REG. NO. B. 1270

MONDAY, MAY 7TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೦

ಪತ್ರದ ವರ್ಗಣಿ

ಕುಮಟೆಯಲ್ಲಿ ಅಗಾವು

ರೂಪಾಯಿ 2-4-0

ಮನೆಯಾರ್ಡರಿಯಿಂದ

ರೂ 3-0-0

ವ್ಹಿ ಪಿ ಅಂಚಪಟ್ಟಿ ಸಹ

ರೂಪಾಯಿ 3-2-0

ಬಿಡಿ ಸಂಚಿಕೆಗೆ 0-1 0

[illegible]
इति [illegible] कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ

ಪ್ಯಾಯಿಕ (೧೫ ಏಮ್ ಅಗಲ)

೫ ಸಾಲುಗಳವರೆಗೆ ರೂ 1-0-

ಆ ನಂತ್ರ ಪ್ರತಿಸಾಲಿಗೆ 0-2-0

ಕೆಳಿಂಗದ ಸಾಲು ಎಷ್ಟು

ದೊಡ್ಡದಿರುವದೋ ಆ ಪ್ರಮಾಣ

ದಿಂದ ಅಷ್ಟು ಸಾಲುಗಳು ಹಿಡಿ

ಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ

ಪತ್ರವ್ಯವಹಾರ ಯಾ ಸಮಕ್ಷ ತಿಳಿ

ಸಲ್ಪಡುವದು

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೭ ಮಾಹೆ ಎಪ್ರಿಲ ಸನ್ ೧೯೨೩ನೇ ಇಸವಿ)—

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ದೇಶಿ ದೇಶಾಂತ ನಮೂನೆಯ, ಹೊಸ ಹೊಸ ನಮಾದರಿಯ ಸಾಮಾನುಗಳು ಸಿಗುತ್ತವೆ -ಅಲ್ಲದೆ ನೊಳೆಗಳ, ಪೋಷಾಕು ಉಪಯೋಗದ ಬೋಲ್ಟು [illegible] ಗಳು, ಪಿನ್ ಫೋಟೊ, ಪಿಸ್ತೂಲ್ಲ ಫೋಟೊ ಸಿಗುತ್ತವೆ, ಬಿಣ್ಣ ಸಿಗುತ್ತದೆ, ಕನ್ನಡಿಯ ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂನೆಯ ಸ್ವದೇಶಿ ಸಾಮಾನು ಸಿಗುವ ದುಕಾನ ಇದೇ! ಲಾಭವನ್ನುಗಳನ್ನು ಲಕ್ಷ್ಯದಲ್ಲಿ ಕೊಂಡುಕೊಳ್ಳಿ !! ಎಲ್ಲಾ [illegible] ಸಾಮಾನು ಗಳ ಇಲ್ಲಿ ಸಿಗುತ್ತವೆ! ಎಲ್ಲ ಸಾಮಾನು [illegible]! ಕಿರಕೋಳ ವ್ಯಾಪಾರಸ್ಥರು ರೋಖ ಮಾಲ ನ್ನು ಕೊಂಡರೆ, ಸವಲತ್ತು ಸಿಗುತ್ತ ಇವೆ, ಗಿರಾಕಿ ಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣ ರಾವ ಕೇಶವ ಗ್ವಾತೊಂಡೆ,

ಆಯರ್ನ ಮರ್ಚಂಟ,

ಕುಮಟಾ. (ಉ ಕನ್ನಡ)

ವಿಜಂಟರು ಬೇಕು! ವಿಜಂಟರು ಬೇಕು!!



ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಕನೇರಿ — ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ —

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಆತ್ಮಾನಂ ಸತತಂ ರಕ್ಷೇತ್ ।

ಏರ್—ಪಿಸ್ತೂಲು ಯಾನೆ

ಗಾಳಿ ತುಬಾಕಿ !

ಕಳ್ಳರು, ದರೋಡೆಖೋರರು, ಕಾಡುಮೃಗ ಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊ ಳ್ಳಲು ಅನುಕೂಲ ಆತ್ಮಸನ್ನು [illegible]!

ಬೆಲೆ ರೂ ೪-೮-೦ (೪೦ ಗುಂಡುಗಳ ಸಹಿತ)

ವ್ಹಿ ಪಿ ಯ ಖರ್ಚು ೦-೬-೦,

೧ ರೂಪಾಯಿಗೆ ೪೦ ಗುಂಡುಗಳು ಸಿಗುತ್ತವೆ

ಸೂಚನೆ. —ಪತ್ರವ್ಯವಹಾರವನ್ನು ಇಂಗ್ಲಿಷ ನಲ್ಲಿಯೇ ಮಾಡಬೇಕು.

ಪತ್ತೆ:-The Novelty Stores, (103)

Bhuleshwar Bombay No 2

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, बेलीच्या, जरीच्या वगैरे हरएक तऱ्हेच्या साधा अगर फॅशनेबल टोप्या तयार केल्या जातात

माल चोख— फॅशनेबल— स्वस्त— व भरपूर

हा शिवाय

आमच्या स्वंत हीतमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीडपाट, चौलपाट, शर्टिंग- कोटींग--वगैरे मालाचा भरपूर पुरवठा नेहमी असतो

ऑर्डर द्या व खात्री करून घ्या !

टीप:-आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.

पोस्ट-— सुंकेरी (कारवार.

—FOR—

HAND AND POWER

-- LOOMS --

SHUTTLES,

Roughest and even Finest COUNTS Steel & Brass REEDS.

COTTON HEALDS,
WIRE HEALDS,
BOBBINS,
OIL PAINTS,
AND

EMERY PAPERS

Can be had at exceptionally reduced rates

From:-

P. P. TRIVEDI & CO.,

BRUCE Street, Fort, BOMBAY

ಉಚಿತ] ನನ್ನ ಶಾಸ್ತ್ರೀಯ ವಾದ [ಉಚಿತ

ಶಾರೀರಿಕ ಶಿಕ್ಷಣ



ಈ ಪುಸ್ತಕದಲ್ಲಿ ನನ್ನ ವಿಶಿಷ್ಟ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ಮತ್ತು ಶರೀರಶಾಸ್ತ್ರಜ್ಞರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟಾಂಪುಗಳನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿ ತೋಕ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೇದಿ ಬಾಕಿಯಿಂದಾಗಲಿ, ಪೇಟೆಯಲ್ಲಿರುವ ಧಾರಣೆಯಿಂದಾಗಲಿ ಆಕರಿಸಲ್ಪಡುವದಿಲ್ಲ. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗು ತರಿಸಿಕೊಳ್ಳಿ. ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)

(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಹಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಿನಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ಸಾರೀ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ: ಫೌಂಟನ ಪೇನಾ ೧, ಸೇಪ್ಟಿ ಪಿನ್ ಬಾಕ್ಸ ೧, ಪ್ಯಾದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಳಿ ೧, ಸವಾರನ ಪೋಷ್ಕು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ ಗೋಲ್ಡ ನೆಕ್ಲೇಸ ಒಂದು ಕತ್ತಿನ ಹಾರ ೧, ಪಂಕದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧. ಈ ೧೫ ಬಹುಮಾನಗಳು ಮತ್ತು ಪ್ರಿಯವಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಬರೇ ರೂ ೪-೮-೦

ವಿಳಾಸ— **ಇಂಗ್ಲೀಷ ಎಂಪೋರಿಯಂ,**

ಪೋಸ್ಟ ಬಾಕ್ಸ ನಂ. ೧೦೫, ಮದರಾಸು.

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನ ಧಿಬ್ಬು ಹಾಕಿದೆ. ಇದರಿಂದ ಬರೆಯಲ್ಪಡುವ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿಕೊಳ್ಳುವವರಿಗೆ ಸುಂದರವಾದ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.

ವಿಳಾಸ—ಹಿಂದೂರ ವಾಚ್ ಕಂಪನಿ ಪೋ. ಬಾಕ್ಸ ನಂ. ೨೨ ಮದರಾಸು.

ಪ್ರಕಟ ! ಪ್ರಕಟ !! ಮುದ್ದು ಇಲ್ಲ ! ! !

ಈ ಅಪೂರ್ವ ಸಂಧಿಯು ಬಹುಕಾಲ ಬಾರದು !

ಚಿನ್ನದ ಮುಂಗೈ ಗಡಿಯಾರಗಳು !

ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು ಅವುಗಳ ಕಂಗಳ ರೇಶಿಮೆಯ ಯಾ ಚರ್ಮದ ಪಟ್ಟಿ ಸಿಗುತ್ತದೆ. ಎಲ್ಲಕ್ಕೂ ಕೂಡಿ ಬೆಲೆ ರೂ. ೫-೧೫-೦. ೪ ವರುಷದ ಗ್ಯಾರಂಟಿ

ವ್ಹಿ. ಪಿ. ಖರ್ಚಿನ ಬಗ್ಗೆ ೦-೬- ಪ್ರತ್ಯೇಕ.

೩ ಗಡಿಯಾರಗಳಿಗೆ ರೂ. ೧೫ ೦-೦; ೬ ಗಡಿಯಾರಗಳಿಗೆ ರೂ. ೩೮—೦—೦ ಅಂಚೆ ವೆಚ್ಚ ಇಲ್ಲ!

ಇಚ್ಛಿಸಿದ ಗಿರಾಕಿಗಳಿಗೆ ಒಂದೊಂದು ಇನಾಮು ಕೊಡಲಾಗುವದು. "ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ತನಕ ಯಾವದೇ ಒಂದು ಅಂಕಿಯನ್ನು ಅವರು ಬರೆದು ತಿಳಿಸಬೇಕು. ಆ ಅಂಕಿಯಂತೆ ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು. ಪ್ರತಿಯೊಂದು ನಂಬರಿಗೆ ಒಂದೊಂದು ಇನಾಮು ನಿರ್ದೇಶಿಸಲಾಗಿದೆ

ಸೂಚನೆ – ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು

ಪತ್ತೆ:- THE DILAWAR WATCH COY., (33)

Bhuleshwar, BOMBAY

ಅಗೇಕರ ಪಂಚಾಂಗದ ವಾದ.

ಜ್ಯೋತಿರ್ಗಣಿತೋಪಾಸಕರಾದ ಅಂಕೋಲೆಯ ರಾ। ಕೃಷ್ಣ ಸದಾಶಿವ ಜ್ಯೋತಿಷಿಯವರು ಅಗೇಕರರ ವಿಭವ ಸಂ॥ ಪಂಚಾಂಗದಲ್ಲಿ ಈ ಕೆಳಗಿನ ೫ ದೋಷಗಳನ್ನು ಉದಾಹರಣಾರ್ಥವಾಗಿ ನಮೂದಿಸಿದ್ದಾರೆ. ಅವು ಯಾವವಂದರೆ:— (೧) ಅಶ್ವಿನ ಕೃಷ್ಣ ೧೪, ಚಂದ್ರವಾರ ದಿನ ಗ್ರಹಲಾಘವಾದಿ ಸಿದ್ಧಾಂತದ ಪ್ರಕಾರ ಪ್ರಾತಃಕಾಲದ ಸ್ಪಷ್ಟ ಬುಧಃ ೫ ರಾ ೨೯ ಅಂ ೫೩ ಕ ೧೪ ವಿಕಲೆಗಳಿಂದ ಭುಕ್ತನಾಗಿ ಅದೇ ದಿವಸ ಸೂರ್ಯೋದಯಾನಂತರ ೨೪ ಘಟಿಕೆಯು ಕನ್ಯಾರಾಶಿಯಿಂದ ತುಲಾರಾಶಿಯಲ್ಲಿ ಪ್ರವೇಶಿಸುವನು. ಅಗೇಕರರ ಪಂಚಾಂಗದಲ್ಲಿ ಅಶ್ವಿನ ಕೃಷ್ಣ ೮ಮಿ ಚಂದ್ರವಾರ ದಿವಾ ಚಿತ್ರಾ ೩ ತುಲಾಪ್ರವೇಶ ಬುಧಃ ಈ ಪ್ರಕಾರ ಇರುತ್ತದೆ. (೨) ಮಾರ್ಗಶೀರ್ಷ ಶುದ್ಧ ೫ಮಿ, ಚಂದ್ರವಾರ ದಿವಾಘಟಿ ೧೩—೨೧ ಕುಂಭಲಗ್ನ ಈ ದಿನ ಮೂರೇ ಗ್ರಹಗಳು ಅನುಕೂಲವಿರುತ್ತವೆ ಈ ಮುಹೂರ್ತವು ವಿವಾಹಕ್ಕೆ ಅಯೋಗ್ಯವಾದದ್ದು (೩) ಮಾರ್ಗಶೀರ್ಷ ಶು ೧೪ ಶುಕ್ರವಾರ ಘಟಿ ೬೦—೪೩ಕ್ಕೆ ಸಲುವ ಮೀನಲಗ್ನದ ಧನುಃ ಅಂಶದ ಮೇಲೆ ವಿವಾಹ ಕಾರ್ಯ ಮಾಡಬಾರದೆಂದು ಶಾಸ್ತ್ರ ವಚನವಿದೆ (೪) ಮಾಘ ಕೃಷ್ಣ ೨ಗ ಚಂದ್ರವಾರ ಘಟಿ ೩ ಪಳ ೩೫ ಕ್ಕೆ ಸಲುವ ಮೀನಲಗ್ನದಿಂದ ಸಿಂಹ ರಾಶಿಯು ಷಷ್ಠಭಾವಗತ ಚಂದ್ರನ ಹೋರವು ಮಕರದ್ರೇಷ್ಕಾಣದೊಳಗೆ ಅಂತರ್ಗತವಾಗಿರುತ್ತದೆ. ಆ ಮೀನಲಗ್ನದಲ್ಲಿ ಉಪನಯನ ಸಂಸ್ಕಾರಕ್ಕೆ ಮುಹೂರ್ತ ಕೊಟ್ಟದ್ದು ಯೋಗ್ಯವಲ್ಲ. ಮಾರ್ಗಶೀರ್ಷ ಕೃಷ್ಣ ೧೦ಮಿ ಬುಧವಾರ ದಿವಾ ಮಾನ ೨೯—೩೨ ಇದ್ದು, ಪೂರ್ವಾಷಾಢಾ ನಕ್ಷತ್ರ ೩೦—೯ ಇರುತ್ತದೆ. ಪೂರ್ವಾಷಾಢಾ ನಕ್ಷತ್ರವು ವಿವಾಹೋಕ್ತ ನಕ್ಷತ್ರವಲ್ಲ. ಆದರೂ, ಆ ದಿನ ಗೋರಜ ಕಾಲದಲ್ಲಿ ಸಲುವ ಸಿಂಹಲಗ್ನದಲ್ಲಿ ವಿವಾಹ ಮುಹೂರ್ತ ಕೊಟ್ಟದ್ದು ಯೋಗ್ಯವಲ್ಲ ಇದಲ್ಲದೆ, ಅದೇ ದಿನರಾತ್ರಿ ಘಟಿ ೬, ಪಳ ೫೩ ಕ್ಕೆ ಸಲುವ ಕನ್ಯಾಲಗ್ನದಲ್ಲಿ ಪಂಚಶಲಾಕಾಚಕ್ರ ಪ್ರಕಾರ ಉದ್ದಿಷ್ಟ ಕಾಲದ ನಕ್ಷತ್ರಕ್ಕೆ ಅಂಗಾರಕನ ವೇಧವಾಗಿರುವದರಿಂದ ಆ ಮುಹೂರ್ತವು ವಿವಾಹಕ್ಕೆ ಪ್ರಶಸ್ತವಾದದ್ದಲ್ಲ.

ದೋಷಕರವಾದ ಮುಹೂರ್ತಗಳ ಮೇಲೆ ಇಷ್ಟ ಕಾರ್ಯಗಳನ್ನು ಮಾಡಿ, ಅನಿಷ್ಟ ಫಲಗಳಿಗೆ ಗುರಿಯಾಗಬಾರದೆಂದು ಬಯಕೆ.

ಈ ಆಕ್ಷೇಪಗಳಿಗೆ ರಾ। ಅಗೇಕರರ ಉತ್ತರ.

(೧) ಅಶ್ವಿನ ಕೃಷ್ಣ ೧೫ ರಗೆ ಬುಧನು ೬—೦—೬—೫೦ ರಾಶ್ಯಾತ್ಮಕನಾಗಿದ್ದು, ಆ ಬುಧನು ವಕ್ರಗತಿಯಿಂದ ಅದೇ ದಿವಸ ಕನ್ಯಾರಾಶಿಗೆ ಬಂದು ಕೃಷ್ಣ ೨ಗ ಶುಕ್ರವಾರ ದಿವಸ ಮಾರ್ಗಿಯಾಗಿ ಕೃಷ್ಣ ೮ಮಿ ಬುಧವಾರ ದಿನ ತುಲಾ ರಾಶಿಗೆ ಪುನಃ ಹೋಗಿರುತ್ತಾನೆ. (೨) ಮಾರ್ಗಶೀರ್ಷ ಶುಕ್ಲ ೫ಮಿ ಚಂದ್ರವಾರ ಕುಂಭ ಲಗ್ನದ ಮುಹೂರ್ತಕ್ಕೆ ಮುಹೂರ್ತ ಮಾಲೆಯ ಮುಹೂರ್ತ ಪ್ರಕರಣಗತ "ತತ್ರೈಕಾದಶೇ ಸ್ಯಾದವಿತಂ ನ್ಯಸ್ಯೈ ನ್ಯಸೇ ಫಲಂ ಗೃಹೈಃ" ಹಾಗು ಮುಹೂ. ಗಣಪತಿ ಗ್ರಂಥೋಕ್ತ "ಸದಶಾ ಸ್ವಾತ್ಮತೋಽನ್ಯತ್ರ ಸ್ಥಿತಾಮುಚ್ಚ ಫಲಾಗ್ರಹಾಃ" ಈ ವಚನದಿಂದ ಸಹ ಮೂರು ಗ್ರಹಗಳ ಅನುಕೂಲವುಳ್ಳ ಲಗ್ನವು ಸರ್ವಥೈವ ತ್ಯಾಜ್ಯವೇ ಕೆಂದುಗುವದಿಲ್ಲ. ಮುಹೂರ್ತ ಚಿಂತಾಮಣಿಯಲ್ಲಿಯೂ "ಗ್ರಹತ್ರಯಾಸ್ ದೋಷ ಪಾನ್" ಹೀಗೆ ಹೇಳಿದ ಕಂಡುತ್ತದೆ. ಈ ಮೂಲ ವಾಕ್ಯದ ಅರ್ಥವು ಪಿಯೂಷಧಾರೆಯ ಟೀಕೆಯಲ್ಲಿ ಸ್ಪಷ್ಟವಾಗಿ ನಿವೇದಿಸಲ್ಪಟ್ಟಿದೆ. ಈ ಲಗ್ನಕ್ಕೆ ವಿವಾಹಭಂಗಕಾರಕ ಗ್ರಹಗಳ ಅನುಕೂಲವಿಲ್ಲ (೩) ಮೀನ ಲಗ್ನದ ಧನುರಂಶದಲ್ಲಿ ವಿವಾಹ ಮುಹೂರ್ತವನ್ನು ನಮ್ಮ ಪಂಚಾಂಗದಲ್ಲಿ ಕೊಟ್ಟಿಲ್ಲ ಸುಳ್ಳ ಆಕ್ಷೇಪ ಮಾಡುವದೇಕೆ? (೪) ಮೀನ ಲಗ್ನದಲ್ಲಿ ಉಪನಯನಕ್ಕೆ ಉಕ್ತವೆಂತ ಮುಹೂರ್ತ ಮಾಲಾ ಮೊದಲಾದ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಈ ಗ್ರಂಥಗಳನ್ನು ಪರಾಂಬರಿಸಿದರೆ ಷಷ್ಠ ಭಾವಗತ ಚಂದ್ರನ ದೋಷಾಭಾವವಾಗಿರುವ ಸಂಗತಿ ಆಕ್ಷೇಪಕರಿಗೆ ಹೊಳೆಯುವದು. (೫) ಪೂರ್ವಾಷಾಢಾ ನಕ್ಷತ್ರವು ವಿವಾಹಕ್ಕೆ ಅನುಕ್ತವೆಂತಾ ನಮಗೆ ಪೂರ್ಣ ತಿಳುವಳಿಕೆಯಿದೆ. ಆದೇ ಪತ್ರಿಕೆಯಲ್ಲಿ ನಮೂದಿಸಿದ ದಿನ ಗೋರಜ ಕಾಲದ ಸಿಂಹಲಗ್ನವು ಸೂರ್ಯಾಸ್ತ ಪಲ್ಲಿ ಘಟಿ ೧ ಪಳ ೯ ರ ತನಕ ಇದ್ದು, ಪೂರ್ವಾಷಾಢಾ ನಕ್ಷತ್ರೋತ್ತರ ಘಟಿಕಾದ್ವಯದಲ್ಲಿ ಉತ್ತರಾಷಾಢಾ ನಕ್ಷತ್ರವಿದ್ದು, ಅದೇ ಕಾಲದಲ್ಲಿ ಗೋಧೂಳಿಯ ಸಿಂಹಲಗ್ನವಿರುವದರಿಂದ ಈ ಮುಹೂರ್ತವು ನಿರ್ದೋಷವಿದೆ ರಾತ್ರಿ ಕನ್ಯಾಲಗ್ನದ ಮುಹೂರ್ತಕ್ಕೆ ಅಂಗಾರಕನ ವೇಧವಾದಗ್ಯಾ, "ಯಕ್ಷಾಣಿ ಭ್ರೂರವಿದ್ಧಾನಿ ಭ್ರೂರಯುಕ್ತಾನಿ ಕಾನಿಚ ಭುಕ್ತ್ವಾ ಚಂದ್ರೇಣ ಮುಕ್ತಾನಿ ಶುಭಾರ್ಹಾಣಿ ಪ್ರಚಕ್ಷತೇ" ಈ ವಚನದಂತೆ ಆ ನಕ್ಷತ್ರವು ಚಂದ್ರ ಭುಕ್ತವಾದದರಿಂದ ಸಕಲ ಶುಭ ಕರ್ಮಗಳಲ್ಲಿ ಶುಭಾರ್ಹವಾಗಿರುತ್ತದೆ.

ಕೃಷ್ಣ ಶಾಸ್ತ್ರಿ ಉಪಾಧ್ಯೆ ಅಗೇಕರ.

[ಅಂಕೋಲೆಯ ರಾ। ಕೃಷ್ಣ ಸದಾಶಿವ ಜ್ಯೋತಿಷಿಯವರು ಬರೆದ ಆಕ್ಷೇಪಗಳನ್ನು ರಾ। ಅಗೇಕರರಿಗೆ ತಿಳಿಸಿ, ಅವರ ಕಡೆಯಿಂದ ಬಂದ ಉತ್ತರವನ್ನು ಜ್ಯೋತಿಷಿಗಳ ಪರಾಂಬರಿಕೆಯ ಸಲುವಾಗಿ ಒಂದೇ ಕಡೆ ಪ್ರಕಟಿಸಿದ್ದೇವೆ. ಇದರಿಂದ ಆಕ್ಷೇಪಗಳ ವಿಚಾರಕ್ಕೂ ಅವುಗಳ ಮೇಲಿನ ಪರಿಹಾರ ವಿಚಾರಕ್ಕೂ ಅನುಕೂಲವಾಗುವಂತೆ ಇದೆ. ಈ ವಾದವನ್ನು ಇನ್ನು ಮುಂದರಿಸಲಪೇಕ್ಷಿಸುವದಿಲ್ಲ. ಜ್ಯೋತಿರ್ಗಣಿತ ಗ್ರಂಥಗಳಲ್ಲಿ ಮತಭೇದವಿದ್ದರೆ, ಗಣಿತ ವಿಚಾರದವರು ತಮ್ಮೊಳಗೊಂದು ಕೂಟ ಸೇರಿಸಿ ನಿಶ್ಚಯಿಸಿಕೊಳ್ಳತಕ್ಕದ್ದು ಯುಕ್ತವೆಂತ ನಮ್ಮ ಅಭಿಪ್ರಾಯ. ಸಂ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು !

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಇದು ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ಅದಕ್ಕೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಬುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಿಗಳಿಗೆ	,,	೨—೧೨—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

——:o:——

½ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಇಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಬಹಳ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX. 2082 **BOMBAY.**

ಮಾನವನಿರ್ಮಿತ ಯಂತ್ರಕ್ಕಾಗಿ ಮಾನವಯಂತ್ರವನ್ನು ಅಲಕ್ಷ ಮಾಡಬೇಡಿ.

ಖಾದಿಯ ಅರ್ಥಶಾಸ್ತ್ರ.

ರಿಚರ್ಡ ಗ್ರೇಗ ಎಂಬೊಬ್ಬ ಅಮೇರಿಕೆಯ ವಕೀಲರು ಇಲ್ಲಿ ಬಂದು ಇಲ್ಲಿಯ ಪರಿಸ್ಥಿತಿಯನ್ನು ವರಾಂಬರಿಸಿ "ಖಾದಿಯ ಅರ್ಥಶಾಸ್ತ್ರ" ವೆಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಇವರು ೩ ವರ್ಷದ ತನಕ ಹಿಂದುಸ್ಥಾನದಲ್ಲುಳಕೊಂಡು ಇಲ್ಲಿಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನೋಡಿದ್ದಾರೆ. ಈ ಗ್ರಂಥದಲ್ಲಿ ಅವರು ಬರೆದ ಅರ್ಥಶಾಸ್ತ್ರವು ಮನನೀಯವಿದೆ. ಭಿನ್ನ ಭಿನ್ನ ಕೈಗಾರಿಕೆಗಳ ಅನುಭವವಿರುವದರಿಂದ ಈ ಗ್ರಂಥದೊಳಗಿನ ವಿಧಾನಗಳಿಗೆ ಹೆಚ್ಚಿನ ಬೆಲೆ ದೊರಕಿದೆ. ಅವರು ಬರೆದ ಗ್ರಂಥದ ತಾತ್ಪರ್ಯವೇನಂದರೆ —

ಹಿಂದುಸ್ಥಾನದೊಳಗಿನ ನಡಾವಳಿಯು ಬಹಳೇ ಮಂದ ಗತಿಯದೆಂದು ಪಾಶ್ಚಾತ್ಯರು ಭಾವಿಸುತ್ತಾರೆ, ಅದುಕಾರಣ ಅದು ತಿರಸ್ಕರಿಸತಕ್ಕದ್ದಲ್ಲ. ಗುಲಾಬಿ ಹೂವಾಗಲಿ, ಗಜ್ಜರಿಯಾಗಲಿ, ಸ್ವಭಾವಕ್ಕನುಸರಿಸಿ ಸಾವಕಾಶವಾಗಿ ಬೆಳೆಯುತ್ತವೆಂದು ನಾವು ಅವನ್ನು ತಿರಸ್ಕರಿಸುತ್ತೇವೇನು? ಪೌರ್ವಾತ್ಯರಿಗೂ, ಸೂರ್ಯನಿಗೂ ನಿಕಟ ಸಂಬಂಧವಿದೆ. ಸೂರ್ಯನೆಂದರೆ, ಜಗತ್ತಿಗೆ ಚೈತನ್ಯ ಕೊಡುವವನು. ಅವರಿಂದ ಪಾಶ್ಚಾತ್ಯರಲ್ಲಿ ಕಾಣಬಾರದ ಅನೇಕ ಗುಣಗಳನ್ನು ಪೌರ್ವಾತ್ಯರಲ್ಲಿ ನಾವು ಕಾಣಬಹುದು. ಗಾಂಭೀರ್ಯ, ಸಹನಶೀಲಬುದ್ಧಿ, ಗೌರವ, ಸೊಬಗು, ಸಾಮಾನ್ಯ ಸೌಂದರ್ಯ, ದೃಢ ವಿಶ್ವಾಸ, ಪ್ರಮಾಣಬದ್ಧತೆ, ಪಿಕಾಲತೆ ಗುಣಗಳು ಪೌರ್ವಾತ್ಯರಲ್ಲಿ ಕಾಣಬಹುದು. ಸಾಮಾನ್ಯ ಜೀವನಕ್ರಮದಲ್ಲಿ ಉಂಟಾಗುವ ಶಾರೀರಿಕ, ಆಸ್ತಿಕ, ಧಾರ್ಮಿಕ ಹಾಗು ನೈತಿಕ ಗುಣಗಳನ್ನು ತಿಳಕೊಳ್ಳದ ಮಾನಸಿಕ ವಿಷಯ ಪಾಶ್ಚಾತ್ಯರಲ್ಲಿ ಇದೆ. ಹಿಂದುಸ್ಥಾನದಲ್ಲಿ ಪ್ರತಿ ವರ್ಷಕ್ಕೆ ನಿಯಮಿತವಾಗಿ ಲಕ್ಷಾವಧಿ ಜನರು ನಿರುದ್ಯೋಗಿಗಳಾಗುತ್ತಾರೆ. ಹಿಂದುಸ್ಥಾನದ ಅರ್ಥಶಾಸ್ತ್ರ ವಿಚಾರ ಮಾಡುವಾಗ ಈ ಸಂಗತಿಯನ್ನು ವಿಚಾರಿಸಿ ತೀರಬೇಕು. ಹೀಗೆ ಮಾನವ ಶಕ್ತಿಯನ್ನೂ, ಸೂರ್ಯ ಚೈತನ್ಯವನ್ನೂ ನಿರರ್ಥಕಗೊಳಿಸಿ ರಾಷ್ಟ್ರಕ್ಕೆ ಸಂಭವಿಸುವ ಭಯಂಕರ ನಷ್ಟವನ್ನು ಪ್ರತಿಬಂಧಿಸುವ ಉಪಾಯವನ್ನು ಶೋಧಿಸಬೇಕು. "ಮಾನವ ಶಕ್ತಿಯನ್ನು ಸರಿಯಾಗಿ ಉಪಯೋಗಿಸುವದೇ ಪ್ರಮುಖ ಕರ್ತವ್ಯ. ಅದಕ್ಕಾಗಿಯೇ ಯಂತ್ರವು ನಿರ್ಮಾಣ ಹೊಂದಿದೆ" ಎಂದು ಗೋಖಲೆರವರ ಅಂಬೋಣ. ಅದರಿಂದ ಮಾನವನ ಸಾಮರ್ಥ್ಯವನ್ನು ನಿರರ್ಥಕಗೊಳಿಸದಂತೆ ಪ್ರಯತ್ನಪಡಬೇಕು. ಮಾನವನು ಉತ್ಕೃಷ್ಟ ಪ್ರತಿಯ ಯಂತ್ರವು. ಆಹಾರವನ್ನು ಗ್ರಹಿಸಿ ಕಾರ್ಯರೂಪದಲ್ಲಿ ಅದನ್ನು ನಿರ್ಮಿಸುವ ಚೈತನ್ಯದ ಬೆಲೆಯು ಅಪಾರವಾಗಿರುತ್ತದೆ. ಮಾನವನು ತಿನ್ನುವ ಆಹಾರದಲ್ಲಿ ರೂಪಾಯಿಗೆ ನಾಲ್ಕಾಣೆಯಷ್ಟು ಯಾಂತ್ರಿಕ ಚೈತನ್ಯವು ನಿರ್ಮಾಣ ಹೊಂದುತ್ತದೆ. ಹಿಂದುಸ್ಥಾನದಲ್ಲಿ ಹುಬ್ಬಿ ಬನ್ನಿಗಳಲ್ಲಿಯೂ, ಬೇಸಾಯಗಳಲ್ಲಿಯೂ ಪ್ರತ್ಯಕ್ಷವಾಗಿ ೧೦ ಕೋಟಿ, ೭೦ ಲಕ್ಷ ಮಂದಿಗಳು ಕೆಲಸ ಮಾಡುತ್ತಾರೆ. ಪ್ರತಿ ಒಬ್ಬ ಮನುಷ್ಯನ ಸಾಮರ್ಥ್ಯವನ್ನು ಅಶ್ವಬಲದೊಡನೆ ತುಲನೆ ಮಾಡಿದರೆ ೭ ರಿಂದ ೧೦ದ ವರೆಗೆ ಬೀಳುತ್ತದೆ. ಈ ಲೆಕ್ಕದಿಂದ ಹಿಂದುಸ್ಥಾನದೊಳಗಿನ ಬೇಸಾಯ ಪ್ರದೇಶದಲ್ಲಿ ೮ ಕೋಟಿ, ೭ ಲಕ್ಷ ಅಶ್ವಬಲವು ಈ ಉದ್ಯೋಗಗಳಿಗೆ ಸಿದ್ಧವಿರುವದೆಂದಾಯಿತು. ಹೀಗೆಯೇ ಲೆಕ್ಕ ಮಾಡಿದರೆ, ೩ ತಿಂಗಳ ತನಕ ಬೇಸಾಯಗಾರರು ಕೈಮುಗಿಸಿಕೊಂಡು ಕೂತ ಸಮಯ ನಿರರ್ಥಕಗೊಳಿಸುವ ಶಕ್ತಿಯು ಮುಂಬಯಿಯೊಳಗಿನ ಗಿರಣಿ ಕೂಲಿಕಾರರ ಶಕ್ತಿಯ ಇಮ್ಮಡಿಯಾಗುವದು. ಇದಲ್ಲದೆ, ಆಹಾರ ತಿಂದು ಕೈರಾಟೆಯನ್ನು ತಿರಗಿಸುವ ಮಾನವ ಯಂತ್ರವು ಕಲ್ಲಿದ್ದಲಿಗಳನ್ನು ತಿಂದು ತಿರುಗುವ ಗಿರಣಿ ಯಂತ್ರಕ್ಕಿಂತ ಹೆಚ್ಚಿನ ಕೆಲಸವನ್ನು ಒಟ್ಟಿನ ಮೇಲೆ ಸಾಧಿಸಬಲ್ಲದು. ಆದರಿಂದ ಈ ಕಡೆ ಯಂತ್ರಕಲಾಕೋವಿದರು ಲಕ್ಷಗೊಡತಕ್ಕದ್ದು. ಅಲ್ಪಸಂಖ್ಯಾಕ ಜನರು ಗಿರಣಿಗಳಿಂದ ಹೆಚ್ಚಿನ ಲಾಭ ಪಡೆಯುತ್ತಾರೆಂಬದರಿಂದ ನಾವು ಬುದ್ಧಿಗೇಡಿಗಳಾಗಲಾಗದು. ಪ್ರತ್ಯಕ್ಷ ಪರಿಸ್ಥಿತಿಯಲ್ಲಿ ನಿರರ್ಥಕವಾಗಿ ಹೋಗುವ ಮಾನವ ಸಾಮರ್ಥ್ಯವನ್ನು ಲಕ್ಷಿಸಿದರೆ, ಅಲ್ಪಸಂಖ್ಯಾಕರು ಪಡೆಯುವ ಲಾಭವು ತೀರ ಕನಿಷ್ಠದರ್ಜೆಯದೆಂದು ಕಾಣುತ್ತದೆ. ಅರ್ಥಶಾಸ್ತ್ರವನ್ನು ವಿಚಾರ ಮಾಡುವಾಗ, ನೀತಿಶಾಸ್ತ್ರವನ್ನೂ ವಿಚಾರ ಮಾಡಬೇಕು. ನೀತಿಶಾಸ್ತ್ರಕ್ಕೂ, ಅರ್ಥಶಾಸ್ತ್ರಕ್ಕೂ ಜೋಡು ಬೀಳುವಂತೆ ಯಾವಾಗಲೂ ಯತ್ನಿಸುತ್ತಿರಬೇಕು. ಹಣದ ಹೆಬ್ಬಾಕೆ ಹಿಡಿದು ಜಗತ್ತಿನಲ್ಲಿ ನಡೆಯುವ ವಿಚಾರವನ್ನು ದುರ್ಲಕ್ಷಿಸಿ ಮಹಾಯುದ್ಧಕಾಲದಲ್ಲಿ ಉಂಟಾದಂತೆ ನೇಮಾಬದ್ಧಿಯನ್ನೇ ನಾವು ಹಿಡಿದರೆ, ಅನೇಕ ಯಂತ್ರಸಾಧನಗಳು ತಾವಾಗಿ ನಿರ್ಮಾಣವಾಗುವವು. ಅವರ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯಿಂದುಂಟಾದ ವಿಷಕ್ರಿಮಿ ದೂರವಾಗುವದು. ಹಿಂದುಸ್ಥಾನದಲ್ಲಿ ಮಾನವನ ಶ್ರಮವನ್ನು ಉಳಿಸುವ ಪ್ರಶ್ನೆಯಿಲ್ಲ. ಮಾನವರಿಗೆ ಶ್ರಮ ಮಾಡಲು ಅವಕಾಶ ದೊರಿಸಿ ಕೊಡುವದೇ ಪ್ರಶ್ನೆಯಾಗಿದೆ. ಹಿಂದುಸ್ಥಾನದೊಳಗಿನ ಮನೆಗಳಲ್ಲಿ ದ್ರವ್ಯಸಂಗ್ರಹವಿಲ್ಲ; ಪರಿಶ್ರಮದ ಮಾತಿಗೆ ಕೆಲಸವೂ ಇಲ್ಲ. ಅದರಿಂದ ಕೈರಾಟೆ ಮಗ್ಗಗಳನ್ನು ಪ್ರಚಾರಪಡಿಸಿದರೆ, ಲಕ್ಷಾವಧಿ ಜನರಿಗೆ ಅಲ್ಪ ಬಂಡವಾಳದಲ್ಲಿಯೇ ಕೆಲಸ ಪೂರೈಸಿ ಕೊಟ್ಟಂತಾಗುವದು. ಇದರಿಂದ ಶಾರೀರಿಕ ಸಾಧನ ಶ್ರಮಪಡೆಯುವ ಜನರಿಗೆ ಜೀವನಕ್ಕೆ ಮಾರ್ಗ ಮಾಡಿಕೊಟ್ಟಂತಾಗುವದು. ಹೀಗೆ ಹುಟ್ಟಿದ ಅರಿವೆ-ಅಂಚಡಿಗಳು ದೇಶದೊಳಗೆ ಸುಸೂತ್ರವಾಗಿಯೂ, ಸುಸಂಘಟಿತವಾಗಿಯೂ ಅಲ್ಲಲ್ಲಿ ವಿಕ್ರಯ ಮಾಡಲ್ಪಡುವವು. ಈ ಉಪಾಯದಿಂದ ಬಂಡವಲದ ರಾಶಿ ಕೆಡದು. ಆದರೆ, ಸರಾಸರಿ ತೆಗೆದರೆ, ಈ ಬಂಡವಲದ ಪ್ರಮಾಣವು ಹೆಚ್ಚಿಗೆ ಬೀಳುವದು. ಹಿಂದುಸ್ಥಾನದಲ್ಲಿ ಬೆಳೆದ ಹತ್ತಿಯನ್ನು ಜಪಾನ, ಇಟಲಿ ಅಥವಾ ಇಂಗ್ಲಂಡ ದೇಶಗಳಿಗೆ ಒಯ್ದು ಅಲ್ಲಿಂದ ಅರಿವೆ ಮಾಡಿ ತಂದು ಪುನಃ ಹತ್ತಿ ಬೆಳೆದ ಹಳ್ಳಿಗರಿಗೆ ಮಾರುವದು ಮೂರ್ಖತನವು. ಈ ವ್ಯವಹಾರದಿಂದ ಒದಗಿದ ನಿರುದ್ಯೋಗವನ್ನೂ ನಿರುದ್ಯೋಗ ನಷ್ಟವನ್ನೂ ಗ್ರಾಮಗಳಲ್ಲಿ ಉಂಟಾದ ಸಮಾಜ ಭಂಗವನ್ನೂ ವಿಚಾರಿಸಿದರೆ, ಖಾದಿಗಿಂತ ಗಿರಣಿ ಅರಿವೆಯು ಅಗ್ಗವಾಗಿ ಸಿಕ್ಕಿದ ಲಾಭವು ತೀರ ಕ್ಷುಲ್ಲಕವೆಂದು ಸ್ಪಷ್ಟವಾಗುತ್ತದೆ. ಮೇಲೆ ಹೇಳಿದ ೧೦ ಕೋಟಿ ೭೦ ಲಕ್ಷ ಜನರು ೩ ತಿಂಗಳವರೆಗೆ ನಿರುದ್ಯೋಗಿಗಳಾಗಿ ಸತತ ಕೂತುಕೊಳ್ಳುತ್ತಾರೆಂಬದು ಕೇಳಲ್ಪಟ್ಟಿಲ್ಲ. ದಿನಾ ಮೂರೇ ಆಣೆಯಂತೆ ಕೂಲಿ ಹಿಡಿದರೆ, ದೇಶಕ್ಕುಂಟಾದ ನಷ್ಟ ನೋಡಿರಿ! ೧ ಅಬ್ಜ ೮೦ ಕೋಟಿ ೫೭ ಲಕ್ಷ ೫೫ ಸಾವಿರ ರೂಪಾಯಿಗಳು ರಾಷ್ಟ್ರಕ್ಕೆ ನಷ್ಟ. ಬೇಸಾಯೋದ್ಯೋಗಗಳ ನಷ್ಟವಿದು. ಈ ಹಣವನ್ನು ಹಿಂದುಸ್ಥಾನದ ಲೋಕಸಂಖ್ಯೆಯ ಮೇಲೆ ಹಂಚಿ ಹಾಕಿದರೆ, ತಲೆಗೆ ೫ ರೂಪಾಯಿ ೭ ಆಣೆಯಂತೆ ಬರುತ್ತದೆ. ಇದೊಂದು ಭೂದಂಡ. ನಮ್ಮ ರಾಷ್ಟ್ರದ ಯಾವದೇ ಕಾರ್ಯಕ್ಕೆ ಇಷ್ಟು ದೊಡ್ಡ ರಕಮು ಖರ್ಚು ಬೀಳುವದಿಲ್ಲ. ಇವರಿಗೆ ಕೈರಾಟೆ ಕೊಟ್ಟರೆ, ದಿನಾ ೧ ಆಣೆಯಾದರೂ ಇವರು ದುಡಿಯಬಹುದು. ೩ ತಿಂಗಳಲ್ಲಿ ಇವರ ದುಡಿತವು ೬೦ ಕೋಟಿ ೧೯ ಲಕ್ಷ ೮೫ ಸಾವಿರ ಆಗುತ್ತದೆ. ಇತಿಹಾಸದ ಮೇಲಿಂದ ಭರತ ಭೂಮಿಯೊಳಗಿನ ಮನೆತನಗಳಲ್ಲೆಲ್ಲ ೫೦೦ ವರ್ಷಗಳ ಹಿಂದೆ ನೂಲುವ ಪ್ರಘಾತವಿತ್ತೆಂದು ಕಾಣುತ್ತದೆ. ಅದು ಬ್ರಿಟಿಶರ ರಾಜ್ಯಧೋರಣದಿಂದ ನಷ್ಟವಾಯಿತೆಂದೂ ಕಾಣುತ್ತದೆ. ಆದರೆ, ಅವರ ಮೇಲಿಂದ ಈಗಿನ ನಿರುದ್ಯೋಗದ ಕಾರಣವಾದರೂ ಸಂಪೂರ್ಣವಾಗಿ ಈ ಪದ್ಧತಿಯ ಮೂಲಕವಾಗಿಯೇ ಎಂದು ಹೇಳಬರದು. ಆದರೆ, ಹಿಂದು ಮಾತನ್ನು ಧಾರಾಳವಾಗಿ ಹೇಳಬಹುದು. ಪರದೇಶಿ ಅರಿವೆಯನ್ನು ಆಮದು ಮಾಡಿದ್ದರಿಂದ ಬೇಸಾಯಗಾರರಿಗೆ ಬೇಸಾಯಕ್ಕೆ ಜೋಡಾಗಿದ್ದ ಉದ್ಯೋಗವು ನಷ್ಟವಾಯಿತು. ಹಿಂದುಸ್ಥಾನ ದೇಶವು ಪರದೇಶಿ ಅರಿವೆಯನ್ನು ಕೊಳ್ಳುವದಕ್ಕೆ ಬೇಸಾಯಗಾರರಿಗೆ ಉದ್ಯೋಗ ಇಲ್ಲಗೊಳಿಸುವದು ಕಷ್ಟವೆಂದೂ ಹೇಳಬಹುದು. ಸರಾಸರಿ ಮಾನದಿಂದ ಈಗಿನ ಬೇಸಾಯಗಾರರಲ್ಲಿ ಕಾಲಾಂಶದವರಾದರೂ ನಿರುದ್ಯೋಗಿಯಾಗಲು ಪರದೇಶಿ ಅರಿವೆಯೇ ಕಾರಣವೆಂದು ಹೇಳಲಡ್ಡಿಯಿಲ್ಲ. ೧೯೨೫ನೇ ಇಸ್ವಿಯಲ್ಲಿ ಹಿಂದುಸ್ಥಾನಕ್ಕೆ ತಗಲುವ ೩ನೇ ೧ ಪಾಲು ಅರಿವೆಯು ಪರದೇಶದಿಂದ ಆಮದಾಯಿತು. ಸಾಮ್ರಾಜ್ಯದ ವಿಚಾರ ಮಾಡುವ. ಹಿಂದುಸ್ಥಾನದಲ್ಲಿ ಬ್ರಿಟಿಶರ ಅರಿವೆಯು ಶೇಕಡಾ ೬೩ ರಷ್ಟು ಖರ್ಚಾಯಿತು. ಅಂದರೆ, ೩ನೇ ೧ ಅಂಶದ ಕೂಲಿಕಾರರಿಗೆ ಕೂಲಿ ಕೊಡುವದಕ್ಕಾಗಿ ಹಿಂದುಸ್ಥಾನದೊಳಗಿನ ೩ನೇ ೧ ಅಂಶದ ಜನರನ್ನು ನಿರುದ್ಯೋಗಿಯಾಗಿ ಇಟ್ಟಂತಾಯಿತು. ಅಂತು ನಿರುದ್ಯೋಗಿಯಾಗಿದ್ದವರ ತುಲನೆ ಮಾಡಿದರೆ, ೩ ಕೋಟಿ ೬೦ ಲಕ್ಷ ಭಾರತೀಯರನ್ನು ನಿರುದ್ಯೋಗಿಯಾಗಿಟ್ಟು ೧ ಲಕ್ಷ ೮೪ ಸಾವಿರ ಬ್ರಿಟಿಶರಿಗೆ ಹೊಟ್ಟೆ ತುಂಬಿದಂತಾಯಿತು. ಇದು ಸಾಮ್ರಾಜ್ಯ ದೃಷ್ಟಿಯಿಂದ ಹಿತಕರವೇ? ಈ ಬ್ರಿಟಿಶ ಕೂಲಿಕಾರರ ಕೂಲಿಯು ೧೯೨೫ನೇ ಇಸ್ವಿಯ ಕೂಲಿಯ ಲೆಕ್ಕದಂತೆ ೨೬ ಕೋಟಿ ರೂಪಾಯಿ ಆಗುತ್ತದೆ. ೩ ಕೋಟಿ ೬೦ ಲಕ್ಷ ಭಾರತೀಯರ ಕೂಲಿಯು ದಿನಾ ೩ ಆಣೆಯಂತೆ ೫೪ ಕೋಟಿ ಆಗುತ್ತದೆ. ಉಪಾಯದಿಂದ ಬ್ರಿಟಿಶ ಕೂಲಿಕಾರರ ಉದ್ಯೋಗದ ದಿಕ್ಕನ್ನು ಬದಲಿಸಿ ಹಿಂದುಸ್ಥಾನದಲ್ಲಿ ಜನರು ನಿರುದ್ಯೋಗಿಯಾಗಿ ಕೂಡ್ರದಂತೆ ವ್ಯವಸ್ಥೆ ಮಾಡುವದು ಒಳಿತಲ್ಲವೇ? ಒಂದು ರಾಷ್ಟ್ರವನ್ನು ಬಲಪಡಿಸುವದಕ್ಕಾಗಿ ಇನ್ನೊಂದು ರಾಷ್ಟ್ರದ ಜನರು ನಿರುದ್ಯೋಗಿಯಾಗುವಂತೆ ಉಪಾಯಯೋಜನೆ ಮಾಡುವದು ಅತ್ಯಘಾತಕವಿದೆ. ಹಾವಿಗೆ ಕೊಂಡು ಹಟ್ಟಿಗೆ ಹಾಕುವ ಕಲ್ಪನೆಯಿದು. ಇದಲ್ಲದೆ, ಹೀಗೆ ಅಗಡಾದ ಮಾತಿ ಸ್ವಾರ್ಥದಿಂದ ಮಾಡಿದ ಉತ್ಪನ್ನವನ್ನೆಲ್ಲ ಬರತಕ್ಕ ಮೂಲಕ ಬಲಾತ್ಕಾರಕ್ಕೊಳಪಟ್ಟ ರಾಷ್ಟ್ರಕ್ಕೆ ಕೊಳ್ಳಲಾಗದೆ, ಬಲಾತ್ಕಾರ ಮಾಡುವ ರಾಷ್ಟ್ರವು ಪರ್ಯಾಯದಿಂದ ನಷ್ಟಪಡಬೇಕಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಯಿಂದ ಪರಸ್ಪರರಿಗುಂಟುಮಾಡುವ ಕಷ್ಟಗಳ ಫಲವನ್ನು ಪಾಶ್ಚಾತ್ಯರು ಉಂಡೇ ತೀರಬೇಕಾಗುವದು. ಖಾದಿಯ ಕಲ್ಪನೆಯು ಪಾಶ್ಚಾತ್ಯರಿಗೂ ಅನುಕರಣೀಯವಿದೆ. ಅಲ್ಲಿಯ ನಿರುದ್ಯೋಗಿ ಜನರು ಸ್ವದೇಶಗಳಲ್ಲಿ ಇದನ್ನು ಕೈಕೊಳ್ಳಬಹುದು.

ವೃತ್ತಸಾರ.

— ಪುದುಕೋಟೆಯ ೬ ಕ್ಕೆ ಒಂದು ಗ್ರಾಮದಲ್ಲಿ ಕುಂಭಾಭಿಷೇಕ ನೋಡಲು ಅರ್ಧ ಲಕ್ಷ ಜನರು ಸೇರಿದ್ದರು. ಪ್ರಮುಖ ಸಾರ್ವಜನಿಕ ಜಾತಿಯವರು ಭೋಜನ ಶಾಲೆಗೆ ಹೋಗುವಾಗ ಗದ್ದಲವಾಗಿ ಬೆಂಕಿಯು ಶಾಲೆಗೆ ಬಿದ್ದು ಹೊತ್ತಿಕೊಂಡಿತು. ಅದರಿಂದ ಜನಸಂದಣಿಯೊಳಗೆ ಗದ್ದಲವಾಯಿತು. ಪೋಲೀಸರು ಜನಸಂದಣಿಗೆ ಲಾಠಿ ಹೊಡೆಯಲಾರಂಭಿಸಿದರು. ಜನರು ರೇಗಿಗದ್ದು ಹತ್ತಿರದಲ್ಲಿದ್ದ ಪೋಲೀಸ ಸ್ಟೇಶನನ್ನು ನುಗ್ಗಿ ಒಳಗಿದ್ದ ಕಾಗದಪತ್ರಗಳನ್ನೂ ಪೋಲೀಸರ ಅಂಗಿ-ತೊಡಿಗೆಗಳನ್ನೂ ಸುಟ್ಟು ಹಾಕಿಬಿಟ್ಟರು. ಪೋಲೀಸರಿಗೂ, ಜಮೀನ್ದಾರವರಿಗೂ ಭಯಂಕರವಾದ ಕದನವಾಯಿತು. ಕೆಲ ಪೋಲೀಸರಿಗೆ ಪೆಟ್ಟಾಗಿದೆ. ಜನರಿಗೂ ಪೆಟ್ಟಾಗಿದೆ ಇದು ದೊಡ್ಡ ಅನರ್ಥ. ದೇವಾಲಯಕ್ಕೆ ಕೀಲಿ ಹಾಕಿ ಬಿಟ್ಟಿದ್ದಾರೆ. ಕುಂಭಾಭಿಷೇಕದ ವಿಧಿಯಲ್ಲಿ ಹೆಚ್ಚು ಕಡಿಮೆಯಾಗಿ ಶ್ರೀ ದೇವರು ಮುನಿದನೇನು?

— ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ೩ ನೇ ಅಧಿವೇಶನವು ಪುಣೆಯಲ್ಲಿ ಕಳೆದ ೩ ನೇ ತಾರೀಖಿಗೆ ನೆರವೇರಿತು. ಬಂಗಾಲದ ಸುಪ್ರಸಿದ್ಧ ಮುಖಂಡರಾದ ಶ್ರೀ ಸುಭಾಷಚಂದ್ರ ಬೋಸರು ಸಭಾಪತಿಗಳಾಗಿದ್ದರು. ಅಖಿಲ ಮಹಾರಾಷ್ಟ್ರವು ಮುಂಬಯಿ ಭೇದಗಳನ್ನೆಲ್ಲ ಮರೆತು ಐಕ್ಯಮತ್ಯದಿಂದ ಈ ಪರಿಷತ್ತನ್ನು ನೆರವೇರಿಸಿದೆ. ಅಧ್ಯಕ್ಷರ ಭಾಷಣವು ಮರಾಠಿ, ಇಂಗ್ಲಿಷಿನಲ್ಲಾಯಿತು; ಉಳಿದ ಕಾರ್ಯಕ್ರಮವೆಲ್ಲ ಮರಾಠಿಯಿಂದಲೇ ನಡೆಯಿತು. ಸ್ವಾತಂತ್ರ್ಯದ ಠರಾವು ಪಾಸಾಗಿದೆ; ಸೈಮನ ಕಮಿಶನನ್ನು ಬಹಿಷ್ಕರಿಸಬೇಕೆಂದು ನಿರ್ಧಾರವಾಗಿದೆ, ಬಾರ್ಡೋಲಿಯ ಚಳವಳಿಗಾರರಿಗೆ ಪುರಸ್ಕರಿಸಲಾಗಿದೆ; ಮಹಾರಾಷ್ಟ್ರದಲ್ಲಿ ಉಂಟಾದ ನೂತನ ಜಾಗೃತಿಯು ಈ ಪರಿಷತ್ತಿನಲ್ಲಿ ಪ್ರತಿಬಿಂಬಿತವಾಗಿ ರಾಷ್ಟ್ರದ ಅಭ್ಯುದಯ ತೋರ್ಪಡುವದು.

— ಸರ್ ಸತ್ಯೇಂದ್ರಪ್ರಸನ್ನ ಸಿಂಹರವರು ತೀರಿಕೊಂಡಿದ್ದು ಗೊತ್ತೇ ಇದೆ. ಇವರು ೧॥ ಕೋಟಿ ರೂಪಾಯಿಗಳ ಸಂಪತ್ತು ಉತ್ತರಾಧಿಕಾರಿಗಳಿಗೆ ಹಂಚುವ ಮೃತ್ಯುಪತ್ರವು ಈಗ ಪ್ರಕಟಗೊಂಡಿದೆ. ೫೫ ಲಕ್ಷ ರೂ. ಗಳು ಹಿರೇ ಮಗನಿಗೆ, ೨-೩ ನೇ ಮಗಂದಿರರಿಗೆ ಪ್ರತ್ಯೇಕ ೪೦-೪೦ ಲಕ್ಷ ರೂಪಾಯಿ; ಮೊಮ್ಮಕ್ಕಳಿಗೆ ಒಂದೊಂದು ಲಕ್ಷ ರೂಪಾಯಿ, ಧರ್ಮಕ್ಕೆ ೧ ಲಕ್ಷ ರೂಪಾಯಿ; ಹೆಂಡತಿಗೂ ೪ ನೇ ಮಗನಿಗೂ ಕೂಡಿ ೪೦೦೦ ರೂಪಾಯಿಗಳಂತೆ ವೇತನ ಕೊಟ್ಟು ಉಳಿದ ಹಣ ೪ ನೇ ಮಗನಿಗೆ. ಸತ್ಯೇಂದ್ರಪ್ರಸನ್ನರು ವಕೀಲಿಯಿಂದಲೇ ಇಷ್ಟು ದೊಡ್ಡ ಆಸ್ತಿ ಮಾಡಿದರು. ತಿಂಗಳಿಗೆ ೪೦ ಸಾವಿರ ರೂಪಾಯಿಗಳ ವರೆಗೆ ಇವರ ಸಂಪಾದನೆ. ಇಷ್ಟಾಗಿ ಮುಂಚಿನ ನಾಲ್ಕು ವರ್ಷ ಇವರಿಗೆ ಕೆಲಸವಿದ್ದಿಲ್ಲ. ಮೊದಲನೇ ಪ್ರಕರಣದ ಬಗ್ಗೆ ಇವರಿಗೆ ೩೪ ರೂಪಾಯಿ ಫೀ ನಿಶ್ಚಯವಾಗಿತ್ತು. ೩೪ ರೂಪಾಯಿ ಬೀಜದಿಂದ ೧॥ ಕೋಟಿ ರೂಪಾಯಿ ಫಲ ಹುಟ್ಟಿತು. ವಕೀಲರಿಗೆ ಬೀಜವು ಯಾವಾಗಲೂ ಪುಷ್ಟವಾಗಿ ರಕ್ತದಲ್ಲವೇ!

— ಬಂಗಾಲದ ಪ್ರಸಿದ್ಧ ದೇಶಭಕ್ತರಾದ ಡಾ॥ ಸುಧೀಂದ್ರ ಬೋಸರವರು ೨೫ ವರ್ಷಗಳ ಮೇಲೆ ಸ್ವದೇಶಕ್ಕೆ ಮರಳಿ ಬಂದಿದ್ದಾರೆ. ಅಮೇರಿಕೆಯೊಳಗಿನ ಪ್ರಸಿದ್ಧ ಅಯೋವಾ ವಿಶ್ವವಿದ್ಯಾಲಯದಲ್ಲಿ ಅವರು ಇತಿಹಾಸದ ಶಿಕ್ಷಕರಿದ್ದಾರೆ. ಇವರಿಗೆ ಹಿಂದುಸ್ಥಾನಕ್ಕೆ ಬರಲು ಈ ವರೆಗೆ ಬ್ರಿಟಿಶ ಸರಕಾರವು ಇಲ್ಲದ ಅಡ್ಡಿ ಮಾಡಿತು. ಪ್ರಯತ್ನದಿಂದ ಅವರು ಅಪ್ಪಣೆ ಪಡೆಕೊಂಡು ಸ್ವದೇಶಕ್ಕೆ ಮರಳಿ ಬಂದಿದ್ದಾರೆ. ಅಮೇರಿಕೆಯಲ್ಲಿ ಮಹಾತ್ಮರ ವಿಷಯ ಬಲು ಆದರವಿರುವದೆಂದು ಡಾ॥ ಸುಧೀಂದ್ರರು ಮುಂಬಯಿಯಲ್ಲಿ ಹೇಳಿದರು.

— ರಾಜಕೋಟ ಸಂಸ್ಥಾನಿಕರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಸಂಸ್ಥಾನದೊಳಗೆ ಹುಟ್ಟುವ ಸಾಮಗ್ರಿಗಳನ್ನು ಮಾತ್ರ ಸರಕಾರದ ಕೆಲಸಕ್ಕೆ ಉಪಯೋಗಿಸಲೇಬೇಕೆಂದು ಕಟ್ಟಪ್ಪಣೆಯಾಗಿದೆ. ಬ್ರಿಟಿಶ ಸರಕಾರಕ್ಕೊಂದು ಚಿತ್ರ. ಇದನ್ನು ಅವರು ಗ್ರಹಿಸುವದಿಲ್ಲವೇ?

— ಗುಜರಾಥದೊಳಗೆ ೧೦೦ ವ್ಯಾಯಾಮ ಶಾಲೆಗಳಿರುವವು. ಅವುಗಳಲ್ಲಿ ೨॥ ಸಾವಿರಕ್ಕೆ ಮಿಕ್ಕಿ ಜನರು ವ್ಯಾಯಾ

— ಹಿಂದುಸ್ಥಾನಿ ಸೇವಾದಳದ ಕರ್ನಾಟಕ ಸ್ವಯಂಸೇವಕ ಶಿಕ್ಷಣ ಶಿಬಿರದ ಎರಡನೆಯ ಸತ್ರಾರಂಭವು ತೀರ್ಥಹಳ್ಳಿಯಲ್ಲಿ ಪಂಡಿತ ತಾರಾನಾಥರವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಶ್ರೀ. ಕೇ. ವೆಂಕಟರಾಮಯ್ಯನವರು ಶಿಬಿರಾಧಿಪತ್ಯವನ್ನು ಸ್ವೀಕರಿಸಿ ಹಿಂದುಸ್ಥಾನೀ ಸೇವಾದಳದ ಮುಖಾಂತರ ರಾಷ್ಟ್ರಸೇವೆ ಮಾಡಲು ಶ್ರೀ ದೇವರನ್ನು ಸ್ಮರಿಸಿ ಪ್ರತಿಜ್ಞೆ ಮಾಡಿದ್ದಾರೆ. ಶಿಬಿರದಲ್ಲಿ ಶಿಕ್ಷಣ ಕೊಡುವ ಕಾರ್ಯವು ಚಲೋ ರೀತಿಯಿಂದ ಸಾಗಿದೆ. ಎರಡನೇ ಸತ್ರಾರಂಭಕ್ಕೆ ೧೦೦೦ಕ್ಕೆ ಮಿಕ್ಕಿ ಜನರು ಸೇರಿದ್ದರು.

ಪುಕ್ಕಟೆ! ಪುಕ್ಕಟೆ!! ಪುಕ್ಕಟೆ!!!

ಲಕ್ಷಾಧೀಶರಾಗಿರಿ!

ವರ್ಷಾವರ್ಷ ಸಾವಿರಾರು ಜನರು ಶ್ರೀಮಂತರಾಗುತ್ತಾರೆ; ನೀವೂ ಯಾಕೆ ಆಗಬಾರದು ?

೧೯೨೮ ನೇ ಇಸ್ವಿಯ ವ್ಯಾಪಾರದ ಭವಿಷ್ಯ.
(Commercial Forecast Report 1928)

ಈ ವರ್ಷ ನಿಮ್ಮ ವ್ಯಾಪಾರದಲ್ಲಿ ಸಕ್ಸೆಸ್ ತಿಳಿಯುವನ್ನು ಇದ್ದಕ್ಕಿದ್ದ ಹಾಗೆ ಹೇಳುವ ರಿಪೋರ್ಟ !

ಜಗತ್ಪ್ರಸಿದ್ಧ ಜ್ಯೋತಿಷಶಾಸ್ತ್ರಜ್ಞರು ಜೋಡಿಕೆ-ಪೂರ್ವಕಗಳ ಆಧಾರದ ಮೇಲೆ ೧೯೨೮ ನೇ ಇಸವಿಯ ವ್ಯಾಪಾರದ ಭವಿಷ್ಯವನ್ನು ಸಿದ್ಧಪಡಿಸಿದ್ದಾರೆ. ಈ ಜ್ಯೋತಿಷಿಗಳು ಬಹಳೇ ಪ್ರಖ್ಯಾತರು, ಈ ವಿಷಯದಲ್ಲಿ ಇವರ ಕೈಹಿಡಿಯುವವರು ಬೇರೊಬ್ಬರಿಲ್ಲ. ನಿಮ್ಮ ವ್ಯಾಪಾರದಲ್ಲೆಲ್ಲ ನಿಮಗೆ ಮಾರ್ಗದರ್ಶಕವಾಗಿ ನಡೆಯುವ ಸಂಗತಿಗಳನ್ನು ತಾರೀಖುವಾರ ಇದರ ಮೇಲಿಂದ ತಿಳಿಯಬಹುದು. ಜಗತ್ತಿನೊಳಗೆ ನಡೆಯುವ ಭಿನ್ನಭಿನ್ನ ವ್ಯಾಪಾರ ವಿಷಯಗಳ ಮೇಲೆ ಪ್ರತ್ಯೇಕ ವಿವರವು ಕೊಡಲ್ಪಟ್ಟಿದೆ. ವಿಚಾರ ಮಾಡಿ ಈ ಕೈಪಿಡಿಯನ್ನು ಸಂಗ್ರಹಿಸಿಕೊಳ್ಳಿ.

ಈ ಪುಸ್ತಕಕ್ಕೆ ಬರೇ ೫ ರೂಪಾಯಿ ಬೆಲೆ.

ತ್ವರೆ ಮಾಡಿರಿ ! ಸ್ವಲ್ಪವೇ ಪ್ರತಿಗಳು ಉಳಿದಿವೆ.

ಪ್ರಕಾಶಕರು:—

The Commercial Forecast Report 1928.

ಈ ರಿಪೋರ್ಟನ್ನು ಜಗತ್ತಿನಲ್ಲಿ ಮುಖ್ಯ ಮುಖ್ಯ ವರ್ತಕರು ಸಂಗ್ರಹಿಸುತ್ತಾರೆ.

ಬ್ರಿಟಿಶ ದೇಶದಲ್ಲಿಯೂ, ಪೌರ್ವಾತ್ಯ ದೇಶದಲ್ಲಿಯೂ ಈ ರೀತಿಯವರು ಈ ಪುಸ್ತಕಗಳನ್ನು ಪೂರೈಸುತ್ತಾರೆ.

SMITH CAMPBELL & COMPANY,
POST BOX NO 2056, **BOMBAY** (India)

ಪ್ರಚಂಡ ಸೋಡ್ತಿ.

ಮಂಗಳೂರಲ್ಲಿರುವ ಕೆನರಾ ಹೈಸ್ಕೂಲು ಮತ್ತು ಕೆನರಾ ಬಾಲಿಕೆಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮೆಜಿಸ್ಟ್ರೇಟರ ಅಪ್ಪಣೆ ಪಡೆದು ಪ್ರಮುಖ ಗೃಹಸ್ಥರ ನೇತೃತ್ವದಲ್ಲಿ ಒಂದು ಸೋಡ್ತಿ ತೆಗೆಯಲಾಗುವದು.

ಸೋಡ್ತಿಯ ಟಿಕೀಟಗಳು ೧ ಲಕ್ಷ. ಇವರೊಳಗಿಂದ ಖರ್ಚಿನ ಬಗ್ಗೆ ೧೫ ಸಾವಿರ ರೂಪಾಯಿಗಳನ್ನು ವಜಾ ಮಾಡಿ, ಉಳಿದ ಹಣದೊಳಗಿಂದ ೪೦ ಸಾವಿರ ರೂಪಾಯಿಗಳನ್ನು ಶಾಲೆಗಳಿಗೆ ಕೊಟ್ಟು, ೪೫ ಸಾವಿರ ರೂಪಾಯಿ ಬೆಲೆಯ ೩೦೪೩ ಇನಾಮುಗಳು ಈ ಕೆಳಗಿನಂತೆ ಹಂಚಲಾಗುವವು.

(೧) ಮೊದಲನೇ ಬಹುಮಾನವು ರೂ. ೭॥ ಸಾವಿರದ್ದು;
(೨) ರೂ. ೫೦೦೦ ದ್ದು;
(೩) ೧೦೦೦ ರೂಪಾಯಿಗಳ ೫ ಇನಾಮುಗಳು;
(೪) ೫೦೦ ರೂಪಾಯಿಗಳ ೩ ಇನಾಮುಗಳು;
(೫) ೨೫೦ ರೂಪಾಯಿಗಳ ೬ ಇನಾಮುಗಳು;
(೬) ೧೦೦ ರೂಪಾಯಿಗಳ ೧೦ ಇನಾಮುಗಳು;
(೭) ೫೦ ರೂಪಾಯಿಗಳ ೨೦ ಇನಾಮುಗಳು;
(೮) ೨೦ ರೂಪಾಯಿಗಳ ೧೦೦ ಇನಾಮುಗಳು;
(೯) ೧೦ ರೂಪಾಯಿಗಳ ೮೦೦ ಇನಾಮುಗಳು;
(೧೦) ೫ ರೂಪಾಯಿಗಳ ೨೦೦೦ ಇನಾಮುಗಳು.

ಟಿಕೀಟುಗಳು ತಾ ೪—೧—೨೯ನೇ ತನಕ ಸಿಗುವವು. ಸೋಡ್ತಿಯು ತಾ. ೨೬—೧—೨೯ನೇಗೆ ತೆಗೆಯಲಾಗುವದು. ಟಿಕೀಟಿನ ಬೆಲೆ ಬರೇ ೧ ರೂಪಾಯಿ. ೨೪ ಟಿಕೀಟುಗಳನ್ನು ಮಾರುವವರಿಗೆ ಪರಿಶ್ರಮದ ಬಗ್ಗೆ ೧ ಟಿಕೀಟು ಉಚಿತವಾಗಿ ಕೊಡಲ್ಪಡುವದು. ಎಲ್ಲರಿಗಿಂತಲೂ ಹೆಚ್ಚು ಟಿಕೀಟುಗಳನ್ನು ಮಾರುವವರಿಗೆ ವಿಶೇಷ ಬಹುಮಾನಗಳು ಸಿಗುವವು. ಲೋಕೋಪಕಾರ್ಯಕ್ಕೆ ಪಾತ್ರವಾದ ೨ ಸಂಸ್ಥೆಗಳಿಗೆ ನೆರವಾದ ಶ್ರೇಯಸ್ಸು ದೊರಕುವದು; ಕೆನರಾ ಹೈಸ್ಕೂಲಿನಲ್ಲಿ ಕೈಗಾರಿಕೆಯ ಶಾಖೆಯನ್ನು ಸ್ಥಾಪಿಸಲಿಕ್ಕೆ ಅನುಕೂಲತೆ ಮಾಡಿಕೊಟ್ಟಂತಾಗುವದು.

ಅಲ್ಲಲ್ಲಿ ಏಜಂಟರು ಬೇಕು. ಏಜಂಟರಾಗಲಿಚ್ಛಿಸುವವರು ಈ ಕೆಳಗಿನ ಪತ್ತೆಯ ಮೇಲೆ ಬರೆಯಬೇಕು.

ಮಂಗಳೂರ, | ಬಿ. ಮಂಜುನಾಥ ಬಾಳಿಗಾ.
ತಾ. ೧೪-೩-೧೯೨೮. | ಹಾನರರಿ ಸೆಕ್ರೆಟರಿ,

ಕೆನರಾ ಹೈಸ್ಕೂಲ ರೆಫಲ್ ಕಮಿಟಿ,
ಕ್ರಿಶ್ಚಿಯನ ಲೇನ, ಫಲನೀರ, ಮಂಗಳೂರು
ದಕ್ಷಿಣ ಕನ್ನಡ.

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವ ನಾರು, ಉತ್ತಮ ರೀತಿಯಿಂದ ತಯಾರಿಸಿದ ಕೈನೆಯ್ಗೆಯ ಕತ್ತದ ಚಾಪೆಗಳು ಸಿಗುತ್ತವೆ ದರ ಫೂಟಿಗೆ ೦-೯-೬



ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಚಲೋ ಕಟ್ಟಿಗೆಯಿಂದ ತಯಾರಿಸಿದ ಬಗೆ ಬಗೆ ಸವೆಯದ ಪೆಟ್ಟಿಗೆಗಳು ಹಾಗೆ ಮೋಟಾರ ಬಾಡಿ ಬಗ್ಗೆ ಸ್ಟ್ರಿಂಗ್ ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ. ಪೆಟ್ಟಿಗೆ ೧ ರ ಬೆಲೆ ರೂ. ೯ ಸೈಜು ೩'×೧'×೧'.

ಡೆಲಿವರಿ ಆರ್ಡರಿಯ ಜತೆ ರೂ. ೨—೦—೦ ಮುಂಗಡವಾಗಿ ಕಳಿಸಬೇಕು.

ವಿಳಾಸ:- ಎಸ್. ಎಮ್. ಪಂಡಿತ.

ಮೋಟಾರ ಟಿಕೀಟ ಆಫೀಸ, ದುರ್ಗಾಕೇರಿ. ಹೊನ್ನಾವರ (ಉ. ಕ.)

ಕಾನಡಾ ವೃತ್ತ.

ಮಿತಿ ವಿಭವ ಸಂ॥ ವೈಶಾಖ ಬ॥ ೩ ಗೆ, ಸೋಮವಾರ

ಹೊಲಗಳ ಪುನರ್ಘಟನೆ

ಡಾ॥ ಮೆನ್‌ರವರ ವಿಚಾರಗಳು

"ಮುಂಬಯಿ ಕೋಓಪರೇಟಿವ್ಹ ಕ್ವಾರ್ಟರ್ಲಿ" ಎಂಬ ತ್ರೈಮಾಸಿಕ ಪತ್ರಿಕೆಯ ಮಾರ್ಚ ತಿಂಗಳ ಸಂಚಿಕೆಯಲ್ಲಿ ಡಾ॥ ಹರೊಲ್ಡ ಎಚ್. ಮೆನ್‌ರವರು "ರೂರಲ್ ಇಂಡಸ್ಟ್ರೀ" ಅಂದರೆ, ಗ್ರಾಮದೊಳಗಿನ ಕೈಗಾರಿಕೆ ಎಂಬ ಸದರಿನಲ್ಲಿ ಒಂದು ವಿಚಾರ ಪರಿಪ್ಲುತವಾದ ಲೇಖ ಬರೆದಿದ್ದಾರೆ. ಈ ಲೇಖವು ಮನನೀಯವಿದೆ. ಡಾ॥ ಮೆನ್‌ರವರ ಪರಿಚಯವನ್ನು ನಾವು ಮಾಡಿಕೊಡುವದು ಬೇಡ. ಬೇಸಾಯ ಕಾಲೇಜಿನ ಮುಖ್ಯ ಸೂತ್ರಚಾಲಕರಾಗಿಯೂ, ಬೇಸಾಯ ಖಾತೆಯ ಡಾಯರೆಕ್ಟರ ಎಂಬ ಸರ್ವಚಾಲಕರಾಗಿಯೂ ಅವರು ಪಡೆದ ಅನುಭವವು ಅಮೂಲ್ಯವಿದೆ. ಇಷ್ಟಾಗಿ ಡಾ॥ ಮೆನ್‌ರವರು ಪ್ರಜೆಗಳ ಸ್ಥಿತಿ-ಗತಿಯನ್ನು ಅದಷ್ಟರ ಮಟ್ಟಿಗೆ ಸಹಾನುಭೂತಿಯಿಂದ ವಿಚಾರಿಸಿ, ಉಪಾಯಗಳನ್ನು ಕಲ್ಪಿಸುವವರು. ಇಂಥವರ ವಿಚಾರಗಳನ್ನು ಹೊಲಗಳ ಪುನರ್ಘಟನೆಯ ಮಯು ಸರಕಾರವೂ, ಪ್ರಜೆಗಳೂ ಪರಾಂಬರಿಸತಕ್ಕದ್ದು. ಲೇಖದ ಸದರು ಗ್ರಾಮದ ಕೈಗಾರಿಕೆಗಳೆಂದು ಇದ್ದಾಗ್ಯೂ, ಗ್ರಾಮಗಳಿಗೊದಗಿದ ರೋಗದ ನಿದಾನವನ್ನು ಡಾ॥ ಮೆನ್‌ರವರು ಚನ್ನಾಗಿ ವಿಚಾರಿಸಿ, ಅದನ್ನು ಪರಿಹರಿಸಲು ಗ್ರಾಮದಲ್ಲಿ ಕೈಗಾರಿಕೆಗಳನ್ನು ಪುರಸ್ಕರಿಸಬೇಕೆಂದು ಪ್ರತಿಪಾದಿಸಿದ್ದಾರೆ.

ಗ್ರಾಮಗಳು ಸುಸ್ಥಿತಿಯಲ್ಲಿಲ್ಲ. ಸಹಕಾರಿ ಕ್ರಮಗಳನ್ನು ಅನುಸರಿಸಿದ್ದಾಗ್ಯೂ ಸುಧಾರಿಸಿದ ಸಂಘಟನೆಯನ್ನು ಕೈಕೊಂಡಾಗ್ಯೂ ಅವುಗಳ ಸ್ಥಿತಿಯು ಸುಧಾರಿಸದು. ಗ್ರಾಮಾಂತರಗಳೊಳಗಿನ ಜನರು ಹೊಟ್ಟೆ ತುಂಬ ಉಣ್ಣುವದಿಲ್ಲ. ಮೈತುಂಬ ಉಡುವದಿಲ್ಲ; ಆದರಿಂದ ಅವರ ಸ್ಥಿತಿಯು ಕಂಗೆಟ್ಟಿದೆ, ಶಿಶುಗಳು ಹೆಚ್ಚಾಗಿ ಸಾಯುತ್ತಿವೆ, ಶಿಶು ಮರಣಕ್ಕೆ ಹೆಚ್ಚಾಗಿ ತಾಯಿ-ತಂದೆಗಳ ಅರೆಹೊಟ್ಟೆ ಉಣ್ಣೋಣವೇ ಪ್ರಮುಖ್ಯವಾಗಿ ಕಾರಣವೆಂದು ಹೆಸರಾದ ವೈದ್ಯ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇದರ ಕಾರಣವೇನು? ಎಂದು ಪ್ರಶ್ನಿಸಿದರೆ ಕಂಡವರು ತಮಗೆ ಕಂಡಂತೆ ಹೇಳುತ್ತಾರೆ. ಸಾವಕಾರರ ಪೀಡನೆಯಿಂದ ಗ್ರಾಮಗಳು ಕಂಗೆಟ್ಟವೆಂದು ಹೇಳುವ ಪ್ರಘಾತವೊಂದು ಬಿದ್ದಿತ್ತು. ಈ ಕಾರಣವು ಮಹತ್ವದ್ದಲ್ಲೆಂದು ಈಗ ಸ್ಪಷ್ಟವಾಗಿದೆ. ಇತ್ತಿತ್ತ ಇನ್ನೊಂದು ರೂಢಿಬಿದ್ದಿದೆ. ಹೊಲಗಳು ಚಿಕ್ಕ ಚಿಕ್ಕದಾಗಿ ಹಂಚಿಹೋದ್ದರಿಂದ ಸಾಗುವಳಿ ಮಾಡಲು ಪ್ರತಿಕೂಲವಾಗಿದೆಂದು ಅಂಬೋಣ. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಈ ಕುರಿತು ಕಾನೂನಿನ ಏರ್ಪಾಟಾಗಲಿಕ್ಕಿದೆ. ಈ ವಿಷಯವು ಮಹತ್ವದ್ದಿದ್ದಾಗ್ಯೂ, ತುಂಡುತುಂಡಾಗಿ ಬಿದ್ದ ಹೊಲಗಳನ್ನು ಪುನರ್ಘಟಿಸುವದರಿಂದ ಗ್ರಾಮಗಳ ಸ್ಥಿತಿಯು ಸುಧಾರಿಸದು. ಇನ್ನು ಕೆಲವರ ದೃಷ್ಟಿಯು ಗ್ರಾಮದೊಳಗಿನ ಲೋಕಸಂಖ್ಯೆಯ ಮೇಲೆ ಬಿದ್ದಿದೆ. ಗ್ರಾಮಗಳಲ್ಲಿ ಜನರಿಗೆ ಸಾಗುವಳಿ ಮಾಡಲು ಇನ್ನೂ ಹೆಚ್ಚಿನ ಭೂಮಿಯನ್ನು ಸಂಗ್ರಹಿಸಿ ಕೊಟ್ಟ ಹೊರತು ಗ್ರಾಮದ ಸ್ಥಿತಿಯು ಸುಧಾರಿಸಲಿಕ್ಕಿಲ್ಲವೆಂದು ಅವರ ಮತ. ಸಂಖ್ಯಾಬಲದ ಕಾರಣಗಳಲ್ಲಿ ಡಾ॥ ಮೆನ್‌ರವರಿಗೆ ತಥ್ಯಾಂಶ ತೋರುವದಿಲ್ಲ. ಗ್ರಾಮದೊಳಗಿನ ಕೆಲಸವು ಋತುಮಾನಕ್ಕೆಯಿಂದ ಹಂಗಾಮಿನಲ್ಲಿ ಸಾಕಾಗುವದಿಲ್ಲ. ಹಂಗಾಮಿನೊಳಗೆ ಹೊಬೀಜಗಳನ್ನ ಸವೇರಿಸಿಕೊಳ್ಳಲು ಅವರು ಹಗಲಿರುಳು ದುಡಿಯಬೇಕಾಗುತ್ತದೆ. ಇದಲ್ಲದೆ, ಗ್ರಾಮದೊಳಗಿನ ಹುಟ್ಟುವಳಿಯಿಂದ ಪ್ರತ್ಯಕ್ಷ ಸಾಗುವಳಿ ಮಾಡುವ ಒಕ್ಕಲಿಗರೂ, ಸಾಗುವಳಿ ಮಾಡದ ಒಡೆಯರೂ ಚರಿತಾರ್ಥವನ್ನು ಸಾಗಿಸಿಕೊಳ್ಳಬೇಕಾಗುತ್ತದೆ.

ಇವೆಲ್ಲ ಕಾರಣಗಳನ್ನು ಪರಾಂಬರಿಸಿ, ಯಾವ್ಯಾವ ಕಾರಣದಿಂದ ಎಷ್ಟೆಷ್ಟರ ಮಟ್ಟಿಗೆ ಗ್ರಾಮದ ಸ್ಥಿತಿ ಕಂಗೆಟ್ಟಿದೆಂದು ಹೇಳಲು ಸಾಧ್ಯವಿಲ್ಲ. ಆದರೆ, ಗ್ರಾಮ ದೈನ್ಯಕ್ಕೆ ಕಾರಣವಾಗಿರುವ ಇನ್ನೊಂದು ಪ್ರಕಾರವು ಇತ್ತ ಬೈಲಿಗೆ ಬಂದಿದೆ. ಗ್ರಾಮದೊಳಗಿನ ಬೇಸಾಯಕ್ಕೆ ಸಹಕಾರಿ ಕೈಗಾರಿಕೆಗಳು ನಾಮಶೇಷವಾದ್ದರಿಂದ ಹಳ್ಳಿಗಳು ಗತಿಗೇಡಾದವೆಂದು ಹೇಳಬಹುದು. ಈ ದೇಶದಲ್ಲಿಯ ಹವಾಮಾನದ ಮೂಲಕ ಬೇಸಾಯೋದ್ಯೋಗಿ ಜನರಿಗೆ ವರ್ಷದಲ್ಲಿ ೪-೫-೬ ತಿಂಗಳುಗಳ ತ ಆ ಕಡೆ ಕೆಲಸ ಮಾಡುವದು ಸಿಗುವದಿಲ್ಲ. ಆದರಿಂದ ಈ ಸಮಯ ಅವರಿಗೆ ತಕ್ಕ ಉದ್ಯೋಗವನ್ನು ಸಂಪಾದಿಸಿಕೊಡದಿದ್ದರೆ, ಇಂಥ ಪರುಷ ಕೆಲಸ ಮಾಡುವ ಒಕ್ಕಲಿಗರಿಗಂತು ಬಡವರಾಗಿರುವದು ಸಹಜವು. ಇದಕ್ಕಾಗಿಯೇ ಹಿಂದುಸ್ಥಾನದಲ್ಲಿ ಔದ್ಯೋಗಿಕ ಚಾಲನೆಯುಂಟಾಗಿದೆ. ಈ ಪ್ರಕಾರ ನಿರುದ್ಯೋಗಿಗಳಿಗಾಗಿ ದೊಡ್ಡ ದೊಡ್ಡ ಕಾರಖಾನೆಗಳನ್ನು ಒಮ್ಮೆಲೇ ಸ್ಥಾಪಿಸಿ, ನಿರುದ್ಯೋಗವನ್ನು ನೀಗಿಸಬೇಕೆಂದು ಹೇಳುತ್ತಾರೆ. ಆದರೆ, ಅದು ಸಾಧ್ಯ ಮಾತಲ್ಲ. ಮುಂಬಯಿಯೊಳಗಿನ ಗಿರಣಿಗಳಿಂದ ರತ್ನಾಗಿರಿ ಜಿಲ್ಲೆಯೊಳಗಿನ ಬೇಸಾಯಗಾರರಿಗೆ ಕೆಲ ಮಟ್ಟಿಗೆ ಉಪಕಾರವಾಗಿದೆ. ಆದರೂ, ಸಮಸ್ತರಿಗೆ ಇವುಗಳಿಂದ ಹೊಟ್ಟೆತುಂಬುವದಿಲ್ಲ.

ಈ ಪ್ರಶ್ನೆಯನ್ನು ಡಾ॥ ಮೆನ್‌ರವರು ಬಹು ಕಾಲದ ತನಕ ವಿಶೇಷ ಸೂಕ್ಷ್ಮ ಬುದ್ಧಿಯಿಂದ ಆಲೋಚಿಸಿದರಂತೆ. ಆದರೆ, ೨ ಉಪಾಯಗಳನ್ನು ಕಲ್ಪಿಸದಿದ್ದರೆ, ಗ್ರಾಮಗಳ ಸ್ಥಿತಿಯು ಎಷ್ಟಕ್ಕೂ ಸಮಾಧಾನಕರವಾಗದು. ಅವು ಯಾವವೆಂದರೆ:— (೧) ಭೂಮಿಯ ಬೆಳೆಯುಮಾನವನ್ನು ಹೆಚ್ಚಿಸಬೇಕು. (೨) ಗ್ರಾಮಗಳೊಳಗಿನ ಮುಂಚಿನ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು. ಇವನ್ನು ಕೈಕೊಂಡರೆ, ಗ್ರಾಮಗಳ ಸ್ಥಿತಿಯು ಸುಧಾರಿಸಬಲ್ಲದು. ಬೆಳೆಯುಮಾನವನ್ನು ಬೆಳೆಸುವ ಬಗೆಯನ್ನು ಮುಂದೆ ಯಥಾವಕಾಶ ಹೇಳುತ್ತೇವಾಗಿ ಡಾ॥ ಮೆನ್‌ರವರು ಅಭಿವಚನವನ್ನಿತ್ತಿದ್ದಾರೆ. ಹೆಚ್ಚಿನ ಬಂಡವಲು ಹಾಕದೆ ಬೆಳೆಯನ್ನು ಹೆಚ್ಚಿಸುವ ಉಪಾಯವನ್ನು ಡಾ॥ ಮೆನ್‌ರು ಸೂಚಿಸುವವರಿದ್ದಾರಂತೆ. ಈ ಲೇಖದಲ್ಲಿ ಕೈಗಾರಿಕೆಗಳ ವಿಷಯದ ಕಡೆಗೇ ಅವರು ಲಕ್ಷ್ಯ ಸೆಳೆದಿದ್ದಾರೆ. ಕೈರಾಟಿ—ಕೈ ಮಗ್ಗಗಳ ಉಪಾಯದಿಂದ ಮಹಾತ್ಮರು ಈ ಪ್ರಶ್ನೆಯನ್ನು ಬಿಡಿಸಲಪೇಕ್ಷಿಸಿದ್ದಾರೆ. ಇದು ಒಂದು ಪ್ರಕಾರವಾಯಿತು.

ಆದರೆ, ಡಾ॥ ಮೆನ್‌ರು ಇನ್ನೊಂದು ಪ್ರಕಾರ ಸೂಚಿಸಿದ್ದಾರೆ. ೧೯೨೬ನೇ ಇಸ್ವಿಯಲ್ಲಿ ಪುಣೆ ಪಟ್ಟಣದಲ್ಲಿ ಬೇಸಾಯ ಪ್ರದರ್ಶನವಾಯಿತು. ಆ ಕಾಲಕ್ಕೆ ಗ್ರಾಮಗಳ ಜೀವನಾಧಾರವಾಗಿರುವ ಬೇಸಾಯ ಸಹಕಾರಿ ಕಲ್ಪನೆಯು ತಮಗಾಗಲಿ, ತಮ್ಮ ಸಹಕಾರಿಗಳಿಗಾಗಲಿ ಇರಲಿಲ್ಲವೆಂದು ಡಾ॥ ಮೆನ್‌ರು ಉದ್ಗರಿಸುತ್ತಾರೆ. "ಕೈರಾಟಿಗಳ ಮೇಲೆ ನೂಲುತ್ತಾರೆ; ನೇಕಾರರಿದ್ದಾರೆ;" ಇಷ್ಟೇ ನಮ್ಮ ಕಲ್ಪನೆ. ದಕ್ಷಿಣ ಮಹಾರಾಷ್ಟ್ರದಲ್ಲಿ ಕಂಬಳಿಗಳನ್ನು ಮಾಡುತ್ತಾರೆ; ಆಟದ ಸಾಮಾನುಗಳನ್ನೂ, ತರತರದ ಅರಗಿನ ಸಾಮಾನುಗಳನ್ನೂ ಮಾಡಿ ಬೇಸಾಯಗಾರರು ತಮ್ಮ ಚರಿತಾರ್ಥವನ್ನು ಸಾಗಿಸುತ್ತಾರೆ ಇನ್ನೂ ಅನೇಕ ಕಲಾಕೌಶಲ್ಯಗಳಿವೆ. ಆದರಿಂದ ಮೊಟ್ಟಮೊದಲು ಬೇಸಾಯಗಾರರ ಉದ್ಧಾರ ಮಾಡಬಯಸುವವರು ಇದೇ ಇಲಾಖೆಯಲ್ಲಿ ಬೇಸಾಯಗಾರರ ಕಲಾಕೌಶಲ್ಯಗಳನ್ನು ಪರಿಶೋಧಿಸಿ ಒಂದು ಗ್ರಂಥವನ್ನು ತಯಾರಿಸತಕ್ಕದ್ದು. ಈ ವಿಷಯವು ಅತ್ಯಂತ ಮಹತ್ವದ್ದಿರುವದರಿಂದ ಕೂಡಲೆ ಈ ಕುರಿತು ವ್ಯವಸ್ಥೆಯಾಗಬೇಕಾಗಿ ಡಾ॥ ಮೆನ್‌ರವರು ಒತ್ತಿ ಹೇಳಿದ್ದಾರೆ.

ಇದಕ್ಕೊಂದು ಆಧಾರವನ್ನೂ ಡಾ॥ ಮೆನ್‌ರವರು ಹೇಳಿದ್ದಾರೆ. ಇಂಗ್ಲಂಡದಲ್ಲಿ ಈ ಪ್ರಕಾರದ್ದೊಂದು ಸಿರೀಜ್ ಶ್ರೇಣಿಯಾಗಿ ಅಲ್ಲಿ ರೂಢವಾಗಿರುವ ಚಿಕ್ಕ ಪುಟ್ಟ ಕಲಾಕೌಶಲ್ಯಗಳ ಗ್ರಂಥವೊಂದು ಪ್ರಕಟವಾಗಿದೆ. ಇಂಗ್ಲಂಡಕ್ಕಿಂತ ಹಿಂದುಸ್ಥಾನದಲ್ಲಿ ಇಂಥ ಪರಿಶೋಧನೆಯ ಆವಶ್ಯಕತೆಯು ವಿಶೇಷವಿದೆ. ಅಸ್ಪರ್ಧದೊಳಗಿನ

“ಎಗ್ರಿಕಲ್ಚರಲ್ ಇಕೊನೊಮಿಕ್ ಇನ್‌ಸ್ಟಿಟ್ಯೂಟ” ಎಂಬ ಬೇಸಾಯದ ಅರ್ಥಶೋಧನೆಯ ಸಂಸ್ಥೆಯು ಈ ಕಾರ್ಯವನ್ನು ಕಡೆಗಾಣಿಸಿದೆ. ಇಂಗ್ಲಂಡಕ್ಕಿಂತ ಪಟ್ಟಿದ ಹಿಂದುಸ್ಥಾನ ಪ್ರದೇಶದಲ್ಲಿ ಇಂಥ ಚೌಕಶಿ ನಡಿಸುವದು ೧೦ ಪಟ್ಟು ಅವಶ್ಯವೆಂದು ಡಾ| ಮೆನ್‌ರು ಉದ್ಗರಿಸುತ್ತಾರೆ. ಗ್ರಾಮದೊಳಗಿನ ಕಲಾಕೌಶಲ್ಯಗಳೇ ಗ್ರಾಮದವರ ಜೀವನಾಧಾರವೆಂದೂ, ಅಭ್ಯುದಯ ಕಾರಣವೆಂದೂ ಅವರು ಒತ್ತಿ ಹೇಳುತ್ತಾರೆ. ಕೊಆಪರೇಟಿವ್ ಇನ್‌ಸ್ಟಿಟ್ಯೂಟದವರಾಗಲಿ, ಇತರರಾಗಲಿ ಈ ಪರಿಶೋಧ ಕೆಲಸವನ್ನು ಕೈಕೊಳ್ಳಬೇಕಾಗಿಯೂ ಅವರ ಸೂಚನೆಯಿದೆ. ಈಗಿರುವ ಕೈಗಾರಿಕೆಗಳ ಜ್ಞಾನವಾದರೆ, ಹೊಸ ಕೈಗಾರಿಕೆಗಳನ್ನು ಈಗಿನ ಕೈಗಾರಿಕೆಗಳ ಮೂಲಾಧಾರದ ಮೇಲೆ ಕಲ್ಪಿಸಲು ಬರುವದಾಗಿಯೂ ಡಾ| ಮೆನ್‌ರವರ ಅಂಬೋಣವಿದೆ.

ಡಾ| ಮೆನ್‌ರವರ ಲೇಖದ ಅನುವಾದವನ್ನು ಸಮಸ್ತರೂ ಪರಾಂಬರಿಸತಕ್ಕದ್ದು. ಸಹಕಾರಿ ಸಂಘಗಳನ್ನು ನಿರ್ಮಿಸಿ ಲೋಕೋಪಕಾರ ಮಾಡಲುದ್ಯುಕ್ತರಾದವರೂ, ಬೇಸಾಯ ಪ್ರಯೋಗ ಹೊಲ ಮುಂತಾದ ಪ್ರಯತ್ನಗಳಿಂದ ದೇಶೋದ್ಧಾರ ಮಾಡಬಯಸುವವರೂ ಮೇಲ್ಕಂಡ ವಿಚಾರಗಳನ್ನು ಚನ್ನಾಗಿ ಪರಾಂಬರಿಸತಕ್ಕದ್ದು. ಹೊಲಗಳನ್ನು ಪುನರ್ಘಟಿಸಿ ಒಮ್ಮೆಲೇ ಬೇಸಾಯಗಾರರಿಗೆ ಕುಬೇರರನ್ನಾಗಿ ಪರಿಣಮಿಸಲು ಹಾತೊರೆದ ಸಂಕಲ್ಪವೂ ಸ್ವಲ್ಪ ಸಮಾಧಾನ ತಾಳಿಕೊಂಡು ವಿಚಾರ ಮಾಡತಕ್ಕದ್ದು. ಹೊಲಗಳ ಪುನರ್ಘಟನೆಯ ಕಾನೂನನ್ನು ಡಾ| ಮೆನ್‌ರು ಉಲ್ಲೇಖಿಸಿ, ಅದರಿಂದ ಬೇಸಾಯಗಾರರ ಉದ್ಧಾರವಾಗುವದೆಂದು ಹೇಳಲಿಲ್ಲ; ಇಷ್ಟಕ್ಕೇ ಅವರು ತಡೆಯದೆ, ವಿಶೇಷ ಭಂಡವಲಿಲ್ಲದೆ ಭೂಮಿಯ ಬೆಳೆಯನ್ನು ಅಭಿವೃದ್ಧಿಗೈಯುವ ಉಪಾಯವನ್ನು ಮುಂದೆ ಹೇಳುತ್ತೇವಾಗಿ ಹೇಳಿ, ಗ್ರಾಮಗಳೊಳಗಿನ ಕಲಾಕೌಶಲ್ಯಗಳ ಯಾದಿಯನ್ನು ಕೂಡಲೆ ತಯಾರಿಸಬೇಕಾಗಿ ಅತ್ಯಾಗ್ರಹದಿಂದ ಹೇಳಿದ್ದಾರೆ. ಇದನ್ನು ಸರಕಾರವೂ, ಸಹಕಾರಿಗಳೂ ಲಕ್ಷಿಸಿ, ಈ ಕಡೆ ಲಕ್ಷ ಪೂರೈಸಬೇಕಾಗಿ ನಮ್ಮದೂ ಒಂದು ಬಿನ್ನಹ ಇದೆ. ರಿಚರ್ಡ ಗ್ರೇಗರರವರು ಖಾದಿಯ ಅರ್ಥಶಾಸ್ತ್ರದ ಮೇಲೆ ಬರೆದ ಕೃತಿಯ ತಾತ್ಪರ್ಯವನ್ನು ಇನ್ನೊಂದೆಡೆ ಪ್ರಕಟಿಸಿದ್ದೇವೆ. ಅದರ ಮೇಲಿಂದಾದರೂ ಡಾ| ಮೆನ್‌ರ ಹೇಳಿಕೆಗೇ ಬೆಂಬಲ ದೊರಕುತ್ತದೆ. ಹಿಂದುಸ್ಥಾನದಲ್ಲಿ ಮಾನವ ಯಂತ್ರಕ್ಕೆ ಸಾಕಷ್ಟು ಕೆಲಸ ಸಿಗದ್ದರಿಂದ ಉಂಟಾದ ದೈನ್ಯವೇ ದೊಡ್ಡದು; ಅದನ್ನು ನೀಗಿಸಲು ಕಲ್ಪಿಸುವವರೇ ಲೋಕೋಪಕಾರಿಗಳು ಎಂದು ಗ್ರೇಗರವರೂ ಆಗ್ರಹಪೂರ್ವಕವಾಗಿ ಹೇಳುತ್ತಾರಲ್ಲವೇ!

ಸ್ಫುಟ ಸೂಚನೆಗಳು.

೧. ಲೋಕೋಪಕಾರದ ತರತರದ ವೇಷಗಳನ್ನು ಕಾಣಿಸಲು ನಮ್ಮ ಅರಸರಷ್ಟು ಚತುರರು ಬೇರೊಬ್ಬರಿಲ್ಲ. ಇತ್ತ ೭-೮ ವರುಷಗಳಲ್ಲಿ ಅನೇಕ ಪ್ರಕಾರದ ಚೌಕಶಿಗಳು ನಡೆದವು. ಒಂದರಿಂದಾದರೂ ಪ್ರಜೆಗಳಿಗೆ ಹೇಳತಕ್ಕಂಥ ಲಾಭವಾಯಿತೆಂದು ಎದೆ ತಟ್ಟಿ ಯಾರು ಹೇಳಬಲ್ಲರು? ಮದ್ಯಪಾನನಿಷೇಧದ ಕಮಿಟಿಯಾಯಿತು; ಜಂಗಲ ಕಮಿಟಿಯಾಯಿತು; ಕರ ಆಕರಣಿ ವಿಷಯದ ಕಮಿಟಿಯಾಯಿತು; ಹೀಗೆ ಎಷ್ಟೋ ಕಮಿಟಿಗಳಾದವು; ಒಂದಿಲ್ಲೊಂದು ಕಾರಣದಿಂದ ಯಾವದೇ ಕಮಿಟಿಯಿಂದ ಪ್ರಜೆಗಳಿಗೆ ಲಾಭವಾಗಲಿಲ್ಲ. ಮುಂಬಯಿ ಇಲಾಖೆಯಲ್ಲಿ, ಪ್ರಮುಖ್ಯವಾಗಿ ಮುಂಬಯಿ ಪಟ್ಟಣದಲ್ಲಿ ಭಿಕ್ಷೆಯ ಉದ್ಯೋಗದಿಂದ ಜೀವನ ಸಾಗಿಸುವವರ ಉಪದ್ರವನ್ನು ನೀಗಿಸಲು ಸ್ಟಾರ್ಕರವರ ನೇತೃತ್ವದಲ್ಲಿ ಒಂದು ವಿಚಾರ ಮಂಡಳ ನೇಮಿಸಿತ್ತು. ಅವರ ಕಡೆಯಿಂದ ರಿಪೋರ್ಟ ಸರಕಾರದ ಕೈಸೇರಿ ೨ ವರ್ಷಗಳಾದವು. ೨ ವರ್ಷಗಳ ಮೇಲೆ ಸರಕಾರವು ತನ್ನ ಅಭಿಪ್ರಾಯವನ್ನು ಪ್ರಕಟಿಸಿದೆ:—“ಸ್ಟಾರ್ಕರವರು ಬರೆದ ರಿಪೋರ್ಟ ಅಮೂಲ್ಯವಿದೆ. ಈ ಬಗ್ಗೆ ಸ್ಟಾರ್ಕರವರಿಗೆ ಪ್ರಶಂಸೆ. ಅವರು ತಯಾರಿಸಿದ ಯೋಜನೆಯಂತೆ ಸರಕಾರವು ವಿಶೇಷ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಹಣದ ಅಡಚಣೆಯಿರುವದರಿಂದ ಈ ಯೋಜನೆಯಂತೆ ಕೆಲಸ ಮಾಡಲು ಸರಕಾರವು ಅಸಮರ್ಥವಿರುವದೆಂದು ನಮೂದಿಸಲಿಕ್ಕೆ ಸರಕಾರಕ್ಕೆ ವ್ಯಸನವಾಗಿದೆ.” ಈ ಅಭಿಪ್ರಾಯವನ್ನು ಕೇಳಿ, ಸರಕಾರದ ವ್ಯಸನವು ಸತ್ಯವೆಂದು ಯಾರು ಹೇಳರು? ಭಿಕ್ಷೆ ಬೇಡುವವರ ಉಪದ್ರವವನ್ನು ನೀಗಿಸಲು ಸರಕಾರಕ್ಕೆ ಖರ್ಚು ತಗಲವೆಂದು ಸರಕಾರದ ಗ್ರಹಿಕೆಯಿತ್ತೇನ? ಸರಕಾರಕ್ಕೆ ದ್ರವ್ಯಾಭಾವವಿದ್ದಿದ್ದರೆ, ಅದನ್ನು ಲಕ್ಷಿಸದೆ, ಸ್ಟಾರ್ಕರವರು ಬರೆದ ರಿಪೋರ್ಟ ಹೇಗೆ ಅಮೂಲ್ಯವು? ಪ್ರಶಂಸಾಪಾತ್ರವಾದರೂ ಹೇಗೆ? ವ್ಯವಹಾರ ಕುಶಲರು ವ್ಯವಹಾರಕ್ಕನುಕೂಲವಾಗಿ ಸೂಚನೆಗೈಯದಿದ್ದರೆ, ಆ ಸೂಚನೆಗಳೆಲ್ಲ ನಿರರ್ಥಕವಲ್ಲವೇ? ಇದರ ಮೇಲಿಂದ ಒಂದು ಸೂಚನೆಯನ್ನು ನಾವು ಸರಕಾರಕ್ಕೆ ಮಾಡಬಯಸುತ್ತೇವೆ. ಲೋಕೋಪಕಾರದ ಚೌಕಶಿ ಮಂಡಳಗಳನ್ನು ನೇಮಿಸುವಾಗ ಅವುಗಳಿಗೆ ಅಕ್ಕಿ ಖರ್ಚಾಗದಂತೆ, ಅಕ್ಕನ ಮಕ್ಕಳು ಬಡವಾಗದಂತೆ ಪ್ರಜೋದ್ಧಾರದ ಮಹಾ ದೊಡ್ಡ ಯೋಜನೆಗಳನ್ನು ಘಟಿಸಲು ಸರಕಾರವು ಅಪ್ಪಣೆ ಮಾಡಬೇಕು; ಚೌಕಶಿ ಮಾಡುವವರಿಗೆ ಚೌಕಶಿಯ ಖರ್ಚನ್ನು ಸಹ ಪರಸ್ಪರ ಎತ್ತುವಳಿ ಮಾಡಲು ಅಪ್ಪಣೆಯಾಗಬೇಕು. ಅಂದರೆ, ಅಮೂಲ್ಯವಾಗಿರುವ, ಪ್ರಶಂಸೆಗೆ ಪಾತ್ರವಾಗಿರುವ ಚೌಕಶಿ ಮಂಡಳದವರು ಪರಿಶ್ರಮಪೂರ್ವಕವಾಗಿ ತಯಾರಿಸಿರುವ ರಿಪೋರ್ಟುಗಳನ್ನು ದಪ್ತರಗಳಲ್ಲಿ ಚಿತ್ತಟ್ಟಿಗೆ ಗಟ್ಟಿಯಾಗಿ ಕಟ್ಟಿಟ್ಟು ವ್ಯಸನಗೊಳ್ಳುವ ಕಷ್ಟಪ್ರಸಂಗವು ಸರಕಾರಕ್ಕೆ ಬರದು.

---

೨. ಬಳ್ಳಾರಿಯ ಶ್ರೀ|| ತಾಡಪತ್ರಿ ರಾಘವಾಚಾರ್ಯರವರು ಕಳೆದ ಬುಧವಾರ ತಾ. ೨ ನೇಗೆ ಕೊಲಂಬೋ ನಗರದಿಂದ ಪಾಶ್ಚಾತ್ಯ ದೇಶಗಳಲ್ಲಿ ಸಂಚರಿಸಹೊರಟಿದ್ದಾರೆ. ಭಾರತ ನಾಟ್ಯಪ್ರಚಾರಕ್ಕಾಗಿಯೂ, ಭಾರತ ನಾಟ್ಯದಲ್ಲಿ ಪಾಶ್ಚಾತ್ಯರ ನಾಟ್ಯವಿಚಾರದಿಂದ ಕೈಕೊಳ್ಳಬಹುದಾದ ಸುಧಾರಣೆಗಳ ವಿಚಾರವಾಗಿಯೂ ಶ್ರೀ| ರಾಘವಾಚಾರ್ಯರು ಪಾಶ್ಚಾತ್ಯ ದೇಶಗಳಿಗೆ ಹೊರಟಿದ್ದಾರೆ. ಇದಕ್ಕಾಗಿ ರಾಘವಾಚಾರ್ಯರನ್ನು ಮನಸಾರೆ ನಾವು ಅಭಿನಂದಿಸಿ ಉದ್ದಿಷ್ಟ ಕಾರ್ಯವು ಸಾರ್ಥಕವಾಗಲೆಂದು ಬಯಸುತ್ತೇವೆ. ಶ್ರೀಯುತರು ಬಿ. ಎ., ಬಿ. ಎಲ್., ವರೆಗೆ ಕಲಿತು ಬಳ್ಳಾರಿಯಲ್ಲಿ ವಕೀಲಿಯನ್ನು ನಡಿಸುತ್ತಾರೆ. ಹೆಸರಾದ ವಕೀಲರಿವರು. ಕರ್ನಾಟಕ ರಂಗಭೂಮಿಯ ಪ್ರೀತಿಯು ಇವರಿಗೆ ವಿಶೇಷ. ಅಭಿನಯಕುಶಲರಿವರು. “ದೀನಬಂಧು ಕಬೀರ” ನಾಟಕವನ್ನಾಡಿ ಇವರು ಮಹಾತ್ಮರ ಶಿಫಾರಸು ಪಡೆದಿದ್ದಾರೆ. ನಾಟ್ಯಕಲೆಯ ಅಭಿಮಾನವೆಷ್ಟೆಂಬ ಬಗ್ಗೆ ಬೆಂಗಳೂರಿನ ‘ರಂಗಭೂಮಿ’ಯಲ್ಲಿ ಪ್ರಕಟವಾದ ಒಂದೇ ಉದಾಹರಣವನ್ನು ವಾಚಕರಿಗೆ ಹೇಳುವೆವು. ಬೆಂಗಳೂರಿನಲ್ಲಿ ನಾಟಕ; ಮಾರನೇ ದಿನ ಬಳ್ಳಾರಿಗೆ ಹೋಗತಕ್ಕದ್ದು; ಇಂಥ ಸಂದರ್ಭದಲ್ಲಿಯೂ ಶ್ರೀ|| ರಾಘವಾಚಾರ್ಯರು ಬೆಂಗಳೂರಿಗೆ ಬಂದು, ತಾವು ವಹಿಸಿಕೊಂಡ ಪಾತ್ರದ ಕೆಲಸವನ್ನು ನಿರ್ದೋಷವಾಗಿ ಅಭಿನಯಿಸಿ, ಕೂಡಲೆ ಬಳ್ಳಾರಿಗೆ ಹೋಗುತ್ತಿದ್ದರು. ಇಷ್ಟು ನಾಟ್ಯಪ್ರೇಮವು ಅವರಲ್ಲಿದೆ. ಅವರು ಸುಶಿಕ್ಷಿತರೂ, ಸುಶೀಲರೂ ಆಗಿರುವದರಿಂದ ಕರ್ನಾಟಕ ರಂಗಭೂಮಿಗೆ ಇವರ ಸೇವೆಯಿಂದ ದೊಡ್ಡದೊಂದು ಉಪಕಾರವಾಗಿದೆ. ಎಮೆಚೂರ ನಾಟಕ ಸಂಘದವರು ಬೆಂಗಳೂರಿನ ಕೋಲಿಜಿಯೇಟ ಹೈಸ್ಕೂಲಿನಲ್ಲಿ ಸಂತೋಷ ಕೂಟವನ್ನು ನೆರವೇರಿಸಿ, ಶ್ರೀ|| ರಾಘವಾಚಾರ್ಯರಿಗೆ ಹರಸಿದರು. ಶ್ರೀಯುತರು ನಾಟ್ಯಪ್ರಪಂಚದ ಚಕ್ರವರ್ತಿಯೆನಿಸಿಕೊಂಡು, ಭರತ ಖಂಡಕ್ಕೆ ಕೀರ್ತಿಪ್ರದರಾಗಲೆಂದು ಪೂಜ್ಯ ಅಧ್ಯಕ್ಷರಾದ ಪಂಡಿತ ತಾರಾನಾಥರವರು ಆಶೀರ್ವದಿಸಿದರು. ದಕ್ಷಿಣ ಹಿಂದುಸ್ಥಾನದಲ್ಲಿ ಆದರ್ಶಭೂತವಾದ ರಾಷ್ಟ್ರೀಯ ರಂಗಭೂಮಿಯನ್ನು ಸ್ಥಾಪಿಸಿ, ಅದರಿಂದ ನಾಟ್ಯಶಾಸ್ತ್ರದಲ್ಲಿ ತಕ್ಕ ಮಾರ್ಪಾಟುಗಳನ್ನು ಏರ್ಪಡಿಸಬೇಕಾಗಿ ಶ್ರೀ|| ತಾಡಪತ್ರಿ ರಾಘವಾಚಾರ್ಯರ ಸಂಕಲ್ಪವಿದೆ. ಈ ಸಂಕಲ್ಪವನ್ನು ಭಗವಂತನು ಅವರ ಕಡೆಯಿಂದ ನೆರವೇರಿಸಿಕೊಳ್ಳುವಂತೆ ಅನುಗ್ರಹಿಸಬೇಕಾಗಿ ಪ್ರಾರ್ಥಿಸಿ, ನಾವು ಶ್ರೀ|| ರಾಘವಾಚಾರ್ಯರಿಗೆ ಸುಪ್ರಯಾಣವನ್ನು ಬಯಸುವೆವು.

---

೩. ಬಾರ್ಡೋಲಿಯ ವೃತ್ತಾಂತವನ್ನು ಪ್ರಜೆಗಳೆಲ್ಲರೂ ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ, ಬಹಳ ಲಾಭವಿದೆ. ಸರಕಾರಿ ಅಧಿಕಾರಿಗಳು ನ್ಯಾಯಾನ್ಯಾಯದ ಅರಿವನ್ನು ಚಿತ್ತಟ್ಟಿಗೆ ಬಿಟ್ಟು ವರ್ತಿಸುತ್ತಿರುವಾಗ, ಪ್ರಜೆಗಳು ಅವರಿಗೆ ಇದಿರಾಗುವ ಬಗೆಯನ್ನು ಪ್ರತ್ಯಕ್ಷವಾಗಿ ಬಾರ್ಡೋಲಿಯವರು ಕಲಿಸುತ್ತಿದ್ದಾರೆ. ಅತ್ಯಾಚಾರಕ್ಕೆ ಯಾವದೇ ಪ್ರಕಾರದಿಂದ ಮಾನವನು ದುರ್ಬಲಮನಸ್ಕನಾಗಿ ಬಲಿಬಿದ್ದರೆ, ಸಶಸ್ತ್ರ ಸರಕಾರವು ನಮಗೆ ಕೂಡಲೆ ದಂಡಿಸಿ ನಮ್ಮ ನೈತಿಕ ಮೂಲಾಧಾರವನ್ನೇ ಅಪಹರಿಸುತ್ತದೆ. ಅದರಿಂದ ಸಮಾಜಘಾತಕ ಹಿಂಸೆಯನ್ನು ಪ್ರಜೆಗಳು ಆಶ್ರಯಿಸಲಾರರು. ಸುಸಂಘಟಿತರಾಗಿ ಅಹಿಂಸೆಯಿಂದಲೇ ಪ್ರಜೆಗಳು ಸರಕಾರಕ್ಕೆದಿರಾಗಬಲ್ಲರು. ಈ ಪ್ರಯೋಗವು ಬಾರ್ಡೋಲಿಯಲ್ಲಿ ನಡೆದಿದೆ. ಅದಕ್ಕೆ ಪ್ರಕಟ ಕಲೆಕ್ಟರರಂಥ ದೊಡ್ಡ ದೊಡ್ಡ ಅಧಿಕಾರಿಗಳೂ ಪಾತಕವರ್ಗವನ್ನು ಅನುಕರಿಸಲು ಬೇಸರಪಡು

ತ್ತಾರೆಂದು ನಾವು ಹೇಳಬಹುದು. ತಾಲೂಕ ಬೋರ್ಡಿನವರು ತಮ್ಮ ಧರ್ಮಶಾಲೆ-ದಿ ಕಟ್ಟಡಗಳಲ್ಲಿ ಅಧಿಕಾರಿಗಳು ವಾಸ ಮಾಡದಂತೆ ಹುಕುಮು ಮಾಡಿದ ಸಾಹಸಕ್ಕಾಗಿ ಅವರಿಗೆ ನಾವು ಕೊಂಡಾಡುವೆವು. ಬಹಿಷ್ಕರಿಸಿದ ಜನಗಳ ಕೆಲಸವು ಮಾಡಲು ಸರಕಾರವು ಪರರನ್ನು ನೇಮಿಸಿಕೊಳ್ಳಬೇಕಾದ ಪ್ರಸಂಗವು ನಿಜವಾಗಿ ಶೋಚನೀಯವು. ಪ್ರಜೆಗಳ ನಿರ್ಧಾರವು ಈ ಸಂಗತಿಯ ಮೇಲಿಂದ ಸ್ಫುಟವಾಗುತ್ತದೆ. ಬೋರ್ಡಿನ ದೊಡ್ಡಿಗಳಲ್ಲಿ ದನಗಳನ್ನಿಡಲು ಬೋರ್ಡಿನವರು ಒಪ್ಪದ್ದರಿಂದ ಪಹರೆ ಅಧಿಕಾರರಿಗೆ ದೊಡ್ಡದೊಂದು ಸಂಕಟವಾಗಿದೆ. ತಾಲೂಕ ಬೋರ್ಡು "ಸ್ಥಾನಿಕ ಸ್ವರಾಜ್ಯ" ಶಬ್ದ ಸಮುಚ್ಚಯದೊಳಗಿನ 'ಸ್ವರಾಜ್ಯ' ಶಬ್ದದ ಸತ್ವಪರೀಕ್ಷೆ ಮಾಡಲುದ್ಯುಕ್ತವಾಗಿವೆ. ಇಷ್ಟು ಸ್ವರಾಜ್ಯವನ್ನು ಪ್ರದರ್ಶಿಸಿದ್ದಕ್ಕಾಗಿ ಬೋರ್ಡಿಗೆ ಸರಕಾರವು ಹ್ಯಾಗೆ ದಂಡಿಸುತ್ತದೆಂಬುದು ನೋಡಬೇಕಾಗಿದೆ. ನಮ್ಮ ಜಿಲ್ಲಾ ಬೋರ್ಡಿನ ಬಳಿ ಸೈಮನ್ ಕಮೀಶನಿನ ಪ್ರಶ್ನಾವಳಿಯು ಉತ್ತರಕ್ಕಾಗಿ ಬಂದಿರುವದಾಗಿ ತಿಳಿಯುತ್ತದೆ. ಈ ಕುರಿತು ಹಿಂದಿನ ಸ್ಥಾನದಲ್ಲಿ ಜಿಲ್ಲಾ ಬೋರ್ಡಿನ ಸಭೆಯಾಗುಂದಿದ್ದ ಸೈಮನ್ ಕೂಟದ ವಿಷಯವು ಹಿಂದುಸ್ಥಾನದಲ್ಲಿ ಬಹಿಷ್ಕಾರದ ಐಕ್ಯಮತ್ಯವಾಗಿರುವದರಿಂದ ನಮ್ಮ ಜಿಲ್ಲಾ ಬೋರ್ಡಿಗೆ ಬಾದೋರ್ಲಿ ತಾಲೂಕ, ಲೋಕಲ್ ಬೋರ್ಡಿನಷ್ಟು ಸಾಹಸ ತೋರಿಸಲಿಕ್ಕಾಗದಿದ್ದರೂ, ಪ್ರಶ್ನಾವಳಿಗೆ ಉತ್ತರ ಕೊಡದೆ ಸುಮ್ಮಗಿರುವಷ್ಟು ಅಧಿಕಾರವಾದರೂ ಇದ್ದೇ ಇದೆ. ಇಷ್ಟನ್ನಾದರೂ ಅವರು ಆಚರಿಸಬೇಕಾಗಿ ಬಾದೋರ್ಲಿ ಬೋರ್ಡಿನ ಉಲ್ಲೇಖವನ್ನು ಮುಂದಿಟ್ಟು ಮಾಡಿರುತ್ತೇವೆ.

ಸ್ಥಾನಿಕ ವೃತ್ತಾಂತ.

ಕುಮಟಾ— ವಿಪರೀತ ಸೆಕೆ. ಮದುವೆ-ಮುಂಜಿ ಮುಂತಾದ ಶುಭ-ಶೋಭನ ಕಾರ್ಯಗಳು ಜರಗುತ್ತಲಿವೆ. ಹೆಗಡೆಯಲ್ಲಿ ಪ್ಲೇಗು ಜೋರಿದೆ. ಒಂದೆಡೆ ಮಿಂಚು ಬಿದ್ದು ೩ ತೆಂಗಿನಮರಗಳು ಸುಟ್ಟುಹೋದವು. ಹೆಗಡೆಯ ರಾ| ರಾಘವೇಂದ್ರ ಬಟ್ಟಪ್ಪ ಶ್ಯಾನಭಾಗರ ಮನೆಯಲ್ಲಿ ಹಿಂದು ಆಕಳಿಗೆ ಅವಳಿ-ಜವಳಿ ಕರುಗಳು ಹುಟ್ಟಿದವು; ಒಂದು ಹೆಣ್ಣುಕರು; ಒಂದು ಗಂಡುಕರು ಒಂದು ೩ ದಿನ ಉಳಿದು ತೀರಿಕೊಂಡಿತು. ಇಲ್ಲಿಯ ಮ್ಯುನಿಸಿಪಾಲಿಟಿಯು ಮಾರ್ಗಗಳ ಮೇಲೆ ನೀರು ಹಾಕುವ ಪ್ರಯೋಗವನ್ನು ನಿಲ್ಲಿಸಿದೆ. ಶ್ರೀ ಗ್ರಾಮದೇವಸ್ಥಾನದ ಬಂಡೀ ಹಬ್ಬವು ವಿಜೃಂಭಣೆಯಿಂದ ನೆರವೇರಿತು.

ಮುದ್ದಗುಣೆಯ ರಾ। ಶಂಭು ಶಂಭು ಭಟ್ಟರವರು ಎಲ್. ಎಜಿ. ಅಂದರೆ, ಬೇಸಾಯ ಶಿಕ್ಷಣದ ಉಚ್ಚತರಗತಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ರಾ| ಶಂಭು ಭಟ್ಟರು ತಮ್ಮ ವಿದ್ಯೆಯ ಉಪಯೋಗವನ್ನು ಬೇಸಾಯದ ಸುಧಾರಣೆಗಾಗಿ ಮಾಡಬಹುದು.

ಗೋಕರ್ಣದೊಳಗಿನ ಸಂಗಮು ಸಂಕಪ್ಪ ತೀರ ಜೀರ್ಣವಾಗಿದೆ. ಸಂಗಮದಲ್ಲಿ ಸಂಚಯವಾದ ನೀರಿನಿಂದ ಹೊಲಸು ವಾಸನೆ ಬರುತ್ತದೆ. ಇದು ರೋಗಕಾರಕವು. ಮ್ಯುನಿಸಿಪಾಲಿಟಿಯ ಸಭಾಸದರು ಕಣ್ಮುಚ್ಚಿಕೊಂಡು ತಿರುಗದೆ ಸ್ವಲ್ಪ ಜಾಗೃತರಾಗಬೇಕು. ಸಂಗಮದಲ್ಲಿ ಈ ನೀರು ನಿಲ್ಲದಂತೆ ಕೋಡಿ ಹೊಡೆಸು ಕೊಡಬಹುದು; ಅಥವಾ ಉಸುಬನ್ನಾದರೂ ತುಂಬಿ ಹೊಲಸು ವಾಸನೆ ಬರದಂತೆ ಏರ್ಪಾಟು ಮಾಡಬಹುದು.

ಅಂಕೋಲಾ— ಸೆಕೆ ಬಹಳ. ಶುಕ್ರವಾರ ರಾತ್ರಿ ಮಳೆ ಹನಿಸಿತು. ಓಕಳಿ ಹಬ್ಬವು ಸೋಮವಾರಕ್ಕೆ ನೆರವೇರಿತು. ೩, ೪ ದಿನ ತಡವೇಕಾಯಿತು ಎಂದು ಎಲ್ಲರೂ ಕೇಳುತ್ತಾರೆ. ಮದುವೆ-ಮುಂಜಿಗಳ ಗಲಾಟೆ.

ಶುಕ್ರವಾರಕ್ಕೆ ಪಟ್ಟಣ ಮೋಟಾರ ಸರ್ವೀಸಿನ ಮೋಟಾರು ಕಾರವಾರಕ್ಕೆ ಹೋಗುವ ಇಂಜಿನಿಯರ ರಸ್ತೆಯಿಂದ ೧೯ ಮೈಲು ಕಲ್ಲಿನ ಬಳಿ, ಅಂದರೆ, ೧ ಮೈಲು ಅಂತರದ ಮೇಲೆ ಹುಲ್ಲು ಗಾಡಿಗೆ ತಗಲಿ ೧ ಎತ್ತಿನ ಕಾಲುಗಳು ಮುರಿದು ಹೋಗಿವೆ. ಗಾಡಿಕಾರನು ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಳ್ಳುತ್ತಿದ್ದಾನೆ.

ಮೊನ್ನೆ ಶನಿವಾರಕ್ಕೆ ಇಲ್ಲಿಯ ಅರಸರವರ ಮನೆತನದ ರಾ| ಸದಾಶಿವರವರು ತಮ್ಮ ಅಣ್ಣ ರಾ| ನಾರಾಯಣರಾಯರಿಗೆ ಕಿವಿ ಕಚ್ಚಿದ ಬಗ್ಗೆ ಮೆಜಿಸ್ಟ್ರೇಟರು ೧ ದಿವಸದ ಸಜೆ ೧೫೦ ರೂಪಾಯಿ ದಂಡ ವಿಧಿಸಿದರು. ಮನೆಯಲ್ಲಿ ಮನಸ್ತಾಪದ ಬಗ್ಗೆ ಸದಾಶಿವರಾಯರು ಸಿಟ್ಟಿಗೆದ್ದು ಕಿವಿ ಕಚ್ಚಿದರಂತೆ. ಪೋಲೀಸರು ಈ ಖಟ್ಲೆ ಮಾಡಿಕೊಟ್ಟಿದ್ದರು.

ಕಾರವಾರ— ಕೋಡಿಬಾಗದ ಬಳಿ ಪ್ಲೇಗು ಸಕ್ಕೋಟಿಗೆ ಹೋಗಿದೆ. ಅಲ್ಲಿ ಇಲಿಗಳು ಬೀಳುತ್ತಿವೆ. ಪ್ರಸಿದ್ಧ ವಕೀಲರಾದ ರಾ| ರಾಮಚಂದ್ರ ಗೋವಿಂದ ಕಾಮತರವರು ಪ್ಲೇಗಿನಿಂದ ಸತ್ತರು.

ಶ್ರೀ ಕೃಷ್ಣರಾವ ರಾಮಚಂದ್ರ ಜಳದೀಪ್ರಭುರವರ ಅಧ್ಯಕ್ಷತೆಯಲ್ಲಿ ಶ್ರೀ ಶಿವಾಜಿ ಉತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು.

ಇಲ್ಲಿಯ ರಾ| ಮಾಧವ ಮಹೇಶ್ವರ ವರ್ಧಮಾನದಾರರವರು ಬಿ. ಕಾಮ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟು – ಬಿಜಾಪುರ ಕೋರ್ಟಿಗೆ ೧೦ ಮೇ ೩೧ನೇ ತಾರೀಖಿನ ವರೆಗೆ ಸ್ಥಳಾಂತರವಾಗಿವೆ.

ಬಿಳಗೆ, ಚೆಂಡಿಯೇ, ಇವುಗಳಿಗೆ ಹೋಗುವ ರಸ್ತೆಯ ಅಂಗಡಿಗಳು ರಾಜಕರ್ತರಿಗೆ ಹೊಂದಿಕೊಂಡಾಗಿವೆ. ಇದರಿಂದ ಜನರಿಗೆ ಬಹಳ ತೊಂದರೆ ಆಗಿರುವದನ್ನು ಕೋರ್ಟಿನವರು ತಿಳಿದು ರಾಜಕರ್ತರಿಂದ ದೂರ ಇರುವಂತೆ ಕಲ್ಪಿಸಿದರು. ತಕ್ಕ ಉಪಾಯವನ್ನೂ ಜನ ಮಾಡಬೇಕು.

ವೃತ್ತಸಾರ

— ಜಮಖಂಡಿ ಸಂಸ್ಥಾನಾಧಿಪರು ಕನ್ನಡದ ಮೇಲೆ ದೊಡ್ಡ ದಾಳಿಯನ್ನೆಬ್ಬಿಸಿದ್ದಾರೆ. ಅಲ್ಲಿ ೧೦೦ಕ್ಕೆ ೯೦ ಮಂದಿ ಕನ್ನಡಿಗರಿದ್ದಾಗ್ಯೂ, ಸಂಸ್ಥಾನಿಕರು ಕನ್ನಡ ಶಾಲೆಗಳನ್ನು ತೆಗೆದು ಎಲ್ಲರಿಗೂ ಮರಾಠಿಯಿಂದಲೇ ಶಿಕ್ಷಣ ಕೊಡುವ ಬಲಾತ್ಕಾರವನ್ನು ಕೈಕೊಳ್ಳುವವರಿದ್ದಾರೆ. ಇದು ಎಷ್ಟು ತಕ್ಕ ತರವಲ್ಲ.

ಸಾಂಗಲಿ ಮ್ಯುನಿಸಿಪಾಲಿಟಿಯವರು ಧರ್ಮಾರ್ಥ ಆಯುರ್ವೇದ ಔಷಧಾಲಯವನ್ನು ತೆರೆದಿಸಿದ್ದಾರೆ.

— ಕೊಲ್ಹಾಪುರ ಸಂಸ್ಥಾನದ ನರಸೋಬವಾಡಿಯಲ್ಲಿ ಬ್ರಾಹ್ಮಣೇತರ ಹೆಂಗಸಿಗೆ ವೇದೋಕ್ತ ಉತ್ತರಕ್ರಿಯೆ ಮಾಡಲು ಅರ್ಚಕರು ಒಪ್ಪದಿದ್ದ ಬಗ್ಗೆ ಒಂದು ದೊಡ್ಡ ಅನರ್ಥವು ಸಂಭವಿಸಿತು. ಅರ್ಚಕರಿಗೂ, ಶಿಕ್ಷ್ಯರಿಗೂ ಪ್ರತಿಬಂಧವಾಯಿತು. ರಾವಸಾಹೇಬ ಜಾಧವ ಎಂಬ ಅಧಿಕಾರಿಗಳು ದೊಂಬಿಯನ್ನೇ ಎಬ್ಬಿಸಿದರು. ಬ್ರಾಹ್ಮಣರಿಗಲ್ಲ ಸರಿ ಕಾನೂನಿನಲ್ಲಿ ಶಾಕೋಣಾಯಿತು.

— ಗ್ರೀಸದೇಶದ ಕಾರಿಂತ ಎಂಬ ದೊಡ್ಡ ಪಟ್ಟಣದಲ್ಲಿ ೧೧ ಸಾರೆ ಭೂಕಂಪನಾಗಿ ಇಡೀ ಊರು ಮಣ್ಣಿನ ರಾಶಿಯಾಗಿಬಿದ್ದಿದೆ.

— ವಿಜಾಪುರದ ಕರ್ನಾಟಕ ಹೊಲಿನ ಹೈಲಿನಲ್ಲಿ ಬ್ರಿಟಿಶ ಕರ್ನಾಟಕ ಎಸೋಸಿಯೇಶನ್ನಿನ ವಿದ್ಯಮಾನ ಒಂದು ವಾಗ್ಯುದ್ಧವು ನಡೆಯಿತು. ಕರ್ನಾಟಕ ಏಕೀಕರಣವನ್ನು ಸಾಧಿಸುವದಕ್ಕಾಗಿ ಸೈಮನ್ ಕೂಟವನ್ನು ಸಂದರ್ಶಿಸಬೇಕೋ, ಬೇಡವೋ ಎಂಬ ಚರ್ಚೆ. ಎರಡೂ ಪಕ್ಷದವರು ವಾದದಲ್ಲಿ ಸೇರಿಕೊಂಡಿದ್ದರು. ರಾ| ಚಿಕ್ಕೋಡಿ ಶಂಡಿತಪ್ಪನವರು ಸೈಮನ್ ಕಮಿಶನ್ನಿನೆದುರಿಗೆ ಸಾಕ್ಷಿ ಕೊಡುವದು ನಾಚಿಕೆಗೇಡಿತನವೆಂದು ಪ್ರತಿಪಾದಿಸಿದರು. ಬ್ರಿಟಿಶ ಕರ್ನಾಟಕ ಎಸೋಸಿಯೇಶನ್ನಿನ ಜನಕರಾದ ರಾ| ಎಸ್. ಟಿ. ಪಾಟೀಲರವರು ಸೈಮನ್ ಕೂಟದ ಬಳಿ ಸಹಕಾರ ಮಾಡಬೇಕೆಂದು ಪ್ರತಿಪಾದಿಸಿದರು. ಜನರ ಬೆಂಬಲವಿಲ್ಲೆಂದು ಕಂಡುಬಂದರೆ, ಸೈಮನ್ ಕೂಟದ ಗೊಡವೆಗೆ ಹೋಗಲಿಕ್ಕಿಲ್ಲವಾಗಿಯೂ ಅಭಿವಚನವನ್ನಿತ್ತರು. ರಾ| ಕಾಜಲಗಿ ಶ್ರೀನಿವಾಸರಾಯರು ಪ್ರಮಾಣ-ಮರ್ಯಾದೆಯ ಪ್ರಶ್ನೆಯನ್ನು ಇನ್ನಾದರೂ ವಿಚಾರಿಸ ಹೇಳಿದರು. ಸೈಮನ್ ಕೂಟಕ್ಕೆ ರಿಪೋರ್ಟ ಮಾಡುವ ಅಧಿಕಾರ ಮಾತ್ರ ಇರುವದಾಗಿಯೂ ಶ್ರೀನಿವಾಸರಾಯರು ಅಂದರು. ಅಧ್ಯಕ್ಷರಾದ ರಾವಬಹಾದ್ದೂರ ಹಣಮಂತಪ್ಪ ಅಂಗಡಿಯವರು ಕಮಿಶನಿನ ಬಳಿ ಸಾಕ್ಷಿ ಕೊಡಬಾರದಾಗಿ ತಮ್ಮ ಸ್ವಂತ ಮತ ಕೊಟ್ಟರು. ವಾಗ್ಯುದ್ಧವು ನಿರ್ಮಲ ಚಿತ್ತದಿಂದ ನಡೆದದ್ದು ಬಹು ಆನಂದಕರವು. ಭಿನ್ನ ಭಿನ್ನ ಪಕ್ಷಗಳು ಒತ್ತಟ್ಟಿಗೆ ಸೇರಿ ಚರ್ಚಿಸುವ ಉಪಕ್ರಮವು ಅನುಕರಣೀಯವಿದೆ.

— ಬೆಳಗಾವಿಯ ಮಿಶನ್ ಹೈಸ್ಕೂಲಿನೊಳಗಿನ ಕ್ರಿಶ್ಚನ್ ಶಿಕ್ಷಕರಾದ ಮಿ| ಮೆಥ್ಯೂರವರಿಗೆ ಮುಖ್ಯಾಧ್ಯಾಪಕರಾದ ಮಿ| ಹಿಂಸ್‌ರವರು ಕೆಲಸದಿಂದ ದೂರ ಮಾಡಿದ್ದಾರೆ. ಕಾರಣಗಳೆರಡು— ಸ್ವದೇಶಾಭಿಮಾನ ಹಾಗು ಖಾದಿ ಭಕ್ತಿ. ಹನುಮಾನಗುಡಿಯಲ್ಲಿ ಬೆಳಗಾವಿಯ ನಾಗರಿಕರ ಪ್ರಚಂಡ ಸಭೆಯಾಗಿ ಮಿ| ಮೆಥ್ಯೂರವರಿಗೆ ಅಭಿನಂದಿಸಲಾಯಿತು. ಶ್ರೀ| ದತ್ತೋಪಂತ ಬೆಳವಿಯವರು ಅಧ್ಯಕ್ಷರಿದ್ದರು.

— ಮಡಿಕೇರಿಯಲ್ಲಿ ಆದೇ ಬರುವ ವಿಭವ ಸಂವತ್ಸರದ ಮಕರ ಸಂಕ್ರಮಣಕ್ಕೆ ವೇದ ಪಾರಾಯಣ ಮಾಡಲು ೨೦ ವೇದ ಪುರುಷರನ್ನು ಕರೆಸಿ ವೇದಪಾರಾಯಣ ಮಾಡಿಕೊಳ್ಳುವ ಸಂಕಲ್ಪವಾಗಿರುತ್ತದೆ. ಘನಪಾಠಿ-ಜಟಾಪಾಠಿಗಳು ತ್ರಿವೇದ ಪುರುಷರು ಆರಿಸಲ್ಪಡುವರು. ವೇದ ಮಂತ್ರವನ್ನು ಘೋಷಸಹಿತ ಪಠಣ ಮಾಡುವದಕ್ಕೆ ೪೪ ರೂಪಾಯಿಗಳ ಬಹುಮಾನವು ಇಟ್ಟಿರುತ್ತದೆ. ಚತುರ್ವೇದಗಳನ್ನು ತಿಳಿದವರಿಗೆ ರೂ ೧೦೦, ತ್ರಿವೇದಿಗಳಿಗೆ ರೂ. ೭೫, ದ್ವಿವೇದಿಗಳಿಗೆ ರೂ. ೫೦ ಬಹುಮಾನ ಸಿಗುವವು. ಬ್ರಾಹ್ಮಣರ ಗ್ರಂಥಗಳನ್ನು ತಿಳಿದ ಚತುರ್ವೇದಿಗಳಿಗೆ ರೂ ೪೦೦, ತ್ರಿವೇದಿಗಳಿಗೆ ರೂ. ೩೦೦, ದ್ವಿವೇದಿಗಳಿಗೆ ೨೦೦, ಏಕವೇದಿಗೆ ರೂ; ೧೦೦ ಕಾಣಿಕೆ ಸಿಗುವವು. ಈ ಧರ್ಮ ಕಾರ್ಯಕ್ಕೆ ನೆರವಾಗಬಯಸುವವರು ರಾ| ಜಯಂತಿ ಗೋ. ಸ. ಕ. ದೇವ ಬೆಂಕ್ಕ ಮಡಿಕೇರಿ ಈ ಪತ್ತೆಗೆ ದ್ರವ್ಯ ಕಳಿಸಬೇಕು.

— ಬೆಳಗಾವಿಯ ಡಾ| ಕೋಕಟನೂರರವರು ಹುಕ್ಕೇರಿಯ ಬಳಿ ತಪ್ಪಲು ಭೂಮಿಯಲ್ಲಿ ಆರೋಗ್ಯಭವನವನ್ನೂ, ಚಿಕಿತ್ಸಾಲಯವನ್ನೂ ಕಟ್ಟಬೇಕೆಂಬ ಸಂಕಲ್ಪ ಮಾಡಿದ್ದಾರೆ. ೧೦೦ ಎಕ್ರೆ ವಿಶಾಲ ಸ್ಥಳವನ್ನು ಸರಕಾರದ ಕಡೆಯಿಂದ ಸಂಪಾದಿಸಿಕೊಳ್ಳುವ ಪ್ರಯತ್ನ ನಡೆದಿದೆ. ಶ್ರೀ| ಬೆಳವಿ ಡಾ| ಹಣಮಂತರಾವ ಸವಣೂರ ಪ್ರಭೃತಿ ಮಂದಿಗಳು ಡಾ| ಕೋಕಟನೂರರವರಿಗೆ ಸರ್ವ ಪ್ರಕಾರದಿಂದ ನೆರವಾಗುವ ಅಭಿವಚನವನ್ನಿತ್ತಿದ್ದಾರೆ.

— ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಚುನಾವಣೆ ಮುಗಿಯಿತು. ೬ ವಾರ್ಡುಗಳ ಚುನಾವಣೆಯ ಬಗ್ಗೆ ತಕರಾರು ಹೊರಟು, ದಾವೆಗಳಿವೆ.

— ಸೋಮೇಶ್ವರದಲ್ಲಿ ವೇ| ಮು| ಮಹಾದೇವಶಾಸ್ತ್ರಿ ದಡತಿಯವರು ನಡಿಸಿದ ಯಾಗವು ನಿರ್ವಿಘ್ನವಾಗಿ ಕಡೆಗಾಣಿತು. ಪರಊರುಗಳಿಂದಲೂ ಹೇರಳ ಜನರು ಹೋಗಿದ್ದರು.

ಬಾರ್ಡೋಲಿಯ ವೃತ್ತಾಂತ.

ಬಾರ್ಡೋಲಿಯೊಳಗೆ ಸರಕಾರಕ್ಕೂ, ಜನರಿಗೂ ನಡೆದ ಸತ್ಯಾಗ್ರಹ ಸಂಬಂಧದ ಕಥೆಯನ್ನು ನೋಡಿದರೆ, ಆಶ್ಚರ್ಯವಾಗುತ್ತದೆ. ಸರಕಾರಿ ಅಧಿಕಾರಿಗಳು ಕಾಯಿದೆಯನ್ನು ಕಟ್ಟಿಟ್ಟು ಕೆಲಸ ನಡಿಸುವ ಪ್ರಕಾರಗಳನ್ನು ಕೇಳಿದರೆ, ಬಹು ಆನಂದವಾಗುತ್ತದೆ. ಸತ್ಯಾಗ್ರಹ ದೃಷ್ಟಿಯಿಂದ ಆನಂದ; ಕಾಯಿದೆಯ ನಿಷ್ಠೆಯನ್ನು ಹೇಳುವ ಬ್ರಿಟಿಶರಿಗೆ ಮಾತ್ರ ದೊಡ್ಡ ಕಳಂಕ. ಡೆಪ್ಯುಟಿ ಕಲೆಕ್ಟರರು ಜಪ್ತಿ ಮಾಡಿದ ಹೆಂಡದ ಪಿಪಾಯಿಗಳನ್ನು ಒಯ್ಯದ್ದರಿಂದ ಅಂಗಡಿಕಾರರು ಸರಕಾರಕ್ಕೆ ನೋಟೀಸು ಕೊಟ್ಟುಬಿಟ್ಟರು. ಪಿಪಾಯಿಗಳನ್ನು ಒಯ್ಯದ ಅವಕ್ಕೆ ದಿನಾ ೫ ರೂಪಾಯಿಗಳಂತೆ ಭಾಡಿಗೆ ತೆರಬೇಕಾಗಿಯೂ, ಜಪ್ತಿ ಮಾಡಿದ ಮಾಲನ್ನು ಒಯ್ಯದಿದ್ದರಿಂದ ಅಂಗಡಿಗಾದ ನಷ್ಟವನ್ನು ತೆರಬೇಕೆಂದೂ ನೋಟೀಸು. ಅಬಕಾರಿ ಖಾತೆಯವರು ತೀರ್ವೆ ಕೊಡಲು ಒತ್ತಾಯ ಮಾಡುತ್ತಿದ್ದಾಗಿಯೂ ಈ ವೃತ್ತದಾರರು ನಮೂದಿಸಿದರು. ಕೂಡಲೆ ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರರು ಅಂಗಡಿಗೆ ಹೋಗಿ ಖಾನದಾರನಿಗೆ ಹೆದರಿಸಿ, ಜಪ್ತಿ ಮಾಡಿದ ಸರಾಯಿಯನ್ನು ಮೋಟರ ಬಂಡಿಯಲ್ಲಿ ತುಂಬಿದರು. ೨ ಸಾವಿರ ರೂಪಾಯಿಗಳ ಸರಾಯಿಯನ್ನು ೩೦೦ ರೂಪಾಯಿಗೆ ಜಪ್ತಿ ಮಾಡಿದರು. ಮೋಟಾರಿನ ಮೇಲೆ ತುಂಬುವಾಗ ಒಂದು ಪಿಪಾಯಿಗೆ ತೂತುಬಿದ್ದು ಬಹಳ ಸರಾಯಿಯು ಸೋರಿಹೋಯಿತು. ಈ ಬಗ್ಗೆ ಸರಾಯಿ ಅಂಗಡಿಯವನು ಸರಕಾರದ ಮೇಲೆ ದಾವಾ ನಡಿಸುವವನಿದ್ದಾನೆ. ಸರಾಯಿ ಅಂಗಡಿಕಾರರು ಸರಾಯಿ ಹಣವನ್ನು ತುಂಬದೆ ಹೋದರೆ, ಅವರ ಕಡೆಯಿಂದ ತೀರ್ವೆ ಹಣವನ್ನು ತುಂಬಿಕೊಂಡು, ಬಾಕಿ ಹಣವನ್ನು ಬೇಡುತ್ತಾರೆ. ಇಬ್ಬರು ೧೭೫೫ ರೂಪಾಯಿ ತೆಗೆದುಕೊಂಡಿದ್ದರು. ಈ ಹಣದೊಳಗಿಂದ ತೀರ್ವೆ ರೂಪಾಯಿ ವಜಾ ತೆಗೆದದ್ದರಿಂದ ಅಬಕಾರಿ ಖಾತೆಗೆ ಕೊಡತಕ್ಕ ಹಣವನ್ನು ಕೊಡದೆ, ಹಾಗೆಯೇ ಇಂದು ಬಿಟ್ಟರು. ಇಬ್ಬರು ೩೦೦ ರೂಪಾಯಿ ಕೊಂಡು ಕಚೇರಿಗೆ ಹೋಗಿದ್ದರು; ಈ ಹಣವನ್ನು ತೀರ್ವೆ ಬಾಬ್ತಕ್ಕೆ ಇಟ್ಟುಕೊಳ್ಳುತ್ತೇವಾಗಿ ಕಚೇರಿಯಲ್ಲಿ ಹೇಳಲಾಯಿತು. ತಮಗೆ ಭೂಮಿಯೇ ಇಲ್ಲವೆಂದು ಅವರು ಹೇಳಲು, ಆದರೂ ಪ್ರಸ್ತುತ(?) ತೀರ್ವೆ ಬಾಬ್ತಕ್ಕೆ ಈ ಹಣ ಜಮಾ ಕೊಳ್ಳಲ್ಪಡುವದೆಂದು ಕಚೇರಿಯಿಂದ ಹುಕುಮಾಯಿತು. ಉಪಾಯವಿಲ್ಲದೆ ಆ ಹಣವನ್ನು ಗುತ್ತೇದಾರನು ತಿರುಗಿ ಪಡಕೊಂಡು, ಮನೆಯ ಹಾದಿ ಹಿಡಿದುಬಿಟ್ಟನು.

ಜಪ್ತಿ ಮಾಡುವವರು ವಿಚಾರವನ್ನು ಕೂಡ ಮಾಡುವದಿಲ್ಲ. ಖಾತೇದಾರರ ಜೋಡಿಗೆಯನ್ನೇ ಜಪ್ತಿ ಮಾಡುವದಿಲ್ಲ; ದನಗಳನ್ನೂ ಇತರ ಸಾಮಗ್ರಿಗಳನ್ನೂ ಸಿಕ್ಕಸಿಕ್ಕಲ್ಲಿ ಜಪ್ತ ಮಾಡುತ್ತಾರೆ. ಹತ್ತಿಕಾಳು ತುಂಬಿ ಒಂದು ಗಾಡಿ ಹೋಗುತ್ತಿತ್ತು; ಅದನ್ನು ಡೆಪ್ಯುಟಿ ಕಲೆಕ್ಟರರು ಜಪ್ತಿ ಮಾಡಿ ತಮ್ಮ ತಾಬೆಯಲ್ಲಿ ಕೊಂಡರು, ಆ ಮೇಲೆ ಬಿಟ್ಟರು. ಗ್ರಾಮದಲ್ಲಿ ೫೮ ದನಗಳು ಒಂದೆಡೆ ಬೈಲಲ್ಲಿ ಮೇಯುತ್ತಿದ್ದವು; ಅವು ಜಪ್ತ ಮಾಡಲ್ಪಟ್ಟವು. ಜಪ್ತಿ ಮಾಡಿದ ದನಗಳು ಯಾರವೆಂದು ಸಹ ಅಧಿಕಾರಿಗಳು ಚೌಕಶಿ ಮಾಡಲಿಲ್ಲ. ಅವನ್ನು ವೇಲೋಡಿಗೆ ಒಯ್ದಿದ್ದಾರೆ. ದಿನಾಲೂ ಅವುಗಳ ಲಿಲಾವ ಮಾಡುತ್ತಾರೆ. ದನಗಳಿಗೆ ಬಹಳ ನೀರು ಕೊಡಬೇಕಾಗುತ್ತದೆ; ಈ ಬಾರಿ ಬೇಸಿಗೆ ಕಾಲದಲ್ಲಿ ನೀರು ಕುಡಿಸುವ ರೀತಿಯಿದೆ. ಇದರಿಂದ ೧೨ ದನಗಳು ತೀರಿಕೊಂಡವು, ಉಳಿದವು ಮೃತಪ್ರಾಯವಾಗಿವೆ.

ಹಮಾಡಾದಲ್ಲಿ ಜಪ್ತಿಯು ದೊಡ್ಡದಾಯಿತು, ಒಂದೆಡೆ ಎಮ್ಮೆಗಳು ನೀರು ಕುಡಿಯುತ್ತಿದ್ದವು. ಜಪ್ತಿ ಆಫೀಸರರು ಬಳಿಯಲ್ಲಿದ್ದ ಹುಡುಗಿಯ ಕಡೆಯಿಂದ ಮಾಲೀಕರ ಹೆಸರು ತಿಳಿದುಕೊಂಡು, ಅವನ್ನು ಜಪ್ತ ಮಾಡಿದರು. ವೇಲೋಡದಲ್ಲಿಯೂ ಅನ್ನೆಂಟು ಎಮ್ಮೆಗಳು ಜಪ್ತ ಮಾಡಲ್ಪಟ್ಟವು. ಅವುಗಳ ಲಿಲಾವ ಮಾಡಲಿಕ್ಕೆ, ಬಾರ್ಡೋಲಿಗೆ ಒಯ್ಯಲಿಕ್ಕೆ ಪಟೇಲರಿಗೆ ಬಿಟ್ಟಿ ಆಳು ಪೂರೈಸಬೇಕೆಂದು ಹುಕುಮಾಯಿತು. ಬಿಟ್ಟಿ ಆಳು ಸಿಗಲಿಲ್ಲ. ದನ ಹೊಡೆಯಲು ಪಟೇಲರಿಗೆ ಹುಕುಮಾಯಿತು. ಪಟೇಲರು ಮಾಮಲೇದಾರರಿಗೆ ಹಿಟ್ಟು ಪಾಡಿ(?) ಒಲ್ಲೆಂದರು. ಜಪ್ತಿ ಮಾಡಿದ ದನಗಳ ಮಾಲೀಕರು ಬಂದು ಅವು ಯಾರ ಯಾರ ದನಗಳೆಂದು ತಮಗೆ ತಿಳಿಸಬೇಕೆಂದು ಅಧಿಕಾರಿಗಳ ಅಂಬೋಣವಿತ್ತು; ಯಾರೂ ಬರಲಿಲ್ಲ. ಹಾಲು ಹಿಂಡಿಕೊಂಡು ಹೋಗಬಹುದೆಂದು ತಿಳಿಸಿದ್ದಾಗ್ಯೂ ಯಾರೂ ಬರಲಿಲ್ಲ. ದನಗಳ ಜಪ್ತಿಯಿಂದ ಹಾಲು ಸಿಗದವರಿಗೆ ಉಳಿದವರು ಹಾಲನ್ನು ಪೂರೈಸುತ್ತಿದ್ದಾರೆ.

ಸ್ಥಾವರ ಆಸ್ತಿಯನ್ನು ಜಪ್ತಿ ಮಾಡುವ ನೋಟೀಸುಗಳು ಮುನ್ನವನಿಗೆ(?) ಹಚ್ಚಲ್ಪಡುತ್ತವೆ. ಇಬ್ಬರೂ ಹೆದರುವದಿಲ್ಲ. ಸಾವಿರಾರು ರೂಪಾಯಿ ಬೆಲೆ ಬಾಳುವ ಆಸ್ತಿಯನ್ನು ಜಪ್ತಿ ಮಾಡಿದ ಸಂಗತಿ ತಿಳಿದರೂ ಇಬ್ರಾಹಿಮ ಪಟೇಲರು ಸಂತೋಷದಿಂದ ತಮ್ಮ ಸತ್ಯಾಗ್ರಹ ಕಾರ್ಯವನ್ನು ನಡಿಸಿದ್ದಾರೆ. ಭಗತ ಗೋವಿಂದ ಎಂಬುವರು ಖಾತೇದಾರರಲ್ಲ. ಆದರೆ, ಅವರ ಭೂಮಿಯೂ ಜಪ್ತಿಯಾಗಿದೆಂದು ಜಾಹೀರನಾಮೆಯು ಹಚ್ಚಲ್ಪಟ್ಟಿದೆ. ಆದರಿಂದ ಯಾರು ಹೆದರಬೇಕು?

ಕೆಲವರ ಮನೆಗಳಲ್ಲಿ ಜಪ್ತಿ ಮಾಡಿದ ಬೆಂಚು-ಖುರ್ಚಿಗಳನ್ನು ಒಯ್ಯದೆ ಅಲ್ಲೇ ಇಟ್ಟು ಹೋದದಕ್ಕೆ ದಿನಾ ೧-೧ ರೂಪಾಯಿಯಂತೆ ಭಾಡಿಗೆ ಬೇಡಿ ಸರಕಾರದ ಮೇಲೆ ನೋಟೀಸುಗಳು ಹೊರಡಿಸಲಾಗಿವೆ. ಕಾಯಿದಕ್ಕನುಸಾರ ಇಲ್ಲದೆ ಜೋಡಿಗೆಯನ್ನು ಒಯ್ದ ಬಗ್ಗೆ ಆಫೀಸರರ ಮೇಲೆ ಕಳವಿನ ಫಿರ್ಯಾದಿ ಕೊಡುವ ಆಲೋಚನೆ ನಡೆದದೆ. ಶ್ರೀ ವಲ್ಲಭಭಾಯಿಯವರು ಜನರಿಗೆ ಸಮಾಧಾನ ಹೇಳುತ್ತಿದ್ದಾರೆ. ಬಾರ್ಡೋಲಿ ತಾಲೂಕ ಲೋಕಲ್ ಬೋರ್ಡಿನ ಸಭೆಯಾಗಿ ಜಪ್ತಿಯ ಬಗ್ಗೆ ತಾಲೂಕಿನಲ್ಲಿ ಸಾಗಿಸುವ ಆಫೀಸರರಿಗೆ ಬೋರ್ಡಿಗೆ ಒಪ್ಪಿದ ಕಟ್ಟಡಗಳಲ್ಲಿ ಉಳಕೊಳ್ಳಲು ಬಿಡಬಾರದಾಗಿ ಠರಾವ ಮಾಡಲ್ಪಟ್ಟಿದೆ. ಇದಲ್ಲದೆ, ತೀರ್ವೆಗಾಗಿ ಜಪ್ತಿ ಮಾಡಿದ ದನಗಳನ್ನು ತಮ್ಮ ದೊಡ್ಡಿಯಲ್ಲಿ ಇಡಕೂಡದಾಗಿಯೂ ಶ್ರೀ ... ಪಟೇಲರಿಗೆ ಹುಕುಮು ಮಾಡಿದ್ದಾರೆ. ಸರಕಾರದವು ಇವರಿಗೆ ಭದ್ರ ಕಡಸಲಿಗೆ(?) ತೊಡಗಿದೆ. ... ಧರೋತಿ ಎಂಬ ಮುಸಲ್ಮಾನ ಮಾಮಲೇದಾರರಿಗೆ ತಲೆಬಾಗಿದರು(?); ೩ ದಿನಗಳಲ್ಲಿಯೇ ಭರ್ತಿಯವರಿಗೂ ಸರ್ವಾಗಿ, ಮುಸಲ್ಮಾನರೆಂಬ ಮಾಮಲೇದಾರರು ಬಂದರು ಇವರ ಕಚೇರಿಯಲ್ಲಿ ಜಪ್ತಿಯ ಕೆಲಸವು ಬಲು ರಭಸದಿಂದ ಸಾಗಿದೆ. ಬಾರ್ಡೋಲಿಯೊಳಗಿನ ಹಿಂದೂ-ಮುಸಲ್ಮಾನರೊಳಗೆ ಭೇದವನ್ನುಂಟು ಮಾಡುವ ಬುದ್ಧಿಯಿಂದ ಈ ವರ್ಗಾವರ್ಗಿಯಾಗಿದೆಯೆಂದು ಹೇಳುತ್ತಾರೆ. ಈಗಿನ ಕಲೆಕ್ಟರರೂ, ಡೆಪ್ಯುಟಿ ಕಲೆಕ್ಟರರೂ ಈ ತೀರ್ವೆ ವಸೂಲಿಯ ಕ್ರಮವನ್ನು ಮನಃಪೂರ್ವಕ ಪುರಸ್ಕರಿಸುವರಿಲ್ಲವಂತೆ. ಆದರಿಂದ ಅವರಿಗೆ ವರ್ಗಾವರ್ಗಿಯಾಗಿ ಸುರತ ಜಿಲ್ಲೆಯ ಕಲೆಕ್ಟರರಿಗೆ ಬಾರ್ಡೋಲಿಗೆ ಒಯ್ಯುವ ಆಲೋಚನೆಯಿರುವದಾಗಿ ಅಂತರಂಗದ ಸುದ್ದಿ.

ಸರಕಾರವು ಜನರ ಮೇಲೆ ಫೌಜದಾರಿ ಮೊಕದ್ದಮೆಯನ್ನು ಹುಟ್ಟಿಸುವ ಉದ್ಯೋಗಕ್ಕೆ ತಗಲಿದೆ. ಈ ಕೆಲಸ ಬಾರ್ಡೋಲಿಯ ಮ್ಯಾಜಿಸ್ಟ್ರೇಟರಿಗೆ ಕೆಲಸ ತೀರ ಕಡಿಮೆ. ಆದರೂ, ಇನ್ನೊಬ್ಬ ಮ್ಯಾಜಿಸ್ಟ್ರೇಟರ ನೇಮಿಸಲಾಗಿದೆ. ಗಾಡಿಕಾರರ ಮೇಲೆ ಸಮನ್ಸಗಳು ಹೊರಟವೆ. ಈ ಗಾಡಿಕಾರರು ಡೆಪ್ಯುಟಿ ಕಲೆಕ್ಟರರ ಸಾಮಾನು ಒಯ್ಯ ಬರಲಿಲ್ಲವಾಗಿ ಇವರ ಮೇಲೆ ಆರೋಪ. ಈ ಗಾಡಿಕಾರರು ಅಲ್ಲಿಯ ಗಿರಣಿ ಸಾವುಕಾರರ ಹತ್ತಿ ಒಯ್ಯುವ ದಾಳು(?) ಸಾಡಿ ಆ ಕೆಲಸಕ್ಕೆ ತೊಡಗಿದ್ದರು. ಅವರಿಗೆ ಪೋಲೀಸರು ಡೆಪ್ಯುಟಿ ಕಲೆಕ್ಟರರ ಸಾಮಾನನ್ನು ಒಯ್ಯಹೇಳಿದ ... ಕೆಲಸ ಮಾಡಿದ್ದರಿಂದ ಅವರು ಸರಕಾರಿ ಸಾಮಾನು ಒಯ್ಯಲಾರೆವೆಂದು ಹೇಳಿದರು. ಅದಕ್ಕಾಗಿ ಈ ಸಮನ್ಸುಗಳು ಹೊರಟವು. ಶ್ರೀ ರವಿಶಂಕರ ವ್ಯಾಸ ಎಂಬ ಸತ್ಯಾಗ್ರಹ ಸಮರದ ಪ್ರಮುಖ ಸೇನಾನಿಗಳಿಗೆ ಅಂದು ೫॥ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ. ಶ್ರೀ ವ್ಯಾಸರ ಮೇಲೆ ಅಕ್ರಮ ಪ್ರವೇಶದ ಒಂದು ಆರೋಪ; ಸರಕಾರಿ ಆಫೀಸರರಿಗೆ ಕರ್ತವ್ಯ ಮಾಡುವಲ್ಲಿ ಆತಂಕ ಮಾಡಿದರೆಂಬ ಎರಡನೇ ಆರೋಪ; ಹೀಗೆ ಎರಡು ಆರೋಪಗಳಿಗಾಗಿ ೨—೨ ತಿಂಗಳ ಶಿಕ್ಷೆ ಹಾಗು ೨೫—೨೫ ರೂಪಾಯಿ ದಂಡ ವಿಧಿಸಲಾಗಿದೆ, ದಂಡ ತೆರದಿದ್ದರೆ ೨೦—೨೦ ದಿನಗಳ ಹೆಚ್ಚಿನ ಸಕ್ತ ಶಿಕ್ಷೆಯನ್ನನುಭವಿಸಬೇಕಾಗಿಯೂ ವಿಧಿಸಲಾಗಿದೆ. ಶ್ರೀ ರವಿಶಂಕರ ವ್ಯಾಸರವರ ಮೊಕದ್ದಮೆಯ ವೃತ್ತಾಂತವು ಬೋಧಪ್ರದವಿದೆ. ಡೆಪ್ಯುಟಿ ಕಲೆಕ್ಟರರ ಸಾಮಾನು ಒಯ್ಯುವದಕ್ಕಾಗಿ ೩ ಗಾಡಿಗಳು ಹಿಡಿಯಲಾದವು. ಗಾಡಿಗಳ ಮಾಲೀಕರಿಗೆ ಈ ಸುದ್ದಿಯಾದೊಡನೆ ಅವರು ರವಿಶಂಕರರವರನ್ನು ಕರಕೊಂಡು, ಡೆಪ್ಯುಟಿ ಕಲೆಕ್ಟರರ ಠಾಣ್ಯಕ್ಕೆ ಹೋದರು; ಒಲ್ಲೆಂದರೂ, ತಮಗೆ ಹಿಡಿದು ತಂದಿರುವದಾಗಿ ಗಾಡಿಕಾರರು ಹೇಳಿದರು; ಗಾಡಿಕಾರರು ಸಂತೋಷಪಡಲಿಲ್ಲದ್ದರೆ, ಅವರ ಮೇಲೆ ಬಲಾತ್ಕಾರ ಮಾಡಬಾರದಾಗಿ ಶ್ರೀ ರವಿಶಂಕರರವರು ಮಾಮಲೇದಾರರಿಗೆ ಬುದ್ಧಿ ಹೇಳಿದರು; ಕೂಡಲೆ ಹೊರಹೋಗಲು ಶ್ರೀ ವ್ಯಾಸರವರಿಗೆ ಅಪ್ಪಣೆಯಾಯಿತು; ರವಿಶಂಕರರವರು ಹೊರಹೋದರು; ಗಾಡಿಕಾರರು ಅವರಿಗೆ ಹಿಂಬಾಲಿಸಿದರು. ಇಷ್ಟಕ್ಕೇ ಅವರ ಮೇಲೆ ಖಟ್ಲೆ; ಶಿಕ್ಷೆ ವಿಧಿಸಿದ ಸುದ್ದಿಯು ಮಹಾತ್ಮರಿಗೆ ಗುರುವಾರಕ್ಕೆ ತಿಳಿಯಿತು; ಮಹಾತ್ಮರು ಅವರಿಗೆ ಅಭಿನಂದಿಸಿ, ರವಿಶಂಕರರಂತೆ ಕಾರಾಗೃಹವಾಸಕ್ಕೆ ಹೋಗುವ ಪ್ರಸಂಗವು ತಮಗೆ ಬರಲಿದ್ದರೆ, ತಮಗೆ ಕೃತಕೃತ್ಯವೆನಿಸುತ್ತಿತ್ತೆಂದು ಉದ್ಗರಿಸಿದ್ದಾರೆ. ಸತ್ಯಾಗ್ರಹ ಸಮರದಲ್ಲಿ ಶ್ರೀ ವಲ್ಲಭಭಾಯಿ ಪಟೇಲರ ಕೈಕೆಳಗೆ ಶ್ರೀ ರವಿಶಂಕರರವರು ನಿಷ್ಠೆಯಿಂದ ದುಡಿಯುತ್ತಿದ್ದರು; ಶ್ರೀ ರವಿಶಂಕರರವರು ಸಂತೋಷದಿಂದ ಸೆರೆಮನೆಯನ್ನು ಸೇರಿದ್ದಾರೆ. ದಂಡದ ರಕಮನ್ನು ಕೊಡಲೊಪ್ಪಲಿಲ್ಲ.

ಸತ್ಯಾಗ್ರಹ ಸಮರದ ಸೇನಾಪತಿಗಳಾದ ಶ್ರೀ ವಲ್ಲಭಭಾಯಿ ಪಟೇಲರವರ ಮೇಲೆ ಸರಕಾರದ ವಿಶೇಷ ಅನುಗ್ರಹವಾಗಿದೆ. ಹೆಚ್ಚಿನ ಗುಪ್ತ ಪೋಲೀಸರನ್ನು ನೇಮಿಸಿಕೊಂಡು ಅವರ ಭಾಷಣದ ರಿಪೋರ್ಟುಗಳನ್ನು ತರಿಸುವ ವ್ಯವಸ್ಥೆಯಾಗಿದೆ. ಸರಕಾರ ಪಕ್ಷಪಾತಿ ವರ್ತಮಾನ ಪತ್ರಗಳಲ್ಲಿ ಶ್ರೀ ವಲ್ಲಭಭಾಯಿ ಪಟೇಲರು ಜನರು ತೀರ್ವೆ ಕೊಡದಿರುವವರಿಗೆ ಹೆದರಿಸುತ್ತಾರೆಂದೂ, ಕೊಲೆ ಮಾಡುವ ಭೀತಿ ಹಾಕುತ್ತಾರೆಂದೂ ಪ್ರಕಟವಾಗಿದೆ. ಹೀಗೆ ಹೆದರುವವರ್‍ಯಾರಾದರಿದ್ದರೆ, ಅವರು ತಮಗೆ ಭೆಟ್ಟಿಯಾಗಬೇಕಾಗಿಯೂ, ತೀರ್ವೆ ತೆರಲು ಅವರಿಗೆ ಸರ್ವಾನುಕೂಲತೆ ಮಾಡಿಕೊಡಲ್ಪಡುವದಾಗಿಯೂ ಶ್ರೀ ವಲ್ಲಭಭಾಯಿಯವರು ಪ್ರಕಟಿಸಿದ್ದಾರೆ. ಸತ್ಯಾಗ್ರಹ ಸಮರವನ್ನು ನಿಷ್ಕಲಂಕವಾಗಿಯೂ, ನಿಷ್ಕಪಟದಿಂದಲೂ ನಡಿಸಲು ಎಲ್ಲರೂ ಇದ್ದರೆಂದೂ ಮಹಾತ್ಮರಿಗೆ ನಾವೆಲ್ಲರೂ ಯಥಾರ್ಥ ವೃತ್ತಾಂತವನ್ನು ಹೇಳಿ ಅವರಿಗೆ ಪ್ರಸನ್ನಚಿತ್ತ ಮಾಡಿ ಉದ್ಧರದ್ದೇವೆಂದೂ, ಅತ್ತ ಕಡೆ ಲಕ್ಷವನ್ನಿಟ್ಟು ಯಾರೂ ಯಾವದೇ ಪ್ರಕಾರದ ಅನ್ಯಾಯಕ್ಕೆ ಕೈಹಾಕದೆ ಈ ಕಾದಾಟವನ್ನು ನಡಿಸಬೇಕಾಗಿಯೂ ಬೋಧಿಸಿದ್ದಾರೆ; ಮಹಾತ್ಮರ ನಿರ್ಮಲ ಕೀರ್ತಿಯನ್ನು ಕಾಪಾಡುವಂತೆ ಬಾರ್ಡೋಲಿಯವರು ವರ್ತಿಸಬೇಕಾಗಿಯೂ ಶ್ರೀ ವಲ್ಲಭಭಾಯಿಯವರ ಆಜ್ಞೆ.

— ಇಂಗ್ಲಂಡದೊಳಗಿನ ಪ್ರಥಮ ಪಟ್ಟದ ೭೪ ವರ್ಷ ವಯಸ್ಸಿನ ಮುದುಕಿಯಾದ ಎಲಿಝಾಬೆಥ್ ಎಂಬವಳು ೬೬ ವರ್ಷ ವಯಸ್ಸಿನ ರಿಚರ್ಡ ಎಂಬುವನನ್ನು ಮದುವೆಯಾಗಿದ್ದಾಳೆ. ಇದು ರಿಚರ್ಡನ ಎರಡನೇ ಸಂಬಂಧ; ಎಲಿಝಾಬೆಥಳ ಎಷ್ಟನೇ ಸಂಬಂಧವೆಂಬುದು ತಿಳಿಯಲಿಲ್ಲ. ಆದರೆ ಮದುವೆಗೆ ೧೬ ಜನ ಮಕ್ಕಳಿದ್ದರೆಂದು ಪ್ರಕಟವಾಗಿದೆ.

—ಶ್ರೀ ಧೋಂಡೋಪಂತ ಕರ್ವೆಯವರಿಗೆ ಹಿಂಗಣೆ ಪದವಿ ಪ್ರಾಪ್ತವಾದ ಬಗ್ಗೆ ಸ್ತ್ರೀ ಶಿಕ್ಷಣಕ್ಕಾಗಿ ಧೋಂಡೋಪಂತರು ನಡಿಸಿದ ಕಾರ್ಯವನ್ನುಲಕ್ಷಿಸಿ, ಮಹಾರಾಷ್ಟ್ರೀಯರು ಸಭೆಸೇರಿ ೧೨ ಸಾವಿರ ರೂಪಾಯಿಗಳ ನಿಧಿಯನ್ನರ್ಪಿಸಿದರು.

— ಪರದೇಶಿ ಅರಿವೆಯ ಬಹಿಷ್ಕಾರವನ್ನು ಸಾಧಿಸುವದಕ್ಕಾಗಿ ಲೋಕನಾಯಕರು ಮಹಾತ್ಮರ ಯಜಮಾನತ್ವದಲ್ಲಿ ಉಪಾಯ-ಯೋಜನೆ ಮಾಡಬೇಕಾಗಿ ಲಾಲಾಲಜಪತರಾಯರು ಸೂಚಿಸುತ್ತಾರೆ.

ಮಹಾತ್ಮರ ಆತ್ಮಚರಿತ್ರ.

(೨) ಗೋಖಲೇಯವರ ಜೊತೆಗೆ.

ನಾನು ಮುಂಬಯಿಗೆ ಹೊರಟು ಮುಟ್ಟಿದೊಡನೆ ಗೋಖಲೆಯವರು ನನಗೊಂದು ಮಾತು ತಿಳಿಸಿದರು — ' ಗವರ್ನರರು ನಿಮಗ ಬೆಟ್ಟಿಯಾಗಲು ಬಯಸುತ್ತಾರೆ ಅದರಿಂದ ಪುಣೆಗೆ ಬರುವ ಮುಂಚೆ ಗವರ್ನರರ ವಿನಂತಿಯನ್ನು ಮನ್ನಿಸುವದು ಯುಕ್ತವು "

ಅದರಂತೆ ನಾನು ಗವರ್ನರರ ಭೆಟ್ಟಿಗೆ ಹೋದೆನ ವ್ಯಾಚಾರದ ಮಾತುಕತೆಯಾದ ಬಳಿಕ, ಅವರ ನುಡಿದದ್ದೇನಂದರೆ.— 'ನಿಮ್ಮಿಂದ ಒಂದು ಮಾತನ್ನು ನಾನು ಕೇಳುತ್ತೇನೆ ಸರಕಾರದ ವಿರುದ್ಧ ಯಾವದೊಂದು ಚಳುವಳಿಯನ್ನು ಕೈಕೊಳ್ಳುವ ಮುಂಚೆ ನೀವು ನನಗೆ ತಿಳಿಸಿ ಮಾತಾಡಬೇಕು "

ನಾನು ನುಡಿದದ್ದೇನಂದರೆ — ' ಈ ವಚನವನ್ನು ನಾನು ನಿಮಗೆ ಸಂತೋಷದಿಂದ ಕೊಡುತ್ತೇನೆ. ನಾನು ಸತ್ಯಾಗ್ರಹಿ ಇದ್ದೇನೆ. ಅದರಿಂದ ಎದುರಾಳಿ ಪಕ್ಷದ ಪ್ರತಿಪಕ್ಷದ ಅಭಿಪ್ರಾಯವನ್ನು ಗ್ರಹಿಸಿ, ಅದಕ್ಕನುಸಾರವಾಗಿ ನಡಕೊಳ್ಳಲು ಪ್ರಯತ್ನ ಮಾಡಿ ನೋಡುವದು ನನ್ನ ನಿಯಮವಿದೆ ದಕ್ಷಿಣ ಆಫ್ರಿಕೆಯಲ್ಲಿ ಈ ನಿಯಮವನ್ನು ನಾನು ನಿಷ್ಠುರತನದಿಂದ ಪಾಲಿಸಿದೆನು. ಹಾಗೆಯೇ ಇಲ್ಲಿಯೂ ನಡಕೊಳ್ಳಬೇಕಾಗಿ ನನ್ನ ಬಯಕೆ ಇದೆ "

ವಿಲಿಂಗಡನ್ ದೊರೆಗಳು (ಗವರ್ನರರು) ನನ್ನ ಉಪಕಾರ ಮನ್ನಿಸಿ ನುಡಿದದ್ದೇನಂದರೆ — " ನಿಮಗೆ ಬೇಕಾದಾಗ ನೀವು ನನ್ನ ಬಳಿ ಬರಬಹುದು. ಬುದ್ಧಿಪೂರ್ವಕವಾಗಿ ನನ್ನ ಸರಕಾರವು ಅನ್ಯಾಯ ಮಾಡಲಿಕ್ಕಿಲ್ಲವೆಂದು ನಿಮಗೆ ತಿಳಿದುಬಂದಿದೆ "

ಇದನ್ನು ಕೇಳಿ ನಾನು ನುಡಿದದ್ದೇನಂದರೆ — ' ಈ ನಂಬಿಗೆಯಿಂದಲೇ ನಾನು ಬಾಳಕೊಂಡಿದ್ದೇನೆ '

"ಇದಾದ ಬಳಿಕ, ನಾನು ಪುಣೆಗೆ ಹೋದೆನು. ಅದರ ತರುವಾಯದ ಕಾಲವು ಈ ಕಾಲದ ಸಂಗತಿಗಳನ್ನು ನನ್ನಿಂದ ನಮೂದಿಸಲಸಾಧ್ಯ.

ಗೋಖಲೇಯವರೂ, ಭಾರತ ಸೇವಕ ಸಮಾಜದ ಸಭಾಸದರೂ ಸ್ನೇಹಶೀಲತೆಯಿಂದ ನನಗೆ ಸ್ವಾಗತವನ್ನಿತ್ತರು. ಗೋಖಲೇಯವರು ಸಭಾಸದರೆಲ್ಲರಿಗೆ ನನ್ನೊಡನೆ ಮಾತಾಡಲು ಆಜ್ಞಾಪಿಸಿದ ನೆನಪು ಕಾಣುತ್ತದೆ. ವಿವಿಧ ವಿಷಯಗಳ ಮೇಲೆ ನಾನೂ ಅವರೂ ಅಂತಃಕರಣಪೂರ್ವಕವಾಗಿ ಮಾತಾಡಿದೆವು.

ಭಾರತ ಸೇವಕ ಸಮಾಜವನ್ನು ನಾನು ಸೇರಬೇಕಾಗಿ ಗೋಖಲೇಯವರ ಆಗ್ರಹವಿತ್ತು. ಆದರೆ, ನನ್ನ ಸಾಧ್ಯಗಳಲ್ಲಿಯೂ, ಸಾಧನಗಳಲ್ಲಿಯೂ ಬಹಳ ಭೇದವಿರುವದರಿಂದ ಸಮಾಜದಲ್ಲಿ ನಾನು ಸೇರುವದು ಸಭಾಸದರಿಗೆ ಯುಕ್ತ ತೋರಲಿಲ್ಲ ನನ್ನ ಸ್ವಂತ ತತ್ವಗಳನ್ನು ನಿಷ್ಠೆಯಿಂದ ನಾನು ಪಾಲಿಸುತ್ತಿದ್ದಾಗ್ಯೂ, ಅವರ ತತ್ವಗಳನ್ನು ವಹಿಸಲಿಕ್ಕೆ ನಾನು ಸಂತೋಷದಿಂದ ಸಿದ್ಧನಿದ್ದೇನೆಂಬ ಮಾತು 'ಗೋಖಲೇಯವರಿಗೆ ನಂಬಿಕೆಯಿತ್ತು. ಅವರು ನುಡಿದದ್ದೇನಂದರೆ — "ಆದರೆ, ನಿಮ್ಮ ಸಾಧನ ಸ್ವಭಾವವು ಈ ಸಭಾಸದರಿಗೆ ಗ್ರಹಿಕೆಯಾಗಿರಲಿಲ್ಲ ಅವರು ತತ್ವವನ್ನು ಭದ್ರವಾಗಿ ಹಿಡಕೊಂಡಿರುತ್ತಾರೆ ಅವರು ನಿಮ್ಮನ್ನು ಅಂಗೀಕರಿಸುವರೆಂದು ನನ್ನ ಬಯಕೆಯಿದೆ ಅವರು ಮನ್ನಿಸದಿದ್ದರೂ, ನಿಮ್ಮ ಮೇಲೆ ಆದರವಿಲ್ಲೆಂದಾಗಲಿ, ಪ್ರೇಮವಿಲ್ಲೆಂದಾಗಲಿ ನೀವು ಎಷ್ಟಕ್ಕೂ ಎಣಿಸಲಾಗದು. ಅವರೂ ಯಾವದೇ ತರಹ ಇಕ್ಕಟ್ಟಿನಲ್ಲಿ ಸಿಲುಕಲು ತಯಾರಿಲ್ಲ ಯಾಕಂದರೆ. ನಿಮ್ಮ ಮೇಲಿರುವ ಆದರವು ಕಡಿಮೆಯಾಗಬಹುದೆಂದು ಅವರು ಭೀತಿಪಡುತ್ತಾರೆ ಆದರೆ, ನೀವು ನಿಯಮದಂತೆ ಸಭಾಸದರಾಗಿರಿ, ಸಭಾಸದರಾಗದಿರಿ, ನೀವು ಒಬ್ಬ ಸಭಾಸದರೆಂದೇ ನಾನು ಗ್ರಹಿಸುವೆನು.

ಗೋಖಲೇಯವರಿಗೆ ನನ್ನ ಅಂತರಂಗವನ್ನು ನಿವೇದಿಸಿದೆನು. ನಾನು ಸಮಾಜದ ಸಭಾಸದನಾಗಿ ಸೇರಿಕೊಳ್ಳಲಿ, ಬಿಡಲಿ ಆಶ್ರಮವನ್ನೊಂದು ಸ್ಥಾಪಿಸುವ ಸಂಕಲ್ಪವಿದೆ. ಅಲ್ಲಿ ಫೋನಿಕ್ಸದೊಳಗಿನ ಕುಟುಂಬದ ಸಹಿತ ನಾನು ವಾಸಮಾಡತಕ್ಕದ್ದು ನಾನು ಗುಜರಾಥಿಯಾಗಿದ್ದೆ ಅದರಿಂದ ಗುಜರಾಥದಲ್ಲಿ ಸೇವೆ ಮಾಡಿ ಇಡೀ ದೇಶದ ಸೇವೆಗೈಯಲು ನಾನು ಪಾತ್ರನಾಗಬೇಕೆಂಬ ಆಲೋಚನೆಯಿಂದ ಗುಜರಾಥದಲ್ಲಿಯೇ ಆಶ್ರಮ ಸ್ಥಾಪಿಸುವದು ಇಷ್ಟವೆಂದೆಣಿಸಿದೆನು. ಗೋಖಲೇಯವರಿಗೆ ಈ ವಿಚಾರವು ಸೇರಿತು. ಅವರು ನುಡಿದದ್ದೇನಂದರೆ — " ನೀವು ಹೀಗೆಯೇ ಮಾಡಿರಿ ಸಭಾಸದರೊಡನೆ ನಡೆದ ಸಂಭಾಷಣೆಯಿಂದ ನಿಮ್ಮ ಅಭಿಪ್ರಾಯವೇನೇ ಆದದ್ದಿರಲಿ, ನಿಮ್ಮ ಆಶ್ರಮವು ನನ್ನದೇ ಎಂದು ನಾನು ಎಣಿಸಿ, ಅದರ ಖರ್ಚು ವೆಚ್ಚವನ್ನು ನಾನೇ ಕೈಕೊಳ್ಳುತ್ತೇನೆ "

ಇದನ್ನು ಕೇಳಿ, ನನಗೆ ಅತ್ಯಾನಂದವಾಯಿತು ದ್ರವ್ಯ ಸಂಗ್ರಹದ ಕಷ್ಟದಿಂದ ನಾನು ಬಿಡುಗಡೆಯಾದ ಆಶ್ರಮದ ಕೆಲಸದಲ್ಲಿ ನನಗೆ ಸಂಕಟ ಕಾಲದಲ್ಲಿ ಮಾರ್ಗದರ್ಶಕರೊಬ್ಬರಿದ್ದಾರೆಂದು ತಿಳಿದು ಆನಂದವಾಯಿತು ಇದರಿಂದ ದೊಡ್ಡ ಹೊರೆ ಇಳಿಸಿದಂತಾಯಿತು

ಕೈಲಾಸವಾಸಿ ಡಾ। ದೇವರವರಿಗೆ ಗೋಖಲೇಯವರು ಕರೆದು ಸಮಾಜದ ಲೆಕ್ಕದಲ್ಲಿ ನನ್ನ ಹೆಸರಿನಿಂದ ಒಂದು ಖಾತೆ ಬರೆದು ಆಶ್ರಮಕ್ಕಾಗಿಯೂ, ಇತರ ಸಾರ್ವಜನಿಕ ಕಾರ್ಯಗಳಿಗೂ ಅವಶ್ಯವಿದ್ದ ಹಣ ಕೊಡಲು ಗೋಖಲೇಯವರು ಹೇಳಿದರು

ಶಾಂತಿ ನಿಕೇತನಕ್ಕೆ ಹೋಗಲು ನಾನು ತಯಾರಾದೆ ಪ್ರಯಾಣದ ಸಮಯದಲ್ಲಿ ಗೋಖಲೇಯವರು ಪ್ರಮುಖರೆಲ್ಲರೊಂದಿಗೆ ಸಂತೋಷ ಕೂಟ ಸೇರಿಸಿದರು. ನನಗೆ ಸೇರುವಂಥ ಹಸಿ ಹಣ್ಣು ಕಾಳು-ಕಂಡಲುಗಳನ್ನು ಫಲಾಹಾರಕ್ಕಾಗಿ ಅವರು ತರಿಸಿದರು. ಊಟವು ಅವರ ಕೋಣೆಯಿಂದ ಸ್ವಲ್ಪ ಅಂತರದಲ್ಲಿಯೇ ನಡೆಯಿತು ಅಲ್ಲಿ ನಡೆಯಲು ಸಹ ಅವರು ಅಸಮರ್ಥರಿದ್ದರು. ಅವರಲ್ಲಿ ನನ್ನ ಮೇಲಿನ ಅತ್ಯಂತ ಪ್ರೇಮ ಆಗ ಅಲ್ಲಿ ಅವರು ಹಾಜರಿದ್ದು ಬಂದರು. ಕಡಲೆ ಮೂರ್ಛೆ ಹೊಂದಿದ್ದರು, ಅದರಿಂದ ಅವರಿಗೆ ಎತ್ತಿಕೊಂಡು ಒಯ್ಯಬೇಕಾಯಿತು ಹೀಗೆ ಮೂರ್ಛೆ ಹೊಂದಿದ್ದು ಇದು ಮೊದಲನೇ ಬಾರಿಯಲ್ಲ ಅದರಿಂದ ಅವರಿಗೆ ಎಚ್ಚರ ಒಂದೊಡನೆ ನಮ್ಮ ಭೋಜನವಿಧಿಯನ್ನು ಮುಗಿಸಬೇಕಾಗಿ ಹೇಳಿ ಕಳಿಸಿದರು

ಈ ಕೂಟವು ಸಮಾಜದ ಅತಿಥಿ ಮಂದಿರದ ಇದಿರಿಗೆ ಅಂಗಳದಲ್ಲಿ ನೆರೆಯಿತು. ಗೆಳೆಯರೆಲ್ಲರೂ ಅಂತಃಕರಣಪೂರ್ವಕವಾಗಿ ಸಂಭಾಷಣೆ ಮಾಡಿದರು ನೆಲಗಡಲೆ, ಖರ್ಜೂರ ಹಾಗು ಇತರ ಆ ಪ್ರಾಯದೊಳಗಿನ ಹಣ್ಣು-ಹಂಪಲುಗಳ ಮೇಲೂ ಮಾತುಕತೆಗಳಾದವು. ಆದರೆ, ನನ್ನ ಮಟ್ಟಿಗೆ ಗೋಖಲೇಯವರ ಮೂರ್ಛೆಯ ಪ್ರಕಾರವನ್ನು ಆಗಿಂದಾಗ ಕೇಳುವ ಪ್ರಸಂಗವು ನನಗೆ ಬರಲಿಲ್ಲ

ಮಂಗಳೂರ ತಂಬಾಕಿನ ತಾಜಾ ನಸ್ಯ! ಸುಲಭ ಕ್ರಯ!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿ ಹೊಂದಿದ
ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ
ಮೋಸಹೋಗಬೇಡಿರಿ ! !
ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ.೧ ನೇ ನಶ್ಯದ ಪುಡಿ ೨೪ ತೊಲೆ ಶೇರು ೧ರ ರೂ ೧|
ನಂ. ೨ ನೇ ೧-೨-೦
ನಂ. ೩ ನೇ ೧ ೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್
ಕೊಡಲಾಗುವದು.

ಸೂಚನೆ— ನಮ್ಮ ನಶ್ಯವು ಉತ್ಕೃಷ್ಟವೆಂಬುದರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟುಗಳು ದೊರಕಿವೆ

ವಿಳಾಸ.- **ಪುಂಡ್ಲೀಕ ನಾಗ ಪೈ,**
ಪೋಸ್ಟ- ಹೊನ್ನಾವರ. (ಉತ್ತರ ಕನ್ನಡ.)

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಧರವಾಡ ದ್ರಾಕ್ಷೆ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು
ವಿಳಾಸ - ಶಿರೋಮಣಿ ನಾರಾಯಣಾಚಾರ್ಯ,
ಮುಕ್ಕಾಂ ಕಾಶಿ ಚೌಕಂಬಾ, ಕಾಶೀಕ್ಷೇತ್ರ.

ಹೊನ್ನಾವರದಲ್ಲಿ ಮುಂಬಯಿ!

ಬನ್ನಿರಿ ! **ಕೊಳ್ಳಿರಿ ! !** **ಕ್ಷುಧಾ-ಶಾಂತಿಹೊಂದಿರಿ ! ! !**

ಮುಂಬಯಿಯ ಶಹರವನ್ನು ನೋಡಿದವರು ಅನೇಕರಿರುತ್ತಾರೆ. ಮುಂಬಯಿಯ ಬಹಳ ಪ್ರಸಿದ್ಧವಾದ ಚಹಾ ಅಂಗಡಿ ಸಮೂಹಗಳ "ಮನಮೋಹನ ವಿಲಾಸ" ವೆಂಬ ಹೆಸರಿನಿಂದ ಸಕಲ ವಿಧಗಳಿಂದಲೂ ಅನಂದಕರವಾದ ಹಿಂದು ಚಹಾ ದುಕಾನನ್ನು ನಾವು ಹೊನ್ನಾವರದಲ್ಲಿ ಬರುವ ಸ್ವರಾಜ್ಯ ಕೃಷ್ಣ ೧೪ಕ್ಕೆ, (ತಾರೀಖು ೩ ೫-೨೮) ಯಿಂದ ಪೋಸ್ಟ ಆಫೀಸಿನ ಹೊರಗೆ ರಸ್ತೆ ಸರಿಯಲ್ಲಿ ತೆರೆಯುತ್ತೇವೆ. ಅದರಲ್ಲಿ ತಿನ್ನಲಪೇಕ್ಷಿಸುವಂಥ ಸರಸವಾದ ತರತರದ ತಿನಸುಗಳು ನಮ್ಮಲ್ಲಿ ತಯಾರಾಗುತ್ತಿವೆ ಅಮೃತತುಲ್ಯವಾದ ಚಹಾ, ಕಾಫಿ, ಕಶಾಯ, ಶರಬತ್ತು ವಗೈರೆ ಪೇಯ ಪದಾರ್ಥಗಳೂ ಶಾಸ್ತ್ರೋಕ್ತವಾಗಿ ಸಿದ್ಧವಾಗುತ್ತವೆ. ಸ್ವಲ್ಪ ಖರ್ಚಿನಿಂದ ಮುಂಬಯಿಯ ಅನುಭವ ಹೊಂದಬೇಕಾದರೆ, ನಮ್ಮ ಈ "ಮನಮೋಹನ ವಿಲಾಸ" ಕ್ಕೆ ಒಮ್ಮೆ ಚಿತ್ತೈಸಬೇಕು. ಗ್ರಾಹಕರು ಹಸಿವೆ ತೃಷೆಗಳನ್ನು ಕಳೆದು, ಮನೋರಂಜನ ಮಾಡಲಿಕ್ಕೆ ಈ "ಮನಮೋಹನ ವಿಲಾಸ" ವನ್ನು ಸಾಮಾನ್ಯವಾಗಿ ಇಲ್ಲಿ ಕ್ರಯ ಕಡಿಮೆ ಕಾರಣ ಅನುಕೂಲವಿದ್ದವರೆಲ್ಲರೂ ಈ 'ವಿಲಾಸ' ಕ್ಕೆ ಬಂದು ವಿಲಾಸ ಹೊಂದಿ ಧನ್ಯರಾಗಬೇಕು.

ದರ ಪಟ್ಟಿಗೆ ಓದಿರಿ ಮಾಹಿತಿ 'ವಿಲಾಸ' ದಲ್ಲಿ.

ಮಾಲಕರು:— " ಮನಮೋಹನ ವಿಲಾಸ, " ಹೊನ್ನಾವರ

ಪುರಾತನಿಗಳ ದುರಾಗ್ರಹ.

ಪ್ರಯಾಗದಲ್ಲಿ ಪುರಾತನವಾದಿಗಳು ತಮ್ಮ ಪುರಾತನ ಮತದ ಹಟಾತ್ಕಾರದಿಂದ ನಡೆಸಿದ ಒಂದು ಪ್ರಕರಣವು ಇತ್ಯರ್ಥವಾಯಿತು. ರಾಮಸ್ವರೂಪ ಎಂಬೊಬ್ಬ ಬ್ರಾಹ್ಮಣರು ಬಿದಾಯರ್ ದಂತರ; ಅಸ್ಪೃಶ್ಯೋದ್ಧಾರಕರು. ತಮ್ಮಲ್ಲಿ ಅಸ್ಪೃಶ್ಯರನ್ನಿಟ್ಟು, ಅವರ ಕಡೆಯಿಂದ ಮನೆಗೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಊರವರಿಗೆ ಅವರ ಮೇಲೆ ಬಲು ದೊಡ್ಡ ಸಿಟ್ಟು. ರಾಮಸ್ವರೂಪರವರ ತಂದೆಗೂ, ರಾಮಸ್ವರೂಪರವರಿಗೂ ಸೇರಿಬರದೆ, ಇಬ್ಬರೊಳಗೂ ಪಾಲಾಗಿ ತಂದೆ-ಮಗಂದಿರು ಪ್ರತಪ್ರತ್ಯೇಕ ಉಳಕೊಂಡರು. ಪುರಾತನಿಗಳು ರಾಮಸ್ವರೂಪರವರ ಮೇಲೂ ರಾಮಸ್ವರೂಪರು ಪುರಾತನಿಗಳ ಮೇಲೂ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಪರಸ್ಪರ ಫೌಜದಾರಿ ಮೊಕದ್ದಮೆಗಳನ್ನೇರ್ಪಡಿಸಿದರು. ಇಷ್ಟರಿಂದಲೂ ಪುರಾತನಿಗಳಿಗೆ ಸಮಾಧಾನವಾಗಲಿಲ್ಲ. ರಾಮಸ್ವರೂಪರು ಅಸ್ಪೃಶ್ಯರಿಗೊಂದು ದೇವಾಲಯವನ್ನು ಕಟ್ಟಿಸಿಕೊಟ್ಟರು. ಕಾರಣವೇನಂದರೆ, ಅಸ್ಪೃಶ್ಯರಿಗೆ ಗ್ರಾಮದೇವಾಲಯದಲ್ಲಿ ಪ್ರವೇಶ ಮಾಡಲು ಊರವರು ಪ್ರತಿಬಂಧ ಮಾಡಿದರು. ೯ ಮಂದಿ ಬ್ರಾಹ್ಮಣರಿಗೆ ಇದೆಲ್ಲ ನೋಡಲಾಗಲಿಲ್ಲ; ಹಿತ ಕೆಣಕಿತು; ರಾಮಸ್ವರೂಪರ ಮನೆಗೆ ಹೋಗಿ ಅವರಿಗೆ ಹೊರ ಕರೆದರು. ಮತ್ತು ದೊಣ್ಣೆಯಿಂದ ಕೊಂದುಬಿಟ್ಟರು. ಇದರಿಂದ ಈ ಪ್ರಕರಣದ ವಿಚಾರವಾಗಿ ೯ ಮಂದಿ ಬ್ರಾಹ್ಮಣರಿಗೆ ಮೈನಾಪುರಿಯ ಸೆಶನ್ಸ ಜಜ್ಜರು ಕರಿನೀರಿನ ಶಿಕ್ಷೆಯನ್ನು ವಿಧಿಸಿದರು. ಅಲಹಾಬಾದದ ಹೈಕೋರ್ಟಿನವರು ಈ ಶಿಕ್ಷೆಯನ್ನೇ ಎತ್ತಿಹಿಡಿದಿದ್ದಾರೆ.

* *

ಲಖನೌದಲ್ಲಿ ಒಂದು ಸತಿ ಪ್ರಕರಣ. ರಾಮಸಹಾಯ ಎಂಬ ಯುವಕರು ಅಲ್ಪಾಯುಷಿಗಳಾಗಿ ತೀರಿದರು. ಅವರಿಗೆ ೧೮-೧೯ ವರ್ಷ ಪ್ರಾಯದ ಹೆಂಡತಿಯಿದ್ದಳು. ವಿರಹತಾಪವನ್ನು ಸಹಿಸುವದಸಾಧ್ಯವಾಗಿ ಅವಳು ಸತಿ ಹೋಗಲುದ್ಯುಕ್ತಳಾದಳು, ಚಿತೆಯನ್ನೇರಿದಳು. ಸ್ಮಶಾನ ಯಾತ್ರೆಗೆ ಹೋದವರು ಸಾರಿದೂರಿ ಹೇಳಿದರೂ, ಅವಳು ಕೇಳಲಿಲ್ಲ. ಜನರಿಗೆ ಬಾಯಿಗೆ ಬಂದ ಹಾಗೆ ಬೈದಳು; ಅವಳು ಚಿತೆಯನ್ನೇರಿಬಿಟ್ಟಳು. ಬಾಲದೇವನು ತುಪ್ಪವನ್ನು ಚಿತೆಯ ಮೇಲೆ ಹಾಕಿ ಚಿತೆಗೆ ಬೆಂಕಿ ಕೊಟ್ಟನು. ಸತಿ-ಪತಿಯರು ಕೂಡಿ ಪರಲೋಕವನ್ನೈದಿದರು. ಇದರಿಂದ ಬಾಲದೇವನ ಮೇಲೂ, ಆತನಿಗೆ ನೆರವಾದ ಪರಮೇಶ್ವರನ ಮೇಲೂ ರಾಮಸಹಾಯನ ಹೆಂಡತಿಗೆ ಚಿತೆಯ ಮೇಲೆ ಹಾಕಿಕೊಂದ ಬಗ್ಗೆ ಪ್ರಕರಣ ನಡೆದು ಇಬ್ಬರಿಗೂ ಶಿಕ್ಷೆಯಾಗಿದೆ. ಈರ್ವರೂ ಲಖನೌದೊಳಗಿನ ನ್ಯಾಯಾಸನದಲ್ಲಿ ಅಪೀಲು ಮಾಡಿದ್ದಾರೆ.

— ಉತ್ತರ ತ್ರಾವಣಕೋರಿನ ಒಂದು ಗ್ರಾಮದಲ್ಲಿ ಐವರು ಮಾತಾಡುತ್ತ ಬೈಲುಪ್ರದೇಶದಲ್ಲಿ ವಿಶ್ರಮಿಸುತ್ತಿದ್ದರು. ಥಟ್ಟನೆ ಮಿಂಚುಬಿದ್ದು ಐವರೂ ಸತ್ತರು. ಕೆಲವು ದನಗಳೂ, ಗಿಡ-ಮರಗಳೂ ಸತ್ತುಹೋಗಿವೆ.

— ಪಂಜಾಬದೊಳಗಿನ ಮೆಜಿಸ್ಟ್ರೇಟರು ಅಂಚೆ ತಿನ್ನುತ್ತಾರೆಂದು ದೊಡ್ಡ ದೂರು. ಅದನ್ನು ಶೋಧಿಸಲು ಗುಪ್ತ ಪೋಲೀಸರನ್ನು ನೇಮಿಸಬೇಕಾಗಿ ಸರದಾರ ರಘು ವೀರಸಿಂಗರವರ ಸೂಚನೆ.

— ರಶಿಯಾ ದೇಶದ ಝಾರರ ತಾಯಿಯು ಒಯ್ದಿರ್ದ ಒರ್ಲೋಫ್ ವಜ್ರವು ಮೂಲ ಗೋವಳಕೊಂಡೆಯದು. ಅದರ ಬೆಲೆಯು ೮೦ ಲಕ್ಷ ಪಾಲರು, ಅಂದರೆ, ೨ ಕೋಟಿ ೪೦ ಲಕ್ಷ ರೂಪಾಯಿ. ಇದನ್ನು ಝಾರರ ತಾಯಿಯ ಕಡೆಯಿಂದ [illegible]

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ವಸ್ತಿ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. **M. Manjappa.**

PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ಮಾತಾಡಲೂ ಸಹ ಪುರುಸೊತ್ತು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಶಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗಿಯಾಗುವದು. ಮೂರೇ ದಿವಸದಲ್ಲಿಗುಣಬರುವದು, ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೨ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು.. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು.. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲ್ಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಬೀಳುವದಿಲ್ಲ. ತಜನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ. ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪಮರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವತ ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಆದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫। ರೂ, ೩ ಡಬ್ಬಿಗೆ ೧೫। ರೂ. ೬ ಡಬ್ಬಿಗೆ ೨೭ ರೂ ೧೨ ಡಬಿಗೆ ೫೦ ರೂ.

[illegible] ಔಷಧಿ ತೆಗೆದುಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- – मृद्विकारिष्ट – शारंगधरम अ १०

रामबाण औषध

सर्दी घालविणारें
भूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचकर

किंमत एक रतलास १॥ रुपये

कॅटलॉग मागवा

झंडु फार्मास्युटिकल वर्क्स लिमिटेड
मुंबई नं. १४

एजंट— मेसर्स पंडित आणी कंपनी
तीर्थहळ्ळी

सिर्सि एजंट एम. एल धाकप्पा आणि सदर

ಹಿಂದ ಸ್ಥಾನದಲ್ಲಿ ಅಗ್ರಗಣ್ಯ
ನೆಶನಲ್ ಇನ್‌ಶೂರನ್ಸ ಕಂಪೆನಿ (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ವ್ಯವಹಾರವು ಒಂದು ಕೋಟಿಯಷ್ಟು ... ಕಳೆದ ವರುಷಕ್ಕಿಂತ ಹೆಚ್ಚು 5 40,044 ರೂಪಾಯಿಗಳ ಲಾಭವು ದೊರೆತಿದೆ

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ಣ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ ಬೋನಸ ಕೊಟ್ಟಿರುವವು

ಹೊಂಗಡ 1000 ರೂಪಾಯಿಗಳ ವಿಮೆ ... ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**
ಬಿ ಸಿ ಶಿರಾಳಕೊಪ್ಪ, *Branch Secretary*
ಲೋಖಂಡೆ ಬಿಲ್ಡಿಂಗ, Alice Building
ಹುಬ್ಬಳ್ಳಿ *Hornby Road,*
BOMBAY

ಕಾಶಿಯ ಅಪೂರ್ವ ವಸ್ತುಗಳು

ನಾವು ಕಾಶಿಯ ಪಟ್ಟೆ ಮಡಿ ಸೀರೆ, ಖಣ, ದೇವ ಶಲ್ಯೆ, ಬಿಚ್ಛಾನೆ, ಕಾಶ್ಮೀರದ ಶಾಲು ಸಕಲಾತಿ ದಾಬಳಿ ರುದ್ರಾಕ್ಷಿ ಸರ ಕಂಚಿ ಗೌರೀಶಂಕರ ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ ಕೇಸರಿ ಪಚ್ಚಕರ್ಪೂರ, ಶಿಲಾಜಿತು ಜಾಫಂಟಿ ಕಂಪು ಮುಂತಾದ ಸಕಲ ವಿಧವಾದ ಕಾಶಿಯ ... ಯೋಗ್ಯ ಬೆಲೆಗೆ ವಿ ಪಿ ... ಕಳಿಸಿಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ನಮ್ಮ ಪತ್ತೆ

ವಿಶ್ವನಾಥ ಎಂಡ್ ಬ್ರದರ್ಸ,
ದಶಾಶ್ವಮೇಧ ಘಾಟ, ಬನಾರಸ್ ಸಿಟಿ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತವೆ. ಮತ್ತು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಮಂದಿಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ ಪರಿಶೀಲಿಸಿ ಪ್ರಕ್ಯಟಿ ಕಾಲಾದೀತು

ಒಂದು ಒಂದಕ್ಕೆ ಕಯಿರ ೦ ೫ ಂ ... ಡಜನ್‌ಗಳಿಗೆ ರೂ ೨-೮-೦ ವಿ. ಪಿ. ೦-೮-೦ ದಯ ಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ

ಪತ್ತೆ —ಗುರ ಬಿ ... ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ವೆಂಕಟಟೌನ, ಮದರಾಸ

ಇದು " ಕರಾಮತ " ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ !



ಕಿರ್ಲೋಸ್ಕರ ಕರಾಮತ ಗಾಣ.

ಈ ಗಾಣದಿಂದ ಶೇಕಡಾ ೭೩ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ

ಈ ಗಾಣವು ಕಸುವುಳ್ಳದ್ದು ಬಾಳಿಕೆಯದು ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇಅರಿಂಗ್ ಗನ್‌ಮೆಟಲ್‌ದವು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು

ಅಕ್ಕಲುಗಳು ಉಕ್ಕಿನವು ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರೆಕವು

ಈ ಉತ್ತರ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦ ೧೨ ಕರಾಮತಗಾಣಗಳು ನಡೆಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ

ಎಲ್ಲ ಕಡೆಗೂ ಸಿಗುತ್ತದೆ ಅಥವಾ

ಅಮೃತಾಂಜನದ ಬಾಹ್ಯಲೇಪನದಿಂದ ಒಳಗಿನ ನೋವು ಗುಣವಾಗುತ್ತದೆ

ತಲೆನೋವು ಬೆನ್ನುನೋವು ಸಂಧಿವಾತ ಚಳಿ ಕೆಮ್ಮು ... ಮುಂತಾದ ಎಲ್ಲಾ ತರದ ನೋವಿಗೆ ... ಗುಣವಾಗುತದೆ ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು ನೋವು ಚಿಕ್ಕದಿರುವಾಗಲೇ ತಿರಸ್ಕರಿಸಲಾಗದು ... ಜೀವಕ್ಕೆ ... ದೊರೆಯುವದಿಲ್ಲ, ಅಮೃತಾಂಜನದ ಒಂದು ... ಬಾಟ್ಲಿಯಿಂದ ಇಂಥ ನೋವುಗಳನ್ನು ಕೂಡಲೆ ಪರಿಹರಿಸಬಹುದು ಬೆಲೆ ೦-೧೦-೦

ಅಮೃತಾಂಜನ ಡಿಪ್ಪೋ, ಮುಂಬಯಿ ಮತ್ತು ಮದ್ರಾಸ

R. NO. B. 1270 MONDAY, MAY 14TH 1928.

ವರ್ಷ ೧೨

ಸಂಚಿಕೆ ೪೧

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಊರ ಪೈಕಿಯಲ್ಲಿ ಅಗಾವು

ರೂಪಾಯಿ 2-4-0.

ವರ್ಷದಾರ್ಧರಿಯಿಂದ

ರೂ. 3-0-0.

ಟಪಾಲ ಹಂಚಿಕೆ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಪರಹಿತನಿरतानां श्रेयसां वापि लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ (೧೨ ಪಾಯಿಂಟ್ ಟಾಯ್ಪ) ೫ ಸಾಲುಗಳವರೆಗೆ ರೂ 1-0-0 ಹೆಚ್ಚಿಗೆ ಪ್ರತಿಸಾಲಿಗೆ 0-2-0

ಜಾಹೀರಾತಿನ ಸಾಲು ಎಷ್ಟು ಹೊತ್ತಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಹು ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ಕರಾರು ಮಾಡಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೪ ಮಾಹೆ ಮೇ ಸನ್ ೧೯೨೮ನೇ ಇಸವಿ)—

ಹೊಸ ಅಂಗಡಿ! ಹೊಸ ಹೊಸ ಮಾಲು!!

ನಮ್ಮಲ್ಲಿ

ದೇಶಿ ಪರದೇಶದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ—ಕಪ್ಪಿನ ಚೊಂಬುಗಳು, ಮೋಟಾರ ಉಪಯೋಗದ ಸಾಮಾನು, ಪಿನ್ ಪೋಷರ, ಡಿಸ್ಟ್ರಿಕ್ಟ ಪೋಷರ ಸಿಗುತ್ತವೆ, ... ಸಿಗುತ್ತದೆ, ಕನ್ನಡಿಯ ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಶಾಲೆಯವರಿಗೆ ಬೇಕಾದ ಸಾಮಾನುಗಳನ್ನು ಇಲ್ಲಿ ಕೊಂಡುಕೊಳ್ಳಿ!! ಎಲ್ಲಾ ಆರ್ಟ್-ದೇಶದ ಸಾಮಾನುಗಳೂ ಇಲ್ಲಿ ಸಿಗುತ್ತವೆ! ಎಲ್ಲ ಸಾಮಾನ ... ಚಿಲ್ಲರೆ ವ್ಯಾಪಾರಸ್ಥರು ಖರೀದಿಮಾಡಿ ... ಕೊಂಡರೆ, ಸವಲತ್ತು ಸಿಗುತ್ತದೆ ... ಗಿರಾಕಿಗಳಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ ತೀಕ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ಕೊಠಡಿ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ—

ದಿ ನೋರ್ಥ ಕನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಅತ್ಮಾನಂ ಸತತಂ ರಕ್ಷೇತ್ ।

ಏರ್-ಪಿಸ್ತೂಲು ಯಾನೆ

ಗಾಳಿ ತುಬಾಕಿ!

ಕಳ್ಳರು, ದರೋಡೆಖೋರರು, ಕಾಡು ಪಶುಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊಳ್ಳಲು ಅನುಕೂಲ ... ಇದನ್ನು ನೋಡಿ!!

ಬೆಲೆ ರೂ ೪-೮-೦ (೫೦ ಗುಂಡುಗಳ ಸಹಿತ)

ವ್ಹಿ. ಪಿ. ಯ ಖರ್ಚು ೦-೬-೦

೧ ರೂಪಾಯಿಗೆ ೪೦ ಗುಂಡುಗಳು ಸಿಗುತ್ತವೆ

ಸೂಚನೆ.—ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು

ಪತ್ತೆ.-**The Novelty Stores,** (103)
Bhuleshwar Bombay No 2

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यात मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनबल टोप्या तयार केल्याजातात

माल चोख— फॅशनेबल— स्वस्त— व भरपूर

ह्या शिवाय

आमच्या स्वत हातमागावरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान-मोठे पचे, सीडपाट, चीलपाट, शर्टिंग- कोटींग -वगैरे मालाचा भरपूर पुरवठा नेहमी असतो

ऑर्डर द्या व खात्री करून घ्या!

टीप:—आमच्या कोणत्याहि मालावर घाऊक व्यापाऱ्यास भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.

पोस्ट— सुंकेरि (कारवार.

FOR
HAND AND POWER
-- LOOMS --.
SHUTTLES,
Roughest and even
Finest COUNTS Steel
& Brass REEDS.

COTTON HEALDS
WIRE HEALDS
BOBBINS
OIL PAINTS,
AND
EMERY PAPERS
Can be had at
exceptionally reduced rates
From -
P. P. TRIVEDI & CO,
BRUCE Street, Fort, BOMBAY

ಉಚಿತ] ನನ್ನ ಶಾಸ್ತ್ರೀಯ ವಾದ [ಉಚಿತ

ಶರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನಾ ನನ್ನ ಸ್ನಾಯು ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳ ನವಪ್ಪದ ಅಂಶವು ... ದ ಕ್ರಮ ಹೇಗೆ ಬಂದಿತೆಂಬ ... ಕೊಡಲ್ಪಟ್ಟಿದೆ ... ನನ್ನ ... ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ... ವನ್ನು ಕಳುಹಿಸಿದರೆ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನು ಈ ಯೋಜನೆಯು ... ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ್,
ಕಾಳಬಾದೇವಿ ರೋಡ,
ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸರ್ವ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿ ರೋಕ ಖರೇದಿ ಮಾಡಿ ಕಳಿಸುತ್ತೇವೆ ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ. ಖರೇದಿ ಚೌಕಶಿಯಿಂದಾ ಗುತ್ತದೆ. ಪೇಟೆಯಲ್ಲಿರುವ ಧಾರಣೆಗೇ ಆಕರಿಸಲ್ಪಡುತ್ತದೆ ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗು ತರಿಸಿಕೊಳ್ಳಿ. ಉಚಿತವಾಗಿ ಸಿಗುವದು.

ಫ... ವರ್ ವಾಚ್.

(... ಳ ಸಹಿತ ಬೆಲೆ ರೂ. ೪-೮-೦)
(... ಗಿ ತಯಾರಿಸಲ್ಪಟ್ಟ ವಿಶಿಷ್ಟವಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ...ಬಿಗೆ ಅಡಕವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ... ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ... ಹಿಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ ಮೂಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ... ಗ್ಲಾಸ ಡೂಮ್ ಇರುವದು ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ...ರ್ ಮೂವೆಂಟ್ಸ್‌ಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ! ರಚಿಸ್ತ ... ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ ಪೇನಾ ೧, ... ಬಾಟ್ಲಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ... ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ... ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧. ಈ ೧೫ ... ಮತ್ತು ... ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕೆ, ಬರೇ ರೂ ೪-೮-೦

ವಿಳಾಸ — ಇಂಗ್ಲೀಷ ಎಂಪೋರಿಯಂ,
ಪೋಸ್ಟ ಬಾಕ್ಸ ನಂ. ೧೦೫, ಮದರಾಸು.

ಟೇಬಲ್ ಟೈಂಪೀಸ ಇನಾಂ



ಈ ಪಕ್ಕದಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿ ... ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನ ... ನಿಬ್ಬು ಇದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟ್ಯಾಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟ್ಯಾಂಪೀಸ ಸಹಿತ ಪೇನಾ ೧ ಕ್ಕೆ ರೂ.೩-೮-೦.
ವಿಳಾಸ — ಪೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಪುಕ್ಕಟೆ ಪುಕ್ಕಟೆ!! ದುಡ್ಡು ಇಲ್ಲ!!!

ಈ ಅಪೂರ್ವ ಸಂಧಿಯು ಬಹುಕಾಲ ಬರದು!

ಚಿನ್ನದ ಮುಂಗೆ, ಗಡಿಯಾರಗಳು!



ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು ಅವುಗಳ ಸಂಗಡ ರೇಶಿಮೆಯ ... ಪಟ್ಟಿ ಸಿಗುತ್ತದೆ. ಎರಡಕ್ಕೂ ಕೂಡಿ ಬೆಲೆ ರೂ. ೫-೧೫-೦ ೪ ವರುಷದ ಗೆರೆ ಟಿ

ವ್ಹಿ. ಪಿ ಖರ್ಚಿನ ಬಗ್ಗೆ ೦-೬-೦ ಪ್ರತ್ಯೇಕ.

೩ ಗಡಿಯಾರಗಳಿಗೆ ರೂ. ೧೫ ೦-೦, ೬ ಗಡಿಯಾರಗಳಿಗೆ, ರೂ. ೨೮-೦-೦. ಅಂಚೆ ವೆಚ್ಚ ಇಲ್ಲ!

ಅದಲ್ಲದೆ ಗಿರಾಕಿಗಳಿಗೆ ಒಂದೊಂದು ಅನಾಮು ಕೊಡಲಾಗುವದು ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ... ಅಂಕಿಯನ್ನು ಅವರು ಬರೆದು ತಿಳಿಸಬೇಕು. ಆ ಅಂಕಿಯಿಂದ ... ಗಡಿಯಾರದ ಜೊತೆಗೆ ಕಳಿಸಲ್ಪಡುವದು ಪ್ರತಿಯೊಂದು ಸಂಖಿಗೆ ಒಂದೊಂದ ... ವಾಗಿದೆ.

ಟೀಪು. — ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು
ಪತ್ತೆ - THE DILAWAR WATCH COY., (33)
Bhuleshwar, BOMBAY.

ಈ ವಾರ ಕುಮಟೆಯಲ್ಲಿ ಸೇರಿದ ಮೂರು ಸಮ್ಮೇಲನಗಳ ವೃತ್ತಾಂತ.

ಸಹಕಾರಿಗಳ ಕೂಟ.

ಗುರುವಾರಕ್ಕೆ ಇಲ್ಲಿಯ ಇನ್‌ಸ್ಟಿಟ್ಯೂಟಿನ ಆಫೀಸಿನಲ್ಲಿ ಜಿಲ್ಲೆಯೊಳಗಿನ ಪ್ರಮುಖ ಸಹಕಾರಿಗಳ ಕೂಟವಾಯಿತು. ರಿಜಿಸ್ಟ್ರಾರರಾದ ರಾ।ಬ್ರಾ। ಭಿಡೇಯವರು ಕೂಟಾಧೀಶರಾಗಿದ್ದರು. ಸಾಮಾನ್ಯವಾಗಿ ಕೂಟದ ಕಾರ್ಯವು ವಿಚಾರವಿನಿಮಯಕ್ಕಾಗಿದ್ದಿತ್ತು. ಸಹಕಾರಿ ಸಂಘಗಳ ನಡಾವಳಿಯ ಕುರಿತು ಮಾತುಕಥೆ ನಡೆಯಿತು. ಸಂಘಗಳು ಪತ್ತಿನ ಸಂಘಗಳಾದ್ದರಿಂದ ಹೆಚ್ಚಿನ ಅವಧಿಯ ತನಕ ಸಾಲ ಕೊಡಕೂಡದೆಂದು ರಾ। ಭಿಡೇಯವರು ಸೂಚಿಸಿದರು. ಮುಂಬಯಿಯ ಬೇಂಕಿನವರು ೫ ವರುಷಗಳ ಮುದ್ದತ್ತಿನ ಮೇಲೆ ಒಬ್ಬರಿಗೆ ೬ ಸಾವಿರ ರೂಪಾಯಿಗಳ ತನಕ ಸಾಲ ಕೊಟ್ಟದ್ದು ವಿಹಿತವಲ್ಲೆಂದು ಅಧ್ಯಕ್ಷರು ಉದ್ಗರಿಸಿದರು. ಹೀಗೆ ಸಾಲ ಕೊಡಬೇಕಾದರೆ, ಭೂಮಿ ಅಡವು ಕೊಳ್ಳುವ ಬೇಂಕುಗಳನ್ನು ಸ್ಥಾಪಿಸಬೇಕಾಗಿಯೂ ಸೂಚಿಸಲಾಯಿತು. ಸಾಲ ಬೇಡುವವರ ಸ್ಥಿತಿಗತಿ ನೋಡಿ ಸಾಲ ಕೊಡಬೇಕಾಗಿಯೂ ಹೇಳಲಾಯಿತು, ಜಾಮೀನದಾರರಿಗೆ ನೋಡಿ, ಸಾಲ ಕೊಡುವ ವಿಚಾರವು ತಪ್ಪೆಂದೂ ಹೇಳಲಾಯಿತು. ಅವಸ್ವರ ಸ್ಥಿತಿಗೆ ಹುಟ್ಟುವಳಿಯಾಗುವ ಉದ್ಯೋಗಗಳಿಗೇ ಸಂಘವು ನೆರವಾಗಬೇಕಾಗಿಯೂ ಎಚ್ಚರಿಕೆ ಕೊಡಲಾಯಿತು. ಸಾಲವನ್ನು ಸುಲಭವಾಗಿ ವಸೂಲ ಮಾಡಿಕೊಳ್ಳುವ ಹವ್ಯಾಸಕ್ಕೆ ಬಲಿಬಿದ್ದು ಜಾಮೀನದಾರರ ಕಡೆಯಿಂದ ಹಣ ವಸೂಲ ಮಾಡುವ ಪದ್ಧತಿಯು ಸದೋಷವಾದದ್ದೆಂದು ಅಧ್ಯಕ್ಷರು ಉದ್ಗರಿಸಿ, ಈ ಕುರಿತು ಅಮಲದಾರ ಮಾಮಲೇದಾರರಿಗೆ ಗುಪ್ತ ಸರ್ಕ್ಯುಲಾರನ್ನು ಹೊರಡಿಸಿ, ತಾವು ತಕ್ಕ ಸೂಚನೆ ಕೊಡಲಿಕ್ಕಿದ್ದೇವಾಗಿ ರಾ। ಭಿಡೇಯವರು ತಿಳಿಸಿದರು. ಅವಿಭಕ್ತ ಕುಟುಂಬದೊಳಗಿನ ಒಬ್ಬರಿಗೆ ಮಾತ್ರ ಸಾಲ ಕೊಡಬೇಕಾಗಿಯೂ ಹೇಳಲಾಯಿತು. ಅವಿಭಕ್ತ ಕುಟುಂಬದೊಳಗೆ ಒಬ್ಬರಿಗೆ ಮಿಕ್ಕ ಮೆಂಬರರಾಗಿ ಸಹ ಸೇರಿಸಿಕೊಳ್ಳಲಾಗದೆಂದು ಅಭಿಪ್ರಾಯವಾಗಿದ್ದರೆ ಮತ್ತೂ ಒಳಿತಾಗುತ್ತಿತ್ತು. ಸಭಾಸದರಾಗಿ ಸೇರಿಸಿಕೊಂಡ ಬಳಿಕ, ಸಾಲ ಕೊಡದಿರುವದು ಪ್ರಶಸ್ತ ತೋರುವದಿಲ್ಲ. ಪಂಚರ ನಿರ್ಣಯಕ್ರಮದ ಬಗ್ಗೆ ನಿಯಮಗಳಿಲ್ಲ. ಅವನ್ನು ಏರ್ಪಡಿಸಬೇಕಾಗಿ ಅಭಿಪ್ರಾಯವಾಗಿದೆ. ಅರ್ಬಿಟ್ರೇಟರ ಯಾನೆ ಪಂಚರಿಗೆ ಪಂಚಪೈಸಲೆಯಂತೆ ವಸೂಲಾದ ರಕಮಿನ ಮೇಲೆ ೧೦೦ಕ್ಕೆ ೨ ರೂಪಾಯಿಯಂತೆ ವೇತನ ಕೊಡಬೇಕಾಗಿಯೂ, ಆ ವೇತನವನ್ನು ಸಾಲಗಾರರ ಕಡೆಯಿಂದ ಫೈಸಲಿ ರಕಮಿನ ಸಂಗಡ ಎತ್ತುವಳಿ ಮಾಡುವ ನಿರ್ಧಾರವಾಗಿದೆ. ಪಂಚರು ಸಹ ರಿಜಿಸ್ಟ್ರಾರರಿಂದ ನೇಮಿಸಲ್ಪಡುವರು. ಪರಸ್ಪರ ಸಹಕಾರದಲ್ಲಿ ಜೀವನ ಜಂಟುವ್ಯವೇಶವಾಗತಕ್ಕದ್ದೆ. ಕರಾರಿನಂತೆ ಸಾಲ ತೆರದವರಿಗೆ ಬಡ್ಡಿಯ ದರವನ್ನು ಇಮ್ಮಡಿ ಆಕರಿಸದೆ, ರೂ. ೧೬॥ ಯಂತೆ ಆಕರಿಸಬೇಕಾಗಿಯೂ ಅಭಿಪ್ರಾಯವಾಗಿದೆ. ಹೀಗೆಲ್ಲ ಸಾಮಾನ್ಯ ಸಾಹುಕಾರರು ತಮ್ಮ ನಿತ್ಯವ್ಯವಹಾರದಲ್ಲಿ ಉಪಯೋಗಿಸುವ ಸಾಮಾನ್ಯ ಆಚಾರ-ವಿಚಾರಗಳನ್ನು ಜಿಲ್ಲೆಯೊಳಗಿನ ಪ್ರಮುಖ ಸಹಕಾರಿಗಳು ಆಳವಾಗಿ ವಿಚಾರಿಸಿ, ಸಮ್ಮೇಲನವನ್ನು ನೇರಿಸಿ ಕೈಕೊಂಡದ್ದು ತುಂಬಾ ಅಭಿನಂದನೀಯವು. ಪರಸ್ಪರ ಸಹಕಾರದಿಂದ ದೇಶದ ಬಡ ಜನರ ಲೋಕೋಪಕಾರದ ಸ್ವರೂಪವು ಇದರಿಂದ ಬೆಳಕಿಗೆ ಬರುತ್ತದೆ. ನಿರುದ್ಯೋಗಿ ಸುಶಿಕ್ಷಿತರಿಗೆ ಮುಂದೆ ಮುಂದೆ ಬರಲು ಇಂಥ ಸಮ್ಮೇಲನಗಳಿಂದ ಬಹು ಅನುಕೂಲವೆಂದು ಸಮ್ಮೇಲನಗಳ ಹಿರಿಯ ಬಲ್ಲವರು ಉದ್ಗರಿಸುತ್ತಾರೆ.

ಪ್ರಾಥಮಿಕ ಶಿಕ್ಷಕರ ಸಮ್ಮೇಲನ.

ಶುಕ್ರವಾರಕ್ಕೆ ಇಲ್ಲಿಯ ಕನ್ನಡ ಶಾಲೆಯ ಮೇಲುಪ್ಪರಿಗೆಯ ಮೇಲೆ ಪ್ರಾಥಮಿಕ ಶಿಕ್ಷಕರ ಸಮ್ಮೇಲನದ ೯ ನೇ ಅಧಿವೇಶನವು ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ರಾ। ಮಹಾಬಲೇಶ್ವರ ಗಣಪತಿಭಟ್ಟ ಗೋಪಿ ಇವರ ಅಧ್ಯಕ್ಷತೆಯಲ್ಲಿ ಸೇರಿತು. ಅಧ್ಯಕ್ಷರ ಅಪೇಕ್ಷೆಯಂತೆ ಮೆರವಣಿಗೆಯನ್ನು ಹೊರಡಿಸದೆ, ಕನ್ನಡ ಶಾಲೆಯ ಬಳಿ ಬೆಂಡುವಾದ್ಯಘೋಷದಿಂದ ಅಧ್ಯಕ್ಷರಿಗೆ ಬರಮಾಡಿಕೊಳ್ಳಲಾಯಿತು. ಸಭೆಗೆ ೬೦-೭೦ ಮಂದಿ ಪ್ರಾಥಮಿಕ ಶಿಕ್ಷಕರು ಸೇರಿದ್ದರು. ಸ್ವಾಗತಪರ ಪದ್ಯ ಮುಂತಾದ ಸ್ವಾಗತ ಸತ್ಕಾರಗಳಾದ ಬಳಿಕ, ಸ್ವಾಗತಾಧ್ಯಕ್ಷರಾದ ರಾ।ಬ್ರಾ। ಮಂಜನಾಥ ಪಾಂಡುರಂಗ ಕಾಮತರವರು ಸ್ವಾಗತಪರ ಭಾಷಣ ಮಾಡಿದರು.

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ್)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಎಣ್ಣೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಗಳಿಗೆ	,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

——o:——

½ ಔನ್ಸಿಗೆ	ರೂ.	೨—೦—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಹೌದು, ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ್)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX. 2082 **BOMBAY.**

ಜಿ॥ ಬೋ॥ ಅಧ್ಯಕ್ಷರಾದ ರಾ॥ ಗೋಪಿಯವರಿಗೆ ಜಾಗೃತಿಯುಂಟಾಯಿತು!

ಕ್ರಮಿಕ ಪುಸ್ತಕಗಳೊಳಗಿನ ದೋಷಗಳನ್ನು ವಿವರಿಸಿ, ಹೆಡ್ ಮಾಸ್ತರಿ ಭತ್ತೆಯ ಅನ್ಯಾಯವನ್ನು ರಾ॥ ಕಾಮತರು ಹೇಳಿದರು. ವಾರ್ಷಿಕ ಪರೀಕ್ಷೆಯನ್ನು ಎಪ್ರಿಲ ತಿಂಗಳಲ್ಲಿ ಕೊಡುವದರಿಂದ ಅಭ್ಯಾಸಕ್ಕೆ ತೊಂದರೆಯಾಗುತ್ತದಾಗಿ ರಾ॥ ಕಾಮತರು ಅಭಿಪ್ರಾಯಪಟ್ಟರು. ನವಂಬರ ತಿಂಗಳಿನಲ್ಲಿ ಈ ಪರೀಕ್ಷೆ ಕೊಂಡರೆ ಅನುಕೂಲವಾಗುವದೆಂದೂ ಅವರು ಉದ್ಗರಿಸಿದರು. ಈಗಿನ ಅಭ್ಯಾಸದ ಮಾನವು ಹುಡುಗರ ಸಾಮರ್ಥ್ಯದ ಮಾನದಿಂದ ಹೆಚ್ಚಾಗಿರುವದಾಗಿಯೂ ಅವರ ಅಭಿಪ್ರಾಯವಾಯಿತು. ಹೀಗೆ ರಾ॥ ಕಾಮತರ ಭಾಷಣದ ಬಳಿಕ, ಅಧ್ಯಕ್ಷರಿಗೆ ಜಾಗೃತಿಯಾಯಿತು. ರಾ॥ ಗೋಪಿಯವರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ಭಾಷಣ ಕೊಡುವವರಿದ್ದರು. ಅಷ್ಟರಲ್ಲಿ ಒಬ್ಬ ಶಿಕ್ಷಕರ ಅಪ್ಪಣೆ ಕೇಳಿ ಬಂತು. ರಾ॥ ವಸಂತ ಪ್ರಭುಗಳವರು ಹಿಂದೆ ಭಾಷಣ ಕೊಟ್ಟು ಬಿಟ್ಟರು. ವಾಙ್ಮಯಾತ್ಮಕ ಶಿಕ್ಷಣಕ್ಕಿಂತ ಔದ್ಯೋಗಿಕ ಶಿಕ್ಷಣದ ಏರ್ಪಾಟನ್ನು ಮುಂಚಿತವಾಗಿ ಕೈಕೊಳ್ಳಬೇಕಾಗಿ ರಾ॥ ಪ್ರಭುಗಳವರ ಸೂಚನೆ. ಇದಕ್ಕೆ ಆಗಲೇ ಇನ್ನೊಬ್ಬ ಶಿಕ್ಷಕರು ಎದ್ದು ನಿಂತು ಉತ್ತರ ಕೊಟ್ಟರು. ರಾ॥ ಪ್ರಭುಗಳು [illegible] ಪರದೇಶ ಅರಿವೆಯನ್ನು ತೊಟ್ಟುಕೊಂಡು ಇಂಥ ಉಪದೇಶ ಮಾಡುವದನ್ನು ನೋಡಿದರೆ, 'ಪರೋಪದೇಶಪಾಂಡಿತ್ಯ'ವು ಪ್ರತ್ಯಕ್ಷ ಇದಿರಿಗೆ ನಿಂತಿದೆಂದು ಅವರು ಉದ್ಗರಿಸಿದ್ದರು. ಇಷ್ಟಾದ ಬಳಿಕ, ಅಧ್ಯಕ್ಷರು ಬರೆದು ತಂದ ಭಾಷಣವನ್ನು ಓದಿತೋರಿಸಿದರು.

ರಾ॥ ಗೋಪಿಯವರ ಭಾಷಣ.

“ಜಿಲ್ಹಾ ಲೋಕಲ್ ಬೋರ್ಡಿನ ಜರೂರಿಯ ಬೇರೆ ಬೇರೆ ಕೆಲಸಗಳಲ್ಲಿ ಸದ್ರಿ ಬೋರ್ಡಿನ ಅಧ್ಯಕ್ಷಸ್ಥಾನದಿಂದ ಜವಾಬದಾರಿಯು ಈ ಕಾಲಕ್ಕೆ ಅಗತ್ಯವಿದ್ದಾಗ್ಯೂ, ಸಭೆಯ ಕಾರ್ಯಕ್ರಮದಲ್ಲಿ ಅಧ್ಯಕ್ಷನಾಗಲು ಪರಮಾನಂದವಾಗುತ್ತದೆ. ಸ್ಥಾನಿಕ ಸಂಸ್ಥೆಯ ಅಭಿವೃದ್ಧಿಯಲ್ಲಿ ನನಗೆ ಪ್ರೀತಿಯಿದೆ. ಶಿಕ್ಷಣ ಜವಾಬದಾರಿಯನ್ನು ಕೈಕೊಳ್ಳುವ ಪೂರ್ವದ ಹಾಗು ನಂತರದ ನಮ್ಮ ಬೋರ್ಡಿನ ಶಿಕ್ಷಣ ಸಂಬಂಧಿ ಆರ್ಥಿಕ ಸ್ಥಿತಿಯ ಕುರಿತು ಹೇಳುವದು ಪ್ರಸಂಗೋಚಿತವಿದೆ. ಬೋರ್ಡಿನವರು ಪ್ರಾಥಮಿಕ ಶಿಕ್ಷಣದ ಜವಾಬದಾರಿಯನ್ನು ವಹಿಸಿಕೊಳ್ಳುವ ಪೂರ್ವದಲ್ಲಿ ವರ್ಷಕ್ಕೆ ರೂ. ೩೧ ಸಾವಿರ ಕೊಟ್ಟರೆ, ನಮ್ಮ ಶಿಕ್ಷಣದ ಕೆಲಸವಾಗುತ್ತಿತ್ತು. ಇದು ಶಿಕ್ಷಕರ ೧ ತಿಂಗಳ ಸಂಬಳ; ಲೋಕಲ್ ಫಂಡಿನ [illegible] ರಕಮು... ಉಳಿದ ಖರ್ಚನ್ನು, ಅಂದರೆ, ರೂ. ೨॥ ಲಕ್ಷಗಳನ್ನು ಸರಕಾರವೇ ಸಹಿಸುತ್ತಿತ್ತು. ಶಿಕ್ಷಣದ ಜವಾಬದಾರಿ ಬಂದಂದಿನಿಂದ ಸ್ವಲ್ಪ ಕಠಿಣವಾಯಾಗಿದೆ. ಬೋರ್ಡಿನವರ ಮೇಲೆ ಹೆಚ್ಚಿನ ಹೊಣೆ ಬಿದ್ದಿದೆ. ಶಾಲೆಯ ಕಟ್ಟಡಗಳೆಲ್ಲ ಜೀರ್ಣ ಸ್ಥಿತಿಯಲ್ಲಿ ನಮ್ಮ ಕೈಸೇರಿವೆ. ಶಾಲೆಗಳಲ್ಲಿ ಶಾಲೋಪಯೋಗಿ ಸರಂಜಾಮು ತಾವ ಸಾಮಗ್ರಿಗಳಿಲ್ಲ. ಕಟ್ಟಡಗಳಿಲ್ಲದೆ, ಎಷ್ಟೋ ಶಾಲೆಗಳು ದೇವಸ್ಥಾನ ಹಾಗು ದಗಾರ್ಗಗಳ ಜಂಪ್ರಶಾಲೆಗಳಲ್ಲಿ ಸೇರುತ್ತವೆ. ಬೋರ್ಡಿನ ಸಾಂಪತ್ತಿಕ ಸ್ಥಿತಿ ನೆಟ್ಟಗಿಲ್ಲ. ಮುಂಬಯಿ ಇಲಾಖೆಯಲ್ಲಿ ನಮ್ಮ ಬೋರ್ಡ ಬಡ ಬೋರ್ಡು; ನಮ್ಮ ಜಿಲ್ಹೆಯು ಜಂಗಲ ಜಿಲ್ಹೆ. ಶೇಕಡಾ ೧೮ ಎಕ್ರೆ ಕ್ಷೇತ್ರವು ಸಾಗುವಳಿಯ ಭೂಮಿ. ಅರಣ್ಯ ಖಾತೆಯ ನಿರ್ಬಂಧನೆಗಳ ಮೂಲಕ ಇಷ್ಟು ಕ್ಷೇತ್ರವು ಸಹ ಸಾಗುವಳಿಯಲ್ಲಿಯಾಗದಿಲ್ಲ, ಬಹಳ ಪ್ರದೇಶವು ಬೀಳು ಬಿದ್ದದೆ. ಇಂಥ ಪರಿಸ್ಥಿತಿಯ ಮೂಲಕ ಬೋರ್ಡಿನ ಸ್ವಂತ ಉತ್ಪನ್ನವು ರೂ. ೯೦ ಸಾವಿರ ಮಾತ್ರವಿದೆ. ಮಾರ್ಗ, ಬಾಜಾರಾ, ದವಾಖಾನೆ, [illegible] ವರಗಳ ಚಿಕಿತ್ಸಾಲಯ ಮುಂತಾದವುಗಳಿಗಾಗಿ ತಗಲುವ ಅಗತ್ಯದ ಖರ್ಚನ್ನು ಸರಕಾರದ ಆಧಾರದ ಮೇಲೆಯೇ ನಿರ್ವಹಿಸಬೇಕು. ಬೋರ್ಡಿನ ಉತ್ಪನ್ನವನ್ನು ಹೊಸ ಕಾನೂನಿನ ಪ್ರಕಾರ ಸ್ಥಳಿಕ ಉದ್ಯೋಗಗಳ ಮೇಲೆ ಕರ, ಟೋಲು ಮುಂತಾದವುಗಳನ್ನೇರ್ಪಡಿಸಿ ಬೆಳೆಸಿಕೊಳ್ಳಲು ಅನುಕೂಲತೆಗಳಿವೆ. ಆದರೆ, ಈ ಕರಗಳನ್ನು ಎತ್ತುವಳಿ ಮಾಡುವ ಖರ್ಚಿನ ವಿಚಾರ ಮಾಡಿದರೆ, ಅವುಗಳಿಂದ ಲಾಭವಾಗುವದಿಲ್ಲ. ಲೋಕಲ್ ಫಂಡನ್ನು ಏರಿಸುವದು ಸಾಧ್ಯವಿದೆ. ಆದರೆ, ನಮ್ಮ ಜಿಲ್ಹೆಯು [illegible] ದಿಂದ ಜೀವಿಸುವವರ ಸಂಖ್ಯೆಯೇ ಹೆಚ್ಚು, [illegible] ಯಾವವೂ ಹೆಚ್ಚು. ಇದರಿಂದ ಲೋಕಲ್ ಫಂಡನ್ನು ಏರಿಸಿದರೆ, ತರತರದ ಕರಬಾಧೆಯಿಂದ ಒಟ್ಟುತ್ತಿರುವ ಬಡ ರೈತರಿಗೆ ಮತ್ತಷ್ಟು [illegible] ಕೊಟ್ಟಂತಾಗುವದು. ಸರಕಾರದಿಂದ ಸಿಗತಕ್ಕ ದಾನ ಉತ್ಪನ್ನವೂ ತೀರ ಕಡಿಮೆ. ಶಿಕ್ಷಣ [illegible] ಯಾವಾಗಲೂ ಬಿರುಕುಬಿಟ್ಟ ಅಡಚಣೆಗಳನ್ನು ದೂರ ಮಾಡಿ [illegible] ಬೇಕಾಗ ವ ಖರ್ಚಿನ [illegible] ಇದನ್ನು ಯಾರೂ [illegible] ದರೂ, ಸರಕಾರವು ತನ್ನ [illegible] ಭಾಗವನ್ನು ಕೊಡುತ್ತದೆ [illegible]. ಯಾಕಂದರೆ, ಸರಕಾರಕ್ಕೆ ಸಹ ಹಣದ ಅಡಚಣೆ ಬೆಳಗಾವಿ, ವಿಜಾಪುರ ಜಿಲ್ಹೆಗಳಲ್ಲಿ ಲೋಕಲ್ ಫಂಡು ಏರಿಸಿದಾಗ್ಯೂ, ಸರಕಾರದ ಭಾಗಧೇಯವು ಸಿಗದೆ, ಅವು ಭಗ್ನಮನೋರಥವಾಗಿರುವವಂತೆ ಸಕ್ತಿಯ ಶಿಕ್ಷಣವನ್ನು ಪ್ರಾರಂಭಿಸುವ ಮಾತು ಹಾಗಿಟ್ಟಿಗಿರಲಿ, ಇದ್ದ ಸ್ಥಿತಿಯಲ್ಲಿ ಇದ್ದಷ್ಟು ಶಾಲೆಗಳನ್ನು ನಡಿಸಿಕೊಂಡು ಹೋಗುವದು ಕಠಿಣವಾಗಿದೆ. ಹೊಸ ಖರ್ಚಿನಲ್ಲಿ ಬೋರ್ಡು ೨೩ನೇ ೧ ವಾಲನ್ನು ಸಹಿಸತಕ್ಕದ್ದು. ಈ [illegible] ನಮ್ಮ ಪಾಲಿಗೆ ಬಂದ ಹೆಚ್ಚಿನ ಖರ್ಚನ್ನು ಹೇಗೂ ಹೀಗೂ ಸಹಿಸಿಕೊಂಡೆವು. ಬೋರ್ಡಿನ ಉತ್ಪನ್ನವು ಬೆಳೆದು ಸ್ಥಿತಿ ಸುಧಾರಿಸದಿದ್ದರೆ, ಶಾಲಾಬೋರ್ಡಿನ ವೆಚ್ಚವು ಬಹಳ ಬೆಳೆದು, ಅದು ಕೊನೆಯ [illegible] ಬಂದೀತು. ಪ್ರಾಥಮಿಕ ಶಿಕ್ಷಣದ ಜವಾಬದಾರಿಯನ್ನು ನಮ್ಮ ಬಡಬೋರ್ಡು ವಹಿಸಿಕೊಂಡದ್ದೇ ತಪ್ಪೆಂದು ನನ್ನ ಅಭಿಪ್ರಾಯವಾಗಿದೆ. ಶಿಕ್ಷಣವನ್ನು ವಹಿಸಿಕೊಳ್ಳದಿದ್ದ ಕೆಲ ಬೋರ್ಡುಗಳಿವೆ. ಅವು ನಿಜವಾಗಿಯೂ ದೂರ ದೃಷ್ಟಿಯುಳ್ಳವು. ಸಕ್ತಿ ಶಿಕ್ಷಣದ ಪೂರ್ವದಲ್ಲೇ ಈ ಸ್ಥಿತಿಯಾದ ಮೇಲೆ ಅದು ಅಮಲಿನಲ್ಲಿ ಬಂದ ಮೇಲೆ ಬೋರ್ಡಿನ ಸ್ಥಿತಿ ಹ್ಯಾಗಾಗಬಹುದೆಂದು ನೀವೇ ಊಹಿಸಿರಿ. ಈ ಜವಾಬದಾರಿಯನ್ನು ತಿರುಗಿ ಸರಕಾರಕ್ಕೆ ಒಪ್ಪಿಸುವ ಪ್ರಸಂಗ ಬಂದೇ ಬರುವದೆಂದು ನಮ್ಮ ಬೋರ್ಡಿಗೆ ಅನಿಸುತ್ತದೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಮೇಲೆ ಶಿಕ್ಷಣದ ಜವಾಬದಾರಿಯನ್ನು ಹೊರಿಸಿದ್ದು ಸುಧಾರಿಸಿದ ಸರಕಾರಕ್ಕೆ ಶೋಭಿಸುವದಿಲ್ಲ. ಇದನ್ನು ನೀಗಿಸುವದಕ್ಕಾಗಿ ಹೊಸ ಯೋಜನೆಯನ್ನು ಕಲ್ಪಿಸತಕ್ಕದ್ದು.

ಶಿಕ್ಷಣ ಕಾನೂನಿನಿಂದುಂಟಾದ ಗೊಂದಲ.

ಪ್ರಾಥಮಿಕ ಶಿಕ್ಷಣದ ಹೊಸ ಕಾನೂನು ದೋಷಾಸ್ಪದವಿದೆ. ಅದರೊಳಗೆ ದೊಡ್ಡ ದೊಡ್ಡ ತಪ್ಪುಗಳು ಕಾಣಲ್ಪಟ್ಟಿವೆ; ಹೊರತು ನಿತ್ಯ ವ್ಯವಹಾರಕ್ಕೆ [illegible] ಕಾನೂನಿನಿಂದ ಬಹಳೇ ತೊಂದರೆಯಾಗಿದೆ. ಜಿಲ್ಹಾ ಬೋರ್ಡ್ ಯಾನೆ ಲೋಕಲ್ ಒಥೋರಿಟಿ-ಸ್ಕೂಲ ಬೋರ್ಡ- ಸರಕಾರ ಇವುಗಳ ಅಧಿಕಾರಗಳಾಗಲಿ, ಕರ್ತವ್ಯನಿರ್ದೇಶವಾಗಲಿ ನಿಶ್ಚಯವಾಗಿ ಹೇಳಲ್ಪಡಲಿಲ್ಲ. ಇದರಿಂದ ಪರಸ್ಪರ ಅಧಿಕಾರಗಳ ಸಂಬಂಧ ಈ ಸಂಸ್ಥೆಗಳೊಳಗೆ ಅನಾವಶ್ಯಕವಾದ ಮನೋವ್ಯಗ್ರತೆಗಳುಂಟಾಗಿವೆ. ಶಾಲಾ ಬೋರ್ಡುಗಳ ರಚನೆಯು ಸಮಾಧಾನಕರವಿಲ್ಲ. ಈ ಸಂಸ್ಥೆಗಳಿಗೆ ಜಾತಿ ತತ್ವಗಳನ್ನು ಹಚ್ಚುವ ಅವಶ್ಯಕತೆಯಿದ್ದಿಲ್ಲ. ತಜ್ಞರನ್ನೇ ಹೆಚ್ಚಾಗಿ ನೇಮಿಸಿಕೊಳ್ಳುವದು ಅವಶ್ಯವಿತ್ತು. ನ್ಯೂನತೆಗಳು ತೋರಿಬಂದಕಾಗೆ ತಿದ್ದು[illegible]ಗಳಾಗಬಹುದಾಗಿತ್ತು.

ಸರಕಾರಿ ಧೋರಣ.

ಶಿಕ್ಷಣದ ಜವಾಬದಾರಿಯನ್ನು ಕೈಕೊಂಡ ೭೨ ಸ್ಥಾನಿಕ ಸಂಸ್ಥೆಗಳಲ್ಲಿ ೪೪ ಸಂಸ್ಥೆಗಳು ಸ್ವೇಚ್ಛಾ ತತ್ವದ ಮೇಲೆ ಶಿಕ್ಷಣ ಪ್ರಸಾರದ ಯೋಜನೆಗಳನ್ನು ತಯಾರಿಸಿ ಸರಕಾರದ ಬಳಿ ರೂ. ೮೮೫೦೦೦ ಬೇಡಿದವು. ಸರಕಾರವು ೫೨ ಯೋಜನೆಗಳನ್ನು ಮಂಜೂರ ಮಾಡಿತು. ಇದಕ್ಕೆ ೩೧೦೦೦೦ ರೂಪಾಯಿ ಸರಕಾರದಿಂದ ದ [illegible]ಕಾಗುತ್ತದೆ. ಎಲ್ಲ ಸ್ಥಾನಿಕ ಸಂಸ್ಥೆಗಳು ಇದೇ ಪ್ರಕಾರ ಯೋಜನೆಗಳನ್ನು ತಯಾರಿಸಿದರೆ, ಸರಕಾರದ ಪಾಲಿಗೆ ರೂ. ೨೧ ಲಕ್ಷ ಬರುತ್ತದಾಗಿ ಅಂದಾಜಾಗಿದೆ. ಹೊಸ ಕಾನೂನಾದಂದಿನಿಂದ ಶಿಕ್ಷಣದ ಹೊಸ ಯೋಜನೆಯ ಬಗ್ಗೆ ಪ್ರತಿವರ್ಷ ೨೧ ಲಕ್ಷ ರೂಪಾಯಿ ಬಜೆಟ-ಖರ್ಚಿನಲ್ಲಿ ಹಾಕಲ್ಪಡುತ್ತದೆ. ಶಿಕ್ಷಣ ಖಾತೆಯ ಪರಿವಾರ ಖರ್ಚು ಕಳೆದು, ಬರೇ ೬ ಲಕ್ಷಗಳು ಹೊಸ ಯೋಜನೆಗಳಿಗೆ ಉಳಿಯುತ್ತವೆ. ಮುಂಚೆ ಆಶ್ವಾಸನ ಕೊಟ್ಟಂತೆ ಸರಕಾರದಿಂದ ಕೃತಿಯಾಗಲಿಲ್ಲ. ಎಲ್ಲ ವಿಚಾರ ಮಾಡಿದರೆ, ಸಕ್ತಿ ಶಿಕ್ಷಣದ ಕಾನೂನು ಅಮಲಿನಲ್ಲಿ ಬರುವ ಲಕ್ಷಣಗಳಿಲ್ಲ. ಹೀಗೆ ಪ್ರತಿಕೂಲ ಸ್ಥಿತಿಯಲ್ಲಿಯೂ ಅನುಕೂಲವಿದ್ದ ಮಟ್ಟಿಗೆ ಯೋಗ್ಯವಾಗಿ ಶಿಕ್ಷಣವನ್ನು ನಡಿಸಲು ನಮ್ಮ ಬೋರ್ಡು ಪ್ರಯತ್ನ ಮಾಡುತ್ತಲಿದೆ. ಉತ್ಪನ್ನವನ್ನು ಬೆಳೆಸುವದಕ್ಕಾಗಿ ಇನಕಮ್‌ಟೆಕ್ಸ, ಪೊರೆಸ್ಟು, ರೆವಿನ್ಯೂ ಮುಂತಾದವುಗಳ ಮೇಲೆ ಸಹ ಲೋಕಲ್ ಫಂಡನ್ನು ಎತ್ತುವಳಿ ಮಾಡಿಕೊಡಬೇಕೆಂದು ಸರಕಾರಕ್ಕೆ ವಿಜ್ಞಾಪನೆಯಾಗುತ್ತಿದೆ. ಈ ತನಕ ಈ ಪ್ರಯತ್ನಗಳಿಗೆ ಫಲಪ್ರಾಪ್ತಿಯಾಗಲಿಲ್ಲ; ಆದರೂ, ನಾವು ಎದೆಗುಂದಲಿಲ್ಲ. ಪ್ರಯತ್ನವನ್ನು ಸಂಪೂರ್ಣವಾಗಿ ಜಾರಿ ಮಾಡಿದ್ದೇವೆ. ನಮ್ಮ ಬಡ ಜಿಲ್ಹೆಯ ವಿಲಕ್ಷಣ ಸ್ಥಿತಿಯನ್ನು ವಿಚಾರಿಸಿ ಸರಕಾರದವರು ಶಿಕ್ಷಣಾಭಿವೃದ್ಧಿಗೆ ಹೆಚ್ಚಿನ ಗ್ರಾಂಟು ಕೊಟ್ಟಾರೆಂದು ನನ್ನ ಆಶೆ.

ಶಿಕ್ಷಕರ ವೇತನದ ವಿಚಾರ.

ಪ್ರಾಥಮಿಕ ಶಿಕ್ಷಣವು ಮೇಲ್ತರದ್ದಾಗಿ ಫಲಿಸಬೇಕಾದರೆ ಶಿಕ್ಷಕರು ಪ್ರಸನ್ನರಾಗಿರತಕ್ಕದ್ದು. ಶಿಕ್ಷಕರ ಪ್ರಪಂಚಕ್ಕೆ ತಕ್ಕ ವೇತನ ಸಿಗುವದಿಲ್ಲ. ಆದರಿಂದ ಆಗಾಗ್ಗೆ ಹಲವು ತರದ ಸ್ಕೇಲುಗಳು ಅಮಲಿನಲ್ಲಿ ಬಂದವು. ಅವುಗಳಿಂದ ನಿಮ್ಮ ಅಡಚಣೆಗಳ ಪರಿಹಾರವಾಗಲಿಲ್ಲ. ಸಾಠೇ ಪರಾಂಜಪೇಯವರು ಸೂಚಿಸಿದ ಸ್ಕೇಲು ಎಲ್ಲರಿಗೂ ಸಮಾಧಾನಕರವಿತ್ತು. ಆ ಸ್ಕೇಲಿನಂತೆ ಶಿಕ್ಷಕರಿಗೆ ಸಂಬಳ ಕೊಡಲು ಕಾಯಿದೆ ಕೌನ್ಸಿಲಿನಲ್ಲಿ ಬಂದ ಠರಾವು ಮನ್ನಿಸಲ್ಪಡದೆ, ರಾ॥ ಸವೇಯವರ ಸೂಚನೆಯಂತೆ ಮಿಶ್ರ ಮಂಡಳದ ಏರ್ಪಾಟಾಯಿತು. ಸಾಠೇ ಪರಾಂಜಪೇ ಸ್ಕೇಲಿನಂತೆ ಶಿಕ್ಷಕ

ಸ್ಕೂಲ ಬೋರ್ಡಿನಲ್ಲಿ ಉಂಟಾದ ಅರಾಜಕತೆ; ಪಕ್ಷಪಾತ; ಶಿಕ್ಷಕರ ಪೀಡನೆ.

ರಿಗೆ ಸಂಬಳ ಕೊಡಹೋದರೆ, ಸರಕಾರಕ್ಕೆ ೧೪॥ ಲಕ್ಷ ರೂಪಾಯಿ ಹೆಚ್ಚು ಖರ್ಚು ಬರುವದೆಂದೂ, ಇಷ್ಟು ರಕಮನ್ನು ಶಿಕ್ಷಕರ ಶಾಲೆಗಳ ಸಂಖ್ಯೆ ಅಥವಾ ಹುಡುಗರ ಸಂಖ್ಯೆ ಬೆಳೆಸಲಿಕ್ಕೆ ಬರುವದಿಲ್ಲವೆಂದೂ, ಆ ಸ್ಕೇಲು [ಮಂಜೂರಾದರೆ,] ಶಿಕ್ಷಣಾಭಿವೃದ್ಧಿಗೆ ತೊಂದರೆಯುಂಟಾಗುತ್ತದೆಂದೂ ಅಭಿಪ್ರಾಯವಾಗಿ ಭತ್ತೆ ಕೊಡುವ ಪದ್ಧತಿಯ ಅವತಾರವಾಯಿತು. ಆದಾದರೂ ಇದು ಅಸಮಾಧಾನ ಕಾರಣವಾಗಿದೆ. ಇಷ್ಟರಲ್ಲಿ ಪ್ರಾಪ್ತಿಯಾತು ಇಲ್ಲ ಈ ವಿಷಯವು ಸ್ಥಾನಿಕ ಸ್ವರಾಜ್ಯ ಹಾಗು ಸರಕಾರದ ಲಕ್ಷಕ್ಕೆ ಬಂದಿದೆ. ಎಲ್ಲರೂ ಈ ವಿಷಯವನ್ನು ವಿಚಾರಿಸುತ್ತಿದ್ದಾರೆ. ಕೌನ್ಸಿಲಿನಲ್ಲಿ ಚರ್ಚೆ ನಡೆಯುತ್ತಲಿದೆ. ನಿಮಗನುಕೂಲವಾಗಿಯೇ ನಿರ್ಣಯವಾಗುವದಾಗಿ ಹೇಳಬಹುದು. ಲೋಕಲ್ ಬೋರ್ಡಿನವರೂ ನಿಮ್ಮ ಹೇಳಿಕೆಯನ್ನು ಎತ್ತಿ ಹಿಡಿದಿದೆ. ಈಗ ಕೊಡುವ ಭತ್ತೆಯು ಹಕ್ಕುದಾರರಲ್ಲದವರಿಗೆ ಸಿಗುತ್ತಿದ್ದು, ಹಕ್ಕುದಾರರಲ್ಲಿ ಅಸಮಾಧಾನವಾಗಿದೆ. ಈ ಕುರಿತು ನನ್ನ ಕಡೆ ಬಹಳ ತಕ್ರಾರಿ ಅರ್ಜಿಗಳು ಬಂದಿವೆ. ಅವನ್ನು ಯೋಗ್ಯ ರೀತಿಯಿಂದ ನಿರ್ಣಯಿಸಲು ಸ್ಕೂಲ ಬೋರ್ಡ ಚೇರಮನ್‌ರವರ ಕಡೆಗೆ ಕಳುಹಿಸಲಾಗಿವೆ. ಹಕ್ಕುದಾರರಿಗೆ ಭತ್ತೆ ಸಿಗುವಂತೆ ವರ್ಗಾವರ್ಗಿ ಮಾಡಹೋದರೆ, ಪ್ರಯಾಣ ಭತ್ತೆ ಮುಂತಾದವುಗಳ ಕುರಿತು ೪ ಸಾವಿರ ರೂಪಾಯಿ ಹೆಚ್ಚಿಗೆ ತಗಲುವದೆಂದೂ, ಹೊಸ ಸ್ಕೇಲು ಶೀಘ್ರವೇ ಮಂಜೂರಾಗಿ ಭತ್ತೆಯ ಪದ್ಧತಿಯು ಸದ್ಯಕ್ಕೇ ರದ್ದಾಗುವದರಿಂದ ಇಷ್ಟು ರಕಮನ್ನು ವರ್ಗಾವರ್ಗಿಯ ಬಗ್ಗೆ ವೆಚ್ಚ ಮಾಡುವದು ಅನಾವಶ್ಯಕವೆಂದೂ ಅವರು ಬರೆಯುತ್ತಾರೆ. ಆದರೂ, ನಿಜವಾದ ಹಕ್ಕುದಾರರಿಗೆ ಭತ್ತೆ ಸಿಗುವಂತೆ ಯತ್ನ ಮಾಡಲು ಸ್ಕೂಲ ಬೋರ್ಡಿಗೆ ನಾನು ಸೂಚಿಸಿರುತ್ತೇನೆ. ಸದ್ಯ ಬೋರ್ಡಿನಲ್ಲಿ ಅನುಭವಿಕ ಜನರಿದ್ದಾರೆ; ದಕ್ಷರಿದ್ದಾರೆ. ಆದರಿಂದ ಈ ವಿಷಯವನ್ನು ಶೀಘ್ರವೇ ಅವರು ನಿರ್ಣಯಿಸುವರೆಂದು ನಾನು ನಂಬಿದ್ದೇನೆ. ನೀವು ಅಸಮಾಧಾನ ಪಡದೆ, ಕರ್ತವ್ಯಕರ್ಮವನ್ನು ಚೊಕ್ಕವಾಗಿ ನಡಿಸಬೇಕು."

ಆ ಮೇಲೆ ಅಧ್ಯಕ್ಷರು ಶಿಕ್ಷಣ ಧಂದೆಯ ಪಾವಿತ್ರ್ಯವನ್ನು ಬಣ್ಣಿಸಿ, ಶಿಕ್ಷಣವನ್ನು ಯಥಾಸಾಂಗವಾಗಿ ನಡಿಸಿದರೆ, ಜಗನ್ನಿಯಾಮಕನು ಅವರಿಗೆ ಅಪಕು ಕೊಂಡು ಅಭಿವೃದ್ಧಿಗೊಳಿಸುವನೆಂದು ಹುರಿದುಂಬಿಸಿದರು. ಶಿಕ್ಷಕರಿಗೆ ಹಿತ ಮಾಡುವ ಪ್ರಸಂಗ ಬಂದಲ್ಲಿ ವಿಶ್ವಪ್ರಯತ್ನ ಮಾಡಲು ತಮ್ಮ ಬೋರ್ಡು ಸದಾ ತತ್ಪರವಿರುತ್ತದಾಗಿಯೂ ಆಶ್ವಾಸಿಸಿ, ಬಾಯಿಯಿಂದ ನಾಲ್ಕು ಮಾತುಗಳನ್ನು ಹೇಳಿದರು. "ಶಿಕ್ಷಕರು ಶಿಕ್ಷಣದ ಕೆಲಸವನ್ನು ಸರಿಯಾಗಿ ಮಾಡುವದಿಲ್ಲವಾಗಿ ದೂರು ಬಂದಿದೆ. ನಾನು ಮೇಲ್ತನಿಖೆಗೆ ಹೋದಾಗ ೩೦-೪೫ ಶಾಲೆಗಳಲ್ಲಿ ಶಿಕ್ಷಕರೇ ಇದ್ದಿಲ್ಲ. ಅವರು ಆ ಕಾಲಕ್ಕೆ ಗೈರಹಾಜರಿರಲು ನೆವಗಳನ್ನು ಹೇಳಿದರು; ಅವುಗಳ ವಿಚಾರವು ಈಗ ಬೇಡ. ಊರವರೂ ಶಿಕ್ಷಕರನ್ನು ದೂರಿದರು. ಅದರಿಂದ ಶಿಕ್ಷಕರ ಉದಾಸೀನ ವೃತ್ತಿಯು ಕಂಡುಬರುತ್ತದೆ. ಶಿಕ್ಷಕರು ಈ ಪ್ರಕಾರ ಕೊಳ್ಳಲಾಗದು." ಇತ್ಯಾದಿ ಹೇಳಿ ಅಧ್ಯಕ್ಷರು ಸ್ವಸ್ಥಾನಾಪನ್ನರಾದರು. ಸ್ಕೂಲ ಬೋರ್ಡಿನ ಮೆಂಬರ ರಾ॥ ಯಾಜಿಯವರು ಶರೀರಸಂಪತ್ತನ್ನು ಬೆಳೆಸುವದಕ್ಕಾಗಿ ಸೂರ್ಯನಮಸ್ಕಾರದ ಪದ್ಧತಿಯನ್ನು ಪ್ರಾಥಮಿಕ ಶಾಲೆಗಳಲ್ಲಿ ಉಪಕ್ರಮಿಸುವ ವಿಚಾರವನ್ನು ಶಿಕ್ಷಕರು ಈ ಅಧಿವೇಶನದಲ್ಲಿ ಮಾಡಬೇಕಾಗಿ ಸೂಚಿಸಿದರು.

ವಿಷಯ ನಿರ್ಧಾರಕ ಮಂಡಳ.

ಆ ವೇಳೆ ವಿಷಯನಿರ್ಧಾರಕ ಸಭೆಯಾಯಿತು. ಸಭೆ ಸೇರುವ ಮುಂಚೆಯೇ ಹಿಂದಿನ ಅಧಿವೇಶನಗಳಂತೆ ಹೆಚ್ಚು ತೀರ್ಮಾನಗಳನ್ನು ಕೈಕೊಳ್ಳಬಾರದಾಗಿ ಮುಂದಾಗ್ರತೆ ಕೊಡಲಾಗಿತ್ತು. ಹೆಡ್‌ಮಾಸ್ತರಿ ಭತ್ತೆಯ ನಿಷೇಧಪ್ರದರ್ಶನವಾಗಿ, ಯಾವದಾದರೊಂದು ಸ್ಕೇಲು ಕೊಡಬೇಕಾಗಿ ಅನಿರ್ಣೀತವಾದ ನಿರ್ಧಾರವಾಗಿದೆ. ಟಪಾಲ ಕೆಲಸವನ್ನು ಶಿಕ್ಷಕರ ಕಡೆಯಿಂದ ತಪ್ಪಿಸಿದ ಬಗ್ಗೆ ನಿಷೇಧವಾಗುವದಿತ್ತು. ಅಧ್ಯಕ್ಷರು ತೀರ್ಮಾನವಾಗಬಾರದಾಗಿ ಹೇಳಿ, ಅದಕ್ಕೆ ಕಾರಣಗಳನ್ನು ವಿವೇಚಿಸಿದರು. ಶಿಕ್ಷಕರಿಗೇ ಟಪಾಲ ಕೊಡಬೇಕಾಗಿ ಕಲೆಕ್ಟರ ಮೊದಲಾದವರ ಅಭಿಪ್ರಾಯವಾಗಿದೆ; ಇದೊಂದು ಲೋಕೋಪಯೋಗಕಾರದ ಕೆಲಸವೆಂದು ಬೋರ್ಡಿನಿಂದ ಬರೆದು ಕೋರಿಯದೆ. ತೀರ್ಮಾನ ವಾಪಸ, ಸ್ವಾರ್ಥದ ಬಣ್ಣ ಬಂದೀತು. ಇತ್ಯಾದಿ ಸಮಾಧಾನ ಹೇಳಲಾಯಿತು. ರಾ॥ ಯಾಜಿಯವರು ಸ್ಕೂಲ ಬೋರ್ಡಿನ ಅಂಬೋಣವನ್ನು ಪ್ರತಿಪಾದಿಸಿದರು. ವಿಷಯನಿರ್ಧಾರಕ ಮಂಡಳದಲ್ಲಿ ಸ್ಕೂಲ ಬೋರ್ಡಿನ ಪ್ರತಿನಿಧಿಗಳಾಗಿ ರಾವಶ್ರೀಯವರಿಗೆ ಕಳಿಸಿದ್ದೇವು ತೋರಿಬರಲಿಲ್ಲ. ವಿಜಾಪುರದೊಳಗೆ ಪೆನಶನ್ ಮಾಸ್ತರರಿಗೆ ಕೊಟ್ಟ ಟಪಾಲನ್ನು ತೆಗೆದು, ಅಲ್ಲಿಯ ಶಾಲೆಯ ಮಾಸ್ತರರಿಗೆ ಅದನ್ನು ಸ್ಕೂಲ ಬೋರ್ಡು ಕೊಡ ಹೇಳಿದರೂ ಕೊಡದೆ ಟಪಾಲ ಖಾತೆಯು ತೋರಿಸಿದ ದರ್ಪಕ್ಕೆ, ತತ್ವಕ್ಕಾಗಿ ಎಲ್ಲ ಶಿಕ್ಷಕರ ಕಡೆಯಿಂದಲೂ ಟಪಾಲನ್ನು ತೆಗೆಯುವ ಯೋಜನೆಯನ್ನು ಸ್ಕೂಲ ಬೋರ್ಡು ಕೈಕೊಂಡಿತೆಂದು ರಾ॥ ಯಾಜಿಯವರು ಸ್ಕೂಲ ಬೋರ್ಡಿನ ಪಕ್ಷದ ನಿರೂಪಣೆ ಮಾಡಿದರು. "ತತ್ವವಿಚಾರ ಮಾಡುವಾಗ ಶಿಕ್ಷಕರ ಹೊಟ್ಟೆಯ ವಿಚಾರವು ಸ್ಕೂಲ ಬೋರ್ಡಿಗೆ ಸ್ಫುರಿಸಲಿಲ್ಲವಾಗಿ ಶಿಕ್ಷಕರೊಬ್ಬರು ರಾವಶ್ರೀಯವರಿಗೆ ಉತ್ತರ ಕೊಟ್ಟುಬಿಟ್ಟರಂತೆ. ಮುಖರವ್ಯರ ಯಾಜನೆ ಪೇಲ್ಲಾಸಿನ ಸ್ಥಳಗಳಲ್ಲಿ ಪ್ರತ್ಯೇಕ ವ್ಯಕ್ತಿಗಳ ಸ್ಥಳಗಳನ್ನು ಪ್ರಾಥಮಿಕ ಶಿಕ್ಷಕರಿಗೆ ಕೊಡಲು ಸಾಧ್ಯವೆಂದು ಅನುಕೂಲತೆಯಿದ್ದಾಗ್ಯೂ, ಹಾಗೆ ಕೊಡದಿದ್ದ ಬಗ್ಗೆ ವಿಷಾದ ಪ್ರದರ್ಶನವಾಯಿತು. ಪ್ರಸ್ತುತ ವಿಚಾರ ಮಾಡಬೇಕೆಂಬ ಉಪಸೂಚನೆಯು ಬಹುಮತದಿಂದ ಮಂಜೂರಾಗಿತ್ತು. ಅಧ್ಯಕ್ಷರು ಏನೋ ಒಂದು ಸಮಾಧಾನ ಹೇಳಿ, ಆ ಉಪಸೂಚನೆಯನ್ನು ಅಂಗೀಕರಿಸಲಿಲ್ಲ. ವಿಧವೆ ಶಿಕ್ಷಕಿಯರಿಗೆ ಅವರ ಅಪೇಕ್ಷೆಯಂತೆ ಅವಶ್ಯವಿದ್ದಲ್ಲಿ ವರ್ಗಾವರ್ಗಿ ಮಾಡಬೇಕೆಂಬ ತೀರ್ಮಾನವೂ ಕೈಕೊಳ್ಳಲಾಯಿತು. ರಾಜನಿಷ್ಠೆಯ ತೀರ್ಮಾನವೂ ಆಗಿದೆ. ಈ ತೀರ್ಮಾನಿನ ಅವಶ್ಯಕತೆ ಏನೆಂದು ತೋರಲಿಲ್ಲ. ಹೀಗೆ ೫ ತೀರ್ಮಾನುಗಳಾದವು.

ಸ್ಕೂಲ ಬೋರ್ಡಿನ ಅವ್ಯವಸ್ಥೆ.

ವಿಷಯ ನಿರ್ಧಾರಕ ಮಂಡಳದಲ್ಲಿ ಮಂಜೂರಾದ ತೀರ್ಮಾನಗಳ ಮೇಲೆ ಔಪಚಾರಿಕ ಮಂತನ-ಅನುಮೋದನಾತ್ಮಕ ಭಾಷಣಗಳಾಗಿ, ಅರ್ಧ ತಾಸಿನಲ್ಲಿಯೇ ಎಲ್ಲವೂ ಸರ್ವಾನುಮತದಿಂದ ಕೈಕೊಳ್ಳಲ್ಪಟ್ಟವು. ಆ ಮೇಲೆ ಅಧ್ಯಕ್ಷರ ಅಪೇಕ್ಷೆಯಂತೆ ೩-೪ ಮಂದಿ ಶಿಕ್ಷಕರು ಚಿತ್ತವೇಧಕವಾದ ಭಾಷಣಗಳನ್ನು ಮಾಡಿದರು. ಹುಬ್ಬಳ್ಳಿ ಶಿಕ್ಷಕರು ವಿಮೆಯ ಪ್ರಕರಣದಲ್ಲಿ ಸ್ಕೂಲ ಬೋರ್ಡಿನಿಂದಾದ ಗೊಂದಲವನ್ನು ವಿವರಿಸಿದರು. ಸ್ಕೂಲ ಬೋರ್ಡಿನ ಅವತಾರವಾಗುವ ಮುಂಚೆ ಶಿಕ್ಷಕರು ಸರಕಾರಿ ನೌಕರರಿದ್ದರು. ಟಪಾಲ ಖಾತೆಯಲ್ಲಿ ಅವರು ತುಂಬುವ ವಿಮೆಯ ರಕಮನ್ನು ತಿಂಗತಿಂಗಳಿಗೆ ಮುರಕೊಂಡು, ಉಳಿದ ಪಗಾರು ಸಿಗುತ್ತಿತ್ತು. ಸ್ಕೂಲ ಬೋರ್ಡಿನ ಕಾರಭಾರದಲ್ಲಿ ಪರಸ್ಪರ ಶಿಕ್ಷಕರಿಗೆ ವಿಮೆಯ ರಕಮು ಟಪಾಲ ಆಫೀಸುಗಳಲ್ಲಿ ತುಂಬಲು ಆಜ್ಞೆಯಾಯಿತು. ಹಳ್ಳಿ-ಹಳ್ಳಿಗಳಲ್ಲಿ ವಿಮೆ ಕೊಳ್ಳಲು ಟಪಾಲಿನ ವ್ಯವಸ್ಥೆಯಿಲ್ಲದ್ದರಿಂದ ಶಿಕ್ಷಕರಿಗೆ ಬಲು ಉಪದ್ರವವಾಯಿತು. ರಜೆ ದಿನಗಳಲ್ಲಿ ಟಪಾಲ ಆಫೀಸಿಗೆ ರಜೆ ಇರುತ್ತದೆ. ಇದರಿಂದ ದಂಡವನ್ನು ಸಹ ತೆರಬೇಕಾಯಿತು. ಈ ಕುರಿತು ಎಡ್‌ಮಿನಿಸ್ಟ್ರೇಟಿವ್ಹ ಆಫೀಸರರಿಗೆ ಬರಕೊಂಡಾಯಿತು. ಜುಲೈ ತಿಂಗಳಲ್ಲಿ ಪಗಾರು ಮುರಿದು ಬಂತು. ಅಗಸ್ಟ ತಿಂಗಳಲ್ಲಿ ಪುನಃ ಪೂರ್ಣ ಪಗಾರು ಬಂತು; ಸಪ್ಟಂಬರದಲ್ಲಿ ಮುರಿದು ಬಂತು, ಅಕ್ಟೋಬರದಲ್ಲಿ ಇಡೀ ಪಗಾರು; ನವಂಬರ ತಿಂಗಳಲ್ಲಿ ವಿಮೆಯ ರಕಮನ್ನು ನೀವೇ ತುಂಬತಕ್ಕದ್ದೆಂದು ಹುಕುಮು ಬಂತು. ಈ ಹುಕುಮು ಬಂದ ಕೆಲ ದಿನಗಳಲ್ಲಿಯೇ ಟಪಾಲ ಖಾತೆಯ ಕಲಕತ್ತೆಯ ಎಸಿಸ್ಟಂಟ ಡೆಪ್ಯುಟಿ ಎಕೌಂಟಂಟರವರ ಕಡೆಯಿಂದ ಒಂದು ಹುಕುಮು ಬಂತು:— "ನಿಮ್ಮ ಮೇಲಧಿಕಾರಿಗಳ ಕಡೆಯಿಂದ ನಿಮ್ಮ ವಿಮೆ ರಕಮು ಪರಸ್ಪರ ಮುರಕೊಳ್ಳುವ ವಿಚಾರವಾಗಿದೆ, ನೀವು ಸ್ವತಃ ತುಂಬುವದವಶ್ಯವಿಲ್ಲ," ಎಂಬರ್ಥದ ಹುಕುಮು ಬಂತು. ಈ ಹುಕುಮುಗಳನ್ನು ಇಟ್ಟು ಎಡ್‌ಮಿನಸ್ಟ್ರೇಟಿವ್ಹ ಆಫೀಸರರಿಗೆ ಬರಕೊಂಡರೆ, ಈ ತನಕ ಉತ್ತರವಿಲ್ಲ. ಈಗಲೂ ಇಡೀ ಪಗಾರು ಸಿಗುತ್ತದೆ. ಹೀಗೆ ಅವರು ಹೇಳಿದರು; ಇನ್ನೊಬ್ಬ ಶಿಕ್ಷಕರು ದಂಡ ಕೊಟ್ಟ ಪಾವತಿಗಳನ್ನು ತೋರಿಸಿ, ಈ ನಷ್ಟಕ್ಕೆ ಜವಾಬದಾರರ್ಯಾರೆಂದು ಕೇಳಿದರು. ರಾ॥ ಯಾಜಿಯವರು ಸ್ಕೂಲ ಬೋರ್ಡಿನೊಳಗಿನ ಮಾಹಿತಿ ಕೊಟ್ಟರು. ಈ ಕುರಿತು ಫೇಬ್ರುವರಿ ತಿಂಗಳಲ್ಲಿ ಠರಾವಾಗಿರುತ್ತದಾಗಿಯೂ, ಆ ಠರಾವಿನಂತೆ ಮುರಕೊಂಡು ಪಗಾರು ಕಳಿಸಲು ಎಡ್‌ಮಿನಿಸ್ಟ್ರೇಟಿವ್ಹ ಆಫೀಸರರಿಗೆ ಹುಕುಮು ಆಗಿರುತ್ತದಾಗಿಯೂ ಹೇಳಿದರು. ಈ ತನಕ ಈ ಸಂಗತಿ ಶಿಕ್ಷಕರಿಗೆ ಹ್ಯಾಗೆ ತಿಳಿಸಲ್ಪಡಲಿಲ್ಲೆಂಬುವನ್ನು ಮಾತ್ರ ರಾ॥ ಯಾಜಿಯವರು ಹೇಳಲಿಲ್ಲ; ಠರಾವನ್ನು ಉಲ್ಲಂಘಿಸಿ ಈಗಲೂ ಇಡೀ ಪಗಾರು ಹ್ಯಾಗೆ ಸಿಗುತ್ತದೆಂಬುವನ್ನೂ ಅವರು ಹೇಳಲಿಲ್ಲ. ಇನ್ನೊಬ್ಬ ಶಿಕ್ಷಕರು ಸ್ಕೂಲ ಬೋರ್ಡಿನ ಪಕ್ಷಪಾತವನ್ನು ಬೈಲಿಗೆಳೆದರು. "ನನ್ನ ಸರ್ವಿಸು ೩೧ ವರುಷವಾಯಿತು. ನಾನು ಹೆಡಮಾಸ್ತರನಿದ್ದೆ; ಸ್ಕೂಲ ಬೋರ್ಡು ಎಸಿಸ್ಟಂಟ ಮಾಸ್ತರನನ್ನಾಗಿ ಮಾಡಿತು. ಇವರಿಂದ ಸನಗಿನ ಶಿರಿಯರಿಗೆ ೧೦-೧೫ ರೂ. ಹೆಡ್‌ಮಾಸ್ತರಿ ಭತ್ತೆ ಸಿಗುತ್ತದೆ. ಡ್ಯಾರೆಕ್ಟರರಿಗೆ ಅರ್ಜಿ ಮಾಡಿಕೊಂಡೆ. ಸ್ಕೂಲ ಬೋರ್ಡಿನ ಕಡೆಗೆ ಅರ್ಜಿ ಮಾಡಿಕೊಳ್ಳ ಹೇಳಿದರು. ಸ್ಕೂಲ ಬೋರ್ಡಿಗೆ ಬರಕೊಂಡೆ; ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ರಾ॥ ಗೋವಿಂದರವರಿಗೂ ಬರಕೊಂಡೆ. ಎಲ್ಲಿಂದಲೂ ಒಂದು ಸಹ ಉತ್ತರವಿಲ್ಲ. ಅರ್ಜಿ ಯಾವ ಕಸದ ಬುಟ್ಟಿಯಲ್ಲಿ ಬಿದ್ದುಹೋಯಿತೋ ಏನೋ! ಇಂಥ ಪ್ರಸಂಗದಲ್ಲಿ ಇದ್ದರುವ ಸ್ಕೂಲ ಬೋರ್ಡಿನ ಮೆಂಬರರೂ,

(ಮುಂದೆ ೯ನೇ ಪುಟದ ಮೇಲೆ ಮುಂಬರಿದದ್ದು)

ಕಾನಡಾ ವೃತ್ತ.

ಮಿತಿ ವಿಭವ ಸಂ। ವೈಶಾಖ ಬ ೯ ಮಿ, ಸೋಮವಾರ

ಹೊಲಗಳ ಪುನರ್ಘಟನೆ.

ಸ್ಥಳೀಕ ಕ್ಷೇತ್ರ ಕಮಿಟಿಯ ವಿಚಾರ.

ಹೊಲಗಳ ಪುನರ್ಘಟನೆಯ ಮೂಲಾಧಾರವು ಸ್ಥಾನಿಕ ಕ್ಷೇತ್ರದ ನಿರ್ಣಯವು. ಜಿಲ್ಲೆಯೊಳಗಿನ ಪರಿಸ್ಥಿತಿಯನ್ನೂ, ಭೂಮಿಯ ಪ್ರಕಾರವನ್ನೂ ಅವಲಂಬಿಸಿ ಈ ಕ್ಷೇತ್ರದ ನಿರ್ಣಯವಾಗುವದು. ತರಿ ಭೂಮಿಗೆ ಬೇರೆ ತೋಟಕ್ಕೆ ಬೇರೆ ಕೆರೆ, ಬಾವಿ, ಕಾಲುವೆ ಮುಂತಾದ ಜಲಾಶಯಗಳ ಆಶ್ರಯವಿದ್ದಲ್ಲಿ ಬೇರೆ ಹೀಗೆ ಭಿನ್ನ ಭಿನ್ನ ಭೂಮಿಗಳ ಹುಟ್ಟುವಳಿಯಿಂದ ಬೇಸಾಯಗಾರರಿಗೆ ಸಿಗುವ ಉತ್ಪನ್ನವು ನಿಶ್ಚಯಿಸಲ್ಪಡುವದು. ಮತ್ತು ಆ ಜಾತಿಯ ಭೂಮಿಯಲ್ಲಿ ಎಷ್ಟು ಕ್ಷೇತ್ರವನ್ನು ಬೇಸಾಯಗಾರನೊಬ್ಬನು ಸಾಗುವಳಿ ಮಾಡಿದರೆ ಆತನ ಚರಿತಾರ್ಥ ಸಾಗಬಹುದೆಂದು ವಿಚಾರಿಸಿ ಅಷ್ಟು ಕ್ಷೇತ್ರಕ್ಕೆ ಕಡಿಮೆಯಾಗಿರುವ ಹೊಲಗಳೆಲ್ಲ ಚಿಕ್ಕ ಪುಟ್ಟ ಹೊಲಗಳೆಂದು ದಾಖಲ ಮಾಡಲ್ಪಡುವವು ಮತ್ತು ಅಷ್ಟು ಕ್ಷೇತ್ರಕ್ಕೆ ತಗ್ಗಿ ಇರುವ ಕ್ಷೇತ್ರಗಳೆಲ್ಲ ಈ ಕಾನೂನಿನ ಕಕ್ಷೆಯಲ್ಲಿ ಬರುವವು. ಪರಾಧೀನತೆ, ಸಾಗುವಳಿ ಮುಂತಾದ ಸ್ವತಂತ್ರ ಅಧಿಕಾರವನ್ನು ನಿಯಂತ್ರಿಸುವ ಪ್ರತಿಬಂಧಗಳೆಲ್ಲ ಅವೇಲೆ ಉಂಟಾಗುವವು.

ಸ್ಥಳೀಕ ಕ್ಷೇತ್ರದ ನಿರ್ಣಯದ ಮಾನದಿಂದ ಬೇಸಾಯಗಾರರ ಕಷ್ಟಗಳು ನಿರ್ಣಯಿಸಲ್ಪಡುವವು. ಕಾನೂನಿನಲ್ಲಿ ಇಂಥಿಂಥ ಪ್ರದೇಶಗಳಿಗೆ ಇಂತಿಷ್ಟು ಕ್ಷೇತ್ರವು ಲಾಭದಾಯಕವೆಂದು ಸೇರಿಸಲ್ಪಡಲಿಲ್ಲ. ಅದರಿಂದ ಈ ವಿಷಯ ಪ್ರತಿಪಾದನೆಗೆ ಸ್ವಲ್ಪ ಅಡ್ಡಿಯಾಗಿದೆ. ಜಿ. ಕೀಟಿಂಗ ಎಂಬ ಬೇಸಾಯಾಧಿಕಾರಿಗಳ ಕಲ್ಪನೆಯಂತೆ ಬೇಸಾಯವು ಲಾಭದಾಯಕವಾಗಲು ೪೦—೫೦ ಎಕ್ರೆ ಕ್ಷೇತ್ರವಾದರೂ ಒಬ್ಬ ಬೇಸಾಯಗಾರನ ಸ್ವಾಧೀನದಲ್ಲಿರಬೇಕು. ಅಷ್ಟು ಕ್ಷೇತ್ರವು ಈ ಕಾನೂನಿನಲ್ಲಿ ಅಭಿಪ್ರೇತವಿದ್ದರೆ ಇಲಾಖೆಯೊಳಗಿನ ಶೇಕಡಾ ೮೦ ರಷ್ಟು ಬೇಸಾಯಗಾರರು ಭೂಮಿ ಕಳಕೊಂಡು ದೇಶಾಂತರಕ್ಕೆ ಹೋಗಬೇಕಾಗುವದು. ರಾ। ಕೀರ್ತಿಯವರು ಸರಾಸರಿ ೧೦ ಎಕ್ರೆ ಸ್ಥಳವು ಲಾಭದಾಯಕ ಸ್ಥಳವೆಂದು ಗ್ರಹಿಸಿ ಲೆಕ್ಕ ಮಾಡಿದ್ದಾರೆ. ಈ ಲೆಕ್ಕ ಹಿಡಿದರೂ ನಮ್ಮ ಕಾನಡಾ ಜಿಲ್ಲೆಯೊಳಗಿಂದ ಸರಾಸರಿ ೩೦೦೦೦ ಜನರು ಭೂಮಿಯನ್ನು ಕಳಕೊಳ್ಳುವರು. ರಾ। ಕೀರ್ತಿಯವರ ಲೆಕ್ಕದಂತೆ ನಮ್ಮ ಜಿಲ್ಲೆಯಲ್ಲಿ ೩೯೨೦೯ ಮಂದಿ ಖಾತೆದಾರರಿದ್ದು, ಅವರೊಳಗೆ ೨೬೧೯೩ ಮಂದಿಗಳು ೫ ಎಕ್ರೆ ಒಳಗೆ ಇರುವ ಖಾತೆದಾರರಿದ್ದಾರೆ. ೧೧೧೧ ಮಂದಿಗಳು ೨೫ ಎಕ್ರೆ ವರೆಗಿನ ಖಾತೆದಾರರಿದ್ದಾರೆ. ಅಂದ ಮೇಲೆ ಸ್ಥಳೀಕ ಕ್ಷೇತ್ರದ ನಿರ್ಣಯದಿಂದ ನಮ್ಮ ಜಿಲ್ಲೆಯಲ್ಲಿ ಒದಗುವ ಅನರ್ಥದ ಕಲ್ಪನೆಯಾಗುವಂತಿದೆ. ಇನ್ನೊಂದು ವಿಚಾರವನ್ನು ನಾವು ಮಾಡಿದರೆ ಇನ್ನೂ ಗೊಡ್ಡ ಅನರ್ಥವು ತಿಳಿಯುವಂತಿದೆ. ಖಾತೆದಾರರ ಸಂಖ್ಯೆಯು ನಿಯಮಿತ ಕಂಡಾಗ್ಯೂ ಖಾತೆದಾರರ ಮೇಲೆ ಅವಲಂಬಿಸಿರುವ ಹೆಂಡರು ಮಕ್ಕಳ ವಿಚಾರವನ್ನು ಮಾಡಿದರೆ ಬೇಸಾಯಗಾರರ ಮೇಲೆ ಒದಗುವ ಆಪತ್ತಿನ ಕಲ್ಪನೆ ಬರುವದು. ಮುಂಬಯಿ ಇಲಾಖೆಯ ಅಂಕು ಲೋಕಸಂಖ್ಯೆಯು ೧೯೨೯೧೦೨೧ ಇದ್ದು, ಅವುಗಳಲ್ಲಿ ೧೨೨೪೧೭೪೩ ಜನರು ಬೇಸಾಯ ಉದ್ಯೋಗದಿಂದ ಚರಿತಾರ್ಥ ಸಾಗಿಸಿಕೊಳ್ಳಬೇಕು. ಅವರೊಳಗೆ ಪ್ರತ್ಯಕ್ಷ ಬೇಸಾಯ ಕೆಲಸ ಮಾಡುವವರು ೫೪೦೯೯೧೪ ಇದ್ದು ಅವರ ಮೇಲೆ ಅವಲಂಬಿಸಿರುವವರು ೬೮೩೩೮೨೯. ಪ್ರತ್ಯಕ್ಷ ಬೇಸಾಯಗಾರರಿಗೆ ಹೊರತಳ್ಳಿದರೆ ಅವರ ಮೇಲೆ ಅವಲಂಬಿಸಿದ್ದ ಜನರ ಕಥೆಯನ್ನು ಹೇಳಿ ತೀರದು.

ಸ್ಥಳೀಕ ಕ್ಷೇತ್ರದ ನಿರ್ಣಯದಿಂದ ಚಿಕ್ಕ ಪುಟ್ಟ ಹೊಲಗಳ ಬೆಲೆಯು ಬಹಳ ಮಟ್ಟಿಗೆ ತಗ್ಗುವದು. ಕಾನೂನಿನಂತೆ ಚಿಕ್ಕ ಪುಟ್ಟ ಹೊಲಗಳನ್ನು ನೆರೆಹೊರೆಯವರಿಗೇ ಸಾಗುವಳಿ ಮಾಡಲಿಕ್ಕಾಗಲೀ, ಪರಾಧೀನ ಮಾಡಲಿಕ್ಕಾಗಲೀ ಬರತಕ್ಕದ್ದಿರುವದರಿಂದ ಮೇಲ್ಪಟ್ಟಕ್ಕೆ ಇಂಬು ದೊರೆಯದೆ ನೆರೆಹೊರೆಯ ದೊಡ್ಡ ದೊಡ್ಡವರು ಹೇಳಿದಷ್ಟಕ್ಕೇ ಸಾಗುವಳಿಗೆ ಅಥವಾ ಪರಾಧೀನತೆಗೆ ಚಿಕ್ಕ ಪುಟ್ಟ ಹೊಲಗಳ ಮಾಲೀಕರು ಒಪ್ಪಬೇಕಾಗುವದು. ಹೀಗೆ ಅನೇಕ ಬಡವರಿಗೆ ಪೀಡಿಸಲು ದೊಡ್ಡ ದೊಡ್ಡವರಿಗೆ ಇಂಬು ದೊರೆಯುತ್ತದೆ. ಮೊದಲೇ ಸಾಲಗಾರರ ಕಷ್ಟಗಳನ್ನು ಹೇಳಲಾಗಲ್ಲ. ಅದರೊಳಗೂ ಈ ಕಾನೂನಿನ ಕಕ್ಷೆಯಲ್ಲಿ ಸೇರಿದರೆ ಆಸ್ತಿಯ ಬೆಲೆಯು ಥಟ್ಟನೆ ತಗ್ಗಿ ಸಾಲದ ಬಜ್ಜೆಯು ಇನ್ನೂ ಮಿಗಿಲಾಗುವದು.

ಸ್ಥಳೀಕ ಕ್ಷೇತ್ರವನ್ನು ನಿರ್ಣಯಿಸಲು ಕಾನೂನಿನಂತೆ ಕಲೆಕ್ಟರ, ಡೆ। ಡಾಯರೆಕ್ಟರ, ಹಾಗು ಜಿ. ಲೋ. ಮೂವ ಸಭಾಸದರಿಗೂ ನೇಮಿಸಬೇಕೆಂದು ಗೊತ್ತಾಗಿತ್ತು. ಆದರೆ, ಈ ಕಾನೂನು ಸರಕಾರದಿಂದ ನೇಮಿಸಲ್ಪಟ್ಟ ವಿಚಾರ ಮಂಡಳದಲ್ಲಿ ಪರಾಂಬರಿಸಲ್ಪಟ್ಟು ಈ ಕಮೀಟಿಯ ಘಟನೆಯು ತಿದ್ದುಪಡಿಹೊಂದಿದೆ. ತಾಲೂಕನ್ನು ಈ ಕಾನೂನಿನ ಮಟ್ಟಿಗೆ ಘಟಕವನ್ನಾಗಿ ಕಲ್ಪಿಸಿ, ಡಿ। ಡೆ। ಕಲೆಕ್ಟರ ತಾಲೂಕ ಬೋರ್ಡ ಹಾಗು ಜಿಲ್ಹಾ ಬೋರ್ಡ ಸಭಾಸದ ಕೆಲವು ಬೇಸಾಯಗಾರರು, ಬೇಸಾಯ ಖಾತೆಯ ಒಬ್ಬ ಅಧಿಕಾರಿಗಳು ಹೀಗೆ ಸಭಾಸದರನ್ನು ನೇಮಿಸಿ ಸ್ಥಳೀಕ ಕ್ಷೇತ್ರದ ನಿರ್ಣಯವಾಗಬೇಕಾಗಿಯೂ ಹಾಗೆ ನಿರ್ಣಯವಾದ ಬಳಿಕ ಅದನ್ನು ಶೇತಕಿ ಖಾತೆಯ ದಿವಾಣರಿಗೆ ತಿಳಿಸಿ ಆ ಕ್ಷೇತ್ರವನ್ನು ಅವರ ಕಡೆಯಿಂದ ಮಂಜೂರು ಮಾಡಿಕೊಳ್ಳಬೇಕಾಗಿಯೂ ತಿದ್ದುಪಡಿಯಾಗಿದೆ. ತಿದ್ದುಪಡಿಯನ್ನು ಸರಕಾರವು ಪ್ರಕಟಿಸಿಲ್ಲ. ಒಬ್ಬ ಸುದ್ದಿಗಾರರು ಸ್ಥೂಲ ಸ್ವರೂಪವನ್ನು ಪ್ರಕಟಿಸಿದ್ದಾರೆ. ಅಷ್ಟರ ಮೇಲಿಂದ ಈ ಮಂಡಳದ ಪರಾಂಬರಿಕೆಯಾಗಬೇಕಾಗಿದೆ. ಈ ಮಂಡಳವು ಸರಕಾರದಿಂದ ನೇಮಿಸಲ್ಪಡುವದು. ಈ ವರೆಗಿನ ಸರಕಾರದ ಧೋರಣದ ಇತಿಹಾಸವನ್ನು ಓದಿದರೆ ಈ ಮಂಡಳವು ಡಿ। ಡೆ। ಕಲೆಕ್ಟರರ ಸೂತ್ರಗೊಂಬೆಯಾಗುವದೆಂದು ಹೇಳಲಿಕ್ಕೆ ಏನೂ ಪ್ರತ್ಯವಾಯವಿಲ್ಲ. ಸರಕಾರಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ನಡಾವಳಿಯೇ ಹೀಗೆ! ಬಡ ಬೇಸಾಯಗಾರರನ್ನು ನೇಮಿಸಿದರೆ ಅವರು ಪ್ರಾಂತ ಸಾಹೇಬರಿಗೆ ಪ್ರತ್ಯುತ್ತರ ಕೊಡಲಾರರು. ದೊಡ್ಡ ದೊಡ್ಡ ಖಾತೆದಾರರನ್ನು ನೇಮಿಸಿದರೆ ಅವರು ತಕ್ಕಗಡಿಯ ಚಿಕ್ಕಪುಟ್ಟ ಹೊಲಗಳನ್ನು ನುಂಗಬಯಸುವರು. ಜಿ। ಬೋರ್ಡ ತಾ। ಲೋಕಲ್ ಬೋರ್ಡುಗಳ ಸಭಾಸದರ ಕಾರಭಾರವನ್ನಂತೂ ನಾವು ನೋಡೇ ನೋಡುತ್ತೇವೆ. ಅಧಿಕಾರಿಗಳ ಪ್ರೀತಿ ಸಂಪಾದನೆಕ್ಕಾಗಿ ಅಥವಾ ದೊಡ್ಡಸ್ತಿಕೆಗಾಗಿ ಸಭಾಸದರಾಗುವವರೇ ಬಹುಸಂಖ್ಯಾಕರು. ಲೋಕೋಪಕಾರಕ್ಕಾಗಿ ನಿಸ್ಪೃಹ ಬುದ್ಧಿಯನ್ನು ತಳೆದು ಆ ಸಂಸ್ಥೆಗಳಲ್ಲಿ ಸೇರುವವರು ತೀರ ವಿರಳರು. ಇದಕ್ಕೆ ಒಂದೇ ಒಂದು ಸಾಕ್ಷಿ ಸಾಕು! ಲೋಕೋಪಕಾರದ ಬುದ್ಧಿ ಇದ್ದರೆ,— ನಿಸ್ಪೃಹ ಬುದ್ಧಿ ಇದ್ದರೆ— ಇಲೆಕ್ಶನುಗಳಲ್ಲಿ ನಾ ಮುಂದೆ, ನೀ ಮುಂದೆ ಎಂದು ಮೇಲಾಟ ನಡೆಯುವ ಕಾರಣವಿದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಈ ಮಂಡಳವು ಲೋಕಮತಾನುವರ್ತಿಯಾಗದು, ಬೇಸಾಯಗಾರರ ಹಿತವನ್ನು ಕಾಪಾಡದು; ಅಂದರೆ, ಸರಕಾರಿ ಧೋರಣವನ್ನು ಪ್ರಾಂತ ಸಾಹೇಬರ ಹೇಳಿಕೆಯಂತೆ ಈ ಮಂಡಳವು ಅಮಲಿನಲ್ಲಿ ತರುವದೆಂದು ಹೇಳಿದರೆ ಅಯಥಾರ್ಥವಾಗದು. ಹೀಗೆ ಕಾನೂನಿನ ಮೂಲಘಟನೆಯೇ ತಪ್ಪಿದ್ದರಿಂದ ಅದನ್ನು ತಿದ್ದುಪಡಿಮಾಡುವ ಹವ್ಯಾಸಕ್ಕೆ ಸಭಾಸದರು ಬೀಳದೆ, ಈ ಕಾನೂನನ್ನು ಒಮ್ಮೆಲೇ ಕಿತ್ತೊಗೆದು ಬೇಸಾಯಗಾರರ ಆಶೀರ್ವಾದ ಪಡೆಯಬೇಕು. ಕಾಯಿದೆ ಕೌನ್ಸಿಲಿನ ಪುಣೆಯ ಅಧಿವೇಶನದಲ್ಲಿ ತಿದ್ದುಪಡಿಯಾದ ಕಾನೂನಿನ ಚರ್ಚೆಯಾಗುವದರಿಂದ ಇತರ ಕಲಮುಗಳನ್ನು ಈ ಮುಂದೆ ವಿಚಾರಿಸುವ

ಕರ್ನಾಟಕ ಪರಿಷತ್ತುಗಳು.

ಧಾರವಾಡಕ್ಕರು ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಇದೇ ತಿಂಗಳ ೨೬-೨೭ನೇ ತಾರೀಖಿಗೆ ಸೇರಿಸುವ ನಿಶ್ಚಯ ಮಾಡಿದ್ದಾರೆಂದು ತಿಳಿಸಲು ನಮಗೆ ಆನಂದವಾಗುತ್ತದೆ. ಧಾರವಾಡಕ್ಕರು ಶ್ರೀ ಜೋಗಿ ವಿಶ್ವನಾಥರಾಯರ ಆಲೋಚನೆಯಿಂದ ಸ್ವಾಗತ ಸಮಿತಿಯನ್ನು ಸೇರಿಸಿ ಸಕಲ ಸಾಹಿತ್ಯಗಳನ್ನು ಒದಗಿಸಿಕೊಳ್ಳುತ್ತಿದ್ದಾರೆ. ಸ್ವಾಗತ ಸಭೆಯು ನಿನ್ನೆ ಧಾರವಾಡದಲ್ಲಿ ಸೇರಿ ಸ್ವಾಗತ ಸಮಿತಿಯ ಚಾಲಕರ ನೇಮಣೂಕಿಯಾಗುವದಿತ್ತು. ಇನ್ನೂ ಅಧ್ಯಕ್ಷರ ಆಸ ರು ಗೊತ್ತಾಗಲಿಲ್ಲ. ಪರಿಷತ್ತಿನ ವಿಚಾರವು ಸದ್ಯಕ್ಕೇ ಸೂಚಿಸಿದ್ದರಿಂದ ಎಲ್ಲ ಕೆಲಸವನ್ನು ಅವಸರದಿಂದ ಪಾರಗಾಣಿಸಿಕೊಳ್ಳಬೇಕಾಗಿದೆ. ಧಾರವಾಡಕ್ಕರು ಅಲ್ಪಾವಕಾಶದಲ್ಲಿ ಪರಿಷತ್ತನ್ನು ಸೇರಿಸುವ ಮಹತ್ತ್ವವಾದ ಜವಾಬದಾರಿಯನ್ನು ಕೈಕೊಂಡಿದ್ದಾರೆ ಕರ್ನಾಟಕಸ್ಥರು ಅವರಿಗೆ ಎಲ್ಲ ತರದಿಂದಲೂ ನೆರವಾಗಿ ಪ್ರಾಂತಿಕ ಪರಿಷತ್ತಿನ ಅಧಿವೇಶನವು ಕರ್ನಾಟಕ ಕೋದ್ಧಾರ ಪ್ರಯತ್ನದಲ್ಲಿ ಮಾರ್ಗದರ್ಶಕವಾಗುವಂತೆ ಪರಿಣಮಿಸಿಕೊಳ್ಳಬೇಕಾಗಿ ನಮ್ಮ ಪ್ರಾರ್ಥನೆಯಿದೆ. ಪ್ರಾಂತಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಶ್ರೀ ರಂಗನಾಥ ಮುದಲಿಯಾರರವರಾಗಲೀ, ಶ್ರೀ ಮುಶೇರ ನರಿಮಾನವರವರಾಗಲೀ ನಿರ್ವಹಿಸುವರು. ಇಬ್ಬರೂ ಹೆಸರಾದ ಪುರುಷರೆ. ಶ್ರೀ ರಂಗನಾಥ ಮುದಲಿಯಾರರವರು ಲೋಕಮತವನ್ನು ಗ್ರಹಿಸಿ, ಮದ್ರಾಸ ಸರಕಾರದ ದಿವಾಣಪದವನ್ನು ತೊರೆದ ಸಾಹಸಿಗರು. ಶ್ರೀ ನರಿಮಾನರವರ ಪರಿಚಯವಂತೂ ಕರ್ನಾಟಕಸ್ಥರಿಗೆ ಗೊತ್ತೇ ಇದೆ. ಮುಂಬಯಿ ಸರಕಾರವು ಮುಂಬಯಿಯಲ್ಲಿ ಸಮುದ್ರ ಹೂಳಿದು ಲೋಕೋಪಕಾರ ಮಾಡಲುದ್ಯುಕ್ತವಾಗಿ ಬೆಕ್‌ಬೇ ಯೋಜನೆಯಲ್ಲಿ ನಡಿಸಿದ ವಂಚನೆಯ ಪ್ರಕಾರಗಳನ್ನು ಧೈರ್ಯದಿಂದ ಬೈಲಿಗೆಳೆದ ವೀರರು. ಇಂಥವರು ಈಗಿನ ಸ್ಥಿತಿಯಲ್ಲಿ ಕರ್ನಾಟಕಕ್ಕೆ ರಾಜಕಾರಣದ ರಾಜಮಾರ್ಗವನ್ನು ತೋರಿಸಲು ಸರ್ವಥಾ ಯೋಗ್ಯರಿದ್ದಾರೆ. ನಾಳೆ ಮಂಗಳವಾರಕ್ಕೆ ಅಧ್ಯಕ್ಷರ್ಯಾರೆಂಬುದನ್ನು ಧಾರವಾಡದವರು ನಿಶ್ಚೈಸುವರು. ಯಾರಾದರೂ ನಮಗೆ ಅಷ್ಟೇ. ಇಬ್ಬರು ಬಂದರಂತೂ ನಮಗೆ ಆನಂದವಿದೆ. ಪ್ರಕೃತ ರಾಜಕಾರಣದ ಸ್ಥಿತಿಯನ್ನು ಯಾರಿಗೂ ಹೇಳಬೇಕಾಗಿಲ್ಲ. ಸ್ಯಾಮನ್ ಕಮಿಟಿ, ಮಾಲಗರ ಪುನರ್ಘಟನೆಯ ಕಾಯದೆ ಮುಂತಾದ ಮಹತ್ವದ ವಿಷಯಗಳ ಮೇಲೆ ಕರ್ನಾಟಕದ ಅಭಿಪ್ರಾಯವು ಪ್ರಕಟವಾಗಬೇಕಾಗಿದೆ. ಕರ್ನಾಟಕಸ್ಥರು ಅನುಸರಿಸಬೇಕಾದ ಮಾರ್ಗದ ನಿರ್ದೇಶವಾಗಬೇಕಾಗಿದೆ. ಇಂಥ ಪರಿಷತ್ತಿಗೆ ನಮ್ಮ ಜಿಲ್ಲೆಯೊಳಗಿಂದ ಪ್ರತಿನಿಧಿಗಳು ಹೋಗಿ ನಮ್ಮ ಜಿಲ್ಲೆಯ ಮತವನ್ನು ಪ್ರದರ್ಶಿಸಬೇಕಾಗಿ ನಮ್ಮದೊಂದು ವಿನ್ನಹ.

**

ಪ್ರಾಂತಿಕ ಪರಿಷತ್ತಿನ ವಾರದಲ್ಲಿ ರಾಜಕೀಯ ಪರಿಷತ್ತಿಗೆ ಪೋಷಕವಾದ ಖಾದಿ ಪರಿಷತ್ತು, ಹಿಂದೀ ಪರಿಷತ್ತು, ಯುವಕ ಪರಿಷತ್ತು, ಏಕೀಕರಣ ಪರಿಷತ್ತು ಸೇರಲಿಕ್ಕಿವೆ. ಖಾದಿ ಪರಿಷತ್ತಿಗೆ ಆಮ ಸತ್ಯಾಗ್ರಹಾಶ್ರಮದ ಚಾಲಕರಾದ ಶ್ರೀ ಹರ್ಡೇಕರ ಮಂಜಪ್ಪನವರಾಗಲೀ, ಮುಖಾತ್ಮರ ಶಿಷ್ಯರಾದ ಕಾಕಾ ಕಾಲೇಲಕರರಾಗಲೀ ಅಧ್ಯಕ್ಷರಾಗುವ ಸಂಭವವಿದೆ ಹಿಂದೀ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಬೆಂಗಳೂರಿನ ಪಂಡಿತ ತಾರಾನಾಥರಯವರಾಗಲೀ, ನಾಗಪುರದ ಡಾಕ್ಟರ ಬಾಲಕೃಷ್ಣ ಮುಂಜೇಯವರಾಗಲೀ ನಿರ್ವಹಿಸುವರು. ಶ್ರೀ ನರಿಮಾನರವರಿಗೆ ಯುವಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಅರ್ಪಿಸಬೇಕಾಗಿ ಅಲ್ಲಿಯ ಯುವಕರ ಸಂಕಲ್ಪವಿದೆ. ಏಕೀಕರಣ ಪರಿಷತ್ತಿಗೆ ಶ್ರೀ ರಂಗನಾಥ ಮುದಲಿಯಾರರವರಾಗಲೀ, ಶ್ರೀ ಹರಕಟ್ಟಿಯವರಾಗಲೀ ಅಧ್ಯಕ್ಷರಾಗುವರು. ಅಧ್ಯಕ್ಷರ ನಿರ್ಣಯವು ನಾಳೆಗೇ ಆಗುವದಿದೆ. ಹೀಗೆ ಪರಿಷತ್ತುಗಳ ನೆವದಿಂದ ಧಾರವಾಡದಲ್ಲಿ ಹೆಸರಾದ ಲೋಕನಾಯಕರು ಸೇರಲಿಕ್ಕಿದ್ದಾರೆ. ಈ ಸಂಧಿಯನ್ನು ಯಾರೂ ಕಳಕೊಳ್ಳಬಾರದು. ಲೋಕನಾಯಕರ ವಚನಗಳನ್ನು ಆಲಿಸಿ, ದೇಶಸೇವೆಯ ಪಾಠಗಳನ್ನು ಕಲಿತುಕೊಂಡು ಈ ಬಿಕ್ಕಟ್ಟಿನ ಕಾಲದಲ್ಲಿ ನಾವು ಲೋಕನಾಯಕರಿಗೆ ನೆರವಾಗತಕ್ಕದ್ದು.

ಸ್ಥಾನಿಕ ವೃತ್ತಾಂತ.

ಹೊನ್ನಾವರ— ಇಲ್ಲಿಯ ಸಬಜಡ್ಜರಾದ ಮಿ। ನಾಡಗೀರರವರಿಗೆ ಧಾರವಾಡಕ್ಕೆ ಬದಲಾಗಿದೆ. ಮಿ। ಎಸ್. ಎ. ಅರುಣಾಚಲರವರು ಅಲ್ಲಿಂದ ಇಲ್ಲಿ ಬರುವರು

ಡಾ। ನಾರಾಯಣ ಹೊನ್ನಾವರದವರ ಅವರಿಗೆ ಪಶೀಲಿಯ ಸನದು ದೊರಕಿದೆ.

ಜಿಲ್ಲಾ ಬೋರ್ಡಿನ ತ್ರೈಮಾಸಿಕ ಸಭೆಯು ಇದೇ ಬರುವ ತಾರೀಖು ೧೮ನೇಗೆ ಇಲ್ಲಿ ಸೇರುವದಿದೆ ಸ್ಯಾಮನ್ ಕಮೀಶನು ಜಂಗಲ ಖಾತೆಯವರು ಹೋಕಲ್ ಬೋರ್ಡಿನ ಖರ್ಚು ಬಗ್ಗೆ ಜಾಮೀನದಾರರಾದ ಡಾ। ಎಲ್. ಟಿ. ಕರ್ಕಿಯವರು ಮಾಡಿದ ರಿಪೋರ್ಟ್, ಮುಂತಾದ ಸಣ್ಣ ದೊಡ್ಡ ವಿಷಯಗಳ ವಿಚಾರವಾಗುವದು.

ಶಿರ್ಸಿ— ಪ್ರಾಥಮಿಕ ಶಾಲೆಗಳಿಗೆ ಬೇಸಿಗೆ ರಜೆ ಕೊಡಬಾರದೆಂಬ ಸುಕ್ಯಾಮಿಸಿಂದ ಲ್ಲೋಕಲ್ಲಂತಾದ ಅಸಂತೋಷವನ್ನು ಲಕ್ಷಿಸಿ ಆ ಹುಕೂಮು ರದ್ದು ಮಾಡಲಾಗಿದೆ ಮೋಟಾರುಗಳ ಉಪದ್ರವು ಅನ್ನು ಹೆಚ್ಚುತ್ತಲಿದೆ ಹುಲಗಾರ ಬಳಿ ಮೋಟರಿನಡಿ ಒಂದು ಆಕಳಿನ ಆಹುತಿಯಾಯಿತ, ಇನ್ನು ಮುಂದೆಂತು ಅಪಘಾತಗಳಾದ ಸುದ್ದಿ ಬಂದಿತು, ಗೋಹತ್ಯದ ಪ್ರಕರಣವು ಎಲ್ಲಿಂದಲ್ಲೇ ಮುಚ್ಚಿಕೊಂಡು ಸ್ವಯಂಸೇವಕರಾದರೂ ಗೋಹತ್ಯದ ಪಾಪವನ್ನು ಕೋಗಿಡಹುದಿಲ್ಲವೇ?

ಕಾರವಾರ— ಮ್ಯುನಿಸಿಪಾಲಿಟಿಯು ಚೀಫ ಆಫೀಸರರಿಗೆ ಬಡತಿಯಾಗಿದೆ ಅವರಿಗೆ ೧೨೫ ರೂಪಾಯಿ ಸಂಬಳ ಇದ್ದು ಸರಕಾರಿ ನೌಕರರು; ಅವರಿಗೆ ಬಡತಿ ಕೊಟ್ಟು ಮ್ಯುನಿಸಿಪಾಲಿಟಿಯವರು ಅಷ್ಟು ಕೊಡಬೇಕೇನೆಂದು ಮ್ಯುನಿಸಿಪಾಲಿಟಿಯವರು ಸದ್ಯಕ್ಕೆ ಚರ್ಚೆಸುವವರಿದ್ದಾರೆ. ಈ ಆಫೀಸರು ಚೊಕ್ಕವಾಗಿ ಕೆಲಸ ಮಾಡುತ್ತಾರೆಂಬ ಬಗ್ಗೆ ಒಪ್ಪಿಗೆ ಇದೆ ಆದರೆ ಈಗ ಇಷ್ಟು ದೊಡ್ಡ ಆಫೀಸರರಿಗೆ ತಕ್ಕ ಕೆಲಸವೇ ಇಲ್ಲ. ಖಾತೆಗಳು ಜಿಲ್ಲಾ ಬೋರ್ಡಿನ ಸ್ವಾಧೀನಕ್ಕೆ ಹೋಗಿವೆ. ಇದರಿಂದ ಮ್ಯುನಿಸಿಪಾಲಿಟಿಯವರು ವಿಚಾರ ಮಾಡಿ ಇವರಿಗೆ ಸರಕಾರಕ್ಕೆ ಒಪ್ಪಿಸಿ, ಈಗಿನ ಕೆಲಸಕ್ಕೆ ತಕ್ಕ ಕಡಿಮೆ ಪಗಾರದ ಇಸಮನ್ನು ನೇಮಿಸಿಕೊಳ್ಳುವದು ಹಿತಕರವು. ಇದರಿಂದ ಕರದ ಸುಧಾರಣೆಗೆ ಕೆಲವು ಹಣವು ಸಿಗುವದು." ಇತ್ಯಾದಿ ಒಬ್ಬರು ಬರೆಯುತ್ತಾರೆ.

ಕುಂಭಾರವಾಡೆ— ಇನ್‌ಕಮ್‌ಟ್ಯಾಕ್ಸ ಆಫೀಸರರಿಗೆ ಒಬ್ಬರು ಬಿನ್ನೈಸಿಕೊಳ್ಳುವದೇನೆಂದರೆ: — "ಇಲ್ಲಿಂದ ಲಕ್ಷ್ಯ ವತ್ತ ತಕ್ಕಂತೆ ಹುಡುಗರಿಗೆಕ್ಕೆ ನೋಟೀಸುಗಳು ಇಲ್ಲಿಯ ವರ್ತಕರಿಗೆ ಬರುತ್ತವೆ ಧಾರವಾಡ, ದೋಣಿ, ವಿಜಾಪುರ ಮುಂತಾದ ಕಡೆ ಲಕ್ಷ್ಯದ ಗಂಟು ಕಟ್ಟಿಕೊಂಡು ಹೋಗಬೇಕು ೪-೫ ಸಾವಿರ ಖರ್ಚಿದ್ದ ವರ್ತಕರಿಗೂ ಅಲ್ಲಿ ಹೋದ ಹೊರತು ಗತಿ ಇಲ್ಲ. ಇಲ್ಲಿಂದ ಧಾರವಾಡಕ್ಕೆ ಹೋಗಬೇಕಾದರೆ ೬೦ ಮೈಲು ಗಾಡಿಯ ಪ್ರವಾಸ; ಅದೆಲ್ಲೆ ಉಗಿಬಂಡಿಯ ಪ್ರವಾಸ; ಇದರಿಂದ ಸರಾಸರಿ ೬೦ ರೂಪಾಯಿ ಖರ್ಚು ಬರುತ್ತದೆ. ಪ್ರತ್ಯಕ್ಷ ಟ್ಯಾಕ್ಸ ಆಗದಿದ್ದರೂ ಖರ್ಚಿನ ಟ್ಯಾಕ್ಸ ತಪ್ಪುವದೇ ಇಲ್ಲ, ಬಡ ವರ್ತಕರಿಗೆ ಇದೊಂದು ದೊಡ್ಡ ಉಪದ್ರವ! ನಮ್ಮಂಥ ಹಳ್ಳಿಯಲ್ಲಿ ವ್ಯಾಪಾರವೆಲ್ಲಿದೆ? ಇದನ್ನಾದರೂ ಆಫೀಸರರು ವಿಚಾರ ಮಾಡುವುದಿಲ್ಲವೇ? ಲೆಕ್ಕ ತಪಾಸಣಿ ಮಾಡಬೇಕಾದರೆ ನಮ್ಮ ತಾಲೂಕಿನಲ್ಲಿ ಕರಸಿಕೊಂಡರೆ ದುಃಖದಲ್ಲೊಂದು ಸುಖ" ಇತ್ಯಾದಿ,

ನೋಟೀಸು.

ದಿ ಕುಮಟಾ ಅರಬನ್ ಕೊ-ಒಪರೇಟಿವ್ಹ ಬ್ಯಾಂಕಿನ ವಾರ್ಷಿಕ ಸಭೆಯು ಇದೇ ಬರುವ ಮೇ ತಿಂಗಳ ತಾರೀಖು ೩೦ ನೇ ಬುಧವಾರ ಮಧ್ಯಾನ್ಹ ೪ ಘಂಟೆಗೆ ಕಸಬಾ ಶ್ರೀ ವಿಠ್ಠಲನ ದೇವಸ್ಥಾನದಲ್ಲಿ ಸನ್ ೧೯೨೭ ೨೮ ನೇ ಸಾಲಿನ ಬಾಬತು ರಿಪೋರ್ಟು ಮತ್ತು ಆಢಾವೆ ಪೀಕು ಹಿಸಾಬ ಓದಿ ಮಂಜೂರ ಮಾಡಲಿಕ್ಕೂ, ಚಾಲು ಸಾಲ ೧೯೨೮-೨೯ ರ ಬಗ್ಗೆ ವ್ಯವಸ್ಥಾಪಕ ಕಮಿಟಿಯ ಮೆಂಬರರನ್ನು ಚುನಾಯಿಸಲಿಕ್ಕೂ, ಹಾಗೂ ಬ್ಯಾಂಕಿನ ಆಫೀಸ ಬೋರ್ಡಿನ ಮೇಲೆ ಘಾಯಕ ಮಾಡಿದ ಇತರೇ ವಿಷಯಗಳನ್ನು ಚರ್ಚಿಸಲಿಕ್ಕೂ ಸೇರುವದು.

ಬ್ಯಾಂಕಿನ ಎಲ್ಲಾ ಮೆಂಬರರು ಈ ಸಭೆಗೆ ಅವಶ್ಯ ಬರಬೇಕಾಗಿ ವಿನಂತಿಯದೆ.

Kumta, 13-5 1928. } **Annapa R. Pai.**
Chairman.

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (**COIR MATTINGS-TOOLS BOX**)

ಯೋಗ್ಯ ಬೆಲೆಗೆ ದೊರೆಯುತ್ತವೆ!

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವಂಥ, ಉತ್ತಮ ರೀತಿಯಿಂದ ತಯಾರಿಸಿದ ಕೈನೆಯ್ಗೆಯ ಕತ್ತದ ಚಾಪೆಗಳು ಸಿಗುತ್ತವೆ.

ದರ ಫೂಟ ೧ಕ್ಕೆ ೦-೩-೬

ಮೋಟಾರಿನ ಹತ್ಯಾರುಗಳು ಇಡುವ ಬಗ್ಗೆ ಚಲೋ ಕಟ್ಟಿಗೆಯಿಂದ ತಯಾರಿಸಿದ ಬೇಗ ಸವೆಯದಂಥ ಪೆಟ್ಟಿಗೆಗಳು ಹಾಗೆ, ಮೋಟಾರ ಬಾಡಿ ಬಗ್ಗೆ ಸೈಡಲಿಂಗ್ಸ ಯೋಗ್ಯ ದರದಿಂದ ತಯಾರಾಗಿ ಸಿಗುತ್ತವೆ. ಪೆಟ್ಟಿಗೆ ೧ರ ಬೆಲೆ ರೂ. ೩. ಸೈಜ ೨'×೧'×೧'.

ಬೇಕಾದವರು ಆರ್ಡರಿಯ ಸಮೇತ ರೂ. ೨-೦-೦ ಮುಂಗಡವಾಗಿ ಕಳಿಸಬೇಕು.

ವಿಳಾಸ:— ಎಸ್. ಎಮ್. ಪಂಡಿತ,

ಮೋಟಾರ ಟಿಕೇಟ ಆಫೀಸ, ದುರ್ಗಾಕೇರಿ. ಹೊನ್ನಾವರ. (ಉ. ಕ.)

ಬಾರ್ಡೋಲಿಯ ವೃತ್ತಾಂತ.

ಶ್ರೀಮ ಹೊಸ ಬಾರ್ಡೋಲಿಯ ಸತ್ಯಾಗ್ರಹ ಸಮರ ನಡೆಯುತ್ತಿದ್ದ ಜಪ್ತಿ ಅಧಿಕಾರಿಗಳಿಗೆ ಚರ ಜಂಗಿ ಸಿಗುವುದು ತೀರ ಕಠಿಣವಾಗಿದೆ. ಈ ಅಧಿಕಾರಿಗಳಿಗೆ ರಾತ್ರಿ ನಿದ್ದೆ ಬರುವದಿಲ್ಲ. ಒಂದು ದಿನ ೩। ಕಲೆಕ್ಟರರು, ಮಾಮಲೇದಾರರೂ ರಾತ್ರಿ ೩॥ ಗಂಟೆಗೆ ಎದ್ದು ದನಗಳನ್ನು ಹಿಡಿಯುವದಕ್ಕಾಗಿ ಹೋದರು. ಆಲೆಸಿ ಗ್ರಾಮದ ಬಳಿ ೩೯ ದನಗಳ ಹಿಂಡು ಮೇಯುತ್ತಿತ್ತು. ಬರಾಬರ, ಈ ಮಾಮಲೇದಾರರು ದನಗಳಿಗೆ ಮುತ್ತಿಗೆ ಹಾಕಲು ಹೋದರು. ಅಗ್ರೇಸರ ವ್ಯಕ್ತಿ ಹೋಗುವಷ್ಟರಲ್ಲಿ ಬಂದು ದನಕ್ಕೆ ಸತ್ಯಾಗ್ರಹದ ಸ್ಪರ್ಶವಾಯಿತೋ ಏನೋ ಆ ದನವು ವೇಗಗಮ್ಯ ಬಿರಿತು. ಎಲ್ಲವೂ ಅದನ್ನು ಹಿಂಬಾಲಿಸಿ ಓಡಿಬಿಟ್ಟವು. ಒಬ್ಬ ಬ್ರಾಹ್ಮಣ ಅಧಿಕಾರಿಗೆ ಈ ಸುದ್ದಿ ತಿಳಿದ ಕೂಡಲೆ ಅವರು ಉದ್ಗರಿಸಿದರೇನೆಂದರೆ,— "ದಾನಕ್ಕೆ ಕೊಟ್ಟಿದ್ದ ನನ್ನ 'ಎರಡು ಜೋಡು' ಭತ್ತವನ್ನು ಮುಂಚಿನ ದಿನ ಮಾಮಲೇದಾರರಿಂದ ಜಪ್ತು ಮಾಡದ ಪ್ರತಿಫಲವಿದು." ನವಾಳೀಲಿಯ ಗ್ರಾಮದೊಳಗಿನ ಒಕ್ಕಲಿಗನ ೩ ದನಗಳನ್ನು ಜಪ್ತಿ ಮಾಡಿದ್ದರು. ಆವರಿಂದ ತೀರ್ವೆ ಸಲ್ಲದಿದ್ದಿಲ್ಲ. ಮಾಮಲೆದಾರರು ಬಳಿ ಅವನ್ನು ಕೊಡ ಹೇಳಲು ಸಾಕಿದ ಖರ್ಚನ್ನು ಅವರು ಬೇಡಿದರು. ಸ್ವಲ್ಪ ಸಮಯದ ಮೇಲೆ ಅವರು ಕೊಡ ಹೇಳಿದರೆ ಕೈಪತ್ತೇನಾಗಿ ಒಕ್ಕಲಿಗನು ಹೇಳಲು, "ನಿನ್ನ ದನಗಳನ್ನು ನೀನು ತೆಗೆದುಕೊಂಡು ಹೋಗು" ಎಂದು ಮಾಮಲೇದಾರರು ಹೇಳಿದರು. ಕೆಲ ಕಾಡಿಗಳನ್ನು ತುಂಬಿ ಬಲಾತ್ಕಾರದಿಂದ ಗಾಡಿಯನ್ನು ಒಯ್ದರೆಂದ ಕಂಡು ಜೋಡಾರ ಎಂಬ ಗಾಡಿಕಾರರು ಪ್ರತಿಜ್ಞಾ ಪತ್ರಕವನ್ನು ಬರೆಕೊಟ್ಟಿದ್ದಾರೆ. ಸನೋಲ ಗ್ರಾಮದಲ್ಲಿ ಸರಾಯಿ ಪೀಪಗಳ ಜಪ್ತಿ ಮಾಡಲ್ಪಟ್ಟವು. ಚಕ್ಕಡಿ ಜಪ್ತಿ ಮಾಡಲ್ಪಟ್ಟಿದೆ. ಬಾರ್ಡೋಲಿಯೊಳಗಿನ ಪತ್ನಾ ಜಿನಿಂಗ ಫ್ಯಾಕ್ಟರಿಯೊಳಗಿಂದ ೩ ಹತ್ತಿಗಳು ಜಪ್ತಿ ಮಾಡಲ್ಪಟ್ಟಿವೆ. ಸತ್ಯ ಕುಂಬಳಿಯೊಳಗಿನ ಶಾಂತಿ ಕಾರಖಾನೆಯಲ್ಲಿದ್ದ ಹತ್ತಿಯು ಜಪ್ತಿಗೆ ದ ಸಿಗುವ ಮುಂಚೆಯೇ ಹತ್ತಿಯ ಅಂಡಿಗೆಗಳು ಬಿಗಿದು ಮೇಲೆ ಕಳಿಸಲಿಕ್ಕೆ ತಯಾರಾಗಿ ಸಿದ್ಧವಾಗಿತ್ತು. ಆದರಿಂದ ಮಾಮಲೇದಾರರ ಪರಿಚೆ ಮಾಡದೆ ಆ ಅಂಡಿಗೆಗಳು ರವಾನೆಯಾದವು. ಅರ್ಥ 'ಕಟ್ಟಿದ ಅಂಡಿಗೆಗಳೂ ಜಪ್ತು ಮಾಡೋಣವು ಜಪ್ತಿಯ ಅಧಿಕಾರಿಗಳಿಗೆ ಜಪ್ತಿಯ ಅತ್ಯುತ್ಸಾಹದಲ್ಲಿ ಸಾರಾಸಾರ ವಿಚಾರವು ಸಹ ಹೋಲಿಗೆ ಬಿಟ್ಟಿದೆ. ಮಂಚ, ಗಾಡಿ, ಹಲಿರಿಂಬು ಇವುಗಳನ್ನು ಬಯಾನಿರುದ್ಧ ಜಪ್ತಿ ಮಾಡಿ ಮೋಟಾರು ತುಂಬಿ ಒಯ್ಯುತ್ತಾರೆ. ಚಿಕ್ಕ ಚಿಕ್ಕ ಬಾಲಕರು ಸಹ ಇವನ್ನು ನೋಡಿ ನಗುತ್ತಾರೆ. ಜೋಡಮಾಡಿ ಗ್ರಾಮದಲ್ಲಿ ದನಗಳ ಹಿಂಡು ಮೇಯುತ್ತಿತ್ತು. ಅದನ್ನು ಹಿಡಿಯಲು ಬಹು ಪ್ರಯಾಸವಾಯಿತು. ಎಲ್ಲವೂ ಓಡಿದವು. ೩ ದನಗಳನ್ನು ಹಿಡಿದು ಇಡೀ ರಾತ್ರಿ, ಕಾದು ಬಾರ್ಡೋಲಿಗೆ ತರಬೇಕಾದರೆ ಸಾಕು ಬೇಕಾಯಿತು. ಈ ಪ್ರಕಾರ ರಾತ್ರಿ ಸಮಯ ಸಹ ಕಾಯಿದೆಗೆ ವಿರುದ್ಧ ಜಪ್ತಿಗಳಾಗುತ್ತಿವೆ.

ಜಪ್ತಿ ಮಾಡಿದ ಜಂಗಿಗೆಯನ್ನು ಮಾರಿಸುವ ಪ್ರಕಾರವನ್ನು ಕೇಳಬಹುದು. ಪದಾರ್ಥಗಳಿಗೆ ಸಾಕಷ್ಟು ಕ್ಷಿಂಡಿ ಸಿಗುವದಿಲ್ಲ. ಆದರೆ ಅವುಗಳಿಗೆ ಹೊಂದಲು ಪ್ರಯತ್ನವಾಗುತ್ತಿದೆ. ಅನೇಕ ಪ್ರಯೋಗಗಳಾಗುತ್ತಿವೆ. ಆದರೂ ದನಗಳು ಹಾಲನ್ನು ಕೊಡುವಷ್ಟರಲ್ಲಿ. ನಗರಶೇಟ ಎಂಬವರು ದನಗಳಿಗೆ ಸಾಕಾತ್ತೇನಾಗಿ ಮುಂಬಯಿದವರು. ಜಪ್ತಿ ಮಾಡಿದ ದನಗಳನ್ನು ನಗರಶೇಟರಿಗೆ ಸಾಕಕೊಟ್ಟರೆ ಸರಕಾರಿಂದ ಹೆಚ್ಚುಗೇಣಿಗಳಾಗುವದೆಂಬ ಭೀತಿಯಿಂದ ಅದಕ್ಕೆ ಸರಕಾರವು ಒಪ್ಪಿಲ್ಲ. ಎಂಥ ದನಗಳ ಗ್ರಹ!

ಜಂಗಿಗೆಯನ್ನು ಲಿಲಾವಿಗೆ ತೆಗೆದರೆ ಕೊಳ್ಳಲು ಜನ ಸಿಗುವದಿಲ್ಲ. ಸರಕಾರದ ಜಾಮೀನುಗಳೂ ಕೊಳ್ಳಬೇಕಾಗುತ್ತದೆ. ೩೨-೩೦-೪೦ ರೂ. ಬೆಲೆಯ ದನಗಳಿಗೆ ೧-೨ ರೂ. ಬಂದವು. ನವಾಬು ಹಿಂದೆ ಸ್ವದೇಶ ಕೂಲಿಗಾರರನ್ನು ನವಾಲಿಗಾಗಿ ಹಿಂದೆ ಧರ್ಮಕಾರ್ಯ ಆಲಿಬಿಟ್ಟವರು. ಕಲೆಕ್ಟರರು ಕಂಡರಿಸಿದ್ದಾರೆ. ೧೨೦೦ ರೂ. ಬೆಲೆಯ ದನಗಳು ೩೧೬ ರೂಪಾಯಿಗಳಿಗೆ ಮಾರಲ್ಪಟ್ಟವು. ದನಗಳ ಮೇವಿನ ಖರ್ಚು ಸಹ ಹುಟ್ಟಲಿಲ್ಲ. ಮಾಮಲೇದಾರರು ನವಾಲಿನ ಸಾಮಾನ್ಯ ದನಗಳ ಗುಣವರ್ಣನೆ ಮಾಡುವದನ್ನು ನೋಡಿದರೆ ಸರಕಾರಕ್ಕೊದಗಿದ ವಿಪತ್ತಿನ ಯಥಾರ್ಥ ಕಲ್ಪನೆ ಬರುತ್ತದೆ. ಹೀಗೆ ಮಾಡಿದರೂ ಯೋಗ್ಯ ಸವಾಲು ಬರುವದಿಲ್ಲ. ಅದೇ ತೋಂಡರೆ! ೨೦೦೦ ರೂಪಾಯಿಗಳ ಸ ಸಲು ಮೇಲೋಸದಲ್ಲಿ ಬರುತ್ತಾಗಿತ್ತು. ಅದು ೬೪ ರೂಪಾಯಿಗೆ ಮಾರಲ್ಪಟ್ಟಿತು. ಇದರಿಂದ ಸರಾಯಿಯ ಅಂಗಡಿಕಾರರು ಸರಕಾರಕ್ಕೆ ನೋಟೀಸು ಕೊಟ್ಟಿದ್ದಾರೆ. ಮಾಸಿಕ ಪರವಾಂಗಿಯ ಕಾಲಾವಧಿ ಮುಗಿಯುವ ಮೊದಲೇ ಜಪ್ತು ಅಂಗಡಿಕಾರರು ಈ ಸರಾಯಿಯನ್ನು ಕೊಂಡುಕೊಂಡ ಬಗ್ಗೆ ಆಕ್ಷೇಪಿಸಿದರು. ಬಂದ ದಿನ ಬಹಿಷ್ಕಾರ ಮಾಡಿ ಅಂಥ ಅಪಕೀರ್ತಿಯಿಂದ ತಮ್ಮ ಗ್ರಾಮವನ್ನು ಸಂರಕ್ಷಿಸಲು ಉಪವಾಸ ಮಾಡಿದರು.

ಬಾರ್ಡೋಲಿಯಲ್ಲಿ ಕೂಲಿಯಾಳುಗಳಿಗೆ ಬಹಳ ಬೆಲೆ ಬಂದಿದೆ. ಕೂಲಿಯಾಳುಗಳ ಹತ್ತಿಯ ಕೆಲಸಕ್ಕೆ ತೀರ ತೊಂದರೆಯಾಗಿದೆ. ಆದರಿಂದ ಕಲೆಕ್ಟರರೂ, ಪೋಲೀಸ ಸುಪರಿಂಟೆಂಡೆಂಟರೂ ಜಾಹೀರನಾಮೆಗಳನ್ನು ಹೊರಡಿಸಿದ್ದಾರೆ. ಸರಕಾರಕ್ಕೆ ಕೂಲಿಯಾಳು ಸಿಗುವದಿಲ್ಲ. ಗಾಡಿಕಾರರು ಸಿಗುವದಿಲ್ಲ, ಸವಾರರು ಸಿಗುವದಿಲ್ಲ. ಯಾರಿಗಾದರೂ ಹಿಡಿದರೆ ಅವರು ಬಹಿಷ್ಕರಿಸಲ್ಪಡುವ ಸಂಭವವೂ ಇದೆ. ಆದರಿಂದ ಸಾರೋಟಗಾಡಿಗಳನ್ನು ಬಾಡಿಗೆಗೆ ಬಾರಿಸಬಹುದು. ಚಿಕ್ಕ ಚಿಕ್ಕ ಬಾಲಕರ ಹಂಗಿತಗಳನ್ನು ಕೂಡ ಬಾರಿಸಲಾಗದು. ಹೀಗೆ ಜಾಹೀರನಾಮೆಗಳು ಹೊರಡಿಸಲಾಗಿವೆ. ಶ್ರೀ ಚೆನೋಯ್, ಆನಂದ ಆವ್ರತಲಾಲ ಪ್ರಭೃತಿ ಪ್ರಮುಖರ ಮೇಲೆ ಹಚ್ಚಲಾದವು. ರಾ। ಚೆನೋಯ್‌ರವರ ವಿಚಾರಣೆ ಮುಗಿದು ಮಾಮಲೇದಾರರಿಗೆ ಅಡ್ಡಗಟ್ಟಿದ ಬಗ್ಗೆ ೩ ತಿಂಗಳ ಶಿಕ್ಷೆ ೫೦ ರೂಪಾಯಿಗಳ ದಂಡ, ದಂಡ ಕೊಡದಿದ್ದರೆ ೫೦ ದಿನಗಳ ಶಿಕ್ಷೆ ಹೀಗೆ ವಿಧಿಸಲಾಯಿತು. ಕೂಲಿಗಾರರಿಗೆ ಪ್ರತಿಬಂಧಿಸಿದ ಬಗ್ಗೆ ೬ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ. ಅಂದಮೇಲೆ ಮಾಮಲೇದಾರರಿಗಿಂತ ಕೂಲಿಯಾಳುಗಳ ಆವಶ್ಯಕತೆಯು ಸರಕಾರಕ್ಕೆ ಹೆಚ್ಚೆಂಬುದು ಸ್ಪಷ್ಟವಾಯಿತು. ಬಂಡಿಕಾರರಿಗೆ ಶಿಕ್ಷೆ ವಿಧಿಸಿದ ಬಗ್ಗೆ ಕೆಲವು ಗ್ರಾಮಗಳಲ್ಲಿ ಬಹಿಷ್ಕಾರ ಮಾಡಿತು. ಪರದೇಶ ಅರಿವೆಯ ಹೋಳಿಯೂ ಆಯಿತು. ಸಾಂಕ್ರಿಯೆಯೊಳಗಿನ ಬೇಸಾಯ ಗಾರರೂ ಸಭೆ ಸೇರಿ ಶ್ರೀ ವಲ್ಲಭಭಾಯಿಯವರಿಗೆ ಈ ಕಾದಾಟವನ್ನು ಕೊನೆ ತನಕ ನಡಿಸುವ ಅಭಿವಚನವನ್ನಿತ್ತರು. ಶ್ರೀ ವಲ್ಲಭಭಾಯಿಯವರು ಸರಕಾರಕ್ಕೆ ಎದೆ ತಟ್ಟಿ ಎಚ್ಚರಿಕೆ ಕೊಟ್ಟಿದ್ದಾರೆ. ನಾಗಪುರದಲ್ಲಿ ೧೫೦೦ ದೇಶಸೇವಕರನ್ನು ಸೆರೆಮನೆಗೆ ಕಳಿಸಿರುವಾಗ ಇಂಥ ಶಿಕ್ಷೆಗಳಿಂದ ಜನರು ಹೆದರುವರೆಂದು ತಿಳಿಯಬಾರದಾಗಿ ಅವರು ಸಾರಿಹೇಳಿದರು. ಇತರ ಜನರಿಗೆ ಸೆರೆಹಿಡಿಯುವದಕ್ಕಿಂತ ಮುಂಚೆ ಸಮಾಚಾರಾಧಿಪತಿಗಳನ್ನೇ ಮೊಟ್ಟಮೊದಲು ಸರಕಾರವು ಸೆರೆಹಿಡಿಯಬೇಕಾಗಿಯೂ ಅವರು ಸಾರಿಹೇಳಿದರು. ಆಕಾರ ಗ್ರಾಮದಲ್ಲಿಯೂ ಸಭೆಯಾಗಿ ಸತ್ಯಾಗ್ರಹ ಸಮರದ ನಿರ್ಧಾರವು ಪುನಃ ಪ್ರಸ್ತಾಪಿತವಾಗಿದೆ. ಕಾಯಿದೆಯನ್ನು ಉಲ್ಲಂಘಿಸಿ, ಸ್ಥಾಪಿಸಿದ ಪೀಡನೆಯಿಂದ ಗ್ರಾಮದವರು ಎಷ್ಟುಕಷ್ಟ ಬೆದರರೆಂದು ಶ್ರೀ ಪಟೇಲರು ಅಲ್ಲಿಯೂ ಹೇಳಿದರು. ಸರಕಾರಕ್ಕೆ ಅನ್ನ ಕಾಲಬದ್ಧ ಜನರ ರೆ ಬಲಾತ್ಕಾರವಾಗುವದಿಲ್ಲವಾಗಿ ಹೇಳುವಾಗ ಶ್ರೀ ಪಟೇಲರು ನುಡಿದದ್ದೇನಂದರೆ — "ಬಾರ್ಡೋಲಿಯಲ್ಲಿ ಹಿಂಸೆಯುಂಟಾದರೆ ಅದಕ್ಕೆ ನಾನೇ ಮೊದಲು ಬಲಿಬೀಳುವೆನು. ಇದು ಅಹಿಂಸೆಯ ಕಾದಾಟವು. ದಿನ ಹೋದಹಾಗೆ ಸಾತ್ವಿಕ ಸಾಮರ್ಥ್ಯವು ಬೆಳೆಯುತ್ತಲಿದೆ. ನೀವು ನಗುಮೋರೆಯಿಂದ ಪ್ರಾಣಾರ್ಪಣ ಮಾಡುವದು ಕಲಿಸಲು ನಾನು ಬಂದಿದ್ದೇನೆ. ಶೈತ್ರದ ಬಗ್ಗೆ ಬಂದಿವನು ನೀವು ಹೀರಬೇಡಿರಿ. ನೀವು ಅಹಿಂಸೆಯ ಮಂತ್ರವನ್ನು ದಕ್ಷಿಣ ಆಫ್ರಿಕೆಯಲ್ಲಿ ಮೂಲ ಪ್ರವರ್ತಕರ ಸಾನ್ನಿಧ್ಯದಲ್ಲಿ ಕಲಿತಿದ್ದೀರಿ. ಅಂಥವರಿಗೆ ನಾನೇನು ಕಲಿಸಲಿ" ಹೀಗೆ ಬಾರ್ಡೋಲಿಯ ಸಮರವು ನಿಕರದಿಂದ ಸಾಗಿದೆ. ಮಹಾತ್ಮರು ಬಾರ್ಡೋಲಿಗೆ ಚಿತ್ತೈಸುತವರಿದ್ದಾರೆ.

— ಕರ್ನಾಟಕ ಆಯುರ್ವೇದ ಸಮ್ಮೇಲನವು ಮಂಗಳೂರಲ್ಲಿ ಈ ೨೧-೨೨-೨೩ನೆ ಗೆ ನಡೆಯುವದೆಂದು ಈಗ ನಿಶ್ಚಯವಾಗಿರುತ್ತದೆ. ಆ ಸಮಯ ವನಸ್ಪತಿಗಳ ಪ್ರದರ್ಶನವೂ ಸೇರುವದು. ಅಧ್ಯಕ್ಷ ಸ್ಥಾನವು ಅಹಮ್ಮದನಗರದ ವೈದ್ಯ ಪಂಚಾನನ ಗೋವಿಂದ ಶಾಸ್ತ್ರಿಗಳಿಗೆ ಅರ್ಪಿಸಲ್ಪಟ್ಟಿದೆ.

— ಉಧ್ವಾನು ಮುನಿಸಿಪಾಲಿಟಿಯು ಖಾದಿಯ ಮೇಲೆ ತೆರಿಗೆ ಹೆಚ್ಚಿಸುವದಿಲ್ಲವಾಗಿ ನಿರ್ಧರಿಸಿದೆ. ಎಲ್ಲ ಮುನಿಸಿಪಾಲಿಟಿಗಳು ಈ ನಿರ್ಧಾರವನ್ನು ಕೈಕೊಳ್ಳಬಹುದಲ್ಲವೇ!

— ಮೋಟಾರ ಸ್ಪ್ಯಾನ್ಡರನು ಮೋಟಾರು ಚಲಿಸುತ್ತಿರುವಾಗ ಮಾತ್ಯ ಕುಡಿಯಬಾರದೆಂದು ಮುಂಬಯಿ ಸರಕಾರದ ನಿಯಮವಾಗಿರುತ್ತದೆ. ಮದ್ಯಪಿಗಳು ಮೋಟಾರ ಡ್ರೈವರ ಆಗಬಾರದೆಂದು ವಿಧಿಸಿದರೆ, ಪ್ರಯೋಜನಕಾರಿ ಕ್ಷೇಮವಾಗುತ್ತಿತ್ತು!

ಹೊನ್ನಾವರದಲ್ಲಿ ಮುಂಬಯಿ!

ಬನ್ನಿರಿ! ಕೊಳ್ಳಿರಿ!! ಕ್ಷುಧಾ-ಶಾಂತಿಹೊಂದಿರಿ!!!

ಮುಂಬಯಿ ಶಹರವನ್ನು ನೋಡಿದವರು ಅನೇಕರಿರುತ್ತಾರೆ. ಮುಂಬಯಿಯ ಬಹಳ ಪ್ರಸಿದ್ಧವಾದ ಚಹಾ ಅಂಗಡಿ ಸಮೂನೆಯ "ಮನಮೋಹನ ವಿಲಾಸ" ವೆಂಬ ಹೆಸರಿನಿಂದ ಸಕಲರಿಗೂ ಅನುಕೂಲವಾದ ಒಂದು ಚಹಾ ದುಕಾನನ್ನು ನಾವು ಹೊನ್ನಾವರದಲ್ಲಿ ಬರುವ ವೈಶಾಖ ಶುದ್ಧ ೧೪ಕೆ, (ತಾರೀಖು ೩-೫-೧೯೨೮) ಯಿಂದ ಪೋಸ್ಟ ಆಫೀಸಿಗೆ ಹೋಗುವ ರಸ್ತೆ ನೆರೆಯಲ್ಲಿ ತೆರೆಯುತ್ತೇವೆ. ಅರಸರು ತಿನ್ನಲಪೇಕ್ಷಿಸುವಂಥ ಸರಸವಾದ ತರತರದ ತಿನಸುಗಳು ನಮ್ಮಲ್ಲಿ ತಯಾರಾಗುತ್ತವೆ. ಅತ್ಯುತ್ಕೃಷ್ಟವಾದ ಚಹಾ, ಕಾಫಿ, ಕಶಾಯ, ಶರಬತ್ ವಗೈರ ಪೇಯ ಪದಾರ್ಥಗಳೂ ಅಪೇಕ್ಷಿತವಾಗಿ ಸಿದ್ಧವಾಗುತ್ತವೆ. ಸ್ವಲ್ಪ ಖರ್ಚಿನಿಂದ ಮುಂಬಯಿಯ ಅನುಭವ ಹೊಂದಬೇಕಾದರೆ, ನಮ್ಮ ಈ "ಮನಮೋಹನ ವಿಲಾಸ"ಕ್ಕೆ ಒಮ್ಮೆ ಚಿತ್ತೈಸಬೇಕು. ಗ್ರಾಹಕರು ಹಸಿವೆ ತೃಷೆಗಳನ್ನು ಕಳೆದು, ಮನೋರಂಜನ ಮಾಡಲಿಕ್ಕೆ ಈ "ಮನಮೋಹನ ವಿಲಾಸ"ದಷ್ಟು ಸಾಮರ್ಥ್ಯವುಳ್ಳದ್ದು ಇಲ್ಲಿ ತೀರ ಕಡಿಮೆ. ಕಾರಣ ಅನುಕೂಲವಿದ್ದವರೆಲ್ಲರೂ ಈ 'ವಿಲಾಸ'ಕ್ಕೆ ಬಂದು ವಿಲಾಸ ಹೊಂದಿ ಧನ್ಯರಾಗಬೇಕು.

ದರ ವಗೈರೆ ಪಿಕೇಟ ವಗೈರೆ 'ವಿಲಾಸ'ದಲ್ಲಿ

ಮಾಲಕರು—"ಮನಮೋಹನ ವಿಲಾಸ" ಹೊನ್ನಾವರ

ಸ್ಕೂಲ ಬೋರ್ಡಿನ ಅವ್ಯವಸ್ಥೆ.

(೫ನೇ ಪುಟದಿಂದ ಮುಂದುವರಿದದ್ದು)

ಜಿಲ್ಹಾ ಬೋರ್ಡಿನ ಅಧ್ಯಕ್ಷರಲ್ಲಿ, ಇತರ ಮಹನೀಯರೂ ನಾನು ಯಾವ ಉಪಾಯದಿಂದ ನ್ಯಾಯ ಪಡೆ ಕೊಳ್ಳಬೇಕೆಂದು ತಿಳಿಸಬೇಕು. ” ಇತ್ಯಾದಿ ಉದ್ಗರಿಸಿದರು. ಅಧ್ಯಕ್ಷರು ಸಮಾಧಾನ ಹೇಳಿದ್ದೇನಂದರೆ:- “ ನನ್ನ ಬಳಿ ಅಧಿಕಾರವಿಲ್ಲ; ನಿಮ್ಮ ಅಹವಾಲನ್ನು ಇತರರ ಕಡೆಯಿಂದ ಬಂದ ಅರ್ಜಿಗಳನ್ನೂ ನಾನು ಫ್ಯಾಯಲು ಮಾಡಿಟ್ಟುಕೊಂಡಿದ್ದೇನೆ. ಸ್ಕೂಲ ಬೋರ್ಡಿನ ನಡಾವಳಿಯ ಮೇಲೆ ನನ್ನ ಅಧಿಕಾರವಿದ್ದಿದ್ದರೆ, ನಿಮ್ಮ ದೂರುಗಳನ್ನೆಲ್ಲ ಒಂದೇ ಒಂದು ತಾಸಿನಲ್ಲಿ ಪರಿಹಾರ ಮಾಡಿ ಬಿಡುತ್ತಿದ್ದೆ. (ಇದನ್ನು ಕೇಳಿ ಎಲ್ಲರೂ ಚಕಿತರಾದರು !) ಡ್ಯಾರೆಕ್ಟರರ ಹತ್ತಿರ ಸ್ಕೂಲ ಬೋರ್ಡು-ಜಿಲ್ಹಾ ಬೋರ್ಡುಗಳ ಅಧಿಕಾರದ ವಿಷಯ ಪತ್ರವ್ಯವಹಾರ ನಡೆದಿದೆ. ” ಇನ್ನೊಬ್ಬ ಶಿಕ್ಷಕರು ಹಳ್ಳಿಯಲ್ಲಿ ಗ್ರಾಮಸ್ಥರಿಗೆ ಸಾಮಾನ್ಯ ಔಷಧೋಪಚಾರ ಮಾಡಲು ತಕ್ಕ ಶಿಕ್ಷಣವನ್ನೂ, ಸಾಹಿತ್ಯಗಳನ್ನೂ ಪೂರೈಸಬೇಕಾಗಿ ವಿನಂತಿಸಿದರು. ಗ್ರಾಮಗಳೊಳಗಿನ ಆರೋಗ್ಯದ ಸ್ಥಿತಿಯನ್ನೂ ವರ್ಣಿಸಿದರು. ಅಧ್ಯಕ್ಷರು ಬೋರ್ಡಿನ ಹಣದ ಅಡಚಣೆಯನ್ನು ವರ್ಣಿಸಿದರು: “ಜಿಲ್ಹೆಯಲ್ಲಿ ೭ ಆಸ್ಪತ್ರೆಗಳಿದ್ದು ಅವುಗಳಿಂದ ೩೫ ಸಾವಿರ ರೂಪಾಯಿ ಖರ್ಚು ಬರುತ್ತದೆ. ಸರಕಾರವು ಕೊಡುವ ಹಣ ಬರೇ ೪ ಸಾವಿರ. ಇಷ್ಟು ಹಣ ತೆರುವದೇ ಬೋರ್ಡಿಗೆ ಭಾರವಾಗಿದೆ. ಅದರಿಂದ ಆಸ್ಪತ್ರೆಗಳನ್ನು ಸರಕಾರಕ್ಕೆ ವಹಿಸಿಕೊಡುವ ವಿಚಾರ ನಡೆದಿದೆ. ಹಣ ಒದಗಿದ ಬಳಿಕ, ಈ ವಿಷಯ ವಿಚಾರ ಮಾಡಬಂದೀತು.” ಇತ್ಯಾದಿ ಹೇಳಿ, ಆ ಸೂಚನೆಗೆ ಮಂತ್ರಾಕ್ಷತೆಗಳನ್ನು ಕೊಟ್ಟರು. ಸೂರ್ಯನಮಸ್ಕಾರಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭಿಸಬೇಕೆಂದು ಒಬ್ಬರು ಪ್ರತಿಪಾದಿಸಿದರು. ಅಧ್ಯಕ್ಷರಾದ ರಾ| ಗೋಖಿಯವರಿಗೆ ಧಾರ್ಮಿಕ ಭಾವನೆಯ ಸಂದೇಹ ಹುಟ್ಟಿತು. ಸೂರ್ಯನಮಸ್ಕಾರಕ್ಕೆ ಹಿಂದು ಧರ್ಮದ ಸಂಪರ್ಕವಿರುವದರಿಂದ ಅದನ್ನು ಸರ್ವಮತಸ್ಥರು ಇರುವ ಸಾರ್ವಜನಿಕ ಶಾಲೆಗಳಲ್ಲಿ ಪ್ರಾರಂಭಿಸಬೇಕೆಂದು ಹೇಳುವದು ಅಪ್ರಸಕ್ತವೆಂದು ರಾ| ಗೋಖಿಯವರ ಅಭಿಮತ. ಆದರೆ ಶಾಲೆಗಳಲ್ಲಿ ದಾಂಡ ಪಟ್ಟಿ ಹೊಯ್ದ ನಮಸ್ಕಾರ ಮುಂತಾದವುಗಳನ್ನು ಅಲ್ಲಲ್ಲಿಯ ಪರಿಸ್ಥಿತಿಯ ಆಲೋಚನೆಯಿಂದ ಕೈಕೊಳ್ಳಬಹುದೆಂದು ಅಧ್ಯಕ್ಷರು ಅನುಜ್ಞೆಯನ್ನಿತ್ತರು. ರಾ| ಗೋಖಿಯವರು ಔಂಧ ಸಂಸ್ಥಾನಾಧಿಪರ ಸೂರ್ಯನಮಸ್ಕಾರ ಗ್ರಂಥವನ್ನು ಓದಿದ್ದರೆ ಧಾರ್ಮಿಕ ಭಾವನೆಯ ಭೂತಕ್ಕೆ ಅವರು ಬೆದರುತ್ತಿದ್ದಿಲ್ಲ. ಇರಲಿ.

ರಾ| ನಾರಾಯಣ ಕಾಮತರ ಉಪದೇಶ

ಇಷ್ಟಾದ ಬಳಿಕ, ಅಧ್ಯಕ್ಷರು ತಮ್ಮ ಗುರುವರ್ಯರಾದ ರಾ| ನಾ. ಸು. ಕಾಮತರಿಗೆ ನಾಲ್ಕು ಉಪದೇಶದ ಮಾತುಗಳನ್ನಾಡಹೇಳಿದರು. ರಾ| ಕಾಮತರು ವಿರಾಣಿಯಲ್ಲಿ ಉಪದೇಶ ಕೊಟ್ಟಿದ್ದೇನಂದರೆ:— ‘‘ಶಿಕ್ಷಕರೇ, ನೀವು ಟೀಕೆಗೆ ಬೆದರಬೇಡಿ. ಇದು ನನ್ನ ಮೊದಲನೇ ಉಪದೇಶ. ನಾನು ಸಹ ಟೀಕೆಗೆ ಲಕ್ಷ್ಯಕೊಡುವದಿಲ್ಲ. ಮೂಗು ಡೊಂಕು; ಕಣ್ಣು ಕುರುಡು ಇರಬಹುದು ಹಿರೆ; ಹೀಗೆ ಆಕ್ಷೇಪಿಸಿದರೆ, ನಾವು ಅಲ್ಲಿಲ್ಲಿ ನೋಡಿಕೊಂಡು ಹಿರೆ ಅವಹಲನ್ನು ಸರಿಪಡಿಸಿಕೊಳ್ಳುತ್ತೇನೆ. ಇಲ್ಲದಿದ್ದರೆ ನಗುಮೋರೆಯಿಂದ ಸುಮ್ಮಗಿರುತ್ತೇನೆ. (ಮೂಗು ಡೊಂಕು; ಕಣ್ಣು ಕುರುಡು ಎಂದು ಕೇಳಿದರೆ ಸರಿಪಡಿಸಿಕೊಳ್ಳಬೇಕೆಂದು ಅವರು ಹೇಳಲಿಲ್ಲ.) ಅದರಿಂದ ಟೀಕೆಗೆ ಸೊಪ್ಪು ಹಾಕಬೇಡಿರಿ. (ಈ ಆವೇಶವನ್ನು ನೋಡಿ, ಅನೇಕರಿಗೆ ಏಕಾಂಗಲಕ್ಷ್ಯಂ ದರಿದ್ರಸ್ಯ ಸರ್ವತ್ರ ವಿಜಯೀ ಭವ’’ ಎಂಬ ಉಕ್ತಿಯ ನೆನಪಾಯಿತು.) ಈ ಕನ್ನಡ ಶಾಲೆಯ ಶಿಕ್ಷಣ ಹಸಿಯದಿಲ್ಲವೆಂದು ನನ್ನ ಕಡೆಗೂ ದೂರು ಬಂದಿದೆ. ನಾಗಿನಂತೆ ಸಂಬಳ ಪಡೆದು ಸರಿಯಾಗಿ ಶಿಕ್ಷಣ ಕೊಡಲಿಕ್ಕೆ ನಿಮ್ಮಿಂದ ಸಾಧ್ಯವಿಲ್ಲದಿದ್ದರೆ ನೀವು ರಾಜೀನಾಮೆ ಕೊಡಲೇ ಬೇಕು. (ಈ ವಾಕ್ಯವನ್ನು ಕೇಳಿ ಎಲ್ಲರೂ ಚಕಿತರಾದರು.) ಮ್ಯುನಿಸಿಪಾಲಿಟಿಯ ಸ್ವಾಧೀನಕ್ಕೆ ಕನ್ನಡ ಶಾಲೆ ಇರುವಾಗ ಆ ಶಾಲೆಯ ಶಿಕ್ಷಣವು ಚಲೋದಿತ್ತಂತೆ! (ಇಂಗ್ಲಿಷ ಶಾಲೆಯು ಮ್ಯುನಿಸಿಪಾಲಿಟಿಯ ವಶದಲ್ಲಿರುವಾಗಲೂ ಇಂಗ್ಲಿಷ ಶಾಲೆಯ ಶಿಕ್ಷಣವು ಚಲೋದಿತ್ತೆ ಎಂದು ಪ್ರೇಕ್ಷಕರೊಬ್ಬರು ಗುಣುಗುಟ್ಟಿದರು) ಮ್ಯುನಿಸಿಪಾಲಿಟಿಯವರು ಕನ್ನಡ ಶಾಲೆಯ ಪಾರುಪತ್ಯವನ್ನು ಪುನಃ ಪಡೆಕೊಳ್ಳುತ್ತಿರುವದಕ್ಕಾಗಿ ನನ್ನೊಡನೆ ವಿಚಾರಿಸಿದರು. ನೀವು ಆ ಗೊಡವೆಗೆ ಹೋಗಬೇಡಿ. ನಿಮಗೀಗ ಕೈ ಹಾಕಲು ಅಗಲಾರದಷ್ಟಲಿಕ್ಕೆ ಉಂಟು ದೊರೆಯದೆ, ಎಂದು ನಾನು ಹೇಳಿದೆನು. (ರಾ| ಕಾಮತರು ಮ್ಯುನಿಸಿಪಾಲಿಟಿ ಮೆಂಬರರ ಫ್ರೆಂಡ-ಫಿಲೊಸೊಫರ—ಗೈಡರೇನು?) ನನ್ನ ಶಾಲೆಯ ವಿಷಯಕ್ಕೂ ಶಿಕ್ಷಣ ಚಲೋದಿಲ್ಲವೆಂದು ದೂರು ಬಂದಿದೆ. ಆದರೆ ಆ ವಿಷಯ ಇಲ್ಲಿ ಚರ್ಚೆ ಅಪ್ರಾಸ್ತಾವಿಕವಾದ ಅದನ್ನು ಇಲ್ಲಿ ವಿವರಿಸುವದಿಲ್ಲ. (ಇದನ್ನು ಕೇಳಿ ಶಿಕ್ಷಕರನೇಕರು ರಾ| ಕಾಮತರಿಗೆ ಮಿಕಿ ಮಿಕಿ ನೋಡಿ ನಕ್ಕರು. ತಮ್ಮ ಸಿದ್ಧಾಂತದಂತೆ ರಾಜೀನಾಮೆ ಕೊಡಬೇಕಾದೀತೆಂಬ ಭೀತಿಯಿಂದ ಹೀಗೆ ಅವರು ತಪ್ಪಿಸಿಕೊಳ್ಳುತ್ತಾರೆಂದು ಅವರ ಅಭಿಪ್ರಾಯವಾಯಿತು. ಕೆಲಸದ ಅವಧಿ ಮುಗಿದರೂ ಒಂದೊಂದು ತಾಸಿನ ಪಾಠವನ್ನು ಪಡೆಕೊಳ್ಳುತ್ತಿದ್ದಾರೆಂದು ಶಿಕ್ಷಕರಿಗೆ ತಿಳಿಯಲಿಲ್ಲ.) ಅದರಿಂದ ನನ್ನದೊಂದು ಸೂಚನೆಯಿದೆ. ಜಿಲ್ಹಾ ಬೋರ್ಡಿನವರು ಶಾಲೆಗಳ ಮೇಲ್ವಿಚಾರಕಿಗಾಗಿ ಎಡ್ವೈಜರಿ ಕಮಿಟಿಯೆಂಬ ಮೇಲ್ವಿಚಾರಕ ಮಂಡಳವೊಂದನ್ನು ಸ್ಥಾಪಿಸಬೇಕು. (ಇದನ್ನು ಕೇಳಿ ಕೇವಲ ಕಾಮತರ ‘ಸ ಪೀಕ ಮೋಡ’ ವಿನ ಪ್ರಶಂಸೆಯಾಯಿತು.) ಆ ಮಂಡಳದ ಮೇಲೆ ಹಳ್ಳಿಯೊಳಗಿನ ಶಿಕ್ಷಣ ತಜ್ಞರಿಗೆ ನೇಮಿಸಬೇಕು. (ಮ್ಯುನಿಸಿಪಾಲಿಟಿಗೆ ಕೈ ಹಾಕಲು ಅಗಲಾರದಷ್ಟು ಸಲ್ಲೆ ಕೊಡುವವರು ತಜ್ಞರಿಗೆ ಬಂಧಿಸುವದೇಕೆ?) ಹೀಗೆ ಮಾಡಿದರೆ ಶಿಕ್ಷಣದ ಮೇಲೆ ಯೋಗ್ಯ ಮೇಲ್ವಿಚಾರ ನಡೆದು ಶಿಕ್ಷಣದ ಗುಣವು ಅಭಿವೃದ್ಧಿಯಾಗಿ ಲೋಕಕಲ್ಯಾಣವಾಗುವದು. ಜಿಲ್ಹಾ ಬೋರ್ಡಿನ ಅಧ್ಯಕ್ಷರೇ. ನಿಮ್ಮ ಸಮ್ಮೇಲನದ ಅಧ್ಯಕ್ಷರಾಗಿರುವದರಿಂದ ಈ ಅಧಿವೇಶನದಲ್ಲಿ ಕೈಕೊಂಡ ಠರಾವುಗಳಿಂದ ನಿಮಗೆ ಲಾಭವಾಗುವದು.’’ ಎಂಬರ್ಥದ ವಚನಗಳನ್ನಾಡಿ ತಮ್ಮ ಉಪದೇಶ ಕಾರ್ಯವನ್ನು ನೆರವೇರಿಸಿದರು. ಅಧ್ಯಕ್ಷರು ಸಮಾರೋಪ ಮಾಡುವಾಗ ರಾ| ಕಾಮತರಿಗೆ ಚೊಕ್ಕ ಉತ್ತರವನ್ನಿತ್ತು ತಕ್ಕ ಸಂಭಾವನೆ ಮಾಡಿದರು. ಅಧ್ಯಕ್ಷರು ನುಡಿದದ್ದೇನಂದರೆ:— ‘‘ಈ ಶಿಕ್ಷಣ ಸಂಘದ ಕಾರ್ಯವು ಉತ್ಸಾಹದಿಂದ ಸಾಗುತ್ತದಿಲ್ಲ. ನೀವು ನಿರುತ್ಸಾಹಿಗಳಾದಂತೆ ತೋರುತ್ತೀರಿ. ಸಂಘವು ಹೀನ ಸ್ಥಿತಿಗೆ ಬಂದಿದೆ. ಜಿಲ್ಹೆಯಲ್ಲಿ ೬೦೦ ಮಂದಿ ಶಿಕ್ಷಕರಿದ್ದಾರೆ. ಅವರಲ್ಲಿ ಬರೇ ೫೦-೬೦ ಶಿಕ್ಷಕರು ಈ ಅಧಿವೇಶನಕ್ಕೆ ಬಂದದ್ದನ್ನು ನೋಡಿ ನನಗೆ ವ್ಯಸನವಾಗುತ್ತದೆ. ನೀವು ಮುಂದಿನ ದಿವಸ ಸಂಸ್ಥೆಯನ್ನು ಬಲಪಡಿಸಲು ಜೋರಾ ಪ್ರಯತ್ನಪಡಬೇಕು. ಶಿಕ್ಷಕಿಯರು ಈ ಸಮ್ಮೇಲನದಲ್ಲಿ ಸೇರಲಿಲ್ಲ. ಇದು ಶೋಚನೀಯವು. ಸ್ತ್ರೀ ಶಿಕ್ಷಣದ ಕಲ್ಪನೆಯು ಸಹ ವಿಪರೀತವಾಗಿರುತ್ತದೆ. ನಾನೊಂದೆಡೆ ಹುಡುಗಿಯರ ಶಾಲೆಗೆ ಹೋಗಿದ್ದೆ. ಅಲ್ಲಿ “ಸ್ತ್ರೀ ಶಿಕ್ಷಣ ಯಾಕೆ ಬೇಕು?” ಎಂಬ ವಿಷಯದ ಮೇಲೆ ಒಂದು ನಿಬಂಧ ಬರೆಯಲು ಹೇಳಿದೆನು. ಐದಾರು ಪಂಕ್ತಿಗಳೊಳಗೆ ನಿಬಂಧ ಬರೆದಾಗಿತ್ತು:- ‘‘ಗಂಡನ ಉಪದ್ರವವು ಬಹಳ; ಅದನ್ನು ನೀಗಿಸಿಕೊಳ್ಳುವದಕ್ಕಾಗಿ ಸ್ತ್ರೀಯರು ಶಿಕ್ಷಣ ಪಡೆಯತಕ್ಕದ್ದು” ಎಂದು ಹುಡುಗಿಯರು ಬರೆದಿದ್ದರು. ಸ್ತ್ರೀ-ಶಿಕ್ಷಣದ ಕಲ್ಪನೆಯನ್ನು ತಿದ್ದತಕ್ಕದ್ದು. ರಾ| ಕಾಮತರು ಸೂಚಿಸಿದ ಎಡ್ವೈಜರಿ ಕಮಿಟಿ ಯಾವ ಮೇಲ್ವಿಚಾರಕ ಮಂಡಳದ ಕಲ್ಪನೆಯು ಗ್ರಾಹ್ಯವಲ್ಲ. ಮೊದಲೇ ಮೇಲ್ವಿಚಾರಕರ ಸಂಖ್ಯೆ ಬೆಳೆಯುತ್ತದೆ ದು ಶಿಕ್ಷಕರ ದೂರು. ಇದಲ್ಲದೆ ಮೇಲ್ವಿಚಾರಕರ ಸಂಖ್ಯಾ ಬಲವು ವಿಶೇಷವಿದೆ. ಜಿಲ್ಹಾ ಬೋರ್ಡಿನ ಮೆಂಬರರಿದ್ದಾರೆ; ಸ್ಕೂಲ ಬೋರ್ಡಿನ ಮೆಂಬರರಿದ್ದಾರೆ, ತಾಲೂಕ ಬೋರ್ಡಿನ ಮೆಂಬರರಿದ್ದಾರೆ; ಸ್ಕೂಲ ಪಂಚರಿದ್ದಾರೆ; ಸುಪರವೈಜರ ಮುಂತಾದ ಸಿಬ್ಬಂದಿಯೂ ಇದೆ. ಇಂಥಲ್ಲಿ ಎಡ್ವೈಜರಿ ಕಮಿಟಿಯನ್ನು ಘಟಿಸುವದು ಪ್ರಶಸ್ತವಲ್ಲ ” ಇತ್ಯಾದಿ ಮಾತುಗಳನ್ನಾಡಿ, ಪ್ರಾಥಮಿಕ ಶಿಕ್ಷಣದ ಕಲ್ಯಾಣವನ್ನೇ ತಾವು ಸದಾ ಚಿಂತಿಸುತ್ತಿರುವೆವಾಗಿ ಉದ್ಗರಿಸಿ, ಅಧ್ಯಕ್ಷರು ಅಧಿವೇಶನವನ್ನು ಪಾರಗಾಣಿಸಿದರು. ಆಭಾರ ಮನ್ನಣೆ, ಪುಷ್ಪಹಾರ ತಾಂಬೂಲ ಸಮರ್ಪಣ ಮುಂತಾದ ಔಪಚಾರಿಕ ವಿಧಿಗಳಾದವು.

ಸಾಯಂಕಾಲ ಅಧಿವೇಶನ ನಡೆಯುವಾಗ ಶಿಕ್ಷಕರ ಶ್ರೀ ಪಾರಿಕಾಂಡಾ ಹ್ಯಾಸ್ಕೂಲಿನ ಅಧ್ಯಾಪಕರಾದ, ನಿಷ್ಕಾಮ ಜಾದಿ ಸೇವಕರಾದ ಶ್ರೀ| ಮಹಾಲಿಂಗಪ್ಪ ಸುಬ್ರಾಯಪೈರವರು ಒಂದು ಬದಿಗೆ ಕೈರಾಟೆಯ ಮೇಲೆ ನೂಲುತ್ತಿದ್ದರು; ಹತ್ತಿ ಹಸನ ಮಾಡುತ್ತಿದ್ದರು. ಬಂದು ನೋಡುವ ಜಿಜ್ಞಾಸು ಶಿಕ್ಷಕರಿಗೆ ಈ ಶಿಕ್ಷಣವನ್ನು ತಿಳಿಸಿಕೊಡುತ್ತಿದ್ದರು. ಶಿಕ್ಷಕರು ಗ್ರಾಮಗಳಲ್ಲಿ ಕೈರಾಟೆಯನ್ನು ಪ್ರಸಾರ ಮಾಡಬೇಕೆಂಬದೊಂದು ಆಶೆ!

ಪ್ರಾ. ಶಿಕ್ಷಕರ ಸಹಕಾರಿ ಮಹಾಸಭೆ.

ಶನಿವಾರಕ್ಕೆ ಪ್ರಾಥಮಿಕ ಶಿಕ್ಷಕರ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯಾಯಿತು. ಹೆಗಡೆಯ ರಾ| ಗಣೇಶ ಶಂಭು ಹೆಗಡೆಯವರು ಅಧ್ಯಕ್ಷರಿದ್ದರು. ಈ ಸಭೆಯೇನು ಅಷ್ಟು ಮಹತ್ವದ್ದಲ್ಲ. ಅಧ್ಯಕ್ಷರು ಜರ್ಮನಿ ಮುಂತಾದ ಸ್ವದೇಶ-ಪರದೇಶಗಳೊಳಗಿನ ಸಹಕಾರದ ಕಥೆಯನ್ನು ಸಂಕ್ಷಿಪ್ತವಾಗಿ ವಿವರಿಸಿ ಪ್ರಾಥಮಿಕ ಶಿಕ್ಷಕರಿಗೆ ಸಹಕಾರ ಸಾಧನದಿಂದ ಆತ್ಮೋನ್ನತಿ ಮಾಡಿಕೊಳ್ಳಲು ಉಪದೇಶಿಸಿದರು. ವಿಷಯ ವಿಧಾಯಕ ಸಭೆಯಲ್ಲಿ ಸಂಘದ ನಿಯಮಗಳ ಚರ್ಚೆಯು ಹಿಡಿ ಆವೇಶದಿಂದ ನಡೆಯಿತು. ಕೆಲಸಕ್ಕಿಂತ ಗದ್ದಲವೇ ಹೆಚ್ಚಾಯಿತು. ಸಂಘಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಕೈಕೊಳ್ಳಬೇಕಾದ ತಿದ್ದುಪಾಟುಗಳು ಸೂಚಿಸೋಣಾಗಿ ಸಭೆಯು ವಿಸರ್ಜನ ಹೊಂದಿತು.

ಮಹಾತ್ಮರ ಆತ್ಮಚರಿತ್ರ.

(೩) ಇದು ಬೆದರಿಕೆಯೇ?

ಮುಂಬಯಿಯಿಂದ ರಾಜಕೋಟೆಗೂ, ಪೋರಬಂದರಿಗೂ ನಾನು ಹೋದೆನು. ಅತ್ತಿಗೆಯನ್ನೂ, ಇತರ ಆಪ್ತೇಷ್ಟರನ್ನೂ ಅಲ್ಲಿ ಕಾಣಹೋಗಿದ್ದೆನು.

ದಕ್ಷಿಣ ಆಫ್ರಿಕದೊಳಗೆ ಸತ್ಯಾಗ್ರಹ ನಡೆದಾಗ ಉಡಿಗೆ-ತೊಡಿಗೆಯ ವಿಧಾನವನ್ನು ನಾನು ಬದಲಿಸಿದ್ದೆನು. ಕೂಲಿಕಾರರಂತೆ ನನ್ನ ಉಡುಪಿತ್ತು. ಇಂಗ್ಲೆಂಡದಲ್ಲಿಯೂ ಮನೆಯಲ್ಲಿಯ ಹಾಗೆಯೇ ನಾನು ಉಡುತ್ತಿದ್ದೆನು. ಮುಂಬಯಿಯಲ್ಲಿ ಬಂದಿಳಿದಾಗ ಕಾಠೇವಾಡಿ ಉಡಿಗೆ-ತೊಡಿಗೆಗಳನ್ನು ತೊಟ್ಟುಕೊಂಡೆನು. ಅಂಗಿ, ಧೋತರ, ನಿಲುವಂಗಿ ಹಾಗು ಬಿಳೇ ಪಾಗುಗಳನ್ನು ತೊಟ್ಟುಕೊಂಡಿದ್ದೆ; ಎಲ್ಲವೂ ಹಿಂದುಸ್ಥಾನದ ಗಿರಣಿಗಳಲ್ಲಿ ತಯಾರಾದ ಅರಿವೆಗಳು. ಆದರೆ, ಮುಂಬಯಿಯಿಂದ ೩ನೇ ತರಗತಿಯಲ್ಲಿ ನಾನು ಸಂಚರಿಸುತ್ತಿದ್ದೆ. ಆದರಿಂದ ಶಾಲು, ಅಂಗಿಗಳು ನನಗೆ ಒಜ್ಜೆಯಾದವು. ಆದರಿಂದ ಅವನ್ನು ತಿರಸ್ಕರಿಸಿ, ೮-೧೦ ಆಣೆ ಕೊಟ್ಟು ಕಾಶ್ಮೀರಿ ಟೊಪ್ಪಿಗೆಯನ್ನು ಕೊಂಡೆನು. ಹೀಗೆ ಉಟ್ಟುಕೊಂಡವನಿಗೆ ಬಡವನೆಂದು ಜನರು ಎಣಿಸುತ್ತಿದ್ದರು.

ಆ ಕಾಲಕ್ಕೆ ಪ್ಲೇಗಿತ್ತು. ಆದರಿಂದ ೩ನೇ ವರ್ಗದ ಪ್ರವಾಸಿಕರಿಗೆ ಡಾಕ್ಟರರು ತಪಾಸು ಮಾಡಿ ಬಿಡುತ್ತಿದ್ದರು. ವಿರಮಗಾಮ ಸ್ಟೇಶನಿನಲ್ಲಿಯೋ, ವಢವಾಣದಲ್ಲಿಯೋ — ನೆನಪು ಸಾಲದು. ನನಗೆ ಸ್ವಲ್ಪ ಜ್ವರ ಬರುತ್ತಿತ್ತು. ಮೈ ಕಾದದ್ದನ್ನು ನೋಡಿ, ಇನ್ಸ್‌ಪೆಕ್ಟರರು ನನ್ನ ಹೆಸರನ್ನು ಬರಕೊಂಡು, ರಾಜಕೋಟದೊಳಗಿನ ಡಾಕ್ಟರರ ಬಳಿ ನನಗೆ ಹೋಗಹೇಳಿದರು.

ಯಾರೋ ಒಬ್ಬರು ನಾನು ವಢವಾಣ ದಾಟಿ ಹೋಗುವವನಿದ್ದೇನೆಂದು ಸುದ್ದಿ ಹರಡಿದ್ದರು. ಆದರಿಂದ ವಢವಾಣದೊಳಗಿನ ಜನಪ್ರಿಯರಾದ ಮೋತಿಲಾಲರು ಸ್ಟೇಶನಿನಲ್ಲಿ ನನಗೆ ಭೆಟ್ಟಿಯಾದರು. ಮೋತಿಲಾಲರು ವಢವಾಣದೊಳಗಿನ ಹೆಸರಾದ ಲೋಕಸೇವಕರು. ಅವರು ವಿರಮಗಾವಿಯೊಳಗಿನ ಕಸ್ಟಮು ಸ್ಟೇಶನಿನ ನಿರ್ಬಂಧಗಳಿಂದ ಉಗಿಬಂಡಿಯೊಳಗಿನ ಪ್ರವಾಸಿಕರಿಗೆ ಒದಗುವ ಕಷ್ಟಗಳನ್ನು ವಿವರಿಸಿದರು. ಜ್ವರದ ಮೂಲಕ ನನಗೆ ಮಾತಾಡಲು ಬೇಸರಿಕೆ, ಆದರಿಂದ ಬಹು ಸಂಕ್ಷಿಪ್ತವಾಗಿ ಸಂಭಾಷಣವನ್ನು ಮುಗಿಸಬಯಸಿ “ನೀವು ಜೈಲಿಗೆ ಹೋಗಲಿಕ್ಕೆ ಸಿದ್ಧರಿದ್ದೀರೇನು?” ಎಂದು ಪ್ರಶ್ನಿಸಿದೆನು.

ಮೋತಿಲಾಲರು ವಿಚಾರ ಮಾಡದೆ ಮಾತಾಡುವ ಅತ್ಯುತ್ಸಾಹಿ ಎಳೆ ಪ್ರಾಯದವರೆಂದು ನನ್ನ ಗ್ರಹಿಕೆ ಇತ್ತು. ಆದರೆ, ಮೋತಿಲಾಲರು ಆ ತರಗತಿಯವರಲ್ಲ. ನಿರ್ಧಾರದಿಂದ ಅವರು ನುಡಿದದ್ದೇನೆಂದರೆ.— “ನೀವು ನಾಯಕರಾಗುತ್ತಿದ್ದರೆ, ನಾವು ಸೆರೆಮನೆಗೆ ಹೋಗಲು ನಿಜವಾಗಿಯೂ ಸಿದ್ಧರಿದ್ದೇವೆ, ನೀವು ಕಾಠೇವಾಡದವರಿದ್ದದರಿಂದ ನಿಮ್ಮ ಮೇಲೆ ನಮ್ಮ ಅಧಿಕಾರವು ಹೆಚ್ಚಿನದು. ಈಗಲೇ ನಾವು ನಿಮಗೆ ಇಲ್ಲಿ ತಡೆಹಾಕಬಯಸುವದಿಲ್ಲ; ಆದರೆ, ಮರಳುವಾಗ, ಇಲ್ಲಿ ಇಳಿಕೊಳ್ಳುವದಾಗಿ ವಚನ ಕೊಡಬೇಕು. ನಮ್ಮ ಕಡೆಯ ಹುಡುಗರ ಕಾರ್ಯವನ್ನೂ, ಪ್ರವೃತ್ತಿಯನ್ನೂ ನೋಡಿ ನಿಮಗೆ ಸಂತೋಷವಾಗುವದು. ನೀವು ಕರೆದ ಕರೆಗೆ ನಾವು ಸಿದ್ಧರಿದ್ದೇವೆಂದು ನೀವು ನಂಬಬಹುದು.”

ಮೋತಿಲಾಲರು ನನ್ನನ್ನು ಮರವಶಗೊಳಿಸಿಬಿಟ್ಟರು. ಅವರ ಜೊತೆಗಾರರು ಅವರ ವರ್ಣನೆಯನ್ನು ಮಾಡಿದರು:— “ನಮ್ಮ ಗೆಳೆಯರು ದರ್ಜಿಗಳು, ಅವರು ದಿನಾ ೧ ತಾಸು ಕೆಲಸ ಮಾಡಿ, ತಮ್ಮ ತಿಂಗಳ ಜೀವನದ ರೂಗಳನ್ನು ಸುಲಭವಾಗಿ ಸಂಪಾದಿಸುತ್ತಾರೆ. ಶಿಂಪಿ ಕೆಲಸದಲ್ಲಿ ಇವರು ಅಷ್ಟು ನಿಪುಣರಿದ್ದಾರೆ. ಉಳಿದ ಸಮಯವೆಲ್ಲ ಲೋಕಸೇವೆಯಲ್ಲಿ ಕಳೆಯುತ್ತಾರೆ. ಅವರು ನಮ್ಮ ನಾಯಕರು. ನಮ್ಮಂಥ ಶಿಕ್ಷಿತರಿಗೆ ಅವರು ನಾಚಿಸುತ್ತಾರೆ.”

ಬಳಿಕ, ಮೋತಿಲಾಲರಿಗೂ ನನಗೂ ದಟ್ಟ ಸ್ನೇಹ ಬೆಳೆಯಿತು. ಈ ವರ್ಣನೆಯಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲವೆಂದು ನನಗೆ ಕಂಡು ಬಂತು. ಹೊಸದಾಗಿ ಹೊರಡಿಸಿದ ಆಶ್ರಮದಲ್ಲಿ ಪ್ರತಿ ತಿಂಗಳಿಗೆ ಕೆಲವು ದಿನ ಬಂದು ಅವರು ಹುಡುಗರಿಗೆ ಹೊಲಿಗೆಯ ಕೆಲಸವನ್ನು ಕಲಿಸುತ್ತಿದ್ದರು, ಹಾಗೂ ಆಶ್ರಮದೊಳಗಿನ ಕೆಲವು ಹೊಲಿಗೆಯ ಕೆಲಸವನ್ನು ಮಾಡುತ್ತಿದ್ದರು. ದಿನಾ ವಿರಮಗಾವಿಯೊಳಗಿನ ವೃತ್ತಾಂತವನ್ನು ನನಗೆ ಹೇಳಿ ಪ್ರಯಾಣಿಕರ ಅವಸ್ಥೆಯು ತೀರ ಅಸಹ್ಯವಾಗಿದೆಂದು ಅವರು ಉದ್ಗರಿಸಿದರು. ಥಟ್ಟನೆ ಅವರು ಅಸ್ವಸ್ಥರಾಗಿ ಹರೆಯ ಪ್ರಾಯದಲ್ಲಿಯೇ ತೀರಿಕೊಂಡರು. ವಢವಾಣದೊಳಗಿನ ಲೋಕಸೇವೆಯ ಕಾರ್ಯದ ತೇಜವೇ ನಷ್ಟವಾಯಿತು.

ರಾಜಕೋಟೆಗೆ ತಲ್ಪಿದ ಮಾರನೇ ದಿನ ಮುಂಜಾವಿಗೆ ಡಾಕ್ಟರರಿಗೆ ಹೋಗಿ ಭೆಟ್ಟಿಯಾದೆನು. ಅಲ್ಲಿ ನನ್ನ ಗುರುತಿನ ಡಾಕ್ಟರರು ಇದ್ದರು. ಅವರು ನಾಚಿಕೆಪಟ್ಟು ಆ ಇನ್ಸ್‌ಪೆಕ್ಟರರ ಮೇಲೆ ಸಿಟ್ಟು ಮಾಡಿದರು. ಹೀಗೆ ಸಿಟ್ಟು ಮಾಡುವದವಶ್ಯವಿದ್ದಿಲ್ಲ. ಇನ್ಸ್‌ಪೆಕ್ಟರರು ತಮ್ಮ ಕರ್ತವ್ಯವನ್ನಷ್ಟೇ ಮಾಡಿದ್ದರು. ಇನ್ಸ್‌ಪೆಕ್ಟರರಿಗೆ ನನ್ನ ಗುರುತಿದ್ದಿಲ್ಲ, ಗುರುತಿದ್ದರೂ ಅವರಿಗೆ ಬೇರೆ ಉಪಾಯವಿದ್ದಿಲ್ಲ. ಡಾಕ್ಟರರು ಇನ್ನು ಮುಂದೆ ತಮ್ಮ ಕಡೆ ನಾನು ಬರಬಾರದಾಗಿಯೂ, ನನ್ನ ತಪಾಸ ಮಾಡಲು ನಿರ್ದೇಶಿಸಿ ಇನ್ಸ್‌ಪೆಕ್ಟರರಿಗೆ ಕಳಿಸಿಕೊಡತಕ್ಕದಾಗಿಯೂ ಹಟ ಹಿಡಿದರು.

ಇಂಥ ಪ್ರಸಂಗಗಳಲ್ಲಿ ೩ನೇ ತರಗತಿಯ ಪ್ರವಾಸಿಕರಿಗೆ ಆರೋಗ್ಯ ಪಾಲನಕ್ಕಾಗಿ ತಪಾಸು ಮಾಡುವದು ಅತ್ಯವಶ್ಯವಿದೆ. ದೊಡ್ಡವರು ೩ನೇ ತರಗತಿಯಲ್ಲಿ ಪ್ರಯಾಣ ಮಾಡಬಯಸಿದರೆ ಬಡವರಿಗೆ ಅನ್ವಯಿಸಿದ ನಿಯಮಗಳಂತೆ ಸಂತೋಷದಿಂದ ಅವರು ನಡಕೊಳ್ಳತಕ್ಕದ್ದು. ಅಧಿಕಾರಿಗಳು ನಿಷ್ಪಕ್ಷಪಾತದಿಂದ ಎಲ್ಲರನ್ನು ನಡಿಸಿಕೊಳ್ಳಬೇಕು. ಅಧಿಕಾರಿಗಳು ೩ ನೇ ತರಗತಿಯ ಪ್ರಯಾಣಿಕರಿಗೆ ಮಾನವರೆಂದು ಎಣಿಸುವದೇ ಇಲ್ಲ. ಕುರಿಗಳೆಂದು ಭಾವಿಸುತ್ತಾರೆ. ಇದನ್ನು ನಾನು ಸ್ವಂತ ಅನುಭವದಿಂದ ಹೇಳುತ್ತೇನೆ. ಪ್ರಯಾಣಿಕರಿಗೆ ತಿರಸ್ಕಾರದಿಂದ ನಡಿಸಿಕೊಳ್ಳುವದಲ್ಲದೆ ಅವರೊಂದು ಪ್ರತ್ಯುತ್ತರ ಕೊಟ್ಟರೆ, ಅಥವಾ ತರ್ಕ ಮಾಡಿದರೆ ಇವರು ಸಹಿಸುವದಿಲ್ಲ. ೩ ನೇ ವರ್ಗದ ಪ್ರವಾಸಿಕರು ಅಧಿಕಾರಿಗಳಿಗೆ ನೌಕರರಂತೆ ವಿಧೇಯರಾಗಿರಬೇಕು. ಅಧಿಕಾರಿಗಳು ಹೊಡೆದರೂ, ಸುಲಿದರೂ ಅವರಿಗೆ ಕ್ರಮದಿಂದ ಬಹಳ ಉಪದ್ರವ ಕೊಟ್ಟು, ಟಿಕೀಟು ಕೊಟ್ಟರೂ, ಈ ಮಾಲಕ ಉಗಿಬಂಡಿಯು ಬಿಟ್ಟು ಹೋದರೂ, ಅವರು ಮಾತಾಡಲಾಗದು. ಇದೆಲ್ಲ ನಾನು ಕಣ್ಣಾರೆ ಕಂಡಿದ್ದೇನೆ. ಶಿಕ್ಷಿತರೂ, ಧನಿಕರೂ ಸ್ವಸಂತೋಷದಿಂದ ಬಡ ಸ್ಥಿತಿಯನ್ನು ಅಂಗೀಕರಿಸಿ ೩ ನೇ ತರಗತಿಯಲ್ಲಿ ಪ್ರಯಾಣ ಮಾಡತಕ್ಕದ್ದು. ಬಡವರಿಗೆ ಇರದ ಅನುಕೂಲತೆಗಳನ್ನು ಅಂಗೀಕರಿಸಲು ಒಪ್ಪಲಾಗದು. ವ್ಯರ್ಥ ಉಪದ್ರವಗಳಿಗೂ, ಅನಾಚಾರಗಳಿಗೂ, ಅನ್ಯಾಯಗಳಿಗೂ ಇದಿರಾಗಿ ಅವನ್ನು ಪರಿಹರಿಸತಕ್ಕದ್ದು; ಅಂದರೆ ಮಾತ್ರ ಸುಧಾರಣೆಯಾಗುವದು ಸಾಧ್ಯವಿದೆ.

ಕಾಠೇವಾಡದ ಸಂಚಾರದಲ್ಲಿ ವಿರಮಗಾವಿಯೊಳಗಿನ ಕಸ್ಟಮು ಜಕಾತಿಯ ಕಷ್ಟಗಳನ್ನು ನಾನು ಎಲ್ಲೆಲ್ಲಿ ಕೇಳಿದೆನು. ವಿಲಿಂಗಡನ್ ದೊರೆಗಳ ಅನುಕೂಲತೆಯನ್ನು ಕೂಡಲೆ ಉಪಯೋಗ ಮಾಡಿಕೊಳ್ಳಬೇಕೆಂದು ನಿರ್ಣಯಿಸಿದೆನು. ಸಂಬಂಧದಲ್ಲಿ ದಾಖಲೆಗಳನ್ನು ಸಂಗ್ರಹಿಸಿಕೊಂಡು ಓದಿ ದೂರುಗಳೆಲ್ಲ ಸಾಧಾರಣವಾದವುಗಳೆಂದು ಮನಗೊಂಡೆನು. ಪತ್ರಬರೆದು ಮುಂಬಯಿ ಸರಕಾರಕ್ಕೆ ಬರಕೊಳ್ಳಲಾರಂಭಿಸಿದೆನು. ವಿಲಿಂಗಡನ್ ದೊರೆಗಳ ಸ್ವಂತ ಕಾರ್ಯದರ್ಶಿಗಳಿಗೆ ಭೆಟ್ಟಿಯಾದೆನು; ದೊರೆಗಳಿಗೂ ಭೆಟ್ಟಿಯಾದೆನು. ದೊರೆಗಳು ಸಹಾನುಭೂತಿಯನ್ನು ಪ್ರದರ್ಶಿಸಿ, ಹಿಂದುಸ್ಥಾನ ಸರಕಾರದ ಮೇಲೆ ಈ ದೋಷವನ್ನು ಹೊರಿಸಿದರು. “ನಮ್ಮ ಕೈಯಲ್ಲಿದ್ದರೆ, ಕಸ್ಟಮು ಕಟ್ಟೆಯ ಆ ಸ್ಟೇಶನನ್ನು ಕಿತ್ತುಗೆದು ಬಹು ಕಾಲವಾಗುತ್ತಿತ್ತು. ನೀವು ಹಿಂದುಸ್ಥಾನ ಸರಕಾರಕ್ಕೆ ಬರಕೊಳ್ಳಬೇಕು,” ಎಂದು ಕಾರ್ಯದರ್ಶಿಗಳು ನುಡಿದರು.

ಹಿಂದುಸ್ಥಾನ ಸರಕಾರಕ್ಕೆ ಬರಕೊಂಡೆನು. ಅಲ್ಲಿಂದ ಉತ್ತರ ಬರಲಿಲ್ಲ. ಕಾಗದ ಮುಟ್ಟಿದ ಸೂಚನೆ ಮಾತ್ರ ನನ್ನ ಕೈಸೇರಿತು. ಚೆಮ್ಸ್‌ಫರ್ಡ ದೊರೆಗಳಿಗೆ ಭೆಟ್ಟಿಯಾಗುವ ಪ್ರಸಂಗ ಬಂದಾಗ ಈ ಕಷ್ಟಗಳನ್ನು ತಿಳಿಸಿದ ಬಳಿಕ, ಈ ದೂರಿನ ಪರಿಹಾರವಾಯಿತು. ಅವರಿಗೆ ಈ ಸಂಗತಿಗಳನ್ನರುಹಿದ ಬಳಿಕ, ಅವರು ಚಕಿತರಾದರು. ಅವರಿಗೆ ಇವುಗಳ ಸುಳಿವಿದ್ದಿಲ್ಲ. ತಾಳ್ಮೆಯಿಂದ ನನ್ನ ಹೇಳಿಕೆಯನ್ನು ಕೇಳಿಕೊಂಡರು. ವಿರಮಗಾವಿಯ ಕಸ್ಟಮಿನ ಬಗ್ಗೆ ಇರುವ ದಾಖಲೆಗಳನ್ನು ಕಳಿಸಲು ಆಗಲೇ ಟೆಲಿಫೋನಿನ ಮೇಲೆ ತಿಳಿಸಿದರು. ಅಧಿಕಾರಿಗಳಿಗೆ ಈ ವಿಷಯವ ಸಮರ್ಥಿಸಬರದಿದ್ದರೆ, ಅದನ್ನು ತಾವು ಕಿತ್ತುಗೆಯುತ್ತೇವಾಗಿ ಚೆಮ್ಸ್‌ಫರ್ಡ ದೊರೆಗಳು ಉತ್ತರವನ್ನಿತ್ತರು. ಈ ಸಂಭಾಷಣವಾದ ಕೆಲವು ದಿನಗಳಲ್ಲಿಯೇ ವಿರಮಗಾವಿಯ ಕಸ್ಟಮು ಕಿತ್ತುಗೆಯಲ್ಪಟ್ಟಿತೆಂದು ವರ್ತಮಾನಪತ್ರಗಳಲ್ಲಿ ಪ್ರಕಟವಾಯಿತು.

ಭಾರತ ಖಂಡದಲ್ಲಿ ಇದು ಸತ್ಯಾಗ್ರಹದ ಆಗಮನವೆಂದು ನಾನು ಗ್ರಹಿಸಿದೆನು. ಮುಂಬಯಿ ಸರಕಾರದ ಬಳಿ ನಾನು ಮಾತಾಡುವಾಗ ಕಾಠೇವಾಡದೊಳಗಿನ ಬಗಸರ ಪಟ್ಟಣದಲ್ಲಿ ಕೊಟ್ಟ ಭಾಷಣದೊಳಗೆ ನಾನು ಮಾಡಿದ ಸತ್ಯಾಗ್ರಹದ ಉಲ್ಲೇಖವನ್ನು ವಿಲಿಂಗಡನ್ ದೊರೆಗಳ ಕಾರ್ಯದರ್ಶಿಗಳು ನಿಷೇಧಿಸಿದ್ದರು. ಆ ಭಾಷಣದ ರಿಪೋರ್ಟ ಅವರ ಕೈಸೇರಿತ್ತು.

“ಇದು ಬೆದರಿಕೆಯಲ್ಲವೇ? ಸಮರ್ಥ ಸರಕಾರವು ಬೆದರಿಕೆಗೆ ಸೊಪ್ಪು ಹಾಕುವದೇ?” ಎಂದು ಅವರು ಉದ್ಗರಿಸಿದರು.

ನಾನು ಉತ್ತರ ಕೊಟ್ಟದ್ದೇನೆಂದರೆ.—“ಇದು ಬೆದರಿಕೆಯಲ್ಲ. ಜನರಿಗೆ ಶಿಕ್ಷಣ ಕೊಡುವ ನಮೂನೆಯಿದು. ಕಷ್ಟಗಳನ್ನು ಪರಿಹರಿಸಿಕೊಳ್ಳುವ ಶಿಷ್ಟಸಮ್ಮತ ಉಪಾಯಗಳನ್ನೆಲ್ಲ ಜನರಿಗೆ ತಿಳಿಸಿಹೇಳುವದು ನನ್ನ ಕರ್ತವ್ಯ. ಸ್ವಂತ ಸಂಸ್ಕಾರಗಳಂತೆ ಉದ್ಧಾರವಾಗಬಯಸುವ ರಾಷ್ಟ್ರವು ಉದ್ಧಾರದ ಸಾಧನಗಳನ್ನು ತಿಳಿದುಕೊಂಡಿರಬೇಕು. ಸಾಮಾನ್ಯವಾಗಿ ಹಿಂಸೆಯೇ ಕೊನೆಯ ಉಪಾಯವೆಂದು ಹೇಳುವ ವಾದಿಕಯಿದೆ. ತೀರ ಅಹಿಂಸೆಯ ಸಾಧನವು ಸತ್ಯಾಗ್ರಹವು. ಸತ್ಯಾಗ್ರಹದ ಆಚಾರವನ್ನೂ, ಅದರ ನಿರ್ಬಂಧಗಳನ್ನೂ ವಿವರಿಸಿ ಹೇಳುವದು ನನ್ನ ಕರ್ತವ್ಯ. ಬ್ರಿಟಿಶ ಸರಕಾರವು ಬಲಾಢ್ಯವೆಂಬುದಕ್ಕೆ ನನ್ನ ಒಪ್ಪಿಗೆ. ಅದರಂತೆ ಸತ್ಯಾಗ್ರಹವು ಶ್ರೇಷ್ಠವಾದ ಉಪಾಯವೆಂದು ನನ್ನ ಮನೋನಿಶ್ಚಯವಾಗಿದೆ.”

“ನಾವು ನೋಡುವ,” ಎಂದು ಚತುರ ಕಾರ್ಯದರ್ಶಿಗಳು ಸಂದೇಹ ಬುದ್ಧಿಯಿಂದ ತಲೆ ದೂಗಡಿಸಿ ನುಡಿದರು.

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ದುಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಪರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ. ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

— ಗೌಡ ಸಾರಸ್ವತ ಬ್ರಾಹ್ಮಣವೃಂದದ ಶ್ರೀ ಕಾಶೀ ಮಠಾಧೀಶರಾದ ಶ್ರೀ ಸುಕೃತೀಂದ್ರತೀರ್ಥ ಶ್ರೀಪಾದ ವಡೇರರವರು ತಿರುಮಂಗಲೂರ ಕಡೆ ದಿಗ್ವಿಜಯ ಮಾಡುತ್ತಿದ್ದಾರೆ. ತಿರುಪ್ಪೂರ ಗ್ರಾಮದ ಮುಸಲ್ಮಾನರು ಶ್ರೀಗಳಿಗೆ ಸತ್ಕರಿಸಲು ಒಯ್ದರು. ಶ್ರೀಗಳು ಮುಸಲ್ಮಾನರ ಅಪೇಕ್ಷೆಯಂತೆ ಅಲ್ಲಿಯ ಮಸೀದಿಯ ಇದಿರಿಗೆ ಚಂದಾಗಿ ಶೃಂಗರಿಸಿದ ಮಂಟಪವನ್ನು ಪ್ರವೇಶಿಸಿ, ಮುಸಲ್ಮಾನರ ಕಡೆಯಿಂದ ಫಲ-ಕಾಣಿಕೆಗಳನ್ನು ಸ್ವೀಕರಿಸಿದರು. ಹಿಂದು-ಮುಸಲ್ಮಾನರ ಸಂಬಂಧಗಳು 'ಪಾಲ್ಸ್ಯಾನ್ಯಾನದ' ತೆರದಂತೆ ನಡೆಯಿತು.

ಪುಕ್ಕಟೆ! ಪುಕ್ಕಟೆ!! ಪುಕ್ಕಟೆ!!!

ಲಕ್ಷಾಧೀಶರಾಗಿರಿ!

ವರ್ಷಾ ಕಸನ ಸಾವಿರಾರು ಜನರು ಶ್ರೀಮಂತರಾಗುತ್ತಾರೆ;

ನೀವೂ ಯಾಕೆ ಆಗಬಾರದು ?

೧೯೨೮ ನೇ ಇಸ್ವಿಯ ವ್ಯಾಪಾರದ ಭವಿಷ್ಯ

(Commercial Forecast Report 1928)

ಈ ವರ್ಷ ನಿಮ್ಮ ವ್ಯಾಪಾರದಲ್ಲಿ ಸತ್ಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ಹೇಳುವ ರಿಪೋರ್ಟು !

ಜಗತ್ಪ್ರಸಿದ್ಧ ಜ್ಯೋತಿಶಾಸ್ತ್ರವಿದರು ವೇದಿಕ-ಪೂರ್ವಿಕರ ಆಧಾರದ ಮೇಲೆ ೧೯೨೮ ನೇ ಇಸವಿಯ ವ್ಯಾಪಾರದ ಭವಿಷ್ಯವನ್ನು ಸಶಾಸ್ತ್ರ ಕಟ್ಟಿಸಿದ್ದಾರೆ. ಈ ಜ್ಯೋತಿಷಿಗಳು ಬಹಳೇ ಪ್ರಖ್ಯಾತರು, ಈ ವಿಷಯದಲ್ಲಿ ಅವರ ಕೈಹಿಡಿಯುವವರು ಬೇರೆ ಇಲ್ಲ. ನಿಮ್ಮ ವ್ಯವಹಾರದಲ್ಲೆಲ್ಲ ನಿಮಗೆ ಮಾರ್ಗದರ್ಶಕವಾಗಿ ಮುಂದೊದಗುವ ಸಂಗತಿಗಳನ್ನು ತಾರೀಖುವಾರ ಇದರ ಮೇಲಿಂದ ತಿಳಿಯಬಹುದು. ಜಗತ್ತಿನೊಳಗೆ ನಡೆಯುವ ಭಿನ್ನ ಭಿನ್ನ ವ್ಯಾಪಾರ ವಿಷಯಗಳ ಮೇಲೆ ಪ್ರತ್ಯೇಕ ವಿವರವು ಕೊಟ್ಟಿದೆ. ವಿಚಾರ ಮಾಡಿ ಈ ಕೈಪಿಡಿಯನ್ನು ಸಂಗ್ರಹಿಸಿಕೊಳ್ಳಿ.

ಈ ಪುಸ್ತಕಕ್ಕೆ ಬರೇ ೫ ರೂಪಾಯಿ ಬೆಲೆ.

ತ್ವರೆ ಮಾಡಿರಿ ! ಸ್ವಲ್ಪವೇ ಪ್ರತಿಗಳು ಉಳಿದಿವೆ.

ಪ್ರಕಾಶಕರು:—

The Commercial Forecast Report 1928.

ಈ ರಿಪೋರ್ಟನ್ನು ಜಗತ್ತಿನಲ್ಲಿ ಮುಖ್ಯ ಮುಖ್ಯ ವರ್ತಕರು ಸಂಗ್ರಹಿಸುತ್ತಾರೆ.

ಬ್ರಿಟಿಷ ದೇಶದಲ್ಲಿಯೂ, ಪೌರ್ವಾತ್ಯ ದೇಶದಲ್ಲಿಯೂ ಈ ಕೆಳಗಿನವರು ಈ ಪುಸ್ತಕಗಳನ್ನು ಪೂರೈಸುತ್ತಾರೆ.

SMITH, CAMPBELL & COMPANY,
POST BOX NO 2056, BOMBAY (India)

ಮಂಗಳೂರ ತಂಬಾಕಿನ ತಾಜಾ ನಶ್ಯ! ಸುಮಾರು ೫೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿಗೊಂಡಿದ

ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹೀರಾತಿನ ಆಡಂಬರಕ್ಕೆ ಮೋಸಹೋಗಬೇಡಿರಿ ! !

ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ.೧ ನೇ ನಶ್ಯದಪುಡಿ ೫ ಶೇರು ೧ರ ರೂ.೧।
ನಂ ೨ ನೇ ೧-೨-೦
ನಂ.೩ ನೇ ೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ— ನಮ್ಮ ನಶ್ಯವು ಉತ್ಕೃಷ್ಟವೆಂಬದರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟುಗಳು ದೊರಕಿವೆ.

ವಿಳಾಸ:— **ಪುಂಡಲೀಕ ನಾಗೆ ಶೈ,**

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ- ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೇರಸಪ್ಪಾ ಜೋಗ (Gersappa Falls). ಸಾಗರ- ಶಿವಮೊಗ್ಗಾ ಈ ಸ್ಥಳಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುತದೆ ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಸವರ್ಧಮಾನವಾಗುವದು. ನಿಜವಾಗಿ ಬಾವೇ ಸಮಯದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕರಿಯ ಹೋಗಿ ಬಾಹಮಾದ ವಿಶ್ವಾಸಕ್ಕೆ ಯೋಗ್ಯವಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ ವು ಬಂದಾಗುವದು.— ಪರಿವಾರ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೆ ದಿವಸದಲ್ಲಿಗುಣ ಬರುವದು. ಕಾರಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮೊದಲಾದ ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು.. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩-೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂಚೆಯ ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಹನ್ನೆರಡು ಬಾಟಲಿಗಳ ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೦-೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ ಜಿ ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಡನೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಶೈತ್ಯ, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆ ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವ ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗುತ್ತಿರುವವರಿಗೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕವ ಆಗುತ್ತದೆ. ರತಿಸುಖ ಬಯಸುವಂಥವರು ಹಿಂದಾಪರಿಯ ತಕ್ಕೊಂಡು ಅನುಭವಿಸಿರಿ. (ಇದಿ) ವನಸ್ಪತಿಗಳು ಮತ್ತು ಭಸ್ಮವು "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವಡಿ, ರಾತ್ರಿಯು ಭೋಜನವಾದ ನಂತರ ೨ ತೊಲಿಯು ಒಂದು ವಡಿ ಮುಸ್ಸಿ ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೬೦ ದಿವಸ ನಡೆಯುವಷ್ಟು ೪೪ ತೊಲೆಯ ಒಂದು ಡಬ್ಬಿಗೆ ೫। ರೂ, ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ ೧೨ ಡಬಿಗೆ ೫೦ ರೂ ವ್ಹಿ. ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

झंडूचें

द्राक्षासव- — मृद्विकारिष्ट — शारंगधर म. अ. १०

रामबाण औषध

सर्दि घालविणारें
मूक घालविणारें
शौच्यास साफ करणारें
झोंप आणणार
शक्ति देणारें
तेजस्वीपणा आणणारें

पिण्यास रुचिकर
किंमत एक रतलास १॥ रुपये
कचाटलाग मागवा

झंडु फार्मास्युटिकल वर्क्स लिमिटेड
मुंबई नं. १४

ऐजंट— मेसर्स पंडित आणी कंपनी,
तीर्थहळ್ಳಿ.

सिर्सि एजंट- एस्. एल्. थाकप्पा आणि ब्रदर

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ. ಯವರ

ಸುಗಂಧಿ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರುಸ್ತ್ರೀ ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಕೃತಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಸು...ಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಒಡಿ ಒಂದಕ್ಕೆ ಕ್ರಯ ರೂ ೦-೬-೦. ವ್ಹಿ. ಪಿ ೪ ಅಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಆಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಪೋರ್ಟಟೌನ, ಮದರಾಸ

ಹಿಂದುಸ್ಥಾನದಲ್ಲಿ ಸ್ವತಂತ್ರ ಅಗ್ರಗಣ್ಯವಾದ
'ನೆಶನಲ್ ಇನ್ ಶೂರನ್ಸ ಕಂಪನಿ, (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಮೀರಿದೆ.

ಕಳೆದ ವರುಷ ಲೆಕ್ಕ ಹಾಕಿದ ಮೇಲೆ 5,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಗಳು ಸಂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿ ತಂತೆ ಬಹುಮಾನ ಕೊಟ್ಟಿರುವೆವು

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡಲಿಕ್ಕಾ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ. ನಮ್ಮ ದರವು ಅಷ್ಟೊಂದು ಸುಲಭ, ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು – **P D. Churi,**
ಬಿ. ಸಿ. ಸಿರಾಳಕೊಪ್ಪ, *Branch Secretary,*
ಲೋಖಂಡಿ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಶೀರೆ, ಖಣ, ರೇಶಿಮೆ ಶಲ್ಲೆ, ಬಟ್ಟೆ, ಕಾಶ್ಮೀರದ ಶಾಲು, ಸಕಲಾತಿ ಧಾಟಿಯ ರುದ್ರಾಕ್ಷ ಸರ, ಕಂಠಿ, ಗೌರೀಶಂಕರ, ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಘಂಟೆ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ. –

ವಿಶ್ವನಾಥ ಎಂಡ್ ಬ್ರದರ್ಸ,
ದುಗಾ೯ಘಾಟ, ಬನಾರಸ್ ಸಿಟಿ

ಇದು "ಕರಾಮತ" ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ.



ಈ ಗಾಣದಿಂದ ಶೇಕಡಾ ೭೫ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶೀ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು, ಬಾಳಿಕೆಯದು. ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ ರೈತರು ಇದನ್ನು ಸರಿಪಡಿಸಬಲ್ಲರು. ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ರೋಲರಿಂಗು ಗನ್ ಮೆಟಲ್ ದವು. ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ರೋಲುಗಳು ಉಕ್ಕಿನವು ಎಷ್ಟೂ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು. ಇಂಥ ಮಹತ್ತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು.

ಈ ಉತ್ತರ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦-೧೨ ಕರಾಮತಗಾಣಗಳು ದುಡಿಯುತ್ತಿವೆ; ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ. ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ, ಜಿಲ್ಹಾ ಸಾತಾರಾ



ಅಮೃತಾಂಜನದ

ಬಾಹ್ಯಲೇಪನದಿಂದ

ಒಳಗಿನ ನೋವು ಗುಣವಾಗುತ್ತದೆ.

ತಲೆನೋವು, ಬೆನ್ನುನೋವು, ಸಂಧಿವಾತ, ಚಳಿ, ಕೆಮ್ಮು, ಮುಂತಾದ ಎಲ್ಲಾ ತರದ ನೋವಿಗೆ ಇದರಿಂದ ಗುಣ ಸಿಗುತದೆ. ಮೇಲ್ಕಂಡ ರೋಗಗಳಿಗೆಲ್ಲ ಪರೀಕ್ಷೆಯಿಂದ ಸಿದ್ಧವಾದ ಮದ್ದು 'ನೋವು ಚಿಕ್ಕದೆಂದು ಹಾಗೇ ತಿರಸ್ಕರಿಸಲಾಗದು. ಚಿಕ್ಕ ನೋವಿನಿಂದಲೇ ದೇಹಕ್ಕೆ ಸುಖ ದೊರೆಯುವದಿಲ್ಲ. ಅಮೃತಾಂಜನದ ಒಂದು ಸಣ್ಣ ಬಾಟ್ಲಿಯಿಂದ ಇಂಥ ನೋವುಗಳನ್ನು ಕೂಡಲೇ ಪರಿಹರಿಸಬಹುದು. ಬೆಲೆ ೦—೧೦—೦.

... ದ್ರಾವಿಸುತ್ತದ ಅಥವಾ

ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ

REG. NO. B. 1270

MONDAY, MAY 21ST 1928.

ವರ್ಷ ೧೨

ಸಂಚಿಕೆ ೨೦

ಕಾನಡಾವೃತ್ತ.

THE KANARA NEWS.

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನಿಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹಿರಾತುಗಳ ದರ,
ಕನ್ನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಅಗಲ) ೫ ಸಾಲುಗಳವರೆಗೆ ರೂ. 1-0. ಆ ನಂತ್ರ ಪ್ರತಿಸಾಲಿಗೆ 0-2-0. ಹೆಡಿಂಗದ ಸಾಲು ಎಷ್ಟು ಹೊಕ್ಕಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು. ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೧ ಮಾಹೆ ಮೇ ಸನ್ ೧೯೨೮ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ಮಾಲು!!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.–ಕಬ್ಬಿಣ ಮೊಳೆಗಳು, ಮೋಟಾರ ಉಪಯೋಗದ ಬೋಲ್ಟುಗಳು, ಪಿನ್ ಪ್ರೆಶರ, ಪಿಸ್ಟಿಲ್ಡ ಪ್ರೆಶರ ಸಿಗುತ್ತವೆ; ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನವೂ ಇದೇ! ಶಾಬೂನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ!! ಎಲ್ಲಾ ಅಪ್-ಟು ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ! ಪತ್ರ ಸಾಮಾನು ಬೇಗ! ಸಿರಕೋಳ ವ್ಯಾಪಾರಸ್ಥರು ತೋಳ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣ ರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)



ಏಜಂಟರು ಬೇಕು! ಏಜಂಟರು ಬೇಕು!

ನಮ್ಮಲ್ಲಿ
ಅತಿ ಮನೋಹರವಾದ
ಶೀಶಿ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಆತ್ಮಾನಂ ಸತತಂ ರಕ್ಷೇತ್!

ಏರ್-ಪಿಸ್ತೂಲು ಯಾನೆ

ಗಾಳಿ ತುಬಾಕಿ!

ಕಳ್ಳರು, ದರೋಡೆಖೋರರು, ಕಾಡು ಪಶುಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊಳ್ಳಲನುಕೂಲ. ಲೈಸನ್ಸು ಬೇಡ!!

ಬೆಲೆ ರೂ. ೪-೧-೦ (೪೦ ಗುಂಡುಗಳ ಸಹಿತ)
ವ್ಹಿ. ಪಿ. ಯ ಖರ್ಚು ೦-೬-೦.
೧ ರೂಪಾಯಿಗೆ ೪೦ ಗುಂಡುಗಳು ಸಿಗುತ್ತವೆ
ಸೂಚನೆ:—ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು.

ಪತ್ತೆ:-**The Novelty Stores,** (103)
Bhuleshwar, Bombay. No. 2.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मलमल, बनात, फर, वेलीच्या, जरीच्या वगैरे हरएक तऱ्हेच्या साधा अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीटपाट, चीलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.
पोस्ट— सुंकेरि (कारवार.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಕಡ್ಡಿ,
ದೊರಗಾದ ಹಾಗು ನುಣುಗಾದ
ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ
ಹತ್ತಿಯ ಹಾಗು ಬಿಜಗರುಗಳೂ
ತಂತಿಯ ಜೋಡಿನುಗಳೂ, ವಾರ್ನಿಶುಗಳೂ,
ಎಮೆರಿಕಾ ಕಾಗದಗಳೂ
ನಮ್ಮಲ್ಲಿ ಅಗವಾಗಿ ಸಿಗ ತ್ತವೆ
ಬಹಳ ಅಗ್ಗ

P. P. TRIVEDI & CO,
BRUCE Street Fort BOMBAY

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
ಈ ಗಡಿ ... ಗಾಗಿ ತಯಾರಿಸಲ್ಪಟ್ಟು ರಿಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸ್ಪೆಶಲ್ಲಿ ತಯಾರಿಸಿ ಹಿಂಬುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು. ಮತ್ತು ಹಿಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ ಮೂಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಯೂ ಗ್ಲಾಸ ಡೋಮ್ ಇರುವದು ಒಂದು ನಿಮಿಷವಾದ ರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂಮೆಂಟ್ಸಗಳಿಂದ ಈ ಗಡಿಯಾರವನ್ನ ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ! ರಿಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ ಫೌಂಟನ ಪೇನಾ ೧, ಸೇಂಟಿನ ಬಾಟ್ಲಿ ೧, ಪಟ್ಟದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ನವಾಸದ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರು ೧, ರೋಲ್ಡ್ ಗೋಲ್ಡ್ ನೆಕ್ಲೆಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧ ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ ಬರೇ ರೂ ೪-೮-೦

ವಿಳಾಸ:— ಇಂಗ್ಲೀಷ ಎಂಪೋರಿಯಂ,
ಪೋಸ್ಟ ಬಾಕ್ಸ ನಂ ೧೧೫, ಮದರಾಸು.

ಉಚಿತ] ನನ್ನ ಶಾಸ್ತ್ರೀಯ ವಾದ [ಗ್ರಂಥ

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ವಶ ನನ್ನ ಸ್ವಂತ ಅಂಗಸೌಷ್ಠವವು ತೋರಿಸುವ ಸೊಗಸಾದ ಚಿತ್ರಗಳ ವಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬು ವರ್ಣನೆಯೂ ಕೊಡಲ್ಪಟ್ಟಿರುವದು ನನ್ನ ಶಿಷ್ಯರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಗೊಳಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳುಹಿಸಿದ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ ಈ ಸಮಯವನ್ನು ಕಳೆದುಕೊಳ್ಳದೆ ಕಾಲಾತೀತ ಮಾಡದೆ ಇನ್ನೂ ಈ ಯೋಜನೆಯಲ್ಲಿ ನಿಮಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ ವಿ ಕೃಷ್ಣರಾವ್,
ಬಸವನಗುಡಿ ಬೆಂಗಳೂರ ಸಿಟಿ

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ್ಬು ಹಾಕಿದೆ ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ ೨-೮-೦
ವಿಳಾಸ —ಸೀಟಿಜ್ ವಾಚ್ ಕಂಪನಿ ಪೋ ಬಾಕ್ಸ ನಂ ೨೭ ಮದರಾಸು.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಔಷಧದ ಪ್ರತಿಯು ಸಾಮಾನುಗಳನ್ನು ಅಗ್ಗವಾಗಿ ರೊಕ್ಕ ಖರೀದಿ ಮಾಡಿ ಕಳಿಸುತ್ತೇವೆ ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ ಖರೆದಿ ಹೋಲ್‌ಸೇಲಿಂದಾ ಗುವದು. ಪೇಟೆಯಲ್ಲಿರುವ ಧಾರಣೆಗೆ ಅನುಸಲ್ಪ ಡುವದು ಗಿರಾಕಿಗಳಿಗೆ ಅನುಕೂಲವಾಗುವ ರೀತಿಯೂ, ಲಾಭವಾಗ ವಂತೆಯೂ, ದೇಶಿಕ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ ಹೆಚ್ಚಿನ ಮಾಹಿತಿ ಬಗ್ಗೆ ಕಟಲಾಗು ತರಿಸಿಕೊಳ್ಳಿ ಉಚಿತವಾಗಿ ಸಿಗುವದು.

ಪುಕ್ಕಟೆ! ಪುಕ್ಕಟೆ!! ದುಡ್ಡು ಇಲ್ಲ!!!

ಈ ಅಪೂರ್ವ ಸಂಧಿಯು ಬಹುಕಾಲ ಬರದು!

ಚಿನ್ನದ ಮುಂಗೈ ಗಡಿಯಾರಗಳು!



ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳು ಮುಂಗೈ ಗಡಿಯಾರಗಳು ಅವುಗಳ ಸಂಗಡ ರೇಶಿಮೆಯ ಅಥವಾ ಚರ್ಮದ ಪಟ್ಟಿ ಸಿಗುತ್ತದೆ. ಎರತರನ್ನ ಕೂಡಿ ಬೆಲೆ ರೂ. ೫-೧೫-೦ ೪ ವರುಷದ ಗ್ಯಾರಂಟಿ

ವ್ಹಿ. ಪಿ ಖರ್ಚಿನ ಬಗ್ಗೆ ೦-೬-೦ ಪ್ರತ್ಯೇಕ

೩ ಗಡಿಯಾರಗಳಿಗೆ ರೂ ೧೫ ೦ ೦ ೬ ಗಡಿಯಾರಗಳಿಗೆ ರೂ. ೨೮—೦—೦ ಅಂಚೆ ವೆಚ್ಚ ಇಲ್ಲ!

ಇದಲ್ಲದೆ ಗಿರಾಕಿಗಳಿಗೆ ಒಂದೊಂದು ಇನಾಮು ಕೊಡಲಾಗುವದು ಗಡಿಯಾರಗಳನ್ನು ತರಿಸುವಾಗ ೧ ೦ ಥ ೧೦೦ ದ ಒಳಗೆ ಯಾವದೇ ಒಂದು ಅಂಕಿಯನ್ನು ಅವರು ಬರೆದು ತಿಳಿಸಬೇಕು ಆ ಅಂಕಿಯಿಂದ ಸೂಚಿತವಾದ ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು ಪ್ರತಿಯೊಂದು ನಂಬರಿಗೆ ಒಂದೊಂದ ಇನಾಮಿನ ನಿರ್ದೇಶವಾಗಿದೆ

ಟೀಪು — ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು

ಪತ್ತೆ - THE DILAWAR WATCH COY, (33)
Bhuleshwar, BOMBAY

ವಿವಿಧ ಸಂಗ್ರಹ.

ಉತ್ತರಾದಿ ಮಠದೊಳಗಿನ ಗೊಂದಲ.

ತುಮ್ಮಿನಕಟ್ಟೆಯ ರಾ। ವೆಂಕಣ್ಣಾಚಾರ್ಯ ಕಾಳಗಿಯವರು ಧಾರವಾಡದ 'ವಿಜಯ' ಪತ್ರಿಕೆಯಲ್ಲಿ ಉತ್ತರಾದಿ ಮಠದೊಳಗಿನ ವರ್ತಮಾನಗಳ ಕುರಿತು ಹಿಂದು ಸವಿಸ್ತರ ಪತ್ರ ಪ್ರಕಟಿಸಿದ್ದಾರೆ. ಅದರೊಳಗಿನ ಮುಖ್ಯ ಮುಖ್ಯ ಸಂಗತಿಗಳೇನಂದರೆ.-ರಾ। ವೆಂಕಣ್ಣಾಚಾರ್ಯರು ತುಮ್ಮಿನಕಟ್ಟೆಯವರು ಅಕ್ಷಿಷ್ಟರು ಬಂದರು. ಆದರಿಂದ ಅವರು ಆ ಊರನ್ನು ತ್ಯಜಿಸಿ, ಕಲ್ಲಾಪುರ ಗ್ರಾಮಕ್ಕೆ ತೆರಳಿದರು. ಆದರಿಂದ ಶ್ರೀ ಮದುತ್ತರಾದಿ ಮಠಾಧೀಶರು ಆ ಕಡೆಯ ಸಂಚಾರಕ್ಕೆ ಬಂದಾಗ ಮುದ್ರಾಧಾರಣ ಕೊಡಲಾಗಲಿಲ್ಲ. ತುಮ್ಮಿನಕಟ್ಟೆಯ ಶ್ರೀ। ಪಾಂಡುರಂಗಿ ವೇದವ್ಯಾಸಾಚಾರ್ಯರು ಮಠದ ದಿವಾಣರಿಗೆ ರಾ॥ ಕಾಳಗಿಯವರ ಚಾಡಿ ಹೇಳಿ, ಮಂತ್ರಮುದ್ರಾಧಾರಣೆಗಳನ್ನು ಅವರು ತಪ್ಪಿಸಿಕೊಳ್ಳುತ್ತಾರಾಗಿ ಗ್ರಹಿಕೆ ಕೊಟ್ಟರು. ವೇದವ್ಯಾಸಾಚಾರ್ಯರು ಶ್ರೀ ಸಂಸ್ಥಾನದ ನಿರೀಕ್ಷಣೆ ನೋಡದ, ರಾ॥ ಕಾಳಗಿಯವರಿಗೆ ಬಹಿಷ್ಕಾರ ಕೊಟ್ಟರು. ಕೆಲವು ದಿನಗಳಲ್ಲಿಯೇ ರಾ॥ ಕಾಳಗಿಯವರಿಗೆ ಹನುಮಂತ ನಾಯ್ಕ ಎಂಬವರಲ್ಲಿ ಭೋಜನದ ಆಮಂತ್ರಣ ಬಂತು. ರಾ॥ ಕಾಳಗಿಯವರು ಸ್ನಾನ ಮಾಡಿ ದೇವತಾರ್ಚನ ಮುಗಿಸಿಕೊಂಡು ಊಟಕ್ಕೆ ಹೊರಡಬೇಕೆಂದು ಆಲೋಚಿಸಿ, ದೇವತಾರ್ಚನ ಮಾಡುತ್ತಿರುವಾಗಲೇ ಹನುಮಂತ ನಾಯ್ಕರು ರಾ। ಕಾಳಗಿಯವರಲ್ಲಿಗೆ ಹೋಗಿ, ಶ್ರೀಗಳಿಂದ ಬಹಿಷ್ಕಾರವಿರುವದಾಗಿ ವೇದವ್ಯಾಸಾಚಾರ್ಯರು ಹೇಳಿದ್ದರಿಂದ ಕಾಳಗಿಯವರು ಊಟಕ್ಕೆ ಬರಬಾರದಾಗಿ ಹೇಳಿಹೋದರು. ಇದ್ದಿಷ್ಟರು ಶ್ರೀಗಳ ಆಜ್ಞಾಪತ್ರವನ್ನು ತೋರಿಸ ಹೇಳಲು, ವೇದವ್ಯಾಸಾಚಾರ್ಯರು ತಮ್ಮ ಆಜ್ಞೆಯೇ ಸಾಕೆಂದೂ, ಶ್ರೀಗಳ ಆಜ್ಞಾಪತ್ರ ಬೇಕಾದರೆ ೪ ದಿನಗಳಲ್ಲಿ ತರಿಸಿಕೊಡುತ್ತೇವಾಗಿಯೂ, ತಮ್ಮ ಮಾತು ಶ್ರೀಗಳು ಎಂದೂ ಮೀರಲಿಕ್ಕಿಲ್ಲವಾಗಿಯೂ ವೇದವ್ಯಾಸಾಚಾರ್ಯರು ಉತ್ತರಿಸಿದರಂತೆ. ಹೀಗೆ ಪ್ರಥಮ ಹಂತದ ಮಾತು ಶ್ರೀಗಳಿಗೆ ವೇದವ್ಯಾಸಾಚಾರ್ಯರೆಂಬ ಹೊಸ ಸಂಸ್ಥಾನದಿಂದ ತುಮ್ಮಿನಕಟ್ಟೆಯವರು ಬಹಿಷ್ಕೃತರಾದರು. ಆ ವೇಳೆ ಶ್ರೀ ಸಂಸ್ಥಾನದ ಕಮಿಶನ್ ಏದಂಬರಾದ ಶ್ರೀ। ಪಾಂಡುರಂಗಿ ಭೀಮಾಚಾರ್ಯರವರು ಬಹಿಷ್ಕಾರಕ್ಕೆ ಮತ್ತಷ್ಟು ಪುಟ ಕೊಟ್ಟರು. ರಾ। ಕಾಳಗಿಯವರಲ್ಲಿ ಬ್ರಾಹ್ಮಣರು ಹೋಗಬಾರದೆಂದು ಕಟ್ಟಪ್ಪಣೆಯನ್ನಿತ್ತಿದ್ದರು, ಪಹರೆಯವನ್ನು ಇಟ್ಟಿದ್ದರು. ಕಳೆದ ಚೈತ್ರ ಬಹುಳ ೧೧ಯ ದಿನ ಕಾಳಗಿಯವರಲ್ಲಿ ತಾಯಿಯ ಶ್ರಾದ್ಧವಿತ್ತು, ಬ್ರಾಹ್ಮಣರಿಗೆ ನಿಮಂತ್ರಣೆಯನ್ನಿತ್ತರು, ಶ್ರಾದ್ಧ ಸಂಪಾದಿಸುವದಕ್ಕಾಗಿ ಅಪ್ಪಣೆ ಪಡೆಯಲು ಬ್ರಾಹ್ಮಣರು ಪಹಂಚರ ಬಳಿ ಕೇಳಿದ್ದಲ್ಲಿ ಅವರೆಷ್ಟು ಕೊಟ್ಟು ಹಿಡಿದಲಿಕ್ಕಿ, ಮೇಲಿಯವರು ಕಾಳಗಿಯವರಲ್ಲಿ ಸೇರದ ತಿಕರೊಳ ಕಾವಲನ್ನಿಟ್ಟರು. ಅದೇ ದಿವಸವೇ ಶ್ರೀ ಸಂಸ್ಥಾನದಿಂದ ಚೈತ್ರ ಶುದ್ಧ ೫ ಮಿತಿ ಆಜ್ಞಾಪತ್ರವು ತುಮ್ಮಿನಕಟ್ಟೆಯವರಿಗೆ ತಲ್ಪಿತು. ಅದರ ತಾತ್ಪರ್ಯವೇನಂದರೆ "ಶ್ರೀಗಳವರ ಸನ್ನಿಧಿಯಲ್ಲಾದಾಗ ರಾ। ಕಾಳಗಿಯವರು ಮಂತ್ರಮುದ್ರಾಧಾರಣ ಕೊಳ್ಳಲಿಲ್ಲ; ೧೫ ದಿನಗಳೊಳಗೆ ಬಾಗಲಕೋಟೆಗೆ ಹೋಗಿ ಸನ್ನಿಧಾನದಲ್ಲಿ ಹಾಜರಾಗತಕ್ಕದ್ದು. ಇಲ್ಲದಿದ್ದರೆ, ಕ್ರಮಪ್ರಕಾರ ಕೆಲಸ ನಡೆದೀತು" ಎಂದು ಬರೆದಿತ್ತು. ಸಂಸ್ಥಾನದ ಬಹಿಷ್ಕಾರವಾಗಲಿಲ್ಲೆಂಬದು ಸ್ಪಷ್ಟವಿದೆ. ತುಮ್ಮಿನಕಟ್ಟೆಯವರ ಸಿ ತಿರುಗಿ ತೀರ ದೀನವಾದದ್ದು. ಅವರ ಮಗನು ೭೦ ವರುಷ ಅವರಿಗೊಬ್ಬನೇ ಮಗನಿದ್ದನು, ೫ ವರುಷಗಳ ಹಿಂದೆ ಪ್ಲೇಗಿನಿಂದ ಅವನು ತೀರಿಕೊಂಡನು. ಇವರಿಗೆ ಕಣ್ಣು ಕಾಣುವದಿಲ್ಲ, ಆದರಿಂದ ಸರಕಾರವು ಪೆನ್ಶನ್ನು ಅವರ ಮನೆಯಲ್ಲಿಯೇ ಮುಟ್ಟಿಸುತ್ತದೆ. ಹೀಗೆಲ್ಲ ವಿವರ ಕೊಟ್ಟು ರಾ। ತುಮ್ಮಿನಕಟ್ಟೆಯವರು ರಾ। ಪಾಂಡುರಂಗ ವೇದವ್ಯಾಸಾಚಾರ್ಯ ಪಾಂಡುರಂಗಿ ಭೀಮಾಚಾರ್ಯ ಇವರು ಕೊಟ್ಟ ಕಷ್ಟ-ನಷ್ಟವನ್ನು ಪರ್ಯಾಲೋಚಿಸಿ ತಾವೇನು ಮಾಡಬೇಕೆಂದು ಶ್ರೀಗಳಿಗೆ ಕೇಳಿಕೊಂಡಿದ್ದಾರೆ. ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ಧಾರವಾಡದಲ್ಲಿ ಅನೇಕರು ಶ್ರೀಗಳ ಕಡೆಯಿಂದ ಮುದ್ರಾಧಾರಣೆಯನ್ನು ಸ್ವೀಕರಿಸಲು ಹಿಮ್ಮೆಟ್ಟಿದವರಾಗಿ ಕೇಳುತ್ತಾರೆ. ಅದರ ಮೇಲೆ ಶ್ರೀ ಸಂಸ್ಥಾನದ ಕಡೆಯಿಂದ ಈ ತನಕ ಯಾವದೇ ಆಜ್ಞಾಪತ್ರವು ಅವರಿಗೆ ಬರಲಿಲ್ಲವಾಗಿ "ಕರ್ಮವೀರ" ಕರ್ತರು ಪ್ರಕಟಿಸಿದ್ದಾರೆ.

* * *

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ ನೀವು ದಿನಾ ಆ ಕಡೆಗೆ ಲಕ್ಷಕೊಡಬೇಕು, ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅದಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಬಿಸಿಮ್ಯಿಕ್ಕಿದ ಕೂದಲಿ ತಲೆಯ ಹೊಟ್ಟು ಹೋಗುತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ		೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

½ ಔನ್ಸಿಗೆ	ರೂ.	೬—೦—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೩—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ-ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಪಾಪಕ್ಕೆ ಬಾಯೊಡೆಯುತ್ತದೆ

ಪಾಪಕ್ಕೆ ಬಾಯೊಡೆಯುತ್ತದೆಂಬ ಮಾತು ಸಟಿಯಲ್ಲ; ಕೇ. ಸಿ. ಬ್ಯಾನರ್ಜಿ ಎಂಬ ಎಳೆ ಹುಡುಗರೊಬ್ಬರು ಲಾಹೋರ ಸ್ಟೇಶನ್ನಿನಲ್ಲಿ ಬಂದಿಳಿದರು. ಅವರ ಬಳಿ ಒಂದು ತುಬಾಕಿ ಇತ್ತು. ಕೆಲವು ಕಾಡತೂಸುಗಳಿದ್ದವು, ಇವುಗಳಿಗೆ ಲೈಸನ್ಸಿದ್ದಿಲ್ಲ; ಅದರಿಂದ ಪೋಲೀಸರು ಅವರಿಗೆ ಹಿಡಿದು ಖಟ್ಲೆ ಮಾಡಿದರು. ಫೈಲಬಿಸ್ ಎಂಬ ಯುರೋಪಿಯನ್ ಮೆಜಿಸ್ಟ್ರೇಟರಿಗೆ ಕ್ರಾಂತಿಕಾರಕರ ಸ್ಮರಣೆಯಾಯಿತೋ ಏನೋ! ಇವರಿಗೆ ೫ ವರುಷದ ಶಿಕ್ಷೆ ವಿಧಿಸಲಾಯಿತು. ಬ್ಯಾನರ್ಜಿಯವರು ದಿಗಿಲುಬಿದ್ದರು, ಹೈಕೋರ್ಟಿನಲ್ಲಿ ಅಪೀಲು ದಾಖಲಾಯಿತು. ಅಪೀಲು ವಿಚಾರಕ್ಕೆ ಬರುವ ಮುಂಚೆಯೇ ಸರಕಾರವು ಬ್ಯಾನರ್ಜಿಯವರಿಗೆ ಥಕ್ಕನೆ ಬಿಟ್ಟುಕೊಟ್ಟುಬಿಟ್ಟಿತು; ಇದರ ಮರ್ಮವೇನೆಂಬುದು ಯಾರಿಗೂ ತಿಳಿಯಲಿಲ್ಲ. ಲಾಹೋರದ "ಟ್ರಿಬ್ಯೂನ" ಪತ್ರಿಕೆಯು ಈ ಪ್ರಕರಣವನ್ನು ಸೂಕ್ಷ್ಮವಾಗಿ ಚೌಕಶಿ ಮಾಡಿ ಅಂತರಂಗವನ್ನು ಪ್ರಕಟಿಸಿದೆ. ಬ್ಯಾನರ್ಜಿಯವರು ಗುಪ್ತ ಪೋಲೀಸ ಖಾತೆಯ ನೌಕರರು, ಲಾಹೋರಿನಲ್ಲಿ ಹೋಗಿ ಉತ್ಸಾಹಿ ದೇಶಾಭಿಮಾನಿಗಳಿಗೆ ಹುರಿದುಂಬಿಸಿ, ಅವರ ಕಡೆಯಿಂದ ಕ್ರಾಂತಿಕಾರಕ ಚಳವಳಿಯನ್ನೆಬ್ಬಿಸಿ, ಮುಂದೆ ಅವರಿಗೆಲ್ಲ ಪೋಲೀಸರ ಸ್ವಾಧೀನ ಮಾಡಿ ಭರತ ಖಂಡದಲ್ಲಿ ಕ್ರಾಂತಿಕಾರಕರ ಜಾಲವು ಹಬ್ಬಿರುವದಾಗಿ ಪ್ರದರ್ಶಿಸಲು ಸರಕಾರದಿಂದ ಬ್ಯಾನರ್ಜಿಯವರಿಗೆ ನೇಮಿಸಲಾಗಿತ್ತೆಂದು 'ಟ್ರಿಬ್ಯೂನ' ಪತ್ರಿಕೆಯು ಪ್ರಕಟಿಸಿದೆ. ಬ್ಯಾನರ್ಜಿಯವರಿಗೆ ಸಂಯುಕ್ತ ಪ್ರಾಂತದಿಂದ ರಹಸ್ಯ ಕ್ರಾಂತಿಯನ್ನು ಘಟಿಸಲು ಕಳಿಸಲಾಗಿತ್ತು. ಥಕ್ಕನೆ ಮೈಮೇಲೆ ಪ್ರಕರಣ ಬಂದಲ್ಲಿ ತಾವು ಕಾಯುತ್ತೇವಾಗಿ ಗುಪ್ತ ಪೋಲೀಸ ಖಾತೆಯಿಂದ ಆಶ್ವಾಸನವೂ ಸಿಕ್ಕಿತಂತೆ. ಆ ಪತ್ರಗಳನ್ನು ಹೈಕೋರ್ಟಿನಲ್ಲಿ ಪ್ರಕಟಿಸಿ, ತಮ್ಮ ನಿರಪರಾಧವನ್ನೂ, ಸರಕಾರಿ ಆಶ್ವಾಸನದ ನಿರರ್ಥಕತೆಯನ್ನೂ ಬೈಲಿಗೆಳೆಯುತ್ತೇವಾಗಿ ಬ್ಯಾನರ್ಜಿಯವರು ಹೆದರಿಸಿದ ಕೂಡಲೆ ಸರಕಾರವು ದಯಾರ್ದ್ರವಾಗಿ ಅವರಿಗೆ ಒಮ್ಮೆಲೇ ಬಿಟ್ಟುಕೊಟ್ಟಿತಂತೆ. ಇನ್ನೂ ಕೆಲವು ಸಂಗತಿಯು ಮತ್ತೂ ಆಶ್ಚರ್ಯಕರವಿವೆ. ಬ್ಯಾನರ್ಜಿಯವರಿಗೆ ಸೆರೆಹಿಡಿದು [illegible] ಬಗ್ಗೆ ಆಗಲೇ ಜಾಮೀನು ಕೊಂಡು ಬಿಟ್ಟು ವಿಚಾರ ಮುಂದಿಟ್ಟರು, ಗುಪ್ತ ಅಧಿಕಾರಿಗಳು ಬ್ಯಾನರ್ಜಿಯವರಿಗೆ ಪಲಾಯನ ಮಾಡಲು ಹೇಳಿದರು. ಬ್ಯಾನರ್ಜಿಯವರು ಪಲಾಯನ ಮಾಡಿಬಿಟ್ಟರು. ಲಾಹೋರದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಬ್ಯಾನರ್ಜಿಯವರ ಅಪತ್ತು ಸಂಬಂಧವು ತಿಳಿಯಲಿಲ್ಲ. ಅವರು ಪತ್ತೆಗಾಗಿ ವಾರಂಟನ್ನು ಹೊರಡಿಸಿ, ಪುರಾತದಿಂದ ಇವರಿಗೆ ಸೆರೆಹಿಡಿದು ತಂದರು. ಜೈಲ ಅಧಿಕಾರಿಗಳ ಕಡೆಯಿಂದ ಸಾಂಸಾರಿಕ ಸುಖವನ್ನು ಅನುಭವಿಸುವದಕ್ಕಾಗಿ ಗುಪ್ತ ಪೋಲೀಸರು ಬ್ಯಾನರ್ಜಿಯವರಿಗೆ ಹಣ ಕೊಟ್ಟು ಜೈಲ ಅಧಿಕಾರಿಗಳಿಗೆ ಲಾಚ ತಾಕಲಿಕ್ಕೆ ಹೇಳಿದರಂತೆ. ಖಟ್ಲೆ ನಡೆಯುವ ತನಕ ಗುಪ್ತ ಪೋಲೀಸರು ತಮ್ಮಲ್ಲೇ ಅವರಿಗಿಟ್ಟುಕೊಂಡು ಸತ್ಕಾರ ಮಾಡಿದರಂತೆ. ಬ್ಯಾನರ್ಜಿಯವರ ಬಳಿ ಸಿಕ್ಕಿದ ತುಬಾಕಿಯು ಗುಪ್ತ ಪೋಲೀಸ ಖಾತೆಯದೆಂದು 'ಟ್ರಿಬ್ಯೂನ' ಪತ್ರಿಕೆಯು ಪ್ರಕಟಿಸಿದೆ. ಲಾಹೋರಿನ ಪೋಲೀಸರಿಗೆ ಬ್ಯಾನರ್ಜಿಯವರ ಮರ್ಮ ಗೊತ್ತಿದ್ದರೆ, ಪಾಪಕ್ಕೆ ಬಾಯೊಡೆಯುತ್ತಿದ್ದಿಲ್ಲ. ಫೈಲಬಿಸ್ ಮೆಜಿಸ್ಟ್ರೇಟರಿಗೆ ರಾಜದ್ರೋಹದ ಚಿತ್ತ ಕೆಣಕದೆ ಸಾಮಾನ್ಯ ಶಿಕ್ಷೆ ಕೊಟ್ಟಿದ್ದರೆ, ಬ್ಯಾನರ್ಜಿಯವರು ಸುಖದಿಂದ ಜೈಲಿನಲ್ಲಿ ಕಾಲ ಕಳೆದು ದೇಶಾಭಿಮಾನಿಗಳಾಗುತ್ತಿದ್ದರು, ಕ್ರಾಂತಿಕಾರಕರ ಸಾಲಿನಲ್ಲಿ ಸೇರಿಸಲ್ಪಡುತ್ತಿದ್ದರು. ಭರತಭೂಮಿಯ ಉದ್ಧಾರಕ್ಕಾಗಿ ಭಗವಂತನಿಂದ ನೇಮಿಸಲ್ಪಟ್ಟ ಬ್ರಿಟಿಶರ ರಾಜ್ಯಭಾರದ ಪ್ರಕಾರಗಳನ್ನು ಕೇಳಿದರೆ, ಮತಿ ಕುಂಠಿತವಾಗುತ್ತದೆ. ಪರರ ಮೇಲೆ ನಿರಾಧಾರವಾದ ಆರೋಪ ಹೊರಿಸುವ ಬ್ರಿಟಿಶರ ದುಷ್ಟ ಸ್ವಭಾವವು ಮುಂಚಿನಿಂದ ಇರುತ್ತದಾಗಿ ಕಲಕತ್ತೆಯ 'ಫಾರವರ್ಡ' ಪತ್ರಿಕಾಕರ್ತರು ಹಿಂದಿನ ಒಂದು ಸಂಗತಿಯನ್ನು ನಮೂದಿಸಿ ವಿವರಿಸಿದ್ದಾರೆ:- ಆ ಕಾಲಕ್ಕೆ ಆಯರ್ಲಂಡದಲ್ಲಿ ಸ್ವಾತಂತ್ರ್ಯ [illegible]ಟ ನಡೆದಿತ್ತು. ಲಂಡನದೊಳಗಿನ ವರ್ತಮಾನ ಪತ್ರಿಕಾಕರ್ತರು ಆಯರ್ಲಂಡಿನ ರಾಜಧಾನಿಯಾದ ಡಬ್ಲಿನದೊಳಗಿನ ತಮ್ಮ ಚಿತ್ರಗುಪ್ತರಿಗೆ ಮುಂಜಾವು ೮ ಘಂಟೆಗೆ ಒಂದು ತಂತಿ ಮಾಡಿದರು. ಅದೇನಂದರೆ:- "ಕೂಡಲೆ ದಂಗೆಯಾದ ಸುದ್ದಿಯನ್ನು ಕಳುಹಿರಿ; ೧೦೦೦ ಶಬ್ದಗಳಷ್ಟು ಮಜಕೂರಿರಬೇಕು." ಒಂದು ತಾಸಿನೊಳಗೆ ಉತ್ತರ ಬಂದದ್ದೇನಂದರೆ.— 'ದಂಗೆಯಿಲ್ಲ, [illegible] ೪ ಘಂಟೆಯೊಳಗೆ ದಂಗೆಯ ವ್ಯವಸ್ಥೆ ಮಾಡುತ್ತೇನೆ" ಬ್ರಿಟಿಶರಷ್ಟು ಸಭ್ಯರೂ, ಲೋಕೋಪಕಾರಿಗಳೂ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೋ? ಇವರ ಗುಣಕ್ಕೇ ಮೆಚ್ಚಿ ಪರಮಾತ್ಮನು ಇವರಿಗೆ ಜಗತ್ತಿನ ದಾರುಪತ್ಯವನ್ನು ವಹಿಸಿದ್ದಾನೆ.

***

ಬಾರ್ಡೋಲಿಯ ಪ್ರತಿಬಿಂಬಗಳು.

ತಿನವೆಲ್ಲಿ ಜಿಲ್ಲೆಯ ಕಡಯಂ ಗ್ರಾಮದಲ್ಲಿ "ಯೂನಿಯನ್ ಬೋರ್ಡ"ವೆಂಬ ಸ್ಥಾನಿಕ ಸ್ವರಾಜ್ಯ ಸಂಸ್ಥೆಯಿದೆ. ಆ ಬೋರ್ಡಿಗೆ ಒಪ್ಪಿದ ೩೫೦ ಮನೆಗಳುಳ್ಳ ಇದೇ ಕೇರಿಯು ಈ ಸಂಸ್ಥೆಗೆ ಮನೆತೆರಿಗೆ ಕೊಡದೆ ೪ ವರುಷಗಳಾದವು. ಮನೆತೆರಿಗೆಯನ್ನು ಅವರೇ ವಸೂಲ ಮಾಡಿ ತಮ್ಮ ಕೇರಿಯಲ್ಲಿ ದೀಪ ಹಚ್ಚಿಕೊಳ್ಳುತ್ತಾರೆ; ರಸ್ತೆಗಳನ್ನು ತೆಗೆದುಕೊಳ್ಳುತ್ತಾರೆ; ಇತರ ಸಾರ್ವಜನಿಕ ಅನುಕೂಲತೆಗಳನ್ನು ಪೂರೈಸುತ್ತಾರೆ. ಬೋರ್ಡಿನವರು ಬಹಳ ಪ್ರಯತ್ನ ಮಾಡಿ ನೋಡಿದರು. ಆದರೆ, ಅವರೆಷ್ಟರಿಂದ ತೆರಿಗೆಯನ್ನು ವಸೂಲ ಕೊಡುವದಿಲ್ಲ. ಈಗ ಬೋರ್ಡಿನವರು ಎದೆಗೆಟ್ಟು, ಪೋಲೀಸರಿಗೆ ಬೆಂಬಲಕ್ಕೆ ಕರೆದಿರುವರಂತೆ. ದಿವಾಣರಿಗೆ ಆ ಕೇರಿಯವರು ಅರ್ಜಿ ಮಾಡಿಕೊಂಡು ತಮ್ಮ ಅಂದೋಲನವನ್ನು ತಿಳಿಸಿದ್ದಾರೆ. 'ಬೋರ್ಡಿಗೆ ಹಣ ಕೊಡಬೇಕು; ಆದರೆ, ಆ ಹಣಕ್ಕೆ ಪ್ರತಿಫಲವಾಗಿ ನಮಗೆ ಯಾವ ಅನುಕೂಲತೆಯೂ ಸಿಗುವದಿಲ್ಲ; ಅದರಿಂದ ತೆರಿಗೆಯನ್ನು ನಾವು ಬಹಿಷ್ಕರಿಸಿರುತ್ತೇವೆ. ತೆರಿಗೆಯನ್ನು ವಸೂಲ ಮಾಡುವದಕ್ಕಾಗಿ ಮಾಡುವ ಬಲಾತ್ಕಾರಗಳನ್ನೆಲ್ಲ ಸ್ವಸಂತೋಷದಿಂದ ನಾವು ಸೈರಿಸಿಕೊಳ್ಳುತ್ತೇವೆ. ನಮ್ಮ ಕೇರಿಗೆ ಪ್ರತ್ಯೇಕ ಪಂಚಾಯತಿಯನ್ನು ಏರ್ಪಡಿಸಿ ಕೊಡಬೇಕು. ಇತ್ಯಾದಿ' ಕಾನಪೂರದಲ್ಲಿಯೂ ಇದೇ ಪ್ರಕಾರ ನಡೆದಿದೆ. ಅಲ್ಲಿ ದೊಂಬಿಯಾದ ನಂತರ ಮೇಲೆ ಸರಕಾರವು ಹೆಚ್ಚಿನ ಪೋಲೀಸ ಫೌಜನ್ನು ಇಟ್ಟು ಅವರ ಖರ್ಚನ್ನು ಜನರ ಕಡೆಯಿಂದ ವಸೂಲ ಮಾಡಲುದ್ಯುಕ್ತವಾಗಿದೆ. ಜನರು ಆ ತೆರಿಗೆ ಅನ್ಯಾಯವೆಂದು ಅದನ್ನು ಕೊಡತಕ್ಕದ್ದಿಲ್ಲ. ಜಪ್ತಿಯ ಪ್ರಕಾರಗಳು ನಡೆದಿವೆ. ಆದರೂ ಜನರು ತೆರಿಗೆ ತೆರುವದಿಲ್ಲ. 'ಪ್ರತಾಪ' ಪತ್ರಿಕೆಯ ಸಂಪಾದಕರಾದ ಶ್ರೀ| ಗಣೇಶ ಶಂಕರ ವಿದ್ಯಾರ್ಥಿಗಳವರು ಈ ಪ್ರಯತ್ನದ ಸೂತ್ರಧಾರರು. ಇವರು ಕಾಯಿದೆ ಕೌನ್ಸಿಲಿನ ಸಭಾಸದರಿದ್ದಾರೆ. ಅಧಿಕಾರಿಗಳು ಅತ್ಯಾಚಾರಗಳನ್ನು ಮಾಡುತ್ತಿದ್ದಾರೆ. ಅಧಿಕಾರಿಗಳಿಗೆ ಪರವಾನಗಿಯ ಈ ನೀತಿಯನ್ನು ವಿರೋಧಿಸಲು ಜನರು ಬಿಡಬೇಕಾಗಿ ಶ್ರೀ| ವಿದ್ಯಾರ್ಥಿಗಳ ಅಂದೋಲನವಿದೆ.

***

ಬಂಗಾಲ ಗ್ರಾಮಗಳಲ್ಲಿ ಭಯಂಕರ ಸ್ಥಿತಿ.

ಬಂಗಾಲ ಪ್ರಾಂತದ ಬಂಕುರಾ, ಬಾಲುರಘಾಟ ಮುಂತಾದ ಗ್ರಾಮಗಳಲ್ಲಿ ಬರಗಾಲ ಬಿದ್ದು ಭಯಂಕರ ಸ್ಥಿತಿಯಾಗಿದೆ. ಒಂದು ವರ್ಷದಿಂದ ಅಲ್ಲಿ ಬರ ಬಿದ್ದಿದೆ. ಹೊಟ್ಟೆಯ ಪಾಡಿಗಾಗಿ ಜನರು ಅನಶನ ಅನಾಚಾರ-ದುರಾಚಾರಗಳನ್ನು ಆಚರಿಸುತ್ತಿದ್ದಾರೆ. ಹೆಂಡರು-ಮಕ್ಕಳನ್ನು ಮಾರಿ ಹಣ ತಂದು ಅನೇಕರು ಹೊಟ್ಟೆಯ ಗುಂಡಿಯನ್ನು ತುಂಬಿಕೊಳ್ಳಲುದ್ಯುಕ್ತರಾಗಿದ್ದಾರೆ; ಅನೇಕರು ಆತ್ಮಹತ್ಯೆ ಮಾಡಿಕೊಂಡರು. ಬೋಲಿ ಗ್ರಾಮದೊಳಗಿನ ಒಂದು ಕೂಸಿಗೆ ಒಬ್ಬನು ೪ ರೂಪಾಯಿ ಕೊಟ್ಟು ಕೊಂಡನು; ಇನ್ನೊಬ್ಬಳು ತನ್ನ ೧೪ ವರ್ಷದ ಬಾಲಕನನ್ನೂ, ಇಬ್ಬ ಹುಡುಗಿಯರನ್ನೂ ೨೪ ರೂಪಾಯಿಗೆ ಮಾರಿದಳು. ಉಷ್ಣಿ ಗ್ರಾಮದ ಮುಸಲ್ಮಾನನು ತನ್ನ ಹೆಂಡತಿಯನ್ನು ಮಾರಿದನು. ಬಂಕುರಾ ಜಿಲ್ಲೆಯಲ್ಲಿ ಗಂಡಸು-ಹೆಂಗಸರಿಗೆ ಒಂದಾಣೆಯು, ಹುಡುಗ-ಹುಡುಗಿಯರಿಗೆ ಅರ್ಧಾಣೆಯು ಅಕ್ಕಿಯನ್ನು ಸರಕಾರವು ಧರ್ಮವಾಗಿ ಕೊಡುತ್ತದೆ. ಈ ಸಹಾಯವು ಸಾಲದೆಂದು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರೇ ಹೇಳುತ್ತಾರೆ. ಅಂದಮೇಲೆ ಬೇರೆಯವರ ಸಾಕ್ಷಿ ಬೇಕೆ. ಆದರೆ, ಸದ್ಯಕ್ಕೆ ಸರಕಾರವು ೧೯೨೬-೨೭ನೇ ಇಸ್ವಿಯ ರಾಜ್ಯಭಾರದ ಸಮಾಲೋಚನವನ್ನು ಪ್ರಕಟಿಸಿದೆ. ಅದರೊಳಗೆ ಊಗಿಬಂಡಿ, ಕಾಲುವೆ ಮುಂತಾದವುಗಳನ್ನು ವರ್ಣಿಸಿ ಬರಗಾಲಕ್ಕೆ ಹೊರತಳ್ಳಿದೆಂದು ಬರೆದಿದೆ. ಬಂಕುರಾದಲ್ಲಿಯ ಈ ಸ್ಥಿತಿ. ಊಗಿಬಂಡಿಯಿಂದ ಬೇಕಷ್ಟು ಧಾನ್ಯವನ್ನು ಕ್ಷಣಾರ್ಧದಲ್ಲಿ ಬರಗಾಲದ ಗ್ರಾಮಗಳಲ್ಲಿ ಒಯ್ಯಬಹುದು; ಆದರೂ, ಜನರು ಉಪವಾಸ ಯಾಕೆ ಸಾಯುತ್ತಾರೆ? ಕಾರಣವು ಸ್ಪಷ್ಟವಿದೆ. ಜನರ ಬಳಿ ದ್ರವ್ಯಸಂಗ್ರಹವಿಲ್ಲ. ಅದರಿಂದ ಹೆಂಡರು-ಮಕ್ಕಳನ್ನು ಮಾರುವ ಪ್ರಸಂಗ ಬಂದಿದೆ. ಬಡತನ ಪರಿಹಾರವಾದ ಹೊರತು, ಊಗಿಬಂಡಿಯ ಸರಂಜಾಮು ನಿರರ್ಥಕವಿದೆ.

***

ಅಳಿಯನಿಗೆ ಧನಲೋಭ; ಹೆಂಡತಿಯ ಕೊಲೆ!

ಲಾಹೋರಿನ ಲಾ ಕಾಲೇಜ (ಕಾಯಿದೆಯ ವಿದ್ಯಾಲಯ)ದಲ್ಲಿ ಮುಕಿಲಾಲ ಕಪೂರ ಎಂಬ ವಿದ್ಯಾರ್ಥಿಗಳಿದ್ದಾರೆ. ಇವರ ಮಾವನು ದೊಡ್ಡ ಸಾವುಕಾರನು. ಬೆಂಕಿನಲ್ಲಿ ಬಹಳ ಹಣ ಠೇವಿಟ್ಟಿದ್ದಾರೆ. ಇವರಿಂದ ೫ ಸಾವಿರ ರೂಪಾಯಿಗಳನ್ನು ತರಬೇಕಾಗಿ ಕಪೂರನು ತನ್ನ ಹೆಂಡತಿಗೆ ಆಜ್ಞೆ ಮಾಡಿದನು. ಈ ಹಿಂದೆ ಬಹಳ ಹಣ ತರಿಸಿದ್ದನೋ ಏನೋ! ಹೆಂಡತಿಯು ಹಣ ತರಲು ಒಪ್ಪಲಿಲ್ಲ. ಕೂಡಲೆ ಅವನು ಅವಳಿಗೆ ಹಗ್ಗದಿಂದ ಮಂಚಕ್ಕೆ ಕಟ್ಟಿದನು; ಕಪೂರನ ತಾಯಿಯು ಸೊಸೆಯ ಕಾಲನ್ನು ಗಟ್ಟಿಯಾಗಿ ಹಿಡಿದಳು, ಕಪೂರನು ಅವಳಿಗೆ ಚೂರಿಯಿಂದ ತಿವಿದು ಕೊಂದನು. ೫ ಸಾವಿರ ರೂಪಾಯಿಗಳನ್ನು ತರುವದಿಲ್ಲವೆಂದು ಈ ಹಿಂದೆ ಗಂಡ-ಹೆಂಡರಿಗೆ ಬಹಳ ತಕರಾರುಗಳ

ಗಿಸ್ಥವಾಗಿಯೂ, ಬಿಲ್ಲಿನಿಂದದ್ದರಿಂದ ಕರ್ಪೂರನು ಹೆಂಡತಿಗೆ ಬಹು ಕ್ರೂರತನದಿಂದ ನಡೆಸುತ್ತಿದ್ದನಾಗಿಯೂ ಪ್ರಸಾರವೆಯಾಗಿದೆ. ಕರ್ಪೂರನೂ, ಅವನ ತಾಯಿಯೂ ಪರಾರಿಯಾಗಿದ್ದಾರೆ. ಪೋಲೀಸರು ಕರ್ಪೂರನ ತಂದೆಗೆ ಸೆರೆ ಹಿಡಿದು ತನಿಖೆ ನಡೆಸುತ್ತಿದ್ದಾರೆ. ಭಯಂಕರ ವ್ಯಾಪಾರವಾಯಿತು!

***

ಸತ್ಯ ಗಡಿಬಿಡಿ.

ಅಫಘಾಣಿಸ್ಥಾನದ ಅಮೀರರಿಗೆ ವಿಲಾಯತಿಯಲ್ಲಿ ವಿಶೇಷ ಸ್ವಾಗತವಾದ ಸುದ್ದಿಗಳಂತು ಎದ್ದೇಳುತ್ತಿವೆ. ಇದೇ ಸಮಯ ಅಫಘಾಣಿಸ್ಥಾನದ ಮೇರೆ ಪ್ರದೇಶದ ಮೇಲೆ ಬ್ರಿಟಿಶರು ಸ್ವಲ್ಪ ಭಾಗಗಳನ್ನು ಕೈಕೊಳ್ಳುತ್ತಾರೆಂದು ಪ್ರಕಟವಾಗಿದೆ. ಹೊಸ ಕೋಟೆಗಳು ಕಟ್ಟಲ್ಪಡುತ್ತಿವೆ. ಹಳೇ ಕೋಟೆಗಳ ಜೀರ್ಣೋದ್ಧಾರವಾಗುತ್ತಿವೆ. ಸೈನಿಕರು ಕೂಡಿಸಲ್ಪಡುತ್ತಿದ್ದಾರೆ. ವಝೀರಿಸ್ಥಾನದೊಳಗಿನ ರಝಮಾಕ ಕೋಟೆಯು ವಿಸ್ತಾರಗೊಂಡಿತು. ೧೨೦೦೦ ಸೈನಿಕರಿಗೆ ಅಲ್ಲಿ ಬಿಡಾರ; ಇಷ್ಟು ದೊಡ್ಡದಾಗಿ ಅದರ ಘಟನೆಯಾಗಿದೆ. ಟೋಚೀ ನದಿಯ ತೀರದಲ್ಲಿ ಸೈನಿಕರ ಬಿಡಾರಿಗಾಗಿ ಗುಡಾರಗಳು ಹೊಡೆಯಲ್ಪಟ್ಟಿವೆ. ದಿಲ್ಲಿ-ಲಾಹೋರಗಳಲ್ಲಿ ೬೦೦೦ ಕುದುರೆಗಳನ್ನು ಕೂಡಿಸಿ, ಅನೇಕರಿಗೆ ವಝೀರಿಸ್ಥಾನ-ಬಲುಚಿಸ್ಥಾನ ಕೋಟೆಗಳಿಗೆ ಕಳಿಸಲಾಗಿರುವದಂತೆ. ವಿಮಾನಗಳಿಗೆ ಇಳಿಯಲು ಸ್ಟೇಶನುಗಳಾಗುತ್ತಿವೆ. ಮೋಟಾರ ಹಿಡಾಟಕ್ಕೆ ಅನುಕೂಲವಾಗಿ ಮಾರ್ಗದ ರಚನೆಯಾಗುತ್ತಿದೆ. ಇದೆಲ್ಲ ರಶಿಯಾ ದೇಶದ ಮೇಲೆ ಸಾಗಿಹೋಗುವ ತಯಾರಿಯೆಂದು ಬಲ್ಲವರು ಹೇಳುತ್ತಾರೆ. ಅಮಾನುಲ್ಲಾ ಖಾನರವರ ಗೆಳೆತನದ ಪ್ರದರ್ಶನ ಮಾಡಿ ಸರಹದ್ದಿಯ ಮೇಲೆ ಇಂಥ ಸಿದ್ಧತೆಗಳನ್ನು ಮಾಡುವ ಕಾರಣವೇನು? ಅಮಾನುಲ್ಲಾಖಾನರವರ ಮೇಲೆ ನಂಬಿಗೆಯು ಇಲ್ಲವೇ?

***

ಸಾಮ್ರಾಜ್ಯರ ರಾಜಕಾರಣದ ಅಂತಃಸೂತ್ರಗಳು.

ಯುರೋಪ ಖಂಡದಲ್ಲಿ ರಶಿಯಾ ದೇಶದ ಅಸೂಯೆಯು ವಿಪರೀತವಾಗಿದೆ. ಕಾರಣವೇನೆಂದು ಬಲ್ಲಿರಾ? ಅಲ್ಲಿಯ ಸರಕಾರವು ಬಡಬಗ್ಗರ ಹಿತಕ್ಕಾಗಿ ಪರಿಶ್ರಮಪಡುತ್ತಲಿದೆ. ಅಲ್ಲಿ ಕಾಯಕಷ್ಟ ಮಾಡದೆ ಜೀವಿಸುವದು ಈಗ ಸಾಧ್ಯವಿಲ್ಲ. ಅಳಾಗಿ ದುಡಿಯಬೇಕು; ಅರಸಾಗಿ ಉಣ್ಣಬೇಕು; ಹೊರತು ಅಲ್ಪರ ಪರಿಶ್ರಮದಿಂದ ದೊಡ್ಡ ದೊಡ್ಡ ಗಂಟುಗಳನ್ನು ಕಟ್ಟಿಕೊಂಡು ವಿಲಾಸ ಮಾಡುವದು ಅಶಕ್ಯವಾಗಿದೆ. ರಾಜ್ಯದೊಳಗಿನ ಭೂಮಿಯೆಲ್ಲ ಈಗ ಸರಕಾರದ ಸ್ವಾಧೀನವಾಗಿದೆ. ಅದನ್ನು ಬೇಸಾಯಗಾರರು ಪಡೆದು, ಕಾಯಕಷ್ಟ ಮಾಡಿ ಜರಿತಾರ್ಥ ಸಾಗಿಸಬೇಕು. ಸರಕಾರದಿಂದ ಬೇಸಾಯ ಮಾಡಲಿಕ್ಕೆ ಬೇಕಷ್ಟು ಅನುಕೂಲತೆಗಳೂ ಹೊಸ ಕಾಯಿದೆಯಲ್ಲಿ ಏರ್ಪಡಿಸಲ್ಪಟ್ಟಿರುತ್ತವೆ. ಇದರಿಂದ ಬ್ರಿಟಿಶ ದೇಶದೊಳಗಿನ ದೊಡ್ಡ ದೊಡ್ಡ ಸಾವಕಾರರ ಹೊಟ್ಟೆಯಲ್ಲಿ ದೆಂಕಿ ಬಿದ್ದಿದೆ. ಸಾಮ್ರಾಜ್ಯ ಸರಕಾರವು ಸೋವಿಯೆಟ್ ಸರಕಾರವನ್ನು ಬಗ್ಗುಬಡಿಯುವದಕ್ಕಾಗಿ ವಿಶ್ವಪ್ರಯತ್ನ ಮಾಡುತ್ತಿದೆ. ಬಿರ್ಕನ್‌ಹೆಡ್ ದೊರೆಗಳು ಜರ್ಮನ್ ದೇಶಕ್ಕೆ ಶಿಷ್ಟಾಯಿಗಾಗಿ ಹೋಗಿದ್ದರಂತೆ. ಕಾಬಾಯ ತಪ್ಪೈ ನಮಃ | ಶಸ್ತ್ರವನ್ನು ವಿಶ್ರಾಂತವಾಗಿ ಪರಿಣಮಿಸಲು ಬಿರ್ಕನ್‌ಹೆಡ್ ದೊರೆಗಳು ಹೋಗಿದ್ದಾರೆ. ಇದಲ್ಲದೆ ಬ್ರಿಟಿಶರು ಇತರ ರಾಷ್ಟ್ರಗಳ ಕಡೆಗೂ ಚಿಕ್ಕ ದೊಡ್ಡ ಸಂಧಾನಗಳನ್ನು ಘಟಿಸುತ್ತಿದ್ದಾರೆ. ಫ್ರಾನ್ಸ ದೇಶದಲ್ಲಿ ಈ ವಿಷಯ ಪ್ರಸಿದ್ಧರಾದ ಯೂಲ್ಸ ಸೋವೀರ್ವರವರು “ಲೀ ಮತೆನ್” ಎಂಬ ಪತ್ರಿಕೆಯಲ್ಲಿ ಬಿರ್ಕನ್‌ಹೆಡ್ ದೊರೆಗಳ ಅನಿಶ್ಚಿತಾಗಮನವನ್ನೂ, ಜರ್ಮನಿಯ ಅಂತರಂಗದವನ್ನೂ ಸ್ಫುಟ ಮಾಡಿದ್ದಾರೆ. ಬಿರ್ಕನ್‌ಹೆಡ್ ದೊರೆಗಳು ಜರ್ಮನಿಗೆ ಹೋಗಿದ್ದೇಕೋ ನಿಜ. ಅದರ ಕಾರ್ಯವೇನು ಫಲಿಸಲಿಲ್ಲ; ಮೇಲಾಗಿ ಕೇಳಿದರೆ, ಇವರ ಗಮನದಿಂದ ಈ ಕಾರ್ಯಕ್ಕೆ ದೊಡ್ಡದೊಂದು ವಿಪರೀತ ರೂಪ ಬಂದಿದೆ. ಜರ್ಮನಿಯ ವರ್ತಮಾನ ಪತ್ರಿಕೆಗಳು ಬ್ರಿಟಿಶರ ಮೇಲೆ ದೊಡ್ಡ ದಾಳಿಯನ್ನೆಬ್ಬಿಸಿ, ಸೋವಿಯೆಟ್ ಸರಕಾರದೊಡನೆ ಹೆಚ್ಚಿನ ಪರಿಚಯ ಬೆಳಿಸಲು ಹುರಿದುಂಬಿಸುತ್ತಿವೆ. ಅದಕ್ಕಾದರೂ ಕಾರಣವಿದೆ. ಜರ್ಮನಿಗೆ ಸೋವಿಯೆಟ್ ಸರಕಾರದ ಮೇಲೆ ಅಷ್ಟೊಂದು ಪ್ರೀತಿ ಇಲ್ಲ. ಅಲ್ಲಿಯ ವ್ಯವಸ್ಥೆಯು ಜಗದುದ್ಧಾರಕವೆಂದು ಬಹಳ ಕೊಡಲು ಜರ್ಮನಿಯು ಪ್ರವೃತ್ತವಾಗಿಲ್ಲ. ಬ್ರಿಟಿಶಾದಿ ಸಾಮ್ರಾಜ್ಯ ರಾಷ್ಟ್ರಗಳ ಸಹವಾಸ ಮಾಡಿದರೆ, ಜರ್ಮನಿಗೆ ಲಾಭವಿಲ್ಲೆಂದು ಪತ್ರಿಕಾಕರ್ತರ ಅಂಬೋಣ. ಸಾಮ್ರಾಜ್ಯ ರಾಷ್ಟ್ರಗಳೆಲ್ಲ ನೀತಿಭ್ರಷ್ಟವಾಗಿರುವವೆಂದೂ, ದೊಡ್ಡ ದೊಡ್ಡ ಘಟಂಗರು ಈ ರಾಷ್ಟ್ರಗಳನ್ನು ನಡೆಸುತ್ತಿರುವರೆಂದೂ, ಇವರು ಜರ್ಮನಿಯನ್ನು ಸುಲಿಯಲು ಹೊಂಚು ಹಾಕುತ್ತಿರುವರೆಂದೂ ಜರ್ಮನಿಯೊಳಗಿನ “ಲೋಕಲೆಂಗಿಯರ” ಎಂಬ ಹೆಸರಿನ ಪತ್ರಿಕಾಕರ್ತರ ಅಂಬೋಣ. ಸೌವಿಯೆಟ್ಟರೊಡನೆ ಗೆಳೆತನ ಬೆಳಿಸಿದರೆ, ಜರ್ಮನ್ ರಾಷ್ಟ್ರವನ್ನು ಪುನರ್ಘಟಿಸಲು ಅನುಕೂಲವಾಗುವದೆಂದೂ ಅದೇ ಪತ್ರಿಕಾಕರ್ತರು ಹೇಳುತ್ತಾರೆ. ಸಾಮ್ರಾಜ್ಯರು ನೀತಿಭ್ರಷ್ಟರೆಂದೂ, ಸ್ವಾರ್ಥಿಗಳೆಂದೂ ಹೇಳಿದ ಮಾತನ್ನು ಸೌವಿಯೆಟ್ಟರು ಲಕ್ಷಿಸಿ ಮುಂದೆ ವರ್ತಿಸಿದರಾಯಿತು. ಅಫಘಾನ ಹಾಗು ಹಿಂದಸ್ಥಾನ ದೇಶಗಳೊಳಗಿನ ಮೇರೆಯಂಚಿನ ಪ್ರದೇಶಗಳಲ್ಲಿ ರಚಿಸುವ ಕೋಟೆಗಳ ಸುದ್ದಿಯನ್ನೂ, ಬಿರ್ಕನಹೆಡ್ ದೊರೆಗಳ ಶಿಷ್ಟಾಯಿಯನ್ನೂ ಅಲೋಚಿಸಿದರೆ, ರಶಿಯಾದ ಮೇಲೆ ಯುದ್ಧದ ಪೂರ್ವ ತಯಾರಿಯು ನಡೆಯುತ್ತಿದೆ ಸಾಗಿದೆಂದು ಹೇಳಬಹುದು.

***

ಬ್ರಿಟಿಶರ ಹೊಟ್ಟೆಗಾಗಿ-ಗೇಣು ಬಟ್ಟೆಗಾಗಿ.

ಹಿಂದುಸ್ಥಾನ ಸರಕಾರವು ತೆರಿಗೆಗಳನ್ನು ಹೆಚ್ಚಿಸುವ ಉಪಾಯ ಸೂಚಿಸುವದಕ್ಕಾಗಿ ತೆರಿಗೆಯ ಚೌಕಶಿ ಮಂಡಳವೊಂದು ನೇಮಿಸಿತ್ತು. ಈ ಮಂಡಳಕ್ಕೆ ಜನರ ಉತ್ಪನ್ನದ ಬಾಬುಗಳನ್ನು ಹೆಚ್ಚಿಸುವ ಉಪಾಯಗಳನ್ನು ಸೂಚಿಸಹೇಳಿತ್ತು. ಅದರಂತೆ ಹಿಂದುಸ್ಥಾನದಲ್ಲಿ ಉಪ್ಪಿನ ಉದ್ಯೋಗವನ್ನು ಬೆಳಿಸಿ ಅದಕ್ಕೆ ಸಂರಕ್ಷಣೆಯನ್ನಿತ್ತರೆ ಸರಕಾರಕ್ಕೆ ಉತ್ಪನ್ನ ಸಿಕ್ಕೀತು; ಜನರಿಗೂ ಉದ್ಯೋಗ ದೊರಕೀತು; ಎಂದು ಹೇಳೋಣವಾಗಿತು. ಈ ಕುರಿತು ಹಿಂದುಸ್ಥಾನ ಸರಕಾರವು ಆಲೋಚಿಸಿ ಹಿಂದುಸ್ಥಾನಕ್ಕೆ ತಗಲುವಷ್ಟು ಉಪ್ಪನ್ನು ಹಿಂದುಸ್ಥಾನದಲ್ಲಿ ಬೆಳಿಸಲು ಬರುವದಿಲ್ಲವಾಗಿ ಅಭಿಪ್ರಾಯಪಟ್ಟಿದೆ. ಹಿಂದುಸ್ಥಾನದ ಮೂರೂ ದಿಕ್ಕಿಗೆ ಉಪ್ಪು ನೀರಿನ ಸಮುದ್ರವಿದೆ; ಆದರೂ, ಹಿಂದುಸ್ಥಾನಕ್ಕೆ ತಗಲುವಷ್ಟು ಉಪ್ಪನ್ನು ಬೆಳಿಸಲು ಹಿಂದುಸ್ಥಾನ ಸರಕಾರಕ್ಕೆ ಇಷ್ಟವಿಲ್ಲ. ಕಾರಣಪರಂಪರೆಯು ಚಿತ್ತವೇಧಕವಿದೆ. ಮುಂಬಯಿಯಿಂದ ಕಲ್ಲಿದ್ದಲಿ ತುಂಬಿಬಂದ ಉಗಿಬಂಡಿಯ ಡಬ್ಬಿಗಳು ಬರಿದಾಗಿ ಬಂಗಾಲಿಗೆ ಹೋಗುತ್ತವೆ. ಹೋಗುವಾಗ ಇವುಗಳಲ್ಲಿ ಉಪ್ಪನ್ನು ತುಂಬಿ ಕಳಿಸಿದರೆ ಈ ಉದ್ಯೋಗಕ್ಕೆ ಸಹಜವಾಗಿ ಉತ್ತೇಜನ ಸಿಕ್ಕೀತು; ಸರಕಾರವು ಈ ವಿಚಾರಕ್ಕೆ ಒಪ್ಪುವದಿಲ್ಲ. ವರ್ತಕರು ಉಗಿಬಂಡಿಯಲ್ಲಿ ಉಪ್ಪನ್ನು ಒಯ್ಯಲು ಸಮ್ಮತಿಸುವದಿಲ್ಲ. ಇತರ ಸರಕುಗಳನ್ನು ಒಯ್ಯುವಾಗ ಇವಕ್ಕೆ ಮಾತ್ರ ಯಾಕೆ ಆಕ್ಷೇಪಿಸುತ್ತಾರೆಂದು ತಿಳಿಯುವದಿಲ್ಲ. ಮತ್ತೊಂದು ಕಾರಣವಿದೆ. ಬಂಗಾಲದಲ್ಲಿ ದೇಶಿ ಉಪ್ಪಿಗೆ ಗಿರಾಕಿಯೇ ಇಲ್ಲ, ಬಿಳೇ ಉಪ್ಪಿನ ಮೇಲೆಯೇ ಪ್ರೇಮ ಬಹಳ. ಅದರಿಂದ ಅಲ್ಲಿ ಈ ಉಪ್ಪನ್ನು ಕಳಿಸಿ ಪ್ರಯೋಜನವಿಲ್ಲ. ಲಿವ್ಹರಪೂಲದೊಳಗಿನ ಉಪ್ಪಿನ ಸಾವುಕಾರರು ಇವನ್ನು ಕೇಳಿ ಕೃತಕೃತ್ಯರೆನಿಸಿಕೊಳ್ಳುವರು. ಹರಿ

(ಮುಂದೆ ೧೧ನೇ ಪಾನಿನ ಮೇಲೆ ಮುಂದರಿಸಿದೆ)

ಹೊನ್ನಾವರದಲ್ಲಿ ಮುಂಬಯಿ!

ಬನ್ನಿರಿ ! ಕೊಳ್ಳಿರಿ ! ! ಕ್ಷುಧಾಶಾಂತಿಹೊಂದಿರಿ ! ! !

ಮುಂಬಯಿಯ ಶಹರವನ್ನು ನೋಡಿದವರು ಅನೇಕರಿರುತ್ತಾರೆ. ಮುಂಬಯಿಯ ಒಹಳ ಪ್ರಸಿದ್ಧವಾದ ಚಹಾ ಅಂಗಡಿ ನಮೂನೆಯ “ಮನಮೋಹನ ವಿಲಾಸ” ವೆಂಬ ಹೆಸರಿನಿಂದ ಸಕಲ ವಿಧಗಳಿಂದಲೂ ಆನಂದಕರವಾದ ಒಂದು ಚಹಾ ದುಕಾನನ್ನು ನಾವು ಹೊನ್ನಾವರದಲ್ಲಿ ಕಳೆದ ವೈಶಾಖ ಶುದ್ಧ ೧೫ಕೆ, (ತಾರೀಖು ೩ ೫-೨೮) ಯಂದ ಪೋಸ್ಟ ಆಫೀಸಿಗೆ ಹೋಗುವ ರಸ್ತೆ ಪರಯಲ್ಲಿ ತೆರೆದಿರುತ್ತೇವೆ. ಅರಸರು ತಿನ್ನಲಪೇಕ್ಷಿಸುವಂಥ ತರತವಾಗ ತರತರದ ತಿನಸುಗಳು ನಮ್ಮಲ್ಲಿ ತಯಾರಾಗುತ್ತವೆ. ಅಮೃತತುಲ್ಯವಾದ ಚಹಾ, ಕಾಫಿ, ಕಷಾಯ, ಶರಬತ್ ಮುಂತಾದ ಪೇಯ ಪದಾರ್ಥಗಳೂ ಶಾಸ್ತ್ರೋಕ್ತವಾಗಿ ಸಿದ್ಧವಾಗುತ್ತವೆ. ಸ್ವಲ್ಪ ಖರ್ಚಿನಿಂದ ಮುಂಬಯಿಯ ಅನುಭವ ಹೊಂದಬೇಕಾದರೆ, ನಮ್ಮ ಈ “ಮನಮೋಹನ ವಿಲಾಸ” ಕ್ಕೆ ಒಮ್ಮೆ ಚಿತ್ತೈಸಬೇಕು. ಗ್ರಾಹಕರು ಹಸಿವೆ-ತೃಷೆಗಳನ್ನು ಕಳೆದು, ಮನೋರಂಜನ ಮಾಡಲಿಕ್ಕೆ ಈ “ಮನಮೋಹನ ವಿಲಾಸ”ದಷ್ಟು ಸಾಮರ್ಥ್ಯವುಳ್ಳದ್ದು ಇಲ್ಲಿ ಬೇರೆ ಇರದು. ಕಾರಣ ಅನುಕೂಲವಿದ್ದವರೆಲ್ಲರೂ ಈ ‘ವಿಲಾಸ’ಕ್ಕೆ ಬಂದು ವಿಲಾಸ ಹೊಂದಿ ಧನ್ಯರಾಗಬೇಕು.

ದರ ವಗೈರೆ ವಿಶೇಷ ಮಾಹಿತಿ ‘ವಿಲಾಸ’ದಲ್ಲಿ.

ಮಾಲಕರು—“ ಮನಮೋಹನ ವಿಲಾಸ, ” ಹೊನ್ನಾವರ.

ಕಾನಡಾ ವೃತ್ತ.

ಮಿತಿ ವಿಭವ ಸಂ। ಜ್ಯೇಷ್ಠ ಶು। ೨ ಗೆ, ಸೋಮವಾರ.

ಹೊಲಗಳ ಪುನರ್ಘಟನೆ.

ಕೊನೆಯ ನಾಲ್ಕು ಮಾತು.

ಸದ್ಯಕ್ಕೆ ಈ ಕಾನೂನಿನ ಇನ್ನು ಕೆಲವು ಕಲಮುಗಳನು ಸಂಕ್ಷಿಪ್ತವಾಗಿ ಸಮಾಲೋಚಿಸಿ ಈ ವಿಷಯ ವಿಚಾರವನ್ನು ಮುಗಿಸುವೆವು. ಕಾರಣವಿದೆ. ಈ ಕಾನೂನಿನ ವಿಚಾರವು ಕಾಯಿದೆ ಕೌನ್ಸಿಲು ನೇಮಿಸಿದ ಚೌಕಶಿ ಮಂಡಳದಲ್ಲಿ ಸವಿಸ್ತರವಾಗಿ ನಡೆದು, ಅನೇಕ ತಿದ್ದುಪಾಟಗಳಾಗಿರುವವೆಂದು ತಿಳಿಯುತ್ತಿದೆ. ತಿದ್ದುಪಾಟಗಳ ನಿಜರೂಪವು ಇನ್ನೂ ಸಾದಾರ ಪ್ರಕಟವಾಗಿಲ್ಲದ್ದರಿಂದ ಅದನ್ನು ವಿಚಾರಿಸಲು ಸಾಧ್ಯವಿಲ್ಲ. ಅದರಿಂದ ಉಳಿದ ಕಲಮುಗಳ ಬಗ್ಗೆ ಸ್ಥೂಲವಾನದಿಂದ ನಾಲ್ಕು ಮಾತು ಬರೆದು, ಈ ವಿಷಯವನ್ನು ಮುಗಿಸಬೇಕಾಗಿದೆ.

ಈ ಕಾನೂನಿಗ ಒಳಪಟ್ಟ ಚಿಕ್ಕ ಪುಟ್ಟ ಹೊಲಗಳನ್ನು ಅನ್ಯರಿಗೆ ಪರಾಧೀನ ಮಾಡಿದ್ದಲ್ಲಿ ನೆರೆಹೊರೆಯ ದೊಡ್ಡವರಿಗೆ ಅಗ್ರಕ್ರಯಾಧಿಕಾರವು ಕೊಡಲ್ಪಟ್ಟಿದೆ. ಇದರಿಂದ ಈ ಅಧಿಕಾರವು ನೆರೆಹೊರೆಯವರಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟೆಂಬುದು ವಿ ಸ್ಪದವು ಅದನ್ನು ತೀರ್ಮಾನಿಸಿಕೊಳ್ಳಲು ಎಷ್ಟೋ ಕೋರ್ಟುಗಳ ಆಶ್ರಯ ಪಡೆಯಬೇಕು. ಇದ್ದ ಕಾನೂನುಗಳ ಅರ್ಥ ಮಾಡಿಕೊಳ್ಳಲಿಕ್ಕೇ ಹೇರಳ ಹಣ ಅಪವ್ಯಯವಾಗುತ್ತಿರುವಾಗ, ಹೊಸ ಕಾನೂನನ್ನು ನಿರ್ಮಿಸುವದು ಅನಿಷ್ಟವೆಂದು ಯಾರೂ ಹೇಳುವರು. ಅಗ್ರಕ್ರಯಾಧಿಕಾರವನ್ನು ಅಮಲುಬಜಾವಣೆ ಮಾಡಿಕೊಳ್ಳುವ ಭರದಲ್ಲಿ ಅಗ್ರಕ್ರಯಾಧಿಕಾರದ ಕಾರಣವಾದ ಹೊಲವನ್ನು ಮಾರಿಕೊಳ್ಳುವ ಪ್ರಸಂಗ ಬಂದೀತು ಗ್ರಾಮದಲ್ಲಿ ಮತ್ಸರವೂ, ದ್ವೇಷಾಸೂಯೆಗಳೂ ಉಂಟಾಗುವವು. ಇಷ್ಟೊಂದು ಮಾತು ಈ ಕಾನೂನಿನೊಳಗಿನ ಪೂರ್ವಾರ್ಧದ ಬಗ್ಗೆ ನಾವು ಹೇಳುವೆವು.

ಉತ್ತರಾರ್ಧವು ಕ್ರಾಂತಿಕಾರಕವಿದೆ. ಇದರಿಂದ ಇಡೀ ಗ್ರಾಮವೇ ಪುನರ್ಘಟಿತವಾಗುತ್ತದೆ. ಚಿಕ್ಕ ಪುಟ್ಟ ಹೊಲಗಳುಳ್ಳ ಗ್ರಾಮವನ್ನು ನಕಾಶೆಯಂತೆ, ಸರಳ ರೇಷೆಯಂತೆ ಸರಿಯಾಗಿ ಘಟಿಸಲು ಈ ಭಾಗದಲ್ಲಿ ಯೋಜನೆಯಾಗಿದೆ. ಈ ಗ್ರಾಮದೊಳಗಿನ ಕೆಲವು ಬೇಸಾಯಗಾರರು ಕಲೆಕ್ಟರರಿಗೆ ಅರ್ಜಿ ಮಾಡಿಕೊಂಡಲ್ಲಿ ಅದರಂತೆ ಸರಕಾರದಿಂದ ಪಂಚರೊಬ್ಬರು ನೇಮಿಸಲ್ಪಡುವರು. ಅವರು ಪ್ರತಿಯೊಂದು ಹೊಲದ ಬೆಲೆಯನ್ನು ನಿರ್ಧರಿಸುವರು. ಬೆಲೆ ನಿರ್ಧಾರದ ಸರ್ವಾಧಿಕಾರವು ಈ ಪಂಚರಿಗೆ ಕಾನೂನಿನಿಂದ ಕೊಡಲ್ಪಟ್ಟಿದೆ. ಇವರು ಮಾಡಿದ್ದೇ ಹುಣ್ಣಿಮೆ. ಹೊಲಗಳ ಬೆಲೆಯನ್ನು ಆಕ್ಷೇಪಿಸುವ ಅಧಿಕಾರವು ಬೇಸಾಯಗಾರರಿಗಿಲ್ಲ. ಅಂದರೆ ಕಡಿಮೆ ಮಾಡಲಿಕ್ಕೂ, ಹೆಚ್ಚು ಮಾಡಲಿಕ್ಕೂ ಪಂಚರಿಗೆ ಸಂಪೂರ್ಣ ಅಧಿಕಾರವಿದೆ. ಪುನರ್ಘಟನೆಯಲ್ಲಿ ಹೊಲ ಪ್ರಾಪ್ತಿಯಾದ ರೈತರು ಹೊಲನಷ್ಟವಾದ ರೈತರಿಗೆ ಪಂಚರು ತೀರ್ಮಾನಿಸಿದಷ್ಟು ಹಣವನ್ನು ಕೊಡಬೇಕು. ಹೊಲಗಳನ್ನು ಹಂಚುವಾಗ ತಕ್ಕಮಟ್ಟಿಗೆ ಖಾತೆದಾರರ ಒಟ್ಟು ಕ್ಷೇತ್ರವು ಒಂದೆಡೆ ಬರುವಂತೆ ಹಂಚಲ್ಪಡುವವು. ಊರ್ಜಿತ ನಷ್ಟವನ್ನು ಪರೀಕ್ಷಿಸುವ ಸರ್ವಾಧಿಕಾರವು ಪಂಚರಿಗೇ ಕೊಡಲ್ಪಟ್ಟಿದೆ. ಇದರ ಮೇಲೆ ಡಿಸ್ಟ್ರಿಕ್ಟ ಜಡ್ಜರಿಗೊಂದು ಅಪೀಲು ಮಾಡುವ ಅಧಿಕಾರವಿದೆ. ಕೋರ್ಟಿನೊಳಗಿನ ಅಪೀಲು — ದಾವೆಯ ಅಧಿಕಾರಗಳೆಂದರೆ ಪ್ರವ್ಯಾಪವ್ಯಯ ಮಾಡುವ ಸಭ್ಯ ಉಪಾಯಗಳೆಂದ ಪರಿಸ್ಥಿತಿ ಬಲ್ಲಾದವರು ಚೆನ್ನಾಗಿ ಅರಿತಿದ್ದಾರೆ. ಆ ಮಾತು ಒತ್ತಟ್ಟಿಗಿಟ್ಟರೆ, ಪಂಚರು ಗ್ರಾಮದ ಪುನರ್ಘಟನೆಯ ವಿಶ್ವಾಮಿತ್ರ ಋಷಿಗಳೆಂದು ಹೇಳಬಹುದ. ಭೂಮಿ ಕಳಕೊಳ್ಳುವರು ತಮ್ಮ ಭೂಮಿಯ ಬೆಲೆಯನ್ನು ನಿಶ್ಚಯಿಸಲು ಪಂಚರ ಕೈಕಾಲು ಹಿಡಿಯಹೋಗುವದು ಸಹಜವು. ಭೂಮಿ ಪ್ರಾಪ್ತಿಯಾಗುವ ಸಂಭವವಿದ್ದವರು ಭೂಮಿಯ ಬೆಲೆಯನ್ನು ತಗ್ಗಿಸುವದರಲ್ಲಿ ಯುಕ್ತಿ—ಪ್ರಯುಕ್ತಿಗಳನ್ನು ಉಪಯೋಗಿಸುವರು. ಭೂಮಿಗಳನ್ನು ಹಂಚುವಾಗ ಉರ್ಜಿತ ಭೂಮಿಗಳನ್ನಷ್ಟೇ ಪಡೆಯಲಿಕ್ಕೆ ಖಾತೆದಾರರೊಳಗೆ ಪೈಪೋಟಿಯುಂಟಾಗುವದು. ಇದರ ಅರ್ಥವು ಸ್ಪಷ್ಟವಿದೆ. ಪಂಚರ ಅನುಗ್ರಹಕ್ಕೆ ಗ್ರಾಮದವರ ದ್ರವ್ಯಸಂಗ್ರಹದ ವಿನಿಯೋಗವಾಗುವದು. ಮೇಲಾಗಿ ಭೂಮಿ ಕಳಕೊಂಡವರಿಗೆ ಭೂಮಿ ಪ್ರಾಪ್ತಿಯಾದವರು ಬೆಲೆ ತೆರಬೇಕು, ಪಂಚರ ಸರಂಜಾಮಿನ ಖರ್ಚನ್ನೂ ಕೊಡಬೇಕು, ಡಿಸ್ಟ್ರಿಕ್ಟ ಕೋರ್ಟಿನೊಳಗಿನ ಬಡದಾಟದ ಖರ್ಚನ್ನೂ ಸೈರಿಸಬೇಕು. ಭೂಮಿ ಕಳಕೊಂಡವರು ಕೈಗೆ ಹಣ ಸಿಕ್ಕಿದ ಕೂಡಲೆ ಬೇಜವಾಬದಾರರಾಗಿ ವಿಲಾಸದಲ್ಲಿ ಹಣವನ್ನು ವಿನಿಯೋಗಿಸಿ ದರಿದ್ರರಾಗಲು ಕಾಲಷ್ಟು, ಬೇಕಷ್ಟು ಅವಕಾಶಗಳು ಬ್ರಿಟಿಶರ ಆಗಮನದಿಂದ ನಿರ್ಮಾಣಹೊಂದಿವೆ. ಖಾತೆದಾರರಂತು ವಿಶ್ವಾಮಿತ್ರ ಸೃಷ್ಟಿಯ ಪ್ರಾಪ್ತಿಗೆ ಹೋಗಿ ಸಾಲಗಾರರಾಗುವರು. ಭೂಮಿ ಕಳಕೊಂಡವರಿಗೆ ಗ್ರಾಮದಲ್ಲಿ ಅಸ್ತಿತ್ವವಿಲ್ಲದ್ದರಿಂದ ಅವರು ದೇಶಾಂತರ ಮಾಡುವರು. ಭೂಮಿಯನ್ನು ಸಾಗುವಳಿ ಮಾಡಲು ಮನುಷ್ಯಬಲವಿಲ್ಲದೆ ಖಾತೆದಾರರು ಬಡವರಾಗಿ ಬಹಳೇ ದೀನರಾಗುವರು. ಭೂಮಿ ಸುಧಾರಿಸುವದಕ್ಕಾಗಿ ಉಗಿಯ ನೇಗಿಲು, ಎಲುಬಿನ ಗೊಬ್ಬರ ಮುಂತಾದ ಸಂಭ್ರಮಗಳನ್ನು ತರಹೋಗುವರು. ಅವುಗಳಿಗೆ ಬೇಕಾಗುವ ಸಾಮಾನು ಗ್ರಾಮದಲ್ಲೇನು ತಯಾರಾಗುವದಿಲ್ಲ. ಅದನ್ನು ಉಪಯೋಗಿಸಿಕೊಳ್ಳುವಷ್ಟು ಶಿಕ್ಷಣವೂ ಸಾಮಾನ್ಯ ಗ್ರಾಮದವರಿಗಿಲ್ಲ. ಅದರಿಂದ ಈ ಯಂತ್ರ ಸಾಮಗ್ರಿಗಳು ಕುಂಟೆಯಾಗಿ ಪರಿಣಮಿಸುವವು. ಗ್ರಾಮದ ಸ್ಥಿತಿಯು ತೀರ ದೀನವಾಗಿ ಖಾತೇದಾರರು ದೇಶಾಂತರ ಮಾಡಬೇಕಾಗುವದು.

ಸಾಮಾನ್ಯವಾಗಿ ಹೊಲಗಳ ಪುನರ್ಘಟನೆಯ ಕಾನೂನಿನ ಮೇಲೆ ನಮಗೆ ಕೋಚಿದ ವಿಚಾರಗಳನ್ನು ನಾವು ವಿವರಿಸಿದ್ದೇವೆ. ಚಿಕ್ಕ ಪುಟ್ಟ ಹೊಲಗಳಿಂದ ಬೆಳೆಯ ಮಾನವು ಕೆಲಮಟ್ಟಿಗೆ ತಗ್ಗುತ್ತದೆಂದು ಯಾರೂ ಒಪ್ಪತಕ್ಕಂಥ ಮಾತು, ನಾವಾದರೂ ಒಪ್ಪುತ್ತೇವೆ. ಆದರೆ, ಅದಕ್ಕಾಗಿ ಈ ಕಾನೂನು ಬೇಡ. ಇದಕ್ಕೆ ಮೂಲ ಕಾರಣವನ್ನು ಪರಿಶೋಧಿಸಬೇಕು. ಮತ್ತು ಅದರ ಮೇಲೆಯೇ ಸರಕಾರವು ಉಪಾಯವನ್ನು ಯೋಜಿಸಬೇಕು. ಬೇಸಾಯಗಾರರಿಗೆ ಹೊಲಗಳಿಗಿಂತ ಹೆಚ್ಚು ಪ್ರಯೋಜನ ಕೊಡುವ ಬೇರೆ ಉದ್ಯೋಗಗಳಿಲ್ಲ. ನೆರೆಹೊರೆಯಲ್ಲಿ ಸಾಗುವಳಿ ಮಾಡುವಂಥ ಭೂಮಿ ಇದ್ದರೆ, ಸರಕಾರವು ಅವರಿಗೆ ಆ ಭೂಮಿಯನ್ನು ಒದಗಿಸಿ ಕೊಟ್ಟರೆ, ಬೇಸಾಯಗಾರರು ಅದನ್ನು ತಾವಾಗಿ ಸಾಗುವಳಿ ಮಾಡುವದಿಲ್ಲವೇ? ತಮ್ಮ ಚಿಕ್ಕ ಪುಟ್ಟ ಹೊಲಗಳನ್ನು ಬೇರೆಯವರಿಗೆ ಸ್ವಸಂತೋಷದಿಂದ ಸಾಗುವಳಿಗೆ ಕೊಡುವದಿಲ್ಲವೇ? ಇದಕ್ಕೆಲ್ಲ ಕಾನೂನು ಬೇಕೇ. ನಮ್ಮ ಜಿಲ್ಹೆಯೊಳಗಿನ ಅವಸ್ಥೆಯನ್ನೇ ಕೇಳಿ. ಜಂಗಲ ನಿಬಂಧನೆಗಳೊಳಗಿಂದ ಉಪಾಯ ಗಾಣದೆ ಎಷ್ಟೋ ಬೇಸಾಯಗಾರರು ಗ್ರಾಮತ್ಯಾಗ ಮಾಡಿದರು, ದೇಹತ್ಯಾಗ ಮಾಡಿದರು. ಗ್ರಾಮಗಳು ಹಾಳು ಬಿದ್ದವೆ. ಗ್ರಾಮಗಳಲ್ಲಿ ಉಳಕೊಳ್ಳಲು ಉಪಾಯವಿದ್ದಿದರೆ, ಸರಕಾರವು ಕಾಡು ಪ್ರಾಣಿಗಳ ಮೇಲಿನ ಮಮತೆಯನ್ನು ಬಿಟ್ಟು ಪ್ರಜೆಗಳ ಸುಖಸಾಧನಗಳನ್ನು ಕಲ್ಪಿಸಿದ್ದರೆ, ಬೇಸಾಯಗಾರರ ಅವಸ್ಥೆಗೆ ಬಹುಮಟ್ಟಿಗೆ ತಡೆಬೀಳುತ್ತಿತ್ತು. ಹೊಲಗಳ ಒಡಕು ಕೆಲಮಟ್ಟಿಗಾದರೂ ತಡೆಯುತ್ತಿತ್ತು.

ಇನ್ನೊಂದು ಮಾತನ್ನೂ ಇಲ್ಲಿ ವಿಚಾರಿಸಬಹದು. ಮಳೆ ಬೀಳದೆ ಬರಗಾಲ ಬೀಳುವ ಗ್ರಾಮಗಳಲ್ಲಿ ಪುನರ್ಘಟನೆಯಿಂದ ಲಾಭವೇನಿದೆ? ಹೊಲಗಳು ಚಿಕ್ಕದಾಗಲಿ, ದೊಡ್ಡದಾಗಲಿ ಸರಿಯಾಗಿ ಮಳೆ ಬಿದ್ದರೆ ಮಾತ್ರ ಬೇಸಾಯಗಾರರ ಬಣ್ಣವಲ್ಲವೇ? ನಮ್ಮ ಕಾನಡಾ ಜಿಲ್ಹೆಯಲ್ಲಿ ೧೮೦೬ನೇ ಇಸ್ವಿಯಲ್ಲಿ ಬರಬಿದ್ದು ೩ ಸಾವಿರ ಜನರು ಸತ್ತರು; ೧೮೬೫—೬೬ರಲ್ಲಿಯೂ ನಮ್ಮಲ್ಲಿ ಬರಗಾಲದ ಸ್ಥಿತಿ ಇತ್ತು.

ಇತ್ತಕಡೆಯ ಸ್ಥಿತಿಯಂತು ಎಲ್ಲರಿಗೂ ಗೊತ್ತಿದ್ದದ್ದೇ. ಸರಕಾರದ ಮಾಹಿತಿಯಂತೆ ನಮ್ಮ ಜಿಲ್ಲೆಯ ೩೦೦೦ ಚದರ ಮೈಲಿನ ಮೇಲೆ ಬಂಬೀಳುವದಿಲ್ಲೆಂದು ಬರೆದಿದೆ. ಅಷ್ಟೂ ಪ್ರದೇಶವೇನು ಸಾಗಾಗುವದಿಲ್ಲ. ಜಂಗಲ ಖಾತೆಯ ಕಷ್ಟನಷ್ಟದ ಮೂಲಕ ಇಲ್ಲಿಯ ಬೇಸಾಯಗಾರರು ಬೆಂದು ಬೆಂಡಾಗಿದ್ದಾರೆ. ಈಗಲೇ ಪರಸ್ಪರ ಸಹಕಾರ ಹಾಗೂ ಸರಕಾರಕ್ಕೆ ಕೂಡಿ ಇಲ್ಲಿಯ ಬೇಸಾಯಗಾರರು ೬೦ ಲಕ್ಷ ರೂಪಾಯಿ ಸಾಲ ತೆರಬೇಕು. ಸಾವುಕಾರರ ಸಾಲವಿದೆ, ಮೇಲಾಗಿ ಈ ಹೊಸ ಘಟನೆಯ ಕಾನೂನು ಬಂದರೆ, ಇನ್ನು ಸಾಲದಲ್ಲಿ ಬೀಳಬೇಕಾಗುವದು. ಇದನ್ನೆಲ್ಲ ವಿಚಾರಿಸಿದರೆ, ಈ ಕಾನೂನಿನಿಂದ ಕ್ಷೇಮವಿಲ್ಲೆಂದು ನಮ್ಮ ಮನೋನಿಶ್ಚಯವಾಗಿದೆ. ಯಾವ ರೂಪದಲ್ಲಿಯೂ ಈ ಕಾನೂನು ಬೇಡ. ಜಂಗಲ ಉಪದ್ರವಗಳನ್ನು ನೀಗಿಸಿದರೆ, ನಮ್ಮ ಲೋಕನಿಯುಕ್ತ ಪ್ರತಿನಿಧಿಗಳು ಸೂಚಿಸಿದ ಉಪಾಯಗಳನ್ನು ಕೈಕೊಂಡರೆ ಬೇಸಾಯಗಾರರ ಹೊರೆ ಕಳೆದಷ್ಟು ಸುಖವಾಗುವದು, ಬೇಸಾಯದ ಉತ್ಪನ್ನವು ಹೆಚ್ಚುವದು. ಯೋಗ್ಯ ಪ್ರತಿಫಲ ಸಿಗದ ಭೂಮಿಗಳು ಸರಕಾರದ ಸ್ವಾಧೀನವಾಗಿ, ಬೇಸಾಯಗಾರರು ಹೊಸ ಭೂಮಿಗಳನ್ನು ಸಾಗುವಳಿ ಮಾಡಿ ಸರಕಾರದ ಅಭೀಷ್ಟ ಚಿಂತನ ಮಾಡುವರು. ಬೇಸಾಯಗಾರರ ಕಲ್ಯಾಣಕ್ಕಾಗಿ ಸರಕಾರಕ್ಕೆ ಚಿಂತೆಯಾಗಿರುತ್ತದಲ್ಲವೇ? ಇದು ನಿಜವಿದ್ದರೆ, ಸರಕಾರವು ಮೊಟ್ಟಮೊದಲು ಜಂಗಲ ಉಪದ್ರವಗಳನ್ನು ಪರಿಹರಿಸಿ ನೋಡಲಿ. ಇದರಿಂದ ಬೇಸಾಯಗಾರರು ಸಮೃದ್ಧರಾಗದಿದ್ದರೆ, ಈ ಕಾನೂನಿನಿಂದಲೇ ಬೇಸಾಯಗಾರರ ಉಳಿಗಾಲವಿದ್ದರೆ ನಾವು ಈ ಕಾನೂನನ್ನು ಪುರಸ್ಕರಿಸುವ ವಿಚಾರ ಮಾಡಬಹುದು. ಇಂದಿಗೇ ಈ ಗಾಬರಿಯಾಕೆ?

ಸ್ಫುಟ ಸೂಚನೆಗಳು.

೧. ಶ್ರೀಮದುತ್ತರಾದಿ ಮಠದ ಶ್ರೀಸತ್ಯಧ್ಯಾನತೀರ್ಥಂಗಳವರಿಗೆ ಮೊಟ್ಟಮೊದಲು ಭಕ್ತಿಪೂರ್ವಕವಾಗಿ ಅಭಿವಾದನಗಳನ್ನರ್ಪಿಸಿ, ತುಮ್ಮಿನಕಟ್ಟೆ ರಾ| ವೆಂಕಣ್ಣಾಚಾರ್ಯ ಕಾಳಗಿಯವರ ಕಷ್ಟನಷ್ಟಗಳನ್ನು ಪರಾಂಬರಿಸಲಿಚ್ಛಿಸುವೆವು. 'ವಿವಿಧ ಸಂಗ್ರಹ'ದಲ್ಲಿ ಈ ವಿಷಯದ ಮುಖ್ಯ ಮುಖ್ಯ ಸಂಗತಿಗಳು ವಿವರಿಸಲ್ಪಟ್ಟಿವೆ. ಇದರ ಮೇಲಿಂದ ಶ್ರೀಗಳ ಮಠವಲ್ಲ ಶ್ರೀವೇದವ್ಯಾಸಾಚಾರ್ಯರೇ ಮಠದ ಸರ್ವಾಧಿಕಾರವನ್ನು ಸ್ವಾಧೀನಪಡಿಸಿಕೊಂಡಂತೆ ಕಾಣುತ್ತದೆ. ಶ್ರಾದ್ಧ ಪಾಕ ಮಾಡಿದ ಕಥೆಯನ್ನೋದಿದರೆ ಧರ್ಮದ ಬದಿ ಮಾಡಿ ಅಧರ್ಮಕ್ಕೆ ಶ್ರೀ ಮಠದೊಳಗಿನ ಮುಖ್ಯಸ್ಥರು ಬರಮಾಡಿಕೊಂಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಶ್ರೀಗಳ ಆಜ್ಞಾಪತ್ರ ಹೊರಡುವ ಮೊದಲೇ ಶ್ರೀಮಠದ ಮುಖಾಂತರ ನಡೆದ ಬಹಿಷ್ಕಾರ ಬಲಾತ್ಕಾರಕ್ಕೆ ಹೊಣೆಗಾರರ್ಯಾರು? ಸುಳ್ಳೇ ಹೊಲಿಯನ್ನೆಬ್ಬಿಸಿ ಶಿಷ್ಯರಿಗೆ ಕಾಡುವವರಿಗೆ ಶಾಸನವೇನಿದೆ? ಎಂಬುದನ್ನು ಶ್ರೀಗಳು ವಿಚಾರಿಸಿ ಆ ಕುರಿತು ಮೊಟ್ಟಮೊದಲು ಉಪಾಯ ಮಾಡದಿದ್ದರೆ ಶಿಷ್ಯರ ಭಕ್ತಿಯು ಕ್ರಮವಾಗಿ ಲೀನವಾಗುವದು. ಶ್ರೀಗಳಿಗೆ ಶಿಷ್ಯರ ಭಕ್ತಿಯಷ್ಟು ದೊಡ್ಡ ಧನವಿಲ್ಲ. ಆ ಧನಸಂಗ್ರಹದ ಮೇಲೆಯೇ ಶ್ರೀಗಳ ಕಾರಭಾರ ನಡೆದಿದೆ. ಶಿಷ್ಯರ ಭಾವನೆಯು ನಷ್ಟವಾದರೆ, ಗುರುಗಳ ರಾಯಸಕ್ಕೆ ಮಾನ್ಯತೆ ಸಿಗುವ ಸಾಧನವೇ ನಷ್ಟವಾಯಿತು. ರಾಜದಂಡವು ಗುರುಮಠಗಳಲ್ಲಿಲ್ಲ; ಭಾವನೆಯ ಧನದ ಮೇಲೆಯೇ ಧರ್ಮಕಾರ್ಯವನ್ನು ಶ್ರೀಗಳು ಸಾಗಿಸಿಕೊಂಡು ಹೋಗಬೇಕು. ಧಾರವಾಡದಲ್ಲಿ ಮುದ್ರಾಧಾರಣೆಯನ್ನು ಕೊಳ್ಳಬಾರದೆಂಬ ಚಳವಳಿ ನಡೆದಿದೆ. ಇದನ್ನೂ ಶ್ರೀಗಳು ಪರಾಂಬರಿಸಬೇಕು; ನಿಷ್ಪಕ್ಷಪಾತಬುದ್ಧಿಯಿಂದ ಆಳವಾಗಿ ವಿಚಾರಿಸಬೇಕು. ಶಿಷ್ಯರ ಭಾವನೆಗೆ ಎಷ್ಟು ಬಾಧಕ ತರುವಂಥ ಕೃತ್ಯಗಳನ್ನು ಕೈಕೊಳ್ಳಲಾಗಿದೆ. ಶ್ರೀಗಳ ವಿಷಯ ಶಿಷ್ಯರಲ್ಲಿ ಪರಮಾದರವಿದೆ. ಶ್ರೀಗಳು ದಿಗ್ವಿಜಯ ಮಾಡುವ ಪ್ರಕಾರಗಳನ್ನೂ, ಶ್ರೀಗಳ ವಿದ್ವತ್ತೆಯನ್ನೂ, ವೈಷ್ಣವ ಮತಪ್ರಚಾರಕ್ಕಾಗಿಯೂ, ಸ್ಥಾಪನೆಗಾಗಿಯೂ ಕಾಲಕಾಲಕ್ಕೆ ಶ್ರೀಗಳು ಯೋಜಿಸುವ ಆಚಾರ-ವಿಚಾರಗಳನ್ನೂ, ಸಂಶೋಧನೆಗಳನ್ನೂ, ಪಠಣ ಸಂಶೋಧನ ಕಾರ್ಯವನ್ನೂ ಪರಾಂಬರಿಸಿದರೆ, ಅರ್ವಾಚೀನ ಕಾಲಕ್ಕುಚಿತವಾಗಿ ನಡೆಯುವ ಶ್ರೀಮದಾನಂದತೀರ್ಥ ಶ್ರೀಭಗವತ್ಪಾದಾಚಾರ್ಯರ ಸಮಸ್ತ ವೈಷ್ಣವ ಮಠಗಳಲ್ಲಿ ಶ್ರೀಮದುತ್ತರಾದಿ ಮಠವೇ ಮುಖ್ಯವಾಗಿ ಅಗ್ರಸ್ಥಾನವನ್ನು ಪಡೆಯುತ್ತದೆಂದು ವಿಚಾರಿಗಳ ಅಭಿಮತವಿದೆ. ಲೋಕಮಾನ್ಯರ ಗೀತಾರಹಸ್ಯ ವಿವೇಚನಕ್ಕೆ ದ್ವೈತಸಿದ್ಧಾಂತ ಮಂಡನ ಮಾಡ ಸ್ಥೂಲ-ಸೂಕ್ಷ್ಮ ಪ್ರಶ್ನೆಗಳನ್ನು ಪ್ರಕಟಿಸಿದ ಪ್ರತಿಭಾಸಂಪನ್ನ ವಿದ್ವನ್ಮಣಿಗಳು ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀಸತ್ಯಧ್ಯಾನತೀರ್ಥಂಗಳವರೇ ಎಂದು ಎಲ್ಲರೂ ಅರಿತ ವಿಷಯವಾಗಿದೆ. ಆದರೆ, ಮುಖ್ಯಸ್ಥರ ಗೊಂದಲದಿಂದ, ಸ್ವಾರ್ಥಪರಾಯಣತೆಯಿಂದ ಶ್ರೀ ಮಠದ ಮೇಲಿನ ನಿಷ್ಠೆಯು ಬಹುಮಟ್ಟಿಗೆ ಕುಗ್ಗಿರುವದಾಗಿ ಧಾರವಾಡದೊಳಗಿನ ವರ್ತಮಾನಪತ್ರಗಳಲ್ಲಿ ಪ್ರಕಟಿಸಿಕೊಂಡಿದ್ದ ಸಮಾಚಾರಗಳಿಂದ ಹೇಳಬಹುದು. ಶ್ರೀಗಳು ಬಡಶಿಷ್ಯರನ್ನು ಧಿಕ್ಕರಿಸಲಾಗದು. ಕಾಳಗಿ ವೆಂಕಣ್ಣಾಚಾರ್ಯರ ದೈನ್ಯವನ್ನು ವಿಚಾರಿಸಿ ಸರಕಾರವು ಅವರಿಗೆ ಸಿಗತಕ್ಕ ವೆಚ್ಚವನ್ನು ಅವರ ಮನೆಯಲ್ಲೇ ಕಲ್ಪಿಸುವ ಔದಾರ್ಯವನ್ನು ತೋರಿಸುತ್ತಿರುವಾಗ, ಸುಖ-ದುಃಖಗಳ ವಿಶೇಷ ವಿಚಾರವಿದ್ದ ಶ್ರೀ ಮಠದಿಂದ ಈ ಪ್ರಕಾರ ಪೀಡನೆಯಾಗುವದು ಎಷ್ಟರಮಟ್ಟಿಗೆ ಉಚಿತವಲ್ಲ. ಶ್ರೀಸತ್ಯಧ್ಯಾನತೀರ್ಥಂಗಳವರು ಎಲ್ಲ ವಿಚಾರ ಮಾಡಿ ಶ್ರೀಮಠಕ್ಕೆ ಅಪಕೀರ್ತಿ ತರುವ ಅನ್ಯಾಯ ಮಾಡಿದವರಿಗೆ ತಕ್ಕ ಶಾಸನ ವಿಧಿಸಬೇಕಾಗಿ ನಾವು ವಿನಂತಿಸಿಕೊಳ್ಳುತ್ತೇವೆ. ಶ್ರೀಗಳಿಗೆ ಯಾರದೂ ದಾಕ್ಷಿಣ್ಯವಿರಲು ಕಾರಣವಿಲ್ಲ. ಪೀಠವು ಅತ್ಯಂತ ಪವಿತ್ರವಿದೆ. ಧರ್ಮರಕ್ಷಣೆಗಾಗಿ ಸಂಸಾರಕ್ಕೆ ತಿಲಾಂಜಲಿ ಕೊಟ್ಟು ಸನ್ಯಾಸದೀಕ್ಷೆಯನ್ನು ಕೈಕೊಂಡ ಶ್ರೀಗಳಿಗೆ ಪ್ರಪಂಚದ ಪಾಶಗಳ ಬಾಧೆಯಾಗಲಾರದು; ಬಾಧೆಯಾಗಬಾರದೆಂದೇ ಪ್ರಪಂಚ ಪಾಶವಿಸರ್ಜನೆಯ ಪೂರ್ವವಿಧಿಗಳು ನಡೆದು, ಆಮೇಲೆ ಸನ್ಯಾಸದೀಕ್ಷೆ ಕೊಡೋಣಾಗುತ್ತದೆ. ಸ್ಖಲನಶೀಲ ಮಾನವನಿಗೆ ಸಹಜವಾದ ದ್ವೇಷಾಸೂಯೆಗಳಾಗಲಿ, ಅನ್ಯತ್ರದ ದಾಕ್ಷಿಣ್ಯವಾಗಲಿ, ದೊಡ್ಡಸ್ತನದ ಭೀತಿಯಾಗಲಿ ಸನ್ಯಾಸದೀಕ್ಷೆಯನ್ನು ಕೈಕೊಂಡು ಧರ್ಮದಂಡವನ್ನು ಸ್ವೀಕರಿಸಿದ ಶ್ರೀಗಳಿಗೆ ಎಂಥಾದರೂ ಬಾಧಿಸಬಲ್ಲವೇ? ಧರ್ಮಪೀಠಾಧೀಶರು ಪೀಠದ ಕಾರ್ಯವನ್ನು ನಿರ್ಮಲಚಿತ್ತದಿಂದ ಗ್ರಹಿಸಿ, ಶಿಷ್ಯರಿಗೆ ಸಲಹಬೇಕಾಗಿ ಪ್ರಾರ್ಥಿಸಿಕೊಂಡು, ಧೈರ್ಯದಿಂದ ಶ್ರೀಮದುತ್ತರಾದಿ ಮಠದೊಳಗಿನ ಗೊಂದಲವನ್ನು ಬೈಲಿಗೆಳೆದ ಬಗ್ಗೆ ರಾ| ವೆಂಕಣ್ಣಾಚಾರ್ಯ ಕಾಳಗಿಯವರಿಗೆ ನಾವು ಪುನಃಪೂರ್ವಕವಾಗಿ ಅಭಿನಂದಿಸುವೆವು.

---

೨. ಬಾರ್ಡೋಲಿಯು ರಣರಂಗಕ್ಕೆ ದಿನಾ ಕಳೆಯೇರುತ್ತಿದೆ. ಕರ ಕಂದಿಗೆಯ ಜಪ್ತಿಯ ಕ್ರಮಗಳನ್ನು ವಿಚಾರಿಸಿದರೆ, ಸರಕಾರಿ ಅಧಿಕಾರಿಗಳಿಗೆ ನಿರಾಶೆಯಾಗಿದೆಂದು ಈಗ ಖಂಡಿತವಾಗಿ ಹೇಳಬಹುದು. ಒಂದು ಬೋಧವನ್ನು ಮಾತ್ರ ಪ್ರಜೆಗಳು ಪಡೆಯತಕ್ಕಂಥಾದ್ದಿದೆ. ಅದನ್ನಷ್ಟು ಮುಂದಾಗ್ರತೆಗಾಗಿ ನಾವು ನಮೂದಿಸಬೇಕಾಗಿದೆ. ಪರಸ್ಪರ ಸಹಕಾರ, ಬೇಸಾಯ ಖಾತೆ ಮುಂತಾದವು ಜನರ ಅನುಕೂಲ್ಯಕ್ಕಾಗಿ ಸರಕಾರದಿಂದ ಸ್ಥಾಪಿಸಲ್ಪಟ್ಟಾಗಿವೆಂದು ಹೇಳೋಣಾಗುತ್ತದೆ. ಅವುಗಳಲ್ಲಿ ಕಾರಣಾಂತರದಿಂದ ಜಮೆಯಾದ ಪ್ರಜೆಗಳ ಹಣವನ್ನು ಸರಕಾರವು ತೀರ್ವೆ ವಸೂಲಿಗಾಗಿ ಪಡೆಯಲುದ್ಯುಕ್ತವಾಗುವದು ತೀರ ನಿಂದ್ಯವಿದ್ದಾಗ್ಯೂ ಪ್ರಜೆಗಳ ಪರಾವಲಂಬನವು ಅದರ ಮೇಲಿಂದ ಸ್ಫುಟವಾಗುತ್ತದೆ. ಸರಕಾರದ ಅಂತರಂಗವು ಪರಿಶುದ್ಧವಾದ ಹೊರತು ಅದರಿಂದ ಕೊಡಮಾಡಿದ ಅನುಕೂಲತೆಗಳನ್ನು ಪ್ರಜೆಗಳು ಪಡೆಕೊಂಡರೆ, ಸರಕಾರಕ್ಕೂ, ಪ್ರಜೆಗಳಿಗೂ ಕಲಹವುಂಟಾದಾಗ ಆ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಂಡು ಪ್ರಜೆಗಳನ್ನು ಕಾಡಲು ಸರಕಾರಕ್ಕೆ ಸಾಕಷ್ಟು ಇಂಬಿದೆ. ವಿಶ್ವಾಸಘಾತ ಮುಂತಾದ ಪಾಪ-ಪುಣ್ಯದ ವಿಚಾರಗಳ ಸ್ಪರ್ಶವಾಗದಿದ್ದರೆ, ಅಧಿಕಾರಿಗಳ ಕೈಹಿಡಿಯುವವರು ತ್ರಿಭುವನದಲ್ಲಿ ಯಾರಿಲ್ಲ. ಬಾರ್ಡೋಲಿಯೊಳಗಿನ ಬೇಸಾಯ ಖಾತೆಯ ಡೈರೆಕ್ಟರರೇನೋ ಮಾಮುಲೇದಾರರಿಗೆ ತಲೆಬಾಗಿಸಲೊಪ್ಪಲಿಲ್ಲವಾಗಿ ಪ್ರಕಟವಾಗಿದೆ. ಆದರೆ, ಎಲ್ಲ ಡೈರೆಕ್ಟರರೂ ಹೀಗೆಯೇ ಇರುತ್ತಾರೆಂದು ಹೇಳಬರದು. ಸ್ವಾರ್ಥಪರಾಯಣ ಮಾನವರೇ ಬಹಳ. ಇಂಥಲ್ಲಿ ಸರಕಾರದ ಅಧಿಕಾರಕ್ಕೊಳಪಟ್ಟು ಪ್ರಜೆಗಳು ಸಂಸ್ಥೆಗಳನ್ನೇರ್ಪಡಿಸುವದು ತಪ್ಪೆಂದು ಬಾರ್ಡೋಲಿಯೊಳಗಿನ ವೃತ್ತಾಂತದ ಮೇಲಿಂದ ತೋರುತ್ತಿದೆ. ಈ ಬೋಧವನ್ನು ಪ್ರಜೆಗಳು ಪಡೆಯಬೇಕಾಗಿ ಬಾರ್ಡೋಲಿಯ ಮಾಮುಲೇದಾರರು ಕೃತಿಯಿಂದ ಮುಂದಾಗ್ರತೆಯನ್ನಿತ್ತಿದ್ದಾರಲ್ಲವೇ?

ಧಾರವಾಡದಲ್ಲಿ ಪರಿಷತ್ತುಗಳು.

ಕರ್ನಾಟಕಸ್ಥರು ಚಿತ್ತೈಸಬೇಕು.

೫ನೇ ಕರ್ನಾಟಕ ಪ್ರಾಂತಿಕ ಪರಿಷತ್ತು ತಾ. ೨೬ ನೇಗೆ ಪ್ರಾರಂಭವಾಗುವದು. ಶ್ರೀ| ಮುಕುಂದ ನರಿಮಾನರವರು ಅಧ್ಯಕ್ಷರಾಗುವರು. ೧ನೇ ಖಾದಿ ಪರಿಷತ್ತಿನ ಅಧ್ಯಕ್ಷಸ್ಥಾನವು ಲಲಮಟ್ಟಿಯ ಅಶ್ವತ್ಥ ಬ್ರಹ್ಮಚಾರಿ ಮುಂಜಪ್ಪ ಹರ್ಡೀಕರರಿಗೆ ಅರ್ಪಿಸಲ್ಪಟ್ಟಿದೆ. ಕರ್ನಾಟಕ ಏಕೀಕರಣ ವಿಚಾರವು ಶ್ರೀ| ರಂಗನಾಥ ಮೊದಲಿಯಾರರವರ ಅಧ್ಯಕ್ಷತೆಯಲ್ಲಿ ವಿಚಾರಿಸಲ್ಪಡುವದು. ೨ನೇ ಹಿಂದೀ ಸಮ್ಮೇಲನವು ಪಂಡಿತ ತಾರಾನಾಥರೀಯವರ ಅಧ್ಯಕ್ಷತೆಯಲ್ಲಿ ಜರಗುವದು. ಸೌ| ಕಮಲಾದೇವಿ ಚಟ್ಟೋಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ೪ನೇ ಮಹಿಳಾ ಪರಿಷತ್ತು ಜರಗಲಿಕ್ಕಿದೆ. ಈ ಸಮಯ ಸಮಸ್ತ ಕರ್ನಾಟಕಸ್ಥರು ಧಾರವಾಡಿಗರಿಗೆ ಸಂಪೂರ್ಣ ನೆರವಾಗಬೇಕು

ಸ್ಥಾನಿಕ ವೃತ್ತಾಂತ.

ಕುಮಟಾ— ಭಯ ತರ ಶಕೆ ನೀರಿನ ಓರ ಗ ಲಕ್ಷ್ಯಪ್ರಾರಂಭವಾಗಿದೆ ಬಿಸಿಲು ತಾಪ ಸ್ಮರಿಸಿದ ದು ಅಕ್ಕಿ ಧಾರಣೆ ಕೇಜಿಯಾಗುತ್ತಿದೆ ಇಲ್ಲಿಯ ಮಾಮಲೇದಾರರ ಕಚೇರಿಯು ಛದಾಗಿದೆ ಹೊಸ್ಪ್ಯಾಂಪ ಮಾರ್ಗದ ರಚನೆಯಾಗುತ್ತಿದೆ ಮ್ಯುನಿಸಿಪಾಲಿಟಿ ಮಾರ್ಗಗಳ ಮೇಲೆ ನೀರಿಲ್ಲ ಧೂಳಿಯು ದ ಳಿ ಮ್ಯುನಿಸಿಪಾಲಿಟಿಯ ಗಂಟು ಕಟ್ಟಹತ್ತಿದೆ ಶಿಲ್ಕ ಬೆಳೆಯಿತು ಲೋಕಾನ ಕಲತೆಗಳ ಗೊಡವೆಯಿಲ್ಲ ನಿನ್ನೆ ದೇವಾಲಯ ಕಮಿಟಿಯಿತ್ತು ಕೋರಂ ಕೂಡಲಿಲ್ಲ ಮುಂದೆ ಆ ಕೇಲಿಯಲ್ಲಿ ಸೇರ ಮನು

ಹೊನ್ನಾವರ— ಈ ಮೊದಲು ಪ್ರಕಟವಾದ ತೆ ಜಿಲ್ಲಾ ಬೋರ್ಡಿನ ಮ ಹಾಸಭೆಯು ಇಲ್ಲಿ ಶುಕ್ರವಾರ-ಶನಿವಾರ ನಡೆಯಿತು. ಸ್ವಾಮಿನ್ ಕೂಟದ ವಿಷಯ ಒ ದು ತಾಸಿನ ತನಕ ಚರ್ಚೆಯಾಯಿತು. ಕಾರ್ಯಕ್ಷಮ ಪತ್ರಿಕೆಯಲ್ಲಿ ಸ್ವಾಮಿನ್ ಕೂಟದ ತಳೆನಿಂದ ಪ್ರಕಟವಾದ ವೃತ್ತಾಂತವು ನ್ಯಾಯವಲ್ಲವೆಂದು ಬರೆದಿತ್ತು ಅದನ್ನು ಮೊದಲೇ ಓದಿದ್ದರೆ ಮುಂದಿನ ವಿಚಾರ ಮಾಡಬಹುದೆ ದು ರಾ| ದೇವ ವರು ಉದ್ಗರಿಸಿದರು ರಾ| ಶೆಟ್ಟಿಯವರು ಹಿಡುವಳಿ ಓದರಲ್ಲಿ ಕ್ಷಮೆಯನ್ನು ಕೊಡಬೇಕೆಂದು ಅರ್ಥ ಹೊರಡುತ್ತದೆಂದರು ಕ್ಷಮೆಯನ್ನು ಕೊಡುವ ಬಗ್ಗೆ ವಿಚಾರಿಸಬೇಕಾದರೂ ಆದರ ಅಂದೋಲನ ವಿ| ಫಿಲ ಪೋ ಸರು ರಾ| ಶೆಟ್ಟಿಯವರ ಬೆಂಬಲ ಕೊಟ್ಟರು ಅಧ್ಯಕ್ಷರಾದ ರಾ| ಗೋಖಲೆಯವರು ಕಾರ್ಯಕ್ಷಮ ಪತ್ರಿಕೆಯನ್ನೇ ತಾವು ತಿದ್ದುಪಡಿ ಮಾಡತಕ್ಕದ್ದೆಂದು, ತಿದ್ದುಪಡಿ ಮಾಡಿಬಿಟ್ಟರ ಶಾಭಾಸ್ ಆ ಮೇಲೆ ಕ್ಷಮೆಯನ್ನು ಕೊಡಬೇಕೋ ಬೇಡವೋ? ಎಂಬ ಚರ್ಚೆ ನಡೆಯಿತು ಸರಕಾರವು ಕ್ಷಮೆಯನ್ನು ಬೇಡಿರ ಪದೆಂದು ಮಿ| ಫಿಲಿಪ್ಪೆ ಸರು ವಾದಿಸಿದರು ಸರಕಾರಕ್ಕೂ ಈ ಕೂಟಕ್ಕೂ ಸಂಬಂಧವೇನಿಲ್ಲಾಗಿಯೂ ಸರಕಾರಿ ಗೆಜೆಟಿನಲ್ಲಿ ಸಹ ಮಾಹಿತಿಯು ಒಗ್ಗೆ ಪ್ರಶ್ನಾವಲಿಯು ಪ್ರಕಟವಾಗಿರುತ್ತದಾಗಿಯೂ ರಾ| ವಿಶ್ವನಾಥ ಪ್ರಭು ಗಳು ತಿಳಿಸಿಕೊಳ್ಳಲು ಇದರಲ್ಲಿದೆ ಎಲ್ಲಾದರೂ ಸಮ್ಮತಿಯ ಸ್ಥಿತಿಯಿರುವದರಿಂದ ಈ ಕೂಟದ ಘಟನೆ ಹಾಗೂ ಕ್ರಮಗಳು ರಾಷ್ಟ್ರಕ್ಕೆ ಮಾನ್ಯವಿಲ್ಲದ್ದರಿಂದಲೂ ಕ್ಷಮೆಯು ತನ್ನ ಕೊಡ ಬಾರದಾಗಿ ರಾ| ಪ್ರಭುಗಳು ವಾದಿಸಿದರ ಕೊನೆಗೆ ಮ ತಗಳ ಎಣಿಕೆಯಾಯಿತು ೧೯ ಮಂದಿಗಳು ಪ್ರತಿಕೂಲ ಮತ ಕೊಟ್ಟರು. ಶೆಟ್ಟಿಯವರ ಸೂಚನೆಯನ್ನು ಹಿಂತೆಗೆದರು ಸ್ಕೂಲ ಬೋರ್ಡಿನ ನಿಯಮಗಳು ಓದಲು ಪ್ರಾರಂಭವಾಯಿತು ಮಿ| ಫಿಲಿಪೋಸರದೊ ಡ ಆಕ್ಷೇಪ ಒಂದು ೨ ವರ್ಷಗಳ ಹಿಂದೆ ನಿಯಮ ಮಾಡತಕ್ಕ ಅಧಿಕಾರವು ಸ್ಕೂಲ ಬೋರ್ಡಿಗೆ ವಹಿಸಲ್ಪಟ್ಟಿತ್ತು ಅದರಿಂದ ಈಗ ನಿಯಮಗಳನ್ನು ಜಿಲ್ಲಾ ಬೋರ್ಡು ಕೈಕೊಳ್ಳಲಾಗದೆಂಬ ಆಕ್ಷೇಪವು ಅಧ್ಯಕ್ಷರಲ್ಲಿ ಧಿಕ್ಕರಿಸಲ್ಪಟ್ಟಿತು ೨ ವರ್ಷಗಳ ತನಕ ನಿಯಮ ಮಾಡಲು ಸ್ಕೂಲ ಬೋರ್ಡಿಗೆ ಸಮಯವಿರಲಿಲ್ಲವಾದ್ದರಿಂದ ಆ ಕೇಲಿಯ ಲ್ಲಿ ಜಿಲ್ಲಾ ಬೋರ್ಡು ನಿಯಮ ಮಾಡಿದವನ್ನು ಘಟಿಸಿ ಈ ಸ ಗತಿಯನ್ನು ಸ್ಕೂಲ ಬೋರ್ಡಿಗೆ ವಹಿಸಿದೆ ಸ್ಕೂಲಬೋರ್ಡಿನ ನಿಯಮಗಳು ಮನ್ನಿಸಲ್ಪಟ್ಟವು ಸ್ಕೂಲ ಬೋರ್ಡಿನ ಕಾರ್ಯಾಗಳ ಮೇಲೆ ಜಿಲ್ಲಾ ಬೋರ್ಡಿಗೆ ಅಪೀಲ ಮಾಡಲು ಕೊಡಲ್ಪಟ್ಟಿದೆ ಎಡ್‌ಮಿನಿಸ್ಟ್ರೇಟಿವ್ ಆಫೀಸರ ಮೇಲೆ ಸ್ಕೂಲ ಬೋರ್ಡಿಗೆ ಅಧಿಕಾರ ಕೊಡತಕ್ಕದ್ದೆ ಸೂಲಬೋರ್ಡ ಕೈಕೊಂಡ ಠರಾವುಗಳನ್ನು ಆಗಿ ದಾಗ ಜಿಲ್ಲಾ ಬೋರ್ಡಿಗೆ ಕಳಿಸಬೇಕ ಹೆ ಲ್ಲಿ ಸ್ಕೂಲ ಬೋರ್ಡಿಗೆ ಮುಂಗಡಾಣ ಕಾಳಲ್ಪಟ್ಟಿದೆ ಎಡ್‌ಮಿನಿಸ್ಟ್ರೇಟಿವ್ ಆಫೀಸರರ ಪಗಾರ ೧೫೦ ರಿ ದ ೨೫೦ರ ತನಕ ಇಡಬೇಕೆಂದು ಗೊತ್ತಾಗಿದೆ ಬೋರ್ಡಿನ ಸ ತ ಎಡ್‌ಮಿನಿಸ್ಟ್ರೇಟಿವ್ ಆಫೀಸರರನ್ನು ನೇಮಿಸುವ ಕಾಲಕ್ಕೆ ಈ ಸ್ಕೇಲು ಅವಲಿಸಲ್ಲ ಬರ ಪದು ರಾ| ನವಲಗುಂದರವರ ನೇಮಣೂಕಿಯನ್ನು ಕಾಯಂ ಮಾಡಬೇಕಾಗಿ ಸೂಚನೆಯಾಯಿತು ರಾ| ಪ್ರಭುಗಳು ಅಷ್ಟು ಹಿಡಿದರು ಸ್ಕೂಲ ಬೋರ್ಡಿಗೆ ಕಾಯಂ ಇದ ವಿ ಪ ನೇಮಣೂಕಿಯ ಬಗ್ಗೆ ವಿಚಾರ ಕೇಸರ ಗಾಗ್ಗು ಜಿಲ್ಲಾ ಬೋರ್ಡು ಸೂಚನೆ ಕೊಟ್ಟ ಅದನ್ನು ಲಕ್ಷ್ಯ ಪದೆ ಸ್ಕೂಲ ಬೋರ್ಡು ನವಲಗುಂದರವರನ್ನು ಕಾಯಂ ಸೂಚಿಸಿದೆ ಈ ಉದ್ಧಟತನಕ್ಕಾಗಿ ಈ ಸೂಚನೆಯನ್ನು ಪ ರಿಗಣನೆಗಾಗಿ ಸ್ಕೂಲ ಬೋರ್ಡಿಗೆ ಕಳಿಸಿಕೊಡಬೇಕೆ ದು ... ರ ಆ ಬೋರ್ಡಿನ ಮಿ ಫಿಲಪೋಸರವರ ಬೋರ್ಡಿನ ತನವನ್ನು ಒಪ್ಪದೇ ಶಾರದ ರಾ| ... ದಕ ಸಪ ಣೂಕಿಯು ಕಾಯಂ ಆಯಿತ ... ಹಾಳಸಿರಿಗಳಾದ ಎಲ್ ಕೆ ಕಕೀರರ ... ರಾ| ಕಾಕೆಯವರು ಖಡಿ ಮಾತಿ ಪ್ರಾನಿಕ ... ಕೊರೆದ ಬೆಸಿರಬೇಕು ಇತ್ಯಾದಿ ಠರಾವುಗಳಂಗಿ ಈ ಹಿ ದಿನ ಬರುವ ಪರಾ ವ ಜಾರಿಗೆ ಬರ ರ ಆ ಹಾ ಸಹಿಸಬೇಕೆಂದು ಒಹ ಮತಿ ದ ಗೊತ್ತಾಗಿದೆ ಕುಮಟಾ ತಾಲೂಕ ಬೋರ್ಡಿನವರ ಕಾಮಗಾರಿಗಳನ್ನು ಜಿಲ್ಲಾ ಬೋರ್ಡಿನ ... ಗಳೆಯದೆ ಮ ಸಿ ನಡಿಸಿದ್ದರು ಅದರಿಂದ ಕ್ಷೋಭೆ ಗ ಕಾ ... ಕಾರ್ಯ ಮಾಡಲಿಲ್ಲ ಕೊನೆಗೆ ತೀರ್ಮಾನವಾಗಿ ಇಂಥ ಅಕ್ರಮಗಳನ್ನಾಚರಿಸದಂತೆ ವ ಜಾಗ್ರತೆ ಕೊಡಬೇಕಾಗಿಯೂ ಹೀಗೆ ಅಕ್ರಮಗಳಿ ದ ಇದನ್ನ ಮ ಎಂತೆ ಹಾನಿ ಆದರೆ ತಾಲೂಕ ಬೋರ್ಡಿನ ಅಧಿಕಾರಿಗಳು ಕೆಸಿಕೊಂಡಿ ದ ಹಣ ಕರ ಬೇಕು ದಿತ ಗಿಯೂ ಮಂಜೂರಕ್ಕೆ ಕೊಡಲ್ಪಟ್ಟಿದೆ ಇತರ ಬಿಲ್ಲು ಪ್ರಶ್ನೆ ಕೇಳಿದ ಮೇಲೆ ತಾಲೂಕ ಬೋರ್ಡಿನ ಅಧ್ಯಕ್ಷರ ಓ ದು ಸಭೆಯು ಸ ರಿ . ವಿಶೇಷ ಹೇಳ ತಕ್ಕಂಥ ಕಾರ್ಯವೇನೂ ನಡೆಯಲಿಲ್ಲ

ಇಲ್ಲಿಯ ರಾ| ಎರಕಾರ ಕೃಷ್ಣರಾಯರ ೧೧೧ ರೂಪಾಯಿ ಕೊಟ್ಟು ಮುಂಬಯಿಯ ಗೌಡಸಾರಸ್ವತ ಲಿಗಿನ ಆಜೀವ ಸಭಾಸದರಾಗಿದ್ದಾರೆ ಉಡುಪಿನ ಪಟ್ಟಣದ ರಾ| ವೈಕುಂಠ ಒನಾಪೆಯ ನ್ಯಾಕರ ಸಭಾಸದರಾಗಲು ಒಪ್ಪಿ ಕೆಲವು ಹಣ ಕೊಟ್ಟಿದ್ದಾರೆ ಎಂದು ಲೀಗಿನ ಕಾರ್ಯದರ್ಶಿಗಳು ತಿಳಿಸುತ್ತಾರೆ

ದಿ ಗೌಡಸಾರಸ್ವತ ಸ್ಕೊಲರಶಿಪ್ ಲೀಗ, ಮುಂಬಯಿ.

ಈ ಸ ಸ್ಥೆಯಿಂದ ಪ್ರಸ್ತುತದ ಮದತ ಪಡೆಯ ಲಿಚ್ಛಿಸುವ ವಿದ್ಯಾರ್ಥಿಗಳ ಛಾಪಿ ಫಾರ್ಮಿನ ಮೇಲೆ ಇದೇ ಬರುವ ತಾ ೩೦-೬ ೧೯೨೮ ರೊಳಗೆ ಅರ್ಜಿ ಮಾಡತಕ್ಕದ್ದು ಫಾರ್ಮಗಳು ಅಲ್ಲಲ್ಲಿಯ ಪ್ರತಿನಿಧಿಗಳ ಬಳಿ ಸಿಕ್ಕುತ್ತವೆಂದು ಲೀಗಿನ ಕಾರ್ಯದರ್ಶಿಗಳು ತಿಳಿಸುತ್ತಾರೆ

— ರಾವಳಪಿಂಡಿಯೊಳಗೆ ನಡುವ ಸಮಾರಂಭದಲ್ಲಿ ಮದ್ದುಗುಂಡು ಹಾರಿಸುವಾಗ ಸ್ಫೋಟವಾಗಿ ೧೦ ಮಂದಿಗಳು ಮಡಿದರು ೫೦ ಮಂದಿಗಳಿಗೆ ಘಾಯಗಳಾಗಿವೆ ಮದುಮಗನ ಸಹೋದರನೂ, ತಕ್ಕನೂ ತೀರಿಕೊಂಡರು ಮದ್ದು ಗುಂಡುಗಳಿಂದ ಮದುವೆ ಸಮಾರಂಭಕ್ಕೆ ಕಳೆ ಏರಿಸುವವರು ಎಚ್ಚರವಹಿಸಲಿ

ಜಪಾನ ದೇಶವು ಚೀನದೊಳಗೆ ನುಗಿಹೋಗಿ ಶಾ ೦ ಕದಂ ಜಗಳ ತೆಗೆದು ನೂರಿಂದು ರಾಷ್ಟ್ರೀಯರಿಗೆ ಕೊಂದಿತ್ತು ಜಪಾನ ದೇಶವು ರಾಷ್ಟ್ರಸಂಘದಲ್ಲಿ ಸೇರಿದ್ದು ಅಲ್ಲಿ ಪರರಾಷ್ಟ್ರಗಳ ಮೇಲೆ ಈ ಪ್ರಕಾರ ದೌರ್ಜನ್ಯ ಮಾಡದಂತೆ ವಚನ ಕೊಟ್ಟಿರುತ್ತದೆ

— ಹಿಂದುಸ್ಥಾನ ಸರಕಾರವು ಆಸ್ಪತ್ರೆಗಳಿಗಾಗಿ ೧ ಕೋಟಿ ರೂಪಾಯಿಗಳನ್ನು ವಿನಿಯೋಗಿಸಬೇಕಾಗಿ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಲಾಲಾ ... ರವರು ಸೂಚಿಸುವವರಿದ್ದಾರೆ ಆಸ್ಪತ್ರೆ ಮೇಲಣ ಸರಕಾರದ ಆಸ್ಥೆಯ ಪರೀಕ್ಷೆಯಾಗುವದು

— ತೀರ್ಥಹಳ್ಳಿಯ ರಾ| ಬನ್ನಭಂಡಾರದ ಸುಬ್ಬರಾವ ಬಿ ಎ ರವರು ಮಲೆನಾಡಿನ ಹಾಗು ಕರ್ನಾಟಕದ ವಿಶೇಷ ಸೇವೆ ಮಾಡಲೋಸ್ಕರವಾಗಿ ಜನ್ಮಭೂಮಿ ಎಂಬ ವಾರ ಪತ್ರಿಕೆಯನ್ನು ಮೇ ೧ನೇಯಿಂದ ಹೊರಡಿಸಿದ್ದಾರೆ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ರೂ ೩—೧೨—೦

Wanted:- Candidates for Telegraph and Station Masters Classes. Full particulars and Railway Fare Certificate on 2 annas stamp. Apply to Central Telegraph College, Nai Sarak **Delhi.**

ಬೆಂಗಳೂರ ತುಂಬಾಕಿನ ತಾಜಾ ನಶ್ಯ ಸುಲಭಕ್ರಯ
೪ ವರ್ಷಗಳಿ ದ ಕರ್ನಾಟಕದಲ್ಲಿ ಪ್ರಸಿದ್ಧಿ ಹೊಂದಿದ
ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದ ಉದ್ದ ಜಾಹಿರಾತಿನ ಆಡ ಒರಕ್ಕೆ ಮೋಸಹೋಗಬೇಡಿರಿ !
ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ ೧ನೇ ನಶ್ಯದ ಪುಡಿ ೪ ತೊಲಿ ಕ್ಕೆ	ರೂ ೦
ನಂ ೨ನೆ	೯-೨-೦
ನಂ. ೩ ನೆ ...	೯ ೯ ೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು
ಸೂಚನೆ – ನಮ್ಮ ನಶ್ಯವು ಉತ್ಕೃಷ್ಟವೆ ಬಗ್ಗೆ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟ ಗಳು ದೊರಕಿವೆ

ವಿಳಾಸ – ಪುಂಡ್ಲೀಕ ನಾಗ ಪೈ,
ಪೋಸ್ಟ– ಹೊನ್ನಾವರ (ಉತ್ತರ ಕನ್ನಡ)

8 U. Naravanacharya & CO
Chaukamba, BENARES CITY



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಫರಮಾಂಡ ದ್ರಾಕ್ಷಿ ಕಸ್ತೂರಿ ಗಂಗಾಜಲ ಸ್ಫಟಿಕದ ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗ ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು
ವಿಳಾಸ ಶಿರೋಮಣಿ ನಾರಾಯಣ ನಾರಾಯಣಾಚಾರ್ಯ
ಮುಕ್ತಾ ಕಂಪನಿ ಚೌಕ ಬ. ಕಾಶೀಕ್ಷೇತ್ರ

ಬಾರ್ದೋಲಿಯ ವೃತ್ತಾಂತ.

[illegible]

ಮಹಾತ್ಮರ ಆತ್ಮಚರಿತ್ರ.

(೪) ಶಾಂತಿನಿಕೇತನ.

ರಾಜಕೋಟದಿಂದ ನಾನು ಶಾಂತಿನಿಕೇತನಕ್ಕೆ ತೆರಳಿದೆ. ಶಿಕ್ಷಕರೂ, ವಿದ್ಯಾರ್ಥಿಗಳೂ ಪ್ರೇಮಾತಿಶಯದಿಂದ ನನ್ನನ್ನು ಬರಮಾಡಿಕೊಂಡರು ಪ್ರೀತಿಪೂರ್ವಕವಾಗಿ ಹಸ್ತ ಕೌಶಲ್ಯದಿಂದ ರಚಿಸಿದ ಸಾಮಾನ್ಯ ಸಾಹಿತ್ಯಗಳಿಂದ ಅವರು ನನ್ನ ಸ್ವಾಗತ ಸತ್ಕಾರಗಳನ್ನು ನಡಿಸಿದರು. ಕಾಕಾ ಸಾಹೇಬ ಕಾಲೇಲಕರರನ್ನು ನಾನು ಇಲ್ಲಿಯೇ ಮೊಟ್ಟ ಮೊದಲು ಕಂಡೆನು.

ಕಾಲೇಲಕರರಿಗೆ ಕಾಕಾ ಸಾಹೇಬರೆಂದು ಕರೆಯುವ ಕಾರಣ ನನಗೆ ಆ ಕಾಲಕ್ಕೆ ತಿಳಿದಿದ್ದಿಲ್ಲ, ಆದರೆ, ಆ ಬಳಿಕ ತಿಳಿಯಿತು. ಇಂಗ್ಲಂಡದಲ್ಲಿ ಗಂಗಾನಾಥ ವಿದ್ಯಾಲಯವನ್ನು ಶ್ರೀ ಕೇಶವರಾವ ದೇಶಪಾಂಡೆಯವರು ನಡಿಸುತ್ತಿದ್ದರು ಅವರು ಇಂಗ್ಲಂಡದೊಳಗಿನ ನನ್ನ ಗೆಳೆಯರು. ವಿದ್ಯಾಲಯಕ್ಕೆ ಕುಟುಂಬದ ರೂಪ ಬರುವದಕ್ಕಾಗಿ ಶಿಕ್ಷಕರಿಗೆಲ್ಲ ಅವರು ಅಪ್ತತ್ವದ ಬಿರುದು ಕೊಟ್ಟಿದರು. ಆಗ ಕಾಲೇಲಕರರು ಅಲ್ಲಿ ಶಿಕ್ಷಕರಿದ್ದರು ಅವರಿಗೆ ಕಾಕಾ ಅಂದರೆ, ಚಿಕ್ಕ ಎಂಬ ಬಿರುದು ಕೊಟ್ಟಿತ್ತು, ಫಡಕೆಯವರಿಗೆ ಮಾಮಾ ಅಂದರೆ, ಸೋದರಮಾವನೆಂದು ಕರೆಯುತ್ತಿದ್ದರು. ಹರಿಹರ ಶರ್ಮಾರವರಿಗೆ ಅಣ್ಣಾ ಎಂಬ ಬಿರುದಿತ್ತು, ಇತರರಿಗೂ ಇದೇ ಪ್ರಕಾರ ಹೆಸರುಗಳಿದ್ದವು ಆನಂದಾನಂದ (ಸ್ವಾಮಿ)ರವರು ಕಾಕಾರವರ ಸ್ನೇಹಿತರಾಗಿ ಈ ವಿದ್ಯಾಲಯದಲ್ಲಿ ಸೇರಿದರು ಪಟವರ್ಧನ (ಅಪ್ಪಾ)ರವರು ಮಾಮಾರವರ ಗೆಳೆಯರಾಗಿ ಈ ಸಂಸ್ಥೆಯಲ್ಲಿ ಸೇರಿದರು ಕ್ರಮವಾಗಿ ಎಲ್ಲರೂ ನನ್ನ ಜೊತೆಗಾರರಾದರು ಶ್ರೀ ದೇಶಪಾಂಡೆಯವರಿಗೆ ಸಾಹೇಬರೆಂಬ ಬಿರುದಿತ್ತು ವಿದ್ಯಾಲಯವು ವಿಸರ್ಜನವಾಗುವಾಗ ಈ ಮನೆತನವೂ ಚದರಿ ಹೋಯಿತು ಆದರೆ, ಅವರೊಳಗಿನ ಪಾರಮಾರ್ಥಿಕ ಸಂಬಂಧವು ನಷ್ಟವಾಗಲಿಲ್ಲ ಅವರು ಇಟ್ಟುಕೊಂಡ ಆಪ್ತತ್ವದ ಹೆಸರುಗಳು ಹಾಗೆಯೇ ಉಳಿಕೊಂಡವು.

ಕಾಕಾ ಸಾಹೇಬರು ಬೇರೆ ಬೇರೆ ಸಂಸ್ಥೆಗಳ ಅನುಭವ ಪಡೆಯುವದಕ್ಕಾಗಿ ಸಂಚಾರಕ್ಕೆ ಹೊರಟರು ನಾನು ಶಾಂತಿನಿಕೇತನಕ್ಕೆ ಹೋದಾಗ ಅವರು ಅಲ್ಲಿದ್ದರು, ಇದೇ ವಿದ್ಯಾಲಯದ ಚಿಂತಾಮಣಿ ಶಾಸ್ತ್ರಿಗಳೂ ಅಲ್ಲಿದ್ದರು. ಇಬ್ಬರೂ ಸಂಸ್ಕೃತ ವಿದ್ಯಾದಾನಕ್ಕೆ ನೆರವಾಗುತ್ತಿದ್ದರು

ಫೋನಿಕ್ಸ ಕುಟುಂಬಕ್ಕೆ ಶಾಂತಿನಿಕೇತನದಲ್ಲಿ ಪ್ರತ್ಯೇಕ ಬಿಡಾರುಗಳನ್ನು ಕೊಟ್ಟಿದ್ದರು ಮಗನಲಾಲ ಗಾಂಧಿಯು ಅವರ ಮುಖಂಡನಿದ್ದನು. ಫೋನಿಕ್ಸ ಆಶ್ರಮದೊಳಗಿನ ನಿಯಮಗಳಂತೆ ಎಲ್ಲರಿಂದಲೂ ಅವನು ನಡಾವಳಿ ಮಾಡಿಕೊಳ್ಳುತ್ತಿದ್ದನು ಅಕ್ಕರತೆಯಿಂದಲೂ, ಜ್ಞಾನದಿಂದಲೂ, ವೀರೋದ್ಯೋಗದಿಂದಲೂ ಶಾಂತಿನಿಕೇತನದಲ್ಲಿ ಅವನಿಗೆ ಬಹಳೇ ಆದರವು ಪ್ರಾಪ್ತವಾಗಿತ್ತು

ಎಂಡ್ರೂಸರವರೂ, ಪಿಯರಸನ್‌ರವರೂ ಅಲ್ಲಿದ್ದರು. ಅಲ್ಲಿ ಬಂಗಾಲಿ ಜನರಿದ್ದರು ಅವರೊಳಗೆ ಜಗದಾನಂದ ಬಾಬು, ನೇಪಾಳ ಬಾಬು, ಸಂತೋಷ ಬಾಬು, ಕ್ಷಿತಿಮೋಹನ ಬಾಬು, ನಾಗಿನ ಬಾಬು, ಶರತ್ ಬಾಬು, ಕಾಲಿ ಬಾಬು ಇಷ್ಟು ಜನ ಶಿಕ್ಷಕರು ನಮ್ಮ ವಿಶೇಷ ಪರಿಚಯದವರು ಪರಿಪಾಠದಂತೆ ನಾನು ಶಿಕ್ಷಕರೊಳಗೂ, ವಿದ್ಯಾರ್ಥಿಗಳೊಳಗೂ ಕೂಡಲೆ ಸೇರಿಕೊಂಡು ಸ್ವಾವಲಂಬನದ ಮೇಲೆ ಚರ್ಚೆ ಮಾಡಲಾರಂಭಿಸಿದೆನು. ಶಿಕ್ಷಕರೂ, ವಿದ್ಯಾರ್ಥಿಗಳೂ ಸಂಬಳದ ಅಡಿಗೆ ಭಟ್ಟರಿಗೆ ಕಡಿಮೆ ಮಾಡಿ ಆಹಾರವನ್ನು ತಾವೇ ಅಡಿಗೆ ಮಾಡಲಾರಂಭಿಸಿದರೆ, ಶಿಕ್ಷಕರ ಹಿತಕ್ಕಾಗಿ ನೈತಿಕ ಆರೋಗ್ಯ ಬಲಕ್ಕೆ ಅನುಕೂಲವಾದೀತು ಮೇಲಾಗಿ ವಿದ್ಯಾರ್ಥಿಗಳಿಗೆ ಸ್ವಾವಲಂಬನದ ಪಾಠ ಹೇಳಿಕೊಟ್ಟಂತಾಗುವದು, ಹೀಗೆ ನಾನು ವಾದಿಸಿದೆನು ಒಬ್ಬಿಬ್ಬರಿಗೆ ಇದು ಸೇರಲಿಲ್ಲ. ಕೆಲವರಂತೂ ಇದನ್ನು ಉತ್ಸಾಹದಿಂದ ಅನುಮೋದಿಸಿದರು ವಿದ್ಯಾರ್ಥಿಗಳಿಗೆ ಆನಂದವಾಯಿತು ಕಾರಣವೆ ನಂದರೆ, ಇದೊಂದು ನೂತನವೆಂದು ಅವರು ಗ್ರಹಿಸಿದರು ಹೀಗೆ ಆ ಪ್ರಯೋಗಕ್ಕೆ ಪ್ರಾರಂಭವಾಯಿತು ಕವಿರಾಜರ ಬಳಿ ಈ ವಿಷಯ ನಾನು ಅಭಿಪ್ರಾಯ ಕೇಳಿದೆನು. ಶಿಕ್ಷಕರು ಅನುಕೂಲವಿದ್ದರೆ ತಮ್ಮದೇನು ಆಕ್ಷೇಪವಿಲ್ಲವೆಂದು ಅವರು ನುಡಿದರು "ಈ ಪ್ರಯೋಗದಲ್ಲಿ ಸ್ವರಾಜ್ಯದ ಕೀಲಿಕೈಯಿದೆ," ಎಂದು ಅವರು ಹುಡುಗರಿಗೆ ಹೇಳಿದರು.

ಈ ಪ್ರಯೋಗವನ್ನು ಕಡೆಗಾಣಿಸುವದಕ್ಕಾಗಿ ಪಿಯರಸನ್‌ರವರು ಪರಿಶ್ರಮಪೂರ್ವಕವಾಗಿ ದುಡಿಯಲಾರಂಭಿಸಿದರು ಬಹು ಉತ್ಸಾಹದಿಂದ ಅವರು ಈ ಕೆಲಸವನ್ನು ಕೈಕೊಂಡರು ಕಾಯಿಪಲ್ಲೆಗಳಿಗಾಗಿ ಕೆಲವರು, ಕಾಳುಕಡಿಯನ್ನು ಹಸನ ಮಾಡುವದಕ್ಕಾಗಿ ಕೆಲವರು, ಹೀಗೆ ಮೇಳಗಳು ನೇಮಿಸೋಣವಾದವು ನಾಗಿನ ಬಾಬು ಪ್ರಭೃತಿಗಳು ಅಡಿಗೆ ಮನೆಯ ಹಾಗು ಸುತ್ತುಮುತ್ತಲಿನ ಪ್ರದೇಶದ ಹೊಲಸನ್ನು ತೆಗೆಯುವ ಕೆಲಸ ಕೈಕೊಂಡರು. ಅವರೆಲ್ಲರೂ ಪ್ರತ್ಯಕ್ಷ ಕೆಲಸ ಮಾಡುವದನ್ನು ನೋಡಿ ನನಗೆ ಆನಂದಾತಿಶಯವಾಯಿತು

ಅಲ್ಲಿ ೧೨೫ ವಿದ್ಯಾರ್ಥಿಗಳಿದ್ದರು, ಎಲ್ಲರೂ ಶಿಕ್ಷಕರ ಜೊತೆಗೆ ಈ ಕೆಲಸದಲ್ಲಿ, ಮೀನ ಜಲಾಶಯದಲ್ಲಿರುವಂತೆ, ಸಹಜವಾಗಿ ನಿಮಗ್ನರಾಗಿರುವರೆಂದು ಗ್ರಹಿಸುವದು ತಪ್ಪು ದಿನಾ ಚರ್ಚೆಯಾಗುತ್ತಿತ್ತು ಕೆಲವರಿಗೆ ಬೇಗನೆ ದಣಿವು ಹುಟ್ಟಿತು ಆದರೆ, ಪಿಯರಸನ್‌ರವರಿಗೆ ದಣುವೇನೆಂಬುದು ಗೊತ್ತಿರಲಿಲ್ಲ, ಯಾವಾಗಲೂ ಅವರು ಅಡಿಗೆಮನೆಯ ಬಳಿಯಲ್ಲಿಯೇ ಸುಳಿವುತ್ತಿದ್ದರು ನಗುಮೋರೆಯಿಂದ ಏನಾದರೊಂದು ಮಾಡುತ್ತಿರುತ್ತಿದ್ದರು. ದೊಡ್ಡ ದೊಡ್ಡ ಅಡಿಗೆ ಪಾತ್ರಗಳನ್ನು ತಿಕ್ಕಿ ತೊಳೆಯುವ ಕೆಲಸವು ಅವರದಾಗಿತ್ತು ಈ ಕೆಲಸ ಮಾಡುತ್ತಿರುವಾಗ ಕೆಲ ವಿದ್ಯಾರ್ಥಿಗಳು ಸತಾರನ್ನು ಬಾರಿಸಿ ಇವರ ಶ್ರಮಪರಿಹಾರ ಮಾಡುತ್ತಿದ್ದರು. ಎಲ್ಲರೂ ಈ ಕೆಲಸವನ್ನು ಆಸಕ್ತಿಯಿಂದ ನಡಿಸಿದರು ಶಾಂತಿನಿಕೇತನವು ಉದ್ಯೋಗದ ತವರಮನೆಯಾಯಿತು.

ಇಂಥ ತಿದ್ದುಪಾಟುಗಳು ಪ್ರಾರಂಭವಾಗುವದೇ ತಡ. ಒಮ್ಮೆ ಪ್ರಾರಂಭವಾದರೆ ಅವು ಅಭಿವೃದ್ಧಿಗೊಳ್ಳುತ್ತವೆ. ಫೋನಿಕ್ಸ ಆಶ್ರಮದ ಅಡಿಗೆ ಮನೆಯು ಸ್ವತಂತ್ರವಾಗಿ ನಡೆದಿತ್ತು ಇದಲ್ಲದೆ, ಅಲ್ಲಿಯ ಆಹಾರವು ತೀರ ಸಾಮಾನ್ಯವಾಗಿತ್ತು ಮಸಾಲೆ ಸಾಮಾನುಗಳಿಗೆ ಪ್ರವೇಶವಿದ್ದಿಲ್ಲ. ಅಕ್ಕಿ ಬೇಳೆ, ಕಾಯಿಪಲ್ಲೆ ಗೋಧಿ ಹಿಟ್ಟು ಅವೆಲ್ಲ ಒಂದೇ ಪಾತ್ರೆಯಲ್ಲಿ ಒಂದೇ ಬಾರಿ ಬೇಯಿಸಲ್ಪಡುತ್ತಿದ್ದವು ಶಾಂತಿನಿಕೇತನದೊಳಗಿನ ಹುಡುಗರೂ ಇಂಥದೊಂದು ಅಡಿಗೆ ಮನೆಯನ್ನು ತೆರೆದಿದ್ದರು ಒಬ್ಬಿಬ್ಬ ಶಿಕ್ಷಕರೂ, ಕೆಲವು ಹುಡುಗರೂ ಈ ಅಡಿಗೆ ಮನೆ ನಡಿಸುತ್ತಿದ್ದರು ಬಂಗಾಲಿ ಅಡಿಗೆ ಮನೆಯಲ್ಲಿ ಸುಧಾರಣೆಯನ್ನು ಮಾಡುವ ಉದ್ದೇಶದಿಂದ ಈ ಅಡಿಗೆ ಮನೆಯು ಹೊರಡಿಸಲ್ಪಟ್ಟಿತ್ತು.

ಕೆಲವು ದಿನಗಳ ಮೇಲೆ ಈ ಪ್ರಯೋಗಕ್ಕೆ ತಡೆ ಬಿತ್ತು ಕೆಲ ಕಾಲದ ವರೆಗೆ ಈ ಪ್ರಯೋಗವನ್ನು ನಡಿಸಿದ್ದರಿಂದ ಈ ಸಂಸ್ಥೆಯು ಕೀರ್ತಿಗೆ ಕಲಂಕ ಬಂದಿರುವದಾಗಿ ನನಗೆ ತೋರುವದಿಲ್ಲ. ಈ ಕಾಲದಲ್ಲಿ ಪ್ರಾಪ್ತವಾದ ಅನುಭವಗಳಿಂದ ಶಿಕ್ಷಕರಿಗೂ ಬಹಳೇ ಸಹಾಯವಾಗಿರಲೇ ಬೇಕು.

ಶಾಂತಿನಿಕೇತನದಲ್ಲಿ ಕೆಲವು ಕಾಲ ಉಳಿಕೊಳ್ಳಬೇಕೆಂದು ನನ್ನ ಸಂಕಲ್ಪವಿತ್ತು; ಆದರೆ, ದೈವಸಂಕಲ್ಪವು ಹಾಗಿರಲಿಲ್ಲ. ಅಲ್ಲಿಗೆ ಹೋಗಿ ಒಂದು ವಾರವು ಸಹ ಕಳೆಯಲಿಲ್ಲ ಅಷ್ಟರಲ್ಲಿ ಗೋಖಲೆಯವರು ತೀರಿಕೊಂಡ ಸಂಗತಿಯು ತಂತಿಯಿಂದ ಬಂತು. ಎಲ್ಲರೂ ನನ್ನ ಬಳಿ ಬಂದು ನನ್ನನ್ನು ಸಹಾನುಭೂತಿಯನ್ನು ಪ್ರದರ್ಶಿಸಿದರು. ಆಶ್ರಮದಲ್ಲಿ ವಿಶೇಷ ಸಭೆ ಸೇರಿಸಿ, ರಾಷ್ಟ್ರದ ಮೇಲೊದಗಿದ ಆಪತ್ತಿನ ಕುರಿತು ಎಲ್ಲರೂ ಮರುಗಿದರು. ಆ ಸಮಾರಂಭವು ತೀರ ಗಂಭೀರವಿತ್ತು ಅದೇ ದಿವಸವೇ ಹೆಂಡತಿಗೂ, ಮಗನಲಾಲನಿಗೂ ಕರಕೊಂಡು ನಾನು ಪುಣೆಯಿಂದ ಹೊರಟೆನು ಉಳಿದವರೆಲ್ಲರೂ ಶಾಂತಿನಿಕೇತನದಲ್ಲಿ ಉಳಿದರು.

ಎಂಡ್ರೂಸರವರು ಬರ್ದ್ವಾನದ ವರೆಗೆ ನನ್ನ ಜೊತೆಗೆ ಬಂದರು ಅವರು ನನಗೆ ಹೇಳಿದ್ದೇನಂದರೆ,— "ಹಿಂದುಸ್ತಾನದಲ್ಲಿ ಎಂದಾದರೂ ಸತ್ಯಾಗ್ರಹ ಮಾಡುವ ಪ್ರಸಂಗ ಬಂದೀತೆಂದು ನಿಮ್ಮ ಗ್ರಹಿಕೆಯಿದೆಯೇ? ಹಾಗಿದ್ದರೆ, ಆ ಪ್ರಸಂಗವು ಯಾವಾಗ ಬಂದೀತೆಂದು ನೀವು ಹೇಳಬಲ್ಲಿರೇನು?"

ನಾನು ನುಡಿದದ್ದೇನಂದರೆ:— "ಇದನ್ನು ಹೇಳುವದು ಅಸಾಧ್ಯವಿದೆ. ೧ ವರ್ಷದ ವರೆಗೆ ನಾನೇನು ಮಾಡತಕ್ಕದ್ದಿಲ್ಲ ಯಾಕಂದರೆ, ಗೋಖಲೆಯವರು ನನ್ನಿಂದ ಒಂದು ವಚನ ತೆಗೆದುಕೊಂಡಿದ್ದಾರೆ ಆ ವಚನದಂತೆ ಅನುಭವ ಪಡೆಯುವದಕ್ಕಾಗಿ ಹಿಂದುಸ್ತಾನದಲ್ಲಿ ನಾನು ಸಂಚರಿಸತಕ್ಕದ್ದು ಉಮೇದ್ವಾರಿಯ ಅವಧಿ ಮುಗಿಯುವ ವರೆಗೆ ಸಾರ್ವಜನಿಕ ಪ್ರಶ್ನೆಗಳ ಮೇಲೆ ಅಭಿಪ್ರಾಯ ಕೊಡತಕ್ಕದ್ದಿಲ್ಲ. ವರ್ಷ ತೀರಿದ ಮೇಲೂ ಅಭಿಪ್ರಾಯಗಳನ್ನು ಹೇಳುವ ಗಡಿಬಿಡಿ ನನಗಿಲ್ಲ ೫ ವರ್ಷಗಳ ವರೆಗೆ ಸತ್ಯಾಗ್ರಹದ ಪ್ರಸಂಗವಿರುವದಾಗಿ ನನಗೆ ತೋರುವದಿಲ್ಲ"

ಇಲ್ಲಿ ನಮೂದಿಸತಕ್ಕ ಒಂದು ಸಂಗತಿಯಿದೆ, "ಹಿಂದ ಸ್ವರಾಜ್ಯ" ದಲ್ಲಿ ಬರೆದ ಕೆಲವು ವಿಚಾರಗಳ ಬಗ್ಗೆ ಗೋಖಲೆಯವರು ನಕ್ಕು ನುಡಿಯುತ್ತಿದ್ದೇನಂದರೆ:— "ಹಿಂದುಸ್ತಾನದಲ್ಲಿ ೧ ವರುಷ ಉಳಿಕೊಂಡ ಬಳಿಕ, ನಿಮ್ಮ ವಿಚಾರಗಳು ತಮ್ಮಷ್ಟಕ್ಕೆ ಸರಿಯಾಗುವವು."

ಮೋಟಾರ ಉಪಯೋಗದ ಬಗ್ಗೆ

ಮೆಟ್ಟಿಂಗಗಳು (COIR MATTINGS-TOOLS BOX)

ಯೋಗ್ಯ ಬೆಲೆಗೆ ದೊರೆಯುತ್ತವೆ

ನಮ್ಮಲ್ಲಿ ಮೋಟಾರಿನಲ್ಲಿ ಹಾಕು ವಂಥ, ಉತ್ತಮ ರೀತಿಯಿಂದ ತಯಾರಿಸಿದ ಕೈನೆಯ್ಗೆಯ ಕತ್ತದ ಚಾಪೆಗಳು ಸಿಗುತ್ತವೆ

ದರ ಫೂಟಿಗೆ ೦-೩-೬



ಮೋಟಾರಿನ ಹತ್ಯಾರುಗಳು ಇಡುವ ಬಗೆ ಚರ್ಮಕಟ್ಟಿಗೆ ಯಿಂದ ತಯಾರಿಸಿದ ಬಗೆ ಬಗೆಯ ಪೆಟ್ಟಿಗೆಗಳು ಹಾಗ ಮೋಟಾರ ದೊಡ್ಡ ಬಗ್ಗೆ ಸ್ಟರಲಿಂಗ್ ಯೋಗ್ಯ ದರದಿಂದ ಮಾರಾಟಕ್ಕೆ ಸಿಗುತ್ತವೆ. ಪೆಟ್ಟಿಗೆ ೧ ರ ಬೆಲೆ ರೂ. ೩ ಸೈಜು ೩' x ೧' x ೧'

ಬೇಕಾದವರು ಆರ್ಡರಿನ ಸಮೇತ ರೂ ೨-೦-೦ ಮುಂಗಡವಾಗಿ ಕಳಿಸಬೇಕು

ವಿಳಾಸ:- ಎಸ್. ಎಮ್. ಪಂಡಿತ,

ಮೋಟಾರ ಟಿಕೀಟ ಆಫೀಸ, ದುರ್ಗಾಕೇರಿ. ಹೊನ್ನಾವರ. (ಉ ಕ)

ಬ್ರಿಟಿಶರ ಹೊಟ್ಟೆಗಾಗಿ-ಗೇಣುಬಟ್ಟೆಗಾಗಿ.

(ಹಸೇ ಮಾಸಿನಿಂದ ಮುಂದರಿದದ್ದು)

ಗುಗರ ಮೇಲೆ ಉಪ್ಪನ್ನು ರಫ್ತು ಮಾಡಬೇಕಾದರೆ, ಒಮ್ಮೆಲೇ ೧೦ ೨ ಟನ್ ಉಪ್ಪು ತುಂಬಬೇಕು. ಇದ ನ್ನು ತಗ್ಗಿಸಿ ಸಣ್ಣ ಸಣ್ಣ ಹಡಗುಗಳಲ್ಲಿ ಉಪ್ಪು ಕಳುಹಿಸಲು ಅನುಕೂಲ ಮಾಡಿಕೊಡಬೇಕೆಂದು ಸರಕಾರಕ್ಕೆ ಬಿನ್ನಹಿಯಿತ್ತು. "ಛೇ, ಅದೆಂದೂ ಆಗದು ಚಿಕ್ಕ ಚಿಕ್ಕ ರಕಮುಗಳಿಂದ ಉಪ್ಪನ್ನು ರಫ್ತು ಮಾಡಗೊಟ್ಟರೆ, ನಮಗೆ ತಾವಲಿತಬರದೆ ತೆರಿಗೆ ನಷ್ಟವಾದೀತು" ಎಂದು ಹಿಂದುಸ್ಥಾನ ಸರಕಾರವು ಉತ್ತರಕೊಟ್ಟಿದೆ. ಇದರ ಅರ್ಥವೇನಂದರೆ, ದೊಡ್ಡ ಹಡಗುಗಳನ್ನು ಕಳಿಸಲು ಇಲ್ಲಿ ಸಾಮರ್ಥ್ಯ ಕಡಿಮೆ. ಸಣ್ಣ ಹಡಗುಗಳನ್ನು ಕಳಿಸಲಾಗದು. ಆಗಿಬಂದಿಯ ದಿಕ್ಕಿಗಂಲ್ಲಿ ಕಳಿಸಲು ವರ್ತಕರಿಗೆ ಒಪ್ಪಿಗೆಯಿಲ್ಲ. ಅಂತು ಲಿವ್ಹರಪೂಲದಿಂದಲೇ ಉಪ್ಪು ತಿನ್ನಬೇಕು. "ದೇಶಿ ಉಪ್ಪನ್ನು ಬೇಕಷ್ಟು ಸಾಕಷ್ಟು ಪೂರೈಸಿಕೊಳ್ಳುವ ದು ಹಿಂದುಸ್ಥಾನಕ್ಕೆ ಕಲ್ಯಾಣಪ್ರದವಲ್ಲೆಂದು" ಹಿಂದುಸ್ಥಾನ ಸರಕಾರವು ಅಭಿಪ್ರಾಯಪಟ್ಟಿದೆ. ಶಾಬಾಸ್! ಆದರೂ, ಸರಕಾರವು ಹಿಂದು ಉಪಾಯವನ್ನು ಕೈಕೊಂಡಿದೆ. ಸಿಂಧ ಪ್ರಾಂತದಲ್ಲಿ ಕೆಲವು ಕಡೆ ಉಪ್ಪಿನ ಕಾರಖಾನೆಗಳು ನೂತನವಾಗಿ ಸ್ಥಾಪನೆ ಹೊಂದಿವೆ. ಆದಾಗಲೇ ಸರಕಾರವು ಯಾವುದೇ ಪ್ರತಿಬಂಧವಿಲ್ಲ. ಹೀಗೆ ಹೇಳಿ ಉಪ್ಪಿಗೆ ಕೊಟ್ಟ ಉತ್ತೇಜನವನ್ನು ಪ್ರಕಟಿಸಿದೆ. ಕೊಲೆ ಮಾಡುವಲ್ಲಿ ಕುಲ ಕೇಂದು ಬಿಡುವರು ಹಿಂದು ಉಪಕಾರವೇ ಇದೆಲ್ಲ ವಿಚಾರಿಸಿದರೆ, ಹಿಂದುಸ್ಥಾನ ಸರಕಾರವು ಬ್ರಿಟಿಶರ ಹೊಟ್ಟೆಗಾಗಿ-ಗೇಣು ಬಟ್ಟೆಗಾಗಿ ಭರತ ಖಂಡವನ್ನಾಳುತ್ತಿದೆಂದು ಸ್ಫುಟವಾಗುತ್ತಿದೆ. ಹಾಗೆಯೇ ಸ್ಪಷ್ಟವಾಗಿ ಹೇಳಬಾರದೇ? ಲೋಕೋಪಕಾರದ ಬಡಿವಾರವೇಕೆ?

***

ದೀರ್ಘಾಯುಷಿ ದಂಪತಿಗಳು.

ಮದ್ರಾಸ ಪ್ರಾಂತದ ಅನಾಕಾಪಲ್ಲಿ ಗ್ರಾಮದಲ್ಲಿ ಯೇಸುದಾಸ್ಯನ್‌ರೆಂಬವರೊಬ್ಬರಿದ್ದಾರೆ. ಅವರು ಹಿಂದು ಧರ್ಮದಿಂದ ಕ್ರೈಸ್ತ ಧರ್ಮದಲ್ಲಿ ಸೇರಿದ್ದಾರೆ. ಅವರ ಪ್ರಾಯವು ೧೩೩ ವರುಷ; ೫೦ನೇ ವರ ಷದಲ್ಲಿ ಅವರಿಗೆ ಮದುವೆಯಾಯಿತು. ಸುದೈವದಿಂದ ಇವರಿಗೆ ದೀರ್ಘಾಯುಷಿ ಹೆಂಡತಿಯೇ ದೊರಕಿದಳು. ಹೆಂಡತಿಯ ಪ್ರಾಯವು ೧೧೦ ವರುಷ. ಇವರಿಗೆ ಹನ್ನೊಂದು ಮಕ್ಕಳಾಗಿದ್ದಾರೆ. ಯೇಸುದಾಸ್ಯನ್‌ರವರು ೬೦ನೇ ವರುಷದಲ್ಲಿ ಕ್ರೈಸ್ತ ಧರ್ಮವನ್ನು ಅಂಗೀಕರಿಸಿದರು. ಮುದುಕರಾಗಿದ್ದರೂ ಆರೋಗ್ಯಸಂಪನ್ನರಾಗಿ. ಸ್ಮರಣಶಕ್ತಿಯೂ ಚಲೋ ಇದೆ. ೧೮೧೮ನೇ ಇಸ್ವಿಯಲ್ಲಿ ಮಸೆಪ್ರೀರವರ ಕಾಲಕ್ಕೆ ಇವರು ಬಾಂಬ ಕಲ್ಲುಗಳನ್ನು ಹುಗಿಯುವ ಆಳಾಗಿದ್ದರು. ಇನ್ನೂ ಬಹುಕಾಲ ಬಾಳಲಿ!

***

ಪೋಲೀಸ ಅಧಿಕಾರರ ದುಷ್ಕೃತ್ಯ.

ಪಂಜಾಬದಲ್ಲಿ ಪೋಲೀಸ ಅಧಿಕಾರರು ಶಿಪಾಯಿಯ ಕವಾಯತನ್ನು ನೋಡುತ್ತಿರುವಾಗ ಒಬ್ಬನು ಅಂಗಿಯ ಕೊರಳನ್ನು ಸರಿಯಾಗಿ ಹಾಕಿಕೊಂಡಿದ್ದಿಲ್ಲ, ಬಿಚ್ಚಿದಂತೆ ಬಿಟ್ಟುಕೊಂಡಿದ್ದಿಲ್ಲ. ಆದರಿಂದ ಅವನಿಗೆ ಒದೆದರು. ಆ ಹೊಡೆತಕ್ಕೆ ಆ ಶಿಪಾಯಿಯು ಆಹುತಿಯಾಗಿ ತಿರಿಕೊಂಡನು. ಈ ಪ್ರಕರಣವನ್ನು ಬಚ್ಚಿಡುವ ಬಲವಾದ ಪ್ರಯತ್ನಗಳು ನಡೆದಿವೆ.

— ಮಧುರೆಯಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದಕ್ಕಾಗಿ ಮದ್ರಾಸ ಸರಕಾರಕ್ಕೆ ಒಬ್ಬ ಧನಾಢ್ಯರು ೫ ಲಕ್ಷ ರೂಪಾಯಿಗಳನ್ನರ್ಪಿಸಿದ್ದಾರೆ. ಸರಕಾರವು ೧೫ ಲಕ್ಷ ರೂಪಾಯಿಗಳನ್ನು ಈ ವಿದ್ಯಾಲಯಕ್ಕೆ ...

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ — ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ— ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿಯೂ ಪಕ್ಕಾ ವ್ಯವಸ್ಥೆ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು. **M. Manjappa.**

PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುರ ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಶಾರೀರಿಕ ಶಕ್ತಿ ತರುಣರಂತೆ ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ಮಾಹವಾದೇ ವಸ್ತ್ರೀಸಂಗ ಶಕ್ತಿ ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಗರ್ಮಿಯಿಂದ ದೂಷಿತವಾದ ರಕ್ತವು ನಿರ್ದೋಷವಾಗುವದು. ಮೂರು ದಿವಸದಲ್ಲಿ ಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅವರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿ ಆಗುತ್ತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧।। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುತ್ತೇವೆ. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಮಿಶನ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಆರಕ್ಕೆ ೧೨-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಶ್ರೋ. ನಿಪ್ಪಾಣಿ, ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ನಂ] ವಜ್ರಾಂಗ ಸುಂದರಪಾಕ. [ರಜಿ.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಸಾಸ ಆಗುತ್ತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ಪ್ರಶಸ್ತಿಗಳು ಮತ್ತು ಬಕ್ಷಿಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದೆ. ಓದಿಕೊಳ್ಳಿರಿ

ಸಾಯಂಕಾಲ ೩ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೩ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ ೧೨ ಡಬ್ಬಿಗೆ ೫೦ ರೂ

ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ...

झंडूचें

द्राक्षासव - मृद्विकारिष्ट - शारंगधरम अ. १०

रामबाण औषध

भूक लावणारें
मूत्र वाढविणारें
श्वासोच्छ्वास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचिकर

किंमत एक रत्तलास १॥ रुपये.
कॅटलॉग मागवा

झंडु फार्मास्युटिकल वर्क्स लिमिटेड
मुंबई नं. १४

ऐजंट — मेसर्स पंडित आणी कंपनी,
तीर्थहळ्ळी

सिर्पि एजंट- एस. एल. धारप्पा आणि ब्रदर

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜಿ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗ... ಇದನ್ನು ಅನೇಕ ... ಗೃಹಸ್ಥರು ಕುಟುಂಬ ಔಷಧವಾಗಿ ಉಪಯೋಗಿಸುತಾರೆ ಮಾದರಿ ... ಕಳಿಸಲಾಗುವದು.

ಒಂದು ಡಬ್ಬಿಗೆ ಕ್ರಯ ... ವ್ಹಿ. ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯವಿಟ್ಟು ... ವಿಳಾಸವನ್ನು ಸರಿಯಾಗಿ ತಿಳಿಯುವಂತೆ ಬರೆಯಿರಿ.

... ಎಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

ಇದ “ಕರಾಮತ” ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!



ಕಿರ್ಲೋಸ್ಕರ ಕರಾಮತ ಗಾಣ.

ಈ ಗಾಣದಿಂದ ಶೇಕಡಾ ೭೫ ರಂತೆ ರಸ ದೊರಕುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ದೊರಕುವದಿಲ್ಲ.

ಈ ಗಾಣವು ಕಸುಕಿಲ್ಲದ್ದು, ಬಾಳಿಕೆಯದು. ವಿಶೇಷ ಯಂತ್ರಸಾಮಗ್ರಿಯೂ ... ಇದನ್ನು ಸರಿಪಡಿಸಬಲ್ಲರು. ಸಾವಿರಾರು ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು.

... ಗನ್‌ಮೆಟಲ್‌ದವು. ಅವನ್ನು ಎಲ್ಲವೂ ಒಂದೇ ತರವಿರುವದರಿಂದ ಬೇಕಾದರೆ ಸ್ಥಳಾಂತರ ಮಾಡಬಹುದು.

... ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಚರಿಯುವದು ... ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು.

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ
೧೦-೧೨ ಕರಾಮತಗಾಣಗಳು ನಡೆಯುತ್ತಿವೆ. ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ
ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

... ಅಗ್ರಗಣ್ಯ ನೇಶನಲ್ ಇನ್‌ಶೂರೆನ್ಸ ಕಂಪನಿ, (ಲಿಮಿಟೆಡ್) ಎಂಬ

ಜೀವ ವಿಮೆಯ ಮಂಡಳಿ.

ಮೂಲಧನವು ಒಂದು ಕೋಟಿಯದು ... ಕಳೆದ ವರುಷ ಬೆಕ್ಕೆ ... ಮೇಲೆ ೯,40,044 ರೂಪಾಯಿಗಳ ಲಾಭವು ದೊರೆತಿದೆ.

... ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ... ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ ಬೋನಸ್ ಕೊಟ್ಟಿರುವದು.

ಹೊರಗಡೆ 1000 ರೂಪಾಯಿಗಳ ವಿಮೆಯ ... ಈ ಕಂಪನಿಯಲ್ಲಿ ... 1200 ರೂಪಾಯಿಗಳ ಪತ್ರವನ್ನು ಪಡೆಯಿರಿ ... ಎಷ್ಟು ಸುಲಭ, ... ತಡಮಾಡಬೇಡಿರಿ!

ಕರ್ನಾಟಕಕ್ಕೆ ಏಜಂಟ - **P D. Churi.**
ಬಿ. ಸಿ. ಸಿರಾಳಕೊಪ್ಪ, *Branch Secretary,*
ಕೊಪ್ಪೀಕರ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ... ಶೀಲೆ, ಪಿತಾಂಬರ, ರೇಶ್ಮೆ ಶಲ್ಲೆ, ಬಟ್ಟೆಗಳು, ಕಾಶ್ಮೀರದ ಶಾಲು, ಸಕಲಾತಿ ... ರುದ್ರಾಕ್ಷಿ ... ಗೌರೀಶಂಕರ ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತ, ಜಾಪಂಚೆ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನು ಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ -
ವಿಶ್ವನಾಥ ಎಂಡ್ ಬ್ರದರ್ಸ,

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ!

ಈ ಮದ್ದು ಅತ್ಯಂತ ಅವಶ್ಯವಾದದ್ದು,

ಬಾಳಿಕೆ ತೀರ ಅನುಕೂಲ; ಮನೆಕನದವರಂತೆ ಇಟ್ಟುಕೊಳ್ಳಲೇ ಬೇಕು; ಬಿದ್ದ ಪೆಟ್ಟು ಘಾಯುಗಳಿಗೆ, ಸಗಣಿ ಚೇಳ್ಕಡಿಗೆ, ತಲೆನೋವಿಗೆ, ಇನ್ನೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

REG. NO. B. 1270

MONDAY, MAY 28TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೨

ಪತ್ರದ ವರ್ಗಣಿ.

ಕುಮುಟೆಯಲ್ಲಿ ಆಗಾವು' ರೂಪಾಯಿ 2-4-0

ಮನೆಯಾರ್ಡರಿಯಿಂದ ರೂ. 3-0-0.

ವಿ. ಪಿ. ಖರ್ಚು ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.

ಕನಡ, ಇಂಗ್ಲಿಷ ಸ್ಮಾಲ ಪೈಕಾಯಿಪ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0- ೮ ಹಂತ್ರ ಪ್ರತಿಸಾಲಿಗೆ 0-2-0. ಹೆಚ್ಚಿಗೆ ಸಾಲು ಎಷ್ಟು ಬೇಕಾಗಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವವು.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೮ ಮಾಹೆ ಮೇ ಸನ್ ೧೯೨೮ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ವ್ಯಾಲು !!

ನಮ್ಮಲ್ಲಿ

ದೇಶ ದೇಶಾಂತರದ ನಮೂನೆಯ ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.-ಕಬ್ಬಿಣ ಮೊಳೆಗಳು, ಮೋಟಾರ ಉಪಯೋಗದ ಪೋಲಿಷ್‌ಗಳು, ಓಸ್ ವ್ರೋಶರ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕಟ್ಟಡದ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಕಾಬೂನುಗಳನ್ನು ಇಲ್ಲಿ ಕೊಂಡುಕೊಳ್ಳಿ!! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಚಿಲ್ಲರೆ ವ್ಯಾಪಾರಸ್ಥರು ರೋಖ ಪಣ್ಣೂಲ ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ
ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಆತ್ಮಾನಂ ಸತತಂ ರಕ್ಷೇತ್ ।

ಏರ್-ಪಿಸ್ತೂಲು ಯಾನೆ
ಗಾಳಿ ತುಬಾಕಿ!

ಕಳ್ಳರು, ದರೋಡೆಖೋರರು, ಕಾಡು ಪಶುಗಳು ಇವುಗಳಿಂದ ಆತ್ಮಸಂರಕ್ಷಣೆ ಮಾಡಿಕೊಳ್ಳಲನುಕೂಲ. ಅಭ್ಯಾಸವನ್ನು ಮಾಡಿ!!

ಕ್ರಿ ರೂ. ೪-೦-೦ (೫೦ ಗುಂಡುಗಳ ಸಹಿತ)
ವ್ಹಿ. ಪಿ. ಯ ಖರ್ಚು ೦-೬-೦.
ರೂಪಾಯಿಗೆ ೫೦೦ ಗುಂಡುಗಳು ಸಿಗುತ್ತವೆ
ಸೂಚನೆ:—ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡಬೇಕು

ಪತ್ತೆ:-**The Novelty Stores,** (103)
Bhuleshwar, Bombay. No. 2.

कारवारांत मुंबई!!!

अर्थात्

आमच्या टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या मादा अगर फॅशनबल टोप्या तयार केल्या जातात.

माल चोख— फॅशनेबल— स्वस्त— व भरपूर

हा शिवाय

आमच्या स्वंत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टॉवेल, चौक, लहानें--मोठे पंचे, सीडपाट, चीलपाट, शर्टिंग- कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोंडकार अँड सन्स.

पोस्ट— सुंकेरि (कारवार.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಕಟ್ಟು,
ದೊಡಗಾದ ಹಾಗು ಚಿನ್ನಗಾದ
ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ,
ಹತ್ತಿಯ ಹಾಗು ಬಿಜಗರುಗಳೂ,
ಹಂಚಿಯ ದೊಬಿನುಗಳೂ, ಪಾವುಗಳೂ,
ಎಲ್ಲ ರೀತಿ ಸಾಗಡಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ
ಬಹಳ ಅಗ್ಗ!

P. P. TRIVEDI & CO.,
BRUCE Street, Fort, BOMBAY

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ.)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟು ಗಿಲ್ಟ ಮೂವೆಂಟ ಮಾಡಿರುವದು ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ.- ಫೌಂಟನ ಪೇನಾ ೧, ಕೇರ್ [illegible] ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪ್ಪು ೧, ಪೇನಾ ಕತ್ತಿ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ೧, ರೋಲ್ ಗೋಲ್ ನೆಕ್ಲೇಸ್ ಎಂಬ ಪತ್ತಿನ ಹಾರ ೧, ಡಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈವಸ್ತ್ರ ೧. ಈ ೧೫ ಬಹುಮಾನಗಳ [illegible] ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಬರೇ ರೂ.೪-೮-೦

ವಿಳಾಸ — **ಇಂಗ್ಲಿಷ ಎಂಪೋರಿಯಂ,**
ಪೋಸ್ಟ್ ಬಾಕ್ಸ್ ನಂ. ೧೦೫, **ಮದರಾಸು.**

ನನ್ನ ಶಾಸ್ತ್ರೀಯ ವಾದ [illegible]

ಶಾರೀರಿಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ. ನನ್ನ ದೇಹದ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಆರೋಗ್ಯವು ಹೇಗೆ ಒಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ೨ ಆಣೆ. ಸಾಂಪನ್ನು ಕಳುಹಿಸಿ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ಕಳಿಸುತ್ತೇನೆ ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನು ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಟೇಬಲ್ ಟೈಂಪೀಸ ಇನಾಂ



ಈ ನಕ್ಷೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ. ೨-೮-೦.
ವಿಳಾಸ:—ಸೀಟಿಜ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿ ರೋಖ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೇದಿ ಚೌಕಸಿಯಿಂದಾಗುವದು. ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುವದು. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಾಗದ ಬರೆದು ತರಿಸಿಕೊಳ್ಳಿ. ಉಚಿತವಾಗಿ ಸಿಗುವದು.

ಪುಕ್ಕಟೆ! ಪುಕ್ಕಟೆ!! ದುಡ್ಡು ಇಲ್ಲ!!!

ಈ ಅಪೂರ್ವ ಸಂಧಿಯು ಬಹುಕಾಲ ಬರದು!

ಚಿನ್ನದಂ ಮುಂಗೈ ಗಡಿಯಾರಗಳು!



ಜೊತೆಗೆ ಅಮೂಲ್ಯ ಇನಾಮುಗಳು!

ಬದಿಗೆ ತೋರಿಸಿದ ನಕ್ಷೆಯೊಳಗಿನ ಗಡಿಯಾರಗಳ ಮುಂಗೈ ಗಡಿಯಾರಗಳು. ಅವುಗಳ ಸಂಗತ ರೇಶಿಮೆಯ ಯಾ ಚರ್ಮದ ಪಟ್ಟಿ ಸಿಗುತ್ತದೆ. ಎರಡಕ್ಕೂ ಕೂಡಿ ಬೆಲೆ ರೂ. ೫-೧೫-೧. ೪ ವರುಷದ ಗೆರೆಂಟಿ.

ವ್ಹಿ. ಪಿ. ಖರ್ಚಿನ ಬಗ್ಗೆ ೦-೬-೦ ಪ್ರತ್ಯೇಕ.

೩ ಗಡಿಯಾರಗಳಿಗೆ ರೂ ೧೫ ೦-೦, ೬ ಗಡಿಯಾರಗಳಿಗೆ ರೂ. ೩೮—೦—೦, ಅಂಚೆ ವೆಚ್ಚ ಇಲ್ಲ!

ಇದಲ್ಲದೆ ಗಿರಾಕಿಗಳಿಗೆ ಒಂದೊಂದು ಇನಾಮು ಕೊಡಲಾಗುವದು ಗಡಿಯಾರಗಳನ್ನು ತರಿಸುವಾಗ ೧ ರಿಂದ ೧೦೦ ರ ತನಕ ಯಾವದೇ ಒಂದು ಅಂಕಿಯನ್ನು ಅವರು ಬರೆದು ತಿಳಿಸಬೇಕು. ಆ ಅಂಕಿಯಿಂದ ಸೂಚಿತವಾದ ಇನಾಮು ಗಡಿಯಾರದ ಜೊತೆಗೆ ಕಳಿಸಲ್ಪಡುವದು ಪ್ರತಿಯೊಂದು ನಂಬರಿಗೆ ಒಂದೊಂದು ಇನಾಮಿನ ನಿರ್ದೇಶವಾಗಿದೆ.

ಟೀಪು:— ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲಿಯೇ ಮಾಡತಕ್ಕದ್ದು

ಪತ್ತೆ:- THE DILAWAR WATCH COY, (33)
Bhuleshwar, BOMBAY.

ಖಾದಿ ಪರಿಷತ್ತು.

ಈ ಹೊತ್ತು ಧಾರವಾಡದಲ್ಲಿ ಸೇರಿದ ಪ್ರಥಮ ಕರ್ನಾಟಕ ಖಾದಿ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ| ಆಲೂರ ವೆಂಕಟರಾಯರ ಭಾಷಣದ ಸಾರಾಂಶವೇನಂದರೆ:—ಮೊಟ್ಟಮೊದಲು ಶ್ರೀ| ಆಲೂರ ವೆಂಕಟರಾಯರು ಖಾದಿ ಭಕ್ತರಿಗೆ ಸುಸ್ವಾಗತವನ್ನಿತ್ತು, ಖಾದಿ ಕಲ್ಪನೆಯ ವಿಕಾಸವನ್ನು ವರ್ಣಿಸಿದರು. ಖಾದಿಯ ಪ್ರಸಾರಕ್ಕಾಗಿ ಅಖಿಲ ಭಾರತ ನೂಲುಗಾರ ಸಂಘವು ಏರ್ಪಾಟು ಹೊಂದಿತೆಂದು ಹೇಳಿದರು. ಮ್ಯಾ| ಮಗನಲಾಲ ಗಾಂಧಿಯವರಿಂದ ಖಾದಿ ಕಾರ್ಯಕ್ಕೆ ಉಂಟಾದ ನಷ್ಟವನ್ನು ಶ್ರೀ| ವೆಂಕಟರಾಯರು ವಿವರಿಸಿದರು. ಖಾದಿಯನ್ನು ಸಂಪೂರ್ಣವಾಗಿ ಹುಟ್ಟಿಸಿ, ಪರದೇಶಿ ಬಟ್ಟೆಯ ಪ್ರಸಾರಕ್ಕೆ ತಡೆ ಹಾಕುವದು ಸಾಧ್ಯವಿದೆ. ಖಾದಿಯು ಸ್ವಾವಲಂಬನದ ಮೊದಲನೇ ಹೆಜ್ಜೆ; ಬಹಿಷ್ಕಾರ ಬತ್ತಳಿಕೆಯೊಳಗಿನ ಹಸನಾದ ಅಸ್ತ್ರ. ಖಾದಿಯಿಂದುಂಟಾದ ನೈತಿಕ ಹಾಗು ಆಧ್ಯಾತ್ಮಿಕ ಶಕ್ತಿಗೆ ಅತ್ಯಂತ ಬೆಲೆಯಿದೆ. ಅಂತರಂಗದಲ್ಲುಂಟಾದ ಪಲ್ಲಟವನ್ನು ಖಾದಿಯು ಪ್ರದರ್ಶಿಸುತ್ತದೆ. ಖಾದಿಯ ಉಡುಪಿನಿಂದ ಮಾನವನ ಮನೋರಚನೆಯಲ್ಲಿ ಸಾತ್ವಿಕ ಭಾವವು ಉದಯವಾಗಿದೆಂದು ಹೇಳಬಹುದು, ದೇಶಾಭಿಮಾನಸ್ಫುರಣದ ದ್ಯೋತಕವಾದರೂ ಅದೇ. ಹೀಗೆಲ್ಲ ಪವಿತ್ರವಾದ ಭಾವನೆಯು ಖಾದಿಯಲ್ಲಿದೆ. ಆರ್ಥಿಕ ದೃಷ್ಟಿಯಿಂದ ನೋಡಿದರೂ, ಖಾದಿಯ ಮಹತ್ವವು ಕಡಿಮೆಯಾಗಿಲ್ಲ. ಖಾದಿಯಿಂದ ಆರ್ಥಿಕ ಲಾಭವೇನು ಸದ್ಯಕ್ಕೆ ಕಣ್ಣಿಗೆ ಕಾಣ ತೋರುವದಿಲ್ಲ. ಆದರೆ, ತಲೆಗೆ ೨೭ ರೂಪಾಯಿ ಸರಾಸರಿ ಉತ್ಪನ್ನವಿರುವವರಿಗೆ ಖಾದಿಯಿಂದ ದಿನಾ ೨ ಆಣೆ ಗಳಿಸಿದರೂ, ವರ್ಷಕ್ಕೆ ೫೦ ರೂಪಾಯಿಗಳ ಆಯ ಕಡಿಮೆಯೇ? ಇದು ಕಡಿಮೆಯೇ? ಎಂದು ಶ್ರೀ| ಆಲೂರ ವೆಂಕಟರಾಯರು ಉದ್ಗರಿಸಿದರು. ಖಾದಿಯಿಂದ ಸ್ಥಾನಿಕ ಅಭಿಮಾನವು ಜಾಗೃತವಾಗುತ್ತದೆ. ಸ್ವಕೀಯ ಪ್ರಾಂತದಲ್ಲಿ ಹುಟ್ಟಿದ ಖಾದಿಯನ್ನೇ ತಾನು ಧರಿಸಬೇಕೆಂಬ ಅಭಿಮಾನವು ಪ್ರಾಂತದವರಲ್ಲಿ ಹುಟ್ಟುತ್ತದೆ. ಕರ್ನಾಟಕದಲ್ಲಿ ಖಾದಿಗೆ ಗಿರಾಕಿ ಹೆಚ್ಚು; ಹುಟ್ಟುವಳಿ ಕಡಿಮೆ. ಇದು ಕರ್ನಾಟಕಕ್ಕೆ ಭೂಷಣವಲ್ಲ. ಕರ್ನಾಟಕಕ್ಕೆ ತಗಲುವ ಖಾದಿಯನ್ನು ಕರ್ನಾಟಕದಲ್ಲಿಯೇ ಹುಟ್ಟುವಳಿ ಮಾಡುವ ಪ್ರಯತ್ನವನ್ನು ನಾವು ಮಾಡಬೇಕು. ಖಾದಿಯಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭೇದವಿಲ್ಲ. ಎಲ್ಲರೂ ಈ ಕಾರ್ಯವನ್ನು ಕೈಕೊಂಡು ಒಮ್ಮನದಿಂದ ನಡೆದು ಬಡವ ಕೈಗಾರಿಕೆಗಳನ್ನು ಉದ್ಧರಿಸಬೇಕು. ಕರ್ನಾಟಕವು ಹತ್ತಿಯ ಪ್ರದೇಶವು ಇಲ್ಲಿ ನೂಲಿಗೆ ಕೊರತೆಯಿಲ್ಲ. ಖಾದಿ ಬೆಳೆಯಲಿಕ್ಕೆ ಪ್ರತಿಬಂಧವ್ಯಾವುದೂ ಇಲ್ಲ. ರೇಶಿಮೆಯೂ ವಿಪುಲವಾಗಿ ದೊರೆಯುತ್ತದೆ. ಆದುದರಿಂದ ಬಡವನ ಮೊದಲುಗೊಂಡು ಸಿರಿವಂತನ ವರೆಗೂ, ಸಾದಾ ಉಡುಪಿನಿಂದ ಬೆಡಗಿನ ಉಡುಪಿನ ವರೆಗೂ, ದಿನದ ಉಡುಗೆಯಿಂದ ಹಬ್ಬದ ಉಡುಗೆಯ ವರೆಗೂ ಕರ್ನಾಟಕವು ಎಲ್ಲರ ಮನಸ್ಸನ್ನು ತೃಪ್ತಿಬಡಿಸಬಹುದೆಂದು ಶ್ರೀ| ಆಲೂರ ವೆಂಕಟರಾಯರು ಸಭಿಕರಿಗೆ ತಿಳಿಸಿಹೇಳಿದರು. ಖಾದಿಯನ್ನು ಸದಾ ಸರ್ವದಾ ತೊಡಬೇಕು. ಕನಿಷ್ಟ ಪಕ್ಷಕ್ಕೆ ರಾಷ್ಟ್ರೀಯ ಉತ್ಸವಗಳಲ್ಲಾದರೂ, ಹಬ್ಬ-ಹುಣ್ಣಿವೆಗಳಲ್ಲಾದರೂ ಧರಿಸಲೇಬೇಕು. ಇದರಿಂದ ಡಂಭಾಚಾರವಾಗುವದಿಲ್ಲ. ದೇವಾಲಯಗಳ ಗರ್ಭಗುಡಿಯಲ್ಲಿ ಪ್ರವೇಶಿಸುವಾಗ, ಶುಚಿರ್ಭೂತ ಉಡುಪನ್ನು ಧರಿಸಿಕೊಂಡು ಪ್ರವೇಶಿಸಬೇಕೆಂದು ನಾವು ಹೇಳುವದಿಲ್ಲವೇ? ಹಾಗೆಯೇ ರಾಷ್ಟ್ರೀಯ ಉತ್ಸವಗಳಲ್ಲಿಯೂ, ಹಬ್ಬ-ಹುಣ್ಣಿವೆಗಳಲ್ಲಿಯೂ ಶುಚಿರ್ಭೂತನಾಗಿ ಪ್ರವೇಶಿಸಿದರೆ, ಕ್ಷಣಕಾಲವಾದರೂ, ಉಚ್ಚ ಮನೋಭಾವಗಳು ಉತ್ಪನ್ನವಿಸಿ ಆತನಿಗೂ, ದೇಶಕ್ಕೂ ಕಲ್ಯಾಣವಾಗುವದು. ಮುಖ್ಯವಾಗಿ ಭಾವನೆಯೇ ಮಹತ್ವದಿದೆ. ಭಾವನೆಯಿರದೆ ಸದಾ ಖಾದಿಯನ್ನು ಧರಿಸಿದರೂ ಡಂಭಾಚಾರವಾಗಲಿಕ್ಕಿಲ್ಲವೇ? ಮೈಸೂರ ಮಹಾರಾಜರು ಖಾದಿಯ ಪುರಸ್ಕಾರ ಮಾಡಿದ ಬಗ್ಗೆ ಅವರಿಗೆ ಪರಿಷತ್ತು ಅಭಿನಂದಿಸತಕ್ಕದ್ದು. ಮೈಸೂರ ಬಂಧುಗಳು ಮಹಾತ್ಮರಿಗೆ ೫೦ ಸಾವಿರ ರೂಪಾಯಿಗಳನ್ನರ್ಪಿಸಿ, ಕರ್ನಾಟಕಕ್ಕೆ ಮೇಲ್ಪಂಕ್ತಿಯು ಹಾಕಿದ್ದಾರೆ. ಬೆಂಗಳೂರ ಮ್ಯುನಿಸಿಪಾಲಿಟಿಯವರು ಖಾದಿಗೆ ಉತ್ತೇಜನ ಕೊಟ್ಟಿದ್ದಾರೆ. ಹೋದ ವರುಷ ಕರ್ನಾಟಕದಲ್ಲಿ ೫೫೮೮೮ ರೂಪಾಯಿಗಳ ಖಾದಿ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು !

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನಿತ್ರ ದಿನಾ ಅ ಕಾರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುತ್ತವೆ, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನ ವ್ಯಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಬಿಮ್ಮಿಕ್ಕಿದ ಕೂದಲಿ ತಲೆಯ ಹೊಟ್ಟು ಹೋಗುತ್ತದೆ; ಕರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

——:o:——

೩ ಔಂಸಿಗೆ	ರೂ.	೨—೦—೦
೨ ಔಂಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಜಾಸ್ತಿ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY.**

ಹುಟ್ಟಿತು, ರೂ ೭೮,೦೦೦ಗಳ ಖಾದಿ ಖರ್ಚಾಯಿತು ಅಂದರೆ ೨೨—೨೩ ಸಾವಿರ ರೂಪಾಯಿಗಳ ಖಾದಿಯು ಪರಪ್ರಾಂತದಿಂದ ಬಂತು. ನಿಜವಾಗಿ ಕರ್ನಾಟಕದಲ್ಲಿ ಖಾದಿಯ ಉತ್ಪತ್ತಿ ಏನೂ ಆಗಿಲ್ಲ ಇತ್ಯಾದಿ ವಿಚಾರಗಳನ್ನರುಹಿ, ಸ್ವಾಗತಾಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದ್ದಾರೆ.

ಅಧ್ಯಕ್ಷರ ಭಾಷಣ

ಅಧ್ಯಕ್ಷರಾದ ಬ್ರಹ್ಮಚಾರಿ ಶ್ರೀ|| ಹರ್ಡೇಕರ ಮಂಜಪ್ಪನವರು ಮಾಡಿದ ಭಾಷಣದ ಸಾರಾಂಶ —

ಖಾದಿಯ ಕಾರ್ಯವನ್ನು ಅಂತಃಕರಣಪೂರ್ವಕವಾಗಿ ನಡಿಸಿದ ಶ್ರೀ ಮಗನಲಾಲ ಗಾಂಧಿಯವರ ಅಕಾಲ ಮೃತ್ಯುವಿಗಾಗಿ ನಾವು ದುಃಖಿಸಿಕೊಳ್ಳಬೇಕು. ಅವರ ನಿಜವಾದ ಶ್ರಾದ್ಧವೆಂದರೆ ಖಾದಿಯು. ವಿಷಯ ಈಗ ಭಿನ್ನಾಭಿಪ್ರಾಯಗಳಿಲ್ಲ. ಖಾದಿಯ ಸ್ವರೂಪವು ಆಗಲೇ ನಿಶ್ಚಿತವಾಗಿದೆ. ಹಿಂದಿನ ಬಡವರ ಹೊಟ್ಟೆಗೆ ರೊಟ್ಟಿ ದೊರಕಿಸಿಕೊಡುವ ಸಾಧನವು ಖಾದಿಯೆಂದು ಈಗ ನಿಶ್ಚಿತವಾಗಿದೆ. ೭ ವರ್ಷಗಳಲ್ಲಿಯೇ ಖಾದಿಯು ೧೫೦೦ ಗ್ರಾಮಗಳಲ್ಲಿ ಪ್ರಸಾರ ಹೊಂದಿದೆ. ೧ ಲಕ್ಷ ಜನರಿಗೆ ಸ್ವಸ್ಥಳದಲ್ಲಿಯೇ ಉದ್ಯೋಗ ದೊರೆತು ಉಪಜೀವನ ಮಾಡುವ ಸಾಧನವು ಪ್ರಾಪ್ತವಾಗಿದೆ. ೧೫೦ ವರ್ಷಗಳಿಂದ ಗಿರಣಿಯುಗ ನಡೆದರೂ ೪ ಲಕ್ಷ ಜನರ ವ್ಯವಸ್ಥೆಯಾಗುತ್ತಿದೆ. ಇದಕ್ಕಾಗಿ ಕೂಲಿಕಾರರು ದೇಶಾಂತರ ಮಾಡಿ ನಾನಾ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಈ ಹಿತಾರ್ಥದಿಂದ ಖಾದಿಯ ಕೆಲಸವೇ ಶ್ರೇಷ್ಠವೆಂದು ಸ್ಪಷ್ಟವಾಗುವದಿಲ್ಲವೇ? (ಈ ಮೇಲೆ ಅಧ್ಯಕ್ಷರು ರಿಚರ್ಡ ಗ್ರೇಗರವರು ಬರೆದ ಗ್ರಂಥದ ಉಲ್ಲೇಖ ಮಾಡಿದರು. ಆ ಗ್ರಂಥದ ಉಲ್ಲೇಖವು ಈ ಹಿಂದೆಯೇ 'ವೃತ್ತ'ದಲ್ಲಿ ಪ್ರಕಟವಾಗಿದೆ) ರಾಷ್ಟ್ರದ ಅಭಿವೃದ್ಧಿಯು ಹಳ್ಳಿಗಳ ಉನ್ನತಿಯ ಮೇಲೆ ಅವಲಂಬಿಸಿರುತ್ತದೆ. ಹಳ್ಳಿಗಳಲ್ಲಿ ಕೋಟ್ಯಾಂತರ ಬಾಂಧವರು ಹೊಟ್ಟೆ—ಬಟ್ಟೆಗಳಿಗಿಲ್ಲದೆ ಒಳಲುತ್ತಿರುವಾಗ, ಅವರ ಜೀವನಾಧಾರವಾದ ಖಾದಿಯ ಕಾರ್ಯವನ್ನು ಮೊಟ್ಟ ಮೊದಲು ನಾವು ಕೈಕೊಳ್ಳತಕ್ಕದ್ದು. ತಮಿಳನಾಡಿನಲ್ಲಿ ಹತ್ತಿ ಬಹಳ ಹುಟ್ಟುತ್ತದೆ. ಆ ಕಾರಣದಿಂದ ಕರ್ನಾಟಕದಲ್ಲಿ ಪ್ರಗತಿಯಿಲ್ಲ. ೧೪ ಖಾದಿ ಅಂಗಡಿಗಳಿವೆ; ೭ ಕೇಂದ್ರಗಳಿವೆ. ಖಾದಿ ಕಾರ್ಯಕ್ಕಾಗಿ ಪರಿಶ್ರಮಪಡುವ ಕರ್ನಾಟಕಸ್ಥರು ಒಬ್ಬರು ಮುಂದಾಗರು. ಕರ್ನಾಟಕದ ಜನಸಂಖ್ಯೆಯು ೧॥ ಕೋಟಿ ಇದರ ಮೇಲಿಂದ ಕರ್ನಾಟಕಸ್ಥರು ಬಡ ಬಾಂಧವರ ಹೊಟ್ಟೆ—ಬಟ್ಟೆಗಳ ವಿಷಯದಲ್ಲಿ ಬಹು ಉಪೇಕ್ಷೆ ಮಾಡುತ್ತಾರೆಂಬುದು ಸ್ಪಷ್ಟವಾಗುತ್ತದೆ. ಮೈಸೂರಿನ ಶ್ರೀಮನ್ಮಹಾರಾಜರವರನ್ನು ಮನಃಪೂರ್ವಕವಾಗಿ ನಾವು ಅಭಿನಂದಿಸುತ್ತೇವೆ. ನಿಜಾಮ ಸರಕಾರ ಪ್ರಚಾರ ಸಾರವನ್ನು ಪ್ರಾರಂಭಿಸಲು ಉತ್ಸುಕವಾಗಿದೆ. 'ಕರ್ನಾಟಕದಲ್ಲಿ ಈ ವರೆಗೆ ಇಷ್ಟಾದರೂ ಖಾದಿಯ ಪ್ರಸಾರವಾಗಲು ದೇಶಭಕ್ತ ದೇಶಪಾಂಡೆ ಗಂಗಾಧರರಾಯರೇ ಮುಖ್ಯವಾಗಿ ಕಾರಣರಾಗಿದ್ದಾರೆ ಹೆಚ್ಚಿನ ಖಾದಿ ಬೆಳಗಾವಿಯಲ್ಲೇ ಹುಟ್ಟುತ್ತದೆ; ವಿಕ್ರಯವಾದರೂ ಅಲ್ಲಿಯೇ ಹೆಚ್ಚಾಗುತ್ತದೆ, ಇತ್ತ ಹೊಸ ಪ್ರಚಂಡ ಗಾಳಿಯು ಸಂಚಾರವಾಗಿದೆ. ಬ್ರಿಟಿಶ ಬಟ್ಟೆಗೆ ಬಹಿಷ್ಕಾರ ಹಾಕುವ ಹವ್ಯಾಸದಲ್ಲಿ ಗಿರಣಿಯ ಬಟ್ಟೆಗಳನ್ನು ಪುರಸ್ಕರಿಸಬೇಕೆಂಬ ಆತುರತೆ ನಡೆದಿದೆ ಈ ಇಕ್ಕಟ್ಟಿನಲ್ಲಿ ಚಂಚಲಮನಸ್ಕರಾಗದೆ ನಾವು ನಡೆಕೊಳ್ಳತಕ್ಕದ್ದು. ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ರಾಷ್ಟ್ರೀಯ ಸಭೆಯವರು ಗಿರಣಿ ಬಟ್ಟೆಯನ್ನು ಉಪಯೋಗಿಸುವದು ಶುದ್ಧ ತಪ್ಪೆಂದು ಹೇಳಿದ್ದಾರೆ. ಖಾದಿಯ ಕಡೆಗೇನೇ ಸಂಪೂರ್ಣ ಗಮನ ಕೊಡಬೇಕೆಂದೂ ಜಾಗ್ರತಿ ಕೊಟ್ಟಿದ್ದಾರೆ. ಗಿರಣಿ ಬಟ್ಟೆಯಿಂದ ಸಾಮಾನ್ಯ ಜನರಿಗೆ ಯಾವ ಉಪಯೋಗವೂ ದೊರೆಯುವದಿಲ್ಲ. ಖಾದಿಯಿಂದ ಬಡಬಾಂಧವರಿಗೆ ಕೂಲಿ ದೊರೆಯುತ್ತದೆ, ಲೋಕಶಿಕ್ಷಣವೂ ಆಗುತ್ತದೆ. ಕೂಲಿಕಾರರು ಕೆಲವು ಕಾಲ ಹೀನರಾಗುವಂತೆ ಗಿರಣಿಗಳಲ್ಲಿ ದುಡಿದರೂ, ಕೊನೆಗೆ ಅವರ ವಿಪತ್ತೇನು ತಪ್ಪುವದಿಲ್ಲ. ಇತ್ತಿತ್ತಲಾಗ ಮುಂಬಯಿಯಲ್ಲಿ ನಡೆಯುವ ಸಪ್ಪೇ ಸಾಕ್ಷಿ. ಕರ್ನಾಟಕದ ಸ್ಥಿತಿಯು ವಿಚಿತ್ರವಿದೆ. ಖಾದಿ ಹುಟ್ಟುವದು ಗಿರಣಿಗಳಿಂದ; ಗಿರಣಿಗಳಿಷ್ಟಲ್ಲಿ ಖಾದಿ ಉಳಿಯುವದಿಲ್ಲ. ಶೇಕಡೆ ೪ ಭಾಗಗಳನ್ನು ಮಾಡಿ ಅರ್ಧಭಾಗಗಳಿಗೆ ಹಂಚಿಬಿಟ್ಟ ಪ್ರಮುಖರನ್ನು ಗೊತ್ತು ಮಾಡಿ ಖಾದಿ ಹುಟ್ಟುವಲ್ಲಿ ಹಾಗು ಪ್ರಸಾರ ಕಾರ್ಯಗಳಿಗೆ ಅನುಕೂಲಮಾಡಿ ಕೊಡಬೇಕು. ಕರ್ನಾಟಕ ಖಾದಿ ಸಂಘಕ್ಕೆ ೩ ವಿಧವಾದ ಸಭ್ಯರನ್ನು ಗೊತ್ತು ಮಾಡಬೇಕು ನೂಲುವವರು ಮತ್ತು ಸಂಪೂರ್ಣ ಖಾದಿಯನ್ನು ಉಪಯೋಗಿಸುವವರು, ಮೊದಲನೇ ತರಗತಿಯವರು; ಸಂಪೂರ್ಣ ಖಾದಿಯನ್ನುಪಯೋಗಿಸುವವರು ಎರಡನೆ ವರ್ಗದವರು ವರ್ಷಕ್ಕೆ ಕನಿಷ್ಟ ಪಕ್ಷ ೧೦ ರೂಪಾಯಿಗಳ ಖಾದಿ ಖರೀದಿ ಮಾಡುವ ... ಕೊಳ್ಳುವವರು ೩ನೇ ವರ್ಗದವರು ಈ ಸಭ್ಯರು ವಿಧವಾದ ಪರಿಶ್ರಮವನ್ನು ಹೆಚ್ಚಿಸಲು ಪ್ರಯತ್ನಿಸಬೇಕು. ಖಾದಿಯ ಮೇಲು ಬಾಗುವ ಆಕ್ಷೇಪಗಳನ್ನು ಕಾಲ ಕಾಲಕ್ಕೆ ನಿವಾರಿಸಲು ಪ್ರಚಾರಪತ್ರಿಕೆಯನ್ನೊಂದು ಹೊರಡಿಸಿ ಅದಕ್ಕೆ ಜಾಗ್ರತೆ ಪ್ರಕಟಿಸಬೇಕು. ಖಾದಿಯು ಧನಿಕರ, ದರಿದ್ರರ ಅಥವಾ ನೀತಿಯ ಹೊಂದು ಗುರುತು. ಖಾದಿಯನ್ನು ಕಂಡೊಡನೆ ಬಡ ಹಳ್ಳಿಗರು ಹೊಟ್ಟೆ-ಬಟ್ಟೆಗಳಿಂದ, ಸಂತೋಷದಿಂದ ಇರುವ ಪ್ರೇಮಮಯವಾದ ನೋಟವು ತೋರಿ ಮನಸ್ಸಿಗೆ ಆನಂದವಾಗುತ್ತದೆ." ಹೀಗೆ ಭಾಷಣವನ್ನು ಮಾಡಿ ಹರ್ಡೇಕರ ಮಂಜಪ್ಪನವರು ಸ್ವಸ್ಥಾನಾಪನ್ನರಾದರು.

ಕರ್ನಾಟಕ ಪ್ರಾಂತಿಕ ಪರಿಷತ್ತಿನ ೫ನೇ ಅಧಿವೇಶನ

ಸ್ವಾಗತಾಧ್ಯಕ್ಷರಾದ ಶ್ರೀ|| ವಿಶ್ವನಾಥರಾವ ಜೋಗರವರ ಭಾಷಣದ ಸಾರಾಂಶ.—

ಧಾರವಾಡ ಜಿಲ್ಲೆಯ ಪರವಾಗಿ ತಮ್ಮೆಲ್ಲರಿಗೂ ಸ್ವಾಗತವಿದೆ; ಸುಸ್ವಾಗತವಿದೆ. ಕರ್ನಾಟಕದ ಬೌದ್ಧಿಕ ಹಾಗು ರಾಜಕೀಯ ಕಾರ್ಯಗಳಲ್ಲಿ ಯಾವಾಗಲೂ ಧಾರವಾಡವೇ ಮುಂದೆ. ಧಾರವಾಡದ ಇತಿಹಾಸವು ಬಹು ಪುರಾತನ ಕಾಲದ್ದು. ಬಹು ಪುರಾತನ ಕಾಲದಿಂದ ನಮ್ಮ ಬೆಳವಲ ನಾಡು ಕನ್ನಡ ಭಾಷೆಗೆ ಹಾಗು ಸಂಸ್ಕೃತಿಗೆ ತವರೂರೆಂದು ಹೆಸರುವಾಸಿಯಾಗಿದೆ. ಪಂಪನಂಥ ಕವಿಶ್ರೇಷ್ಠರು ಇಲ್ಲಿ ಆಗಿ ಹೋದರು. ರಾಷ್ಟ್ರಕಾರ್ಯದಲ್ಲಿ ನಿಶ್ಚಿತವಾದ ಧೋರಣವನ್ನು ಕೈಕೊಳ್ಳುವ ಪ್ರಸಂಗವು ಇದೇ. ನಮ್ಮ ಸ್ವಾತಂತ್ರ್ಯದ ವಿರೋಧಿಗಳು ನಮ್ಮ ದಾಸ್ಯವನ್ನು ಶಾಶ್ವತ ಮಾಡಲಿಕ್ಕೆ ಯತ್ನಿಸುತ್ತಿದ್ದಾರೆ. ಹಿಂದೀ ರಾಷ್ಟ್ರಪ್ರತಿನಿಧಿಗಳು ಒಮ್ಮನಸ್ಸಿನಿಂದ ಕೇಳಿದ ಬೇಡಿಕೆಗಳು ಮೂಲೆಗೊತ್ತಿಸೋಣಾಗಿವೆ. ಸ್ವಾತಂತ್ರ್ಯದ ವಾತಾವರಣವು ಎಲ್ಲೆಡೆಯಲ್ಲಿಯೂ ಪಸರಿಸಿದೆ. ಬಂಗಾಲಿಗಳು ಕಡುತರ ಕಷ್ಟಗಳನ್ನು ಅನುಭವಿಸಿ ಸಹಿಸುತ್ತಿದ್ದಾರೆ. ಬಾರ್ಡೋಲಿ-ಪೇಣ ತಾಲೂಕುಗಳಲ್ಲಿ ರೈತರ ಮೇಲೆ ಹೇರಲ್ಪಡುವ ಕಂದಾಯದ ನಿರಾಕರಣೆ ನಡೆದಿದೆ. ರಾಷ್ಟ್ರೀಯ ಸಭೆ, ಪ್ರಾಂತಿಕ ಪರಿಷತ್ತುಗಳ ಸ್ವಾತಂತ್ರ್ಯನಿರ್ಧಾರವು ಬಲು ಉತ್ಸಾಹದಿಂದ ಸ್ವೀಕರಿಸಿಕೊಳ್ಳೋಣಾಗಿವೆ. ಡಾ|| ಹರ್ಡೀಕರರು ಸ್ವಯಂಸೇವಕ ಸಂಸ್ಥೆಗಳಲ್ಲಿ ವಿಶೇಷ ಯಶಸ್ಸನ್ನು ಸಂಪಾದಿಸಿದ್ದಾರೆ. ಇವೆಲ್ಲ ರಾಷ್ಟ್ರೋದ್ಧಾರದ ಶುಭ ಚಿನ್ಹಗಳು. ಕರ್ನಾಟಕವು ಛಿನ್ನವಿಚ್ಛಿನ್ನವಾಗಿದೆ. ಅದರಿಂದ ರಾಷ್ಟ್ರಕಾರ್ಯಕ್ಕಾಗಿ ಸರ್ವಸಾಮರ್ಥ್ಯವನ್ನು ಒಟ್ಟುಗೂಡಿಸಲು ಸಾಧ್ಯವಿಲ್ಲ. ಗೋದಾವರೀ-ಕಾವೇರೀ ತೀರದ ಮೇಲೆ ದಂಡಿನ ರಾಜ್ಯವನ್ನಿಟ್ಟು ಜಯಪತಾಕೆಯನ್ನು ಮೆರೆಸಿದ ಕರ್ನಾಟಕವು ಈಗ ಮೂರೆಡೆ ಹಂಚಿ ಹೋಗಿದೆ. ಕನ್ನಡಿಗರು ತಮ್ಮ ಪೂರ್ವೇತಿಹಾಸವನ್ನೆ ಮರೆತು ಬಿಟ್ಟಿದ್ದಾರೆ. ಕರ್ನಾಟಕ ಏಕೀಕರಣದ ಆಂದೋಲನಕ್ಕೆ ಎಲ್ಲ ಜಾತಿ—ಪಂಗಡಗಳು ಕುಂದದೆ ಪ್ರಯತ್ನಪಡುತ್ತಲಿವೆ. ಕರ್ನಾಟಕದೊಳಗಿನ ಮೇಲಿನ ವೃತ್ತಪತ್ರಗಳೂ, ಶಿವಯೋಗ ಮಂದಿರ, ಬಾಲಮೂರ್ತಿ ಸಂಸ್ಥೆ, ಗೆಳೆಯರ ಗುಂಪು, ವೀರಶೈವ ಆಶ್ರಮ, ಶಾಂತಿ ಶಿಬಿರ, ಕರ್ನಾಟಕ ಸಂಘ ಮುಂತಾದ ಸಂಸ್ಥೆಗಳು ತುಂಬಾ ನೆರವಾಗುತ್ತಲಿವೆ. ಕನ್ನಡ ವಾಙ್ಮಯದ ಏಳ್ಗೆಗಾಗಿ ನಾವು ಪ್ರಯತ್ನಪಟ್ಟು ದುಡಿಯಬೇಕು. ಬುದ್ಧಿಶಾಲಿ ಕರ್ನಾಟಕಸ್ಥರು ವಿಚಾರವಿನಿಮಯ ಮಾಡಿಕೊಳ್ಳಬೇಕು. ಕರ್ನಾಟಕದ ಬಗ್ಗೆ ಕರ್ನಾಟಕಸ್ಥರು ಯೋಗ್ಯವಾದ ಅಭಿಮಾನವನ್ನು ತಾಳಬೇಕು. ನೆರೆಹೊರೆಯ ಪ್ರಾಂತಗಳ ಭಾಷೆ ಮುಂತಾದ ಸಂಸ್ಥೆಗಳಿಗೆ ಎಡೆಗೊಡದೆ, ನಮ್ಮ ಕನ್ನಡ ಭಾಷೆಯನ್ನು ಹಿರಿದರಿಂದ ಪುರಸ್ಕರಿಸಬೇಕು. ಅಂದರೆ, ಬೆಳಗಾವಿ-ಬಳ್ಳಾರಿಗಳಂಥ ಗಡಿ ನಾಡುಗಳು ಸುರಕ್ಷಿತವಾಗುವವು. ಹಿಂದೀ ರಾಷ್ಟ್ರದ ಅಂತಿಮ ಧ್ಯೇಯವು ಅನಿಯಂತ್ರಿತವಾದ ಪೂರ್ಣ ಸ್ವಾತಂತ್ರ್ಯವೆ ಎಂದು ನಿಶ್ಚಯವಾದರೆ, ರಾಷ್ಟ್ರದೊಳಗಿನ ಅನೇಕ ಪ್ರಶ್ನೆಗಳು ಸುಲಭವಾಗಿ ಬಿಡಿಸಲ್ಪಡುವವು. ಸೈಮನ ಕಮಿಶನದ ಬಹಿಷ್ಕಾರವನ್ನು ಎಲ್ಲರೂ ಪುರಸ್ಕರಿಸಿದ್ದಾರೆ. ನಮ್ಮ ಕರ್ನಾಟಕದಲ್ಲಿಯಾದರೂ ಮತಭೇದವಿಲ್ಲ. ದಿವಾನಬಹಾದ್ದೂರ ಕಂಬಳಿ, 'ನವ ಕರ್ನಾಟಕ'ದ ಸಂಪಾದಕರಾದ ರಾವಸಾಹೇಬ ಹಳಕಟ್ಟಿ, ರಾವಬಹಾದ್ದೂರ ಅಂಗಡಿ, ಶ್ರೀ|| ಪಂಡಿತಪ್ಪಾ ಚಿಕ್ಕೋಡಿಯವರಂಥ ರಾಷ್ಟ್ರೀಯ ಸಭೆಯಲ್ಲಿಲ್ಲದವರೂ ಬಹಿಷ್ಕಾರಕ್ಕೆ ಬೆಂಬಲವನ್ನಿತ್ತಿದ್ದಾರೆ. ಬಾರ್ಡೋಲಿ-ಪೇಣ ತಾಲೂಕುಗಳಲ್ಲಿ ಹೆಚ್ಚಿಸಿದ ಕಂದಾಯವನ್ನು ರೈತರು ಕೊಡಲೊಲ್ಲದೆ ಉಂಟಾದ ಪರಿಸ್ಥಿತಿಯು ಸಾರ್ವರಾಷ್ಟ್ರೀಯ ಮಹತ್ವದ ಪ್ರಶ್ನೆಯಾಗಿದೆ. ಭೂಕಂದಾಯವನ್ನು ಹೆಚ್ಚಿಸುವದೆಂದರೆ, ಜುಲುಮೆಯು. ಹೀಗೆ ಹೆಚ್ಚಿಸಿದ ತೆರಿಗೆಯನ್ನು ಬಲಾತ್ಕಾರದಿಂದ ವಸೂಲ ಮಾಡುವದೆಂದರಂತೂ ಅದಕ್ಕೂ ಹೆಚ್ಚಿನ ಜುಲುಮೆಯು. ಕರ್ನಾಟಕದ ಹಾಗೆ ಅಖಿಲ ಭಾರತೀಯ ವಿಷಯಗಳು ತಮ್ಮೆದುರಿಗೆ ಚರ್ಚೆಗೆ ಬರುವವು. ಅವನ್ನು ಶಾಂತಚಿತ್ತದಿಂದ ವಿಚಾರ ಮಾಡಿ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸಿ, ತಾವು ಮಾರ್ಗದರ್ಶಕರಾಗಲುಬೇಕು. ಇತ್ಯಾದಿ ಭಾಷಣವನ್ನು ಶ್ರೀ|| ಜೋಗರವರು ಮಾಡಿ ಸಭಿಕರಿಗೆ ಸ್ವಾಗತೀಕರಿಸಿದರು.

ಪ್ರಾಂತಿಕ ಪರಿಷತ್ತು.

ಅಧ್ಯಕ್ಷರಾದ ಶ್ರೀ। ನರಿಮಾನರವರ ಭಾಷಣ.

ಅಧ್ಯಕ್ಷರಾದ ಶ್ರೀ। ಖುರ್ಶೇದ ನರಿಮಾನರವರು ಅಧ್ಯಕ್ಷಸ್ಥಾನಾಪನ್ನರಾಗಿ, ತಮಗೆ ಅಧ್ಯಕ್ಷಸ್ಥಾನವನ್ನರ್ಪಿಸಿದ ಬಗ್ಗೆ ಕರ್ನಾಟಕಸ್ಥರ ಉಪಕಾರ ಮನ್ನಿಸಿ ಕರ್ನಾಟಕಸ್ಥರು ಓದಾರ್ಯ ತೋರಿ ತಮ್ಮ ಮೇಲಿನ ಜಾತಿ ಪಕ್ಷಪಾತದ ಆರೋಪವು ನಿರಾಧಾರವೆಂದು ಸಿದ್ಧಗೊಳಿಸಿದ್ದಾರೆಂದು ಹೇಳಿದರು. ಸ್ವರಾಜ್ಯದಲ್ಲಿ ಅಲ್ಪಸಂಖ್ಯಾಕ ಜಾತಿಗಳಿಗೆ ಕಷ್ಟ-ನಷ್ಟಗಳೊದಗಬಹುದೆಂದು ತಿಳಿಯಲು ಎಷ್ಟು ಕಾರಣವಿಲ್ಲೆಂಬ ಬಗ್ಗೆ ತಮಗೆ ಅಧ್ಯಕ್ಷರನ್ನಾಗಿ ಆರಿಸಿದ್ದೇ ಸಾಕ್ಷಿಯೆಂದೂ ಅವರು ಉದ್ಗರಿಸಿದರು. ಸರ್ವಾಧಿಪತಿ ಅಥವಾ ಪ್ರಾಂತಾಧಿಪತಿಯಾಗಿ ಅಧಿಕಾರಿಗಳ ಕೃತ್ರಿಮೋಪಾಯಗಳಿಂದ ಹಿಡಿದುಕೊಂಡ ಕೂಲಿಕಾರರ ಸ್ಥಾನವನ್ನು ಸ್ವೀಕರಿಸುವದಕ್ಕಿಂತ ಪ್ರಾಂತಿಕ ಪರಿಷತ್ತು ಅಥವಾ ರಾಷ್ಟ್ರಸಭೆಗಳ ಅಧ್ಯಕ್ಷನಾಗುವದು ಯಾವಾಗಲೂ ಅಭಿಮಾನಾಸ್ಪದವೆಂದು ಉದ್ಗರಿಸಿದರು. ಕರ್ನಾಟಕ ಪ್ರಾಂತದ ದುರ್ಗುಣಗಳ ಜ್ಞಾನವು ತಮಗಿಲ್ಲದ ಮೂಲಕ ಆ ಕುರಿತು ವಿಶ್ವಸನೀಯವಾದ ಅಭಿಪ್ರಾಯ ಕೊಡಲು ತಮಗೆ ಅಧಿಕಾರವಿಲ್ಲವಾಗಿಯೂ ಹೇಳಿ, ಕರ್ನಾಟಕ ಏಕೀಕರಣ ವಿಚಾರ ಮಾಡಿದರು. ಕರ್ನಾಟಕವು ನಾಲ್ಕು ಕಡೆ ಹಂಚಿಹೋಗಿದೆ. ಮದ್ರಾಸ ಇಲಾಖೆಯಲ್ಲಿಷ್ಟು, ಮುಂಬಯಿ ಇಲಾಖೆಯಲ್ಲಿಷ್ಟು, ನಿಜಾಮರಾಜ್ಯದಲ್ಲಿಷ್ಟು, ಮೈಸೂರ ಸಂಸ್ಥಾನದಲ್ಲಿಷ್ಟು; ಇದರಿಂದ ಕರ್ನಾಟಕದ ಉದ್ಧಾರಕ್ಕೆ ಆತಂಕ ಉಂಟಾಗಿದೆ. ಇದನ್ನು ಪರಿಹರಿಸುವದೂ ಸುಲಭಸಾಧ್ಯ ಮಾತಲ್ಲ. ಬ್ರಿಟಿಶ ರಾಜ್ಯದೊಳಗಿನ ಕರ್ನಾಟಕ ಪ್ರದೇಶಗಳನ್ನು ಒಟ್ಟುಗೂಡಿಸಬಹುದು ಆದರೆ, ಮೈಸೂರ-ನಿಜಾಮ ರಾಜ್ಯಗಳ ಕೈಕೆಳಗಿನ ಭಾಗಗಳನ್ನು ಒಂದೆಡೆ ಸೇರಿಸುವದು ಅಷ್ಟೊಂದು ಸಾಧ್ಯ ಮಾತಲ್ಲ. ಪ್ರಾಂತಿಕ ಕಾಂಗ್ರೆಸ ಕಮೀಟಿಯನ್ನು ಈ ಭಾಗಗಳಿಗೆಲ್ಲ ಕೂಡಿ ಏರ್ಪಡಿಸಿ, ಈ ಪ್ರಶ್ನೆಯು ತಕ್ಕಮಟ್ಟಿಗೆ ಬಿಡಿಸಲ್ಪಟ್ಟಿದೆ. ಕರ್ನಾಟಕ ವಿದ್ಯಾಲಯವನ್ನೊಂದು ಸ್ಥಾಪಿಸಿ, ಕರ್ನಾಟಕಕ್ಕೆ ಒಪ್ಪಿದ ಜಿಲ್ಹೆಗಳನ್ನು ಆ ವಿದ್ಯಾಲಯದಲ್ಲಿ ಸೇರಿಸಿದರೆಂದರೆ, ಕರ್ನಾಟಕ ಏಕೀಕರಣಕ್ಕೆ ಅನುಕೂಲವಿದೆ. ದಿವಾಣಿ ಕೋರ್ಟುಗಳಲ್ಲಿ ಸರಕಾರಿ ಭಾಷೆಯ ಸಂಖ್ಯೆಯನ್ನು ಆಯಾ ಜಿಲ್ಹೆಗಳ ಮಾನದಿಂದ ಸರಕಾರಿ ಭಾಷೆಗಳ ಸಂಖ್ಯೆಯನ್ನು ಹೆಚ್ಚಿಸಿದರೆ, ಏಕೀಕರಣದ ಪ್ರಶ್ನೆಯು ಕೆಲಮಟ್ಟಿಗೆ ಬಿಡಿಸಲ್ಪಡುವದು. ಹೀಗೆ ಹೇಳಿ, ಶ್ರೀ। ನರಿಮಾನರು ಪ್ರಕೃತ ರಾಜಕೀಯ ಸ್ಥಿತಿಯನ್ನು ಪರಾಂಬರಿಸಹತ್ತಿದರು.

ಬ್ರಿಟಿಶರ ಸ್ವಾರ್ಥ ಧ್ಯೇಯ.

ಬ್ರಿಟಿಶ ರಾಜ್ಯದ ಕಲ್ಪನೆಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸುವೆನು. ಬ್ರಿಟಿಶರು ಪರಾರ್ಥಘಾತಕರಾಗಿ ಭರತ ಭೂಮಿಗೆ ಬಂದಿಳಿಯಲಿಲ್ಲ. ಈಸ್ಟ ಇಂಡಿಯಾ ಕಂಪನಿಯವರು ಈ ದೇಶವನ್ನು ಸುಲಿದ ಗಂಟು ಕಟ್ಟಿಕೊಂಡು ಹೋಗುವದಕ್ಕಾಗಿ ಇಲ್ಲಿ ಬಂದಿಳಿದರು. ಮೆಕಾಲೆ ದೊರೆಗಳ ಸಾಕ್ಷಿಯನ್ನೇ ಕೇಳಿ — ಹಿಂದೀ ಪ್ರಜೆಗಳ ಕಡೆಯಿಂದ ೧—೨ ಲಕ್ಷ ಪವನುಗಳನ್ನು ಸುಲಕೊಂಡು ವಿಲಾಯತಿಗೆ ಹೋಗಿ ಒಬ್ಬ ನೆರೆಗಳ ಹುಡುಗಿಯನ್ನು ಮದುವೆ ಮಾಡಿಕೊಳ್ಳುವದು ಅಥವಾ ಸೇಂಟ ಜೇಮ್ಸ ಸ್ಕ್ವೇರದಲ್ಲಿ ಪ್ರಾಯಸ್ತ ಹುಡುಗಿಯರೊಡನೆ ಕುಣಿದಾಟ ಮಾಡುವದೇ ಕಂಪನಿಯ ನೌಕರರ ಧ್ಯೇಯವಾಗಿತ್ತು. ಡ್ಯಾರೆಕ್ಟರರಾದರೂ ಹೆಚ್ಚೆಚ್ಚು ಹಣ ಕಳಿಸಲು ಗವ್ಹರ್ನರರಾದ ವೋರನ್ ಹೇಸ್ಟಿಂಗ್ಸರವರಿಗೆ ಪುನಃ ಪುನಃ ಬರೆಯುತ್ತಿದ್ದರು. ಕ್ಲೈವ್ಹರು ವರ್ಷಕ್ಕೆ ೩೦ ಸಾವಿರ ಪವನು ಹುಟ್ಟುವಳಿ ಬರುವ ಆಸ್ತಿಯನ್ನು ಅಪಹರಿಸಿದರು. ಈ ಬಗ್ಗೆ ಕ್ಲೈವ್ಹರ ಮೂರ್ತಿಯು ಇಂಡಿಯಾ ಆಫೀಸಿನ ಬಳಿ ಸ್ಥಾಪಿಸಲ್ಪಟ್ಟಿದೆ. ಹೀಗೆ, ಈಸ್ಟ ಇಂಡಿಯಾ ಕಂಪನಿಯವರು ೧೮೫೭ನೇ ಇಸ್ವಿಯ ತನಕ ತಮ್ಮ ಸುಲಿಗೆಯನ್ನು ನಡಿಸಿದರು. ೧೮೫೮ನೇ ಇಸ್ವಿಯಲ್ಲಿ ಕಂಪನಿಯ ಮುಕ್ತಿಯು ನಷ್ಟವಾಯಿತು. ಆ ಕಾಲಕ್ಕೂ ಲೋಕೋಪಕಾರ ಬುದ್ಧಿಯಿಂದ ಬ್ರಿಟಿಶರು ಪ್ರೇರಿತರಾಗಲಿಲ್ಲ. ಕಂಪನಿಯವರು ಸುಲಿಗೆಯಿಂದ ಮಾಡಿದ ಧನರಾಶಿಯನ್ನು ನೋಡಿ, ಇತರ ವರ್ತಕರಿಗೆ ದೊಳ್ಳುರಿ ಬಿತ್ತು. ಅದರಿಂದ ಹಿಂದುಸ್ಥಾನವನ್ನು ಸುಲಿಯಲು ಎಲ್ಲರಿಗೂ ಇಂಬು ಕೊಡದೇಕೆಂದು ಗೊತ್ತಾಯಿತು. ಈಗ ಹಿಂದುಸ್ಥಾನದ ಕಲ್ಯಾಣದ ಬಾಯಿಮಾತಿಕೆಯಾಗುತ್ತಿದೆ. ಇದು ಬರೇ ತೋರಿಕೆಯ ವೇಷ! ಸರ್ ಜಾನ್ ಸೈಮನರಂಥ ಹಿಂದುಸ್ಥಾನದ ಸರಕಾರದ ಅಧಿಕಾರಿಗಳ ವಚನಗಳನ್ನು ಲಾಲಿಸಿರಿ. "ಹಿಂದುಸ್ಥಾನದ ಹಿತಗಳನ್ನಷ್ಟೇ ಹಿಂದುಸ್ಥಾನ ಸರಕಾರವು ವಿಚಾರಿಸಿ ಹಿಂದುಸ್ಥಾನವನ್ನು ಆಳದೇಕೆಂದು ಹೇಳುವ ತತ್ವವು ನನಗೆಂದೂ ಮಾನ್ಯವಿಲ್ಲ. ಹಿಂದುಸ್ಥಾನದಲ್ಲಿಯೇ ನಾನು ಬಹಳ ಆಯುಷ್ಯ ಕಳೆದಿದ್ದೇನೆ. ಆದರೂ, ನಾನು ಆಂಗ್ಲನಿದ್ದೇನೆಂಬದನ್ನು ಎಂದಿಗೂ ಮರೆಯಲಾರೆ. ನನಗೆ ಹಾಗೆ ಹೇಳಿಕೊಳ್ಳಲು ನಾಚಿಕೆಯೇನಿಲ್ಲ. ಸ್ವದೇಶಕ್ಕೆ ಹಿತ ಮಾಡಲು ನಾನು ಯಾವಾಗಲೂ ಬದ್ಧನಿದ್ದೇನೆ." ಇದರ ಮೇಲಿಂದ ಬರ್ಕನ್‌ಹೆಡ್‌-ವಿಂಟರಟನ್ ಪ್ರಭೃತಿಗಳು ಹೇಳುವ ವಚನಗಳೆಲ್ಲ ವಂಚಕವೆಂದು ಸ್ಪಷ್ಟವಾಗುತ್ತದೆ. ಸ್ಟೆಜಿಯವರ ಹೇಳಿಕೆಯಂತೆ, ವರ್ಷಕ್ಕೆ ೨ ಕೋಟಿ ಪವನು ಇಲ್ಲಿಂದ ಅತ್ತ ರವಾನೆಯಾಗುತ್ತಿವೆ. ನೂರಾರು ವರ್ಷಗಳಿಂದ ಈ ಪ್ರಕಾರ ದ್ರವ್ಯವು ದೇಶಾಂತರವಾಗುವದರಿಂದಲೇ ನಮ್ಮಲ್ಲಿ ದಾರಿದ್ರ್ಯವು ಬೇರೂರಿಕೊಂಡಿದೆ. ಕಂಪನಿ ಸರಕಾರವು ಹೋಗಿ ಬಾದಶಹರು ರಾಜ್ಯಾಧಿಕಾರವನ್ನು ಕೈಕೊಂಡರೂ, ಹಿಂದುಸ್ಥಾನದ ಧೋರಣದಲ್ಲಿ ಬದಲಾಗಲಿಲ್ಲ. ಭಾರತ ಮಂತ್ರಿಗಳಾದ ಸಲಿಸ್‌ಬೆರಿಯವರು ಹೇಳಿದ್ದೇನಂದರೆ — "ಭರತ ಭೂಮಿಯ ಚೈತನ್ಯ ಹರಣವಾಗಬೇಕು. ಆದರೆ, ಖಡ್ಗವನ್ನು ರಕ್ತಾತಿಶಯವಿದ್ದಲ್ಲಿ ಅಥವಾ ಸಾಕಷ್ಟು ರಕ್ತವಿದ್ದಲ್ಲಿ ಹಾಕಿ ಅದನ್ನು ಹೀರಿಕೊಳ್ಳಬೇಕು. ಚೈತನ್ಯವಿಲ್ಲದ ಬೇಸಾಯಗಾರರಿಗೆ ಖಡ್ಗದಿಂದ ಇರಿಯಹೋಗಲಾಗದು" ಅಂದರೆ ಬಾದಶಹರ ರಾಜ್ಯಕಾರಭಾರದಲ್ಲಿ ದ್ರವ್ಯಾಪಹಾರವು ಪದ್ಧತಿಯಿಂದ ನಡೆಯಿತು. ಸೈನ್ಯಕ್ಕಾಗಿ ೬೦ ಕೋಟಿ ರೂಪಾಯಿ ಹುಂಡಣಾವಳಿಯಿಂದ ಕೋಟ್ಯಾವಧಿ ರೂಪಾಯಿ, ಸಕ್ಕರ ಕಟ್ಟು, ಮುಂಬಯಿಯ ವಿಸ್ತಾರ ಮುಂತಾದ ಯೋಜನೆಗಳಿಂದ ಲಕ್ಷಾವಧಿ ರೂಪಾಯಿಗಳು ವೆಚ್ಚವಾಗುತ್ತಿವೆ. ಹಿಂದುಸ್ಥಾನದಲ್ಲಿ ಬ್ರಿಟಿಶ ಧರ್ಮಸಂಸ್ಥೆಗಾಗಿ ವರ್ಷಾವರ್ಷ ೩೪ ಲಕ್ಷ ರೂಪಾಯಿಗಳ ವೆಚ್ಚವಾಗುತ್ತಿದೆ.

ಬ್ರಿಟಿಶ ರಾಜ್ಯದಿಂದುಂಟಾದ ಲಾಭಗಳ ಪುರಾಣ

ಬ್ರಿಟಿಶ ರಾಜ್ಯದಿಂದ ಹಿಂದುಸ್ಥಾನದಲ್ಲಿ ಲಾಭಗಳಾಗಿವೆಂದು ಹೇಳಲ್ಪಡುತ್ತದೆ. ಕೆಲವು ಅಂಕಿಗಳನ್ನು ವಿಚಾರಿಸಿದರೆ, ಈ ಪುರಾಣದ ನಿಜ ಮೇಲವು ಹೊಳೆಯುವಂತಿದೆ. ೧೯೨೬ನೇ ಇಸ್ವಿಯ ಲೆಖ್ಖದಂತೆ ಭೂಕಂದಾಯದಿಂದ ಸರಕಾರಕ್ಕೆ ೩೬ ಕೋಟಿ ಉತ್ಪನ್ನವಾಯಿತು. ಒಟ್ಟು ಉತ್ಪನ್ನದ ಮಾನದಿಂದ ಈ ಉತ್ಪನ್ನವು ಶೇಕಡಾ ೧೮ ರಷ್ಟು ಆಯಿತು. ಬ್ರಿಟಿಶ ದೇಶದಲ್ಲಿ ಈ ಉತ್ಪನ್ನವು ಶೇಕಡಾ ೧ರಂತೆ ಬೀಳುತ್ತದೆ. ಇಂಥ ಪ್ರಸಕ್ತಿಯಲ್ಲಿ ಬೇಸಾಯಗಾರರು ದಾರಿದ್ರ್ಯ ಸಂಕಟದಲ್ಲಿ ಹೊರಳಿ ಬಳಲುತ್ತಿದ್ದರೆ ಆಶ್ಚರ್ಯವೇನಿದೆ? ೧೯೧೯—೧೯೨೦ ನೇ ಇಸ್ವಿಯ ಲೆಖ್ಖದಂತೆ ೧೧॥ ಕೋಟಿ ಎಕ್ರೆ ಸಾಗುವಳಿ ಭೂಮಿಯು ಬಂಜರು ಬಿದ್ದಿದೆ. ಈ ಕಡೆ ನಮ್ಮ ಸರಕಾರದ ಲಕ್ಷವೇ ಇಲ್ಲ. ಮದ್ರಾಸ ಇಲಾಖೆಯಲ್ಲಿ ಜನರಿಗೆ ೪೫ ಕೋಟಿ ಸಾಲವಾಗಿದೆ. ಇದು ಕೆಲವು ವರ್ಷಗಳ ಹಿಂದಿನ ಸ್ಥಿತಿ. ಮುಂಬಯಿ ಇಲಾಖೆಯಲ್ಲಿ ೧೯೦೧ನೇ ಇಸ್ವಿಯಲ್ಲಿ ಬರಗಾಲದ ಕಮೀಶನು ನೇಮಿಸಲ್ಪಟ್ಟಿತ್ತು. ಇಲಾಖೆಯೊಳಗಿನ ಕಾಲಾಂಶ ಬೇಸಾಯಗಾರರು ಭೂಮಿ ಕಳಕೊಂಡಿದ್ದರು. ೫ನೇ ೧ ಅಂಶದವರಿಗೆ ಮಾತ್ರ ಸಾಲವೇನೂ ಇದ್ದಿಲ್ಲ. ಪಂಜಾಬದೊಳಗೆ ೧೯೧೯ನೇ ಇಸ್ವಿಯಲ್ಲಿ ೯ ಕೋಟಿ ಪವನು ಸಾಲವಿತ್ತು. ಹಿಂದುಸ್ಥಾನವು ಬೇಸಾಯ ಪ್ರಧಾನ ದೇಶವು. ಇದಕ್ಕಾಗಿ ಸರಕಾರವು ೫ ಲಕ್ಷ ೯೯ ಸಾವಿರ ಪವನುಗಳನ್ನು ವರ್ಷಾವರ್ಷ ಖರ್ಚ ಮಾಡುತ್ತಿದೆ. ಅಂದರೆ, ಎಕ್ರೆಗೆ ೧ ಪೆನ್ನಿ, ಅಂದರೆ ಅರ್ಧಾಣೆ ಬಿತ್ತು. ಬ್ರಿಟಿಶ ದೇಶದಲ್ಲಿ ೧೦೦೦ ಎಕ್ರೆಗೆ ರೂ. ೧೩೮೦ ರಂತೆ ವೆಚ್ಚ ಮಾಡುತ್ತದೆ. ಜಪಾನದಲ್ಲಿ ೧೦೦೦ ಎಕ್ರೆಗೆ ರೂ. ೫೬ ರಂತೆ ಖರ್ಚಾಗುತ್ತದೆ. ಹೀಗೆ ಬೇಸಾಯಗಾರರ ದೈನ್ಯವಾಗಿದ್ದರೂ, ಆ ದೈನ್ಯಕ್ಕೆ ಭೂಕಂದಾಯದ ವಿಪರೀತ ಮಾನವೇ ಕಾರಣವಾಗಿದ್ದರೂ, ಅದೊಂದನ್ನು ಬಿಟ್ಟು, ವಿಚಾರ ಮಾಡಲು ಬೇಸಾಯ ಕಮೀಶನಿನ ನೇಮಣೂಕಿಯಾಯಿತು. ಶಿಕ್ಷಣ ಪ್ರಗತಿಯನ್ನು ವಿಚಾರಿಸುವ ಪ್ರಜೆಗಳಿಗೆಲ್ಲ ಜ್ಞಾನದಾನ ಕೊಡಲು ಶಾಲೆಗಳನ್ನೇರ್ಪಡಿಸಬೇಕೆಂದು ಇಂಗ್ಲಂಡದಲ್ಲಿ ೧೮೭೦ ನೇ ಇಸ್ವಿಯಲ್ಲಿ ಕಾನೂನಾಗಿದೆ. ಆ ಕಾನೂನು ಇಂಗ್ಲಂಡದ ಪ್ರಯೋಗ ಹಿಂದುಸ್ಥಾನದಲ್ಲಿಲ್ಲ. ಸರ್. ಫೈಲಂಟ್ಯಾನ ಜಿರೋಲರಂಥ ಬ್ರಿಟಿಶ ಪಕ್ಷಪಾತಿ ಪುರುಷರೇ ಈ ಕುರಿತು ಸರಕಾರಕ್ಕೆ ನಿಂದಿಸಿದ್ದಾರೆ. ಕೈ। ನಾ। ಗೋಪಾಲಕೃಷ್ಣ ಗೋಖಲೆಯವರೂ, ಶ್ರೀ। ವಿಠ್ಠಲಭಾಯಿ ಪಟೇಲರವರೂ ಸಕ್ತಿಯ ಕಾನೂನನ್ನೇರ್ಪಡಿಸಬೇಕೆಂದು ಮಾಡಿದ ಪ್ರಯತ್ನಗಳು ನಿಷ್ಫಲವಾದವು. ಈಗ ಸ್ವರಾಜ್ಯದಾನಕ್ಕೆ ಅಶಿಕ್ಷಣದ ಆಕ್ಷೇಪವನ್ನೇ ಆಳರಸರು ಎತ್ತುತ್ತಾರೆ. ಹೀಗೆ ಶತಮಾನಕ್ಕೆ ಮಿಕ್ಕಿ ಆಡಳಿತೆ ನಡಿಸಿ ಪ್ರಜೆಗಳಿಗೆ ಶಿಕ್ಷಣದ ಏರ್ಪಾಟು ಮಾಡಲಾಗದ ಬಳಿಕ, ನಮ್ಮ ರಾಜ್ಯಭಾರವನ್ನು ನಡಿಸುವ ಬ್ರಿಟಿಶರ ಅಧಿಕಾರವು ನಷ್ಟವಾಗಿದೆಂದು ನಿಃಸಂಧಾರವಾಗಿ ಹೇಳಬಹುದು. ಇನ್ನು ಬ್ರಿಟಿಶ ರಾಜ್ಯದಿಂದ ನಮಗೊದಗಿದ ಪುರುಷನೇಹಿತವನ್ನು ಅರಿಯಬೇಕು. ಶಸ್ತ್ರಾಸ್ತ್ರಗಳ ಕಾನೂನನ್ನು ಏರ್ಪಡಿಸಿ ಇಡೀ ರಾಷ್ಟ್ರವು ನಿಶ್ಶಸ್ತ್ರ ಮಾಡಲ್ಪಟ್ಟಿದೆ. ಇದು ಬರೇ ಹೇಡಿತನವು. ತಮ್ಮ ಆಡಳಿತೆಯನ್ನು ಸ್ಥಿರಪಡಿಸುವದಕ್ಕಾಗಿ ರಾಷ್ಟ್ರದ ಪೌರುಷೇಯವು ನಷ್ಟ ಮಾಡಲ್ಪಟ್ಟಿದೆ. ಈಗ ಇದರ ಬಾಹುಳ್ಯ ಮಾಡಿ ಪರರಾಷ್ಟ್ರಗಳಿಂದ ಭಯ. ಬಂದಲ್ಲಿ ಅದನ್ನು ನೀಗಿಸಿಕೊಳ್ಳಲು ನಮ್ಮಲ್ಲಿ ಸಾಮರ್ಥ್ಯವಿಲ್ಲದ್ದರಿಂದ ಬ್ರಿಟಿಶ ಹಿಂದುಸ್ಥಾನ

(ಮುಂದೆ ೯ ನೇ ಪಾನಿನ ಮೇಲೆ ಮುಂದರಿಸಿದೆ.)

ಕಾನಡಾ ವೃತ್ತ.

ಮಿತಿ ವಿಭವ ಸಂ। ಜ್ಯೇಷ್ಠ ಶು। ೯ ಮಿ, ಸೋಮವಾರ

ಬ್ರಿಟಿಶರ ನಿಜವೇಷ.

ಕರ್ನಾಟಕ ಪ್ರಾಂತಿಕ ಪರಿಷತ್ತಿನ ಅನೇಕ ಅಧಿವೇಶನವು ಮೊನ್ನೆ-ನಿನ್ನೆ ಧಾರವಾಡದಲ್ಲಿ ಜರುಗಿತು. ಸಮ್ಮೇಲನದ ಸಮಗ್ರ ವೃತ್ತಾಂತವು ಇನ್ನೂ ನಮ್ಮ ಕೈಸೇರಿಲ್ಲ. ಆದರಿಂದ ಪರಿಷತ್ತಿನ ಕಾರ್ಯದ ವಿಷಯ ಈ ಮುಂದೆ ಯಥಾವಕಾಶ ಸಮಾಲೋಚಿಸಬೇಕಾಗಿದೆ. ಅಧ್ಯಕ್ಷರಾದ ಶ್ರೀ। ಖುರ್ಶೇದ ನರಿಮಾನರವರ ಭಾಷಣದ ಮುಖ್ಯ ತಾತ್ಪರ್ಯವನ್ನು ಇನ್ನೊಂದೆಡೆ ಪ್ರಕಟಿಸಿದ್ದೇವೆ. ಅದರ ವಾಚನದಿಂದುಂಟಾದ ವಿಚಾರಗಳನ್ನು ಇಂದಿಗೆ ನಮೂದಿಸಬಿಟ್ಟಿರುವೆವು.

ಶ್ರೀ। ನರಿಮಾನರು ತಮ್ಮ ಭಾಷಣದಲ್ಲಿ ಪ್ರಾಮುಖ್ಯವಾಗಿ ಬ್ರಿಟಿಶ ರಾಜ್ಯಭಾರದ ಪೂರ್ವೇತಿಹಾಸವನ್ನು ವಿವರಿಸಿದ್ದಾರೆ. ಈಗಿನ ರಾಜ್ಯಭಾರವು ಹಿಂದಿನ ಕೃತಿಯ ಫಲವಾಗಿದ್ದರಿಂದ ಆ ಮೂಲ ಬೀಜದ ರೂಪವನ್ನು ಸಮಾಲೋಚಿಸಿದ್ದು ತೀರ ಯೋಗ್ಯವಾಯಿತು. ಶ್ರೀ। ನರಿಮಾನರು ಶತ್ರುವಿನ ಅಂತರಂಗವನ್ನು ಅವರ ಬಾಯಿಯಿಂದಲೇ ಸಿದ್ಧಗೊಳಿಸಿದ್ದಾರೆ. ಮೂಲ ಬ್ರಿಟಿಶರು ಹಿಂದುಸ್ಥಾನಕ್ಕೆ ಸುಲಿಯುವದಕ್ಕಾಗಿಯೇ ಬಂದರು. ಹಿಂದೀ ಪ್ರಜೆಗಳಿಗೆ ಸುಲಿಯುವದು, ದೊಡ್ಡ ದೊಡ್ಡ ಗಂಟುಗಳನ್ನು ಕಟ್ಟಿಕೊಂಡು ಸ್ವದೇಶಕ್ಕೆ ತೆರಳಿ ಉಳಿದ ಆಯುಷ್ಯವನ್ನು ಭೌತಿಕ ಸುಖದಲ್ಲಿ ಕಳೆಯುವದು, ಇದೇ ಬ್ರಿಟಿಶರ ಧ್ಯೇಯವಾಗಿತ್ತು. ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆ ಕಲಿಸಲಿಕ್ಕಾಗಲಿ, ಹಿಂದುಸ್ಥಾನದೊಳಗಣ ರಾಜ್ಯ ವ್ಯವಸ್ಥೆಯನ್ನು ತಿದ್ದುಪಡಿ ಮಾಡಲಿಕ್ಕಾಗಲಿ, ಪರಸ್ಥರ ದೌರ್ಜನ್ಯದಿಂದ ಭಾರತ ಪುತ್ರರನ್ನು ಕಾಯಲಿಕ್ಕಾಗಲಿ ಬ್ರಿಟಿಶರ ಹಿಂದುಸ್ಥಾನಕ್ಕೆ ಅನುಗ್ರಹಿಸಲಿಲ್ಲ. ಭಗವಂತನ ಅಪೇಕ್ಷೆಯಂತೆ ಹಿಂದುಸ್ಥಾನಕ್ಕೆ ಕಲ್ಯಾಣ ಮಾಡಲೋಸುಗ ಅವರು ಬಂದಿರುತ್ತಾರೆಂಬ ಈಗಿನ ವೇದಾಂತಕ್ಕೆ ಮೂಲಾಧಾರವು ಎಲ್ಲಿಯೂ ಕಾಣದು. ಕಂಪನಿ ಸರಕಾರದ ಕಾಲದಲ್ಲಿ ಗವ್ಹರ್ನರರಿಗೆ ಹಿಂದುಸ್ಥಾನದಿಂದ ಹೆಚ್ಚೆಚ್ಚು ಹಣವನ್ನು ವಿಲಾಯತಿಗೆ ಕಳಿಸಲು ಕಾಲಕಾಲಕ್ಕೆ ಬರೆದುಬರುತ್ತಿತ್ತು. ನಾನಾದೇಶ ಉಪಾಯದಿಂದ, ನೀತಿ—ಅನೀತಿಯನ್ನು ಲಕ್ಷಿಸದೆ, ಹಣ ಕಳಿಸಿಕೊಡುತ್ತ ಉಳಿದರೆ, ಅಲ್ಲಿಯ ಗವ್ಹರ್ನರರ ಸ್ವಾಮಿನಿಷ್ಠೆಯ ಪ್ರದರ್ಶನವಾಗುತ್ತಿತ್ತು. ಕಂಪನಿ ಸರಕಾರದ ಆಡಳಿತೆಯು ಹೋಗಿ, ಸಾರ್ವಭೌಮ ಮಹಾರಾಣಿಯವರ ಅಧಿರಾಜ್ಯವು ಪ್ರಸ್ಥಾಪಿತವಾದರೂ, ಹಿಂದುಸ್ಥಾನದ ರಾಜ್ಯಧೋರಣವೇನೂ ಬದಲಿಲ್ಲ. ಕಂಪನಿ ಸರಕಾರದ ವೈಭವವನ್ನು ನೋಡಿ ತಾವೂ ಅದರಂತೆಯೇ ಕುಬೇರರಾಗಬೇಕೆಂಬ ಲವಲವಿಕೆಯಿಂದ ಅಲ್ಲಿಯ ವರ್ತಕರು ನಡಿಸಿದ ಪ್ರಯತ್ನದಿಂದ ಕಂಪನಿಯ ಆಡಳಿತೆಯು ನಷ್ಟವಾಗಿ, ಬಾದಶಹರ ಅಧಿಕಾರವು ಪ್ರಚಲಿತವಾಯಿತು. ಭಾರತ ಮಂತ್ರಿಗಳಾದ ಸೆಲಿಸ್‌ಬರಿ ದೊರೆಗಳು ಇದೇ ಮಾತನ್ನು ಹೇಳಿದ್ದಾರೆ. ಟೀಕಿತನ್ಯಾಯಿದ್ದಲ್ಲಿ ಖಡ್ಗದ ಉಪಯೋಗ ಮಾಡಿ ಅದನ್ನು ಹರಣ ಮಾಡತಕ್ಕದ್ದೆಂಬ ಅವರ ಅಭಿಪ್ರಾಯವು ನಮೂದಾಗಿದೆ. ಸ್ಟ್ರೇಚಿಯವರು ಬ್ರಿಟಿಶರ ಲೋಕೋಪಕಾರದ ತತ್ವವನ್ನು ಸ್ಪಷ್ಟವಾಗಿ ಅಲ್ಲಗಳೆದು, ಬ್ರಿಟಿಶರ ಹಿತಕ್ಕಾಗಿಯೇ ಹಿಂದುಸ್ಥಾನದ ಆಡಳಿತೆ ನಡೆಯುತ್ತದೆಂದು ಸಾರಿದ್ದಾರೆ. ಇನ್ನು ಮುಂದಾದರೂ ಬ್ರಿಟಿಶರ ಸಾಮ್ರಾಜ್ಯವಿರುವ ತನಕ ಹೀಗೆಯೇ ನಡೆಯುವದೆಂದು ಯಾರಾದರೂ ಹೇಳುವರು.

ಈ ಇತಿಹಾಸವನ್ನು ಪರಾಂಬರಿಸಿದರೆ, ಬ್ರಿಟಿಶರು ಹಿಂದುಸ್ಥಾನದಲ್ಲಿ ಕೈಕೊಂಡ ಧೋರಣವು ಸ್ಪಷ್ಟವಾಗುತ್ತದೆ. ಬೇಸಾಯಗಾರರ ಮೇಲೆ ವಿಪರೀತ ಕರಗಳನ್ನು ಹೇರಿ ಅವರ ಉದ್ಧಾರಕ್ಕಾಗಿ ಖರ್ಚು ಮಾಡುವ ಪ್ರಕಾರವೂ, ಶಿಕ್ಷಣದ ಅಭಾವವೂ, ರಾಷ್ಟ್ರದ ಪೌರುಷೇಯಘಾತವೂ ಸುಂಕದ ಪ್ರಸಾರವೂ ಇವೆಲ್ಲ ಮೂಲ ಧೋರಣದಿಂದ ಹೊರಡುವ ಸ್ವಾಭಾವಿಕ ಫಲಗಳು. ಹಿಂದುಸ್ಥಾನವನ್ನು ಯಾವ ಉಪಾಯದಿಂದ ಸುಲಿದು, ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಬೇಕೆಂಬ ಲವಲವಿಕೆಯೂ, ಆತುರತೆಯೂ ಬ್ರಿಟಿಶರಲ್ಲಿದ್ದದರಿಂದ ಭರತಪುತ್ರರ ಕಲ್ಯಾಣದ ಯೋಜನೆಯನ್ನು ಅವರೆಂದೂ ಪುರಸ್ಕರಿಸರು. ಆ ಕೆಲಸವೇ ಅವರದಲ್ಲ. ನ್ಯಾಯ ನೀತಿಯಿಂದ ರಾಜ್ಯಭಾರವನ್ನು ನಿರ್ವಹಿಸಿ ಲೋಕದಲ್ಲಿ ಲೋಕೋಪಕಾರಿಗಳೆಂದು ಹೇಳಿಸಿಕೊಳ್ಳಲು ಅವರು ಭರತ ಭೂಮಿಗೆ ಬರಲಿಲ್ಲವಾದ್ದರಿಂದ, ಲೋಕಕಲ್ಯಾಣದ ಯಾವದೇ ಚಿಂತೆಯು ಅವರಿಗಿಲ್ಲ. ಮುಂಬಯಿಯ ಡೆವ್ಹಲಪ್‌ಮೆಂಟ ಯಾನೆ ನಗರವಿಸ್ತಾರದ ಯೋಜನೆಯಲ್ಲಿ ಶ್ರೀ। ನರಿಮಾನರವರು ವೈರಿಗಳ ನೀತಿಭ್ರಷ್ಟತೆಯ ಪ್ರಕಾರಗಳಿಂದ ಅವರಿಗೆ ಲಜ್ಜೆ ಹುಟ್ಟದ ಕಾರಣವಾದರೂ ಇದೇ ಕಾಯಿದೆ ಕೌನ್ಸಿಲುಗಳಲ್ಲಿ, ವರ್ತಮಾನಪತ್ರಗಳಲ್ಲಿ ಅಧಿಕಾರಿಗಳಿಗೆ ಛೀ ಹೇಳಿದರೂ, ಅವರು ಆ ಕಡೆ ಎಷ್ಟಕ್ಕೂ ಲಕ್ಷಗೊಡದೆ, ಕೈಕೊಂಡ ಕಾರ್ಯವನ್ನು ಸುಸೂತ್ರವಾಗಿ ನಡಿಸುತ್ತಿರುತ್ತಾರೆ. ಅದಕ್ಕೆ ಕಾರಣವು ಶ್ರೀ। ನರಿಮಾನರು ಹೇಳಿದಂತೆ ಮೂಲ ಬೀಜದಲ್ಲಿದೆ. ಸಭ್ಯತನದಿಂದ ಅವರು ಹಿಂದುಸ್ಥಾನ ಸಡಿಸಬಂದಿದ್ದರೆ, ಸಭ್ಯತೆಯು ನಷ್ಟವಾದ ಬಗ್ಗೆ ಅವರಿಗೆ ಪಶ್ಚಾತ್ತಾಪವಾಗುತ್ತಿತ್ತು, ನಾಚಿಕೆಯಾಗುತ್ತಿತ್ತು. ಸುಳ್ಳು ಉತ್ತರಗಳನ್ನು ಕೌನ್ಸಿಲಿನಲ್ಲಿ ಹೇಳಲು ಅವರೆಂದಿಗೂ ಧೈರ್ಯಪಡುತ್ತಿದ್ದಿಲ್ಲ. ಆದರೆ, ಈಗಿನ ಕಾಲಮಾನಕ್ಕನುಸರಿಸಿ ಲೋಕವಂಚನೆಗಾಗಿ ಲೋಕೋಪಕಾರದ ಪುರಾಣವು ಹೇಳಲ್ಪಡುತ್ತದೆ. ಲೋಕೋಪಕಾರದ ಪುರಾಣಕ್ಕೆ ಮೇಲಾಧಾರವಿಲ್ಲೆಂದು ಶ್ರೀ। ನರಿಮಾನರವರು ಮೂಲ ಇತಿಹಾಸದಿಂದ ಸಿದ್ಧಗೊಳಿಸಿ, ಬ್ರಿಟಿಶರ ನಿಜವೇಷವನ್ನು ಬೈಲಿಗೆಳೆದಿದ್ದಾರೆ.

ಈ ಇತಿಹಾಸವು ಮನನೀಯವಿದೆ. ನಾವು ಕಾಯಿದೆ ಮುಂತೆ ಬಹಳ ಪ್ರಯತ್ನಪಟ್ಟಾಗ್ಯೂ, ನಮ್ಮ ಕಲ್ಯಾಣವಾಗಕೂಡದಿಲ್ಲೆಂದು ಇದರಿಂದಲೇ ಸ್ಪಷ್ಟವಾಗುತ್ತದೆ. ಆದರಿಂದ ಆ ಕಡೆ ನಾವು ಲಕ್ಷಗೊಡಲಾಗದು. ಸರಕಾರದ ಬಳಿ ಪ್ರಾರ್ಥಿಸಿಕೊಂಡು, ಆತ್ಮೋದ್ಧಾರ ಸಾಧಿಸಿಕೊಳ್ಳುವ ಪ್ರಯತ್ನಗಳು ನಿಷ್ಪ್ರಯೋಜಕವಿವೆ. ಆತ್ಮಬಲದ ಆಧಾರದ ಮೇಲೆಯೇ ನಾವು ಆತ್ಮೋದ್ಧಾರವನ್ನು ಸಾಧಿಸಿಕೊಳ್ಳಬೇಕಾಗಿದೆ. ಕಾಯಿದೆ ಭಂಗ, ಕರನಿರಾಕರಣೆಗಳ ಪ್ರಯತ್ನಗಳೇ ಬ್ರಿಟಿಶರನ್ನು ಹಣ್ಣಿಗೆ ತರುವ ಉಪಾಯಗಳು. ಈ ದೃಷ್ಟಿಯಿಂದ ವಿಚಾರಿಸಿದರೆ, ಬಾರ್ದೋಲಿಯಲ್ಲಿ ನಡೆದ ಕರನಿರಾಕರಣೆಯ ಪ್ರಯತ್ನದ ವ್ಯಾಪಕ ಅರ್ಥವು ಸ್ಪಷ್ಟವಾಗುತ್ತದೆ. ಬಾರ್ದೋಲಿಯವರು ಗೆದ್ದರೆ, ಹಿಂದೀ ಪ್ರಜೆಗಳು ಗೆದ್ದರು. ಮುಂಬಯಿ ಸರಕಾರವು ಸೋತರೆ, ಸಾಮ್ರಾಜ್ಯ ಸರಕಾರವು ಸೋತುಹೋಯಿತು. ಅಲ್ಲಿಯ ಸೋಲು-ಗೆಲುವಿನ ಮೇಲೆ ಹಿಂದುಸ್ಥಾನದ ಭವಿತವ್ಯತೆಯು ಸಂಪೂರ್ಣವಾಗಿ ಅವಲಂಬಿಸಿದೆ. ಇದಕ್ಕಾಗಿಯೇ ನಮ್ಮ ಮುಂಬಯಿ ಸರಕಾರವು ಕರವನ್ನು ವಸೂಲ ಮಾಡಲು ಪರಮಾವಧಿಯ ಪ್ರಯತ್ನ ಮಾಡುತ್ತಿದೆ. ಪರಮಾವಧಿಯ ಅನಾಚಾರಗಳನ್ನೂ ಕೈಕೊಂಡಿದೆ. ಪಠಾಣರಿಗೆ ಬಿಯ್ದು ಹಗಲು ಲೂಟಿ ಮಾಡುತ್ತಿದೆ, ಸ್ಪೇಶಲ್ ಮೆಜಿಸ್ಟ್ರೇಟರನ್ನು ನೇಮಿಸಿಕೊಂಡು ಏನಾದರೊಂದು ನೆವ ಹುಡುಕಿ ಷಣ್ಮುಖಲಾಲ, ಶಿವಾನಂದ ಪ್ರಭೃತಿ ಪ್ರಮುಖರಿಗೆ ಕಾರಾಗೃಹಕ್ಕಟ್ಟುತ್ತದೆ. ಆದರೆ, ಬಾರ್ದೋಲಿಯವರು ಕಾರಾಗೃಹಕ್ಕೆ ಅಂಜುವವರಲ್ಲ. ಅಭೀತಿಯ ಆ ಅಹಿಂಸೆಯ ಯುಗದಲ್ಲಿಯೇ ನಷ್ಟವಾಗಿ ಹೋಗಿದೆ. ಹಂಗಸರ ಮೈಮೇಲೆ ಕೈಹಾಕುವ ಅಸಭ್ಯದುರಾಚಾರಗಳೂ ನಡೆಯಲಾರಂಭಿಸಿದವಾಗಿ ಈಗಿನ ಸುದ್ದಿಯು ಮೇಲಿಂದ ತಿಳಿಯುತ್ತದೆ. ಇಷ್ಟಕ್ಕೂ ಸರಕಾರವು ಸೇಸದು. ಯಾಕೆಂದರೆ, ಅವರ ಮೂಲ ಪೀಠವು ಪ್ರತ್ಯಾಘಾತದ್ದು ಛೀ, ಎಂದರೆ ಛೀ ಅನಿಸಿಕೊಳ್ಳುತ್ತಿದ್ದಾರೆ,

ಬೇಕಾದಷ್ಟು ಅಸ್ತಿ; ಅದರಿಂದ ಹುಣ್ಣು ಬೀಳುವದಿಲ್ಲೆಂದು ಬ್ರಿಟಿಶರ ಮನವರಿಕೆಯಾಗಿದೆ. ಬಾರ್ದೋಲಿಯವರು ಇದನ್ನೆಲ್ಲ ಅರಿತುಕೊಂಡ, ಸರ್ವಸಾಮರ್ಥ್ಯವಂತ ಸರಕಾರಕ್ಕೆ ಇದಿರಾಗಿದ್ದಾರೆ. ಅಸಹಯೋಗದ ಸತ್ವಪರೀಕ್ಷೆಯಾಗುತ್ತಿದೆ, ಪ್ರಜೆಗಳ ನಿರ್ಧಾರದ ಸ್ಥೈರ್ಯಬಲ್ಯವೂ ಪರೀಕ್ಷಿಸಲ್ಪಡುತ್ತಿದೆ. ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಬಾರ್ದೋಲಿಯ ಸಮರದ ವ್ಯಾಪಕತೆಯನ್ನು ಲಕ್ಷಿಸಿ ರಾಷ್ಟ್ರದ ಬೆಂಬಲವನ್ನು ಬಾರ್ದೋಲಿಗೆ ಅರ್ಪಿಸಿದೆ. ಪ್ರಸಂಗ ಬಿದ್ದರೆ, ಶಾಂತಿಯುದ್ಧದ ಪ್ರವರ್ತಕರಾದ ಮಹಾತ್ಮರೂ ಕೂಡ ಬಾರ್ದೋಲಿಗೆ ಚಿತ್ತೈಸುವರು. ಇತ್ತ ಪ್ರತ್ಯಕ್ಷ ಉಪಾಯಗಳನ್ನು ಭಾರತೀಯರು ಕೈಕೊಂಡನಕ ಅರ್ಜಿ, ಶಿಷ್ಟಮಂಡಳ, ಕಾಯಿದೆ ಕೌನ್ಸಿಲು ಮುಂತಾದ ರಾಜಮಾರ್ಗಗಳಿಂದ ನಮ್ಮ ಉದ್ಧಾರವಾಗದೆಂದು ಶ್ರೀ| ನರಿಮಾನರು ಸಪ್ರಮಾಣ ಪ್ರತಿಪಾದಿಸಿದ್ದಾರೆ. ಈ ಭಾಷಣದಿಂದ ಬ್ರಿಟಿಶರ ನಿಜವೇಷವು ಸ್ಫುಟವಾಗಿದೆ. ಇದನ್ನು ತಿಳಿದು ಆತ್ಮೋದ್ಧಾರ ಸಾಧಿಸಬಯಸುವ ಪ್ರಜೆಗಳು ವರ್ತಿಸಿದರೆ, ನಮ್ಮ ಉದ್ಧಾರವಾಗುವದು. ಇದೇ ಶ್ರೀ| ನರಿಮಾನರ ಹೇಳಿಕೆ.

ಸ್ಫುಟ ಸೂಚನೆಗಳು.

೧. ರಾಷ್ಟ್ರದಲ್ಲಿ ಐಕ್ಯಮತ್ಯಭಂಗ ಮಾಡುವ ಪ್ರಯತ್ನಗಳು ವಿಫಲವಾಗಿ ಐಕ್ಯ ನೆಲೆಗೊಳ್ಳಹತ್ತಿದೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಮುಂಬಯಿಯಲ್ಲಿ ಸೇರಿದ ಸಮಸ್ತ ಪಕ್ಷದ ಪರಿಷತ್ತಿನಲ್ಲಿ ಐಕ್ಯಭಂಗವನ್ನುಂಟು ಮಾಡಲು ಡಾ| ದಳವಿ ಪ್ರಭೃತಿ ಕುಚೋದ್ಯಗಾರರು ನಡಿಸಿದ ಕುಚೇಷ್ಟೆಗಳು ಸರ್ ಪಿರುಜಶಾಹ ಸೇಟಲವಾಡ ಪ್ರಭೃತಿಗಳಿಂದ ಪರಿಹರಿಸಲ್ಪಟ್ಟವು. ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ| ಅನ್ಸಾರಿಯವರು ನಿರ್ಮಲ ಚಿತ್ತದಿಂದ ಪ್ರತ್ಯಕ್ಷ ಪರಿಸ್ಥಿತಿಯನ್ನು ಸಮಸ್ತರಿಗೆ ತಿಳಿಸಿ ಕೇಳಿ ಸಮಸ್ತರಿಗೂ ದೇಶೋದ್ಧಾರವನ್ನು ಕಡೆಗಾಣಿಸಲು ಪ್ರಾರ್ಥಿಸಿಕೊಂಡರು. ಅದರಿಂದ ಪರಿಷತ್ತಿನಲ್ಲಿ ದೇಶಹಿತಬುದ್ಧಿಯಿಂದಲೇ ಎಲ್ಲ ವಿಚಾರವಾಗಿ ಮುಂದಿನ ರಾಜ್ಯಘಟನೆಯನ್ನು ತಯಾರಿಸುವ ಬಗ್ಗೆ ಪಂಡಿತ ಮೋತಿಲಾಲ ನೆಹರು, ಸರ್ ತೇಜ ಬಹಾದ್ದೂರ ಸಪ್ರು, ಸರ್ ಅಲೀ ಇಮಾಮು, ಶ್ರೀ ರಾಮಚಂದ್ರ, ಗಣೇಶ ಪ್ರಧಾನ, ಶ್ರೀ ಶುಯಬ ಖುರೇಶಿ, ಸುಭಾಷಚಂದ್ರ ಬೋಸ್, ಮಾಧವರಾವ ಅಣೇ, ಮುಕುಂದರಾವ ಜಯಕರ, ನಾರಾಯಣರಾವ ಜೋಶಿ, ಸರದಾರ ಮಂಗಲಸಿಂಗ ಇವರದೊಂದು ಮಂಡಳವು ರಚಿತವಾಯಿತು. ಈ ಮಂಡಳವು ರಾಜ್ಯಘಟನೆಯ ತತ್ವಗಳನ್ನು ವಿಚಾರಿಸಿ ಕಾನೂನನ್ನು ನಿರ್ಧರಿಸುವದು. ಈ ತೀರ್ಮಾನವು ಭಾರತೀಯ ರಾಜಕಾರಣದಲ್ಲಿ ತೀರ ಮಹತ್ವದ್ದಿದೆ. ದೇಶಾಭಿಮಾನಿಗಳು ದುರಭಿಮಾನಕ್ಕೆ ಬಲಿಬೀಳದೆ ದೇಶಹಿತಬುದ್ಧಿಯಿಂದ ಮಾರ್ಗಕ್ರಮಣ ಮಾಡತೊಡಗಿರುವರೆಂದು ಇದರಿಂದ ಸ್ಪಷ್ಟವಾಗುತ್ತದೆ. ಸ್ಯಾಮನ್ ಕಮಿಟಿಯನ್ನು ನೇಮಿಸಿ ಸಾಮ್ರಾಜ್ಯಕರ್ತರು ಮಾಡಿದ ನಾಚಿಕೆಗೇಡು... [illegible] ದರಸ್ಥಿತಿಯು ಇದೆ. ಅಂತು ಭರತಖಂಡದ ಉದ್ಧಾರವು ಬೇಗನೇ ಆಗಲಿಕ್ಕಿದೆಂದು ನಿರೀಕ್ಷಕರು ನಿಃಸಂದೇಹವಾಗಿ ಹೇಳಬಹುದು.

೨. ಬಾರ್ದೋಲಿಯ ವೃತ್ತಾಂತವನ್ನು ಕೇಳಿ ಸುಮ್ಮಗುಳಿಯುದೇಕೆಂದರೂ ಉಳಿಯಲಾಗುವದಿಲ್ಲ. ಅಷ್ಟು ಭಯಂಕರ ಪ್ರಕಾರಗಳು ಅಲ್ಲಿ ನಡೆಯಲಾರಂಭಿಸಿವೆ. ಅವಿವೇಕದಿಂದ ಹೇರಿದ ತೆರಿಗೆಯನ್ನು ಕೆರಲಾರೆವೆಂದು ಹೇಳುವ ಅಧಿಕಾರವು ಸಾಮಾನ್ಯ ಪ್ರಜೆಗಳಿಗೆ ಯಾವಾಗಲೂ ಇರುತ್ತದೆ. ಅತ್ತ ಮಾರ್ಗ ಹಿಡಿಸುತ ಹೋಗುವ ಅಧಿಕಾರಿಗಳಿಗೆ ಬಗ್ಗುವ ಕಾರಣವದು ಅದಕ್ಕಾಗಿ ನಮ್ಮ ಅಧಿಕಾರಿಗಳು ಸ್ವಾಯತ್ತವನ್ನು ತೋರದೂ ಪ್ರಜೆಗಳಿಗೆ ಸಮಸ್ತ ಪ್ರಕಾರದಿಂದ ಅಡ್ಡಗಟ್ಟುವದು ಎಂದಿಗೂ ಕ್ಷೇಮಪ್ರದವಲ್ಲ. ಪೆನ್ಶನಿಗೂ, ತೆರಿಗೆಗೂ ಏನು ಸಂಬಂಧವಿದೆ? ಬಿಟ್ಟಿ ಕೆಲಸಕ್ಕಾಗಿ ಬಿಟ್ಟ ವಾಳವಾ ಭೂಮಿಗಳಿಗೂ, ತೆರಿಗೆಗೂ ಯಾವ ಸಂಬಂಧ? ಸುಬಾಕಿ ಲಾಯಸನ್ಸುಗಳನ್ನು ರದ್ದು ಮಾಡುವದೇಕೆ? ಅರ್ಜಿ ವಿಚಾರಕ್ಕೂ ತೆರಿಗೆ ಕೊಡದೇಕೆ? ಬಾರ್ದೋಲಿಯ ಪ್ರಜೆಗಳ ಮೇಲಿನ ರಾಜ್ಯಾಡಳಿತೆಯ ಅಧಿಕಾರವನ್ನು ಅಧಿಕಾರಿಗಳು ತೋರದೇನು? ಬಾರ್ದೋಲಿಯವರು ಇವಕ್ಕೂ ಸಿದ್ಧರಿದ್ದಾರೆ. ತಮ್ಮ ತಮ್ಮ ಮನೆಗಳನ್ನು ಭದ್ರಪಡಿಸಿಕೊಳ್ಳಲು ಅವರು ಉಪಾಯಯೋಜನೆ ಮಾಡುತ್ತಿದ್ದಾರೆ. ಪರಮಾವಧಿಯ ತಾಪವನ್ನು ಸೈರಿಸಲು ಅವರು ಟೊಂಕ ಕಟ್ಟಿದ್ದಾರೆ. ಪಠಾಣರು ಆಚರಿಸುವ ಪಾಪಕೃತ್ಯಗಳನ್ನು ಮಿರಿಯಿ ತಿಂದು ಇವರು ಸ್ವಾಗತಿಕರಿಸುತ್ತಿದ್ದಾರೆ. ಇದು ನಿಜವಾಗಿ ಆನಂದದಾಯಕ ಸುದ್ದಿಯು. ಹೀಗೆಯೇ ಬಾರ್ದೋಲಿಯವರಿಗೆ ಕಷ್ಟನಷ್ಟಗಳನ್ನು ಸೈರಿಸಲು ಪರಮಾತ್ಮನು ಸಾಮರ್ಥ್ಯವನ್ನೀಯಲೆಂದು ನಾವು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆ ಬಂದೆರಡಾವರ್ತಿ ಮಳೆ ಬಿತ್ತು. ಎಲ್ಲರೂ ಮಳೆ ನಾರ್‍ಕುತ್ತಿದ್ದಾರೆ

ಇಲ್ಲಿಯ ಪ್ರಸಿದ್ಧ ವರ್ತಕರಾದ ಹಂಸರಾಜ ಲಧ್ಧಾಶೇಟರವರು ಸ್ವರ್ಗವಾಸಿಗಳಾದರೆಂದು ತಿಳಿಸಲು ವ್ಯಸನವಾಗುತ್ತದೆ. ಶೇಟಜೀಯವರು ಅತ್ತ ಅಸ್ವಸ್ಥರಿದ್ದು, ಕೆಲ ಕಾಲ ಹಿಂದೆ ಒದಗಿದ ಪುತ್ರನಿಧನದಿಂದ ಅವರ ಪ್ರಕೃತಿಯು ವಿಶೇಷ ಕೆಟ್ಟು ದೇಹಾವಸಾನ ಹೊಂದಿದರು. ಅವರು ನಮ್ಮ ಕುಮಟೆಯಲ್ಲಿ ಅನೇಕ ಧರ್ಮ ಕೆಲಸಗಳನ್ನು ಮಾಡಿದ್ದಾರೆ. ಪಶ್ಚಿಮಘಟ್ಟದ ಮೇಲೆ ಪ್ರಯಾಣಿಕರಿಗಾಗಿ ಧರ್ಮಶಾಲೆಗಳನ್ನು ಕಟ್ಟಿಸಿದ್ದಾರೆ. ದನಗಳ ಚಿಕಿತ್ಸೆಗಾಗಿ ದವಾಖಾನೆಯನ್ನು ಕಟ್ಟಿಸಲು ವಿಶೇಷ ದ್ರವ್ಯಸಹಾಯ ಮಾಡಿದ್ದಾರೆ. ಹಳಿಯಲ್ಲಿ ಬಾವಿ ಕಟ್ಟಿಸುವದಕ್ಕಾಗಿ ಜಿಲ್ಹಾ ಬೋರ್ಡಿಗೆ ೫೦೦ ರೂಪಾಯಿಗಳನ್ನು ಅವರು ಅನುಗ್ರಹಿಸಿದ್ದಾರೆ. ಇದಲ್ಲದೆ, ಇಲ್ಲಿಯ ಸಣ್ಣ ದೊಡ್ಡ ಧರ್ಮಕಾರ್ಯಗಳಲ್ಲಿ ವಿನಾಯದಿಂದ ಅವರು ನೆರವಾಗುತ್ತಿದ್ದರು. ಇಲ್ಲಿಯ ಸ್ಥಾಯಿಕ ದೊಡ್ಡವರು ಸಹ ಅಷ್ಟು ಧರ್ಮ ಮಾಡಲಿಲ್ಲ. ಇಂಥ ಧರ್ಮಾತ್ಮರು ತೀರಿಕೊಂಡದ್ದರಿಂದ ಕುಮಟೆಯವರಿಗೆ ವಿಷಾದವಾಗಿದೆ. ಪುಣ್ಯಾತ್ಮರಿಗೆ ಸದ್ಗತಿ ಪ್ರಾಪ್ತವಾಗಲೆಂದು ಪ್ರಾರ್ಥನೆ

ಗೋಕರ್ಣಸ್ಥರೊಬ್ಬರು ಬರೆಯುವದೇನಂದರೆ,— "ಇಲ್ಲಿಯ ಕೋಟಿತೀರ್ಥದಲ್ಲಿ ಗೌಡಸಾರಸ್ವತ ಸಮಾಜದವರ ಪರ್ವಸಿಂದ ಮಂಗಳೂರ ಡಾ| ಕೃಷ್ಣ ಅನಂತ ಪ್ರಭು ಕುಂಬಳೆಯವರು ಜೀರ್ಣೋದ್ಧಾರ ಮಾಡಿದ ಕೋಟಿತೀರ್ಥ ಮಂಟಪವು ಮುನಿಸಿಪಾಲಿಟಿಯ ಡಾ| ವೆಂಕಟರಾವ ನಾಡಕರ್ಣಿ, ಗಣಪ್ಪ ಪಂಡಿತ, ರಘು ಅಡಿ ಈ ತ್ರಿಮೂರ್ತಿಗಳ ಬಾಯಿಂದ ಪಾರುಹೋತು. ಡಾ| ವೆಂಕಟರಾಯರು ಚೇರಮನ್ ನಾತೆಯಿಂದ ಮಂಟಪದ ಜೀರ್ಣೋದ್ಧಾರ ಮಾಡುವಂತೆ ಗೌಡಸಾರಸ್ವತ ಸಮಾಜದ ಮೇಲೆ ಇಂಜಂಕ್ಶನ ಹುಕುಮು ಹೊರಡಿಸಿದ್ದರು. ಪುಣ್ಯಾತ್ಮರಿಗೆ ಈ ಅಧಿಕಾರ ಯಾರು ಕೊಟ್ಟರೋ ಏನೋ! ಕೋರ್ಟು ದ್ಯಾಪತ್ರೆಯಲ್ಲಿ ಕೊಡೆ ಹಿಡಿಸಿಕೊಳ್ಳುವ ಐಶ್ವರ್ಯವಂತರ ಪಾಲಿಕೆಯಲ್ಲಿ ಡಾ| ವೆಂಕಟರಾಯರು ಈಗ ಸೇರಿದರು. ಆ ಮೇಲೆ ಮಂಟಪವನ್ನು ಕಿತ್ತೊಗೆಯುವ ತೀರ್ಮಾನವನ್ನೂ ಈ ಪುಣ್ಯಾತ್ಮರು ಸೇರಿ ಮಾಡಿದರು. ಆದರೆ, ಅಧ್ಯಕ್ಷರು ಈ ಹುಡಿ ಗಾಟಕ್ಕೆ ಅಲ್ಲಿಂದಲ್ಲೇ ಕಡೆಹಾಕಿ ಶುಕ್ರವಾರಕ್ಕೆ ಮುನಿಸಿಪಾಲಿಟಿಯ ಸಭೆ ಸೇರಿಸಿದರು. ಅಧ್ಯಕ್ಷರೂ, ಸಭಾಸದರೂ ಮಂಟಪವನ್ನು ನೋಡಿ ಎಲ್ಲಿಯೂ ಅತಿಕ್ರಮಣವಾಗಲಿಲ್ಲೆಂದು ಕಂಡು ಹಿಡಿದು ಜೀರ್ಣೋದ್ಧಾರಕ್ಕೆ ಮುನಿಸಿಪಾಲಿಟಿಯ ಅಪ್ಪಣೆಯು ಅವಶ್ಯವಿಲ್ಲವಾಗಿ ಬಹುಮತದಿಂದ ತೀರ್ಮಾನ ಮಾಡಿದರು. ಮೇಲ್ಕಂಡ ತ್ರಿಮೂರ್ತಿಗಳು ಮಂಟಪವನ್ನು ಕಿತ್ತೊಗೆದ ಪುಣ್ಯವನ್ನು ಮುನಿಸಿಪಾಲಿಟಿಯ ಸರಗಿಗೆ ಕಟ್ಟಿ ಕೃತಕೃತ್ಯರಾಗಬೇಕೆಂದು ನಡಿಸಿದ ಕುಯುಕ್ತಿಗಳೆಲ್ಲ ನಿರ್ಥಕವಾದವು. ಅನಧಿಕಾರದಿಂದ ಡಾ| ವೆಂಕಟರಾಯರು ಹೊರಡಿಸಿದ ಇಂಜಂಕ್ಶನ ಹುಕುಮನ್ನು ಅಲಕ್ಷಿಸಿ, ಗೌಡಸಾರಸ್ವತ ಸಮಾಜದ ಪ್ರತಿನಿಧಿಗಳು ಮಂಟಪವನ್ನು ಕಟ್ಟಿಸಿಬಿಟ್ಟರು. ಶ್ರೀ ಕ್ಷೇತ್ರ ಹಿರೇಭಟ್ಟರ ಮನೆಯವರು ಗೌಡಸಾರಸ್ವತರಿಗೆ ಜೀರ್ಣೋದ್ಧಾರ ಕಾರ್ಯದಲ್ಲಿ ಸಕಾಲ ನೆರವಾಗಿದ್ದಾರೆ. ಇಂಥ ಧರ್ಮಕಾರ್ಯಗಳನ್ನು ಮಾಡುವವರೇ ವಿರಳರಾಗಿದ್ದಾಗ ಯೋಗ್ಯ ತ್ರ್ಯಂತ ನಿರ್ಥಕ ಪಂಚಾಯ್ತಿ ಕೊನೆ ಜಾನೀಮಹೇ" ಎಂಬುದೊಂದು ಪ್ರಶ್ನೆ. ಅಧ್ಯಕ್ಷರಾದ ಡಾ|| ದಿವೇಕರರು (ಪ್ರ್ಯಾಂಕ ಸಾಹೇಬರು) ಈ ಪ್ರಕರಣವನ್ನು ಈ ಪ್ರಕಾರ ತೀರ್ಮಾನಿಸಿದ ಬಗ್ಗೆ ಅವರಿಗೆ ಎಲ್ಲರೂ ಕೊಂಡಾಡುತ್ತಾರೆ

ಹೊನ್ನಾವರ— ಒಬ್ಬ ಪತ್ರಗಾರರು ಬರೆಯುವದೇನಂದರೆ — ಇಲ್ಲಿಯ ಕೋರ್ಟಿನ ನೆಲದ ಸ್ಥಿತಿಯನ್ನು ಬಣ್ಣಿಸಿದಷ್ಟು ತೀರದು. ಕೊಟ್ಟಿಗೆಯ ನೆಲವಾದರೂ ಬೇಕು, ಇಲ್ಲಿಯ ನೆಲ ಬೇಡ. ವರ್ಷ ವರ್ಷಕ್ಕೆ ನೆಲದ ದುರುಸ್ತಿಯಾಗುತ್ತದಂತೆ. ಎಂಥ ದುರುಸ್ತಿಯೋ ಏನೋ! ನೆಲವೆಲ್ಲ ಅಗಿದುಹೋಗಿದೆ. ಮಾರ್ಗದ ಮೇಲೆ ಆದರೂ ಇಷ್ಟೊಂದು ಧೂಳಿ ಇರುವದಿಲ್ಲ, ಅದಕ್ಕೂ ಹೆಚ್ಚಿನ ಧೂಳಿಯು ನಾಜರರ ಕೋರ್ಟು, ರಿಕಾರ್ಡ ಕೋಣೆಗಳಲ್ಲಿ ಇದೆ. ಏನು ಹೇಳುವದು? ಕಕ್ಷಿಗಾರರು ಬರುತ್ತಾರೆ; ಹೋಗುತ್ತಾರೆ. ಆದರೆ, ನೆಲವು ದುರುಸ್ತಿಯಾಗುವದಿಲ್ಲ. ಹೊಸ ಸಬಜಡ್ಜರು ಈ ಕಡೆ ಲಕ್ಷಗೊಡಬೇಕು. ಹೊಸ ಡಿಸ್ಟ್ರಿಕ್ಟ ಜಡ್ಜರೂ ನೋಡಬೇಕು. ಇದಕ್ಕಾಗಿ ಬರಾಗುವ ಹಣ ನೋಡಿದರೆ ರಿಕ್ಕಿಲ್ಲ ಇತ್ಯಾದಿ.

ಕಾರವಾರ— ಪೋಲೀಸ ಇನ್ಸಪೆಕ್ಟರರಾದ ರಾ|| ಮಾಲಂಬೆಯವರು ತೀರಿಕೊಂಡರು. ತಮ್ಮ ಮನೆಯಲ್ಲಿ ಗುಂಡು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರು. ಕೊಲೆಗಾರರ ಪಾರಿಗಳನ್ನು ಕಂಡುಹಿಡಿಯಲು ಹೋಗಿ ಯಾಳಕ್ಕೆ ಅವರು ಹೋಗಿದ್ದರಂತೆ! ಅಪ್ಪರ್‍ಗೂ ಹೋಗಿದ್ದರಂತೆ! ಎಲ್ಲಿಯೂ ಪತ್ತೆ ಸಿಗಲಿಲ್ಲ. ಕಾಗಸ್ತರು ಗೈರ ಮರ್ಜಿ ಮಾಡುವರೆಂದು ಗ್ರಹಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಾಲಂಬೆಯವರು ದೊಡ್ಡ ಇನಾಮದಾರರು. ಹೆಂಡರು ಮಕ್ಕಳೂ, ಸಹೋದರರೂ ಇದ್ದಾರೆ. ದುರ್ಬಲಮನಸ್ಕರಾಗಿ ಅವರು ಈ ಅನರ್ಥ ಮಾಡಿಕೊಳ್ಳಬಾರದಾಗಿತ್ತು

ಪೋಲೀಸ ಸುಪರಿಂಟೆಂಡೆಂಟರು ಹೊಸ ನಿಯಮವೊಂದನ್ನು ಮಾಡಿದ್ದಾರೆ. ಮೋಟಾರ ಪ್ರಯಾಣಿಕರಿಗೆ ಸ್ಟ್ಯಾಂಡಿನ ಬಳಿಯಲ್ಲಿಯೇ ಟಿಕೆಟ್ಟು ಕೊಡುವುದು. ಇದರಿಂದ ಕಾರಿಯವರುಗಳ ಸುಗ್ಗಿ, ಪ್ರಯಾಣಿಕರ ದಿವಾಳಿ. ಹಂಗಸರು-ಹುಡುಗರು ದಂಡೂ ದೊಡ್ಡ ಗೋಳು. ಇಲ್ಲಿಯ ಮಾರ್ಗಗಳು ವಿಶಾಲವಿವೆ. ಹೀಗಿದ್ದು ಪೋಲೀಸ ಸುಪರಿಂಟೆಂಡೆಂಟರು ನಿಯಮಮಾಡುವ ಅಧಿಕಾರವನ್ನು ಸರಕಾರವು ನಿಯಂತ್ರಿಸತಕ್ಕದು. ಈ ನಿಯಮವು ಕೂಡಲೆ ರದ್ದಾಗಬೇಕು.

ಬಾರ್ದೋಲಿಯ ವೃತ್ತಾಂತ.

ಬಾರ್ದೋಲಿಯ ಸಮರವು ಮತ್ತೂ ತೀಕ್ಷ್ಣವಾಗಿ ನಡೆದಿದೆ. ಪಠಾಣರು ಅತ್ಯಾಚಾರಿಗಳಾಗಿದ್ದಾರೆ. ವಾಡಿಯಲ್ಲಿ ಪಠಾಣರ ದರ್ಶನವಾದೊಡನೆ ಒಂದು ಮನೆಯೊಳಗಿನ ಮಣಿಬಾಯಿ ಎಂಬ ಹೆಂಗಸು ಕದ ಹಾಕಿಕೊಳ್ಳಲು ಪ್ರಯತ್ನಿಸಿದಳು. ಪಠಾಣನು ಒಳಸೇರಿ, ಅವಳ ಕೈಹಿಡಿದು ಹೊರತಂದು, ಮನೆಯಲ್ಲಿದ್ದ ೪ ಎಮ್ಮೆಗಳನ್ನು ಎಳಕೊಂಡು ಹೋಗಿಬಿಟ್ಟನು. ಪಂಚನಾಮೆಯಿಲ್ಲ ಏನೇನೂ ಇಲ್ಲ. ತೀರ್ವೆ ಕೊಡದವರಲ್ಲಿಯೂ ಜಪ್ತಿಯಾಗುತ್ತಿವೆ. ದಿಲವಾಡಾ ಎಂಬಲ್ಲಿ ಹರಿಪ್ರಿಲ ಎಂಬುವನ ಮನೆಯ ಬೀಗ ಒಡೆದು ಕೆಲವು ಪಾತ್ರೆಗಳು ಒಯ್ಯಲ್ಪಟ್ಟವು. ಸರಕಾರವು ತೆರಿಗೆಯನ್ನು ವಸೂಲ ಮಾಡುವ ಹಾದಿಗಳನ್ನು ಹುಡುಕುತ್ತಿದೆ. ತೆರಿಗೆ ಕೊಡದವರ ಬಾಕಿ ಲೈಸನ್ಸುಗಳನ್ನು ಕಲೆಕ್ಟರರು ರದ್ದು ಮಾಡಿದ್ದಾರೆ. ಆ ಬಾಕಿಗಳನ್ನು ಜಪ್ತು ಮಾಡಿ ಬಂದ ಹಣವನ್ನು ತೆರಿಗೆಯ ವಸೂಲಿಗೆ ಜಮಾ ಕೊಳ್ಳುವರೆ ಉಪಾಯವಾಗಿದೆ. ಸಂಸಾರದ ನೈಜ ಬಿಟ್ಟು ಮಾಡುವದಕ್ಕಾಗಿ ಬೇರೆ ಗ್ರಾಮದಲ್ಲಿ ಬಿಟ್ಟ ಎಳೆಗಳಿಗೆ ಮುಂಚಿನ ಕಾಲದಿಂದ ಭೂಮಿ ಕ್ರೋಡೀಕರಣವಾಗಿದೆ. ಕರ ವಸೂಲಿಯ ಕೆಲಸದಲ್ಲಿ ಅವರು ಮನಮುಟ್ಟಿ ಕೆಲಸ ಮಾಡುವದಿಲ್ಲವೆಂದು ಅವರ ಮೇಲೆ ಆ ಭೂಮಿಗಳನ್ನು ರದ್ದು ಮಾಡುವ ನೋಟೀಸುಗಳು ಹೊರಟಿವೆ. ಪಟೇಲ ಮಾಲೂ ಆಕ್ಷೇಪ ಬರುತ್ತಿರೆ, ಕೆಲವು ಪನ್ನಯರಿಗೆ ಭೂಮಿಗಳಿವೆ. ಅವರೂ ತೀರ್ವೆ ಕೊಡಲಿಲ್ಲ. ಅವರ ಪನ್ನವನ್ನು ಯಾಕೆ ಜಪ್ತ ಮಾಡಬಾರದೆಂದು ನೋಟೀಸುಗಳು ಹೊರಟಿವೆ. ಹೆಚ್ಚಿನ ತೆರಿಗೆ ಕೊಡದಿದ್ದರಿಂದ ಅಸಹಕಾರದಲ್ಲಿ ಅವರು ಸೇರಿದಂತಾಯಿತಂತೆ. ಅಸಹಕಾರದ ಅಂಗದಲ್ಲಿರುವ ಸಿದ್ಧಿಯಿಂದ ಸರಕಾರಿ ಪತ್ರವನ್ನು ಎತ್ತಿಹಿಡಿದ ಬಗ್ಗೆ ಬಿಬ್ಬಿಬ್ಬರ ಹಳೆ ಸರ್ಟಿಫಿಕೇಟುಗಳೂ ಇವೆ. ಒಬ್ಬ ಪನ್ನೇರ ಮನೆ ದ. ಮುಂದಿನಿಂದ ಪಠಾಣರಿಗೆ ಹೋಗಬೇಕಾಗಿದೆ. ತೆರಿಗೆಯನ್ನು ಯಾವದೇ ಉಪಾಯದಿಂದ ವಸೂಲ ಮಾಡದೇ ಬಿಡುವದಿಲ್ಲವೆಂದು ಭಾಂವಿದ ಜಪ್ತಿ ಆಫೀಸರರು ಹೇಳಿದರು. ಕೆಲ ಕಾಲ ಮೇಲೆ ಈ ಪಠಾಣರಿಗೆ ಜಪ್ತಿ ಆಫೀಸರರು ಕರಕೊಂಡರಂತೆ.

ಜನರ ಒಕ್ಕಟ್ಟು ಒಟ್ಟಿಗೆ ಚಲೋ ರೀತಿಯಿಂದ ನಡೆದಿದೆ. ಜಪ್ತು ಮಾಡಿದ ಗಾಡಿಗಳನ್ನು ಪಠಾಣರೂ, ಸರಕಾರಿ ನೌಕರರೂ ಎತ್ತುಗಳಂತೆ ಎಳೆದೊಯ್ಯುವದನ್ನು ನೋಡಿದರೆ, ಸರಕಾರಿ ನೌಕರಿಯ ದೈನ್ಯವು ಸ್ಪಷ್ಟವಾಗುತ್ತದೆ. ಅವರು ಈ ಕೆಲಸ ಮಾಡಲು ಮನಃಪೂರ್ವಕ ಹೇಸುತ್ತಾರೆ. ಆದರೆ ಉಪಾಯವಿಲ್ಲದೆ ಈ ಕೆಲಸವನ್ನು ಮಾಡಬೇಕಾಗಿದೆ. ಶ್ರೀ ನರಿಮಾನರವರು ಬಾರ್ದೋಲಿಗೆ ಹೋಗಿ ಅಲ್ಲಿಯ ಸ್ಥಿತಿ ನೋಡಿಬಂದರು. ಮಂಡಿಯಲ್ಲಿ ಸಭೆಗಳಾದವು. ಬಾರ್ದೋಲಿಯ ಗ್ರಾಮಗಳಲ್ಲಿಯೂ ಅಲ್ಲಲ್ಲಿ ಸಭೆಗಳಾಗುತ್ತಿವೆ. ಈ ಅನ್ಯಾಯವನ್ನು ಸೈರಿಸಲಾಗದೆಂಬ ಹುರಿದುಂಬಿಸೋಣಾಗುತ್ತದೆ. ಮನೆಯ ಸುತ್ತಮುತ್ತು ಭದ್ರವಾದ ಬೇಲಿಯನ್ನು ಹಚ್ಚಿ ಕೋಟೆಯಂತೆ ರಚನೆ ಮಾಡಿಕೊಂಡಿರಬೇಕೆಂದು ಹೇಳೋಣಾಗುತ್ತದೆ. ಶ್ರೀ ನರಿಮಾನರವರು ಈ ವಿಷಯ ಸರಕಾರಿ ಧೋರಣವು ಅಗ್ರಾಹ್ಯವಾದದ್ದೆಂದೂ ಅನಾಚಾರಗಳು ವಿಪರೀತವಾದವೆಂದೂ ಹೇಳಿ ಕಾಯಿದೆ ಕೌನ್ಸಿಲಿನ ಸಭಾಸದರು ಈ ವಿಷಯ ರಾಜಿನಾಮೆ ಕೊಡಬೇಕಾಗಿ ಸಭಾಸದರಿಗೆ ಸೂಚಿಸಿದ್ದಾರೆ.

ಬೋಪಾದಲ್ಲಿ ಕೆಲವರು ದ್ರೋಹ ಮಾಡಿದರು. ಅಬಕಾರಿ ಇನ್ಸಪೆಕ್ಟರರ ದುರುಪದೇಶದಿಂದ ೧೩೦೦ ರೂಪಾಯಿ ತೀರ್ವೆ ವಸೂಲಾಯಿತು. ಕೂಡಲೆ ಅಲ್ಲಿಯವರು ೧ ದಿನದ ವರೆಗೆ ಉಪೋಷಣ ಮಾಡಿ ಪ್ರಾರ್ಥನೆ ನಡಿಸಿದರು. ತೀರ್ವೆ ಕೊಟ್ಟವರ ಕುಟುಂಬದವರೂ ಪಶ್ಚಾತ್ತಾಪ ಪ್ರದರ್ಶನ ಮಾಡಿದರು. ತೀರ್ವೆ ಕೊಟ್ಟವರ ಮನೆಯಲ್ಲಿ ಆಪ್ತರೊಬ್ಬರು ಸತ್ತುಹೋದಂತೆ ಎಲ್ಲರೂ ಮರುಗಿದರು. ಶ್ರೀ ವಲ್ಲಭಭಾಯಿಯವರಿಗೆ ತೀರ್ವೆ ಕೊಟ್ಟವರು ಪತ್ರ ಬರೆದು ಪಶ್ಚಾತ್ತಾಪ ಪ್ರದರ್ಶನ ಮಾಡಿ ಕ್ಷಮಾಯಾಚನೆ ಮಾಡಿದ್ದಾರೆ. ರಾಮ ಗೋವಿಂದ ಎಂಬುವರು ತಮ್ಮ ಮನೆಯ ಬೀಗವನ್ನು ಒಡೆದ ಪಠಾಣರ ಒಳಸೇರಿ ಪಾತ್ರಗಳನ್ನೊಯ್ದ ಬಗ್ಗೆ ಮಿಠಾಯಿ ಹಂಚಿದರು. ತೀರ್ವೆ ವಸೂಲಿಗಾಗಿ ಬಂದ ಪಠಾಣರೊಬ್ಬರ ಸ್ಟೇಶನಿನಲ್ಲಿದ್ದ ಉಪ್ಪಿನ ಚೀಲಗಳನ್ನು ಒಡೆದು ಉಪ್ಪನ್ನು ಕದ್ದ ಬಗ್ಗೆ ಪ್ರಕರಣವಾಗಿದೆ. ಸಕ್ಕರೆಯೆಂದು ಆ ಚೀಲ ಒಡೆಯೋಣಾಗಿತ್ತಂತೆ.

ಬಾರ್ದೋಲಿಯಿಂದ ಮೂವರಿಗೆ ಆಸಾಮು ಚಹದ ತೋಟಗಳಿಗೆ ಬಂದರು. ಈ ಕುರಿತ ಅಲ್ಲಿಯವರು ಅವರಿಗೆ ಚಹದ ತೋಟಗಳಿಗೆ ಕಳಿಸಬಾರದಾಗಿ ಕಲೆಕ್ಟರರಿಗೆ ಅರ್ಜಿ ಮಾಡಿಕೊಂಡಿದ್ದರು. ಅರ್ಜಿದಾರರು ತೀರ್ವೆ ಕೊಡಲಿಲ್ಲಾದ್ದರಿಂದ ಅವರ ಅರ್ಜಿ ಸ್ವೀಕಾರವಾಗಲಿಲ್ಲ. ತೀರ್ವೆ ಕೊಡದವರಿಗೆ ಬಾರ್ದೋಲಿಯಲ್ಲಿ ಈಗ ಯಾರೂ ಕೇಳುವದಿಲ್ಲ.

ಜಪ್ತಿಯ ಕಾಲಕ್ಕೆ ಪಂಚರಾಗಲು ಒಪ್ಪದಿದ್ದ ಬಗ್ಗೆ ಗೋಸಾನ ಭಾಯಿ ಜೀವನರವರ ಮೇಲೆ ಒಂದು ಖಟ್ಲೆ! ಜಪ್ತಿ ಮಾಡಲು ಬಂದಾಗ ಮನೆಯ ಕದ ತಟ್ಟಿದ ಬಗ್ಗೆ ಭವಾನಿಶಂಕರರ ಮೇಲೆ ಇನ್ನೊಂದು ಖಟ್ಲೆ! ಸಾರಭೋಣ ಗ್ರಾಮದಲ್ಲಿ ಪೋಲೀಸರು ಮನೆಯ ಹಿಂದುಗಡೆ-ಮುಂದುಗಡೆ ಗಸ್ತು ಹಾಕುತ್ತಿದ್ದಾರೆ. ಆದರಿಂದ ಜಪ್ತಿಯ ಅಧಿಕಾರಿಗಳು ಜಪ್ತಿ ಮಾಡಬಹುದೆಂದಾಗಿ ಆಡ್ಡಾಡುತ್ತಿದ್ದಾರೆ. ಎಲ್ಲರೂ ಕದ ಮುಚ್ಚಿಕೊಂಡು ಮನೆಯೊಳಗೆ ಕೂತುಕೊಂಡಿದ್ದಾರೆ. ಉರವಾಸ ಸಹವೆಷ್ಟು, ಆದರೆ ಜಪ್ತಿ ಮಾಡಲಿಕ್ಕೆ ಕೊಡಲಿಕ್ಕಿಲ್ಲೆಂಬದೊಂದೇ ನಿರ್ಧಾರದಿಂದ ಜನರು ಒಳಗೆ ಕೂತುಕೊಂಡಿದ್ದಾರೆ. ಪರಕೀಯ ದೌಡು ಬರುವದಕ್ಕಿಂತ ಮುಂಚೆಯೇ ಈ ಕೇರಿಯಲ್ಲಿ ದೌಡಿನ ಕಷ್ಟಗಳು ಪ್ರಾರಂಭವಾಗಿವೆ.

ಪೇಣ ತಾಲೂಕಿನೊಳಗಿನ ಸತ್ಯಾಗ್ರಹದ ವೃತ್ತಾಂತ

ಹಿಂದ ತೀರ್ವೆಯನ್ನು ಕೊಡಬಾರದೆಂಬ ಪ್ರಯತ್ನವು ಪೇಣ ತಾಲೂಕಿನಲ್ಲಿ ನಡೆದಿದೆ. ಸಾವಿರಕ್ಕೆ ಮಿಕ್ಕಿ ನೋಟೀಸುಗಳು ಹೊರಟಿವೆ. ೧೦೦ ಕ್ಕೆ ಮಿಕ್ಕಿ ಜಪ್ತಿಗಳಾದವು. ನೋಟೀಸು ಕೊಡದೆ ಜಪ್ತಿಗಳಾಗುತ್ತಿವೆ. ಪಂಚನಾಮೆಯ ಶಾಸ್ತ್ರ ಸಹ ನಡೆಯುವದಿಲ್ಲ. ಜಪ್ತಿ ಮಾಡಿದ ಸಾಮಾನು ಒಯ್ಯುವಾಗ ರಸೀದಿ ಸಹ ಕೊಡುವದಿಲ್ಲ. ಒಂದೆರಡು ಕಡೆಯಲ್ಲಿ ಜಪ್ತಿ ಮಾಡುವ ನಮೂನೆ ನೋಡಿದರೆ, ಜಪ್ತಿಯ ಆಫೀಸರರಿಗೆ ಹೊಗಳಿದಷ್ಟು ಕಡಿಮೆ, ಧ್ರುವ ಚೇರ ಪಾಟೀಪಾಡಿಯವರ ಮನೆಯಲ್ಲಿದ್ದ ಎಲ್ಲ ಸಾಮಾನನ್ನು ಬಿಟ್ಟು ದೀಪವನ್ನೇ ಜಪ್ತಿ ಮಾಡಿ ಒಯ್ಯಲಾಯಿತು. ರಸೀದಿ ಕೊಡಲಿಲ್ಲ, ದೀಪ ಒಯ್ಯಲು ತೃಪ್ತರಾದರೆ ಅಂಧಕಾರವಿಟ್ಟು ಹಣ ಕೊಡಬೇಕೆಂಬ ಭಾವನೆ! ಈಗ ಶುಭಾಶುಭದ ವಿಚಾರವೆಲ್ಲ ಮಾಯವಾಗಿದೆ, ನಿರ್ಧಾರ ಪಾಲನವೇ ಶುಭಕಾರ್ಯವು, ಉಳಿದವೆಲ್ಲ ಅಶುಭಗಳು. ರಾ। ಬಾಬುರಾವ ಟಿಳಕರರ ಮನೆಯಲ್ಲಿ ಮದುವೆಯಿತ್ತು. ವಧೂವರರಿಗೆ ಕೂಡಿಸಲು ತಂದ ಮಣೆಯು ಜಪ್ತಿ ಮಾಡಲಾಯಿತು. ಪಾವತಿ ಕೊಟ್ಟ ಹೊರತು ಮಣೆಯನ್ನು ಒಯ್ಯಲು ಅವರು ಬಿಡಲಿಲ್ಲ, ಆದರಿಂದ ಜಪ್ತಿಯನ್ನು ಮಾಡಿದ ಆಫೀಸರರು ಹೋದರು, ರಾತ್ರಿ ಆ ಮಣೆಯು ಕಳುವಿನಿಂದ ಒಯ್ಯಲಾಯಿತಂತೆ! ಪುರುಷಾರ್ಥದ ಪರಮಾವಧಿ, ರಾ। ರಂಗೋಪಂತ ಟಿಳಕರವರ ಮನೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರರಿಗೆ "ಬೀಳ ನಕೋ ಪಣ ಕುಡಾ, ಅವರ" ಇದು ಯಥಾರ್ಥವಾಗಿ ಅನುಭವಕ್ಕೆ ಬಂತು. ಸರ್ಕಲ್ ಇನ್‌ಸ್ಪೆಕ್ಟರರು ಜಪ್ತಿ ಮಾಡಬಂದರು, ಹೊರಬದಿಗೆ ಭತ್ತವಿತ್ತು, ಅದನ್ನು ಜಪ್ತಿ ಮಾಡಿ ಒಯ್ಯಿರೆಂದು ರಾ। ರಂಗೋಪಂತರು ಹೇಳಿದ್ದಕ್ಕೆ ಸರ್ಕಲ್ ಇನ್‌ಸ್ಪೆಕ್ಟರರು ಒಳಸೇರಲೂ ಬರು... ರೀತಿಯ ಅಂಗಳದಲ್ಲಿ ಮಾಡಿಕೊಂಡ ಹೊರತು ಒಳಸೇರಲು ಹಾದಿ ಬಿಡುವದಿಲ್ಲವಾಗಿ ರಾ। ರಂಗೋಪಂತರು ಆತಂಕ ಮಾಡಿದರು, ಹೊಸ ಪಂಚನಾಮೆ ಮಾಡಲಿಕ್ಕೆ ತಯಾರಾದರು; ಇಷ್ಟೆಲ್ಲ ಸಂಭಾವನೆಯಾದ ಬಳಿಕ, ಸರ್ಕಲ್ ಇನ್‌ಸ್ಪೆಕ್ಟರರು ಭತ್ತ ಒಯ್ಯಲು ಒಪ್ಪಿದರು. ಆದರೆ ಭತ್ತವನ್ನು ಅಳತೆ ಮಾಡಲಿಕ್ಕೆ ಸಾಹಿತ್ಯವಾಗಲೀ, ತುಂಬಲಿಕ್ಕೆ ಚೀಲವಾಗಲೀ ಸರ್ಕಲ್ ಇನ್‌ಸ್ಪೆಕ್ಟರರಿಗೆ ದೊರೆಯಲಿಲ್ಲ. ರಂಗೋಪಂತರು ತಮ್ಮ ಚೀಲ ಹಾಗೂ ಅಳತೆ ಕೊಟ್ಟರು. ರಂಗೋಪಂತರ, ಅಳಕೊಂಡು ಭತ್ತ ಒಯ್ಯುವಾಗ ಪಾವತಿ ಕೊಡಬೇಕಾಗಿ ಹೇಳಿದರು. ಪಾವತಿ ಕೊಡಲು ಅವರು ಒಪ್ಪಲಿಲ್ಲ. ಚೀಲ ಒಯ್ಯಗೊಡಲು ರಂಗೋಪಂತರು ಒಪ್ಪಲಿಲ್ಲ. ಸರ್ಕಲ್ ಇನ್‌ಸ್ಪೆಕ್ಟರರು ರಂಗೋಪಂತರ ಮೈಮೇಲೆ ಬಿದ್ದರು. ಅದನ್ನು ... ಬಳಿಯಲ್ಲಿ ಕಟ್ಟಿಹಾಕಿದ್ದ ರಂಗೋಪಂತರ ನಾಯಿಯು ಸರ್ಕಲ್ ಇನ್‌ಸ್ಪೆಕ್ಟರರ ಮೇಲೆ ಹಾರಿ ಹೋಗಿ ಅಂಗಿಯನ್ನು ಹರಿದುಹಾಕಿತು. ಸರ್ಕಲ್ ಇನ್‌ಸ್ಪೆಕ್ಟರರಿಗೆ ಯೋಗ್ಯ ಸಂಭಾವನೆಯಾಯಿತು. ಜಪ್ತಿಯ ಭತ್ತವನ್ನು ಬಿಟ್ಟು, ಬಂದ ಹಾದಿಗೆ ಸುಂಕ ಇಲ್ಲೆಂಬಂತೆ ಅವರು ಖಿನ್ನವದನರಾಗಿ ಹೊರಟುಹೋದರು.

ಜಪ್ತಿ ಆಫೀಸರರು ಬೀಗಗಳನ್ನು ತೆರೆಯುವದಕ್ಕಾಗಿ ಕೀಲಿಕೈಗಳ ಗೊಂಚಲುಗಳನ್ನು ಸಂಪಾದಿಸಿಕೊಂಡು ಬೀಗಗಳನ್ನು ತೆರೆಯಹತ್ತಿದ್ದಾರೆ. ಹೀಗೆ ಕೀಲಿಕೈಗಳ ಉಪಯೋಗದಿಂದ ಕೆಲವು ಕಡೆ ಜಪ್ತಿಗಳಾದವು. ಜಪ್ತಿಯಾದ ವಸ್ತುಗಳನ್ನು ಬಹು ಅಗ್ಗವಾಗಿ ಸರಕಾರಿ ಆಫೀಸರರೇ ಕೊಳ್ಳುತ್ತಿದ್ದಾರೆ. ಸರಕಾರಿ ಕೋರ್ಟಿನ ಡ್ರಾಯ್ವರರೊಬ್ಬರು ೩೬ ರೂಪಾಯಿಗಳಿಗೆ ಒಂದು ಜೋಡು ಕುದುರೆಯನ್ನು ಕೊಂಡರು. ಪೋಲೀಸ ನಾಯಿಕನೊಬ್ಬನು ೧೦ ಪಾತ್ರೆಗಳನ್ನು ೧೩ ರೂಪಾಯಿಗಳಿಗೆ ಗಿಟ್ಟಿಸಿದನು, ೯ ಮಣ ಜ್ವಾರಿ ೨ ರೂಪಾಯಿ ಬೆಲೆಗೆ ಸತ್ಯಾಗ್ರಹಿಗಳ ಮೇಲೆ ಸಾಕ್ಷಿ ಹೇಳಿದ ಜನರಿಗೆ ಸಿಕ್ಕಿತು,

ವೃತ್ತಸಾರ.

— ಕಲಕತ್ತೆಯ ಇಂಪೀರಿಯಲ್ ಬ್ಯಾಂಕಿನ ಕಾರಕೂನರೊಬ್ಬರು ಕ್ಷೌರ ಮಾಡಿಕೊಳ್ಳದೆ ಆಫೀಸಿಗೆ ಬಂದ ಬಗ್ಗೆ ಬ್ಯಾಂಕಿನ ಯಜಮಾನರು ೧ ರೂಪಾಯಿ ದಂಡ ಮಾಡಿ ತಿಂಗಳ ನೋಟೀಸು ಕೊಡದೆ ಅವರಿಗೆ ಹೊರಹಾಕಿದರು, ಈ ಕಾರಕೂನರು ಬ್ಯಾಂಕಿನ ಮೇಲೆ ದಾವೆ ಮಾಡಿದ್ದಾರೆ.

— ಕಾಶ್ಮೀರ ಮಹಾರಾಜರು ತಮ್ಮ ರಾಜ್ಯದಲ್ಲಿ ಬಾಲವಿವಾಹವಾಗದಂತೆ ಹುಕುಮನ್ನು ಹೊರಡಿಸಿದ್ದಾರೆ,

— ಮೈಸೂರಿನೊಳಗಿನ ಮುದ್ರಣ ಕಾನೂನು ಇನ್ನು ಸ್ವಾತಂತ್ರ್ಯವನ್ನೀಯುತ್ತಿಲ್ಲ '[illegible] ಪತ್ರಿಕೆ' ವರ್ಧಿಸಿದ ಬಗ್ಗೆ ತಗಡೂರ ರಾಮಚಂದ್ರರಾಯರ ೫ ನೇ ಸತ್ಯಾಗ್ರಹ ಮುದ್ರಣಾಲಯವು ಜಪ್ತು ಮಾಡಿ ಒಯ್ಯಲಾಯಿತು.

— ಮೈಸೂರ ಸಂಸ್ಥಾನದೊಳಗಿನ ಕಂಚನಾಡಿ ಪ್ರದೇಶದಲ್ಲಿ ಚಂದನ ಮರಗಳ ಒಂದು ದೊಡ್ಡ ವನ ದೊರಕಿದೆ. ಅದರ ಬೆಲೆಯು ೬ ಲಕ್ಷ ರೂಪಾಯಿಯಾದೀತು,

— ಬಿಹಾರ ಪ್ರಾಂತದ ದಿನಜಪುರ ಜಿಲ್ಲೆಯ ಬಾಲಘಾಟದಲ್ಲಿ ಅಗೆಯಲು ಒಂದು ಶ್ರೀವಾಸುದೇವಮೂರ್ತಿ ಬಾವಿ ಹಾಗು ಮನೆಗಳು ದೊರಕಿದವು

— ಧಾರವಾಡ ಮ್ಯುನಿಸಿಪಾಲಿಟಿಯವರು ೩೦೦೦ ರೂಪಾಯಿಗಳನ್ನು ವ್ಯಾಯಾಮ ಶಾಲೆಗೆ ಮಂಜೂರ ಮಾಡಿದ್ದಾರೆ

— ಬೆಂಗಳೂರ ಸ್ಟೇಶನಿನ ಬಳಿ ೧೦ ರೂಪಾಯಿಗಳ ಕೃತ್ರಿಮ ನೋಟುಗಳು ತಯಾರಾಗುತ್ತಿವೆ. ವಿಶ್ವಾಮಿತ್ರರು ಯಾರೆಂದು ಇನ್ನು ತಿಳಿಯಲಿಲ್ಲ

— ಧಾರವಾಡದಲ್ಲಿರುವ ಕನ್ನಡ ಟ್ರೇನಿಂಗ ಸ್ಕೂಲ ಸದ್ಯಕ್ಕೇ ಕಿತ್ತಿಗೆಯಲ್ಪಡುವದೆಂದು ಒಂದು ವಾರ್ತೆ

(೫ನೇ ಪಾನಿನಿಂದ ಮುಂದರಿದದ್ದು)

ನಡೆಸಲೇಬೇಕೆಂದು ಪ್ರತಿಪಾದಿಸುತ್ತಿದ್ದಾರೆ. ಇದು ಬ್ರಿಟಿಶರ ಹೇಡಿತನದ ಪ್ರದರ್ಶನವೆಂದು ನನ್ನ ಮತ. ಬ್ರಿಟಿಶರ ಸ್ವಾರ್ಥವನ್ನು ತೋರಿಸಿಕೊಳ್ಳಲು ಇದೊಂದು ದೊಡ್ಡ ಕಾರಣವೆಂದೂ ನನ್ನ ಮತ. ಬಹು ಪ್ರಯತ್ನದಿಂದ ಸೈನ್ಯವನ್ನು ಹಿಂದೀಕರಣ ಮಾಡಬೇಕೆಂದು ಯೋಜನೆಯಾಗಿದೆ. ಡೇರ್ಹ್ರಾಡೂನ್‌ದಲ್ಲಿ ೬೦ ವಿದ್ಯಾರ್ಥಿಗಳು ಕಲಿಯಬೇಕು; ಅವರೊಳಗಿನ ೧೦ ಮಂದಿಗಳು ಆರಿಸಲ್ಪಡುವರು. ವರ್ಷಕ್ಕೆ ಹತ್ತೇ ಮಂದಿಗಳು ಸೈನ್ಯದಲ್ಲಿ ಸೇರುವರು. ಈ ಲೆಕ್ಕದಂತೆ ಸೈನ್ಯವೆಲ್ಲ ಹಿಂದೀಯರವಾಗಲು ೮೦೦ ವರ್ಷಗಳು ತಗಲುವವು. ಮಧ್ಯದಲ್ಲಿ ವಿಘ್ನಗಳುಂಟಾಗಬಾರದು. ಬ್ರಿಟಿಶ ರಾಜ್ಯದಿಂದ ಸುರಾಪಾನದ ಉಪಕಾರವೂ ನಮಗಾಗಿದೆ. ಹುಲಿಗೆಗಾಗಿ ಸುರಾಪಾನವು ಸರಕಾರದಿಂದ ನಡಿಸಲ್ಪಡುತ್ತಿದೆ.

ಹಿಂದುಸ್ಥಾನದ ರಾಜ್ಯಘಟನೆ.

ಹಿಂದುಸ್ಥಾನದ ರಾಜ್ಯಘಟನೆಯು ಕೇವಲ ವಂಚನೆಯದು. ಹಿಂದೀಯರು ರಾಜ್ಯಭಾರ ನಡಿಸಲು ಅಪಾತ್ರರೆಂದೂ, ರಾಜ್ಯಭಾರಧುರಂಧರರು ಬ್ರಿಟಿಶರೆಂದೂ ಹೇಳಿಕೊಂಡು, ಈ ವ್ಯಾಪಾರ ನಡೆದಿದೆ. ವರಿಷ್ಠ ಕಾಯಿದೆ ಕೌನ್ಸಿಲು ಹಾಗು ಪ್ರಾಂತಿಕ ಕಾಯಿದೆ ಕೌನ್ಸಿಲುಗಳ ಕೆಲಸವನ್ನು ನೋಡಿ ಬ್ರಿಟಿಶರೊಬ್ಬರು ಇಲ್ಲಿಯ ಅಧಿಕಾರಿಗಳ ವಿಷಯ ಅಭಿಪ್ರಾಯ ಕೊಟ್ಟಿದ್ದಾರೆ. ಯಾವ ದೃಷ್ಟಿಯಿಂದ ವಿಚಾರಿಸಿದರೂ ವರಿಷ್ಠ ಕಾಯಿದೆ ಕೌನ್ಸಿಲಿನೊಳಗಿನ ಹಿಂದೀ ಸಭಾಸದರು ಬ್ರಿಟಿಶರಿಗಿಂತ ಮೇಲ್ಪಂಕ್ತಿಯನ್ನೇ ಪಡೆಯುತ್ತಾರೆ. ಇಂಗ್ಲಿಷರು ಹೆಚ್ಚಾಗಿ ಕಾರಕೂನಿ ತರಗತಿಯವರೇ. ಇದರಿಂದ ಬ್ರಿಟಿಶ ರಾಜ್ಯದ ಬಗ್ಗೆ ಹಿಂದುಸ್ಥಾನದಲ್ಲಿ ತಿರಸ್ಕಾರವುಂಟಾಗಿದೆ. ಹೊಸ ರಾಜ್ಯಘಟನೆಯಿಂದ ತಿರಸ್ಕಾರವು ಇನ್ನೂ ಮಿಗಿಲಾಯಿತು. ಬ್ರಿಟಿಶರು ಪ್ರಾಮಾಣಿಕರೆಂಬ ಭಾವನೆಯೂ ನಷ್ಟವಾಗಿದೆ.

ಬ್ರಿಟಿಶ ಕಾರಕೀರ್ದಿಯ ಪೂರ್ವಸ್ಥಿತಿ.

ಹಿಂದುಸ್ಥಾನವು ಬ್ರಿಟಿಶ ಕಾರಕೀರ್ದಿಯ ಪೂರ್ವದಲ್ಲಿ ಸಂಪತ್ತು ಹಾಗು ವೈಭವಗಳಿಂದ ತುಂಬಿ ತುಳುಕುತ್ತಿತ್ತೆಂದೂ, ಹಿಂದುಗಳು ಪುರಾತನ ಕಾಲದಿಂದ ಸುಧಾರಿಸಿದ ರಾಷ್ಟ್ರದವರೆಂದೂ ಆಂಗ್ಲ ಇತಿಹಾಸಜ್ಞರಾದ ಥೊರ್ನಟನ್‌ರವರೇ ಬರೆದಿದ್ದಾರೆ. ಪರಸ್ಪರ ವಾಕ್ಯವನ್ನು ಪರಿಹರಿಸುವ ಆಲೋಚನೆಯನ್ನು ನಾವು ಮಾಡಬೇಕಾಗಿದೆ. ದೀರ್ಘವಾದ ದಾಸ್ಯದಿಂದ ರಾಷ್ಟ್ರದ ಪೌರುಷೇಯವು ನಷ್ಟವಾಗಿ, ಜನರಲ್ಲಿ ಆತ್ಮವಿಶ್ವಾಸವಿಲ್ಲ. ಪರಾವಲಂಬನ ವೃತ್ತಿಯು ಹಬ್ಬಿಹೋಗಿದೆ. ಅದರಿಂದ ದೇಶದಲ್ಲಿ ಪ್ರಗತಿಯಾಗುವದಿಲ್ಲ.

ರಾಷ್ಟ್ರೀಯ ಸಭೆಯೊಳಗಿನ ಅವಸ್ಥಾಂತರ.

೧೮೮೫ನೇ ಇಸ್ವಿಯಲ್ಲಿ ರಾಷ್ಟ್ರೀಯ ಸಭೆಯು ಅವತಾರವಾಯಿತು. ಆ ಕಾಲಕ್ಕೆ ಕೆಲವು ಸುಶಿಕ್ಷಿತ ಮಧ್ಯಮವರ್ಗದವರಿಗೆ ದೊಡ್ಡ ಅಧಿಕಾರ ಕೊಡಲಿಲ್ಲವಂತೆ. ಅದರಿಂದ ರಾಷ್ಟ್ರೀಯ ಸಭೆಯು ಅವತೀರ್ಣವಾಯಿತು. ಆ ಅನ್ಯಾಯವು ಈಗಲೂ ಇದೆ. ಸರಕಾರಿ ೨೦೦ನೇ ಈಗ ಆಗಿದೆ ವೈದ್ಯಖಾತೆಯಲ್ಲಿ ವರ್ಷಾಶನ ಹಿಡಗುವ ೧೦ ಜಾಗೆ ಖಾಲಿ ಬೀಳುವ ಸ್ಥಳಗಳಲ್ಲಿ ೮ ಸ್ಥಳಗಳನ್ನು ಯುರೋಪಿಯನ್‌ರಿಗೆ ಕೊಡಬೇಕೆಂದು ಸರಕಾರಿ ಠರಾವವಾಗಿದೆ. ಮಹಾರಾಣಿಯವರ ಜಾಹೀರನಾಮೆಯು ಈಗ ಸರ್ವಥಾ ಧಿಕ್ಕರಿಸಲಾಯಿತು. ರಾಷ್ಟ್ರೀಯ ಸಭೆಯು ಕ್ರಿಸ್ಮಸ್ ಹಬ್ಬದ ರಜೆಯಲ್ಲಿ ಭಾಷಣ ಮಾಡುವ ಒಂದು ಸಂಸ್ಥೆಯಾಗಿದ್ದಿತು. ಮವಾಳರ ಠರಾವುಗಳಿಷ್ಟು ಮನ್ನಿಸಲ್ಪಡುತ್ತಿದ್ದವು. ಇದರಿಂದ ಸರಕಾರವು ಹೆದರುತ್ತಿದ್ದಿಲ್ಲ. ಮಹಾತ್ಮರ ಅಸಹಯೋಗವನ್ನು ರಾಷ್ಟ್ರೀಯ ಸಭೆಯು ಕೈಕೊಂಡಂದಿನಿಂದ ಹಿಂದುಸ್ಥಾನ ಸರಕಾರಕ್ಕೂ, ಬ್ರಿಟಿಶ ಸರಕಾರಕ್ಕೂ ಚಿಂತೆ ಹತ್ತಿದೆ. ಜಾಲಿಯನವಾಲಾಬಾಗದಲ್ಲಿ ಬ್ರಿಟಿಶರು ಕಂಗೆಟ್ಟು ಮಾಡಿದ ಅತ್ಯಾಚಾರಗಳನ್ನು ಕೇಳಿದರೆ, ಅಸಹಯೋಗದ ಮಹಿಮೆಯು ಗೊತ್ತಾಗುವದು. ಈ ಯುಗದಲ್ಲಿ ಬ್ರಿಟಿಶರು ಕೈಕೊಂಡ ಬಲಾತ್ಕಾರದ ಕಥೆಗಳನ್ನು ಕೇಳಿ, ಕವಿಶ್ರೇಷ್ಠ ರವೀಂದ್ರನಾಥ ಠಾಕೂರರು ಬ್ರಿಟಿಶರಿಗೆ ನಿಂದಿಸಿದ್ದಾರೆ. ಈ ಕಾರಣದಿಂದ ಬ್ರಿಟಿಶರ ಪ್ರಾಮಾಣಿಕತನವನ್ನೇ ಆಕ್ಷೇಪಿಸುವ ಪಕ್ಷವು ಹಿಂದುಸ್ಥಾನದಲ್ಲಿ ಅವತಾರ ಹೊಂದಿತು. ಅದೇ ಅಸಹಕಾರ ಪಕ್ಷವು. ಈ ಯುಗದಲ್ಲಿಯೇ ದೇಶಾಭಿಮಾನಿಗಳ ಸ್ವಾರ್ಥತ್ಯಾಗದ ಪರಮಾವಧಿಯಾಯಿತು. ಬ್ರಿಟಿಶರು ಈ ಜನರ ಈ ಪ್ರಕಾರ ಪ್ರಜೆಗಳಿಗೆ ನಡಿಸಿ ಚೈತನ್ಯಹರಣ ಮಾಡಿಕೊಂಡಾಗ್ಯೂ, ಹಿಂದುಸ್ಥಾನದ ಆತ್ಮವು ನಷ್ಟವಾಗಿದ್ದಿಲ್ಲ. ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣ ಮಾಡಲು ಸಾವಿರಾರು ದೇಶಬಾಂಧವರು ಸಿದ್ಧರಾದರು. ಬ್ರಿಟಿಶ ರಾಜ್ಯದ ವಿಶ್ರಂಭಕಸ್ಥಾನಗಳು ಕಾರಾಗೃಹಗಳು, ಅವು ಈ ಕಾರಕೀರ್ದಿಯಲ್ಲಿ ತುಂಬಿಹೋದವು. ಸನದಶೀರ ಚಳವಳಿಯು ನಿಷ್ಪ್ರಯೋಜಕವಿದೆ. ಸರಕಾರವು ನಿರ್ಮಿಸಿದ ಸಂಸ್ಥೆಗಳಿಂದ ಜಾತಿಗಳಲ್ಲಿ ವೈಷಮ್ಯವುಂಟಾಗಿದೆ. ಸ್ವರಾಜ್ಯಬಲವನ್ನು ಪ್ರತಿಷ್ಠಾಪಿಸುವದಕ್ಕಾಗಿ ಬ್ರಿಟಿಶರು ಈ ಸಂಸ್ಥೆಗಳನ್ನು ಘಟಿಸಿದ್ದಾರೆ. ಇವುಗಳಿಂದ ನೀತಿಯು ಭ್ರಷ್ಟವಾಗಿದೆ. ಕಾಯಿದೆಮಂಡಳದ ಚಳವಳಿಯನ್ನು ನಡಿಸಿ ಯಾವದೇ ಅನ್ಯಾಯವನ್ನು ದೂರಪಡಿಸಿಕೊಳ್ಳಬರದು. ನಾನು ಆ ಪ್ರಯೋಗವನ್ನು ಮಾಡಿನೋಡಿದ್ದೇನೆ. ಕೌನ್ಸಿಲುಗಳಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಕಾರದಿಂದ ಸುಳ್ಳು ಉತ್ತರಗಳು ಕೊಡೋಣಾಗಿವೆ. ಚೌಕಶಿ ಮಾಡಲು ಕಮಿಟಿಯನ್ನು ನೇಮಿಸಬೇಕೆಂಬ ಠರಾವವು ಕೌನ್ಸಿಲಿನಲ್ಲಿ ಮಂಜೂರಾಯಿತು. ಆದರೆ ಆಚಾರದಲ್ಲಿ ಪರಿಣಮಿಸಲಿಲ್ಲ. ಇಂಥ ಸ್ಥಿತಿಯಲ್ಲಿ ನನ್ನ ನಂಬಿಗೆಯು ನಷ್ಟವಾಗಿದೆ. ಮುಂಬಯಿ ಕೌನ್ಸಿಲಿನೊಳಗೆ ಸರಕಾರವು ಮತಗಳನ್ನು ಸಂಗ್ರಹಿಸುವ ನಮೂನೆಯನ್ನು ಕೇಳಿದರೆ, ಬೇಸರವಾಗುತದೆ. ಅಧಿಕಾರದಾನದ ಆಶೆ ತೋರಿಸಿ, ಸಭಾಸದರ ಕಡೆಯಿಂದ ಮತಗಳು ಸರಕಾರದ ಬದಿಗೆ ಕೊಳ್ಳೋಣಾಗುತ್ತವೆ. ಇಂಥ ಪ್ರಸಕ್ತಿಯಲ್ಲಿ ರಾಷ್ಟ್ರವು ಹೇಗೆ ವರ್ತಿಸಬೇಕೆಂದು ತಿಳಿಯದೆ ಚಿತ್ತಚಂಚಲವಾಗುತ್ತದೆ.

ಸ್ಯಾಮನ್ ಕೂಟದ ಬೋಧ.

ಬ್ರಿಟಿಶ ರಾಜ್ಯದ ಪರಿಚಯವು ನಮಗೆ ಒಳಿತಾಯಿತು. ಅದರಿಂದ ಆ ಕುರಿತು ನಮ್ಮಲ್ಲಿ ಈಗ ಪ್ರೀತಿಯಿಲ್ಲ. ಯಾವದಕ್ಕೂ ಸೀಮೆಯಿಲ್ಲ. ಮಾನವನ ಸೈರಣೆಗಾದರೂ ಸೀಮೆಯಿದೆ. ಸ್ಯಾಮನ್ ಕೂಟದ ಘಟನೆಯಿಂದ ಬ್ರಿಟಿಶರ ಸ್ನೇಹಿತರು ಕೂಡ ಬೇಸರಾಗಿರುವರು. ಬ್ರಿಟಿಶರೆಂದರೆ ತಕ್ಕ ಶ್ರೇಷ್ಠರೆಂದು ಅವರ ಮನವರಿಕೆಯಾಗಿದೆ. ಈ ಭ್ರಾಂತಿ ನಿರಸನದಿಂದ ಹಿಂದುಸ್ಥಾನದಲ್ಲಿ ಐಕ್ಯವಶ್ಯವಾಗಿದೆ. ಕರ್ನಾಟಕದಲ್ಲಿ ಸಂಪೂರ್ಣ ಬಹಿಷ್ಕಾರವಾಗುವದೆಂದು ನಾನು ಗೃಹೀತ ಹಿಡಿಯುತ್ತೇನೆ. ಬ್ರಿಟಿಶರು ಕೇವಲ ಸ್ವಾರ್ಥಕ್ಕಾಗಿಯೇ ಈ ದೇಶದ ರಾಜ್ಯಭಾರ ನಡಿಸಲುದ್ಯುಕ್ತರಾಗಿದ್ದಾರೆಂದು ಈಗ ಚಿಕ್ಕ ಶಿಶುಗಳೂ ಕೂಡ ತಿಳಿದು ಹೋಗಿಯದೆ. ಬ್ರಿಟಿಶರ ಸ್ವಾರ್ಥಕ್ಕೆ ಇಲ್ಲಿ ಇಂಬಿರುವ ತನಕ ಅವರು ನಮ್ಮನ್ನು ಎಷ್ಟಕ್ಕೂ ತಾವಾಗಿ ತೊಲಗರು. ಇಂಥ ಪ್ರಸಕ್ತಿಯಲ್ಲಿ ಹಿಂದುಸ್ಥಾನದ ಯೋಗ್ಯಾಯೋಗ್ಯತೆಯನ್ನು ನಿರ್ಣಯಿಸುವ ಹಕ್ಕು ಬ್ರಿಟಿಶರಿಗೆಂದೂ ಪ್ರಾಪ್ತವಾಗದು. ಹಿಂದುಸ್ಥಾನಕ್ಕೆ ಈ ಕೂಟದಿಂದ ಎಂದಾದರೂ ನ್ಯಾಯ ಸಿಗಬಲ್ಲದೇ? ಬ್ರಿಟಿಶರು ನ್ಯಾಯಸ್ಥಾನವನ್ನಾಕ್ರಮಿಸಲು ಅನರ್ಹರಿದ್ದಾರೆ. ಡೆವ್ಹಲಪ್‌ಮೆಂಟ ಖಾತೆಯ ಪ್ರಕರಣದಲ್ಲಿ ಅಧಿಕಾರಿಗಳು ಕೈಕೊಂಡ ವಂಚನೆ-ಠಕ್ಕಿನ ಮುಂತಾದವುಗಳನ್ನು ವಿಚಾರಿಸಿದರೆ, ಇವರು ಹ್ಯಾಗೆ ಮೋರೆ ತೋರಿಸಿ ತಿರುಗಾಡುತ್ತಾರೆಂಬುದೇ ಒಂದು ಪ್ರಶ್ನೆ. ಬಹುಕಾಲದಿಂದ ಇಂಥ ವ್ಯಾಪಾರ ನಡಿಸುತ್ತಿರುವದರಿಂದ ಅವರಿಗೆ ನಾಚಿಕೆಯೇ ಹುಟ್ಟುವದಿಲ್ಲ. ರಾಜ್ಯಭಾರ ನಡಿಸಲು ನಾವು ಪಾತ್ರರಿದ್ದೇವೆಂದು ಅವರು ಸಿದ್ಧಪಡಿಸಬೇಕು. ಇಂಥವರ ಸಹವಾಸವನ್ನು ನಾವು ಎಷ್ಟಕ್ಕೂ ಮಾಡಲಾಗದು. ರಾಜಕೀಯ, ಸಾಮಾಜಿಕ ಬಹಿಷ್ಕಾರವನ್ನೇ ನಾವು ಅಂಗೀಕರಿಸಬೇಕು. ಸ್ವಾತಂತ್ರ್ಯವನ್ನು ಅಪಹರಿಸಬಂದ ಪುಣ್ಯಾತ್ಮರಿವರು. ಇವರು ನಮ್ಮ ಕಡು ವೈರಿಗಳಿದ್ದಾರೆ.

ಭಾವೀ ರಾಜ್ಯಘಟನೆ.

ಬಹಿಷ್ಕಾರವನ್ನು ಪುರಸ್ಕರಿಸಿ ಅಷ್ಟಕ್ಕೇ ತಣಿಯಲಾಗದು. ಹೊಸ ರಾಜ್ಯಘಟನೆಯನ್ನು ನಾವು ತಯಾರಿಸತಕ್ಕದ್ದು. ೧೯೨೭ನೇ ಇಸ್ವಿಯ ಸಪ್ಟಂಬರ ೬ನೇ ತಾರೀಖಿಗೂ ೨೮ನೇ ಇಸ್ವಿಯ ಜನವರಿ ೨೩ನೇ ತಾರೀಖಿಗೂ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರಚಂಡ ಬಹುಮತದಿಂದ ನಾವು ಠರಾವುಗಳನ್ನು ಕೈಕೊಂಡು ನಮಗೇನು ಬೇಕೆಂದು ಹೇಳಿದ್ದೇವೆ. ಲೋಕಶಾಹಿಯ ಅವಲೋಕವಿದ್ದಿದ್ದರೆ, ಈ ಸರಕಾರವು ಆಗಲೇ ಅಧಿಕಾರತ್ಯಾಗ ಮಾಡಿ ಬಹುಮತದವರಿಗೆ ರಾಜ್ಯಭಾರವನ್ನು ಒಪ್ಪಿಸುತ್ತಿತ್ತು. ಈ ಠರಾವಗಳಿಂದ ಹಿಂದೀ ಸ್ವಾಯತ್ತತೆಯ ಬಗ್ಗೆ ಎಲ್ಲ ಪಕ್ಷಗಳೂ ಒಕ್ಕಟ್ಟಿನಿಂದಿರುವವೆಂದು ಸ್ಪಷ್ಟವಾಗುತ್ತದೆ. ಈ ಠರಾವಗಳನ್ನು ಸಭ್ಯ ರೀತಿಯಿಂದ ಸರಕಾರವು ಕೈಕೊಳ್ಳುವದಿಲ್ಲ. ಅದರಿಂದ ನಾವು ಉಪಾಯವನ್ನು ಕೈಕೊಳ್ಳಬೇಕು. ಬ್ರಿಟಿಶ ಅರಿವೆಯನ್ನು ಬಹಿಷ್ಕರಿಸಿದರೆ, ಬ್ರಿಟಿಶರಿಗೆ ಕತ್ತರೆಯುವ ಹಾಗಿದೆ.

ಅಸ್ಪೃಶ್ಯತೆಯನ್ನು ಹೋಗಲಾಡಿಸಿದ ಹೊರತು, ಸ್ವರಾಜ್ಯಪ್ರಾಪ್ತಿಯ ಪ್ರಯತ್ನಕ್ಕೆ ಕಳೆ ಏರದು. ಅಸ್ಪೃಶ್ಯರನ್ನು ಪೀಡಿಸುವವರಿಗೆ ಬ್ರಿಟಿಶರ ಪೀಡನೆಯ ಕುರಿತು ದೂರಲು ಬಾಯಿಯಿಲ್ಲ. ಅದರಿಂದ ಅದನ್ನು ನಾವು ಕೂಡಲೆ ಪರಿಹರಿಸಬೇಕು. ಹಿಂದು-ಮುಸಲ್ಮಾನರ ಐಕ್ಯತೆಯ ಕುರಿತು ನಾವು ಪ್ರಯತ್ನಪಡಬೇಕು.

ಬಾರ್ಡೋಲಿಯ ಹೋರಾಟ.

ಬಾರ್ಡೋಲಿಯಲ್ಲಿ ನಡೆದ ಕಾದಾಟವು ನಮ್ಮ ಸ್ವಾತಂತ್ರ್ಯ ಸಮರದೊಳಗಿನ ಒಂದು ಹೋರಾಟವೆಂದು ನಾನು ಎಣಿಸುತ್ತೇನೆ. ಇದಕ್ಕೆ ಮುಂಬಯಿ ಇಲಾಖೆಯಲ್ಲಿ ಸಾಕಷ್ಟು ಬೆಂಬಲ ದೊರೆತದ್ದು ತೋರುವದಿಲ್ಲ. ೧೯೨೧ನೇ ಇಸ್ವಿಯಲ್ಲಿ ಮಹಾತ್ಮರು ಕರನಿರಾಕರಣೆಯ ಪ್ರಯತ್ನವನ್ನು ಉಪಕ್ರಮಿಸಿದರು.

(ಮುಂದೆ ೧೧ನೇ ಪಾನಿನ ಮೇಲೆ ಮುಂದರಿಸಿದೆ)

ಮಹಾತ್ಮರ ಆತ್ಮಚರಿತ್ರೆ.

(೫) ೩ ನೇ ವರ್ಗದ ಪ್ರಯಾಣಿಕರ ಕಷ್ಟ.

ಬುರದ್ವಾನದಲ್ಲಿ ೩ ನೇ ವರ್ಗದ ಪ್ರಯಾಣಿಕರು ಟಿಕೀಟನ್ನು ಪಡೆಯುವಾಗ ಸಹ ಅನುಭವಿಸಬೇಕಾದ ಕಷ್ಟಗಳು ನನ್ನ ತಿಳುವಳಿಕೆಗೆ ಬಂದವು. “ ಇಷ್ಟು ಬೇಗ ೩ ನೇ ವರ್ಗದ ಟಿಕೀಟುಗಳು ಕೊಡಲ್ಪಡುವದಿಲ್ಲ ” ಎಂದು ನಮಗೆ ಹೇಳಲಾಯಿತು. ನಾನು ಸ್ಟೇಶನ್ ಮಾಸ್ತರರ ಕಡೆ ಹೋದೆನು. ಇದೂ ಒಂದು ಕಠಿಣ ಕೆಲಸವೇ. ಯಾರೋ ಒಬ್ಬರು ನನ್ನ ಮೇಲೆ ಉಪಕಾರ ಮಾಡಿ ಅವರಿದ್ದಲ್ಲಿಗೆ ಒಯ್ದರು. ನಮ್ಮ ಕಷ್ಟವನ್ನು ನಾನವರಿಗೆ ಹೇಳಿದೆನು. ಅವರೂ ಅದೇ ಉತ್ತರವನ್ನು ನನಗೆ ಹೇಳಿದರು. ಟಿಕೀಟು ಕೊಡುವ ಕಿಡಿಕಿಯು ತೆರೆದ ಕೂಡಲೆ ನಾನು ಟಿಕೀಟುಗಳನ್ನು ಕೊಳ್ಳಹೋದೆನು. ಆದರೆ, ಆ ಕೆಲವು ಸುಲಭವಾದದ್ದಲ್ಲ. ಪ್ರಬಲರಾಗಿದ್ದ ಪ್ರಯಾಣಿಕರು ಹಿಂದುಗಡೆ ನನ್ನ ಮೈಮೇಲೆ ಬಿದ್ದು ನನ್ನ ಕೊರಳು ದೂಡುತ್ತಿದ್ದರು. ಅವರಿಗೆ ಬೇರೆ ದಾರಿ ಇದ್ದಿಲ್ಲ. ಒತ್ತೊತ್ತಿ ಬರುತ್ತಿದ್ದರು. ಆದರಿಂದ ಮೊದಲನೇ ಕಿಂಡಿಯಲ್ಲಿ ನನಗೆ ಕೊನೆಗೆ ಟಿಕೀಟು ಸಿಕ್ಕಿತು.

ಉಗಿಬಂಡಿ ಬಂತು. ಬಂಡಿಯಲ್ಲಿ ಸೇರುವದು ಇನ್ನೊಂದು ಕಷ್ಟ. ಉಗಿಬಂಡಿಯಲ್ಲಿ ಕೂತುಕೊಂಡ ಪ್ರಯಾಣಿಕರಿಗೂ, ಕೂತುಕೊಳ್ಳಯತ್ನಿಸುವ ಪ್ರಯಾಣಿಕರಿಗೂ ಬೈದಾಟ-ಹೊಡೆದಾಟಗಳು ನಡೆದವು. ಆ ಸ್ಟೇಶನಿನ [illegible] ಕೆಳಗೆ ನಾವು ಓಡಾಡಹತ್ತಿದೆವು. “ ಇಲ್ಲಿ ಸ್ಥಳವಿಲ್ಲ,” ಎಂಬದೊಂದೇ ಉತ್ತರವು ಎಲ್ಲ ಕಡೆಯಲ್ಲಿಯೂ ನನಗೆ ಸಿಕ್ಕಿತು. ನಾನು ಗಾರ್ಡರ ಬಳಿಗೆ ಹೋದೆನು. ಅವರು ಅಂದದ್ದೇನಂದರೆ:— “ ನಿಮಗೆ ಸಾಧ್ಯವಿದ್ದರೆ ಈ ಬಂಡಿಯಲ್ಲಿ ಎಲ್ಲಿಯಾದರೂ ಸೇರಿಕೊಳ್ಳಿ. ಇಲ್ಲದಿದ್ದರೆ, ಬೇರೆ ಬಂಡಿಯಿಂದ ಬನ್ನಿ. ”

“ ಆದರೆ, ನನಗೆ ಅಗತ್ಯದ ಕೆಲಸವಿದೆ;” ಎಂದು ನಾನು ಆದರಾತಿಶಯದಿಂದ ಹೇಳಿದೆನು. ನನ್ನ ಕಡೆ ಕಿವಿಗೊಡಲು ಅವರಿಗೆ ಸಮಯವಿದ್ದಿಲ್ಲ. ನಾನು ದಿಗಿಲುಪಟ್ಟೆ. ಸಾಧ್ಯವಿದ್ದ ಕಡೆ ಸೇರಿಕೊಳ್ಳಲು ನನ್ನ ಸಂಗಡಿಗರಿಗೆ ನಾನು ಹೇಳಿದೆನು. ಹೆಂಡತಿಯನ್ನು ಕರಕೊಂಡು ಮಧ್ಯಮ ತರಗತಿಯ ಡಬ್ಬಿಯಲ್ಲಿ ನಾನು ಕೂತುಕೊಂಡೆ. ಈ ಡಬ್ಬಿಯಲ್ಲಿ ಸೇರುವಾಗ ಗಾರ್ಡನು ನಮ್ಮನ್ನು ನೋಡಿದರು. ಅಸಾನಸೋಲ ಸ್ಟೇಶನಿನಲ್ಲಿ ಹೆಚ್ಚಿನ ಹಾಸಲನ್ನು ವಸೂಲ ಮಾಡಲು ಅವರು ಬಂದರು. ನಾನು ಹೇಳಿದ್ದೇನಂದರೆ: “ನಮಗೆ ಸ್ಥಳ ಮಾಡಿಕೊಡುವದು ನಿಮ್ಮ ಕರ್ತವ್ಯವಿತ್ತು. ನಮಗೆ ಸ್ಥಳ ಸಿಗಲಿಲ್ಲ ಆದರಿಂದ ನಾವು ಇಲ್ಲಿ ಕೂತುಕೊಂಡಿದ್ದೇವೆ; ೩ ನೇ ವರ್ಗದ ಡಬ್ಬಿಯಲ್ಲಿ ನಮಗೆ ಸ್ಥಳ ಮಾಡಿಕೊಟ್ಟರೆ, ಅಲ್ಲಿ ಹೋಗಿ ಕೂತುಕೊಳ್ಳಲು ನನಗೆ ಬಹಳ ಸಂತೋಷವಿದೆ.”

“ ನೀವು ನನ್ನೊಡನೆ ತರ್ಕಮಾಡಕೂಡದು. ನಿಮಗೆ ಸ್ಥಳ ಮಾಡಿಕೊಡಲಾರೆ. ನೀವು ಹೆಚ್ಚಿನ ಹಾಸಲನ್ನು ಕೊಡಬೇಕು. ಇಲ್ಲವೆ ಹೊರಹೋಗಬೇಕು.” ಎಂದು ಗಾರ್ಡನು ನುಡಿದನು.

ಹ್ಯಾಗಾದರೂ ನಾನು ಪುಣೆಗೆ ಹೋಗಬೇಕಾಗಿತ್ತು. ಆದರಿಂದ ಗಾರ್ಡರ ಬಳಿಗೆ ಬಡಿದಾಡಲು ನಾನು ಸಿದ್ಧನಿದ್ದಿಲ್ಲ. ಈ ಮೂಲಕ [illegible] ತನಕ ಹೆಚ್ಚಿನ ತರಗತಿಯ ಹಾಸಲನ್ನು ನಾನು ಕೊಟ್ಟೆನು. ಹಾಗೆಯೇ ಅನ್ಯಾಯವನ್ನು ನಿಷೇಧಿಸಿದೆನು.

ಮುಂಜಾವಿಗೆ ಮೊಗಲಸರಾಯಿಗೆ ಮುಟ್ಟಿದೆವು. ಮಗನಲಾಲರು ೩ ನೇ ತರಗತಿಯಲ್ಲಿ ಪ್ರಯತ್ನದಿಂದ ಸ್ಥಳ ಸಂಪಾದಿಸಿಕೊಂಡಿದ್ದರು. ನಾನು ಅಲ್ಲಿ ಹೋಗಿ ಅವರ ಬಳಿ ಕೂತುಕೊಂಡೆ. ಟಿಕೀಟು ತಪಾಸಕರಿಗೆ ಎಲ್ಲ ಸಂಗತಿಯನ್ನೂ ವಿವರಿಸಿದೆನು. ಮೊಗಲಸರಾಯಿಯಲ್ಲಿ ನಾನು ೩ ನೇ ತರಗತಿಯಲ್ಲಿ ಕೂತುಕೊಂಡಿದ್ದೇನಾಗಿ ಸರ್ಟಿಫಿಕೀಟು ಕೊಡಲು ಅವರಿಗೆ ನಾನು ಹೇಳಿದೆನು. ಅದಕ್ಕೆ ಅವರು ಒಪ್ಪಲಿಲ್ಲ. ನಾನು ರೇಲ್ವೆ ಅಧಿಕಾರಿಗಳಿಗೆ ಈ ಅನ್ಯಾಯವನ್ನು ಪರಿಹರಿಸುವದಕ್ಕಾಗಿ ಬರೆಕೊಂಡೆ. ಅದಕ್ಕೆ ಉತ್ತರ ಬಂದದ್ದೇನಂದರೆ. — “ ಸರ್ಟಿಫಿಕೀಟು ಪಡೆಕೊಂಡ ಹೊರತು ಹೆಚ್ಚಿನ ಹಾಸಲುಗಳನ್ನು ಮರಳ ಮಾಡುವ ಪರಿಪಾಠವು ನಮ್ಮಲ್ಲಿಲ್ಲ; ನಿಮ್ಮ ವಿಷಯ ಈ ನಿಯಮವನ್ನು ಅಲಕ್ಷ ಮಾಡುತ್ತೇವೆ. ಬುರದ್ವಾನಿನಿಂದ ಮೊಗಲಸರಾಯಿ ತನಕ ವಸೂಲ ಮಾಡಿದ ಹೆಚ್ಚಿನ ಹಾಸಲನ್ನು ಮರಳ ಕೊಡಲು ಸಾಧ್ಯವಿಲ್ಲ ”

ಈ ಸಂಗತಿಯಾದ ಬಳಿಕ, ೩ನೇ ವರ್ಗದ ಪ್ರಯಾಣದ ಅನೇಕ ಅನುಭವಗಳನ್ನು ನಾನು ಪಡೆದಿದ್ದೇನೆ. ಅವನ್ನೆಲ್ಲ ನಾನು ಬರೆಯಹೋದರೆ, ಒಂದು ಗ್ರಂಥ ತಯಾರಾಗಬಹುದು. ಈ ಅಧ್ಯಾಯಗಳಲ್ಲಿ ಅವುಗಳನ್ನು ಪ್ರಸಂಗಾನುಸಾರವಾಗಿ ಉಲ್ಲೇಖಿಸಬಲ್ಲೆನು. ಶಾರೀರಿಕ ಅಶಕ್ತದ ಮೂಲಕ ೩ನೇ ವರ್ಗದಲ್ಲಿ ಇತ್ತ ಪ್ರಯಾಣ ಮಾಡದಂತಾದದ್ದರಿಂದ ನನಗೆ ಯಾವಾಗಲೂ ವ್ಯಸನವಾಗುತ್ತದೆ.

೩ನೇ ವರ್ಗದ ಪ್ರಯಾಣಿಕರ ಕಷ್ಟಗಳಿಗೆ ಉಗಿಬಂಡಿಯ ಅಧಿಕಾರಿಗಳ ಬಲಾತ್ಕಾರವೇ ನಿಸ್ಸಂಶಯವಾಗಿ ಕಾರಣವಿದೆ. ಪ್ರಯಾಣಿಕರ ಅಸಭ್ಯ ನಡಾವಳಿಗಳೂ, ದುರಭ್ಯಾಸಗಳೂ, ಸ್ವಾರ್ಥವೂ ಅಜ್ಞಾನವೂ ಹಾಗೆಯೇ ಕಾರಣವಾಗಿವೆ. ಈ ಪ್ರಯಾಣಿಕರಿಗೆ ತಮ್ಮ ಹೊಲಸುತನ, ಸ್ವಾರ್ಥ [illegible] ತಿಳಿಯುವದಿಲ್ಲೆಂಬುದೇ ಒಂದು ದುಃಖ. [illegible] ಮಾಡುವದಲ್ಲ [illegible] ಅವರು [illegible] ಅವರ ಕಡೆ [illegible] ತಿಳಿಯದಾಗಿದೆ.

ನಾವು [illegible] ಕಲಕತ್ತೆಯಿಂದ [illegible] ಪ್ರಯಾಣ ಮಾಡಿದ ಕೂಡಲೆ [illegible]. [illegible] ನನ್ನ ಹೆಂಡತಿಯು [illegible] ಭಾರತ ಸೇವಕ ಸಮಾಜದ [illegible] ನನ್ನ ಗುರುತು ಸಿಕ್ಕಿತು; ಅವರು [illegible] ಪುಣೆಗೆ ಹೋಗತಕ್ಕವರಿದ್ದರು. ೨ನೇ ವರ್ಗದ ಸ್ನಾನಗೃಹದಲ್ಲಿ ನನ್ನ ಹೆಂಡತಿಯು [illegible] ವ್ಯವಸ್ಥೆ [illegible] ಆ ವರು [illegible]. ನನ್ನ ತನದಿಂದ ಆದಲು [illegible] ಅತಿಶ್ಯವನ್ನು [illegible] ನಾನು ಅನುಭವಿಸಿದೆನು. ೩ನೇ ವರ್ಗದ ಸ್ನಾನಗೃಹವನ್ನು ಉಪಯೋಗಿಸಲು ನನ್ನ ಹೆಂಡತಿಗೆ ಅಧಿಕಾರವಿದ್ದಿಲ್ಲವೆಂದು ನನಗೆ ಗೊತ್ತು. ಆದರೆ ಈ ಅನೌಚಿತ್ಯವನ್ನು ನಾನು ಕೊನೆಗೆ ಲಕ್ಷ್ಯ ಮಾಡದೆ [illegible] ನನ್ನ ಹೆಂಡತಿಗೆ ಆ ಸ್ನಾನಗೃಹವನ್ನು ಉಪಯೋಗಿಸಲು ಅನುಮತಿಯಿದ್ದಿಲ್ಲ. ಆದರೆ, ಸತ್ಯಾಗ್ರಹಕ್ಕಿಂತ [illegible]

ಯಿತು. ನಶ್ಯವು ಮಾಯಿಯು ನೋಡತಕ್ಕ ಅವರಣದಲ್ಲಿ ಬಿಚ್ಚಿಡಲ್ಪಟ್ಟಿದೆಂದು ಬಾಬನಿಪತ್ತು ಹೇಳುತ್ತದೆ.

Wanted:- Candidates for Telegraph and Station Masters' Classes Full particulars and Railway Fare Certificate on 2 annas stamp. Apply to. Central Telegraph College, Nai Sarak, **Delhi.**

ಮಂಗಳೂರ ತಂಬಾಕಿನ ತಾಜಾ ನಸ್ಯ! ಸುಲಭ ಕ್ರಯ!
೪೦ ವರ್ಷಗಳಿಂದ ಹೊನ್ನಾವರದಲ್ಲಿ ಪ್ರಸಿದ್ಧಿಹೊಂದಿದ
ಉತ್ಕೃಷ್ಟ ಮಂಗಳೂರ ತಂಬಾಕಿನ

ನಶ್ಯದ ಪುಡಿ.

ಉದ್ದುದ್ದ ಜಾಹೀರಾತಿನ ಆಡಂಬರಕ್ಕೆ ಮೋಸಹೋಗಬೇಡಿರಿ ! !
ಒಮ್ಮೆ ಪರೀಕ್ಷಿಸಿ ಅನುಭವ ಕೊಳ್ಳಿರಿ!

ನಂ. ೧ ನೇ ನಶ್ಯದ ಪುಡಿ ೪೪ ತೊಲೆ ಶೇರು ೧ರ	ರೂ. ೧।
ನಂ ೨ ನೇ	೧-೩-೦
ನಂ. ೩ ನೇ	೧-೦-೦

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಕೊಡಲಾಗುವದು.

ಸೂಚನೆ - ನಮ್ಮ ನಶ್ಯವು ಉತ್ಕೃಷ್ಟವೆಂಬುದರ ಕುರಿತು ಅನೇಕ ಮಹಾನುಭಾವರ ಸರ್ಟಿಫಿಕೇಟುಗಳು ದೊರಕಿವೆ

ವಿಳಾಸ; **ಪುಂಡ್ಲೀಕ ನಾಗ ಶ್ಯಾ,**
ಪ್ರೋಪ್ರೈಟರ್— ಹೊನ್ನಾವರ. (ಉತ್ತರ ಕನ್ನಡ.)

S U. Narayanacharya & CO.
Chaukamba, BENARES CITY,



ನಮ್ಮಲ್ಲಿ ಎಲ್ಲತರದ ರೇಶ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಧರವಾಡ, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಪದಾರ್ಥಗಳು ಸಿಗುತ್ತವೆ ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.
ವಿಳಾಸ ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

ಮೋಟಾರ ಉಪಯೋಗದ ಬಗ್ಗೆ
ಮೆಟ್ಟಿಂಗಗಳು (COIR MATTINGS-TOOLS BOX)
ಯೋಗ್ಯ ಬೆಲೆಗೆ ದೊರೆಯುತ್ತವೆ !

ನಮ್ಮಲ್ಲಿ ಮೋಟಾರಿನಲ್ಲಿ ಹಾಕುವ [illegible], ಉತ್ತಮ ರೀತಿಯಿಂದ ತಯಾರಿಸಿದ [illegible] ಬಗೆಗಳು ಸಿಗುತ್ತವೆ.
ದರ ಪ್ರತಿಯೊಂದಕ್ಕೆ ೧-೩-೬



ಮೋಟಾರಿನ ಹತ್ಯಾರುಗಳು ಇಡುವ ಬಿಗಿ ಪೆಟ್ಟಿಗೆಯಿಂದ ತಯಾರಿಸಿದ ಬೇಗ ಸವೆಯದಾದ ಪೆಟ್ಟಿಗೆಗಳು ಹಾಗು ಮೋಟಾರ ಬಾಡಿ ಬಗ್ಗೆ ಸ್ಪೆಶಲಿಂಗ ಯೋಗ್ಯ ದರದಿಂದ ತಯಾರಿಕೆಗೆ ಸಿಗುತ್ತವೆ. ಪೆಟ್ಟಿಗೆ ೧೮ ಬೆಲೆ ರೂ. ೩. ಸೈಜು ೩'×೧'×೧'

ಬೇಕಾದವರು ಆರ್ಡರಿನ ಸಮೇತ ರೂ ೩—೦—೦ ಮುಂಗಡವಾಗಿ ಕಳಿಸಬೇಕು.
ವಿಳಾಸ:— ಎಸ್. ಎಮ್. ಪಂಡಿತ,
ಮೋಟಾರ ಟಿಕೀಟ ಆಫೀಸ, ದುರ್ಗಾಕೇರಿ. ಹೊನ್ನಾವರ. (ಉ ಕ.)

(೯ನೇ ಪಾನಿನಿಂದ ಮುಂದುವರಿದದ್ದು.)

ಬರೇ ಶ್ರೀನಗರ್ನನಗರನ್ನು ಕೈಕೊಂಡರೆ ಪ್ರಯೋಜನ ಶಿಗದು. ಅವನ್ನು ಮುನ್ನಿಕ್ಕಿಕೊಳ್ಳುವ ಶ್ರೈಕ್ಷಸ್ಯವು ನಮ್ಮಲ್ಲಿ ಪ್ರಾಪ್ತವಾಗಬೇಕು. ಸ್ವಾಯತ್ತಭಂಗ ಹಾಗು ಅಸಹಕಾರಣೆಯ ಅಳವಳಿಗಳು ಸರಕಾರಕ್ಕೆ ಬಗ್ಗಿಸುವ ಉಪಾಯಗಳು. ಬಾರ್ದೋಲಿಯವರು ಸ್ವರಾಜ್ಯ ಸೈನಿಕರು. ಅವರಿಗೆ ಕೂಗಳಿಸಿದಷ್ಟು ಕಡಿಮೆ. ಶ್ರೀ ವಲ್ಲಭಭಾಯಿ ಪಟೇಲರು ಇವನ್ನು ಘಟಿಸಿ ಲೋಕಸೇವಕರ ವಾಡಿದ್ದಾರೆ. ಬ್ರಿಟಿಶ ಕಾರಕೀರ್ದಿಯಲ್ಲಿ ಇಂಥ ಚಳವಳಿಯನ್ನಿದ್ದು ಇದೇ ಮೊದಲು. ನ್ಯಾಯಶಾಸನಗಳಲ್ಲಿ ವಿಚಾರದ ಘಾಸ್ಸಿಗಳು ನಡೆದು ಧಳುಕುಳ್ಳ ಶಿಕ್ಷೆಗಳು ಕೊಡಲ್ಪಡುತ್ತಿವೆ. ಅವಿಲ್ಲ ಧರತಾಯಿಂದವು ಇಕ್ಕಾ ಸಂಪೂರ್ಣ ಲಕ್ಷ ಕೊಟ್ಟು ಪರೀಕ್ಷಿಸುತ್ತಿರಬೇಕು. ಹಿಂದು-ಮುಸಲ್ಮಾನ ತ್ರಾಸೀ ... ಸಪುಸ್ತರ ... ಆಕಾರದಲ್ಲಿ ಪವನಾವನ್ನಂದರಾಗಿ ಘಟಿಸುತ್ತಿದ್ದಾರೆ. ಇವನ್ನು ನೋಡಿ ನಮಗೆ ಸಂತೋಷವಾಗುತ್ತದೆ. ಕನ್ನಡಿಗರು ... ಹೇಗಿದ್ದಾಗ್ಯೂ ಪ್ರಾಣಕ್ಕೊಡ್ಡಿ ರಕ್ಷಣೆಯ ಕಾರ್ಯವನ್ನು ಕೈಕೊಳ್ಳಬೇಕು. ಎಲ್ಲ ಕ್ಷತ್ರಿಯ ಧರ್ಮದಲ್ಲಿ ರಾಷ್ಟ್ರೋದ್ಧಾರದ ಕಾರ್ಯವು ಸಾಗಬೇಕು. ಮನುಷ್ಯರ ಧ್ಯಾನವು ಸಹಾಯ ಕುಡಿವಳೆ, ಸಾವಿರಕಿ ... ಪ್ರಾಂತದಲ್ಲಿಯೇ ಪ್ರಕಾಶವಾಗುವವು.

ಹೀಗೆ ಹೇಳಿ ಶ್ರೀ ನರಿತಾನವರು ತಮ್ಮ ಭಾಷಣವನ್ನು ಮುಗಿಸಿದರು.

ಕರ್ನಾಟಕ ಆಯುರ್ವೇದ ಸಮ್ಮೇಲನ.

ಕರ್ನಾಟಕ ಆಯುರ್ವೇದ ಸಮ್ಮೇಲನವು ವೈದ್ಯ ಪಂಚಾನನ ಗಂಗಾಧರ ಶಾಸ್ತ್ರಿ ಗುಣೆಯವರ ಅಧ್ಯಕ್ಷತೆಯಲ್ಲಿ ಮುರಗಳಲ್ಲಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನೆರೆಯಿತು. ಅಧ್ಯಕ್ಷರ ಭಾಷಣವು ಆಯುರ್ವೇದದ ಇತಿಹಾಸ, ವೈಶಿಷ್ಟ್ಯ ... ಯನ್ನು ಸಪ್ರಮಾಣ ಪ್ರತಿಪಾದಿಸುತ್ತಿದೆ. ಆಯುರ್ವೇದ ಶಿಕ್ಷಣವನ್ನು ಹಿರದೇಶದಲ್ಲಿ ಪ್ರಾರಂಭಿಸಿದರೆ ಭಾರತೀಯರ ಚಿಕಿತ್ಸೆಯು ಸ್ವಭಾವಕ್ಕನುಸರಿಸಿದ್ದಾಗಿ ದೇಶದ ಕಲ್ಯಾಣವಾಗುವದೆಂಬ ... ಭಾಷಣವು ಶಾಸ್ತ್ರೀಯ ವಿಷಯದಿಂದಲೂ, ಶಾಸ್ತ್ರೀಯ ಪರಿಭಾಷೆಯಿಂದಲೂ ತುಂಬಿ ... ರಿಂದ ಪ್ರೇಕ್ಷಕರಿಗೆ ಅದನ್ನು ಗ್ರಹಿಸಲು ಬಲು ಕಷ್ಟವಾಯಿತು. ... ಡು. ಮುಂಬಯಿ ಸರಕಾರದವು ಮದ್ರಾಸ ಸರಕಾರದಂತೆ ಆಯುರ್ವೇದ ಶಾಲೆಯೊಂದನ್ನು ಸ್ಥಾಪಿಸಬೇಕು. ವ. ಎಸಿಸಿಪಾಲಿಟಿ, ಲೋಕಲ್ ಬೋರ್ಡುಗಳು ಆಯುರ್ವೇದ ಚಿಕಿತ್ಸಾಲಯಗಳನ್ನು ತೆರೆಯಬೇಕು; ಕರ್ನಾಟಕ ಆಯುರ್ವೇದ ಪೀಠದ ಪರೀಕ್ಷೆಗೆ ಸಿಂಕಪರಿಗೆ ... ಆಯುರ್ವೇದ ... ವೈದ್ಯರಂಬ ಬಿರುದು ಕೊಡಬೇಕೆಂದು ಗೊತ್ತಾಯಿತು. ಸಮ್ಮೇಲನದ ... ಕೂಡಿ ವಿಷಯದ ಮೇಲೆ ಸಮರ್ಪಕ ಉಪನ್ಯಾಸ ಬರೆಯುವವರಿಗೆ "ವೈದ್ಯವಿದ್ವಾನ" ಬಿರುದು ಕೊಡಬೇಕೆಂದು ಗೊತ್ತಾಗಿದೆ. "ಆಯುರ್ವೇದ" ಪತ್ರಿಕೆಯನ್ನೊಂದು ಹೊರಡಿಸಬೇಕೆಂದು ಗೊತ್ತಾಗಿದೆ.

— ಸ್ವಾಮಿ ... ಸಭಾಸದರೊಬ್ಬರಾದ ಮಿ. ... ಕೋಸಂಬಿಯವರು ಟಾಟಾ ಕಂಪನಿಯವರ ಮೇಲೆ ... ಕಾಯಿದೆಯನ್ನು ... ಪ್ರತಿಬಂಧ ... ಶಿಕ್ಷೆ ... ಹೊರಿಸಿದ ... ಕಾರವರ ಮೇಲೆ ಮಾನನಷ್ಟದ ... ಹೂಡಿದ್ದಾರೆ.

- ವಿಶಾಖಪಟ್ಟಣದ ... ಹಲಿಯ ... ಯಗನ್ನು ... ಪರಲೋಕವನ್ನೈದಿದರು. ... ಕಲೆಕ್ಟರಿಗೆ ... ಕಾರ್ಯಗಳಾಗಿವೆ. ... ಬಿಕ್ಷೆ ... ಜಕ್ಕೀ

ಟಿ. ಎಸ್. ಮೋಟರ ಸರ್ವೀಸ್, ಶಿವಮೊಗ್ಗಾ.

ಗೇರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ - ಯಲ್ಲಾಪುರ - ಅಂಕೋಲಾ ಕಾರವಾರ (೨) ಹುಬ್ಬಳ್ಳಿ ಮುಂಡಗೋಡ ಸಿರ್ಸಿ ಕುಮಟಾ ಹೊನ್ನಾವರ ಭಟ್ಕಳ. (೩) ಕುಮಟಾ ಸಿರ್ಸಿ - ಸಿದ್ದಾಪುರ ಗೇರಸಪ್ಪಾ ಜೋಗ (Gersappa Falls) ಸಾಗರ - ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತದೆ. ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲಿ ಒಳ್ಳೆ ಏರ್ಪಾಡು ಮಾಡಿದೆ. ಹೆಚ್ಚಿನ ಸಮಾಚಾರವನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ,

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರಿಷ್ಟ ಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

... ಪ್ರಿಯವಾಗಿದ್ದು ಬಹಳ ಸೇವನೀಯವೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ... ವರ್ಷದ ಮುದುಕರ ಕಾವ್ಯವಿಕಾರ ... ಧಾತುವರ್ಧನವಾಗುವದು. ನಿಶ್ಚಯವಾಗಿ ಬಲವೇ ಸಮಯದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯ ... ಶಿಥಿಲ ... ಸಾವಕಾಶ ವೀರ್ಯಸ್ಖಲನವು ತಡೆಯುವದು, ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು. ದರವೂ ಹಾಗೂ ಕಾವಿನಿಂದ ಬಾಧಿತವಾದ ಶರೀರವು ನಿರ್ದೋಷವಾಗುವದು. ಮೂರಿ ದಿವಸದಲ್ಲಿ ಗುಣ ಬರುವದು. ಅರುಣ ಸ್ತ್ರೀ ಪುರುಷರು ಈ ದ್ರಾಕ್ಷಾರಿಷ್ಟ ಮಧುವಿನ ಸೇವನ ಮಾಡಿ ... ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಕೆಮ್ಮುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದ ನಂತರ ... ಹಸಿವೆ ಚೆನ್ನಾಗಿ ಆಗುತದೆ, ... ಭವವು ಮೊದಲನೇ ದಿವಸವೇ ಬರುವದು. ... ಅಗುವಾ ... ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ನಡೆಯುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟ್ಲಿಯ ಕಿಮ್ಮತ ೧॥ ರೂಪಾಯಿ. ಪೂರ್ತಿ ಪ್ರಾಪ್ತಿಯ ಕಿಮ್ಮತ ೩-೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲು ಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತು ೧೩-೦-೦ ಮತ್ತು ೧ ಬಾಟಲಿ ಪ್ರತ್ಯೇಕ ಸಿಗುವದು. ಟಪಾಲು ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧-४-೦ ೩ ಬಾಟ್ಲಿಗೆ ३-೮-೦ ಡಜನಿಗೆ ೧೩-೦-೦

ಮ್ಯಾನೇಜರ — ದ್ರಾಕ್ಷಾರಿಷ್ಟ ಮಧು ಆಫೀಸ. ಶ್ರೀ. ವಿಪ್ಲಾಣ ಜಿ. ಬೆಳಗಾಂವ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ಪಂ. ವಿಶ್ವನಾಥಶಾಸ್ತ್ರೀ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ.] ವಜ್ರಾಂಗ ಸುಂದರಪಾಕ. [ಸ್ವದೇ.]

ವೀರ್ಯವು ಶಿಥಿಲವಾಗುವದರಿಂದ ಹುಟ್ಟಿದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ ... ರೋಗ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕ್ಷಯ, ಮೂತ್ರ ... ರೋಗ, ಪಿತ್ತವಿಕಾರ, ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ, ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತು ... ಆಗಲಿಕ್ಕೆ ಸಹಾಯಕರ ಆಗುತ್ತದೆ. ... ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಇದು) ವನಸ್ಪತಿಗಳು ಮತ್ತು ಭಸ್ಮ ... "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ ಪ್ರಕಾಶ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೩ ತೊಲೆ ೧ ವರಿ, ರಾತ್ರಿಯ ಭೋಜನವಾದ ನಂತರ ೩ ತೊಲೆಯು ಒಂದು ಮಾತ್ರೆಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಷ್ಟು ... ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ನಡೆಯುವಷ್ಟು ... ಒಂದು ಡಬ್ಬಿಗೆ ೫॥ ರೂ, ೩ ಡಬ್ಬಿಗೆ ೧೫॥ ರೂ. ೬ ಡಬ್ಬಿಗೆ ... ೧೦. ರೂ. ವ್ಹಿ. ಪಿ. ಖರ್ಚು ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಶ್ಚಯವಾಗಿ ಪೂರ್ಣ ಗುಣಬರುವದು.

ಪತೆ:— ಮಾಲಕ ವದ. ವಿ. ಎಸ್. ಶಾಸ್ತ್ರೀ. ಮು. ಮಿರಜ

झंडूचें
द्राक्षासव- – मृद्विकारिष्ट – शारंगधर म अ.१०

रामबाण औषध

सर्दि घालविणारें
भूक वाढविणारें
शौच्यास साफ करणारें
झोंप आणणार
शक्ति देणारें
तेजस्वीपणा आणणारे

पिण्यास रुचिकर

किंमत एक रतलास १॥ रुपये
कॅटालाग मागवा

झंडु फार्मास्युटिकल वर्क्स लिमिटेड
मुंबई नं. १४

ऐजंट— मेसर्स पंडित आणी कंपनी,
तीर्थहळ्ळी

सिर्सि एजंट- एस. एल. धाकप्पा आणि ज़दर

ಹಿಂದುಸ್ಥಾನದಲ್ಲಿಯ ಅತ್ಯಂತ ಅಗ್ರಗಣ್ಯವಾದ
'ನೆಶನಲ್ ಇನ್ಶೂರನ್ಸ ಕಂಪನಿ, (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ
ಕಳೆದ ವರುಷ ಲೆಕ್ಕಾಚಾರದ ಮೇಲೆ 5,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಹೋಲ ಲೈಫ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 1. ರೂಪಾಯಿಯಂತೆಯೂ ಬೋನಸವನ್ನು ಕೊಟ್ಟಿರುವವು

ಹೊರಗಿನ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡಬೇಕೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ,

ಎಲ್ಲಾ ಕಡೆ ಮುಸ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು.- **P D Churi,**
ಬಿ. ಸಿ. ಸಿರಾಳಕೊಪ್ಪ, *Branch Secretary,*
ಲೋಕ ಬಿಲ್ಡಿಂಗ, Alice Building,
ಹುಬ್ಬಳ್ಳಿ. *Hornby Road,*
BOMBAY

ಕಾಶಿಯ ಅಪೂರ್ವ ವಸ್ತುಗಳು

ನಾವು ಕಾಶಿಯ ಪಟ್ಟೆ ಪತ್ತಿ, ಶೀರೆ, ಪಂಚೆ, ರೇಶ್ಮೆ ಶಲ್ಲೆ, ಬಟ್ಟೆ, ಕಾಶ್ಮೀರದ ಶಾಲು, ಸಕಲಜಾತಿ ಧಾಬಳೆ, ರುದ್ರಾಕ್ಷ ಸರ ಕರಿ, ಗೌರೀಶಂಕರ ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಲ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ —
ವಿಶ್ವನಾಥ ಎಂಡ್ ಬ್ರದರ್ಸ,
ದುರ್ಗಾ ಘಾಟ, ಬನಾರಸ್ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವವು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ನಕಲಿ ಪುಕ್ಕಟ ಕಳಿಸಲಾಗುವದು

ಬುಡಿ ಒಂದಕ್ಕೆ ಕ್ರಯ ರೂ ೦ ೪ ೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ,

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ

ಇದು "ಕರಾಮತ" ಗಾಣ—
ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ.



ಈ ಗಾಣದಿಂದ ಶೇಕಡಾ ೭೨ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು ಬಾಳಿಕೆಯದು ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇರಿಂಗು ಗಸ್‌ಮುಟಲ್‌ವವು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ರೋಲರುಗಳು ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು.

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦-೧೨ ಕರಾಮತಗಾಣಗಳು ದುಡಿಯುತ್ತಿವೆ. ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ. ಜಿಲ್ಹಾ ಸಾತಾರಾ.

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ!

ಈ ಮದ್ದು ಅತ್ಯಂತ ಅವಶ್ಯವಾದದ್ದು,
ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು; ಬಿನ್ನ ಬಟ್ಟೆ ಬಾಯಿಗಳಿಗೆ, ನೆಗಡಿ ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೆ ಗುಣಬರುತ್ತದೆ ಬೇಕಾದಲ್ಲಿ ಸಿಗುತ್ತದೆ

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೊ,
ಮುಂಬಯಿ ಮತ್ತು ಮದ್ರಾಸ.

Regd. No. B. 1170 MONDAY, JUNE 4TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೪

ಪತ್ರದ ವರ್ಗಣಿ.
ಮುಂಗಡವಾಗಿಯಲ್ಲಿ ಅಗಾವು:
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

परपरिहितकर्ता नैष्ठर्तां याति लोके जनपदहितकर्ता त्यज्यते पार्थिवेंद्रै।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (ಬಾಸ ಪ್ರಯಿಂಟ)
೮ ಸಾಲುಗಳವರೆಗೆ ರೂ. 1-0.
೮ ಮೇಲ್ಪಟ್ಟ ಪ್ರತಿಸಾಲಿಗೆ 0-2-0.
ಇಂಗ್ಲಿಷ ಸಾಲು ಎಷ್ಟು ಉದ್ದವಿರುವದೋ ಆ ಮಾಪ ಪ್ರಕಾರ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬೇರೆ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷಮ ಗೊತ್ತುಪಡಿಸಲ್ಪಡುವವು.

(ಕುಮಟಾ— ಕಾನಡಾವೃತ್ತ. ಸೋಮವಾರ, ತಾರೀಖು ೪ ಮಾಹೆ ಜೂನ ಸನ್ ೧೯೨೩ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ವಸ್ತ್ರಗಳು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ—ಕಚ್ಚೆಪಂಜೆಗಳು, ಮೋಟಾರ ಉಪಯೋಗದ ಜೋಡುಗಳು, ಪಿನ್ ಪೋಶರ, ಡಿಸ್ಟ್ರಿಲ್ಡ ವಾಟರ ಸಿಗುತ್ತವೆ, ಬಣ್ಣ ಸಿಗುತ್ತವೆ; ಇನ್ನೂ ಇತರ ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಸಾಮಾನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಸಣ್ಣ ವ್ಯಾಪಾರಸ್ಥರು ದೊಡ್ಡ ವಸ್ತ್ರಗಳನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣ ರಾವ ಕೇಶವ ಗಾಯತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನ್ನಡ)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತವೆ.

ನಮ್ಮ ವಿಳಾಸ:—

ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

S U. Narayanacharya & CO.
Chaukamba, BENARES CITY,

ನಮ್ಮಲ್ಲಿ ಎಲ್ಲಾತರದ ರೇಶ್ಮೆ ಪೀತಾಂಬರ, ಜರಿ ಶಾಲ, ಜರಿ ಸೀರೆ, ಕಾಶ್ಮೀರ ಶಾಲು, ಧರ್ಮಾಂಬರ, ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ವಸ್ತುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಪುಕ್ಕಟೆಯಾಗಿ ಕಳಿಸಲಾಗುವದು.

ವಿಳಾಸ - ಶಿರೋಮಣಿ ನಾರಾಯಣಾಚಾರ್ಯ,
ಮುಕ್ಕಾಂ ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, बेलीच्या, जरीच्या वगैरे हरएक तऱ्हेच्या साद्या अगर फॅशनबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनची रंगी-बेरंगी चादरे, फॅशनेबल बाथ टोवेल, चौक, लहान-मोठे पंचे, सीटपाट, चोलपाट, शर्टिंग- कोटींग- वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या!

टीप:—आमच्या कोणत्याहि मालावर घाउक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.
पोस्ट— बंकेरि (कारवार.

Wanted:- Candidates for Telegraph and Station Masters Classes Full particulars and Railway Fare Certificate on 2 annas stamp Apply to.— Central Telegraph College, Nai Sarak, **Delhi**

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಶಸ್ತ್ರ,
ದೊರಗಾದ ಹಾಗು ಚನ್ನಾದ
ಉಕ್ಕಿನ ಹಾಗು ಹಿತ್ತಾಳಿಯ ಹಣಿಗೆಗಳೂ,
ಹತ್ತಿಯ ಹಾಗು ಬಿಬಗರುಗಳೂ,
ತಂತಿಯ ಬೊಬಿನುಗಳೂ ನಾಳೀಕಗಳೂ,
ಎಮೆರಿಕಾ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ
ಬಹಳ ಅಗ್ಗ !

P. P. TRIVEDI & CO.,
BRUCE Street, Fort, BOMBAY

ಉಚಿತ] ನನ್ನ ಶಾಸ್ತ್ರೀಯ ವಾದ [ಗ್ರಂಥ

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಒಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಆರಬಿಯುತ್ತಿದ್ದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ೨ ಆಣೆಯ ಸ್ಟಾಂಪ ಕಳುಹಿಸಿದವರ ಹಾತ್ರಕ್ಕೆ ಈ ಪುಸ್ತಕವನ್ನು ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಚನೆಯಲ್ಲಿ ನಿಲ್ಲಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,
ಕಾಳಬಾದೇವಿ ರೋಡ,
ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿ ರೋಕ ಖರೀದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ತೊಳ್ಳುವದಿಲ್ಲ; ಖರೀದಿ ಚೊಕ್ಕಟದಿಂದಾಗುವದು. ಪೇಟೆಯಲ್ಲಿರುವ ಧಾರಣೆಯೇ ಆಕರಿಸಲ್ಪಡುವದು. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಹೇಡಿಪ್ ಬಂದ ಕೂಡಲೆ ತತ್ಪರತೆಯಿಂದಲೂ, ಪ್ರಾಮಾಣಿಕತನದಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ ಹೆಚ್ಚಿನ ಮಾಹಿತಿ ಬಗ್ಗೆ ಕೆಟಲಾಗು ತರಿಸಿಕೊಳ್ಳಿ. ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)

ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅನುಕೂಲವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ತಯಾರಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕಲ್ಲುಗಳುಳ್ಳ ಗಿಲ್ಟ ಮೂವ್ಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ! ರಜಿಸ್ಟರ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವ ಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ ಪೇನಾ ೧ ಹೇರಾಯಿಲ್ ಬಾಟ್ಲಿ ೧, ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, ಸುವಾಸನೆ ಸೋಪು ೧, ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ್ ಗೋಲ್ಡ್ ನೆಕ್ಲೆಸ್ ಎಂಬ ಕತ್ತಿನ ಹಾರ ೧, ದಂತದ ಬಾಚಣಿಗೆ ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ ೧, ಈ ೧೫ ಬಹುಮಾನಗಳು ಮತ್ತು ಖಾತ್ರಿಯಾದ ೩ ವರುಷ ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಬರೇ ರೂ.೪-೮ ೦

ವಿಳಾಸ:— **ಇಂಗ್ಲೀಷ್ ಎಂಪೋರಿಯಂ,**
ಪೋಸ್ಟ ಬಾಕ್ಸ್ ನಂ. ೧೦೫, ಮದರಾಸು.

ಟೇಬಲ್ ಟೈಂಪೀಸ ಇನಾಂ



ಈ ಪತ್ರೆಯಲ್ಲಿ ಕಂಡ ಫೌಂಟನ್ ಪೇನವು ವಿಲಾಯತಿಯಲ್ಲಿ ತಯಾರಾದದ್ದು. ಇದಕ್ಕೆ ೧೪ ಕ್ಯಾರೆಟ್ಟಿನಂಥ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವದರಿಂದ ಅಕ್ಷರಗಳು ಬಹು ಚನ್ನಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿ ಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಟೈಂಪೀಸ ಸಹಿತ ಪೇನಾ ೧ ಕ್ಕೆ ರೂ.೩-೪-೦.
ವಿಳಾಸ — ಪೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೨೭ ಮದರಾಸು.

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪಡಿಶೆ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುವದು, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ ಓದಿಕೊಳ್ಳಿರಿ.

ಪ್ರಂಜಾನೆ ೨ ತೊಲಿಯು ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೪೨ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ, ೧೨ ಡಬಿಗೆ ೫೦ ರೂ ವ್ಹಿ. ಪಿ ಖರ್ಚ ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ— **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.**

ಗರುಡಮೋಕ್ಷ

ಮುಂಬಯಿಯೊಳಗಿನ ಒಂದು ಪತ್ರಿಕೆಯಲ್ಲಿ ಜೆಸ್ಸೂರದಲ್ಲಿ ಸಂಭವಿಸಿದ ಸಂಗತಿಯೊಂದು ಪ್ರಕಟವಾಗಿದೆ. ಒಕ್ಕಲಿಗನೊಬ್ಬನು ಗಾಡಿ ಹೊಡೆದುಕೊಂಡು ಜೆಸ್ಸೂರಿನ ಪೇಟೆಯೊಳಗಿಂದ ಗ್ರಾಮಕ್ಕೆ ಹೋಗುತ್ತಿದ್ದನು. ಮಾರ್ಗದ ಪಕ್ಕದಲ್ಲಿ ಒಂದು ಹುತ್ತವಿದೆ; ಮೇಲೆ ಮರವಿದೆ. ಮರದಂಚಿಗೆ ಘಟಸರ್ಪವು ತಂಗಾಳಿಯನ್ನು ಸೇವಿಸುತ್ತ ಬಿದ್ದುಕೊಂಡಿತ್ತು. ಸರ್ಪದ ಮೇಲೆ ಗರುಡಪಕ್ಷಿಯ ಕಣ್ಣು ಬಿತ್ತು. ಅದನ್ನು ನುಂಗುವ ಆಶೆಯಿಂದ ಹತ್ತರ ಮೇಲೆ ಹಾರಿ ಬಂದು ಬಳಿಯಲ್ಲಿಯೇ ಕುಳಿತುಕೊಂಡಿತು. ಘಟಸರ್ಪದ ಹಾವಭಾವಗಳನ್ನು ನೋಡಿದ ಕೂಡಲೆ ಗರುಡನಿಗೂ ಕೂಡ ಎದೆ ಹಾರಿಹೋಯಿತೇನೋ! ಅನುಮಾನಿಸುತ್ತಲೇ ಕುಳಿತುಕೊಂಡಿತು. ಸರ್ಪವು ವೈರಿಯ ಚಂಚಲತನವನ್ನು ಕಂಡು ನಿಮಿಷಾರ್ಧದಲ್ಲಿ ಗರುಡನ ಕಾಲಿಗೆ ಗಟ್ಟಿ ಭದ್ರವಾಗಿ ಹಿಡಕೊಂಡಿತು. ಗರುಡಪಕ್ಷಿಯ ದೈನ್ಯವನ್ನು ಬಣ್ಣಿಸುವದಸಾಧ್ಯ! ಘಟಸರ್ಪದ ಸಾಹಸವನ್ನು ಪ್ರಶಂಸಿಸುವಷ್ಟು ಕಡಿಮೆ. ನಿಂತಿಯಾದಾಗ ಜೀವವೇ ಗಂಡಾಂತರದಲ್ಲಿ ಸಿಲುಕಿಕೊಂಡಾಗ ಒಮ್ಮೊಮ್ಮೆ ಇಂಥ ಚಮತ್ಕಾರಗಳು ಸಂಭವಿಸುತ್ತವೆ. ಪ್ರಬಲನಾದರೂ ಸ್ವರಕ್ಷಣಾರ್ಥವಾಗಿ ರೆಕ್ಕೆ ಇಕ್ಕಟ್ಟಿನ ಸಂದರ್ಭದಲ್ಲಿ ಸಂದೇಹಕ್ಕೊಳಗಾಗಿ ಬಿಟ್ಟರೆ ಗರುಡಪಕ್ಷಿಯಂತೆಯೇ ಅನಪೇಕ್ಷಿತವಾಗಿ ಅತನು ಗಂಡಾಂತರದಲ್ಲಿ ಸಿಲುಕಿಬೀಳುತ್ತಾನೆ. ಅದಿರಲಿ. ಹೀಗೆ ಗರುಡ-ಘಟಸರ್ಪಗಳ ಜಗಿದಾಟವೂ, ಎಳೆದಾಟವೂ ನಡೆಯಿತು. ಗಜೇಂದ್ರ-ನಕ್ರರ ದೊಡ್ಡದೊಂದು ಸಂಗ್ರಾಮ ನಡೆದಂತೆ ಭಾಸವಾಯಿತು. ಒಕ್ಕಲಿಗನು ಈ ನೋಟವನ್ನು ನೋಡುತ್ತಿದ್ದನು. ಥಟ್ಟನೆ ಗಜೇಂದ್ರನಿಗೆ ಮೋಕ್ಷವಿತ್ತ ಗರುಡವಾಹನನ ಪ್ರೇರಣೆಯಾಯಿತೋ ಏನೋ, ಅತನು ಒಂದು ದೊಣ್ಣೆಯನ್ನು ಕೊಂಡು ಘಟಸರ್ಪಕ್ಕೆ ಬಲವಾಗಿ ಒಂದು ಏಟು ಕೊಟ್ಟುಬಿಟ್ಟನು. ಗರುಡಪಕ್ಷಿಯು ಸರ್ಪದ ಬಾಯಿಯಿಂದ ತಪ್ಪಿ ಹಾರಿಹೋಯಿತು. ಸರ್ಪವು ಹುತ್ತದೊಳಗೆ ಸೇರಿಕೊಂಡು ಬಿಟ್ಟಿತು. ಒಕ್ಕಲಿಗನು ಮನೆಕಡೆ ತೆರಳಿದನು. ೪-೬ ದಿವಸಗಳ ತರುವಾಯ ಒಕ್ಕಲಿಗನು ಬೇರೊಂದು ಕೆಲಸದ ನಿಮಿತ್ತ ಜೆಸ್ಸೂರಿಗೆ ಇದೇ ಹಾದಿಯಿಂದ ಬಂಡಿಯ ಮೇಲೆ ಸಾಗುತಿದ್ದನು. ಆ ಕಾಲಕ್ಕೆ ನಡೆದ ಪ್ರಕಾರವನ್ನು ನೋಡಿ, ಅತನಿಗೆ ಸಂತೋಷವಾಯಿತು. ಭೀತಿಯೂ ಆಯಿತು. ಸರ್ವಾಂತರ್ಯಾಮಿಯ ಚಮತ್ಕಾರವೂ ಗೊತ್ತಾಯಿತು. ಬಂಡಿ ಬರುತ್ತಿರುವಾಗ ಮರಕ್ಕೆ ಆ ಘಟಸರ್ಪವು ಬಾಲ ಮೇಲಾಗಿ ತೂಗುತಿತ್ತು; ಬಂಡಿ ಮುಂದೆ ಬರುವಷ್ಟರಲ್ಲಿ ಭುಸುಗುಟ್ಟುತ್ತ ಒಕ್ಕಲಿಗನ ಮೇಲೆ ಹಾರಿ ಬರಲುದ್ಯುಕ್ತವಾಯಿತು; ಒಕ್ಕಲಿಗನು ಹೌಹಾರಿದನು, ಏನೊಂದು ಅವನಿಗೇನೂ ತೋಚಲಿಲ್ಲ. ಎತ್ತ ಕಡೆಯಿಂದಲೋ ಏನೋ ಗರುಡಪಕ್ಷಿ ಒಂದು ಹಾರಿ ಬಂದು ಘಟಸರ್ಪದ ಕಣ್ಣು ಕುಕ್ಕಿ ತೆಗೆದು ಸೀಳಿಹೋಯಿತು. ನೋಡಿದರೆ, ಆ ದಿನ ಏಟು ತಿಂದ ಘಟಸರ್ಪವೆ! ಮುಕ್ತಿಹೊಂದಿದ ಗರುಡನು!! ಏಟು ಕೊಟ್ಟ ಹಗೆಯನ್ನು ತೀರಿಸಿಕೊಳ್ಳುವದಕ್ಕಾಗಿ ಸರ್ಪವು ಬಹಳ ಕಾಲದಿಂದ ಗಾಢಿಯ ಮೇಲೆ ಹಾರಿ ಒಕ್ಕಲಿಗನಿಗೆ ಕೊಲ್ಲಲು ಹೊಂಚುಹಾಕಿತ್ತು; ಗರುಡಪಕ್ಷಿಯು ಕೃತಜ್ಞತೆಯಿಂದ ಸರ್ಪಕ್ಕೆ ಹೊಡೆದು ಒಕ್ಕಲಿಗನ ಉಪಕಾರವನ್ನು ತೀರಿಸಲು ಹಾದಿ ಕಾಯುತ್ತಿತ್ತು. ಸರ್ಪದ ಹಗೆ ನೋಡಿ ಭೀತಿಯಾಯಿತು; ಗರುಡನ ಉಪಕಾರ ಸ್ಮರಣೆಯನ್ನು ನೋಡಿ ಆನಂದಾತಿಶಯವಾಯಿತು! ಪರೋಪಕಾರ ಮಾಡಿದರೆ, ಅದಕ್ಕೆ ಪ್ರತಿಫಲವನ್ನು ವಿಧಿಯು ದಯಪಾಲಿಸುವದೆಂಬ ವಿಧಿಘಟನೆಯೂ ಸ್ಪಷ್ಟವಾಯಿತು. ಪರೋಪಕಾರವನ್ನು ಯಾವಾಗಲೂ ಮಾಡುತಿರಬೇಕೆಂದು ಧರ್ಮಶಾಸ್ತ್ರಗಳು ಹೇಳುವದು ಇದಕ್ಕಾಗಿಯೇ.

— ಧರ್ಮಕಾರ್ಯಗಳಿಗಾಗಿ ಸೋಡತಿಯನ್ನು ಏರ್ಪಡಿಸುವದು ತರವಲ್ಲವೆಂದು ಮಹಾತ್ಮರು ಬರೆದಿದ್ದಾರೆ. ಧರ್ಮಬುದ್ಧಿಗಿಂತ ಲೋಭದ ಆಶೆಯೇ ಈ ಸೋಡತಿಗಳಲ್ಲಿ ಹೆಚ್ಚಾಗಿರುವದರಿಂದಲೂ, ಈ ಪ್ರವೃತ್ತಿಯನ್ನು ಸಮಾಜದಲ್ಲಿ ಬೆಳಸಲು ಈ ಸೋಡತಿಗಳು ಕಾರಣವಾಗುತ್ತದಾಗಿಯೂ ಮಹಾತ್ಮರ ಅಂಬೋಣ. ಲಕ್ಷಾವಧಿ ಟಿಕೀಟುಗಳಿಗೆ ನಿರುಪಯೋಗಿ ಇಂಥ ಧರ್ಮಕಾರ್ಯಗಳನ್ನು ಏರ್ಪಡಿಸುವದರಿಂದ ಶ್ರೇಯಸ್ಸು ಪ್ರಾಪ್ತವಾಗುವದಿಲ್ಲವಾಗಿಯೂ ಮಹಾತ್ಮರು ಸಾರಿದ್ದಾರೆ.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಉಪೇಕ್ಷೆ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ಅವುಗಳನ್ನು ಆ ಕರಿತ ತಕೊಳ್ಳಬೇಕು. ಕೂದಲುಗಳನ್ನು ಉಪೇಕ್ಷೆ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನಿಮ್ಮ ಅವಕ್ಕೆ ಚಲೋ 'ಕೂದಲನ್ನು' ಗೊಡಬೇಕು, ಶ್ರೇಷ್ಠವಾದ ತೈಲವನ್ನಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಇದರಿಂದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಅವುಗಳಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಒಕ್ಕದ ಚೈತನ್ಯವು ಕೂದಲುಗಳಿಗೆ ಹುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

——:o:——

೨ ಔಂಸಿಗೆ	ರೂ.	೩—೦—೦
೧ ಔಂಸಿಗೆ	,,	೧—೮—೦
ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ!

“ ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ ”

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಇಲ್ಲವೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082, **BOMBAY.**

ವಿವಿಧ ಸಂಗ್ರಹ.

ಆತ್ಮೀಯಿಯ ಅವತಾರವೇ!

ಧಕ್ಷಿಣಕಾನಡಾದ ಜಿಲ್ಹೆಯೊಳಗಿನ ಕಾದಿನಗರದಲ್ಲಿ ೭ ವರ್ಷ ಪ್ರಾಯದ ಒಬ್ಬ ಹೆಣ್ಣುಮಗಳಿದ್ದಾಳೆ. ಅವಳಿಗೆ ಪೂರ್ವಜನ್ಮದ ಚರಿತ್ರೆ ಸ್ಮರಣೆಯಿದೆ. ಅವಳ ಹೆಸರು ರಾಮಕಾಂತಿ ಎಂದು. ಪಂಡಿತ [illegible] ಎಂಬ ಒಬ್ಬ ಬ್ರಾಹ್ಮಣನ ಮಗಳು. ೩ನೇ ವರ್ಷದಲ್ಲಿಯೇ ಅವಳು ತನ್ನ ಪೂರ್ವಚರಿತ್ರೆಯನ್ನು ಹೇಳತೊಡಗಿದಳು. ಮೊಗಲಬಾದ ಗ್ರಾಮದಲ್ಲಿ ತಾನಿದ್ದೆ. ಮೂವರು ಮಗಂದಿರರು ತನಗೆ ಹುಟ್ಟಿದರು. ನಾಲ್ಕನೇ ಕೂಸು ಹುಟ್ಟಿದ ಬಳಿಕ ತಾನು ತೀರಿಕೊಂಡೆ. ಹಿರೇ ಮಗನ ಹೆಸರು ಶಿವರಾಮ. ಎರಡನೇ ಮಗನ ಹೆಸರು ಧಂಸ್ವರೂಪ. ಆ ಮಗಂದಿರರನ್ನು ಕಾಣಲು ಅವಳು ಬಹಳವಾಗಿ ಒಯ್ಯಸಿದಳು. ತಾಯಿ ತಂದೆಗಳು ಸವಕಾಶವ ಹೇಳಿ, ಅವಳಿಗೆ ಮರೆಸಾಕಲ ಪ್ರಯತ್ನ ಮಾಡಿದರು, ಆದರೆ ಹುಡುಗಿಯು ಕೇಳಲೊಲ್ಲದ ಮರವಾಸ ಬಿದ್ದು ಸಾಯಲುವ್ಯಕ್ತಳಾದಳು. ನಿರುಪಾಯವಾಗಿ ಅವರು ಅವಳಿಗೆ ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಮೊಗಲಬಾದಿಗೆ ಹೋದ್ದರು. ಗ್ರಾಮಕ್ಕೆ ಹೋದ ಮೇಲೆ ಹುಡುಗಿಯು ತಾನಿದ್ದ ಮನೆಯನ್ನು ತೋರಿಸಿದಳು. ಆ ಮನೆಯೊಳಗೆ ಹೋಗಿ ಇಬ್ಬರು ತನ್ನ ಮಗಂದಿರರೆಂದು ಗುರುತು ಹೇಳಿದಳು. ಅಲ್ಲಿ [illegible] ವಸ್ತುಸ್ಥಿತಿಯ ಕುರಿತು ಪರೀಕ್ಷೆ [illegible] ಹಾಕಿದರು. ಎಲ್ಲ ಪ್ರಶ್ನೆಗಳಿಗೂ ಬಾಲಕಿಯು ಸರಿಯಾದ ಉತ್ತರವನ್ನು ಕೊಟ್ಟಳು. ಮನೆಗೆ ಮಾಡಿದ ದುರಸ್ತಿಯ ಸಂಗತಿಯನ್ನು ಸಹ ಅವಳು ತಪ್ಪದೆ ಹೇಳಿದಳು. ಅಲ್ಲಿಯೇ ಅವರು ಕೆಲಕಾಲ ಉಳಿದು, ಈಗ ತಿರುಗಿ ಕಾದಿನಗರಕ್ಕೆ ಮರಳಿ ಬಂದಿದ್ದಾಳೆ.

***

ಬೇಸಾಯಗಾರರ ಚಿಂತೆ ನೋಡಿ!

ಹಿಂದುಸ್ಥಾನ ಸರಕಾರವು ಬೇಸಾಯಗಾರರಿಗಾಗಿ ಕಳವಳಗೊಳ್ಳುತ್ತದೆಂದು ಹೇಳಲ್ಪಡುತ್ತದೆ. ಸರಕಾರದ ಉತ್ಪನ್ನವು ೯೦ ಕೋಟಿ. ಅದರೊಳಗೆ ಸರಕಾರವು ಸಾಗುವಳಿಯ ಎಕ್ರೆ ೧ಕ್ಕೆ ಸರಾಸರಿ ೯ ಪೈಯಂತೆ ಖರ್ಚ ಮಾಡುತ್ತದೆ. ಅಂದರೆ ತಲೆಗೆ ೮ ಪೈ ಬೀಳುತ್ತದೆ. ಉತ್ಪನ್ನದ ಶೇಕಡಾ ೧ರಷ್ಟು ಸಹ ಈ ವ್ಯಯ ಬೀಳುವದಿಲ್ಲ. ಬೇಸಾಯ ಖಾತೆ, ಡ್ಯಾರೆಕ್ಟರ, ಡೆಪ್ಯುಟಿ ಡ್ಯಾರೆಕ್ಟರ ಮುಂತಾದ ಎಲ್ಲ ಸರಂಜಾಮಿನ ವಿಚಾರ ಮಾಡಿದರೂ ಖರ್ಚ ಆಗುವದಿಷ್ಟೇ ರಳಮು! ಇದರ ಮೇಲಿಂದ ಬೇಸಾಯಗಾರರಿಗಾಗಿ ಸರಕಾರವು ಬಹಳವಾಗಿ ಕಳವಳಗೊಳ್ಳುತ್ತದೆಂದು ಹೇಳಬಹುದಲ್ಲವೆ?

***

ಆಂಗ್ಲ ಹುಡುಗಿಗೆ ಕನ್ನಡಿ ಬೇಕಾಯಿತಲ್ಲವೇ?

ಬಾಲೂರಘಾಟದಲ್ಲಿ ಭಯಂಕರ ಬಂಗಾಲ [illegible] ತ್ತದೆ. ಹೊಟ್ಟೆಯ ಗೋಳು ಪರಿಹರಿಸುವದು ಅರಿತ ಹೊಟ್ಟೆಯ ಗೋಳನ್ನು ಪರಿಹರಿಸುವದಕ್ಕಾಗಿ ಹೊಟ್ಟೆಕರರನ್ನು ಕೂಡ ಮಾರವ ಕಷ್ಟ ಬಂದಿದೆ. ಬಾಲಕ-ಬಾಲಕಿಯರಿಗೆ ಮಾರಾಟ ಮಾಡುವ ಸಂಗತಿಗಳು ವರ್ತಮಾನಪತ್ರಗಳಲ್ಲಿ ಪ್ರಕಟವಾದೊಡನೆ ಸರಕಾರಕ್ಕೆ ಬಹು ನಾಚಿಕೆಯಾಯಿತು. [illegible] ಕ್ಕಿಂಗ ಸಿರಾಜಗಂಜು [illegible] ಪ್ರಕಟಿಸಿಹಂದಿತು 'ಪ್ರೊ' [illegible] ಪತ್ರಿಕೆಯು [illegible] ಬವಳ ವರ್ತಮಾನವನ್ನು ಪ್ರಕಟಿಸಿ [illegible] ರೂಪಾಯಿಗೆ [illegible] ನಾಗರ ಮೋಡಲನಿಗೆ ಮಾರಿದ ಸಂಗತಿ ಒದಗಿ [illegible] ಈ ವಿಷ್ಯಕ್ಕೆ ೧೨ ಜನರ ಸಾಕ್ಷಿಯಿದೆ. [illegible] ಬಂಗಾಲಿ ಪ್ರಜೆಗಳ ಪರಿಷತ್ತೂ [illegible] ೧೦ ಸಾವಿರ ಮಂದಿಗಳು ಸಭೆಗೆ ಸೇರಿದ್ದರು. ಬಾಲೂರಘಾಟ ಎಲ್ಲಾ ಸ್ಥಿತಿಯಾದರೂ ಸರಕಾರವು [illegible] ಪ್ರಕಟಿಸಿಲ್ಲ. ರಾಷ್ಟ್ರೀಯ ಸಭೆ [illegible] ಬಂಗಾಲದಲ್ಲಿ ಒದಗಿದ ಸ್ಥಿತಿಯನ್ನು ವರ್ಣಿಸಿ, ಸರಕಾರದ ನಿರಾಕರಣೆಯನ್ನು ಖಂಡಿಸಿ [illegible] ಹೆಚ್ಚು, ತನ್ನ ಹುಡುಗನನ್ನು [illegible] ರೂಪಾಯಿಗೆ ಮಾರಿದೆನೆಂತಲೂ, ಇನ್ನು [illegible] ಹುಡುಗರು ಮಾರಾಟಕ್ಕೆ ಸಿಗ[illegible]ರೆಂದೂ ಹೇಳಿದನ. ಇವೆಲ್ಲ ಆಂಗ್ಲ ಹುಡುಗಗಳನ್ನು ಸರಕಾರಕ್ಕೆ ತೋರಿಸಲು ಕನ್ನಡಿ ಎಲ್ಲಿಂದ ತರುವದು!

***

ಅಹಿಂದುಗಳಿಗೆ ಹಿಂದು ಮಾಡಬಹುದೋ?

[illegible] ಮಿಸ್ತರ ಳಿಗೆ ಹಿಂದವಾಗಿ ರಣದಾಂತರಿಸಿ ವರ್ತಕ ಮಾಡಿಕೊಂಡು [illegible] ಪಿರಾಯತಿಗೆ ಸಾಗಿಕೊಳ್ಳುವ [illegible] ಸಂಗತಿಯಿಂದ ಹಿಂದು [illegible] ದೊಡ್ಡದೊಂದು ವಾದವೆದ್ದಿದೆ. ನಾಶಿಕ ಕ್ಷೇತ್ರದಲ್ಲಿ ಪಾಲಪಾಟದ [illegible] ಅನಂತಕೃಷ್ಣ ಶಾಸ್ತ್ರಿಯವರಿಗೂ, ಮಿಸ್ತರರಿಗೆ ಹಿಂದು ಮಾಡಿದ ಕರವೀರ ಪೀಠದ ಶ್ರೀ ಶಂಕರಾಚಾರ್ಯರವರಿಗೂ ವಾದವಾಯಿತು. ವಾದವು ಎರಡು ದಿನ ನಡೆಯಿತು. ೨೦೦೦ ಜನರು ವಾದ ಕೇಳಹೋಗಿದ್ದರು. ವಾದದಲ್ಲಿ ಶ್ರೀ ಶಂಕರಾಚಾರ್ಯರು ತಪ್ಪು ಒಪ್ಪಬೇಕಾಯಿತಂತೆ. ಪ್ರಾಯಶ್ಚಿತ್ತ ವಿಧಿಯಿಂದ ಮಿಸ್ತರಳು ಹಿಂದು ಧರ್ಮದಲ್ಲಿ ಸೇರಲಿಲ್ಲವಾಗಿ [illegible] ಉಪಾಧ್ಯಾಯರು ಸಶಾಸ್ತ್ರ ಸಿದ್ಧಮಾಡಿದರು. [illegible] ರಾಮುಥ ಬಿನ ನಾಡಿ ಹಿಂದುಗಳಿಗೂ ಮಿಶ್ರವಾಗಿ [illegible] ಕೊನೆ ತನಕ ಅವರು ಮುಸಲ್ಮಾನರಾಗಿಯೇ ವರ್ತಿಸಿಕೊಂಡವನ್ನೊದಿದರ. ಶ್ರೀ ಶಂಕರಾಚಾರ್ಯರು ಮಹಾಭಾರತದೊಳಗಿನ ಕೆಲವು ಶ್ಲೋಕಾಧಾರಗಳನ್ನು ವಿವರಿಸಿದರು. ಆ ಶ್ಲೋಕಗಳು ಇಂಥ ಪ್ರಸಂಗದಲ್ಲಿ ಉಪಯೋಗಿಸಬಾರದೆಂದು [illegible] ಉಪಾಧ್ಯಾಯರು ಸಂದರ್ಭದಿಂದ ಸಿದ್ಧಪಡಿಸಿದರು. ಇಷ್ಟೇ ಅಲ್ಲ, ಹಿಂದುಗಳು ಧರ್ಮಾಂತರ ಹೊಂದಿ ೪ ವರ್ಷಗಳಾದ ಬಳಿಕ, ಅವರಿಗೆ ಪುನಃ ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳಲಾಗದೆಂದು ದೇವಲ ಸ್ಮೃತಿಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಹಿಂದು ಪತಿತರು ಬೇರೆ ಧರ್ಮದಲ್ಲಿ ಸೇರಬಹುದಾಗಿ "ಉದಯನಾಚಾರ್ಯ ಅತ್ಯಂತ ವಿವೇಕ್ರನ" ಗ್ರಂಥದಲ್ಲಿ ಹೇಳಲ್ಪಟ್ಟಿದೆ. ಸನಾತನ ಧರ್ಮದಲ್ಲಿ ಪರಧರ್ಮೀಯರನ್ನು ಸೇರಿಸಿಕೊಳ್ಳಲು ಎಲ್ಲಿಯೂ ಅನುಜ್ಞೆಯಿಲ್ಲ. ಇವನ್ನೆಲ್ಲ ಶ್ರೀ ಶಂಕರಾಚಾರ್ಯರು ಒಪ್ಪಿಕೊಂಡಿದ್ದಾರೆ. ಈ ವಾದದ ಸವಿಸ್ತರ ಹಕೀಕತು ಸಾಧ್ಯಂತ ಪ್ರಕಟವಾಗಲಿಕ್ಕಿದೆ. ಈ ವಾದದಿಂದ ಹಿಂದು ಮಾಡತಕ್ಕ ಸಿದ್ಧಾಂತ. [illegible] ಸನಾತನ ಧರ್ಮೋದ್ಧಾರದ [illegible] ಎದ್ದಿಸಿದ ಧರ್ಮಪ್ರಸಾರದ ದಾಳಿಗೆ [illegible] ಧರ್ಮೋದ್ಧಾರ ಮಾಡಬೇಕಾದ ಪತಿತರಿಗೆ ಪ್ರಾಯಶ್ಚಿತ್ತ ಹೋಮ ಮಾಡಿ ಪಾವನ ಶಾಸ್ತ್ರ ಮಾಡುವದಕ್ಕಿಂತ ಹಿಂದು ಧರ್ಮವನ್ನು ಹಿಂಬಾಲಿಸುವ ಹಿಂದುಗಳಲ್ಲಿ ಧರ್ಮಬುದ್ಧಿಯನ್ನು ಬೆಳೆಸುವದೇ ಧರ್ಮೋದ್ಧಾರವೆಂದು ಗ್ರಹಿಸಿ, ಅತ್ತ ಕಡೆ ಧರ್ಮೋದ್ಧಾರಕರು ಲಕ್ಷ್ಯ ಸೆಳೆಯುವದುತ್ತಮ.

***

ಬಂಗಾಲಿ ದೇಶಾಭಿಮಾನಿಗಳ ಪೀಡನೆ.

ದಬ್ಬಾಳಿಕೆಯ ಕಾನೂನಿನನ್ವಯ ಸೆರೆಬಿದ್ದ ದೇಶಾಭಿಮಾನಿಗಳು ತರತರದ ಕಷ್ಟಗಳನ್ನನುಭವಿಸುತ್ತಿದ್ದಾರೆ. ಕೆಲವರಿಗೆ ಪಟ್ಟು ಹಂಗಾಮಿ ಇಲಾಜೇಲು [illegible] ರೋಡಾ ಜೈಲಿನಲ್ಲಿಟ್ಟಿದ್ದಾರೆ. ಅವರನ್ನು ಕಾಣಲು ಶ್ರೀ ಸುಭಾಷಚಂದ್ರ ಬೋಸರವರು ಬಂಗಾಲ ಸರಕಾರದ ಅಪ್ಪಣೆ ಪಡಕೊಂಡರು. ಆದರೆ, ಮುಂಬಯಿ ಸರಕಾರವು ಬಂಗಾಲ ಸರಕಾರದ ಬಳಿ ಕೇಳಿದ ಹೊರತು ಅಪ್ಪಣೆ ಕೊಡಬರುವದಿಲ್ಲವಾಗಿ ಹೇಳಿ ನಿರಾಕರಿಸಿತು. ಬಂಗಾಲ ಸರಕಾರಕ್ಕೆ ಮುಂಬಯಿ ಸರಕಾರವು ಕೇಳಲು, ಅಪ್ಪಣೆ ಕೊಡಬಾರದಾಗಿ ಉತ್ತರ ಬಂತಂತೆ. ಇದೆಂಥ ವ್ಯಾಪಾರ? ಮೊದಲು ಸುಭಾಷಚಂದ್ರರಿಗೆ ಅಪ್ಪಣೆ ಕೊಟ್ಟ ಬಂಗಾಲ ಸರಕಾರವೇ ಈಗ ಅಪ್ಪಣೆಯನ್ನು ಅಲ್ಲಗಳೆಯುವ ಬಗೆ ಹ್ಯಾಗೆ? ಸ್ವರಾಜ್ಯ ಪಕ್ಷದ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರ ಪ ಸತ್ಯೇಂದ್ರಚಂದ್ರ ಮಿತ್ರರವರು ಈ ಜೈಲಿನೊಳಗಿನ ಇಬ್ಬ ದೇಶಭಕ್ತರ ಪೀಡನೆಯನ್ನು ಪ್ರಕಟಿಸಿದ್ದಾರೆ. ಶ್ರೀ ಸುರೇಂದ್ರ ಮೋಹನ ಘೋಷರವರು ಯರೋಡಾ ಜೈಲಿನಲ್ಲಿದ್ದಾರೆ. ಅವರಿಗೆ ಎಲುಬು-ಚರ್ಮ ಮಾತ್ರ ಉಳಿದಂತೆ. ೧೫೦ ರತ್ತಲ ಅವರ ತೂಕವಿತ್ತು, ಈಗ ಅದು ೯೫ ರತ್ತಲಿಗೆ ಬಂದು ಕೂತಿದೆ. ಹೀಗೆ ನಡೆದರೆ, ಅವರ ಅಂತ್ಯಕಾಲವು ಬೇಗನೆ ಸಮೀಪಿಸಿಬಂದು ಕಾರಾಗೃಹದಲ್ಲಿಯೇ ಅವರ ಪ್ರಾಣೋತ್ಕ್ರಮಣವಾಗುವದು. ಶ್ರೀ ಸತೀಶಚಂದ್ರ ಪಕ್ರಾಶಿಯವರಿಗೆ ಯರೋಡೆಯಲ್ಲಿಟ್ಟಿದ್ದರು. ಅವರ ತಾಯಿ-ತಂದೆಗಳು ಬಂಗಾಲದಲ್ಲಿ ಪ್ರಾಣಾಂತಿಕ ಕಾಯಿಲೆಯಲ್ಲಿ ಬಿದ್ದರು. ಆದರಿಂದ ಪಕ್ರಾಶಿಯವರಿಗೆ ತಾಯಿ ತಂದೆಗಳಿಗೆ ಕಾಣಲು ಬಂಗಾಲಕ್ಕೆ ಕಳುಹಿದರು. ಜೊತೆಗೆ ೧೦ ಮಂದಿ ಗುರಖಾ ಜನರಿಗೆ ಅಂಗರಕ್ಷಕರಾಗಿ ಕಳಿಸಲಾಗಿತ್ತು. ಅಂಗರಕ್ಷಕರು ಅಂಗಭಕ್ಷಕರಾಗಿ ಪರಿಣಮಿಸಿದರು. ಮೆಹಸ್ಟರರ ಹಿಂದೆ-ಮುಂದೆ ಪೋಲೀಸರಿರುತ್ತಾರೆ; ಕೈದಿಯ ಹಿಂದೆ-ಮುಂದೆಯೂ ಪೋಲೀಸರಿರುತ್ತಾರೆ. ಪಕ್ರಾಶಿಯವರ ಸ್ಥಿತಿಯು ಕೈದಿಯಂತಿತ್ತು. ಅಂಗರಕ್ಷಕರು ಮಾತಾಡಲಿಕ್ಕೆ ಸಹ ಬಿಡು ತೊಂದರೆ ಕೊಟ್ಟರು. ಪಕ್ರಾಶಿಯವರು ನಿಷೇಧಿಸಿದರು. ಕೂಡಲೆ ಪಕ್ರಾಶಿಯವರಿಗೆ ಅಂಗರಕ್ಷಕರಾಗಿ ಬಂದ ಗುರಖರು ಸರೆಹಿಡಿದು, ಅವರಿಗೆ ಢಾಕಾ ಜೈಲಿನಲ್ಲಿ ಹಿಯ್ದುಬಿಟ್ಟರು. ಮುಂದೆ ಏನಾಯಿತೆಂದು ಯಾರಿಗೂ ಗೊತ್ತಿಲ್ಲ. ನಿರಪರಾಧಿ ದೇಶಬಾಂಧವರಿಗೆ ಅರಸರು ಈ ಪ್ರಕಾರ ಕಾಣಿಸುವದು ಕ್ಷೇಮವೇ?

— ಲಾಹೋರದಲ್ಲಿ ವಿರುಪಾಲ್-ಶಿವಪಾಲರೆಂಬ ಇಬ್ಬರು ಇರುತ್ತಿದ್ದರು. ಮೊದಲು ಬಾಯಿಜಗಳವಾಯಿತು ಹಾಗೆಯೇ ಕೈಜಗಳವಾಯಿತು, ಶಿವಪಾಲನ ಕಲ್ಲು ಉರುಳಿದಳು ವಿರುಪಾಲನ ಮೇಲೆ ಫಿರ್ಯಾದಾಯಿತು. ತಿಂಗಳ ಅಪೀಲಾಯಿತು. ಅಪೀಲಿನಲ್ಲಿ ವಿರುಪಾಲನು ನಿರ್ದೋಷಿಯೆಂದು ಬಿಡುಗಡೆಹೊಂದಿದನು. ಶಿವಪಾಲನು ಸ್ವಸಂರಕ್ಷಣೆ ಮಾಡಿಕೊಳ್ಳುವಾಗ ಶಿವಪಾಲನ ಕಲ್ಲು ಉರುಳಿದವೆಂದು ಅಪೀಲ ಜಡ್ಜರ ಅಂಬೋಣ!

ಧಾರವಾಡದಲ್ಲಿ ಪರಿಷತ್ತುಗಳು.

ಧ್ವಜಾರೋಹಣ.

ಕಳೆದ ವಾರ ಧಾರವಾಡದಲ್ಲಿ ನಡೆದ ಪರಿಷತ್ತುಗಳಿಗಾಗಿ ಶ್ರೀಯುತ ಬೆಂಗೇರಿಕರ ಯಾಜ್ಞವಲ್ಕ್ಯರ ಪ್ರೆಸ್ಸು ಅಂದವಾಗಿ ಶೃಂಗರಿಸಲ್ಪಟ್ಟಿದ್ದಿತು. ಅದರ ವಿಶಾಲವಾದ ಕಟ್ಟಡವು ಧ್ವಜಪತಾಕೆಗಳಿಂದಲೂ, ನಾನಾ ಬಣ್ಣಗಳ ಪಟಗಳಿಂದಲೂ ಶೃಂಗರಿಸಲ್ಪಟ್ಟಿದ್ದಿತು. ಹೊರಗಿನ ಅಂಗಳವು ಕೂಡ ಶೋಭಾಯಮಾನವಾಗಿದ್ದು, ಮಧ್ಯಭಾಗದಲ್ಲಿ ರಾಷ್ಟ್ರೀಯ ಧ್ವಜವು ನಿಲ್ಲಿಸಲ್ಪಟ್ಟಿದ್ದಿತು. ಈ ಧ್ವಜಾರೋಹಣ ಸಮಾರಂಭವು ತಾ. ೨೬ನೆಯ ಶನಿವಾರ ದಿವಸ ಪ್ರಾತಃಕಾಲ ೭॥ ಘಂಟೆಗೆ ಶ್ರೀ ಕೇ. ಎಫ್. ನರಿಮನ್ ಇವರ ಹಸ್ತದಿಂದ ಜರುಗಿತು. ಶ್ರೀ ನರಿಮನ್‌ರವರು ಧ್ವಜಾರೋಹಣ ಮಾಡುವಾಗ, ರಾಷ್ಟ್ರೀಯ ಧ್ವಜವು ರಾಷ್ಟ್ರದ ರಾಷ್ಟ್ರೀಯತ್ವದ ಕುರುಹು ಎಂತಲೂ, ಜನರಲ್ಲಿ ಭಿನ್ನಾಭಿಪ್ರಾಯವಾದಾಗ್ಯೂ, ಸಕಲರೂ ಈ ರಾಷ್ಟ್ರೀಯ ಧ್ವಜವನ್ನು ಮನ್ನಿಸಿ ನಡೆಯಬೇಕೆಂತಲೂ ಹೇಳಿದರು.

೧ನೆಯ ಕರ್ನಾಟಕ ಖಾದಿ ಪರಿಷತ್ತು.

ತಾ. ೨೬ನೆಯ ಶನಿವಾರ ಪ್ರಾತಃಕಾಲ ೮ ಘಂಟೆಗೆ ೧ನೆಯ ಕರ್ನಾಟಕ ಖಾದೀ ಪರಿಷತ್ತು ಪ್ರಾರಂಭವಾಯಿತು. ಮೊದಲು ಈಶಸ್ತವನವಾಗಿ, ಶ್ರೀ ಆಲೂರು ವೆಂಕಟರಾಯರ ಸ್ವಾಗತದ ಭಾಷಣವಾದ ಮೇಲೆ ಶ್ರೀ ದೇಶಪಾಂಡೆ ಗಂಗಾಧರರಾಯರು ಜನರ ಪವಿತ್ರ ಜೀವನಕ್ಕೆ ಖಾದಿಯು ಅತ್ಯಾವಶ್ಯಕವಾಗಿದೆ ಎಂತಲೂ, ಖಾದಿಪ್ರಸಾರದಂತಹ ಪವಿತ್ರ ಕಾರ್ಯಕ್ಕೆ ಪವಿತ್ರಾಚರಣೆಯುಳ್ಳ ನಾಯಕರು ಬೇಕಾಗಿದೆ ಎಂತಲೂ, ಅಂತಹ ಗುಣವುಳ್ಳ ಶ್ರೀ ಹರ್ಡೇಕರ ಮಂಜಪ್ಪನವರು ಖಾದಿ ಪರಿಷತ್ತಿಗೆ ಅಧ್ಯಕ್ಷರಾಗಬೇಕೆಂತಲೂ ಹೇಳಿ, ಶ್ರೀ ಹರ್ಡೇಕರ ಮಂಜಪ್ಪನವರ ಹೆಸರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿದರು. ಶ್ರೀ ಮಂಜಪ್ಪನವರು ಸ್ಥಾನಾಪನ್ನರಾದ ಮೇಲೆ ನೂಲುವವರ ಸಂಘದ ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ಕಲ್ಲಿಗಿ ಹಣಮಂತರಾಯರು ಕರ್ನಾಟಕದಲ್ಲಿ ಆದ ಖಾದಿ ಪ್ರಸಾರ ಕಾರ್ಯದ ವರದಿಯನ್ನು ಓದಿ ತೋರಿಸಿದರು.

ಆ ಮೇಲೆ ಅಧ್ಯಕ್ಷರು ತಮ್ಮ ಭಾಷಣವನ್ನು ಮಾಡಿದರು. ಸಭಿಕರು ಯುಕ್ತಿಯುಕ್ತವೂ, ಮನೋರಂಜಕವೂ, ಬೋಧಪರವೂ ಆದ ಭಾಷಣವನ್ನು ಕೇಳಿ ಆಗಾಗ್ಗೆ ಕರತಾಡನೆಯನ್ನೆಸಗುತ್ತಿದ್ದರು. ಅಧ್ಯಕ್ಷರ ಭಾಷಣವಾದ ಮೇಲೆ ಹತ್ತೆಂಟು ಮಹತ್ವವಾದ ಠರಾವುಗಳು ಪಾಸಾದವು. ಮಹಾರಾಷ್ಟ್ರ ಖಾದಿ ಸಂಘದವರು ಖಾದಿ ಪ್ರಸಾರಕ್ಕಾಗಿ ಮಹಾರಾಷ್ಟ್ರ ಮತ್ತು ಮಹಾರಾಷ್ಟ್ರೇತರ ಮಹಾರಾಷ್ಟ್ರ ಎಂಬ ವಿಭಾಗಗಳನ್ನು ಮಾಡಿ, ಎರಡನೆಯ ವಿಭಾಗದಲ್ಲಿ ಕರ್ನಾಟಕವನ್ನು ಜಗ್ಗುವ ಪ್ರಯತ್ನ ಮಾಡಿರುವರು. ಈ ಮರಾಠಿಗರ ಪರಿಕೆಯ ಧೋರಣವನ್ನು ಕುರಿತು ಒಂದು ಠರಾವಿನ ಮೇಲೆ ಶ್ರೀ ದೇಶಪಾಂಡೆ ಗಂಗಾಧರರಾಯರೂ ಶ್ರೀ ಜೋಶಿ ವಿನಾಯಕರಾಯರೂ ಮರಾಠಿಗರ ಕ್ಷುದ್ರ ಮತ್ತು ಸಂಕುಚಿತ ವಿಚಾರದೃಷ್ಟಿಯನ್ನು ಖಂಡಿಸಿ ಮಾತಾಡಿದರು.

೫ನೆಯ ಕರ್ನಾಟಕ ಪ್ರಾಂತಿಕ ಪರಿಷತ್ತು.

ತಾ. ೨೬ನೆಯ ಶನಿವಾರ ಮಧ್ಯಾಹ್ನ ೩ ಘಂಟೆಗೆ ೫ನೆಯ ಕರ್ನಾಟಕ ಪ್ರಾಂತಿಕ ರಾಜಕೀಯ ಪರಿಷತ್ತಿನ ಅಧಿವೇಶನವು ಪ್ರಾರಂಭವಾಯಿತು. ಕರ್ನಾಟಕದ ನಾನಾ ಭಾಗಗಳ ಪ್ರತಿನಿಧಿಗಳೂ, ಪ್ರೇಕ್ಷಕರೂ ವಿಶೇಷವಾಗಿ ಸೇರಿದ್ದರು. ಸ್ತ್ರೀಯರೂ ಕೂಡ ಬಂದಿದ್ದರು. ಮೊದಲು ಈಶಸ್ತವನ, ರಾಷ್ಟ್ರಗೀತೆಗಳಾದ ಮೇಲೆ ಸ್ವಾಗತಾಧ್ಯಕ್ಷರಾದ ಶ್ರೀ ಜೋಗ ವಿಶ್ವನಾಥರಾಯರು ತಮ್ಮ ಭಾಷಣವನ್ನು ಓದಿದರು. ಆ ಮೇಲೆ ಅಧ್ಯಕ್ಷರಾದ ಶ್ರೀ ಕೇ. ಎಫ್. ನರಿಮನ್‌ರು ಸ್ಥಾನಾಪನ್ನರಾಗಿ, ತಮ್ಮ ಸ್ಫೂರ್ತಿದಾಯಕ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿದರು. ಇವರ ಭಾಷಣದಲ್ಲಿ ವೀರವಾಣಿಯೊಂದಲ್ಲದೆ, ವಿಷಯಗಾಂಭೀರ್ಯವೂ ಕೂಡ ಪರಿಪೂರ್ಣವಾಗಿದ್ದಿತು.

ಅರ್ಧ ಘಂಟೆಯ ವಿರಾಮದ ನಂತರ ಪುನಃ ಪರಿಷತ್ತಿನ ಕಾರ್ಯವು ಪ್ರಾರಂಭವಾಯಿತು. ತಾ. ೨೬ನೆಯ ರಾತ್ರಿಯೇ ವಿಷಯ ನಿಯಾಮಕ ಕಮಿಟಿಯು ಸೇರಿ, ಚರ್ಚಿಸಿ ನಿರ್ಧರಿಸಲ್ಪಟ್ಟ ಕೆಲವು ಠರಾವುಗಳು ಪರಿಷತ್ತಿನಲ್ಲಿಡಲ್ಪಟ್ಟು ತೀರ್ಮಾನಿಸಲ್ಪಟ್ಟವು. ಮರುದಿವಸ ತಾ. ೨೭ನೆಯ ರವಿವಾರ ದಿವಸ ಪ್ರಾತಃಕಾಲ ೮ ಘಂಟೆಗೆ ಪರಿಷತ್ತಿನ ಕಾರ್ಯಕ್ಕೆ ಆರಂಭವಾಯಿತು. ಶನಿವಾರ ರಾತ್ರಿಯೇ ಪುನಃ ವಿಷಯನಿಯಾಮಕ ಸಂಘವು ಕೂಡಿ, ಎಲ್ಲ ಠರಾವುಗಳು ಚರ್ಚಿಸಲ್ಪಟ್ಟು ನಿರ್ಧರಿಸಲ್ಪಟ್ಟಿದ್ದವು. ಇವುಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಠರಾವಿನ ಮೇಲೆ ವಿಶೇಷವಾದ ಚರ್ಚೆಯು ಎರಡೂ ದಿವಸ ನಡೆದಿದ್ದಿತು. ಮೊದಲು ಉಳಿದ ಠರಾವುಗಳೆಲ್ಲ ಪರಿಷತ್ತಿನಲ್ಲಿ ತರಲ್ಪಟ್ಟು ಈ ಸ್ವಾತಂತ್ರ್ಯದ ಠರಾವು ಮಾತ್ರ ಕೊನೆಗೆ ತರಲ್ಪಟ್ಟಿತು. ಬಳ್ಳಾರಿಯ ಪ್ರತಿನಿಧಿಗಳಾದ ಶ್ರೀ ಸುಬ್ರಹ್ಮಣ್ಯಂ ಇವರೊಬ್ಬರು ಮಾತ್ರ ಈ ಠರಾವಿಗೆ ವಿರೋಧಿಸಿ ಮಾತಾಡಿದರು. ಕೊನೆಗೆ ಠರಾವು ಬಹುಮತದಿಂದ ಪಾಸಾಯಿತು.

ಎರಡನೆಯ ಮಹತ್ವವಾದ ಗೊತ್ತುವಳಿಯು ಬಾರ್ಡೋಲಿಯ ಸಂಬಂಧವಾದುದಾಗಿದ್ದಿತು. ಈ ಠರಾವನ್ನು ತರುವಾಗ ಶ್ರೀ ದೇಶಪಾಂಡೆ ಗಂಗಾಧರರಾಯರು ಅಸಹಕಾರ ಚಳವಳಿಯ ಪೂರ್ವವೃತ್ತಾಂತವನ್ನೂ, ಬಾರ್ಡೋಲಿಯ ಪೂರ್ವಸಿದ್ಧತೆಯನ್ನೂ ಶ್ರೀ ವಲ್ಲಭಭಾಯಿ ಪಟೇಲ ಮೊದಲಾದ ದೇಶಸೇವಕರ ನಿಃಸ್ವಾರ್ಥ ದೇಶಸೇವೆಯನ್ನೂ ಹೃದಯಂಗಮವಾಗಿ ವರ್ಣಿಸಿ ಹೇಳಿದರು.

ಆ ಮೇಲೆ ಮುಂದಿನ ವರ್ಷ ಪರಿಷತ್ತನ್ನು ಬೆಳಗಾವಿಯಲ್ಲಿ ಜರುಗಿಸಬೇಕೆಂದು ನಿಶ್ಚಯವಾಯಿತು. ಆಗ ಸಭಾಧ್ಯಕ್ಷರ ಆಭಾರ ಪ್ರದರ್ಶನ ಮೊದಲಾದವುಗಳು ನಡೆದು ಇತರ-ಕಾರ್ಯಗಳು ಸಮಾಪ್ತಿಸಲ್ಪಟ್ಟವು. ಕೊನೆಗೆ ಅಧ್ಯಕ್ಷರು ಸಮಾರೋಪದ ಭಾಷಣದಲ್ಲಿ ಕರ್ನಾಟಕಸ್ಥರು ತಮಗೆ ಈ ಸನ್ಮಾನವನ್ನು ಕೊಟ್ಟು ಸತ್ಕರಿಸಿದ್ದಕ್ಕಾಗಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ, ಕನ್ನಡಿಗರೂ ಕಾರ್ಯತತ್ಪರರಾಗಬೇಕೆಂತಲೂ, ದೇಶೋದ್ಧಾರದ ಕಾರ್ಯವನ್ನು ನಿಃಸ್ವಾರ್ಥ ಬುದ್ಧಿಯಿಂದ ಮಾಡಬೇಕೆಂತಲೂ ಉಪದೇಶಿಸಿ, ಕರ್ನಾಟಕವು ಶೀಘ್ರದಲ್ಲಿಯೇ ಒಂದು ಸ್ವತಂತ್ರ ಪ್ರಾಂತವಾಗಿ ರಚಿಸಲ್ಪಟ್ಟು, ಸ್ವತಂತ್ರವಾದ ಭರತಖಂಡದಲ್ಲಿ ಒಂದು ಪ್ರಮುಖವಾದ ಪ್ರಾಂತವಾಗಿ ಮೆರೆಯಲೆಂದು ಹರಸಿ ತಮ್ಮ ಭಾಷಣವನ್ನು ಪ್ರಚಂಡ ಕರತಾಡನದಲ್ಲಿ ಮುಗಿಸಿದರು.

ಕರ್ನಾಟಕ ಏಕೀಕರಣ ಪರಿಷತ್ತು.

ತಾ. ೨೭ನೆಯ ಭಾನುವಾರ ಮಧ್ಯಾಹ್ನ ೨॥ ಘಂಟೆಗೆ ತೃತೀಯ ಕರ್ನಾಟಕ ಏಕೀಕರಣ ಪರಿಷತ್ತು ಕೂಡಿತು. ಮೊದಲು ಈಶಸ್ತವನ, ಕರ್ನಾಟಕ ರಾಷ್ಟ್ರಗೀತೆಗಳಾದ ಮೇಲೆ ಸ್ವಾಗತಾಧ್ಯಕ್ಷರಾದ ಚಿತ್ರಾಪುರದ ಪಂ॥ ಬ॥ ಶ್ರೀನಿವಾಸರಾವ ಕೌಜಲಗಿ ಸಿ. ಆಯ್. ಇ. ಇವರು ತಮ್ಮ ಸ್ವಾಗತಪರ ಭಾಷಣವನ್ನು ಓದಿ ಹೇಳಿದರು. ಪರಿಷತ್ತಿನ ಅಧ್ಯಕ್ಷರಾದ ವಿಜಾಪುರದ ರಾ॥ ಸಾ॥ ಪಿ. ಜಿ. ಹಲಕಟ್ಟಿ ಬಿ.ಎ., ಎಲ್‌ಎಲ್. ಬಿ., ಇವರು ತಮ್ಮ ಭಾಷಣವನ್ನು ಓದಿ ಹೇಳಿದರು. ಆ ಮೇಲೆ ಯುವಜನರ ಸಂದೇಶಗಳು ಓದಲ್ಪಟ್ಟು ೨೦ ಜನರ ವಿಷಯನಿಯಾಮಕ ಸಂಘವು ಏರ್ಪಟ್ಟಿತು.

ರಾತ್ರಿ ೯॥ ಘಂಟೆಗೆ ವಿಷಯನಿಯಾಮಕ ಸಂಘವು ನೆರೆದು, ಠರಾವುಗಳು ಚರ್ಚಿಸಲ್ಪಟ್ಟವು. ಮರುದಿವಸ ಎಂದರೆ ತಾ. ೨೮ನೆಯ ಸೋಮವಾರ ದಿವಸ ಪ್ರಾತಃಕಾಲ ೮॥ ಘಂಟೆಗೆ ಪುನಃ ಪರಿಷತ್ತಿನ ಕಾರ್ಯವು ಪ್ರಾರಂಭವಾಗಿ, ಅನೇಕ ಮಹತ್ವದ ಠರಾವುಗಳು ಪಾಸಾದವು.

ಕರ್ನಾಟಕ ಹಿಂದೀ ಪರಿಷತ್ತು.

೩ನೆಯ ಕರ್ನಾಟಕ ಹಿಂದೀ ಪರಿಷತ್ತು ಸೋಮವಾರ ಮಧ್ಯಾಹ್ನ ೩ ಘಂಟೆಗೆ ಸೇರಿತು. ಸ್ತ್ರೀ-ಪುರುಷ ಪ್ರವೇಶಕರು ಸಭೆಗೆ ಆಗಮಿಸಿ, ತಮಗಿರುವ ಹಿಂದೀ ಪ್ರೇಮವನ್ನು ವ್ಯಕ್ತಮಾಡಿದರು. ಅಧ್ಯಕ್ಷರಾದ ಪಂ॥ ತಾರಾನಾಥರವರು ಅರ್ಥಗರ್ಭಿತವಾದ ಮತ್ತು ಬಹು ಸ್ವಾರಸ್ಯವಾದ ಭಾಷಣವನ್ನು ಅಸ್ಖಲಿತ ವಾಣಿಯಿಂದ ಮಾಡಿದರು. ಹುಬ್ಬಳ್ಳಿ ಮತ್ತು ಧಾರವಾಡಗಳಿಗೆ ಈ ಮುಂಚೆ ಇದ್ದಂತೆ ಹಿಂದಿ ಪ್ರಚಾರಕರನ್ನೊಬ್ಬರನ್ನು ನಿಯಮಿಸಬೇಕು ಎಂಬ ಠರಾವು ಅನೇಕ ಠರಾವುಗಳಲ್ಲಿ ಒಂದಾಗಿದೆ.

೩ನೆಯ ಕರ್ನಾಟಕ ಮಹಿಳಾ ಪರಿಷತ್ತು.

ತಾ. ೨೯ನೆಯ ಮಂಗಳವಾರ ದಿವಸ ಮಧ್ಯಾಹ್ನ ೩ ಘಂಟೆಗೆ ಕರ್ನಾಟಕ ಮಹಿಳಾ ಪರಿಷತ್ತಿನ ಮೂರನೆಯ ಅಧಿವೇಶನವು ಕೂಡಿತು. ಅನೇಕ ಸ್ತ್ರೀ-ಪುರುಷರು ಬಂದಿದ್ದರು. ಈಶಸ್ತವನವಾದ ಮೇಲೆ ಶ್ರೀಮತಿ ಜಾನಕಿಬಾಯಿ ಭಾತಖಂಡೆ ಇವರು ಸ್ವಾಗತಪರ ಭಾಷಣ ಮಾಡಿದ ಮೇಲೆ ಪರಿಷತ್ತಿನ ಅಧ್ಯಕ್ಷರಾದ ಬೆಂಗಳೂರಿನ ಗರ್ಲ್ಸ್ ಮಿಡಲ್ ಸ್ಕೂಲಿನ ಹೆಡ್ ಮಿಸ್ಟ್ರೆಸ್‌ರಾದ ಬಿ. ಇಂದಿರಮ್ಮ ಬಿ. ಎ., ಇವರು ತಮ್ಮ ಭಾಷಣ ಮಾಡಿದರು. ಆ ಮೇಲೆ ಕರ್ನಾಟಕದಲ್ಲಿ ೧೩ ಭಗಿನಿ ಮಂಡಲಗಳಿದ್ದು, ಅವುಗಳಲ್ಲಿ ಹುಬ್ಬಳ್ಳಿ, ಅಥಣಿ, ವಿಜಾಪುರಗಳಲ್ಲಿ ಮಾತ್ರ ಅವು ಜೀವಂತವಾಗಿವೆ. ಪುನಃ ಎಲ್ಲಾ ಕಡೆಗೆ ಮಂಡಲಗಳನ್ನು ಕಾರ್ಯತತ್ಪರ ಮಾಡಲು ಒಂದು ಸಂಘವು ಏರ್ಪಟ್ಟಿತು. ಮಿ॥ ಶಾರದಾ ಇವರ ವಿವಾಹ ಪ್ರತಿಬಂಧಕದ ಬಿಲ್ಲಿನ ಸಮರ್ಥನೆ, ಮಿಸ್ ಮೇಯೋಳ 'ಭಾರತ ಮಾತಾ' ಪುಸ್ತಕದ ನಿಷೇಧ ಮೊದಲಾದ ಠರಾವುಗಳಾದವು.

—ಲೋಕಮಿತ್ರ.

— ಹುಬ್ಬಳ್ಳಿಗೆ ಕ್ರಿಶ್ಚನ ಮಿಷನರಿ ಸಭೆಯವರಿಗೆ ನಿಮಂತ್ರಿಸಿದ್ದಕ್ಕೆ ಹುಬ್ಬಳ್ಳಿಯವರು ೫೦೦ ರೂಪಾಯಿಗಳ ಸ್ವೀಕರಿಸಿದರು

ಕಾನಡಾ ವೃತ್ತ.

ಶ್ರೀ ವಿಭವ ಸಂ॥ ಜ್ಯೇಷ್ಠ ಶು॥ ೧೬, ಸೋಮವಾರ.

ಡರ್ ತೋ ಪಿಛೇ ರಹೇ.

ಬಾರ್ದೋಲಿಯವರ ಸತ್ಯಾಗ್ರಹದಿಂದ ನಮ್ಮ ಪ್ರಾಂತಿಕ ಸರಕಾರದ ಅಂತರಂಗವು ಕಂಪಾಯಮಾನವಾಗಹತ್ತಿದೆ. ಉಪಾಯದಿಂದ ಬಾರ್ದೋಲಿಯೊಡನೆ ಸಂಧಾನ ಮಾಡಲು ಅಧಿಕಾರಿಗಳು ಹೊಂಚು ಹಾಕುತ್ತಿದ್ದಾರೆ. ಉಪಾಯ ಮಾತ್ರ ಇನ್ನೂ ತೋಚಲೊಲ್ಲದು. ದಿವಾಣದ ದಿವಾಣ ಬಹಾದ್ದೂರ ಹರಿಲಾಲ ದೇಸಾಯಿಯವರು ಗುಜರಾಥ ಪ್ರಾಂತದವರು. ಅವರಿಗೆ ದಿವಾಣಪದದ ಮೋಹ ಬಿಡುವದಿಲ್ಲ, ಇತ್ತ ಬಾರ್ದೋಲಿಯವರ ಕಷ್ಟ-ನಷ್ಟಗಳನ್ನು ನೋಡಲಾಗುವದಿಲ್ಲ. ಸರಕಾರದ ಅನುಗ್ರಹಕೆ ಒದೆ ತೆಟ್ಟಂತೆ ಬಾರ್ದೋಲಿಯವರ ಬಿನ್ನಹವನ್ನು ಮನ್ನಿಸುವ ಸಮಸ್ಯೆಯನ್ನು ಅವರು ಬಿಡಿಸತೊಡಗಿದ್ದಾರೆ. ಉಭಯ ಪಕ್ಷದಲ್ಲಿಯೂ ವಿಶೇಷ ಪ್ರಗತಿಯಾದ್ದರಿಂದ ಯಾರೊಬ್ಬರು ಮರ್ಯಾದೆಯಿಂದ ಹಿಂಜರಿಯುವದು ದುಸ್ತರವಾಗಿದೆ. "ಹೇರಿದ ಕರಗಳನ್ನು ಮುಂದಾಗಿ ತೆರತಕ್ಕದ್ದು; ಪುನರಾಲೋಚನೆಯು ಮುಂದೆ ಯಥಾವಕಾಶ ಮಾಡಲ್ಪಡುವದು. ಕರಗಳನ್ನು ತೆತ್ತ ಹೊರತು ತಿದ್ದುಪಾಟದ ಆಲೋಚನೆಯನ್ನು ಯಾರೂ ಹೇಳಲಾಗದು," ಎಂದು ಸರಕಾರದ ಅಂಬೋಣ, "ಈ ಪುರಾಣ ಇನ್ನು ಸಾಕು. ವಿಚಾರ ಪೂರ್ಣವಾಗುವ ತನಕ ಹೊಸ ಕರಕ್ಕೆ ತಡೆಹಾಕಿರಿ, ಅಂದರೆ ನಮ್ಮ ಸಂಗ್ರಾಮವು ತಣಿಯುವದು," ಎಂದು ಬಾರ್ದೋಲಿಯವರ ನಿಶ್ಚಯವಾದ ಪ್ರತ್ಯುತ್ತರ. ಬಾರ್ದೋಲಿಯೊಳಗಿನ ಅನಾಚಾರ-ದುರಾಚಾರಗಳೂ, ಅಕ್ರಮ-ವಿಕ್ರಮಗಳೂ, ಲೋಕದಲ್ಲಿ ಪಸರಿಸಿವೆ. ಅದರಿಂದ ಸರಕಾರವು ಸ್ವಪ್ರತಿಷ್ಠೆಯನ್ನು ಕಾಯ್ದುಕೊಂಡು ಸಮರಾಂಗಣದೊಳಗಿಂದ ಕಾಲ್ತೆಗೆದುಕೊಳ್ಳುವ ಉಪಾಯವನ್ನು ಪರಿಶೋಧಿಸುತ್ತಿದೆ. ಬಾರ್ದೋಲಿಯವರು ಸೋತಂತಾಗಬೇಕು; ಸರಕಾರವು ಗೆದ್ದಂತಾಗಬೇಕು; ಗೆದ್ದ ಬಣ್ಣ ಬಂದರೂ ಸಾಕು; ಎಂಬಂತೆ ಸರಕಾರದ ಪ್ರಯತ್ನ ನಡೆಯುತ್ತಲಿದೆ.

ಸದ್ಯಕ್ಕೊಂದು ಸರಕಾರಿ ಪ್ರಕಟಣೆಯು ಪ್ರಸಿದ್ಧಹೊಂದಿದೆ:— ಅದರೊಳಗ ಈ ಹಿಂದೆ ವೃತ್ತಪತ್ರಗಳಲ್ಲಿ ಪ್ರಕಟಹೊಂದಿದ ವಿಪರೀತ ಅಕೃತ್ಯಗಳು ಅಲ್ಲಗಳೆಯಲ್ಪಟ್ಟಿವೆ. ಪ್ರಜೆಗಳ ಹಟಮಾರಿತನದಿಂದ ದನ-ಕರುಗಳನ್ನು ಜಪ್ತಿ ಮಾಡಬೇಕಾಯಿತೆಂದು ಬರೆಯೋಣಾಗಿದೆ. ಪಠಾಣರು ನಿರ್ಮಲ ಚಿತ್ತದಿಂದಲೂ, ಸ್ವೈರಣೆಯಿಂದಲೂ ನಡಕೊಂಡರಂತೆ! ಮಾಮಲೇದಾರ-ಮಹಾಲಕರಿಗಳಂಥ ಜವಾಬದಾರ ಅಧಿಕಾರಿಗಳ ಪಾರುಪತ್ಯದಲ್ಲಿ ಕೆಲಸ ಮಾಡುವ ೨೫ ಮಂದಿ ಪಠಾಣರು ೯೦೦೦೦ ಪ್ರಜೆಗಳುಳ್ಳ ಪ್ರದೇಶದಲ್ಲಿ ಪೀಡಿಸುವ ಕಲ್ಪನೆಯೇ ಅಗ್ರಾಹ್ಯವೆಂಬದು ಸರಕಾರದ ಅಂಬೋಣ! ಅಸಹಕಾರಿಗಳು ಬಿಟ್ಟಿಯ ಆಳುಗಳಿಗೆ ಬೆದರಿಸದಿದ್ದರೆ ಪಠಾಣರಿಗ ಮನೆಗೆ ಕಳಿಸಲ್ಪಡುವದೆಂದೂ ಸರಕಾರದ ಆಶ್ವಾಸನ. ಜಪ್ತು ಮಾಡಿದ ಆಸ್ತಿಯನ್ನು ಕೊಳ್ಳಲು ಗಿರಾಕಿಗಳು ಬಹಳ. ಇದರ ಮೇಲಿಂದ ಹೇರಿದ ತಿರ್ವೆಯು ಹೆಚ್ಚಲ್ಲವೆಂದು ಸ್ಪಷ್ಟವಾಗುತ್ತದಂತೆ! ಜಪ್ತಿ ಭೂಮಿಯನ್ನು ಬೇರೆಯವರಿಗೆ ಕೊಟ್ಟರೆ, ಪುನಃ ಆ ಭೂಮಿ ಮೂಲ ಒಡೆಯರಿಗೆ ಸಿಗಲಿಕ್ಕಿಲ್ಲವಾಗಿ ಮುಂಜಾಗ್ರತೆ ಕೊಡೋಣಾಗಿದೆ. ೬೫೦೦ ಎಕ್ರೆ ಭೂಮಿಯು ಜಪ್ತಿಯಾಗಿದೆ. ತೀರ್ವೆ ಕೊಟ್ಟವರ ನಾಮನಿರ್ದೇಶ ಮಾಡಿದರೆ, ಅವರಿಗೆ ಅಸಹಕಾರಿಗಳು ಬಹಿಷ್ಕಾರ ಮಾಡಿ ಪೀಡಿಸುವ ಭೀತಿಯಿದೆ. ಅದರಿಂದ ಅವರ ಹೆಸರು ಪ್ರಕಟವಾಗಲಿಲ್ಲ. ಬಾರ್ದೋಲಿಯ ನೆರೆಹೊರೆಯ ಚೋರಾಸಿ ತಾಲೂಕಿನಲ್ಲಿ ತೀರ್ವೆ ಏರಿಕೆಯು ಮಾನವು ಬಾರ್ದೋಲಿಗಿಂತ ಹೆಚ್ಚಾಗಿದ್ದಾಗ್ಯೂ, ಅಲ್ಲಿಯ ತೀರ್ವೆಯು ೧೧ ರಲ್ಲಿ ೯ ಪಾಲು ವಸೂಲಾಯಿತು. ತೀರ್ವೆ ಕೊಡುವವರಿಗೆ ಅನುಕೂಲತೆ ಕೊಡಲು ಸರಕಾರವು ಇನ್ನೂ ತಯಾರಿದೆ. ಜೂನ ೧೯ ರೊಳಗೆ ತೀರ್ವೆ ಕೊಟ್ಟರೆ ಚೌಥಾಯಿ ದಂಡದ ರಕಮು ಸೂಟ ಬಿಡುವ ಅಧಿಕಾರವು ಕಲೆಕ್ಟರರಿಗೆ ಕೊಟ್ಟಿದೆ. ಸರಕಾರವು ಪ್ರಕಟಿಸಿದ ಆತ್ಮಶ್ಲಾಘನೆಯು ಪುರಾಣವಿದು ಪ್ರಜೆಗಳಿಗೆ ಹಾಕುವ ಭೀತಿಯೂ ಇದರೊಳಗೇ ಹೇಳಲ್ಪಟ್ಟಿದೆ.

ಆದರೆ ಈ ಬೆದರಿಕೆಗೆ ಬಾರ್ದೋಲಿಯವರು ಸೊಪ್ಪು ಹಾಕುವವರಲ್ಲ. ಪರಮಾವಧಿಯ ಕಷ್ಟನಷ್ಟಗಳನ್ನು ಮುಂದಾಗಿ ಅವರು ಆಲೋಚಿಸಿ ಸತ್ಯಾಗ್ರಹವನ್ನು ಕೈಕೊಂಡಿದ್ದಾರೆ. ಕೈತಪ್ಪಿಹೋದ ಭೂಮಿಗಳು ಪುನಃ ಸಿಗಲಾರವೆಂದು ಅಧಿಕಾರಿಗಳು ಹೇಳುವದು ಬೇಡ. ಅದು ಬಾರ್ದೋಲಿಯವರಿಗೆ ಗೊತ್ತಿದ್ದ ಮಾತು, ಸರಕಾರಕ್ಕೆ ಗೊತ್ತಿಲ್ಲದ ಮಾತೊಂದು; ಅಥವಾ ಗೊತ್ತಿರುವದಿಲ್ಲೆಂಬಂಥ ಒಂದು ಮಾತಿದೆ. ಅದೇನಂದರೆ:— ಜಪ್ತಿ ಮಾಡಿದ ಭೂಮಿಗಳನ್ನೇ ಕೊಳ್ಳುವವರೇ ಇಲ್ಲ; ೬೫೦೦ ಎಕ್ರೆ ಭೂಮಿಯಲ್ಲಿ ಬರೇ ೧೪೦೦ ಎಕ್ರೆ ಭೂಮಿ ಈ ತನಕ ಕೊರಳಿಗೆ ಕಟ್ಟಲ್ಪಟ್ಟಿದೆ. ಭೂಮಿ ಕೊಂಡರೆ ಅದು ಸಾಗಾಗುವದು ಅಸಾಧ್ಯವಿದ್ದದರಿಂದ ಸರಕಾರವು ಬೆದರಿಕೆಯೆಂದು ಈ ಪ್ರಕಟಣೆಯನ್ನು ಹೊರಡಿಸಿರುತ್ತದಾಗಿ ಬಾರ್ದೋಲಿಯ ಪರಿಸ್ಥಿತಿಯನ್ನು ಬಲ್ಲವರು ಬಲ್ಲರು. ಗಿರಾಕಿ ಬಹಳವಾಗಿದ್ದರೆ, ಜಪ್ತಾದ ಭೂಮಿಯನ್ನು ಸಾಗು ಮಾಡಲಿಕ್ಕೆ ಅಪರಿಮಿತವಾದ ಗಿರಾಕಿ ಸಿಗುತ್ತಿದ್ದರೆ ಸರಕಾರವು ಈ ಪ್ರಕಟಣೆಯನ್ನು ಹೊರಡಿಸುವಷ್ಟು ಪ್ರಜಾನುನಯವನ್ನು ತೋರಿಸುತ್ತಿದ್ದಿಲ್ಲ. ವಿಜಯಧ್ವಜವು ಇಷ್ಟೊತ್ತಿಗೆ ಸಡಗರದಿಂದ ಹಾರ್‍ಯಾಡುತ್ತಿತ್ತು. ಪಠಾಣರಿಗೆ ಸರಕಾರವು ಕೊಟ್ಟ ಸರ್ಟಿಫಿಕೇಟಿನಿಂದ ಯಾರೂ ಬೆಚ್ಚಿಹೋಗರು. ಸರಕಾರಿ ಸರ್ಟಿಫಿಕೇಟಿನ ಬೆಲೆಯು ಈಗ ಸರ್ವಶ್ರುತವಾದದ್ದೇ. ಒಂದು ಮಾತು ಸ್ಫುಟವಾಗಿದೆ. ಇಡೀ ಬಾರ್ದೋಲಿ ತಾಲೂಕಿನಲ್ಲಿ ಸರಕಾರಕ್ಕೆ ಬಿಟ್ಟಿ ಆಳು ಸಿಗುವದಿಲ್ಲ. ಬರೇ ನೈತಿಕ ಬಲದಿಂದ — ಸರಕಾರವು ಬಲಾತ್ಕಾರವೆಂದು ಬೇಕಾದರೆ ಹೇಳಿಕೊಳ್ಳಲಿ — ಜಪ್ತಿಯಾದ ಸಾಮಗ್ರಿಯನ್ನೊಯ್ಯಲು ಬಿಟ್ಟಿ ಆಳು ಸಿಗುವದಿಲ್ಲೆಂಬ ಸರಕಾರಿ ಒಪ್ಪಿಗೆಯನ್ನು ನೋಡಿ ನಮಗೆ ಆನಂದವಾಗಿದೆ. ಬಾರ್ದೋಲಿಯವರಿಗೂ ಶ್ರೀ ವಲ್ಲಭಭಾಯಿ ಪಟೇಲರಿಗೂ ಆದರದಿಂದ ನಾವು ತಲೆಬಗ್ಗಿಸಿ, ಅಧಿಕಾರಿಗಳು ನಡಿಸುವ ಅತ್ಯಾಚಾರಗಳಿಗೆ ಅಹಿಂಸೆಯ ಬಲದಿಂದ ಇದಿರಾಗಲು ಭರತಪುತ್ರರಿಗೆ ಸದ್ಬುದ್ಧಿಯನ್ನೂ, ಸಾಮರ್ಥ್ಯವನ್ನೂ ದಯಪಾಲಿಸಲಿ.

ಬಾರ್ದೋಲಿ ಸಮರದ ವ್ಯಾಪವು ಈ ವಾರದಲ್ಲಿ ಮತ್ತೂ ಬೆಳೆಯಿತು. ವರಿಷ್ಠ ಕಾಯಿದೆ ಕೌನ್ಸಿಲಿನ ಸರ್ವಮಾನ್ಯ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿ ಪಟೇಲರು ಬಾರ್ದೋಲಿಯ ಸಮರದಲ್ಲಿ ಸೇರಲು ಮನೋನಿಶ್ಚಯ ಮಾಡಿದ್ದಾರೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತದೆ. ಅಧಿಕಾರದ ವ್ಯಾಮೋಹದಿಂದ ಅವರು ಬದ್ಧರಾಗಲಿಲ್ಲ. ಮಹಾತ್ಮರಿಗೆ ಪತ್ರ ಬರೆದು ತಮ್ಮ ನಿರ್ಧಾರವನ್ನು ಪ್ರಕಟಿಸಿದ್ದಾರೆ. ಬಾರ್ದೋಲಿಯವರ ಪಕ್ಷವು ನ್ಯಾಯದ್ದೆಂತಲೂ ಅಧಿಕಾರಿಗಳು ತೀರ್ವೆ ವಸೂಲಿಗಾಗಿ ನಡಿಸುವ ಕೃತ್ಯಗಳು ಅನ್ಯಾಯದ್ದೆಂತಲೂ ಎಲ್ಲ ವಿಚಾರ ಮಾಡಿ ಶ್ರೀ ವಿಠ್ಠಲಭಾಯಿಯವರು ಅಭಿಪ್ರಾಯಪಟ್ಟಿದ್ದಾರೆ. ಅಧ್ಯಕ್ಷಾಧಿಕಾರದಿಂದ ಬಾರ್ದೋಲಿಯವರ ಕಷ್ಟಗಳನ್ನು ಪರಿಹರಿಸಲು ಅನುಕೂಲವಾಗಿದ್ದರೆ ತಾವು ಆ ಕುರಿತು ತಕ್ಕ ಉಪಾಯಯೋಜನೆ ಮಾಡುತ್ತಿದ್ದೆವಾಗಿಯೂ ಶ್ರೀ ವಿಠ್ಠಲಭಾಯಿಯವರು ಬರೆದಿದ್ದಾರೆ. ಅದ್ಯಾವದೂ ಸದ್ಯಕ್ಕೆ ಸಾಧ್ಯವಿಲ್ಲ. ಆದರೆ ಸಮರವು ಸಾಗುವ ವರೆಗೆ ತಿಂಗಳಿಗೆ ರೂಪಾಯಿ ೧೦೦೦ ದಂತೆ ಬಾರ್ದೋಲಿಯವರಿಗೆ ತಾವು ಅರ್ಪಿಸುತ್ತೇವಾಗಿಯೂ ಬರೆದಿದ್ದಾರೆ. ಕೊನೆಯ ವಚನವು ಮಾತ್ರ ಅರ್ಥಗಾಂಭೀರ್ಯದಿಂದ ತುಂಬಿ ತುಳುಕುತ್ತಿದೆ; ಶ್ರೀ ವಿಠ್ಠಲಭಾಯಿಯವರ ಪ್ರಜಾಪ್ರೇಮವನ್ನೂ, ಅಧಿಕಾರಿಗಳ ನಿಷ್ಠುರತೆಯನ್ನೂ ಒಮ್ಮೆಲೇ ವ್ಯಕ್ತಪಡಿಸುತ್ತಿದೆ. ಯಾವದೇ ಕಾಲಕ್ಕೆ ತಮಗೆ ಬಾರ್ದೋಲಿಯ ಸಮರದಲ್ಲಿ ಸೇರಬೇಕೆಂದು ತೋರಿದ್ದಲ್ಲಿ ಆ ಕಾಲಕ್ಕೆ ತಾವು ಹಿಂಜರಿಯಲಿಕ್ಕಿಲ್ಲವಾಗಿ ಮಾ

ನ್ನ ವಿಠ್ಠಲಭಾಯಿಯವರು ಸತ್ಯಾಗ್ರಹ ಪ್ರವರ್ತಕರಾದ ಮಹಾತ್ಮರಿಗೆ ವಚನ ಕೊಟ್ಟಿದ್ದಾರೆ. ಬಾರ್ದೋಲಿಯವರಿಗೆ ಈ ಅಭಯ ವಚನದ ಅರ್ಥವು ಅಪಾರವಿದೆ. ಸರಕಾರವು ಆಳವಾಗಿ ವಿಚಾರಿಸತಕ್ಕ ವಿಷಯವಿದು. ಶ್ರೀ ವಿಠ್ಠಲಭಾಯಿಯವರು ಅಧಿಕಾರದ ಅತಿಕ್ರಮ ಮಾಡಿ ಸರಕಾರದ ವಿರುದ್ಧ ನಡೆದ ಪ್ರಯತ್ನದಲ್ಲಿ ಈಗಾಗಲೇ ಸೇರಿದರೆಂದು ಸರಕಾರಿ ಪಕ್ಷಪಾತಿ ಪತ್ರಿಕೆಗಳಲ್ಲಿ ಹುಯಿಲಿಯೆದ್ದಿದೆ. ಅಧಿಕಾರದಿಂದ ಅವರಿಗೆ ಪದಚ್ಯುತ ಮಾಡಬೇಕಾಗಿಯೂ ಸರಕಾರಕ್ಕೊಂದು ಸೂಚನೆ ಕೊಡಲಾಗಿದೆ. ಅಧ್ಯಕ್ಷಸ್ಥಾನವನ್ನು ಸರಕಾರವು ಶ್ರೀ ವಿಠ್ಠಲಭಾಯಿಯವರಿಗೆ ಅರ್ಪಿಸಿಲ್ಲ. ಅವರಿಗೆ ಆ ಅಧಿಕಾರವು ಸರಕಾರದ ಅನುಗ್ರಹದಿಂದ ಪ್ರಾಪ್ತವಾಗುವಷ್ಟು ಯಾವದೇ ಕಾರ್ಯವನ್ನು ಅವರು ಮಾಡಿದ್ದೂ ಇಲ್ಲ. ಪ್ರಜಾನುರಾಗದಿಂದ, ಪ್ರಜಾನುಮತಿಯಿಂದ ಪ್ರಾಪ್ತವಾದ ಅಧಿಕಾರವನ್ನು ಪ್ರಜೆಗಳಿಗಾಗಿಯೇ ಅವರು ಉಪಯೋಗಿಸುತ್ತಿದ್ದಾರೆ. ಆ ಅಧಿಕಾರದಿಂದ ಪದಚ್ಯುತ ಮಾಡುವ ಧೈರ್ಯವು ಸರಕಾರಕ್ಕಿದ್ದರೆ ಅದನ್ನಾದರೂ ಅದು ಮಾಡಿ ನೋಡಲಿ! ಅದಕ್ಕೆ ಬಾರ್ದೋಲಿಯವರು ಸಿದ್ಧರಿದ್ದಾರೆ. ಶ್ರೀ ವಿಠ್ಠಲಭಾಯಿಯವರೂ ಸಿದ್ಧರಿದ್ದಾರೆ. ಮಹಾತ್ಮರ ಆಧಿಪತ್ಯದೊಳಗಿನ ರಾಷ್ಟ್ರವಂತೂ ಬಿಗ್ಗಾಲಿನ ಮೇಲೆ ಸಿದ್ಧವಿದೆ.

ಬಾರ್ದೋಲಿಯ ಸಮರದಲ್ಲಿ ಸರಕಾರವು ಐಹಿಕ ಕಷ್ಟನಷ್ಟಗಳ ಭೀತಿಯನ್ನು ಎಂದಿಗೂ ಹಾಕಲಾಗದು. ಆ ಭೀತಿ ತೂರಿಹೋಗಿ ಎದೆ ಘಟ್ಟಿ ಮಾಡಿ ಸರ್ವಸ್ವವನ್ನರ್ಪಿಸಲು ಸಿದ್ಧರಾಗಿ ಬಾರ್ದೋಲಿಯವರು ಸತ್ಯಾಗ್ರಹವನ್ನು ಕೈಕೊಂಡಿದ್ದಾರೆ. ಅದರಿಂದ ಸರಕಾರವಾಗಲೀ ಸರಕಾರ ಪಕ್ಷಪಾತಿ ಜನರಾಗಲೀ ಅಂಥ ಬೆದರಿಕೆಗಳನ್ನು ಹಾಕಬಾರದು; ಅವೆಲ್ಲವು ನಿರರ್ಥಕವಿವೆ. ಬಾರ್ದೋಲಿಯವರು ಪ್ರಜಾಮತವಿಲ್ಲದೆ ಕರಗಳ ಎತ್ತುವಳಿಯಾಗಬಾರದೆಂಬ ತತ್ತ್ವಕ್ಕಾಗಿ ಹೋರಾಡುತ್ತಿದ್ದಾರೆ. ಇದು ರಾಜ್ಯಭಾರದ ಮೂಲತತ್ತ್ವವು ಈ ತತ್ತ್ವಕ್ಕಾಗಿಯೇ ಬಾರ್ದೋಲಿಯ ಸತ್ಯಾಗ್ರಹವು ಅಖಿಲ ಭರತಖಂಡವನ್ನು ವ್ಯಾಪಿಸಿದೆ. ಶ್ರೀ ವಲ್ಲಭಭಾಯಿ ಪಟೇಲರಂಥ ನಿರ್ಭಯ ಪುರುಷರು ಸೇನಾಪತಿಗಳಾಗಿದ್ದಾರೆ. ಅವರು ಸರಕಾರದ ಮೋಹಕ್ಕೆ ಬಲಿಬೀಳುವವರಲ್ಲ; ಬೆದರಿಕೆಗೆ ಹಿಂಜರಿಯುವವರೂ ಅಲ್ಲ. ಸರಕಾರವು ಇದನ್ನರಿತು ಬಾರ್ದೋಲಿಯ ಪ್ರಜೆಗಳೊಡನೆ ಶಿಷ್ಟಾಯಿಯ ಮಾತುಗಳನ್ನಾಡಿದರೆ ಮಾತ್ರ ಇತ್ತಟ್ಟಿಗೂ ಈಗಾದರೂ ಮರ್ಯಾದೆ ಇದೆ. ಅದನ್ನು ಬಿಟ್ಟು ತನ್ನದೇ ಹಟ ಹಿಡಿದು ಪಠಾಣ ರಾಜ್ಯವನ್ನೇ ನಡಿಸಗೊಟ್ಟರೆ ಮುಂದೆ ಅನರ್ಥವಾಗುವದು. ಇಷ್ಟೊಂದು ಮಾತನ್ನು ನಮೂದಿಸಿ ಇಂದಿನ ಲೇಖವನ್ನು ಮುಗಿಸುವೆವು.

ಸ್ಫುಟ ಸೂಚನೆಗಳು.

೧. ಧಾರವಾಡದಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು, ಖಾದಿ, ಏಕೀಕರಣ, ಹಿಂದೀ ಭಗಿನೀ ಸಮಂತಾದ ಪರಿಷತ್ತುಗಳು ನಡೆದವು. ಈ ಪರಿಷತ್ತುಗಳ ಸಂಕ್ಷಿಪ್ತ ವೃತ್ತಾಂತವನ್ನು ಬೇರೊಂದೆಡೆ ಕೊಟ್ಟಿದ್ದೇವೆ. ಅವನ್ನು ವಾಚಕರು ಪರಾಂಬರಿಸತಕ್ಕದ್ದು. ಅಗ್ರಪೂಜೆಯ ಮಾನವು ಪ್ರಾಂತಿಕ ಪರಿಷತ್ತಿನದು. ರಾಜಕಾರಣವು ರಾಷ್ಟ್ರದ ಉನ್ನತಿ—ಅವನತಿಗಳಿಗೆ ಕಾರಣವಾಗಿರುವಾಗ ರಾಜಕಾರಣ ಪರಿಷತ್ತಿನ ಸಮಾಚಾರವೇ ಪ್ರಮುಖ್ಯವಾಗಿದೆ. ಅದಕ್ಕಾಗಿ ಪ್ರಾಂತಿಕ ಪರಿಷತ್ತಿನ ನಿರ್ಣಯಗಳನ್ನು ಸವಿಸ್ತರ ಪ್ರಕಟಿಸಿದ್ದೇವೆ. ಅವುಗಳಲ್ಲಿ ಕರ್ನಾಟಕದ ಅಭಿಪ್ರಾಯವು ಗ್ರಥಿತವಾಗಿವೆ. ಸ್ವಾತಂತ್ರ್ಯದ ಧ್ಯೇಯವನ್ನು ಕರ್ನಾಟಕವು ಕೈಕೊಂಡು ಭಾರತೀಯ ರಾಜಕಾರಣದಲ್ಲಿ ಮುಂದಾದ ಅವಸ್ಥಾಂತರವು ಕರ್ನಾಟಕದಲ್ಲಿಯೂ ಘಟಿಸಾಗಿದೆಂದು ಪ್ರಕಟಿಸಿದೆ. ಸ್ಯಾಯಮನ್ ಕಮಿಟಿ ನಿಷೇಧದ ಬಗ್ಗೆ ವಿಶೇಷವೇನಿಲ್ಲ. ಹೊಲಗಳ ಪುನರ್ಘಟನೆಯು, ಕಾನೂನು, ವನದ ತಕರಾರು ನಿವಾರಣೆ ಮುಂತಾದ ಸ್ಥಾನಿಕ ವಿಷಯಗಳ ಕುರಿತು ಪ್ರಸಂಗೋಚಿತ ಠರಾವುಗಳಾಗಿವೆ. ಇವುಗಳಂತೆ ನಾವು ನಡೆಕೊಂಡರೆ ನಮಗೆ ಕ್ಷೇಮವಿದೆ. ಖಾದಿ ಪರಿಷತ್ತು—ಏಕೀಕರಣ ಪರಿಷತ್ತುಗಳಲ್ಲಿಯೂ ಕರ್ನಾಟಕಕ್ಕೆ ಸಂಗ ಕಲ್ಯಾಣಕರವಾದ ಠರಾವುಗಳು ಕೈಕೊಳ್ಳಲ್ಪಟ್ಟಿವೆ. ಠರಾವುಗಳಂತೆ ಕರ್ನಾಟಕದ ಪ್ರಮುಖರು ಪ್ರಜೆಗಳಲ್ಲಿ ಜಾಗೃತಿ ಮಾಡಿದರೆ ಮಾತ್ರ ಪ್ರಯೋಜನವಿದೆ. ಪುನರ್ಘಟನೆಯ ಕಾನೂನು ಹಾಗೂ ಖಾದಿಯ ನಿರ್ಣಯಗಳು ಪ್ರಮುಖವಾಗಿ ಪ್ರಮುಖರ ಕಾರ್ಯದಕ್ಷತೆಯ ಮೇಲೆಯೇ ಸರ್ವಥಾ ಅವಲಂಬಿಸಿರುವವು. ಪರಿಷತ್ತುಗಳ ಹವಣಿಗಿಂತ ಈ ಕಾರ್ಯವು ತೀರ ಮಹತ್ವದ್ದಿದೆ. ಈ ಕಡೆ ಕರ್ನಾಟಕಸ್ಥರು ಲಕ್ಷ್ಯ ಮಾಡಿದ್ದರಿಂದ ಕರ್ನಾಟಕವು ಹಿಂದೆ ಬಿದ್ದಿದೆ. ಪ್ರಮುಖರಲ್ಲಿಯೂ ಈ ಕಡೆ ಲಕ್ಷ್ಯ ಕೊಟ್ಟು ನಡೆಯುವದಕ್ಕಾಗಿ ನಾವು ವಿನಯಪೂರ್ವಕ ಬಿನ್ನೈಸುವೆವು.

೨. ಪರಿಷತ್ತುಗಳಿಂದ ತೋರಿದ ಇನ್ನು ಹಿಂದೆರಡು ವಿಚಾರಗಳನ್ನು ಇಲ್ಲಿ ನಮೂದಿಸಬೇಕಾಗಿದೆ. ಅಧ್ಯಕ್ಷ-ಸ್ವಾಗತಾಧ್ಯಕ್ಷರ ನಾಮಾವಲಿಯನ್ನು ನೋಡಿದರೆ, ಹರ್ಷವಾಗುತ್ತದೆ. ಬ್ರಾಹ್ಮಣ—ಬ್ರಾಹ್ಮಣೇತರರೆಂಬ ಭೇದವು ಪರಿಷತ್ತುಗಳಲ್ಲಿ ತೋರಿಬರದೆ, "ಗುಣಾಃ ಪೂಜಾಸ್ಥಾನಂ" ಎಂಬ ತತ್ತ್ವದಂತೆ ಪರಿಷತ್ತುಗಳು ಸಾಗಿದವು. ಖಾದಿ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ ಆಲೂರ ವೆಂಕಟರಾಯರು ಬ್ರಾಹ್ಮಣರು. ಅಧ್ಯಕ್ಷರಾದ ಶ್ರೀ ಹರ್ಡೇಕರ ಮಂಜಪ್ಪನವರು ಬ್ರಾಹ್ಮಣೇತರ ಸಾಧು ಪುರುಷರು. ಪ್ರಾಂತಿಕ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀ ಸಿತಾಯಕರಾವ ಜೋಗರವರೂ, ಅಧ್ಯಕ್ಷರಾದ ಶ್ರೀ ಮುಧೋಳ ಪರಿಮಾಪರವರೂ ರಾಷ್ಟ್ರಸೇವೆಯಲ್ಲಿ ಬ್ರಾಹ್ಮಣ—ಬ್ರಾಹ್ಮಣೇತರವೆಂಬ ಭೇದವನ್ನು ಕರ್ನಾಟಕಸ್ಥರು ಧಿಕ್ಕರಿಸಿದರೆಂದು ಸಾರಿದ್ದಾರೆ. ಏಕೀಕರಣ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ದಿವಾಣ ಬಹಾದ್ದೂರ ರೊದ್ದರವರೂ, ಅಧ್ಯಕ್ಷರಾದ ರಾವಸಾಹೇಬ ಹಳಕಟ್ಟಿಯವರೂ ಕರ್ನಾಟಕ ಏಕೀಕರಣ ಕಾರ್ಯದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರೆಂಬ ಭೇದಭಾವವನ್ನು ಮರೆತು ಎಲ್ಲರೂ ಐಕ್ಯರಾಗಿದ್ದಾರೆಂಬದು ಸಿದ್ಧಗೊಳಿಸಿದ್ದಾರೆ. ಏಕೀಕರಣ ಪರಿಷತ್ತಿನಲ್ಲಿ ಇನ್ನೊಂದು ವಿಶೇಷವಿದೆ. ರಾವಸಾಹೇಬ-ದಿವಾಣ ಬಹಾದ್ದೂರರಂಥ ಬಿರುದವಂತರಿದ್ದ ಪರಿಷತ್ತಿನಲ್ಲಿ ಸಾಯಮನ್ ಕಮಿಟಿ ಬಹಿಷ್ಕಾರವು ಕೈಕೊಳ್ಳಲ್ಪಟ್ಟು ಬಿರುದಾಂಕಿತರಿಗೆ ಒಂದು ಪಾಠವು ಹೇಳಲ್ಪಟ್ಟದ್ದು ಇದೆಲ್ಲ ಸರಿ. ಆದರೆ ಒಂದು ಸಂಗತಿಯನ್ನು ನಾವು ನಮೂದಿಸಲೇಬೇಕು. ಏಕಕಾಲದಲ್ಲಿ ಪರಿಷತ್ತುಗಳನ್ನು ಸೇರಿಸಿ ನುಗ್ಗು ಮಾಡುವದು ಪ್ರಶಸ್ತವಲ್ಲ. ಇದರಿಂದ ಭಿನ್ನ ಭಿನ್ನ ಪರಿಷತ್ತುಗಳ ಕಡೆ ಪ್ರಜೆಗಳ ಸಾಕಷ್ಟು ಲಕ್ಷ್ಯ ಹೋಗುವದಿಲ್ಲ. ಅದರಿಂದ ದೇಶಕಾರ್ಯಕ್ಕೆ ಅನುಕೂಲತೆಯೂ ಆಗುವದಿಲ್ಲ. ಒಂದೇಸವನೆ ಮಳೆ ಸುರಿದು ಕಟ್ಟೆಯ ನೆರೆಯು ಥಟ್ಟನೆ ಹರಿದುಹೋಗುವಂತೆ ಸ್ಥಿತಿಯಾಗುತ್ತದೆ. ಹೀಗೆ ಪರಿಷತ್ತುಗಳನ್ನು ಸೇರಿಸುವ ಪರಿಪಾಠವನ್ನು ಪ್ರಮುಖರು ನಿಲ್ಲಿಸಿ ಯಥಾಕಾಲ ಭಿನ್ನಭಿನ್ನ ಪರಿಷತ್ತುಗಳನ್ನು ಭಿನ್ನ ಭಿನ್ನ ಕಾಲಕ್ಕೆ ನೆರವೇರಿಸುವದು ಉತ್ತಮ.

೩. ಪುಣೆಯ 'ಕೇಸರಿ' ಪತ್ರಿಕೆಯನ್ನು ಟೀಕಿಸುವ ಪ್ರಸಂಗವು ಇತ್ತಿತ್ತ ಆಗಿಂದಾಗ್ಗೆ ಬರಹತ್ತಿದೆ. ಬೆಳಗಾವಿಯಲ್ಲಿ ಸಾಹಿತ್ಯ ಸಮ್ಮೇಲನವನ್ನು ಸೇರಿಸುವ ವಾದವು 'ಕೇಸರಿ' ಯಲ್ಲಿ ಉಂಟಾಯಿತು. ಮಾನ್ಯ ಕರ್ನಾಟಕಸ್ಥರು ಬರೆದ ಪತ್ರಗಳನ್ನು ಪ್ರಕಟಿಸುವ ಸ್ವಲ್ಪ ಔದಾರ್ಯವು 'ಕೇಸರಿ' ಯಲ್ಲಿರಲಿಲ್ಲ. ಹಿಂದೊಮ್ಮೆ ಶ್ರೀ ದೇಶಪಾಂಡೆ ಗಂಗಾಧರರಾಯರ ಪತ್ರಕ್ಕೇ 'ಕೇಸರಿ' ಯಲ್ಲಿ ಸ್ಥಳ ಸಿಗಲಿಲ್ಲ. ಹೀಗೆ ನಡೆದ ಕರ್ನಾಟಕಕ್ಕೆ ಅನ್ಯಾಯದ ಮೇಲೆ ಕಳೆದ 'ಕೇಸರಿ' ಯಲ್ಲಿ ಕಳಸ ಹಾಕಲ್ಪಟ್ಟಿದೆ. ಕರ್ನಾಟಕ ಪ್ರಾಂತಿಕ ಪರಿಷತ್ತು ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿಗಿಂತ ನಿರಸವಾಯಿತೆಂದೂ, ಮೇಲಾಗಿ ಕೇಳಿದರೆ ಮಹಾರಾಷ್ಟ್ರದ ಧೋರಣವನ್ನೇ ಕರ್ನಾಟಕವು ಅಂಗೀಕರಿಸಿತೆಂದೂ, "ಕೇಸರಿ" ಯು ಪ್ರಕಟಿಸಿದೆ. ಮಹಾರಾಷ್ಟ್ರ ಧುರೀಣರಿಗಿಂತ ಕರ್ನಾಟಕ ಪ್ರಮುಖರು ಮೇಲೆಂಬ ಮಾನವನ್ನು ನಾವು ಹೂಡುವದಿಲ್ಲ. ಆದರೆ ತನ್ನ ಪ್ರತಿಷ್ಠೆಯನ್ನು ಬೆಳಗಿಸಲು 'ಕೇಸರಿ'ಯು ಮಾಡಿದ ಸುಳ್ಳು ವಿಧಾನಗಳನ್ನಷ್ಟು ನಿಷೇಧಿಸುವೆವು. ಅಸ್ಪೃಶ್ಯತೆ ನಿವಾರಣೆಯ ಠರಾವವು ಕರ್ನಾಟಕ ಪರಿಷತ್ತಿನಲ್ಲಿ ಕೈಕೊಳ್ಳಲ್ಪಡಲಿಲ್ಲವೆಂದು 'ಕೇಸರಿ'ಯು ಹೇಳಿ, ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತಿನ ಬೆನ್ನು ಬಡಿಯುತ್ತದೆ. ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ಈ ಠರಾವನ್ನು ಕೈಕೊಳ್ಳಲಿಲ್ಲೆಂಬ ಆಕ್ಷೇಪಕ್ಕೆ ಈ ವಿಧಾನವು ಮಾಡಲ್ಪಟ್ಟಿದೆ. ಹಟಿಗೊಂದು ಎಲೆಯ ಆಧಾರಬೇಕಲ್ಲವೇ? ಆದರೆ ವಸ್ತುಸ್ಥಿತಿಯನ್ನು ಬಚ್ಚಿಡುವದೇಕೆ? ನಮ್ಮ ಪ್ರಾಂತಿಕ ಪರಿಷತ್ತು ಈ ಅಸ್ಪೃಶ್ಯತಾ ನಿವಾರಣೆಯ ಠರಾವನ್ನು ಪ್ರಚಂಡ ಬಹುಮತದಿಂದ ಕೈಕೊಂಡಿದೆ. ಇದೇ ಪರಿಷತ್ತಿನಲ್ಲಿ ಇದಕ್ಕೆ ವಿರೋಧ ಮಾಡಿದವರು ಇಬ್ಬರೇ. ಹೀಗಿದ್ದು ಬೇರೆಂದು ಸುಳ್ಳು ಪ್ರಕಟಿಸುವದರಲ್ಲಿ ಪುರುಷಾರ್ಥವೇನಿದೆ? ಹೊಲಗಳ ಪುನರ್ಘಟನೆಯ ಕಾನೂನಿನ ವಿಚಾರ ಮಾಡದಿದ್ದದ್ದು ಅನುಚಿತವಾಯಿತೆಂದು 'ಕೇಸರಿ'ಕಾರರು ಕರ್ನಾಟಕ ಪರಿಷತ್ತಿನಮೇಲೆ ಕರಾ ಹೊಡೆಯುತ್ತಾರೆ. ಈ ವಿಷಯದ ಮೇಲೆ ಠರಾವು ಆಗಿದೆ. ಮೇಲಾಗಿ ದೇಶಪಾಂಡೆ ಗಂಗಾಧರರಾಯರು ಒಳ್ಳೇ ಕಳಕಳಿಯ ಭಾಷಣವನ್ನೂ ಮಾಡಿದ್ದಾರೆ. ಕರ್ನಾಟಕ ಸಿಂಹದ ಗರ್ಜನೆಯು ಮಹಾರಾಷ್ಟ್ರದ ಕೇಸರಿಯ ಕಿವಿಗೆ ಮುಟ್ಟಲಿಲ್ಲವೇ? ಲೋಕಮಾನ್ಯರ ತರುವಾಯ ಆತನು ಅಷ್ಟು ಕಿವುಡನಾದನೇ? ಅಥವಾ

"ನಾಭಿಷೇಕೋ ನ ಸಂಸ್ಕಾರಃ" "ವಿಕ್ರಮಾರ್ಜಿತಸತ್ವ" ಎಂಬ ಗರ್ವದಲ್ಲಿ ಕರ್ನಾಟಕದ ಗರ್ಜನೆಯು ಅವನಿಗೆ ಕೇಳಲಿಲ್ಲವೇ? ಹೀಗೆ ನಡೆದರೆ, ಕೇಸರಿಯು ಗೋಮಾಯುವಾದನೆಂದು ಲೋಕದಲ್ಲಿ ಅಪಕೀರ್ತಿಗೀಡಾಗುವನು. ಇದಕ್ಕೂ ಹೆಚ್ಚಿಗೆ ಇನ್ನೇನು ಹೇಳುವದು?

೪. ಲೋಕಮಾನ್ಯರ ಎರಡನೇ ಮಗ ದಿ|| ಶ್ರೀಧರಪಂತರ ಅಪಮೃತ್ಯುವಾರ್ತೆಯನ್ನು ತಿಳಿಸಲು ಬಹು ಮನೋವ್ಯಥೆಯಾಗುತ್ತದೆ. ಇವರು ಬರೇ ೩೦ ವರ್ಷದಲ್ಲಿ ಹೆಂಡರು-ಮಕ್ಕಳನ್ನು ಬಿಟ್ಟು ನಿರಾಶೆಹೊಂದಿ ಉಗಿಬಂಡಿಯಡಿಗೆ ಬಿದ್ದು ಮರಣಕ್ಕೆ ಈಡಾದರು. ಲೋಕಮಾನ್ಯರ ಮಗಂದಿರ ಆತ್ಮಹತ್ಯೆಯ ಕಾರಣವನ್ನು ಲೋಕಮಾನ್ಯರ 'ಕೇಸರಿ'ಯಲ್ಲಿ ಓದಲು ಎಲ್ಲರೂ ಆತುರಪಟ್ಟು ಕೇಸರಿ ತೆರೆದರೆ ಒಂದು ಸಹ ಕಾರಣ ಸಿಗದೇ! ಇತರ ವರ್ತಮಾನಪತ್ರಗಳಲ್ಲಿ ಪ್ರಕಟಹೊಂದಿದ ತರ್ಕಗಳು ನಿರಾಧಾರವಲ್ಲೆಂಬ ನಿಷೇಧವನ್ನು 'ಕೇಸರಿ'ಯು ಪ್ರಕಟಿಸಿ ಸುಮ್ಮಗುಳಿದು ಬಿಟ್ಟಿದೆ. ಇದರಿಂದ 'ಕೇಸರಿ'ಯು ದೊಡ್ಡ ಸಭ್ಯ ಕೆಲಸ ಮಾಡಿತೆಂದು ಯಾರೂ ಹೇಳರು. ಲೋಕಮಾನ್ಯರ ಕೇಸರಿಯ ಚಾಲಕರಿಗೂ, ಲೋಕಮಾನ್ಯರ ಪುತ್ರರಿಗೂ ವಿವಾದ ನಡೆದಿತ್ತು. ದಿವಾಣಿ ಕೋರ್ಟಿನಲ್ಲಿ ವ್ಯಾಜ್ಯವು ಕೂಡ ನಡೆದಿದೆ. ಲೋಕಮಾನ್ಯರ ಮಗಂದಿರು ಕೇಸರಿ ಆಫೀಸಿನ ಬೀಗ ಮುರಿಯುವ ತನಕ ಪ್ರಸಂಗ ಬಂದಿತ್ತು. ಈ ದಾವೆಯಲ್ಲಿ ತಮಗೆ ಅವಶ್ಯ ಸೋಲಾಗಬಹುದೆಂದು ಶ್ರೀಧರಪಂತರಿಗೆ ...ವಾಗಲೂ ಚಿಂತೆ! ಆ ಚಿಂತೆಯಲ್ಲಿರುವಾಗಲೇ ವಕೀಲರು ದಸ್ತೇವಜುಗಳನ್ನು ಹಿಡಗೊಡದೆ ತಮ್ಮ ಹಕ್ಕು ಪಡೆದವರಾಗಿಯೂ ಅದರಿಂದ ನಿರಾಶೆಪಟ್ಟು ಕಲೆಕ್ಟರಿಗೆ ಅವರು ಸಾಯುವ ಕೆಲವು ತಾಸು ಪೂರ್ವದಲ್ಲಿ ಪತ್ರ ಬರೆದಿದ್ದಾರೆ; ತಮ್ಮ ಪತ್ರಗಳನ್ನು ಸರಕಾರಿ ತಿಜೋರಿಯಲ್ಲೇ ಇಡಬೇಕಾಗಿಯೂ ಅವರು ವಿನಂತಿ ಮಾಡಿಕೊಂಡಿದ್ದಾರೆ. ಸದ್ಯಕ್ಕೆ 'ಮರಾಠಾ ವೃತ್ತಸಂಗ' ಎಂಬ ಸುಸಂಗ್ರಹವನ್ನು ಅವರು ಪ್ರಕಟಿಸಿದ್ದರು. ಕೋರ್ಟಿನ ಭಾವನಾಶೂನ್ಯ ವಾತಾವರಣದಲ್ಲಿ ತಾವು ಈಗ ಸಿಲುಕಿಕೊಂಡಿರುವದರಿಂದ ಕವಿತ್ವದ ಪ್ರಾಚುರ್ಯ ಸೇವೆಯಾಗಲಿಕ್ಕಿಲ್ಲವಾಗಿ ಪ್ರಸ್ತಾವನೆಯಲ್ಲಿ ನಿರಾಶೆಪಟ್ಟಿದ್ದಾರೆ. ಇದರ ಮೇಲಿಂದ ಲೋಕಮಾನ್ಯರ ಕೇಸರಿಯೇ, ಲೋಕಮಾನ್ಯರ ಶ್ರೀಧರಪಂತರ ಅಂತಃಕರಣವಾಯಿತೆಂದು ಹೇಳಲಡ್ಡಿಯಿಲ್ಲ. ಶ್ರೀಧರಪಂತರು ಲೇಖನ ವ್ಯವಸಾಯದಲ್ಲಿ ಹೆಸರು ಪಡೆಯುವಂಥವರಿದ್ದರು. ಮೇಲಾಗಿ ಲೋಕಮಾನ್ಯರ ಮಗಂದಿರು. ಇಂಥ ಭಾಗ್ಯಶಾಲಿಗಳು ತೀರಿಕೊಂಡು ಬಹಳ ನಷ್ಟವಾಗಿದೆ. ಲೋಕಮಾನ್ಯರ ಮಹಾರಾಷ್ಟ್ರಕ್ಕಂತೂ ಇದೊಂದು ದೊಡ್ಡ ಕಲಂಕವೇ! ಕೇಸರಿ-ಲೋಕಮಾನ್ಯರ ಸಂಬಂಧಗಳನ್ನು ವಿಚಾರಿಸಿದರೆ, ಕವಿಶ್ರೇಷ್ಠ ಕಾಲಿದಾಸನ "ವಿಷಮಪ್ಯಮೃತಂ ಕಚಿದ್ಭವೇದಮೃತಂ ವಾ ವಿಷಮೀಶ್ವರೇಚ್ಛಯಾ" ಎಂಬ ಉಕ್ತಿಯು ನೆನಪಾಗುತ್ತದೆ. ಶ್ರೀಧರಪಂತರ ಕುಟುಂಬಕ್ಕೂ ಅಜ್ಞಾನ ಬಾಲ-ಬಾಲಿಕೆಯರಿಗೂ ಯಾರೂ ಏನೆಂದು ಸಮಾಧಾನ ಹೇಳುವದು?

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಗಾಲದ ಲಕ್ಷಣಗಳಾಗಹತ್ತಿವೆ. ಮೋಡಗಳ ಮೂಲಕ ನಿನ್ನಿನ ಚಂದ್ರಗ್ರಹಣ ದರ್ಶನವಾಗಲಿಲ್ಲ. ಭಾವಿಕರು ಸಮುದ್ರಸ್ನಾನ ಮಾಡಿ ಜಪತಪಾದಿಗಳನ್ನು ನಡಿಸಿದರು.

ಇಲ್ಲಿಯ ಮುನಿಸಿಪಾಲಿಟಿಯವರು ಇಲ್ಲಿಯ ದವಾಖಾನೆಗೆ ಶೃಂಗಾರ ಮಾಡುತ್ತಿದ್ದಾರೆ. ಮುಂಬದಿಗೆ 'ಪೋರ್ಚ' ಕಟ್ಟಹತ್ತಿದ್ದಾರೆ. ಆ ಕುರಿತು ಮಿ|| ಪುರುಷೋತ್ತಮ ರಾಮಪ್ಪ ಎಂಬ ಸ್ಪೆಶಲ್ ಇಂಜನಿಯರರಿಗೆ ನೇಮಿಸಿಕೊಳ್ಳಲಾಗಿದೆ. ಔಷಧ ಸಂಗ್ರಹವು ಸಾಕಷ್ಟಿಲ್ಲ. ಅದರ ಹೆಚ್ಚಳವಮೇಟಿನ ಡೌಲಿಗೆ ಬರಗಾಲವಿಲ್ಲ.

ಹೊನ್ನಾವರ ಮಾರ್ಗದ ರಚನೆಯು ಭರದಿಂದ ಸಾಗಿದೆ. ೪-೫ ಫೂಟು ಮಾರ್ಗದಿಂದ ಜನರಿಗೆ ಅನಾನುಕೂಲತೆ ಮಿಗಿಲಾಗುವದು. ಒಂದು ಬದಿಯಿಂದ ಇಬ್ಬರು ಇನ್ನೊಂದು ಬದಿಯಿಂದ ಇಬ್ಬರು ಬಂದರೆ ದಾಟಲು ಬಹಳ ಸಂಕಟ. ಮಾರ್ಗವಿಲ್ಲದಿದ್ದಾಗ ಗದ್ದೆ ಬದಿಗಾದರೂ ಇಳಿಯಬರುತ್ತಿತ್ತು; ಈಗ ಮಾರ್ಗ ಎತ್ತರ, ಗದ್ದೆಯಲ್ಲಿ ಇಳಿಯಲಾಗುವದಿಲ್ಲ. ಸಾರ್ವಜನಿಕ ಕೆಲಸಕ್ಕೆ ರಾ|| ಅಣ್ಣಪ್ಪಾ ರಾ. ಮುಜುಂದಾರ, ಮಹಾಬಳೇಶ್ವರ ಪೈ ಇಂಥ ದೊಡ್ಡವರು ಸಂತ ಸ್ಥಳ ಕೊಡಬೇಕಾಗಿತ್ತು. ಅದು ಒತ್ತಟ್ಟಿಗೇ ಉಳಿಯಿತು. ಸರಕಾರವು ಬಿಟ್ಟ ೮ ಫೂಟು ಸ್ಥಳದೊಳಗಿಂದ ಮುನಿಸಿಪಾಲಿಟಿಯು ಅಧ್ಯಕ್ಷ-ಮೆಂಬರರಿದ್ದು ೩-೪ ಫೂಟು ಸ್ಥಳವನ್ನು ಕಾಪಾಡಿಸಿಕೊಳ್ಳದೆ ಬಿಟ್ಟುದ್ದಾದರೂ ಏನು? ಗದ್ದೆ ಮಾರ್ಗಕ್ಕೆ ಕಾಲುವೆ ಬೇಕೋ? ಇಂಥ ನಡತೆಯಿಂದ ಸಾರ್ವಜನಿಕ ಕೆಲಸ ಮಾಡಲು ರಾ|| ಪೈ ದ ಅನರ್ಹರಾದಾರ ! ಅವರು ವಿಚಾರ ಮಾಡತಕ್ಕ ವಿಷಯ.

ಇಲ್ಲಿಯ ಗಿಬ್ಬ ಹೈಸ್ಕೂಲಿನಿಂದ ಈ ಕೆಳಗಿನ ವಿದ್ಯಾರ್ಥಿಗಳು ಸ್ಕೂಲ ಲೀವ್ಹಿಂಗ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದಾರಾಗಿ ಶಾಲೆಯ ಸುಪರಿಂಟೆಂಡೆಂಟರಾದ ರಾ|| ಎಸ್. ಎಸ್. ಕಾಮತರು ತಿಳಿಸುತ್ತಾರೆ. ಪಿಂಟೊ, ಜಿ ಪಿ ಪ್ರಭು, ಸ್ಟಿ. ಆರ್. ಬಳ್ಳೆ, ಶೆಣೈ, ಸೋಮೇಶ್ವರ, ಶಾಸ್ತ್ರಿ, ರಾಯ್ ಎಲ್. ಶ್ಯಾನಭಾಗ, ಎನ್ ಎಸ್ ಶ್ಯಾನಭಾಗ, ಎಸ್. ಎಚ್ ಪ್ರಭು, ಎಸ್. ಎಸ್. ಪ್ರಭು, ಶೆಣ್ವಿ, ವಿ. ಕೆ. ಶ್ಯಾನಭಾಗ.

ಇಲ್ಲಿಯ ಸಹಕಾರಿ ಬ್ಯಾಂಕಿನ ವಾರ್ಷಿಕ ಸಭೆಯು ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಬುಧವಾರಕ್ಕೆ ಸೇರಿ ಹಳೇ ಮೆನೇಜಿಂಗ ಕಮಿಟಿಯೇ ಪುನರುದ್ಧರಿಸಲ್ಪಟ್ಟಿತು. ರಾಜೀನಾಮೆ ಕೊಟ್ಟ ರಾ|| ಮಹಾಬಲ ಇವರ ಬದಲಿಗೆ ರಾ|| ಭಾಗ್ವತರೂ, ನಿಧನಪಟ್ಟ ರಾ|| ಲಕ್ಷ್ಮೀದಾಸ ಶೆಟ್ಟರ ಬದಲಿಗೆ ರಾ|| ವೇಲುಶೆಟ್ಟರೂ ನೇಮಿಸಲ್ಪಟ್ಟರು. ೭-೧೩-೦ ರಷ್ಟು ಲಾಭ ಹಂಚೋಣಾಯಿತು.

ಶ್ರೀ ಕ್ಷೇತ್ರ ಗೋಕರ್ಣದೊಳಗಿನ ವೇ|| ಮೂ|| ಸುಬ್ರಾಯ ನಾರಾಯಣ ಭಟ್ಟ ಹೊಸಮನೆ ಇವರು ಕ್ಷಯರೋಗ ವಿಕಾರದಿಂದ ಮೊನ್ನೆ ಶನಿವಾರಕ್ಕೆ ಕೈಲಾಸವಾಸಿಗಳಾದರು. ಶ್ರೀಯುತರು ಆಯುರ್ವೇದ ಔಷಧಕ್ರಮದಲ್ಲಿ ನಿಷ್ಣಾತರಿದ್ದು ಬಹಳೇ ಹೆಸರು ಪಡೆದಿದ್ದರು. ಇವರು ಗೋಕರ್ಣ ಸುಬ್ಬಣ್ಣ ವೈದ್ಯರೆಂದು ಎಲ್ಲೆಲ್ಲಿಯೂ ಖ್ಯಾತಿ ಪಡೆದಿದ್ದರು. ವೈದ್ಯರು ಅವಿವಾಹಿತರಾಗಿದ್ದರು. ಸುಬ್ಬಣ್ಣ ವೈದ್ಯರ ಆತ್ಮಕ್ಕೆ ಸದ್ಗತಿ ದೊರೆಯಲೆಂದು ಬಯಸುತ್ತೇವೆ.

ಹೊನ್ನಾವರ— ಮೋಡಗಳಾಗಹತ್ತಿವೆ. ಶುಕ್ರವಾರಕ್ಕೆ ಮಳೆ ಬಿತ್ತು. ಊರಲ್ಲಿ ಮೈಲಿಯದೆ.

ಗಾಂಧಿ ಬಂಡೂಕಿನ ಖಟ್ಲೆ ವಿಚಾರವು ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರಾದ ರಾ|| ಡಿವೇಕರರ ಕೋರ್ಟಿನಲ್ಲಿ ನಡೆಯಿತು. ಆರೋಪಿಗಳಿಗೆ ೧೦ ರೂಪಾಯಿ ಶಾಸನವಾಯಿತು. ಕೆಲಗರ್ವೇಲಿನ ಖಟ್ಲೆಯಲ್ಲಿ ರೂಪಾಯಿ ೧೦೦ ರಷ್ಟು ದಂಡವಾಗಿತ್ತು. ಅಷ್ಟು ದಂಡವಾಗಲಿಕ್ಕಿಲ್ಲ: ಆರೋಪಿಯು ಪುಣ್ಯ.

ರಾ|| ಪುತ್ತಪ್ಪ ಪದ್ಮನಾಭ ಕಾಮತ ಇವರ ಖೂನ ಜೀರ್ಣೋದ್ಧಾರ ವಿಚಾರಕ್ಕೆ ಪ್ರಾರಂಭವಾಯಿತು. ಪಂಚರ ನೇಮಣೂಕಿಯಾಯಿತು.

ಒಬ್ಬ ಪತ್ರಗಾರರು ಬರೆಯುವದೇನಂದರೆ:- ಇಲ್ಲಿಯ ಸಬೋರ್ಡಿನೇಟ ಜಜ್ಜ ಕೋರ್ಟಿನಲ್ಲಿ ಸಬಜಜ್ಜರು ನಂಬರು ನಿಕಾಲಿ ಮಾಡುವ ಒಂದು ದೊಡ್ಡ ಕಾರಖಾನೆಯನ್ನೇ ಪ್ರಾರಂಭಿಸಿದ್ದಾರೆ. ಯಾವದೇ ಕಾರಣದಿಂದ ಹೊಸ ನಂಬರುಗಳಲ್ಲಿ ಸಹ ಮುದ್ದತ್ತು ಸಿಗುವದು ಅಶಕ್ಯವಾಗಿರುತ್ತದೆ. ಪಕ್ಷಗಾರರ ಗೈರಹಾಜರಿಯ ಬಗ್ಗೆ ಕಿತ್ತೊಗೆದ ನಂಬರಗಳು ಈ ೧೦-೧೫ ದಿನಗಳಲ್ಲಿ ಲೆಕ್ಕ ಮಿಕ್ಕಿದವು. ಹೀಗೆ ನಂಬರ ನಿಕಾಲಿ ಮಾಡುವದಕ್ಕಿಂತ, ಎಲ್ಲ ನಂಬರ ಕಟ್ಟುಗಳನ್ನು ಒಮ್ಮೆಲೆ ಕಿಡಕಿಯೊಳಗಿಂದ ಹೊರಗೆ ಒಗೆಯಬಹುದು. ಸಬಜಜ್ಜರೆಂದರೆ ನಂಬರ ನಿಕಾಲಿ ಮಾಡುವ ಯಂತ್ರವಲ್ಲ; ನ್ಯಾಯದಾನವಾಗಬೇಕು. ಡಿಸ್ಟ್ರಿಕ್ಟ ಜಜ್ಜರಾದ- ರಾ|| ಓಕರವರು ಇತ್ತ ಸ್ವಲ್ಪ ನೋಡಬೇಕು. ಇತ್ಯಾದಿ.

ಕಾರವಾರ— ಬಹಳ ಶಕೆ. ಮಳೆಲಕ್ಷಣ ಇನ್ನೂ ಕಾಣುವದಿಲ್ಲ. ಕಲೆಕ್ಟರರೂ, ಕಾರವಾರ ಡಿವ್ಹಿಜನಿನ ಅಸಿಸ್ಟಂಟ ಕಲೆಕ್ಟರರೂ ಸಂಚಾರ ಮುಗಿಸಿ ಮರಳಿ ಬಂದಿದ್ದಾರೆ. ಮಗಾಯಿಸಿದ ಸ್ಥಳಗಳಿಗೆ ನಾಲ್ಯಾಭೋಗರು ಹೋಗಲಿಲ್ಲೆಂದು ಅವರಿಗೆ ಅಸಿಸ್ಟಂಟ ಕಲೆಕ್ಟರರು ಹದಶ್ಯತ ಮಾಡಿದರ . ಮೇಲಧಿಕಾರಿಗಳು ವಿಚಾರ ಮಾಡತಕ್ಕ ವಿಷಯ.

ಅಸಿಸ್ಟಂಟ ಕಲೆಕ್ಟರರಾದ ರಾ|| ವ್ಯಾಸರಕರು ೬೫ನೇ ನಂಬರ ಪ್ರಕರಣದಲ್ಲಿ ಆರು ತಿಂಗಳ ತನಕ ಮೋಟಾರು ಲ್ಯಾಸನ್ನು ರದ್ದು ಮಾಡಿದ್ದರು. ಸೆಶನ್ಸ ಜಜ್ಜರ ದಯಾರ್ದ್ರರಾಗಿ ಅದನ್ನು ೩ ತಿಂಗಳಿಗೆ ತಗ್ಗಿಸಿದರ . ಈ ಜಜ್ಜರು ಪ್ರಕರಣ ಕೇಳಿಕೊಂಡ ಕೂಡಲೆ ತೀರ್ಪನ್ನು ಬಾಯಿಂದ ಹೇಳುತ್ತಾರೆ. ಇದರಿಂದ ಸಂಬಂಧಪಟ್ಟವರಿಗೊಂದು ಅನುಕೂಲವಾಗುತ್ತದೆ.

ಮೆಟ್ರಿಕ್ಯುಲೇಶನ್ ಪರೀಕ್ಷೆಯ ಪರಿಣಾಮದಲ್ಲಿ ಇಲ್ಲಿಯ ಹೈಸ್ಕೂಲಿನಿಂದಲೂ, ಹೊರಗಿನಿಂದಲೂ ಹೋದ ೧೩೫ ವಿದ್ಯಾರ್ಥಿಗಳಲ್ಲಿ ಬರೇ ೩೫ ವಿದ್ಯಾರ್ಥಿಗಳು ತೇರ್ಗಡೆಹೊಂದಿದ್ದಾರೆ. ವಿದ್ಯಾರ್ಥಿನಿಯರೆಲ್ಲರೂ ನಾಪಾಸಾದರು. ಮೆಟ್ರಿಕ್ಯುಲೇಶನದಂಥ ಒಂದೇ ಪರೀಕ್ಷೆಗೆ ಎಲ್ಲ ವಿದ್ಯಾರ್ಥಿಗಳು ಕೂಡಿಕೊಳ್ಳುವದಕ್ಕಿಂತ ಔದ್ಯೋಗಿಕ ಹಾಗು ಕಲಾಕೌಶಲ್ಯಗಳ ಕಡೆ ತಮ್ಮ ಲಕ್ಷ ಸೆಳೆಯುವದುತ್ತಮ. ಎಲ್ಲರೂ ಒಂದೇ ತರಗತಿಯವರಿರುವದಿಲ್ಲ. ತಾಯಿ-ತಂದೆಗಳೂ, ಊರ ವಿಚಾರಿಗಳೂ ಇದನ್ನು ವಿಚಾರ ಮಾಡಿ ಆಯುಷ್ಯ ಹರಣಕ್ರಮಕ್ಕೆ ತಡೆಹಾಕಬೇಕಾಗಿ ಸೂಚನೆ

ಜಳಗಾಂವ ಮ್ಯುನಿಸಿಪಾಲಿಟಿಯಲ್ಲಿ ಕೈರಾಟಿ.

ಜಳಗಾಂವದ ಖಾದಿ ಬೋರ್ಡಿನ ಕಾರ್ಯದರ್ಶಿಗಳು ಅಲ್ಲಿಯ ಮ್ಯುನಿಸಿಪಾಲಿಟಿಯ ಶಾಲೆಗಳಲ್ಲಿ ನಡೆದ ಕೈರಾಟಿಯ ಪ್ರಗತಿಯನ್ನು ಮಹಾತ್ಮರಿಗೆ ಸಾದರಪಡಿಸಿದ್ದಾರೆ. ಅದರ ಮೇಲಿಂದ ತೋರುವದೇನಂದರೆ:—

ತಾ. ೧೫-೬-೩೭ನೇಯಿಂದ ೧೫-೩-೩೮ನೇ ವರೆಗಿನ ೮ ತಿಂಗಳುಗಳಲ್ಲಿ ೧೪೯ ಹುಡುಗಿಯರೂ, ೧೩೬ ಹುಡುಗರೂ ನೂಲುತ್ತಿದ್ದರು. ಕೆಲವರು ಬೋಗರಿಯ ಮೇಲೆ ನೂಲುತ್ತಿದ್ದರು. ಹಲವರು ಕೈರಾಟಿಯ ಮೇಲೆ ನೂಲುತ್ತಿದ್ದರು. ದಿನಾ ೩೫ ಮಿನಿಟುಗಳಿಂದ ೫೦ ಮಿನಿಟುಗಳ ತನಕ ನೂಲಲಾಗುತ್ತಿತ್ತು. ಅಂತು ೪೪೦೦೦೦ ಗಜ ನೂಲು ತಯಾರಾಯಿತು. ಬೋಗರಿಯ ಮೇಲೆ ಹಚ್ಚೆಂದರೆ ತಾಸಿಗೆ ೧೨೫ ಗಜ ನೂಲೂ, ಕೈರಾಟಿಯ ಮೇಲೆ ೩೨೫ ಗಜ ನೂಲೂ ತಯಾರಾಯಿತು. ಕೈರಾಟಿಯ ಮೇಲೆ ನೂಲುವ ಹುಡುಗರು ತಮ್ಮ ಹತ್ತಿಯನ್ನು ತಾವೇ ಹಿಂಜಿಕೊಂಡಿದ್ದರು.

ಬಾರ್ದೋಲಿಯ ವೃತ್ತಾಂತ.

ಬಾರ್ದೋಲಿಯ ಸತ್ಯಾಗ್ರಹ ಸಮರಕ್ಕೆ ಅನಪೇಕ್ಷಿತವಾದ ಚೈತನ್ಯವು ಪ್ರಾಪ್ತವಾಗಹತ್ತಿದೆ. ಜಪ್ತಿ ಅಧಿಕಾರಿಗಳ ದುಷ್ಟತನವು ಮಿಗಿಲಾದ ಹಾಗೆ ಸತ್ಯಾಗ್ರಹಿಗಳ ಸಾತ್ವಿಕ ಬಲವು ಅಭಿವೃದ್ಧಿಗೈಯ್ಯುತ್ತಲಿದೆ. ಸರಭೋಣ ಗ್ರಾಮದಲ್ಲಿ ಜಪ್ತಿ ಮಾಡುವ ಹೊಸ ಕ್ರಮದ ಪ್ರಯೋಗವಾಯಿತು. ಸರ್ಕಲ್ ಇನ್‌ಸ್ಪೆಕ್ಟರರು ಮನೆಯ ಮುಂದುಗಡೆ ಹಾಗು ಪಠಾಣದ್ವಯರು ಹಿಂದುಗಡೆ, ಹೀಗೆ ರಾತ್ರಿ ೨॥ ಘಂಟೆಯಿಂದ ೬ ಘಂಟೆಯ ತನಕ ಕಾಯ್ದುಕೊಂಡರು. ಆದರೆ, ಮನೆಯವರು ಮನೆಬಾಗಿಲು ತೆರೆಯಲಿಲ್ಲ. ಅಲ್ಲಿ ಒಬ್ಬ ಬನ್ಯನವರು ತಮ್ಮ ಹೆಂಡತಿಯೊಡನೆ ಇದ್ದಾರೆ. ಬನ್ಯನವರ ಪ್ರಿಯವು ಹಿತ ಕರುವ; ಮಾದಕಿಯು ದನಮಾಡುವವನ್ನು ಜಪಿಸುತ್ತ ಮೇಲುಪ್ಪರಿಗೆಯ ಮೇಲೆ ಕೂತುಕೊಂಡಿದ್ದಳು. ಈ ಸುದ್ದಿಯು ಶ್ರೀ॥ ವಲ್ಲಭಭಾಯಿ ಪಟೇಲರಿಗೆ ತಿಳಿದೊಡನೆ ಅವರು ಅತ್ತ ಹೋಗಿ ಸಮಾಚಾರ ಕೇಳಿದರು. ಅವಳು ಒಂದೂ ಅಭದ್ರ ಶಬ್ದವನ್ನು ಪಠಾಣರಿಗೆ ಅಂದಿಲ್ಲ; ವ್ಯಸನಪ್ರದರ್ಶನ ಮಾಡಲಿಲ್ಲ. ಅವರು ಹೀಗೆ ತಮ್ಮ ಸಾವೆಗೆ ಮುತ್ತಿಗೆ ಹಾಕಿದ್ದು ಉಪಕಾರವೆಂದಳು. ಸಂಜೆ ೬ ಘಂಟೆಗೆ ಮುತ್ತಿಗೆಯು ಅಂತ್ಯವಾಯಿತು

ರಾಯಂ ಗ್ರಾಮದೊಳಗಿನ ಒಂದು ಸಂಗತಿ. ಒಬ್ಬರ ಫೌಜದಾರರು ಪಂಚರಾಗಲು ಕರೆದಿದ್ದರಂತೆ! ಅವರು ಬರಲಿಲ್ಲ ಅದಕ್ಕಾಗಿ ಅವರ ಮೇಲೆ ಖಟ್ಲೆಯಾಯಿತು. "ನನಗೆ ಬುದ್ಧಿ ಬಂದು ೫೦ ವರುಷಗಳಾದವು. ಈ ತನಕ ನನ್ನ ಗ್ರಾಮದಿಂದ ಒಬ್ಬರೂ ಕೋರ್ಟಿನ ಮೆಟ್ಟಿಲೇರಲಿಲ್ಲ. ನಮ್ಮೊಳಗಿನ ಕಲಹಗಳನ್ನು ನಾವೇ ತೀರ್ಮಾನಿಸಿಕೊಂಡಿದ್ದೇವೆ. ನಾನು ಕೋರ್ಟಿನಲ್ಲಿ ಹೋಗುವದು ಇದೇ ಮೊದಲನೇ ಬಾರಿ." ಎಂದು ಆತನು ಉದ್ಗರಿಸಿ ಮೆಜಿಸ್ಟ್ರೇಟ ಕೋರ್ಟಿಗೆ ನಡೆದನು. ಪಂಚರಾಗಲು ಬೇಕೆ ಹುಕುಮು ಕೊಟ್ಟಿತ್ತೆಂದು ಫೌಜದಾರರು ಹೇಳಿದ್ದನ್ನು ಕೇಳಿ "ದೇವಸಾಕ್ಷಿಯಾಗಿ ನೀವು ಈ ಮಾತನ್ನು ಹೇಳುತ್ತೀರೋ?" ಎಂದು ಆತನು ಕೇಳಿದನು. ಬೇಕೆ ಹುಕುಮು ಆತನಿಗೆ ಕೊಟ್ಟಿಲ್ಲಾಗಿತ್ತು.

ಜುಬಾಕಿಯ ವ್ಯಾಕನ್ಸಗಳು ರದ್ದುಪಡಿಸುವ ರಭಸ ನಡೆದದೆ. ಗಾಡಿ, ಜ್ವಾರಿ, ಹುಲ್ಲು, ಮಂಚ ಮೊದಲಾದ ಜಂದಿಗಿ ಜಪ್ತಿಯಾಗುತ್ತಿದೆ. ಆದರೆ ಅದನ್ನು ಕೊಳ್ಳುವವರಿಲ್ಲ. ಹೀಗಾಗಿ ೧೫೦ ರೂಪಾಯಿಯ ಗಾಡಿಯು ೧೦ ರೂಪಾಯಿಗಳಿಗೆ ಲಿಲಾವು ಮಾಡಬೇಕಾಯಿತು.

ಮಹಾಬಲೇಶ್ವರದಲ್ಲಿ ಅಧಿಕಾರಿಗಳ ಕೂಟ ನಡೆದಿರುವದಂತೆ! ಕಮಿಶನರರಾದ ಮಿ॥ ಸ್ಮಾರ್ಟರವರು ಗವ್ಹರ್ನರರ ಬಳಿಗೆ ಹಾಗು ಮೇಲಧಿಕಾರಿಗಳ ಬಳಿಗೆ ಆಲೋಚನ ಮಾಡುತ್ತಿದ್ದಾರೆ. ರಿವಿನಿಯೂ ಮೆಂಬರ ರಾ॥ ಹರಿಲಾಲ ದೇಸಾಯಿಯವರು ಸಂಧಾನ ಮಾಡಲು ಪ್ರಯತ್ನಪಡುತ್ತಲಿದ್ದಾರೆ. ಅಹಮದಾಬಾದಿನಲ್ಲಿ ದೇಸಾಯಿ ಪ್ರದರ್ಶನವಾಗುತ್ತಿದೆ. ಅದನ್ನು ಬಹಿಷ್ಕರಿಸುವ ವಿಚಾರವು ನಡೆದದೆ. ಇದೊಂದು ತಮಾಷೆಯೆಂದೂ ಹೇಳಲಾಗುತ್ತದೆ. ಈ ಕಾರಣ ಅಧಿಕಾರಿಗಳು ಚಿಂತೆಯಲ್ಲಿ ಬಿದ್ದಿದ್ದಾರೆ.

ಸೂರತ ಪಟ್ಟಣದಲ್ಲಿ ಬೇಸಾಯಗಾರರ ಸಭೆಯಾಯಿತು. ೧೦೦೦೦ ಸಾವಿರಕ್ಕೆ ಮಿಕ್ಕಿ ಸಭಾಸದರು ಕೂಡಿದ್ದರು. ಬಾರ್ದೋಲಿಯವರಿಗೆ ಮನಃಪೂರ್ವಕ ನೆರವಾಗಬೇಕೆಂಬ ನಿರ್ಧಾರವಾಯಿತು. ಕಮೀಶನರರು ಮಾಫಿ ಬೇಡಬೇಕಾಗಿಯೂ ನಿರ್ಧಾರವಾಗಿದೆ. ಸಭೆಯಲ್ಲಿಯೇ ಸತ್ಯಾಗ್ರಹ ನಿಧಿಯು ಸಂಗ್ರಹಿಸಲ್ಪಟ್ಟಿತು. ಅಧ್ಯಕ್ಷರಾದ ಶ್ರೀ॥ ದಯಾರಾಮದಾಸ ದೌಲತರಾಮವರು ಸರಕಾರದ ಆಕ್ಷೇಪಗಳನ್ನು ಸಪ್ರಮಾಣ ಖಂಡಿಸಿ ದುರಭಿಮಾನದಿಂದಲೇ ಸರಕಾರವು ಬಾರ್ದೋಲಿಯವರ ಮೇಲೆ ಬಲಾತ್ಕಾರ ಮಾಡುತ್ತದೆಂದು ಅವರು ಸಿದ್ಧಪಡಿಸಿದರು. ಶ್ರೀ॥ ವಲ್ಲಭಭಾಯಿ ಪಟೇಲರು ಗ್ರಾಮಸಂಚಾರ ಮಾಡುತ್ತಿದ್ದಾರೆ ಶ್ರೀ॥ ವಲ್ಲಭಭಾಯಿಯವರಿಗೆ ಪ್ರತಿ ಗ್ರಾಮದಲ್ಲಿ ಊರವರು ಉತ್ಸಾಹಭರಿತರಾಗಿ ಸ್ವಾಗತ ಕೊಡುತ್ತಿದ್ದಾರೆ. ಸಂಚಾರ ಪತ್ರಮಾಡಿ ಜನರು ಸತ್ಯಾಗ್ರಹಿಗಳಿಗೆ ಪ್ರತಿಜ್ಞೆಯನ್ನು ಭಂಗಪಡಿಸಲು ಪ್ರಯತ್ನಪಡುವ ಜನರನ್ನುದ್ದೇಶಿಸಿ ಹೇಳಿದ್ದೇನೆಂದರೆ:— "ನೀವು ಇದನ್ನು ಸತ್ತ ಹಾಗೆಯೇ. ನಮ್ಮನ್ನು ಕೊಲ್ಲಲು ಪ್ರಯತ್ನಪಡಬೇಡಿ. ನಿರ್ಧಾರಪಾಲನವೇ ನಮಗೆ ಪ್ರಾಣವು; ಅದರ ಭಂಗವೇ ಮರಣವು; ನಿಮ್ಮ ನೌಕರಿಯ ಸಲುವಾಗಿ ನೀವು ಇಷ್ಟೆಲ್ಲ ಹೇಳುತ್ತೀರಿ." ರೋಟಾ ಗ್ರಾಮದಲ್ಲಿ ಮಹಾಜನ ಎಂಬೊಬ್ಬ ಡಾಕ್ಟರರಿದ್ದಾರೆ. ಅವರು ತಮ್ಮ ತೀರ್ವ ಕೊಟ್ಟಿದ್ದಲ್ಲದೆ, ಜಪ್ತದ ಕೆಲವು ಭೂಮಿಯನ್ನು ಪಡೆಕೊಂಡಿದ್ದಾರೆ. ಆದರೆ, ಈ ಕೃತ್ಯದಲ್ಲಿ ಅವರ ಆಪ್ತರ್ಯಾರೂ ಮೆಲುಗಾರರಿಲ್ಲ. ಆದ್ದರಿಂದ, ಈ ಮಹಾಜನಯವರಿಗೂ ಎಂದಿಗೂ ಸೌಖ್ಯವಿಲ್ಲದಿರುವಾಗಿ ಅವರ ಬೆಗಪ್ಪನವರು ಶ್ರೀ॥ ವಲ್ಲಭಭಾಯಿಯವರಿಗೆ ಆಶ್ವಾಸಿಸಿದರು. ಸತ್ಯಾಗ್ರಹ ನಿಧಿಗೆ ಸಹಾಯವನ್ನು ಮಾಡಿದರು.

ಮುಂಬಯಿಯ ಮುಸಲ್ಮಾನರು ಸಭೆಸೇರಿ ಬಾರ್ದೋಲಿ ಸತ್ಯಾಗ್ರಹವನ್ನು ಪ್ರಶಂಸಿಸಿದರು. ಭಡೋಚದಲ್ಲಿಯೂ ಸತ್ಯಾಗ್ರಹ ಸಹಾನುಭೂತಿಯು ವ್ಯಕ್ತಪಡಿಸಲಾಯಿತು. ಲಾಹೋರಿನ ಶಿರೋಮಣಿ ಅಕಾಲಿದಳದ ಅಧ್ಯಕ್ಷರಾದ ಸರದಾರ ಗೋಪಾಲಸಿಂಗರವರು ಗಾಂಧಿಜಿಯವರಿಗೆ ಪತ್ರ ಬರೆದು ಬಾರ್ದೋಲಿ ಸತ್ಯಾಗ್ರಹಿಗಳೊಡನೆ ಸಹಾನುಭೂತಿಯನ್ನು ವ್ಯಕ್ತಪಡಿಸಿ, ಅವಶ್ಯ ಬಿದ್ದರೆ ತಮ್ಮ ಸಂಸ್ಥೆಯು ಪ್ರತ್ಯಕ್ಷ ಸತ್ಯಾಗ್ರಹ ಸಮರಾಂಗಣದಲ್ಲಿ ಸೇರಲಿಕ್ಕೆ ಸಿದ್ಧವಿರುವದಾಗಿ ಬರೆದಿದ್ದಾರೆ. ಮುಂಬಯಿ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಿಂಧದ ಮುಸಲ್ಮಾನ ಸಭಾಸದರಾದ ರಾ॥ ಭುಟ್ಟೋ—ಕುಂದ್ರೋಲಕರರೂ, ಬ್ರಾಹ್ಮಣೇತರ ಸಭಾಸದರಾದ ರಾ॥ ದೋಂಗರಸಿಂಗ ಪಟೇಲರವರೂ ಹೊಸ ಚೌಕಶಿ ಮಾಡುವದು ಅವಶ್ಯವೆಂದು ಅಭಿಪ್ರಾಯಪಟ್ಟಿದ್ದಾರೆ. ಸೋಮವಾರಕ್ಕೆ ಪಂಡಿತ ಮದನಮೋಹನ ಮಾಲವೀಯರವರ ಅಧ್ಯಕ್ಷತೆಯಲ್ಲಿ ಮುಂಬಯಿ ನಾಗರಿಕರ ಪ್ರಚಂಡ ಸಭೆಯಾಯಿತು. ಬಾರ್ದೋಲಿಯವರ ಕಾದಾಟವು ಸತ್ಪಕ್ಷದೆಂದೂ, ಅದನ್ನು ಪಕ್ಷತುಲ್ಯ ಬಲಾತ್ಕಾರಗಳಿಂದ ನಿಮೂರ್ಲಿಸುವದು ಯಾವದೇ ಸರಕಾರಕ್ಕೆ ಅಶಕ್ಯವೆಂದೂ ಪಂಡಿತಜೀಯವರು ಉದ್ಗರಿಸಿದರು. ಸಭೆಯಲ್ಲಿ ಸತ್ಯಾಗ್ರಹ ನಿಧಿಗೆ ರೂ ೩೦೦೦ ಕ್ಕೆ ಮಿಕ್ಕಿ ದ್ರವ್ಯಸಂಚಯವಾಯಿತು. ಒಬ್ಬರು ಒಂದು ಚಿನ್ನದ ಉಂಗುರವನ್ನು ಕೊಟ್ಟರು, ಒಬ್ಬ ಸ್ತ್ರೀಯು ಕೈಯ ಚಿನ್ನದ ಬಳೆಯನ್ನೊಂದು ಅರ್ಪಿಸಿದಳು. ಮುಂಬಯಿಯಲ್ಲಿ ಕಳೆದ ವಾರ ಈ ಕುರಿತು ಇನ್ನು ಬೇರೆ ಸಭೆಗಳಾದವು. ಮುಂಬಯಿಯ ಬೆರಿಷ್ಟರ ಬಾಳಾಭಾಯಿ ದೇಸಾಯಿಯವರು ೫ ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವ ಸಂಕಲ್ಪ ಮಾಡಿ ಪ್ರಯತ್ನ ಮಾಡುತ್ತಿದ್ದಾರೆ. ಬಿರ್ಖೆಂಡ ಅಮ್ಮಾನವರು ಮೊನ್ನೆ ಸನಿವಾರಕ್ಕೆ ವಿಲಾಯತಿಗೆ ಹೋದರು. ಆ ಸಮಯ ಅವರು ಹೇಳಿದ್ದೇನಂದರೆ:— ಬಾರ್ದೋಲಿಯ ಕಾದಾಟವನ್ನು ಅನುಕರಿಸಿರಿ. ಬಾರ್ದೋಲಿಯವರು ಕಷ್ಟಗಳನ್ನು ಅನುಭವಿಸಹಿಲ್ಲರು ಆದರಿಂದ ಅವರು ವಿಜಯ ಹೊಂದುವರು. ಕರಾಚಿ, ನಡಿಯಾದ, ಮುಂಬಯಿ ಮುಂತಾದ ಕಡೆಗಳಿಂದ ಜನರು ಬಾರ್ದೋಲಿಗೆ ಹೋಗುತ್ತಿದ್ದಾರೆ. ಮುಂಬಯಿಯ ಮೂವ ಪಾರ್ಸೀ ವಿದ್ಯಾರ್ಥಿಗಳು ಅತ್ತ ಹೋಗಿದ್ದರು. ಸತ್ಯಾಗ್ರಹಿಗಳ ಕಷ್ಟವನ್ನೂ, ಮನೋನಿರ್ಧಾರವನ್ನೂ ನೋಡಿ ಅವರಿಗೆ ಕಣ್ಣೀರು ಬಂತು. ಕಾಯಿದೆ ಕೌನ್ಸಿಲಿನ ಸಭಾಸದಸ್ಥಾನವನ್ನು ತ್ಯಜಿಸಿದ ಶ್ರೀ॥ ಅಮೃತಲಾಲ ಶೇಟರವರು ವೆಲೋಡ ಗ್ರಾಮದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದಾರೆ

ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ॥ ವಿಠ್ಠಲಭಾಯಿ ಪಟೇಲರವರು, ಸತ್ಯಾಗ್ರಹ ಸಮರವು ನಡೆಯುವ ತನಕ ತಿಂಗಳಿಗೆ ೧೦೦೦ ರೂಪಾಯಿಗಳನ್ನು ಕೊಡುವ ವಚನ ಕೊಟ್ಟಿದ್ದಾರೆ. "ಬಾರ್ದೋಲಿಯ ಕಾದಾಟವನ್ನು ನಾನು ಪರಿಶೀಲಿಸುತ್ತಿದ್ದೇನೆ. ಪ್ರಜೆಗಳ ಹೇಳಿಕೆಯು ನ್ಯಾಯವಾದದ್ದು. ಇತ್ತಿದು ಅಧಿಕಾರಿಗಳು ಅಹಂಕೃತ್ಯಗಳಿಗೀಡಾಗಿದ್ದಾರೆ. ಪ್ರಸಂಗ ಬಿದ್ದರೆ, ವಗೈರೆ ಕೊಡುವದಕ್ಕಿಂತ ವಿಶೇಷ ಕಾರ್ಯ ಮಾಡಲು ಹಿಂಜರಿಯಲಿಕ್ಕಿಲ್ಲ. ಇತ್ಯಾದಿ ಪತ್ರವನ್ನು ಮಹಾತ್ಮರಿಗೆ ಬರೆದಿದ್ದಾರೆ

ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಲೇಖ ಬರೆದು ಅಖಿಲ ಭಾರತ ಖಂಡಕ್ಕೆ ನೆರವಾಗಲಿಕ್ಕೆ ಬೋಧಿಸಿದ್ದಾರೆ. ಬಾರ್ದೋಲಿಯವರಿಗೆ ಸ್ವಾಭಿಮಾನವನ್ನು ಕಾಪಾಡಿಕೊಳ್ಳಲು ಹುರಿದುಂಬಿಸಿದ್ದಾರೆ. ದಾನದ ವಿಚಾರ ಮಾಡಿದರೆ, ಮರಣವು ಸಹ ಶ್ರೇಯಸ್ಕರವಾದದ್ದು. ಕಷ್ಟಗಳನ್ನು ಸಹಿಸಲಾಗದಿದ್ದರೆ, ದೇಹಾಂತರ ಮಾಡಿರಿ. ಪ್ರಜಾಪೀಡನೆಯು ಒಂದು ತರದ ಪ್ಲೇಗು. ಬಲಾತ್ಕಾರವಾಗುವಾಗ ದೇಹಾಂತರ ಮಾಡುವ ಉದಾಹರಣೆಗಳು ಇತಿಹಾಸದಲ್ಲಿ ಇವೆ. ಇದೇ ಬರುವ ಜೂನ ೧೨ನೇ ತಾರೀಖಿಗೆ ಸಭೆ ಸೇರಿಸಿ ಬಾರ್ದೋಲಿಯ ಪ್ರಶ್ನೆಯ ಮೇಲೆ ಜನರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಬೇಕು. ಇತ್ಯಾದಿ ಬರೆದಿದ್ದಾರೆ. ಅಂತು ಸತ್ಯಾಗ್ರಹ ಸಮರಕ್ಕೆ ಈಗ ಪುಟವೇರುತ್ತಿದೆ. ಬಾರ್ದೋಲಿಯ ಸತ್ವಪರೀಕ್ಷೆಯೂ, ಸರಕಾರದ ಸಾಮರ್ಥ್ಯಪರೀಕ್ಷೆಯೂ ಒಮ್ಮೆಲೇ ನಡೆಯುತ್ತಲಿದೆ. ಎಲ್ಲರೂ ಈ ಕಡೆ ದೃಷ್ಟಿ ನೋಡುತ್ತಿದ್ದಾರೆ. ಅಫಘಾನಿಸ್ಥಾನದ ವರ್ತಮಾನಪತ್ರಿಕೆಗಳಲ್ಲಿಯೂ ಈ ಸುದ್ದಿ ಪ್ರಕಟವಾಗಿದೆ. ರಾಷ್ಟ್ರೀಯರು ಬಾರ್ದೋಲಿಯಲ್ಲಿ ಗೆದ್ದರೆ, ಇಂಥ ಪ್ರಯೋಗಗಳು ಇತರ ಕಡೆಗಳಲ್ಲಿ ನಡಿಸಲ್ಪಡುವವೆಂದು ಆ ಸಮಾಚಾರ ಪತ್ರಿಕೆಯವರ ಅಭಿಪ್ರಾಯ.

ಪ್ರಚಂಡ ಸೋಡ್ತಿ.

ಮಂಗಳೂರದಲ್ಲಿರುವ ಕೆನರಾ ಹೈಸ್ಕೂಲ ಮತ್ತು ಕೆನರಾ ಬಾಲಿಕೆಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮ್ಯಾಜಿಸ್ಟ್ರೇಟರ ಅಪ್ಪಣೆ ಪಡೆದು ಪ್ರಮುಖ ಗೃಹಸ್ಥರ ನೇತೃತ್ವದಲ್ಲಿ ಒಂದು ಸೋಡ್ತಿ ತೆಗೆಯಲಾಗುವದು.

ಸೋಡ್ತಿಯು ಬಂದವಲು ೧ ಲಕ್ಷ ಇವರೊಳಗಿಂದ ಖರ್ಚಿನ ಬಗ್ಗೆ ೧೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ, ಉಳಿದ ಹಣದೊಳಗಿಂದ ೪೦ ಸಾವಿರ ರೂಪಾಯಿಗಳನ್ನು ಶಾಲೆಗಳಿಗೆ ಕೊಟ್ಟು, ೪೫ ಸಾವಿರ ರೂಪಾಯಿ ಬೆಲೆಯ ೩೨೪೬ ಇನಾಮುಗಳು ಈ ಕೆಳಗಿನಂತೆ ಹಂಚಲ್ಪಡುವವು.

(೧) ಮೊದಲನೇ ಬಹುಮಾನವು ರೂ ೧೨॥ ಸಾವಿರದ್ದು;
(೨) ರೂ. ೫೦೦೦ ದ್ದು;
(೩) ೧೦೦೦ ರೂಪಾಯಿಗಳ ೩ ಇನಾಮುಗಳು;
(೪) ೫೦೦ ರೂಪಾಯಿಗಳ ೫ ಇನಾಮುಗಳು;
(೫) ೨೫೦ ರೂಪಾಯಿಗಳ ೬ ಇನಾಮುಗಳು;
(೬) ೧೦೦ ರೂಪಾಯಿಗಳ ೧೦ ಇನಾಮುಗಳು,
(೭) ೫೦ ರೂಪಾಯಿಗಳ ೨೦ ಇನಾಮುಗಳು;
(೮) ೨೦ ರೂಪಾಯಿಗಳ ೧೦೦ ಇನಾಮುಗಳು;
(೯) ೧೦ ರೂಪಾಯಿಗಳ ೮೦೦ ಇನಾಮುಗಳು;
(೧೦) ೫ ರೂಪಾಯಿಗಳ ೨೩೦೦ ಇನಾಮುಗಳು;

ಟಿಕೇಟುಗಳು ತಾ. ೪—೧—೨೯ ನೇ ತನಕ ಸಿಗುವವು. ಸೋಡ್ತಿಯು ತಾ. ೨೬—೧—೨೯ ನೇಗೆ ತೆಗೆಯಲಾಗುವದು. ಟಿಕೇಟಿನ ಬೆಲೆ ಬರೇ ೧ ರೂಪಾಯಿ. ೨೪ ಟಿಕೆಟುಗಳನ್ನು ಮಾರುವವರಿಗೆ ಪರಿಶ್ರಮದ ಬಗ್ಗೆ ೧ ಟಿಕೇಟು ಉಚಿತವಾಗಿ ಕೊಡಲ್ಪಡುವದು. ಎಲ್ಲರಿಗಿಂತಲೂ ಹೆಚ್ಚು ಟಿಕೇಟುಗಳನ್ನು ಮಾರುವವರಿಗೆ ವಿಶೇಷ ಬಹುಮಾನಗಳು ಸಿಗುವವು. ಲೋಕಾಶ್ರಯಕ್ಕೆ ಪಾತ್ರವಾದ ೨ ಸಂಸ್ಥೆಗಳಿಗೆ ನೆರವಾದ ಶ್ರೇಯಸ್ಸು ದೊರಕುವದು; ಕೆನರಾ ಹೈಸ್ಕೂಲಿನಲ್ಲಿ ಕೈಗಾರಿಕೆಯ ಶಾಖೆಯನ್ನು ಸ್ಥಾಪಿಸಲಿಕ್ಕೆ ಅನುಕೂಲತೆ ಮಾಡಿಕೊಟ್ಟಂತಾಗುವದು.

ಅಲ್ಲಲ್ಲಿ ಏಜಂಟರು ಬೇಕು. ಏಜಂಟರಾಗಲಿಚ್ಛಿಸುವರು ಈ ಕೆಳಗಿನ ಪತ್ತೆಯ ಮೇಲೆ ಬರೆಯಬೇಕು.

ಮಂಗಳೂರ, ತಾ.೨೧-೩-೧೯೨೮.

ಬಿ. ಮಂಜನಾಥ ಬಾಳಿಗಾ,
ಹಿನರರಿ ಸೆಕ್ರೆಟರಿ,
ಕೆನರಾ ಹೈಸ್ಕೂಲ ರೆಫಲ್ ಕಮೀಟಿ,
ಪ್ರಿಟೋ ಲೇನ, ಫಲನೀರ, ಮಂಗಳೂರು.
ದಕ್ಷಿಣ ಕನ್ನಡ.

ಮಹಾತ್ಮರ ಆತ್ಮಚರಿತ್ರೆ.

(೬) ಪ್ರೇಮಸಂಗ್ರಹ ಪ್ರಯತ್ನ.

ನಾವು ಪುಣೆಗೆ ಬಂದು ಮುಟ್ಟಿದೆವು. ಶ್ರಾದ್ಧಾದಿ ಉತ್ತರಕ್ರಿಯೆಗಳಾದ ಬಳಿಕ, ಭಾರತಸೇವಕ ಸಮಾಜದ ಉತ್ತರ ವ್ಯವಸ್ಥೆಯನ್ನು ನಾವು ಚರ್ಚಿಸಹತ್ತಿದೆವು. ನಾನು ಸಮಾಜದಲ್ಲಿ ಸೇರಬೇಕೋ, ಬೇಡವೋ ಎಂಬ ಪ್ರಶ್ನೆಯ ಚರ್ಚೆಯೂ ಆಯಿತು. ನನ್ನ ಸಭಾಸದತ್ವದ ವಿಷಯವು ನನಗೆ ಬಹಳ ಉಪದ್ರವ ಕೊಟ್ಟಿತು. ಗೋಖಲೆಯವರು ಇರುವ ತನಕ ನನಗೆ ಸಭಾಸದನಾಗಿ ಸೇರುವದವಶ್ಯವಿದ್ದಿಲ್ಲ. ಗೋಖಲೆಯವರ ಅಪೇಕ್ಷೆಗೆ ವಿಧೇಯನಾಗಿ ನಡಕೊಳ್ಳುವದಷ್ಟೇ ನನ್ನ ಕೆಲಸವಿತ್ತು, ಹಾಗೆ ನಡಕೊಳ್ಳುವದೇ ನನಗೆ ಪ್ರೀತಿ. ಭಾರತೀಯ ರಾಜಕಾರಣವು ತೂಫಾನು ಎದ್ದ ಸಾಗರದಂತಿತ್ತು. ಅಲ್ಲಿ ನನಗೆ ಸರಿದಾರಿ ತೋರಿಸುವ ಮಾರ್ಗದರ್ಶಕರು ಬೇಕಾಗಿದ್ದರು. ಗೋಖಲೆಯವರು ಅಂಥ ಮಾರ್ಗದರ್ಶಕರಾಗಿದ್ದರು. ಅವರ ಸಂರಕ್ಷಣೆಯಲ್ಲಿ ನಾನು ಕ್ಷೇಮದಿಂದಿದ್ದೆ. ಈಗ ಅವರು ತೀರಿಕೊಂಡದ್ದರಿಂದ ನನ್ನನ್ನೇ ನಾನು ನಂಬಿಕೊಂಡಿರಬೇಕಾಗಿತ್ತು. ಆದರಿಂದ ಸಮಾಜದಲ್ಲಿ ಸೇರುವದು ನನ್ನ ಕರ್ತವ್ಯವೆನಿಸಿತು. ಗೋಖಲೆಯವರ ಆತ್ಮವು ಇದರಿಂದ ಪ್ರಸನ್ನವಾಗುವದೆಂದು ನನಗನಿಸಿತು. ಹೀಗೆ ನಿಶ್ಚಯ ಮನಸ್ಸಿನಿಂದಲೂ, ಸ್ಥಿರಚಿತ್ತದಿಂದಲೂ ನಾನು ಸಮಾಜದವರೊಡನೆ ಪ್ರೇಮಸಂಗ್ರಹ ಮಾಡಲುದ್ಯುಕ್ತನಾದೆನು.

ಈ ಪ್ರಸಂಗದಲ್ಲಿ ಈ ಸಮಾಜದ ಬಹಳ ಸಭಾಸದರು ಪುಣೆಯಲ್ಲಿದ್ದರು. ಅವರೊಡನೆ ನಾನು ತರ್ಕಿಸಹತ್ತಿದೆನು. ನನ್ನ ವಿಷಯ ಇರುವ ಕಿಂತುಗಳನ್ನು ಪರಿಹರಿಸಲೆತ್ನಿಸಿದೆನು. ಆದರೆ, ಅವರೊಳಗೆ ದುರಭಿಪ್ರಾಯವಾಯಿತು. ಒಂದು ಪಕ್ಷದವರು ಸಮಾಜದಲ್ಲಿ ನನ್ನನ್ನು ಸೇರಿಸಿಕೊಳ್ಳಲೊಪ್ಪಿದರು, ಎರಡನೇ ಪಕ್ಷದವರು ತೀವ್ರ ವಿರೋಧ ಮಾಡಿದರು. ನನ್ನ ಮೇಲೆ ಎಲ್ಲ ಸಭಾಸದರಿಗೂ ಪ್ರೀತಿ ಇತ್ತು. ಆದರೆ, ಸಮಾಜಕ್ಕೆ ಅದಕ್ಕಿಂತ ಹೆಚ್ಚು ಅಥವಾ ಅಷ್ಟೇ ಅವರು ನಿಷ್ಠಾವಂತರಾಗಿದ್ದರು.

ಈ ಕಾರಣ ನಮ್ಮ ವಾದ-ವಿವಾದದಲ್ಲಿ ತೀಕ್ಷ್ಣ ನುಡಿಗಳು ನಡೆಯದೆ ತಾತ್ವಿಕ ವಿಚಾರಗಳ ಚರ್ಚೆಯೇ ನಡೆಯಿತು. ನನ್ನ ಧ್ಯೇಯಗಳೂ ಸಮಾಜದ ಧ್ಯೇಯಗಳೂ ಮಹತ್ವದ ವಿಷಯಗಳಲ್ಲಿ ಉತ್ತರ-ದಕ್ಷಿಣ ಧ್ರುವಗಳಷ್ಟು ಭಿನ್ನವಾಗಿರುವದರಿಂದ ನಾನು ಸಮಾಜದಲ್ಲಿ ಸೇರಿಕೊಂಡರೆ, ಸಮಾಜದ ಸಾಧ್ಯಕ್ಕೇ ಬಾಧೆ ತಟ್ಟೀತೆಂದು ವಿರೋಧಕರ ಅಭಿಪ್ರಾಯವಾಯಿತು. ಈ ಗಂಡಾಂತರವನ್ನು ಸ್ವೀಕರಿಸಲು ಅವರು ತಯಾರಿದ್ದಿಲ್ಲ. ಇದೇನು ಅಸ್ವಾಭಾವಿಕವಲ್ಲ.

ಬಹು ಕಾಲದ ತನಕ ತರ್ಕ ಮಾಡಿ ಸಿದ್ಧಾಂತವನ್ನು ಮುಂದೆ ಹಾಕಿಕೊಳ್ಳಬೇಕೆಂದು ಗೊತ್ತು ಮಾಡಿ ನಾವು ಚರ್ಚೆಯನ್ನು ಮುಗಿಸಿದೆವು.

ನಾನು ಮನೆಗೆ ಬಂದೆ. ನನಗೆ ಆಗಿಂದಾಗ ಇದೇ ವಿಷಯವು ತೋಚುತ್ತಿತ್ತು. ಬಹುಮತದ ಬಲದಿಂದ ಸಮಾಜದಲ್ಲಿ ಸೇರುವದು ಯುಕ್ತವೇ? ಗೋಖಲೆಯವರ ವಿಷಯ ನನ್ನ ನಿಷ್ಠೆಗೆ ಈ ವರ್ತನವು ಸುಸಂಗತವಾಗುವದೇ? ನನ್ನ ಸೇರಿಕೆಯ ಕಾರಣ ಸಮಾಜದ ಸಭಾಸದರಲ್ಲಿ ತೀಕ್ಷ್ಣ ಮತಭೇದವಾಗಿದ್ದಾಗ, ಪ್ರವೇಶ ಅರ್ಜಿಯನ್ನು ಹಿಂದಕ್ಕೆ ತೆಗೆದುಕೊಂಡು ನನ್ನ ವಿರೋಧಕರ ಮನಸ್ಸಿನಲ್ಲುಂಟಾಗುವ ಬೇಸರವನ್ನು ಪರಿಹರಿಸುವದೇ ಉತ್ತಮ ಉಪಾಯವೆಂದು ನನಗನಿಸಿತು. ಇದರಿಂದ ಸಮಾಜದ ಹಾಗು ಗೋಖಲೆಯವರ ಮೇಲಿರುವ ನನ್ನ ಭಕ್ತಿ ಕೂಡ ಪ್ರಕಟವಾಗುವದೆಂದು ನನಗನಿಸಿತು. ಈ ನಿರ್ಧಾರವು ನನಗೆ ಥಟ್ಟನೆ ಹೊಳೆಯಿತು. ಕೂಡಲೆ ನಾನು ರಾ। ಶಾಸ್ತ್ರಿಯವರಿಗೆ ಬರೆಕೊಂಡೆ. ಮುಂದೆ ಈ ಕುರಿತು ಸಭೆ ಸೇರಿಸುವದವಶ್ಯವಿಲ್ಲವಾಗಿ ತಿಳಿಸಿದೆನು. ನನ್ನ ವಿರೋಧಕರು ಈ ನಿರ್ಣಯವನ್ನು ಕೇಳಿ ಬಹಳ ಸಂತೋಷಪಟ್ಟರು. ಅವರಿಗೆ ಒಂದು ಉಪದ್ರವ ತಪ್ಪಿದಂತಾಯಿತು. ನಮ್ಮೊಳಗಿನ ಗೆಳೆತನವು ವಿಶೇಷ ಬೆಳೆಯಿತು. ಅರ್ಜಿಯನ್ನು ಪರತ ಪಡೆದದ್ದರಿಂದ ನಾನು ಸಮಾಜದ ಪ್ರತ್ಯಕ್ಷ ಸಭಾಸದನಾದೆ. (ಅಷ್ಟು ಸಭಾಸದರ ಹಾಗು ನನ್ನ ಗೆಳೆತನವು ಬೆಳೆಯಿತು)

ನಾನು ಶಾಸ್ತ್ರದಂತೆ ಸಭಾಸನಾಗದಿದ್ದದ್ದು ಒಳಿತಾಯಿತೆಂದೂ, ವಿರೋಧಕರ ವಿರೋಧವು ಸಾಧಾರವಿತ್ತೆಂದೂ ಈಗ ನನ್ನ ಅನುಭವದ ಮೇಲಿಂದ ನಾನು ಹೇಳುತ್ತೇನೆ. ನಮ್ಮ ವಿಚಾರಗಳಲ್ಲಿರುವ ತಾತ್ವಿಕ ಮತಭೇದವು ಅಗಜಾಂತರವಷ್ಟಿರುವದಾಗಿಯೂ ಅನುಭವದಿಂದ ತಿಳಿಯುತ್ತದೆ. ಆದರೆ, ಈ ಮತಭೇದದಿಂದ ನಮ್ಮೊಳಗೆ ಅಪ್ರೀತಿಯಾಗಲಿಲ್ಲ; ಅಥವಾ ದ್ವೇಷವಾಗಲಿಲ್ಲ. ನಾವು ಅಣ್ಣ-ತಮ್ಮಂದಿರಂತೆ ಬಾಳಿಕೊಳ್ಳುತ್ತಿದ್ದೇವೆ. ಸಮಾಜದ ಪುಣೆಯ ಮಂದಿರವು ನನಗೊಂದು ಯಾತ್ರಾಸ್ಥಳವಾಗಿ ಪರಿಣಮಿಸಿದೆ.

ಶಾಸ್ತ್ರದಂತೆ ನಾನು ಸಮಾಜದ ಸಭಾಸದನಲ್ಲವೆಂಬ ಮಾತು ನಿಜ. ಆದರೆ ಮನಸ್ಸಿನಿಂದ ಯಾವಾಗಲೂ ನಾನು ಸಭಾಸದನಿದ್ದೇನೆ. ಶಾರೀರಿಕ ಸಹವಾಸಕ್ಕಿಂತ ಪಾರಮಾರ್ಥಿಕ ಅಸ್ತಿತ್ವವೇ ವಿಶೇಷ ಬೆಲೆಯುಳ್ಳದ್ದು, ಪಾರಮಾರ್ಥಿಕ ಅಸ್ತಿತ್ವವಿಲ್ಲದ ಶಾರೀರಿಕ ಸಂಬಂಧವು ಪ್ರಾಣವಿಲ್ಲದ ಶರೀರದಂತಿದೆ.

ಕರ್ನಾಟಕ ಪ್ರಾಂತಿಕ ಪರಿಷತ್ತಿನಲ್ಲಿ ಮಂಜೂರಾದ ತೀರ್ಮಾನಗಳು

ಕಳೆದ ೨೬—೨೭ ನೇ ದಿವಸ ಇಲ್ಲಿ ಸೇರಿದ ಮೇಲ್ಕಂಡ ಪರಿಷತ್ತಿನಲ್ಲಿ ಕೆಳಗೆ ಕಾಣಿಸಿದ ಠರಾವುಗಳು ಸರ್ವಾನುಮತದಿಂದ ತೇರ್ಗಡೆ ಹೊಂದಿದವು. ಅಸ್ಪೃಶ್ಯತಾ ನಿವಾರಣೆಯ ಠರಾವನ್ನು ಮಾತ್ರ ಒಬ್ಬರು ವಿರೋಧಿಸಿದರು.

೧. ಧಾರವಾಡದ ಪ್ರಸಿದ್ಧ ದೇಶಭಕ್ತರಾದ ಶ್ರೀ। ರಾಘವೇಂದ್ರರಾವ ಶರ್ಮಾ ಇವರ ಅಕಾಲಿಕ ನಿಧನದ ಬಗ್ಗೆ ಈ ಪರಿಷತ್ತು ದುಃಖವನ್ನು ವ್ಯಕ್ತಪಡಿಸುತ್ತದೆ, ಮತ್ತು ಅವರು ಮಾಡಿದ ಕರ್ನಾಟಕದ ಸೇವೆಗಾಗಿ ವಿಶೇಷತಃ ಏಕೀಕರಣದ ಕಾರ್ಯಕ್ಕಾಗಿ ತುಂಬ ಕೃತಜ್ಞವಾಗಿದೆ.

೨. ದಿಲ್ಲಿಯ ಹಕೀಮ ಅಜಮಲ್‌ಖಾನ ಸಾಹೇಬ ಮತ್ತು ಸತ್ಯಾಗ್ರಹ ಆಶ್ರಮದ ಶ್ರೀ। ಮಗನಲಾಲ ಗಾಂಧಿ ಇವರ ಆಕಸ್ಮಿಕ ಮರಣದಿಂದ ದೇಶಕ್ಕೆ ದೊಡ್ಡ ಹಾನಿ ತಟ್ಟಿರುತ್ತದೆಂದು ಈ ಪರಿಷತ್ತಿಗೆ ಅನಿಸುತ್ತದೆ, ಮತ್ತು ದೇಶಾಭಿಮಾನಿಗಳಾದ ಇವರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲೆಂದು ಈ ಪರಿಷತ್ತು ಪ್ರಾರ್ಥಿಸುತ್ತದೆ.

೩. ಪೂರ್ಣ ಸ್ವಾತಂತ್ರ್ಯವೇ ಹಿಂದುಸ್ಥಾನದ ಅಂತಿಮ ಧ್ಯೇಯವೆಂದು ಈ ಪರಿಷತ್ತು ಸಾರಿ ಹೇಳುತ್ತದೆ. ಹಾಗೂ ಮದ್ರಾಸ ರಾಷ್ಟ್ರೀಯ ಸಭೆಯು ಮಾಡಿದ ಮತ್ತು ಸಂಯುಕ್ತ ಪ್ರಾಂತ, ಪಂಜಾಬ, ಬಂಗಾಲ, ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತುಗಳು ಪುಷ್ಟೀಕರಿಸಿದ "ಸ್ವಾತಂತ್ರ್ಯ"ದ ನಿರ್ಣಯವನ್ನು ಈ ಪರಿಷತ್ತು ಅಂಗೀಕರಿಸುತ್ತದೆ.

೪. ತಾ. ೩ನೇ ಡಿಸೆಂಬರ ೧೯೨೭ ನೇ ಇಸ್ವಿಯ ದಿವಸ ಬಾಗಲಕೋಟೆಯಲ್ಲಿ ಕೂಡಿದ ಕರ್ನಾಟಕ ಪ್ರಾಂತಿಕ ಮಂಡಳದವರು 'ಸ್ಯಾಯಮನ್ ಕಮಿಶನ್ನ ಬಹಿಷ್ಕಾರ'ದ ಬಗ್ಗೆ ಮಾಡಿದ ಗೊತ್ತುವಳಿಯನ್ನು ಈ ಪರಿಷತ್ತು ಪುಷ್ಟೀಕರಿಸುತ್ತದೆ; ಹಾಗೂ ಹಿಂದುಸ್ಥಾನ ದೇಶಕ್ಕೆ ಸರ್ವಥಾ ಅಪಮಾನಕಾರಕವಾದ ಈ ಕಮಿಶನ್ನಿನ ಕೂಡ ಕರ್ನಾಟಕವು ಎಂದಿಗೂ ಸಹಕಾರ ಮಾಡಲಾರದೆಂದು ಸಾರುವದಲ್ಲದೆ, ಎಲ್ಲ ಕಾಂಗ್ರೆಸ ಸಂಸ್ಥೆಗಳು ಈ ಬಹಿಷ್ಕಾರದ ಆಂದೋಲನವನ್ನು ಜೋರಿನಿಂದ ನಡಿಸಬೇಕೆಂದು ಈ ಸಭೆಯು ಇಚ್ಛಿಸುತ್ತದೆ; ಅಖಿಲ ಕರ್ನಾಟಕವು ಕಮಿಶನ್ನಿನ ಕೂಡ ಯಾವ ರೀತಿಯಿಂದಲೂ ಸಹಕರಿಸಕೂಡದೆಂದೂ ಬೇಡಿಕೊಳ್ಳುತ್ತದೆ.

೫. ಕರ್ನಾಟಕ ಏಕೀಕರಣದ ನೆವ ಮಾಡಿ ಪರಪ್ರೇರಣೆಯಿಂದ ಬ್ರಿಟಿಶ ಕರ್ನಾಟಕ ಅಸೋಸಿಯೇಶನ್ ಎಂಬ ಸಂಘವನ್ನು ನಿರ್ಮಿಸಿ ಇಡೀ ಹಿಂದುಸ್ಥಾನವು ಬಹಿಷ್ಕರಿಸಿದ ಸಾಯಮನ್ನ ಕಮಿಶನ್ನಿನ ಮುಂದೆ ಹೋಗಲಿಚ್ಛಿಸುವ ಹಲಕೆಲವು ವ್ಯಕ್ತಿಗಳ ದೇಶ ವಿಘಾತಕ ಮತ್ತು ಆತ್ಮಘಾತಕವಾದ ಪ್ರಯತ್ನಗಳನ್ನು ಕಂಡು ಈ ಪರಿಷತ್ತಿಗೆ ವಿಷಾದವಾಗುತ್ತದೆ.

೬. ಬ್ರಿಟಿಶ ಬಟ್ಟೆ-ನೂಲುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸುವದೇ ಬ್ರಿಟಿಶ ಪಾರ್ಲಿಮೆಂಟಿನವರು ಹಿಂದುಸ್ಥಾನದ ವಿಷಯವಾಗಿ ಕೈಕೊಂಡ ಧೋರಣಕ್ಕೆ ಯೋಗ್ಯವಾದ ಪ್ರತ್ಯುತ್ತರವಾಗಿರುವದೆಂದು ಈ ಪರಿಷತ್ತಿನ ಖಂಡಿತವಾದ ಮತವಿದೆ. ಆದರಿಂದ ಬ್ರಿಟಿಶ ಬಟ್ಟೆ ಮತ್ತು ನೂಲುಗಳ ಬಹಿಷ್ಕಾರದ ವಿಷಯವಾಗಿ ರಾಷ್ಟ್ರಸಭೆಯು ಮಾಡಿದ ಸಂಕಲ್ಪವನ್ನು ನೆರವೇರಿಸುವದನ್ನು ಕುರಿತು ಕರ್ನಾಟಕಸ್ಥರು ಕಂಕಣಬದ್ಧರಾಗಬೇಕೆಂದು ಈ ಸಭೆಯು ಬೇಡಿಕೊಳ್ಳುತ್ತದೆ.

೭. ಬಡತನದಲ್ಲಿ ಬಳಲುತ್ತಿರುವ ಹಿಂದವಾಸಿಗಳಿಗೆ ಸದ್ಯದ ಸ್ಥಿತಿಯಲ್ಲಿ ಪೂರಕವಾದ ಪ್ರಮುಖ ಉದ್ಯೋಗವೆಂದರೆ ಖಾದಿಯ ಉದ್ಯೋಗವೇ ಇರುತ್ತದೆಂದು ಈ ಪರಿಷತ್ತಿನ ವಿಶ್ವಾಸವಿರುತ್ತದೆ. ಅಂತೆಯೇ ಕರ್ನಾಟಕಸ್ಥರು ದಿನ ದಿನಕ್ಕೆ ಖಾದಿಯ ಉಪಯೋಗವನ್ನು ಹೆಚ್ಚಿಸುತ್ತ ಹೋಗಬೇಕೆಂದು ಪ್ರಾರ್ಥಿಸುವದಲ್ಲದೆ ವ್ಯಕ್ತಿಗಳು ಮತ್ತು ಲೋಕಸಂಸ್ಥೆಗಳು ಖಾದಿಯ ಪ್ರಸಾರಕ್ಕೆ ಶಕ್ಯವಾದ ಎಲ್ಲ ಮಾರ್ಗಗಳಿಂದ ಉತ್ತೇಜನ ಕೊಡಬೇಕೆಂದು ಈ ಸಭೆಯು ಬಿನ್ನೈಸುತ್ತದೆ.

೮. ಬ್ರಿಟಿಶ ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಒಂದೇ ಆಡಳಿತಕ್ಕೆ ಸೇರಿಸಬೇಕೆಂದು ಈ ಪರಿಷತ್ತಿನ ಖಂಡಿತವಾದ ಅಭಿಪ್ರಾಯವಾಗಿದೆ. ಅಲ್ಲದೆ ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಒರೆದು ಕರ್ನಾಟಕ ಏಕೀಕರಣ ಸಂಘದೊಂದಿಗೆ ಸರ್ವ ಪಕ್ಷೀಯ ಪರಿಷತ್ತಿನೆದುರಿನಲ್ಲಿ ಅದನ್ನು ಮಂಡಿಸುವದಕ್ಕಾಗಿ ಶ್ರೀಯುತರಾದ ವೆಂ. ಬೆಳವಿ, ಶ್ರೀನಿವಾಸರಾವ ಕೌಜಲಗಿ, ವಿ. ನಾ. ಜೋಗ ಹಾಗು ರಂ. ರಾ. ದಿವಾಕರ (ಕಾರ್ಯದರ್ಶಿ) ರ ಒಂದು ಮಂಡಲವನ್ನು ಈ ಪರಿಷತ್ತು ನೇಮಿಸುತ್ತದೆ.

೯. ಎಲ್ಲ ಜಾತಿಯ ಒಂದೇ ಮತದಾರರ ಗುಂಪ(ಸಂಘ)ವನ್ನು ನಿರ್ಮಿಸುವದೇ ರಾಷ್ಟ್ರಘಾತಕೀ ಜಾತ್ಯಭಿಮಾನದ ಬೆಳವಣಿಗೆಗೆ ಒಳ್ಳೇ ಮದ್ದೆಂದು ಈ ಪರಿಷತ್ತಿನ ಅಭಿಪ್ರಾಯವು.

೧೦. (ಅ) ಕಂದಾಯವನ್ನು ಮನಬಂದಂತೆ ಏರಿಸುವ ಮುಂಬಯಿ ಸರಕಾರದ ನಿರಂಕುಶ ಅನ್ಯಾಯದ ಧೋರಣವನ್ನು ಈ ಪರಿಷತ್ತು ವಿರೋಧಿಸುತ್ತದೆ.

(ಆ) ಬಾರ್ಡೋಲಿಯಲ್ಲಿಯ ಕಂದಾಯ ವಸೂಲಿಯನ್ನು ಮಾಡುವಾಗ ಸರಕಾರದವರು ಉಪಯೋಗಿಸುವ ಜುಲುಮಿಯ ಮಾರ್ಗಗಳನ್ನು ಈ ಪರಿಷತ್ತು ನಿಷೇಧಿಸುತ್ತದೆ.

(ಇ) ಬಾರ್ಡೋಲಿಯ ರೈತರು ಪ್ರಾರಂಭಿಸಿದ ಸತ್ಯಾಗ್ರಹ ಚಳವಳಿಯನ್ನು ಈ ಪರಿಷತ್ತು ಸಂಪೂರ್ಣವಾಗಿ ಅನುಮೋದಿಸುತ್ತದೆ. ಅಂಥ ಶಾಂತ ಸತ್ಯಾಗ್ರಹವೇ ಆಳರಸರ ದಬ್ಬಾಳಿಕೆಯ ವಿರುದ್ಧ ಬಡ ರೈತರು ಉಪಯೋಗಿಸಬಹುದಾದ ಒಳ್ಳೇ ಉಪಾಯವು. ಯಾವ ಎಡರಿಗೂ ಎದೆಗುಂದದೆ ಈ ಯುದ್ಧವನ್ನು ನಡೆಸಿದ್ದಕ್ಕಾಗಿ ಬಾರ್ಡೋಲಿಯ ರೈತರನ್ನು ಈ ಪರಿಷತ್ತು ಅಭಿನಂದಿಸುತ್ತದೆ.

(ಈ) ಗುಜರಾಥದ ಈ ಪವಿತ್ರ ಕಾರ್ಯಕ್ಕೆ ಕರ್ನಾಟಕವು ತನ್ನ ಸಹಾನುಭೂತಿಯನ್ನು ತೋರಿಸುವದಲ್ಲದೆ ಎಲ್ಲ ರೀತಿಯಿಂದ ಸಹಾಯ ಮಾಡಲು ಸಿದ್ಧವಿರುವದೆಂ

ಈ ಪರಿಷತ್ತು ಅಭ್ಯಾಸನವನ್ನೀಯುತ್ತದೆ. ಮತ್ತು ಕರ್ನಾಟಕ ಪ್ರಾಂತಿಕ ಮಂಡಲದವರಿಗೆ ಕರ್ನಾಟಕದಲ್ಲಿ ನಿಧಿಯನ್ನು ಕೂಡಿಸುವ ಪ್ರಯತ್ನವನ್ನು ಮಾಡಬೇಕೆಂತಲೂ ಸತ್ಯಾಗ್ರಹಕ್ಕೆ ಕಳಿಸಲು ಸ್ವಯಂಸೇವಕರನ್ನು ಸಿದ್ಧ ಮಾಡಬೇಕೆಂದು ಕರ್ನಾಟಕ ದಲಿತರಿಗೆ ತಿಳಿಸಬೇಕೆಂತಲೂ ಈ ಪರಿಷತ್ತು ಬಿನ್ನವಿಸುತ್ತದೆ.

೧೧. ಮಾದಕ ಪದಾರ್ಥಗಳ ಪೂರ್ಣ ಬಂದಿಸು ಧೋರಣದ ವಿಷಯವನ್ನು ಕುರಿತು ಸರಕಾರದವರು ತೋರಿಸುತ್ತಿರುವ ಅನಿಷ್ಟವೃತ್ತಿಯನ್ನು ಈ ಸಭೆಯು ನಿಷೇಧಿಸುತ್ತದೆ. ಮತ್ತು ಪೂರ್ಣ ಬಂದಿಯೇ ಯೋಗ್ಯ ಮತ್ತು ಹಿತಕರ ಮಾರ್ಗವೆಂದು ಈ ಸಭೆಯು ಸ್ಪಷ್ಟವಾಗಿ ಹೇಳುತ್ತದೆ.

೧೨. ಮುಂಬಯಿ ಸರಕಾರದವರು ನ್ಯಾಯದ ಮತ್ತು ಪ್ರಜೆಗಳ ಹಿತದ ವಿರುದ್ಧವಾಗಿ ತಮ್ಮ ಜಿ. ಆರ್. ನಂ ೧೬೬೬೨ ರಿಂದ ಇನಾಮು ಪಟ್ಟಿಯ ಸೆಕ್ ಸನದಿದಾರರಿಗೆ ಅವರ ವತನ ಭೂಮಿಗಳ ಮೇಲಿನ ಅಧಿಕಾರವನ್ನು ತಪ್ಪಿಸುವದಕ್ಕೆ ಪ್ರಯತ್ನಿಸುತ್ತಿರುವದನ್ನು ಈ ಸಭೆಯು ನಿಷೇಧಿಸುತ್ತದೆ. ಮತ್ತು ಈ ಪ್ರಾಂತದ ಆ ವ್ಯಾವಂತರಾದ ಸನದಿಯವರ ಹಕ್ಕುಗಳನ್ನು ಕಾಯಲು ಸಹಾಯಕರಾಗಬೇಕೆಂದು ಈ ಸಭೆಯು ನಮ್ಮ ಪ್ರಾಂತದ ಮುಖಂಡರನ್ನು ಬೇಡುತ್ತದೆ.

೧೩. ಮುಂಬಯಿ ಕೌನ್ಸಿಲದಲ್ಲಿ ಸದ್ಯಕ್ಕೆ ಬಂದ (Consolidation of small-holdings Bill) ಭೂಮಿಯ ಸಣ್ಣ ತುಂಡುಗಳ ಏಕೀಕರಣದ ವಿಷಯದ ಕಾಯಿದೆಯು ರೈತರ ಹಕ್ಕುಗಳಿಗೆ ಬಾಧಕವಿರುವದೆಂದು ಈ ಪರಿಷತ್ತಿಗೆ ತೋರುವದರಿಂದ ಲೋಕನಿಯುಕ್ತ ಸಭಾಸದರು ರೈತರ ಹಕ್ಕುಗಳನ್ನು ಕಾಯುವ ಯತ್ನ ಮಾಡಬೇಕೆಂದು ಅದು ಆಜ್ಞಾಪಿಸುತ್ತದೆ. ಮತ್ತು ಈ ಬಗ್ಗೆ ರೈತರಲ್ಲಿ ತಿಳುವಳಿಯನ್ನು ಮಾಡಬೇಕೆಂದು ನಿರ್ಣಯಿಸುತ್ತದೆ.

೧೪. ದೇಶೀಯ ಸಂಸ್ಥಾನಗಳ ಅಂತರಿಕ ರಾಜ್ಯವ್ಯವಹಾರಗಳಲ್ಲಿ ಕಾಂಗ್ರೆಸ್ಸು ಸಂಸ್ಥೆಗಳು ಪ್ರತ್ಯಕ್ಷ ಭಾಗ ತೆಗೆದುಕೊಳ್ಳಲು ಆಸ್ಪದವನ್ನು ಕೊಡುವಂತೆ ಹಿಂದೀ ರಾಷ್ಟ್ರೀಯ ಘಟನೆಯಲ್ಲಿ ಅವಶ್ಯಕಗಳಾದ ಮಾರ್ಪಾಟುಗಳನ್ನು ಮಾಡಬೇಕೆಂದು ಈ ಸಭೆಯು ಅಖಿಲ ಭಾರತ ರಾಷ್ಟ್ರೀಯ ಸಭೆಯ ಸಮಿತಿಯನ್ನು ಪ್ರಾರ್ಥಿಸುತ್ತದೆ.

೧೫. ಸ್ವರಾಜ್ಯವನ್ನನುಭವಿಸುವ ಹಿಂದುಸ್ಥಾನದ ಭಾಗ ಮತ್ತು ಹಿಂದುಸ್ಥಾನಗಳ ಸಂಬಂಧವು ಯಾವ ಬಗೆಯದ್ದಿರಬೇಕೆಂಬುದರ ಬಗ್ಗೆ ಸ್ಪಷ್ಟವಾದ ತತ್ವಗಳನ್ನು ನಿಶ್ಚಯಿಸದೆ ಹೋದರೆ ಭಾವೀ ಹಿಂದೀ ರಾಜ್ಯಘಟನೆಯು ಅಪೂರ್ಣವೇ ಉಳಿಯುವದೆಂದು ಈ ಪರಿಷತ್ತಿನ ಅಭಿಪ್ರಾಯವದೆ. ಆದುದರಿಂದ ಈ ವಿಷಯವನ್ನು ಸರ್ವಪಕ್ಷೀಯ ಪರಿಷತ್ತಿನ ಎದುರಿನಲ್ಲಿ ಇಡಬೇಕೆಂದು ಅಖಿಲ ಭಾರತ ಮಂಡಲದವರಿಗೆ ಈ ಪರಿಷತ್ತು ಪ್ರಾರ್ಥಿಸುತ್ತದೆ.

೧೬. ಮುಂಬಯಿ ಗ್ಯಾಝೀಟದಲ್ಲಿ ಪ್ರಸಿದ್ಧವಾದ ಮುಂಬಯಿ ಕೌನ್ಸಿಲ ಅಧಿವೇಶನದಲ್ಲಿ ಬರತಕ್ಕ ಟ್ರ್ಯಾಂಕ ರಿವ್ಹಿನ್ಯೂ ಕೋಡದ ಸುಧಾರಣೆಯ ಬಿಲ್ಲನ್ನು ಬಹಳೇ ಸಂಶಯ ದೃಷ್ಟಿಯಿಂದ ನೋಡುತ್ತದೆ. ಮತ್ತು ಆ ಬಿಲ್ಲಿನಲ್ಲಿ ನಿರ್ದಿಷ್ಟವಾದ ಕಂದಾಯ ಹೇರುವ ತತ್ವವನ್ನು ಬಲವಾಗಿ ನಿಷೇಧಿಸುತ್ತದೆ.

೧೭. ರಾಷ್ಟ್ರೀಯ ಸಭೆಯ ಘಟನೆಯಂತೆ ಕರ್ನಾಟಕ ಪ್ರಾಂತಕ್ಕೆ ಒಳಗಾಗಲಿಕ್ಕೆ, ಆದರೆ ಸದ್ಯಕ್ಕೆ ಪರಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ಅಧಿಕಾರಕ್ಕೆ ಒಳಗಾದ ಭಾಗಗಳನ್ನು ಪುನಃ ಕರ್ನಾಟಕ ಪ್ರಾಂತಕ್ಕೆ ಸೇರಿಸುವ ಎಲ್ಲ ಪ್ರಯತ್ನಗಳನ್ನು ಕರ್ನಾಟಕ ಪ್ರಾಂತಿಕ ಮಂಡಲದವರು ಮಾಡಬೇಕೆಂದು ಈ ಪರಿಷತ್ತು ಆಗ್ರಹಪೂರ್ವಕವಾಗಿ ಹೇಳುತ್ತದೆ.

೧೮. ಪರರಾಜ್ಯದ ಕರ್ನಾಟಕದ ಭಾಗಗಳಲ್ಲಿ ಜನರಿಗೆ ದೊರೆಯತಕ್ಕ ಜನ್ಮಸಿದ್ಧವಾದ ಅಧಿಕಾರಗಳನ್ನು ಸರಕಾರದವರು ಕೊಡದೆ ಇದ್ದುದರಿಂದ ಈಗ ಅವರು ಕೊಟ್ಟ ಸವಲತ್ತುಗಳು ಅಪೂರ್ಣವಿರುವವೆಂದು ಈ ಪರಿಷತ್ತಿನ ಅಭಿಪ್ರಾಯವದೆ.

೧೯. ಈಗಿನ ರಾಷ್ಟ್ರೀಯ ಪ್ರಗತಿಯ ಕಾಲದಲ್ಲಿ ಅಸ್ಪೃಶ್ಯತಾ ನಿವಾರಣೆಯು ಅತ್ಯವಶ್ಯವಾಗಿರುವದರಿಂದಲೂ ೬೦ ದಿನಗಳಲ್ಲಿಯೂ ಅದನ್ನು ಶೀಘ್ರವಾಗಿ ಮಾಡಬೇಕೆಂದು ಈ ಪರಿಷತ್ತಿನ ಸ್ಪಷ್ಟವಾದ ಮತವದೆ.

೨೦. ಕರ್ನಾಟಕದಲ್ಲಿ ರಾಷ್ಟ್ರೀಯ ಸಭೆಯ ಸಭಾಸದರನ್ನು ಸೇರಿಸಿಕೊಳ್ಳುವ ಕಾರ್ಯ-ಪ್ರ. ಬೇರೆ ಬೇರೆ ಭಾಗಗಳಲ್ಲಿ ಶಿಬಿರಗಳನ್ನು ಸ್ಥಾಪಿಸಿ ಶಿಕ್ಷಣವನ್ನು ಕೊಡುವ ಕಾರ್ಯವನ್ನು ಕೈಕೊಂಡದ್ದಕ್ಕಾಗಿ ಕರ್ನಾಟಕ ದಲವನ್ನು ಈ ಪರಿಷತ್ತು ಅಭಿನಂದಿಸುತ್ತದೆ. ಆಗಸ್ಟ ಮೊದಲನೇ ತಾರೀಖಿನ ದಿವಸ ಬಾಗಲಕೋಟೆಯಲ್ಲಿ ತೆರೆಯತಕ್ಕ ವ್ಯಾಯಾಮ ವಿದ್ಯಾಮಂದಿರಕ್ಕೆ ಉದಾರ ಹಸ್ತದಿಂದ ಸಹಾಯ ಮಾಡಬೇಕೆಂದು ಕರ್ನಾಟಕಸ್ಥರನ್ನು ಪ್ರಾರ್ಥಿಸುತ್ತದೆ,

೨೧. ಯೋಗ್ಯ ವತನದಾರರು ನೌಕರಿಯನ್ನು ಮಾಡಲಿಕ್ಕೆ ಸಿದ್ಧರಿಲ್ಲದಾಗ ಬಿನ್‌ವತನದಾರರನ್ನು ನಿಯಮಿಸುವ ದಂತವರಿಂದ ಅಧಿಕಾರವನ್ನು ಪಾರಸು ವತನದಾರರಿಂದ ಜಿ. ಆರ್. ನಂ. ೧೧೧೬೨ ನೇ ಪ್ರಕಾರ ಕಸಿದುಕೊಳ್ಳಬೇಕೆಂಬ ಸರಕಾರದ ನಿರ್ಣಯವನ್ನು ಈ ಪರಿಷತ್ತು ತೀವ್ರವಾಗಿ ನಿಷೇಧಿಸುತ್ತದೆ.

೨೨ ಬರುವ ವರ್ಷದಲ್ಲಿ ಪರಿಷತ್ತು ಬೆಳಗಾಂವಿಯಲ್ಲಾಗತಕ್ಕದ್ದು. —ಕರ್ಮವೀರ.

— ಮುಮ್ಮಿಗಟ್ಟಿಯ ಹೇಮಹಿಂದ ಗ್ರಾಮದಲ್ಲಿ ಭೂಕಂಪವಾಯಿತು. ಬೆಟಗೇರಿ ಗ್ರಾಮದಲ್ಲಿ ಜ್ವಾಲಾಮುಖಿಯ ಸ್ಫೋಟವಾಗಿದೆ. ಕಲ್ಲು-ಮಣ್ಣು-ಬೂದಿಗಳು ೩೦ ಅಡಿ ಎತ್ತರದವರೆಗೆ ಹಾರಿಹೋದವು. ಬಾವಿ ರಸವು ಬಂದು ೧೯ ಮನೆಗಳು ನಾಶವಾದವು.

— ಬಾದಾಮಿಯ ಬನಶಂಕರೀ ಕ್ಷೇತ್ರದಲ್ಲಿ ದೇವಾಂಗ ಸಮಾಜದವರು ಕಟ್ಟಿಸಿದ ಶ್ರೀ ರಾಮಲಿಂಗ ದೇವಾಲಯದ ಮೇಲೆ ಸಿಡಿಲು ಬಿದ್ದು ದೇವಾಲಯವು ನೆಲಸಮವಾಯಿತು. ಅದನ್ನು ಉದ್ಧರಿಸುವದಕ್ಕಾಗಿ ನಿಧಿಯ ವಿಚಾರವಾಗಿದೆ.

— ಮೈಸೂರಿನ ಶ್ರೀಮನ್ಮಹಾರಾಜರವರ ಜನನೋತ್ಸವ ಜಯಂತಿ ಉತ್ಸವವು ತಾ. ೨೭ ಬುಧವಾರ ವೈಭವದಿಂದ ಜರುಗಿತು.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ- ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಶರೀರವು ತರುಣರಂತೆ ಸವರ್ಧಮಾನವಾಗುವದು. ನಿಜವಾಗಿ ಒಂದೇ ಸಲಕ್ಕಲ್ಲಿ ಅನುಭವಕ್ಕೆ ಬರುವದು; ಜನನೇಂದ್ರಿಯದೊಳಗಿನ ಶಕ್ತಿ. ರೋಗಿ ಮಾತನಾಡದೇ ಸಪ್ಪೆಯಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ನಂತರ ಹೋಗುವ ವೀರ್ಯವು ಬಂದಾಗುವದು.— ಬರಡು ಹಾಗೂ ಕಾವಿನಿಂದ ಕೊಬ್ಬಿದವಾದ ಶರೀರವು ನಿರೋಗವಾಗುವದು. ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ ಉದರರೋಗ ಮುಂತಾದ ಅನೇಕ ರೋಗಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚೆನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಶಿ ಸಾಧ ಆಗುವದು. ಪ್ರಯಲ್ಲಿ ಎಷ್ಟೇ ದಿವಸದ ಕಾಯಿಲೆ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೧ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವದು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ವಿಪಿ.ಪಿ. ಕಳಿಯಿಂದ ೧ ಬಾಟ್ಲಿಗೆ ೧-೯-೦ ೩ ಬಾಟ್ಲಿಗೆ ೩-೮-೦ ಆರಕ್ಕೆ ೧೩-೯-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ

झंडूचें द्राक्षासव

– मृद्विकारिष्ट –
शारंगधर म अ. १०

शमबाण औषध

सर्दि घालविणारें
मूक घालविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

विण्यास रुचिकर

किंमत- एक रतलाम १।। रुपये.
कॅटलाग मागवा

झंडु फार्मास्युटिकल वर्क्स लिमिटेड
मुंबई नं. १४

ऐजट— मेसर्स पंडित आणी कंपनी,
तीर्थहळ्ळी

शिरसि एजंट एस एल. धाकप्पा आणि ब्रदर

ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಅಗ್ರವಾದ
'ನೇಶನಲ್ ಇನ್‌ಶೂರನ್ಸ್ ಕಂಪನಿ, (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ
ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044
ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಹೋಲ್ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂ ಯಂತೆಯೂ ಬೋನಸ್ ಕೊಟ್ಟಿದೆ.

ಹೊಂಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ. ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D. Churi,**
ಬಿ ಸಿ ಸಿರಾಳಕೊಪ್ಪ, *Branch Secretery,*
ಲೋಬಾಂಡಿ ಬಿಲ್ಡಿಂಗ, Alic Building
ಹುಬ್ಬಳ್ಳಿ. *Hornby Road,*
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಸೀರೆ, ಖಣ, ರೇಶ್ಮೆ ಶಲ್ಲೆ, ಬಟಾಶನೆ, ಕಾಶ್ಮೀರದ ಶಾಲು ಸಕಲಜಾತಿ ಧಾಬಳಿ, ರುದ್ರಾಕ್ಷ ಸರ, ಅಂಬಿ ಗೌರೀಶಂಕರ ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಂಟಿ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ: -
ವಿಶ್ವನಾಥ ಎಂಡ್ ಬ್ರದರ್ಸ,
ದುರ್ಗಾಘಾಟ, ಬನಾರಸ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುತ್ತಲಿವೆ, ಕಂಠಕ್ಕೆ ಮೇಲ್ಪಟ್ಟ ಎಲ್ಲಾ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು- ನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ವ್ಯಾಪಾರಿಗಳಿಗೆ ಕ್ರಯ ಕಡಿಮೆ ಮಾಡಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ ೧-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ, ರೂ. ೨-೮-೦. ವ್ಹಿ. ಪಿ. ೬- ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕಟೌನ, ಮದ್ರಾಸ

ಇದು "ಕರಾಮತ" ಗಾಣ—
ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ



ಈ ಗಾಣದಿಂದ ನೇಕಡಾ ೭೫ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು, ಬಾಳಿಕೆಯದು. ವಿಶೇಷ ಯಂತ್ರಸಾಮಗ್ರಿಯ ಇಲ್ಲ ಸಾಮಾನ್ಯ ರೈತರು ಇವನ್ನು ಸರಿಪಡಿಸಬಲ್ಲರು ಸಾಮಾನ್ಯ ಎರಡು ಎತ್ತು ಈ ಗಾಣವನ್ನು ಎಳೆಯಬಲ್ಲವು

ಬೇರಿಂಗು ಗನ್ ಮೆಟಲ್‌ದವು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಅಕ್ಕಲುಗಳು ಎಷ್ಟು ಎಷ್ಟೂ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು.

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ
೧೦-೧೨ ಕರಾಮತಗಾಣಗಳು ದುಡಿಯುತ್ತಿವೆ. ಎಲ್ಲರೂ ಆನಂದದಿಂದ ಪ್ರಶಂಸಿಸುತಾರೆ
ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ ಜಿ. ಸಾತಾರಾ

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅನನ್ಯಸಾಧಕವು,
ಬಾಲಕರಿಗೆ ತೀರ ಅನುಕೂಲ, ಮನೆತನದವರೆಲ್ಲರೂ ಇಟ್ಟುಕೊಳ್ಳಲೇ ಬೇಕು; ಬಿದ್ದು-ಪೆಟ್ಟು ಘಾಯಗಳಿಗೆ, ನೆಗಡಿ-ಕೆಮ್ಮು, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೆ ಗುಣಬರುತ್ತದೆ ಬೇಕಾದಲ್ಲಿ ಸಿಗತ್ತೆ

ಬಾಟ್ಲಿಗೆ ೧೦ ಆಣೆ ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

NO. B. 1270

MONDAY, JUNE 11TH 1928.

೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೫

ವರ್ಗಣಿ.

ಮುಂಗಾಡ

...ಗೆ 3-4-0.

...ಯಿಂದ

... 3-0-0.

...ಷ್ಟ ...

3-2-0.

... 0-1-0.

ಜಾಹೀರಾತುಗಳ ದರ.

ಕನಡ, ಇಂಗ್ಲಿಷ ಮ್ಯಾ ಟರ (೧೧ ಎಮ್ ಅಗಲ) ೬ ಸಾಲುಗಳವರೆಗೆ ರೂ. 1-0-0 ೬ ಸಂತ್ರ ಪ್ರತಿಸಾಲಿಗೆ 0-2-0. ಹೆಚ್ಚಿಗಿನ ಸಾಲು ಎಷ್ಟು ಹೊತ್ತಿದ್ದರೂ ೬ ದಾಸ ರಿಂದ ಅಷ್ಟು ಸಾಲುಗಳು ಹಿಡಿ ಯಲ್ಪಡುವವು.

ಖಾಸ ಜಾಹೀರಾತುಗಳ ಬಗ್ಗೆ ಕಡಪ್ಪಾರ ಯಾ ಪತ್ರದ್ವಾರಾ ತಿಳಿ ಸಲ್ಪಡುವದು.

समपरिहितकर्ता ... वाति, लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

...ಟಾ— ಕಾನಡಾವೃತ್ತ. ಸೋಮವಾರ. ತಾರೀಖು ೧೧ ಮಾಹೆ ಜೂನ ಸನ್ ೧೯೨೮ನೇ ಇಸವಿ.)

...ಡಿ! ಹೊಸ ಹೊಸ ಮ್ಹಾಲು !!

ನಮ್ಮಲ್ಲಿ

...ಕಾರದ ನಮೂನೆಯ, ಹೊಸ ಹೊಸ ಸಾಮಾನುಗಳು ಸಿಗುತ್ತವೆ.—ಕಡ್ಡಿಣ ಮೋಟಾರ ಉಪಯೋಗದ ಬೋಲ್ಟು ... ಪೊಶರ, ಪಿಸ್ಟಲ್ಡ ಪ್ರೇಟರ ಸಿಗುತ್ತವೆ, ... ಕನ್ನಡಿಯ ಸಾಮಾನುಗಳೂ ಸಿಗು... ನಮೂನೆಯ ಸ್ಟೇಶನರಿ ಸಾಮಾನ... ...ೂ ಇದೇ! ಶಾಬೂನುಗಳನ್ನು ಇಲ್ಲ ಕೊಳ್ಳಿ!! ಎಲ್ಲಾ ಆರ್-ಟು-ಡೇಟ ...ಇಲ್ಲಿ ಸಿಗುತವೆ! ಎಲ್ಲಿ ಸಾಮಾನು... ...ಳ ವ್ಯಾಪಾರಸ್ಥರು ರೋಕ ಮ್ಹಾಲ ..., ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿ ಪಡೆಯಬಹುದು.

...ವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)

...rayanacharya & CO.
...amba, BENARES CITY.

ನಮ್ಮಲ್ಲಿ ಎಲ್ಲಾತರದ ರೇಶ್ಮಿ ಪೀತಾಂಬರ ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ಧರವಂದ ರುದ್ರಾಕ್ಷಿ, ಕಸ್ತೂರಿ, ...ಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗು ...ಗೆ ಉಚಾಪಾಗಿ ಕಳಿಸಲಾಗುವದು
...ರೀನಾಮಿ ನಾರಾಯಣಾಚಾರ್ಯ,
..., ಶರನಿ, ಬನಾರಸ, ಕಾಶೀಕ್ಷೇತ್ರ.

...nted:- Candidates
...graph and Station Masters
Full particulars and Railway
...tificate on 2 annas stamp
to— Central Telegraph
Nai Sarak, **Delhi.**

ಏಜಂಟರು ಬೇಕು! ಏಜಂಟರು ಬೇಕು!!



ನಮ್ಮಲ್ಲಿ
ಅತಿ ಮನೋಹರವಾದ
ಸೀಸಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.
ನಮ್ಮ ವಿಳಾಸ:—
ದಿ ನೋರ್ಥ ಕನಡಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!
अर्थात्
आमचा टोप्यांचा जंगी कारखाना!
आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनबल टोप्या तयार केल्याजातात
माल चोख— फॅशनेबल— स्वस्त— व भरपर
ह्या शिवाय
आमच्या स्वंत हातमागांवरील नानातऱ्हेच्या डिझायनची रंगी-बेरंगी चादरें, फॅशनेबल बाथ टॉवेल, चौक, लहान-मोठे पंचे, सीडपाट, चौलपाट, शर्टिंग- कोटींग -वगैरे मालाचा भरपूर पुरवठा नेहमी असतो
ऑर्डर द्या व खात्री करून घ्या!
टीप:—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.
पत्ता:— मेसर्स गोविंद माधव शेणवि, फोवकार अँड सन्स.
पोस्ट— मुंकेरि (कारवार.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

[illegible]

P. P. TRIVEDI & CO.
BRUCE Street Fort BOMBAY

[೬೦೪] ಸನ್ನ ಶಾಸ್ತ್ರೀಯ ಮಾಲಿ [೧೦೬

ಶಾರೀರಿಕ ಶಿಕ್ಷಣ

ಈ ಪುಸ್ತಕದ [illegible] ಅಂಗ ಸಾಧನವನ್ನು ಶರೀರದ [illegible] ಕೊಡುವುದು [illegible] ಪುಸ್ತಕವನ್ನು ಓದಿ [illegible] ದೇಹವನ್ನು ಹೀಗೆ ಒಲಿಸಬೇಕೆಂಬ [illegible] ಈ ಪುಸ್ತಕವನ್ನು [illegible]

ಪ್ರೊಫೆಸರ್ ಎಂ. ವಿ. ಕೃಷ್ಣರಾವ,
ಬಸವನಗುಡಿ ಬೆಂಗಳೂರ ಸಿಟಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ ೨.

ಮುಂಬಯಿಯಲ್ಲಿ ಸಿಗುವ ಸಕಲ ಪ್ರಕಾರದ, ಉತ್ತಮ ಪ್ರತಿಯ ಸಾಮಾನುಗಳನ್ನು ಅಗ್ಗವಾಗಿ ರವಾನೆ ಖರೀದಿ ಮಾಡಿ ಕಳಿಸುತ್ತೇವೆ. ನಮ್ಮಲ್ಲಿ ಹೆಚ್ಚಿಗೆ ತೆಗೆದುಕೊಳ್ಳುವದಿಲ್ಲ [illegible] ಗಿರಾಕಿಗಳಿಗೆ [illegible] ಲಾಭವಾಗ ತಕ್ಕದ್ದು, ಬೇಡಿಕೆ ಬಾರದ ಕೂಡಲೆ ತತ್ಪರತೆಯಿಂದಲೂ, ಶೀಘ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿ ಬಗ್ಗೆ ಕಾಗದ ಬರೆದು ತಿಳಿಸಿಕೊಳ್ಳಿರಿ. ಉಚಿತವಾಗಿ ಸಿಗುವದು.

ಫ್ಯಾನ್ಸಿ ಲೀವರ್ ವಾಚ್.

(೧೫ ಬಹುಮಾನಗಳ ಸಹಿತ ಬೆಲೆ ರೂ. ೪-೮-೦)
(ಈ ಗಡಿಯಾರವು ನಮಗಾಗಿ ತಯಾರಿಸಲ್ಪಟ್ಟು ರಜಿಸ್ಟರಾಗಿದೆ)



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ, ಜೇಬಿಗೆ ಅಡಕವಾಗಿಯೂ ಇರುವಂತೆ, ಚಿಕ್ಕ ಸೈಜಿನಲ್ಲಿ ಮಾಡಿಸಿ ಹಿಂದುಗಡೆ ಚಿತ್ರ ಕೆಲಸ ಮಾಡಲ್ಪಟ್ಟಿರುವದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗ್ಲಾಸ ಮೂವ್ಮೆಂಟ ಮಾಡಿರುವದು. ಗಾಳಿ, ಧೂಳು ಸೇರದಂತೆ ಮುಂಭಾಗದಲ್ಲಿಯೂ ಗ್ಲಾಸ ಡೂಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟ್ಸಗಳಿಂದ ಈ ಗಡಿಯಾರವನ್ನು ತಯಾರಿಸಿದೆ. [illegible] ಈ ಗಡಿಯಾರವು ಲೋಕಪ್ರಸಿದ್ಧಿಯಾಗುವದಾಗಿ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ತೋರಿಸಿರುವ ೧೫ ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ್ ಪೇನಾ ೧, [illegible] ವಜ್ರದ ಗುಂಡಿಗಳು ೪, ಪಾಕೆಟ ಕನ್ನಡಿ ೧, ಗಡಿಯಾರದ ಸರಪಣಿ ೧, [illegible] ಪೇನಾ ಕತ್ತಿ ೧, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ ೧, ರೋಲ್ಡ ಗೋಲ್ಡ್ [illegible] ೧, ಕೈ ಗುಂಡಿಗಳ ಸೆಟ್ ೧, ಕೈ ವಸ್ತ್ರ. ಈ ೧೫ ಬಹುಮಾನಗಳು ಮತ್ತು [illegible] ಗ್ಯಾರಂಟಿ ಸಹಿತ ಗಡಿಯಾರ ೧ ಕ್ಕೆ, ಬೆಲೆ ೪-೮-೦

ವಿಳಾಸ - ಇಂಗ್ಲೀಷ ಎಂಪೋರಿಯಂ,
ಪೋಸ್ಟ ಬಾಕ್ಸ ನಂ. ೧೦೫, ಮದರಾಸ

ಟೇಬಲ್ ಫೌಂಟನ್ ಪೇನ ಇನಾಂ



ಈ ಚಿತ್ರದಲ್ಲಿ ಕಂಡ ಫೌಂಟನ್ ಪೇನವು ತಾಯಿತ ಆಕಾರವಾಗಿದ್ದು, [illegible] ಇದರಲ್ಲಿ ಬರೆಯುವದರಿಂದ ಅಕ್ಷರಗಳು ಒಳ್ಳೇ ತಸ್ಸಾಗಿ ಇರುವವು. ಈ ತಿಂಗಳೊಳಗಾಗಿ ಈ ಪೇನವನ್ನು ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಕ್ಲಾಕನ್ನು ಬಹುಮಾನವಾಗಿ ಕೊಡುವೆವು.

ಇನಾಂ ಟೇಬಲ್ ಕ್ಲಾಕ ಸಹಿತ ಪೇನಾ ೧ ಕ್ಕೆ ರೂ. ೩-೦-೦.

ವಿಳಾಸ --ಸೀಟರ್ ವಾಚ್ ಕಂಪನಿ ಪೋ. ಬಾಕ್ಸ ನಂ. ೩೭ ಮದರಾಸ.

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

[illegible] ರೋಗದ ಮೂಲಕ ಸಂತತಿಯಾಗದಿರೋಣ, ಮನಸ್ಸಿನ [illegible] ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನನಷ್ಟ, ಮೂತ್ರದೊಡನೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆಸೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, [illegible] ನೋಣ, ಪಿತ್ತವಿಕಾರ ಸಿದ್ಧ [illegible] ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ [illegible] ಆಗುತದೆ. ಧಾತು ಶುದ್ಧವಾಗಿ ಘಟ್ಟ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ [illegible] ಮತ್ತು ಸಂತತಿ ಆಗಲಿಕ್ಕೆ ಸಹಾಯಕದ [illegible] ಬಂಧುಗಳು [illegible] ತಕ್ಕೊಂಡು ಅನುಭವಿಸಿರಿ. (೫೦) ಪಶಸ್ತಿಗಳು [illegible] "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಾಶಮಾಡಿರುತ್ತದೆ. ಓದಿಕೊಳ್ಳಿರಿ

[illegible] ತೊಲೆಯು [illegible] ರಾತ್ರಿಯ ಭೋಜನವಾದ ನಂತರ [illegible] ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಷ್ಟ್ಯಾದ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ [illegible] ಒಂದು ಡಬ್ಬಿಗೆ [illegible] ರೂ ೩ ಡಬ್ಬಿಗೆ [illegible] ರೂ ೬ ಡಬ್ಬಿಗೆ [illegible] ರೂ, [illegible] ಡಬಿಗೆ [illegible] ರೂ [illegible] ಡಬ್ಬಿಗಳನ್ನ ತಕ್ಕೊಂಡರೆ [illegible] ಗುಣಬರುವದು.

ಪತ್ತೆ -- ವಾಮನ ಸಖಾರಾಮ ಕಾಪಸೆ, ಮು. ಪೋ. ಮಿರಜ.

ಬಾರ್ಡೋಲಿಯೊಳಗಿನ ಪರಿಸ್ಥಿತಿ.

ಪುಣೆಯ "ಕೇಸರೀ" ಪತ್ರಿಕೆಯ ಪ್ರತಿನಿಧಿಗಳು ಸತ್ಯಾಗ್ರಹ ಸಮರ ಕ್ಷೇತ್ರವಾದ ಬಾರ್ಡೋಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ವರ್ಣಿಸಿದ್ದಾರೆ. ಆ ವರ್ಣನೆಯ ಮೇಲಿಂದ ಸತ್ಯಾಗ್ರಹ ಸಂಘಟನೆಯ ಕಲ್ಪನೆಯಾಗುವಂತಿದೆ.

ತಾಪ್ತೀ ನದಿಯ ದಂಡೆಯಲ್ಲಿ ಸುರತದಿಂದ ಬಾರ್ಡೋಲಿಯು ಐದನೇ ಉಗಿಬಂಡಿಯ ಸ್ಟೇಶನು. ಈ ತಾಲೂಕಿನಲ್ಲಿ ವೇಲೋಡ ಎಂಬ ಪೇಟೆಯಿದೆ. ಈ ಪೇಟೆಯು ಬಾರ್ಡೋಲಿ ತಾಲೂಕಿಗೆ ಹಚ್ಚಿದ್ದು. ಈ ಪೇಟೆಯು ಸತ್ಯಾಗ್ರಹ ಸಮರದಲ್ಲಿಯೇ ಸೇರಿದೆ. ಈ ತಾಲೂಕಿನ ಲೋಕಸಂಖ್ಯೆಯು ೮೮೩೩೬; ಗ್ರಾಮ ಸಂಖ್ಯೆಯು ೧೩೭. ಪ್ರದೇಶವು ಸಮಪಾತಳಿಯದು. ಆಲದಮರ, ಅಶ್ವತ್ಥ ವೃಕ್ಷ, ಮಾವಿನ ಮರ ಮುಂತಾದ ಗಿಡಮರಗಳು ಈ ತಾಲೂಕಿನಲ್ಲಿ ವಿಪುಲವಾಗಿ ಬೆಳೆಯುತ್ತವೆ. ೨-೩ ಕಡೆಗಳಲ್ಲಿ ನದಿಗಳಿವೆ, ಉಳಿದ ಕಡೆಗಳಲ್ಲಿ ಚಿಕ್ಕ-ದೊಡ್ಡ ಹಳ್ಳಗಳಿವೆ. ಹೀಗೆ ಈ ಕಡೆ ನೀರಿನ ಅನುಕೂಲತೆಯಿದೆ. ತೋಟಗಳನ್ನು ಮಾಡುವ ಪದ್ಧತಿಯಿಲ್ಲ. ಹತ್ತಿ ಬಹಳ ಬೆಳೆಯುತ್ತದೆ, ಭತ್ತ ಮುಂತಾದವು ಬೆಳೆಯುತ್ತವೆ. ಬೇಸಾಯವು ಅಲ್ಲಿಯ ಪ್ರಧಾನ ಉದ್ಯೋಗ. ಬೇರೆ ಉದ್ಯೋಗವಿಲ್ಲ. ಎಲ್ಲರೂ ನೂಲುತ್ತಿರುತ್ತಾರೆ. ೧೦೦ರಲ್ಲಿ ೯೫ ಮಂದಿಗಳು ಖಾದಿಯನ್ನು ಧರಿಸುತ್ತಾರೆ. ಪಾಟೀ-ಗುಜರಾಥಿಗಳವರ ವಸ್ತಿಯು ವಿಶೇಷ. ಮುಸಲ್ಮಾನರು ತಕ್ಕಮಟ್ಟಿಗಿದ್ದಾರೆ. ಬಾರ್ಡೋಲಿ ತಾಲೂಕಿನಲ್ಲಿ ಮೊಟ್ಟಮೊದಲು ೧೮೬೫-೬೬ ನೇ ಸಾಲಿನಲ್ಲಿ ತೀರ್ವೆ ಆಕರಿಸಲ್ಪಟ್ಟಿತು. ೧೮೯೬-೯೭ನೇ ಸಾಲಿನಲ್ಲಿ ತಿದ್ದುಪಡಿಯಾಯಿತು. ಈಗಿನದು ೩ನೇ ತಿದ್ದುಪಡಿಯು. ಶೇಕಡಾ ೨೨ರಂತೆ ತೀರ್ವೆ ಏರಿಸಲ್ಪಟ್ಟಿದೆ. ಅಂತು ಇಲ್ಲಿಯ ತೀರ್ವೆಯು ೬ ಲಕ್ಷ ರೂಪಾಯಿ. ಇದರೊಳಗೆ ೧೮೭೦೦೦ ರೂಪಾಯಿ ಹೆಚ್ಚಾದ ತೀರ್ವೆ. ಸಾಗುವಳಿ ಭೂಮಿಯು ೧೨ ಲಕ್ಷ ಎಕರೆ. ೬೫ ಗ್ರಾಮಗಳೊಳಗಿನ ೩೦೦೦ ಖಾತೆದಾರರ ಜಮೀನು ಸರಕಾರಜಪ್ತಿಯಾಯಿತು. ಇನ್ನು ನಿತ್ಯವೂ ಜಪ್ತಿಯಾಗುತ್ತಿದೆ. ತೀರ್ವೆ ಏರಿಸಿದ್ದು ಅಯೋಗ್ಯವಾಯಿತೆಂದು ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರು ಹೋಗಿ ತಿಳಿಸಿದರು. ಕರನಿರಾಕರಣೆಯ ಪ್ರಯತ್ನವನ್ನು ಕೈಕೊಳ್ಳಬೇಕಾಗಿಯೂ ಅವರು ಬೋಧಿಸಿದರೆ; ಬಾರ್ಡೋಲಿ ಪ್ರಜೆಗಳೂ ಒಪ್ಪಿ ಕೌನ್ಸಿಲು ಸಭಾಸದರಿಗೆ ನಾಯಕರಾಗಲು ಬಿನ್ನೈಸಿಕೊಂಡರು. ಯಾರೂ ಒಪ್ಪಲಿಲ್ಲ. ಅದರಿಂದ ಅಲ್ಲಿಯ ಪ್ರಜೆಗಳ ಶಿಷ್ಟಮಂಡಳವು ಶ್ರೀ ವಲ್ಲಭಭಾಯಿಯವರ ಕಡೆಗೆ ಹೋಗಿ ಬಿನ್ನೈಸಿಕೊಂಡಿತು. ಬಂದ ಸಮಸ್ತ ಪ್ರಕಾರದ ಕಷ್ಟ-ನಷ್ಟಗಳನ್ನು ಸೈರಿಸಿಕೊಳ್ಳಲು ತಯಾರಿದ್ದರೆ ತಾವು ಆ ಸಮರವನ್ನು ಮುಂದಾಗಿ ನಡಿಸುತ್ತೇವಾಗಿ ಶ್ರೀ ವಲ್ಲಭಭಾಯಿಯವರು ಒಪ್ಪಿಕೊಂಡರು. ಅದರಂತೆ ಜನರೂ ಒಪ್ಪಿಕೊಂಡರು.

ಬಾರ್ಡೋಲಿ ತಾಲೂಕಿನಲ್ಲಿ ೧೭ ಸಾವಿರ ಖಾತೆದಾರರಿದ್ದಾರೆ. ಇವರಲ್ಲಿ ೫ ಎಕರೆ ಒಳಗಿದ್ದ ಖಾತೆದಾರರ ಸಂಖ್ಯೆಯು ೧೩೨೦; ೨೫ ಎಕರೆ ಒಳಗಿದ್ದವರ ಸಂಖ್ಯೆಯು ೧೪ ಸಾವಿರ, ಇಷ್ಟು ಪ್ರತ್ಯಕ್ಷ ಸಾಗುವಳಿ ಮಾಡುವ ರೈತರೇ ಹೆಚ್ಚಾಗಿ ಖಾತೆದಾರರು.

ಅಸಹಕಾರ ಕಾಲದಲ್ಲಿ ಕರನಿರಾಕರಣೆಯ ಪ್ರಯತ್ನ ಮಾಡುವ ಬಗ್ಗೆ ಇಲ್ಲಿ ತಯಾರಿ ನಡೆದಿತ್ತು. ಆ ತಯಾರಿಯು ಈಗ ಬಹಳವಾಗಿ ಉಪಯೋಗಕ್ಕೆ ಬಿದ್ದಿದೆ. ೬ ಸ್ವರಾಜ್ಯಾಶ್ರಮಗಳು ಸ್ಥಾಪಿಸಲ್ಪಟ್ಟು, ಅವುಗಳಲ್ಲಿ ಸಜ್ಜನರಾದ ಮಹಂತರನ್ನಿಟ್ಟಿದ್ದಾರೆ. ೩೦ ಮಂದಿಗಳು ಲೋಕೋಪಕಾರದ ಕೆಲಸಗಳನ್ನು ಮಾಡುತ್ತಾರೆ. ಕೆಲವರು ನೂಲುತ್ತಾರೆ; ಕೆಲವರು ಪುಕ್ಕಟೆಯಾಗಿ ಚಿಕಿತ್ಸೆ ಮಾಡುತ್ತಾರೆ. ಈ ಪ್ರಕಾರದ ಲೋಕೋಪಕಾರದಿಂದಲೂ, ಸುಸ್ವಭಾವದಿಂದಲೂ, ನೀತಿಮತ್ತೆಯಿಂದಲೂ ಜನರ ವಿಶ್ವಾಸವನ್ನು ಇವರು ಗಳಿಸಿಕೊಂಡರು. ಇಂಥ ಲೋಕೋಪಕಾರಿಗಳ ಮಾತನ್ನು ಗ್ರಾಮದವರು ಸಂತೋಷದಿಂದ ಪೂರೈಸಿದರು. ಈ ಮಹಂತರೂ, ಸ್ವಯಂಸೇವಕರೂ ಶ್ರೀ ವಲ್ಲಭಭಾಯಿ ವಕೀಲರ ಆಜ್ಞೆಗಳನ್ನು ಅತ್ಯಂತ ವಿಧೇಯರಾಗಿ ಮನ್ನಿಸುತ್ತಾರೆ. ಈಗ ಇನ್ನು ೬ ಆಶ್ರಮಗಳು ಸ್ಥಾಪಿಸಲ್ಪಟ್ಟಿವೆ. ಈಗ ಸುಮಾರು ೧೫೦೦ ಜನರು ಸ್ವಯಂ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ತಮ್ಮ ಕೂದಲು ಮನೋಹರವಾಗಿರಬೇಕಾದರೆ, ನಿತ್ಯ ದಿನಾ ಆ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅದಕ್ಕೆ ಒಳ್ಳೇ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಹಿಮ್ಮಕ್ಕೆ ದಕ್ಕಿದರೆ ತಲೆಯ ಹೊಟ್ಟು ಹೋಗುತ್ತವೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸ್ವಾಭಾವಿಕ ಚೈತನ್ಯವು ಕೂದಲುಗಳಿಗೆ ಹುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಿಲ್ಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:o:—

೩ ಔಂಸಿಗೆ	ರೂ.	೨—೦—೦
೩ ಔಂಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಸೇವಕರಾಗಿದ್ದಾರೆ ಸ್ವಯಂಸೇವಕರೆಲ್ಲರೂ ಸ್ಥಳವಂತಿಕರೇ ತಮ್ಮ ತಮ್ಮ ಮನೆಯಲ್ಲಿ ಊಟ ಮಾಡಿಕೊಂಡು ಸ್ವಯಂಸೇವಕ ಕೆಲಸವನ್ನು ಮಾಡುತ್ತಾರೆ ವ್ಯವಸ್ಥರಾಗಿ ಸ್ವಯಂಸೇವಕ ಕೆಲಸ ಮಾಡುವವರು ಸುಮಾರು ೧೯೦ ಮಂದಿಗಳಿದ್ದಾರೆ. ಆಶ್ರಮದಲ್ಲಿ ಇರುತ್ತಾರೆ, ಹೊರಗಿನ ಕೆಲಸ ಮಾಡುತ್ತಾರೆ. ೮-೧೦ ವರುಷ ಪ್ರಾಯದ ಹುಡುಗರಿಂದ ೪೦ ವರ್ಷ ಪ್ರಾಯದ ವಯೋವೃದ್ಧರು ಸಹ ಸ್ವಯಂಸೇವಕರಿದ್ದಾರೆ. ಪ್ರತಿ ಆಶ್ರಮಕ್ಕೊಂದೊಂದು ಪೋಲೀಸ ಠಾಣೆ ನೇಮಿಸುವ ಕೆಲಸವನ್ನು ಕೂಲಿ ಕೊಟ್ಟು ನಡಿಸುತ್ತಾರೆ. ಸರಕಾರಿ ಅಧಿಕಾರಿಗಳ ಭಾರ್ಯಾಮಣಿಯರನ್ನು ಕೂಡ ಆಶ್ರಮದವರು ಚಿತ್ರಗುಪ್ತ [illegible] ಕೂಲಿಯವರು ಸಹ ಸ್ವತಂತ್ರ ಕೆಲಸ ಮಾಡಲು ತಯಾರಿಲ್ಲ. ಆದಾಗ್ಯೂ ಇದೆಲ್ಲ ಕಾರಣದಲ್ಲಿ ಪ್ರವೇಶಿಸಿದ್ದಾರೆ. ಆಶ್ರಮವಾಸಿಗಳು ತಮ್ಮ ಸರ್ವಸ್ವವನ್ನೂ ಸಮರ್ಪಿಸಿದ್ದಾರೆ. ಯಾರೂ ಚಿಂತೆಪಡುವುದಿಲ್ಲ ಸಂತೋಷಪಡುತ್ತಾರೆ. ಸರಕಾರಿ ಅಧಿಕಾರಿಗಳಿಗೆ ಅನ್ನ ಅಥವಾ ನೀರು ದೊರಕುವಲ್ಲಿ ತೊಂದರೆ ಇದ್ದರೆ, ಸ್ವಯಂ ಆಶ್ರಮದವರಿಂದ ಬೇಡಿ ತರಬೇಕು. ಸರಕಾರಿ ಅಧಿಕಾರಿಗಳಿಗೆ ಬಬ್ಬರೂ ಸೇರುವದಿಲ್ಲ. ಇದ್ದ ಅಧಿಕಾರಿಗಳ ಮೂಲಕ ಜನರಿಗೆ ಬಹಳ ಕಷ್ಟವಾಗಿದೆ.

ಆಶ್ರಮದವರು ಪ್ರಸಿದ್ಧ ಖಾತೆಯನ್ನು ಹೊರಡಿಸಿದಾರೆ. ದಿನಾಲು ಜರುಗಿದ ಸಂಗತಿಯನ್ನು ಆಶ್ರಮದವರು ಸಂಗ್ರಹಿಸಿ ಬಾರ್ಡೋಲಿಗೆ ಕಳುಹುತ್ತಾರೆ. ಎಲ್ಲ ಆಶ್ರಮಗಳಲ್ಲಿಂದ ಬಂದ ಸುದ್ದಿಯನ್ನು ಒಟ್ಟುಗೂಡಿಸಿ ಬಾರ್ಡೋಲಿಯಲ್ಲಿ ರಾತ್ರಿಗೇನೇ ಛಾಪಿಸಿ, ಆ ಪತ್ರಿಕೆಗಳನ್ನು ಬೆಳಿಗ್ಗೆ ಸ್ವಯಂಸೇವಕರು ಹಳ್ಳಿಗಳಿಗೆ ಒಯ್ಯುತ್ತಾರೆ. ಓದು-ಬರಹ ತಿಳಿಯದಿದ್ದವರಿಗೆ ಬಲ್ಲವರು ಓದಿ ಹೇಳುತ್ತಾರೆ. ಅಖಿಲ ಭಾರತೀಯ ವೃತ್ತಪತ್ರಿಕೆಗಳ ವ್ಯಾಸಂಗಿಗಳು ಬಾರ್ಡೋಲಿಯ ಮುಖ್ಯ ಆಶ್ರಮದಲ್ಲಿಯೇ ಉಳುಕೊಂಡು ಸುದ್ದಿ ಕಳುಹುತ್ತಾರೆ.

ಫೆಬ್ರುವರಿ ಹಾಗು ಎಪ್ರೀಲ್ ತಿಂಗಳುಗಳಲ್ಲಿ ಸ್ವಂತ ಸಾರಕಾರಿ ರಿಪೋರ್ಟಿನಂತೆ ೫೩ ಸಾವಿರ ರೂಪಾಯಿ ವಸೂಲಾಗಿದೆ. ಬಲೀ ತಿಂದ ಸಾವಿರ ರೂಪಾಯಿ ವಸೂಲಾಗಿವೆಂದು ಆಶ್ರಮದವರು ಹೇಳುತ್ತಾರೆ. ಇಷ್ಟು ರಕಮು ಕಟ್ಟ ಕಂಡಕರೆಯಿಂದಲೇ, ಜೀವಿತೆಯಿಂದಲೂ ವಸೂಲಾಗಿರುವದಾಗಿ ತಿಳಿಯುತ್ತದೆ. ಸೂರತದೊಳಗಿನ ಕಲೆಕ್ಟರು ಜನಗಳ ಮನೆಗಳ ಜಪ್ತಿಯಾದರೂ ಮಾಡಿ ಬದಿ ಯಿಂದಲೂ ಸರಕಾರಕ್ಕೆ ಇದರಿಂದಾಗುವ್ವ ಹಾನಿಯಾರಿ ನಡೆದಿವೆ.

ಪ್ರತಿ ಸರಕಾರದ ಹಲ್ಲಿ ನೆಯನ್ನು ಇಲ್ಲಿ ಪ್ರತ್ಯಕ್ಷ ನಡೆಸುವುದು ಎಲ್ಲಿ ಸೂತ್ರಗಳು ಶ್ರೀ| ವಲ್ಲಭಭಾಯಿ ಪಟೇಲರ ಕೈಯಲ್ಲಿವೆ. ಆದರಿಂದ ಬಾರ್ಡೋಲಿಯಲ್ಲಿ ಶ್ರೀ| ವಲ್ಲಭಭಾಯಿ ಪಟೇಲರೇ ರಾಜ್ಯಾಧಿಕಾರಿಗಳೆಂದು ಯಥಾರ್ಥವಾಗಿ ಹೇಳಬಹುದು.

—ಅವರು ಬೇಕಿದ್ದಲ್ಲಿ ಪ್ರಥಮ ವಕೀಲರು. ತ್ಯಾಗದಿಂದ ಅವರಿಗೆ ಪ್ರಪಂಚ ಮಾಡಲು ಬಹಳ ಕೊಂಡರೆ ಕಾರಣ ದಿನಮಾನ್ಯನಲ್ಲಿ ಬಹಳ ಸಭೆಯನ್ನು ಈ ದೊಡ್ಡ ವಿವಾದಕ್ಕಾಗಿ ಪ್ರತಿಬಂಧಿಸುವದಕ್ಕಾಗಿ ಒಂದು ಕಾರ್ಯ ಭಾಷಣವೆಯನಾಗಿದೆ. ಹಿಂದೂ ದೇಶದಲ್ಲಿ ನೂರ ವಕೀಲರ ಶಾಲೆ ಇಲ್ಲಿಯ ವಿದ್ಯಾರ್ಥಿಗಳಿಗೆ ಅಲ್ಲಿ ಕಳಿಸು, ಇದ್ದಷ್ಟು ಪದ ರನ್ನು ಇತ್ತ ಅವರು ಮಾಡಿದರೆ ಏನಾಗಿ ದೇಶಕ್ಕೆ ಕ್ಷೇಮ.

ಪ್ರಾಥಮಿಕ ಶಿಕ್ಷಕ ಸಮ್ಮೇಲನ.

(ಲೇಖಕ—ನಿರೀಕ್ಷಕ)

ಕನ್ನಡನಾಡಿನೊಳಗಣ ಪ್ರಾಥಮಿಕ ಶಿಕ್ಷಕ ಸಮ್ಮೇಲನದ ವೃತ್ತಾಂತವನ್ನು ಪರಾಂಬರಿಸಿದರೆ ಇಂಥ ಸಮ್ಮೇಲನಗಳಲ್ಲಿ ಪ್ರಾಥಮಿಕ ಶಿಕ್ಷಕರ ಶ್ರಮ ವ್ಯರ್ಥವಾಗಿದೆಂದು ಕಾಣುತ್ತದೆ – ಇದೇನು ಆಶ್ಚರ್ಯದಲ್ಲ. ಈ ಸಮ್ಮೇಲನಗಳಿಂದ ಶಿಕ್ಷಕರ ಲಾಭವೇನಾಗಿರುತ್ತದೆ? ಯೋಚಿಸಿ ನಿರ್ಣಯಿಸಬೇಕು. ಕರಿಸಿದ ಕಾಲು ಹಿಡಿದು ಸಮ್ಮೇಲನಗಳನ್ನು ನೆರೆಸಬೇಕು, ಹಿಂದಿನಂತೆ ತೀರ್ಮಾನ ಮಾಡಬೇಕು, ಪ್ರತಿ ಇದ್ದಂತೆ ಒಂದಿಷ್ಟು ಸಹಾಯ ಕೆಯಿತ್ತು ಬಿಸಿ ಬಿಸಿ ಭಾಷಣ ಮಾಡಿದರೆ, ವಿದ್ಯಾಧಿಕಾರಿಗಳು ಆಸಕ್ತಿ ವಹಿಸಿ, ಎಲ್ಲಿ ನಷ್ಟ ಮಾಡುತ್ತಾರೇ ಎಂಬ ಭಯ, ಭಾಷಣ ಮಾಡದಿದ್ದರೆ, ಪ್ರಾಥಮಿಕ ಶಿಕ್ಷಕರಲ್ಲಿ ವಿಶೇಷ ವಿಚಾರಗಳೇನಿಲ್ಲ, ಸಮ್ಮೇಲನದ ವ್ಯರ್ಥ ಗೋಳಿಕೆಯಿಲ್ಲ, ಎಂದು ಹೇಳುತ್ತಾರೆ. ಬೆಳಗಾವಿಯ ಪ್ರಾಥಮಿಕ ಶಿಕ್ಷಕ ಸಮ್ಮೇಲನದಲ್ಲಿ ಶಿಕ್ಷಕರ ಹಾಗು ಶಿಕ್ಷಣ ಖಾತೆಯ ಮುಖ್ಯ ಮುಖ್ಯ ತೀರ್ಮಾನಗಳನ್ನೆಲ್ಲ ಅಧ್ಯಕ್ಷರೇ ಸೂಚಿಸಿ ಮಂಜೂರ ಮಾಡಬೇಕಾಯಿತು. ಆ ಸಂಬಳ ಕಡಿತ ಮಾಡಿಕೊಳ್ಳಬೇಕೆಂದೇ ಸಮ್ಮೇಲನಗಳ ಸಾಧ್ಯವಾಗಿದ್ದರಿಂದ ಕೆಲ ಶಿಕ್ಷಕರು ಸ್ವಬಾಂಧವರ ಚಾತಿ ಹೇಳಿ, ಕೆಲವು ಅನುಕೂಲತೆಗಳನ್ನು ಸಂಪಾದಿಸಿಕೊಳ್ಳಬಹುದು. ಹೀಗೆಲ್ಲ ಆದಷ್ಟು ನೋಡಬೇಕೆಂದು ಕಳೆದ ಜೆಲ್ಲೆಗಳ ಸಭೆಯಲ್ಲಿ ಕೈಕೊಂಡ ಸಮ್ಮೇಲನಗಳಾಗಿವೆ. ಇವುಗಳಿಂದ ಶಿಕ್ಷಕರಿಗೆ ಪ್ರತ್ಯಕ್ಷ ಲಾಭವೇನಿಲ್ಲದಿದ್ದರೂ ಒಂದು ರೀತಿಯ ಸಮಾಧಾನ ಸಿಗುತ್ತದೆ. ಶಿಕ್ಷಕ ಸಮೂಹದ ಅಭಿಪ್ರಾಯವನ್ನು ಸ್ವೀಕರಿಸಿ ಬಡ ಮಾಸ್ತರ ಭಾವನೆಗೆ ಶಿಕ್ಷಕರಿಗೆ ಆಕರ್ಷಕವಾದ ಉತ್ತೇಜನ ಸಿಗುವದು, ಸಮ್ಮೇಲನವು ಅನುಕೂಲತೆಯಾಗುತ್ತದೆ.

ಸಮ್ಮೇಲನದ ಅಧ್ಯಕ್ಷರಾದ ರಾ| ಮುಕುಂದಲೇಶ್ವರ ಗಣಪತಿ ಭಟ್ಟ ಗೋಖಿಯವರ ಭಾಷಣವು ತೀರ ಅಪ್ರಾಸಂಗಿಕವಾಯಿತು. ಈ ಭಾಷಣದಲ್ಲಿ ಜಿಲ್ಹಾ ಬೋರ್ಡ-ಸ್ಕೂಲು ಬೋರ್ಡಗಳ ದೊರೆದಾಟ ಹಾಗು ಸ್ಥಾನಿಕ ಸರಾಜ್ಯದ ಸ್ಥಿತಿ ಮುನ್ನಷ್ಟು ವಿವರಿಸಿದ್ದು, ಹೊರತು ಶಿಕ್ಷಕರ ಮುಖ್ಯ ವಿಷಯವಾದ ಸಂಬಳದ ವಿಷಯದ ಮೇಲೆ ಅವರ ಅಭಿಪ್ರಾಯ ಇದ ರಲಿಲ್ಲ. ಆ ವಿಷಯದ ಮಾಹಿತಿ ಅವರಿಗಿದ್ದಂತೆ ತೋರಲಿಲ್ಲ. ಆದರೆ, ಲೋಕಲ್ಬೋರ್ಡ ವಿಷಯ ಅವರು ಅನುಭವಿಸಿದ ಅಂದಾಜಗಳು ಬಹಳ ಶ್ರೇಷ್ಠವಾಗಿವೆ. ವಿಚಾರವಿಲ್ಲದೆ, ಲೋಕಲ್ಬೋರ್ಡಿನ ಪರಿಕ್ಷೆಯನ್ನು ಅವರು ಕೈಕೊಳ್ಳಲು ಆಧ್ಯಕ್ಷರಾಗಿದ್ದ ರೆಂದು ಈಗ ಎಲ್ಲರೂ ತಿಳಿದಿರಾಯಿತು. ಹೀಗಿದ್ದು ಲೋಕಲ್ ಫಂಡನ್ನು ಪರಿಶೀಲಿಸ ತನ್ನಾ ಶಕ್ತಿ ರಾ| ಗೋಖಿಯವರು ಬಹಳ ಬಿದ್ದರೆಂದು ಅನೇಕರಿಗೆ ತಿಳಿಯದಾಗಿದೆ. ಇನ್ನೇನೇ ಲೋಕಲ್ ಫಂಡನ್ನು ಪರಿಶಿಸಿದರೆ ಸರಕಾರಿ ಅಧಿಕಾರಿಗಳ್ಳ ಸ್ಥಿತಿ ವಿಷಕಾರಾಗಿ ಬಹುದೆಂದು ಅವರು ಅಭಿಪ್ರಾಯಪಟ್ಟಿದ್ದರೆಂದು ಅಂತ ಸ್ಥೂಲವಾಗಿ ಕೆಲವರು ತರ್ಕಿಸಿದ್ದರು. ರಾ| ಗೋಖಿಯವರ ಬಾಯಿಯಿಂದಲೇ ಲೋಕಲ್ ಫಂಡಿನ ಪರಿಕ್ಷೆಯ ಶ್ರಾವಣವು (ಪ್ರಾ| ಶಿಕ್ಷಕ ಸಮಿತಿ ವಿಷಯವು) ನಿರರ್ಥ

ಮಾಡಿ ತಿಳಿದ ಬಳಿಕ, ಹಿಂದಿನ ಶಿಕ್ಷಕರ ಭಯವು ಇರುತ್ತದೆ. ಶಿಕ್ಷಣವನ್ನು ಜಿಲ್ಹಾ ಬೋರ್ಡ ಸ್ವಾಧೀನ ಕೊಂಡದ್ದು ತಪ್ಪೆಂದು ತಿಳಿದ ಬಳಿಕ, ಅದನ್ನು ಪರಿಹರಿಸಿಕೊಳ್ಳುವದಕ್ಕಾಗಿ ಅವರೇನು ಉಪಾಯ ಮಾಡಬೇಕು ಎನ್ನುವದೇ. ಇದಕ್ಕಾಗಿ ಸರಕಾರಕ್ಕೆ ಬಿನ್ನವಿಸಿಕೊಂಡರೂ ಪ್ರಯೋಜನವಿಲ್ಲೆಂಬ ಮಾತನ್ನು ರಾ| ಗೋಖಿಯವರಿಗೆ ನಾವು ಹೇಳಬೇಕಾಗಿಲ್ಲ.

ಸಮ್ಮೇಲನದೊಳಗಿನ ತೀರ್ಮಾನಗಳು ಸಹ ರಾ| ಗೋಖಿಯವರ ಭಾಷಣದಷ್ಟೇ ಅಲಕ್ಷ್ಯವಾಗಿವೆ. ಶಿಕ್ಷಕರಿಗೆ ಯಾವ ಸ್ಕೇಲು ಬೇಕು, ಎಂದು ಹಿಂದೆ ನಿರ್ಣಯಿಸಿದ್ದ ಕೋರ ಮೇಲಿನ ಕುಂಬಳಕಾಯಿಯಂತೆ ಒಂದು ಠರಾವು ಮಾಡಲ್ಪಟ್ಟಿದೆ. ನ್ಯಾಯ ದೊರೆಯದ ಕಾರಣ ಇದೇ ಠರಾವು ಮಾಡುವದರಲ್ಲಿ ಪ್ರಯೋಜನವೇನು! ಜರೂರಿಯಾದ ಹೊಸ ಪಗಾರದ ಠರಾವು ಮುಂದಿನಲ್ಲಿ ಕರುಣ ಬರೆ ಹೋಗಿದೆ ಬೇಗನೆ ಮುಂದಿನಲ್ಲಿ ಜರೂರಿಯಾದ ಹೊಸ ಪಗಾರದ ಯೋಜನೆ ಯಾವುದು? ಹೊಸ ಪಗಾರದ ಯೋಜನೆಯಲ್ಲಿ ಸಾತೇರಾ ಜಿಲ್ಹೆ ಅಥವಾ ಕೊಲ್ಹಾಪುರ ಯೋಜನೆಗಳ ಸೇರುವ ದಿಲ್ಲೆಂಬುದು ಸ್ಪಷ್ಟವಿದೆ. ಇಂಥ ಪ್ರಸಂಗದಲ್ಲಿ ಸಮ್ಮೇಲನಕ್ಕೆ ಗ್ರಾಹ್ಯವಾದ ಹೊಸ ಪಗಾರದ ಯೋಜನೆ ಮಾಡಿ ಸಮ್ಮೇಲನವು ತಯಾರಿಸಬೇಕಾಗಿತ್ತಲ್ಲವೆ? ಹೆತ್ತೆಯ ಪದ್ಧತಿ ಹೋದಂತಾಯಿತು; ಯಾವುದೊಂದು ಹೊಸ ಪಗಾರದ ಯೋಜನೆ ಆದರಾಯಿತು, ಹೀಗೆ ಸಮ್ಮೇಲನದ ಅಂತಃಕರಣವಿದ್ದರೆ, ಅದಕ್ಕೆ ಕಾರಣ ಕೇಳಬೇಕಿಲ್ಲ. ಶಕ್ತಿ ಸಹಿಯಾಗದಂತೆ ಹೊಸ ಹೊಸ ಪ್ರಕಾರದ ಯೋಜನೆಗಳನ್ನು ತಯಾರಿಸುವುದರಲ್ಲಿ ಸರಕಾರವು ದಕ್ಷವಾಗಿದೆ.

ಜಿಲ್ಹಾ ಬೋರ್ಡಿನ ಅಧ್ಯಕ್ಷರ ಅಧಿಕಾರವನ್ನು ಕುರಿತು ರಾ| ಗೋಖಿಯವರು ವರ್ಣಿಸಿದ್ದು ಒಂದು ವಿಧಾಯದ ಚಿತ್ರವಾಯಿತು. ಸ್ಥಾನಿಕ ಸ್ವರಾಜ್ಯವನ್ನು ಹೆಸಿ ಸರಕಾರವು ದೊಡ್ಡದೊಂದು ಉಪಕಾರ ಮಾಡಿರುತ್ತದೆಂಬ ಭಾವನೆಯು ಈಗ ನಷ್ಟವಾದರೆ, ಬಳಿಕ ಲೋಕಲ್ ಬೋರ್ಡ ಕಾರಭಾರಕ್ಕೆ ಸ್ಥಾನಿಕ ಸ್ವರಾಜ್ಯದಲ್ಲಿ ಏನೂ ಕೆಲಸವಿಲ್ಲೆಂದು ಬಗ್ಗೆ ಜಿಲ್ಹಾ ಬೋರ್ಡ-ಸ್ಕೂಲ ಬೋರ್ಡಗಳ ಆಡಳಿತವೇ ಸಾಕ್ಷಿ. ಸ್ಕೂಲ ಬೋರ್ಡಿನಲ್ಲಿ ಎಷ್ಟೂ ಗೊಂದಲ, ಅಲ್ಲಿ ಕೆಲವರಿಗೆ ಸ್ಕೂಲು ಬೋರ್ಡಿನ ಅಧ್ಯಕ್ಷರು ಶಿಕ್ಷಕರ ದುಗ್ಗರವನ್ನು ಕಳುಹಿದರೂ ಶಿಕ್ಷಣ ಸ್ಕೂಲ ಬೋರ್ಡಿನ ಲಕ್ಷ್ಯ ಹೋಗುವದಿಲ್ಲ. ಹಕ್ಕುದಾರರಾದವರಿಗೆ ಭತ್ತೆ ಸಿಗುವಂತೆ ಮಾಡಿದ ವಶೀಲೆಬಾಜಿಯವರು ಇದ್ದುದರಿಂದ ಮಾಡಿಕೊಳ್ಳಲಿ, ನ್ಯಾಯ್ಯ ಮಾರ್ಗವರ್ಗಿಗೆ ಭಕ್ತಿ ತಗಲ್ಲದೆಂದು ಅನ್ಯಾಯದ ಮಾರ್ಗವರ್ಗಿ ಯು ಮುಂದಿನದ್ದಾವ ಶಿಕ್ಷಕರಿಗೆ ಈ ಗತಿಂಗಳಿಗೆ ಅನ್ಯಾಯದಿಂದ ಜಾರಿಗೆ ಅವರ ಕಾರದ ಗಣಿತವು ಸ್ಕೂಲ ಬೋರ್ಡಿನ ಶಿಕ್ಷಕರಿಗೆ, ಅನ್ಯಾಯ ಪರಿಹಾರಕ್ಕೆ ಮಾತ್ರ ಹಣದ ಜಾಡಿನಲ್ಲಿ ರೂಪಾಯಿಗಳನ್ನು ಪ್ರಾಥಮಿಕ ಶಿಕ್ಷಕರು ವರ್ಗದ ವಶೀಲೆಗಿಟ್ಟರೆ, ಅನ್ಯಾಯದ ಪರಿಹಾರ ನೆಯಾಗುವದೇನು? ಹೊಸ ಸ್ಕೇಲು ಬೇಗನೆ ಮಂಜೂರಾಗಲಿಕ್ಕಿದೆಯೆಂದು ಸ್ಕೂಲ ಬೋರ್ಡಿನ ವರ್ತು ಜಿಲ್ಹಾ ಬೋರ್ಡಿನಿಂದ ಬರೆಯಿಸ್ಪಾಗಿ ರಾ| ಗೋಖಿಯವರು ಹೇಳಿದರು. ಯಾವ ಯೋಜನೆ, ಯಾವಾಗ ಮಂಜೂರಾಗುವದೆಂಬುದೇನು ತಿಳಿಯಲಿಲ್ಲ

ಅವಧಿ-ಯೋಜನೆಗಳ ಸ್ವರೂಪ ತಿಳಿದಿದ್ದರೆ, ಶಿಕ್ಷಕರಿಗಾಗುವ ನಷ್ಟ ಹೆಚ್ಚೋ, ವರ್ಗಾವರ್ಗಿಯಿಂದ ಸ್ಕೂಲ ಬೋರ್ಡಿಗಾಗುವ ನಷ್ಟ ಹೆಚ್ಚೋ ಎಂಬುದು ತಿಳಿಯುತ್ತಿತ್ತು.

* *

ಅಂತು ಈ ಸಮ್ಮೇಲನದಿಂದ ಸ್ಕೂಲ ಬೋರ್ಡು-ಇನ್ನಾ ಬೋರ್ಡುಗಳೊಳಗಿನ ನಿಜರೂಪವು ಜನರಿಗೆ ಹೊಳೆಯಿತು. ಶಿಕ್ಷಕರಿಗೆ ಅನ್ಯಾಯಗಳಾಗುತ್ತಿದ್ದರೂ, ಅವನ್ನು ಸರಿಪಡಿಸುವದಕ್ಕಿಂತ ಸ್ಕೂಲಬೋರ್ಡಿಗೆ ಆಗುವ ಖರ್ಚಿನ ವಿಚಾರವೇ ಬೋರ್ಡಿಗೆ ನ್ಯಾಯ ಮಾಡಲು ಪ್ರತಿಬಂಧಿಸುತ್ತದೆ. ಲೋಕೋಪಕಾರ ಮಾಡಹೋದ ಬೋರ್ಡಿನ ಚೇರಮನ್ನರಿಗಾಗಲಿ, ಮೆಂಬರರಿಗಾಗಲಿ ಭತ್ತೆ ಕೊಡಲು ಬೋರ್ಡಿನ ಬಳಿ ಬೇಕಷ್ಟು ಹಣವಿದೆ. ಆ ಬಗ್ಗೆ ತೋರಿದ ರೀತಿಯಿಂದ ಬೋರ್ಡುಗಳ ಮೆಂಬರರಲ್ಲಿ ಸಹಕಾರ ಬುದ್ಧಿ ಇಂಥ ತಮ್ಮ ತಮ್ಮ ಸಂಸ್ಥೆಗಳ ಮೇಲ್ಮೆಯನ್ನು ಪ್ರದರ್ಶಿಸುವದಕ್ಕಾಗಿ ಜಾಗ್ರತವಾಗುತ್ತದೆ. ಬೋರ್ಡಿಗೆ ಅಧಿಕಾರವಿಲ್ಲ, ಸ್ಕೂಲಬೋರ್ಡಿನ ಅಧಿಕಾರಕ್ಕೆ ಮಿಕ್ಕಿ ನಡೆಯಿತು; ಮುಂತಾದ ಅನ್ಯಾಯಗಳ ಹೆಚ್ಚಿಗೆ ನಡೆಯುತ್ತವೆ ಸ್ಕೂಲ ಬೋರ್ಡಿನ ಹೆಮ್ಮೆಯ ಮೂಲಕ ಕೆಲ ಪ್ರಾಥಮಿಕ ಶಿಕ್ಷಕರ ಟಪಾಲ ಭತ್ತೆಯು ಲೋಪವಾಯಿತು. ಕಡಿಮೆ ಸಂಬಳದ ಮೇಲೆ ಪ್ರಾಥಮಿಕ ಶಿಕ್ಷಕರು ಟಪಾಲ ಕೆಲಸ ಮಾಡುತ್ತಿದ್ದದರಿಂದ ಸ್ಕೂಲ ಬೋರ್ಡು ಸಂಬಳ ನೋಟೀಸ ಕೊಟ್ಟ ಕೂಡಲೆ ಟಪಾಲ ಖಾತೆಯು ತನ್ನ ಮುಂದೆ ಕೈಜೋಡಿಸಿ ಅನುಗ್ರಹ ಬೇಡಿ ಬರುವದೆಂದು ಸ್ಕೂಲ ಬೋರ್ಡಿನ ಭ್ರಮೆಯಿತ್ತು. ಆ ಭ್ರಮೆಯು ಈಗಿನ ಹಿಂದುಸ್ಥಾನದ ಸ್ಥಿತಿಯಲ್ಲಿ ನಡೆಯುವದೇನು? ಸರಕಾರಿ ನೌಕರಿಯ ಹಣವನ್ನು ಸಂಪಾದಿಸಲು ತಪ್ಪು ನಿಧಿಗಳಾಗಿ ಪೇಚಾಡುತ್ತಿರುವ ಮಂದಿಗಳಿಗೆ ಬರಗಾಲವಿದೆಯೇ? ಸ್ಕೂಲ ಬೋರ್ಡು ವಿವೇಕಿಯಾಗಿದ್ದರೆ, ಇಂಥ ಕೆಲಸ ಮಾಡುತ್ತಿದ್ದಿಲ್ಲ. ಅಧಿಕಾರ ಮದದಿಂದ ಪ್ರೇರಿತರಾದವರಿಗೆ ವಿವೇಕವೆಲ್ಲಿ?

ವಿವಿಧ ಸಂಗ್ರಹ.

ಮಿಲ್ಲರಳ ಹಿಂದುಧರ್ಮಪ್ರೇಮದ ಅಂತರಂಗ.

ಅಮೇರಿಕೆಯ ಮಿಲ್ಲರಳು ಹಿಂದು ಧರ್ಮವನ್ನು ಸನಾತನ ಧರ್ಮಭಕ್ತಿಯಿಂದ ಅಂಗೀಕರಿಸಿದಳೆಂದೂ, ಶ್ರೀ ಶಾರದಾ ಪೀಠದ ಶಂಕರಾಚಾರ್ಯರಾದ ಡಾ| ಕುರ್ತಕೋಟಿ ಮಹಾಭಾಗವತರು ಪ್ರಾಯಶ್ಚಿತ್ತ ವಿಧಿಯಿಂದ ಅವಳನ್ನು ಹಿಂದು ಧರ್ಮದಲ್ಲಿ ಸೇರಿಸಿ ದೊಡ್ಡದೊಂದು ಧರ್ಮಸೇವೆ ಮಾಡಿದರೆಂದೂ ಲೋಕದಲ್ಲಿ ಖ್ಯಾತಿ. ತಾರೀಖಿನೊಳಗಿನ "ಈವ್ನಿಂಗ ಸ್ಟೇಂಡರ್ಡ" ಪತ್ರಿಕೆಯಲ್ಲಿ ಪ್ರಕಟವಾದ ಕಥೆಯನ್ನೋದಿದರೆ, ಕಾಮವಾಸನೆಯನ್ನು ತೃಪ್ತಿಪಡಿಸುವದಕ್ಕಾಗಿ ಹಿಂದು ಧರ್ಮಪ್ರದರ್ಶನವಾಯಿತೆಂದು ತಿಳಿಯುತ್ತದೆ. ಮಿಲ್ಲರಳು ೧೯೨೬ನೇ ಇಸ್ವಿಯಲ್ಲಿ ಶಾಲೆಯಲ್ಲಿ ಕಲಿಯುತ್ತಿದ್ದಳು, ಆಗ ಅವಳಿಗೆ ಬರೇ ೧೮ ವರ್ಷ ಪ್ರಾಯ. ಅವಳು ತಾಯಿಯೊಡನೆ ಯುರೋಪ ಖಂಡಕ್ಕೆ ಸಂಚಾರಕ್ಕೆ ಹೊರಟಿದ್ದಳು ಸ್ವಿಟ್ಝರ್ಲೇಂಡಕ್ಕೆ ಹೋದಾಗ ಮಿಲ್ಲರಳಿಗೂ, ತುಕೋಜಿರಾಯರಿಗೂ ಗಂಟು ಬಿತ್ತು. ಮದುವೆಯ ಸೂಚನೆಯೂ ಆಯಿತು. ಅಮೇರಿಕೆಯ ವಕೀಲರ ಆಲೋಚನೆಯೂ ಕೇಳಲಾಯಿತು. ಇಬ್ಬರು ಹೆಂಡಂದಿರಿರುವಾಗ, ಹೀಗೆ ಕಾಯಿದೆಯಂತೆ ಮದುವೆಯಾಗಬರುತ್ತದೇನೆಂಬ ಪ್ರಶ್ನೆ ಹೊರಟಿತು. ಇಬ್ಬ ಹೆಂಡಂದಿರ ಪಾಣಿಗ್ರಹಣದ ಪಾಶವನ್ನು ಕಾಯಿದೆಯಂತೆ ತುಂಡರಿಸಬೇಕಾಗಿಯೂ ವಕೀಲರ ಸಲ್ಲೆ ಕೇಳಲಾಯಿತು. ಮಹಾರಾಜರು ತಮ್ಮ ಇಬ್ಬ ಹೆಂಡರ ಸ್ಥಿತಿಯನ್ನು ವಕೀಲರಿಗೆ ಹೀಗೆ ತಿಳಿಸಿದರು - ಹಿರೇ ಹೆಂಡತಿಗೆ ಒಬ್ಬ ಮಗನಿದ್ದಾನೆ. ಅವಳಿಗೂ, ತನಗೂ ಭಿನ್ನಮತವೇರ್ಪಟ್ಟಿದೆ. ಎರಡನೇ ಬಾರಿ ಮದುವೆಯಾಯಿತು ಎರಡನೇ ಹೆಂಡತಿಯು ಸನ್ಯಸ್ತಳಾಗಿದ್ದಾಳೆ. ಯಾವಾಗಲೂ ಧ್ಯಾನಸ್ಥಳಾಗಿರುತ್ತಾಳೆ ಅರಮನೆಗೆ ಬೆಂಕಿ ಹತ್ತಿದಾಗ ಅವಳದೊಂದು ಕೂಸು ಸುಟ್ಟು ಹೋಯಿತು. ಆದರಿಂದ ಅವಳು ಮಹಾರಾಜರಿಗೆ ಮೂರನೇ ಹೆಂಡತಿ ಮಾಡಿಕೊಳ್ಳಲು ಅಪ್ಪಣೆ ಕೊಟ್ಟಿದ್ದಾಳೆ. ಆದರಿಂದ ಫ್ರಾನ್ಸ ದೇಶದೊಳಗಿನ ಕಾಯಿದೆಯಂತೆ ಮೂರನೇ ಹೆಂಡತಿಯೊಡನೆ ಆದ ವಿವಾಹಬದ್ಧತೆಯನ್ನು ತುಂಡರಿಸಬೇಕಾಗಿ ವಕೀಲರ ಆಲೋಚನೆ ಕೇಳಿದರು. ಎರಡನೇ ರಾಣಿಯರಾದ ಶ್ರೀ| ಇಂದಿರಾ ರಾಣಿಯವರು ಸನ್ಯಸ್ತವೃತ್ತಿಯನ್ನು ಸಂತೋಷದಿಂದ ಸ್ವೀಕರಿಸಿರುತ್ತಾರೆಂಬರ್ಥದ ಒಂದು ಪತ್ರವೂ ತೋರಿಸಲಾಯಿತು. ಆದರೂ, ವಕೀಲರು ಕಾಯಿದೆಯಂತೆ ಹಿಂದಿನ ವಿವಾಹಬದ್ಧತೆಯನ್ನು ತುಂಡರಿಸಲಾಗದೆಂದು ಅಭಿಪ್ರಾಯ ಕೊಟ್ಟರು. ವೇಶ್ಯೆಯು ಮಾತನ್ನು ಹೇಳಿದರಂತೆ ಪೌರ್ವಾತ್ಯರೊಡನೆ ಪಾಶ್ಚಿಮಾತ್ಯರು ವಿವಾಹ ಮಾಡಿಕೊಂಡರೆ ಇಷ್ಟಪಟ್ಟವರಿಗೂ ಮುಂದೆ ಕ್ಷೇಮವಿಲ್ಲವೆಂದು ಮುಂಜಾಗ್ರತೆ ಕೊಟ್ಟರಂತೆ. ಇಷ್ಟಲ್ಲದೆ ನಲ್ಲೆಯ ಪ್ರೇಮಾತಿಶಯದ ವಿಷಯದಿಂದ ಮದುವೆಗಾಗಿ ಹಿಂದು ಧರ್ಮವನ್ನು ಅಂಗೀಕರಿಸಬೇಕೆಂಬ ನಿರ್ಧಾರವಾಯಿತಾಗಿ ವಕೀಲರು ಹೇಳುತ್ತಾರೆ. ಮಿಲ್ಲರಳಿಗೆ ಹಿಂದು ಧರ್ಮದ ಮೇಲೆ ಬಾಲ್ಯದಿಂದ ಭಕ್ತಿಯಿರುತ್ತದೆಂಬ ಸಂಗತಿಗಳೆಲ್ಲ ಕಟ್ಟುಕಥೆಗಳು. ಹಿಂದು ಧರ್ಮದ ಇಬ್ಬ ರಾಣಿಯರಿರುತ್ತ, ಸನಾತನ ಧರ್ಮದ ವ್ಯಾಪ್ತಿಯನ್ನು ಬೆಳೆಸುವ ದೊಡ್ಡ ತತ್ವದ ಮೇಲೆ ಧರ್ಮಾಂತರ ಮಾಡಿದ್ದು ಅನುಚಿತವೆಂದು ಶ್ರೀ ಶಂಕರಾಚಾರ್ಯರಿಗೆ ಈಗಲಾದರೂ ಹೊಳೆದರೆ, ಹಿಂದು ಲಾಭವೇ. ವಿವಾಹವಾದಂದಿನಿಂದ ದಂಪತಿಗಳು ಪ್ರಕೃತಿಸ್ವಾತಂತ್ರ್ಯದ ನೆವದ ಮೇಲೆ ವಿಲಾಯತಿಯಲ್ಲಿ ವಿಹರಿಸುತ್ತಿದ್ದಾರೆ.

* *

ಸರಕಾರದ ಅಪಕೃತ್ಯಗಳು.

ಲಾಹೋರಿನಲ್ಲಿ ಬಾನರ್ಜಿ ಎಂಬವರಿಗೆ ಕಳುಹಿ ಸರಕಾರವು ಕ್ರಾಂತಿಕಾರಕ ಪ್ರಕರಣವನ್ನೆಬ್ಬಿಸಲು ಹೊಂಚು ಹಾಕಿದ ಸಂಗತಿಯು ಈ ಹಿಂದೆ ಕೊಡಲ್ಪಟ್ಟದೆ. ಬಾನರ್ಜಿಯು ಕೋರ್ಟಿನಲ್ಲಿ ಹಾಜರಾಗುವಂತೆ ನರೇಂದ್ರನಾಥ ಎಂಬವರಿಂದ ಜಾಮೀನು ಕೊಟ್ಟಿದ್ದರು. ಜಾಮೀನು ಕೊಳ್ಳುವಾಗ ನರೇಂದ್ರನಾಥರಿಗೆ ಜಾಮೀನಿಗೆ ತಕ್ಕ ಆಸ್ತಿಯದೆಯೋ ಹೇಗೆ? ಎಂಬ ಚೌಕಶಿಯಾಗಲಿಲ್ಲ ಬಾನರ್ಜಿಯು ಮಿರತಿಗೆ ಓಡಿಹೋದನು ಜಾಮೀನದಾರರಿಗೆ ಒಂದು ಪ್ರಶ್ನೆ ಸಹ ಕೇಳಲಿಲ್ಲ ಜಾಮೀನ ಕರಾರು ಜಪ್ತಾಗಲಿಲ್ಲ ಇದೆಲ್ಲ ಸಂಗತಿಯು ಸರಕಾರಕ್ಕೆ ಶೋಭಿಸುತ್ತದೆಯೇ? ಬಾರ್ಡೋಲಿಯೊಳಗಿನ ಸ್ಥಿತಿಯ ವಿಚಾರ ಮಾಡಿದರೆ, ಈ ದುರಾಚಾರವೇನು ವಿಶೇಷವಲ್ಲ

* *

ಅತಿವೃಷ್ಟಿಯಿಂದ ನಷ್ಟ!

ಮಳೆಯಿಲ್ಲ, ಮಳೆಯಿಲ್ಲವೆಂದು ಉದ್ಗರಿಸುತ್ತಿರುವಾಗ, ಒಮ್ಮೆಲೇ ವಿಪರೀತ ಮಳೆಬಿದ್ದು ದಿಕ್ಕು ಅತ್ತಕಡೆಯಲ್ಲಿ ಗಿಡ-ಮರಗಳು ಸಹ ಕಿತ್ತುಬಿದ್ದು ಹೇರಳ ನಷ್ಟ. ದಾವಣಗೆರೆಯಲ್ಲಿ ಸಿಡಿಲು, ಗುಡುಗು, ಮಿಂಚು, ಗಾಳಿ-ಮಳೆಗಳ ಆರ್ಭಾಟ! ಮರಗಳು ಬೇರು ಸಹಿತ ಉರುಳಿದವು. ಅವುಗಳ ಮೇಲಿದ್ದ ಹಕ್ಕಿ-ಪಕ್ಕಿಗಳೆಲ್ಲ ಪಟ ಪಟ ಉದುರಿ ಪ್ರಾಣಬಿಟ್ಟವು. ದೊಡ್ಡ ದೊಡ್ಡ ಬಂಗಲೆ ಸರಕಾರಿ ಕಟ್ಟಡಗಳು ಕಿತ್ತುಹೋದವು. ಚಿಕ್ಕ ಪುಟ್ಟ ಮನೆಗಳ ಪಾಡೇನು? ಮನೆಯ ಛಾವಣಿ ಹತ್ತಿಯ ಚಪ್ಪರಗಳ ಮೇಲೆ ಹಾಕಿದ ತಗಡುಗಳು ಗಾಳಿಪಟದಂತೆ ಹಾರಿಹೋಗಿ ಒಂದೆರಡು ಮೈಲು ದೂರ ಬಿದ್ದವು. ಪ್ರಾಣಾಪಾಯ ವಿಶೇಷವಾಗಲಿಲ್ಲ. ಶಿವಮೊಗ್ಗೆ ತಾಲೂಕಿನ ಅರದೊಳಲು ಗ್ರಾಮದಲ್ಲಿ ಮಳೆ ಬಂದು ನಮೂನೆ ಅಲ್ಲಿ ಆಣೆಕಲ್ಲುಗಳು ಸುರಿದವು! ಸಿಪ್ಪೆ ಸುಲಿದ ತೆಂಗಿನಕಾಯಿಯಷ್ಟು ದೊಡ್ಡ ಆಣೆಕಲ್ಲುಗಳು!! ಮೇಲ್ಮಾಡುಗಳ ಹಂಚುಗಳು ಒಡೆದು ಚೂರು ಚೂರು!!! ಒಬ್ಬ ಹುಡುಗನು ತೋಟದಿಂದ ಮನೆಗೆ ಬರುತ್ತಿದ್ದನು; ಬರುವಾಗ ತಲೆಯ ಮೇಲೆ ಒಂದು ಆಣೆಕಲ್ಲು ಬಿದ್ದು ದೊಡ್ಡ ಗಾಯ! ನೆರೆಯ ಹೊಸಹಳ್ಳಿ ಗ್ರಾಮದಲ್ಲಿ ಇನ್ನೂ ದೊಡ್ಡ ದೊಡ್ಡ ಆಣೆಕಲ್ಲುಗಳು ಬಿದ್ದವು. ೧-೧॥ ಸಾವಿರ ರೂಪಾಯಿಗಳ ಹಂಚು ಒಡೆದು ಹೋದವು! ಇಲ್ಲಿ ಮಳೆ ಬೀಳುವದೇ ಅಪರೂಪ, ಅಂಥಲ್ಲಿ ಇದೆಂಥ ವಿಕಲಾಟ! ೧೫-೨೦ ಮಿನಿಟುಗಳಲ್ಲಿಯೇ ಈ ಮಳೆ ತಡೆದಷ್ಟೊಂದು ಪುಣ್ಯ! ಇಲ್ಲದಿದ್ದರೆ ಏನೇನಾಗುತ್ತಿತ್ತೋ ಏನೋ?

— ಬೆಂಗಳೂರಿನ ಬಳಿ ಕೆಂಗೇರಿ ಗ್ರಾಮದಲ್ಲಿ ಬ್ರಹ್ಮಚರ್ಯಾಶ್ರಮ ಸ್ಥಾಪನೆಯಾಗಿದೆ. ಈ ಆಶ್ರಮದಲ್ಲಿ ಜಾತಿ ಭೇದವಿಲ್ಲ. ೧೦ ವರ್ಷಕ್ಕೆ ಮಿಕ್ಕಿದ ಹಿಂದೂ ಬಾಲಕರಿಗೆ ಇಲ್ಲಿ ಪ್ರವೇಶವಿದೆ.

— ಅಮೇರಿಕಾ ಖಂಡದ ಪೇರು ಪ್ರಾಂತದಲ್ಲಿ ಭೂಕಂಪವಾಗಿ ೨ ಗ್ರಾಮಗಳು ನೆಲಸಮವಾದವು

— ಮೈಸೂರಿನ ಕೊಳ್ಳೇನಪೇಟೆಯ ನೆರೆಯ ಗ್ರಾಮದಲ್ಲಿ ಒಂದು ವಿವಾಹ ಸಮಾರಂಭ ನಡೆದಿತ್ತು. ಮದುಮಗನು ಕಾಶಿಯಾತ್ರೆಗೆ ಹೋಗುವ ಸಂಭ್ರಮ, ವಧುವು ಗೌರೀಪೂಜೆ ಮಾಡುತ್ತಿದ್ದಳು, ಥಟ್ಟನೆ ಸೀರೆಗೆ ಬೆಂಕಿ ಹಾರಿ ವಧುವಿನ ಅವಸಾನ. ಕಾಶಿಯಾತ್ರೆಗೆ ಹೋದ ವರನು ಓಡಿ ಬಂದನು ವಧುವಿನ ಮೈ ಸುಟ್ಟುಹೋಗಿತ್ತು, ಆದರೂ ವಧು-ವರರ ವಿವಾಹವು ನಿಶ್ಚಯಿಸಿದ ಮುಹೂರ್ತಕ್ಕೆ ನೆರವೇರಿತು. ಸಾಯಂಕಾಲಕ್ಕೇ ವಧುವು ತೀರಿಕೊಂಡಳು. ಯಜಮಾನನಿಗೆ ಕನ್ಯಾದಾನದ ಪುಣ್ಯ ಬಂತು, ಆಪ್ತೇಷ್ಟರಿಗೆ ಮದುವೆಯ ಸಂಭ್ರಮ ಸಿಕ್ಕಿತು, ವರನಿಗೆ ವಧುವಿನ ಪಾಣಿಗ್ರಹಣಸುಖ ದೊರೆಯಿತು, ವಧುವಿಗೆ ಮರಣಕಾಲಕ್ಕೆ ಸೌಭಾಗ್ಯವೂ ಪ್ರಾಪ್ತವಾಯಿತು. ಇಷ್ಟು ಅವಿವೇಕದಿಂದ ಮದುವೆ ಮಾಡುವ ಗಾಂಪರು ಎಲ್ಲಿಯಾದರೂ ಸಿಕ್ಕಾರೇ? ಮದುವೆಯಾದರಾಯಿತೇನು? ಮುಂದಿನ ಕ್ಷೇಮವಿಚಾರ ಬೇಡವೇ?

— ಹಿಂದು ಮಹಾಸಭೆಯ ಟ್ರಸ್ಟ ಮಂಡಳದವರು ಗೋಮಾಂತಕಕ್ಕೆ ಹೋಗಿ ಅಲ್ಲಿಯ ಗವ್ಹರ್ನರ ಕಡೆಗೆ ಮಾತು ಕಥೆ ಮಾಡಿದರು. ಗವ್ಹರ್ನರರು ಶಾಂತತೆಯಿಂದ ಶುದ್ಧಿ ಕಾರ್ಯವನ್ನು ಮಾಡುವವರಿಗೆ ಕಾಯಿದೆಯಂತೆ ಆಕ್ಷೇಪವಿಲ್ಲವಾಗಿ ಹೇಳಿದರು

— ಸೊಲ್ಲಾಪುರ ಪೇಟೆಯೊಳಗಿನ ಶ್ರೀ ಕಾಶೀಶ್ವರ ದೇವಸ್ಥಾನಕ್ಕೊಪ್ಪಿದ ರಥದ ಕೊಟ್ಟಿಗೆಗೆ ಬೆಂಕಿ ಬಿದ್ದು ೨೫ ಸಾವಿರ ರೂಪಾಯಿಗಳ ನಷ್ಟ.

ಕಾನಡಾ ವೃತ್ತ.

ಮಿತಿ ವಿಭವ ಸಂ। ಜ್ಯೇಷ್ಠ ವ। ೮ ಮಿ ಸೋಮವಾರ

ಅವಿವೇಕಿಯಾಗಬೇಡಿ!

ಈಗ ಎಲ್ಲೆಲ್ಲಿಯೂ ಬಾರ್ದೋಲಿಯೇ ಪ್ರಮುಖ ವಿಷಯವಾಗಿದೆ. ಅಖಿಲ ಭಾರತೀಯ ರಾಜಕಾರಣದಲ್ಲಿ ಸ್ಯಾಮನ್ ಕೂಟಕ್ಕೆ ಹಿಂದೆ ಹಾಕಿ ಬಾರ್ದೋಲಿಯು ಮುಂದಾಗಿ ಬಂದಿದೆ. ಬಾರ್ದೋಲಿಯೊಳಗಿನ ಪಠಾಣರ ರಾಜ್ಯದಿಂದಂತೂ ಬ್ರಿಟಿಶ ರಾಜ್ಯಾಧಿಕಾರಿಗಳ ಅಕೀರ್ತಿಯು ದಿನಾ ಹೆಚ್ಚಾಗಿ ಹಬ್ಬುತ್ತಲಿದೆ. ಅತ್ಯಾಚಾರ ಮಾಡುವ ಪಠಾಣರಿಗೆ ಸರಕಾರವು ಸದ್ವರ್ತನದ ಸರ್ಟಿಫಿಕೇಟುಗಳನ್ನು ಅರ್ಪಿಸಿ, ಅಕೀರ್ತಿಗೆ ತಡೆಹಾಕಲೆತ್ನಿಸಿದರೂ, ಅದರಿಂದ ಅಕೀರ್ತಿಗೆ ಮತ್ತಿಷ್ಟು ಪುಟ ಏರುತ್ತದೆ. ಸದ್ವರ್ತನದ ಜಾಮೀನನ್ನು ಕೊಳ್ಳುವಂಥ ಪಠಾಣರು ಬಾರ್ದೋಲಿಯಲ್ಲಿ ಸಾಧು ಪುರುಷರಾಗಿ ಪರಿಣಮಿಸಿದ್ದಾರೆಂದು ಹೇಳಿದರೆ, ನಂಬತಕ್ಕ ಪ್ರಾಣಿಯು ಜಗತ್ತಿನಲ್ಲಿ ಯಾರಿದ್ದಾನೆ? ಅದಿಂತಿರಲಿ, ವಸೂಲಿಯ ಕೆಲಸಕ್ಕೆ ಬೇರೆ ಜಾತಿಯ ಆಳುಗಳು ಸರಕಾರಕ್ಕೆ ದೊರೆಕಲಿಲ್ಲವೇ? ಅಷ್ಟು ಸರಕಾರದ ಪ್ರತಿಷ್ಠೆಯು ಶೂನ್ಯಾಂಕಕ್ಕೆ ತಪ್ಪಿರುವದೇ? ಅದಿಂತಿರಲಿ.

ಇಂದಿಗೆ ಹೇಳಬೇಕಾದ ವಿಷಯವು ಇದಲ್ಲ. ಬಾರ್ದೋಲಿಯ ವೃತ್ತಾಂತವನ್ನು ವಾರವಾರಕ್ಕೆ ನಾವು ಪ್ರಕಟಿಸುತ್ತ ಬಂದಿದ್ದೇವೆ. ಅದನ್ನು ವಾಚಕರು ಲಕ್ಷಪೂರ್ವಕವಾಗಿ ಓದುತ್ತಾರೆಂದ ನಮ್ಮ ಗ್ರಹಿಕೆಯಿದೆ. ಬಾರ್ದೋಲಿಯೊಳಗಿನ ಸಮಾಚಾರದಿಂದ ಒಂದು ಮಾತು ಸಿದ್ಧವಿದೆ: ಬಾರ್ದೋಲಿಯ ಪ್ರಜೆಗಳು ಪಠಾಣರಿಗೂ ಹಿಮ್ಮೆಟ್ಟುವದಿಲ್ಲ, ಧೀರರಂತೆ ಸಮಸ್ತ ಕಷ್ಟಗಳನ್ನು ಸಹಿಸುತ್ತಾರೆ. ಹಿಂದುಸ್ಥಾನ ಸರಕಾರದಲ್ಲೂ, ಮುಂಬಯಿ ಸರಕಾರದಲ್ಲೂ ಗಡಿಬಿಡಿಯಾಗಹತ್ತಿದೆ, ಗಾಬರಿಯೂ ಆಗಹತ್ತಿದೆ. ಗಡಿಬಿಡಿ ಗಾಬರಿಗಳ ಸುದ್ದಿಗಳೆಲ್ಲ ವದಂತಿಗಳೇ. ಆದರೆ, ಈ ಸುದ್ದಿಗಳಲ್ಲಿ ತಥ್ಯಾಂಶವಿರಲೇಬೇಕೆಂಬ ಭಾವನೆಯಿಂದ ಇವು ಪ್ರಕಟ ಹೊಂದಿವೆ. ಆದರಿಂದ ಇವನ್ನು ಇಂದಿಗೆ ಪರಾಂಬರಿಸ ಬಯಸುವೆವು.

ಸರ್ವಾಧಿಪತಿಗಳಾದ ಇರ್ವಿನ್ ದೊರೆಗಳು ಮುಂಬಯಿ ಸರಕಾರಕ್ಕೆ ಬಾರ್ದೋಲಿಯೊಳಗಿನ ಅವಸ್ಥೆಯನ್ನು ಪರಾಂಬರಿಸುವದಕ್ಕಾಗಿ ಸ್ವತಂತ್ರ ಮಂಡಳವನ್ನೊಂದು ನೇಮಿಸಲು ಸೂಚಿಸಿದ್ದಾರಂತೆ. ಬಾರ್ದೋಲಿ ಪ್ರಜೆಗಳ ತರ್ಫೆನಿಂದ ಮಹಾತ್ಮರೂ, ಬೆರಿಸ್ಟರ ಮುಕುಂದರಾವ ಜಯಕರರೂ ಸಭಾಸದರಾಗಬೇಕಾಗಿಯೂ, ಮುಂಬಯಿ ಸರಕಾರದ ತರ್ಫೆನಿಂದ ಸರಕಾರಿ ಕಾರ್ಯದರ್ಶಿಗಳಾದ ಮಿ। ಸ್ಮಿಥ್‌ರವರು ಸಭಾಸದರಾಗಬೇಕಾಗಿ ಸರ್ವಾಧಿಪತಿಗಳ ಸೂಚನೆ. ಕರ ಏರಿಕೆಯು ಈ ಮಂಡಳದ ವಿಚಾರ ವಿಷಯವಾದ್ದರಿಂದ ಬಾರ್ದೋಲಿಯವರು ಹಳೇ ಕರಿಗೆಯನ್ನು ಮೊಟ್ಟಮೊದಲು ತೆರಬೇಕೆಂಬ ಶರ್ತಿನ ಮೇಲೆ ಈ ಮಂಡಳವು ಘಟಿಸಲ್ಪಡುವದಂತೆ. ಮುಂಬಯಿ ಸರಕಾರವು ಈ ಸೂಚನೆಯನ್ನು ಗ್ರಾಹ್ಯ ಮಾಡಿರುವದಾಗಿಯೂ, ಶೀಘ್ರವೇ ಸರಕಾರಿ ಪ್ರಕಟನೆಯು ಹೊರಡಿಸಲ್ಪಡುವದಾಗಿಯೂ ಸುದ್ದಿ ಹಬ್ಬಿತ್ತು. ಬಾರ್ದೋಲಿಯ ಪ್ರಜೆಗಳ ಸೇನಾಪತಿಗಳಾದ ಶ್ರೀ। ವಲ್ಲಭಭಾಯಿ ಪಟೇಲರ ಹೇಳಿಕೆಯಾದರೂ ಏರಿಕೆಯ ತೀರ್ವೆಯನ್ನು ತಹಕೂಬ ಇಡಬೇಕೆಂದು ಇರುತ್ತಿದ್ದದರಿಂದ ಈ ಸೂಚನೆಯು ಮುಂಬಯಿ ಸರಕಾರಕ್ಕೆ ಮಾನ್ಯವಾಗುವದೆಂದು ಒಮ್ಮಿಲೇ ಹೇಳುವದು ಕಷ್ಟಸಾಧ್ಯ.

ವಿಹಾರಿಯ ಮಹಾಬಲೇಶ್ವರದೊಳಗಿನ ಸುದ್ದಿಗಾರನ ಅನುಮಾನದ ಮೇರೆಂದ ಮುಂಬಯಿ ಸರಕಾರದ ಮನಸ್ಥಿತಿಯು ವ್ಯಕ್ತವಾಗುತ್ತದೆ. ಪ್ರಾಂತಾಧಿಪರಾದ ಸರ್ ವಿಲ್ಸನ್‌ರಿಗೆ ಬಾರ್ದೋಲಿಯ ವಿಷಯವೇ ಹೆಚ್ಚಾಗಿ ಮನೋವ್ಯಥೆಗೆ ಕಾರಣವಾಗಿದೆ. ದಿವಾಣರು ರಾಜೀನಾಮೆ ಕೊಡುವ ತಯಾರಿಯಲ್ಲಿದ್ದಾರಂತೆ. ಹೊಸ ದಿವಾಣರನ್ನು ನೇಮಿಸಿಕೊಳ್ಳುವದು ಬಲು ಕಠಿಣ. ಯೋಗ್ಯತಾವಂತರನ್ನು ನೇಮಿಸಿಕೊಳ್ಳಹೋದರೆ, ಸ್ಯಾಮನ್ ಕೂಟಕ್ಕೆ ಅವರು ಬೆಂಬಲ ಕೊಡುವದಿಲ್ಲ. ಒಮ್ಮೆ ಸ್ಯಾಮನ್ ಕೂಟವನ್ನು ಪುರಸ್ಕರಿಸಿದರೂ, ಬಾರ್ದೋಲಿಯೊಳಗಿನ ಸರಕಾರಿ ಧೋರಣವನ್ನು ಎತ್ತಿ ಹಿಡಿಯುವವರು ದುರ್ಲಭರು. ಆದರಿಂದ ಮಿ। ಮೆಕ್ಕೇ ಎಂಬವರನ್ನು ನೇಮಿಸಿ ಹೊಸ ಚೌಕಶಿ ಮಾಡಲು ಸರಕಾರವು ತಯಾರಿದೆ. ಆದರೆ, ಸರಕಾರದ ಶರ್ತುಗಳು ಮಾತ್ರ ಸ್ವಾಭಿಮಾನಲೇಶವಿದ್ದವರಿಗೆ ಮಾನ್ಯವಾಗುವಂಥವಿಲ್ಲ. ಸತ್ಯಾಗ್ರಹ ಸಮರಕ್ಕೆ ಮೊಟ್ಟಮೊದಲು ತಡೆಹಾಕಬೇಕು, ಏರಿದ ತೀರ್ವೆಯನ್ನೂ ತೆರಬೇಕು. ಜಪ್ತ ಮಾಡಿದ ಭೂಮಿಯನ್ನು ಮುಂಚಿನ ಖಾತೆದಾರರಿಗೆ ಕೊಡುವದು ಅಥವಾ ಬಿಡುವದು ಔದಾರ್ಯವಂತ ಸರಕಾರದ ಅನುಗ್ರಹದ ಮೇಲೆ ಸರ್ವಥಾ ಅವಲಂಬಿಸಿರಬೇಕು; ಈ ಶರ್ತುಗಳನ್ನು ಪಾಲಿಸಲು ಸತ್ಯಾಗ್ರಹಿಗಳು ತಯಾರಿದ್ದರೆ, ಸರಕಾರವು ಮಿ। ಮೆಕ್ಕೇಯವರಿಗೆ ಚೌಕಶಿಗಾಗಿ ನೇಮಿಸಲು ಒಪ್ಪುತ್ತದೆ. ಕೈಕಾಲು ಕಟ್ಟಿಕೊಂಡು ನಿರಾಧಾರಿಗಳಾಗಿ ಸರಕಾರಕ್ಕೆ ಬಾರ್ದೋಲಿಯವರು ಶರಣಾಗತರಾಗಬಂದಾಗ ಈ ಮಾತು ನೋಡುವ. ನೇಮಸ್ತ ವಿಚಾರದ ಕೌನ್ಸಿಲು ಪ್ರತಿನಿಧಿಗಳಿಗೇ ಈ ಸೂಚನೆ ಮಾನ್ಯವಿಲ್ಲದ ಬಳಿಕ, ವೀರರಾದ ಸತ್ಯಾಗ್ರಹಿಗಳು ಶ್ವಾನದಂತೆ ರೊಟ್ಟಿಯ ತುಣುಕಿಗೆ ಬಾಯ್ಬಿಡುವರೇನು?, ಸರ್ವಸ್ವವನ್ನೂ, ಪ್ರಸಂಗ ಬಿದ್ದರೆ, ಪ್ರಾಣವನ್ನೂ ಧಾರೆಯೆರೆಯಲು ಸಿದ್ಧರಾದ ಬಾರ್ದೋಲಿಯ ಪ್ರಜೆಗಳೂ, ಸತ್ವಧೀರರಾದ ಶ್ರೀ। ವಲ್ಲಭಭಾಯಿ ಪಟೇಲರೂ ಔದಾರ್ಯವಂತ ಸರಕಾರಿ ಅನುಗ್ರಹದ ಬಿಸಿಲುಗುದುರೆಗೆ ಮರುಳಾಗಿ ಸತ್ಯಾಗ್ರಹ ಸಮರವನ್ನು ಕಡಿಸುವರೇನು? ಆ ಮೂರ್ಖತನವು ಹಿಂದಾದದ್ದಾಯಿತು. ಇನ್ನು ಈ ವೇಷವನ್ನು ಸರಕಾರವು ಇಳಿಸುವದುತ್ತಮ. ಇಳಿಸಿದರೇನೇ ಕ್ಷೇಮವಿದೆ. ಬ್ರಿಟಿಶರಿಗೂ ಕ್ಷೇಮ, ಭಾರತೀಯರಿಗೂ ಕ್ಷೇಮ.

ಅಂತೂ ಬಾರ್ದೋಲಿಯು ಸರಕಾರಿ ಅಂತಃಗಾರದಲ್ಲಿ ಗಡಿಬಿಡಿಯನ್ನುಂಟುಮಾಡಿದೆ. ಹಿಂದುಸ್ಥಾನ ಸರಕಾರದ ಸೂಚನೆಯನ್ನು ಮನ್ನಿಸಿ ಮುಂಬಯಿ ಸರಕಾರವು ವರ್ತಿಸಿದರೆ, ರಾಜ-ಪ್ರಜೆಗಳೊಳಗಿನ ಸಂಬಂಧಗಳು ಪುನಃ ಪ್ರಸ್ಥಾಪಿತವಾಗುವವು. ಅದಲ್ಲದೆ, ತಮ್ಮದೇ ಹಟ ಹಿಡಿದು ಬಾರ್ದೋಲಿಯ ಪ್ರಜೆಗಳು ಶರಣಾಗತರಾಗಬೇಕೆಂಬ ದುರಾಶೆಗೆ ಬಲಿಬಿದ್ದರೆ, ಅದೇನು ಸಾಧ್ಯವಾಗದು. ಬಾರ್ದೋಲಿಯೊಳಗಿನ ದುರಾಚಾರಗಳಿಂದ [illegible]ರತ್ತುಗೇಡಾಗಿ ಭರತ ಖಂಡದಲ್ಲಿ ಪೂರ್ಣ ಸ್ವಾತಂತ್ರ್ಯದ ಕಲ್ಪನೆಗೆ ಪುಟ ಏರುವದು. ಕಾದಿದವ ಬಾಳಿಯಾನು; ಆದರಿಂದ ಮುಂಬಯಿ ಸರಕಾರವು ಇನ್ನಾದರೂ ಕೈ ತಡೆದು, ವಿಚಾರ ಮಾಡಲಿ. ಅವಿವೇಕಿಯಾಗಿ ನಡೆದರೆ, ಅದರ ಪ್ರಾಯಶ್ಚಿತ್ತವನ್ನು ಅವರು ಅನುಭವಿಸಬೇಕಾಗುವದು. ವಿವೇಕಭ್ರಷ್ಟರಿಗೆ ವಿನಿಪಾತ ಸಂಭವಿಸುದು ಸಾಹಜಿಕವಲ್ಲವೇ?

— ಪುಣೆಯ ಸಮೀಪದ ರಾಜಾಪುರದೊಳಗಿನ ನಾಯಿನಗೋಪಾಳ ಮೇಲಿಂಗ ಎಂಬ ವಿದ್ಯಾರ್ಥಿಗಳು ಬಿ. ಎಸ್. ಸಿ ಪರೀಕ್ಷೆಗೆ ಕೂತಿದ್ದರು. ೮ ಗುಣ ಕಡಿಮೆ ಬಿದ್ದು ಅವರಿಗೆ ಮೊದಲನೇ ತರಗತಿ ತಪ್ಪಿತು. ಆದರಿಂದ ಬೇಸರಪಟ್ಟು, ಅವರು ವಿಷ ತಿಂದು ಪ್ರಾಣ ಕೊಟ್ಟರು. ಎಂಥ ಮೊದಲನೇ ತರಗತಿಯ ಆಶ ಇದು?

— [illegible] ಇವರು ೪೨ ದಿನಗಳ ತನಕ ಜಲಪಾನದ ಮೇಲೆಯೇ ಇದ್ದರು.

— ಹಿಂದುಸ್ಥಾನದಲ್ಲಿ ಬೆರಿಸ್ಟರ, ಎಡ್ವೊಕೇಟ ಹಾಗೂ ವಕೀಲಿ ಇವರ ದರ್ಜೆಗಳು ಭಿನ್ನ ಭಿನ್ನವಿವೆ. ಅವನ್ನು ಸಂಘಟಿಸುವದಕ್ಕಾಗಿ ಹೊಸ ಕಾನೂನಿನ ನಿರ್ಮಾಣಾಗಿದೆ. ಆ ಕಾನೂನು ಇಂಗ್ಲಂಡದೊಳಗಿನ ದೊರೆಗಳ ಸಭೆಯಲ್ಲಿ ಮನ್ನಿಸಲ್ಪಟ್ಟಿದೆ.

— ನೂತನವಾಗಿ ಅಧಿಕಾರಿಗಳ ಪ್ರೇರಣೆಯಿಂದ ಜನ್ಮವನ್ನೆತ್ತಿದ ಬ್ರಿಟಿಶ ಕರ್ನಾಟಕ ಸಂಘವು ಕರ್ನಾಟಕದ ಏಕೀಕರಣಕ್ಕಾಗಿ ಸ್ಯಾಮನ್ ಕೂಟದ ಬಳಿ ಶಿಷ್ಟಮಂಡಳವನ್ನು ಕಳಿಸಲುದ್ಯುಕ್ತವಾಗಿದೆ. ಈ ಕರ್ನಾಟಕ ಸಂಘಕ್ಕೆ ಕರ್ನಾಟಕಸ್ಥರ ಬೆಂಬಲವಿಲ್ಲೆಂದು ಪ್ರಾಂತಿಕ ಪರಿಷತ್ತು, ಏಕೀಕರಣ ಪರಿಷತ್ತು ಪ್ರಕಟಿಸಿದೆ.

ಸ್ಫುಟ ಸೂಚನೆಗಳು.

೧. ಕೊನೆಗೆ ಚೀನದೊಳಗಿನ ರಾಷ್ಟ್ರೀಯರು ವಿಜಯಹೊಂದಿದರೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ಚೀನದೊಳಗೆ ರಾಷ್ಟ್ರೀಯ ಚೀನರು, ಇತರ ಚೀನರು ಹೀಗೆ ಇಬ್ಭಾಗವಾಗಿತ್ತು. ಈ ಯಾದವಿಯಲ್ಲಿ ಬ್ರಿಟಿಶರೂ, ಅಮೇರಿಕೆಯವರೂ, ಜಪಾನಿಗರೂ ಯುಕ್ತಿ-ಪ್ರಯುಕ್ತಿಗಳಿಂದ ಪ್ರವೇಶಿಸಿ ರಾಷ್ಟ್ರೀಯರಿಗೆ ಹಿಮ್ಮೆಟ್ಟಿಸಬೇಕೆಂದು ಮಾಡಿದ ಯತ್ನಗಳೆಲ್ಲ ನಿರರ್ಥಕವಾದವು. ಇತರ ಚೀನರು ರಾಷ್ಟ್ರೀಯರೊಡನೆ ಹೋರಾಡುತ್ತಿದ್ದಾಗ್ಯೂ ತಮ್ಮ ಅಧಿಕಾರ ಸ್ಥಾಪನೆಗಾಗಿ ಅವರು ಪರ ರಾಷ್ಟ್ರಗಳ ಆಶ್ರಯ ಪಡೆಯಲು ಎಷ್ಟು ಕೂಡ ಒಪ್ಪಲಿಲ್ಲ. ಇದನ್ನು ನಮೂದಿಸಲು ನಮಗೆ ಅತ್ಯಂತ ಸಂತೋಷವಾಗುತ್ತದೆ. ಇಬ್ಬರ ನ್ಯಾಯ ಪ್ರಸಂಗದಲ್ಲಿ ಮೂರನೇಯವನು ಮೂಗು ತೂರಿಸಿಕೊಂಡು ಇಬ್ಬರಿಗೂ ಸುಲಿಯುವ ಹಂಚಿಕೆಯನ್ನು ಎಲ್ಲರೂ ಬಲ್ಲಾದ ವಿಷಯ! ಇದರಿಂದ ರಾಷ್ಟ್ರೀಯರ ಎದುರಾಳಿಗಳಾಗಿ ನಿಂತ ಚೀನೀಯರು ಬ್ರಿಟಿಶ-ಜಪಾನಾದಿ ರಾಷ್ಟ್ರಗಳಿಗೆ ಅಂತಃಕಲಹದಲ್ಲಿ ಸೇರಿಸಿಕೊಳ್ಳಲಿಕ್ಕಾಗಲಿ, ಅವರಿಂದ ವಿಶೇಷ ಬೆಂಬಲ ಪಡೆಯಲಿಕ್ಕಾಗಲೀ ಒಪ್ಪಲಿಲ್ಲ. ಮತ್ತೊಂದು ಕಾರಣವಿತ್ತು. ಬ್ರಿಟಿಶ-ಜಪಾನ-ಅಮೇರಿಕೆಯವರು ಮಿತ್ರಪಕ್ಷದವರಾದಾಗ್ಯೂ ನಿಜವಾಗಿ ಅವರು ಮಿತ್ರರಲ್ಲ. ಒಬ್ಬರನ್ನೊಬ್ಬರು ಚೀನದೊಳಗಿಂದ ಓಡಿಸಿ ತಾವೇ ಜಗತ್ತಿನ ಸಂರಕ್ಷಕರಾಗಲು ಹವಣಿಸುತ್ತಿದ್ದರು. ಇದರಿಂದ ಒಬ್ಬೊಬ್ಬರಾಗಿ ಪ್ರವೇಶಿಸಲಿಕ್ಕೆ ಯಾರೂ ಎದೆಗಟ್ಟು ಮಾಡಲಿಲ್ಲ. [illegible] ಚೀನದೊಳಗಿನ ಯಾದವಿಯ ಕ್ಷೇತ್ರವು ನಿಯಂತ್ರಿತವಾಗಿ ಜಗತ್ತಿಗೆ ವಿಶೇಷ ತಾಪವಾಗದೆ ರಾಷ್ಟ್ರೀಯರು ಪ್ರತಿಪಕ್ಷದ ರಾಜಧಾನಿಯಾದ ಪೇಕಿಂಗ ಪಟ್ಟಣವನ್ನು ಕೈವಶ ಮಾಡಿಕೊಂಡು ಚೀನ ದೇಶದ ಸರ್ವಾಧಿಪತಿಗಳಾಗಿದ್ದಾರೆ. ಇನ್ನು ರಾಷ್ಟ್ರೀಯರು ಈ ಕಾದಾಟವನ್ನು ಮರೆತು ದೇಶೋದ್ಧಾರ ಕಾರ್ಯದಲ್ಲಿ ನಿಮಗ್ನರಾಗುವರು. ಸೈನ್ಯ ಖರ್ಚನ್ನು ತಗ್ಗಿಸುವರು; ಈಗೇನು ಸೈನ್ಯ ಬೇಡ. ಯಾದವಿಯಲ್ಲುಂಟಾದ ಸಾಲವನ್ನು ತೀರಿಸುವ ಯೋಜನೆ ಮಾಡುವರು; ಗ್ರಾಮಸಂಘಟಣೆ ಮಾಡುವರು. ಒಟ್ಟಿನ ಮೇಲೆ ಚೀನ ದೇಶದೊಳಗಿನ ಪೌರುಷೇಯವನ್ನು ಅಭಿವೃದ್ಧಿಗೊಳಿಸಿ ಹಿಂದುಸ್ಥಾನದಂಥ ಪೌರ್ವಾತ್ಯ ರಾಷ್ಟ್ರಗಳಿಗೆ ಆದರ್ಶಭೂತರಾಗುವರು. ರಾಷ್ಟ್ರೀಯ ಚೀನರನ್ನು ನಾವು ಮನಃಪೂರ್ವಕವಾಗಿ ಕೊಂಡಾಡಿ, ಆ ಸುದಿನವು ನಮಗೂ ಬೇಗನೇ ಪ್ರಾಪ್ತವಾಗಲೆಂದು ಹಾರೈಸುತ್ತಿದ್ದೇವೆ.

---

೨. ನಾಳೆ ಮಂಗಳವಾರ ೧೨ನೇ ತಾರೀಖು. ಮಹಾತ್ಮರ ಅನುಜ್ಞೆಯಂತೆ ದೇಶಾಭಿಮಾನಿಗಳು ಸಭೆ ಸೇರಿಸಿ ಬಾರ್ದೋಲಿಯವರೊಡನೆ ಸಹಾನುಭೂತಿಯನ್ನು ಪ್ರದರ್ಶಿಸತಕ್ಕದ್ದು. ಬಾರ್ದೋಲಿಯ ಕಾದಾಟದ ವ್ಯಾಪಕತೆಯನ್ನು ನಾವು ಈ ಹಿಂದೆ ಹೇಳಿದ್ದೇವೆ; ಇಂದಿಗೂ ಹೇಳುತ್ತೇವೆ; ವಾರ ವಾರಕ್ಕೆ ಪ್ರಕಟಹೊಂದಿದ ಬಾರ್ದೋಲಿಯ ವೃತ್ತಾಂತದ ಮೇಲಿಂದ ತಿಳಿಯುವಂತಿದೆ. ಸರಕಾರವು ಏರಿಸಿದ ೧। ಲಕ್ಷ ರೂಪಾಯಿಗಳಿಗಾಗಿ ಕಾದಾಡುವದಿಲ್ಲ. ಪ್ರಜೆಗಳಾದರೂ ಈ ಹಣದ ಉಳಿತಾಯಕ್ಕಾಗಿ ಕಷ್ಟ-ನಷ್ಟಗಳನ್ನು ಸಹಿಸಲುದ್ಯುಕ್ತರಾಗಲಿಲ್ಲ. ಪ್ರಜಾನುಮತಿಯಿಲ್ಲದೆ ನ್ಯಾಯ ನೀತಿಯ ವಿಚಾರ ಮಾಡದೆ ಕರಗಳನ್ನು ಹೇರುವ ಅಧಿಕಾರವು ಸರಕಾರಕ್ಕಿಲ್ಲವಾಗಿ ಬಾರ್ದೋಲಿಯವರ ಹೇಳಿಕೆ. ಅದನ್ನು ಸಿದ್ಧಪಡಿಸುವದಕ್ಕಾಗಿ ಬಾರ್ದೋಲಿಯವರು ಸರ್ವಸ್ವವನ್ನರ್ಪಿಸಲು ಒಗ್ಗಾಲಿನ ಮೇಲೆ ಸಿದ್ಧರಾಗಿದ್ದಾರೆ. ಈ ಅಧಿಕಾರವನ್ನು ಒಮ್ಮೆ ಬಾರ್ದೋಲಿಯಲ್ಲಿ ಕಳಕೊಂಡರೆ ಮುಂದೆ ಸರಕಾರಕ್ಕೆ ಕಷ್ಟವೇ. ಪ್ರಜೆಗಳ ಕರಗಳಿಂದ ಎತ್ತುವಳಿ ಮಾಡಿದ ಹಣವನ್ನು ಸೈನ್ಯಖಾತೆ, ಆ ಖಾತೆ-ಈ ಖಾತೆಗಳಲ್ಲಿ ಮನಬಂದಂತೆ ಖರ್ಚು ಮಾಡಲು ತೊಂದರೆಯಾಗುತ್ತದೆ. ಅದರಿಂದ ಆ ಅಧಿಕಾರವನ್ನು ಅಳಿಗಳೆಯಲು ಸರಕಾರವು ಟೊಂಕಕಟ್ಟಿದೆ; ಪಠಾಣರು ಹೇಯವಾದ ಅತ್ಯಾಚಾರಗಳನ್ನಾಚರಿಸುತ್ತಿದ್ದರೂ, ಆ ಕಡೆ ಲಕ್ಷ ಕೊಡದೆ ತೀರ್ವ ವಸೂಲಿಯ ಕಡೆಗೇ ಏಕಾಗ್ರಚಿತ್ತದಿಂದ ದೃಷ್ಟಿಯನ್ನಿಟ್ಟಿದೆ. ರಾಜ್ಯಭಾರದ ಮೂಲ ತತ್ವಕ್ಕಾಗಿ ಬಾರ್ದೋಲಿಯ ಪ್ರಜೆಗಳೂ ಸರಕಾರವೂ ಹೋರಾಡುತ್ತಿವೆ. ದೇಶಾಭಿಮಾನಿಗಳೆಲ್ಲರೂ ಈ ಕಾದಾಟದ ಸ್ವರೂಪವನ್ನೂ, ಬಾರ್ದೋಲಿಯ ವೃತ್ತಾಂತವನ್ನೂ ಅಲ್ಲಲ್ಲಿ ತಿಳಿಸಿಹೇಳಿ, ಕಾಯಿದೆ ಕಾನೂನನ್ನು ಧಿಕ್ಕರಿಸಿ ನಡೆದ ಪ್ರಜೆಗಳ ಸುಲಿಗೆಗೆ ಶಸ್ತ್ರಬಲದಿಂದ ಕೀಲು ಹಾಕಲುದ್ಯುಕ್ತರಾದ ಬಾರ್ದೋಲಿಯವರ ಕಲ್ಯಾಣವನ್ನು ಚಿಂತಿಸಿ, ಅವರಿಗೆ ಈ ಕಾದಾಟದಲ್ಲಿ ಯಥಾಶಕ್ತಿ ನೆರವಾಗತಕ್ಕದ್ದು. ಇದರಿಂದ ಸರಕಾರಕ್ಕೂ, ಬಾರ್ದೋಲಿಯವರಿಗೂ ಲೋಕಮತದ ಅರಿವಾಗಿ ಸರಕಾರಕ್ಕೆ ಶೀಘ್ರವೇ ಹಿಮ್ಮೆಟ್ಟಲು ಬುದ್ಧಿಯಾಗಬಹುದೆಂದು ಒಂದು ಆಶೆ! ಇಲ್ಲದಿದ್ದರೆ ಮುದ್ದಣ್ಣನ ಹಟ ಹಿಡಿದು ಕೂತರೆ ಮುದ್ದಣ್ಣನಂತೆ ಸರಕಾರದ ಅವಸ್ಥೆಯಾಗುವದು. ಅದಕ್ಕಾಗಿ ದೇಶಾಭಿಮಾನಿಗಳು ಮಹಾತ್ಮರ ಅನುಜ್ಞೆಯಂತೆ ಸಭೆ ಸೇರಿಸಿ ಪ್ರಸಂಗೋಚಿತವಾದ ನಿರ್ಧಾರಗಳನ್ನು ಕೈಕೊಳ್ಳಬೇಕಾಗಿ ವಿನಂತಿ.

---

೩. ಮುಂಬಯಿ ಸರಕಾರವು ಒಂದು ಪ್ರಕಟಣೆಯನ್ನು ಪ್ರಕಟಿಸಿ ಹೈಸ್ಕೂಲು ಹಾಗು ಕಾಲೇಜುಗಳ ಫೀಯನ್ನು ಏರಿಸುವ ಸೂಚನೆ ಮಾಡಿದೆ. ಪ್ರಾಥಮಿಕ ಶಿಕ್ಷಣಕ್ಕೂ, ಹೈಸ್ಕೂಲು-ಕಾಲೇಜು ಮುಂತಾದ ಇತರ ಶಿಕ್ಷಣಗಳಿಗೂ ಸರಕಾರಿ ಖರ್ಚು ಸಾಧಾರಣ ೨॥ ಪಟ್ಟು ಬೆಳೆಯಿತು. ೧೯೧೫-೧೬ನೇ ಇಸ್ವಿಯಲ್ಲಿ ರೂ.೭೪೭೬೮೫೩ ಇದ್ದದ್ದು ೧೯೨೫-೨೬ನೇ ಇಸ್ವಿಯಲ್ಲಿ ರೂ. ೧೯೨೨೮೫೪೨ ಗಳಿಗೇರಿತು. ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸಹೋದರೆ, ಹೈಸ್ಕೂಲು-ಕಾಲೇಜುಗಳಿಗೆ ವಿನಿಯೋಗಿಸಲು ಹಣದ ಅಡಚಣೆಯಾಗುವದರಿಂದ ಕಾಲೇಜುಗಳಲ್ಲಿ ಫೀಯನ್ನು ಶೇಕಡಾ ೨೦-೨೫ ರಂತೆ ಏರಿಸುವ ವಿಚಾರ ನಡೆದದೆ. ಹೈಸ್ಕೂಲುಗಳಲ್ಲಿ ಶೇಕಡಾ ೨೦ ರಿಂದ ೩೦ ರ ತನಕ ಫೀ ಏರಿಸಬೇಕೆಂದು ಗೊತ್ತಾಗಿದೆ. ಈ ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕಾಗಿ ಪ್ರಕಟಣೆಯು ಹಂಚಲ್ಪಟ್ಟಿದೆ. ಪ್ರಾಂತಿಕ ಸರಕಾರದ ಬಳಿ ಹಣವಿಲ್ಲವಾಗಿಯೂ ಈಗಿನ ಪ್ರಗತಿಯನ್ನಷ್ಟೇ ಕಾಪಾಡಿಕೊಳ್ಳಬೇಕಾದರೆ ಫೀ ಏರಿಸಬೇಕಾಗಿಯೂ ಸರಕಾರದ ಸೂಚನೆ. ಫೀ ಏರಿಸಿದ ಬಳಿಕ, ಸರಕಾರಿ ದ್ರವ್ಯಸಹಾಯ ಕಡ ತಗ್ಗುವಂತಿದೆ. ಸರಕಾರವು ಖರ್ಚಿನ ಅಂಕೆಗಳ ಜೊತೆಗೆ ಏರಿಕೆಯಿಂದ ಹುಟ್ಟಬಹುದಾದ ಉತ್ಪನ್ನದ ಅಂಕಿಗಳನ್ನು ಕೊಟ್ಟಿದ್ದರೆ, ಈ ಸೂಚನೆಯಿಂದ ಎಷ್ಟರ ಮಟ್ಟಿಗೆ ಉಪಯೋಗವಾಗುತ್ತಿತ್ತೆಂದು ಹೇಳಬರುತ್ತಿತ್ತು. ಪ್ರಾಥಮಿಕ ಶಿಕ್ಷಣವನ್ನು ಹಬ್ಬಿಸುವದಕ್ಕಾಗಿ ಹೈಸ್ಕೂಲು-ಕಾಲೇಜು ಶಿಕ್ಷಣಗಳ ಫೀ ಏರಿಸುವ ಕುಯುಕ್ತಿ ನೋಡಿದರೆ ನಗೆ ಬರುತ್ತದೆ. ಮೊದಲೇ ಶಿಕ್ಷಣವು ಬಹು ತುಟ್ಟಿಯೆನಿಸುತ್ತದೆ. ಫೀಯನ್ನು ಹೀಗೆ ಏರೇರಿಸುತ್ತ ಹೋದರೆ, ಜನಸಾಮಾನ್ಯರಿಗೆ ಕಾಲೇಜು-ಹೈಸ್ಕೂಲುಗಳ ಶಿಕ್ಷಣ ಕೊಳ್ಳುವದು ದುರ್ಘಟವಾಗುವದು. ಯೋಗ್ಯತೆಯುಳ್ಳ ಬಡ ಹುಡುಗರಿಗೆ ಸರಕಾರದಿಂದ ಆಶ್ರಯ ಸಿಗುವದಾಗಿ ಪ್ರಕಟಣೆಯಲ್ಲಿ ಪ್ರಕಟಹೊಂದಿದೆ. ಹಣದ ಅಡಚಣೆಯ ಸ್ಥಿತಿಯಲ್ಲಿ ಯೋಗ್ಯತೆಯ ಬಡ ಹುಡುಗರು ಸರಕಾರಕ್ಕೆ ಕಾಣಲಿಕ್ಕಿಲ್ಲೆಂದು ಹೇಳಿದರೆ, ಅಯಥಾರ್ಥವಾಗದು. ಫೀ ಏರಿಕೆಯ ಸಂಕಲ್ಪವನ್ನು ಸರಕಾರವು ಇಷ್ಟಕ್ಕೇ ತಡಿಸಬೇಕು. ಇಲ್ಲದಿದ್ದರೆ, ಹೈಸ್ಕೂಲು-ಕಾಲೇಜು ಶಿಕ್ಷಣಗಳು ವಿಪರೀತ ಖರ್ಚಿನದಾಗುವವು. ಆತ್ಮಶುದ್ಧಿಯ ದೃಷ್ಟಿಯಿಂದ ವಿಚಾರ ಮಾಡಿದರೆ, ಫೀ ಏರಿಸುವ ಉಪಾಯವು ಸರಿಯೇನು. ಈಗಿನ ಶಿಕ್ಷಣವು ಬರೇ ಕಾರಕೂನಿಯದು; ಸ್ವತ್ವಹರಣದ್ದು; ಆ ಗೊಡವೆಗೆ ಹೋಗದಂತೆ ಏರ್ಪಾಟಾದರೆ, ರಾಷ್ಟ್ರೀಯತ್ವವನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುತ್ತದೆ. ಹೀಗೆ ಫೀ ಏರಿಸಿದರೂ ಲಾಭವಿದೆ; ಇಳಿಸಿದರಂತೂ ಲಾಭವೇ.

---

೪. ಕುಯುಕ್ತಿ ತಿಳಿಯಬೇಕಾದರೆ, ನಮ್ಮ ಕುಮಟಾ ಮ್ಯುನಿಸಿಪಾಲಿಟಿಗೆ ಬರಬೇಕು. ಕಳೆದ ತಾ. ೩ ನೇಗೆ ಪ್ರಕಟವಾದ ಮತದಾರರ ಕಚ್ಚಾ ಯಾದಿಯಲ್ಲಿ ಸುಮಾರು ೪೦೦ಕ್ಕೆ ಮಿಕ್ಕಿ ಮತದಾರರ ಹೆಸರುಗಳು ತಪ್ಪಿಹೋಗಿವೆ. ಹಳೇ ಮತದಾರರ ಯಾದಿಯಲ್ಲಿದ್ದ ಹೆಸರುಗಳು ಸಹ ಕಾಣುವದಿಲ್ಲ. ಹೆಸರುಗಳನ್ನು ಸೇರಿಸುವದಕ್ಕಾಗಿ ೩೦-೩೫ ಅರ್ಜಿಗಳು ಈ ತನಕ ದಾಖಲಾಗಿವೆ. ಕೆಲ ಡಾಕ್ಟರ-ವಕೀಲರ ಹೆಸರುಗಳು ಸಹ ಕಾಣುವದಿಲ್ಲ. ಮನೆ ತೆರಿಗೆ ರಜಿಸ್ಟರದಲ್ಲಿದ್ದವರ ಹೆಸರುಗಳನ್ನು ಮ್ಯುನಿಸಿಪಾಲಿಟಿಯು ಕಚ್ಚಾ ಯಾದಿಯಲ್ಲಿ ಸೇರಿಸದಿದ್ದರೆ, ಇದು ಬುದ್ಧ್ಯಾ ಮಾಡಿದ ಪ್ರಮಾದವೆಂದು ಮ್ಯುನಿಸಿಪಾಲಿಟಿಯೊಳಗಿನ ಪಕ್ಷಗಳ ವಿಚಾರದಿಂದ ಹೇಳಬಹುದು. ಅಧಿಕಾರಾರೂಢ ಪಕ್ಷಕ್ಕೆ ಅನುಕೂಲ ಮತ ಕೊಡುವವರ ಹೆಸರುಗಳು ಹೆಚ್ಚೆಚ್ಚಾಗಿ ಕಾಣುತ್ತಿವೆ. ಹಳೇ ಮತದಾರರ ಯಾದಿಯಲ್ಲಿ ಇಲ್ಲದಂಥವು ಸಹ ಕಾಣುತ್ತವೆ. ದುರುಸ್ತಿ ಮಾಡಲು ಅವಧಿ ಕೊಟ್ಟಿದೆಂದು ಅಧಿಕಾರಾರೂಢ ಪಕ್ಷವು ತನ್ನ ಸಭ್ಯತನವನ್ನು ಸಾರಬಹುದು; ಆದರೆ, ಮತದಾರರನೇಕರು ಅಜ್ಞರಿರುತ್ತಾರೆ; ನಿರಕ್ಷರರಿರುತ್ತಾರೆ; ಮತಾಧಿಕಾರದ ಬೆಲೆ ಬಲ್ಲವರಿರುವದಿಲ್ಲ. ಇಂಥವರು ಸಮಯಕ್ಕನುಕೂಲವಾಗಿ ಅರ್ಜಿಗಳನ್ನು ಹಾಜರಪಡಿಸುವದು ಸುಲಭಸಾಧ್ಯವೆ? ಮ್ಯುನಿಸಿಪಾಲಿಟಿಯು ಶಿಕಾಶೀನ ಮೇಲಿಂದ ಕಚ್ಚಾ ಯಾದಿ ತಯಾರಾಗದಿದ್ದರೆ, ಅಂಥ ಯಾದಿಗಳನ್ನು ಪ್ರಕಟಿಸುವ ತಾತ್ಪರ್ಯವೇಕೆ? ಮೇಲಾಗಿ ಯಾದಿ ತಯಾರಿಸುವ ಸಂಪೂರ್ಣ ಕರ್ತವ್ಯವು ಮ್ಯುನಿಸಿಪಾಲಿಟಿಯದಿದ್ದು, ಅದ್ದಿ ತಪ್ಪಿ ಹೆಸರುಗಳು ಸೇರದೆ ಉಳಿದಲ್ಲಿ ಅವನ್ನು ತಿದ್ದುಪಡಿ ಮಾಡಿಕೊಳ್ಳುವದು ಮತದಾರರ ಕೆಲಸ. ಹೊರತು ಯಾದಿಯನ್ನು ಪುನರ್ಘಟಿಸುವದು ಅವರ ಕೆಲಸವಲ್ಲ. ಮ್ಯುನಿಸಿಪಾಲಿಟಿ ಇತಿಹಾಸದಲ್ಲಿ ಇಷ್ಟು ಅರ್ಜಿಗಳು ದುರುಸ್ತಿಯ ಬಗ್ಗೆ ಬಂದದ್ದು ಈ ವರುಷವೇ ಎಂದು ಬಲ್ಲವರು ಹೇಳುತ್ತಾರೆ. ಇನ್ನು ಅಧಿಕಾರಾರೂಢ ಪಕ್ಷಕ್ಕೆ ಭೂಷಣ

ವಲ್ಲ. ಗಿಬ್ಬ ಹೈಸ್ಕೂಲ ಶಿಕ್ಷಕರಾದ ರಾ| ಗಾವಸ್ಕರರು ಮೊನೆಹಂಗ ಕಪಿಮುಟಿಯ ಕೆನರಾ ಜಿಲ್ಲಾ ಪ್ರಾಥಮಿಕ ಶಿಕ್ಷಣ ಸಮ್ಮೇಲನದೊಳಗಿನ ಭಾಷಣದ ಮೇಲಿಂದ ರಾ| ಗಾವಸ್ಕರರ ಧಾಟಿಯು ರಾ| ನಾ. ಸು. ಕಾಮತರವರು (ಗಿಬ್ಬ ಹೈಸ್ಕೂಲಿನ ಸುಪರಿಂಟೆಂಡೆಂಟರು) ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಇದನ್ನು ತಿಳಿದು ಬರುತ್ತದೆ. ರಾ| ಕಾಮತರಂಥವರೂ ಇಂಥ ಕುಯುಕ್ತಿಗಳಿಗೀಡಾಗದಂತೆ ರಾ| ಗಾವಸ್ಕರರಿಗೆ ಬುದ್ಧಿ ಹೇಳಬಾರದಿತ್ತೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರ ಒಮ್ಮೆಲೇ ವಿಪರೀತ ಮಳೆ ಸುರಿಯಿತು. ಮಳೆಗಾಲದ ಪೂರ್ಣ ತಯಾರಿಯಾಗದ್ದರಿಂದ ಜನರಿಗೆ ಬಹಳ ತೊಂದರೆಯಾಯಿತು.

ಸೋಮವಾರಕ್ಕೆ ಬಾಳೆಕರ ವರ್ಧಂತ್ಯುತ್ಸವಕ್ಕಾಗಿ ಗಿಬ್ಬ ನಂಬರಿನ ಕನ್ನಡ ಶಾಲೆಯ ಉದ್ಘಾಟನೆಯು ಮೇಲೆ ನಡೆಸಲಾಯಿತು. ಸಭೆಯ ಅಧ್ಯಕ್ಷರಿದ್ದರು ಗಿಬ್ಬ ಹೈಸ್ಕೂಲಿನ ಇತಿಹಾಸದ ಶಿಕ್ಷಕರಾದ ರಾ| ಗಾವಸ್ಕರರು ಬಾಳೆಕರ ಕಾರ್ಯಬಾಹುಳ್ಯವನ್ನು ವರ್ಣಿಸಿದರು. ಬಾಳೆಕರರಿಗೆ ಕೆಲಸವಿಲ್ಲೆಂಬುದೊಂದು ಗ್ರಹಿಕೆಯಿದೆ. ಆದರೆ ಅದು ತಪ್ಪೆಂದು ಸರ್ವರಿಗೂ ಪ್ರಕಟಹೊಂದಿದ ಒಂದು ಪುಸ್ತಕದ ಮೇಲಿಂದ ತಿಳಿಯುತ್ತದೆ. ಬಾಳೆಕರರಿಗೆ ಬೆಳಿಗ್ಗೆ ಎದ್ದಾರಿಂದ ರಾತ್ರಿ ಮಲಗುವ ವರೆಗೆ ಕೇವಲ ಇದೇ ಕೆಲಸ. ಕೆಲಸಗಳ ವಿವರ ಕೇಳಿ- (೧) ಜನರಲ್ ಇಲೆಕ್ಶನ (೨) ಅಧಿಕಾರಿಯೂ ಪಕ್ಷವನ್ನು ಕಂಡು ಹಿಡಿದು ಆ ಪಕ್ಷದ ನಾಯಕರಿಗೆ ಮಂತ್ರಿ ಮಂಡಳ ನೇಮಿಸುವ ಪಕ್ಷ ಮಾಡುವದ, (೩) ಸಾರ್ವಜನಿಕ ಸಮಾರಂಭಗಳಿಗೆ ಅನುಗ್ರಹಿಸುವದು." ರಾ| ಗಾವಸ್ಕರರು ಇಲ್ಲಿಯ ಮುನಿಸಿಪಾಲಿಟಿಯ ಉಪಾಧ್ಯಕ್ಷರಿದ್ದಾರೆ. ಹೀಗಿದ್ದು ಮೂರು ವರ್ಷಕ್ಕೊಮ್ಮೆ ನಡೆಯುವ ಜನರಲ್ ಇಲೆಕ್ಶನು ನಿತ್ಯದ ಕೆಲಸದಲ್ಲಿ ಹೇಗೆ ಸೇರಿತು? ರಾ| ಗಾವಸ್ಕರರಿಗೆ ಈ ವರುಷದ ಜನರಲ್ ಇಲೆಕ್ಶನಿನ ಚಿಂತೆಯು ನಿತ್ಯಕ್ಕೂ ಬಾಧಿಸುತ್ತಿರಬಹುದೇ?

ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶುಕ್ರವಾರದಿಂದ ಭಜನೆ ಸಪ್ತಾಹಕ್ಕೆ ಪ್ರಾರಂಭವಾಗಿದೆ.

ತಾಲೂಕ ಲೋಕಲ್ಬೋರ್ಡಿನ ಸಭೆಯು ಕಳೆದ ಸೋಮವಾರ ಸಾಯಂಕಾಲಕ್ಕೆ ಕೂಡಬೇಕಾಗಿ ನೋಟೀಸ ಕೊಟ್ಟಿದ್ದವು. ಕೋರಂ ಕೂಡಲಿಲ್ಲ. ಸಭೆ ಕರೆದ ಅಧ್ಯಕ್ಷರೇ ಗೈರಹಾಜರು!

ಇಲ್ಲಿಯ ಪೆನ್ಶನ ಪಡೆಯುವ ಸರಕಾರಿ ಕಾಮದಾರರಾದ ಮಿ| ...ದ ಇವರಿಗೆ ರಾವಸಾಹೇಬ ಕಿತಾಬು ದೊರಕಿದೆ.

ಸಾಳುಕಟ್ಟೆಯ ಬಗ್ಗೆ ಒಂದು ವರ್ತಮಾನವೆಂದರೆ:— ಇಲ್ಲಿಯ ಸೊಸೈಟಿಯವರು ಕಟ್ಟಲಿಕ್ಕಿದ್ದ ಒಡ್ಡು ಈ ವರುಷಕ್ಕೆ ಪೂರ್ಣವಾದಂತಾಯಿತು. ಒಡ್ಡು ಬಹು ಭದ್ರವಾಗಿ ಕಲ್ಲುಗಳಿಂದ ಕಟ್ಟಲ್ಪಟ್ಟಿದೆ. ೫೦೦ ಫೂಟು ಉದ್ದ, ೧೮ ಫೂಟು ಅಗಲವಿದ್ದು ಈ ಒಡ್ಡು ಸಾಧಾರಣ ೧೧ ಸಾವಿರ ರೂಪಾಯಿ ಖರ್ಚಿನ ಒಡ್ಡಾಗಿ ಕಾಣುತ್ತದೆ; ಸೊಸೈಟಿಯವರಿಗೆ ೫-೬ ಸಾವಿರ ರೂಪಾಯಿ ಖರ್ಚು ತಗಲಿತು. ಸೊಸೈಟಿಯವರು ಶ್ರಮದಿಂದ ದುಡಿದದ್ದರಿಂದ ಈ ಕೆಲಸವು ಇಷ್ಟು ಅಗ್ಗವಾಗಿ ನೆರವೇರಿತು. ಈ ಕಟ್ಟಿನ ಮೂಲಕ ನೀರಿನಲ್ಲಿ ಮುಳುಗಿಹೋಗುವ ಸುಮಾರು ೨೦೦ ಎಕರೆ ಭೂಮಿಯು ಸಾಗುವಳಿಗೆ ದೊರೆಯುವಂತಿದೆ. ಕಳೆದ ಬೇಸಿಗೆಯಲ್ಲಿ ೪೦-೫೦ ಎಕರೆ ಭೂಮಿ ಸಾಗುವಳಿಯಾಯಿತು. ದಿವಾನರಾದ ರಾ| ಕೃಷ್ಣರಾವ ಸಹಕಾರಿ ಸಂಘದ ರಜಿಸ್ಟ್ರಾರರಾದ ರಾ| ಭಿಡೆಯವರೂ, ಜಿಲ್ಲಾಧಿಕಾರಿಗಳಾದ ರಾ| ಬಾಸ್ಕರವಿಲ್ಲೆಯವರೂ ಈ ಕಟ್ಟನ್ನು ನೋಡಿ ಸಂತೋಷಪಟ್ಟಿದ್ದಾರೆ. ಈ ಕಟ್ಟಿನ ಪೂರ್ವೇತಿಹಾಸವನ್ನು ಇಲ್ಲಿ ನಮೂದಿಸಬೇಕಾಗಿದ್ದಿದೆ. ಪೂರ್ವದಲ್ಲಿ ಈ ಕಟ್ಟನ್ನು ಕಟ್ಟಿಗೊಟ್ಟಿದ್ದ ಭೂಮಿಯು ಸಾಗುವಳಿದಾರರ ಕಟ್ಟುತ್ತಿದ್ದರು. ಸರಕಾರದಿಂದ ಈ ಕಟ್ಟಿಗೆ ವರ್ಷಾಸನ ೬೦ ರೂಪಾಯಿ ಸಿಗುತ್ತಿತ್ತು. ವ್ಯಕ್ತಿಸ್ವಾತಂತ್ರ್ಯದ ಜಾಗ್ರತೆ ಹೆಚ್ಚಾದಹಾಗೆ ಸಾಗುವಳಿದಾರರೊಳಗಿನ ಐಕ್ಯತೆ ಭಂಗವಾಗಿ ಈ ಕಟ್ಟು ಕಟ್ಟುವ ಕೆಲಸವು ನಿಂತುಹೋಯಿತು. ಸರಕಾರವು ಅದಕ್ಕಾಗಿ ಕೊಡುವ ೬೦ ರೂಪಾಯಿ ರಕಮು ಕೊಡುವದನ್ನು ಬಿಟ್ಟುಬಿಟ್ಟಿತು. ಈಗ ೨೦-೨೫ ವರುಷಗಳಿಂದ ಈ ಭೂಮಿಯು ನೀರಿನಲ್ಲಿ ಮುಳುಗಿಕೊಂಡಿದೆ. ಆದರೂ ೧೯೧೩ನೇ ಇಸವಿಯಲ್ಲಿ ಈ ಭೂಮಿಯು ತೀರ್ವೆ ಏರಿತು. ಖಾತೆದಾರರು ಈ ತೀರ್ವೆಯನ್ನು ತೆತ್ತರು. ೨೦೦ ಎಕರೆ ಭೂಮಿಗೆ ಸುಮಾರು ೧೨೦೦ ರೂಪಾಯಿ ತೀರ್ವೆ ಇದೆ. ಸೊಸೈಟಿಯವರಿಗೆ ಕಟ್ಟಿನ ಖರ್ಚನ್ನು ರೈತರ ಕಡೆಯಿಂದ ಪೂರೈಸಿಕೊಳ್ಳಲು ಕಷ್ಟವಾಗಿದೆ. ಭೂಮಿ ಬಂಜರು. ತೀರ್ವೆ ತೆರಬೇಕು ಇಂಥ ಅಡಚಣಿ ಮೂಲಕ ಒಬ್ಬಿಬ್ಬರ ಭೂಮಿ ಲಿಲಾವಾಯಿತಾಗಿ ತಿಳಿಯುತ್ತದೆ. ಈ ವಿಚಾರದಿಂದ ಕಟ್ಟಿನ ಖರ್ಚಿನ ಬಗ್ಗೆ ದ್ರವ್ಯ ಸಹಾಯ ಮಾಡಲು ಸರಕಾರಕ್ಕೆ ಅರ್ಜಿಯಾಗಿದೆ. ಈ ವರ್ಷಾಸನ ತೆರುತ್ತಿದ್ದ ೬೦ ರೂಪಾಯಿಗಳನ್ನು ಸರಕಾರವು ಈಗ ೨೦-೨೫ ವರುಷಗಳಿಂದ ತೆರುವದಿಲ್ಲ. ಅದನ್ನು ಬಡ್ಡಿ ಸಹಿತ ತೆತ್ತರೆ ೩-೪ ಸಾವಿರ ರೂಪಾಯಿ ಸಹಜ ಸಿಗುವದು. ಇನ್ನು ಉಪಕಾರಮಾಡುವ ಮನಸ್ಸು ಸರಕಾರಕ್ಕಿದ್ದರೆ ಇದನ್ನ ಕೃಷಿಕ ನಿಷ್ಟೆಯಾಗಿ ಎತ್ತುವಳಿ ಮಾಡಿದ ತೆರಿಗೆಯಿಂದ ಕಿಂಚಿತ್ ಸಹಾಯ ಮಾಡಿದರೆ ಈ ಕಟ್ಟಿನ ಪೂರ್ಣ ಪ್ರಯೋಜನ ಹುಟ್ಟಿ ಸರಕಾರಕ್ಕೆ ಬೇಸಾಯಗಾರರ ತೆರುವ ೬೦ ರೂಪಾಯಿಗಳನ್ನು ಇನ್ನು ಮುಂದೆ ಕೊಡುತ್ತಹೋದರೆ ವರ್ಷಾಸನ ಕಟ್ಟಿನ ದುರುಸ್ತಿಗೆ ಅನುಕೂಲವಾಗುವದು. ಒಲೇ ಪ್ರಶಂಸೆಯಿಂದೇನು ಪ್ರಯೋಜನ?" ಇತ್ಯಾದಿ

ಅಂಕೋಲಾ— ಇಲ್ಲಿಯ ಎಜ್ಯುಕೇಶನ ಶಾಲೆಯಿಂದ ಸ್ಕೂಲ ಲೀವಿಂಗ ಪರೀಕ್ಷೆಗೆ ಹೋದ ೧೨ ಮಂದಿ ವಿದ್ಯಾರ್ಥಿಗಳಲ್ಲಿ (೧) ಸುಬ್ರಾಯ ಶಾಂತಾರಾಮ ನಾಳವಾಕ್ಕರ, (೨) ವಿಠ್ಠಲ ಸಾಂತಪ್ಪ ಶೆಟ್ಟಿ, (೩) ದತ್ತಾತ್ರೇ ರಾಮಚಂದ್ರ ಘಾಣೇಕರ ಹೀಗೆ ೩ ಜನರು ತೇರ್ಗಡೆ ಹೊಂದಿದ್ದಾರೆ. ೫ನೇ ಇಯತ್ತೆಯಲ್ಲಿ ಕಲಿಯುತ್ತಿದ್ದ ಎಲ್ಲ ಅಂದರೆ ೧೨ ಜನ ವಿದ್ಯಾರ್ಥಿಗಳು ಕಳಿಸಲ್ಪಟ್ಟಿದ್ದರಾಗಿ ಹೆಡ್ಮಾಸ್ತರರ ತಿಳಿಸುತ್ತಾರೆ.

ಹೊನ್ನಾವರ— ಪ್ರೇಕ್ಷಕರೊಬ್ಬರು ತಿಳಿಸುವದೇನಂದರೆ — ೨೮ ಹಿಂದೆ ಪ್ರಕಟಹೊಂದಿದ ಜಿಲ್ಲಾ ಬೋರ್ಡಿನ ಸಭೆಯ ವೃತ್ತಾಂತದಲ್ಲಿ ಒಂದು ಸಂಗತಿಯು ಪ್ರಕಟವಾಗಲಿಲ್ಲ. ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದ ರಾ| ನಾಡಕರ್ಣಿಯವರು ೩ ದಿನಗಳ ರಜೆ ಕೊಂಡಿದ್ದರಂತೆ! ಆ ೩ ದಿನಗಳ ಬಗ್ಗೆ ರಾ| ಶೆಟ್ಟಿಯವರಿಗೆ ರಾ| ಗೋಪಿಯವರು ಉಪಾಧ್ಯಕ್ಷರಾಗಿ ನೇಮಿಸಿದರು. ಆ ನೇಮಣೂಕಿಯನ್ನು ಮನ್ನಿಸುವ ಸೂಚನೆಯು ಜಿಲ್ಲಾ ಬೋರ್ಡಿನ ಮುಂದೆ ಬಂತು. ಉಪಾಧ್ಯಕ್ಷರನ್ನು ನೇಮಿಸುವ ಅಧಿಕಾರವು ಬೋರ್ಡಿನದಿದೆ ಅಧ್ಯಕ್ಷರಿಗೆ ಆ ಅಧಿಕಾರವಿಲ್ಲ. ನೇಮಿಸಿದ್ದು ಕಾಯಿದೆಗೆ ಸಮ್ಮತವಿಲ್ಲ. ರಾ| ಶೆಟ್ಟಿಯವರು ಉಪಾಧ್ಯಕ್ಷರಾಗಿ ಸಹಿ ಮಾಡಿದ ಕಾಗದಗಳೆಲ್ಲ ಬೇಕಾಯಿದೇಶೀರ ಇವೆ, ಇತ್ಯಾದಿ ಚರ್ಚೆಯಾಯಿತು. ತಾವು ಉಪಾಧ್ಯಕ್ಷರೆಂದು ಸಹಿ ಮಾಡದೆ ಸಭಾಸದರೆಂದೇ ಸಹಿ ಮಾಡಿರುವೆವಾಗಿ ರಾ| ಶೆಟ್ಟಿಯವರು ಸಭೆಯಲ್ಲಿ ಹೇಳಿದರು. ಮಿ| ಫಿಲಿಪೋಸರವರು ತಮಗೆ ಬಂದ ಒಂದು ಕಾಗದದಲ್ಲಿ ಉಪಾಧ್ಯಕ್ಷರೆಂದೇ ರಾ| ಶೆಟ್ಟಿಯವರು ಸಹಿ ಮಾಡಿದ್ದಾರಾಗಿ ಹೇಳಿದರು. ಹೀಗೆ ಚರ್ಚೆಯಾಗಿ ಈ ಪ್ರಕರಣವು ಏನೊಂದು ಇತ್ಯರ್ಥವಾಗದೆ ಹಿಂದೆ ಹೋಯಿತು. ಉಪಾಧ್ಯಕ್ಷರ ಗೈರಹಾಜರಿಯಲ್ಲಿ ಅಧ್ಯಕ್ಷರು ಕೆಲಸ ಮಾಡಬಾರದಿತ್ತೇನು? ಇದರ ಬದಲು ಅಧ್ಯಕ್ಷರಿಗಿಂತ ಕಾರಭಾರಿ ಮಂಡಳದ ಮುಖ್ಯಸ್ಥರಾದ ಚೀಫ ಆಫೀಸರ ಮಿ| ಬಿಜಾಪುರ ಮೇಲೆ ವಿಶೇಷವಾದ ಬೋರ್ಡಿನ ಕಾನೂನು, ನಿಯಮ ಮುಂತಾದವುಗಳ ಜ್ಞಾನವು ಮುಖ್ಯಸ್ಥರಿಗೆ ಅವಶ್ಯವಿರಬೇಕು. ಅಂದರೆ, ಕಾರಭಾರವು ಸುಸೂತ್ರವಾಗಿ ಸಾಗುತ್ತದೆ. ಬಿ. ಏ., ಅಥವಾ ಬಿ ಇ ಪರೀಕ್ಷೆ ಪಾಸಾದವರಿಗೆ ಚೀಫ ಆಫೀಸರರಾಗಿ ನೇಮಿಸಬೇಕೆಂದು ಕಾಯಿದೆಯಲ್ಲಿ ಸೂಚಿಸಲಾಗಿದೆ. ಈಗಿನ ಚೀಫ ಆಫೀಸರರು ಗ್ರ್ಯಾಜ್ಯುಯೇಟರಲ್ಲ. ಎಷ್ಟೋ ಕಾಲದಿಂದ ಅವರು ಬೋರ್ಡಿನಲ್ಲಿದ್ದಾರೆ. ಇಂಥವರಿಗೆ ಹೊಸ ಹೊಸ ಕಾನೂನಿನ ಜ್ಞಾನವಾಗುವದು ಸ್ವಲ್ಪ ಕಷ್ಟವಾಗುತ್ತದೆ. ಮಿ| ಬಿಜಾಪುರರು ಸರಕಾರ ಇಲಾಖೆಯು ಅವರಿಗೆ ಮರಳಿ ಸರಕಾರಕ್ಕೆ ವಹಿಸಿ ಕಾನೂನಿನಂಥ ಗ್ರ್ಯಾಜ್ಯುಯೇಟರನ್ನು ನೇಮಿಸಿಗೊಳ್ಳುವದು ಉತ್ತಮ." ಇತ್ಯಾದಿ

ಈ ತಾಲೂಕ ಮಂಕಿಮುಡಿಯಲ್ಲಿ ಹುಲಿಗಳ ಬಾಧೆಯು ವಿಪರೀತವಾಗಿದೆ. ದೊಡ್ಡ ಹುಲಿಯು ಬಂಡೆಗಲ್ಲುಗಳಲ್ಲಿ ಅಡಗಿ ದಿನಾ ಒಂದೊಂದು ದನವನ್ನು ಬಲಿ ತೆಗೆದುಕೊಳ್ಳುತ್ತಿದೆ, ೩೦-೪೦ ದನಗಳು ಈ ತನಕ ಹುಲಿಯ ಬಾಯಿಯಲ್ಲಿ ಬಿದ್ದವೆ. ಹಗಲಿಗೇ ಹುಲಿಯು ಗರ್ಜನೆ ಕೇಳುತ್ತಿದೆ. ಬಂದೂಕಿನ ಲಾಯಸನ್ಸದಾರರು ಹುಲಿಗೆ ಹೆದರುತ್ತಾರೆ, ಅದರಿಂದ ಜಿಲ್ಲಾಧಿಕಾರಿಗಳು ಈ ಕಡೆ ಸ್ವಲ್ಪ ಲಕ್ಷ ಕೊಡಬೇಕು, ದನಗಳಿಂದಲೇ ಬೇಸಾಯ ನಡೆಸಬೇಕಾಗಿದೆ, ಅವನ್ನು ಕಳಕೊಂಡರೆ ಉಳಿಯುವ ನೇಗಿಲುಗಳನ್ನು ಹಿಡಿದು ಬೇಸಾಯ ಮಾಡುವ ಸಾಮರ್ಥ್ಯವು ಈ ರೈತರಲ್ಲಿಲ್ಲ.

ಶಿರಸಿ— ಕಳೆದ ೩ ನೇ ತಾರೀಖಿನಿಂದ ಒಮ್ಮೆಲೇ ಮಳೆ ಶುರುವಾಗಿ ೫-೬ ದಿನ ಎಡಬಿಡದೆ ಸುರಿಯಿತು.

ಇಲ್ಲಿಯ ಶ್ರೀ ಮಾರಿಕಾಂಬಾ ಹೈಸ್ಕೂಲಿನಿಂದ ಸ್ಕೂಲ್ ಲೀವಿಂಗ ಪರೀಕ್ಷೆಗೆ ಹೋದವರಲ್ಲಿ ೯ ಹುಡುಗರು ತೇರ್ಗಡೆ ಹೊಂದಿದ್ದಾರೆ: ಟಿ. ಶಾಮಣ್ಣ; ವಾಮನ ಮುಕುಂದರಾವ ಕಾಮತ; ಗೋಪಾಲ ಮುಕುಂದರಾವ ಕಾಮತ; ರತ್ನಾಕರ ವೆಂಕಟರಾವ ಆರೂರ; ಪಿ. ಜಿ. ಪಿ. ಬಿಂಡೋ; ನೀಲಕಂಠ ಎಸ್. ನೆಜ್ಜೂರ; ವಿ. ಆರ್. ಹೆಗಡೆ; ದತ್ತಾತ್ರೇಯ ಕೃಷ್ಣಯ್ಯಾ ಕೆಕ್ಕಾರ; ನರಸಿಂಹ ವಿ. ಬಾರಕೂರ.

ಇನ್ಕಮ್ ಟೆಕ್ಸಿನ ಅಧಿಕಾರಿಗಳು ಇಲ್ಲಿ ೧ ತಿಂಗಳ ತನಕ ಉಳಿದು ... ಮಾಡಿಕೊಂಡು ತನಿಖೆ ಮಾಡಿದರು. ವ್ಯಾಪಾರಿಗಳಿಗೆ ಲೆಕ್ಕಪತ್ರವಿಡಲಿಕ್ಕೇ ಬರುವದಿಲ್ಲವೆಂಬ ಸಾಮಾನ್ಯ ಕಲ್ಪನೆಯುಳ್ಳವರಿದ್ದ ಹೀಗೆ ಅವಸ್ಥೆಯಾದರೆ, ಅಂಗಡಿಕಾರರು ವ್ಯಾಪಾರ ಮಾಡಿಕೊಂಡು ಸಂಸಾರ ನಡಿಸಿಕೊಂಡು ಉಳಿದ ಬಗೆ ಹೇಗೆ?

ಲೀಡಿಯೋ ಯಂತ್ರವು ಈಗ ಸಮಾಧಿ ಸುಖವನ್ನನುಭವಿಸುತ್ತದೆ. ಮುನಿಸಿಪಾಲಿಟಿಯವರು ಕೊಡಿಸಲ್ಪಟ್ಟದ್ದರ ಸಾರ್ಥಕವಾಯಿತು. ತಂಗಡಾರರು ಅಂಥವರಿಗೇ ಅರಸಿ ಕಳುಹಿಸಬೇಕು.

ಮುನಿಸಿಪಾಲಿಟಿಯವರು ಶುಕ್ಲಪಕ್ಷದಲ್ಲಿ ದೀಪ ಹಚ್ಚಬಾರದೆಂಬ ನಿಯಮವನ್ನು ನಿಷ್ಠುರತನದಿಂದ ಪಾಲಿಸುತ್ತಿದ್ದಾರೆ. ಮಳೆಗಾಲದಲ್ಲ ಮೋಡ ಮುಸುಕಿ ಕೃಷ್ಣಪಕ್ಷದ ಕಗ್ಗತ್ತಲೆಯಾಗುತ್ತಿದ್ದರೂ, ಕೃಷ್ಣ ಪಕ್ಷದಲ್ಲಿ ಬೆಳಗುವ ಮುನಿಸಿಪಾಲಿಟಿಯ ದೀಪಗಳು ಕಾಣದೆ, ಜನರಿಗೆ ಶುಕ್ಲಪಕ್ಷದ ನೆನಪು ಮಾಡಿಕೊಡುತ್ತವೆ.

ಹಿನಮಾಸಿ ದೇವಾಲಯದ ಪ್ರಕರಣದಲ್ಲಿ ಪ್ರತಿವಾದಿಗಳಾದ ಮಿ| ವಡೇರರವರು ಹೈ ಕೋರ್ಟಿನಲ್ಲಿ ಅಪೀಲನ್ನು ದಾಖಲಮಾಡಿಸಿದ್ದಾರೆ.

ಕಾರವಾರ— ಸೋಮವಾರದಿಂದ ಬಹಳ ಮಳೆ ಸುರಿಯಿತು. ಬಿತ್ತಿಗೆ ಮಾಡಿದ ಹೊಲಗಳಿಗೆ ಬಹಳ ಹಾನಿ. ಅಕ್ಕಿ ದರ ಏರಿತು, ರೂಪಾಯಿಗೆ ೬ ೬|| ಶೇರು ಅಕ್ಕಿಯಾಯಿತು, ಮುಂದೆ ೬||| ಶೇರು ಇತ್ತು. ನಿನ್ನಿನ ಸಂತೆಗೆ ಇನ್ನರ್ಧ ಶೇರು ಹುಟ್ಟಿದಾಯಿತು. ಪೋ|| ಸುಪರಿಂಟೆಂಡೆಂಟರು ವ್ಯಾಪಾರ ಪ್ರಯಾಣಿಕರಿಗೆ ಸ್ಟಾಂಡಿನಲ್ಲಿಯೇ ಇಳಿಸಿಕೊಳ್ಳಬೇಕೆಂಬ ಹುಕುಮನ್ನು ರದ್ದುಪಡಿಸಿದ್ದಾರೆ. ಈ ಬಗ್ಗೆ ಅಭಿನಂದನೆ.

ಕುಂಭಾರವಾಡೆ— ಸಾವಂತವಾಡಿಯ ಮಹಾರಾಜರು, ಬರೋಡೆಯ ಯುವರಾಜರು ಇಲ್ಲಿ ಶಿಕಾರಿ ಮಾಡಿ ೩ ಹುಲಿಗಳನ್ನು, ಒಂದು ಕರಡಿಯನ್ನು ಕೊಂದರು

...ಅವರಿಗ್ಗೆ ಹರಿಸಿದರು. ಬುತ್ತೇನು ಮಾಡುವರು ? ...ಸ್ತ್ರಗಳಿಲ್ಲದಾಗ ಪರೋಪಕಾರವನ್ನೇ ಮಾಡ್ಕಿಸುತ್ತಿಂಬೇ...ವೇ? ಸುಖವನ್ನು ಕುಬಾಟಗಳಿಗೆ ಮದ್ದು-ಕೇಸ ಬೇ...ರೆ ಸಾಲೆಗೆ ಹೋ ಬೇಕು? ೩೦ ಮೈಲು ... ತನಕ ಪ್ರಯಾಣ ಮಾಡಬೇಕಾಗುತ್ತದೆ. ಅದರಿಂದ ...ಬರಿನ ತಫೇಸಿಂದ ಜನರ ಅನುಕೂಲತೆಯ ದೆಸೆ...ಂದ ಮುದ್ದಿನ ಲ್ಯಾಕಸ್ಸು ಕೊಡಬೇಕಾಗಿ ಕಲೆಕ್ಟರರಿಗೆ ...ರಯಾಗಿತು. ಜಿಲ್ಹಾಧಿಪತಿಗಳು ಅನುಗ್ರಹಿಸಬೇಕು.

...ಸೆ— ಇಲ್ಲಿ ಒಂದು ಅಬಕಾರಿ ಎಕ್ಸ್ಚೈಜರಿ ಕಮಿಟಿ ... ಈ ಕಮಿಟಿಗೆ ಸರಕಾರದಿಂದ ಸಿಗುವ ಸಂಭಾವನೆ ...ರಿ ಇಲ್ಲಿ ತಿನೇಕರ ಸ್ಟ್ರೀಟು ಎಂಬ ಸ್ಥಳಗ ಸರಾಯಿ ...ಅಂಗಡಿ ಇಡುವ ಕಾಂಕ್ಷೆಯೊಬ್ಬರಿಗಾಯಿತು. ಅಲಿ...ರಿಗೆ ಅವರು ಅರ್ಜಿ ಮಾಡಿಕೊಂಡರು. ಆ ಅರ್ಜಿ ... ಎಕ್ಸ್ಚೈಜರಿ ಕಮಿಟಿಯು ಕಡೆಗೆ ಬಂತು. ಕಮಿಟಿ...ವರು ವಿಚಾರ ಮಾಡಿದರು. ತಿನೇಕರ ಸ್ಟ್ರೀಟನ್ನು ...ವರೆ ಪ್ರಾಣಹಾನಿಯಾಗುವ ಸಂಭವವುಂಟು. ಜನ...ಗರು ಹೆಚ್ಚಾಗಿ ಕುಡಿಯುವರು. ಅದರಿಂದ ಈ ಅಂಗ...ಡದವಾಗಿ ಕಮಿಟಿಯವರು ಅಭಿಪ್ರಾಯ ಕೊಟ್ಟಿದರು. ...ಕ್ಟರರು ಈ ಅಭಿಪ್ರಾಯವನ್ನು ನೋಡಿ ಅರ್ಜಿಯು ...ಮನ್ನಿಸಿ ಅಂಗಡಿಯನ್ನು ಸ್ಥಾಪಿಸಿದರು. ಕಮಿಟಿ ... ಸಭಾಸದರಿಗೆ ಇಷ್ಟು ಸಂಭಾವನೆ ಸಾಲದೇ ? ಕಮಿಟಿ...ದ ಮೆಂಬರರು ರಾಜೀನಾಮೆ ಕೊಟ್ಟರೆ ಅವರು ಸ್ವಾಭಿ...ಮಾನಿಗಳೆಂದು ಜನರು ತಿಳಿಯುವರು.

...ಅಸಿ| ಕಲೆಕ್ಟರಾದ ಮಿ| ವ್ಯಾಸರಾಯರು ಶ್ಯಾನಭೋಗ...ಮೇಲೆ ವಿಶೇಷ ಕಟಾಕ್ಷವನ್ನಿಟ್ಟಿದ್ದಾರೆ. ೭ ಮಂದಿ ಶ್ಯಾ...ಭೋಗರೂ, ಒಬ್ಬ ಶೇಧಿಯೂ ೨೪ ತಾಸುಗಳಲ್ಲಿ ದೂರ...ದೂರ ಗ್ರಾಮಗಳಿಗೆ ಹೋಗಿ ಹಾಜರಾಗಬೇಕಾಗಿ ಹುಕುಮು ... ಮಾಡಿದರು. ಎಲ್ಲರೂ ಕಲೆ ಒಗ್ಗಿಸಿ ತಮ್ಮ ಸ್ಥಳಗಳಿ...ಗೆ ನಡೆದರು. ಆದರೆ, ಕೆಲವರು ಅಸ್ವಸ್ಥ ಬಿದ್ದರು. ಈ [illegible] ಅವರ ಅರ್ಜಿಗಳನ್ನು ...ಸ್ವೀರಿಸಿ ಸರಕಾರಿ ಕಾರ್ಯವನ್ನು ಅಲಕ್ಷ ಮಾಡಿದ...ಪದ ಹೊರಿಸಿ ವಿಚಾರ ವೇಷ ನಡೆಯಿತು. ೪ ಜನ...ಗೆ ಬಡತರ್ಫ ಮಾಡಲಾಯಿತು. ಕೆಲವರಿಗೆ ಹಿಂಬಡ... ಕೊಡಲಾಯಿತು, ಮುಂಡಗೋಡ ತಡಸ್ಕಲ್ಪಟ್ಟ ... ಶೇಧಿಯು ಪತಚ್ಯುತನಾಗಿದ್ದಾನೆ. ೧೪-೧೫ ವರು...ಗಳ ತನಕ ಸರ್ವಿಸು ಮಾಡಿದ ಶ್ಯಾನಭೋಗರ ಅವಸ್ಥೆ ... ಮಿ| ವ್ಯಾಸರವರಾಗಿ ಮೇಲಧಿಕಾರಿಗಳು ಹೀಗೆ ನಡಿಸಿ...ಕೊಂಡರೆ, ಅವರಿಗೆ ಗ್ರಾಹ್ಯವಾಗುವದೇನು? ಹನ್ನಂತ... ೩ಗಡಿಸೆ— ಶ್ಯಾನಭೋಗರಿಗೆ ಈ ಅವಸ್ಥೆಯಾ...ತ್ತಿದ್ದಲ್ಲಿ ಮೇಲಧಿಕಾರಿಗಳು ವಿಚಾರ ಮಾಡಿ ಜನ...ಕಾರಿಗೆ ತಾವುಬೇಕು. ಇಷ್ಟಾಗಿ ಅವರ ರಜೆಯೂ ಬಾ... ಇತ್ತು,

ಮುಂಡಗೋಡ— ಇಲ್ಲಿ ಮಿ| ಹೆಬ್ಬ ಎಂಬವ... ಕಾರಕೂನನಾಗಿ ಬಂದಾಗ ಸುಳ್ಳು ಛತ್ರಬೀಲನ್ನು ಕೊ...ರೆಂದು ಮಿ| ಕಲಗಲ್ಲ ಎಂಬವರು ಕಂಡುಹಿಡಿದು ಮೇ...ಲಧಿಕಾರಿಗಳಿಗೆ ಅರ್ಜಿ ಮಾಡಿದರು. ಆ ಅರ್ಜಿ ತಪಾಸನ್ನು ...ಪ್ರಾಂತ ಸಾಹೇಬರು ಗುಪ್ತವಾಗಿ ನಡಿಸಿ ಹೆಬ್ಬನವರಿಗೆ ಹಿಂ...ಬಡತಿ ಮಾಡಿದರು. ಅವರ ಜೊತೆಗೆ ಶಿರಸ್ತೇದಾರರಾಗಿದ್ದ ... ಮಿ| ಬಳವಳ್ಳಿಯವರಿಗೂ ಹಿಂಬಡತಿಯಾಯಿತು. ಇವರ ...ಪರಾಧವೇನೆಂದು ತಿಳಿಯಲಿಲ್ಲ, ಇವರ ಕಾಲದಲ್ಲಿ ಈ ...ಛತ್ರ ಪ್ರಕರಣ ನಡೆಯದೆ ಮಿ| ಹೆಗಡೆಯವರು ಮಾಮಲ...ತದಾರರಾಗಿದ್ದಾಗ ಈ ಪ್ರಕರಣವಾಗಿತ್ತಂತೆ! ಮಿ| ಹೆಗಡೆಯ...ವರ ಕಾಲದಲ್ಲಿ ಛತ್ರ ಬೀಲು ಮಂಜೂರಾದದ್ದು ಇದ್ದರೆ, ... ಮಿ| ಬಳವಳ್ಳಿಯವರಿಗೆ ಪ್ರಾಯಶ್ಚಿತ್ತವೇಕೆ? ದೂರ ಚಿತ್ತ!!

...ಇಲ್ಲಿ ಮೋಟಾರ ಏಜಂಟರ ಉಪಟಳವು ಭಯಂಕರ...ವಾಗಿದೆ; ಪ್ರಮಾಣಿಕರಿಂದ ಟಿಕೀಟಿನ ಹಣವನ್ನು ೪ ... ೮ ಆಣೆ ತನಕ ಹೆಚ್ಚಿಗೆ ವಸೂಲ ಮಾಡುತ್ತಾರೆ, ...ಬಗ್ಗೆ ಸಂಬಂಧಪಟ್ಟವರು ಪೋಲೀಸ ಏಜಂಟರಿಗೆ ... ಎಚ್ಚರಿಕೆ ಕೊಡಬೇಕು

ಬಾರ್ದೋಲಿಯ ವೃತ್ತಾಂತ.

ಬಾರ್ದೋಲಿಯಲ್ಲಿ ಪಠಾಣರ ಅತ್ಯಾಚಾರಗಳು ಭರದಿಂದ ಸಾಗಿವೆ. ಇವರು ಹೆಂಗಸರು-ಹುಡುಗರು ಆಡ್ತಾಡುವ ಹಾದಿಗಳ ಮೇಲೂ, ನೀರು ತರುವ ಬಾವಿಗಳ ಬದಿಗೂ ದಿಗಂಬರರಾಗಿ ಕೂತುಕೊಂಡು ದಣಿಸುತ್ತಾರೆಂದು ಬಾರ್ದೋಲಿಯವರು ಪ್ರಕಟಿಸಿದ್ದಾರೆ. ಅನೇಕರಿಕು ಹೆಂಗಸರ ಪ್ರತಿಷ್ಠಾ ಲೇಖಗಳಾಗಿವೆ. ಜಪ್ತಿ ಮಾಡುವ ವ್ಯಾಪಾರವು ಭರದಿಂದ ಸಾಗಿದೆ. ಬಾರ್ದೋಲಿಯ ಬಂಗಲೆಯಲ್ಲಿ ಉಳಕೊಳ್ಳುವ ಸರಕಾರಿ ಅಧಿಕಾರಿಗಳ ಬಿಡಾರವನ್ನು ಕಾಯಲು ನೇಮಿಸುವ ಸ್ವಯಂಸೇವಕರ ಮೇಲೆ ಉಪದ್ರವ ಕೊಟ್ಟ ಸಬಬಿನ ಮೇಲೆ ಪೋಲೀಸ ಆಕ್ಟಿನನ್ವಯ ಜಪ್ತಿಯಾಯಿತು. ಜಪ್ತಿಯಾದ ೩ ಸ್ವಯಂಸೇವಕರು ಹಿರಿಯ ಸದ್ಗೃಹಸ್ಥರು. ಒಬ್ಬರು ಗುಜರಾಥ ಮಹಾವಿದ್ಯಾಲಯದ ವಿದ್ಯಾರ್ಥಿಗಳು; ಎರಡನೆಯವರು ಕಾಶೀ ಹಿಂದು ವಿದ್ಯಾಪೀಠದ ವಿದ್ಯಾರ್ಥಿಗಳು; ೩ನೇಯವರು ಬಾರ್ದೋಲಿಯ ದೊಡ್ಡ ವರ್ತಕರ ಮಗಂದಿರು. ಇವರಿಗೆ ಪೋಲೀಸ ಆಕ್ಟಿನ ೩ನೇ ಕಲಮಿನನ್ವಯ ಪ್ರಾರ್ಥಿಕ್ಷೆ ಕೊಡಲಾಗಿದೆ. ಯಾರಿಗೆ ಉಪದ್ರವವಾಯಿತೆಂಬ ಪುರಾವೆಯಲ್ಲಿ ಬರಲಿಲ್ಲ. ಆರೋಪಿಗಳಲ್ಲೊಬ್ಬರಾದ ಶ್ರೀ|| ದಿವಾಕರರಾಯರು ತಮ್ಮ ಕೈಫೀಯತಿನಲ್ಲಿ ಹೇಳಿದ್ದೇನೆಂದರೆ:- " ಬಾರ್ದೋಲಿಯಲ್ಲಿ ಫೌಜದಾರರು ಸರ್ವಾಧಿಕಾರಿಗಳಾಗಿದ್ದಾರೆ. ಮೆಜಿಸ್ಟ್ರೇಟರು ಅವರ ಕೈಯೊಳಗಿನ ಸೂತ್ರಗೊಂಬೆಗಳು. ಫೌಜದಾರರು ಬಾರ್ದೋಲಿಯಲ್ಲಿ ದಬ್ಬಾಳಿಕೆಯ ಯಜ್ಞವನ್ನು ಪ್ರಾರಂಭಿಸಿದ್ದಾರೆ. ನಮ್ಮಂಥವರು ಯಜ್ಞಪಶುಗಳಾಗಿ ಬೇಗನೇ ಸೇರಿದರೆ ಯಜ್ಞವು ಬೇಗನೇ ಪೂರ್ತಿಯಾಗುವದು.

ಮುಂಬಯಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ|| ನರಿಮಾನ, ಬಾಳೂಭಾಯಿ ದೇಸಾಯಿ, ನಾರಾಯಣದಾಸ, ಜಯರಾಮದಾಸ ದೌಲತರಾಮ ಹೀಗೆ ೪ ಮಂದಿ ಸಭಾಸದರು ಬಾರ್ದೋಲಿಯೊಳಗಿನ ದಬ್ಬಾಳಿಕೆಗೆ ಬೇಸರಪಟ್ಟು ರಾಜೀನಾಮೆ ಕೊಟ್ಟರು. ೪೦ ಮಂದಿ ಪಟೇಲರೂ, ೮ ಮಂದಿ ತಲಾಟಿಗಳೂ ರಾಜೀನಾಮೆ ಕೊಟ್ಟರು. ದನಗಳ ಪೀಡನೆಯನ್ನೂ, ಪ್ರಜೆಗಳ ಕಷ್ಟ-ನಷ್ಟವನ್ನೂ ನೋಡಲಾಗದೆ ಅವರು ರಾಜೀನಾಮೆ ಕೊಟ್ಟರು. ಬಾರ್ದೋಲಿಯ ಸ್ಥಿತಿಯನ್ನು ಪ್ರತ್ಯಕ್ಷ ಪರಾಂಬರಿಸಲು ಪಂಜಾಬದಿಂದ ಡಾ| ಸತ್ಯಪಾಲರು ಬಾರ್ದೋಲಿಗೆ ಹೋಗಿದ್ದಾರೆ. ಬಾರ್ದೋಲಿಯೊಳಗಿನ ಪ್ರಜೆಗಳಿಗೆ ನೆರವಾಗಲು ಮುಂಬಯಿಯೊಳಗಿನ ಯುವಕರು ನಿಧಿಸಂಗ್ರಹ ಮಾಡುತ್ತಿದ್ದಾರೆ. ಇಷ್ಟರವರೆಗೆ ೫-೬ ಸಾವಿರ ರೂಪಾಯಿ ಕೂಡಿತು.

ಶ್ರೀ|| ವಲ್ಲಭಭಾಯಿ ಪಟೇಲ ಪ್ರಭೃತಿ ಲೋಕನಾಯಕರು ಅವಹೇಳನೆಗಾಗಿ ಈ ಚಳವಳಿಯನ್ನೆಬ್ಬಿಸಿದ್ದಾರೆಂದು ಕಮೀಶನರರುಬರೆದ ವಾಕ್ಯವು ಹುಸಿ ಕಲ್ಪಕರವೆಂದು ಅವರ ಮೇಲೆ ದಾವಸಾಹೇಬ ದಾದೂಭಾಯಿ ದೇಸಾಯಿಗಳಾದಿ ಪ್ರಮುಖರು ಫಿರ್ಯಾದು ಮಾಡುವ ವಿಚಾರದಲ್ಲಿದ್ದಾರೆ. ಮುಂಬಯಿ ಎಡ್ವೊಕೇಟರಾದ ಶ್ರೀ|| ಬಾಳೂಭಾಯಿ ದೇಸಾಯಿಯವರು ಬಾರ್ದೋಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿ ಬಂದರು. ಭಗವಂತನ ಮೇಲೆ ಶ್ರದ್ಧೆಯನ್ನಿಟ್ಟು ಪ್ರಜೆಗಳು ಕೊನೆತನಕ ಕಾದಾಡುವ ನಿರ್ಧಾರ ಮಾಡಿರುವರಾಗಿ ಅವರು 'ಹೆರಲ್ಡ' ಪತ್ರಿಕೆಯ ಪ್ರತಿನಿಧಿಗಳ ಬಳಿ ಹೇಳಿದರು. ಶೇಟ ಜಮುನಲಾಲ ಬಜಾಜ ಹಾಗು ಮಿ| ಅಬಾಸ ಅಲ್ಲಿ ತಾಕ್ಷರಭಾಯಿಯವರು ಬಾರ್ದೋಲಿ ತಾಲೂಕಿನೊಳಗಣ ಸುಮಾರು ೩೦ ಗ್ರಾಮಗಳನ್ನು ಸಂಚರಿಸಿ ಮರಳಿದರು

ಬಾರ್ದೋಲಿಯಲ್ಲಿ ಹೊಸ ಚೌಕಶಿ ಮಾಡಲು ಸರ್ವಾಧಿಪತಿ ಇರ್ವಿನ್ ದೊರೆಗಳು ಮುಂಬಯಿ ಸರಕಾರಕ್ಕೆ ಸೂಚನೆ ಮಾಡಿರುತ್ತದೆಂಬ ಸುದ್ದಿಯು ನಿರಾಧಾರವೆಂದು ಮುಂಬಯಿ ಸರಕಾರವು ವಿಶೇಷ ಪ್ರಕಟನೆಯದ್ವಾರಾ ಪ್ರಕಟಿಸಿದೆ.

ಜಾಹೀರ ನೋಟೀಸು.

ಯಾವತ್ತೂ ಜನರಿಗೆ ಇದರ ಮೂಲಕ ತಿಳಿಸುವದೇನೆಂದರೆ:—

ನನ್ನ ಗಂಡಂದಿರಾದ ಯಶವಂತ ಸಾಂತಪ್ಪಾ ಕಸಬೇಕರ, ಕಡವಾಡ ತಾಲೂಕ ಕಾರವಾರ ಇವರು ಈ ನಾಲ್ಕೈದು ವರ್ಷಗಳಿಂದ ನನ್ನ ಪಿತ್ರಾರ್ಜಿತ ಆಸ್ತಿಯಾದ ಭೂಮಿಯನ್ನು (ಕಡವಾಡ ಗ್ರಾಮದೊಳಗಿನ ಭೂಮಿ) ಒತ್ತಿ ಇಟ್ಟು ಆ ಹಣವನ್ನು ಹಾಳು ಮಾಡುತ್ತಿರುತ್ತಾರೆ. ಇದರ ಹೊರತು ಹಳಿಯಾಳ ತಾಲೂಕಿನೊಳಗಿನ ಮುಠಲಮುರಿ ಗ್ರಾಮದಲ್ಲಿ ಸ. ನಂ. 21, 115, 117 ಇವುಗಳ ತರಿಗೆ 61-10-0 ಮತ್ತು ಸದ್ರೀ ತಾಲೂಕಿನಲ್ಲಿ ಅಂತರೋಲಿ ಮೌಜೆ ತೇರಗಾಂವ ಗ್ರಾಮದಲ್ಲಿ ಸ. ನಂ. 79 ನೇದರ ತರಿಗೆ 18-1-0 ಈ ಪ್ರಕಾರ ಭೂಮಿಗಳಿದ್ದು ಸದ್ರೀ ಭೂಮಿಗಳ ಮೇಲೆ ಇನ್ನು ಮುಂದೆ ಯಾರಾದರೂ ಭೂಮಿ ಒತ್ತಿ ಇಟ್ಟುಕೊಂಡು ಇಲ್ಲವೇ ಮಾರಲಿಕ್ಕೆ ತಕ್ಕೊಂಡು ಇಲ್ಲವೇ ಬೇರೆ ಯಾವ ರೀತಿಯಿಂದಾದರೂ ಸದ್ರೀ ನನ್ನ ಗಂಡಂದಿರಿಗೆ ಹಣ ಕೊಟ್ಟದಕ್ಕೆ ನಾನು ಯಾ ನನ್ನ ಮಕ್ಕಳು ಆ ನಾಲಕ್ಕೆ ಜವಾಬದಾರರಾಗಲಿಕ್ಕಿಲ್ಲ. ತಿಳಿಯಬೇಕು.

ಕಡವಾಡ, ತಾ. 4-6-1928. } * ರುಕ್ಮಿಣೀಬಾಯಿ ಯಶವಂತ ಕಸಬೇಕರ ಇವರ ಹೆಬ್ಬೆಟ್ಟಿನ ಗುರುತು.

पाहिजेत !— गावोंगांवीं फिरून आमचे कडे तयार होणारा हरएक प्रकारचा सोन्या-चांदीचा माल विक्री करण्याकरितां हुशार, कर्तव्यदक्ष व सचोटीचे असे कानडी, मराठी व हिंदी जाणणारे फिरते एजंट पाहिजे आहेत.

एजंट होऊं इच्छिणाऱ्यानीं लायख असा कमीतकमी दोन हजाराचा जामीन अगर ऐपत अथवा जबाबदारी द्यावी लागेल. अनुभवशीर लोकांना विशेष पसंत केलें जाईल. भरपूर पगार, कमिशन, ट्रैव्हलिंगखर्च व ट्रैव्हलिंगचा बोर्डिंग लॉजिंगखर्च।

विशेष माहितीकरितां ताबडतोब खालील पत्त्यावर आजच लिहा.

शेट केशव लक्ष्मण आणि सन, मॅन्युफॅक्चरिंग ज्युवेलर्स, कारवार (उ.कानडा.)

ಮಹಾತ್ಮರ ಆತ್ಮಚರಿತ್ರೆ.

(೭) ಕುಂಭ ಜಾತ್ರೆ.

ಕಲಕತ್ತೆಯ ಸ್ವ॥ ಡಾ॥ ಭೂಪೇಂದ್ರನಾಥ ಬಸೂರವರು ಅಮ್ಮಲ್ಲಿ ನನಗೆ ನಿಮಂತ್ರಿಸಿದ್ದರು. ಆದರಿಂದ ಡಾ॥ ಪ್ರಾಣಜೀವನದಾಸ ಮೆಹತಾರವರಿಗೆ ಭೆಟ್ಟಿಯಾಗಲು ರಂಗೂನಿಗೆ ಹೋಗುವಾಗ ಕಲಕತ್ತೆಯಲ್ಲಿ ಉಳಿಯಬೇಕಾಗಿತ್ತು. ಇಲ್ಲಿ ಬಂಗಾಲಿ ಆದರಾತಿಥ್ಯದ ಪರಮಾವಧಿಯಾಯಿತು. ಆ ಕಾಲಕ್ಕೆ ನಾನು ಫಲಾಹಾರಿಯಾಗಿದ್ದೆ. ಕಲಕತ್ತೆಯಲ್ಲಿ ಸಿಗಬಹುದಾದ ಹಸಿ ಒಣ ಹಣ್ಣು ಹಂಪಲಗಳೆಲ್ಲ ನನ್ನ ಸಲುಗೆ ತರಿಸುತ್ತಿದ್ದವು. ಅನೇಕ ಹಣ್ಣು-ಹಂಪಲಗಳ ಸಿಪ್ಪೆ ತೆಗೆಯುತ್ತ ಮನೆಯ ಹೆಂಗಸರು ರಾತ್ರಿಗಳನ್ನು ಕಳೆದರು. ಪದ್ಧತಿಯಂತೆ ಹಣ್ಣು ಹಂಪಲಗಳಿಗೆ ಬಹು ಜಾಗ್ರತೆಯಿಂದ ಬಡಿಸಿಕೊಳ್ಳುವ ವ್ಯವಸ್ಥೆಯಾಯಿತು. ನನ್ನ ಜೊತೆಗಾರರಿಗಾಗಿ ವಿವಿಧ ಪ್ರಕಾರದ ಪಕ್ವಾನ್ನಗಳು ಸಿದ್ಧಪಡಿಸಲ್ಪಡುತ್ತಿದ್ದವು. ನನ್ನ ಮಗನಾದ ರಾಮದಾಸನು ನನ್ನ ಜೊತೆಯಲ್ಲಿದ್ದನು. ಇಂಥ ಪ್ರೇಮಾತಿಶಯದ ಆದರಾತಿಥ್ಯವನ್ನು ನಾನು ಕಂಡಿರಲಿಲ್ಲ. ಆದರೂ, ಒಬ್ಬಿಬ್ಬರು ಅತಿಥಿಗಳ ಆತಿಥ್ಯಕ್ಕಾಗಿ ಇಡೀ ಮನೆಯವರು ಈ ಪ್ರಕಾರ ದುಡಿಯುವದನ್ನು ನೋಡಿ ನನ್ನಿಂದ ಸಹಿಸಲಾಗಲಿಲ್ಲ. ಆದರೆ ಇಂಥ ವಿಪರೀತ ಆತಿಥ್ಯದೊಳಗಿಂದ ಪಾರಾಗುವ ಉಪಾಯವ್ಯಾವದೂ ನನಗೆ ಸೂಚಲಿಲ್ಲ.

ರಂಗೂನಿಗೆ ಹೋಗಲು ಹಡಗ ಹತ್ತಿದೆನು. ಅಲ್ಲಿ (ಸಾಮಾನ್ಯರಂತೆ) ಡೆಕ್ ಪ್ರಯಾಣಿಕನಾಗಿದ್ದೆನು. ಬಸೂರವರ ಮನೆಯಲ್ಲಿ ನನ್ನ ಸಲುಗೆ ವಿಪರೀತ ಜಾಗ್ರತೆ ತೆಗೆದುಕೊಳ್ಳಲಾಗಿದ್ದರೆ, ಹಡಗದ ಮೇಲೆ ಮಾನವಹಕ್ಕಿಗೆ ಅವಶ್ಯವಿದ್ದಷ್ಟು ಸಹ ಜಾಗ್ರತೆ ಸಹ ತೆಗೆದುಕೊಳ್ಳುತ್ತಿದ್ದಿಲ್ಲ. ಬಚ್ಚಲ ಕೋಣೆಗಳಲ್ಲಿ ಅಸಹ್ಯವಾದ ಹೊಲಸು, ಸಂಡಾಸ ಖಾನೆಗಳೆಂದರೆ, ನರಕವೇ. ಪಾಯಖಾನೆಗಳಿಗೆ ಹೋಗಬೇಕಾದರೆ ಮಲಮೂತ್ರಾದಿಗಳನ್ನು ಮೆಟ್ಟಿ ಅವುಗಳ ಮೇಲಿಂದ ಹಾದುಹೋಗಬೇಕಾಗಿತ್ತು.

ಇದನ್ನು ನೋಡಿ ನನಗೆ ವಿಪರೀತ ಬೇಸರವಾಯಿತು. ಹಡಗದ ಅಧಿಕಾರಿಗಳ ಬಳಿಗೆ ಹೋಗಿ ಈ ಸಂಗತಿ ಹೇಳಿಕೊಂಡೆನು; ಪ್ರಯೋಜನವಾಗಲಿಲ್ಲ. ಪ್ರಯಾಣಿಕರ ವಿಚಾರಹೀನ ಹೊಲಸು ನಡಾವಳಿಯಿಂದ ಈ ನರಕದಲ್ಲಿ ಇನ್ನೂ ಬಿದ್ದ ಹೊಲಸು ಹೆಚ್ಚಾಗುತ್ತಲೇ ಹೋಯಿತು. ಪ್ರಯಾಣಿಕರು ಕುಳಿತಲ್ಲಿಯೇ ಉಗುಳುತ್ತಿದ್ದರು. ಊಟ ಮಾಡಿದ್ದಲ್ಲಿ ಎಂಜಲು ತೆಗೆಯುತ್ತಿದ್ದಿಲ್ಲ, ಎಲೆಅಡಿಕೆ, ಹೊಗೆಸೊಪ್ಪು ತಿಂದು ಕಸವನ್ನು ಅಲ್ಲಿಂದಲ್ಲೇ ಚೆಲ್ಲುತ್ತಿದ್ದರು. ಗದ್ದಲವಂತೂ ಮಿತಿಮೀರಿ ನಡೆದಿತ್ತು. ಪ್ರತಿಯೊಬ್ಬರೂ ಹೆಚ್ಚಿನ ಸ್ಥಳವನ್ನು ವ್ಯಾಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಬೇರೆಯವರ ವ್ಯವಸ್ಥೆ ಏನಾಗಬೇಕೆಂಬ ಕಲ್ಪನೆಯೂ ಯಾರಿಗೂ ಸ್ಫುರಿಸುತ್ತಿಲ್ಲ. ಇವರಿಗಿಂತ ಸಾಮಾನಿಗೇ ಹೆಚ್ಚು ಸ್ಥಳ ಬೇಕಾಗಿತ್ತು. ಇಂಥ ಕಷ್ಟದಲ್ಲಿ ಪ್ರಯಾಣದ ೨ ದಿವಸಗಳನ್ನು ಕಳೆಯಬೇಕಾದರೆ, ನಮಗೆ ಸಾಕುಬೇಕಾಯಿತು.

ರಂಗೂನಿಗೆ ಮುಟ್ಟಿದ ಕೂಡಲೆ ಹಡಗದ ಕಂಪನಿಯ ಏಜಂಟರಿಗೆ ಈ ಸ್ಥಿತಿಯನ್ನೆಲ್ಲ ಬರೆದೆನು. ಡಾ॥ ಮೇಹತಾರವರೂ ಈ ವಿಷಯ ಪ್ರಯತ್ನ ಮಾಡಿದರು. ಆದರಿಂದ ಮರಳಿ ಬರುವಾಗ ನಾನು ಡೆಕ್‍ದ ಮೇಲೆ ಪ್ರಯಾಣ ಮಾಡಿದ್ದಾಗ್ಯೂ, ಪ್ರಯಾಣವು ಅಷ್ಟು ಕಷ್ಟಪ್ರದವಾಗಲಿಲ್ಲ.

ರಂಗೂನಿನಲ್ಲಿ ನನ್ನ ಫಲಾಹಾರದ ಮೂಲಕ ಅವರಿಗೆ ದೊಡ್ಡ ತೊಂದರೆಯಾಯಿತು. ಆದರೆ ಡಾ॥ ಮೇಹತಾರವರ ಮನೆಯೆಂದರೆ, ನನ್ನ ಮನೆಯೇ ಆಗಿತ್ತು. ಆದರಿಂದ ಫಲಾಹಾರದ ಸಾಮಾನುಗಳ ಸಂಖ್ಯೆಯನ್ನು ನಾನು ಮಿತಿಗೊಳಿಸಬಲ್ಲೆನು; ಆದರೆ, ಬೇಕಾದ ಹಣ್ಣು-ಹಂಪಲಗಳನ್ನು ನಾನು ತಿನ್ನತೊಡಗಿದೆನು. ಆದರಿಂದ ನಾಲಿಗೆಗೆ ಹಾಗು ಕಣ್ಣಿಗೆ ತೋರಿದ ಪ್ರತಿಯೊಂದು ಪ್ರಕಾರದ ಹಣ್ಣು-ಹಂಪಲಗಳನ್ನು ಮಿತಿಮೀರಿ ತಿನ್ನುತ್ತಿದ್ದೆನು. ಭೋಜನದ ಕಾಲವು ನಿಯಮಿತವಿದ್ದಿಲ್ಲ. ಮಾರಿ ಸಂಜೆಯ ಮುಂಚೆ ರಾತ್ರಿ ಊಟ ಉಣ್ಣಬೇಕೆಂದು ನನ್ನ ಸಂಕಲ್ಪ; ಆದರೆ, ೮-೯ ಘಂಟೆ ರಾತ್ರಿಯ ಮುಂಚೆ ಉಣ್ಣಲಿಕ್ಕೇ ಆಗುತ್ತಿದ್ದಿಲ್ಲ.

ಇದು ೧೯೧೫ ನೇ ಇಸ್ವಿಯಲ್ಲಿ ಈ ವರುಷ ಹರಿದ್ವಾರದಲ್ಲಿ ಕುಂಭ ಜಾತ್ರೆಯಾಗುವದಿತ್ತು. ಈ ಜಾತ್ರೆಯು ೧೨ ವರುಷಕ್ಕೊಮ್ಮೆ ಆಗುತ್ತದೆ. ಈ ಜಾತ್ರೆಗೆ ಹೋಗಲು ನಾನು ಆತುರಪಟ್ಟಿದ್ದಿಲ್ಲ. ಆದರೆ, ಮಹಾತ್ಮಾ ಮುನ್ಷೀ ರಾಮಜೀಯವರ ದರ್ಶನ ಪಡೆಯಲು ನಾನು ಉತ್ಸುಕನಾಗಿದ್ದೆ. ಅವರು ಗುರುಕುಲದಲ್ಲಿರುತ್ತಿದ್ದರು. ಗೋಖಲೆಯವರ ಸಮಾಜದವರು ಕುಂಭ ಜಾತ್ರೆಯ ಸಮಯ ಸೇವೆ ಮಾಡಲಿಕ್ಕೆ ದೊಡ್ಡದೊಂದು ಸ್ವಯಂಸೇವಕ ದಳವನ್ನು ಕಳಿಸಿದ್ದರು. ಪಂಡಿತ ಹೃದಯನಾಥ ಕುಂಝರೂರವರು ಈ ದಳದ ಸೇನಾನಾಯಕರಾಗಿದ್ದರು, ಹಾಗು ಸ್ವ॥ ಡಾ॥ ದೇವರವರು ಚಿಕಿತ್ಸಕರಾಗಿದ್ದರು. ಇವರಿಗೆ ನೆರವಾಗಲು ಫೀನಿಕ್ಸ ಆಶ್ರಮದವರನ್ನು ಕಳಿಸಲು ನನಗೆ ಹೇಳಲಾಗಿತ್ತು. ಆದರಂತೆ ಮಗನಲಾಲನಿಗೆ ಕಳುಹಿದೆನು. ಆತನು ನನ್ನ ಮುಂಚೆಯೇ ಹೋಗಿದ್ದನು. ರಂಗೂನಿನಿಂದ ಬಂದ ಬಳಿಕ, ನಾನು ಈ ಪಥಕದಲ್ಲಿ ಸೇರಿದೆನು.

ಕಲಕತ್ತೆಯಿಂದ ಹರಿದ್ವಾರದ ವರೆಗಿನ ಪ್ರಯಾಣವು ಬಹಳ ಕಷ್ಟಪ್ರದವಾಯಿತು. ಕೆಲವು ಕಾಲ ಡಬ್ಬೆಗಳಲ್ಲಿ ದೀಪವಿರುತ್ತಿದ್ದಿಲ್ಲ. ಸಹರಾಣಪುರದಿಂದ ಸಾಮಾನಿನ ಡಬ್ಬೆಗಳಲ್ಲೋ, ದನಗಳ ಡಬ್ಬೆಯಲ್ಲೋ ನಮಗೆ ನೂಕಿದರು. ಈ ಡಬ್ಬೆಗಳಿಗೆ ಮೇಲ್ಮಾಡಿದ್ದಿಲ್ಲ; ಮೇಲೆ ಸೂರ್ಯನಾರಾಯಣನು ಮಧ್ಯಾಹ್ನಕ್ಕೆ ಪ್ರಚಂಡ ಕಿರಣಗಳಿಂದ ತಾಪಕೊಡುತ್ತಿದ್ದನು. ಕಾದು ಕೆಂಪಾದ ಕಬ್ಬಿಣದ ಡಬ್ಬೆಗಳು ಬಿಸಿಲು ತಾಪಕ್ಕೆ ಕಾದುಹೋಗಿದ್ದವು; ನಮಗೆ ಬೇಯುವಂತಾಯಿತು. ಇಂಥ ಪ್ರಯಾಣದಿಂದ ಮಿತಿಮೀರಿ ತೃಷೆಯಾದಾಗ್ಯೂ ಸನಾತನಿ ಹಿಂದುಗಳು ಮುಸಲ್ಮಾನರ ಕೈಯಿಂದ ನೀರು ಕೊಳ್ಳುತ್ತಿದ್ದಿಲ್ಲ, ಹಿಂದುಗಳ ಕೈಯಿಂದ ನೀರು ಕೊಳ್ಳುವ ನಿರೀಕ್ಷಣೆ ಮಾಡುತ್ತಿದ್ದರು. ಒಂದು ಮಾತು ನಮೂದಿಸತಕ್ಕಂತಾದ್ದಿದೆ. ಅಸ್ವಸ್ಥ ಬಿದ್ದಾಗ ಡಾಕ್ಟರರು ಸಹ ಔಷಧವನ್ನಾಗಲೀ, ಗೋಮಾಂಸದ ರಸವನ್ನಾಗಲಿ ಅಥವಾ ಮುಸಲ್ಮಾನ ಯಾ ಕ್ರಿಶ್ಚನ್ ಜಾತಿಯ ಕಂಪೌಂಡರರು ನೀರು ಕೊಟ್ಟರೆ ಪೃಚ್ಛೆ ಸಹ ಮಾಡದೆ, ಅನುಮಾನ ಮಾಡದೆ ಈ ಹಿಂದುಗಳೇ ಸೇವಿಸುತ್ತಾರೆ.

ಶಾಂತಿನಿಕೇತನದಲ್ಲಿ ನಾವಿರುವಾಗ ಹಿಂದುಸ್ಥಾನದಲ್ಲಿ ಝಾಡಮಾಲಿಯ ಕೆಲಸವನ್ನು ನಾವೇ ಮಾಡತಕ್ಕದ್ದೆಂಬುದೊಂದು ಪಾಠ ಕಲಿಸಲಾಗಿತ್ತು. ಸ್ವಯಂಸೇವಕರಿಗಾಗಿ ಹರಿದ್ವಾರದೊಳಗಿನ ಧರ್ಮಶಾಲೆಯಲ್ಲಿ ಗುಡಾರ ಹೊಡೆದಿದ್ದರು; ಡಾ॥ ದೇವರವರು ಪಾಯಖಾನೆ ಉಪಯೋಗಕ್ಕಾಗಿ ಕುಣಿಗಳನ್ನು ಅಗೆದಿದ್ದರು. ಈ ಕುಣಿಗಳೊಳಗಿನ ಮಲಮೂತ್ರಾದಿಗಳನ್ನು ತೆಗೆಯುವದಕ್ಕಾಗಿ ಸಂಬಳದ ಝಾಡಮಾಲಿಗಳ ಮೇಲೆ ಅವರು ಅವಲಂಬಿಸಬೇಕಾಗಿತ್ತು. ಈ ಕೆಲಸವು ಫೀನಿಕ್ಸದವರು ಮಾಡುವದಾಗಿತ್ತು. ಮಲವನ್ನು ಮಣ್ಣಿನಿಂದ ಮುಚ್ಚಿ ಮುಂದಿನ ವ್ಯವಸ್ಥೆ ಮಾಡುತ್ತೇವಾಗಿ ನಾವು ಹೇಳಿದೆವು. ಡಾ॥ ದೇವರವರು ಸಂತೋಷದಿಂದ ನಮ್ಮ ಸೂಚನೆಯನ್ನು ಅಂಗೀಕರಿಸಿದರು ಸ್ವಾಭಾವಿಕವಾಗಿ ಈ ಕೆಲಸದಲ್ಲಿ ಮುಂದಾಗಿ ಹೇಳಿದವನು ನಾನು, ಆದರೆ, ಕೆಲಸ ಮಾಡುವ ಭಾರವು ಮಗನಲಾಲನದಿತ್ತು. ಗುಡಾರದಲ್ಲಿ ಕೂತುಕೊಂಡು ಕಾಣಬಂದವರಿಗೆ ದರ್ಶನ ಕೊಟ್ಟು ಅನೇಕ ಯಾತ್ರಿಕರ ಬಳಿ ಧಾರ್ಮಿಕ ಹಾಗು ಇತರ ಚರ್ಚೆ ಮಾಡುವದಷ್ಟೇ ನನ್ನ ಕೆಲಸ. ನನಗೆ ಇದರಿಂದ ಒಂದು ನಿಮಿಷ ಸಹ ಸಮಯ ದೊರಕುತ್ತಿದ್ದಿಲ್ಲ. ದರ್ಶನಕಾಂಕ್ಷಿಗಳು ನನ್ನ ಜೊತೆಗೆ ಸ್ನಾನ ಮಾಡುವಾಗ ಗಂಗಾಘಾಟಕ್ಕೂ ನನ್ನನ್ನು ಹಿಂಬಾಲಿಸುತ್ತಿದ್ದರು. ಊಟ ಮಾಡುವಾಗ ಸಹ ನನಗೆ ಬಿಟ್ಟುಕೊಡುತ್ತಿದ್ದಿಲ್ಲ. ದಕ್ಷಿಣ ಆಫ್ರಿಕೆಯೊಳಗೆ ನಾನು ಸ... ಸಿದ ಅಲ್ಪ ಸೇವೆಯಿಂದ ಇಡೀ ಹಿಂದುಸ್ಥಾನದಲ್ಲಿ ಸ... ವಿಷಯ ಉಂಟಾದ ಭಕ್ತಿಯು ಹರಿದ್ವಾರದಲ್ಲಿ ನನ್ನ ಅ...ಕ್ಕೆ ಬಂತು. ಆದರೆ, ಈ ಸ್ಥಿತಿಯೇನು ಸುಖದಾಯಕ...ದ್ದಿಲ್ಲ. ನನಗೆ ಕರಿ-ಭಾವಿಗಳ ಮಧ್ಯದಲ್ಲಿ ಸಿಲುಕಿದಂತಾ...ತು. ಗುರುತಿಲ್ಲದಂಥ ನನ್ನ ಪರಿಚಯವಿಲ್ಲದ ಸ್ಥಳಗಳ... ಸಾಮಾನ್ಯ ಮನುಜರಂತೆ ನಾನು ಕಷ್ಟಗಳನ್ನನುಭವಿ...ಬೇಕಾಗಿತ್ತು. ನನ್ನ ಪರಿಚಯವಿದ್ದ ಜನರು ಮುತ್ತಿಗ...ದಾಗ ದರ್ಶನ ಮರುಳಿನಿಂದ ನನಗೆ ಉಪದ್ರವವಾಗುತ್ತಿತ್ತು... ಯಾವ ಸ್ಥಿತಿಯು ಒಳ್ಳೆದಾಗಿರಬೇಕೆಂದು ಅನೇಕಾವರ್ತಿ ವಿಚಾರಿಸಿದರೂ ನನಗೆ ಗೋಚರವಾಗಲಿಲ್ಲ. ಅಷ್ಟೊಂದ...ಮಾತು ಹೇಳಬಲ್ಲೆ. ದರ್ಶನಕಾಂಕ್ಷಿಗಳ ಅಂಧಭಕ್ತಿಯಿಂದ ಅನೇಕಾವರ್ತಿ ನನಗೆ ಸಿಟ್ಟು ಬಂದಿರುತ್ತದೆ. ...ಲವು ಬಾರಿ ವಿಷಾದವೂ ಆಗಿದೆ. ಇನ್ನೇ ಬಗೆಯ ಪ್ರಯಾಣ...ದಿಂದ ಬಹಳ ಕಷ್ಟವಾದರೂ, ಆತ್ಮೋನ್ನತಿಯಾಗಿದೆ; ...ಟ್ಟು ಎಂದೂ ಬರಲಿಲ್ಲ.

ಅಡ್ಡಾಡಲು ಆ ಕಾಲಕ್ಕೆ ನನಗೆ ಚೈತನ್ಯವಿತ್ತು. ಸ...ದೈವದಿಂದ ಬೀದಿಗಳಲ್ಲಿ ಅಡ್ಡಾಡುವಾಗ ವಿಶೇಷ ಗದ್ದಲ...ವಾಗುತ್ತಿದ್ದಿಲ್ಲ; ಅಷ್ಟು ಪರಿಚಯವು ಬೆಳೆದಿದ್ದಿಲ್ಲ. ಹೀಗೆ ತಿರುಗಾಡುತ್ತಿರುವಾಗ ಯಾತ್ರಿಕರ ಭಾವಶೂನ್ಯತೆಯನ್ನೂ, ಚಂಚಲತನವನ್ನೂ, ಹೊಲಸುತನವನ್ನೂ ಪಾಸ...ನೋಡಿದೆನು. ಅವರ ಧರ್ಮಬುದ್ಧಿಯು ಅಷ್ಟೊಂದು ನ...ನಗೆ ಕಾಣಲಿಲ್ಲ. ಅಲ್ಲಿ ಬಂದ ಸಾಧುಗಳ ತಂಡ ಭೌತಿಕ ಸುಖವನ್ನನುಭವಿಸಲು ಜನ್ಮವೆತ್ತಿದಂತೆ ನನಗೆ ತೋರಿತು.

ಇಲ್ಲಿ ೫ ಕಾಲುಗಳಿದ್ದ ಒಂದು ಗೋವನ್ನು ನಾನು ನೋಡಿದೆನು. ನನಗೆ ಆಶ್ಚರ್ಯಾತಿಶಯವಾಯಿತು. ಒ... ವರು ನನಗೆ ಇದರ ಮರ್ಮ ಹೇಳಿದರು. ದುಷ್ಟರ ದ್ರವ್ಯಲೋಭದಿಂದ ೫ ಕಾಲಿನ ಆಕಳನ್ನು ಪೀಡಿಸುತ್ತಾರೆ. ಜೀವಂತ ಕರುವಿನ ಒಂದು ಕಾಲನ್ನು ಕಡಿದು ಆಕಳ ಕಾಲಿನ ಬದಿಗೆ ಹಚ್ಚಿ ೫ ನೇ ಕಾಲಾಗಿ ತೋರಿಸಿದ್ದರೆಂದು ನನಗೆ ತಿಳಿಯಿತು. ಹೀಗೆ ಎರಡು ಪ್ರಾಣಿಗಳಿಗೆ ಉಪದ್ರವ ಕೊಟ್ಟು ಅಜ್ಞರಿಗೆ ಸುಲಿಯುತ್ತಾರೆ. ... ಕಾಲಿನ ಆಕಳಿಗೆ ನೋಡಿದ ಕೂಡಲೆ ಅಲ್ಲಿ ಬರೆದಿದ್ದ ... ದುವಿಲ್ಲ; ಆಶ್ಚರ್ಯಪ್ರದ ಆಕಳಿಗಾಗಿ ಆತನು ಧರ್ಮ... ಮಾಡದೆ ಹೋಗುವದಿಲ್ಲ.

ಜಾತ್ರೆಯ ದಿನ ಬಂತು. ಅದು ನನಗೆ ದೊಡ್ಡ ಸುದಿನವಾಯಿತು. ಯಾತ್ರಿಕನಾಗಿ ನಾನು ಹರಿದ್ವಾರಕ್ಕೆ ಹೋಗಿದ್ದಿಲ್ಲ. ಪುಣ್ಯಸಂಗ್ರಹಕ್ಕಾಗಿ ಯಾತ್ರೆ ಮಾಡುವ ಕಲ್ಪನೆಯು ನನ್ನಲ್ಲಿಲ್ಲ. ಆದರೆ, ಅಲ್ಲಿ ೧೭ ಲಕ್ಷ ಯಾತ್ರಿಕರು ಬಂದಿದ್ದರಂತೆ. ಎಲ್ಲರೂ ಠಕ್ಕರಲ್ಲ, ಅಥವಾ ಬರೀ ನಯನಮನೋರಂಜನಕ್ಕಾಗಿ ಬಂದವರಲ್ಲ. ಹೇರಳ ಜನರು ಪುಣ್ಯಸಂಗ್ರಹಕ್ಕಾಗಿಯೂ, ಪಾಪಕ್ಷಾಲನಕ್ಕಾಗಿಯೂ ಅಲ್ಲಿಗೆ ಹೋಗುತ್ತಾರೆಂದು ನಿಸ್ಸಂಶಯವಾಗಿ ಹೇಳುವೆನು. ಅಂಥ ಭಕ್ತಿಯಿಂದ ಎಷ್ಟರ ಮಟ್ಟಿಗೆ ಆತ್ಮೋನ್ನತಿಯಾಗುತ್ತದೆಂದು ಹೇಳುವದು ಅಶಕ್ಯವೆಂದು ಹೇಳಲಾಗದಿದ್ದರೂ, ... ಆಗಲೇ ಸರಿ.

ಆದರಿಂದ ಇಡೀ ರಾತ್ರೆ ವಿಚಾರದಲ್ಲೇ ನಾನು ಮಗ್ನನಾಗಿದ್ದೆ. ಠಕ್ಕರು ಸುತ್ತ ಮುತ್ತಿದ್ದರೂ, ಅವರೊಳಗೆ ... ಧಾರ್ಮಿಕರಿದ್ದರು; ಅವರ ಪಾಪಕ್ಷಾಲನವಾಗುವದು; ... ದ್ವಾರಕ್ಕೆ ಈ ಕಾಲಕ್ಕೆ ಬರುವದೇ ಪಾಪವಾಗಿದ್ದರೆ, ನಾನು ಈ ಜಾತ್ರೆಯ ದಿನ ಹರಿದ್ವಾರವನ್ನೇ ತ್ಯಜಿಸಿ ನನ್ನ ನಿಷೇಧವನ್ನು ಪ್ರಕಟಿಸಬೇಕು; ಹರಿದ್ವಾರ ಯಾತ್ರೆಯೂ, ಕುಂಭ ಜಾತ್ರೆಯೂ ಮೂಲತಃ ಪಾಪಮಯವಾಗಿರದಿದ್ದರೆ ಅಲ್ಲಿ ನಡೆಯುವ ಅಪಕೃತ್ಯಗಳಿಗಾಗಿ ನಾನು ಕೆಲವೊಂದು ತ್ಯಾಗವನ್ನು ಕೈಕೊಂಡು ಆತ್ಮಶುದ್ಧಿಯನ್ನು ಮಾಡಿಕೊಳ್ಳಬೇಕು. (ಆತ್ಮಶುದ್ಧಿಯು) ಈ ಉಪಾಯವು ನನಗೆ ಸಹಜವಾಗಿತ್ತು. ಕಿತ್ತಿನ ನಿರ್ಧಾರಗಳಿಂದಲೇ ನನ್ನ ಜೀವನ ... ಸಾಗಿದೆ. ಕಲಕತ್ತೆಯಲ್ಲಿಯೂ, ರಂಗೂನಿನಲ್ಲಿಯೂ ಹೇ...ಳ ಖರ್ಚು ಮಾಡಿ ನನಗೆ ಆತಿಥ್ಯ ಮಾಡಿದ ಗೆಳೆಯ...

...ಪ್ರಾಣದ ಅನಾವಶ್ಯಕ ತೊಂದರೆಗಳು ಸಿಗಬಹುದು. ...ದರಿಂದ ನನ್ನ ಆಹಾರದ ಜೀವಸಾಗಳನ್ನು ನಿಯಂತ್ರಿ...ವ! ನಿರ್ಧಾರ ಮಾಡಿದೆನು. ಸೂರ್ಯಾಸ್ತವಾಗುವ ...ಂಚೆಯೇ ದಿನಕ್ಕೆ ಭೋಜನ ಮಾಡಬೇಕಾಗಿ ನಿರ್ಧರಿ...ದೆನು. ಈ ನಿರ್ಬಂಧಗಳನ್ನು ನಾನು ಕೈಕೊಳ್ಳದಿದ್ದರೆ, ...ಗಿ ವಿಶ್ರಾಂತಿಸುವವರಿಗೆ ಮುಂದೆ ಬಹಳ ತೊಂದರೆ ...ಗುವದಾಗಿಯೂ ನನ್ನ ಊಟ-ಉಪಹಾರಗಳಲ್ಲಿಯೇ ...ವರ ಸಮಯವೆಲ್ಲ ಕಳೆದು ಹೋಗಿ ನನ್ನಿಂದ ಸೇವೆ ... ಕೊಳ್ಳುವವರಿಗೆ ಸಮಯವಿರಲಿಕ್ಕಿಲ್ಲವೆಂದೂ ನನ್ನ ...ನೋಡಿಕೆಯಾಯಿತು. ಹಿಂದುಸ್ಥಾನದಲ್ಲಿರುವಾಗ ...ಂದು ದಿನ ... ಜೀವಸಾಗಳಿಗೆ ಮಿಕ್ಕಿ ಜೀವಸಾಗಳನ್ನು ...ವಿಚಾರದಿಂದಾಗಿಯೂ, ಕತ್ತಲೆಯಾದ ಬಳಿಕ ಆಹಾರ ...ಳ್ಳಬಾರದಾಗಿಯೂ ಪ್ರತಿಜ್ಞೆ ಮಾಡಿದೆನು. ಮುಂದೆ ...ರುವುದರ ಸಂಕಟಗಳನ್ನು ಆರೋಗ್ಯ ವಿಚಾರಿಸಿ ...ನು, ಅವುಗಳಿಗಿಂತ ಹೊರತಲು ನನ್ನ ವಿಚಾರವಿದ್ದಿ... ಅಸ್ವಸ್ಥ ವಿದ್ದಾಗ ನನ್ನ ಸ್ಥಿತಿಯೇನಾಗುವದೆಂಬುದ... ವಿಚಾರ ಮಾಡಿದೆನು. ಇದ್ದು ಆ ಜೀವಸಾಗಳಲ್ಲಿ ...ಂದಾಗಿ ಪರಿಣಮಿಸುತ್ತವೆ. ವಿಶೇಷ ಆಹಾರ ಜೀವಸಾ...ಗೆ ನನಗೆ ಆವಾದ ಮಾಡಲಿಲ್ಲ, ಯಾವದೇ ಕಾರಣದ ...ೀಲ ಆಹಾರವಿಚಾರದೆಂದು ಕೊನೆಗೆ ನಿರ್ಣಯಿ...ದೆನು. ಈ ಪ್ರತಿಜ್ಞೆಗಳನ್ನು ನಾನು ಈಗ ೧೩ ವರ್ಷ...ದಿಂದ ಪಾಲಿಸುತ್ತಿದ್ದೇನೆ. ಈ ಪ್ರತಿಜ್ಞೆಗಳಿಂದ ನನ್ನ ಸ... ಪರೀಕ್ಷೆಯಾಯಿತು. ಹಾಗೆಯೇ ಅವುಗಳಿಂದ ನನಗೆ ಜೀ...ನಾಧಾರವು ದೊರೆಯಿತು. ಈ ಪ್ರತಿಜ್ಞೆಗಳಿಂದಲೇ ಕೆಲ ವ...ಗೆ ನನ್ನ ಆಯುರ್ದಾಯವು ಮಿಗಿಲಾಯಿತು. ಅಸ್ವಸ್ಥ...ಳತೆಯ ವಿರ್ಬಲಿಯೂ ಆಯಿತೆಂದು ನನ್ನ ಅಭಿಪ್ರಾಯ...ಾಗಿದೆ.

— ಜೈನರ ಯಾತ್ರಾಸ್ಥಳವಾದ ಶತ್ರುಂಜಯ ಗಿರಿಯ ಮಾ...ರವು ಸರ್ವಾಧಿಪತಿಗಳ ಮಧ್ಯಸ್ಥಿಕೆಯಿಂದ ತೀರಿದೆ. ಜೈ...ನರು ವರ್ಷಕ್ಕೆ ೬೦ ಸಾವಿರ ರೂಪಾಯಿಗಳನ್ನು ಕಾ...ಕಾರ ಸಾಹೇಬರಿಗೆ ಕೊಡತಕ್ಕದ್ದು. ಜೈನ ಸಮಾಜವು ಈ ರಾಜಿಗೆ ಒಪ್ಪಿತೆ, ಕಳೆದ ೭.ಶ್ರಾವಣಕ್ಕೆ ಗಿರಿಯಾತ್ರೆ ಪ್ರಾರಂಭವಾಗುವದಿತ್ತು.

— ಈ ವರುಷ ಬಂಗಾಳ ಬುದ್ಧಯಾತ್ರಾ ಇರ... ದರಿಂದ ಮಹಾಯುದ್ಧವಾಗುವದೆಂದು ಯುರೋಪಿಯನ್ ಜ್ಯೋತಿಷಿ ವಿದರ ಅಂಬೋಣ. ಬ್ರಿಟೀಶರಿಗೆ ತುಂಬ ಹಾನಿಯಾಗುವದಂತೆ! ನೋಡೋಣ.

— ವ್ಯಾಸಾರಿಕ ಪಾಠವಿದಾಸ ಚಿಕಿತ್ಸಾಲಯದಲ್ಲಿ ಒಬ್ಬ ಹೆಂಗಸು ಮೂರು ಶಿಶುಗಳಿಗೆ ಜನ್ಮ ಕೊಟ್ಟಿದೆ. ಇಬ್ಬರು ಹೆಣ್ಣು; ಒಂದು ಗಂಡು; ಹೆಣ್ಣು ಶಿಶುಗಳು ನಾಲ್ಕು-ನಾಲ್ಕು ರತ್ತಲು ತೂಕ; ಗಂಡು ಶಿಶು ೭ ರತ್ತಲು ತೂಕ,

— ಪಂಡಿತ ಮದನ ಮೋಹನ ಮಾಲವೀಯರವರು "ಮನುಸ್ಮೃತಿ" ಎಂಬ ಗ್ರಂಥವನ್ನು ಬರೆಯಲಾರಂಭಿಸಿದ್ದಾರೆ. ಗ್ರಂಥವು ಸಂಸ್ಕೃತದಲ್ಲಿ ಬರೆಯಲ್ಪಡುತ್ತದೆ.

— ಕಾಠಿಯಾವಾಡದಲ್ಲಿ ೧೩ ವರುಷದ ಮೈಸೂರ ಹುಡುಗನು ಬಾಲಿಕಾ ಪಾಠಶಾಲೆಯಲ್ಲಿ ಹಲಕಟ ಮಾಡಿದನು. ಇದು ಚಿತ್ರದೇಧಕವಾಯಿತು.

— ತಿರುಪತಿಯಲ್ಲಿ ವಿಪರೀತ ಪಾಂತಿಭೇದಿ ರೋಗವು ಪ್ರಸಾರ ಹೊಂದಿದೆ ನಿತ್ಯದ ಕೆಲಸಕ್ಕೆ ನೀರು ಸಿಗುವದು ಕಠಿಣ.

— ಗುಂಟೂರಿನಿಂದ ಅಪ್ಪತ್ತು ಮೈಲು ದೂರ ಜೆಲ್ಲಾರ ಪೇಠ ಇದೆ. ಅಲ್ಲಿಯ ಸೆಲಗಿಣಿ ಕಾರಖಾನೆಗೆ ಬೆಂಕಿ ಬಿದ್ದು ಅರ್ಧ ಲಕ್ಷ ರೂಪಾಯಿಗಳ ನಷ್ಟ.

— ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಪುಣೆಯ ಸಭಾಮಂದಿರದಲ್ಲಿ ಜುಲೈ ೨೩ನೇ ತಾರೀಖಿಗೆ ಪ್ರಾರಂಭವಾಗುವದು.

— ಅಮೇರಿಕೆಯ ಪಾಕ್ಸರ ವಿಜ್ಞ ಎಂಬ ಶೋಧಕರು ವಿದ್ಯುಚ್ಛಕ್ತಿಯ ಸಹಾಯದಿಂದ ಓದುವ ಯಂತ್ರವನ್ನೊಂದು ತಯಾರಿಸಲು ಸಿದ್ಧರಾಗಿದ್ದಾರೆ. ಪುಸ್ತಕವನ್ನು ಯಂತ್ರಕ್ಕೆ ಕೊಟ್ಟರಾಯಿತು; ಅದು ಓದುತ್ತದೆ. ಇದರಿಂದ ಅಭ್ಯಾಸ ಮಾಡಲು ಸಮಯವಿರದ ವಿದ್ಯಾರ್ಥಿಗಳಿಗೆ ಬಲು ಅನುಕೂಲ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಶಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸತಿ ವಿಚಾರ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ವೃತ್ತಸಾರ.

...ದ ಸರ್ ಇಬ್ರಾಹಿಮ ರಹಿಮತುಲ್ಲಾ ಅವರು ... ಸರ್ ಇವರು ಜಹಾಂಗೀರರವರು ಜೂನ ೨೨ ...ಗೆ ಅಧಿಕಾರಸೂತ್ರಗಳನ್ನು ತ್ಯಜಿಸಬೇಕಾಗಿತ್ತು, ಬಾ...ಕರು ಅವರ ಅಧಿಕಾರದ ಅವಧಿಯನ್ನು ಮೂರು ತಿಂ...ಳ ವರೆಗೆ ಬೆಳೆಸಿದ್ದಾರೆ ಹೊಲಗಳ ಭೂವರ್ಗೀಕರಣೆಯ ...ಾನೂನನ್ನು ಕಾಯಿದೆ ಕೌನ್ಸಿಲಿನಲ್ಲಿ ಮನ್ನಿಸಿಕೊಳ್ಳು... ವರೆಯಿಂದ ಈ ಅಯುದಾರ್ಯವಾಗಿರುವದಂತೆ. ರಿ...ನಿರುವ ಸರ್ ಫೀರೋಜಾ ಹುಸೇನ ಹಿದಾಯತುಲ್ಲಾ ರವ... ಸರ್ ಕಾವಸಜಿ ಜಹಾಂಗೀರರವರ ಉತ್ತರಾಧಿಕಾರಿಗ...ದೂ ಸಾರ್ವಭೌಮರು ಅನುಗ್ರಹಿಸಿದ್ದಾರೆ. ಸರ್ ಘು...ಮ ಹುಸೇನ ಹಿದಾಯತುಲ್ಲಾರವರು ದಿವಾನರಿದ್ದರು; ...ಯಾಂತರದಿಂದ ಉಂಟಾದ ದಿವಾನಪದದ ಖಾಲಿ ಜಾಗ...ಲ್ಲಿ ಸರಕಾರದ ಪ್ರೀತಿಯನ್ನು ಸಂಪಾದಿಸಿ ದಿವಾನರಾಗ... ಕೆಲವು ಕಾಯಿದೆ ಕೌನ್ಸಿಲಿನ ಸಭಾಸದರಲ್ಲಿ ಕರ್ಮ... ನಡೆದಿದೆ.

...ಮೈಸೂರ ಸರಕಾರವು ಅಖಿಲ ಭಾರತೀಯ ನೂಲು ...ರ ಸಂಘದ ಖಾದಿಯ ಕೇಂದ್ರವಾದ ಬಾದನವಾಲದೊ... ಖಾದಿ ಭಾಗದಿಯಿಂದ ಪೋಲೀಸ-ಅಬಕಾರಿ ಖಾತೆಗ... ಅಗಲು ಅರಿವೆಯನ್ನು ಕೊಂಡುಕೊಳ್ಳುವ ನಿರ್ಧಾರ ಮಾಡಿದೆ.

ಸ್ಯಾಮುಯೆಲ್ ಹೋರ ಸಭಾಸದರಾದ ಮಿ|| ಹಾರ್ಟ... ನೇರವರು ಪುನಃ ಹಿಂದುಸ್ಥಾನಕ್ಕೆ ಬರಲಿಕ್ಕಿಲ್ಲ. ...ಕೆಂದರೆ ಅವರ ಮುತ್ಸದ್ದಿಗಳು ಅವರ ಮೇಲೆ ಕೋಗಿ... ದ್ದಾರಂತೆ.

...ಮುಂಬಯಿ ಸ್ಟೇಂಡರ್ಡ ಆಯಿಲ್ ಕಂಪನಿಯ ಕಚೇರಿ ...ಳಗಿನ ಕೆರೊಸಿನ್ ಎಣ್ಣೆಯ ಉಗ್ರಾಣಕ್ಕೆ ಮುಕ್ತವಾರ ...ಬೆಂಕಿ ಬಿತ್ತು. ೫ ಲಕ್ಷ ಗ್ಯಾಲನ್ ಎಣ್ಣೆ ಸುಟ್ಟಿತು.

ಹಿಂದುಸ್ಥಾನ ಸರಕಾರವು ಟಪಾಲ ಪೇಟಿಗಳ ಸಂಖ್ಯೆ...ನ್ನು ಏರಿಸುವ ನಿಶ್ಚಯ ಮಾಡಿದೆ. ಎಷ್ಟು ಏರುತ್ತ...ೆ ನೋಡಬೇಕು.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುತದೆ ೬೦-೭೦ ವರ್ಷದ ಮುದುಕರ ಕೂಡ ಸೇವಿಸಿದರೆ ತರುಣರಂತೆ ಪವರ್ಧಮಾನವಾಗುವರು. ನಿಜವಾಗಿ ಒಂದೇ ಸಲಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ದುಷ್ಟವಾದ ಸರ್ವನಾಶಕ್ಕವು ಅಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ದರದಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗಿಯಾಗುವದು. ಮೂರೆ ದಿವಸದಲ್ಲಿಗುಣಕಾರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ, ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಟ ನೋವು ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ವಿಷಯಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ, ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣವಾಗುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣವಾಗುವದು ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦—೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂಚೆ, ಟಪಾಲ ಖರ್ಚು ಹೊರು ಬೀಳುವದಿಲ್ಲ. ಹಜಾ ಬಾಟಲಿಗಳ ಕಿಮ್ಮತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ವಿ.ಪಿ. ಟಪಾಲ ಕಳಿಸುವದರಿಂದ ೧ ಬಾಟ್ಲಿಗೆ ೦-೮-೦ ೩ ಬಾಟ್ಲಿಗೆ ೩-೮-೦ ಹಜಾವಿಗೆ ೧೩-೧-೦

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव-

– मृद्रिकारिष्ट –
शारंगधर म अ १०

रामबाण औषध

सर्दि घालविणारें
मूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

विण्याम काचकर

किंमत एक रतलाम १।। रुपय
कॅटलाग मागवा

झंडु फार्मास्युटिकल वर्क्स लिमिटेड
मुंबई नं. १४

ऐजट— मेसर्स पंडित आणी कंपनी,
तीर्थहळ्ळी

सिमिएजट एस. एल धाकप्पा आणि ब्रदर

ಹಿಂದ ಸ್ತಾನದಲ್ಲಿ ಅತ್ಯಂತ ಅಗ್ರವಾದ
'ನೆಶನಲ್ ಇನ್ಶೂರನ್ಸ ಕಂಪನಿ (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ
ಕಳೆದ ವರುಷ ಲೆಕ್ಕಾಚಾರದ ಮೇಲೆ 5 40,041
ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿ ಬೋನಸ್, ಪೂರ್ತ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿ ಬೋನಸ್ ಕೊಟ್ಟಿದೆ.

ಹೊರಗಿನ 1000 ರೂಪಾಯಿಗಳ ವಿಮೆಯ ಪತ್ರ ಕಂತು ಕಟ್ಟದಿದ್ದರೂ ಅದೇ ಕಂಪನಿ ... ಸುಮಾರು 1700 ರೂಪಾಯಿಗಳ ಪತ್ರವನ್ನು ಪಡೆಯಿರಿ ... ಸುಲಭ,

ಎಲ್ಲಾ ಕಡೆಯಲ್ಲಿಯೂ ಏಜೆಂಟರು ಬೇಕು

ಕರ್ನಾಟಕಕ್ಕೆ ಏಜಂಟರು - **P D Churi,**
ಬ್ರಾಂಚ ಸೆಕ್ರೆಟರಿ, *Branch Secretary,*
ಲೋಖಂಡೆ ಬಿಲ್ಡಿಂಗ, Alice Building
ಹುಬ್ಬಳ್ಳಿ *Hornby Road,*
BOMBAY

ಕಾಶಿಯ ಅಪೂರ್ವ ವಸ್ತುಗಳು.

ನಿಂಪ್ರ ಕಾಶಿಯ ಪಟ್ಟೆ ಮಡಿ, ಶಾಲಿ, ... ತಲ್ಲೆ, ಬನಾರಸ ಕಸೂತಿಯ ಶಾಲು, ಸಕಲಾತಿ ಧಾಬಳ ರುದ್ರಾಕ್ಷ ಸರ, ಕಂಠಿ, ಗೌರೀಶಂಕರ ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಬಾಳಂಟಿ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನ ಸೋವಿಗೆ ಬೆಲೆಗೆ ... ಕಳಿಸಿ ಕೊಡತಕ್ಕದ್ದು. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗ ತರಿಸಿಕೊಳ್ಳಿರಿ

ನಮ್ಮ ಪತ್ತೆ -
ವಿಶ್ವನಾಥ ಎಂಡ್ ಬ್ರದರ್ಸ,
ಮಗಾಲಕ್ಷ್ಮಿ ... ಬನಾರಸ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರುಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಶೋರ್ಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ವಾಸಿಯಾಗುವ ವ್ಯಾಧಿಗಳು ಯಾವವೆಂದರೆ-- ಪಿನಶಿ, ಒಂಟಿ ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ರೋಗಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಸೇರಿದ್ದ ರಕ್ತ ವ್ಯಾಧಿಗಳನ್ನೂ ಸ್ವಸ್ಥ ಮಾಡಿ, ... ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಚಿಟ್ಟಿಕೆ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯ ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ನಮ್ಮ ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ನೀನೆ ಪ್ರತ್ಯಕ್ಷ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ ಅಂಚೆ ಡಜನ್ ೧ ಕ್ಕೆ ರೂ. ೨-೮-೦. ...
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಬೊಂಬಾಯಿ.

ಇದು "ಕರಾಮತ" ಗಾಣ—
ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ



ಈ ಗಾಣದಿಂದ ಶೇಕಡಾ ೭೨ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಹಗುರವುಳ್ಳದ್ದು, ಬಾಳಿಕೆಯದು. ವಿಶೇಷ ಯಂತ್ರಸಾಮಗ್ರಿ ಇಲ್ಲ. ಸಾಮಾನ್ಯ ರೈತರು ಇದನ್ನು ಜೋಡಿಸಬಲ್ಲರು. ಸಾಮಾನ್ಯ ಎರಡು ಎತ್ತು ಈ ಗಾಣವನ್ನು ಎಳೆಯಬಲ್ಲವು

ಬೇಅರಿಂಗು ಗನ್‌ಮೆಟಲ್‌ದವು. ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಉಕ್ಕಿನ ಲಗುಗಳು ಉತ್ತಮವು ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು. ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರೆಯವು.

ಈ ಉತ್ತರ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦-೧೨ ಕರಾಮತಗಾಣಗಳು ದುಡಿಯುತ್ತಿವೆ, ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ. ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್, ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮುದ್ದು ಅತ್ಯಂತ ಅವಶ್ಯವಾದದ್ದು,

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತೂ ಕೊಳ್ಳಲೇ ಬೇಕು. ಬಿದ್ದ ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮು, ತಲೆಶೂಲಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದು ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೧ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೊ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press Ku

REG. NO. B. 1270

MONDAY, JUNE 18TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೧

ತ್ರದ ವರ್ಗಣಿ.

ಯಲ್ಲಿ ಅಗಾವು
ಪಾಯಿ 2-4-0.
ರ್ಡರಿಯಿಂದ
ರೂ. 3-0-0.
ಅಂಚೆವೆಚ್ಚ ಸೇರಿ
ರಾಯಿ 3-2-0.
ಂಚಿಕೆಗೆ 0-1-0.

ನೃपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ವ್ಯಾಖ್ಯಾನ (೧೫ ಎಮ್ ಉದ್ದ)
೮ ಸಾಲುಗಳವರೆಗೆ ರೂ. 1-0-
ಆ ನಂತರ ಪ್ರತಿಸಾಲಿಗೆ 0-2-0.
ಹೆಚ್ಚಿಂಗಿನ ಸಾಲು ಎಷ್ಟು ಕೊಡಬೇಕೆಂಬದು ಆ ಮೇಲಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮುಖಾಂತರ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೮ ಮಾಹೆ ಜೂನ ಸನ್ ೧೯೨೮ನೇ ಇಸವಿ.)

ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ದೇಶಾದ ನಮೂನೆಯ, ಹೊಸ ಹೊಸ ಸಾಮಾನುಗಳು ಸಿಗುತ್ತವೆ -ಕಬ್ಬಿಣ, ಮೋಟಾರ ಉಪಯೋಗದ ಪೆಟ್ರೋಲ್ ಪೆಟ್ರೋಲ್ ಪಂಪ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಕನ್ನಡಿಯ ಸಾಮಾನುಗಳೂ ಸಿಗುವ ನಮೂನೆಯ ಸ್ಪೇಶನರಿ ಸಾಮಾನು ಕಾನೂ ಇದೇ! ಶಾಮಾನುಗಳನ್ನು ಇಲ್ಲಿ ತುಕೊಳ್ಳಿ !! ಎಲ್ಲಾ ಲೇಟೆಸ್ಟ-ಡೇಟ ಗಳೂ ಇಲ್ಲಿ ಸಿಗುತವೆ! ಎಲ್ಲಿ ಸಾಮಾನು ಕರೀದಿ ವ್ಯಾಪಾರಸ್ಥರು ಹೋಲ ಮಾಲ ತರೆ, ಕಮಿಶನು ಸಿಗುತ್ತೆ. ಒಮ್ಮೆ ಗಿರಾಕಿ ಪಡೆಯತಕ್ಕದ್ದು.

—

ರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನಡ)



ಏಜಂಟರು ಬೇಕು! ಏಜಂಟರು ಬೇಕು!

ನಮ್ಮಲ್ಲಿ
ಅತಿ ಮನೋಹರವಾದ
ಶೀಸಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनचीं रंगी-बेरंगी चादरें, फॅशनेबल बाथ टॉवेल, चौक, लहाने-मोठे पचे, सीडपाट, चौलपाट, शर्टिंग कोटींग-वगैरे मालाचा भरपूर पुरवठा नेहेमी असतो.

ऑर्डर द्या व खात्री करून घ्या!

टीप:-आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:- मेसर्स गोविंद माधव शेणवि, फोवकार अँड सन्स.
पोस्ट— सुंकेरि (कारवार.

Narayanacharya & CO.
kamba, BENARES CITY,

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಶಾಲ್ಯ ರ್ ಶಾಲು, ಧರ್ವಂದ ರುದ್ರಾಕ್ಷಿ, ಕಸ್ತೂರಿ, ಲಿಂಗಗಾಯ, ಸ್ಫಟಿಕಮಣಿ ಮೊದಲಾದ ವಸ್ತುಗಳು ಸಿಗುತ್ತವೆ ಕ್ಯಾಟಲಾಗು ಬರೆದವರಿಗೆ ಉಚಿತವಾಗಿ ಕಳಿಸಲಾಗುವದು.
-ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

anted:- Candidates elegraph and Station Masters s Full particulars and Railway Certificate on 2 annas stamp ly to.— Central Telegraph ege, Nai Sarak, **Delhi.**

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಸಟ್ಟು,
ದೊರಗಾದ ಹಾಗು ಜನುಗಾದ
ಉಕ್ಕಿನ ಹಾಗು ಹಿತ್ತಾಳಿಯ ಹಣಿಗಳೂ,
ಹತ್ತಿಯ ಹಾಗು ಜಿಜಗರುಗಳೂ,
ಶಂಕಿಯ ದೊಬಿನುಗಳೂ, ಮಾರ್ವೀಕುಗಳೂ,
ಎಮೆರಿಕಾ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.
ಬಹಳ ಅಗ್ಗ!

P. P. TRIVEDI & CO.,
BRUCE Street, Fort, BOMBAY

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿಯ. ಹೋಗಿ ಬಾಕವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರವಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಕೂಡಲೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ, ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಳ್ ಸಾಧ ಆಗುವದೂ, ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦—೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ೩ಜನ ಬಾಟಲಿಗಳ ಕಿಮ್ಮತು ೧೨—೦—೦ ಮತು ೧ ಬಾಟಲ ಪುಕ್ಕಟ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಫ್ರೋ. ನಿಪ್ಪಾಣಿ, ಜಿ. ಬೆಳಗಾಂವ

ಉಚಿತ] ನನ್ನ ಶಾಸ್ತ್ರೀಯವಾದ [ಉಚಿತ

ಶಾರೀರಿಕ ಶಿಕ್ಷಣ



ಈ ಪುಸ್ತಕದಲ್ಲಿ ನನ್ನ ಮತು ನನ್ನ ಶಿಷ್ಯರ ಅಂಗಸೌಷ್ಠವವನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಶಿಕ್ಷಣಹೊಂದಿದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಕಲು ೩ ಪೈಸೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯುಲರ
ಸರ್ವೀಸ್



ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ, ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತದೆ.
ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಿದೆ.
ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

M. Manjappa.
PROPRIETOR.

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ,

ಕಾಳಬಾದೇವಿ ರೋಡ,

ಮುಂಬಯಿ ನಂ. ೨.

ಮುಂಬಯಿಯಲ್ಲಿ ಸಿಗುವ ಸಮಸ್ತ ಪ್ರಕಾರದ, ಉತ್ತಮ ಸ್ಥಿತಿಯ ಸಾಮಾನುಗಳನ್ನು ಅಗ್ಗವಾಗಿ ತೋಕ ಖರೇದಿ ಮಾಡಿ ಕಳಿಸುತ್ತೇವೆ. ದಲಾಲಿ ಹೆಚ್ಚಿಗೆ ಕೊಳ್ಳುವದಿಲ್ಲ; ಖರೇದಿ ಚೌಕಸಿಯಿಂದಾಗುತದ, ಪೇಟೆಯಲ್ಲಿರುವ ಧಾರಣೆಗೇ ಆಕರಿಸಲ್ಪಡುತದೆ. ಗಿರಾಕಿಗಳಿಗೆ ಅನುಕೂಲವಾಗುವಂತೆಯೂ, ಲಾಭವಾಗುವಂತೆಯೂ, ಬೇಡಿಕೆ ಬಂದ ಕೂಡಲೆ ತತ್ಪರತೆಯಿಂದಲೂ, ಜಾಗ್ರತೆಯಿಂದಲೂ, ಕಳಿಸುವ ವ್ಯವಸ್ಥೆ ಮಾಡುತ್ತೇವೆ. ಹೆಚ್ಚಿನ ಮಾಹಿತಿಗೆ ಪತ್ರವ್ಯವಹಾರ ಮಾಡಿರಿ. ಉಚಿತವಾಗಿ ಸಿಗು

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್

ವೀರ್ಯನಾಶ ಶಿಥಿಲತೆ ವಗೈರೆಯಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶಮಾತ್ರ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆಸೋಕು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ಸಿದ್ಧವಾಗುವ ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಅ೨) ವನಸ್ಪತಿಗಳು ಮತು ಭಸ್ಮಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನಾನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೪೪ ತೊಲೆಯ ಒಂದು ಡಬ್ಬಿಗೆ ೫ ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ.

ವ್ಹಿ. ಪಿ. ಖರ್ಚ ಬೇರೆ, ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಭಯಂಕರ ವಿಚಿತ್ರ!

ಶ್ರಾವಣಕೋರಿನಲ್ಲಿ ಹೊಂಟರಗಾಳಿಯಿಂದ್ದು ೩೦-೩೦ ಅಡಿ ಎತ್ತರವಾದ ಜಲಸ್ತಂಭ ತಯಾರಾಗಿ ಅದು ಹಾರಾಡತೊಡಗಿತು. ಕೊನೆಗೆ ಒಂದು ಹೊಲದಲ್ಲಿ ನೆಟ್ಟಗೆ ನಿಂತುಕೊಂಡಿತು. ಅದರ ನಾಲ್ಕೂ ಬದಿಯಿಂದ ಜ್ವಾಲೆಗಳು ಹೊರಸೂಸುತ್ತಿದ್ದವು; ಭಯಂಕರವಾದ ಗರ್ಜನೆಯಾಗುತ್ತಿತ್ತು. ಜನರೆಲ್ಲರೂ ಗಾಬರಿಬಿದ್ದರು. ಅಲ್ಪಾವಕಾಶದಲ್ಲಿಯೇ ಅದು ಅದೃಶ್ಯವಾಯಿತು. ಕಡೆಗೆ ಹೋಗಿ ನೋಡಿದರೆ, ಆ ಹೊಲದಲ್ಲಿ ಬಾವಿಯಂತೆ ಒಂದು ದೊಡ್ಡ ತಗ್ಗು ಬಿದ್ದಿತ್ತು.

* * *

ಮುಂಬಯಿಯ ಹೈಕೋರ್ಟಿನಲ್ಲಿ ಒಂದು ವ್ಯಾಜ್ಯದ ಇತ್ಯರ್ಥವಾಗಿದೆ. ಪೆಸ್ಟನ್ ಹಾಗು ಎಲಿನ್ ಎಂಬ ದಂಪತಿಗಳಿದ್ದರು. ಎಲಿನಳು ಶ್ರೀಕೊಂಡರೆಂದು ಪತ್ರಕನು ಗ್ರಹಿಸಿ, ಪೇರ್ ಮರ್ಯಾದೆಯಿಂದ ಪತ್ರಕನು ತೀರಿಕೊಂಡ ಸುದ್ದಿಯಾದ್ದರಿಂದ ಎಲಿನಳು ಪರ್ಸಿ ಎಂಬುವನನ್ನು ಮದುವೆಯಾದಳು. ಪರ್ಸಿಗೂ ಎಲಿನಳಿಗೂ ಕೂಡಿಬರದೆ, ಎಲಿನಳು ಮಾಡಿದ ಘಟಸ್ಫೋಟದ ದಾವೆಯಲ್ಲಿ ಪರ್ಸಿಯು ತಿಂಗಳಿಗೆ ೧೦೦ ರೂಪಾಯಿ ಕೊಡಬೇಕೆಂದಾಯಿತು. ಪತ್ರಿಕನು ಜೀವಂತವಿದ್ದ ವರ್ತಮಾನ ಪರ್ಸಿಗೆ ದೊರಕಿ, ಈಗ ಗಂಡನ ಜೀವಂತವಿರುವಾಗ ಆದ ಮದುವೆಯನ್ನು ರದ್ದುಪಡಿಸುವದಕ್ಕಾಗಿ ಪರ್ಸಿಯು ಹೈಕೋರ್ಟಿನಲ್ಲಿ ದಾವೆ ಮಾಡಿದ್ದನು. ಪರ್ಸಿ-ಎಲಿನ ದಂಪತಿಗಳಿಗೆ ಒಬ್ಬ ಹುಡುಗ ಹುಟ್ಟಿದ್ದಾನೆ. ಮದುವೆಯು ಬೇಕಾಯಿದೇಶೀರ ಆದರೆ ಹುಡುಗನಿಗೆ ಗತಿಯೇನು! ಮದುವೆಯೇನೋ ಬೇಕಾಯಿದೇಶೀರ ಆಯಿತು. ಆದರೆ ಹುಡುಗನಿಗೆ ಜೀವನಾಂಶದ ಬಗ್ಗೆ ತಿಂಗಳಿಗೆ ೫೦ ರೂ. ಕೊಡಬೇಕೆಂದು ನ್ಯಾಯಮೂರ್ತಿಗಳು ವಿಧಿಸಿದರು.

* * *

ಅಮೇರಿಕೆಯೊಳಗಣ ಡಾಲಸ್ ರೇ ಎಂಬವರು ತಮ್ಮ ಮಲತಾಯಿಯನ್ನು ಮದುವೆ ಮಾಡಿಕೊಂಡಿರುತ್ತಾರೆ. ಮಲತಾಯಿಯ ಪ್ರಾಯ ೪೮ ವರುಷ; ಮಲಮಗನ ಪ್ರಾಯ ೩೦ ವರುಷ. ಇದೇ ಹತ್ತು ವರುಷಗಳಲ್ಲಿ ಮಲತಾಯಿ-ಮಗಂದಿರು ದಂಪತಿಗಳಾಗಿ ಪರಿಣಮಿಸಿದ್ದಾರೆ. ಇವರಲ್ಲಿ ಹುಟ್ಟಿದ ಹುಡುಗರಿಗೆ ಪರಸ್ಪರ ಸಂಬಂಧ ಹೇಳುವದು ಬಲು ಪ್ರಯಾಸ.

* * *

ಹೊಸಪೇಟೆ ... ಸಮಾರಂಭದಲ್ಲಿ ರಾಷ್ಟ್ರ... ಹೇಬ ಕೆತ್ತಾಬಾ ದೊರೆಕ ಲಕ್ಷ್ಮೀನಾರಾಯಣ ... ದೇಶಾಯಿ ... ಶ್ರೀ ... ಶಿಕ್ಷೆಯನ್ನು ವಿಧಿಸಿದ್ದಾರೆ.

ಜಾಲ್ನೂರಿನ ಮಸಿ ಫಕೀರ ಎಂಬುವರು ಬರಗಾಲದ ಮೂಲಕ ಉಪವಾಸದಲ್ಲಿದ್ದು ಗತಿಯಿಲ್ಲದೆ ಗ್ರಾಮದ ಅಲ್ಲಿ ಎಂಬ ಹುಡುಗನನ್ನು ಕಸಾಯಿ ... ಎಂಬ ಇಸ್ಲಾಮರಿಗೆ ೧೦ ರೂಪಾಯಿಗೆ ಮಾರಿ ಕೊಟ್ಟನು. ದಸ್ತೈವಜು ಆಯಿತು; ರಿಜಿಸ್ಟ್ರಿಯ ಬಗ್ಗೆ ಸಬ್‌ರಿಜಿಸ್ಟ್ರಾರರ ಕಛೇರಿಯಲ್ಲಿ ಹಾಜರಾಗಲು, ಸಬ್ ರಿಜಿಸ್ಟ್ರಾರರು ಆ ದಸ್ತೈವಜನ್ನು ಚೌಕಶಿಯ ಬಳಿಕ ಪರಿಷ್ಕಾರ ಕಡೆ ಕಳುಹಿದ್ದಾರೆ. ಸಬ್‌ಸೇ ಜಾದಾ ಮಸ್ಕರಾ! ಇದರೊಳಗೆ ವಿಚಿತ್ರವೇನಿದೆ? ಗುಲಾಮರ ವ್ಯಾಪಾರವನ್ನು ನಿರ್ಮೂಲನಗೊಳಿಸಿದ ಬ್ರಿಟಿಶ ರಾಜ್ಯದಲ್ಲಿ ಕಾನೂನಿನ ಕ್ರಯ-ವಿಕ್ರಯಗಳ ವ್ಯಾಪಾರವು ನಡೆಯುವದು ವಿಚಿತ್ರವಲ್ಲವೇ? ಅಸ್ಪೃಶ್ಯತೆಯ ಮೂಲಕ ಇಂಥ ವ್ಯಾಪಾರ ನಡೆಯುವದು ಮಾತ್ರ ವಿಚಿತ್ರವು!!

* * *

ಬದ್ರೀನಾಥ ಕ್ಷೇತ್ರದಲ್ಲಿ ಈಗ ಯಾತ್ರೆಗೆ ಬ್ರಾಹ್ಮಣ ಸಾಧುಗಳ ಭಕ್ತಿಯ ಗದ್ದಲ. ಸಾಧುಗಳೆಲ್ಲರು ದೇವಾಲಯದಲ್ಲಿ ದೇವ ಪೂಜಾ ವಿಧಿಗಳಲ್ಲಿ ಆತಂಕ ಕಲ್ಪಿಸಿದ ಬಗ್ಗೆ ಎರಡು ಪಂಗಡಗಳ ತನಕ ಇತ್ತಂಡಗಳಾಗಿ ದೊಡ್ಡ ಗೊಂದಲವಾಯಿತು. ಅಂಗಡಿಯೊಳಗಿಂದ ಸಾಮಾನವು ಕೊಳ್ಳೆಗೆಯಾಯಿತು. ... ಸಾಧುಗಳಿಗೆ ಸೆರೆಹಿಡಿದಿದ್ದಾರೆ. ದೇವಭಕ್ತಿಯಿಂದ ಪ್ರೇರಿತರಾದ ಸಾಧು ಪುರುಷರು ದೇವತಾ ಸಾನ್ನಿಧ್ಯದಲ್ಲಿ ಬಡಿದಾಡುವದು ವಿಚಿತ್ರ ಸಂಗತಿ! ವಿಚಿತ್ರವೇನಿದೆ? ನಿಗ್ರಹ ಮಾಡದೆ ಇಂದ್ರಿಯಗಳಿಗೆ ಅಧೀನವಾದರೆ, ಆಗುವ ಅವಸ್ಥೆಯು ಇದು! ಅಂಗಡಿಯ ಲೂಟಿ ನಡೆಯುತ್ತಿರುವಾಗ ಬದರೀನಾರಾಯಣನು ತಪ್ಪಿಸಿ ಉಳಿಸದ್ದೆಂದು ... ವಿಚಿತ್ರವಲ್ಲವೇ!

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಅದರ. ಕೆಲವು ಸ್ತ್ರೀಯರು ಅನಾವಶ್ಯಕವಾಗಿ ತಮ್ಮ ಕೂದಲುಗಳನ್ನು ಉಲ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿದ್ದರೆ, ನೀವು ದಿನಾ ಅವುಗಳ ರಕ್ಷಣೆ ಮಾಡಬೇಕು. ಕೂದಲುಗಳನ್ನು ಉಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ ... ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಇದರಿಂದ ಕೂದಲಿ ತಲೆಯ ಹೊಟ್ಟು ಹೋಗುತ್ತದೆ: ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೆ ಬರೆದು ತರಿಸಿಕೊಳ್ಳಿ

ಬಾಟ್ಲಿಗೆ ಕ್ರಯ ರೂ.	೧—೦—೦
ಅಂಚೆವೆಚ್ಚ	೦—೬—೦
೩ ಬಾಟಲಿಗಳಿಗೆ „	೨—೧೦—೦
ಅಂಚೆವೆಚ್ಚ	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೩ ಔನ್ಸಿಗೆ ರೂ.	೩—೦—೦
೧ ಔನ್ಸಿಗೆ „	೧—೪—೦
ಡ್ರಾಮಿಗೆ „	೦—೬—೦
ಅಂಚೆವೆಚ್ಚ „	೦—೬—೦

ಒಟ್ಟೋ-ದಿಲ್-ಬಹಾರ ಕೇಳಲಿಕ್ಕೆ ಮರೆಯಬೇಡಿರಿ!

"ಸುವಾಸನೆಯೆಲ್ಲಾ ಒಂದೇ ಬಾಟ್ಲಿಯಲ್ಲಿ"

ನಾನಾ ಸುಗಂಧದ್ರವ್ಯಗಳಿಂದ ಸಂಪಾದಿಸಬಹುದಾದ ಪುಷ್ಪ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್‌ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದ್ದರಿಂದ ಹೂವಿನ ಸಹಜ ಪರಿಮಳವು ಸಿಗುವದು ... ಒಟ್ಟೋ ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮುಖ್ಯ ಕಾರಣ ...

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಕಲಬುರ್ಗೆಯ ಸಾಹಿತ್ಯ ಸಮ್ಮೇಲನ.

ಕರ್ನಾಟಕ ಸಾಹಿತ್ಯ ಸಮ್ಮೇಲನದ ಕಲಬುರ್ಗೆಯ ಅಧಿವೇಶನವು ಕಲಬುರ್ಗೆಯಲ್ಲಿ ಕಳೆದ ಜೂನ ತಾ. ೧೦-೧೧-೧೨ನೇಗೆ ಬಲು ವಿಜೃಂಭಣೆಯಿಂದ ನೆರವೇರಿತು. ಕಲಬುರ್ಗೆಯೊಳಗಣ ಕನ್ನಡಾಭಿಮಾನಿಗಳ ಜೊತೆಗೆ ಮರಾಠಿಗರೂ ಸಮ್ಮೇಲನಕ್ಕಾಗಿ ಉತ್ಸಾಹದಿಂದ ದುಡಿದು [illegible] ಒಂದು ಸಂತೋಷದ ಮಾತು. ನೂತನ [illegible] ವಿದ್ಯಾಲಯದಲ್ಲಿ ಪ್ರತಿನಿಧಿಗಳ ಉಳಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಧಾರವಾಡ, ಬಿಜಾಪುರ, ಮೈಸೂರು, ಬೆಂಗಳೂರ ಮುಂತಾದ ಸ್ಥಳಗಳಿಂದ ಪ್ರತಿನಿಧಿಗಳು ಸಮ್ಮೇಲನಕ್ಕೆ ಹೋಗಿದ್ದರು. ಅಧಿವೇಶನದ ಸಲುವು ನೂತನ ಮರಾಠಿ ವಿದ್ಯಾಲಯದಿಂದ ೧ ಮೈಲಿನ ಮೇಲಿತ್ತು. ಅಧ್ಯಕ್ಷರಾದ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ [illegible] ಅವರ ಕನ್ನಡ ಭಾಷಾ ಲಾಲಿತ್ಯವೆಲ್ಲ [illegible] ಅಧ್ಯಕ್ಷಸ್ಥಾನದ ಭಾಷಣವನ್ನು ಅವರು ಕಲಬುರ್ಗೆಗೆ ಹೋಗುವ [illegible] ಅವರಿಂದ ಭಾಷಣವನ್ನು [illegible] ಅನುಕೂಲವಾಗಲಿಲ್ಲ.

ಸ್ವಾಗತಾಧ್ಯಕ್ಷರ ಭಾಷಣ.

ಕರ್ನಾಟಕ ಪ್ರಾರ್ಥನೆ(?) ಸಮ್ಮೇಲನವು ನಡೆಯಿತು. ಸ್ವಾಗತಾಧ್ಯಕ್ಷರಾದ ಶ್ರೀ [illegible] ಶರಣಬಸಪ್ಪನವರ ಕರ್ನಾಟಕದ ಪ್ರದೇಶದ ಇತಿಹಾಸವನ್ನು ಒಪ್ಪಿಸಿ, ನಿಜಾಮ ಕರ್ನಾಟಕದ ವಿಶೇಷ ಮಹಿಮೆಯನ್ನು ನಿವೇದಿಸಿದರು. ನಿಜಾಮ ಕರ್ನಾಟಕವು ಕರ್ನಾಟಕದ ಇತಿಹಾಸದ ತವರುಮನೆ. ರಾಷ್ಟ್ರಕೂಟರ ಮಳಖೇಡ ಹಾಗು ಕಲ್ಯಾಣದ ಚಾಲುಕ್ಯರ ರಾಜ್ಯಗಳು ಅವ್ಯಾಹತವಾಗಿ ನಡೆದದ್ದು ಈ ಪ್ರದೇಶದಲ್ಲಿಯೇ. ಮುಂದೆ ಕೆಲ ಭಾಗವು ದೇವಗಿರಿಯ ಯಾದವರ ರಾಜ್ಯಕ್ಕೆ ಸೇರಿತು. ಕೆಲ ಭಾಗವು ವರಂಗಲ್ಲದ ಕಾಕತೀಯರ ವಶವಾಯಿತು. ಯಾದಗಿರಿಯ ಕಿಲ್ಲೆಯು ದೇವಗಿರಿಯ ಯಾದವರು ಕಟ್ಟಿಸಿದ್ದು. ರಾಯಚೂರ ಕೋಟೆಯನ್ನು ೧೩ನೇ ಶತಮಾನದಲ್ಲಿ ವರಂಗಲ್ಲ ರಾಜನ ದಂಡನಾಯಕನು ಕಟ್ಟಿಸಿದ ಬಗ್ಗೆ ಶಿಲಾಶಾಸನವಿದೆ. ಕಲಬುರ್ಗೆಯ ಕೋಟೆಯನ್ನು ಇನ್ನೊಬ್ಬ ಪಾಳೆಯಗಾರನು(?) ಕಟ್ಟಿಸಿದನು. ಮುಸಲ್ಮಾನರ ದಾಳಿಗೆ ತಡೆ ಹಾಕಿ ಜನರಲ್ಲಿ ಸ್ವಾತಂತ್ರ್ಯವನ್ನು ಉಳಿಸಿದ ಆನೆಗುಂದಿಯ ರಾಜ್ಯವು ನಮ್ಮ ಸೀಮೆಗೆ ಹತ್ತಿದ್ದು; ಬಾಮಿನಿ ರಾಜ್ಯವಾದರೂ ಇದೇ ಕಲಬುರ್ಗೆಯಲ್ಲಿದ್ದಿತು. ಹೀಗೆಯೇ ಇಲ್ಲಿಯ ಹಾಡಾಗಿದೆ. ಬಾಮಿನಿ ರಾಜ್ಯವು ಮುರಿದ ತರುವಾಯ ಕಲಬುರ್ಗೆಯ ಪ್ರದೇಶವು ಬಿಜಾಪುರದ ಆದಿಲಶಾಹಿಯವರ ವಶವಾಯಿತು; ಬೇದರದ ರಾಜ್ಯವು ಬರೀದಶಾಹಿಗೆ ಒಳಪಟ್ಟಿತು; ದಕ್ಷಿಣದ ರಾಜ್ಯವು ವಿಜಯನಗರದ ಆಡಳಿತೆಯಲ್ಲಿತ್ತು. ತಾಳೀಕೋಟೆಯ ಕಾಳಗದ ತರುವಾಯ ಎಲ್ಲ ಪ್ರಾಂತವು ವಿಜಾಪುರದ ಅಧೀನವಾಯಿತು. ಮುಂದೆ ಔರಂಗಜೇಬನು ಇಲ್ಲಿ ಮೋಗಲ ರಾಜ್ಯವನ್ನು ಸ್ಥಾಪಿಸಿದನು. ಔರಂಗಜೇಬನ ಮುಖ್ಯ ಸರದಾರನಾದ ದಿಲೇರ ಖಾನನನ್ನು ಸೋಲಿಸಿ ಓಡಿಸಿ ವಿಜಾಪುರವನ್ನು ಕಾಪಾಡಲು ಹೆಣಗಾಡಿದ ಪಾಮನಾಯಕನೂ, ವಿಜಾಪುರದ ರಾಜ್ಯವು ಅಳಿದ ನಂತರ ಔರಂಗಜೇಬನ ಹೊಡೆತದಿಂದ ತಪ್ಪಿಸಿಕೊಳ್ಳುತ್ತಿದ್ದ ಮರಾಠಿಗರಿಗೆ ಆಶ್ರಯ ಕೊಟ್ಟು, ದಿಲ್ಲಿ ಸಾಮ್ರಾಜ್ಯಕ್ಕೆ ೪ ತಿಂಗಳ ವರೆಗೆ ವಾಗಿನಗೇರಿ ಕೋಟೆಯಲ್ಲಿ ಕಾದಾಡಿದ ವೀರ ಪಿತ್ತನಾಯಕನೂ ಇಲ್ಲಿಯೇ ಆಗಿಹೋದನು. ಪಾಮನಾಯಕನೂ, ಪಿತ್ತನಾಯಕನೂ ತಂದೆ-ಮಕ್ಕಳು. ಈ ಪಿತ್ತನಾಯಕನೇ . ನಿರ್ಮಿಸಿದನು. ಸುರಪುರ ಸಂಸ್ಥಾನವು ೧೮೫೮ ನೇ ಇಸ್ವಿಯ ವರೆಗೆ ಬಾಳಿತು. ಎಡೆಬಿಡದೆ ೧೦೦೦ ವರುಷಗಳ ರಾಜಕೀಯ ವಿಷಯದ ಕೇಂದ್ರಸ್ಥಾನವು ನಿಜಾಮ ಕರ್ನಾಟಕವು. ಸಂಸ್ಕೃತಿಯ ದೃಷ್ಟಿಯಿಂದ ನೋಡಿದರೂ, ಈ ನಾಡಿನ ಇತಿಹಾಸವು ಪ್ರಚಂಡವಿದೆ. ಶ್ರೀಮದಾನಂದತೀರ್ಥರಿಂದ ರಚಿ[illegible]ವ ಗ್ರಂಥಗಳಿಗೆಲ್ಲ "ನ್ಯಾಯಸುಧಾ" ಮುಂತಾದ ಜಗತ್ತಿಗೆ ಬೆರಗು ಮಾಡುವಂಥ ಟೀಕಾರೂಪ ವೇದಾಂತ ಗ್ರಂಥಗಳನ್ನು ಬರೆದ ಜಯತೀರ್ಥ ಭಿಕ್ಷುವಿನ ಸ್ಥಳವಿದು ! ನಾಲ್ಕು ಓಡಿಯಲ್ಲಿ ಆ ಕಾಲಕ್ಕೆ ಅರಾಜಕತೆಯಿತ್ತು. ಜಯತೀರ್ಥರು ಮಳಗೋಳ ಗುಹೆಯಲ್ಲಿ ಆಸನಸ್ಥರಾಗಿ ಈ ಗ್ರಂಥವನ್ನು ಬರೆದು 'ಟೀಕಾಚಾರ್ಯ'ರೆಂದು ಬಿರುದು ಪಡೆದರು. ಅದ್ವೈತರಿಗೆ ಶ್ರೇಷ್ಠರಾದ ವಿದ್ಯಾರಣ್ಯರು ಈ ನಾಡಿನ ಮಳಖೇಡದಲ್ಲಿಯೇ ಹುಟ್ಟಿದರು. ಹಾಗೆಯೇ ವಿಶಿಷ್ಟಾದ್ವೈತರಿಗೆ ಪೂಜ್ಯರಾದ ನಿಗಮಾಂತದೇಶಿಕರೂ ಇಲ್ಲಿಯೇ ಹುಟ್ಟಿದರು. ಆಸೇತುಹಿಮಾಚಲದ ವರೆಗೆ ಹಿಂದುಗಳಿಗೆ ವ್ಯವಹಾರ ಹೇಳುವ ಮಿತಾಕ್ಷರಕರ್ತನಾದ ವಿಜ್ಞಾನೇಶ್ವರನು ಇದೇ ನಾಡಿನವನು. ನಿಗಮಾಂತದೇಶಿಕರ ತರುವಾಯ ಶ್ರೀನಿವಾಸಾಚಾರ್ಯರು ಹುಟ್ಟಿದರು. ತತ್ವಮಾರ್ತಾಂಡ ಮುಂತಾದ ವೇದಾಂತ ಗ್ರಂಥಗಳನ್ನೂ, ವಿವರಣ ಮೊದಲಾದ ವ್ಯಾಕರಣ ಗ್ರಂಥಗಳನ್ನೂ, ಧರ್ಮರತ್ನ ಮೊದಲಾದ ಧರ್ಮಶಾಸ್ತ್ರ ಗ್ರಂಥಗಳನ್ನೂ, ನಾಟಕಾಲಂಕಾರಗಳನ್ನೂ ಈ ಶ್ರೀನಿವಾಸಾಚಾರ್ಯರೇ ಬರೆದರು. ಇವರು ಸುರಪುರ ಸಂಸ್ಥಾನಾಧಿಪತಿಗಳಾದ ೩ನೇ ಪಾಮನಾಯಕನ ಕುಲಗುರುಗಳು. ಇವರ ತಮ್ಮನ ಮಗನಾದ ಕಿರೀಟಿ ವೆಂಕಟಾಚಾರ್ಯರು ಸರ್ವತಂತ್ರಸ್ವತಂತ್ರ ಕವಿ ತಾರ್ಕಿಕಾಲಂಕಾರ, ಚಕ್ರವರ್ತಿ ಮುಂತಾದ ಬಿರುದಾಂಕಿತನಾಗಿ ಝುಂಝುಮಾರುತವೆಂಬ ಗದಾಧರಿಯ ಖಂಡನವನ್ನು ಮಾಡಿದ್ದಲ್ಲದೆ, ಅನೇಕ ವೇದಾಂತ ಗ್ರಂಥಗಳನ್ನು ಬರೆದು ಸುರಪುರದಲ್ಲಿ ಕೀರ್ತಿಶಾಲಿನಾಗಿದ್ದನು. ಕನ್ನಡ ಭಾಷೆಯು ಇಲ್ಲಿ ಬಹಳ ಉಚ್ಚಾವಸ್ಥೆಯಲ್ಲಿತ್ತು. ರಾಷ್ಟ್ರಕೂಟರ ಚಾಲುಕ್ಯರ ಕಾಲದಲ್ಲಿ ಕರ್ನಾಟಕ ವಾಙ್ಮಯವು ಉತ್ಕೃಷ್ಟ ಸ್ಥಿತಿಗೆ ಏರಿತ್ತು. ಕವಿರಾಜಮಾರ್ಗವೆಂಬ ಕನ್ನಡ ಸಾಹಿತ್ಯ ಗ್ರಂಥವನ್ನು ಬರೆದ ನೃಪತುಂಗ ಸಮ್ರಾಟನೂ, ವೀರಶೈವ ಮತಪ್ರವರ್ತಕರಾದ ಆಳಂದಿ ಗ್ರಾಮದ ಏಕಾಂತಯ್ಯ, ಬಸವೇಶ್ವರ, ಚನ್ನಬಸವ ಮುಂತಾದ ವಚನಕಾರರಾದ ಸಾಧುವರ್ಯರೂ, ಕರ್ನಾಟಕ ಕವಿಚೂತವನಚೈತ್ರ ಬಿರುದಾಂಕಿತನಾಗಿ ಕನ್ನಡ ಜೈಮಿನಿ ಭಾರತವನ್ನು ಬರೆದು ಕನ್ನಡ ನುಡಿಗೆ ಭರಣವನ್ನು ಹಾಕಿದ(?) ಸುರಪುರ ತಾಲೂಕಿನ ದೇವಪುರ ಗ್ರಾಮದ ಪ್ರತಿಭಾಸಂಪನ್ನ ಕವಿಯಾದ ಲಕ್ಷ್ಮೀಶನೂ, ಸಂಸ್ಕೃತ ಭಾಷೆಯ ರತ್ನಭಾಂಡಾರದಲ್ಲಿ ಬೀಗಮುದ್ರೆಯಾಗಿ ಬಿದ್ದಂಥ ವೇದಾಂತ ಭಕ್ತಿ ನೀತಿಯ ಸಾರಸರ್ವಸ್ವವಸುಧೆಯನ್ನು ಜನಸಾಮಾನ್ಯಕ್ಕೆ ತೂರೆ ಮಾಡಲು ತಿಳಿಗನ್ನಡ ಭಾಷೆಯದ್ವಾರಾ ಜ್ಞಾನೋಪದೇಶವನ್ನು ಮಾಡಿ ಕನ್ನಡದ ಬಗ್ಗೆ ಆದರವನ್ನುಂಟುಮಾಡಿದ ದಾಸಕೂಟದ ವಿಜಯವಿಠ್ಠಲ, ಜಗನ್ನಾಥಾಚಾರ್ಯ, ಗೋಪಾಲ ವಿಠ್ಠಲ ಪ್ರಭೃತಿ ಭಗವದ್ಭಕ್ತ ಶಿರೋಮಣಿಗಳೂ ಇಲ್ಲಿಯೇ ಉದಯಿಸಿದರು.

ಪೂರ್ವಸ್ಥಿತಿಯು ಈಗ ತೋರುವದಿಲ್ಲ. ಕನ್ನಡ ನುಡಿಯ ಪ್ರಾಬಲ್ಯವು ಈಗ ಬಹಳ ಕುಂದಿ(?) ಹೋಗಿದೆ. ಪ್ರಾಚೀನ ಇತಿಹಾಸವನ್ನು ವಿವೇಚಿಸುವದು ಪ್ರಕೃತಕ್ಕೆ ಅವಶ್ಯವಿಲ್ಲ. ಸದ್ಯಸ್ಥಿತಿಯನ್ನಷ್ಟು ನಿವೇದಿಸಿ ತಮ್ಮ ಭಾಷಣವನ್ನು ಮುಗಿಸುತ್ತೇನೆಂದಾಗಿ ಶ್ರೀ॥ ಶರಣಬಸಪ್ಪನವರು ನುಡಿದು, ಈಗಿನ ಸ್ಥಿತಿಯನ್ನು ವಿಚಾರಿಸಿದರು. ಕನ್ನಡ ನುಡಿಯು ಮರಾಠಿ, ಉರ್ದು ಭಾಷೆ ಮುಂತಾದವುಗಳ ಇರಕಿನಲ್ಲಿ ಸಿಲುಕಿಕೊಂಡಿದೆ. ದರಬಾರದಲ್ಲಿಯೂ, ವ್ಯವಹಾರದಲ್ಲಿಯೂ ಇದಕ್ಕೆ ಇಂಬಿಲ್ಲ. ಈಗ ಮನೆಮಾರುಗಳಲ್ಲಿ ಷ್ಟು ಜೀವ ಕೊಂಡಿದೆ. ಶಾಲೆಯಲ್ಲಿ ಮರಾಠಿ, ಉರ್ದು, ಇಂಗ್ಲಿಷ ಭಾಷೆಗಳಿಷ್ಟು ಕಲಿಸೋಣಾಗುತ್ತವೆ. ಹಳ್ಳಿಯ ವ್ಯವಹಾರದ ಲೆಕ್ಕಪತ್ರಗಳೆಲ್ಲ ಮರಾಠಿಯಲ್ಲಿ ನಡೆಯುತ್ತದೆ. ಕಚೇರಿಗಳಲ್ಲಿ ಉರ್ದು ಭಾಷೆ. ಈಪ್ರಕಾರ ಕಲಬುರ್ಗೆ, ಬೀದರ ಕೋಟೆಯ ಸುಮಾರು ೯ ಲಕ್ಷ ಕನ್ನಡಿಗರಿಗೆ ಕನ್ನಡ ಅಕ್ಷರಾಭ್ಯಾಸವು ಕೂಡ ಸಿಗುವದು ದುರ್ಲಭವಾಗಿದೆ. ಅತ್ಯುಜ್ವಲವಾದ ಸ್ವಭಾಷೆ ಹಾಗು ಅದರ ಪರಂಪರೆ ಇವುಗಳನ್ನು ಪುನರುದ್ಧರಿಸಲು ಅವುಗಳ ಸ್ಮೃತಿ-ಪರಿಚಯ-ಪರಿಜ್ಞಾನರೂಪಿಯಾದ ದೀಪವನ್ನು ಏಕಪ್ರಕಾರವಾಗಿ ಕಳೆಗುಂದದಂತೆ ಬೆಳಗಿಸುತ್ತ ಇಟ್ಟರೆ, ಕನ್ನಡ ನುಡಿಯು ತಲೆಯನ್ನೆತ್ತುವದು. ಉತ್ತರಕ್ಕೆ ಗೋದಾವರಿಯಿಂದ ಸಾತಾರೆ, ಪುಣೆ, ಕೊಂಕಣ ಮುಂತಾದ ಮಹಾರಾಷ್ಟ್ರದ ತಿರುಳುನಾಡಿವರೆಗೆ ಹಬ್ಬಿದ ಕರ್ನಾಟಕವು ಈ ದುರವಸ್ಥೆಗೀಡಾಗಿದ್ದು ಕಾಲಚಕ್ರದ ವಿಚಿತ್ರ ಗತಿಯು. ಆದರೂ, ಅದನ್ನು ಉದ್ಧರಿಸಲು ವಿಶ್ವಪ್ರಯತ್ನಗಳಿಂದ ಕನ್ನಡಿಗರು ಪ್ರಯತ್ನಿಸಬೇಕು. ಎಲ್ಲ ಕನ್ನಡಿಗರೂ ಸಹಕಾರ್ಯ-ಸಂಘಟನಗಳನ್ನು ಬೆಳಸತಕ್ಕದ್ದು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಪರವಾಗಿ ವಾಗ್ಮಿಗಳಾದ ಸಾಹಿತ್ಯಭಕ್ತರು ಇತ್ತ ಕಡೆ ಬಂದು ಕನ್ನಡ ವಾಙ್ಮಯ-ಇತಿಹಾಸಗಳ ಉಪನ್ಯಾಸ ಕೊಡಬಹುದು. ಕನ್ನಡ ಕೀರ್ತನ, ದಾಸರ ಪದ, ಸಂಗೀತ ನಾಟಕ, ಕನ್ನಡ ಪತ್ರಿಕೆಗಳ ಪ್ರಚಾರ, ನಿಜಾಮ ಕರ್ನಾಟಕದ ಇತಿಹಾಸ ಸಂಶೋಧನ ಕನ್ನಡ ಪ್ರಾಥಮಿಕ ಶಾಲೆಗಳ ಪ್ರಚಾರ ಮುಂತಾದವುಗಳನ್ನು ಪುರಸ್ಕರಿಸಬಹುದು. ಇಲ್ಲಿ ಈಗ "ಕರ್ನಾಟಕ ಸಂಘ"ವೊಂದು ಸ್ಥಾಪಿತವಾಗಿದೆ. ಹಾಗು "ಸರಸ್ವತೀ ವಿಲಾಸ"ವೆಂಬ ಮುದ್ರಣಾಲಯವು ಸ್ಥಾಪನೆ ಹೊಂದಿದೆ ಇತ್ಯಾದಿ ಹೇಳಿ, ಸ್ವಾಗತಾಧ್ಯಕ್ಷರಾದ ಶ್ರೀ॥ ದೊಡ್ಡಪ್ಪ ಅಪ್ಪಾ ಉರ್ಫ ಶ್ರೀ ಸಾಧು ಶರಣಬಸಪ್ಪನವರು ತಮ್ಮ ಸ್ವಾಗತಪರ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರ ಭಾಷಣ.

ಆ ಮೇಲೆ ಶ್ರೀ॥ ಕೃಷ್ಣರಾವ ಕವಟಗಾರ(?) ಇವರ ಸೂಚನೆಯಂತೆ ಶ್ರೀ॥ ಬಿ. ಎಂ. ಶ್ರೀಕಂಠಯ್ಯ ಎಂ. ಏ., ಬಿ. ಎಲ್., ಇವರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಶ್ರೀಕಂಠಯ್ಯನವರು ಮೈಸೂರು ವಿದ್ಯಾಪೀಠದ ರಿಜಿಸ್ಟ್ರಾರರಿದ್ದಾರೆ. ಹಳೆ ವಿದ್ವಾಂಸರು; ಸಾಹಿತ್ಯಭಕ್ತರು "ವಿದ್ಯಾ ವಿನಯೇನ ಶೋಭತೇ" ಎಂಬಂತೆ ವಿದ್ಯಾ-

ಸಿವಯುಗಳಿಂದ ಕಂಗೊಳಿಸಿತು. ಕನ್ನಡ ಸಾಹಿತ್ಯಕ್ಕೆ ಉದ್ಧಾರದ ಹೊಸ ಮಾರ್ಗವನ್ನು ನಿರ್ದೇಶ ಮಾಡುವ ನವಯುವಕರ ಗುಂಪನ್ನು ಇವರು ಘಟಿಸಿದ್ದಾರೆ. ಇಂಥ ಸರ್ವಾಂಗಸುಂದರರಾದ ಶ್ರೀ॥ ಶ್ರೀಕಂಠಯ್ಯನವರ ಭಾಷಣವು ಬಲು ಚಿತ್ತವೇಧಕವಾಯಿತು. ಅಧ್ಯಕ್ಷರು ಭಾಷಣವನ್ನೋದುವಾಗ ಎಲ್ಲರೂ ಚಿತ್ರಾರ್ಪಿತರಾದಂತೆ ತನ್ಮಯರಾಗಿ ಕೇಳುತ್ತಿದ್ದರು. ಕನ್ನಡದೊಳಗಿನ ಗುಣಸಮುಚ್ಚಯಗಳು ಈ ಭಾಷಣದಲ್ಲಿ ತುಂಬಿತುಳುಕುತ್ತಿದ್ದವು. ಸೌಲಭ್ಯ, ಮಾಧುರ್ಯ, ಪ್ರಸಾದ ಗುಣಗಳು ಕನ್ನಡ ಭಾಷೆಯಲ್ಲಿ ಇಲ್ಲವೆಂದು ಹೇಳುವವರಿಗೆ ಶ್ರೀಕಂಠಯ್ಯನವರು ಒಳ್ಳೇ ಉತ್ತರ ಕೊಟ್ಟಿದ್ದರು. ಭಾಷಣವು ಗದ್ಯವು, ಆದರೆ ಪದ್ಯದ ಸೌಂದರ್ಯವು ಆ ಭಾಷಣದಲ್ಲಿ ಕಂಗೊಳಿಸುತ್ತಿತ್ತು. ಆದ್ದಾಗಿ ಪದ್ಯದಂತೆ ಇದು ಗ್ರಹಣಶಕ್ತಿಗೆ ಭಾರಿಯಾಗಿರಲಿಲ್ಲ. ಮಾನವನ ಹೃದಯದಲ್ಲಿ ಉಂಟಾಗುವ ಸ್ಥೂಲ-ಸೂಕ್ಷ್ಮ ಭಾವನೆಗಳನ್ನು ಪರಿಶುದ್ಧವಾಗಿಯೂ, ವಾಸ್ತವವಾಗಿಯೂ, ಲಾಲಿತ್ಯದಿಂದಲೂ ವ್ಯಕ್ತಪಡಿಸಲು ಕನ್ನಡ ನುಡಿಗೆ ಸಾಮರ್ಥ್ಯವಿರುವದೆಂದು ಅಧ್ಯಕ್ಷರು ತಮ್ಮ ಭಾಷಣದ ದ್ವಾರಾ ಸ್ಪಷ್ಟಗೊಳಿಸಿದರು. ಕನ್ನಡ ಪ್ರಾಚೀನ ಸಾಹಿತ್ಯ ಪ್ರಪಂಚದ ಪರಿಚಯವನ್ನಷ್ಟೇ ಕನ್ನಡಿಗರು ಮಾಡಿಕೊಂಡರೆ, ಸಾಲದು. ಈಗಿನ ಕಾಲಕ್ಕುಚಿತವಾಗಿ ಇಂಗ್ಲೀಷ-ಸಂಸ್ಕೃತ ಮುಂತಾದ ಸಾಹಿತ್ಯ ಪ್ರಪಂಚದ ವ್ಯಾಸಂಗ ಬೆಳಿಸಿ ನೂತನ ಮಾರ್ಗದಿಂದ ಕನ್ನಡ ಸಾಹಿತ್ಯವನ್ನು ಇತಃ ಇತಃ ಎಂದು ಕರಕೊಂಡು ಹೋಗತಕ್ಕದ್ದಾಗಿ ಬಲು ಚಿತ್ತವೇಧಕವಾಗಿಯೂ, ಸತ್ಯಪ್ರಮಾಣವಾಗಿಯೂ, ಮನವೊಲಿಕೆಯಾಗುವಂತೆಯೂ ತಿಳಿಸಿಹೇಳಿದರು. ಮಾನವಹೃದಯದೊಳಗೆ ದೇಶಕಾಲಕ್ಕುಚಿತವಾಗಿ ಎದ್ದೇಳುವ ಭಾವನೆಗಳನ್ನು ವ್ಯಕ್ತಪಡಿಸುವದಕ್ಕಾಗಿ ಸಾಹಿತ್ಯ ಭಕ್ತರು ನೂತನ ಸಂಸ್ಕಾರಗಳನ್ನು ಪಡಕೊಂಡರೆ, ಕನ್ನಡ ಸಾಹಿತ್ಯ ಸೇವೆಯು ವಿಶೇಷ ಫಲಪ್ರದವಾಗುವದೆಂದೂ ಅಧ್ಯಕ್ಷರು ಪ್ರತಿಪಾದಿಸಿದರು. ಭಾಷಣದಲ್ಲಿ ಅವರ ವಿನೋದ ಸ್ವಭಾವವು ಪ್ರತಿಬಿಂಬಿತವಾಗಿದೆ. ಕನ್ನಡದ ಲಾಲಿತ್ಯವನ್ನು ಸಭಿಕರಿಗೆ ಪ್ರತ್ಯಕ್ಷ ತೋರಿಸುವದಕ್ಕಾಗಿ ಪಂಪನು ಮಾಡಿದ ಬನವಾಸಿ ವರ್ಣನೆಯನ್ನು ಹಾಡಿದಾಗ, ಸಮ್ಮೇಲನ ಮಂಟಪದಲ್ಲಿ ನಿಸರ್ಗದೇವಿಯೇ ಪ್ರತ್ಯಕ್ಷ ಅವತೀರ್ಣಳಾದಳೆಂದು ಸಭಿಕರಿಗೆ ಭಾಸವಾಯಿತು. ಪಂಪನ ಜಿನಸ್ತುತಿ-ಹರಿಹರನ ಶಿವಸ್ತುತಿಗಳನ್ನೂ ಅಧ್ಯಕ್ಷರು ಭಕ್ತಿಪೂರ್ವಕವಾಗಿ ಹಾಡಿ ಪ್ರಾಚೀನ ಸಾಹಿತ್ಯದ ಸೊಬಗನ್ನು ಸಭಿಕರಿಗೆ ಪ್ರದರ್ಶಿಸಿದರು. ಅಧ್ಯಕ್ಷರು ಬರೇ ಮಾತಾಡುವವರಲ್ಲ, ಇಂಗ್ಲಿಷದೊಳಗಿಂದ ಕೆಲವು ಹಾಡುಗಳನ್ನು ಇವರು ಭಾಷಾಂತರಿಸಿ ಪದಗಳನ್ನು ರಚಿಸಿದ್ದಾರೆ. ಕೆಲವು ಸಭೆಯಲ್ಲಿ ಹಾಡಲ್ಪಟ್ಟವು. ಮೂಲ ಕವಿತೆಗೆ ನಿಕ್ಕಿ ಇವುಗಳಲ್ಲಿ ಸೊಬಗಿದೆ.

ಅಧ್ಯಕ್ಷರ ಭಾಷಣವಾದ ಬಳಿಕ, ಸಭಾಕಾರ್ಯವು ಮುಗಿಯಿತು. ಬಳಿಕ, ಮೈಸೂರ ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘದ ವಿದ್ಯಾರ್ಥಿಗಳು "ಯಮನ ಸೋಲು" ನಾಟಕವನ್ನಾಡಿ ತೋರಿಸಿದರು. "ಗದಾಯುದ್ಧ"ವೆಂಬ ನಾಟಕವೂ ಆಡಿ ತೋರಿಸಲ್ಪಟ್ಟಿತು. ನಾಟಕಶೈಲಿಯು ಚಿತ್ತವೇಧಕವಾಗಿದೆ.

ಮಾರನೇ ದಿನ ವಿಷಯ ನಿಯಾಮಕ ಮಂಡಳದ ಸಭೆಸೇರಿ ತೀರ್ಮಾನಗಳು ತಯಾರಿಸಲ್ಪಟ್ಟವು. ಸಭೆಯಲ್ಲಿ ಆದ ತೀರ್ಮಾನಗಳು ಸಮ್ಮೇಲನದಲ್ಲಿ ಕೈಕೊಳ್ಳಲ್ಪಟ್ಟವು. ಈ ಕುರಿತು ಅಧ್ಯಕ್ಷರ ವಿನೋದಪ್ರಿಯತೆಯನ್ನು ಪ್ರಕಟಿಸುವ ಒಂದು ಸಣ್ಣ ಸಂಗತಿಯಾಯಿತು. ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ತೀರ್ಮಾನವನ್ನು ಅಧ್ಯಕ್ಷರ ಅಳಿಯಂದಿರು ಸೂಚಿಸಿದರು. ಈ ತೀರ್ಮಾನವನ್ನು ಸಭಿಕರ ಮುಂದಿಡುವಾಗ ಅಧ್ಯಕ್ಷರು ನುಡಿದದ್ದೇನಂದರೆ.— "ಅಳಿಯನ ಅಭಿಪ್ರಾಯವು ಮಾವನಿಗೆ ಒಪ್ಪಿಗೆಯಾಗದಿರುವದೇ?" ಎಂಬ ಪದಕ್ಕೆಲ್ಲ ನಗೆಯೋ ನಗೆ! ಕೈಕೊಂಡ ಠರಾವುಗಳು ಬೇರೆ ಕಡೆಗೆ ಕೊಡಲ್ಪಟ್ಟಿವೆ. ಠರಾವುಗಳ ಕೆಲಸ ಮುಗಿದ ಬಳಿಕ ಹೊಸ ಕವನಗಳನ್ನು ರಚಿಸಿದ ಕವಿಗಳು ತಮ್ಮ ಕವನಗಳನ್ನು ಹಾಡಿ ತೋರಿಸಿದರು. ಯಶೋದೆಯು ಮೊಸರು ಕಡೆಯುವಾಗ ಬಾಲಕೃಷ್ಣನು ಮಾಡಿದ ಲೀಲೆಯನ್ನು ಶ್ರೀ ಮುದವೀಡು ಕೃಷ್ಣರಾಯರು ಹಾಡಿದ್ದನ್ನು ಕೇಳುತ್ತಿರುವಾಗ, ಸಮ್ಮೇಲನದಲ್ಲಿ ಪ್ರತ್ಯಕ್ಷ ಬಾಲಕೃಷ್ಣನೇ ಅವತರಿಸಿ ಬಾಲ ಚೇಷ್ಟೆಗಳನ್ನು ನಡಿಸುತ್ತಾನೆಂದು ಭಾಸವಾಯಿತು. ಪ್ರಸಿದ್ಧ ಕವಿಗಳಾದ ಶ್ರೀ॥ ಬೇಂದ್ರೆಯವರು ಕೋಕಿಲ ದನಿಯಿಂದ ಹಾಡಿ ತೋರಿಸಿದ ಕಂದನ ಲಾಲಿಯೆಂಬ ಹಾಡು ಹಳ್ಳಿಯ ಹೆಣ್ಣುಮಕ್ಕಳ ಕಾವ್ಯದೊಳಗಿನ ಮಾಧುರ್ಯವನ್ನು ಪ್ರಕಟಿಸಿತು. ಅಧ್ಯಕ್ಷರಾದ ಶ್ರೀ॥ ಶ್ರೀಕಂಠಯ್ಯನವರ ಶಿಷ್ಯರಾದ ಶ್ರೀ॥ ಕಿಶೋರಚಂದ್ರ ವಾಣಿಯವರು ಕಿಂದರಜೋಗಿಯ ಬಾಲಗೀತವನ್ನು ಹಾಡಿದರು. ಅದನ್ನು ಕೇಳಿ ಕವಿಶ್ರೇಷ್ಠರಾದ ರವೀಂದ್ರನಾಥ "ಜಡಿಗೆಯು ಚಂದಿರ"ವೆಂಬ ಕಾವ್ಯದ ನೆನಪಾಯಿತು. ಶ್ರೀ॥ ತಮ್ಮಣ್ಣಪ್ಪ ಚಿಕ್ಕೋಡಿಯವರ ಭಾಷಣವನ್ನು ಕೇಳಿ, ಯುವಕರು ಸಹ ನಾಚಿದರು. ಶ್ರೀ॥ ತಮ್ಮಣ್ಣಪ್ಪನವರು ವಯೋವೃದ್ಧರು, ಆದರೆ, ಕನ್ನಡದ ಅಭಿಮಾನವನ್ನೂ, ಅದಕ್ಕಾಗಿ ಅವರು ಮಾಡುತ್ತಿದ್ದ ಸಾಹಸವನ್ನೂ ಅಧ್ಯಕ್ಷರಾದ ಶ್ರೀಕಂಠಯ್ಯನವರು ಬಹಳೇ ಕೊಂಡಾಡಿದರು. ಈ ವ್ಯಾಖ್ಯಾನದಿಂದ ಹರೆಯದವರು ಕನ್ನಡ ನುಡಿಯ ಅಭ್ಯಾಸವನ್ನು ಕಲಿಯತಕ್ಕದ್ದಿರುತ್ತದೆ. ಅಧ್ಯಕ್ಷರು ಕಲಬುರ್ಗಿಯ ಸಮ್ಮೇಲನದ ಉಪಸಂಹಾರ ಮಾಡುವಾಗ, ಕನ್ನಡ ನುಡಿಯನ್ನು ಪ್ರೀತಿಯಿಂದ ಪುರಸ್ಕರಿಸಲು ಕನ್ನಡಿಗರಿಗೆ ಬೋಧಿಸಿದರು. ಮೈಸೂರು ವಿದ್ಯಾಪೀಠವು ಕನ್ನಡ ವಾಙ್ಮಯ ಬೆಳವಣಿಗೆಯ ಬಗ್ಗೆ ಪ್ರಯತ್ನ ನಡಿಸುತ್ತಿರುವದಾಗಿಯೂ ಅಧ್ಯಕ್ಷರು ಹೇಳಿ, ಸಭಿಕರ ಉಪಕಾರ ಮನ್ನಿಸಿ, ಎಲ್ಲರಿಗೂ ಕನ್ನಡ ನಾಡು-ನುಡಿಗಳ ಅಭಿಮಾನವನ್ನು ತಾಳಲಿಕ್ಕೂ ಅವುಗಳ ಉದ್ಧಾರಕ್ಕಾಗಿ ಹಗಲಿರುಳು ತನುಮನಧನದಿಂದ ದುಡಿಯಲಿಕ್ಕೂ, ಕರ್ನಾಟಕ ವೈಭವವನ್ನು ಪುನಃ ಪ್ರಸ್ಥಾಪಿಸಿ ದಿಗಂತ ಕೀರ್ತಿ ಬೆಳಗಿಸಲಿಕ್ಕೂ ಪ್ರೇರೇಪಿಸಿ, ಕರ್ನಾಟಕ ಸಾಹಿತ್ಯ ಸಮ್ಮೇಲನದ ೧೪ನೇ ಅಧಿವೇಶನವನ್ನು ಪರಿಸಮಾಪ್ತಿಗೈದರು. ಆ ಮೇಲೆ ಔಪಚಾರಿಕ ಆಭಾರ ಮನ್ನಣೆಗಳಾಗಿ, ಸಭೆಯು ವಿಸರ್ಜನ ಹೊಂದಿತು.

ವಿಹಾರ ನಗರದ ಬಳಿ ಇಲೂರ ಗ್ರಾಮದಲ್ಲಿ ಅಗ್ನಿನಾರಾಯಣನು ಸುಮಾರು ೩೦೦ ಮನೆಗಳನ್ನು ಸುಟ್ಟುಬಿಟ್ಟನು. ೩೦ ಮಂದಿಗಳು ಮಡಿದರು. ೪ ಲಕ್ಷ ರೂಪಾಯಿಗಳಿಗೆ ಮಿಕ್ಕಿ ನಷ್ಟ.

— ಸಾರ್ವಭೌಮರು ಸರ್ ಫ್ರಡರಿಕ ಸೈಕ್ಸ ಎಂಬುವರಿಗೆ ಮುಂಬಯಿಯ ಗವರ್ನರರಾಗಿ ನೇಮಿಸಿದ್ದಾರೆ. ವೈಮಾನಿಕ ವಿದ್ಯೆಯಲ್ಲಿ ವಿಶೇಷ ನಿಷ್ಣಾತರಿದ್ದಾರೆ.

೧೪ ನೇ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಪಾಸಾದ ಠರಾವುಗಳು.

೧. ಕಲಬುರ್ಗಿಯಲ್ಲಿ ಕೂಡಿರುವ ಕರ್ನಾಟಕ ಸಾಹಿತ್ಯ ಪರಿಷತ್ತಿನ ಈ ಹದಿನಾಲ್ಕನೆಯ ಸಮ್ಮೇಲನವು ಆಲಾಹಜರತ್ ಬಂದಗಾನ್ ಅಲಿಯವರಿಗೂ ಮೈಸೂರ ಶ್ರೀಮನ್ಮಹಾರಾಜರವರಿಗೂ ಭಕ್ತಿ-ವಿಶ್ವಾಸಗಳನ್ನು ಅತ್ಯಂತ ವಿನಯಪೂರ್ವಕವಾಗಿ ಸಮರ್ಪಿಸಿ ಖಾವಂದರವರುಗಳು ಕರ್ನಾಟಕ ಭಾಷೆಗೆ ಮತ್ತು ಸಾಹಿತ್ಯಕ್ಕೆ ನಿರಂತರವಾಗಿ ಪ್ರೋತ್ಸಾಹವನ್ನು ದಯಪಾಲಿಸಬೇಕೆಂದು ಪ್ರಾರ್ಥಿಸುತ್ತದೆ.

೨. (ಅ) ನಿಜಾಮ ಕರ್ನಾಟಕದಲ್ಲಿರುವ, ಗುಲಬುರ್ಗಾ, ರಾಯಚೂರ, ಬೀದರ ಮುಂತಾದ ಜಿಲ್ಹೆಗಳು ಕನ್ನಡ ಜಿಲ್ಹೆಗಳಾದ್ದರಿಂದ ಆ ಭಾಗಗಳಲ್ಲಿರುವ ಕೋರ್ಟು-ಕಚೇರಿಗಳ ಭಾಷೆಯು ಕನ್ನಡವಿರಬೇಕೆಂದು ಈ ಸಮ್ಮೇಲನವು ನಿಜಾಮ ಸರಕಾರವನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

(ಬ) ಪೋಸ್ಟ ಆಫೀಸಿನ ಮನಿಆರ್ಡರ ಫಾರ್ಮ ಮುಂತಾದವುಗಳು ಕನ್ನಡವಿರಬೇಕೆಂದು ಆಯಾ ಅಧಿಕಾರಿಗಳನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

೩ ನಿಜಾಮ ಕರ್ನಾಟಕದ ಗುಲಬುರ್ಗಾ, ಬೀದರ, ಮುಂತಾದ ಜಿಲ್ಹೆಗಳಲ್ಲಿ ಗ್ರಾಮಸ್ಥರ ದಫ್ತರುಗಳು ಮರಾಠಿಯಲ್ಲಿರುವದರಿಂದ ಕನ್ನಡ ಪ್ರಾಥಮಿಕ ಶಿಕ್ಷಣಕ್ಕೆ ಬಹಳೇ ತೊಂದರೆಯಾಗುತ್ತದೆ. ಅದಕಾರಣ ಈ ಭಾಗಗಳಲ್ಲಿಯ ಗ್ರಾಮಸ್ಥರ ದಫ್ತರುಗಳು ಕನ್ನಡದಲ್ಲಿಯೇ ಇಡುವಂತೆ ನಿಜಾಮ ಸರಕಾರದವರು ಅಪ್ಪಣೆ ಕೊಡಿಸಿ ತೀವ್ರ ಜಾರಿಯಲ್ಲಿ ತರಬೇಕೆಂದು ಈ ಸಮ್ಮೇಲನವು ಪ್ರಾರ್ಥಿಸುತ್ತದೆ.

೪. ನಿಜಾಮ ಕರ್ನಾಟಕದಲ್ಲಿಯ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಕನ್ನಡ ಬಾಲಕರ ಮಾತೃಭಾಷೆಯಲ್ಲದ ಭಾಷೆಗಳಲ್ಲಿಯೇ ನಡೆಯುತ್ತಿರುವದರಿಂದ ಶಿಕ್ಷಣ ಪ್ರಗತಿಯು ಅತಿಶಯವಾಗಿ ಕುಂಠಿತವಾಗಿದೆ. ಆದ್ದರಿಂದ ಆ ಪ್ರಾಥಮಿಕ ಶಿಕ್ಷಣವೆಲ್ಲವೂ ಕನ್ನಡದಲ್ಲಿಯೇ ಇರಬೇಕೆಂದೂ, ಮುಂದೆ ಅದು ಅವ್ಯಾಹತವಾಗಿ ಸಾಗುವಂತೆ ಏರ್ಪಾಟು ಮಾಡಲ್ಪಡಬೇಕೆಂದೂ ಈ ಸಮ್ಮೇಲನವು ನಿಜಾಮ ಸರಕಾರವನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತದೆ.

೫. ಕಲಬುರ್ಗಿ ಮತ್ತು ಬಿದರ ಜಿಲ್ಹೆಗಳಲ್ಲಿಯ ವರ್ತಕರೂ, ಸಾರ್ವಜನಿಕ ಸಂಸ್ಥೆಗಳೂ ಕನ್ನಡ ಭಾಷೆಗೆ ಪ್ರಾಧಾನ್ಯವನ್ನು ಕೊಡಬೇಕೆಂದೂ ಲೆಖ್ಖ ಪತ್ರ ಮುಂತಾದವುಗಳನ್ನೆಲ್ಲ ಕನ್ನಡದಲ್ಲಿಯೇ ಇಡಬೇಕೆಂದೂ ಈ ಸಮ್ಮೇಲನವು ಅವರುಗಳನ್ನು ಪ್ರಾರ್ಥಿಸುತ್ತದೆ.

೬ ನಿಜಾಮ ಕರ್ನಾಟಕದಲ್ಲಿರುವ ಎಷ್ಟೋ ಖಾಸಗಿ ಸಂಸ್ಥೆಗಳಲ್ಲಿ ಕನ್ನಡ ಶಿಕ್ಷಣದ ವ್ಯವಸ್ಥೆ ಇಲ್ಲದಿರುವದರಿಂದ ಆ ಸಂಸ್ಥೆಗಳ ಚಾಲಕರು ತೀವ್ರವೇ ಕನ್ನಡ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಮ್ಮೇಲನವು ಅವರಿಗೆ ಸೂಚಿಸುತ್ತದೆ.

೭. ನಿಜಾಮ ಸರಕಾರದಲ್ಲಿ ಕರ್ನಾಟಕ ಇತಿಹಾಸಕ್ಕೆ ಮುಖ್ಯ ಸಾಮಗ್ರಿಯಾಗಿರುವ ಶಿಲಾಶಾಸನಗಳು ಹೇರಳವಾದರೂ ಮಹತ್ವವಾದವು ಇರುವದರಿಂದ

(೧೧ನೇ ಪಾನಿನಮೇಲೆ ಮುಂದುವರಿದಿದೆ.)

ಕಾನಡಾ ವೃತ್ತ.

ಮಿತಿ ವಿಭವ ಸಂ। ಆಷಾಢ ಶು ೧ ದಿ. ಸೋಮವಾರ.

ವಿಪರೀತ ಬುದ್ಧಿ ಬೇಡ.

ಬಾರ್ಡೋಲಿಯೊಳಗಿನ ದಸ್ತಸಂಗ್ರಾಮಕ್ಕೆ ಕಳೆದ ವಾರದಲ್ಲಿ ಸಿಟ್ಟಿನ ಸ್ವರೂಪವು ಪ್ರಾಪ್ತವಾಯಿತು. ಅಲ್ಲಿನ ಸರಕಾರಿ ನೌಕರರೂ, ಸತ್ಯಾಗ್ರಹಿಗಳೂ ತಮ್ಮತಮ್ಮಷ್ಟಕ್ಕೆ ಕಾದಾಡುತ್ತಿದ್ದರು. ತೀರ್ವೆಯನ್ನು ವಸೂಲ ಮಾಡುವದಕ್ಕಾಗಿ ಸರಕಾರದ ಸೈನ್ಯವೂ, ಜಪ್ತಿಯ ಅಧಿಕಾರಿಗಳೂ, ಇತರ ಮಹಾನುಭಾವರೂ ಪ್ರಯತ್ನಪಡುತ್ತಿದ್ದರು. ತೀರ್ವೆ ಕೊಡದಂತೆ ಬೇಸಾಯಗಾರರು ಮನೆಮಾರುಗಳಿಗೆ ಬೀಗಿಲು ಇಕ್ಕಿಕೊಂಡು ಜಪ್ತಿಯ ಅಧಿಕಾರಿಗಳ ದಾರಿಯನ್ನು ಕಾಯುತ್ತಿದ್ದರು. ಅಲ್ಲಲ್ಲಿ ಜಪ್ತಿ ಅಧಿಕಾರಿಗಳ ಆತಂಕಪೂರ್ಣ ನಡತೆಯ ಮೇಲೆ ಖಟ್ಲೆಗಳೂ ಆಗುತ್ತಿದ್ದವು. ಇವೆಲ್ಲ ಸರಕಾರದ ಜಿದ್ದಿನ ನಡತೆಯೆಂಬಂತೆ ಪ್ರಚಾರವಾಯಿತೆಂದು ಮರುಗುವ ಕೆಲವು ದೇಶಬಾಂಧವರ ಗ್ರಹಿಕೆಯಾಗಿತ್ತು. ಪ್ರಾಂತಾಧಿಪತಿ ವಿಲ್ಸನ್ ದೊರೆಗಳು ಪರಮ ದಯಾಳು ಸ್ವಭಾವದವರೆಂದೂ, ಬೇಸಾಯಗಾರರ ಕಲ್ಯಾಣಕ್ಕಾಗಿ ಅವರು ದುಡಿಯುವವರೆಂದೂ ಅನೇಕರ ಕಲ್ಪನೆ ಇತ್ತು. ವಾಸ್ತವವಾದ ಸ್ಥಿತಿಯು ಅವರ ತಿಳುವಳಿಕೆಗೆ ಬಂದರೆ, ಅವರೆಂದಿಗೂ ಈ ಅನರ್ಥಪರಂಪರೆಯನ್ನು ನಡಿಸಗೊಡಲಿಕ್ಕಿಲ್ಲವಾಗಿಯೂ ಭಾವಿಕರು ಭಾವಿಸುತ್ತಿದ್ದರು. ಆದರೆ, ಈ ಆಶಾತಂತುವು ಕಳೆದ ವಾರದಲ್ಲಿ ತುಂಡಾಗಿ ಹೋಯಿತು. ಸರಕಾರವು ಬಾರ್ಡೋಲಿಯ ಪ್ರಜೆಗಳ ಮೇಲೆ ಯುದ್ಧವನ್ನು ಕಳೆದ ವಾರ ಸಾಕ್ಷಾತ್ ಪ್ರಕಟಿಸಿದೆ.

ಮುಂಬಯಿ ವಿಶ್ವವಿದ್ಯಾಲಯದ ಪರವಾಗಿ ಪ್ರಾಂತಿಕ ಕಾ. ಕೌನ್ಸಿಲಿನ ಸಭಾಸದರಾದ ಎಡ್ವೊಕೇಟ ರಾ। ಕನ್ಹಯಾಲಾಲ ಮುನಶೀಯವರು ಪ್ರಾಂತಾಧಿಪತಿಗಳಾದ ಸರ್ ಲೆಸ್ಲೀ ವಿಲ್ಸನ್‌ರವರಿಗೆ ಬರೆದ ಪತ್ರಗಳೂ, ಪ್ರಾಂತಾಧಿಪರು ಅವಕ್ಕೆ ಬರೆದ ಉತ್ತರಗಳೂ ಬಾರ್ಡೋಲಿಯ ದಿನ, ಅಂದರೆ, ಕಳೆದ ಮಂಗಳವಾರಕ್ಕೆ ಪ್ರಕಟಿಸಲ್ಪಟ್ಟವು. ರಾ। ಕನ್ಹಯಾಲಾಲರವರು ಸ್ವತಂತ್ರ ಚೌಕಶಿಯನ್ನು ಮಾಡಿ ಕರ ನಿರಾಕರಣೆಯಿಂದ ಒದಗುವ ಅನರ್ಥಕ್ಕೆ ದೊರೆಗಳು ತಡೆ ಹಾಕಬೇಕಾಗಿ ಪ್ರಾರ್ಥಿಸಿಕೊಂಡಿದ್ದರು. ರಾ। ಕನ್ಹಯಾಲಾಲರವರು ಅತ್ಯ ಶ್ಲಾಘನೆಯನ್ನೂ, ಮತಿ ಸ್ವಭಾವವನ್ನೂ ಪ್ರಾಂತಾಧಿಪರಿಗೆ ಅರುಹಿದ್ದರು. ಗುಜರಾಥದ ಶಿಷ್ಟಮಂಡಳವು ಈ ಹಿಂದೆ ಭೆಟ್ಟಿ ಕೊಳ್ಳಹೋದಾಗ ಅವರ ಕರನಿರಾಕರಣೆಯ ಚಳವಳಿಯು ಬೇಕಾಯದೇಶೀರವಾದ್ದರಿಂದ ತಾವು ಆ ಮಂಡಳದಲ್ಲಿ ಸೇರಲಿಲ್ಲವಾಗಿ ರಾ। ಕನ್ಹಯಾಲಾಲರವರು ಬರೆದು ಸ್ವತಂತ್ರ ಚೌಕಶಿ ಮಂಡಲವೊಂದನ್ನು ನೇಮಿಸಿ ಬಾರ್ಡೋಲಿಯ ಪ್ರಜೆಗಳಿಗೆ ಸುಖ ಕೊಡಬೇಕಾಗಿ ಅರಿಕೆ ಮಾಡಿದ್ದರು. ಪ್ರಾಂತಾಧಿಪರು ರಾಜೇಶ್ರೀಗಳಿಗೆ ಚೊಕ್ಕ ಉತ್ತರವನ್ನಿತ್ತರು. ಅಳರಸರ ಸರ್ವಾಧಿಕಾರಕ್ಕೆ ಬಾಧೆ ತಟ್ಟುವಾಗ ಮಡಿ-ಮೈಲಿಗೆಯೆಂಬ ಭೇದವಿಲ್ಲೆಂದು ರಾ। ಮುನಶಿಯವರಿಗೆ ಕೃತಿಯಿಂದ ತಿಳಿಸಿಬಿಟ್ಟರು. ಸ್ವತಂತ್ರ ಚೌಕಶಿಯನ್ನು ಮಾಡುವದವಶ್ಯವಿಲ್ಲ. ವಿಶೇಷ ಚೌಕಶಿ ಮಾಡಿದರೆ, ತೀರ್ವೆಯು ಮತ್ತೂ ಏರುವ ಸಂಭವವಿದೆ. ಸಾಕಷ್ಟು ಬೇಕಷ್ಟು ಚೌಕಶಿಯು ಈ ಮುಂಚೆಯೇ ಆಗಿ ಹೋಗಿದೆ. ಸರಕಾರಿ ಅಧಿಕಾರವನ್ನು ಧಿಕ್ಕರಿಸುವವರಿಗೆ ಎದುರಾಗಿ ಅಧಿಕಾರಿಗಳೊಡನೆ ತಾವೂ ಹೋರಾಡಬೇಕಾಗಿ ರಾಜೇಶ್ರೀಯವರಿಗೆ ವಿಲ್ಸನ್ ದೊರೆಗಳು ಒದೆದು ತಿಳಿಸಿದರು. ರಾ। ಮುನಶಿಯವರು ಮತ್ತೊಂದು ಪತ್ರವನ್ನು ಬರೆದರು. ಇಂಥ ಮನೋವಿಕಾರದಿಂದ ಬಾರ್ಡೋಲಿ ಪ್ರದೇಶವು ನಿರ್ಜನವಾಗುವದೆಂದೂ, ಅಲ್ಲದೆ ರಕ್ತಪಾತವಾಗುವದೆಂದೂ ಹೇಳಿ, ರಾಜ-ಪ್ರಜೆಗಳೊಳಗಿನ ಸಂಬಂಧಗಳು ಬಲು ಕಠಿಣವಾಗುವವಾಗಿ ಉದ್ಗರಿಸಿದರು. ಪುನರಾಲೋಚನೆ ಮಾಡಿದರೆ, ಈ ಅನ್ಯಾಯವು ಒದಗಲಿಕ್ಕಿಲ್ಲವಾಗಿಯೂ ಹೇಳಿ ಪುನಃ ಸ್ವತಂತ್ರ ಚೌಕಶಿ ಮಾಡಲು ಪ್ರಾಂತಾಧಿಪತಿಗಳಿಗೆ ಅವರು ಬಿನ್ನೈಸಿಕೊಂಡರು. ಪ್ರಾಂತಾಧಿಪರು ಜೂನ ೫ ನೇ ತಾರೀಖಿಗೆ ಬರೆದದ್ದೇನಂದರೆ:— "ಬೇಸಾಯಗಾರರ ಬಗ್ಗೆ ನಾನು ಹಗಲಿರುಳು ಚಿಂತಿಸುತ್ತಿದ್ದೇನೆ. ತೀರ್ವೆ ಕೊಡಲು ಅವರಿಗೆ ಮನಸ್ಸಿದೆ. ಜನರೇ ಅವರಿಗೆ ಬಿಡುವದಿಲ್ಲ. ಚೋರಾಸಿಯಲ್ಲಿಯೂ ತೀರ್ವೆ ಏರಿತು; ಹಾಗೆಯೇ ಬಾರ್ಡೋಲಿಯಲ್ಲಿಯೂ ಏರಿದೆ. ಬಾರ್ಡೋಲಿಯಲ್ಲಿ ಮಾತ್ರ ಈ ದೂರು ಏಕೆ? ಸ್ವತಂತ್ರ ಮಂಡಳದ ನಿರ್ಣಯಕ್ಕೆ ಸರಕಾರವು ಆಡಳಿತೆಯ ಅಧಿಕಾರವನ್ನು ಒಪ್ಪಿಸಬೇಕೇ? ಸರಕಾರಿ ಅಧಿಕಾರವನ್ನು ಖಾಸಗಿ ವ್ಯಕ್ತಿಗಳಿಗೆ ಯಾವದೇ ಸರಕಾರವು ಒಪ್ಪಿಸದು. ಆ ಅಧಿಕಾರವನ್ನು ಒಪ್ಪಿಸಿದರೆ, ಸರಕಾರಕ್ಕೆ ಸರಕಾರವೆಂದು ಹೇಳುವವರ್ಯಾರು? ಇದು ತಕ್ಕದ ಮಾತು. ಕಾನೂನುಗಳನ್ನು ಇಲಾಖೆಯೊಳಗಿನ ಇತರ ಪ್ರಜೆಗಳಂತೆ ಪಾಲಿಸಲು ಬಾರ್ಡೋಲಿಗೆ ಸರಕಾರವು ಹೇಳುತ್ತದೆ. ಅನ್ಯಾಯವಾದರೆ ಮುಂದೆ ಅದರ ವಿಚಾರ ಮಾಡಿ ಹೆಚ್ಚಿನ ತೀರ್ವೆಯನ್ನು ಸೂಟ ಬಿಡುವ ವಿಚಾರ ಮಾಡಬಹುದು. ಇತ್ಯಾದಿ ಬರೆದು, ರಾ। ಕನ್ಹಯಾಲಾಲ ಮುನಶಿಯವರಿಗೆ ಯೋಗ್ಯ ಸೂಚನೆಗಳನ್ನು ಮಾಡಲು ಸೂಚಿಸಿದ್ದಾರೆ. ರಾ। ಮುನಶೀಯವರ ಸ್ವತಂತ್ರ ಚೌಕಶಿಯ ಸೂಚನೆಯು ಅಯೋಗ್ಯವೆಂದು ಹೇಳಿದ ಸಂಭಾವನೆಯನ್ನು ರಾ। ಮುನಶಿಯವರು ಮನ್ನಿಸಿಕೊಳ್ಳಲಿ.

ಪ್ರಾಂತಾಧಿಪತಿ ವಿಲ್ಸನ್ ದೊರೆಗಳಿಗೆ ಉತ್ತರ ಕೊಡಲು ವಿಶೇಷ ವಿಚಾರ ಮಾಡುವದು ಬೇಡ. ಆಡಳಿತೆಯ ಅಧಿಕಾರವು ಸರಕಾರಕ್ಕಿದ್ದಂತೆ, ಆಡಳಿತೆಯು ಅಡ್ಡ ಮಾರ್ಗ ಹಿಡಿದು ಹೋಗುತ್ತಿರುವಾಗ ಅದಕ್ಕೆ ತಗ್ಗುವ ಅಧಿಕಾರವು ಪ್ರಜೆಗಳಲ್ಲಿದೆ. ಕಾಯಿದೆಯನ್ನತಿಕ್ರಮಿಸಿ, ಲೋಕಮತಕ್ಕೆ ಲೆಕ್ಕಿಸದೆ, ಕರಗಳನ್ನು ಎತ್ತುವಳಿ ಮಾಡುತ್ತ ಹೋಗುವದೇ ಸರಕಾರದ ಕರ್ತವ್ಯವಲ್ಲ. ಪ್ರಜಾಪಾಲನಕ್ಕಾಗಿ ಆಡಳಿತೆಯು ನಿರ್ಮಾಣ ಹೊಂದಿದೆ; ಹೊರತು ಆಡಳಿತೆಯ ಪಾಲನಕ್ಕಾಗಿ ಪ್ರಜೆಗಳಲ್ಲ. "ಯಸ್ಮಾತ್ ಪ್ರಜಾನಾಂ ಅನುರಂಜನೇ ಸ್ಯಾತ್ ।" ಎಂದು ವಸಿಷ್ಠ ಮಹರ್ಷಿಗಳು ಆದರ್ಶಭೂತ ಅರಸನಾದ ಪ್ರಭು ಶ್ರೀ ರಾಮಚಂದ್ರನಿಗೆ ಉಪದೇಶ ಮಾಡಿ ಆಡಳಿತೆಯ ಕರ್ತವ್ಯವನ್ನು ಸಮಸ್ತ ರಾಷ್ಟ್ರಚಾಲಕರಿಗೆ ಬೋಧಿಸಿದ್ದಾರೆ. ಇದನ್ನು ಬಾರ್ಡೋಲಿಯವರು ಸರಕಾರದ ಕಡೆಯಿಂದ ಪಾಲಿಸಿಕೊಳ್ಳುವ ಪ್ರಯತ್ನ ನಡೆದಿದೆ. ಚೋರಾಸಿಗೆ ಬೊಟ್ಟು ತೋರಿಸಿ ಬಾರ್ಡೋಲಿಗೆ, ಬಾರ್ಡೋಲಿಗೆ ಬೊಟ್ಟು ತೋರಿಸಿ ಚೋರಾಸಿಗೆ ಸುಲಿಯುವ ಕುಯುಕ್ತಿಗಳು ಈಗ ನಡೆಯುತ್ತವೆ. ಬಾರ್ಡೋಲಿಯೊಳಗಿನ ತೀರ್ವೆ ಏರಿಕೆಯು ನ್ಯಾಯ-ನೀತಿಯಂತೆ ನಡೆದಿದೆಯೇನೆಂಬುದೇ ಪ್ರಶ್ನೆ. ಆ ಪ್ರಶ್ನೆಯನ್ನು ಸ್ವತಂತ್ರ ಮಂಡಳದಲ್ಲಿ ಚರ್ಚಿಸಿ ಇತ್ಯರ್ಥಪಡಿಸಿಕೊಂಡರೆ ಸರಕಾರದ ಆಡಳಿತೆಯ ಅಧಿಕಾರವೇ ನಷ್ಟವಾಗುವದೆಂದು ಹೇಳುವದಾದರೆ, ಯಾವದೇ ವಿಷಯ ಚೌಕಶಿ ಮಂಡಳವನ್ನೇರ್ಪಡಿಸಬೇಕಾಗಿ ಸರಕಾರಕ್ಕೆ ಯಾರೂ ಹೇಳುವದುಳಿಯಲಿಲ್ಲ. ಸರಕಾರಿ ಅಧಿಕಾರಿಗಳು ಸರ್ವಜ್ಞರಿದ್ದರೆ, ಅಂತರ್ಯಾಮಿಗಳಾಗಿದ್ದರೆ, ನ್ಯಾಯ-ನೀತಿಗಳ ಮೂರುತಿಗಳಿದ್ದರೆ ಈ ತನಕ ನಡೆದ ಚೌಕಶಿ ಮಂಡಳಗಳ ವಿಚಾರವೆಲ್ಲ ಲೋಕವಂಚನೆಯು ಘಾಸೇನು? ಈ ಚೌಕಶಿಗಳಿಂದ ಸರಕಾರಿ ಅಧಿಕಾರಕ್ಕೆ ಬಾಧೆ ತಟ್ಟದಿದ್ದರೆ ಬಾರ್ಡೋಲಿಯ ಚೌಕಶಿಯಿಂದ ಮಾತ್ರ ಬಾಧೆ ತಟ್ಟುವದೆಂತು? ಚೌಕಶಿ ನೇಮಿಸಿದ ಕೂಡಲೆ ಸರಕಾರಿ ಆಡಳಿತೆಯು ಪದಭ್ರಷ್ಟವಾಗುತ್ತಿದ್ದರೆ, ಚೌಕಶಿ ನೇಮಿಸುವ ಮುಂಚೆ ಬಾರ್ಡೋಲಿಯವರು ತಮ್ಮ ಸಂಗ್ರಾಮಕ್ಕೆ ತಡೆ ಹಾಕಿದರೆ, ಅಳರಸರಿಗೆ ತಗ್ಗುವ ಪ್ರಜಾಧಿಕಾರವೆಲ್ಲಿದೀತು! ಲೋಕಪಕ್ಷೀಯರು ವಿಚಾರ ಮಾಡಿದರೆ, ಸರಕಾರಿ ಅಧಿಕಾರ ಪಾಲನದ ಮಹತ್ವವು ಅಷ್ಟಿಲ್ಲ. ಪ್ರಜಾಧಿಕಾರ ಪಾಲನದ ಮಹತ್ವವೇ

ವಿಶೇಷವಿದೆ. ಪ್ರಜಾಧಿಕಾರವು ಪ್ರಬಲವಿದ್ದರೆ, ಸರಕಾರವನ್ನು ನಿರ್ಮಿಸಲಿಕ್ಕೂ, ನಿಯಂತ್ರಿಸಲಿಕ್ಕೂ ಅನುಕೂಲವಾಗುತ್ತದೆ. ಪ್ರಜಾಧಿಕಾರವು ಬೀಜವು; ಸರಕಾರವು ಆ ಬೀಜದಿಂದ ಹುಟ್ಟುವ ಮರದ ಟೊಂಗೆ. ಇಂಥ ಪರಿಸ್ಥಿತಿಯಲ್ಲಿ ಬಾರ್ಡೋಲಿಯ ಪ್ರಜೆಗಳು ಹಿಮ್ಮೆಟ್ಟಬಾರರು; ಹಿಮ್ಮೆಟ್ಟಲಿಕ್ಕಿಲ್ಲ.

ಸರಕಾರವು ಈ ಕಡೆ ಲಕ್ಷ್ಯ ಕೊಡಬೇಕು. ಬುಧವಾರಕ್ಕೆ ವಿಲಾಯತಿಯೊಳಗಣ ಪಾರ್ಲಿಮೆಂಟಿನಲ್ಲಿ ಮುಂಬಯಿ ಸರಕಾರವು ಈ ಕಾದಾಟವನ್ನು ಕೊನೆ ತನಕ ನಡಿಸುವ ನಿರ್ಧಾರ ಮಾಡಿರುವದಾಗಿ ಹೇಳಲಾಯಿತು. ಇದರ ಮೇಲಿಂದ ಭಾರತ ಮಂತ್ರಿಗಳ ತನಕ ಸಮಸ್ತ ಬ್ರಿಟಿಶ ಸಾಮ್ರಾಜ್ಯ ಸರಕಾರವು ಬಾರ್ಡೋಲಿಯಲ್ಲಿ ಹೋರಾಡುತ್ತದಾಗಿ ಸ್ಪಷ್ಟವಾಯಿತು. ಮುಂಚಿನ ದಿವಸವೇ ಅಖಿಲ ಭಾರತೀಯರು ಆಳರಸರಿಗೆ ತಮ್ಮ ನಿರ್ಧಾರವನ್ನು ತಿಳಿಸಿದ್ದಾರೆ. ಮಹಾತ್ಮರೂ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ| ಅನ್ಸಾರಿಯವರೂ ಅಪೇಕ್ಷಿಸಿದಂತೆ ಮಂಗಳವಾರಕ್ಕೆ ನಮ್ಮೀ ಭರತ ಭೂಮಿಯ ಪ್ರಮುಖ ಪಟ್ಟಣದಲ್ಲಿ ದೇಶಾಭಿಮಾನಿಗಳು ಸಭೆ ಸೇರಿ ಬಾರ್ಡೋಲಿ ಪ್ರಜೆಗಳಿಗೆ ಜನಬಲ ದ್ರವ್ಯಬಲಗಳನ್ನು ಪೂರೈಸುವ ಅಭಿವಚನ ಕೊಟ್ಟಿದ್ದಾರೆ. ಸತ್ಯಾಗ್ರಹ ಯುದ್ಧಶಾಸ್ತ್ರವಿಶಾರದರಾದ ಮಹಾತ್ಮರೂ, ಅವಶ್ಯಬಿದ್ದರೆ, ಬಾರ್ಡೋಲಿಯಲ್ಲಿ ರಣ ಹೂಡುವರಾಗಿ ಅವರ ಜೋಡುಗಾರರಾದ ಶ್ರೀ| ಮಹಾದೇವಭಾಯಿ ದೇಸಾಯಿಯವರು ಅಹಮದಾಬಾದದೊಳಗಿನ ಸಭೆಯಲ್ಲಿ ಹೇಳಿದರು. ಇದರ ಮೇಲಿಂದ ವಿಚಾರ ಮಾಡಿದರೆ, ಪ್ರಾಂತಿಕ ಸರಕಾರಕ್ಕೆ ವಿಪರೀತ ಬುದ್ಧಿ ಪ್ರೇರಣೆಯಾಗಿದೆಂದು ನಾವು ಹೇಳಬೇಕಾಗಿದೆ. ಪ್ರಜಾಧಿಕಾರವನ್ನು ಬಾರ್ಡೋಲಿಯವರು ಎಷ್ಟಕ್ಕೂ ತ್ಯಜಿಸಲಿಕ್ಕಿಲ್ಲ. ಈ ಮಾತು ತ್ರಿಕಾಲಾಬಾಧಿತ ಸತ್ಯವು. ಅಂದ ಬಳಿಕ, ಸರಕಾರಕ್ಕೆ ಈ ವಿಪರೀತ ಬುದ್ಧಿಯಿಂದ ಕ್ಷೇಮವಾಗಬಲ್ಲದೇ ?

ಸ್ಫುಟ ಸೂಚನೆಗಳು.

೧. ಚೀನ ದೇಶದ ರಾಷ್ಟ್ರೀಯ ಸರಕಾರವು ಲೋಕೋಪಕಾರಿ ಪರರಾಷ್ಟ್ರಗಳಿಗೊಂದು ಜಾಹೀರನಾಮೆಯನ್ನು ಪ್ರಕಟಿಸಿದೆ. ಚೀನದೊಳಗಿನ ಯಾದವಿಯಲ್ಲಿ ಆತ್ಮರಕ್ಷಣದ ನೆವಮಾಡಿ ರಾಷ್ಟ್ರೀಯರಿಗೆ ಪ್ರತಿಬಂಧಿಸಲು ಬ್ರಿಟಿಶರೂ, ಅಮೇರಿಕೆಯವರೂ, ಜಪಾನರೂ ಸೈನ್ಯಗಳನ್ನು ಒಯ್ದಿಟ್ಟಿದ್ದರು. ಅವನ್ನು ಹಿಂಗರೆದುಕೊಳ್ಳಬೇಕಾಗಿ ರಾಷ್ಟ್ರೀಯ ಸರಕಾರವು ಅಪ್ಪಣೆಯನ್ನಿತ್ತಿದೆ. ರಾಜಕಾರಣಿ ಬ್ರಿಟಿಶರಿಗೆ ರಾಜಕಾರಣದ ಪ್ರಸ್ತಾಪವನ್ನೇ ಚೀನ ಸರಕಾರವು ಮಾಡಿರುತ್ತದೆ; ಪರರಾಷ್ಟ್ರಗಳ ಸಹಕಾರವನ್ನೂ, ಸಹಾಯವನ್ನೂ ತಾವು ಅಲ್ಲಗಳೆಯುವವರಲ್ಲವಾಗಿ ನಮೂದಿಸಿ, ಚೀನದೇಶದ ಉದ್ಧಾರಕ್ಕೆ ಅನುಕೂಲವಾಗಿ ತಮಗೆ ನೆರವಾಗಲು ಪರರಾಷ್ಟ್ರಗಳಿಗೆ ವಿಜ್ಞಾಪಿಸಿಕೊಂಡಿದೆ. ಪರರಾಷ್ಟ್ರೀಯರು ಹೋದ ಹೋದಲ್ಲಿ ಅವರ ರಕ್ಷಣೆಗಾಗಿ ಅವರವರು ಸೈನ್ಯವನ್ನಿಡುತ್ತ ಹೋಗುವದಾದರೆ ಆ ಮಹಾನುಭಾವರಿಗೆ ಚೀನದಲ್ಲಿ ಪ್ರವೇಶವನ್ನೀಯದಂತೆ ನಿರುಪಾಯದಿಂದ ಪ್ರತಿಬಂಧಿಸಬೇಕಾಗುವದೆಂದೂ ರಾಷ್ಟ್ರೀಯ ಸರಕಾರವು ಮುಂಜಾಗ್ರತೆಯನ್ನಿತ್ತಿದೆ. ಲೋಕೋಪಕಾರಿಗಳ ನಿಜವೇಷವನ್ನು ರಾಷ್ಟ್ರೀಯರು ಅರಿತಿದ್ದಾರೆ. ಚೀನಿಯರಿಗೆ ಎಲ್ಲಿಯ ಸರಕಾರವು ಪಾಲಿಸುತ್ತಿರುವಾಗ, ಪರರಾಷ್ಟ್ರದವರಿಗೆ ಮಾತ್ರ ಪಾಲಿಸಲು ಸ್ವತಂತ್ರ ಸೈನ್ಯ ಬೇಕೇನು ? ಚೀನ ದೇಶದಲ್ಲಿ ಈ ಪ್ರಕಾರ ಜಂಜು ಪ್ರವೇಶ ಮಾಡಿ ಚೀನೀಯರಿಗೆ ಸದಾ ಸರ್ವದಾ ಸುಲಿಯುವ ಹಂಚಿಕೆಯಿದೆಂದು ಸಾಮಾನ್ಯ ರಾಜಕಾರಣಿಗಳಿಗೆ ಬಲ್ಲಾದ ವಿಷಯವಾಗಿದೆ. ರಾಷ್ಟ್ರೀಯರು ಚೀನದೇಶದ ರೋಗನಿದಾನವನ್ನು ಸರಿಯಾಗಿ ಮಾಡಿದ್ದಾರೆಂದು ಎಲ್ಲರೂ ಹೇಳುತ್ತಾರೆ. ಈಗ ಪರರಾಷ್ಟ್ರದವರು ಸೈನ್ಯವನ್ನಿಟ್ಟರೆ ಕೈಕಟ್ಟಿ ಹಿಡಿದು ರಾಷ್ಟ್ರೀಯ ಸರಕಾರವು ಇವರಿಗೆ ಹೊಂತಕರು ನಸು. ಚೀನದಲ್ಲಿ ನಾವು ಹೇರಳ ಹಣ ಖರ್ಚ ಮಾಡಿದ್ದೇವೆ; ನಮಗೆ ಸಂರಕ್ಷಣೆ ಬೇಕು. ಇತ್ಯಾದಿ ಪುರಾಣದ ಕಡೆಗೆ ಈಗ ಲಕ್ಷ್ಯಕೊಡುವವರಾರಿಲ್ಲ. ಇದರ ಮೇಲಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ಪ್ರಾಪ್ತಿಯಾದರೆ ಬ್ರಿಟಿಶರು ಹಿಂದುಸ್ಥಾನದಲ್ಲಿ ಖರ್ಚ ಮಾಡಿದ ಹಣದ ಭದ್ರತೆ ನಷ್ಟವಾಗುವದೆಂಬ ಸಾಧನೆಯು ತೀರ ನಿರಾಧಾರವಾದದ್ದೆಂದು ಚೀನದೊಳಗಿನ ರಾಷ್ಟ್ರೀಯರು ಪ್ರಕಟಣೆಯ ದ್ವಾರಾ ಸಾರಿಹೇಳಿದ್ದಾರೆ. ಬ್ರಿಟಿಶರು ಇನ್ನಾದರೂ ಈ ನೆವ ಹೇಳಲಾಗದು. ಫ್ರಾನ್ಸ, ಜರ್ಮನಿ, ಅಮೇರಿಕಾ ಮುಂತಾದ ರಾಷ್ಟ್ರಗಳಲ್ಲಿ ಉಳಕೊಳ್ಳುತ್ತಿರುವ ಪರರಾಷ್ಟ್ರದವರ ಪಾಲನಕ್ಕಾಗಿ ಪ್ರತ್ಯೇಕ ಸೈನ್ಯವನ್ನಿಡಲು ಆಯಾ ದೇಶದವರಿಗೆ ಇಂಬಿತ್ತಿದಾಗ ಇಂಥ ಅಧಿಕಾರವನ್ನು ಇಜಿಪ್ತ-ಹಿಂದುಸ್ಥಾನ-ಚೀನ ಮುಂತಾದ ಪೌರ್ವಾತ್ಯ ದೇಶಗಳಲ್ಲಿ ಮಾತ್ರ ಈ ಪ್ರಸಂಗವೇಕೆ ? ಇದೊಂದು ಲೂಟಿ ಮಾಡುವ ಸಭ್ಯ ಪ್ರಕಾರವೇ ?

---

೨. ಬೆಳಗಾಂವಿಯ ದೇಸಾಯಗಾರರು ಸ್ವಹಿತ ರಕ್ಷಣಕ್ಕಾಗಿ 'ಬೆಳಗಾಂವಿ ಶೇತಕರಿ ಸಂಘ' ವೆಂಬದೊಂದು ಸಂಘವನ್ನು ಸ್ಥಾಪಿಸಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ| ಬ| ಅಂಗಡಿ ಹಾಗು ರಾ| ಪಂಡಿತಪ್ಪಾ ಚಿಕ್ಕೋಡಿಯವರು ಈ ಸಂಘದ ಕಾರ್ಯಕಾರಿ ಮಂಡಳದಲ್ಲಿದ್ದು ಪರಿಸ್ಥ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ| ದತ್ತೋಪಂತ ದೇಸಾಯಿಯವರು ಅಧ್ಯಕ್ಷರಾಗಿದ್ದಾರೆ. ಬೆಳಗಾವಿ ಮುನಿಸಿಪಾಲಿಟಿಯ ಅಧ್ಯಕ್ಷ-ಉಪಾಧ್ಯಕ್ಷರಾದ ರಾ| ಭೀಮರಾವ ಪೋತದಾರ, ಯಶವಂತರಾವ ಅಂಕಲಿ, ಹಾಗು "ರಾಷ್ಟ್ರವೀರ" ಪತ್ರಿಕೆಯ ಸಂಪಾದಕರಾದ ರಾ| ಶಾಮರಾವ ದೇಸಾಯಿಯವರು ಈ ಸಂಘದ ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟಿದ್ದಾರೆ. "ಹೊಲಗಳ ಪುನರ್ಘಟನೆಯ ಕಾನೂನಿನ" ಅಂಗ-ಉಪಾಂಗಗಳ ಚರ್ಚೆ ನಡಿಸಿ ಜಿಲ್ಲೆಯೊಳಗೆ ಲೋಕಮತವನ್ನು ಘಟಿಸಿ, ಕಾಯಿದೆ ಕೌನ್ಸಿಲಿನಲ್ಲಿ ಈ ಕಾನೂನನ್ನು ರದ್ದುಪಡಿಸಿಕೊಳ್ಳುವ ಪ್ರಯತ್ನ ಮಾಡಲಿಕ್ಕೂ, ಅಂಥ ರದಿಯನ್ನು ಕೊಡಿಸಿದ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ತೀರ್ವೆಯನ್ನೇರಿಸುವ ಪರಮಾವಧಿಯನ್ನು ನಿರ್ಣಯಿಸಲು ಅಗಲಿಕ್ಕಿದ್ದ ಕಾನೂನನ್ನು ಕಿತ್ತೊಗೆಯಲಿಕ್ಕೂ ಈ ಸಂಘದವರು ಪ್ರಯತ್ನಪಡುವರು. ದೇಸಾಯಗಾರರ ಕಲ್ಯಾಣಕ್ಕಾಗಿ ಹಗಲಿರುಳು ಚಿಂತಿಸುತ್ತಿರುವ ಆಳರಸರ ಲೋಕೋಪಕಾರವು ಈ ಸಂಘದಿಂದ ದೇಸಾಯಗಾರರಿಗೆ ತಿಳಿಸಿಕೊಳ್ಳಲ್ಪಡುವದು. ಶ್ರೀ| ದತ್ತೋಪಂತ ದೇಸಾಯಿಯವರಂಥ ನಿಃಸ್ಸೀಮ ರಾಷ್ಟ್ರೀಯ ಸಭೆಯ ಅನುಯಾಯಿಗಳೂ, ರಾ| ಬ| ಅಂಗಡಿಯವರಂಥ ನೇಮಸ್ತರೂ, ರಾ| ಪಂಡಿತಪ್ಪ ಚಿಕ್ಕೋಡಿಯವರಂಥ ಸ್ವತಂತ್ರ ಮತದವರೂ, ಬ್ರಾಹ್ಮಣ-ಬ್ರಾಹ್ಮಣೇತರರೂ, ತಮ್ಮ ತಮ್ಮ ಪಕ್ಷಭೇದಗಳನ್ನು ಅಲಕ್ಷಿಸಿ, ದೇಸಾಯಗಾರರ ಮೇಲೆ ಬಾಗಿದ ಆಪತ್ತನ್ನು ಪರಿಹರಿಸುವದಕ್ಕಾಗಿ ಟೊಂಕ ಕಟ್ಟಿದ್ದನ್ನು ನೋಡಿ ನಮಗೆ ಸಂತೋಷವಾಗುತ್ತದೆ. ಬೆಳಗಾಂವ ಜಿಲ್ಲಾ ಬೋರ್ಡಿನ ಅಧ್ಯಕ್ಷಸ್ಥಾನದ ಅಧಿಕಾರಕ್ಕಾಗಿ ಮುಂಬಯಿ ಹೈಕೋರ್ಟಿನ ತನಕ ಅನಾವಶ್ಯಕವಾಗಿ ವ್ಯಾಜ್ಯ ನಡಿಸಿದ ರಾ| ಅಂಗಡಿ-ಚಿಕ್ಕೋಡಿಯವರು ಈಗ ದೇಸಾಯಗಾರರ ಕಲ್ಯಾಣಕ್ಕಾಗಿ ಐಕ್ಯತ್ವದ ನೋಟವು ಬಲು ರಮಣೀಯವಿದೆ; ಬೋಧಪ್ರದವಿದೆ. ಹೀಗೆಯೇ ಕರ್ನಾಟಕದೊಳಗಿನ ಮುಂದಾಳುಗಳು ಪಕ್ಷಭೇದದ ದ್ವೇಷವನ್ನು ಸತತವಾಗಿ ಪ್ರದರ್ಶಿಸದೆ, ಅಲ್ಲಿಂದಲ್ಲೇ ಮರೆತು ಲೋಕಕಾರ್ಯದ ಕಡೆಗೆ ದೃಷ್ಟಿ ಕೊಟ್ಟು ವರ್ತಿಸಬೇಕಾಗಿ ನಾವು ಬಿನ್ನೈಸುವೆವು.

---

೩. ಬ್ರಿಟಿಶರಿಗೂ, ಅಮೇರಿಕೆಯವರಿಗೂ, ಯುದ್ಧಕ್ಕೆ ತಡೆಹಾಕುವ ಕುರಿತು ಕರಾರುಗಳು ನಡೆಯುತ್ತಿವೆ. ಬ್ರಿಟಿಶರ ಪಕ್ಷದಿಂದ ಪರರಾಷ್ಟ್ರದ ಮಂತ್ರಿಗಳಾದ ಚೆಂಬರಲೇನ ದೊರೆಗಳು ತಮ್ಮ ಹೇಳಿಕೆಯಂತೆ ಯುದ್ಧವನ್ನು ಹೊರದೂಡುವ ವಿಚಾರ ಮಾಡುತ್ತಿದ್ದರೆ, ಕರಾರು ಮಾಡಿಕೊಳ್ಳಲು ಅಡ್ಡ ಇಲ್ಲವಾಗಿ ಬರೆದಿದ್ದಾರೆ. ಸಾಮ್ರಾಜ್ಯದ ಮರ್ಮಸ್ಥಾನಗಳನ್ನು ಕಾಪಾಡಿಕೊಳ್ಳುವ ಸಂಪೂರ್ಣ ಅಧಿಕಾರವು ತಮ್ಮದೇ ಇರಬೇಕಾಗಿ ಬ್ರಿಟಿಶ ಪ್ರಧಾನರ ಹೇಳಿಕೆ, ಅದಕ್ಕೆ ಪ್ರತಿಬಂಧಿಸಲು ಯಾವ ರಾಷ್ಟ್ರಕ್ಕೂ ಅಧಿಕಾರವಿರಬಾರದಂತೆ ! ಹೀಗೆ ಹೀಗೆ ಹಟಮಾರಿತನದಿಂದ ಕರಾರಾಗುವದು ಸಾಧ್ಯವಿಲ್ಲವೆಂದು ನಾವು ಹೇಳಬೇಕೇ ? ಇತ್ತ ಬರ್ಕನಹೆಡ್ ದೊರೆಗಳು ಜರ್ಮನಿಗೆ ಹೋಗಿಬಂದರು. ಜರ್ಮನಿಯು ಮುಂಚಿನ ಶತ್ರುರಾಷ್ಟ್ರವು; ಈಗ ಮಿತ್ರರಾಷ್ಟ್ರವಾಗುವದಂತೆ!! ರಶಿಯಾ ದೇಶಕ್ಕೆ ಇದಿರಾಗಲು ಜರ್ಮನಿಯ ಗೆಳೆತನವನ್ನು ಸಂಗ್ರಹಿಸಲು ಬರ್ಕನ್‌ಹೆಡ್ ದೊರೆಗಳು ವೀರ್ಯ ಕೊಂಡಿದ್ದರು. ಸ್ನೇಹಸಂಬಂಧವು ಕೂಡಿ ಬಂದಿರುವದಾಗಿ ಬಲ್ಲವರ ಹೇಳಿಕೆ ಇದೆ. ಸೇನಾಪತಿ ವ್ಹೊನ್ ಸೀಕ್‌ರವರು ಜರ್ಮನ ಜನಾಂಗದ ರಾಯಭಾರಿಗಳಾಗಿ ಬ್ರಿಟಿಶ ದೇಶಕ್ಕೆ ನೇಮಿಸಲ್ಪಟ್ಟಿದ್ದಾರೆ. ಇವರು ಬ್ರಿಟಿಶರಿಗೆ ಅನುಕೂಲವಾದ ಪಕ್ಷದವರಂತೆ! ಅದರಿಂದ ರಶಿಯಾ ದೇಶದ ಮೇಲೆ ಜರ್ಮನಿಯನ್ನು ಮುಂದೆ ಮಾಡಿ ಬ್ರಿಟಿಶರು ದಾಳಿಯನ್ನೆಬ್ಬಿಸುವ ಕುಹಕದಲ್ಲಿದ್ದಾರೆಂದು ಹೇಳುತ್ತಾರೆ. ಬ್ರಿಟಿಶರ ಚಾಣಕ್ಯತಂತ್ರಗಳನ್ನು ಹೊಗಳಿದಷ್ಟು ಕಡಿಮೆ. ಬೆಲ್ಜಮ, ಫ್ರಾನ್ಸ ದೇಶಗಳಿಗೆ ಮುಂದೆ ಮಾಡಿ ಹಿಂದೆ ಜರ್ಮನಿಗೆ ಬ್ರಿಟಿಶರು ಇದಿರಾ

ದರೆ ಈಗ ಜನ [illegible] ನಿಗೆ [illegible] ದೆ ನೂಕಿ [illegible] ದೇಶಕ್ಕೆ ಹೊಡೆಯಲು ಬ್ರಿಟಿಶರು ಹೊಂಚ [illegible] ದ್ವಾರೆ ವರರ [illegible] ಗೂ ಡು ಹೊಡೆಯುವುದರಲ್ಲಿ ಬ್ರಿಟೀಶರ [illegible] ಇನ್ನಾವ್ಯರಿಲ್ಲಿ [illegible] ಯ [illegible] ಗ [illegible] ದೊಂದ ನಿಜ '

ಸ್ಥಾನಿಕ ವೃತ್ತಾಂತ.

ಕುಮಟಾ— ಒಮ್ಮಲೇ [illegible] ದ್ದರಿಂದ ವೂಲಿ ಬೀಜವೆಲ್ಲ ಕೊಳೆತುಹೋಯಿತು [illegible] ದಿನಗಳಿಂದ [illegible] ಈ ತನಕ [illegible] ಈ ವಾರದಲ್ಲಿ ೧೦ [illegible]

[illegible] ಯಿಂದ [illegible] ಬಳ್ಳಿ ಘಾಟಿಯ [illegible] ಬಿದ್ದು [illegible] ಸಿಗೆ [illegible] ಆಸ್ಪತ್ರೆಯಲ್ಲಿ [illegible] ಹೊಂದ [illegible] ಕೆಲ ಮಾಟ್ಟಿಗೆ ಉಂಟು [illegible] ಹತ್ತಿ ಹೋಗಲು [illegible] ಹತ್ತಿ [illegible] ಪೋಲೀಸರ [illegible]

[illegible]

ಕೊಗಲಬಳ್ಳಿ— [illegible] ಸನಾತನ [illegible] ವಿದ್ಯಾಲಯವು [illegible] ಸಂಸ್ಕೃತ [illegible] ಗಳನ್ನು [illegible] ವಿದ್ಯಾಲಯದ [illegible] ಈ ವಿದ್ಯಾಲಯದ [illegible] ಈ ವಿದ್ಯಾಲಯವು [illegible]

ಕಾರವಾರ— ಎಜ್ಯುಕೇಶನಲ್ ಇನ್ಸ್‌ಪೆಕ್ಟರರು [illegible] ಶಾಸ್ತ್ರಿಯವರು [illegible] ಇಂಗ್ಲಿಷ ಕಲಿ ಸುವ [illegible] ವಿಚಾರ [illegible] ವಿಶ್ವವಿದ್ಯಾಲಯದ [illegible] ಶಾಸ್ತ್ರಿಯವರು ಈ ವಿಷಯ [illegible] ವರು ಮಾಡುವ ಅಭಿವಚನವಿತ್ತಿದ್ದಾರೆ

[illegible] ವಂಗ [illegible] ಈ [illegible] ಈ ಪ್ರಯೋಗಗಳ [illegible] ಶಸ್ತ್ರಚಿಕಿತ್ಸೆಯಿಂದ [illegible] ಆಸ್ಪತ್ರೆ [illegible] ಸಂಗತಿಯು [illegible]

ವೇ | [illegible] ಇಲ್ಲಿಯ [illegible] ಈ [illegible]

[illegible] ವಕೀಲ [illegible] ಬಿಜ್ಜೂರ [illegible] ಕಾಗದಗಳಿಗೆ [illegible] ಅಧಿಕಾರ [illegible] ಈ ಪ್ರಶ್ನೆಯ [illegible] ಸುದ್ದಿಗಾರರು [illegible] ಬಿದ್ದ [illegible] ಈ ರರಾವು [illegible] ಸುದ್ದಿಗಾರರಿಗೆ [illegible] ಬಿಜ್ಜೂರರ ಮೇಲೆ [illegible] ಈ ಪ್ರಕರಣವ [illegible] ಇಲ್ಲ (thankless task) ನಿಮ್ಮ ಸುದ್ದಿಗಾರರು ಈ ಪ್ರಕಾರ [illegible] ಜವಾಬದಾರ ಸುದ್ದಿಗಾರರನ್ನು ನೇಮಿಸಿಕೊಳ್ಳುವ [illegible]

[ಡಾ॥ ಶೆಟ್ಟಿಯವರ ಪತ್ರದ ಪ್ರತಿ ನಮ್ಮ ಹೊನ್ನಾವರದ ಬಾತ್ಮೀದಾರರಿಗೆ ಕಳಿಸಿ ಅವರಿಂದ [illegible] ಯಿಂದ ಬಂದ ಉತ್ತರದ ಸಾರಾಂಶವನ್ನು ಇದರಡಿ ಪ್ರಕಟಿಸಿದ್ದೇವೆ ನಮ್ಮ ಸುದ್ದಿಗಾರರು ಬರೆಯುವದೇನಂದರೆ — " ಡಾ॥ ಶೆಟ್ಟಿಯವರ ವಕೀಲಿಯಕ್ಕೋಣಿ, ನಾನು ಅಕ್ಷರಿಗೊಂಡ [illegible] ಅಂದರೆ ಅಲಕ್ಷದಿಂದ ತಮ್ಮ ಹುದ್ದೆಯು ಕೆಲವು ಕಾಗದಗಳ ಮೇಲೆ " ಉಪಾಧ್ಯಕ್ಷರೆಂ"ದು ತೋರಿಸೋಣಾದದ್ದಕ್ಕೆ ಅವರು ಒಪ್ಪುತಾರೆ ಆ ದಿನದ ಚರ್ಚೆಯ ಹಕೀಕತನ್ನು ಅವರು ಆಕ್ಷೇಪಿಸ ವದಿಲ್ಲ ಆದರೆ ಹಾಗೆ ಹುದ್ದೆ ತೋರಿಸಿದ ಮಾತ್ರದಿಂದ ತಾವು "ಉಪಾಧ್ಯಕ್ಷರಾಗಲಿಲ್ಲೆಂ"ದು ಡಾ॥ ಶೆಟ್ಟಿಯವರು ಹೇಳುತ್ತಾರೆ ನನಗೊಪ್ಪಿಗೆ ! ಅಧ್ಯಕ್ಷರು ಉಪಾಧ್ಯಕ್ಷರನ್ನಾಗಿ ನೇಮಿಸಿದರೂ ಡಾ॥ ಶೆಟ್ಟಿಯವರು ಉಪಾಧ್ಯಕ್ಷರಾಗು [illegible] ಕಾರ್ಯ [illegible] ಯಲ್ಲಿಯೂ ಅಲಕ್ಷ ಮಾಯಿತೆಂದು ಡಾ॥ ಶೆಟ್ಟಿಯವರ ಹೇಳಿಕೆ ಹೀಗೆ ಎಲ್ಲವೂ ಕುರುಡ ದರಬಾರದ ಬಳಿಕ ಡಾ॥ ಶೆಟ್ಟಿಯವರು ನನ್ನ ಮೇಲೆ " ಹೊಗಡಿಸುವ " ಆರೋಪ ಹೊರಿಸಿದ್ದನ್ನು ನೋಡಿ 'ಫಿಜೀಯನ್ ಹೀಲ ದಾಯ್‌ಸೆಲ್ಫ' (ವೈದ್ಯರೇ, ಮೊಟ್ಟಮೊದಲು ನಿಮ್ಮ ಚಿಕಿತ್ಸೆ ನಡೆಯಲಿ!" ಎಂದು ಹೇಳಬೇಕಾಗಿದೆ ಕಾರ್ಯಕ್ರಮ ಪತ್ರಿಕೆಯು ತಿದ್ದುಪಡಿ ಮಾಡುವ ಪ್ರಕಾರ ನನಗೆ ಗೊತ್ತಿಲ್ಲ. ಈ ಪ್ರಕಾರಗಳು ಡಾ॥ ಶೆಟ್ಟಿಯವರ ಪತ್ರದ ಮೂಲಕವೇ ನನಗೆ ತಿಳಿದುಬಂತು ಡಾ॥ ಬಿಜ್ಜೂರರ ವಕೀಲಿ ಮಾಡಹೋಗಿ ಡಾ॥ ಶೆಟ್ಟಿಯವರು ಡಾ॥ ಬಿಜ್ಜೂರರ ಅಪಾತ್ರತೆಯನ್ನಷ್ಟು ಪ್ರಕಟಿಸಿಬಿಟ್ಟರು [illegible] ಗಳನ್ನು ನೋಡಿ ಡಾ॥ ಬಿಜ್ಜೂರರವರೆ, ಆಯೋಜಿಸಿದ ಕಾರ್ಯಕ್ರಮ ಪತ್ರಿಕೆಯಲ್ಲಿ ಉಪಾಧ್ಯಕ್ಷರ ನೇಮಣೂಕಿಗೆ ಮನ್ನಣೆಯೆಂದು ಸ್ಪಷ್ಟ ಶಬ್ದಗಳಿವೆ ಡಾ॥ ಶೆಟ್ಟಿಯವರಂತೆ ಉಪಾಧ್ಯಕ್ಷರ ಒಡನೆ [illegible] ದೂ, ಉಪಾಧ್ಯಕ್ಷರಾಗಿ ನೇಮಿಸುವದೂ ಬೇರೆ ಬೇರೆಯೆಂದು ತಿಳಿಯುವಷ್ಟು ಸೂಕ್ಷ್ಮಬುದ್ಧಿಯು ಡಾ॥ ಬಿಜ್ಜೂರರವರಲ್ಲಿಲ್ಲ ಅಧಿಕಾರವಿಲ್ಲದೆ ಅಧಿಕಾರಿಗಳು ಸಹಿ ಮಾಡುವಲ್ಲಿ, ಸಹಿ ಮಾಡಲು ಇತರರಿಗೆ ಅಧಿಕಾರವಿರುತ್ತದೆಂಬ ನೋಟವ [illegible] ಬಿಜ್ಜೂರರಿಂದ ಗ್ರಹಿಸಲಾಗಲಿಲ್ಲ ನೇಮಣೂಕಿ ಮಾಡುವ ಅಧಿಕಾರವು ಅಧ್ಯಕ್ಷರಿಗೆ ಇಲ್ಲವೆಂಬುದು ಡಾ॥ ಶೆಟ್ಟಿಯವರು ಒಪ್ಪತಕ್ಕ ಮಾತು ಅಧಿಕಾರವಿಲ್ಲದವರು ನೇಮಣೂಕಿ ಮಾಡದೆ ಸಹಿ ಮಾಡಲು [illegible] ನೇಮಣೂಕಿ ಮಾಡಲು ಅಧ್ಯಕ್ಷರಿಗಿರುವ ಅಧಿಕಾರವು ಲೋಕಲ್ ಬೋರ್ಡ ಕಾಯಿದೆಯ ಯಾವ ಕಲಮಿನಲ್ಲಿ ಹೇಳಲ್ಪಟ್ಟಿದೆ? ಕಾಯಿದೆಯಿಂದಲೇ ಈ ಅಧಿಕಾರವು ಅಧ್ಯಕ್ಷರಿಗಿದ್ದರೆ ಬೋರ್ಡಿನಲ್ಲಿ ಅದನ್ನೇ ಮನ್ನಿಸಿ ಕೊಳ್ಳಲು ಕಾರಣವೇನು ? ಆಗಿನ್ನಾದ ಅರ್ಥವಂತು ನನಗೆ ತಿಳಿಯುವದಿಲ್ಲ ನಾಮ್ಯಕರ್ತೆಯವರು ೧೫ ನೇ ತಾರೀಖಿಗೆ ಹೋಗುವವರಿದ್ದರು ೧೩ ನೇ ತಾರೀಖಿಗೇ ಆಗಿನ್ನ ಪತ್ರವ್ಯವಹಾರದ ಸ್ವರೂಪ ಬಿದ್ದು ಹೀಗೆ ಶಾಂತಿಯಾದದ್ದಿದ್ದರೆ, ಆ ಪತ್ರವ್ಯವಹಾರವನ್ನು ೧೪ ನೆ ತಾರೀಖಿನೊಳಗೆ ತಯಾರಿಸಲು [illegible] ಜನರಿಂದ ಸಾಧ್ಯವಾಗಲಿಕ್ಕಿಲ್ಲವಾಗಿ ಮೂರು ದಿನ ಮುಂಚಿತವಾಗಿ ತಿಳಿದು ಹೋಯಿತೇನು ? ಅಷ್ಟು ಆಗತ್ಯದ ಪತ್ರವ್ಯವಹಾರದ ನಾಟಕವಿದೆ [illegible] ಮಾಡಿದ್ದರೆ ಈ ನೇಮಣೂಕಿಯ ಮರ್ಮವು ಹೊರಬೀಳುತ್ತಿತ್ತು ಡಾ॥ ಶೆಟ್ಟಿಯವರಿಗೆ ಸಹಿ ಮಾಡಲು ಸುಖ ಕಾಣದಿದ್ದರೆ, ಅವರಿಗೆ ಇಂಥ ದೊಡ್ಡ ಜಬಾಬದಾರಿಯನ್ನು ಕೊಳ್ಳ ಹೇಳಿದವರ್‍ಯಾರು ' ಇದು ಕ್ಷುದ್ರ ವಿಷಯವಲ್ಲ ಜಬಾಬುದಾರಿಯು ನಡಿಸುವ ಜೀಜಬಾಬದಾರಿಯ ವಿಷಯ ' ಇತ್ಯಾದಿ ಸುದ್ದಿಗಾರರು ಬರೆಯುತ್ತಾರೆ ಈ ವಿವರದ ಮೇಲಿಂದ ಡಾ॥ ಶೆಟ್ಟಿಯವರು ನಮ್ಮ ಸುದ್ದಿಗಾರರ ಮೇಲೆ ಮಾಡಿದ ಆಕ್ಷೇಪವು ನಿರಾಧಾರವಲ್ಲೆಂದು ಹೇಳಬೇಕೇ? ನಮ್ಮ ಸುದ್ದಿಗಾರರು ಜಬಾಬದಾರ ಜನರೆಂದು ಡಾ॥ ಶೆಟ್ಟಿಯವರಿಗೆ ನಾವು ಈ ಮೂಲಕ ತಿಳಿಸುವೆವು ಸಂ]

ಬಾರ್ಡೋಲಿಯ ವೃತ್ತಾಂತ.

ಬಾರ್ಡೋಲಿಯಲ್ಲಿ ಪಠಾಣರ ಅತ್ಯಾಚಾರಗಳು ಭರದಿಂದ ಸಾಗಿವೆ. ಪಠಾಣರು ಮಹಾವಿಲಕ್ಷಣಗಳನ್ನು ಮರುವಲ ಕಟ್ಟಿಗೆಯನ್ನು ಕಳುವು ಮಾಡುತ್ತಾರೆ. ಹೆಂಗಸರಿಗೆ ಅಭದ್ರ ಬೈಗಳನ್ನು ಬಯ್ಯುತ್ತಾರೆ, ಹೊಡೆದ ಸುದ್ದಿಗಳೂ ಇವೆ. ಸ್ವಯಂಸೇವಕರೊಬ್ಬರಿಗೆ ಅಟ್ಟಿ ಹಿಡಿದ ಪಠಾಣನು ನಿಷ್ಕಾರಣ ಜಗ್ಗಿ ಪೋಲೀಸ ಠಾಣ್ಯಕ್ಕೆ ಒಯ್ದನಂತೆ. ಬಲು ಕಷ್ಟದಿಂದ ಸ್ವಯಂಸೇವಕನು ತಪ್ಪಿಸಿಕೊಂಡನು. ಸಿಂಹಗಡ ಊರಲ್ಲಿ ಪಠಾಣನು ಮನೆಯ ಯಜಮಾನಿಯ ಕೈಯಿಂದ ಕೊಟ್ಟಿಗೆಯ ಕೀಲಿಕೈಗಳನ್ನು ಕಸಕೊಂಡು ಕೊಟ್ಟಿಗೆಯಲ್ಲಿದ್ದ ಒಂದು ಎತ್ತನ್ನು ಜಪ್ತಿ ಮಾಡಿ ಎಳೆದೊಯ್ದನು. ಮುಂದೆ ಅದು ಒಮ್ಮೆ ಈ ಆಕೆಯಿಲ್ಲೆಂದು ನೋಡಿ ಪುನಃ ಆ ಮನೆಗೆ ಬಂದು ಹೊಕ್ಕನು. ಎಷ್ಟು ಅರ್ಜಿ ಮಾಡಿದ್ದಾಗ್ಯೂ ಆ ಎತ್ತು ಬರಲಿಲ್ಲ. ರಾಜಪುರದೊಳಗಿನ ಒಂದು ಮನೆಯಲ್ಲಿ ಪಠಾಣನು ಮನೆ ಹೊಕ್ಕು ಹೆಂಗಸರಿಗೆ ಭಂಭಯ ನೆ ಎಳೆತಂದು ಧಪರಾಕು ಕೊಟ್ಟನು, ಸೀರೆಯನ್ನು ಬಿಡಿಸಲಿಕ್ಕೆ ಪ್ರಯತ್ನಿಸಿದನು. ಗದ್ದಲ ಕೇಳಿ ನೆರೆಯವರೊಬ್ಬರು ಮೇಲುಪ್ಪರಿಗೆಯ ಮೇಲಿದ್ದ ಗಂಡನೂ ಓಡಿ ಬರಲು, ಪಠಾಣನಿಗೆ ಅಸಭ್ಯ ಪ್ರಕಾರಗಳನ್ನು ಮಾಡಬಾರದೆಂದು ತಿಳಿಸಿ ಹೇಳಿದನು. ಪರ್ಸೋನಲ್ ಇನ್‌ಸ್ಪೆಕ್ಟರ ಕಡೆ ಈ ಕುರಿತು ದೂರಿಕೊಂಡರೆ ಸುಳ್ಳೇ ಹೂಲಿ ಎಬ್ಬಿಸಲಾಗಿದೆಂದು ಅವರು ಹೇಳಿಬಿಟ್ಟರು. ಪತ್ರಾಪದ ಶ್ರೀ ಜಮನಲಾಲ ಬಜಾಜ, ಶ್ರೀ ಅಬ್ಬಾಸ ತಾಯಬಜಿ, ದರಬಾರ ಸಾಹೇಬ, ಗೋಪಾಲದಾಸ ಪ್ರಭೃತಿ ಲೋಕನಾಯಕರು ಅಲ್ಲಿ ಹೋಗಿ ಸ್ವತಃ ಚೌಕಸಿ ಮಾಡಿ ಈ ವಿಷಯವು ಖರೆಯದ್ದೆಂದು ಖಾತ್ರಿ ಮಾಡಿಕೊಂಡಿದ್ದಾರೆ.

ಪಟೇಲರೂ, ತಲಾಟಿಗಳೂ ರಾಜಿನಾಮೆ ಕೊಡುತ್ತಲಿದ್ದಾರೆ. ಅಂತು ೬೪ ಪಟೇಲರು ರಾಜಿನಾಮೆ ಕೊಟ್ಟರು. ೧೧ ಮಂದಿ ಉಗ್ರಾಣಿಗಳು ರಾಜಿನಾಮೆ ಕೊಟ್ಟರು. ವಾಂಕಿ ನೇರದ ತಲಾಟಿಯು ಪೆನ್ಶನಿಗೆ ತಯಾರಾಗಿದ್ದನು. ಆದರೂ ಪೆನ್ಶನನ್ನು ಲೆಕ್ಕಿಸದೆ ಆತನು ರಾಜಿನಾಮೆಯನ್ನಿತ್ತು ಅಧಿಕಾರಿಗಳ ನಡಾವಳಿಯನ್ನು ನಿಷೇಧಿಸಿದನು.

ಮಂಗಳವಾರಕ್ಕೆ ಬಾರ್ಡೋಲಿಯ ದಿನವು ಅಲ್ಲಲ್ಲಿ ಆಚರಿಸಲ್ಪಟ್ಟಿತು. ಬಾರ್ಡೋಲಿಗೆ ಸಹಾನುಭೂತಿ ತೋರಿಸಿ ನಿರ್ಧಾರಗಳಾದವು. ಅಲ್ಲಲ್ಲಿ ದ್ರವ್ಯಸಂಗ್ರಹ ಮಾಡುವ ನಿರ್ಧಾರವೂ ಆಯಿತು. ಕರ್ನಾಟಕದೊಳಗಿನ ಪ್ರಾಂತಿಕ ಕಾಯದೆ ಕೌನ್ಸಿಲಿನ ಸಭಾಸದರು ರಾಜಿನಾಮೆ ಕೊಡಬೇಕಾಗಿಯೂ ಧಾರವಾಡದ ಸಭೆಯಲ್ಲಿ ಇತ್ಯರ್ಥವಾಗಿದೆ. ಲಜಪತರಾಯರು ಲ್ಯಾಹೋರದಲ್ಲಿದ್ದಾರೆ. ಅಲ್ಲಿಂದ ಅವರು ಬಾರ್ಡೋಲಿಗೆ ೨೦೦೦ ರೂಪಾಯಿ ಕಳುಹಿದ್ದಾರೆ.

ಪಟೇಲ-ತಲಾಟಿಗಳು ಅಸಹಯೋಗಿಗಳ ಪೀಡನೆಯನ್ನು ಸಹಿಸಲಾರದೆ ರಾಜಿನಾಮೆ ಕೊಟ್ಟರೆಂದು ಸರಕಾರವು ಪ್ರಕಟಿಸಿದ ಹೊರತು ಸರಕಾರಿ ಅಧಿಕಾರಿಗಳ ಕಷ್ಟ-ನಷ್ಟಗಳಿಂದಲ್ಲ. ಒಬ್ಬ ತಲಾಟಿಯು ಕಲೆಕ್ಟರರ ಕಡೆಗೆ ಹೋಗಿ ಅಸಹಕಾರಿಗಳ ಪೀಡನೆಯನ್ನು ತನ್ನಿಂದ ಸ್ವರಿಸಲಾಗುವದಿಲ್ಲವಾಗಿ ಹೇಳಿ, ರಾಜಿನಾಮೆಯನ್ನು ಕೊಡಲು ತನಗೆ ಮನಸ್ಸಿದ್ದಿಲ್ಲವಾಗಿಯೂ ಹೇಳಿದನು. ಒಬ್ಬ ಪಟೇಲನೂ ಅದೇ ಪ್ರಕಾರ ಹೇಳಿ, ರಾಜಿನಾಮೆ ಕೊಡಲು ತನಗೆ ಒತ್ತಾಯವಾಯಿತಾಗಿ ಕಲೆಕ್ಟರರ ಕಡೆ ಸ್ವತಃ ಹೇಳಿದನು. ಉಳಿದವರಿಗೆ ಭೆಟ್ಟಿಯಾಗಲು ಕಲೆಕ್ಟರರಿಗೆ ಅನುಕೂಲವಾಗಲಿಲ್ಲ. ಬಹಳ ಮಾಡಿ ಅಸಹಕಾರಿಗಳ ಒತ್ತಾಯದಿಂದಲೇ ಅವರು ರಾಜಿನಾಮೆ ಕೊಟ್ಟಿದ್ದಿರಬೇಕಾಗಿ ಸರಕಾರದ ಹೇಳಿಕೆ. ಏಳು ಮಂದಿ ತಲಾಟಿಗಳು ತೀರ್ವೆ ಕೊಡದವರು. ಸಾಮಾನ್ಯವಾಗಿ ಎಲ್ಲರೂ ಸರಕಾರಕ್ಕೆ ನೆರವಾದವರಲ್ಲ. ಅಸಹಕಾರಿಗಳೊಡನೆ ಒಳಸಂಚು ಮಾಡುವವರೆಂದೂ ಸರಕಾರವು ಪ್ರಕಟಿಸಿದೆ. ಅಸಹಕಾರಿಗಳೊಡನೆ ಒಳಸಂಚು ಮಾಡುವವರಿಗೆ ಅಸಹಕಾರಿಗಳು ಹೇಗೆ ಪೀಡಿಸಿದರು? ಸ್ವತಃ ತೀರ್ವೆ ಕೊಡದವರು ಕಲೆಕ್ಟರರಿಗೆ ಹೇಗೆ ಭೆಟ್ಟಿಯಾಗಿ ಅಸಹಕಾರಿಗಳ ದೂರು ಹೇಳಿದರು? ಎಂಬ ವಿಸಂಗತ ಸಂಗತಿಗಳು ಸರಕಾರಿ ಪ್ರಕಟನೆಯಲ್ಲಿ ಪ್ರಕಟವಾಗಲಿಲ್ಲ. ರಾಜಿನಾಮೆ ಕೊಟ್ಟ ೭ ಮಂದಿ ತಲಾಟಿಗಳು ಸರಕಾರಿ ಪ್ರಕಟನೆಯಾದ ಮಾರನೇ ದಿವಸವೇ ಸರಕಾರಿ ಹೇಳಿಕೆಯು ಸುಳ್ಳೆಂದೂ, ಆತ್ಮಸಂತೋಷದಿಂದ ತಾವು ರಾಜಿನಾಮೆ ಕೊಟ್ಟವೆಂದೂ ಬರೆದಿದ್ದಾರೆ. ರಾಥೋಡಜೀ ಮೋಹನಭಾಯಿ ಎಂಬ ತಲಾಟಿಗೂ, ಕಲೆಕ್ಟರರಿಗೂ ರಾಜಿನಾಮೆಯ ವಿಷಯ ಮಾತುಕಥೆಯಾಗಲಿಲ್ಲ. ಮಿ॥ ಕಲೆಕ್ಟರರಿಗೂ, ರಾಥೋಡಜೀಯವರಿಗೂ ಮಾತುಕಥೆ ನಡೆಯಿತು. ರಾಜಿನಾಮೆಯನ್ನು ತಿರುಗಿ ಪಡಕೊಳ್ಳಲು ಅವರು ಬಲು ಪ್ರಯತ್ನ ಮಾಡಿದರು. “ರಜೆ ಅರ್ಜಿ ಕೊಡಿರಿ, ಅಥವಾ ಬಗೆ ಮಾಡಿಕೊಳ್ಳಲೊಲ್ಲಿರಿ, ಬಗೆ ಮಾಡಿಕೊಂಡರೆ ಹೆಚ್ಚಿನ ಪಗಾರ ವ್ಯವಸ್ಥೆ ಮಾಡುತ್ತೇನೆ” ಇತ್ಯಾದಿ ಹೇಳಿದಾಗ್ಯೂ ರಾಥೋಡಜೀಯವರು ಒಪ್ಪದೆ ರಾಜಿನಾಮೆಯನ್ನೇ ಸ್ವೀಕರಿಸಬೇಕಾಗಿ ಹೇಳಿದರು. ತಲಾಟಿಗೆ ನಂಬಬೇಕೋ? ಕಲೆಕ್ಟರರಿಗೆ ನಂಬಬೇಕೋ? ಪಠಾಣರ ನಿರ್ಜಾಲ ನಡಾವಳಿಯನ್ನು ಸರಕಾರವು ಸಹ ಧಿಕ್ಕರಿಸದಾಗ್ಯೂ ಅವರಿಗೆ ಹಿಂಗರೆದುಕೊಳ್ಳಲು ಏರ್ಪಾಟು ನಡೆದದೆಂಬುದು ಪ್ರಕಟವಾಗಿದೆ.

ಸಂದುರ ಗಢೀಕ ಎಂಬುವರು ಜಪ್ತಿ ಮಾಡಿದ ಭೂಮಿಯನ್ನು ಲಿಲಾವಿನಲ್ಲಿ ಪಡೆದರು. ಅದರಿಂದ ಆಗಸಗೂ, ಕೊಲೆಯರೂ ಅವರಿಗೆ ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ಆಗಸರು ಇನ್ನು ಮುಂದೆ ಗಢೀಕ ಮನೆಯವರ ಅರಿವೆ-ಅಂಚಡಿಗಳನ್ನು ಒಗೆಯಲಿಕ್ಕಿಲ್ಲ. ಹೊಲೆಯರು ಕೀಳು ಥಬಾನೆಗಳನ್ನು ಸ್ವಚ್ಛ ಮಾಡಲಿಕ್ಕಿಲ್ಲ. ಇದಕ್ಕೆ ಮಿಕ್ಕಿ ಜಾತಿಯವರ ಪಡೆದರೆ, ೫೦—೧೦೦ ರ ತನಕ ದಂಡ ಕೊಡಬೇಕಾದೀತಾಗಿ ವಿಧಿಸಲಾಗಿದೆ.

ಮಂಕಾನೇರದೊಳಗಿನ ೧೧ ಮಂದಿಗಳ ಮೇಲೆ ದೊಂಬಿ ನಡಿಸಿದೆಂಬ ಖಟ್ಲೆಯ ನಿರ್ಣಯವು ಅದರೊಳಗಿನ ಪುರಾವೆಯು ಸಾಕಷ್ಟಿಲ್ಲದಿದ್ದಾಗ್ಯೂ ಆ ಮಂದಿಗಳಿಗೆ ೬-೬ ತಿಂಗಳ ಕ್ಷೇದಾಗಿದೆ. ಈ ಅಪರಾಧಿಗಳಿಗೆ ಬೇಡಿ ಹಾಕಿ ಜೇಲಿನಿಂದ ಒಯ್ದರು. ಆದರೂ ಎಲ್ಲರೂ ಬಲು ವಿನೋದದಿಂದಿದ್ದರು. “ಮುಂಗೈ ಗಡಿಯಾಂಗಳಿಗಿಂತ ಈ ಬೇಡಿಗಳು ಚಲೋ ಕಾಣುತ್ತವೆ” ಎಂದು ಒಬ್ಬರು ನುಡಿದರು. ಉಗಿಬಂಡಿಯಲ್ಲಿ ಏರಲು “ವಂದೇ ಮಾತರಂ” ಘೋಷ ಮಾಡಿದರು. ಹೆದರುವದಿಲ್ಲೆಂದು ನೋಡಿ ಪೋಲೀಸರೂ ಕಡೆ ನಾಚಿಕೆಪಟ್ಟರು. ಗೇಣು ಹೊಟ್ಟೆಗಾಗಿ ನಾವು ಈ ಕರ್ತವ್ಯವನ್ನು ಮಾಡಬೇಕಾಗಿದೆಂದು ಪೋಲೀಸರು ಉದ್ಗರಿಸಿದರು.

ಸದುಯಯನ್ನು ಜಪ್ತಿ ಮಾಡಿದ ಬಗ್ಗೆ ದೊರಾಬಜಿಯವರು ತಮ್ಮ ಅಂಗಡಿಯನ್ನು ಮುಚ್ಚಿದ್ದರು. ಅಂಗಡಿಯನ್ನು ಮುಚ್ಚಿದ ಬಗ್ಗೆ ಕಾಯಿದೆಯಂತೆ ಇಲಾಜು ಯಾಕೆ ಕೈಕೊಳ್ಳಬಾರದೆಂಬ ಬಗ್ಗೆ ಕಾರಣಗಳನ್ನು ತೋರಿಸಲು ನೋಟೀಸು ಹೊರಟಿದೆ. ದೊರಾಬಜಿಯವರು ಚೊಕ್ಕ ಉತ್ತರ ಕೊಟ್ಟರು. ಸರಕಾರಕ್ಕೆ ಎಲ್ಲ ಸಂಗತಿಗಳೂ ಈ ಮುಂಚೆಯೇ ಗೊತ್ತಾಗಿವೆ. ಸರಕಾರದ ಮೇಲೆಯೇ ಯಾಕೆ ಇಲಾಜು ನಡಿಸಬಾರದೆಂದು ಸರಕಾರವೇ ಕಾರಣ ತೋರಿಸತಕ್ಕದ್ದು.

ವಾಲೋಡ ತಾಲೂಕಿನ ಗ್ರಾಮದಲ್ಲಿ ಕುಡಿಯಲು ಜಲವಿಗಲಿಲ್ಲ. ಎಲ್ಲರ ಮನೆಗಳೂ ಮುಚ್ಚಿಕೊಂಡಿದ್ದರಿಂದ ಎಲ್ಲಿಯೂ ಹೋಗಲು ಅಂಬಿರಲಿಲ್ಲ. ಪಟೇಲರ ಮನೆಯ ಕಿಡಿಕಿಯ ಬಳಿಯಲ್ಲಿ ಹೋಗಿ ಬಿರಿದಿಯಿಂದ ಮಾಮಲೇದಾರರು ಬಂದು ಕಲ್ಪ ತುಂಬ ಜಲ ಕೊಡಲು ಹೇಳಿಕೊಂಡಿದ್ದರಿಂದ ಕನಿಕರಪಟ್ಟು ತಂಬು ಜಲ ಕೊಟ್ಟನಾಗಿ ಪಟೇಲರು ಹೇಳಿದರು. ಈ ಸಂಗತಿಯನ್ನು ಕೇಳಿ ಶ್ರೀ ವಲ್ಲಭಭಾಯಿ ಪಟೇಲರು ಮುಂಜಾಗ್ರತೆ ಕೊಟ್ಟಿದ್ದೇನಂದರೆ ಜಲದಂಥ ಅಲ್ಪ ಸೇವೆಯನ್ನು ಕೊಡತಕ್ಕ ಸೇವೆ ಒಪ್ಪಬಹುದು, ಆದರೆ ಉಪಾಯ ಸಂಭವಿಸದಂತೆ ನೀವು ಎಚ್ಚರಿಕೆಯಿಂದಿರತಕ್ಕದ್ದು. ಕಾಲಕಾಲಕ್ಕೆ ಜಲದಲ್ಲಾಗಲೀ ಹಾಲಿನಲ್ಲಾಗಲೀ ವಿಷಹರೆಂದು ನೊಣ ಬಿದ್ದು ಅವರಿಗೇನಾದರೂ ಸಂಭವಿಸಿದರೆ ನೀವು ಹೊಣೆಗಾರರಾಗುವಿರಿ. ಆದರಿಂದ ಅವಶ್ಯರ ಬಟ್ಟೆಗೆ ಅವರ ಸಹವಾಸಕ್ಕೆ ಹೋಗಬೇಡಿ”, ಒಬ್ಬರು ಶ್ರೀ ವಲ್ಲಭಭಾಯಿ ಪಟೇಲರ ಬಳಿಗೆ ಬಂದು “ನಮಗೆ ಸರೆ ಹಿಡಿಯುವರೇನು?” ಎಂದು ಚಿಂತಾತುರರಾಗಿ ಕೇಳಿದರು. “ನನಗೇಕೆ ಸರೆ ಹಿಡಿಯುವರು? ದನಗಳಿಗೆ ಹಿಡಿದು ಮಾರಿದರೆ ಕೆಲವು ಹಣ ಸಿಗುತ್ತದೆ. ನನಗೆ ಹಿಡಿದು ಏನು ಪ್ರಯೋಜನ?” ಎಂದು ಶ್ರೀ॥ ಪಟೇಲರು ನುಡಿಯಲು, ಅಲ್ಲಿಯಲ್ಲಿದ್ದವರು ನಕ್ಕರು.

ಮೆಜಿಸ್ಟ್ರೇಟರು ಮತ್ತೆ ಹೊಸ ಕೋರ್ಟುಗಳನ್ನು ಮಾಡಿ ಶಿಕ್ಷೆ ಕೊಡಲು ಪ್ರಾರಂಭಿಸಿದ್ದಾರೆ. ಆರೋಪಿಗಳ ಮೋರೆಯ ಮುಂದೆ ಕಂದೀಲು ಹಿಡಿದು ಗುರುತು ತೋರಿಸಲಾಗುತ್ತದೆ. ಸರಾಯಿ ಕುಡಿದು ಸಾಕ್ಷಿಗಾರರು ಸಾಕ್ಷಿ ಕೊಡುವದೂ ಉಂಟು.

ಶ್ರೀ॥ ವಲ್ಲಭಭಾಯಿಯವರು, ಸರಕಾರಕ್ಕೆ ಜಪ್ತಿ ಮಾಡಿದ ಭೂಮಿಗಳ ಲಿಲಾವಿನ ರಕಮನ್ನು ಪ್ರಕಟಿಸಲು ಆಹ್ವಾನ ಮಾಡಿದ್ದಾರೆ. ಅದನ್ನು ಪ್ರಕಟಿಸಿದರೆ, ಸರಕಾರವು ತೀರ್ವೆ ಏರಿಸಿದ ಭೂಮಿಯ ಬೆಲೆಗೂ ಪ್ರತ್ಯಕ್ಷ ಬೆಲೆಗೂ ತುಲನೆಯಾಗುವದೆಂತಲೂ ಶ್ರೀ॥ ವಲ್ಲಭಭಾಯಿಯವರು ಹೇಳುತ್ತಾರೆ.

ಮಹಾತ್ಮರ ಕಾರ್ಯಕರ್ತರಾದ ಶ್ರೀ॥ ಮಹಾದೇವ ಭಾಯಿ ದೇಸಾಯಿಯವರು ಒಂದು ಗ್ರಾಮಕ್ಕೆ ಹೋಗಿದ್ದರು. ಅಲ್ಲಿಯ ಒಬ್ಬರೊಡನೆ ಮಾತಾಡಿದ್ದರ ಮೇಲಿಂದ ಅಲ್ಲಿಯ ನಿರ್ಧಾರವು ವ್ಯಕ್ತವಾಗುತ್ತದೆ. “ನಮ್ಮ ಗ್ರಾಮದಲ್ಲಿ ಒಂದು ಸಹ ದನವಿಲ್ಲ. ಬೆಲೆ ಬರಬಹುದಾದ ಒಂದು ಸಹ ಜಿಂದಗಿಯು ಸರಕಾರದ ಕೈಸೇರದಂತೆ ನಾವು ಏರ್ಪಾಟು ಮಾಡುವೆವು. ನಾವು ಹಿತ್ತಾಳೆಯ ಪಾತ್ರಗಳನ್ನು ಈಗ ಉಪಯೋಗಿಸುವದಿಲ್ಲ, ಮಣ್ಣಿನ ಪಾತ್ರಗಳಲ್ಲಿ ಉಣ್ಣುತ್ತೇವೆ, ಬಾಳೆಗಳ ಮೇಲೆ ಮಲಗುತ್ತೇವೆ. ಇನ್ನು ಈ ಕಾದಾಟವು ಮುಂದವರಿದರೆ ಊರವರು ಮನೆಬಿಟ್ಟು ಧರ್ಮಶಾಲೆಯನ್ನೇ ಪಡಿಸಿಕೊಂಡು ಅಲ್ಲಿ ಮಣ್ಣು ಪಾತ್ರಗಳಲ್ಲಿ ಉಣ್ಣುವೆವು. ಅವಶ್ಯ ಬಿದ್ದರೆ ದೇಶಾಂತರ ಮಾಡುವೆವು. ಹುಡುಗರಿಗೆ ಅತ್ತರ ಮನೆಗೆ ಕಳಿಸಲಾಗಿದೆ. ದನಕರುಗಳಿಗೂ, ಹೆಂಗಸರಿಗೂ ಬೇರೆ ಕಡೆ ಕಳಿಸಿದ್ದೇವೆ. ಖರೇ ಸಿದ್ಧ ಮಾಡುವದಕ್ಕೆ ನಾವಿಲ್ಲಿ ಬರುತ್ತೇವೆ. ಈ ಜಳಕಳಿಯಿಂದ ನಮಗೊಂದು ಉಪಕಾರವಾಗಿದೆ. ಚಹದ ಚಟ ನಮ್ಮಿಂದ ಬಿಡಲಾಗುತ್ತಿದ್ದಿಲ್ಲ. ಈಗ ದಿನಗಳಿಲ್ಲ, ಹಾಲಿಲ್ಲ! ಆದರಿಂದ ಚಹದ ಚಟಕ್ಕೆ ಬಗಿಹರಿದಂತಾಗಿದೆ. ಸೋಲುವದರ ಪರಿವೆಯಿಲ್ಲ. ಇನ್ನು ಮುಂದೆ ಕಾದಾಡಲು ನಮಗೆ ಬೋಧ ಶಕ್ಯವೆಂತಾಗುವದು” ಇತ್ಯಾದಿ ಆತನು ಹೇಳಿದನು.

ಜಪ್ತಿ ಮಾಡಿದ ಭೂಮಿಯನ್ನು ಮಾಗುಡಕ್ಕೆ ಮಾಡುವ ಆಲೋಚನೆಯಾಗುತ್ತಿದೆ. ಈ ಕಾಯಿದೆಭಂಗವು ಮಹಾತ್ಮರ ಆಲೋಚನೆಯಿಂದ ನಡಿಸಲ್ಪಡುವದು.

ಕಾಲಾಬಾ ಜಿಲ್ಲೆಯೊಳಗಣ ಕರನಿರಾಕರಣೆಯ ಚಳವಳಿಯ ಪ್ರವರ್ತಕರಾದ ಶ್ರೀ॥ ಗೋಸಾವಿಯವರು ಬಾರ್ಡೋಲಿಗೆ ಹೋಗಿ ಮರಳಿ ಅಲಿಬಾಗಕ್ಕೆ ಹೋದರು. ಬಾರ್ಡೋಲಿಯಂತೆಯೇ ಅಲಿಬಾಗದೊಳಗಿನ ಕರನಿರಾಕರಣೆಯ ಚಳವಳಿಯನ್ನು ಘಟಿಸಲು ಅವರು ಪ್ರಯತ್ನಿಸುತ್ತಿದ್ದಾರೆ. ಅಲಿಬಾಗದಲ್ಲಿ ಏರಿದ ತೀರ್ವೆಯನ್ನು ವಸೂಲ ಮಾಡುವದಕ್ಕಾಗಿ ಜಪ್ತಿಯ ನೋಟೀಸುಗಳು ಹೊರಟಿವೆ.

ಮೇಲೆ ಕಾಣಿಸಿದ ಅತ್ಯಾಚಾರದ ಸಂಗತಿಗಳು ಅಯಥಾರ್ಥವೆಂದೂ, ಬುದ್ಧಿಪೂರ್ವಕವಾಗಿ ಮಾಡಿದ ಅತಿಶಯೋಕ್ತಿಯವೆಂದೂ ಸರಕಾರವು ಪ್ರಕಟಿಸಿದೆ.

ಪಠಾಣರಿಗೆ ತೆಗೆದು, ಬಾರ್ಡೋಲಿಯಲ್ಲಿ ೩೦೦ ಮಂದಿ ಹೆಚ್ಚಿನ ಪೋಲೀಸ ಕಳಿಸುವ ಯೋಚನೆ ನಡೆದಿದೆ. ೫೦ ಟೋಪಿಯವರು ಹೋಗಿದ್ದಾರೆ. ಕಲೆಕ್ಟರು ಹಸ್ತಪತ್ರಿಕೆಗಳನ್ನು ಹಂಚಿ ಶಾಂತತೆ ಬೇಕಾದರೆ ಸರಕಾರಿ ತೀರ್ವೆಯನ್ನು ಕೊಡಲು ಬೇಸಾಯಗಾರರಿಗೆ ಬುದ್ಧಿ ಹೇಳಿದ್ದಾರೆ.

ಪುಣೆಯ ನೇಮಿತ್ತ ವಿಚಾರದ ಭಾರತ ಸೇವಕ ಸಮಾಜವು ತನ್ನ ಕಡೆಯಿಂದ ಬಾರ್ಡೋಲಿಯಲ್ಲಿ ಕೆಲಸ ಮಾಡಲು ಶ್ರೀ॥ ಬಳವಂತ ಠಕ್ಕರೆಯವರನ್ನು ಕಳುಹಿದ್ದಾರೆ.

ಮಹಾತ್ಮರ ಆತ್ಮಚರಿತ್ರ.

(೮) ಲಕ್ಷ್ಮಣ ಜೋಕಾಲಿ ಸಂಕ.

ಗುರುಕುಲಕ್ಕೆ ಹೋಗಿ ಅಜಾನುಬಾಹುಗಳಾದ ಮಹಾತ್ಮಾ ಮುನ್ಷೀರಾಮಜೀಯವರಿಗೆ ಭೆಟ್ಟಿಯಾದ ಬಳಿಕ ಮನಸ್ಸಿಗೆ ಸಮಾಧಾನವೆನಿಸಿತು. ಹರಿದ್ವಾರದೊಳಗಿನ ಗದ್ದಲಕ್ಕೂ ಗುರುಕುಲದೊಳಗಿನ ಶಾಂತತೆಗೂ ಇದ್ದ ಆಶ್ಚರ್ಯಜನಕವಾದ ಭೇದವು ನನಗೆ ಆಗಲೇ ಅನುಭವಕ್ಕೆ ಬಂತು. ಮಹಾತ್ಮರು ನನಗೆ ಪ್ರೇಮಾತಿಶಯದಿಂದ ಆದರಾತಿಥ್ಯ ಮಾಡಿದರು. ಬ್ರಹ್ಮಚಾರಿಗಳು ನನ್ನ ಕಡೆ ಕೆಲಸ ಮಾಡಲು ಹಗಲಿರುಳೂ ಸಿದ್ಧರಾಗಿರುತ್ತಿದ್ದರು. ಆಚಾರ್ಯ ರಾಮದೇವಜೀಯವರ ಪರಿಚಯವಾದದ್ದು ಇಲ್ಲಿಯೇ. ಆಗಲೇ ಅವರೊಂದು ದೊಡ್ಡ ಚೈತನ್ಯಶಕ್ತಿಯೆಂದು ನಾನು ತಿಳಿದೆನು. ಅನೇಕ ವಿಷಯಗಳ ಮೇಲೆ ನಮ್ಮ ಮತಭೇದವಿತ್ತು, ಆದರೂ ನಮ್ಮ ಪರಿಚಯವು ಶೀಘ್ರವೇ ಗೆಳೆತನವಾಗಿ ಪರಿಣಮಿಸಿತು.

ಆಚಾರ್ಯ ರಾಮದೇವಜೀಯವರ ಬಳಿಗೂ, ಇತರ ಅಧ್ಯಾಪಕರ ಬಳಿಗೂ ಗುರುಕುಲದಲ್ಲಿ ಉದ್ಯೋಗ ಶಿಕ್ಷಣ ಕೊಡಲು ನಾನು ಬಹಳವಾಗಿ ಚರ್ಚಿಸಿದೆನು. ಗುರುಕುಲದಲ್ಲಿ ಬಹಳ ಕಾಲ ಉಳಿಯಲಾಗಲಿಲ್ಲ. ಅಲ್ಲಿಂದ ಹೊರಡುವಾಗ ನನಗೆ ಬಹಳ ಕೆಡಕೆನಿಸಿತು.

ಗಂಗಾ ನದಿಯ ಮೇಲೆ ಲಕ್ಷ್ಮಣ ಜೋಕಾಲಿ ಎಂಬುದೊಂದು ಸಂಕವಿದೆ. ಅದರ ಹೊಗಳಿಕೆಯನ್ನು ನಾನು ಬಹಳ ಕೇಳಿದ್ದೆ. ಈ ಸಂಕವು ಹೃಷಿಕೇಶದಿಂದ ಸ್ವಲ್ಪ ದೂರವಿದೆ. ಸಂಕ ನೋಡಿದ ಹೊರತು ಹರಿದ್ವಾರದಿಂದ ಹೋಗಲಾಗದೆಂದು ಗೆಳೆಯರನೇಕರು ನನಗೆ ಹೇಳಿದರು. ಈ ಯಾತ್ರೆಯನ್ನು ಪಾದಚಾರಿಯಾಗಿ ಮಾಡಬೇಕೆಂದು ನನ್ನ ಸಂಕಲ್ಪವಾಯಿತು. ೨ ಪ್ರಯಾಣ ಮಾಡಿಕೊಂಡು ಅಲ್ಲಿಗೆ ಹೋಗಿ ಮುಟ್ಟಿದೆನು.

ಹೃಷಿಕೇಶದಲ್ಲಿ ಸನ್ಯಾಸಿಗಳನೇಕರು ನನಗೆ ಭೆಟ್ಟಿಯಾದರು. ಒಬ್ಬರಿಗಂತೂ ನೋಡಿ ನನಗೆ ಅತ್ಯಂತ ಹರುಷವಾಯಿತು. ಫೀನಿಕ್ಸ ಮಂಡಳವು ನನ್ನ ಜೊತೆಗಿತ್ತು. ಈ ಮಂಡಳದ ಕುರಿತು ಸ್ವಾಮಿಗಳು ಅನೇಕ ಪ್ರಶ್ನೆಗಳನ್ನು ಕೇಳಿದರು. ಧರ್ಮವನ್ನು ನಾವು ಚರ್ಚಿಸುತ್ತಿದ್ದೆವು. ಅದರ ಮೇಲಿಂದ ಧರ್ಮದ ಕಡೆ ನನಗೆ ಬಹಳ ಆಸಕ್ತಿಯಿರುವದಾಗಿ ಅವರಿಗೆ ತೋರಿತು. ಭಾಗೀರಥೀ ನದಿಯಲ್ಲಿ ಜಳಕ ಮಾಡಿಕೊಂಡು ಬರುವಾಗ ಅವರು ನನಗೆ ನೋಡಿದರು. ಆ ಕಾಲಕ್ಕೆ ನನ್ನ ಮೈಮೇಲೆ ಅಂಗಿಯಿದ್ದಿಲ್ಲ. ತಲೆಗೆ ರುಮಾಲಿದ್ದಿಲ್ಲ. ಅದರಿಂದ ನನಗೆ ಚಂಡಿಕೆಯಿಲ್ಲವಾಗಿಯೂ, ಯಜ್ಞೋಪವೀತವಿಲ್ಲವಾಗಿಯೂ ನೋಡಿದವರಿಗೆ ವ್ಯಸನವಾಯಿತು. ಅವರು ನನಗೆ ಹೇಳಿದ್ದೇನಂದರೆ — 'ನೀವು ಆಸ್ತಿಕರಿದ್ದು ಯಜ್ಞೋಪವೀತ ಚಂಡಿಗಳಿಲ್ಲದಿರುವದನ್ನು ನೋಡಿ ನನಗೆ ದುಃಖವಾಗುತ್ತದೆ. ಇವೆರಡೂ ಹಿಂದು ಧರ್ಮದ ಬಾಹ್ಯ ಚಿಹ್ನಗಳು. ಹಿಂದುಗಳು ಅವನ್ನು ಧರಿಸತಕ್ಕದ್ದು.'

ಇದನ್ನು ನಾನು ತ್ಯಜಿಸಿದ ಬಗ್ಗೆ ಒಂದು ಚಿಕ್ಕ ಇತಿಹಾಸವಿದೆ. ನಾನು ೧೦ ವರ್ಷದ ಹುಡುಗನಿದ್ದಾಗ ಬ್ರಾಹ್ಮಣ ಮಕ್ಕಳು ಜನಿವಾರಕ್ಕೆ ಕೀಲಿಕೈಗಳನ್ನು ಕಟ್ಟಿಕೊಂಡು ಆಡುವದನ್ನು ನೋಡಿ ನನಗೂ ಅವರಂತೆಯೇ ಅನುಕರಿಸಬೇಕೆಂದೆನಿಸಿತು. ಕಾಠೇವಾಡದೊಳಗಿನ ವೈಶ್ಯರಲ್ಲಿ ಆ ಕಾಲಕ್ಕೆ ಯಜ್ಞೋಪವೀತವನ್ನು ಧರಿಸುವ ಪ್ರಘಾತವಿದ್ದಿಲ್ಲ. ತ್ರಿವರ್ಣದವರು ಯಜ್ಞೋಪವೀತವನ್ನು ಧರಿಸಲೇಬೇಕೆಂಬುದೊಂದು ಚಳವಳಿಯು ಈಗ ನಡೆದಿದೆ. ಅದರಿಂದ ಗಾಂಧಿ ಕುಟುಂಬದವರನೇಕರು ಯಜ್ಞೋಪವೀತವನ್ನು ಧರಿಸುತ್ತಾರೆ. 'ರಾಮರಕ್ಷೆ'ಯನ್ನು ನನಗೂ, ಇತರ ಒಬ್ಬಿಬ್ಬರಿಗೂ ಕಲಿಸುತ್ತಿದ್ದ ಬ್ರಾಹ್ಮಣರು ನಮಗೆ ಯಜ್ಞೋಪವೀತವನ್ನು ಹಾಕಿದರು. ನನ್ನ ಬಳಿ ಕೀಲಿಕೈ ಇರುವ ಪ್ರಸಂಗವಿದ್ದಿಲ್ಲ. ನಾನು ಒಂದನ್ನು ಸಂಪಾದಿಸಿ ಆಡತೊಡಗಿದೆನು. ಕೆಲ ಕಾಲದ ತರುವಾಯ ಜನಿವಾರವು ಹರಿದು ಹೋಯಿತು. ಆದರೆ ಅದರಿಂದ ನನಗೆ ವಿಶೇಷವೆನಿಸಿದ ನೆನಪಿಲ್ಲ. ಆದರೆ ಹೊಸ ಜನಿವಾರವನ್ನು ನಾನು ಆ ಮೇಲೆ ಧರಿಸಲಿಲ್ಲ.

ನನಗೆ ಪ್ರಾಯ ಬಂದಾಗ ಅನೇಕ ಹಿತಚಿಂತಕರು ಹಿಂದುಸ್ಥಾನದಲ್ಲೂ ದಕ್ಷಿಣ ಆಫ್ರಿಕೆಯಲ್ಲೂ ಪುನಃ ನನಗೆ ಜನಿವಾರ ಧರಿಸಲು ಮನವೊಲಿಸಲಾರಂಭಿಸಿದರು. ಆದರೆ, ಅದರಿಂದ ಫಲಪ್ರಾಪ್ತಿಯಾಗಲಿಲ್ಲ. ಶೂದ್ರರಿಗೆ ಯಜ್ಞೋಪವೀತ ಅಧಿಕಾರವಿಲ್ಲದಿದ್ದರೆ ಇತರ ವರ್ಣದವರಿಗಾದರೂ ಅದನ್ನು ಧರಿಸುವ ಅಧಿಕಾರವಿಲ್ಲೆಂದು ನಾನು ತರ್ಕಿಸಿದೆನು. ಇದೊಂದು ಅನಾವಶ್ಯಕವಾದ ಪರಿಪಾಠವನ್ನು ಅಂಗೀಕರಿಸಲು ನನಗೆ ತಕ್ಕ ಕಾರಣ ತೋರಲಿಲ್ಲ. ಜನಿವಾರ ನೂಲಿಗೆ ನನ್ನ ವಿರೋಧವಿರಲಿಲ್ಲ. ಆದರೆ ಅದನ್ನು ಧರಿಸುವ ಕಾರಣಗಳು ನನಗೆ ತೋರಲಿಲ್ಲ.

ನಾನು ವೈಷ್ಣವನಿದ್ದೆ. ಅದರಿಂದ ನಾನು ಕಂಠಿಯನ್ನು ಧರಿಸುತ್ತಿದ್ದೆ. ಚಂಡಿಕೆಯ ಸಂಬಂಧವಾಗಿ ಹಿರಿಯರ ಆಗ್ರಹವಿತ್ತು. ಇಂಗ್ಲಂಡಕ್ಕೆ ಹೋಗುವಾಗ ನಾನು ಚಂಡಿಕೆಯನ್ನು ತೆಗೆದೆನು. ಯಾಕಂದರೆ ಶಿಕ್ಷಣವೆಲ್ಲರದ್ದಾಗ ಇಂಗ್ಲಿಷರು ನನ್ನ ಚಂಡಿಕೆ ಕಂಡರೆ ಕಾಡು ಜಾತಿಯಲ್ಲಿ ನನ್ನ ಗಣನೆ ಮಾಡಿ ನನಗೆ ಹಾಸ್ಯ ಮಾಡಬಹುದೆಂಬ ಭೀತಿ ಇತ್ತು. ಇದೇ ಹೇಡಿತನದ ಭಾವನೆಯು ದಕ್ಷಿಣ ಆಫ್ರಿಕೆಯಲ್ಲಿ ಈ ಭಾವನೆಯಿಂದಲೇ ನನ್ನ ಸೋದರಳಿಯನಾದ ಛಗನಲಾಲ ಗಾಂಧಿಯ ಚಂಡಿಕೆಯನ್ನು ನಾನು ತೆಗೆಸಿದೆನು. ಧರ್ಮಾತ್ಮನಾಗಿ ಅವನು ಚಂಡಿಕೆಯನ್ನು ಕಾಯ್ದಿಕೊಂಡಿದ್ದನು. ಇದರಿಂದ ಲೋಕಸೇವೆಯು ಅಡ್ಡಿಯಾಗಬಹುದೆಂದು ನಾನು ಬಯಪಟ್ಟೆನು. ಅವನಿಗೆ ವಿಷಾದವೆನಿಸಿದರೂ, ನಾನು ಆ ಕಡೆ ಲಕ್ಷ್ಯಗೊಡದೆ ಅದನ್ನು ತೆಗೆಸಿದೆನು.

ಸ್ವಾಮಿಗಳಿಗೆ ಹಿಂದಿನ ಸ್ಥಿತಿಯನ್ನು ನಿವೇದಿಸಿ ನಾನು ಹೇಳಿದ್ದೇನಂದರೆ — "ಯಜ್ಞೋಪವೀತವನ್ನು ನಾನು ಧರಿಸಲಿಕ್ಕಿಲ್ಲ. ಅದರ ಅವಶ್ಯಕತೆಯು ನನಗಿಲ್ಲ. ಲಕ್ಷಾವಧಿ ಹಿಂದುಗಳು ಅದನ್ನು ಧರಿಸುವದಿಲ್ಲ. ಆದರೂ ಅವರು ಹಿಂದುಗಳೇ. ಜನಿವಾರವು ಆಧ್ಯಾತ್ಮಿಕ ಉನ್ನತಿಯ ಲಕ್ಷಣವು. ಯಜ್ಞೋಪವೀತವನ್ನು ಧರಿಸುವವರು ನಿರ್ಮಲ ಜೀವನವನ್ನು ಬುದ್ಧಿಪೂರ್ವಕವಾಗಿ ಪ್ರಯತ್ನಿಸತಕ್ಕದ್ದು. ಈಗಿನ ಹಿಂದು ಧರ್ಮದ ಹಾಗು ಹಿಂದುಸ್ಥಾನದ ಸ್ಥಿತಿಯಲ್ಲಿ ಇಷ್ಟು ಅರ್ಥವುಳ್ಳ ಚಿಹ್ನವನ್ನು ಧರಿಸುವ ಹಕ್ಕುಳ್ಳವರಾಗಿ ಹಿಂದುಗಳು ಹೇಳಬಲ್ಲರೇ? ಹಿಂದು ಧರ್ಮವು ಅಸ್ಪೃಶ್ಯತೆಯನ್ನು ಹೋಗಲಾಡಿಸುವದಲ್ಲದೆ ಉಚ್ಚ-ನೀಚ ಭೇದಗಳನ್ನೂ, ಇತರ ಅನೇಕ ಕಲಂಕಗಳನ್ನೂ ಅವಾಸ್ತವ ವಾದಗಳನ್ನೂ ಪರಿಹರಿಸಿದರೆ ಮಾತ್ರ ಆ ಅಧಿಕಾರವು ಹಿಂದುಗಳಿಗೆ ಬಂದೀತು. ಅದರಿಂದ ಪವಿತ್ರ ಜನಿವಾರವನ್ನು ಧರಿಸಲು ನನ್ನ ಮನಸ್ಸು ಎಂದಿಗೂ ತಯಾರಾಗುವದಿಲ್ಲ. ಆದರೆ, ಚಂಡಿಕೆಯ ವಿಷಯ ನೀವು ಮಾಡಿದ ಸೂಚನೆಯು ವಿಚಾರಾರ್ಹವಿದೆ. ಅದನ್ನು ನಾನೊಮ್ಮೆ ಧರಿಸುತ್ತಿದ್ದೆ. ಸುಳ್ಳು ಲಜ್ಜೆಯಿಂದ ಅದನ್ನು ನಾನು ಧಿಕ್ಕರಿಸಿದೆ. ಚಂಡಿಕೆಯನ್ನು ಪುನಃ ಇಟ್ಟುಕೊಳ್ಳಬೇಕೆಂದು ನನಗನಿಸುತ್ತಿದೆ. ಸಹಕಾರಿಗಳ ಬಳಿ ಈ ವಿಷಯವನ್ನು ಚರ್ಚಿಸುವೆನು."

ಸ್ವಾಮಿಗಳಿಗೆ ಯಜ್ಞೋಪವೀತದ ವಿಷಯ ನನ್ನ ವಿಚಾರಗಳು ಪ್ರಶಸ್ತ ತೋರಲಿಲ್ಲ. ಜನಿವಾರವನ್ನು ಧರಿಸದಿರಲಿಕ್ಕೆ ನಾನು ಹೇಳಿದ ಕಾರಣಗಳೆ ಅದನ್ನು ಧರಿಸಲು ಅನುಕೂಲವೆಂದು ಅವರ ಅಭಿಪ್ರಾಯವಾಯಿತು. ಹೃಷಿಕೇಶದೊಳಗೆ ಹೇಳಿದಂತೆಯೇ ಈಗಲೂ ನನ್ನ ಅಭಿಪ್ರಾಯವಿದೆ. ಭಿನ್ನ ಭಿನ್ನ ಧರ್ಮಗಳಿರುವವರೆಗೆ, ಅವನ್ನು ನಿರ್ದೇಶಿಸಲು ಭಿನ್ನ ಭಿನ್ನ ಬಾಹ್ಯ ಲಕ್ಷಣಗಳ ಅವಶ್ಯವಿದೆ. ಆದರೆ, ಆ ಲಕ್ಷಣವನ್ನೇ ದೊಡ್ಡ ಆಡಂಬರವಾಗಿ ಬಳಸಿ ಉಚ್ಚತ್ವದ ಸೂಚನೆ ಮಾಡಿಕೊಂಡ ಬಳಿಕ, ಅದನ್ನು ತ್ಯಜಿಸುವದೇ ಯೋಗ್ಯವಾಗುತ್ತದೆ. ಯಜ್ಞೋಪವೀತ ಧಾರಣದಿಂದ ಹಿಂದು ಧರ್ಮವನ್ನು ಉದ್ಧರಿಸುವದು ಸಾಧ್ಯವೆಂದು ನನಗೆ ತೋರುವದಿಲ್ಲ. ಆದ್ದರಿಂದ ಆ ಕಡೆ ನನ್ನ ಲಕ್ಷ್ಯವಿಲ್ಲ.

ಚಂಡಿಕೆಯನ್ನು ತೆಗೆಯಲು ಪುಕ್ಕತನವೇ ಕಾರಣವಾಗಿತ್ತು. ಕಾರಣ ಗೆಳೆಯರೊಡನೆ ಆಲೋಚಿಸಿ ಅದನ್ನು ಬೆಳಸಲಾರಂಭಿಸಿದೆನು.

ಲಕ್ಷ್ಮಣ ಜೋಕಾಲಿಯ ಸಂಕದ ವಿಷಯ ಈಗ ಹೇಳುವೆ. ಹೃಷಿಕೇಶದೊಳಗಿನ ಸೃಷ್ಟಿಸೌಂದರ್ಯವನ್ನೂ, ಲಕ್ಷ್ಮಣ ಜೋಕಾಲಿ ಸಂಕವನ್ನೂ ನೋಡಿ ನಾನು ಬೆರಗಾದೆ. ಈಶಸೃಷ್ಟಿಯೊಳಗಿನ ಸೊಬಗನ್ನು ಗ್ರಹಿಸಿ, ಆ ಸ್ಥಳಗಳಲ್ಲಿ ಧಾರ್ಮಿಕ ಭಾವನೆಯನ್ನು ದೂರದೃಷ್ಟಿಯಿಂದ ಉಂಟುಮಾಡಿದ ಹಿರಿಯರಿಗೆ ಆದರಾತಿಶಯದಿಂದ ವಂದನೆಗಳನ್ನರ್ಪಿಸಿದೆನು.

ಈ ಕ್ಷೇತ್ರಗಳನ್ನು ಜನರು ಉಪಯೋಗಿಸುವ ನಮೂನೆ ನೋಡಿ ನನಗೆ ಸಮಾಧಾನವೆನಿಸಲಿಲ್ಲ. ಹರಿದ್ವಾರದಂತೆ ಹೃಷಿಕೇಶದೊಳಗೂ, ಭಾಗೀರಥಿ ನದಿಯ ದಡಗಳ ಮೇಲೂ ಜನರು ಮಾರ್ಗಗಳ ಮೇಲೂ, ಹೊಲಸು ಮಾಡುತ್ತಿದ್ದರು. ನದಿಯ ಪವಿತ್ರವಾದ ಜಲಾಶಯವನ್ನು ಅಪವಿತ್ರ ಮಾಡಲಿಕ್ಕೂ ಅವರು ಹಿಂಜರಿಯುತ್ತಿದ್ದಿಲ್ಲ. ಮಾರ್ಗಗಳ ಮೇಲೂ, ನದಿಯ ದಡಗಳ ಮೇಲೂ ಜನರು ಮಲವಿಸರ್ಜನ ಮಾಡುವದನ್ನು ನೋಡಿ ನನಗೆ ಬಹಳ ವ್ಯಸನವಾಯಿತು. ಸ್ವಲ್ಪ ಅಚೆ-ಈಚೆ ಹೋದರೆ ಈ ಕ್ರಿಯೆಗಳನ್ನು ಮಾಡಲು ಬೇಕಷ್ಟು ಸ್ಥಳವಿತ್ತು.

ಲಕ್ಷ್ಮಣ ಜೋಕಾಲಿಯ ಸಂಕವೆಂದರೆ, ಗಂಗಾನದಿಯ ಮೇಲೆ ತೂಗಾಡುವ ಒಂದು ಸಂಕವಾಗಿತ್ತು. ಪೂರ್ವದಲ್ಲಿ ಅಲ್ಲಿ ಚಲೋ ಹಗ್ಗದ ಸಂಕವಿತ್ತಂತೆ. ಪುಣ್ಯಾತ್ಮ ಮಾರವಾಡಿಗಳೊಬ್ಬರು ಆ ಸಂಕವನ್ನು ತೆಗೆದು ಬಹಳ ಹಣ ಖರ್ಚು ಮಾಡಿ ಕಬ್ಬಿಣದ ಸಂಕವನ್ನು ರಚಿಸಿ, ಕೀಲಿಕೈಗಳನ್ನು ಸರಕಾರಕ್ಕೆ ಒಪ್ಪಿಸಿದರು. ಆ ಸಂಕವನ್ನು ನಾನೇನ ನೋಡಲಿಲ್ಲ. ಅದರಿಂದ ಆ ಕುರಿತು ನನ್ನಿಂದ ಅಭಿಪ್ರಾಯ ಕೊಡಲಾಗುವದಿಲ್ಲ. ಆದರೆ ಅಂಥ ಸನ್ನಿವೇಶದಲ್ಲಿ ಕಬ್ಬಿಣದ ಸಂಕಕ್ಕೆ ಸ್ಥಳವಿಲ್ಲ. ಅದರಿಂದ ಅಲ್ಲಿಯ ಸೌಂದರ್ಯಕ್ಕೆ ಒಂದು ಕಲಂಕವಾಗಿದೆ. ಆ ಯಾತ್ರಿಕರ ಸಂಕದ ಕೀಲಿಕೈಗಳನ್ನು ಸರಕಾರಕ್ಕೆ ಒಪ್ಪಿಸಿದ್ದು ನನಗೆ ಅಸಹ್ಯವಾಯಿತು. ಆ ಕಾಲಕ್ಕೆ ನಾನು ರಾಜನಿಷ್ಠನಿದ್ದೆ. ಸಂಕವನ್ನು ದಾಟಿದರೆ ಸ್ವರ್ಗಾಶ್ರಮ ಸಿಗುತ್ತದೆ. ಇದು ಬರೇ ನರಕ. ತಗಡಿನ ಮಾಡುಗಳಿಂದ ಕೂಡಿದ ಕೋಣೆಯ ಬಿಡಾರುಗಳಷ್ಟು ಅಲ್ಲಿವೆ. ಸಾಧಕರಿಗಾಗಿ ಇವುಗಳ ರಚನೆಯಾಗಿರುವದಂತೆ. ಆ ಕಾಲಕ್ಕೆ ಅಲ್ಲಿ ಸಾಧಕರ್ಯಾರೂ ಕಾಣಲಿಲ್ಲ. ಮುಖ್ಯ ಮಂದಿರದಲ್ಲಿ ಇದ್ದವರೊಬ್ಬರನ್ನು ನೋಡಿ ನನಗೆ ಸಮಾಧಾನವೆನಿಸಲಿಲ್ಲ.

ಹರಿದ್ವಾರದೊಳಗಿನ ಅನುಭವಗಳಿಂದ ನನಗೆ ಅಮೂಲ್ಯವಾದ ಸಹಾಯವಾಯಿತು. ನಾನೆಲ್ಲಿರಬೇಕು, ಏನು ಮಾಡತಕ್ಕದ್ದು ಎಂಬುದನ್ನು ನಿರ್ಣಯಿಸಲು ಈ ಅನುಭವಗಳೇ ಬಹುಮಟ್ಟಿಗೆ ಕಾರಣವಾದವು.

— ರಾಯಚೂರದೊಳಗಿನ ವೈಷ್ಣವ ಮಠಗಳೊಳಗಿನ ಬಿಕ್ಕಟ್ಟಿನ ಕಲಹಗಳು ನಡೆದಿವೆ ೧೦–೧೨ ವರ್ಷಗಳಾದರೂ ಅವುಗಳ ಸಂಧಾನವಾಗುವದಿಲ್ಲ. ಮಠದ ಮೇಲಾಧಿಕಾರಿಗಳಾದ ಪೀಠಸ್ಥರು ಮೂಗರಾಗಿದ್ದಾರೆ. ವೈಷ್ಣವ ಮಠಗಳಿಗೆ ಶಾಪ ಬಂದಿದೆಯೇನು? ಎಲ್ಲಿ ನೋಡಿದಲ್ಲಿ ಇದೇ ಕಥೆ. ವೈಷ್ಣವ ಮತಸ್ಥಾಪಕರಾದ ಶ್ರೀಮದಾನಂದತೀರ್ಥ ಸ್ವಾಮಿಗಳು ಸದ್ಬುದ್ಧಿಯನ್ನೀಯಬೇಕು.

— ದಾವಣಗೇರಿಯ ಪ್ರಾಣಿದಯಾ ಸಂಘದವರು ಉತ್ತಮ ಪ್ರತಿಯ ಹಸುಗಳನ್ನು ಸಾಕಿ ಅವುಗಳ ಹಾಲನ್ನು ಬಡಬಗ್ಗರಿಗೆ ಧರ್ಮ ಮಾಡುವರಂತೆ!

೧೪ನೇ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಪಾಸಾದ ಠರಾವುಗಳು.

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ನಿಜಾಮ ಸರಕಾರದವರು ಮೈಸೂರ ಮತ್ತು ಬ್ರಿಟಿಶ ಸರಕಾರಗಳು ವ್ಯವಸ್ಥೆ ಮಾಡಿರುವಂತೆ ಇಲ್ಲಿಯ ಕರ್ನಾಟಕ ಜಿಲ್ಲೆಗಳಲ್ಲಿ ಶಿಲಾಲಿಪಿಗಳ ಸಂಶೋಧನ ಕಾರ್ಯವನ್ನು ತೀವ್ರವೇ ಪ್ರಾರಂಭಿಸಿ ಯಾವತ್ತೂ ಸ್ಥಾನಗಳ ಲಿಪಿಗಳ ಅಚ್ಚನ್ನು ತೆಗೆದುಕೊಂಡವನ್ನು ಪ್ರಸಿದ್ಧಿಸಬೇಕೆಂದು ಪ್ರಾರ್ಥಿಸುತ್ತದೆ.

೮. ನಿಜಾಮ ಸಂಸ್ಥಾನದಲ್ಲಿ ಕೈಬರಹದ ಅಮೂಲ್ಯವಾದ ಗ್ರಂಥಗಳು ದೊರೆಯುವದರಿಂದ ಅವುಗಳನ್ನು ಸಂಗ್ರಹಿಸಬೇಕೆಂದು ನಿಜಾಮ ಸರಕಾರವನ್ನು ಪ್ರಾರ್ಥಿಸುತ್ತದೆ.

೯. ಜಮಖಂಡಿ ಸಂಸ್ಥಾನದ ಅಧಿಪತಿಗಳು ತಮ್ಮ ಸಂಸ್ಥಾನದಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪಿಸಿದಕ್ಕೋಸ್ಕರ ಈ ಸಮ್ಮೇಲನವು ಆ ಅಧಿಪತಿಗಳನ್ನು ಅಭಿನಂದಿಸುತ್ತದೆ. ಆದರೆ ಈಗಿರುವ ಶಾಲೆಗಳು ಸಾಕಷ್ಟು ಇಲ್ಲದಿರುವದರಿಂದ ಈ ಶಾಲೆಗಳನ್ನು ಹೆಚ್ಚಿಸಬೇಕೆಂತಲೂ ಈ ಸಂಸ್ಥಾನದಲ್ಲಿ ಈಗಿರುವ ಕನ್ನಡ ಶಾಲೆಗಳನ್ನು ಕೂಡ ತೆಗೆದುಹಾಕಬೇಕೆಂದೂ ಯೋಜನೆ ನಡೆದಿರುವದೆಂದು ಅಲ್ಲಿಯ ಪ್ರಜೆಗಳಿಗೆ ಅಂಜಿಕೆಯುಂಟಾಗಿರುತ್ತದೆ. ಆ ಪ್ರಕಾರ ಯೋಚನೆ ನಡೆದಿದ್ದರೆ, ಅದನ್ನು ಸರ್ವಥಾ ಬಿಟ್ಟುಕೊಡಬೇಕೆಂದು ಮತ್ತು ಆ ಪ್ರಕಾರದ ಆಶ್ವಾಸನವನ್ನು ಕೊಟ್ಟು ಪ್ರಜೆಗಳ ಅಂಜಿಕೆಯನ್ನು ದೂರ ಮಾಡಬೇಕೆಂದು ಈ ಸಮ್ಮೇಲನವು ಅವರನ್ನು ವಿಜ್ಞಾಪಿಸುತ್ತದೆ

೧೦. ಉತ್ತರ ಕರ್ನಾಟಕದಲ್ಲಿರುವ ಕೊಲ್ಹಾಪುರ, ರಾಮದುರ್ಗ, ಮಿರಜ ಸಾಂಗಲಿ, ಕುರುಂದವಾಡ, ಔಂಧ, ಅಕ್ಕಲಕೋಟೆ, ಜತ್ತ, ಮುಧೋಳ, ಜಮಖಂಡಿ ಮುಂತಾದ ಸಂಸ್ಥಾನಗಳಲ್ಲಿಯ ಕನ್ನಡ ಭಾಗಗಳ ಪ್ರಜೆಗಳ ಅನುಕೂಲಕ್ಕೋಸ್ಕರ ಕನ್ನಡ ಶಾಲೆಗಳನ್ನು ಸ್ಥಾಪಿಸಬೇಕೆಂದೂ, ಕೋರ್ಟು-ಕಚೇರಿಗಳಲ್ಲಿ ಕನ್ನಡ ಭಾಷೆಗೆ ಅವಕಾಶ ಕೊಡಬೇಕೆಂದೂ ಈ ಸಮ್ಮೇಲನವು ವಿಜ್ಞಾಪಿಸುತ್ತದೆ

೧೧. ಮೇಲಿನ ೯ ಮತ್ತು ೧೦ನೇಯ ನಿರ್ಣಯಗಳ ವಿಷಯವಾಗಿ ಆಯಾ ಸಂಸ್ಥಾನಗಳಿಗೆ ಹೋಗಿ ಪ್ರಯತ್ನಿಸುವದಕ್ಕೆ ಕೆಳಗೆ ಬರೆದ ಸದ್ಗೃಹಸ್ಥರದೊಂದು ಉಪಮಂಡಳವನ್ನು ನೇಮಿಸುತ್ತದೆ—

೧. ದಿವಾಣ ಬಹಾದ್ದೂರ ಶ್ರೀನಿವಾಸರಾವ ರೊದ್ದ,
೨ ರಾವಸಾಹೇಬ ಫಕೀರಪ್ಪ ಹಳಕಟ್ಟಿ,
೩. ಶ್ರೀ. ಹಣಮಂತರಾವ ಕೌಜಲಗಿ,
೪ ಕಾರ್ಯದರ್ಶಿಗಳು (ಕ. ಸಾ. ಪರಿಷತ್ತಿನ)
೫. ಶ್ರೀ. ಕೃಷ್ಣರಾವ ಮುದವೇಡಕರರು,
೬. ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ.

೧೨. ಗ್ವಾಲೇರಿಯಲ್ಲಿ ಕೂಡಿದ ಮಹಾರಾಷ್ಟ್ರ ಸಾಹಿತ್ಯ ಸಮ್ಮೇಲನದವರು ತಾವಾಗಿಯೇ ಆಮಂತ್ರಣ ಕೊಟ್ಟು ಕರೆಯಿಸಿಕೊಂಡ ಕರ್ನಾಟಕ ಸಾಹಿತ್ಯ ಪರಿಷತ್ತಿನ ಪ್ರತಿನಿಧಿಗಳನ್ನು ಆ ಪ್ರಕಾರ ಪ್ರತಿನಿಧಿಗಳಂತೆ ಗಣಿಸದಿದ್ದಕ್ಕೋಸ್ಕರ ಈ ಸಮ್ಮೇಲನ ವಿಷಾದಿಸುತ್ತದೆ.

೧೩. ಬ್ರಿಟಿಶ ಕರ್ನಾಟಕಕ್ಕೆ ಶಿಲಾಶಾಸನಗಳ ಇಲಾಖೆಯನ್ನು ಬ್ರಿಟಿಶ ಸರಕಾರದವರು ತೀವ್ರವೇ ಸ್ಥಾಪಿಸಬೇಕೆಂದು ಈ ಸಮ್ಮೇಲನವು ಬ್ರಿಟಿಶ ಸರಕಾರವನ್ನು ಕೇಳಿಕೊಳ್ಳುತ್ತದೆ.

೧೪. ಅಖಿಲ ಕರ್ನಾಟಕಕ್ಕೆ ಒಂದೇ ತರದ ಕ್ರಮಿಕ ಪುಸ್ತಕಗಳಿರುವದು ಅವಶ್ಯವಿರುವದರಿಂದ ಮೈಸೂರ ಹೈದರಾಬಾದ ಮತ್ತು ಬ್ರಿಟಿಶ ಸರಕಾರದವರು ಕೂಡಿ ಒಂದು ಕಮಿಟಿಯನ್ನು ಏರ್ಪಡಿಸಿ ಆ ಪ್ರಕಾರ ಕ್ರಮಿಕ ಪುಸ್ತಕಗಳನ್ನು ಸಿದ್ಧಪಡಿಸಬೇಕೆಂದು ಈ ಸಮ್ಮೇಲನವು ಕೇಳಿಕೊಳ್ಳುತ್ತದೆ.

೧೫. ಅಖಿಲ ಕರ್ನಾಟಕಕ್ಕೆ ಒಂದೇ ವಿಶ್ವವಿದ್ಯಾಲಯವಿರುವದು ಕರ್ನಾಟಕ ದೃಷ್ಟಿಯಿಂದ ಹಿತವಾಗಿರುವದರಿಂದ ಮೈಸೂರ ಮತ್ತು ಬ್ರಿಟಿಶ ಮತ್ತು ಹೈದರಾಬಾದ ಸರಕಾರದವರು ಕೂಡಿ ಆ ಪ್ರಕಾರದ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಎತ್ತುಗಡೆಯನ್ನು ಮಾಡಬೇಕೆಂಬುದಾಗಿ ಈ ಸಮ್ಮೇಲನವು ವಿಜ್ಞಾಪಿಸುತ್ತದೆ.

೧೬. ಕರ್ನಾಟಕದಲ್ಲಿ ಮೈಸೂರ ಮುಂಬಯಿ ಇಲಾಖೆಗಳಲ್ಲಿರುವ ಪಂಡಿತ ಪರೀಕ್ಷೆಗಳಲ್ಲಿ ಪಾಸಾಗಿ ಬಂದವರಿಗೆ ಮುಂಬಯಿ ಮತ್ತು ನಿಜಾಮ ಇಲಾಖೆಗಳಲ್ಲಿರುವ ಹೈಸ್ಕೂಲ ಮೊದಲಾದವುಗಳಲ್ಲಿ ನೇಮಿಸಿಕೊಂಡು ಅವರ ಪಾಂಡಿತ್ಯದ ಲಾಭವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡುವದು ಅವಶ್ಯವಾಗಿರುವದರಿಂದ, ಈ ಎರಡೂ ಸರಕಾರದವರು ಆ ಪ್ರಕಾರ ನೇಮಿಸಿಕೊಳ್ಳಬೇಕೆಂದು ಈ ಸಮ್ಮೇಲನವು ಮುಂಬಯಿ ಮತ್ತು ನಿಜಾಮ ಸರಕಾರಗಳನ್ನು ಕೇಳಿಕೊಳ್ಳುತ್ತದೆ.

೧೭. ಕೊಪ್ಪಳ ಜಹಗೀರಿಯಲ್ಲಿ ಮೊದಲು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡುತ್ತಿದ್ದದ್ದನ್ನು ನಿಲ್ಲಿಸಿರುವದರಿಂದ ಪುನಃ ಉಚಿತ ಶಿಕ್ಷಣವನ್ನು ಪ್ರಾರಂಭಿಸಬೇಕೆಂಬುದಾಗಿ ನವಾಬ ಸಾಲರಜಂಗ ಬಹದ್ದೂರರವರಿಗೆ ಪ್ರಾರ್ಥಿಸಿಕೊಳ್ಳುತ್ತದೆ.

ಮಹಾಯುದ್ಧದ ಪ್ರವರ್ತಕರೆಂಬುದಾಗಿ ಈಗ ಪದಚ್ಯುತರಾದ ಜರ್ಮನಿಯ ಕೈಸರ ಬಾದಶಹರು ಹದ್ದುಪಾರರಾಗಿದ್ದರಷ್ಟೇ ಹೊಲಂಡದಲ್ಲಿದ್ದಾಗ ಕೈಸರರು ಹರ್ಮ್ಯಾನ ಎಂಬ ಅರಸು ಮನೆತನದ ಸ್ತ್ರೀಯನ್ನು ಮದುವೆ ಮಾಡಿಕೊಂಡರು. ಡೂರ್ನ ಪಟ್ಟಣದಲ್ಲಿ ದಂಪತಿಗಳು ಸುಖದ ಸಂಸಾರ ಮಾಡುತ್ತಿದ್ದಾರೆ. ಹರ್ಮ್ಯಾನರು ವಿಧವೆ ೧೯೨೦ನೇ ಇಸ್ವಿಯಲ್ಲಿ ಅವಳ ಪತಿಯು ತೀರಿಕೊಂಡನು ಹಿರೇಗಂಡನಿಂದ ಇವಳಿಗೆ ಮೂವರು ಹುಡುಗರು, ೪ ಮಂದಿ ಹೆಣ್ಣುಮಕ್ಕಳು ಆಗಿದ್ದಾರೆ ಹರ್ಮ್ಯಾನಳ ಕೈಸರರ ವಯಸ್ಸಿನ ವಿಚಾರ ಮಾಡಿದರೆ ಇಬ್ಬರ ವಯಸ್ಸಿನಲ್ಲಿಯ ೨೮ ವರ್ಷ ಅಂತರವಿದೆ, ಕೈಸರರು ಹರ್ಮ್ಯಾನಳಿಗಿಂತ ಹಿರಿಯರು ೨೦ ನೇ ಶತಮಾನದ ಸುಧಾರಣಾಯುಗದಲ್ಲಿ ಸಧಾರಣೆಯ ಶಿಖರವನ್ನೇರಿದ ಪಾಶ್ಚಾತ್ಯ ರಾಷ್ಟ್ರದ ಸರದಾರರು ಸಂತತಿಯಿರುವ ವಿಧವೆಯನ್ನು ಮದುವೆ ಮಾಡಿಕೊಳ್ಳುವದು ವಿಚಿತ್ರವಲ್ಲವೇ? ರಾಜ್ಯ ಹೋಗಿ ಹದ್ದುಪಾರಿಯಾದಾಗ ವೈರಾಗ್ಯ ಬರುವದು ಒತ್ತಟ್ಟಿಗಿರಲಿ, ವೃದ್ಧರ ಸುಖಾಪೇಕ್ಷೆಯಾಗುವದು ಮಾತ್ರ ವಿಚಿತ್ರವು!!

— ಬೆಂಗಳೂರಿನ ಚಿಕ್ಕಪೇಟೆಯಲ್ಲಿ ' ಶ್ರೀ ಕೃಷ್ಣಭವನ ' ಎಂಬ ಹೋಟೆಲಿದೆ. ಅಲ್ಲಿ ಒಬ್ಬರು ದೋಸೆ ಕೊಂಡು ತಿನ್ನಲಾರಂಭಿಸಿದರು. ಮಧ್ಯದಲ್ಲಿ ಏನೋ ಕಾಣಿಸಿತು. ನೋಡಿದರೆ, ಚೇಳು! ಚೇಳು ಹಿಟ್ಟಿನಲ್ಲಿತ್ತೋ? ಕಾವಲಿಗೆಯ ಮೇಲೆ ಬಿತ್ತೋ! ಹೋಟೆಲುಗಳ ತಿಂಡಿ ತಿನ್ನುವವರು ಎಚ್ಚರವಿರಬೇಕು.

೧ ನೇ ಕರ್ನಾಟಕ ಖಾದೀ ಪರಿಷತ್ತಿನಲ್ಲಿ ಪಾಸಾದ ಠರಾವುಗಳು.

೧. ಮಗನಲಾಲ ಗಾಂಧಿಯವರ ನಿಧನದ ಬಗ್ಗೆ ದುಃಖ ಪ್ರದರ್ಶನ.

೨. ಮೈಸೂರ ಸರಕಾರದವರು ಹಾಗೂ ಅಲ್ಲಿಯ ಸ್ಥಾನಿಕ ಸಂಸ್ಥೆಗಳೂ ಖಾದಿಗೆ ಕೊಡಹತ್ತಿರುವ ಪ್ರೋತ್ಸಾಹಕ್ಕಾಗಿ ಅಭಿನಂದನ ಬ್ರಿಟಿಶ ಕರ್ನಾಟಕ ಸ್ಥಾನಿಕ ಸಂಸ್ಥೆಗಳೂ ಖಾದಿಗೆ ಸರ್ವರೀತಿಯಿಂದಲೂ ಪ್ರೋತ್ಸಾಹಿಸಬೇಕೆಂದು ವಿನಂತಿ.

೩ ಬೆಳಗಾವಿ ಡಿ. ಲೋ. ಬೋರ್ಡಿನವರು ಜಿಲ್ಲೆಯ ದುಷ್ಕಾಳಬಿದ್ದ ಭಾಗಕ್ಕೆ ಖಾದಿಯ ಸಲುವಾಗಿ ೫೦೦ ರೂಪಾಯಿ ಕೊಟ್ಟ ಬಗ್ಗೆ ಅಭಿನಂದನ.

೪. ಕರ್ನಾಟಕದಲ್ಲಿ ಯಾವಾಗಲೂ ಖಾದಿಯನ್ನು ಧರಿಸಿ ತಿಂಗಳಿಗೆ ಕನಿಷ್ಠ ೧೦೦೦ ಗಜ ನೂಲುವವರು, ಯಾವಾಗಲೂ ಖಾದಿಯನ್ನೇ ಧರಿಸುವವರು, ವರ್ಷಕ್ಕೆ ೧೦ ರೂ॰ ಖಾದಿಯನ್ನು ಕೊಳ್ಳುವವರು; ಹೀಗೆ ಮೂರು ತರದ ಜನರ ಪಟ್ಟಿಯನ್ನು ತಯಾರಿಸತಕ್ಕದ್ದು.

೫ ಖಾದಿಯ ಕಾರ್ಯಕ್ಕೆ ಹೆಚ್ಚು ಅನುಕೂಲವಾಗುವ ಹಾಗೆ ತರುಣರು ಲೆಕ್ಕ ತಪಾಸ ಮಾಡುವದು, ಖಾದಿಯ ಹುಟ್ಟುವಳಿ ಮಾರಾಟದ ಕೇಂದ್ರಗಳನ್ನು ಸ್ಥಾಪಿಸುವದು ಮುಂತಾದ ಕೆಲಸಗಳ ಶಿಕ್ಷಣವನ್ನು ಪಡೆಯಲು ಮುಂದೆ ಬರತಕ್ಕದ್ದು.

೬. ಕರ್ನಾಟಕ ಖಾದೀ ಕೇಂದ್ರಗಳನ್ನು ಸುಧಾರಿಸಲು ಅ. ಭಾ. ಚರಕಾ ಸಂಘಕ್ಕೆ ವಿನಂತಿ.

೭. ತಮ್ಮಲ್ಲಿ ಉಂಟಾದ ಖಾದಿಯನ್ನೇ ಕರ್ನಾಟಕಸ್ಥರು ಧರಿಸತಕ್ಕದ್ದು.

೮ ನಿಜಾಮ ಕರ್ನಾಟಕದಲ್ಲಿಯ ಸದ್ಯದ ಅನುಕೂಲ ಪರಿಸ್ಥಿತಿಯನ್ನು ತಿಳಿದು ಅಲ್ಲಿ ಒಬ್ಬ ಖಾದೀ ಪ್ರಚಾರಕನನ್ನು ನೇಮಿಸಬೇಕೆಂದು ಅ. ಭಾ ಚರಖಾ ಸಂಘಕ್ಕೆ ವಿನಂತಿ.

೯. ಉತ್ತರ ಕರ್ನಾಟಕ ಸಂಸ್ಥಾನಗಳನ್ನು ಮಹಾರಾಷ್ಟ್ರ ಖಾದೀ ಪರಿಷತ್ತಿನವರು ತಮ್ಮ ಖಾದೀ ಕ್ಷೇತ್ರದಲ್ಲಿ ಸೇರಿಸಿಕೊಂಡ ಬಗ್ಗೆ ನಿಷೇಧ, ಹಾಗೂ ಕಾಂಗ್ರೆಸ್ಸಿನವರು ನಿರ್ಣಯಿಸಿದ ಪ್ರಾಂತ ವಿಭಜನೆಯಂತೆ ಕರ್ನಾಟಕದವರೇ ಅಲ್ಲಿಯ ಖಾದೀ ಕಾರ್ಯವನ್ನು ವಹಿಸಬೇಕೆಂದು ವಿನಂತಿ

೧೦. ಅ ಭಾ ಚರಕಾ ಸಂಘದೊಂದಿಗೆ ಸಹಕಾರ ಮಾಡಿ ಈ ಪ್ರಾಂತದಲ್ಲಿ ಖಾದೀ ಕಾರ್ಯವನ್ನು ನಡೆಸುವದಕ್ಕಾಗಿ ಒಂದು ಮಂಡಲವನ್ನು ನೇಮಿಸಲಾಗಿದೆ.

೧೧. ಖಾದೀ ಪತ್ರಿಕೆಯನ್ನು ಹೊರಡಿಸುವ ವಿಚಾರ ಮಾಡಲು ಮಂಜಪ್ಪ ಹರ್ಡೇಕರ, ರಂ. ರಾ. ದಿವಾಕರ, ಗಂಗಾಧರರಾವ ದೇಶಪಾಂಡೆ ಹಾಗೂ ಹಣಮಂತರಾವ ಕೌಜಲಗಿ ಇವರದೊಂದು ಮಂಡಲವು ನೇಮಿಸಲಾಗಿದೆ.

— ಜಿಲ್ಲಾ ಶೇತಕರೀ ಸಂಘದ ವಿದ್ಯಮಾನದ ಬೆಳಗಾವಿಯಲ್ಲಿ ಸೇರಿದ ಪ್ರಚಂಡ ಸಭೆಯಲ್ಲಿ ಹೊಲಗಳ ಭುವರ್ಧ ಟೆಣೆಯು ಕಾನೂನು ದೋಷಾರ್ಹವೆಂದು ಪುಣೆಯ “ ಮರಾಠಾ ” ಪತ್ರಿಕೆಯ ಸಂಪಾದಕರಾದ ಶ್ರೀ ದಾಮೋದರ ವಿಶ್ವನಾಥ ಗೋಖಲೇಯವರು ಸಪ್ರಮಾಣ ಪ್ರತಿಪಾದಿಸಿದರು.

झंडूचें
द्राक्षासव - मृद्रिकारिष्ट - शारंगधरम अ. १०

रामबाण औषध

सर्दि घालविणारें
भूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

विन्यास रुचिकर

किमत एक रतलास १।। रुपये
रचीटलीस मागवा

झंडु फार्मास्युटिकल वर्क्स लिमिटेड मुंबई नं. १४

ऐजंट— मेसर्स पंडित आणी कंपनी, तीर्थहळ्ळी

सिमि एजंट एस एल धाकप्पा आणि ब्रदर

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ ಬೀ ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ಶೀತ ಸ್ಲಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ಒಂದರೊಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇಲ್ಪಟ್ಟ ಗಳ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಜನರು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿಗೋಸ್ಕರ ಪುಕ್ಕಟ ಕಳಿಸಲ್ಪಡುವದು.

ಬುಡಿ ಬರಣಿ ಕ್ರಯ ೦ ೪ ... ಡಜನ್ ೧ಕ್ಕೆ ರೂ ೨-೮-೦. ವ್ಹಿ. ಪಿ. ೦-೮-೦ ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ ಬಾ ೫೧೦, ಜಾರ್ಜಟೌನ, ಮದರಾಸ

ಇದು "ಕರಾಮತ" ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!

ಕಿರ್ಲೋಸ್ಕರ ಕರಾಮತ ಗಾಣ.



ಈ ಗಾಣದಿಂದ ಶೇಕಡಾ ೭೨ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ನಡಿಸಲಿಕ್ಕೆ ಬೇಕೆಂಬುದು ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ್ಯ ರೈತರು ಇದನ್ನು ನಡಿಸಬಲ್ಲರು. ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು.

ಬೇರೆ ಬೇರೆ ಭಾಗಗಳು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಲಾಂತರ ಮಾಡಬಹುದು.

ಅಕ್ಕಲಗಳು ಎಷ್ಟು ಎಷ್ಟೂ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಗುಣಗಳು ಬೇರೆ ಇನ್ನಾವ ಗಾಣದಲ್ಲಿಯೂ ದೊರಕವು

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦ ೧೨ ಕರಾಮತಗಾಣಗಳು ನಡಿಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್ ಕಿರ್ಲೋಸ್ಕರವಾಡಿ, ಜಿಲ್ಲಾ ಸಾತಾರಾ

ಹಿಂದುಸ್ಥಾನದಲ್ಲಿಯ ಅತ್ಯಂತ ಅಗ್ರವಾದ 'ನೆಶನಲ್ ಇನ್ಶೂರನ್ಸ ಕಂಪೆನಿ (ಲಿಮಿಟೆಡ್)' ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ ಕಳೆದ ವರುಷ ಶಿಲ್ಕಾದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿನಂತೆಯೂ, ಹೋಲ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿನಂತೆಯೂ ಬೋನಸ ಕೊಟ್ಟಿರುವರು

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅಷ್ಟೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅತೀ ಸುಲಭ, ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**
ಬಿ ಸಿ ಸಿರಾಳಕೊಪ್ಪ, *Branch Secretary,*
ಲೋಬಂಡಿ ಬಿಲ್ಡಿಂಗ, Alice Building
ಹುಬ್ಬಳ್ಳಿ *Hornby Road, BOMBAY*

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯಾಷಧ

ಈ ಮದ್ದು ಅತ್ಯಂತ ಅವಶ್ಯಾವಾದದ್ದು,

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಲ್ಲರು ಇಟ್ಟುಕೊಳ್ಳಲೇ ಬೇಕು, ಎಷ್ಟ ಸುಟ್ಟ ಘಾಯಿಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತೆ.

ಬಾಟಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡಿಪೋ,
ಮುಂಬಯಿ ಮತ್ತು ಮದ್ರಾಸ.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಸೀರೆ, ಖಣ, ರೇಶ್ಮೆ ಶಲ್ಯ, ಬನಿಯನ್, ಕಾಶ್ಮೀರದ ಶಾಲು, ಸಕಲಜಾತಿ ಮಾಲೆ, ರುದ್ರಾಕ್ಷ ಸರ, ಕರಿ ಗೌರೀಶಂಕರ, ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಲ ಟೆ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ ಪಿ ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ ನಮ್ಮ ಪತ್ತೆ -

ವಿಶ್ವನಾಥ ಎಂಡ್ ಬ್ರದರ್ಸ.
ದುರ್ಗಾಘಾಟ, ಬನಾರಸ್ ಸಿಟಿ

REG. NO. B. 1270 MONDAY, JUNE 25TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೩೭

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಭಾಷಾ ಟೈಪಿನ (೧೫ ಎಮ್ ಅಗಲ) ೮ ಸಾಲುಗಳವರೆಗೆ ರೂ. 1-0- ಆನಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಹಳ ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ದ್ವಾರಾ ಕಡಿಮೆ ಮಾಡಲ್ಪಡುವದು.

-*(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೫ ಮಾಹೆ ಜೂನ ಸನ್ ೧೯೨೮ನೇ ಇಸವಿ.)*-

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ -ಕಟ್ಟಿಣ ಪೆಟಿಗೆಗಳು, ಮೋಟಾರ ಉಪಯೋಗದ ಪೋಟ್ಟಿಗಳು, ಪಿನ್ ಪ್ರೊಶರ, ಡಿಸ್ಟಿಲ್ಡ ವಾಟರ ಸಿಗುತ್ತವೆ ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಸಾಬೂನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ ! ಎಲ್ಲ ಸಾಮಾನು ಅಗ್ಗ ! ಕಿರಕೋಳ ವ್ಯಾಪಾರಸ್ಥರು ಠೋಕ ಮಾಲ್ಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ.—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

S. U. Narayanacharya & CO.
Chaukamba, BENARES CITY,

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ಧರಮಂರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ, ಪುತ್ರ ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

Wanted:- Candidates for Telegraph and Station Masters Classes Full particulars and Railway Fare Certificate on 2 annas stamp Apply to.— Central Telegraph College, Nai Sarak, **Delhi.**

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फर, वेलीच्या, जरीच्या वगैरे हरएक तऱ्हेच्या साधा अगर फॅशनबल टोप्या तयार केल्याजातात.

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनचीं रंगी-बेरंगी चादरें, फॅशनेबल बाथ टोवेल, चौक, लहान-मोठे पंचे, सीडपाट, चीलपाट, शर्टिंग- कोटींग-वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या !

टीप:-आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:- मेसर्स गोविंद माधव शेणवि, फोवकार अँड सन्स.
पोस्ट— मुंकेरि (कारवार.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ಪಿಷಿವ ಚಕ್ಕ

ದೊರಗಾಪ ಕಾಗ ಹೊಸ ರಾದ

ಯಾಕ್ರಿನ ಕಾರಗ ಹಿತ್ತಾಳಿಯ ಹಲ್ಲಿನ ಗರಳ

ಹತ್ತಿಯ ಹಾಗು ಬಿಡಿಗೆರಗಳೂ

ತ ಡಿಯ ಪೊಸೆನಗಳು, ಮಾಗ ಗಳು

ಎಮಿರಿಕಾ ಆಗಬಾರ

ನಮ್ಮಲ್ಲಿ ಅಗವಾಗಿ ಸಿಗ ವೆ

ಬಹಳ ಅಗ್ಗ !

P. P TRIVEDI & CO,

BRUCE Street Fort BOMBAY

ನಮ್ಮ ಶಾಸ್ತ್ರೀಯ ಪಾದ

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ [illegible]

ಪುಸ್ತಕವನ್ನು ಓದಿದ [illegible]

[illegible]

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ ಬೆಂಗಳೂರ ಸಿಟಿ

ಗೋಪಾಳ ಸಖಾರಾಮ ಮತ್ತು ಕಂಪನಿ.

ಕಮಿಶನ್ ಏಜಂಟ್ಸ್,

ಕಾಳಬಾದೇವಿ ರೋಡ್ಡ್,

ಮುಂಬಯಿ ನಂ ೨.

ಮುಂಬಯಿಯಲ್ಲಿ [illegible] ಉತ್ತಮ ಪ್ರತಿಯ [illegible] ಲೋಕ ಖರೀದಿ ಮಾಡಿ ಕಳಿಸುತ್ತೇವೆ [illegible] ಹೆಚ್ಚಿಗೆ ಕಮೀಶನ ಖರೀದಿ [illegible] ಗುಣ [illegible] ಧಾರಣೆ [illegible] ದುಕಾನೆ ಗಿರಾಕಿಗಳಿಗೆ ಅನುಕೂಲ [illegible] ಲಾಭವಾಗ ಪಂಕೆಯು, [illegible] ಕಾರ್ಖಾನೆ ತಕ್ಕರಕಮ್ಮಿ [illegible] ವ್ಯವಸ್ಥೆ [illegible] ಬಗ್ಗೆ ಕಟಲಾಗು ಬರೆಸಿಕೊಳ್ಳಿ [illegible]

ಸರಕಾರದಲ್ಲಿ ರಜಿಸ್ಟರ್ ಆದಂಥ

ಅನೇಕ ಸರ್ಟಿಫಿಕಿಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕ ಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು [illegible] ವರ್ಷದ ಮುದುಕರ [illegible] ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ [illegible] ರೋಗ [illegible] ಅಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯ [illegible] — [illegible] ನಿರ್ಮೂಲವಾಗುವದು. [illegible] ದಿವಸದಲ್ಲಿಗುಣಬರುವದು ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ [illegible] ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ [illegible] ದಮ್ಮು [illegible] ದಿವಸದಲ್ಲಿ [illegible] ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಹೆಚ್ಚಾಗಿ ಆಗುತದೆ. [illegible] ಒಂದು ವಾರದಲ್ಲಿ [illegible] ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ [illegible] ಒಂದು ಬಾಟಲಿಯಿಂದ ಗುಣಬರುವದು. [illegible] ಬಾಟಲಿಯ ಕಿಮ್ಮತ್ತು [illegible]

ಮ್ಯಾನೇಜರ— ದ್ರಾಕ್ಷಾರ್ಕ ಮಧು ಆಫೀಸ [illegible] ಬೆಳಗಾಂವ

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ಬಿಗ್ಯಾಲರ [illegible]

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ ಯಲ್ಲಾಪುರ — ಅಂಕೋಲಾ ಕಾರವಾರ- (೨) ಹುಬ್ಬಳ್ಳಿ [illegible] ಕುಮಟಾ ಹೊನ್ನಾವರ ಭಟ್ಕಳ- (೩) ಕುಮಟಾ [illegible] ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ ಶಿವಮೊಗ್ಗಾ [illegible] ಪ್ರಯಾಣಿಕರಿಗೆ [illegible] ನಮ್ಮ [illegible]

M. Manjappa

PROPRIETOR.

೧೦೦೦ ರೂಪಾಯಿ ಇನಾಮು

ಕಾರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ [illegible] ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರಪಾಕ.

[illegible] ರೋಗ [illegible] ದಿಂದ ಇಂದ್ರಿಯ [illegible] ಸಪ್ತ [illegible] ಸ್ವಪ್ನದೋಷ, ಮೂತ್ರದೊಳಗೆ [illegible] ಪ್ರಮೇಹ [illegible] ಧಾತುಕ್ಷೀಣ [illegible] ಕಳೆ [illegible] ಮುಂತಾದ ಸರ್ವ [illegible] ರೋಗಗಳು ಹೋಗಿ [illegible] ಪುರುಷತ್ವ ಹೆಚ್ಚುತ್ತದೆ. [illegible] ಅನುಭವಿಸಿರಿ [illegible] "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ [illegible]

[illegible] ರಾತ್ರಿಯ [illegible] ಹಾಲು [illegible] ಪಥ್ಯವಿಲ್ಲ ಸ್ತ್ರೀಸಂಗವಿಲ್ಲ [illegible] ದಿವಸ ಸಾಕಾಗುವಷ್ಟು [illegible] ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು

ಈಗಿನ ಶಿಕ್ಷಣಕ್ರಮದ ಅನರ್ಥ.

ಪುಣೆಯೊಳಗಿನ ಸ್ತ್ರೀ ವಿದ್ಯಾಪೀಠದ ಪದವೀದಾನ ಸಮಾರಂಭವು ಕಳೆದ ಸೋಮವಾರಕ್ಕೆ ವಿದ್ಯಾಪೀಠದ ಮಂದಿರದಲ್ಲಿ ಜರಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸ್ತ್ರೀ ವಿದ್ಯಾರ್ಥಿನಿಗಳಿಗೆ ಪದವಿಗಳು ಕೊಡೋಣಾದವು ಈ ಸಮಾರಂಭವು ಹೈದರಾಬಾದ ಸಂಸ್ಥಾನದ ಮುಖ್ಯ ವಿದ್ಯಾಧಿಕಾರಿಗಳಾದ ನವಾಬ ಮಸೂದಜಂಗ ಬಹಾದ್ದೂರ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಹಾಶಯರು ಈಗಿನ ಶಿಕ್ಷಣಕ್ರಮದಿಂದು ಆದ ಅನರ್ಥಪರಂಪರೆಯನ್ನು ಬಹು ವಿಶದವಾಗಿ ವರ್ಣಿಸಿದರು. ಇಂಗ್ಲಿಷ ಭಾಷೆಯು ಹಿಂದೆ ಬೀಳುತ್ತಹೋಗಿ ನಮ್ಮ ಸಂಸ್ಕೃತಿಯನ್ನು ನಾವು ಹೇಗೆ ಹೋಗಲಾಡಿಸಿಕೊಳ್ಳುತ್ತಿದ್ದೇವೆಂಬುದನ್ನು, ಇಂಗ್ಲಿಷಿನ ಮಧ್ಯಸ್ಥಿಕೆಯಿಂದ ಶಿಕ್ಷಣ ಪಡೆಯುವ ಪದ್ಧತಿಯಿಂದ ನಮ್ಮೊಳಗಿಯ ಬುದ್ಧಿಶಾಲಿಗಳೆತ್ತ ಸ್ವದೇಶದಲ್ಲಿಯೇ ಪರದೇಶಿಗಳಾಗಿದ್ದೇವೆಂಬುದನ್ನು ಸ್ಪಷ್ಟಗೊಳಿಸಿದರು. ನವಾಬ ಮಸೂದಜಂಗ ಬಹಾದ್ದೂರರವರು ಹೈದರಾಬಾದ ಸಂಸ್ಥಾನದಲ್ಲಿ ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ನರವರಿದ್ದಾರೆ ಅವರು ನುಡಿಯುವದೇನೆಂದರೆ —

‘ರಾಷ್ಟ್ರೀಯ ಶಿಕ್ಷಣವೆಂದರೇನು ?” ಇದರ ವ್ಯಾಖ್ಯೆಯು ಅನೇಕರಿಂದ ಹೇಳಲ್ಪಟ್ಟಿದೆ ಇಂದಿಗೆ ನಾನು ಇನ್ನೊಂದು ವ್ಯಾಖ್ಯೆಯನ್ನು ಹೇಳುತ್ತೇನೆ ದೇಶಬಾಂಧವರಿಗೆ ದೇಶಬಾಂಧವರ ಭಾಷೆಯಿಂದ ಸ್ವದೇಶಬಾಂಧವರು ಕೊಡತಕ್ಕ ಶಿಕ್ಷಣವೇ ರಾಷ್ಟ್ರೀಯ ಶಿಕ್ಷಣವು ಹೀಗೆ ಇಂಗ್ಲಂಡದಲ್ಲಿ ತಿಳಿದು ನೋಡಿದರೆ, ಇದು ಆಗುತ್ತದೆಂದು ಇಂಗ್ಲಂಡದಲ್ಲಿ ಇಂಗ್ಲಿಷ ಹುಡುಗರಿಗೆ ಇಂಗ್ಲಿಷರು ಕಲಿಸುವದೇ ರಾಷ್ಟ್ರೀಯ ಶಿಕ್ಷಣ ಫ್ರೆಂಚರು ಫ್ರೆಂಚ ಭಾಷೆಯಲ್ಲಿ ಇದೇ ಗಣಿತವನ್ನು ಫ್ರೆಂಚ ಹುಡುಗರಿಗೆ ಕಲಿಸುವದು ರಾಷ್ಟ್ರೀಯ ಶಿಕ್ಷಣವು ಈ ವಿಷಯವು ಹಿಂದಿನವರೂ ದೇಶಭೇದದಂತೆ ಭಾಷಾಭೇದವನ್ನು ಕೈಕೊಂಡ ಪದ್ಧತಿಯಿಂದ ರಾಷ್ಟ್ರೀಯ ಶಿಕ್ಷಣವಾಗುತ್ತದೆ ಇತರ ರಾಷ್ಟ್ರಗಳೊಳಗೆ ನಮ್ಮ ಹಿಂದುಸ್ಥಾನದ ಸ್ಥಿತಿಯು ಬೇರೆ ನಮ್ಮ ದೇಶದಿಂದ ೬ ಸಾವಿರ ಮೈಲು ದೂರ ಇರುವವರ ಭಾಷೆಯಿಂದ ಎಲ್ಲ ವಿದ್ಯಾಭ್ಯಾಸ ನಡೆಸಿ ಆ ಶಿಕ್ಷಣವನ್ನು ರಾಷ್ಟ್ರಶಿಕ್ಷಣವೆಂದು ಹೇಳುವದು ಬರೇ ಮೂರ್ಖತನವು ಸದ್ಯಕ್ಕೆ ನಾನೊಂದು ಸಮಾರಂಭಕ್ಕೆ ಹೋಗಿದ್ದೆ ನಮ್ಮ ಹೈದರಾಬಾದ ಸಂಸ್ಥಾನದೊಳಗಿನ ಉಸ್ಮಾನಿಯಾ ವಿದ್ಯಾಪೀಠದ ಮಾತು ಬಂತು ನಮ್ಮ ವಿದ್ಯಾಲಯದೊಳಗೆ ಉರ್ದು ಭಾಷೆಯಲ್ಲಿ ಕಲಿಸುವ ಪದ್ಧತಿಯು ಒಂದು ಪ್ರಯೋಗವಿರುವದಾಗಿಯೂ, ಆದರೆ ಯಶಾಪಯಶಗಳನ್ನು ಪರೀಕ್ಷಿಸಬೇಕಾಗಿಯೂ ಉಪದೇಶಿಸಿದರು ‘ಹಾಗೋ?’ ಎಂದು ನಾನು ಕೇಳಿದೆನು ನಿಮಗೊಂದು ಕೂಸು ಜನಿಸಿದಾಗ ಆ ಕೂಸು ತಾಯಿಯ ಮೊಲೆ ಉಣ್ಣ ಹೋದಾಗ ಅದೊಂದು ಪ್ರಯೋಗವೆಂದು ನೀವು ಏಳುತ್ತೀರೇನು ? ಇಂಗ್ಲಿಷಿನಂಥ ವಿದ್ಯಾಶಾನ ಬಾಡಲೀಳಿಸುವದೇ ಒಂದು ಪ್ರಯೋಗವೆನಿಸತಕ್ಕದ್ದು, ಹೊರತು ಸ್ವಭಾಷೆಯಲ್ಲಿ ಶಿಕ್ಷಣ ಕೊಡುವದು ಪ್ರಯೋಗವಾಗಲಾರದು ಅದು ಸ್ವಾಭಾವಿಕ ಲಕ್ಷಣವು ಇಂಗ್ಲಿಷ ಭಾಷೆಯು ಏನೆಂದರೂ ದಾದಿಯೋಪಾದಿಯಲ್ಲಿದೆ ದಾದಿಯ ಮೊಲೆ ಕುಡಿದು, ನಾವು ತಾಯಿಯನ್ನು ಮರೆತೆವು ಸ್ವಭಾಷೆಗಳು ಚೈತನ್ಯಹೀನವೆಂದು ಸುಳ್ಳೇ ಕಲ್ಪನೆ ಮಾಡಿಕೊಂಡೆವು ಈಗ ನಮ್ಮಲ್ಲಿ ಗ್ರಹಿಕೆಯುಂಟಾಗಹತ್ತಿದೆ ನಮ್ಮಲ್ಲಿಯ ಹುಡುಗ-ಹುಡುಗಿಯರು ಮನಸ್ಸಿನಿಂದಲೂ, ನೀತಿಯಿಂದಲೂ ಸುದೃಢವಾಗಿ ಬೆಳೆಯಬೇಕಾದರೆ, ಪರಭಾಷೆಯು ದಾದಿಯ ಮೊಲೆ ಕುಡಿಸು ಕೆಲಸ ಸಾಗದೆಂದು ಇತ್ತ ತಿಳಿಯಹತ್ತಿದೆ

ತ್ರಿಶಂಕುಗಳ ಜಾತಿ

ಇಂಗ್ಲಿಷ ಶಿಕ್ಷಣದಿಂದ ಹಿಂದುಸ್ಥಾನಕ್ಕೊಂದು ದೊಡ್ಡ ಹಾನಿ ತಟ್ಟಿದೆ ಇಂಗ್ಲಿಷ ಕಲಿತವರು ಪ್ರತ್ಯೇಕ ಒಂದು ಜಾತಿಯವರಾಗಿ ನಿರ್ಮಾಣವಾಗಿದ್ದಾರೆ ಈ ಮಹಾನುಭಾವರಿಗೆ ಅತ್ತ ಇಂಗ್ಲಿಷರು ಸ್ವಜಾತಿಯಲ್ಲಿ ಸೇರಿಸಿಕೊಳ್ಳುವದಿಲ್ಲ, ವರ್ಣಭೇದದಿಂದಲೂ, ಸಂಸ್ಕಾರಭೇದದಿಂದಲೂ ಇಂಗ್ಲಿಷರಲ್ಲಿ ಅವರು ಸೇರಿಹೋಗುವದೂ ಇಲ್ಲ ಸ್ವದೇಶಬಾಂಧವರಿಗೂ

(೧೦ನೇ ಪಾನಿನಮೇಲೆ ಮುಂದರಿದಿದೆ)

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ ಕೂದಲು ಮನೋಹರವಾಗಿರಬೆ ಕಾದರೆ ನೀವು ವಿನಾ ಆ ಕರೆಗ ಲಕ್ಷಕೊಡಬೇಕು ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು ನೀವು ಅವಕ್ಕೆ ಚಲೋ ‘ಕೂದಲನ್ನು’ ಕೊಡಬೇಕ ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ವಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು ಹಿಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತದೆ ಕೇಶರಂಧ್ರಗಳು ತರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ ರೂ ೧—೦—೦

ಅಂಚೆವೆಚ್ಚ ,, ೦—೬—೦

೩ ಬಾಟಲಿಗಳಿಗೆ ,, ೨—೧೦—೦

ಅಂಚೆವೆಚ್ಚ ,, ೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

—— ೦ ——

೩ ಔಂಸಿಗೆ ರೂ ೨—೦—೦

½ ಔಂಸಿಗೆ ,, ೧—೪—೦

೧ ಡ್ರಾಮಿಗೆ , ೦—೧೨—೦

ಅಂಚೆವೆಚ್ಚ ,, ೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ”

ಹಿಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಜಾನೆ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ವಿವಿಧ ಸಂಗ್ರಹ.

ಲಕ್ಷಾಪತಿ-ಭಿಕ್ಷಾಪತಿಯಾದುದು.

"ಬ್ರೂಕ ವೋಟಾರ ಕ ಪನಿ" ಎಂಬ ಮೋಟಾರ ಕಂಪನಿಯನ್ನು ಎಲ್ಲರೂ ಬಲ್ಲರು. ಈ ಕಂಪನಿಗೆ ೨ ಲಕ್ಷ ವೋಟಾರ ಬಂಡಿಗಳು ಹಿತಾಪತಿವೆ. ಈ ಕಂಪನಿಯನ್ನು ಸ್ಥಾಪಿಸಿದ ಪಿ ಡೆಪಿಡ್ ಬ್ರೂಕರವ ಬವರ ಅವಸ್ಥೆಯನ್ನು ಈಗ ಓಸ್ಟ [illegible] ಈಗ ಇವರು ಅಮೇರಿಕಾ ಡಟ್ರೊಯಿಡ್ ಗ್ರಾಮ ದಲ್ಲಿ ದ್ದಾರೆ. ಇವರ ಪ್ರಾಯವು ೭೪ ವರುಷ. ಒಂದು ಶಾಲೆಯಲ್ಲಿ ಅಧ್ಯಾಪಕ ಕೆಲಸ ಮಾಡಿ [illegible] ಗಿಸುತ್ತಾರೆ ಮ [illegible] ರ [illegible] ವೈಭವವನ್ನು ಹೊಂ ದ ಬಿಟ್ಟ ಮಹಾಮಾನ [illegible] ಪ್ರತಿಸ್ಪರ್ಧಿ ಪಿ ಡೆಪಿಡ್ ಬ್ರೂಕರವರ [illegible] ಇವರು ಹುಟ್ಟಿದ್ದು ಸ್ಕಾಟಲ ದೇಶದಲ್ಲಿ [illegible] ವಾಗಲೇ ಅಮೇರಿಕಾ ದವಾಸೆಯಾದ [illegible] ವರುಷ ಪ್ರಾಯದಲ್ಲಿ ಇವರ ವೈಭವವನ್ನು [illegible] ಲಾಗುತ್ತಿದ್ದಿಲ್ಲ. ಆ ಕಾಲಕ್ಕೆ ಕ [illegible] ವು. ಗಾಡಿಗಳಿಗೆ ಕೊಳೆವೆಗಳನ್ನು ಇವರು ಮಾಡಿ [illegible] ಡುತ್ತಿದ್ದರು. ಇವರ ಮನಸ್ಸಿನ ವೋಟಾರ ಮಾ [illegible] ಡುವ ಕಲ್ಪನೆ ಹುಟ್ಟಿ ೧೯೦೩ನೇ ಇಸ್ವಿಯಲ್ಲಿ 'ಬ್ರೂಕ [illegible]' ವೋಟಾರನ್ನು ತಯಾರಿಸಿದರು. [illegible] ಡೆಪಿಡ್‌ರ [illegible] ಗಳಿಗೆ ಪುರಸತ್ತು ಇರಲಿಲ್ಲ. ೭ ವರ ಷಗಳ ತನಕ [illegible] ವಾಗಿ [illegible] ಮಾಡುತ್ತಿದ್ದರು. [illegible] ಗಳ ತನಕ ಅವರು ಮಾಡಿದ್ದು [illegible] ಣ್ಣವಿಗಳೆಂಬುದು ಇವರಿಗೆ [illegible] ಶ್ರೀ ಯುಗಾದಿಗಳನ್ನು [illegible] ಕಾಲಿಕವಾಗಲಿಲ್ಲ ೧೯೧೦ನೇ ಇಸ್ವಿ ಬೆಂಗಳ [illegible] ತು. ಕಂಪನಿ ಬಿಟ್ಟು ಕೆಲಿಫೋರ್ನಿಯಾಕ್ಕೆ ತೆರಳಿದ ರು. ದ್ರವ [illegible] ಮೂಲಕ ಕಂಪನಿಯನ್ನು ಮಾ ರಿದರು. ಈ ಬಹಳ ದೈನ್ಯಪ್ರಸ್ತವಾದ [illegible] ಮುರಿದು ದುಡಿದರೆ ಹೊಟ್ಟೆ ತುಂಬ ಅನ್ನ ಸಿಗುತ್ತದೆ. ಮಿ| ಡೆಪಿಡ್‌ರವರ ಮಿತ್ರರಲ್ಲಿ ಅನೇಕರು ಲಕ್ಷಾಪತಿಗ ಳಿದ್ದಾರೆ. ಅವರ ಬಳಿ ಹೋಗಿ ತನಗೆ ಸಹಾಯ [illegible] ಡು ಕೆಲಸ ಕೊಡಬೇಕಾಗಿ ಅವರು ಹೇಳಿದರಂತೆ! "ನನಗೆ ಭಿಕ್ಷಾಧನ ಬೇಡ ನಾನು ಸಶಕ್ತನಿದ್ದೇನೆ. ನಾನು ದುಡಿಯುವೆ ಅದರೆ, ನಿಶ್ಚಿತ ಉದ್ಯೋಗವಿರು ವ ಕೆಲಸ ದೊರೆತರೆ ಈ ಪ್ರಾಯದಲ್ಲಿ ನನಗೆ ಸಾಕು." ಹೀಗೆ ಬ್ರೂಕ್‌ರವರು ಹೇಳುತ್ತಾರೆ. "ದೀರ್ಘೋದ್ಯೋ ಗದಿಂದ ಯಶಕ್ಕೆ ಪ್ರಾಪ್ತಿಯಾಗುತ್ತದೆ. ಈಗಿನ ಅವ ಸ್ಥೆಯ ಬಗ್ಗೆ ನಾನು ಮರುಗುವದಿಲ್ಲ. ಹಿತ್ತಿಲಿಗೆ ಕೂ ತುಕೊಂಡು ಹಿಂದಿನ ವೈಭವವನ್ನೇ ನಾನು ಮನಸ್ಸಿ ನಲ್ಲಿ ಚಿಂತಿಸುತ್ತಿರುವದಿಲ್ಲ. ಹುರುಪಿನಿಂದ ಇಂದೇನು ಮಾಡತಕ್ಕದ್ದೆಂದು ಆಲೋಚಿಸುತ್ತೇನೆ. ಇಂಥ ಸ್ಥಿ ತಿಯಲ್ಲಿ ನಾನು ಏಕೆ ಮರುಗುತ್ತಿರಬೇಕು? ದುಡಿಯು ತ್ತಿರಬೇಕಾದ ದೇಹವಿದ್ದು, ದುಡಿದು ಸಂಸಾರ ನೀಗಿಸ ಬಲ್ಲೆ" ಇತ್ಯಾದಿ ವರ್ತಮಾನ ಪತ್ರಿಕೆಗಳ ಪ್ರತಿನಿಧಿಗಳ ಬಳಿಗೆ ನುಡಿದು ಬ್ರೂಕರವರು ಸಂಪತ್ತಿನಲ್ಲಿಯೂ, ವಿಪತ್ತಿನ ಲ್ಲಿಯೂ ಜನರು ಸಂತೋಷದಿಂದಿರಬಲ್ಲರೆಂದು ಸಿದ್ಧ ಗೊಳಿಸಿದ್ದಾರೆ.

***

ಅಸಲು ೧೯ ರೂಪಾಯಿ; ಬಡ್ಡಿ ೨೬೦೦೦ಳಲ!

ಬಾಂದಪ್ಪರವ ಸಕರುಪ್ಪಿನರಂಬಿವರು ತಾರೀಖು ೧೮-೫-೧೯೨೮ ನೇಗೆ ೩ ಮಣ ರಂಗೂನ [illegible] [illegible] ಪ್ರಕಾಶ [illegible] ಕಡೆಯಿಂದ ಕೊಂ ಡ ೨೨ ರೂಪಾಯಿಗಳಿಗೆ ಅವರು ವಸ್ತ್ರವನ್ನು ಬ [illegible] ೨ ರೂಪಾಯಿ ಮುಂದಿನ ಬಡ್ಡಿಯಾಗಿ [illegible] ಬಡ್ಡಿಯು ದರವು ದಲಸಾಲವರ [illegible] ೧೨೦ [illegible] ಪ್ರತಿ ೬ ತಿಂಗಳಿಗೊಮ್ಮೆ ಬಡ್ಡಿ ಕೂಡಿಸಿ [illegible] ಮಾಡಿ ಚಕ್ರಬಡ್ಡಿ [illegible] ಗೊತ್ತಾ [illegible] ವರ್ಷಗಳ ಮೇಲೆ ಕಳೆದ [illegible] ದಿನವರಿ [illegible] ಗಳಲ್ಲಿ [illegible] ಸಕರುಪ್ಪಿನನು ಅಸಲನ್ನು ಕೊಡಲಿಲ್ಲ, ಬಡ್ಡಿಯನ್ನು ಕೊಡಲಿಲ್ಲ. ಬಡ್ಡಿ [illegible] ೨೬೦೦೦ [illegible] ರೂಪಾಯಿ ಆಯಿತು. [illegible] ಅಂತೂ [illegible] ೨೬೦೦೦ [illegible] ರೂಪಾಯಿ [illegible] ರೂಪಾಯಿಗಳನ್ನು [illegible] ರೂಪಾಯಿಗಳ ಬಗ್ಗೆ ದಾವೆ [illegible] [illegible] ಸತ್ಯಸ್ಥಿತಿಯನ್ನು [illegible] [illegible] ದಲ್ಲು ಪಿ [illegible] ವದಾಗಿ [illegible] ೧೬ನೇ ತಾರೀಖಿಗೆ ಈ ದಾವೆ [illegible] ಇತ್ತಟ್ಟಿನ ವಿಚಾರದಿಂದ ರಾಜಿ [illegible] ರೂಪಾಯಿ ಕೊಟ್ಟು [illegible] ಇತ್ಯರ್ಥ ಮಾಡಿಕೊಳ್ಳಾ [illegible] ರೂಪಾಯಿಗಳನ್ನು ಸೂಟ ಬಿಡುವ [illegible] ೬೨೦ ರೂ [illegible] ಸೂಟ [illegible]!

***

ಮುಸಲ್ಮಾನ ಬಂಧುಗಳಿಗಾಗಿ.

[illegible] ಕಡೊಳಗಿನ ಕ [illegible] ವಾಗಿ ಪ [illegible] ಇಸ್ಲಾಮ [illegible] ಗಳನ್ನೇ [illegible] ಮಂಡಳವನ್ನೇ [illegible]. ಈ ಮಂಡಳವು [illegible] ಪ್ರತಿಬಂಧವ ನ್ನು [illegible] ಮುಖ್ಯ [illegible] ಮೇಲಿನ [illegible] ಕಲ್ಲಿ ಮಾಡಬೇಕೆಂದು ಈ ಮಂಡಳವು ಶಿಫಾರಸು ಮಾ ಡಿದೆ. ಮುಸಲ್ಮಾನ ಬಾಂಧವರು ಈ ಶಿಫಾರಸಿನ ಮೇ ಲಿ [illegible] ಕಲಿತು [illegible] ಬಾರಿಸ [illegible] ಅವಿಚಾರದ ಹಟವನ್ನು ತ್ಯಜಿಸಿ, ಹಿಂದ [illegible] ಐಕ್ಯಕ್ಕೆ ನೆರವಾಗಬೇಕು. [illegible] ಒಂದು ಗ್ರಾಮದಲ್ಲಿ ಮುಸಲ್ಮಾನರ ಅವಿಚಾರದಿಂದ ಒದಗಿದ ಅನರ್ಥ ವೊಂದು ಪ್ರಕಟಗೊಂಡಿದೆ. ಶೀಖನೊಬ್ಬನು ಒಂದು ಹೋರಿಯನ್ನು ಕೊಂದನು. ಕೊಂದ ಪ್ರಕಾರವು ಮಹಮ್ಮದೀಯ ಧರ್ಮಶಾಸ್ತ್ರದೊಳಗಿನ ನಿಯಮದಂತೆ [illegible] ಮಹಮ್ಮದೀಯರು ಬೇಗ ಗೆದ್ದರು. ಶೀಖನಿಗೆ [illegible] ಗ್ರಾಮದ ಮೌಲವಿ [illegible] ಒಯ್ದರು. "ಅಕಳ ಗೋ [illegible] ಹೇಡಿಯನ್ನು ಅಕ್ರಮವಾಗಿ ಕೊಂದ ಪಾಪಕ್ಕೆ ಪ್ರಾಯಶ್ಚಿತ್ತ ಸಿಗುವದಾಗಿ" ಶಿಫಾರ್ ಕೊ ಟ್ಟರು. ಶೀಖನು ಕ್ಷಮೆ ಬೇಡಿದನು. ಮುಸಲ್ಮಾನರು ಕೇಳಲಿಲ್ಲ. "ಆಗಲಿ! ಅಕಳಿಗೆ ಕೊಡುತ್ತೇನೆ, ಉಷ್ಣ ವಾದ ಕಿರಪಾನ ಕತ್ತಿಯನ್ನು ಕೊಡಿರಿ; ಭದ್ರವಾಗಿ ಅಕಳನ್ನು ಹಿಡಕೊಳ್ಳಿರಿ" ಎಂದು ಶೀಖನು ಹೇಳಿದ ನು. ಮುಸಲ್ಮಾನರು ಆಕಳಿಗೆ ಹಿಡಕೊಂಡರು. ಕಿರ ಪಾನ ಖಡ್ಗವನ್ನು ಶೀಖನ ಕೈಯಲ್ಲಿ ಕೊಟ್ಟರು. ಒ ಮ್ಮೆಲೇ ಆವೇಶದಿಂದ ನೈಖುರಿತು ಶೀಖನು ಆಕಳ ನ್ನು ಹಿಡಕೊಂಡ ೯ ಮಂದಿ ಮುಸಲ್ಮಾನರ ತಲೆ ಹಾರಿಸಿದನು. ಪೋಲೀಸರು ಶೀಖನಿಗೆ ಸೆರೆ ಹಿಡಿದು ಗುಜರಾನವಾಲೆಯ ಡೆಪ್ಯುಟಿ ಕಮಿಶನರ ಕೋರ್ಟಿನಲ್ಲಿ ಕೊಲೆಪಾತಕದ ಬಗ್ಗೆ ಖಟ್ಲೆ ಮಾಡಿಕೊಟ್ಟಿದ್ದಾರೆ. ಮುಸಲ್ಮಾನರ ಅವಿವೇಕದಿಂದ ಒದಗಿದ ಅನರ್ಥವ ಲ್ಲೇನಿದು! ಹೇಂಟೆ ಕೊಂದ ಪಾತಕ್ಕೆ ಆಕಳು ಹೊಡೆ ದರೆ ಪ್ರಾಯಶ್ಚಿತ್ತವಾಗುತ್ತದೆಂದು ಇಸ್ಲಾಮ ಧರ್ಮ ದ ಯಾವ ಗ್ರಂಥದಲ್ಲಿ ಹೇಳಲ್ಪಟ್ಟಿದೆ? ಧರ್ಮಬೋ ಧೆಗಾಗಿ ನೇಮಿಸಲ್ಪಟ್ಟ ಮೌಲವಿಯವರು ಇಂಥ ಅಧ ರ್ಮಾಚಾರವನ್ನು ನಡಿಸುವದು ವಿಹಿತವೇ?

***

ಅಮೂಲ್ಯ ರತ್ನ.

ವಸ್ತುಸಂಗ್ರಹಾಲಯದಲ್ಲಿ ಇತ್ತೀಚ್ಚೆ ೩ ರತ್ನಗಳು ಇಡಲ್ಪಟ್ಟಿವೆ. ಇವು ಮೋಗಲರ ಕಾಲದವು. ಒಂದು ನೀಲವು ಉತ್ತಮ ಪ್ರತಿಯದ್ದಿದೆ. ಅರ್ಧ ಇಂಚು ಉ ದ್ದ, ಅರ್ಧ ಇಂಚು ಅಗಲವಿದೆ. ಇದರ ಮೇಲೆ ಶ್ರೀ ರಾಮ-ಲಕ್ಷ್ಮಣ, ಸೀತಾ ಹಾಗು ಹನುಮಂತ ದೇವರ ಮೂರ್ತಿಗಳು ಮನೋಹರವಾಗಿ ಕೊರೆಯಲ್ಪಟ್ಟಿವೆ.

***

ಕ್ಷತ್ರಿಯ ಕುಲಾವತಂಸ ಶ್ರೀ ಶಿವಛತ್ರಪತಿಗಳ ಸ್ಮಾರಕ.

ಮಹಾರಾಷ್ಟ್ರದ ರಾಜಧಾನಿಯಾದ ಪುಣ್ಯನಗರಿ ಯಲ್ಲಿ ಮಹಾರಾಷ್ಟ್ರ ರಾಜ್ಯಸಂಸ್ಥಾಪಕರಾದ ಛತ್ರಪ ತಿ ಶ್ರೀ ಶಿವಾಜಿ ಮಹಾರಾಜರ ಅಶ್ವಾರೂಢ ಕಂಚಿನ ಪ್ರತಿಮೆಯ ಅನಾವರಣ ಸಮಾರಂಭವು ಮುದದಿಂದ ನೆರವೇರಿತು. ಶ್ರೀ ಶಿವಾಜಿ ಮಹಾರಾಜರ ಮೇಲಿನ ಆಳರಸರ ದೃಷ್ಟಿಕೋನವು ಇತ್ತ ಬದಲಾದ್ದರಿಂದ ಈ ಸಮಾರಂಭವನ್ನು ಪ್ರಾಂತಾಧಿಪರಾದ ಸರ್ ಲೆಸ್ಲೀ ವಿಲ್ಸನ್ ದೊರೆಗಳ ಕೈಯಿಂದಲೇ ಸಾಗಿಸಲ್ಪಟ್ಟಿತು. ಕೊಲ್ಲಾಪುರದ ಮಹಾರಾಜರು ಛತ್ರಪತಿಗಳ ಗುಣ ಸಂಕೀರ್ತನ ಮಾಡಿ ಸ್ಮಾರಕ ಮಂಡಳದ ಇತಿಹಾಸ ವನ್ನೂ, ಅವರು ಮಾಡಿದ ಪ್ರಯತ್ನಗಳನ್ನೂ ಆರು ವರ್ಷಗಳ ಹಿಂದೆ ಯುವರಾಜರು ಶಂಕುಸ್ಥಾಪನೆ ಮಾಡಿ ಸ್ಮಾರಕ ಮಂಡಳದ ಮೇಲೆ ಮಾಡಿದ ಉಪ ಕಾರವನ್ನೂ ಹೇಳಿ ಕಂಚು ಪ್ರತಿಮೆಯನ್ನು ಚೊಕ್ಕ ವಾಗಿ ಘಟಿಸಿದ ಶಿಲ್ಪಿಗಳಾದ ಶ್ರೀ| ಕರಮರಕರರನ್ನು ಮನಃಪೂರ್ವಕವಾಗಿ ಅಭಿನಂದಿಸಿದರು. ಈ ಸಮಾ ರಂಭಕ್ಕೆ ಸೈನ್ಯನಿವಾರವನ್ನು ಪೂರೈಸಿದ ಸೈನ್ಯಾಧಿ ಪತಿಗಳಿಗೆ ಹರಸಿ ಈ ಮೂರ್ತಿಯು ಛತ್ರಪತಿಗಳ ಸ್ಮ ರಣೆ ಮಾಡಿಕೊಟ್ಟ ದೇಶದಲ್ಲಿ ಸಾಹಸವನ್ನು ಕೈಕೊ ಳ್ಳಲು ಪ್ರೇರೇಪಿಸಲೆಂದರು. ವಿಲ್ಸನ್ ದೊರೆಗಳು, ಶ್ರೀ ಶಿವಾಜಿ ಮಹಾರಾಜರು ಮಹಾಯೋದ್ಧರೆಂದು ನುಡಿ ದು, ಈ ಸ್ಮಾರಕದಿಂದ ದೇಶದಲ್ಲಿ ಐಕ್ಯಮತ್ಯ ಉಂಟಾ ಗಲೆಂದು ಬಯಸಿದರು. ಶ್ರೀ| ಕರಮರಕರರವರು ಪ್ರತಿಮೆಯನ್ನು ಕೌಶಲ್ಯದಿಂದ ರಚಿಸಿದ್ದಾರೆಂದೂ ಹೇ ಳಿದರು. ಅಶ್ವಾರೂಢ ಪ್ರತಿಮೆಯ ಅನಾವರಣದಿಂದ ಮೊದಲನೇ ಭಾಗವು ನೆರವೇರಿದೆ. ಸ್ಮಾರಕದ ಒಳಿದು ಳ್ಳ ಭಾಗ್ಯವನ್ನೂ, ಗ್ರಂಥಸಂಗ್ರಹಾಲಯವನ್ನೂ ಕಟ್ಟಿ ಮಹಾರಾಷ್ಟ್ರ ಇತಿಹಾಸದ ಸಂಶೋಧನ ಕಾ ರ್ಯವನ್ನು ನಡಿಸುವ ಏರ್ಪಾಟು ಮಾಡುವದು ಮು ಖ್ಯ ಕೆಲಸವಾಗಿದೆ. ಕಟ್ಟಡವನ್ನು ಕಟ್ಟುವ ಕೆಲಸವು ಮಳೆಗಾಲ ಮುಗಿದ ಬಳಿಕ ಪ್ರಾರಂಭಿಸಲ್ಪಡುವದು.

ಆ ಮೇಲೆ ಅಲ್ಲಿ ವಸ್ತುಸಂಗ್ರಹಾಲಯವಿಡಲ್ಪಡುವದು. ಸ್ಮಾರಕ ಫಂಡಿನಲ್ಲಿ ೭೮೫೦೦ ರೂಪಾಯಿಗಳನ್ನು ಸಂಗ್ರಹಿಸಿದೆ. ಅಶ್ವಾರೂಢ ಪ್ರತಿಮೆ ಮತ್ತು ಅದರ ಪ್ರಾಸ್ತಾವಿಕ ಖರ್ಚಿಗೆ ೨೬೭೦೦೦ ರೂಪಾಯಿ ಖರ್ಚಾದವು. ಪ್ರತಿಮೆಯು ೧೪ ಅಡಿ ಉನ್ನತವಿದೆ. ೧೧ ಟನ್ನು ಭಾರವಿದೆ. ಇಷ್ಟು ದೊಡ್ಡ ಪ್ರತಿಮೆಯು ಹಿಂದುಸ್ಥಾನದಲ್ಲಿ ಹಿಂದೆಂದೂ ರಚಿಸಲ್ಪಡಲಿಲ್ಲೆಂದು ಹೇಳುತ್ತಾರೆ. ಛತ್ರಪತಿಗಳ ಪ್ರತಿಮೆಯನ್ನು ರಚಿಸುವ ಭಾಗ್ಯವು ಈಗಿನ ಯುಗದಲ್ಲಿ ಶ್ರೀ॥ ಕರಮರಕರರವರಂಥ ಹಿಂದೀ ಶಿಲ್ಪಿಗಳಿಗೆ ದೊರೆತದ್ದನ್ನು ನೋಡಿ ನಮಗೆ ಸಂತೋಷವಾಗಿದೆ. ಛತ್ರಪತಿಗಳು ತಮ್ಮ ಸ್ವಾತಂತ್ರ್ಯಪ್ರೀತಿಯನ್ನು ದೇಶದಲ್ಲೆಲ್ಲ ಹಬ್ಬಿಸಿ ಮರಾಠಾ ಜನರಿಗೆ ದೇಶಕಾರ್ಯಕ್ಕೆ ಹುರಿದುಂಬಿಸಲೆಂದು ನಮ್ಮದೊಂದು ಪ್ರಾರ್ಥನೆ.

ಕರ್ನಾಟಕ ಏಕೀಕರಣ.

ಸರ್ವಪಕ್ಷೀಯ ಪರಿಷತ್ತಿನ ಸಲುವಾಗಿ ಕರ್ನಾಟಕ ಏಕೀಕರಣ ಪರಿಷತ್ತಿನ ಅಧ್ಯಕ್ಷರಾದ ರಾವಸಾಹೇಬ ಹುಲಕಟ್ಟಿಯವರೂ, ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ॥ ಕೌಜಲಗಿ ಶ್ರೀನಿವಾಸರಾಯರೂ ಒಂದು ಹೇಳಿಕೆಯನ್ನು ಪ್ರಕಟಪಡಿಸಿದ್ದಾರೆ. ಅದರೊಳಗೆ ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ಸಪ್ರಮಾಣ ಪ್ರತಿಪಾದಿಸಿದ್ದಾರೆ. ಮಹಾಭಾರತ ಕಾಲದಲ್ಲಿ ಕರ್ನಾಟಕವು ಪ್ರತ್ಯೇಕ ದೇಶವಾಗಿತ್ತು. ೧೫೬೫ ನೇ ಇಸ್ವಿಯಲ್ಲಿ ಕರ್ನಾಟಕವು ಪೇಶ್ವೆ, ನಿಜಾಮ ಸಾಹೇಬರು ಹಾಗೂ ಟೀಪೂ ಸುಲ್ತಾನ ಇವರೊಳಗೆ ಹಂಚಿಕೊಂಡಿತು. ಟೀಪೂ ಸತ್ತನಂತರ ಕರ್ನಾಟಕವು ಮತ್ತೂ ಛಿನ್ನವಿಚ್ಛಿನ್ನವಾಯಿತು. ಹೀಗೆ ಪ್ರದೇಶವು ಛಿನ್ನವಿಚ್ಛಿನ್ನವಾದಾಗ್ಯೂ ಭಾಷಾವಿಷಯದಲ್ಲಿ ಕರ್ನಾಟಕವು ಒಂದಾಗಿ ಉಳಿಯಿತು. ಈಗ ಕರ್ನಾಟಕವು ಐದು ಕಡೆ ಹಂಚಿಹೋಗಿದೆ. ಮೈಸೂರಿನಲ್ಲಿ ೮ ಜಿಲ್ಹೆಗಳು; ಹೈದರಾಬಾದಿನಲ್ಲಿ ೩ ಜಿಲ್ಹೆಗಳು; ಮುಂಬಯಿಯಲ್ಲಿ ೪ ಜಿಲ್ಹೆಗಳು; ಮದ್ರಾಸದಲ್ಲಿ ೩ ಜಿಲ್ಹೆಗಳು; ಕೊಡಗಿನಲ್ಲಿ ೧ ಜಿಲ್ಹೆ; ಹೀಗೆ ೧೯ ಜಿಲ್ಹೆಗಳ ವ್ಯವಸ್ಥೆಯಾಗಿದೆ. ಏಕೀಕರಣ ಪುರಸ್ಕರ್ತರು ಬ್ರಿಟಿಶ ಆಡಳಿತೆಯಲ್ಲಿರುವ ಕರ್ನಾಟಕ ಪ್ರಾಂತದೊಳಗಿನ ಭಾಗಗಳನ್ನೆಲ್ಲ ಒಟ್ಟು ಹಾಕಲು ಪ್ರಯತ್ನಿಸುತ್ತಾರೆ. ಬೆಳಗಾವಿ, ಧಾರವಾಡ, ವಿಜಾಪುರ, ಬಳ್ಳಾರಿ, ಉತ್ತರ-ದಕ್ಷಿಣ ಕನ್ನಡ, ನೀಲಗಿರಿ, ಕೊಡಗು ಇಷ್ಟು ಜಿಲ್ಹೆಗಳನ್ನು ಒಟ್ಟು ಮಾಡಿ ಕರ್ನಾಟಕ ಪ್ರಾಂತವನ್ನು ಘಟಿಸಲು ಏಕೀಕರಣದ ದೃಷ್ಟಿಯಿದೆ. ಹೀಗೆ ಕರ್ನಾಟಕ ಪ್ರಾಂತ ರಚಿಸಿದರೆ, ಇದರ ಕ್ಷೇತ್ರವು ೫೫೪೦೮ ಚದರ ಮೈಲು ವಿಸ್ತಾರವಾಗುವದು; ೬೩೫೭೬೬೨ ಲೋಕಸಂಖ್ಯೆಯಾಗುತ್ತದೆ. ಈ ಜಿಲ್ಹೆಗಳೊಳಗಿಂದ ೫೫೭೯೪೮೫ ರೂಪಾಯಿ ತೆರಿಗೆ ಎತ್ತುವಳಿಯಾಗುತ್ತಿದೆ. ೩೦೯೧೯೬೭ ರೂಪಾಯಿ ಖರ್ಚಾಗುತ್ತದೆ. ಅಂದರೆ, ಸುಮಾರು ೫೦ ಲಕ್ಷ ರೂಪಾಯಿಗಳು ಈಗಿನ ತೆರಿಗೆಯ ಮಾನದಿಂದ ಆದಾಯವಾಗುತ್ತವೆ. ಹೊಸ ಪ್ರಾಂತವನ್ನು ರಚಿಸುವದರಿಂದ ಆಗುವ ಹೆಚ್ಚಿನ ಖರ್ಚಿಗೆ ಈ ರಕಮು ಸಾಕಾಗಿ ಉಳಿಯಬಹುದು. ಕರ್ನಾಟಕವನ್ನು ಏಕೀಕರಿಸಿದರೆ, ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಭೀಮಾ, ಮಲಪ್ರಭಾ ಮೊದಲಾದ ನದಿಗಳಿಗೆ ಒಡ್ಡು ಹಾಕಿ ಕಾಲುವೆಗಳ ಮುಖಾಂತರವಾಗಿ ನೀರಾವರಿಯನ್ನು ಉದ್ಧರಿಸಲು ಬಹಳ ಅನುಕೂಲತೆಯುಂಟಾಗುವದು. ಸಮುದ್ರ ದಂಡೆಗುಂಟ ಆಗಿಬೋಟಿಗಳನ್ನೇ ನಡೆಸಬಹುದು. ಭಟಕಳದಲ್ಲೊಂದು ಬಂದರ ಕಟ್ಟಿ ಆಗಿಬಂಡಿಯನ್ನು ರಚಿಸಿದರೆ, ವ್ಯಾಪಾರಕ್ಕೆ ಅನುಕೂಲವಾಗುವದು. ತೇಗಿನ ಕಟ್ಟಿಗೆಯ ಅನುಕೂಲತೆಯಿಂದ ನೌಕೆಗಳನ್ನೂ ಕಟ್ಟಬಹುದು. ಕೊಬಲಗಿತ್ತಿಯಲ್ಲಿ ಚಿನ್ನದ ಗಣಿಗಳಿವೆ; ಕೋಲಾರದಲ್ಲಿ ಚಿನ್ನದ ಗಣಿಗಳಿವೆ. ಮ್ಯಾಂಗನೀಜ ಸಿಗುತ್ತದೆ. ಅವುಗಳನ್ನು ಉಪಯೋಗಿಸಿಕೊಂಡು ಕರ್ನಾಟಕದ ಸಂಪದಭ್ಯುದಯ ಮಾಡಬಹುದು. ಹತ್ತಿ, ನೆಲಗಡ್ಲೆ ಮುಂತಾದವುಗಳಿಂದ ಎರಿಪೆ-ಎಣ್ಣೆಯ ವ್ಯಾಪಾರವನ್ನು ಉರ್ಜಿತಾವಸ್ಥೆಗೆ ತರಬಹುದು. ಸಹ್ಯಾದ್ರಿ ಪರ್ವತದ ಮೇಲಿಂದ ಬೀಳುವ ಧಬಧಬೆಗಳಿಂದ ವಿದ್ಯುತ್ತನ್ನು ರಚಿಸಿ, ಅದನ್ನು ಉಪಯೋಗಿಸಿಕೊಳ್ಳಬಹುದು. ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ರಚಿಸಿದರೆ, ಹೊಸ ಖರ್ಚಿನ ಪ್ರಶ್ನೆಯಾಗಲಿಕ್ಕಿಲ್ಲೆಂಬ ಪ್ರತಿಪಾದನೆಯು ನಿರಾಧಾರವಾದದ್ದು. ಮೇಲಾಗಿ, ಕರ್ನಾಟಕಕ್ಕೆ ಉನ್ನತಿ ಹೊಂದಲು ಪ್ರತ್ಯೇಕ ಪ್ರಾಂತರಚನೆಯಿಂದ ಅನುಕೂಲವಿದೆ. ಇತ್ಯಾದಿ ಸಂಗತಿಗಳು ಸರ್ವಪಕ್ಷೀಯ ಪರಿಷತ್ತಿಗೆ ತಿಳಿಸೋಣಾಗಿವೆ.

ವೃತ್ತಸಾರ.

— ಈ ಹೊತ್ತಿನಿಂದ ಬೆಳಗಾವಿಯಲ್ಲಿ ಡೆಪ್ಯುಟಿ ಪೋಲೀಸ ಸುಪರಿಂಟೆಂಡೆಂಟ, ಪೋಲೀಸ ಹೆಡ ಇನ್ಸಪೆಕ್ಟರ, ಪೋಲೀಸ ಇನ್ಸಪೆಕ್ಟರ, ಪೋಲೀಸ ಸಬ್ ಇನ್ಸಪೆಕ್ಟರ ಮುಂತಾದ ೧೦ ಜನರ ಮೇಲೆ ಲಂಚ ತಿಂದ, ಹಿಂಸೆಮಾಡಿದ್ದರಿಂದ ಭ್ರಷ್ಟಾಚಾರ ಮಾಡಿದ ಮುಂತಾದ ಆರೋಪಗಳ ಮೇಲೆ ಖಟ್ಲೆ ನಡೆಯುವದು. ಸರಕಾರವು ಈ ಖಟ್ಲೆ ಮಾಡಿಕೊಟ್ಟಿದೆ.

— ಕರಾಚಿಯಲ್ಲಿ ಸಿಡಿಲು ಹೊಡೆದುಕೊಂಡು ಹೋದ ಆಗಿಬಂಡಿಯೊಂದು ಕಂಬಿಗಳಿಂದ ಜಾರಿ ಬಿತ್ತು. ಪ್ರಾಣಹಾನಿಯಾದ ಸುದ್ದಿಯಿಲ್ಲ. ೧೦-೧೧ ಸಾವಿರ ರೂಪಾಯಿಗಳ ನಷ್ಟ.

— ಲಾಹೋರಿನ ಬಳಿ ೨ ಗ್ರಾಮಗಳಲ್ಲಿ ಸೋಶಲಿಸ್ಟರ ಸಮಿತಿಯೊಂದು 'ಸ್ವರಾಜ್ಯ'ವನ್ನು ಸ್ಥಾಪಿಸಿ ಗ್ರಾಮದವರ ಮೇಲೆ ಬೇಕಾಯಿದೇಶೀರ ತೆರಿಗೆ ಹೇರಲಾಯಿತು. ಹೈಕೋರ್ಟಿನ ತನಕ ಒಯ್ದಾಗ, ಆ ತೆರಿಗೆಯು ಬೇಕಾಯಿದೇಶೀರ ಎಂದು ಊರವರು ನಿರ್ಣಯಿಸಿಕೊಂಡರು. ಈಗ ಮತ್ತೊಂದು ಜಾಹೀರನಾಮೆಯನ್ನು ಪ್ರಕಟಿಸಿ, ಅದೇ ತೆರಿಗೆಯನ್ನು ಸರಕಾರವು ವಸೂಲ ಮಾಡಲುದ್ಯುಕ್ತವಾಗಿದೆ. ಊರವರು ಪ್ರಾಂತಾಧಿಪರಿಗೆ ಬರೆಕೊಂಡಿದ್ದಾರೆ. ನಿರ್ಣಯದ ತನಕ ತೆರಿಗೆ ಕೊಡಲಿಕ್ಕಿಲ್ಲವಾಗಿಯೂ ತಿಳಿಸಿದ್ದಾರೆ!

— ಪುಣೆ-ಮುಂಬಯಿಯೊಳಗಿನ ಪ್ರವಾಸವನ್ನು ಶೀಘ್ರವಾಗಿ ನೆರವೇರಿಸುವ ಬಗ್ಗೆ ಜಿ. ಆಯ್. ಪಿ. ಕಂಪನಿಯವರು ತಾಸಿಗೆ ೭೦ ಮೈಲು ಓಡುವ ಆಗಿಬಂಡಿಗಳನ್ನು ತರಿಸಿದ್ದಾರೆ.

— ಸರ್ ಘುಲಾಮ ಹುಸೇನ ಹಿದಾಯತುಲ್ಲಾರವರ ಜಾತಿಯಿಂದ ಬರಿದಾದ ದಿವಾನ ಜಾಗಕ್ಕೆ ಪುನಃ ಮೌಲವಿ ರಫಿಉದ್ದೀನರವರಿಗೆ ನೇಮಿಸಲಾಗಿದೆ.

ದೇಶಬಂಧುಗಳ ಪುಣ್ಯತಿಥಿಯು ಬಂಗಾಲ ಪ್ರಾಂತದಲ್ಲಿ ಭಕ್ತಿಪೂರ್ವಕವಾಗಿ ಪಾಲಿಸಲ್ಪಟ್ಟಿತು. ಕಲಕತ್ತೆಯೊಳಗಿನ ಸಾವಿರಾರು ಪ್ರಜೆಗಳು ನಾಮಸಂಕೀರ್ತನ ಮಾಡುತ್ತ ದೇಶಬಂಧುಗಳ ದಹನಭೂಮಿಯ ತನಕ ಹೋಗಿ ದೇಶಬಂಧುಗಳಿಗೆ ವಂದನೆಗಳನ್ನರ್ಪಿಸಿದರು. ಮರುಂಜಾವಿಗೆ ಶ್ರೀ ಬಸುರವರ ಅಧ್ಯಕ್ಷತೆಯಲ್ಲಿ ಪ್ರಚಂಡ ಸಭೆಯಾಯಿತು. ಹೈಕೋರ್ಟಿನ ನ್ಯಾಯಮೂರ್ತಿಗಳಾದ ಶ್ರೀ ಎಸ್. ಎನ್. ಮುಖರ್ಜಿಯವರೂ ಸಭೆಗೆ ಬಂದಿದ್ದರು.

— ಹಿಂದುಸ್ಥಾನದೊಳಗಿನ ವ್ಯಾಪಾರಿಗಳು ಬ್ರಿಟಿಶ ಕಾರಕೀರ್ದಿಯಲ್ಲಿ ಒಂದೊಂದಾಗಿ ನಾಶಹೊಂದಿದ್ದರಿಂದಲೇ ಭಾರತೀಯರಿಗೆ ಅರೆಹೊಟ್ಟೆ ಕೂಳು ಸಹ ಸಿಗದ ಕಷ್ಟವಾಗಿದೆ. ಬಂಗಾಲದಲ್ಲಿ ಬಂಗಾಲಿಯಿದ್ದಾಗ್ಯೂ ಹಿಂದೀ ಪ್ರಜೆಗಳಾದ ದಿವಾನರು ತಿಂಗ-ತಿಂಗಳಿಗೆ ೫-೬ ಸಾವಿರ ರೂಪಾಯಿಗಳನ್ನು ತಿನ್ನುತ್ತಾರೆ. ಸರಕಾರಿ ದಾಖಲೆಗಳಲ್ಲಿ ಬಂಗಾಲ ಬಗ್ಗೆ ಬೆಂಬಲ ಉಲ್ಲೇಖ ಮಾಡುವದಿಲ್ಲ ಇತ್ಯಾದಿ ಉದ್ಗಾರಗಳನ್ನು ಆಚಾರ್ಯ ರಾಯರು 'ಫ್ರೀಪ್ರೆಸ' ಪತ್ರಿಕೆಯ ಪ್ರತಿನಿಧಿಗಳ ಬಳಿ ತೆಗೆದಿದ್ದಾರೆ.

— ಲಂಡ ರೆಡ್ಡಿಯವರ ಕಾನೂನಿನಲ್ಲಿ ಹುಟ್ಟುವಳಿಯ ಅರ್ಧದಷ್ಟು ಹಿರಿಯರನ್ನು ಆರಿಸಬಹುದೆಂದು ಹೊಸ ನಿಯಮಾಗಲಿಕ್ಕಿದೆ. ಈ ಕಾನೂನು ಬೇಸಾಯಗಾರರಿಗೆ ಕ್ಷೇಮಕರವಲ್ಲೆಂದು ಎಲ್ಲ ಕಡೆಯಲ್ಲಿಯೂ ನಿಷೇಧವಾಗುತ್ತಿದೆ. ಈ ೨೩-೬-೨೮ನೇಗೆ ಪುಣೆಯಲ್ಲಿ ಸೇರುವ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಈ ಕಾನೂನಿನ ಪ್ರಥಮ ವಾಚನವಾಗುವದು.

— ಕಾಕಿನಾಡಿನೊಳಗಿನ ರಾ॥ ತಿರುಮಲರಾವ ವೆಂಕಟಸ್ವಾಮಿ ಇವರ ಉಗ್ರಾಣದಲ್ಲಿಗೆ ಬೆಂಕಿ ಹತ್ತಿ ಅರ್ಧ ಲಕ್ಷ ರೂಪಾಯಿಗಳ ೫೦-೬೦ ನಷ್ಟ. ಪವಾಸ್ಯದಲ್ಲಿ ದೊಡ್ಡ ಬೆಂಕಿಯಾಗಿ ಇಡೀ ಜಿಲ್ಹೆಯೇ ಸುಟ್ಟು ಬೂದಿಯಾಗಿದೆ ೧೨ ಮಂದಿಗಳು ತೀರಿದರು.

— ಬಾಲೂರ ಘಾಟದೊಳಗಿನ ಬಂಗಾಲದ ಮೂಲಕ ಜನರು ಉದ್ವಿಗ್ನರಾಗಿದ್ದಾರೆ, ಶ್ರೀ ಅನಿಲ ವಿಶ್ವಾಸ ಎಂಬ ವಕೀಲರ ನೇತೃತ್ವದಲ್ಲಿ ೫೦೦ ಮಂದಿ ಬಂಗಾಲಿಗಳು ಕೂಟವಾಡಿ ಪ್ರಾಂತಸಾಹೇಬರ ಸುತ್ತು ಮುತ್ತು ಉಪವಾಸ ಕೂತುಕೊಂಡಿದ್ದಾರೆ. ಹೊಟ್ಟೆಯ ಗೋಳನ್ನು ಪರಿಹರಿಸಲು ಉಪಾಯ ಯೋಜನೆ ಮಾಡಿದ ಹೊರತು, ತಾವು ಅಲ್ಲಿಂದ ಏಳಲಿಕ್ಕಿಲ್ಲವಾಗಿಯೂ ನಿರ್ಧಾರವನ್ನು ಪ್ರಕಟಿಸಿದ್ದಾರೆ.

— ಸರ್ ಚೆನಿಲಾಲ ಮೇಹತಾರವರ ಜಾಗಕ್ಕೆ ಪ್ರಸಿದ್ಧ ರಾ॥ ಬಾಲಕೃಷ್ಣ ಸೀತಾರಾಮ ಕಾಮತರವರನ್ನು ಕಾರ್ಯಕಾರಿ ಸಭಾಸದರಾಗಿ ನೇಮಿಸುವವರಿದ್ದಾರಾಗಿ ತಿಳಿಯುತ್ತದೆ.

— ಬಿರುಗಾಳಿಯಿಂದ ಸಾಂಗಲಿ ವಿಲಿಂಗಡನ್ ಕಾಲೇಜದೊಳಗಿನ ಶ್ರೀ ಶಾಹೂ ಛತ್ರಪತಿ ವಸತಿಗೃಹದ ಮೇಲಿನ ಮೇಲ್ಛಾವಣಿ ಹಾರಿಹೋಯಿತು. ರೂ. ೨೦೦೦ ಮಟ್ಟಿಗೆ ನಷ್ಟವಾಗಿದೆ.

पाहिजेत !— गांवोगांवीं फिरून आमचे कडे तयार होणारा हरएक प्रकारचा सोन्या-चांदीचा माल विक्री करण्याकरितां हुशार, कर्तव्यदक्ष व सचोटीचे असे कानडी, मराठी व हिंदी जाणणारे फिरते एजंट पाहिजे आहेत.

एजंट होऊं इच्छिणाऱ्यानीं लायख असा कमीतकमी दोन हजाराचा जामीन अगर ऐपत अथवा जबाबदारी द्यावी लागेल. अनुभवशीर लोकांना विशेष पसंत-केलेजाईल. भरपूर पगार, कमिशन, ट्रॅव्हलिंगखर्च व ट्रॅव्हलिंगचा बोर्डिंग लॉजिंगखर्च।

विशेष माहितीकरिता ताबडतोब खालील पत्त्यावर अर्ज लिहा.

शेट केशव लक्ष्मण आणि सन्स, मॅन्युफॅक्चरिंग ज्वेलर्स, कारवार (उ.कानडा.)

ಕಾನಡಾ ವೃತ್ತ.

ಮಿತಿ ವಿಭವ ಸಂ। ಆಷಾಢ [illegible] ಸೋಮವಾರ

ಇಂಗ್ಲಿಷ ಶಿಕ್ಷಣ.

ಇಂಗ್ಲಿಷ ಶಿಕ್ಷಣ ಪಡೆಯುವದು ಬ್ರಿಟಿಶ ರಾಜ್ಯಭಾರದಲ್ಲಿ ಒಂದು ದೊಡ್ಡಸ್ತನದ ಲಕ್ಷಣವಾಗಿದೆ. ಬುದ್ಧಿಶಾಲಿಯಾಗಬೇಕಾದರೆ, [illegible]ರು ಪಡೆಯಬೇಕಾದರೆ ಇಂಗ್ಲಿಷ ಶಿಕ್ಷಣ ಪಡೆಯಬೇಕು. ಪದವಿಗಳನ್ನು ಸಂಗ್ರಹಿಸಬೇಕು. ಮಾತು ಮಾತಿಗೆ ಇಂಗ್ಲಿಷನ್ನು ಮಾತಾಡಬೇಕು. [illegible] ಇಂಗ್ಲಿಷ [illegible]ಗಳನ್ನಂಗೀಕರಿಸಬೇಕು. ಉಡಿಗೆ ತೊಡಿಗೆಗಳೂ, ನಡೆನುಡಿಗಳೂ, ಆಚಾರ-ವಿಚಾರಗಳೂ, ಕಲ್ಪನೆಗಳೂ, ಭಾವನೆಗಳೂ ಎಲ್ಲ [illegible] ಇಂಗ್ಲಿಷರಂತೆಯೇ ಅಭಿನಯಿಸಿದವನು ಈಗಿನ ರಾಜ್ಯದಲ್ಲಿ ಶ್ರೇಷ್ಠನಾಗುತ್ತಾನೆ. ಮೆಕಾಲೆಯ ದೃಷ್ಟಿಯಿಂದ ಇದೇ ಅವಸ್ಥೆಯನ್ನು [illegible] [illegible]ಗಳನ್ನು ಉಪಯೋಗಿಸಬೇಕಾಗ [illegible] [illegible] [illegible] [illegible] ಅಂದರೆ ಅತನು ಸಾಧಿಸಿದ [illegible] ಮಹಾತ್ಮರ ಅಸಹಯೋಗದಲ್ಲಿ ಈ ಭಾವನೆ ದೊಡ್ಡ ಆಘಾತವಾಯಿತು. ಇನ್ನೊಂದೆಡೆ [illegible] ದ ಸಂಸ್ಥಾನದ ಮುಖ್ಯ ವಿದ್ಯಾಪೀಠ[illegible] ನವಾಬ ಮಸೂದಜಂಗ ಬಹಾದ್ದೂರರವರು ಮಾಡಿದ ಉಪನ್ಯಾಸವನ್ನು ವಿಚಾರಿಸಿದರು ವಿಚಾರಿಸತಕ್ಕದ್ದು.

ನವಾಬ ಮಸೂದಜಂಗ ಬಹಾದ್ದೂರರವರು ದೇಶಭಾಷೆಯ ತ್ಯಾಗದಿಂದ ಒದಗುವ ಅನರ್ಥಪರಂಪರೆಯನ್ನು ಚಿಕಿತ್ಸಕವಾಗಿ ತೋರಿಸಿದ್ದಾರೆ. ದೇಶಾಭಿಮಾನದ ಮೂಲವು ದೇಶಭಾಷೆಯು. ಕಾರಣವಿದೆ. ಗೀತೆಪುರಾಣಗಳನ್ನೆಲ್ಲ, ಪೂಜ್ಯ ಮಹರ್ಷಿಗಳ ವಚನಗಳೆಲ್ಲ ದೇಶಭಾಷೆಗಳಿಂದಲೇ ಗೊತ್ತು ಪಡೆದಿರುವೆವು. ಆ ಭಾಷೆಯ ವ್ಯಾಸಂಗ ಬೆಳೆಸದೆ, ಆ ಭಾಷೆಯನ್ನು ಹೀಯಾಳಿಸುತ್ತಿರುವಾಗ ಆ ಭಾಷೆಯಲ್ಲೊಳಗೊಂಡ ಅಮೂಲ್ಯ ತತ್ವಗಳ ಗ್ರಹಿಕೆಯಾಗುವದೆಂತು? ದೇಶಭಾಷೆಯ ವಿಶೇಷ ವ್ಯಾಸಂಗ ಬೆಳೆಸಬೇಕಾದರೂ ಇಂಗ್ಲಿಷ ಭಾಷೆಯ ಮಧ್ಯಸ್ತಿಕೆ ಬೇಕು. ನಮ್ಮಲ್ಲಿಯ ಅಂಗ್ಲಭಾಷಾ ಕೋವಿದರು ರಾಮಾಯಣ, ಮಹಾಭಾರತ ಜಗದ್ಗೀತೆಗಳಂಥ ಶ್ರೇಷ್ಠ ಗ್ರಂಥಗಳ ಪರಿಚಯವನ್ನು ಇಂಗ್ಲಿಷ ಭಾಷೆಯಿಂದ ಮಾಡಿಕೊಳ್ಳುತ್ತಾರೆ. ಆದರಿಂದ ನಮ್ಮ ವಿಚಾರ ಸಾಮ್ರಾಜ್ಯದಲ್ಲಿ ಇಂಗ್ಲಿಷ ಭಾಷೆಯ ಲಾಲಿತ್ಯವೇ ಪ್ರಮುಖ್ಯವಾಗಿ ಕಂಗೊಳಿಸುತ್ತದೆ. ಇಂಗ್ಲಿಷ ಭಾಷೆಯ ಪರಿಚಯದ ಮೂಲಕ ಇಂಗ್ಲಿಷ ವಾಙ್ಮಯ ಭಾಂಡಾರದ ಮೇಲೆ ಪ್ರೇಮ, ಇಂಗ್ಲಿಷ ನಡೆ-ನುಡಿಗಳ ಮೇಲೆ ವಾತ್ಸಲ್ಯ. ಹೀಗಾಗಿ ಹಿಂದುಸ್ಥಾನದಲ್ಲಿ ಭಾರತೀಯರು ಇಂಗ್ಲಿಷರಾಗಿ ಪರಿಣಮಿಸಲು ಪ್ರಯತ್ನಪಡುತ್ತಲಿದ್ದಾರೆ. ಇದರಿಂದ ಅತ್ತ ಇಂಗ್ಲಿಷರೂ ಸೇರಿಸಿಕೊಳ್ಳುವದಿಲ್ಲ. ಯಾಕಂದರೆ ಎಷ್ಟೆಂದರೂ ವೈಪೊಗಲು ವಿಲಾಯತಿಯ ಸಾಹೇಬರಂತೆ ರೂಪಾಂತರಿಸುತ್ತಿದೆಯೇ? ಇತ್ತ ಭಾ[illegible] ಯರೊಳಗೂ ಸೇರಿಕೊಳ್ಳಲು ನಾಚಿಕೆ. ಹೀಗೆ ಇಂಗ್ಲಿಷ ಶಿಕ್ಷಣ ಪಡೆದವರು ತ್ರಿಶಂಕುಗಳಾಗಿ ಪರಿಣಮಿಸಿದ್ದಾರೆ.

ಈ ಸ್ಥಿತಿಯಲ್ಲಿ ದೇಶಕ್ಕೆ ಕ್ಷೇಮವಿಲ್ಲ, ದೇಶದಲ್ಲಿ ಸಾಹಸವಿಲ್ಲ. ದೇಶೋದ್ಧಾರದ ಪ್ರಯತ್ನಗಳಿಗೆ ಬೆಂಬಲವಿಲ್ಲ. ಆದರಿಂದಲೇ ಇಂಗ್ಲಿಷ ಕಲಿತವರು ಇತ್ತ ೩೦ ವರುಷಗಳಲ್ಲಿ ಹೇಳತಕ್ಕಂಥ ವಿಧಾಯಕ ಕಾರ್ಯಕ್ರಮವನ್ನು ನಡಿಸಲಿಲ್ಲವಾಗಿ ನವಾಬಜಂಗ ಬಹಾದ್ದೂರರವರು ವ್ಯಸನಪೂರ್ವಕವಾಗಿ ನಮೂದಿಸಿದ್ದಾರೆ. ಮಹಾತ್ಮರು ಇದೇ ಸಮಯ ಈ ವಿಷಯಕ್ಕಿನ ಉದ್ಗಾರಗಳನ್ನೂ ನಾವು ಬೇರೊಂದೆಡೆ ಕೊಟ್ಟಿರುವೆವು. ಮಹಾತ್ಮರು ಈ ವಿಷಯವನ್ನು ಸ್ಪಷ್ಟ ಬಿಚ್ಚಿ ಹೇಳಿದ್ದಾರೆ. ಇಂಗ್ಲಿಷ ಭಾಷೆಗೆ ಅಧೀನರಾಗಿದ್ದದರಿಂದ ನಮ್ಮ ವಿಷಯಾಗ್ರಹಣವೆಲ್ಲ ಇಂಗ್ಲಿಷ ಭಾಷೆಯಿಂದಲೇ ಸಾಗುವದರಿಂದ ವಿಷಯಜ್ಞಾನವು ಇಂಗ್ಲಿಷ ದೃಷ್ಟಿಯಿಂದಲೇ ನಡೆಯುತ್ತದೆ. ಸ್ವದೇಶದ ಇತಿಹಾಸವನ್ನು ಇಂಗ್ಲಿಷರ ದೃಷ್ಟಿಯಿಂದ ನೋಡಬೇಕಾಗುತ್ತದೆ. ಕೃಷ್ಣನು ಭೂತಲವನ್ನು ಉದ್ಧರಿಸಲು ಅವತರಿಸಿದ ಪುಣ್ಯ ಪುರುಷನು; ಛತ್ರಪತಿ ಶ್ರೀ ಶಿವಾಜಿ ಮಹಾರಾಜರು, ಒಬ್ಬ ಪುಂಡುಗಾರನು, (ಸುದೈವದಿಂದ ಈಗ ಈ ಕಲ್ಪನೆಯಿಲ್ಲ) ಇಂಥ ಸ್ವಾಭಿಮಾನಘಾತಕ ಇತಿಹಾಸವನ್ನು ನಮ್ಮಲ್ಲಿಯ ಎಳೆ ಬಾಲಕರು ನೋಡಬೇಕಾಗುತ್ತದೆ. ಅರ್ಥ-ಶಾಸ್ತ್ರದಂಥ ದೇಶಕ್ಕೆ ಕಲ್ಯಾಣ ಮಾಡುವ ಸಂಪತ್ತು ವಿಪತ್ತುಗಳಿಗೆ ಕಾರಣವಾದ ವಿಷಯದಲ್ಲಿಯೂ ಇಂಗ್ಲಂಡದೊಳಗಿಂದ ಅಚ್ಚುಕಟ್ಟಾಗಿ ಬಂದ ಗ್ರಂಥಗಳನ್ನೇ ನೋಡಬೇಕು. ಇಂಗ್ಲಂಡದ ಪರಿಸ್ಥಿತಿಯಲ್ಲಿ ಅಲ್ಲಿ ಅಭ್ಯುದಯವಾಗುವಂತೆ ಘಟಿಸಿದ ನಿಯಮಗಳನ್ನು ಕಣ್ಮುಚ್ಚಿ ಬಾಯಿಪಾಠ ಮಾಡಿಕೊಂಡು ಅವನ್ನೇ ಹಿಂಬಾಲಿಸಿ ಒದಗಿದ ರಾಷ್ಟ್ರವಿಪತ್ತನ್ನು ನಾವು ಕಣ್ಣಾರೆ ಕಾಣುತ್ತೇವೆ.

ಮಹಾತ್ಮರು ಹೇಳಿದ ಒಂದು ಸಂಗತಿಯು ಕುರಿತು ಸದ್ಯಕ್ಕೇ ಒಂದು ದಾಖಲೆ ದೊರಕಿತು. ವಿದ್ಯಾಪೀಠದೊಳಗಿನ ವಿದ್ಯಾರ್ಥಿಗಳ ಸ್ವಾತಂತ್ರ್ಯದ ಸುದ್ದಿ ಹೇಳುವಾಗ, ಮಹಾತ್ಮರು ಬಾರ್ದೋಲಿಯ ಸಂಗ್ರಾಮದಲ್ಲಿ ಸೆರೆಯಾಳಾದ ವಿದ್ಯಾಪೀಠದ ವಿದ್ಯಾರ್ಥಿಯನ್ನು ಅಭಿನಂದಿಸಿದರು. ಹೀಗೆ ಸರಕಾರಿ ಶಾಲೆಗಳೊಳಗಿನ ವಿದ್ಯಾರ್ಥಿಗಳಿಗೆ ರಾಷ್ಟ್ರೋದ್ಧಾರ ಪ್ರಯತ್ನದಲ್ಲಿ ಸೇರಬರಲಿಕ್ಕಿಲ್ಲವಾಗಿಯೂ ಉದ್ಗರಿಸಿದರು. ಲಾಹೋರದೊಳಗಿನ ಸರಕಾರಿ ಕಾಲೇಜಿನ ಮುಖ್ಯಾಧ್ಯಾಪಕರು, ಯಾವದೇ ಪ್ರಕಾರದ ಪ್ರಚಲಿತ ರಾಜಕಾರಣದಲ್ಲಿ ಸೇರಲಿಕ್ಕಿಲ್ಲೆಂಬರ್ಥದ ಪ್ರತಿಜ್ಞಾಪತ್ರ ಕೊಟ್ಟ ಹೊರತು, ವಿದ್ಯಾರ್ಥಿಗಳಿಗೆ ಪ್ರವೇಶ ಕೊಡುವದಿಲ್ಲವಾಗಿ ಪ್ರಕಟಣೆಯನ್ನು ಹೊರಡಿಸಿದ್ದಾರಂತೆ. ವಿದ್ಯಾರ್ಥಿಗಳು ರಾಷ್ಟ್ರದ ಮುಂದಿನ ಚಾಲಕರು; ಇಂಥವರು ರಾಷ್ಟ್ರೋದ್ಧಾರ ಕಾರ್ಯದಲ್ಲಿ ನೆರವಾಗಬಾರದೆಂದು ಪ್ರತಿಬಂಧಿಸುವದು ಯಾವ ದೇಶದಲ್ಲಾದರೂ ಸಾಧ್ಯವಿದೆಯೇ? ಚೀನ ದೇಶದ ಉದ್ಧಾರವನ್ನು ಅಲ್ಲಿಯ ವಿದ್ಯಾರ್ಥಿಗಳೇ ಸಾಧಿಸಿದ್ದಾರೆ. ಸ್ವಾತಂತ್ರ್ಯದ ಕಾದಾಟ ನಡೆದಾಗ ಪುಸ್ತಕಗಳನ್ನು ದೇಶಾಭಿಮಾನಶೂನ್ಯರಾಗಿ ಅವರು ಓದುತ್ತ ಕೂಡ್ರಲಿಲ್ಲ. ರಾಷ್ಟ್ರೋದ್ಧಾರವು ಆಬಾಲವೃದ್ಧ ಸ್ತ್ರೀ-ಪುರುಷರ ಆದ್ಯ ಕರ್ತವ್ಯವೆಂದೇ ಎಣಿಸಿ, ಸಾಮಾನ್ಯ ವ್ಯವಸಾಯಗಳನ್ನೆಲ್ಲ ಧಿಕ್ಕರಿಸಿ ಎಲ್ಲರೂ ಅದೇ ಕಾರ್ಯಕ್ಕೆ ತೊಡಗಿದರು. ಅದರಿಂದಲೇ ರಾಷ್ಟ್ರೀಯರು ಪೇಕಿಂಗ ಪಟ್ಟಣದ ಮೇಲೆ ವಿಜಯಧ್ವಜವನ್ನು ಹಾರಿಸಲು ಸಮರ್ಥರಾದರು. ಇಂಗ್ಲಿಷ ಶಿಕ್ಷಣದಿಂದ ಇಂಥ ಸಾಹಸವು ಪ್ರಾಪ್ತವಾಗುವದಿಲ್ಲ. ದೇಶಾಭಿಮಾನದ ಜ್ಯೋತಿಯಿದ್ದಾಗ್ಯೂ, ಇಂಗ್ಲಿಷ ಭಾಷೆಯ ವಾತ್ಸಲ್ಯದಿಂದಲೂ, ಇಂಗ್ಲಿಷರ ಗುಣವರ್ಣನೆಯ ಪಠಣದಿಂದಲೂ ಆ ಜ್ಯೋತಿಗೆ ಬಿರುಗಾಳಿ ಸೋಂಕಿ ಅದು ನಂದಿಹೋಗುತ್ತದೆ. ಲೋಕಮಾನ್ಯ-ಮಹಾತ್ಮ ದೇಶಬಂಧುಗಳಂಥ ವಿಭೂತಿಗಳ ಪ್ರೇರಣೆಯಿಂದ ಆ ಜ್ಯೋತಿಯು ಬೆಳಗಹತ್ತಿದರೆ, ಅದಕ್ಕೆ ಶಿಕ್ಷಣಾಧಿಕಾರಿಗಳು ಜುಲಾಯಿಯಿಂದ ಬೀಸಣಿಗೆಯನ್ನು ಬಲವಾಗಿ ಬೀಸಿ ನಂದಿಸಲು ಯತ್ನಿಸುತ್ತಾರೆ. ಇಂಗ್ಲಿಷ ಶಿಕ್ಷಣದ ಮಹಾದರಿಯಿದು!

ಇಂಗ್ಲಿಷ ಕಲಿಯಬಾರದೆಂದು ಯಾರದೂ ಹೇಳಿಕೆಯಿಲ್ಲ. ಅವಶ್ಯವಿದ್ದಷ್ಟು ಇಂಗ್ಲಿಷ, ಫ್ರೆಂಚ, ಜರ್ಮನಿ ಮುಂತಾದ ಭಾಷೆಗಳನ್ನು ಭಾರತೀಯರು ದೇಶಕಾಲೋಚಿತವಾಗಿ ಕಲಿಯಬೇಕು. ಆದರೆ, ಇಂಗ್ಲಿಷಿಗೆ ಈಗಿನಂತೆ ಅಗ್ರಪೂಜೆಯು ಮಾನವಿರಕೂಡದು. ಇಂಗ್ಲಿಷ ಭಾಷೆಯು ನಮ್ಮ ಭಾಷೆಯಲ್ಲ. ಆದ್ದರಿಂದ ಅದಕ್ಕೆ ನಾವು ಅಗ್ರಪೂಜೆಯನ್ನು ಮಾಡಿದರೆ, ನಮ್ಮ ದೇಶಭಾಷೆಗೆ ಅಪಮಾನ ಮಾಡಿದ ಪಾಪಕ್ಕೆ ನಾವು ಗುರಿಯಾಗಿ ಪರ್ಯಾಯದಿಂದ ನಾವು ಸ್ವಾಭಿಮಾನಶೂನ್ಯರಾಗುತ್ತೇವೆ. ನಮ್ಮ ಊರಲ್ಲಿಯೇ ನಾವು ಪರಸ್ಥರಾಗು

ತ್ತೇವೆ. ಇಂಗ್ಲಿಷ ಶಿಕ್ಷಣದ ಕ್ರಮವು ಅಷ್ಟು ಸದೋಷವಿದೆ. ಇದರಿಂದ ನಮ್ಮ ದೇಶಕ್ಕೆ ಲಾಭವಿಲ್ಲದಿದ್ದರೆ, ಅಷ್ಟು ಆಕ್ಷೇಪವಿದ್ದಿಲ್ಲ, ಹಾನಿಯಿದೆ. ಆದರಿಂದಲೇ ಅದನ್ನು ಆದಷ್ಟು ಬೇಗನೇ ತ್ಯಜಿಸಲು ದೇಶಾಭಿಮಾನಿಗಳು ಪ್ರಯತ್ನಿಸತಕ್ಕದ್ದು. ನವಾಬಜಂಗ ಬಹಾದ್ದೂರರವರು ನುಡಿದಂತೆ, ಮುಖ್ಯ ಮುಖ್ಯ ಭಾಷೆಗಳದೊಂದು ವಿದ್ಯಾಪೀಠವನ್ನು ಸ್ಥಾಪಿಸಲು ಉಪಾಯಯೋಜನೆ ಮಾಡಬೇಕು. ವಿದ್ಯಾರ್ಥಿಗಳ ಸಂಖ್ಯೆಯು ಕಡೆಗೆ ಲಕ್ಷಗೊಡಲಾಗದು. ವಿದ್ಯಾರ್ಥಿಗಳ ಶೀಲವೇ ದೇಶೋದ್ಧಾರದ ಮುಖ್ಯ ಆಧಾರವಾದ್ದರಿಂದ ಆ ಕಡೆ ಲಕ್ಷಗೊಟ್ಟು, ಈ ವಿದ್ಯಾಪೀಠಗಳ ಏರ್ಪಾಟಾಗತಕ್ಕದ್ದೆಂಬ ಮಹಾತ್ಮರ ಅಭಿಪ್ರಾಯವು ಎಲ್ಲರಿಗೂ ಗ್ರಾಹ್ಯವಾಗುವಂತಿದೆ. ಅದೇನೂ ಇರಲಿ. ಸದ್ಯಕ್ಕೆ ನಮ್ಮ ಶಿಕ್ಷಣಕ್ರಮದೊಳಗೆ ಇಂಗ್ಲಿಷ ಭಾಷೆಯ ಮಧ್ಯಸ್ಥಿಕೆಯನ್ನಾದರೂ ವಿದ್ಯಾಧಿಕಾರಿಗಳು ತ್ಯಜಿಸಿದರೆ, ವಿದ್ಯಾರ್ಥಿಗಳ ಮೇಲೆ ದೊಡ್ಡದೊಂದು ಉಪಕಾರವಾಗುವದಲ್ಲವೇ ?

ಸ್ಫುಟ ಸೂಚನೆಗಳು.

೧. ವಿಜಾಪುರದಲ್ಲಿ ಬ್ರಾಹ್ಮಣೇತರರ ಮದವೇರಿತೆಂತೆ. ಜಿಲ್ಲಾ ಲೋಕಲ್ ಬೋರ್ಡಿನಲ್ಲಿಯೂ, ಸ್ಕೂಲ ಬೋರ್ಡಿನಲ್ಲಿಯೂ ಅಧಿಕಾರಪ್ರಾಪ್ತರಾದ ಬ್ರಾಹ್ಮಣೇತರ ಬಾಂಧವರು ಬ್ರಾಹ್ಮಣ ಶಿಕ್ಷಕರ ಬೆನ್ನಿಗೆ ಹತ್ತಿ ಅವರಿಗೆ ಪೀಡಿಸುತ್ತಿದ್ದಾರೆ. ಅನೇಕ ಬ್ರಾಹ್ಮಣ ವಯೋವೃದ್ಧ ಶಿಕ್ಷಕರಿಗೆ ಬಡತರ್ಫ ಮಾಡಲಾಯಿತು. ಹಿಂದಿಲ್ಲದೊಂದು ನೆವದ ಮೇಲೆ ಕೆಲವರಿಗೆ ಹಿಂಬಡತಿ ಕೊಡಲಾಯಿತು. ಏನೂ ನೆವ ಸಿಗದೆ ನಿರುಪಾಯವಾದ ಪ್ರಸಂಗದಲ್ಲಿ ಬ್ರಾಹ್ಮಣ ಶಿಕ್ಷಕರಿಗೆ ದೂರ ದೂರ ವರ್ಗ ಮಾಡಲಾಯಿತು. ಹೊಸ ಹೊಸ ಬ್ರಾಹ್ಮಣೇತರ ಶಿಕ್ಷಕರಿಗೆ ನೇಮಿಸಿಕೊಳ್ಳಲಾಗಿದೆ. ಶಿಕ್ಷಕರ ಯೋಗ್ಯತೆಯ ವಿಚಾರವಾಗದೆ ಅವರು ನೇಮಿಸಲ್ಪಟ್ಟಿದ್ದಾರೆಂದು ಹಲವರು ಆಕ್ಷೇಪಿಸುತ್ತಾರೆ. ಈ ಕುರಿತು ಸರಕಾರಿ ವಿದ್ಯಾಧಿಕಾರಿಗಳ ಬಳಿ ಅರ್ಜಿಗಳಾಗಿರುವದಾಗಿ ತಿಳಿಯುತ್ತದೆ. ಇಂಥ ಉಪಾಯಗಳಿಂದ ಬ್ರಾಹ್ಮಣೇತರರ ದಯಾರ್ಯದಿಂದ ವಿದ್ಯಾರ್ಥಿಗಳ ಕಲ್ಯಾಣವಾಗುತ್ತಿದ್ದರೆ, ನಮ್ಮ ಆಕ್ಷೇಪವಿದ್ದಿಲ್ಲ. ಬ್ರಾಹ್ಮಣೇತರರಾದರೂ ಉದ್ಧಾರಹೊಂದಲಿ! ಆದರೆ, ಬ್ರಾಹ್ಮಣ ದ್ವೇಷದಿಂದ ಬ್ರಾಹ್ಮಣೇತರರ ಉದ್ಧಾರವಾಗಬಲ್ಲದೇ? ಅಯೋಗ್ಯ ಶಿಕ್ಷಕರನ್ನು ನೇಮಿಸಿಕೊಂಡರೆ ವಿದ್ಯಾದಾನವು ಸುಸೂತ್ರವಾಗಿ ನಡೆಯುವದೇ? ಇಷ್ಟು ಸಾಮಾನ್ಯ ವಿಚಾರವನ್ನು ಬ್ರಾಹ್ಮಣೇತರ ಮುಂದಾಳುಗಳು ಯಾಕೆ ಮಾಡಲಾಗದು? ಬ್ರಾಹ್ಮಣೇತರರು ಅಧಿಕಾರಾರೂಢರಾದಾಗ ಬ್ರಾಹ್ಮಣ ಶಿಕ್ಷಕರ ಪೀಡನೆಯಾದಂತೆ, ಕಾಲವಶಾತ್ ಬ್ರಾಹ್ಮಣರು ಅಧಿಕಾರಾರೂಢರಾದಾಗ ಹೀಗೇ ಆಚರಿಸಬಹುದೇನು? ಇಂಥ ಪರಸ್ಪರ ದ್ವೇಷಾಸೂಯೆಗಳಿಂದ ಶಿಕ್ಷಣಕಾರ್ಯವು ಅಥವಾ ಯಾವದೇ ಕಾರ್ಯವು ಸುಸೂತ್ರವಾಗಿ ಸಾಗಬಲ್ಲದೇ? ಅಧಿಕಾರ ನಡಿಸುವವರು ನ್ಯಾಯ-ನೀತಿಗಳನ್ನು ಲೆಕ್ಕಿಸದೆ ವರ್ತಿಸಿದರೆ ಅವರು ಅಧಿಕಾರಕ್ಕೆ ಅಪಾತ್ರರಾಗುತ್ತಾರೆ. ಅರ್ಥ, ಇಷ್ಟ, ಜಾತಿ, ಪಕ್ಷ ಮುಂತಾದ ಸಂಕುಚಿತ ದೃಷ್ಟಿಯನ್ನು ಹಿಡಿದು ಅಧಿಕಾರ ನಡಿಸಿದರೆ ಆ ಅಧಿಕಾರವು ಹೆಚ್ಚು ಕಾಲ ಬಾಳುವದಿಲ್ಲ; ಅಧಿಕಾರಿಯಾಗುವ ಪಾತ್ರತೆಯೂ ಇರುವದಿಲ್ಲ. ನ್ಯಾಯ-ನೀತಿಗಳಿಂದ ಎಲ್ಲರಿಗೂ ಸಮಸಮಾನರೆಂದೆಣಿಸಿ ವರ್ತಿಸಿಕೊಂಡು ಬ್ರಾಹ್ಮಣೇತರ ಬಾಂಧವರು ರಾಜ್ಯಾಧಿಕಾರದಲ್ಲಿ ಮುಂದಾಳುಗಳಾಗಿ ಬರಲಿ. ನಮಗೆ ಅತ್ಯಂತ ಆನಂದವಿದೆ.

---

೨. ಬಾರ್ಡೋಲಿ ಪ್ರಶ್ನೆಯು ಮೇಲೆ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರನೇಕರು ರಾಜೀನಾಮೆ ಕೊಡುತ್ತಿದ್ದಾರಷ್ಟೇ! ಕರ್ನಾಟಕದೊಳಗಿನ ಸಭಾಸದರು ಇನ್ನೂ ಮುಗ್ಧತೆಯನ್ನೇ ಸ್ವೀಕರಿಸಿಕೊಂಡಿದ್ದಾರೆ. ಶ್ರೀ| ನರಿಮಾನವರವರು ತಮ್ಮ ಸರಕಾರಿಗಳಿಗೆಲ್ಲ ಈ ಕುರಿತು ಪತ್ರ ಸಹ ಬರೆದಿದ್ದರಾಗಿ ಸುದ್ದಿ ಇದೆ. ಆದರೂ, ಕರ್ನಾಟಕಸ್ಥ ಸಭಾಸದರು ಸುಮ್ಮಗೇಕೆ? ಧಾರವಾಡದ ಶ್ರೀ| ಜೋಗರವರು ರಾಜೀನಾಮೆ ಕೊಡಲು ಹಿಂದೆ ಮುಂದೆ ನೋಡುತ್ತಾರಂತೆ! ಒಂದು ಕಾರಣವು ಹೇಳಲಾಗುತ್ತದೆ. ಪುನಃ ಇಲೆಕ್ಷನಿಗೆ ನಿಂತರೆ ಪ್ರತಿಸ್ಪರ್ಧಿಗಳು ನಿಂತು ತಮಗೆ ಸೋಲಾಗಿ ಬಾರ್ಡೋಲಿಯ ಪ್ರಶ್ನೆಗೆ ಬಾಧೆ ತಟ್ಟಬಹುದೆಂದು ಅವರಿಗೊಂದು ಭೀತಿ ಇದೆ. ಈ ಭೀತಿಗೆ ಶ್ರೀ| ಜೋಗರವರು ಒಳಿಬೀಳಲಾಗದು. ನಿಷೇಧವನ್ನು ಮಾಡಿ ರಾಜೀನಾಮೆ ಕೊಡುವದಷ್ಟೇ ಅವರ ಕರ್ತವ್ಯ. ಸಭಾಸದರಾಗಿ ಪುನಃ ಕೌನ್ಸಿಲಿಗೆ ಕಳಿಸುವದು ಮತದಾರರ ಕೆಲಸ. ಬಾರ್ಡೋಲಿಯ ಬಗ್ಗೆ ಮತದಾರರಲ್ಲಿ ಕಳವಳವಿದ್ದರೆ ಅವರು ಶ್ರೀ| ಜೋಗರಿಗೆ ಕಳಿಸುವರು. ಇಲ್ಲದಿದ್ದರೆ ಬಿಡುವರು. ಆ ಆಪತ್ತನ್ನು ಈಗಲೇ ಗ್ರಹಿಸಿ ರಾಜೀನಾಮೆ ಕೊಡದಿರುವದು ರಾಷ್ಟ್ರೀಯರಿಗೆ ಭೂಷಣವಲ್ಲ. ನಮ್ಮ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ| ಕರ್ಕಿಯವರು ಯಾಕೆ ಸುಮ್ಮನೆ ಕೂತುಕೊಂಡಿದ್ದಾರೆಂಬದು ನಮಗೆ ತಿಳಿಯದ ಮಾತು. ನಮ್ಮ ಜಿಲ್ಲೆಯಲ್ಲಿ ಪ್ರತಿಸ್ಪರ್ಧಿಗಳಿಲ್ಲದೆ ಇವರು ಕೌನ್ಸಿಲಿಗೆ ಆರಿಸಿ ಹೋಗಿದ್ದಾರೆ. ಬಾರ್ಡೋಲಿಯ ಬಗ್ಗೆ ಇಲ್ಲಿಯ ಲೋಕಮತವು ಸಹಾನುಭೂತಿಯನ್ನು ತೋರುತ್ತದೆ. ಶ್ರೀ| ಕರ್ಕಿಯವರಿಗೆ ಇಂಥ ಪ್ರಸಕ್ತಿಯಲ್ಲಿ ಎದುರಾಗುವ ಕಾರ್ಯಕ್ಷಮ ಮಹಾಶಯರ್‍ಯಾರೂ ತೋರುವದಿಲ್ಲ. ಹೀಗಿರಲು, ಅವರು ಅನುಮಾನಿಸುವ ಕಾರಣವೇನು? ಶ್ರೀ| ಕರ್ಕಿಯವರು ಈ ಕುರಿತು ಇನ್ನೂ ವಿಚಾರ ಮಾಡಲಾಗದು. ಬಾರ್ಡೋಲಿಯ ಪ್ರಶ್ನೆಯನ್ನು ಸಂಧಾನದಿಂದ ಬಿಡಿಸಲಿಚ್ಛಿಸಿದ ಕರನಿರಾಕರಣೆಯ ತತ್ತ್ವ ಪ್ರಯೋಗದಲ್ಲಿ ಬಹಳಮಟ್ಟಿಗೆ ಅನುಮಾನಿಸಿ ಕೊನೆಗೆ ರಾಜೀನಾಮೆ ಶ್ರೀ| ಕೊಟ್ಟ ಕನ್ನೂಯಲಾಲ ಮುನಶಿಯವರ ಪತ್ರವನ್ನು ಆಮೂಲಾಗ್ರ ಪರಾಂಬರಿಸಿ ಕೌನ್ಸಿಲು ಆಸನವನ್ನು ಇನ್ನೂ ತ್ಯಜಿಸದಿದ್ದಲ್ಲಿ ಹಿಡಗುವ ದ್ರೋಹವನ್ನು ನೆನೆಸಬೇಕು; ಮತ್ತು ಕೂಡಲೆ ರಾಜೀನಾಮೆಯನ್ನಿತ್ತು ಬಾರ್ಡೋಲಿಯ ಲ್ಲಿ ಸರಕಾರವು ನಡಿಸುವ ಅನ್ಯಾಯವನ್ನು ನಿಷೇಧಿಸಬೇಕು.

---

೩. ನಮ್ಮ ಸ್ಕೂಲ ಬೋರ್ಡ ಪ್ರಾಥಮಿಕ ಶಾಲೆಗಳಲ್ಲಿ ರಾಷ್ಟ್ರೀಯ ಬುದ್ಧಿಯನ್ನು ಪ್ರೇರೇಪಿಸುವ ಯೋಜನೆ ಮಾಡುತ್ತಿರುವದೆಂದು ತಿಳಿಸಲು ತುಂಬಾ ಸಂತೋಷವಾಗುತ್ತದೆ. ದಿನಾ ಮುಂಜಾವಿಗೆ "ವಂದೇ ಮಾತರಂ" ಗೀತದಿಂದ ಭಾರತ ಭೂಮಾತೆಯನ್ನು ವಿದ್ಯಾರ್ಥಿಗಳೆಲ್ಲರೂ ವಂದಿಸಿ, ಬಳಿಕ "ಭೂಮಾತೆ ಕರ್ನಾಟಕ ಭೂಮಾತೆ" ಗೀತದಿಂದ ಕರ್ನಾಟಕವನ್ನೂ ಅಭಿವಾದಿಸತಕ್ಕದ್ದು. ಲೋಕಮಾನ್ಯರ ಪುಣ್ಯತಿಥಿಗೂ, ಮಹಾತ್ಮರ ವರ್ಧಂತಿ ತಿಥಿಗೂ ಶಾಲೆಗಳಿಗೆ ರಜೆ ಇರಬೇಕು. ದೇಶಬಂಧುಗಳ ಪುಣ್ಯತಿಥಿಯನ್ನು ರಜಾ ದಿನಗಳಲ್ಲಿ ಸೇರಿಸಬೇಕಾಗಿ ನಮ್ಮದೊಂದು ಸೂಚನೆ ಇದೆ. ದೇಶಬಂಧುಗಳ ದೇಶಸೇವೆಯನ್ನು ವಿದ್ಯಾರ್ಜನಕ್ಕಾಗಿ ವಿದ್ಯಾರ್ಥಿಗಳಿಗೆ ಮಾಡಿದ ಅಪಾರ ಸಹಾಯವನ್ನೂ ಎಲ್ಲರೂ ಅರಿತ ವಿಷಯ. ಶಾಲೆಗಳಲ್ಲಿ ಸೂರ್ಯ ನಮಸ್ಕಾರದಂಥ ಖರ್ಚು ಬೇರದ ವ್ಯಾಯಾಮ ಪದ್ಧತಿಯನ್ನು ಏರ್ಪಡಿಸಬೇಕಾಗಿ ಸ್ಕೂಲ ಬೋರ್ಡು ಮಾಡಿದ ಠರಾವು ತೀರ ಯೋಗ್ಯವಿದೆ. ಈ ವಿಷಯ ನಾವೊಂದು ಸೂಚನೆ ಮಾಡಬಯಸುವೆವು. ನಮಸ್ಕಾರ ವ್ಯಾಯಾಮವನ್ನು ಶಾಸ್ತ್ರಶುದ್ಧವಾಗಿ ನಡಿಸಿದರೆ ಮಾತ್ರ ಲಾಭವಿದೆ. ಅದಕ್ಕಾಗಿ ಔಂಧದಿಂದ ಒಬ್ಬಿಬ್ಬರನ್ನು ಇಲ್ಲಿ ಕರಿಸಿಕೊಂಡು ಒಂದೆರಡು ತಿಂಗಳು ಇಲ್ಲಿಯ ಕೆಲ ಶಿಕ್ಷಕರಿಗೆ ಈ ವ್ಯಾಯಾಮವನ್ನು ಸಶಾಸ್ತ್ರ ಕಲಿಸಬೇಕು. ಔಂಧದ ಸಂಸ್ಥಾನಾಧಿಪರು ಬರೆದ ಸೂರ್ಯ ನಮಸ್ಕಾರ ಗ್ರಂಥವನ್ನು ಪ್ರತಿ ಶಾಲೆಗೆ ಹಂಚಬೇಕು. ಈ ಗ್ರಂಥವು ಕನ್ನಡದಲ್ಲಿ ಭಾಷಾಂತರಿಸಲ್ಪಟ್ಟಿದ್ದರಿಂದ ಶಿಕ್ಷಕರಿಗೆ ಇದನ್ನು ತಿಳಕೊಳ್ಳಲು ಬಹು ಅನುಕೂಲವಾಗಿದೆ. ಶಿಕ್ಷಕರು ಸ್ವದೇಶಿ ವಿಶೇಷವಾಗಿ ಖಾದಿಯನ್ನು ಪುರಸ್ಕರಿಸಬೇಕಾಗಿ ಮಾಡಿದ ಠರಾವಿನಿಂದ ಶಿಕ್ಷಕರೊಳಗಿನ ಕಿಂತು ನಷ್ಟವಾಗಿ ಸ್ವದೇಶಿ ಪುರಸ್ಕಾರಕ್ಕೆ ವಿದ್ಯಾರ್ಥಿಗಳಲ್ಲಿಯೇ ಸಹಜವಾಗಿ ಪ್ರೇರಣೆಯಾಗುವದು. ಈ ಠರಾವುಗಳನ್ನು ಕೈಕೊಂಡು ನಮ್ಮ ಸ್ಕೂಲ ಬೋರ್ಡು ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಬಹು ಉಪಕಾರ ಮಾಡಿದೆಂದು ಹೇಳಿ, ಕರ್ನಾಟಕದೊಳಗಿನ ಸ್ಕೂಲ ಬೋರ್ಡುಗಳೆಲ್ಲವೂ ಇದನ್ನೇ ಅನುಕರಿಸಬೇಕಾಗಿ ನಮ್ಮದೊಂದು ವಿನಂತಿ ಇದೆ.

[illegible]

೪ ಹೊನ್ನಾವರದ ಶ್ರೀ| ಗಣೇಶ ರಾಮಚಂದ್ರ ಕರ್ಕಿಯವರು ಹೊನ್ನಾವರದಲ್ಲಿ ಕಳೆದ ರವಿವಾರ ತಾರೀಖು ೧೭ನೇಗೆ ತೀರಿಕೊಂಡರೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಗಣೇಶರಾಯರು ಮುಂಚಿನಿಂದ ಬಡ ಕುಟುಂಬದವರು. ಅದರೊಳಗೂ ಇದ್ದ ಆಸ್ತಿಯನ್ನೆಲ್ಲ ಅವರ ತಂದೆಯವರು ಅಡಿಕೆ ವ್ಯಾಪಾರದಲ್ಲಿ ಹುದಗಿಸಿ ಮತ್ತದ ಮೂಲಕ ಪರಾಧೀನ ಮಾಡಿದ್ದರು. ಗಣೇಶರಾಯರಿಗೆ ಚಿಕ್ಕಂದಿನಿಂದ ವಿದ್ಯಾಭಿರುಚಿ ಬಹಳ. ಇವರು ಮದುವೆ-ಮುಂಜಿ ಮುಂತಾದ ಸಮಾರಂಭ ನಡೆದಾಗ ಪಂಡಾಗ್ರಾಮಗಳಲ್ಲಿ ಸಂಚರಿಸಿ ದೊರಕಿದ ದಕ್ಷಿಣೆಯಿಂದ ಕಳಿರ್ಯ ಕನ್ನಡ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಇಂಗ್ಲಿಷ ಕಲಿಯಬೇಕೆಂಬ ಲವಲವಿಕೆಯು ಇವರಿಗೆ ಬಹಳವಾಗಿತ್ತು. ಆದರೆ, ಹಣದ ಅನುಕೂಲತೆ ಇರಲಿ. ಪಾರಾವ್ನದಿಂದಾದರೂ ಇಂಗ್ಲಿಷ ಕಲಿಯಬೇಕೆಂದು ಬಯಸಿ ಗಣೇಶರಾಯರು ಕಾರವಾರಕ್ಕೆ ಹೋದರು. ದೈವಬಲವೋ, ಯೋಗಾಯೋಗವೋ ಆ ಕಾಲಕ್ಕೆ ಶ್ರೀಯುತ ಬಾಬಾಜಿ ಠಾಕೂರ ಬಿ. ಎ., ಆಯ್. ಸಿ. ಎಸ್., ಬಾರ್ ಎಟ್-ಲಾ ಎಂಬವರು ನಮ್ಮ ಜಿಲ್ಲೆ ಡಿಪ್ಟಿ ಜನರ ಅಸಿ| ಕಲೆಕ್ಟರರಿದ್ದರು. ಗಣೇಶರಾಯರು ನಯನಮನೋಹರ ಮೂರ್ತಿಯು. ಠಾಕೂರರವರ ಚಿತ್ತವು

ಇವರ ಕಡೆಗೆ ಒಲಿಯಿತು. ಚುರುಕುತನವನ್ನೂ, ಶ್ರದ್ಧೆಯನ್ನೂ ನೋಡಿ ಇಂಗ್ಲಿಷ ವಿದ್ಯಾಭ್ಯಾಸವನ್ನು ತಾವು ನಡಿಸುತ್ತೇವಾಗಿ ಹೇಳಿ, ಅವರಿಗೆ ತಮ್ಮಲ್ಲಿ ಆಶ್ರಯ ಕೊಟ್ಟರು. ರಾಜೂರಕರವರಿಗೆ ಕಾಲೇಜಿನ್ನ ವಗೇವಾಗುತ್ತಿದ್ದದರಿಂದ ಇವರ ವಿದ್ಯಾಭ್ಯಾಸವು ಅಷ್ಟು ಸುಸೂತ್ರವಾಗಿ ಸಾಗಲಿಲ್ಲ. ಆದರೂ, ಗಣೇಶ ರಾಯರು ಅಲಕ್ಷ ಮಾಡದೆ ರಾಜೂರರ ಬಳಿಯ ಲೈಬ್ರರಿ ಪುಸ್ತಕ ಭಾಂಡಾರವನ್ನೆಲ್ಲ ಸೂರೆ ಮಾಡಿ [illegible] ರಾದರು. ಇವರಿಗೆ ವಿಲಾಯತಿಗೆ ಕಳಿಸಿ ಬ್ಯಾರಿಸ್ಟರರಾಗಿ ಏರ್ಪಡಿಸಬೇಕೆಂದು ರಾಜೂರರ ಸಂಕಲ್ಪವಿತ್ತು. ಆದರೆ, ಗಣೇಶರಾಯರ ತಂದೆಯವರು [illegible] ಇವರ ವಿದ್ಯಾಭ್ಯಾಸಕ್ಕೆ ತಡೆಬಿತ್ತು. ರಾಜೂರರಿಗೆ ಗಣೇಶ ರಾಯರೆಂದರೆ ಬಲು ಪ್ರೀತಿ [illegible] ಅವರಿಗೆ ಪ್ರೀತಿಸುತ್ತಿದ್ದರು. [illegible] ಸಂಬಂಧವು [illegible] ರಾಜೂರರು ಹೈದರಾಬಾದದಲ್ಲಿ ತೀರಿಕೊಳ್ಳುವಾಗ [illegible] ವನ್ನು ಗಣೇಶರಾಯರಿಗೆ [illegible] ದಲೂ ಬೇರೆ [illegible] ಗಣೇಶರಾಯರು ಮುಂಬಯಿಯಲ್ಲಿ "ಗಣೇಶ [illegible]" [illegible] ವಸ್ತು [illegible] ಕರ್ನಾಟಕದಲ್ಲೆಲ್ಲ ಹೆಸರಾಗಿದ್ದಾರೆ. ವಿಶೇಷ [illegible] ನ್ನೂ ಸಂಪಾದಿಸಿದ್ದಾರೆ. ಗಣೇಶರಾಯರು [illegible] ಮೂಲಕ ಅವರ ಮಿತ್ರರನೇಕರಿದ್ದಾರೆ. ಮುಂಬಯಿಯಲ್ಲಿ ಇವರ ದೊಡ್ಡ ಇದೆ. ಆ ಮನೆಯಲ್ಲಿ ಕರ್ನಾಟಕಸ್ಥರಿಗೂ ಆಯಾ ಕಾಲಕ್ಕೆ ಆಶ್ರಯ [illegible] ವಿದ್ಯಾರ್ಥಿಗಳಿಗೆ ಇವರು [illegible] ಪ್ರಸಂಗದಲ್ಲಿ ನೆರವಾಗಿ ರಾಜೂರಕರವರ ಉಪಕಾರವನ್ನು ಬಹುಮಟ್ಟಿಗೆ ಸ್ಮರಿಸಿದ್ದಾರೆ. ಗಣೇಶರಾಯರ ಮಗಂದಿರೀರ್ವರು ಉಚ್ಚ ವಿದ್ಯಾಭ್ಯಾಸವನ್ನು ಹೊಂದಿ ಚಲೋ ರೀತಿಯಿಂದಿದ್ದಾರೆ. ಗಣೇಶರಾಯರ [illegible] ವರ್ಷ ಪ್ರಾಯದ ಮಗಳು ಕೆಂಡತಿಯನ್ನು ತೊರೆದು ಹೋದದ್ದು ವಿಶೇಷ [illegible] ವಾಗಿದೆ. ಆದರೆ, [illegible] ಗಣೇಶರಾಯರ [illegible] ಕರ್ನಾಟಕಸ್ಥರು ಪಾಲುಗಾರರಿದ್ದಾರೆಂದು ಗ್ರಹಿಸಿ, ಅವರ ಕುಟುಂಬದವರು ಸಮಾಧಾನ ಮಾಡಿಕೊಳ್ಳಬೇಕು ಕೈಲಾಸವಾಸಿಗಳಿಗೆ ಸದ್ಗತಿ ದೊರೆಯಲೆಂದು ಪರಮಾತ್ಮನೆಡೆಗೆ ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಮಳೆ ಬೀಳುತ್ತಿದೆ, [illegible] ಬಿಡದೆ ಸುರಿಯುತ್ತಿದೆ. ಒಕ್ಕಲಿಗರು ಬೇಸಾಯದಲ್ಲಿ ತೊಡಗಿದ್ದಾರೆ. ಈ ವಾರದಲ್ಲಿ ೧೧-೧೭ ಇಂಚು ಮಳೆ ಬಿತ್ತು. ಈ ತನಕ ೪೬-೯೬ ಇಂಚು ಮಳೆ ಬಿತ್ತು.

ವಿಖ್ಯಾತ ಜಾದುಗಾರರಾದ ಪ್ರೊ| ಲಿಖಿತೇಯವರು ಇಚ್ಛಾಶಕ್ತಿಯ ಪ್ರಯೋಗಗಳಿಂದ ಇಲ್ಲಿಯ ಶ್ರೀ ಮಹಾಬಲ ದೇವಸ್ಥಾನದಲ್ಲಿ ಒಂದು ಪ್ರಯೋಗ ಮಾಡಿ ತೋರಿಸಿದರು. ಅರ್ಧ ಉತ್ಪನ್ನ ಇಲ್ಲಿ [illegible] ದಿಂದ ನಡೆಯುವ ದಿನಗಳ ಆಸ್ಪತ್ರೆಯ ಸಹಾಯಕ್ಕಾಗಿ ಕೊಡಲ್ಪಟ್ಟಿತು. ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿಯೂ ಅದರ ಚಾಲಕರು ಒಂದು ಪ್ರಯೋಗ ಮಾಡಿಸಿದರು. ಪ್ರೊ| ಲಿಖಿತೇಯವರು ಪ್ರಯೋಗ ಮುಗಿದ ಬಳಿಕ ಒಂದು ಉದ್ಗಾರ ತೆಗೆದರಾಗಿ ತಿಳಿಯುತ್ತದೆ. ಸಾಮಾನ್ಯ ಡೊಂಬರ ಆಟದ ಜಾದುಗಾರನಂತೆ ತಾವು ಕೆಲಸ ಮಾಡುತ್ತಿದ್ದಾಗ್ಯೂ, [illegible] ಸಂಭಾವನೆಯಾಗುವ ಕಾರಣವು ತಮ್ಮ ಉಡಿಗೆ-ತೊಡಿಗೆಗಳು [illegible] ಬರಂತೆ ಚಿಣ್ಣ-ಕೋಟುಗಳನ್ನು ತಾವು ಹಾಕುತ್ತಿದ್ದದರಿಂದ ತಮಗೆ ಇಷ್ಟು ಸಂಭಾವನೆಯಾಗುತ್ತದೆಂದು ಪ್ರೊ| ಲಿಖಿತೇಯವರು ಸಂಭಾವನೆಯೊಳಗಿನ ಬಾವವನ್ನು ಹೇಳಿಬಿಟ್ಟರು.

[illegible] ಉದ್ಯಾವರದೊಳಗಣ ರಾ| [illegible] ಭಟ್ಟ ಎಂಬವರು ಶ್ರೀ ಕುಂಭಕ್ಷೇತ್ರದಲ್ಲಿ [illegible] ಬಿಳಿದಿದ್ದಾರೆ. ಇವರು ಜ್ಯೋತಿಷಿಗಳಂತೆ, ಮಂತ್ರವಾದಿಗಳಂತೆ.

ಹೊನ್ನಾವರ— ತಾರೀಖು ೩ನೇಗೆ ಪ್ರಾರಂಭ [illegible] ತಪ್ಪಿದೆ ಜೋರಿನಿಂದ ಬಿದ್ದು ಬಿತ್ತಿದ ಬೀಜವೆಲ್ಲ ಕೊಳೆತುಹೋಯಿತು. ತನ್ನ ಬಿತ್ತಲಿಕ್ಕೆ ಬೀಜ [illegible] ದುರ್ಲಭವಾಗಿರುತ್ತದೆ. ಅಕ್ಕಿಯ ದರ [illegible]

ರಾ| [illegible] ಇವರ ಮನೆಯ [illegible] ಹೋಯಿತ [illegible] ರು [illegible] ಕೋಣೆ [illegible] ಡಾಕ್ಟರರು [illegible] ಶ್ರೀ| [illegible] ನಡೆದ ಪ್ರಕರಣವನ್ನು [illegible] ರಾ| ಪ್ರತ್ಯಕ್ಷ [illegible] ಇಷ್ಟೆಲ್ಲ [illegible]

ಇಲ್ಲಿಯ ಮ್ಯುನಿಸಿಪಾಲಿಟಿಯವರು ಮಳೆಗಾಲದಲ್ಲಿ [illegible] ಕಷ್ಟ ಪಕ್ಷಗಳೆಂಬ ಭೇದ ಮಾಡದೆ ಮಾರ್ಗ [illegible] ದೀಪ ಹಚ್ಚಬೇಕು. ಯಾಕಂದರೆ, [illegible] ಯಾವಾಗಲೂ ಕೃಷ್ಣ ಪಕ್ಷವೇ [illegible] ಮೂಲಕ ಚಂದ್ರದರ್ಶನವಾಗುವದು ಅಪರೂಪ

ಅಂಕೋಲಾ— ಜ್ವರಾದಿ ರೋಗಗಳು ಇವೆ. ಮಳೆ [illegible] ಬಿದ್ದದರಿಂದ ಬಿತ್ತಿಗೆ ನಷ್ಟವಾಯಿತು [illegible] ಪರವು [illegible] ಮಾನವಿಗೆ ೬| ರೂಪಾಯಿ [illegible] ಆಗಿದೆ. ಲೋಕಲ್ ಬೋರ್ಡಿನವರು ಶಾಲೆಯೊಳಗಿನ ಕೆಲಸವನ್ನು [illegible] ಹಾಕಿದ್ದರಿಂದ [illegible] ಅವರಿಗೆ [illegible] ಆಗುತ್ತಿದೆ. ಇಲ್ಲಿಯ ಸ್ಕೂಲಿನಲ್ಲಿ ಪ್ರತಿ ವರ್ಷ ಹೊಸ ಹೊಸ ಪುಸ್ತಕಗಳನ್ನು ಹಚ್ಚುತ್ತಾರೆ. ಫೀ ಕೊಡುವದೇ ಕಠಿಣವಾದಾಗ, ಹೊಸ ಹೊಸ ಪುಸ್ತಕಗಳನ್ನು ಹೊಸ ಹೊಸ ತಂದುಕೊಡುವ ಶಿಕ್ಷಕರ ಹಚ್ಚಬಾರದು. ದೊಡ್ಡ ಭೂದಂಡವಿದು. ದೇವಲ ಕಮಿಟಿಯವರು ಇಲ್ಲಿಯ ಶ್ರೀ ಶಾಂತಾದುರ್ಗಾ, ಶ್ರೀ ವೆಂಕಟ್ರಮಣ, ಹಾಗು ಶ್ರೀ ನಾರಾಯಣದೇವ ಈ ದೇವಾಲಯಗಳಿಗೆ ಮೊಕ್ತೇಸರರನ್ನು ನೇಮಿಸುವ ಕೆಲಸ ಮಾಡಿಯಿತು. ಶ್ರೀ ಶಾಂತಾದುರ್ಗಾ ದೇವಸ್ಥಾನಕ್ಕೆ ೪ ಮೊಕ್ತೇಸರರು ನೇಮಿಸಲ್ಪಟ್ಟರು. ೩ ಜನರು ನಾಮ್ಧಾರಿಯೆಂಬ ಹಿಂದೇ ಮನೆತನದವರು, ಒಬ್ಬರು ವೈಶ್ಯರು. ಶ್ರೀ ವೆಂಕಟ್ರಮಣ ದೇವಸ್ಥಾನಕ್ಕೆ ೩ ಜನ ಮೊಕ್ತೇಸರರು. ಎಲ್ಲರೂ ನಾಡ್ವರ್ ಮನೆತನದವರೇ. ಶ್ರೀ ನಾರಾಯಣ ದೇವಸ್ಥಾನಕ್ಕೆ ೩ ಜನ ಮೊಕ್ತೇಸರರಿರುತ್ತಾ ಇನ್ನಿಬ್ಬ ಮೊಕ್ತೇಸರರಾಗಿ ನೇಮಿಸಲ್ಪಟ್ಟರು. ಒಬ್ಬರು ರಾ| ವಿನಾಯಕ ಶಿವರಾವ ಅರಸ ಎಂಬವರು. ಇನ್ನೊಬ್ಬರು ಈ ಅರಸರ ಆಪ್ತೇಷ್ಟರು. ರಾ| ವಿನಾಯಕ ಅರಸರ ಗುರುತು ನಮ್ಮ ಊರವರಿಗೆ ಉಂಟು. ದೇವಲ ಕಮಿಟಿಯ ಚಾಲಕತ್ವವು ನ್ಯಾಯಾಧಿಕಾರ ನಡಿಸಿ ದೆನ್ನನು [illegible] ದವರ ಕೈಯಲ್ಲಿರುವಾಗ, ಭಿನ್ನ ಭಿನ್ನ ಸಮಾಜಗಳಿಂದ ಭಜಿಸಲ್ಪಡುವ ದೇವಾಲಯಗಳಿಗೆ ಮೊಕ್ತೇಸರರಾಗುವ ಪಾತ್ರತೆಯು ನಾಡ್ವರ್ಣೀಯವರ ಕುಟುಂಬಕ್ಕೇ ಇದದಾಗಿ ಹೇಗೆ ತಿಳಿಯುತ್ತಾರೆ?

ಸದಾಶಿವಗಡ— ತಾರೀಖು ೨೧-೬-೨೮ನೇ ದಿನ ಸಾಯಂಕಾಲ ಇಲ್ಲಿಯ ಸುಪ್ರಸಿದ್ಧ ಜಮೀನದಾರ ಗೃಹಸ್ಥ ರಾ| ಸುಬ್ರಾವ ಅನಂತಪ್ಪಾ ನಟ್ಟೇ ಇವರ ಅಧ್ಯಕ್ಷತೆಯಲ್ಲಿ ಇಲ್ಲಿ ನಾಗರಿಕ ಜನರ ಸಭೆ ಸೇರಿ ಕೆಳಗಿನ ಅರ್ಥದ ೩ ಠರಾವುಗಳು ಪಾಸಾದವು:—

(೧) ಮುಂಬಯಿ ಕೌನ್ಸಿಲ ಮುಂದೆ ಬೇಗನೇ ವಿಚಾರಕ್ಕೆ ಬರುವ 'ಜಮೀನ ವಿಭಾಗಣಿ ಪ್ರತಿಬಂಧಕ ಬಿಲ್ಲು' ಈಗ ಇದ್ದ ಸ್ಥಿತಿಯಲ್ಲಿ ಈ [illegible] ಅಗದೀ ನಾಮಸೂರು ಉಂಟು ಎಂಬರ್ಥದ ಒಂದು ಠರಾವು, (೨) ಜನರ ಸ್ವಾತಂತ್ರವನ್ನು ಅಪಮಾನ್ಯ ಮಾಡಿ ಬಾರ್ದೋಲಿಯ ಮಹಾತ್ಮ್ಯಸದ ತೀರ್ವೆ ವಸೂಲಿ ಮಾಡಲಿಕ್ಕೆ ಸರಕಾರದವರು ಕೈಕೊಂಡ ಉಪಾಯಗಳನ್ನು ನಿಷೇಧಿಸಿ, ಬಾರ್ದೋಲಿ ರೈತರು ನ್ಯಾಯಮಾಗಣೆ ಸಮರ್ಥಿಸುವ ಠರಾವು, (೩) ಹಾಗು ಈ ಜಿಲ್ಹೆಯ ರೈತರಿಗೆ ಜಂಗಲ ಖಾತೆಯ ಈಗಿನ ಕಷ್ಟಪ್ರದ ಧೋರಣದಿಂದ ಪ್ರತಿದಿನಕ್ಕೆ ಆಗುವ ತೊಂದರೆಗಳನ್ನು ವರ್ಣಿಸಿ, ಸರಕಾರಕ್ಕೆ ಮುಂಬಯಿ ಪ್ರೆಸಿಡೆನ್ಸಿ ಎಸೋಸಿಏಶನ್‍ದವರು ಸಾದರ ಮಾಡಿದ ಅರ್ಜಿಗೆ ಪುಷ್ಟಿ ಕೊಡುವ ಠರಾವು, ಈ ಪ್ರಕಾರ ಮೂರು ಠರಾವುಗಳು ಪಾಸಾದವು.

ಪ್ರತ್ಯಕ್ಷ ಸಹಾನುಭೂತಿ ದರ್ಶಿಸುವದಕ್ಕೋಸ್ಕರ ಸ್ವಲ್ಪ ಹಣ ಜಮಾ ಮಾಡಿ ಬಾರ್ದೋಲಿಗೆ ಬೇಗನೇ ಕಳುಹಿಸಿ ಕೊಡುವ ವಿಚಾರ ನಡೆದದೆ.

ಸಿಸಿ— ೧೫ ದಿನಗಳಿಂದ ಒಂದೇ ಸವನೆ ಮಳೆ ಸುರಿದು ಬೇಸಾಯಕ್ಕೆ ಬಲು ನಷ್ಟ. ಇಲ್ಲಿಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ತರತರದ ಚಿತ್ರ-ವಿಚಿತ್ರ ಕಲ್ಲುಗಳನ್ನು ಹಾಸಿದ್ದಾರೆ. ದೇವರ ಪೂಜೆಯ ಬಗ್ಗೆ ಬೆಳ್ಳಿಯ ಉಪಕರಣಗಳನ್ನು ತಂದಿದ್ದಾರೆ. ಶ್ರೀ ದೇವಸ್ಥಾನದಲ್ಲಿ ಭಗವದ್ಗೀತಾದಿ ಧರ್ಮಗ್ರಂಥಗಳನ್ನು ಭಾವಿಕರಿಗೆ ನಿರೂಪಿಸಿ ಧರ್ಮಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದ್ದರೆ, ಶ್ರೀ ದೇವರ ಭಂಡಾರದ ಸದ್ವಿನಿಯೋಗವಾಗುವದು. ಶ್ರೀ ವೀರಭದ್ರ ದೇವಾಲಯದ ಜೀರ್ಣೋದ್ಧಾರವಾಯಿತು. ಹಲವು ವರ್ಷಗಳಿಂದ ಈ ದೇವಾಲಯದ ಕಟ್ಟಡವು ಕಳಚಿಬಿದ್ದಿತ್ತು. ಮೋಟಾರುಗಳ ಟಿಕೀಟ ಏಜಂಟರಿಂದ ಅಜ್ಞ ಪ್ರಯಾಣಿಕರಿಗೆ ಕ್ರೂರದ ಕಷ್ಟ-ನಷ್ಟಗಳು ಸಂಭವಿಸುತ್ತವೆ. ಪೋಲೀಸರೂ, ಮೋಟಾರ ಮಾಲೀಕರೂ ಈ ಕಡೆ ಲಕ್ಷ ಕೊಡಬೇಕು. ಇಲ್ಲಿಯ ಪೋಸ್ಟಿನ ಬಾವಿಯು ಒಂದು ವರ್ಷದಲ್ಲಿಯೇ ಅಕ್ಕಹತ್ತಿದೆ. ನಮ್ಮೂರಲ್ಲಿ ಸಶಾಸ್ತ್ರ ಕಟ್ಟಿದ ಬಾವಿ ಇದು! ಅಶಾಸ್ತ್ರೀಯ ಬೇಗಗಾಗಿ ಹೋಗಿದ್ದಾರೆ. ಬಳಿಯಲ್ಲಿದ್ದ ಬೋರಿಂಗ ಬಾವಿಗಳಿಗೆ ಛಪ್ಪರವಿಲ್ಲದ್ದರಿಂದ ರಾಮುಷ್ಪನ ಹೊಂಡವಿಂದ ನೀರು ತರುವದೇ ಮು ತಪ್ಪುವದಿಲ್ಲ.

ಬಂದೂಕು ಹೊಡಿಯುವ ಜುಗಾರಿ ಆಟ ಒಂದು ಇಲ್ಲಿ ಒಂದಿತ್ತು. ಪೋಲೀಸ ಅಧಿಕಾರಿಗಳು ಅನುಮತಿ ಕೊಟ್ಟರು. ಮುನಿಸಿಪಾಲಿಟಿಯವರು ಮಾರ್ಕೇಟು ಸ್ಥಳ ಕೊಟ್ಟರು. ಇದರಿಂದ ೨೦೦-೩೦೦ ರೂಪಾಯಿ ಸುಲಕೊಂಡು ಅವರು ಪಾರಾದರು. ಜನರಿಗೆ ಬುದ್ಧಿ ಕಲಿಸಿ ಅಧಿಕಾರಿಗಳೂ ಊರ ಪ್ರಮುಖರೂ ಬುದ್ಧಿಗೆಟ್ಟರೇನು?

ಶಹರದೊಳಗಿಂದ ಪರಭಾರೆ ಹತ್ತಿಯ ಪರಸ್ಥಳಗಳಿಗೆ ಹೋಗುವ ಸರಕುಗಳ ಮೇಲೆ ಮ್ಯುನಿಸಿಪಾಲಿಟಿಯವರು ಎಷ್ಟುವಳಿ ಮಾಡುವ ಅಕಟ್ರಾಯ ಡ್ಯೂಟಿಯನ್ನು ರಿಫಂಡು ಕೊಡುತ್ತಿದ್ದರು. ಅದು ಈಗ ನಿಲ್ಲಿಸಲ್ಪಡುವದೆಂದು ಜಾಹೀರನಾಮೆ ಹೊರಟಿದೆ. ಪರಭಾರೆ ಪರಸ್ಥಳಕ್ಕೆ ಹೋಗಲು ಮಾಲಗಳಿಲ್ಲದಾಗ ವರ್ತಕರೇನು ಮಾಡುವರು. ಒಂದು ಸರಕಿನ ಮೇಲೆ ಎಷ್ಟು ಕಡೆ ಎಷ್ಟು ಸುಂಕ ತೆರಬೇಕು?

ವೃತ್ತಸಾರ.

— ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರವರು ಇಂಗ್ಲಂಡದಲ್ಲಿ ದೊಡ್ಡ ದೊಡ್ಡ ಸಭೆಗಳನ್ನು ಸೇರಿಸಿ ಹಿಂದುಸ್ಥಾನದ ಪರಿಸ್ಥಿತಿಯನ್ನು ತಿಳಿಸಹೇಳುತ್ತಿದ್ದಾರೆ. ಇವರ ಭಾಷಣ ಕೇಳಿ ಕೂಲಿಕಾರ ಪಕ್ಷದಲ್ಲಿ ಆಂದೋಲನಗಳಾಗಿವೆ. ಮಿ॥ ರೆಮ್ಸೇ ಮೆಕಡೋನಾಲ್ಡರು ಕೂಲಿಕಾರ ಪಕ್ಷದ ಪ್ರಮುಖರು ಹಿಂದುಸ್ಥಾನದೊಡನೆ ಸಾಹಚರ್ಯ ಬೆಳಿಸದೆ ಕೂಲಿಕಾರರಿಗೆ ದ್ರೋಹ ಮಾಡಿದ್ದಾರೆಂದು ಮಿ॥ ಮೆಕ್ಸಟನ್—ಕುಕ್‌ರವರ ಅಭಿಪ್ರಾಯವಾಗಿ ಅವರು ಪ್ರತ್ಯೇಕ ಪಕ್ಷವನ್ನು ನಿರ್ಮಿಸಿದ್ದಾರೆ ಹಿಂದುಸ್ಥಾನದ ಸಾಹಚರ್ಯವನ್ನು ಬೆಳಿಸಿ ಬ್ರಿಟಿಶ ಸಾಮ್ರಾಜ್ಯ ಘಟಕಗಳೊಳಗೆ ಒಂದು ಭಾವವನ್ನು ನೆಲಿಸುವದು ಈ ಹೊಸ ಪಕ್ಷದ ಧ್ಯೇಯವಾಗಿದೆ. ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರ ಪ್ರೇರಣೆಯಿಂದ ಅಲ್ಲಿ ರಾಷ್ಟ್ರೀಯ ಸಭೆಯೆಂಬ ಮಂಡಳವೊಂದು ಸ್ಥಾಪಿಸಲ್ಪಟ್ಟಿದೆ ಶ್ರೀ॥ ಅಯ್ಯಂಗಾರರು ಜರ್ಮನಿ-ಫ್ರಾನ್ಸಗಳಿಗೆ ಸಂಚಾರ ಮಾಡುವವರಿದ್ದಾರೆ ಆ ದೇಶಗಳಲ್ಲಿಯೂ ಹಿಂದುಸ್ಥಾನದ ಪರಿಸ್ಥಿತಿಯನ್ನು ಶ್ರೀಮಾನರು ತಿಳಿಸಿಹೇಳಿ ಬ್ರಿಟಿಶ ಸಾಮ್ರಾಜ್ಯವು ಹಿಂದುಸ್ಥಾನದ ಮೇಲೆ ಮಾಡಿದ ಅಪಕಾರದ ಹೊರೆಯನ್ನು ಬಿಚ್ಚಿಹೇಳುವರು

— ಲೋಕಮಾನ್ಯರ ಪುಣ್ಯತಿಥಿಯಾದ ಆಗಸ್ಟ ೧ನೇ ತಾರೀಖಿಗೆ ೩ನೇ ಕರ್ನಾಟಕ ಸೇವಾದಲದ ಪರಿಷತ್ತಿನ ಅಧಿವೇಶನವು ಬಾಗಲಕೋಟೆಯಲ್ಲಿ ಜರಗುವದು ವ್ಯಾಯಾಮ ವಿದ್ಯಾಪೀಠದ ಅನಾವರಣ ಸಮಾರಂಭವು ಅದೇ ಸಮಯ ನಡೆಯುವದು ಅಖಿಲ ಭಾರತೀಯ ಸ್ವಯಂಸೇವಕ ಮಂಡಳದ ಸಭೆ, ಅಖಿಲ ಕರ್ನಾಟಕ ಸಂಪಾದಕರ ಪರಿಷತ್ತು, ಅಖಿಲ ಕರ್ನಾಟಕ ವ್ಯಾಪಾರಸ್ಥರ ಪರಿಷತ್ತು, ಅಖಿಲ ಕರ್ನಾಟಕ ಗಾಯಕರ ಪರಿಷತ್ತು, ಖಾದಿ ಪ್ರದರ್ಶನ, ವ್ಯಾಯಾಮ ಉಪಕರಣಗಳ ಪ್ರದರ್ಶನ, ಅಖಿಲ ಕರ್ನಾಟಕ ಇತಿಹಾಸ ವಸ್ತುಪ್ರದರ್ಶನ, ಅಖಿಲ ಕರ್ನಾಟಕ ವೃತ್ತಪತ್ರಿಕೆಗಳ ಪ್ರದರ್ಶನ ಮುಂತಾದವುಗಳು ನಡೆಯುವವು. ಕರ್ನಾಟಕಾಭಿಮಾನಿಗಳಾದ ಸರ್ವರೂ ಈ ಕಾರ್ಯದಲ್ಲಿ ನೆರವಾಗಿ ಪಾಲುಗೊಳ್ಳಬೇಕಾಗಿ ಕರ್ನಾಟಕ ದಲದ ಕಾರ್ಯದರ್ಶಿಗಳಾದ ಶ್ರೀ॥ ನಾರಾಯಣರಾವ ಹರ್ಡೀಕರರವರು ಬಿನ್ನೈಸುತ್ತಾರೆ.

— ಬೆಳಗಾವಿಯ ಜಿಲ್ಲಾ ಬೋರ್ಡಿನವರು ೮೦ ಹೊಸ ಶಾಲೆಗಳನ್ನು ತೆರೆಯುವ ಸಂಕಲ್ಪ ಮಾಡಿದ್ದಾರೆ ೧೦೦ ಮಂದಿ ಶಿಕ್ಷಕರ ನೇಮಣೂಕಿಯಾಗುವದು ಜಾಹೀರಾತು ಕೊಟ್ಟ ದಿನಗಳಲ್ಲಿಯೇ ೩॥ ಸಾವಿರ ಅರ್ಜಿಗಳು ಬಂದವು! ಹಿಂದುಸ್ಥಾನದ ಅವಸ್ಥೆ ನೋಡಿ!

— ಜಬಲಪುರದಲ್ಲಿ ಬೆಳೆ ಹುಟ್ಟದಿದ್ದಕಾರಣ ತೆರಿಗೆಯನ್ನು ಸೂಟುಬಿಡಬೇಕಾಗಿ ಸರಕಾರಕ್ಕೆ ಅರ್ಜಿಯಾಗಿರುತ್ತದೆ. ಅರ್ಜಿಗೆ ಮನ್ನಣೆಯಾಗದಿದ್ದಲ್ಲಿ ಬಾರ್ಡೋಲಿಯಂತೆ ಸತ್ಯಾಗ್ರಹ ಕೈಕೊಳ್ಳಲ್ಪಡುವದು. ಅದಕ್ಕಾಗಿಯೇ ಸರಕಾರವು ಬಾರ್ಡೋಲಿಯಲ್ಲಿ ಶಕ್ತಿಯನ್ನು ವೆಚ್ಚಮಾಡುತ್ತಿದೆ.

— ಧಾರವಾಡದ ಮುರಿ ಹನುಮಂತ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ವಿಶ್ವಗುಣಾದರ್ಶ ಮಂಡಳದವರು ಒಂದು ನಾಟಕದ ಉತ್ಪನ್ನದ ರೂಪ್ಯ ೩೦೦ ರನ್ನು ಕೊಟ್ಟರು.

ಬಾರ್ಡೋಲಿಯ ವೃತ್ತಾಂತ.

ದಿನ ಹೋದ ಹಾಗೆ ಬಾರ್ಡೋಲಿಯ ವ್ಯಾಜ್ಯವು ಬೆಳೆಯುತ್ತ ನಡೆಯುತ್ತದೆ. ಕಳೆದ ವಾರದಲ್ಲಿ ಇಬ್ಬರು ಮುಂಬಯಿ ತಮ್ಮ ಕೌನ್ಸಿಲು ಆಸನವನ್ನು ತ್ಯಜಿಸಿದರು. ವಿಶ್ವವಿದ್ಯಾಲಯದ ತರ್ಫೆನಿಂದ ಕೌನ್ಸಿಲು ಸಭಾಸದರಾದ ಶ್ರೀ॥ ಕನ್ಹಯಾಲಾಲ ಮುನಶಿಯವರು, ಮುಂಬಯಿಯ ಉತ್ತರ ಭಾಗದ ತರ್ಫೆನ ಸಭಾಸದರಾದ ಮಿ॥ ಎಫ್. ಜೆ. ಜಿನ್ವಾಲಾರವರೂ ತಮ್ಮ ಕೌನ್ಸಿಲು ಆಸನಗಳನ್ನು ಧಿಕ್ಕರಿಸಿದರು ಇಂಡಿಯನ್ ಮರ್ಚಂಟ್ಸ ಚೇಂಬರ ಎಂಬ ಹಿಂದೀ ವರ್ತಕ ಸಂಘದವರು ತಮ್ಮ ಪ್ರತಿನಿಧಿಗಳಾದ ಶ್ರೀ॥ ಲಾಲಜಿ ನಾರಣಜಿಯವರು ರಾಜೀನಾಮೆ ಕೊಡಬೇಕಾಗಿ ಒತ್ತಾಯಪಡಿಸುತ್ತಿದ್ದಾರೆ ವರ್ತಕ ಸಂಘದವರು ಸೋಮವಾರಕ್ಕೆ ಗುಪ್ತ ಸಭೆ ಸೇರಿಸಿ ಆಲೋಚನೆ ಮಾಡಿದರು. ಅಧ್ಯಕ್ಷರೂ ಇತರ ಒಬ್ಬಿಬ್ಬ ಸಭಾಸದರೂ ಪ್ರಾಂತಾಧಿಪತಿಗಳಿಗೆ ಭೆಟ್ಟಿಯಾಗಿ ಸರಕಾರ ಹಾಗು ಲೋಕಪಕ್ಷದ ತರ್ಫೆನಿಂದ ಆಲೋಚನಾ ಸಭೆಯನ್ನು ಸೇರಿಸುವ ವಿಚಾರ ನಡೆದಿದೆ. ಸರ್ ಪುರುಷೋತ್ತಮದಾಸ ಠಾಕೂರದಾಸರವರು ಮಹಾತ್ಮರ ಭೆಟ್ಟಿಕೊಂಡು ಹೋದರು. ಶ್ರೀ॥ ವಲ್ಲಭಭಾಯಿ ಪಟೇಲರವರೊಡನೆ ಆಲೋಚನೆಯನ್ನೂ ನಡೆದರು ಮತ್ತೆ ಮುಂಬಯಿ ಶನಿವಾರಕ್ಕೆ ಗವ್ಹರ್ನರರ ಭೆಟ್ಟಿ ಪಡೆಯಲ್ಲಿಕ್ಕಿದ್ದರು ಇವೆಲ್ಲ ಗುಪ್ತ ಆಲೋಚನೆಗಳಾದ್ದರಿಂದ ಸುಸಂಗತವಾದ ಹಕೀಕತು ಪ್ರಕಟವಾಗಲಿಲ್ಲ

ಕರನಿರಾಕರಣೆಯ ಪ್ರಯತ್ನವು ನಿಶ್ಚಯದಿಂದ ಸಾಗಿದೆ. ಎಷ್ಟಕ್ಕೂ ಕರ ತೆರಲಿಕ್ಕಿಲ್ಲೆಂಬ ನಿರ್ಧಾರವು ಪ್ರಬಲವಾಗುತ್ತ ನಡೆದಿದೆ. ಬೇಸಾಯಗಾರರು ಮನೆಯಲ್ಲಿಯೇ ಕೂತುಕೊಂಡು ಎಲ್ಲ ವ್ಯವಹಾರವನ್ನು ಮನೆಯ ಹೊರ ಹೋಗದೆ ನಡಿಸುತ್ತಾರೆ ದನ-ಕರುಗಳೆಲ್ಲ ಒಳಕ್ಕೇ. ಆದರಿಂದ ಮನೆಯಲ್ಲಿ ಹೊಲಸು ಇದರಿಂದ ಅಲ್ಲಿ ಉಳಿಯಲಾಗುವದಿಲ್ಲ ಸಾವು ಬಂದರೂ ಚಿಂತೆಯಿಲ್ಲ, ಮನೆಯ ಬಾಗಿಲನ್ನು ತಾವು ಎಷ್ಟಕ್ಕೂ ತೆಗೆಯಲಿಕ್ಕಿಲ್ಲೆಂಬ ನಿರ್ಧಾರ ಮಾಡಿ ಹೆಂಗಸರು ಹುಡುಗರು ಎಲ್ಲರೂ ಉಳಿದಿದ್ದಾರೆ ಜಪ್ತಿ ಮಾಡಿದ ಭೂಮಿಯನ್ನು ಹೆಂಗಸರು ಜಪ್ತಿಯ ಕಾಯ್ದೆಯನ್ನು ಅವಮಾನ್ಯ ಮಾಡಿ ಸಾಗುವಳಿ ಮಾಡಬೇಕೆಂಬ ಸಂಕಲ್ಪ ನಡೆದದೆ.

ಬುಧವಾರಕ್ಕೆ ಶ್ರೀ॥ ಮುನಶಿಯವರ ಭಾಷಣ ಮುಂಬಯಿಯಲ್ಲಾಯಿತು ಮುನಿಸಿಪಾಲಿಟಿ ಅಧ್ಯಕ್ಷರಾದ ಡಾ॥ ದೇಶಮುಖರವರು ಅಧ್ಯಕ್ಷರಿದ್ದರು ಶ್ರೀ॥ ಮುನಶಿಯವರು ಬಾರ್ಡೋಲಿಯ ಸ್ಥಿತಿಯನ್ನು ವಿಶದವಾಗಿ ವರ್ಣಿಸಿದರು. ಬಾರ್ಡೋಲಿಯಲ್ಲಿ ೧೩೦ ಗ್ರಾಮಗಳಿವೆ ಈ ಗ್ರಾಮಗಳಿಗೆ ೯೦ ಮಂದಿ ಪಟೇಲರು ೩೫ ಮಂದಿ ತಲಾಟಿಗಳು ಇವರಲ್ಲಿ ೬೯ ಮಂದಿ ಪಟೇಲರು ೧೧ ಮಂದಿ ತಲಾಟಿಗಳು ರಾಜೀನಾಮೆಯನ್ನಿತ್ತಿದ್ದಾರೆ ಜಪ್ತಿ ಅಧಿಕಾರಿಗಳಿಗೆ ಕಲೆ ಹೋಗಿಸಿಕೊಳ್ಳಬೇಕೆಂದರೆ ಕೆಲಸಿಗರು ಸಿಗುವದಿಲ್ಲ. ಕಲೆಕ್ಟರರಿಗೆ ವಾಹನ ಬೇಕಾದರೆ ವಲ್ಲಭಭಾಯಿಯವರು ಮನ್ನಣೆಯನ್ನೀಯಬೇಕು ಕಮೀಶನರರಾದ ಮಿ॥ ಸ್ಮಾರ್ಟರವರಿಗೆ "ದನ ತಿನ್ನುವ ಹುಲಿಯೆಂದು" ಸಂಬೋಧಿಸುತ್ತಾರೆ ಸಾಸಿವೆಕಾಳಿನಷ್ಟು ಸರಕಾರದ ಪ್ರತಿಷ್ಠೆ ಇಲ್ಲ. ೩೦೦ ರೂಪಾಯಿ ತೀರ್ವೆಯ ಬಗ್ಗೆ ವೀರಚಂದ ಎಂಬವರ ರೂ. ೪೦೦೦೦ ಗಳ ಆಸ್ತಿಯು ಜಪ್ತಾಗಿದೆ. ೩೩ ಎಕ್ರೆ ಭೂಮಿಯ ತೀರ್ವೆಗಾಗಿ ರೂ ೧೫೦೦೦ ಬೆಲೆಯ ಆ ಭೂಮಿಯನ್ನು ಲಿಲಾವು ಮಾಡಲು ೧೬೧ ರೂ ಬಂತು ತೀರ್ವೆ ಭರ್ತಿಯಾಗಲಿಲ್ಲ. ಅಡಿಗೆಪಾತ್ರಗಳೂ, ಕುದುರೆಯ ಜೋಡಿಯೂ ಲಿಲಾವು ಮಾಡಲ್ಪಟ್ಟವು. ೨೫೦ ರೂಪಾಯಿಗಳ ಹತ್ತಿಯು ೨೧ ರೂಪಾಯಿಗಳಿಗೆ ಲಿಲಾವಾಯಿತು. ಹೀಗೆಲ್ಲ ಅನಾಚಾರಗಳು ನಡೆದಿವೆ ಶ್ರೀ॥ ಮುನಶಿಯವರು ಚೌಕಶಿಗಾಗಿ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ॥ ಹುಸೇನಭಾಯಿ ಲಾಲಜಿ, ಠಕ್ಕರಬಾಪಾ ಮುಂತಾದವರನ್ನು ಕರಕೊಂಡು ಬಾರ್ಡೋಲಿಗೆ ಹೋಗುವವರಿದ್ದಾರೆ.

ಬಾರ್ಡೋಲಿಯ ಪಟೇಲರು ಸರಕಾರಿ ಪ್ರಕಟಣೆಯಲ್ಲಿ ನಮೂದಿಸಿದಂತೆ ಅಸಹಯೋಗದವರ ಪೀಡನೆಯಿಂದ ತಾವು ರಾಜೀನಾಮೆ ಕೊಡಲಿಲ್ಲವಾಗಿಯೂ, ಸರಕಾರದ ದಬ್ಬಾಳಿಕೆಯನ್ನು ತಾಳಲಾರದ ರಾಜೀನಾಮೆಯನ್ನು ಕೊಟ್ಟಿರುತ್ತೇವಾಗಿಯೂ ಪ್ರಕಟಿಸಿದ್ದಾರೆ. ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಹೊಂದಿದ ಸರಕಾರಿ ಅತ್ಯಾಚಾರಗಳು ಸತ್ಯವಾಗಿರುವದಾಗಿ ಪ್ರತಿಪಾದಿಸಿ ಅವನ್ನು ಅಲ್ಲಗಳೆಯಬೇಕಾದರೆ, ಸರಕಾರವು ಸ್ವತಂತ್ರ ಚೌಕಶಿಯನ್ನೇರ್ಪಡಿಸಬೇಕಾಗಿಯೂ ಬರೆದಿದ್ದಾರೆ. ಹಾಗೆ ಮಾಡದೆ ಬರೇ ನಿರಾಕರಣೆ ಮಾಡಿದರೆ ಸರಕಾರದ ಅಂಬೋಣವನ್ನು ಯಾರೂ ನಂಬಲಿಕ್ಕಿಲ್ಲವಾಗಿಯೂ ಬರೆದಿದ್ದಾರೆ ಜಪ್ತಿ ಕೆಲಸದಲ್ಲಿ ನೆರವಾದ ಪಠಾಣರ ಕಳ್ಳತನವನ್ನು ಬಚ್ಚಿಡುವದಕ್ಕಾಗಿ ಕಳವು ಮಾಡಿದ ಉಪ್ಪಿನಲ್ಲಿ ಪೋಲಿಸ ಅಧಿಕಾರಿಗಳ ಹೇಳಿಕೆಯಂತೆ ಮಣ್ಣು ಸೇರಿಸಲ್ಪಟ್ಟಿತೆಂದು ಬಾರ್ಡೋಲಿಯ ಸ್ಟೇಶನದ ಮೇಲೆ ಕಾವಲು ಮಾಡುತ ಪಠಾಣನ ಪ್ರತಿಜ್ಞಾಪತ್ರವು ಪ್ರಕಟಿಸಲ್ಪಟ್ಟಿದೆ ಜೋರಿ ಹಾಕಿ ಕೊಡುವ್ಯಾಗ ನೋಡಿದವರ ಪ್ರತ್ಯಕ್ಷ ಸಾಕ್ಷಿ ದೊರಗಿವೆ, ಛಾಯಾಚಿತ್ರಗಳಿವೆ, ಇದರೂ, ಸುಳ್ಳೆಂದು ಸರಕಾರವು ಹೇಳಿದರೆ ಅದನ್ನು ನಂಬುವವರ್‍ಯಾರು?

ಮಧ್ಯದಲ್ಲಿ ಶ್ರೀ॥ ವಲ್ಲಭಭಾಯಿ ಪಟೇಲರವರಿಗೆ ಸರಕಾರವು ಸೆರೆಹಿಡಿಯುವ ಆಲೋಚನೆಯಲ್ಲಿರುವದಾಗಿ ಒಂದು ಸುದ್ದಿ ಹಬ್ಬಿದೆ. ಕಲೆಕ್ಟರ ಕಮೀಶನರರಿಗೆ ಸರ್ವಾಧಿಕಾರ ಕೊಡಲ್ಪಟ್ಟಿರುವದಾಗಿಯೂ ತಿಳಿಯುತ್ತದೆ. ಸರಕಾರವು ಈ ಬಳವಳಿಯೊಳಗಿಂದ ಹ್ಯಾಗಾದರೂ ಪಾರಾಗಲು ಹವಣಿಸುತ್ತಿದೆ. ಸ್ವತಃ ಗವ್ಹರ್ನರರು ಬಹಳ ಬೇಸರಪಟ್ಟಿದ್ದಾರೆ. ಕಾರ್ಯಕಾರಿ ಸಭಾಸದರಾದ ಸರ್ ಚುನಿಲಾಲ ಮೆಹತಾರವರೂ [illegible] ದಿ॥ ಬ॥ ಹರಿಲಾಲಭಾಯಿ ದೇಸಾಯಿ, ಗೋವಿಂದರಾವ ಪ್ರಧಾನರವರೂ ಸರಕಾರದ ದಬ್ಬಾಳಿಕೆಯನ್ನು ಮನ್ನಿಸುವದಿಲ್ಲವಾಗಿ ತಿಳಿಸುತ್ತಿದೆ. ಬಾರ್ಡೋಲಿಯ ತೀರ್ವೆ ಏರಿಕೆಯ ವಿಷಯ ಇವರ ಪಕ್ಷಭೇದವಿಲ್ಲ ಆದರೆ, ಪ್ರಜೆಗಳಿಗೆ ದಬ್ಬಾಳಿಕೆಯಿಂದ ಪೀಡಿಸು ಧೋರಣೆ ಇವರಿಗೆ ಮಾನ್ಯವಿಲ್ಲ. ಅಧಿಕಾರಿಗಳು ಅದೇನಾಗಲಿ! ಕೊನೆತನಕ ಸೋಲೊಪ್ಪುವದಿಲ್ಲವೆಂಬ ಸಂಕಲ್ಪದವರಂತೆ! ತೀರ್ವೆ ವಸೂಲಿಯ ಕ್ರಮವನ್ನು ಇಷ್ಟಕ್ಕೇ ತಡೆಸಿ ಬೆಳೆ ಹುಟ್ಟಿದ ಬಳಿಕ ಅದನ್ನು ಜಪ್ತಿ ಮಾಡಿ ಹಿಂದಿನ-ಮುಂದಿನ ತೀರ್ವೆಗಳನ್ನು ವಸೂಲ ಮಾಡಬೇಕೆಂಬುದೊಂದು ವಿಚಾರ ನಡೆದಿದೆ. ಆದರೆ, ಹಾಗೆ ಮಾಡಿದರೆ ಸರಕಾರವು ಪ್ರಜೆಗಳಿಗೆ ಹೆದರಿದಂತಾಗುವದೆಂದು ಅಧಿಕಾರಿಗಳದೊಂದು ಭೀತಿ ಮುಂದೇನೇ ಆಗಲಿ, ಸದ್ಯಕ್ಕೆ ಕರ ವಸೂಲಿಗೆ ತಡೆ ಬಿದ್ದಿತಲ್ಲವೇ? ಎಂದು ಲೋಕದಲ್ಲಿ ಸರಕಾರದ ಸೋಲು ಜಾಹೀರಾಗುವದಂತೆ' ಹಿಂದಿನ ಬೆಳೆಗೆ ಮುಂದಿನ ಆಲೋಚನೆ ಮಾಡಿ ಬೆಳೆ ಜಪ್ತಿ ಮಾಡದೆ ಇದ್ದದ್ದು ಅಧಿಕಾರಿಗಳ ದೊಡ್ಡ ತಪ್ಪೆಂದು ಈಗಿನ ಅನುಭವದ ಮೇಲಿಂದ ಜಾಣರು ಹೇಳುತ್ತಾರೆ. ಸರಕಾರವು ಬೇಕೆಂದು ಈ ತಪ್ಪು ಮಾಡಿತೆಂದು ಬಲ್ಲವರ ಅಂಬೋಣ ಸತ್ಯಾಗ್ರಹ ಆಫೀಸಿನಲ್ಲಿ ಸರಕಾರಿ ಆಫೀಸರರ ವ್ಯವಸ್ಥಿತ ಖಾತೆ-ಕಿರ್ದಿಗಳಿವೆಯಂತೆ! ಪ್ರಸಂಗದಲ್ಲಿ ಎಲ್ಲ ಅನಾಚಾರ-ದುರಾಚಾರಗಳನ್ನು ಪ್ರಕಟಿಸಿ ಸರಕಾರದ ನಿಜರೂಪವು ಪ್ರಕಟಪಡಿಸುವದು ಸತ್ಯಾಗ್ರಹ ನಿಧಿಯು ೧॥ ಲಕ್ಷಕ್ಕೆ ಮಿಕ್ಕಿತು. ಇನ್ನೂ ನಿಧಿಸಂಚಯವಾಗುತ್ತಿದೆ.

— ೧೯೨೭ ನೇ ಇಸ್ವಿಯಲ್ಲಿ ೧೦೮೪೩ ಕಾಡು ಪ್ರಾಣಿಗಳ ಕೊಲೆಯಾಯಿತು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ೧೦೨೦ ಪ್ರಾಣಿಗಳ ನಾಶವಾಯಿತು. ೩೨೨೩೩ ಹಾವುಗಳು ಕೊಲ್ಲಲ್ಪಟ್ಟವು. ಕಾಡು ಪ್ರಾಣಿ ಹಾಗು ಹಾವುಗಳನ್ನು ಕೊಂದದ್ದಕ್ಕಾಗಿ ೧೩೪೫ ರೂಪಾಯಿಗಳ ಪಾರಿತೋಷಕವು ಹಂಚಲ್ಪಟ್ಟಿತು.

— ಹುಬ್ಬಳ್ಳಿಯ ಪ್ರಸಿದ್ಧ ಜವಳಿ ವರ್ತಕರಾದ ಶ್ರೀ॥ ಸಾಗರಹಳ್ಳಿ ಮುಲ್ಲೇಶಪ್ಪನವರು ಸ್ಟೇಶನ್‌ದ ಬಳಿ ಧರ್ಮಶಾಲೆ ಕಟ್ಟಲು ೪೦೦೦ ರೂಪ್ಯಗಳನ್ನರ್ಪಿಸಿದ್ದಾರೆ.

ಮಹಾತ್ಮರ ಆತ್ಮಚರಿತ್ರೆ

(೯) ಸತ್ಯಾಗ್ರಹಾಶ್ರಮ ಸ್ಥಾಪನೆ.

ಕುಂಭ ಯಾತ್ರೆಯ ನಿಮಿತ್ತದಿಂದ ನಾನು ಹರಿದ್ವಾರಕ್ಕೆ ಹೋದದ್ದು ಎರಡನೇ ಸಲ. ಸತ್ಯಾಗ್ರಹಾಶ್ರಮವು ತಾ. ೨೫-೫-೧೯೧೫ನೇಯ ದಿವಸ ಸ್ಥಾಪಿಸಲ್ಪಟ್ಟಿತು. ಹರಿದ್ವಾರದಲ್ಲಿಯೇ ನಾನು ಉಳಕೊಳ್ಳಬೇಕಾಗಿ ಶ್ರದ್ಧಾನಂದಜೀಯವರ ಅಪೇಕ್ಷೆ ಇತ್ತು. ಕಲಕತ್ತೆಯೊಳಗಿನ ವೈದ್ಯನಾಥಧಾಮದಲ್ಲಿ ನಾನು ಇರಬೇಕಾಗಿ ಅಲ್ಲಿಯ ಕೆಲವು ಗೆಳೆಯರು ನನಗೆ ಸೂಚಿಸಿದರು. ರಾಜಕೋಟದಲ್ಲಿಯೇ ನಾನು ಉಳಕೊಳ್ಳಬೇಕೆಂದು ಅನೇಕರ ಬಹಳ ಆಗ್ರಹವಿತ್ತು. ಆದರೆ ಅಹಮದಾಬಾದದಿಂದ ನಾನು ಪ್ರಯಾಣ ಮಾಡುತ್ತಿರಲು ಅನೇಕ ಗೆಳೆಯರು ನನಗಲ್ಲಿಯೇ ಇರಬೇಕಾಗಿ ... ಉಳಕೊಳ್ಳಲು ಮನೆ ಕಟ್ಟಿಕೊಡುವುದಾಗಿಯೂ ... ಖರ್ಚನ್ನು ಸಹಿಸುವುದಾಗಿಯೂ ಸಂತೋಷದಿಂದ ಹೇಳಿದರು.

ಅಹಮದಾಬಾದದ ಮೇಲೆ ನನ್ನದೊಂದು ಪ್ರೀತಿ ಇತ್ತು. ನಾನು ಗುಜರಾಥಿಯನಾಗಿದ್ದೆ. ಆದದರಿಂದ ನಾನು ಗುಜರಾಥಿ ಭಾಷೆಯದ್ವಾರಾ ರಾಷ್ಟ್ರಕ್ಕೆ ವಿಶೇಷ ಸೇವೆ ಸಲ್ಲಿಸಬಹುದೆಂದು ನನಗನಿಸಿತು. ಇದಲ್ಲದೆ ಅಹಮದಾಬಾದು ... ದಲ್ಲಿ ಪುರಾತನ ಕಾಲದಿಂದ ನೇಯ್ಗೆ ನಡೆಸುತ್ತಿರುವ ... ಲದ ಉದ್ಯೋಗವನ್ನು ಪುನರುದ್ಧರಿಸಲು ಇಲ್ಲಿ ಬಹಳ ಅನುಕೂಲವಿತ್ತು. ಗುಜರಾಥ ಪ್ರಾಂತದ ಮುಖ್ಯ ನಗರವು ಅಹಮದಾಬಾದ ಆದ್ದರಿಂದ ... ಕಡೆಗಳಲ್ಲಿ ಇರುವದಕ್ಕಿಂತ ಇಲ್ಲಿ ಉಳಕೊಂಡರೆ ಇಲ್ಲಿಯ ಧನವಂತರು ದ್ರವ್ಯಸಹಾಯ ಮಾಡಬಹುದೆಂಬ ಆಶೆಯೊಂದಿತ್ತು.

ಅಹಮದಾಬಾದದೊಳಗಿನ ಗೆಳೆಯರೊಡನೆ ಅಸ್ಪೃಶ್ಯತೆಯ ಪ್ರಶ್ನೆಯನ್ನು ಕುರಿತು ವಿಷಯಗಳೊಡನೆ ಸಹಜವಾಗಿ ಚರ್ಚಿಸಿದೆನು. ಅವಶ್ಯವಿದ್ದಲ್ಲಿ ಯೋಗ್ಯರಾಗಿರುವ ಅಸ್ಪೃಶ್ಯರಿಗೂ ಆಶ್ರಮದಲ್ಲಿ ನಾನು ಸೇರಿಸಿಕೊಳ್ಳದೆ ಬಿಡಲಿಕ್ಕಿಲ್ಲವಾಗಿ ಅವರಿಗೆ ನಾನು ಸ್ಪಷ್ಟವಾಗಿ ಹೇಳಿದೆನು.

ನಿಮ್ಮ ಶರತ್ತುಗಳನ್ನು ಪಾಲಿಸುವ ಅಸ್ಪೃಶ್ಯನೆಲ್ಲಿದ್ದಾನು" ಎಂದು ವೈಷ್ಣವ ಗೆಳೆಯರೊಬ್ಬರು ಉತ್ತರಿಸಿ ಮನಸ್ಸು ಸಮಾಧಾನ ಮಾಡಿಕೊಂಡರು. ಹೀಗೆ ಅಹಮದಾಬಾದದಲ್ಲಿ ಆಶ್ರಮವನ್ನು ಸ್ಥಾಪಿಸಬೇಕೆಂದು ನಾನು ಕೊನೆಸು ನಿರ್ಣಯ ಮಾಡಿದೆನು.

ಅಹಮದಾಬಾದದೊಳಗಿನ ಬ್ಯಾರಿಸ್ಟರರಾದ ಶ್ರೀ ಜೀವನಲಾಲ ದೇಸಾಯಿಯವರು ನನಗೆ ವಿಶೇಷ ಸಹಾಯ ಮಾಡಿದರು. ತಮ್ಮ ಕೊಚರಬ್ ಬಂಗಲೆಯನ್ನು ಅವರು ಬಾಡಿಗೆಗೆ ಕೊಡಲು ಒಪ್ಪಿದರು.

ಆಶ್ರಮಕ್ಕೆ ಕೊಡತಕ್ಕ ಹೆಸರನ್ನು ನಿಶ್ಚಯಿಸಬೇಕಾಯಿತು. ಗೆಳೆಯರ ಆಲೋಚನೆ ಕೇಳಿದೆನು. 'ಸೇವಾಶ್ರಮ', 'ತಪೋವನ' ಮುಂತಾದ ಹೆಸರುಗಳ ಸೂಚನೆಗಳಾದವು. 'ಸೇವಾಶ್ರಮ' ವೆಂಬ ಹೆಸರು ನನಗೆ ಸರಿದೋರಿತು. ಆದರೆ, ಅದರೊಳಗೆ ಸೇವೆಯ ಸ್ವರೂಪ ನಿರ್ದೇಶವಿದ್ದಿಲ್ಲ. 'ತಪೋವನ' ವೆಂಬ ಹೆಸರು ಒಳ್ಳೇ ಡಂಭಾಚಾರದ್ದು. ತಪಸ್ಸು ನನಗೆ ಪ್ರಿಯವಿತ್ತು. ಆದರೆ, ನಾವು ತಪಸ್ವಿಗಳಲ್ಲ. ಸತ್ಯ-ಭಕ್ತಿಯೇ ನಮ್ಮ ಧ್ಯೇಯವಾಗಿತ್ತು. ಸತ್ಯಶೋಧ, ಸತ್ಯಾಗ್ರಹ ಇವೇ ನಮ್ಮ ಕೆಲಸವಾಗಿತ್ತು. ದಕ್ಷಿಣ ಆಫ್ರಿಕೆಯಲ್ಲಿ ನಡಿಸಿದ ಕ್ರಮವನ್ನು ಹಿಂದುಸ್ಥಾನಕ್ಕೆ ತಿಳಿಸಬೇಕಾಗಿ ನನ್ನ ಅಪೇಕ್ಷೆ ಇತ್ತು. ಹಾಗು ಆ ಕ್ರಮವನ್ನು ಹಿಂದುಸ್ಥಾನದಲ್ಲಿ ಎಷ್ಟರ ಮಟ್ಟಿಗೆ ಅನುಸರಿಸಬಹುದೆಂಬುದನ್ನು ನೋಡುವದಿತ್ತು. ಆದದರಿಂದ ಸತ್ಯಾಗ್ರಹಾಶ್ರಮವೆಂಬ ಹೆಸರನ್ನೇ ನಾನೂ, ನನ್ನ ಗೆಳೆಯರೂ ಶೋಧಿಸಿ ತೆಗೆದೆವು. ಇದರೊಳಗೆ ನಮ್ಮ ಧ್ಯೇಯವೂ, ಸೇವೆಯ ಕ್ರಮವೂ ನಿರ್ದೇಶವಾಗಿದ್ದವು. ಆಶ್ರಮವು ನಡಿಸುವದಕ್ಕಾಗಿ ನಿಯಮಗಳ ಆವಶ್ಯವಿತ್ತು. ನಿಯಮಾವಳಿಯು ತಯಾರಿಸಲ್ಪಟ್ಟಿತು. ಗೆಳೆಯರಿಗೆ ಅಭಿಪ್ರಾಯ ಕೊಡಲಿಕ್ಕೆ ಹೇಳಲಾಯಿತು. ಅನೇಕರು ತಮ್ಮ ಅಭಿಪ್ರಾಯಗಳನ್ನು ಕಳಿಸಿದರು. ಸರ್ ಗುರುದಾಸ ಬ್ಯಾನರ್ಜೀಯವರ ಅಭಿಪ್ರಾಯವು ಇನ್ನೂ ನೆನಪಿನಲ್ಲಿದೆ. ನಿಯಮಾವಳಿಯು ಅವರಿಗೆ ಸಮ್ಮತವಾಯಿತು. ಆದರೆ, ನಮ್ರತೆಯ ವ್ರತವನ್ನೊಂದು ನಿಯಮಗಳಲ್ಲಿ ಸೇರಿಸಬೇಕಾಗಿ ಅವರ ಅಂಬೋಣ. ಈಗಿನ ಯುವಕರಲ್ಲಿ ವಿನಯಸ್ವಭಾವವಿಲ್ಲವೆಂದೂ ವ್ಯಸನಪೂರ್ವಕವಾಗಿ ಅವರು ಬರೆದಿದ್ದರು. ನಿಯಮಗಳೊಳಗಿನ ಈ ದೋಷವು ನನಗೆ ಗೊತ್ತಿತ್ತು. ಆದರೆ, ವಿನಯವನ್ನು ಪ್ರತಿಜ್ಞೆಗಳಲ್ಲಿ ಸೇರಿಸಿದರೆ ವಿನಯವಿರಲಿಕ್ಕಿಲ್ಲವಾಗಿ ನನ್ನ ಗ್ರಹಿಕೆಯಾಯಿತು. ನಮ್ರತೆಯ ಅರ್ಥವೇನಂದರೆ, ತನ್ನ ಮಹತ್ವವೇ ಇಲ್ಲವೆಂದೆನಿಸುವದು. ಈ ಶೂನ್ಯಾಕಾರಕ್ಕೆ ಮೋಕ್ಷವೆಂದೆನ್ನುತ್ತಾರೆ. ವಿನಯವು ಸ್ವತಃ ಪ್ರತಿಜ್ಞೆಯ ವಿಷಯವಲ್ಲ. ಅದನ್ನು ಸಾಧಿಸುವದಕ್ಕಾಗಿ ಬೇರೆ ಪ್ರತಿಜ್ಞೆಯನ್ನು ಕೊಳ್ಳಬೇಕು. ಮುಮುಕ್ಷುಗಳಾಗಲೀ, ಸೇವಕರಾಗಲೀ ವಿನಯವಿಲ್ಲದೆ ನಿಸ್ಪೃಹತನದಿಂದ ಸೇವೆ ಮಾಡುವದ್ದರೆ ಅವರು ಮೋಕ್ಷಸಾಧಕರೂ ಅಲ್ಲ, ಸೇವಕರೂ ಅಲ್ಲ. ವಿನಯವಿಲ್ಲದ ಸೇವೆಯು ಒರೇ ಸ್ವಾರ್ಥವು, ಅಹಂಕಾರವು.

ನಮ್ಮೊಡನೆ ಆ ಕಾಲಕ್ಕೆ ೧೩ ಮಂದಿ ತಮಿಳರಿದ್ದರು. ದಕ್ಷಿಣ ಆಫ್ರಿಕೆಯಿಂದ ಬಂದವರು ೫ ಜನ ಉಳಿದವರು ಇಲ್ಲಿಯವರೇ. ಹೀಗೆ ಒಟ್ಟು ೨೫ ಮಂದಿ ಸ್ತ್ರೀ-ಪುರುಷರಿಂದ ಆಶ್ರಮವು ಸ್ಥಾಪಿಸಲ್ಪಟ್ಟಿತು. ಇದು ನನ್ನ ಆಶ್ರಮವು ... ಎಲ್ಲರೂ ಒಂದೇ ಕುಟುಂಬದವರಂತೆ ಎಲ್ಲರೂ ಉಳಕೊಳ್ಳಹತ್ತಿದರು.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರದಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ ಎ. ರಂಗನಾಥಂ ಅವರ ಮುನ್ನುಡಿ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ — ಶ್ರೀ ಬಿ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ-ಛಾಯಾಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ ೨-೮-೦, ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀ ತುಳಸೀದಾಸ ರಾಮಾಯಣ ಕಾರ್ಯಾಲಯ

(ಶಾ) ೧೭೬ ಚಾಮರಾಜಪೇಟೆ, ೫ನೇ ಬೀದಿ,

ಬೆಂಗಳೂರು ಸಿಟಿ.

ಈಗಿನ ಶಿಕ್ಷಣ ಕ್ರಮದ ಅನರ್ಥ,

(೩ನೇ ಪಾನಿನಿಂದ ಮುಂದರಿದದ್ದು.)

ಇವರು ಪರಾಶ್ರಯಿಗಳು. ಸುವಿಚಾರ ತತ್ವಗಳನ್ನು ಸ್ವಭಾಷೆಯಲ್ಲಿ ಹೇಳುವಷ್ಟು ಸಾಮರ್ಥ್ಯವು ಇವರಲ್ಲಿಲ್ಲ. ಹೀಗೆ ಶಿಕ್ಷಕರು ತ್ರಿಶಂಕುಗಳಾಗಿದ್ದಾರೆ. ಹಿಂದುಸ್ಥಾನದ ಸ್ಥಿತಿಯು ಈ ಪ್ರಕಾರ ವಿಚಿತ್ರವಾಗಿದೆ. ತ್ರಿಶಂಕು ಶಿಕ್ಷಕರಿಗೆ ನಾಚಿಕೆಯಿಲ್ಲ. ಸ್ವದೇಶದ ವಾಙ್ಮಯಕ್ಕಿಂತ ಪರದೇಶ ವಾಙ್ಮಯ ಭಾಂಡಾರದ ಪರಿಚಯವು ತಮಗೆ ವಿಶೇಷವೆಂದು ಇವರು ಅಭಿಮಾನದಿಂದ ಹೇಳುತ್ತಾರೆ. ಈ ರಾಜಶ್ರೀಗಳಿಗೆ ಒಂದು ಮಾತು ಗೊತ್ತಿಲ್ಲ. ಸ್ವಸಂಸ್ಕೃತಿಯನ್ನು ಮನ್ನಿಸದ ರಾಷ್ಟ್ರಕ್ಕೆ ಭೂತಲದಲ್ಲಿ ಮನ್ನಣೆ ಸಿಗದು. ಸ್ವಸಂಸ್ಕೃತಿಯು ಮನ್ನಣೆಯಾಗಬೇಕಾದರೆ, ಆ ಸಂಸ್ಕೃತಿ ಇರುವ ಸ್ವಭಾಷೆಯು ಮನ್ನಣೆಯಾಗಬೇಕು. ಭೂಮಂಡಲದಲ್ಲಿ ಇಂಗ್ಲಿಷಿನ ಮಧ್ಯಸ್ಥಿಕೆಯಿಂದ ಕಲಿತ ಶಿಕ್ಷಕರಿಗೆ ಹೆಳವರೆಂದು ಗ್ರಹಿಸುತ್ತಾರೆ. ಭಗವಂತನು ಕೊಟ್ಟ ಸ್ವಭಾಷೆಯ ಕಾಲುಗಳಿಂದ ನಡೆಯಲಾಗದೆ, ೬೦೦೦ ಮೈಲು ದೂರವಿದ್ದ ದೇಶದಲ್ಲಿ ತಯಾರಾದ ಕೋಲ್ಗುದುರೆಗಳನ್ನು ಆನಿಸಿಕೊಂಡು ನಡೆಯುವಂತೆಯೇ ನಮ್ಮ ಸ್ಥಿತಿಯಾಗಿದೆ. ಈ ಸ್ಥಿತಿಯು ವಿಚಾರರಮಣೀಯವೇ ? ಇಂಥ ವಿದ್ಯಾಪೀಠಗಳ ಸ್ವಭಾಷೆಯ ಉನ್ನತಿಯ ಪ್ರಯತ್ನಗಳನ್ನು ಹೀಯಾಳಿಸುವವರು ಭಗವದ್ದ್ವೇಷಿಗಳೆಂದು ನಾನು ಎಣಿಸುತ್ತೇನೆ. ಭಗವಂತನೇ ನಮ್ಮ ವಿಚಾರಗಳನ್ನು ಉಚ್ಚರಿಸುವದಕ್ಕಾಗಿ ನಮಗೆ ಭಾಷೆಯನ್ನು ದಯ ಪಾಲಿಸಿದ್ದಾನೆ. ಆತನಿಂದ ದೊರೆತ ಅನುಗ್ರಹವು ನಮಗೆ ಸಾಕಾಗುವದಿಲ್ಲವೇ, ?

ಸಾಮಾಜಿಕ ಸ್ಥಿತಿ.

ಇಂಗ್ಲಿಷ ಭಾಷೆಯಿಂದ ಕುಟುಂಬದಲ್ಲಿ ಐಕ್ಯಭಂಗವಾಗಿದೆ. ಕುಟುಂಬದೊಳಗಿನ ಸ್ತ್ರೀ-ಪುರುಷರ ವಿಚಾರಕ್ರಮವು ಭಿನ್ನವಾಗಿರುತ್ತದೆ. ಹೆಂಗಸರು ಪೂರ್ವ ಪರಂಪರೆಯನ್ನು ಕಲಿತವರು, ಗಂಡಸರು ಅಲ್ಪ ಇಂಗ್ಲಿಷ ಶಿಕ್ಷಣದಿಂದ ಜಾಣರಾದವರು. ಇವರಿಗೆ ಹೆಂಗಸರ ಆಚಾರ-ವಿಚಾರಗಳು ಸೇರುವದಿಲ್ಲ. ಇಂಗ್ಲಿಷ ವಾಙ್ಮಯ-ಕೃಷ್ಟಿ ಸೌಂದರ್ಯವನ್ನೇ ಇವರು ಚಿಂತಿಸುತ್ತಿರುತ್ತಾರೆ; ಹೆಂಗಸರು ತುಳಸೀದಾಸ ಅಥವಾ ಫೌಲೀಬರಂಥವರನ್ನು ಧ್ಯಾನಿಸುತ್ತಿರುತ್ತಾರೆ. ಅಂದರೆ, ಗಂಡಸರ ಮೋರೆಯು ಪಶ್ಚಿಮ ದಿಕ್ಕಿಗೆ; ಹೆಂಗಸರ ಮೋರೆಯು ಪೂರ್ವದಿಕ್ಕಿಗೆ, ಹೀಗೆ ಕುಟುಂಬದ ಸ್ಥಿತಿಯಾಗಿ ಕುಟುಂಬವು ದಿಕ್ಕುಪಾಲಾಗುತ್ತದೆ.

ಸ್ವದೇಶಭಾಷೆ ಕಲಿಯಿರಿ.

ಸ್ತ್ರೀ-ಪುರುಷರು ಸುಖಿಯಾಗಿರಬೇಕಾದರೆ, ಪುರುಷರಿಗೆ ಸಿಗುವ ಜ್ಞಾನವನ್ನು ಸ್ತ್ರೀಯರಿಗೆ ಸಿಗುವಂತೆ ವ್ಯವಸ್ಥೆಯಾಗಬೇಕು. ಅಂದರೆ, ಪರಂಪರೆಯಿಂದ ನಡೆದುಬಂದು ಹೆಂಗಸರು ಉಪಯೋಗಿಸುವ ದೇಶಭಾಷೆಯನ್ನೇ ಗಂಡಸರೂ ಉಪಯೋಗಿಸಿ ಸುಧಾರಿಸತಕ್ಕದ್ದು. ಈ ಉಪಾಯದಿಂದ ನಮ್ಮ ದೇಶಕ್ಕೆ ಇನ್ನೊಂದು ಲಾಭವಾಗುವಂತಿದೆ. ಜಪಾನ ದೇಶದಲ್ಲಿ ಮಕ್ಕಳಿಗೆ ತಾಯಿಂದಿರೇ ವಿದ್ಯಾಭ್ಯಾಸ ಕಲಿಸುತ್ತಾರೆ. ಇಲ್ಲಿ ಅಂಥ ಪರಿಪಾಠವಿಲ್ಲ. ಗಂಡಸರ-ಹೆಂಗಸರ ಶಿಕ್ಷಣ ಕೊಡುವ ಭಾಷೆಗಳು ಭಿನ್ನ ಭಿನ್ನವಾದ್ದರಿಂದ ಈ ಪರಿಪಾಠವು ಇಲ್ಲಿ ಸಾಧ್ಯವಿಲ್ಲ. ಇಂಗ್ಲಿಷ

ಭಾಷೆಯಿಂದ ವಿದ್ಯಾಭ್ಯಾಸ ಮಾಡುವದೆಂದರೆ, ನಮ್ಮ ಕಡೆಯ ವಿದ್ಯಾರ್ಥಿಗಳಲ್ಲಿ ಭಾಷಾವಿಷಯಕ್ಕೇ ಹೆಚ್ಚಿನ ಶಕ್ತಿ ಹಿಡಿಯಾಗುತ್ತದೆ. ಇಂಗ್ಲಿಷ ಭಾಷೆಯ ಮಧ್ಯಸ್ಥಿಕೆಯನ್ನು ಬಿಟ್ಟು ನಮ್ಮ ಅನ್ಯಭಾಷಾ-ಕೌಶಲ್ಯಕ್ಕೆ ಕೊಡುವಟ್ಟಿಗೆ ಕುಂದು ಬಂದರೂ, ಅದರಿಂದ ದೇಶಕ್ಕೆ ಹಾನಿಯಿಲ್ಲ. ಇಂಗ್ಲಿಷನ್ನು ಬೇರೊಂದು ರೀತಿಯಿಂದ ಮಾತಾಡಿದ್ದರೂ, ನನಗೆ ಅದರಿಂದ ಕೆಡಕೆನಿಸುವದಿಲ್ಲ. ಸ್ವದೇಶದಲ್ಲಿಯೇ ಸ್ವದೇಶ ಬಾಂಧವರು ಪರದೇಶಿಗಳಾಗುವದನ್ನು ನಾನು ನೋಡಲಾರೆ. ನಮ್ಮ ಪರಂಪರೆಯ ಗುಣಗಳು ಅವರಿಗೆ ಗೊತ್ತಿಲ್ಲ, ಈಗಿನ ಇಂಗ್ಲಿಷ ಕಲಿತವರಿಗೆ ಗೊತ್ತಿಲ್ಲ. ಸ್ವದೇಶ ಭಾಷೆಯಿಂದ ಮಾತಾಡಲಿಕ್ಕೂ ಬರುವದಿಲ್ಲ. ಭಿನ್ನ ಭಿನ್ನ ಪ್ರಾಂತಗಳಲ್ಲಿ ಭಿನ್ನ ಭಿನ್ನ ದೇಶಭಾಷೆಗಳನ್ನು ಪ್ರಚಾರದಲ್ಲಿ ತಂದರೆ, ದೇಶದಲ್ಲಿ ಒಮ್ಮನಸ್ಸುಂಟುಮಾಡಲು ಒಳ್ಳೇ ಪ್ರತಿಬಂಧವಾಗುವದೆಂದು ಅವರು ಹೇಳುತ್ತಾರೆ. ಈ ತರ್ಕವು ಬರೇ ನಿರಾಧಾರವಾದದ್ದು. ಹಿಂದುಸ್ಥಾನದವರೆಲ್ಲರೂ ಒಂದೇ ಧರ್ಮವನ್ನು ಅಂಗೀಕರಿಸಿ, ಒಂದೇ ಪ್ರಕಾರದ ಆಹಾರ ಕೊಂಡು ಒಂದೇ ತರಗತಿಯ ಉಡಿಗೆ-ತೊಡಿಗೆಗಳನ್ನು ತೊಟ್ಟುಕೊಂಡ ಹೊರತು ಈ ದೇಶದಲ್ಲಿ ಐಕ್ಯಮತ್ಯವು ಆಗಲಾರದೆಂದು ಯಾರಾದರೂ ಹೇಳಿದರೆ, ಅದಕ್ಕೆ ನೀವು ಒಪ್ಪುವಿರೇನು? ಭರತಭೂಮಿಯ ಮಹಿಮೆಯು ದೊಡ್ಡದಿದೆ. ಈ ಭೂಮಿಯಲ್ಲಿ ತರತರದ ಧರ್ಮಗಳೂ, ಪರಸ್ಪರ ವಿರೋಧವಾದ ತತ್ವಗಳೂ ದ್ವೇಷಾಸೂಯೆಗಳಿಲ್ಲದೆ ಅಭ್ಯುದಯಹೊಂದಿವೆ. ಹಿಂದುಸ್ಥಾನದಲ್ಲಿ ಒಂದೇ ಭಾಷೆಯಾದಹೊರತು ಸ್ವರಾಜ್ಯ ಸಿಗುವದೆಂಬದಕ್ಕೆ ಆಧಾರವೇನಿದೆ? ಅಮೇರಿಕೆಯಲ್ಲಿ ಒಂದೇ ಭಾಷೆಯಿದೆ. ಅಲ್ಲಿಯ ನಿಗ್ರೋ ಜಾತಿಯವರು ಅಮೇರಿಕೆಯವರ ಭಾಷೆಯನ್ನೇ ಕಲಿತಿದ್ದಾರೆ. ಆದರೂ, ಅಲ್ಲಿ ನಿಗ್ರೋ ಜಾತಿಯವರ ಕೊಲೆಗಳಾಗುತ್ತವೆ. ಬೆಲ್ಜಿಯಮ್ ಸ್ವಿಝರ್ಲಂಡ ದೇಶಗಳಲ್ಲಿ ಅನೇಕ ಭಾಷೆಗಳು ರೂಢವಾಗಿವೆ. ಆದರೂ, ಪ್ರಜೆಗಳು ಅನ್ಯೋನ್ಯ ಪ್ರೀತಿಯಿಂದ ನಡೆಕೊಳ್ಳುತ್ತಾರೆ. ಇಂಥಲ್ಲಿ ಒಂದು ಭಾಷೆಯಾದರೆ, ದೇಶದಲ್ಲಿ ಐಕ್ಯಮತ್ಯವಾಗುವದೆಂದು ನಾನು ಹೇಗೆ ಗ್ರಹಿಸಲಿ?

ಈಗಿನ ದೇಶಸ್ಥಿತಿ.

ಗಂಡಸರಂತೂ ಮರುಳರು. ಅವಿವೇಕಿಗಳಾಗಿ ಮಂಗಗಳಂತೆ ಪಾಶ್ಚಾತ್ಯರ ನಡೆನುಡಿಗಳನ್ನು ಹಿಂಬಾಲಿಸುತ್ತಾರೆ. ಕೆಲ ಹೆಂಗಸರೂ ಬುದ್ಧಿಹೀನರಾಗಿ ಗಂಡಸರನ್ನೇ ಅನುಕರಿಸಿ ಪಾಶ್ಚಾತ್ಯರ ನಡೆನುಡಿಗಳನ್ನು ಅನುಕರಿಸುವದನ್ನು ನೋಡಿ ನನಗೆ ಬಹಳ ವ್ಯಸನವಾಗುತ್ತದೆ. ರಾಷ್ಟ್ರದ ನಡೆ-ನುಡಿಗಳು ಪರಂಪರೆಯಿಂದ ಘಟಿಸಲ್ಪಡುತ್ತವೆ. ಉತ್ಕ್ರಾಂತಿವಾದದ ತತ್ವವಿದು. ಹೀಗಿರಲು ನಮ್ಮ ನಡೆ-ನುಡಿಗಳನ್ನು ಒಮ್ಮೆಲೇ ತ್ಯಜಿಸಿದರೆ ಸಮಾಜ ಜೀವನಕ್ಕೆ ದೊಡ್ಡ ಆಘಾತವಾಗುತ್ತದೆ. ಶರೀರದ ಒಂದು ಅಂಗವು ಒಮ್ಮೆಲೇ ಕೊಯ್ದು ಹೋದದ್ದು ಕಷ್ಟವಾಗುತ್ತದೆ. ಈ ದೇಶದ ಕಳೆದ ೩೦ ವರುಷಗಳ ಇತಿಹಾಸವನ್ನು ಪರಾಂಬರಿಸಿದ್ದಲ್ಲಿ ದೇಶೋಪಕಾರವಾದ ಸೇವೆಯನ್ನು ಮಾಡಿದವರು ಇಂಗ್ಲಿಷ ಶಿಕ್ಷಣವನ್ನು ಪಡೆದವರಲ್ಲವೆಂದು ನಿಮಗೆ ತಿಳಿಯುವಂತಿದೆ. ದೇಶಿ ಶಿಕ್ಷಣ ಪದ್ಧತಿಯಿಂದಲೇ ನಮ್ಮ ಕೈಕಾಲುಗಳಿಗೆ ಶಕ್ತಿ ಬಂದು ನಮಗೆ ಸುಖ ತೃಪ್ತಿಯಾಗಬಲ್ಲವು. ಜಪಾನ ದೇಶದ ಕಡೆಗೆ ನೋಡಿರಿ. ಸ್ವದೇಶದ ಪರಂಪರೆಯನ್ನು ತ್ಯಜಿಸದೆ, ಪರದೇಶಿ ಜ್ಞಾನಭಾಂಡಾರದೊಳಗಿನ ಉತ್ತಮೋತ್ತಮವಾದ ಜ್ಞಾನವನ್ನು ಅವರು ಗ್ರಹಿಸಿದ್ದಾರೆ. ಇದನ್ನು ಕೇಳಿ ಅನೇಕರು ನನಗೆ ಪುರಾತನ ಮತವಾದಿಯೆಂದು ಹೀಯಾಳಿಸಬಹುದು. ನಾನು ಪುರಾತನ ರೂಢಿ ಸಂಪ್ರದಾಯಗಳನ್ನೆಲ್ಲ ಅಂಧ ಬುದ್ಧಿಯಿಂದ ಅನುಸರಿಸಬೇಕೆಂದು ಹೇಳುವವನಲ್ಲ. ನಮ್ಮ ಮೇಲೆ ಪರಂಪರೆಯಿಂದುಂಟಾದ ಸಂಸ್ಕಾರಗಳನ್ನು ತ್ಯಜಿಸಬಾರದಾಗಿ ನನ್ನ ಅಂಬೋಣವಿದೆ. ಪುರಾತನ ಕಾಲದಿಂದ ನಡೆದ ಬಂದ ರೂಢಿಗಳು ನಮ್ಮ ಸಂಸಾರಕ್ಕೆ ಅಪಾಯಕರವಾಗಿದ್ದರೆ ಅವನ್ನು ನಾವು ತ್ಯಜಿಸಲೇ ಬೇಕು. ಪುರಾತನ-ಪುರಾತನವೆಂದು ಎಲ್ಲವನ್ನೂ ಮನ್ನಿಸುವದಾಗಲಿ, ನೂತನ ನೂತನವೆಂದು ಎಲ್ಲವನ್ನೂ ಹೀಯಾಳಿಸುವದಾಗಲೀ ತರವಲ್ಲ. ಜಪಾನದವರಂತೆ ನಮ್ಮ ಪುರಾತನ ಪರಂಪರೆಯಲ್ಲಿ ದೇಶಕಾಲೋಚಿತವಾದ ತತ್ವಗಳನ್ನು ಶೋಧಿಸಿ ನಮ್ಮ ಸಂಸ್ಕೃತಿಯನ್ನು ರೂಪಾಂತರಿಸತಕ್ಕದ್ದು.

ಮಹಾಶಯರೇ, ಹಿಂದುಸ್ಥಾನದೊಳಗಿನ ಎಲ್ಲ ಭಾಷೆಗಳೂ ಇದೇ ಪ್ರಕಾರ ವಿದ್ಯಾಪೀಠವನ್ನು ಸ್ಥಾಪಿಸಿ, ಭಾಷೆಯ ಉದ್ಧಾರ ಮಾಡುವ ಯೋಗವು ಶೀಘ್ರವೇ ಪ್ರಾಪ್ತವಾಗಲೆಂದು ನನಗೆ ಅನಿಸುತ್ತದೆ. ಇಂಥ ವಿದ್ಯಾಪೀಠ ನದಿಗಳಿಂದಲೇ ನಮ್ಮ ಭರತಭೂಮಿಯ ಜ್ಞಾನಭಂಡಾರ ಭಾಗೀರಥಿಯು ದೇಶದಲ್ಲೆಲ್ಲ ಹರಿದು ದೇಶದೊಳಗಿನ ಜ್ಞಾನಸಂಪತ್ತಿಯು ಅಭಿವೃದ್ಧಿಗೈಯುವದು. ಇಂಥ ವಿದ್ಯಾನಿಲಯಗಳ ವಿದ್ಯಾರ್ಥಿಗಳು ಅಭಿಮಾನದಿಂದ ದೇಶದಲ್ಲಿ ದೇಶಭಾಷೆಯ ವಿದ್ಯಾರ್ಜನದ ಮಹಿಮೆಯನ್ನು ಪ್ರಾಚೀನ ಮಹರ್ಷಿಗಳಂತೆ ಪ್ರಚಾರ ಮಾಡಹತ್ತಿದರೆ, ಪ್ರಜೆಗಳೆಲ್ಲರೂ ಅಜ್ಞಾನದಿಂದ ಬಿಡುಗಡೆಯಾಗಿ ದೇಶವು ಉದ್ಧಾರವಾಗುವದು. ನಮ್ಮ ದೇಶದಲ್ಲಿ ಐಕ್ಯಮತ್ಯ ಮಾಡುವ ಉಪಾಯವು ಒಂದೇ: ನಾವು ದೇಶಾಭಿಮಾನಿಗಳಾದರೆ ನಾವೆಲ್ಲರೂ ಒಂದಾಗುವೆವು. ಸ್ವದೇಶಬಾಂಧವರ ಮೇಲೆ ಪ್ರೀತಿ ಇಟ್ಟು ನಡೆಕೊಂಡರೆ ಮತಭೇದಗಳಿಂದ ತೊಂದರೆಯಾಗದೆ ದೇಶದ ಉದ್ಧಾರವಾಗುವದು. ದ್ವೇಷದಿಂದ ನಮಗೆಂದೂ ಲಾಭವಿಲ್ಲ. ಆದರಿಂದ ಎಲ್ಲರೂ ದೇಶಾಭಿಮಾನಿಗಳಾಗಿ ಪ್ರೀತಿಯಿಂದ ದೇಶಭಾಷೆಗಳ ಉದ್ಧಾರಕ್ಕಾಗಿ ತನುಮನಧನಗಳಿಂದ ದುಡಿಯಬೇಕಾಗಿ ಪ್ರಾರ್ಥನೆ ಇದೆ.

—ಓರಿಸಾ ಪ್ರಾಂತದ ನಿಸ್ಪೃಹ ಲೋಕಸೇವಕರಾದ ಪಂಡಿತ ಗೋಪಬಂಧು ದಾಸರವರು ಸಾಕ್ಷಿಗೋಪಾಲದೊಳಗಿನ ತಮ್ಮ ಸತ್ಯವಾದಿ ಆಶ್ರಮದಲ್ಲಿ ತೀರಿಕೊಂಡರು. ಮಹಾತ್ಮರೂ, ಲಾಲಾ ಲಜಪತರಾಯರವರೂ ಪಂಡಿತಜಿಯವರ ನಿಧನದಿಂದ ನಿಸ್ಪೃಹ ದೇಶಸೇವಕರೊಬ್ಬರನ್ನು ಭರತಭೂಮಿಯು ಕಳಕೊಂಡಿತಾಗಿ ಉದ್ಗರಿಸಿದ್ದಾರೆ. ಇವರು [illegible] ಕೋರ್ಟಿಯ [illegible] 'ಸಮಾಜ' ಎಂಬ ವರ್ತಮಾನ ಪತ್ರವನ್ನು ಇವರು ನಡಿಸುತ್ತಿದ್ದರು. ಲಜಪತರಾಯರು ಹೊಂದಿಸಿದ ಲೋಕಸೇವಕ ಸಮಾಜದ ಉಪಾಧ್ಯಕ್ಷರಿವರು. ಅಸಹಯೋಗದಲ್ಲಿ ವಕೀಲಿಯನ್ನು ತ್ಯಜಿಸಿದರು. ತಮ್ಮ ಉತ್ಕಲ ಪ್ರಾಂತವನ್ನು ಉದ್ಧರಿಸಲು ಅರ್ಧ ಲಕ್ಷ ರೂಪಾಯಿಗಳನ್ನು ಧರ್ಮ ಮಾಡಬೇಕಾಗಿ ಮರಣಶಾಸನ ಮಾಡಿಟ್ಟಿದ್ದಾರೆ.

ಮಹಾತ್ಮರ ಅಭಿಪ್ರಾಯ.

ಮಹಾತ್ಮರು ಅಹಮ್ಮದಾಬಾದದೊಳಗಿನ ರಾಷ್ಟ್ರೀಯ ವಿದ್ಯಾಲಯ ಹಾಗು ವಿನಯ ಮಂದಿರಗಳ ಅನಾವರಣ ಸಮಾರಂಭ ಮಾಡುವಾಗ ರಾಷ್ಟ್ರೀಯ-ಸರಕಾರಿ ಶಿಕ್ಷಣಗಳೊಳಗಿನ ಭೇದಗಳನ್ನು ವಿವರಿಸಿದರು. ಅದೇನೆಂದರೆ:— "ಈ ವಿದ್ಯಾಪೀಠದ ವಿದ್ಯಾರ್ಥಿಗಳೊಬ್ಬರು ಬಾರ್ಡೋಲಿಯ ಸತ್ಯಾಗ್ರಹ ಸಂಗ್ರಾಮದಲ್ಲಿ ಸೆರೆಯಾಳಾಗಿದ್ದಾರೆ. ಸರಕಾರಿ ಕಾಲೇಜಗಳೊಳಗಿನ ವಿದ್ಯಾರ್ಥಿಗಳು ಈ ಸಾಹಸ ಮಾಡಬಲ್ಲರೇನು? ರಾಷ್ಟ್ರೋದ್ಧಾರದ ಪ್ರಯತ್ನದಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಮಾಡಲು ಸಾಹಸ ಕೊಡದ ಪುಸ್ತಕ ಶಿಕ್ಷಣದಿಂದೇನು ಪ್ರಯೋಜನ? ನಮ್ಮ ಶಿಕ್ಷಣಕ್ರಮಕ್ಕೂ, ಸರಕಾರಿ ಶಿಕ್ಷಣಕ್ರಮಕ್ಕೂ ಮಹದಂತರವಿದೆ. ಸರಕಾರಿ ಶಾಲೆಗಳಲ್ಲಿ ಕಲಿಸಿದಂತೆ ಇಂಗ್ಲಿಷನ್ನು ನಾವು ಕಲಿಸುವದಿಲ್ಲ. ಕೆಲಸಕ್ಕೆ ತಕ್ಕಷ್ಟು ಇಂಗ್ಲಿಷ ಭಾಷೆಯನ್ನು ನಾವು ಕಲಿಯಬಹುದು. ಆದರೆ, ಹುಟ್ಟು ಭಾಷೆಯನ್ನು ಬಿಟ್ಟು ಇಂಗ್ಲಿಷದಿಂದ ವಿಚಾರವನ್ನು ನಾವು ಮಾಡಲಾರೆವು. ಗುಜರಾಥಿಯಲ್ಲಿಯೇ ಎಲ್ಲ ವಿಷಯಗಳನ್ನು ನಾವು ಕಲಿಯಬೇಕು. ನಮ್ಮ ಪರಾಕ್ರಮದಿಂದ ಆ ಭಾಷೆಯಲ್ಲಿ ಸೂಕ್ಷ್ಮ ವಿಚಾರ-ಭಾವನೆಗಳನ್ನು ಉಚ್ಚರಿಸುವ ಶಬ್ದಯೋಜನೆಯನ್ನು ನಾವು ಹುಡುಕಿ ತೆಗೆಯಬೇಕು. ನಮ್ಮ ಕಡೆಯಷ್ಟು ಸ್ಥಿತಿಯು ಭೂತಲದಲ್ಲೆಲ್ಲಿಯೂ ಇಲ್ಲ. ಈ ತನಕ ಇಂಗ್ಲಿಷ ಭಾಷೆಯಿಂದ ವ್ಯವಹಾರವನ್ನು ನಡಿಸಿದ ಬಗ್ಗೆ ನಾವು ಪ್ರಾಯಶ್ಚಿತ್ತವನ್ನು ಅನುಭವಿಸಿದ್ದೇವೆ. ಅರ್ಥಶಾಸ್ತ್ರದ ವಿಚಾರ ಮಾಡಿರಿ. ಸರಕಾರಿ ಶಾಲೆಗಳಲ್ಲಿಯೂ ಅರ್ಥಶಾಸ್ತ್ರ ಕಲಿಸುವ ಪದ್ಧತಿಯು ದುಷ್ಟತನದ್ದು. ದೇಶಭೇದದಂತೆ ಆಯಾ ದೇಶಕ್ಕೆ ತಗಲುವ ಅರ್ಥಶಾಸ್ತ್ರದ ನಿಯಮಗಳು ಭಿನ್ನ ಭಿನ್ನವಿರುತ್ತವೆ. ಜರ್ಮನಿಯೊಳಗಿನ ಅರ್ಥಶಾಸ್ತ್ರದ ಪುಸ್ತಕಗಳು ಬೇರೆ; ಇಂಗ್ಲಿಷರದು ಬೇರೆ. ಇಂಗ್ಲಿಷದೊಳಗಿನ ಅರ್ಥಶಾಸ್ತ್ರಗಳನ್ನು ನಾವು ಅನುಕರಿಸಿದರೆ ಹಿಂದುಸ್ಥಾನದ ಸರ್ವನಾಶವಾಗುವದು. ಇತಿಹಾಸದ ಅವಸ್ಥೆಯೂ ಇದೇ. ಫ್ರೆಂಚರು ಬರೆದ ಹಿಂದುಸ್ಥಾನದ ಇತಿಹಾಸಕ್ಕೂ, ಇಂಗ್ಲಿಷರು ಬರೆದ ಇತಿಹಾಸಕ್ಕೂ ಭೇದವಿದೆ, ಅವರವರ ಗುಣದೋಷಗಳು, ಅವರವರ ಭಾವನೆಗಳು ಆ ಗ್ರಂಥಗಳಲ್ಲಿ ಪ್ರತಿಬಿಂಬಿಸಲ್ಪಡುವವು. ದೇಶಾಭಿಮಾನಿ ಭಾರತೀಯನು ಮೂಲ ದಾಖಲೆಗಳಿಂದ ಬರೆಯುವ ಹಿಂದುಸ್ಥಾನದ ಇತಿಹಾಸವು ತೀರ ಭಿನ್ನವಾಗುವದು. ಈ ಕಾರ್ಯವನ್ನು ಈ ವಿದ್ಯಾಪೀಠದ ಗುರುಶಿಷ್ಯರು ನಡಿಸಬಲ್ಲರು. ಗಣಿತ ವಿಷಯ ಕಲಿಸಬೇಕಾದರೆ ಉದಾಹರಣೆಗಳನ್ನು ಹಿಂದುಸ್ಥಾನದ ಸ್ಥಿತಿಯ ಕಲ್ಪನೆಯಾಗುವಂತೆ ನಾವು ಘಟಿಸುವೆವು. ನಾವು ಶಾರೀರಿಕ-ಔದ್ಯೋಗಿಕ ಶಿಕ್ಷಣಗಳ ಮೇಲೆ ಹೆಚ್ಚಿನ ಕಟಾಕ್ಷವನ್ನಿಟ್ಟಿದ್ದೇವೆ. ಈ ಶಿಕ್ಷಣದಿಂದ ನೀವು ಮುಂದೆ ಮುತಿಗಳಾಗುವಿರೆಂದು ಗ್ರಹಿಸಬೇಡಿರಿ. ಬರೇ ಬಾಯಿಪಾಠದಿಂದ ಜ್ಞಾನವಿಕಾಸವಾಗುವದಿಲ್ಲ. ಔದ್ಯೋಗಿಕ ಶಿಕ್ಷಣವನ್ನು ಬುದ್ಧಿಪೂರ್ವಕವಾಗಿ ಪಡೆದರೆ ಬುದ್ಧಿವಿಕಾಸಕ್ಕೆ ಬಹಳ ಅನುಕೂಲವಾಗುತ್ತದೆ."

झंडूचे

द्राक्षासव-

— मृद्रिकारिष्ट — शारंगधरम अ १०

रामबाण औषध

सर्दि घालविणारें
भूक वाढविणारें
शौच्यास साफ करणारें
झोप आणणारें
शक्ति देणारें
तरतरीपणा आणणारें

— विश्राम दायिकर

किंमत एक रतलास १।। रुपये
ट्पालखर्च निराळा

झंडु फार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी, तीर्थहळ्ळी

मिसिएचर एम एच् यांकप्पा आणि ब्रदर

ಜೀವ ವಿಮಾ ಮಂಡಲಿ.

ಪಿ. ಡಿ. ಚೂರಿ

P D Churi,
Branch Secretary,
Alice Building
Hornby Road,
BOMBAY

ಕನ್ನಡ ಜಿಲ್ಹೆಗಳಿಗೆ ಏಜಂಟರು
ಬಿ. ಸಿ. ಶಿರಾಳಕೊಪ್ಪ,
ಲೋಹಿಯಾ ಬಿಲ್ಡಿಂಗ,
ಹುಬ್ಬಳ್ಳಿ

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಶಾಲು, ಖಣ, ರೇಶ್ಮೆ ಶಲ್ಯ, ಬನಾರಸ, ಕಾಶ್ಮೀರದ ಶಾಲು, ಪಕ್ಷಲಾತಿ ದಾಬಳೆ ರುದ್ರಾಕ್ಷಿ ಸರ, ಕಾಳೆ, ಗೌರೀಶಂಕರ, ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಂಟಿ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ.ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ

ವಿಶ್ವನಾಥ ಎಂಡ್ ಬ್ರದರ್ಸ,
ಮಂಗಳಾಘಾಟ, ಬನಾರಸ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಟೀ. ಯವರ

ಸುಗಂಧಿ ನಶ್ಯದ ಪುಡಿ.



ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿದ್ದ ಈ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುವದು. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟ ಕಳಿಸಲಾದೀತು.

ಒಂದು ಡಬ್ಬಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕಟೌನ, ಮದರಾಸ

ಇದು "ಕರಾಮತ" ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!



ಕಿರ್ಲೋಸ್ಕರ ಕರಾಮತ ಗಾಣ.

ಈ ಗಾಣದಿಂದ ಶೇಕಡಾ ೭೫ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು, ಬಾಳಿಕೆಯದು. ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ ರೈತರು ಇದನ್ನು ಸರಿಪಡಿಸಬಲ್ಲರು. ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು.

ಬೇರಿಂಗು ಗನ್‌ಮೆಟಲ್‌ದವು. ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಅಕ್ಸಲುಗಳು ಉಕ್ಕಿನವು ಎಷ್ಟೂ ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು

ಈ ಉತ್ತರ ಕನ್ನಡ ಜಿಲ್ಹೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦೦ ಕರಾಮತಗಾಣಗಳು ದುಡಿಯುತ್ತಿವೆ. ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; } ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು,

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಲ್ಲರು ಇಟ್ಟುಕೊಳ್ಳಲೇ ಬೇಕು, ಮದ್ದು ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೋ,

ಮುಂಬಯಿ ಮತ್ತು ಮದ್ರಾಸ.

[redacted] at his Star of Kanara Prsae, Kumta.

REG. NO. B. 1270

MONDAY, JULY 2ND 1928.

ವರ್ಷ ೧೨

ಕಾನಡಾವೃತ್ತ.

ಸಂಚಿಕೆ ೩೮

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನಿಯಾರ್ಡರಿಯಿಂದ
ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಸ್ಮಾಲ ಟೈಪಿನ (೧೧ ಎಮ್ ಅಗಲ) ೮ ಸಾಲುಗಳವರೆಗೆ ರೂ 1-0-
೮ ಸಂತ್ರ ಪ್ರತಿಸಾಲಿಗೆ 0-2-0.
ಹತಿಂಗಳ ಸಾಲು ಎಷ್ಟು ಹೊತ್ತದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨ ಮಾಹೆ ಜುಲೈ ಸನ್ ೧೯೨೮ನೇ ಇಸವಿ.)—

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ತರಹದಿಯ ಸಾಮಾನುಗಳು ಸಿಗುತ್ತವೆ—ಅಲ್ಯುಮಿನಿಯಮ ಭಾಂಡೆಗಳು, ಮೋಟಾರ ಉಪಯೋಗದ ಜೋಲ್ಟುಗಳು, ಪಿನ್ ಫ್ಲೋರರ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಶಾಲು ಮುಂತಾದವುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನ ಗಳೂ ಇಲ್ಲಿ ಸಿಗುತವೆ ! ಎಲ್ಲ ಸಾಮಾನು ಅಗ್ಗ ! ಚಿಲ್ಲರೆ ವ್ಯಾಪಾರಸ್ಥರು ಠೋಕ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ರಾಮ್ತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನಡ



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ ಶಾಲು, ಧರವಾಂರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ **ಶಿರೋಮಣಿ ನಾರಾಯಣಾಚಾರ್ಯ,**
ಮುತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

Wanted:- Candidates for Telegraph and Station Masters Classes. Full particulars and Railway Fare Certificate on 2 annas stamp Apply to.— Central Telegraph College, Nai Sarak, **Delhi.**

कारवारांत मुंबई!!!

अर्थात्

आमचा टोप्यांचा जंगी कारखाना!

आमच्या कारखान्यांत मखमल, बनात, फेर, वेलीच्यां, जरीच्या वगैरे हरएक तऱ्हेच्या साद्या अगर फॅशनेबल टोप्या तयार केल्याजातात

माल चोख— फॅशनेबल— स्वस्त— व भरपूर

ह्या शिवाय

आमच्या स्वंत हातमागांवरील नानातऱ्हेच्या डिझायनचीं रंगी-बेरंगी चादरें, फॅशनेबल बाथ टॉवेल, चौक, लहान--मोठे पंचे, सीडपाट, चीलपाट, शर्टिंग--कोटींग--वगैरे मालाचा भरपूर पुरवठा नेहमी असतो.

ऑर्डर द्या व खात्री करून घ्या !

टीप:—आमच्या कोणत्याहि मालावर घाऊक व्यापाऱ्यांस भरपूर कमिशन दिलें जाईल.

पत्ता:— मेसर्स गोविंद माधव शेणवि, फोवकार अँड सन्स.
पोस्ट— मुंकेरि (कारवार.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ಬೇಕಾಗುವ ವಿವಿಧ ಚಿಲ್ಲರೆ ಸಾಮಾನುಗಳು,

ದೊರಗಾದ ಹಾಗು ಒಳ್ಳೆಗಾದ

ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ,

ಹತ್ತಿಯ ಹಾಗು ರೇಶಿಮೆಯ ಜಿಬಗಳೂ

ಜಂತಿಯ ಮೊಳೆಗಳೂ, ವಾರ್ಪಿಂಗಳೂ,

ಮಾರಿಕಾ ಕಾಗದಗಳೂ

ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ

ಬಹರ ಅಗ್ಗ

P. P. TRIVEDI & CO.,

BRUCE Street, Fort BOMBAY

ರೂ. ೩] ನನ್ನ ಶಾಸ್ತ್ರೀಯ ಮಾದರಿ [ರೂ. ೩

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನ ... ನನ್ನ ... ತೋರಿಸುವ ... ವನ್ನಿದೆ ... ಸೇವೆ ... ಮೆಗಳೂ ಅದರಲ್ಲಿ ... ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ... ಬೇಕೆಂಬ ... ನಮ್ಮ ... ಮಾತ್ರಕ್ಕೆ ... ನಿಮಗೆ ... ಸಮಯ ... ನ್ನು ಕಳೆದುಕೊಳ್ಳದೆ ... ಇನ್ನು ಈ ... ಬರೆಯಿರಿ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ ಬೆಂಗಳೂರ ಸಿಟಿ.

ಬಿ ... ಬಿಡುಗಡೆ ...

ಶ್ರೀಮತ್ ... ಪ್ರತಿ ...

ಶ್ರೀ ತುಳಸೀದಾಸ

ರಾಮಾಯಣ.

ಪಂಡಿತ ... ಅವರ ಪ್ರಸ್ತಾವನೆ ಸಹಿತ

ಕವಿಶ್ರೇಷ್ಠನ ... ಗೂಢಾರ್ಥ ...

ಇತ್ಯಾದಿ ಸಹಿತ

ಅನುವಾದಕ — ಶ್ರೀ ದ ಕೃ ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ಛಾಪಾಗಿರುವ ಬಾಲಕಾಂಡದ ಬೆಲೆ ... ಪ್ರತಿ ರೂ ೨-೮-೦ ರಫ್ ಪ್ರತಿ ರೂ ೨-೦-೦ ಅಂಚೆ ವೆಚ್ಚ ೦-೮-೦ ಪ್ರತ್ಯೇಕ ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ, ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ,

(ಶಾ) ೧೩೪ ... ಬೀದಿ,

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದಲ್ಲದೆ ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲತೆ ಹೋಗಿ ಸಶಕ್ತವಾದ ನಪುಂಸಕತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ವೀರ್ಯವು ಬಂದಾಗುವದು — ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರು ದಿವಸದಲ್ಲಿಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುತದೆ. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು ಈ ಔಷಧಕ್ಕೆ ಪಥ್ಯ ವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ ಬೇಕಾದರೆ ಪರೀಕ್ಷಿಸ ಬೇಕೆ ... ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩-೦-೦ ನೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳ ಲಿಕ್ಕಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೩-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ. ನಿಪ್ಪಾಣಿ, ಜಿ. ಬೆಳಗಾಂವ

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ- ಕುಮಟಾ- ಹೊನ್ನಾವರ ಭಟ್ಕಳ- (೩, ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersapp Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತದೆ ಪ್ರಯಾಣಿಕರಿಗೆ ಊಳಕೊಳ್ಳು ವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಲಾಗಿದೆ. ಟಿಕೇಟಿನ ದರಪಟ್ಟಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.

PROPRIETOR.

೧೦೦೦ ರೂಪಾಯಿ ಇನಾಮು

ಬೆಳಗಾಂವಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪ್ರಮೇಹ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತೆಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲೆಯ ಒಂದು ವಡಿಯನ್ನು ತೆಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫ ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತೆಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಬೇಸಾಯಗಾರರೇ, ಮುಂಜಾಗ್ರತೆ ಪಡೆಯಿರಿ; ಆಲಸ್ಯವನ್ನು ತ್ಯಜಿಸಿರಿ.

ಪುಣೆಯಲ್ಲಿ ಭೂಮಿ ಸಂರಕ್ಷಿಸುವ ಮಂಡಳವೊಂದು ಸ್ಥಾಪಿಸಲ್ಪಟ್ಟಿದೆ. ಈ ಮಂಡಳವು ಹೊಲಗಳ ಸ್ವವರ್ಗೀಕರಣೆಯ ಕಾನೂನನ್ನು ಸೂಕ್ಷ್ಮವಾಗಿ ಪರಾಂಬರಿಸಿ, ಅದರಿಂದ ಹುಟ್ಟುವ ಸಂಕಟಗಳನ್ನು ವಿವರಿಸುತ್ತದೆ. ಸರಕಾರಿ ಆಲೋಚಕ ಮಂಡಳಿಯು ಮಾಡಿದ ತಿದ್ದುಪಾಟಗಳು ಈ ಪ್ರಕಟನೆಯಲ್ಲಿ ವಿಚಾರಿಸಲ್ಪಟ್ಟಿವೆ. ಅದರಿಂದ ಈ ಪ್ರಕಟಣೆಯೊಳಗಿನ ಆಕ್ಷೇಪಗಳು ತರ್ಕಶಾಸ್ತ್ರಶುದ್ಧವಿವೆ ಅವು ಯಾವವೆಂದರೆ —

(೧) ಮೊಟ್ಟಮೊದಲು ಚದರಿಬಿದ್ದ ಹೊಲದ ನಾಮನಿರ್ದೇಶವಿಲ್ಲ. ಹೊಲದ ತುಂಡಿನ ಪ್ರಮಾಣವನ್ನು ನಿಶ್ಚಯಿಸುವ ಅಧಿಕಾರವು ಮಂಡಳಕ್ಕೆ ಕೊಡಲ್ಪಟ್ಟಿದೆ, ಈ ಮಂಡಳದಲ್ಲಿ ೯ ಮಂದಿ ಸಭಾಸದರು ಡಿ| ಡೆ| ಕಲೆಕ್ಟರರು ಅಧ್ಯಕ್ಷರ, ತಾ| ಲೋ| ಬೋರ್ಡಿನ ಈರ್ವ ಸಭಾಸದರು; ಜಮೀನಿನ ಮಾಲೀಕರಲ್ಲಿ ಡಾ| ಲೋ| ಬೋರ್ಡಿನವರು ನೇಮಿಸಿದ ಇಬ್ಬ ಸಭಾಸದರು, ಬೇಸಾಯ ಖಾತೆಯ ಅಧಿಕಾರಿಗಳೊಬ್ಬರು ತಾಲೂಕಿನಿಂದ ಹಲ್ಲಾ ಬೋರ್ಡಿಗೆ ಕಳಿಸಿದ ಸಭಾಸದರಲ್ಲೊಬ್ಬರು; ಸರಕಾರವು ನೇಮಿಸಿದ ಕಾಯದೆ ಕೌನ್ಸಿಲಿನ ಸಭಾಸದರೊಬ್ಬರು, ಈ ಆ ಗುಂಡಿಗಳು ನೇಮಿಸಿಕೊಂಡ ಸೇವಕರೊಬ್ಬರ. ಹೀಗೆ ಘಟಿಸಿದ ಮಂಡಳವು ತಾಲೂಕಿನೊಳಗಿನ ಬೇಸಾಯದ ಚಿಕ್ಕ ಹೊಲದ ಕ್ಷೇತ್ರವನ್ನು ನಿಶ್ಚಯಿಸಬೇಕು. ಚಿಕ್ಕ ಹೊಲವೆಂದರೆ, ಭೂಮಿಯ ಜಾತಿ, ಪರಿಸ್ಥಿತಿ, ಗಾಳಿಯ ಮಾನ, ನೀರಿನ ಪೂರೈಕ, ಬೆಳೆ, ನೇಗಿಲು ಮುಂತಾದ ಬೇಸಾಯ ಸಾಹಿತ್ಯಗಳ ಅನುಕೂಲತೆ, ಗೊಬ್ಬರ ಸೊಪ್ಪು, ಬೀಜ, ಆಳುಗಳ ಖರ್ಚು, ಬೆಳೆಕಾವಲಿನ ಖರ್ಚು, ಬೆಳೆ ತಯಾರ ಮಾಡುವ ಖರ್ಚು ಬಂಡವಲಿನ ಅನುಕೂಲತೆ, ಮಾರಾಟದ ಅನುಕೂಲತೆ ಮುಂತಾದ ಸ್ಥೂಲ-ಸೂಕ್ಷ್ಮ ವ್ಯವಹಾರದ ತಂತುಗಳನ್ನು ವಿಚಾರಿಸಿ ಹೊಲದ ಪ್ರಮಾಣವನ್ನು ನಿಶ್ಚಯಿಸಬೇಕು. ಅದಕ್ಕಿಂತ ಕಡಿಮೆ ಪ್ರಮಾಣವಿದ್ದ ಹೊಲಗಳೆಲ್ಲ ಚಿಕ್ಕ ಹೊಲಗಳು. ಒಂದೊಂದು ತಾಲೂಕಿನಲ್ಲಿ ಒಂದೇ ಪರಿಸ್ಥಿತಿಯಿರುವದಿಲ್ಲ. ಒಂದೇ ಗ್ರಾಮದ ಭೂಮಿ ಸಹ ಭಿನ್ನ ಭಿನ್ನವಾಗಿರುತ್ತದೆ. ಎಕರೆ ೨ ಆಣೆಯ ತೀರ್ವೆ ಕಟ್ಟುವ ಭೂಮಿಯೂ ಉಂಟು, ೩ ರೂಪಾಯಿ ತೀರ್ವೆ ಕಟ್ಟುವ ಭೂಮಿಯೂ ಉಂಟು, ೮ ರೂಪಾಯಿ ತೀರ್ವೆ ಕಟ್ಟುವ ಭೂಮಿಯೂ ಉಂಟು. ಇಂಥ ಪ್ರಸಂಗದಲ್ಲಿ ಮೇಲ್ಕಂಡ ಮಂಡಳವು ಹೇಗೆ ವರ್ತಿಸತಕ್ಕದ್ದು? ಕಮಿಟಿಯು "ಚಿಕ್ಕ" ನಿಯಮಿಸು ಹೇಳಿಕೊಳ್ಳಬಹುದೆಂಬ ಏನಾದರೊಂದು ಪ್ರಮಾಣವನ್ನು ಠರಾಯಿಸಿ, ಸೂಕ್ಷ್ಮದಾಗ ಬಯಸಿದರೆ, ಪೇಟೆಯ ಆವರ ಅವಸ್ಥೆ ಹಾಗೆ ಮೋತಿಕೆಯದೆ ಇಂಥ ಕಠಿಣಪೂರ್ವಕವಾಗಿ ಕೆಲಸ ಮಾಡಬೇಕೆಂದಿದ್ದರೆ, ೧೦ ವರುಷ ದುಡಿದರೂ, ಆ ಕೆಲಸವೇನು ಆಗದು. ೨ ವರ್ಷಗಳಲ್ಲಿ ಕಮಿಟಿಯವರು ಈ ಕೆಲಸ ಮಾಡಿಸಿದ್ದರೆ, ಸರಕಾರವೇ ಪ್ರಮಾಣವನ್ನು ನಿಶ್ಚಯಿಸುವದು. ಕಮಿಟಿಯವರು ವಿಚಾರದಿಂದ ನಿಶ್ಚಯಿಸಿದ ಕ್ಷೇತ್ರ ಪ್ರಮಾಣವನ್ನಾದರೂ ಮನ್ನಿಸಲು ಸರಕಾರವು ಬದ್ಧವಿಲ್ಲ. ಅದರೊಳಗೆ ಬೇಕಾದ ತಿದ್ದುಪಾಟ ಮಾಡಲು ಸರಕಾರಕ್ಕೆ ಅಧಿಕಾರವಿದೆ. ಮಂಡಳವು ಹಿಂದು ನಿಮಿತ್ತ ಸರ್ವಸೂತ್ರ ಚಾಲಕತ್ವವು ಸರಕಾರದ್ದು.

(೨) ಒಮ್ಮೆ ಕ್ಷೇತ್ರ ನಿಶ್ಚಯವಾದ ಮೇಲೆ ಅದಕ್ಕಿಂತ ಕಡಿಮೆಯಿರುವ ಭೂಮಿಯಲ್ಲಿ ಚಿಕ್ಕ ಹೊಲಗಳ ಪಟದಲ್ಲಿ ದಾಖಲಾಗುವದು. ದಾಖಲಾದ ತಾರೀಖಿನಿಂದ ಈ ಹೊಲಗಳ ಭವಿತವ್ಯವೆಲ್ಲ ಈ ಕಾಯಿದೆಯ ಅಧೀನವಾಯಿತು. ದಾಖಲ ಮಾಡಿದ ಹಕೀಕತ್ತು ಮಾಲೀಕರಿಗೆ ತಿಳಿಸುವದು ೨ ತಿಂಗಳ ಮೇಲೆ. ಈ ನೋಟೀಸುಗಳು ಮನೆಗೆ ಅಂಟಿಸಿದರೂ, ಗಿಡಕ್ಕೆ ಅಂಟಿಸಿದರೂ ಆಗುತ್ತದಂತೆ! ಅಂದರೆ, ನೋಟೀಸು ಪ್ರತ್ಯಕ್ಷ ಜಾರಿ ಮಾಡದೆ ಬೇಕಾದ ಕುಯುಕ್ತಿ ಮಾಡಲು ಬೇಕಷ್ಟು ಆಸ್ಪದವಿದೆ. ಚಿಕ್ಕ ಹೊಲಗಳ ಪಟದಲ್ಲಿ ಹೊಲ ದಾಖಲಾದ ಸುದ್ದಿ ತಿಳಿಯಲು ನೋಟೀಸಿನ ಹೊರತು ಬೇರೆ ಮಾರ್ಗವಿಲ್ಲ. ಆದರೂ, ನೋಟೀಸು ಮುಟ್ಟದ ಮುಂದಿನ ಪರಾಧೀನತೆಗಳು ರವಾಗಿ ಇಷ್ಟಿನ ಗೋಳು. ನೆರೆಹೊರೆಯವರಿಗೆ ಚಿಕ್ಕ ಹೊಲದ ಶರ್ತುಗಳನ್ನು ತಿಳಿಸುವಂತೆ ಮಾಮಲೇದಾರರು ಜಾಹೀರ ನೋಟೀಸು ಹೊರಡಿಸತಕ್ಕದ್ದು. ನೋಟೀಸಿನಂತೆ ನೆರೆಹೊರೆಯವರಿಗೆ ಭೂಮಿ ಕೊಳ್ಳಬೇಕೆಂದಿದ್ದರೆ, ಅವರು ಮಾಮಲೇದಾರರ ಬಳಿ ಕ್ರಯದ ಹಣವನ್ನು ಠೇವಾಗಿ ಇಡತಕ್ಕದ್ದು. ಇದರಿಂದ ನೆರೆಹೊರೆಯವರಿಗೆ ಭೂಮಿ ಕೊಡಲು ಅಪೇಕ್ಷೆಯಿಲ್ಲ.

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ ನೀವು ದಿನಾ ಆ ಕಡೆ ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ, ಅವು ಒಣವಾಗಿ ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ್)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

——.೦·——

½ ಔಂಸಿಗೆ	ರೂ.	೨—೦—೦
¼ ಔಂಸಿಗೆ	,,	೧—೪—೦
೧ ಡ್ರಾಮಿಗೆ	,	೧—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಹಿಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ದಿದ್ದರೆ ಬುಧ್ಯಾ ಮಾರಾಟದ ಹಣವು ಉಬ್ಬಿ ತೋರಿಸಲಾಗುವದು. ಈ ಮೂಲಕ ಸ್ಟ್ಯಾಂಪು, ನೋಂದಣಿ ಫೀ, ಹೆಚ್ಚಾಗಿ ಸರಕಾರಕ್ಕೆ ಲಾಭವಾಗುವದು. ಸುಳ್ಳ ಪರಾಧೀನತೆಯು ಶರ್ತು ತೋರಿಸೋಣಾಗಿ ಮೋಸ ವ್ಯವಹಾರಗಳು ಉಂಟಾಗುವವು. ಸರಕಾರಿ ತ್ರಿಜೋರಿಯಲ್ಲಿ ರೇವಿನ ರಕಮು ನಿಬ್ಬಡ್ಡಿಯಿಂದ ಬೀಳುವದು. ರೇವು ಕಟ್ಟಿದವರಿಗೆ ಬಡ್ಡಿ ದಂಡ; ಹಣವಿದ್ದ ಸಾವುಕಾರರಿಗೆ ಮಾತ್ರ ಈ ಕಲಮಿನಿಂದ ಅನುಕೂಲತೆ. ಹಕ್ಕದಾರರಾದ ನೆರೆಹೊರೆಯವರಿಗೆ ಚಿಕ್ಕ ಹೊಲ ಕೊಡದೆ ಬೇರೆಯವರಿಗೆ ಕೊಟ್ಟರೆ ದಾವೆಗಳೇಳುವವು. ಈ ಕಷ್ಟದಲ್ಲಿ ಸಿಲುಕಿಕೊಳ್ಳುವವರು ತೀರ ಅವರೂ ಅದರಿಂದ ನೆರೆಹೊರೆಯವನು ಕೇಳಿದಷ್ಟಕ್ಕೆ ಚಿಕ್ಕ ಹೊಲ ಮಾರುವ ಪ್ರಸಂಗ ಬರುತ್ತದೆ. ಚಿಕ್ಕ ಹೊಲಗಳನ್ನು ಪರಾಧೀನತೆ ಮಾಡುವಾಗ ಆ ಪರಾಧೀನತೆಯಿಂದ ಮೇಲ್ಕಂಡ ಮಂಡಳವು ಅಥವಾ ಸರಕಾರವು ತೀರ್ಮಾನಿಸಿದ ಕ್ಷೇತ್ರದಷ್ಟು ಹೊಲವಾಗುವಂತೆ ಪರಾಧೀನ ಮಾಡುವದು ಬರುತ್ತದೆ. ಈ ಕಲಮಿನಿಂದ ಬಡಬಗ್ಗರಿಗೆ ಅಗತ್ಯವಿದ್ದಷ್ಟು ಭೂಮಿಯನ್ನು ಪರಾಧೀನ ಮಾಡಬರದೆ ಪೂರಾ ಹೊಲವನ್ನು ಪರಾಧೀನ ಮಾಡಬೇಕು. ಇದರಿಂದ ಬಡಬಗ್ಗರಿಗೊಂದು ದೊಡ್ಡ ಕಷ್ಟ.

(೩) ಹೊಸದಾಗಿ ಚಿಕ್ಕ ಹೊಲಗಳಾದರೆ, ಅವನ್ನು ಸಾಗುವಳಿ ಮಾಡಲಿಕ್ಕೂ ಪ್ರತಿಬಂಧವಿದೆ. ನೆರೆಹೊರೆಯವರಿಗೇ ಸಾಗುವಳಿಗೆ ಕೊಡಬೇಕು. ನೆರೆಹೊರೆಯವರು ಸಾಗುವಳಿ ಮಾಡಲೇಬೇಕೆಂಬ ಪ್ರತಿಬಂಧವಿಲ್ಲ. ಅವರ ಮರ್ಜಿಯಿದ್ದರೆ ಅವರ ಸಾಗುವಳಿ ಮಾಡುವರು, ನೆರೆಹೊರೆಯವನು ಒಲ್ಲೆವೆಂದರೆ(?) ಆ ಚಿಕ್ಕ ಹೊಲ ಬಂಜರು ಬೀಳುವದೇ.

(೪) ೫ ವರ್ಷಗಳ ತನಕ ಮುದ್ದತ್ತ ಗೇಣಿಯಿಂದ ಹಳೇ ಚಿಕ್ಕ ಹೊಲಗಳನ್ನು ಯಜಮಾನರು(?) ಗೇಣಿಗೆ ಕೊಡಬಹುದು. ಅದಕ್ಕೂ ಮಿಕ್ಕಿ ನೆರೆಹೊರೆಯವರಿಗೇ ಕೊಡಬೇಕು. ನೆರೆಹೊರೆಯವರ ಒಲ್ಲೆವಿದ್ದರೆ(?) ಕೊಳ್ಳಲೇಬೇಕೆಂದು ಒತ್ತಾಯವಿಲ್ಲ. ವರ್ಷದ ಒಳಗಿನ ಗೇಣಿಯ ಕರಾರಿನಂತೆ ನೆರೆಹೊರೆಯವನು ಒಪ್ಪಿದರೆ ಭೂಮಿಯನ್ನು ಬೇರೆಯವರಿಗೆ ಕೊಡತಕ್ಕದ್ದು(?), ನೆರೆಹೊರೆಯವನಿಗೇ ಕೊಡಬೇಕು. ಇಲ್ಲಿ ಕುಯುಕ್ತಿಗೆ ಬೇಕಷ್ಟು ಇಂಬು. ನೆರೆಹೊರೆಯವನಿಗೆ ಕೊಡುವ ಮನಸ್ಸಿಲ್ಲದವರು ಗೇಣಿಯ ರಕಮನ್ನು ಉಬ್ಬಿಸೇರುವರು, ಬಿಗಿ ಬಿಗಿ ಶರ್ತುಗಳನ್ನು ಹಾಕುವರು. ಮುಷ್ಟು ವಿವಾದದಲ್ಲಿ ತಮಗೇ ಸ್ಥಿರಪಡಿಸಿಕೊಳ್ಳುವರು. ಇದರಿಂದ ರಕ್ಕಮ(?) ಸಾವುಕಾರರಿಗೂ, ವಂಚಕರಿಗೂ ಬಹಳ ಅನುಕೂಲ. ಇಂಥ ಶರ್ತುಗಳು ನೆರೆಹೊರೆಯವರಿಗೆ ವಂಚಿಸುವ ಪ್ರಾರ್ಥನೆಯ(?) ಹೇಳಿಕೆಯ ಮೇಲೆ ನಂಬಿದವರು ಕೆಟ್ಟರು. ೫ ವರ್ಷಕ್ಕೆ ಮಿಕ್ಕಿ ಗೇಣಿಗೆ ಕೊಡಬರದ್ದರಿಂದ ಗೇಣಿಯ ಸಾಗುವಳಿಯು ಆಸಕ್ತಿಯಿಂದ ನಡೆಯಲಿಕ್ಕಿಲ್ಲ. ಶ್ರಮಕ್ಕೆ ಪ್ರತಿಫಲ ಬರುವಷ್ಟರಲ್ಲಿ ೫ ವರ್ಷದ ಮುದ್ದತ್ತು ಕಳೆದು ಹೋಗುತ್ತದೆ. ಹೊಸ ಚಿಕ್ಕ ಹೊಲಗಳನ್ನು ಸಾಗುವಳಿ ಮಾಡಲಿಕ್ಕೆ ನೆರೆಹೊರೆಯವನಿಗೆ ಒಬ್ಬನಿಗೇ ಅಧಿಕಾರವಿದೆ. ಹೀಗೆ ಚಿಕ್ಕ ಹೊಲಗಳ ಮಾಲೀಕರು ನೆರೆಹೊರೆಯವರ ಅಧೀನರಾಗುತ್ತಾರೆ.

(೫) ಈ ಸ್ಥಿತಿಯಲ್ಲಿ ಬೇಸಾಯಗಾರರು ಪಡತ್ತುಗೇಡಾಗುವರು(?). ಚಿಕ್ಕ ಚಿಕ್ಕ ಹೊಲಗಳ ಬೇಸಾಯಗಾರರ ಸಂಖ್ಯೆಯು ನಮ್ಮ ಕರ್ನಾಟಕ ಪ್ರಾಂತದಲ್ಲಿ ಶೇಕಡಾ ೫೦ರಷ್ಟು ಉಂಟು. ಶೇಕಡಾ ೩೭ರಷ್ಟು ೫ ಎಕ್ರೆ ಒಳಗಿನವರು, ಶೇಕಡಾ ೪೯ರಷ್ಟು ೫ ರಿಂದ ೨೫ ಎಕ್ರೆ ಒಳಗಿನವರು. ಅಂದರೆ, ಶೇಕಡಾ ೮೬ರಷ್ಟು ಬೇಸಾಯಗಾರರು ೨೫ ಎಕ್ರೆ ಒಳಗಿನ ಮಾಲೀಕರೆಂದು ತಿಳಿಯುವದು. ಇಂಥವರಿಗೆ ಈ ಕಾಯಿದೆಯ ಕಕ್ಷೆಯಲ್ಲಿ ಸೇರಿಸಿದರೆ, ಇವರ ಅವಸ್ಥೆಯನ್ನು ಕೇಳುವವರ್ಯಾರಿದ್ದಾರೆ? ಭೂಮಿಯನ್ನು ಕೊಳ್ಳುವಲ್ಲಿ ಪ್ರತಿಬಂಧವಿರುವ ಮೂಲಕ ದುಸ್ಥಿತಿಯ ಮಾಲು ಕಾಸಿಗೆ ಸೇರು(?) ಮಾರಿಶವಾಗಿ ಹೋಗುವದು. ಸಾವುಕಾರರು ಇದ್ದ ಭೂಮಿಯನ್ನೆಲ್ಲ ಬೇಸಾಯಗಾರರಿಂದ ಪಡಕೊಂಡು ಅವರಿಗೆ ಕೂಲಿಯವರು(?) ... ಪೂರಾ ರಕಮು ತೀರದೆ ಬೇಸಾಯಗಾರರು ಸಾಲದಲ್ಲಿ ಮರಳಬೇಕಾಗುವದು. ಪರಸ್ಪರ ಸಹಕಾರ ಸಂಘಗಳಿದ್ದರೆ, ಆ ಸಂಘದ ಸಾಲಕ್ಕೆ ಗ್ರಾಮದ ಪೂರಾ ಆಸ್ತಿ ವಾರಿಶೋ(?) ವರೂ ಸಾಲ ತೀರದೆ, ಸಂಘವು ನಷ್ಟಪಡುವದು.

(೬) ಅವಿಭಕ್ತ ಕುಟುಂಬದಲ್ಲಿ ವಾಂಟಣೆ ಮಾಡುವಾಗ, ಕಲೆಕ್ಟರರು ಚಿಕ್ಕ ಹೊಲ ಭಾಗವಾಗದಂತೆ(?) ಜಾಗ್ರತೆ ತೊಗೊಳ್ಳಬೇಕೆಂದು ವಿಧಿಸಲಾಗಿದೆ. ಚಿಕ್ಕ ಹೊಲಗಳಾಗದಂತೆ ಹಿಸ್ಸೆದಾರರ ಕಡೆಯಿಂದ ಹಣ ತುಂಬಿಸಬೇಕಾಗಿ ವಿಧಿಸಲಾಗಿದೆ. ಭೂಮಿಯ ಬೆಲೆ ನಿರ್ಣಯಿಸುವ ಕೆಲಸವು ಕಲೆಕ್ಟರರದು, ಆದರೆ ಮಾಮಲೇದಾರರದು(?). ಅಂದರೆ, ಗ್ರಾಮದ ಪಟೇಲ-ಕುಲಕರ್ಣಿಗಳದು(?). ಇಂಥ ಸ್ಥಿತಿಯಲ್ಲಿ ಪಕ್ಷದ(?) ... ಹಣ ... ಭೂಮಿಯನ್ನು ಕಳಕೊಂಡು ನಿರಾಧಾರಿಗಳಾಗುವರು.

ಗ್ರಾಮದ ಪುನಸ್ಸೃಷ್ಟಿಯ ಕಲಮುಗಳ ವಿಚಾರ.

(೭) ಏಕೀಕರಣದ ಭಾಗದಲ್ಲಿ ಬೇಸಾಯಗಾರರ ಕೊಲೆಯಾಗಿದೆ. ಗ್ರಾಮದ ಪುನರ್ಘಟನೆಯಾಗುವ ಪ್ರಸಂಗದಲ್ಲಿ ಗ್ರಾಮದ ಎಲ್ಲ ಖಾತೆದಾರರಿಗೆ ಅವರವರ ಖಾತೆಯೊಳಗಿರುವ ಪೂರ್ಣ ಭೂಮಿಯನ್ನು ಒಂದೇ ಕಡೆಯಲ್ಲಿ ಹಂಚಿ ಕೊಡಬೇಕೆಂದು ವಿಧಿಸಲಾಗಿದೆ. ಈ ವಿಚಾರದಿಂದ ಚಿಕ್ಕ ಹೊಲಗಳ ಮಾಲೀಕರಿಗೆ ಸಹ ಪುನಸ್ಸೃಷ್ಟಿಯಲ್ಲಿ ಭೂಮಿ ಸಿಗುವದು, ಆದರೆ, ಆ ಚಿಕ್ಕ ಹೊಲಗಳು ಹಳೇ ಚಿಕ್ಕ ಹೊಲಗಳ ಸದರಿನಲ್ಲಿ ನೋಂದವಾಗದೆ, ಹೊಸ ಚಿಕ್ಕ ಹೊಲಗಳ ಸದರಿನಲ್ಲಿ ನೋಂದವಾಗುವವು. ಮೊದಲಿನ ಭಾಗದಂತೆ ಹೊಸ ಚಿಕ್ಕ ಹೊಲವನ್ನು ಪರಾಧೀನ ಮಾಡಲಿಕ್ಕಾಗಲೀ, ಸಾಗುವಳಿ ಮಾಡಲಿಕ್ಕಾಗಲೀ ಮಾಲೀಕರಿಗೆ ಸಿಗದು. ಭೂಮಿ ಚದರಿದ್ದಾಗ(?) ಹಳೇ ಚಿಕ್ಕ ಹೊಲವಿತ್ತು. ಅದರಿಂದ ಸಾಗುವಳಿ ಮಾಡಲಿಕ್ಕೂ ೫ ವರ್ಷಗಳ ಮುದ್ದತಿನ ಒಳಗೆ ಗೇಣಿಗೆ ಕೊಡಲಿಕ್ಕೂ ಇಂಬಿತ್ತು. ಹೊಸ ಸೃಷ್ಟಿಯಲ್ಲಿ ಚಿಕ್ಕ ಹೊಲಗಳು ಒಕ್ಕಟ್ಟಾಗಿ ಈ ಕಾಯಿದೆಯ ಪ್ರಮಾಣದಷ್ಟು ಹೊಲವಾಗದೆ ಚಿಕ್ಕ ಹೊಲವಾಗುವ ಪ್ರಸಕ್ತಿಯಲ್ಲಿ ಒಕ್ಕಟ್ಟಾಗಿಯೂ ಒಡೆಯರಿಗೆ ಲಾಭವಿಲ್ಲ; ಮುಂಚಿನ ಅನುಕೂಲತೆಗಳೂ ನಷ್ಟ.

(೮) ಮುಂಚಿನ ಭೂಮಿಯು ಪುನಸ್ಸೃಷ್ಟಿಯಲ್ಲಿ ಸಿಗುವದೆಂದೂ ನಂಬಿಗೆಯಿಲ್ಲ. ಅದರಿಂದ ಏಕೀಕರಣದ ಯೋಜನೆಯಾದಂದಿನಿಂದ ಭೂಮಿಗಳನ್ನು ಹಂಚುವವರೆಗೆ ಭೂಮಿಗಳ ಸಾಗುವಳಿಯು ಆಸಕ್ತಿಯಿಂದ ನಡೆಯಲಿಕ್ಕಿಲ್ಲ; ಭೂಮಿ ನಿಸ್ಸಾರವಾಗುವದು. ಎಲ್ಲ ಭೂಮಿಯು ಲೆಂಡ ಎಕ್ವಿಝಿಶನ್ ಕಾನೂನಿನಂತೆ ಸರಕಾರದ್ದಾಗಿ ಹಿಂದಿನ ಹಕ್ಕುಗಳೆಲ್ಲ ರದ್ದಾಗಿ ಭೂಮಿಯು ಸರಕಾರದಿಂದ ಬೇಸಾಯಗಾರರಿಗೆ ಕೊಡಲ್ಪಡುವದು. ಅಂದರೆ, ಭೂಮಿಯ ಮಾಲ್ಕಿಯೆಲ್ಲ ಸರಕಾರದ್ದಾಗುವದು. ಭೂಮಿ ಪಡೆಯುವವರೆಲ್ಲ ಸರಕಾರದ ಒಳಗಿನ ಒಕ್ಕಲಾಗಿ ಪರಿಣಮಿಸುವರು.

(೯) ಕಲೆಕ್ಟರರು ಗ್ರಾಮದ ಪುನರ್ಘಟನೆಯ ಚಾಲಕರು. ಇವರೇ ಈ ಪ್ರಯೋಗವನ್ನು ಪ್ರಾರಂಭಿಸುವರು. ಭೂಮಿಯ ಖಾತೆದಾರರಿಗೆಲ್ಲ ನೋಟೀಸುಗಳು ಹೊರಡಿಸಲ್ಪಡುವವು. ಖಾತೆದಾರರು ಉತ್ತರ ಕೊಡದಿದ್ದರೆ, ಅವರ ಸಮ್ಮತಿಯಿರುವದೆಂದು ಗ್ರಹಿಸಲಾಗುವದು. ಅಜ್ಞಾನ, ಅಜಾಗ್ರತೆಗಳು ದೇಶದಲ್ಲಿ ಮನೆಮಾಡಿಕೊಂಡಿರುವಾಗ, ಪುನರ್ಘಟನೆಯ ಯೋಜನೆಗೆ ಕಲೆಕ್ಟರರು ಮನಸ್ಸು ಮಾಡುವಷ್ಟರಲ್ಲಿಯೇ ಯೋಜನೆಗೆ ಮನ್ನಣೆ ಸಿಗುವದು. ಕಾರಣವಿದೆ. ಖಾತೆದಾರರು ಆಕ್ಷೇಪ ಮಾಡದೆ ಸುಮ್ಮನೆ ಕುಳಿತರೆ, ಅವರ ಸಮ್ಮತಿಯಿರುವದಾಗಿ ಗ್ರಹಿಸಬೇಕೆಂದು ಕಾಯಿದೆ ಕಲಮು ಹೇಳುತ್ತದೆ. ಹೀಗೆ ಇರಲ್ಲಿ(?) ಖಾತೆದಾರರ ಸಮ್ಮತಿ ಸಿಕ್ಕಿದ ಕೂಡಲೆ ಕೊನ್ಸೊಲಿಡೇಶನ್ ಆಫೀಸರರು ನೇಮಿಸಲ್ಪಡುವರು. ಅವರು ಗ್ರಾಮದ ನಕಾಶೆ, ಭೂಮಿಯ ಸ್ಥಿತಿಗತಿ, ಭೂಮಿಯ ಮೇಲಿನ ಜವಾಬದಾರಿ, ಅವುಗಳ ಬೆಲೆ, ಪುನರ್ಘಟನೆಯ ಮೇಲೆ ಒದಗಬಹುದಾದ ಭೂಮಿಯ ಬೆಲೆ ಮುಂತಾದವುಗಳನ್ನು ತಯಾರಿಸುವದು. ಅದರ ಮೇಲೆ ತಕರಾರು, ಅವುಗಳ ವಿಚಾರ, ಅವುಗಳ ಇತ್ಯರ್ಥ ಇವೆಲ್ಲ ಸಂಭ್ರಮವಾಗಲಿಕ್ಕೆ ೧೦ ವರ್ಷಗಳಾದರೂ ಬೇಕು. ಕಾಯಿದೆಯಂತೆ ಎಲ್ಲವೂ ಸುಸೂತ್ರವಾಗಿ ನಡೆದರೆ, ನೇಮಿಸಿದ ವಾಯಿದೆಗೆ ನೇಮಿಸಿದ ಕೆಲಸವಾದರೆ ೩ ವರ್ಷಗಳಾದರೂ ತಗಲುವವು. ಇಷ್ಟು ಅವಧಿಯು ಕಾಯಿದೆಯಲ್ಲಿಯೇ ಕೊಡಲ್ಪಟ್ಟಿದೆ. ಈ ಅವಧಿಯಲ್ಲಿ ಭೂಮಿಯ ಸಾಗುವಳಿಯು ಆಸಕ್ತಿಯಿಂದ ನಡೆಯದ್ದರಿಂದ ಬೇಸಾಯಗಾರರಿಗೆ ನಷ್ಟ; ಭೂಮಿಗೂ ನಷ್ಟ. ಕಾರಣಗಳು ಮೇಲೆ ೮ನೇ ಕಲಮಿನಲ್ಲಿ ನಮೂದಿಸಲಾಗಿವೆ.

(೧೦) ಕೊನ್ಸೊಲಿಡೇಶನ್ ಆಫೀಸರರ ಗಣಿತ ಕ್ರಮವನ್ನು ಸ್ವಲ್ಪ ವಿಸ್ತಾರದಿಂದ ವಿಚಾರಿಸಬಹುದು. ೪ನೇ ಕಲಮಿನಂತೆ ಭೂಮಿಯ ಮಾರಾಟದ ಕ್ರಯ, ಭೂಮಿ ಇದ್ದಲ್ಲಿದ್ದ ಗಿಡಮರ-ಕಟ್ಟಡಗಳ(?) ಕ್ರಯ, ಭೂಮಿಯನ್ನು ಹಂಚುವದರಿಂದ ಒದಗುವ ನಷ್ಟ, ಅಡವುದಾರರ ರಕಮು, ಗೇಣಿದಾರರಿಗೆ ಅವರ ಹಕ್ಕಿನ ರದ್ದಾಯಿತಿಯಿಂದ ಒದಗುವ ನಷ್ಟ, ಹೀಗೆ ಮುಂಚೆ ವಿಚಾರ ಮಾಡಿ ಬೆಲೆಯನ್ನು ಠರಾಯಿಸಿ ಪುನರ್ಘಟನೆಯನ್ನು ಆಲೋಚಿಸತಕ್ಕದ್ದು. ಪುನಸ್ಸೃಷ್ಟಿಯಲ್ಲಿ ಹೊಸ ಚಿಕ್ಕ ಹೊಲಗಳ ಅವತಾರವಾಗುವದರಿಂದ ಅವುಗಳ ಬೆಲೆಯು ಹೊಸ ಸೃಷ್ಟಿಯಲ್ಲಿ ಬಹು ಮಟ್ಟಿಗೆ ಕುಗ್ಗುವದು. ಚಿಕ್ಕ ಚಿಕ್ಕ ಹೊಲಗಳ ಹಿಡಿಯುವ(?) ಸಂಖ್ಯೆಯೇ ಹೆಚ್ಚಿನದಿರುವದರಿಂದ ಹೊಸ ಸೃಷ್ಟಿಯಲ್ಲಿ ಗ್ರಾಮದ ಬೆಲೆ ಕುಗ್ಗುವದು. ಹೀಗೆ ಮುಂಚಿನ ಬೆಲೆ ಹಾಗು ಮುಂದಿನ ಬೆಲೆಗಳಲ್ಲಿರುವ ಅಂತರವನ್ನು ತುಂಬಿಕೊಡುವವರ್ಯಾರು? ಅಜಾಗ್ರತೆಯಿಂದ ವಿಸ್ತಾರವಾದ ಭೂಮಿ ನಷ್ಟವನ್ನು ತುಂಬಿಕೊಡುವವರ್ಯಾರು?

ಅವು ಮುಂತಾದ ಸಾಲಗರು ಕಾಲಾಂತರದಿಂದ ಪರಿಹಾರವಾಗುತ್ತಿದ್ದವು. ಅವುಗಳ ಬೆಳೆಯನ್ನು ಈಗ ಲೇ ತರ್ಕಾಸಿ ಅವನ್ನು ಹೊಸ ಕೃಷ್ಟಿಯಲ್ಲಿ ಖಾತೆದಾರರಿಂದ ವಸೂಲ ಮಾಡಹತ್ತಿದರೆ, ಗ್ರಾಮದೊಳಗಿನ ಸಾಲದ ಮಾನವು ಏರುವದು, ದೇಸಾಯಗಾರರು ಮೊದಲೇ ಸಾಲದಲ್ಲಿ ಸಂಪೂರ್ಣ ಮುಳುಗಿದ್ದಾರೆ, ಈ ಕಾನೂನಿನಿಂದ ಉಳಿಯಹೊಂದುವರು.

(೧೧) ಕೋರ್ಟ-ಕಚೇರಿಗಳಿಗೆ ಈ ಕಾನೂನಿನಿಂದ ಬೇಕಷ್ಟು ಕೆಲಸ ದೊರೆದೀತು; ಗ್ರಾಮಗಳೊಳಗಿನ ಕಿಡಿಗೇಡಿಗಳಿಗೆ ತುಂಬಾ ಉದ್ಯೋಗ ದೊರೆದೀತು. ನೆರೆಹೊರೆಯುವರ ಹಕ್ಕಿನ ಅಮಲಬಜಾವಣೆಯ ವಿಷಯ, ಗೇಣಿ ಕರಾರುಗಳ ವಿಷಯ ವ್ಯಾಜ್ಯಗಳೇಳಲು ಕಾಯಿದೆಯೊಳಗಿನ ಸಂದಿಗ್ಧ ಭಾಷೆಯು ಮೂಲಕ ಬೇಕಷ್ಟು ಅವಕಾಶವಿದೆ ಹ್ಯಾಕೋರ್ಟಿನ ಕನಕ ಬಡಿದಾಡಲಿಕ್ಕೂ ಮಾರ್ಗಗಳಿವೆ. ಉದಾಹರಣಾರ್ಥವಾಗಿ ಅನೇಕ ಕಲಮಿನೊಳಗಿನ ದಾವಾ ಹೇತುವಿನ ವಿಚಾರ ಮಾಡುವ. ಎಲ್ಲಿ ಆಸ್ತಿಯ ಪ್ರತ್ಯಕ್ಷ ಕಬ್ಜೆಯನ್ನು ಪರರು ಪಡೆಕೊಂಡ ಹೊರತು ನೆರೆಹೊರೆಯುವನು ಪರಾಧೀನತೆಯನ್ನು ರದ್ದುಪಡಿಸಲು ಹಕ್ಕುದಾರನಾಗ ಪದಿಲ್ಲ ಅಂದರೆ, ಕ್ರಯಕ್ಕೆ ಕೊಟ್ಟ ಅದೇ ಹೊಲವನ್ನು ಗೇಣಿಗೆ ಒಡೆಯನು ಪಡೆದರೆ, ಪ್ರತ್ಯಕ್ಷ ಕಬ್ಜೆಯು ಮೂಲ ಒಡೆಯನ ಹಸ್ತರ ಉಳಿದಂತಾಯಿತು. ದಾವೆ ಕಾರಣವು ಟಾಗುವದಿಲ್ಲ. ಇನ್ನೊಂದು ಪ್ರಕಾರದಿಂದ ನೆರೆಹೊರೆಯವನಿಗೆ ವ್ಯಾಜ್ಯಕ್ಕೆ ಕಳಿಸಬಹುದು. ೧ ಎಕ್ರೆ ಭೂಮಿಯನ್ನು ಮಾರಾಟಕ್ಕೆ ಕೊಂಡು ಅದರೊಳಗಿನ ೧ಗುಂಟೆ ಭೂಮಿಯನ್ನು ಮೂಲ ಒಡೆಯನ ಕಬ್ಜೆಯಲ್ಲಿರಗೊಟ್ಟರೆ, ಎಲ್ಲ ಭೂಮಿಯು ಪರಸ್ವಾಧೀನವಾಗದ್ದರಿಂದ ನೆರೆಹೊರೆಯುವನ ದಾವೆಯು ಹ್ಯಾಕೋರ್ಟಿನ ತನಕ ಹೋಗಿ ಅರ್ಥವಾಗಬೇಕಾಗುವದು. ಗೇಣಿ ಕೂತಲು ಪ್ರತಿಬಂಧಗಳು ಕಾಯಿದೆಯಲ್ಲಿ ಹೇಳಲ್ಪಟ್ಟಿವೆ. ಆದರೆ, ಹಾಲಿನ ಸಾಗುವಳಿಯ ವಿಚಾರವಿಲ್ಲ

ಕಾರಣ, ದೇಸಾಯಗಾರರೆಲ್ಲರೂ ವಿಚಾರಿಸಿ, ಈ ಕುರಿತು ಮುಂದಾಗಿ ಎಚ್ಚರಪಡತಕ್ಕದ್ದು.

ಲೆಂಡ ರೆವ್ಹಿನ್ಯೂ ಕೋಡಿನ ಹೊಸ ಕಲಮು.

ತೀರ್ವೆ ಪರಿಕೆಯ ಕುರಿತು ಲೆಂಡ ರೆವ್ಹಿನ್ಯೂ ಕೋಡಿನ ೧೧೭ನೇ ಕಲಮಿನಲ್ಲಿ ಉಲ್ಲೇಖಗಳಿವೆ. ಆ ಉಲ್ಲೇಖವು ಅಸ್ಪಷ್ಟವಿದ್ದದ್ದರಿಂದ ಅದನ್ನು ಸ್ಪಷ್ಟ ಮಾಡುವದಕ್ಕಾಗಿ ಇದೇ ಕೌನ್ಸಿಲಿನಲ್ಲಿ ಕಾಯಿದೆಸೊಂದು ಘಟನೆಯಾಗಲಿಕ್ಕಿದೆ. ಆ ಕಲಮಿನ ಅರ್ಥವನ್ನು ಸ್ಪಷ್ಟ ಮಾಡುವ ಆಲೋಚನೆಗಾಗಿ ಸರಕಾರವು ಒಂದು ಕಮಿಟಿಯನ್ನು ನೇಮಿಸಿತ್ತು. ಆ ಕಮಿಟಿಯವರು ವಿಚಾರ ಮಾಡಿ ಭೂಮಿಗಳ ಲಾಭದಲ್ಲಿ ಜಾಸ್ತಿ ಭಾಗಾಂಶವನ್ನು ಸರಕಾರವು ತೀರ್ವೆಯೆಂದು ಕೊಡುವಂತೆ ಕಾಯಿದೆಯಲ್ಲಿ ತಿದ್ದುಪಡಿಯಾಗಬೇಕಾಗಿ ಬಹುಮತದಿಂದ ಸೂಚಿಸಿದರು. ಗೇಣಿಯ ಮೊಬಲಗಿನ ಮೇಲಿಯೇ ತೀರ್ವೆ ಆಕರಿಸಬೇಕಾದರೆ, ಗೇಣಿಯ ಮೊಬಲಗಿನ ಚತುರ್ಥಾಂಶಕ್ಕೆ ತೀರ್ವೆ ಮಿಕ್ಕಲಾಗದು. ಆದರೆ, ಸರಕಾರವು ಈ ಶಿಫಾರಸನ್ನು ತಿರಸ್ಕರಿಸಿ ಸಾವುಕಾರರು ಒಕ್ಕಲುಗಳ ಕಡೆಯಿಂದ ಕೊಳ್ಳುವ ಗೇಣಿಯ ಆಧಾರವನ್ನು ತೀರ್ವೆಯನ್ನೇರಿಸಬಹುದೆಂಬ ಕಾಯಿದೆಯಾಗಲಿಕ್ಕಿದೆ. ಸರಕಾರಿ ಲೆಖ್ಖದ ಮೇಲಿಂದ ಗೇಣಿಗೆ ಕೊಟ್ಟ ಭೂಮಿಯು ಶೇಕಡಾ ೧೦ರಷ್ಟು ಇರುತ್ತದೆ. ಉಳಿದ ಭೂಮಿಯಲ್ಲಿ ಸ್ವಂತ ಸಾಗುವಳಿ ಮಾಡುವದೇ. ಗೇಣಿಗೆ ಪಡಕೊಳ್ಳುವ ಕಾರಣಗಳು ಬೇರೆ ಬೇರೆ ಇರುತ್ತವೆ. ಕೆಲವರು ಭೂಮಿಯನ್ನು ಪರಾಧೀನವಾದ ಮೊಬಲಗಿನ ಬಡ್ಡಿಯೆಂದು ಗೇಣಿಗೆ ಪಡೆಯುತ್ತಾರೆ. ಕೆಲ ಭೂಮಿಯು ಮೇಲಾಟದ ಮೂಲಕ, ಕೆಲ ಭೂಮಿಯು ಆಸ್ತಕೊಲ್ಲಗಳ ಮೂಲಕ ಹೆಚ್ಚಿನ ಗೇಣಿಗೆ ಹೋಗುತ್ತದೆ. ಇಂಥ ಅಪವಾದಾತ್ಮಕ ಸಂಗತಿಗಳನ್ನು ಗ್ರಾಮಗಳಿಗೆ ಸಾಮಾನ್ಯವಾಗಿ ಹಚ್ಚಿ ಗೇಣಿಯ ಅರ್ಧವನ್ನು ತೀರ್ವೆ ಏರಿಸುವದೆಂದರೆ ದೇಸಾಯಗಾರರಿಗೆ ಸುಲಿಯುವದೇ. ಕಲೆಕ್ಟರ-ಕಮಿಶನರರಂಥ ಅಧಿಕಾರಿಗಳು ಸಹ ಹೀಗೆ ತೀರ್ವೆಯನ್ನು ಅರ್ಧಕ್ಕೆ ಏರಿಸಬಾರದಾಗಿ ಅಭಿಪ್ರಾಯಪಟ್ಟಿದ್ದರು. ಗೇಣಿಯ ಮೇಲೆ ತೀರ್ವೆಯ ಆಧಾರ ಮಾಡುವದು ಸಹ ತಪ್ಪೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಕಾರಣ ಈ ಕಾಯಿದೆಯ ಬಗ್ಗೆ ದೇಸಾಯಗಾರರು ನಿಷೇಧಿಸತಕ್ಕದ್ದು

ನಿಷೇಧಕಾರಿಗೆ ಅನುಕೂಲವಾಗಬೇಕೆಂದು ಈ ಕೆಳಗೆ ನಿಷೇಧ ಪಡಾತುವ ನಮೂನೆ ಕೊಟ್ಟಿದೆ. ಅದನ್ನು ಕಾಗದದ ಮೇಲೆ ನಕಲು ಮಾಡಿ, ಸಹಿ ಮಾಡಿ ಅಧಿಕಾರಿಗಳ ಕಡೆಗೆ ಒಂದು ಪ್ರತಿ, ಹಾಗೂ ಇನ್ನೊಂದು ಪ್ರತಿಯನ್ನು ನಮ್ಮ ಕೌನ್ಸಿಲು ಪ್ರತಿನಿಧಿಗಳಾದ ಶ್ರೀ| ಕರ್ಕಿಯವರ ಕಡೆಗೆ ಕಳಿಸಬೇಕು

ಫಾರ್ಮಿನ ನಮೂನೆ.

ಮೆಹರಬಾನ ಮುಂಬಯಿ ಕಾಯಿದೆ ಕೌನ್ಸಿಲಿನ ಸೆಕ್ರೆಟರಿ, ಪ್ರತಿ ಇವರ ಸನ್ನಿಧಾನಕ್ಕೆ—

ಈ ಕೆಳಗೆ ಸಹಿ ಮಾಡಿದ ದೇಸಾಯಗಾರರು ದಿನ್ನೈಸಿಕೊಳ್ಳುವದೆ ನಂದರೆ.—

ಮುಂಬಯಿ ಕಾಯಿದೆ ಕೌನ್ಸಿಲಿನ ಸಿಲೆಕ್ಟ ಕಮಿಟಿ (ಆಲೋಚಕ ಮಂಡಳಿ) ಯು ತಿದ್ದುಪಡಿ ಮಾಡಿದ ಹೊಲಗಳ ಪುನರ್ಘಟನೆಯ ಕಾನೂನಿನಲ್ಲಿ ಚಿಕ್ಕ ಪುಟ್ಟ ಹೊಲಗಳಿದ್ದ ಬಡಬಗ್ಗ ದೇಸಾಯಗಾರರಿಗೆ ಸ ಮಸ್ತ ಪ್ರಕಾರಗಳಿಂದಲೂ ಕಷ್ಟಪಡಿಸುವ ಕಲಮುಗಳಿರುತವೆ. ಕಾಯಿದೆ ಕೌನ್ಸಿಲಿನಲ್ಲಿ ಮಂಡಿಸಲ್ಪಟ್ಟ ಕರಡಿನ ಎಲ್ಲ ಕಡೆಯಲ್ಲಿಯೂ ಈ ಕಾನೂನು ಒಮ್ಮೆಲೇ ಆಚಾರದಲ್ಲಿ ಬರಬೇಕೆಂದು ವಿಧಿಸಲಾಗಿದೆ. ಇಂಥ ಕಾನೂನಿನಿಂದ ನಮ್ಮ ಖಾಸ್ಗಿಯ ಚಿಕ್ಕ ಚಿಕ್ಕ ಹೊಲಗಳಿಗೆ ನಾವು ಪರಾಙ್ಮುಖರಾಗುವ ಹೊತ್ತು ಸಮೀಪಿಸುವ ಲಕ್ಷಣಗಳು ತೋರುತ್ತವೆ. ಆದರಿಂದ ಈ ಕಾಯಿದೆಯನ್ನು ಎಷ್ಟಕ್ಕೂ ಮನ್ನಿಸದಾರದಾಗಿ ಸರಕಾರಕ್ಕೂ, ಕಾಯಿದೆ ಕೌನ್ಸಿಲಿನ ಸಭಾಸದರಿಗೂ ಕಳವಳಗೊಂಡು ನಾವು ಪ್ರಾರ್ಥಿಸುತ್ತೇವೆ.

ಹಾಗೆಯೇ ತೀರ್ವೆಯನ್ನೇರಿಸುವ ಕಾನೂನಿನಿಂದ ಈಗಿನ ಉಪದ್ರವಕಾರಕ ಪದ್ಧತಿಯೇ ಶಾಶ್ವತವಾಗುವದರಿಂದ ಅಂಥ ಕಾಯಿದೆಯಾಗುವದು ಅನಿಷ್ಟವಿದೆ. ಆದರಿಂದ ಅದನ್ನೂ ತಿರಸ್ಕರಿಸಬೇಕಾಗಿ ನಾವು ಪ್ರಾರ್ಥಿಸುತ್ತೇವೆ.

ತಾ. – ೧೯೨೮ . (ಸಹಿಗಳು)

— ಬೇಸಾಯ ಕಮೀಶನಿನ ರಿಪೋರ್ಟು ಪ್ರಕಟವಾಗಿದೆ ಇದಕ್ಕೆ ೧೩ಲಕ್ಷ ರೂಪಾಯಿ ಖರ್ಚು ತಗಲೀತು ಎಂಬ ಸುದ್ದಿಯಿದೆ.

ಶ್ರೀ| ಕರ್ಕಿಯವರ ಕೈಫೀಯತು.

ಬಾರ್ದೋಲಿ ಸತ್ಯಾಗ್ರಹದ ಸಂಗ್ರಾಮದ ವಿಷಯಕ್ಕೆ ಕಳಕಳಿಪಡುವ ಜನರೊಳಗೆ ನಾನೊಬ್ಬನು. ಮುಂಬಯಿ ಕಾಯಿದೆ ಕೌನ್ಸಿಲದಲ್ಲಿ ಈ ವಿಷಯದ ಮೂಲಾಧಾರ ಪ್ರಶ್ನೆಯ ಚರ್ಚೆ ನಡೆದಾಗ ಅದನ್ನು ಎತ್ತಿಹಿಡಿದವರಲ್ಲಿ ನಾನೊಬ್ಬನು. ಕರ್ನಾಟಕ ಪ್ರಾಂತಿಕ ಪರಿಷತ್ತಿನಲ್ಲಿ ಚರ್ಚೆಗೆ ಬಂದ ಠರಾವುಗಳಲ್ಲಿ ಬಾರ್ದೋಲಿ ಸತ್ಯಾಗ್ರಹದ ವಿಷಯದ ಠರಾವನ್ನು ಸೂಚಿಸಿದವರಲ್ಲಿ ನಾನೊಬ್ಬನು. ಆದರೆ, ಅಜಾರಿ ಮೂಲಕ ಪರಿಷತ್ತಿಗೆ ಹೋಗಲಾಗಲಿಲ್ಲ. ಬಾರ್ದೋಲಿ ಸತ್ಯಾಗ್ರಹ ಚಳವಳದಲ್ಲಿ ಸರಕಾರದವರ ಕೃತ್ಯ ನಿಷೇಧಿಸಲು ಕೌನ್ಸಿಲ ಮೆಂಬರರು ರಾಜೀನಾಮೆ ಕೊಡಬೇಕೆಂಬ ಯೋಜನೆಯು ನನಗೆ ಸಂಪೂರ್ಣ ಸಮ್ಮತವಿರುವದು. ರಾಜೀನಾಮೆ ವಿಷಯಕ್ಕೆ ಕರ್ನಾಟಕ ಪ್ರಾಂತಿಕ ಕಾಮ್ರೆಸ್ಸಿನ ವಿಷಯನಿಯಾಮಕ ಕಮಿಟಿಯಲ್ಲಿ ಚರ್ಚೆ ನಡೆದು ಆ ಪ್ರಕಾರದ ವಿಷಯವನ್ನು ಲೋಕದ ಪಡಿಸಿದ ಸಂಗತಿ ನನಗೆ ವಿಶ್ವಸನೀಯವಾದ ದ್ವಾರದಿಂದ ತಿಳಿದು ಬಂದದರಿಂದ ಕರ್ನಾಟಕವು ಆ ಬಗ್ಗೆ ಅಷ್ಟು ಖಂಡಿತವಾದ ನಿರ್ಣಯ ಮಾಡಲಿಕ್ಕೆ ಇಚ್ಛಿಸಲಿಲ್ಲೆಂದು ತಿಳಿದು ರಾಜೀನಾಮೆ ಕೊಡಬೇಕೆಂತ ಮಾಡಿದ ನನ್ನ ದೃಢ ಸಂಕಲ್ಪವು ಶಿಥಿಲವಾಯಿತು. ಇದಲ್ಲದೆ ತಿಲಕ ಆಗುವ ಚುನಾವಣೆಯಲ್ಲಿ ಪ್ರತಿಸ್ಪರ್ಧಿಗಳ್ಯಾರಾದರೂ ಬಂದರೆ ಕಾನಡಾ ಜಿಲ್ಹೆಯಲ್ಲಿ ಬಾರ್ದೋಲಿ ವಿಷಯಕ್ಕೆ ಏಕಮುಖವಿದ್ದದಂತಾಗಿ ಬಾರ್ದೋಲಿ ಕಾರಣಕ್ಕೆ ಹಾನಿ ಸಂಭವಿಸೀತೆಂತಾ ವಿಚಾರಿ ಸ್ನೇಹಿತರಲ್ಲಿ ಕೆಲವರು ಅಭಿಪ್ರಾಯಪಟ್ಟರು. ಇದು ನನಗೂ ಒಪ್ಪಿತು. ಆದ್ದರಿಂದ ರಾಜೀನಾಮೆ ವಿಷಯಕ್ಕೆ ಅನುಮಾನಿಸಿದೆನು. ನನ್ನ ಅನುಮಾನವನ್ನು ದೇಶಭಕ್ತ ಗ ಗ ಧರರಾವ ದೇಶಪಾಂಡೆಯವರಿಗೂ ಕೊಡಿ ತಿಳಿಸಿದ್ದಕ್ಕೆ ಅವರು ಕೆಲ ಕಾಲ ತಡೆಯಬೇಕಾಗಿ ಬರೆದಿರುವರು. ಶಿವ್ಹಾಪೂರ ತಾಲೂಕಾ ಕಾಂಗ್ರೆಸ್ ಕಮಿಟಿಯವರು ಇದೇ ತಿಂಗಳ ತಾ. ೨೫ಕ್ಕೆ ನಾನು ರಾಜೀನಾಮೆ ಕೊಡಬೇಕಾಗಿ ತಾರು ಕೊಟ್ಟರು. ನಾನು ಅಂದೇ ನನ್ನ ಅನುಮಾನವನ್ನು ತಿಳಿಸಿ ನನಗೆ ಖಂಡಿತ ಉತ್ತರ ಕೊಡಬೇಕಾಗಿ ತಾರು ಕೊಟ್ಟೆನು. ಅದಕ್ಕೆ ಇನ್ನೂ ಉತ್ತರವಿಲ್ಲ. ಬಾರ್ದೋಲಿಯಲ್ಲಿ ಸರಕಾರದವರು ನಡಿಸಿದ ದಬ್ಬಾಳಿಕೆಯ ಧೋರಣ ನಿಷೇಧಿಸಿ ನನ್ನ ಅಂದೋಲನ ಮುಂಬಯಿ ದೈನಿಕ ಪತ್ರಗಳಿಗೆ ತಿಳಿಸಿರುವೆನು. ಬಾರ್ದೋಲಿ ಪ್ರಶ್ನೆಯ ವಿಷಯಕ್ಕೆ ಸರಕಾರದವರು ರಾಜಿ ಮಾಡಿಕೊಳ್ಳುವ ಪ್ರಸ್ತಾವನೆತ್ತಿರುವ ಸಂಗತಿ ತಿಳಿದುಬರುತ್ತದೆ. ರಾಜಿ ಮಾಡಿಕೊಳ್ಳದೆ ಸರಕಾರದವರು ರೈತರನ್ನು ಹತ್ತಿ ಹಣ್ಣು ಮಾಡುವ ಯೋಜನೆಯನ್ನೇ ಮುಂದರಿಸುವ ಡೌಲು ತೋರಿಸಿದರೆ ಅವರ ಕೃತ್ಯ ನಿಷೇಧ ಪಡಿಸಲು ರಾಜೀನಾಮೆ ಕೊಡಲು ಸಿದ್ಧನಾಗಿರುವೆನು. ಪ್ರಮುಖ ಮತದಾರರು ಈ ವಿಷಯಕ್ಕೆ ಇನ್ನೂ ಪ್ರೋತ್ಸಾಹ ಕೊಡದಿರುವದನ್ನು ನಮೂದಿಸಲು ವ್ಯಸನವಾಗುತ್ತದೆ.

ತಾ ೨೧-೭-೨೮ **M. D. Karki.**

[*.* ಶ್ರೀ| ಕರ್ಕಿಯವರು ಕೊಟ್ಟ ಕೈಫೀಯತನ್ನು ಮೇಲೆ ಪ್ರಕಟಿಸಿರುವೆವು. ಇದರ ಮೇಲಿಂದ ಶ್ರೀ| ಕರ್ಕಿಯವರು ಬಾರ್ದೋಲಿಯೊಳಗಣ ದುರಾಚಾರಗಳಿಗೆ ಹೇಸಿದ್ದಾರೆಂದು ಸ್ಪಷ್ಟವಾಗುತ್ತದೆ. ರಾಜೀನಾ

ಮೆ ಕೊಡಲು ಅವರು ಸಿದ್ಧರಿದ್ದಾರೆಂಬ ತಿಳಿ[illegible]ನ ನಮಗೆ ಸಂತೋಷವಾಗುತ್ತದೆ. ರಾಷ್ಟ್ರೀಯ ಧೋರಣೆಯನ್ನು ಶ್ರೀ॥ ಕರ್ಕೀಯವರು ಯಾವಾಗಲೂ ಬಿಡದೇ ಹಿಡಿದಿದ್ದವರಿಂದ ನಮಗೆ ಈ ಕುರಿತು ಸಂಶಯ ಇಲ್ಲ. ಸುಮ್ಮಗಿದ್ದದರಿಂದ ಅನುಮಾನಕ್ಕೆ ಕಾರಣವಾಯಿತು. ಕೊನೆಗೆ ಶ್ರೀ॥ ಕರ್ಕೀಯವರು ಸಮೂಹಿಸಿದ ಉದ್ಗಾರವನ್ನು ಮುಕ್ತಮನದ ಪ್ರಮುಖರು ಅದರಾಗಿ ವಿಚಾರಿಸಿ ತಮ್ಮ ಅಭಿಪ್ರಾಯವನ್ನೂ ತಿಳಿಸಿ [illegible] ನಾಮಣೆಯಾಗುವ ಪ್ರಸಂಗದಲ್ಲಿ ಎಲ್ಲರ ಬೆಂಬಲವನ್ನೂ ಬರೆದು ತಿಳಿಸಬೇಕಾಗಿ ವಿನಂತಿಯಿದೆ. ಸದಾ ದರೇ ಶ್ರೀ॥ ಕರ್ಕೀಯವರಂಥ ಲೋಕಸೇವಕರ ಅಸ್ತಿತ್ವ ಸ್ತಾನವೊದು ಎಲ್ಲರೂ ತಿಳಿದ ವಿಷಯ. ಸಂ]

ಕಾನಡಾ ವೃತ್ತ.

ಶ್ರೀ ವಿಭವ ಸಂ॥ ಆಷಾಢ ಶು ೧೫ ನೆ ಸೋಮವಾರ

ಬೇಸಾಯಗಾರರ ಘಾತ.

ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಇದೇ ಬರುವ ಜುಲೈ ೨೩ನೇ ತಾರೀಖಿನಿಂದ ಪುಣೆಯೊಳಗಿನ ಸಭಾಮಂದಿರದಲ್ಲಿ ಪ್ರಾರಂಭವಾಗಲಿದೆ. ಅದರ ಮುಂದೆ ಸೇರಲಿಕ್ಕಿರುವ ಅನೇಕ ಹೊಲಗಳ ಪುನರ್ಘಟನೆಯ ಕಾನೂನಿನ ವಿಚಾರವಾಗುವದು. ಲೆಂಡ ರೆವ್ಹಿನ್ಯೂ ಕೋಡ ಕಾಯಿದೆಯ ದುರುಸ್ತಿಯು ವಿಚಾರವೂ ಈ ಕಾಲಕ್ಕೆ ನಡೆಯುವದು. ಈ ಎರಡೂ ಕಾನೂನುಗಳು ಬೇಸಾಯಗಾರರ ಘಾತ ಮಾಡುವಂಥವಿದ್ದಿವೆ. ಹೊಲಗಳ ಪುನರ್ಘಟನೆಯ ಕಾನೂನಿನ ವಿಷಯು ನಾವು ಟಿಪ್ಪಣಿಯನ್ನು ಈ ಹಿಂದೆ ಬರೆದಿದ್ದೇವೆ, ಸ್ಥೂಲ ಸ್ವರೂಪವನ್ನೂ ನಿವೇದಿಸಿದ್ದೇವೆ. ಈ ಕಾನೂನು ಆಲೋಚಕ ಮಂಡಳದಲ್ಲಿ ವಿಚಾರವಾಗಿ ತಿದ್ದುಪಡಿಯಾಗಿದೆ. ಆ ತಿದ್ದುಪಡಿಯು ಇನ್ನೂ ಜಾಹೀರಾಗುವದಿಲ್ಲ. ಆಲೋಚಕ ಮಂಡಳದ ರಿಪೋರ್ಟಾಗಿ ೨ ತಿಂಗಳಾಗಿಹೋಗುತ್ತ ಬಂದವು. ಲೋಕಕಲ್ಯಾಣದ ಯೋಜನೆಯು ಯಾಕೆ ಜಾಹೀರಾಗುವದಿಲ್ಲವೆಂದು ಎಲ್ಲರೂ ಆಲೋಚಿಸುತ್ತಿದ್ದಾರೆ. ಆ ರಿಪೋರ್ಟಿನಲ್ಲಿ ಬೇಸಾಯಗಾರರ ಕಲ್ಯಾಣವಿರುವದಿಲ್ಲವಾಗಿ ಬಳಸುದ್ದಿ. ಪುಣೆಯಲ್ಲಿ ಬೇಸಾಯಗಾರರ ಭೂಮಿ ಸಂರಕ್ಷಕ ಮಂಡಳವೊಂದು ಸ್ಥಾಪಿಸಲ್ಪಟ್ಟಿದೆ. ಈ ಸಂಸ್ಥೆಯ ವಿದ್ಯಮಾನ ಇನ್ನೊಂದು ಪಕ್ಷದಲ್ಲಿ ಬೇಸಾಯಗಾರರ ಮಹಾಸಭೆಯೊಂದೂ ಜರುಗಲಿಕ್ಕಿದೆ. ಶ್ರೀ॥ ವಿನಾಯಕ ಗಣೇಶ ತಿಶೀದವರು ಹೊಲಗಳ ಪುನರ್ಘಟನೆಯ ಕಾನೂನನ್ನು, ಆಲೋಚಕ ಮಂಡಳದ ಅಪ್ರಸಿದ್ಧವಾದ ತಿದ್ದುಪಾಟಗಳನ್ನೂ ವಿಚಾರಿಸಿ, ತಮ್ಮ ಸಂಸ್ಥೆಯ ವಿದ್ಯಮಾನ ಪ್ರಕಟಣೆಯನ್ನೊಂದು ಹೊರಡಿಸಿದ್ದಾರೆ. ಬಾರ್ದೋಲಿಯ ತೀರ್ವೆ ಏರಿಕೆಯ ಕ್ರಮದಲ್ಲಿ ಹೆಸರಿಗೆ ಬಂದ ಸೆಟ್ಲಮೆಂಟ ಕಮೀಶನರರಾದ ಮಿ॥ ಎಂಡರಸನ್‌ರವರಿಗೂ, ಶ್ರೀ॥ ತಿವೇಯವರಿಗೂ ಈ ಕಾನೂನಿನ ತರ್ಕಗಳು ನಡೆದಿವೆ. ಇಷ್ಟಾನಿಷ್ಟತೆಗಳ ಚರ್ಚೆಯಾಗುತ್ತಲಿದೆ. ಮಿ॥ ಎಂಡರಸನ್‌ರವರು ಬೇಸಾಯಗಾರರ ಕಲ್ಯಾಣದ ವೀಳ್ಯವನ್ನು ನಿರ್ಧರಿಸಿಕೊಂಡಿದ್ದಾರೆ. ಇದರ ಮೇಲಿಂದಲೇ ಈ ಕಾನೂನನ್ನು ಬೇಸಾಯಗಾರರು ಸಕಾಲದಲ್ಲಿ ನಿಷೇಧಿಸತಕ್ಕದ್ದು. ನಿಷೇಧಿಸದಿದ್ದರೆ, ಮುಂದೆ ನಿರ್ಧಾರಿಗಳಾಗಿ ಬಳಲುತ್ತಿರಬೇಕಾಗುವದು.

ಹೊಲಗಳ ಪುನರ್ಘಟನೆಯ ಕಾನೂನಿನ ಮುಖ್ಯಾಂಶಗಳನ್ನೂ, ಅವುಗಳಿಂದೊದಗುವ ಆಪತ್ತು-ವಿಪತ್ತುಗಳನ್ನೂ, ಲೆಂಡ ರೆವ್ಹಿನ್ಯೂ ಕಾಯಿದೆಯ ವಿವರವನ್ನೂ ನಾವು ಬೇರೊಂದೆಡೆ ಸಂಕ್ಷಿಪ್ತವಾಗಿಯೂ, ಸ್ಪಷ್ಟವಾಗಿಯೂ ಪ್ರಕಟಿಸಿರುವೆವು. ಅವುಗಳ ಮೇಲಿಂದ ಬೇಸಾಯಗಾರರ ಕಲ್ಯಾಣವನ್ನು ಸಂತತವಾಗಿ ಚಿಂತಿಸುತ್ತಿರುವ ಸರಕಾರವು ಘಟಿಸಲಿಕ್ಕಿದ್ದ ಕಾನೂನಿನ ಸ್ಥೂಲ ಸೂಕ್ಷ್ಮ ಅಚಾರಗಳು ಬೇಸಾಯಗಾರರಿಗೆ ಹೊಳೆಯುವ ಸ್ಥೂಲಮಾನದಿಂದ ಒಂದು ತಪ್ಪವನ್ನು ನಾವು ಕೇಳಬಹುದು. ಸರಕಾರವು ಬೇಸಾಯಗಾರರ ಕಲ್ಯಾಣವನ್ನು ಬಕಧ್ಯಾನದಂತೆ ವ್ಯಾಪಿಸುತ್ತ ಕೊನೆಗೆ ಬೇಸಾಯಗಾರರನ್ನೇ ನಿರ್ನಾಮ ಮಾಡಲು ಹೊಂಚುಹಾಕಿದೆ. ಭೂಮಿಯ ಮೇಲಿನ ಬೇಸಾಯಗಾರರ ಒಡೆತನವನ್ನು ನಷ್ಟಪಡಿಸಿ, ತಾನು ಒಡೆಯನಾಗುವ ಕಟ್ಟುನಿಟ್ಟಾಗಿದೆ. ಹಿಂದಿನ ಹಕ್ಕುಗಳನ್ನೆಲ್ಲ ಬೇಸಾಯಗಾರರ ಹಿತಕ್ಕಾಗಿ ರದ್ದುಮಾಡಿ ಹೊಸ ಹಕ್ಕಿನ ಹೊಸ ದಾಖಲೆಗಳು ಸರಕಾರದಿಂದಲೇ ಕೊಡಲ್ಪಡಲಾಗಿವೆ. ಅಂದರೆ, ಪೂರ್ವಪರಂಪರೆಗೆ ಬೇಸಾಯಗಾರರು ಚ್ಯುತರಾಗುತ್ತಾರೆ. ಸರಕಾರವು ಒಡೆತನವನ್ನು ವಹಿಸಿಕೊಂಡ ಬಳಿಕ ಪ್ರಜೆಗಳೆಲ್ಲರೂ ಒಕ್ಕಲುಗಳಾಗಿ ಬೇಡಿದಷ್ಟು ರಕಮನ್ನು ತೀರ್ವೆಯೆಂದು ತೆತ್ತರಾಯಿತು. ತೀರ್ವೆಯೆಂದರೆ, ಗೇಣಿ ಸರಕಾರಕ್ಕೆ ಕೊಡುವದು ರಾಜಾರ್ಥವಲ್ಲ, ಒಡೆತನದ ಆಂಶವಾಗುತ್ತದೆ. ಹೀಗೆ ಬಿಕ್ಕಲೇ ಸರಕಾರವು ಬೇಸಾಯಗಾರರ ಹಿತ ಸಾಧಿಸಬಂದು, ಬೇಸಾಯಗಾರರ ಘಾತ ಮಾಡಲುದ್ಯುಕ್ತವಾಗಿದೆ.

ಈ ಕಾನೂನಿನಿಂದ ಇನ್ನೊಂದು ಅನರ್ಥವು ಘಟಿಸುವದು. ಸಾಲದ ಮಾನವು ಅಪಾರವಾಗಿ ಏರುವದು. ಕಾಯಿದೆಯ ಅರ್ಥ ಮಾಡಲು ಹೇರಳ ದ್ರವ್ಯವ್ಯಯವಾಗುವದು. ಹಳ್ಳಿ ಹಳ್ಳಿಗಳೊಳಗಿನ ಕಾರ‍್ಕೂನ—ಪ್ಲೀಡರರಿಗೆ ಪ್ರಕಟ ದೊರಕಿ ಬೇಸಾಯಗಾರರು ಸುಲಿಯಲ್ಪಡುವರು. ನೆರೆಹೊರೆಯ ಭೂಮಿಗಳ ಒಡೆಯರೊಳಗೆ ಕಲಹಕಾರಣಗಳುಂಟಾಗಿ ದ್ವೇಷ ಮತ್ಸರ- ಅಸೂಯೆ ಮುಂತಾದವುಗಳು ಪ್ರಬಲವಾಗಿ ಗ್ರಾಮಗಳೊಳಗಿನ ಸಾಮಾನ್ಯ ವ್ಯಾವಹಾರಿಕ ವ್ಯವಹಾರವು ಕೆಟ್ಟಾಗಿ ಹೋಗುವದು. ಎಲ್ಲರೂ ಕೋರ್ಟು-ಕಚೇರಿಗಳಲ್ಲಿ ಚಿಕ್ಕ ಪುಟ್ಟ ನೆವಗಳ ಮೇಲೆ ಬಿದ್ದಾಡುತ್ತಿರಬೇಕಾಗುವದು. ಈ ಪುನರ್ಘಟನೆಯೊಳಗಿನ ಅಧಿಕಾರಿಗೂ, ಮಾಮಲೇದಾರ ಕಚೇರಿಯೊಳಗಿನ ಅಧಿಕಾರಿಗೂ ಗುಪ್ತ ಕಾರಸ್ಥಾನಗಳನ್ನು ರಚಿಸಲು ತುಂಬಾ ಅವಕಾಶವಿದ್ದದರಿಂದ ಬೇಸಾಯಗಾರರಿಗೆ ವಂಚನೆಯಾಗಲು ಬಲು ಅನುಕೂಲವಿದೆ. ಹೊಸ ಚಿಕ್ಕ ಹೊಲಗಳನ್ನು ಸಾಗುವಳಿ ಮಾಡಲು ಸಹ ಪ್ರತಿಬಂಧವಿರುವದರಿಂದಲೂ, ನೆರೆಹೊರೆಯವನು ಹೋಗುವಲ್ಲಿಗೆ ಕೊಳ್ಳಲೇಬೇಕೆಂಬ ಒತ್ತಾಯವಿರದ್ದರಿಂದಲೂ ಇಂಥ ಹೊಲಗಳು ಬಂಜರುಬಿದ್ದು ಬೇಸಾಯಗಾರರು ನಷ್ಟಕ್ಕೆ ಗುರಿಯಾಗುವರು. ಚಿಕ್ಕ ಪುಟ್ಟ ಹೊಲಗಳ ಪ್ರಮಾಣವು ವಿಶೇಷವಿದ್ದದರಿಂದ ಕೇಳತಾ ಇಂತಷ್ಟು ಭೂಮಿಯು ಬಂಜರು ಬೀಳಲು ಅಡ್ಡಿ ತೋರುವದಿಲ್ಲ. ಒಮ್ಮೆಲೇ ಈ ಪರಿಣಾಮವು ದೃಗ್ಗೋಚರವಾಗದ್ದರಿಂದಲೂ, ಕ್ರಮವಾಗಿ ಇಷ್ಟು ಭೂಮಿ ಬಂಜರು ಬೀಳಲು ಪ್ರತ್ಯವಾಯುವೇನೂ ಕಾಣುವದಿಲ್ಲ. ಪುನರ್ಘಟನೆಯ ಕಾನೂನಿನಿಂದ ಸರಕಾರವು ಯಾವಾಗಲೂ ಹುಳಿಯುತ್ತಿರುವ ಸಾವುಕಾರರಿಗೆ ಪ್ರಕಟ ದೊರಕಿ ಅವರ ಸ್ವಾಧೀನಕ್ಕೆ ಬೇಸಾಯಗಾರರು ಸರ್ವಸ್ವವನ್ನರ್ಪಿಸಿದರೂ ಮುಕ್ತರಾಗಲಾರರು. ಹೆಜ್ಜೆ—ಹೆಜ್ಜೆಗೂ, ಕಲವು-ಕಲವುಗಳಲ್ಲಿಯೂ ದ್ರವ್ಯಸಂಗ್ರಹ ಬೇಕಾದ್ದರಿಂದ ಪರಂಪರೆಯಿಂದ ಆಳಿ ಅನುಭವಿಸಿಬಂದ ಭೂಮಿ ತುಂಡನ್ನು ಯುಕ್ತಿ ಪ್ರಯುಕ್ತಿಯಿಂದ ಬದುಕಿಸಿಕೊಳ್ಳಲು ಬೇಸಾಯಗಾರರು ಸಾವುಕಾರರಿಗೆ ಶರಣು ಹೋಗಬೇಕಾಗುವದು. ಹೀಗೆ ಕೊಂಡ ಸಾಲ ತೀರಿಸಬರದೆ, ಇದ್ದ ಭೂಮಿಯನ್ನೆಲ್ಲ ಅವರ ಸ್ವಾಧೀನಕ್ಕೊಪ್ಪಿಸಿ ದೇಶಾಂತರಕ್ಕೆ ಹೋಗಬೇಕಾಗುವದು. ತೀರ್ವೆ ಏರಿಕೆಯ ಕಾನೂನಿನಿಂದಲೂ, ಚಿಕ್ಕ ಹೊಲಗಳನ್ನು ಪುನರ್ಘಟಿಸುವ ಕಾನೂನಿನಿಂದಲೂ ಭೂಮಿಯ ಬೆಲೆಯು ಅನಪೇಕ್ಷಿತವಾಗಿ ತಗ್ಗಿ ಬೇಸಾಯಗಾರರು ಪರಮಾವಧಿಯ ಪ್ರಯತ್ನಪಟ್ಟಾಗ್ಯೂ ಋಣಮುಕ್ತರಾಗಲಾರರು. ಇಂಥ ರಾಕ್ಷಸ ಕಾನೂನುಗಳು ಇದೇ ಬರುವ ಕಾಯಿದೆ ಕೌನ್ಸಿಲಿನಲ್ಲಿ ಘಟನೆಯಾಗಲಿಕ್ಕಿವೆ.

ಸರಕಾರದ ಕಾರ್ಯೋದ್ಯಮವನ್ನೊಂದು ನಾವು ನಿಷೇಧಿಸಬೇಕಾಗಿದೆ. ಕೌನ್ಸಿಲಿನೊಳಗಿನ ಮುಸಲ್ಮಾನ ಸಭಾಸದರ ಬೆಂಬಲವನ್ನು ಈ ಕಾನೂನುಗಳಿಗೆ ಪಡೆಕೊಳ್ಳುವದಕ್ಕಾಗಿ ಸರಕಾರವು ಮುಸಲ್ಮಾನರ ಬಾಯಿಗೆ ಬೆಲ್ಲದ ಬಟ್ಟನ್ನು ಹಚ್ಚಿದೆ. ಸಿಂಧದೊಳಗೆ ಮುಸಲ್ಮಾನರ ಪ್ರಾಬಲ್ಯವಿದೆ. ಅದಕ್ಕಾಗಿ ಅವರ ಮನಪ್ರೀತ್ಯಲು

ಸರಕಾರವು ಯಾವಾಗಲೂ ಪ್ರಯತ್ನಿಸುತ್ತದೆ. ದಿವಾಣರಾದ ಸರ್ ಘುಲಾಮ ಹುಸೇನ ಹಿದಾಯತಲ್ಲಾ ಇವರಿಗೆ ಕಾರ್ಯಕಾರಿ ಮಂಡಳದ ಸಭಾಸದರಾಗಿ ನೇಮಿಸಿಕೊಳ್ಳಲಾಯಿತು. ಅವರ ಸ್ಥಳದಲ್ಲಿ ಮೌಲವಿ ರಫಿಉದ್ದೀನ ಎಂಬ ಮುಸಲ್ಮಾನ ಗೃಹಸ್ಥರಿಗೇ ದಿವಾಣರಾಗಿ ನೇಮಿಸಿಕೊಳ್ಳಲಾಗಿದೆ. ಮೇಲೆ ಪುನರ್ಘಟಣೆಯ ಲೋಕೋಪಕಾರದ ಕಾನೂನು ಸಿಂಧ ಪ್ರಾಂತಕ್ಕೆ ಹಚ್ಚಲ್ಪಡಲಿಕ್ಕಿಲ್ಲ. ಆದರೆ, ಈ ಕಾನೂನಿನ ಮೇಲೆ ಕೌನ್ಸಿಲಿನಲ್ಲಿ ಮತ ಕೊಡುವ ಅಧಿಕಾರವು ಸಾಹೇಬರಿಗುಂಟು. ಸಕ್ಕರದಲ್ಲಿ ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿ, ಸರಕಾರವು ಕಟ್ಟಿಸುತ್ತಿದ್ದ ಕಟ್ಟಿನಿಂದ ಸಿಕ್ಕಿದ ಭೂಮಿಯನ್ನು ಅಲ್ಲಿಯ ಜಮೀನದಾರರಿಗೇ ಅನುಕೂಲ ಶರ್ತುಗಳ ಮೇಲೆ ಕೊಡಲ್ಪಡುವದೆಂದು ಈ ಮೊದಲೇ ಗೊತ್ತಾಗಿದೆ. ಬೇಸಾಯಗಾರರ ಭೂಮಿಯು ಬೇಸಾಯೇತರ ಮಂದಿಗಳ ಕೈಯಲ್ಲಿ ಸೇರಬಾರದೆಂಬ ದೊಡ್ಡ ವೇದಾಂತ ಹೇಳಿ, ಮುಸಲ್ಮಾನರ ಭೂಮಿಯನ್ನು ಮುಸಲ್ಮಾನರಿಗೇ ಪರಾಧೀನ ಮಾಡಬೇಕೆಂಬದೊಂದು ಕಾನೂನು ಅಭಿಪ್ರಾಯಕ್ಕಾಗಿ ಪ್ರಕಟಿಸಲ್ಪಟ್ಟಿದೆ. ಹಿಂದುಗಳು ಬೇಸಾಯೇತರ ಮಂದಿಗಳಂತೆ. ಬ್ರಿಟಿಶ ರಾಜ್ಯಭಾರದಲ್ಲಿ ಏನೇನು ಚಮತ್ಕಾರಗಳಾಗುತ್ತವೆಂದು ಅಗಾಧ ಲೀಲೆಗಳನ್ನು ಘಟಿಸುವ ಪರಮಾತ್ಮನಿಗೂ ಸಹ ಗೋಚರವಾಗಲಾರದು. ಸಿಂಧದೊಳಗಿನ ಮುಸಲ್ಮಾನ ಸಭಾಸದರು ಸರಕಾರದ ಮೇಲೆ ಒಲಿದರೆ, ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸರ್ಕಾರವು ಹ್ಯಾಗೆ ಕುಣಿದರೂ, ಅಲ್ಲಿ ಸೈ, ಸೈ ಎಂದು ಹೇಳಿಸಿಕೊಳ್ಳಬಹುದು. ಅದಕ್ಕಾಗಿಯೇ ಸರಕಾರವು ಆ ಆಶ್ರಯವನ್ನು ಕಾದುಕೊಳ್ಳುವದಕ್ಕಾಗಿ ಇಷ್ಟೆಲ್ಲ ಆಯಾಸ ಪಡುತ್ತಿದೆ.

ಬೇಸಾಯಗಾರರು ಇದನ್ನೆಲ್ಲ ಚೆನ್ನಾಗಿ ಪರಾಂಬರಿಸತಕ್ಕದ್ದು, ಮೈಗಳ್ಳರಾಗಲಾಗದು. ಅಲಕ್ಷ್ಯ ಮಾಡಿದರೆ, ನಮ್ಮ ನಿಷೇಧದಿಂದೇನು ಪ್ರಯೋಜನವೆಂದು ತಮ್ಮಷ್ಟಕ್ಕೇ ಹೇಳಿಕೊಂಡು ಕುಳಿತರೆ, ಈ ಕಾನೂನುಗಳು ಬೇಸಾಯಗಾರರಿಗೆ ಮಾನ್ಯವಿರುವವೆಂಬ ಸಿದ್ಧಾಂತವು ಪ್ರಸ್ಥಾಪಿತವಾಗುವದು. ಬಾಯಿ ನಿಷೇಧಕ್ಕೆ ಈಗಿನ ರಾಜ್ಯಪದ್ಧತಿಯಲ್ಲಿ ಬೆಲೆಯಿಲ್ಲೆಂಬ ಮಾತನ್ನು ನಾವು ಅಲ್ಲಗಳೆಯುವದಿಲ್ಲ. ದಿನಾ ನಾವು ನೋಡುತ್ತಿರುವಾಗ ಬಾಯಿ ನಿಷೇಧದಿಂದ ಫಲಪ್ರಾಪ್ತಿಯಾಗುವದೆಂದು ನಾವು ಹ್ಯಾಗೆ ಹೇಳುವದು ! ಆದರೂ, ಬಾಯಿನಿಷೇಧ ಮಾಡಬೇಕೆಂದು ನಾವು ಮುದ್ದಾಂ ಹೇಳುತ್ತೇವೆ. ಕಾರಣವೇನೆಂದರೆ, ಬಾಯಿನಿಷೇಧದಿಂದ ನಮ್ಮ ಜಾಗರೂಕತೆಯು ಸ್ಫುಟವಾಗುತ್ತದೆ. ಸರಕಾರದ ಕಾರಸ್ಥಾನಗಳನ್ನು ನಾವು ಅಭ್ಯಾಸಿಸುತ್ತೇವೆಂದು ಸರಕಾರಕ್ಕೆ ತಿಳಿಯುತ್ತದೆ, ಜನರಿಗೂ ತಿಳಿದದೆಂದು ಲೋಕನಾಯಕರಿಗೆ ಅರಿತುಕೊಳ್ಳಲು ಇದೊಂದು ಮಾರ್ಗ. ಪ್ರಜೆಗಳ ನಿಷೇಧವು ಪ್ರಬಲವಾಗಿದ್ದರೆ ಅದನ್ನು ಸಂಘಟಿಸಲು ಮುಂದಾಳುಗಳಿಗೆ ಅನುಕೂಲವಾಗುತ್ತದೆ. ಬಾರ್ದೋಲಿಯಲ್ಲಿಯೂ, ನಿರರ್ಥಕವೆಂದು ಗೊತ್ತಿದ್ದರೂ, ಬೇಸಾಯಗಾರರು ಮೊಟ್ಟಮೊದಲು ಬಾಯಿನಿಷೇಧವನ್ನು ಮಾಡಿ, ಆ ಮೇಲೆ ಕರನಿರಾಕರಣೆಯ ಪ್ರಯತ್ನಕ್ಕೆ ಕೈ ಹಾಕಿದರು. ಸಾರಿ ದೂರಿ ಕೊಂಡರೆ, ಕೋಲಿವಾಕಳದ ದೋಷವಿಲ್ಲೆಂದು ಹೇಳುತ್ತಾರೆ. ಅದರಿಂದ ಸರಕಾರಕ್ಕೆ ಬೇಸಾಯಗಾರರು ತಮ್ಮ ತಮ್ಮ ಅಂಬೋಣವನ್ನು ಮುಂದಾಗಿ ತಿಳಿಸಬೇಕಾಗಿ ನಾವು ಆಗ್ರಹದಿಂದ ಸೂಚಿಸುತ್ತೇವೆ. ನಿಷೇಧಕ್ಕೆ ಅನುಕೂಲವಾಗಬೇಕೆಂದು ನಿಷೇಧ ಪತ್ರಿಕೆಯ ನಮೂನೆಯನ್ನೂ ನಾವು ಪ್ರಕಟಿಸಿದ್ದೇವೆ. ಬೇಸಾಯಗಾರರು ವಿಚಾರ ಮಾಡಿ ತಮ್ಮ ಮೇಲೊದಗುವ ಆಪತ್ತನ್ನು ಮುಂದಾಗಿ ಕಲ್ಪಿಸಿ ತಡ ಮಾಡದೆ ಉಪಾಯ ಯೋಜನೆ ಮಾಡಬೇಕಾಗಿ ನಾವು ವಿಜ್ಞಾಪಿಸುತ್ತೇವೆ. ಆತ್ಮಘಾತವಾಗುವಾಗ, ಬೇಸಾಯಗಾರರು ಮೈ ಮುರಿದು ದುಡಿಯದಿದ್ದರೆ, ಅದರ ಫಲವನ್ನು ಮುಂದೆ ಅವರೇ ಉಣ್ಣಬೇಕಾದೀತಲ್ಲವೇ ?

ಸ್ಫುಟ ಸೂಚನೆಗಳು.

೧ ಕಲಕತ್ತೆಯ 'ಫೋರವರ್ಡ' ಪತ್ರಿಕೆಯು ಸರಕಾರದ ಗುಪ್ತ ಕಾರಸ್ಥಾನವನ್ನೊಂದು ಬೈಲಿಗೆಳೆದಿದೆ. ಇವರ ಮೇಲಿಂದ ಬ್ರಿಟಿಶರು ಯುದ್ಧದ ತಯಾರಿಯಲ್ಲಿ ಆಸಕ್ತಿಯಿಂದ ತೊಡಗಿದ್ದಾರೆಂದೂ, ಆ ರಣಯಜ್ಞದಲ್ಲಿ ಹಿಂದುಸ್ಥಾನವನ್ನು ಸಹ ಎಳೆದೊಯ್ಯುತ್ತಿದ್ದಾರೆಂದೂ ತಿಳಿಯುವ ಹಾಗಿದೆ. ಸರ್ ಎಂಡ್ರ್ಯೂ ಸ್ಕೀನ ಎಂಬೊಬ್ಬರು ಹಿಂದೆ ಸೇನಾಪತಿಗಳಿದ್ದರು. ಅವರು ಹಿಂದುಸ್ಥಾನದೊಳಗಿನ ಸೈನ್ಯವನ್ನು ಆಧುನಿಕ ಪದ್ಧತಿಯಂತೆ ಪುನರ್ಘಟಿಸುವದಕ್ಕಾಗಿ ವಿಸ್ತೃತ ಯೋಜನೆಯನ್ನೊಂದು ತಯಾರಿಸಿದ್ದಾರೆ. ಪರರಾಷ್ಟ್ರಗಳ ಸೈನ್ಯದಲ್ಲಿ ಉಂಟಾದ ಸುಧಾರಣೆಗಳಿಂದ ಹಿಂದುಸ್ಥಾನದೊಳಗಿನ ಸೈನ್ಯವನ್ನು ಪುನರ್ಘಟಿಸಬೇಕಂತೆ. ಅದಕ್ಕಾಗಿ ವರ್ಷಾಸನ ೮ ಕೋಟಿ ರೂಪಾಯಿಗಳನ್ನು ಹಿಂದುಸ್ಥಾನದ ಕೋಶದಿಂದ ಸಂಗ್ರಹಿಸಿ ಕೊಡಬೇಕಂತೆ. ಪರರಾಷ್ಟ್ರಗಳ ಬೆನ್ನಿಗೆ ಹಿಂದುಸ್ಥಾನವೂ ಓಡಬೇಕಂತೆ. ಸೈನ್ಯ ಸುಧಾರಣೆಯಲ್ಲಿ ಮಾತ್ರ !' ಇತರ ಸುಧಾರಣೆಗಳನ್ನು ಹಿಂದುಸ್ಥಾನ ಸರಕಾರವು ಕೈಕೊಳ್ಳಲಪೇಕ್ಷಿಸಿದರೆ, ಹಣದ ಅಡಚಣೆ! ಸಾಮ್ರಾಜ್ಯ ಸರಕಾರಕ್ಕಾಗಿ ಸೈನ್ಯವನ್ನು ಪುನರ್ಘಟಿಸಲು ಹಿಂದುಸ್ಥಾನ ಸರಕಾರವು ಒಪ್ಪದಿದ್ದರೆ, ವಿಲಾಯತಿಯಿಂದ ಏಟು ಕೊಡಲಾಗುತ್ತವೆ. ಹಿಂದುಸ್ಥಾನದೊಳಗಿನ ಸೈನ್ಯವು ಯುದ್ಧಕ್ಕೆ ಸನ್ನದ್ಧವಾಗಿರುವದಲ್ಲವಾಗಿ ವಿಲಾಯತಿಯೊಳಗಿನ ಯುದ್ಧ ಖಾತೆಯ ಅಭಿಪ್ರಾಯವಾಗಿದೆ. ಅವರು ಹಿಂದುಸ್ಥಾನದ ಕಡೆಗೇ ದಿಟ್ಟಿಸಿ ನೋಡುತ್ತಿದ್ದಾರೆಂದು ಪ್ರಯಾಗದೊಳಗಿನ 'ಪಾಯೋನಿಯರ' ಪತ್ರಿಕೆಗೆ ಸುದ್ದಿ ಬಂದಿದೆ. ಇಲ್ಲಿಯ ಸೈನ್ಯ ಸ್ಥಿತಿ ಸುಧಾರಿಸುವ ಲಕ್ಷಣವಿಲ್ಲದಿದ್ದರೆ, ಅಲ್ಲಿಂದ ಸೈನ್ಯ ಖಾತೆಯ ಕಾರ್ಯದರ್ಶಿಗಳಾದ ಸರ್ ಕೆಲ್ಲಾ ಬೇಕಬರರವರು ಭರತಭೂಮಿಗೆ ಅನುಗ್ರಹಿಸಿ ಸೈನ್ಯದ ಸರ್ವಾಧಿಪತ್ಯವನ್ನು ಸ್ವಾಧೀನಪಡಿಸಿಕೊಂಡು ಇಲ್ಲಿಯ ಸೈನ್ಯವನ್ನು ಕಾರ್ಯಕ್ಷಮವಾಗಿ ಘಟಿಸುವರೆಂದೂ ವಾರ್ತೆಯಿದೆ. ಸಾಮ್ರಾಜ್ಯದ ಮಹತ್ವಾಕಾಂಕ್ಷೆಗಾಗಿ ಹಿಂದುಸ್ಥಾನವು ಸೈನ್ಯ ಖಾತೆಯ ದೊಳ್ಳನ್ನು ತುಂಬಬೇಕಾಗಿದೆ. ಬ್ರಿಟಿಶರು ಗೆಲ್ಲಲಿ, ಸೋಲಲಿ. ಭಾರತೀಯರಿಗೆ ನಷ್ಟವೇ ಹೊರತು ಲಾಭವಿಲ್ಲ. ಪರತಂತ್ರ ಭರತಖಂಡಕ್ಕೂ, ಸ್ವತಂತ್ರ ರಾಷ್ಟ್ರದೊಳಗಿನ ರಾಜಕಾರಣಕ್ಕೂ ಸಂಬಂಧವೇನಿಲ್ಲವಾಗಿಯೂ, ಭರತಭೂಮಿಯು ಭದ್ರತೆಗಾಗಿಯೇ ಹಿಂದುಸ್ಥಾನದೊಳಗಿನ ಸೈನ್ಯ ಖರ್ಚು ನಡೆಸಲಾಗಿಯೂ ಹೇಳಿ ತೋರಿಸುವ ಹಲ್ಲಿಗೂ, 'ಫೋರವರ್ಡ' ಪತ್ರಿಕೆಯು ಬೈಲಿಗೆಳೆದ ಗುಪ್ತ ಕಾರಸ್ಥಾನದ ತಿಮ್ಮಪ ಹಲ್ಲಿಗೂ ಪರಸ್ಪರ ಸಂಬಂಧವೇನಾದರೂ ಇದೆಯೇ? ಬ್ರಿಟಿಶರು ವರ್ತಕರಂತೆ! ವರ್ತಕರಲ್ಲಿರುವಷ್ಟು ಪ್ರಾಮಾಣಿಕತನವಾದರೂ ಬ್ರಿಟಿಶರಲ್ಲಿರಬಾರದೆ? ಅಥವಾ ಶ್ರೀ| ಪರಿಪಾಣರು ನುಡಿದಂತೆ ಹಿಂದುಸ್ಥಾನವನ್ನು ಪರಿಪರಿಯಿಂದ ಸುಲಿಯುವದಕ್ಕಾಗಿಯೇ ಬ್ರಿಟಿಶ ರಾಜ್ಯಭಾರವು ನಡೆದದೆಂಬ ಸಿದ್ಧಾಂತದ ಇದೊಂದು ಉದಾಹರಣೆಯೇ? ತಮ್ಮ ಮಾನವನು ಪರಸ್ವಾಧೀನವಾದ ಬಳಿಕ ದೊರೆ ಬೆತ್ತದಂತೆ ಆತನು ಸೂತ್ರಗೊಂಬೆಯಾಗಿ ಕುಣಿದಾಡದೇ ಕಲ್ಲವೇ? ಅದೇ ಸ್ಥಿತಿಯು ನಮ್ಮೀ ಭರತಭೂಮಿಗೊದಗಿದೆ.

---

೨ ತ್ರಾವಣಕೋರ ಸಂಸ್ಥಾನವು ಬ್ರಿಟಿಶರಿಗೆ ಗುರುವಾಗಬಹುದು ಅಷ್ಟು ಮಹತ್ತ್ವದ ಸುಧಾರಣೆ ಹೊಂದಿದನ್ನು ಆ ಸಂಸ್ಥಾನವು ಕೈಕೊಂಡಿದೆ. ಅಲ್ಲಿ ಪುಲಿಯಾ ಜನರ ಒಂದು ಜಾತಿಯೇ ಉಂಟು. ಇದು ಅಸ್ಪೃಶ್ಯ ಜಾತಿಯು. ಅಸ್ಪೃಶ್ಯರ ಅವಸ್ಥೆಯನ್ನು ಎಲ್ಲರೂ ಬಲ್ಲಾದ ವಿಷಯ. ಆ ಕುರಿತು ಹೆಚ್ಚಿಗೆ ವರ್ಣಿಸುವ ಅವಶ್ಯವಿಲ್ಲ. ಹಂಗಾಮಿನಲ್ಲಿ ಇವರಿಗೆ ಕೂಲಿಯಾಳಾಗಿ ನೇಮಿಸಿಕೊಳ್ಳುತ್ತಾರೆ. ಇವರು ಅಸ್ಪೃಶ್ಯರಿದ್ದದರಿಂದ ಇವರಿಗೆ ಸಿಗುವ ಕೂಲಿಯ ಮಾನವು ತೀರ ಕಡಿಮೆ. ಹಂಗಾಮ ಇಲ್ಲದಾಗ ಬೆಟ್ಟದೊಳಗಿಂದ ಹಿಣಕಟ್ಟಿಗೆಯನ್ನು ತಂದು ಮಾರಿ ಅವರು ಜೀವಿಸಬೇಕಾಗುತ್ತದೆ. ಇವರ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಸಂಸ್ಥಾನದ ಉದ್ಯೋಗಿಕ ಖಾತೆಯವರು ಎರಡು ನೇಕಾರರ ಪಥಕಗಳನ್ನು ರವಾನಿಸಿ ಪುಲಿಯಾ ಜನರಿಗೆ ನೇಯ್ಗೆ ಕಲಿಸಬೇಕಾಗಿ ಸಂಸ್ಥಾನದ ಯೋಜನೆಯಾಗಿದೆ. ಕೈಮಗ್ಗಗಳನ್ನೂ ನೇಯ್ಗೆಯ ಇತರ ಸಾಧನೆಗಳನ್ನೂ ಯೋಗ್ಯರಿಗೆ ಉಚಿತವಾಗಿ ಕೊಡಬೇಕೆಂದೂ ಸಂಸ್ಥಾನದ ಸಂಕಲ್ಪವಾಗಿದೆ. ನೇಯ್ಗೆಯು ಪುಲಿಯಾ ಜನರಿಗೆ ಒಂದು ದೊಡ್ಡ ಜೀವನಾಧಾರವಾಗಿ ಪರಿಣಮಿಸುವದೆಂಬುದರಲ್ಲಿ ಸಂದೇಹವಿಲ್ಲ. ಈ ಬಗ್ಗೆ ಅವರೆಲ್ಲರೂ ಸಂಸ್ಥಾನಕ್ಕೆ ಹಾಡಿ ಹರಸುವರು. ಪ್ರಜಾಕ್ಷೇಮವನ್ನು ಚಿಂತಿಸುವ ಸ್ವಂತ ರಾಜ್ಯಭಾರವಿದ್ದರೆ, ಅದಕ್ಕೆ ಪ್ರಜೆಗಳ ಕಷ್ಟದಿಂದ ಕಳವಳ ಹುಟ್ಟಿ ಕಲ್ಯಾಣಕ್ಕಾಗಿ ಅದು ಉಪಾಯಯೋಜನೆ ಮಾಡುತ್ತದೆ. ನಮ್ಮಲ್ಲಿಯ ಸರಕಾರದ ದೃಷ್ಟಿಯಲ್ಲಿ ೬೦೦೦ ಮೈಲು ದೂರ ಇರುವ ಬ್ರಿಟಿಶ ದೇಶದ ಮೇ

ಲೆ ಅದಕ್ಕೆ ಹಿಂದುಸ್ಥಾನದೊಳಗಿನ ಅಸ್ಪೃಶ್ಯರ ಸ್ಥಿತಿಯೇ ಉದಾಹರಣೆ ಅಸ್ಪೃಶ್ಯರಿಗಾಗಿ ಸರಕಾರಿ ಅಧಿಕಾರಿಗಳು ತಳ್ಳಿಹಿಸುವದೇನು ದಿಕ್ಕಿಲ್ಲ ಅದರೆ ಅದನ್ನು ನೀಗಿಸಲು ಅವರಿಗೆ ಉದ್ಯೋಗ ಹಚ್ಚಿ ಕೊಡಲು ಸಾಮರ್ಥ್ಯವಂತ ಬ್ರಿಟಿಶ ಸರಕಾರವು ಇಂಥ ಯೋಜನೆಯನ್ನು ಮಾಡುವದು ಹತ್ತಿಟ್ಟಿಗಿರಲಿ ಮಹಾತ್ಮರಂಥವರು ಕೈರಾಟಿ-ಕೈಮಗ್ಗಗಳ ಪ್ರಚಾರ ಮಾಡಿದರೆ ಅದರೊಳಗೆ ಬ್ರಿಟಿಶರ ದ್ವೇಷದ ಬೋಧ ಹಚ್ಚಿ ಸರಕಾರವು ಅದಕ್ಕೆ ಕೀಲು ಹಾಕಲೆತ್ನಿಸುತ್ತಿದೆ ಕ್ರಾವಣಕೋರದಿಂದಾದರೂ ನಮ್ಮ ಬ್ರಿಟಿಶ ಸರಕಾರವು ಬುದ್ಧಿ ಕಲಿಯ ಬಹುದೇನು?

---

೩ ದಿವಾಣರಾವ ರಾ| ಗೋ ಪಿ ಪಾಲವ ಪ್ರಧಾನರವರ ಇಲ್ಲಿ ಸಂಚರಿಸಿದಾಗ ಜೋ[illegible] ಮಾಲ್ಕಿ ಸಿಗುವ ಸಂಭವವಿದೆಂದು ವೃತ್ತ ಪತ್ರ ಪ್ರಕಟವಾಗಿತ್ತಷ್ಟೇ ಅ ಅನುಮಾನವು [illegible] ವಾಯಿತೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ ಇದಕ್ಕಾಗಿ ನಾವು ಮ[illegible] ಯಿ ಸರಕಾರಕ್ಕೆ ಅಭಿನಂದಿಸುವೆವು ಹಾಗೆಯೇ ನಮ್ಮ ಕೌನ್ಸಿಲು ಸಭಾಸದರಾದ ಶ್ರೀ ಕರ್ಕಿ [illegible] ಗೂ ಕೊಂಡಾಡುವೆವು ಪಿ [illegible] ರರವರ ಕಾರ ದಿರ್ದಿಯಲ್ಲಿ ಮುಲಕಿ ಜಂಗಲ ಅಧಿಕಾರಿಗಳ ಐಕಮತ್ಯದಿಂದ ಜೋಯಿಡ ಮಾಲ್ಕಿ ಸಿಗದೇಕಾಗಿ ಗೊತ್ತಾಗಿತ್ತರೂ, ಅದು ನಮಗೆ ಸಿಗಲಿಲ್ಲೆಂಬ ಮಾತು ಪ್ರಜೆಗಳ ಆಗಿತ ವಿಷಯು [illegible]ಪುರ ಕೊಟದ ಶಿ ಮರ್ಮಗಳನ್ನಾದರೂ ಪಾಲಿಸಿ ಪ್ರಜೆಗಳಿಗೆ ಅನುಗ್ರಹಿಸಬೇಕೆಂದು ನಾವು ಒದರಾಡಿದರೂ ನಮ್ಮ ಕಡೆ ಯಾರೂ ಕಿವಿಗೊಡಲಿಲ್ಲ ಶ್ರೀ ಕರ್ಕಿ ದೇವ ಪ್ರಭೃತಿ ಕೌನ್ಸಿಲು ಸಭಾಸದರ ಪ್ರಯತ್ನದಿಂದ ಜಂಗಲ ಕಮಿಟಿಯು ನೇಮಿಸಲ್ಪಟ್ಟಿತ ಈ ಕಮೀಟಿಯಿಂದ ನಮಗೆ ಹೆಚ್ಚಿನ ಲಾಭವಾಗದಿದ್ದರೂ, ಜೋಯಿಡ ಮಾಲ್ಕಿ ಸಿಗಲು ಈ ಮುಂತಳವೇ ಕಾರಣವೆಂದು ನಾವು ಒಪ್ಪುವೆವು ಈ ಯೋಜನೆಯಿಂದ ಲಕ್ಷದ[illegible]ಗೆ ಮಿಕ್ಕಿ ಜಮೀನು ದೇಸಾಯುಗಾರರಿಗೆ ಮಾಲ್ಕಿಯಾಗಿ ಸಿಗುವದು ಜಂಗಲ ಖಾತೆಯ ಹಿಂಡಸೆಯಿಂದ [illegible] ಗಟ್ಟಿಗ ಉದೊಂದು ಸಣ್ಣ ಅ[illegible] ಯಾರೂ ಒಪ್ಪುವ ದ ಅದಕ್ಕಾಗಿ ಸರಕಾರಕ್ಕೂ ಶ್ರೀ ಕರ್ಕಿ-ದೇವ ಪ್ರಭೃತಿ ಮುಂದಾಳುಗಳಿಗೂ ವ[illegible] ಪೂರ್ವಕವಾಗಿ ಕೃತಜ್ಞತೆಯನ್ನು ಪ್ರದರ್ಶಿಸಿ, ಹಿಗ್ಗೆ ಲೋಕಾಂತ ಕಾಲಕ್ಕೆ [illegible] ಪ್ರಾರ್ಥಿಸಿ ಪ್ರಜೆಗಳಿಂದ ಪ್ರಶಸ್ತಿಯನ್ನು ಪಡೆಯಬೇಕಾಗಿ ವಿನ್ನೈಸುವೆವು

[redacted]

೪ ಶ್ರೀ ಕ್ಷೇತ್ರ ಗೋಕರ್ಣದೊಳಗಿನ ಆಹಿತಾಗ್ನಿಗಳಾದ ವೇದಶಾಸ್ತ್ರ ಸಂಪನ್ನ ದೀಕ್ಷಿತ ಅನಂತ ಉಪಾಧ್ಯಾಯರವರು ಕಳೆದ ಆಷಾಢ ಶ ೧೧ ಗುರುವಾರ ದಿನ ಸ್ಥೂಲಶರೀರವನ್ನು ತ್ಯಜಿಸಿ ಪರಂಧಾಮವನ್ನೈದಿದರೆಂದು ತಿಳಿಸಲು ತ ೦ಬಾ ವ್ಯಸನವಾಗುತ್ತದೆ ಅನಂತ ಉಪಾಧ್ಯಾಯುಗಳವರು ಬಾಲ್ಯದಿಂದಲೇ ವಿದ್ಯಾಪ್ರೇಮಿಗಳು ೧೦ ವರ್ಷ ವಯಸ್ಸಿನಲ್ಲಿಯೇ ತಂದೆಯವರಾದ ವೇದಮೂರ್ತಿ ಮಹಾಬಲೇಶ್ವರ ಉಪಾಧ್ಯಾಯರು ತೀರಿಕೊಂಡರೂ, ಸ್ವಯಂಪ್ರೇರಣೆಯಿಂದ ಬ್ರಹ್ಮೀಭೂತ ಜಯರಾಮಭಟ್ಟ ಜಿಯುವರ ಕಡೆಯಿಂದ [illegible]ಂಗ ಋಗ್ವೇದದ ಅಧ್ಯಯನವನ್ನು ಕೊನೆಗಾಣಿಸಿದರು ವೇ| ಹೊಸಮನೆ ಗಣೇಶಶಾಸ್ತ್ರಿಗಳ ಕಡೆಯಿಂದ ಸಾಹಿತ್ಯ, ವ್ಯಾಕರಣ, ನ್ಯಾಯಶಾಸ್ತ್ರ ಉಪನಿಷದ್ಭಾಗಗಳನ್ನೂ ಉಪದೇಶಿಸಿಕೊಂಡರು ಗಣೇಶ ಶಾಸ್ತ್ರಿಗಳು ಸ್ಥಾಪಿಸಿದ ಸಂಸ್ಕೃತ ಶಾಲೆಯಲ್ಲಿ ಅಧ್ಯಾಪನವನ್ನು ಇವರು ನಡಿಸಿದರು ಕೊನೆಗೆ ಗೋಕರ್ಣ ಕ್ಷೇತ್ರಸ್ಥರಿಗೆ ವೇದಶಾಸ್ತ್ರ ಪುರಾಣಾದಿಗಳ ಅಧ್ಯಾಪನದ ಕಾರ್ಯವನ್ನು ನೆರವೇರಿಸುತ್ತಿರುವಾಗಲೇ ಇಹಲೋಕದ ಯಾತ್ರೆಯನ್ನು ಮುಗಿಸಿದರು ಅನಂತ ಉಪಾಧ್ಯಾಯರ ವಿದ್ಯಾಲಾಲಸೆಯು ಇಷ್ಟರಿಂದಲೇ ತೃಪ್ತಿಹೊಂದಲಿಲ್ಲ ಶೃಂಗೇರಿ ಮಠದ ಈ ಪೂರ್ವದ ಜಗದ್ಗುರುಗಳಕಡೆಯಿಂದ ವೇದಾಂತಶಾಸ್ತ್ರದ ಅಧ್ಯಯನವನ್ನು ಶೃಂಗೇರಿಯಲ್ಲಿದ್ದುಕೊಂಡು ಮಾಡಿದರು ಕೈಲಾಸವಾಸಿ ಕದ ಬೇಶ್ವರರ ಪ್ರೇರಣೆಯಿಂದ ವೇದಾಂತ ವಿಷಯಕ ಪುರಾಣ ನಿರೂಪಣೆಯನ್ನು ಪ್ರಾರಂಭಿಸಿ ಕೊನೆತನಕ ಅದನ್ನು ಅಪ್ರತಿಹತವಾಗಿ ನಡೆಸಿದ್ದರು ಯಾವಜ್ಜೀವಂ ಅಗ್ನಿಹೋತ್ರಂ ಜುಹುಯಾತ್ ಎಂಬ ವಚನವನ್ನು ಇವರು ಸತತ ೧೬ ವರ್ಷಗಳಿಂದ ಪಾಲಿಸಿಕೊಂಡು ಬಂದಿರುತ್ತಾರೆ ಅಗ್ನಿನಾರಾಯಣನ ಧ್ಯಾನ, ಉಪಾಸನೆ ಮುಂತಾದ ಕರ್ಮಾಂಗಗಳನ್ನು ಕಠೋರವಾಗಿ ಇವರು ಪಾಲಿಸಿದರು ಚಿತ್ತ ಮಾಲಿಕ್ಯ ದೋಷ ಶಿಷ್ಟಾಚಾರವಿಧಿಯಾಗಳನ್ನೂ ಇವರ ಸಾಂಗಗೊಳಿಸಿದ್ದಾರೆ ಇವರ ನಿಧನದಿಂದ ಸನಾತನ ಧರ್ಮದ ಪುರಾತನ ಕರ್ಮಾಂಗಗಳನ್ನು ಭಕ್ತಿಯಿಂದ ನೆರವೇರಿಸಿ ಧರ್ಮಬೋಧೆಯು [illegible] ಮಾಡುವ ಪುಣ್ಯಾತ್ಮರೊಬ್ಬರನ್ನು ಕ್ಷೇತ್ರಸ್ಥರೂ, ನಮ್ಮ ಕಡೆ ಒಬ್ಬ [illegible]ಕವೂ ಕಳಕೊಂಡಿದೆ ಆಹಿತಾಗ್ನಿಗಳ ನಿಧನದಿಂದ ಕಡಲ್ಲಿ ಸನಾತನ ಧರ್ಮಾಭಿಮಾನಿಗಳೆಲ್ಲರೂ ದುಃಖಗಾರರಾಗಿದ್ದಾರೆಂದು ತಿಳಿದು ಅವರ ಆಪ್ತ ಸ್ವಮಿತ್ರರು ಶವ್ಮ ಶೋಕವನ್ನು ಸಾಂತ್ವನ ಮಾಡಿಕೊಳ್ಳಬೇಕ ದೀಕ್ಷಿತ ಅನಂತ ಉಪಾಧ್ಯಾಯರಿಗೆ ಸದ್ಗತಿ ದೊರೆಯಲೆಂದು ನಾವು ಕೈಲಾಸನಾಥನೆಡೆಗೆ ಪ್ರಾರ್ಥಿಸುವೆವು

---

೫ ಆ ಕೇರಿಯ ರಾ| ಲಕ್ಷ್ಮಣ ಬಾಬಣಪ್ಪೈಗಳವರ ಬಧವಾರ ಮುಂಜಾನೆಗೆ ದೇಹ ವಿಸರ್ಜನೆಹೊಂದಿದ ಸುದ್ದಿಯನ್ನು ಅರುಹಲು ದುಃಖವಾಗುತ್ತದೆ ಮರಣಕಾಲದಲ್ಲಿ ೬೨ ವರುಷದ ಮುದುಕರಾಗಿದ್ದರೂ, ಹರೆಯದವರಂತೆ ಉತ್ಸಾಹದಿಂದ ದುಡಿಯುತ್ತಿದ್ದರು ಮೊದಲು ಇಂಗ್ಲಿಷ ಶಿಕ್ಷಣ ಪಡೆದವರಲ್ಲಿ ಇವರೊಬ್ಬರಾಗಿದ್ದವರಿಂದಲೂ ಗಣಿತ ಶಕ್ತಿಯು ಹೆಚ್ಚಿದ್ದವರಿಂದಲೂ ನೆರೆಹೊರೆಯಲ್ಲಿ ಉಂಟಾದ ವ್ಯವಹಾರಗಳನ್ನು ಇವರು ರಾಜಿಯಿಂದ ಇತ್ಯರ್ಥಪಡಿಸುವದರಲ್ಲಿ ನಿಷ್ಣಾತರಿದ್ದರು ಸಣ್ಣ ದೊಡ್ಡ ಕುಟುಂಬಗಳೊಳಗೆ ಕಾರಣಾಂತರದಿಂದ ಉಂಟಾದ ಕಲಹಗಳನ್ನು ವಿಚಾರಿಸಿ ಇವರು ಹಿಸೆಪಟ್ಟಿಗಳನ್ನು ಸಹ ಮಾಡಿಕೊಟ್ಟು ಕಕ್ಷಿಮಟ್ಟಿಗೆ ಪರೋಪಕಾರ ಮಾಡಿದ್ದಾರೆ ಆಂಕೋಲೆಯೊಳಗಿನ ಇಂಗ್ಲಿಷ ಶಾಲೆಯ ಪ್ರವರ್ತಕರಲ್ಲಿ ಇವರೊಬ್ಬರು ಹೀಗೆ ಎಲ್ಲ ಪರಿಯಿಂದಲೂ ಕೀರ್ತಿಮಿರಿ [illegible] ಇವರು ಹೆಸರುವಾಸಿಯಾಗಿದ್ದಾರೆ ರಾ| ಲಕ್ಷ್ಮಣಪ್ಪೈಗಳವರಿಗೆ ಭಗವಂತನು ಸದ್ಗತಿ ಕೊಡಲೆಂದು ನಾವು ಪ್ರಾರ್ಥಿಸಿ, ರಾ| ಪೈಗಳವರ ದೊಡ್ಡ ಕುಟುಂಬದವರೊಡನೆ ಸಹತಾಪವನ್ನು ಪ್ರದರ್ಶಿಸುವೆವು

— ಬೆಮಂಟ ಎಣ್ಣೆ ಕಂಪನಿಗಳಲ್ಲಿ ಸಂಧಾನವಾಯಿತು ಬೆಲೆ ಎಣ್ಣೆ ದರವು ಮೂಲಪದಕ್ಕೆ ಬರುವದೆಂದು ಎಲ್ಲರೂ ತಿಳಿದಿಲ್ಲ

— ದ. ಮಾಡದ ಪಕ್ಷದ ಶ್ರೀ| ಹುಲಕೋಟಿಯವರು ಬೆಳಗಾವಿಯಲ್ಲಿ ಕಸಿಂ ಬಜಾರಾಗಿ ನೇಮಿಸಲ್ಪಟ್ಟಿದ್ದಾರೆ

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆ ಹಿಡಿಸಿತು ಚೊಕ್ಕ ಬಿಸಿಲು ಬಿದ್ದು ದೇಸಾಯುಗಾರರಿಗೆ ಹೊಲಗೆಲಸ ಮಾಡಲು ಬಹು ಆತಂಕವಾಯಿತು ಸಿತ್ತಶಿಗಳು ನೆಡಲಿಕ್ಕಾಗದೆ ನಷ್ಟ ನಿನ್ನೆಯಿಂದ ಮೇಘರಾಜನು ಅನುಗ್ರಹಿಸಿದ್ದಾನೆ ಹೀಗೆಯೇ ದಿನಾ ೩ ೪ ಮಳೆ ಬಿದ್ದರೆ ದೇಸಾಯಕ್ಕೆ ಅನುಕೂಲವಾಗುವದು ಊರಲ್ಲಿ ಒಂದು ಪ್ರಕಾರದ ಭೇದಿಯು ಹಬ್ಬಿದೆ. ಈ ವಾರದಲ್ಲಿ ೮-೩೬ ಇಂಚು ಮಳೆ ಬಿತ್ತು ಈ ತನಕ ೫೨-೩೨ ಇಂಚು ಮಳೆ ಬಿತ್ತು

ಕುಮಟಾ ಮುನಿಸಿಪಾಲಿಟಿಯವರು ಮತದಾರರ ಯಾದಿಯನ್ನು ತಿದ್ದುಪಡಿ ಮಾಡುವ ಅನೇಕ ಅರ್ಜಿಗಳನ್ನು ಕಿತ್ತೊಗೆದಿದ್ದಾರೆ ಅದರಿಂದ ಪರೀಕ್ಷಾರ್ಥವಾಗಿ ಕಾರವಾರ ಜಿಲ್ಹಾ ಕೋರ್ಟಿನಲ್ಲಿ ೩ ದಾವೆಗಳು ದಾಖಲಾಗಿವೆ ಊರ [illegible] ಮುನಿಸಿಪಾಲಿಟಿಯ ಕೃತ್ಯದಿಂದ ಅಸಂತೋಷ ಹಬ್ಬಿದೆ.

ಇಲ್ಲಿಯ ಸಹಕಾರಿ ಬ್ಯಾಂಕಿನ ಮೆನೆಜಿಂಗ ಕಮೀಟಿಯು ಗಿಬ್ಬ ಹೈಸ್ಕೂಲಿಗೆ ಶಿಕ್ಷಣ ನಿಧಿಯೊಳಗಿಂದ ೬೦೦ ರೂಪಾಯಿಗಳನ್ನರ್ಪಿಸಿದೆ ಹೋದ ವರುಷ ದಿನಾ ಒಂದು ರೂಪಾಯಿಯಂತೆ ದ್ರವ್ಯಸಹಾಯ ಮಾಡಲಾಗಿತ್ತು ಈ ವರುಷ ೧॥ ರೂಪಾಯಿಗೆ ಏಕ್ಕೆ ಸಂಕಾರಿ ಗ್ರ್ಯಾಂಟು ಏರೇರಿಸಿದ ಫೀ ಉತ್ಪನ್ನ, ಈ ತನಕ ಸಂಗ್ರಹಿಸಿದ ಶಾಲೆಯ ದ್ರವ್ಯ ನಿಧಿ ಇವುಗಳಿಂದ ಶಾಲೆಯನ್ನು ನಡಿಸಲಾಗುವದಿಲ್ಲೇನು? ಮುನಿಸಿಪಾಲಿಟಿಯೊಳಗೂ, ಗಿಬ್ಬ ಹೈಸ್ಕೂಲಿನ ಪ್ರಶ್ನ ಹಬ್ಬಿದೆ ಹೀಗೆ ಪರಸ್ಪರ ಸಹಕಾರ ಮುನಿಸಿಪಾಲಿಟಿಗಳಂಥ ಭಿನ್ನ ಭಿನ್ನ ಧ್ಯೇಯದ ಸಂಸ್ಥೆಗಳಿಂದ ಮಹಾಜನರ ದ್ರವ್ಯಸಹಾಯ ಪಡೆಯದೆ ಶಾಲೆಯನ್ನು ನಡಿಸಲಾಗದಿದ್ದರೆ ಅದನ್ನು ಮುಚ್ಚುವದು ಕ್ಷೇಮಕರ ಸಹಕಾರಿ ಸಂಘದ ಹಣವನ್ನು ಸಾಲಗಾರರ ಬಡ್ಡಿಯ ದರವನ್ನು ಇಳಿಸುವ ಕೆಲಸಕ್ಕಾಗಿ ಅಥವಾ [illegible]ಬಡ ಜಾಮೀನದಾರರ ನಷ್ಟಭರಪಾಯಿಗಾಗಿ ವಿನಿಯೋಗ ಮಾಡತಕ್ಕದ್ದು ಅದಕ್ಕಾಗಿ ದ್ರವ್ಯಸಂಗ್ರಹವಿದ್ದಷ್ಟು ಕಡಿಮೆ ರಾ| ಅಣ್ಣಪ್ಪೈ, ರಾ| ನಾ ಸು ಕಾಮತರವರಂಥ ಮೆನೇಜಿಂಗ ಕಮೀಟಿಯೊಳಗಿನ ಪ್ರಮುಖರು ಆಳವಾಗಿ ವಿಚಾರಿಸಬಾರದೇ?

ಮೊಹರಮ್ಮ ಹಬ್ಬವು ನಾಡಿಕೆಯಂತೆ ಸಾಂಗವಾಗಿ ನೆರವೇರಿತು ಹುಲಿಗಳ ಹಾವಳಿಯು ಈ ವರುಷ ವಿಶೇಷ

ಮೋಟಾರಡಿಗೆ ಸಿಕ್ಕಿದ ಹುಡುಗನು ನಿನ್ನೆ ತೀರಿಕೊಂಡನು ಎಲುಬುಗಳೆಲ್ಲ ನುಚ್ಚುನೂರಾಗಿದ್ದನಂತೆ ಬಹಳ ಯಾತನೆಗಳನ್ನನುಭವಿಸಿದನು ತಾಯಿಯ ಮಧ್ಯೆಕನ

ಪತ್ರ ಸ್ವೀಕಾರ.

ರಾ| ಜೆ ವಿ ಗಾವಸ್ಕರ, ಚೆಅರಮನ್ ಕುಮಟಾ ಮುನಿಸಿಪಾಲಿಟಿ ನಿಮ್ಮ ಪತ್ರ ತಲ್ಪಿತು ನಿಮ್ಮ ಜವಾಬದಾರಿಯನ್ನರಿತುಕೊಂಡು ಯುಕ್ತ ಕ ದಾತೆ ಪತ್ರಿಸಲು ಅಡ್ಡಿ ಇಲ್ಲ

ಹೊನ್ನಾವರ— ಮಳೆ ಕಡಿಮೆ ಮೋಡಗಳಾಗಹತ್ತಿವೆ ನಟ್ಟಿ ಕೆಲಸಕ್ಕೆ ತಡೆಬಿದ್ದಿದೆ ಅಕ್ಕಿಯ ದರ ಏರುತ್ತಲಿದೆ ಪ್ರೊ| ಲಿಖಿತೇಯ ವರ ಜಾದ ಪ್ರಯೋಗಗಳು ಮಂಗಳವಾರ-ಗುರವಾರಕ್ಕೆ ನಡೆದವು ಇಲ್ಲಿಯ ವಾಚನಾಲಯ ಹಾಗು ಅವಮ್ಮ ದಾಬಾಪದೊ।

...ಗಿನ ದೇಸಾಯಿ ಪ್ರಧಾನ ಇವುಗಳ ಸಹಾಯಪೂರ್ವಕವಾಗಿ ಈ ಆಟಗಳಾದವು. ಮೊಹರಮ್ಮ ಹಬ್ಬವು ಹಳೇ ವಿಧ್ಯುಕ್ತ ರೀತಿಯಿಂದ ನೆರವೇರಿತು. ಮಳೆ ಇಲ್ಲದ್ದರಿಂದ ಉತ್ಸವಕ್ಕೆ ಕುಂದು ಬಂತು.

ಸಿರಸಿ— ಮಳೆ ಪ್ರಾರಂಭವಾಗಿದೆ. ಒಂದು ಪಕ್ಷವಾಯಿತು. ಮೊಹರಮ್ಮ ಹಬ್ಬವೇನೋ ಮುಗಿಯಿತು. ನೂರಾರು ತಾಬೂತುಗಳು ಇಲ್ಲಿ ಮುಂಚೆ ಇಡಲ್ಪಡುತ್ತಿದ್ದವು, ಈಗ ೫-೬ ಮಾತ್ರ ಕಾಣುತ್ತವೆ. ಮುಸಲ್ಮಾನರಲ್ಲಿ ತಾಬೂತುಗಳ ಭಕ್ತಿಯು ಕಡಿಮೆಯಾದ ಲಕ್ಷಣವೆಂದು ಹೇಳುತ್ತಾರೆ. ಶ್ರಾವಣ ಸೋಮವಾರದ ಕೀರ್ತನಕಾರರೊಬ್ಬರು ಇಲ್ಲಿ ಕೀರ್ತನ ಮಾಡುತ್ತಿದ್ದಾರೆ.

೫-೬ ದಿನಗಳಿಂದ ಗಡಿಗಡಿ ಆಟ ನಡೆದಿದೆ. ಅವರು ಸುಮ್ಮನಿರುವದಿದ್ದ ಪೋಲೀಸರಿಗೆ ಈ ಸಂಗತಿ ಗೊತ್ತಿದೆ ಎಂದು ಹೇಳುವದು ಕಷ್ಟ. ಗೊತ್ತಿದ್ದು ಈ ವ್ಯಾಪಾರ ನಡೆದದೆ ಎಂದು ಹೇಳುವದಾದರೂ ಕಷ್ಟವಿದೆ. ಇಂಗಿತವೇನಿದೆ?

ಇಲ್ಲಿಯ ರೇಡಿಯೋ ಕಂಪನಿ ಬಿನ್ನತಾರಯಂತ್ರವನ್ನು ಸರಕಾರಿಗೆ ವಿಕ್ರಯ ಮಾಡುವ ಸುದ್ದಿಯು ಬಿನ್ನತಾರಸಂದೇಶದಿಂದ ಊರಲ್ಲೆಲ್ಲ ಹಬ್ಬಿದೆ.

ಹೊನ್ನಾವರದಿಂದ ಕೆಲವರು ಸಕಲ ಸಾಹಿತ್ಯಗಳನ್ನು ಪಡೆದುಕೊಂಡು ಶಾಲೆಕೊಡೆಗಳನ್ನು ತಯಾರಿಸಿ ಮಾರುತ್ತಿದ್ದಾರೆ. ಸ್ವದೇಶಿ ಉದ್ಯೋಗಗಳ ಭಕ್ತರು ಆಶ್ರಯ ಕೊಡಬೇಕು.

ಸಿದ್ದಾಪುರ— ಒಮ್ಮೆಲೇ ಮಳೆ ಬಿದ್ದದರಿಂದ ಹೊಲಕ್ಕೆ ಬಹಳ ನಷ್ಟ. ದಿಂಬವೆಲ್ಲ ಬೆಳಸು ಹೋಯಿತು. ಉಳಿದದ್ದು ಕೊಳೆತು ಹೋಯಿತು. ಹೊಸ ಬೀಜ ಹಾಕಲು ಬೀಜವಿಲ್ಲ. ಹೀಗೆ ಈ ವರುಷ ಅನೇಕ ಹೊಲಗಳು ಹಾಳು ಬೀಳುವ ಸ್ಥಿತಿ ಬಂದಿದೆ. ಅಡಿಕೆ ಬೆಳೆಗೆ ಕೊಳೆ ರೋಗವು ಈಗಲೇ ಪ್ರಾರಂಭವಾಯಿತು. ಜಿಲ್ಲಾಧಿಕಾರಿಗಳು ಇತ್ತ ಲಕ್ಷ ಕೊಡಬೇಕು. ಸುಮಾರು ೨೫ ಇಂಚ ಮಳೆ ಆಯಿತು.

ಇಲ್ಲಿಯ ಮಾಮಲೇದಾರರಾದ ರಾ| ಜೋಗಳೇಕರರವರಿಗೆ ಶಿರ್ಸಿಗೆ ವರ್ಗವಾಯಿತು. ಚಾರ್ಜ ಕೊಡುವ ಮುಂಚಿನ ದಿನ ಮಾಮಲೇದಾರರಿಗೆ ಕಾರಕೂನರೂ, ಶ್ಯಾನಭೋಗರೂ ತಾಂಬೂಲ ಸಮಾರಂಭ ಮಾಡಿದರು. ರಾ| ಕೊಪ್ಪೀಕರರು ಇಲ್ಲಿಯ ಹೊಸ ಮಾಮಲೇದಾರರು.

ತೀರ್ಥಹಳ್ಳಿಯಲ್ಲಿ ಹುಬ್ಬಳ್ಳಿಯ ಹಿಂದುಸ್ಥಾನಿ ಸೇವಾದಲವು ಹೊರಡಿಸಿದ ಶಿಬಿರಕ್ಕೆ ಇಲ್ಲಿಯಿಂದ ಪುಂಡಲೀಕ, ಗೋಪಾಳ ಎಂಬ ಇಬ್ಬ ಹುಡುಗರು ಹೋಗಿ ಶಿಕ್ಷಣ ಪಡೆದು ಬಂದರು. ಇವರು ತಾವು ಕಲಿತು ಬಂದ ಕವಾಯಿತನ್ನು ಜನರಿಗೆ ಮಾಡಿ ತೋರಿಸಿದರು.

ಇತ್ತಿತ್ತ ಈ ತಾಲೂಕಿನಲ್ಲಿ ಹುಲಿಯ ಹಾವಳಿ ಹೆಚ್ಚಾಗಿ ಕೇಳಬರುತ್ತಿದೆ. ಇಲ್ಲಿಯ ಹೊಸಪೇಟೆಯೊಳಗೆ ಕೊಟ್ಟಿಗೆ ಹೊಕ್ಕು ಒಂದು ಆಕಳ ಕರು ಹಿಡಿದೊಯ್ಯಲಾಯಿತು. ಹೇರೂರಿಗೆ ಬೆಟ್ಟದಲ್ಲಿ ಒಂದು ಆಕಳು, ಕೋಡಿಗದ್ದೆಯಲ್ಲಿ ಒಂದು ಎತ್ತು ಹೀಗೆ ಹುಲಿಯು ಫಲಾಹಾರ ಮಾಡಿತು. ಬಿದ್ರಕಾನ, ಇಟ್ಗಿ, ಹೆಗ್ಗರಣಿ ಮುಂತಾದವುಗಳ ಕಡೆಯಲ್ಲಿ ಎಮ್ಮೆ-ಕೋಣಗಳೇ ವ್ಯಾಘ್ರನ ಪಾಲಾದ ಸುದ್ದಿ ಇದೆ. ದೇಸಾಯಿಗಾರರು ಗಾಬರಿಯಾಗಿದ್ದಾರೆ.

ಈ ವರುಷ ನಮ್ಮ ಕಡೆ ಭೂಮಿಗೆ ಹೊಸ ತೀರ್ವೆಯು ಆಕ್ಕರಣೆಯಾಗುತ್ತದಂತೆ! ಹರಿ ಭೂಮಿ ತೀರ್ವೆ ಸ್ಥಿರವಿದಂತೆ! ತೋಟದ ಭೂಮಿಗೆಲ್ಲ ತೀರ್ವೆ ಹೆಚ್ಚಾಗುವದಂತೆ! ದೇಶೀಯ-ಪದ್ಧಾರಿಕೆ ಮಾಡಿದ್ದರೆ, ಒಟ್ಟಿನ ಮೇಲೆ ತೀರ್ವೆ ಏರಿತು. ತೋಟಿಗರಿಗೆ ಒಂದು ದೊಡ್ಡ ದೊಬ್ಬು. ಹರಿ ಭೂಮಿಯವರಿಗೆ ಸಹಿ ಸಹಿ ಸಹಾಯದ ಕೊಡ ಒಂದು.

ಶಿವಶಿದ್ದಪುರ ಮಾರ್ಗದ ಕ್ಯಾಂಪ್ಲಿಯಿಂದ ಶಾಪ ಕೂರಸರಿಗೆ ಮಾರ್ಗವು ತೀರ ಕೆಟ್ಟಿದೆ. ಪ್ರಯಾಣಿಕರ ಗೋಳು ಅಷ್ಟಿಷ್ಟಲ್ಲ, ಹೇಳಲಾಗ ಸವಿಲ್ಲ. ಮೋಟಾರ ಡ್ರೈವ್ಹರರಂತು ಮಾರ್ಗದ ಮೇಲೆ ಮಣ್ಣು ಹಾಸಿಕೊಂಡು ಮೋಟಾರನ್ನು ಓಡಿಸಬೇಕಾಗುತ್ತದೆ. ಚಿಕ್ಕ ಚಿಕ್ಕ ಮೋರಿಗಳಿದ್ದ ಜಾಗದಲ್ಲಿ ಬರೇ ಮಣ್ಣು ತುಂಬಿದ್ದಾರೆ. ಅದರಿಂದ ಮೋಟಾರ ಗಾಡಿ ಮುಂತಾದವುಗಳು ಹುಗಿದು ಬೀಳುತ್ತವೆ. ಇಂಜನಿಯರ ಖಾತೆಯವರು ಒಮ್ಮೆ ಈ ಕಡೆ ಮೋಟಾರು ಓಡಿಸಿ ಪ್ರತ್ಯಕ್ಷ ಅನುಭವ ಪಡೆಯಬೇಕು.

ಸಿದ್ದಾಪುರದಿಂದ ಶಿರ್ಸಿಗೆ ಇದ್ದ ತಂತಿಯು ೨ ಈ ಮಳೆಗಾಲದಲ್ಲಿ ಆಗಿಂದಾಗ್ಗೆ ಕೆಡುತ್ತದೆ. ತಂತಿಯನ್ನು ನೆಟ್ಟಗೆ ಮಾಡಲು ಒಂದು ಇಸಮು ನೇಮಿಸಿಕೊಳ್ಳುವದು ಶ್ರಮ. ಹಾಗೆಯೇ ಸಿದ್ದಾಪುರದಿಂದ ಸಾಗರ ಮಾರ್ಗವಾಗಿ ತಂತಿ ಹಾಕಿದರೆ ತಂತಿ ಕಚೇರಿಗೆ ಉಪಯೋಗವಾಗುತ್ತಿತ್ತು. ಸಾಗರದ ಬದಿಗೆ ಮರಗಳ ಸಾಲುಗಳಾಗಲೀ, ಅಡವಿ ಪ್ರದೇಶವಾಗಲೀ ಇಲ್ಲದ್ದರಿಂದ ತಂತಿ ಹಾಕಲು ಹೆಚ್ಚಿನ ಖರ್ಚು ಬರಲಿಕ್ಕಿಲ್ಲ.

ಮೋಹರಮ್ ಹಬ್ಬವು ಸಮಾಧಾನದಂತೆ ನೆರವೇರಿತು. ಹುಲಿ ಹಾವಳಿಗೆ ಜನರು ಹೆದರುತ್ತಿದ್ದಾಗ್ಯೂ, ಹುಲಿ ವೇಷಗಳೇನು ಬರಗಾಲವಾಗಲಿಲ್ಲ. ಈ ಹಬ್ಬದಲ್ಲಿ ಮುಸಲ್ಮಾನರಿಗಿಂತ ಹಿಂದೂಗಳೇ ಹೆಚ್ಚಾಗಿ ಸೇರಿದ್ದರು.

ನಮ್ಮ ಜಿಲ್ಲೆಯ ಕೌನ್ಸಿಲ ಮೆಂಬರರಾದ ಶ್ರೀ|| ಮಂಜುನಾಥ ಭಟ್ಟ ಕರ್ಕಿ ಇವರಿಗೆ ಬಾರ್ಡೋಲಿಯ ಪ್ರಶ್ನೆಯ ಮೇಲೆ ರಾಜೀನಾಮೆ ಕೊಡಬೇಕಾಗಿ ಇಲ್ಲಿಯ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ತಂತಿ ಕೊಟ್ಟಿದ್ದರು. ಅದಕ್ಕೆ ಶ್ರೀ|| ಕರ್ಕಿಯವರು ಉತ್ತರ ಕೊಟ್ಟರು — "ಮರುಚುನಾವಣೆಯಲ್ಲಿ ಪ್ರತಿಸ್ಪರ್ಧಿಗಳು ನಿಂತರೆ ಬಾರ್ಡೋಲಿಯ ಕಾರ್ಯಕ್ಕೆ ಬಾಧೆ ತಟ್ಟುವಂತಿದೆ. ಪ್ರತಿಸ್ಪರ್ಧಿಗಳಿಲ್ಲದೆ ಮರು ಚುನಾವಣೆಯಾಗುವದು ಸಂಶಯಾಸ್ಪದವಿದೆ. ಗೆಳೆಯರು ಈಗಲೇ ರಾಜೀನಾಮೆ ಕೊಡಲು ಅನುಕೂಲಾಭಿಪ್ರಾಯಪಡುವದಿಲ್ಲ" ಹೀಗೆ ತಂತಿಯಿಂದ ತಿಳಿಸಿರುತ್ತಾರೆ. ಶ್ರೀ|| ಕರ್ಕಿಯವರ ಈ ಧೋರಣದಿಂದ ಇಲ್ಲಿ ಬಹಳ ಅಸಂತೋಷವಾಗಿದೆ.

ಕಾರವಾರ— ವೇ| ಶಾ|| ಸಂ| ತಾಂಬೆ ಶಾಸ್ತ್ರಿಗಳು "ಮಾನವ ಜಾತಿಯ ಸಾಮಾನ್ಯ ಧರ್ಮ" ವೆಂಬ ವಿಷಯದ ಮೇಲೆ ಇಲ್ಲಿಯ ಸೋಮನಾಥ ಮಂದಿರದಲ್ಲಿ ಪ್ರವಚನಗಳನ್ನು ಕೊಟ್ಟರು. ಪ್ರವಚನಗಳು ಬೋಧಪ್ರದವಿದ್ದವು. "ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು" ಎಂಬ ತತ್ವವನ್ನು ಸಪ್ರಮಾಣ ಶಾಸ್ತ್ರಿಗಳು ಪ್ರತಿಪಾದಿಸಿದರು. ಇಲ್ಲಿಂದ ಶಾಸ್ತ್ರಿಗಳು ಸದಾಶಿವಗಡಕ್ಕೆ ಹೋಗಿ ಅಲ್ಲಿಂದ ಅಂಕೋಲೆಗೆ ಹೋದರು.

ವೈ| ಮಂಜುನಾಥ ಪ್ರಭು ಅಂಕೋಲಾ ಇವರ ನಿಧನದಿಂದ ~~ದೇವಳ ಕಮಿಟಿಯಲ್ಲಿ~~ ಬರಿದಾದ ಜಾಗವನ್ನು ತುಂಬಿ ತರುವದಕ್ಕಾಗಿ ಜಿಲ್ಲಾ ಕಲೆಕ್ಟರನವರಲ್ಲಿ ಬೇರೆ ಬೇರೆ ಉಮೇದ್ವಾರರ ಅರ್ಜಿಗಳ ವಿಚಾರ ನಡೆಯಿತು. ಅಂಕೋಲೆಯಿಂದ ಸ್ಪರ್ಧೆ ಇದ್ದ ದಾಖಲಾಗಿತ್ತು. ಅದರಿಂದ ಅಲ್ಲಿಯ ಎಲ್ಲ ಮತದಾರರಿಗೆ ಅರ್ಜಿ ದಾಖಲ್ಮಾಡಲು ಇದೇ ಬರುವ ಜುಲೈ ೧೪ನೇ ತಾರೀಖಿನ ತನಕ ಅವಧಿ ಕೊಡಲ್ಪಟ್ಟಿದೆ.

ಬಾರ್ಡೋಲಿ ನಿಧಿಯು ಸಂಗ್ರಹಿಸಲ್ಪಡುತ್ತದೆ.

ಕಾರವಾರ ಹೈಸ್ಕೂಲಿನ ಗೋಂಡಾ ಸದಾಶಿವ ಪೈಲ ಎಂಬ ಹುಡುಗನು ಈಜಹೋದಾಗ ತಾರೀಖು ೨೬ನೇಗೆ ಮುಳುಗಿ ಸತ್ತನು. ಬರೇ ೧೮ ವರ್ಷ ಪ್ರಾಯದ ಹುಡುಗನು ಆರನೇ ಇಯತ್ತೆ ಕಲಿಯುತ್ತಿದ್ದನು, ಮದ್ವೆಯಾಗಿದ್ದನು. ವಿಧವೆ ಹೆಂಡತಿಯ ಪಾಡು!

ಬಾಡೆ— ಇಲ್ಲಿ ತಾರೀಖು ೨೯-೬-೨೮ನೇಗೆ ಶ್ರೀ|| ವಾಸುದೇವರಾವ ಮಾಗಳೇ ಇವರ ಅಧ್ಯಕ್ಷತೆಯಲ್ಲಿ ನಂದನಗದ್ದೆ, ಕೋಡಿಬಾಗ, ಸಂಕೇರಿ, ಕಾಜೂಬಾಗ, ಬಾಡಗಳ ಹಾಗು ಕಾರವಾರ ಪೇಟೆ ಮೊಗೇರರ ಹಾಗು ಜಮೀನದಾರರ ಸಭೆಸೇರಿ ಕೆಳಗಿನ ಠರಾವುಗಳು ಸರ್ವಾನುಮತದಿಂದ ಮನ್ನಿಸಲ್ಪಟ್ಟವು (೧) ಹೊಲಗಳ ವಿಭಾಗಗಳನ್ನು ಪ್ರತಿಬಂಧಿಸುವ ಬೇಲಿ ಮತ್ತು ಹೊಲಗಳ ಧನಧಾನ್ಯಕ್ಕೆ ಬೇಲಿಗಳು ಹಾನಿಕಾರಕವಿರುವದರಿಂದ ಅವುಗಳ ನಿಷೇಧ ಮತ್ತು ಅವುಗಳನ್ನು ನಾಶಪಡಿಸುವ ಕಾಯಿದೆಗೆ ಮುಂಬಯಿ ಕಾಯದೆ ಕೌನ್ಸಿಲಿಗೆ ವಿನಂತಿ, (೨) ಸದರೀ ಬೇಲಿಗಳು ಕೌನ್ಸಿಲಿನಲ್ಲಿ ಪಾಸಾಗುವಂತೆ ಪ್ರಯತ್ನಿಸಲಿಕ್ಕೆ ಶ್ರೀ|| ಕರ್ಕಿಯವರಿಗೆ ವಿನಂತಿ, (೩) ಮುಂಬಯಿ ಪ್ರಸಿದ್ಧ ವಿನೋದಯೋಜನದವರು ಮುಂಬಯಿ ಸರಕಾರಕ್ಕೆ ಮನೆಗಳ ನಿರ್ಮಾಣಗಳಿಗಾಗಿ ಮಾಡಿದ ಬೇಡಿಕೆಗಳಿಗೆ ಬೆಂಬಲ (೪) ಬಾರ್ಡೋಲಿಯಲ್ಲಿ ಸರಕಾರವು ನಡಿಸಿದ ಅತ್ಯಾಚಾರಗಳ ನಿಷೇಧ ಮತ್ತು ಬಾರ್ಡೋಲಿ ಸತ್ಯಾಗ್ರಹಿಗಳ ಅಭಿನಂದನ ಮತ್ತು ಅವರಿಗೆ ಸಹಾನುಭೂತಿ. ಈ ಠರಾವುಗಳಲ್ಲಿ ೧-೨ ನೇಗಳನ್ನು ಶ್ರೀ|| ಕರ್ಕಿಯವರಿಗೂ, ೧ನೇದನ್ನು ಮುಂಬಯಿ ಕಾಯದೇ ಕೌನ್ಸಿಲಿನ ಸೆಕ್ರೆಟರಿಗೂ, ೩ನೇದನ್ನು ಮುಂಬಯಿ ಸರಕಾರದ ಸೆಕ್ರೆಟರಿಗೂ, ೪ನೇದನ್ನು ದೇಶಭಕ್ತ ವಲ್ಲಭಭಾಯಿ ಪಟೇಲರಿಗೂ ಕಳಿಸಿಕೊಡುವ ವ್ಯವಸ್ಥೆಯಾಗಿದೆ. ಸಭೆಯಲ್ಲಿ ಗಣಪತರಾವ ನಾಡಕರ್ಣಿಯವರು ಹೊಲಗಳ ಬಗ್ಗೆ ೨ ಬೇಲಿಗಳ ಭಯಂಕರ ಸ್ವರೂಪವನ್ನು ತಿಳಿಸಿಹೇಳಿದರು. ಸಭೆಯಾದಂದಿನಿಂದ ಇಲ್ಲಿಯ ಜನರಲ್ಲಿ ಇದೇ ಚರ್ಚೆಯ ವಿಷಯವಾಗಿದೆ. ಬೇಲಿಗಳ ಕ್ರಾಂತಿಕಾರಕ ರೂಪವನ್ನು ಕಂಡು ಜನರು ಗಾಬರಿಗೊಂಡಿದ್ದಾರೆ.

ಪೋಸ್ಟ ಖಾತೆಯ ಹೊಸ ವ್ಯವಸ್ಥೆಯಾದಂದಿನಿಂದ, ಬಾಡದೊಳಗಿನ ಪೋಸ್ಟ ಆಫೀಸಿಗೆ ಹೋಗಬೇಕಾದರೆ, ಮಾರ್ಗದ ಮೇಲಿಂದ ಎರಡು ಫರ್ಲಾಂಗು ಹೊಲದೊಳಗಿಂದ ಒಳಗೆ ಹೋಗಬೇಕಾಗುವದರಿಂದ ಜನರಿಗೆ ತುಂಬಾ ಅನಾನುಕೂಲವಾಗಿದೆ. ಇತ್ತ ಕಡೆಗೆ ಪೋಸ್ಟ ಇನ್ಸ್‌ಪೆಕ್ಟರರು ಲಕ್ಷ ಕೊಡಬೇಕು.

— ಮೈಸೂರಿನಲ್ಲಿ ಮುದ್ರಣ ಕಾನೂನು ರದ್ದು ಮಾಡಬೇಕೆಂಬ ನಿರ್ಧಾರವಾಗಿ ೨-೩ ತಿಂಗಳುಗಳಾಗುತ್ತ ಬಂದವು, ಶ್ರೀ|| ಪಡಸೂರು ರಾಮಚಂದ್ರರಾಯರು ಹೊರಡಿಸುವ "...ಯರ ಪತ್ರಿಕೆ" ಯನ್ನು ಜಪ್ತಿ ಮಾಡುವ ಕ್ರಮವು ಎಂದಿನಂತೆ ನಡೆದಿದೆ. ಹೀಗೆ ಯಾಕೆ?

— ಉಡುಪಿಯ "ಸತ್ಯಾಗ್ರಹಿ" ಯು ಪಕ್ಷಪತ್ರಿಕೆಯಾಗಿ ಪ್ರಕಟವಾಗಹತ್ತಿದೆ. ವಾರ್ಷಿಕ ಚಂದಾ ಅಂಚೆ ವೆಚ್ಚ ಸೇರಿ ರೂ. ೨|| ಇಡಲ್ಪಟ್ಟಿದೆ.

— ಯಾರೋ ಒಬ್ಬ ಅಧಮರು ಪೂನೆಯೊಳಗಿನ ಶಿವಾಜಿ ಮಂದಿರದೊಳಗಿನ ಶ್ರೀ ಶಿವಾಜಿ ಮಹಾರಾಜರ ಮೂರ್ತಿಯ ಮೇಲೆ ಸಗಣಿ ಒಗೆದು ಹಳೇ ದಪ್ಪ ಜೋಡಿನ ಸರ ಹಾಕಲುದ್ಯುಕ್ತರಾಗಿದ್ದರು. ಪೋಲೀಸರು ಈ ಬಗ್ಗೆ ತಪಾಸು ಮಾಡುತ್ತಿದ್ದಾರೆ.

ಮಹಾತ್ಮರ ಆತ್ಮಚರಿತ್ರ.

(೧೦) ನನ್ನ ಪರೀಕ್ಷೆ

ಆಶ್ರಮವು ಹೊರಡಿಸಿ ಕೆಲವು ತಿಂಗಳುಗಳಾಗುವಷ್ಟರಲ್ಲಿಯೇ ನಮ್ಮ ಪರೀಕ್ಷೆಯ ಸಮಯವು ಬಂದೊದಗಿತು. ನಾನು ಇದನ್ನು ಎಂದೂ ಯೋಚಿಸಲಿಲ್ಲ. ಅಮೃತಲಾಲ ಠಕ್ಕರರವರು ನನಗೊಂದು ಪತ್ರ ಬರೆದರು — "ಒಂದು ಅಸ್ಪೃಶ್ಯ ಕುಟುಂಬದವರು ನಿಮ್ಮ ಆಶ್ರಮದಲ್ಲಿ ಸೇರಬಯಸುತ್ತಾರೆ. ಇವರು ದೀನರು ಹಾಗೂ ಪ್ರಾಮಾಣಿಕರು. ನೀವು ಇವರನ್ನು ಸ್ವೀಕರಿಸುವಿರಾ?" ಎಂದು ಅವರು ಬರೆದಿದ್ದರು.

ನಾನು ದಿಗಿಲುಬಿದ್ದೆ. ಠಕ್ಕರ ಬಾಪಾರಂಥವರಿಂದ ಶಿಫಾರಸು ಪಡೆದು ಅಸ್ಪೃಶ್ಯ ಕುಟುಂಬವು ಆಶ್ರಮದಲ್ಲಿ ಇಷ್ಟು ಬೇಗನೇ ಸೇರಬಯಸುತ್ತದೆಂದು ನಾನು ಸ್ವಪ್ನದಲ್ಲಿಯೂ ಯೋಚಿಸಿರಲಿಲ್ಲ. ಈ ಪತ್ರವನ್ನು ನಾನು ನನ್ನ ಜೊತೆಗಾರರಿಗೆ ತೋರಿಸಿದೆನು. ಎಲ್ಲರೂ ಅದನ್ನು ಅಂಗೀಕರಿಸಿದರು. ಆ ಕುಟುಂಬವನ್ನು ಆಶ್ರಮದಲ್ಲಿ ಸೇರಿಸಿಕೊಳ್ಳಲು ನಮಗೆ ಸಂತೋಷವೆಂದು ಅಮೃತಲಾಲ ಠಕ್ಕರರವರಿಗೆ ನಾನು ಬರೆದೆನು. ಆಶ್ರಮದ ನೇಮಗಳನ್ನೆಲ್ಲ ಆ ಕುಟುಂಬದವರು ಪಾಲಿಸಬೇಕಾಗಿದೆಯೆಂದು ಬರೆದೆನು. ಈ ಕುಟುಂಬದಲ್ಲಿ ದೂದಾಭಾಯಿ, ಆತನ ಹೆಂಡತಿ ದಾನಿಬೇನ ಮತ್ತು ಈ ದಂಪತಿಗಳ ... ಎಂಬ ಮಗಳು ಲಕ್ಷ್ಮಿಯು ಆ ಕಾಲಕ್ಕೆ ಅಂಬೆಗಾಲಿಡುತ್ತಿದ್ದಳು. ದೂದಾಭಾಯಿಯವರು ಮುಂಬಯಿಯಲ್ಲಿ ... ಶಿಕ್ಷಕರಾಗಿದ್ದರು. ಆಶ್ರಮದ ನೇಮಗಳನ್ನು ಅವರು ಪಾಲಿಸಲೊಪ್ಪಿದರು. ಅವರೆಲ್ಲರಿಗೂ ಆಶ್ರಮದಲ್ಲಿ ಸೇರಿಕೊಳ್ಳಲಾಯಿತು.

ಆದರೆ, ಆಶ್ರಮಕ್ಕೆ ಆಶ್ರಯ ಕೊಡುವ ಗೆಳೆಯರಲ್ಲಿ ಇದರಿಂದ ದೊಡ್ಡದೊಂದು ಗಲಿಬಿಲಿ ಉಂಟಾಯಿತು. ಬಾಗಿಲು ಬಾವಿಯನ್ನು ಬಂಗಲೆಯ ಮಾಲೀಕರ ಸಹ ಉಪಯೋಗಿಸುತ್ತಿದ್ದರು. ಮೊಟ್ಟಮೊದಲು ಬಾವಿಯ ಉಪಯೋಗದ ವಿಷಯ ಕಷ್ಟ ಬಂತು. ರಾಟೆಯಿಂದ ನೀರು ಸೇದುತ್ತಿದ್ದರು. ನಾವು ರಾಟೆಯಿಂದ ನೀರು ಸೇದುವಾಗ ನೀರಿನ ಹನಿ ಬಿದ್ದು ತಾನು ಭ್ರಷ್ಟನಾಗುತ್ತೇನೆಂದು ರಾಟೆಯ ಆಳು ಆಕ್ಷೇಪಿಸುತ್ತಿದ್ದನು. ನಮಗೆಲ್ಲರಿಗೂ ಬೈಯ್ಯುತ್ತಿದ್ದನು. ದೂದಾಭಾಯಿಯವರಿಗೆ ಕಾಡುತ್ತಿದ್ದನು. ಬೈಗಳಿಗೆ ಲಕ್ಷ್ಯ ಕೊಡದೆ ನೀರು ಸೇದುವುದನ್ನು ಎಡಬಿಡದೆ ನಾನು ಎಲ್ಲರಿಗೂ ಹೇಳಿದೆನು. ಪ್ರತಿಯಾಗಿ ನಾವು ಬೈಯುವವರಲ್ಲವೆಂದು ಆತನು ತಿಳಿದೊಡನೆ ತನ್ನಷ್ಟಕ್ಕೆ ತಾನು ನಾಚಿ ನಮಗೆ ಆತನು ಉಪದ್ರವ ಕೊಡುವುದನ್ನು ಬಿಟ್ಟನು.

ದ್ರವ್ಯಸಹಾಯವೆಲ್ಲ ನಿಂತಿತು. ಆಶ್ರಮದ ನೇಮಗಳನ್ನು ಪಾಲಿಸುವ ಅಸ್ಪೃಶ್ಯನನ್ನಾದರೂ ಒಂದು ... ಗೆಳೆಯರಿಗೆ ಇಂಥ ಅಸ್ಪೃಶ್ಯನನ್ನು ಸೇರಿಸಿದೆನೆಂದು ಎಂದೂ ತೋರಿದ್ದಿಲ್ಲ. ದ್ರವ್ಯಸಹಾಯ ನಿಂತ ತಕ್ಷಣವೇ ಸಾಮಾಜಿಕ ಬಹಿಷ್ಕಾರದ ಸೂಚನೆಯಿದ್ದಿತು. ಇದಕ್ಕೆಲ್ಲ ನಾವು ತಯಾರಾಗಿದ್ದೆವು. ನಮಗೆ ಬಹಿಷ್ಕಾರ ಹಾಕಿದ್ದರಿಂದ ದೈನಿಕ ಜೀವನಕ್ಕೆ ಅನುಕೂಲತೆಗಳು ನಮಗೆ ದೊರೆಯುವುದಿಲ್ಲವಾದರೆ ಅಹಮದಾಬಾದವನ್ನು ನಾವು ಬಿಡಲಾಗದೆಂದು ಜೊತೆಗಾರರಿಗೆ ಹೇಳಿದೆನು. ಅಸ್ಪೃಶ್ಯರ ಕೇರಿಯಲ್ಲೇ ಹೋಗಿ ಕಾಯಕಷ್ಟದಿಂದ ಬಂದ ಅನ್ನದ ಮೇಲೆ ಉಳಕೊಳ್ಳತಕ್ಕದ್ದೆಂದೂ ನಾನು ಹೇಳಿದೆನು.

ಕಡೆಗೆ ಪ್ರಸಂಗವು ಬಂತು. ಒಂದು ದಿನ ಮಗನಲಾಲ ಗಾಂಧಿಯು ನನಗೆ ತಿಳಿಸಿದ್ದೇನಂದರೆ — "ಎಲ್ಲ ಹಣ ಖರ್ಚಾಯಿತು. ಮುಂದಿನ ತಿಂಗಳಿಗೆ ಏನೂ ಹಣವಿಲ್ಲ" ಗಾಬರಿಯಾಗದೆ ನಾನು ನುಡಿದದ್ದೇನಂದರೆ — "ಹಾಗಾದರೆ, ನಾವು ಅಸ್ಪೃಶ್ಯರ ಕೇರಿಗೆ ಹೋಗುವ" ಇದೇನು ನನ್ನ ಮೇಲೊದಗಿದ ಮೊದಲನೇ ಆಪತ್ತಲ್ಲ. ಇಂಥ ಪ್ರಸಂಗಗಳಲ್ಲೆಲ್ಲ ಕೊನೆಗೆ ಭಗವಂತನು ನನಗೆ ಸಹಾಯ ಮಾಡಿದ್ದಾನೆ. ನನಗೆ ಮಗನಲಾಲನು ಮುಂಜಾಗ್ರತೆ ಕೊಟ್ಟು ಬಹಳ ದಿವಸಗಳಾಗಿರಲಿಲ್ಲ. ಒಂದು ದಿನ ಬೆಳಿಗ್ಗೆ ಒಬ್ಬ ಹುಡುಗನು ಬಂದು ಹೊರಗಡೆ ಒಬ್ಬರು ಬಂಡಿಯಲ್ಲಿ ನನ್ನ ನಿರೀಕ್ಷಣೆ ಮಾಡುತ್ತಾರೆಂದೂ ನನಗೆ ಕಾಣಲಪೇಕ್ಷಿಸುತ್ತಾರೆಂದೂ ಹೇಳಿದನು. ನಾನು ಹೊರಹೋದೆ. "ಆಶ್ರಮಕ್ಕೆ ಕೆಲವು ಸಹಾಯ ಮಾಡಬಯಸಿದ್ದೇನೆ. ನೀವದನ್ನು ಅಂಗೀಕರಿಸುವಿರಾ?" ಎಂದು ಅವರು ನನಗೆ ಕೇಳಿದರು.

"ನಾನು ಆನಂದದಿಂದ ಸ್ವೀಕರಿಸುವೆನು. ಇದೀಗಲೇ ನಮ್ಮ ಬಳಿಯಲ್ಲಿದ್ದ ಹಣವೆಲ್ಲ ಖರ್ಚಾಗುತ್ತ ಬಂದಿದೆ" ಎಂದು ನಾನು ಹೇಳಿದೆನು.

"ನಾಳೆ ಇದೇ ಹೊತ್ತಿಗೆ ನಾನಿಲ್ಲಿ ಬರುತ್ತೇನೆ. ನೀವಿರುವಿರಲ್ಲವೇ?" ಎಂದು ಶೇಟರವರು ಕೇಳಿದರು.

"ಹೌದು" ಎಂದು ನಾನು ಹೇಳಿದೆನು.

ಅವರು ನಡೆದರು. ಮಾರನೇ ದಿನ ಅವರು ಹೇಳಿದ ಹೊತ್ತಿಗೆ ಬಂಡಿ ನಮ್ಮ ಆಶ್ರಮದ ಬಳಿ ಬಂತು. ಕೊಂಬು ಊದಲ್ಪಟ್ಟಿತು. ಜನರು ಆ ಸುದ್ದಿ ಹೇಳಿದರು. ಶೇಟರು ಒಳಬರಲಿಲ್ಲ. ಅವರಿಗೆ ಕಾಣಲು ನಾನು ಹೊರಹೋದೆ. ೧೩ ಸಾವಿರ ರೂಪಾಯಿಗಳ ನೋಟುಗಳನ್ನು ಅವರು ನನ್ನ ಕೈಯಲ್ಲಿಟ್ಟು ಹೊರಟುಹೋದರು.

ಈ ಸಹಾಯವನ್ನು ನಾನೆಂದಿಗೂ ನಿರೀಕ್ಷಿಸಿರಲಿಲ್ಲ. ಸಹಾಯ ಕೊಡುವ ವಿಧವೂ ಹೊಸದಾಗಿತ್ತು. ಈ ಗೃಹಸ್ಥರು ಹಿಂದೆ ಆಶ್ರಮಕ್ಕೆ ಬಂದವರಲ್ಲ. ಒಮ್ಮೆ ಮಾತ್ರ ನಾನವರಿಗೆ ಭೆಟ್ಟಿ ... ಕಾಣುತ್ತದೆ. ಆಶ್ರಮಕ್ಕೆ ಬರದೆ ಏನೂ ಕೇಳದೆ ದ್ರವ್ಯಸಹಾಯ ಮಾಡಿ ಹಾಗೇ ಹೊರಟುಹೋಗುವುದೆಲ್ಲ ನನಗೆ ವಿಚಿತ್ರವೆನಿಸಿತು. ಅಸ್ಪೃಶ್ಯರ ಕೇರಿಗೆ ಹೋಗುವ ಆಲೋಚನೆಗೆ ಈ ದ್ರವ್ಯಸಹಾಯದ ಮೂಲಕ ತಡೆಬಿತ್ತು. ಒಂದು ವರ್ಷದ ಖರ್ಚು ದೊರೆಯಿತು.

ಸಮಾಜದಲ್ಲಿ ಗಲಿಬಿಲಿಯಾದಂತೆ ಆಶ್ರಮದಲ್ಲಿಯೂ ಗಲಿಬಿಲಿಯಾಯಿತು. ದಕ್ಷಿಣ ಆಫ್ರಿಕೆಯ ಅಸ್ಪೃಶ್ಯರು ನಮ್ಮ ಮನೆಗೆ ಬಂದು ನಮ್ಮ ಸಂಗಡ ಉಳಕೊಂಡು ಊಟ ಮಾಡುತ್ತಿದ್ದರೂ ಆಶ್ರಮದಲ್ಲಿ ಅಸ್ಪೃಶ್ಯರಿಗೆ ಪ್ರವೇಶ ಕೊಡಲು ನನ್ನ ಹೆಂಡತಿಗೆ ಮತ್ತು ಇತರ ಹೆಂಗಸರಿಗೆ ಸರಿದೋರಲಿಲ್ಲ. ದಾನಿಬೇನರಿಗೆ ಅವರು ತಾತ್ಸಾರ ಮಾಡುತ್ತಾರೆಂದು ನಾನು ನೋಡಿದೆನು; ಕೇಳಿದೆನು. ಹಣದ ಅಡಚಣೆಯಿಂದ ನನಗೆ ಚಿಂತೆಯಾಗಿರಲಿಲ್ಲ. ಆದರೆ ಈ ಕಾಟವು ಬದಲಾಗಿ ಈ ಪ್ರಕಾರವು ನನ್ನಿಂದ ಸಹಿಸಲಾಗಲಿಲ್ಲ. ದಾನಿಬೇನಳು ಸಾಮಾನ್ಯ ಹೆಂಗಸು. ದೂದಾಭಾಯಿಯವರಿಗೆ ಸ್ವಲ್ಪ ಶಿಕ್ಷಣವಿತ್ತು. ಗ್ರಹಣಶಕ್ತಿಯುಳ್ಳವರಾಗಿದ್ದರು. ಅವರ ಸಹನಶೀಲತೆಯನ್ನು ನೋಡಿ ನನಗೆ ಆನಂದವಾಯಿತು. ಕೆಲವು ಬಾರಿ ಅವರಿಗೆ ಸಿಟ್ಟು ಬರುತ್ತಿತ್ತು. ಆದರೆ ಒಟ್ಟಿನ ಮೇಲೆ ಅವರು ತಾಳ್ಮೆಯಿಂದ ನಡಕೊಂಡರು. ಚಿಕ್ಕಪುಟ್ಟ ಅಪಮಾನಗಳನ್ನು ಸಹಿಸಬೇಕಾಗಿ ನಾನವರಿಗೆ ಸಮಾಧಾನ ಹೇಳಿದೆನು. ಅವರು ಸಮ್ಮತಿಸಿದರು. ಇದಲ್ಲದೆ ತಮ್ಮ ಹೆಂಡತಿಗೂ ತಾಳ್ಮೆ ಹಿಡಿಯಲು ಬೋಧಿಸಿದರು.

ಈ ಕುಟುಂಬವನ್ನು ಆಶ್ರಮದಲ್ಲಿ ಸೇರಿದ್ದರಿಂದ ಆಶ್ರಮವಾಸಿಗಳಿಗೆ ಅಮೂಲ್ಯ ಬೋಧ ದೊರಕಿತು. ಆಶ್ರಮದಲ್ಲಿ ಅಸ್ಪೃಶ್ಯತೆಯನ್ನು ಪಾಲಿಸುವುದಿಲ್ಲೆಂದು ನಾವು ಮೊಟ್ಟಮೊದಲು ಪ್ರಕಟಿಸಿದಂತಾಯಿತು. ಆಶ್ರಮಕ್ಕೆ ಆಶ್ರಯ ಕೊಡುವವರಿಗೆ ಮುಂಜಾಗ್ರತೆ ಸಿಕ್ಕಿತು. ಈ ಕಡೆ ಆಶ್ರಮದ ಕೆಲಸವು ಬಹುಮಟ್ಟಿಗೆ ಸುಲಭವಾಯಿತು. ಈ ಆಶ್ರಮದ ಖರ್ಚು ದಿನಾ ಬೆಳೆಯುತ್ತ ನಡೆಯಿತು. ಆದರೆ, ಅದನ್ನೆಲ್ಲ ಪುರಾತನವಾದಿಗಳೇ ಪೂರೈಸಿದ್ದಾರೆ. ಇದರ ಮೇಲಿಂದ ಅಸ್ಪೃಶ್ಯತೆಯ ಮೂಲಾಧಾರವು ಸಡಿಲಾಗಿದೆಂದು ಸ್ಪಷ್ಟವಾಗುತ್ತದೆ. ಈ ಲಕ್ಷಣದ ಬಗ್ಗೆ ಅನೇಕ ಸಾಕ್ಷಿ ಕೊಡಬಹುದು. ಆದರೆ, ಅಸ್ಪೃಶ್ಯರ ಜೊತೆಗೆ ಊಟ ಮಾಡುವಷ್ಟರ ತನಕ ಬಂಧನಗಳನ್ನು ಪಾಲಿಸುವ ಆಶ್ರಮಕ್ಕೆ ಧರ್ಮಪರರಾದ ಹಿಂದುಗಳು ಆಶ್ರಯ ಕೊಡಲು ಅನುಮಾನಿಸುವುದಿಲ್ಲವೆಂಬುದು ಸಾಮಾನ್ಯ ಸಂಗತಿಯಲ್ಲ.

ಈ ವಿಷಯಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ನನಗೆ ಬರೆಯಲಾಗದೆಂದು ತಿಳಿಸಲು ವಿಷಾದವಾಗುತ್ತದೆ. ಈ ಮುಖ್ಯ ವಸ್ತುವಿಗೆ ಅನುಷಂಗಿಕವಾದ ಸೂಕ್ಷ್ಮ ಪ್ರಶ್ನೆಗಳನ್ನು ನಾವು ಬಿಡಿಸಿದ ಬಗೆಯನ್ನೂ, ಅನಪೇಕ್ಷಿತವಾದ ಕಷ್ಟಗಳನ್ನು ಪರಿಹರಿಸಿಕೊಂಡ ಸಂಗತಿಗಳನ್ನೂ, ಈ ಸತ್ಯಪ್ರಯೋಗದ ವರ್ಣನೆಗೆ ಅವಶ್ಯವಾದ ಇತರ ಸಂಗತಿಗಳನ್ನೂ ಹೇಳಲಾಗುವುದಿಲ್ಲ. ಮುಂದಿನ ಅಧ್ಯಾಯಗಳಿಗೂ ಇದೇ ದೋಷವು ಪ್ರಾಪ್ತವಾಗುವದು. ಮಹತ್ವದ ವಿವರಗಳನ್ನು ಸಹ ನನ್ನಿಂದ ಹೇಳಬರಲಿಕ್ಕಿಲ್ಲ. ಈ ಪ್ರಯೋಗದೊಳಗಿನ ಬಹುತರವಾಗಿ ಎಲ್ಲ ಪಾತ್ರಗಳು ಜೀವಮಾನರಾಗಿದ್ದಾರೆ. ಆದರಿಂದ ಅವರಿಗೆ ಸಂಬಂಧಪಟ್ಟ ಸಂಗತಿಗಳನ್ನು ಹೇಳುವಾಗ ಅವರ ಅಪ್ಪಣೆ ಪಡೆಯದೆ ನಾಮನಿರ್ದೇಶ ಮಾಡುವದು ಯುಕ್ತವಲ್ಲ. ಎಲ್ಲರ ಒಪ್ಪಿಗೆಯನ್ನು ಪಡಕೊಳ್ಳುವದು ಕಷ್ಟಸಾಧ್ಯ ಕೆಲಸ. ಆಗಿಂದಾಗ ಈ ಅಧ್ಯಾಯಗಳನ್ನು ಅವರ ಕಡೆಯಿಂದ ತಿದ್ದಿಕೊಳ್ಳುವದೂ ಅಸಾಧ್ಯ ಮಾತು. ಇದಲ್ಲದೆ ಇಂಥ ಕ್ರಮವು ಆತ್ಮಚರಿತ್ರದ ಕಕ್ಷೆಯಲ್ಲಿ ಬರುವದಿಲ್ಲ. ಮುಂದಿನ ಚರಿತ್ರಭಾಗವು ಸತ್ಯಶೋಧಕರಿಗೆ ಅಮೂಲ್ಯವಿದೆ. ಆದರೂ ಅದರ ಹುರ್ಯ ... ಮೂಲಕ ಕೆಲವು ವಿಷಯಗಳನ್ನು ಉಲ್ಲೇಖಿಸದೆ ಅದನ್ನು ಹೇಳಬೇಕಾಗಿದೆ. ದೇವರು ನಡೆಸಿದರೆ ಅಸಹಯೋಗದ ತನಕ ಈ ಚರಿತ್ರವನ್ನು ಬರೆಯಬೇಕೆಂದು ನನ್ನ ಸಂಕಲ್ಪವಿದೆ.

— ಅಧಿಕ ... ಸಂಘದವರು ... ಸ್ಥಾಪಿಸಲಿಕ್ಕಿದ್ದ ಇಂಗ್ಲಿಷ ಶಾಲೆಗೆ ಅಲ್ಲಿಯ ಶ್ರೀ ಮಾ। ಕೃಷ್ಣಜಿ ನಾರಾಯಣ ... ಯವರು ೧೫ ಸಾವಿರ ರೂಪಾಯಿಗಳನ್ನಿತ್ತು, ತಮ್ಮ ಪತಿಗಳ ಸ್ಮಾರಕವನ್ನೇರ್ಪಡಿಸಿದ್ದಾರೆ. ಶಾಲೆಗೆ ಶ್ರೀ ಮಾ। ಕೃಷ್ಣಾಜಿಗಳವರ ಹೆಸರು ಕೊಡಲ್ಪಟ್ಟಿದೆ.

-- ಅಮೇರಿಕೆಯ ಲೆಕ್ಚರೆಂದು ಶೋಧ ಹೆಣ್ಣು ಕಪ್ಪೆಗಳನ್ನು ಕೆಲಕಾಲ ಬಿಸಿನೀರಿನಲ್ಲಿಟ್ಟರೆ ಅವು ಗಂಡಾಗುತ್ತವಂತೆ ಇದೆಂಥ ಆಶ್ಚರ್ಯ!

— ದಾವಣಗೇರಿಯಲ್ಲಿ ಬೆಳ್ಳು ನಾಯಿಯು ಮೊಲೆಹಾಲು ಕುಡಿಯುತಂತೆ ಕಣ್ಣಾರೆ ಕಂಡವರು ಪ್ರಕಟಿಸುತ್ತಾರೆ ಇದೆಂಥ ವಿಚಿತ್ರ !

पाहिजेत !— गावोंगावी फिरून आमचे कडे तयार होणारा हरएक प्रकारचा सोन्या चांदीचा माल विक्री करण्याकरिता हुशार, कर्तव्यदक्ष व सचोटीचे असे कानडी, मराठी व हिंदी जाणणारे फिरते एजंट पाहिजे आहेत.

एजंट होऊ इच्छिणाऱ्यांनी लायक असा कमीतकमी दोन हजाराचा जामीन अगर ऐपत अथवा जबाबदारी घ्यावी लागेल. अनुभवशीर लोकांना विशेष पसंत केले जाईल भरपूर पगार, कमिशन, ट्रेवलिंगखर्च व ट्रेवलिंगचा बोर्डिंग लॉजिंगखर्च!

विशेष माहितीकरिता तावडतोब खालील पत्त्यावर आजच लिहा

शेट केशव लक्ष्मण आणि सन्स, मॅन्युफॅक्चरिंग जुवेलर्स, कारवार (उ कानडा.)

ಬಾರ್ದೋಲಿಯ ವೃತ್ತಾಂತ.

ಬಾರ್ದೋಲಿಯ ಪ್ರಕರಣದಲ್ಲಿ ಸಂಧಾನವಾಗುವ ಆಶೆಯು ಈಗ ದೂರವಾಯಿತೆಂದು ಹೇಳಲಡ್ಡಿಯಿಲ್ಲ. ಮುಂಬಯಿ ವರ್ತಕ ಸಂಘದ ಅಧ್ಯಕ್ಷರಾದ ಎ. ಎಚ್. ಎ. ಮೋರಿಯವರಿಗೂ, ಮಂತ್ರಾಧಿಪರಾದ ಸರ್ ಲಿಸ್ಲೀ ವಿಲ್ಸನ್‌ರವರಿಗೂ ನಡೆದ ಸಂಭಾಷಣ ಪ್ರಸ್ತಾವಿನಿಂದ ಏನೂ ನಿಷ್ಪತ್ತಿಯಾಗಲಿಲ್ಲ. ಆಶೆಯಿಲ್ಲ ನಿರಾಶೆಯಾಗಿದೆ. ಗವರ್ನರರು ಈ ಪ್ರಕರಣವನ್ನು ರಾಜಿಯಿಂದ ಇತ್ಯರ್ಥಪಡಿಸಲು ಉತ್ಸುಕರಾಗಿದ್ದಾರೆ. ಆದರೆ, ಗವರ್ನರರ ಪರಿವಾರವು ಎಷ್ಟಕ್ಕೂ ಒಪ್ಪುವದಿಲ್ಲ. ಬಾರ್ದೋಲಿಯವರ ಅಪೇಕ್ಷೆಯಂತೆ ಸರಕಾರವು ಹಿಂಜರಿದರೆ ಸರಕಾರದ ಗೌರವಕ್ಕೆ ಹಾನಿ ತಟ್ಟಬಹುದೆಂಬ ಭಯವದೇಕವಾಗ ಹತ್ತಿದೆ. ತಪ್ಪು ಒಪ್ಪಿಕೊಂಡರೆ, ಸರಕಾರಕ್ಕೆ ಭೂಷಣವೆಂದು ಗವರ್ನರರಿಗೆ ವಿಚಾರಿ ಪ್ರಮುಖರು ಹೇಳಿದರೆ ಗವರ್ನರರು ಒಪ್ಪುತ್ತಾರೆ, ಆದರೆ ಪರಿವಾರದವರಿಗೆ ಈ ಹಿತೋಕ್ತಿಯು ಸರಿದೋರುವದಿಲ್ಲ. ಬಾರ್ದೋಲಿಯೊಳಗಿನ ಕರ ಹೇರಿಕೆಯ ಚೌಕಶಿಯ ಕ್ರಮವು ಸರಿಯಾಗಿ ನಡೆಯಲಿಲ್ಲೆಂದು ಸರಕಾರಕ್ಕೆ ಒಪ್ಪಿಗೆ. ಹೊಸ ಚೌಕಶಿಯನ್ನು ಲೋಕರು ಕೋರಿದಂತೆ ನಡಿಸಲಿಕ್ಕೆ ಸರಕಾರದ ಒಪ್ಪಿಗೆ. ಹೊಸ ಚೌಕಶಿ ಮಾಡಿದರೆ, ಅದರಂತೆ ನಡಕೊಳ್ಳಲಿಕ್ಕೆ ಸರಕಾರವು ಒಪ್ಪುತ್ತದೆ, ಬಾರ್ದೋಲಿಯವರೂ ಒಪ್ಪುತ್ತಾರೆ. ಸತ್ಯಾಗ್ರಹದ ಕಾದಾಟದಲ್ಲಿ ಸೆರೆಯಾಳಾದವರಿಗೆ ಬಿಡುಗಡೆ ಮಾಡಲಿಕ್ಕೆ ಸರಕಾರದ ಅಡ್ಡಿಯಿಲ್ಲ. ತೀರ್ವೆ ಕೊಡದೆ ಜಪ್ತಾದ ಭೂಮಿಗಳನ್ನು ಅವರವರಿಗೆ ಹಿಂದಿರುಗಿಸಿಕೊಡಲು ಸರಕಾರವು, ಜನರೂ ಸಾಹಚರ್ಯದಿಂದ ದುಡಿಯುವದು. ಹೊಸ ಚೌಕಶಿಯನ್ನು ಸರಕಾರಿ ಅಧಿಕಾರಿಗಳ ಕಡೆಯಿಂದಲೇ ನಡಿಸಲು ಶ್ರೀ|| ವಲ್ಲಭಭಾಯಿ ಪಟೇಲರು ಒಪ್ಪಿದರು. ಇಷ್ಟಾದರೂ ಸರಕಾರಕ್ಕೆ ಸಮಾಧಾನವಿಲ್ಲ. ಏರಿದ ತೀರ್ವೆಯನ್ನು ಮೊಟ್ಟಮೊದಲು ತೆತ್ತ ಹೊರತು ಹೊಸ ಚೌಕಶಿ ಕೈಕೊಳ್ಳುವದಿಲ್ಲೆಂದು ಸರಕಾರದ ಅಂಬೋಣ. ಹೊಸ ಚೌಕಶಿಯಲ್ಲಿ ಏರಿದ ತೀರ್ವೆಯು ಹೆಚ್ಚೆಂದು ತೀರ್ಮಾನವಾದರೆ ಸರಕಾರವು ಸೂಟು ಬಿಡಲು ಒಪ್ಪುವದಿಲ್ಲ. ಹೊಸ ಚೌಕಶಿಯಲ್ಲಿ ತೀರ್ವೆ ಹೆಚ್ಚಿದರೆ, ಈ ವರುಷದ ತೀರ್ವೆಯನ್ನು ತಾವು ಹಿಡಿದುಕೊಳ್ಳುತ್ತೇವೆಂದು ಬೇಸಾಯಗಾರರ ಅಂಬೋಣ. ಚೌಕಶಿ ಕ್ರಮದಂತೆ ನಡೆಯುತ್ತಿರುವಾಗ ಏರಿಕೆಯ ತೀರ್ವೆ ಕೊಳ್ಳಲು ಸರಕಾರಕ್ಕೆ ಅಧಿಕಾರವೆಲ್ಲಿದೆ? ಹೊಸ ಚೌಕಶಿಯಾಗುವ ತನಕ ಏರಿಸಿದ ತೀರ್ವೆಯ ರಕಮನ್ನು ಸರಕಾರವು ನೇಮಿಸಿದ ಮಧ್ಯಸ್ಥರ ಒಳಿಯಲ್ಲಿ ಠೇವಿಗಿಡಬೇಕೆಂದು ಸರಕಾರದ ಅಂಬೋಣ. ಹಾಗೆ ಇಡಲಿಕ್ಕೆ ಬಾರ್ದೋಲಿಯವರು ಒಪ್ಪುವದಿಲ್ಲ. ಬಂದರೆಲ್ಲೆಂದು ತಮ್ಮಿಂದ ಏರಿಸಿದ ತೀರ್ವೆಯನ್ನು ವಸೂಲ ಕೊಳ್ಳಲು ಸರಕಾರವು ಹಂಚಿಕೆ ಮಾಡುತ್ತಿದೆ. ಬಾರ್ದೋಲಿಯವರು ಸ್ವಾಭಿಮಾನ ಕಳಕೊಂಡು ಸಂಧಾನ ಮಾಡಿಕೊಂಡು ಈವರೆಗಿನ ಕಾದಾಟದ ಫಲವನ್ನು ಕಳಕೊಳ್ಳುವಷ್ಟು ಮೂರ್ಖರಲ್ಲ. ಕಮಿಶನರರೂ, ಸೂರತ ಜಿಲ್ಲೆಯ ಪೋಲೀಸ ಸುಪರಿಂಟೆಂಡೆಂಟರೂ ಗವರ್ನರರ ಭೆಟ್ಟಿಕೊಂಡರು.

ಸರಕಾರದಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ಸಂಪಾದಿಸಿದ ಭಾರತೀಯ ಅಧಿಕಾರಿಗಳಿಗೆ ಸರಕಾರದ ಪ್ರತಿಷ್ಠೆಯ ಚಿಂತೆಯು ವಿಶೇಷ. ಅವರೇ ಈ ಸಂಧಾನದಲ್ಲಿ ಪ್ರತಿಷ್ಠೆಯ ಅಡ್ಡಿಗಳನ್ನೊಡ್ಡುತ್ತಾರಂತೆ. ಸೂರ್ಯನ ಬಿಸಿಲಿನ ಕಾವಕ್ಕಿಂತ ಉಸುಬಿನ ಉರಿ ಹೆಚ್ಚಲ್ಲವೇ? ಇನ್ನು ಕೆಲ ದಿನಗಳಲ್ಲಿಯೇ ಬಾರ್ದೋಲಿಯ ಪ್ರಕರಣದಲ್ಲಿ ಸರಕಾರವು ತಲೆಬಾಗ್ಗಬೇಕಾದೀತೆಂದು ಅಂತರಂಗದೊಳಗಿನ ಸೂತ್ರಗಳನ್ನು ಬಲ್ಲವರು ಹೇಳುತ್ತಾರೆ.

ಗುಜರಾಥದಲ್ಲಿ ರಾಜೀನಾಮೆ ಕೊಟ್ಟ ಸಭಾಸದರೆಲ್ಲರೂ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಬಂದರು. ಮುಂಬಯಿಯ ಶ್ರೀ|| ಖುರ್ಶೇದ ನರಿಮಾನರವರೂ, ಬಾಳುಭಾಯಿ ದೇಸಾಯಿಯವರೂ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಬಂದರು.

ಸಂಧಾನದ ಮಾತುಕಥೆ ನಡೆಯುತ್ತಿದ್ದದರಿಂದ ಬಾರ್ದೋಲಿಯಲ್ಲಿ ಜಪ್ತಿಯ ಅನಾಚಾರಗಳಿಗೆ ಈಗ ತಡೆಬಿದ್ದಿದೆ. ಎಂಟು ಅಗಡುಂಡಿ ಪಟೇಲರು ರಾಜೀನಾಮೆ ಕೊಟ್ಟರು. ವಾಲೋಡ ಮಹಾಲಕರಿ ಕಚೇರಿಯೊಳಗಿನ ಒಬ್ಬ ಕಾರಕೂನರೂ ಸರಕಾರದ ದಬ್ಬಾಳಿಕೆಗೆ ಬೇಸತ್ತು ರಾಜೀನಾಮೆ ಕೊಟ್ಟರು. ಅಂತು ಯಾರೂ ತೀರ್ವೆ ಕೊಡುವ ವಿಚಾರದಲ್ಲಿಲ್ಲ. ಕೆಲವರಂತು ಕಂದಮೂಲ ಫಲಗಳನ್ನು ಭಕ್ಷಿಸಿ ಜೀವಿಸುತ್ತಾರೆ. ಬಹು ಸಂತೋಷಪಡುತ್ತಾರೆ. ಆದರೆ, ತೀರ್ವೆ ಕೊಟ್ಟು ಮನೆಮಾರು ಮಾಡಿಕೊಂಡು ಮಿಷ್ಟಾನ್ನ ಭೋಜನ ಮಾಡಲು ತಯಾರಿಲ್ಲ. ಕಮೀಶನರರು ಬಾರ್ದೋಲಿಗೆ ಹೋಗಿ ರಾಜೀನಾಮೆ ಕೊಟ್ಟ ಪಟೇಲರಿಗೂ ತಲಾಟಿಯವರಿಗೂ ಕಾಣಕರೆದರು. ಒಬ್ಬರೂ ಹೋಗಲಿಲ್ಲ.

ಶ್ರೀ|| ಕನ್ಹಯಲಾಲ ದೇಸಾಯಿಯವರು ೬ ಮಂದಿಗಳ ಚೌಕಶಿ ಮಂಡಳವೊಂದನ್ನು ನೇಮಿಸಿ ಸರಕಾರಿ ಅಧಿಕಾರಿಗಳ ಕಡೆಯಿಂದ ತೀರ್ವೆ ವಸೂಲಿಯಲ್ಲಿ ನಡೆದ ಅತ್ಯಾಚಾರಗಳ ವಿಚಾರ ನಡೆಸಿದ. ಶ್ರೀ|| ಕನ್ಹಯಲಾಲ, ಮಾಣಿಕಲಾಲ ಮುನಶಿ, ಡಾ|| ಎಚ್. ಡಿ. ಗಿಲ್ಡರ್, ಶ್ರೀ|| ಕುಸೇನಭಾಯಿ ಲಾಲಜಿ, ರಾ|| ಬ|| ಬೀವಭಾಯಿ ನಾಯ್ಕ, ಶ್ರೀ|| ಚಂದ್ರಚೂಡ ದೇವಧರರು ಹೀಗೆ ೬ ಮಂದಿಗಳು ಈ ಮಂಡಳದ ಸಭಾಸದರು. ಮುಂಬಯಿಯ ಸೊಲಿಸಿಟರರಾದ ಶ್ರೀ|| ಬಿ. ಜೆ. ಖೇರರವರು ಈ ಮಂಡಳದ ಕಾರ್ಯದರ್ಶಿಗಳು. ಶ್ರೀ|| ಮುನಶಿಯವರು ಅಧ್ಯಕ್ಷರು. ಶ್ರೀ|| ಮುನಶಿಗಳವರೂ ಅತ್ಯಾಚಾರ-ಅನಾಚಾರಗಳ ಪುರಾವೆ ಕೊಡಲು ಶ್ರೀ|| ವಲ್ಲಭಭಾಯಿ ಪಟೇಲರವರಿಗೆ ಬರೆದಿದ್ದಾರೆ. ನ್ಯಾಯನಿರ್ಣಯದಲ್ಲಿ ನೆರವಾಗಲು ಸರಕಾರಕ್ಕೆ ನಿಮಂತ್ರಿಸಿದ್ದಾರೆ. ಮಂಡಳದ ಮೇಲೆ ಒಬ್ಬ ಸರಕಾರಿ ಅಧಿಕಾರಿಯನ್ನು ನೇಮಿಸಬೇಕಾಗಿಯೂ ಶ್ರೀ|| ಮುನಶಿಯವರ ವಿನಂತಿ ಮಾಡಿಕೊಂಡಿದ್ದಾರೆ. ಈ ಮಂಡಳದವರು ಬಾರ್ದೋಲಿಯಲ್ಲಿ ಕಳೆದ ೨೮ ನೇ ತಾರೀಖಿನಿಂದ ತಮ್ಮ ವಿಚಾರ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಮಹಾತ್ಮರು ಈ ಕಮಿಟಿಯನ್ನು ಸ್ಥಾಪಿಸಿದ ಬಗ್ಗೆ ಶ್ರೀ|| ಮುನಶಿಯವರಿಗೆ ಅಭಿನಂದಿಸಿದ್ದಾರೆ.

ಜಪ್ತಿ ಆಫೀಸರರಿಗೆ ಅತಂಕ ಮಾಡಿದ ಬಗ್ಗೆ ಭವನ ಹೀರಾ ಎಂಬೊಬ್ಬ ಖಾತೆದಾರರಿಗೆ ೬ ತಿಂಗಳ ಸಕ್ರಮ ಶಿಕ್ಷೆಯಾಯಿತು. ಜಪ್ತಿ ಆಫೀಸರರಿಗೆ ಜಪ್ತಿಗೆ ಹೋದಾಗ ಹೆಂಡತಿ ಕಡೆಯಿಂದ ಕದ ಮುಚ್ಚಿಸಿ ಅತಂಕ ಮಾಡಿದ ಅಪರಾಧಕ್ಕೆ ಶಿಕ್ಷೆಯಾಗಿದೆ. ಜಪ್ತಿ ಆಫೀಸರರು ಹಿಂಬಾಗಿಲಿನಿಂದ ಒಳಸೇರುತ್ತಿದ್ದರು. ಹಿಂಬಾಗಿಲಿನಲ್ಲಿ ಹೆಂಗಸರಿರುತ್ತಾರೆ. ಪಠಾಣರನ್ನು, ಜಪ್ತಿ ಆಫೀಸರರನ್ನು ಕಂಡು ಭವನ ಹೀರಾನ ಹೆಂಡತಿಯು ಬಾಗಿಲಿಕ್ಕಿದಳು. ಈ ಶಿಕ್ಷೆಯಿಂದ ಮನೆಯವರೇನು ಎದೆಗುಂದಲಿಲ್ಲ. ತೀರ್ಪು ಕೇಳಲು ಕೋರ್ಟಿಗೆ ಹೋಗುವಾಗ ಪತಿಗೆ ಸತಿಯು ನುಡಿದದ್ದೇನಂದರೆ — "ನಿಮ್ಮ ಹಕ್ಕಿಗಾಗಿ ನೀವು ಕಾದುತ್ತೀರಿ, ನಿಮಗೆ ಪರಮಾತ್ಮನು ರಕ್ಷಿಸುವನು" ಎಂದು ಹೇಳಿದಳು. ಶಿಕ್ಷೆಯಾದ ಬಳಿಕ ಅವಳು ಪತಿಗೆ ನ್ಯಾಯದವರು ಕೊಟ್ಟ ೯ ರೂಪಾಯಿ ಕಾಣಿಕೆಯನ್ನು ಒಯ್ದು ಶ್ರೀ|| ವಲ್ಲಭಭಾಯಿ ಪಟೇಲರವರಿಗೆ ಒಪ್ಪಿಸಿದಳು. ಈ ಶಿಕ್ಷೆ ಕೊಟ್ಟದ್ದರಿಂದ ೮ ಮಂದಿ ತಲಾಟಿಗಳು ರಾಜೀನಾಮೆ ಕೊಟ್ಟು ನಿಷೇಧ ಪ್ರದರ್ಶಿಸಿದರು.

ಸತ್ಯಾಗ್ರಹ ನಿಧಿಯು ಎರಡು ಲಕ್ಷಕ್ಕೆ ಮಿಕ್ಕಿತು. ಈ ನಿಧಿಯಿಂದ ಬಾರ್ದೋಲಿಯೊಳಗಿನ ಸತ್ಯಾಗ್ರಹಿಗಳ ಹೊಟ್ಟೆ ಹೊರಲು ಉಪಯೋಗವಾಗುವದಿಲ್ಲ. ಈ ನಿಧಿಯಿಂದ ೨೫೦ ಸ್ವಯಂಸೇವಕರ ಖರ್ಚು ಸಾಗಬೇಕಾದ್ದು. ಸತ್ಯಾಗ್ರಹ ಸಂಗ್ರಾಮದ ದಿನದ ಪತ್ರಿಕೆಯನ್ನು ದಿನಾ ಪ್ರಜೆಗಳಿಗೆ ತಿಳಿಸುವದಕ್ಕಾಗಿ ೧೩೦೦೦ ಪ್ರಕಟನೆಗಳು ಉಚಿತವಾಗಿ ಹಂಚೋಣಾಗುತ್ತವೆ. ಟಪಾಲ ತಂತಿ ಮುಂತಾದವುಗಳಿಗಾಗಿಯೂ ವಾಹನಗಳಿಗಾಗಿಯೂ ಖರ್ಚು ಬೇಕು. ಇದಕ್ಕಾಗಿ ಈ ನಿಧಿಯು ವಿನಿಯೋಗಿಸಲ್ಪಡುತ್ತದೆ. ಕಾಂಗ್ರಿಯೊಳಗಿನ ಗುರುಕುಲದವರು ೨ ದಿನ ಕಾಯಕಷ್ಟ ಮಾಡಿ ಹುಟ್ಟಿದ ೫೦ ರೂಪಾಯಿಗಳನ್ನು ಈ ನಿಧಿಗೆ ಕಳುಹಿದ್ದಾರೆ. ಸೂಪೆಯ ಗುರುಕುಲದವರು ಕೆಲವು ದಿನಗಳ ತನಕ ಹಾಲು-ತುಪ್ಪಗಳನ್ನು ಸೇವಿಸದೆ ಈ ನಿಧಿಗೆ ಹಣ ಕಳುಹಿದ್ದಾರೆ. ಜೋರಾಸಿ ತಾಲೂಕಿನಿಂದ ೨೫|| ಸಾವಿರ ರೂಪಾಯಿ ನಿಧಿ ದೊರಕಿದ ಬಗ್ಗೆ ಸಂಘಟಿಕೆ ಇದ್ದದ್ದರೆ, ಏರಿದ ತೀರ್ವೆಯನ್ನು ತುಂಬಿ ತೆರುತ್ತಿದ್ದಿಲ್ಲವಾಗಿ ಜೋರಾಸಿಯಲ್ಲಿ ಸಭೆ ಸೇರಿಸಿ ಶ್ರೀ|| ವಿಠ್ಠಲಭಾಯಿ ಪಟೇಲರಿಗೆ ಅಲ್ಲಿಯವರು ಹೇಳಿ ಸರಕಾರವು ತಮ್ಮ ಮೇಲೆ ಮಾಡಿದ ಅನ್ಯಾಯವನ್ನು ಅವರು ಬೈಲಿಗೆಳೆದರು.

ಬಾರ್ದೋಲಿಯಲ್ಲಿ ಸರಕಾರದ ಮಾತಿಗೆ ಎಳ್ಳು ಕಾಸಿನಷ್ಟು ಬೆಲೆಯಿಲ್ಲ. ಪಾಂಕಾನೇರದವನೊಬ್ಬನಿಗೆ ೧೯೨೨ನೇ ಇಸ್ವಿಯಲ್ಲಿ ಅಲ್ಲಿಯ ಕಲೆಕ್ಟರರು ಒಂದು ಶಿಫಾರಸು ಪತ್ರ ಕೊಟ್ಟಿದ್ದರು. ೧೯೨೨ನೇ ಇಸ್ವಿಯ ಅಸಹಯೋಗದ ಕಾಲದಲ್ಲಿ ಅವರು ಸರಕಾರದ ಕಡೆಯಿಂದ ದುಡಿದ ಬಗ್ಗೆ ಈ ಶಿಫಾರಸು ಪತ್ರ ಕೊಡಲಾಗಿತ್ತು. ಈ ಕಾಲದಲ್ಲಿ ಸರಕಾರಕ್ಕೆ ಮಾಡಿದ ಸೇವೆಯನ್ನು ಯಾವೆಂದೂ ಮರೆಯಲಿಕ್ಕಿಲ್ಲವಾಗಿ ಆ ಶಿಫಾರಸು ಪತ್ರದಲ್ಲಿ ಬರೆದಿತ್ತು. ತೀರ್ವೆ ಏರಿಕೆಯ ಅನ್ಯಾಯವನ್ನು ಪರಿಮಾರ್ಜಿಸಿಕೊಳ್ಳಲು ಅದರಿಂದೇನೂ ಪ್ರಯೋಜನವಾಗಲಿಲ್ಲವಾಗಿ ಅವರು ಹೇಳಿ ಶ್ರೀ|| ವಲ್ಲಭಭಾಯಿ ಪಟೇಲರವರಿಗೆ ಆ ಶಿಫಾರಸುಪತ್ರವನ್ನು ತೋರಿಸಿದರು.

ಬಾರ್ದೋಲಿಯ ಸ್ವಯಂಸೇವಕರೊಳಗೆ ಬರೋಡೆ ಸಂಸ್ಥಾನದಲ್ಲಿ ನ್ಯಾಯಾಸನದ ಕೆಲಸ ಮಾಡಿ ನಿವೃತ್ತರಾದ ಶ್ರೀ|| ಅಬ್ಬಾಸ ತಾಯಬಜಿಯವರೂ ಕೆಲಸ ಮಾಡುತ್ತಿದ್ದಾರೆ. ಮುಂಬಯಿಯ ಐಶ್ವರ್ಯವಂತ ಪಟೀಟ ಕುಟುಂಬದ ಒಬ್ಬ ಸ್ತ್ರೀಯೂ, ಶ್ರೀ|| ಪಟೇಲರ ಮಗಳೂ ಸತ್ಯಾಗ್ರಹ ಸೈನ್ಯದ ಇಬ್ಬರು ಅಧಿನೇತ್ರಿಗಳು.

'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಸುದ್ದಿಗಾರರು ಶ್ರೀ|| ವಲ್ಲಭಭಾಯಿ ಪಟೇಲರ ಅಭಿಪ್ರಾಯ ಪಡೆದರು. ಸರಕಾರವು ೧|| ಲಕ್ಷ ರೂಪಾಯಿ ತೆರಿಗೆಯನ್ನು ವಸೂಲ ಮಾಡಿರುತ್ತದೆಂಬ ವಿಧಾನವು ವಾಸ್ತವವಲ್ಲೆಂದು ಅವರು ನುಡಿದರು. ಸಂಧಾನವಾಗುವ ಲಕ್ಷಣಗಳಿಲ್ಲವಾಗಿಯೂ ಅವರು ಉದ್ಗರಿಸಿದರು.

ಮುಂಬಯಿಯ ವಿಖ್ಯಾತ ಹತ್ತಿಯ ಸಾವುಕಾರರಾದ ರಾ|| ನಾರಾಯಣಜಿ ಮೂಲಜಿ ಪಟೇಲರವರು ಬೇಸಾಯ ಖಾತೆಯ ಸುಪರಿಂಟೆಂಡೆಂಟರ ಮಾರ್ಫತ ಲಕ್ಷಾವಧಿ ರೂಪಾಯಿಗಳ ವ್ಯಾಪಾರ ಮಾಡಿದ್ದರು. ಆ ಕುರಿತು ಈ ಖಾತೆಯಿಂದ ೨೩೫೦೦ ರೂಪಾಯಿಗಳು ಸಲ್ಲತಕ್ಕದ್ದಿವೆ. ರಾ|| ನಾರಾಯಣಜಿಯವರು ಪಾಂಕಾನೇರದವರು, ಸತ್ಯಾಗ್ರಹ ಪ್ರಮುಖರು. ಇವರು ಕೊಂಡ ಹತ್ತಿಯಲ್ಲಿ ಬಾರ್ದೋಲಿಯ ತೀರ್ವೆ ತೆರದ ಕೆಲವರ ಹತ್ತಿ ಇರಬೇಕೆಂದು ಅನುಮಾನಿಸಿ ಈ ರೂಪಾಯಿಗಳು ತೀರ್ವೆ ಬಾಕಿಗೆ ಜಪ್ತಿ ಹಿಡಿಯಲ್ಪಟ್ಟಿವೆ. ಯಾರ್‍ಯಾರ ತೀರ್ವೆಗೆಂಬುದು ಸ್ವತಃ ಜಪ್ತ ಮಾಡುವವರಿಗೇ ಗೊತ್ತಿಲ್ಲ. ರಾ|| ನಾರಾಯಣಜಿಯವರಿಂದ ಬಾರ್ದೋಲಿಯಲ್ಲಿ ಏನೂ ಸಲ್ಲುವದಿಲ್ಲ. ರಾ|| ನಾರಾಯಣಜಿಯವರು ಸರಕಾರದ ಮೇಲೆ ಕಾಯಿದೆ ಇಲಾಜು ನಡಿಸುವ ನೋಟೀಸು ಕೊಟ್ಟಿದ್ದಾರೆ.

ಶ್ರೀ|| ಕರ್ಕಿಯವರ ಪ್ರಕಟಣೆ

ಶ್ರೀ|| ಮಂಜನಾಥ ಭಟ್ಟ ಕರ್ಕಿಯವರು ಮುಂಬಯಿಯ ದೈನಿಕ ವರ್ತಮಾನಪತ್ರಗಳಿಗೆ ಶನಿವಾರಕ್ಕೆ ಕಳುಹಿದ ತಂತಿಯ ಪ್ರತಿಯನ್ನೊಂದು ನಮ್ಮ ಬಳಿಗೆ ಪ್ರಕಟನೆಗಾಗಿ ಕಳುಹಿದ್ದಾರೆ. ಅದೇನಂದರೆ —

"ಬಾರ್ದೋಲಿಯ ಪ್ರಶ್ನೆಯು ಇಡೀ ಇಲಾಖೆಯೊಳಗಿನ ಬೇಸಾಯಗಾರರಿಗೆ ಸಂಬಂಧಪಟ್ಟದ್ದು. ಅದರಿಂದ ಅಲ್ಲಿ ತೀರ್ವೆ ಏರಿಕೆಯ ವಿರುದ್ಧವಾಗಿ ನಡೆಯುತ್ತಿರುವ ಕಾದಾಟವನ್ನು ನಾನು ಸೂಕ್ಷ್ಮವಾಗಿ ಪರಾಂಬರಿಸುತ್ತಿದ್ದೇನೆ. ಬಾರ್ದೋಲಿಯೊಳಗಿನ ತೀರ್ವೆ ಏರಿಕೆಯ ಪ್ರಕರಣದಲ್ಲಿ ಸರಕಾರವು ಕೈಕೊಂಡ ಧೋರಣವು ತಪ್ಪೆಂದೂ ನನ್ನ ಅಭಿಪ್ರಾಯವಿದೆ. ಶ್ರೀ|| ಚಿಕ್ಕೋಡಿಯವರು ಪ್ರಕಟಿಸಿದ ಅಭಿಪ್ರಾಯವನ್ನು ನಾನು ನೋಡಿದ್ದೇನೆ. ಅದಕ್ಕೆ ಸಂಪೂರ್ಣವಾಗಿ ನನ್ನ ಒಪ್ಪಿಗೆಯಿದೆ. ಸರಕಾರವು ಈ ಪ್ರಕರಣವನ್ನು ಸದುಪಚಾರದಿಂದ ಇತ್ಯರ್ಥಪಡಿಸದಿದ್ದರೆ, ಉತ್ತರ ಕನ್ನಡ ಜಿಲ್ಲೆಯ ಬೇಸಾಯಗಾರರ ಪ್ರತಿನಿಧಿಯಾದ ನಾನು ನಿಷೇಧ ಪ್ರದರ್ಶನಾರ್ಥವಾಗಿ ರಾಜೀನಾಮೆ ಕೊಟ್ಟು ಬಾರ್ದೋಲಿ ಪ್ರಶ್ನೆಯ ಮೇಲೆಯೇ ಪುನಃ ಚುನಾವಣೆಗೆ ನಿಲ್ಲುವ ವಿಚಾರ ಮಾಡಬೇಕಾದೀತು."

झंडूचें

द्राक्षासव- -[मृद्विकारिष्ट - शारंगधर म अ १०

रामबाण औषध

सर्दि घालविणारें
भूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर

किंमत एक रत्तलास १॥ रुपये

क्याटलाग मागवा

झंडु फार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी,
तीर्थहळ्ळी

सिर्सि एजंट एस. एल धाकप्पा आणि ब्रदर

ಹಿಂದ ಸ್ಥಾನದಲ್ಲಿನ್ನ ಅತ್ಯಂತ ಅಗ್ರವಾದ
'ನೆಶನಲ್ ಇನ್ ಶೂರನ್ಸ ಕಂಪನಿ, (ಲಿಮಿಟೆಡ್
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಮೀರ್ಯಮಿಂದ
ಕಳೆದ ವರಷ ಲೆಕ್ಕಾಚಾರದ ಮೇಲೆ 5 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರ ಷಕ್ಕೆ 10 ರೂಪಾಯಿನಂತೆಯೂ, ಪೂರ್ತಿ ಜೀವ ವಿಮೆ ಯ ಪತ್ರದ ಮೇಲೆ ವರ ಷಕ್ಕೆ 1೨ ರೂಪಾಯಿನಂತೆಯೂ ಬೋನಸ ಕೊಟ್ಟಿರುವೆವು

ಹೋಗಿದೆ 1000 ರೂಪಾಯಿಗಳ ವಿಮೆ ಎಷ್ಟು ಕಂತು ಕೂಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗನ್ನು ಪಡೆಯಿರಿ ನಮ್ಮ ದರವು ಅಷ್ಟು ಸುಲಭ,
ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು'

ಕರ್ನಾಟಕಕ್ಕೆ ಏಜಂಟರ - **P D Churi,**
ಬಿ ಸಿ ಸಿರಾಳಕೊಪ್ಪ, *Branch Secretary,*
ಲೋಬಾಡಿ ಬಿಲ್ಡಿಂಗ Alice Building,
ಹುಬ್ಬಳ್ಳಿ *Hornby Road,*
BOMBAY

ಕಾಶಿಯ ಅಪೂರ್ವ ವಸ್ತುಗಳು.

ನಂಪ ಕಾಶಿಯ ಪಟ್ಟೆ ಮರಿ, ಶೀರೆ ಖಣ, ರೇಶ್ಮೆ ಶಲ್ಲೆ, ಬಿಚ್ಛಾನೆ, ಕಾಶ್ಮೀರದ ಶಾಲು, ಸಕಜಾತಿ ಧಾಬಳಿ, ರುದ್ರಾಕ್ಷ ಸರ, ಕಂಠಿ ಗೌರೀಶಂಕರ ಪಂಚಾಯತನ ಸ್ಪಟಿಕ ಸರ ಲಿಂಗ, ಶಾಲಿಗ್ರಾಮ ಕೇಸರಿ, ಪಚ್ಚಕರ್ಪೂರ ಶಿಲಾಜಿತು, ಜಾಫಂಜಿ, ಶಂಬ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ ಪಿ ಯಿಂದ ಕಳಿಸಿ ಕೊಡತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ,
ನಮ್ಮ ಪತ್ತೆ –

ವಿಶ್ವನಾಥ ಎಂಡ್ ಬ್ರದರ್ಸ,
ದುರ್ಗಾಘಾಟ, ಬನಾರಸ್ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ. ಯವರ

ಸುಗಂಧಿ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರ ವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ೫೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿಗೆ ಪುಕ್ಕಟೆ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ೦-೪-೦. ಪ್ಯಾ. ಪಿ ೪ ಆಣೆ ಡಜನ್ ೧ ಕ್ಕೆ ರೂ ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಜಾರ್ಜಟೌನ, ಮದರಾಸ

ಇದು "ಕರಾಮತ" ಗಾಣ—

ನೀವು ಹಾರೈಸುತ್ತಿದ್ದ ಕಬ್ಬಿನ ಗಾಣವು ಇದೇ!



ಕಿರ್ಲೋಸ್ಕರ ಕರಾಮತ ಗಾಣ.

ಈ ಗಾಣದಿಂದ ಶೇಕಡಾ ೭೨ ರಂತೆ ರಸ ಹೊರಡುತ್ತದೆ. ಯಾವದೇ ಪರದೇಶಿ ಗಾಣದಿಂದ ಇಷ್ಟು ರಸ ಎಂದಿಗೂ ಹೊರಡುವದಿಲ್ಲ.

ಈ ಗಾಣವು ಕಸುವುಳ್ಳದ್ದು ಬಾಳಿಕೆಯದು ವಿಶೇಷ ಯಂತ್ರಸಾಮಗ್ರಿಯೂ ಇಲ್ಲ ಸಾಮಾನ್ಯ ರೈತರು ಇದನ್ನು ಸರಿಪಡಿಸಬಲ್ಲರು ಸಾಮಾನ್ಯ ಎರಡು ಎತ್ತುಗಳು ಈ ಗಾಣವನ್ನು ಎಳೆಯಬಲ್ಲವು

ಬೇರಿಂಗು ಗನ್ ಮೆಟಲ್ ದವು ಅವನ್ನು ಎಲ್ಲವೂ ಒಂದೇ ತರದವಿರುವದರಿಂದ ಬೇಕಾದಲ್ಲಿ ಸ್ಥಳಾಂತರ ಮಾಡಬಹುದು.

ಆಕ್ಸಲುಗಳು ಉಕ್ಕಿನವು ಎಷ್ಟು ಕೆಲಸಬಿದ್ದರೂ ಈ ಗಾಣವು ಹಿಂಜರಿಯದು ಇಂಥ ಮಹತ್ವದ ಸುಧಾರಣೆಗಳು ನಿಮಗೆ ಇನ್ನಾವ ಗಾಣದಲ್ಲಿಯೂ ದೊರಕವು

ಈ ಉತ್ತರ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ೧೦ ೧೨ ಕರಾಮತಗಾಣಗಳು ದುಡಿಯುತ್ತಿವೆ ಎಲ್ಲರೂ ಆನಂದದಿಂದ ಪ್ರಶಂಸಿಸುತ್ತಾರೆ
ಗಾಣದ ವರ್ಣನೆಯ ಪತ್ರಿಕೆಯು ಸಿಗುತ್ತದೆ.

ಕಿರ್ಲೋಸ್ಕರ ಬಂಧು ಲಿಮಿಟೆಡ್; ಕಿರ್ಲೋಸ್ಕರವಾಡಿ, ಜಿಲಾ ಸಾತಾರಾ

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು,
ಬಾಳಿಕೆಗೆ ತೀರ ಅನುಕೂಲ, ಮನೆತನದವರಂತು ಇಟ್ಟುಕೊಳ್ಳಲೇ ಬೇಕು; ಏಟು-ಸುಟ್ಟ ಘಾಯಿಗಳಿಗೆ, ನೆಗಡಿ ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೆ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೊ,

ಮುಂಬಯಿ ಮತ್ತು ಮದ್ರಾಸ.

Printed and Published by Krishnarao Kocha

REG. NO. B. 1270

MONDAY, JULY 9TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೯

ಪತ್ರದ ವರ್ಗಣಿ.

ಮುಂಗಡೆಯಲ್ಲಿ ಆದಾಪ್ತ
ರೂಪಾಯಿ 2-4-0.
ವರ್ಷಅಖೇರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

यदपि दिनकर्ता देवकर्ता चाति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಪ್ರಾಕ್ರುತ
ಟೈಪಿನ (೧೨ ಎಮ್ ಉದ್ದ)
೮ ಸಾಲುಗಳವರೆಗೆ ರೂ 1-0
೮ ನಂತ್ರ ಪ್ರತಿಸಾಲಿಗೆ 0-2-0
ಹೆಡಿಂಗದ ಸಾಲು ಎಷ್ಟು
ಜಾಗ್ಗ ಹಿಡಿಯುವದೋ ಆ ಮಾನ
ದಿಂದ ಅಷ್ಟುಸಾಲುಗಳು ಹಿಡಿ
ಯಲ್ಪಡುವವು.
ಚಾಲಿ ಜಾಹಿರಾತುಗಳ ಬಗ್ಗೆ
ಪತ್ರವ್ಯಾರ ಯಿ. ಸಮಕ್ಷ ತಿಳಿ
ಸಲ್ಪಡುವದು

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೯ ಮಾಹೆ ಜುಲೈ ಸನ್ ೧೯೨೮ನೇ ಇಸವಿ)—

ಹೊಸ ಅಂಗಡಿ! ಹೊಸ ಹೊಸ ಮಾಲು!!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.—ಕಬ್ಬಿಣ ಪೆಟ್ಟಿಗೆಗಳು, ಮೋಟಾರ ಉಪಯೋಗದ ಜೋಡು ಗಳು, ಟಿನ್ ಪೋಶಣ, ಡಿಸ್ಟ್ರಿಕ್ಟ ಪ್ರೂಟರ ಸಿಗುತ್ತವೆ ಬಣ್ಣ ಸಿಗುತ್ತವೆ, ಕನ್ನಡಿಯ ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಶಾಟಿಮನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ!! ಎಲ್ಲಾ ಅಪ್-ಟು-ಡೇಟ ಸಾಮಾನ ಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಕಿರಕೋಳ ವ್ಯಾಪಾರಸ್ಥರು ಠೋಕ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತ ನಿಮ್ಮ ಗಿರಾಕಿಯಾಗಿ ಲಾಭ ಪಡೆಯುತಕ್ಕದ್ದು

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)

S. U. Narayanacharya & CO
Chaukamba, BENARES CITY

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿ ಕಣ ಜರಿ ಸೀರೆ, ಕಾಶ್ಮೀರ ಶಾಲು ದರವಾರ ರುದ್ರಾಕ್ಷಿ ಕಸ್ತೂರಿ, ಲಿಂಗಗಳೂ, ಸ್ಫಟಿಕದ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಧರ್ಮಾವಾಗಿ ಕಳಿಸಲಾದೀತು

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ ಚೌಕಂಬಾ, ಕಾಶೀಕ್ಷೇತ್ರ

ಮಂಗಳೂರ ಕಂಬೈನ ಖಾಜಾ ನಶ್ಯ! ಸುಲಭ ಕ್ರಯ!
ಶಿಫಾರಸುಪತ್ರ ಪಡೆದ

ನಶ್ಯದ ಪುಡಿ!

ನಂ. ೧ನೇ ನಶ್ಯದಪುಡಿ ೫ಲ ತೋಲೆ ಶೇರು ೧ರ ರೂ ೧।
ನಂ. ೨ ನೇ ... ಶೇರು ೧ರ ರೂ. ೧ ೨-೦
ನಂ ೩ ನೇ ಶೇರು ೧ರ ರೂ. ೧-೦ ೦
ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಸಿಗುವದು
ಪತ್ತೆ - ಪುಂಡಲೀಕ ನಾಗ ಪೈ,
ನಶ್ಯದ ವ್ಯಾಪಾರಿ, ಹೊನ್ನಾವರ (ಉ. ಕ)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ.

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡ್ರೆಸ್ಸಿಂಗ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ಡೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತವೆ
ನಮ್ಮ ವಿಳಾಸ —
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ ಯಲ್ಲಾಪುರ – ಅಂಕೋಲಾ ಕಾರವಾರ. (೨) ಹುಬ್ಬಳ್ಳಿ ಮುಂಡಗೋಡ. ಸಿರ್ಸಿ. ಕುಮಟಾ. ಹೊನ್ನಾವರ ಭಟ್ಕಳ. (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಸ್ಥಳಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನಗಳಲ್ಲೂ ವ್ಯವಸ್ಥೆ ಮಾಡಲಾಗಿದೆ ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa
PROPRIETOR

पाहिजेत !— गावोंगावीं फिरून आमचे कडे तयार होणारा हरएक प्रकारचा सोन्या चांदीचा माल विक्री करण्याकरिता हुशार, कर्तव्यदक्ष व सचोटीचे असे कानडी, मराठी व हिंदी जाणणारे फिरते एजट पाहिजे आहेत.

एजंट होऊ इच्छिणाऱ्यानीं लायक असा कमीतकमी दोन हजाराचा जामीन अगर ठेवत अथवा जबाबदारी घ्यावी लागेल अनुभवशीर लोकाना विशेष पसत केलें जाईल भरपूर पगार, कमिशन, ट्रेवलिंगखर्च व ट्रेवलिंगचा बोर्डिंग लॉजिंगखर्च।

विशेष माहितीकरिता ताबडतोब खालील पत्त्यावर आजच लिहा.

शेट केशव लक्ष्मण आणि सन्स, मॅन्युफॅक्चरिंग जुवेलर्स, कारवार (उ कानडा.)

ವಿವಿಧ ಸಂಗ್ರಹ.

ಪಾರ್ವತೆವ್ವನವರ ಪಾತಿವ್ರತ್ಯ ಪರೀಕ್ಷೆ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕುರುವಿನಕೊಪ್ಪ ಗ್ರಾಮದಲ್ಲಿ ಮುದಕಪ್ಪ ರೆಂಬವರೊಬ್ಬರಿದ್ದಾರೆ. ಇವರ ೨ನೇ ಹೆಂಡತಿಯು ಪಾರ್ವತೆವ್ವಾ ಯೆಂಬುವರು. ಇವರು ೧೭-೧೮ ವರ್ಷ [illegible] ರು. ಮುದಕಪ್ಪನಿಗೆ ಒಬ್ಬ ವಿಧವೆಯ ಸಹವಾಸವು ಪ್ರಾಪ್ತವಾಗಿ ಅವರು ಪಾರ್ವತೆವ್ವನವರ [illegible] ಬಿಡಹತ್ತಿದರು. ವಿಧವೆಯು ಮೇಲಿನ [illegible] ಬಹು ಪ್ರೀತಿ [illegible] ಪಾರ್ವತೆವ್ವನವರಿಗೆ ಇವರ ಮಾತು [illegible] ವಿಪರೀತವಾದ [illegible] ಕಾರಣವಿದೆ [illegible] ತೆವ್ವನವರು ವ್ಯಭಿಚಾರಿ [illegible] ವಿಧವೆಯು ಮುದಕಪ್ಪನಿಗೆ ಗೃಹಿಣಿ [illegible] ಪಾರ್ವತೆವ್ವನವರಿಗೂ ಮುದಕಪ್ಪನಿಗೂ [illegible] ಪ್ರತ್ಯೇಕ ಮಾಡಿ ಮುದಕಪ್ಪನೊಡನೆ [illegible] ಶಾಶ್ವತವಾಗಿ [illegible] ವಿಧವೆಯು [illegible] ಪಾರ್ವತೆವ್ವನವರು ಎಲ್ಲ ಉಪದ್ರವವನ್ನು ಸೈರಣೆಯಿಂದ [illegible] ತವರಮನೆಯವರಿಗೆ ಈ ಕಷ್ಟ [illegible] ಪಾರ್ವತೆವ್ವನವರು ತವರಮನೆಗೆ ಹೋಗಲು [illegible] ಕ್ಕೂ ಒಪ್ಪಲಿಲ್ಲ. ವಿಧವೆಯು ಹೊಂದಿದವರೂ ಅಲ್ಲಿಯೆ [illegible] ಇಲ್ಲಿಂದ ಪತಿಗೆ ಅಗಲಿ ಇರಲಾರೆನೆಂಬ ದೃಢನಿಶ್ಚಯ ಮಾಡಿದಳು. ಆಗ ಪತಿಗೆ ಇವರ ಪಾತಿವ್ರತ್ಯ ಪರೀಕ್ಷೆ ಮಾಡುವ ಸುಬುದ್ಧಿಯಾಯಿತು. ಕಾದೆಣ್ಣೆಯ ಕಡಾಯಿಯಲ್ಲಿ ಕೈಯಿದ್ದಬೇಕೆಂದು ನಿರ್ಣಯವಾಯಿತು. ಜೂನ ೧ನೇ ತಾರೀಖಿನ ರವಿವಾರಕ್ಕೆ ಮನೆಯ ಅಂಗಳದಲ್ಲಿ ಕಡಾಯಿಯನ್ನಿಟ್ಟು ಬೆಂಕಿ ಮಾಡಿದರು. ಎಣ್ಣೆಯು ಕುದಿಯಹತ್ತಿತು. ದೊಡ್ಡದೊಂದು ಕಡಾಯಿಯಲ್ಲಿ [illegible] ಪಾರ್ವತೆವ್ವನವರ ಪರೀಕ್ಷೆ ನೋಡಲು [illegible] ಗ್ರಾಮದೊಳಗಿನ [illegible] ವಿಧವೆಯೂ ಬಂದಿದ್ದಳು. ವಿಧವೆಯು ತನ್ನ ಪಾತಿವ್ರತ್ಯವನ್ನು ವರ್ಣಿಸುತ್ತಿದ್ದಳು. [illegible] ನೋಡಲಿ [illegible] ಈ ವಿಧವೆಯು [illegible] ಹೊಡೆ [illegible] ಪಾರ್ವತೆವ್ವನವರ ವ್ಯಭಿಚಾರವನ್ನು [illegible] ಪಾರ್ವತೆವ್ವನವರು [illegible] ಪತಿವ್ರತೆಯರ [illegible] ಪತಿವ್ರತೆಯರಾಗಿದ್ದರು. [illegible] ಕುದಿಯುವ ಎಣ್ಣೆಯಲ್ಲಿ [illegible] ಅನುಮಾನ ಮಾಡದೆ ಕೈಯನ್ನಿಕ್ಕಿ ಹೊರತೆಗೆದರು [illegible] ಕೈ ಸುಡಲಿಲ್ಲ. ಈ ಅದ್ಭುತ ನೋಡಿ [illegible] ''ಪತಿವ್ರತೆಯು [illegible] ನೋಡಿ!' ಪುರಾಣದಲ್ಲಿ ಇಂಥ ಹಲವು ಕಥೆಗಳನ್ನು ನಾವು ಓದಿದ್ದೇವೆ. ಅದು ಇಂದು ನಮಗೆ ಪ್ರತ್ಯಕ್ಷವಾಯಿತು. ಕಲಿಯುಗದಲ್ಲಾದರೂ ಇಂಥ ಧರ್ಮನಿಷ್ಠ ಸ್ತ್ರೀಪುರುಷರಿದ್ದವರಿಂದ ಭೂಮಂಡಲ ನಡೆದಿದೆ.'' ಎಂದು ನೆರೆದ ಜನರು ಪಾರ್ವತೆವ್ವನವರ ಪ್ರಶಂಸೆ ಮಾಡಿದರು. ಕುಚೋದ್ಯಗಾರನೊಬ್ಬನು ವಿಧವೆಯ ಪರೀಕ್ಷೆ ಮಾಡಲು ಅವಳ ಕಡೆಯಿಂದ ಕಾದ ಕಡಾಯಿಯಲ್ಲಿ ಕೈಹಾಕಲಿಕ್ಕೆ ವಿಧವೆಗೆ ಹೇಳಹೋದರೆ, ಆ ಭ್ರಷ್ಟೆಯು ಪಲಾಯನ ಮಾಡಿದ್ದಳಂತೆ!''

* * *

ಭೂತಚೇಷ್ಟೆಯೇ ?

ನಿಜಾಮ ರಾಜ್ಯದಲ್ಲಿ ಭೂತಚೇಷ್ಟೆಯ ಒಂದು ಅದ್ಭುತವಾದ ಚಮತ್ಕಾರವು ಸಂಭವಿಸುತ್ತಿದೆ. ಗುಪ್ತ ಪೋಲೀಸರಿಗೆ ಈ ಭೂತಗಳ ಪತ್ತೆಯಾಗುವದಿಲ್ಲವಂತೆ. ಭೊಂಗೀರ ಗ್ರಾಮದಲ್ಲಿ ಸೈಯ್ಯದ ಜಾಫರ ಹುಸೇನ ಎಂಬ ಒಬ್ಬ ಕಾರಕೂನರಿದ್ದಾರೆ. ರುಕಿಯಾಬಿ ಎಂಬುವಳು ಅವರ ಹೆಂಡತಿ. ಗಂಡ-ಹೆಂಡರು ಸುಖದಿಂದ ಸಂಸಾರ ಮಾಡುತ್ತಿದ್ದಾರೆ. ೧೯೨೫ನೇ ಇಸ್ವಿಯಲ್ಲಿ ಈ ದಂಪತಿಗಳಿಗೆ ಒಂದು ಗಂಡು ಶಿಶು ಹುಟ್ಟಿತು. ಒಂದು ವರ್ಷದಲ್ಲಿ ಆ ಶಿಶು ಕಾಣೆ. ಎಷ್ಟು ಹುಡುಕಿದರೂ ಆ ಶಿಶುವಿನ ಪತ್ತೆ ಆಗಲಿಲ್ಲ. ೨ ವರ್ಷದ ಮೇಲೆ ೧೯೨೭ನೇ ಇಸ್ವಿಯಲ್ಲಿ ಇನ್ನೊಂದು ಗಂಡು ಶಿಶು ಹುಟ್ಟಿತು. ಹಿಂದಿನಂತೆ ಈ ಶಿಶುವು ಕಾಣೆಯಾಗಿ ಹೋಗಬಾರದೆಂದು ಶಕ್ತಿಮೀರಿ ಮುಂಜಾಗ್ರತೆ ಕೊಳ್ಳಲಾಯಿತು. ೧೫ ದಿನಗಳಲ್ಲಿ ಈ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ ನೀವು ದಿನಾ ಆ ಕುರಿತು ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಚ್ಚುಕಟ್ಟು ಮಾಡಿದರೆ, ಅವು ಉದ್ದವಾಗಿಯೂ ಮತ್ತು [illegible] ನೀವು ಅವಕ್ಕೆ [illegible] 'ಕೂದಲನ್ನು' [illegible] ಶ್ರೇಷ್ಠವಾದ ಕೂದಲನ್ನು ವಾವದು?

ಕಾಮಿನಿಯಾ ಆಯಿಲ್ (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಇದು ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲು ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ [illegible] ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಿಲ್ಲರೆ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ	೧—೦—೦
ಅಂಚೆವೆಚ್ಚ ,,	೦—೬—೦
೩ ಬಾಟಲಿಗಳಿಗೆ ,,	೨—೧೦—೦
ಅಂಚೆವೆಚ್ಚ ,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

—— ೦ ——

½ ಔನ್ಸಿಗೆ ರೂ	೨—೦—೦
¼ ಔನ್ಸಿಗೆ ,,	೧—೪—೦
೧ ಡ್ರಾಮಿಗೆ ,,	೦—೧೨—೦
ಅಂಚೆವೆಚ್ಚ ,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದೆ? ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಶಿಶುವೂ ಕಾಣೆ. ಹಿಂದಿನ ಪ್ರಕಾರವೇ ಈಗ ಸಂಭವಿಸಿತು. ಆ ಪ್ರಕಾರವು ಬಲು ಚಮತ್ಕಾರದ್ದಿದೆ. ತಾಯಿ-ತಂದೆಗಳು ಶಿಶುವಿನ ಜೊತೆಗೆ ಕೋಣೆಯಲ್ಲಿ ಮಲಗಿದ್ದರು ಗಾಢ ನಿದ್ರೆ ಹತ್ತಿದೆ ಕೋಣೆಗೆ ಒಂದು ಬಾಗಿಲು; ಒಂದೇ ಬಾಗಿಲು. ಕಿಡಕಿ ಸಹ ಇರಲಿಲ್ಲ ಬಾಗಿಲಿಗೆ ಭದ್ರವಾಗಿ ಕೀಲು ಹಾಕಿತ್ತು. ರುಖಿಯಾಬೀಬಿಯವರಿಗೆ ಒಂದು ಪ್ರಕಾರದ ದೃಷ್ಟವಾಯಿತು. ವಿಲಕ್ಷಣ ಪ್ರಕಾರದಿಂದ ಉಟ್ಟುಕೊಂಡ ಇಬ್ಬರು ಅವಳ ಬಳಿ ಬಂದಂತೆ ಭಾಸವಾಯಿತು ಇಬ್ಬರೂ ಖಡ್ಗಗಳನ್ನು ಧರಿಸಿದ್ದರು ಮಧ್ಯರಾತ್ರಿ ಸಮಯ. ತಾಯಿಗೆ ಹೆದರಿಸಿ ಅವಳ ಮಗ್ಗುಲಿನಿಂದ ಆ ಶಿಶುವನ್ನು ಜಗ್ಗಿಕೊಂಡು ನಡೆದುಬಿಟ್ಟರು ಎದ್ದು ನೋಡಿದರೆ ಶಿಶು ಕಾಣೆ. ಯಾರೂ ಇಲ್ಲ. ಬಾಗಿಲು ಇದ್ದಕ್ಕಿದ್ದ ಹಾಗೆಯೇ ಇಕ್ಕಿಕೊಂಡಿತ್ತು. ಬಹಳ ಶೋಧ ನಡೆಯಿತು. ಶಿಶುವಿನ ಪತ್ತೆ ಇಲ್ಲ. ರುಖಿಯಾಬೀಗೆ ಸ್ಮೃತಿ ಬರಲು ಕೆಲವು ಅವಕಾಶವೂ ತಗಲಿತಂತೆ! ೧೯೨೭ನೇ ಇಸ್ವಿಯಲ್ಲಿ ೩ನೇ ಬಾರಿ ರುಖಿಯಾಬೀಬಿಯವಳು ಬಸುರಾದಳು. ಶಿಶುವನ್ನು ಪ್ರಯತ್ನದಿಂದ ಬದುಕಿಸಿಕೊಳ್ಳಬೇಕೆಂದು ತಾಯಿ-ತಂದೆಗಳು ನಿರ್ಧಾರ ಮಾಡಿದರು. ಕೋಣೆಯ ನ್ಯೂನತೆಯಿಂದಲೇ ಈ ಆಪತ್ತು ಸಂಭವಿಸಿರಬೇಕೆಂದು ಅವರು ಗ್ರಹಿಸಿ, ಹೆಂಡತಿಯನ್ನು ಒಬ್ಬ ಆಪ್ತರ ಮನೆಯಲ್ಲಿಟ್ಟರು. ಪೋಲೀಸರಿಗೆ ಅರ್ಜಿ ಮಾಡಿ ಇಬ್ಬ ಪೋಲೀಸರಿಗೆ ಕಾವಲು ಮಾಡಲಿಕ್ಕೆ ಇಟ್ಟುಕೊಂಡರು ನವಂಬರ ೪ನೇ ತಾರೀಖಿಗೆ ರುಖಿಯಾಬೀಬಿಯವಳು ಪ್ರಸೂತಳಾದಳು. ಗಂಡು ಶಿಶುವೇ ಹುಟ್ಟಿತು ಶಿಶುವು ಆರೋಗ್ಯದಿಂದ ಹುಟ್ಟಿದೆ. ತಾಯಿಗೂ ಕಷ್ಟವೆನಿಸಲಿಲ್ಲ. ಪೋಲೀಸರ ಕಠೋರ ಕಾವಲಿತ್ತು, ಆದರೂ, ನವಂಬರ ೧೯ನೇ ತಾರೀಖಿನ ಮಧ್ಯರಾತ್ರಿ ಆ ಕೂಸು ಕಾಣೆ. ಕೂಸಿನ ಕೋಣೆಯಲ್ಲಿ ಯಾರಿಗೂ ಪ್ರವೇಶವಿರಲಿಲ್ಲ. ತಂದೆ, ತಾಯಿ, ಕೂಸು ಇಷ್ಟೇ ಮಂದಿಗಳಿದ್ದರು. ಮೇಲೆ ಇಬ್ಬ ಪೋಲೀಸರು ಕಠೋರ ಕಾವಲು ಮಾಡುತ್ತಿದ್ದರು ಮಧ್ಯರಾತ್ರಿಗೆ ನಿದ್ದೆಗಣ್ಣಿನಲ್ಲಿ ಹೆಂಡತಿಯು ಬಡಬಡಿಸುತ್ತಿದ್ದದ್ದನ್ನು ಕೇಳಿ ಡಾಕ್ಟರ ಹುಸೇನರು ಎಚ್ಚತ್ತರು. ರುಖಿಯಾಬೀಗೆ ಮೂರ್ಛೆಯಾಗಿತ್ತು, ಶಿಶುವಿದ್ದಿಲ್ಲ ಕೆಲವು ಅವಕಾಶದ ಮೇಲೆ ಅವಳಿಗೆ ಬೋಧ ಬಂತು ಸ್ತ್ರೀಯರೊಬ್ಬರು ಬಂದು ಬಲಾತ್ಕಾರದಿಂದ ಆ ಶಿಶುವನ್ನು ಸೆಳೆಕೊಂಡು ಹೋದರೆಂದು ಅವಳು ಹೇಳಿದಳು. ಪೋಲೀಸರಿಗೆ ಕೇಳಲು, ನಾವು ಯಾರಿಗೂ ನೋಡಲಿಲ್ಲವಾಗಿ ಅವರು ಹೇಳಿದರು. ಸುಳ್ಳು ಸ್ವಪ್ನವನ್ನು ಹೇಳಿ ಅಲಕ್ಷ ಮಾಡತಕ್ಕೊಡರೆ ಪ್ರತ್ಯಕ್ಷ ಕೂಸು ಕಾಣೆಯಾದದ್ದು ಕಾಣುತ್ತದೆ ಈ ಚಮತ್ಕಾರವೇನೆಂದು ಯಾರಿಗೂ ತಿಳಿಯದು ಹೀಗೆ ಶೋಧ ನಡೆಯುತ್ತಿರುವಾಗಲೇ ರುಖಿಯಾಬಿ ಇವಳು ನಾಲ್ಕನೇ ಬಾರಿ ಗರ್ಭವತಿಯಾಗಿದ್ದಾಳೆ ಪೋಲೀಸರು ಈ ಶಿಶುವನ್ನು ಜೋಪಾನ ಮಾಡುವ ತಯಾರಿಯಲ್ಲಿ ಈಗಿನಿಂದಲೇ ತೊಡಗಿದ್ದಾರೆ. ಪೋಲೀಸ ಪಹಾರೆಯಲ್ಲಿ ಭೋಂಗೀರದಿಂದ ಅವಳಿಗೆ ಹೈದರಾಬಾದಕ್ಕೆ ಕರೆಯಲಾಗಿದೆ. ಅಲ್ಲಿಯ ಆಸ್ಪತ್ರೆಯಲ್ಲಿ ಅವಳ ಉಪಚಾರ ನಡೆದದೆ. ನಾಲ್ಕು ಬದಿಯಿಂದ ಬಿಚ್ಚುಗತ್ತಿಯ ಕಾವಲಿದೆ. ವೈದ್ಯಶಾಸ್ತ್ರಜ್ಞರೂ ಮಾನಸಶಾಸ್ತ್ರಜ್ಞರೂ, ಗುಪ್ತ ಪೋಲೀಸರೂ, ಈ ಚಮತ್ಕಾರದ ತಿರುಳನ್ನು ಶೋಧಿಸಲು ಬದ್ಧಕಂಕಣರಾಗಿದ್ದಾರೆ ಕೃಷ್ಣಾವತಾರದ ಸಮಯ ದೇವಕನ್ಯನವರಿಗೆ ಶಿಶುಹತ್ಯೆಗಾಗಿ ಕಂಸಾಸುರನು ಕಠೋರ ಕಾವಲಿಟ್ಟು ಪ್ರಸೂತ ಮಾಡಿದ್ದನಂತೆ! ಅಂಥ ಪ್ರಕಾರವೇ ಹೈದರಾಬಾದದಲ್ಲಿ ಶಿಶು ಕಾಪಾಡಿಕೊಳ್ಳುವದಕ್ಕಾಗಿ ನಡೆದದೆ. ಇದು ಅಷ್ಟಮಸುಗರ ಅವತಾರವೇ?

***

ಒಂದು ವಿಲಕ್ಷಣ ಘಟಸ್ಫೋಟದ ದಾವೆ.

ಎಡಿಥ್ ಕ್ರೊಮವೆಲ್ ಎಂಬುವಳು ಅಮೇರಿಕದೊಳಗಿನ ನ್ಯಾಯಾಸನದಲ್ಲಿ ವಿಲಕ್ಷಣವಾದ ಒಂದು ಘಟಸ್ಫೋಟದ ದಾವೆಯ ಚರ್ಚೆಯನ್ನೆಬ್ಬಿಸಿದ್ದಾಳೆ. ಇವಳ ಪ್ರಾಯವು ೪೧ ವರ್ಷ; ಇವಳ ೩ನೇ ಗಂಡನ ಪ್ರಾಯವೂ ೪೧ ವರ್ಷ. ೨ನೇ ಗಂಡನಿಂದ ಇವಳಿಗೆ ೫ ಮಕ್ಕಳು ಹುಟ್ಟಿದರು. ಈಗಿನ ೩ನೇ ಗಂಡನಿಂದ ೧೩ ಮಕ್ಕಳು ಹುಟ್ಟಿದ್ದಾರೆ. ಇನ್ನೊಂದು ಹುಟ್ಟುವ ತಯಾರಿಯಲ್ಲಿದೆ. ಗಂಡನಿಗೆ ವಾರಕ್ಕೆ ೭೨ ಶಿಲಿಂಗು ಕೂಲಿ ದೊರೆಯುತ್ತದೆ ಈ ಪ್ರಾಪ್ತಿಯಿಂದ ಇಷ್ಟು ದೊಡ್ಡ ಕುಟುಂಬದ ಹೊಟ್ಟೆ ಹೊರೆಯಲಾಗವದಿಲ್ಲ. ಇವರಿದ್ದ ಸಂತತಿಯನ್ನು ಸಮಯಮಾಡಲು ಕೋರ್ಟಿಗೆ ಬೇಡಿಕೊಂಡಿದ್ದಾಳೆ. ಅವಳು "ಹ್ಯೂಮನ್ ಸೇಸ್ಪ್ಲಟ" ಎಂಬ ಮಾನವ ಜಾತಿಯ ಪರೀಕ್ಷೆ ಮಾಡುವ ಸಂಸ್ಥೆಯ ಸಹಾಯವನ್ನು ಪಡೆಕೊಂಡಳು ೪೧ ವರ್ಷ ಪ್ರಾಯದವನಾದರೂ ೮ ವರ್ಷ ಪ್ರಾಯದ ಹುಡುಗನಂತೆ ಆತನ ಬುದ್ಧಿಯಾಗಿರುವದಂತೆ! ಹುಟ್ಟಿದ ಸಂತತಿಯನ್ನು ನಿಯಂತ್ರಿಸುವ ಕಾನೂನು ವಕೀಲರಿಗೆ ಸಿಗಲಿಲ್ಲವಂತೆ!! ಗಂಡನಿಗೆ ಕೇಳಿದರೆ ೫೧ ಮಕ್ಕಳಾದರೂ ತಾನು ಹೆದರುವವನಲ್ಲೆಂದು ಹೇಳುತ್ತಾನೆ ಇನ್ನು ಮಕ್ಕಳಾದರೆ ಎಡಿಥ್ ಕ್ರೊಮವೆಲ್ಲಳು ಸಾಯುತ್ತಾಳೆಂದು ವೈದ್ಯರಾದವರು ಅಭಿಪ್ರಾಯಪಟ್ಟಿದ್ದಾರಂತೆ! ಎಡಿಥಳು ಮರಣಕ್ಕೆ ಹೆದರಿ ಇತ್ತ ಸಾಯಲೂ ಬಾರದು, ಅತ್ತ ಮದುವೆಯ ಪಾಶವು ಹರಿದು ಹೋಗಲೂಬಾರದು, ದಂಪತಿ ಸುಖಕ್ಕೆ ತೊಂದರೆಯೂ ಬರಬಾರದು; ಸಂತತಿ ಹುಟ್ಟಲಾಗದು ಇಂಥ ಪರಿಣಾಮವನ್ನು ಕೊಡಿಸಲು ಕೊನೆಗೆ ಕೋರ್ಟಿಗೆ ಬಂದಿದ್ದಾಳೆ "ಮಕ್ಕಳ ಮೇಲೆ ನನಗೆ ಪ್ರೀತಿ ವಿಶೇಷ, ಆದರೆ, ಅವರಿಗೆ ಸಾಕಲಿಕ್ಕೆ ನಮ್ಮ ಕಡೆ ಶಕ್ತಿ ಇಲ್ಲ ಅದರಿಂದ ಇನ್ನು ಸಂತತಿ ಯಾಕೆ? ಎತ್ತರ್ಸನ (ಗಂಡನ ಹೆಸರು ಕೊಳ್ಳಲಿಕ್ಕೆ ಅಲ್ಲಿ ನಾಚಿಕೆ ಇಲ್ಲ.) ಸಂತತಿಪ್ರೇಮದಿಂದ ಪ್ರೇರಿತನಾಗಿ ತನಗೆ ಬಹಳ ಮಕ್ಕಳು ಹುಟ್ಟುತ್ತಾರೆಂದು ಬಡಬಡಿಯ ಸಮಕ್ಷೇಶ್ವರ ಈ ಉಪದ್ರವ ಕೊಡತ್ತಾನೆ ೩೨ ವರ್ಷಗಳಲ್ಲಿ ೧೮ ಮಕ್ಕಳು ಹುಟ್ಟಿದರು ಈ ಕುರಿತು ಹಿಂದೆಗೆ ಬರಕೊಂಡೆ. ಆದರೆ, ಹೀಗೆ ಸಂತತಿಯ ವಿಷಯ ಬರಕೊಳ್ಳಲು ಅಧಿಕಾರವಿಲ್ಲವಾಗಿ ಆತನು ಬರೆದನು ಮೂರು ಪತ್ರಗಳ ಮಾತು ನಾನರಿಯೆ ಎಂದು ಹಿಂದೆಯೇ ಬರೆಯುತ್ತಾನೆ," ಎಂದು ಎಡಿಥಳು ಹೇಳುತ್ತಾಳೆ ಈ ಪ್ರಶ್ನೆಯು ದಂಪತಿಯೊಳಗಿನ ಮಾತೆಂದು ಅನೇಕರು ಅಭಿಪ್ರಾಯಪಡುತ್ತಾರೆ ಬ್ರಹ್ಮಚರ್ಯ, ಇಂದ್ರಿಯನಿಗ್ರಹ ಮುಂತಾದ ಆಚಾರ-ವಿಚಾರಗಳನ್ನು ಬಿಟ್ಟು ಸ್ವೇಚ್ಛೆಯಿಂದ ನಡೆಕೊಂಡರೆ, ಇಂಥ ಆಪತ್ತುಗಳು ಸಂಭವಿಸುತ್ತವೆ ಭೌತಿಕಸೃಷ್ಟಿಯ ಹೊರತಾಗಿ ಪರಲೋಕವಿಲ್ಲೆಂದು ಗ್ರಹಿಸುವವರಿಗೆ ಇಂಥ ಆಪತ್ತು ಒದಗದಿದ್ದರೆ ಮತ್ತಾರಿಗೆ ಒದಗುವದು? ಸಂತತಿಯ ಮೇಲೆ ಪ್ರೀತಿ ಇರದೆ ಕೇವಲ ಪುರಭಿಮಾನಕ್ಕಾಗಿ ಕಾಮಾಸಕ್ತವಾಗುವ ಧೈರ್ಯವು ನಮ್ಮೀ ಭರತ ಭೂಮಿಯಲ್ಲಿಲ್ಲ. ಅಮೇರಿಕೆಯ ಕೋರ್ಟಿನಲ್ಲಿ ಇನ್ನೂ ಇದರ ನಿರ್ಣಯವಾದ ಸುದ್ದಿ ಇಲ್ಲ.

***

ಮಿಶ್ರಶಿಕ್ಷಣ-ಪ್ರೌಢವಿವಾಹಗಳಿಂದ ಒದಗುವ ಅನರ್ಥಗಳು.

ಅಮೇರಿಕೆಯ ನ್ಯೂಯೋರ್ಕ ಪಟ್ಟಣದಲ್ಲಿ ನೀತಿಭ್ರಷ್ಟ ಸ್ತ್ರೀಯರಿಗೆ ಹುಟ್ಟಿದ ಶಿಶುಸಂಗೋಪನ ಮಾಡುವ ಚಿಕಿತ್ಸಾಲಯಗಳನ್ನು 'ಮುಕ್ತಿಫೌಜು' ಎಂಬ ಸಂಸ್ಥೆಯವರು ತೆರೆದಿದ್ದಾರೆ. ಈ ಸಂಸ್ಥೆಯವರು ಪ್ರಕಟಿಸಿದ ರಿಪೋರ್ಟಿನೊಳಗಿನ ಕೆಲವು ಅಂಶಗಳು ಇಲ್ಲಿಯ ಸುಧಾರಕರಿಗೆ ಬೋಧಪ್ರದವಾಗುವವು. ೧೦-೨೦ ವರ್ಷಗಳ ಹಿಂದೆ ಬುದ್ಧಿ ನೀತಿಗೆಟ್ಟ ಹೆಂಗಸರೇ ನಮ್ಮ ಚಿಕಿತ್ಸಾಲಯಗಳ ಆಶ್ರಯ ಪಡೆಯುತ್ತಿದ್ದರು. ಬಹಳ ಸುಧಾರಣೆ ಕ್ರಮಗಳನ್ನು ಮಾಡಿ ನಾವು ಇಂಥ ವ್ಯಭಿಚಾರಕ್ಕೆ ತಡೆಹಾಕಿದ್ದೇವೆ ಆದರೂ, ಚಿಕಿತ್ಸಾಲಯಗಳಲ್ಲಿ ಈಗ ಇಮ್ಮಡಿ ಹೆಂಗಸರು ತುಂಬಿಕೊಂಡಿದ್ದಾರೆ. ಬಹಿರಂಗವಾಗಿ ವ್ಯಭಿಚಾರ ಮಾಡುವ ಹೆಂಗಸರು ಈ ಚಿಕಿತ್ಸಾಲಯದಲ್ಲಿ ಕಾಣುವದಿಲ್ಲ. ಶಾಲೆಗಳಿಗೆ ಹೋಗುವ ವಿದ್ಯಾರ್ಥಿನಿಗಳು ಬಹಳವಾಗಿ ಈ ಚಿಕಿತ್ಸಾಲಯಗಳ ಆಶ್ರಯ ಪಡೆಯುತ್ತಾರೆ. ಇತ್ತ ೨ ವರ್ಷಗಳಲ್ಲಿ ಈ ಸಂಖ್ಯೆಯು ಮೂರು ಮಿಕ್ಕಿತು. ಸಂಸ್ಥೆಯಲ್ಲಿ ಆಶ್ರಯ ಪಡೆಯುವ ಎಲ್ಲ ಸ್ತ್ರೀಯರ ವಯಸ್ಸಿನ ಸರಾಸರಿ ತೆಗೆದರೆ ಅದು ೧೭ಕ್ಕೆ ಮುಟ್ಟುತ್ತದೆ ಈ ಸರಾಸರಿಯ ಮೇಲಿಂದ ೧೧ ರಿಂದ ೧೪ರ ವರೆಗಿನ ವಿದ್ಯಾರ್ಥಿನಿಗಳು ಈ ಚಿಕಿತ್ಸಾಲಯದಲ್ಲಿ ಬಹಳ ಮಂದಿಗಳಿರವರೆಂಬ ಮಾತು ಸ್ಪಷ್ಟವಿರುವದಾಗಿ ಚಾಲಕರು ಬರೆಯುತ್ತಾರೆ ಆಧುನಿಕ ಸುಧಾರಣೆಯು ಶಿಖರವನ್ನೇರಿದ ಅಮೇರಿಕೆಯಲ್ಲಿ ನೀತಿಗೆಟ್ಟ ವ್ಯಭಿಚಾರವು ಹೀಗೆ ನಡೆಯುತ್ತಿರುವಾಗ, ಆ ಸುಧಾರಣೆಯ ಮೆಟ್ಟಲುಗಳನ್ನೇರಲು ಬಾವಾತ್ಮರು ಪ್ರೌಢವಿವಾಹ-ಸ್ತ್ರೀ-ಪುರುಷರ ಮಿಶ್ರಶಿಕ್ಷಣ ಮುಂತಾದಗಳನ್ನು ಪುರಸ್ಕರಿಸುವದು ಸಮಾಜಕ್ಕೆ ಶ್ರೇಯಪ್ರದವೇ?

***

ದೇಶಾಭಿಮಾನಿಗಳ ಪೀಡನೆ.

ಶ್ರೀ| ಸತೀಂದ್ರನಾಥ ಸೇನರವರು ಪಾಟಣಖಾಲಿಯೊಳಗೆ ನಡೆದ ಸತ್ಯಾಗ್ರಹ ಸಂಗ್ರಾಮದ ಅಧಿಪತಿಗಳು. ಅವರಿಗೆ ಮಣಿಸುವದಕ್ಕಾಗಿ ಬಹು ಪರಿಯಿಂದ ಅವರ ಮೇಲೆ ಆರೋಪ ಹೊರಿಸಿ, ಸ್ಥಳೀಕ ಜಿಲ್ಲಾಧಿಕಾರಿಗಳು ಅವರ ಮೇಲೆ ಖಟ್ಲೆ ಮಾಡಿದರು "ಸತ್ಯಮೇವ ಜಯತೇ ನಾನೃತಂ|" ಎಂಬಂತೆ ಕೊನೆಗೆ ಸತ್ಯದಿಂದಲೇ ದಿಗ್ವಿಜಯ ಹೊಂದಿ ಇವರು ಬಿಡುಗಡೆ ಹೊಂದಿದರು ಆದರೂ, ಅಧಿಕಾರಿಗಳು ಇವರ ಬೆನ್ನು ಬಿಡಲಿಲ್ಲ ಬಾರಿಸಾಲ ಸರಸ್ವತೀ ಪೂಜೆಯ ಕುರಿತು ನಡೆದ ಪ್ರಕರಣದಲ್ಲಿ ಶ್ರೀ| ಸತೀಂದ್ರನಾಥ ಸೇನರವರಿಗೆ ಸೇರಿಸಿದರು ಅಲ್ಲಿಯೂ ಸತ್ಯಕ್ಕೆ ಜಯ ಬಂತು ಶ್ರೀ|| ಸತೀಂದ್ರನಾಥರವರು ಬಿಡುಗಡೆ ಹೊಂದಿದರು. ಈಗ ಪೋಲೀಸರು ರಾಜಮಾರ್ಗವನ್ನು ತ್ಯಜಿಸಿ ಅಡ್ಡಮಾರ್ಗವನ್ನು ಹಿಡಿದರು. ಕ್ರಿ. ಪ್ರೊ ಕೋಡಿನ ೧೦೭ನೇ ಕಲಮಿನನ್ವಯ ಶ್ರೀ| ಸತೀಂದ್ರನಾಥರವರ ಕಡೆಯಿಂದ ಸಜ್ಜನತನದ ಜಾಮೀನು ಕೊಳ್ಳಬೇಕಾಗಿ ಖಟ್ಲೆಯಾಯಿತು. ಪ್ರಾಂತ ಸಾಹೇಬರು ಒಂದು ಲಕ್ಷ ರೂಪಾಯಿಗಳ ಜಾಮೀನು ಕೊಡಬೇಕಾಗಿ ಹುಕುಮು ಮಾಡಿದರು.. ಜನಕ ವರೆಗೆ ಕಾರಾಗೃಹವಾಸ

ದಲ್ಲಿ ಉಳಕೊಳ್ಳಬೇಕಾಗಿಯೂ [illegible] ಸೆಶನ್ ಜಡ್ಜರ ಕಡೆ ಅಪೀಲು ಮಾಡಿ [illegible] ಜಾಮೀನಿನ ರಕಮನ್ನು ೫೦೦ಕ್ಕೆ ಇಳಿಸಿದರು. ಹೈಕೋರ್ಟಿನಲ್ಲಿ ಅಪೀಲು ದಾಖಲಾಯಿತು. ಈ ಅಪೀಲು ವಿಚಾರಣೆಯಲ್ಲಿರುವಾಗಲೇ ಸಹಿಂದ್ರನ [illegible] ಕಡೆಯಿಂದ ಜಾಮೀನು ಕೊಂಡು [illegible] ಗಡೆ ಮಾಡಿತ. ಜಾಮೀನದಾರರಿಗೆ [illegible] ನೋಟೀಸು ಕೊಡಲಾಯಿತು [illegible] ತಾರೀಖಿನೊಳಗ ಸತೀಂದ್ರನಾಥರವರ [illegible] ದಲ್ಲಿ ಹಾಜರ ಮಾಡಬೇಕೆಂದು ಡಿ| ಮೆಜಿಸ್ಟ್ರೇಟರು [illegible] ಆಯಿತು. ಡಿ| ಮೆಜಿಸ್ಟ್ರೇಟರಿಗೆ [illegible] ಸಮಾಧಾನವಾಗಲಿಲ್ಲ [illegible] ಪ್ರತಿ [illegible] ಸತೀಂದ್ರನಾಥರ [illegible] ವರಿಗೆ ಕಟ್ಟಿ ಕಳಿಸಲಾಯಿತು. ಹೈಕೋರ್ಟಿನಲ್ಲಿ ಅಪೀಲು ವಿಚಾರ ಕಾಲಕ್ಕೆ ಈ ಸಂಗತಿ [illegible] ಬ ದವು. ಜಿಲ್ಲಾ ಮೆಜಿಸ್ಟ್ರೇಟರು ಈ [illegible] ನ್ಯಾಯಮೂರ್ತಿ [illegible] ಇದು ಪಶ ಕುಲ್ಕ [illegible] ವಟ್ಟ ಹೈಕೋರ್ಟಿನ ಈ ದೇಶ [illegible] ತನಕ ಇಂಥ ಅತ್ಯಾಚಾರಗಳು [illegible] ಗೊಡದೆಂದು [illegible] ೫೦ ರೂಪಾಯಿಯ ಜಾಮೀನು [illegible] ನಲ್ಲಿ ಮುನ್ಸಿಪಾಲಿಟಿ [illegible] ಗಳ ಕೆಲಸವು ಸತೀಂದ್ರನಾಥರ [illegible] ಲ್ಲಿ ಸತೀಂದ್ರನಾಥರವರ [illegible] ಯಿಂದ ಜಾಮೀನದಾರರ [illegible] ಭಟ ಮುನಿಸಿಪಾಲಿಟಿಯ [illegible] ವ ೦ಡಳದ [illegible] ಗಳೂ ೫೦೦ ರೂಪಾಯಿ [illegible] ಜಾಮೀನು ಕೊಡಲು ಮೆಜಿಸ್ಟ್ರೇಟ ಕೋರ್ಟಿನಲ್ಲಿ ಹಾಜರಾದರು. [illegible] ರೂಪಾಯಿಗಳಿಗೆ ಈ ಜನರ [illegible] ಮೆಜಿಸ್ಟ್ರೇಟರು ಜಾಮೀನು [illegible] ಸತೀಂದ್ರನಾಥರವರಿಗೆ [illegible] ಕುರಿತು ಪ್ರಸಿದ್ಧ ಹಾಯಕೋರ್ಟಿಗೆ ಅರ್ಜಿಯಾಯಿತು. ಹೈಕೋರ್ಟಿನ ನ್ಯಾಯಮೂರ್ತಿಗಳು ಅರ್ಜಿಯನ್ನು ಮನ್ನಿಸುವಾಗ [illegible] ಈ ಜಾಮೀನದಾರರನ್ನು [illegible] ಸಭ್ಯತನದಿಂದ [illegible] ಮೆಜಿಸ್ಟ್ರೇಟರು [illegible] ಗಿತ್ತು. ಮೆಜಿಸ್ಟ್ರೇಟರು ಈ ಪ್ರಕಾರ ತಮ್ಮ ವಿವೇಕಶಕ್ತಿಯನ್ನು ಅಜರಿಸಿ ತಪ್ಪು ಮಾಡಿದ್ದಾರೆ. ಇಷ್ಟಕ್ಕೇ ಈ ಪ್ರಕರಣ ಮುಗಿಯಲಿಲ್ಲ. ಈ ಅರ್ಜಿಯ ವಿಚಾರ ನಡೆಯುತ್ತಿರುವಾಗಲೇ [illegible] ಪ್ರಮುಖರನ್ನು ಹೆದರಿಸುತ್ತಾರೆಂಬ ನೆವದ ಮೇಲೆ ಸತೀಂದ್ರನಾಥರವರ ಮೇಲೆ ಖಟ್ಲೆಯಾಯಿತು. ಪುನಃ ಸತೀಂದ್ರನಾಥರು ಹೈಕೋರ್ಟಿಗೆ ಅರ್ಜಿ ಮಾಡಿದರು. ಜಿಲ್ಲಾಧಿಕಾರಿಗಳು ಕೈಕೊಂಡ ಕ್ರಮಗಳೆಲ್ಲ ಅಸಂಬದ್ಧವಾದವುಗಳೆಂದೂ, ಬೇಕಾಬಿಟ್ಟಿಯಾದವುಗಳೆಂದೂ ಅಭಿಪ್ರಾಯಪಟ್ಟು ಜಿಲ್ಲಾಧಿಕಾರಿಗಳು ಎಬ್ಬಿಸಿದ ಖಟ್ಲೆಯನ್ನು ಅವರು ಹಿಂದೆಗೆದು ಈ ಮುಂಚೆ ಕೊಟ್ಟ ಜಾಮೀನದಾರರ ಕಡೆಯಿಂದ ಅವಶ್ಯವುಳ್ಳ ಕರಾರನ್ನು ಬರಿಸಿಕೊಂಡು ಸತೀಂದ್ರನಾಥರವರಿಗೆ ಬಿಟ್ಟುಬಿಡತಕ್ಕದ್ದು ಎಂದು ಹೈಕೋರ್ಟು ವಿಧಿಸಿತು. ಹೈಕೋರ್ಟಿನಿಂದ ನ್ಯಾಯ ಪಡೆಯಬೇಕಾದರೆ ಸತೀಂದ್ರನಾಥರವರು ಎಷ್ಟು ಬವಣೆ ಪಡಬೇಕಾಯಿತು ನೋಡಿರಿ. ಇಂಥ ಅನ್ಯಾಯಗಳನ್ನು ಎಸಗುವದಿಲ್ಲವಾಗಿ ನ್ಯಾಯಮೂರ್ತಿಗಳು ಬರೆದರೂ, ಅನ್ಯಾಯವಾಗದಿರುವದೇನು ತಪ್ಪುವದಿಲ್ಲ. ಹೈಕೋರ್ಟಿನ ಬುದ್ಧಿವಾದಕ್ಕೆ ಅಧಿಕಾರಿಗಳು ಕೃತಿಯಿಂದಲೇ ಉತ್ತರ ಕೊಟ್ಟು ನಿಷೇಧಿಸಿದ್ದಾರೆ.

***

ಹಿಂದುಸ್ಥಾನ ಸರಕಾರದ ನಿಜರೂಪ

ಟೊಲನ್‌ಸನ್ ಮೋಗಳು ಹಿಂದುಸ್ಥಾನದ ಮುಖ್ಯ ಸೈನ್ಯಾಧಿಕಾರಿಗಳಿದ್ದರು. ಅವರು ತೀರಿಕೊಂಡಿದ್ದಾರೆ. ಸರ್ ಫ್ರೆಡ್ರಿಕ್ ಮೋರೀಸ ಎಂಬವರು ಅವರ ಚರಿತ್ರೆಯನ್ನು ಬರೆದಿದ್ದಾರೆ. ಅವರೊಳಗೆ ಹಿಂದುಸ್ಥಾನ ಸರಕಾರವು ಪ್ರಜೆ [illegible] ಎತ್ತುವಳಿ ಮಾಡುವ ತೆರಿಗೆ ಎಲ್ಲಿಯೋಗಿಸುವದನ್ನು ನೋಡಿ ಅವರು ಬೆರಗಾಗುತ್ತಿದ್ದರೆಂಬ [illegible] ಅವರು ಬರೆಯುವದೇನೆಂದರೆ - 'ಹಿಂದುಸ್ಥಾನ ಸರಕಾರದಂಥ ದುಂದು [illegible] ಸರಕಾರವು ಬೇರೊಂದಿಲ್ಲ. ಅವರ ಅತಿಥಿಯ ಸತ್ಕಾರ ಸೂಕ್ಷ್ಮ ಕೃತ್ಯಗಳೆಲ್ಲ ಬರೇ ಪುರಾಣಕಾಲದವು. ಸುಮಾರು ೨೦೦ ವರ್ಷಗಳ ಹಿಂದೆ ಮೋಗಲ್ ಬಾದಶಹರು ಹಿಂದುಸ್ಥಾನದಲ್ಲಿ ಆಕ್ರಮಿಸಿದ [illegible] ಪ್ರದರ್ಶನವು ಈಗಲೂ ನಡೆಯುತ್ತದೆ. [illegible] ಗಳೂ, [illegible] ಶಿಪಾಯರೂ ಸಂಸ್ಥಾನಿಕರೂ ಮೊಗಲ್ ಬಾದಶಹರಂತೆ ಡೌಲಿನಿಂದ ಮೆರೆಯುತ್ತಾರೆ. ಅಂಗರಕ್ಷಕರೂ, ಕೆಂಪು ಪೋಷಾಕಿನ ಪೇದೆ, ಮೇಜವಾನಿ ದೊಡ್ಡ ದೊಡ್ಡ ಅರಮನೆ ಮುಂತಾದವುಗಳ ಮೇಲೆ ಮಾರ್ಯಾಸನ ಹೇರಳ ದ್ರವ್ಯ ವ್ಯಯವಾಗುತ್ತದೆ. ಹಿಂದಿನ ಕಾಲದಲ್ಲಿ ಈ ಡೌಲಿನಿಂದ ಏನಾದರೂ ಪ್ರಯೋಜನವಾಗುತ್ತಿದ್ದಿರಬಹುದು. ಆದರೆ ಈಗಿನ ಕಾಲದಲ್ಲಿ ಇದರಿಂದೇನೂ ಪ್ರಯೋಜನವಿಲ್ಲ. ಹಳೇ ಕಾಲದ ಡೌಲಿನ ಗರತಿಸುವದೇನೆಂದು ನಾನು ವನ್ನಕ್ಕೆ ವಿಚಾರಿಸುತ್ತಿರುತ್ತೇನೆ. ಸರ್ವಾಧಿಪತಿಗಳ ಬಗ್ಗೆ ಕಟ್ಟಿ ಕಲಿಕ್ಕಿದ್ದ ಅರಮನೆಗಳನ್ನು ನೋಡಿದರೆ ಮನಸ್ಸಿನಲ್ಲಿ ನೆನಪು [illegible] ಬಯ್ಯುತ್ತಿರುತ್ತೇನೆ. ಹಿಂದುಸ್ಥಾನದಲ್ಲಿ ಪ್ರಜೆಗಳಿಗೆ ಸ್ವರಾಜ್ಯ ಕೊಟ್ಟ ಬಳಿಕ ಪಾರತಂತ್ರ್ಯವನ್ನು ಪ್ರಬಲಗೊಳಿಸಲು ಸೈನ್ಯವನ್ನಿಡುವದು ಅವಶ್ಯವಿಲ್ಲ.' ಈ ಉದ್ಗಾರಗಳನ್ನು ಹಿಂದುಸ್ಥಾನ ಸರಕಾರಕ್ಕೆ ಭಾರತೀಯರು ಅರ್ಪಿಸುತ್ತಾರೆ. ಸೈನ್ಯಾಧಿಪತಿಗಳಂಥ ಸರಕಾರದ ಅಂತರಂಗ ಬಲ್ಲವರೇ ಆಡಳಿತಕ್ಕೆ ಈ ಪ್ರಕಾರ ಶಿಫಾರಸು ಪತ್ರ ಕೊಟ್ಟ ಬಳಿಕ ದೇಶಾಭಿಮಾನಿಗಳಾದ ಅಸಹಕಾರಿಗಳು ಈ ಕುರಿತು ಮತ್ತೇನು ಹೇಳುವದಿದೆ?

***

ಮೆಜಿಸ್ಟ್ರೇಟರಿಗೆ ಪಿತ್ತ ಕೆಣಕಿತು

[illegible] ಪ್ರಾಂತ ಸಾಹೇಬರು ಭಂಗಿಯ ಮೇಲೆ ನಡೆಸಿದ ಅತ್ಯಾಚಾರದ ಪ್ರಕರಣ ಹಿಂದ ಸರ್ವತ್ರೋ[illegible]ಗಿದೆ. ಭಂಗಿಯು ಹೊಲಸು [illegible] ಗಾಡಿ ಹೊಡೆಕೊಂಡು ಹೋಗುತ್ತಿದ್ದನು. ಹೋಗುವ ಹಾದಿಯೇ ಅದು. ಸಪ್ಪಕ್ಕೆ ಪ್ರಾಂತ ಸಾಹೇಬರು ಬಂಗಲೆಯಲ್ಲಿದ್ದರು. ಬಂಗಲೆಯಿಂದ ಈ ಹಾದಿಯು ೩೦ ಫೂಟು ದೂರ ಇದೆ. ಮೆಜಿಸ್ಟ್ರೇಟರಿಗೆ ಪಿತ್ತ ಕೆಣಕಿತು. ಓಡಿಬಂದು ಬಂಡಿ ಹೊಡೆಯುವವನನ್ನು ಗಾಡಿಯಿಂದ ಎಳೆದು ಅತನ ಕೈಯೊಳಗಿದ್ದ ಬಡಿಗೆಯನ್ನು ಜಗ್ಗಿ ಅತನಿಗೆ ಹೊಡೆದರು. ಆ ಗಾಡಿಯಲ್ಲಿ ಇಷ್ಟೊಂದು ಭಂಗಿ ಇದ್ದನು. ಅತನು ಮುನಿಸಿಪಾಲಿಟಿ ಅಫೀಸಿಗೆ ಓಡಿ ಅಲ್ಲಿ ಈ ಸಂಗತಿ ತಿಳಿಸಿದನು. ಅನಕವರೆಗೆ ಮೆಜಿಸ್ಟ್ರೇಟರು ಈ ಗಾಡಿಯನ್ನು ಪೋಲೀಸರಿಗೆ ಒಪ್ಪಿಸಿದರ, ಎತ್ತುಗಳನ್ನು ದೊಡ್ಡಿಗೆ ಕಳುಹಿದರು. ಮುನಿಸಿಪಾಲಿಟಿ ಅಧ್ಯಕ್ಷರಿಗೆ ಒಂದು ಪತ್ರವನ್ನೂ ಬರೆದರು. ಭಂಗಿಯ ಮೇಲೆ ಖಟ್ಲೆ ಮಾಡಲ್ಪಡುವದಾಗಿಯೂ, ಬಂಗಲೆಯಲ್ಲಿ ಅಕ್ರಮ ಪ್ರವೇಶ ಮಾಡಿ ಕಳುವು ಮಾಡಲು ಪ್ರಯತ್ನಿಸಿದ ಕುರಿತು ಮುನಿಸಿಪಾಲಿಟಿಯ ಕಾರ್ಯದರ್ಶಿಗಳ ಮೇಲೆ ಖಟ್ಲೆ ಮಾಡಲ್ಪಡುವದಾಗಿಯೂ ಪತ್ರದಲ್ಲಿ ಬರೆದಿತ್ತು. ಅಧ್ಯಕ್ಷರು ಸಭೆ ಸೇರಿಸಿ ಇದರ ವಿಚಾರ ಮಾಡಿದರು. ಡಿ| ಕಮೀಶನರರು ಈ ಪ್ರಕರಣವನ್ನು ನಿರ್ಣಯಿಸುವ ತನಕ ಮುನಿಸಿಪಾಲಿಟಿಯವರು ಈ ವಿಚಾರ ಮಾಡುವದವಶ್ಯವಿಲ್ಲವಾಗಿಯೂ ಮನ್ನಿಯ ನಿರ್ಣಯವಾಗಿದೆ. ಹೀಗೆ ಅತ್ಯಾಚಾರಗಳನ್ನು ನಡೆಯಗೊಟ್ಟರೆ ಮುನಿಸಿಪಾಲಿಟಿಯ ಮರ್ಯಾದೆ ಎಲ್ಲಿ ಉಳಿದೀತು?

***

ನ್ಯಾಯಕೋರ್ಟುಗಳಲ್ಲಿ ಅಸ್ಪೃಶ್ಯತೆಯ ಚಂಚುಪ್ರವೇಶ.

ತ್ರಾವಣಕೋರ ಸಂಸ್ಥಾನದ ಅತಿ [illegible] ಗತ್ತಿದು ದೊಳಗಿನ ಸುದ್ದಿ ಇದು. ಹಿಂದು ದಾವೆಯಲ್ಲಿ ಒಬ್ಬ ಬ್ರಾಹ್ಮಣ ಸ್ತ್ರೀಯು ಸಾಕ್ಷಿಯಾಗಬೇಕಾಗಿತ್ತು. ಆ ಸ್ತ್ರೀಯು ಕೋರ್ಟ ಕಚೇರಿಗೆ ಕಾಲಿಡದ ಮಾನಿನಿಯಾಗಿದ್ದಳು. ಅವಳ ಸಾಕ್ಷಿಯನ್ನು ಅವಳ ಮನೆಯಲ್ಲಿಯೇ ಕೊಳ್ಳಬೇಕಾಗಿ ಮಾಡಿದ ಅರ್ಜಿಯನ್ನು ನ್ಯಾಯಾಧೀಶರು ಮನ್ನಿಸಿದರು. ಅವಳಿಗೆ ಸಾಕ್ಷಿ ಬರೆದ ಪಕ್ಷಗಾರರ ವಕೀಲರು ಎಝುವಾ ಜಾತಿಯವರು. ಎಝುವಾರೆ ದರೆ ಅಸ್ಪೃಶ್ಯರು, ಅವರ ನೆರಳಿಗೆ ಸಹ ಬ್ರಾಹ್ಮಣರು ಹೋಗುವದಿಲ್ಲ. ಅದರಿಂದ ಸಾಕ್ಷಿ ಕೊಳ್ಳುವಾಗ ಆ ವಕೀಲರಿಗೆ ಮನೆಯಲ್ಲಿ ಬರಗೊಡಲು ಬ್ರಾಹ್ಮಣ ಸ್ತ್ರೀಯು ಮನೆಯವರು ಒಪ್ಪಲಿಲ್ಲ. ಮುನಸೀಫರ ಬಳಿ ಈ ವಿಷಯ ಚರ್ಚೆಯಾಗಿ ಜಾತಿವಂತ ಹಿಂದುಗಳಿಗೇ ವಕೀಲರಾಗಿ ನೇಮಿಸಿಕೊಂಡು ಆ ಸ್ತ್ರೀಯ ಸಾಕ್ಷಿ ಕೊಳ್ಳಬೇಕಾಗಿ ಹುಕುಮು ಆಗಿದೆ. ಇದರಿಂದ ಎಝುವಾ ಸಮಾಜದಲ್ಲಿ ದೊಡ್ಡದೊಂದು ಗಲಭೆಯುಂಟಾಗಿದೆ

ಪ್ರೆಸಿಡೆನ್ಸಿ ಪ್ರೊವಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್

ಹೆಡ್ ಅಫೀಸ ಅಮೃತ ಬಿಲ್ಡಿಂಗ, ಬೆಲರ್ಡ ಇಸ್ಟೇಟ ಫೋರ್ಟ ಮುಂಬಯಿ

ಸರಕಾರಿ ಭದ್ರತೆ ಇದೆ

ಸ್ಪೆಶಲ್ ಪೋಲೀಸಿಗಳು ೧-೭-೨೮ ನೇ ದಿವಸದಿಂದ ಕೊಡಲ್ಪಡುತ್ತವೆ. ೨ ವರ್ಷಗಳ ಮೇಲೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು. ಡಾಕ್ಟರರ ತಪಾಸು ಇಲ್ಲ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗಲಿದೆ. ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾಗಿ ಇನ್ನೂ ಇಳಿಸುತ್ತಿದ್ದಾರೆ. ಕಂತಿನ ರಕಮು ತಿಂಗಳಿಗೆ ೧ ಯಾ ೨ ರೂಪಾಯಿ. ೧೪ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ಸಿಗುತ್ತವೆ. ಪ್ರಯುಕ್ತಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ದಲಾಲಿ ದರವು ವಿಶೇಷ. ಹೆಚ್ಚಿನ ಮಾಹಿತಿಯ ಬಗ್ಗೆ ಹೆಡ್ ಅಫೀಸಿಗೆ ಬರಕೊಳ್ಳತಕ್ಕದ್ದು.

ಶ್ರೀ|| ಕರ್ಕಿಯವರು ಕೌನ್ಸಿಲ ಮೆಂಬರಿಗೆ ಇನ್ನೂ ಯಾಕೆ ರಾಜಿನಾಮೆ ಕೊಡಲಿಲ್ಲ ಎಂಬದಕ್ಕೆ ವಿವರ

ಕಾನಡಾವೃತ್ತ ಪತ್ರಕರ್ತರ ಬಳಿಗೆ—

ಮಂಜುನಾಥಭಟ್ಟ ಕರ್ಕಿಯ ವರ ಕಡೆಯಿಂದ ವಿನಂತಿ

ತಾ ೨-೭-೨೮ ನೇಯ ತಮ್ಮ ಪತ್ರಿಕೆಯ ಸಂಚಿಕೆಯಲ್ಲಿ ನನ್ನ ಕೈಫಿಯತು ಪ್ರಸಿದ್ಧಿಸಿದ ಬಗ್ಗೆ ತಮ್ಮ ಉಪಕಾರವನ್ನು ಸ್ಮರಿಸುತ್ತೇನೆ ಆ ಕೈಫಿಯತಿನಿಂದ ನನ್ನ ಮತದ ರವಿವರ್ಗದಲ್ಲಿ ನನ್ನ ಮನೋಗತದ ವಿಷಯಕ್ಕೇನಾದರೂ ಅನುಮಾನವುಂಟಾಗಿದ್ದರೆ, ಅದು ದೂರವಾಗಿರಬಹುದೆಂದು ನೆನಸುತ್ತೇನೆ ರಾಜಿನಾಮೆ ಕೊಡುವ ವಿಷಯಕ್ಕೆ ನನ್ನ ಪೂರ್ತ ಆತುರತೆಯ ಬಗ್ಗೆ ಪುನಃ ಹೇಳಬೇಕೆಂತಿಲ್ಲ ಕಾರವಾರದ ಮಿತ್ರರಾದ ಶ್ರೀ|| ಎಸ್ ಎಸ್ ಪ್ರಭು ಮುಂತಾದ ಪ್ರಭೃತಿಗಳು ನನಗೆ ಪ್ರೋತ್ಸಾಹ ಕೊಟ್ಟು ನನ್ನ ಬೆಂಬಲಕ್ಕೆ ತಾವು ನಿಲ್ಲುವೆವೆಂದು ಆಶ್ವಾಸನ ಕೊಟ್ಟಿರುವರು ಶ್ರೀ|| ಬಸರೂರಾದಿ ಪ್ರಭೃತಿಗಳು ಸಹ ಅದರಂತೆ ಆಶ್ವಾಸನವನ್ನಿತ್ತಿರುವರು ಸಿದ್ದಾಪುರ ತಾಲೂಕ ಕಾಂಗ್ರೆಸ ಕಮಿಟಿ ಪ್ರೆಸಿಡೆಂಟರು ತಡವಾಗಿ ಅವರೂ, ತಾವು ಮುಖಾಂತರ ನನ್ನ ಪರಿಣಾಮದ ಕಡೆಗೆ ಲಕ್ಷ ಕೊಡತಕ್ಕದ್ದೆಂದು ವಾಹಿಸಿರುವರು. ಕೊಡುವದು ನನ್ನ ಕರ್ತವ್ಯವೆಂತ ತಮ್ಮ ಅಗ್ರಹದ ಸೂಚನೆ ಬರುತ್ತದಾಗಿ ತಿಳಿಸಿದ್ದರು ಹೊನ್ನಾವರ ತಾಲೂಕಕ್ಕಾಗುಂದವಲ್ಲಿ ಕೂಡಿದ್ದ ಸಭೆಯು ನಾನು ರಾಜಿನಾಮೆ ಕೊಡಲೇ ಕೊಡತಕ್ಕದ್ದೆಂಬ 'ಸುಖೋದಾತ್ತ್ಯರ್ಯವನ್ನು' ವ್ಯಕ್ತಪಡಿಸಿ ಅಗ್ರಹದಿಂದ ವಿನಂತಿ ಮಾಡಿದ ಠರಾವು ತಾ ೩-೭ ರನೇ 'ಕರ್ನಾಟಕ ಧುರೀಣ' ದಲ್ಲಿ ಪ್ರಕಟವಾಗಿದ್ದು ನನ್ನ ತಿಳುವಳಿಕೆಗೆ ಬರಪೈಸಿದೆ ಈ ಎಲ್ಲ ಮಹಾನುಭಾವರ ಮತ್ತು ಸಭೆಯ ಉಪಕಾರವನ್ನು ನಾನು ಅಂತಃಕರಣಪೂರ್ವಕವಾಗಿ ನೆನಸುತ್ತೇನೆ ಈ ಮೊದಲಿನ ನನ್ನ ಕೈಫಿಯತಿನಲ್ಲಿ ದೇಶಭಕ್ತ ಗಂಗಾಧರರಾವ ದೇಶಪಾಂಡೇಯವರ ರಾಜಿನಾಮೆ ಕೊಡಲಿಕ್ಕೆ ಅವಕಾಶ ಹಿಡಿಯಬೇಕಾಗಿ ಒರೆದಿರುವ ಸಂಗತಿ ಬರೆದಿದೆನು ಆ ಮೇಲೆ ಪುನಃ ಅವರಿಗೆ ನನ್ನ ಸಿದ್ಧತೆಯನು ತಿಳಿಸಿದ್ದಕ್ಕೆ ತಾರೀಖು ೪-೭-೧೯೨೮ ನೇ ತಮ್ಮ ಪತ್ರದಲ್ಲಿ ಇನ್ನೂ ತಡೆಯಬೇಕೆಂತ ನನಗೆ ತಿಳಿಸಿರುವರು ನನ್ನ ರಾಜಿನಾಮೆ ವಿಷಯದಲ್ಲಿ ಅವರು ಏನು ಕಾರ್ಯ ತಡೆಯಬೇಕೆಂತ ಸೂಚಿಸುವರೋ, ಅದರಂತೆ ಮಾಡಬೇಕಾಗಿ ಶ್ರೀ|| ಬಸರೂರಾದಿ ಪ್ರಭೃತಿಗಳು ನನಗೆ ಸೂಚಿಸಿರುವರು ಅವರ ಸೂಚನೆಯನ್ನು ಮಾನ್ಯ ಮಾಡಿ, ನನಗೆ ಮೇಲಿನಂತೆ ಬಂದ ಆಶ್ವಾಸನ ಸೂಚನೆಗಳನ್ನು ಅವರಿಗೆ ತಿಳಿಸಿರುವೆನು ಕ್ಷಣಕ್ಷಣಕ್ಕೆ ಅವರ ಪತ್ರದ ಇಲ್ಲವೆ ತಾರದ ಬರವು ನಿರೀಕ್ಷಿಸುತ್ತಾ ಇದ್ದೇನೆ ಈ ವಿವರವು ಯಾವನೊಬ್ಬ ಮತದಾರನಲ್ಲಾದರೂ 'ಕ್ಷ ಬ್ಧತೆ' ಯನ್ನುಂಟುಮಾಡಲಿಕ್ಕಿಲ್ಲವಾಗಿ ಕೇಳುತ್ತೇನೆ ಇಷ್ಟಲ್ಲದೆ, ಮತದಾರರನ್ನು ವಂಚಿಸಿದ ಅಪರಾಧವು ಅವರು ನನ್ನ ವಿಷಯಕ್ಕೆ ಅವಿಶ್ವಾಸಿಕರಾಗಿ ನನ್ನ ವಿರುದ್ಧ 'ಪ್ರತಿಕಾರ ಮಾರ್ಗವನ್ನು' ಹಿಡಿಯಲಿಕ್ಕೆ ಪ್ರಸಂಗ ಕೊಟ್ಟದ್ದೂ ನನ್ನ ಮನದಿನಲ್ಲಿ ದೀರಲಿಕ್ಕಿಲ್ಲೆಂದು ನನ್ನ ಪೂರ್ಣ ನಂಬಿಗೆ ಇದೆ ತಾ ೭—೭—೨೮

ತಮ್ಮ ಕೃಪಾಭಿಲಾಷಿ,

M D KARKI M L C, KANARA

ವೃತ್ತಸಾರ.

— ಶ್ರೀಯುತ್ತ|| ನರಸಿಂಹ ಚಿಂತಾಮಣಿ ಕೇಳಕರರವರು ಬೆಳಗಾವಿಗೆ ಹೋದ ಪ್ರಬೇಶಾಯಿ ಕನ್ನಡದ ವಿದ್ಯಾವಂತ ಸೇರಿದ ಜಾಹೀರ ಸಭೆಯಲ್ಲಿ ಹೊಸ ಕಾನೂನುಗಳಿಂದ ಉಂಟಾಗುವ ಬೇನಾಯಿಗಾದರ ವೈ ವನ್ನು ವರ್ಣಿಸಿ, ಈ ಕಾನೂನ ಗಳನ್ನು ನಿಷೇಧಿಸಿದರೆ ಅಖಿಲ ಭಾರತೀಯ ಲೋಕಾಸುರ ಸ್ವರಾಜ್ಯ ಘಟನೆಯ ವಿಚಾರಕ್ಕಿಂತ ಬಾರ್ಡೋಲೀದ ಸತ್ಯಾಗ್ರಹ ಸ ವ ರವೇ ಶ್ರೇಷ್ಠ ಸ್ಥಳವೆಂದೂ ಉದ್ಗರಿಸಿದರು ಶ್ರೀ|| ನರಸಿಂಹರವರ ಪ್ರಕೋಪವು ಹಿಗ್ಗ ಬಾರ್ಡೋಲಿಯವರು ತುಂಬಾ ಉಪಕೃತರಾಗಿದ್ದಾರೆ.

— ದಾರವಾಡ ಜಿಲ್ಲೆಯ ಅಸ್ಪೃಶ್ಯರ ಗ್ರಾಮದ ಬಳ್ಳಿ ಗವ್ವನವರ ಭವ ಕಪತ್ತವರವರು ಇರುವುದನ್ನು ಅವರು ತಮ್ಮ ತಾಯಿ ಬಸವ್ವನವರ ಜ್ಞಾಪಕಾರ್ಥವಾಗಿ ದಾವನಗೆರೆಯ ಮ್ಯಾಟಿಕದಯಾ ಜ್ಞಾನಪ್ರಸಾರಕ ಸಂಘಕ್ಕೆ ೩೦೦ ರೂಪಾಯಿಗಳನ್ನಿತ್ತಿದ್ದಾರೆ ಈ ಹಣದಿಂದ ಗ್ರಂಥಗಳನ್ನು ಕೊಂಡು ಸಂಘದವರು ಅನಾಥರೋಗಿಗಳಿಗೂ ಎಳೆಯ ಮಕ್ಕಳಿಗೂ ಹಾಲನ್ನು ಕೊಡುವ ಏರ್ಪಾಟು ಮಾಡಿದ್ದಾರೆ ಗೋವುಗಳ ಹಿತಕ್ಕಾಗಿ ಏರ್ಪಡಿಸಲ್ಪಟ್ಟ ಈ ರೂಪಾಯಿಯಂತೆ ಕೊಡತಕ್ಕದಾಗಿಯೂ ಅವರು ವಚನವನ್ನಿತ್ತಿದ್ದಾರೆ

— ದಾವಣಗೆರೆಯ ಸ್ಟೇಷನಿನ ಬಳಿ ಎತ್ತಿನ ಗಾಡಿಯು ಒಂದ ದಿನ ಹುಲ್ಲು ಸಿಗಲಿಲ್ಲ ಬಹಳ ಪ್ರಯತ್ನಪಟ್ಟರೂ ಸಿಗಲಿಲ್ಲ ಊಟಕ್ಕಾಗಿ ಮಾಡಿಟ್ಟ ಅನ್ನವನ್ನು ಎತ್ತಿಗೆ ಹಾಕಿ ಹೆಂಡತಿ ಸಹಿತ ಉಪವಾಸ ಬಿದ್ದನು

— ಪೆಸೋವರದೊಳಗಿನ ವಸ್ತು ಸಂಗ್ರಹಾಲಯದೊಳಗೆ ಒಂದು ಕಲ್ಲನ್ನು ಎರಡು ಬಾರಿ ಮಾಡಲು, ಅದರೊಳಗಿಂದು ಕಪ್ಪೆ ಬಿತ್ತು ಈ ಕಪ್ಪೆಯು ೩|| ಲಕ್ಷ ವರುಷದ ಪ್ರಾಯದ್ದೆಂದು ಪ್ರಾಣಿಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ ಕಲ್ಲೊಳಗೆ ಹುಟ್ಟುವ ಕಪ್ಪೆಗಳಿಗೆ ಅಲ್ಲಿ ಆಹಾರವಿತ್ತವರಾರೋ! "

— ತಿರುಪತಿಯಲ್ಲಿ ೩ ತಿಂಗಳುಗಳಿಂದ ಆಹಾರಗಳ ಮತ್ತು ಲಕ ಅಲ್ಲಿ ಮಳೆ ಸರಿಯಾಗಿ ಬೀಳುವದಿಲ್ಲವಂತೆ ಜನರನ್ನು ಸರ ಎದ್ದದ್ದು ಬಿಟ್ಟರೆ ಮಳೆ ಬೀಳುವದೆಂದು ಜನರು ಪ್ರಾರ್ಥನೆ ಮಾಡಿದರು. ಆ ಕಲ್ಲುಗಳು ತಿರುಪತಿಯಿಂದ ಬೇರೊಂದು ಗ್ರಾಮಕ್ಕೆ ಒಯ್ಯಲ್ಪಡುತ್ತವೆ ಕಲ್ಲ ಗ್ರಾಮವು ತರಕ್ಕೆ ಮಗ್ಗವಾಗಿಯೇ ದಿನವೇ ತೆರೆಯಲ್ಪಟ್ಟ ಮಳೆ ಬಿತ್ತು!

— ಬಂಗಾಳದಲ್ಲಿ ಅನಾವೃಷ್ಟಿಯಿಂದ ಜಲಪ್ರಳಯವಾಗಿ ೧೧ ಲಕ್ಷ ಎಕರೆನ ನಷ್ಟ ೩೦ ಸಾವಿರ ಎಕ್ರೆ ಭೂಮಿ ಜಲಮಯವಾಗಿರುವುದು ೧೦೦ ಜನರು ಸತ್ತಿದ್ದಾರೆ

— ಹಿಂದುಸ್ಥಾನದ ಸರಕಾರಿ ಭಾಷೆಗಳ ಸಂಖ್ಯೆಯು ನಿರ್ದೇಶವಾಗಿದೆ ಅಂತು ೧೭೯ ಭಾಷೆಗಳೂ ೫೪೪ ಉಪಭಾಷೆಗಳೂ ಇರುವ ಈ ದೇಶದಲ್ಲಿ ರಾಷ್ಟ್ರವೇಶ ಹಿಂದೂಸ್ಥಾನಿ ಸ್ವದೇಶೀಯ ರಾಜ್ಯ ಭಾಷೆಗಳೊಳಗೆ ಹಿಂದಿಯೇ ರಾಷ್ಟ್ರೀಯ ಭಾಷೆಗಳ ಅನ್ನೂ ಗಣನೀಯವಾಗುವದಾಗಿದೆ

— ಶಿರ ಸಾಂಗ ಸಂಸ್ಥಾನದಲ್ಲಿ ಇಂಗ್ಲೀಷ ಶಾಲೆಯ ನದಿ ದಿನ್ಯಾ ಗಿರಿಯಾಗಿ ಶಾಲೆಗೆ ಕೊಂಡವರ ಸಂಖ್ಯೆ ೨ ವಿವರ ಹಾಗಿದೆ ಅದರಿಂದ ಅಲ್ಲಿಯ ಸರಕಾರವು ವೇದವೂ ಕಲಿಸಬೇಕಾದರೆ, ಮೆಟ್ರಿಕ್ಯುಲೇಶನ್ ಪರೀಕ್ಷೆ ಮಾತು ಗಟ್ಟ ಕೊಂಡು ವಿದಿಸಿದೆ

— ಅಹಮದಾಬಾದ ಜಿಲ್ಲೆಯೊಳಗಿನ ಮಾತೊಡೀದಾರರು ದಫ್ತರು ದವಾಖಾನೆಯವರು ಬರಿಸಿ, ವಸ್ತ್ರೀಯರುಗಳ ಮೇಲೆ ಜನರಿಗೆ ಹಕ್ಕು ಕೊಡಲಿಸಿಕೊಟ್ಟು ಸರಕಾರದ ಕರ್ಣನ್ನು ತಿದ್ದುಪಡಿ ಮಾಡಿದ ಬದ್ಧೆ ಅವರಿಗೆ ೩ ವರ್ಷಗಳ ಶಿಕ್ಷೆ ಹಾಗು ೧೦೦೦ ರೂಪಾಯಿ ದಂಡ ಆಗಿತ್ತು ಹೈಕೋರ್ಟಿನಲ್ಲಿ ಈ ಶಿಕ್ಷೆಯು ಅರ್ಧಕ್ಕೆ ಬಂತು ದಂಡದ ರಕಮು ಹಾಗೆಯೇ ಇಡಲ್ಪಟ್ಟಿದೆ

— ಮೈಸೂರಿನೊಳಗಿನ 'ಪ್ರಜಾಮಿತ್ರ' ವರ್ತಮಾನ ಪತ್ರಿಕೆಯು ಮುದ್ರಣಾಲಯವನ್ನು ಸಂಸ್ಥಾನದಿಕಾರಿಗಳು ಜಪ್ತು ಮಾಡಿ ಒಯ್ದರು ಸಂಪಾದಕರ ಮುದ್ರಣಾಲಯದಲ್ಲಿಯೇ ಉಳಕೊಳ್ಳುತ್ತಿದ್ದರು ಅವರ ಮನೆಯ ಸಾಮಾನಾದಿಗಳ ಜಪ್ತಿಯಾಗಿದೆ ಈ ಬಗ್ಗೆ ಅಧಿಕಾರಿಗಳ ಮೇಲೆ ಕಾಯಿದೆ ಇರಾದು ಕೈಕೊಳ್ಳುವ ವಿಚಾರ ನಡೆದದೆ ಸರ್ ಎಮ್ ವಿಶ್ವೇಶ್ವರಯ್ಯನವರು ಕಲ್ಪಿಸಿದ ಯೋಜನೆಗಳನ್ನು 'ಪ್ರಜಾಮಿತ್ರ'ನು ನಿರ್ಭಿಡೆಯಾಗಿ ಟೀಕಿಸಿದಕ್ಕಾಗಿ ಈ ಫಲವಂತೆ! ಮಹಾರಾಜರ ಅನುಗ್ರಹವು ಬೇಕು

— ಚೀನ ದೇಶದೊಳಗಿನ ರಾಷ್ಟ್ರೀಯ ಸರಕಾರವು ಒಂದು ಪ್ರಕಟನೆಯನ್ನು ಹೊರಡಿಸಿ ೩೦ ವರುಷದ ಕೆಳಗಿನ ಹುಡುಗರು ಬೀಡಿ ಸೇದಬಾರದಾಗಿಯೂ, ಮದ್ಯಪಾನ ಮಾಡಬಾರದಾಗಿಯೂ ಆಜ್ಞಾಪಿಸಿದೆ ಆದನ್ನುಲ್ಲಂಘಿಸುವವರಿಗೆ ಶಿಕ್ಷೆಯಾಗುವದು ಇಂಥ ರಾಷ್ಟ್ರೀಯ ಸರಕಾರವು ಬೇಕಾಗಿದೆ

— ಧಾರವಾಡ ಜಿಗಿರಿಯೆಂಬ ಊರಿನವರ ಚಹ ತೋಟದ ಕಾಲಿಕಾರನ ಹೆಂಡತಿಯು ಮೇಲೆ ತೋಟದ ಸಾಹೇಬರು ಬಲಾತ್ಕಾರ ಮಾಡಿದರಿಂದ ಆತನು ಆತ್ಮಹತ್ಯ ಮಾಡಿಕೊಳ್ಳಬೇಕೆಂತ ಮಾಡಿದನು ಬಿಟ್ಟಲ್ಲದೆ ಅವನಿಗೆ ಕಾರ್ಯಕ್ಕ ಮಾನಹಾನಿಯಾದ ಆತ್ಮಹತ್ಯದ ಕಾರಣವನ್ನು ಆತನು ನಿವೇದಿಸಿದನು ಆತನ ಕಡೆ ವಕೀಲರಿದ್ದಿಲ್ಲ. ಮುಂದೆ ಅದೇ ದೊಡ್ಡ ಎಂತೆಯಾಯಿತು ಆತನಿಗೆ ಮರಳಿ ಹಿಡಿದಿಂದ ಜೋಡರ ಆಸ್ಪತ್ರೆಗೆ ಕಳಿಸಿದರು ಅಲ್ಲಿ ಹುಚ್ಚು ಹಿಡಿದ ಶಿಕ್ಷೆಯಾಗಿ ತಾಂತ್ರಿಕರ ಅಭಿಪ್ರಾಯವಾಯಿತು ಮಾಜಿಸ್ಟ್ರೇಟರು ಆತನಿಗೆ ಮನೆಗೆ ಕಳುಹಿಬಿಟ್ಟರು, ಜೊತೆಗೆ ದಂಡವನ್ನು ಕಳ ಹಲ್ಲಿಲ್ಲ ಜೋಡ್ಯವಾಯಿತು, ನಾ ಹಾಗಿಂದ ಜೇಲದಲ್ಲಿದ್ದರೆ ಅದು !

— ಲ್ಯಾಪರ್ನ್ ಹ್ಯಾನಿಸೌಸ ಅಮ್ಯೂಸಮೆಂಟರದವರ ಸಂದಾಯದ ಕರಡು ಸರಿ ಅಲ್ಲಿಯ ಸರಕಾರವು ನೆರವಾಗಿದೆ

— ಗಂಡನ ಮನೆಗೆ ಹೋಗಲಿಕ್ಕೆ ಹೆಂಡತಿಗೆ ಬೇಕಾದಷ್ಟು ಶಕ್ತಿ ಒದಗಿಸಬೇಕಾಗುವುದರಿಂದ ಕೌಟುಂಬ ಅಭಿಪ್ರಾಯವಾಗುವಲ್ಲಿ ಮಾಂಪತ್ಯ ಅಧಿಕಾರವಂತೆ ಹೆಂಡತಿಯು (ಸ್ತ್ರೀಯು) ತನ್ನ ಪತಿಯ ಬಳ ಗಂಡನು ತಂದ ದಾವೆಯನ್ನು ತಿರಸ್ಕರಿಸಬೇಕಾಗಿ ಮುಂಬಯಿ ಹೈಕೋರ್ಟಿನ ತೀರ್ಮಾನವಾಗಿದೆ

— ಆಸ್ಟ್ರೇಲಿಯದೊಳಗಿನ ಮೆಲ್ಬೋರ್ನ ಎಂಬ ಜ್ವಾಲಾಮುಖಿಯ ಸ್ಫೋಟವಾಗಿ ಅದರ ರಸವು ೫೦೦ ಮೈಲು ದೂರದವರೆಗೆ ಹರಿದುಹೋಗಿರುವದು ೫೦೦೦ ಮಂದಿಗಳು ಸತ್ತಿರಬಹುದಾಗಿ ಹೇಳುತ್ತಾರೆ ಅನೇಕ ಗ್ರಾಮಗಳು ಸುಟ್ಟುಹೋದವು

— ಒಬ್ಬ ಆಪ್ಘನ ಹಿಂದೂ ಕಾಂಗ್ರೆಸ್ ವಕ್ಷದ ಸಭೆಯಿಂದ ಪಾರ್ಲಿಮೆಂಟಿನ ಸ್ಥಾನಕ್ಕಾಗಿ ನಿಲ್ಲಬೇಕೆಂದು ಪ್ರಯತ್ನಿಸುತ್ತಿರುವ 'ನ್ಯೂ ಇಂಡಿಯಾ' ಪತ್ರಿಕೆಗೆ ತಂತಿ ಬಂದಿದೆ

— ಆವ ಜೀಕೆಯು ಸರಕಾರದ ಜಮಾ ಖರ್ಚಿನ ವರ್ತವು ಕಳೆದ ಜೂನ ತಿಂಗಳ ಕೊನೆಯವರೆಗೆ ಅಂತ್ಯವಾಯಿತು ಆ ಕೊಡಕ್ಕೆ ಶ್ರೀಮಂತರಿಯಲ್ಲಿ ಸುಮಾರು ೩೫ ಕೋಟಿ ೫೦ ಲಕ್ಷ ಡಾಲರುಗಳಷ್ಟು ಉಳಿಯಿತಂತೆ ದುಡ್ಡಿನ ರಾಶಿ!

— ದಿಲ್ಲಿಯಲ್ಲಿ ಹತ್ತಿರಗಳ ಗಲಾಟೆ ನಡೆಯುತ್ತಿದೆ ಮ್ಯುನಿಸಿಪಾಲಿಟಿಯು ಕರ್ಚಿನಿಂದ ನಡೆಯುತ್ತಿದೆ ಜಾಹೀರಾತುಗಳಿಗೆ ಸ್ಥಳ ಒದಗಿ ಪೇರಿಗಳು ಬಯಲು ಜಾಗೆ ಅಂಗಡಿಗಳಲ್ಲಿ ಹಾಕಿ ಆಲ್ಲಟ್ಟ ಕಾಲುವೆಗಳನ್ನು ಕತ್ತರ ಸಾಮಾನುಗಳನ್ನು ಕೆಡಿಸಿದವು ಅದರಿಂದ ಅಂಗಡಿಕಾರರು ಮ್ಯುನಿಸಿಪಾಲಿಟಿಯವರ ಮೇಲೆ ೩೦೦೦ ರೂಪಾಯಿ ಪರಿಹಾರಕ್ಕೆ ದಾವೆ ಹೂಡಿದ್ದಾರೆ

Wanted:— AGENTS on decent salary For full particulars apply with 2 annas stamp to — THE JATI SEVAK, Nai Sarak, DELHI

ಕಾನಡಾ ವೃತ್ತ.

ವಿಜಿ ವಿಭವ ಸಂ| ಆಷಾಢ ಶು|| ೩ ವಿ ಸೋಮವಾರ

ಇಂಗ್ಲಿಷ ಶಿಕ್ಷಣ

ಮಾಡಿದ್ದುಣ್ಣೊ ಬೇಕೆಂಬ ಮಾತೇನು ಸುಳ್ಳಲ್ಲ. ಇಂಗ್ಲಿಷ ಶಿಕ್ಷಣದಿಂದ ಭಾರತೀಯರ ದೃಷ್ಟಿಯಿಂದ ಒದಗಿದ ನಷ್ಟದ ಸ್ವರೂಪವನ್ನು ನಾವು ಈ ಹಿಂದೆ ಪರಾಂಬರಿಸಿದ್ದೇವೆ. ಉಸ್ಮಾನಿಯಾ ವಿಶ್ವವಿದ್ಯಾಲಯದ ಅಧಿಪತಿಗಳ ಅಂಬೋಣವನ್ನೂ ಮಹಾತ್ಮರ ಅಭಿಪ್ರಾಯವನ್ನೂ ಉಲ್ಲೇಖಿಸಿ, ಭರತ ಭೂಮಿಗೆ ಒದಗಿದ [illegible] ನ್ನು ಬಣ್ಣಿಸಿದ್ದೇವೆ. ಇಂದಿಗೆ ಇಂಗ್ಲಿಷ ಶಿಕ್ಷಣವನ್ನು ಬ್ರಿಟಿಶರ ದೃಷ್ಟಿಯಿಂದ [illegible] ಬೇಕಾಗಿದೆ.

ಇಂಗ್ಲಿಷ ಶಿಕ್ಷಣವನ್ನು ಪ್ರಚುರಗೊಳಿಸುವಾಗ ಭಾರತೀಯರ ಕಲ್ಯಾಣ ಮಾಡಬೇಕೆಂಬ ಸದಿಚ್ಛೆ ಇದ್ದದ್ದು ನಮಗೆಲ್ಲ ಗೊತ್ತಿದ್ದ ವಿಷಯವಾಗಿದೆ. ಭರತಪುತ್ರರನ್ನು ಪೂರ್ವ ಪರಂಪರೆಗೆ ಚ್ಯುತಮಾಡಿ ನೂತನ ಪರಂಪರೆಯನ್ನು ನಿರ್ಮಿಸಿ ಬ್ರಿಟಿಶ ಸಂಸ್ಕಾರದ ಮಹಿಮೆಯನ್ನೇ ಯಾವಾಗಲೂ ವರ್ಣಿಸಹಚ್ಚಿ ದೇಶತುಂಬ ಬ್ರಿಟಿಶರ ಪ್ರತಿಷ್ಠೆಯನ್ನು ಹಬ್ಬಿಸಿ ಭರತಪುತ್ರರ ಕಡೆಯಿಂದ ಅವಶ್ಯವಿಲ್ಲ [illegible] ವನ್ನು ಸಂಗ್ರಹಿಸಿಕೊಂಡು [illegible] ಅವರ ಪಾರತಂತ್ರ್ಯದಲ್ಲಿಟ್ಟು, ಜಗ ಅನುಭವಿಸಿಕೊಂಡು ಬರಬೇಕೆಂಬದೊಂದು ವಿಚಾರವು ಇದ್ದೇ ಇರುವದು. ಅದಕ್ಕಾಗಿಯೇ ಪೂರ್ವ ಪರಂಪರೆಯ ಶಿಕ್ಷಾಕ್ರಮವನ್ನು [illegible] ಪಡಿಸಿ ಹೊಸ ಕ್ರಮದ, ಹೊಸ ಪದ್ಧತಿ ಹೊಸ ಪರಂಪರೆಯ ಪಾಶ್ಚಾತ್ಯ ಸಂಸ್ಕಾರದ ಅಚ್ಚಿನ್ನ ಇಂಗ್ಲಿಷ ಶಿಕ್ಷಣಕ್ರಮವು ನಮ್ಮೀ ಭರತಭೂಮಿಯಲ್ಲಿ ರೂಢವಾಯಿತು. ಈ ಶಿಕ್ಷಣದಿಂದುಂಟಾದ ಫಲವನ್ನು ನಾವು ಕಣ್ಣಾರೆ ಕಾಣುತ್ತೇವೆ. ಆ ಕುರಿತು ವಿಚಾರಶೀಲ ಲೋಕನಾಯಕರ ಅಭಿಪ್ರಾಯಗಳನ್ನೂ ಓದುತ್ತೇವೆ. ಅದಿಂತಿರಲಿ.

ಬ್ರಿಟಿಶರ ಕಲ್ಪನೆಯಂತೆ ಹಿಂದುಸ್ಥಾನದೊಳಗಿನ ವಿದ್ವಜ್ಜನರಲ್ಲಿ ಪಾರತಂತ್ರ್ಯಬುದ್ಧಿಯು ನೆಲಿಸಲಿಕ್ಕಾಯಿತೇನು? ನೊಟ್ಟಿಂಗಹಾಮ್‌ದೊಳಗಿನ ವಿದ್ಯಾಲಯದ ಅಧ್ಯಾಪಕರಾದ ಜೋನ್ ಬಾಯುರ್ಸರವರು 'ಹಿಂದುಸ್ಥಾನ'ವೆಂಬ ವಿಷಯದ ಮೇಲೆ ಮಾತನಾಡುವಾಗ ಭಾರತವಾಸೀಯರು ಶಿಕ್ಷಣ ಪಡೆಯಲಿಕ್ಕಾಗಿ ಬ್ರಿಟನ್ ದೇಶಕ್ಕೆ ಹೋಗುವದು ಇಷ್ಟವೇನು? ಎಂಬ ಪ್ರಶ್ನೆಯನ್ನೆತ್ತಿ, ಅದು ಅನಿಷ್ಟವೆಂದು ಅಭಿಪ್ರಾಯಪಟ್ಟರು. ನಮ್ಮ ಭಾರತೀಯ ಲೋಕನಾಯಕರ ಕಾರಣ ಬೇರೆ ಇವರ ಕಾರಣ ಬೇರೆ. ವಿದ್ಯಾರ್ಥಿಗಳೆಲ್ಲರೂ ಬ್ರಿಟಿಶ ರಾಜ್ಯಾಡಳಿತೆಯ ಪರಮ ಶತ್ರುಗಳಾಗುತ್ತಾರೆಂದು ಅವರು ಅಭಿಪ್ರಾಯಪಡುತ್ತಾರೆ. ಇಂಗ್ಲಿಷ ಶಿಕ್ಷಣಕ್ರಮದಿಂದ ಬ್ರಿಟಿಶರಿಗೂ, ಭಾರತೀಯರಿಗೂ ತಕ್ಕಮಟ್ಟಿಗೆ ಗೆಳೆತನ ಬೆಳೆಯಲು ಅನುಕೂಲವಾಗಿದೆ. ಹಾಗೆಯೇ ತಪ್ಪುಗ್ರಹಿಕೆಯೂ, ಕಲಹಗಳೂ ಉಂಟಾಗಿವೆ. ಇಂಗ್ಲಿಷ ಶಿಕ್ಷಣ ಹೊಂದಿದ ಭಾರತೀಯರೇ ಬ್ರಿಟಿಶ ರಾಜ್ಯಭಾರದ ಮೇಲಿನ ಟೀಕೆಯನ್ನು ತಿರಸ್ಕಾರದಿಂದ ನಡಿಸುತ್ತಾರೆ. ಶಿಕ್ಷಣ ಹೊಂದಿದವರ ಪ್ರಮಾಣವು ಹೆಚ್ಚಿಗಿಲ್ಲ. ಆದರೂ, ಅವರೇ ದೇಶದೊಳಗೆ ಗೊಂದಲವನ್ನು ಉಂಟುಮಾಡುತ್ತಾರೆ. ಬ್ರಿಟಿಶ ದೇಶವನ್ನೇ ನಿಂದಿಸಿ ತಡೆಯುವದಿಲ್ಲ. ಗಾಂಧಿಯವರ ಕೈಕೆಳಗೆ ಪಾಶ್ಚಾತ್ಯ ಸಂಸ್ಕೃತಿಯ ಮೇಲೆಯೇ ಅವರು ಕಾದಹ ಹೂಡಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯಿಂದ ತಮಗೆ ಸ್ಫೂರ್ತಿಯಾಗುವದಿಲ್ಲವಾಗಿಯೂ, ಕ್ಷಣಭಂಗುರ ಸುಖದ ಆದಿಭೌತಿಕ ವಿಚಾರಗಳೇ ಉಂಟಾಗುತ್ತವಾಗಿಯೂ ಭಾರತೀಯರು ಹೇಳುತ್ತಾರೆ. ಆದರಿಂದ ಭಾರತೀಯರ ಪರಂಪರೆಯನ್ನು ಉದ್ಧರಿಸುವದು ಯೋಗ್ಯವಲ್ಲವೇ? ಭಾರತ ಇತಿಹಾಸ ಸಂಶೋಧನ ಮಾಡಿ ಭಾರತೀಯ ಪರಂಪರೆಯಿಂದ ದೇಶದಲ್ಲಿ ಪ್ರೇರಕ ಶಕ್ತಿಯನ್ನುಂಟುಮಾಡುವ ಪ್ರಯತ್ನ ಒಂದು ಈಗ ಭರತಭೂಮಿಯಲ್ಲಿ ನಡೆದಿದೆ. ಬ್ರಿಟಿಶರು ಮುಂದಾಗಿ ಈ ಕಾರ್ಯವನ್ನು ಕೈಕೊಂಡು ಮುಂದರಿಸತಕ್ಕದ್ದು. ಬ್ರಿಟಿಶ ಕ್ರಮದಿಂದ ಹಿಂದುಸ್ಥಾನವನ್ನು ಉದ್ಧರಿಸಬಯಸುವ ಗೊಡವೆಗೆ ಈಗ ಬ್ರಿಟಿಶರು ಹೋಗಲಾಗದು.

ಅಧ್ಯಾಪಕರಾದ ಬಾಯುರ್ಸರವರು ಬ್ರಿಟಿಶರ ದೃಷ್ಟಿಕೋನದಿಂದ ಪ್ರದರ್ಶಿಸಿದ ವಿಚಾರಗಳನ್ನು ಸಮಾಲೋಚಿಸಿದರೆ, ಬ್ರಿಟಿಶರ ಸ್ವಾರ್ಥಪರಾಯಣತೆಗೆ ಪ್ರತಿಫಲ ದೊರಕಿದೆಂದು ತಿಳಿದು ಒಂದು ಪ್ರಕಾರದಿಂದ ಸಂತೋಷವಾಗುತ್ತದೆ. ಪರನಾಶ ಮಾಡುವವರು ಪರನಾಶವನ್ನೇ ಮಾಡಿ ತಾತ್ಪೂರ್ತಿಕ ಲಾಭಹೊಂದಿದರೂ ಕೊನೆಗೆ ಅವರು ಅಧಃಪತನ ಹೊಂದಬೇಕಾಗುತ್ತದೆ. ಬಾಯುರ್ಸರವರು ಭಾರತೀಯ ಪರಂಪರೆಯ ಪುರಸ್ಕಾರವನ್ನು ಯಾಕೆ ಮಾಡುತ್ತಾರೆಂದು ಮೇಲಿನ ವಿವರದಿಂದ ಸ್ಫುಟವಾಗುತ್ತದೆ. ಬ್ರಿಟಿಶ ರಾಜ್ಯಭಾರದ ಮೇಲಿನ ಟೀಕಾಕಾರರ ಮಂಡಳವನ್ನು ಮುರಿಯುವದಕ್ಕಾಗಿ ಅವರು ಪುರಾತನ ಪರಂಪರೆಯ ಶಿಕ್ಷಣಕ್ರಮವನ್ನು ಭರತಭೂಮಿಯಲ್ಲಿ ಉದ್ಧರಿಸಲು ಬೋಧಿಸಿದ್ದಾರೆ. ಅನುಮಾನಕ್ಕೆ ಅವಕಾಶವಿಲ್ಲದ ಕೊಡದೆ ತಮ್ಮ ಉಪನ್ಯಾಸದ ಕೊನೆಗೆ ತಾತ್ಪರ್ಯವನ್ನು ಹೇಳಿಬಿಟ್ಟಿದ್ದಾರೆ. "ಹಿಂದುಸ್ಥಾನವನ್ನು ಬ್ರಿಟಿಶ ದೇಶವು ತೊರೆಯಲಾರದು, ಹಿಂದುಸ್ಥಾನದ ಕಲ್ಯಾಣಕ್ಕಾಗಿಯೇ ಹಿಂದುಸ್ಥಾನವನ್ನು ಬಿಡಬರುವದಿಲ್ಲ" ಹಿಂದುಸ್ಥಾನದ ಕಲ್ಯಾಣದ ವೇದಾಂತವು ಅದಿಂತಿರಲಿ. ಆ ವೇದಾಂತವನ್ನೂ, ಆ ವೇದಾಂತದಿಂದ ಹೊರಡುವ ಪುರಾಣವನ್ನೂ, ಕಟ್ಟುಕಥೆಗಳನ್ನೂ ನಾವು ಓದಿದ್ದೇವೆ, ಈಗ ಪ್ರತ್ಯಕ್ಷ ಅನುಭವಿಸುತ್ತಿದ್ದೇವೆ. ಬ್ರಿಟಿಶರಿಗೆ ಉಪಾಯದಿಂದ ಹಿಂದುಸ್ಥಾನದೊಳಗಿನ ರಾಜ್ಯಭಾರದ ಸೂತ್ರಗಳನ್ನು ಸ್ವಾರ್ಥಸಾಧನೆಗಾಗಿ ಬಿಡಮನಸ್ಸಿಲ್ಲ. ಆದರಿಂದ ಹಿಂದುಸ್ಥಾನದ ಕಲ್ಯಾಣದ ವೇದಾಂತವು ಹೇಳಲಾಗುತ್ತದೆ. ಬ್ರಿಟಿಶ ರಾಜ್ಯವನ್ನು ಚಿರಕಾಲ ಹಿಂದುಸ್ಥಾನದಲ್ಲಿ ನೆಲಿಸಿಕೊಳ್ಳುವದಕ್ಕಾಗಿಯೇ ಈಗಿನ ಇಂಗ್ಲಿಷ ಶಿಕ್ಷಣ ಕ್ರಮವನ್ನು ರದ್ದುಪಡಿಸಿ ನೂತನ ಪುರಾತನ ಪರಂಪರೆಯ ಶಿಕ್ಷಣಕ್ರಮವನ್ನು ಉಪಕ್ರಮಿಸಲು ಬಾಯುರ್ಸರವರು ಬೋಧಿಸುತ್ತಾರೆ. ವಿರೋಧಭಕ್ತಿಯಾದರೂ ನಾವೀ ಉಪಕ್ರಮವನ್ನು ಆನಂದದಿಂದ ಅಂಗೀಕರಿಸುವೆವು. ಪುರಾತನ ಪರಂಪರೆಯ ಶಿಕ್ಷಣವು ನಮಗೆ ದೊರೆತರೆ, ನಮ್ಮ ರಾಷ್ಟ್ರದ ಬೆಳವಣಿಗೆಯು ಪರಂಪರೆಯಂತೆ ಸ್ವಾಭಾವಿಕವಾಗಿ ಸಾಗಿ ಆತ್ಮೋದ್ಧಾರ ಮಾಡಿಕೊಳ್ಳಲು ಬಹುಮಟ್ಟಿಗೆ ಅನುಕೂಲವಾಗುವದು. ಪುರಾತನ ಪರಂಪರೆಯು ನಮ್ಮಲ್ಲಿ ರೂಢವಾಗಿದ್ದರೆ, ಇಂಗ್ಲಿಷ ಶಿಕ್ಷಣಕ್ರಮದಿಂದ ಅದನ್ನು ಹೀಯಾಳಿಸಲು ಕಲಿಯದಿದ್ದರೆ ಈಗಿನಷ್ಟು ಅರಾಷ್ಟ್ರೀಯತ್ವವು ದೇಶದಲ್ಲಿ ದೃಗ್ಗೋಚರವಾಗುತ್ತಿದ್ದಿಲ್ಲವೆಂದು ನಾವು ಎದೆತಟ್ಟಿ ಹೇಳಬಲ್ಲೆವು. ಲೋಕಮಾನ್ಯ, ದೇಶಬಂಧು, ಮಹಾತ್ಮರಂಥ ಲೋಕನಾಯಕರಿಗೆ ದೇಶಾಭಿಮಾನದ ಜ್ಯೋತಿಯನ್ನು ಪ್ರಜ್ವಲಿಸುವದಕ್ಕಾಗಿ ಇಷ್ಟು ಕಷ್ಟಪಡಬೇಕಾಗುತ್ತಿದ್ದಿಲ್ಲ. ಬಾಯುರ್ಸರವರ ವಿಚಾರತಂತುವೂ, ದೇಶಾಭಿಮಾನಿ ಲೋಕನಾಯಕರ ವಿಚಾರತಂತುವೂ ಭಿನ್ನ ಭಿನ್ನವಾಗಿದ್ದಾಗ್ಯೂ, ಇಬ್ಬರೂ ಸೂಚಿಸಿದ ಉಪಾಯವು ಮಾತ್ರ ಒಂದೇ ಎಂದು ವಿಚಾರಶೀಲರು ತಿಳಿಯದಿರರು. ಬ್ರಿಟಿಶ ರಾಜ್ಯಾಧಿಕಾರವನ್ನು ಇನ್ನು ಮುಂದೆ ನೆಲಿಸುವದಕ್ಕಾಗಿ ಬಾಯುರ್ಸರವರು ಸೂಚಿಸುವ ಉಪಾಯವನ್ನೇ ಮಹಾತ್ಮರಂಥ ಮುಂದಾಳುಗಳು ಭರತಭೂಮಿಯ ಉದ್ಧಾರಕ್ಕಾಗಿ ಸೂಚಿಸುತ್ತಾರೆ. ತೋರಿಕೆಗೆ ಇದು ಚಮತ್ಕಾರವೆಂದೆಣಿಸಿದರೂ, ನಿಜವಾಗಿ ಇದರೊಳಗೆ ಚಮತ್ಕಾರವೇನಿಲ್ಲ. ಆದರಿಂದ ನಮ್ಮ ಬ್ರಿಟಿಶ ಸರಕಾರವು ಬಾಯುರ್ಸರವರ ವಿಚಾರಪರಂಪರೆಯನ್ನು ಮನ್ನಿಸಿ ಈಗಿನ ಶಿಕ್ಷಣಕ್ರಮವನ್ನು ಆಮೂಲಾಗ್ರ ಕಿತ್ತೊಗೆದು, ಭರತಭೂಮಿಯ ಪೂರ್ವಪರಂಪರೆಗನುರೋಧವಾಗಿ ಹೊಸ ಶಿಕ್ಷಣಕ್ರಮವನ್ನು ಕಲ್ಪಿಸಬೇಕಾಗಿ ಬಿನ್ನೈಸುವೆವು. ಯಾವದೇ ಗಡಿ ಇದರೊಳ್ಳದೇಕೆ? ಸಿದ್ಧ ಬಿದ್ದ ರಾಮಿತಲ್ಲವೇ?

ಸ್ಫುಟ ಸೂಚನೆಗಳು.

೧. ಬ್ರಿಟಿಶ ರಾಜ್ಯಭಾರದಲ್ಲಿ ಲೋಕೋಪಕಾರ, ಹಿಂದುಸ್ಥಾನದ ಕಲ್ಯಾಣ ಮುಂತಾದ ಬಡಿವಾರಕ್ಕೇನ ಕಡಿಮೆ ಇಲ್ಲ. ಲಂಕಾಶಾಯರದೊಳಗಿನ 'ಮ್ಯಾಂಚೆಸ್ಟರಗಾರ್ಡಿಯನ್' ಪತ್ರಿಕೆಯು ಬ್ರಿಟಿಶದೇಶದೊಳಗಿನ ಲೋಕಶಾಹಿಯ ಸಂಸ್ಥೆಗಳನ್ನು ಭರತಭೂಮಿಯಲ್ಲಿ ಪ್ರಚುರಗೊಳಿಸಿ ಭರತ ಖಂಡದ ಉದ್ಧಾರ ಮಾಡಲು ಬ್ರಿಟಿಶರು ಸಿದ್ಧರಾಗಬೇಕಾಗಿ ಬರೆದು ಹಿಂದುಸ್ಥಾನದ ಉಪಕಾರಕ್ಕಾಗಿಯೇ ಬ್ರಿಟಿಶರು ಹಿಂದುಸ್ಥಾನದಲ್ಲಿರಬೇಕೆಂದು ಬರೆಯುತ್ತದೆ. ಬ್ರಿಟಿಶರ ರಾಜ್ಯಭಾರವು ಲೋಕೋಪಕಾರಕ್ಕಾಗಿಯೇ ನಡೆದದೆಂಬುದಕ್ಕೆ ಸದ್ಯಕ್ಕೆ ನಡೆದ ಒಂದು ಉದಾಹರಣೆಯನ್ನು ಹೇಳಬಹುದು. ಹಿಂದುಸ್ಥಾನದಲ್ಲಿ ಉದ್ಯೋಗಗಳ ಉದ್ಧಾರ ಮಾಡುವ ಉಪಾಯಗಳನ್ನು ಸೂಚಿಸುವದಕ್ಕಾಗಿ ನಮ್ಮ ಹಿಂದುಸ್ಥಾನ ಸರಕಾರವು ಔದ್ಯೋಗಿಕ ಕಮೀಶನನ್ನು ನೇಮಿಸಿತು. ಈ ಕಮೀಶನು ದೇಶದಲ್ಲೆಲ್ಲ ಸಂಚರಿಸಿ ಉದ್ಯೋಗಗಳನ್ನು ಅಭಿವೃದ್ಧಿ ಮಾಡುವ ಅನೇಕ ಉಪಾಯಗಳನ್ನು ಸೂಚಿಸಿತು. ಆ ಉಪಾಯಗಳಲ್ಲಿ ಒಂದು ಉಪಾಯವೆಂದರೆ, ಇಲ್ಲಿಯ ಉಗಿಬಂಡಿಗಳಿಗೆ ತಗಲುವ ಸಾಹಿತ್ಯಗಳನ್ನು ಇಲ್ಲಿಯ ಕಾರಖಾನೆಗಳಲ್ಲಿಯೇ ಕೊಂಡುಕೊಳ್ಳುವದು, ಈ ಸೂಚನೆಯನ್ನು ಸರಕಾರವು ಮನ್ನಿಸಿತು. ಕೂಡಲೆ ಹಿಂದುಸ್ಥಾನದಲ್ಲಿ ಔದ್ಯೋಗಿಕ ಅಭಿವೃದ್ಧಿಯಾಗಿ ಹೋಯಿತೆಂದು ಅವಸರದ ಆಶಾವಾದಿಗಳು ಗ್ರಹಿಕೆ ಮಾಡಿಕೊಂಡರು. ಆದರೆ, ಮುಂಚಿನಂತೆಯೇ ಉಗಿಬಂಡಿಗಳಿಗೆ ತಗಲುವ ಸಾಹಿತ್ಯಗಳೆಲ್ಲ ಬ್ರಿಟಿಶ ದೇಶದಿಂದಲೇ ಬರುತ್ತವೆ. ಎಷ್ಟೆಂದರೂ ಆ ತತ್ವವು ಖಂಡಿಸಲ್ಪಡುತ್ತದೆಯೋ? ಮುಂಬಯಿಯ ವರ್ತಕ ಸಂಘಕ್ಕೆ 'ವಣಿಜ್ಯವೃತ್ತಾಯುಕ್ತವೃತ್ತ' ಪ್ರಕಾರ ತಿಳಿದು ಸರಕಾರಿ ಉಗಿಬಂಡಿಗಳಿಗಾಗಿ ತಗಲುವ ಸಾಮಗ್ರಿಯು ಎಲ್ಲಿಂದ ಪೂರೈಸಿಕೊಳ್ಳಲಾಗುತ್ತದೆಂದು ಸರಕಾರವು ಉಗಿಬಂಡಿಯ ಆಡಳಿತಕ್ಕಾಗಿ ನೇಮಿಸಿದ ರೇಲ್ವೆ ಬೋರ್ಡಿಗೆ ಕೇಳಿತು. ತಾವರಿಯವಾಗಿ ರೇಲ್ವೆ ಬೋರ್ಡು ವರ್ತಕ ಸಂಘಕ್ಕೆ ಬರೆದದೆ. ಈ ಉತ್ತರವನ್ನು ಕೇಳಿ ಹಿಂದೀ ವರ್ತಕ ಸಂಘಕ್ಕೆ ಬಹು ಸಿಟ್ಟು ಬಂದು, ಬುದ್ಧ್ಯ ಸರಕಾರವು ಆಜ್ಞಾನದ ನೇಮ ಹಾಕುತ್ತದೆಂದು ಅಭಿಪ್ರಾಯಪಟ್ಟಿದೆ. ವರ್ಷಾಸನ ೧|| ಅಬ್ಜ ರೂಪಾಯಿಗಳ ಸಾಹಿತ್ಯವು ಈ ಉಗಿಬಂಡಿಗಳಿಗೆ ಬೇಕು. ಔದ್ಯೋಗಿಕ ಅಭಿವೃದ್ಧಿಯ ವಚನವನ್ನು ಪಾಲಿಸಹೋದರೆ ಸ್ವದೇಶ ಬಾಂಧವರಾದ ಬ್ರಿಟಿಶರು ನಷ್ಟಪಡಬೇಕಾಗುತ್ತದೆ. ಆದರಿಂದ ಅದಸ್ಕರ ವಟ್ಟಿಗೆ ವಚನಭಂಗವನ್ನು ಮುಚ್ಚಿಡುವದಕ್ಕಾಗಿ ಮೂಕವೇಷ ಬಳಕೊಳ್ಳಲಾಗಿದೆಂದು ಬಲ್ಲವರು ಹೇಳುತ್ತಾರೆ. ಸ್ವಾರ್ಥಕ್ಕೆ ಬಾಧೆ ತಗಲುವ ಹಿಂದುಸ್ಥಾನದ ಕಲ್ಯಾಣವು ಬ್ರಿಟಿಶರ ಕೈಯಿಂದ ಎಂದಾದರೂ ಆಗಬಲ್ಲದೇ? ಅದಕ್ಕಾಗಿಯೇ ಮಹಾತ್ಮರಂಥ ಲೋಕನಾಯಕರು ಸ್ವರಾಜ್ಯಕ್ಕಾಗಿ ತಳಮಳಿಸುತ್ತಿದ್ದಾರೆ.

---

೨ 'ವಿವಿಧ ಸಂಗ್ರಹ'ದಲ್ಲಿ ಕೊಟ್ಟ ರೋಲಿನ್ಸನ್ ದೊರೆಗಳ ಉದ್ಗಾರಗಳು ಬೋಧಪ್ರದವಿವೆ. ದೊರೆಗಳು ಹಿಂದುಸ್ಥಾನದೊಳಗೆ ಸೈನ್ಯಾಧಿಪತಿಗಳಾಗಿರುವ ತನಕ ತಮ್ಮ ವಿಚಾರಗಳನ್ನು ಪ್ರದರ್ಶನ ಮಾಡದೆ ನಿಧನವಪಟ್ಟ ನಂತರ ಅವನ್ನು ಚರಿತ್ರಕರ್ತರು ಪ್ರಕಟಿಸಬೇಕಾಯಿತು. ಈ ವಿಚಾರಗಳ ಮೇಲಿಂದ ಬ್ರಿಟಿಶ ರಾಜ್ಯಭಾರದೊಳಗಿನ ಧುಂದುಗಾರಿಕೆಯು ಯಥಾರ್ಥವಾಗಿ ಪ್ರಕಟಹೊಂದಿದೆ. ದೊರೆಗಳಿಗೆ ಸ್ವರಾಜ್ಯಪಕ್ಷದವರೆಂದಾಗಲಿ, ಅಸಹಯೋಗಿಗಳೆಂದಾಗಲಿ ಯಾರೂ ಹೇಳಲಿಕ್ಕಿಲ್ಲ; ಅವರು ಬ್ರಿಟಿಶರ ದ್ವೇಷಿಗಳಂತೂ ಅಲ್ಲೇ ಅಲ್ಲ. ಬ್ರಿಟಿಶ ಪಕ್ಷಪಾತಿಯಾಗಿ ಅವರು ನಮೂದಿಸಿದ ಅಭಿಪ್ರಾಯಗಳಿವು. ಸೇನಾಧಿಪತಿ, ಪ್ರಾಂತಾಧಿಪತಿ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳ ದೊಡ್ಡಸ್ತನದ ವೇಷವನ್ನು ಮೊಗಲ್ ಬಾದಶಹರಂತೆ ಮೆರಿಸುತ್ತಿರುವದು ಬರೇ ಕಪಟ ನಾಟಕವು. ಇಂಗ್ಲಾಯಿಯಲ್ಲಿ ಮೋಗಲಾಯಿಯು ನಷ್ಟವಾಯಿತೆಂದು ಡಂಗುರ ಸಾರುವವರಂತೂ ದಿಕ್ಕಿಲ್ಲ. ವ್ಯವಹಾರದಲ್ಲಿ ಮಾತ್ರ ಮೋಗಲ್ ಬಾದಶಹರ ಪರಂಪರೆಯನ್ನೇ ಬ್ರಿಟಿಶರು ಶಿದ್ದಿ ಬೆಳೆಸಿ ಅನುಸರಿಸುತ್ತಿದ್ದಾರೆ. ಬ್ರಿಟಿಶರ ದೇಶವು ಪ್ರತ್ಯೇಕವಾಗಿದ್ದು ಆ ದೇಶದ ಮೇಲಿನ ಮಮತಾಪಾಶವು ಭದ್ರವಾಗಿದ್ದದರಿಂದ ಮೋಗಲರ ಕಾಲದಲ್ಲಿ ನಡೆಯದ ಒಂದು ಪ್ರಕಾರವು ಮಾತ್ರ ಹೆಚ್ಚಾಗಿ ನಡೆಯುತ್ತಿದೆ. ಇಂಥ ಧುಂದುಗಾರಿಕೆಗಳ ಹಣವು ವಿಲಾಯತಿ ಸಾಮಗ್ರಿಗಳ ಪೂರೈಕೆಗಾಗಿ ಪರದೇಶಕ್ಕೆ ರವಾನೆಯಾಗುತ್ತದೆ. ಈ ದೃಷ್ಟಿಯಿಂದ ವಿಚಾರಿಸಿದರೆ, ಇಂಗ್ಲಾಯಿಗಿಂತ ಮೋಗಲಾಯಿಯೇ ಮೇಲು, ಅದರಿಂದ ಹಿಂದುಸ್ಥಾನದ ಅವಸ್ಥೆಯು ಇಷ್ಟು ದೀನವಾಗುತ್ತಿದ್ದಿಲ್ಲವಾಗಿ ಬ್ರಿಟಿಶರ ಆಚರಣದ ಮೇಲಿಂದ ಈಗ ಹೇಳಲಡ್ಡಿಯಿಲ್ಲ. ರೋಲಿನ್ಸನ್ ದೊರೆಗಳಂಥ ಪಕ್ಷಪಾತಿ ಪುರುಷರು ನಿಷೇಧ ಮಾಡಿದ್ದರ ಮೇಲಿಂದ ಸರಕಾರದ ದ್ರವ್ಯವ್ಯಯವು ಮೇರೆಮೀರಿ ನಡೆದದೆಂದು ಸ್ಪಷ್ಟವಾಗುತ್ತದೆ. ರಾಜ್ಯಕರ್ತರು ಇನ್ನಾದರೂ ವಿಚಾರಿಸುವರೇ?

---

೩. ಬಾರ್ದೋಲಿಯೊಳಗಿನ ಸರಕಾರದ ದಬ್ಬಾಳಿಕೆಯು ಫಲಿಸಹತ್ತಿದೆ. ಈ ಕಾದಾಟದಲ್ಲಿ ವಿದ್ಯಾರ್ಥಿಗಳು ಸೇರಲಾರಂಭಿಸಿದ್ದಾರೆ. ಕಳೆದ ಬುಧವಾರ ಮುಂಬಯಿಯ ವಿದ್ಯಾರ್ಥಿಗಳು ಬಾರ್ದೋಲಿ ದಿನವನ್ನು ಪಾಲಿಸಿ ಬಾರ್ದೋಲಿಯ ಸತ್ಯಾಗ್ರಹ ಸಮರಕ್ಕೆ ೧೨೦೦೦ ರೂಪಾಯಿಗಳನ್ನು ಸಂಗ್ರಹಿಸಿಕೊಟ್ಟರು. ಇದು ಶುಭಸೂಚಕವು. ಚೀನ ದೇಶದಲ್ಲಿ ಸ್ವಾತಂತ್ರ್ಯದೇವಿಯನ್ನು ಪ್ರಾಣಪ್ರತಿಷ್ಠೆ ಮಾಡಲು ಪ್ರಾಮುಖ್ಯವಾಗಿ ವಿದ್ಯಾರ್ಥಿಗಳೇ ದುಡಿದಿದ್ದಾರೆ. ವಿದ್ಯಾರ್ಥಿಗಳ ಬೆಂಬಲದಿಂದ ಚೀನದೊಳಗಿನ ರಾಷ್ಟ್ರೀಯ ಕಾದಾಟಕ್ಕೆ ಕಳೆ ಏರಿ, ಕೊನೆಗೆ ಚೀನದೇಶವು ಸ್ವತಂತ್ರವಾಗಿದೆ. ಇಂಥ ಸುಯೋಗವು ಹಿಂದುಸ್ಥಾನದಲ್ಲಿ ಸಂಭವಿಸುವ ಶುಭಸೂಚನೆ ಇದೆಂದು ಬಲ್ಲವರ ಹೇಳುತ್ತಾರೆ. ಎಲ್ಫಿನ್‌ಸ್ಟನ್ ಕಾಲೇಜಿನಂಥ ಸರಕಾರಿ ಕಾಲೇಜಿನ ವಿದ್ಯಾರ್ಥಿಗಳು ಸಹ ನಿರ್ಭಯದಿಂದ ಬಾರ್ದೋಲಿಯ ಸಮರಾಂಗಣದಲ್ಲಿ ಬೆಂಬಲಕ್ಕೆ ನಿಂತಿದ್ದಾರೆಂದು ತಿಳಿದು, ದೇಶಾಭಿಮಾನಿಗಳಿಗೆ ಹರುಷವಾಗದಿರದು. ಹೀಗೆ ವಿದ್ಯಾಲಯಗಳೊಳಗಿನ ವಿದ್ಯಾರ್ಥಿಗಳೆಲ್ಲರೂ ರಾಷ್ಟ್ರೋದ್ಧಾರದ ಪ್ರಯತ್ನದಲ್ಲಿ ಸೇರಿದರೆ, ನಮ್ಮ ಭರತಭೂಮಿಯ ಉದ್ಧಾರವು ಶೀಘ್ರವೇ ಕೊನೆಗಾಣುವದೆಂದು ಚೀನ ದೇಶದ ಇತಿಹಾಸದ ಮೇಲಿಂದ ಹೇಳಲಡ್ಡಿಯಿಲ್ಲ. ಶಾಲಾಧಿಕಾರಿಗಳು ಸ್ವಸಂತೋಷದಿಂದ ವಿದ್ಯಾರ್ಥಿಗಳಿಗೆ ಸೇರಗೊಟ್ಟರೆ, ಎಲ್ಲವೂ ಅನುಕೂಲವಾಗಿ ಸಾಗುವದು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವರ್ಷದ ಮಳೆಯು ಪೀಡಿಸಹತ್ತಿದೆ. ಮಳೆ ಬೀಳಹತ್ತಿದರೆ, ತೆರಪಿಲ್ಲದೆ ಮಳೆ ಸುರಿಯುತ್ತದೆ; ಹಗಲಿರುಳು ಮಳೆ; ಒಮ್ಮೆ ಮಳೆ ಹಡೆದರೆ, ಚೊಕ್ಕ ಬಿಸಿಲು; ವೈಶಾಖ ಮಾಸದ ಬಿಸಿಲು ಬೀಳುತ್ತದೆ. ಇದರಿಂದ ಬೇಸಾಯಗಾರರಿಗೆ ಬಲು ತೊಂದರೆ. ಈ ವಾರದಲ್ಲಿ ೯–೩೮ ಇಂಚು ಮಳೆ ಬಿತ್ತು. ಈ ತನಕ ೬೧–೭೦ ಇಂಚು ಮಳೆ ಬಿತ್ತು.

ಶ್ರೀ ಕುಂಭೇಶ್ವರ ದೇವಾಲಯದ ಮುಂದುಗಡೆ ಇರುವ ಅಶ್ವತ್ಥ ಕಟ್ಟೆಯ ಮೇಲಿರುವ ಉತ್ತರಾಭಿಮುಖವಾಗಿರುವ ವೀರ ಮುಖ್ಯಪ್ರಾಣ ದೇವರ ಜೀರ್ಣೋದ್ಧಾರ ಸಂಕಲ್ಪವಾಗಿದೆ. ಶ್ರೀ ದೇವರು ಈ ಕಾರ್ಯವನ್ನು ಊರವರ ಕಡೆಯಿಂದ ನೆರವೇರಿಸಿಕೊಳ್ಳಬೇಕು.

ಉತ್ತರ ಕಡೆಯಿಂದ ಇಲ್ಲಿ ಒಬ್ಬ ಬೈರಾಗಿಯು ಬಂದು, ೭–೮ ದಿವಸ ಉಳಕೊಂಡನು. ಆತನು ಶಿರ್ಶಿಯ ರಾ| ನಾರಾಯಣ ಪ್ರಭುರ ಮಗನೆಂದು ಅವರ ಆಪ್ತರು ಶಿರ್ಶಿಗೆ ತಿಳಿಸಿದರಂತೆ. ಅವರು ಬಂದರು; ನೋಡಿದರು. ೧೫ ವರುಷಗಳ ಹಿಂದೆ ದೇಶಾಂತರಕ್ಕೆ ಹೋದ ತಮ್ಮ ಮಗ ವಾಸುದೇವನೆಂದು ಗುರ್ತ ಹಚ್ಚಿದರು, ತಾಯಿಯೂ ಬಂದು ಮಗನೆಂದು ಹೇಳಿದಳು. ಬೈರಾಗಿಯು ಯಾವದೇ ವಿಧಾನವನ್ನು ನಿಶ್ಚಯವಾಗಿ ಹೇಳುವದಿಲ್ಲ. ಬೈರಾಗಿಯು ಸಾನಕ ಪಂಥದವನು, ಅಗ್ನಿಹೋತ್ರವನ್ನಿಟ್ಟಿದ್ದಾನೆ. ಸನ್ಯಾಸ ಸಾಧನವನ್ನು ಕಠೋರವಾಗಿ ಪಾಲಿಸುತ್ತಾನೆ. ಅನ್ನಗ್ರಹಣ ಮಾಡುವದಿಲ್ಲ. ಈತನ ಪ್ರಾಯವು ೩೧ ವರುಷ. ಮೋರೆಯ ಮೇಲೆ ಮೈಲಿಯ ಕಲೆಗಳಿವೆ. ಹಲ್ಲು ಚಿನ್ನದ ಮೊಳೆಗಳಿಂದ ಕಟ್ಟಿಕೊಳ್ಳಲಾಗಿವೆ. ಮಾತೆಲ್ಲ ಹಿಂದುಸ್ಥಾನಿ. ಈಗ ಶಿರ್ಶಿಗೆ ಹೋಗಿದ್ದಾನೆ.

ಇಲ್ಲಿಯ ಸಬ್‌ಡಿವ್ಹಿಜನಲ್ ಆಫೀಸರರಾದ ಮಿ|| ಆರ್. ಎಸ್. ಶೇಶಕಾಮತರವರಿಗೆ ಅಸಿಸ್ಟಂಟ ಇಂಜಿನಿಯರರಾಗಿ ನೇಮಿಸಲಾಗಿದೆ.

ಪರಸ್ಪರ ಸಹಕಾರಿಗಳು ಶನಿವಾರಕ್ಕೆ ಎಂದಿನಂತೆ ಸುಗ್ಗಿಯ ಹಬ್ಬವನ್ನು ಪಾಲಿಸಿದರು.

ಮ್ಯುನಿಸಿಪಾಲಿಟಿಯ ಇಲೆಕ್ಷನದ ಕುರಿತು ಅರ್ಜಿಗಳ ವಿಚಾರವು ನಾಳೆ ಜಿಲ್ಹಾ ಕೋರ್ಟಿನಲ್ಲಿ ನಡೆಯುವದು

ಹಿಂದುಸ್ಥಾನಿ ಸೇವಾ ದಲದ ಸ್ವಯಂಸೇವಕರಾದ ಶ್ರೀ|| ರಾಮ ಅಣ್ಣಾ ಲೀಂಗಡೇ ಇವರಿಗೆ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮೀಟಿಯಿಂದ ಧಾರವಾಡ, ಬೆಳಗಾವಿ, ವಿಜಾಪುರ, ಮತ್ತು ಕಾರವಾರ ಈ ಜಿಲ್ಲೆಗಳಲ್ಲಿ ರಾಷ್ಟ್ರೀಯ ಸಭೆಗೆ ಸಭಾಸದರನ್ನು ಕೂಡಿಸಲು ಅಧಿಕಾರ ಕೊಡಲಾಗಿದೆ. ಆದರಿಂದ ಶ್ರೀ|| ಲೀಂಗಡೆಯವರಿಗೆ ಅಲ್ಲಲ್ಲಿಯ ಪ್ರಮುಖರು ಸಮಸ್ತ ಪ್ರಕಾರದಿಂದ ಸಹಾಯ ಮಾಡಬೇಕಾಗಿ ಸೇವಾ ದಲದ ಕಾರ್ಯದರ್ಶಿಗಳು ವಿನಂತಿ ಮಾಡಿಕೊಳ್ಳುತ್ತಾರೆ.

ಹೊನ್ನಾವರ— ಇತ್ತಲಾಗಿ ೨ ೩ ದಿವಸಗಳಿಂದ ಮಳೆಯಿಲ್ಲ. ಬೇಸಾಯಗಾರರು ಚಿಂತಿಸುತ್ತಿದ್ದಾರೆ. ನೆಟ್ಟಿ ಕೆಲಸಕ್ಕೆ ಬಹು ತೊಂದರೆ. ಕುಂಭಾರವಾಡೆ ಸಾಧುಗಳಾದ ಶ್ರೀ ಶಾಂಡಿಲ್ಯ ಮಹಾರಾಜರವರು ಶ್ರೀ ರಾಮತೀರ್ಥದಲ್ಲಿ ಸ್ನಾನ ಮಾಡಿ, ಅದೇ ದಿನ ಕುಮಟಾ ಮಾರ್ಗವಾಗಿ ಗೋಕರ್ಣಕ್ಕೆ ತೆರಳಿದರು. ಸಹಕಾರದ ಸುಗ್ಗಿ ಹಬ್ಬವು ಇಲ್ಲಿಯ ಕನ್ನಡ ಶಾಲೆಯಲ್ಲಿ ಮಾಮಲೇದಾರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಜಾಹೀರ ನೋಟೀಸು.

ಹೊನ್ನಾವರ ತಾಲೂಕಿನ ಯಾವತ್ತೂ ನಾಗರಿಕರಿಗೆ ತಿಳಿಸುವದೇನಂದರೆ:— ಈ ಕೆಳಗಿನ ವಿಷಯಗಳ [illegible] ನ್ನು ಚರ್ಚಿಸುವದಕ್ಕೆ ಹೊನ್ನಾವರದ [illegible] ದ ಹೊಲಿನಲ್ಲಿ ಇದೇ ಬರುವ ರವಿವಾರ ತಾರೀಖು 1-7-192೮ನೇ ದಿವಸ ಸಾಯಂಕಾಲ 6 ಘಂಟೆಗೆ (ಸ್ಟಾಂ ಟಾ) ಹೊನ್ನಾವರ ತಾಲೂಕಿನ ನಾಗರಿಕರ ಸಭೆಯನ್ನು ಕೂಡಿಸುವದು ನಿಶ್ಚಯಿಸಿರುತ್ತ[illegible] ಆ ಸಭೆಯಲ್ಲಿ ಎಲ್ಲರೂ ಒಂದೇ[illegible]ಗಿ ಬಿನಂತಿ ಇದೆ

ಚರ್ಚೆಸತಕ್ಕ ವಿಷಯಗಳು.

1 [illegible] ಹೊಂಬ ಪ್ರೋಗ್ರಾತೆ[illegible] ಕುರಿತ [illegible] ಮಾಡುವ[illegible]

2 [illegible] ಹೊಲವನ್ನು [illegible] ಹೊನ್ನಾವರ ಮುನಿಸಿಪಾಲಿಟಿಯ [illegible] ಜಾತ್ಯಗಂಟಿನ [illegible]

3 [illegible]

4 ಹೊನ್ನಾವರ [illegible]

5 [illegible]

6 ಶ್ರೀ [illegible]

ಎಸ್. ಡಿ. ಕಿಣಿ,
[illegible]

[illegible] — ಇಲ್ಲಿ ಪ್ರತಿ [illegible] ಹೇಳಿದರೂ [illegible] ಬರುವದಿಲ್ಲ. [illegible] ಲೋಕಲ್ಬೋರ್ಡಿನವರೂ ಮಾರ್ಗಗಳಿಗೆ [illegible] ಪೇಟೆಯೊಳಗಿನ ಮಾರ್ಗವು [illegible] ವು ಇಲ್ಲಿ ಬೆಳಗಿಲ್ಲದ [illegible] ತೋಳೆದುಕೊಂಡು [illegible] ಕಲ್ಲುಗಳು [illegible] ಬಿದ್ದಿವೆ [illegible] ಒಡೆಗೆ ಕಾಲುವೆ ಇಲ್ಲದರಿಂದ ಇನ್ನೊಂದು ಬದಿಯಿಂದ ನೀರು ಬಂದು [illegible] ಮೇಲೆ ಹರಿ ಬಿದ್ದಿದೆ. ಅದ್ದ ಮಾರ್ಗಗಳಲ್ಲಿ ಲೋಕಲ್ಬೋರ್ಡಿನವ ಇವು ಮತ್ತೆ ನವು ಗಾಡಿಗಳ ಓಡಾಟದಿಂದ [illegible] ಕಾಲುವೆಗಳಿಲ್ಲದ್ದರಿಂದ ಎಲ್ಲ ನೀರು ಮಾರ್ಗಗಳ ಮೇಲೆಯೇ ಇದರಿಂದ ಕಷ್ಟಂಗಿ ಗಾಡಿಚಕ್ರಗಳು ಹುಗಿಯುತ್ತವೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಲಕ್ಷ ಕೊಡಬೇಕು.

ಭಟಕಳ— ಇಲ್ಲಿ ಅಪ್ರೀಲ [illegible] ಮಳೆಯು ತಕ್ಕ ಮಟ್ಟಿಗೆ ಹೊಂದದ ಭೂಮಿಗೆ ಉಪಕಾರವಾಗುವಂತೆ ಬಂದರೂ, ಮಕ್ಕಿಮಜಲುಗಳಿಗೆ ಸಾಕಷ್ಟು ನೀರಿಲ್ಲದೆ ಜನರು ಮೇಘರಾಜನ ದರ್ಶನಾಪೇಕ್ಷೆಯಾಗಿರುವಲ್ಲಿ ನಿನ್ನೆಯಿಂದ ಶುರುವಾದ ಪ್ರವರ್ಷವು ಮಳೆಯು ಸಹ ಗುರುವಾರ ರಾತ್ರೆ ಚನ್ನಾಗಿ ಸುರಿದು ಮಾರನೇ ದಿನ ಬೆಳಗ್ಗಿನಿಂದ ರವಿರಾಜನು ತನ್ನ ಪ್ರಕಾಶವನ್ನು ಜನರಿಗೆ ತೋರಿಸುತ್ತಿರುವನು. ಇಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ಸಾಂಕ್ರಾಮಿಕ ರೋಗಗಳು ಇಷ್ಟ ಇರುವವು. ಇದಕ್ಕೆ ಕಾಲಗತಿಯಲ್ಲದೆ ಬೇರೇನೂ ಇರುವದಿಲ್ಲ.

ರಾ|| ಪಿ ವ್ಹಿ ಪಟ್ಟರವರು ಬರೆಯುವದೇನಂದರೆ - ಇದೇ ಆಷಾಢ ಕೃಷ್ಣ ಪಕ್ಷ ೧೩ ಆದಿತ್ಯವಾರ ಕರ್ಕಾಟಕ ಸಂಕ್ರಮಣ ಬಂದದ್ದಲ್ಲದೆ ಇದರಂತೆ ಮುಂದೆ ಮಕರ ಸಂಕ್ರಮಣವು ಸಹ ಆದಿತ್ಯವಾರವೇ ಬಂದಿರುತ್ತದಾದ್ದರಿಂದಲೂ ಮತ್ತೂ ಕೆಲವು ಮಾಸದ ಶುದ್ಧ ಪಾಡ್ಯವು ಸಹ ರವಿವಾರವೇ ಬಂದಿರುವದರಿಂದಲೂ "ಅರಿಷ್ಟೇ ವ್ಯಾಧಿಪೀಡಿತಃ" ಎಂಬಂತೆ ಜನರಿಗೆ ತಪ್ಪದೆ ಒರುವ ೬ ತಿಂಗಳ ವರೆಗೆ ನಾನಾ ತರದ ವ್ಯಾಧಿಯು ಸುರುವಾಗಿ ಅದರಿಂದ ಅವರು ಬಹಳೇ ತ್ರಾಸಿನಲ್ಲಿ ಬೀಳುವ ಸಂಭವವಿರುವದರಿಂದ ಎಲ್ಲರೂ ಪ್ರತಿನಿತ್ಯ ಶ್ರದ್ಧೆ[illegible]ವಾಗಿ ' ವ್ಹಿದೋ, ನಾರಾಯಣೋ ಹರಿಃ' ಎಂಬ ಉಕ್ತಿಯಂತೆ, ಹರಿನಾರಾಯಣ ಜಪವನ್ನು ಜಪಿಸಬೇಕಾಗಿಯೂ, ದೋಷವನ್ನು ಇದರಿಂದ ಕ್ಷಾಲನ ಮಾಡಿಕೊಳ್ಳಬೇಕಾಗಿಯೂ ಅರಿಕೆ.

ಕಾರವಾರ— "ಸಹಕಾರಿಗಳ ಹಬ್ಬವು ನಮ್ಮ ಕ್ಷಯೂ ಆಚರಿಸಲ್ಪಟ್ಟಿತು. ಜಿಲ್ಲಾಧಿಕಾರಿಗಳಾದ ಮಿ|| ಬಾಸ್ಕರವಿಲೆಯವರು ಅಧ್ಯಕ್ಷರಿದ್ದರು ಈ ಜಿಲ್ಲೆಯಲ್ಲಿ ಅನೇಕ ಪ್ರಕಾರದ ಅಡಚಣೆಗಳಿರುವದಾಗಿ ಅಧ್ಯಕ್ಷರು ವಿವರಿಸಿದರು ಈ ಜಿಲ್ಲೆಯಲ್ಲಿ ಜಂಗಲು ವಿಶೇಷ. ಕಾಡಾನೆ, ಹುಲಿ, ಹಂದಿ ಇವುಗಳಿಂದ ಬೇಸಾಯಗಾರರಿಗೆ ಉಪದ್ರವವಾಗುತ್ತದೆ. ಉಗಿಬಂಡಿಯಿಂದ ಈ ಜಿಲ್ಲೆಯು ೧೦೦ ಮೈಲು ದೂರ ಇದೆ. ಮಳೆಗಾಲದಲ್ಲಿ ಉಗಿಹಡಗದ ಓಡಾಟವಿಲ್ಲದ್ದರಿಂದ ದೊಡ್ಡ ಆತಂಕವಾಗುತ್ತದೆ. ಆದರೂ, ಸಹಕಾರ ಚಳವಳಿಯು ಈ ಜಿಲ್ಲೆಯಲ್ಲಿ ಹಬ್ಬಹತ್ತಿದ್ದು ಸಂತೋಷಪ್ರದವೆಂದು ಅಧ್ಯಕ್ಷರು ನುಡಿದರು. ಸರಕಾರಿ ವಕೀಲರಾದ ಮಿ|| ಕುಟಿನ್ಹೋರವರು ಸಹಕಾರಿ ಚಳವಳಿಯ ಅವಶ್ಯಕತೆಗಳನ್ನು ವಿವರಿಸಿದರು. ಸಹಕಾರದಿಂದ ಸಿಕ್ಕಿದ ಹಣವನ್ನು ಜನರು ಮದುವೆ-ಮುಂಜಿಗಳಂಥ ಸಂಭ್ರಮಗಳಿಗೆ ಕೊಂತು ಮಾರ್ವಾಡಿಯಂತೆ ಹಣ ಕೊಡದೆ ಜಮೀನದಾರರಿಗೆ ದಣಿಸುತ್ತಾರೆಂದರು. ರಾ|| ದತ್ತಾತ್ರಯ ಭಾಸ್ಕರ ನಾಡ್ಕರ್ಣಿಯವರು ಹಿಂದ ಸ್ಥಾನದ ಸಂಚಾರದಿಂದ ಸಿಕ್ಕಿದ ಅನುಭವಗಳನ್ನು ವಿವರಿಸಿದರು. ಪಾಶ್ಚಿಮಾತ್ಯರಲ್ಲಿ ಶಿಕ್ಷಣಪ್ರಸಾರವಾದ ಬಳಿಕ ಈ ಚಳವಳಿಯುಂಟಾಯಿತೆಂದೂ, ಹಿಂದುಸ್ಥಾನದಲ್ಲಿ ಶಿಕ್ಷಣಕ್ಕಿಂತ ಪೂರ್ವದಲ್ಲಿಯೇ ಈ ಚಳವಳಿಯುಂಟಾಯಿತಾಗಿಯೂ ಅವರು ನುಡಿದರು. ಜಾಮೀನದಾರರು ತಮ್ಮ ಜವಾಬದಾರಿಯನ್ನು ತಿಳಕೊಳ್ಳದೆ ಜಾಮೀನಾಗುತ್ತಿರುವ ಬಗ್ಗೆ ವಸ್ತುಸ್ಥಿತಿಯಲ್ಲಿ ಅದು ಜವಾಬದಾರಿಯು ಸಹಕಾರಕ್ಕಲ್ಲವಾಗಿ ರಾ|| ನಾಡ್ಕರ್ಣಿಯವರು ಉದ್ಗರಿಸಿದರು. ರಾ|| ಎಸ್ ಎಸ್. ತ್ಯಾಗಭಾಗರವರು ಕಲೆಕ್ಟರರ ಸಹಾನುಭೂತಿಪರ ಭಾಷಣವನ್ನು ಕೊಂಡಾಡಿದರು, ಜಂಗಲು ಖಾತೆಯು ದೂರುಗಳನ್ನು ಕಲೆಕ್ಟರರು ಪರಿಹರಿಸಿ ಜಂಗಲ ಉದ್ಯೋಗಗಳನ್ನು ತೆರೆದಿಡಲಿಕ್ಕೂ, ಬೇಸಾಯ ಖಾತೆಯು ವಿದ್ಯಮಾನ ಬಂದು ಬಿದ್ದ ಭೂಮಿಯನ್ನು ಸಾಗುವಳಿ ಮಾಡಲು ಅನುಕೂಲತೆ ಮಾಡಿಕೊಟ್ಟಲ್ಲಿ ಸಹಕಾರವು ಊರ್ಜಿತಾವಸ್ಥೆಗೆ ಒರ ಬಹುದೆಂದರು."

ರಾ|| ನಾಗಪ್ಪಾ ಅನಂತಪ್ಪೈ ಗಂಡಬಾಳೆ ಇವರು ತಿಳಿಸುವದೇನಂದರೆ: — ದಿವಾಣಿ ಕೋರ್ಟಿನ ತೀರ್ಪುಗಳಿಂದ ರಿಕಾರ್ಡ ಅಫ್ ರ್ಯಾಯ್ಟ್ಸಗಳ ದಾಖಲೆಯು ತಪ್ಪೆಂದು ನಿರ್ಣಯ ಆಗುವ ಸಂಗ್ತಿಯಲ್ಲಿ ಅಂಥ ತಿದ್ದುಪಾಟವನ್ನು ದಿವಾಣಿ ಕೋರ್ಟಿನವರು ಕಲೆಕ್ಟರರಿಗೆ ಲೆಂಡ ರೆವ್ಹಿನ್ಯೂ ಕೋಡಿನ ೧೩೫ (4) (3) ನೇ ಕಲಮಿನನ್ವಯ ತಿಳಿಸಬೇಕೆಂದು ಕಾಯಿದೆಯಿದೆ. ಕಲಮಿನಂತೆ ಜಿಲ್ಲಾ ಕೋರ್ಟಿಗೆ ಅಪೀಲ ನಂ[illegible] ೧೮೮-೧೯೨೬ನೇದರ ತೀರ್ಪು ತಿಳಿಸಬೇಕಾಗಿ [illegible] ದ್ದಂ ಅರ್ಜಿ ಮಾಡಿಕೊಂಡಾಗ್ಯೂ, ಅದು ತಿರಸ್ಕೃತವಾಯಿತು. ಜಬ್ಬ ಮೋಟು-ಡಿಕ್ರಿಗಳನ್ನು ಜಾರಿ[illegible] ವಡಿಸಿ ರಿಕಾರ್ಡನ್ನು ದುರುಸ್ತ ಮಾಡಬೇಕಾಗಿ ಹು[illegible] ಮಾಗಿದೆ. ಪಕ್ಷಗಾರರು ಸ್ವತಃ ವ್ಯವಸ್ಥೆ ಮಾಡಿಕೊ[illegible] ಳ್ಳುವದಾದರೆ ಆ ಕಾನೂನು ಯಾರ ಬಗ್ಗೆ? [illegible] ಕೋರ್ಟು ಈಕಡೆ ಲಕ್ಷ ಕೊಡಬೇಕು.

ಚೆಂಡಿಯಾ— ಕಿರಬಿಲ್ಲದ ಮಳೆಯಿಂದ ಬಿತ್ತಿ[illegible] ಪೈರು ತೊಳೆದುಹೋಯಿತು. ಮಳೆ ಕಡಿಯಿತು[illegible] ಬಿಸಿಲು ಬಿದ್ದು ಕೊಳೆಯದ ಪೈರು ಒಣಗಿಹೋಯಿ[illegible]ತು ಇಲ್ಲಿಯ ಕನ್ನಡ ಶಾಲೆಯ ಸ್ಥಿತಿ ಬಹಳ ಕೆಟ್ಟಿದೆ[illegible] ಹುಡುಗರು ಮುಲ್ಕಿ ಪರೀಕ್ಷೆಯಲ್ಲಿ ಪಾಸಾಗುವದ[illegible] ಕಠಿಣ. ಸ್ಕೂಲ ಬೋರ್ಡಿನ ಸಭಾಸದರಾದ ಪ[illegible] ಹಬ್ಬುರವರು ಈ ವಿಷಯ ಕೆಲವು ಜಾಗ್ರತೆಕೊಂಡ[illegible] ಶಾಲೆ ಸ್ಥಿತಿ ಸುಧಾರಿಸ[illegible]ವಾಗಿದೆ.

ಶಿರ್ಶಿ— ಬಿಸಿಲು-ಮಳೆಗಳೆರಡೂ ಬಾರಿ ಬಾ[illegible] ಯಿಂದ ಕೆಲಸ ನಡಿಸಿವೆ ಗಡಗಡೆ ಆಟವು ಇಲ್ಲಿ ಜಾ[illegible] ಮಾಸ ಮಾತ್ರ ಧೋರಣ ಕಾಣುತ್ತದೆ. ಅಧಿಕಾ[illegible] ಗಳು ಎಚ್ಚರಾಗಬೇಕು. ಪ್ರೋಲಿಸಖಾತೆಯವರು ಜಾ[illegible] ಆಟ ಮಾಡಿದರು ಬಡ ಶಾಲಾ ವಿದ್ಯಾರ್ಥಿಗಳಿ[illegible] ಅರ್ಧ ಉಳ್ಳನ್ನ ಸಿಗುವದೆಂದು ಹೇಳಿದ್ದರಿಂದ ಅಂತ[illegible] ಉತ್ಸನ್ನವು ವಿಶೇಷ ಪ್ರಯತ್ನಗಳಿಲ್ಲದೆ ಹೆಚ್ಚಿತು.

ಸಿದ್ದಾಪುರ— ಇತ್ತ ಮಳೆ ಬೀಳಲು ಪ್ರಾರಂಭ[illegible] ವಾಗಿದೆ. ಕೊಳೆ ರೋಗದ ಔಷಧೋಪಚಾರವು ನಡೆದದೆ[illegible] ಕೂಲಿಗಳ ಅಭಾವದಿಂದ ಈ ಕೆಲಸವು ಭರದಿಂ[illegible] ಸಾಗುವದಿಲ್ಲ ಶಿರ್ಶಿ ಕೋಡಕಣಿ ಮಾರ್ಗವು ಕಿತ್ತು ಹೋಯಿತು ಮಾವಿನಗುಂಡಿಯ ಪರಿಸ್ಥಿತಿಯು ರಸ್ತೆ[illegible] ಸ್ಥಿತಿ ನೋಡಲಾಗುವದಿಲ್ಲ. ಗವ್ಹರ್ನರರ ಆಗಮನ[illegible] ಕಾಲಕ್ಕೆ ಈ ಮಾರ್ಗದ ಸಂಭ್ರಮ ನೋಡಿದವರು[illegible] ಈಗ ಈ ಸ್ಥಿತಿ ನೋಡಿ ಮರುಗುತ್ತಾರೆ.

ತೋಟಗಳಿಗೆ ಸೊಪ್ಪು ಹಾಕಲು ಕೊಟ್ಟ ಬೆಟ್ಟ[illegible] ದಲ್ಲಿ ಧೂಪದ ಮರಗಳು ಬಹಳವಿವೆ. ಧೂಪವನ್ನು[illegible] ಬೇಸಾಯಗಾರರು ಮಾರಾಟ ಮಾಡಬಾರದಂತೆ[illegible] ಇಷ್ಟು ಧೂಪವನ್ನು ಬೇಸಾಯಗಾರರು ಉಪಯೋಗಿ[illegible] ಸಿಕೊಳ್ಳುವ ಬಗೆ ಹೇಗೆ? ಬೆಟ್ಟದ ಮಾಲ್ಕಿಯು ತೋ[illegible] ಟಿಗರದೆಂದು ಹುಕುಮು ಮಾಡಿದ ಬಳಿಕ ಈ ಪ್ರ[illegible] ಬಂಧವೇಕೆ?

ಇಲ್ಲಿ ಅರ್ಬನ್ ಬ್ಯಾಂಕನ್ನು ಸ್ಥಾಪಿಸುವ ಬಗ್ಗೆ ಪಟ[illegible] ರ ವಣಿಜದೆ ೫೦೦೦ ರೂಪಾಯಿ ಸಂಗ್ರಹವಾಗಿದೆ. ಶ್ರೀ|| ಶಾಂತಾರಾಮ ನರಸಿಂಹಯ್ಯಾ ಶ್ರೀ|| ಲಕ್ಷ್ಮಪ್ಪ[illegible] ಪುಂಡ್ಲೀಕ ಮುಂತಾದ ಶ್ರೀಮಂತರು ರೇವು ಇದರ ಮೂಲಕ ದ್ವಾರೆ ವರ್ತಕರಿಗೆ ಲಾಭವಾದೀತಾಗಿ ಚಾಲಕರ[illegible] ಅಭಿಪ್ರಾಯ. ಇಲ್ಲಿ ಹಾಲು ಪೂರೈಸುವ ಸಂಘ[illegible] ಸ್ಥಾಪನೆ ಮಾಡಲು ಶೇರುಗಳೂ ಕೂಡಿಸೋಣಾಗಿದೆ.

ಇಲ್ಲಿಯ ಶಿಕ್ಷಕರು, ಸ್ಕೂಲಬೋರ್ಡಿನ ಠರಾವಾದರೂ ಖಾದಿಯನ್ನು ಧರಿಸಲು ಇನ್ನೂ ಅರೆಯೋಚಿಸುತ್ತಿದ್ದಾರೆ, ಖಾದಿ ಉಪದೇಶ ಮಾಡಲು ಇವರು ತಯಾರು, ಆದರೆ, ಖಾದಿಯನ್ನು ಧರಿಸಲು ತಮಗೆ ಅಪ್ಪಣೆ ಇಲ್ಲೆಂಬುದು ಅವರ ಅಭಿ[illegible] ಶಿಕ್ಷಕರು ವಿಚಾರ ಮಾಡಬೇಕು. ಖಾದಿ ತೊಡಲೇ ಬೇಕೆಂದು ಶಿಕ್ಷಕರಿಗೆ ಸ್ಕೂಲ ಬೋರ್ಡ ವಿಧಿಸಲಿ ಎಂದು.

ಬಾರ್ಡೋಲಿಯ ವೃತ್ತಾಂತ.

ಬಾರ್ಡೋಲಿಯ ರಣಾಂಗಣದಲ್ಲಿ ಇನ್ನು ಸಂಧಾನವಾಗುವ ಲಕ್ಷಣ ತೋರಿಯಿತು. ವರ್ತಕ ಸಂಘ ಪ್ರತಿನಿಧಿಗಳಾದ ಶ್ರೀ॥ ಬಾಲಜಿ ನಾರಾಯಣಜೀಯವರು ಕೊನೆಗೆ ರಾಜೀನಾಮೆ ಕೊಟ್ಟು ಕೌನ್ಸಿಲು ಸಭಾಸ್ಥಾನವನ್ನು ತ್ಯಜಿಸಿದರು. ಮುನಸಿ ಕಮಿಟಿಯ ಮುಂದೆ ಬಾರ್ಡೋಲಿಯ ಪ್ರಜೆಗಳು ತಮ್ಮ ಕಷ್ಟ-ನಷ್ಟಗಳನ್ನು ಅರುಹುತ್ತಿದ್ದಾರೆ. ಸರದಾರ ವಲ್ಲಭಭಾಯಿಯವರ ಸಾಕ್ಷಿಯನ್ನು ಮೊಟ್ಟಮೊದಲು ಕಮಿಟಿಯವರು ಕೇಳಿದರು. ಪಠಾಣರು ಉಪದ್ರವ ಕೊಡಲಿಕ್ಕೆ ಆರಂಭಿಸಿದಾಗ ಸತ್ಯಾಗ್ರಹ ಸ್ವಯಂಸೇವಕರು ಹೋಗಿ ಭಾವಚಿತ್ರಗಳನ್ನು ತೆಗೆದರೆಂಬುದನ್ನು ವಿಶದವಾಗಿ ಶ್ರೀ॥ ವಲ್ಲಭಭಾಯಿಯವರು ಹೇಳಿದರು. ಈ ಕಳುವು ಆದಬಗ್ಗೆ ಅನವರಖಾನನೆಂಬ ರೇಲ್ವೆ ಪಠಾಣನು ಸ್ವತಃ ಸತ್ಯಾಗ್ರಹ ಆಫೀಸಿನಲ್ಲಿ ಕೊಟ್ಟ ಹಮಾನಿಯನ್ನು ಆ ಪಠಾಣನ ಸಹಿಸಿ ಹಾಜರ ಮಾಡಿದರು. ಆ ಪಠಾಣನು ಸ್ವತಃ ಸಾಕ್ಷಿ ಕೊಡತಕ್ಕವನಿದ್ದಾನೆ. ಮೊದಲನೇ ದಿವಸ ೪೦ ಸಾಕ್ಷಿಗಳಾದವು. ಸರಕಾರಿ ಪ್ರಸಿದ್ಧ ಖಾತೆಯ ಪ್ರಕರಣಗಳು ಕಳುವು ಮಾಡಿದ ಪಠಾಣನಿಗೆ ಎತ್ತಿ ಹಿಡಿಯುವ ಎಲ್ಲ ವೇಷವು ಹೊರಗೆ ಬಂದಿದೆ. ಜನರು ತಂಡ-ಗಟ್ಟಿಕೊಂಡು ಸಾಕ್ಷಿ ಕೊಡಲಿಕ್ಕೆ ಬರುತ್ತಿದ್ದಾರೆ. ಸರಕಾರವು ಈ ಕಮಿಟಿಯು ಬಯಸಿದ ಸಹಕಾರಿತ್ವವನ್ನು ತಿರಸ್ಕರಿಸಿದೆ.

ಸರಕಾರದವರು ತೀವ್ರ ಕೊಡದೆ ಅರ್ಧ ಸರಕಾರಿ ಪತ್ರನವಾರರ ಪತ್ರವನ್ನು ತೆಗೆದು ಹಾಕಲ್ಪಡುವದೆಂಬುದನ್ನು ಜಾಹೀರ ಮಾಡಿದ್ದಾರೆ. ಇನ್ನು ವರೆಗೆ ಪತ್ರವನ್ನು ನಿಲ್ಲಿಸಿದ ಸುದ್ದಿ ಇಲ್ಲ. ಸರಕಾರಿ ಸತ್ತೆಯನ್ನು ಒಡೆದು ಹಾಕುವ ವಿಚಾರವು ಈ ಸತ್ಯಾಗ್ರಹ ದೊಂಬಿಯ ಮೂಲಕ ಸ್ಪಷ್ಟವಾಗುತ್ತದೆಂದು ಮುಂಬಯಿ 'ಟೈಮ್ಸ' ಪತ್ರಿಕೆಯ ಬರೇ ೩ ತಾಸು ನಿಂತು ನೋಡಿ ಬಂದ ಸುದ್ದಿಗಾರನು ಬರೆಯುತ್ತಾನೆ. ಸಾಕಿದ ಪಶುಗಳ ಮೇಲಿನ ಪ್ರೀತಿಯಿಂದ ಜನರು ತಮ್ಮ ದನ-ಕರುಗಳೊಡನೆ ಒಂದೇ ಮನೆಯಲ್ಲಿ ವಾಸಿಸಿ ಅನೇಕ ರೋಗಗಳಿಗೆ ತುತ್ತಾದರೆಂದೂ, ಸತ್ಯಾಗ್ರಹಾಶ್ರಮದ ಅಪ್ಪಣೆಯ ಹೊರತು ಒಂದು ಕಾಳಕ್ಕಿ ಸಹ ಹೊರಗಿನವರಿಗೆ ಸಿಗುವದಿಲ್ಲೆಂದೂ ಅದೇ ಬಾತ್ಮಿದಾರನು ಬರೆಯುತ್ತಾನೆ. ಬಾರ್ಡೋಲಿಯ ಪ್ರಜೆಗಳು ಅದೊಂದು ದೊಡ್ಡ ದಂಗೆ ಎಬ್ಬಿಸಿದ ಮೂಲಕ ಅತ್ಯಾಚಾರವಾಗುವ ಸಂಭವವಿದೆಂದು ಬರೆದು ಸರಕಾರದವರು ಪಂಜಾಬದಂತೆ ಪಬ್ಲಿಕ ಕಾನೂನು ಜಾರಿಗೆ ತರಬೇಕೆಂದು ಸ್ಪಷ್ಟವಾಗಿ ಸೂಚಿಸಿದ್ದಾನೆ. ಇದಕ್ಕೆ ಬಗ್ಗಿ ನಡೆದರೆ ಭರತಖಂಡದಲ್ಲಿ ಎಲ್ಲ ಕಡೆಯಲ್ಲಿಯೂ ಸರಕಾರದೊಡನೆ ಹೋರಾಡುವ ಇದೊಂದು ದೊಡ್ಡ ಶಸ್ತ್ರವಾಗಿ ಜನರು ಸತ್ಯಾಗ್ರಹ ಶಿಬಿರಗಳನ್ನು ಹಬ್ಬಿಸುವರೆಂಬ ಸರಕಾರದ ಅಂತರಂಗದೊಳಗಿನ ಭಯವು ಸ್ಫುಟವಾಗುತ್ತಿದೆ.

ಮುಂಬಯಿಯ ವಿದ್ಯಾರ್ಥಿಗಳು ಕಳೆದ ಬುಧವಾರಕ್ಕೆ ಬಾರ್ಡೋಲಿ ದಿನವನ್ನು ಪಾಲಿಸಿದರು. ಸತ್ಯಾಗ್ರಹ ಸಹಾನುಭೂತಿಯನ್ನು ವ್ಯಕ್ತ ಮಾಡುವದಕ್ಕೆ ದ್ರವ್ಯಸಂಗ್ರಹವನ್ನು ಮಾಡಿದರು. ಸರದಾರ ವಲ್ಲಭಭಾಯಿಗಳು ಆ ದಿನ ವಿದ್ಯಾರ್ಥಿಗಳ ಸ್ವಾಗತ ಆಮಂತ್ರಣೆಯನ್ನು ಮನ್ನಿಸಿ ಮುಂಬಯಿಗೆ ದಯಮಾಡಿಸಿದರು. ಬಾರ್ಡೋಲಿ ಪ್ರಜೆಗಳ ಸ್ಫೂರ್ತಿಯನ್ನು ಕೊಡೆದು ತಗ್ಗಿಸಲಿಕ್ಕೆ ಸರಕಾರದವರು ನಡಿಸಿದ ಅನ್ಯಾಯಗಳನ್ನೂ ಅತ್ಯಾಚಾರಗಳನ್ನೂ ವಿದ್ಯಾರ್ಥಿಗಳಿಗೆ ತಿಳಿಸಿಹೇಳಿದರು. ಸಾಯುವ ವರೆಗೆ ತೀವ್ರ ಕೊಡದ ಜಗಳಾಡುವ ಭೀಷ್ಮಪ್ರತಿಜ್ಞೆಯನ್ನು ಬಾರ್ಡೋಲಿ ಜನರು ಮಾಡಿದ್ದಾರೆಂದು ಹೇಳಿದರು. "ನನಗೆ ಜೈಲಿಗೆ ಒಯ್ದ ದಿವಸ ದೊಡ್ಡ ಉತ್ಸವವನ್ನು ಮಾಡಿರಿ, ನಾನು ಜೈಲಿಗೆ ಹೋದರೆ ಪೂಜ್ಯ ಮಹಾತ್ಮರು ನಿಮ್ಮ ಸಹಾಯಕ್ಕಾಗಿ ಬರುವರು; ಆದರೆ ಸರಕಾರಕ್ಕೆ ಮಾತ್ರ ಬಿಡದೆ ಕಪ್ಪ ನೀಡಬೇಡಿರಿ" ಎಂಬ ಸಂದೇಶವನ್ನು ಅವರು ಪ್ರಜೆಗಳಿಗೆ ಹೇಳಿದ್ದಾರೆ. ತಾನು ಮಹಾತ್ಮರ ಬಡ ಸೈನಿಕನಿದ್ದು ತನಗೆ ರಾಜಕಾರಣ ಬರುವದಿಲ್ಲ, ಪ್ರತಿಯೊಂದು ಸಣ್ಣ ಕೆಲಸಕ್ಕೆ ತಾನು ಮಹಾತ್ಮರ ಅಭಿಪ್ರಾಯ ಕೊಳ್ಳುವದಿಲ್ಲ; ಈ ಸತ್ಯಾಗ್ರಹವನ್ನು ಪ್ರಜೆಗಳು ತಾವಾಗಿಯೇ ಕೈಕೊಂಡಿದ್ದಾರೆ; ಎಂಬುದನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು.

ಮುನಸಿ ಕಮಿಟಿಯ ಚೇರಮನ್‍ರಾದ ರಾ॥ ಕೆ ಎಮ್ ಮುನಸಿಗಳು ಶಿಕ್ಷಣ ಖಾತೆ ಮಂತ್ರಿಯಾಗುವ ಉದ್ದೇಶದಿಂದ ಈ ಕಮಿಟಿಯನ್ನು ಕೊಂಡು ಬಾರ್ಡೋಲಿಗೆ ಹೋಗಿದ್ದಾರೆಂದೇ ಮರಾತ್ರಿಪ್ಪ 'ಟೈಮ್ಸ' ಬಾತ್ಮಿದಾರನು ಬರೆಯುತ್ತಾನೆ. ಇದು ಕೇವಲ ಸುಳ್ಳು ಸುದ್ದಿಯೆಂದು ರಾ॥ ಮುನಸಿಗಳು ಜಾಹೀರ ಮಾಡಿದ್ದು ಈ ಬಗ್ಗೆ ಟೈಮ್ಸರು ತನಗೆ ಎಬ್ಬಿಸಿದ್ದಾರೆಂಬ ವಿಧಾನವು ಬಹಳ ಅಸಂಬದ್ಧವೆಂಬುದನ್ನು ಸ್ಪಷ್ಟೀಕರಿಸಿದ್ದಾರೆ. ರಜಪೂತಾನಾದಲ್ಲಿಯ ಬಾರ್ಡೋಲಿ ಸತ್ಯಾಗ್ರಹಕ್ಕೆ ನೆರವಾಗುವ ಬಗ್ಗೆ ಹಣವು ಒಟ್ಟುಗೂಡುತ್ತಿದೆ. ಅಜಮೀರ, ಜಲವಾಡ, ಜೋಧಪುರ, ಜಯಪುರ ಬಿಕಾನೇರ ಸಂಸ್ಥಾನಗಳಲ್ಲಿ ಬಹು ತ್ವರದಿಂದ ಹಣವು ಜಮೆಯಾಗುತ್ತಿದೆ. ಬಾರ್ಡೋಲಿ ತಾಲೂಕಿನ ಹೆಂಗಸರು ತಮಗೆ ಎಷ್ಟು ಕಷ್ಟ ಸಂಭವಿಸಿದರೂ ಸತ್ಯಾಗ್ರಹವನ್ನು ಬಿಡಲಾರರೆಂದು ಶ್ರೀ॥ ವಲ್ಲಭಭಾಯಿಗಳೊಡನೆ ಬಿನ್ನೈಸಿಕೊಂಡಿದ್ದಾರೆ

ವೃತ್ತಸಾರ.

— ಆಗಸ್ಟ ೧ನೇ ತಾರೀಖಿಗೆ ಬಾಗಲಕೋಟೆಯಲ್ಲಿ ನಡೆಯುವ ಸೇವಾದಲದ ವ್ಯಾಯಾಮ ಮಂದಿರದ ಪ್ರಾರಂಭೋತ್ಸವದ ಕಾಲಕ್ಕೆ ಅಖಿಲ ಕರ್ನಾಟಕ ಪತ್ರಿಕಾಕರ್ತರ ಪರಿಷತ್ತು ನೆರೆಯಲಿಕ್ಕಿದೆ.

— ಮುಂಬಯಿ ಮುನಿಸಿಪಾಲಿಟಿಯವರು ವೇಶ್ಯಾವೃತ್ತಿಗೆ ಸಂಪೂರ್ಣ ತಡೆ ಹಾಕಬೇಕೆಂಬ ವಿಚಾರದಲ್ಲಿದ್ದಾರೆ. ಕಾಯಿದೆಯಂತೆ ಯಾವದೇ ದುವ್ಯರ್ಸನವು ನಿಲ್ಲಿಸಲಿಕ್ಕಾಗದಿದ್ದರೂ, ಸಾರ್ವಜನಿಕ ಆರೋಗ್ಯ ಕಡನಂತೆ ಆದಷ್ಟು ಕಾಯಿದೆಯ ಸಕ್ತಿ ಮಾಡುವದು ವಿಹಿತವಾಗಿರುತ್ತದೆಂಬ ಅಭಿಪ್ರಾಯಕ್ಕೆ ಮುನಿಸಿಪಾಲಿಟಿಯ ಅಧಿಕಾರಿಗಳು ಒಪ್ಪಿದ್ದಾರೆ.

— ಮುಂಬಯಿ ಸರಕಾರದವರು ಲೆಂಡ ರೆವಿನ್ಯೂ ದುರುಸ್ತಿ ಕಾಯಿದೆ, ಹೊಲಗಳ ಪುನರ್ಘಟಣೆ ಕಾಯಿದೆ, ಸಿಂಧ ಲೆಂಡ ಎಲಿನೇಶನ್ ಬಿಲ್ಲ ಮುಂತಾದ ಕಾಯಿದೆಗಳನ್ನು ನಿರ್ಮಾಣ ಮಾಡುವ ಸಮಯದಲ್ಲಿ ಕೇಳಿನವರಿ ಯಾನೆ ಒಕ್ಕಲಿಗರ ಕಾಯಿದೆಗಳನ್ನು ಹಚ್ಚಲಿಕ್ಕೆ ಆರಂಭಿಸಿದೆ. ಈ ಒಕ್ಕಲಿಗರು ಬೈಲು ಸೀಮೆ ಪ್ರದೇಶಗಳಾದ ಧಾರವಾಡ, ವಿಜಾಪುರ, ಬೆಳಗಾಂವ ಮುಂತಾದ ಸೀಮೆಗಳಲ್ಲಿ ಹೆಚ್ಚಿಗಿರುವರು. ಇವರು ಮೊದಲು ಹೊಲಗಳ ಒಡೆಯರೇ ಇದ್ದರು. ಆದರೆ ಬ್ರಿಟಿಶ ಸರಕಾರವು ತೀವ್ರ ಕಾರ್ಯಕ್ರಮದ ಮೇಲೆ ತೀವ್ರ ಎತ್ತುವಳಿ ಮಾಡುವ ಕೆಲಸಕ್ಕೆ ಈ ಹೊಲಗಳ ಒಡೆಯರು ಸಹಾಯ ಮಾಡುತ್ತಿದ್ದರು. ಆ ಬಗ್ಗೆ ಆ ತೀವ್ರ ಹಣ ಉಚಿತ ಬಿಟ್ಟು, ಅವರಿಗೆ ಒಕ್ಕಲಿಗರೆಂಬ ಹೆಸರು ಧಾರಣ ಮಾಡಲಿಕ್ಕೆ ಬಿಟ್ಟರು. ಈಗ ರೆವಿನ್ಯೂ ಖಾತೆಯ ನಿರ್ಮಾಣದಿಂದ ಅವರ ಕೆಲಸವು ಸರಕಾರಕ್ಕೆ ಅವಶ್ಯವಾಗಿ ಕಾಣದ್ದರಿಂದ ಅವರ ಹಕ್ಕು ತೆಗೆದು ಕೊಳ್ಳಲಿಕ್ಕಾಗಿ ಅವರ ಮೇಲೆ ತೀವ್ರ ಹೇರಿಸಲ್ಪಟ್ಟಿತು. ಈಗ ಇವರು ತಮ್ಮ ಭೂಮಿಗಳನ್ನು ಪರಸ್ವಾಧೀನ ಮಾಡಲಾಗದು. ಮಾಡಿದರೆ ಆ ಹಕ್ಕು ಜಪ್ತಿಯಾಗಲಾರದೆಂದು ಸರಕಾರವು ಹೊಸ ಕಾಯಿದೆ ನಿರ್ಮಾಣ ಮಾಡಲಿಕ್ಕಿದೆ. ಒಟ್ಟಿಗೆ ಒಕ್ಕಲಿಗರ ದೈನ್ಯಾವಸ್ಥೆ!

— ಮುಂಬಯಿಯ "ನೇಶನಲ್ ಹೆರಲ್ಡ" ಪತ್ರಿಕೆಗೆ ನಷ್ಟವಾಗುತ್ತದೆಂದು ಧನಕೋರ ಅಫೆನ್ಸಿ ಹೈಕೋರ್ಟಿನಲ್ಲಿ ಸಾದಾರ ಅರ್ಜಿ ದಾಖಲಾಗಿರುತ್ತದೆ. ವಿಚಾರವು ಜುಲೈ ತಾರೀಖು ೧೩ಕ್ಕೆ ಇಟ್ಟಿರುತ್ತದೆ.

— ಮುಂದಿನ ಕಾಂಗ್ರೆಸ ತಯಾರಿಯು ಕಲಕತ್ತೆಯಲ್ಲಿ ಭರದಿಂದ ಸಾಗಿದೆ. ಕಲಕತ್ತಾ ಪಾರ್ಕ ಸರ್ಕಸಿನಲ್ಲಿ ಖಿಲಾಫತ್ ಕ್ಷೇತ್ರದ ದೊಡ್ಡ ಮೈದಾನಿನ ಮೇಲೆ ಕಾಂಗ್ರೆಸ ನಗರದ ರಚನೆಯಾಗುವದು. ಗೋಹತಿ ಕಾಂಗ್ರೆಸಿನಂತೆ ಮಳೆಯಿಂದ ಆತಂಕವಾಗಬಾರದೆಂದು ಒಳ್ಳೇ ಚಪ್ಪರದ ತಯಾರಿಯಾಗುವದು. ಪರದೇಶಗಳಿಂದ ಕುಸ್ತಿ ಹಿಡಿಯಲಿಕ್ಕೆ ಒಳ್ಳೇ ಜಟ್ಟಿಗಳನ್ನು ಆಮಂತ್ರಿಸಲಿಕ್ಕಿರುವರು. ಆ ಬಗ್ಗೆ ಕುಸ್ತೀ ಕಣವೊಂದು ತಯಾರಾಗುವದು.

— ಬೆಮಾಶೆ ಎಣ್ಣೆ ಕಂಪನಿಗಳಲ್ಲಿ ದೊಡ್ಡ ಜಗಳವೆದ್ದು ಬರ್ಮಾ ಆಯಿಲ್ ಮುಂತಾದ ವಿದೇಶೀ ಕಂಪನಿಗಳು ತಾವು ಸ್ವದೇಶೀ ಕಂಪನಿಗಳೆಂದು ನಟಿಸಿ ತಮಗೆ ಸರಕಾರ ಸಹಾಯ ಸಿಗಬೇಕೆಂದು ಹಿಂದುಸ್ಥಾನ ಸರಕಾರದ ಬಳಿ ಅರ್ಜಿ ಮಾಡಿಕೊಂಡಿದ್ದರು. ಅದರಂತೆ ಟೇರಿಫ ಬೋರ್ಡಿನ ಚೌಕಶಿ ನಡೆಯುತ್ತಿರುವಾಗಲೇ ಸದ್ಯಕ್ಕೆ ಅವರಲ್ಲಿ ರಾಜಿಯಾಯಿತು. ಮತ್ತು ಬೆಮಾಶೆ ಎಣ್ಣೆ ದರವು ಪೂರ್ವ ಸ್ಥಳಕ್ಕೆ ಬಂತು. ಸರಕಾರ ಚೌಕಶಿಯಲ್ಲಿ ಅರ್ಜಿದಾರ ಕಂಪನಿಗಳ ಹೇಳಿಕೆಯು ನಿರಾಧಾರವಾಗಿ ಕಂಡದ್ದರಿಂದ ತಮ್ಮ ವಿರುದ್ಧ ರಿಪೋರ್ಟ ಹೊರಡುವದೆಂದು ಆ ಅರ್ಜಿದಾರರು ಅರ್ಜಿಯನ್ನು ಹಿಂತೆಗೆದುಕೊಂಡರು. ದುಡ್ಡು ಖರ್ಚ ಮಾಡಿ ಚೌಕಶಿ ನಡಿಸಿದ ಪ್ರಯೋಜನವೇನು ಆದ ಚೌಕಶಿ ರಿಪೋರ್ಟು ಪ್ರಕಟವಾಗುವದಿಲ್ಲೆಂದು ಹೇಳಿತು.

— ಬೆಳಗಾವಿಯೊಳಗಿನ ಹನುಮಾನ ಗರಡೀ ಮನೆಗೆ ಶ್ರೀ॥ ಚಿಂತ್ರೇ ಕಾರ್ಲೆಯವರು ೨೫೦ ರೂಪಾಯಿಗಳನ್ನು ಅರ್ಪಿಸಿದ್ದಾರೆ

— ಕೊಲ್ಲಾಪುರ ಜಿಲ್ಲೆಯ ಮಾಳಶಿರಸ ತಾಲೂಕಿನ ಬಾಂಬು ಗ್ರಾಮದಲ್ಲಿ ಅನಪೇಕ್ಷಿತವಾಗಿ ದೊಡ್ಡ ಮಳೆ ಬಿದ್ದು ನೆರೆ ಬಂದು ೪೦೦ ಕಾರಗಳು ಬಳದುಹೋದವು.

— ಮೈಸೂರ "ಪ್ರಜಾಮಿತ್ರ" ವರ್ತಮಾನ ಪತ್ರದ ಮುದ್ರಣ ಯಂತ್ರವನ್ನು ಸರಕಾರವು ಕಸುಕೊಂಡಿದೆ. ಭದ್ರಾವತಿ ಕಾಲುವೆಗಳ ಬಗ್ಗೆ ಸರಕಾರದ ನೀತಿಯನ್ನು ಆಪಾದಿಸಿ ಸಂಪಾದಕರು ಟೀಕೆ ಮಾಡಿದ್ದೇ ಕಾರಣ. ಸಂಪಾದಕರು ಸರಕಾರದಿಂದ ಹಣವನ್ನು ಸಾಲವಾಗಿ ಕೊಂಡಿದ್ದು ಅದರ ನಿಮಿತ್ತ ಬಗ್ಗೆ ಕಸುಕೊಳ್ಳಲ್ಪಟ್ಟಿತೆ ಎಂದು ಸರಕಾರದ ಅಂಬೋಣ! "ವೀರಕೇಸರಿ" ಎಂಬ ಪತ್ರದ ಮೇಲೂ ಈ ಪ್ರಸಂಗ ಬರಬಹುದಂತೆ!!

— ಹುಬ್ಬಳ್ಳಿಯ ರೇಲ್ವೆ ವರ್ಕಶಾಪಿನಲ್ಲಿ ಮೋಹರಂ ಹಬ್ಬದ ಮೂಲಕ ಮುಸಲ್ಮಾನ ಕೆಲಸಗಾರರು ಹಾಜರಾಗಲಿಲ್ಲವೆಂದು ಅಲ್ಲಿಯ ಅಧಿಕಾರಿಗಳು ಅವರಿಗೆ ದಂಡ ಮಾಡಿದ್ದಾರೆ. ಅಧಿಕಾರಿಗಳು ಕ್ರೈಸ್ತರು. ಕ್ರೈಸ್ತ ಹಬ್ಬದ ದಿನ ಈ ಪುಣ್ಯಾತ್ಮರು ಕೆಲಸ ಮಾಡುತ್ತಾರೆಯೋ?

— ಹಿಂದುಸ್ತಾನಿ ಸೇವಾ ದಲಕ್ಕೆ ದೇವಲ ಸರ್ಕಸಿನ ಮಾಲೀಕರಾದ ಶ್ರೀ॥ ವಿನಾಯಕರಾವ ದೇವಲರವರು ೫೦೦ ರೂಪಾಯಿಗಳನ್ನರ್ಪಿಸಿದ್ದಾರೆ.

— ವಿಜಾಪುರ ಜಿಲ್ಹೆಯಲ್ಲಿ ಹೊಸ ಹೊಸ ಉಪಕಾರಗಳು ರೈತರ ಕೊಂಳಲ್ಲಿ ಕಟ್ಟಲ್ಪಡುತ್ತವೆ. ತಗಾವಿ ಸಾಲ ಕೊಳ್ಳುವವರು ಪರದೇಶದಿಂದ ಬಂದ ಕಬ್ಬಿಣ ನೇಗಿಲವನ್ನು ಕೊಳ್ಳಬೇಕೆಂತೆ, ಎತ್ತು ಕೊಳ್ಳಲು ಗತಿಯಿಲ್ಲ; ನೇಗಿಲು ಕೊರಳಿಗೆ ಕಟ್ಟಿಕೊಂಡು ಸಾಯಬೇಕೇನು? ಕಲೆಕ್ಟರ ಕಣ್ಣುಚ್ಚಿಕೊಂಡು ಹೀಗೆ ದಣಿಸಗೊಡುವದು ತರವಲ್ಲ.

— ತ್ರಾವಣಕೋರದ ಮಹಾರಾಣಿ ಸಾಹೇಬರು ನೀಲಗಿರಿಗೆ ಹೋಗಿದ್ದರು ಅಲ್ಲಿ ಅವರ ಖಾಸಗಿ ಕಾರ್ಯದರ್ಶಿಗಳ ಟ್ರಂಕನ್ನು ಒಡೆದು ಅರ್ಧ ಲಕ್ಷ ರೂಪಾಯಿಗಳ ಸಾಮಗ್ರಿಯು ಕಳುವಾಯಿತು.

— ಧಾರವಾಡದ ಮುನಿಸಿಪಾಲಿಟಿಯವರು ಖಾದಿಯ ಮೇಲಿನ ರದ್ದು ಮಾಡಿದ ಕರವನ್ನು ಪುನಃ ಹೇರಿದ್ದಾರೆ. ಸರಕಾರದ ಮನ್ನಣೆ ಸಿಗಬೇಕೆಂಬುದರಿಂದ ಈ ನಿರ್ಣಯವು ಇಷ್ಟಕ್ಕೇ ತಡೆದದೆ.

ಮಹಾತ್ಮರ ಆತ್ಮಚರಿತ್ರ.

(೯) ಕರಾರುಬದ್ಧ ಕೂಲಿ ಪದ್ಧತಿಯ ಅಳಿಗಾಲ.

ಹೊಸದಾಗಿ ಸ್ಥಾಪಿಸಿದ ಆಶ್ರಮಕ್ಕೆ ಮೊದಮೊದಲು ಆಶ್ರಮವಾಸಿಗಳಿಂದಲೂ, ಪರರ ಕಡೆಯಿಂದಲೂ ಒದಗಿದ ಕಷ್ಟಗಳ ಕಥೆಯನ್ನು ಸದ್ಯಕ್ಕೆ ಒತ್ತಟ್ಟಿಗಿಟ್ಟು ನಾನು ಕೈಕೊಂಡ ಕಾರ್ಯವನ್ನು ಸಂಕ್ಷೇಪದಿಂದ ಹೇಳಿಬಿಡುವೆನು.

೫ ವರುಷ ಯಾ ಅದಕ್ಕೂ ಕಡಿಮೆ ಮುದ್ದತಿನ ಮೇಲೆ ಕೂಲಿ-ಕಷ್ಟ ಮಾಡಲು ಕರಾರು ಬರೆಕೊಟ್ಟು ಹಿಂದುಸ್ಥಾನದಿಂದ ಹೋದ ಕೂಲಿಕಾರರಿಗೆ ಕರಾರುಬದ್ಧ ಕೂಲಿಕಾರರೆನ್ನುತ್ತಾರೆ. ೧೯೧೪ನೇ ಇಸ್ವಿಯ ಸ್ಮಟ್ಸ್-ಗಾಂಧಿ ಸಂಧಾನದ ತರುವಾಯ ನಾತಾಳಕ್ಕೆ ಹೋಗುವ ಕರಾರು ಬದ್ಧ ಕೂಲಿಕಾರರ ಮೇಲಿನ ೩ ಪವನಿನ ತಲೆಪಟ್ಟಿಯು ತೆಗೆಯಲ್ಪಟ್ಟಿತ್ತು. ಆದರೆ, ಇತರ ಪ್ರಕಾರದಿಂದ ಅಲ್ಲಿ ಹೋಗುವ ಜನರ ವಿಷಯ ವ್ಯವಸ್ಥೆಯಾಗಬೇಕಾಗಿತ್ತು.

೧೯೧೬ನೇ ಇಸ್ವಿಯ ಮಾರ್ಚ ತಿಂಗಳಿನಲ್ಲಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕರಾರುಬದ್ಧ ಕೂಲಿ ಪದ್ಧತಿಯನ್ನು ನಿರ್ಮೂಲಿಸುವದಕ್ಕಾಗಿ ಪಂಡಿತ ಮದನ ಮೋಹನ ಮಾಲವೀಯಜೀಯವರು ಒಂದು ಠರಾವನ್ನು ಸೂಚಿಸಿದರು. ಈ ಪದ್ಧತಿಯನ್ನು ತಕ್ಕ ಕಾಲದಲ್ಲಿ ರದ್ದುಪಡಿಸಲು ಸಾಮ್ರಾಜ್ಯ ಸರಕಾರದ ಕಡೆಯಿಂದ ವಚನ ದೊರೆಯುತ್ತದಾಗಿ ಸರ್ವಾಧಿಪತಿ ಹಾರ್ಡಿಂಜ ದೊರೆಗಳು ನುಡಿದು, ಠರಾವನ್ನು ಅಂಗೀಕರಿಸಿದರು. ಇಂಥ ಅನಿಶ್ಚಿತ ಅಭಿವಚನದಿಂದ ಹಿಂದುಸ್ಥಾನಕ್ಕೆ ಸಮಾಧಾನವಾಗಲಿಕ್ಕಿಲ್ಲವಾಗಿಯೂ, ಒಮ್ಮೆಲೇ ಈ ಪದ್ಧತಿಯನ್ನು ರದ್ದುಪಡಿಸುವದಕ್ಕಾಗಿ ನಾವು ಪ್ರಯತ್ನಪಡಬೇಕೆಂದೂ ನನಗನಿಸಿತು. ಬರೇ ಅಜಾಗ್ರತೆಯಿಂದಲೇ ಹಿಂದುಸ್ಥಾನದಲ್ಲಿ ಈ ಪದ್ಧತಿಯು ನಡೆದುಬಂತು. ಇದನ್ನು ನಿರ್ಮೂಲಿಸಿಕೊಳ್ಳಲು ಪ್ರಜೆಗಳು ಪ್ರಯತ್ನಪಡುವ ಸಮಯವು ಈಗಲೇ ಬಂದಿರುವದಾಗಿ ನನಗನಿಸಿತು. ಕೆಲ ಮುಂದಾಳುಗಳ ದರ್ಶನ ಪಡೆದೆನು, ವರ್ತಮಾನಪತ್ರಗಳಲ್ಲಿ ಬರೆದೆನು. ಒಮ್ಮೆಲೇ ಇದನ್ನು ನಷ್ಟಪಡಿಸಲು ಲೋಕಮತವೆಲ್ಲ ಅನುಕೂಲವಿರುವದಾಗಿ ತಿಳಿದುಬಂತು. ಸತ್ಯಾಗ್ರಹ ಹೂಡಲು ಇದು ಯೋಗ್ಯ ವಿಷಯವೇ? ಯೋಗ್ಯವೆಂದು ನನ್ನ ಮನೋನಿಶ್ಚಯವಾಯಿತು. ಆದರೆ, ಅದನ್ನು ಹೂಡುವ ಬಗೆ ಹ್ಯಾಗೆಂದು ನನಗೆ ತಿಳಿಯಲಿಲ್ಲ.

ಅಷ್ಟರಲ್ಲಿ ಕ್ರಮವಾಗಿ ಚೆಮ್ಸಫರ್ಡರು ತಮ್ಮ ಸರ್ವಾಧಿಪತಿಗಳು ಪ್ರಕಟಿಸಿದರು. “ಹೊಸ ವಿಮಾಕಟ್ಟುಗಳನ್ನು ಮಾಡಲು ಯೋಗ್ಯ ಸಮಯ ದೊರೆತ ಬಳಿಕ, ಈ ಪದ್ಧತಿಯು ಪರಿಹರಿಸಲ್ಪಡುವದು” ಎಂದು ಅವರು ಹೇಳಿದರು.

ಹೀಗಿನ ರೀತಿಯಲ್ಲಿ ಈ ಪದ್ಧತಿಯನ್ನು ಒಮ್ಮೆಲೇ ತೆಗೆಯಬೇಕೆಂದು ಪಂಡಿತ ಮಾಲವೀಯಜೀಯವರು ೧೯೧೭ನೇ ಇಸ್ವಿಯ ಫೇಬ್ರುವರಿ ತಿಂಗಳಿನಲ್ಲಿ ಕಾಯಿದೆಯನ್ನು ಸೂಚಿಸಿದರು. ಚೆಮ್ಸಫರ್ಡ ದೊರೆಗಳು ಅಪ್ಪಣೆ ಕೊಡಲು ಒಪ್ಪಲಿಲ್ಲ. ಅಖಿಲ ಭಾರತೀಯ ಚಳವಳಿಗಾಗಿ ದೇಶತುಂಬ ಸಂಚರಿಸುವ ಪ್ರಸಂಗ ಬಂತು.

ಚಳವಳಿಯನ್ನು ಕೈಕೊಳ್ಳುವ ಪೂರ್ವದಲ್ಲಿ ಸರ್ವಾಧಿಪತಿಗಳಿಗೆ ಭೆಟ್ಟಿಯಾಗುವದು ಯೋಗ್ಯವೆಂದು ನನಗನಿಸಿತು. ಆದರಿಂದ ಮಾತುಕಥೆಯಾಡಲು ಸಮಯ ಕೊಡಬೇಕಾಗಿ ನಾನು ಸರ್ವಾಧಿಪತಿಗಳಿಗೆ ಬರೆದೆನು. ಕೂಡಲೆ ಸರ್ವಾಧಿಪತಿಗಳು ಒಪ್ಪಿಗೆಯನ್ನಿತ್ತರು. ಮಿ॥ ಮೆಫಿಯರು (ಈಗ ಅವರು ಸರ್ ಜೊನ್ ಮೆಫಿಯರಿದ್ದಾರೆ) ಸರ್ವಾಧಿಪತಿಗಳ ಖಾಸಗಿ ಕಾರ್ಯದರ್ಶಿಗಳಾಗಿದ್ದರು. ಇವರಿಗೂ, ನನಗೂ ಬಹಳ ಪರಿಚಯವಾಯಿತು. ಚೆಮ್ಸಫರ್ಡ ದೊರೆಗಳೊಡನೆ ಮಾತುಕಥೆಯಾಯಿತು. ನಿಶ್ಚಯ ಪೂರ್ವಕ ಯಾವದೇ ಮಾತನ್ನಾಡದಿದ್ದರೂ, ಸಹಾಯ ಮಾಡುತ್ತೇವೆಂದು ನುಡಿದರು. ಮಾತುಕಥೆಯು ಬಹು ಸಮಾಧಾನಕರವಾಗಿ ನಡೆಯಿತು.

ಮುಂಬಯಿಯಿಂದ ನನ್ನ ಸಂಚಾರಕ್ಕೆ ಪ್ರಾರಂಭವಾಯಿತು. ಸಾಮ್ರಾಜ್ಯ ನಾಗರಿಕ ಸಂಘದ ವಿದ್ಯಮಾನದಿಂದ ಜಹಾಂಗೀರ ಪೆಟಿಟರವರು ಸಭೆ ಸೇರಿಸುತ್ತೇವಾಗಿ ಅಭಿವಚನವನ್ನಿತ್ತರು. ಸಂಘದ ಕಾರ್ಯಕಾರಿ ಮಂಡಳದ ಸಭೆಯು ಮೊಟ್ಟಮೊದಲು ಸೇರಿ ಸಭೆಯಲ್ಲಿ ಸೂಚಿಸತಕ್ಕ ಠರಾವಿನ ಚರ್ಚೆ ಮಾಡಲಾಯಿತು. ಡಾ॥ ಸ್ಟೇನಲೇ ರೀಡ, ಮಿ॥ ಲಲ್ಲುಭಾಯಿ ಸಾಮಳದಾಸ, ನಟರಾಜನ, ಪೆಟಿಟರವರು ಈ ಮಂಡಳದಲ್ಲಿ ಕೂಡಿದ್ದರು. ಈ ಪದ್ಧತಿಯನ್ನು ರದ್ದು ಮಾಡಲು ಸರಕಾರಕ್ಕೆ ಕೊಡುವ ಅವಧಿಯ ನಿರ್ಣಯದ ಕುರಿತು ವಿಶೇಷ ಚರ್ಚೆಯಾಯಿತು. ಮೂರು ಸೂಚನೆಗಳು ಬಂದವು: ಆದಷ್ಟು ಬೇಗನೆ ಈ ಪದ್ಧತಿಯು ರದ್ದಾಗಬೇಕು. ಜುಲೈ ೩೧ನೇ ತಾರೀಖಿನೊಳಗೆ ರದ್ದಾಗಬೇಕು. ಕೂಡಲೆ ರದ್ದಾಗಬೇಕು. ನಿಶ್ಚಿತ ತಾರೀಖನ್ನು ಉಲ್ಲೇಖಿಸಬೇಕೆಂದು ನಾನೆಂದೆ. ಆದರಿಂದ ಆ ಅವಧಿಯೊಳಗೆ ನಮ್ಮ ವಿಜ್ಞಾಪನೆಯು ಮಾನ್ಯವಾಗದಿದ್ದರೆ, ಮುಂದೇನು ಮಾಡತಕ್ಕದ್ದೆಂದು ವಿಚಾರ ಮಾಡಲಿಕ್ಕೆ ಅನುಕೂಲವಾಗುತ್ತದೆ. ಕೂಡಲೆ ರದ್ದಾಗಬೇಕೆಂದು ಸರ್ ಲಲ್ಲುಭಾಯಿಯವರ ಅಂಬೋಣ. ಜುಲೈ ೩೧ನೇ ತಾರೀಖಿಗಿಂತ ಕಡಿಮೆ ಅವಧಿಯನ್ನು, ಕೂಡಲೆ ಎಂಬ ಶಬ್ದವು ದ್ಯೋತಿಸುತ್ತದೆಂದು ಅವರ ಅಭಿಪ್ರಾಯ. ಜನರಿಗೆ ಈ ಶಬ್ದದ ಅರ್ಥವಾಗಲಿಲ್ಲವಾಗಿ ನಾನು ಹೇಳಿದೆನು. ಜನರ ಕಡೆಯಿಂದ ಕಾರ್ಯವನ್ನು ಮಾಡಿಕೊಳ್ಳಬೇಕಾದಲ್ಲಿ ನಿಶ್ಚಿತ ಶಬ್ದಯೋಜನೆಯಾಗಬೇಕಾಗಿ ನಾನು ಹೇಳಿದೆನು. ಕೂಡಲೆ ಶಬ್ದದ ಅರ್ಥವನ್ನು ಪ್ರತಿ ಒಬ್ಬರೂ ತಮ್ಮ ತಮ್ಮ ಮನಬಂದಂತೆ ಅರ್ಥ ಮಾಡುವರು. — ಸರಕಾರವು ಒಂದು ಪ್ರಕಾರದಿಂದ, ಜನರು ಇನ್ನೊಂದು ಪ್ರಕಾರದಿಂದ. “ಜುಲೈ ೩೧ನೇ ತಾರೀಖು.” ಎಂಬ ಶಬ್ದದಿಂದ ತಪ್ಪು ಗ್ರಹಿಕೆಯಾಗಲು ಆಸ್ಪದವಿಲ್ಲ. ಆ ತಾರೀಖಿನೊಳಗೆ ಮುಂದಿನ ವ್ಯವಸ್ಥೆಯಾಗದಿದ್ದರೆ, ನಮಗೆ ಮುಂದರಿಸಬಹುದು. ಈ ತರ್ಕವು ಡಾ॥ ರೀಡರವರಿಗೆ ಗ್ರಾಹ್ಯವಾಯಿತು; ಕೊನೆಗೆ ಸರ್ ಲಲ್ಲುಭಾಯಿಯವರೂ ಒಪ್ಪಿದರು. ಜುಲೈ ೩೧ನೇ ತಾರೀಖು ಕೊನೆಯ ದಿನವೆಂದು ನಾವು ನಿರ್ಣಯಿಸಿದೆವು. ಆ ತಾರೀಖಿನೊಳಗೆ ಈ ಪದ್ಧತಿ ನಿರ್ಮೂಲ ಹೊಂದಿದ ಪ್ರಕಟಣೆ ಹೊರಡಬೇಕು. ಜಾಹೀರ ಸಭೆಯಲ್ಲಿ ಹಾಗೆ ಠರಾವಾಯಿತು. ಹಿಂದುಸ್ಥಾನದಲ್ಲಿ ಸೇರಿದ ಇತರ ಸಭೆಗಳಲ್ಲೂ ಇಂಥ ಠರಾವುಗಳು ಕೈಕೊಳ್ಳಲಾದವು. ಶ್ರೀಮತಿ ಜೈಜಿ ಪೆಟಿಟರವರು ಸರ್ವಾಧಿಪತಿಗಳ ಹತ್ತರ ಸ್ತ್ರೀಯರ ಮಂಡಳವೊಂದು ಕಳಿಸಲು ಶಕ್ತಿಮೀರಿ ದುಡಿದರು. ಈ ನಿಯೋಗದಲ್ಲಿ ಮುಂಬಯಿಯಿಂದ ಸ್ತ್ರೀಯರೂ ಹೋಗಿದ್ದರು. ಲೇಡಿ ಟಾಟಾರವರೂ ಮಾ॥ ದಿಲಶಾದ ಬೇಗಮ್‌ರವರೂ ಮುಂಬಯಿಯಿಂದ ಹೋದ ನೆನಪು ಕಾಣುತ್ತದೆ. ಈ ಮಂಡಳದಿಂದ ಬಹಳ ಪರಿಣಾಮವಾಯಿತು. ಸರ್ವಾಧಿಪತಿಗಳ ಉತ್ತರದಿಂದ ಉತ್ಸಾಹ ಉಂಟಾಯಿತು.

ಕರಾಚಿ, ಕಲಕತ್ತಾ ಮುಂತಾದ ಪಟ್ಟಣಗಳಿಗೆ ನಾನು ಹೋದೆನು. ಪ್ರತಿ ಒಂದೆಡೆಯಲ್ಲಿಯೂ ಚಲೋ ಸಭೆಗಳಾದವು. ಅಪಾರವಾದ ಉತ್ಸಾಹವು ಕಂಡುಬಂತು. ಈ ಚಳವಳಿಯನ್ನು ಪ್ರಾರಂಭಿಸುವಾಗ ಈ ಪ್ರಕಾರ ಸಂಭವಿಸುವದೆಂದು ನನಗೆ ಕಲ್ಪನೆ ಕೂಡ ಇರಲಿಲ್ಲ.

ಆ ಕಾಲದಲ್ಲಿ ನಾನೊಬ್ಬೊಂಟಿಗನಾಗಿ ತಿರುಗಾಡುತ್ತಿದ್ದೆ. ಆದರಿಂದ ನನಗೆ ಅದ್ಭುತವಾದ ಅನುಭವಗಳು ಬಂದವು. ಗುಪ್ತ ಪೋಲೀಸ ಖಾತೆಯವರ ಒಂದು ಕಾಟವೊಂದು ನನ್ನ ಬೆನ್ನಿಗಿತ್ತು; ಆದರೆ, ನನ್ನ ಕಡೆಗೆ ಬಚ್ಚಿಡುವಂಥಾದ್ದೇನಿರಲಿಲ್ಲ. ಆದರಿಂದ ನನಗೆ ಅವರು ಉಪದ್ರವ ಕೊಡಲಿಲ್ಲ; ನಾನೂ ಅವರಿಗೆ ಉಪದ್ರವ ಕೊಡಲಿಲ್ಲ. ಸುದೈವದಿಂದ ಆ ಕಾಲಕ್ಕೆ ನನಗೆ “ಮಹಾತ್ಮಾ” ಎಂಬ ಬಿರುದು ಸಾರ್ವತ್ರಿಕವಾಗಿರಲಿಲ್ಲ. ನನ್ನ ಗುರುತಿದ್ದ ಜನರು ಮಾತ್ರ ಈ ಹೆಸರಿನಿಂದ ಘೋಷಿಸುತ್ತಿದ್ದರು.

ಒಮ್ಮೆ ಗುಪ್ತ ಪೋಲೀಸರು ಅನೇಕ ಸ್ಟೇಶನುಗಳಲ್ಲಿ ನನಗೆ ತೊಂದರೆ ಕೊಟ್ಟರು. ಟಿಕೀಟು ಕೇಳಿದರು. ಟಿಕೀಟು ನಂಬರನ್ನು ನಮೂದಿಸಿಕೊಂಡರು. ಅವರು ಕೇಳಿದ ಪ್ರಶ್ನೆಗಳಿಗೆಲ್ಲ ನಾನು ಉತ್ತರ ಕೊಟ್ಟೆ. ನನ್ನ ಜೊತೆಗಿದ್ದ ಪ್ರಯಾಣಿಕರು ನಾನೊಬ್ಬ ಸಾಧು ಅಥವಾ ಫಕೀರನೆಂದು ಗ್ರಹಿಸಿದರು. ಪ್ರತಿಯೊಂದು ಸ್ಟೇಶನಿನಲ್ಲಿ ನನಗೆ ಅವರು ಉಪದ್ರವ ಕೊಡುವದನ್ನು ನೋಡಿ ಜೊತೆಗಾರ ಪ್ರಯಾಣಿಕರ ಪಿತ್ತ ಕೆರಳಿತು. ಗುಪ್ತ ಪೋಲೀಸರಿಗೆ ಅವರು ಬೈಯ್ದರು. “ನಿಷ್ಕಾರಣವಾಗಿ ಈ ಸಾಧುಗಳಿಗೇಕೆ ನೀವು ಉಪದ್ರವ ಕೊಡುತ್ತೀರಿ?” ಎಂದು ಅವರು ನಿಷೇಧಿಸಿದರು. “ಈ ಘಟಿಂಗರಿಗೆ ನಿಮ್ಮ ಟಿಕೀಟನ್ನು ತೋರಿಸಬೇಡಿ,” ಎಂದು ಅವರು ನನಗೆ ಹೇಳಿದರು.

“ಟಿಕೀಟನ್ನು ತೋರಿಸಲು ನನಗೇನು ಬೇಸರವಿಲ್ಲ.” ಅವರು ತಮ್ಮ ಕರ್ತವ್ಯವನ್ನು ಮಾಡುತ್ತಾರೆ, ಎಂದು ನಾನವರಿಗೆ ಸಮಾಧಾನದಿಂದ ನುಡಿದೆನು; ಪ್ರಯಾಣಿಕರಿಗೆ ಸಮಾಧಾನವಾಗಲಿಲ್ಲ. ನನ್ನ ಬಗ್ಗೆ ಹೆಚ್ಚೆಚ್ಚು ಸಹಾನುಭೂತಿಯನ್ನು ಪ್ರದರ್ಶಿಸಿ, ನನ್ನಂಥ ನಿರಪರಾಧಿಗಳಿಗೆ ಈ ಪ್ರಕಾರ ಕಾಡಗೊಡಲು ಎಷ್ಟುಕಾಲ ಒಪ್ಪಲಿಲ್ಲ.

ಗುಪ್ತ ಪೋಲೀಸರಿಂದ ನನಗೇನು ಉಪದ್ರವವಾಗಲಿಲ್ಲ. ೩ ನೇ ವರ್ಗದ ಪ್ರಯಾಣವೇ ಒಂದು ದೊಡ್ಡ ಕಷ್ಟವಾಗಿತ್ತು. ಲಾಹೋರದಿಂದ ದಿಲ್ಲಿಯ ತನಕ ನನಗೆ ವಿಪರೀತ ಕಷ್ಟವಾಯಿತು. ಕರಾಚಿಯಿಂದ ಲಾಹೋರ ಮಾರ್ಗವಾಗಿ ನಾನು ಕಲಕತ್ತೆಗೆ ಹೋಗುತ್ತಿದ್ದೆ. ಲಾಹೋರದಲ್ಲಿ ಉಗಿಬಂಡಿಗಳನ್ನು ಬದಲು ಮಾಡಬೇಕಾಗುತ್ತದೆ. ಉಗಿಬಂಡಿಯಲ್ಲಿ ಸ್ಥಳ ಸಿಗುವದು ಅಶಕ್ಯವಾಯಿತು. ಜನರೆಲ್ಲ ತುಂಬಿಹೋಗಿದ್ದರು. ಬಲಾತ್ಕಾರದಿಂದ ಒಳ ಸೇರಬಲ್ಲವರು ಒಳಸೇರುತ್ತಿದ್ದರು. ಬಾಗಿಲು ಮುಚ್ಚಿದರೆ, ಕಿಡಿಕಿಯೊಳಗಿಂದ ಹಾಗೂ ಹೀಗೂ ಮಾಡಿ ಸೇರುತ್ತಿದ್ದರು. ಸಭೆ ಸೇರುವ ದಿನವೇ ನಾನು ಕಲಕತ್ತೆಗೆ ಹೋಗಿ ಮುಟ್ಟಬೇಕಾಗಿತ್ತು. ಈ ಬಂಡಿ ತಪ್ಪಿದರೆ, ಸಭೆಗೆ ಹೋಗಿ ಮುಟ್ಟಲು ನನಗೆ ಸಾಧ್ಯವಿದ್ದಿಲ್ಲ. ಬಂಡಿಯಲ್ಲಿ ಸೇರುವ ಆಶೆ ನಾನು ಬಿಟ್ಟುಬಿಟ್ಟಿದ್ದೆ. ನನಗೆ ಒಳತೂರಿಕೊಳ್ಳಲು ಯಾರೂ ಒಪ್ಪಲಿಲ್ಲ. ಅಷ್ಟರಲ್ಲಿ ಕಾವಲುಗಾರ ಹಮಾಲಿಯು ನನ್ನ ದೈನ್ಯವನ್ನು ನೋಡಿ ನನ್ನ ಬಳಿಗೆ ಬಂದು, “ನನಗೆ ೧೨ ಆಣೆ ಕೊಡಿ; ನಾನು ನಿಮಗೊಂದು ಜಾಗ ದೊರಕಿಸಿಕೊಡುತ್ತೇನೆ,” ಎಂದು ನುಡಿದನು. “ನನಗೊಂದು ಸ್ಥಳ ದೊರಕಿಸಿಕೊಟ್ಟರೆ ನಿನಗೆ ೧೨ ಆಣೆ ಕೊಡುತ್ತೇನೆ” ಆ ಎಳೆ ಪ್ರಾಯದ ಕಾವಲುಗಾರನು ಪ್ರತಿ ಡಬ್ಬಿಗೂ ಹೋಗಿ, ಪರಿಪರಿಯಿಂದ ಪ್ರಾರ್ಥಿಸಿಕೊಂಡನು. ಆದರೆ ಯಾರೂ ಆ ಕಡೆ ಕಿವಿಗೊಡಲಿಲ್ಲ. ಉಗಿಬಂಡಿಯು ಹೊರಡಲು ತಯಾರಾಯಿತು. “ಇಲ್ಲೇನು ಸ್ಥಳವಿಲ್ಲ, ಆಷ್ಟಿದ್ದರೆ, ನೀನು ಅವರನ್ನು ಒಳನೂಕಬಹುದು; ಅವರು ನಿಂತುಕೊಳ್ಳಬೇಕಾಗುವದು,” ಎಂದು ಕೆಲ ಪ್ರಯಾಣಿಕರು ನುಡಿದರು. “ನೋಡುವಾ” ಎಂದು ಆ ಕಾವಲುಗಾರನು ನುಡಿದನು. ನಾನು ಕೂಡಲೆ ಒಪ್ಪಿದೆ. ಆತನು ಕಿಡಿಕಿಯೊಳಗಿಂದ ನನ್ನನ್ನು ಒಳ ನೂಕಿದನು. ಹೀಗೆ ನಾನು ಒಳ ಸೇರಿದೆನು; ಕಾವಲುಗಾರನಿಗೆ ೧೨ ಆಣೆ ಪ್ರಾಪ್ತಿಯಾಯಿತು.

ಆ ದಿನದ ರಾತ್ರಿ ಯಾತನೆಗಳನ್ನನುಭವಿಸಿದೆನು. ಇತರ ಪ್ರಯಾಣಿಕರು ಹ್ಯಾಗಾದರೂ ಮಾಡಿ ಕೂತುಕೊಂಡಿದ್ದರು. ಮೇಲಿನ ತೂಗುತ್ತಿದ್ದ ಸರಪಳಿಗೆ ಕೈ ಹಿಡಿದು ೨ ತಾಸುಗಳ ತನಕ ನಾನು ನಿಂತುಕೊಂಡೆ. ಕೆಲ ಪ್ರಯಾಣಿಕರು ಆಗಾಗ ನನಗೆ ಹೀಯಾಳಿಸುತ್ತಿದ್ದರು. “ನೀವು ಕೂತುಕೊಳ್ಳವದಿಲ್ಲವೇಕೆ?” ಎಂದು ಅವರು ನನಗೆ ಪ್ರಶ್ನಿಸುತ್ತಿದ್ದರು. “ಸ್ಥಳವಿಲ್ಲ” ವಾಗಿ ನಾನು ಅವರೊಡನೆ ತರ್ಕ ಮಾಡುತ್ತಿದ್ದೆನು. ಮೇಲಿನ ಆಸನಗಳ ಮೇಲೆ ಅವರು ಕೈ-ಕಾಲು ನೆಟ್ಟಗೆ ಚಾಚಿಕೊಂಡು ಮುದದಿಂದ

ಕಟ್ಟುಕೊಂಡಿದ್ದರು. ನಾನು ನಿಂತುಕೊಂಡದ್ದನ್ನು ಅವರಿಂದ ನೋಡಲಾಗುತ್ತಿದ್ದಿಲ್ಲ; ನನಗೆ ಪ್ರಶ್ನೆ ಕೇಳಿ ಅವರು ಬಹಳ ಉಪದ್ರವ ಕೊಟ್ಟರು. ನಾನಾದರೂ ಅಷ್ಟೇ ಸಮಾಧಾನದಿಂದ ಅವರಿಗೆ ಪ್ರತ್ಯುತ್ತರ ಕೊಟ್ಟೆನು. ಕೊನೆಗೆ ಅವರು ಸುಮ್ಮಗಾಗಲಿಲ್ಲ. ಕೆಲವರು ನನ್ನ ಹೆಸರನ್ನು ಕೇಳಿದರು. ಹೆಸರು ಹೇಳಿದಾಕ್ಷಣ ಬಹು ನಾಚಿಕೆಪಟ್ಟು ನನ್ನಬಳಿ ಕ್ಷಮೆ ಬೇಡಿ ನನಗೆ ಸ್ಥಳ ಮಾಡಿಕೊಟ್ಟರು. ಹೀಗೆ ಸ್ವಕೀಯರಿಂದ ನಾನು ಬಹಿಷ್ಕೃತನಾದೆನು. ನನಗೆ ಬಹಳ ದಣುವಾಗಿತ್ತು; ತಲೆ ತಿರುಗುತ್ತಿತ್ತು. ಅತ್ಯವಶ್ಯವಿದ್ದ ಸಮಯದಲ್ಲಿಯೇ ದೇವನಾತ್ಮನು ನನಗೆ ನೆರವಾದನು.

ಈ ಪ್ರಕಾರ ಹಾಗೂ ಹೀಗೂ ಮಾಡಿ ನಾನು ದಿಲ್ಲಿ ಪಟ್ಟಣಕ್ಕೆ ಮುಟ್ಟಿದೆನು; ಅಲ್ಲಿಂದ ಕಲಕತ್ತೆಗೆ ಹೋಗಿ ಮುಟ್ಟಿದೆನು. ಕೋಯಮುಬಝಾರದ ಮಹಾರಾಜರವರು ಕಲಕತ್ತೆಸಭೆಯ ಅಧ್ಯಕ್ಷರಿದ್ದರು. ಅವರಲ್ಲೇ ನಾನು ಅತಿಥಿಯಾಗಿ ಉಳಕೊಂಡೆ. ಕಲಕತ್ತೆಯಂತೆ ಇಲ್ಲಿಯೂ ಅಪಾರವಾದ ಉತ್ಸಾಹವು ಕಂಡುಬಂತು. ಅನೇಕ ಇಂಗ್ಲಿಷರೂ ಸಭೆಗೆ ಬಂದಿದ್ದರು. ಜುಲೈ ೩೧ ನೇ ತಾರೀಖಿನೊಳಗೆ ಹಿಂದುಸ್ಥಾನದಿಂದ ಕರಾರುಬದ್ಧ ಕೂಲಿಕಾರರನ್ನು ಕಳಿಸುವ ಪದ್ಧತಿಗೆ ಶಾಶ್ವತವಾಗಿ ಸರಕಾರವು ಪ್ರಕಟಿಸಿತು.

೧೮೯೪ ನೇ ಇಸ್ವಿಯಲ್ಲಿ ಈ ಪದ್ಧತಿಯ ವಿರುದ್ಧ ನಾನು ಮೊಟ್ಟಮೊದಲು ಅರ್ಜಿಯನ್ನು ತಯಾರಿಸಿದ್ದೆ. ಪದ್ಧತಿಗೆ ಸರ್ ಡಬ್ಲ್ಯು. ಡಬ್ಲ್ಯು. ಹಂಟರರವರು ದಾಸ್ಯವೆಂದು ಸಂಬೋಧಿಸುತ್ತಿದ್ದರು. ಈ ಪದ್ಧತಿಯು ಒಂದಿಲ್ಲೊಂದು ದಿನ ಅಂತ್ಯವಾಗುವದೆಂದು ನಾನು ಆ ಕಾಲಕ್ಕೆ ತಿಳಕೊಂಡಿದ್ದೆ. ಹೀಗೆ ೧೮೯೪ ನೇ ಇಸ್ವಿಯಲ್ಲಿ ಪ್ರಾರಂಭವಾದ ಚಳವಳಿಗೆ ಅನೇಕರು ಸಹಾಯಕರಾಗಿದ್ದಾರೆ. ಆದರೆ ಸತ್ಯಾಗ್ರಹದ ತಯಾರಿಯಿಂದ ಈ ಪದ್ಧತಿಯು ನಿರ್ಮೂಲವಾಯಿತೆಂದು ನನ್ನ ಅಭಿಪ್ರಾಯವಾಗಿದೆ. ಈ ಚಳವಳಿ ವಿವರದ ಬಗ್ಗೆ, ಅದರೊಳಗೆ ಸೇರಿದ ಮಹನೀಯರ ಬಗ್ಗೆ ನಾನು "ದಕ್ಷಿಣ ಆಫ್ರಿಕೆಯೊಳಗಿನ ಸತ್ಯಾಗ್ರಹದ ಇತಿಹಾಸ" ವೆಂದು ಬರೆದ ಗ್ರಂಥವನ್ನು ಓದಬಹುದು.

— ಹಿಂದೂಸ್ಥಾನ ಸೇವಾ ದಳದವರು ಹುಬ್ಬಳ್ಳಿಯಿಂದ ಒಳೆದ ಪತ್ರಗಳನ್ನು ಪೋಸ್ಟಾಫೀಸಿನ ಕೆಲವು ಅಧಿಕಾರಿಗಳು ಒಡೆಯುತ್ತಾರೆಂದು ಪ್ರಕಟಿಸಿದ್ದಾರೆ. ಈ ಕುಚೇಷ್ಟೆ ಯಾಕೆ?

— ಪುದುಕೋಟೆಯ ಸಂಸ್ಥಾನದ ಗಾದಿಯ ತಕರಾರು ಬಿದ್ದಿದೆ. ಮಹಾರಾಜರು ಆಸ್ಟ್ರೇಲಿಯಾದೊಳಗಿನ ಯುರೋಪಿಯನ್ ಜಾತಿಯ ಹೆಂಗಸನ್ನು ಮದುವೆಯಾಗಿ ಪ್ಯಾರೀಸ ಪಟ್ಟಣದಲ್ಲಿ ತಿರುಗಿಕೊಂಡಿದ್ದಾರೆ. ಆ ಹೆಂಗಸಿನಿಂದ ಹುಟ್ಟಿದ ಸಿಡನೀ ಮಾರ್ತಾಂಡ ಎಂಬ ಹುಡುಗನು ಹಿಂದೂ ವಿಧಿಯಂತೆ ಪುದುಕೋಟೆ ಮಹಾರಾಜರ ಉತ್ತರಕ್ರಿಯೆ ಮಾಡಿದನು. ಇವರಿಗೇ ಪಟ್ಟಗಟ್ಟಬೇಕೆಂಬ ಸರಕಾರದ ವಿಚಾರ ನಡೆದದೆ. ಧರ್ಮಶಾಸ್ತ್ರಗಳಂತೆ ಸಿಡನೀ ಮಾರ್ತಾಂಡರವರಿಗೆ ನಾಲಸು ಹಕ್ಕು ಇಲ್ಲವಾಗಿ ಶ್ರೀ ರಾಮುಕೋಟ ಮೊದಲಾದ ಶ್ರೀ ಶಂಕರಾಚಾರ್ಯರವರು ಶ್ರೀಮುಖವನ್ನು ಹೊರಡಿಸಿದ್ದಾರೆ. ಮದ್ರಾಸದ ಶ್ರೀ ಸತ್ಯಮೂರ್ತಿಗಳೂ ಸಿಡನೀ ಮಾರ್ತಾಂಡರ ಹಕ್ಕನ್ನು ಅಲ್ಲಗಳೆಯುವ ಪ್ರಮುಖರಿದ್ದಾರು. ಹಿಂದು ಜಾತಿಯ ತಾಯಿಯಲ್ಲಿ ಹುಟ್ಟಿದ ಹೊರತು ಪಾರಸು ಹಕ್ಕು ಬರುವದಿಲ್ಲವಾಗಿ ಶ್ರೀಗಳವರ ಅಭಿಪ್ರಾಯ. ಮಹಾರಾಜರ ಕಾಮಾಂಧತೆಯಿಂದ ಸಂಸ್ಥಾನದ ಪ್ರಜೆಗಳ ಮೇಲೆ ಆಪತ್ತು ಬಂತು.

— ಚಿದಂಬರದಲ್ಲಿ ವಿದ್ಯಾಪೀಠವನ್ನು ಸ್ಥಾಪಿಸುವದಕ್ಕಾಗಿ ಸರ್ ಅಣ್ಣಾಮಲೈ ಚೆಟ್ಟಿಗಳವರು ೩೦ ಲಕ್ಷ ರೂಪಾಯಿಗಳನ್ನು ಅರ್ಪಿಸಿದ್ದಾರೆ. ಅದಲ್ಲದೆ ೧೭ ಲಕ್ಷ ರೂಪಾಯಿಗಳ ಆಸ್ತಿಯನ್ನು ಕೊಟ್ಟಿದ್ದಾರೆ; ಸ್ವಂತ ಖರ್ಚಿನಿಂದ ಅಣ್ಣಾಮಲೈ ಚೆಟ್ಟಿಗಳವರು ಚಿದಂಬರದಲ್ಲಿ ಕಾಲೇಜನ್ನು ನಡಿಸುತ್ತಿದ್ದಾರೆ. ನಾಟುಕೋಟೆ ಚೆಟ್ಟಿಗಳ ಸರಸ್ವತೀ ಸೇವೆಯ ಭಕ್ತಿಯನ್ನು ಹೊಗಳಿದಷ್ಟು ಕಡಿಮೆ.

— ಬೇಸಾಯ ಕಮೀಶನಿನ ಸಭಾಸದರಾದ ಪಟಿಯಾಲಿ ಮೊದಲಾದ ರಾಜರು ಕಮೀಶನಿನ ಕೆಲಸ ನಡೆದಾಗ ತಮಗೆ ಸಿಕ್ಕಿದ ೩೦ ಸಾವಿರ ರೂಪಾಯಿಗಳ ವೇತನವನ್ನು ಮುದ್ರಾಸ ಇಲಾಖೆಯಲ್ಲಿ ಬೇಸಾಯಾಭಿವೃದ್ಧಿ ದಾನಕ್ಕಾಗಿ ಅರ್ಪಿಸಿದ್ದಾರೆ. ಎಷ್ಟೆಂದರೂ ದೇಶಾಭಿಮಾನಿಗಳ ಕೃತ್ಯವು ದೇಶಾಭಿಮಾನಿಗಳಿಗೆ ತಿಳಿಯಬರದಿಲ್ಲವೇ !

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ ಎ. ರಂಗನಾಥಂ ಅವರ ಪ್ರಸ್ತಾವನೆ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ

(ಕಾ) ೧೭೩ ಚಾಮರಾಜಪೇಟೆ, ೪ನೇ ಬೀದಿ,

ಬೆಂಗಳೂರು ಸಿಟಿ.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತರಗಳ ವಿವಿಧ ಚಕ್ಕೆ,

ದೊರಗಾದ ಹಾಗು ನಯವಾದ

ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ,

ಹತ್ತಿಯ ಹಾಗು ಹಿತ್ತಾಳೆಯ ಬಿಗಿಗರುಗಳೂ,

ತಂತಿಯ ಹೊದಿನುಗಳೂ, ಲಾಳಿಕೆಗಳೂ,

ಎಮೆರಿಕಾ ಕಾಗದಗಳೂ

ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.

ಬಹಳ ಅಗ್ಗ !

P. P. TRIVEDI & CO.,

BRUCE Street, Fort, BOMBAY.

ಉಚಿತ] ನವ್ಯ ಶಾಸ್ತ್ರೀಯ ವಾದ [ಉಚಿತ

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರಸಾಧ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿದ್ದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಕಲು ೨ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಪತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ನನ್ನ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಯವಿಕಾರ ಕೂಡ ತರುಣರಂತೆ ಶಕ್ತಿವರ್ಧಮಾನವಾಗುವದು. ನಿಜವಾಗಿ ಬಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಇಂದ್ರಿಯದೊಳಗಿನ ಕಳೆಯ ಹೋಗಿ ಮಹಾನಾಮರ್ದತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ನಂತರ ಹೋಗುವ ವೀರ್ಯವು ಬಂದಾಗುವದು. ಪರಮಾ ಹಾಗೂ ಹಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮೊದಲಾದ ರೋಗಗಳು ನಾಶವಾಗುವದು ದಿವಸದಲ್ಲಿ ದುರ್ಬಲತೆ ಉಂಟಾಗಿದ್ದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ರೋಗ ಸಾಧ್ಯ ಆಗುತ್ತದೆ. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಬಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೫೦ ದಿವಸ ಸಾಲುವ ಬಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಬಂದು ಬಾಟ್ಲಿಯ ಕಿಮ್ಮತ್ತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦—೦ ಮೂರು ಬಾಟಲಿಗಳನು ಬಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲು ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲು ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव - मृद्विकारिष्ट - शारंगधर म अ १०

रामबाण औषध

सर्दि घालविणारें
भूक वाढविणारें
शौच्यास साफ करणार
झोप आणणार
शक्ति देणारें
तेजस्वीपणा आणणारें

पिण्यास रुचिकर

किंमत एक रत्तलास १॥ रुपये

कॅटलॉग मागवा

झंडु फार्मास्युटिकल वर्क्स लिमिटेड

मुंबई नं. १४

ऐजंट— मेसर्स पंडित आणी कंपनी,

तीर्थहळ್ಳಿ

सिर्पि एजट- एम्. एल्. धाकप्पा आणि ब्रदर

ಹಿಂದುಸ್ಥಾನದಲ್ಲಿಯೆ ಅತ್ಯಂತ ಅಗ್ರವಾದ

'ನೆಶನಲ್ ಇನ್‌ಶೂರನ್ಸ ಕಂಪೆನಿ, (ಲಿಮಿಟೆಡ್)'

ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 8,40 044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ ಬೋನಸ ಕೊಟ್ಟಿರುವರು

ಹೋದ ವರ್ಷ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅಷ್ಟೇ ಕಂತಿನ್ ಮೇಲೆ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D Churi,**

ಬಿ. ಸಿ. ಶಿರಾಳಕೊಪ್ಪ, *Branch Secretary,*

ಲೋಕುರ ಬಿಲ್ಡಿಂಗ, Alice Building

ಹುಬ್ಬಳ್ಳಿ *Hornby Road,*

BOMBAY

ಕಾಶಿಯ ಅಪೂರ್ವ ವಸ್ತುಗಳು.

ನಮ್ಮ ಕಾಶಿಯ ಪಟ್ಟೆ ಮಡಿ, ಸೀರೆ, ಖಣ, ರೇಶ್ಮೆ ಶಲ್ಲೆ, ಬನಾರ್ಸಿ, ಕಾಶ್ಮೀರದ ಶಾಲು ಸಕಲಜಾತಿ ದಾಭಳೆ ರುದ್ರಾಕ್ಷ ಸರ ಕಂಠಿ, ಗೌರೀಶಂಕರ್ ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ ಶಿಲಾಜಿತು, ಚಾಮುಂಡೆ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ನಮ್ಮ ಪತ್ತೆ -

ವಿಶ್ವನಾಥ ಎಂಡ್ ಬ್ರದರ್ಸ,

ದುರ್ಗಾಘಾಟ ಬನಾರಸ್ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಿಪಟ್ಟ ಸಕಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ವೈದ್ಯರುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಬೇಕಾದರೆ ಕಳಿಸಲಾಗುವದು.

ಬುಡ್ಡಿ ೧ ಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ. ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗಾರ ಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟೇರ್.]

ವೀರ್ಯವು ತಿಳುವಾಗುವದರಿಂದ ಉಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಡನೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನವಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದುವರ್ತಿ ತಕ್ಕೊಂಡು ಅನುಭವಿಸಿರಿ (೫೨) ವನಸ್ಪತಿಗಳು ಮತ್ತು ಭಸ್ಮದ "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಾಶ ಮಾಡಿರುತ್ತದೆ ಓದಿಕೊಳ್ಳಿರಿ

ಮುಂಜಾನೆ ೨ ತೊಲೆಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲೆಯ ಒಂದು ವಡಿಯ ಪ್ರತಿಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಆಳ ಕೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ ೧೨ ಡಬ್ಬಿಗೆ ೫೦ ರೂ ವ್ಹಿ. ಪಿ. ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣ ಬರುವದು

ಪತ್ತೆ — ಮಾಲಿಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು

ಚಳಿಕೆಗೆ ತೀರ ಅನುಕೂಲ ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು, ಬಿದ್ದ ಸುಟ್ಟ ಗಾಯಗಳಿಗೆ, ನೆಗಡಿ-ಕಫ್ಫಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೋ,

ಮುಂಬಯಿ ಮತ್ತು ಮದ್ರಾಸ.

REG. NO. B. 1270

MONDAY, JULY 16TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೦

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಈ ಪೇಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸಹಿತ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ಜಾಹೀರಾತುಗಳ ದರ.
ಕನಡ, ಇಂಗ್ಲಿಷ, ಮ್ಯಾಟ
ಮ್ಯಾಟನ (೧೫
ಅ ಸಾಲುಗಳವ
ಅನಂತ್ರ ಪ್ರತಿ
ಪಡಿಂಗದ
ದೊತ್ತ ದಿಯುವದ
ರಿಂದ ಆಪ್ಪು ವಾ
ಯಲ್ಪಡುವದು
ಬಾಕಿ ಜಾ
ಪತ್ರವ್ಯವ
ಸಲ್ಪಡುವದು

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೬ ನೇ ಮಾಹೆ ಜುಲೈ ಸನ್ ೧೯೨೮ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ-ಕಬ್ಬಿಣ ಮೊಳೆಗಳು, ಮೋಟಾರ ಉಪಯೋಗದ ಜೋಲು ಗಳು, ಪಿನ್ ಪೇಂಟರ, ಎಕ್ಸೆಲ್ಸಿಯರ್ ಮೋಟರ ಸಿಗುತ್ತವೆ, ಬಣ್ಣ ಸಿಗುತ್ತದೆ, ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಶಾಲೆಯನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ ! ಎಲ್ಲ ಸಾಮಾನು [illegible] ವ್ಯಾಪಾರಸ್ಥರು ರೊಕ್ಕವನ್ನು ಕೊಂಡರೆ, ಸವಲತ್ತು ಸಿಗುತ್ತೆ. ಖಾಯಂ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕ್ಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—
ದಿ ಸೌತ್ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯುಲರ್
ಸರ್ವಿಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ ಯಲ್ಲಾಪುರ - ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR

S. U. Narayanacharya & CO.
Chaukamba, BENAPES CITY,

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿ ಕಣ ಜರಿ ಸೀರೆ, ಕಾಶ್ಮೀರ ಶಾಲು, ಧರ್ಮಾವರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ - ಶಿರೋಮಣಿ ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

Wanted:- Candidates for Telegraph and Station Master's Classes Full particulars and Railway Fare Certificate on 2 annas stamp. Apply to.— Central Telegraph College Nai Sarak **Delhi.**

ಪುನರ್ವಿವಾಹವಾಗಬಯಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ,
ವಿಧವಾ ವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಡಿಸ್ಟ್ರಿಕ್ಟ್, ಕೊಳ್ಳೇಗಾಲ.
ಅವರಿಗೆ ಬರೆದು ತಿಳಿದುಕೊಳ್ಳಿರಿ

ಮಂಗಳೂರ ತಂಬಾಕಿನ ತಾಜಾ ನಶ್ಯ! ಸುಲಭ ಕ್ರಯ!
ಶಿಫಾರಸುಪತ್ರ ಪಡೆದ

ನಶ್ಯದ ಪುಡಿ!

ನಂ ೧ನೇ ನಶ್ಯದಪುಡಿ ೩೦ ತೊಲೆ ಸೇರು ೧ರ ರೂ.೧|
ನಂ ೨ ನೇ ... ಸೇರು ೧ರ ರೂ. ೧ ೨-೦.
ನಂ. ೩ ನೇ ... ಸೇರು ೧ರ ರೂ. ೧-೦-೦.
ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಸಿಗುವದು
ಪತ್ತೆ - ಪುಂಡಲೀಕ ನಾಗ ಪೈ,
ನಶ್ಯದ ವ್ಯಾಪಾರಿ ಹೊನ್ನಾವರ (ಉ. ಕ.)

ಶ್ರೀ! ತಾಂಬೇ ಶಾಸ್ತ್ರಿಗಳ ಪ್ರವಚನಗಳು.

ರತ್ನಾಗಿರಿ ಜಿಲ್ಹೆಯ ಶ್ರೀ| ತಾಂಬೇಶಾಸ್ತ್ರಿಗಳು ನಮ್ಮ ಕಾರವಾರ ಜಿಲ್ಹೆಯಲ್ಲಿ ಸಂಚರಿಸಹತ್ತಿ ಈಗ ೧ ತಿಂಗಳಾಗುತ್ತ ಬಂತು ಕಾರವಾರ, ಸದಾಶಿವಗಡ, ಅಂಕೋಲಾ, ಗೋಕರ್ಣ ಮೊದಲಾದ ಕಡೆಗಳಲ್ಲಿ ಸಂಚರಿಸಿ ಮಾನವ ಜಾತಿಯ "ಸಾಮಾನ್ಯ ಧರ್ಮ" ಎಂಬ ವಿಷಯದ ಮೇಲೆ ಉದ್ಬೋಧಕವಾದ ಪ್ರವಚನಗಳನ್ನು ಇವರು ಕೊಡುತ್ತಿದ್ದಾರೆ. ಪ್ರಚಲಿತ ಪರಿಸ್ಥಿತಿಯನ್ನು ಪ್ರವಚನ ರೂಪದಿಂದ ವರ್ಣಿಸುವ ಪ್ರಕಾರವು ಚಿತ್ತವೇಧಕವಿದೆ ಇವರು ಸುಪ್ರಸಿದ್ಧ ದೇಶಸೇವಕರು. ದೇಶಸೇವೆಗಾಗಿ ಬಹಳ ಸ್ವಾರ್ಥತ್ಯಾಗ ಮಾಡಿದ್ದಾರೆ. ಇಂಗ್ಲಿಷ ಭಾಷೆಯ ಜ್ಞಾನವು ತಕ್ಕಮಟ್ಟಿಗಿದೆ. ಸಂಸ್ಕೃತ-ಮರಾಠಿ ವಾಙ್ಮಯಗಳಲ್ಲಿ ನಿಷ್ಣಾತರಿದ್ದಾರೆ. ನ್ಯಾಯ ವ್ಯಾಕರಣ-ವೇದಾಂತಗಳಲ್ಲಿ ವಿಶೇಷ ವ್ಯಾಸಂಗ ಮಾಡಿ ಕಲಕತ್ತೆಯ ನವದ್ವೀಪ ವಿದ್ಯಾಪೀಠದಿಂದ "ಭಟ್ಟ" ಹಾಗು 'ವಿದ್ಯಾಭೂಷಣ' ವೆಂಬ ಪದವಿಗಳನ್ನು ಇವರು ಪಡೆದಿದ್ದಾರೆ ಪುಣೆಯ ಟ್ರೇನಿಂಗ್ ಕಾಲೇಜಿನಲ್ಲಿ ೧ ವರ್ಷದ ತನಕ ಇವರು ಸಂಸ್ಕೃತ ಪ್ರೊಫೆಸರ ಯಾನೆ ಉಪಾಧ್ಯಾಯರಾಗಿದ್ದರು. ೧೯೨೧ನೇ ಇಸ್ವಿಯಲ್ಲಿ ರಾಜಿನಾಮೆ ಕೊಟ್ಟು ಈ ಸೇವಾವೃತ್ತಿಯಿಂದ ಬಿಡುಗಡೆಹೊಂದಿದರು. ಮುಂದೆ ರತ್ನಾಗಿರಿಯಲ್ಲಿ "ವಿದ್ಯಾಧರ" ವೆಂಬ ಮುದ್ರಣಾಲಯವನ್ನು ಸ್ಥಾಪಿಸಿ, ಅನೇಕ ಗ್ರಂಥಗಳನ್ನು ಬರೆದು ಪ್ರಕಟಿಸಿದರು. ಈ ಗ್ರಂಥಗಳಿಂದ ರಾಜದ್ರೋಹದ ಪ್ರಕರಣಗಳು ಉಂಟಾಗಿ ಇವರ ಮೇಲೆ ೫-೬ ಸಲ ಖಟ್ಲೆಗಳಾದವು. ಒಂದು ಸಾರೆ ೧ ವರ್ಷದ ಕಾರಾಗೃಹವಾಸವೂ ಪ್ರಾಪ್ತವಾಯಿತು. ಮುದ್ರಣ ಕಾನೂನಿನನ್ವಯ ಇವರ "ವಿದ್ಯಾಧರ" ಮುದ್ರಣಾಲಯವು ಸರಕಾರಜಪ್ತ ಆಯಿತು, ಗ್ರಂಥಗಳೂ ಜಪ್ತ ಆದವು. ಈ ದಬ್ಬಾಳಿಕೆಯ ಮೂಲಕ ಇವರಿಗೆ ಸುಮಾರು ೫-೭೦ ಸಾವಿರ ರೂಪಾಯಿಗಳ ನಷ್ಟವಾಯಿತು. ೧೯೧೪ನೇ ಇಸ್ವಿಯ ತನಕ, ಅಂದರೆ ಮಹಾಯುದ್ಧ ಪ್ರಾರಂಭವಾಗುವ ತನಕ ಸರಕಾರವು ಇವರ ಬೆನ್ನಿಗೆ ಇಬ್ಬ ಪೋಲೀಸರ ಕಾವಲನ್ನಿಟ್ಟಿತ್ತು. ಈಗ ಇವರು ರತ್ನಾಗಿರಿಯಲ್ಲಿ ದೇಸಾಯೋದ್ಯೋಗ ಮಾಡಿಕೊಂಡು ಸಂಸಾರ ನಡಿಸುತ್ತಿದ್ದಾರೆ. ೧೦ ೨೦ ವರ್ಷಗಳಿಂದ ಉಪನ್ಯಾಸ ಕೊಡುತ್ತಿದ್ದಾರೆ. ಆದರೆ, ಇವೆಲ್ಲ ರಾಜಕಾರಣದ ಉಪನ್ಯಾಸಗಳೆಂದೂ, ಹಿಂದುಸ್ಥಾನದಲ್ಲಿ ಮೂಲಾಧಾರವಾದ ಧರ್ಮದ ನೆಲಗಟ್ಟು ಶಿಥಿಲವಾದ್ದರಿಂದ ಅದನ್ನು ಭದ್ರಪಡಿಸುವದಕ್ಕಾಗಿ ಈಗ ಸಾಮಾನ್ಯ ಧರ್ಮದ ವಿವೇಚನವನ್ನು ಶ್ರೀ| ತಾಂಬೇ ಶಾಸ್ತ್ರಿಗಳವರು ಕೈಕೊಂಡಿದ್ದಾರೆ. ಇಲ್ಲಿಂದ ಇವರು ಮುಂದೆ ಹೊನ್ನಾವರ, ಶಿರ್ಸಿ ಕಡೆ ಸಂಚರಿಸುವವರಿದ್ದಾರೆ ಶ್ರೀ| ಶಾಸ್ತ್ರಿಗಳು ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಗುರುವಾರ ೧೦ನೇಯ ದ ಮುರಾತಿ ಭಾಷೆಯಲ್ಲಿ ಪ್ರವಚನಗಳಿಗೆ ಪ್ರಾರಂಭಿಸಿದರು. ಆ ವಚನಗಳ ತಾತ್ಪರ್ಯವು ಪ್ರವಚನ ರೂಪದಿಂದಲೇ ಇದರಡಿ ಕೊಡಲಾಗಿದೆ. ಸಂ.]

**

ಕರ್ಮವು ಯಾರಿಗೂ ತಪ್ಪುವದಿಲ್ಲ; ಪ್ರತಿಬಿಬ್ಬರು ಕರ್ಮವನ್ನು ಮಾಡಲೇಬೇಕು. ಕರ್ಮಶೂನ್ಯತೆಯು ಘಟಿಸಲಾರದು. ಚಿಕ್ಕ ಮಕ್ಕಳು ಸಹ ಏನಾದರೊಂದು ಖಟಪಟಿಯನ್ನು ಮಾಡುತ್ತಿರುತ್ತಾರೆ. ಶ್ವಾಸೋಚ್ಛ್ವಾಸವಾದರೂ ಕರ್ಮವೇ; ನೋಡೋದು, ಕೇಳೋದು ಕರ್ಮವೇ ಸ್ವಸ್ಥ ಕೂತುಕೋಡವನು ಕರ್ಮ ಮಾಡುವದಿಲ್ಲೆಂತ ತೋರುತ್ತದೆ; ಆದರೆ, ಆ ಕಾಲಕ್ಕೆ ಮನದ ಕಾರ್ಯವು ನಡೆದಿದ್ದಿರುತ್ತದೆ. ಇದು ಮಾನಸಿಕ ಕರ್ಮ. ಸ್ಥಾವರ-ಜಂಗಮ ವಸ್ತುಗಳು ಸಹ ಈ ನಿಯಮಗಳಿಗೆ ಒಳಪಟ್ಟಿರುತ್ತವೆ. ಹ್ಯಾಗಂದರೆ, ಹಿಮಾಲಯದಂಥ ದೊಡ್ಡ ಪರ್ವತವು ಸಹ ಕಾಲಗತಿಯಿಂದ ಸವೆದು ಬೈಲು ಪ್ರದೇಶವಾಗಬಹುದು; ಈಗ ಚಂದಾಗಿ ಕಾಣುವ ಪಟ್ಟಣ-ಪ್ರದೇಶಗಳು ಗುಡ್ಡವಾಗಬಹುದು; ಜಗತ್ತಿನ ವ್ಯಾಪಾರವು ಅಪ್ರತಿಹತವಾಗಿ ನಡೆದದೆ; ಈ ವ್ಯಾಪಾರಕ್ಕೆ ಕರ್ಮವೆಂದು ಹೆಸರು. ಕರ್ಮಶೂನ್ಯತೆಯು ಘಟಿಸುವದಿಲ್ಲೆಂದು ಸಿದ್ಧವಾಯಿತು. ಸ್ಥಾವರ-ಜಂಗಮ ವಸ್ತುಗಳು ಕರ್ಮ ಮಾಡೇ ತೀರಬೇಕು. ಅದರಿಂದ ಈಗ ವಿಚಾರಣೀಯವಾದ ವಿಷಯವ್ಯಾವದು ? ಕರ್ಮವನ್ನು ಹ್ಯಾಗೆ ಮಾಡಬೇಕು ?

**

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು !

ಆದರೆ, ಕಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ ಕೂದಲು ಮನೋಹರವಾಗಿರಬೇಕಾದರೆ, ನೀವು ವಿನಾ ಆ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ... ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ... ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೩ ಔಂಸಿಗೆ	ರೂ.	೨—೮—೦
೨ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

THE ANGLO INDIAN DRUG & CHEMICAL CO. LTD.

POST BOX, 2082 **BOMBAY.**

ಕರ್ಮವನ್ನು ಧರ್ಮದಂತೆ ಮಾಡಬೇಕು. 'ಧರ್ಮೋ ಹಿ ಮೂಲಂ ಜಗತಃ ಪ್ರತಿಷ್ಠಾ|' ಎಂದು ಹೇಳಲ್ಪಟ್ಟಿದೆ. ಈ ಜಗತ್ತಿನ ಪ್ರತಿಷ್ಠೆಗೆ ಧರ್ಮವೇ ಮೂಲ ಕಾರಣವು. ಜಗತ್ತು ಸುಸೂತ್ರವಾಗಿ ನಡೆಯಬೇಕಾದರೆ, ಧರ್ಮದಿಂದ ಜಗತ್ತಿನೊಳಗಿನ ವ್ಯಾಪಾರಗಳು ಸಾಗಬೇಕು. ಆದಿಶಂಕರಾಚಾರ್ಯರು ಸಹ ಧರ್ಮದ ವ್ಯಾಖ್ಯೆಯನ್ನು ಸ್ಫುಟಗೊಳಿಸಿದ್ದಾರೆ. ಧರ್ಮವೆಂದರೆ, 'ಜಗತಃ ಸ್ಥಿತಿ ಕಾರಣಂ ಅಭ್ಯುದಯ ನಿಶ್ರೇಯಸ ಸಾಧಕಃ ಸ ಧರ್ಮಃ ||' ಅಂದರೆ, ಜಗತ್ತಿನ ಸ್ಥಿತಿಯನ್ನು ಪಾಲಿಸಲಿಕ್ಕೂ, ಐಹಿಕ-ಪಾರಮಾರ್ಥಿಕ ಕಲ್ಯಾಣ ಹಾಗು ಆತ್ಯಂತಿಕ ಕಲ್ಯಾಣ ಸಾಧ್ಯಮಾಡಲಿಕ್ಕೂ ಧರ್ಮವೇ ಮೂಲ ಕಾರಣವು. ಧರ್ಮದ ಪ್ರತಿಷ್ಠೆಯನ್ನು ಭಗವಂತನು ಗೀತೆಯಲ್ಲಿ ಪ್ರಶಂಸೆ ಮಾಡಿದ್ದಾನೆ. ಶ್ರೀ ಕೃಷ್ಣ ಪರಮಾತ್ಮನು ರಾಜಕಾರಣ ಧುರಂಧರನು. ಈ ಬಗ್ಗೆ ವಾದವಿಲ್ಲ. ದೊಡ್ಡ ದೊಡ್ಡವರೂ ಕೂಡ ಒಪ್ಪುತ್ತಾರೆ. ಧರ್ಮಗ್ಲಾನಿಯಾದಾಗ ತಾನು ಧರ್ಮಪ್ರತಿಷ್ಠಾಪನೆಗಾಗಿ ಅವತಾರ ಕೊಳ್ಳುತ್ತೇನಾಗಿ ಅತನು ಹೇಳಿದ್ದಾನೆ. ಇದರ ಮೇಲಿಂದ ಧರ್ಮವು ತೀರ ಮಹತ್ವದ್ದೆಂದು ಗೋಚರವಾಗುವದು.

* * *

ಧರ್ಮವು ಯಾಕೆ ಬೇಕು? "ಧರ್ಮಸ್ತು ಧಾರಣ-ಪೋಷಣಯೋಃ।" ಧಾರಣೆಗಾಗಿ ಧರ್ಮವು ಕಲ್ಪಿಸಲ್ಪಟ್ಟಿದೆ. ಜಗತ್ತಿನ ಧಾರಣ-ಪೋಷಣಗಳು ನಡೆಯುವದಕ್ಕಾಗಿ ಧರ್ಮ ಬೇಕು. ಧಾರಣವೆಂದರೆ, ಜಗತ್ತಿನಲ್ಲಿ ಜನಸಂಖ್ಯೆಯನ್ನು ಹೆಚ್ಚಿಸುವದೊಂದೇ ಅಲ್ಲ; ಬೆಳೆದ ಜನಸಂಖ್ಯೆಗೆ ಪೋಷಣ ಮಾಡುವದಿದೆ. ಪೋಷಣವೆಂದರೆ ಹ್ಯಾಗಾದರೂ ಮಾಡಿ ಜೀವಿಸುವದಲ್ಲ. "ಕಾಕೋಽಪಿ ಜೀವತಿ ಚಿರಾಯ ಬಲಿಂ ಚ ಭುಂಕ್ತೇ" ಎಂಬಂತೆ ಜನರು ಜೀವಿಸುವದಲ್ಲ. ಈಗಿನ ಜೀವನಕ್ರಮ ನೋಡಿರಿ. ನಮ್ಮ ರತ್ನಾಗಿರಿ ಜಿಲ್ಹೆಯಿಂದ ರಪ್ತಾಗುವ ಜೀನಸೆಂದರೆ, ೧೦ ಸಾವಿರ ಜನರು; ಇವರು ಯಾಕೆ ಹೋಗುತ್ತಾರೆ? ಹೊಟ್ಟೆ ಬೇಡುವದಕ್ಕಾಗಿ. ಮುಂಬಯಿ ಪಟ್ಟಣ ನೋಡಿದರೆ, ಇವರಿರುವ ಪಳಪ್ಪರಿಗೆಯ ಮನೆಗಳನ್ನು ನೋಡಿದವರಿಗೆ ಬಹು ದೊಡ್ಡ ಕಲ್ಪನೆಯಾಗುತ್ತದೆ. ಮೇಲೆ ಹೋಗಿ ನೋಡಿದರೆ, ಇವರ ಅವಸ್ಥೆಯನ್ನು ಹೇಳಲಾಸಲ್ಲ. ಒಂದು ಕೋಣೆಯೊಳಗೆ ಗಂಡ-ಹೆಂಡರಿಬ್ಬರು ಇರಲಿಕ್ಕೊಂದು ಸಂಸ್ಕಾರ ಸಾಗಿಸಬೇಕು ಅತಿಥಿಗಳಿಗೆ ಅಲ್ಲಿ ಇಂಬಿಲ್ಲ. ಶಿಕ್ಷಿತ ಸಂಬಳವು ಹೊಟ್ಟೆ ಸಂಸಾರಕ್ಕೆ ಸಾಲದೆ, ಸಾಲ ಕೊಳ್ಳಬೇಕಾಗುತ್ತದೆ. ಈಗ ಸರಕಾರವು ಕಟ್ಟಿದ ಡೆವಲಪ್‌ಮೆಂಟ ಚಾಳಿಗಳ ಕೋಣೆಗಳಲ್ಲಂತು ಒಂದು ಬದಿಯಿಂದ ಮಲಗಬರುತ್ತದೆ. ಯಾರಾದರೊಬ್ಬ ಅಪ್ತರು ಬಂದರೆ, ಅವರಿಗೆ ಜೆಂಡಿಕೆ ಇದ್ದರೆ ಗೂಟಕ್ಕೆ ಕಟ್ಟಿ ನಿದ್ದೆ ಮಾಡ ಹೇಳುವದೇ. ಇದು ನಮ್ಮ ಧಾರಣ-ಪೋಷಣವಾಗಿದೆ. ಇದು ಧರ್ಮವೇ? ಈ ಬ್ರಿಟಿಶ ರಾಜ್ಯದಲ್ಲಿ ಚಮತ್ಕಾರಗಳು ಸಂಭವಿಸುತ್ತವೆ ಧಾರಣ-ಪೋಷಣದ ಒಂದು ಚಮತ್ಕಾರ ಹೇಳುತ್ತೇನೆ. ಬರಗಾಲದಲ್ಲಿ ಜನರು ಹೆಚ್ಚು ಅನ್ನ ತಿಂದು ತೀರಿಕೊಂಡರೆಂದು ನಮ್ಮ... ರಲ್ಲಿ ಬರಗಾಲ ಬಂದ ವರುಷ ಗದ್ದಲವಾಯಿತು. ನಾನು ಇದರ ಗೂಢ ತಿಳಕೊಳ್ಳಬೇಕೆಂದು ಹಳ್ಳಿಗೆ ಹೋದೆ. ಪೋಲೀಸ ಪಾಟೀಲರಿಗೆ ಕೇಳಿದೆ. ಅವರು ಪಂಚನಾಮೆಯನ್ನು ತೋರಿಸಿದರು. ಪಂಚನಾಮೆ ಸುಳ್ಳೆಂದು ನಾನು ಹೇಗೆ ಹೇಳಲಿ? "ಪಂಚರು ಮುಖೇ ಪರಮೇಶ್ವರ" ಅಲ್ಲವೇ? ಬರಗಾಲದಲ್ಲಿ ಹೆಚ್ಚು ಅನ್ನ ತಿಂದು ಸಾಯುವ ಗೂಢವೇನೆಂದು ನಾನು ಪಟೇಲರಿಗೆ ಕೇಳಿದೆನು. ಅವರು ಹೇಳಿದ್ದೇನಂದರೆ:— ೧-೨ ತಿಂಗಳ ತನಕ ಈ ಜನರಿಗೆ ಅನ್ನವಿದ್ದಿಲ್ಲ. ಮುಂಬಯಿಯ ಸಾವುಕಾರರೊಬ್ಬರು ಇಲ್ಲಿ ಬಂದರು; ಅವರು ಬರಗಾಲಪೀಡಿತರಿಗೆ ಅನ್ನದಾನ ಮಾಡಿದರು. ಹೊಟ್ಟೆಬಾಕರಂತೆ ತಿಂದು ಇವರು ಮಡಿದರು. ಆ ಸಂಗತಿ ಪಂಚನಾಮೆಯಲ್ಲಿ ಬರೆಯಲಿಲ್ಲವೇಕೆ? ಎಂದು ಕೇಳಲು, ಆ ಸಂಗತಿ ಪಂಚರಿಗೆ ಯಾರು ಹೇಳುತ್ತಾರೆ! ಇದೊಂದು ಚಮತ್ಕಾರವು.

* * *

ಜಗತ್ ಶಬ್ದವು ಗಮ್ ಧಾತುವಿನಿಂದ ಉಂಟಾಗಿದೆ. ಗಮ್ ಅಂದರೆ ಹೋಗುವದು; ಜಗತ್ತು ಯಾವಾಗಲೂ ಹೋಗುತ್ತಿರುತ್ತದೆ, ಅಂದರೆ ಸತತವಾಗಿ ಚಳವಳಿ ಮಾಡುತ್ತಿರುತ್ತದೆ. ಚಲನವಲನ ಮಾಡುವದು ಜಗತ್ತಿನ ಸ್ವಾಭಾವಿಕ ಚಳವಳಿಯು. ಈ ವ್ಯಾಪಾರಗಳ ಪ್ರತಿಷ್ಠೆಗಾಗಿ ಅಂದರೆ ಸ್ಥಿರವಡಿಸುವದಕ್ಕಾಗಿ ಧರ್ಮ ಬೇಕು. ಧರ್ಮವು ಮಾಡುವ ಕಾರ್ಯವನ್ನು ಕಾಯಿದೆಯಿಂದ ನೆರವೇರಿಸಲಾಗದು. ಇದೀಗ ಪಿನಲ್ ಕೋಡನ್ನು ನಾನು ಓದಿದ್ದೇನೆ. ನನ್ನ ಮೇಲೆ ಖಟ್ಲೆಗಳು ಆದಾಗ ಅದನ್ನು ಓದುವ ಪ್ರಸಂಗ ಬಂತು. ಅವನ್ನೋದಿ ಆ ಕಾಯಿದೆಯ ವಿಷಯ ನನ್ನ ನಿರಾಶೆಯಾಯಿತು. ಅದರೊಳಗೆ ಅಪರಾಧಕ್ಕೆ ಶಿಕ್ಷೆಯಿಲ್ಲ. ಅಪರಾಧಕ್ಕೆ ಶಿಕ್ಷೆಯಿದ್ದಿದ್ದರೆ, ಸಮಾಜದಲ್ಲಿ ಹಗಲುಗಳ್ಳತನ ನಡೆಸುವ ಕಳ್ಳರು ನಿರಾತಂಕವಾಗಿ ಅಡ್ಡಾಡುತ್ತಿದ್ದಿಲ್ಲ. ಪಿನಲ್ ಕೋಡಿನ ಅಭಿಪ್ರಾಯ ಕೇಳಿ ನನಗೆ ಯಾವಾಗಲೂ ಹುಚ್ಚರೆಂದು ಗ್ರಹಿಸುವರು. ಅದರೆ, ಹೇಳಿರಿ ನೋಡುವ, ಮಧ್ಯರಾತ್ರಿಗೆ ಕನ್ನ ಹೊಡೆದು ಕಳವಾಯಿತ; ನೀವು ಫಿರ್ಯಾದಿ ಕೊಟ್ಟರೆ, ಸಾಕ್ಷಿಗಾರರಿಗೆ ತಯಾರು ಮಾಡಿಕೊಡಬೇಕು. ಸಾಕ್ಷಿಗಾರರಿಲ್ಲದಿದ್ದರೆ, ನಿಮ್ಮ ಫಿರ್ಯಾದಿಯು ಖೊಟ್ಟಿ ಫಿರ್ಯಾದಾಗಿ ಪರಿಣಮಿಸಿ, ನಿಮ್ಮ ಮೇಲೇ ತಿರುಗಿ ಬರುತ್ತದೆ. ಕಡಿಮ್ಮೆ ಅಪರಾಧಿಗಳಿಗೆ ಮಾತ್ರ ಶಾಸನವಾಗಲು ಪಿನಲ್ ಕೋಡು, ಮಳ್ಳ ಅಪರಾಧಿಗಳು ಆ ಕೋಡಿನೊಳಗಿಂದ ಪಾರಾಗಿ ಬಿಡುತ್ತಾರೆ. ಮಾನವನು ಘಟಿಸಿದ ಕಾನೂನಿದು; ಇದು ಹ್ಯಾಗೆ ನಿರ್ದೋಷವಿದ್ದೀತು? ಕಾಯಿದೆಯ ವಿಷಯವನ್ನೇ ನಾವು ಅಲೋಚಿಸುತ್ತೇವೆ. ಮಹಾಯುದ್ಧದೊಳಗೆ ಕಾಯಿದೆಯಿಂದ ಒದಗಿದ ಒಂದು ಸಂಗತಿಯನ್ನು ನಾನು ಹೇಳುತ್ತೇನೆ. ರಣಾಂಗಣದಲ್ಲಿ ಬ್ರಿಟಿಶ ಸೈನ್ಯಾಧಿಕಾರಿಯೊಬ್ಬರು ಶತ್ರುವಶರಾದರು. ಎಷ್ಟು ಹುಡುಕಿದರೂ ಇವರು ಸಿಗಲಿಲ್ಲ. ರಣಾಂಗಣದಲ್ಲಿ ದಿಕ್ಕಿಲ್ಲದ ಪ್ರೇತ ಸಿಕ್ಕಿತು; ಅದೆಲ್ಲ ಛಿನ್ನವಿಚ್ಛಿನ್ನವಾಗಿದ್ದಿತು. ಪಂಚನಾಮೆ ಮಾಡಬೇಕಾಯಿತು. ಪಂಚರು ಆ ಹೆಣಕ್ಕೂ, ಕಾಣೆಯಾದ ಸೈನ್ಯಾಧಿಕಾರಿಗಳಿಗೂ ಸಾದೃಶ್ಯವಿದೆಂದು ಪಂಚನಾಮೆ ಬರಕೊಟ್ಟರು. ಸೇನಾಪತಿಗಳು ದುಃಖಪ್ರದರ್ಶನ ಮಾಡಿದರು; ಆಪ್ತೇಷ್ಟರು, ಹೆಂಡರು-ಮಕ್ಕಳು ಮರುಗಿದರು. ಸೈನ್ಯಾಧಿಕಾರಿಗಳ ಪಟದ ಮೇಲಿನ ಇವರ ಹೆಸರು ಕಿತ್ತಿಗೆಯಲಾಯಿತು. ಹೀಗೆ ಕಾಯಿದೆಯಂತೆ ಇವರು ಸತ್ತುಹೋದರು. ಮುಂದೆ ಇವರು ಶತ್ರುಗಳ ಕಡೆಯಿಂದ ತಪ್ಪಿಸಿಕೊಂಡು ಬಂದು ಇಂಗ್ಲಿಷ ಕಾಲುವೆಯನ್ನು ಈಸಿಕೊಂಡು ಹೋಗಿ ಇಂಗ್ಲಂಡಕ್ಕೆ ತಲಿಪಿದರು. ದೊಡ್ಡ ಸತ್ಕಾರವಾಯಿತು. ಎಲ್ಲೆಲ್ಲಿಯೂ ಆನಂದವೇ ಆನಂದ. ಸೇನಾಧಿಪತಿಗಳ ಕಡೆ ಹೋದರು; ಅವರಿಗೂ ಆನಂದವಾಯಿತು. "ನಾನು ಯಾವಲ್ಲಿಗೆ ಹೋಗಲಿ?" ಎಂದು ಸಾಹಸಿಗ ಸೈನ್ಯಾಧಿಕಾರಿಗಳು ನುಡಿಯಲು, ನಿಮಗೆಲ್ಲಿಯೂ ಕಳಿಸಲಾಗುವದಿಲ್ಲ. ಯಾಕಂದರೆ, ನೀವು ಕಾಯಿದೆಯಂತೆ ಸತ್ತುಹೋಗಿದ್ದೀರಿ." ಎಂದು ಅವರು ನುಡಿದರು. ಕಾಯಿದೆಯ ಅವಸ್ಥೆ ಇದು!

* * *

ಧರ್ಮದಲ್ಲಿ ಎರಡು ಪ್ರಕಾರಗಳಿವೆ, ಸಾಮಾನ್ಯ ಧರ್ಮ; ವಿಶೇಷ ಧರ್ಮ. ವೈದಿಕ ಧರ್ಮ, ಆಶ್ರಮ ಧರ್ಮ, ಜಾತಿಧರ್ಮ ಇವೆಲ್ಲ ವಿಶೇಷ ಧರ್ಮಗಳು. ವಿಶೇಷ ಜನರಿಗಾಗಿ ಇವು ಹೇಳಲ್ಪಟ್ಟಿವೆ. ಕ್ರಿಸ್ತಿ, ಮುಸಲ್ಮಾನ ಧರ್ಮಗಳು ಇವು ವಿಶೇಷ ಧರ್ಮಗಳು. ಈ ಧರ್ಮಗಳ ನಿರೂಪಣವನ್ನು ನಾನು ಮಾಡಲಿಳಸುವದಿಲ್ಲ. ಸಾಮಾನ್ಯ ಧರ್ಮದ ವಿವೇಚನವನ್ನೇ ನಾನು ಮಾಡಬಯಸಿದ್ದೇನೆ. ಈ ವಿವೇಚನವು ಸಕಲ ಜಗತ್ತಿಗೆ ಸಂಬಂಧಪಟ್ಟದ್ದು. "ಧರ್ಮೋ ಹಿ ಜಗತಃ ಪ್ರತಿಷ್ಠಾ |" ಇದೀ ಜಗತ್ತಿಗಾಗಿಯೇ ಈ ಸಾಮಾನ್ಯ ಧರ್ಮದ ವಿವೇಚನ ಬೇಕು. ಸಾಮಾನ್ಯ ಧರ್ಮದಲ್ಲಿ ಕಾಲಭೇದದಿಂದ, ವಯೋಮಾನದಿಂದ ಭೇದವಾಗುವದಿಲ್ಲ. ಜಗತ್ತಿನ ಲಕ್ಷಣವು ಚಲನವಲನವು. ಚಲನವಲನವನ್ನು ಸ್ಥಿರಪಡಿಸಲಿಕ್ಕೆ ಧರ್ಮ ಬೇಕು. ಚಲನವಲನವು ಹೇಗುಂಟಾಗುತ್ತದೆ? ಇಗೋ ನೋಡಿರಿ; ಈ ಪುಸ್ತಕವು ಕೇಂದ್ರದಲ್ಲಿ ಸ್ಥಿರವಾಗಿ ನಿಂತಿದೆ. ಇದರ ಒಂದು ಬದಿಗೆ ಒಂದು ದಮಡಿಯನ್ನಿಟ್ಟರೆ ಇದು ಅಲ್ಲಾಡುವದು; ಅಂದರೆ, ಚಲನವಲನ ಮಾಡುವದು. ಯಾಕೆ? ಕೇಂದ್ರದಲ್ಲಿ ಎಲ್ಲ ಬದಿಗೂ ಸರಿ ಸರಿ ಭಾರವಿದೆ. ದಮಡಿಯಿಂದ ಆ ಭಾರದಲ್ಲಿ ವೈಷಮ್ಯವುಂಟಾಗುತ್ತದೆ. ವೈಷಮ್ಯವೇ ಚಲನವಲನದ ಕಾರಣವು. ಸಣ್ಣ ಉದಾಹರಣೆ ಕೊಡುತ್ತೇನೆ. ಮನೆಯಲ್ಲಿ ಇಬ್ಬರು ಅಣ್ಣತಮ್ಮಂದಿರಿದ್ದಾರೆ; ಇಬ್ಬರಿಗೆ ಇಬ್ಬ ಹುಡುಗರಿದ್ದಾರೆ. ದೊಡ್ಡವ್ವೆಯು ತನ್ನ ಹುಡುಗನಿಗೆ ಬಡಿಸುವಾಗ ಚಿಪ್ಪನ್ನು ಅದ್ದಿ ಹಿಡಿದು, ಚಿಪ್ಪು ತುಂಬ ತುಪ್ಪ ಬಡಿಸುತ್ತಾಳೆ, ಅದೇ ಮೈದುನನ ಮಗನಿಗೆ ಬಡಿಸುವಾಗ ನೆಟ್ಟಗೆ ಹಿಡಿದು ಬಡಿಸುತ್ತಾಳೆ, ಎಷ್ಟು ಬಡಿಸಿದರೂ, ತುಪ್ಪ ಬೀಳುವದಿಲ್ಲ; ಹುಡುಗನಿಗೆ ಈ ವೈಷಮ್ಯ ತಿಳಿಯುತ್ತದೆ. ಅತನು ತಾಯಿಗೆ ಹೇಳುತ್ತಾನೆ; ತಾಯಿಯು ತನ್ನ ಗಂಡನಿಗೆ ಹೇಳುತ್ತಾಳೆ ಹುಡುಗನಿಗೆ ತುಪ್ಪ ಬಡಿಸದ್ದರಿಂದ ಹುಡುಗನು ಸೊರಗಹತ್ತಿದ್ದಾನೆಂದು ಆಗ ತಿಳಿಯುತ್ತದೆ. ಈ ವೈಷಮ್ಯದಿಂದಲೇ ಅಣ್ಣ-ತಮ್ಮಂದಿರಿಬ್ಬರೂ ಪ್ರತ್ಯೇಕರಾಗುತ್ತಾರೆ. ವೈಷಮ್ಯವೇ ಚಳವಳಿಯ ಮೂಲ ಕಾರಣವು. ಸಮದೃಷ್ಟಿಯಿಂದ ನಡಕೊಂಡರೆ ಚಳವಳಿಯಿಲ್ಲ. ಚಳವಳಿಯನ್ನು ದಬ್ಬಿಹಾಕುವದಕ್ಕೆ ಧರ್ಮ ಬೇಕಲ್ಲವೇ? ಅಹೋ! ಅದಕ್ಕಾದರೆ, ನಮ್ಮ ಇಂಗ್ಲಿಷ ಸರಕಾರವು ಮಾಡಿದ ಕಾಯಿದೆಗಳಿವೆ! ಇವುಗಳಿಂದ ಚಳವಳಿಯನ್ನು ತಡೆಹಾಕಬಹುದು. ಆದರೆ, ಈ ಕಾಯಿದೆಗಳಿಂದ ಚಳವಳಿ ದಬ್ಬಿಹೋಗುತ್ತದೆಯೋ? ಕೆಲವು ವೇಳೆ ತಡೆದು ನಿಲ್ಲಿಸಬಹುದು; ಶಾಶ್ವತವಾಗಿ ಇವನ್ನು ತಡಿಸಲಾಗುವದಿಲ್ಲ. ಅಶಕ್ಯ ಮಾತದು. ಕಾಯಿದೆಯಿಂದ ನಿದಾನವೆಲ್ಲಾಗುತ್ತದೆ? ನಿದಾನವಾಗದಿದ್ದಾಗ ಚಿಕಿತ್ಸೆ ಹ್ಯಾಗೆ ನಡೆದೀತು? ಇಲ್ಲದಿದ್ದರೆ, 'ಯಸ್ಯ ಕಸ್ಯ ತರೋರ್ಮೂಲಂ| ಯೇನಕೇನಾಪಿ ಘರ್ಷಿತಂ|| ಯಸ್ಮೈ

ಕಸ್ಟ್ರ ಚಿರ್ ಪತ್ರ [illegible] ತ ನಡೆದದೆ. [illegible] ಸ್ವಾತಂತ್ರ್ಯ [illegible] ಕ ನಡಿಸಿದರೆ, ಕ್ಷೇಮವು [illegible] ವಾಸಿಯರಿಗೆ ಹೊರದೇಶಗಳಿಗೆ ಹೋಗ [illegible] ಹಿಂದು ಬಾಸು ದೇಶ [illegible] ತೆ ಬೇಕ, ಒಬ್ಬನ [illegible] ಇಂಗ್ಲಿಷರು ಇಲ್ಲಿ ಓದ [illegible] ಕೊಂಡ ಬಂದಿದ್ದರೇ? ನಾನು [illegible] ತಿದ್ದೆ [illegible] ದಲ್ಲಿ ಹಿಂದು [illegible] ಮ ಕೂಡಿತ [illegible] ನು ಕೂಸ್ತ [illegible] [illegible] ಬಿಟ್ಟಿದ್ದಾನೆ

***

[illegible] ಯ ವಿಟೆಕ್ಟಿ [illegible] ಪಿತರಪ್ತ [illegible] ಚಂದ್ರಾವತಿ [illegible] ದಿನಂ ದಿನಮಸ್ತು ॥ [illegible] ದ್ಯೌ, ಧರ್ಮೋಪಿ ಜಾನಾತಿ ನರಸ್ಯ ವೃತ್ತಂ ” ಸೂರ್ಯ, ಚಂದ್ರ, ಅಗ್ನಿ, [illegible] ಆಕಾಶ, ಭೂಮಿ, ಜಲ, ಹೃದಯ, ಯಮ, [illegible], ರಾತ್ರಿ, ಉಭಯ ಸಂಧ್ಯಾಕಾಲಗಳು ಇವು ಮನುಷ್ಯ ಮಾನವನ ಚರಿತವನ್ನು ನೋಡುತ್ತಿರುತ್ತವೆ. ಈ ಚಿಟಿಕ್ಟೀವ್ಹರು ಯಾವಾಗಲೂ ಮಾನವನ ವೃತ್ತವನ್ನು ನಿರೀಕ್ಷಿಸುತ್ತಿರುತ್ತಾರೆ. ನಾವು ಯಾವದೇ ಕೃತ್ಯ ಮಾಡುವಾಗ ಇವರಲ್ಲಿ ಯಾರೊಬ್ಬ ಗುಪ್ತ ಪೋಲೀಸರು ನೋಡುತ್ತಿದ್ದಾರೆ. ಇವರನ್ನು ತಪ್ಪಿಸಿಕೊಂಡು ಆಚಾರ ಮಾಡುವದಿಲ್ಲ ಮಾನಸಿಕ ವ್ಯಾಪಾರಗಳನ್ನು ಹೃದಯಕ್ಕೆ ತಿಳಿಯಗೊಡದೆ ಮಾಡುವದು ಸಾಧ್ಯವೇ? ಈ ದೃಷ್ಟಿಯಿಂದ ನಾವು ವಿಚಾರಪೂರ್ವಕ ನಡೆಯಬೇಕು

***

“The sun never sets over the British Empire” ಅಂದರೆ ದಿನಗೂ ಒಬ್ಬಗೆ ಬ್ರಿಟಿಶ ಸಾಮ್ರಾಜ್ಯದ ಮೇಲೆ ಸೂರ್ಯನು ಎಂದೂ ಅಸ್ತಾಚಲಕ್ಕೆ ಹೋಗನು ಇದು ಬ್ರಿಟಿಶರ ದರ್ಪೋಕ್ತಿ. ಸೂಕ್ಷ್ಮ ವಿಚಾರ ಮಾಡಿದರೆ, ಇದು ದೊಡ್ಡ ಅವಮಾನವೆಂದು ನಿಮಗೆ ತಿಳಿವುದು. ಧರ್ಮದಿಂದ ನೇಮಿಸಲ್ಪಟ್ಟ ಗುಪ್ತ ಪೋಲೀಸರಲ್ಲಿ ಸೂ[illegible]

[illegible] ನಾರಾಯಣನು ಪೋಲೀಸ ಸುಪರಿಂಟೆಂಡೆಂಟನಂ[illegible] ದ್ದಾನೆ. ಪರಮಾತ್ಮನು ಬ್ರಿಟಿಶರ ನಡತೆಯನ್ನು ನಿ[illegible] ರೀಕ್ಷಿಸ ಬೇಕಾಗಿ ಪೋಲೀಸ ಸುಪರಿಂಟೆಂಡೆಂಟರಿಗೇ ನೇಮಿಸಿದ್ದಾನೆ. ಬ್ರಿಟಿಶರು ಗುಣಸಂಪನ್ನರು. ಆದರೆ ಅವರ ಗುಣಗಳಿಂದ ಹುದುಗುವ ಅನಾಚಾರದ ಮೇಲೆ ಸತತವಾಗಿ ಕಾವಲಿಡಲು ಸೂರ್ಯನಾರಾಯಣನಿಗೇ ನೇಮಿಸಿದ್ದಾನೆ. ಬಡಮನುಷ್ಯತನವು [illegible] ಹೆಚ್ಚೆಚ್ಚಿನ ಅಧಿಕಾರಿಗಳ ನೇಮಣೂಕಿಯಾಗಿದೆ. ನಾನೊಮ್ಮೆ ಲೋಕಮಾನ್ಯರ ಬಳಿ ಕೋರಿದ್ದೆ ಅವರ ಮೇಲೆ ಕಾವಲಿತಲ ಒಬ್ಬ ಒಡೇ ಪೋಲೀಸ ಆಫೀಸರೂ ಇಬ್ಬ ಶಿಪಾಯಿಗಳೂ ಇದ್ದರು. “ನನ್ನ ಮೇಲೆ ಬರೇ ಇಬ್ಬ ಪೋಲೀಸ ಶಿಪಾಯಿಗಳ [illegible]?” ಎಂದು ಲೋಕಮಾನ್ಯರಿಗೆ ನಾನು ಕೇಳಿದೆನು. “ನೀವು ಚಿಕ್ಕ ಬಡಮನುಷ್ಯ ನಾನು ದೊಡ್ಡ ಬಡಮನುಷ್ಯನು” ಎಂದು ಲೋಕಮಾನ್ಯರು ಉದ್ಗರಿಸಿದರು. ಆದರಿಂದ ಬಾಲಕರಿಗೆ ಓವರ್ ಕೋಡಿನ ಭಯ ಹೇಳಲಾಗದು, ಯಾಕಂದರೆ, ಓವರ್ ಕೋಡಿನೊಳಗಿಂದ ತಪ್ಪಿಸಿಕೊಳ್ಳಲು ಪ್ರಯತ್ನವಾಗುತ್ತದೆ ಆದರಿಂದ ಬಾಲಕರಿಗೆ ಸೂರ್ಯ-ಚಂದ್ರಾದಿ ಭಗವನ್ನಿರ್ಮಿತ ಕಾವಲುಗಾರರ ಭಯ ಹೇಳಬೇಕು ಚಿಕ್ಕಂದಿನಲ್ಲಿ ಪಡೆದ ಸಂಸ್ಕಾರಗಳು ಕಡೆ ತನಕ ಬಾಳುತ್ತವೆ ದೇವರ ಕಲ್ಪನೆ-ಭೀತಿಯು ಕಲ್ಪನೆಗಳು ಆಗಿನಿಂದಲೇ ಹೇಳಲ್ಲಬೇಕು

***

ಇಂದ ಆಫ್ಘಾಣ ಕಾನೂನು ಮಾಡುವವರಿಗೆ ಜನರು ಮಾನಪತ್ರ ಕೊಡುತ್ತಾರೆ, ಇತ್ತಿತ್ತ ಮಾನಪತ್ರಗಳ ಸುಳಿವು ಹೆಚ್ಚಾಗಿದೆ. ಪ್ರತಿಯು 'ಸಾರ್ವಜನಿಕ ಸಭೆಯವರು ನನಗೊಂದು ಮಾನಪತ್ರ ಕೊಟ್ಟರು. ಕೆಲಸಿಗರಿಗೆ ಸಹ ಚೊಕ್ಕ ಕ್ಷೌರ ಮಾಡಿದ ಬಗ್ಗೆ ಮಾನಪತ್ರ ಸಿಗಹತ್ತಿತು. ಅಂದಿನಿಂದ ನಾನು ಮಾನಪತ್ರಗಳನ್ನು ಸ್ವೀಕರಿಸುವದಿಲ್ಲ ನಮ್ಮ ಮನೆಯಲ್ಲಿ ಎತ್ತುಗಳು ಸರಿ ಇಡೀ ಮಾನವ ಜಾತಿಗೊಂದು ಮಾನಪತ್ರ ಕೊಡಲು ಧೃತರಾದರು ನನಗೆ ಸ್ವಲ್ಪ ರುಪರ ಕೃಪೆಯಿಂದ ಎತ್ತುಗಳ ಭಾಷೆ ಬರುತ್ತದೆ ಆದರಿಂದ ಅವರ ಮಾನಪತ್ರದ ಸಾರಾಂಶವನ್ನು ಹೇಳುತ್ತೇನೆ —

॥ आर्या ॥

नदी समस्त मिळुनी मनुजाचे धन्यवाद गायास॥
कारिती परिषद मोठी एक दिनी करुनी थोर
आयास ॥१॥
अध्यक्ष एक नंदी झाला तेथे भला ककुद्मंत ॥
वक्ता रसाळ मोठा वाचस्पतिच्या समान
धीमंत ॥२॥
अत्यादरें मनुष्या दिधले त्या मानपत्र आर्यांनी ॥
अति मंदबुद्धि दरि मी वर्णितसे अल्प तेंच
आर्यांनी ॥३॥
नाही दयाळु मनुजा सम या दुनियेंत एकही
प्राणी ॥
ऐशी प्रचंड झाली वृषभांची त्या सभेंत कां
वाणी ॥४॥
दोहन समयीं आम्हा सोडिती जो तो सुटे
स्तनापाना ॥
सुरताचि दूर बांधिति दुग्धें होतील जत कीं
यानां ॥५॥
ऐसें दुग्ध विकारी परि तें देती सदा स्वपुत्रांस ॥
कल्याणार्थाचि आमुच्या कृति मनुजाची
असेच ही खास ॥६॥
देउनि घास तृणाचे वपु आमुचें पुष्ट राखिले
ज्यांनीं ॥
मातेहुनि वत्सलता वाटे आम्हासि दाविली
त्यांनीं ॥७॥
आम्हा कृषि विद्येचे शिक्षण जोतास बांधुनी
दिधलें ॥
विद्यादानां सम या जगतीं एकहि नसेच
दान भलें ॥८॥
आम्हीं शेत धन्याचे नांगरुनीं पेरिलें बहु मोठें ॥
केवळ ज्वारिकणातें घेउनि आम्हासि
[illegible] घाटे ॥९॥
केवळ वितस्ति परिमित भाताची लोंगरे धनी
घेती ॥
आम्हा गवत तयाचे लाभ असे ते सदा मुदें
देती ॥१०॥
केल्याने देशाटण अंगीं चातुर्य येतसे फार ॥
यास्तव शकटा बांधुनि नेती आम्हासि कीं
बहु दूर ॥११॥
दाविति पुण्यक्षेत्रें व्यापाराच्या तशा बहु पेठा ॥
गौरव करिती आमुचा बांधुनि कंठीं सुरेखश्या
घंटा ॥१२॥
व्यापारि शिक्षणाही देण्यास्तव आमुते
पहा घाणी ॥
पृष्ठीं सदैव आमुच्या धान्याच्या लादतात
कीं गोणी ॥१३॥
शिंगें कापुनि आमुचें ओझें करिती कमी
शिरावरचें ।
रक्षण करिती आमुचें मग अम्हां काम काय
शृंगाचे ॥१४।
मारुं परस्परा ते शृंगाघातें म्हणुनि मनुजानीं ॥
शिंगें कापुनि केलें हित आमुचें खरोखरी
त्यानी ॥१५।
स्नेहाभिलापि मानव केवळ तैलास काढुनी घेती
आम्हा पेंडतिळाची पौष्टिक खाण म्हणूनिया
देती ॥१६
आमुचे हाल न व्हावे वृद्धपणीं म्हणुनि खाटक
विकिती ।
मनुजापरी दयाळु नाही एक हो वसुधेवरत
॥१७
अपराध पोटि आमुचे घालिति हें सांगणे
कशास्नाही ।
घालिति केंव्हां केंव्हां आम्हाला चे पोटि ते
दयाळु हो ॥१८।
ऐसे धनी दयाळु सुखि ठेवी आमुचे सदा देवा
त्यांच्या सत्कीर्तीचा उच्च ध्वज वातदेव
फडकावा ॥१९

ವಿವಿಧ ಸಂಗ್ರಹ.

ಅಧಿಕ ಮಾಸ ನಿರ್ಣಯದ ಕ್ರಮ.

ಈ ವರುಷ ಶ್ರಾವಣ ಮಾಸವು ಗ್ರಹಲಾಘವಿ ಪಂಚಾಂಗದಂತೆ ಅಧಿಕಮಾಸವಾಗಿದೆ. ಟಿಳಕ ಪಂಚಾಂಗದಂತೆ ಈ ವರುಷ ಅಧಿಕ ಮಾಸವೇ ಇಲ್ಲ. ಮುಂದಿನ ವೈಶಾಖವು ಅಧಿಕ ಮಾಸವು. ಈ ಅಧಿಕ ಮಾಸ ಶೋಧಿಸುವ ಕ್ರಮವನ್ನಷ್ಟು ತಿಳಕೊಳ್ಳುವದು ಇಷ್ಟವು. ಯಾವದೇ ನಿರ್ಣಯವು ಸಾಧಾರವಾಗಲಿ, ಆ ಕ್ರಮವೇನೆಂದರೆ— ಚಾಂದ್ರಮಾನ ವರುಷ ಹಾಗು ಸೌರಮಾನ ವರುಷಗಳನ್ನು ಸರಿಪಡಿಸುವದಕ್ಕಾಗಿ ಅಧಿಕ ಮಾಸದ ಯೋಜನೆಯಾಗಿದೆ. ಚಾಂದ್ರಮಾನ ವರುಷಕ್ಕೆ ೩೫೪ ದಿನಗಳು; ಸೌರಮಾನ ವರುಷಕ್ಕೆ ೩೬೫ ದಿನಗಳು. ಹೀಗೆ ೩ ವರ್ಷಗಳಲ್ಲಿ ೩೩ ದಿನಗಳ ಅಂತರ ಬರುತ್ತದೆ. ಆದರಿಂದ ಪ್ರತಿ ೨।-೨॥ ವರ್ಷಗಳಿಗೊಮ್ಮೆ ಅಧಿಕ ಚಾಂದ್ರಮಾಸವನ್ನು ಹಿಡಿಯುವ ಯೋಜನೆಯಾಗಿದೆ. ಕಳೆದ ಮೂರು ವರ್ಷಗಳಿಂದ ಮೋಹರಮ್ ಹಬ್ಬವು ಆಷಾಢದಲ್ಲಿ ಬರುತ್ತದೆ. ಮುಂದಿನ ವರುಷ ಅದು ಜ್ಯೇಷ್ಠದಲ್ಲಿ ಬರುವದು. ಯಾವುದನ್ನು ಅಧಿಕ ಮಾಸವಾಗಿ ಇಡಬೇಕು ಎಂಬುದರ ಕುರಿತು ನಮ್ಮ ಹಿರಿಯರು ನಿಯಮ ಮಾಡಿಟ್ಟಿದ್ದಾರೆ. ಸೂರ್ಯಸಂಕ್ರಾಂತಿಯಿಲ್ಲದ ಚಾಂದ್ರಮಾಸ ತಿಂಗಳು ಅಧಿಕ ಮಾಸವು. ಚಾಂದ್ರಮಾಸಕ್ಕೆ ೨೯॥ ದಿನಗಳು. ಒಮ್ಮೆ ಚಂದ್ರನು ಪೂರ್ಣನಾಗಿ ಪುನಃ ಪೂರ್ಣನಾಗುವ ವರೆಗೆ ೨೯॥ ದಿನಗಳು ತಗಲುತ್ತವೆ. ಆದರಿಂದ ಕೆಲ ತಿಂಗಳುಗಳಲ್ಲಿ ೨೯ ದಿನಗಳು, ಕೆಲ ತಿಂಗಳುಗಳಲ್ಲಿ ೩೦ ದಿನಗಳು ಹೀಗೆ ಸಮವಾಗಿ ಬರುತ್ತವೆ. ೨೯॥ ದಿನಗಳ ೧೨ ತಿಂಗಳಿಗೆ ೩೫೪ ದಿನಗಳಾಗುತ್ತವೆ. ಸೌರ ಮಾಸವೆಂದರೆ, ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಹೋಗುವಷ್ಟು ಅವಧಿ. ಸೌರ ಮಾಸಕ್ಕೆ ೩೦-೩೧ ದಿನಗಳು. ಆದರಿಂದ ೩ ವರುಷಗಳಿಗೊಮ್ಮೆ ಸೌರ ಸಂಕ್ರಾಂತಿಯು ಚಾಂದ್ರಮಾಸದ ೩೦ ನೈ ಹಗಲು ರಾತ್ರಿ ಸಹ ಸಾಧಿಸಿ ಮುಂದಿನ ಇಡೀ ಚಾಂದ್ರಮಾಸದಲ್ಲಿ ಸೂರ್ಯ ಸಂಕ್ರಾಂತಿಯು ಬತ್ತೆಯಿರುವದಿಲ್ಲ. ಆ ಇಡೀ ಮಾಸ ಕಳೆದ ಬಳಿಕ, ೧ನ್ಯ ಯಾ ೨ನೆ ಸುಮಾರಕ್ಕೆ ಸೌರ ಸಂಕ್ರಾಂತಿಯಾಗುತ್ತದೆ. ಸೌರ ಸಂಕ್ರಾಂತಿವಿಹೀನ ಇದ್ದ ತಿಂಗಳನ್ನು ಅಧಿಕ ಮಾಸವೆಂದು ಹೇಳುತ್ತಾರೆ. ಗ್ರಹಲಾಘವಿ ಪಂಚಾಂಗದಂತೆ ಈ ವರುಷ ಶ್ರಾವಣ ಮಾಸದಲ್ಲಿ ಸೂರ್ಯ ಸಂಕ್ರಾಂತಿ ಇಲ್ಲ. ಟಿಳಕ ಪಂಚಾಂಗದಂತೆ ಶ್ರಾವಣ ಮಾಸದಲ್ಲಿ ಸೂರ್ಯ ಸಂಕ್ರಾಂತಿ ಇದೆ. ಎರಡೂ ಪಂಚಾಂಗಗಳ ಪ್ರವರ್ತಕರು ತಮ್ಮ ತಮ್ಮ ಪಕ್ಷಗಳನ್ನು ಸಮರ್ಥಿಸುತ್ತಿದ್ದಾರೆ. ಚಿತ್ರಾಪಕ್ಷದಂತೆ ವಿಚಾರಿಸಿದರೆ ಶ್ರಾವಣವೇ ಅಧಿಕ ಮಾಸವಾಗುತ್ತದೆ.

* * *

ಬ್ರಿಟಿಶ ರಾಜ್ಯದೊಳಗಿನ ಪಕ್ಷಪಾತಪ್ರಪಂಚ.

ಹಿಂದುಸ್ಥಾನದೊಳಗಿನ ಉಗಿಬಂಡಿಯ ಆಡಳಿತೆಯಲ್ಲಿ ಬಾಲಕರ ಶಿಕ್ಷಣ ವ್ಯವಸ್ಥೆಯನ್ನು ಪರಾಂಬರಿಸಲು ಯುರೋಪಿಯನ ಅಧಿಕಾರಿಗಳೊಬ್ಬರು ನೇಮಿಸಲ್ಪಟ್ಟಿದ್ದರು. ಅವರು ಸ್ಥಿತಿಯನ್ನು ವಿಚಾರಿಸಿ ಮಾಡಿದ ರಿಪೋರ್ಟಿನ ಸಾರಾಂಶವು ಅಲಹಾಬಾದದ 'ಲೀಡರ' ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಉಗಿಬಂಡಿಯವರು ಯುರೋಪಿಯನ್-ಎಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗಾಗಿ ೯೫ ಶಾಲೆಗಳನ್ನು ತೆರೆದಿದ್ದಾರೆ. ಹಿಂದೀ ವಿದ್ಯಾರ್ಥಿಗಳಿಗಾಗಿ ೫೭ ಶಾಲೆ ನಡಿಯುತ್ತವೆ. ಯುರೋಪಿಯನ್ನರ ಶಾಲೆಗಳಿಗೆ ೩ ಲಕ್ಷ ೬ ಸಾವಿರ ರೂಪಾಯಿಗಳ ವೆಚ್ಚವಾಗುತ್ತದೆ. ಹಿಂದೀ ವಿದ್ಯಾರ್ಥಿಗಳ ಬಗ್ಗೆ ೧ ಲಕ್ಷ ೩೦ ಸಾವಿರ ರೂಪಾಯಿಗಳ ವೆಚ್ಚವಾಗುತ್ತದೆ. ಇದು ಪ್ರತ್ಯಕ್ಷ ಖರ್ಚು. ಅಪ್ರತ್ಯಕ್ಷವಾಗಿಯೂ ಉಗಿಬಂಡಿ ಖಾತೆಯಿಂದ ಶಿಕ್ಷಣದ ಖರ್ಚು ನಡೆಯುತ್ತದೆ. ಫೀ ಬಗೆ ೨ ಲಕ್ಷ ೯೦ ಸಾವಿರ ರೂಪಾಯಿಗಳು ಯುರೋಪಿಯನ್ ವಿದ್ಯಾರ್ಥಿಗಳಿಗೆ ಕೊಡಲ್ಪಡುತ್ತವೆ. ೧೯೦೦೦ ರೂಪಾಯಿಗಳು ಹಿಂದೀ ವಿದ್ಯಾರ್ಥಿಗಳ ಫೀ ಬಗೆ ಕೊಡಲ್ಪಡುತ್ತವೆ. ಇದಲ್ಲದೆ, ಯುರೋಪಿಯನ್ ವಿದ್ಯಾರ್ಥಿಗಳಿಗೆ ಕಲಿಸುತ್ತಾರೆಂಬುದರಿಂದ ೬೨೦೦೦ ರೂಪಾಯಿ ಗ್ರಾಂಟು ಸ್ವತಂತ್ರ ಶಾಲೆಗಳಿಗೆ ಕೊಡಲ್ಪಡುತ್ತದೆ. ಈ ಶಾಲೆಗಳಲ್ಲಿ ೧೭೨೨ ಯುರೋಪಿಯನ್ ವಿದ್ಯಾರ್ಥಿಗಳು ಕಲಿಯುತ್ತಾರೆ. ಹೀಗಿದ್ದು ೨೧೬೯ ಹಿಂದೀ ವಿದ್ಯಾರ್ಥಿಗಳು ಕಲಿಯುತ್ತಾರೆಂಬುದರಿಂದ ಹಿಂದೀ ಶಾಲೆಗಳಿಗೆ ೪೫೦೦೦ ರೂಪಾಯಿ ಗ್ರಾಂಟು ಸಿಗುತ್ತದೆ. ಯುರೋಪಿಯನ್ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯ ಬಗ್ಗೆ ೧೦೦೦೦ ರೂಪಾಯಿಗಳು ಕೊಡಲ್ಪಡುತ್ತವೆ. ಅದೇ ಹಿಂದೀ ವಿದ್ಯಾರ್ಥಿಗಳಿಗೆ ೧೮೦ ರೂಪಾಯಿಗಳ ಶಿಷ್ಯವೃತ್ತಿ. ಯುರೋಪಿಯನ್ ವಿದ್ಯಾರ್ಥಿಗಳಿಗೆ ಪ್ರಯಾಣ ಸೌಕರ್ಯಗಳನ್ನು ಪೂರೈಸಲು ೩ ಲಕ್ಷ ೫೩ ಸಾವಿರ ರೂಪಾಯಿಗಳ ವೆಚ್ಚವಾಯಿತು, ಹಿಂದೀ ವಿದ್ಯಾರ್ಥಿಗಳಿಗಾಗಿ ೧ ಲಕ್ಷ ೮೫ ಸಾವಿರ ರೂಪಾಯಿಗಳ ವೆಚ್ಚವಾಯಿತು. ಹೀಗೆ ಯುರೋಪಿಯನರಿಗಾಗಿ ಉಗಿಬಂಡಿ ಖಾತೆಯಲ್ಲಿ ವಿದ್ಯಾದಾನಕ್ಕೆ ೧೧ ಲಕ್ಷ ೫೪ ಸಾವಿರ ರೂಪಾಯಿ ಖರ್ಚು ಬಿದ್ದಿವೆ. ಹಿಂದೀಯರಿಗಾಗಿ ೩ ಲಕ್ಷ ೯೭ ಸಾವಿರ ರೂಪಾಯಿ ಖರ್ಚಾದವು. ಸರಾಸರಿ ತೆಗೆದರೆ, ಯುರೋಪಿಯನ್ ಬಾಲಕನೊಬ್ಬನಿಗೆ ರೂ ೧೧೫ ಖರ್ಚು ಬರುತ್ತದೆ; ಹಿಂದೀ ಬಾಲಕನಿಗೆ ೧೯ ರೂಪಾಯಿ ಖರ್ಚು ಬರುತ್ತದೆ. ಇದು ಪ್ರಾಥಮಿಕ ಶಿಕ್ಷಣದ ಖರ್ಚು. ಮಾಧ್ಯಮಿಕ ಶಿಕ್ಷಣದ ಬಗ್ಗೆ ಅನುಕ್ರಮವಾಗಿ ಯುರೋಪಿಯನರಿಗೆ ೧೬೪ ರೂಪಾಯಿ, ಹಿಂದೀಯರಿಗೆ ೨೭ ರೂಪಾಯಿ ಬೀಳುತ್ತವೆ. ಹೈಸ್ಕೂಲ ಶಿಕ್ಷಣದ ಬಗ್ಗೆ ಅನುಕ್ರಮವಾಗಿ ಯುರೋಪಿಯನ್ ಬಾಲಕನಿಗೆ ರೂ. ೪೫೨, ಹಿಂದೀ ಬಾಲಕನಿಗೆ ರೂ. ೫೩ ಬೀಳುತ್ತವೆ. ಬ್ರಿಟಿಶ ರಾಜ್ಯದಲ್ಲಿ ಪ್ರಜೆಗಳೆಲ್ಲರಿಗೂ ಸರಿಯಾಗಿ ನಡಿಸಿಕೊಳ್ಳುತ್ತಾರೆಂಬುದಕ್ಕೆ ಈ ಉದಾಹರಣೆ ಸಾಕಾಗದೇ?

— ನೆಲ್ಲೂರು ಪುರದಲ್ಲಿ ಆರೋಗ್ಯ ಮಂಡಳದ ೬ ನೇ ಅಧಿವೇಶನವಾಯಿತು. ಶ್ರೀಮಂತ ಬಾಳಾಸಾಹೇಬ ಪಂತ ಪ್ರತಿನಿಧಿಗಳವರು ಅಧ್ಯಕ್ಷರಿದ್ದರು. ಎಲ್ಲ ವ್ಯಾಯಾಮಗಳಿಗಿಂತಲೂ ಸೂರ್ಯ ನಮಸ್ಕಾರದ ವ್ಯಾಯಾಮವೇ ಶ್ರೇಷ್ಠ ತರಗತಿಯದೆಂದು ಬಾಳಾಸಾಹೇಬರು ಸಪ್ರಮಾಣ ಪ್ರತಿಪಾದಿಸಿದರು.

— ಮದ್ರಾಸದ 'ಹಿಂದು' ಪತ್ರಿಕೆಗೆ ಬರುವ ಸಪ್ಟಂಬರ ತಿಂಗಳಲ್ಲಿ ೫೦ ವರುಷಗಳು ತುಂಬುತ್ತವೆ. ಆ ಕಾಲಕ್ಕೆ ೫೦ ನೇ ವರ್ಷದ ಜಯಂತಿ ಮಹೋತ್ಸವವನ್ನು ಸಾಜರ ಪಡಿಸುವದಕ್ಕಾಗಿ "ಹಿಂದು" ಪತ್ರಿಕೆಯು ವಿಶೇಷ ಸಂಚಿಕೆಯನ್ನು ಪ್ರಕಟಿಸುವದು. ಪತ್ರಿಕೆಯ ಚಂದಾದಾರರೂ, ವಾಚಕರೂ ಈ ಸಮಾರಂಭವನ್ನು ಜಾಲಿಸುವ ಆಲೋಚನೆಗಾಗಿ ಸಭೆ ಕರೆದಿದ್ದಾರೆ.

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೇಕೆಟ ಗಳಿಗೆ ರೂ. ೬
.. (ಎಕತೋಡರ್ಮೆಂಟು) ೨೫ ... ... ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪॥
ಶಾಕ ೧೬ ,, ,, ೨॥
ಸಿಲ್ವರ ಓಕ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ಪತ್ತಿಗೆ . ೨॥
ಹರಿವೆ ಸೊಪ್ಪು ೧ ರತ್ತಲಿಗೆ ... ೪
ಕುದುರೆ ಮಸಾಲೆ ಬೀಜ ೧ ರತ್ತಲಿಗೆ ... ೩
ಡೊಲೋ ಗುಲಾಬಿ ಗಿಡ ೧೨ ಕ್ಕೆ ರೂ ೫ ರಿಂದ ೧೨
ಕರೋಟನ್ಸ್ ಗಿಡ ೧೨ ಕ್ಕೆ .. ೩ ರಿಂದ ೧೨
ಬಣ್ಣವಾದ ಹೂ ಗಿಡ (ಜೆರೇನಿಯಂ) ೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೪ ರಿಂದ ೧೨
ಕೇರಿಸಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ... ೧॥ ಯಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ . ೩ ರಿಂದ ೧೨
ಕಟ್ಟಡ ಮಾದಿನ ಗಿಡಗಳು ೧೨ ಕ್ಕೆ . ೧೦ ರಿಂದ ೧೨
ಪವು ಗಿಡಗಳು ೧೨ ಕ್ಕೆ ... . ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ ... ... ೧೨ರಿಂದ ೩೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಸಿತ್ತಳೇ ಗಿಡಗಳು, ಚಕೋತ್ರಿ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ ರಾಜಪೆರಿ, ಪನ್ನೇರಲ, ಕಂಚಿಕಾಯಿ, ಲಕ್ಯೂಟೆ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇಬು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ . ೨೪
ವಾಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ೫
೧ ಬುಟ್ಟಿ ತುಂಬ ತರಕಾರಿ . ೫ ರಿಂದ ೬
ಕ್ರಿಶಾಂತಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ ಕ್ಕೆ ರೂ ೬-೯ ೧೨
ನೆರಳು ಕೊಡುವ ತಾಳೆ ಎಲೆಯ ಜಾತಿಯ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡ್ಡೆಗಳು ೧೨ ಕ್ಕೆ ರೂ. ೨ ರಿಂದ ೯
ಎರೋಕೇರಿಯಾ ಕ್ಕೆ ೧೨ ತಗಿಗಳಿಗೆ ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ .. ೪ ರಿಂದ ೬

ಟೀಪು: ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ್,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ಕಾನಡಾ ವೃತ್ತ.

ಮಿತಿ ವಿಭವ ಸಂ| ಆಷಾಢ ಶು ೧೬ ಸೋಮವಾರ

ಶುಭಸೂಚನೆ.

ಬಾರ್ಡೋಲಿಯ ಕರನಿರಾಕರಣ [illegible] ಪ್ರಸಂಗಕ್ಕೆ [illegible] ಶುಭ ಸ[illegible] ಗಾಗಹತ್ತಿದೆ. ಬಾರ್ಡೋಲಿಯ [illegible] ಮಾಡಿ [illegible] ಶ್ರೀ| ವಲ್ಲಭಭಾಯಿ ಪಟೇಲರವರ ನಿಭಯವೃತ್ತಿಯಿಂದಲೂ ಧೈರ್ಯದಿಂದಲೂ ಹಿಂದುಸ್ಥಾನದಲ್ಲಿ ಲೋಕಮತವು ದಿನೇ ದಿನೇ ಪ್ರಬಲ[illegible] ನಡೆದಿದೆ. ಪ್ರಖ್ಯಾತ [illegible] ಪತ್ರಿಕೆಯ ಸಂಪಾದಕರಾದ ಶ್ರೀ| [illegible] ಬಾರ್ಡೋಲಿಯ ಕಾದಾಟದಲ್ಲಿ [illegible] ಪ್ರಜೆಗಳ ಪಕ್ಷ ವಹಿಸಿ ಅದರನ್ನು [illegible] ಸರಕಾರಕ್ಕೆ [illegible] ತಾವು ಒಂದು [illegible] ಸ್ವಪ್ರಯೋಗದ [illegible] ಬಾರ್ಡೋಲಿಯೊಳಗಿನ ಕಾದಾಟವು ಸತ್ಯ [illegible] ತನ್ನಿಂದ [illegible] ಪ್ರಯತ್ನ [illegible] ಭಾಷಣದಿಂದ ಈ ಪ್ರಕಾರ ಕರನಿರಾಕರಣ ಮಾಡುವ ಪ್ರಜೆ[illegible] ಅಧಿಕಾರಿಗಳಿಗೆ [illegible] ಪ್ರತಿಪಾದಿಸಿದ್ದಾರೆ.

ಇದಕ್ಕೂ ಅದ್ಭುತವಾದ ಇನ್ನೊಂದು ಚಮತ್ಕಾರ [illegible] ಪ್ರಸಂಗದೊಳಗೆ 'ಪಾಯೋನಿಯರ' ಎಂಬ ಸರಕಾರ ಪಕ್ಷಪಾತಿ ವರ್ತಮಾನಪತ್ರವು ಸರಕಾರದ ಅತ್ಯಂತ ನಂಬಿಗೆಯ [illegible] ವು. ಸರಕಾರಿ ಅಧಿಕಾರಿಗಳಿಗೆ ಈ ಪತ್ರಿಕೆಯು ಆಶ್ರಯ [illegible] ಈ ಪತ್ರಿಕೆಯು ಬಾರ್ಡೋಲಿಯ ಸತ್ಯಾಗ್ರಹ [illegible] ಎತ್ತಿ ಹಿಡಿದು ಭಾರತ ಮಂತ್ರಿಗ[illegible] ಬರ್ಕನಹೆಡ್ ದೊರೆಗಳಿಗೆ ರಭಸದಿಂದ ನಿಂದಿಸಲಾರಂಭಿಸಿದೆ. ಬಾರ್ಡೋಲಿ ಪ್ರಜೆಗಳ ಕಾದಾಟವು ನ್ಯಾಯ್ಯವಾದದ್ದೆಂದೂ 'ಪಾಯೋನಿಯರ' ಪತ್ರಿಕೆಯು [illegible] ಕೊಟ್ಟದೆ ಇಷ್ಟೇ ಅಲ್ಲದೆ, ಮುಂಬಯಿ ಸರಕಾರವು ನಡೆಸುವ ಅತ್ಯಾಚಾರಗಳು ನಿರ್ದಯವಾದವುಗಳೆಂದೂ, ದುಷ್ಟವೆಂದೂ ಹೀಯಾಳಿಸಿದೆ. ಮೇಲೊಂದು ಮಾತನ್ನು ಸರಕಾರಕ್ಕೆ ಸ್ಪಷ್ಟವಾಗಿ ಸಾರಿ ಹೇಳಿದೆ ಈ ಸಮರದಲ್ಲಿ ಸರಕಾರವು ಸೋತು ಹೋಗವದೆಂದು ಖಂಡಿತವಾಗಿ ಭವಿಷ್ಯ ಹೇಳಿ ರುತ್ತದೆ. ಮುಂಬಯಿಯ ಗವರ್ನರರು ದಯಾದ್ರ್ರರೆಂದೂ, ಉದಾರರೆಂದೂ ಬಾರ್ಡೋಲಿಯಲ್ಲಿ ಸಂಧಾನ ಮಾಡಲು ಅವರ ಸಂಕಲ್ಪ [illegible]ದವಾಗಿದ್ದರೂ, ಅಧಿಕಾರಿಗಳ ದುರಾಗ್ರಹದ ಮುಂದೆ ಅವರು ನಿರುಪಾಯರಾಗಿದ್ದಾರೆಂದೂ 'ಪಾಯೋನಿಯರ' ಪತ್ರಿಕೆಯು ಅಂದಿರುವುದು. 'ಪಾಯೋನಿಯರ' ಪತ್ರಿಕೆಯು ಸರಕಾರದ ವಿಶ್ವಾಸಸ್ಥಾನವಾದ್ದರಿಂದ, ಆ ಪತ್ರಿಕೆಯಲ್ಲಿ ಹೇಳಲ್ಪಟ್ಟ ಗುಟ್ಟು ಆಯದಾರ್ಥವಂತು ನಮ್ಮಿಂದ ಹೇಳಬರದ ಸಂಧಾನವೆಂದು ನಾವು ಹೇಳಲೇಬೇಕು.

ಸಂತೋಷವೆಂದು [illegible] ಇನ್ನೊಂದು ಶಾಸ್ತ್ರ ಹೊರಬಿದ್ದಿದೆ ಸರ್ವಾಧಿಪತಿಗಳ ಕಾರಬಾರಿ ಮಂಡಳದ [illegible] ಆಲೋಚನೆಯು ಕಳೆದ ಬುಧವಾರಕ್ಕೆ ನಡೆಯಿತೆಂದು ಪ್ರಕಟವಾಗಿದೆ ಮಾರನೇ ದಿನಕ್ಕೆ ಮುಂಬಯಿಯ ಪ್ರಾಂತಾಧಿಪರಿಗೆ ಸರ್ವಾಧಿಪತಿಗಳು ನಿಮಂತ್ರಿಸಿದರೋ ಏನೋ ಶಕ್ರವಾರ ಮುಂಜಾವಿಗೆ ಸರ್ವಾಧಿಪತಿಗಳೊಡನೆ ಮಾತುಕಥೆಯಾಡಲು ಹೊರಟು ಹೋಗಿದ್ದಾರೆ ಬಾರ್ಡೋಲಿಯ ವಿಷಯ ಆಲೋಚನ ಮಾಡಲಿಕ್ಕೇ ಪ್ರಾಂತಾಧಿಪರು ಹೋಗಿರುವರೆಂದು ಸರಕಾರಿ ಪ್ರಕಟಣೆ. ಆ ಪ್ರಕಟಣೆಯ ಜೊತೆಗೆ ಅಧಿಕಾರಿಗಳ ಟೀಕೆಯೊಂದು ಪ್ರಕಟವಾಗಿದೆ ಸರಕಾರದ ಮುಖ್ಯಾಧಿಕಾರಿ ಸ್ಥಾನದ [illegible] ಕಾಯಿದೆಯ ಪ್ರತಿಷ್ಠೆಯನ್ನು ಕಾಪಾಡಲು ಪ್ರಾಂತಾಧಿಪರು ಬದ್ಧರಿದ್ದಾರೆ. ಜನಕಹರ ಪ್ರತಿನಿಧಿತ್ವದಿಂದ ಪ್ರಜೆಗಳಿಗೊದಗುವ ಕಷ್ಟನಷ್ಟಗಳನ್ನು ಪರಿಹರಿಸಲಿಕ್ಕೂ ಬದ್ಧರಿದ್ದಾರೆ ಪ್ರಾಂತಾಧಿಪರು ನಾಡಿದ್ದು ಬುಧವಾರಕ್ಕೆ ಸುರತದಲ್ಲಿ ಮುಕ್ಕಾಂ ಮಾಡುವರು ಅಲ್ಲಿ ಅವರ ಮುಕ್ಕಾಮು ಒಂದೇ ದಿನ ಸ್ಥಳೀಯ ಅಧಿಕಾರಿಗಳೊಡನೆಯೂ, ಪ್ರಜೆಗಳ ಶಿಷ್ಟರೊಡನೆಯೂ ಪ್ರಾಂತಾಧಿಪರು ಈ ವಿಷಯ ಮಾತನಾಡುವರು ಅಧಿಕಾರಿಗಳ ಅಧಿಕಾರದರ್ಪವು ಇಳಿಯಲಾರಂಭಿಸಿದ ಲಕ್ಷಣವಿದೆಂದು ಸೂಕ್ಷ್ಮ ಪರ್ಯಾಲೋಚಕರು ಉದ್ಗರಿಸಹತ್ತಿದ್ದಾರೆ.

ಬಾರ್ಡೋಲಿಯೊಳಗೆ ಈಗ ಜಪ್ತಿಯು ನಡೆಯುವಿಲ್ಲ ಅತ್ಯಾಚಾರಗಳಿಗಾದರೂ ಸೀಮೆ ಇರುತ್ತದಲ್ಲವೇ? ಎಲ್ಲವೂ ವಿಪರೀತವಾಯಿತು ಅಪಾರವಾದ ಕಷ್ಟಗಳನ್ನು ಬಡ ಪ್ರಜೆಗಳ ಮೇಲೆ ಹೊರಿಸಿದರೂ, ಅವರೆಷ್ಟು ಬಗ್ಗುವದಿಲ್ಲ ಸರಕಾರವು ಬಲಾತ್ಕಾರದಿಂದ ಜಪ್ತಿ ಮಾಡಿದ ಭೂಮಿಯನ್ನು ಬೇಸಾಯಗಾರರು ಎಂದಿನಂತೆ ಸಾಗುಮಾಡಹತ್ತಿದ್ದಾರೆ ಸರಕಾರದ ಜಪ್ತಿಯ ಸುದ್ದಿಯು ಕನಸು ಮನಸ್ಸಿನಲ್ಲಿಲ್ಲವೆಂಬಂತೆ ಅವರ ವ್ಯವಹಾರ ನಡೆದಿದೆ ಡೆಪ್ಯುಟಿ ಕಲೆಕ್ಟರರು ಹೆದರಿಸಿ ನೋಡಿದರು ಕೇಸ್ ಬೆಳೆದ ಪೈರು ಸರಕಾರದ್ದೆಂಬ ಕಾಯಿದೆ ಹೇಳಿದಾಗ್ಯೂ ಬೇಸಾಯಗಾರರು ಲಕ್ಷ್ಯ ಕೊಡುವದಿಲ್ಲ ಪುರುಷರಿರಲಿ, ಅಬಲೆಯರು ಸಹ ಈ ಹೆದರಿಕೆಗೆ ಸೊಪ್ಪು ಹಾಕುವದಿಲ್ಲ ಇಷ್ಟು ನಿರ್ಧಾರವು ಬಾರ್ಡೋಲಿಯಲ್ಲಿ ನಡೆದಿದೆ. ಸರಾಯಿ ಲೈಸೆನ್ಸುಗಳನ್ನು ಸವಾಲು ಮಾಡುವ ಸಮಯವಿದು ಈ ಕಾಲಕ್ಕೆ ಶ್ರೀ| ವಲ್ಲಭಭಾಯಿಯವರು ಒಂದು ಪ್ರಕಟಣೆಯನ್ನು ಹೊರಡಿಸಿ ಸರಾಯಿ ಅಂಗಡಿಗ ಸವಾಲು ಮಾಡಬಾರದಾಗಿ ಆಜ್ಞೆಯನ್ನು ಹೊರಡಿಸಿದ್ದಾರೆ ಈ ಆಜ್ಞೆಗೆ ಮಿಕ್ಕಿ ಸವಾಲು ಮಾಡಿದ್ದಲ್ಲಿ ಅಂಗಡಿಗಳ ಮುಂದೆ ಪಿಕೆಟಿಂಗ ನಡೆಯುವದಾಗಿಯೂ ಮುಂಜಾಗ್ರತೆ ಕೊಟ್ಟಿದ್ದಾರೆ ಹೀಗೆ ಬಾರ್ಡೋಲಿಯೊಳಗೆ ಪ್ರಜಾಸಂಘಟನೆಯ ಮಹಾಯಜ್ಞವು ನಡೆದಿದೆ.

ಬೇಸಾಯಗಾರರ ನಿರ್ಧಾರದ ಮುಂದೆ ಸಮರ್ಥ ಸರಕಾರವು ಸಹ ತಲೆ ಬಗ್ಗಿಸುವ ಪ್ರಸಂಗಕ್ಕೆ ಬಂದಿದೆ, ತಲೆ ಬಗ್ಗಿಸುವ ತಯಾರಿಯೂ ಆಗಿದೆ. ಹ್ಯಾಗೆ ತಲೆಬಗ್ಗಿಸುವದು, ಎಷ್ಟಕ್ಕೆ ಬಗ್ಗುವದು, ಎಂಬುದೇ ದೊಡ್ಡ ಪ್ರಶ್ನೆ ಏನು ಮಾಡಬೇಕೆಂದು ಎಷ್ಟು ವಿಚಾರಿಸಿದರೂ ತಿಳಿಯದು ಏರಿದ ತೀರ್ವೆಯನ್ನು ಒಮ್ಮೆ ವಸೂಲ ಪಡೆಯುವ, ಆ ಮೇಲೆ ವಿಚಾರ ಮಾಡುವ ಎಂದು ಹಳೆ ತೀರ್ವೆಯನ್ನು ವಸೂಲ ಪಡೆಯುವ ಹಂಚಿಕೆಯಾಯಿತು. ಆ ಬಿಸಿಲುಗುದುರೆಗೆ ಈಗ ಯಾರೂ ನಂಬುವದಿಲ್ಲ, ಆದರಿಂದ ಬಾರ್ಡೋಲಿಯೊಳಗಿನ ಸತ್ಯಸ್ಥಿತಿಯನ್ನು ಪರಿಷ್ಕರಿಸಿ ಕಡೆ ವಾಸ್ತವವಾಗಿ ತಿಳಿಸಲಿಲ್ಲೆಂದು ಡಿ| ಜಿ| ಕಲೆಕ್ಟರರ ಮೇಲೆ ಮುಂಬಯಿಯ "ಟೈಮ್ಸ" ಪತ್ರಿಕೆಯು ರೇಗಿಗೆದ್ದಿದೆ. ಭಾಪುರೆ! ಜಿಲ್ಲಾಧಿಪತಿಗಳೂ, ಕಮೀಶನರರೂ ದೊಡ್ಡ ದೊಡ್ಡ ಸಂಬಳ ಪಡೆದು ಜಿಲ್ಲೆಯ ಸ್ಥಿತಿ ಗತಿಯನ್ನು ಪರಾಂಬರಿಸುವದಕ್ಕಾಗಿ ನೇಮಿಸಲ್ಪಟ್ಟ ನಂಬಿಗಸ್ಥ ದ[illegible] ರೋಪಿಯನರು ಅವರು ಸರಕಾರಕ್ಕೆ ಸತ್ಯಸ್ಥಿತಿಯನ್ನು ನಿವೇದಿಸಲಿಲ್ಲವೇ? ಅವರ ಮೇಲೆ "ಟೈಮ್ಸ" ಪತ್ರಿಕೆಗೆ ಸಿಡುಕಿಲ್ಲ, ಅವರು ತನ್ನ ಜಾತಿಗಳೆಂದಲ್ಲವೇ? ಡಿ| ಡೆ ಕಲೆಕ್ಟರ[illegible] ಭಾರತೀಯರು ಅವರೇ ಅಯೋಗ್ಯರೆಂ[illegible] ಹೇಳಲಿಕ್ಕೆ ಅಡ್ಡಿ ಯೇನಿದೆ? "ಸ್ವಧರ್ಮೆ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ಪರವು ಗಹನೋ ಯೆ ಸೀಗಿನಾಮುಷ್ಯಗಮ್ಯ: " ಎಂದು ಹೇಳುವದು ಇದಕ್ಕಾಗಿಯೇ ಡಿ| ಡೆ ಕಲೆಕ್ಟರರು ಈ ವಿಚಾರವನ್ನು ಮಾಡಿ ದೇ[illegible] ಬಾಂಧವರಿಗೆ ಪೀಡಿಸಲುದ್ಯುಕ್ತರಾಗದಿದ್ದ[illegible] ಅವರಿಗೂ ಸುಖವಾಗುತ್ತಿತ್ತು, ಸರಕಾರಕ್ಕೆ ನಿಜಸ್ಥಿತಿ ತಿಳಿಯುತ್ತಿತ್ತು, ದೇಶಬಾಂಧವರಿಗೆ ಕ್ಷೇಮವಾಗುತ್ತಿತ್ತು ಅಂತು ಬಾರ್ಡೋಲಿಯ ರಣಾಂಗಣದಲ್ಲಿ ಸಂಧಾನದೇವಿಯ ಅವತಾರ ಹೊಂದುವ ಪೂರ್ವ ಪೀಠಿಕೆಯಾಗಿದೆ ಒಂದು ವಾರದೊಳಗೆ ಪ[illegible] ತಾಂಶವು ಪ್ರಕಟವಾಗುವದೆಂದು ನಿಶ್ಚಯವಾಗಿ ಈಗ ಹೇಳಬಹುದು ಪ್ರಾಂತಾಧಿಪರ ಗ[illegible]

ದಿಂದಲೂ, ಸ್ವಾರ್ಥಪರರುಗಳ ನಿಪತ್ರಿಕೆಯಿಂದಲೂ 'ಮಾಯೋಸಿಯರ' ಪತ್ರಿಕೆಯೊಳಗಿನ ನಿಷೇಧಪರ ಉದ್ಗಾರಗಳಿಂದಲೂ ಸರಕಾರದ ಮನಸ್ಸು ಅತ್ಯಾಚಾರಗಳಿಗೆ ಹೇಸಿದೆಂದು ಸ್ಪಷ್ಟವಾಗುತ್ತಿದೆ. ಇದೊಂದು ಶುಭಸೂಚನೆ. ಮುಂದೆ ಸಂಧಾನವಾಗಲಿ ಬಿಡಲಿ ಸರಕಾರಿ ಅತ್ಯಾಚಾರದ ಸೀಮೆಯೊಂದು ಪ್ರಜೆಗಳಿಗೆ ತಿಳಿದಂತಾಯಿತು. ಸರಕಾರಕ್ಕೆ ಇದರಿಂದ ಲ ಪ್ರಜೆಗಳು ಎಷ್ಟರಮಟ್ಟಿಗೆ ಸ್ವಾರ್ಥತ್ಯಾಗ ಮಾಡಬೇಕೆಂಬುದೂ ಗೊತ್ತಾದಂತಾಯಿತು. ಬಾರ್ದೋಲಿಯು ಸರಕಾರದ ನಿರ್ದಯತನದ ಪರಮಾವಧಿಯ ಪರೀಕ್ಷೆ ಮಾಡಿ ದೇಶೋದ್ಧಾರ ಮಾಡಬಯಸುವ ಪ್ರಜೆಗಳಿಗೆ ಮಹದುಪಕಾರ ಮಾಡಿದೆಂದು ನಮೂದಿಸಿ, ಭಗವಂತನು ಈ ಮಹಾನುಭಾವರಿಗೆ ವಿಜಯವನ್ನು ಕರುಣಿಸಲೆಂದು ಪ್ರಾರ್ಥಿಸುವೆವು.

ಸ್ಫುಟ ಸೂಚನೆಗಳು.

೧ ಮುಂಬಯಿ ಕಾಯದೆ ಕೌನ್ಸಿಲಿನ ಅಧಿವೇಶನವು ಮುಂದಿನ ಸೋಮವಾರದಿಂದ ಪುಣ್ಯನಗರಿಯಲ್ಲಿ ಪ್ರಾರಂಭವಾಗುತ್ತದೆ. ಈ ಅಧಿವೇಶನದಲ್ಲಿ ಹೊಲಗಳ ಪುನರ್ಘಟನೆಯ ಕಾನೂನಿನ ಎರಡನೇ ವಾಚನವಾಗಿ ವಿರೋಧನೆ ನಿಲ್ಲದಿದ್ದರೆ ೩ ನೇ ವಾಚನದ ಶಾಸ್ತ್ರವಾಗಿ ಅದು ಕಾಯಿದೆಯಾಗಿ ಪರಿಣಮಿಸುವದು. ಸುದೈವದಿಂದ ಈ ಕಾನೂನಿನ ವಿಷಯ ಪ್ರಜೆಗಳಲ್ಲಿ ಮತಭೇದವೇನಿಲ್ಲ, ಎಲ್ಲರ ಐಕ್ಯಮತ್ಯವಿದೆ. ಈ ಕಾನೂನಿನಿಂದ ಬೇಸಾಯಗಾರರಿಗೆ ಪರಮಾವಧಿಯ ಅಕಲ್ಯಾಣವಾಗಿ ಅವರು [illegible] ಲ್ಬತ್ತರೆಂದು ಈ ಕಾನೂನನ್ನು ಮೇಲಿನ ಮೇಲೆ ವಿಚಾರಿಸಿದವರೂ ತಿಳಿಯುವಹಾಗಿದೆ. ಇದನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಪ್ರಜಾಪ್ರತಿನಿಧಿಗಳು ಟೊಂಕವನ್ನು ಘಟ್ಟಿಯಾಗಿ ಕಟ್ಟಬೇಕು. ಸರಕಾರವು ಈ ಕಾನೂನನ್ನು ಮನ್ನಿಸಿಕೊಳ್ಳುವ ನಿರ್ಧಾರ ಮಾಡಿದೆ. ಕಾಯದೆಕಾರಿ ಮಂಡಲದ ಸಭಾಸದರಾದ ಸರ್ ಚುನಿಲಾಲ ಮೇಹತಾರವರ ಅಧಿಕಾರದವಧಿ ತೀರಿದಾಗ್ಯೂ, ಅವರಿಗೆ ೩ ತಿಂಗಳ ಆಯುರ್ದಾಯ ಕೊಟ್ಟ ಈ ಕಾನೂನಿನ ಪ್ರಾಣಪ್ರತಿಷ್ಠೆಗಾಗಿಯೇ ಇಟ್ಟುಕೊಂಡಿದೆ. ಅನುಕೂಲ ಮತಸಂಗ್ರಹ ಮಾಡುವ ಪ್ರಯತ್ನಗಳು ೩-೪ ತಿಂಗಳೊಳಗೆ ನಡೆದಿರಬೇಕು. ಲೋಕಪ್ರತಿನಿಧಿಗಳು ದೀರ್ಘ ವಿಚಾರ ಮಾಡಿ ಜಾಗ್ರತೆಯಿಂದ ವರ್ತಿಸತಕ್ಕದ್ದು. ಸ್ಯಾಮನ್ ಕೂಟದೊಡನೆ ಪ್ರಾಂತದಲ್ಲಿ ಸಂಚಾರ ಮಾಡಲು ಮಂಡಳವೊಂದು ಇದೇ ಅಧಿವೇಶನದಲ್ಲಿ ನೇಮಿಸುವದಿದೆ. ಸ್ಯಾಮನ್ ಕೂಟದ ಅಪಮಾನವನ್ನೂ, ಅನ್ಯಾಯವನ್ನೂ ನಮ್ಮ ಪ್ರತಿನಿಧಿಗಳು ತಿಳಿದ ವಿಷಯ. ನಮ್ಮ ಕರ್ನಾಟಕ ಪ್ರಾಂತದಲ್ಲಿ ಈ ವಿಷಯ ಐಕ್ಯಮತ್ಯವಿದ್ದಿದ್ದರೆ ನಮಗೆ ಆನಂದವಾಗುತ್ತಿತ್ತು. ವಿಜಾಪುರದೊಳಗಿನ ಕೆಲ ವೀರಶೈವ ಪ್ರಮುಖರು 'ಬ್ರಿಟಿಶ ಕರ್ನಾಟಕ ಸಂಘ'ವೆಂಬವೊಂದು ಸಂಸ್ಥೆಯನ್ನು ಕರ್ನಾಟಕದ ಏಕೀಕರಣಕ್ಕಾಗಿ ಸ್ಥಾಪಿಸಿದ್ದಾರೆ. ಮುಂಬಯಿ-ಮದ್ರಾಸ ಮುಂತಾದ ಬ್ರಿಟಿಶ ರಾಜ್ಯದಲ್ಲಿ ಹರಿಸಿಕೊಂಡಿದ್ದ ಕರ್ನಾಟಕದ ಭಾಗಗಳನ್ನು ಒಟ್ಟು ಮಾಡುವದಕ್ಕಾಗಿ ಸ್ಯಾಮನ್ ಕೂಟದೊಡನೆ ಇವರು ಸಹಕಾರ ಮಾಡದೆ ಇಲ್ಲದಿದ್ದರೆ, ಈ ವಿಷಯವನ್ನು ಪ್ರಜಾಪ್ರತಿನಿಧಿಗಳು ಅಂತಿಮ ಪ್ರಜಾಕಲ್ಯಾಣದ ವಿಚಾರ ಮಾಡಿ ತಿಳಿಯಬೇಕು. ಸರಕಾರದ ಕುಹಕವನ್ನು ಬೈಲಿಗೆಳೆಯಬೇಕು. ಸರ್ ಚುನಿಲಾಲ ಮೇಹತಾರವರೇ ಸ್ಯಾಮನ್ ಕೂಟದ ಅಂಗೀಕಾರದ ಪ್ರವರ್ತಕರು. ಯುರೋಪಿಯನ್ ಸಭಾಸದರಿಗೆ ಈ ವೀರ್ಯವನ್ನು ನಮ್ಮ ಮುಂಬಯಿ ಸರಕಾರವು ಬಿಡದ್ಯ ಕೊಡಲಿಲ್ಲೆಂಬಂತೆ ತೋರುತ್ತದೆ. ಗೆದ್ದರೆ ಸರಕಾರದ ಪ್ರತಿಷ್ಠೆ ಬೆಳೆಯಿತು, ಸೋತರೆ ಚುನಿಲಾಲ ಮೇಹತಾರವರಿಗೆ ಕಾಯಿದೆ ಕೌನ್ಸಿಲಿನಲ್ಲಿ ಪ್ರತಿಷ್ಠೆ ಇಲ್ಲೆಂದು ಸಿದ್ಧವಾಯಿತು. ಸಭಾಸದರು ಸರ್ ಚುನಿಲಾಲ ಮೇಹತಾರವರ ೧ ಧೋರಣಗಳನ್ನು ವಿಚಾರಿಸದೆ, ಅವರ ಪ್ರತಿಷ್ಠಾಪಾಲನದ ವಿಚಾರ ಮಾಡದೆ ನಿರ್ದಾಕ್ಷಿಣ್ಯವಾಗಿ ತಮ್ಮ ಮತಗಳನ್ನು ಪ್ರತಿಕೂಲ ಕೊಟ್ಟು ಆ ಎರಡು ಸೂಚನೆಗಳನ್ನು ಮೆಟ್ಟಿ ಮೊದಲು ತೆಗೆಯತಕ್ಕದ್ದು.

— ಇಂಗ್ಲಿಷ ಶಿಕ್ಷಣದ ವಿಷಯ ವಿಚಾರ ಮಾಡಲಾಗಿ ಆ ಶಿಕ್ಷಣದಿಂದ ನಾವು ಓದೇ ಕಾರಕೂನರಾಗುತ್ತೇವೆಂದು ಕೇಳಿ, ಆ ಶಿಕ್ಷಣವನ್ನು ತಿರಸ್ಕರಿಸಬೇಕೆಂದು ಪ್ರತಿಪಾದಿಸಿದ್ದೆವು. ಹಿಂದುಸ್ಥಾನ ಸರಕಾರವು ೫೦ ವರುಷಗಳ ಹಿಂದೆ ಉಗಿಬಂಡಿಯ ಅಧಿಕಾರಿಗಳ ಪರಾಂಬರಿಕೆ ಮಾಡಿದ ತೀರ್ಮಾನವೊಂದು ಸರಕಾರಿ [illegible] ಉಗಿಬಂಡಿ ಖಾತೆಯ ರಿಪೋರ್ಟಿನಲ್ಲಿ ಪ್ರಕಟಿಸಿದ್ದಾರೆ. ಈ ತೀರ್ಮಾನವು ನಮ್ಮ ಸರಕಾರಿ ಅರಸರ ಮನೋವಿಕಾರಗಳನ್ನು ಸ್ಫುಟ ಮಾಡುತ್ತದೆ. ಉಗಿಬಂಡಿಯ ಖಾತೆಯವರು ತಮ್ಮಲ್ಲಿ ನೌಕರಿ ಮಾಡುವ ಯುರೋಪಿಯನ್ ಜನರ ಮಕ್ಕಳಿಗೆ ಗಾರ್ಡ, ಡ್ರೈವ್ಹರ, ಫಿಟರ್ ಮುಂತಾದ ದೊಡ್ಡ ದೊಡ್ಡ ಹುದ್ದೆಗಳಿಗೆ ತಕ್ಕ ಶಿಕ್ಷಣವನ್ನು ಕೊಡತಕ್ಕದ್ದು. ಹಿಂದೀ ವಿದ್ಯಾರ್ಥಿಗಳಂತೆ ಕಾರಕೂನರಾಗಲು ಇವರಿಗೆ ಉತ್ತೇಜನ ಕೊಡಬಾರದು" ಬ್ರಿಟಿಶ ರಾಜ್ಯದಲ್ಲಿ ಎಲ್ಲರೂ ಸರಿಸಮಾನರೆಂದು ಆಗಾಗ ನಿಶ್ಚಯವಾಗಿ ಯಾರಾದರೂ ಹೇಳುವರು. ಕಾರಕೂನಿಯ ಶಿಕ್ಷಣ ಕೊಡುವಾಗ ಆ ಶಿಕ್ಷಣದಿಂದ ನಮ್ಮ ಪ್ರಗತಿಯಾಗದಿದ್ದರೆ, ಆಶ್ಚರ್ಯವೇನಿದೆ? ಆಶ್ಚರ್ಯವಾದ ಮಾತು ಹಿಂದು. ಸರಕಾರವು ಕಾರಕೂನಿ ಶಿಕ್ಷಣ ಪದ್ಧತಿಯ ಯೋಜನೆ ಮಾಡಿದರೂ, ದೊಡ್ಡ ದೊಡ್ಡವರು ನಿರ್ಮಿಸಿದ್ದರಂತೆ ಆ ಶಿಕ್ಷಣವೇ ವಿದ್ಯಾದಾನದ [illegible] ಮೋಕ್ಷಸಾಧನೆಯೆಂದು ಭಾವಿಸಿಕೊಂಡು ನಮ್ಮ [illegible] ಅದನ್ನು ಹೊಗಳಿಕೊಳ್ಳುತ್ತೇವೆ. ಇಂಗ್ಲಿಷ ಶಿಕ್ಷಣದಿಂತ ಉಚ್ಚ ಶಿಕ್ಷಣಕ್ರಮವು ಬೇರೆ ಇಲ್ಲವೆಂಬ ಗ್ರಹಿಕೆ ಮಾಡಿಕೊಂಡು ಅದಕ್ಕಾಗಿ ಶಕ್ತಿಮೀರಿ ದ್ರವ್ಯವನ್ನು ವಿನಿಯೋಗಿಸುತ್ತೇವೆ. ಸಾಂಗವಾಗಿ ವಿಚಾರ ಮಾಡುವದಿಲ್ಲ. ಸರಕಾರದ ಅಂತರಂಗವು ೧೮೭೦-೮೦ ವರ್ಷಗಳ ಸಹವಾಸದಿಂದಲೂ ನಮಗೆ ತಿಳಿಯಲಿಲ್ಲ. ಇಂಗ್ಲಿಷ ಶಿಕ್ಷಣದ ಗುಟ್ಟು ಇನ್ನಾದರೂ ತಿಳಿಯಿತಲ್ಲವೇ?

೨ ನಮ್ಮ ಕುಮಟಾ ಮುನಿಸಿಪಾಲಿಟಿಯೊಳಗಿನ ಕುಯುಕ್ತಿಗಳು ಈಗ ನ್ಯಾಯಾಸನಗಳಲ್ಲಿ ಹೊರಬೀಳಲಾರಂಭಿಸಿವೆ. ಮತದಾರರಿರ್ವರು ಕೆಲವರ ಮತಗಳನ್ನು ಮತದಾರರ ಪತ್ರಿಕೆಯೊಳಗಿಂದ ತೆಗೆಯಲು ಜಿಲ್ಲಾ ಕೋರ್ಟಿನಲ್ಲಿ ದಾವೆ ಮಾಡಿದ್ದರು. ಅವುಗಳೊಳಗೆ ಒಂದು ದಾವೆಯಲ್ಲಿ ಬೈಲಿಗೆ ಬಂದ ಸಂಗತಿಗಳಿಂದ ಮುನಿಸಿಪಾಲಿಟಿಯೊಳಗಿನ ಅಧಿಕಾರಾರೂಢ ಪಕ್ಷಕ್ಕೆ ಬಹಳಷ್ಟೆ ಇಲ್ಲವೆಂದು ಸ್ಪಷ್ಟವಾಗುತ್ತದೆ. ರಾ ಅನಂತಭಟ್ಟ ಎಂಬುವರೊಬ್ಬರು ಅಧ್ಯಕ್ಷರಾದ ರಾ ಅಣ್ಣಪ್ಪೈರ ಶಾಗು ಮು| ಕಮಿಟಿಯ ಸಭಾಸದರಾದ ರಾ| ಮಹಾಳಪ್ಪೈರ ನಿಕಟ ಸಂಬಂಧಿಕರು. ರಾ| ಅಣ್ಣಪ್ಪ ಮಹಾಳಪ್ಪೈರು ಒಂದೇ ಅವಿಭಕ್ತ ಕುಟುಂಬದವರಿದ್ದು ರಾ| ಅಣ್ಣಪ್ಪೈರಿಗೆ ರಾ| ಅನಂತ ಭಟ್ಟರು ಭಾವಂದಿರ ಮೇಲಾಗಿ ಪುರೋಹಿತರು. ಮುನಿಸಿಪಾಲಿಟಿಯಲ್ಲಿ ತಾ ೧೯-೩-೨೮ ರ ತನಕ ರಾ| ಅನಂತ ಭಟ್ಟರ ಹೆಸರಲ್ಲಿ ಮುನಿಸಿಪಾಲಿಟಿಯೊಳಗಿನ ಇಮಾರತುಗಳು ಕಿರಾಯದಾರರ ಲಿಸ್ಟಿನಲ್ಲಿ ದಾಖಲಿದ್ದವು. ಆ ತಾರೀಖಿಗೆ ಎರಡು ಇಮಾರತುಗಳು ರಾ| ಅನಂತಭಟ್ಟರ ಇಬ್ಬರು ಮಗಂದಿರ ಹೆಸರಲ್ಲಿ ಭಕ್ಷೀಸಾಗಿ, ಭಕ್ಷೀಸಿಗೂ ಮುಂಚಿನ ಮುನಿಸಿಪಾಲಿಟಿ ಕಿರಾಯು ಉಭಯ ಮಗಂದಿರರ ಕಡೆಯಿಂದ ವಸೂಲಾಯಿತು. ತೆರಿಗೆ ಕೊಟ್ಟ ಹೊರತು ಮತ ಕೊಡಲು ಪಾತ್ರತೆ ಬರುವದಿಲ್ಲೆಂದು ಹಿಂದಿನ ತೆರಿಗೆಯು ಮುಂದಿನ ಭಕ್ಷೀಸಿನಾತ ವಸೂಲ ಮಾಡುವ ಕ್ರಮ ನೋಡಿದರೆ, ಮುನಿಸಿಪಾಲಿಟಿಯೊಳಗಿನ ಅಧಿಕಾರಾರೂಢ ಪಕ್ಷದಲ್ಲಿ ಸತ್ಯತೆಯು ಸಂಪೂರ್ಣವಾಗಿ ಬಯಲಾಗಿದೆಂದು ನಿಃಸಂದೇಹವಾಗಿ ಹೇಳಬಹುದು. ಜಡ್ಜರು ಈ ವ್ಯಾಪಾರ ನೋಡಿ ಇದಕ್ಕೆ ಮತ ಸಂಗ್ರಹಿಸುವ ಕುತಂತ್ರ (Trick) ವೆಂದು ಘೋಷಿಸಿದ್ದಾರೆ. ರಾ| ಅಣ್ಣಪ್ಪ-ಮಹಾಳಪ್ಪೈರಿಗೆ ಈ ಠರಾವಿನ ಪ್ರತಿಷ್ಠೆ ಹೆಚ್ಚುತ್ತದೆಂದರೆ ನಮ್ಮದೇನು ಹೇಳಿಕೆ ಇಲ್ಲ. ಇದೇ ಪ್ರಕಾರ ಅನೇಕ ಸಂಗತಿಗಳಲ್ಲಿ ಮತಗಳು ಹೆಚ್ಚಾಗಿರುವವೆಂದು ಹೇಳುತ್ತಾರೆ. ಮುನಿಸಿಪಾಲಿಟಿಯವರು [illegible] ಹೆಸರುಗಳನ್ನು ಮತದಾರರ ಯಾದಿಯಲ್ಲಿ ಸೇರಿಸಲಿಲ್ಲವಾಗಿಯೂ ಜಿಲ್ಲಾ ಕೋರ್ಟಿನಲ್ಲಿ ಹೊರಬಿದ್ದಿದೆ. ಹೀಗೆಲ್ಲ ಅಕ್ರಮದಿಂದ ತಯಾರಿಸಿದ ಯಾದಿಯ ಮೇಲೆ ಇಲೆಕ್ಷನನ್ನು ನಡಿಸುವದು ಅನ್ಯಾಯವು. ಕಲೆಕ್ಟರರು ಇದರ ವಿಚಾರ ಮಾಡಿ ಇಲೆಕ್ಷನಿನ ಈಗಿನ ಕಾರ್ಯಕ್ರಮವನ್ನು ರದ್ದುಪಡಿಸಿ, ಜಿಲ್ಲಾ ಕೋರ್ಟಿನ ನಿರ್ಣಯಕ್ಕನುಸಾರ ಹೊಸ ಮತದಾರರ ಯಾದಿಯನ್ನು ತಯಾರಿಸುವಂತೆ ಮುನಿಸಿಪಾಲಿಟಿಗೆ ಆಜ್ಞೆ ಮಾಡಿ ಇಲೆಕ್ಷನಿನ ಕೆಲಸವನ್ನು ಮುಂದರಿಸುವದಿಷ್ಟವೆಂದು ನಮಗೆ ತೋರುತ್ತದೆ. ಕಚ್ಚಾ ಯಾದಿಯ ವಿರುದ್ಧ ಬಂದ ಅನೇಕ ಅರ್ಜಿಗಳನ್ನು ಮುನಿಸಿಪಾಲಿಟಿಯವರು ತಿರಸ್ಕರಿಸಿದ್ದರು. ಪರೀಕ್ಷಾರ್ಥವಾಗಿ ಜಿಲ್ಲಾ ಕೋರ್ಟಿಗೆ ಹೋದ ೩ ಅರ್ಜಿಗಳ ವಿಚಾರದಲ್ಲಿ ಶ್ರೇಷ್ಠ ನ್ಯಾಯಾಸನದ ತೀರ್ಪಿನಂತೆ ವಿಚಾರಿಸಿದರೆ ಹೊಸ ಮತದಾರರ ಯಾದಿಯನ್ನು ತಯಾರಿಸುವದೇ ಯೋಗ್ಯವೆಂದು ಕಲೆಕ್ಟರರಿಗೆ ವಿಚಾರದಿಂದ ತಿಳಿಯುವಹಾಗಿದೆ.

— ಧಾರವಾಡದೊಳಗಿನ ಬೇಸಾಯಗಾರರು ರಾವಬಹಾದ್ದೂರ ಪಾಟೀಲರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹೊಲಗಳ ಪುನರ್ಘಟನೆಯ ಕಾನೂನನ್ನೂ, ಆರ್ಥದ ತನಕ [illegible] ಲೆಂಡ ರೆವಿನ್ಯೂ ಕೋಡಿನ ಕಾಯಿದೆಯನ್ನೂ ನಿಷೇಧಿಸಿದರು. ಕಾಯದೆ ಕೌನ್ಸಿಲಿನ ಸಭಾಸದರಾದ ರಾ|| ಜೋಗ ವಿಶ್ವನಾಥರಾಯರೂ 'ಕರ್ನಾಟಕ ಬ್ರಾಹ್ಮಣ' ಪತ್ರಿಕಾಕರ್ತರಾದ ರಾ|| ರಾಮಲಿಂಗ ಶಾಸ್ತ್ರಿಗಳವರೂ, ಇತರರೂ ಈ ಕಾನೂನುಗಳನ್ನು ಚರ್ಚಿಸಿ, ಬೇಸಾಯಗಾರರಿಗೆ ವಿಘಾತಕವಾದ ಸ್ವರೂಪವನ್ನು ತಿಳಿಸಿ ಹೇಳಿದರು

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಜಡಿಮಳೆ ಬಿತ್ತು. ಗಾಳಿ ಮಳೆ ಸೇರಿ ಬಿಸ್ತು. ಗಾಳಿಗೆ ಕೆಲ ಕಲವು ಕಡೆ ಮರಗಳು ಬಿದ್ದು ಸ್ವಲ್ಪ ನಷ್ಟವಾದ ಸುದ್ದಿ ಇದೆ. ಒಕ್ಕಲಿಗರು ಹೊಲಗೆಲಸಗಳಲ್ಲಿ ತೊಡಗಿದ್ದಾರೆ. ಈ ವಾರದಲ್ಲಿ ೨೨-೧೭ ಇಂಚು ಮಳೆ ಬಿತ್ತು. ಈ ವರೆಗೆ ೮೩-೮೭ ಇಂಚು ಮಳೆ ಆಯಿತು.

ಶ್ರೀ|| ಕಾಂಚೀ ಶಾಸ್ತ್ರಿಗಳ ಇಲ್ಲಿಯ ಪ್ರವಚನಗಳನ್ನು ಮುಗಿಸಿ ಈ ಹೊತ್ತು ಬೆಳಿಗ್ಗೆ ಹೊನ್ನಾವರಕ್ಕೆ ತೆರಳಿದರು.

ಇಲ್ಲಿಯ ಮುನಿಸಿಪಾಲಿಟಿಯ ಮೇಲೆ ಅನೇಕ ಮಗಂದಿರು ಅರ್ಜಿದಾರರು ... ನಡೆದ ಗದ್ದಲದ ... ನಾನು ... ಮಂಜುನಾಥ ಕಾಮತ ಮತ್ತು ... ಕಾಲದಲ್ಲಿ ... ಗಾಳಿಯಿತು ... ಕೌನ್ಸಿಲಿನ ಮೀಟಿಂಗು ಸಭೆಯಿಂದ ಹೊರಟು ... ಹೋಯಿತು. ... ತರ್ಫೆಯಿಂದ ... ರಾಘವೇಂದ್ರ ಮಹಾಲೆ ... ಕಾಮತ ಇವರ ಮನೆಯಲ್ಲಿ ... ಯಾಯಿತು. ... ಹೆಸರ ಗಳನ್ನು ... ಮಾಡಿ ಅರ್ಜಿದಾರರ ಕಡೆ ... ಹೆಸರು ಕಡಿಮೆ ಮಾಡಿಸುವರು ತೆರೆದೇನೆಂಬು ... ಸೂಚನೆ ... ರಾ|| ರಾಮಚಂದ್ರ ... ವ ತನ ತಕ್ಕ್ರಾರು ಸಹ ಇದೇ ಅರ್ಜಿಯಲ್ಲಿ ಮಾಡೋಣಾಗಿತ್ತು. ... ಬಾಡಿಗೆ ... ಇಲ್ಲವಿದ್ದಾಗ್ಯೂ, ಭಾಡಿಗೆ ದಾರನೆಂಬ ತಕರಾರು. ಗ್ರಾಹ್ಯ ಮಾಡೋಣಾಯಿತ ... ಕರಾರವು ಇದ್ದನು ನಿಯಮ (೮) ವನ್ನು ತಿದ್ದು ಪಡಿ ಮಾಡಿದೆ. ಆ ತಿದ್ದುಪಡಿಯನ್ನು ಈ ಮುನಿಸಿಪಾಲಿಟಿಯು ಮನ್ನಿಸಿಕೊಂಡಿದ್ದಾಗ್ಯೂ ಆ ನಿಯಮವು ಈ ಮುನಿಸಿಪಾಲಿಟಿಗೆ ಲಾಗು ಮಾಡಿ ಈ ಅರ್ಜಿಯು ಇತ್ಯರ್ಥವಾಗಿದೆ. ರಾ|| ಅಣ್ಣಪ್ಪ ಪ್ರಾಣಪ್ಪ ಇವರ ಪರವಾಗಿ ಮಾಡಿದ ಅರ್ಜಿಯಲ್ಲಿ ತಕರಾರದವರಾಗಿ ಇವರಿಗೆ ಇಬ್ಬರಿಗೂ ಮತಾಧಿಕಾರ ಕೊಡೋಣಾಗಿದೆ. ರಾ. ಅಣ್ಣಪ್ಪ ... ದೆ ಕೌನ್ಸಿಲಿನ ಮತದಾರರೂ, ಇನ್‌ಕಮ್‌ಟ್ಯಾಕ್ಸ ತೆರಿಗೆ ... ಎಸ್ಸೆಸರರೂ ... ಆದುದರಿಂದ ಅವರಿಗೆ ಮ... ರ ... ವಾಗಿಯೂ, ಅವಿಭಕ್ತ ಕುಟುಂಬದ ಮುಖ್ಯಾಧಿಕಾರಿಯಿಂದ ರಾ. ಮಾ ಅಪ್ಪೈರಿಗುಂಟೆಂತಲೂ ಜಡ್ಜರು ಅಭಿಪ್ರಾಯಪಟ್ಟು ಇವರ ಕಡೆ ಖರ್ಚನ್ನು ಅರ್ಜಿದಾರರು ಕೊಡತಕ್ಕದ್ದಾಗಿ ವಿಧಿಸಿದ್ದಾರೆ. ಮತದಾರರ ಯಾದಿ ತಯಾರಿಸುವಾಗ ಎಸ್ಸೆಸರ ಲಿಸ್ಟಿನ ಕಲ್ಪನೆ ಸಹ ಇರಲಿಲ್ಲ. ವೇ! ಅನಂತ ಭಟ್ಟರ ... ಆಗು ಅವರ ಇಬ್ಬ ಮಗಂದಿರರ ಮೇಲೆ ಮಾಡಿದ ಅರ್ಜಿಯಲ್ಲಿ ಅರ್ಜಿದಾರರ ಸಾಧನೆಯು ಸಂಪೂರ್ಣವಾಗಿ ಸಿದ್ಧವಾಯಿತು. ವೇ! ಅನಂತಭಟ್ಟ ವಗ್ಗೆರು ಪ್ರತ್ಯಪ್ರತ್ಯೇಕ ತೆರಿಗೆ ಕೊಡುತ್ತಿದ್ದುದರಿಂದ ಮೂವರಿಗೆ ಮತಾಧಿಕಾರವಿರುವದಾಗಿ ಸಾಧಿಸಿದ್ದರು. ತಾ ೧೯೨೨ನೇ ಇಸವಿ ಎಲ್ಲ ತೆರಿಗೆಯು ವೇ| ಅನಂತಭಟ್ಟರ ಹೆಸರಲ್ಲೇ ದಾಖಲ ಇತ್ತು. ಆ ದಿನ ವೇ| ಅನಂತಭಟ್ಟರು ಮಗಂದಿರರಿಗೆ ಭಕ್ಷೀಸ ಕೊಟ್ಟು ಅರ್ಜಿ ಕೊಟ್ಟರು. ಅದರಂತೆ ಮಗಂದಿರರ ಹೆಸರುಗಳು ದಾಖಲಾದವು. ವೇ| ಅನಂತ ಭಟ್ಟರು ಅವಿಭಕ್ತ ರಾ| ಅಣ್ಣಪ್ಪ-ಪ್ರಾಣಪ್ಪರ ಅಪ್ಪ ರೆಡ್ಡು ಸಿದ್ಧವಾಯಿತು. ಮನೆತೆರಿಗೆಯ ಅರ್ಜಿಯಂತೆ ಹಂಚಿಕೆ ಕೊಡೋಣಾಯಿತು. ಹಿಂದಿನ ತೆರಿಗೆ ... ಮಾಡಾಯಿತು. ಇದೆಲ್ಲ ಹೆಚ್ಚಿನ ಮತಸಂಗ್ರಹ ಮಾಡುವ ಯುಕ್ತಿಯೆಂದು ಜಡ್ಜರು ಅಭಿಪ್ರಾಯಪಟ್ಟು ಇಬ್ಬ ಮಗಂದಿರರ ಹೆಸರ ಗಳನ್ನು ತೆಗೆದು ಅರ್ಜಿದಾರರ ಕಡೆ ಖರ್ಚನ್ನು ವೇ! ಅನಂತ ಭಟ್ಟರ ಮಗಂದಿರು ತೆರಬೇಕಾಗಿ ವಿಧಿಸಿದ್ದಾರೆ. ಕಲೆಕ್ಟರರು ಈ ಅಕ್ರಮಗಳನ್ನು ಲಕ್ಷಿಸಿ ತಕ್ಕ ತಿದ್ದುಪಾಟುಗಳಾಗುವಂತೆ ಉಪಾಯ ಯೋಜನೆ ಮಾಡತಕ್ಕದ್ದು.

ಶ್ರೀ ಕ್ಷೇತ್ರ ಗೋಕರ್ಣ ಶ್ರೀ ಬ್ರಹ್ಮಚರ್ಯಾಶ್ರಮ ಸ್ಥಾಪಕರಾದ ಶ್ರೀ| ದೈವರಾತ ಗಜಾನನ ಶರ್ಮಾರವರ ಸಲಹೆಯಲ್ಲಿ ಕೆಲವು ಸಭ್ಯ ಗೃಹಸ್ಥರ ಆಗ್ರಹ ಪ್ರೇರಣೆಯಿಂದ ಇದೇ ತಿಂಗಳ ತಾರೀಖು ೨೧ನೇ (ಶನಿವಾರ ಅಧಿಕ್ಯವಾರ) ದ ಸಾಯಂಕಾಲ ಘಂಟೆ ೪-೬ರ ವರೆಗೆ ಈಗಿನ ಪರಿಸ್ಥಿತಿಗೆ ಅತ್ಯಂತ ಅವಶ್ಯಕವಾಗಿರುವ "ಅತ್ಮಬಲ ಸಂಪಾದನೆ" ಎಂಬ ವಿಷಯದ ಬಗ್ಗೆ ... ವ್ಯಾಖ್ಯಾನ ಮಾಡುವರು. ಸರ್ವರೂ ಇದರ ಲಾಭ ಪಡೆಕೊಳ್ಳುವದು ಯುಕ್ತವು.

ಹೊನ್ನಾವರ— ಇಲ್ಲಿನ ನಾಗರಿಕರು ಇಲ್ಲಿಯ ... ಸ್ಮಾರಕ ಮಂದಿರದಲ್ಲಿ ಸಭೆಸೇರಿ ಹೊಲಗೆಲಸದ ಪ್ರಯೋಜನೆಯ ಕಾನೂನನ್ನೂ, ಲೆಂಡ ರೆವಿನ್ಯು ... ತಿದ್ದುಪಾಟಿನ ಕಾನೂನನ್ನೂ ನಿಷೇಧಿಸಿದರು. ಈ ಕಾನೂನ ಗಳಿಂದ ನಮ್ಮ ಕನ್ನಡ ಜಿಲ್ಲೆಗೆ ವಿಶೇಷ ನಷ್ಟವಿರುವದೆಂಬ ಅಭಿಪ್ರಾಯವನ್ನೂ ಸೂಚಿಸಿ, ಈ ಕಾನೂನನ್ನು ತಿರಸ್ಕರಿಸಬೇಕಾಗಿ ಕೌನ್ಸಿಲು ಪ್ರತಿನಿಧಿಗಳಿಗೆ ಅನುಜ್ಞೆ ಮಾಡಿದ್ದಾರೆ. ಬಾರ್ದೋಲಿಯ ಜನರ ಸಾಹಸವನ್ನೂ ಸಭೆಯು ಕೊಂಡಾಡಿತು. ಸರಕಾರದ ಅನಾಚಾರಗಳನ್ನು ನಿಷೇಧಿಸಿತು. ಅಧ್ಯಕ್ಷರಿಗೆ ಬಾರ್ದೋಲಿ ನಿಧಿಯನ್ನೇ ಸಂಗ್ರಹಿಸಲು ಅಧಿಕಾರ ಕೊಡೋಣಾಗಿದೆ. ಶ್ರೀ| ಕೃಷ್ಣರಾವ ಒಳ್ಳೂರರವರು ಅಧ್ಯಕ್ಷರಿದ್ದರು. ಸಭೆಯಲ್ಲಿ ಶ್ರೀ| ಕಂಚಿ-ಶಾಸ್ತ್ರಿಗಳ ಭಾಷಣಗಳಾದವು. ನಿಧಿಗೆ ರೂಪಾಯಿ ೩೫೫ ವಾಗ್ದಾನ ದೊರೆತಿವೆ.

ಶ್ರೀ| ಕರ್ಕಿಯವರು ಶ್ರೀ| ಗಂಗಾಧರರಾವ ದೇಶಪಾಂಡೆಯವರ ಕಡೆಯಿಂದ ಬಂದ ಈ ಕೆಳಗಿನ ಪತ್ರವನ್ನು ಪ್ರಕಾಶನೆಗಾಗಿ ಕಳುಹಿದ್ದಾರೆ

ಬೆಳಗಾವಿ,

೯-೭-೧೯೨೮

ಪ್ರಿಯ ಕರ್ಕಿಯವರಿಗೆ,

ನಿಮ್ಮ ಪತ್ರ ತಲ್ಪಿತು. ರಾಜಿನಾಮೆಯ ವಿಷಯ ಶ್ರೀ| ... ಯವರೊಡನೆ ನಾನು ಆಲೋಚಿಸುತ್ತಿದ್ದೇನಾಗಿ ನಿಮಗೆ ಈ ಹಿಂದೆಯೇ ಬರೆದಿದ್ದೇನೆ. ಅವರ ಉತ್ತರ ನಿರೀಕ್ಷಣೆ ಮಾಡುವದು ಯೋಗ್ಯವೆಂತಾ ನನಗೆನಿಸುತ್ತದೆ. ಪುಣೆಗೂ ನಾನು ಬರೆದಿದ್ದೇನೆ.

ನಿಮ್ಮ ಜಿಲ್ಹೆಯ ಕೆಲವು ಭಾಗಗಳಲ್ಲಿ ಇನ್ನೂ ತಪ್ಪು ಗ್ರಹಿಕೆಯಿರುತ್ತದೆಂದು ತಿಳಿದು ನನಗೆ ವ್ಯಸನವಾಗುತ್ತದೆ. ಅದು ಶೀಘ್ರವೇ ದೂರವಾಗುವದೆಂದು ನನಗೆ ತೋರುತ್ತದೆ. ನೀವು ಆ ಕುರಿತು ಖೇದಪಡುವದು ಅನಾವಶ್ಯಕ.

ನಿಮ್ಮ ಸ್ನೇಹಾಭಿಲಾಷಿ,

ಗಂಗಾಧರರಾವ ಬಿ. ದೇಶಪಾಂಡೆ,

[ಮೂಲ ಪತ್ರವು ಇಂಗ್ಲಿಷಿನಲ್ಲಿದೆ. ಸಂ]

ಭಟ್ಕಳ— ಒಬ್ಬರು ಬರೆಯುವದೇನಂದರೆ:— "ಈ ಊರಲ್ಲಿ ೧೯೨೧-೨೨ನೇ ಸಾಲಿನಲ್ಲಿ ಕೊಂಗ್ರೆಸ ಕಮಿಟಿ ಸ್ಥಾಪನೆಯಾಗಿ ಟಿಳಕ ಸ್ವರಾಜ್ಯ ಫಂಡ, ಮುಷ್ಟಿಫಂಡ ಮುಂತಾದ ನಿಧಿಗಳ ಸಂಗ್ರಹವಾಯಿತು. ಹಿಂದೆರಡು ವರ್ಷಗಳಲ್ಲಿ ಈ ಕಮಿಟಿಯ ಉತ್ಸಾಹವು ಕುಗ್ಗಿತು. ಹೊಸ ಕೊಂಗ್ರೆಸ ಕಾರ್ಯಕಾರಿ ಮಂಡಳದ ನೇಮಣೂಕಿ ಸಹ ಆಗಲಿಲ್ಲ. ಕಳೆದ ವರ್ಷ ಒಬ್ಬರು ಬಂದು ಕೊಂಗ್ರೆಸ ಸಭಾಸದರನ್ನು ಕೂಡಿಸಿಕೊಂಡು ಹೋದರು. ಇವರು ಪ್ರಚಾರಕರಂತೆ! ಇವರಿಗೆ ಈ ಸುದ್ದಿ ಹೇಳಿದರೆ, ಅವರು ಆ ಕಡೆ ಲಕ್ಷ ಕೊಡಲಿಲ್ಲ. ಹಂಡ್ರೆಡ ಮಿಕ್ಕಿ ರೂಪಾಯಿಗಳು ೧೯೨೧ನೇ ಇಸ್ವಿಯಲ್ಲಿ ನೇಮಕ ಹೊಂದಿದ ಕೋಶಾಧಿಕಾರಿಗಳ ಬಳಿಯಲ್ಲಿ ಇವೆ. ಹೀಗೆ ಖಾಸಗಿ ವ್ಯಕ್ತಿಗಳು ಸಾರ್ವಜನಿಕ ಹಣವನ್ನು ಎತ್ತಿಕೊಳ್ಳುವದು ಸುರಕ್ಷಿತವಲ್ಲ." ಇತ್ಯಾದಿ

ಅಂಕೋಲಾ— ಕೆಲವು ಅಂಗಡಿಗಳಲ್ಲಿ ಇಲಿಗಳು ಸತ್ತು ಬೀಳಲಾರಂಭಿಸಿವೆ. ಸ್ಥಳಿಕ ಅಧಿಕಾರಿಗಳು ಯೋಗ್ಯ ಉಪಾಯ ಮಾಡತಕ್ಕದ್ದು. ವಿಠ್ಠಲಘಾಟ್ಟದ ಬದಿ ಮಾರ್ಗದ ಮೇಲೆ ಕೊರಕಲು ಬಿದ್ದಿವೆ. ಇಂಜನಿಯರ ಖಾತೆಯವರು ಇತ್ತ ಗಮನ ಕೊಡಬೇಕು.

ಕಾರವಾರ— ನಮ್ಮ ಕಲೆಕ್ಟರರಾದ ಮಿ| ಬಾಸ್ಕರವಿಲೆಯವರು ಭವಿಷ್ಯವಾದಿಗಳೆಂದು ಊರಲ್ಲಿ ಕೇಳಿಂದುತ್ತಿದ್ದಾರೆ. ಗಾಳಿ ಮರದ ತೋಪು ಕೊಯ್ದ ಪ್ರದೇಶದಲ್ಲಿ ಪುನಃ ಗಾಳಿ ಗಿಡಗಳು ನೆಡಲ್ಪಟ್ಟವು. ಮುನಿಸಿಪಾಲಿಟಿಯವರು ೧೦ ಎಕ್ರ ಸ್ಥಳ ಕೊಟ್ಟರೆ ಪ್ಲೇಗು ಬಂದಾಗ ಜನರಿಗೆ ಹುಂಗಾಮಿ ಬಿಡಾರು ಕಟ್ಟಿಕೊಳ್ಳಲಿಕ್ಕೆ ಅನುಕೂಲವಾಗುವದೆಂದು ಹೇಳಿದರಂತೆ. ಈ ಊರಲ್ಲಿ ಬೈಲುಪ್ರದೇಶವಿಲ್ಲವಾಗಿಯೂ ಹೇಳಿದರಂತೆ. ಪ್ಲೇಗು ರೋಗವು ಇನ್ನು ಮುಂದೆ ಕಾರವಾರದಲ್ಲಿ ಬರಲಿಕ್ಕಿಲ್ಲವಾಗಿ ಭವಿಷ್ಯ ಹೇಳಿ, ಪುನಃ ಗಿಡ ನೆಡಲು ಅಪ್ಪಣೆ ಕೊಟ್ಟಂತೆ ಗಿಡಗಳು ನೆಡೋಣಾಗುತ್ತವೆ. ಈ ಭವಿಷ್ಯವನ್ನು ... ಮಾಡುವದಕ್ಕೋ ಏನೋ, ಬಿಣಗೆಯಲ್ಲಿ ಇಲಿಗಳು ಬೀಳಲಾರಂಭಿಸಿವೆ. ಮುಸಲ್ಮಾನರ ಕೇರಿಯಲ್ಲಿ ಇಲಿಗಳು ಪ್ರಾಣೋತ್ಕ್ರಮಣ ಮಾಡಹತ್ತಿವೆ.

ಇಲ್ಲಿ ಪ್ರಸೂತಿಗೃಹವನ್ನು ಹೊರಡಿಸುವದಕ್ಕಾಗಿ ಖಾನಬಹಾದ್ದೂರ ದಾದಾಭಾಯಿಯವರು ರು ೪೦೦೦ ಗಳನ್ನು ಅರ್ಪಿಸಿದ್ದಾರೆ. ಕಟ್ಟಡದ ಕೆಲಸ ರಾವಸಾಹೇಬ ಪೋಲಕರರಿಗೆ ವಹಿಸಲ್ಪಟ್ಟಿದೆ.

ರಾವಸಾಹೇಬ ಹರಿಪಿಲಾಸ ಶಾರದಾ ಇವರು ಮದುವೆ ವಯಸ್ಸಿನ ಕಾಯಿದೆಯ ಚರ್ಚೆಯು ಇಲ್ಲಿಯ ಮಿತ್ರ ಸಮಾಜದಲ್ಲಿ ಕಳೆದ ಸೋಮವಾರಕ್ಕೆ ನಡೆಯಿತು. ಸಾಧಕ-ಬಾಧಕ ಚರ್ಚೆ ನಡೆಯಿತು, ನಿಶ್ಚಯವೇನೂ ಆಗದೆ ಸಭೆಯು ವಿಸರ್ಜನ ಹೊಂದಿತು.

ಮಾಜಾಳಿ— ಇಲ್ಲಿಯ ಮುಂದಾಳುಗಳಾದ ರಾ|| ಸುಬ್ರಾವ ದುರ್ಗೇಕರ ವಾಗಳೇ ಇವರ ಅಧ್ಯಕ್ಷತೆಯಲ್ಲಿ ಊರವರು ಸಭೆ ಸೇರಿ ಠರಾವುಗಳನ್ನು ಕೈಕೊಂಡರು. ಹೊಲಗೆಲಸದ ಪುನರ್ಘಟನೆಯ ಕಾನೂನಿನ ನಿಷೇಧ, ಬಾರ್ದೋಲಿಯೊಳಗಿನ ಅತ್ಯಾಚಾರಗಳ ನಿಷೇಧ, ಬಾರ್ದೋಲಿಯವರೊಡನೆ ಸಹಾನುಭೂತಿ, ಮುಂಬಯಿ ಪ್ರೆಸಿಡೆನ್ಸಿ ಎಸೋಸಿಯೇಶನವು ನಮ್ಮ ಜಿಲ್ಲೆಯೊಳಗಿನ ... ದೂರುಗಳ ವಿಷಯ ಮಾಡಿದ ... ನವಿಗೆ ಸಮ್ಮತಿ. ಹೀಗೆ ಠರಾವುಗಳಾದವು.

ಬಾರ್ಡೋಲಿಯ ವೃತ್ತಾಂತ.

ಬಾರ್ಡೋಲಿಯ ಸಮರದ ಮುಖ್ಯ ಸಂಗತಿಗಳು ೨೦ ದಿನ ಅಗ್ರಲೇಖದಲ್ಲಿ ಹೇಳಲ್ಪಟ್ಟವೆ. ಪಂಡಿತ ನೆಹರುಗಳು ಈ ಕಾದಾಟಕ್ಕೆ ಬೆಂಬಲವನ್ನಿತ್ತು ಜಾಹೀರ ಪತ್ರಕವನ್ನು ಹೊರಡಿಸಿರುತ್ತಾರೆ. ಸ್ವತಂತ್ರ ಚೌಕಿ ನೇಮಿಸುವದು ಅವಶ್ಯವೆಂದು ಅಭಿಪ್ರಾಯಪಟ್ಟಿರು ಇಡೀ ಭಾರತಖಂಡವು ಇದಕ್ಕೆ ಬೆಂಬಲ ಕೊಡಬೇಕೆಂದು ಅಗ್ರಹದ ಸೂಚನೆ ಮಾಡಿದ್ದಾರೆ. ಮುಂಬಯಿ ಕಾಯಿದೆ ಕೌನ್ಸಿಲಿನ ಸಂಯುಕ್ತ ರಾಷ್ಟ್ರೀಯ ಪಕ್ಷದ ಸಭೆಯಾಗಿ ದಿವಾಣರು ರಾಜೀನಾಮೆ ಕೊಡಬೇಕಾಗಿ ತೀರ್ಮಾನಿಸಿದ್ದಾರೆ. ಇಬ್ಬ ದಿವಾಣರು ಈ ಪಕ್ಷದ ಸಭಾಸದರಿದ್ದಾರೆ. ಅವರು ಈ ತೀರ್ಮಾನದ ಚರ್ಚೆಯ ಕಾಲಕ್ಕೆ ಹಾಜರಿದ್ದರು. ಅದರೆ, ಮತ ಕೊಡಲಿಲ್ಲ. ಆಂಧ್ರದ ಅಂದಾಪಲ್ಲಿ ನರಸಿಂಹ ಗುಪ್ತರೆಂಬುವರಿಗೆ ಆಂಧ್ರ ದೇಶದಲ್ಲಿ ೩೦೦೦ ಎಕ್ರೆ ಭೂಮಿ ಇದೆ. ಅವರು ೨೦೦೦ ಎಕ್ರೆ ಭೂಮಿಯನ್ನು ಬಾರ್ಡೋಲಿಯ ಬೇಸಾಯುಗಾರರಿಗೆ ಕೊಡಲೊಪ್ಪಿದ್ದಾರೆ. ಮುಂಬಯಿಯೊಳಗಿನ ನಮ್ಮ ಉತ್ತರ ಕನ್ನಡ ಜಿಲ್ಲೆಯ ಬಾಂಧವರು ರಾ॥ ಜೆ ಬಿ ಧೇಣೂಳಕರವರ ಅಧ್ಯಕ್ಷತೆಯಲ್ಲಿ ಸೇರಿ ಬಾರ್ಡೋಲಿಯವರಿಗೆ ಸಹಾನುಭೂತಿಯನ್ನು ಪ್ರದರ್ಶಿಸಿದರು. ತಲಾಟಿಗಳು ಕೊಟ್ಟ ರಾಜೀನಾಮೆಯಲ್ಲಿ ಸರಕಾರದ ಟೀಕೆ ಇದ್ದದರಿಂದ ಆ ಕುರಿತು ಯೋಗ್ಯ ಮಾಫಿ ಬೇಡಿದ್ದರೆ ತಲಾಟಿಗಳಿಗೆ ಪದಭ್ರಷ್ಟ ಮಾಡಲ್ಪಡುವದಾಗಿ ಡಿ। ಡೆ। ಕಲೆಕ್ಟರರು ಪ್ರಕಟಿಸಿದ್ದಾರೆ. ತಲಾಟಿಗಳು ಬೇಕಾದ್ದನ್ನು ಮಾಡಬಹುದೆಂದು ಉತ್ತರ ಕೊಟ್ಟಿದ್ದಾರೆ. ದಾಮೂಭ್ಯಾಗಜಿ ಎಂಬುವರ ೪೫೦ ರೂಪಾಯಿಗಳ ದನಗಳು ೪೫ ರೂಪಾಯಿಗಳಿಗೆ ಲಿಲಾಂವಾದವು. ದನಗಳ ಖರ್ಚ ಕಳೆದು ಉಳಿದ ರಕಮು ರೂ. ೧-೧೪-೦ ಜಮಾ ಕೊಳ್ಳಲಾಗಿದೆ. ಡಿ। ಡೆ। ಕಲೆಕ್ಟರರು ಕಾಲೆ ಮಾಸ್ತರರ ಮೇಲೂ ನೋಟೀಸು ಹೊರಡಿಸಿ ತೀರ್ವೆ ಕೇಳಲು ಬೆದರಿಸಿದ್ದಾರೆ. ರಾ॥ ವೀರಚಂದ ಚೇನಾಜಿ ಎಂಬವರ ಕಡೆಯಿಂದ ಜಪ್ತು ಮಾಡಿದ ಕುದುರೆ ಜೋಡಿಯನ್ನು ಖಾನದೇಶ ಜಿಲ್ಲೆಯ ಶಹಾದಾ ಗ್ರಾಮದ ಜಮಾಬಾಯಿ ಎಂಬೊಬ್ಬರು ಕೊಂಡಿದ್ದರು. ಅವರ ಜಾತಿಯವರು ಇದು ಅಪಮಾನವೆಂದೆಣಿಸಿ ಜಪ್ತಾದ ಕಡೆಯಿಂದ ಆ ಕುದುರೆ ಜೋಡಿ ಕೊಂಡು ವೀರಚಂದ ಚೇನಾಜಿಯವರಿಗೆ ಮುಟ್ಟಿಸಿದರು. ಮದ್ರಾಸದ ಬ್ರಾಹ್ಮಣೇತರ ಪ್ರಮುಖರಾದ ರಾಮಸ್ವಾಮಿ ಮುದಲಿಯಾರರವರೂ ಬಾರ್ಡೋಲಿಯ ಸಂಗ್ರಾಮಕ್ಕೆ ಬೆಂಬಲವನ್ನಿತ್ತಿದ್ದಾರೆ. ಬಾರ್ಡೋಲಿಯವರ ಹೇಳಿಕೆಯನ್ನು ಮನ್ನಿಸಿದಲ್ಲಿ ಸರಕಾರದ ಪ್ರತಿಷ್ಠೆಯು ನಷ್ಟವಾಗುವದಿಲ್ಲವಾಗಿಯೂ ಅವರು ಹೇಳಿದ್ದಾರೆ. ಪುಣೆಯ 'ಸರ್ವಂಟ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಪೆನ್ಶನು ಪಡೆದ ಮುಲ್ಕಿ ಅಧಿಕಾರಿಗಳೊಬ್ಬರು ಸರಕಾರದ ಅಕ್ರಮಗಳನ್ನು ವಿಚಾರಿಸಿ ಈ ಪ್ರಕರಣದೊಳಗಿನ ಬೇಕಾಯಿದೆಯನ್ನು ಸ್ಪಷ್ಟವಾಗಿ ಪ್ರತಿಪಾದಿಸಿ ಲೇಖ ಬರೆದಿದ್ದಾರೆ.

ವೃತ್ತಸಾರ.

— ಅಮೇರಿಕೆಯ ಟೆಕ್ಸಸ್ ಎಂಬ ಗ್ರಾಮದಲ್ಲಿ ಮಾರಿವಾಳಗಳಿಗೆ ಇಂಗ್ರಜಿ ವಿದ್ಯಾಭ್ಯಾಸ ಮಾಡಿಸುವ ಶಾಲೆಯಿದೆ. ಫೋನೋಗ್ರಾಫಿನ ಮೂಲಕ ವಿದ್ಯಾಭ್ಯಾಸ ಕಲಿಸಲಾಗುತ್ತದಂತೆ.

— ದಕ್ಷಿಣ ಕನ್ನಡ ಜಿಲ್ಲೆಯ ಐದನೇ ರಾಜಕೀಯ ಪರಿಷತ್ತನ್ನು ಮಂಗಳೂರಲ್ಲಿ ಸೇರಿಸುವ ಪೂರ್ವ ತಯಾರಿ ನಡೆದಿದೆ. ನವೆಂಬರ ತಿಂಗಳಲ್ಲಿ ಸಭೆಸೇರಿಸುವ ಸಂಕಲ್ಪ ಉಂಟು.

— ಕುಮಾರಿ ಚಂದ್ರಾಬಾಯಿ ಘೋಂಕ್ಷೆ ಎಂಬುವರು ಪುಣೆಯ ಕೋರ್ಟುಗಳಲ್ಲಿ ವಕೀಲಿ ಮಾಡಲು ಸನದು ಪಡೆದಿದ್ದಾರೆ. ಮಹಾರಾಷ್ಟ್ರೀಯರು ಬಹಳ ಮುಂದೆ ಬಂದರು.

ಹೊಲಗಳ ಪುನರ್ಘಟನೆಯ ಕಾನೂನನ್ನು, ತೀರ್ವೆ ಪರಿಕೆಯ ಕಾನೂನನ್ನು ತಿರಸ್ಕರಿಸಲು ಉಪಾಯ ಮಾಡುವದಕ್ಕಾಗಿ ಮುಂಬಯಿ ಇಲಾಖೆಯೊಳಗಿನ ಬೇಸಾಯ ಪರಿಷತ್ತು ಪುಣೆಯಲ್ಲಿ ಅದೇ ಬರುವ ತಾ ೨೫ನೇ ಬುಧವಾರಕ್ಕೆ ಸೇರಲಿಕ್ಕಿದೆ. ಸಮಸ್ತ ಜಿಲ್ಲೆಗಳೊಳಗಿಂದ ಬೇಸಾಯಗಾರರು ಬಿಕ್ಕೆಸಿ ಪರಿಷತ್ತಿನ ಕಾರ್ಯವನ್ನು ಕಡೆಗಾಣಿಸಿಕೊಳ್ಳಬೇಕಾಗಿ ಕಾರ್ಯದರ್ಶಿಗಳು ಬಿನ್ನೈಸಿಕೊಳ್ಳುತ್ತಾರೆ. ಪರಿಷತ್ತಿನ ಚಾಲಕರಲ್ಲಿ ಶ್ರೀ। ನರಸಿಂಹ ಚಿಂತಾಮಣಿ ಕೇಳಕರ, ವಿಠ್ಠಲ ರಾಮಜಿ ಶಿಂದೇ ಪ್ರಭೃತಿ ಮುಂದಾಳುಗಳಿದ್ದಾರೆ. ಬಾರ್ಡೋಲಿ ಸತ್ಯಾಗ್ರಹಕ್ಕೆ ಬೆಂಬಲ ಕೊಡುವ ತೀರ್ಮಾನವೂ ಆಗಲಿಕ್ಕಿದೆ. ಶ್ರೀ। ಬಾಬುರಾವ ಮಾರುತಿರಾವ ಜೋಧೆಯವರು ಸ್ವಾಗತಾಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ.

— ನಾಗಪುರದ ರಾ॥ ಖಾನಖೋಜೆ ಎಂಬುವರು ಇಲ್ಲಿಯ ಸರಕಾರದ ಪೀಡನೆಯನ್ನು ಸಹಿಸಲಾರದೆ ಮೆಕ್ಸಿಕೋ ದೇಶಕ್ಕೆ ಹೋದರು. ಅಲ್ಲಿ ಸ್ವಪರಾಕ್ರಮದಿಂದ ಬಿಕ್ಕಲತನ ಖಾತೆಯ ಮುಖ್ಯಾಧಿಕಾರಿಗಳಾಗಿದ್ದಾರೆ. ಭಾರತೀಯರಿಗೆ ಆನಂದ, ಅಭಿಮಾನ.

— ನಮ್ಮ ಮುಂಬಯಿಯ ಗವರ್ನರರ ಪುಣೆಯ ಡೆಕ್ಕನ ವರ್ನಾಕ್ಯುಲರ ಟ್ರಾನ್ಸಲೇಶನ್ ಸೊಸೈಟಿ ಎಂಬ ದೇಶಿ ಭಾಷೆಯ ಉದ್ಧಾರಕ ಸಂಘವನ್ನು ಸಂದರ್ಶಿಸಿದರು. ಆ ಕಾಲಕ್ಕೆ ವಿ। ಟಿಳಕರು ಹೊರಡಿಸಿದ ಒಂದು ವರ್ತಮಾನ ಪತ್ರಿಕೆಯು ಮರಾಠಿ ಭಾಷೆಯ ಉಚ್ಚಾವಸ್ಥೆಯನ್ನು ಕಾಪಾಡುತ್ತಿರುವದಾಗಿ ತಮ್ಮ ತಿಳುವಳಿಕೆಗೆ ಬಂದಿದೆಂದು ಗವರ್ನರರು ನುಡಿದರು. 'ಕೇಸರಿ' ಎಂದು ಹೆಸರು ಹೇಳಿಲ್ಲ. ಆ ಪತ್ರಿಕೆಯ ಅಭಿಪ್ರಾಯಗಳು ತಮಗೆ ಯಾವಾಗಲೂ ಅಸಮ್ಮತವಿರುವದಾಗಿಯೂ ಹೇಳಿದರು. 'ಕೇಸರಿ'ಯ ಅಭಿಪ್ರಾಯಗಳು ಗವರ್ನರರಿಗೆ ಗ್ರಾಹ್ಯವಾದರೆ, ಆಶ್ಚರ್ಯವಾಗಿತ್ತು! ಅಭಿಪ್ರಾಯ ಭೇದದಲ್ಲಿ 'ಕೇಸರಿ'ಯ ಮರಾಠಿ ಸೇವೆಯನ್ನು ಗವರ್ನರರು ಮನ್ನಿಸಿದ ಬಗ್ಗೆ ಜನರು ಅವರ ಔದಾರ್ಯವನ್ನು ಹೊಗಳುವರು।

ಅಮೇರಿಕೆಯ ಕೋಟ್ಯಾಧೀಶರಲ್ಲೊಬ್ಬರಾದ ಕಾರ್ನೇಕ ಕಂಪನಿಯವರು ಭೂಮಿಯನ್ನು ಹೂಡಿ ಮಣ್ಣು ಪುಡಿ ಮಾಡುವ ಮೋಟಾರು ಯಂತ್ರಗಳನ್ನು ತಯಾರಿಸಿವೆ. ಬೆಂಗಳೂರು ಬಳಿ ಮಂಡ್ಲಕುಂಟೆ ಭೂಮಿಯಲ್ಲಿ ಈ ಯಂತ್ರದ ಪ್ರಯೋಗ ಮಾಡಿ ತೋರಿಸಲಾಯಿತು. ಇದು ೮ ಅಂಗುಲ ಅಗಲ ೧ ಅಡಿ ವರೆಗೂ ಭೂಮಿಯ ಮಣ್ಣನ್ನು ಪುಡಿಮಾಡಬಲ್ಲದು. ಇದರ ಖರ್ಚ ಎಷ್ಟೆಂಬುದು ತಿಳಿಯಲಿಲ್ಲ. ಮನುಷ್ಯರಿಗೆ ತುಂಬಾ ಕೆಲಸವಿಲ್ಲದಿದ್ದಾಗ, ಹೊಟ್ಟೆ ಹೊರೆಕೊಳ್ಳುವದು ಕಠಿಣವಾಗಿದ್ದಾಗ ಇಂಥ ಯಂತ್ರಗಳಿಂದೇನು ಪ್ರಯೋಜನ?

— ನೀಲಗಿರಿ ಜಿಲ್ಲೆಯಲ್ಲಿ ಕನ್ನಡ ಭಾಷೆಯ ಉದ್ಧಾರದ ಪ್ರಯತ್ನಗಳಿಗೆ ಫಲ ಸಿಗುವ ಲಕ್ಷಣಗಳಾಗುತ್ತಿವೆ. ಶ್ರೀ। ಜೋರೇಲಿಂಗಯ್ಯನವರು ಈ ಕುರಿತು ವಿಶೇಷ ಪ್ರಯತ್ನ ಮಾಡುತ್ತಿದ್ದಾರೆ. ಕನ್ನಡ ಪ್ರಾಥಮಿಕ ಶಾಲೆಗಳು ಶೀಘ್ರವೇ ಅಲ್ಲಲ್ಲಿ ಹೊರಡಲಿಕ್ಕಿವೆ.

— ಅಮೇರಿಕೆಯ ಜನರಲ್ ಮೋಟರ್ಸ್ ಕೊರ್ಪೋರೇಶನ ಕಂಪನಿಯವರು ಮುಂಬಯಿಯಲ್ಲಿ ಮೋಟಾರುಗಳನ್ನು ತಯಾರು ಮಾಡುವ ಕಾರಖಾನೆಗಳನ್ನು ಸ್ಥಾಪಿಸಹತ್ತಿದ್ದಾರೆ. ೧ ಕೋಟಿ ರೂಪಾಯಿ ಭಂಡವಲು ಹಾಕಿ ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪ, ಇರಾಣ ಮುಂತಾದ ದೇಶಗಳಿಗೆ ಮೋಟಾರುಗಳು ರವಾನೆಯಾಗುವವು.

— ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಇದೇ ಬರುವ ಸಪ್ಟಂಬರ ೪ನೇ ತಾರೀಖಿಗೆ ಸಿಮ್ಲಾ ಪಟ್ಟಣದಲ್ಲಿ ಕೂಡುವದಿದೆ.

— ಬಂಗಾಲ ಪ್ರಾಂತದ ಬೇಲೂರ ಗ್ರಾಮದಲ್ಲಿ ಉಗಿಬಂಡಿಯು ಕಂಬಿ ಬಿಟ್ಟು ಹೋಗಿ ೩೦೦ ಮಂದಿಗಳು ಸತ್ತುಹೋದರು. ಉಗಿಬಂಡಿಯವರು ಬಹಳ ಅಜಾಗ್ರತೆ ಮಾಡಿದರೆಂದು ಪ್ರೇಕ್ಷಕರು ಪ್ರಕಟಿಸಿದ್ದಾರೆ. ೩೦೦೦ಕ್ಕೆ ಮಿಕ್ಕ ಜನರು ಘಾಯವಾಗಿದ್ದಾರೆ.

— ಬೆಳಗಾವಿಯಲ್ಲಿ ಲಂಚ ತಿಂದ ಬಗ್ಗೆ ಡೆಪ್ಯುಟಿ ಪೋಲೀಸ ಸುಪರಿಂಟೆಂಡೆಂಟ ವಿ। ರಂಗ ಹೋವು ಇನ್ಸಪೆಕ್ಟರ ವಿ॥ ಟವರಾ ಇನ್ಸಪೆಕ್ಟರ ವಿ। ಮೋಘೇರವರ ಮೇಲಿನ ಖಟ್ಲೆಯ ವಿಚಾರವು ಮುದ್ದಾಂ ನೇಮಿಸಿದ ಮೆಜಿಸ್ಟ್ರೇಟ ರಾವಬಹಾದ್ದೂರ ಪಾರೇಕರರವರ ಕೋರ್ಟಿನಲ್ಲಿ ನಡೆದದೆ. ಸಣ್ಣ ಮಲ್ಲಪ್ಪನಾಮಕ್ಕೆ ಇವರ ಸಾಕ್ಷಿಯಾಯಿತು. ಗ್ರಾಮದೊಳಗಿನ ೬ ಮಂದಿಗಳು ಸಣ್ಣಮಲ್ಲಪ್ಪನವರಿಗೆ ಕೊಲೆ ಮಾಡುತ್ತೇವೆಂದು ಹೆದರಿಸಿ ೫೦೦ ರೂಪಾಯಿಗಳ ರಸೀದಿ ಬರೆಕೊಂಡರು. ಸಣ್ಣಮಲ್ಲಪ್ಪನವರು ಪುಣೆಗೆ ಹೋಗಿ ರಂಗರವರ ಕಡೆ ಫಿರ್ಯಾದು ಕೊಟ್ಟರು. ರಂಗರವರು ಮೋಘೇಯವರ ಬಳಿ ಹೋಗಿ ಹೇಳಿದರು. ಮೋಘೇಯವರು ಸಬ್ ಡಿವಿಜನಲ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಫಿರ್ಯಾದು ದಾಖಲ ಮಾಡಹೇಳಿದರು. ಮೆಜಿಸ್ಟ್ರೇಟರು ಮೋಘೇಯವರಿಗೇ ಚೌಕಿ ಮಾಡಲು ಆಜ್ಞಾಪಿಸಿದರು. ಮೋಘೇಯವರು ಸಣ್ಣಮಲ್ಲಪ್ಪನವರ ಗ್ರಾಮಕ್ಕೆ ಹೋದರು. ಚೌಕಿ ಮಾಡಿದರು. ೫೦೦ ರೂಪಾಯಿ ಕೊಡಲು ಒತ್ತಾಯ ಮಾಡಿದರು. ಸಣ್ಣಮಲ್ಲಪ್ಪನವರು ೨೦೦ ರೂಪಾಯಿ ಕೊಟ್ಟರು. ಆಮೇಲೆ ಟವರರವರಿಗೆ ೧೦೦ ರೂಪಾಯಿ ಕೊಡಲು ಒತ್ತಾಯವಾಯಿತು. ರಂಗರವರು ೨೦೦ ರೂಪಾಯಿ ಪಡೆಕೊಂಡರು. ಆಮೇಲೆ ಪುನಃ ೧೦೦-೧೦೦ ರೂಪಾಯಿಯಂತೆ ಟವರ-ರಂಗರವರಿಗೆ ಕೊಡಬೇಕಾಯಿತು. ಇಷ್ಟೆಲ್ಲ ಪ್ರಯಾಸದಿಂದ ನಡೆದ ಚೌಕಿಯಲ್ಲಿ ಕೊನೆಗೆ ಫಿರ್ಯಾದು ಪುರಾವೆಯಿಲ್ಲದೆ ಕಿತ್ತೊಗೆಯಲಾಯಿತು. ಲಂಚ ಕೊಳ್ಳುವಾಗ ಟವರರವರೂ ರಂಗರವರೂ ಮೋಘೇಯವರಿಗೆ ಕೊಡಲು ಕೆಲವು ಕಾಗದಗಳನ್ನು ಕೊಟ್ಟಿದ್ದರು. ಆ ಕಾಗದಗಳನ್ನು ಹಾಜರಪಡಿಸಿ ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಸಣ್ಣಮಲ್ಲಪ್ಪನವರು ಅರ್ಜಿ ದಾಖಲಪಡಿಸಿದರು. ಗುಪ್ತ ಪೋಲೀಸರು ಚೌಕಿ ಮಾಡಿ ಪೋಲೀಸರ ಮೇಲೆಯೇ ಈಗ ಖಟ್ಲೆ ಮಾಡಿಕೊಟ್ಟಿದ್ದಾರೆ.

ಮತದಾರ ಬಾಂಧವರಿಗೊಂದು ವಿನಂತಿ.

ಮುಂಬಯಿ ನ್ಯಾಯವಿಧಾಯಕ ಸಭೆಯು ಇದೇ ತಿಂಗಳ ೨೩ ನೇ ದಿವಸ ಪುಣೆಯಲ್ಲಿ ಕೂಡುವದು. ಸದ್ರಿ ಸಭೆಯಲ್ಲಿ ಚಿಕ್ಕ ಹೊಲಗಳ ಕಾಯಿದೆ ಮಸೂದೆ (*Small holdings Bill*) ಮತ್ತು ಭೂಮಿ ಮಹಸೂಲ ಕಾಯಿದೆ ತಿದ್ದುಪಡಿ ಮಸೂದೆ (*Land Revenue Act amendment Bill*) ಎಂಬ ಎರಡು ಮಸೂದೆಗಳು ಕಾಯಿದೆ ಆಗುವ ಬಗ್ಗೆ ಚರ್ಚಿಸಲ್ಪಡುವವು. ಚಿಕ್ಕ ಹೊಲಗಳ ಕಾಯಿದೆ ಮಸೂದೆಯು ಪ್ರಥಮ ವಾಚನವನ್ನು ಮುಗಿಸಿಕೊಂಡು ಸಿಲೆಕ್ಟ ಕಮಿಟಿಯಲ್ಲಿ ತಿದ್ದುಪಡಿ ಆಗಿ ಬಂದಿರುವದು. ಸಿಲೆಕ್ಟ ಕಮಿಟಿಯ ರಿಪೋರ್ಟು ಸದ್ಯದಲ್ಲೇ ಪ್ರಕಟವಾಗಿದೆ. ಭೂಮಿ ಮಹಸೂಲಿನ ಕಾಯಿದೆ ತಿದ್ದುಪಡಿಯ ಮಸೂದೆಯು ಹೊಸದಾಗಿ ಚರ್ಚೆಗೆ ಬರುವದು. ಈ ಮಸೂದೆಯು ಸರಕಾರ ತೀರ್ವೆಯ ಆಧಾರದ ಮೇಲೆ ಎಷ್ಟರ ಮಟ್ಟಿಗೆ ಏರಿಸಬಹುದೆಂಬ ತತ್ವವನ್ನು ಒಳಗೊಂಡಿದ್ದಿರುತ್ತದೆ. ಈ ಮಸೂದೆಗಳು ರೈತರ ಹಿತಕ್ಕೆ ಸಂಬಂಧಪಟ್ಟವಿದ್ದು ಕೆಲವು ಕಡೆ ರೈತರು ಈ ಎರಡೂ ಮಸೂದೆಗಳನ್ನು ನಿಷೇಧಿಸಿ ಠರಾವುಗಳನ್ನು ನನ್ನ ಕಡೆ ಕಳಿಸಿರುತ್ತಾರೆ. ಎಲ್ಲಾ ಕಡೆ ರೈತರು ಈ ವಿಷಯಕ್ಕೆ ಗಮನ ಕೊಟ್ಟಿದ್ದು ತೋರಿಬರುವದಿಲ್ಲ. ಆದ್ದರಿಂದ ಅಲ್ಲಲ್ಲಿಯ ಪ್ರಮುಖ ರೈತರು ರೈತರ ಸಭೆ ಸೇರಿ ಈ ವಿಷಯಕ್ಕೆ ತಮ್ಮ ಅಭಿಪ್ರಾಯವೇನಿರುತ್ತದೆಂಬ ಬಗ್ಗೆ ಠರಾವುಗಳನ್ನು ಪಾಸು ಮಾಡಿ ನನ್ನ ಕಡೆ ಕಳಿಸಿಕೊಡಬೇಕು. ಮುಂದಿನ ವ್ಯವಸ್ಥೆಯನ್ನು ನಾನು ಮಾಡುವೆನು.

ಹೊನ್ನಾವರ, ತಾ ೮-೭-೨೮ । ತಮ್ಮ ಕೃಪಾಭಿಲಾಷಿ,

M. D. Karki

ಮಹಾತ್ಮರ ಆತ್ಮಚರಿತ್ರ.

(೧೨) ನೀಲಿ ತೋಟಗಳ ಕಷ್ಟ

ಚಂಪಾರಣ್ಯವು ಜನಕರಾಯನ ರಾಜ್ಯವು. ಅಲ್ಲಿ ಮಾವಿನ ತೋಪುಗಳು ಹೇರಳವಿವೆ. ಹಾಗೆಯೇ ೧೯೧೭ನೇ ಇಸ್ವಿಯ ವರೆಗೆ ಅಲ್ಲಿ ನೀಲಿ ತೋಟಗಳು ವಿಪುಲವಾಗಿದ್ದವು. ಚಂಪಾರಣ್ಯದೊಳಗಿನ ಒಕ್ಕಲಿಗರೆಲ್ಲರೂ ಕಾಯಿದೆಯಂತೆ ತಮ್ಮ ಸ್ವಾಧೀನವಲ್ಲಿರುವ ೨೦ನೇ ೩ ಅಂಶದ ಭೂಮಿಯಲ್ಲಿ ಒಡೆಯರ ಬಗ್ಗೆ ನೀಲಿ ನೆಡಲು ಬದ್ಧರಿದ್ದರು. ಈ ಪದ್ಧತಿಗೆ "ತಿಂಕಾಠ್ಯಾ" ಪದ್ಧತಿ ಎಂದು ಹೇಳುತ್ತಾರೆ. ಯಾಕೆಂದರೆ ೨೦ ಕಾಠಗಳೆಂದರೆ ಒಂದು ಎಕರೆ; ೩ ಕಾಠಗಳಲ್ಲಿ ನೀಲಿ ನೆಡಬೇಕಾಗಿತ್ತು.

ಆ ಕಾಲದಲ್ಲಿ ಚಂಪಾರಣ್ಯವೆಂಬ ಹೆಸರೇ ನನಗೆ ಗೊತ್ತಿರಲಿಲ್ಲ. ಯಾವ ಭಾಗದಲ್ಲಿರುತ್ತದೆಂದು ಗೊತ್ತಾಗುವ ಬಗೆ ಹೇಗೆ? ನೀಲಿ ತೋಟಗಳ ಕಲ್ಪನೆಯೂ ಇರಲಿಲ್ಲ. ನೀಲಿ ಪೊಟ್ಲೆಗಳನ್ನು ಕಂಡಿದ್ದೆ. ಆದರೆ, ಸಾವಿರಾರು ಬೇಸಾಯಗಾರರಿಗೆ ಬಹಳ ಕಷ್ಟ ಕೊಟ್ಟು ಅವು ಚಂಪಾರಣ್ಯದಲ್ಲಿ ತಯಾರಾಗುತ್ತವೆಂದು ಸ್ವಪ್ನದಲ್ಲಿ ಸಹ ನಾನು ಯೋಚಿಸಿದ್ದಿಲ್ಲ.

ರಾಜಕುಮಾರ ಶುಕ್ಲ ಎಂಬೊಬ್ಬ ಒಕ್ಕಲಿಗನಿದ್ದ. ಅವನಿಗೂ ಇವೇ ಕಷ್ಟ ಬಂದಿತ್ತು. ತನ್ನಂತೆಯೇ ಕಷ್ಟಪಡುವ ಸಾವಿರಾರು ಜನರ ಮೇಲಿನ ಉಪದ್ರವಗಳನ್ನು ನೀಗಿಸುವದಕ್ಕಾಗಿ ಅವರು ಟೊಂಕಕಟ್ಟಿದ್ದರು. ಇವರು ಲಖನೌದಲ್ಲಿ ನನಗೆ ಗಂಟುಬಿದ್ದರು. ೧೯೧೬ನೇ ಇಸ್ವಿಯ ರಾಷ್ಟ್ರೀಯ ಸಭೆಯ ಬಗ್ಗೆ ನಾನು ಅಲ್ಲಿಗೆ ಹೋಗಿದ್ದೆ. "ವಕೀಲ ಬಾಬುಗಳು ನಮ್ಮ ಕಷ್ಟಗಳನ್ನೆಲ್ಲ ನಿಮಗೆ ತಿಳಿಸುವರು," ಎಂದು ಅವರು ಹೇಳಿ ಚಂಪಾರಣ್ಯಕ್ಕೆ ಬರಲು ನನಗೆ ಆಗ್ರಹ ಮಾಡಿದರು. ವಕೀಲ ಬಾಬುಗಳೆಂದರೆ, ಬಾಬು ವ್ರಜಕಿಶೋರ ಪ್ರಸಾದರವರು. ಚಂಪಾರಣ್ಯದಲ್ಲಿ ಅವರು ನನ್ನ ಸಹಕಾರಿಗಳಾಗಿ ಅಮೂಲ್ಯ ಕೆಲಸ ಮಾಡಿದ್ದಾರೆ. ಬಿಹಾರದೊಳಗಿನ ಸಾರ್ವಜನಿಕ ಜೀವನದ ಪಂಚಪ್ರಾಣಗಳಿವರು. ರಾಜಕುಮಾರ ಶುಕ್ಲರವರು ಅವರಿಗೆ ನನ್ನ ಗುಡಾರಕ್ಕೆ ತಂದರು. ಆ ಕಾಲಕ್ಕೆ ವ್ರಜಕಿಶೋರ ಪ್ರಸಾದರವರು ಮಲವಲಿನ ಅಂಗಿಯನ್ನು ಚಣ್ಣವನ್ನು ತೊಟ್ಟಿದ್ದರು. ನನಗೆ ಆ ಕಾಲಕ್ಕೆ ಅವರ ಬಗ್ಗೆ ಆದರ ಹುಟ್ಟಲಿಲ್ಲ. ಅಜ್ಞ ಬೇಸಾಯಗಾರರಿಗೆ ಸುಲಿಗೆ ಮಾಡುವ ಒಬ್ಬ ವಕೀಲನಾಗಿರಬೇಕೆಂದು ನಾನು ಗ್ರಹಿಸಿದೆನು. ಚಂಪಾರಣ್ಯದ ಸಂಗತಿಗಳನ್ನು ಅವರಿಂದ ಕೇಳಿಕೊಂಡೆ. ಪಾಡಿಕೆಯಂತೆ ಅವರಿಗೆ ಉತ್ತರಕೊಟ್ಟೆನೆಂದರೆ — "ಕಣ್ಣಾರೆ ಕಂಡ ಹೊರತು ನಾನು ಅಲ್ಲಿಯ ಪರಿಸ್ಥಿತಿಯ ಬಗ್ಗೆ ಅಭಿಪ್ರಾಯ ಕೊಡಲಾರೆ. ರಾಷ್ಟ್ರೀಯ ಸಭೆಯಲ್ಲಿ ನೀವು ತೀರ್ಮಾನವನ್ನು ಸಹ ತರಬಹುದು. ನನಗೀಗ ತೊಂದರೆ ಕೊಡಬೇಡಿ." ರಾಜಕುಮಾರ ಶುಕ್ಲರವರಿಗೆ ರಾಷ್ಟ್ರೀಯ ಸಭೆಯಿಂದ ಬೆಂಬಲ ಬೇಕಾಗಿತ್ತು. ಬಾಬು ವ್ರಜಕಿಶೋರ ಪ್ರಸಾದರವರು ಚಂಪಾರಣ್ಯದೊಳಗಿನ ಜನರೊಡನೆ ಸಹಾನುಭೂತಿಯನ್ನು ಪ್ರದರ್ಶಿಸುವ ತೀರ್ಮಾನವನ್ನು ಸೂಚಿಸಿದರು. ಅದು ಸರ್ವಾನುಮತಿಯಿಂದ ಮನ್ನಿಸಲ್ಪಟ್ಟಿತು.

ರಾಜಕುಮಾರ ಶುಕ್ಲರವರಿಗೆ ಸಂತೋಷವೇನೋ ಆಯಿತು, ಆದರೆ ಸಮಾಧಾನವಾಗಲಿಲ್ಲ. ಚಂಪಾರಣ್ಯಕ್ಕೆ ನಾನು ಸ್ವತಃ ಹೋಗಿ ಒಕ್ಕಲಿಗರ ಕಷ್ಟವನ್ನು ನೋಡಬೇಕಾಗಿ ಅವರ ಆಗ್ರಹ ಮಾಡಿದರು. ಚಂಪಾರಣ್ಯವನ್ನು ನನ್ನ ಸಂಚಾರಕ್ರಮದಲ್ಲಿ ಸೇರಿಸಿ ಒಂದೆರಡು ದಿನ ಅಲ್ಲಿ ಉಳಿಯುತ್ತೇನಾಗಿ ನಾನವರಿಗೆ ಹೇಳಿದೆನು. "೧ ದಿನ ಉಳಿದರೆ ಸಾಕು, ನಿಮ್ಮ ಕಣ್ಣಿನಿಂದ ಸಕಲಸ್ಥಿತಿಯು ನಿಮಗೆ ನೋಡಸಿಗುವದು," ಎಂದು ಅವರು ನುಡಿದರು. ಲಖನೌದಿಂದ ನಾನು ಕಾನಪುರಕ್ಕೆ ಹೋದೆನು. ಅಲ್ಲಿ ರಾಜಕುಮಾರರವರು ನನ್ನನ್ನು ಹಿಂಬಾಲಿಸಿದರು. "ಚಂಪಾರಣ್ಯವು ಇಲ್ಲಿಂದ ಸಮೀಪವಿದೆ. ಒಂದು ದಿನದ ಮಟ್ಟಿಗೆ ಬನ್ನಿ" ಎಂದು ಅತ್ಯಾಗ್ರಹ ಮಾಡಿದರು. "ಈ ಸಲ ಕ್ಷಮೆ ಮಾಡಿ. ಆದರೆ ನಾನು ಬರುತ್ತೇನೆಂದು ನಿಮಗೆ ವಚನ ಕೊಡುತ್ತೇನೆ" ಎಂದು ನಾನು ವಚನಬದ್ಧನಾದೆನು. ನಾನು ಆಶ್ರಮಕ್ಕೆ ಮರಳಿದೆನು. ಆದರೂ, ರಾಜಕುಮಾರನು ನನ್ನ ಬೆನ್ನು ಬಿಡಲಿಲ್ಲ. "ಈಗಲೇ ದಯ ಮಾಡಿ ದಿನವನ್ನು ನಿಶ್ಚಯಿಸಿರಿ" ಎಂದು ಅವರು ಹೇಳಿದರು. "ಒಳ್ಳೇದು. ಇಂತಿಷ್ಟನೇ ತಾರೀಖಿಗೆ ನಾನು ಕಲಕತ್ತೆಗೆ ಹೋಗುವದಿದೆ. ಅಲ್ಲಿ ಬಂದು ನನಗೆ ಭೆಟ್ಟಿಯಾಗಿ, ಅಲ್ಲಿಂದ ನನಗೆ ಕರಕೊಂಡು ಹೋಗಿರಿ" ಎಂದು ನಾನು ನುಡಿದೆನು. ಎಲ್ಲಿ ಹೋಗಬೇಕು, ಏನು ಮಾಡಬೇಕು, ಏನು ನೋಡಬೇಕು ಎಂಬುದೇನು ನನಗೆ ತಿಳಿಯಲಿಲ್ಲ.

ಕಲಕತ್ತೆಗೆ ಹೋಗಿ ಭೂಪನ ಬಾಬುರವರ ಮನೆಗೆ ಮುಟ್ಟುವ ಮುಂಚೆಯೇ ರಾಜಕುಮಾರ ಶುಕ್ಲರವರು ಅಲ್ಲಿ ಹೋಗಿ ಸಿದ್ಧರಾಗಿದ್ದರು. ಹೀಗೆ ಆ ಅಜ್ಞ ಒಕ್ಕಲಿಗನ ನಿಷ್ಕಪಟ ಸ್ವಭಾವದ ನಿಶ್ಚಯದಿಂದ ನಾನು ಮೋಹಿತನಾದೆ. ೧೯೧೭ನೇ ಇಸ್ವಿಯ ಪ್ರಾರಂಭ ಕಾಲದಲ್ಲಿಯೇ ನಾವು ಕಲಕತ್ತೆಯಿಂದ ಚಂಪಾರಣ್ಯಕ್ಕೆ ಹೊರಟೆವು. ರಾಜಕುಮಾರರ ಜೊತೆಗೆ ನಾನೂ ಒಬ್ಬ ಒಕ್ಕಲಿಗನಂತೆ ಕಾಣುತ್ತಿದ್ದೆ. ಯಾವ ಗಾಡಿಯಿಂದ ಹೋಗಬೇಕೆಂಬುದೂ ಆ ಕಾಲಕ್ಕೆ ನನಗೆ ಗೊತ್ತಿರಲಿಲ್ಲ. ರಾಜಕುಮಾರರು ನನಗೆ [illegible] ನಾವಿಬ್ಬರೂ ಪ್ರಯಾಣ ಮಾಡಿದೆವು. ಪಾಟಣಾ ಪಟ್ಟಣಕ್ಕೆ ಬೆಳಿಗ್ಗೆ ಹೋಗಿ ಮುಟ್ಟಿದೆವು.

ಪಾಟಣಾಕ್ಕೆ ನಾನು ಹೋದದ್ದು ಇದೇ ಮೊದಲನೇ ಸಾರಿ. ಅಲ್ಲಿ ಉಳಕೊಳ್ಳಬಹುದಾದ ಸಂಬಂಧಗಳಾಗಲಿ ನನ್ನ ಪರಿಚಯದವರಾಗಲಿ ಯಾರೂ ಇರಲಿಲ್ಲ. ರಾಜಕುಮಾರ ಶುಕ್ಲರವರು ಅಜ್ಞ ಒಕ್ಕಲಿಗರಾದರೂ ಪಾಟಣಾ ಪಟ್ಟಣದಲ್ಲಿ ಅವರಿಗೆ ತಕ್ಕಮಟ್ಟಿಗೆ ಪ್ರತಿಷ್ಠೆಯಿರಬೇಕೆಂದು ನಾನು ಗ್ರಹಿಸಿದ್ದೆ. ಪ್ರಯಾಣದಲ್ಲಿ ಅವರ ವಿಷಯ ಹೆಚ್ಚಿನ ಪರಿಚಯವಾಯಿತು. ಪಾಟಣಾ ಪಟ್ಟಣಕ್ಕೆ ಮುಟ್ಟಿದ ಬಳಿಕ ಅವರ ದೊಡ್ಡಸ್ತನದ ವಿಷಯದ ಕಲ್ಪನೆಗಳೆಲ್ಲ ನಾಶವಾದವು. ಅವರಿಗೆ ಏನೂ ಗೊತ್ತಿದ್ದಿಲ್ಲ. ವಕೀಲರು ಗೆಳೆಯರೆಂದು ಅವರು ಭಾವಿಸಿದ್ದರು. ಆದರೆ ವಾಸ್ತವ ಸ್ಥಿತಿಯು ಹಾಗಿರಲಿಲ್ಲ. ಬಡ ರಾಜಕುಮಾರರಿಗೆ ಆಳಿಗಿಂತ ಹೆಚ್ಚಿನ ಬೆಲೆ ಅವರು ಕೊಡುತ್ತಿರಲಿಲ್ಲ. ಇಂಥ ಬೇಸಾಯಗಾರ ಪಕ್ಷಗಾರರಿಗೂ ವಕೀಲರಿಗೂ ನಡುವೆ ನೆರೆಕಟ್ಟಿದ ಗಂಗಾನದಿಯಷ್ಟು ಅಭ್ಯಂತರವಿದೆ.

ರಾಜಕುಮಾರ ಶುಕ್ಲರವರು ರಾಜೇಂದ್ರ ಬಾಬುಗಳ ಮನೆಗೆ ನನ್ನನ್ನೊಯ್ದರು. ರಾಜೇಂದ್ರರವರು ಪುರಿಗೋ ಬೇರೆಲ್ಲಿಯೋ ಹೋಗಿದ್ದರು; ಯಾವುದೆಂದು ನನಗೆ ನೆನಪಿಲ್ಲ. ಬಂಗಲೆಯಲ್ಲಿ ಒಂದಿಬ್ಬರು ಆಳುಗಳಿದ್ದರು. ಅವರು ನಮ್ಮ ಕಡೆ ಲಕ್ಷ್ಯಗೊಡಲಿಲ್ಲ. ನಾನು ಕೆಲವು ತಿಂಡಿ ಒಯ್ದಿದ್ದೆ. ನನಗೆ ಖರ್ಜೂರ ಬೇಕಾಗಿತ್ತು. ರಾಜಕುಮಾರರವರು ಪೇಟೆಗೆ ಹೋಗಿ ಅವನ್ನು ತಂದುಕೊಟ್ಟರು.

ಬಿಹಾರದಲ್ಲಿ ಅಸ್ಪೃಶ್ಯತೆಯು ಕಠೋರವಾಗಿ ಪಾಲಿಸಲ್ಪಡುತ್ತಿತ್ತು. ಆಳುಗಳು ಬಾವಿಯ ನೀರು ಸೇದುವಾಗ ನನಗೆ ನೀರು ಸೇದಬರುತ್ತಿರಲಿಲ್ಲ, ನನ್ನ ಜಾತಿಯು ಯಾವುದೆಂದು ಅವರಿಗೆ ಗೊತ್ತಿದ್ದಿಲ್ಲ. ನಾನು ನೀರು ಸೇದುವಾಗ ನನ್ನ ಪಾತ್ರೆಯೊಳಗಿನ ಜಲಬಿಂದು ಅವರ ಪಾತ್ರೆಯಲ್ಲಿ ಬಿದ್ದರೆ ಮೈಲಿಗೆಯಾಗುತ್ತಿತ್ತು. ರಾಜಕುಮಾರರವರು ನನಗೆ ಒಳಗಿನ ಪಾಯಖಾನೆಗೆ ಒಯ್ಯುತ್ತಿದ್ದರು, ಕೂಡಲೆ ಅಲ್ಲಿಯ ಆಳುಗಳು ಹೊರ ಪಾಯಖಾನೆಗೆ ಹೋಗಬೇಕೆಂದರು. ಈ ಪ್ರಕಾರಗಳಿಂದ ನನಗೆ ಆಶ್ಚರ್ಯವಾಗಲಿಲ್ಲ. ಮನೋವ್ಯಥೆಯೂ ಆಗಲಿಲ್ಲ. ಯಾಕೆಂದರೆ ನನಗೆ ಇಂಥ ಸಂಗತಿಗಳ ಅನುಭವವಿತ್ತು. ಆಳುಗಳು ತಮ್ಮ ಕೆಲಸ ಮಾಡುತ್ತಿದ್ದರು. ರಾಜೇಂದ್ರ ಬಾಬುಗಳ ಅಪೇಕ್ಷೆಯಂತೆ ಅವರು ವರ್ತಿಸುತ್ತಿದ್ದರು.

ಈ ಮನೋರಂಜಕ ಅನುಭವಗಳಿಂದ ರಾಜಕುಮಾರ ಶುಕ್ಲರವರ ಮೇಲಿನ ನನ್ನ ಪ್ರೀತಿಯು ಬೆಳೆಯಿತು. ಅವರ ಸ್ಥಿತಿಯ ಕಲ್ಪನೆಯೂ ಆಯಿತು. ರಾಜಕುಮಾರ ಶುಕ್ಲರವರು ಹಿಂದು-ಮುಂದೆ ನನ್ನ ಮಾರ್ಗದರ್ಶಕರಾಗಲಾರರೆಂದೂ, ನನ್ನ ಕೆಲಸವನ್ನು ಈಗ ನಾನೇ ಮಾಡಿಕೊಳ್ಳಬೇಕಾಗುವದೆಂದೂ ನನಗೀಗ ಸ್ಪಷ್ಟವಾಯಿತು.

ಹೊಗೆಸೊಪ್ಪು ಸೇದಬೇಡಿ.

ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಹೊಗೆಸೊಪ್ಪಿನ ಖರ್ಚಿನ ವಿಷಯ ಬರೆಯುವದೇನೆಂದರೆ — ಹೊಗೆಸೊಪ್ಪು ಸಿಗರೆಟ್ಟುಗಳಿಗಾಗಿ ನಾವು ವರ್ಷಂಪ್ರತಿ ೨ ಕೋಟಿ ೧೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ದಿನಹೋದ ಹಾಗೆ ಈ ಖರ್ಚು ಬೆಳೆಯುತ್ತಲಿದೆ. ೧೯೨೩ನೇ ಇಸ್ವಿಯಲ್ಲಿ ೧೨|| ಲಕ್ಷ ರತ್ತಲು ಹೊಗೆಸೊಪ್ಪು ನಮ್ಮ ಹಿಂದುಸ್ಥಾನದಲ್ಲಿ ಆಮದಾಯಿತು, ಆದೇ ೧೯೨೭ನೇ ಇಸ್ವಿಯಲ್ಲಿ ೫೦ ಲಕ್ಷ ರತ್ತಲು ಹೊಗೆಸೊಪ್ಪು ಆಮದಾಯಿತು. ಮೇಲಿನ ಲೆಕ್ಕದಲ್ಲಿ ಹಿಂದುಸ್ಥಾನದಲ್ಲಿ ಬೆಳೆಯುವ ಹೊಗೆಸೊಪ್ಪಿನ ಲೆಕ್ಕಾಚಾರವಿಲ್ಲ. ನಮ್ಮಲ್ಲಿಯ ಹೊಗೆಸೊಪ್ಪನ್ನು ನಾವು ಪರದೇಶಗಳಿಗೆ ರಫ್ತು ಮಾಡುವದಿಲ್ಲ. ಇದರ ಮೇಲಿಂದ ಈ ಖರ್ಚು ಹೇರಳವೆಂಬುದು ತಿಳಿಯುವದಾಗಿದೆ. ಬೀಡಿ ಸೇದುವವರು ಈ ಹೊಲಸು ಅಭ್ಯಾಸಕ್ಕೆ ಕಡೆಹಚ್ಚಿದರೆ, ಅವರ ಶ್ವಾಸೋಚ್ಛ್ವಾಸವು ಶುದ್ಧವಾಗಿ ಹಲ್ಲುಗಳು ಗಟ್ಟಿಯಾಗುವವು. ಸೂಕ್ಷ್ಮ ಪರೀಕ್ಷೆಯ ಇಂದ್ರಿಯವು ಸುಸ್ಥಿತಿಯಲ್ಲಿರುವದು. ಹೀಗೆ ಉಳಿತಾಯ ಮಾಡಿದ ಹಣವನ್ನು ರಾಷ್ಟ್ರೀಯ ಕೆಲಸಕ್ಕೆ ಅರ್ಪಿಸಿದರೆ, ಅವರಿಗೂ, ದೇಶಕ್ಕೂ ಲಾಭವಾಗುವದು.

ವೃತ್ತಸಾರ.

— ಬಾಗಲಕೋಟದೊಳಗಿನ ಶ್ರೀ ವಿಠ್ಠಲ ದೇವಾಲಯದಲ್ಲಿ ಆಷಾಢಶುದ್ಧ ೧೧ಕ್ಕೆ ದೊಡ್ಡ ಉತ್ಸವವಾಗುತ್ತದೆ. ಉತ್ಸವವು ಗಚ್ಚಿನ ಮಸೀದಿಯಿಂದ ಸಾಗಿ ಹೋಗಬೇಕು. ವಾದ್ಯಘೋಷವಾಗಬಾರದೆಂದು ಮುಸಲ್ಮಾನರು ೨ ವರ್ಷಗಳ ಹಿಂದೆ ತಕರಾರು ಮಾಡಿದರು. ಹಿಂದುಗಳು ತಮ್ಮ ಹಕ್ಕಿನ ಪಾಲನೆಕ್ಕಾಗಿ ದಿವಾಣಿ ಕೋರ್ಟಿಗೆ ಹೋಗಿ ಅಲ್ಲಿ ತಮ್ಮ ಹಕ್ಕನ್ನು ಸಿದ್ಧಪಡಿಸಿಕೊಂಡರು. ಈ ವರುಷ ಉತ್ಸವ ಹೊರಡಿಸುವ ಎಲ್ಲ ತಯಾರಿಯಾಯಿತು. ಮೆಜಿಸ್ಟ್ರೇಟರು ಉತ್ಸವ ಹೊರಟರೆ ಶಾಂತತಾಭಂಗವಾಗುವದೆಂದು ಹೇಳಿ ಈ ವರುಷ ಉತ್ಸವಕ್ಕೆ ತಡೆಹಾಕಿದ್ದಾರೆ. ವಿಜಾಪೂರದೊಳಗಿನ ರಾಜ್ಯಾಧಿಕಾರಿಗಳಿಗೆ ಪ್ರಜೆಗಳ ಹಕ್ಕನ್ನು ರಕ್ಷಿಸುವ ಸಾಮರ್ಥ್ಯವಿಲ್ಲವೇ?

— ಬೆಳಗಾಂವ ಜಿಲ್ಲೆಯ ಅಂಕಲಿಗಿಯಲ್ಲಿ ಗ್ವಾಲ್ಹೇರದ ಸರದಾರ ಅಪ್ಪಾಸಾಹೇಬ ಚಿತ್ನೀಸಯವರ ಇನಾಮು ಭೂಮಿಯದೆ. ಅವರು ಅಂಕಲಿಯಲ್ಲಿ ೬೦೦೦ ರೂಪಾಯಿ ಖರ್ಚು ಮಾಡಿ ಚಿಕಿತ್ಸಾಲಯವನ್ನು ಹೊರಡಿಸಿದ್ದಾರೆ. ವರ್ಷಾಸನ ಖರ್ಚಿನ ಬಗ್ಗೆ ೨೮೦೦ ರೂಪಾಯಿಗಳು ಕೊಡುವ ಅಭಿವಚನ ಕೊಟ್ಟಿದೆ.

— ನಾಭಾದ ಮಹಾರಾಜರಾದ ಗುರುಚರಣಸಿಂಗಜಿಯವರು ಈಗ ಕೊಡಾಯ್‌ಕೆನಾಲದಲ್ಲಿ ಸರಕಾರದ ಬಂದಿವಾಸದಲ್ಲಿದ್ದಾರೆ. ಅವರಿಗೆ ೩ ಲಕ್ಷ ರೂಪಾಯಿಗಳನ್ನು ಸರಕಾರವು ಅವರ ಸಂಸ್ಥಾನದಿಂದ ವೇತನ ಕೊಡುತ್ತಿತ್ತು. ರಾಜದ್ರೋಹದ ಚಳವಳಿಯಲ್ಲಿ ಅವರು ಪ್ರವೇಶಿಸಿದರೆಂದು ಅವರ ವೇತನವು ತಿಂಗಳಿಗೆ ೧೦ ಸಾವಿರ ರೂಪಾಯಿಗೆ ಇಳಿಸಲಾಯಿತು. ಅದರೊಳಗಿಂದಲೂ ಕಾರಣಗಳನ್ನು ತಿಳಿಸದೆ ಸರಕಾರವು ಮತ್ತೆ ೨ ಸಾವಿರ ರೂಪಾಯಿಗಳನ್ನು ಮುರಕೊಂಡಿದೆ. ಅದರಿಂದ ತಾವು ೮ ಸಾವಿರ ರೂಪಾಯಿಗಳ ರಕಮನ್ನು ಸಹ ಸ್ವೀಕರಿಸುವದಿಲ್ಲವಾಗಿ ಮಹಾರಾಜರು ಸರಕಾರಕ್ಕೆ ತಿಳಿಸಿದ್ದಾರೆ. ಪ್ರಸಂಗಬಿದ್ದರೆ ಪ್ರಾಯೋಪವೇಶನದಿಂದ ಪ್ರಾಣತ್ಯಾಗ ಮಾಡಲು ಸಿದ್ಧರಾಗುವೆವಾಗಿಯೂ ಸರ್ವಾಧಿಪತಿಗಳಿಗೆ ತಿಳಿಸಿದ್ದಾರೆ.

— ಜಪಾನ ಸೈನ್ಯವು ಚೀನ ದೇಶದಲ್ಲಿ ೧೦೦೦ ಚೀನಿಯರನ್ನು ಕೊಂದರು. ಶಾಂಟುಂಗದೊಳಗಿನ ರಾಯಭಾರಿಯ ಕಿವಿ ಮೂಗುಗಳನ್ನು ಕೊಯ್ದರು.

ಪೋಲೀಸರು ಕಲಕತ್ತೆಯ "ಫೋರವರ್ಡ್" ಕಂಪನಿಯವರು ನಡೆಸುವ "ಬೆಂಗಾಲ ಕಥಾ" ಎಂಬ ದೈನಿಕ ಪತ್ರಿಕೆಯಲ್ಲಿ ರಾಜದ್ರೋಹದ ಬಗ್ಗೆ ಸಂಪಾದಕರಾದ ಶ್ರೀ ಸತ್ಯರಂಜನ ಬಕ್ಷಿ ಹಾಗು ಪ್ರಕಾಶಕರಾದ ಶ್ರೀ ಸತ್ಯರಂಜನ ಮುಖರ್ಜೀಯವರಿಗೆ ಸೆರೆಹಿಡಿಯಲಾಗಿದೆ

— ಹಿಂದುಸ್ಥಾನದ ಸೇನಾಧಿಪತಿಗಳಾದ ಬರ್ಡವುಡ್ ಸಾಹೇಬರು ಸೈನ್ಯ ನಿರೀಕ್ಷಣೆಗಾಗಿ ಪಠ್ಯಕ್ಕೆ ಬೆಂಗಳೂರಿಗೆ ಬರುವವರಿದ್ದಾರೆ ಯುದ್ಧ ಕವಾಯತಿಯು ನೋಡ್ತಮಿಸತ ಕ್ಕೆನಿದೆ ?

— ಕರಾಚಾ ಪಟ್ಟಣದಿಂದ ಪಾಲಿಟಾಣಾ ಪಟ್ಟಣಕ್ಕೆ ೬೨ ಮಂದಿ ಜೈನ ಯಾತ್ರಿಕರು ದೋಣಿ ಹತ್ತಿ ಬರುವಾಗ ಬಿರುಗಾಳಿ ಬೀಸಿ ದೋಣಿ ಕವಚಿ ಬಿದ್ದು ೩ ಮಂದಿಗಳು ಸತ್ತುಹೋದರು ನಾಲ್ವರಿಗೆ ಆಸ್ಪತ್ರೆಯಲ್ಲಿ ಇಡಲಾಗಿದೆ ಉಳಿದ ೧೧ ಮಂದಿಗಳ ಪತ್ತೆಯಿಲ್ಲ

— ಕಲಕತ್ತೆಯ ನೆಶನಲ್ ಬೇಂಕಿಗೆ ೧೦ ಲಕ್ಷ ರೂಪಾಯಿಗಳ ವಂಚನೆ ಮಾಡಿದ ಬಗ್ಗೆ ಬೇಂಕಿನ ಗಣದರರವರ ಮೇಲೆ ಖಟ್ಲೆ ನಡೆದಿದೆ

ಬಂಗಾಲ ಕಾಯಿದೆ ಕೌನ್ಸಿಲಿನಲ್ಲಿ ಸ್ಕ್ರೆಮನ್ ಕಮಿಟಿ ಯೊಡನೆ ಆಲೋಚನೆ ನಡೆಸಲು ಮಂಡಳ ನೇಮಿಸುವದ ಒತಾಯಮತದಿಂದ ನಿ ...ವಾಗಿದೆ ಅನುಕೂಲ ಮತ ಸಂಗ್ರಹಿಸುವದಕ್ಕಾಗಿ ಪ್ರಾಂತಾಧಿಪರು ಸ್ವತಃ ತಮ್ಮ ಅಧಿಕಾರ ಪ್ರತಿಷ್ಠೆಯನ್ನು ವೆಚ್ಚ ಮಾಡಿದರು ಈ ಕುರಿತು ಶ್ರೀ ಸೇನಗುಪ್ತರು ಕಾಯಿದೆ ಕೌನ್ಸಿಲಿನಲ್ಲಿ ನಿಷೇಧಿಸಲು ಅಧ್ಯಕ್ಷರು ತಡಹಾಕಿದರು, ಆದರೆ ಅದಕ್ಕೆ ಲಕ್ಷ್ಯವಿಡದೆ ಸೇನಗುಪ್ತರು ತಮ್ಮ ಹೇಳಿಕೆಯನ್ನು ಕೌನ್ಸಿಲಿನಲ್ಲಿ ಹೇಳಿಬಿಟ್ಟರು

— ಮುಂಬಯಿಯ ಡೆವ್ಹಲಪ್‌ಮೆಂಟ್ ಖಾತೆ ಕಟ್ಟೋಣ ಖಾತೆಯಲ್ಲಿ ಅಸಿಸ್ಟಂಟ ಇಂಜನಿಯರರಾಗಿದ್ದ ಕೆಪ್ಟನ್ ಕಾವಸ್ಜೀ ಕೇಲ, ಮಿ। ಗಣಪತ, ಮಿ। ಕೊಲವೆಲ್ ಹಾಗು ಎಕ್ಸಿಕ್ಯುಟಿವ್ ಇಂಜನಿಯರರಾದ ಮಿ। ಅಮೀರ್‌ ಈ ನಾಲ್ವರ ಮೇಲೆ ಲಂಚ ತಿಂದ ಆರೋಪದ ಮೇಲೆ ಖಟ್ಲೆ ನಡೆದಿದೆ ಸರಕಾರದ ಪರವಾಗಿ ಹಾರ್ವೀ ಖಟ್ಲೆ ನಡೆಸುತ್ತಿದ್ದಾರೆ ... ಗಿಂತ ಘಂಟಾದ ಚಾಲವಿದೆ.

— ಕಲಕತ್ತೆಯಲ್ಲಿ ರಾಷ್ಟ್ರೀಯ ಸಭೆಯ ತಯಾರಿ ನಡೆದಿದೆ ೩೦ ಸಾವಿರ ಜನರಿಗೆ ಸಾಲುವಷ್ಟು ದೊಡ್ಡ ಸಭಾಮಂಟಪದ ನಿರ್ಮಾಣವಾಗುವದು. ಮಲ್ಲಯುದ್ಧದ ನಿರ್ಮಾಣ ಆಗಿದೆ

— ಪಂಡಿತ ಮೋತಿಲಾಲ ನೆಹರೂರವರು ಕನಿಷ್ಠ ದೇಶಕ್ಕೆ ಸಾಮ್ರಾಜ್ಯ ಸಭೆಯ ಪ್ರತಿನಿಧಿಗಳಾಗಿ ಹೋಗಿದವರಿದ್ದರು. ದ ಕರಡಾಳಗಿನ ಪರಿಷತ್ತಿಯ ಮೂಲಕ ಆ ಸಾಮ್ರಾಜ್ಯ ಅವರು ರಾಜನಾಮೆ ಕೊಟ್ಟು ಆ ಕಡೆಗೇ ಹೋಗಲಿದ್ದಾರೆ

— ಬೆಳಗಾವಿಯ ಮಹಿಳಾ ವಿದ್ಯಾಲಯಕ್ಕೆ ಶ್ರೀ। ದತ್ತೋಪಂತ ಬೆಳವಿಯವರು ೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ

ಜಗತ್ತಿನ ರಾಮಾಯಣಗಳಲ್ಲೆಲ್ಲ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ। ಎ. ರಂಗನಾಥಂ ಅವರ ಪ್ರಸ್ತಾವನಾ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ

ಅನುವಾದಕ — ಶ್ರೀ। ದ ಕೃ ಭಾರದ್ವಾಜ

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಚಿತ್ತಾಕರ್ಷಕವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ, ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ-ರೂ ೨-೮-೦, ರಫ್ ಪ್ರತಿ ರೂ ೨-೦-೦ ಅಂಚೆ ವೆಚ್ಚ ೦ ೮ ೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ

(ಕಾ) ೧೩೩ ಚಾಮರಾಜಪೇಟೆ, ೪ನೇ ಬೀದಿ,

ಬೆಂಗಳೂರು ಸಿಟಿ

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ಬೇಕಾಗುವ ವಿವಿಧ ಕಡ್ಡಿ,

ದೊರೆಯುವ ಹಾಗು ಹೆಚ್ಚಾದ

ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ,

ಹತ್ತಿಯ ಹಾಗು ಹಿತ್ತಾಳೆಯ ದಬ್ಬಣಗಳೂ,

ಕಟ್ಟಿಯ ಬೊಬಿನುಗಳೂ, ವಾರ್ಪಿಂಗಳೂ,

ಎಲ್ಲಾ ಕಾಗದಗಳೂ

ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.

ಬಹಳ ಅಗ್ಗ !

P. P. TRIVEDI & CO.,

BRUCE Street, Fort, BOMBAY

ಉಚಿತ!] ನನ್ನ ಶಾಸ್ತ್ರೀಯ ವಾದ [ಉಚಿತ!!

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮೇಲ್ ನನ್ನ ಶಿಷ್ಯರ ಅಂಗಸೌಷ್ಠವವನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದ ನನ್ನಲ್ಲಿ ಕಲಿಯುತ್ತಿದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳುಹಿಸಿದ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ. ವಿ ಕೃಷ್ಣರಾವ್,

ಬಸವನಗುಡಿ, ಬೆಂಗಳೂರ ಸಿಟಿ

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ-ಅಮೃತ ಬಿಲ್ಡಿಂಗ,

ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ

ಸರಕಾರಿ ಭದ್ರತೆ ಇದೆ

ಸ್ಪೆಶಲ್ ಪೋಲೀಸಿಗಳು ೧-೭-೨೮ ನೇಯಿಂದ ಕೊಡಲ್ಪಡುತ್ತವೆ. ೨ ವರ್ಷಗಳ ಮೇಲೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು ಡಾಕ್ಟರರ ತಪಾಸು ಇಲ್ಲ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗುತ್ತದೆ ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾರೆ, ಇನ್ನೂ ಇಳಿಸುತ್ತಿದ್ದಾರೆ ಕಂತಿನ ರಕಮು ತಿಂಗಳಿಗೆ ೧ ಯಾ ೨ ರೂಪಾಯಿ ೧೪ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ಸಿಗುತ್ತವೆ ಪ್ರಯತ್ನಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ಏಜನ್ಸಿ ಹಾಗು ವಿಶೇಷ ಹೆಚ್ಚಿನ ಮಾಹಿತಿಯ ಬಗ್ಗೆ ಹೆಡ್ ಆಫೀಸಿಗೆ ಬರೆಕೊಳ್ಳತಕ್ಕದ್ದು,

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುವದು ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರು ಕಾಮವಿಕಾರ—ತರುಣರಂತೆ ವರ್ಧಮಾನವಾಗುವದು ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿಯ ಹೋಗಿ ಸಾಕವಾದೇ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ವೀರ್ಯವು ಹಿಂದಾಗುವದು.— ಪಗಣಿ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು, ಮೂರೇ ದಿವಸದಲ್ಲಿಗುಣ ಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮುಂತಾದ ರೋಗಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುವದು, ಇದರ ಅನುಭವವು ಮೊದಲನೇ ದಿವಸದೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩-೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವವು ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ ಹಜನ ಬಾಟಲಿಗಳ ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಹಜನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪ್ರೋ। ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव- – मृद्विकारिष्ट – शारंगधरम अ.१०

रामबाण औषध

सर्दि बांलविणारें
मूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

पित्यास रुचिकर
किंमत- एक रत्तलास १॥ रुपये
कॅटलाग मागवा

झंडु फार्मास्युटिकल वर्क्स लिमिटेड
मुंबई नं: १४

ऐजंट— मेसर्स पंडित आणी कंपनी,
तीर्थहळ्ळी.

मिर्सि एजंट एस. एल. धाकप्पा आणि ब्रदर

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಬಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿಗೆ ಪುಕ್ಕಟೆ ಕಳಿಸಲಾಗದು.

ಒಂದು ಡಬ್ಬಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦, ವ್ಹಿ. ಪಿ. ೦-೮-೦ ದಯವಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ಶಿಥಿಲವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಒಡಸೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಚಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವಾಗಿ [illegible] ಆಗ ಇದೆ ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತಿ [illegible] ಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ [illegible] ಕಳ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತು [illegible] "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ಸಾರಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ಸಾರಿ ಹಿಡಿದು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ಆಳ ಕೊಲಿಯ [illegible] ಡಬ್ಬಿಗೆ ೫, ರೂ. ೩ ಡಬ್ಬಿಗೆ ೧೪ ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ ಪಿ [illegible] ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ [illegible] ಪೂರ್ಣ ಗುಣಬರುವದು.

ಪತ್ತೆ — ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.

ಹಿಂದ ಸ್ಥಾನದಲ್ಲೆಲ್ಲ ಅತ್ಯಂತ ಅಗ್ರವಾದ 'ನೆಶನಲ್ ಇನ್ಶೂರನ್ಸ ಕಂಪನಿ, (೧ ಡಾ) ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ.

ಕಳೆದ ವರುಷ ಲೆಕ್ಕಾಚಾರದ ಮೇಲೆ ೫,40,041 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ [illegible] ಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬೋನಸ ಕೊಟ್ಟಿರುವದು.

ಹೋಗದೆ 1000 ರೂಪಾಯಿಗಳ ವಿಮೆಯನ್ನು ಕಂಪನಿ ಕೊಡ [illegible] ಅದೇ ಕಂಪನಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆದಿರಿ- ನಮ್ಮ ದರವು ಅಷ್ಟೇ [illegible]

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು:- P. D. Churi, ಬಿ ಸಿ. ಶಿರಾಳಕೊಪ್ಪ, *Branch Secretary,* ಲೋಖಂಡೆ ಬಿಲ್ಡಿಂಗ, Alice Building, ಹುಬ್ಬಳ್ಳಿ *Hornby Road,* *BOMBAY.*

ಕಾಶಿಯ ಅಪೂರ್ವ ವಸ್ತುಗಳು.

ನಾನಾ ಕಾಶಿಯ ಪಟ್ಟೆ ಮಡಿ, ಶೀರೆ, ಪಣ, ರೇಶ್ಮೆ ಶಲ್ಲೆ, ಒಡಾಕ್ಕಿನೆ, ಕಾಶ್ಮೀರದ ಶಾಲು, ಸಕಲಜಾತಿ ದಾಬಳಿ, ರುದ್ರಾಕ್ಷಿ ಸರ, ಕಂಠಿ, ಗೌರೀಶಂಕರ, ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತ, ಜಾಫಂಚಿ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ: —

ವಿಶ್ವನಾಥ ಎಂಡ್ ಬ್ರದರ್ಸ,
ಮಗರ್ ಘಾಟ, ಬನಾರಸ್ ಸಿಟಿ

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು;

ಬಾಳಿಕೆಗೆ ತೀರ ಅನುಕೂಲ; ಮನೆತನದವರಂತು ಇಟ್ಟುಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇನ್ನೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

REG. NO. B. 1270

MONDAY, JULY 23RD 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೧

ಪತ್ರದ ವರ್ಗಣಿ.

ಕ.ಮುಂಚೆಯಲ್ಲಿ ಅಗಾವು

ರೂಪಾಯಿ 2-4-0.

ಮನೆಯಾರ್ಡರಿಯಿಂದ

ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ

ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನಡ, ಇಂಗ್ಲಿಷ ಪೈಕಾ ಟೈಪಿನ (೧೨ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-

೮ ನಂತ್ರ ಪ್ರತಿಸಾಲಿಗೆ 0-2-0.

ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪ ದಿಂದ ಅಷ್ಟು ಸಾಲುಗಳು ಹಿಡಿ ಯಲ್ಪಡುತವೆ.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿ ಸಲ್ಪಡುವದು.

-:(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೩ ಮಾಹೆ ಜುಲೈ ಸನ್ ೧೯೨೩ನೇ ಇಸವಿ.):-

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಎಲ್ಲ ದೇಶದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.—ಸ್ಟವ್ಹ, ಬಟ್ಟೆ ಬರೆಗಳು, ಮೋಟಾರ ಉಪಯೋಗದ ಪೆಟ್ರೋಲ, ಪಿನ್ ಪ್ಲೇಟರ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಎಲ್ಲಾ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಶಾಯಿ ಮುಂತಾದವುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ ! ಎಲ್ಲ ಸಾಮಾನು ಅಗ್ಗ ! ಚಿಲ್ಲರೆ ವ್ಯಾಪಾರಸ್ಥರು ತೋಕ ಮಾಲು ನಮ್ಮ ಕೊಂಡರೆ, ಸವಲತ್ತು ಸಿಗುತ್ತೆ. ಬಹಳ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾಡೊಂಡೆ,

ಆಯರ್ನ ಮರ್ಚಂಟ,

ಕುಮಟಾ. (ಉ. ಕನಡ.)



ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ- ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತದೆ. ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸ್ತ್ರಾ ವಿಶ್ರಾಂತಿ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಧರ್ಮರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ—**ಶಿರೋಮಣಿ ನಾರಾಯಣಾಚಾರ್ಯ,**

ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

Wanted:- Candidates for Telegraph and Station Master's Classes. Full particulars and Railway Fare Certificate on 2 annas stamp. Apply to:— Central Telegraph College, Nai Sarak, **Delhi.**

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,

ಗೌರವ ಕಾರ್ಯದರ್ಶಿ,

ವಿಧವಾವಿವಾಹ ಸಹಾಯಕ ಸಭಾ,

ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.

ಇವರಿಗೆ ಬರೆದು ತಿಳಿದುಕೊಳ್ಳಿರಿ.

ಮಂಗಳೂರ ತಂಬಾಕಿನ ತಾಜಾ ಸತ್ವ! ಸುಲಭ ಕ್ರಯ!

ಶಿಫಾರಸುಪತ್ರ ಪಡೆದ

ನಶ್ಯದ ಪುಡಿ!

ನಂ. ೧ನೇ ನಶ್ಯಪುಡಿ ೨೧ ತೊಲೆ ಶೇರು ೧ರ ರೂ.೧|.

ನಂ. ೨ ನೇ ... ...ಶೇರು ೧ರ ರೂ. ೧-೨-೦.

ನಂ. ೩ ನೇ ... ...ಶೇರು ೧ರ ರೂ. ೧-೦-೦.

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಸಿಗುವದು

ಪತ್ತೆ:— ಪುಂಡಲೀಕ ನಾಗ ಶೈ,

ನಶ್ಯದ ವ್ಯಾಪಾರಿ, ಹೊನ್ನಾವರ (ಉ. ಕ.)

ಶ್ರೀ। ತಾಂಬೇ ಶಾಸ್ತ್ರಿಗಳ ಪ್ರವಚನಗಳು.

(೨)

ನನ್ನ ಭಾಷಣದ ವಿಷಯವು ನಾನು ನಿನ್ನೆ ಹೇಳಿದಂತೆ "ಧರ್ಮೋ ಹಿ ಮೂಲಂ ಜಗತಃ ಪ್ರತಿಷ್ಠಾ" ಪ್ರತಿಷ್ಠೆಯೆಂದರೆ ಸ್ಥೈರ್ಯ. ಚಲನವಲನವು ತಡೆಯುವದು. ನಾವು ಸಮಾಜದೊಳಗಿನ ಕೆಲವು ಜನರಿಗೆ ಪ್ರತಿಷ್ಠಿತ ಜನರೆಂದು ಹೇಳುತ್ತೇವೆ. ಯಾರ ಬುದ್ಧಿಯು ಸ್ಥೈರ್ಯದಿಂದ ನಿಶ್ಚಲವಾಗಿದೆಯೋ ಅವರೇ ಪ್ರತಿಷ್ಠಿತರು, ಅಂದರೆ ಮಾನ್ಯರು. ಇದರ ಮೇಲಿಂದ ಧರ್ಮವು ಸ್ಥಿತಿಯನ್ನು ನೆಲಿಸುವಂಥ ಸಾಧನವಾಗಿರುತ್ತದೆಂದು ನಿಮಗೆ ಹೊಳೆಯುವದು. ಅಧುನಿಕ ಸುಧಾರಣೆಗೆ ಒಳಪಟ್ಟ ಕೆಲವು ಜನರು ಧರ್ಮದಿಂದ ಭರತ ಖಂಡದ ನಾಶವಾಯಿತೆಂದು ಹೇಳುತ್ತಾರೆ. ಅವರಿಗೆ ಸಾಮಾನ್ಯ ಧರ್ಮ ಹಾಗು ವಿಶೇಷ ಧರ್ಮ ಇವೆರಡರೊಳಗಿನ ಭೇದವೇ ತಿಳಿಯಲಿಲ್ಲೆಂದು ಹೇಳಬೇಕಾಗುತ್ತದೆ. ಸಾಮಾನ್ಯ ಧರ್ಮವು ಎಂದೂ ಬದಲಾಗುವದಿಲ್ಲ. ವಿಶೇಷ ಧರ್ಮವು ಕಾಲಮಾನದಿಂದ ಬದಲುತ್ತದೆ. ಅದು ವಿಶಿಷ್ಟ ಸ್ಥಿತಿಯಲ್ಲಿ ವ್ಯಕ್ತಿಗತ ಧರ್ಮವಾಗಿದೆ ಉದಾಹರಣಾರ್ಥವಾಗಿ ಒಂದು ಕುಟುಂಬದಲ್ಲಿ ಕಾರಣಾಂತರದಿಂದ ಸುಗ್ಗಿ ಹಬ್ಬವು ನಿಂತುಹೋಯಿತೆಂದು ತಿಳಿಯುವಾ, ಮುಂದೆ ದೀಪಾವಳಿ ಹಬ್ಬವು ಬಂತು. ಆಗ ಆ ಕುಟುಂಬದ ಜನರು ಈ ದೀಪಾವಳಿಯ ದಿನ ಸುಗ್ಗಿ ಹಬ್ಬ ಮಾಡುವಾ ಎಂತ ಬೆಳಿಗ್ಗೆ ಸುಗ್ಗಿ ಹಬ್ಬದ ಆಚರಣೆಯನ್ನು ಕೈಕೊಂಡರೆ ನೆರೆಹೊರೆಯ ಜನರು ಅದನ್ನು ಕೇಳಿ "ಇವರ ಮನೆಯಲ್ಲಿ ಶಂಖನಾದವ್ಯಾಕೆ?" ಎಂತ ಆಶ್ಚರ್ಯದಿಂದ ಸಂಕಟನಿವಾರಣೆ ಮಾಡಬೇಕೆಂದು ಅವರ ಬಳಿಗೆ ಓಡಿ ಬಂದಾರು! ಅದರಂತೆಯೇ ಇನ್ನೊಂದು ಸಣ್ಣ ಸಂಗತಿಯು. ನಾನು ಪುಣೆಯಲ್ಲಿ ಒಂದು ವ್ಯಾಖ್ಯಾನ ಕೊಟ್ಟೆ. ನನ್ನ ಭಾಷಣದಿಂದ ಜನರ ಮನರಂಜನೆಯಾಯಿತು. ಕೂಡಲೆ ಅವ್ವಾಗೆ ಬಾರಿಸೋಣಾಯಿತು. ಸಮೀಪದಲ್ಲಿ ಒಬ್ಬ ಕೀರ್ತನಕಾರನಿದ್ದನು. ಅವನು ತನ್ನ ಹರಿಕೀರ್ತನೆಯಲ್ಲಿ ನನ್ನಂತೆಯೇ ಕೋಟಿಕ್ರಮ ಹೂಡಬೇಕೆಂದು ಯೋಚಿಸಿದನು. ಅವನ ಮೇಲೆ ೧೨೪ (ಅ) ಕಲಮಿನಂತೆ ರಾಜದ್ರೋಹದ ಆರೋಪ ಬಂತು. ಆರೋಪಿಯು ತನ್ನ ಜಬಾನಿಯಲ್ಲಿ "ತಾಂಬೇ ಶಾಸ್ತ್ರಿಗಳು ವ್ಯಾಖ್ಯಾನ ಮಾಡುವ ಪದ್ಧತಿಯು ನನಗೆ ಇಷ್ಟ ಕಂಡದ್ದರಿಂದ ನಾನು ಹಾಗೆ ಕೀರ್ತನ ಮಾಡಬೇಕಾಯಿತು. ಹೊರತು ನನ್ನ ಕೇತು ಭಾಷಣದಿಂದ ಇದ್ದಿಲ್ಲ" ಎಂದನು. ವ್ಯಕ್ತಿ ಧರ್ಮ ಮತ್ತು ಕ್ರಿಯೆಗಳು ಭಿನ್ನ ಭಿನ್ನವಿರುತ್ತವೆ. ಕೈಲಾಸವಾಸಿ ಶ್ರೀ ಗೋಖಲೆಯ ವಿಷವನ್ನು ಕುಡಿದರೆಂದು, ಅನ್ಯರೇನಕ್ಕೆ ಸಾಧ್ಯವಾಗುತ್ತೇ? ಸಾಮಾನ್ಯ ಧರ್ಮ-ವಿಶೇಷ ಧರ್ಮಗಳ ತಾರತಮ್ಯವು ಈ ಬಗೆಯಾಗಿರುತ್ತದೆ.

ಇದನ್ನು ನಾನು ಇನ್ನೂ ಸ್ಪಷ್ಟಗೊಳಿಸುವೆನು. ನಾನು ಒಬ್ಬ ಮನುಷ್ಯನಿಗೆ ಕೆಟ್ಟ ಶಬ್ದಗಳನ್ನಾಡಿದರೆ ಆತನು ನನಗೆ ಕೆಟ್ಟ ಶಬ್ದಗಳಿಂದಲೇ ಕರೆಯುವನು; ನಾನು ಒಳಿತು ಮಾಡಿದರೆ ಬೇರೆಯವರು ಒಳಿತು ಮಾಡುವರು. 'ನ ತತ್ಪರಸ್ಯ ಸಂದಧ್ಯಾತ್ಪ್ರತಿಕೂಲಂ ಯದಾತ್ಮನಃ। ಏಷ ಸಾಮಾನ್ಯ ಧರ್ಮಃ' ತನಗೆ ಬೇರೆಯವರು ಯಾವದನ್ನು ಮಾಡಬಾರದೋ ಅಂಥಾದ್ದನ್ನು ತಾನು ಹೆರವರಿಗೆ ಮಾಡಬಾರದು. ಇದು ಸಾಮಾನ್ಯ ಧರ್ಮವು. ಇತ್ತ ವರ್ತಮಾನ ಪತ್ರಿಕೆಗಳು ಬಹಳವಾಗಿ ಬೆಳೆದಿವೆ. ಟೀಕೆಗಳಂತೂ ಕೇಳುವದು ಬೇಡ. ಒಬ್ಬನು ಲುಚ್ಛ-ಕೊಳ್ಳೆಗಾರನೆಂದು ಮತ್ತೊಬ್ಬನ ವಿಷಯಕ್ಕೆ ಬರೆದ ಕೂಡಲೇ ಆತನು ಅದರಂತೆಯೇ ತಿರುಗಿ ಬರೆಯುತ್ತಾನೆ. "ವಿಕಟೋ ಶಾಸ್ತ್ರಿ" "ಡೇಂಬಿಸ" "ಗುಲಾಮ" ಎಂಬ ಉಪನಾಮಗಳು ಬಹಳವಾಗಿ ಕೇಳಬರುತ್ತವೆ. ಇಂಥ ಶಬ್ದಗಳನ್ನು ಬೇರೆಯವರ ವಿರುದ್ಧ ಬರೆಯಬೇಕಾದರೆ ಹಲವುಸಾರೆ ವಿಚಾರ ಮಾಡಬೇಕು, ಯಾರೊಬ್ಬ ಯುರೋಪಿಯನನಿಗೆ ನೀನು "ಗುಲಾಮ" ನೆಂದರೆ ಆತನು ಕೂಡಲೆ ಗುಂಡು ಹಾರಿಸಿ ಬಿಡುವನು.. ಪತ್ರಿಕೆಗಳಲ್ಲಿ ಒಮ್ಮೊಮ್ಮೆ ಜಾಹೀರಾತು ಓದಿದರೆ ಬಹಳ ಬೇಸರ ಬರುತ್ತದೆ. ವೈದ್ಯರಾಜನೊಬ್ಬನು 'ಸೂತಶೇಖರ ಮಾತ್ರೆ' ಯ ಬಗ್ಗೆ ಒಂದು ಜಾಹೀರಾತು ಕೊಟ್ಟಿದ್ದನು. ಅದರಲ್ಲಿ ಪಿತ್ಥಕ್ಕೂ ಸೂತಶೇಖರ; ಕಾಣೆಯಾಗಿ ಹೋದ ಎಮ್ಮೆ ಪತ್ತೆ ಮಾಡುವದಕ್ಕೂ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು !

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಾಳಜಿ ತೆಗೆದುಕೊಳ್ಳಬೇಕು, ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು, ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಸಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೩ ಔನ್ಸಿಗೆ	ರೂ.	೨—೦—೦
೧ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಅಥವಾ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.- LTD.

POST BOX, 2082 **BOMBAY.**

ಸೂತಕಶೇಖರ. ಇಷ್ಟು ಅವಾಂತ್ರವ ಬರೆದು ಮೇಲೆ ಬೇರೆ ಯಾವರು ಕಂಡಕರಿದ್ದರೆ. ಆ ತನ್ನ ಸೂತಕಶೇಖರವನ್ನೇ ಕೊಳ್ಳಬೇಕೆಂದು ಪರರಿಗೆ ಹಳಿಯುವ ದುರಾಗ್ರತೆಯ ಸೂಚನೆ. ಪರರೂ ಹೀಗೆಯೇ ಪ್ರತಿಜಾಹೀರಾತು ಕೊಡುತ್ತಾರೆ. ಇಂಥ ಪ್ರಕಾರಕ್ಕೆ ಸಾಮಾನ್ಯ ಸಮಾಜದಲ್ಲಿ ಎಡೆಯಿಲ್ಲ. ಜಿಲ್ಲೆದೊಳಗಿನ ನಿಯಂತೆ ಸಾಮಾನ್ಯ ಧರ್ಮವು ಬೇರೆ ರೂಪವನ್ನು ಹೊಂದದೆ ಎಲ್ಲರಿಗೂ ಸರಿಯಾಗಿ ತೋರುತ್ತದೆ.

* * *

ಕೆಲವು ಜನರು ಧಾರ್ಮಿಕರೆಂತು ನಟಿಸಿಕೊಂಡು ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಕೊಡುತ್ತಾರೆ. ಅದನ್ನೇ ಅವರಿಗೆ ಒಂದು ದೇವಾಲಯದಲ್ಲಿ ಬಂದು ಪ್ರಮಾಣ ಮಾಡಿ ಹೇಳಬೇಕೆಂದು ಕೇಳಿದರೆ ಒಪ್ಪುವದಿಲ್ಲ. "ಇದು ಕೋರ್ಟಲ್ಲ; ದೇವಸ್ಥಾನವು" ಎಂತ ಹೇಳುತ್ತಾರೆ. ಇಂಥ ಜನರು ಭಸ್ಮ-ರುದ್ರಾಕ್ಷಿ ಮುಂತಾದವುಗಳನ್ನು ಧರಿಸಿ ನಿತ್ಯ ಸಂಧ್ಯಾವಂದನಕ್ಕೆ ಒಂದು ಹರಿವಾಣ ತುಂಬ ನೀರು ಒರೆದು ಮಾಡುತ್ತಾರೆ. ಸುಳ್ಳುತನಕ್ಕೆ ಇವೆಲ್ಲ ಆಚ್ಛಾದನಗಳೆಂದು ಅವರು ತಿಳಿದಿರಬಹುದು. 'ಪಂಢರಿಯ ವಾರಿ' ಯನ್ನು ಕೊಂಡು ಯಾತ್ರೆ ಮಾಡುವ ಜನರು ದೊಡ್ಡ ದೊಡ್ಡ ಅಪರಾಧ ಮಾಡಿ ಜೈಲಿಗೆ ಹೋಗುವದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನನ್ನ ಈ ಮಾತನ್ನು ಕೇಳಿ ಇಲ್ಲಿ ನೆರೆದ ಜನರು ಭಸ್ಮ-ರುದ್ರಾಕ್ಷಿಗಳನ್ನು ಧರಿಸಬಾರದೆಂಬ ಭಾವನೆ ಮಾಡಿಕೊಳ್ಳಬಹುದು. ಆದರೆ, ಅದು ನನ್ನ ಹೇತುವಲ್ಲ. ಉಗಿಬಂಡಿಯು ಸ್ಟೇಶನಿನಲ್ಲಿ ಸೇರಬೇಕಾದರೆ ಅಥವಾ ರೈಲು ಮಾರ್ಗದ ಮೇಲೆ ಸುರಕ್ಷಿತವಾಗಿ ಓಡಾಡಬೇಕಾದರೆ, ಸನ್ನೆಗಾಗಿ ಒಂದು ಸಣ್ಣ ಹಲಿಗೆಯ ತುಂಡು ಒಂದು ಕಂಬಕ್ಕೆ ತೂಗಿಸಿದ್ದು ದೂರದಿಂದ ಕಾಣುತ್ತದೆ. ಅದು ಅಡ್ಡ ಬಿದ್ದರೆ ಮಾತ್ರ ಉಗಿಬಂಡಿಯು ಮುಂದೆ ಸಾಗುತ್ತದೆ; ಇಲ್ಲವಾದರೆ ತನ್ನ ಗತಿಯನ್ನು ನಿಲ್ಲಿಸಿಬಿಡುತ್ತದೆ. ಆದರೆ, ಆ ಸಣ್ಣ ಹಲಿಗೆಯ ತುಂಡೇನು ಉಗಿಬಂಡಿಯಲ್ಲ. ಅದು ಬರೇ "ಸಿಗನಲ್ಲ" ಯಾನೆ ಸನ್ನೆಯು. ಅದರಂತೆಯೇ ಭಸ್ಮ-ರುದ್ರಾಕ್ಷಿಧಾರಣವು ಧರ್ಮವಲ್ಲ. ಇವು ಧಾರ್ಮಿಕ ಮನುಷ್ಯನ ಚಿನ್ಹಗಳಾಗಿರುತ್ತವೆ. ಇವನ್ನು ಧರಿಸಲೇಬೇಕು. ಆದರೆ, ಇವುಗಳೇ ಸರ್ವಸ್ವವೆಂದು ತಿಳಿಯಲಾಗದು. ಹಳ್ಳೇ ಭಸ್ಮಧಾರಣ ಮಾಡುವವನೂ, ಮಾಲೆಗಳನ್ನು ಧರಿಸುವವನೂ ಇರಾಣಿ ಜಾತಿಯವನ ಅಂಗಡಿಯಲ್ಲಿ ಚಹಾ ಕುಡಿಯಲಿಕ್ಕೆ ಹೋಗುವದೇನೋ ನಿಜ. ಆದರೆ ಅವನಿಗೆ ಅವುಗಳ ಪಾವಿತ್ರ್ಯವು ಹೊಳೆದು ಅದನ್ನು ಬೇರೆ ಜನರ ದೃಷ್ಟಿಗೆ ಬೀಳದಂತೆ ಯಾವದರೂ ಅವನ್ನು ಅಡಗಿಸಿಕೊಳ್ಳಲಿಚ್ಛಿಸುತ್ತಾನಲ್ಲವೇ?

* * *

ಧರ್ಮಾಚರಣೆಯನ್ನು ಹೇಗೆ ಮಾಡಬೇಕು? "ದೃಷ್ಟಿಪೂತಂ ನ್ಯಸೇತ್ಪಾದಂ| ವಸ್ತ್ರಪೂತಂ ಪಿಬೇಜ್ಜಲಂ| ಶಾಸ್ತ್ರಪೂತಂ (ಸತ್ಯಪೂತಂ) ವದೇದ್ವಾಚಂ| ಮನಃಪೂತಂ ಸಮಾಚರೇತ್ ||" ಎಂತ ಹೇಳಲ್ಪಟ್ಟಿದೆ. ಪ್ರತಿಯೊಂದು ಸಂಗತಿಯನ್ನು ಶಾಸ್ತ್ರಪೂತ ಅಂದರೆ ಶಾಸ್ತ್ರದ್ರೋಹವಾಗದಂತೆ ಮಾತಾಡಬೇಕು. ಶಾಸ್ತ್ರಶುದ್ಧವೆಂದರೆ ವ್ಯಾಕರಣಶುದ್ಧವೇನು? "ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್" ಎಂತ ಗೀತೆಯಲ್ಲಿ ಭಗವಂತನು ಹೇಳುತ್ತಾನೆ. ಅನ್ಯರು ಉದ್ವೇಗಗೊಳ್ಳುವ ವಾಣಿಯನ್ನು ಎಂದೂ ಉಪಯೋಗಿಸಬಾರದು. 'ಕಾಕಸ್ಯ ಕತಿ ದಂತಾಃ' ಎಂಬ ಶುಷ್ಕವಾದವನ್ನೂ ಹೂಡಬಾರದು. ಯಾಕೆಂದರೆ ಕಾಗೆಗೆ ಹಲ್ಲು ಎಷ್ಟೆಂದು ತಿಳಕೊಂಡು ಯಾರೇನು ಮಾಡಬೇಕು? "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾನ್ನ ಬ್ರೂಯಾತ್ಸತ್ಯಮಪ್ರಿಯಂ| ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಃ ಸನಾತನಃ" ಈ ಶ್ಲೋಕದ ನಿಯಮದಂತೆ ಮಾತಾಡಬೇಕು. ಅಂದರೆ ಸತ್ಯ ಮಾತಾಡಬೇಕು; ಮೆಚ್ಚುವಂತೆ ಆಡಬೇಕು; ಹಿತಕರವಾಗದಂಥ ಸತ್ಯವನ್ನು ಮಾತಾಡಬೇಕು; ಹಿತಕರವಾದ ಸುಳ್ಳು ಮಾತಾಡಬಾರದು. ಇದೇ ಸನಾತನ ಧರ್ಮವು.

* * *

ಸತ್ಯವನ್ನು ಹೇಗೆ ಮಾತಾಡಬೇಕು ಎಂಬ ಬಗ್ಗೆ ಪೂರ್ವಕಾಲದ ಋಷಿಗಳು ತಮ್ಮ ಶಿಷ್ಯರಿಗೆ ೧೨ ವರ್ಷ ಶಿಕ್ಷಣ ಮುಗಿದ ಮೇಲೆ ಉಪದೇಶಿಸುತ್ತಿದ್ದರು. ಪ್ರತಿಯೊಬ್ಬ ವಿದ್ಯಾರ್ಥಿಯು ೧೨ ವರ್ಷಗಳ ಗುರುಶುಶ್ರೂಷೆ ಮುಗಿಸಿಕೊಂಡು ತನ್ನ ಮನೆಯ ಕಡೆಗೆ ವಿದ್ಯಾವಿಭೂಷಿತನಾಗಿ ಹಿಂತಿರುಗುವಾಗ ಈ ಉಪದೇಶವಾಗುತ್ತಿತ್ತು. ಆ ಕಾಲಕ್ಕೆ ವಿದ್ಯಾರ್ಥಿಗಳಿಗೆ ಅಂತೇವಾಸಿನ್ ಎಂತ ಹೇಳುತ್ತಿದ್ದರು. ಅಂತೇವಾಸಿನ್ ಅಂದರೆ ಸಮೀಪದಲ್ಲಿ ವಾಸಿಸುವವನು ವಿದ್ಯಾರ್ಥಿಯು. ಈಗಲೂ ಈ ಉಪದೇಶವು ಸಮಾವರ್ತನ ಕಾಲಕ್ಕೆ ಮಾಡಲ್ಪಡುತ್ತದೆ. ಈಗಿನ ಯುನಿವ್ಹರ್ಸಿಟಿಗಳಲ್ಲಿಯೂ ಡಿಗ್ರಿಗಳನ್ನು ಕೊಡುವಾಗ ಕೊನವ್ಹೊಕೇಶನ್ ಎಂಬ ಸಮಾವರ್ತನ ಸಮಾರಂಭವು ಮಾಡಲ್ಪಡುತ್ತದೆ. 'ಧರ್ಮಾನ್ನ ಪ್ರಮದಿತವ್ಯಂ| ಸತ್ಯಾನ್ನ ಪ್ರಮದಿತವ್ಯಂ| ಸ್ವಾಧ್ಯಾಯಾನ್ನ ಪ್ರಮದಿತವ್ಯಂ| ಮಾತೃದೇವೋ ಭವ| ಪಿತೃದೇವೋ ಭವ| ಆಚಾರ್ಯದೇವೋ ಭವ|' ಮುಂತಾದ ಶಿಕ್ಷೋಪನಿಷದವನ್ನು ಆ ಕಾಲಕ್ಕೆ ಗುರುಗಳು ವಿದ್ಯಾರ್ಥಿಗಳಿಗೆ ಹೇಳುತ್ತಿದ್ದರು. ಈಗ ಡಿಗ್ರಿ ಕೊಡಬೇಕಾದರೆ ಹ್ಯಾಕೋರ್ಟ ಜಜ್ಜ್, ಗವ್ಹರ್ನರ ಮುಂತಾದ ಅಧಿಕಾರಿಗಳ 'ವಿದ್ಯೆಯ ಶೀಲವನ್ನು' ಕೊಟ್ಟು ಉಪದೇಶಿಸುತ್ತಾರೆ. ಹಿಂದಿನ ಋಷಿಗಳು 'ಸ್ವಾಧ್ಯಾಯಾನ್ಮಾ ಪ್ರಮದಃ' ಎಂಬ ಒಂದೇ ಸೂತ್ರವನ್ನು ಚನ್ನಾಗಿ ತಿಳಿಸಿಹೇಳುತ್ತಿದ್ದರು. ವಿದ್ಯೆಯ ಉಪಯೋಗವನ್ನು ಸತ್ಯಾಸತ್ಯ ಮೀಮಾಂಸೆಯಲ್ಲಿಯೇ ಕಳೆಯಬೇಕೆಂದು ಹೇಳುತ್ತಿದ್ದರು.

* * *

ಈ ಸತ್ಯಾಸತ್ಯ ಮೀಮಾಂಸೆಯು ದೇವಿಭಾಗವತದಲ್ಲಿ ಚನ್ನಾಗಿ ಹೇಳಲ್ಪಟ್ಟಿದೆ. 'ಸತ್ಯಂ ನ ಸತ್ಯಂ ಖಲು ಯತ್ರ ಹಿಂಸಾ| ದಯಾನ್ವಿತಂ ಚಾನೃತಮೇವ ಸತ್ಯಂ|' ಸತ್ಯದಿಂದ ಹಿಂಸೆಯಾಗುತ್ತಿದ್ದರೆ ಅದು ಸತ್ಯವಲ್ಲ; ಸುಳ್ಳುತನದಲ್ಲಿ ದಯೆಯು ಕೂಡಿಕೊಂಡಿದ್ದರೆ ಅದೇ ಸತ್ಯವು. ತಂದೆಯು ಮನೆಯಲ್ಲಿ ಇಲ್ಲದ ಸಮಯ ಕಳ್ಳರು ಆಲ್ಲಿ ಬಾಲಕನಿಗೆ 'ನಿನ್ನ ತಂದೆಯ ಕೋಶದ ಕೀಲಿ ಎಲ್ಲಿ?' ಎಂತ ಕೇಳಿದರೆ, ಆ ಹುಡುಗನು ಅಸತ್ಯದಿಂದ ಕೀಲಿಗಳನ್ನು ತೋರಿಸದೆ ಇದ್ದರೆ ಅದರಿಂದ ದೋಷ ಬರಲಾರದು. ಯಾಕೆಂದರೆ ಆ ಕಾಲಕ್ಕೆ ಅತನು ಸತ್ಯ ಮಾತಾಡಿದರೆ ಬಹಳ ಹಾನಿಯಾಗಿ ತಂದೆಯ ವಿತ್ತವು ನಷ್ಟವಾಗುತ್ತಿತ್ತು. ತಾಯಿಯು ಸಣ್ಣ ಮಗುವಿಗೆ ಕಹಿ ಮದ್ದು ಕುಡಿಸಬೇಕಾದರೆ ಸವಿಯನ್ನು ಬಾಯಿಗೆ ಹಚ್ಚಿ ಆ ಮೇಲೆ ಮದ್ದನ್ನು ಎರೆದುಬಿಡುತ್ತಾಳೆ. ವಕೀಲರು ಸತ್ಯವನ್ನು ಗೆಲ್ಲುವದಕ್ಕಾಗಿ ಕೋರ್ಟ ಸಾಕ್ಷಿಯನ್ನು ಸರಿಯಾಗಿ ಮಾಡಿಸುತ್ತಾರೆ. ವಕೀಲರು ಹಾಗೆ ಮಾಡದಿದ್ದರೆ ಸತ್ಯವು ಗೆಲ್ಲುವದಿಲ್ಲ. ಸತ್ಯ ರಕ್ಷಣೆಗಾಗಿ ಕೆಲ ಸುಳ್ಳು ವ್ಯವಸ್ಥೆ ಮಾಡುವಷ್ಟು ಅಧಿಕಾರವು ಮಾತ್ರ ವಕೀಲರಿಗೆ ಉಂಟು. ಸತ್ಯ ವಿಜಯಕ್ಕಾಗಿ ಅವಶ್ಯವಿದ್ದರೆ ಅಸತ್ಯ ಕೈಕೊಳ್ಳಲೇಬೇಕು. ಅವಕಾಶ್ಯವಿದ್ದ ವಕೀಲನು ಶಾಂತಿಯ ಪಾಪಸ್ತರನಾಗಿ ಧಂದೆಯನ್ನು ಮಾಡಬಹುದು; ಅವನು ವಕೀಲಿ ಧಂದೆಗೆ ನಿಷ್ಪ್ರಯೋಜಕನಾಗುವನು. ಸತ್ಯದಲ್ಲಿಯೂ ಎರಡು ಭೇದಗಳುಂಟು. 'ಋತಂಚ ಸತ್ಯಂ ಚ' 'ಸತ್ಯಂಚಶಮೇನ' ಎಂಬ ಮಂತ್ರಗಳು ನಮಗೆ ಕಲಿಸಲ್ಪಡುತ್ತವೆ. 'ಋತಂ' ಅಂದರೆ ಆಧ್ಯಾತ್ಮಿಕ ಸತ್ಯ; ಸತ್ಯವೆಂದರೆ ವ್ಯಾವಹಾರಿಕ ಸತ್ಯ. ಈ ಎರಡೂ ಶಬ್ದಗಳು ಸಮಾನಾರ್ಥಕ ಪಾರಿಭಾಷಿಕ ಶಬ್ದಗಳು. ಅದರಲ್ಲಿ ಸ್ವಲ್ಪ ಭೇದವಿದೆ. ಆಧ್ಯಾತ್ಮಿಕ ಸತ್ಯವು ಶ್ರೇಷ್ಠ ತರಗತಿಯದು; ವ್ಯಾವಹಾರಿಕ ಸತ್ಯವು ಸಾಮಾನ್ಯ ಸತ್ಯವು.

* * *

ಸತ್ಯಾಸತ್ಯತೆಯಲ್ಲಿ ಹೇತುವು ಪರೀಕ್ಷಿಸಲ್ಪಡುತ್ತದೆ. ಒಬ್ಬ ಬ್ರಾಹ್ಮಣನು ಅನುಷ್ಠಾನಕ್ಕೆ ಕೂತುಕೊಂಡಾಗ ಒಂದು ಗೋವು ಮುಂದಿನಿಂದ ಓಡುತ್ತ ಹೋಯಿತು. ಅದರ ಹಿಂದೆ ಒಬ್ಬ ಕಟುಕನು ಸುರಿಯ ಕತ್ತಿಯನ್ನು ಹಿಡಕೊಂಡು 'ಆಕಳೆಲ್ಲಿಗೆ ಹೋಯಿತು?' ಎಂದು ಕೇಳಿದರೆ ಆತನು ಉತ್ತರವೇನು ಕೊಡಬೇಕು? ಕೈಯಲ್ಲಿ ಶಸ್ತ್ರ ನೋಡಿದೊಡನೆಯೆ ಆತನಿಗೆ ಆ ಕಟುಕನ ಹೇತು ವ್ಯಕ್ತವಾಗಿದ. ಆ ಕಾಲಕ್ಕೆ ಅವನು ವಕ್ರೋಕ್ತಿಯನ್ನು ಕೊಡಲೇಬೇಕು 'ನನ್ನ ಕಣ್ಣುಗಳು ನೋಡಿದರೂ ಅವು ಹೇಳಲಾರವು; ಬಾಯಿಗೆ ಹೇಳಲಿಕ್ಕೆ ಬಂದರೂ ಅದು ಆಕಳನ್ನು ನೋಡಲಿಲ್ಲ' ಒಬ್ಬಗೆ ಆಕಳನ್ನು ಆ ಬ್ರಾಹ್ಮಣನು ತೋರಿಸಲಿಲ್ಲ. ಅಂದ ಮೇಲೆ ಇದು ಅಸತ್ಯವಾಗದು. ಆದರೆ ವಂಚಿಸುವ ಸತ್ಯವು ಬೇರೆತರದ್ದಿರುತ್ತದೆ. ಹಣ್ಣು ಮಾರುವವನು ತಲೆಯ ಮೇಲೆ ಭಾರವಾದ ಹಣ್ಣಿನ ಬುಟ್ಟಿಯನ್ನು ಹೊರುತ್ತ ಹೋಗುವಾಗ ಶಾಲೆಗೆ ಹೋಗುವ ತುಂಟ ಹುಡುಗರಿಬ್ಬರು ಅವನನ್ನು ಹಿಂಬಾಲಿಸಿದರು. ಒಬ್ಬನು ಮೆಲ್ಲಗೆ ಎರಡು ಹಣ್ಣು ಎಬ್ಬಿಸಿ ತನ್ನ ಹಿಂದಿನವನ ಜೇಬಿನಲ್ಲಿ ಸೇರಿಸಿಬಿಟ್ಟನು. ಸ್ಪರ್ಶಜ್ಞಾನವಾಗಿ ಹಣ್ಣು ಮಾರುವವನು ಪರಿಕಿಸಿ ನೋಡಲು ೨ ಹಣ್ಣುಗಳು ಕಡಿಮೆ ಕಂಡವು. ಆ ಕಳ್ಳ ಹುಡುಗರಿಗೆ ಆತನು ಕೇಳಲು, ಮುಂದಿನವನು 'ಜಗದಂಬೆಯ ಆಣೆಯಾಗಿ ಹಣ್ಣು ನನ್ನಲ್ಲಿಲ್ಲ.' ಹಿಂದಿನವನು 'ಹಣ್ಣುಗಳನ್ನು ನಾನು ತೆಗೆಯಲಿಲ್ಲ.' ಎಂತ ಅನುಕ್ರಮವಾಗಿ ಹೇಳಿದರೆ, ಆ ತುಂಟರು ಮೇಲೆ ಹೇಳಿದ ಬ್ರಾಹ್ಮಣನ ಪಂಗ್ತಿಗೆ ಹೋಗಿ ಕೂತುಕೊಳ್ಳುವರೇ? ಛೇ, ಎಂದಿಗೂ ಇಲ್ಲ. ಇದು ವಂಚಕತನದ ಸತ್ಯವು. ಇದರಿಂದ ಕೇಡೇ ಉಂಟು. ಸಾಲ ಕೊಂಡ ಗೃಹಸ್ಥನೆಡೆಗೆ ಧನಕೋನು ಬಂದಾಗ ಹುಮ್ಮಸ್ಸು ಸಂಧಿಯ ತಪ್ಪಿಸಿಕೊಳ್ಳಬೇಕೆಂದು ಮಗನಿಗೆ ತಾನು ಮನೆಯಲ್ಲಿಲ್ಲವೆಂದು ಹೇಳಲಿಕ್ಕೆ ಹುಡುಗನಿಗೆ ಆಜ್ಞೆ ಮಾಡುತ್ತಾನೆ. ಆ ಹುಡುಗನು ಜಾಣನಾದರೆ ಹಳ್ಳೇದು; ಇಲ್ಲವಾದರೆ "बाबा म्हणतात मी घरी नाही म्हणून" ಹೀಗೆ ಗೊಂದಲವಾಗುತದೆ.

ಹಿಮ್ಮೆ ನಾನೊಂದು ಊರಿಗೆ ಹೋಗಿದ್ದೆ. ಅಲ್ಲಿ ಒಂದು ದಿನ ಕೀರ್ತನೆ ನಡೆದಿತ್ತು. ಹರಿದಾಸನು

ಶ್ರೀ ಕೃಷ್ಣನ ಅನಂತರಂಗದ ಗೋಪ ಬಾಲಕರ ವರ್ಣನೆ ಮಾಡುತ್ತಿದ್ದನು. ಆ ಗೋಪ ಬಾಲಕರಲ್ಲಿ ಚೆಂಬ್ಯಾ ಹೆಸರಿನ ಒಬ್ಬ ಹುಡುಗನ ವರ್ಣನೆ ಬಂತು ಕೀರ್ತನಕಾರನು ಮುಂದೆ ಕೂತುಕೊಂಡ ಒಬ್ಬ ಗೃಹಸ್ಥರನ್ನು ಉದ್ದೇಶಿಸಿ ಅವರಂತೆಯೇ ಹುಡುಗನ ರೂಪು-ಲಾವಣ್ಯಗಳಿದ್ದವೆಂದು ಹೋಲಿಸಿದನು. ಆ ಗೃಹಸ್ಥನಿಗೆ ಕೂಡಲೆ ಸಿಟ್ಟು ಬಂದು ವ್ಯಕ್ತಿ ಉಪಮೆಯನ್ನು ಕೊಟ್ಟು ಅಣಕಿಸಿದ ಬಗ್ಗೆ ದೋಷ ಹೊರಿಸಿದನು. ಇಂಥ ಪ್ರಸಂಗಗಳಲ್ಲಿಯೂ ನಮ್ಮ ಮಾತು ಅಸಂತೋಷಕರವಾಗಿರಬೇಕು.

* * *

ಸತ್ಯ ಹೇಳುವ ಪದ್ಧತಿಯು ಪ್ರಿಯವಾಗಿರದೇ ಹಲವರಿಗೆ ಸತ್ಯ ಹೇಳುವ ಪದ್ಧತಿಯೇ ಗೊತ್ತಿರುವದಿಲ್ಲ ಅದರಿಂದ ಅಧರ್ಮವಾಗುತ್ತದೆ. ಜಾತಕ ಹೇಳುವವರು ಬಹು ಜಾಣ್ಮೆಯಿಂದ ಭವಿಷ್ಯದ ಸತ್ಯ ಹೇಳಬೇಕಾಗುತ್ತದೆ. ಒಬ್ಬ ಧನಾಢ್ಯನಿಗೆ ಜಾತಕ ತೋರಿಸುವ ಮರುಳಿತ್ತು. ಹೊರಗಿನ ಜೋಯಿಸರೊಬ್ಬರು ಆ ಊರಿಗೆ ಬಂದರು. ಆತನು ತನ್ನ ಮನೆಯವರ ಜಾತಕಗಳನ್ನೆಲ್ಲ ಆ ಜೋಯಿಸರ ಮುಂದಿಟ್ಟು ಸರಿಯಾಗಿ ಜಾತಕದ ಸಂಗತಿ ಹೇಳಿದರೆ ಇನಾಮು ಕೊಡುವೆನೆಂದು ಹೇಳಿದನು. ಜೋಯಿಸರು ಜಾತಕಗಳನ್ನೆಲ್ಲ ನೋಡಿದರು, ಯಜಮಾನನ ಆಯುಷ್ಯವು ಎಲ್ಲರಿಗಿಂತ ಹೆಚ್ಚಿನದು, ಮನೆಯ ಜನರೆಲ್ಲರೂ ಈತನ ಮುಂದೆಯೇ ಸಾಯುವರು, ಆದರಿಂದ ಈತನು ನಿರ್ವಂಶನಾಗುವನೆಂದು ಜೋಯಿಸರು ಹೇಳಿದರು. ಇದರಿಂದ ಧನಾಢ್ಯನಿಗೆ ಸಿಟ್ಟು ಬಂದು ಜೋಯಿಸರಿಗೆ ಧೈರ್ಯ, ವೇತನವೇನೂ ಕೊಡದೆ ಕಳುಹಿದನು. ತರುವಾಯ ಜೋಯಿಸರು ಬಂದರು, ಆತನು ಪ್ರಿಯ ಮಾತಿನಲ್ಲಿ ನಿಪುಣನಿದ್ದನು ಆತನಿಗೂ ಈ ಜಾತಕಗಳು ತೋರಿಸಲ್ಪಟ್ಟವು. "ನಿಮ್ಮ ಮನೆಯಲ್ಲಿ ಜಾತಕಗಳಲ್ಲಿ ನಿಮ್ಮ ಜಾತಕವೇ ಶ್ರೇಷ್ಠವಾದದ್ದು. ಎಲ್ಲರಿಗಿಂತ ನೀವೇ ದೀರ್ಘಾಯುಷಿಗಳು," ಇದು ಮೇಲ್ಕಂಡ ಸತ್ಯವನ್ನೇ ದೀರ್ಘಾಯುಷ್ಯವೆಂಬ ಪಥ್ಯ ಮಾತಿನಿಂದ ಹೇಳಿದನು. ಅನಂತರವಾಗಿ ಈತನಿಗೆ ತುಂಬಾ ವೇತನ ಸಿಕ್ಕಿತು.

* * *

ಸತ್ಯವನ್ನು ಪ್ರಿಯವಾಗಿ ಹೇಳುವದರಿಂದ ದೂರ ದೃಷ್ಟಿಯ ಕಡೆಯಿಂದ ಜೀವ ಪಾರುಗಾಣಿಸಿಕೊಂಡ ಉದಾಹರಣೆಗಳೂ ಉಂಟು. ಒಮ್ಮೆ ಒಬ್ಬ ಅರಸನು ತನ್ನ ಅಧಿಕಾರಿಗಳ ಕಾರಭಾರವನ್ನು ಪರೀಕ್ಷಿಸಿದನು. ಒಬ್ಬ ಉಪಾಧ್ಯಾಯನು ಮಂತ್ರಿಯು ಒಬ್ಬ ಕಾಲಕರ್ಣ (ಶ್ವಾನಭೋಗ) ಯು ಲಂಚ ತಿಂದದ್ದನ್ನು ಕಂಡು ಹಿಡಿದನು. ಅರಸನು ಆ ಮಂತ್ರಿಗೆ "ನಿನಗೆ ಲಂಚ ತಿಂದದ್ದು ಹೇಗೆ ತಿಳಿಯಿತು?" ಎಂದು ಕೇಳಿದನು. ಆತನು ಪುಷ್ಟನಾಗಿದ್ದ ಮೂಲಕ ಲಂಚ ತಿಂದದ್ದು ನನಗೆ ತಿಳಿಯಿತು ಎಂದು ಉತ್ತರ ಕೊಟ್ಟನು. ಕೊಟ್ಟ ತಾರೆಂದು ಅರಸನ ಗ್ರಹಿಕೆಯಾಯಿತು. ಕೆಲವು ದಿವಸಗಳಲ್ಲಿ ಒಬ್ಬ ಸಣ್ಣ ಪಗಾರದ ಶ್ವಾನಭೋಗನು ಅರಸನಿಗೆ ಬೆಟ್ಟಿಯಾದನು. ಈತನು ಲಂಚ ತಿಂದಿದ್ದನೆಂದು ಅರಸನ ನಿಶ್ಚಯವಾಯಿತು. ಅವನ ಕೆಲಸದ ರಿಕಾರ್ಡು ಪರೀಕ್ಷಿಸಲಾಯಿತು. ಅದರಲ್ಲಿ ಏನೊಂದು ತಪ್ಪು ಕಾಣದೆ ನಿಷ್ಕಳ ಬರಹದ ಚೊಕ್ಕ ಲೆಕ್ಕವು ಕಂಡಿತು. ಅರಸನಿಗೆ ತನ್ನ ತತ್ವವು ಹೋಯಿತೆಂದು ವ್ಯಸನವಾಯಿತು. ಆ ಶ್ವಾನಭೋಗನಿಗೆ ಅರಸು ಕರೆದು ತೋರಿಸಿದ ಅನೆಯನ್ನು ಅವನ ವಶಕ್ಕೆ ಕೊಡಲಾಯಿತು. "ನೀನು ಇದು ಸತ್ತಹೋಯಿತೆಂದು ಹೇಳದಿದ್ದರೆ ನಿನಗೆ ಗಲ್ಲಿಗೆ ಏರಿಸಲಾದೀತು" ಎಂಬ ಆಜ್ಞೆ ಮಾಡಲಾಯಿತು. ಅರಸನ ಅಪ್ಪಣೆಯಂತೆ ಆ ಬಡ ಶ್ವಾನಭೋಗನು ಆ ಆನೆಯ ಶುಶ್ರೂಷೆ ಮಾಡತೊಡಗಿದನು. ನಿತ್ಯಕ್ಕೂ ಆನೆಯು ಚನ್ನಾಗಿ ಹುಲ್ಲು-ಆಹಾರಗಳನ್ನು ತಿನ್ನುತ್ತದೆಂದು ಆ ಶ್ವಾನಭೋಗನು ಅರಸನಿಗೆ ಹೇಳಿದನು. ದೈವವಶಾತ್ ಆನೆಯು ಕೆಲವು ದಿನಗಳಲ್ಲಿ ತೀರಿಕೊಂಡಿತು. ಅರಸನ ಮುಂಭಾಗದಲ್ಲಿ ಆನೆಯು ಸತ್ತಿತು ಹೇಳಲಿಕ್ಕೆ ನಿತ್ಯದಂತೆ ಕೈ ಜೋಡಿಸಿ ಶ್ವಾನಭೋಗನು ನಿಂತನು. ಆನೆಯು ಕ್ಷೇಮವೆ? ಎಂದು ಅರಸನು ಕೇಳಲು, ಶ್ವಾನಭೋಗನು ಅಹದು 'ಆದರೆ ...' ಎಂದು ಉಚ್ಚರಿಸಿದನು. 'ಆದರೆ ಏನು?' ಎಂದು ಅರಸನು ಗದ್ದರಿಸಲು ಶ್ವಾನಭೋಗನ ಉತ್ತರ ಕೊಟ್ಟದ್ದೇನೆಂದರೆ – "ಆನೆಯು ಮಲಗಿ ಅದೆ. ಆಹಾರ ತಿನ್ನುವದಿಲ್ಲ. ಕಣ್ಣು ಮುಚ್ಚಿಕೊಂಡಿದೆ, ಉಸಿರು ತೆಗೆಯುವದಿಲ್ಲ. ಇತ್ಯಾದಿ ಹೇಳಿದನು. ಹಾಗಾದರೆ, ಆನೆ ಸತ್ತುಹೋಯಿತೆ ಏನು ಹೇಳು ಎನ್ನಲು ... ಕೇಳಲು. "ಸ್ವಾಮೀ! ಆನೆ ಸತ್ತ ... ಎಂದು ನಾನೇ ಹೇಗೆ ಹೇಳಲಿ?" ... ಗಲ್ಲಿಗೇರಿಸಿಕೊಳ್ಳುವ ... ಒಬ್ಬ ಕಾಲಕರ್ಣ ... ಯನ್ನು ಕೇಳಿರಿ.

* * *

... ಒಬ್ಬ ಗ್ರಾಮದ ಶ್ವಾನಭೋಗನಿಗೆ ... ಕಳಿಸಿ ಕೊಟ್ಟನು ... "ನೀವು ಹೇಳುವ ... ಉತ್ತರದೊಳಗೆ ... ವೆನು" ಎಂದು ವ್ಯಕ್ತಿಸಿದನು ... ತನ್ನ ... ಒಳಗೆ ... ದನನ್ನು ... ನ ಶ್ರೀ ಸ ... ವರ್ತನ ... ನಲ್ಲಿ ... ತೋರಿಸಿದನು.

ಶ್ರೀ ಮಹಾವಿಷ್ಣುವು ಚಕಿತನಾಗಿ ಆ ಬಾಲಕರೆಂಗೆ ತಮ್ಮ ಸಭೆಯಲ್ಲಿ ಕರೆಯಿಸಿ ತಾವು ಈ ಉದ್ಧಟತನದ ವಿಚಾರ ಮಾಡಿದನು. "ಸ್ವಾಮೀ, ನನಗೆ ತಮ್ಮ ಅಡಿದಾವರೆಗಳು ವಿಶ್ರಾಂತಿಗಾಗಿ ಬೇಕಾಗಿದ್ದವು. ಈ ಯುಕ್ತಿ ಮಾಡದೆ ಇದ್ದರೆ ನನಗೆ ಈ ಕ್ಷಣಾಂತರವು ದೊರೆಯುತ್ತಿತ್ತೇ? ಎಂದು ಈ ರೀತಿ ಮಾಡಿದೆನು; ಮಹಾಪ್ರಭೋ! ಕ್ಷಮಿಸಬೇಕು," ಎಂದು ಮುಕ್ತಿಯನ್ನು ಯುಕ್ತಿಯಿಂದ ಪಡೆದನಂತೆ!

* * *

ಭಗವಂತನು ಗೀತೆಯಲ್ಲಿ "ಯೇ ಯಥಾ ಮಾಂ ಪ್ರಪದ್ಯಂತೇ। ತಾಂಸ್ತಥೈವ ಭಜಾಮ್ಯಹಂ" ಎಂದು ಬೋಧಿಸಿದ್ದಾನೆ. ಇದೊಂದು ಮುಂಚೆ ಹೇಳಿದ ಸಾಮಾನ್ಯ ತತ್ವದ ನಿರೂಪಣೆಯು. ಇದರ ತಾತ್ಪರ್ಯವನ್ನು ಸ್ವಲ್ಪದರಲ್ಲಿ ಹೇಳಬಹುದು. ಧ್ವನಿಯಂತೆ ಪ್ರತಿಧ್ವನಿ ಒಂದು ಸಣ್ಣ ಸಂಗತಿ ಹೇಳುತ್ತೇನೆ. ವಿಜಾಪುರದಲ್ಲಿ ಗೋಲಗುಮಟವೆಂಬ ಹೆಸರಾದ ಕಟ್ಟಡವಿದೆ. ಪುರಾತನ ಕಾಲದ ಶಿಲ್ಪಸೌಂದರ್ಯ ಕಲೆಯನ್ನು ಶಿಲ್ಪಚಾತುರ್ಯವನ್ನು ಈ ಮಂದಿರದಲ್ಲಿ ಕಾಣಬಹುದು. ಒಮ್ಮೆ ಧ್ವನಿ ತೆಗೆದರೆ ೭ ಬಾರಿ ಪ್ರತಿಧ್ವನಿಯಾಗುತ್ತದೆ. ನಾನು ಮೇಲಿನ ಅಂತಸ್ತು ಏರಿಹೋದೆ. "ನೀನು ಕಳ್ಳ" ಅಂದ ಕೂಡಲೆ "ನೀನು ಕಳ್ಳ; ನೀನು ಕಳ್ಳ," ಎಂದು ೭ ಬಾರಿ ನನಗೆ ಪ್ರತ್ಯುತ್ತರ ಸಿಕ್ಕಿತು. ಕಳ್ಳನೆಂದು ಸಂಬೋಧಿಸುವ ದುರ್ಬುದ್ಧಿ ನನಗೇಕೆ ಹುಟ್ಟಿತ್ತೆ? "ನೀನು ಸತ್ಪುರುಷ" ಅಂದೆ, ಕೂಡಲೆ ೭ ಬಾರಿ ನನ್ನ ಸುಸ್ವರ ಮಧುರ ಧ್ವನಿ ಕೇಳಿಸಿತು. ಈ ಜಗತ್ತು ದೊಡ್ಡ ದೊಡ್ಡ ಗೋಲಗುಮಟವು. ಇಲ್ಲಿ ನಾವು ವರ್ತಿಸಿಕೊಂಡಂತೆ ಜನರು ನಮ್ಮ ಕಡೆ ವರ್ತಿಸುತ್ತಾರೆ. ಇದೊಂದು ಸಾಮಾನ್ಯ ಧರ್ಮತತ್ವವು. ಇದನ್ನು ನಾವು ಪಾಲಿಸದ್ದರಿಂದ ನಮ್ಮ ಅವಸ್ಥೆಯು ಕೆಟ್ಟುಹೋಗಿದೆ.

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪಾಕೀಟುಗಳಿಗೆ ರೂ. ೬	ತೆಂಗಿನ ಗಿಡ ೧೦ ಕ್ಕೆ ... ೧೨ ರಿಂದ ೧೫
(ಎಕಸಿಬಿಷನ್ ...)	ಆ ಜಾತಿಯ ಬಾಳೇ ಗಿಡ ೧೦ ಕ್ಕೆ ... ೬
ಹೂ ಬಳ್ಳಿಗಳ ಬೀಜಗಳು ೧೨ " " ೨॥	ನಿಂಬೆ ಗಿಡ ೩ ಜಾತಿ, ಕಿತ್ತಳೇ ಗಿಡಗಳು, ಚಕೋತ್ರ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಮಫಲ, ಪನ್ನೇರಲ, ಕಂಚೀಕಾಯಿ, ಲಕ್ಸ್ಮಣ,
ಇಂಗ್ಲೀಷು ತರಕಾರಿ ಬೀಜಗಳು ೧೭ " " ೪॥	ಈ ಎಲ್ಲಾ ೧೨ ಗಿಡಗಳಿಗೆ ರೂ. ೬
ನಾಟಿ ೧೬ " " ೨॥	**ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.**
ಸಿಲ್ವರ್ ... ೧ ರತ್ತಲಿಗೆ " ೨॥	ಸೇಬು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨॥
ಬೆಂಗಳೂರು ಬಿಳೀ ಮೂಲಂಗಿ ಬೀಜ ರತ್ತಲಿಗೆ ೨॥	ಪೀಚೆಸ್, ಪ್ಲಮ್ಸ್, ಪಿಯರ್ಸ್ ಗಿಡ ೧೨ ಕ್ಕೆ ೬॥
ಹಸಿರೆ ಸೊಪ್ಪು ೧ ರತ್ತಲಿಗೆ ... ೪	ವಾಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ...
ಕಡುರೆ ಮಸಾಲೆ ಬೀಜ ೧ ರತ್ತಲಿಗೆ ... ೩	೧ ಬುಟ್ಟಿ ತುಂಬ ತರಕಾರಿ .. ೫ ರಿಂದ ೬
ಚಕೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨	ಕ್ರೋಟಾನ್ಸ್ ಗಿಡ ೧೦೦ ಕ್ಕೆ ೧೨
ಚಲೋಕ್ ... ಗಿಡ ೧೨ ಕ್ಕೆ .. ೩ ರಿಂದ ೧೨	ಡೇಲಿಯಾ ಗಡ್ಡೆಗಳು ೧೨ ಕ್ಕೆ ರೂ. ೬-೯ ೧೨
ಅಲಂಕಾರದ ಹೂ ಗಿಡ (ಪರೇನಿಯಂ) ೧೨ ಕ್ಕೆ ... ೩ ರಿಂದ ೬	ನೆರಳು ಕೊಡುವ ತಾಳೆ ಜಾತಿಯ ... ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಅಲಂಕಾರದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೩ ರಿಂದ ೧೨	... ಗಡ್ಡೆಗಳು ೧೨ ಕ್ಕೆ ರೂ. ೩ ರಿಂದ ೬
ಕೇರಿನಾಡಿ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ... ೧॥ ಯಿಂದ ೩	ಪರ್ಗೋಲಿಯ ... ಕ್ಕೆ ೧೨ ಗಿಡಗಳಿಗೆ
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ .. ೩ ರಿಂದ ೧೨	ರೂ. ೬—೧೨—೨೪
ಕ್ಯಾಕ್ಟಸ್ ಜಾತಿಯ ಗಿಡಗಳು ೧೨ ಕ್ಕೆ ... ೧೦ ರಿಂದ ೧೨	
ಬೇವು ಗಿಡಗಳು ೧೨ ಕ್ಕೆ ... ೯ ರಿಂದ ೧೨	ಅಲಂಕಾರದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಆರ್ಡರಕ್ಕೆ ಕನಿಷ್ಠಪಕ್ಷ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ್,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ವಿವಿಧ ಸಂಗ್ರಹ.

ಬ್ರಿಟಿಶ ರಾಷ್ಟ್ರವು ನಡಿಸಿದ ಹಿಂದೀ ಕೈಗಾರಿಕೆಗಳ ನಾಶ.

೧೮೩೭ನೇ ಇಸ್ವಿಯಲ್ಲಿ ಕಂಪನಿ ಸರಕಾರದ ಮಾರ್ಟಿನ್‌ರವರು ಬರೆದ "ಈಸ್ಟರ್ನ ಇಂಡಿಯಾ" ಊರ್ಫ ಪೂರ್ವ ಹಿಂದುಸ್ಥಾನ ಎಂಬ ಗ್ರಂಥದಲ್ಲಿ ಬ್ರಿಟಿಶ ರಾಷ್ಟ್ರವು ಹಿಂದೀ ಕೈಗಾರಿಕೆಗಳನ್ನು ನಾಶಮಾಡಿ ಹಿಂದುಸ್ಥಾನದಲ್ಲಿ ದಾರಿದ್ರ್ಯವನ್ನು ನೆಲೆಗೊಳಿಸಿದ ಕಥೆಯನ್ನು ವರ್ಣಿಸಿದ್ದಾರೆ ಅದನ್ನು ಬ್ರಿಟಿಶರ ಉಪಾಸಕರು ಪರಾಂಬರಿಸತಕ್ಕದ್ದು. ಅದರ ತಾತ್ಪರ್ಯವೇನಂದರೆ:- ಎರಡು ಸಂಗತಿಗಳನ್ನು ಪ್ರಾಮುಖ್ಯವಾಗಿ ನಮೂದಿಸಬೇಕಾಗಿದೆ. ನಾವು ನೋಡಿದ ದೇಶವು ಸಮೃದ್ಧವಿದೆ; ಆದರೆ, ಜನರು ಬಹಳ ಬಡವರಾಗಿದ್ದಾರೆ. ಈ ಎರಡೂ ಸಂಗತಿಗಳನ್ನು ಲಕ್ಷದಲ್ಲಿಟ್ಟರೆ, ಬ್ರಿಟಿಶರ ಎಸಗಿದ ಅನ್ಯಾಯವು ತಿಳಿಯುವಹಾಗಿದೆ. ಇಂಗ್ಲಿಷರು ತಮ್ಮಲ್ಲಿ ತಯಾರಾದ ಸರಕುಗಳನ್ನು ಹಿಂದುಸ್ಥಾನದಲ್ಲಿ ಒತ್ತಾಯದಿಂದ ಖರ್ಚು ಮಾಡುತ್ತಾರೆ. ಹಿಂದುಸ್ಥಾನದಲ್ಲಿ ತಯಾರಾದ ಸರಕುಗಳು ತಮ್ಮಲ್ಲಿ ಬಂದಂತೆ ಅರಿವೆ-ಅಡಿಗಳ ಮೇಲೆ ಶೇಕಡಾ ೨೦-೩೦ ರಂತೆಯೂ, ಸಕ್ಕರೆಯ ಮೇಲೆ ಶೇಕಡಾ ೧೫೦ ರಂತೆಯೂ, ಕಾಫಿಯ ಮೇಲೆ ೨೦೦ ರಂತೆಯೂ, ಮೆಣಸಿನ ಮೇಲೆ ೩೦೦ ರಂತೆಯೂ ತೆರಿಗೆ ಹೇರಿ ಪ್ರತಿಬಂಧಿಸುತ್ತಾರೆ. ಹಿಂದುಸ್ಥಾನದಿಂದ ಕಪ್ಪ-ಕಾಣಿಕೆಯಾಗಿ ವರ್ಷಾವರ್ಷ ೩೦ ಲಕ್ಷ ಪವನುಗಳು ರವಾನೆಯಾಗುತ್ತವೆ. ೩೦ ವರುಷಗಳತನಕ ಈ ರೂಪಾಯಿಗಳಿಗೆ ಶೇಕಡಾ ೧೨ ರಂತೆ ಬಡ್ಡಿ ಹಿಡಿದರೆ, ೩೦ ವರುಷಗಳಲ್ಲಿ ಈ ರಕಮು ೭೨ ಕೋಟಿ ಪವನಿಗೆ ಮುಟ್ಟುತ್ತದೆ. ಹೀಗೆ ದ್ರವ್ಯಶೋಷಣೆಯಾಗಹತ್ತಿದರೆ, ಇಂಗ್ಲಂಡ ದೇಶವು ಇಷ್ಟರಲ್ಲಿ ದಾರಿದ್ರ್ಯಪಾಲಾಗಿ ನರಳಬೇಕಾಗುತ್ತಿತ್ತು. ಹಿಂದುಸ್ಥಾನದಲ್ಲಿ ೩-೪ ಆಣೆಯಂತೆ ಕೂಲಿಯ ದರವಿದೆ. ಇದರಿಂದ ಅಲ್ಲಿ ಅವಸ್ಥೆ ಏನಾಗಿರಬೇಕೆಂದು ಗ್ರಹಿಸಿರಿ. ಹಿಂದುಸ್ಥಾನದ ಸೃಷ್ಟಿಸೌಂದರ್ಯವನ್ನೂ, ಸೃಷ್ಟಿಸಮೃದ್ಧಿಯನ್ನೂ ವಿಚಾರಿಸಿ ಅಲ್ಲಿಯ ನಿವಾಸಿಗಳ ದೈನ್ಯವನ್ನು ಪರಾಂಬರಿಸಿದರೆ, ಬ್ರಿಟಿಶ ರಾಜ್ಯದ ಮೇಲೆ ಇದೊಂದು ಕಲಂಕವೆಂದು ನಾನು ಹೇಳುತ್ತೇನೆ. ಬ್ರಿಟಿಶ ವರ್ತಕರ ನಿಮ್ನದ ಸ್ವಾರ್ಥಸಾಧನೆಗಾಗಿ ಹಿಂದುಸ್ಥಾನವನ್ನು ಶೋಷಿಸಲು ನಾವು ಶಕ್ತಿಮೀರಿ ಪ್ರಯತ್ನಿಸಿದ್ದೇವೆ. ಅಪ್ರತಿಹತ ವ್ಯಾಪಾರವಿರಬೇಕೆಂದು ಹಿಂದುಸ್ಥಾನದಲ್ಲಿ ಆಮದಾಗುವ ಬ್ರಿಟಿಶ ಸರಕುಗಳ ಮೇಲಿನ ತೆರಿಗೆಯು ಪೂರ್ತ ಇಳಿಸಲಾಯಿತು. ಬಂಗಾಲ ಬಿಹಾರದೊಳಗೆ ತಯಾರಾಗುವ ಅಮೂಲ್ಯ ಸಾಮಗ್ರಿಗಳನ್ನು ಬ್ರಿಟಿಶ ದೇಶದಲ್ಲಿ ಸೇರಲು ಪ್ರತಿಬಂಧಿಸಲಾಯಿತು. ಪರಿಣಾಮವು, ಸ್ಪರ್ಧೆಯಲ್ಲಿ ಹಿಂದುಸ್ಥಾನದೊಳಗೆ ಮನೆಯ ಉಪಯೋಗಕ್ಕೆ ಬೇಕಾಗುವ ಚಿಕ್ಕ ಪುಟ್ಟ ಸಾಮಾನುಗಳು ತಯಾರಿಸಲಾಗದವು. ಮತ್ತು ಅವನ್ನು ಹಿಂದುಸ್ಥಾನದಲ್ಲಿ ಅಗ್ಗವಾಗಿ ಮಾರಿ ಇಲ್ಲಿಯ ಕೈಗಾರಿಕೆಗಳ ಅನ್ನವೆ ಸೆಳೆಯಲಾಯಿತು. ಹೀಗೆ ಆದದ್ದರಿಂದ ಹಿಂದುಗಳು ಬರಗಾಲದಲ್ಲಿಯೂ, ಸಾಂಕ್ರಾಮಿಕ ರೋಗಗಳಲ್ಲಿಯೂ ಇರುವೆಗಳಂತೆ ಸಾಯುತ್ತಾರೆ. ಸೈನ್ಯ ಖರ್ಚಿಗಾಗಿಯೂ, ದೊಡ್ಡ ಅಧಿಕಾರಿಗಳ ಸಂಬಳಕ್ಕಾಗಿಯೂ ಹೇರಳ ತೆರಿಗೆಯು ಎತ್ತುವಳಿಯಾಗುತ್ತದೆ. ಕಂಪನಿಗಳಿಗಾಗಿ, ಸಾಲದ ಬಡ್ಡಿಗಾಗಿ, ಬ್ರಿಟಿಶ ದೇಶದೊಳಗೆ ಹಿಂದುಸ್ಥಾನದ ಆಡಳಿತೆಯ ಪರಿವಾರಕ್ಕಾಗಿ, ಹಿಂದುಸ್ಥಾನದಲ್ಲಿ ಕೆಲಸ ಮಾಡಿ ನಿವೃತ್ತರಾದವರ ಸಂಬಳಕ್ಕಾಗಿ ವರ್ಷಾವರ್ಷ ಹೇರಳ ಹಣವು ಬ್ರಿಟಿಶ ದೇಶಕ್ಕೆ ರವಾನೆಯಾಗುತ್ತದೆ. ಈ ಹಣವನ್ನು ಹೀಗೆಯೇ ಕಳಿಸುತ್ತಿರುವಾಗ, ಹಿಂದುಸ್ಥಾನಕ್ಕೆ ಬ್ರಿಟಿಶರು ಕಲ್ಯಾಣ ಮಾಡುತ್ತಿರುವ ಮಾತು ಯಾರೂ ಒಪ್ಪುವರೇ?

* *

ಊನರು ಮದುವೆಯಾಗಬಾರದು!

ಪಾಶ್ಚಾತ್ಯ ಸಂಸ್ಕೃತಿಗೆ ಧರ್ಮವೆಂಬುದು ಗೊತ್ತಿಲ್ಲ. ಐಹಿಕ ಪ್ರಯೋಜನವನ್ನೇ ಆ ಸಂಸ್ಕೃತಿಯು ನೋಡುತ್ತದೆ. ಸಮಾಜ ಧಾರಣೆಗಾಗಿ ಸಾಮಾಜಿಕ ಕಾನೂನುಗಳು ಘಟಿಸಲ್ಪಡುತ್ತವೆ. ಆಸ್ಟ್ರೇಲಿಯಾ ನ್ಯೂಝಿಲಂಡ ದೇಶಗಳು ಸಾಮಾಜಿಕ ಕಾನೂನಿನಲ್ಲಿ ಬಹಳೇ ಮುಂದುವರಿದಿದ್ದಾವೆ. ಇಂದ್ರಿಯನ್ಯೂನತೆಯಿದ್ದವರು ಮದುವೆಯಾಗಬಾರದೆಂದು ಆಸ್ಟ್ರೇಲಿಯಾದಲ್ಲಿ ಕಾನೂನಾಗಿದೆ. ನ್ಯೂಝಿಲಂಡ ದೇಶವು ಅದಕ್ಕೂ ಮುಂದಾಗಿ ದುರ್ಬಲಮನಸ್ಕರೂ, ದುರ್ಬಲದೇಹಿಗಳೂ, ಮುದುಕರೂ ಮದುವೆಯಾಗಬಾರದೆಂಬ ಕಾನೂನನ್ನು ಕೈಕೊಳ್ಳುವದಿದೆ. ಇಂಥ ಜನರನ್ನು ಸರಕಾರದಿಂದ ನೇಮಿಸಲ್ಪಟ್ಟ ಡಾಕ್ಟರು ತಪಾಸ ಮಾಡಿ ಅವರಿಗೆ ಈ ಕಾನೂನಿನಿಂದ ಪ್ರತಿಬಂಧಿಸುವರು. ತಾಯಿ-ತಂದೆಗಳ ಅಥವಾ ಪಾಲಕರ ಅಪ್ಪಣೆ ಪಡೆದು ಈ ಮಂದಿಗಳ ಬೀಜ ತೆಗೆಯುವ ಕಾನೂನಾಗಿದೆ. ಇಂಥ ಕಾನೂನಿನಿಂದ ಸಮಾಜ ಪಾಲನ ಮಾಡಿ ಅಭಿವೃದ್ಧಿಗೈಯ್ಯಲಿಚ್ಛಿಸುವದು ಸರಿಯಲ್ಲ. ಬೀಜ ತೆಗೆಯುವ ಕ್ರಮವು ಪಶುತುಲ್ಯವೆಂದು ವಿಚಾರಿಗಳ ಮತ. ಸನಾತನ ಧರ್ಮದಂತೆ ಬ್ರಹ್ಮಚರ್ಯದ ಕಲ್ಪನೆಯಾಗಲಿ, ಆಚಾರವಾಗಲಿ ರೂಢವಾಗಿದ್ದಿದ್ದರೆ, ಇಂಥ ಹೇಯವಾದ ಕಾನೂನನ್ನು ಘಟಿಸುವ ಕಾರಣವಿರುತ್ತಿದ್ದಿಲ್ಲ. ಐಹಿಕ ಪ್ರಯೋಜನ ಸಿದ್ಧಾಂತಕ್ಕಾದರೂ ಮೇರೆಯಿರಬೇಕಲ್ಲವೇ?

* *

ಬ್ರಿಟಿಶರ ದ್ರವ್ಯಶೋಷಣೆಯ ಇನ್ನೊಂದು ಪ್ರಕಾರ!

ಕಳೆದ ಜೂನ ೨೫ ನೇ ತಾರೀಖಿನಿಂದ ಲಂಡನಿನೊಳಗಿನ ಪ್ರೀವ್ಹಿ ಕೌನ್ಸಿಲಿನಲ್ಲಿ ಬಾಟಿಹಾ ಕ್ಯಾಕೋಟೇನ ಕರ್ಜಿನ ಮೇಲೆ ಅಪೀಲಿನ ವಿಚಾರ ನಡೆದದೆ. ಈ ಅಪೀಲು ೧। ತಿಂಗಳ ತನಕ ನಡೆಯಬಹುದಂತೆ. ಬ್ರಹ್ಮದೇಶದೊಳಗಿನ ರುಬುರಾಂವ ಎಂಬದೊಂದು ೧೫ ಸಾವಿರ ಎಕರೆ ಆಸ್ತಿಯ ಮಾಲ್ಕಿಯ ಬಗ್ಗೆ ಈ ಅಪೀಲು ನಡೆದದೆ. ಮಹಾರಾಜಾ ಬಹಾದ್ದೂರ ಕೇಶವಪ್ರಸಾದ ಸಿಂಗರವರು ಮಹಾರಾಜಾ ಸರ್ ರಾಧಾಪ್ರಸಾದ ಸಿಂಗರವರ ವಾರಸದಾರರೆಂತ ಹೇಳಿ ಆಸ್ತಿಯ ಕಬ್ಜೆ ಹಾಗು ಉತ್ಪನ್ನ ಬೇಡಿದ್ದಾರೆ. ತಮ್ಮ ತಂದೆಯು ಈ ಆಸ್ತಿಯ ವಹಿವಾಟದಾರರಿದ್ದದರಿಂದ ಅದಕ್ಕೆ ತಾವೇ ಹಕ್ಕುದಾರರೆಂದು ಪ್ರತಿವಾದಿಗಳಾದ ರಾಯಬಹಾದ್ದೂರ ಹರಿಹರಪ್ರಸಾದಸಿಂಗರವರು ಸಾಧಿಸುತ್ತಾರೆ. ಪಕ್ಷಕಾರರ ಸಂಬಂಧವು ಬಹಳವಿಲ್ಲದಿದ್ದರೂ, ಇತ್ತಂಡಗಳ ಕಡೆ ೩೦ ಮಂದಿ ಬೆರಿಷ್ಟರರು ಕೆಲಸ ನಡಿಸುತ್ತಿದ್ದಾರೆ. ಅಪೀಲಾಂಟರಾದ ಮಹಾರಾಜಾ ಬಹಾದ್ದೂರ ಕೇಶವಪ್ರಸಾದ ಸಿಂಗರವರು ಇಂಗ್ಲಂಡಕ್ಕೆ ಹೋಗಿದ್ದಾರೆ. ಅವರು ೯ ಮಂದಿ ಬೆರಿಷ್ಟರರನ್ನು ಇಟ್ಟಿದ್ದಾರೆ. ಹಿರಿಯ ಬೆರಿಷ್ಟರರಿಗೆ ೩೦೦೦ ಗಿನಿಗಳನ್ನು ಮುಂಚೆ ಕಾಣಿಕೆಯಾಗಿ ಕೊಟ್ಟು ಅಪೀಲು ನಡೆದಷ್ಟು ದಿವಸ ೧೦೦-೧೫೦ ಗಿನಿಗಳಂತೆ ದಿನಗೂಲಿ ಕೊಡುವ ಮಾತು ಮಾಡಿದ್ದಾರಂತೆ! ವಿರುದ್ಧ ಪಕ್ಷದ ಹಿರಿಯ ಪಕ್ಷಗಾರರ ಕಡೆಯಿಂದ ೯ ಮಂದಿ ಬೆರಿಷ್ಟರರು. ಕೂಡ ಹರಿಯಾಯಿತು. ಯಾವ ಪಕ್ಷವು ಗೆದ್ದರೂ ಖರ್ಚಿಗೆ ಅರ್ಧ ಆಸ್ತಿಯು ಮಾರಿಹೋಗಲಿಕ್ಕಿಲ್ಲ. ಅದೇನಿರಲಿ! ವ್ಯವಹಾರದಿಂದ ಇಂಗ್ಲಂಡಕ್ಕೆ ಹೋಗುವ ದ್ರವ್ಯಶೋಷಣೆಯನ್ನು ಕೇಳಿದರೆ, ಮತಿಯು ಕುಂಠಿತವಾಗುತ್ತದೆ.

ವಿಮರ್ಶೆ.

ಶ್ರೀ ತುಲಸಿದಾಸ ರಾಮಾಯಣ.

ಶ್ರೀ| ದತ್ತಾತ್ರೇಯ ಕೃಷ್ಣ ಭಾರದ್ವಾಜರವರು ಮಾಡಿದ ಶ್ರೀಮದ್ಗೋಸ್ವಾಮಿ ತುಲಸಿದಾಸ ರಾಮಾಯಣದ ಬಾಲಕಾಂಡದ ಕನ್ನಡ ಭಾಷಾಂತರವನ್ನು ನಾವು ಆನಂದದಿಂದ ಸ್ವೀಕರಿಸುತ್ತೇವೆ. ಭಾಷಾಂತರವು ಕರ್ನಾಟಕ ಟೀಕೆ-ಟಿಪ್ಪಣಿ, ಗೂಢಾರ್ಥ ಕೋಶಗಳಿಂದ ಪ್ರಕಟವಾಗಿದ್ದು ಬಹು ಹೃದಯಂಗಮವಾಗಿದೆ. ಶ್ರೀ| ಭಾರದ್ವಾಜರವರಿಗೆ ಕನ್ನಡ ಭಾಷೆಯ ಶೈಲಿಯ ಬಗ್ಗೆ ನಾವು ಪ್ರತ್ಯೇಕ ಶಿಫಾರಸು ಕೊಡಬೇಕಾಗಿಲ್ಲ. ಭಾಷಾಂತರವು ಸುಬೋಧವಾಗಿದೆ. ಮೂಲ ಹಿಂದಿ ರಾಮಾಯಣದ ಭಾಗವನ್ನು ಭಾಷಾಂತರದೊಡನೆ ಪ್ರಕಟಿಸಿದ್ದರಿಂದ ಕನ್ನಡಿಗರಿಗೆ ಹಿಂದಿ ಭಾಷೆಯನ್ನು ಕಲಿಯಲು ಇದರಿಂದ ಬಹು ಅನುಕೂಲವಿದೆ. ಶ್ರೀ ಗೋಸ್ವಾಮಿ ತುಲಸಿದಾಸರ ಜೀವನಚರಿತಾಮೃತವನ್ನು ಶ್ರೀ| ಭಾರದ್ವಾಜರು ಕೊಟ್ಟು ತುಲಸಿದಾಸರ ರಾಮಭಕ್ತಿಯನ್ನೂ, ಅದರಿಂದ ಅವರು ಮಾಡಿದ ಯೌಗಿಕ ಚಮತ್ಕಾರಗಳನ್ನೂ ವಿವರಿಸಿದ್ದಾರೆ. ಇದರಿಂದ ರಾಮನಾಮ ಮಹಿಮೆಯು ಭಾವಿಕರ ಮೇಲುಂಟಾಗಿ ರಾಮಾಯಣ ಪಠಣಕ್ಕೂ, ರಾಮಭಕ್ತಿಗೂ ಬಲು ಅನುಕೂಲವಾಗುವಂತಿದೆ. ಶ್ರೀ ಲಕ್ಷ್ಮೀನಾರಾಯಣನ ರಾಮಾವತಾರ ಸಂಕಲ್ಪ, ಶ್ರೀ ವಾಲ್ಮೀಕಿ ಮಹಾಮುನಿ, ಶ್ರೀ ತುಲಸೀದಾಸ ಅಹಿಲ್ಯೋದ್ಧಾರ, ಉಮಾ-ಮಹೇಶ್ವರರ ವಿವಾಹ ಮುಂತಾದ ಪ್ರಸಂಗೋಚಿತ ಚಿತ್ರಗಳಿಂದ ಗ್ರಂಥವು ಸಂಗ್ರಾಹ್ಯವಾಗಿದೆ. ಶ್ರೀ ತಾತ್ಯಾಶಾಸ್ತ್ರಿ ರಾಘವಾಚಾರ್ಯರ ಮಾತೋಶ್ರೀಗಳವರಾದ ಶ್ರೀ| ಶೇಷಮ್ಮನವರು ಈ ಪುಸ್ತಕವನ್ನು ಪ್ರಕಟಿಸಲು ಬಹಳ ಧನಸಹಾಯ ಮಾಡಿದವರಾಗಿ ಶ್ರೀ| ಭಾರದ್ವಾಜರವರು ಬರೆಯುತ್ತಾರೆ. ಈ ಸತ್ಕಾರ್ಯಕ್ಕಾಗಿ ನಾವು ಶ್ರೀ| ಶೇಷಮ್ಮನವರನ್ನು ಹೊಗಳುವೆವು. ಮುದ್ರಣವೂ, ಕಟ್ಟಡವೂ ಸೊಗಸಾಗಿವೆ. ರಫ್ ಪ್ರತಿಯ ಕಿಮ್ಮತ್ತು ರೂ. ೨ ೦-೦; ಇದೆ. ಗ್ಲೇಜ ಪ್ರತಿ ರೂ. ೨-೮ ೦.

— ಮೈಸೂರಿನಲ್ಲಿ ಒಬ್ಬ ಕೂಲಿಕಾರನು ಕೊಡಲಿ ಕೊಂಡು ಬೆಟ್ಟಕ್ಕೆ ಕಟ್ಟಿಗೆ ತರಲು ನಿತ್ಯದಂತೆ ಹೋಗಿದ್ದನು. ಥಕ್ಕನೆ ಹುಲಿ ಬಂತು. ಅವನ ಮೇಲೆ ಅದು ಹಾರಲು ಪ್ರಯತ್ನವಾಯಿತು. ಕೂಲಿಕಾರನು ಹುಷಾರಿದ್ದನು, ಅದರ ಬಾಯಿ ಎದೆಗಟ್ಟಿ ಮಾಡಿದನು. ಜೀವದಾಸೆ ಬಿಟ್ಟು ಕೊಡಲಿಯಿಂದ ಒಮ್ಮೆ ಬಂದು ಏಟು ಕೊಟ್ಟನು, ಸ್ಮೃತಿ ತಪ್ಪಿ ಬಿದ್ದನು. ಕೆಲವು ಕಾಲದ ಬಳಿಕ ಎಚ್ಚರಗೊಂಡು ನೋಡಲು ಹುಲಿಯು ಸತ್ತುಬಿದ್ದಿತ್ತು!

ಕಾನಡಾ ವೃತ್ತ.

ಮಿತಿ ವಿಭವ ಸಂ॥ ಆ॥ ಶ್ರಾವಣ ಶು॥ ೫ ಸೋಮವಾರ

ಸಂಧಾನವಾಗಲಿಲ್ಲ.

ಸಂಧಾನವಾಗುವ ಬಗೆ ಹೇಗೆ? ಲಕ್ಷ್ಮೀದೇವಿಯ ಪ್ರಯಾಣವಾದರೂ ಲಕ್ಷ್ಮಿಯ ಅನುಗ್ರಹದಿಂದ ಪ್ರಾಪ್ತವಾದ ಐಶ್ವರ್ಯವು ಒಮ್ಮೆಲೇ ತೊಲಗಬಲ್ಲದೇ? ಹಾಗೆಯೇ ನಮ್ಮ ಸರಕಾರದ ಸ್ಥಿತಿಯಾಗಿದೆ. ಸತ್ವಗುಣಪ್ರಧಾನರಾದ ಬಾರ್ಡೋಲಿ ಪ್ರಜೆಗಳ ಸಾತ್ವಿಕ ಬಲ, ನಿರ್ಭಯ ವೃತ್ತಿಯಿಂದಲೂ ಬಾರ್ಡೋಲಿಯೊಳಗಿನ ಬ್ರಿಟಿಶ ರಾಜ್ಯಾಧಿಕಾರದ [illegible]ಯಿಂದಲೂ ಸರಕಾರದ ಮನಸ್ಥಿತಿಯು ಚಂಚಲವಾಗಿದ್ದೇನೋ ನಿಜ! ಅನ್ಯಾಯದಿಂದ ಹೆಚ್ಚಿಸಿದ ತೀರ್ವೆ ವಸೂಲಿಗಾಗಿ ಕೈಕೊಂಡ ದುಷ್ಟ ಕ್ರಮಗಳಿಂದ ಅಖಿಲ ಭಾರತ ಖಂಡದಲ್ಲಿ ವಿಲಾಯತಿಯಲ್ಲೂ ಪರದೇಶಗಳಲ್ಲೂ ಇಲ್ಲಿಯ ರಾಜ್ಯಾಧಿಕಾರಿಗಳ ಅಪಕೀರ್ತಿಯು ಬೆಳೆಯಿತು. ಕೀರ್ತಿ ಪ್ರಸ್ಥಾಪಿಸುವದಕ್ಕೂ ಬಾರ್ಡೋಲಿಯ ರಣರಂಗದಲ್ಲಿ [illegible] ಸೋತುಹೋಗುವ ಸಂಭವವಿರುವದರಿಂದಲೂ ವಿಚಾರಶೀಲರ ಸಹಾನುಭೂತಿಯನ್ನು ಮರಳಿ ಸಂಗ್ರಹಿಸುವದಕ್ಕಾಗಿಯೂ ಸಂಧಾನದ ಮಾತುಕಥೆ ನಡೆದಿರಬೇಕಾಗಿ ಪರಿಸ್ಥಿತಿಯಿಂದ ಹೇಳಬಹುದು. ಸಂಧಾನ ಮಾಡಿಕೊಂಡು ಪ್ರಜಾನುರಂಜನದಿಂದ ಬಾರ್ಡೋಲಿಯೊಳಗಿನ ಪ್ರಶ್ನೆಯನ್ನು ಬಿಡಿಸಬೇಕೆಂದಿದ್ದರೆ ಈ ಮುಂಚೆಯೇ ಸಂಧಿಯಾಗಿ ಹೋಗುತ್ತಿತ್ತು.

ಸರ್ವಾಧಿಪತಿ ಇರ್ವಿನ ದೊರೆಗಳು ಬೇಸಾಯಗಾರರೆಂದು ಸಂಬೋಧಿಸಿಕೊಳ್ಳಲು ಅಭಿಮಾನಪಡುವ ಸತ್ಪುರುಷರಲ್ಲೊಬ್ಬರಂತೆ! ಮಹಾತ್ಮರಂತೂ ಹಾಗೆ ಸಂಬೋಧಿಸಿಕೊಳ್ಳುತ್ತಾರೆಂದು ಲೋಕದಲ್ಲಿಯ ಖ್ಯಾತಿ! ನಮ್ಮ ಪ್ರಾಂತಾಧಿಪರಾದ ವಿಲ್ಸನ್ ದೊರೆಗಳು ಬಾರ್ಡೋಲಿಯ ಪ್ರಜೆಗಳ ದೈನ್ಯವನ್ನು ಕೇಳಿ ಮನಸ್ಸಿನಲ್ಲಿಯೇ ಮರುಗುತ್ತಿದ್ದಾರೆ. ಬಾರ್ಡೋಲಿಯ ಪ್ರಜೆಗಳಿಗೆ ಸುಖ ಕೊಡಲು ಅವರು ಇತ್ತೀಚೆ ಉಪಾಯಗಳನ್ನು ಚಿಂತಿಸುತ್ತಿದ್ದಾರಂತೆ! ಅಲ್ಲಿಯ ಪ್ರಜೆಗಳ ಸ್ಥಿತಿಗತಿಯನ್ನು ಸಂಧಾರ ತಿಳಿಕೊಳ್ಳುವದಕ್ಕಾಗಿ ಮುಲ್ಕಿ ಖಾತೆಯ ಮುಖ್ಯಾಧಿಕಾರರಾದ ಮಿ| ರೂರವರನ್ನು ಇವರು ಮುದ್ದಾಂ ಬಾರ್ಡೋಲಿಯ ತನಕ ರವಾನಿಸಿದರಂತೆ! ಸ್ಥಳಿಕ ಅಧಿಕಾರಿಗಳು ಪರಿಸ್ಥಿತಿಯನ್ನು ಯಥಾರ್ಥವಾಗಿ ತಿಳಿಸದೆ ಸರಕಾರಕ್ಕೂ ಪ್ರಜೆಗಳಿಗೂ ಕಷ್ಟದಲ್ಲಿ ಸಿಲುಕಿಸಿದರಾಗಿ ದೊರೆಗಳ ಅಭಿಪ್ರಾಯವಾಯಿತೆಂದೂ ಹೇಳಲಾಗುತ್ತದೆ. ಇಷ್ಟು ಪ್ರಜಾವಾತ್ಸಲ್ಯದಿಂದ ನಮ್ಮ ವಿಲ್ಸನ್ ದೊರೆಗಳು ತುಂಬಿ ತುಳುಕುತ್ತಿದ್ದಾರೆ. ಶ್ರೀ| ವಲ್ಲಭಭಾಯಿ ಪಟೇಲರವರಂತೂ ಬೇಸಾಯಗಾರರ ದೈನ್ಯವನ್ನು ಪರಿಹರಿಸುವದಕ್ಕಾಗಿ ಸಕಲಸುಖ ತ್ಯಾಗಮಾಡಿ ಬಾರ್ಡೋಲಿ ಸಮರದ ಸೇನಾನಾಯಕರಾಗಿ ದುಡಿಯುತ್ತಿದ್ದಾರೆ. ಇಷ್ಟು ಮುಖ್ಯ ಪಾತ್ರಗಳು ಬೇಸಾಯಗಾರರ ಕಲ್ಯಾಣವನ್ನೇ ಬಯಸುವವರಿದ್ದಾಗ ಬೇಸಾಯಗಾರರು ಆತ್ಮೋದ್ಧಾರಕ್ಕಾಗಿ ಒದರಾಡುತ್ತಿರುವಾಗ ಇನ್ನೂ ಸಂಧಾನವಾಗದ ಸುದ್ದಿ ಏಕೆ ಕೇಳಬೇಕಾಗುತ್ತದೆ?

ಇದಕ್ಕೆ ಉತ್ತರವನ್ನು ಸುಲಭವಾಗಿ ಕೊಡಬಹುದು. ನಮ್ಮ ಸರಕಾರದ ಪ್ರಾಬಲ್ಯವು [illegible] ಬಹಳ ಮಟ್ಟಿಗೆ ಕಡಿಮೆಯಾಗಿದ್ದರೂ, ಅದರ ಒಣ ಬಿಂಕದಲ್ಲಿ ಈ ಸರಕಾರದ [illegible] ಪ್ರಕಾರದ ನಿಜಮೋಸವು ಬಯಲಾದಾಗ್ಯೂ ನಮ್ಮ ಸರಕಾರವು ಇದೇ ಸ್ಥಿತಿಗೆ ಇನ್ನೂ [illegible] ಲೋಕಾಧಿಪತಿಯ ವೇಷವನ್ನು [illegible]. ಬಾರ್ಡೋಲಿಯ ಪ್ರಜೆಗಳು ಪುನಃ ಚೌಕಶಿ ಆಗುವ ತನಕ [illegible] ತೆರಿಗೆಯನ್ನು ಸರ್ವಥಾ ಕೊಡತಕ್ಕವರಲ್ಲವೆಂದು ಭೀಷ್ಮ ಪ್ರತಿಜ್ಞೆ ಮಾಡಿದ್ದು ವಿಲ್ಸನ್ ದೊರೆಗಳು ಅರಿಯದ ಮಾತೇ? ಸರ್ವಾಧಿಪತಿ ಇರ್ವಿನ ದೊರೆಗಳಿಗೆ ತಿಳಿಯದ ಸಂಗತಿಯೇ? ಆದರೂ ವಿಲ್ಸನ್ ದೊರೆಗಳು ಪೂನೆಯಿಂದ ಮುದ್ದಾಂ ಸಿಮ್ಲಾ ಪಟ್ಟಣದ ತನಕ ಹೋಗಿ ಸರ್ವಾಧಿಪತಿಗಳೊಡನೆ ಒಂದು ತಾಸಿನ ತನಕ ಗುಪ್ತ ಆಲೋಚನೆ ನಡೆಸಿ ಮರಳಿ ಸೂರತ ಪಟ್ಟಣಕ್ಕೆ ಬಂದು [illegible]ರೊಡನೆ ಆ ಪ್ರತಿಜ್ಞೆಯು ಭಂಗಕ್ಕೆ ಅನುಕೂಲವಾದ ಸಂಧಾನ ಶರ್ತನ್ನು ಹೇಳುವ ಬಗೆ ಹೇಗೆ? ನಮಗ್ಯಾವದೂ ತಿಳಿಯದು. ಏರಿದ ತೀರ್ವೆಯನ್ನು ಸರಕಾರಿ ಕೋಶದಲ್ಲಿ ಅದನ್ನು [illegible] ಸ್ಥರ ಬಳಿ ಠೇವಾಗಿ ಇಡಬೇಕೆಂದು ವಿಧಿಸುವರೇಕೆ? ಇನ್ನೊಂದು ಶರ್ತನ್ನು ಕೇಳಿದರೆ ನಗೆ ಬರುತ್ತದೆ. ಹೀಗೆ ಚರಿಸಿದ ವ್ಯವಸ್ಥೆಯಾದ ಬಳಿಕ ಈಗಿನ ಚಳವಳಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕಂತೆ! ಎಲ್ಲ ಕರಿಗೆ ತೆತ್ತು ಸರಕಾರಕ್ಕೆ ಶರಣುಹೋದ ಬಳಿಕ ಇನ್ನು ಚಳವಳಿ ಇರಬಲ್ಲದೇ?

ಶ್ರೀ| ವಲ್ಲಭಭಾಯಿ ಪಟೇಲರವರು ಖಂಡತುಂಡ ಮಾತನಾಡಿದರು. ಮರಳಿ ಚೌಕಶಿಯಾಗಬೇಕಾದರೆ ಪೂರ್ವಸ್ಥಿತಿಯನ್ನು ಸರಕಾರವು ಉಂಟುಮಾಡಬೇಕು. ಈ ತನಕ ಮಾಡಿದ ಪಾಪವನ್ನು ಪ್ರಾಯಶ್ಚಿತ್ತ ವಿಧಿಯಿಂದ ಅಚ್ಚ ತೊಳೆದು ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಬೇಕು, ತಪ್ಪು ಒಪ್ಪಬೇಕು, ಒಪ್ಪಿದ ಸ್ಪಷ್ಟ ಲಕ್ಷಣಗಳನ್ನು ಪ್ರದರ್ಶಿಸಬೇಕು. ಸತ್ಯಾಗ್ರಹ ಸಂಗ್ರಾಮದಲ್ಲಿ ಬಂಧನ ಹೊಂದಿದವರನ್ನು ಮೊಟ್ಟಮೊದಲು ಬಿಡುಗಡೆ ಮಾಡತಕ್ಕದ್ದು, ಜಪ್ತಿ ಆಫೀಸರರ ದುಷ್ಟ ಕ್ರಮಗಳನ್ನು ಶೋಧಿಸತಕ್ಕದ್ದು, ಸರಕಾರಜಪ್ತಾದ ಭೂಮಿಯನ್ನು ಪೂರ್ವವತ್ ಮಾಲೀಕರಿಗೆ ಒಪ್ಪಿಸತಕ್ಕದ್ದು, ಜಪ್ತಿ ವಸ್ತುಗಳನ್ನು ಲಿಲಾವು ಮಾಡಿ ಒದಗಿದ ನಷ್ಟವನ್ನು ತುಂಬಿಕೊಡತಕ್ಕದ್ದು, ರಾಜೀನಾಮೆಯನ್ನಿತ್ತ ಪಟೇಲ-ತಲಾಟಿಗಳಿಗೆ ಪುನಃ ಕೆಲಸ ಕೊಡತಕ್ಕದ್ದು, ಕರಹೇರಿಕೆಯ ವಿಷಯ ಸ್ವತಂತ್ರವಾಗಿಯೂ ಸಾರ್ವಜನಿಕವಾಗಿಯೂ ಚೌಕಶಿ ನಡಿಸತಕ್ಕದ್ದು. ಶ್ರೀ| ವಲ್ಲಭಭಾಯಿ ಪಟೇಲರವರೊಡನೆ ಪ್ರಾಂತಾಧಿಪರು ಎರಡು-ಮೂರು ಬಾರಿ ಆಲೋಚನೆ ನಡಿಸಿದರು. ಸರ್ವಾಧಿಪತಿ ಇರ್ವಿನ ದೊರೆಗಳು ಈ ಸಂಗ್ರಾಮವನ್ನು ನಿಲ್ಲಿಸಲು ಸ್ವಂತ ಬಿನ್ನಹವನ್ನು ತಮಗೆ ಮಾಡಿಕೊಂಡಿದ್ದರಾಗಿಯೂ ಶ್ರೀ| ಪಟೇಲರಿಗೆ ಹೇಳಿ ಇರ್ವಿನ ದೊರೆಗಳ ಪ್ರಜಾವಾತ್ಸಲ್ಯವನ್ನು ವಿಲ್ಸನ್ ದೊರೆಗಳು ಪ್ರದರ್ಶಿಸಿದರು. ಆದರೆ ಶ್ರೀ| ವಲ್ಲಭಭಾಯಿಯವರಿಗೆ ನಿರರ್ಥಕ ವಿನಂತಿಗಳು ಮಾನ್ಯವಾಗಲಿಲ್ಲ. ಸ್ವಂತ ಬಿನ್ನಹ ಮಾಡಿಕೊಳ್ಳಲಿಕ್ಕೆ ಇದರೊಳಗೆ ಖಾಸಗಿ ವ್ಯವಹಾರವೇನಿಲ್ಲ. ರಾಜ್ಯಾಧಿಕಾರಿಗಳೊಡನೆ ಪ್ರಜಾಪ್ರಮುಖರ ಕಾದಾಟವಿದು. ಸರ್ವಾಧಿಪತಿಗಳು ಸರಕಾರದ ಪರವಾಗಿ ಸಹಾನುಭೂತಿಯುಳ್ಳವರಾಗಿದ್ದರೆ, ಆ ಸಹಾನುಭೂತಿಗೆ ತಕ್ಕದ್ದಾಗಿ ನಡಿಯುವಷ್ಟು ಅಧಿಕಾರವು ಸರ್ವಾಧಿಪತಿಗಳಿಗಿದ್ದರೆ ಅದನ್ನು ನಡಿಸಬೇಕೇ ಹೊರತು, ಅಂತರಂಗದ ಸಹಾನುಭೂತಿಯ ಮೋಹ ಹುಟ್ಟಿ ಪ್ರಜಾಪ್ರಮುಖರನ್ನು ಬಗಲಲ್ಲಿ ಸೇರಿಸಿಕೊಂಡು ಕೈಕೊಂಡ ಕಾರ್ಯವನ್ನು ನಡಿಸುವ ದಿನಗಳು ಹಿಂದಾದವು. ಇಂಥ ಖಾಸಗಿ ಬಿನ್ನಹಗಳಲ್ಲಿ ತಿರುಳಿರುವದಿಲ್ಲೆಂದು ಭರತ ಪುತ್ರರಿಗೆ ಅನುಭವದಿಂದ ಗೊತ್ತಾಗಿಹೋಗಿದೆ. ಇದರಿಂದ ಶ್ರೀ| ವಲ್ಲಭಭಾಯಿಯವರು ಸರಕಾರದ ದುರಾಗ್ರಹ ಶರ್ತುಗಳಿಗೆ ಒಪ್ಪಲಿಲ್ಲ, ಸರಕಾರವು ಶ್ರೀ| ವಲ್ಲಭಭಾಯಿಯವರ ಸಭ್ಯ ಶರ್ತುಗಳಿಗೆ ಒಪ್ಪಲಿಲ್ಲ. ಹೀಗೆ ಸಂಧಾನವಾಗಲಿಲ್ಲವಾಗಿ ಜಾಹೀರಾಗಿದೆ.

ಮುಂದೇನು? ಎಂಬ ಪ್ರಶ್ನೆಯು ಈಗ ಉದ್ಭವಿಸುತ್ತಿದೆ. ಶ್ರೀ| ವಲ್ಲಭಭಾಯಿಯವರು ಸಿದ್ಧತೆಯಿಂದ ತಾವು ಎಷ್ಟಕ್ಕೂ ಹಿಂಜರಿಯಲಿಕ್ಕಿಲ್ಲವಾಗಿ ಪ್ರಕಟಿಸಿದ್ದಾರೆ. ಸರಕಾರ ಜಪ್ತ ಭೂಮಿಯು ಸಾಗುವಳಿಯಾಗಹತ್ತಿದೆ, ಮುಂಬಯಿನ ಮಾಲೀಕರೇ ಅದನ್ನು ಸಾಗುವಳಿ ಮಾಡುತ್ತಿದ್ದಾರೆ. ಸರಕಾರದ ಜಪ್ತಿಯ ಕ್ರಮಕ್ಕೆ ಈಗ ತಡೆಬಿದ್ದಿದೆ. ಆದರೂ, ಬೆಳೆ ಬಂದಾದ ಬಳಿಕ ಆ ಬೆಳೆಯನ್ನು ಸರಕಾರವು ಜಪ್ತು ಮಾಡುವದೆಂದು 'ಹರಿ' ಪತ್ರಿಕೆಯು

ಪ್ರಕಟಿಸುತ್ತಿದೆ. ಸರಕಾರ ಜಪ್ತಾದ ಭೂಮಿಯ ಮೇಲೆ ಹುಟ್ಟಿದ ಬೆಳೆಯೆಲ್ಲ ಈಗಿನಿಂದ ಸರಕಾರದ ಕಡೆಯಿಂದ ಅದನ್ನು ಅಪಹರಿಸುವ ಯೋಚನೆಯಾಗುತ್ತಿದೆ. ಪ್ರಜೆಗಳಿಗೆ ಇದರ ಸೂಚನೆ ಇದ್ದು ಅವರು ಮುಂದಾಗಿಯೇ ಇದರ ವಿಚಾರ ಮಾಡಿ ಆಲೋಚಿಸಿಕೊಂಡು ಕಾದುಕೊಂಡಿದ್ದಾರೆ. ಪ್ರಸಂಗ ವಿಶೇಷದಲ್ಲಿ ಬೆಳೆಯನ್ನು ಅಗ್ನಿನಾರಾಯಣನಿಗೆ ಪೂರ್ಣಾಹುತಿಯಾಗಿ ಕೊಟ್ಟು ಬಾರ್ದೋಲಿಯ ಸತ್ಯಾಗ್ರಹಯಜ್ಞವನ್ನು ಸಾಂಗಗೊಳಿಸಿ ಸರಕಾರಕ್ಕಿದಿರಾಗುವ ಸುಲಕ್ಷಣಗಳು ತೋರಹತ್ತಿವೆ. ಆ ಕಾಲಕ್ಕೆ ಪೋಲೀಸರು ಸತ್ಯಾಗ್ರಹಿಗಳಗೊಡವೆಗೆ ಹೋಗಲು ಈಗಲೇ ಹೆದರುತ್ತಾರೆಂದು ಪ್ರಕಟಹೊಂದಿದೆ. ಸೈನ್ಯವನ್ನು ಆಶ್ರಯಿಸಬೇಕಾಗುವದಂತೆ! ಇದರಿಂದ ಸಂಧಾನದ ಪ್ರಸ್ತಾಪವು ಸದ್ಯಕ್ಕೆ ಬಿದ್ದುಹೋದರೂ ಇನ್ನೂ ಆಶೆ ಇರುವದಾಗಿ ದೂರದರ್ಶಿಗಳ ಅಭಿಪ್ರಾಯ. ಸರಕಾರವು ತನ್ನ ಸಿದ್ಧಾಂತವನ್ನು ಶಿಥಿಲಮಾಡಿ ಶೀಘ್ರವೇ ಶ್ರೀ ವಲ್ಲಭಭಾಯಿಯವರೊಡನೆ ಸಂಧಾನದ ಮಾತು ಪುನಃ ನಡಿಸುವದೆಂದು ವಾರ್ತೆ. ಈ ಹೊತ್ತು ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಪುಣೆಯಲ್ಲಿ ಪ್ರಾರಂಭವಾಗತಕ್ಕದ್ದಿದೆ. ಆ ಕಾಲಕ್ಕೆ ವಿಲ್ಸನ್ ದೊರೆಗಳು ಈ ವಿಷಯ ಮಾತನಾಡುವರೆಂದು ಸರಕಾರಿ ಪ್ರಕಟಣೆಯೊಂದು ಪ್ರಕಟಹೊಂದಿದೆ. ನೋಡೋಣ! ಏನು ವಿಚಾರವಾಗುತ್ತದೆಂದು.

ಯುದ್ಧದ ಪೂರ್ವಪೀಠಿಕೆ.

೧. ಅಫಗಾಣಿಸ್ಥಾನದ ಅಮೀರರಾದ ಅಮಾನುಲ್ಲಾಖಾನರವರು ದೇಶಾಟಣವನ್ನು ತೀರಿಸಿಕೊಂಡು ಸ್ವದೇಶಕ್ಕೆ ಮರಳಿಬಂದಿದ್ದಾರೆ. ಪ್ರಜೆಗಳು ಬಹು ಆನಂದದಿಂದ ಅಮೀರರಿಗೆ ಸ್ವಾಗತವನ್ನಿತ್ತರು. ಅಮೀರರ ದೇಶಾಟಣದಿಂದ ಭೂತಲದೊಳಗಿನ ರಾಜಕಾರಣದಲ್ಲಿ ದೊಡ್ಡದೊಂದು ಅವಸ್ಥಾಂತರ ಉಂಟಾಗಿದೆ. ಮಹಾಯುದ್ಧ ಮುಗಿದು ಭೂತಲದಲ್ಲಿ ಶಾಂತಿದೇವಿಯ ರಾಜ್ಯವಿರುವದಾಗಿ ತೋರಿದಾಗ್ಯೂ, ದೇಶಗಳಲ್ಲಿ ರಣದೇವಿಯ ಉಪಾಸನೆ ನಡೆಯುತ್ತದೆಂಬ ಮಾತನ್ನು ಎಲ್ಲರೂ ಅರಿತುಕೊಂಡಿದ್ದಾರೆ. ಅಮೀರರ ಸಂಚಾರದಿಂದ ಪೌರ್ವಾತ್ಯ ರಾಷ್ಟ್ರಗಳ ಪ್ರಾಮುಖ್ಯವಾಗಿ ಮುಸಲ್ಮಾನಿ ರಾಷ್ಟ್ರಗಳ ಐಕ್ಯಮತ್ಯವಾಗಿದೆಂದು ಹೇಳುತ್ತಾರೆ. ನೂತನ ಯುಗದಲ್ಲಿ ಏಶಿಯಾಖಂಡದ ರಾಷ್ಟ್ರಗಳಲ್ಲಿ ಉಂಟಾದ ಜಾಗೃತಿಯಿಂದ ತುರ್ಕಸ್ಥಾನ, ಇರಾಣ, ಅಫಗಾಣಿಸ್ಥಾನ ದೇಶಗಳು ಬಲು ಪ್ರಬಲವಾಗಿವೆ; ಸ್ವತಂತ್ರವಾಗಿವೆ. ಸ್ವಾರ್ಥಸಾಧಕರಿಗೆ ಇವನ್ನು ಸೂತ್ರಗೊಂಬೆಗಳಾಗಿ ಕುಣಿಸುವದು ಇನ್ನು ಸಾಧ್ಯವಿಲ್ಲ. ತಮ್ಮ ಹಿತಾಹಿತಗಳನ್ನು ತಿಳಕೊಂಡು ವರ್ತಿಸುವಷ್ಟು ಗ್ರಹಿಕೆಯೂ, ಧೈರ್ಯವೂ ಈ ದೇಶಗಳಿಗೆ ಪ್ರಾಪ್ತವಾಗಿದೆ. ಗಾಝಿ ಮುಸ್ತಾಫಾ ಕೆಮಾಲ ಪಾಶಾರವರ ಅಧಿಪತ್ಯದಲ್ಲಿ ತುರ್ಕಸ್ಥಾನವು ಯಥಾರ್ಥವಾಗಿ ತುರ್ಕರ ಸ್ಥಾನವಾಗಿ ಪರಿಣಮಿಸಿದೆ. ಸ್ವತಂತ್ರರಾಗಿ ಪರದೇಶಗಳೊಡನೆ ಅವರು ಕರಾರುಗಳನ್ನು ಮಾಡಿಕೊಂಡು ಸ್ವದೇಶದ ಹಿತವನ್ನು ಸಾಧಿಸುತ್ತಿದ್ದಾರೆ. ಇಟಾಲಿಯ ಏಕಛತ್ರಾಧಿಪತಿಯಾದ ಸಿನೋರ ಮುಸೋಲಿನಿಯವರೊಡನೆ ಕೆಮಾಲ ಪಾಶಾರವರು ಸಖ್ಯತೆಯನ್ನು ಬೆಳಿಸಿಕೊಂಡು ಭೂಮಧ್ಯ ಸಮುದ್ರದ ದಿಕ್ಕಿಗೆ ಬ್ರಿಟಿಶರು ಸ್ವದೇಶದ ಮೇಲೆ ಸಾಗಿ ಬರದಂತೆ ಏರ್ಪಾಟು ಮಾಡಿಕೊಂಡಿದ್ದಾರೆ. ಅಮಾನುಲ್ಲಾಖಾನರವರು ಪಾಶಾರವರಿಗೆ ಅಣ್ಣನೆಂದು ಆದರದಿಂದ ಸಂಬೋಧಿಸಿದ ಬಳಿಕ, ಅವರ ಪರಾಕ್ರಮವನ್ನು ನಾವು ಪ್ರತ್ಯೇಕ ಹೇಳಬೇಕೇ? ಇರಾಣ ದೇಶವೂ ಸಾಮರ್ಥ್ಯವಂತವಾಗಿದೆ. ರೀಝಾಖಾನ ಪೆಹಲವಿ ಶಹಾರವರ ಉದಯವಾದಂದಿನಿಂದ ಇರಾಣ ದೇಶವು ಬಹಳ ಮುಂದುವರಿದು ಬಂದಿದೆ. ರೇಝಾಖಾನ ಪ್ರತಿಭಾಯುತರು ಇರಾಣದೇಶದಲ್ಲಿ ಪ್ರಜೆಗಳಿಗೆ ಅಭಿವೃದ್ಧಿಗೊಳಿಸುವ ಅನೇಕ ಉಪಾಯಗಳನ್ನು ಕೈಕೊಂಡು ದೇಶವನ್ನು ಸಮೃದ್ಧಗೊಳಿಸಲಿಚ್ಛಿಸಿದ್ದಾರೆ. ಆತ್ಮಸಂರಕ್ಷಣಾರ್ಥವಾಗಿ ಇರಾಣದ ಆಖಾತದಲ್ಲಿ ಜಲಯಾನಗಳನ್ನು ನಿರ್ಮಿಸಿ ಬ್ರಿಟಿಶರ ಹಾವಳಿಯಿಂದ ಸ್ವದೇಶವನ್ನು ಕಾಪಾಡುವದಕ್ಕಾಗಿ ಇಟಾಲಿಯ ಕಡೆಯಿಂದ ನೌಕಾಶಕ್ತಿಯ ಹಾಗೂ ಸೈನ್ಯಶಕ್ತಿಯ ಜಾಣರನ್ನು ಕರತರಿಸಿ ಪ್ರಜೆಗಳಿಗೆ ಶಿಕ್ಷಣ ಕೊಡುತ್ತಿದ್ದಾರೆ. ಅಮೀರರಾದ ಅಮಾನುಲ್ಲಾಖಾನರವರೂ ತಮ್ಮ ದೇಶದಲ್ಲಿ ಅದೇ ಪ್ರಕಾರ ವ್ಯವಸ್ಥೆ ಮಾಡುವ ಸಂಕಲ್ಪ ಮಾಡಿದ್ದಾರೆ. ಸದ್ಯಕ್ಕೆ ಅಮೀರರಿಗೂ, ಶಹಾರವರಿಗೂ ಆದ ತಹನಾಮೆಯು ವಿಚಾರಾರ್ಹವಿದೆ. ಅಫಘಾಣಿಸ್ಥಾನ ಅಥವಾ ಇರಾಣ ದೇಶದ ಮೇಲೆ ಪರರಾಷ್ಟ್ರಗಳು ದಾಳಿಯನ್ನಿಟ್ಟ ಪಕ್ಷಕ್ಕೆ ಈ ರಾಷ್ಟ್ರಗಳು ಪ್ರಯತ್ನಪೂರ್ವಕವಾಗಿದ್ದು, ಪರಮಾವಧಿಯ ಪ್ರಯತ್ನ ಮಾಡಬೇಕು. ಈ ಶರ್ತಿಗಳ ಈ ಪರಿಭಾಷೆಯನ್ನು ಜನಸಾಮಾನ್ಯರ ಭಾಷೆಯಲ್ಲಿ ಹೇಳಬಹುದು. ಅದೇನಂದರೆ, ಇನ್ನು ಮುಂದೆ ಇರಾಣ ದೇಶದ ಶತ್ರುವು ಅಫಗಾಣಿಸ್ಥಾನದ ಶತ್ರುವು; ಅಫಗಾಣಿಸ್ಥಾನದ ಶತ್ರುವು ಇರಾಣದ ಶತ್ರುವು, ಒಬ್ಬರಿಗೊಬ್ಬರು ಆಪತ್ಕಾಲದಲ್ಲಿ ನೆರವಾಗಲು ಅನುಕೂಲವಾಗಬೇಕೆಂದು ತೆಹರಾನ-ಕಾಬೂಲಗಳ ನಡುವೆ ಉಗಿಬಂಡಿಯನ್ನು ರಚಿಸುವದಕ್ಕಾಗಿ ಇಂಜನಿಯರರ ಯೋಜನೆಯಾಗುವದಿದೆ. ಈ ಉಗಿಬಂಡಿಯು ಪಟ್ಟಗ ಅಂಗೋರಾ ಪಟ್ಟಣದ ತನಕ ಹೋಗುವದೆಂದು ಅಮೀರರಿಗೂ, ಪಾಶಾರವರಿಗೂ ನಡೆದ ಸಂಭಾಷಣದಿಂದ ವ್ಯಕ್ತವಾಗಿದೆ. ರಶಿಯಾ ದೇಶದ ಭೀತಿಯು ಈಗ ಈ ದೇಶಗಳಿಗಿಲ್ಲ. ಯಾಕಂದರೆ ಅಫಗಾಣಿಸ್ತಾನಕ್ಕೂ ರಶಿಯಾ ದೇಶಕ್ಕೂ ಸ್ನೇಹವಾಗಿರುತ್ತದೆ. ಅಫಗಾಣಿಸ್ಥಾನದ ಮೇಲೆ ಯುದ್ಧವಾಗುವ ಸಂದರ್ಭದಲ್ಲಿ ರಶಿಯಾ ದೇಶವು ತಟಸ್ಥವೃತ್ತಿಯನ್ನು ಧರಿಸಬೇಕೆಂದು ಗೊತ್ತಾಗಿದೆ. ಈ ಮೂರೂ ದೇಶಗಳ ಐಕ್ಯದಿಂದ ಉಂಟಾಗುವ ಫಲವನ್ನು ಸ್ವಲ್ಪದರಲ್ಲಿ ಹೇಳಬಹುದು. ಬ್ರಿಟಿಶರು ಇರಾಣ ದೇಶದೊಳಗಿನ ಎಣ್ಣೆಯ ಖಣಿಗಳನ್ನು ಕೈವಶ ಮಾಡಿಕೊಂಡು ಮುಂದಿನ ಯುದ್ಧಕ್ಕೆ ತಗಲುವ ಎಣ್ಣೆಯ ಪೂರೈಕೆ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ತುರ್ಕಸ್ಥಾನ, ಇರಾಣ, ಅಫಗಾಣಿಸ್ಥಾನಗಳ ಐಕ್ಯದಿಂದ ಈ ಸ್ವಾರ್ಥಕ್ಕೆ ತಡೆಬಿದ್ದು ಬ್ರಿಟಿಶರಿಗೆ ಬಹುಪರಿಯಿಂದ ತೊಂದರೆಯಾಗುವದು. ಮುಂದಿನ ಯುದ್ಧದಲ್ಲಿ ಬ್ರಿಟಿಶರೇ ಕಟ್ಟವೇಶಧಾರಿಗಳಾಗಿರುವ ಮೂಲಕ ಅಮಾನುಲ್ಲಾಖಾನರವರ ದೇಶಾಟಣದಿಂದ ಬ್ರಿಟಿಶರ ರಾಜಕಾರಣದ ಶಕ್ತಿಯು ಬಹುತರವಾಗಿ ಹರಣವಾಗಿದೆಂದು ಹೇಳಬಹುದು. ಹಿಂದುಸ್ಥಾನದೊಳಗೆ, ವಿಶೇಷವಾಗಿ ಅಫಗಾಣಿಸ್ಥಾನ-ಹಿಂದುಸ್ಥಾನ ಮೇರೆಗುಂಟ ಪ್ರದೇಶದಲ್ಲಿ ನಡಿಸಿದ ಸೈನ್ಯ ತಯಾರಿಯಿಂದ ಮುಂದಿನ ರಣಕ್ಷೇತ್ರವು ಅಫಗಾಣಿಸ್ಥಾನದಲ್ಲೇ ಉಂಟಾಗುತ್ತದೆಂದು ಹೇಳುತ್ತಾರೆ. ಕಲಕತ್ತೆಯ 'ಫೋರವರ್ಡ' ಪತ್ರಿಕೆಯಲ್ಲಂತೂ ಅಫಗಾಣಿಸ್ಥಾನದಲ್ಲಿ ದಂಗೆಯನ್ನೆಬ್ಬಿಸಲು ಹಿಂದುಸ್ಥಾನ ಸರಕಾರವೇ ದೂತರನ್ನು ರವಾನಿಸಿರುವದಾಗಿ ಪ್ರಕಟಗೊಂಡಿತ್ತು. ಅದು ನಿರಾಧಾರವಾದದ್ದೆಂದು ಹಿಂದುಸ್ಥಾನ ಸರಕಾರವು ಪ್ರಕಟಣೆಯನ್ನು ಹೊರಡಿಸಿದೆ. ಆದರೆ ಈ ಸುದ್ದಿಯಲ್ಲಿ ಏನೂ ಹುರುಳಿಲ್ಲವೆಂದು ವಿಚಾರಿಗಳು ಗ್ರಹಿಸುವದಿಲ್ಲ. ಪ್ರತ್ಯಕ್ಷ ಯುದ್ಧವಾಗುವ ವರೆಗೆ ಎಲ್ಲವೂ ಮಿತ್ರರಾಷ್ಟ್ರಗಳೆಂದು ಹೇಳುವ ಪರಿಪಾಠವಿದ್ದಂತೆ ಹಿಂದುಸ್ಥಾನ ಸರಕಾರವು ಅಫಗಾಣಿಸ್ಥಾನದ ಗೆಳೆತನವನ್ನು ಪ್ರಕಟಿಸಿದೆಂದು ಸೂಜ್ಞರು ತಿಳಿಯುತ್ತಾರೆ. ಅದಂತಿರಲಿ, ರಣಯಜ್ಞದ ಸಾಧನ ಸಾಮಗ್ರಿಗಳ ಸಂಗ್ರಹವಾಗುತ್ತಿದೆ, ಪ್ರತ್ಯಕ್ಷ ಯುದ್ಧಕ್ಕೆ ಬೇಗನೇ ಪ್ರಾರಂಭವಾಗುವದು. ಯಾರ್ಯಾರು ಕಂಕಣ ಧರಿಸುತ್ತಾರೆಂಬದು ಶೀಘ್ರವೇ ತಿಳಿಯುವದಾಗಿದೆ. ಮುಂದಿನ ಭವಿಷ್ಯದ ಈಗಿನ ಲಕ್ಷಣಗಳನ್ನಷ್ಟು ನಾವು ಹೇಳಿಟ್ಟಿದ್ದೇವೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮುಂಚೆ ೩-೪ ದಿನಗಳ ವರೆಗೆ ಬಹಳ ಮಳೆ ಸುರಿಯಿತು. ನೆರೆ ಸಹ ಬಂದಿತ್ತು. ನಿನ್ನೆ ಮೊನ್ನೆಯಿಂದ ಸ್ವಲ್ಪ ಬಿಸಿಲು ಬಂದು ಸಮಾಧಾನವಾಗಿದೆ. ಹೊಳೆಗದ್ದೆಯ ದಿಕ್ಕಿಗೆ ಮೂರಾವರ್ತಿ ಹಾಕಿದ ಬೀಜವು ಕೆಟ್ಟುಹೋಯಿತು. ಒಮ್ಮೆ ಕೊಳೆತುಹೋಯಿತು; ೨ನೇ ಬಾರಿ ಹುಟ್ಟುಹೋಯಿತು; ೩ನೇ ಬಾರಿಗೂ ಕೊಳೆತುಹೋಗುವ ತಯಾರಿಯಲ್ಲಿದೆ. ಹೀಗೆ ಬೇಸಾಯಗಾರರ ಕಷ್ಟ. ಹೆಗಣ ಬದಿಗೆ ಮೈಲಿ ಬಂದಿದೆ. ಈ ವಾರದಲ್ಲಿ ೧೯ ೯೮ ಇಂಚು ಮಳೆ ಬಿತ್ತು. ಒಟ್ಟು ೧೦೩-೮೫ ಇಂಚು ಮಳೆಯಾಯಿತು.

ಗುರುವಾರಕ್ಕೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಈ ತಾಲೂಕಿನ ಕಷ್ಟಿನ ದೇಸಾಯಿಗಾರರದೊಂದು ಸಭೆ ಸೇರಿ ಹೊಲಗಳ ಪುನರ್ಘಟಣೆಯ ಕಾನೂನು ನಿಷೇಧಿಸಲ್ಪಟ್ಟಿದೆ. ಈ ಕಾನೂನಿನಿಂದ ಬೇಸಾಯಗಾರರು ದೇಶಾಂತರಕ್ಕೆ ಹೋಗಬೇಕಾಗುತ್ತದೆಂಬ ಧಾಸ ತೀವ್ರವಾಗಿದೆ. ತೀರ್ವೆಯನ್ನು ಗೇಣಿಯ ಅರ್ಧಾಂಶದಷ್ಟು ಇಳಿಸಬೇಕೆಂಬ ಕಾನೂನಿನ ನಿಷೇಧವಾಯಿತು. ಇದ್ದ ತೀರ್ವೆಯನ್ನು ತೆರಲಾಗುವದಿಲ್ಲವಾದ್ದರಿಂದ ತೆರಿಗೆಯನ್ನು ತಗ್ಗಿಸಬೇಕಾಗಿಯೂ ನಿರ್ಧಾರವಾಗಿದೆ. ಬಾರ್ದೋಲಿ ಪ್ರಜೆಗಳು ನಡಿಸುವ ಕಾದಾಟಕ್ಕೆ ಸಹಾನುಭೂತಿ ಪ್ರದರ್ಶಿಸಲಾಗಿದೆ. ಆ ಕುರಿತು ನಾಣೆ ಸಂಗ್ರಹ ಮಾಡುವದಕ್ಕಾಗಿ ಒಂದು ಮಂಡಳಿಯು ನೇಮಿಸಲ್ಪಟ್ಟಿದೆ. ಶ್ರೀ ಗೋಕರ್ಣ ಕ್ಷೇತ್ರದವರು ತಮ್ಮ ನಿಷೇಧವನ್ನು ವ್ಯಕ್ತಗೊಳಿಸುವ ಅರ್ಜಿಯನ್ನು ಶ್ರೀ ಕಲೆಕ್ಟರರ ಕಡೆಗೆ ಕಳಿಸಿದ್ದಾರಾಗಿ ತಿಳಿಯುತ್ತದೆ.

ಶ್ರೀ ಗೋಕರ್ಣ ಕ್ಷೇತ್ರದಲ್ಲಿ ಶ್ರೀ ಶಾಂಡಿಲ್ಯ ಮಹಾರಾಜರವರು ಜೀರ್ಣೋದ್ಧಾರ ಮಾಡಿದ ಶ್ರೀ ರಾಮತೀರ್ಥದ ಕೆರೆಯು ಅಪಾರವು ಮಳೆಯಿಂದ, ನೆರೆಯು

ಸಮುದ್ರ ತೆರೆಗಳಿಂದಲೂ ಕೆಟ್ಟು ಬಹಳ ನಷ್ಟವಾಗಿದೆ.

ಶ್ರೀ ಬ್ರಹ್ಮಚರ್ಯಾಶ್ರಮ ಗೋಕರ್ಣ ಇಲ್ಲಿಯ ದೈವರಾತ ಶರ್ಮರವರು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ನಿನ್ನೆ-ಮೊನ್ನೆ "ಆತ್ಮಬಲ ಸಂಪಾದನೆ" ಎಂಬ ವಿಷಯದ ಮೇಲೆ ೨ ಉಪನ್ಯಾಸಗಳ ನ್ನಿತ್ತರು.

ಕಲಬಾಗ ಗ್ರಾಮದವರೊಬ್ಬರು ತಿಳಿಸುವದೇನಂದರೆ — ‘ಇಲ್ಲಿಯ ಮುನಿಸಿಪಾಲಿಟಿಯ ಕಾರಕೂನರು ನಮ್ಮ ಕಡೆ ಬಂದು ಚೇಷ್ಟೆ ಮಾಡಹತ್ತಿದ್ದಾರೆ ಹೊಸ ಮಾರ್ಗ ಮಾಡಿದ್ದಲ್ಲಿ ನೀವು ಸ್ಥಳ ಕೊಡಬೇಕೆಂದು ಮನೆ ಮನೆಗೆ ಕೇಳುತ್ತ ಹೋಗುತ್ತಾರೆ. ಈ ಸಂಗತಿ ಯಾರು ಹೇಳಿದರೆಂದು ಕಾರಕೂನರಿಗೆ ಕೇಳಿದರೆ, ಅಧ್ಯಕ್ಷರು ಈ ಚೌಕಶಿ ಮಾಡಲಿಕ್ಕೆ ನಮಗೆ ಅಪ್ಪಣೆ ಮಾಡಿದ್ದಾರೆಂದು ಹೇಳುತ್ತಾರೆ. ಮಾರ್ಗದ ಪ್ಲಾನ ಎಸ್ಟಿಮೇಟುಗಳಿಲ್ಲ. ಇಂಥ ಸಂಗತಿಯಲ್ಲಿ ಹೀಗೆ ಕೇಳುತ್ತ ಹೋಗುವದರ ಮರ್ಮವೇನು? ಅಧ್ಯಕ್ಷರು ಇಂಥ ಅಪ್ಪಣೆ ಮಾಡಿದ್ದಾರೇನು?’ ಇತ್ಯಾದಿ

ಹಿಂದುಸ್ಥಾನಿ ಸೇವಾದಲದ ಶ್ರೀ॥ ದಾಮೋದರ ಲೀಂಗಡೆಯವರು ತಿಳಿಸುವದೇನಂದರೆ ಕಾರವಾರದಲ್ಲಿ ೩೨೧ ರಾಷ್ಟ್ರೀಯ ಸಭೆಯ ಸಭಾಸದರಾದರು ೨೧ ಸೇವಾದಲದ ಸಭಾಸದರಾದರು. ಅಂಕೋಲೆಯಲ್ಲಿ ಅನುಕ್ರಮವಾಗಿ ೧೦೪, ೪ ಕುಮಟೆಯಲ್ಲಿ ೧೧, ೨, ಹೊನ್ನಾವರದಲ್ಲಿ ೧೦೮ ೨ ಸಭಾಸದರಾಗಿದ್ದಾರೆ. ಇನ್ನೂ ಕೆಲಸ ನಡೆದದೆ.

ಹೊನ್ನಾವರ— ಟಪ್ಪರ ಸ್ಮಾರಕ ಮಂದಿರದ ಪೂರ್ಣತೆ ಬಗ್ಗೆ ವಿಚಾರ ಮಾಡಲು ಇಲ್ಲಿಯ ನಾಗರಿಕರ ಸಭೆ ಸೇರಿತು. ಮತ್ತಿಘಟ್ಟದ ಸಿಲ್ಕ ರೂಪಾಯಿ ಗಳನ್ನು ಮುನಿಸಿಪಾಲಿಟಿಯವರಿಗೆ ಕೊಡದೇ ಕೆಂದೂ, ಈ ಹಣದಿಂದ ಹಾಗು ಮುನಿಸಿಪಾಲಿಟಿಯ ಹಣವನ್ನು ವೆಚ್ಚಮಾಡಿ ಟಪ್ಪರ ಸ್ಮಾರಕ ಮಂದಿರವನ್ನು ಪೂರ್ಣತೆಗೊಳಿಸಿ ಅದನ್ನು ಶಾಶ್ವತವಾಗಿ ...ಊ, ಅದರೊಳಗೆ ಈಗಿನ ವಾಚನಾಲಯಗಳನ್ನು ಇಡಬೇಕೆಂದೂ ಯಾವದೇ ಪ್ರಕಾರದ ಸಭೆ ...ಸಲು ನಾಗರಿಕರಿಗೆ ಪ್ರತಿಬಂಧ ಮಾಡಬಾರದೆಂದೂ ನಿರ್ಣಯಗಳಾಗಿವೆ. ಮುನಿಸಿಪಾಲಿಟಿಯು ಈ ಶರ್ತುಗಳಿಗೆ ಒಪ್ಪಿದ್ದರೆ, ಮುಂದಿನ ವಿಚಾರ ಮಾಡಲಿಕ್ಕಿದೆ.

ಮಳೆ ಜೋರಾಗಿ ಬೀಳುತ್ತಿದೆ. ಹೊಳೆಗೆ ನೆರೆ ಬಂದಿದೆ. ಗದ್ದೆ ನೆಟ್ಟ ಕೆಲಸವು ಮುಗಿಯುತ್ತ ಬಂತು. ಅಕ್ಕಿ ದರ ಸ್ವಲ್ಪ ಏರಿದೆ. ಈ ತನಕ ಅಂಗಡಿ ...

ಶ್ರೀ ಸಾಂಡೇ ಶಾಸ್ತ್ರಿಗಳವರು ಇಲ್ಲಿಯ ... ನರ ಮಠದಲ್ಲಿ ಎರಡು ದಿವಸ, ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಒಂದು ದಿವಸ, ಹೀಗೆ ೩ ಸುಶ್ರಾವ್ಯ ಪ್ರವಚನ ಕೊಟ್ಟರು. ಇವರ ಪ್ರವಚನಗಳು ... ಕ್ಯಂಥವಿವೆ. ಮುಂದೆ ಇವರು ಶಿರ್ಸಿಗೆ ಪ್ರಯಾಣ ಮಾಡಿದರು.

ಅಂಕೋಲೆ— ಶುಕ್ರವಾರಕ್ಕೆ ಇಲ್ಲಿಯ ನಾಗರಿಕರು ಎಸ್ವತ್ವರ ಆಶಿಯಲ್ಲಿ ಸಭೆ ಸೇರಿ ಜಕ್ಕ ... ಗಳ ಕಾಯಿದೆಯಿಂದ ಜನರಿಗೆ ಬಾಧೆ ಕಷ್ಟ ಮಾಗಿರುವದರಿಂದ ಅದನ್ನು ನಿಷೇಧಿಸಲಾಯಿತು. ತೀರ್ವೆ ಹಿಗ್ಗಿಸಿದ ಕಾಯಿದೆಯ ಧೋರಣದಿಂದ ಬೇಸಾಯಗಾರರ ನಾಶವಾಗುವ ಹಾಗಿರುವದರಿಂದ ಅದನ್ನು ನಿಷೇಧಿಸಲಾಯಿತು. ಈ ಕಾಯಿದೆಯನ್ನು ... ರ್ಣವಾಗಿ ವಿರೋಧಿಸಬೇಕೆಂತ ಲೋಕಪಕ್ಷದ ಪ್ರತಿನಿಧಿಗಳಿಗೆ ವಿನಂತಿ ಮಾಡಲಾಯಿತು.

ಕಾರವಾರ— ಕೋಡಿಬಾಗದಲ್ಲಿ ಒಂದು ಪ್ಲೇಗ ಮರಣವಾದ ಸುದ್ದಿ ಬಿದ್ದಿದೆ. ಜನರು ಪುನಃ ಗಾಬರಿಯಾಗಿದ್ದಾರೆ. ಇಲ್ಲಿಯ ಸೆಶನ್ ಕೋರ್ಟಿನಲ್ಲಿ ಖೂನಿ ಖಟ್ಲೆಯೊಂದು ವಿಚಾರವಾಯಿತು. ಭಾಗೀರಥಿಯೆಂಬ ಹವೀಕ ಜಾತಿಯ ೨೫ ವರ್ಷದ ವಿಧವೆಯೊಡನೆ ಪರಮ ಸೀತಾರಾಮಶಾಸ್ತ್ರಿ ಮುಂಡಿಗೇರಿ ಇವರು ವ್ಯಭಿಚಾರ ಮಾಡಿದ್ದರಿಂದ ಭಾಗೀರಥಿಯು ಗರ್ಭವತಿಯಾದಳು. ಜಾತಿಯೊಳಗೆ ಉಂಟಾದ ಅಪವಾದವನ್ನು ಪರಿಹರಿಸಿಕೊಳ್ಳುವ ಬಗ್ಗೆ ಭಾಗೀರಥಿಯು ತನ್ನನ್ನು ಕೊಲ್ಲಬೇಕಾಗಿ ಪರಮ ಶಾಸ್ತ್ರಿಯೊಡನೆ ಬೇಡಿಕೊಂಡಳಂತೆ! ಅದರಂತೆ ತಾನು ಅವಳ ಘಾತ ಮಾಡಿದೆನೆಂದು ಪರಮಶಾಸ್ತ್ರಿಯು ಒಪ್ಪಿಕೊಂಡನು. ಆತನು ನಿರಪರಾಧಿಯೆಂದು ಎಸೆಸರರು ಅಭಿಪ್ರಾಯ ಕೊಟ್ಟರು. ಅದನ್ನು ಧಿಕ್ಕರಿಸಿ ಸೆಶನ್ ಜಡ್ಜರು ಜನ್ಮ ಕಾಪು ಶಿಕ್ಷೆಯನ್ನು ವಿಧಿಸಿದ್ದಾರೆ. ಭಾಗೀರಥಿಯ ಗಂಡನು ಮದುವೆಯಾದ ೧೫ ದಿನಗಳಲ್ಲಿಯೇ ತೀರಿಕೊಂಡಿದ್ದನು.

ಪ್ಲೇಗು ಬರುವ ಲಕ್ಷಣಗಳು ಕಾಣಹತ್ತಿದ್ದರಿಂದ ಇಲ್ಲಿಯ ಮುನಿಸಿಪಾಲಿಟಿಯವರು ಗಾಳಿ ಮರದ ಕೋಡಿಬೋಳಗಿಂದ ೧೦ ಎಕ್ರೆ ಸ್ಥಳವನ್ನು ತಾತ್ಪುರ್ತಿನ ಕೊಡಲು ಠರಾವು ಮಾಡಿದ್ದಾರೆ. ಕಲೆಕ್ಟರರು ಅನುಗ್ರಹಿಸಬಹುದು. ಬಾಡೇಶೋಲಿ ವಿಷಯಾಗಿ ಇನ್ನು ೨೫ ರೂಪಾಯಿಗಳು ಕಳೆಸೋಣ ಪಟ್ಟ ಮತ್ತು ಕೂಡಿಸಹತ್ತಿದ್ದಾರೆ.

ಚೆಂಡಿಯೆ— ಒಬ್ಬರು ತಿಳಿಸುವದೇನಂದರೆ — ಇಲ್ಲಿಯ ಶಾಲೆಯ ಶಿಕ್ಷಣದ ಸ್ಥಿತಿ ಕೇಳಬಾರದು ... ಕೆಡುತ್ತಿದೆ. ಕಳೆದ ವರುಷ ವರ್ನ್ಯಾಕ್ಯುಲರ್ ಪರೀಕ್ಷೆಗೆ ಕಳಿಸಿದ ಒಬ್ಬನೇ ಹುಡುಗನು ಪ್ಯಾಸಾಗದೆ ಬಿದ್ದು ಮರಳಿದನು. ಅದಕ್ಕೆ ಯಾರು ಹೊಣೆಗಾರರು? ಮುಂಚಿನ ವರುಷ ಮುಲ್ಕಿ ಪರೀಕ್ಷೆಯಲ್ಲಿ ಈ ಶಿಕ್ಷಕರು ಕಲಿಸಿದ ವಿದ್ಯಾರ್ಥಿಗಳು ಹೇಗೆ ಪಾಸಾದರು? ಶಾಲೆಯ ಮೇಲಧಿಕಾರಿಗಳು ಶಿಕ್ಷಕರ ಕೆಲಸ ನೋಡಿ ಹಂತೋಷಪಟ್ಟಿದ್ದಾರೆ" ಇತ್ಯಾದಿ

ಯಲ್ಲಾಪುರ— ಇಲ್ಲಿಯ ನಾಯ್ಕರಕೇರಿಯವ ಶ್ರೀ ... ಭಟ್ಟರು ಹೆಣ್ಣು ಮಕ್ಕಳಿಗೆ ಬಹುಮಾನ ಹಂಚಲಿಕ್ಕಾಗಿ ೧೦ ರೂಪಾಯಿ ಕೊಟ್ಟರು. ಅದರಂತೆ ಇಲ್ಲಿಯ ಪ್ರಮುಖ ೩ ಸ್ತ್ರೀಯರೂ, ಹುಡುಗಿಯರೂ ಸಭೆ ಸೇರಿ ಬಹುಮಾನ ಸಮಾರಂಭವನ್ನು ನೆರವೇರಿಸಿದರು. ಸ್ತ್ರೀಶಿಕ್ಷಣದ ಪ್ರಯೋಜನ, ಶಿಶುಸಂಗೋಪನ, ಗೃಹಶಿಕ್ಷಣ ಮುಂತಾದ ವಿಷಯಗಳ ಮೇಲೆ ಜಾಣ ಸ್ತ್ರೀಯರು ಉಪನ್ಯಾಸ ಕೊಟ್ಟರು. ಸಭಾಧ್ಯಕ್ಷರು ಪುಸ್ತಕ ರೂಪ ಗ್ರಂಥವನ್ನು ಬಹುಮಾನ ಕೊಟ್ಟರು.

ಮುಂಡಗೋಡ— ಒಬ್ಬರು ತಿಳಿಸುವದೇನಂದರೆ:— ಕಲಘಟಗಿ ತಾಲೂಕ ಪೈಕಿ ಸಂತೇ ಹೊನ್ನಳ್ಳಿ ಪಟೇಲ ಶಾಂತಪ್ಪ ಗೌಡರ ಹೆಂಡತಿಯು ಗರ್ಭಿಣಿಯಿದ್ದಳು. ಜನನ ಕಾಲ ಸಮೀಪಿಸಿಬಂತು. ಅವಳು ತನ್ನ ಅಕ್ಕನನ್ನು ಕರೆಸಿಕೊಂಡು ತನ್ನ ಹತ್ತಿರವೇ ಇಟ್ಟುಕೊಂಡಿರುತ್ತಿದ್ದಳು. ಅಕ್ಕ-ತಂಗಿಯರಿಬ್ಬರೂ ರಾತ್ರಿ ಒಂದೇ ಕೋಣೆಯಲ್ಲಿ ಮಲಗುತ್ತಿದ್ದರು, ಒಂದೇ ಹಾಸಿಗೆಯ ಮೇಲೆ ಮಲಗುತ್ತಿದ್ದರು. ಎಂಟು ದಿವಸಗಳ ಹಿಂದೆ ಅಪರಾತ್ರಿ ತಂಗಿಯು ಮಲಗಿದ್ದಲ್ಲಿಂದ ಕಾಣದಾದಳು. ಅಕ್ಕನು ವಗೈರರು ದೂರ ಮನೆಯ ಕಂಪೌಂಡದಲ್ಲಿ ಹೋಗಿಬಿದ್ದಿದ್ದಳು; ಜನನವಾಗಿದ್ದಿತು. ಆದರೆ, ಶಿಶುವಾಗಲೀ, ಬಾಣಂತಿಯಾದ ಬಾಕಿ ಹೊಲಸಾಗಲೀ ಯಾವದೂ ಕಾಣುತ್ತಿದ್ದಿಲ್ಲ. ಬಾಣಂತಿಯು ಎಚ್ಚರತಪ್ಪಿ ಬಿದ್ದಿದ್ದಳು. ಬಾಣಂತಿಗೆ ಜನನಕಾಲಕ್ಕೆ ಸ್ವಪ್ನದಲ್ಲಿ ದೃಷ್ಟವಾಯಿತಂತೆ! ಗಂಡು ಕೂಸನ್ನು ತಾವು ಒಯ್ಯುತ್ತೇವೆಂದು ಯಾರೋ ಒಬ್ಬರು ಬಂದು ಹೇಳಿ ಒಯ್ದರಂತೆ! ಇಷ್ಟು ಸಂಗತಿಯನ್ನು ಅವಳು ಎಚ್ಚರ ಹೊಂದಿದ ಬಳಿಕ ಹೇಳಿದಳು. ಇದೆಂಥ ಚಮತ್ಕಾರ! (೧೩-೭-೧೯೨೮)

ಸಿದ್ದಾಪುರ— ಇಲ್ಲಿ ಈ ತನಕ ೩೩ ಇಂಚು ಮಳೆಯಾಯಿತು. ಈವರುಷ ತೋಟಗಳ ಸ್ಥಿತಿಯು ಕೆಟ್ಟು ಹೋಗಿದೆ. ದೇಶಿಗೆಯಲ್ಲಿ ಬಿದ್ದ ಮಳೆಯಿಂದ ಕಿಂಗಾರಕ್ಕೆ ಪೆಟ್ಟು ಬಡೆದು ಅಡಿಕೆ ಹಿಡಿಯುವಷ್ಟು ಹಿಡಿಯಲಿಲ್ಲ. ಹಿಡಿದ ಅಡಿಕೆಯು ಕೊಳೆಯಿಂದ ಉದುರಿ ಹೋಗುತ್ತಿದೆ. ಬೇಸಾಯ ಖಾತೆಯ ಡಿಪುಟಿಯವರು ಇಲ್ಲಿ ಬಂದು ಕೊಳೆ ಔಷಧಿಯ ಪ್ರಯೋಗವನ್ನು ನೋಡಿ ಹೋದರು. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಪಾಸಾಗಲಿಕ್ಕಿದ್ದ ಜಮೀನ ವಿಭಾಗಣಿ ಬಿಲ್ಲು ಹಾಗು ತಿಂಡ ರೆವ್ಹಿನ್ಯೂ ಕೋಡಿನ ದುರುಸ್ತಿ ಕಾಯಿದೆಗಳನ್ನು ಪಾಸು ಮಾಡಬಾರದೆಂದು ಇಲ್ಲಿಯ ಬೇಸಾಯಗಾರರು ಬಿನ್ನೈಸಿದಾರೆ. ಈ ಎರಡೂ ಕಾನೂನುಗಳ ವಿಷಯ ಮುಂದಿನ ಆಲೋಚನೆ ಮಾಡಲು ಇದೇ ಬರುವ ೩೧ನೇ ತಾರೀಖಿಗೆ ಬೇಸಾಯಗಾರರ ಸಭೆ ಸೇರಲಿಕ್ಕಿದೆ.

ಇಲ್ಲಿಯ ಗ್ರಾಮಾಧಿಕಾರಿಗಳ ಬಳಿ ಚಳಿಬ್ಬರ ಬೀಡಿಕರು ಕ್ವಿನೀನು ಕೇಳಿದರೆ ಸಿಗುವದಿಲ್ಲವಾಗಿ ಒಬ್ಬರು ದೂರುತ್ತಾರೆ. ಬಂದೂಕ ಲೈಸನ್ಸಿನ ಮುದ್ದತ್ತು ಈಗ ೧ ವರ್ಷಕ್ಕೆ ಇಳಿಸಲಾಗಿದೆ. ಮೊದಲು ೫ ವರ್ಷವಿತ್ತು; ಬಳಿಕ ೩ ವರ್ಷವಾಯಿತು. ಪ್ರತಿ ವರುಷ ಮುದ್ದತ್ತು ಬೆಳಿಸಲು ಕಲೆಕ್ಟರರಿಗೆ ಅರ್ಜಿ ಮಾಡಿಕೊಳ್ಳಬೇಕು. ಎಲ್ಲ ವಿಧಿಯಾಗಿ ಪುನಃ ಲೈಸನ್ಸು ಕೈಯಲ್ಲಿ ಸಿಗುವ ವರೆಗೆ ೩-೪ ತಿಂಗಳು ಕಳೆದು ಹೋಗುತ್ತವೆ. ಕಾಯಿದೆಯಂತೆ ೧ ವರುಷವಿದ್ದದ್ದು ೮ ತಿಂಗಳಾಗುತ್ತವೆ.

ಕಳೆದ ಸೋಮವಾರಕ್ಕೆ ತಾಲೂಕ ಲೋಕಲ್ ಬೋರ್ಡಿನ ಸಭೆಯಾಯಿತು. ಶಿರ್ಸಿಯಿಂದ ಕೂಡೆ, ಉಕ್ಕಳಿಯಿಂದ ಮೆಟ್ಟಿನ ಮುಂತಾದವುಗಳ ಮೇಲಿಂದ ಹಾದೀಯನೆ ಹೊಳೆಗೆ ಹೋಗಲು ರೈತರು ತಯಾರಿಸಿದ ಹೊಸ ರಸ್ತೆಯನ್ನು ಬೋರ್ಡು ವಹಿಸಿಕೊಂಡಿದೆ. ರೈತರ ಕೆಲಸವು ಸ್ತುತ್ಯವಿದೆ.

ರಾ॥ ರಾಮಚಂದ್ರ ಮಂಜಯ್ಯ ಹೆಗಡೆ ಮಲವಳ್ಳಿ, ಗಣಪಭಟ್ಟ ತಿಮ್ಮಣ್ಣಭಟ್ಟ ಹೋಬಳಿ ಮುಂತಾದವರು ಬರೆಯುವದೇನಂದರೆ.- ‘ನಮ್ಮಲ್ಲಿ ರಿವ್ಹಿಜನ್ ಸರ್ವೇ ಆಗಿ ೩೦ ; ತೀರ್ವೆ ಏರಿದೆಯಂತೆ ಜಾಹೀರ ನಾಮ ಪ್ರಕಟವಾದ ಸುದ್ದಿಯಿಲ್ಲ. ಆಫೀಸಿನ ಮೂಲೆಯಲ್ಲಿ ಅಂಟಿಸಿದರೆ ನಮಗೇನು ಗೊತ್ತಿಲ್ಲ. ಸಿದ್ದಾಪುರ ತಾಲೂಕಿನ ಭೂಮಿ ತೀರ ಕನಿಷ್ಠ. ತರಗತಿಯ ದುಡ್ಡು ಸಹ ಸಿಗುವದು ದುರ್ಲಭ. ಪಡಭೂಮಿ ಬೆಳೆಯುತ್ತ ನಡೆದದೆ, ಚಳಿಜ್ವರ ಮುಂತಾದ ರೋಗಗಳಿಂದ ಜನರು ಸಾಯುತ್ತಿದ್ದಾರೆ, ದನಕರುಗಳು ಹುಲಿಯಪ್ಪನ ಪಾಲಿಗೆ; ಇಂಥ ಸ್ಥಿತಿಯಲ್ಲಿ ಸಂಸಾರ ನಡಿಸಿಕೊಂಡು ಹೋಗುವದು ಕಷ್ಟವಾಗಿದೆ. ಅಧಿಕಾರಿಗಳು ಇತ್ತ ಲಕ್ಷ ಕೊಡಬೇಕು" ಇತ್ಯಾದಿ ಬರೆಯುತ್ತಾರೆ.

ಬಾರ್ದೋಲಿಯ ವೃತ್ತಾಂತ.

ಈ ವಾರದ ಪ್ರಾರಂಭದ ಸುದ್ದಿಯು ಸಂಧಾನದ್ದು. ೧೮ನೇ ತಾರೀಖಿನ ದಿನ ಗವರ್ನರರಾದ ಸರ್ ಲೆಸ್ಲೀ ವಿಲ್ಸನ್‌ರವರು ಸಿಮಲಾ ಪಟ್ಟಣಕ್ಕೆ ಹೋಗಿ ಸುರತ ಪಟ್ಟಣದಲ್ಲಿ ಇಪ್ಪರ ಭೆಟ್ಟಿ ಕೊಟ್ಟು ಪುನಃ ಮರಳಿ ಬಂದರು. ಸಿಮಲಾ ಪಟ್ಟಣದಲ್ಲಿ ಸರ್ವಾಧಿಪತಿಗಳಿಗೂ, ವಿಲ್ಸನ್ ದೊರೆಗಳಿಗೂ ಅಂತರಂಗದ ಮಾತುಕಥೆಗಳು ಬಂದು ಹೊಸ ತನದ ನಡೆದವಂತೆ! ಸರ್ವಾಧಿಪತಿಗಳು ತಮ್ಮ ಕಾರ್ಯಕಾರಿ ಮಂಡಳದ ಸಭೆ ಕೂಡಿಸಿ ಬಾರ್ದೋಲಿಯ ಪ್ರಶ್ನೆಯನ್ನು ವಿಚಾರಿಸಿದರು. ಕಾರ್ಯಕ್ರಮದಂತೆ ಬುಧವಾರ ಬೆಳಿಗ್ಗೆ ೮|| ಘಂಟೆಗೆ ಗವರ್ನರರು ಸುರತಕ್ಕೆ ಬಂದು ಮುಟ್ಟಿದರು; ಸ್ಟೇಶನಿನಲ್ಲಿ ಇರುವಾಗಲೇ ಕಮೀಶನರ, ಕಲೆಕ್ಟರ, ಡೆ|| ಕಲೆಕ್ಟರ ಮುಂತಾದ ಬಾರ್ದೋಲಿಯ ಅಧಿಕಾರಿಗಳೊಡನೆ ೧|| ಘಂಟೆಯ ತನಕ ಗುಪ್ತ ಆಲೋಚನೆ ಮಾಡಿದರು.

ಶ್ರೀ ವಲ್ಲಭಭಾಯಿ ಪಟೇಲರವರೂ ಸಹಕಾರಿಗಳಾದ ಶ್ರೀ ಅಬ್ಬಾಸ ತಾಯಬಜಿ, ಕಲ್ಯಾಣಜಿ ಮೆಹತಾ, ಕಾಕಾಸಾಹೇಬ ಕಾಲೇಲಕರ, ಶ್ರೀ ಭಕ್ತಿಬೆನ ದೇಸಾಯಿ, ಶ್ರೀ ಮಣಿಬಾಯಿ ಮೊದಲಾದವರೊಡನೆ ಸುರತದೊಳಗೆ ಪಟ್ಟಣದ ಆಶ್ರಮದಲ್ಲಿ ಪ್ರಸ್ತುತ ಚರ್ಚೆ ನಡೆಸಿ ತಮ್ಮ ಶರ್ತುಗಳನ್ನು ನಿಶ್ಚಯಿಸಿಕೊಂಡರು.

೧೧ ಘಂಟೆಗೆ ಗವರ್ನರರು ಕಾರ್ಯಕ್ರಮದಂತೆ ಅಲ್ಲಿಯ ಕೋಟೆಗೆ ಹೋದರು. ಗವರ್ನರರು ಕೋಟೆಗೆ ಹೋಗುವ ಮಾರ್ಗದ ಮೇಲೆಲ್ಲ ಮಿತಿಮೀರಿ ಪೋಲೀಸ ಬಂದೋಬಸ್ತು ಇತ್ತು. ಬೆಳಗಿನ ೮ ಘಂಟೆಯಿಂದಲೇ ಈ ಬಂದೋಬಸ್ತಿಗೆ ಪ್ರಾರಂಭ. ಈ ಬಂದೋಬಸ್ತಿನಿಂದ ಬಾರ್ದೋಲಿಯವರಲ್ಲಿ ಭೀತಿಯನ್ನು ಹುಟ್ಟಿಸುವ ಪ್ರಯತ್ನವಾಯಿತಂತೆ!

ಗವರ್ನರರು ಶ್ರೀ ವಲ್ಲಭಭಾಯಿ ಪ್ರಭೃತಿ ಶಿಷ್ಟರ ಭೆಟ್ಟಿ ತೆಗೆದುಕೊಂಡರು. ಗವರ್ನರರ ಜೊತೆಗೆ ಮುಂಬಯಿ ಸರಕಾರದ ಮುಖ್ಯಾಧಿಕಾರಿಗಳಾದ ಮಿ|| ರೂಕರವರೂ ಕಲೆಕ್ಟರ ಕಮೀಶನರರೂ ಇದ್ದರು. ಅವರೆಲ್ಲರಿಗೂ ಎಲ್ಲ ಮಾತುಕಥೆ ಗೊತ್ತಾಯಿತು. ಕೆಲವು ಬಾರಿ ಗವರ್ನರರು ಇತರರನ್ನೆಲ್ಲ ಹೊರಗೆ ಕಳಿಸಿ ಶ್ರೀ ವಲ್ಲಭಭಾಯಿಯವರೊಡನೆ ಖಾಸಗಿಯಾಗಿ ಮಾತಾಡಿದರಾಗಿ ತಿಳಿಯುತ್ತದೆ. ಸರ್ವಾಧಿಪತಿಗಳು ತಮ್ಮ ಶರ್ತುಗಳಿಗೆ ನೀವು ಒಪ್ಪಬೇಕಾಗಿ ಸಂದೇಶ ಕೊಟ್ಟಿದ್ದಾರೆಂದೂ ಶ್ರೀ ವಲ್ಲಭಭಾಯಿಯವರಿಗೆ ಗವರ್ನರರು ಹೇಳಿ ನೋಡಿ ನೋಡಿದರು. ಏರಿದ ತೀರ್ವೆಯನ್ನು ತೆರಬೇಕೆಂಬ ಶರ್ತಿಗೆ ಶ್ರೀ ವಲ್ಲಭಭಾಯಿಯವರು ಒಪ್ಪಲಿಲ್ಲ, ಸ್ವತಂತ್ರ ಚೌಕಶಿ ಮಾಡಬೇಕೆಂಬ ಬಗ್ಗೆ ಗವರ್ನರರು ಒಪ್ಪಲಿಲ್ಲ. ನ್ಯಾಯಾಧಿಕಾರಿಯನ್ನು ನೇಮಿಸಿ ಈ ಚೌಕಶಿ ನಡೆಸುತ್ತೇನಾಗಿ ಗವರ್ನರರು ಹೇಳಿದರು. ಬಿನ್‌ಸರಕಾರಿ ಜನರ ಚೌಕಶಿ ಮಂಡಳವಿರಬೇಕಾಗಿ ಶ್ರೀ ವಲ್ಲಭಭಾಯಿಯವರ ಆಗ್ರಹವಾಯಿತು. ಜಪ್ತು ಮಾಡಿದ ಭೂಮಿಗಳನ್ನು ಮರಳ ಕೊಡಬೇಕೆನ್ನಲು ಗವರ್ನರರು ಒಪ್ಪಲಿಲ್ಲ. ಹೀಗೆ ೩ ತಾಸು ಚರ್ಚೆಯಾಗಿ ಎಲ್ಲವೂ ನಿಷ್ಫಲವಾಯಿತು.

೫ ಘಂಟೆಗೆ ಪುನಃ ಗವರ್ನರರು ಕರೆದರು. ಏರಿದ ತೀರ್ವೆಗೆ ಜಾಮೀನದಾರರು ನಿಂತರೂ ಆಗುವದೆಂದು ಗವರ್ನರರು ಹೇಳಿದರು. ವಲ್ಲಭಭಾಯಿಯವರು ಅಷ್ಟಕ್ಕೂ ಒಪ್ಪಲಿಲ್ಲ. ೧| ತಾಸು ಉಗಿಬಂಡಿಯ ಸ್ಟೇಶನಿನಲ್ಲಿ ಈ ಕುರಿತು ಚರ್ಚೆ ನಡೆಯಿತು. ಏನೂ ನಿಶ್ಚಯವಾಗಲಿಲ್ಲ. ಸ್ಪಷ್ಟ ಮಾತುಕಥೆಗಳನ್ನು ತಿಳಿಯಲು ಮಾರ್ಗವಿಲ್ಲ. ಶಿಷ್ಟರೂ, ಗವರ್ನರರೂ ಎಲ್ಲ ಸಂಗತಿಗಳನ್ನು ಗುಪ್ತವಾಗಿಟ್ಟುಕೊಂಡಿದ್ದಾರೆ. ಗವರ್ನರರು ಪುನಃ ತೆರಳಿದರು; ಶ್ರೀ ವಲ್ಲಭಭಾಯಿಯವರು ಬಾರ್ದೋಲಿಗೆ ತೆರಳಿದರು.

ಇನ್ನು ಅತಿ ಅದೆ ಎಂದು ಅಧಿಕಾರಿಗಳ ಅತಿ ಪ್ರತಿಷ್ಠೆಯನ್ನು ಲಕ್ಷಿಸದೆ ಬಾರ್ದೋಲಿಯವರೊಡನೆ ಸಂಧಾನ ಮಾಡಿಕೊಳ್ಳಲು ಸರ್ವಾಧಿಪತಿ ಅರ್ವಿನ್ ದೊರೆಗಳು ವಿಲ್ಸನ್ ದೊರೆಗಳಿಗೆ ಆಜ್ಞಾ ಮಾಡಿದ್ದಾರೆಂದು 'ವಿಹಾರ'ಯು ವಾರ್ತೆ. ಗವರ್ನರರು ಶ್ರೀ ವಲ್ಲಭಭಾಯಿಯವರ ಪಕ್ಷದ ಸತ್ಯತೆಯ ಕಡೆಗೆ ತಮ್ಮ ಲಕ್ಷವನ್ನು ಭದ್ರವಾಗಿ ಕಾಯ್ದಿರಿಸಿದರೆಂದೂ, ಮುಂದೆ ಶ್ರೀ ವಲ್ಲಭಭಾಯಿಯವರಂತೆ ಇತರರು ಸಂಧಾನ ಮಾಡುವರೆಂದೂ ಹೇಳುತ್ತಾರೆ.

ಸಂಧಾನವಾಗದಿದ್ದರೆ ಮುಂದಿನ ಬೆಳೆಯ ತನಕ ನಿರೀಕ್ಷಣೆ ಮಾಡಿ ಬೆಳೆ ತಯಾರಾದ ಬಳಿಕ ಸರಕಾರವು ಅದನ್ನು ಕೊಯ್ಯಿಸುವದಂತೆ! ಅದನ್ನು ಸುಲಭವಾಗಿ ಕೊಯ್ಯಿಸುವದು ಸಾಧ್ಯವಿಲ್ಲೆಂದು ಪೋಲೀಸ ಅಧಿಕಾರಿಗಳು ಗವರ್ನರರಿಗೆ ತಿಳಿಸಿದರು. ಸೈನ್ಯವನ್ನು ಕಳಿಸಬೇಕಾಗುವದೆಂದ ಅವರ ಹೇಳಿಕೆ. ಮಿ|| ರೂಕರವರೂ ಹೀಗೆಯೇ ಅಭಿಪ್ರಾಯಪಟ್ಟಿದ್ದಾರಂತೆ! ಇಷ್ಟರ ತನಕ ಪಟ್ಟಾಗಿ ನಡೆಸಲು ವಿಲ್ಸನ್ ದೊರೆಗಳು ತಯಾರಿಲ್ಲ.

ಬೇಸತ್ಯಾಗ್ರಹಿಗಳು ಬೆಳೆಯನ್ನು ಕೊಯ್ಯಿಸುವ ನಿರ್ಧಾರ ಮಾಡಿದ್ದಾರೆ. ಅಸಾಧ್ಯವಾದರೆ ಎಲ್ಲ ಬೆಳೆಗೆ ಬೆಂಕಿ ಹಾಕುವರು; ಹೊರಗಿನ ಸರಕಾರಿ ಅಧಿಕಾರಿಗಳಿಗೆ ಸ್ಥಳಿಕರು ಕಾಳು ಕೊಡತಕ್ಕದ್ದಿಲ್ಲ.

ಸುರತ ಜಿಲ್ಲೆಯಲ್ಲಿ ಕೆಲವು ಗುತ್ತಿಗೆ ಲಿಲಾವು ಆಗುವ ಜಲಾಲಪುರ ತಾಲೂಕಿನಲ್ಲಿಯೂ, ಚಿಖಲಿ ತಾಲೂಕಿನಲ್ಲಿಯೂ ಆದಾರೂ ಸಹ ಬಂದ ಮಾತಿಲ್ಲ. ಇಡೀ ಸುರತ ಜಿಲ್ಲೆಯಲ್ಲಿ ಆದಾರೂ ಸಹಾಯ ಮಾಡುವ ಲಕ್ಷಣಗಳು ಕಾಣುವದಿಲ್ಲ.

ಮುಂಬಯಿಯವರು ನೇಮಿಸಿಕೊಂಡ ಚೌಕಶಿ ಕಮಿಟಿಯು, ಸರಕಾರಿ ಅಧಿಕಾರಿಗಳು ನಡೆಸಿದ ಜುಲುಮೆಗಳನ್ನು ಸಂಗ್ರಹಿಸಿ ರಿಪೋರ್ಟು ತಯಾರಿಸಿ ಕೊಟ್ಟಿದೆ. ಕಮಿಟಿ ಚೌಕಶಿ ನಡೆಯುವಾಗ ಸರಕಾರ ಕಡೆಯಿಂದ ಗುಪ್ತ ಪೋಲೀಸರು ಹಾಜರಿದ್ದರು.

ಪರಿಷತ್ತಿನ ಕೌನ್ಸಿಲಿನ ಸಭಾಸದರಾದ ಶ್ರೀ ನರಸೋಪಂತ ಕೇಳಕರ, ಜಮನಾದಾಸ ಮೆಹತಾ, ದಕ್ಷೋಪಂತ ಬೆಳವಿಗಳವರು ಸರ್ವಾಧಿಪತಿ ಅರ್ವಿನ ದೊರೆಗಳಿಗೆ ಗೂಢ ಪತ್ರ ಬರೆದು ಬಾರ್ದೋಲಿಯ ಪ್ರಕರಣವನ್ನು ಶೀಘ್ರವೇ ಇತ್ಯರ್ಥಪಡಿಸಿಕೊಳ್ಳದಿದ್ದರೆ, ಅದು ಭಾರತೀಯ ರಾಜಕಾರಣದಲ್ಲಿ ಹೊಸ ಬಿರುಗಾಳಿ ಎಬ್ಬಿಸುವದೆಂದು ಎಚ್ಚರಿಕೆ ಕೊಟ್ಟಿದ್ದಾರೆ.

ಅಹಮದಾಬಾದದಲ್ಲಿ ಜಿಲ್ಲಾ ಪರಿಷತ್ತು ಸೇರಿತು. ಶ್ರೀ ನರಸೋಪಂತ ಕೇಳಕರರು ಸಭಾಪತಿಗಳಿದ್ದರು. ಶ್ರೀ ನರಸೋಪಂತರು ಲೋಕಮತವನ್ನು ದಬ್ಬಿ ಹಿಡಿದ ಕಾರ್ಯಕಾರಿ ಸಭಾಸದರ ದಿಟ್ಟತನದ ಬಗ್ಗೆ ಅಸಮಾಧಾನ ಪ್ರದರ್ಶಿಸಿದರು. ರಿವಾನದಾಸ ಬಿ|| ಹರಿಲಾಲ ದೇಸಾಯಿಯವರು ರಾಜೀನಾಮೆ ಕೊಡಬೇಕಾಗಿ ನಿರ್ಧಾರವಾಗಿದೆ. ಬೇಸಾಯ ಪ್ರದರ್ಶನವನ್ನು ಬಹಿಷ್ಕರಿಸಬೇಕೆಂದೂ ತೀರ್ಮಾನವಾಗಿದೆ.

ಸರಕಾರ ಜಪ್ತಿಯ ನೋಟೀಸನ್ನು ಹರಿದು ತೆಗೆದ ಬಗ್ಗೆ ಖಟ್ಲೆಯಾಗಿದೆ. ಶ್ರೀ ವಲ್ಲಭಭಾಯಿಯವರ ಅನುಜ್ಞೆಯಂತೆ ಕಲೆಕ್ಟರರ ಬಂಗ್ಲೆಯ ಬಳಿ ಕಾವಲು ಮಾಡುತ್ತಿದ್ದ ಸ್ವಯಂಸೇವಕನಿಗೆ ಪೋಲೀಸರು ಹೊಡೆದು ಬಡಿದು ೩ ಬಾರಿ ಎಳೆದು ಕಾಡಿದರು. ಆದರೂ ಅವನು ಪುನಃ ನೇಮಿಸಿದ ಜಾಗಕ್ಕೇ ಬಂದು ನಿಂತುಕೊಂಡನು.

ಶುಕ್ರವಾರ ಸುರತದಿಂದ ಶ್ರೀ ವಲ್ಲಭಭಾಯಿಗಳು ಸಂಧಾನದ ಶರ್ತುಗಳನ್ನು ಮಹಾತ್ಮರ ಮುಂದೆ ಇಡಲಿಕ್ಕೆ ಸಾಬರಮತಿಗೆ ಹೋದರು. ಮಹಾತ್ಮರೊಡನೆ ಇಡೀ ದಿವಸ ವಿಚಾರ ನಡಿಸಿ ಸರಕಾರದ ಶರ್ತುಗಳಂತೆ ಬಾರ್ದೋಲಿ ಪ್ರಕರಣದಲ್ಲಿ ಸಂಧಾನವಾಗಲಿಕ್ಕಿಲ್ಲೆಂದು ವಿಲಸನ್ ದೊರೆಗಳ ಬಳಿಗೆ ತಿಳಿಸಿದರು. "ಬಾರ್ದೋಲಿ ತೀರ್ವೆ ವಾಢೆಯ ಪ್ರಶ್ನೆಯ ಸ್ವತಂತ್ರ ವಿಚಾರಣೆಯು ಹೇಗೆ ಮಾಡಲ್ಪಡುವದೆಂದು ಸತ್ಯಾಗ್ರಹಿಗಳಿಗೆ ಸ್ಪಷ್ಟ ತಿಳಿಯುವಂತೆ ಕರಾರುಗಳೇನೂ ಇಲ್ಲ. ಪ್ರಜಾ ಪಕ್ಷದ ಕಮಿಟಿಯೇ ಸಂಪೂರ್ಣವಾಗಿ ನೇಮಿಸಬೇಕೆಂದು ನನ್ನ ಆಗ್ರಹವಿಲ್ಲ. ಈ ಚೌಕಶಿ ಕಮಿಟಿಯಲ್ಲಿ ಪ್ರಜೆಗಳ ವಿಶ್ವಾಸಕ್ಕೆ ಪಾತ್ರವಾಗುವಂತೆ ಪ್ರಜಾ ಕಡೆಯಿಂದ ಆರಿಸಲ್ಪಟ್ಟ ಸರಕಾರಿ ಅಧಿಕಾರಿಗಳು ನೇಮಿಸಲು ಅಡ್ಡಿಯೇನಿಲ್ಲ. ಆದರೆ, ಪ್ರಜೆಗಳಿಗೆ ತಮ್ಮ ಹೇಳಿಕೆಯನ್ನು ಕಮಿಟಿಯ ಮುಂದೆ ಹಾಯದೆಯ ಪಂಡಿತರ ಮುಖಾಂತರ ಇಡಲಿಕ್ಕೆ ಅಪ್ಪಣೆಯಿರಬೇಕು, ಜಾಹೀರ ನ್ಯಾಯಾಸನದ ಮುಂದೆ ಚೌಕಶಿ ಮಾಡಬೇಕು. ಪ್ರಜಾಪಕ್ಷದ ಅವರ ಕಡೆಯಿಂದ ಏರಿದ ತೀರ್ವೆಯ ಬಗ್ಗೆ ತೀವ್ರ ಅಡಿಕೆಂದು ಹೇಳುವದು ಬಾರ್ದೋಲಿ ಮಾಮಲೇದಾರರ ಪ್ರಮಾಣಿಕತನದ ಮೇಲಿನ ಅವಿಶ್ವಾಸವು. ಚೌಕಶಿಯು ನಂತರ ಸತ್ಯಾಗ್ರಹ ಸಂಧಾನದ ಮುಂದಾಳುಗಳು ಅಪ್ರಮಾಣಿಕರೆಂದು ಕಂಡು ಬಂದರೆ ಅವರಿಗೆ ದಂಡಿಸಲಿಕ್ಕೆ ಸರಕಾರದ ಬಳಿ ಬೇಕಷ್ಟು ಸಾಧನಗಳಿವೆ ಹೀಗಿದ್ದು, ಸರಕಾರದ ಬಳಿಗೆ ಕೇವಲ ಇಟ್ಟುಕೊಂಡು ಚೌಕಶಿ ನಡಿಸುವ ಬದಲು ಜತಿಸುವದೇಕೆಂದು ತಿಳಿಯದು. ಹಳೇ ನಮೂನೆಯ ಲೆಕ್ಕ ರಿವಿನ್ಯೂ ಕೋಡನ್ನು ಸಂಪೂರ್ಣ ವಿರೋಧಿಸಲು ನನಗೆ ಪ್ರಜೆಗಳು ಅಧಿಕಾರ ಕೊಟ್ಟಿಲ್ಲ. ಆದರೆ ಅದರೊಳಗಿನ ಸವಲತ್ತುಗಳು ಸಹ ದೊರೆಯದ ಇದ್ದ ಮೇಲೆ ಆ ಸವಲತ್ತುಗಳ ಬಗ್ಗೆ ಯುದ್ಧ ಹೂಡಲು ನನಗೆ ಪ್ರಜೆಗಳು ಆಜ್ಞಾಪಿಸಿದ್ದಾರೆ. ಕಾರಣ ಈಗ ತಿಳಿಸುವದೇನೆಂದರೆ.— ಎಲ್ಲ ಸತ್ಯಾಗ್ರಹಿಗಳಿಗೆ ಜೈಲಿನಿಂದ ಬಿಡಬೇಕು, ಜಪ್ತಿಯಲ್ಲಿ ಸರಕಾರದ ವಶದಲ್ಲಿದ್ದ ಆಸ್ತಿಗಳನ್ನು ತಿರುಗಿ ಮಾಲೀಕರಿಗೆ ಕೊಡಬೇಕು; ಹೀಗೆ ಕೃಷಿಯಿಂದ ಸರಕಾರವು ಮಾಡಿದ ಎಲ್ಲ ನುಕ್ಸಾನುಗಳ ಪೇಟಿ ಭಾರೀ ಕ್ರಯ ಅವರಿಗೆ ಕೊಡಬೇಕು; ಸರಕಾರವು ಇನ್ನು ಕೈಕೊಳ್ಳಲಿಕ್ಕಿದ್ದ ದಂಡನೆಗಳನ್ನು ನಿಲ್ಲಿಸಬೇಕು " ಎಂತ ಸರದಾರ ವಲ್ಲಭಭಾಯಿಗಳು ಗವರ್ನರರಿಗೆ ತಿಳಿಸಿದ್ದಾರೆ. ಇದಲ್ಲದೆ ಸತ್ಯಾಗ್ರಹಿಗಳ ಮೇಲೆ ಜಪ್ತಿ ಕಾಲಕ್ಕೆ ನಡಿಸಿದ ಸರಕಾರ ಕೃತ್ಯಗಳ ಚೌಕಶಿಯೂ ಆಗಬೇಕೆಂತ ಹೇಳಿದ್ದಾರೆ.

ವೃತ್ತಸಾರ.

— ಕಡೂರು ಜಿಲ್ಲೆಯ ಮಾಗಡಿಯಲ್ಲಿ ಒಂದು ಆಕಳು ಈದಿದೆ. ಅದಕ್ಕೆ ಹುಟ್ಟಿದ ಕರುವು ಎಮ್ಮೆಯ ಕರುವಿನಂತಿದೆ! ಇದೊಂದು ವೈಚಿತ್ರ್ಯವೆಂದು ಎಲ್ಲರೂ ಉದ್ಗರಿಸುತ್ತಾರೆ!

— ಬೆಳಗಾವಿಯ ಕಾಲೇಜಿಗೆ ಮುಖ್ಯಾಧ್ಯಾಪಕರಾಗಿ ಬಂದ ರೆಂಗ್ಲರ ಪಟವರ್ಧನರು ಶ್ರೀ ಕಾಶೀಕ್ಷೇತ್ರದೊಳಗಿನ ಹಿಂದೂ ವಿಶ್ವವಿದ್ಯಾಲಯದಲ್ಲಿ ಅನುಭವ ಪಡೆಯುವದಕ್ಕೆ ಹೋಗಿದ್ದಾರೆ. ಅಲ್ಲಿ ಅವರು ೧ ವರುಷದ ತನಕ ಅಧ್ಯಾಪಕರಾಗಿರುವರು.

— ಬೆಂಗಳೂರಿಗೆ ೨ ವಿಮಾನಗಳು ಬಂದಿದ್ದಾವೆ. ೨೫ ರೂಪಾಯಿಗಳ ಟಿಕೇಟು ಕೊಂಡರೆ, ವಿಮಾನಗಳಲ್ಲಿ ಕುಳ್ಳಿರಿಸಿ ವಿಮಾನ ವಿಹಾರದ ಸುಖವನ್ನು ತೋರಿಸುತ್ತಾರೆ.

— ಈಗ ಉತ್ತರಾಯಣಕಾಲದಲ್ಲಿ ಸ್ಕಾಟಲಂಡ ದೇಶದೊಳಗೆ ೧೭|| ತಾಸು ಸೂರ್ಯದರ್ಶನ. ಪ್ರಾತಃಕಾಲ ೪|| ಘಂಟೆಗೆ ಸೂರ್ಯದರ್ಶನ; ರಾತ್ರಿ ೧೦ ಘಂಟೆಗೆ ಸೂರ್ಯಾಸ್ತ! ಸ್ವೀಡನ್-ನಾರ್ವೇ ಮುಂತಾದ ಉತ್ತರಧ್ರುವ ಪ್ರದೇಶಗಳಲ್ಲಿ ಸೂರ್ಯನಾರಾಯಣನು ೨೪ ತಾಸು ಕಾಣುತ್ತಾನೆ.

— ತಮಿಳನಾಡಿನೊಳಗಿನ ಧನಾಢ್ಯರೊಬ್ಬರು ಪರಭಾಷೆಗಳೊಳಗಿನ ಅಮೂಲ್ಯ ಗ್ರಂಥಗಳನ್ನು ತಮಿಳ ಭಾಷೆಯಲ್ಲಿ ಪರಿವರ್ತಿಸುವದಕ್ಕಾಗಿ ೩-೩ ವರ್ಷಕ್ಕೊಮ್ಮೆ ೧೫ ಸಾವಿರ ರೂಪಾಯಿಗಳನ್ನು ಮದ್ರಾಸ ವಿಶ್ವವಿದ್ಯಾಲಯಕ್ಕೆ ಕಾಣಿಕೆ ಕೊಡುತ್ತಿದ್ದಾರೆ.

— ಸ್ವಾತಂತ್ರವಾದಿ ಸಂಸ್ಥಾನದಿಂದ ಸಹಾಯ ಪಡೆಯುವ ವಿದ್ಯಾರ್ಥಿಗಳು ಖಾದಿ ತೆಗೆಯಬೇಕೆಂತ ವಿಧಿಸಲಾಗಿದೆ.

— ಕಾನಪುರ ಮ್ಯುನಿಸಿಪಾಲಿಟಿಯವರು ರಾಷ್ಟ್ರಧ್ವಜವನ್ನು ತಮ್ಮ ಮ್ಯುನಿಸಿಪಾಲಿಟಿಯ ಕಟ್ಟಡದ ಮೇಲೆ ಹಾರ್‍ಯಾಡಿಸಬೇಕೆಂದು ನಿರ್ಧರಿಸಿದ್ದಾರೆ.

ಮಹಾತ್ಮರ ಆತ್ಮಚರಿತ್ರ.

೧೩ ನಿಷ್ಕಪಟ ಬಿಹಾರಿಗಳು.

ಲಂಡನಿನಲ್ಲಿ ಮೌಲಾನಾ ಮಝರುಲ್ ಹಕ್ಕರವರು ಕಾಯಿದೆಯ ಅಭ್ಯಾಸ ಮಾಡುತ್ತಿದ್ದರು. ಆ ಕಾಲಕ್ಕೆ ನನಗೆ ಅವರ ಪರಿಚಯವಾಗಿತ್ತು. ೧೯೧೫ ನೇ ಇಸ್ವಿಯಲ್ಲಿ ಮುಂಬಯಿಯ ರಾಷ್ಟ್ರೀಯ ಸಭೆಯಾದಾಗ ನಾನು ಅವರಿಗೆ ಭೆಟ್ಟಿಯಾದೆ. ಆ ವರುಷ ಅವರು ಮುಸ್ಲಿಮ್ ಲೀಗಿನ ಅಧ್ಯಕ್ಷರಿದ್ದರು. ಹಿಂದಿನ ಪರಿಚಯ ನೆನಪು ಮಾಡಿ ಪಾಟಣಾಕ್ಕೆ ಬಂದಾಗ ತಮ್ಮಲ್ಲುಳಕೊಳ್ಳಬೇಕೆಂದು ಅವರು ನನಗೆ ನಿಮಂತ್ರಣ ಕೊಟ್ಟಿದ್ದರು. ಈಗ ನನಗೆ ಆ ನಿಮಂತ್ರಣದ ನೆನಪಾಯಿತು. ನಾನು ಬಂದಂಥ ಕಾರ್ಯವನ್ನು ಉಲ್ಲೇಖಿಸಿ ಅವರಿಗೊಂದು ಪತ್ರ ಕಳುಹಿದೆನು. ಕೂಡಲೆ ಅವರು ಮೋಟಾರು ಹತ್ತಿ ಬಂದರು. ತಮ್ಮಲ್ಲಿ ಉಳಿಯಲು ಆಗ್ರಹ ಮಾಡಿದರು. ನಾನು ಅವರ ಉಪಕಾರ ಮನ್ನಿಸಿ ನನ್ನ ಸ್ಥಳಕ್ಕೆ ಹೋಗಲು ಇರುವ ಮೊದಲನೇ ಉಗಿಬಂಡಿಯಿಂದ ನನಗೆ ಕಳುಹಿಕೊಡುವ ವ್ಯವಸ್ಥೆ ಮಾಡಬೇಕಾಗಿ ಅರಿಕೆ ಮಾಡಿಕೊಂಡೆನು. ಉಗಿಬಂಡಿಗೆ ಮಾರ್ಗದರ್ಶಕ ಪುಸ್ತಕವು ನನ್ನಂಥ ಹೊಸಬ ಅರಿಯದ ಪರದೇಶಿಗೆ ನಿಷ್ಪ್ರಯೋಜಕವಾಗಿತ್ತು. ರಾಜಕುಮಾರ ಶುಕ್ಲರವರೊಡನೆ ಅವರು ಮಾತಾಡಿದರು, ಮತ್ತು ಮೊಟ್ಟಮೊದಲು ಮುಝಫರಪುರಕ್ಕೆ ನಾನು ಹೋಗಬೇಕಾಗಿ ಸೂಚಿಸಿದರು. ಅದೇ ದಿನ ಸಾಯಂಕಾಲ ಆ ಪಟ್ಟಣಕ್ಕೆ ಉಗಿಬಂಡಿ ಹೋಗುವದಿತ್ತು. ಆ ಬಂಡಿಯ ಮೇಲಿಂದ ನನಗವರು ಮುಝಫರಪುರಕ್ಕೆ ಕಳುಹಿದರು.

ಮುಝಫರಪುರದಲ್ಲಿ ಆಚಾರ್ಯ ಕೃಪಲಾನಿಯವರಿದ್ದರು. ಅವರ ಪರಿಚಯವು ನನಗೆ ಮೊದಲೇ ಇತ್ತು. ಹೈದರಾಬಾದಕ್ಕೆ ಹೋದಾಗ ಅವರ ಅಪರಿಮಿತವಾದ ಸ್ವಾರ್ಥತ್ಯಾಗವನ್ನೂ, ಸಾಮಾನ್ಯ ಜೀವನಕ್ರಮವನ್ನೂ, ಡಾ|| ಚೊಯಿಥರಾಮರವರಿಗೆ ದ್ರವ್ಯಸಹಾಯ ಮಾಡುತ್ತ ನಡಿಸುವ ಆಶ್ರಮದ ಸಂಗತಿಯನ್ನೂ ಡಾ|| ಚೊಯಿಥರಾಮರವರು ನನಗೆ ಹೇಳಿದರು. ಮುಝಫರಪುರದೊಳಗಿನ ಸರಕಾರಿ ಕಾಲೇಜಿನಲ್ಲಿ ಅವರು ಪ್ರೊಫೆಸರಿದ್ದರು. ನಾನಲ್ಲಿ ಹೋದಾಗ ಅವರು ಆ ಅಧಿಕಾರಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ನಾನವರಿಗೆ ನನ್ನ ಆಗಮನವನ್ನು ತಂತಿ ಮೂಲಕ ತಿಳಿಸಿದೆನು. ಮುಝಫರಪುರಕ್ಕೆ ಉಗಿಬಂಡಿಯು ಮಧ್ಯರಾತ್ರಿಗೆ ಮುಟ್ಟುತ್ತದೆ. ಅಂಥ ಸಮಯದಲ್ಲಿಯೂ ಅವರು ಶಿಷ್ಯರ ಸಹಿತ ನನಗೆ ಕರೆದೊಯ್ಯಲು ಸ್ಟೇಶನಿಗೆ ಬಂದರು. ಅವರಿಗೆ ಸ್ವಂತ ಮನೆಯಿರಲಿಲ್ಲ. ಪ್ರೊ|| ಮಲಕಾನಿಯವರೊಡನೆ ಅವರು ಉಳಿಯುತ್ತಿದ್ದರು. ನನಗೂ ಅವರಲ್ಲಿಯೇ ಕರಕೊಂಡು ಹೋದರು. ನನ್ನಂಥವರಿಗೆ ಸರಕಾರಿ ಪ್ರೊಫೆಸರರು ಆಶ್ರಯ ಕೊಡುವ ಸಂಗತಿಯು ಆ ಕಾಲಕ್ಕೆ ಸಾಮಾನ್ಯ ಮಾತಾಗಿರಲಿಲ್ಲ.

ಪ್ರೊ|| ಕೃಪಲಾನಿಯವರು ಬಿಹಾರದೊಳಗಿನ ದೈನ್ಯವನ್ನು ನನಗೆ ವಿವರಿಸಿದರು. ತಿರುಹುತ ಭಾಗದೊಳಗಿನ ದೆಸೆಯನ್ನು ವಿಸ್ತಾರದಿಂದ ಹೇಳಿದರು. ನನ್ನ ಕಾರ್ಯದೊಳಗಿನ ಕಷ್ಟಗಳ ಸ್ವರೂಪವನ್ನೂ ತಿಳಿಸಿಕೊಟ್ಟರು. ಬಿಹಾರಿಯರೊಡನೆ ಇವರು ಬಹಳ ಪರಿಚಯ ಬೆಳಸಿದ್ದರು; ನಾನು ಬಿಹಾರಕ್ಕೆ ಬಂದ ಕಾರ್ಯವನ್ನು ಅವರಿಗೆ ಮೊದಲೇ ಹೇಳಿಟ್ಟಿದ್ದರು.

ಮುಂಜಾವಿಗೆ ಕೆಲ ವಕೀಲರು ನನಗೆ ಭೆಟ್ಟಿಯಾದರು. ಆಗ ಬಂದ ರಾಮನವಮಿಪ್ರಸಾದರವರ ನೆನಪು ಈಗಲೂ ಇದೆ. ಅವರು ತಮ್ಮ ಅಂತಃಕರಣಪೂರ್ವಕ ಮಾತುಗಳಿಂದ ನನ್ನ ಮನಸ್ಸಿನ ಮೇಲೆ ವಿಶೇಷ ಪರಿಣಾಮ ಮಾಡಿದರು. ಅವರು ನುಡಿದದ್ದೇನಂದರೆ,— « ಇಂಥಲ್ಲಿ ಉಳಕೊಂಡು ಕೈಕೊಂಡ ಕಾರ್ಯವನ್ನು ನೆರವೇರಿಸಲು ನಿಮ್ಮಿಂದ ಸಾಧ್ಯವಾಗದು. ನಮ್ಮೊಡನೆ ನೀವು ಬಂದು ಉಳಕೊಳ್ಳಬೇಕು. ಗಯಾ ಬಾಬುಗಳವರು ಇಲ್ಲಿ ಹೆಸರಾದ ವಕೀಲರು, ಅವರಲ್ಲಿ ಉಳಕೊಳ್ಳಲು ನಿಮಗೆ ನಿಮಂತ್ರಿಸುವದಕ್ಕಾಗಿ ಅವರ ಕಡೆಯಿಂದ ನಾನು ಬಂದಿದ್ದೇನೆ. ನಾವೆಲ್ಲರೂ ಸರಕಾರಕ್ಕೆ ಹೆದರುವವರೆಂಬ ಮಾತು ನನಗೊಪ್ಪಿಗೆ. ಆದರೆ ಕೈಲಾದಷ್ಟು ಸಹಾಯವನ್ನು ನಾವು ನಿಮಗೆ ಮಾಡುತ್ತೇವೆ. ರಾಜಕುಮಾರ ಶುಕ್ಲರವರು ನಿಮಗೆ ಹೇಳಿದ ಬಹುತರ ಎಲ್ಲ ಸಂಗತಿಗಳು ನಿಜವಿರುತ್ತವೆ. ಇಂದಿಗೆ ನಮ್ಮ ಮುಂದಾಳುಗಳಾದ ಬಾಬು ವ್ರಜಕಿಶೋರ ಪ್ರಸಾದ ಹಾಗು ರಾಜೇಂದ್ರ ಪ್ರಸಾದರವರು ಇಲ್ಲಿ ಇಲ್ಲಾದದ್ದು ಶೋಚನೀಯವು. ಆದರೂ ಇಬ್ಬರಿಗೂ ನಾನು ತಂತಿ ಮಾಡಿದ್ದೇನೆ. ಸದ್ಯಕ್ಕೇ ಅವರು ಬಂದು ತಲ್ಪುವರು. ನಿಮಗೆ ಬೇಕಾದ ಮಾಹಿತಿಯನ್ನೆಲ್ಲ ಅವರು ಪೂರೈಸಿ ಬಹುಮಟ್ಟಿಗೆ ನಿಮಗೆ ನೆರವಾಗುವರು. ದಯಮಾಡಿ ಗಯಾ ಬಾಬುರವರಲ್ಲಿಗೆ ಬನ್ನಿರಿ. »

ಈ ವಿನ್ನಹವನ್ನು ನನ್ನಿಂದ ಅಮಾನ್ಯ ಮಾಡಲಾಗಲಿಲ್ಲ. ಗಯಾ ಬಾಬುರವರಲ್ಲಿಗೆ ನಾನು ಹೋದರೆ, ಅವರಿಗೆ ಕಷ್ಟವಾಗಬಹುದೆಂದು ನಾನು ಸಂದೇಹಪಟ್ಟೆ. ಆದರೆ, ಹೆದರಿಕೆಯಿಲ್ಲವಾಗಿ ಅವರು ನನ್ನ ಅನುಮಾನವನ್ನು ಪರಿಹರಿಸಿದರು. ಹೀಗೆ ನಾನು ಅವರಲ್ಲಿಗೆ ಹೋದೆ. ಗಯಾ ಬಾಬುಗಳವರೂ ಅವರ ಮನೆಯವರೂ ನನಗೆ ಬಹು ಪ್ರೀತಿಯಿಂದ ಸತ್ಕಾರ ಮಾಡಿದರು.

ವ್ರಜಕಿಶೋರ ಬಾಬುಗಳವರು ದರ್ಭಾಂಗದಿಂದ ಬಂದರು. ರಾಜೇಂದ್ರ ಬಾಬುಗಳವರು ಪುರಿಯಿಂದ ಬಂದರು. ಲಖನೌದಲ್ಲಿ ಕಂಡ ಬಾಬು ವ್ರಜಕಿಶೋರ ಪ್ರಸಾದರವರ ಹೋಲಿಕೆ ಈಗ ಕಾಣಲಿಲ್ಲ. ನಮ್ರತೆಯಿಂದಲೂ ಸರಳ ಸ್ವಭಾವದಿಂದಲೂ, ಸಾತ್ವಿಕ ವೃತ್ತಿಯಿಂದಲೂ, ಅಸಾಮಾನ್ಯವಾದ ಶ್ರದ್ಧೆಯಿಂದಲೂ ನನಗೆ ಆತ್ಮಾನಂದವಾಯಿತು. ಬಿಹಾರಿಯರ ಲಕ್ಷಣಗಳೇ ಇವು. ಬಿಹಾರದೊಳಗಿನ ವಕೀಲರು ಅವರ ಬಗ್ಗೆ ಪ್ರದರ್ಶಿಸಿದ ಆದರ ನೋಡಿ ಆನಂದಾಶ್ಚರ್ಯಗಳುಂಟಾದವು.

ಈ ಗೆಳೆಯರ ಮಂಡಳಕ್ಕೂ, ನನಗೂ ಜನ್ಮದ ಸ್ನೇಹಸಂಬಂಧ ಬೆಳೆಯಿತು. ವ್ರಜಕಿಶೋರ ಬಾಬುಗಳವರು ಎಲ್ಲ ಸಂಗತಿಗಳನ್ನು ನನಗೆ ತಿಳಿಸಿದರು. ಬಡ ಬೇಸಾಯಗಾರರ ಪ್ರಕರಣಗಳನ್ನು ಅವರು ನಡಿಸುತ್ತಿದ್ದರು. ನಾನು ಅಲ್ಲಿ ಹೋದಾಗ ಇಂಥ ಎರಡು ಪ್ರಕರಣಗಳು ಕೋರ್ಟಿನಲ್ಲಿ ಬಾಕಿಯುಳಿದ್ದವು. ಇಂಥದೊಂದು ಪ್ರಕರಣದಲ್ಲಿ ಅನುಕೂಲ ತೀರ್ಪು ದೊರೆತೊಡನೆ ಬಡವರಿಗಾಗಿ ತಾವೊಂದು ಸೇವೆ ಮಾಡಿದೆನೆಂಬ ಭಾವನೆಯು ಅವರಲ್ಲುಂಟಾಗಿ ಅವರು ಸಮಾಧಾನ ಮಾಡಿಕೊಳ್ಳುತ್ತಿದ್ದರು. ಬಡವರ ಕಡೆಯಿಂದ ಫೀ ಕೊಳ್ಳದೆ ಅವರು ಕೆಲಸ ಮಾಡುತ್ತಿದ್ದರೆಂದು ಗ್ರಹಿಸಬಾರದು. ಫೀ ಕೊಳ್ಳದೆ ಕೆಲಸ ಮಾಡಿದರೆ, ಸಂಸಾರದ ಖರ್ಚು ನಡಿಸಲಾಗದೆ ಬಡಬಗ್ಗರಿಗೆ ಉಪಕಾರ ಮಾಡಲು ಪ್ರತಿಬಂಧವಾಗುವದೆಂದು ವಕೀಲರು ತಿಳಿದು ಸಮರ್ಥನೆ ಮಾಡಿಕೊಳ್ಳುತ್ತಾರೆ. ಬಂಗಾಲ-ಬಿಹಾರದೊಳಗಿನ ವಕೀಲರು ಆಕರಿಸುವ ಫೀಯ ಅಂಕೆಗಳನ್ನೂ, ಬೆರಿಸ್ಟರರ ಫೀಯ ಪರಿಮಾಣವನ್ನೂ ಕೇಳಿ ನನ್ನ ಎದೆ ಹಾರಿತು.

« ಅಭಿಪ್ರಾಯ ಪಡೆಯುವದಕ್ಕಾಗಿ ಈ ವಕೀಲರಿಗೆ ೧೦ ಸಾವಿರ ರೂಪಾಯಿ ಕೊಟ್ಟೆ," ಎಂದು ಒಬ್ಬರು ಹೇಳಿದರು. ಯಾವದೇ ಪ್ರಕರಣದಲ್ಲಿ ನಾಲ್ಕು ಅಂಕಿಗಳಿಗಿಂತ ಕಡಿಮೆಯಾಗಿ ಫೀ ಕೊಳ್ಳುತ್ತಿದ್ದಿಲ್ಲ. ಗೆಳೆಯರು ನನ್ನ ಆಕ್ಷೇಪವನ್ನು ಸಂತೋಷದಿಂದ ಕೇಳಿಕೊಂಡರು. ತಪ್ಪು ಗ್ರಹಿಕೆಗಳನ್ನು ಮಾಡಿಕೊಳ್ಳಲಿಲ್ಲ."

ನಾನು ನುಡಿದದ್ದೇನಂದರೆ:— « ಈ ಪ್ರಕರಣಗಳ ಪರಾಂಬರಿಕೆಯಿಂದ ನನ್ನದೊಂದು ಮನೋನಿಶ್ಚಯವಾಗಿದೆ. ಇನ್ನು ಮುಂದೆ ನಾವು ಈ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳುವದಕ್ಕಾಗಿ ನ್ಯಾಯಾಸನಗಳಿಗೆ ಹೋಗಲಾಗದು. ಇದರಿಂದ ಹೇಳತಕ್ಕಂಥ ಲಾಭವಾಗುವದಿಲ್ಲ. ಬೇಸಾಯಗಾರರು ಜಝಿಗೆಟ್ಟಿದ್ದಾರೆ. ಇಂಥಲ್ಲಿ ನ್ಯಾಯಾಸನದಿಂದ ಪ್ರಯೋಜನ ದೊರೆಯದು. ಅವರ ಭೀತಿ ಪರಿಹರಿಸುವದೇ ಅವರ ಮೇಲೆ ಮಾಡತಕ್ಕ ದೊಡ್ಡ ಉಪಕಾರವು. ಬಿಹಾರದೊಳಗಿಂದ ತಿಂಕಾಠ್ಯಾ ಪದ್ಧತಿಯನ್ನು ನಿರ್ಮೂಲಿಸದ ಹೊರತು ನಾವು ಸುಮ್ಮನೆ ಕೂಡ್ರಲಾಗದು. ಎರಡು ದಿನಗಳಲ್ಲಿ ಇಲ್ಲಿಯ ಕೆಲಸ ಮುಗಿಸಿಕೊಂಡು ಹೋಗಬಹುದೆಂದು ನನಗನಿಸಿತ್ತು. ಆದರೆ, ಎರಡು ವರ್ಷಗಳಲ್ಲಿಯೂ ಸಹ ಈ ಕೆಲಸ ಪೂರ್ಣವಾಗಲಾರದೆಂದು ನನಗನಿಸಹತ್ತಿದೆ. ಅಷ್ಟು ಸಮಯ ಕಳೆಯಲಿಕ್ಕೆ ನನ್ನ ತಯಾರಿಯಿದೆ. ಈಗ ಮುಂದೇನು ಮಾಡಬೇಕೆಂದು ನನಗೆ ಸೂಚಿಸಹತ್ತಿದೆ. ನೀವು ಮಾತ್ರ ನನಗೆ ನೆರವಾಗಬೇಕು. »

ವ್ರಜಕಿಶೋರ ಬಾಬುಗಳು ಬಹಳ ಶಾಂತಚಿತ್ತದವರೆಂದು ನನಗೆ ಕಂಡುಬಂತು. ಅವರು ಶಾಂತ ರೀತಿಯಿಂದ ನುಡಿದದ್ದೇನಂದರೆ:— « ನಿಮಗೆ ಬೇಕಾದ ಬೆಂಬಲವನ್ನು ನಾವು ಕೊಡುತ್ತೇವೆ. ಆದರೆ, ನಿಮಗೆ ಯಾವ ಪ್ರಕಾರದ ಸಹಾಯ ಬೇಕೆಂಬುದನ್ನು ನಮಗೆ ತಿಳಿಸಿರಿ. »

ಹೀಗೆ ನಾವು ಮಧ್ಯರಾತ್ರಿಯ ವರೆಗೆ ಮಾತಾಡುತ್ತ ಕುಳಿತೆವು.

« ನಿಮ್ಮ ಕಾಯಿದೆಯ ಜ್ಞಾನವು ನನಗವಶ್ಯವಿಲ್ಲ. ನನಗೆ ಕಾರಕೂನರು ಬೇಕು, ದುಭಾಷಿಗಳು ಬೇಕು. ಅವಶ್ಯವಿದ್ದರೆ ಕಾರಾಗೃಹದಲ್ಲಿ ಸೇರಬೇಕಾಗುವದು; ಆ ಜೋಖಮಿನ್ನು ಭರಮಾಡಿಕೊಳ್ಳಲಿಕ್ಕೆ ನಿಮ್ಮ ತಯಾರಿ ಇರಬೇಕೆಂದು ನನಗನಿಸುತ್ತಿದ್ದರೂ, ನಿಮಗೆ ಎಷ್ಟರ ಮಟ್ಟಿಗೆ ಧೈರ್ಯವಿದೆಯೋ ಅಷ್ಟು ತ್ಯಾಗ ಮಾಡಲು ನೀವು ಸಿದ್ಧರಿರಬೇಕು. ಕೆಲವು ಕಾಲದ ವರೆಗೆ ನಿಮ್ಮ ಉದ್ಯೋಗ ಬಿಟ್ಟು ಕಾರಕೂನರಂತೆ ಕೆಲಸ ಮಾಡುವದಾದರೂ ಸಾಮಾನ್ಯ ಮಾತಲ್ಲ. ಹಿಂದೀ ಭಾಷೆಯು ಇಲ್ಲಿಯ ಪಂಭಾಷೆಯನ್ನು ಗ್ರಹಿಸಲು ನನಗೆ ಕಷ್ಟವಾಗುತ್ತದೆ. ಕೈಥೀ ಅಥವಾ ಉರ್ದು ಭಾಷೆಗಳಲ್ಲಿ ಬರೆದ ಕಾಗದಗಳನ್ನು ನನ್ನಿಂದ ಓದಲಾಗುವದಿಲ್ಲ. ಇಂಥ ಕೆಲಸಕ್ಕೆ ಖರ್ಚು ಮಾಡುವ ಸಾಮರ್ಥ್ಯವು ನನ್ನಲ್ಲಿಲ್ಲ. ಇದೆಲ್ಲ ಪ್ರೀತಿಯಿಂದಲೂ, ನಿಷ್ಪೃಹ ಸೇವಾಬುದ್ಧಿಯಿಂದಲೂ ನಡಿಸಬೇಕಾಗಿರುತ್ತದೆ," ಎಂದು ನಾನು ಹೇಳಿದೆನು.

ಈ ಮಾತಿನ ಅರ್ಥವನ್ನು ವ್ರಜಕಿಶೋರ ಬಾಬುಗಳು ಕೂಡಲೆ ಗ್ರಹಿಸಿದರು. ನನಗೂ, ತಮ್ಮ ಜೊತೆಗಾರರಿಗೂ ಅನೇಕ ಸವಾಲು ಹಾಕಿ ನಾನು ಹೇಳಿದ ಮಾತುಗಳ ಅರ್ಥವನ್ನು ಸ್ಪಷ್ಟಮಾಡಿಕೊಂಡರು. ಎಷ್ಟು ಕಾಲದ ವರೆಗೆ ಅವರು ಕೆಲಸ ಮಾಡಬೇಕಾದೀತು, ಎಷ್ಟು ಜನರು ಕೆಲಸ ಮಾಡಬೇಕಾದೀತು, ಪಾಳಿಯಿಂದ ಕೆಲಸ ಮಾಡಬಹುದೋ ಹೇಗೆ ಎಂಬುದನ್ನೆಲ್ಲ ಕೇಳಿಕೊಂಡರು. ಆ ಮೇಲೆ ವಕೀಲರಿಗೆ ಅವರು ತಮ್ಮಿಂದಾದ ಸ್ವಾರ್ಥತ್ಯಾಗದ ಪರಿಮಾಣವನ್ನು ಕೇಳಿಕೊಂಡರು.

ಕೊನೆಗೆ ಎಲ್ಲರೂ ವಿಚಾರದಿಂದ ನನಗೆ ಅಭಿವಚನ ಕೊಟ್ಟದ್ದೇನಂದರೆ:— « ಇಷ್ಟು ಮಂದಿಗಳು ನೀವು ಹೇಳಿದ ಕೆಲಸವನ್ನು ಮಾಡುವರು. ಇಷ್ಟು ಕಾಲದ ವರೆಗೆ ನಿಮ್ಮ ಅವಶ್ಯಕತೆಯಂತೆ ಇಷ್ಟು ಮಂದಿಗಳು ನಿಮ್ಮ ಕೈಕೆಳಗೆ ಕೆಲಸ ಮಾಡುವರು. ಕಾರಾಗೃಹಕ್ಕೆ ಸೇರುವ ಕಲ್ಪನೆಯು ನೂತನವಾದದ್ದು. ಅದಕ್ಕೆ ಸಿದ್ಧರಾಗುವದಕ್ಕಾಗಿ ನಾವು ಅವಶ್ಯವುಳ್ಳ ಸಾಮರ್ಥ್ಯವನ್ನು ಸಂಗ್ರಹಿಸಲೆತ್ನಿಸುವೆವು. »

— ಕುಂಭಕೋಣದಲ್ಲಿ ೧೬ ವರ್ಷ ಪ್ರಾಯದ ಹುಡುಗಿಯ ಲಗ್ನವಾಯಿತು. ಮದುಮಗನು ೫೦ ವರ್ಷ ಪ್ರಾಯದವನು! ಶುಭಮಂಗಲವಾದ ೫ ನಿಮಿಷಗಳಲ್ಲಿಯೆ ಮದುಮಗನು ತೀರಿಕೊಂಡ ಬಿಟ್ಟನು. ಪೋಲೀಸರಿಗೆ ಇದೊಂದು ಕಠಿಣ ಪ್ರಶ್ನೆ. ಗುಜರಾಥದೊಳಗಿನ ಒಬ್ಬ ಘಟಿಯಾ ಶ್ರೀಮಂತನ ಆಯುಷ್ಯ ಮಾತ್ರ ದೊಡ್ಡದು! ಈತನ ಪ್ರಾಯ ೮೦ ವರುಷ. ೧೩ ವರ್ಷ ಪ್ರಾಯದ ಹುಡುಗಿಯನ್ನು ಈತನು ಮದುವೆ ಮಾಡಿಕೊಂಡಿದ್ದಾನೆ. ಇದಕ್ಕಾಗಿ ಆತನು ೨೫ ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟಿದ್ದಾನೆ. ಇದು ೬ನೇ ವಿವಾಹ!

— ನವಣಾಲಿಯಲ್ಲಿ ಒಂದು ವಿಚಿತ್ರ! ಒಂದು ಎತ್ತು ಕೊಲ್ಲಲ್ಪಟ್ಟಿತು. ೮ ಜನರು ಮಾಂಸ ಹಂಚಿಕೊಂಡರು. ಹಂಚಿಕೊಂಡವರ ಕೈಗಳ ಮೇಲೆ ಹುಣ್ಣುಗಳಾಗಿವೆ! ಒಬ್ಬ ಹೆಂಗಸು ಆ ಮಾಂಸದ ಅಡಿಗೆ ಮಾಡಿದಳು. ಅವಳಿಗೂ ಅಸ್ವಸ್ಥವಾಗಿದೆ. ಎತ್ತಿನ ಮೂತ್ರಕೋಶವನ್ನು ಕೆಲ ಹುಡುಗರು ಕಾಲುಚೆಂಡು ಮಾಡಿ ಆಡಿದರು; ಆದರೆ ಕಾಲಿಗೆ ಹುಣ್ಣು! ಮಾಂಸದ ಚಿಕ್ಕ ಚಿಕ್ಕ ತುಂಡುಗಳನ್ನು ನಾಯಿ ತಿಂದವು; ಅವುಗಳಿಗೆ ರೋಗ ಹಿಡಿದು ಅವು ತೀರಿದವು! ಎತ್ತು ಕೊಂದವರು ಮಾಂಸ ತಿಂದರು; ಅವರಿಗೇನೂ ಆಗಲಿಲ್ಲ. ಕೊಂದ ಪಾಪ ತಿಂದು ಪರಿಹಾರವಾಯಿತೇ?

ಗೌ॥ ಸಾ॥ ಬ್ರಾ॥ ಸ್ಕೊಲರಶಿಪ್ ಲೀಗ, ಮುಂಬಯಿ.

ಸದ್ರಿ ಲೀಗಿನ ವಾರ್ಷಿಕ ಸಾಧಾರಣ ಸಭೆಯು ಇದೇ ತಿಂಗಳ ತಾರೀಖು ೨೯ನೇ ರವಿವಾರ ಸ್ಯಾಂ ೩॥ ಘಂಟೆಗೆ ಗಿರಗಾಂವ(ಮುಂಬಯಿ) ಖೇತವಾಡಿ ಬ್ಯಾಕ್ ರೋಡ, ಮೋಹಿನೀ ಬಿಲ್ಡಿಂಗ, ೨ನೇ ಮಾಳಿಗೆಯ ಮೇಲೆ ನೆರೆಯುವದು. ಲೀಗಿನ ೧೫ನೇ ಸಾಲಿನ ರಿಪೋರ್ಟ್, ಆಯವ್ಯಯ ಪತ್ರವೆ, ಮುಂದಿನ ಅಂದಾಜು ಜಮಾ-ಖರ್ಚು ಮಂಜೂರು ಮಾಡುವದು, ಹೊಸ ವರ್ಷದ ಅಧ್ಯಕ್ಷ, ಕಾರ್ಯಕಾರಿ ಮಂಡಳ ನೇಮಿಸಿ ಜಾಹೀರ ಮಾಡುವದು, ಮುಂತಾದ ಇತರೇ ಔಪಚಾರಿಕ ಕೆಲಸಗಳು ಸಭೆಯಲ್ಲಿ ನಡೆಯತಕ್ಕಂಥವಿವೆ. ಹೋದ ಸಾಲಿನ ಛಾಪಿತ ರಿಪೋರ್ಟ್ ಎಲ್ಲ ಸಭಾಸದರ ಕೈಸೇರುವಂತೆ ಮತಪತ್ರಕದೊಡನೆ ಕಳಿಸಲಾಗಿದೆ. ಅದರೊಳಗಿನ ವಿನಂತಿಪತ್ರ ಓದಿಕೊಂಡು ಆ ಮತಪತ್ರಕವನ್ನೂ, ರಿಪೋರ್ಟ್ ಓದಿ ಮನಗಂಡು ಸಭೆಯ ಮುಂದೆ ತರಬೇಕಾದ ಬೇರೆ ಸೂಚನೆ ಠರಾವುಗಳನ್ನೂ ಕಾರ್ಯದರ್ಶಿಗಳ ಬಳಿಗೆ ಸಭೆಯ ೩ ದಿನ ಮುಂಚಿತ ದಯಮಾಡಿ ಕಳಿಸಬೇಕು. ಸಭೆಗೆ ಎಲ್ಲರೂ ಅಗತ್ಯವಾಗಿ ಬರಬೇಕಾಗಿ ವಿನಂತಿ ಇದೆ.

೨೦-೭-೨೮. ತಮ್ಮ ನಮ್ರ,

ಗೋವಿಂದ ಶ್ರೀನಿವಾಸ ಗುಡಾಳ
ಕುಂದಾಪುರ ವಿಠ್ಠಲ ಶ್ಯಾನಭಾಗ
ಕಾರ್ಯದರ್ಶಿ.
C/o Saraswat Brahman Samaj,
264, Churni Road, Bombay

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ:-ಅಮೃತ ಬಿಲ್ಡಿಂಗ, ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ.

ಸರಕಾರಿ ಭದ್ರತೆ ಇದೆ.

ಸ್ಪೆಶಲ್ ಪೋಲಿಸಿಗಳು ೧-೬-೨೮ ನೇದರಿಂದ ಕೊಡಲ್ಪಡುತ್ತವೆ. ೨ ವರ್ಷಗಳ ಮೇಲೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು. ಡಾಕ್ಟರರ ತಪಾಸು ಇಲ್ಲ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗುತ್ತದೆ. ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾರೆ; ಇನ್ನೂ ಇಳಿಸುತ್ತಿದ್ದಾರೆ. ಕಂತಿನ ರಕಮು ತಿಂಗಳಿಗೆ ೧ ಯಾ ೨ ರೂಪಾಯಿ. ೧೪ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ಸಿಗುತ್ತವೆ. ಪ್ರಯತ್ನಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ದಲಾಲಿ ದರವು ವಿಶೇಷ. ಹೆಚ್ಚಿನ ಮಾಹಿತಿಯ ಬಗ್ಗೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು,

— ಶ್ರೀ॥ ಹರ್ಡೇಕರ ಮಂಜಪ್ಪನವರು "ಖಾದಿ ವಿಜಯ" ವೆಂಬ ಪತ್ರಿಕೆಯನ್ನು ಹೊರಡಿಸುವ ಸಂಕಲ್ಪ ಮಾಡಿದ್ದಾರೆ.

— ಹುನಗುಂದ ತಾಲೂಕಿನ ಗಂಜಿಹಾಳ ಗ್ರಾಮದ ರಾ॥ ರಾಘವೇಂದ್ರರಾವ ಜಹಾಗೀರದಾರರವರು ಹುನಗುಂದ ದೊಡ್ಡಿನ ಇಂಗ್ಲಿಷ ಸ್ಕೂಲಿಗೆ ೫೦೦೦ ರೂಪಾಯಿಗಳನ್ನ ಕಳಿಸಿದ್ದಾರೆ.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ॥ ಎ. ರಂಗನಾಥಂ ಅವರ ಮುನ್ನುಡಿ ಸಹಿತ
ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ — ಶ್ರೀ॥ ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ
(ಶಾ) ೧೩೨ ಚಾಮರಾಜಪೇಟೆ, ೪ನೇ ಬೀದಿ,
ಬೆಂಗಳೂರು ಸಿಟಿ.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಸಲಕರಣೆ.
ದೊರಗಾದ ಹಾಗು ನುಣುಪಾದ
ಉಕ್ಕಿನ ಹಾಗು ಹಿತ್ತಾಳಿಯ ಹಣಿಗೆಗಳೂ,
ಹತ್ತಿಯ ಹಾಗು ಹಿತ್ತಾಳಿಯ ದಿಬಗಳುಗಳೂ,
ಕಂಠಿಯ ಬೊಬಿನುಗಳೂ, ವಾಶೀಕುಗಳೂ,
ಎಮೆರಿ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.
ಬಹಳ ಅಗ್ಗ !

P. P. TRIVEDI & CO.,
BRUCE Street, Fort, BOMBAY.

ಉಚಿತ] **ನನ್ನ ಶಾಸ್ತ್ರೀಯವಾದ** [ಉಚಿತ!
ಶಾರೀರಿಕ ಶಿಕ್ಷಣ



ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವಿವರಣೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು. ರೋಗಿ ನಾಜೂಕಾದ ಸಪ್ಪೆ ಸಲಕ್ಷಣ ಅಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ವೀರ್ಯವು ನಿಂತುಹೋಗುವದು.— ಬಿರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿ ಗುಣ ಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಕೆಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಾಸ್ತಿ ಆಗುತ್ತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಟ ಸಾಧ ಆಗುವದಿಲ್ಲ, ಶರೀರದಲ್ಲಿ ಎಷ್ಟೋ ದಿವಸದ ಶಾಖವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣ ಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೪-೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಡಜನ ಬಾಟಲಿಗಳ ಕಿಮ್ಮತ್ತು ೧೨-೦-೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೮-೦

ಮ್ಯಾನೇಜರ— 'ದ್ರಾಕ್ಷಾರ್ಕಮಧು' ಆಫೀಸ, ಪ್ರೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव- – मृद्विकारिष्ट – शारंगधर म अ १०

रामबाण औषध

सर्दि घालविणारें
भूक वाढविणारें
शोच्यास साफ करणारें
झोप आणणार
शक्ति देणारें
तेजस्वीपणा आणणारें

पिण्यास रुचिकर
किंमत एक रत्तलास १।। रुपये
पत्राद्वारा मागवा

झंडु फार्मास्युटिकल वर्क्स लिमिटेड
मुंबई नं. १४

एजंट— मेसर्स पडित आणी कंपनी,
तीर्थहळ्ळी

सिर्सि एजंट एस एल थाकप्पा आणि ब्रदर्स

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ. ಯುವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಹೇಳಲ್ಪಟ್ಟ ಈ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಪಡಿದರಿಸಿ ಪ್ರತ್ಯೇಕ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ०४०, ವ್ಹಿ. ಪಿ ೪ ಅಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ०-೮-० ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕ ಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ]

ಹಿರಿಯ ಕತ್ತೆ ತಿಳುವಾಗ ಪಡದಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಪ್ರಮೇಹದೊಡನೆ ಧಾತು ಹೋಗೋಣ ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ... ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗ ಪಡಲ್ಲದೆ, ಪುರ ಪತ್ವತ್ವ ಹೆಚ್ಚುತ್ತದೆ ಹೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿ ... ಬಯಸುವಂಥವರು ಹಿಂದಾವರ್ತಿ ತಕ್ಕೊಂಡು ಅನುಭವಿಸಿರಿ (೫೨) ವನಸ್ಪತಿಗಳು ಮಿಶ್ರವಿರುವ ವೈಸೂರ ಸ್ಟ್ಯಾರ" ಪತ್ರಿಕೆಯಲ್ಲಿ ಪ್ರಕಾಶಿತ ಮಾಡಿದ್ದಾರೆ ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವಳಿ ರಾತ್ರಿಯು ಭೋಜನವಾದ ನಂತರ ೨ ತೊಲಿಯು ಒಂದು ವಳಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ನಡೆಯುವಷ್ಟು ಆಳ ಶೋಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ ೧೨ ಡಬಿಗೆ ೫೦ ರೂ ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದ.

ಪತ್ತೆ — ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು ಪೋ ಮಿರಜ.

ಹಿಂದುಸ್ಥಾನದಲ್ಲಿದ್ದ ಅತ್ಯಂತ ಅಗ್ರವಾದ
'ನೆಶನಲ್ ಇನ್‌ಶೂರನ್ಸ ಕಂಪನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ ಕಳೆದ ವರುಷ ಲಕ್ಷ್ಯಾಂಶದ ಮೇಲೆ 5 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರ ಷಕ್ಕೆ 10 ರೂಪಾಯಿ ನಂತೆಯೂ, ಹೂರ್ತಿ ಜೀವ ವಿಮೆಯ ಪತ್ರದ ಮೇಲೆ ವರ ಷಕ್ಕೆ 10 ರೂಪಾಯಿ ನಂತೆಯೂ ಬೋನಸ ಕೊಟ್ಟಿರುವವು

ಹೋಗಿದ 1000 ರೂಪಾಯಿಗಳ ವಿಮೆ ವನ್ನು ತಂಬ ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ ದರವು ... ಬಹು ಸುಲಭ ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P. D. Churi,**
ಬ್ರಾಂಚ ಸಿಕ್ರೆಟರಿ, *Branch Secretary*
ಲಿಮಿಂಟ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಶೀರೆ, ಖಣ, ರೇಶ್ಮೆ ಶಲ್ಲೆ, ಬಿಚಾನೆ, ಕಾಶ್ಮೀರದ ಶಾಲು, ಸಕಲಾತಿ ಧಾಬಳಿ, ರುದ್ರಾಕ್ಷಿ ಸರ, ಕಂಠಿ ಗೌರೀಶಂಕರ, ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಚಾಫಂಚಿ, ಶಂಖ, ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ –
ವಿಶ್ವನಾಥ ಎಂಡ್ ಬ್ರದರ್ಸ,
ದ ಗರ್ಘಾಟ, ಬನಾರಸ್ ಸಿಟಿ

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು,

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು; ಬಿದ್ದ ಸುಟ್ಟ ಘಾಯಗಳಿಗೆ, ನೆಗಡಿ ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದ್ದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ

... Kanara Press, Kumta

REG. NO. B. 1270

MONDAY, JULY 30TH 1928.

ವರ್ಷ ೧೨

ಸಂಚಿಕೆ ೪೨

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 3-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಪ್ರಾಥಾ
ಮ್ಯಾಪಿನ (೧೫ ಎಮ್ ಉದ್ದ)
ಆ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಟಯಿಂಗದ ಸಾಲು ಎಷ್ಟು
ದೊಡ್ಡದಿರುವದೋ ಆ ಪ್ರಮಾಣ
ದಿಂದ ಅಷ್ಟುಸಾಲುಗಳು ಹಿಡಿ
ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರದ್ವಾರ ಯಾ ಸಮಕ್ಷ ತಿಳಿ
ಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೩೦ ನೇದಿ ಜುಲೈ ಸನ್ ೧೯೨೮ನೇ ಇಸವಿ)—

ಹೊಸ ಅಂಗಡಿ! ಹೊಸ್ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಪ್ರಕಾರದಿಂದ ಸಾಮಾನುಗಳು ಸಿಗುತ್ತವೆ -ಕಬ್ಬಿಣ ತೊಲೆಗಳು, ತೋಟಾದ ಉಪಯೋಗದ ಪೈಪು ಗಳು, ಟಿನ್ ಪ್ಲೇಟರ, ಡಿಸ್ಟಿಲ್ಡ ಪ್ಲೇಟರ ಸಿಗುತ್ತವೆ, ಬಣ್ಣ ಸಿಗುತ್ತದೆ, ಕನ್ನಡಿಯ ಸಾಮಾನುಗಳೂ ಸಿಗು ತ್ತವೆ ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಶಾಬೂನುಗಳನ್ನು ಇಲ್ಲ ಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಚಿಲ್ಲರೆ ವ್ಯಾಪಾರಸ್ಥರು ದೊಡ್ಡ ಮಾಲ ನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿ ಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ಕೂಡುವ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ:—
ದಿ ನೊರ್ಥ ಕನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪೆ
ಜೋಗಿಗೆ
ರೆಗ್ಯೂಲರ್
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ ಯಲ್ಲಾಪುರ - ಅಂಕೋಲಾ ಕಾರವಾರ. (೨) ಹುಬ್ಬಳ್ಳಿ ಮುಂಡಗೋಡ. ಸಿರ್ಸಿ. ಕುಮಟಾ. ಹೊನ್ನಾವರ ಭಟ್ಕಳ. (೩) ಕುಮಟಾ ಸಿರ್ಸಿ. ಸಿದ್ದಾಪುರ. ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR

S. U. Narayanacharya & CO
Chaukamba, BENARES CITY.

ನಮ್ಮಲ್ಲಿ ಎಲ್ಲಾತರದ ರೇಶ್ಮಿ ಪೀತಾಂಬರ, ಜರಿ ಶಾಲು, ಜರಿ ಸೀರೆ, ಕಾಶ್ಮೀರ್ ಶಾಲು, ಧರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಧರ್ಮಾರ್ಥವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ,
ಮುಕ್ಕಾ, ಚೌಕಂಬಾ, ಕಾಶೀಕ್ಷೇತ್ರ.

Wanted:- Candidates for Telegraph and Station Master's Classes. Full particulars and Railway Fare Certificate on 2 annas stamp. Apply to.— Central Telegraph College, Nai Sarak, Delhi.

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ,
ವಿಧವಾವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಬ್ರ್ಯಾಂಚ್, ಕೊಳ್ಳೇಗಾಲ.
ಇವರಿಗೆ ಬರೆದು ತಿಳಿದುಕೊಳ್ಳಿರಿ.

ಮಂಗಳೂರ ತಂಬಾಕಿನ ಖಾಸಾ ನಸ್ಯ! ಸುವಾಸ ಸ್ವಾದು!

ಶಿಫಾರಸುಪತ್ರ ಪಡೆದ

ನಶ್ಯದ ಪುಡಿ!

ನಂ ೧ನೇ ನಶ್ಯದಪುಡಿ ೫೪ ತೊಲೆ ಶೇರು ಧರ ರೂ.೧|
ನಂ ೨ ನೇ ... ಶೇರು ೧ರ ರೂ. ೧-೨-೦
ನಂ. ೩ ನೇ .ಶೇರು ೧ರ ರೂ. ೧-೦-೦
ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಸಿಗುವದು
ಪತ್ತೆ - ಪುಂಡ್ಲೀಕ ನಾಗ ಪೈ,
[illegible]

ಸುಪೆಯಲ್ಲಿ ಮೆಜಿಸ್ಟ್ರೇಟ-ಪೋಲೀಸರ ಜಗ್ಗಾಟ; ಹೈಕೋರ್ಟಿನ ಉಡುಗರೆ!

ಸುಪೆಯ ಕರಂಜೋಡಾ ಗ್ರಾಮದಲ್ಲಿ [illegible] ಜಾತಿಯ ಗೋಕುಳೆಯ. ಹುಡು[illegible] ರಾಮ [illegible] ವನು ಡಿಸೆಂಬರ ತಾ. ಎಸೇಗೆ ಮಧ್ಯ ರಾತ್ರಿ [illegible] ಕೊಂಡನು. ಈತನ [illegible] ಯ. ಮೆಜಿಸ್ಟ್ರೇಟರಾಗಿದ್ದ ರಾ| [illegible] ಅಭಿಪ್ರಾಯವಾಯಿತು. ಆ ಕುರಿತು ಅವರು [illegible] ಸಿ ನಡಿಸಿದರು ಸ್ವಾಭಾವಿಕ ಕಾರಣದಿಂದಲೇ [illegible] ನು ನಿಧನಹೊಂದಿದನೆಂಬ ಪೋಲೀಸರ [illegible] ಯವಾಯಿತು. ಪೋಲೀಸರ [illegible] ಮೆಜಿಸ್ಟ್ರೇಟರಾದ ರಾ| ಕರ್ಕಿ[illegible] ಚೌಕಶಿ ಮಾಡಹತ್ತಿದರು ಹೀಗಿನ [illegible] ವಾಗಲೇ ಡಿ| ಮೆಜಿಸ್ಟ್ರೇಟರಾದ ಮಿ. [illegible] ಯವರಿಂದ ಪೋಲೀಸ ಸುಪರಿಂಟೆಂಡೆಂಟರಾದ ಮಿ| ರೊಬಿನಸನ್‌ರವರ ರಿಪೋರ್ಟಿನ ಮೇಲೆ ರಾ| ಕರ್ಕಿಯವರಿಗೆ [illegible] ಮಾಡಲಾಯಿತು [illegible] ಕಟಾಸ ನಡಿಸುತ್ತಿರುವಾಗ, ಕಲೆಕ್ಟರರಿಗೆ [illegible] ಸಸ್ಪಂಡ ಮಾಡುವ ಅಧಿಕಾರವಿಲ್ಲೆಂದು ರಾ| ಕರ್ಕಿಯವರು ಸಾಧಿಸಿ, ಹೈಕೋರ್ಟಿಗೆ ಅರ್ಜಿ [illegible] ರು. ಆ ಅರ್ಜಿಯ ವಿಚಾರವು [illegible] ಮಿರ್ಝಾ-ಬಾಟಕರರವರ [illegible] ಕಾಲಕ್ಕೆ ನ್ಯಾಯಮೂರ್ತಿಗಳ [illegible] ನ್ನು ಪರಾಂಬರಿಸಿ, ನಮೂದಿಸಿದ ಉದ್ಗಾರಗಳ ಪೋಲೀಸರ [illegible] ತೆಯನ್ನೂ, ಡಿ| ಮೆಜಿಸ್ಟ್ರೇಟ ಹಾಗು ಕಲೆಕ್ಟರರಾದ ಮಿ| ಬಾಸ್ಕರವಿಲ್ಲೆಯವರ [illegible] ಕಾರಭಾರವನ್ನೂ, ಡಿ| ಡೆ| ಕಲೆಕ್ಟರರಾದ ಮಿ| ವ್ಯಾಸರವರ ಅತ್ಯುತ್ಸಾಹವನ್ನೂ ಬೈಲಿಗೆಳೆಯುತ್ತವೆ. ಅದರಿಂದ ಈ ಎರಡೂ ತೀರ್ಪುಗಳ ಮುಖ್ಯಾಂಶವು ಇದರ [illegible]

ನ್ಯಾಯಮೂರ್ತಿ ಮಿರ್ಝಾರವರು ಬರೆಯುವದೇನೆಂದರೆ - ರಾ| ಕರ್ಕಿಯವರು ರಾಮುನ ಮರಣ ಕಾರಣದ ಕುರಿತು ಮೆಜಿಸ್ಟ್ರೇಟ ನಾತೆಯಿಂದ ಚೌಕಶಿ ಮಾಡುತ್ತಿರುವಾಗ, ಅರ್ಜಿದಾರ (ರಾ| ಕರ್ಕಿ)ರ ಹೆ[illegible] ರಾಮುನ ಶವವು ಅಗಿದು ತೆಗೆದ ಬಗ್ಗೆ ಈ ಚೌಕಶಿಯೊಳಗಿನ ಇತರ ವಿಷಯಗಳ ಬಗ್ಗೆ ಅರ್ಜಿದಾರರ ಮೇಲೆಯೇ ಡಿಪಾರ್ಟಮೆಂಟಿನ ಚೌಕಶಿ ನಡೆಯಿತು ಇದರಿಂದ ಅರ್ಜಿದಾರನಿಗೆ ರಾಮುನ ಮರಣ ಚೌಕಶಿಗೆ ತಡೆಬಿತು. ಫೆಬ್ರುವರಿ [illegible] ನೇ ತಾರೀಖಿಗೆ ಈ ವಿಷಯಗಳನ್ನೆಲ್ಲ ನಮೂದಿಸಿ, ಅರ್ಜಿದಾರರು ಹೈಕೋರ್ಟಿಗೆ ಅರ್ಜಿ ಮಾಡಿದರು. ಆ ಅರ್ಜಿಯನ್ನು [illegible], ಈ ವಿಷಯ ಕಲೆಕ್ಟರರಿಗೆ [illegible]. ಕಲೆಕ್ಟರರು ಬರೆದದ್ದೇನಂದರೆ - ಪೋಲೀಸ ಸುಪರಿಂಟೆಂಡೆಂಟರಾದ ರೊಬಿನಸನ್‌ರವರು ಮಾಡಿದ ರಿಪೋರ್ಟಿನ ಮೇಲಿಂದ ರಾ[illegible] ಮರಣ ಕಾರಣದ ವಿಷಯ ರಾ| ಕರ್ಕಿಯವರು [illegible] ಪುರಾವೆ ತಯಾರ ಮಾಡುತ್ತಾರೆಂದೂ, ಗೋ[illegible] ಬಾಳ [illegible] ಬಾಡಿ [illegible] ಹೊಡೆದು [illegible] ಕೋರ್ಟ [illegible] ವರ್ಷ ಶಿಕ್ಷೆ ವಡೆಯುವಂಥ ಭಯಂಕರ ಅಪರಾಧ ಮಾಡಿರುವರೆಂದೂ, ಈವಿಧಾನಗಳನ್ನೆಲ್ಲ ಚೌಕಶಿ ಮಾಡುವದಕ್ಕಾಗಿ ತಾವು ಅ| ಕಲೆಕ್ಟರರಿಗೆ ರವಾನಿಸಿದೆವಾಗಿಯೂ, ರಾ| ಕರ್ಕಿಯವರು ಅ| ಕಲೆಕ್ಟರರ ಕೋರ್ಟಿನಲ್ಲಿ ಕರೆಗೆ ಹಾಜರಾಗಲು ಧಿಕ್ಕರಿಸಿದ್ದರಿಂದ ಅವರಿಗೆ ಸಸ್ಪೆಂಡ ಮಾಡಬೇಕಾಯಿತೆಂದೂ ಬರೆದರು. ಕಾಗದಪತ್ರಗಳ ಮೇಲಿಂದಲೇ ಹೈಕೋರ್ಟು ಈ ಪ್ರಕರಣವನ್ನು ಇತ್ಯರ್ಥಪಡಿಸಬಹುದಾಗಿ ಡಿ| ಮೆಜಿಸ್ಟ್ರೇಟರು ಬರೆದು ಸರಕಾರಿ ವಕೀಲರಿಗೆ ಮಾಹಿತಿ ಕೊಡಲಿಲ್ಲ

ರಿಕಾರ್ಡು ನೋಡಿದ ಬಳಿಕ, ಸರಕಾರಿ ವಕೀಲರು ಈ ಪ್ರಕರಣದಲ್ಲಿ ಹಾಜರಾಗುವದು ಅವಶ್ಯವೆಂದು ನಮಗೆ ತೋರಿತು. ನಾವು ಸರಕಾರಿ ವಕೀಲರಿಗೆ ನೋಟೀಸು ಕೊಟ್ಟೆವು. ಸರಕಾರಿ ವಕೀಲರು ಅರ್ಜಿಯ ವಿರುದ್ಧ ೪ ಕಾರಣಗಳನ್ನು ಹೇಳಿದ್ದಾರೆ,:-

ಇಂಥ ಪ್ರಕರಣಗಳಲ್ಲಿ ಹೈಕೋರ್ಟಿಗೆ ಅರ್ಜಿಗಳನ್ನು ಮನ್ನಿಸುವ ಅಧಿಕಾರವಿಲ್ಲೆಂದು ಸರಕಾರಿ ವಕೀಲರು ಸಾಧಿಸುತ್ತಾರೆ, ಕ್ರಿ. ಪ್ರೊ. ಕೋಡ ಹಾಗು ಹೈಕೋರ್ಟ ಠರಾವುಗಳ ಮೇಲಿಂದ ಈ ಸಾಧನೆಯು ನಮಗೆ ಗ್ರಾಹ್ಯವಾಗುವದಿಲ್ಲ. ಇನ್ನು ರಾಮುನ ಮರಣವು ಸಂಶಯಾಸ್ಪದವೋ ಹೇಗೆ? ಎಂಬ ಪ್ರಶ್ನೆಯನ್ನು ಪರಾಂಬರಿಸುವ. ಕರಂಜೋಡಾ ಗ್ರಾಮದಲ್ಲಿ ಬಕೇಲೋ, ಸಾಯೋಬಾ ಹಾಗು ಯಶವಂತ ಎಂಬ ಮೂವ ಸಹೋದರರು ಹುಟ್ಟಿಗಿದ್ದಾರೆ. ಅವರ ಮನೆಯಲ್ಲಿ ಈ ರಾಮುನು ಆಳಾಗಿದ್ದನು. ಈತನು

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು [illegible] ತನ್ನ ಕೂದಲುಗಳ [illegible] ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ಪ್ರತಿದಿನಾ ಅ[illegible] ಲಕ್ಷ್ಯಕೊಡಬೇಕು ಕೂದಲುಗಳನ್ನು ಅಲಕ್ಷ್ಯ ಮಾಡಿದರೆ, ಅವು ಬಾಡಿ [illegible] ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು [illegible] ಕೂದಲನ್ನ ವ್ಯಾಪನ ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ 'ಕೂದಲ ತಲೆಯ ಹೊಟ್ಟು [illegible]ಗುತ್ತದೆ, [illegible] ರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಗಳಿಗೆ	,,	೨—೧೧—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

೩ ಔಂಸಿಗೆ	ರೂ.	೨—೦—೦
೨ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಿಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO. LTD.

ಡಿಸೆಂಬರ ೨ನೇ ತಾರೀಖಿನ ರಾತ್ರಿ ಅಥವಾ ೩ನೇ ತಾರೀಖಿನ ಮುಂಜಾವಿಗೆ ತೀರಿಕೊಂಡರೆಂದು ಹೇಳುತ್ತಾರೆ. ಈ ನಿಧನವು ಸಂಶಯಾಸ್ಪದವೆಂದು ಪೋಲೀಸ ಪಟೇಲರು ೩ನೇ ತಾರೀಖಿಗೆ ಪೋಲೀಸರಿಗೆ ರಿಪೋರ್ಟು ಕೊಟ್ಟರು. ಆ ರಿಪೋರ್ಟಿನ ಮೇಲಿಂದ ಫೌಜದಾರರಾದ ಮಿ| ಮಾನೇಯವರು ಚೌಕಶಿ ನಡಿಸಿ ೧೮ ಜನರ ಜಬಾಬು ಕೊಂಡರು. ಕ್ರಿ. ಪ್ರೊ. ಕೋಡ ಕಲಂ ೧೭೪ರನ್ವಯ ಅರ್ಜಿದಾರರಿಗೆ ಫೌಜದಾರರು ರಿಪೋರ್ಟು ಮಾಡಬೇಕಾಗಿತ್ತು; ಹಾಗೆ ಅವರು ರಿಪೋರ್ಟು ಮಾಡಲಿಲ್ಲ. ಕಾನೂನಿನಂತೆ ಅರ್ಜಿದಾರರೇ ಸಮೀಪದ ಮೆಜಿಸ್ಟ್ರೇಟರಾಗಿದ್ದರು. ೭ನೇ ತಾರೀಖಿಗೆ ಫೌಜದಾರರು ಅರ್ಜಿದಾರರಿಗೆ ಬರೆಕೊಂಡದ್ದೇನಂದರೆ:— ಬರ್ಕೆಲೋನು ರಾಮನ ನಿಧನ ಸಂಗತಿಯನ್ನು ತಮಗೆ ತಿಳಿಸಿದ್ದನಂತೆ. ಪಂಚನಾಮೆ ಮಾಡಿ ಶವದ ವ್ಯವಸ್ಥೆ ಮಾಡಲು ತಾವು ಹೇಳಿದ್ದರಂತೆ. ಈ ಸಂಗತಿ ನಿಜವೋ ಹೇಗೆ? ಇತ್ಯಾದಿ. ಇದಕ್ಕೆ ಅರ್ಜಿದಾರರು ಉತ್ತರಕೊಟ್ಟದ್ದೇನಂದರೆ:- ನಿಮ್ಮ ಬರವಣಿಗೆಯ ಮೇಲಿಂದ ರಾಮನು ಅಸ್ವಸ್ಥನಿದ್ದು ಸ್ವಾಭಾವಿಕವಾಗಿ ನಿಧನವಾದಂತೆ ಕಾಣುತ್ತದೆ. ಹೀಗಿದ್ದರೆ, ನೀವು ಎಂಥ ಚೌಕಶಿ ಮಾಡುತ್ತೀರಿ? ರೀತಿಯಂತೆ ನಮಗೆ ರಿಪೋರ್ಟು ಕಳಿಸಿರಿ. ಇದಕ್ಕೆ ಫೌಜದಾರರು ಉತ್ತರ ಕೊಟ್ಟದ್ದೇನಂದರೆ- ಕ್ರಿ. ಪ್ರೊ. ಕೋಡ ೭೪ನೇ ಕಲಮಿನಂತೆ ಪೋಲೀಸ ಪಾಟೀಲರ ರಿಪೋರ್ಟಿನ ಮೇಲಿಂದ ಚೌಕಶಿ ಮಾಡುವದವಶ್ಯವೆಂದು ನನಗೆ ತೋರಲಿಲ್ಲ. ಆದರಿಂದ ನಿಮಗೆ ತಪ್ಪಿಯವರು ನಿಮ್ಮ ಕಡೆ ಏನು ಹೇಳಿದ್ದಾರೆಂದು ತಿಳಕೊಳ್ಳಲಿಕ್ಕೆ ನಿಮಗೆ ಬರೆದಿದ್ದೆ. ಇತ್ಯಾದಿ ಬರೆದರು. ಅರ್ಜಿದಾರರು ಇದಕ್ಕೆ ಉತ್ತರ ಕೊಟ್ಟದ್ದೇನಂದರೆ:- ನಿಮ್ಮ ಪತ್ರದಲ್ಲಿ ರಾಮನು ವಾರಸದಾರರಿಲ್ಲದೆ ತೀರಿಕೊಂಡನೆಂದು ಬರೆದದೆ. ಪಟೇಲರು ಪಂಚರನ್ನು ಕೂಡಿಸಿ ಪಂಚನಾಮೆ ಮಾಡಿ ಶವ ಹುಗಿದರಾಗಿಯೂ ಬರೆದದೆ. ಇಂಥ ಸಂಗತಿಯಲ್ಲಿ ಪಟೇಲರ ರಿಪೋರ್ಟು ನಮ್ಮ ಕಡೆಗೇ ಬರಬೇಕಾಗಿತ್ತು; ನಿಮ್ಮ ಕಡೆ ಕಳಿಸುವ ಕಾರಣವಿರಲಿಲ್ಲ. ನೀವು ಯಾವ ಬಗ್ಗೆ ಚೌಕಶಿ ನಡಿಸಿದಿರಿ, ಎಂಬದನ್ನು ಬರೆಯಬೇಕು. ಚೌಕಶಿಯ ಕಾಗದಗಳನ್ನು ನಮಗೆ ಕಳಿಸತಕ್ಕದ್ದು. ಇತ್ಯಾದಿ.

ಆ ಕಾಗದಪತ್ರಗಳೆಲ್ಲ ಪೋಲೀಸ ಸುಪರಿಂಟೆಂಡೆಂಟರಿಗೆ ಕಳಿಸಿರುವದಾಗಿ ಫೌಜದಾರರು ಬರೆದರು. ಅರ್ಜಿದಾರರು ಪೋಲೀಸ ಸುಪರಿಂಟೆಂಡೆಂಟರಿಗೆ ಕಾಗದಗಳನ್ನು ಕಳುಹಲು ವಿನಂತಿ ಮಾಡಿಕೊಂಡರು.

ತನ್ಮಧ್ಯದಲ್ಲಿ, ಅಂದರೆ ಡಿಸೆಂಬರ ೧೫ನೇ ತಾರೀಖಿಗೆ ಪಟೇಲರು ಅರ್ಜಿದಾರರಿಗೆ ರಿಪೋರ್ಟು ಮಾಡಿದರು. ರಾಮನ ನಿಧನವು ಸಂಶಯಾಸ್ಪದವೆಂದೂ, ತಾವು ಈ ಸಂಗತಿಯನ್ನು ಪೋಲೀಸರಿಗೆ ಈ ಮೊದಲೇ ತಿಳಿಸಿದ್ದೇನೆಂದೂ ಪಟೇಲರು ಬರೆದರು. ಆ ದಿವಸವೇ ಅರ್ಜಿದಾರರು ಪಟೇಲರ ಜಬಾನಿ ಕೊಂಡರು. ಮಾರನೇ ದಿನ ಜನನ-ಮರಣ ರಿಜಿಸ್ತರದಲ್ಲಿ ರಾಮನ ಮರಣ ಕಾರಣ-ದಿನಗಳು ದಾಖಲಾಗಲಿಲ್ಲವೆಂದು ಸರ್ಕಲ ಇನ್ಸ್ಪೆಕ್ಟರರು ರಿಪೋರ್ಟು ಕೊಟ್ಟರು. ೧೭ನೇ ತಾರೀಖಿಗೆ ಸಬ್ ಅಸಿಸ್ಟಂಟ ಸರ್ಜನ್‌ರಿಗೆ ಕರಿಸಿ, ಪಂಚರ ಸಮಕ್ಷ ಅರ್ಜಿದಾರರು ರಾಮನ ಶವವನ್ನು ೧೮ನೇ ತಾರೀಖಿಗೆ ಅಗಿಸಿ ತೆಗೆದು, ೧೭೬ನೇ ಕಲಮಿನನ್ವಯ ಚೌಕಶಿಗೆ ಶುರು ಮಾಡಿದರು. ಶವಕ್ಕೆ ಸುತ್ತಿದ ಅರಿವೆಯ ಮೇಲೆ ನೆತ್ತರದ ಕಲೆಯಿದ್ದಿಲ್ಲ; ಆದರೆ, ಒಂದು ಬದಿಗೆ ಮಾಂಸದ ತುಂಡು ಅರಿವೆ ಕೂಡ, ಶಿಕ್ಕಿತು; ಹೆಣದ ಮೂಗು ಕೊಯ್ಯಲ್ಪಟ್ಟಿತ್ತು; ಮೂಗಿನ ಎಲುಬುಗಳು ಮುರಿದಿದ್ದವು; ಮುರಿದ ತುಂಡುಗಳು ಅಲ್ಲಿರಲಿಲ್ಲ; ನಾಲ್ಗೆಯೂ ಕೊಯ್ಯಲ್ಪಟ್ಟಿತ್ತು. ಇದು ಕೊಲೆಯಾಗಿರಬೇಕೆಂದು ಡಾಕ್ಟರರು ನುಡಿದರು. ಇಂಥ ಸಂಗತಿಯಲ್ಲಿ ಅರ್ಜಿದಾರರಿಗೆ ೧೭೬ನೇ ಕಲಮಿನಂತೆ ಚೌಕಶಿ ಮಾಡುವ ಅಧಿಕಾರವಿರುತ್ತದೆ. ಅರ್ಜಿದಾರರು ಜಬಾನಿಗಳನ್ನು ಕೊಂಡರು. ಈ ಜಬಾನಿಗಳ ಮೇಲಿಂದ ರಾಮನ ಮರಣವು ಬಲಾತ್ಕಾರದಿಂದ ಒದಗಿ ಬಂದಿತ್ತೆಂದು ಕಾಣುತ್ತದೆ. ಈ ಪ್ರಕಾರ ಸಿದ್ಧಾಂತವಾಗುವದು ಫೌಜದಾರರಿಗೂ, ಪೋಲೀಸ ಸುಪರಿಂಟೆಂಡೆಂಟರಿಗೂ ಅಪ್ರಿಯವಾಯಿತು. ಅದರಿಂದ ಈ ಚೌಕಶಿ ನಡೆಯುವಾಗ, ಅಂದರೆ, ಡಿಸೆಂಬರ ೧೯ನೇ ತಾರೀಖಿಗೆ ಫೌಜದಾರರು ಆ ಗ್ರಾಮಕ್ಕೆ ಪೋಲೀಸ ದಲ ಒಯ್ದು ಅರ್ಜಿದಾರರು ಕ್ಯಾಂಪು ಮಾಡಿದ ಸ್ಥಳದಲ್ಲಿ ಮೆರಿಸಿ ತಂದರು. ಹೀಗೆ ಮಾಡುವ ಕಾರಣವೇನೆಂದು ಅರ್ಜಿದಾರರು ಫೌಜದಾರರಿಗೆ ಕೇಳಿದರು. "ಪೋಲೀಸ ಸುಪರಿಂಟೆಂಡೆಂಟರಿಗೆ ಕೇಳಿರಿ," ಎಂಬ ಅಸಭ್ಯ ಉತ್ತರವು ಅರ್ಜಿದಾರರಿಗೆ ಶಿಕ್ಕಿತು. ಅರ್ಜಿದಾರರು ಅಪರಾಧದ ತಪಾಸು ಮಾಡುತ್ತಿರುವಾಗ, ಫೌಜದಾರರು ಈ ಪ್ರಕಾರ ವರ್ತಿಸಿದ್ದು ಅಯೋಗ್ಯವೆಂದು ನಮ್ಮ ಅಭಿಪ್ರಾಯವಾಗಿದೆ. ಹೀಗೆ ಪೋಲೀಸ ದಲವನ್ನು ಮೆರಿಸಿ ಇವರು ಚೌಕಶಿಗೆ ಆತಂಕ ಮಾಡಲು ಹವಣಿಸುತ್ತಿದ್ದರೆಂಬುದು ಸ್ಪಷ್ಟ ಕಾಣುತ್ತದೆ.

೩೦ನೇ ತಾರೀಖಿಗೆ ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರಾದ ಮಿ| ವ್ಯಾಸರವರಿಗೆ ಅರ್ಜಿದಾರರು ಪತ್ರ ಬರೆದರು. ರಾಮನ ನಿಧನ ವಿಷಯವನ್ನು ಪೋಲೀಸರು ಸಕಾಲದಲ್ಲಿ ತಮಗೆ ಪೂರೈಸಲಿಲ್ಲವಾಗಿ ದೂರಿ ತಾವು ಚೌಕಶಿಯನ್ನು ಪ್ರಾರಂಭಿಸಿದ್ದಾಗಿ ತಿಳಿಸಿದರು. ಅದೇ ದಿವಸವೇ ಈ ವಿಷಯದ ಕಾಗದಗಳನ್ನು ಕಳಿಸಲು ಸುಪರಿಂಟೆಂಡೆಂಟರಿಗೆ ಬರೆದರು. ಈ ಕಾಗದಗಳು ಆ ಕಾಲಕ್ಕೆ ಅವಶ್ಯವಿದ್ದವೆಂದು ನಮ್ಮ ಅಭಿಪ್ರಾಯವಾಗಿದೆ. ಈ ಕಾಗದಗಳ ಮೇಲಿಂದ ಅಪರಾಧಿಯನ್ನು ಶೋಧಿಸಲು ಅನುಕೂಲವಾಗುವಂತಿತ್ತು. ಆದರೆ, ಪೋಲೀಸ ಸುಪರಿಂಟೆಂಡೆಂಟರು ಅದಕ್ಕೆ ಕಿವಿಗೊಡಲಿಲ್ಲ. ಪುನಃ ಜನವರಿ ೧೧ನೇ ತಾರೀಖಿಗೆ ಅರ್ಜಿದಾರರು ಸುಪರಿಂಟೆಂಡೆಂಟರಿಗೆ ಕಾಗದಗಳನ್ನು ಕಳುಹಲು ಬರೆದರು. ಈ ಪತ್ರವು ಡಿ| ಮೆಜಿಸ್ಟ್ರೇಟರ ಮುಖಾಂತರ ಕಳಿಸೋಣಾಯಿತು. ಈ ಪತ್ರ ಮುಟ್ಟುವ ಮುಂಚೆಯೇ ಪೋಲೀಸ ಸುಪರಿಂಟೆಂಡೆಂಟರು ಡಿಸೆಂಬರ ೩೦ನೇ ತಾರೀಖಿನ ಪತ್ರಕ್ಕೆ ಕಳಿಸಿದ ಉತ್ತರವು ಬಂದು ತಲ್ಪಿತು. "ನೀವು ಬೇಡಿದ ಕಾಗದಗಳನ್ನು ಕಳಿಸಲಾಗುವದಿಲ್ಲ." ಈ ಪತ್ರ ತಲ್ಪಿದ ಕೂಡಲೆ ೧೩ನೇ ತಾರೀಖಿಗೆ ಅರ್ಜಿದಾರರು ಪೋಲೀಸ ಸುಪರಿಂಟೆಂಡೆಂಟರಿಗೆ ಬರೆದದ್ದೇನಂದರೆ:— "ಹೀಗೆ ಚೌಕಶಿಗೆ ಅವಶ್ಯವಿದ್ದ ದಾಖಲೆಗಳನ್ನು ಇಟ್ಟುಕೊಳ್ಳುವ ಅಧಿಕಾರವು ತಮಗಿರುವದಾಗಿ ನನಗೆ ತೋರುವದಿಲ್ಲ. ಕಾರಣ ಆ ದಾಖಲೆಗಳನ್ನು ಶೀಘ್ರವೇ ಕಳಿಸಬೇಕಾಗಿ ನನ್ನ ವಿನಂತಿ." ಈ ಸಂಗತಿಯನ್ನು ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರಿಗೆ ಅರ್ಜಿದಾರರು ತಿಳಿಸಿದರು. ಪೋಲೀಸ ಸುಪರಿಂಟೆಂಡೆಂಟರು ಇದಕ್ಕೆ ಕಿವಿಗೊಡಲಿಲ್ಲ. ಹೀಗೆ ನಡಕೊಳ್ಳುವದು ಸುಪರಿಂಟೆಂಡೆಂಟರ ಕರ್ತವ್ಯವಾಗಿರಲಿಲ್ಲ. ಎಲ್ಲ ಸಂಗತಿಗಳ ವಿಚಾರದಿಂದ ರಾಮನ ನಿಧನವು ಕೊಲೆಯಿಂದೊದಗಿರಬೇಕೆಂದು ನಮ್ಮ ಅನುಮಾನ.

ಸರಕಾರಿ ವಕೀಲರು ಡಿ| ಮೆಜಿಸ್ಟ್ರೇಟ ಹಾಗು ಪೋಲೀಸ ಸುಪರಿಂಟೆಂಡೆಂಟರ ಅಭಿಪ್ರಾಯಕ್ಕೆ ಜೋಟ್ಟು ತೋರಿಸಿ ಈ ಪ್ರಕರಣದಲ್ಲಿ ಇನ್ನು ಚೌಕಶಿಯಾಗುವದವಶ್ಯವಿಲ್ಲವಾಗಿ ಹೇಳುತ್ತಾರೆ. ಕಲೆಕ್ಟರರ ಅಭಿಪ್ರಾಯಕ್ಕೆ ನಾವೇನು ಲಕ್ಷ ಕೊಡುವದಿಲ್ಲ. ಅವರು ಸ್ವತಃ ಬುದ್ಧಿ ಖರ್ಚು ಮಾಡಿದ್ದು ತೋರುವದಿಲ್ಲ. ಪೋಲೀಸ ಸುಪರಿಂಟೆಂಡೆಂಟರ ಹೇಳಿಕೆ ಮೇರೆಗೆ ಅವರು ಅಭಿಪ್ರಾಯಪಟ್ಟಿದ್ದಾರೆ. ಡಾಕ್ಟರರು ನಮೂದಿಸಿದ ವಿಷಯಗಳು ಅವರಿಗೆ ಇನ್ನೂ ತನಕ ಗೊತ್ತೇ ಇಲ್ಲ. ಪೋಲೀಸ ಸುಪರಿಂಟೆಂಡೆಂಟರು ಕಲೆಕ್ಟರರಿಗೆ ಬರೆದ ಪತ್ರವು ನಿರ್ಮಲವೆಂದು ನಮಗೆ ತೋರುವದಿಲ್ಲ. ಪೋಲೀಸ ಸುಪರಿಂಟೆಂಡೆಂಟರ ನಡತೆಯ ಕುರಿತು ಅರ್ಜಿದಾರರು ಸಬ್ ಡಿವ್ಹಿಜನಲ್ ಮೆಜಿಸ್ಟ್ರೇಟರ ಕಡೆ ದೂರಿದ್ದರಿಂದಲೂ, ರಾಮನ ನಿಧನದ ಬಗ್ಗೆ ಅರ್ಜಿದಾರರು ಕೊಂಡ ಪುರಾವೆಯ ಮೇಲಿಂದಲೂ ಸುಪರಿಂಟೆಂಡೆಂಟರ ಮನಸ್ಸು ಚೊಕ್ಕವಿದ್ದಿಲ್ಲ. ಇಂಥ ಪ್ರಸಂಗದಲ್ಲಿ ರಾ| ಕರ್ಕಿಯವರ ಮೇಲೆ ಪಿನಲ್ ಕೋಡಿನ ೩೩೦ನೇ ಕಲಮಿನನ್ವಯ ಅಪರಾಧ ಮಾಡಿದ ಆರೋಪ ಹೊರಿಸಿದ್ದು ನಿಷ್ಪಕ್ಷಪಾತದ್ದೆಂದು ನಮ್ಮ ಅಭಿಪ್ರಾಯವಾಗುವದಿಲ್ಲ. ಈ ಪತ್ರದ ಭಾಷೆಯು ಅಸಭ್ಯವಿದೆ. ಅರ್ಜಿದಾರರ ವಿಷಯ ತಿರಸ್ಕಾರ ಬುದ್ಧಿಯು ಇದರೊಳಗೆ ವ್ಯಕ್ತವಾಗಿದೆ. ಪೋಲೀಸ ಆಫೀಸರರು ಮೆಜಿಸ್ಟ್ರೇಟರ ಬಳಿ ನಡಕೊಳ್ಳುವಾಗ ಮರ್ಯಾದೆ ಕಾಪಾಡಬೇಕೆಂದು ನಿಯಮವಿದೆ. ಈ ನಿಯಮವನ್ನು ಡಿ| ಮೆಜಿಸ್ಟ್ರೇಟರೂ, ಪೋಲೀಸ ಸುಪರಿಂಟೆಂಡೆಂಟರೂ ಧಿಕ್ಕರಿಸಿದ್ದಾರೆ. ರಾಮನ ಮೂಗು ಕೊಯ್ದು ಹೋದ ಉಲ್ಲೇಖವು ಈ ಪತ್ರದಲ್ಲಿ ಎಲ್ಲಿಯೂ ಕಾಣುವದಿಲ್ಲ. ಇಷ್ಟು ದೊಡ್ಡ ಮಹತ್ವದ ಸಂಗತಿಯನ್ನು ಅವರು ಮುದ್ದಾಂ ಬರೆಯಲಿಲ್ಲ. ಡಿ| ಮೆಜಿಸ್ಟ್ರೇಟರಿಗೆ ತಪ್ಪು ಗ್ರಹಿಕೆ ಕೊಡುವದಕ್ಕಾಗಿ ಅವರು ಡಾಕ್ಟರರು ನಮೂದಿಸಿದ ಸಂಗತಿಗಳನ್ನು ಉಲ್ಲೇಖಿಸಲಿಲ್ಲ. ಫೌಜದಾರರಿಗೆ ಮೆಜಿಸ್ಟ್ರೇಟರೇ ಮಾಹಿತಿ ಕೊಡಬೇಕಾಗಿತ್ತು ಎಂಬ ಗ್ರಹಿಕೆಯಿಂದಲೂ ಸುಪರಿಂಟೆಂಡೆಂಟರು ಈ ಪತ್ರ ಬರೆದಿದ್ದಾರೆ. ಕ್ರಿ. ಪ್ರೊ. ಕೋಡಿನಂತೆ ಪೋಲೀಸ ಆಫೀಸರರಿಗೆ ಸಂಶಯಾಸ್ಪದ ಮರಣದ ಪ್ರಕರಣಗಳಲ್ಲಿ ಅಭಿಪ್ರಾಯ ಕೊಡುವ ಅಧಿಕಾರವಿಲ್ಲ, ಮೆಜಿಸ್ಟ್ರೇಟರೇ ಈ ವಿಷಯವನ್ನು ಪರಾಂಬರಿಸಿ ಅಭಿಪ್ರಾಯ ಕೊಡಬೇಕು. ಅಂಥ ಸಂಗತಿಯಲ್ಲಿ ಪೋಲೀಸ ಆಫೀಸರರು ಅರ್ಜಿದಾರರ ಕಡೆ ರಿಪೋರ್ಟು ಮಾಡದಿದ್ದದ್ದು ದೊಡ್ಡ ತಪ್ಪು.

ಪೋಲೀಸ ಸುಪರಿಂಟೆಂಡೆಂಟರು ಆ ಮಂದಿಗಳ ಸಾಕ್ಷಿ ಕೊಂಡು ಮೆಜಿಸ್ಟ್ರೇಟರಾದ ರಾ| ಕರ್ಕಿಯವರು ಸುಳ್ಳು ಪುರಾವೆ ತಯಾರ ಮಾಡುತ್ತಿದ್ದರೆಂದು ಡಿ| ಮೆಜಿಸ್ಟ್ರೇಟರಿಗೆ ರಿಪೋರ್ಟು ಮಾಡಿದ್ದಾರೆ. ಫೌಜದಾರರು ವಿರುದ್ಧರಾದಾಗ ರಾ| ಕರ್ಕಿಯವರ ಮುಂದೆ, ಹಿಂದೆ ಸಾಕ್ಷಿ ಕೊಟ್ಟವರು ತಮ್ಮ ಮೇಲಿನ ಆರೋಪವನ್ನು ತಪ್ಪಿಸಿಕೊಳ್ಳುವದಕ್ಕಾಗಿ ಮೆಜಿಸ್ಟ್ರೇಟರು ಬಲಾತ್ಕಾರ ಮಾಡಿದ ಸಾಧನೆ ಮಾಡುವದು ಶಕ್ಯವಿದೆಂದು ಅವರಿಗೆ ತಿಳಿಯಲಿಲ್ಲ. ಪೋಲೀಸ ಸುಪರಿಂಟೆಂಡೆಂಟರು ಜನವರಿ ೧೫ನೇ ತಾರೀಖಿಗೆ ಸುಪೆಗಿ

ಹೋಯಿತು. ಗೋಪಾಲನ ಅಂಗಪರೀಕ್ಷೆಯಾಯಿತು. ೨ ಸಣ್ಣ ಗಾಯಗಳಾಗಿದ್ದವೆಂದು ಡಾಕ್ಟರರ ಸರ್ಟಿಫಿಕೇಟು ಉಂಟು. ಗೋಪಾಲನಿಗೆ ಏಟು ಬಿದ್ದ ೨೩ನೇ ತಾರೀಖಿಗೆ ತೊಡೆದಿದ್ದರೆಂಬ ಸಾಧನೆ. ಸುಪರಿಂಟೆಂಡೆಂಟರು ೨೫ನೇ ತಾರೀಖಿಗೆ ಪುನಃ ಗೋಪಾಲನ ಪರೀಕ್ಷೆ ಮಾಡಿಸಿದರು. ಡಾಕ್ಟರರು ತಪಾಸ ಮಾಡಿ ೨೫ನೇ ತಾರೀಖಿಗೆ ಸರ್ಟಿಫಿಕೇಟು ಕೊಟ್ಟರು, ಹಿಂದಿನ ದಿನ ಕೊಟ್ಟ ಸರ್ಟಿಫಿಕೇಟನ್ನು ಡಾಕ್ಟರರು ನಾಶ ಮಾಡಿದರು. ಅದೇನಿದ್ದರೂ ತಪ್ಪಿಂದ ಅಪರಾಧವಾಗಿದ್ದರೆ, ತನ್ನ ಮೇಲೆ ಖಟಲೆ ನಡೆಸಿರೆಂದು ಅರ್ಜಿದಾರರು ಹೇಳುತ್ತಾರೆ. ಇದೇ ಯೋಗ್ಯ ಮಾರ್ಗವು. ಅಪರಾಧ ಮಾಡಿದ್ದಿದ್ದರೆ, ಅವರಿಗೆ ಶಾಸನವಾಗಲಿ. ಸುಪರಿಂಟೆಂಡೆಂಟರ ರಿಪೋರ್ಟು ಸಂಬಂಧಕ್ಕೆ ಆಧಾರವು ನಮಗೆ ತೋರುವದಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಪೋಲೀಸ ಸುಪರಿಂಟೆಂಡೆಂಟರ ರಿಪೋರ್ಟಿನ ಮೇಲಿಂದ ಅರ್ಜಿದಾರರ ನಡಿಸುವ ಚೌಕಶಿಯನ್ನು ತಹಕೂಬ ಮಾಡುವಂಥ ಡಿಪಾರ್ಟಮೆಂಟ ಪ್ರಕರಣವನ್ನು ಅರ್ಜಿದಾರರ ಮೇಲೆ ನಡಿಸಿದ್ದ ವಿಶೇಷವೇ ಹೇಗೆ? ಸುಪರಿಂಟೆಂಡೆಂಟರು ಡಿ| ಮೆಜಿಸ್ಟ್ರೇಟರಿಗೆ ಪತ್ರ ಬರೆದಿದ್ದರು. ಮಿ|| ವ್ಯಾಸರವರೇ ಯವರು ಕಲೆಕ್ಟರರಿದ್ದಾರೆ, ಡಿ| ಮೆಜಿಸ್ಟ್ರೇಟರೂ ಇದ್ದಾರೆ. ಡಿ| ಮೆಜಿಸ್ಟ್ರೇಟ ನಾತೆಯಿಂದ ಈ ಪ್ರಕರಣಕ್ಕೆ ತಡೆ ಹಾಕಲು ಅವರಿಗೆ ಅಧಿಕಾರವಿರಲಿಲ್ಲ. [illegible]ನೇ ಕಲಮಿನನ್ವಯ ರಿಪೋರ್ಟು ಕಳಿಸುವ ಅಧಿಕಾರ ಮಾತ್ರ ಅವರಿಗುಂಟು. ಅರ್ಜಿದಾರರು ನಡಿಸುವ ಚೌಕಶಿಯಲ್ಲಿ ಅಕ್ರಮಗಳಾಗಿದ್ದರೆ, ಅವರು ಹೈಕೋರ್ಟಿಗೆ ೪೩೮ನೇ ಕಲಮಿನನ್ವಯ ರಿಪೋರ್ಟು ಮಾಡಬೇಕಾಗಿತ್ತು. ಹೀಗೆ ಮಾಡದೆ ಕಲೆಕ್ಟರ ನಾತೆಯಿಂದ ರ್ಯಾಕರ್ಟ್ಯವರಿಗೆ ಮಾಮಲೇದಾರಿ ಅಧಿಕಾರದಿಂದ ಚ್ಯುತ ಮಾಡಿ ಈ ಚೌಕಶಿಗೆ ಮಧ್ಯದಲ್ಲಿಯೇ ತಡೆಹಾಕಿದ್ದು ಕಾಯಿದೆಗೂ, ನೀತಿಗೂ ವಿರೋಧವಾದದ್ದು. ಕಾರ್ಯಕಾರಿ ಅಧಿಕಾರಿಗಳಿಗೆ ನ್ಯಾಯಾಧಿಕಾರದಲ್ಲಿ ಅತಂಕಗಳನ್ನೊಡ್ಡುವ ಅಧಿಕಾರವಿಲ್ಲ.

ಮೆಜಿಸ್ಟ್ರೇಟ ಅಧಿಕಾರವನ್ನು ಅರ್ಜಿದಾರರಿಗೆ ತಪ್ಪಿಸಿದ್ದು ಯುಕ್ತವೋ ಹೇಗೆ? ಮಾಮಲೇದಾರಿ ಅಧಿಕಾರದಿಂದ ಪದಚ್ಯುತ ಮಾಡುವ ಅಧಿಕಾರವು ಲೆಂಡ ರೆವ್ಹನ್ಯೂ ಕೋಡಿನ ೪ ಅರ್ಜಿದಾರರಿಗೆ ಇರುತ್ತದೆ. ಆದರೆ, ಮೆಜಿಸ್ಟ್ರೇಟ ಅಧಿಕಾರವನ್ನು ತಪ್ಪಿಸಲು ಪ್ರಾಂತಿಕ ಸರಕಾರಕ್ಕೇ ಅಧಿಕಾರವಿದ್ದು, ಮಾಮಲೇದಾರರಾಗಿರುವದರಿಂದ ಅರ್ಜಿದಾರರಿಗೆ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುತ್ತದಾಗಿಯೂ, ಮಾಮಲೇದಾರಿ ಸ್ಥಾನದಿಂದ ಅರ್ಜಿದಾರರಿಗೆ ತಪ್ಪಿಸಿದ ಬಳಿಕ ಅವರ ಮೆಜಿಸ್ಟ್ರೇಟ ಅಧಿಕಾರವು ಸಹ ಅದರ ಜೊತೆಗೇ ನಷ್ಟವಾಗುತ್ತದಾಗಿಯೂ ಸರಕಾರಿ ವಕೀಲರು ಪ್ರತಿಪಾದಿಸುತ್ತಾರೆ. ಆದರೆ, ಸರಕಾರವು ಮೆಜಿಸ್ಟ್ರೇಟರಾಗಿ ನೇಮಿಸುವಾಗ ಅರ್ಜಿದಾರರ ಅಧಿಕಾರವನ್ನು ಉಲ್ಲೇಖಿಸದೆ, ಹೆಸರನ್ನೇ ನಮೂದಿಸಿ ಅಧಿಕಾರ ಕೊಡುವದರಿಂದ ಮೆಜಿಸ್ಟ್ರೇಟ ಅಧಿಕಾರವು ಅರ್ಜಿದಾರರ ಸ್ವಂತ ಅಧಿಕಾರವೆಂದು ನಮ್ಮ ಅಭಿಪ್ರಾಯವಾಗಿದೆ. ಸರಕಾರವು ಈ ಸ್ಥಲಕ್ಕೆ ಬೇರೆ ಇಸಮನನ್ನು ನೇಮಿಸಿದ್ದರಿಂದ ಇವರ ಮೆಜಿಸ್ಟ್ರೇಟ ಅಧಿಕಾರವನ್ನು ಸರಕಾರವು ಅಂತ್ಯಗೊಳಿಸಿದಂತಾಗಿ ಗ್ರಹಿಸಬೇಕೆಂದು ಸರಕಾರಿ ವಕೀಲರು ವಾದಿಸುತ್ತಾರೆ. ಆದರೆ, ನಮಗೆ ಹಾಗೆ ಕಾಣುವದಿಲ್ಲ. ಅರ್ಜಿದಾರರು ಇನ್ನೂ ೨ ನೇ ವರ್ಗದ ಮೆಜಿಸ್ಟ್ರೇಟರಿದ್ದಾರಾಗಿ ನಮ್ಮ ಅಭಿಪ್ರಾಯವುಂಟು. ಅವರ ಮೆಜಿಸ್ಟ್ರೇಟ ಅಧಿಕಾರವು ಇನ್ನೂ ಊರ್ಜಿತವಾಗಿದ್ದುದರಿಂದ ಅವರ ಕಡೆಯಿಂದ ಈಗಿನ ಚೌಕಶಿಯನ್ನು ಮುಂದರಿಸಲು ಪ್ರತಿಬಂಧವಿರುತ್ತದೇನು? ಯಾವದೇ ಕಾರಣದಿಂದ ಅವರ ಮಾಮಲೇದಾರಿ ಅಧಿಕಾರವು ನಷ್ಟವಾದದ್ದಿರಲಿ, ಆ ಬಗ್ಗೆ ತಕ್ಕ ಇಲಾಜನ್ನು ಅರ್ಜಿದಾರರು ಕೈಕೊಳ್ಳುವರು. ಅದರ ಗುಣದೋಷಗಳ ಬಗ್ಗೆ ನಾವು ಅಭಿಪ್ರಾಯ ವ್ಯಕ್ತ ಮಾಡುವದಿಲ್ಲ. ಈ ಚೌಕಶಿಯನ್ನು ಅರ್ಜಿದಾರರ ಕಡೆಯಿಂದ ನಡಿಸದಿರಲಿಕ್ಕೆ ನಮಗೇನೂ ಸಾಕಷ್ಟು ಆಧಾರ ಕಾಣುವದಿಲ್ಲ.

ಡಿ|| ಕಲೆಕ್ಟರರ ಹುಕುಮಿನ ಉಲ್ಲೇಖನೆಯಾದ್ದರಿಂದ ಅರ್ಜಿದಾರರು ಈ ಚೌಕಶಿಯನ್ನು ಮುಂದರಿಸಲು ಅಯೋಗ್ಯರೆಂದು ನಮಗೆ ಕಾಣುವದಿಲ್ಲ. ತಾಯಿಯ ಶ್ರಾದ್ಧದ ಮೂಲಕ ಮಿ|| ವ್ಯಾಸರ ಕೋರ್ಟಿಗೆ ಅರ್ಜಿದಾರರು ಹಾಜರಾಗದಿರಲು ಹೇಳಿದ ನೆವವು ಸುಳ್ಳೆಂದು ಮಿ|| ವ್ಯಾಸರವರು ಕಲೆಕ್ಟರರಿಗೆ ಬರೆಯುತ್ತಾರೆ. ಆ ಸಾಧನೆಯನ್ನು ಮಿ|| ವ್ಯಾಸರವರು ಈಗ ಪ್ರತಿಪಾದಿಸುವದಿಲ್ಲ. ಮಿ|| ವ್ಯಾಸರವರ ಕಚೇರಿಯು ಅರ್ಜಿದಾರರ ಮನೆಯ ಬಳಿಯಲ್ಲಿತ್ತು. ಶ್ರಾದ್ಧದ ಸಂಗತಿಯು ಸುಳ್ಳಾಗಿದ್ದರೆ, ಅವರು ಮನೆಯಲ್ಲಿ ವಿಚಾರಿಸಬಹುದಿತ್ತು. ಸುಳ್ಳೆಂಬ ನೆವವು ನಿರಾಧಾರವೆಂದು ನಮಗೆ ತೋರುತ್ತದೆ. ತಾಯಿಯ ಶ್ರಾದ್ಧಕ್ಕಾಗಿ ಒಪ್ಪತ್ತಿನ ರಜೆ ಬೇಡಿದ್ದು ಅಯೋಗ್ಯವೆಂದು ನಾವು ತಿಳಿಯುವದಿಲ್ಲ. ಅದನ್ನು ಧಿಕ್ಕರಿಸಿ, ಮಿ|| ವ್ಯಾಸರವರು ಯೋಗ್ಯ ಕೆಲಸ ಮಾಡಿದರೆಂದೂ ನಾವು ತಿಳಿಯುವದಿಲ್ಲ. ಇಷ್ಟಾಗಿ, ಮಾರನೇ ದಿನ ಶ್ರಾದ್ಧವಿರುವದೆಂದು ಅರ್ಜಿದಾರರು ಮುಂಚಿನದಿನವೇ ಹೇಳಿದ್ದರು. ಅದರಿಂದ ಮುಂಜಾನೆ ವ್ಯಾಸರವರ ಕೋರ್ಟಿನ ೪ ತಾಸು ಕೆಲಸ ನಡೆಯಿತು. ಅಪರಾಹ್ನ ೧|| ಘಂಟೆಯ ನಂತರ ಅರ್ಜಿದಾರರು ಮೆರೆಯುವದಕ್ಕಾಗಿ ಒಪ್ಪತ್ತಿನ ರಜೆ ಬೇಡಿದ್ದರೆಂಬ ಮಿ|| ವ್ಯಾಸರವರ ವಿಧಾನಕ್ಕೆ ನಾವು ತಲೆದೂಗುವದಿಲ್ಲ. ಹಿಂದು ಧರ್ಮಶಾಸ್ತ್ರದಂತೆ ಶ್ರಾದ್ಧ ವಿಧಿಯನ್ನು ಕರ್ತವ್ಯನಿಷ್ಠ ಮಗನು ಭಕ್ತಿಯಿಂದಲೇ ಮಾಡಬೇಕೆಂದು ವಿಧಿಸಿದೆ. ಅರ್ಜಿದಾರರ ಅನುಕೂಲತೆಯ ಬಗ್ಗೆ ಸಾಕ್ಷಿಗಾರರಿಗೆ ಅನಾನುಕೂಲತೆ ಮಾಡಬೇಕೆಂಬ ಮಿ|| ವ್ಯಾಸರವರ ವಿಧಾನದಲ್ಲಿಯೂ ತಿರುಳಿಲ್ಲ. ಅರ್ಜಿದಾರರು ಡಿಪಾರ್ಟಮೆಂಟ ಚೌಕಶಿಯಲ್ಲಿ ಆರೋಪಿಗಳಾಗಿದ್ದರು. ಅವರ ಅನುಕೂಲತೆಯ ಕಡೆಗೆ ಸ್ವಲ್ಪ ಲಕ್ಷ ಕೊಡಬೇಕು. ಸ್ವಲ್ಪ ಮುಂಜಾಗ್ರತೆ ಕೊಂಡಿದ್ದರೆ, ಮಿ| ವ್ಯಾಸರವರು ಸಾಕ್ಷಿದಾರರಿಗೆ ಸಂಭವಿಸುವ ಅನಾನುಕೂಲತೆಗಳನ್ನು ಪರಿಹರಿಸಬಹುದಿತ್ತು. ಹೆಚ್ಚೇನು, ಸಾಕ್ಷಿದಾರರ ಜಬಾನಿಯನ್ನು ಅರ್ಜಿದಾರರ ಗೈರಹಾಜರಿಯಲ್ಲಿ ನಡಿಸಬಹುದಿತ್ತು. ಆದ್ದು ಸವಾಲಿಗೆ ಆ ಸಾಕ್ಷಿದಾರರನ್ನು ಕರೆಯಹೇಳಿದ್ದರೆ, ಆಗ ಆ ಅರ್ಜಿಯನ್ನು ಕಿತ್ತೊಗೆಯಬಹುದಿತ್ತು. ಮಿ| ವ್ಯಾಸರವರಿಗೆ ತಮ್ಮ ಹುಕುಮು ಅಮಾನ್ಯವಾಯಿತೆಂಬುದನ್ನು ನೋಡಿ ಬಹಳ ಸಿಟ್ಟು ಬಂದಿದೆ. ನಾವೇನು ಇಷ್ಟು ಸಿಟ್ಟು ಮಾಡುತ್ತಿಲ್ಲ. ಅರ್ಜಿದಾರರು ಈ ಚೌಕಶಿಯಲ್ಲಿ ತಮಗೆ ಬೆದರಿಕೆ ಹಾಕಲೆತ್ನಿಸಿದರಾಗಿ ಮಿ| ವ್ಯಾಸರವರು ಬರೆಯುತ್ತಾರೆ; ಈ ವಿಧಾನಕ್ಕೆ ರಿಕಾರ್ಡಿನಲ್ಲಿ ಏನ ಆಧಾರ ತೋರುವದಿಲ್ಲ. ಕಲೆಕ್ಟರರಿಗೆ ಬರೆದ ಪತ್ರದಲ್ಲಿಯೂ ಈ ಸಂಗತಿ ತಿಳಿಸಲಿಲ್ಲ. ಅರ್ಜಿದಾರರು ವ್ಯಾಸರವರಿಗೆ ಬರೆದ ಪತ್ರವು ಆದರಯುಕ್ತವಿದೆ. ಈಗ ಮಿ| ವ್ಯಾಸರವರು ಸಣ್ಣ ಸಂಗತಿಯ ಬಾಹುಳ್ಯ ಮಾಡುತ್ತಾರಾಗಿ ತೋರುತ್ತದೆ. ಏನಾದರೂ ಅನಾದರವಾದದ್ದಿದ್ದಲ್ಲಿ ಅದನ್ನು ಅರ್ಜಿದಾರರು ಬುದ್ಧಿಪೂರ್ವಕವಾಗಿ ಮಾಡಿರಲಿಲ್ಲವೆಂದು ತಿಳಿಯಬೇಕಾಗಿದೆ. ಪೋಲೀಸರ ವಿರೋಧಭಾವದಿಂದಲೂ, ವರಿಷ್ಠಾಧಿಕಾರಿಗಳು ಪೋಲೀಸರ ಪಕ್ಷಪಾತಿಯಾಗಿರುವದರಿಂದಲೂ, ತಮ್ಮ ಪಕ್ಷವನ್ನು ಅರ್ಜಿದಾರರು ಸ್ವತಃ ನಡಿಸುತ್ತಿದ್ದುದರಿಂದಲೂ ಏನಾದರೊಂದು ಅಸಭ್ಯ ವರ್ತನವು ಒದಗಿದ್ದಿರಬಹುದು; ಆದರೆ, ಇವೆಲ್ಲ ಕಾರಣಗಳ ಮೇಲಿಂದ ಅರ್ಜಿದಾರರ ಕಡೆಯಿಂದ ರಾಮುನ ಕೊಲೆಯ ಅಪರಾಧ ಚೌಕಶಿಯನ್ನು ಸೆಳಕೊಳ್ಳಬೇಕಾಗಿ ನಮಗೆ ತೋರುವದಿಲ್ಲ.

ಅರ್ಜಿದಾರರು ಈ ಪ್ರಕರಣದಲ್ಲಿ ಉತ್ಸಾಹದಿಂದಲೂ, ಸಾಹಸದಿಂದಲೂ ಕೆಲಸ ಮಾಡಿದ್ದಾರೆ. ಫೌಜದಾರರಿಗೂ, ಸುಪರಿಂಟೆಂಡೆಂಟರಿಗೂ ಇವರು ಲೆಕ್ಕಿಸಲಿಲ್ಲ. ಈ ಚೌಕಶಿಯನ್ನು ತಡಿಸಿ, ಕಾಯಿದೆಯ ಆಚಾರಕ್ಕೆ ಅಧಿಕಾರಿಗಳು ತಡೆಹಾಕಿದ್ದಾರೆ. ನ್ಯಾಯಕ್ಕೆ ಪ್ರತಿಷ್ಠಿತ ಮಾಡಬೇಕಾದರೆ, ಅರ್ಜಿದಾರರಿಗೆ ಈ ಚೌಕಶಿಯ ಕೆಲಸವನ್ನು ವಹಿಸತಕ್ಕದ್ದು. ಸ್ಥಳೀಕ ಪೋಲೀಸರು ಆತಂಕ ಮಾಡದಂತೆ ಅವರ ಮೇಲೆ ಇಂಜಂಕ್ಷನ ಹುಕುಮನ್ನು ಹೊರಡಿಸಬಹುದು. ಆದರೆ ಅಷ್ಟರ ತನಕ ಹೋಗುವದವಶ್ಯವಿಲ್ಲ. ರಾಮನ ಕೊಲೆಯ ವಿಷಯವನ್ನು ಶೀಘ್ರವೇ ತಪಾಸ ಮಾಡುವದು ಅವಶ್ಯವಾಗಿದೆ. ಡಿ| ಮೆಜಿಸ್ಟ್ರೇಟರು ಧೈರ್ಯ ಹಿಡಿದು ಪೋಲೀಸ ಅಫೀಸರರಿಗೆ ಆಟೋಪಿಸಿಕೊಂಡು ಸಾಕ್ಷಿಗಾರರ ವಿಶ್ವಾಸವನ್ನು ಸಂಗ್ರಹಿಸಿ, ಈ ಚೌಕಶಿಯನ್ನು ಮುಗಿಸಬೇಕು. ಇದರಿಂದ ಅರ್ಜಿದಾರರ ಮೇಲೆ ನಾವು ಯಾವದೇ ಕೆಟ್ಟ ಅಭಿಪ್ರಾಯವನ್ನು ಪಡೆಯುತ್ತೇವಾಗಿ ತಿಳಿಯಲಾಗದು.

ನ್ಯಾಯಮೂರ್ತಿ ಪಾಟಕರರವರು ನ್ಯಾಯಮೂರ್ತಿ ಮಿರ್ಝಾರವರ ಅಂಬೋಣವನ್ನೇ ಎತ್ತಿಹಿಡಿದಿದ್ದಾರೆ. ಮಾಮಲೇದಾರರಾದ ಅರ್ಜಿದಾರರು ರಾಮುವ ಕೊಲೆಯ ವಿಷಯ ಚೌಕಶಿ ನಡಿಸತಕ್ಕದ್ದು ಯೋಗ್ಯವೆಂದೂ, ಕಲೆಕ್ಟರರು ಮಾಡಿದ ಹುಕುಮು ಅನಧಿಕಾರದ್ದೆಂದೂ ಅಭಿಪ್ರಾಯಪಟ್ಟಿದ್ದಾರೆ. ಡಿ| ಮೆಜಿಸ್ಟ್ರೇಟರು ಮಾಡಿದ ಸಸ್ಪೆಂಡಿನ ಹುಕುಮು ಅಯೋಗ್ಯವಾದದ್ದು. ಸುಪರಿಂಟೆಂಡೆಂಟರು ಬರೆದ ಪತ್ರವು ಅಸಭ್ಯವಾದದ್ದು. ಡಿ| ಮೆಜಿಸ್ಟ್ರೇಟರರಿಗೆ ಪೂರ್ಣ ಸಂಗತಿಗಳನ್ನು ಸುಪರಿಂಟೆಂಡೆಂಟರು ತಿಳಿಸದೆ ಬಚ್ಚಿಟ್ಟರು. ಫೌಜದಾರರು ಕಾಗದಪತ್ರ ಕಳಿಸದ ವರ್ತನವು ನಿಂದ್ಯವಾದದ್ದು. ರಾಮುನು ಮರಣಪಟ್ಟ ಮನೆಯವರು ತುಟಿಮೂಗುಗಳನ್ನು ಕೊಯ್ದ ಹಕೀಕತನ್ನು ಒಪ್ಪುತ್ತಾರೆ. ಫೌಜದಾರರ ಪ್ರೇರಣೆಯಿಂದ ಪೋಲೀಸ ಸುಪರಿಂಟೆಂಡೆಂಟರು ವರ್ತಿಸಿ, ಅರ್ಜಿದಾರರಾದ ಮೆಜಿಸ್ಟ್ರೇಟರ ಮೇಲೆ ಅಸಭ್ಯ ರಿಪೋರ್ಟನ್ನು ಮಾಡಿದರು. ಇಂಥ ಸಂಗತಿಯಲ್ಲಿ ಅರ್ಜಿದಾರರು ಧೈರ್ಯದಿಂದ ಚೌಕಶಿ ಮುಂದರಿಸಿದ್ದು ಪ್ರಶಂಸನೀಯವಿದೆ. ಅವರ ಮೆಜಿಸ್ಟ್ರೇಟ ಅಧಿಕಾರವು ಇನ್ನೂ ಊರ್ಜಿತವಿದೆ. ಇತ್ಯಾದಿ ಬರೆದು, ಸಸ್ಪೆಂಡ ಮಾಡಿದ ಹುಕುಮು ಅಷ್ಟು ಪ್ರಮಾಣವಲ್ಲೆಂದು ನಮೂದಿಸಿದ್ದಾರೆ

ನ್ಯಾಯವಾದಿ ಪಾಟೀಲರವರು ಈ ವಿಷಯ ಬರೆಯುವದೇನಂದರೆ:— ೧೯-೨-೧೯೨೫ ನೇ ದಿನ ೨ ಘಂಟೆಗೆ ಡಿ| ಕಲೆಕ್ಟರಾದ ಮಿ| ನ್ಯಾಕರವರ ಕೋರ್ಟಿನಲ್ಲಿ ಅರ್ಜಿದಾರರು ಹಾಜರಾಗಲಿಲ್ಲೆಂಬುವರ ಮೇಲಿಂದ ಅವರನ್ನು ಶಿಕ್ಷಿಸಿ ಮಾಡಲು ಸಾಕಷ್ಟು ಆಧಾರವಿರಲಿಲ್ಲ. ೧೮ ನೇ ತಾರೀಖಿನ ಬೆಳಗಿನ ೯ ಘಂಟೆಗೇ ಕ್ರಾಂತಿಯ ಮೂಲಕ ಕೋರ್ಟು ಕೆಲಸ ನಡಿಸಬೇಕಾಗಿ ಡಿ| ಕಲೆಕ್ಟರರ ಕಡೆಗೆ ಅರ್ಜಿ ಮಾಡಿಕೊಂಡರು. ಆ ದಿನ ೯ ಘಂಟೆಗೆ ಕೋರ್ಟು ನಡೆಯಿತು. ಅರ್ಜಿದಾರರಿಗೆ ಮಧ್ಯಾಹ್ನಕ್ಕೆ ರಜೆ ಕೊಡಬೇಕೆಂಬುವರಿಂದಲೇ ಬೆಳಿಗ್ಗೆ ಕೋರ್ಟು ಸೇರಿತಾಗಿ ಅರ್ಜಿದಾರರು ಹೇಳುತ್ತಾರೆ. ಆ ದಿನ ಯಾವಾಗ ಕೋರ್ಟಾಯಿತೆಂದು ತಮಗೆ ನೆನಪಿಲ್ಲವಾಗಿ ಡಿ| ಕಲೆಕ್ಟರರು ಬರೆಯುತ್ತಾರೆ. ಅರ್ಜಿದಾರರ ಹೇಳಿಕೆಯು ಸತ್ಯವೆಂದು ನಾವು ತಿಳಿಯುತ್ತೇವೆ. ಡಿ| ಕಲೆಕ್ಟರರು ಅರ್ಜಿಯಂತೆ ನ್ಯಾಯ ಕೊಡದಿದ್ದಷ್ಟು ತಪ್ಪು. ಸಂಜೆ ವಿ.ರಿಯುವದಕ್ಕಾಗಿ ಕ್ರಾಂತಿಯ ನವ ಹೇಳೋಣಾಗಿತ್ತೆಂಬ ವಿಧಾನವು ಅಧಿಕಪ್ರಸಂಗತನದ್ದು. ಇಷ್ಟಕ್ಕಾಗಿ ಶಿಕ್ಷಿಸಿದಿನಂಥ ಕಠೋರ ಶಿಕ್ಷೆಯನ್ನು ವಿಧಿಸುವದು ತರವಲ್ಲ. ತಮ್ಮ ಕೋರ್ಟಿನಲ್ಲಿ ಅಸಭ್ಯವರ್ತನ ಮಾಡಿದರಾಗಿಯೂ, ಬೆದರಿಸಿದರಾಗಿಯೂ, ಡಿ| ಕಲೆಕ್ಟರರು ನಮಗೆ ಬರೆಯುತ್ತಾರೆ ಆದರೆ, ಈ ವಿಧಾನಗಳಿಗೆ ರೆಕಾರ್ಡಿನಲ್ಲಿ ಏನೂ ಆಧಾರ ದೊರೆಯುವದಿಲ್ಲ. ನ್ಯಾಯದೀಶರು ಅರ್ಜಿಯಂತು ಸಭ್ಯ ಹಾಗು ಆದರಯುಕ್ತ ಭಾಷೆಯಲ್ಲಿ ಬರೆಯೋಣಾಗಿದೆ. ಇತ್ಯಾದಿ ಬರೆದು ಡಿ| ಮೆಜಿಸ್ಟ್ರೇಟರಿಗೆ ರಾಮನ ಕೋಳಿಯ ವಿಷಯವನ್ನು ಶೀಘ್ರವೇ ತಪಾಸ ಮಾಡಿ ಅಪರಾಧಿಗಳನ್ನು ಕಂಡುಹಿಡಿದು ನ್ಯಾಯಾಸನದಲ್ಲಿ ವಿಚಾರ ಣಿಸುವ ಯೋಜನೆಯಾಗಬೇಕಾಗಿ ಹುಕುಮು ಮಾಡಿದ್ದಾರೆ.

ಮುಂಬಯಿ ಕಾಯಿದೆ ಕೌನ್ಸಿಲಿನ ಹಕೀಕತು.

ಮುಂಬಯಿ ನ್ಯಾಯವಿಧಾಯಕ ಸಭೆಯ ೨ ನೇ ಅಧಿವೇಶನವು ಸೋಮವಾರ ಅಪರಾನ್ಹ ೨ ಘಂಟೆಗೆ ಪುಣೆಯ ಕೌನ್ಸಿಲು ಸಭಾಮಂದಿರದಲ್ಲಿ ಸೇರಿತು. ನಾ। ಗವ್ಹರ್ನರ ದೊರೆಗಳು ೪ ಸವಾರರಿಗಳಿಂದ ಎಳೆಯಲ್ಪಟ್ಟ ರಥದಲ್ಲಿ ಸಂಪ್ರದಾಯದಂತೆ ಕುಳಿತು, ಛತ್ರಚಾಮರದಂಥ ಸೇವಕರ ಸೇವೆ ಸ್ವೀಕರಿಸುತ್ತ ಸಭಾಮಂದಿರದ ಹೆಬ್ಬಾಗಿಲಲ್ಲಿ ಬಂದಿಳಿದರು. ಪರಿಪಾಠದಂತೆ ಅಧ್ಯಕ್ಷರು ಹೆಬ್ಬಾಗಿಲ ಬಳಿ ಸ್ವಾಗತವನ್ನಿತ್ತರು; ಸಾಮಾನ್ಯರು ಆನಂದಾತಿಶಯದಿಂದ ಕರತಾಡನದ ಮಧ್ಯಘೋಷ ಮಾಡಿದರು, ಗವ್ಹರ್ನರರು ಉತ್ಸಾಹದ ಮೇಲೆ ವಿರಾಜಮಾನರಾದರು. ದೊರೆಗಳ ಮುಖಕಮಲವು ಬಾರ್ಡೋಲಿಯ ಸತ್ಯಾಗ್ರಹ ಸೂರ್ಯನ ಪ್ರತಾಪದಿಂದಲೋ ಏನೋ, ಸ್ವಲ್ಪ ಕಂದುಹೋದಂತೆ ತೋರುತ್ತಿತ್ತು. ವಿದ್ಯಾರ್ಥಿಗಳು ಅಂದು ಬಾರ್ಡೋಲಿಯ ದಿನವನ್ನಾಚರಿಸಿ, ಶ್ರೀ ನರಿಮಾನಾದಿ ಕೌನ್ಸಿಲು ಸಭಾಸದರೊಂದಿಗೆ ಮೆರವಣಿಗೆಯನ್ನು ಹೊರಡಿಸಿ ದೊರೆಗಳ ಆಗಮನವಾಗುವ ಮಾರ್ಗದ ಬದಿ ಸಾಲಾಗಿ ಅಚ್ಚುಕಟ್ಟಾಗಿ ನಿಂತಿದ್ದರು. ಸಾಹೇಬರ ದರ್ಶನವಾದೊಡನೆ "ವಲ್ಲಭಭಾಯಿ ಪಟೇಲರಿಗೆ ಜಯವಾಗಲಿ," "ಸತ್ಯಾಗ್ರಹಕ್ಕೆ ಜಯವಾಗಲಿ" ಎಂಬ ಜಯಘೋಷ ಮಾಡಿ, ಗವ್ಹರ್ನರರಿಗೆ ಧಿಕ್ಕಾರ, ಧಿಕ್ಕಾರವೆಂದು ಸಂಬೋಧಿಸಿದರು. ಜಯಜಯಕಾರದಿಂದಲೂ, ಧಿಕ್ಕಾರದಿಂದಲೂ ದೊರೆಗಳ ಮುಖಚರ್ಯೆಯು ಬಾಡಿ ಇಳಿದಿತ್ತೆಂದು ಕೆಲವರ ಅಭಿಪ್ರಾಯ. ಗವ್ಹರ್ನರರ ಭಾಷಣವು ದೀರ್ಘಕಾಲ ಪರ್ಯಂತರ ನಡೆದಿತ್ತು. ಬಾರ್ಡೋಲಿ ಸತ್ಯಾಗ್ರಹವನ್ನು ದ್ದೇಶಿಸಿ ಈ ಭಾಷಣವಾಯಿತು. ಆ ಸತ್ಯಾಗ್ರಹಕ್ಕೆ ಜರೆಯೋಣಾಗಿತ್ತು; ನಿಂದಿಸೋಣಾಗಿತ್ತು. ಸತ್ಯಾಗ್ರಹ ಸಂಗ್ರಾಮವನ್ನು ನಿಲ್ಲಿಸದಿದ್ದರೆ, ಸಂಪೂರ್ಣ ಶಕ್ತಿಯನ್ನು ಪ್ರಯೋಗಿಸಿ ಸಂಗ್ರಾಮವನ್ನು ಅಡಗಿಸುವದಕ್ಕೆ ಹಿಂದುಸ್ಥಾನ ಬ್ರಿಟಿಶ ಸರಕಾರದ ಸಿದ್ಧತೆ ಇರುತ್ತದಾಗಿ ದೊರೆಗಳು ಬೆದರಿಕೆಯನ್ನೊಡ್ಡಿದರು. ಈ ಪ್ರಕಾರದ ಭಾಷಣಕ್ಕೆ ಹಿಂದುಸ್ಥಾನ ಸರಕಾರ ಹಾಗು ಸಾಮ್ರಾಜ್ಯ ಸರಕಾರದಿಂದ ಸಮಂಜಾರೀಗಿ ಬಂದಿತಂತೆ. ದೊರೆಗಳು ಸ್ವರಕ ಪತ್ರಿಕರಲ್ಲಿ ನಾವು ಹೇಳಿದ ಕಠೋರಗಳು ಆ ಜಿಲ್ಹೆಯ ಪ್ರತಿನಿಧಿಗಳಿಗೆ ಮಾನ್ಯವಾಗುವದೋ ಹೇಗೆ? ಎಂಬುದನ್ನು ವಿಚಾರಿಸಿ ತಿಳಿಸಲಿಕ್ಕೆ ೧೪ ದಿವಸಗಳ ನೋಟೀಸ ಕೊಟ್ಟು ವೈಭವದಿಂದ ಮರಳಿದರು. ಮರಳುವಾಗಲೂ ದೊರೆಗಳು ಖಿನ್ನಮನಸ್ಕರಾಗಿದ್ದರು. ದೊರೆಗಳ ವ್ಯಾಖ್ಯಾನದಿಂದ ಉರಿಯುವ ಹುಣ್ಣಿಗೆ ಉಪ್ಪನ್ನು ತುಂಬಿದಂತಾಗಿದೆ. ಗವ್ಹರ್ನರರ ಭಾಷಣವನ್ನು ನಿಷೇಧಿಸಿ ಸಭಾಸದರು ಕ್ಷೋಭೆಯನ್ನು ಪ್ರಕಟಿಸಿದ್ದಾರೆ. ಬ್ರಾಹ್ಮಣೇತರರೂ, ಗವ್ಹರ್ನರರ ಭಾಷಣವನ್ನು ನಿಷೇಧಿಸಿದ್ದಾರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ.

ಸಿಟಿ ಮ್ಯುನಿಸಿಪಾಲಿಟಿ ಕಾಯಿದೆಯಲ್ಲಿ ತಿದ್ದುಪಡಿ ಮಾಡಿ ಮ್ಯುನಿಸಿಪಾಲಿಟಿಗಳು ನಡಿಸುವ ಶಾಲೆಗಳ ಮೇಲೆ ಸರಕಾರದ ಅಂಕೆಯಿರಬೇಕೆಂಬ ಕಾಯಿದೆಯನ್ನು ಸರಕಾರವು ಲೋಕಮತಕ್ಕೆ ಬೆದರಿ ಹಿಂತೆಗೆದುಕೊಂಡಿತು. ದಸ್ತೈವಜುಗಳನ್ನು ಛಾಯಾಚಿತ್ರ ತೆಗೆದು ರಜಿಸ್ಟ್ರಿ ಮಾಡಬೇಕೆಂಬ ಕಾಯಿದೆಯನ್ನು ಸಹ ಹಿಂತೆಗೆದುಕೊಳ್ಳಲಾಗಿದೆ.

ಚಿಕ್ಕ ಹೊಲಗಳನ್ನು ಪುನರ್ಘಟಿಸುವ ಕಾನೂನನ್ನು ಮನ್ನಿಸಿಕೊಳ್ಳುವದಕ್ಕಾಗಿ ಸರ್ ಚುನಿಲಾಲ ಮೆಹೆತಾರವರು ಬಹು ಪ್ರಯತ್ನಪಟ್ಟರು. ೩ ದಿವಸಗಳ ವರೆಗೆ ಸಮಯವಿದ್ದರೂ ಈ ವಿಷಯ ವಿಚಾರಕ್ಕೆ ಕೊಳ್ಳಲಿಲ್ಲ. ಸರ್ಕಾರಕ್ಕೆ ಸಂಕಷ್ಟ-ವಿಪತ್ತುಗಳಲ್ಲಿ ಆಶ್ರಯ ಕೊಡುವ ಸಿಂಧ ಪ್ರಾಂತದ ಸಭಾಸದರು ಬಂದುಮುಟ್ಟಲಿಲ್ಲ. ಆದರಿಂದ ಈ ಕಾನೂನು ಕೌನ್ಸಿಲಿನ ಮುಂದೆ ಬುಧವಾರ ತನಕ ಬರಲಿಲ್ಲ. ಬುಧವಾರಕ್ಕೆ ಪುಣೆಯ ರೇ ಮಾರ್ಕೇಟಿನಲ್ಲಿ ಶ್ರೀ ವಿಠ್ಠಲ ರಾಮಜಿ ಶಿಂಧೆಯವರ ಅಧ್ಯಕ್ಷತೆಯಲ್ಲಿ ಒಕ್ಕಲಿಗರ ಪ್ರಚಂಡ ಸಭೆಯಾಯಿತು. ಈ ಸಭೆಗೆ ಶ್ರೀ ನರಸೋಪಂತ ಕೇಳಕರ, ಶಂಕರ ಶ್ರೀಕೃಷ್ಣ ದೇವ, ಗಂಗಾಧರರಾವ ದೇಶಪಾಂಡೇ ಮೊದಲಾದ ಮುಂದಾಳುಗಳು ಸೇರಿದ್ದರು. ೨೫ ಸಾವಿರ ಒಕ್ಕಲಿಗ ಪ್ರಮುಖರು ಆ ದಿನ ರೇ ಮಾರ್ಕೇಟಿನಿಂದ ಕೌನ್ಸಿಲು ಸಭಾಮಂದಿರದ ತನಕ ಜನಸ್ತೋಮದೊಡನೆ ಮೆರವಣಿಗೆಯಿಂದ ಬಂದು ಕೌನ್ಸಿಲು ಮೆಂಬರರಿಗೆ ಬಂದು ಹೊರೆಭಾರದಷ್ಟು ಭಾರವುಳ್ಳ ಮನವಿಗಳನ್ನು ಸಮರ್ಪಿಸಿದರು. ಆ ಮಾನವಿಗಳನ್ನೆಲ್ಲ ಕೌನ್ಸಿಲು ಸಭಾಸದರಾದ ಶ್ರೀ ಚಂದ್ರಚೂಡರು ಕೌನ್ಸಿಲಿಗೆ ಅರ್ಪಿಸಿದರು. ಈ ಕಾನೂನಿನ ಜನಕರಾದ ಸರ್ ಚುನಿಲಾಲರು ತಮ್ಮ ಬೆಂಬಲಕ್ಕೆ ಬೇಕಾಯಿತು ತಜ್ಞರೆಂದು ನಾಮದಾರ ಬಿ. ಎಸ್. ಕಾಮತರವರಿಗೆ ನೇಮಿಸಿಕೊಂಡರು. ಆದರೂ ಸಿಂಧ ಪ್ರಾಂತದ ಸಭಾಸದರು ಸಕಾಲದಲ್ಲಿ ಬಂದು ತಲ್ಪಲಿಲ್ಲ. ಅವರಲ್ಲಿ ಇತ್ತಂಡಗಳಾಗಿವೆ. ಆದರಿಂದ ಸರ್ ಚುನಿಲಾಲರವರು ಈ ಕಾನೂನಿನ ವಿಚಾರವನ್ನು ಈ ಅಧಿವೇಶನದಲ್ಲಿ ತರಲಿಲ್ಲ. ಈ ಕಾನೂನಿಗೆ ೧೫೦೦ ದುರುಸ್ತಿಯ ಸೂಚನೆಗಳು ಬಂದಿದ್ದವು. ತಿದ್ದುಪಡಿಯಾದ ಕಾನೂನಿನ ಮೇಲೆ ಲೋಕಮತವನ್ನು ತಿಳಕೊಳ್ಳುವದಕ್ಕಾಗಿ ಈ ಅವಧಿ ಕೊಡೋಣಾಗಿರುವದಂತೆ. ಮಹಾರಾಷ್ಟ್ರ ಹಾಗು ಗುಜರಾಥ ಪ್ರಾಂತಗಳೊಳಗೆ ಚಿಕ್ಕ ಹೊಲಗಳ ಕಾನೂನಿನ ಕುರಿತು ವಿಶೇಷ ಸಂಚಿಕೆಗಳೂ ಹೊರಡಿಸಲ್ಪಟ್ಟವು. ಹಳ್ಳಿ-ಪಳ್ಳಿಗಳಲ್ಲಿ ಈ ಸಂಚಿಕೆಗಳು ಪುಕ್ಕಟೆಯಾಗಿ ಹಂಚಲ್ಪಟ್ಟವು. ಮಹಾರಾಷ್ಟ್ರ-ಗುಜರಾಥ ಪ್ರಾಂತಗಳಿಂದ ಬಂದ ಅರ್ಜಿಗಳ ರಾಶಿ ಬಿದ್ದಿದೆ. ಆ ಮಾನದಿಂದ ಯಾಕೆ-ಯಾವದೇ ಮಾನದಿಂದ ವಿಚಾರಿಸಿದರೂ ನಮ್ಮ ಕರ್ನಾಟಕ ಪ್ರಾಂತದಿಂದ ಹೋದ ಅರ್ಜಿಗಳ ಮಾನ ತೀರ ಕಡಿಮೆ.

— ಹಿಂದುಸ್ಥಾನ ಸರಕಾರವು ಮಳೆ - ಗಾಳಿ — ತುಫಾನು ಇವುಗಳ ಭವಿಷ್ಯ ಹೇಳುವ ಯಂತ್ರವನ್ನಿಡುವ ಕಟ್ಟಡವನ್ನೊಂದು ಪುಣೆಯಲ್ಲಿ ನಿರ್ಮಿಸಿದ್ದಾರೆ. ಕಟ್ಟಡವು ರಮಣೀಯವಾಗಿದೆ; ದುಬಾರಿ ಹಾಗೇ ಜಾಸ್ತಿಯಾಗಿದೆ; ಲಕ್ಷಾವಧಿ ರೂಪಾಯಿ ಖರ್ಚು!

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೇಕೆಟ್‌ಗಳಿಗೆ ರೂ. ೬	ತೆಂಗಿನ ಗಿಡ ೧೨ ಕ್ಕೆ ... ...೧೨ರಿಂದ ೧೬
... (ಎಕಲೋರ್ಟಮೆಂಟು) ೨೫ ... ... ೪	೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥	ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕೋತ್ರಿ
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪॥	ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಜಪುರಿ,
ಸಾಟಿ ... ೧೩ ,, ,, ೨॥	ಪನ್ನೇರಲ, ಕಂಚಿಕಾಯಿ, ಲಕ್ಷ್ಮಣಫಲ,
ಸಿಲ್ವರ ಓಕ ೧ ರತ್ತಲಿಗೆ ... ,, ೨॥	ಈ ಎಲ್ಲ ೧೨ ಗಿಡಗಳಿಗೆ ರೂ. ೬.
ಬೆಂಗಳೂರ ಬಿಳೀ ಮೂಲಂಗಿ ಬೀಜ ರತ್ತಲಿಗೆ... ೨॥	ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.
ಶಿರವೆ ಸೊಪ್ಪು ೧ ರತ್ತಲಿಗೆ ೪	ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಈ ಪುರೆ ಮಸಾಲಿ ಬೀಜ ೧ ರತ್ತಲಿಗೆ ... ೩	ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೨೪
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨	ವಾಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ... ೫
ಚಲೋ ಕ್ರೋಟನ್ಸ ಗಿಡ ೧೨ ಕ್ಕೆ ... ೩ ರಿಂದ ೧೨	೧ ಬುಟ್ಟಿ ತುಂಬ ತರಕಾರಿ ...೫ ರಿಂದ ೬
ಅಂದವಾದ ಹೂ ಗಿಡ (ಜರೇನಿಯಂ) ೧೨ ಕ್ಕೆ ... ೩ ರಿಂದ ೬	ಕ್ರಿಸಾಂತಿಮಮ್ ಗಿಡ ೧೦೦ ಕ್ಕೆ ... ೧೨
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೩ ರಿಂದ ೧೨	ಡೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ...೧॥ ಯಿಂದ ೩	ನೆರಳು ಕೊಡುವ ಕಾಳೆ ಎಲೆಯ ಜಾತಿಬಲ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨	ಗಡ್ಡೆಗಳು ೧೨ ಕ್ಕೆ ರೂ. ೩ ರಿಂದ ೯
ಕಟ್ಟದ ಮಾದರಿ ಗಿಡಗಳು ೧೨ ಕ್ಕೆ ... ೧೦ ರಿಂದ ೧೨	ಎರೋಕೇರಿಯಾ ಕುಕ್ಕಿ ೧೨ ಗಿಡಗಳಿಗೆ ರೂ. ೬—೧೨—೨೪
ಸೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨	ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:— ಆರ್ಡರಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ್,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, **ಬೆಂಗಳೂರು ಸಿಟಿ.**

ಕಾನಡಾ ವೃತ್ತ.

ವಿಭವ ಸಂ ॥ ಶ್ರಾವಣ ಶು ೧೩ ಸೋಮವಾರ

ಶಂಖಾನ್ ದಧ್ಮುಃ॥

ಕಳೆದ ಸೋಮವಾರ ಬಾರ್ಡೋಲಿಯ ಸತ್ಯಾಗ್ರಹ ಸಮರಕ್ಕೆ ಹೊಸ ಕಳೆ ಏರಿತೆ. ಪ್ರಾಂತಾಧಿಪರಾದ ವಿಲ್ಸನ್ ದೊರೆಗಳೂ, ಬಾರ್ಡೋಲಿಯ ಸರದಾರರಾದ ಶ್ರೀ। ವಲ್ಲಭಭಾಯಿ ಪಟೇಲರೂ ಸೂರತ ಪಟ್ಟಣದಲ್ಲಿ ನಡೆಸಿದ ಶಿಷ್ಟಾಯಿಯ ಪ್ರಯತ್ನಗಳು ವಿಫಲವಾದದ್ದು ಸರ್ವಶ್ರುತವಿದೆ ಅದೂ ಒಂದು ಆಯಿತು. ಮಾನವ ಪ್ರಾಣಿಯು ಆಶಾವಾದಿಯಲ್ಲವೇ? ಅದರಂತೆ ವಿಲ್ಸನ್ ದೊರೆಗಳು ಶಿಷ್ಟಾಯಿಯನ್ನು ಮುರಿಕೊಂಡು ಹೋದಾಗ್ಯೂ, ತಕ್ಕ ವಿಚಾರದೊಡನೆ ಆಲೋಚಿಸಿ ಅದಕ್ಕಾಗಿ ಪಟ್ಟಿಗೆ ಪ್ರಜೆಗಳ ಕ್ಷೇಮಪಾಲನಕ್ಕಾಗಿ ಪ್ರಯತ್ನಿಸುವರೆಂದು ವಿಲ್ಸನ್ ದೊರೆಗಳ ಸ್ವಭಾವ ಬಲ್ಲವರು ಅನುಮಾನಿಸಿದ್ದರು! ಇನ್ನೊಂದು ಕಾರಣವಿತ್ತು ವಿಲ್ಸನ್ ದೊರೆಗಳ ಅಧಿಕಾರದಶೆಯು ಈಗ ಸಮಾಪ್ತವಾಗುತ್ತಬಂದಿದೆ ಇಂಥ ಸಮಯ ಬಾರ್ಡೋಲಿ ಸತ್ಯಾಗ್ರಹವನ್ನು ನಡಿಸುತ್ತ ಅವರು ಸ್ವದೇಶಕ್ಕೆ ಮರಳಿ ತೆರಳಲ್ಲವೆಂದೂ ಕೆಲವರ ಅಭಿಪ್ರಾಯವಾಗಿತ್ತು. ಕಳೆದ ಸೋಮವಾರ ದಿವಸ ಕಾಯಿದೆ ಕೌನ್ಸಿಲಿನಲ್ಲಿ ಅವರು ಭಾಷಣ ಮಾಡುವಾಗ ತಮ್ಮ ಶರ್ತುಗಳನ್ನು ಕೆಲ ಮಟ್ಟಿಗೆ ಶಿಥಿಲಗೊಳಿಸಿ ಪ್ರಜಾಮತದವರಿಗೆ ಅನುಕೂಲರಾಗಿ ನಡೆಯಲು ಪ್ರಯತ್ನಿಸುವರೆಂದು ಅಂದಾಜಿತ್ತು. ಆ ಅಂದಾಜೆಲ್ಲ ಕಳೆದ ಸೋಮವಾರ ಉತ್ತಿತ್ತಾಗಿ, ಸರಕಾರವು ಪ್ರಜೆಗಳ ಮೇಲೆ ಯುದ್ಧ ಹೂಡಿರುವದಾಗಿ ಸಷ್ಟ ಪ್ರಕಟವಾಗಿದೆ.

ಸೂರತ ಶಿಷ್ಟಾಯಿಯಲ್ಲಿ ಶ್ರೀ ವಲ್ಲಭಭಾಯಿಯವರ ಬಳಿ ಹೇಳಿದ ಶರ್ತುಗಳನ್ನು ಪ್ರಜೆಗಳು ಪಾಲಿಸಿ ಹಳೇ ಹೊಸ ತೀರ್ವೆಗಳ ವ್ಯವಸ್ಥೆ ಮಾಡದಿದ್ದರೆ ಸರಕಾರವು ತನ್ನ ಅಧಿಕಾರವನ್ನು ಪ್ರಸ್ಥಾಪಿಸುವದಕ್ಕಾಗಿ ಕಾಯಿದೆಯಂತೆ ಶಕ್ಯವಿದ್ದ ಉಪಾಯಗಳನ್ನು ಕೈಕೊಳ್ಳುವದಾಗಿ ಮುಂಜಾಗ್ರತೆ ಕೊಟ್ಟಿದ್ದಾರೆ. ವಿಚಾರ ಮಾಡುವದಕ್ಕಾಗಿ ಸತ್ಯಾಗ್ರಹಿಗಳಿಗೂ, ಸತ್ಯಾಗ್ರಹ ಪಕ್ಷಪಾತಿಗಳಿಗೂ ೧೪ ದಿನಗಳ ಅವಧಿ ಕೊಟ್ಟಿದ್ದಾರೆ. ಈ ಅವಧಿಯಲ್ಲಿ ಸತ್ಯಾಗ್ರಹಿಗಳು ಸರಕಾರಕ್ಕೆ ಶರಣಾಗತರಾಗದಿದ್ದರೆ, ಬ್ರಿಟಿಶ ರಾಜ್ಯಾಧಿಕಾರವನ್ನು ಪ್ರಸ್ಥಾಪಿಸುವದಕ್ಕೆ ಸರಕಾರವು ಶಿಕ್ಷಪ್ರಯತ್ನ ಮಾಡುವದು. ಸಾಮ್ರಾಜ್ಯ ಸರಕಾರವೂ ಬಾರ್ಡೋಲಿಯೊಳಗಿನ ಈ ಚಳವಳಿಯನ್ನು ನಷ್ಟಪಡಿಸುವದಕ್ಕಾಗಿ ಅವಶ್ಯವಿದ್ದ ಉಪಾಯಗಳನ್ನು ಕೈಕೊಳ್ಳಲು ಆಜ್ಞಾಪಿಸಿರುವದಾಗಿ ಪ್ರಕಟವಾಗಿದೆ. ಪುಣೆಯ ಪೋಲೀಸ ಸುಪರಿಂಟೆಂಡೆಂಟರಿಗೆ ಸೂರತಕ್ಕೆ ವರ್ಗವಾಗಿದೆ ಅಹಮದಾಬಾದದ ಕಲೆಕ್ಟರರೂ ಸೂರತಕ್ಕೆ ಕಳುಹಿದ್ದಾರೆ. ಹೀಗೆ ಇಡೀ ಸಾಮ್ರಾಜ್ಯ ಸರಕಾರವು ಬಾರ್ಡೋಲಿಯ ಪ್ರಜೆಗಳಿಗೆ ಬಾರ್ಡೋಲಿಯ ರಣರಂಗದಲ್ಲಿ ಇದಿರಾಗಲು ಟೊಂಕ ಕಟ್ಟಿದೆ.

ಸರಕಾರದ ಅನುಶಾಸನಗಳನ್ನೆಲ್ಲ ಸೈರಿಸಲು ಬಾರ್ಡೋಲಿಯ ಪ್ರಜೆಗಳು ಈ ಮುಂಚೆಯೇ ಸಿದ್ಧರಿದ್ದಾರೆ ಸಾಧಕ ಬಾಧಕ ಸಂಗತಿಗಳನ್ನೆಲ್ಲ ಆಲೋಚಿಸಿ ಅವರು ಈ ಪ್ರಯತ್ನಕ್ಕೆ ಕೈಹಚ್ಚಿದ್ದಾರೆ. ಇದನ್ನು ಸ್ವತಃ ವಿಲ್ಸನ್ ದೊರೆಗಳೇ ತಮ್ಮ ಭಾಷಣದಲ್ಲಿ ಒಪ್ಪಿದ್ದಾರೆ ಆದರೆ, ಅವರು ಮಾಡಿದ ಒಂದು ವಿಧಾನವನ್ನು ಚರ್ಚಿಸಬೇಕಾಗಿದೆ ಬಾರ್ಡೋಲಿಯ ಪ್ರಕರಣದಲ್ಲಿ ಮುಖ್ಯ ವಿಷಯವೆಂದು ಅವರು ಹೇಳಿದ್ದೇನಂದರೆ — “ಬಾದಶಹರ ರಾಜ್ಯದಲ್ಲಿ ಬಾದಶಹರ ಆಜ್ಞೆ ನಡೆಯಬೇಕೋ, ಅಥವಾ ಇತರೇ ಜನರ ಆಜ್ಞೆ ನಡೆಯಬೇಕೋ?” ಈ ವಿಧಾನವು ತೀರ ನಿರಾಧಾರವಾದದ್ದು. ಬಾದಶಹರೆಂದರೆ ಯಾರು? ಅವರು ಕೊಟ್ಟ ಹುಕುಮು ಯಾವದು? ಸೆಟ್ಲಮೆಂಟ ಕಮೀಶನರಾದ ಮಿ। ಎಂಡರಸನ್‌ರವರು ಬಾದಶಹರೇ? ಡಿ। ಡೆ। ಕಲೆಕ್ಟರರಾದ ಮಿ। ಆಲ್ಮೋಲಾರವರು ಬಾದಶಹರೇ? ಜಪ್ತಿಯ ಕ್ರಮ ನಡಿಸುವ ಪಠಾಣರು ಬಾದಶಹರೇ? ಅದಿರಲಿ. ಸ್ವತಃ ವಿಲ್ಸನ್ ದೊರೆಗಳು ಬಾದಶಹರೆಂದು ಸಂಬೋಧಿಸಿಕೊಳ್ಳುತ್ತಾರೆಯೋ? ಕಾಯಿದೆಯಂತೆ ರಾಜ್ಯವನ್ನು ಪರಿಪಾಲನ ಮಾಡುವದಕ್ಕಾಗಿ ಬಾದಶಹರು ಅಧಿಕಾರಿಗಳನ್ನು ನೇಮಿಸುತ್ತಾರೆ. ಆ ಅಧಿಕಾರಿಗಳು ಕಾಯಿದೆಯಂತೆ ವರ್ತಿಸದೆ ಸ್ವೇಚ್ಛೆಯಿಂದ ನಡೆದದ್ದರಿಂದಲೇ ಬಾರ್ಡೋಲಿಯಲ್ಲಿ ಸತ್ಯಾಗ್ರಹ ಸಮರವು ಕೈಕೊಳ್ಳಲ್ಪಟ್ಟಿತು. ಬಾದಶಹರಿಗೆ ಸಲ್ಲತಕ್ಕ ರಾಜಾರ್ಥವನ್ನು ತೆರಬಾರದೆಂದು ಬಾರ್ಡೋಲಿಯ ಪ್ರಜೆಗಳ ಹೇಳಿಕೆಯಿಲ್ಲ, ಬಾದಶಹರ ರಾಜ್ಯಾಧಿಕಾರವನ್ನು ಅವರು ಅಲ್ಲಗಳೆಯುವದಿಲ್ಲ. ಕಾಯಿದೆಯ ಕ್ರಮಕ್ಕನುಸರಿಸಿ ಬಾರ್ಡೋಲಿಯ ಪರಿಸ್ಥಿತಿಯು ವಿಚಾರವಾಗದೆ, ಅಕ್ರಮದಿಂದ ತೀರ್ವೆ ಪರಿಸೋಧನೆಯಾಯಿತೆಂದು ಬಾರ್ಡೋಲಿಯ ಪ್ರಜೆಗಳು ಸಾರಿಸಾರಿ ಹೇಳಿ, ಅದಕ್ಕೆಲ್ಲ ಅಧಿಕಾರಿಗಳು ಮದಾಂಧತೆಯಿಂದ ಅಲಕ್ಷ್ಯ ಮಾಡಿದ ಬಳಿಕ, ಅನ್ಯಾಯದಿಂದ ಹೇರಿದ ಕರವನ್ನು ಅಲ್ಲಗಳೆಯುವ ಪ್ರಜಾಧಿಕಾರವು ಅಕ್ರಿಯಿಸೋಣವಾಗಿದೆ. ಈಗಲೂ ಹಳೇ ಕರ ತೆರಲು ಅವರ ಅಕ್ಷೇಪವಿಲ್ಲ, ಕಾಯಿದೆಯಂತೆ ಚೌಕಸಿ ನಡಿಸಿ ಕರ ಏರಿದರೆ ಅದನ್ನು ತೆರಲಿಕ್ಕೂ ಅವರ ತಯಾರಿಯಿದೆ. ಹೀಗಿರಲು, ಬಾದಶಹರ ರಾಜ್ಯವನ್ನೇ ಬಾರ್ಡೋಲಿಯವರು ಧಿಕ್ಕರಿಸುತ್ತಾರೆಂದು ಹುಲಿಯನ್ನೆಬ್ಬಿಸುವ ವಿಧಾನ ಮಾಡಿದ್ದು ಯಾರ ಕಣ್ಣಿಗೆ ಧೂಳಿ ಹಾಕುವ ಬಗ್ಗೆ? ಇಂಥ ವಿಧಾನಗಳಿಂದ ವಿಲ್ಸನ್ ದೊರೆಗಳು ಬಾರ್ಡೋಲಿ ಪಕ್ಷಪಾತಿಗಳಿಗೆ ರಾಜದ್ರೋಹದ ಸದರಿನಲ್ಲಿ ಸೇರಿಸಿ ಕಷ್ಟ-ನಷ್ಟಕ್ಕೆ ಗುರಿ ಮಾಡುವ ವಿಚಾರದಲ್ಲಿದ್ದಾರೆಂದು ಜನಸಾಮಾನ್ಯರು ತಿಳಿದರೆ, ಅಯಥಾರ್ಥವಾದೀತೇ!

ಬಾರ್ಡೋಲಿಯ ಪ್ರಜೆಗಳ ಕಾದಾಟವು ರಾಜ್ಯಘಟನೆಗೆ ವಿಘಾತಕವಂತೆ; ಪ್ರಜಾಧಿಕಾರವನ್ನು ಬಜಾಯಿಸುವ ಕ್ರಮವಲ್ಲವಂತೆ, ಬೇಕಾಯಿದೆಯದಂತೆ. ಇದೆಲ್ಲ ಪುರಾಣವನ್ನು ವಿಲ್ಸನ್ ದೊರೆಗಳಿಂದ ಜನರು ಕಲಿಯಬೇಕಾಗಿಲ್ಲ. ಕಾಯಿದೆಯ ಅರ್ಥವೂ, ಘಟನೆಯ ಕ್ರಮವೂ, ಪ್ರಜಾಧಿಕಾರದ ವ್ಯಾಪ್ತಿಯೂ ಈಗ ಸರ್ವರಿಗೂ ತಿಳಿದ ವಿಷಯ. ಸರಕಾರ ಮಾನ್ಯರೂ, ಕಾಯಿದೆಪಂಡಿತರೂ, ಬಾರ್ಡೋಲಿಯ ಸತ್ಯಾಗ್ರಹಕ್ಕೆ ಈ ಹಿಂದೆಯೇ ಬೆಂಬಲ ಕೊಟ್ಟು ವಿಲ್ಸನ್ ದೊರೆಗಳ ಸಾಧನೆಯನ್ನು ಖಂಡಿಸಿ ಬಿಟ್ಟಿದ್ದಾರೆ. ಅಧಿಕಾರಿಗಳು ಕಾಯಿದೆಯಂತೆ ನಡೆಯದಿದ್ದಾಗ, ಹಾಗೆ ನಡೆಯಲು ಪ್ರಜೆಗಳು ಪುನಃ ಪುನಃ ಹೇಳಿದಾಗ್ಯೂ ಒಪ್ಪದಿದ್ದಾಗ, ಅವರ ಸ್ವೇಚ್ಛಾಚಾರಕ್ಕೆ ಜಗ್ಗಲಾರದೆ ಇರುವದು ಪ್ರಜೆಗಳಿಗೆ ಸ್ವಾಭಾವಿಕ ಅಧಿಕಾರವುಂಟು. ಕಾಯಿದೆಯ ಪಾಲನಕ್ಕಾಗಿ ನೇಮಿಸಿದ ಅಧಿಕಾರಿಗಳಿಗೆ ಸರಿ ಮಾರ್ಗಕ್ಕೆ ತರುವ ಶಸ್ತ್ರವು ಇದೇ. ನಾಮದಾರ ಚಿಂತಾಮಣಿಗಳವರಂಥ ವಿಚಾರವಂತರೆಂದು ಖ್ಯಾತಿಗೊಂಡವರು ಸಹ ಬಾರ್ಡೋಲಿಗೆ ಬೆಂಬಲ ಕೊಟ್ಟ ಬಳಿಕ, ಬಾರ್ಡೋಲಿಯೊಳಗಿನ ಹೋರಾಟವು ಪರಿಶುದ್ಧವಾದದ್ದೆಂದು ನಮಗಿನ್ಯಾರೂ ಹೇಳುವದು ಬೇಡ. ಬೋರ್ಸದದಲ್ಲಿ ೪॥ ವರ್ಷಗಳ ಹಿಂದೆ ಅನ್ಯಾಯದಿಂದ ಪೋಲೀಸರನ್ನಿಟ್ಟು ಅವರ ಖರ್ಚನ್ನು ವಸೂಲ ಮಾಡುವ ಕ್ರಮ ನಡೆದಾಗ, ಅದನ್ನು ವಿಲ್ಸನ್ ದೊರೆಗಳೇ ವಿಚಾರಿಸಿ, ಆ ಅನ್ಯಾಯವನ್ನು ಸಂಪೂರ್ಣವಾಗಿ ಪರಿಮಾರ್ಜನ ಮಾಡಿದ್ದರು. ಆಗ ಬಾದಶಹರ ಆಜ್ಞೆಯ ಉಲ್ಲಂಘನವಾಗಲಿ, ಕಾಯಿದೆಯ ಉಲ್ಲಂಘನವಾಗಲಿ ವಿಲ್ಸನ್ ದೊರೆಗಳಿಗೆ ತೋರಲಿಲ್ಲ, ಈಗ ಮಾತ್ರ ಈ ಸಾಧನೆ ಏಕೆ? ಅದರ ಹೀಗೆ ಸಾಧಿಸಿದ ಹೊರತು ಬಾರ್ಡೋಲಿಯ ಮೇಲೆ ಶಸ್ತ್ರವನ್ನೆಸೆಯಲು ಉಪಾಯವಾಗುವದಿಲ್ಲ. ಅದರಿಂದ ಈ ಸಾಧನೆ ಮಾಡಲಾಗಿದೆ.

ಇರಲಿ. ೧೪ ದಿನಗಳೊಳಗೆ ತಮ್ಮ ಶರ್ತುಗಳನ್ನು ಪಾಲಿಸದಿದ್ದರೆ, ರಾಜ್ಯಾಧಿಕಾರದ ಪ್ರಸ್ಥಾಪನೆಗಾಗಿ ಸರಕಾರವು ಸಮಸ್ತ ಉಪಾಯಗಳನ್ನು ಕೈಕೊಳ್ಳುವದೆಂದು ವಿಲ್ಸನ್ ದೊರೆ

ಗಳು ಜಾಹೀರಪಡಿಸಿ, ಯುದ್ಧದ ಕಂಬವನ್ನು ಊದಿಬಿಟ್ಟಿದ್ದಾರೆ. ಅದಕ್ಕೆ ಪ್ರತಿಯಾಗಿ ಶ್ರೀ॥ ವಲ್ಲಭಭಾಯಿ ಪಟೇಲರವರೂ ಪ್ರತಿಕಂಬವನ್ನೂದಿದ್ದಾರೆ. ಹೀಗೆ ತುಮುಲ ಯುದ್ಧವಾಗುವ ಪೂರ್ವ ಸೂಚನೆಗಳಾಗಿವೆ. ಸರಕಾರದ ಪ್ರತಿಷ್ಠೆಯನ್ನು ಬಾರ್ಡೋಲಿಯಲ್ಲಿ ಪ್ರಸ್ಥಾಪಿಸುವದಕ್ಕಾಗಿ ಸರಕಾರವು ದಬ್ಬಾಳಿಕೆಯನ್ನು ಕೈಕೊಳ್ಳುವದು. ಯಾರ್‍ಯಾರ ಮೇಲೆ ಯಾವ್ಯಾವ ಸಮೂನೆಯಿಂದ ಯಾವ್ಯಾವ ಶಸ್ತ್ರಗಳ ವೃಷ್ಟಿಯಾಗುವದೆಂದು ಯಾರು ಹೇಳುವದು? ಬಾರ್ಡೋಲಿಯ ಪ್ರಜೆಗಳಂತು ಮುಂಚೆಯೇ ಟೊಂಕಕಟ್ಟಿ ನಿಂತಿದ್ದಾರೆ. ಸರಕಾರದ ಅತ್ಯಾಚಾರಗಳಲ್ಲಿಯೂ ಅವರು ಸ್ಥೈರ್ಯದಿಂದಲೂ, ಧೈರ್ಯದಿಂದಲೂ ನಡಕೊಂಡು ಅತ್ಯಾಚಾರಗಳನ್ನೆಲ್ಲ ಸೈರಿಸಿದ ಬಳಿಕ, ಮುಂದಿನ ದಬ್ಬಾಳಿಕೆಗೆ ಅವರು ಹೆದರಲಿಕ್ಕಿಲ್ಲವೆಂದು ಈಗಲೇ ನಾವು ಹೇಳಬಹುದು. ಬಾರ್ಡೋಲಿಯವರ ಸತ್ಯಾಗ್ರಹದ ವ್ಯಾಪ್ತಿಯು ಈಗ ಇಡೀ ಸೂರತ ಜಿಲ್ಹೆಯಲ್ಲಿ ಹಬ್ಬಿದೆ. ಇಡೀ ಜಿಲ್ಹೆಯಲ್ಲಿ ಮದ್ಯದ ಅಂಗಡಿಗಳ ಮಕ್ತೆ ಕೊಳ್ಳುವವರು ಸಿಗುವದು ದುರ್ಲಭವಾಗಿದೆ. ಮಕ್ತೆ ಕೊಂಡರೆ, ಮಾರಸಿಗಲಿಕ್ಕಿಲ್ಲವಾಗಿ ಈ ಮುಂಚೆಯೇ ಬಾರ್ಡೋಲಿ ತಾಲೂಕಿನ ಸರದಾರರಾದ ಶ್ರೀ॥ ವಲ್ಲಭಭಾಯಿ ಪಟೇಲರವರು ಪ್ರಕಟಣೆಯನ್ನು ಹೊರಡಿಸಿದ್ದಾರೆ. ರಾಜ-ಪ್ರಜೆಗಳೊಳಗಣ ಈ ಸಮರವು ಬೇಗನೇ ಶಾಂತವಾಗದಿದ್ದಲ್ಲಿ ಮುಂದೆ ಅಧಿಕಾರಿಗಳಿಗೂ, ಪ್ರಜೆಗಳಿಗೂ ತರತರದ ಕಷ್ಟಗಳು ಸಂಭವಿಸುವವು. ೧೪ ದಿನಗಳಲ್ಲಿ ೭ ದಿನಗಳು ಕಳೆದುಹೋದವು, ಇನ್ನು ೭ ದಿನಗಳು ಉಳಿದಿವೆ. ಅಷ್ಟು ಅವಧಿಯಲ್ಲಿ ವಿಲ್ಸನ್ ದೊರೆಗಳು ಸದ್ಬುದ್ಧಿ ತಳೆಯಬೇಕು. ಮತ್ತು ಪ್ರಜೆಗಳ ಕಷ್ಟ-ನಷ್ಟಗಳನ್ನು ಪರಿಹರಿಸಿ ಕೀರ್ತಿ ಪಡೆಯಬೇಕು. ಬೋರಸದ ಸತ್ಯಾಗ್ರಹವು ವಿಲ್ಸನ್ ದೊರೆಗಳ ಕಾರಕೀರ್ದಿಯ ಪ್ರಾರಂಭದಲ್ಲಿ ಉಂಟಾಗಿತ್ತು, ಬಾರ್ಡೋಲಿಯ ಸತ್ಯಾಗ್ರಹವು ಅಧಿಕಾರ ಸಮಾಪ್ತಿಯ ಸಮಯದಲ್ಲಿ ಉಂಟಾಗಿದೆ. ಬೋರಸದದಂತೆಯೇ ಬಾರ್ಡೋಲಿಯ ಸಮರವನ್ನು ಈಗಲಾದರೂ ವಿಲ್ಸನ್ ದೊರೆಗಳು ಶಾಂತಪಡಿಸಬಹುದಲ್ಲವೇ?

ಸ್ಫುಟ ಸೂಚನೆಗಳು.

೧ ಬ್ರಿಟಿಶರು ವರ್ತಕರು. ಇವರ ರಾಜ್ಯದಲ್ಲಿ ಲೆಖ್ಖ ಚೊಕ್ಕವಿರುತ್ತದೆಂದು ಲೋಕದಲ್ಲಿ ಖ್ಯಾತಿ. ಹಣದ ಕಪಾಸಿನ ಬಗ್ಗೆ ಅಧಿಕಾರಿಗಳ ಮೇಲೆ ಅಧಿಕಾರಿಗಳು ನೇಮಿಸಲ್ಪಟ್ಟಿದ್ದಾರೆ. ಮೇಲೆ ಲೆಕ್ಕ ಪರಿಶೋಧಕರೂ ನೇಮಿಸಲ್ಪಟ್ಟಿದ್ದಾರೆ. ಕಾಸು ಹೆಚ್ಚು-ಕಡಿಮೆಯಾದರೆ ಕಲ್ಲೋಲವೇಳುತ್ತದೆ. ಆದರೆ ಲಕ್ಷಾವಧಿ ರೂಪಾಯಿ ವಂಚನೆಯಾದರೂ ಹಿಮ್ಮೆಮ್ಮೆ ಪತ್ತೆಯಾಗುವದಿಲ್ಲ. ಮುಂಬಯಿ ಡೆವ್ಹಲಪಮೆಂಟ ಖಾತೆಯಲ್ಲಿ ಸರಕಾರಿ ಅಧಿಕಾರಿಗಳು ವಂಚನೆ ಮಾಡಿದ ಪ್ರಕಾರಗಳನ್ನು ಬೈಲಿಗೆಳೆಯಬೇಕಾದರೆ ಶ್ರೀ॥ ನರಿಮಾನರವರು ೧ ವರ್ಷದ ತನಕ ಆರೋಪಿಯಾಗಿ ನಿಲ್ಲಬೇಕಾಯಿತು. ಸದ್ಯಕ್ಕೆ ಹಿಂದುಸ್ಥಾನ ಸರಕಾರದ ದಿವಾಣಿ-ಲಷ್ಕರಿ-ಟಪಾಲು-ತಂತಿ-ಉಗಿಬಂಡಿ ಮುಂತಾದ ಖಾತೆಗಳ ೧೯೨೬-೨೭ ನೇ ಸಾಲಿನ ಲೆಕ್ಕವು ಪ್ರಕಟವಾಗಿದೆ. ಸರಕಾರದ ಲೆಕ್ಕ ಪರಿಶೋಧಕರೇ ಲೆಕ್ಕಗಳನ್ನು ಪರಿಶೋಧಿಸಿ ವಂಚನೆಯ ಪ್ರಕಾರಗಳನ್ನು ನಮೂದಿಸಿದ್ದಾರೆ. ಸರಕಾರವು ವಿಪರೀತ ಖರ್ಚ ಮಾಡಿ ಕಟ್ಟಿಸಿದ ಕಟ್ಟಡಗಳಿಗೆ ಸಿಗುವ ಬಾಡಿಗೆಯು ತೀರ ಅಲ್ಪ. ೨ ಲಕ್ಷ ರೂಪಾಯಿ ಖರ್ಚ ಮಾಡಿ ಗ್ವಾಲ್ಹೇರದಲ್ಲಿ ಒಂದು ಬಂಗಲೆ ಕಟ್ಟಲ್ಪಟ್ಟಿತು. ಕರ್ನಲನ ಖರ್ಚಿಗೆ ೧೨ ಸಾವಿರ ರೂಪಾಯಿ ಬೇಕು. ಆ ಮಾಸದಿಂದ ಬಾಡಿಗೆಯೇನು ಹುಟ್ಟುವದಿಲ್ಲ. ಒಬ್ಬ ಸಾಹೇಬರಿಗೆ ಹಣ ಕೊಡುವ ಅಧಿಕಾರವಿತ್ತು; ಆ ಸಾಹೇಬರು ತಮ್ಮ ಬಂಗಲೆ ಸುತ್ತುಮುತ್ತ ಭವ್ಯವಾದ ಪ್ರಾಕಾರ ಕಟ್ಟಿಸಿದರು. ಸರಕಾರದ ಮನ್ನಣೆ ಪಡೆಯಲಿಲ್ಲ. ಹಣ ತೆಗೆದು ಕೊಟ್ಟುಬಿಟ್ಟರು. ಉಗಿಬಂಡಿಯ ಅಧಿಕಾರಿಗಳ ಅಜಾಗ್ರತೆಯಿಂದ ೧ ಲಕ್ಷ ರೂಪಾಯಿಗಳು ಒಂದು ಕಂಪನಿಗೆ ಸೇರುವ ಪ್ರಸಂಗ ಬಂತು. ಆ ಕಂಪನಿಯು ಯಾರೊಬ್ಬರದೋ ಏನು? ಎಂಬ ತಿಳಿಯಲಿಲ್ಲ. ಕಂಟ್ರಾಕ್ಟರರ ವಂಚನೆಯಿಂದ ಬಂಗಾಲ-ನಾಗಪುರ ರೇಲ್ವೆ ಲೆಕ್ಕಕ್ಕೆ ೫ ಲಕ್ಷದ ವಂಚನೆಯಾಯಿತು. ಟಪಾಲ ಆಫೀಸಿನಲ್ಲಿ ೪೫೯ ವಂಚನೆ ಪ್ರಕರಣಗಳಿಂದ ರೂ ೧೧೨೦೦೦ ಕ್ಕೆ ಮಿಕ್ಕ ನಷ್ಟ. ೧೯೨೨ನೇ ಇಸವಿಯಿಂದ ೨೬ ನೇ ಇಸ್ವಿಯ ವರೆಗಿನ ೪ ವರ್ಷಗಳಲ್ಲಿ ನಾಣ್ಯ-ನೋಟು ತಯಾರಾಗುವ ಕರನ್ಸಿ ಟ್ರೆಝುರಿ ಖಾತೆಯಲ್ಲಿ ೫೨೦೦೦ ರೂಪಾಯಿ ಕಾಣೆ. ಈ ಹಣವು ಕೋಶದೊಳಗೇ ಕಡಿಮೆ. ಇದಲ್ಲದೆ ಆಗಸ್ಟದಿಂದ ಡಿಸೆಂಬರತನಕ ೫ ತಿಂಗಳಲ್ಲಿ ೭೬೭೦೦ ರೂಪಾಯಿಗಳನ್ನು ಇಲ್ಲಿಯ ಅಧಿಕಾರಿಗಳು ಪರರಿಗೆ ಕೊಟ್ಟುಬಿಟ್ಟರು. ಅಧಿಕಾರಿಗಳು ಸರಕಾರದ ಹಿತವನ್ನು ಲಕ್ಷಿಸದೆ ಈ ನಷ್ಟ ಮಾಡಿದರೆಂದು ಸರಕಾರಿ ಲೆಕ್ಕ ಶೋಧಕರು ಬರೆದಿದ್ದಾರೆ. ಅಂದರೆ ಅಧಿಕಾರಿಗಳು ಬುದ್ಧ್ಯಾ ಈ ರಕಮಿನ ವಂಚನೆ ಮಾಡಿದರೆಂದು ಸ್ಪಷ್ಟವಾಗುತ್ತದೆ. ಇಷ್ಟಾದರೂ ಆ ಅಧಿಕಾರಿಗಳ ಮೇಲೆ ಸರಕಾರದಿಂದ ಖಟ್ಲೆಯಾಗುವದಿಲ್ಲ. ಹೊಸ ದಿಲ್ಲಿಯಲ್ಲಿ ನೆಲ ಹಾಸುವದಕ್ಕಾಗಿ ಸಂಗಮರವರಿಯ ಕಲ್ಲುಗಳನ್ನು ಕಟ್ಟಲು ಸರಕಾರ ತರ್ಫೆನಿಂದಲೇ ಕೆಲಸ ನಡೆಯಿತು. ಇವರು ಕ್ರಮದಂತೆ ಕೆಲಸ ಮಾಡದೆ ಸರಕಾರಕ್ಕೆ ೩ ಲಕ್ಷಕ್ಕೆ ಮಿಕ್ಕಿ ನಷ್ಟ. ಈ ಕುರಿತು ಸರಕಾರಿ ಅಧಿಕಾರಿಗಳು ಚೌಕಶಿ ನಡಿಸಿದರಂತೆ. ಚೌಕಶಿಯ ಕಾಗದಗಳನ್ನು ಲೆಖ್ಖ ಪರಿಶೋಧಕರು ಕೇಳಿದರೆ, ಅವು ನಾಶವಾಯಿತೆಂದು ಉತ್ತರ ಸಿಕ್ಕಿತು. ಚೌಕಶಿಯಲ್ಲಿ ಇಷ್ಟು ನಷ್ಟವಾದದ್ದೇನು ದೊಡ್ಡದಲ್ಲವೆಂದು ಅಭಿಪ್ರಾಯವಾಗಿರುವದಾಗಿ ಆಡಿಟರರಿಗೆ ಹೇಳಲಾಯಿತು. ಈ ಪ್ರಕಾರಗಳ ಮೇಲೆ ಏನೆಂದು ಟೀಕೆ ಮಾಡುವದು? ಸರಕಾರಿ ಲೆಕ್ಕ ಪರಿಶೋಧಕರಿಗೇ ಸರಕಾರವು ಸಿಕ್ಕಿಸದೆ ಪ್ರಜೆಗಳಿಂದ ಎತ್ತುವಳಿ ಮಾಡಿದ ಸಾರ್ವಜನಿಕ ಹಣವನ್ನು ಅಪವ್ಯಯ ಮಾಡುತ್ತಿರುವಾಗ, ಅನ್ಯರು ಆಕ್ಷೇಪಿಸುವದೆಲ್ಲಿ ಉಳಿಯಿತು! ಸರಕಾರವು ಇಂಥ ಪ್ರಕಾರಗಳನ್ನು ಬಚ್ಚಿಡುವದರ ಮೇಲಿಂದ ಹಿಂದುಸ್ಥಾನದ ಆಡಳಿತೆಯನ್ನು ನಡಿಸಲು ಈ ರಾಜ್ಯಪದ್ಧತಿಯು ಅಪಾತ್ರವೆಂದು ಸಿದ್ಧವಾಗುತ್ತದೆ.

---

೨. ಆ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಲೋಕಮತವು ವಿಜಯಗೊಂಡಿತೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಸರಕಾರವು ವಿಶೇಷ ಆಸ್ಥೆಯಿಂದ ಘಟಿಸಲಿಕ್ಕಿದ್ದ ತಿವೇಯನ್ನು ಅಧಿಕಾರಕಕ್ಕೆ ಒಳಪಡಿಸಬೇಕೆಂಬ ಕಾನೂನು, ಚಿಕ್ಕ-ಚಿಕ್ಕ ಹೊಲಗಳ ವ್ಯವಹಾರವನ್ನು ನಿಯಂತ್ರಿಸುವ ಕಾನೂನೂ ಈ ಅಧಿವೇಶನದಲ್ಲಿ ಲೋಕಮತಕ್ಕೆ ಹೆದರಿ ಕೌನ್ಸಿಲಿನಲ್ಲಿ ಮೋರೆ ತೋರಿಸದೆ ದಪ್ತರದಲ್ಲೇ ಉಳಿದವು. ಚಿಕ್ಕ ಚಿಕ್ಕ ಹೊಲಗಳ ಕಾನೂನಿನ ಬಗ್ಗೆ ಸರ್ ಚುನಿಲಾಲರವರು ಬಹು ಪ್ರಯತ್ನಪಟ್ಟಿದ್ದರು. ಈ ಕಾನೂನಿಗಾಗಿಯೇ ಅವರ ಅಧಿಕಾರದ ಮುದ್ದತ್ತು ೩ ತಿಂಗಳು ಬೆಳಿಸಲಾಗಿತ್ತು; ದೇಸಾಯಿ ಕನಿಯಾರ ಸಭಾಸದರಾದ ರಾ॥ ಬಾಲಕೃಷ್ಣ ಸೀತಾರಾಮ ಕಾಮತರಿಗೆ ಹಚ್ಚರೆಂದು ನೇಮಿಸಿಕೊಳ್ಳಲಾಗಿತ್ತು. ಆದರೂ, ಲೋಕಮತದ ಪ್ರಕ್ಷುಬ್ಧ ಸಂಗರಕ್ಕೆದಿರಾಗಲು ಸರ್ ಚುನಿಲಾಲರವರಿಗೆ ಧೈರ್ಯವಾಗಲಿಲ್ಲ. ಇದಕ್ಕಾಗಿ ನಾವು ನಮ್ಮ ಮುಂದಾಳುಗಳನ್ನು ಆನಂದದಿಂದ ಅಭಿನಂದಿಸುವೆವು. ದಸ್ತೈವಜುಗಳ ಫೋಟೋ ತೆಗೆದು ರಿಜಿಸ್ತ ಮಾಡಬೇಕೆಂಬ ಮಿ॥ ಎಂಡರಸನ್ ರವರ ಠರಾವೂ ಆ ಅಧಿವೇಶನದಲ್ಲಿ ಬಯಲಾಯಿತು. ಹಲ್ಲಾ ಲೋಕಲ್ ಬೋರ್ಡುಗಳೂ, ಪ್ರಮುಖರೂ ಈ ಕಾಯಿದೆಯ ವಿರುದ್ಧ ಮತ ಕೊಟ್ಟರು. ಮಿ॥ ಎಂಡರಸನ್‌ರವರು ಲೋಕಲ್ ಬೋರ್ಡುಗಳ ನಿಷೇಧಕ್ಕೆ "ಫೋ ಪಟಪಟಂತಿ" ಅಂದರೆ ಗಿಳಿಮಾತವೆಂದು ತಿರಸ್ಕಾರ ಮಾಡಿದರು. ಅಲ್ಲಿಂದಲ್ಲೇ ಶ್ರೀ॥ ನರಿಮಾನರು ಸರಕಾರಿ ಅಧಿಕಾರಿಗಳೇ ಗಿಳಿಮಾತ ಹೇಳುತ್ತಾರೆಂದು ಉತ್ತರವನ್ನಿತ್ತರು. ಉದಾಹರಣಾರ್ಥ ಹೊಸ ದಿವಾಣರಾದ ಮೌ॥ ರಫಿಉದ್ದೀನರಿಗೇ ಬೊಟ್ಟು ತೋರಿಸಿದರು. ದಿವಾಣರಾಗುವ ಮುಂಚೆ ಮೌಲವಿ ಸಾಹೇಬರು ಈ ಕಾನೂನಿಗೆ ವಿರೋಧ ಮಾಡುತ್ತಿದ್ದರು. ಈಗ ಅವರೇ ಈ ಕಾನೂನನ್ನು ಸೂಚಿಸುತ್ತಾರಲ್ಲವೇ? ಈ ಪ್ರಕಾರ ನಿಷೇಧವಾಗಲು, ಮೌ॥ ರಫಿಉದ್ದೀನರು ಈ ಕಾನೂನನ್ನು ಹಿಂತೆಗೆದುಕೊಂಡರು. ಹೀಗೆ ಲೋಕಮತದ ವಿಜಯವಾಗಿದೆ. ನಾಡಿದ್ದು ಬುಧವಾರ ಸ್ಯಾಮನ್ ಕಮಿಟಿಯೊಡನೆ ಸಹಕಾರ ಮಾಡಲು ಕಮಿಟಿ ನೇಮಿಸುವ ವಿಚಾರವಾಗುವದಿದೆ. ಆ ಕಾಲಕ್ಕೂ ಸಭಾಸದರೆಲ್ಲರೂ ಏಕಮತದಿಂದ ವರ್ತಿಸಿ ಸರಕಾರಕ್ಕೆ ಸೋಲಿಸಬೇಕಾಗಿ ಪ್ರಜೆಗಳೆಲ್ಲರೂ ಬಯಸಿಕೊಳ್ಳುತ್ತಾರೆ. ಈ ನಿರ್ಧಾರವು ಲತ್ತಿಗೆಳೆಯಲ್ಪಟ್ಟರೆ ಮುಂಬಯಿ ಕಾಯಿದೆ ಕೌನ್ಸಿಲಿನ ಕೀರ್ತಿಯು ದಿಗಂತ ಹಬ್ಬುವದು.

---

೩. ರಾ॥ ಲಕ್ಷ್ಮೀನಾರಾಯಣ ತಿಮ್ಮಣ್ಣ ಭಟ್ಟಕರ್ಕಿ ಇವರ ಪ್ರಕರಣದಲ್ಲಿ ನಮ್ಮ ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಮಿರ್ಝಾ-ಪಾಟಕರರವರು ಕೊಟ್ಟ ತೀರ್ಪಿನ ಮುಖ್ಯಾಂಶಗಳನ್ನು ನಾವು ಬೇರೊಂದೆಡೆಗೆ ಪ್ರಕಟಿಸಿರುವೆವು. ಅದರ ಮೇಲಿಂದ ಫೌಜದಾರರಾದ ರಾ॥ ಮಾನೇಯವರೂ, ಸುಪರಿಂಟೆಂಡೆಂಟರಾದ ಮಿ॥ ರೋಬಿನ್‌ಸನ್‌ರವರೂ ನಡಿಸಿದ ವಿಪರೀತ ವರ್ತನವು ಗೋಚರವಾಗುವಂತಿದೆ. ಗೋಕಳೆಯ ಮಗನಾದ ರಾಮನ ನಿಧನವು ಮಾನವ ಬಲಾತ್ಕಾರದಿಂದ ಒದಗಿಬಂತೆಂದು ಡಾಕ್ಟರರ ಕಬಾಸ ಹೇಳುತ್ತಿರುವಾಗ ಫೌಜದಾರರೂ, ಪೋಲೀಸ ಸುಪರಿಂಟೆಂಡೆಂಟರೂ ಕಾಯಿದೆಗೆ ವಿರೋಧ

ವಾಗಿ ನ್ಯಾಯಮೂರ್ತಿಗಳಾಗಿ ರಾಮನ ಸ್ವಭಾವಿಕ ಕಾರಣದಿಂದಲೇ ಮೃತಪಟ್ಟಿರುವನೆಂಬ ಸಿದ್ಧಾಂತಕ್ಕೆ ಬಿಗಿದಪ್ಪಿಕೊಂಡಿದ್ದು ಅನಿವಾರ್ಯವೆಂಬ ಮರಾಗ್ರಹವೆಂದು ಹೇಳಬೇಕಾಗಿದೆ ಮೆಜಿಸ್ಟ್ರೇಟರಾದ ರಾ| ಕರ್ಕೆಯವರಿಗೆ ಈ ವಿಷಯದ ರಿಪೋರ್ಟ್ ಕೊಡಲು ಫೌಜದಾರರು ಬಂದಿದ್ದರು ಅದನ್ನೂ ಅವರು ಕಳಿಸಲಿಲ್ಲ ಸುಪರಿಂಟೆಂಡೆಂಟರು ಕಾಯಿದೆಯ ಉಲ್ಲಂಘನವಾದ ಬಗ್ಗೆ ಫೌಜದಾರರಿಗೆ ಕಿವಿ ಹಿಡಿಯುವದರ ಬದಲು ರಾ| ಕರ್ಕೆಯವರು ಈ ಚೌಕಶಿ ನಡೆಸುವ ಸ್ಥಳದಲ್ಲಿ ಪೋಲೀಸ ಫೌಜನ್ನು ಫೌಜದಾರರ ಕಡೆಯಿಂದ ವಹಿಸಿದರು ಇದರ ಗೂಢವೇನೆಂದು ನಮಗಿನ್ನೂ ತಿಳಿಯದು ಬಹು ವಿಚಾರಿಸಿದಾಗ್ಯೂ ತಲೆ ಹರಿಯದು. ಸುಪರಿಂಟೆಂಡೆಂಟ ಡಿ| ಪೆ ಚಟ್ರ್ಜಿಯವರಿಗೆ ಸಹ ಯಥಾರ್ಥ ಸಂಗತಿಯನ್ನು ಬದ್ಧ್ಯೆ ಹೇಳಲಿಲ್ಲವಾಗಿ ನ್ಯಾಯಮೂರ್ತಿಗಳು ಉದ್ಗರಿಸುತ್ತಾರೆ ಇಷ್ಟರ ತನಕ ಈ ಪ್ರಕರಣವನ್ನು ಪೋಲೀಸರು ಸೋಕಿಕೊಡದ ಕಾರಣವೇನು ? ಡಿ| ಮೆಜಿಸ್ಟ್ರೇಟರೂ ಕಣ್ಣು ತೆರೆಯಲಿಲ್ಲ ಪೋಲೀಸ ಸುಪರಿಂಟೆಂಡೆಂಟರ ರಿಪೋರ್ಟನ್ನೇ ವೇದಪ್ರಮಾಣವೆಂದು ಗ್ರಹಿಸಿ ಆ ರಿಪೋರ್ಟಿನಂತೆ ರಾ| ಕರ್ಕೆಯವರ ಮೇಲೆ ಚೌಕಶಿಯ ಕೆಲಸ ವಹಿಸಿದರು ಚೌಕಶಿಯ ಅಹೀಸರರಾದ ಆಸಿ ಕಲೆಕ್ಟರ ಮಿ. ವ್ಯಾಸರ ವರ್ತನವಂತೂ ಮತ್ತೂ ಸಿಕ್ಕಿಸ್ತವು ತಾಯಿಯ ಶ್ರಾದ್ಧ ಮಾಡಲಿಕ್ಕೂ ಅವರ ರಾ| ಕರ್ಕೆಯವರಿಗೆ ಸಮಯ ಕೊಡಲೊಲ್ಲರು ಅರ್ಜಿಯು ಅವರಿಗೆ ಸ್ವಷ್ಟವಾಗಿ ಬರೆದಿದ್ದಾಗ್ಯೂ ಅವರೊರಗೆ ಅಸಾಧ್ಯವೇ ರಾ| ವ್ಯಾಸರವರಿಗೆ ಒಡೆ ಒಡೆಪಾಠ ತ್ತದೆ ಮೊಸರಲ್ಲಿ ಕಲ್ಲು ಸಿಗುವದೆಂಬುದು ಹೀಗೆಯೇ! ಹೀಗೆ ಪೋಲೀಸರೂ, ಡಿ| ಮೆಜಿಸ್ಟ್ರೇಟರೂ, ಅಸಿ| ಕಲೆಕ್ಟರರೂ ಮಾಡಿದ ಅಕಾಂಡ ತಾಂಡವವನ್ನು ನ್ಯಾಯಮೂರ್ತಿಗಳು ಸಪ್ರಮಾಣ ಪ್ರತಿಪಾದಿಸಿ ಅವರವರಿಗೆ ಸಲ್ಲತಕ್ಕ ಟಾಪಣಿಗಳನ್ನು ಅವರವರಿಗೆ ಒಪ್ಪಿಸಿದ್ದಾರೆ ಒಂದು ಮಾತನ್ನ ಅವರು ಹೇಳಲಿಲ್ಲ. ನಾವು ಹೇಳುತ್ತೇವೆ ಈ ರಾಜ್ಯಪದ್ಧತಿಯಲ್ಲಿ ಪೋಲೀಸರೇ ಪ್ರಭುಗಳು ನ್ಯಾಯಮೂರ್ತಿ ವಿಮರ್ಶಕರು ಪೋಲೀಸರ ಮೇಲೆ ಇಂಬಿಟ್ಟಷ್ಟು ಹುರುಪು ಕಾಯದವನ್ನು ಮನೋನಿಗ್ರಹದ ಮಾಡಿದ್ದರವರಿಂದ ಪೋಲೀಸ ಪುಂಡಾಟಿಕೆ ಕಲ್ಪನೆಯಾಗುತ್ತದೆ. ಅದರ ಮುಂದೆ ಮೆಜಿಸ್ಟ್ರೇಟರಾಗದ ಅಧಿಕಾರಿಗಳು ಪೋಲೀಸರ ಆ ಜೋಡಿಸ್ಕೆ ಕಲಿವಾಗುತ್ತಾರೆ ಅದರಿಂದ ಮೆಜಿಸ್ಟ್ರೇಟರ ಅಧಿಕಾರವು ಅವರಿಂದ ಅಧಿಕಾರಿಗಳಿಗೆ ಇರಕೂಡದು ಎಂಬ ಸಿದ್ಧಾಂತವು ರಾ| ಕರ್ಕೆಯವರ ಪ್ರಕರಣದಿಂದ ಸಾರುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆ ವಿಪರೀತ ಸುರಿಯಿತು ಕೊಳ್ಳ-ಹಳ್ಳಗಳಿಗೆಲ್ಲ ನೀರೇ ನೀರು. ಅಘನಾಶಿನಿ ನದಿಗೆ ನೆರೆ ಬಂದು ಗದ್ದೆ ಭೂಮಿಗಳಿಗೆ ಹಾನಿಯಾಗಿದೆ ಪೊನ್ನು ಹ ಮೆ ಘರಬಸು. ಕಬ್ಬದ ಹಂದಿದ್ದಾನೆ. ಅದರಿಂದ ಒಕ್ಕಲಿಗರಿಗೆ ಸ್ವಲ್ಪ ಪೈರು ಬಂದೀತು. ಈ ವಾರದಲ್ಲಿ ೧೭-೭೩ ಇಂಚು ಮಳೆ ಬಿತ್ತು. ಇಂತು ಈ ತನಕ ೧೩೧ ೫೭ ಇಂಚು ಮಳೆ ಬಿತ್ತು.!

ದೇಸಿಗಳಲ್ಲಿ ಕಸರ ತೆಗೆಸದೆ ಬಾವಿಯ ನೀರು ಕೆಟ್ಟು ಈ ಹಂಗಾಮಿನಲ್ಲಿ ಹೊರಕಡೆ ಉಪಟಳಿಯಾಗುತ್ತದೆಂದು ಆರೋಗ್ಯ ಖಾತೆಯ ಅಭಿಪ್ರಾಯವಾಗಿರುವದಾಗಿಯೂ, ಪೊಟೇಶಿಯಮ್ ಪರಮೆಂಗನೇಟ ಎಂಬ ದ್ರವ್ಯವನ್ನು ಬಾವಿಯಲ್ಲಿ ಹಾಕಿದರೆ ನೀರು ಸ್ವಚ್ಛವಾಗುತ್ತದಾಗಿಯೂ, ಆ ಔಷಧವು ತಾಲೂಕ ಲೋಕಲ್ ಬೋರ್ಡಿನಲ್ಲಿ ಉಚಿತವಾಗಿ ಹಂಚಲ್ಪಡುತ್ತದಾಗಿಯೂ ತಾಲೂಕ ಲೋಕಲ್ ಬೋರ್ಡಿನ ಅಧ್ಯಕ್ಷರು ತಿಳಿಸುತ್ತಾರೆ

ಹೊನ್ನಾವರ— ಒಬ್ಬರು ಕೈ ತಿಳಿಸುವದೇನಂದರೆ — ಇಲ್ಲಿಯ ಮೀನು ಮಾರ್ಕೇಟಿನಿಂದ ಸ್ಮಶಾನ, ಶಿವನ ಕೇರಿ ಬದಿಗೆ ಹೋಗುವ ಮಾರ್ಗದ ಮೇಲೆ ಸುಮಾರು ೨-೩ ಅಡಿ ನೀರು ನಿಲ್ಲುತ್ತದೆ. ಈ ನೀರು ಇಂಗ್ಲಿಷ ಶಾಲೆಯ ಬೇಣದ ಮೇಲಿಂದ ಬಂದು ನಿಲ್ಲುತ್ತದೆ ಇಲ್ಲಿ ದಿನಾ ೭ ತಾಸ ರಾತ್ರಿಯ ವರೆಗೆ ಖಾಸೀ ಜನರು ತಿರಗಾಡುತ್ತಿರುತ್ತಾರೆ ದೀಪದ ಕಂಬ ಕೂಡ ಇರುವದಿಲ್ಲ. ಚಿಕ್ಕ ಹುಡುಗರಿಗೆ ಸೊಂಟದ ಮಟ್ಟಿಗೆ ನೀರಾಗುತ್ತದೆ ಸ್ಮಶಾನದ ಹತ್ತರ ಒಂದು ದೀಪದ ಕಂಬವಿತ್ತು ಅದು ಕಿತ್ತುಹೋಗಿ ಕ್ಯಾಣಾಯಿತು. ಮುನಿಸಿಪಾಲಿಟಿಗೆ ತಾ ೧೬ನೇಗೆ ಅರ್ಜಿ ಮಾಡಲಾಯಿತು ಆದರೂ ಯಾವದೇ ವ್ಯವಸ್ಥೆಯಿಲ್ಲ ಇತ್ಯಾದಿ

ಸ್ವಲ್ಪ ಬಿಡುವಾಗಿ ಜೀಲ್ಲತ್ತ ಈ ವರೆಗೆ ೯೫ ಇಂಚ ಮಳೆ ಬಿತ್ತು ಶೇಂಡಿ ಬಸ್ತರ ಲಿಂಗಾವು ಅದವು ಕಾರವಾರ-ಅಂಕೋಲಾಗಳಲ್ಲಿ ಪುನಃ ಪ್ಲೇಗು ಶುರು ಆದದ್ದು ಕೇಳಿ ಮುನಿಸಿಪಾಲಿಟಿಯವರು ಆ ಕುರಿತು ಉಪಾಯ ಕೈಕೊಳ್ಳುವದು ದ್ವಾರಾಗಿ ತಿಳಿಯುತ್ತದೆ ಈಬಗ್ಗೆ ಪತ್ರಗ ಹೊಲಿನಲ್ಲಿ ಸಭೆ ಕೂಡಲಿಕ್ಕಿದೆ. ಸ್ತ್ರೀ

ಭಟಕಳ— ಪುಷ್ಯ ಮಳೆಗೆ ಮಿತಿಮೀರಿ ಗಾಳಿ ಬೀಸಿ ಬಹಳ ಮರಗಳು ಬತ್ತಗೂಡಿ ನೆಲಕ್ಕುರುಳಿವೆ. ಅತಿಸಾರದಿಂದ ಮುಸಲ್ಮಾನರ ಕೇರಿಯಲ್ಲಿ ೩-೪ ಮರಣಗಳಾದವು ಇಲ್ಲಿ ನೀರಿನಲ್ಲಿ ಹಾಲು – ತಪ್ಪಿದೆ - ಹಾಲಿನಲ್ಲಿ ನೀರು ಹಾಕಿ ಮಾರಾಟವಾಗುವ ಪರಿಪಾಠವು ಹೆಚ್ಚಾಗಿದ್ದರಿಂದ ಇದನ್ನು ಪ್ರತಿಬಂಧಿಸುವದಕ್ಕಾಗಿ ಮುನಿಸಿಪಾಲಿಟಿಗೆ ಅರ್ಜಿ. ಗೋಪಾಲನ ಹೆಚ್ಚಾದರೆ, ಜನಬಾನ ಕಡಿಮೆಯಾದರೆ, ನೀರಿನಲ್ಲಿ ಹಾಲು ಬೆರಸುವ ವ್ಯಾಪಾರಕ್ಕೆ ತಾನಾಗಿಯೇ" ತಡೆ ಬೀಳುವಂತಿದೆ

ಇಲ್ಲಿಯ ಕನ್ನಡ ಶಾಲೆಯ ಶಿಕ್ಷಕರು ನ್ಯಾಯಮಾರ್ಗದ ಹೊಸ ಶೋಧ ಹಚ್ಚಿದ್ದಾರೆ ಮಾರ್ಗದ ಮೇಲೆ ಹುಡುಗರನ್ನು ಒಡಿಸುತ್ತಾರೆ ಕಾಲು ಜಾರಿ ಕವಾಲವೋ ಕ್ಷಣವಾಗವ ಸಂಭವವಿದೆ. ಲೋಕಲ್ ಬೋರ್ಡಿನವರು ಜಾರಿಕೆಯಾಗದ ವಸ್ತು ಬಿದ್ದ ಬೆಳೆಯುವ ಸಮತಟ್ಟಿದ ಸ್ಥಳ ಕೊಟ್ಟರೆ ಕ್ಷೇಮವಿದೆ.

ಇಲ್ಲಿ ದೇವಸ್ಥಾನಗಳ ಸಂಖ್ಯೆ ಬಹಳ. ಆದರೆ ದೇವಾಲಯ ಕಮಿಟಿಯ ಅಜಾಗ್ರತೆಯಿಂದಲೋ ಏನೋ, ಇಲ್ಲಿಯ ದೇವಸ್ಥಾನಗಳ ಸ್ಥಿತಿಯು ತೀರ ಕಂಗೆಟ್ಟಿದೆ. ವೆಂಕ್ಟೇಶರರೇ ಪೂಜಾಂಗಳು; ಪರಿಚಾರಕರು ಕೆಲ ದೇವಸ್ಥಾನಗಳಲ್ಲಿ ವೆಂಕ್ಟೇಶರರು ಶ್ರೀ ದೇವರಿಗೆ ಅಮೃತಪತಿ ನಂದಾದೀಪಗಳನ್ನು ಕೊಡದೆ ಅರ್ಚಕರಿಗೆ ಪೀಡಿಸುತ್ತಾರೆ, ಕೆಲವು ವೆಂಕ್ಟೇಶರರು ದೇವರ ಒಕ್ಕಲಿಗರಿಗೆ ಮುಂದಿನ ಗೇಣಿಯನ್ನು ವ್ಯಾದೆಗಿಂತ ಮುಂಚೆ ವಸೂಲ ಕೊಂಡು ತಮ್ಮ ಸ್ವಂತ ಅಡಚಣೆಗಳನ್ನು ಸಾಗಿಸಿಕೊಳ್ಳುತ್ತಾರಂತೆ, ಕೆಲವು ದೇವಸ್ಥಾನಗಳಲ್ಲಿ ಭಂಡಾರಕ್ಕೆ ಕೊರತೆಯಿಲ್ಲ. ಆದರೆ ಶ್ರೀ ದೇವರಿಗೆ ನೀರಿನಿಂದಲೇ ಷೋಡಶೋಪಚಾರ ಪೂಜೆಯಾಗುತ್ತದೆ. ಮಂತ್ರನೈವೇದ್ಯ, ಮಂತ್ರದೀಪ ಇವುಗಳ ಪೂಜೆ. ನಿತ್ಯ-ಪ್ರತ್ಯಕ್ಷ ನೈವೇದ್ಯ- ದೀಪ ಸೇವೆಗಳು ೧೦-೧೫-೨೦ ೩೦ ದಿನಗಳಿಗೊಮ್ಮೆ ಹಣ ಇದ್ದಾಗ್ಯೂ ಅದನ್ನು ಉಪಭೋಗಿಸಲು ಋಣ ಬೇಕಲ್ಲವೇ! ದೇವಾಲಯ ಕಮಿಟಿಯು ಎಚ್ಚರಗೊಳ್ಳಲಿ

ಶಿರ್ಸಿ— ಮಳೆಯಂತು ಎಡೆಬಿಡದೆ ಸುರಿಗುತ್ತದೆ. ವಿದ್ಯಾಭೂಷಣ ತಾಂಬೇ ಶಾಸ್ತ್ರಿಗಳ ಉಪನ್ಯಾಸಗಳು ನಡೆದಿವೆ. ವೇ| ಶಾಸ್ತ್ರಿಗಳು ೧೯೧೭ ನೇ ಇಸ್ವಿಯಲ್ಲಿ ಸಹ್ಯಾದ್ರಿ ಖಂಡವನ್ನು ನೋಡುವದಕ್ಕಾಗಿ ಇಲ್ಲಿ ಬಂದಿದ್ದರು. ನಮ್ಮ ಕಡೆ ಹಳೇ ಗೆಳೆಯರಿವರು. ಶ್ರೀ ಮಾರಿಕಾಂಬಾ ದೇವರ ಭಂಡಾರದಿಂದ ಇಲ್ಲಿಯ ಸಂಸ್ಕೃತ ಧರ್ಮಾರ್ಥ ವಾಚನಾಲಯಕ್ಕೆ ೫೦ ರೂಪಾಯಿಗಳು ಅರ್ಪಿಸಲ್ಪಟ್ಟಿರುತ್ತವೆ. ಲಿಂಡ ರೆವ್ವಿನ್ಯೂ ಕೋಡಿನ ಬೀಜ ಹಾಗು ಚಿಕ್ಕ ಹೊಲಗಳ ನಿಷೇಧ ಮಾಡುವ ಸಭೆಯು ಶೀಘ್ರವೇ ಆಗತಕ್ಕದ್ದಿದೆ. ಈಗ ಗಾಬರಿಯಿಲ್ಲ.

ಇಲ್ಲಿಯ ರಾ| ನಾರಾಯಣ ಪ್ರಭುಗಳ ಮಗನು ಮದಂತಿಯುಳ್ಳ ಬೈರಾಗಿಯು ಮೊದಲು ಬಾವಾಜಿ ಮಠದಲ್ಲಿ ಇಳಕೊಂಡಿದ್ದನು. ಹಳಿಯಾಳ ಸ್ನಾನರಾರು ಜನರು ತಂಡಗಟ್ಟಿ ಹೋಗಿ ಬಹಳ ತೊಂದರೆ ಕೊಟ್ಟರು. ನಾಲ್ಕು ದಿವಸಗಳ ಮೇಲೆ ಆತನಿಗೆ ಅಸ್ವಾಸ್ಥ್ಯ ಉಂಟಾಯಿತು. ಶ್ರೀ ದತ್ತ ಮಠದಲ್ಲಿದ್ದಾನೆ ಚಾತುರ್ಮಾಸವನ್ನು ಆತನು ಇಲ್ಲೇ ಕಳೆಯುವನು ಆತನಿಗೆ ಸಂಭ್ರಮದಿಂದ ಆದರಾತಿಥ್ಯವಾಗುತ್ತಿದೆ. ಬೈರಾಗಿಗೆ ಸಂಸಾರಿಕರಿಂದ ಕರ್ಮಯೋಗದ ಉಪದೇಶವಾಗುತ್ತಿರುವದಂತೆ !

ಅಮ್ಮಸೆ— ಇಲ್ಲಿ ಸಹಕಾರಿ ಸಂಘ ಹಾಗು ರೈತರ ತರ್ಫೆನಿಂದ ಕಳೆದ ತಾರೀಖು ೨೪ನೇ ಮಂಗಳವಾರಕ್ಕೆ ಸಭೆ ಸೇರಿ, ಭೂಮಿಯ ಮಹಸೂಲು, ಚಿಕ್ಕ ಹೊಲಗಳ ಕಾನೂನು ಹಾಗು ಬಾರ್ಡೋಲಿಯ ಸತ್ಯಾಗ್ರಹ ಇವುಗಳ ವಿಚಾರ ಮಾಡಲಾಯಿತು. ಮೊದಲಿನ ಎರಡೂ ಕಾನೂನುಗಳ ನಿಷೇಧ ಮಾಡಲಾಯಿತು, ಬಾರ್ಡೋಲಿಯ ಸತ್ಯಾಗ್ರಹಕ್ಕೆ ಬೆಂಬಲ ಕೊಡಲಾಯಿತು; ಬಾರ್ಡೋಲಿಯ ಸತ್ಯಾಗ್ರಹಕ್ಕೆ ಸಹಾಯ ಮಾಡಬೇಕಾಗಿಯೂ ನಿರ್ಧಾರವಾಯಿತು ಈ ಠರಾವುಗಳು ಪುಣೆಯ ದೇಸಾಯಗಾರರ ಪರಿಷತ್ತಿಗೆ ತಂತಿ ಮೂಲಕ ರವಾನಿಸಲಾಯಿತು.

ಮುಂಡಗೋಡದಲ್ಲಿಯೂ ಹೀಗೆಯೇ ದೊಡ್ಡ ಸಭೆ ಸೇರಿ ಧಿಕ್ಕಾರ-ಪುರಸ್ಕಾರದ ಠರಾವುಗಳಾದವೆಂಬ ವಾರ್ತೆ.

ಕಾರವಾರ— ಇಲಿ ಕೊಲ್ಲುವದಾಗಿ ಹಂಚುತ್ತಿದ್ದಾರೆ. ಸತ್ತ ಇಲಿಗಳು ಕಾಣುತ್ತಿವೆ ಮ್ಯುನಿಸಿಪಾಲಿಟಿಯವರು ಜಾಗ್ರತೆ ಕೊಡಬೇಕು ಜಾಡ ವಾರ್ತೆಯ ಮನೆ ತೆರಿಗೆದಾರರು ಕೊಟ್ಟ ಮನೆ ತೆರಿಗೆಯನ್ನು ಕಾರಕೂನರು ಜಮೆ ಕೊಳ್ಳದಿದ್ದ ಪ್ರಕರಣವೊಂದು ಉದ್ಭವಿಸುತದು. ಇಲ್ಲಿಯ ಸಿವ್ಹಿಲ್ ಸರ್ಜನರು ರಾ| ಲಕ್ಷ್ಮಣ ವಾಸುದೇವ ಬಾಳಗಿ ಎಂಬವರಮೇಲೆ ಶಸ್ತ್ರಕ್ರಿಯೆ ಮಾಡಿದರು , ಅವರ ರೋಗವು ಸಂಕೀರ್ಣವಾಗಿದೆಂದು ಸರ್ಜನರಿಗೆ ಹೊಳೆದು, ಶಸ್ತ್ರಪ್ರಯೋಗವು ಅಷ್ಟಕ್ಕೇ ಕಡೆಯಿತು; ಪ್ರಾಣವೂ ಅಷ್ಟಕ್ಕೇ ಹೊರಟುಹೋಯಿತು !

ಬಾರ್ಡೋಲಿಯ ವೃತ್ತಾಂತ.

ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಸೋಮವಾರಕ್ಕೆ ಗವ್ಹರ್ನರರಾದ ವಿಲ್ಸನ್ ದೊರೆಗಳ ಭಾಷಣವಾದಂದಿನಿಂದ ಕಾಯಿದೆ ಕೌನ್ಸಿಲಿನ ಸಭಿಕರು ಇನ್ನೂ ಎದೆಗಟ್ಟಿ ಮಾಡಿದ್ದಾರೆ. ಬ್ರಾಹ್ಮಣೇತರರೂ, ನೇಮಸ್ತ ವಿಚಾರದ ಇತರ ಸಭಾಸದರೂ ವಿಲ್ಸನ ದೊರೆಗಳ ಭಾಷಣಕ್ಕೆ ಚೊಕ್ಕ ಉತ್ತರವನ್ನು ಕೊಟ್ಟಿದ್ದಾರೆ. ಮಹಾತ್ಮರು ಮುಂಬಯಿ ಸರಕಾರಕ್ಕೆ ಸನ್ಮಾರ್ಗ ಹಿಡಿಯಲು ಬೋಧಿಸಿದ್ದಾರೆ. ಗವರ್ನರರು ಸುರತ ಜಿಲ್ಹೆಯ ಕೌನ್ಸಿಲು ಸಭಾಸದರೊಡನೆ ಗುರುವಾರ ಗುಪ್ತ ಆಲೋಚನೆ ನಡಿಸಿದರಂತೆ! ಬಾರ್ಡೋಲಿಯ ರಾ। ರಾಮಚಂದ್ರ ಭಟ್ಟರೆಂಬುವರು ಪರಿಹಸ್ತ್ಯ ತೀರ್ವೆಯನ್ನು ಸರಕಾರದ ಹುಕೂಮಿಗೆ ಠೇವಾಗಿಡಲು ಒಪ್ಪಿ ಗವರ್ನರರಿಗೆ ಬರೆದರು. ಈ ಠೇವಿನ ವಿಷಯವನ್ನು ಅಂಗೀಕರಿಸುವ ಪೂರ್ವದಲ್ಲಿ ಬಾರ್ಡೋಲಿಯ ಬೇಸಾಯಗಾರರು ಹಳೇ ತೆರಿಗೆಯನ್ನು ಮುಂಚೆ ತೆತ್ತುಬಿಡಬೇಕಾಗಿ ಸರಕಾರದ ಹೇಳಿಕೆ. ಸುರತ ಜಿಲ್ಹೆಯ ಕೌನ್ಸಿಲ ಪ್ರತಿನಿಧಿಗಳ ವಿದ್ಯಮಾನ ಇನ್ನೂ ಮುಂದೆ ಒಪ್ಪಂದದ ಮಾತುಕತೆ ನಡೆಯಬೇಕಾಗಿ ಸರಕಾರದ ಆಜ್ಞೆಯಾಗಿದೆ. ರಾ। ರಾಮಚಂದ್ರ ಭಟ್ಟರು ಈ ಪ್ರಕರಣವನ್ನು ಸಾಮೋಪಚಾರದಿಂದ ಇತ್ಯರ್ಥಪಡಿಸಿಕೊಳ್ಳುವದಕ್ಕಾಗಿ ಸ್ವಂತ ಬುದ್ಧಿಯಿಂದ ಠೇವಿಡಲು ಒಪ್ಪಿದರೆಂದು ಹೇಳುತ್ತಾರೆ. ತ್ರಯಸ್ಥರಿಂದ ಠೇವನ್ನು ತಿಂತ ರೆಪ್ಪಿನ್ನೂ ಕೊಡಿಸಿ ಅಂಸೇ ಕಲಮಿನನ್ವಯ ಇಟ್ಟುಕೊಳ್ಳಲು ಸರಕಾರಕ್ಕೆ ಕಾಯಿದೆಯಂತೆ ಇಂಬಿರುವದೆಂದು ಕಾಯಿದೆಯ ಅರ್ಥವೂ ಹೇಳಲ್ಪಡುತ್ತದೆ. ಸತ್ಯಾಗ್ರಹಿಗಳ ಬಂಧವಿಮೋಚನೆ, ಚರಜೆಂದಿಗಿಯ ಜಪ್ತಿಯಿಂದ ಉಂಟಾದ ನಷ್ಟಭರಪಾಯಿ, ಸರಕಾರಜಪ್ತಾದ ಭೂಮಿಯನ್ನು ತಿರುಗಿ ಮಾಲೀಕರಿಗೆ ಕೊಡುವ ಯೋಚನೆ ಇವುಗಳ ಕುರಿತು ಸರಕಾರದ ಅಂಬೋಣವು ಇನ್ನೂ ಪ್ರಕಟವಾಗಲಿಲ್ಲ. ಇವನ್ನು ಮನ್ನಿಸಿದ ಹೊರತು ಒಪ್ಪಂದವಾಗುವ ಲಕ್ಷಣ ತೋರುವದಿಲ್ಲ.

ಶ್ರೀ। ವಲ್ಲಭಭಾಯಿಯವರಿಗೆ ಸೆರೆಹಿಡಿಯುವ ಸುದ್ದಿಗಳು ಎದ್ದೇಳುತ್ತವೆ. ಅವರಿಗೆ ಸೆರೆಹಿಡಿದರೆ ತಾವು ಬಾರ್ಡೋಲಿಯ ಸೂತ್ರಧಾರರಾಗುತ್ತೇವೆಂದು ಮಹಾತ್ಮರು ಪ್ರಕಟಿಸಿದ್ದಾರೆ.

ಬಾರ್ಡೋಲಿಯಲ್ಲಿ ಹೆಂಡ-ಶರಾಬು ಅಂಗಡಿಗಳ ಲಿಲಾವು ಆಯಿತು. ಆ ಕಾಲಕ್ಕೆ ಸತ್ಯಾಗ್ರಹ ಸ್ವಯಂಸೇವಕರು ಕೊರಳಿಗೆ ಪಾಟಿಗಳನ್ನು ಕಟ್ಟಿಕೊಂಡು ಸವಾಲದಾರರಿಗೆ ಸವಾಲು ಮಾಡಬಾರದಾಗಿ ಉಪದೇಶಿಸುತ್ತಿದ್ದರು. ಸುರತದಲ್ಲಿ ಸವಾಲು ನಡೆಯುವಾಗ ಶ್ರೀ। ಮಣಿಲಾಲ ಕೋಠಾರಿ ಮೊದಲಾದ ಸ್ವಯಂಸೇವಕರು ಕಚೇರಿಗೆ ಹೋಗಿ ಸವಾಲು ಮಾಡಬಾರದಾಗಿ ಹೇಳಿದರೆಂದು ಅವರಿಗೆ ಸೆರೆಹಿಡಿಯಲಾಯಿತು. ಕೂಡಲೇ ಅದೇ ಸುರತ ಪಟ್ಟಣದಲ್ಲಿ ಹರತಾಳಾಗಿ ಜನರು ತಂಡಾಗಟ್ಟಿಕೊಂಡು ಅಲ್ಲಿ ಹೋಗಿ ಸವಾಲು ಮಾಡಬಾರದೆಂದು ಉಪದೇಶ ಮಾಡಿದರು; ಕೂಡಲೆ ಅವರಿಗೆ ಬಿಡುಗಡೆಯಾಯಿತು. ಅಲ್ಲಿಯ ಕಮೀಟಿಯ ಸಭಾಸದರಾದ ಡಾ। ಘಿಯಾರವರು, ಸವಾಲು ಮಾಡುವಾಗ ಕಲೆಕ್ಟರರ ಆಫೀಸಿಗೆ ಹೋದ ಬಗ್ಗೆ ಅವರಿಗೂ ಸೆರೆಹಿಡಿಯಲಾಗಿತ್ತು, ಅವರಿಗೂ ಬಿಡುಗಡೆಯಾಯಿತು. ಮಾಂಡವಿ ತಾಲೂಕಿನಲ್ಲಿ ೧೪೧ ಚಪ್ಪರಗಳು ಲಿಲಾವಾಗುವದಿದ್ದವು; ಅವುಗಳಲ್ಲಿ ಎಂಟೇ ಚಪ್ಪರಗಳು ಲಿಲಾವಾದವು. ಉಳಿದವುಗಳಿಗೆ ಅರ್ಧ ಸವಾಲು ಬಂತು. ಚಿಖಲಿ, ಜಲಾಲಪೂರ ತಾಲೂಕುಗಳಲ್ಲಿ ಒಬ್ಬರೂ ಚಪ್ಪರ ಕೊಳ್ಳಲಿಲ್ಲ. ಮತ್ತು ಕೊಳ್ಳುವವರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕುವ ಆಲೋಚನೆಯಾಗಿದೆ.

ಸತ್ಯಾಗ್ರಹ ನಿಧಿಯು ೩ ಲಕ್ಷಕ್ಕೆ ಮಿಕ್ಕಿತು; ಇನ್ನೂ ಸಂಗ್ರಹವಾಗುತ್ತಲಿದೆ. ಶ್ರೀ। ವಲ್ಲಭಭಾಯಿಯವರು ಮಲೇರಿಯಾ ಜ್ವರದಿಂದ ಅಸ್ವಸ್ಥರಿದ್ದಾರೆ.

ನೂಲುಹುಣ್ಣಿವೆಯ ಹಬ್ಬ ಬಂತು!

ಭದ್ರ ಗ್ಯಾರಂಟಿಯ ಮೂಲ

ವೆಸ್ಟ ಎಂಡ್ ಗಡಿಯಾರಗಳನ್ನೇ ಕೊಳ್ಳಿರಿ!

ಕಾರಣವೇನಂದರೆ:—

ನಿಮ್ಮ ಇಷ್ಟ-ಮಿತ್ರರು ನಿಮ್ಮ ನೆನಪನ್ನು ಪ್ರೀತಿಯಿಂದ ಮಾಡಬೇಕಾದರೆ, ನೀವು ಅವರಿಗೆ "ವೆಸ್ಟ-ಎಂಡ್" ಗಡಿಯಾರವನ್ನು ಕಾಣಿಕೆ ಕೊಡಿರಿ!

ನಿಮಗೆ ಸ್ವತಃ ಸರಿಯಾಗಿ ಹೊತ್ತು ತೋರಿಸುವ ಉತ್ತಮ ಹಾಗು ಬಾಳಿಕೆಯ ಗಡಿಯಾರ ಬೇಕೆಂದಿದ್ದರೆ, "ವೆಸ್ಟ ಎಂಡ್ ಘಡಿಯಾರವನ್ನೇ ಕೊಳ್ಳಿರಿ!!

ಸಾವಿರಾರು ಕಡೆಯಲ್ಲಿ ಜಾಹೀರಾತು ಕೊಟ್ಟ ಕಡಿಮೆ ತರಗತಿಯ ಗಡಿಯಾರಗಳನ್ನು ಕೊಂಡು ಮೋಸ ಹೋಗಬೇಡಿ. ಆ ಗಡಿಯಾರಗಳೆಲ್ಲ ಬರೇ ಚಿಕ್ಕ ಮಕ್ಕಳ ಆಟಿಗೆಯ ಸಾಮಾನುಗಳಾಗಿವೆ! ನಿಮ್ಮ ಹಣವು ನಿರರ್ಥಕವಾಗುವದು!

ವೆಸ್ಟ ಎಂಡ್ "ಕೀಪ-ಸೇಕ್"

ಲೀವರ್, ಲಿವ್ಹರ.

ನಿಕಲ್ ಬೆಳ್ಳಿ	ರೂ	೩೨
ರೋಲ್ಡ ಗೋಲ್ಡ	,,	೪೨
೯ ಕ್ಯಾರೆಟ ಭಂಗಾರದ್ದು	,,	೫೦
೧೮ ಕ್ಯಾರೆಟ ಭಂಗಾರದ್ದು	,,	೭೦



ಸರಿಯಾಗಿ ಹೊತ್ತು ತೋರಿಸುವಂಥವು. ಕ್ಯಾಟಲಾಗು ತರಿಸಿಕೊಳ್ಳಿ.

ವೆಸ್ಟ ಎಂಡ್ ವಾಚ್ ಕಂಪನಿ,

ಮುಂಬಯಿ. ಕಲಕತ್ತಾ.

"ಔಷಧ ಸೀಸೆಗಳಿಗಿಂತ ಬರೀ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ" ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ಮಹಾತ್ಮರ ಆತ್ಮಚರಿತ್ರ.

(೧೪) ಅಹಿಂಸೆಯ ಸನ್ನಿಧಿಯಲ್ಲಿ.

ಚಂಪಾರಣ್ಯದೊಳಗಿನ ಬೇಸಾಯಗಾರರ ಸ್ಥಿತಿ-ಗತಿಯನ್ನು ಪರಾಂಬರಿಸಿ ನೀಲೀ ತೋಟಗಳ ಸಾವುಕಾರರು ಕೊಡುವ ಕಷ್ಟ-ನಷ್ಟಗಳನ್ನು ಅರಿತುಕೊಳ್ಳಲು ನಾನು ಹೋಗಿದ್ದೆ. ಇದಕ್ಕಾಗಿ ಸಾವಿರಾರು ಮಂದಿ ರೈತರೊಡನೆ ನಾನು ಮಾತುಕಥೆ ಮಾಡಬೇಕಾಗಿತ್ತು. ಆದರೆ, ಈ ಚೌಕಶಿ ಮಾಡುವ ಮುಂಚೆ ತೋಟಿಗರ ಪಕ್ಷವನ್ನು ತಿಳಕೊಳ್ಳುವದವಶ್ಯವೆಂದು ನನಗೆ ತೋರಿತು; ಆ ಭಾಗದ ಕಮೀಶನರರಿಗೆ ಭೆಟ್ಟಿಯಾಗಬೇಕೆಂದೂ ಅನಿಸಿತು. ಅದರಂತೆ ಈರ್ವರಿಗೂ ನನ್ನ ಮನೋಗತವನ್ನು ತಿಳಿಸಿದೆನು. ಈರ್ವರೂ ಭೆಟ್ಟಿಯಾಗಲು ಒಡಂಬಟ್ಟು ಸಮಯ ತಿಳಿಸಿದರು.

ತೋಟಿಗರ ಸಂಘದ ಕಾರ್ಯದರ್ಶಿಗಳು ನನಗೆ ಪರಸ್ಥನೆಂದು ಹೇಳಿದರು; ತೋಟಿಗ ಹಾಗು ರೈತರೊಳಗೆ ಸೇರಲು ನನಗೆ ಉಚಿತವಲ್ಲವಾಗಿ ತಿಳಿಸಿದರು. ಏನಾದರೊಂದು ಅರ್ಜಿ ಮಾಡುವದಿದ್ದರೆ, ಅದನ್ನು ಬರೆದು ಕಳಿಸಬಹುದಾಗಿಯೂ ನನಗವರು ತಿಳಿಸಿದರು. ನಾನು ಪರಸ್ಥನಲ್ಲವೆಂದು ನಮ್ರಭಾವದಿಂದ ಹೇಳಿದೆನು. ರೈತರು ಅಪೇಕ್ಷಿಸಿದರೆ, ಅವರ ಸ್ಥಿತಿ-ಗತಿಯ ಕುರಿತು ಚೌಕಶಿ ಮಾಡುವ ಅಧಿಕಾರವು ನನಗಿರುವದಾಗಿಯೂ ನಾನವರಿಗೆ ಹೇಳಿದೆನು. ಕಮೀಶನರರಿಗೆ ನಾನು ಭೆಟ್ಟಿಯಾಗಲು ಅವರು ನನಗೆ ಹೆದರಿಸಿದರು. ಕೂಡಲೆ ತಿರಹುತ ಭಾಗವನ್ನು ಬಿಟ್ಟು ಹೋಗಬೇಕಾಗಿಯೂ ನನಗೆ ಉಪದೇಶಿಸಿದರು.

ಈ ಎಲ್ಲ ಸಂಗತಿಗಳನ್ನು ನನ್ನ ಜೊತೆಗಾರರಿಗೆ ಹೇಳಿದೆನು. ಮುಂದೆ ಹೋಗಗೊಡದಂತೆ ನನ್ನ ಮೇಲೆ ಸರಕಾರವು ಪ್ರತಿಬಂಧಿಸುವ ಸಂಭವವಿರುವದಾಗಿಯೂ, ಅಪೇಕ್ಷಿಸಿದ್ದಕ್ಕಿಂತ ಮುಂಚಿತವಾಗಿಯೇ ನಾನು ಸೆರೆಯಾಳಾಗುವ ಸಂಭವವಿರುವದಾಗಿಯೂ ಅವರಿಗೆ ಹೇಳಿದೆನು. ಸೆರೆಬೀಳುವದಾದರೆ, ಮೋತಿಹಾರಿಯಲ್ಲಾಗಲಿ, ಬೆಟಿಯಾದಲ್ಲಾಗಲಿ ಸೆರೆಬೀಳುವದು ಯೋಗ್ಯವೆಂದೂ ನಾನವರಿಗೆ ತಿಳಿಸಿ, ಆ ಗ್ರಾಮಗಳಿಗೆ ಶೀಘ್ರವೇ ಹೋಗುವದುಚಿತವೆಂದೆನು.

ಚಂಪಾರಣ್ಯವು ತಿರಹುತ ಭಾಗದೊಳಗಿನ ಒಂದು ಜಿಲ್ಲೆ. ಮೋತಿಹಾರಿಯು ಆ ಜಿಲ್ಲೆಯ ಮುಖ್ಯಸ್ಥಳ. ರಾಜಕುಮಾರ ಶುಕ್ಲರವರು ಬೆಟಿಯಾ ಪಟ್ಟಣದ ನೆರೆಹೊರೆಯಲ್ಲಿಯೇ ವಾಸಿಸುತ್ತಿದ್ದರು. ಆ ಭಾಗದ ಸುತ್ತುಮುತ್ತಲಿರುವ ಕೋಠಿ ಜಾತಿಯ ಒಕ್ಕಲಿಗರು ಈ ಜಿಲ್ಲೆಯಲ್ಲಿ ತೀರ ದರಿದ್ರರು. ರಾಜಕುಮಾರ ಶುಕ್ಲರವರು ಒಕ್ಕಲಿಗರಿಗೆ ಭೆಟ್ಟಿಯಾಗಲು ನನಗೆ ಹೇಳಿದ್ದರು; ನನಗಾದರೂ ಅವರಿಗೆ ಭೆಟ್ಟಿಯಾಗಬೇಕೆಂಬ ಲವಲಿಕೆ ಇತ್ತು.

ಹೀಗೆ ವಿಚಾರ ಮಾಡಿ ಅದೇ ದಿವಸವೇ ನಾನು ಜೊತೆಗಾರರೊಡನೆ ಮೋತಿಹಾರಿಗೆ ತೆರಳಿದೆನು. ಬಾಬು ಗೋರಖ ಪ್ರಸಾದರವರು ತಮ್ಮ ಮನೆಯಲ್ಲಿ ನಮಗೆಲ್ಲರಿಗೆ ಆಶ್ರಯ ಕೊಟ್ಟರು. ಅದೊಂದು ಧರ್ಮಶಾಲೆಯಾಗಿ ಪರಿಣಮಿಸಿತು. ನಮಗೆಲ್ಲರಿಗೂ ಅದರೊಳಗೆ ಸಾಲುವಷ್ಟು ಸ್ಥಳವಿರಲಿಲ್ಲ. ಮೋತಿಹಾರಿಯಿಂದ ೫ ಮೈಲಿನ ಮೇಲೆ ಒಬ್ಬ ಒಕ್ಕಲಿಗನಿಗೆ ಪೀಡಿಸಿದ ಸುದ್ದಿಯು ನಮಗೆ ಅದೇ ದಿನ ಹತ್ತಿತು. ಬಾಬು ಧರಣೀಧರ ಪ್ರಸಾದರವರಿಗೆ ಕರಕೊಂಡು ನಾನು ಮಾರನೇ ದಿನ ಬೆಳಿಗ್ಗೆ ಹೋಗಿ ಆ ಒಕ್ಕಲಿಗನಿಗೆ ನೋಡಿ ಬರಬೇಕಾಗಿ ಸವ್ಯಸ್ಲರ ನಿರ್ಧಾರವಾಯಿತು. ನಾವು ಆನೆ ಹತ್ತಿ ಆ ಗ್ರಾಮಕ್ಕೆ ತೆರಳಿದೆವು. ಈ ಪ್ರದೇಶದಲ್ಲಿ ಆನೆಯ ಮೇಲೆ ಸ್ವಾರಿ ಮಾಡುವದೆಂದರೆ, ಗುಜರಾಥದಲ್ಲಿ ಗಾಡಿ ಹತ್ತುವ ಹಾಗೆಯೇ. ಅರ್ಧ ಹಾದಿ ಹೋಗುವಷ್ಟರಲ್ಲಿ ಪೋಲೀಸ ಸುಪರಿಂಟೆಂಡೆಂಟರಿಂದ ದೂತರೊಬ್ಬರು ಬರುತ್ತ ಬಂದು ಸುಪರಿಂಟೆಂಡೆಂಟರು ನನಗೆ ನಮಸ್ಕಾರ ಹೇಳಿರುವರಾಗಿ ಹೇಳಿದರು. ನನಗಿದರ ಅರ್ಥ ತಿಳಿಯಿತು. ಧರಣೀಧರ ಬಾಬುರವರಿಗೆ ಆ ಗ್ರಾಮಕ್ಕೆ ಹೋಗಹೇಳಿ ದೂತನು ತಂದ ಬಾಡಿಗೆಯ ಗಾಡಿಯನ್ನು ನಾನು ಹತ್ತಿದೆನು. ಬಳಿಕ, ಚಂಪಾರಣ್ಯವನ್ನು ನಾನು ತ್ಯಜಿಸಬೇಕಾಗಿ ನೋಟೀಸನ್ನು ಆತನು ನನ್ನ ಮೇಲೆ ಜ್ಯಾರಿ ಮಾಡಿದನು. ಮತ್ತು ನನಗೆ ತಿರುಗಿ ನನ್ನ ಬಿಡಾರಕ್ಕೆ ಒಯ್ದನು. ನೋಟೀಸು ಮುಟ್ಟಿದ ಬಗ್ಗೆ ಪಾವತಿ ಬರಕೊಡಬೇಕಾಗಿ ಆ ಸಿಪಾಯಿಯು ಕೇಳಲು, ಈ ನೋಟೀಸನ್ನು ನಾನು ಮಾನ್ಯ ಮಾಡುವದಿಲ್ಲೆಂದೂ, ನನ್ನ ಚೌಕಶಿ ಮುಗಿಸಿಕೊಂಡ ಹೊರತು ಚಂಪಾರಣ್ಯವನ್ನು ಬಿಟ್ಟುಹೋಗಲಿಕ್ಕಿಲ್ಲಾಗಿಯೂ ನಾನು ಬರಕೊಟ್ಟೆ. ಹಾಗೆಯೇ ನನಗೆ ಸಮನ್ಸು ಬಂತು. ಚಂಪಾರಣ್ಯವನ್ನು ಬಿಟ್ಟುಹೋಗಬೇಕೆಂಬ ಆಜ್ಞೆಯನ್ನು ಅಮಾನ್ಯ ಮಾಡಿದಬಗ್ಗೆ ನನ್ನ ಮೇಲೆ ಖಟ್ಲೆಯಾಗಿರುವದಾಗಿಯೂ, ಅದರ ವಿಚಾರವು ಮಾರನೇ ದಿನವೇ ಇಟ್ಟಿರುವದಾಗಿಯೂ ಆ ಸಮನ್ಸಿನಲ್ಲಿ ಬರೆದಿತ್ತು.

ಇಡೀ ರಾತ್ರೆ ನಾನು ಒರಗಲಿಲ್ಲ. ಪತ್ರ ಬರೆದೆನು. ಬಾಬು ವ್ರಜಕಿಶೋರ ಪ್ರಸಾದರವರಿಗೆ ಅವಶ್ಯವುಳ್ಳ ಸೂಚನೆಗಳನ್ನೂ ಕೊಟ್ಟೆನು. ನನ್ನ ಮೇಲೆ ಆದ ನೋಟೀಸು-ಸಮನ್ಸುಗಳ ಸುದ್ದಿಯು ವಿದ್ಯುದ್ವೇಗದಿಂದ ಹಬ್ಬಿತು. ಆ ದಿನ ಮೋತಿಹಾರಿಯಲ್ಲಿ ಅಪೂರ್ವ ಪ್ರಕಾರಗಳು ಸಂಭವಿಸಿದವೆಂದು ನನಗೆ ಕೇಳಲಾಯಿತು. ಗೋರಖ ಬಾಬುರವರ ಮನೆಯ ಸ್ಥಳವೂ, ಕೋರ್ಟಿನಲ್ಲಿಯೂ ಜನರ ಗೊಂದಲವು ಹೇಳಲಾಗುತ್ತಿಲ್ಲ. ಸುದೈವದಿಂದ ನನ್ನ ಕೆಲಸವನ್ನೆಲ್ಲ ನಾನು ರಾತ್ರಿಗೇ ತೀರಿಸಿಕೊಂಡಿದ್ದೆ. ಆದರಿಂದ ಈ ಜನರಿಗೆ ಸಮಾಧಾನ ಮಾಡಲು ನನಗನುಕೂಲವಾಯಿತು. ನನ್ನ ಸಂಗಡಿಗರು ನನಗೆ ಬಹಳ ಸಹಾಯ ಮಾಡಿದರು. ನಾನು ಹೋದಹೋದಲ್ಲಿ ಜನರು ನನಗೆ ಮುತ್ತುತ್ತಿದ್ದರು. ಜೊತೆಗಾರರು ಜನರೊಳಗೆ ವ್ಯವಸ್ಥೆಯನ್ನು ಕಾಯುತ್ತಿದ್ದರು.

ಕಲೆಕ್ಟರರೂ, ಮೆಜಿಸ್ಟ್ರೇಟರೂ, ಪೋಲೀಸ ಸುಪರಿಂಟೆಂಡೆಂಟರೂ, ನಾನೂ ಒಂದು ಪ್ರಕಾರದಿಂದ ಸ್ನೇಹಿತರಾದೆವು. ನನ್ನ ಮೇಲೆ ಜ್ಯಾರಿ ಮಾಡಿದ ನೋಟೀಸುಗಳನ್ನು ನಾನು ಕಾಯಿದೆಯಂತೆ ನಿರೋಧಿಸಬಹುದಿತ್ತು. ಆದರೆ, ನಾನು ಅವನ್ನೆಲ್ಲ ಅಂಗೀಕರಿಸಿದೆನು. ಅಧಿಕಾರಿಗಳ ಬಳಿ ನನ್ನ ವರ್ತನವು ಪತ್ಯ್ರಶುದ್ಧವಿತ್ತು. ಸ್ವತಃ ಅಧಿಕಾರಿಗಳ ಅಪಮಾನ ಮಾಡಲು ನನ್ನ ಉದ್ದೇಶವಿರಲಿಲ್ಲವಾಗಿ ಅವರಿಗೆ ಹೊಳೆಯಿತು. ಅವರ ಹುಕುಮುಗಳನ್ನು ಶಾಂತರೀತಿಯಿಂದ ವಿರೋಧಿಸುವದೇ ನನ್ನ ಧ್ಯೇಯವಾಗಿತ್ತೆಂದೂ ಅವರ ಗ್ರಹಿಕೆಯಾಯಿತು. ಈ ಪ್ರಕಾರ ಅವರು ಸಮಾಧಾನಪಟ್ಟರು. ನನಗೆ ಉಪದ್ರವ ಕೊಡುವ ಬದಲು ಜನಸಂದಣಿಯನ್ನು ಅಟಕಾಯಿಸುವ ಕಾರ್ಯದಲ್ಲಿ ನಮಗವರು ನೆರವಾದರು. ಈ ಸಂದಣಿಯಿಂದ ಅವರ ಅಧಿಕಾರವು ಕೆಲಮಟ್ಟಿಗೆ ಶಿಥಿಲವಾಗಿರುವದಾಗಿ ಅವರಿಗೆ ಪ್ರತ್ಯಕ್ಷ ತಿಳಿದಂತಾಯಿತು. ಜನರು ಕ್ಷಣದ ಭೀತಿಯನ್ನು ತೊರೆದು ಪ್ರೇಮಸಾಮ್ರಾಜ್ಯದಲ್ಲಿ ಸಿಲುಕಿದ್ದರು; ಹೊಸ ಗೆಳೆಯರು ಪ್ರೇಮವನ್ನು ಜನಿಸಿದ್ದರು.

ಒಂದು ಮಾತು ಲಕ್ಷದಲ್ಲಿಡುವಂಥದ್ದಿದೆ. ಆ ಕಾಲಕ್ಕೆ ಚಂಪಾರಣ್ಯದಲ್ಲಿ ನನ್ನ ಗುರುತಿನವರ್‍ಯಾರೂ ಇರಲಿಲ್ಲ. ಒಕ್ಕಲಿಗರೆಲ್ಲ ಅಜ್ಞಾನಿಗಳೇ. ಚಂಪಾರಣ್ಯವು ಭಾಗೀರಥಿಯ ಉತ್ತರ ತುದಿಗಿದೆ. ಹಿಮಾಲಯ ಪರ್ವತದ ಬುಡಕ್ಕೆ ಈ ಪ್ರದೇಶವಿದೆ. ನೇಪಾಳ ದೇಶವು ಇದಕ್ಕೆ ಹೊಂದಿಕೆಯಾಗಿದೆ. ಅದರಿಂದ ಭರತಖಂಡಕ್ಕೂ, ಇದಕ್ಕೂ ಸಂಬಂಧವಿಲ್ಲದ ಹಾಗೆಯೇ. ಆ ಪ್ರದೇಶದಲ್ಲಿ ರಾಷ್ಟ್ರೀಯ ಸಭೆಯ ಹೆಸರೇ ಗೊತ್ತಿರಲಿಲ್ಲ; ಗೊತ್ತಿದ್ದವರ್‍ಯಾರಾದರೂ ಇದ್ದರೆ, ಅವರು ಹೆಸರು ಹೇಳಲಿಕ್ಕೆ ಸಹ ಹೆದರುತ್ತಿದ್ದರು. ಈಗ ರಾಷ್ಟ್ರೀಯ ಸಭೆಯೂ, ಅದರ ಸಭಾಸದರೂ ರಾಷ್ಟ್ರೀಯ ಸಭೆಯ ಹೆಸರಿನಿಂದ ಪ್ರವೇಶಿಸಲಿಲ್ಲಾದ್ದೇನೋ ನಿಜ. ಆದರೆ, ಹೆಸರಿಲ್ಲದಾಗ್ಯೂ ತತ್ವದಿಂದ ಅದರು ಪ್ರವೇಶಿಸಿದರು.

ಜೊತೆಗಾರರ ಆಲೋಚನೆ ಪಡೆದು ರಾಷ್ಟ್ರೀಯ ಸಭೆಯ ಹೆಸರಿನಿಂದ ಯಾವದೇ ಕೆಲಸ ಮಾಡಬಾರದೆಂದು ನಿರ್ಣಯಿಸಿದೆವು. ನಮಗೆ ಬೇಕಾದದ್ದು ಕೆಲಸ; ಹೆಸರೇನು ಮಾಡುತ್ತದೆ? ರಾಷ್ಟ್ರೀಯ ಸಭೆಯ ಹೆಸರು ಕಂಡರೆ, ಸರಕಾರಕ್ಕೂ ಸರಕಾರದ ಸೂತ್ರಧಾರರಾದ ತೋಟಿಗ ಸಾವುಕಾರರಿಗೂ ಕಡು ತಾಪವಾಗುತ್ತಿತ್ತು. ರಾಷ್ಟ್ರೀಯ ಸಭೆ ಎಂದ ಕೂಡಲೆ ಅದೊಂದು ವಕೀಲರ ಕುತ್ಸಿತ ವಾದಭೂಮಿಯೆಂದೂ, ಕಾಯಿದೆಯೊಳಗಿಂದ ಹಾದಿಗಳ ಉಪಾಯಗಳನ್ನು ಹುಡುಕಿ ಶಾಸನ ತಪ್ಪಿಸಿಕೊಳ್ಳುವ ಸಂಸ್ಥೆಯೆಂದೂ, ಬಾಂಬು, ಅರಾಜಕತೆ ಮುಂತಾದವುಗಳ ಪುರಸ್ಕಾರ ಸಂಸ್ಥೆಯೆಂದೂ, ಕಪಟ ವಿದ್ಯೆ, ಕಕ್ಕುಲತೆ ಮುಂತಾದವುಗಳನ್ನು ಪೋಷಿಸುವ ಸಂಸ್ಥೆಯೆಂದೂ ಪ್ರಖ್ಯಾತಿಯಾಗಿದ್ದಿತು. ಈ ಅಪವಾದವನ್ನು ನಾವು ಹೋಗಲಾಡಿಸಬೇಕಾಗಿದ್ದಿತು. ಅದರಿಂದ ರಾಷ್ಟ್ರೀಯ ಸಭೆಯ ಹೆಸರನ್ನೆತ್ತಬಾರದೆಂದೂ, ರಾಷ್ಟ್ರೀಯ ಸಭೆಯ ವಿಷಯ ಒಕ್ಕಲಿಗರಿಗೆ ಪರಿಚಯ ಮಾಡಿಕೊಡಬಾರದೆಂದೂ ನಾವು ನಿರ್ಣಯಿಸಿದೆವು. ರಾಷ್ಟ್ರೀಯ ಸಭೆಯೆಂಬ ಶಬ್ದ ತಿಳಕೊಳ್ಳದೆ, ಅದರ ತತ್ವ ರಾಷ್ಟ್ರೀಯ ಸಭೆಯಂತೆ ನಡಿಸತಕ್ಕದಾಯಿತೆಂದು ನನ್ನ ಗ್ರಹಿಕೆಯಾಯಿತು.

ಆದರಿಂದ ನಮ್ಮ ಗಮನದ ಪೂರ್ವ ತಯಾರಿಯ ಬಗ್ಗೆ ರಾಷ್ಟ್ರೀಯ ಸಭೆಯ ಕಡೆಯಿಂದ ಈ ಪ್ರದೇಶದಲ್ಲಿ ಯಾರೂ ಹೋಗಿದ್ದಿಲ್ಲ. ರಾಜಕುಮಾರ ಶುಕ್ಲರವರಿಗೆ ಸಾವಿರಾರು ಮಂದಿ ಒಕ್ಕಲಿಗರನ್ನು ಕೂಡಿಸುವದು ಸಾಧ್ಯವಿರಲಿಲ್ಲ. ಈ ತನಕ ಈ ಪ್ರದೇಶದಲ್ಲಿ ರಾಜಕೀಯ ಕೆಲಸವಾಗಲಿಲ್ಲ; ಚಂಪಾರಣ್ಯದ ಹೊರಗೆ ಬೇರೆ ಜಗತ್ತಿದೆಂದು ಅಲ್ಲಿಯವರಿಗೆ ಗೊತ್ತೇ ಇಲ್ಲ. ನಾನು ಪುರಾತನ ಕಾಲದಿಂದ ಪರಿಚಯವಿದ್ದ ಗೆಳೆಯನೆಂಬಂತೆ ಅವರು ನನಗೆ ಸತ್ಕರಿಸಿದರು. ಒಕ್ಕಲಿಗರ ಸಭೆಯಲ್ಲಿ ನನಗೆ ಪರಮಾತ್ಮನ ಸಾಕ್ಷಾತ್ಕಾರವಾದಂತಾಯಿತು. ಅಹಿಂಸೆಯೂ, ಸತ್ಯವೂ ಈ ಸಭೆಯಲ್ಲೇ ನನಗೆ ಪ್ರಗೋಚರವಾದವು. ಈ ಮಾತುಗಳೇನು ಅತಿಶಯೋಕ್ತಿಯಲ್ಲ; ಸತ್ಯಸ್ಥಿತಿಯಿದು.

ಈ ಪ್ರಕಾರ ಸಂಭವಿಸುವಂತೆ ನಾನೇನು ತರಕ್ಷಯ ಮಾಡಲಿಲ್ಲ. ಜನರ ಮೇಲಿನ ಪ್ರೀತಿಯಿಂದಲೇ ಈ ಚಮತ್ಕಾರ ಸಂಭವಿಸಿತು. ಅಹಿಂಸೆಯನ್ನು ಅಚಲವಾಗಿ ನಾನು ನಂಬಿಕೊಂಡಿದ್ದರಿಂದಲೇ ಇದು ನಿಸ್ಸಂಶಯವಾಗಿ ಸಂಭವಿಸಿತು.

ಚಂಪಾರಣ್ಯದೊಳಗೆ ಸಂಭವಿಸಿದ ಆ ದಿನದ ಕಥೆಯನ್ನು ನನ್ನಿಂದೆಂದೂ ಮರೆಯಲಿಕ್ಕಾಗದು. ಒಕ್ಕಲಿಗರಿಗೂ, ನನಗೂ ಅದು ಸುದಿನ ದಿನವಾಗಿತ್ತು. ಕಾಯಿದೆಯಂತೆ ನನ್ನ ಮೇಲೆ ಖಟ್ಲೆ ನಡೆದಿತ್ತು; ಆದರೆ, ನಿಜವಾಗಿ ಈ ಖಟ್ಲೆ ರೂಪದಿಂದ ಸರಕಾರದ್ದೇ ಪರೀಕ್ಷೆಯಾಗುತ್ತಿತ್ತು. ನನಗಾಗಿ ಬಗೆದ ಬಲೆಯಲ್ಲಿ ಕಮೀಶನರರು ಸರಕಾರಕ್ಕೇ ಸಿಲುಕಿಹಾಕಿದರು.

ಪ್ರೆಸಿಡೆನ್ಸಿ ಪ್ರೋವಿಡೆಂಟ-ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ:-ಅಮೃತ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಧಂದ್ಯಾಶ ಇದೆ.

ಸ್ಪೆಶಲ್ ಪೋಲೀಸಿಗಳು ೧-೭-೨೮ ನೇ ತಾರೀಖಿನಿಂದ ಕೊಡಲ್ಪಡುತ್ತವೆ. ೨ ವರ್ಷಗಳ ಮೇಲೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು. ಡಾಕ್ಟರರ ತಪಾಸು ಇಲ್ಲಾ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗುತ್ತದೆ. ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾರೆ; ಇನ್ನೂ ಇಳಿಸುತ್ತಿದ್ದಾರೆ. ಕಂತಿನ ರಕಮು ತಿಂಗಳಿಗೆ ೧ ಯಾ ೨ ರೂಪಾಯಿ. ೧೪ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ಸಿಗುತ್ತವೆ. ಪ್ರಯತ್ನಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ದಲಾಲಿ ದರವು ವಿಶೇಷ. ಹೆಚ್ಚಿನ ಮಾಹಿತಿಯ ಬಗ್ಗೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದು,

ವೃತ್ತಸಾರ.

— ಮುಂಬಯಿಯ ಸತ್ಯಾಗ್ರಹ ಸೇವಾ ಸಮಾಜದ ಉಪಾಧ್ಯಕ್ಷರು ಚಹದ ಚಟವನ್ನು ಹೋಗಲಾಡಿಸುವದಕ್ಕಾಗಿ, ಚಹ ಕುಡಿಯುವವರ ಕುರಿತು ಪ್ರತಿಜ್ಞಾ ಪತ್ರವನ್ನು ತಯಾರಿಸಿದ್ದಾರೆ. ಜೀವಮಾನವಿರುವ ವರೆಗೆ ಚಹ ಕುಡಿಯುವದಿಲ್ಲೆಂದು ಮನೋನಿಶ್ಚಯ ಮಾಡಿ ಪ್ರತಿಜ್ಞಾಲೇಖಕ್ಕೆ ಸಹಿ ಮಾಡಬೇಕು. ೧೦೦ ಮಂದಿಗಳು ಪ್ರತಿಜ್ಞೆ ಕೊಂಡ ಬಳಿಕ ಚಹ ವಿರೋಧಕರ ಪರಿಷತ್ತು ಸೇರಿಸಬೇಕೆಂದು ಸಂಕಲ್ಪವಾಗಿರುತ್ತದೆ.

— ಬೆಳಗಾವಿಯಿಂದ ಬಾರ್ಡೋಲಿಗೆ ರೂ. ೧೫೦ ಕಳುಹಿಸಲಾಗಿದೆ. ಇದರಿಗಿಂತ ರೂ. ೧೮೩॥ ಕಳುಹಿಸಲ್ಪಟ್ಟವು.

— ಉರಿಯಾ ದೇಶದಲ್ಲಿ ಬುದ್ಧ ದೇವರ ಜನ್ಮಸ್ಥಳ ಉಲ್ಲೇಖಿಸುವ ಶಿಲಾಶಾಸನವೊಂದು ದೊರಕಿದೆ. ಇದು ಅಶೋಕ ಚಕ್ರವರ್ತಿಯ ಕಾಲದ್ದಂತೆ!

— ಸಿಂಧ ಪ್ರಾಂತಿಕ ಮುಸಲ್ಮಾನರ ಪರಿಷತ್ತಿನಲ್ಲಿ ಸೈಮನ್ ಕಮಿಟಿಯನ್ನು ಬಹಿಷ್ಕರಿಸಬೇಕೆಂದು ನಿರ್ಧರಿಸಿದ್ದಾರೆ. ಅಧ್ಯಕ್ಷರಾದ ಮಾ। ಅಲಂರವರು ಬಾರ್ಡೋಲಿಯ ಸತ್ಯಾಗ್ರಹದಂತೆ ೧೦—೧೨ ಸ್ಥಳಗಳಲ್ಲಿ ಸತ್ಯಾಗ್ರಹ ಮಾಡಿದ್ದಲ್ಲಿ ಸ್ವರಾಜ್ಯ ಸಿಕ್ಕೀತೆಂದು ಅಭಿಪ್ರಾಯಪಟ್ಟಿದ್ದಾರೆ.

— ಮೇ ... ರೊಳಗಿನ ಹೊಸ ಕಾಲೇಜಿಗೆ ವಿಜಾಪುರದ ಮಾ। ಹಿರೇಮಠ ಹಾಗು ಹಾಳಭಾವಿಯವರು ೧೦೦೦೦.೧೦೦೦ ರೂಪಾಯಿಗಳನ್ನರ್ಪಿಸಿದ್ದಾರೆ.

— ಕಲಕತ್ತೆಯ ರಾಷ್ಟ್ರೀಯಸಭೆಗೆ ಪಂಡಿತ ಮೋತಿಲಾಲ ನೆಹರೂರವರು ಅಧ್ಯಕ್ಷರಾಗಬೇಕಾಗಿ ಮಹಾತ್ಮರು ಸೂಚಿಸಿದ್ದಾರೆ. ಬಹಳ ಮಾಡಿ ಪಂಡಿತ ಮೋತಿಲಾಲರೇ ಅಧ್ಯಕ್ಷರಾಗಿ ಆರಿಸಲ್ಪಡುವರಾಗಿ ಹೇಳಲಡ್ಡಿಯಿಲ್ಲ.

— ಗೋಪಬಂಧು ದಾಸರವರ ಸ್ಮರಣಾರ್ಥ ಕಟಕದಲ್ಲಿ "ಗೋಪಬಂಧು ಶಿಲ್ಪಸದನ" ವೆಂಬ ಔದ್ಯೋಗಿಕ ಹಾಗು ವರ್ತಕ ಸಂಸ್ಥೆಯನ್ನು ಸ್ಥಾಪಿಸಬೇಕಾಗಿ ಅಲ್ಲಿಯ ನಾಗರಿಕರ ವಿಚಾರವಾಗಿದೆ.

— ಅಸ್ಪೃಶ್ಯನೆಂದು ತಮಗೆ ಹೊರತಕ್ಕೆ ಹಾಕ್ಯಾ ವಿಶ್ವವಿದ್ಯಾಲಯದ ಪರೀಕ್ಷೆಗೆ ಕೂಡ್ರಲು ಕೊಡದಿದ್ದದರಿಂದ ಮಿ। ನಾರ ರಾಜಮಾನ ಎಂಬ ವಿದ್ಯಾರ್ಥಿಯು ಹಾಕ್ಯಾ ವಿದ್ಯಾಲಯದ ಮೇಲೆ ಮಾಡಿದ ದಾವೆಯು ಡಿಕ್ರಿಯಾಗಿದೆ. ಫೀ ಕೊಂಡು ಆತನಿಗೆ ಪರೀಕ್ಷೆಗೆ ಕೂಡ್ರಲು ಕೊಡಬೇಕಾಗಿ ಮುನಸೀಫರು ಹುಕುಮು ಮಾಡಿದ್ದಾರೆ. ಹುಕುಮಾಗುವ ಮುಂಚೆಯೇ ಪರೀಕ್ಷೆಗೆ ಪ್ರಾರಂಭವಾಗಿ ಹೋಗಿತ್ತು. ಅವಿಲಂಬಾಗಿ ಮಾಡುವ ಬಗೆ ಹೇಗೆ? ರಮಜಾನ ಹಬ್ಬದಲ್ಲಿ ಉಪವಾಸ ಮಾಡಲಿಲ್ಲೆಂದು ವಿಶ್ವವಿದ್ಯಾಲಯದವರಿಂದ ಆತನಿಗೆ ವಿದ್ಯಾಲಯದ ಮುಸಲ್ಮಾನ ಮಂದಿರದೊಳಗಿಂದ ಹೊರಹಾಕಲ್ಪಟ್ಟಿತ್ತು.

— ಜೈನ ಧರ್ಮದ ಶ್ರೀ ಕ್ಷೇತ್ರ ... ಸ್ಥಾನಿಕ ಪಾಸಿಯ ಪೂಜ್ಯ ಶ್ರೀ ಸಾಗರಮಲಜೀ ಸ್ವಾಮಿಗಳವರು ತೀರ್ಥಂಕರ ಶಾಸ್ತ್ರದಂತೆ ಅನಶನ ವ್ರತವನ್ನು ಅಂಗೀಕರಿಸಿ ತಮ್ಮ ೩೯ ನೇ ವರ್ಷ ಪ್ರಾಯದಲ್ಲಿ ಪರಂಧಾಮವನ್ನೈದಿದರು. ಬಹಳ ವೈರಾಗ್ಯ ಪುರುಷರವರು, ಮುಂಚಿನಿಂದ ಲೇ ಪರಮಾರ್ಥ ಸಾಧನದಲ್ಲಿ ನಿರತರಾಗಿದ್ದರು. ಅನ್ನಾಸ್ತ್ಯದೊಳಗಿಂದ ಸಾವು ಬರುತ್ತಲಾದರೆಂದು ಅವರು ಗ್ರಹಿಸಿ ಶಾಸ್ತ್ರದಂತೆ ಉಪೋಷಣ ಮಾಡಿ ಪ್ರಾಣೋತ್ಕ್ರಮಣ ಮಾಡಿದರು.

— ಸರಕಾರದ ಮೇಲಿನ ಪಠಾಣರು ೧೧೦ ರೂಪಾಯಿಗಳ ನೋಟುಗಳನ್ನು ತಯಾರಿಸುವ ಕಾರಖಾನೆಯನ್ನಿಟ್ಟಿದ್ದರು. ಅದು ಈಗ ಪತ್ತೆಯಾಗಿದೆ.

— ಮಿಶ್ರ ಹುಲ್ಲನ್ನು ತಯಾರಿಸ ಮಾರಿದ ಬಗ್ಗೆ ಉಪ್ಪಿನ ವರ್ತಕರಿಂದ ೧ ಲಕ್ಷ ರೂಪಾಯಿಗಳು ಎತ್ತಲ್ಪಟ್ಟಿದ್ದವು. ಈ ಹಣದಿಂದ ಪಂಡಿತ ಮದನಮೋಹನ ಮಾಲವೀಯರವರ ಆಲೋಚನೆ ಪಡೆದು ಹುಲ್ಲು ಬೇಳೆಗಳನ್ನು ಕೊಳ್ಳಬೇಕಾಗಿ ದಿಲ್ಲಿಯ ರಾಯಬಹದ್ದೂರ ಸೇಟ ಬನಸೀಲಾಲ ಅವಿರಚಂದರವರು ಸಂಕಲ್ಪ ಮಾಡಿದ್ದಾರೆ.

— ಕರ್ನಾಟಕ ಪ್ರಾಂತದಲ್ಲಿ ಕಳೆದ ಎಪ್ರಿಲ ತಿಂಗಳಲ್ಲಿ ೩೬೫೫೫ ರೂಪಾಯಿಗಳ ಖಾದಿಯು ಹುಟ್ಟಿತು. ೧೨೯೭೬ ರೂಪಾಯಿಗಳ ಖಾದಿಯು ವಿಕ್ರಯವಾಯಿತು. ಇದೇ ತಿಂಗಳಿನಲ್ಲಿ ೧,೯೨,೬೩೧ ರೂಪಾಯಿಗಳ ಉತ್ಪನ್ನವಾಯಿತು. ೩ ೧೮,೧೩೩; ರೂಪಾಯಿಗಳ ಖಾದಿಯು ವಿಕ್ರಯವಾಯಿತು.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ। ಎ. ರಂಗನಾಥಂ ಅವರ ಮುನ್ನುಡಿ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ। ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೫೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತವು ಮನೋಹರವಾದ ಬಣ್ಣ ಚಿತ್ರ, ಛಾಯಾಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ (ಕಾ) ೧೭೩ ಚಾಮರಾಜಪೇಟೆ, ೫ನೇ ಬೀದಿ, ಬೆಂಗಳೂರು ಸಿಟಿ.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಸಲಕರಣೆ,
ದೊರಗಾದ ಹಾಗು ನಯಗಾದ
ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ,
ಹತ್ತಿಯ ಹಾಗು ಹಿತ್ತಾಳೆಯ ಬಿಡಗರುಗಳೂ,
ಕಂಡಿಯ ಬೋಬಿನುಗಳೂ, ಮಾಕೋಡುಗಳೂ,
ಎಮೆರಿ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.
ಬಹಳ ಅಗ್ಗ!

P. P. TRIVEDI & CO.,
BRUCE Street, Fort, BOMBAY.

೮ನೇ ಆ॥] ನನ್ನ ಶಾಸ್ತ್ರೀಯವಾದ [೮ನೇ ಆ॥

ಶಾರೀರಿಕ ಶಿಕ್ಷಣ.



ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುವವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೩ ಆಣೆಯ ಸ್ಟಾಂಪನ್ನು ಕಳುಹಿಸಿದಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಆಲೋಚನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರು ಸಿಟಿ.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಶಕ್ತಿಯು ಕೂಡ ತರುಣರಂತೆ ಪರಿವರ್ಧಮಾನವಾಗುವದು. ನಿಜವಾಗಿ ಒಂದೇ ಸಲಕ್ಕಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಬಾಧಕವಾದ ಪ್ರಫೋಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ತರುವಾಯ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಶಾವಿನಿಂದ ಹುಟ್ಟಿಕವಾದ ಶರೀರವು ನಿರೋಗಿಯಾಗುವದು. ಕೆಲವು ದಿವಸಗಳಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಧಮ್ಮು ಇವುಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಜರನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಕಾಂತಿ ಸುಧಾರಿಸುವದು. ಮೈಯಲ್ಲಿ ಎಷ್ಟೋ ದಿವಸದ ಕ್ಷಯ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ದಿವಸಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ನಾಲ್ಕುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಇದನ ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ವಿ.ಪಿ.ಯಿಂದ ಕಳಿಸುವದು ೧ ಬಾಟ್ಲಿಗೆ ೧-೮-೦ ೩ ಬಾಟ್ಲಿಗೆ ೩-೮-೦ ಇದನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂ.

झंडूचें

द्राक्षासव – मृद्विकारिष्ट – शारंगधर म. अ. १०

रामबाण औषध

सर्दि थांबविणारें,
भूक वाढविणारें
शौच्यास साफ करणारें
झोंप आणिणारें
शक्ति देणारें
तेजस्वीपणा आणणारें

पिण्यास रुचिकर

किंमत- एक रत्तलास १॥ रुपये.
क्याटलाग मागवा

झंडु फार्मास्युटिकल वर्क्स लिमिटेड

मुंबई नं: १४

ऐजंट— मेसर्स पंडित आणि कंपनी,
तीर्थहळ्ळी

सिर्सि एजंट- एम्. एल्. धाकप्पा आणि ब्रदर

ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಅಗ್ಗವಾದ
'ನೆಶನಲ್, ಇನ್‌ಶೂರನ್ಸ್-ಕಂಪೆನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರಕಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಸಂಕೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಸಂಕೆಯೂ ಬಹುಮಾನ ಕೊಟ್ಟಿರುವವು.

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ. ನಮ್ಮ ದರವು ಅಷೆ ಂದು ಸುಲಭ, ಎಲ್ಲಾ ಕಡೆಯಲ್ಲಿಯೂ ಏಜಂ ಬೇಕು!

ಕರ್ನಾಟಕಕ್ಕೆ ಏಜಂಟರು:- ಬಿ. ಸಿ. ಸಿರಾಳಕೊಪ್ಪ, ಲೀಮಿಂದ ಬಿಲ್ಡಿಂಗ, ಹುಬ್ಬಳ್ಳಿ.

P. D. Churi,
Branch Secretary,
Alice Building,
Hornby Road,
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಸೀರೆ, ಪಿಣಾ, ರೇಶ್ಮೆ ಶಲ್ಲೆ, ಬಚ್ಚಾಕಸೆ, ಕಾಶ್ಮೀರದ ಶಾಲು, ಸಕಲಾತಿ ಧಾಬಳಿ, ರುದ್ರಾಕ್ಷಿ ಸರ, ಕಂಠಿ, ಗೌರೀಶಂಕರ, ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಚಾಫುಂಚೆ, ಶಂಖ, ಮುಂತಾದ ಸಕಲವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ನಮ್ಮ ಪತ್ತೆ:—
ವಿಶ್ವನಾಥ ಎಂಡ್ ಬ್ರದರ್ಸ್,
ದುರ್ಗಾಘಾಟ ಬನಾರಸ್ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟೆತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಿಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು.

ಬುಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ.—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ, ಬಾ ೫೧೦, ಪಾರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತಿಳುವಾಗ ವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ಸಿದ್ಧಿಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚ ... ವೆ ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ಥಂಭ ವಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ. ರತಿಸ ಬಂಧದ ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಿಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದ್ದದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲೆಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲೆಯ ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೪೪ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ. ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ. ಪಿ ಖರ್ಚ ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ:— ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ ಮಿರಜ.



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು:

ಬಾಳಿಕೆಗೆ ತೀರ ಅನುಕೂಲ; ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ದೇಶಾದ್ದಲ್ಲಿಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೊ,
ಮುಂಬಯಿ ಮತ್ತು ಮದ್ರಾಸ.

Pri nted and Published by Krishnarao Keshav Shenvi (Editor) at his Star of Kanara Press, Kum

REG. NO. B. 1270 : MONDAY, AUGUST 6TH 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೩

यदि नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು:
ರೂಪಾಯಿ 2-4-0.
ಮನೀಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.

ಕನ್ನಡ, ಇಂಗ್ಲಿಷ ಸ್ಮಾಲ ಪೈಕಿನ (೧೨ ಎಲ್ ಉದ್ದ) ೮ ಸಾಲುಗಳವರೆಗೆ ರೂ. 1-[illegible]
ಆ ನಂತರ ಪ್ರತಿಸಾಲಿಗೆ 0-2-0.
ಹತಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹೀರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೬ ಮಾಹೆ ಅಗೋಸ್ತ ಸನ್ ೧೯೨೮ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ವಸ್ತ್ರಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ವಹಾದರಿಯ ಸಾಮಾನುಗಳು ಸಿಗುತ್ತವೆ:—ಕಪ್ಪಿಣ ಪೆಟಿಗೆಗಳು, ಮೋಟಾರ ಉಪಯೋಗದ ಬೋಲ್ಟು ಗಳು, ಪಿನ್ ಪ್ರೊಶರ, ಡಿಸ್ಟಿಲ್ಡ ಪ್ರೊಟರ ಸಿಗುತ್ತವೆ; ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಲಾಟೀನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ ! ಎಲ್ಲ ಸಾಮಾನು ಅಗ್ಗ ! ಚಿಲ್ಲರೆ ವ್ಯಾಪಾರಸ್ಥರು ತೋಕ ವಸ್ತ್ರಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಸೀಸೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಸ್ಪೆನ್ಸೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

S. U. Narayanacharya & CO.
Chaukamba, BENARES CITY,

ನಮ್ಮಲ್ಲಿ ಎಲ್ಲಾತರದ ರೇಷ್ಮಿ ಪೀತಾಂಬರ, ಜರಿ ಶಾಲು, ಜರಿ ಸೀರೆ, ಕಾಶ್ಮೀರ ಶಾಲು, ಧರ್ಮರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಸಾಮಾನುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

Wanted:- Candidates for Telegraph and Station Master's Classes. Full particulars and Railway Fare Certificate on 2 annas stamp. Apply to:— Central Telegraph College, Nai Sarak, **Delhi.**

"ಔಷಧ ಸೀಸೆಗಳಿಗಿಂತ ಬರೇ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ" ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯದಿಂದ ಶಾಶ್ವತರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಜವಾಬು ಕಾಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ಶ್ರೀ। ತಾಂಬೇ ಶಾಸ್ತ್ರಿಗಳ ಪ್ರವಚನಗಳು.

(೨)

ಧರ್ಮವು ಒಟ್ಟಿನ ಸ್ಥಿತಿಯ ಕಾರಣವು, ಐಹಿಕ-ಪಾರಲೌಕಿಕ ಉನ್ನತಿಯ ಸಾಧನವು ಎಂಬ ಶಂಕರಾಚಾರ್ಯರ ವ್ಯಾಖ್ಯೆಯನ್ನು ನಾನು ವಿವರಿಸಿದ್ದೇನೆ. ಸಾಮಾನ್ಯ ಧರ್ಮದ ವ್ಯಾಪಕತೆಯನ್ನೂ ನಿರೂಪಿಸಿದ್ದೇನೆ. ಮಾನವನ ಭಾಷಣವು ಸಹ ಧರ್ಮಕ್ಕೆ ಅನುಸರಿಸಿ ಇರಬೇಕೆಂದು ಶಾಸ್ತ್ರಾಧಾರ ಕೊಟ್ಟು ಹೇಳಿದ್ದೇನೆ " ಮನಃಪೂತಂ ಸಮಾಚರೇತ್ " ಎಂಬ ಪ್ರತಿಯೊಬ್ಬರು ಇಟ್ಟುಕೊಳ್ಳತಕ್ಕಂಥ ಮಾತಾಗಿದೆ. ಯಾವನೊಬ್ಬ ಹುಡುಗನ ತಲೆತಿರುಕನಂತೆ ನಡೆಯುತ್ತಾನೆಂದು ನಾವು ಹೇಳುತ್ತೇವೆ. ಮನಃಪೂತವಾಗದಿರುವದು ತಲೆತಿರುಕತನ. ಎಲ್ಲದಕ್ಕೂ ಮನವೇ ಸಾಕ್ಷಿ, ಮಾಡಿದ ಪಾಪಕ್ಕೂ ಮನವೇ ಸಾಕ್ಷಿ. ಹಾಲಿನ ಕೆನೆಯನ್ನು ಕದ್ದು ತಿನ್ನುವಾಗ "ನನಗೆ ಯಾರೂ ನೋಡಲಿಲ್ಲವಲ್ಲ" ಎಂಬ ಭಾವನೆ ಹುಟ್ಟುತ್ತದೆ. " ಯಾರೂ ನೋಡದಿದ್ದರೂ ನಿನ್ನನ್ನೇ ಯಾಕೆ ವಂಚಿಸುತ್ತೀ? ನೀನು ನೋಡಲಿಲ್ಲವೇ? " ಎಂದು ಆತನ ಮನಸ್ಸು ಕಳ್ಳನಿಗೆ ಚುಚ್ಚುತ್ತಿರುತ್ತದೆ. ಮನಸ್ಸು ಪವಿತ್ರವಿರಬೇಕು, ಅದು ಸ್ವಚ್ಛವಿರಬೇಕು. ಬೇರೆಯವರಿಗೆ ತಿಳಿಯಗೊಡದಂತೆ ನಾವು ಕೆಲವು ಸಂಗತಿಗಳನ್ನು ಮಾಡುತ್ತೇವೆ. ಕಳ್ಳನು ಪೆಟ್ಟಿಗೆಯನ್ನು ತೆರೆಯುವಾಗ ಯಾರಾದರೂ ಬರುತ್ತಿದ್ದರೆ ಸುಳಿವು ತಿಳಿಯಬೇಕೆಂದು ಅಚೆ ಈಚೆಗೆ ನೋಡುತ್ತಿರುತ್ತಾನೆ. ಮನಸ್ಸು ಪಾವಿತ್ರ್ಯದ ನೆನವರಿಕೆ ಮಾಡಿಕೊಡುವದರಿಂದ ಆತನು ಈ ಪ್ರಕಾರ ಹಿಂದೆ ಮುಂದೆ ನೋಡುತ್ತಿರುತ್ತಾನೆ. ಲೌಕಿಕ ಭೀತಿಯಿಂದ ಇದೇ ರೀತಿ ಕುಯ್ಯುವಾಗ ಈ ಅಂಜಿಕೆಯಿಂದಲೇ ಕಳ್ಳನು ಬೆದರಬೇಕಾಗುತ್ತದೆ. ಜಗತ್ತಿನ ಸುಧಾರಣೆ ಸ್ಥಿತಿಗಳಿಗೆ ನಾವು ಶಾಂತತೆಯೊಂದೇ ಕಾರಣವೆಂದು ಹೇಳುತ್ತೇವೆ. ಹೀಗೆ ಉನ್ನತಿ ಧಾರಣೆಗಳು ನಮಗೆ ಧರ್ಮದಿಂದಲೇ ಲಭಿಸಬೇಕು.

***

ಇತ್ತಲಾಗಿ ಜಗತ್ತಿನ ಸುಧಾರಣೆಯು ಮುಂದೆ ಮುಂದೆ ನಡೆಯುತ್ತದೆಂದು ಹೇಳಲಾಗಿದೆ. ಬಹಳೇ ಪ್ರಗತಿಯನ್ನು ನಾವು ನೋಡುತ್ತೇವೆ. ಇದು ಪ್ರಗತಿಯ ಭಾಸವೆಂದು ವಿಚಾರಶೀಲರಿಗೆ ತಿಳಿಯುವಂತಿದೆ. ಉಗಿಬಂಡಿ, ಉಗಿಹಡಗ, ಮೋಟಾರು, ವಿಮಾನು, ವಿದ್ಯುದ್ದೀಪ ಮುಂತಾದ ಆಧುನಿಕ ಪ್ರಗತಿಯ ಸಾಧನಗಳು ನಮಗೆ ದೊರಕಿವೆ. ಫೋನೋಗ್ರಾಫು ಮಾತಾಡುತ್ತದೆ, ಹಾಡುತ್ತದೆ, ಇದೆಲ್ಲ ನೋಡಿದರೆ ಪ್ರಗತಿಯಿಲ್ಲವೆಂದು ಯಾರು ಹೇಳುವರು? ಆದರೆ ನಮ್ಮ ದುಸ್ಥಿತಿಯು ಮನಸ್ಥಿತಿಯಂತಲೇ ನಾವು ಮನಗಂಡಿದ್ದೇವೆ. ಮೋಟಾರ ಕಂಪನಿ ಯಜಮಾನರು ತಮ್ಮ ಆಸ್ತಿಯನ್ನು, ಮನೆ-ಮಾರುಗಳನ್ನೂ ಒತ್ತಿ ಇಟ್ಟು ಇಲ್ಲವೆ ಮಾರಿ ಮೋಟಾರು ತರಿಸುತ್ತಾರೆ. ಮೋಟಾರು ತಿಕೀಟುಗಳಿಂದ ಅವರ ಬಳಿಗೆ ಹಣವೂ ಸಂಗ್ರಹವಾಗದ್ದು ಕಂಡುಬರುತ್ತದೆ. ಮೋಟಾರ ಡ್ರೈವ್ಹರನು ಸ್ವಂತ ಮನುಷ್ಯನಾದರೆ ಸ್ವಲ್ಪ ದಿವಸ ಮೋಟಾರು ಬಾಳುತ್ತದೆ, ಸಂಬಳದ ಡ್ರೈವ್ಹರನಿದ್ದರೆ ಯಜಮಾನನ ಭಿಕ್ಷಾಪತಿಯಾಗಬೇಕಾಗುತ್ತದೆ. ಯುರೋಪೀಯ ರಾಷ್ಟ್ರಗಳಲ್ಲಿ ಈ ಮೋಟಾರುಗಳು ಹೆಚ್ಚಾಗಿ ತಯಾರಾಗುತ್ತಲಿವೆ. ಅಮೇರಿಕೆಯವರು ೧೦೦೦ ರೂಪಾಯಿಗಳಿಗೆ ಒಂದು ಮೋಟಾರು; ೫೦೦ ರೂಪಾಯಿಗಳಿಗೂ ಒಂದು ಮೋಟಾರು ಕ್ರಯಕ್ಕೆ ಕೊಡುವ ತಯಾರಿಯಲ್ಲಿದ್ದಾರೆ. ಈ ಎಲ್ಲ ಪ್ರಗತಿ ನೋಡಿದರೆ " ಲಂಕೆಯಲ್ಲಿ ಬಂಗಾರದ ಇಟ್ಟಂಗಿ " ಎಂಬ ಕಥೆಯು ನೆನಪಾಗುತ್ತದೆ. ಒಬ್ಬನು ಸುವರ್ಣ ಲಂಕೆಗೆ ಹೋಗಿದ್ದನಂತೆ! ಅಲ್ಲಿ ಸಂಬಳಕ್ಕಾಗಿ ನಿಂತು ದ್ರವ್ಯಸಂಗ್ರಹ ಮಾಡಬೇಕೆಂದು ಆವನು ಹೊರಟಿದ್ದನು. ದಿನಗೂಲಿಯಿಂದ ೧೦-೨೦ ಬಂಗಾರದ ಇಟ್ಟಂಗಿ ಗಳಿಸಿದನು. ಅಲ್ಲಿ ಖರ್ಚು ಇಟ್ಟಂಗಿಯದೇ! ಕ್ಷೌರಿಕನಿಗೆ ೩, ೪ ಇಟ್ಟಂಗಿಗಳನ್ನು ಆತನು ಕೊಡಬೇಕಾಯಿತು. ಅಂದರೆ, ಅಲ್ಲಿಯ ನಾಣ್ಯಗಳೇ 'ಇಟ್ಟಂಗಿಗಳು. ತಿರುಗಿ ಮನೆಗೆ ಬರಬೇಕಾದರೆ ಆ ಮನುಷ್ಯನಿಗೆ ಮುಂಚಿನ ಸ್ಥಿತಿಯೇ. ಅದೇ ಅವಸ್ಥೆಯು ನಮ್ಮದು. ಪಾಶ್ಚಾತ್ಯ ರಾಷ್ಟ್ರಗಳು ಸೂರೆ ಮಾಡುವದೇ ಈ ಪ್ರಗತಿಯ ಬಲವಾಗಿದೆ. ಇದು ನಿಜವಾದ ಪ್ರಗತಿಯಲ್ಲ.

***

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಬಿಕ್ಕಿಸ ಚೈತನ್ಯವು ಕೂದಲುಗಳಿಗೆ ಹುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

½ ಔನ್ಸಿಗೆ	ರೂ.	೨—೦—೦
¼ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ವಾಸನೆ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO., LTD.

POST BOX, 2082 **BOMBAY.**

ಈಗಿನ ಪ್ರಗತಿಯು ಎಷ್ಟರಮಟ್ಟಿಗೆ ಮುಂದ ಬರುತ್ತದೆಂದು ಹೇಳುತ್ತೇನೆ. ನನ್ನ ಈಗಿನ ಊನ ಸ್ಥಿತಿಯನ್ನು ನೆನಸಿ ನಾನು ಅಡ್ಡಾಡುವ ಬಗ್ಗೆ ಒಂದು ಕುದರೆ ಇಟ್ಟುಕೊಂಡೆನು. ಆ ಕುದುರೆ ಬೆಲೆ ಕೊಡುವಾಗ ಮಾರುವವನ ಬಳಿಗೆ ಕುದುರೆಯ ನಡತೆ ಮುಂತಾದವುಗಳ ಬಗ್ಗೆ ಚೌಕಶಿ ಮಾಡಿದೆನು. ಕುದುರೆಯು ಬಹಳ ಉತ್ತಮ ತರಗತಿಯದೆಂದು ಆತನು ಆಶ್ವಾಸಿಸಿದನು. ಒಂದು ದಿನ ಕುದುರೆಯ ಮೇಲೆ ಕೂತುಕೊಂಡು ಹೋಗುವಾಗ ದಾರಿಯಲ್ಲಿ ಒಬ್ಬ ಸ್ನೇಹಿತನು ಭೆಟ್ಟಿಯಾದನು. ಆತನೊಡನೆ ಮಾತಾಡಬೇಕೆಂದು ಲಗಾಮು ಜಗ್ಗಿದೆನು. ಕುದುರೆಯು ತಡೆಯಿತು. ಕುದುರೆಯ ಮೇಲೆ ಭರವಸೆ ಇಟ್ಟು ಜೀನಿನ ತಂದಿನೊಳಗಿಂದ ಕಾಲು ತೆಗೆದು ಸೀಟಾಗಿ ಸ್ವಲ್ಪ ಕೆಳಗೆ ಜೋಲು ಬಿಟ್ಟೆನು. ಕುದುರೆಯು ಪ್ರಗತಿ ಮಾಡಿ ಹಿಡಿ ನಡೆಯಿತು, ನನ್ನ ಅವಸ್ಥೆ ಏನಾಗುವದೆಂದು ನೀವೇ ತಿಳಕೊಳ್ಳಿರಿ! ಮುಂದೆ ಎರಡನೇ ಕುದುರೆಯನ್ನು ಕ್ರಯಕ್ಕೆ ಕೊಳ್ಳಹೋದೆನು ಆ ಮಾರುವವನ ಬಳಿಗೂ ತಿರುಗಿ ವಿಚಾರ ನಡಿಸಿದೆನು. "ರಾಯರೇ, ಕುದುರೆಗೆ ಏನೂ ಅಸಭ್ಯ ಚಾಳಿಗಳಿಲ್ಲ, ಆದರೆ ನೀವು ಬಾಲದ ಬದಿಗೆ ಮೋರೆ ಮಾಡಿ ಕೂತುಕೊಳ್ಳಬೇಕು ಬಾಲದ ಬದಿಗೆ ಅದು ಪ್ರಗತಿ ಮಾಡುತ್ತದೆ, ಒಟ್ಟಿಗೆ ಕುದುರೆ ಒಳ್ಳೇದು!" ಎಂದು ಹೇಳಿದನು. ಇದು ನಮ್ಮ ಸುಧಾರಣೆಯ ಪ್ರಗತಿ.

***

"ಧರ್ಮೋ ಹಿ ಮೂಲಂ" ಧರ್ಮವೇ ಮೂಲಾಧಾರವು. ನಾವು ಧರ್ಮವನ್ನು ಮರೆತಿದ್ದೇವೆ ನಾನು ಅನೇಕ ಕಡೆಯಲ್ಲಿ ವ್ಯಾಖ್ಯಾನ ಕೊಟ್ಟೆನು. ರಾಜಕೀಯ ವಿಷಯಗಳನ್ನೇ ವ್ಯಾಖ್ಯಾನದಲ್ಲಿ ಚರ್ಚಿಸುತ್ತಿದ್ದೆನು; ಆದರೆ ಜನರ ಮೇಲೆ ಅದರ ಪರಿಣಾಮವೇನೂ ಅದಷ್ಟು ನನಗೆ ಕಂಡುಬರಲಿಲ್ಲ. ಇದರ ಕಾರಣವೆಂದರೆ ನಾವು ಧರ್ಮವನ್ನು ಮರೆತಿದ್ದೇವೆ. ಅಂಕಿ-ಸಂಗ್ಗಿ ಬರದೆ ಇದ್ದ ಹುಡುಗನಿಗೆ ಬೀಜಗಣಿತದ ಸಿದ್ಧಾಂತಗಳನ್ನು ವಿವರಿಸಿ ಹೇಳುವಂತೆ ನಮ್ಮ ಅವಸ್ಥೆಯಾಗಿದೆ ಕಾರಣ ನಾವು ಬೇರೀಜು-ವಜಾಬಾಕಿಗಳಿಂದ ಶುರು ಮಾಡಬೇಕಾಗಿದೆ ಇಂಗ್ಲಿಷ ಜನರು ತಕ್ಕಡಿ ಕೊಂಡು ಭರತ ಖಂಡಕ್ಕೆ ಬಂದವರು ರಾಜ್ಯಕಾರಭಾರ ಮಾಡಲಿಕ್ಕೆ ಹತ್ತಿದ್ದು ನೋಡಿ ನಾವು ಅವರ ಸುಧಾರಣೆಯನ್ನು ಬಯಸಹತ್ತಿದೆವು. ಪಾಶ್ಚಾತ್ಯ ಸುಧಾರಣಾ ದೇವಿಯು ಮಂದಿರ ಪ್ರವೇಶ ಮಾಡಿಸಿದೆವು. ಆ ದೇವಿಯನ್ನು ಮೆಚ್ಚಿಸಿ, ಒಲಿಸಿ ವರಪ್ರದಾನ ಕೊಳ್ಳಲು ಆರಂಭಿಸಿದೆವು. "ಭಗವತೀ, ನಾನು ನಿನಗೆ ಶರಣು ಬಂದಿದ್ದೇನೆ, ವರಂ ಬ್ರೂಹಿ" ಎಂಬ ಯಾಚನೆಗೆ ಆರಂಭವಾಯಿತು. ಕೂಡಲೆ ದೇವಿಯು ಪ್ರಸನ್ನಳಾಗಿ ಒಂದೊಂದೇ ವರಗಳನ್ನು ದಯಪಾಲಿಸಿದಳು. ಬಿಳೇ ಸಾಹೇಬನು ಸ್ವಂತ ಕೈಯಿಂದಲೇ ಕ್ಷೌರ ಮಾಡಿಕೊಳ್ಳುವದು ಕಂಡು ಬಂತು, ಸುಧಾರಣಾ ದೇವಿಯ ಭಕ್ತನು ಸ್ವತಃ ಕ್ಷೌರ ಮಾಡಿಕೊಳ್ಳಹತ್ತಿದನು. ಈತನ ಹೆಂಡತಿಗೆ ಇದು ಬಹು ಸೋಜಿಗವೆನಿಸಿತು. ಸಾಹೇಬನು ನಿರ್ಗುಣ ದೇವಾಲಯ (ಚರ್ಚ)ದಲ್ಲಿ ಪ್ರಾರ್ಥನೆ ನಡಿಸುತ್ತಿದ್ದನು, ಈ ಭಕ್ತನೂ ಹಾಗೆಯೇ ಮಾಡತೊಡಗಿದನು ತನ್ನ ಹೆಂಡತಿಯು ಘೋಷಾ ಪದ್ಧತಿಯಲ್ಲಿರುವದು ಇವನಿಗೆ ಸೇರದೆ, ಸಾಹೇಬನಂತೆಯೇ ಗಾಡಿ ಮುಂಗಲಿಕೆ, ಸಪತ್ನೀಕನಾಗಿ ವಿಹಾರಕ್ಕೆ ಹೋಗಹತ್ತಿದನು. ವಿಹಾರದ ಸಮಯದಲ್ಲಿದ್ದಾಗ ಹೂಂದು ಹಾಕಿಕೊಂಡು ನಿಂತಿದ್ದ ಪಠಾಣನು ಕೈಹಿಡಿದುಕೊಂಡ ಈತನ ಹೆಂಡತಿಯನ್ನು ಹಿಡಿಸಿಕೊಂಡು ನಡೆದನು ಈತನು ಹೆಂಡತಿ ಹೋದಳೆಂದು ಶಂಖನಾದ ಮಾಡತಾರಂಭಿಸಿದನು. ಸಾಹೇಬರ ಬಳಿಯಲ್ಲಿ ತುಬಾಕಿ ಇರುತ್ತದೆಂಬ ಮಾತನ್ನು ಈತನು ಮರೆತು ಅರ್ಧಾಂಗಿಗೆ ಕರೆಕೊಂಡು ಹೋದರೆ, ಆಗುವ ಗತಿ ಇದೇ

***

ಇದೆಲ್ಲ ಮೇಲಿಂದ ಮೇಲೆ ಕಂಡುಬರುವ ಸುಧಾರಣೆ. ಧರ್ಮದ ಅಧಿಷ್ಠಾನವೇ ಸುಧಾರಣೆಯ ಮೂಲವು. ಇದನ್ನು ನಾವು ಮರೆಯಲಾಗದು. ಅಂತ್ಯಜೋದ್ಧಾರ, ಶುದ್ಧಿ, ಅಬಲೋನ್ನತಿ ಮುಂತಾದ ಉದ್ಧಾರೋನ್ನತಿಗಳಲ್ಲದೆ ಇಂಥ ಕೆಲಸಗಳನ್ನು ಉನ್ನತಿ ಮಾಡಲಿಕ್ಕೆ ಈಗಿನ ಜನರು ಹಾತೊರೆಯುತ್ತಾರೆ ವಿಧವಾ ವಿವಾಹ ಸಂಘಗಳೂ ಅಲ್ಲಲ್ಲಿ ಏರ್ಪಡಾಗುತ್ತಿವೆ. ಒಬ್ಬ ಗೃಹಸ್ಥನು ವಿಧವಾ ವಿವಾಹವನ್ನು ಪುರಸ್ಕರಿಸುತ್ತಿದ್ದನು; ಆತನ ಹೆಂಡತಿಯು ನನ್ನ ಬಳಿಗೆ ಬಂದ, ತನ್ನ ಗಂಡನು ವಿಧವಾ ವಿವಾಹವನ್ನು ಎತ್ತಿ ಹಿಡಿಯುತ್ತಾನೆ, ಆದರೆ ನಾನು ಗಂಡನಿದ್ದು ವಿಧವೆ, ನನ್ನ ಗತಿಯೇನು? ಎಂದು ನಿಟ್ಟುಸಿರು ಬಿಟ್ಟಳು ನಾನು ಚಕಿತನಾದೆನು! "ಅವ್ವಾ ಅದ್ಯಾಕೆ?" ಎಂತ ನಾನು ಕೇಳಿದೆನು. "ನನ್ನ ಗಂಡನ ಮಾವನಿಗೂ ಗಂಡನಿಗೂ ಜಗಳ ಬಿದ್ದರೆ, ನನಗೆ ಗಂಡನು ಮನೆಯಲ್ಲಿ ಸೇರಗೊಡಬಾರದೇ?" ಎಂದು ಆಕೆಯ ಸವಾಲ. ನಿಜವಾಗಿ ಇದು ಶೋಚನೀಯವು. ಒಂದು ಊರಲ್ಲಿ ನಾನು ಪ್ರವಚನ ಕೊಡಲಿಕ್ಕೆ ಹೋಗಿದ್ದೆ. ನನ್ನ ವ್ಯಾಖ್ಯಾನದ ವಿಷಯವು "ಮದ್ಯಪಾನ ನಿಷೇಧ" ವಾಗಿತ್ತು ನನ್ನ ವ್ಯಾಖ್ಯಾನಕ್ಕೆ ಸರಾಯಿ ಮಕ್ತೇದಾರ ಗೃಹಸ್ಥನೊಬ್ಬನು ಅಧ್ಯಕ್ಷನಾದನು ಜನರು ಅವನ ಬಗ್ಗೆ ಬಹಳ ವೈಷಮ್ಯವೆಣಿಸಿದರು. ವ್ಯಸನಾಧೀನರು ಆ ವ್ಯಸನವನ್ನು ಚರ್ಚಿಸಿ ಉಪದೇಶ ಮಾಡಬಾರದು ವ್ಯಾಖ್ಯಾತರ ಭೂಮಿಕೆಯು ಶುದ್ಧವಿರಬೇಕೆಂದು ಹೇಳುವದು ಅದಕ್ಕಾಗಿಯೇ. ಯಾಕೆಂದರೆ ಅದರಿಂದ ನಿಜವಾದ ಪರಿಣಾಮವಾಗದೆ ಸಮಾಜದಲ್ಲಿ ಪ್ರತಿಯೊಬ್ಬರು ಹೇಳುವವರೇ ಆಗುತ್ತಾರೆ; ಕೇಳುವವರ್‍ಯಾರೂ ಉಳಿಯುವದಿಲ್ಲ ನಾವು ಸ್ವಂತ ಉದ್ಧಾರ ಮಾಡಿಕೊಳ್ಳಬೇಕೇ ಹೊರತು, ಅನ್ಯರ ಉದ್ಧಾರಕ್ಕೆ ಟಿಕ್ಕಸಾಗೆ ಕೈಯೊಡ್ಡಬಾರದು

***

ಇಡೀ ಜಗತ್ತು ಸುಧಾರಿಸುವ ಹವ್ಯಾಸಕ್ಕೆ ಮಾನವನು ಹೋಗಲಾಗದು. ಅದು ಆತನಿಂದ ಆಗದ ಮಾತ. "ಉದ್ಧರೇದಾತ್ಮನಾತ್ಮಾನಂ" ಇದನ್ನು ನಾವು ತಿಳಕೊಳ್ಳಬೇಕು, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕು. ಜಗತ್ತಿನ ಪರಿಸ್ಥಿತಿ ನೆಟ್ಟಗಿಲ್ಲ, ಕಾರಣ ಸುಧಾರಿಸಿಕೊಳ್ಳಲು ಅಸ್ಪದವಿಲ್ಲವೆಂದು ಪರಿಸ್ಥಿತಿಯ ಮೇಲೆ ಸಿಟ್ಟಾಗಬಾರದು. ಪ್ರತಿಯೊಬ್ಬನು ವಿಚಾರ ಮಾಡಿ ನೋಡಿದರೆ ಪ್ರತಿಕೂಲ ಪರಿಸ್ಥಿತಿಯಲ್ಲಿಯೇ ಏರಿ ಮೇಲೆ ಬಂದಿದ್ದಾನೆಂದು ತಿಳಿಯುವದಾಗಿದೆ. ನಾವು ಚಿಕ್ಕಂದಿನಿಂದ ಆತಾಯಿ ಸ್ಥಿತಿಯಲ್ಲಿ ಬೆಳೆದಿದ್ದೇವೆ ಚಿಕ್ಕ ಮಗುವಿನ ಲೀಲೆಗಳನ್ನು ಪರಾಂಬರಿಸಿದರೆ ನಮಗೆ ತಿಳಿಯುವಂತಿದೆ. ಆ ಮಗುವಿಗೆ ಮಾತಾಡಬರುವದಿಲ್ಲ. ಬರೇ ಅಳುತ್ತಾ ತಾಯಿಯ ಮೋರೆ ನೋಡುವದೊಂದೇ ಕೆಲಸ ಮಾಡುತಿರುತ್ತದೆ. ತಾಯಿಯು ಹಾಲುಣಿಸಿ, ಮುದ್ದಾಡುತ್ತಳೆ. ಸಾವಕಾಶವಾಗಿ ಅದು ಬೆಳೆಯಹತ್ತುತ್ತದೆ ಮುಂದೆ ಮಗ್ಗಲು ತಿರುಗಿ ಕವಡಿ ಬೀಳುತ್ತದೆ. ಮುಖ್ಯ ತನಷ್ಟಕ್ಕೆ ನಗುತ್ತಿರುತ್ತದೆ. ತನ್ನ ಆಟದಲ್ಲಿ ಅದಕ್ಕೆ ಹೆಚ್ಚು ಸೌಕರ್ಯವು ಸಿಕ್ಕಿದಂತೆ ಅದು ತನ್ನಷ್ಟಕ್ಕೇ ನಗುತ್ತಾ ಇರುತ್ತದೆ. ಮೊದಮೊದಲು ನಮಗೆ ಅದರ ಅರ್ಥವೇ ತಿಳಿಯದು ಆದರೆ, ಆ ನಗೆಯಲ್ಲಿ ಅರ್ಥವಿರುತ್ತದೆ ಕೆಲವು ದಿವಸಗಳಲ್ಲಿ ಆ ಕೂಸು ಅತ್ತಿತ್ತ ಓಡಾಡಹತ್ತುತ್ತದೆ; ಮುಂದೆ ಮನೆಯಲ್ಲಿ ಚಳವಳಿಯನ್ನು ಎಬ್ಬಿಸುತ್ತದೆ. ತಾಯಿಗೆ ಈ ಚಟ್ಟುಳಿಯು ಸಹನವಾಗದೆ "ಧಡಪಡಾಹ" ಯನ್ನು ಕೈಕೊಳ್ಳುತ್ತಾಳೆ. ಚಳವಳಿಯಿದ್ದಲ್ಲಿ ಕಾಯಿದೆಯ ಹಾವಳಿ ಇರಬೇಕು ಅಂದ ಮೇಲೆ ಅಪರಾಧವಾಯಿತೆಂದು ಶಿಕ್ಷೆಯನ್ನು ಅನುಭವಿಸಬೇಕು. ನಾವೆಲ್ಲರೂ ನಮ್ಮ ತಂದೆ-ತಾಯಂದಿರ ಶಿಕ್ಷೆಯನ್ನು ಅನುಭವಿಸಿಯೇ ಬೆಳೆದಿದ್ದೇವೆ ಆ ಕೂಸಿಗೆ ತಾಯಿಯು ತೊಟ್ಟಿಲಲ್ಲಿ ಹಾಕಿ ಬಂಧಿಸುತ್ತಾಳೆ. ಅಲ್ಲಿಂದ ಪುನಃ ಚಳವಳಿ ಎಬ್ಬಿಸಿ ಕೆಳಗೆ ಹಾರಿ ಹಣೆ-ಮೂಗುಗಳನ್ನು ಒಡೆದುಕೊಂಡದ್ದು ತಾಯಿಯು ನೋಡಿ ಬಹಳ ಕಠಿಣ ಕಾರಾಗೃಹವಾಸ ಕೊಡುತ್ತಾಳೆ. ಒಂದು ಉನ್ನತವಾದ ಮೆಟ್ಟಿಲು ಇದ್ದ ಕೋಣೆಯಲ್ಲಿ ಆ ಮಗುವಿಗೆ ಕೂಡ್ರಿಸಿ ಬಾಗಿಲು ಹಾಕುತ್ತಾಳೆ. ಅಲ್ಲಿಂದ ಅದು ಹೊರಗೆ ಬಂದು ಘಂಟಿ ಬಾರಿಸುತ್ತಿದೆ ತಾಯಿಯು ಈ ಚಳವಳಿಯ ಸಾಹಸ ಹಾಗು ಆತ್ಮಿಕ ಕಷ್ಟಗಳನ್ನು ಸಹಿಸಲಿಕ್ಕಾಗದೆ ಬೇಕಾದದ್ದನ್ನು ಕೊಡುತ್ತಾಳೆ. ಇದು ನಿಜವಾದ ಸತ್ಯಾಗ್ರಹ ಚಳವಳಿಯ ಲಾಭವು. ಆ ಕಾರಣದಿಂದ ನಾವು ಮೊಟ್ಟಮೊದಲು ನಮ್ಮ ಆತ್ಮಿಕ ಉದ್ಧಾರವನ್ನು ಮಾಡಿಕೊಳ್ಳಬೇಕು. ಆ ಮೇಲೆ ಅಸ್ಪೃಶ್ಯೋದ್ಧಾರ ಮುಂತಾದ ಚಳವಳಿಗಳು ಸಾಧ್ಯವಾಗುತ್ತವೆ

***

ನಾನು ಅಸ್ಪೃಶ್ಯೋದ್ಧಾರ ವಿರೋಧಕನಲ್ಲ. ಒಂದೆರಡು ಕಡೆಯಲ್ಲಿ ನಾನು ಶುದ್ಧಿ ಸಂಸ್ಕಾರವನ್ನೂ ಮಾಡಿದ್ದೇನೆ ಆದರೆ ಅಸ್ಪೃಶ್ಯರೊಡನೆ ಚಹ ಕುಡಿಯುವದು, ಅಸ್ಪೃಶ್ಯರಿಗೆ ಆಲಿಂಗನ ಕೊಡುವದು ಇದರಿಂದ ನಿಜವಾದ ಉದ್ಧಾರವಾಗಲಾರದು. ಇನ್ನು ನಿಜವಾದ ಮಾರ್ಗವೇ ಅಲ್ಲ. "ಸ ಹತ್ವರಸ್ಯ ಸಂದಧ್ಯಾತ್" ಇದೊಂದೇ ಸಾಮಾನ್ಯ ಧರ್ಮವನ್ನು ಅವಲಂಬಿಸಿದರೆ ಬೇಕಾದಷ್ಟು ಕಾರ್ಯ ಕೈಗೂಡುವಂತಿದೆ. ನಗರ ಜಿಲ್ಹೆಯಲ್ಲಿ ಜಾಮಖೇಡ ಎಂಬ ಊರುಂಟು. ಅಲ್ಲಿ ಅಸ್ಪೃಶ್ಯರ ಬಗ್ಗೆ ಒಂದು ಶಾಲೆ ಇದೆ. ಅಲ್ಲಿ ಮೊದಲು ಚಮಗಾರ ಜಾತಿಯ ಶಿಕ್ಷಕನಿದ್ದನು. ಅವನು ಚಮಗಾರರಿಗೂ, ಮಹಾರರಿಗೂ ಬೇರೆ ಬೇರೆ ಕೂಡ್ರಿಸುತ್ತಿದ್ದನು ಆದರೆ ಕೆಲವು ದಿವಸಗಳಲ್ಲಿ ಅವನು ವರ್ಗವಾಗಿ ಬೇರೆ ಊರಿಗೆ ಹೋದನು. ಅವನ ಜಾಗಕ್ಕೆ ಒಬ್ಬ ಕಟಕರ ಜಾತಿ (ಢೋರ) ಯ ಶಿಕ್ಷಕನು ಬಂದನು. ಅವನು ಎಲ್ಲರಿಗೂ ಒಟ್ಟಿಗೆ ಕೂಡ್ರಿಸಿ ಶಿಕ್ಷಣ ಕೊಡಲಾರಂಭಿಸಿದನು. ಚಮಗಾರ ಹಾಗು ಢೋರ ಜಾತಿಗಳಲ್ಲಿ ವೈಷಮ್ಯವುಂಟಾಗಿ ಅವರು ದೊಡ್ಡ ಕೋಲಾಹಲವನ್ನು ಎಬ್ಬಿಸಿದರು. ಪ್ರತಿಯೊಬ್ಬನು ಬೇರೆ ಜಾತಿಗೆ ಕಡಿಮೆ ಯೋಗ್ಯತೆಯದೆಂದು ತಿಳಕೊಳ್ಳುತ್ತಾನೆ; ಧರಣಗಾಂವ ಊರಿನಲ್ಲಿ ಸಂತೋಜಿ ಮಹಾರಾಜನೆಂಬ ಗುಜರಾಥಿ ಧರ್ಮಾಧಿಕಾರಿಯಿದ್ದಾನೆ. ಆ ಊರಲ್ಲಿ ಅಸ್ಪೃ. ಜಾತಿಯ ಜನರದೊಂದು ಭೋಜನವಾಗಿತ್ತು ಅವರು ಪ್ರತಪ್ರತ್ಯೇಕವಾಗಿ ಜನರು

ಕೂತು ಊಟ ಬಡಿಸುವ ವಾಡಿಕೆ ಇತ್ತು. ಅವರಲ್ಲಿ ಒಂದು ಜಾತಿಯ ಗುಜರಾಥಿ ಜನರೊಡನೆ ಸಂತೋಷಿ ಮಹಾರಾಜರು ಊಟ ಮಾಡುತ್ತಿದ್ದಿಲ್ಲ. ನಾವು ಅಲ್ಲಿ ಹೋದಾಗ ನನಗೆ ಆ ಜಾತಿಗೆ ಬೇರೆ ಕೂಡ್ರಿಸುವಷ್ಟು ಕಾರಣವು ಕಾಣಲಿಲ್ಲ. ನಾನು ಆ ಜ್ಞಾತಿಯ ಗೃಹಸ್ಥರಿಗೆ ನನ್ನ ಪಂಗ್ತಿಗೆ ಕೂತುಕೊಂಡು ಊಟ ಮಾಡಲಿಕ್ಕೆ ಕರಕೊಂಡು ಹೋದೆನು. ಸಂತೋಷಿ ಮಹಾರಾಜರು ಅವರಿಗೆ ಪಂಗ್ತಿಗೆ ಕೊಳ್ಳಬಾರದೆಂದು ನನಗೆ ಸೂಚನೆ ಕೊಟ್ಟರು. ನಾನು ಪೃಚ್ಛೆ ಮಾಡಿಸಲು, ಅಲ್ಲಿಯ ಪೈಪಾಟಿಯು ಹಾಗೆ ಅದೆ ಎಂದು ಸಂತೋಷಿಯವರು ಹೇಳಿದರು.

***

'ನಮ್ಮಲ್ಲಿ ಕರ್ಹಾಡಿ ಬ್ರಾಹ್ಮಣರಾದ ನಾವು ಗುಜರಾಥಿಗಳಿಗೆ ಪಂಗ್ತಿಗೆ ಕೊಳ್ಳುವದಿಲ್ಲ ಅಂದ ಮೇಲೆ ನಾನು ಸಹ ನಿಮ್ಮ ಪಂಗ್ತಿಗೆ ಕೂಡ್ರುವದಿಲ್ಲ' ಇದನ್ನು ಕೇಳಿದ ಕೂಡಲೆ ಸಂತೋಷಿ ಮಹಾರಾಜರು ಅವರೊಡನೆ ಊಟ ಮಾಡಲಿಕ್ಕೆ ಸಿದ್ಧರಾದರು.

***

ಬೆರಿಸ್ಟರ ಆಂಬೇಡಕರರೆಂಬ ಅಸ್ಪೃಶ್ಯ ಜ್ಞಾತಿಯ ಗೃಹಸ್ಥರು ಅಸ್ಪೃಶ್ಯೋದ್ಧಾರಕ್ಕಾಗಿ ಇತ್ತಲಾಗಿ ಬಹಳ ಹೆಣಗಾಡುತ್ತಾರೆ! ನನಗೊಮ್ಮೆ ಅವರು ಅಂಬೆಜಾಳಿಯೆಂಬ ಊರಲ್ಲಿ ಭೆಟ್ಟಿಯಾದರು. ಮಾತಾಡುತ್ತಿದ್ದಾಗ ಅವರು ಅಸ್ಪೃಶ್ಯೋದ್ಧಾರದ ಬಗ್ಗೆ ತಾವು ಕೊಂಕಣಪಟ್ಟಿಗುಂಟ ತಿರುಗಾಡಿದ ಪಟ್ಟಣಗಳ ಹೆಸರು ಹೇಳಿದರು. ಅವುಗಳಲ್ಲಿ ಚಿಪಳೂಣ, ದಾಪೋಲಿ ಮಹಾಡಗಾಂವ ಮುಂತಾದ ಪಟ್ಟಣಗಳಲ್ಲಿ ತಾವು ತಿರುಗಾಡಿ ಬಂದೆನೆಂದು ಹೇಳಿದರು. ಹಾಗಾದರೆ ಭೋಜನ-ಶಯನಾದಿಗಳಿಗೆ ನೀವು ಯಾರಲ್ಲಿ ಉಳಕೊಂಡಿರಿ?' ಎಂತ ನಾನು ಕೇಳಿದೆನು. ಬೆರಿಸ್ಟರರು ನಾನು ಯಾಕೆ ಹಾಗೆ ಕೇಳುತ್ತೇನೆಂದು ತಿಳಿಯಲಿಲ್ಲ. ಬೆರಿಸ್ಟರರು ಉತ್ತರ ಕೊಟ್ಟಿದ್ದೇನಂದರೆ ನಾನು ಆಯಾ ಊರಿನೊಳಗಿನ ರೆಸ್ಟಹೌಸ, ಬಂಗಲೆಗಳಲ್ಲಿ ಉಳಕೊಂಡೆನು. 'ಕೂಡಲೆ ನನ್ನ ದೃಷ್ಟಿಗೆ ಅಸ್ಪದ ದೊರಕಿತು. 'ಇಷ್ಟು ಅಸ್ಪೃಶ್ಯೋದ್ಧಾರಕ್ಕೆ ನೀವು ಹೆಣಗಾಡುತ್ತೀರಿ, ಅಲ್ಲಿಯ ಯಾರೊಬ್ಬ ಅಸ್ಪೃಶ್ಯರಲ್ಲಿ ನಿಮಗೆ ಅಸ್ಪದ ಸಿಗಲಿಲ್ಲವೇ! ನೀವು ಅವರ ಮನೆಗೆ ಊಟಕ್ಕೆ ಹೋಗಿದ್ದರೆ ತಮ್ಮ ಅಣ್ಣನೊಬ್ಬನು ಇಷ್ಟು ದೊಡ್ಡ ಯೋಗ್ಯತೆಗೆ ಮುಟ್ಟಿದರೂ ನಮ್ಮಲ್ಲಿ ಉಳಕೊಂಡನೆಂದು ಅವರಿಗೆ ಎಷ್ಟು ಆನಂದವಾಗುತ್ತಿತ್ತು? ನಿಮ್ಮ ಮನಸ್ಸಿನಲ್ಲಿ ತಾನು ಬೆರಿಸ್ಟರನಿದ್ದೇನೆಂದು ಅವರಲ್ಲಿ ಉಳಕೊಳ್ಳಲಿಕ್ಕೆ ಲಜ್ಜೆ ತೋರಿತೋ? ಅಥವಾ ಈ ಕೀಳು ಸ್ಥಿತಿಗೆ ನೀವು ಹೇಸಿದಿರೋ? ಬರೇ ೮ ೧೦ ವರ್ಷ ನೀವು ನಿಮ್ಮ ಬಂಧು-ಬಾಂಧವರಿಂದ ಬೇರೆ ಉಳಿದುಕೊಂಡು ಬೆರಿಸ್ಟರರಾದ ಕೂಡಲೆ ನಿಮಗೆ ಅವರೊಡನೆ ಸೇರಿಕೊಳ್ಳಲು ಮನಸ್ಸು ಹೇಸಿಕೊಳ್ಳುತ್ತಿದ್ದ ಮೇಲೆ, ಆ ಅಶುಚಿ ಆಚಾರದ ನೆನಪರಿಕೆ ಇಲ್ಲದ ನಮ್ಮಂಥ ಕುಲಾಂತರಗತ ಬ್ರಾಹ್ಮಣರು ಹೇಗೆ ಅಸ್ಪೃಶ್ಯರನ್ನು ಕೂಡಿಕೊಳ್ಳುವರು? ಇದನ್ನು ತಾವೇ ವಿಚಾರಿಸಿರಿ' ಎಂದು ನಾನು ತಿಳಿಸಿಹೇಳಿದೆನು. ಇದೇ ಸ್ಥಿತಿಯು ಸಾರ್ವಜನಿಕ ಗಣಪತಿ ವಿಗ್ರಹಗಳನ್ನು ವಿಸರ್ಜಿಸುವಾಗ ವಿಚಾರಕ್ಕೆ ಕೊಳಬಹುದು. ಅದೇ ಊರಲ್ಲಿ ೩೦ ವರ್ಷಗಳಿಂದ ಸ್ಪೃಶ್ಯ-ಅಸ್ಪೃಶ್ಯರ ಗಣಪತಿ ವಿಗ್ರಹಗಳು ವಿಸರ್ಜನೆಗಾಗಿ ಒತ್ತಟ್ಟಿಗೇ ಹೊರಡುತ್ತಿದ್ದವು. ಮೇಲಿನಂತೆ ಡಾ| ಅಂಬೇಡಕರರಿಗೆ ನಾನು ಕೇಳಿದ ಮೇರೆ ಮರ್ಷ ಸ್ಪೃಶ್ಯರ ಗಣಪತಿಗಳೊಡನೆ ಅಸ್ಪೃಶ್ಯರ ಗಣಪತಿ ಕೂಡ್ರಿಸುವದು ನಿಂತು ಹೋಯಿತು.

***

ಜನರ ಮನೋಧರ್ಮಗಳನ್ನು ಕಂಡು ಹಿಡಿದು ಅಸ್ಪೃಶ್ಯೋದ್ಧಾರ ಮಾಡಬೇಕು, ಹೊರತು ಅಸ್ಪೃಶ್ಯರೊಡನೆ ನಾವೂ ಕೆಳ ತರಗತಿಗೆ ಹೋಗಬಾರದು. ಅವರಿಗೆ ಕೈ ನೀಡಿ ಮೇಲಕ್ಕೆ ಎತ್ತಬೇಕು. ಒಮ್ಮೆ ಒಂದು ಬಾವಿಯಲ್ಲಿ ಒಬ್ಬ ಮಾದಿಗನು ಬಿದ್ದನು. ಬಾವಿಯ ದಡದ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹೀಗೆ ಮೂರು ಮಂದಿಗಳು ಕೂತಿದ್ದರು. ಶೂದ್ರನು ತನಗೆ ಮೇಲಕ್ಕೆ ಕೊಳ್ಳಿರೆಂದು ದೈನ್ಯದಿಂದ ಹೇಳಿಕೊಳ್ಳುತ್ತಿದ್ದನು. ಈ ಮೂವರಲ್ಲಿ ಯಾರು ಕೆಳಗೆ ಬಾವಿಯಲ್ಲಿ ಹಾರಬೇಕೆಂಬ ಪ್ರಶ್ನೆ ಬಿತ್ತು. ಕ್ಷತ್ರಿಯ-ವೈಶ್ಯರೀರ್ವರು 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬ ಶಾಸ್ತ್ರ ತೆಗೆದು ಬ್ರಾಹ್ಮಣನೇ ಬಾವಿಯ ತಳಕ್ಕೆ ಹಾರಬೇಕೆಂದು ನಿಶ್ಚಯಿಸಿದರು. ಬ್ರಾಹ್ಮಣನು ಕೆಳಗೆ ಹಾರಿ ಆ ಶೂದ್ರನಿಗೆ ತನ್ನ ಹೆಗಲ ಮೇಲೆ ಕೊಂಡನು, ಆದರೆ ಮೇಲಕ್ಕೆ ಬರುವಂತಿದ್ದಿಲ್ಲ. 'ಕ್ಷತಾತ್ಕಿಲತ್ರಾಯತ ಇತಿ' ಕ್ಷತ್ರಿಯನ ಸರತಿ ಬಂತು. ಅವನು ಬ್ರಾಹ್ಮಣನ ಹೆಗಲ ಮೇಲೆ ನಿಂತು ಶೂದ್ರನಿಗೆ ತನ್ನ ಮೇಲೆ ಕೊಂಡನು. ಆದರೂ ಮೇಲೆ ಬರಲಿಲ್ಲ. ಈಗ ವೈಶ್ಯನೂ ಹಾರಿದನು. ಮತ್ತು ಆ ಮಾದಿಗನು ಮೇಲಕ್ಕೆ ಬಂದನು. ಈಗ ಆ ಬಾವಿಯೊಳಗಿಂದ ಉಳಿದ ಮೂರು ಮಂದಿಗಳಿಗೆ ಬರಲಸಾಧ್ಯವಾಯಿತು. ಆಗ ಅವರು ಮೇಲೆ ಬಂದು ಮುಟ್ಟಿದ ಶೂದ್ರನಿಗೆ ಬಿನ್ನೈಸಿಕೊಂಡರು. ಅದಕ್ಕೆ ಶೂದ್ರನು ಉತ್ತರ ಕೊಟ್ಟಿದ್ದೇನಂದರೆ 'ಅಯ್ಯಾ ವರ್ಣಶ್ರೇಷ್ಠರೇ, ನೀವು ಯಾಕೆ ನನ್ನೊಡನೆ ಕೆಳಗೆ ಹಾರಿದಿರಿ. ನನಗೆ ಒಂದು ಹಗ್ಗ ಬಿಟ್ಟು ಮೇಲಕ್ಕೆ ಎಳಕೊಳ್ಳಲಿಕ್ಕೆ ಸುಲಭವಾಗಿ ಆಗುತ್ತಿತ್ತು. ಈಗ ನಾನು ನಿಮಗೆ ಮೇಲಕ್ಕೆ ಕೊಳ್ಳಲು ಅಸಮರ್ಥನಾಗಿದ್ದೇನೆ' ವಿವೇಕ ಮಾಡದೆ ಬೇರೆಯವರ ಉದ್ಧಾರ ಮಾಡಲಿಕ್ಕೆ ಹೋಗಿ ನಾವು ಕೆಳಕೆಳಗೆ ಹೋಗಬಾರದು.

***

ಈಗಿನ ಅಸ್ಪೃಶ್ಯೋದ್ಧಾರವು ತೀರ ನಿಕೃಷ್ಟಾವಸ್ಥೆಗೆ ಹೋಗಿ ಮುಟ್ಟಿದೆ. ಸೊರಗಿದ ಆಕಳು ಏಳಲಿಕ್ಕೆ ಆಗದೆ ಒಂದೇ ಕಡೆಯಲ್ಲಿ ಬಿದ್ದುಕೊಂಡಿದೆಂದು ತಿಳಕೊಳ್ಳುವಾ. ಅದು ಎದ್ದು ತಿರುಗಾಡುವಂತೆ ಮಾಡಬೇಕಾದರೆ ಅದರ ಬೆನ್ನಿಗೆ ಬಳ್ಳಿಹಾಕಿ ಮೇಲಿನ ಗೂಟಕ್ಕೆ ತೂಗಹಾಕಿ ನಿಂತುಕೊಳ್ಳುವಂತೆ ಮಾಡಬಾರದು. ಮೊದಲು ಅದಕ್ಕೆ ಚೈತನ್ಯವು ಸಿಗುವಂತೆ ಸಾವಕಾಶವಾಗಿ ನಾಲ್ಕು ಜನರು ಎತ್ತಿಕೊಂಡು ತನ್ನಷ್ಟಕ್ಕೇ ಕಾಲು ನೆಲಕ್ಕೆ ಊರುವಂತೆ ಮಾಡಬೇಕು. ತಾನಾಗಿ ಅದು ನಿಂತು ಆವರಿಸಿಕೊಂಡ ಮೇಲೆ ನಾವು ಅದಕ್ಕೆ ಮುಂದೆ ಮುಂದೆ ಹಿಡುವಂತೆ ಕೈಕೊಡಬೇಕು. ಹೊರತು ಒಮ್ಮೆಲೇ ಅವಸರ ಮಾಡಿ ತೂಗಹಾಕಿದರೆ ಕೆಲವು ದಿವಸಗಳಲ್ಲಿ ಸಾಯುವ ಆಕಳು ಇಂದೇ ಸತ್ತುಹೋದೀತು. ಹೀಗೆ ವಿಚಾರದಿಂದ ಚಳವಳಿ ನಡಿಸಿದರೆ ಮಾತ್ರ ನಿಜವಾದ ಉದ್ಧಾರವಾದೀತಲ್ಲದೆ, ಬರೇ ಬೇರೆಯವರ ನಿಂದೆ ಮಾಡಿ ಚಳವಳಿ ಎಬ್ಬಿಸಿದರೆ ಪ್ರಯೋಜನವೇನೂ ಸಿಗದು. ನಮ್ಮ ರತ್ನಾಗಿರಿಯ ಡಾ| ವಿನಾಯಕರಾವ ಸಾವರಕರರ ಸ್ಥಿತಿಯು ಹೀಗೇ ಆಗಿತ್ತು. ಸಾವರಕರರು ರಾಜಕೀಯ ಚಳವಳಿ ಎಬ್ಬಿಸಿದಾಗ ದಂಗೆ ಎಬ್ಬಿಸಿಯಾದರೂ ತಮ್ಮ ಪಕ್ಷದ ಜನರು ಸ್ವಾತಂತ್ರ್ಯವನ್ನು ಸಂಪಾದಿಸುವರೆಂದು ಲೇಖ, ವ್ಯಾಖ್ಯಾನಗಳದ್ವಾರಾ ಬೋಧಿಸಲಿಕ್ಕೆ ಹತ್ತಿದರು. ಅವರು "ಝकझोराची कैफीयत" ಎಂತ ಹಿಂದು ಲೇಖವನ್ನು ಬರೆದರು. ನಾನು ಅದಕ್ಕೆ ಉತ್ತರವಾಗಿ "झकझोरास सलामी" ಎಂತ ಹಿಂದರ ಹಿಂದೊಂದು ೩ ಲೇಖಗಳನ್ನು ಬರೆದೆನು. ಸಾವರಕರರು ನನ್ನೊಡನೆ ಸಂಧಾನ ಮಾಡಿದರು. "ನಾನು ನಿಮ್ಮ ಚಳವಳಿಯ ಪದ್ಧತಿಯು ತೀರ ತಪ್ಪು ಅದೆ; ಅದು ಜನರಿಗೆ ತಿಳಿಯುವದಿಲ್ಲ" ವೆಂದು ತಿಳಿಸಿದೆನು. "ನಮ್ಮ ನಮ್ಮ ದಿಶೆಯು ಒಂದೇ ಅಂದ ಮೇಲೆ ಅದರಂತೆಯೇ ನಡೆಯುವಾ" ಎಂತ ವಿನಾಯಕರಾಯರು ಹೇಳಿದರು. ಆದರೆ ಆ ರೀತಿ ಅವರಿಂದ ಹಿಂಬಾಲಿಸಲಿಕ್ಕೆ ಆಗದೆ ಕಡೆಗೆ ವಿಪರೀತ ಪರಿಣಾಮವಾಯಿತು.

***

ಸಾರ್ವಜನಿಕ ಚಳವಳಿಯು ಆಯಾ ಸಮಾಜಕ್ಕೆ ಒಪ್ಪಿದ್ದಿರುತ್ತದೆ. ಯವನವಸಾಹತಲ್ಲಿ ಒಬ್ಬ ಬ್ರಾಹ್ಮಣ ಡಾಕ್ಟರನು ಮಾದಿಗ ಸ್ತ್ರೀಯನ್ನು ಲಗ್ನ ಮಾಡಿಕೊಂಡಿದ್ದನು. ಹೀಗೆ ವಿಪರೀತವಾಗಿ ನಡೆದರೆ ಸಮಾಜವು ಎಂದೂ ಸುಧಾರಿಸದು. ಪುಣೆಯೊಳಗಿನ ಬೇಧೇ ಮಂಡಳಿಯವರು ಜಾಹೀರ ಪತ್ರಕವನ್ನೊಂದು ಹೊರಡಿಸಿ ಶೂದ್ರರಿಗೆ ಮತ್ತು ಬ್ರಾಹ್ಮಣೇತರರಿಗೆ ಮರಾಠೆ ಜಾತಿಯವರನ್ನಾಗಿ ಮಾಡುತ್ತೇವೆಂದು ಪ್ರಕಟಿಸಿದ್ದರು. ನಾನು ಇದನ್ನು ಕೇಳಿ ಬ್ರಾಹ್ಮಣತ್ವ ಕೊಡಲಿಕ್ಕೆ ಅಧಿಕಾರವೂ ಸಹ ಅದೆ; ಕಾರಣ ಬ್ರಾಹ್ಮಣರನ್ನಾಗಿ ಸಹ ಮಾಡಿರೆಂದು ಬರೆದಿದ್ದೆನು. ಅವರು ತಮಗೆ ಮಂತ್ರದ ಕೊರತೆ ಇರುದಾಗಿ ಹೇಳಿದರು. ನಾನು ಅವರಿಗೆ ಮಂತ್ರವನ್ನೊಂದು ಹೇಳಿದೆನು. ಅದೇನಂದರೆ.— अस्य मंत्रस्य व्रात्यऋषि। स्वेच्छाचारी देवता। स्वच्छंदच्छंद। गडबड-बीजं। कटकटकीलकम्। अंत्यजाना ब्रह्मवर्चसी करणे विनियोग॥

ये वै व्रात्यास्सन्त्यजास्तान्देवास्सर्वे पुनंति। उत व्रात्यानत्यजान्ते ददंति ब्रह्मवर्चसं। मायाहारान्कंठस्थानस्तान्देवास्सर्वेनमति। माहारेष्युत प्रेम्णा ते वदंति दिवौकस। माहारा पावमानास्तान्श्राद्धेनियोजयेत्। ಹೀಗೆ ಮಂತ್ರೋಪದೇಶ ಮಾಡಲಿಕ್ಕೆ ಅಡ್ಡಿಯಿಲ್ಲವೆಂದು ನಾನು ಬೋಧಿಸಿದೆನು. ಮಂತ್ರವಾದರೂ ಮನಃಪೂತವೇ ಇರಬೇಕಾಗುತದೆ. ಶೂದ್ರರಿಗೆ ಬ್ರಹ್ಮವರ್ಚಸ್ಸು ಕೊಡಬೇಕಾದರೆ ಇಂಥ ಮಂತ್ರಗಳು ಮನಸ್ಸಂತೋಷಕರವಾದದ್ದು ಇರುವದಿಲ್ಲವೆಂದು ಮತ್ತೇನು ಹೇಳಬೇಕು?

***

ಸಾರ್ವಜನಿಕ ವ್ಯವಸಾಯಗಳ ಬಗ್ಗೆ ಸಹ ನಾವು ಸಾಮಾನ್ಯ ಧರ್ಮವನ್ನು ಪಾಲಿಸಬೇಕು. ಮುನಿಸಿಪಾಲಿಟಿಯ ಅಂಕೆಯಲ್ಲಿದ್ದ ಕೆಲವು ಬೀದಿಗಳಲ್ಲಿ ಒಟ್ಟುಗೂಡಿದ್ದ ಹೊಲಸನ್ನು ನೋಡಿದರೆ ಕೇಳುವದು ಬೇಡ. ಮುನಿಸಿಪಾಲಿಟಿ ಅಧಿಕಾರಿಗಳು ಅದರ ಕಡೆಗೆ ಲಕ್ಷ ಕೊಡುವರೆಂದು ತಮ್ಮ ಮನೆಯ ಸಮೀಪದಲ್ಲಿ ಎಷ್ಟು ಹೊಲಸಾದರೂ ಜನರು ಲೆಕ್ಕಿಸುವದಿಲ್ಲ. ಮಹಾರೋಗ ಜಾತಿಗಳು ಈ ಹೊಲಸಿನಲ್ಲಿ ಹುಟ್ಟಿ ಬೆಳೆಯುತ್ತವೆ. ಸೊಳ್ಳೆ ಮುಂತಾದ ಕೀಟಕಗಳು

ಕಷ್ಟಕರವೆ ಆದರೂ ಅದನ್ನು ಸ್ವಚ್ಛ ಮಾಡಲಿಕ್ಕೆ ಸಾರ್ವಜನಿಕರೆಂದು ಯಾರೂ ಮುಂದರಿಯುವದಿಲ್ಲ. ಹೊಲಸು ಒಂದೇ ಕಡೆಗೆ ಕೂಡಿಕೊಂಡು ಸ್ವಚ್ಛ ಮಾಡಲಿಕ್ಕೆ ಅನುಕೂಲವಾಗಿರಬೇಕೆಂದು ಮುನಿಸಿಪಾಲಿಟಿಯವರು ಬೀದಿಯ ಹಿಂದು ಮೂಲೆಗೆ "ಕಚರಾ ಪೇಟಾಯಿ"ಯನ್ನು ಇಟ್ಟಿರುತ್ತಾರೆ ಜನರು ಆಲಸ್ಯದಿಂದ ಅದರ ಹೊರಗೆ ಕಸವನ್ನು ಚೆಲ್ಲುತ್ತಾರೆ. ಗಾಳಿ ಬೀಸಿದರೆ ಅದು ತಿರುಗುವವರ ಕಾಲಿಗೆ ಬಡಿಯುತ್ತದೆಂದು ವಿಚಾರ ಮಾಡದೆ ಮಾರ್ಗದ ಮೇಲೆಯೇ ಚೆಲ್ಲಿಬಿಡುತ್ತಾರೆ ಮುಂಬಯಿಯಲ್ಲಿ ಒಮ್ಮೊಮ್ಮೆ ಮೇಲಿನ ಮಾಳಿಗೆಯ ಮೇಲೆ ಇದ್ದ ಹೆಂಗಸು ಕೆಳಗೆ ಅಚೀಚೆ ನೋಡಿ ಕಸವನ್ನು ಚೆಲ್ಲಿಹೋಗುತ್ತಾಳೆ, ಹೊರತು ನಾಲ್ಕು ಹೆಜ್ಜೆ ತೆಗೆದು ಕಸದ ಪೇಟಾಯಿಯಲ್ಲಿ ಹಾಕುವದಿಲ್ಲ. ಅದು ಕೆಳ ಮಾಳಿಗೆಯ ಮೇಲೆ ತಪ್ಪದೆ ಬಿದ್ದೇಬೀಳುತ್ತದೆ ಕೆಳಗಿನವರು ಗದ್ದರಿಸಿದರೆ ಕಳ್ಳನು ಕಳುವಾಗಿ ಹೋಯಿತೆಂದು ತಿರುಗಿ ಬೊಬ್ಬಿರಿಯುವಂತೆ, ಯಾರು ಚೆಲ್ಲಿದರೆಂದು ಆಕೆಯೇ ಸಮೀಪದ ಜನರಿಗೆ ಕೇಳುತ್ತಾಳೆ. ನೆರೆಹೊರೆಯ ಜನರೊಡನೆ ನಾವು ಪಾಲಿಸಬೇಕಾದ ಧರ್ಮವು ನಮಗೆ ಗೊತ್ತೇ ಇರುವದಿಲ್ಲ. ಇದರ ಒಳ್ಳೇ ಉದಾಹರಣೆಯು ನಮಗೆ ಮುಂಬಯಿ ಶಹರದಲ್ಲಿ ನೋಡಲಿಕ್ಕೆ ಸಿಗುತ್ತದೆ ಮಕ್ಕಳ ಕಾಟ ಬೇಡಾಗಿ ಕುಟುಂಬವನ್ನು ಬಿಟ್ಟು ಯಾರೊಬ್ಬ ಗೃಹಸ್ಥನು ಮುಂಬಯಿ ಇಮಾರತುಗಳಲ್ಲಿ ಹೋಗಿ ಉಳಕೊಳ್ಳುತ್ತಾನೆ. ಸಮೀಪದ ಬಿಡಾರುಗಳಲ್ಲಿಯ ಕೂಸು ಒಮ್ಮೊಮ್ಮೆ ಆತನ ಕೋಣೆಯ ಬಾಗಿಲಲ್ಲಿ ಮಲವಿಸರ್ಜನೆ ಮಾಡಿ ಹೋಗುತ್ತದೆ. ಆ ಕೂಸಿನ ತಾಯಿ ಸುಮ್ಮನೆ ತನ್ನ ಮಗುವನ್ನು ಎತ್ತಿಕೊಂಡು ತೊಳೆದು ತೊಟ್ಟಿಲಲ್ಲಿ ಮಲಗಿಸುತ್ತಾಳೆ ಕೇಳಿದರೆ, "ನನ್ನ ಮುದ್ದು ಮಗುವು ತೊಟ್ಟಿಲಲ್ಲಿ ಮಲಗಿ ಎಷ್ಟೋ ಹೊತ್ತು ಆಯಿತು! ಏನೇ ಇಲ್ಲವೆಂತ" ಸವಾಲು ಕೊಡುತ್ತಾಳೆ. ಅತ್ತಿತ್ತ ತಿರುಗಾಡುವ ಜನರು ಮಲವನ್ನು ಕಾಲಿಗೆ ಹಚ್ಚಿಕೊಂಡು ಬಯ್ಯುತ್ತ ಹೋಗಬೇಕಾಗುತ್ತದೆ. ಕೋಣೆಯ ಮಾಲೀಕನು ಸಭ್ಯನಾದರೆ ನಾಲ್ಕು ಸವಿ ಮಾತುಗಳಿಂದಲೇ ಅಲ್ಲಿಯ ನೆರೆಯ ಹೆಂಗಸರಿಗೆ ಕೇಳುವಂತೆ, "ನಿಮಗೆ ಮಕ್ಕಳ ಪ್ರೀತಿಯಿಂದ ಕೇಳುವುದೇ ಬೇಕಾದರೂ, ನಾನು ಹಾಗೇನು ಹೇಳುವದಿಲ್ಲ. ಆದರೆ ನಿಮ್ಮ ಕೂಸಿನ ಮೇಲಿನ ವಾತ್ಸಲ್ಯಕ್ಕೆ ಮಾತ್ರ ಮೆಚ್ಚಿದೆ" ಎಂತ ಹೇಳಿ ಸಗಣಿ ತೆಗೆದು ಸಾರಿಸುತ್ತಾನೆ. ಸಾಮಾನ್ಯ ಧರ್ಮ ತಿಳಿಸಿದರೆ ಜಗಳವಿಲ್ಲ. ಇಲ್ಲವಾದರೆ "ಹೇಟ! ಮಾಡಲಿಕ್ಕೆ ಯಾರ ಕೂಸು ಸತ್ತಿತು!" ಎಂತ ಆರೋಪ ಹಚ್ಚಿ ಆಡುತ್ತಾನೆ. ಮುಂಬಯಿ ಪಟ್ಟದ ಪಾಯಖಾನೆಗಳೊಳಗಿನ ಸ್ವಚ್ಛತೆ ಕೇಳುವದೇ ಬೇಡ. ಕೆಲಕೆಲವು ಗೃಹಸ್ಥರು ಮಲವಿಸರ್ಜನೆ ವಿರುದ್ಧ ಟೀಕೆ ಮಾಡುತ್ತಾರೆ, ವಿದ್ಯಾವಂತರು ಆ ಕೋಣೆಯ ಒಳ ಬದಿಯ ಗೋಡೆಯ ಮೇಲೆ ಅಸಭ್ಯ-ಬೀಭತ್ಸ ಬರಹವನ್ನು ಬರೆಯುತ್ತಾರೆ. ಅರ್ಥ ಸುಟ್ಟು ಹೋದ ಬೀಡಿ ತುಂಡುಗಳ ರಾಶಿ ಬಿದ್ದಿರುತ್ತದೆ, ಪುರಾಣಿಕ ಪಂಡಿತರು ಬಾಯಿತುಂಬ ತಾಂಬೂಲಚರ್ವಣ ಮಾಡಿ ಗೋಡೆಗಳಿಗೆ ಬಣ್ಣ ಕೊಡುತ್ತಾರೆ ಇದೆಲ್ಲ ನೋಡಿದರೆ, ನಮಗೂ, ಪಶುಗಳಿಗೂ ಭೇದವೇನೆಂದು ತಿಳಿಯದು. ಇದರಿಂದ ನಿಜವಾಗಿ ನಾವು ನಾಚಿಕೊಳ್ಳಬೇಕು.

***

ನಮ್ಮ ಸಮಾಜದಲ್ಲಿ ಒಕ್ಕಟ್ಟು ನಮಗೆ ಗೊತ್ತೇ ಇಲ್ಲ. ನಾನೊಂದು ಊರಲ್ಲಿ ಹೋದಾಗ ಹೊರಗೆ ಬಂದು "ऐक्यपरवर्तक सत्र" ಎಂದು ಬರೆದ ಪಟವನ್ನು ಕಂಡೆನು ಚೌಕಶಿ ಮಾಡಲು, ಊರಲ್ಲಿ ಒಕ್ಕಟ್ಟು ನೆಲಿಸಬೇಕಾಗಿ ಕೆಲವರು ಸ್ಥಾಪಿಸಿದ ಒಂದು ಸಭೆಯೆಂದು ತಿಳಿದುಬಂತು. ಆದರೆ, ಆ ಸಭೆಯ ಬಾಗಿಲು ಇಕ್ಕಿಕೊಂಡಿತ್ತು. ಅದರ ಕಾರಣವೇನೆಂದು ಕೇಳಲು, ಆ ಸಭೆಯ ಜನರಲ್ಲಿ ಕೆಲವು ದಿವಗಳ ಹಿಂದೆ ಒಡಕು ಹುಟ್ಟಿತೆಂದು ಕೇಳಿದೆನು. ಐಕ್ಯದ ಸಭೆಗಳಲ್ಲಿ ಒಡಕು! ಊರಲ್ಲಿ ಎರಡು ಪಕ್ಷಗಳಿದ್ದರೆ ರಾಜಿಗೆ ಬಂದ ಗೃಹಸ್ಥನು ಮೂರನೇ ಪಂಗಡ ಹುಟ್ಟಿಸಿ ಹೋಗುತ್ತಾನೆ. ಇದೊಂದು ರೋಗವೆಂದೇ ಹೇಳಬೇಕಾಗುತ್ತದೆ ನಾನು ಕೆಲವು ದಿವಸಗಳ ವರೆಗೆ ಶಾಲೆಯ ಮಾಸ್ತರನಾಗಿದ್ದೆ ಹುಡುಗರು ಪ್ರತಿನಿತ್ಯ ಬಂದು ಕೈ ಹೋಗುತ್ತಿದ್ದರು ಒಮ್ಮೆ ಒಬ್ಬ ಹುಡುಗನಿಗೆ ಶತವಾರ್ಧಕ್ಕೆ ಸಿಟ್ಟಿಗೆದ್ದೆನು "पंतोजी ! मला एकांत वेळी झाली" ಅಂದರೆ ಮಲವಿಸರ್ಜನೆ ಮಾಡಬೇಕಾಯಿತೆಂದ. ಆ ಹುಡುಗನು ಹೇಳಿದನು. ಇದು ನಮ್ಮ ಐಕ್ಯಕ್ಕಾಗಿ ಬಂದ ಗೃಹಸ್ಥರ ಅವಸ್ಥೆಯಾಗುತದೆ. (शेजार धर्म) ನೆರೆಹೊರೆಯವರೊಡನೆ ನಮ್ಮ ನಡತೆಯನ್ನು ನಾವು ಚನ್ನಾಗಿ ಇರಿಸಿಕೊಳ್ಳಬೇಕು ಹೋಳಿಗೆ ಊಟವಾದರೆ ನೆರೆಯವನಲ್ಲ ಹೋಗುವದು. ನಮ್ಮ ಹಕ್ಕು ಎಂತ ನಾವು ಹೇಳುತ್ತೇವೆ, ಅದರಂತೆಯೆ ವಿವಾಹಾದಿಗಳಲ್ಲಿ ನೃತ್ಯ, ಗೀತ, ವಾದ್ಯದಿಂದ ರಾತ್ರಿ ನಿದ್ದೆ ಗೇಡಾಗಿದ್ದರೆ, ಆ ಕಷ್ಟ ಸಹಿಸಬೇಕು ಹೀಗೆ ಸಣ್ಣ ಸಣ್ಣ ಸುಧಾರಣೆಗಳಿಂದಲೇ ನಾವು ಸ್ವಾತಂತ್ರ್ಯ ಗಳಿಸಬಲ್ಲೆವು. ಗ್ರಾಮ ಸುಧಾರಣೆ, ದೇಶಸುಧಾರಣೆ, ಆಮೇಲೆ ರಾಷ್ಟ್ರ ಸುಧಾರಣೆ ಎಂಬುದನ್ನು ಎಂದೂ ಮರೆಯದೆ ನಡೆಸಬೇಕಾಗಿ ಸಾಮಾನ್ಯ ಧರ್ಮದ ಮರ್ಮವಾಗಿದೆ.

Mr. Oak's District Court.

To,

The Editor, 'Kanara News,' Kumta.

Sir,

When I go to Karwar for court work, I go and sit some time in the District Court, merely out of curiosity. This practice of mine is long-standing I have attended Mr Oak's Court on several occasions. Mr Oak, our District Judge has his own ways of doing Court work Some ways may be said to be good, some indifferent, and some positively bad In Mr Oak's court everything is to be done in open court. Mr Oak even signs decrees in open court Ordinary applications such as, for change of address are disposed of in open court Judgments too are dictated to the typist in open court Some of these practices may be good I have seen former Judges I have seen Mr Sen, Mr. Oak's predecessor all these things mentioned above were disposed of by him in chamber. Really, that is the place for such business Much of the Court time is saved therebye When I saw these things, I felt considerably amused,

(continuced on page 9)

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪಾಕೀಟುಗಳಿಗೆ ರೂ. ೬
.. (ಎಕೆಲೊಜರ್ಮೆಂಟು) ೨೫ .. .. ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪॥
ನಾಟಿ . ೧೬ ,, ,, ೨॥
ಸಿಲ್ವರ ಬೀಟ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಲಿಗೆ ೨॥
ಹರಿವೆ ಸೊಪ್ಪು ೧ ರತ್ತಲಿಗೆ ೪
ಕ ಮರೆ ಕುಸಾಬಿ ಬೀಜ ೧ ರತ್ತಲಿಗೆ ... ೩
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಚಲೋ ಕ್ರೋಟನ್ಸ್ ಗಿಡ ೧೨ ಕ್ಕೆ .. ೩ ರಿಂದ ೧೨
ಅಂದವಾದ ಹೂ ಗಿಡ (ಜಿರೇನಿಯಂ) ೧೨ ಕ್ಕೆ .. ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ . . ೨ ರಿಂದ ೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ... ೧॥ ಯಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨
ಕಟ್ಟಿದ್ದ ಮಾವಿನ ಗಿಡಗಳು ೧೨ ಕ್ಕೆ .. ೧೦ ರಿಂದ ೧೨
ಸೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ ... ...೧೨ ರಿಂದ ೨೬
೮ ಜಾತಿಯ ಬಾಳೇ ಗಿಡ ೧೦ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಜಬೆರಿ, ಪನ್ನೇರಲ, ಕಂಚಿಕಾಯಿ, ಲಕ್ಕೋಟೆ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ . . ೨೪
ವೊಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ .. ೫
೧ ಬುಟ್ಟಿ ತುಂಬ ತರಕಾರಿ ...೫ ರಿಂದ ೬
ಕ್ರಿಸಾಂಥಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೆರಳು ಕೊಡುವ ಹಾಗೂ ಎಲೆಯ ಜಾತಿಯ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡ್ಡೆಗಳು ೧೨ ಕ್ಕೆ ರೂ. ೩ ರಿಂದ ೯
ಎರೂಕೇರಿಯಾ ಕುಕ್ಕಿ ೧೨ ಗಿಡಗಳಿಗೆ ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ . ೪ ರಿಂದ ೬

ಟೀಪು.- ಆರ್ಡರ್ಕ್ಕೆ ಕಮಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು

ಎಮ್. ದೇವಪ್ಪ ಎಂಡ್ ಸನ್ಸ,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ಕಾನಡಾ ವೃತ್ತ.

ಶಕೆ ವಿಭವ ಸಂ। ಆ। ಶ್ರಾವಣ ಬ। ೫ಮಿ, ಸೋಮವಾರ

ಬಾರ್ದೋಲಿ.

ಶಂಖನಾದದ ಪ್ರಸ್ತಾವಿಕ ಸ್ವರೂಪವು ಈಗ ಬಯಲಾಗಿ ಬಾರ್ದೋಲಿಗೆ ಮುಂದಿನ ರಂಗದ ಘಟನೆಯಾಗುತ್ತಿದೆ. ಯುಧಿಷ್ಠಿರಾದಿ ಪಾಂಡವರೂ, ದುರ್ಯೋಧನಾದಿ ಕೌರವರೂ ಕುರುಕ್ಷೇತ್ರದಲ್ಲಿ ಯುದ್ಧಸೂಚಕವಾದ ಶಂಖನಾದವನ್ನು ಮಾಡಿದ ತರುವಾಯ, ಅತ್ತ ದುರ್ಯೋಧನನೂ, ಇತ್ತ ಪಾರ್ಥನೂ ಪರಸ್ಪರ ಸೈನ್ಯದೊಳಗಿನ ಮುಖ್ಯ ಮುಖ್ಯ ಸೇನಾನಿಗಳ ಪರಿಚಯವನ್ನು ಸಾರಥಿಗಳಿಂದ ಪಡೆಯುತ್ತಿದ್ದರು. ಕೌರವರ ಕಡೆಯಿಂದ ದ್ರೋಣಾಚಾರ್ಯರೂ, ಪಾಂಡವರ ಕಡೆಯಿಂದ ಜಗನ್ಮೋಹನ ಮೂರುತಿಯಾದ ಪ್ರತ್ಯಕ್ಷ ಶ್ರೀ ಕೃಷ್ಣ ಪರಮಾತ್ಮನೂ ದುರ್ಯೋಧನ-ಪಾರ್ಥರಿಗೆ ಸಮರಾಂಗಣದೊಳಗಿನ ಎದುರಾಳಿಗಳ ಅಸ್ತಿತ್ವವನ್ನೂ, ಪರಾಕ್ರಮವನ್ನೂ ತಿಳಿಸುತ್ತಿದ್ದರಂತೆ. ಇದು ಭಾರತ ಯುದ್ಧದೊಳಗಿನ ಎರಡನೇ ಸ್ಥಿತಿಯು. ಈ ಪ್ರಕಾರವು ಬಾರ್ದೋಲಿಯ ರಣಾರಂಗಕ್ಕೆ ಈಗ ಪ್ರಾಪ್ತವಾಗಹತ್ತಿದೆ

ನಾಮದಾರ ವಿಲ್ಸನ ದೊರೆಗಳಂತು ೧೪ ದಿನಗಳ ಕೊನೆಯ ನೋಟೀಸನ್ನು ಕೊಟ್ಟು ಬಾರ್ದೋಲಿಯ ಮೇಲೆ ಸಮಗ್ರ ಬ್ರಿಟಿಶ ಸಾಮ್ರಾಜ್ಯದ ಶಕ್ತಿಸರ್ವಸ್ವವನ್ನೆಸೆಯಲು ಟೊಂಕ ಕಟ್ಟಿದ್ದಾರೆ. ಭಾರತ ಮಂತ್ರಿಗಳಾದ ಬರ್ಕನಹೆಡ್ ದೊರೆಗಳೂ, ಸರ್ವಾಧಿಪತಿಗಳಾದ ಇರ್ವಿನ್ ದೊರೆಗಳೂ ವಿಲ್ಸನ ದೊರೆಗಳಿಗೆ ಬೇಕಾದ ಬೆಂಬಲವನ್ನಿತ್ತು ಬಾರ್ದೋಲಿಯವರೊಡನೆ ಕಾದಾಡಲು ವಿಲ್ಸನ ದೊರೆಗಳಿಗೆ ಹುರಿದುಂಬಿಸಿದ್ದಾರೆ ಅತ್ತ ಬಾರ್ದೋಲಿಯ ಪ್ರಜೆಗಳೇನು ಹಿಮ್ಮೆಟ್ಟುವ ಸ್ಥಿತಿಯಲ್ಲಿಲ್ಲ. ಮಾನಧನವನ್ನು ಪ್ರಾಣಾರ್ಪಣೆಯಿಂದ ಸಹ ಕಾಪಾಡಿಕೊಂಡು ಆಚಂದ್ರಾರ್ಕ ಕೀರ್ತಿ ಪಡೆದು ಚಿರಂಜೀವಿಯಾಗುವದಕ್ಕಾಗಿ ಅವರೂ ಟೊಂಕ ಕಟ್ಟಿ ಸಿದ್ಧರಾಗಿದ್ದಾರೆ ಮರ್ಯಾದೆಗೇಡಿತಹನಾಮೆಯನ್ನು ಎಷ್ಟಕ್ಕೂ ಮಾಡಲಾಗದೆಂದು ಅವರು ಶ್ರೀ। ವಲ್ಲಭಭಾಯಿಯವರಿಗೂ, ಮೊನ್ನೆ ಬಾರ್ದೋಲಿಗೆ ಚಿತ್ತೈಸಿದ ಮಹಾತ್ಮರಿಗೂ ನಿರ್ಧಾರದಿಂದ ಹೇಳಿದರು. “ಈ ವರೆಗೆ ನಾವು ಅನುಭವಿಸಿದ ಕಷ್ಟಗಳೇನು ವಿಶೇಷವಲ್ಲ; ಇನ್ನೂ ನಮ್ಮ ಪರೀಕ್ಷೆಯಾಗುವದಿದೆ,” ಎಂದು ಅವರು ಮಹಾತ್ಮರಿಗೆ ಹೇಳಲು, ಮಹಾತ್ಮರು ಆನಂದದಿಂದ ನಸುನಕ್ಕು ಅವರಿಗೆ ತಲೆದೂಗಿದರು ಹೀಗೆ ಇತ್ತಟ್ಟಿನವರೂ ಬಾರ್ದೋಲಿಯ ರಣರಂಗದಲ್ಲಿ ತಮ್ಮ ತಮ್ಮ ತಯಾರಿ ಮಾಡಿಕೊಂಡು ಕಾದಾಡುವದಕ್ಕಾಗಿ ನಿಂತುಕೊಂಡಾಗ ಪರಸ್ಪರ ಪರಿಚಯದ ಮಾತುಕತೆಗಳು ನಡೆಯಲಾರಂಭಿಸಿವೆ. ಪಾರ್ಥನಿಗೆ ಭೀಷ್ಮಾಚಾರ್ಯ, ದ್ರೋಣಾಚಾರ್ಯ, ದುರ್ಯೋಧನ, ಅಶ್ವತ್ಥಾಮ, ಕರ್ಣ ಮೊದಲಾದ ಆಚಾರ್ಯ ಶ್ರೇಷ್ಠರನ್ನೂ, ಅಸ್ತ್ರಶ್ರೇಷ್ಠರನ್ನೂ ನೋಡಿ ವಿಷಾದವಾಗಿ ದಿಙ್ಮೂಢವಾಗುವಂಥ ಲಕ್ಷಣಗಳೇನು ಸ್ವತಃ ಶ್ರೀ। ವಲ್ಲಭಭಾಯಿಯವರಲ್ಲಾಗಲಿ, ಮಹಾತ್ಮರಲ್ಲಾಗಲಿ ತೋರಿ ಬರುವದಿಲ್ಲವೆಂದು ತಿಳಿಸಲು ಸಂತೋಷವಾಗುತ್ತದೆ.

ಆದರೆ, ಕಾಯಿದೆ ಕೌನ್ಸಿಲಿನೊಳಗಿನ ನಾಮದಾರ ಸಭಾಸದರು ವಿಷಾದಯೋಗಾವಸ್ಥೆಯನ್ನು ಅನುಭವಿಸಹತ್ತಿದ್ದಾರೆ. ರಾ। ಕನ್ನಯಲಾಲ ಮುನಶಿಗಳಾದಿ ಸಭಾಸದರು, ಬಾರ್ದೋಲಿಯ ಪ್ರಜೆಗಳ ಮೇಲೆ ನೋಟೀಸಿನ ಮುದ್ದತ್ತು ತೀರಿದ ಕೂಡಲೆ ಅನರ್ಥಪರಂಪರೆಯ ಮುಗಿಲು ಒಮ್ಮೆಲೇ ಕುಸಿದು ಬೀಳುವದೆಂಬ ಒಳಗುಟ್ಟಿನ ಸುದ್ದಿ ಪಡೆದು ಬಹಳ ಭಯಪಟ್ಟಿದ್ದಾರೆ ಗುಜರಾಥ ಪ್ರಾಂತದ ಸಭಾಸದರಾಗಿ ದಿವಾಣರಾದ ದಿ। ಬ। ಹರಿಲಾಲಭಾಯಿ ದೇಸಾಯಿಯವರು ಈ ಒಳಗುಟ್ಟಿನ ಸುದ್ದಿಗಾರರಂತೆ! ಮುಂದಿನ ಚಕ್ರವ್ಯೂಹ ರಚನೆಯುಗುಟ್ಟೂ, ಕಷ್ಟ-ನಷ್ಟದ ಪರಿಮಾಣವೂ ಇವರಿಗೆ ಪಕ್ಕಾ ಗೊತ್ತಾಗಿರುವದಂತೆ! ಇವರೇ ಆ ಒಳಗುಟ್ಟನ್ನು ಸುರತದ ಸಭಾಸದರಾದ ಶ್ರೀ। ದಾದೂಭಾಯಿ ದೇಸಾಯಿ ಪ್ರಭೃತಿ ಸಭಾಸದರಿಗೆ ತಿಳಿಸಿದರು. ಹೀಗೆ ಬಾರ್ದೋಲಿಯ ಸರದಾರರಾದ ಶ್ರೀ। ವಲ್ಲಭಭಾಯಿ ಪಟೇಲರಿಗೆ ಬಗ್ಗಿಸುವ ಉಪಾಯಯೋಜನೆಯಾಗಹತ್ತಿದೆ. ಗುರ್ಜರ ಬಾಂಧವರ ಸೌಭಾಗ್ಯವೋ, ದುರ್ಭಾಗ್ಯವೋ ನಾವರಿಯೆವು, ಈ ಸಮಯ ಗುರ್ಜರ ಬಾಂಧವರಾದ ಸರ್ ಚುನಿಲಾಲ ಮೇಥಾರವರು ನಮ್ಮ ಮುಂಬಯಿ ಸರಕಾರದ ಮುಖ್ಯ ಆಧಾರಸ್ತಂಭಗಳಾಗಿದ್ದಾರೆ. ಅವರೇ ಶ್ರೀ। ವಲ್ಲಭಭಾಯಿಯವರಿಗೆ ಸಿಲುಕಿ ಹಾಕಲು ತಯಾರಾಗಿದ್ದಾರಾಗಿ ಕಾಣುತ್ತದೆ. ಮೊನ್ನೆ ಶ್ರೀ। ವಲ್ಲಭಭಾಯಿಯವರಿಗೆ ಸರ್ ಚುನಿಲಾಲರು ನಿಮಂತ್ರಿಸಿದ್ದಾರೆ; ಪುಣೆಗೆ ನಿಮಂತ್ರಿಸಿದ್ದಾರೆ. ಸರದಾರರು ತಮ್ಮಲ್ಲಿಯೇ ಉಳಕೊಳ್ಳಬೇಕಾಗಿಯೂ ಚುನಿಲಾಲರ ಆಗ್ರಹವಿದೆ ಬಾರ್ದೋಲಿಯ ಪ್ರಶ್ನೆಯ ಚರ್ಚೆಯಾಗುವದಂತೆ. ಸಂಧಾನದ ಕರಾರುಗಳ ಅತ್ಯರ್ಥವಾಗುವದಂತೆ! ಈಗಿನ ಮಟ್ಟಿಗೆ ತಿಳಿದ ಸುದ್ದಿಗಳ ಮೇಲಿಂದ ಸರ್ ಚುನಿಲಾಲರವರು ಸರಕಾರದ ತರ್ಫೆನಿಂದ ಬಾಯಿ ಆಶ್ವಾಸನಗಳನ್ನು ಕೊಟ್ಟು ಮುಂದೆ ಅವನ್ನು ಅಮಲಿನಲ್ಲಿ ತರುವ ವಚನಗಳನ್ನೂ ಕೊಡುವರಂತೆ. ಅಂತು ಬಾರ್ದೋಲಿಯೊಳಗಿನ ಪ್ರಶ್ನೆಯನ್ನು ಪ್ರಜೆಗಳ ಮಾನಭಂಗ ಮಾಡಿ ತೀರ್ಮಾನಿಸಿಕೊಳ್ಳುವ ಉಪಾಯಗಳು ಮಧ್ಯಸ್ಥರ ವಿಷಾದಯೋಗದ ಅಧ್ಯಾಯದಲ್ಲಿ ನಡೆದಿವೆ

ಆದರೆ, ಮಹಾತ್ಮರಾಗಲಿ, ಸರದಾರ ಶ್ರೀ। ವಲ್ಲಭಭಾಯಿಯವರಾಗಲಿ ಗಳಿಗೆಗೊಂದು ಮಾತಾಡುವ ರಾಜಕಾರಣ ಮುತ್ಸದ್ದಿಗಳಲ್ಲ. ಸರದಾರ ವಲ್ಲಭಭಾಯಿಗಳವರು ಬಾರ್ದೋಲಿಯ ಪ್ರಜೆಗಳ ಅಂಬೋಣವನ್ನು ಚೊಕ್ಕವಾಗಿ ಪ್ರಕಟಿಸಿದ್ದಾರೆ. ಹೊಸ ಕರಿಗೆಯನ್ನು ಏರಿಸದಿದ್ದರೆ ಉಂಟಾಗುತ್ತಿದ್ದ ಪರಿಸ್ಥಿತಿಯನ್ನು ತಿರುಗಿ ಉಂಟುಮಾಡಿ ಸಾರ್ವಜನಿಕ ಸ್ವತಂತ್ರ ಚೌಕಶಿ ನಡಿಸಲು ಸರದಾರರು ಬಿನ್ನೈಸಿಕೊಂಡಿದ್ದಾರೆ. ಹೊಸ ಕರಿಗೆಯನ್ನೇರಿಸದಿದ್ದರೆ ಪ್ರಜೆಗಳ ಭೂಮಿಯಾಗಲಿ, ಜಿಂದಿಗೆಯಾಗಲಿ ಕಾಸಿಗೆ ಮಾರಿಹೋಗುತ್ತಿದ್ದಿಲ್ಲ; ಪರಾಧೀನವಾಗುತ್ತಿದ್ದಿಲ್ಲ. ಪಟೇಲರಾಗಲಿ, ತಲಾಟಿಗಳಾಗಲಿ ರಾಜೀನಾಮೆ ಕೊಡುತ್ತಿದ್ದಿಲ್ಲ. ಈ ಸ್ಥಿತಿಯನ್ನು ತಿರುಗಿ ಪ್ರಾಪ್ತ ಮಾಡಿಕೊಳ್ಳಲು ಅವಶ್ಯವುಳ್ಳ ನಷ್ಟಭರಪಾಯಿಯನ್ನು ಸರಕಾರವು ಮಾಡಿಕೊಡಲು ಬದ್ಧವಿದೆ. ಸರಕಾರಕ್ಕೆ ನಿಜವಾಗಿ ಪಶ್ಚಾತ್ತಾಪವಾಗಿದ್ದರ, ಅವರು ಪಶ್ಚಾತ್ತಾಪವನ್ನು ಪ್ರದರ್ಶಿಸುವ ಉಪಾಯವೇ ಇದು. ಅದಲ್ಲದೆ, ಏನಾದರೊಂದು ರೊಟ್ಟಿಯ ತುಣುಕನ್ನು ಬೀಸಾಡಿ ಬಾರ್ದೋಲಿಯ ಪ್ರಜೆಗಳಿಗೆ ಸಂತೈಸಲು ಇನ್ನು ಸಾಧ್ಯವಿಲ್ಲ ಬಾರ್ದೋಲಿಯಿಂದ ಶ್ರೀ। ವಲ್ಲಭಭಾಯಿಯವರು ಪುಣೆಗೆ ತೆರಳುವಾಗ ಪುಣೆಯಲ್ಲಿಯೇ ತಾವು ಸೆರೆಯಾಳಾಗಲಾಗುವೆವೆಂದು ಗ್ರಹಿಸಿ ಹೊರಟಿದ್ದಾರೆ. ಅದಕ್ಕಾಗಿ ಮಹಾತ್ಮರಿಗೆ ಬಾರ್ದೋಲಿಗೆ ಹೋಗುವ ಪ್ರಸಂಗ ಬಂತು. ಇಂದಿಗೆ ಸರಕಾರದ ನೋಟೀಸಿನ ಮುದ್ದತ್ತು ತೀರಿತು ಶ್ರೀ। ವಲ್ಲಭಭಾಯಿಯವರು ಸೆರೆಯಾಳಾದರೆ, ಬಾರ್ದೋಲಿಯ ಹೋರಾಟಕ್ಕೆ ಸಹಜವಾಗಿ ಉಗ್ರ ರೂಪವು ಪ್ರಾಪ್ತವಾಗುವದು.

ಬಾರ್ದೋಲಿಯ ತಾಜಾ ಸುದ್ದಿ.

ಸರದಾರ ವಲ್ಲಭಭಾಯಿಯ ಮಂಡಳಿಯ ಸರ್ ಚುನಿಲಾಲ ಮೇಥಾರವರೂ, ನಾಮದಾರ ಗವ್ಹರ್ನರರೂ ಮಧ್ಯಸ್ಥಿಕೆಯನ್ನು ನಡಿಸಹತ್ತಿದ್ದಾರೆ. ನಾಮದಾರ ವಿಲ್ಸನ್ ದೊರೆಗಳು ಸ್ವಂತ ಜವಾಬದಾರಿಯ ಮೇಲೆ ಶ್ರೀ॥ ವಲ್ಲಭಭಾಯಿಯವರ ಅನುಮತಿ ಪಡೆದು ಸಾರ್ವಜನಿಕ ಚೌಕಶಿ ಮಂಡಳವನ್ನು ನೇಮಿಸಲು ಒಪ್ಪಿದ್ದಾರಾಗಿ ಪುಣೆಯ ‘ವಿಹಾರಿ’ಯ ಸುದ್ದಿಗಾರರು ಪ್ರಕಟಿಸಿದ್ದಾರೆ. ಸರಕಾರಿ ಅಧಿಕಾರಿಗಳು ಹಿಂಜರಿಯಲು ಒಪ್ಪುವದಿಲ್ಲ. ಆದರೂ, ಸಂಧಾನದ ಆಶೆ ಇದೆ

ಸ್ಫುಟ ಸೂಚನೆಗಳು.

೧ ಶೀರ್ವೆಯನ್ನು ತಿದ್ದುಪಡಿ ಮಾಡುವ ಸೆಟ್ಲಮೆಂಟ ಅಧಿಕಾರಿಗಳ ಮನೋರಚನೆಯನ್ನು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ೨೬ ವರ್ಷಗಳ ಹಿಂದೆ ಸರ್ ಫಿರೋಜಶಹಾ ಮೇಥಾರವರು ಬಲು ಮಾರ್ಮಿಕವಾಗಿ ವಿವರಿಸಿದ್ದಾರೆ. ಅದು ಬೋಧಪ್ರದವಿದೆ: ಸೆಟ್ಲಮೆಂಟ ಅಧಿಕಾರಿಗಳು ಭೂಮಿಯ ಅರತೆಯ ಮುಲ್ಲಿಖಾಸ ಮಾಡುತ್ತಾರೆ. ಕೆಲವರ ಅರತೆ ಕಡಿಮೆಯಾಗಿದೆಂದು ಅವರು ಕಂಡುಹಿಡಿಯುವದು ಸಾಮಾನ್ಯ ಸಿದ್ಧಾಂತವು. ಪರಿಶ್ರಮದಿಂದಲೂ, ಖರ್ಚಿನಿಂದಲೂ ಸಾಗುವಳಿಗೆ ತಂದ ಬಂಜರು ಹೊಲ, ಕಲ್ಲುಗುಡ್ಡೆಯ ಪ್ರದೇಶ, ಗಡಿಸಿಯ ತುಂಡು ಇವುಗಳ ಮೇಲೆ ಅವರು ಕಣ್ಣಿಟ್ಟು, ಅವುಗಳ ಅರತೆ ಮಾಡಿ ಸಾಗು ಭೂಮಿಯಲ್ಲಿ ಸೇರಿಸುತ್ತಾರೆ. ಆ ಮೇಲೆ ಶೀರ್ವೆಯನ್ನೇರಿಸುವ ಕಾರಣಗಳನ್ನು ಅವರು ನಮೂದಿಸುತ್ತಾರೆ. ನವೆಹೊರೆಯಲ್ಲಿ ಹೊಸ ಉಗಿಬಂಡಿ ... ಸ್ತ ಯಾಗಿದೆ; ಹಂಚು ಹಾಕಿದ ಮನೆಗಳ ಸಂಖ್ಯೆಯು ಹೆಚ್ಚಿತು; ಗೋಧನವು ಅಭಿವೃದ್ಧಿಗೈದಿತು; ನಿಯಮಿತವಾಗಿ ಸಂತೆಯಾಗುತ್ತದೆ; ಶಾಲೆಯಿದೆ; ಮಕ್ಕಳಾಗಿದ್ದಾರೆ, ಶ್ರೀಮಂತರಾದ ಒಂದಿಲ್ಲೊಂದು ನೆವ ಹೇಳಿ ಪ್ರಜಾಭಿವೃದ್ಧಿ ಪ್ರದರ್ಶಿಸಲಾಗುತ್ತದೆ. ರಾಷ್ಟ್ರೀಯ ಸಭೆಗೆ ಪ್ರತಿನಿಧಿಗಳನ್ನು ಕಳಿಸುವದೂ ಪ್ರಜಾಭಿವೃದ್ಧಿಯ ಲಕ್ಷಣವೆಂದು ಶೀರ್ವೆ ತಿದ್ದುಪಡಿಯಾಗುತ್ತದಂತೆ. ಸರಕಾರವು ಕಟ್ಟಿಸಿದ ಕೆರೆ-ಕಾಲುವೆಗಳನ್ನೂ ಲೆಕ್ಕಕ್ಕೆ ಹಿಡಿಯುತ್ತಾರೆ. ಮೂರ್ಖತನದಿಂದ ಬೇಸಾಯಗಾರರು ಬಾವಿ ಅಗಿಸಿದರೆ ಬಾವಿಗೆ ಸಿಕ್ಕಿದ ನೀರಿನ ಬಾಳಿಕೆಯ ಮೇಲಿಂದಲೂ ಶೀರ್ವೆಯ ತಿದ್ದುಪಡಿಯಾಗುತ್ತದೆ. ಬಹಿರಂಗ ಅಭಿವೃದ್ಧಿಯಲ್ಲಿ ಒಕ್ಕಲಿಗರಿಗೆ ಪಾಲೆಷ್ಟು ಬಂದದೆಂಬ ವಿಚಾರವಾಗುವದಿಲ್ಲ. ಸಾಮಾನ್ಯ ಉತ್ಪನ್ನದ ಮಾನದ ಬಗ್ಗೆ ಬುಡಬೇರಿಲ್ಲದ ಚೌಕಶಿಯಾಗುತ್ತದೆ. ಅಂತೂ ಶೀರ್ವೆಯನ್ನು ಏರಿಸಲು ಸೆಟ್ಲಮೆಂಟ ಅಧಿಕಾರಿಗಳು ಶಿಫಾರಸು ಮಾಡುತ್ತಾರೆ." ಸರ್ ಫಿರೋಜಶಹಾ ಮೇಥಾರವರ ಶೀರ್ವೆ ತಿದ್ದುವಿಕೆಯ ವರ್ಣನೆಯನ್ನು ಅಯಥಾರ್ಥವೆಂದು ಹೇಳುವವರಾರು? ಇಂಥ ಚೌಕಶಿಯಿಂದ ನಡಿಸಿದ ಶೀರ್ವೆ ಏರಿಕೆಗೆ ಬಾರ್ಡೋಲಿಯವರು ವಿರೋಧಿಸಿ ಪ್ರಾಂತಿಕ ಸರಕಾರಕ್ಕೂ, ಪ್ರಜೆಗಳಿಗೂ ಪಾಠ ಕಲಿಸುತ್ತಿದ್ದಾರೆ.

---

೨. ಮುಂಬಯಿ ಕಾಯಿದೆ ಕೌನ್ಸಿಲು ಮೇಲಿನಂತೆ ಪುನಃ ಪೂರ್ವಸ್ಥಿತಿಗೆ ಮುಟ್ಟಿತೆಂದು ತಿಳಿಸಲು ವಿಷಾದವಾಗುತ್ತದೆ. ಅಧಿವೇಶನದ ಪ್ರಾರಂಭ ಕಾಲದಲ್ಲಿ ಲೋಕಮತವನ್ನು ಪ್ರಾಬಲ್ಯದಿಂದ ಪ್ರಕಟಿಸಿ, ಲೋಕಶಾಸಕಾರರ ಕಾನೂನುಗಳನ್ನು ಧಿಕ್ಕರಿಸಿದ್ದರ ಮೇಲಿಂದ ಸ್ಯಾಯಮನ್ ಕೂಟದೊಡನೆ ಈ ಅಧಿವೇಶನವು ಸಹಕಾರ್ಯ ಬೆಳೆಸಲಿಕ್ಕಿಲ್ಲವಾಗಿ ಕೆಲವರ ಅಂದಾಜಿತ್ತು. ಸರಕಾರಕ್ಕೂ ಈ ಭೀತಿಯಿತ್ತೋ ಏನೋ, ಕಳೆದ ಆಗಸ್ಟ ೧ನೇ ತಾರೀಖಿಗೆ ಸ್ಯಾಯಮನ್ ಕೂಟದೊಡನೆ ಚೌಕಶಿಯ ಕೆಲಸ ಮಾಡಲು ಕಾಯಿದೆ ಕೌನ್ಸಿಲು ನೇಮಿಸಲಿಕ್ಕಿದ್ದ ಹಿಳಕೂಟದ ನೇಮಣೂಕಿಯ ಚರ್ಚೆಯಾಯಿತು. ನಾಮದಾರ ಗವ್ಹರ್ನರರೂ ಈ ಚರ್ಚೆ ಕೇಳಬಂದು ಸ್ಯಾಯಮನ್ ಕೂಟದ ಮೇಲೆ ಸರಕಾರಕ್ಕಿರುವ ವಿಶೇಷ ಕಳಕಳಿಯನ್ನು ಪ್ರದರ್ಶಿಸಿದರು. ಜನರೂ ಈ ಚರ್ಚೆ ಕೇಳಲು ತಂಡಗಟ್ಟಿ ಸೇರಿದ್ದರು. ಮೊಟ್ಟಮೊದಲು ಒಂದು ಪ್ರಾಸ್ತಾವಿಕ ಪ್ರಶ್ನೆಯ ವಿಚಾರವಾಯಿತು. ಕಾಯಿದೆ ಕೌನ್ಸಿಲಿನ ಸಭಾಸದರಾಗಿದ್ದ ಸರಕಾರಿ ಅಧಿಕಾರಿಗಳು ಈ ವಿಷಯ ಮತ ಕೊಡಬಹುದೋ ಹೇಗೆ? ಎಂದು ಸಭಾಸದರೊಬ್ಬರು ಕೇಳಿದರು. ಕೌನ್ಸಿಲಿನ ಅಧ್ಯಕ್ಷರಾದ ನಾ॥ ದೆಹಲವಿಯವರು "ಅಹುದು" ಎಂದು ತಿಳಿಸಿದಾಗಿನ ಚರ್ಚೆ ಮುಂದರಿಯಿತು. ಶ್ರೀ॥ ನರಿಮಾನ್, ದೇಸಾಯಿ, ಮುನಶಿ, ಜಿಕೆನ್ಯೇಡಿಯವರಂಥ ಲೋಕಪಕ್ಷದ ಸಭಾಸದರು ಸ್ಯಾಯಮನ್ ಕೂಟದ ನೇಮಣೂಕಿಯಿಂದ ಭರತಖಂಡಕ್ಕೆ ಸಾಮ್ರಾಜ್ಯಕರ್ತರು ಮಾಡಿದ ಅಪಮಾನವನ್ನು ಉಲ್ಲೇಖಿಸಿ, ಈ ಠರಾವಿಗೆ ವಿರೋಧಿಸಿದರು. ಮಿ॥ ಎಂಡರಸನ್ನಾದಿ ಸರಕಾರಿ ಅಧಿಕಾರಿಗಳೂ, ಹೊಸದಾಗಿ ದಿವಾಣರಾದ ರಾ॥ ಜಾಧವರವರೂ, ಮಿ॥ ಲತೀಫ ಆದಿ ಸರಕಾರನಿಯುಕ್ತ ಸಭಾಸದರೂ ಸ್ಯಾಯಮನ್ ಕೂಟದ ಬಳಿ ಪ್ರಾರ್ಥನೆ ನಡಿಸಿ ಅದರಿಂದ ಭರತಖಂಡದ ಉನ್ನತಿ ಮಾಡಿಕೊಳ್ಳಲು ಸಹಕಾರಿ ಸಭಾಸದರಿಗೆ ಬೋಧಿಸಿದರು. ಸ್ಯಾಯಮನ್ ಕೂಟದ ಘಟನೆಯು ಸಮಾಧಾನಕರವಿದ್ದಿದ್ದಾಗ್ಯೂ ಅದಕ್ಕೆ ಧಿಕ್ಕರಿಸಿದ್ದರಿಂದ ಹಿಂದುಸ್ಥಾನಕ್ಕೇ ನಷ್ಟವಿದೆಂದು ಪ್ರತ್ಯಾಕ್ಷೇಪಕರ ಅಂಬೋಣ. ಹಿಂದುಸ್ಥಾನಕ್ಕೆ ಬ್ರಿಟಿಶರು ಬಲಾತ್ಕಾರದಿಂದ ಕಲ್ಯಾಣ ಮಾಡುವ ಕಾರಣವೇನೆಂದು ಇವರು ಹೇಳಲಿಲ್ಲ. ಮಾರನೇ ದಿನದ ತನಕ ಚರ್ಚೆ ನಡೆಯಿತು. ಸರ್ ಚುನಿಲಾಲ ಮೇಥಾರವರು ಚರ್ಚೆಗೆ ಉತ್ತರ ಸಹ ಕೊಡಲಿಲ್ಲ. ಕಾರಣವೇನಿದೆ? ಸರಕಾರಿ ಅಧಿಕಾರಿಗಳೂ, ಕೆಲ ಸ್ವಯಂಪ್ರೇಷಿತ ಲೋಕನಿಯುಕ್ತ ಸಭಾಸದರೂ ಸರಕಾರಿ ಹೇಳಿಕೆಗೆ ಕಣ್ಮುಚ್ಚಿ ತಲೆದೂಗುತ್ತಿರುವಾಗ, ಸರ್ ಚುನಿಲಾಲ ಮೇಥಾರವರು ಸರಕಾರದ ತರ್ಫೆನಿಂದ ಶ್ರಮವನ್ನು ಏಕೆ ಖರ್ಚ ಮಾಡಬೇಕು? ೬೪ ಸಭಾಸದರು ಸರ್ ಚುನಿಲಾಲರವರಿಗೆ ಅನುಕೂಲ ಮತ ಕೊಟ್ಟರು; ೪೩ ಮಂದಿ ಸಭಾಸದರು ಪ್ರತಿಕೂಲ ಮತ ಕೊಟ್ಟರು; ಬಹುಮತದಿಂದ ಸರ್ ಚುನಿಲಾಲರವರು ಗೆದ್ದರು. ಈ ಅಂಕಿಗಳನ್ನು ಸ್ವಲ್ಪ ಪರೀಕ್ಷಿಸಿದರೆ, ಪ್ರಾಂತಿಕ ಲೋಕಮತವು ಸರಕಾರಕ್ಕೆ ಪ್ರತಿಕೂಲವೆಂದು ಯಾರೂ ಹೇಳುವರು. ಅನುಕೂಲ ಮತ ಕೊಟ್ಟ ೬೪ ಸಭಾಸದರಲ್ಲಿ ಸರಕಾರಿ ಅಧಿಕಾರಿಗಳು ೩೩ ಮಂದಿಗಳಿದ್ದಾರೆ. ಅಂದರೆ, ೩೧ ಮಂದಿ ಲೋಕನಿಯುಕ್ತರು ಸರಕಾರಕ್ಕೆ ಅನುಕೂಲರಾದರು; ೪೩ ಮಂದಿಗಳು ಪ್ರತಿಕೂಲರಾದರು; ಎಂದು ಸ್ಪಷ್ಟವಾಗುತ್ತದೆ. ಆದರೆ, ೩೧ ಮಂದಿಗಳಾದರೂ ಸ್ಯಾಯಮನ್ ಕೂಟದಿಂದ ಅಭಿಪ್ರೇತವಾದ ಅಪಮಾನವನ್ನು ಸಹಿಸಿ, ಅದಕ್ಕೆ ಅನುಕೂಲ ಮತ ಕೊಡುವ ನೋಟದಿಂದ ಬೇಸರಹುಟ್ಟುತ್ತದೆ. ಸರ್ ಚುನಿಲಾಲ ಮೇಥಾರವರಂಥ ಮಹಾಭಾರತೀಯರೇ ಸರಕಾರದ ಸಂಬಳ ಪಡೆದೊಡನೆ ದೇಶಬಾಂಧವರನ್ನು ಸಹ ಮರೆತು, ದೇಶದ್ರೋಹ ಮಾಡಲು ತಯಾರಾಗುತ್ತಾರೆ. ಇವನ್ನು ಕೇಳಿದರೆ, ಭರತಖಂಡದಲ್ಲಿ ಈ ರಾಜ್ಯಪದ್ಧತಿಯಿಂದುಂಟಾದ ಹೀನದೆಸೆಯ ನೆನವರಿಕೆಯಾಗಿ, ಈ ರಾಜ್ಯಪದ್ಧತಿಯನ್ನು ಕಿತ್ತೊಗೆದು ಹೊಸ ರಾಜ್ಯಪದ್ಧತಿಯನ್ನು ಘಟಿಸಿ ಅದ್ದ ಮಾರ್ಗ ಹಿಡಿದುಹೋಗುವ ದೇಶದೊಳಗಿನ ಮಹಾನುಭಾವರಿಗೆ ಬಲವಾಗಲಿಕ್ಕೆ ತಂದು ದೇಶಕಲ್ಯಾಣವನ್ನು ನೆರವೇರಿಸಿಕೊಳ್ಳಲು ಮನಸ್ಸು ಆತುರಗೊಳ್ಳುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಆಶ್ಲೇಷಾ ನಕ್ಷತ್ರದ ಮಳೆಯು ಬಹಳ ಬೀಳುತ್ತದೆ. ಮಧ್ಯ ಮಧ್ಯ ಬಿಸಿಲು ಬೀಳುತ್ತದೆ. ಅಂತು ಮಳೆಯ ಮಾನವು ತಕ್ಕಮಟ್ಟಿಗೆ ಸಮಾಧಾನಕರವದೆ. ಈ ವಾರದಲ್ಲಿ ೧೧-೬೪ ಇಂಚು ಮಳೆ ಬಿತ್ತು. ಅಂತೂ ಈ ತನಕ ೧೩೩-೩೧ ಇಂಚು ಮಳೆ ಬಿತ್ತು.

ಈಗ ಇಲೆಕ್ಷನ ಗದ್ದಲ! ನಾಳೆ ಮತ ಕೊಡುವ ಗಡಿಬಿಡಿ!! ನಾಡದು ಮತ ಎಣಿಕೆಯ ಗಾಬರಿ! ಹೊಸ ಮೆಂಬರರ ಹೆಸರುಗಳು ನಾಡದು ಜಾಹೀರಾಗುವವು. ಇಲೆಕ್ಷನಿನ ಪೋಲಿಂಗ ಠಾಣ್ಯಗಳು ಪೇಟೆಯಲ್ಲೇ ಇರುವದರಿಂದ, ನಾಳೆಯು ಗಡಬಡಿಯಲ್ಲಿ ಕನ್ನಡ ಶಾಲೆಗೆ ರಜೆ ಕೊಡುವದುಳಿತು. ಚಿಕ್ಕ ಮಕ್ಕಳಿಗೆ ಈ ಗಡಬಡಿಯಲ್ಲಿ ತೊಂದರೆಯಾಗುವದು. ಹೆಡ್ ಮಾಸ್ತರರಿಗೆ ಇಂಥ ಪ್ರಸಕ್ತಿಯಲ್ಲಿ ರಜೆ ಕೊಡಲು ಅಧಿಕಾರವುಂಟು.

ಇಲ್ಲಿಯ ಪಶುಗಳ ಚಿಕಿತ್ಸಾಲಯದ ಡಾ॥ ಆರ್. ಎನ್. ನಾಯ್ಕ, ಜಿ. ಬಿ. ವ್ಹಿ. ಸಿ. ಇವರಿಗೆ ಇಂಪೀರಿಯಲ್ ರಿಸರ್ಚ ಇನ್‌ಸ್ಟಿಟ್ಯೂಟದಲ್ಲಿ ಅಸಿಸ್ಟಂಟ ವ್ಹೆಟರ್ನರಿ ರಿಸರ್ಚ ಅಧಿಕಾರರಾಗಿ ನೇಮಿಸಿದ್ದರಿಂದ, ಅವರು ನಿನ್ನೆ ಇಲ್ಲಿಂದ ಹೊರಟು ಹೋದರು. ಇಲ್ಲಿ ಇವರು ೬ ವರ್ಷಗಳ ತನಕ ಕೆಲಸ ಮಾಡಿದ್ದಾರೆ. ಇವರ ಸ್ಥಳದಲ್ಲಿ ಡಾ॥ ಸಹದೇವ ಇವರು ಹಾಜರಾಗಿದ್ದಾರೆ.

ಗೋಕರ್ಣಸ್ಥರು ತಿಳಿಸುವದೇನಂದರೆ:- ಗೋಕರ್ಣವು ಪ್ರಸಿದ್ಧ ಕ್ಷೇತ್ರವು. ಒಹ ಜನರು ಬರತಕ್ಕ ಯಾತ್ರಾಸ್ಥಳವೂ ಎಂಬದು ಸರ್ವಶ್ರುತವಿರುವದು. ಇಲ್ಲಿ ಕೆಲಕೆಲವು ಕಡೆ ಮುನಿಸಿಪಾಲಿಟಿಯ ಅಜಾಗ್ರತೆಯಿಂದಲೋ ಏನೋ, ಅಲ್ಲಲ್ಲಿ ರಸ್ತೆಯ ಸ್ಥಿತಿಯು ತೀರ ಕೆಟ್ಟುಹೋಗಿದೆ. ಪ್ರಸ್ತುತ ಕಲ್ಲಪ್ಪನ ಮನೆಯ ಎಡಮಗ್ಗಲಿನಿಂದ ಭಂಡೀಕೇರಿಗೆ ಹೋಗತಕ್ಕ ರಸ್ತೆಯು ನೋಡತಕ್ಕಂಥದಾಗಿರುವದು. ಇಲ್ಲಿ ಎಂಟು-ಹತ್ತು ಕಾಯಂ ವಸ್ತೀದಾರರ ಮನೆಗಳಿದ್ದಾವೆ. ಆ ಮನೆಗಳಿಂದ ಮುನಿಸಿಪಾಲಿಟಿಯು ಟೆಕ್ಸ ವಸೂಲ ಮಾಡುತ್ತದೆ. ಭಂಡೀಕೇರಿ ಎಂಬಲ್ಲಿ ವಾಸಮಾಡಿಕೊಂಡ ಹಾಲಕ್ಕೀ ಗೌಡರೂ, ಕಾಯಂ ವಸ್ತೀದಾರರೂ ಹೆಚ್ಚಾಗಿ ಈ ರಸ್ತೆಯಲ್ಲಿ ತಿರುಗಾಡುತ್ತಾರೆ. ಈ ರಸ್ತೆಯಲ್ಲಿ ಎರಡು ಭಯಂಕರ ಮುರುಕಲುಗಳಿವೆ. ಶಿವರಾತ್ರಿ ಜಾತ್ರೆಯ ಸಮಯ ಮಾತ್ರ ಮುನಿಸಿಪಾಲಿಟಿಯವರು ಮೂರು ದೀಪದ ಕಂಬಗಳನ್ನು ಹುಗಿಸುತ್ತಾರೆ. ಪುನಃ ದೀಪದ ಕಂಬದ ಸುಭಾಗ್ಯವನ್ನು ನೋಡಬೇಕಂದರೆ, ಮತ್ತೆ ಶಿವರಾತ್ರಿಯೇ ಬರಬೇಕು! ಇಲ್ಲಿ ಹವೇಶ ತಿರುಗಾಡುವವರಿಗೇನೋ ರಾತ್ರಿಕಾಲದಲ್ಲಿ ಭೀತಿ. ಸಣ್ಣ-ಪುಟ್ಟ ಅಪಘಾತಗಳು ಸಂಭವಿಸುವವು; ಇನ್ನು ಏನೂ ರಸ್ತೆಯ ಮಾಹಿತಿ ಅರಿಯದ ಪ್ರಯಾಣಿಕ ಜನರಿಗೆ ಕಪಾಲಮೋಕ್ಷವೇ! ಇಂಥ ಭಯಂಕರ ರಸ್ತೆಯಲ್ಲಿ ಕಾಯಂ ದೀಪಗಳ ಆವಶ್ಯಕತೆ ಬೇಕೇಬೇಕು. ಈ ಕುರಿತು ಪ್ರಯಾಣಿಕರ ಸೌಕರ್ಯಕ್ಕಾಗಿ ದೀಪದ ವ್ಯವಸ್ಥೆಯನ್ನು ಮಾಡಬೇಕೆಂದು ಚೇರಮನ್ ಸಾಹೇಬರ ಹತ್ತರ ಹಿಂದೆ ಎರಡು ಸಾರೆ ಮೊಕ್ತಾ ಹೇಳಿಕೊಂಡೆವು. ಅಧ್ಯಕ್ಷರು ತಯಾರಿ ಸಿದ್ಧ ಕಂಬವಿಲ್ಲೆಂತಲೂ, ತಯಾರಿಸಲು ಹೇಳಿದ್ದೇವೆಂತಲೂ, ಬಂದ ಕೂಡಲೆ ಕೋರಿಕೆಯಂತೆ ನಡಿಸುತ್ತೇವೆಂತಲೂ ವಗೈರೆ ಪುರಾಣ ಹೇಳಲಾಗುತ್ತದೆಯೇ

...ವ್ಯಾ ಇನ್ನೂ ಏನೂ ವ್ಯವಸ್ಥೆ ಆದದ್ದಿಲ್ಲ. ಈ ದಿನ ಕೊರತೆಯೋ, ಕಾಮಗಾರರ ಕೊರತೆಯೋ ಅಥವಾ ದ್ರವ್ಯದ ಕೊರತೆಯೋ? ಏನೆಂಬುದೇ ತಿಳಿಯುವದಿಲ್ಲ. ಮಳೆಯಂತೂ ಎಡೆಬಿಡದೆ ಸುರಿಯುತ್ತಿದೆ. ಈ ರಸ್ತೆಯಲ್ಲಿಂತೂ ನಿ[illegible] ಹೋಗಲು ಕಾಲವೆಯ[illegible] ಗ್ಗ್ರೇಜರಿಸದ ಮೂಲಕ ತಿಕ್ಕ ತಿಕ್ಕಲ್ಲಿ ಹೋಗಹತ್ತಿದೆ. ಅದರಿಂದ ಕೆಲ ಕಡೆಯಲ್ಲಿ ಕೊರಕಲು, ಕೆಲ ಕಡೆಯಲ್ಲಿ ಹೆ[illegible] ಆಗಿವೆ. [illegible] ಗೂ [illegible] ದಿ ವಹಿಲ್ಲ[illegible] [illegible] ದ್ವೈತವವೇ ಸರಿ [illegible] ಪ್ರಯಾಸ [illegible] ಹೊಂ[illegible] [illegible] ಸ್ಟ ಹೇಳ[illegible] [illegible] ಜಿಲ್ಹೆಯ [illegible] [illegible] ಮೇಧಿಕಾರಿಗೆ [illegible] ಪ್ರಯಾಣಿಕರ ಗೋಳ ನ್ನು [illegible] ನೋಡಬೇಕು.

ಹೊನ್ನಾವರ— ಮಳೆ ಚನ್ನಾಗಿದೆ. ಅಕ್ಕಿಯ ದರ ಇಳಿಯ[illegible] ದ್ದಿದೆ. ೬ ನೇ [illegible] ಸತ್ಯಾಗ್ರಹ ಸಪ್ತಾ[illegible] ಬಗ್ಗೆ ಇಲ್ಲಿಯ ನಾಗರಿಕರ ಕಡೆ ನಿಂದ ಈ ತವಕ ರೂಪಾಯಿ [illegible] ದವು. ಇನ್ನೂ ವಸೂಲಿಯ ಕ್ರಮ ನಡೆದದೆ.

ಭಟಕಳ— ಮ[illegible] ನಮೂನೆ ಸಮಾಧಾನಕರ. [illegible] ೦ ಕ್ಕ ಡೇಕಾ[illegible] ಜೀರ ತಗೆ [illegible] ಡಿಸೂಜ[illegible] [illegible] ಗಿದ್ದು, ಅವರ ಕೆಲಸದ ವೇಳೆ ಹಾಜರಾಗ[illegible] [illegible] ಒಹಳ ಸಂತೋಷವಾಗಿರುತದೆ. [illegible] ದಿಸೋಜಾರವರ ಮೇಲೆ ಪ್ರೀತಿ.

ತಾರೀಖು ೨[illegible] ನೇಗೆ ಹಗಲು ೪ ತಾಸು ಹೊತ್ತಿಗೆ ಇಲ್ಲಿ[illegible] ಳ ಮೈಲು ದೂರವಿರುವ ತಿರುಲಿ ಸಾರದ ಕೊಳದ ಹತ್ತರ ಶ್ರೀಂಟಿತ್ರಾಪ್ಪರ ಸಾಗು [illegible] ವೋ[illegible] [illegible] ಬಂದರೆನ್ನಾಂದ ತಾಗಿ [illegible] ಒನಾವೆ ಆಗಿರತ್ತದೆ. ಒಂದು ಕಡೆ ಪ್ರಂವೆ [illegible] ಗಿದೆ. ಎರಡನೇ ಕಡೆ ಪುರಾಣೆ ಕೆರ್ಸಲ್ಲ[illegible]

[illegible] ಸ್ಥಿದ್ದರೆ ಮರಣ ಸಂಭವಿಸ ವದಿಲ್ಲ. ಭಯಂಕರ [illegible] ಗ [illegible] ಕಳೆದ [illegible] ನೇ ತಾರೀಖಿಗೆ ಅವರಾಸ್ಥ ೨ ಘಂಟೆ ಸುಮಾರು ಇಲ್ಲಿಯ [illegible] ಕೃಷ್ಣ ಉಗ್ರಾಣಿ [illegible] ದೊಡ್ಡ ಮಳೆಗಾಳಿ ಬಂತು. [illegible] ವೇಳೆ ಇದ್ದ [illegible] ಕಿತ್ತು [illegible] [illegible] ಕಿಡ್ಡಿಸಿಕೊಳ್ಳುವದಕ್ಕಾಗಿ ಅವಳು [illegible] ಹೋಗಿ [illegible] ಅಲ್ಲಿ [illegible] ಕಲ್ಲು ಕಿತ್ತು [illegible] ತಲೆ ಮೇಲೆ ಬಿತ್ತು. ತಲೆಗೆ [illegible] ಹಿಡಿದಿದ್ದಳು. ಇದನ್ನು [illegible] ನೋಡಿ ಇವಳಿಗೆ ಹೊತ್ತುಕೊಂಡು ಹೋಗಿ ಡಾಕ್ಟರರ ಕಡೆಯಿಂದ ಉಪಚಾರ ಮಾಡಿಸಿ[illegible] ಕೆಲ ಹೊತ್ತಿನ ಮೇಲೆ ಪ್ರಜ್ಞೆ ಬಂತು. [illegible] ಬಹಿಗೆ ಅವಳು ಬಿದ್ದುಕೊಂಡಿದ್ದರೆ, ನರಗೆ ಅವಳ ಬಳದು [illegible] ಪ್ರಕ್ಕೆ ಹೋಗುತ್ತಿದ್ದಳು. ಚಿಕ್ಕಮಕ್ಕಳ ಪರಾಮರಿಕ...

ಕಾರವಾರ— ಇಲ್ಲಿಯ ಟಪಾಲ ಆಫೀಸಿನಲ್ಲಿ ಒಂದು ಸಣ್ಣ ಗದ್ದಲವಾಯಿತು. ಕಳೆದ ತಾರೀಖು ೨[illegible] ನೇಗೆ ಡಿವ್ಹಿಜನಲ್ ಫ್ರೋರೆಸ್ಟ ಆಫೀಸರರಾದ ಮಿ| [illegible] ಲೆಟ್‌ರವರು ಒಂದು ಪತ್ರ ಕೊಟ್ಟು ರಿಜಿಸ್ತ್ರಿ ಬಗ್ಗೆ ಕಳಿಸಿದರು. ಟಪಾಲ ವೇಳೆ ಆದದ್ದರಿಂದ ಪೇದೆಯು ರಿಜಿಸ್ತ್ರಿ ಯಾಗದೆ ಮರಳಿ ಬಂದನು. ಮಿಲೆಟ್‌ರವರು ಸ್ವತಃ ಹೋದರು. ರಿಜಿಸ್ತ್ರಿ ಮಾಡಬೇಕಾಗಿ ಹಿತ್ತಾಯ ಮಾಡಿದರು. "ವೇಳೆ ಮೀರಿತು, ಉಪಾಯವಿಲ್ಲ," ಎಂದು ಕಾರಕೂನರಾದ ಮಿ| ಗೋಮ್ಸರವರು ನುಡಿದರತೆ "ನೀನ ಹಂದಿ, (Swine)" ಎಂದು ಮಿಲೆಟ್‌ರವರು ಅವರಿಗೆ ಬೈಯ್ದರತೆ. ಗೋಮ್ಸರವರು ಸಿಟ್ಟಿಗೆದ್ದು ಆ ಮಾತನ್ನು ಪುನಃ ಉಚ್ಚರಿಸಹೇಳಿದರು. ಮಿಲೆಟ್[illegible] [illegible] ಹಸ್ತಲು ಹಿಡಿದರು. ಗೋಮ್ಸರವರು ಅವರ [illegible] ಅವರಿಗೆ ಬೊ[illegible] ಹಿಡಿದರು. ಗೋಮ್ಸರವರಿಗೆ ಮಿಲೆಟ್‌ರವರು ಜಂಗಲ[illegible] ಎಂದು ತಿಳಿಯಲಿತ್ತಿವೇ?

ಟಿಳ್ಳಕರೊಬ್ಬರು ಬರೆಯುವದೇನಂದರೆ— ಲಕ್ಷ್ಮಣ ಬಾಳಗಿಯವರ ನಿಧನದ ಕುರಿತು ಕೆಲವು ತಪ್ಪು ಗ್ರಹಿಕೆಯಾದದ್ದು ತೋರುತ್ತದೆ. ಸಿವ್ಹಿಲ್ ಆಸ್ಪತ್ರೆಯಲ್ಲಿ ಅವರು ತೀರಿದ್ದು ನಿಜ. ಆದರೆ, ಅದರೊಳಗೆ ಶಸ್ತ್ರಕ್ರಿಯೆಯು ದೋಷವಿಲ್ಲ. ಶಸ್ತ್ರಕ್ರಿಯೆಯಾದ [illegible] ದು ತಿಂಗಳ ನಂತರ ಅವರು ತೀರಿಕೊಂಡಿದ್ದಾರೆ. ಅವರ ರೋಗವು ಅನಿವಾರ್ಯವಿತ್ತು. ಆದರೂ ಮೃತನ ಬಹಳವಾಗಿ ಹೇಳಿದ್ದರಿಂದ ಆತನ ಆಗ್ರಹದಂತೆ ಕೊನೆಯ ಉಪಾಯವೆಂದು ಸಿವ್ಹಿಲ್ ಆಸ್ಪತ್ರೆಯೊಳಗಿನ ಉಪಲಬ್ಧ ಸಾಮಗ್ರಿಗಳ ಮೇಲಿಂದ ಸಿವ್ಹಿಲ್ ಸರ್ಜನರು ಕೌಶಲ್ಯದಿಂದ ಈ ಶಸ್ತ್ರಪ್ರಯೋಗ ಮಾಡಿದ್ದರು. ಅದರೊಳಗೆ ಯಶಸ್ಸು ಪ್ರಾಪ್ತವಾಗಲಿಲ್ಲ. ಆ ಬಗ್ಗೆ ಯಾರಿಗೂ ದೂರಿ ಪ್ರಯೋಜನವಿಲ್ಲ. ಸಿವ್ಹಿಲ್ ಸರ್ಜನರು ಮಾಡಿದ ಪ್ರಯತ್ನಗಳ ಬಗ್ಗೆ ಅವರು ಪ್ರಶಂಸೆಗೆ ಪಾತ್ರರಿದ್ದರೆ ಇತ್ಯಾದಿ.

ಮುಂಡಗೋಡ— ಈ ಮೇರ ಸೋಮಗಣ ಕೆ[illegible] ರವರೊಬ್ಬ ಬಡ ಜಾತಿಯವರು ಜಂಗಲ ಹದ್ದಿನ ಮೇಲೆ ಬೆಳೆಯುವ ಮೇವಿನ ಹುಲ್ಲನ್ನು ಕೊಯ್ದು ತಂದು ಕಸಬರಿಗ ಹಗ್ಗ [illegible] ತಾಡವ್ರಗಳನ್ನು ತಯಾರಿಸಿಕೊಂಡು ಉಪಜೀವನ ನಡಿಸಿಕೊಳ್ಳುತ್ತಿದ್ದರು. ಫ್ರೋರೆಸ್ಟ ಕಂಟ್ರಾಕ್ಟರರೊಬ್ಬರು ಈ ಹುಲ್ಲಿನ ಕಂಟ್ರಾಕ್ಟ ಬೇಡಿದ್ದಾರಾಗಿಯೂ, ಆ ಕುರಿತು ಸದ್ಯಕ್ಕೇ ಲಿಲಾವಿಟ್ಟಿರುತ್ತದಾಗಿಯೂ ತಿಳಿಯುತ್ತದೆ. ಈ ವರೇಗೆ ಬಿಟ್ಟಿಗೊಂದು ಕಸಬರಿಗೆ ಸಿಗುತ್ತಿತ್ತು, ಹೊಸ ಮನ್ವಂತರದಲ್ಲಿ ೨ ಬಿಲ್ಲೆ ಕೊಟ್ಟರೂ ಕಸಬರಿಗೆ ಸಿಗುವಂತಿಲ್ಲ. ಜಂಗಲ ಖಾತೆಯವರು ಇಷ್ಟು ಸ್ವಾರ್ಥಪರಾಯಣರಾಗಲಾಗದು.

ಬಾರ್ಡೋಲಿಗೆ ಬೆಂಬಲ ಕೊಡುವ ಠರಾವು ಮಂಜೂರಾಯಿತು. ರಾಮಸಾಹೇಬ ಹಳಕಟ್ಟಿಯವರೇ ಈ ಠರಾವನ್ನು ಸೂಚಿಸಿದರು. ಪಾಲೇಕಾರರ ಬಗ್ಗೆ ಸರಕಾರವು ಸ್ವೀಕರಿಸಿದ ದೋರಣವು ನಿಷೇಧಿಸಲಾಯಿತು. ಬೇಸಾಯ ಕಮಿಶನಿನಿಂದ ಬೇಸಾಯಗಾರರಿಗೆ ಲಾಭವಿಲ್ಲೆಂಬ ತೀರ್ಮಾನವಾಯಿತು. ಬೇಸಾಯಗಾರರಿಗೆ ಸಾಲಲು ಅನುಕೂಲ ಮಾಡಬೇಕಾಯಿತು. ಅನಂತರ ಸೊಲ್ಲಾಪುರದ ವಕೀಲರಾದ ಶ್ರೀ ನಾಗಪ್ಪನವರ ಅಧ್ಯಕ್ಷತೆಯಲ್ಲಿ ಬ್ರಾಹ್ಮಣೇತರ ಪರಿಷತ್ತು ಸೇರಿತು. ಹೀಗೆ ಬಾಗಲಕೋಟೆಯಲ್ಲಿ ಪರಿಷತ್ತುಗಳ ಪರ್ವಣಿ.

ಬಾಗಲಕೋಟೆಯಲ್ಲಿ ಪರಿಷತ್ತುಗಳ ಪರ್ವಣಿ.

ಬಾಗಲಕೋಟೆಯಲ್ಲಿ ೩೦ ನೇ ತಾರೀಖಿಗೆ ಕೌಜಲಗಿ ಶ್ರೀನಿವಾಸರಾಯರು ರಾಷ್ಟ್ರಧ್ವಜವನ್ನು ಏರಿಸುವ ಸಮಾರಂಭವನ್ನು ನೆರವೇರಿಸಿದರು. ಈ ಸಮಾರಂಭಕ್ಕಾಗಿ ಧಾರವಾಡ ಹಾನಗಲ್ಲ, ಗದಗ, ಗುಳೇದಗುಡ್ಡ ಮುಂತಾದವುಗಳ ಕಡೆಯಿಂದ ೧೦೦ ಕ್ಕೆ ಮಿಕ್ಕಿ ಸ್ವಯಂಸೇವಕರು ಸೇರಿದ್ದರು. ಹುಬ್ಬಳ್ಳಿಯ ಕನ್ಯಾಶಾಲೆಯಿಂದ ೩೦ ಮಂದಿ ಸ್ವಯಂಸೇವಿಕೆಯರೂ ಹೋಗಿದ್ದರು. ಅದೇ ದಿನ ಕೌಜಲಗಿ ಹನುಮಂತರಾಯರು ಖಾದಿ ಪ್ರದರ್ಶನವನ್ನು ತೆರೆದರು. ಗಲಗಲಿ ಕೂರ್ಮಾಚಾರ್ಯರು ಖಾದಿಯ ಧಾರ್ಮಿಕ ದೃಷ್ಟಿಯನ್ನು ವಿಚಾರಿಸಿ ಧರ್ಮದೃಷ್ಟಿಯಿಂದಲೂ ಖಾದಿಯು ಪವಿತ್ರವೆಂದು ಪ್ರತಿಪಾದಿಸಿದರು. ಮಾರನೇ ದಿನ ಡಾ|| ಸವಣೂರ ಹನುಮಂತರಾಯರು ಆಯುರ್ವೇದದ ಪ್ರದರ್ಶನವನ್ನು ತೆರೆದರು. ಆಯುರ್ವೇದದ ಪ್ರಾಚೀನ ಪರಂಪರೆಯನ್ನೂ, ಚಿಕಿತ್ಸಾಕ್ರಮದ ಮಹಿಮೆಯನ್ನೂ ಡಾ|| ಹನುಮಂತರಾಯರು ನಿವೇದಿಸಿದರು. ಪ್ರದರ್ಶನದಲ್ಲಿ ತರತರದ ವನಸ್ಪತಿಗಳ ಸಂಗ್ರಹವಿತ್ತು. ಆ ಮೇಲೆ ಬೆಳಗಾವಿಯ "ಕರ್ನಾಟಕ ವೃತ್ತ" ಪತ್ರಿಕೆಯ ಸಂಪಾದಕರಾದ ಮುದವೀಡು ಕೃಷ್ಣರಾಯರು ವೃತ್ತಪತ್ರಿಕೆಗಳ ಪ್ರದರ್ಶನವನ್ನು ತೆರೆದರು. ಸಮಾಚಾರ ಪತ್ರಿಕೆಗಳ ದೀನಸ್ಥಿತಿಯನ್ನೂ, ಮಹತ್ವವನ್ನೂ ಕೃಷ್ಣರಾಯರು ಹೇಳಿದರು. ವಿಜಾಪುರದ "ಪಾಂಡುರಂಗರಾವ ದೇಸಾಯಿಯವರು ಚಿತ್ರಕಲೆಯ ಪ್ರದರ್ಶನವನ್ನು ತೆರೆದರು. ಸೇವಾದಲದ ವ್ಯಾಯಾಮ ವಿದ್ಯಾಪೀಠದ ಮಾಸ್ತ್ರ ಸಮಾರಂಭವು ಲೋಕಮಾನ್ಯರ ಪುಣ್ಯತಿಥಿಯ ದಿನ ಜರುಗಿತು. ಹೈದರಾಬಾದದ ಮಾನನೀಯರಾದ ರಾಜಾ ಧನರಾಜಗೀರಜಿ ಬಹಾದ್ದೂರರವರು ಈ ಸಮಾರಂಭವನ್ನು ನೆರವೇರಿಸಿದರು. ೪—೫ ಸಾವಿರ ಜನರ ಮೆರವಣಿಗೆಯಾಯಿತು. ಧನರಾಜರು ತಮ್ಮ ಭಾಷಣವನ್ನು ಉರ್ದು ಭಾಷೆಯಲ್ಲಿ ಮಾಡಿ ಶರೀರ ಸಂಪತ್ತಿಯ ಮಹಿಮೆಯನ್ನು ವರ್ಣಿಸಿದರು. ಆಸನ, ಪ್ರಾಣಾಯಾಮ, ಸೂರ್ಯನಮಸ್ಕಾರ ಮುಂತಾದ ಪ್ರಾಚೀನ ಶರೀರಬಲಸಂವರ್ಧಕ ಸಾಧನಗಳನ್ನು ಪ್ರಶಂಸಿಸಿ, ಅವುಗಳ ಪುನರುದ್ಧಾರವಾಗಬೇಕಾಗಿಯೂ, ಅವಶ್ಯವುಳ್ಳ ಆಧುನಿಕ ಆಟ ನೋಟಗಳ ಪ್ರಚಾರವನ್ನು ಜೋಡಿಸಿಕೊಂಡು ಶರೀರಬಲವನ್ನು ಬೆಳೆಸಿಕೊಳ್ಳಬೇಕಾಗಿಯೂ ರಾಜಾಬಹಾದ್ದೂರರು ಹೇಳಿದರು. ಬೌದ್ಧಿಕ ಉನ್ನತಿಯಾಗಲಿಕ್ಕೆ ಶಾರೀರಿಕ ಸಂಪತ್ತೇ ಕಾರಣವೆಂದು ಫ್ರೋಟಬಾಲ ಯುದ್ಧವನ್ನು ಗೆದ್ದ ವೆಲಿಂಗಟನ್‌ರವರ ಉಲ್ಲೇಖ ಮಾಡಿ ಹೇಳಿದರು. ಶ್ರೀನಿವಾಸರಾವ ಕೌಜಲಗಿಯವರ ಸ್ತುತಿಪೂರ್ವಕ ಭಾಷಣವಾಯಿತು. ರಾಜಾಬಹಾದ್ದೂರರವರು ವ್ಯಾಯಾಮ ಪೀಠಕ್ಕೆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟರು. ಅದೇ ದಿನ ಮಧ್ಯಾಹ್ನ ದೇ| ಗಂಗಾಧರರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ರೈತರ ಪರಿಷತ್ತು ಸೇರಿತು. ೩೦೦ ಕ್ಕೆ ಮಿಕ್ಕಿ ರೈತರು ಸಭೆಯಲ್ಲಿ ಸೇರಿದ್ದರು. ಬಾರ್ಡೋಲಿಯ ರೈತರಂತೆ ಕರ್ನಾಟಕದೊಳಗಿನ ರೈತರು ಎದೆಗಟ್ಟಿ ಮಾಡಿ ತಮ್ಮ ಮೇಲೊದಗುವ ಅನ್ಯಾಯಗಳಿಗೆ ಇದಿರಾಗಬೇಕಾಗಿ ಗಂಗಾಧರರಾಯರು ಹುರಿದುಂಬಿಸಿ ಹೇಳಿದರು. ಅನಂತರ ೪|| ಘಂಟೆಗೆ ಸ್ವಯಂಸೇವಕರು ಕುಸ್ತಿ, ಮಲ್ಲಗಂಬ, ಛಲ್ಲೆ, ಕಿರಿಗತ್ತಿ, ನಮಸ್ಕಾರ, ಆಸನ ಮುಂತಾದ ವಿಧವಿಧದ ವ್ಯಾಯಾಮಗಳನ್ನು ಆಡಿ ತೋರಿಸಿದರು. ೭—೮ ಸಾವಿರ ಜನರು ಅದನ್ನು ನೋಡಲು ಸೇರಿದ್ದರು. ರಾತ್ರಿ ೭|| ಘಂಟೆಗೆ ಸ್ವಯಂಸೇವಕರ ಪರಿಷತ್ತು ಸೇರಿ ಕಾಂಗ್ರೆಸ ಕಮಿಟಿ ಪಕೀಕರಣ, ಸಭೆ ಕೈರಾಟಸಂಘ, ಬಾರ್ಡೋಲಿಯ ಸತ್ಯಾಗ್ರಹ ಮುಂತಾದ ರಾಷ್ಟ್ರಕಾರ್ಯಕ್ಕೆ ಸ್ವಯಂಸೇವಕರು ನೆರವಾಗಬೇಕಾಗಿ ಠರಾವುಗಳಾದವು. ಮಾರನೇ ದಿನ ರೈತರ ಪರಿಷತ್ತು ಪುನಃ ಸೇರಿ...

ಬಾರ್ಡೋಲಿಯ ವೃತ್ತಾಂತ.

ಬಾರ್ಡೋಲಿಯಲ್ಲಿ ಸರಕಾರ ಶರ್ತುಗಳಿಗೊಳಪಟ್ಟ ರಾಜಿ ಮಾಡಲಿಕ್ಕೆ ರಾ| ಶಾಸ್ತ್ರಿಯವರ ಮುಂತಾದವರು ಬಹಳ ಪ್ರಯತ್ನ ಮಾಡಿದ್ದರು ಆದರೆ ಸರದಾರ ವಲ್ಲಭಭಾಯಿಯವರೂ, ಮಹಾತ್ಮರೂ ಒಪ್ಪದ್ದರಿಂದ ರಾ| ಮುನಶಿಯವರ ಮಧ್ಯಸ್ಥಿಕೆಯು ಬಿದ್ದು ಹೋಯಿತು ಸರಕಾರವು ಅನುಭವಿಕ ... ತಿ ಖಾತೆಯ ಅಧಿಕಾರಿಯಿಂದ ಚೌಕಶಿ ಮಾಡಲು ಒಪ್ಪುತ್ತದೆ, ನ್ಯಾಯಾಧಿಕಾರಿಗಳ ಚೌಕಶಿ ಕೊಡಲಿಕ್ಕೆ ಸರಕಾರದ ಒಪ್ಪಿಗೆ ಉಂಟು. ಆದರೆ, ನ್ಯಾಯಾಧಿಕಾರಿಗಳಿಗೆ ಅಧಿಪತ್ಯ ಕೊಡಲು ಸರಕಾರದ ಒಪ್ಪಿಗೆ ಇಲ್ಲ ಸರದಾರ ವಲ್ಲಭಭಾಯಿಯವರು ನ್ಯಾಯಾಧಿಕಾರಿಯು ಇವೆಲ್ಲ ಸಂಗತಿಯನ್ನು ಅರಿಕೆ ಮಾಡಿಕೊಂಡ ಅವರು ಕೊಟ್ಟ ತೀರ್ಪನ್ನು ಮನ್ನಿಸಲು ಸಿದ್ಧರಿದ್ದಾರೆ ಜಜ್ಜರಾಗಿರುವ ಮಿ| ಜೇಮ್ಸ್ ಕಾರವರಿಗೆ ನೇಮಿಸಿದರೆ ಬಾರ್ಡೋಲಿಯವರ ಒಪ್ಪಿಗೆಯಿದೆ

ಮುಂಬಯಿ, ಪುಣೆ, ಬಡೋದೆಗಳೊಳಗಿನ ವಿದ್ಯಾರ್ಥಿಗಳು ಬಿಟ್ಟಾಗಿ ಬಾರ್ಡೋಲಿಯ ಸತ್ಯಾಗ್ರಹಕ್ಕೆ ನೆರವಾಗಲು ಸಂಕಲ್ಪ ಮಾಡಿದ್ದಾರೆ ನಿನ್ನೆ ಸೂರತ ಪಟ್ಟಣದಲ್ಲಿ ವಿದ್ಯಾರ್ಥಿಗಳ ಪ್ರಚಂಡ ಸಭೆಯಾಗುವದಿತ್ತು

ಸಿಂಗಾಪುರದೊಳಗಿನ ಭಾರತೀಯರು ಬಾರ್ಡೋಲಿಗೆ ನಿಧಿಯನ್ನು ಕಳುಹಿದ್ದಾರೆ

ಭಾವಯ್ಯ ಗ್ರಾಮದ ಶ್ರೀ| ಲಲ್ಲುಭಾಯಿ ಖಾಲಭಾಯಿಯವರ ೩ ದನಗಳ ಜಪ್ತಿ ಆಗಿತ್ತು ಅವನ್ನು ಮಾರಬೇಕಾಗಿತ್ತು ಉಳಿದ ... ರೂಪಾಯಿಗಳು ತೀರ್ವೆಯ ಲೆಖ್ಖಕ್ಕೆ ಜಮಾ ಮಾಡಿಕೊಳ್ಳಲಾಗುವದೆಂದು ಅವರಿಗೆ ತಿಳಿಸಲಾಯಿತು, ಅವರು ಆ ರಸೀದಿಯನ್ನ ತಿರುಗಿ ಕಳಿಸಿಕೊಟ್ಟರು ಮದ್ಯಪಾನ ನಿಷೇದಕ ಚಳವಳಿಯು ದಿನೇ ದಿನೇ ಬಳೆಯುತ್ತಿದೆ ... ಗ್ರಾಮದ ಕಿಲ್ಲಿ ಜಾತಿಯವರು ತಮ್ಮೊಳಗೊಂದು ಕೂಟ ನೇರಿಸಿ ಹೆಂಡ ಕೊಯ್ಯಲಿಕ್ಕೆ ಮರ ಕೊಡಲಾಗದು, ಹೆಂಡ ಕೊಯ್ಯುವ ಅಳಾಗಬಾರದು, ಹೆಂಡ ಕುಡಿಯಬಾರದು, ಹೀಗೆ ತೀರ್ಮಾನ ಮಾಡಿದ್ದಾರೆ ವೋಲಪಡ ತಾಲೂಕಿನ ೧೨ ಗ್ರಾಮಗಳಲ್ಲಿಯ ... ಹೀಗೆಯೇ ನಿರ್ಧಾರಗಳಾಗಿವೆ ಕಟುಂಗ್‌ವ್ ಗ್ರಾಮದಲ್ಲಿ ಇಂಥದೊಂದು ಸಭೆಯಾಯಿತು ಹೆಂಡ ಕೊಯ್ಯುವರ ಕೊಟ್ಟು ವರ್ಷಕ್ಕೆ ೫ ಸಾವಿರ ರೂಪಾಯಿ ಉತ್ಪನ್ನ ಮಾಡುವ ಸಾವುಕಾರರೇ ಈ ನಿಷೇದದ ಠರಾವನ್ನು ಸೂಚಿಸಿದರು ಕುಂಬಾರರು ಹೆಂಡದ ಕೊಡಗಳನ್ನು ಮಾಡಿ ಕೊಡಬಾರದಾಗಿ ನಿಶ್ಚಯಿಸಿದ್ದಾರೆ, ಸರಕಾರ ಹುಲ್ಲು ಬೇಣಗಳನ್ನ ಗೇಣಿಗೆ ಪಡಕೊಳ್ಳಬಾರದೆಂದೂ ನಿಶ್ಚಯವಾಗಿದೆ ಕೋಳಿ ಜಾತಿಯವರೂ ಇಂಥ ತೀರ್ಮಾನಗಳನ್ನು ಕೈಕೊಂಡಿದ್ದಾರೆ ಕೋಳಿ ಜಾತಿಯ ಪಂಚರ ಬಿನ್ನಹವನ್ನು ಮನ್ನಿಸಿ ಮುಕ್ತೇದಾರರು ಅಂಗಡಿಯನ್ನು ನಡಿಸುವದಿಲ್ಲವಾಗಿ ಅಭಿವಚನವನ್ನಿತ್ತಿದ್ದಾರೆ ಸುರತ ಜಿಲ್ಹೆಯ ಮಾಗರ್ದಲು ಗ್ರಾಮದ ನಬಾಬ ಬಂಗಲೆಯಲ್ಲಿ ಹೆಂಡದ ಅಂಗಡಿಗಳ ಲಿಲಾಂವಾಗುವದಿತ್ತು ಕಲೆಕ್ಟರರಿಗೆ ಧಕ್ಕನೆ ವರ್ಗವಾದ್ದರಿಂದ ಈ ಲಿಲಾಂವಿನ ವಿಚಾರವು ಅಷ್ಟಕ್ಕೇ ನಡೆಯಿತು ೪೦-೫೦ ಶಿಪಾಯಿಗಳಿಗೆ ತಿಂಡಿ ತಯಾರಿಸಲು ಪಟೇಲರಿಗೆ ಹುಕುಂ ಹೇಳಲಾಗಿತ್ತಂತೆ ಪಟೇಲರು ವರಿಷ್ಠರ ಅನುಜ್ಞೆಯಂತೆ ಶಿಪಾಯಿಗಳ ಹಿಗ್ಗೆಲ್ಲ ತಯಾರಿ ಇಟ್ಟಿದ್ದರು ಸವಾಲಿನ ಕಾಲಕ್ಕೆ ಸತ್ಯಾಗ್ರಹ ಸ್ವಯಂಸೇವಕರಿಗೆ ಎದಿರಾಗಲು ಈ ಸ್ವಚ್ಛ ಯೋಜನೆಯಾಗಿತ್ತು. ಆದರೆ, ಸವಾಲಿನ ಯೋಜನೆಯು ಕಡೆದದ್ದರಿಂದ ಯಾರಷ್ಟೆಬರಲಿಲ್ಲ ಪಟೇಲರು ತಿಂಡಿ ತಿನ್ನಲು ಜನರಿಗೆ ಕರಕರುವ ಪ್ರಸಂಗ ಬಿತ್ತು

ಸರದಾರ ವಲ್ಲಭಭಾಯಿಯವರ ಆರೋಗ್ಯವು ವಿಶೇಷ ಸುಧಾರಿಸಲಿಲ್ಲ, ಆದರೂ, ಕಾಯಿದೆ ಕೌನ್ಸಿಲಿನ ಸಭಾಸದರ ನಿಮಂತ್ರಣೆಯನ್ನು ಸ್ವೀಕರಿಸಿ ಅವರು ಪುಣೆಗೆ ತೆರಳಿದ್ದಾರೆ. ಪುಣೆಯಲ್ಲಿಯೇ ತಮಗೆ ಸರಿಯಾಗುವದಾಗಿ ಅವರ ಅಂದಾಜು ಅದರಿಂದ ಮಹಾತ್ಮರಿಗೆ ಬಾರ್ಡೋಲಿಗೆ ಕರೆದೊಯ್ದು, ಅವರು ಪುಣೆಗೆ ಹೊರಟಿದ್ದಾರೆ ಪುಣೆಯಲ್ಲಿ ಸರದಾರ ವಲ್ಲಭಭಾಯಿಯವರು ಪ್ರಾಂತಿಕ ಸರಕಾರದ ಮುಖ್ಯ ಅಲೋಚಕರಾದ ಸರ್ ಚುನಿಲಾಲ ಮೇಥಾರವರಲ್ಲಿ ಇಳಕೊಳ್ಳುವರಂತೆ ಪುಣೆಯಲ್ಲಿ ಒಪ್ಪಂದದ ಚರ್ಚೆಯಾಗುವದಂತ ಆದರೆ, ಸಂಧಾನದ ಆಶೆಯಿಲ್ಲವಂತೆ

ಬೆಳಗಾವಿಯ ರಾ| ಪಂಡಿತಪ್ಪಾ ಚಿಕ್ಕೋಡಿಯವರು ಕಾಯಿದೆ ಕೌನ್ಸಿಲಿನಲ್ಲಿ ಬಾರ್ಡೋಲಿಯ ವಿಷಯ ಸರಕಾರದು ಮಾಡಿದ ಧೋರಣದ ನಿಷೇಧ ಮಾಡುವ ಸೂಚನೆಯನ್ನು ಸೂಚಿಸುವವರಿದ್ದರು ಈ ಸೂಚನೆಯು ನಿಯಮಬಾಹ್ಯವೆಂದು ಅಭಿಪ್ರಾಯಪಟ್ಟು ಅಧ್ಯಕ್ಷರು ಅದನ್ನು ಚರ್ಚಿಸಗೊಡಲಿಲ್ಲ

Mr Oak s District Court.

(continued from page 5)

but the amusing part is still to be told When pleaders were advancing arguments Mr Oak would stop them in the middle, take some line from their argument to narrate some incidents of his life These incidents are all foreign to the argument or to the case under consideration Mr Oak has also a habit of commenting on the Judicial system He expressed once that he wanted to place his opinions before the Simon Commission. This is fresh news Government may take a note of it Sir John Simon, the Counsel would be glad to hear Mr Oak, the Judge, the District Judge

All this could have been neglected, but his conduct towards the Bar is very insulting and some times provoking A pleader of long standing was addressing arguments in a case In the middle Mr Oak the District Judge stopped him and said in Marathi 'बेक्कार सारखे बोलूनका, तसे काम तर मी असेच करीन,'' The pleader did not retort At another time he said 'Either you have no brains, nor I have none' I was thunderstruck to hear Mr Oak say that he had no brains On a third occasion Mr Oak was in a philosophic mood, He gave a long sermon to a pleader on the nobility of pleader's profession Mr Oak was also pleased to denote the conduct of pleaders

I felt pained I had never seen such scenes before Pleaders pocketed the insults for fear of irritating the District Judge But, that must not be the case They must take courage and fight for their rights with the District Judge

A Spectator

ನೂಲುಹುಣ್ಣಿಮೆಯ ಹಬ್ಬ ಬಂತು!

ಭದ್ರ ಗ್ಯಾರಂಟಿಯ ಮೂಲ

ವೆಸ್ಟ ಎಂಡ್ ಗಡಿಯಾರಗಳನ್ನೇ ಕೊಳ್ಳಿರಿ!

ಕಾರಣವೇನಂದರೆ :—

ನಿಮ್ಮ ಇಷ್ಟ ಮಿತ್ರರು ನಿಮ್ಮ ನೆನಪನ್ನ ಪ್ರೀತಿಯಿಂದ ಮಾಡಬೇಕಾದರೆ, ನೀವು ಅವರಿಗೆ “ ವೆಸ್ಟ-ಎಂಡ್ ” ಗಡಿಯಾರವನ್ನು ಕಾಣಿಕೆ ಕೊಡಿರಿ!

ನಿಮಗೆ ಸ್ವತಃ ಸರಿಯಾಗಿ ಹೊತ್ತು ತೋರಿಸುವ ಉತ್ತಮ ಹಾಗು ಬಾಳಿಕೆಯ ಗಡಿಯಾರ ಬೇಕೆಂದಿದ್ದರೆ, ವೆಸ್ಟ ಎಂಡ್ ಘಡಿಯಾರವನ್ನೇ ಕೊಳ್ಳಿರಿ !

ಸಾವಿರಾರು ಕಡೆಯಲ್ಲಿ ಜಾಹೀರಾತು ಕೊಟ್ಟ ಕಡಿಮೆ ತರಗತಿಯ ಗಡಿಯಾರಗಳನ್ನ ಕೊಂಡು ಮೋಸ ಹೋಗಬೇಡಿ ಆ ಗಡಿಯಾರಗಳೆಲ್ಲ ಬರೇ ಚಿಕ್ಕ ಮಕ್ಕಳ ಆಟಿಗೆಯ ಸಾಮಾನುಗಳಾಗಿವೆ ! ನಿಮ್ಮ ಹಣವು ನಿರರ್ಥಕವಾಗುವದು !

ವೆಸ್ಟ ಎಂಡ್ “ ಕೀಪ-ಸೇಕ ”

ಕೀಲೆಸ್, ಲಿವ್ಹರ

ನಿಕಲ್ ಬೆಳ್ಳಿ	ರೂ	೩೩
ರೋಲ್ಡ ಗೋಲ್ಡ	,,	೪೨
೯ ಕ್ಯಾರೆಟ ಭಂಗಾರದ್ದು	,,	೫೨
೧೮ ಕ್ಯಾರೆಟ ಭಂಗಾರದ್ದು	,,	೭೦

ಸರಿಯಾಗಿ ಹೊತ್ತು ತೋರಿಸುವಂಥವು



ಕ್ಯಾಟಲಾಗು ತರಿಸಿಕೊಳ್ಳಿ.

ವೆಸ್ಟ ಎಂಡ್ ವಾಚ್ ಕಂಪನಿ,

ಮುಂಬಯಿ. ಕಲಕತ್ತಾ.

झंडूचें

द्राक्षासव- – मृद्विकारिष्ट – शारगधरम अ.१०

रामबाण औषध

सर्दि घालविणारे,
भूक वाढविणारे
श्वासोच्छ्वास साफ करणारे
झोंप आणणारे
शक्ति देणारे
तेजस्वीपणा आणणारे

पिण्यास रुचिकर

किमत- एक रतल ११। रुपये.
कॅटलॉग मागवा

झंडु फार्मास्युटिकल वर्क्स लिमिटेड
मुंबई नं. १४

ऐजंट— मेसर्स पंडित आणी कंपनी,
तीर्थहळ्ಳी

सिर्सि एजंट एस् एल. धाकप्पा आणि ब्रदर

ಹಿಂದುಸ್ಥಾನದಲ್ಲಿಯ ಅತ್ಯಂತ ಅಗ್ಗವಾದ
'ನೆಶನಲ್ ಇನ್ಶೂರನ್ಸ್-ಕಂಪನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬೋನಸ ಕೊಟ್ಟಿರುವದು

ಹೋದ ವರ್ಷ 1000 ರೂಪಾಯಿಗಳ ವಿಮೆಯನ್ನು ಕೇಳಿ ಕೊಡಲಿಲ್ಲ. ಅದೇ ಕಂತಿಗೆ ಸದ್ಯಕ್ಕೆ ಸುಮಾರು 1200 ರೂಪಾಯಿಗಳ ಪತ್ರಗಳನ್ನು ನಡೆಸಿರಿ ನಮ್ಮ ದರವು ಅಷ್ಟೊಂದು ಸುಲಭ, ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P D. Churi.**
ಬಿ ಸಿ ಸಿರಾಳಕೊಪ್ಪ, *Branch Secretary,*
ಆಲಿಸ ಬಿಲ್ಡಿಂಗ Alice Building,
ಹುಬ್ಬಳ್ಳಿ *Hornby Road,*
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಸೀರೆ, ಖಣ, ರೇಶ್ಮೆ ಶಲ್ಲೆ ಒಮ್ಮೆಲೇ ಕಾಶ್ಮೀರದ ಶಾಲು ಸಕಲಾತಿ ದಾಪಿಳಿ ರುದ್ರಾಕ್ಷ ಸರ, ಕಂಠಿ, ಗೌರೀಶಂಕರ, ಪಂಚಾಯತನ, ಸ್ಫಟಿಕ ಸರ, ಬಾಣಲಿಂಗ, ಸಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಂಟೆ, ತಂಬಿ ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನುಗಳನ್ನು ಯೋಗ್ಯ ಬೆಲೆಗೆ ವಿ. ಪಿ. ಯಿಂದ ಕಳಿಸಿ ಕೊಡುತ್ತೇವೆ. ವಿಶೇಷ ಮಾಹಿತಿಗೆ ಪತ್ರ ಬರೆದ ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ನಮ್ಮ ಪತ್ತೆ –
ವಿಶ್ವನಾಥ ಎಂಡ್ ಬ್ರದರ್ಸ,
ದರ್ಗಾಘಾಟ, ಬನಾರಸ್ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಎಲ್ಲ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪ್ರೋ, ಬಾ ೫೧೦, ಪೋರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗಿ ವರ್ದಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯದೌರ್ಬಲ್ಯ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಡನೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಮೈ ಉರಿ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ್ ಆಗುತದೆ, ಧಾತು ಶುದ್ಧವಾಗಿ ಪುಷ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮ ವಾಸನೆಯು ಮತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತು ಭಸ್ಮಗಳಿಂದ "ವೈಕುಂಠ ಕ್ಯಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ತ ತೊಲಿ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿ ಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ಅಳತೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ ೧೨ ಡಬಿಗೆ ೫೦ ರೂ ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದ.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪ್ರೋ ಮಿರಜ.**



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು;

ಜಾಳಿಗೆ ಶೀರ ಅನುಕೂಲ, ಮನೆತನದವರಂತು ಇಟ್ಟುಕೊಳ್ಳಲೇ ಬೇಕು, ಬಿದ್ದ ಸುಟ್ಟ ಘಾಯಗಳಿಗೆ, ನೆಗಡಿ ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao K... ...(Editor) at his Star of Kanara Press, Kumta.

REG. NO. B. 1270

MONDAY, AUGUST 13TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೪

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಪ ಸೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.

ಕನಡ, ಇಂಗ್ಲಿಷ ಪ್ರಾಯಾ ಟೈಪಿನ (೧೫ ಎಮ್ ಅಗಲ) ೫ ಸಾಲುಗಳವರೆಗೆ ರೂ. 1-0.

ಆನಂತರ ಪ್ರತಿಸಾಲಿಗೆ 0-2-0.

ಹಿಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೩ ಮಾಹೆ ಅಗೋಸ್ತ ಸನ್ ೧೯೨೩ನೇ ಇಸವಿ.)—

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಪಸಾಡರಿಯ ಸಾಮಾನುಗಳು ಸಿಗುತ್ತವೆ-ಕಬ್ಬಿಣ ಪೊಳೆಗಳು, ಮೋಟಾರ ಉಪಯೋಗದ ಪೋಲ್ಟುಗಳು, ಪಿನ್ ವೃಶರ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನವೂ ಇದೇ! ಶಾಟಿಯನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ!! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಸಿರಸಿಯ ವ್ಯಾಪಾರಸ್ಥರು ನಮ್ಮಲ್ಲಿ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ವಾತೊಂಡೆ,

ಆಯರ್ನ ಮರ್ಚಂಟ,

ಕುಮಟಾ. (ಉ. ಕನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ

ಅತಿ ಮನೋಹರವಾದ

ಶೀಶೆ ಕಟ್ಟಿಗೆಯ

ದೇವರ ಮಂಟಪಗಳೂ,

ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ,

ಕಾರವಾರ.

U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ ಶಾಲು, ಧರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಪದಾರ್ಥಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

“ಔಷಧ ಸೀಸೆಗಳಿಗಿಂತ ಬರೇ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು.”

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ “ಆರೋಗ್ಯಚಂದ್ರಿಕೆ” ಎಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯ ಸ್ವಾಸ್ಥ್ಯ ಕಾರಕವಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹು ಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ಸ್ವಪ್ರಖ್ಯಾತರಾದ ಡಾಕ್ಟರರು ನಿಮಗೂ ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೊಂಕುರೋಗಗಳ ನಿವಾರಣೆ ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯನೆಂದೆ ಬಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಚೆಟ್ಟಿ ಬೀದಿ, ಮದರಾಸು.

Wanted:- Candidates for Telegraph and Station Master's Classes. Full particulars and Railway Fare Certificate on 2 annas stamp. Apply to:— Central Telegraph College, Nai Sarak, **Delhi.**

ಶ್ರೀ! ಶಾಂಬೇ ಶಾಸ್ತ್ರಿಗಳ ಪ್ರವಚನಗಳು.

(೪)

ನನ್ನ ಹಿಂದಿನ ವ್ಯಾಖ್ಯಾನಗಳ ವಿಷಯವು "ಧರ್ಮೋ ಹಿ ಮೂಲಂ ಜಗತಃ ಪ್ರತಿಷ್ಠಾ" ಇದೊಂದೇ ವ್ಯಾಖ್ಯೆಯನ್ನವಲಂಬಿಸಿದೆ. ಯಾವದೇ ತರದ ಉನ್ನತಿಯಾದರೂ ಧರ್ಮದಿಂದ. ಅಂಥ ಧರ್ಮವು ಸಹ ಆಚಾರದಿಂದಲೇ ಒಪ್ಪವಾಗಿದೆ. "ಆಚಾರ ಪ್ರಭವೋ ಧರ್ಮಃ" ಎಂದು ಋಷಿಗಳು ಧರ್ಮವನ್ನು ಆಚಾರದ ಅಂಕೆಯಲ್ಲಿಟ್ಟಿದ್ದಾರೆ. ವೇದವನ್ನು ಪಾಲಿಸುವ ವೈದಿಕರು ಆಚಾರದಿಂದಲೇ ನಡೆಯಬೇಕು. ಆಚಾರವು ಬ್ರಾಹ್ಮಣರಲ್ಲಿ ಹಿಂದಿನಿಂದ ನಡೆಸಿದ ಆಚಾರವೇ ಪರ, ಸದಾವಳಿ ಅಥವಾ ರೂಢಿ. ಭಿನ್ನ ಭಿನ್ನ ದೇಶಗಳಲ್ಲಿ ಭಿನ್ನ ಭಿನ್ನ ಆಚಾರಗಳಿವೆ. ಉತ್ತರ ದೇಶದ ನೇಪಾಳಿ ಬ್ರಾಹ್ಮಣರ ಆಚಾರವು ದಕ್ಷಿಣದ ದ್ರಾವಿಡ ಬ್ರಾಹ್ಮಣರ ಆಚಾರಕ್ಕಿಂತ ತೀರ ಭಿನ್ನವಿದೆ. ಕೆಲವೆಡೆ ಮೀನ ಬೋಳಿ ಸಿಕ್ಕಿಂದೇ ಇರುತ್ತಾರೆ. ತಿರುಪತಿ ಬೆಟ್ಟಕ್ಕೆ ಹೋಗಿ ಶ್ರೀ ವೆಂಕಟರಮಣನ ದರ್ಶನ ಕೊಂಡರೆ ಅಲ್ಲಿಯ ಆಚಾರದಂತೆ ಸನ್ಯಾಸಿಗಳಿಗೆ ವಪನ ಮಾಡುತ್ತಾರೆ. ಬೇರೆಯವರು ಮಾಡಿದಂತೆ ನಾವು ಮಾತಲಿಕ್ಕೆ ಬರುವದಿಲ್ಲ. ಹೀಗೆ ಆಚಾರ ಪಾಲಿಸಲಿಕ್ಕೆ ಋಷಿಗಳು ನಿಯಮ ಮಾಡಿದ್ದಾರೆ. "ಶ್ರುತಿಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ | ಸಮ್ಯಕ್ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಂ ||" ಹೀಗೆ ಸ್ಮೃತಿಯು ಮಾನವನ ಆಚಾರವನ್ನು ನಿರ್ದೇಶಿಸುತ್ತದೆ. ವೇದ, ಸ್ಮೃತಿ, ಸದಾಚಾರ, ಮನದ ಮೆಚ್ಚಿಗೆ ಇವೆಲ್ಲ ಧರ್ಮಾಚಾರದ ಪದರಿನಲ್ಲಿ ಸೇರುತ್ತವೆ. ದಕ್ಷಿಣ ಹಿಂದುಸ್ಥಾನದಲ್ಲಿ ಕೆಲವು ಕಡೆ ಮದುವೆ ಮೆರವಣಿಗೆಯ ಕಾಲಕ್ಕೆ ವಧೂ-ವರರು ಕತ್ತೆಯ ಮೇಲೆ ಕೂತು ಕೊಳ್ಳುತ್ತಾರೆ. ಇಲ್ಲಿ ಕತ್ತೆಯ ಮೇಲೆ ಕೂತು ಕೊಂಡು ಹೋದರೆ, ಚಿಕ್ಕ ಮಕ್ಕಳು ಸಹ ನಮಗೆ ನಕ್ಕುವರು. ರಾಮವರ್ಮನೆಂಬ ಹುಡುಗನು ಮದ್ರಾಸ ಪಟ್ಟಣದಲ್ಲಿ ನನಗೆ ಭೆಟ್ಟಿಯಾದನು. ಆತನಿಗೆ ನಾನು ನನ್ನ ಹೆಸರನ್ನು ಹೇಳಿದೆನು, ಮತ್ತು ಆತನ ತಂದೆಯ ಹೆಸರನ್ನು ಹೇಳ ಹೇಳಿದೆನು. ಆತನು "ಇರೇ ತಂದೆಯ ಹೆಸರ ಬೇಕೋ ಹೇಗೆ?" ಎಂತ ನನ್ನ ಪ್ರಶ್ನೆಗೆ ಉತ್ತರ ಕೊಟ್ಟನು. ನಾನು ಬೆರಗಾಗಿ "ನಿಮ್ಮಲ್ಲಿ ಹುಡುಗರಿಗೆ ಗಂಡ ಇರುತ್ತಾನೆ?" ಎಂತ ಕೇಳಿದೆನು. "ನಮ್ಮಲ್ಲಿ ಹೆಂಡತಿಗೆ ಒಬ್ಬನೇ ಗಂಡನೋ!" ಎಂತ ತಿರುಗಿ ಅವನು ಸವಾಲು ಕೊಟ್ಟನು. 'ಹೌದು ನಾವು ನಮ್ಮ ಹೆಂಡತಿಗೆ ಕಾಯದೇಶೀರ ಒಬ್ಬನೇ ಗಂಡನು' ಎಂತ ಹೇಳಿದೆನು. ಅಲ್ಲಿ ರಾಮವರ್ಮನು ಹೇಳಿದ್ದು ಹೆಂಗಸಿಗೆ ಒಬ್ಬನೇ ಗಂಡನಿರಲಿಲ್ಲ. ತಂದೆಯ ಹೆಸರು ಕೆಲವು ಕಡೆಯಲ್ಲಿ ಆ ತಂದೆಯ ಮನೆತನದವರಿಗೆ ಕಾಯದೆಯಂತೆ ತಿಳಿಯುತ್ತದೆ. ಹೀಗೆ ದೇಶಧರ್ಮ, ಗ್ರಾಮಧರ್ಮ, ಕುಲಧರ್ಮಗಳ ಆಚಾರ ಭೇದಗಳು ತೆ ಬೇರೆ ಬೇರೆ ಇರುತ್ತವೆ. ಮಹಾರಾಷ್ಟ್ರ ಸಾಧುಗಳಾದ ಶ್ರೀ ಸಮರ್ಥ ರಾಮದಾಸ ಸ್ವಾಮಿಗಳು ಆಚಾರ ಭೇದಗಳನ್ನೂ, ಅವುಗಳನ್ನು ಪಾಲಿಸಬೇಕಾದ ನಿಯಮಗಳನ್ನೂ ತಮ್ಮ 'ದಾಸಬೋಧ' ಗ್ರಂಥದಲ್ಲಿ ಬಹಳ ಚನ್ನಾಗಿ ವಿವರಿಸಿದ್ದಾರೆ.

* * *

ಋಷಿಪ್ರಣೀತವಾದ ಸ್ಮೃತಿಗಳಿಗೆ ಅಂದರೆ ಮಾನವನಿರ್ಮಿತ ಆಚಾರಗಳಿಗೆ ಮನ್ನಣೆಯನ್ನೀಯಬೇಕಾಗಿ ಶಾಸ್ತ್ರವಿದ್ದ ಮೇಲೆ ನಾವು ಸಹ ಸ್ಮೃತಿಗಳನ್ನು ಕಾಲಭೇದದಂತೆ ಈಗ ತಿದ್ದಿ ಹೊಸ ಸ್ಮೃತಿ ಗ್ರಂಥಗಳನ್ನು ನಿರ್ಮಿಸಬಹುದೆಂದು ತಾರ್ಕಿಕರು ಉದ್ಗರಿಸಬಹುದು. ಆದರೆ, ಅದಕ್ಕೊಂದು ಆತಂಕವಿದೆ. ಸೃಷ್ಟಿ ಮತವು ಹುಟ್ಟಿಕೊಂಡಿದ ಮೇಲೆ ಸಮಷ್ಟಿಯು ಕಾಯಿದೆಯಾಗುತ್ತದೆ. ಸಮಷ್ಟಿ ಕಾಯಿದೆಯು ಸಮಾಜದಲ್ಲಿ ಮನ್ನಣೆಯಾಗಹತ್ತಿದರೆ, ಅದು ಈಶ್ವರಪ್ರಣೀತ ಆಚಾರ ಶಾಸ್ತ್ರವಾಗುತ್ತದೆ. ಕಾಯಿದೆಯನ್ನು ಮುಂಚೆ ನಿರ್ಮಿಸುವ ವ್ಯಕ್ತಿಯು ಸಹ ಆ ಕಾಯಿದೆಗೆ ಬದ್ಧನಿದ್ದಾನೆ. ನ್ಯಾಯಾಧೀಶನು ಆ ಕಾಯಿದೆಯಂತೆ ತನ್ನ ನಿಕಾಲೆಯನ್ನು ಹೇಳಬೇಕು. ಸಮಾಜದೊಳಗಿನ ಪ್ರಧಾನ ವ್ಯಕ್ತಿಯಾದರೂ ಆ ಕಾಯಿದೆಗೆ ತಲೆಬಗ್ಗಿಸಬೇಕು. ಸಮಾಜದ ಮುಂಚೂರಿಯಿಂದಲೇ ಈಶ್ವರನಿಂದ ದಯಪಾಲಿಸಿದ ನಿಯಮಗಳು. ಅಂಥ ನಿಯಮ, ರೂಢಿ, ಕಾಯದೆಗಳ ಮೇಲೆ ಸಮಾಜದ ಸತ್ತೆ ಇರುತ್ತದೆ. ಅದನ್ನು ಯಾರೂ ಅಲ್ಲಗಳೆಯಬಾರದು.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು !

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹಿಮ್ಮೆ ತಿಕ್ಕಿದ ಕೂಡಲೆ ತಲೆಯು ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ತೈಲವು ಕೂದಲುಗಳಿಗೆ ಪುಷ್ಟಿ ನೀಡಿ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ

ದೊಡ್ಡ ಸೀಸೆಗೆ	ರೂ.	೨—೦—೦
ಸಣ್ಣ ಸೀಸೆಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No 2.**

ಅದಕ್ಕೆ ಸಮಷ್ಟಿಯು ಸಮಾನ್ಯತೆ ಇದ್ದ ಮೂಲಕ ಅದನ್ನು ತಿರುಗಿಸಲಿಕ್ಕೆ ಸಮಷ್ಟಿ ಸಿದ್ಧವಿದೆಯೋ? ಸಮಾಜದ ರೂಪವು ಅನುಕೂಲವಿದೆಯೋ? ಎಂತ ಪರೀಕ್ಷಿಸಬೇಕಾಗುತ್ತದೆ. ಇಂಥ ಕಾಯಿದೆಗಳು ಸಮಷ್ಟಿ ಅಂದರೆ ಸಮಾಜದ ನಾಡಿಗಳಾಗಿರುತ್ತವೆ. ಸ್ಮೃತಿಗಳು ಸಮಾಜದ ಮನ್ನಣೆಯಿಂದ ದೇಶಪ್ರಾಣಸಮವಾಗಿವೆ. ಕಾರಣ ಅವನ್ನು ಈಗ ಬದಲಿಸಬರುವದಿಲ್ಲ. ಹಾಗೆ ಬದಲಾವಣೆ ಮಾಡಿದರೆ ಅವು ಬರೇ ಸಂಸ್ಕೃತ ಶ್ಲೋಕಗಳಾಗುವವು. ಅವುಗಳಿಗೆ ಸಮಾಜದ ಮಾನ್ಯತೆಯಿಲ್ಲ. ಅಂದಮೇಲೆ ವಿಶೇಷ ಧರ್ಮದ ಗೊಡವೆಗೆ ಹೋಗಲಾಗದು. ಸಾತ್ವಿಕ ಗುಣದಿಂದ ವಿಶೇಷ ಧರ್ಮವು ನಮ್ಮಲ್ಲಿ ತಲೆದೋರುತ್ತದೆ. ಭಾಷೆಯು ಮೊದಲೇ ಹುಟ್ಟಿದೆ, ಆ ಮೇಲೆ ವ್ಯಾಕರಣವನ್ನು ಕಲಿಯಬೇಕು. ಭಾಷೆ ಮತ್ತು ವ್ಯಾಕರಣವು ಒಟ್ಟಿಗೇ ತಲೆದೋರುತ್ತಿವೆ. ಗೀತೆಯಾದರೂ ಇದನ್ನೇ ಸಾರುತ್ತದೆ. 'ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ' ಬ್ರಹ್ಮನು ಕರ್ಮ ಮತ್ತು ಪ್ರಜೆಗಳನ್ನು ಒಮ್ಮೆಗೇ ಹುಟ್ಟಿಸಿದನು. ಪ್ರತಿಯೊಬ್ಬ ಮನುಷ್ಯನಿಗೆ ತನ್ನ ಜೀವನ ಧರ್ಮವು ತಿಳಿಯುತ್ತದೆ. ಇದೇ ಯಜ್ಞವು ಸಾಮಾನ್ಯ-ವಿಶೇಷ ಧರ್ಮಗಳು ಸಹಜ ಧರ್ಮಗಳಾಗುತ್ತವೆ. ಸಾಮಾನ್ಯ ಧರ್ಮವನ್ನು ಮನುಷ್ಯನು ತಿಳಿಕೊಂಡರೆ ಸಾತ್ವಿಕ ಭಾವವು ಜಾಗೃತವಾಗಿ ವಿಶೇಷ ಧರ್ಮದಂತೆ ಕಾಯಿದೆಯನ್ನು ಪಾಲಿಸಲಿಕ್ಕೆ ಅನುಕೂಲವಾಗುತ್ತದೆ.

***

ಕಾಯಿದೆಯಂತೆ ಶಾಂತತೆ ಸ್ಥಾಪಿಸಲಿಕ್ಕಾದರೂ ಬರೇ ಕಾಯಿದೆಯನ್ನೇ ಅವಲಂಬಿಸಿ ಇರಲಿಕ್ಕೆ ಆಗುವದಿಲ್ಲೆಂದು ನಾನು ಹಿಂದೆ ಹೇಳಿದ್ದೇನೆ. ಯಾಕೆಂದರೆ ಸಾತ್ವಿಕ ಸ್ವಭಾವವು ಹಿಡಿದುಕೊಂಡಿದ್ದ ಹೊರತು ಕಟ್ಟಳೆ-ನಿಯಮಗಳನ್ನು ಮಾಡುವ ತಾರತಮ್ಯ ಬುದ್ಧಿಯು ಮನುಷ್ಯನಲ್ಲಿ ಹುಟ್ಟುವದಿಲ್ಲ, ಅರಸನಿಂದ ಎಂದೂ ಕಾಯಿದೆಗಳನ್ನು ಮಾಡಲಿಕ್ಕೆ ಬರುವದಿಲ್ಲ. ಹಿಂದೆ ಯಾವ ಅರಸನೂ ಮಾಡಿದ್ದಿಲ್ಲ. ಮುಂದೆ ಮಾಡಲಿಕ್ಕಿಲ್ಲ. ಯಾಕೆಂದರೆ ಅರಸನೆಂದರೆ ಅವನಲ್ಲಿ ರಾಜಸ ಗುಣವು ಹೆಚ್ಚಿಗೆ ಬೆಳೆದಿರುತ್ತದೆ. ಸನಾತನ ಧರ್ಮವೊಂದೇ ಸಾತ್ವಿಕ ಗುಣಭರಿತ ಮಹರ್ಷಿಗಳಿಂದ ಮಾಡಿದ್ದಿರಲಿ ಇತರೇ ಧರ್ಮಸ್ಥಾಪಕರಾದರೂ ಅರಸರೇನು? ಬೌದ್ಧ, ಜೈನ, ಇಸಾಯಿ, ಇಸ್ಲಾಮಿ ಮುಂತಾದ ಧರ್ಮಸ್ಥಾಪನೆಯನ್ನೂ ನೋಡಿದರೂ ಇದೇ ಸಿದ್ಧವಾಗುತ್ತದೆ. ಈ ಧರ್ಮಸ್ಥಾಪಕರು ಅರಸರಲ್ಲ. ಬುದ್ಧನು ಸಾರ್ವಭೌಮ ಅರಸನ ಮಗನಾದರೂ, ಇಡೀ ರಾಜ್ಯವನ್ನು ತ್ಯಜಿಸಿ ಆತನು ತಿರುಕನಾದ ಮೇಲೆ ಧರ್ಮ ಸ್ಥಾಪಿಸುವ ಯೋಗ್ಯತೆ ಆತನಲ್ಲಿ ಹುಟ್ಟಿತು. ರಾಜನು ಕಾಯಿದೆಯಿಂದ ಶಾಂತತೆ ಹಾಗು ಐಹಿಕ ಸುಖ ಇವೆರಡನ್ನು ಸಂಪಾದಿಸಿಕೊಡಬಲ್ಲನು. ಆದರೆ, ಧರ್ಮವು ಐಹಿಕ ಸುಖ-ಶಾಂತತೆಯಲ್ಲದೆ ಪಾರಲೌಕಿಕ ಸುಖವೆಂದರೆ ಮೋಕ್ಷವನ್ನು ಕೊಡಬಲ್ಲದು. ಕಾಯಿದೆಯನ್ನು ಪಾಲಿಸಿ ರಾವಸಾಹೇಬ-ರಾವಬಹಾದ್ದೂರರಾಗಬಹುದು. ಆದರೆ, ಧರ್ಮದಿಂದ ಅದಕ್ಕೂ ಹೆಚ್ಚಿನ ಗೌರವವು ಮನುಷ್ಯನಿಗೆ ಲಭಿಸುತ್ತದೆ. ಧರ್ಮವೆಂದರೆ ಭಸ್ಮ ಹಚ್ಚಿಕೊಂಡು ಮೂಗು ಹಿಡಿದುಕೊಂಡು ಕೂತರೆ ಆಗಲಿಲ್ಲ. ಧರ್ಮದಿಂದ ನಡೆದು ರಾಜ್ಯವನ್ನು ನಡಿಸಿದ ಶಿಬಿ-ನಳ-ಜನಕ ಮುಂತಾದ ಚಕ್ರವರ್ತಿಗಳು ನಮ್ಮ ಈ ಪುಣ್ಯಭೂಮಿಯಲ್ಲಿ ಆಳಿ ಹೋದರು. ಅರ್ವಾಚೀನ ಅರಸರು ಒಂದೊಮ್ಮೆ ಬರೇ ಐಹಿಕ ಸುಖವನ್ನು ಗಳಿಸಿ ಕೊಡಬಹುದು. ಪಾರಲೌಕಿಕ ಸುಖಪ್ರಾಪ್ತಿಯು ಧರ್ಮದಿಂದ ಸಿಗುವ ದೊಡ್ಡ ಲಾಭವು.

***

ಸಾಮಾನ್ಯ ಧರ್ಮವನ್ನು ನಾವು ಪಾಲಿಸಹತ್ತಿದರೆ ಮುನಿಸಿಪಾಲಿಟಿ-ಲೋಕಲ್ ಬೋರ್ಡ ಮುಂತಾದ ಆಧುನಿಕ ರಾಜ್ಯಗಳು ನಮಗೆ ಬೇಡ. ನಾವು ಧರ್ಮವನ್ನು ಪಾಲಿಸಬೇಕಾದರೆ ಎಲ್ಲಿ ತಪ್ಪುತ್ತೇವೆ ಎಂಬದನ್ನು ಸೂಕ್ಷ್ಮವಾಗಿ ತಿಳಕೊಳ್ಳಬೇಕು, ಅಂದರೆ ಸ್ವರಾಜ್ಯವು ನಮಗೆ ಸಿಕ್ಕೇಸಿಗುತ್ತದೆ. ಸ್ವರಾಜ್ಯ ಸಿಗಬೇಕಾದರೆ ನಾವು ರಾಜಕಾರಣಿಗಳಾಗಬೇಕೆಂದು ಹಲವರು ಈಗ ಚಳವಳಿಯನ್ನು ನಡಿಸುತ್ತಾರೆ. ಕೆಲವರು ಅತ್ಯಾಚಾರ ಮಾಡಬೇಕೆಂತಲೂ, ಕೆಲವರು ಖಾದಿಯನ್ನೇ ಧರಿಸಬೇಕೆಂತಲೂ, ಹಲವರು 'जवाब तसे, गोस्वाग गोसा' ಮುಂತಾದ ತತ್ವಗಳನ್ನೂ ಹೇಳುತ್ತಾರೆ. ಬೇರೆ ಅನೇಕರು ಶಕ್ತಿಯನ್ನು ಎಸೆದು ಕೊಡದೆ ಸ್ವರಾಜ್ಯ ಸಿಗಲಿಕ್ಕಿಲ್ಲೆಂತಲೂ ಹೇಳಬಲ್ಲರು. ಮಹಾತ್ಮರು ಹಿಂದೇ ವರ್ಷದಲ್ಲಿ ಸ್ವರಾಜ್ಯಧ್ವಜವನ್ನು ಹಚ್ಚುತ್ತೇವೆಂದು ಹೇಳಿದರು ಜನರು. ಖರೆ ಎಂತ ನಂಬಿ ಬಹಿಷ್ಕಾರಯುಕ್ತ ಯತ್ನಗಳನ್ನು ಮಾಡತೊಡಗಿದ್ದು ಹಣ ಕೈಗತ ಒಯ್ದರೆ ನಮಗೆ ಬುದ್ಧಿ ಸರಿಯಾಗಿ ಕೊಡಲು ತಿಳಿಯುವದಿಲ್ಲ. ಸ್ವರಾಜ್ಯ ಗಳಿಸುವ ಉಪಾಯಗಳೇನಿವು? ರಾಜಕಾರಣವಂತು ನಮಗೆ ತಿಳಿಯುವದೇ ಇಲ್ಲ. ಶ್ರೀರಾಮದಾಸ ಸ್ವಾಮಿಗಳು 'ದಾಸಬೋಧ'ದಲ್ಲಿ ರಾಜಕಾರಣವನ್ನು ಹಿತವಾಗುವಂತೆ ಜನರಿಗೆ ಉಪದೇಶಿಸಿದ್ದಾರೆ. ನಿಜವಾಗಿ ನೋಡಿದರೆ 'ದಾಸಬೋಧ'ದಂಥ ಶ್ರೇಷ್ಠ ಪ್ರಾಕೃತ ಗ್ರಂಥವು ಇಲ್ಲವೆಂತ ಹೇಳಬೇಕು. ಆ ಗ್ರಂಥಪ್ರಸಾರಕ್ಕಾಗಿ ರಾ. ಮುಕೂರಕರರು ೧ ಲಕ್ಷ ಪ್ರತಿಗಳನ್ನು ಜನರಿಗೆ ಪ್ರತಿಜ್ಞೆ ಮೇಲೆ ಹಂಚಿದರು. ಪ್ರತಿನಿತ್ಯ ನಮಸ್ಕಾರ ಹಾಕಿ ಪಾರಾಯಣ ಮಾಡಬೇಕೆಂದು ಅವರ ಪ್ರತಿಜ್ಞೆ ಕರಾರ. ಹಾಗೆಂದ ಮೇಲೆ ನಮಗೆ ಬಹಳೇ ರಾಮದಾಸರು ಲಭಿಸಬೇಕು. ಹೀಗೆ ದಾಸಬೋಧ ಹಂಚುವದರಿಂದ ಏನೂ ಪ್ರಯೋಜನವಾಗಲಿಲ್ಲೆಂದು ಹೇಳಬೇಕಾಗಿದೆ. ನಿಜವಾದ ಜನರು ಹಾಗೆ ಗ್ರಂಥವನ್ನು ಕೊಳ್ಳಲಿಲ್ಲ, ಮತ್ತು ಕೊಂಡವರಿಗೆ ಪ್ರತಿಜ್ಞೆಯಂತೆ ನಡೆಯಲಿಕ್ಕೆ ಸಾಧ್ಯವಾಗಲಿಲ್ಲ. ಒಟ್ಟಿಗೆ ಒಳ್ಳೇ ಜನರ ಕೈಯಲ್ಲಿ ಈ ಗ್ರಂಥವು ಬೀಳಲಿಲ್ಲ. ಹೀಗೆ ನಮಗೆ ರಾಜಕಾರಣ ತಿಳಿಯಲಿಕ್ಕಿಲ್ಲ. ಕೆಲವು ದೊಡ್ಡ ದೊಡ್ಡ ಮುಖಂಡರು ರಾಜಕಾರಣವನ್ನು ಕುರಿತು ಭಾಷಣ ಮಾಡುವಾಗ 'ದಾಸಬೋಧ'ದೊಳಗಿನ ಪದ್ಯ (ओवी) ಗಳನ್ನು ಹಾಡುತ್ತಾರೆ. ನಿಜವಾಗಿ ಶ್ರೀ ಸಮರ್ಥ ಸ್ವಾಮಿಗಳು ಮಹಾರಾಷ್ಟ್ರದ ರಾಜಕಾರಣಪಟುಗಳು! ಅವರು ರಾಜಕಾರಣವನ್ನು 'ದಾಸಬೋಧ'ದಲ್ಲಿ ಹೀಗೆ ಹೇಳಿದ್ದಾರೆ:- ''राजकारण बहुत करावें। परंतु कळोंच नेदावें। परपीडेवरी नसावें॥ अंतःकरण ॥'' ನಾವು ಮೊದಲು ಪ್ರಸಿದ್ಧಿ ಕೊಟ್ಟು ಆ ಮೇಲೆ ರಾಜಕಾರಣ ಮಾಡುತ್ತೇವೆ. ನಾಗಪುರದಲ್ಲಿ "झेंड्याची मिरवणूक" ಅಂದರೆ ಧ್ವಜದ ಮೆರವಣಿಗೆಯನ್ನು ಕೆಲವು ವರ್ಷಗಳ ಹಿಂದೆ ತೆಗೆದಿದ್ದರು. "ಪೋಲೀಸರು ಮುಖ್ಯ ಬೀದಿಯಲ್ಲಿ ಅತಂಕ ಮಾಡುತ್ತಿದ್ದ ಕಾರಣ ಸಣ್ಣ ಬೀದಿಯಿಂದ ಮೆರವಣಿಗೆ ತೆಗೆಯಲಾಗಿದೆ" ಎಂಬ ಹಸ್ತಪತ್ರಿಕೆಯು ಮೊದಲೇ ಹಂಚಲಾಗಿತ್ತು. ಪೋಲೀಸರಿಗೆ ಅಲ್ಲಿ ಬರಲಾಗುವದಿಲ್ಲೆಂಬ ಈ ಮುಖಂಡರ ಭಾವನೆಯೋ? ಏನೋ? ಹಸ್ತಪತ್ರಿಕೆ ಹಂಚದಿದ್ದರೆ ಮೆರವಣಿಗೆ ಸಾವಧಾನದಿಂದ ನಡೆಯುತ್ತಿತ್ತು. ಶ್ರೀ ಸಮರ್ಥ ರಾಮದಾಸ ಸ್ವಾಮಿಗಳು ಹಾಗೆ ಹೇಳಲಿಲ್ಲ. ವಿಜಾಪುರದ ಅದಿಲ್‌ಶಹನಿಗೆ ಸೋಲಿಸಬೇಕಾದಾಗ ಮತ್ತು ಅಫಜುಲ್‌ಖಾನನಿಗೆ ಕೊಲ್ಲುವಾಗ ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ಪ್ರಕಟಿಸಿ ಕೊಡದೆ ಗೌಪ್ಯವಾದ ರಾಜಕಾರಣವನ್ನು ಅನುಸರಿಸಿದ್ದರು.

***

ಸತ್ಯಾಗ್ರಹವಾದರೂ ನಾವು ಪಾಲಿಸುವಾಗ ಬಹಳ ತಪ್ಪುತ್ತೇವೆ. ರಾಜಕಾರಣದಂತೆ ಈ ಸತ್ಯಾಗ್ರಹ ದಳವಾಗಿದೆ. ಸತ್ಯಾಗ್ರಹ ಮಾಡಿ ಕೆಲವರಿಗೆ ಲಡ್ಡು ಸಿಗುತ್ತಿದೆ. ಲಡ್ಡು ಸಿಕ್ಕಿದ ಕೂಡಲೆ ಅವರಿಗೆ ಬಹಳ ಆನಂದವಾಗುತ್ತದೆ. ತಾಯಿಯೊಡನೆ ಮಗುವು ಸತ್ಯಾಗ್ರಹ ಮಾಡಿದರೆ ಅದು ನಡೆಯುತ್ತದೆ. ಯಾಕಂದರೆ ಅಲ್ಲಿ ಪ್ರೀತಿ ಪ್ರೇಮದ ಸ್ಥಾನವಿರುತ್ತದೆ, ಗಂಡನು ಹೆಂಡತಿಯೊಡನೆ ಸತ್ಯಾಗ್ರಹ ಮಾಡಿದರೆ ಅದು ನಡೆಯುತ್ತದೆ ಯಾಕಂದರೆ ಅಲ್ಲಿ ಪ್ರೀತಿ-ಪ್ರೇಮದ ಸ್ಥಾನವಿರುತ್ತದೆ ಹೆಂಡತಿಯು ಗಂಡನೊಡನೆ ಸತ್ಯಾಗ್ರಹ ಮಾಡಿದರೆ ಜಯ ಸಿಗುವಂತಿದೆ. ಅದೇ ಒಬ್ಬ ಲವಲೇಶ ಪ್ರೀತಿಯಿಲ್ಲದ ಪರಕೀಯರೊಡನೆ ಸತ್ಯಾಗ್ರಹ ನಡಿಸಿದರೆ ಅದು ಕೈಗೂಡುವಂತಿಲ್ಲ. ನಾನು ಒಮ್ಮೆ ಒಂದು ಖಾನಾವಳಿಗೆ ಊಟಕ್ಕೆ ಹೋದೆನು. ಖಾನಾವಳಿ ಭಟ್ಟನು ಅನ್ನವದೆ, ಮಜ್ಜಿಗೆ ಅದೆ ಎಂತ ಹೇಳಿ ಆಶ್ವಾಸಿಸಿದನು. ನಾನು ಊಟಕ್ಕೆ ಕೂತೆ, ಬರೇ ಕಸಕು ಅನ್ನವಲ್ಲದೆ ಬೇರೆ ತಿನಸುಗಳು ನಮ್ಮ ಎಲೆಯ ಮೇಲೆ ಬಡಿಸುವದೇ ಇಲ್ಲ. ಜತೆಯಲ್ಲಿ ಇನ್ನೊಬ್ಬ ಗೃಹಸ್ಥನೂ ಕೂತುಕೊಂಡಿದ್ದನು. ಅವನು ಬೇಕಿನಂತೆ ತಿನಸು ತನಗೆ ಸರಿಯಾಗಿ ಬಡಿಸಿದ ಹೊರತು ತಾನು ಎಲೆ ಮುಟ್ಟಲಿಕ್ಕಿಲ್ಲೆಂದು ಹಟ ಮಾಡಿ ಸತ್ಯಾಗ್ರಹ ಮಾಡಿ ಕೂತನು. ಖಾನಾವಳಿ ಭಟ್ಟನು "ಬೇಕಾದರೆ ಬಡಿಸಿದಷ್ಟು ಊಟ ಮಾಡಬೇಕು, ಇಲ್ಲವಾದರೆ ನಡೆಯಬೇಕು." ಎಂತ ಹೇಳಿದನು. ನಾನೂ ಒಳ್ಳೇ ಸತ್ಯಾಗ್ರಹ ಮಾಡುವ ವಿಚಾರ ನಡಿಸಿದೆನು. ಅಜೀರ್ಣವಾದರೂ ಚಿಂತೆ ಇಲ್ಲ, ಡಾಕ್ಟರರ ಕಡೆ ಮದ್ದು ಕೊಳ್ಳುವೆ; ಇವನಿಗೆ ಬಗ್ಗಿಸುವೆನೆಂದು ಕಸಕು ಅನ್ನವಾದರೂ ಅನ್ನ ಸಂಪೂರ್ಣ ಬಡಿಸಲಿಕ್ಕೆ ಹೇಳಿದೆನು. ಭಟ್ಟನಿಗೆ ಊಟಕ್ಕೆ ಅನ್ನವಿರಲಿಲ್ಲ. ಆತನು ಹಣಿಗೆ ಓಡಿದನು ಕೂಡಲೆ ಸಾಕು ಮಾಡದೇ ಹೋಗಿ ಅಂಗಲಾಚಿ ಬೇಡಿಕೊಂಡನು. ನಾನು ಹೊಟ್ಟೆತುಂಬ ಬಡಿಸಿದ ಹೊರತು ಏಳಲಿಕ್ಕಿಲ್ಲೆಂದೂ, ಮತ್ತೂ ಬಡಿಸಿರಿ, ಇನ್ನೂ ಬಡಿಸಿರಿ," ಎಂದು ಹಟ ಹಿಡಿದೆನು. ಖಾನಾವಳಿಯ ಯಜಮಾನನು ಶರಣು ಬಂದು ಊಟದ ದುಡ್ಡಿನೊಳಗಿಂದ ೨ ಆಣೆ ತಿರುಗಿ ಕೊಡಲಿಕ್ಕೆ ತಯಾರಾದನು. ಎಲೆಗೆ ಕೈ ಹಚ್ಚದ ಗೃಹಸ್ಥನು ಊಟ ಮಾಡದೆ ಊಟದ ಹಣ ಕೊಟ್ಟು ಹೋದನು. ಇದೀಗ ಸತ್ಯಾಗ್ರಹದ ಹಟವು!

***

ಅಸಹಕಾರಿತೆಯ ಬಗ್ಗೆ ನಾಲ್ಕು ಮಾತು ಹೇಳಬೇಕಾಗಿದೆ. ಇದರ ವಿಷಯವಾಗಿ ಉದ್ಬೋಧಕವಾದ ಕಥೆಯೊಂದು "ಅರೇಬಿಯನ್ ನೈಟ್ಸ" ಪುಸ್ತಕದೊಳಗೆ ಕೊಟ್ಟಿದೆ. ಹಿಂದು ಊರಲ್ಲಿ ಒಬ್ಬ ಅರಸನಿದ್ದನು. ಆತನಿಗೆ ಹೆಂಗಸರ ಮೇಲೆ ವ್ಯಭಿಚಾರ

ಸಂಶಯಭರಿತನಾಗಿದ್ದನು. ಆ ಊರೊಳಗಿನ ಒಬ್ಬ ರೈತನ ಹೆಂಡತಿಯನ್ನು ಪ್ರತಿಯೊಂದು ದಿವಸ ಲಗ್ನಮಾಡಿಕೊಂಡು ಆಕೆಯೊಡನೆ ಆ ರಾತ್ರಿ ರಮಿಸಿ ಮರುದಿವಸ ಆಕೆಯನ್ನು ಕೊಂದು ಬಿಡುತ್ತಿದ್ದನು. ಈ ಹುಚ್ಚಾಟ ಅವನ ಮಂತ್ರಿಯ ಮಗಳು ತಿಳಕೊಂಡು ಅರಸನಿಗೆ ಪತ್ನಿಯಾಗಿ ವರಿಸಿ ನ್ಯಾಯೋಹವಾದ ಈ ಕೊಲೆಯನ್ನು ನಿಲ್ಲಿಸುವ ವಿಚಾರದಿಂದ ಪ್ರತಿದಿವಸ ಕ್ಕಾಗಿ ತನ್ನ ತಂದೆಗೆ ಸರಿಬರುವಂಥ ಕೇಳಿಕೊಂಡಳು. ಮಗಳ ಮನದೊಲವನ್ನು ಕಂಡು ಅವಳ ... ವೃತ್ತ ಮಾಡಬೇಕೆಂದು ಆಕೆಗೆ ಒಂದು ಉಪಕಥೆಯನ್ನು ಮಂತ್ರಿಯು ಹೇಳಿದನು. ಒಂದು ಗ್ರಾಮದಲ್ಲಿ ಒಬ್ಬ ಒಕ್ಕಲಿಗನಿದ್ದನು. ಆತನ ಬಳಿಯಲ್ಲಿ ಒಂದು ಕುದುರೆ ಇತ್ತು. ಆ ರೈತನ ಎತ್ತು ಆ ಕುದುರೆ ಬಳಿಗೆ ಬಂದು ತಾನು ಇಡೀ ದಿವಸ ಹೊಲಗೆಲಸಗಳಲ್ಲಿ ನೇಗಿಲು ಹೊತ್ತುಕೊಂಡು ಪಡುವ ಕಷ್ಟಗಳನ್ನು ಹೇಳಿತು. ಅದಕ್ಕೆ ಆ ಕುದುರೆಯು ಒಂದು ಉಪಾಯ ಹೇಳಿತು: 'ರೈತನು ಹೊಲಕ್ಕೆ ನಿನಗೆ ಹೊಡಕೊಂಡು ಹೋಗಲಿಕ್ಕಾಗಿ ಬಂದ ಕೂಡಲೆ ನೀನು ಕೈಕಾಲು ಚಾಚಿ ಮಲಗಿ ಬಿಡು. ಆಗ ಯಜಮಾನನು ನಿನಗೆ ನನ್ನಂತೆ ಕಟ್ಟೆ ಹಾಕಿದಲ್ಲಿ ಆಹಾರ-ನೀರುಗಳನ್ನು ಹಾಕುವನು,' ಎಂತ ಅಸಹಕಾರದ ಯುಕ್ತಿಯನ್ನು ಹೇಳಿತು. ಮಾರನೇ ದಿವಸ ಎತ್ತು ಹಾಗೆಯೇ ಮಾಡಿತು. ಯಜಮಾನನು ಎತ್ತು-ಕುದುರೆಗಳ ಭಾಷಣವನ್ನು ಅಡಗಿ ನಿಂತು ಕೇಳಿದ್ದನು. ಎತ್ತಿಗೆ ಹೊಡಕೊಂಡು ಹೋಗುವ ಆಳು ಎತ್ತು ಕೈಕಾಲು ಚಾಚಿ ಮಲಗಿಕೊಂಡ ಸುದ್ದಿಯನ್ನು ಯಜಮಾನನಿಗೆ ತಿಳಿಸಿದೊಡನೆ, ಕುದುರೆಗೆ ಹೊಲಕ್ಕೆ ಹೊಡಕೊಂಡು ಹೋಗಲು ಆಳಿಗೆ ಅಜ್ಞೆ ಮಾಯಿತು. ಬತ್ತ ಕುದುರೆಗೆ ಎತ್ತಿನಂತೆ ಪೆಟ್ಟು ತಿಂದ ದಣಿದು ಬಂದ ಅವಸ್ಥೆ ಬಂತು. ಕೂಡಲೆ ಕುದುರೆಯು ಹೀಗೆ ಅಸಹಕಾರ ಮಾಡಿದರೆ ತನ್ನ ಸೆರಗು ಬಾಯಬೇಕಾದೀತೆಂದು ಒಂದು ಯೋಜನೆ ಹುಡುಕಿ ತೆಗೆದು ಎತ್ತಿಗೆ ಆ ದಪ್ಪನೆಂದರೆ 'ನಿನ್ನ ಯಜಮಾನನು ನಿನ್ನ ಈ ದೀನ ಸ್ಥಿತಿಯನ್ನು ಕಂಡ ನಿನಗೆ ಬರೆ ಕೊಡಲಿಕ್ಕೆ ಕಾಸಿದ ಕುಳವನ್ನು ನಾಳೆ ಇಲ್ಲಿ ಕೊಡಲು ಬರುವವನಿದ್ದಾನೆ. ಕಾರಣ ನಾಳೆ ಆಳು ನಿನಗೆ ಹೊಲಕ್ಕೆ ಕೊಂಡು ಹೋಗಲು ಬಂದಾಗ ನೀನು ಅಸಹಕಾರ ಮಾಡಿ ಮಲಗಿದರೆ ನಿನ್ನ ಅವಸ್ಥೆ ನೆಟ್ಟಗಾಗಲಿಕ್ಕಿಲ್ಲ" ಇದನ್ನು ಕೇಳಿ ಎತ್ತು ದಿಗಿಲಂತೆ ಮೈ ಕೊಡವಿ ಹೊಲಕ್ಕೆ ಹೋಗಲಿಕ್ಕೆ ತಯಾರಾಯಿತು. ಇದೇ ಸ್ಥಿತಿಯು ನಿನ್ನದಾಗುವದೆಂದು ಮಂತ್ರಿಯು ಹೇಳಿ, ತನ್ನ ಮಗಳಿಗೆ ಅದುಷ್ಟ ಅರಸನನ್ನು ವಿಚ್ಛೇದವೆಂಬ ಬೋಧಿಸಿದನು. ನಿಜವಾಗಿ ತಂದೆ ಸ್ವ ವಿಚಾರ ಮಾಡಿ ಅಸಹಕಾರ ಮಾಡಬೇಕಲ್ಲದೆ ಸ್ವಾರ್ಥಿ ಕುಕಲ್ಪನೆಗಳಿಗೆ ಈಡಾಗಬಾರದು.

***

ಸಮಾಜ ಸುಧಾರಣೆಗೆ ಹಲವು ವಿಧ ಅಖಂಡ ಸೇವೆ ಮಾಡುವ ಸಾಧುಶ್ರೇಷ್ಠರು ಸಂದಿಗೊಂದಿಗಳಲ್ಲಿ ಪರ್ವತ ಪರಿಗಳಲ್ಲಿ ಹೋಗಿ ಅಲೌಕಿಕ ದೈವಿ ಶಕ್ತಿಯನ್ನು ಧರ್ಮದಿಂದ ಗಳಿಸಿಕೊಂಡು ಹೊರಗೆ ಬೀಳುತ್ತಿದ್ದರು. ಪಿ ಧ್ಯಾಚಲದಲ್ಲಿ ಮ ಹಾರಾಷ್ಟ್ರ ಮಠಿಸಿಯು ಬರ ಕಾರಣಾಯಿತು. ಇದರ ಅರ್ಥವು ನಿಮಗೆ ತಿಳಿಯಲಿಕ್ಕಿಲ್ಲ. ನಾನು ಮೊದಲು ಹೇಳಿದ ಶ್ರೀ ಮಹಾರಾಷ್ಟ್ರ ಧರ್ಮಗುರುಗಳಾದ ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ ದಾಸಬೋಧವೆಂಬ ಸಮಾಜ ಸುಧಾರಣೆಯ ಧರ್ಮಗ್ರಂಥವು ಬೇರೊಂದಿಲ್ಲ. ಅದರೊಳಗೆ ಜನರಿಗೆ ಒಳ್ಳೇ ಮಂತ್ರಗಳು ಹೇಳಲ್ಪಟ್ಟಿವೆ. ಒಂದು ಸಮಾಸದಲ್ಲಿ ಅವರು ಹೆ ರುವಂತೆ 'सामर्थ्य आहे चळवळीचे । जो जो करील तयाचे । परंतु तेथे भगवंताचे अधिष्ठान पाहिजे ॥' ಬೇಕಾದ ಚಳವಳಿಯನ್ನು ನಾವು ನಡೆಸಿದರೂ ಅದಕ್ಕೆ ಭಗವಂತನ ಅಧಿಷ್ಠಾನ ಬೇಕು. ಮುಂದೆ ಅವೇ ಗ್ರಂಥದಲ್ಲಿ लोक राजी राखावे कोणी । सत्य काही ಎಂತಲೂ ಹೇಳಿದೆ. ಜನರಿಗೆ ಪ್ರಸನ್ನರಾಗಿಟ್ಟು ಎಲ್ಲವನ್ನೂ ನಡಿಸಬೇಕು. ನಾವು ಬಹಳೇ ಗಾಬರಿ-ಗೊಂದಲಿಗಳನ್ನು ನಡಿಸಿ ಕೆಲಸವನ್ನು ಕೆಡಿಸಿಕೊಳ್ಳುತ್ತೇವೆ. ಪುಣೆಯಲ್ಲಿ ಶ್ರದ್ಧಾನಂದರ ಸ್ಮೃತಿ ದಿವಸ ಸಭೆಯಾಯಿತು. ಸಭೆಯಲ್ಲಿ ಮೃತರ ಗುಣಾನುವಾದಗಳಾದವು. ಆದರೆ ಶ್ರದ್ಧಾನಂದರು ಹೇಗೆ ಸತ್ತರೆಂಬ ಗೂಢವು ಇನ್ನೂ ಜನರಿಗೆ ಗೊತ್ತಿಲ್ಲ. ಶ್ರದ್ಧಾನಂದರಿಗೆ ಅಸ್ಪೃಶ್ಯರ ಪ್ರೇಮವಿತ್ತೆಂದು ಅಸ್ಪೃಶ್ಯರೊಡನೆ ಕೂತ ಊಟ ಮಾಡಬೇಕೆಂದು ಕೆಲವರು ಬೊಬ್ಬಿರಿದರು. ಇದು ಶ್ರದ್ಧಾನಂದರ ಆತ್ಮಕ್ಕೆ ಶಾಂತಿ ಕೊಡುವದೆಂದು ಅವರ ಮತ. ನನ್ನ ತಂದೆಗೆ ಸಂಯಮವಿಲ್ಲ ಕ್ಕೆ ತಿ ಬರ ಕೊಡಬೇಕೆಂಬ ವೈದ್ಯರ ಅಭಿಪ್ರಾಯವಿತ್ತು. ಅದು ಕೊಡುವ ಮುಂಚೆ ಆತನು ತೀರಿಹೋದನು. ಯಾವದಾದರೂ ಬ್ರಾಹ್ಮಣನಿಗೆ ಧನ-ದಕ್ಷಿಣೆಯೊಡನೆ ಈ ಬರೆ ಕೊಡುವ ದಕ್ಷಿಣೆ ಕೊಡ್ಲು ಹೇಳಿದರೆ ಯಾರೂ ಒಪ್ಪುವದಿಲ್ಲ. ಶಿವಾಜಿಗಳಿಗೆ ಬಟಾಟೆ ತಿನ್ನುವ ಅಭ್ಯಾಸವಿತ್ತೆಂದು ಹೇಳಿದರೆ ಅದಕ್ಕೆ ಎಲ್ಲರೂ ಒಪ್ಪುತ್ತಾರೆ, ಮತ್ತು ಬಟಾಟೆ ತಿನ್ನಲಿಕ್ಕೆ ಹತ್ತುತ್ತಾರೆ. ಆದರೆ ಅವರು ಕೈಕೊಂಡ ದೇಶಕಾರ್ಯವನ್ನು ಅದರ ಕಷ್ಟಗಳಿಂದ ನಡಿಸಲಿಕ್ಕೆ ಯಾರೂ ಒಪ್ಪುವದಿಲ್ಲ. ದೊಡ್ಡ ದೊಡ್ಡ ವ್ಯಾಖ್ಯಾತರು ವ್ಯಾಖ್ಯಾನ ಕೊಡುತ್ತಾರೆ. "ಸ್ವರಾಜ್ಯ ಗಳಿಸುವಾಗ ತಾಯಿ-ತಂದೆಗಳು ಅಡ್ಡ ಬಂದರೆ ಅವರಿಗೆ ಕೊಲ್ಲುವೆನು, ಆಳು ಬಂದರೆ ಕತ್ತರಿಸಿಬಿಡುವೆನು" ಮುಂತಾದ ಉತ್ತರದ ಮಾತಿನ ವೀರೋಕ್ತಿ ಬಡಬಡಿಸುತ್ತಾರೆ. ಆದರೆ, ಸಾಧಾರಣ ಒಬ್ಬ ಒಳ್ಳೇ ಸಾಹೇಬನು ಅಡ್ಡ ಬಂದರೆ ಓಡಿಹೋಗುತ್ತಾನೆ. ಅಂದ ಮೇಲೆ ಪ್ರಯೋಜನವೇನು? ಮೊದಲು ಸಮಾಜವನ್ನು ತಯಾರ ಮಾಡಬೇಕು. ಬಾರ್ಡೋಲಿಯು ಮುಹೂರ್ತದ ಮೊದಲಿನ ಕಾಯಿ ಬೆಳಗವು ಹೀಗಾಗಿ ನೋಡಿ ಸಮಾಜದ ಕಣ್ಣು ಬಿಟ್ಟರೆ ಮುಂದಾದರೂ ಹೆಜ್ಜೆ ಇಡಬೇಕು. मुलाच्या बोलणे बोलावे । मुलाच्या चालीने चालावे । ಹೀಗೆ ಶ್ರೀ ಸಮರ್ಥರು ಹೇಳುವಂತೆ ನಾವು ಎಲ್ಲರೊಡನೆ ನಡೆಯಬೇಕು. ಮೊಟಾರಿಗೆ ಹಿಂದೆ ಹೋರಿನ್ನು ಕಟ್ಟಿ ಅದರಂತೆ ಗಾಡಿ ಓಡಬೇಕೆಂದು ನಡಿಸಹೋದರೆ ಅನರ್ಥವಾಗಿ ಎತ್ತು ಸತ್ತು ಹೋದೀತು. ಯಾರೊಬ್ಬನ ಉಚ್ಚ ವಿಚಾರಗಳು ಇಡೀ ಸಮಾಜದ ಕೆಳ ವರ್ಗಕ್ಕೆ ಬರದೆ ಉಳಿಯಬಹುದು. ವೃತ್ತಪತ್ರದಲ್ಲಿ ಸಮಾಜದ ಹಲವು ತೀವ್ರ ತೀಕ್ಷ್ಣ ವಿಚಾರಗಳನ್ನು ಸಂಪಾದಕರು ಚರ್ಚಿಸುತ್ತಿರುತ್ತಾರೆ.

***

ಪ್ರತಿಯೊಂದು ಊರಲ್ಲಿ ಬಹುಶಃ ಎರಡು ತಂಗಡಗಳಿರುತ್ತವೆ. ನಾನು ಒಂದು ಊರಿಗೆ ಹೋದಾಗ ಅಲ್ಲಿಯ ಜಗಳದಲ್ಲಿ ಎರಡು ಪಕ್ಷಗಳಿದ್ದವು. ಒಂದು ಪಕ್ಷದ ಜನರು ಎಂದಾದರೇ ಪಕ್ಷವು ಭಡಸುವ ದೇವಾಲಯಕ್ಕೆ ಬರುತ್ತಿದ್ದಿಲ್ಲ. ಬೇರಾಯದ ಮೇಲೆ ಪಕ್ಷದ್ವೇಷವೇಕೆ? ಅನ್ಯಾಯದ ಪರವಾನಿಗಿಯನ್ನು ನ ಪಕ್ಷಭೇದದಿಂದ ಒಮ್ಮೊಮ್ಮೆ ಮಾಡುತ್ತೇವೆ. ಹಾದಮೇಲಿನವಲ್ಲಿ ಐಕ್ಯ ಹೇಗೆ ನೆಲೆಗೊಳ್ಳುವದು. ಒಂದು ಕುಟುಂಬದಲ್ಲಿ ಸಹ ನಮಗೆ ಐಕ್ಯ ನೆಲೆಸಿಕೊಡಲಿಕ್ಕೆ ಬರುವದಿಲ್ಲ. ಕರ್ನಾಟಕ ಪ್ರಾಂತದಲ್ಲಿ ನಾನು ತಿರುಗಾಡ ಹೋಗಿದ್ದೆ. ಒಬ್ಬ ಗೃಹಸ್ಥನ ಮನೆಯಲ್ಲಿ ನಾನು ಉಳಕೊಂಡಿದ್ದೆನು. ಅದೇ ದಿವಸ ಸಂಜೆಗೆ ಒಂದು ಜಾಹೀರ ಸಭೆಯಿತ್ತು. ಸಭೆಯಲ್ಲಿ ಚರ್ಚೆಗೆ ಬರುವ ವಿಷಯವು "ಸಾಮಾಜಿಕ ಸಂಘಟನೆ, ಹಿಂದೂ ಸಮಾಜದ ಐಕ್ಯ" ಈ ಎರಡು ಪ್ರಶ್ನೆಯಿಂದ ಕೂಡಿತ್ತು. ಅದೇ ಗೃಹಸ್ಥನು ಸಭಾಧ್ಯಕ್ಷನಾಗಬೇಕಾಗಿದ್ದನು. ಆ ಗೃಹಸ್ಥನ ಹೆಂಡತಿಗೂ, ಆತನಿಗೂ ಗೃಹಕಲಹವಾಯಿತು. ಹೆಂಡತಿಯು ಉಚ್ಚ ಸ್ವರದಿಂದ ವಾಗ್ವಾದ ಮಾಡಲಿಕ್ಕೆ ಹತ್ತಿದಳು. ನನಗೆ ಕೇಳದಂತೆ ಆತನು ತನ್ನ ಹೆಂಡತಿಗೆ ಸಾವಕಾಶ ಮಾತಾಡಲಿಕ್ಕೆ ಹೇಳಿದನು. "ನಿಮ್ಮ ಅತಿಥಿಗಳು ನಿಮಗೆ ಶ್ರೇಷ್ಠರು" ಎಂತ ಹೆಂಡತಿಯು ತಾರಸ್ವರ ತೆಗೆದಳು. ಒದರಾಟಗಳು ಬಂದವು. ನಾನು ಇದನ್ನೆಲ್ಲ ಕೇಳಿದೆನು. ಸಂಜೆಗೆ ಸಭೆಗೆ ಬರವದಿಲ್ಲವಾಗಿ ನಾನು ಆ ಗೃಹಸ್ಥನಿಗೆ ಹೇಳಿದೆನು. ಕಾರಣ ಕೇಳಲು ನಮಗೆ ಮನೆಯಲ್ಲಿ ಹೆಂಡತಿಯೊಡನೆ ಐಕ್ಯದಿಂದಿರಲಿಕ್ಕೆ ಆಗದು. ಹಿಂದೂ-ಮುಸಲ್ಮಾನರ ಐಕ್ಯ ಹೇಗೆ ಸಾಧ್ಯವಾಗಬಲ್ಲದ? ಎಂತ ನಾನು ಸವಾಲು ಕೊಟ್ಟೆನು. ತಮ್ಮ ಜಗಳವು ನನಗೆ ತಿಳಿಯಿತೆಂದು ಅವನು ಬಹಳ ಬೇಸರಪಟ್ಟನು. ಇರಲಿ. ನನ್ನ ವ್ಯಾಖ್ಯಾನವು ಇಂದಿಗೆ ಮುಗಿಯಿತು. ಧರ್ಮಗ್ರಂಥ ಪರಿಶೀಲನೆಯನ್ನು ಹೇಗೆ ಮಾಡಬೇಕೆಂಬದನ್ನು ನಾನು ನನ್ನ ದಾಸನಾಗಿ ನಮ್ಮ ಧರ್ಮದೊಡನೆ ಹೇಳಿದ್ದೇನೆ. ಪ್ರತಿಯೊಬ್ಬರು ಹಾಗೆ ನಡೆದರೆ ಅನೇಕ ಅಸಾಧ್ಯವಾದ ಗೋಷ್ಟಿಗಳು ಸಾಧ್ಯವಾಗುವವೆಂದು ಹೇಳಿ, ಶ್ರೋತೃವೃಂದದ ಉಪಕಾರ ಮನ್ನಿಸುತ್ತೇನೆ.

— ರಾಯಚೂರ ಜಿಲ್ಲೆಯಲ್ಲಿ ಹತ್ತು ಸಾವಿರ ಏ ಕೆರೆ ತೋಡಿಸುವದಕ್ಕಾಗಿ ೧೦ ಲಕ್ಷ ರೂಪಾಯಿಗಳು ಮಂಜೂರಾಗಿವೆ.

— ಗೋಕಾವಿ ತಾಲೂಕಿನೊಳಗಿನ ಸಿಗಸಾಪೂರ ಕೋಳ್ಸೂರ, ಅವಟ್ಟಿ ಮುಂತಾದ ಗ್ರಾಮಗಳೊಳಗಿನ ಬಾವಿಗಳು ಪಂಚಾಯಿ ಕಾಲುವೆಗಳ ನೆರೆಹೊರೆಯಲ್ಲಿವೆ, ಅದರಿಂದ ಅವಕ್ಕೆ ನೀರಿನ ಸೆಲೆಗಳು ಸಿಗುತ್ತವೆ. ಈ ಬಗ್ಗೆ ಬಾವಿಯು ಮಾಲೀಕರ ಮೇಲೆ ಸರಕಾರವು ಕರ ಹೇರುವ ವಿಚಾರದಲ್ಲಿದೆ.

ಜಾಹೀರಾತು.

ಇದೇ ತಾ ೧೧ ನೇ ಯಿಂದ ನಾವು ಕುಮಟಾ ಶಹರದಲ್ಲಿ ಮುಕ್ಕಾಂ ಮಾಡಿದ್ದು, ನಾವು ಜ್ಯೋತಿಷ, ಸಶಾಸ್ತ್ರ ಜಾತಕ ತಯಾರಿಸುವದು, ಭವಿಷ್ಯ ಫಲ ಭವಿಷ್ಯ, ಪ್ರಶ್ನೆ ಮುಂತಾದ ಪೂರ್ವಾಪರ ವಿಚಾರ ಹೇಳುವದು ಹಾಗು ಮಂತ್ರವಾದಿ ಕೆಲಸಗಳನ್ನು ಯೋಗ್ಯ ರೀತಿ ಮಾಡಿಕೊಡುತ್ತೇವೆ. ನಮ್ಮ ಮುಕ್ಕಾಂ ಇಲ್ಲಿ ಸ್ವಲ್ಪ ಕಾಲವಿರುವದರಿಂದ ಬೇಕಾದವರ ಅವಶ್ಯ ಲಾಭ ಹೊಂದಿ ಖಾತ್ರಿ ಮಾಡಿಕೊಳ್ಳಬೇಕು.

ತಾ ೧೨-೮-೧೯೨೮.

ಪತ್ತೆ – ಕೃಷ್ಣ ಜ್ಯೋತಿಷಿ,
ಶ್ರೀ ವೆಂಕಟರಮಣ ದೇವಸ್ಥಾನದ ಹತ್ತಿರ,
ಕುಮಟಾ (ಉ. ಕ.)

ವಿವಿಧ ಸಂಗ್ರಹ.

ಮನುಷ್ಯನ ಹೊಟ್ಟೆಯಲ್ಲಿ ಮಂಗ!

ಮಂಟುಯಿಯ ನೇಪಿಯನ್ ಸೀರೋಕದ ಕೇರಿಯಲ್ಲಿರುವ ಪನಿಗೆಯ ಹೆಂಡತಿಯು ಕಳೆದ ತಿಂಗಳವಾರಕ್ಕೆ ಪ್ರಸೂತಳಾಗಿ ಮಂಗನ ಮರಿಗೆ ಜನ್ಮ ಕೊಟ್ಟಳು. ಮಂಗನಮರಿ ಜೀವಂತವಿತ್ತು. ಅದನ್ನು ಕೂಡಲೆ ಕೊಂಡು ಪೋಲೀಸ ಚೌಕಿಗೆ ಒಯ್ದರು. ತಾಯಿಯು ಕ್ಷೇಮದಿಂದ ಇದ್ದಾಳೆ.

* * *

ಉಪಾಸನಿ ಮಹಾರಾಜರ ಅದ್ಭುತ ಚಮತ್ಕಾರಗಳು!

ಸದ್ಯಕ್ಕೆ ಮುಂಬಯಿಯಲ್ಲಿ ಶ್ರೀ ಉಪಾಸನಿ ಮಹಾರಾಜರಿದ್ದಾರೆ. ಇವರು ವಯೋವೃದ್ಧ ಸನ್ಯಾಸಿಗಳು. ಅದ್ಭುತ ಚಮತ್ಕಾರ ಮಾಡುತ್ತಾರೆ. ಕೆಲವರಿಂದ ಭಕ್ತಿಭಾವದಿಂದ ಅವರಿಗೆ ಪೂಜೆಯೂ ಆಗುತ್ತದೆ. 'ಕ್ರಾನಿಕಲ್' ಎಂಬ ಹೆಸರಿನ ಮುಂಬಯಿಯ ಹೆಸರಾದ ಪತ್ರಿಕೆಯಲ್ಲಿ ಉಪಾಸನಿ ಮಹಾರಾಜರ ಅದ್ಭುತಗಳನ್ನು ವಿವರಿಸಿದ್ದಾರೆ. ಬಂಗಾಲ ಪ್ರಾಂತದ ಖಡ್ಗಪುರದಲ್ಲಿ ಉಪಾಸನಿ ಮಹಾರಾಜರ ಸ್ವಾರಿ ಇತ್ತು. ಮಹಾರಾಜರು ಉಟ್ಟುಕೊಳ್ಳುವದಿಲ್ಲ; ದಿಗಂಬರರಾಗಿರುತ್ತಾರೆ. ಈ ಸುದ್ದಿಯನ್ನು ಅಲ್ಲಿಯ ಜನರು ಪೋಲೀಸರಿಗೆ ತಿಳಿಸಿ, ಈ ಅವರಿಂದ ಜನಗಳು ನೀತಿಭ್ರಷ್ಟರಾಗುವರೆಂದು ಪೋಲೀಸ ಸುಪರಿಂಟೆಂಡೆಂಟರಿಗೆ ತಕರಾರಿಗುದ್ಯುಕ್ತರಾದರು. ಒಂದು ದಿನ ಮಹಾರಾಜರು ಭಕ್ತರಿಗೆ ಅನ್ನಸಂತರ್ಪಣೆ ಮಾಡುತ್ತಿದ್ದರು. ಸಂತರ್ಪಣೆಗಾಗಿ ದೊಡ್ಡ ಮಂಟಪ ರಚನೆಯಾಗಿತ್ತು. ಉಪಾಸನಿ ಮಹಾರಾಜರು ಮಧ್ಯ ಭಾಗದಲ್ಲಿ ಕುಳಿತುಕೊಂಡಿದ್ದರು. ಥಟ್ಟನೆ ಮಹಾರಾಜರಿಗೆ ಏನು ತೋರಿತೋ ಏನೋ! "ಈಗ ಒಂದು ಚಮತ್ಕಾರವಾಗುವದು!" ಎಂದು ಉದ್ಗರಿಸಿದರು. ಕೂಡಲೆ ಮಿದಾಪುರದ ಪೋಲೀಸ ಸುಪರಿಂಟೆಂಡೆಂಟರು ಮಂಟಪದಲ್ಲಿ ಬಂದು ನಿಂತರು. ಒಡನೆ ಅಲ್ಲಿ ಪೋಲೀಸ ಅಧಿಕಾರಿಗಳು, ಜೊತೆಗೆ ಫಿರ್ಯಾದಿ ಹೇಳಿದವರೂ ಇದ್ದರು. ಸುಪರಿಂಟೆಂಡೆಂಟರು ಮಹಾರಾಜರಿಗೆ ದಿಟ್ಟಿಸಿ ನೋಡಿ, ಫಿರ್ಯಾದಿಗಳನ್ನುದ್ದೇಶಿಸಿ ನುಡಿದದ್ದೇನಂದರೆ — "ಮಹಾರಾಜರು ನಮ್ಮಂತೆ ಉಟ್ಟು-ತೊಟ್ಟುಕೊಂಡಿದ್ದಾರೆ. ಅವರಿಗೆ ನೋಡಿದೊಡನೆ ಮಹಾತ್ಮರೆಂಬ ಪೂಜ್ಯಭಾವವು ನನ್ನಲ್ಲಿ ಹುಟ್ಟುತ್ತದೆ, ಅವರಿಗೆ ಏನು ತೊಂದರೆಯೂ ಇಲ್ಲ, ಅಗೋ ನೋಡಿ, ನಾನವರಿಗೆ ವಂದಿಸುತ್ತೇನೆ." ಈಗ ಆ ಸುಪರಿಂಟೆಂಡೆಂಟರು ಮಹಾರಾಜರಿಗೆ ಭೆಟ್ಟಿಯಾಗಿ ವಂದಿಸುತ್ತಿರುತ್ತಾರೆ. ಒಮ್ಮೆ ಒಬ್ಬ ಭಕ್ತನು ಭಾಗೀರಥಿ ನದಿಯ ನೀರು ತಂದಿದ್ದನು, ಮಹಾರಾಜರಿಗೆ ಅಭಿಷೇಕ ಮಾಡಲು ಅಪ್ಪಣೆ ಕೇಳಲು, ಮಹಾರಾಜರು ಒಪ್ಪಲಿಲ್ಲ. ಆತನು ಹಠದಿಂದ ಹೇಳಿಕೊಂಡನು, ಆಗ ಮಹಾರಾಜರು ಒಪ್ಪಿದರು. ಭಕ್ತನು ತಂಬಿಗೆಯೊಳಗಿಂದ ನೀರನ್ನು ಹೊಯ್ಯಹತ್ತಲು ಅದರಲ್ಲಿ ಕೊಳಚೆ ನೀರಾಗಿತ್ತು. "ಕೊಳಚೆ ನೀರನ್ನು ನನ್ನ ತಲೆಯ ಮೇಲೆ ಯಾಕೆ ಹಾಕಿದಿ?" ಎಂದು ಮಹಾರಾಜರು ಗದರಿಸಿದರು. ಭಕ್ತನು ಉಸುರೆತ್ತಲಿಲ್ಲ, "ಹರೋ ಗಂಗೋದಕ ತಂದಿದ್ದೆ" ಎಂದು ಆತನು ಗುಣುಗುಟ್ಟಿದನು. ಬಳಿಕ, ಮಹಾರಾಜರು ಬಳಿಯಲ್ಲಿದ್ದ ಕಾಲುವೆಯೊಳಗಿನ ಕೊಳಚೆ ನೀರನ್ನು ತಂದು ತನಗೆ ಅಭಿಷೇಕ ಮಾಡಲು ಹೇಳಿದರು, ಮಹಾರಾಜರಿಗೆ ಆ ನೀರಿನ ಅಭಿಷೇಕ ಮಾಡಲಾಯಿತು. ಅದಲ್ಲ ಸ್ವಚ್ಛವಾದಂತೆ ನಿರ್ಮಲವಿತ್ತು. ಒಮ್ಮೆ ಮಹಾರಾಜರು ಪ್ರವಚನ ಹೇಳುತ್ತಿದ್ದರು. ರಾತ್ರಿ ೧೧ ಘಂಟೆಯಾಯಿತು. ಕೂಡಿದ ಜನರಿಗೆ ಹೋಗಬೇಕಾದರೂ ತಡವಾಗಿ ಆ ಚಮತ್ಕಾರಗಳನ್ನು ಕಲ್ಪಿಸಲಿಕ್ಕೆ ಅವರು ಹೇಳಿದರು, ಅದನ್ನು ನಾವು ಊಹಿಸಿಕೊಳ್ಳುವದಾಗಿಯೂ ಹೇಳಿದರ ಮಾರನೇ ದಿನ ಬೆಳಿಗ್ಗೆ ನಾಗಪುರದಿಂದ ಒಂದು ತಂತಿ — "ವೆ ಮಹಾರಾಜರು ನಮ್ಮಲ್ಲಿ ಇಂದಿದ್ದಾರಾಗಿ" ತಂತಿ ಬಂತು, ಎಲ್ಲರೂ ಚಕಿತರಾದರು! ಅಷ್ಟು ದೂರ, ಅಷ್ಟು ಸಮಯದಲ್ಲಿ ಹ್ಯಾಗೆ ಹೋಗಲು ಅನುಕೂಲವಿದ್ದಿಲ್ಲ. ಮಹಾರಾಜರ ಜೀವನಕ್ರಮವು ಪವಿತ್ರವಿದೆ. ಅವರು ಎಲ್ಲರನ್ನೂ ಪವಿತ್ರವಾಗಿ ನಡಿಸಿಕೊಳ್ಳುತ್ತಾರೆ. ಸಿದ್ಧಪುರುಷರು ಜಾದು-ಕೃತ್ರಿಮಧಾರಿ ಪತ್ರಿಕೆಗಳ ಬಾಧೆಯು ಅವರಿಗಿಲ್ಲ.

* * *

ಶ್ರೀ ಕೃಷ್ಣ ಪರಮಾತ್ಮನ ಅದ್ಭುತ ಲೀಲೆ.

ಜೋಧಪುರದಲ್ಲಿ ಒಬ್ಬ ೯ ವರ್ಷ ಪ್ರಾಯದ ಹುಡುಗಿಯು ಮೈಮರೆತು ಶ್ರೀ ಕೃಷ್ಣ ಪರಮಾತ್ಮನ ಗಹನ ವೇದಾಂತವನ್ನು ಬೋಧಿಸುತ್ತಾಳೆ. ಸಾವಿರಾರು ಜನರು ಈ ಪ್ರವಚನ ಕೇಳಲು ಸೇರುತ್ತಾರೆ. ಥಟ್ಟನೆ ಈ ಹುಡುಗಿಗೆ ಎಚ್ಚರತಪ್ಪುತದೆ. ಆ ಸಮಯ ಮೇಲೆ ದಿವ್ಯ ತೇಜವು ಕಾಣಿಸುತ್ತದೆ. ಹಾಗೆಯೇ ಅವಳು ಶ್ರೀ ಕೃಷ್ಣ ಪರಮಾತ್ಮನೇ ತಾನೆಂಬಂತೆ ಪ್ರವಚನ ಮಾಡುತ್ತಾಳೆ. ಎಂಥ ಗಹನ ವೇದಾಂತ ಪ್ರಶ್ನೆ ಕೇಳಿದರೂ, ಸಮರ್ಪಕ ಉತ್ತರ ಕೊಡುತ್ತಾಳೆ. ಮಧ್ಯದಲ್ಲಿ ಅತ್ಯಂತ ಚಿತ್ತವೇಧಕವಾದ ಕೊಳಲ ಧ್ವನಿಯಂದ ಹಾಡುತ್ತಾಳೆ. ಒಂದು ತಾಸು ಈ ಸಂಚಾರವಾಗುತ್ತದೆ, ಪುನಃ ಅವಳ ಸ್ಮೃತಿಗೆ ಬರುತ್ತಾಳೆ. ಹೀಗೆ ದಿನಾ ಹಲವು ಬಾರಿ ಅವಳು ಸ್ಮೃತಿ ತಪ್ಪಿ ಶ್ರೀ ಕೃಷ್ಣ ಪರಮಾತ್ಮನ ಲೀಲೆಗಳನ್ನು ಪ್ರದರ್ಶಿಸುತ್ತಾಳೆ. ಅನೇಕ ಯೋಗಿಗಳ ಕಡೆ ಇವಳಿಗೆ ಒಯ್ದು ತೋರಿಸಲಾಯಿತು. ಅವರಿಗ್ಯಾರಿಗೂ ಇದರ ಗುಟ್ಟು ತಿಳಿಯಲಿಲ್ಲ.

* * *

ಹಾಲು ಶ್ರೇಷ್ಠ ಆಹಾರವು

ಮಾಂಸಾಹಾರಿಗಳು ಆತ್ಮಸಮರ್ಥನೆ ಮಾಡುವಾಗ, ಹಾಲ ಬೆಳೆಯ ರಕ್ತದ ಒಂದು ರೂಪವೆಂದು ಪ್ರತಿಪಾದಿಸುತ್ತಾರೆ. ಅಮೃತಧಾರೆಯ ವಿಷಯಾಸಕ್ತ ಡಾಕ್ಟರ ವೈದ್ಯರವರು ಹಾಲಿನ ಘಟನೆಯನ್ನು ನಿರಾಕರಿಸಿದ್ದಾರೆ. ಹಾಲು ರಕ್ತಾಂಶವಾದರೆ ದಿನಾ ಹಾಲು ಹಿಂಡುವ ಆಕಳು ವೈದ್ಯಶಾಸ್ತ್ರದಂತೆ ಅಷ್ಟು ಹಾಲು ಹಿಂಡಿ ಬದುಕಲಾರದು. ಆಯುರ್ವೇದ ಶಾಸ್ತ್ರದಂತೆ ಹಾಲೆಂದರೆ ರಸವು ಪಶುಗಳು ತಿನ್ನುವ ವನಸ್ಪತಿಗಳಿಂದ ಉಂಟಾಗುವ ರಸವು; ವಿಶೇಷ ಮಾಂಸವು ವನಸ್ಪತಿ ತಿನ್ನುವ ಪಶುಗಳ ಹಾಲಿಗೆ ಬಂದ. ಆದರೆ ಮಾಂಸ ತಿನ್ನುವ ಕಾರಣವಾದರೂ ಅವೇ. ಹಾಲು ಪೂರ್ಣ ಆಹಾರವು. ಮಾನವನ ಪೋಷಣೆಗೆ ಆವಶ್ಯಕವಾದ ಸಮಸ್ತ ದ್ರವ್ಯಗಳು ಹಾಲಿನಲ್ಲಿರುವವಾಗಿವೆ. ಮಾಂಸಾಹಾರವು ಕೃತ್ರಿಮ ಆಹಾರವು. ಮಾಂಸ, ಮೀನು, ಕತ್ತಿ ಇವನ್ನು ಮಾನವನು ಸ್ವಾಭಾವಿಕವಾಗಿ ತಿನ್ನುವವನಲ್ಲ. ಕೈವಿಲ್ಲ ಕಾಲೇಜಿನ ಡಾಕ್ಟರ ವೈದ್ಯರು ಒಂದು ಉದಾಹರಣೆ ಕೊಟ್ಟಿದ್ದಾರೆ. ಹುಲಿ, ಬೆಕ್ಕು, ನಾಯಿ ಮುಂತಾದ ಮಾಂಸ ತಿನ್ನುವ ಜಾನುವಾರುಗಳು ನೀರು ಕುಡಿಯುವಾಗ ನಾಲಿಗೆಯಿಂದ ನೆಕ್ಕುತ್ತವೆ, ಆಕಳು ಮುಂತಾದ ವನಸ್ಪತ್ಯಾಹಾರಿ ಪ್ರಾಣಿಗಳು ಬಾಯಿಂದ ನೀರು ಕುಡಿಯುತ್ತವೆ. ಮಾನವನು ನಾಲಿಗೆಯಿಂದ ನೆಕ್ಕಿ ನೀರು ಕುಡಿಯುವದಿಲ್ಲ, ವನಸ್ಪತ್ಯಾಹಾರಿ ಪ್ರಾಣಿಗಳಂತೆ ಬಾಯಿಂದ ಕುಡಿಯುತ್ತಾನೆ. ಇದರ ಮೇಲಿಂದ ಮಾನವನ ಸಹಜ ಆಹಾರವು ವನಸ್ಪತಿಯೆಂದು ತಿಳಿಯುವದಾಗಿದೆ. ವನಸ್ಪತ್ಯಾಹಾರಿಗಳಿಗೆ ರೋಗಬಾಧೆಯು ಕಡಿಮೆ, ಚೈತನ್ಯವು ಹೆಚ್ಚು. ಒಮ್ಮೆ ರಾಕಫೆಲರದತ್ತ ಡಾಕ್ಟರ ವೈದ್ಯರು ಲಂಡನಿನಲ್ಲಿ ಸಭೆ ಸೇರಿದಾಗ ವನಸ್ಪತ್ಯಾಹಾರಿಗಳಿಗೆ ಅನ್ನ ಕಸುಂಗ್ಯೆ ಹಿಡಿಯಲು ಆಹ್ವಾನ ಮಾಡಿದರಾಗಿಯೂ, ಧಾರ್ಮಿಕ ಅದನ್ನು ಸ್ವೀಕರಿಸಲ್ಲವಾಗಿಯೂ ಬರೆಯುತ್ತಾರೆ.

ನೂಲುಹುಣ್ಣಿಮೆಯ ಹಬ್ಬ ಬಂತು!

ಭದ್ರ ಗ್ಯಾರಂಟಿಯ ಮೂಲ
ವೆಸ್ಟ ಎಂಡ್ ಗಡಿಯಾರಗಳನ್ನೇ ಕೊಳ್ಳಿರಿ!
ಕಾರಣವೇನಂದರೆ --
ನಿಮ್ಮ ಇಷ್ಟ ಮಿತ್ರರು ನಿಮ್ಮ ನೆನವನ್ನು ಪ್ರೀತಿಯಿಂದ ಮಾಡಬೇಕಾದರೆ, ನೀವು ಅವರಿಗೆ
" ವೆಸ್ಟ-ಎಂಡ್ " ಗಡಿಯಾರವನ್ನು ಕಾಣಿಕೆ ಕೊಡಿರಿ!
ನಿಮಗೆ ಸ್ವತಃ ಸರಿಯಾಗಿ ಹೊತ್ತು ತೋರಿಸುವ
ಉತ್ತಮ ಹಾಗು ಬಾಳಿಕೆಯ ಗಡಿಯಾರ ಬೇಕಾದಿದ್ದರೆ,
ವೆಸ್ಟ ಎಂಡ್ ಘಡಿಯಾರವನ್ನೇ ಕೊಳ್ಳಿರಿ!!

ಸಾವಿರಾರು ಕಡೆಯಲ್ಲಿ ಜಾಹೀರಾತು ಕೊಟ್ಟ ಕಡಿಮೆ ತರಗತಿಯ ಗಡಿಯಾರಗಳನ್ನು ಕೊಂಡು ಮೋಸ ಹೋಗಬೇಡಿ. ಆ ಗಡಿಯಾರಗಳೆಲ್ಲ ಬರೇ ಚಿಕ್ಕ ಮಕ್ಕಳ ಆಟಿಗೆಯ ಸಾಮಾನುಗಳಾಗಿವೆ! ನಿಮ್ಮ ಹಣವು ನಿರರ್ಥಕವಾಗುವದು!

ವೆಸ್ಟ ಎಂಡ್ " ಕೀಪ-ಟೈಮ್ "
ಕೀಲೆಸ್, ಲಿವ್ಹರ

ನಿಕಲ್ ಬೆಳ್ಳಿ	ರೂ	೩೦
ರೋಲ್ಡ್ ಗೋಲ್ಡ್	,,	೪೦
೯ ಕ್ಯಾರೆಟ ಭಂಗಾರದ್ದು	,,	೫೨
೧೮ ಕ್ಯಾರೆಟ ಭಂಗಾರದ್ದು	,,	೭೦

ಸರಿಯಾಗಿ ಹೊತ್ತು ತೋರಿಸುವಂಥವು



ಕ್ಯಾಟಲಾಗು ತರಿಸಿಕೊಳ್ಳಿ.

ವೆಸ್ಟ ಎಂಡ್ ವಾಚ್ ಕಂಪನಿ,
ಮುಂಬಯಿ. ಕಲಕತ್ತಾ.

ಕಾನಡಾ ವೃತ್ತ.

ಮಿತಿ ವಿಭವ ಸಂ| ಆ| ಶ್ರಾವಣ ಶು ೧೩, ಸೋಮವಾರ

ಮಂಗಳವಾಗಲಿ.

ಯತೋ ಧರ್ಮಸ್ತತೋ ಜಯಃ।

ಬಾರ್ದೋಲಿಯ ಸತ್ಯಾಗ್ರಹದಲ್ಲಿ ಸಂಧಾನವಾಯಿತೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಪ್ರಾಂತಾಧಿಪರಾದ ವಿಲ್ಸನ್ ದೊರೆಗಳೂ, ಮುಂಬಯಿ ಸರಕಾರದ ಪ್ರಮುಖ ಆಲೋಚಕರಾದ ಸರ್ ಚುನಿಲಾಲ ಮೇದಾರವರೂ ಬಾರ್ದೋಲಿಯೊಳಗಿನ ಯಥಾರ್ಥ ಸ್ಥಿತಿಯನ್ನು ಅರಿತುಕೊಂಡು ವಿವೇಕದಿಂದ ಒಪ್ಪಂದ ಮಾಡಿಕೊಳ್ಳಲು ಸಿದ್ಧರಾದ ಬಗ್ಗೆ ನಾವು ಅವರಿಗೆ ಮನಃಪೂರ್ವಕವಾಗಿ ಅಭಿನಂದಿಸುವೆವು. ಒಪ್ಪಂದವಾಗಬಾರದಾಗಿಯೂ, ಬಾರ್ದೋಲಿಯ ಬೇಸಾಯಗಾರರಿಗೆ ಸಾಮ್ರಾಜ್ಯ ಸರಕಾರದ ಪ್ರಚಂಡ ಶಕ್ತಿಯನ್ನು ತಿಳಿಸಿ ಅವರ ಟೊಂಕ ಮುರಿಯಬೇಕಾಗಿಯೂ ಕೆಳ ಅಧಿಕಾರಿಗಳು ದುರಭಿಮಾನಪ್ರೇರಿತರಾಗಿ ನಡಿಸಿದ ದುಷ್ಟ ಪ್ರಯತ್ನಗಳಲ್ಲಿ ವಿಲ್ಸನ ದೊರೆಗಳು ಬಲಿಬೀಳದೆ ನಿರ್ಮಲಚಿತ್ತದಿಂದ ಶ್ರೀ| ವಲ್ಲಭಭಾಯಿಯವರೊಡನೆ ಸಂಧಾನ ಮಾಡಿದ್ದನ್ನು ನೋಡಿ ನಮಗೆ ಹರುಷವಾಗುತ್ತದೆ

ಈ ಸಂಧಾನದಲ್ಲಿ ಯಾರು ಹಿಮ್ಮೆಟ್ಟಿದರೆಂದು ಯಾರೂ ಕೇಳಲೂ ಬಾರದು, ನಾವು ಹೇಳಲೂ ಬಾರದು. ಸಂಧಾನವೆಂದ ಕೂಡಲೆ ಹಿಮ್ಮೆಟ್ಟು-ಮುಮ್ಮೆಟ್ಟುಗಳ ಪ್ರಶ್ನೆಯೇ ಉಳಿಯಲಿಲ್ಲ. ಸ್ವಾಭಿಮಾನದಿಂದ ಈ ಸಂಧಾನವಾಯಿತೆಂಬ ಸಂಗತಿಯನ್ನಷ್ಟು ನಾವು ಹೇಳುವೆವು. ಈ ಸಂಧಾನ ಕರಾರುಗಳಂತೆ ಬಾರ್ದೋಲಿಯೊಳಗಿನ ತೀರ್ವೆ ತಿದ್ದುಪಡಿಯನ್ನು ಪರಾಂಬರಿಸಲು ಇಬ್ಬರ ಮಂಡಳವೊಂದು ನೇಮಿಸಲಾಗುವದು. ಒಬ್ಬರು ನ್ಯಾಯಾಧಿಕಾರಿಗಳು, ಎರಡನೆಯವರು ಮುಲ್ಕಿ ಖಾತೆಯವರು. ಇಬ್ಬರೂ ಸ್ಥಿತಿಯನ್ನು ಪರಾಂಬರಿಸಿ ತೀರ್ವೆ ಪರಿಕೆಯ ಅಥವಾ ಇಳಿಕೆಯ ಪ್ರಮಾಣವನ್ನು ನಿಶ್ಚಯಿಸುವರು. ಇಬ್ಬರೊಳಗೆ ಮತಭೇದವಾದರೆ ನ್ಯಾಯಾಧೀಶರ ಮತವೇ ಪ್ರಾಧಾನ್ಯವಾಗಿ ಎಣಿಸಲು ಸರಕಾರವು ಬದ್ಧವಿದೆ. ಪುರಾವೆ ಕೊಡಲು ಬೇಸಾಯಗಾರರಿಗೆ ಸಂಪೂರ್ಣ ಅನುಕೂಲತೆ ಕೊಡಲ್ಪಟ್ಟಿದೆ. ಈ ಪ್ರಕರಣದಲ್ಲಿ ಬೇಸಾಯಗಾರರು ವಕೀಲರ ಕಡೆಯಿಂದಲೂ ತಮ್ಮ ಅಂಬೋಣವನ್ನು ಪ್ರತಿಪಾದಿಸಬಹುದು. ಈ ವಿಚಾರದ ಅಧಿಕಾರಿಗಳ [illegible] ಪ್ರಕಟವಾಗದಿದ್ದರೂ, ಮಿ| ಡೇವ್ಹಿಸ್ ಹಾಗು ಮಿ| ಮೆಕ್ಕೇ ಎಂಬವರು ಈ ವಿಚಾರವನ್ನು ನಡಿಸುವರಂತೆ. ಮಿ| ಡೇವ್ಹಿಸ್‌ರವರಿಗೆ ಬಾರ್ದೋಲಿಯ ಬೇಸಾಯಗಾರರೇ ನೇಮಿಸಲು ಸರಕಾರಕ್ಕೆ ಈ ಹಿಂದೆಯೇ ಹೇಳಿದ್ದರು. ಇದರ ಮೇಲಿಂದ ಈ ಚೌಕಶಿಯು ನಿರ್ಮಲಚಿತ್ತದಿಂದಲೂ, ನಿಷ್ಪಕ್ಷಪಾತದಿಂದಲೂ ನಡೆಯುವದೆಂದು ಹೇಳಲಡ್ಡಿಯಿಲ್ಲ

ಸತ್ಯಾಗ್ರಹಿ ಕೈದಿಗಳಿಗೆ ಸರಕಾರವು ಬಿಡುಗಡೆ ಮಾಡಿದೆ. ಸತ್ಯಾಗ್ರಹಿಗಳಿಗೆ ನಾವು ಮನಃಪೂರ್ವಕವಾಗಿ ಅಭಿನಂದಿಸುವೆವು. ಇವರ ಬಂಧನದಿಂದಲೇ ಬಾರ್ದೋಲಿಯ ಪ್ರಶ್ನೆಯು ಬಿಡುಗಡೆ ಹೊಂದಿತು. ಇಂಥ ವೀರರೂ, ಸಾಹಸಿಗರೂ ಬಾರ್ದೋಲಿಯ ಬೇಸಾಯಗಾರರ ಸತ್ಪಕ್ಷವನ್ನು ಹೊತ್ತುಕೊಂಡ ಪರಾಕ್ರಮಪೂರ್ವಕವಾಗಿ ಕಾದಾಡಿದ್ದರಿಂದ ಅವರ ಉಗ್ರ ತೀರ್ವೆ ತಿದ್ದುಪಡಿಯನ್ನು ವಿಚಾರಿಸುವ ಸುಯೋಗವು ಬಾರ್ದೋಲಿಗೆ ಪ್ರಾಪ್ತವಾಗಿದೆ. ಸರಕಾರಜಪ್ತಾದ ಭೂಮಿಯೆಲ್ಲ ಮುಂಚಿನ ಮಾಲೀಕರಿಗೆ ಸಿಗುವದು. ಲಿಲಾಂವಾಗಿ ಹೋದ ಭೂಮಿಯನ್ನು ಸಹ ಕೂಡಲೆ ಮುಂಚಿನ ಮಾಲೀಕರಿಗೆ ಕೊಡಲ್ಪಡುವವು. ಪಟೇಲ-ತಲಾಟಿಗಳಿಗೆ ಪುನಃ ಕೆಲಸ ಕೊಡಲ್ಪಡುವದು. ಅವರ ರಾಜೀನಾಮೆಗಳನ್ನು ಸರಕಾರವು ಇನ್ನೂ ಮನ್ನಿಸದ್ದರಿಂದ ಈ ವಿಷಯ ಹೊಸ ಪಟ್ಟಿನ ವ್ಯವಸ್ಥೆಯಾಗುವ ಅವಶ್ಯಕತೆಯಿಲ್ಲ

ಬೇಸಾಯಗಾರರು ಮುಂಚಿನ ತೀರ್ವೆಯನ್ನು ವಚನದಂತೆ ತೆರುವರು. ಸರಕಾರವು ಮಧ್ಯಸ್ಥರಿಂದ ರಾ| ರಾಮಚಂದ್ರ ಭಟ್ಟರ ಕಡೆಯಿಂದ ಏರಿದ ತೀರ್ವೆಯನ್ನು ರೆವಾಗ ಬಿಟ್ಟುಕೊಳ್ಳುವ ಬಗ್ಗೆ ಲೆಂಡ ರಪ್ಪಿನ್ಸ್ಕೋಡಿನ ಶಾಸ್ತ್ರಾಧಾರವೂ ದೊರಕಿದೆ. ಮನಸ್ಸಿದ್ದ ಮೇಲೆ ಶಾಸ್ತ್ರಾಧಾರದ ಕೊರತೆ ಎಲ್ಲಿ? ಹೀಗೆ ಸಂಧಾನವಾಗಿದೆ. ಸತ್ಯಾಗ್ರಹದ ಕಾದಾಟದಲ್ಲಿ ಅಧಿಕಾರಿಗಳು ಪ್ರತ್ಯಕ್ಷಾಪ್ರತ್ಯಕ್ಷವಾಗಿ ಆಚರಿಸಿದ ಅನ್ಯಾಯ ಪರಂಪರೆಯ ಚೌಕಶಿ ಬೇಡವಾಗಿ ಶ್ರೀ| ವಲ್ಲಭಭಾಯಿಯವರೇ ಒಪ್ಪಿದರು "ಗತಂ ನ ಶೋಚಯೇತ್" ಎಂಬ ವಚನವನ್ನು ಲಾಲಿಸಿ, ಶ್ರೀ ವಲ್ಲಭಭಾಯಿಯವರು ಹಿಂದಿನ ಕಷ್ಟಗಳನ್ನೂ, ಪೀಡನೆಯನ್ನೂ ಪರಾಂಬರಿಸದ್ದಲ್ಲಿ ಇತ್ತಟ್ಟಿನಲ್ಲಿಯೂ ಖೇದ-ದ್ವೇಷಗಳೂ, ತಿರಸ್ಕಾರವೂ ತಲೆದೋರುತ್ತಿದ್ದವು. ಈ ವಿಚಾರ ಮಾಡಿ ಶ್ರೀ| ವಲ್ಲಭಭಾಯಿ ಪಟೇಲರೂ, ಮಹಾತ್ಮರೂ ಈ ಕರ್ತನ ಆಗ್ರಹ ಹಿಡಿಯಲಿಲ್ಲ. ಮಿಂತಿದಾಂರ ಜರ ಜಿಂದಿಗೆಯು ಜಪ್ತಿಯಾದಾಗ ತೀರ ಅಲ್ಪ ಬೆಲೆಗೆ ಮಾರಿ ಹೋಗಿತ್ತು. ಇದನ್ನು ವಿಚಾರಿಸಿ ಜೇಟಿಯ ದರವನ್ನು ಸರಕಾರವು ಆಯಾ ಜನರಿಗೆ ಭರಪಾಯಿ ಮಾಡಿ ಕೊಡಬೇಕಾಗಿ ಶ್ರೀ| ವಲ್ಲಭಭಾಯಿಯವರು ಹೇಳಿದ್ದರು. ವಿಶೇಷ ಹಾನಿಯಾದ ಸಂಗತಿಗಳಲ್ಲಿ ಸರಕಾರದ ಕೈನಿಲುಕುವ ಮಟ್ಟಿಗೆ ಬೇಸಾಯಗಾರರಿಗೊದಗಿದ ನಷ್ಟವನ್ನು ತುಂಬಿಕೊಡಬೇಕೆಂಬ ಸರಕಾರದ ಸತ್ಸಂಕಲ್ಪವಿದೆ. "ಸತ್ಸಂಕಲ್ಪಸ್ಯ ದಾತಾ ಭಗವಾನ್।" ಎಂಬ ಉಕ್ತಿಯಂತೆ ಸರಕಾರಕ್ಕೆ ಸದಿಚ್ಛೆಯು ಪ್ರಾಪ್ತವಾದರೆ, ಈ ನಷ್ಟವು ಕಾನಾಗಿ ತುಂಬಿಬಂದೀತು. ಮುಖ್ಯ ಫಲಪ್ರಾಪ್ತಿಯಾಗುವಾಗ, ಅವಾಂತರ ಸಂಗತಿಗಳ ಮೇಲೆ ಹಟ ಹಿಡಿಯಬಾರದೆಂದು ಮಹಾತ್ಮರೂ, ಶ್ರೀ| ವಲ್ಲಭಭಾಯಿಯವರೂ ಆಲೋಚಿಸಿ, ಭಾರತೀಯರ ಔದಾರ್ಯವನ್ನು ಜಗತ್ತಿಗೆ ಜಾಹೀರಪಡಿಸಿದ್ದಾರೆ. ಸರಕಾರವು ಸದ್ಬುದ್ಧಿ ತಳೆದರೆ, ಬೇಸಾಯಗಾರರಿಗೆ ಹಿತವಮಾಡಬಲ್ಲದು; ತನ್ನ ಮನಸ್ಸಿನ ಔದಾರ್ಯವನ್ನೂ ಪ್ರಕಟಿಸಬಲ್ಲದು. ಇರಲಿ

ಇನ್ನು ಬಾರ್ದೋಲಿಯೊಳಗಣ ಅನಾಚಾರ-ದುರಾಚಾರಗಳನ್ನೆಲ್ಲ ನಾವು ಮರೆತುಬಿಡುವ. ಬಾರ್ದೋಲಿಯ ಬೇಸಾಯಗಾರರ ಸಾತ್ವಿಕ ಕಾದಾಟವನ್ನೂ, ಶ್ರೀ| ವಲ್ಲಭಭಾಯಿ ಪಟೇಲರವರ ನಿಸ್ಪೃಹ ಜನಸೇವೆಯನ್ನೂ, ಸುರತ ಜಿಲ್ಹೆಯ ಕಲೆಕ್ಟರರಾದ ಮಿ ಗೆರೆಟ್ ಮೊದಲಾದ ಅಧಿಕಾರಿಗಳ ಸುವಿಚಾರವನ್ನೂ, ಸರ್ ಚುನಿಲಾಲ ಮೇಧಾ ಹಾಗು ಪ್ರಾಂತಾಧಿಪರ ವಿವೇಕವನ್ನೂ, ಪ್ರಜಾಕ್ಷೇಮ ವಿಚಾರವನ್ನೂ ಸ್ಮರಿಸಿ, ವರಿಷ್ಠಾಧಿಕಾರಿಗಳಿಗೆ ಲೋಕಹಿತ ಮಾಡುವ ಬುದ್ಧಿಯಾಗಲೆಂದು ಪ್ರಾರ್ಥಿಸುವೆವು. ಮಹಾತ್ಮರು ಶ್ರೀ| ವಲ್ಲಭಭಾಯಿ ಪಟೇಲರವರಿಗೆ ಕಾಲಕಾಲಕ್ಕೆ ಅವಶ್ಯವುಳ್ಳ ಸಲಹೆಗಳನ್ನು ಕೊಟ್ಟದ್ದಲ್ಲದೆ, ಇಕ್ಕಟ್ಟಿನ ಸಂದರ್ಭದಲ್ಲಿ ಬಾರ್ದೋಲಿಗೆ ವಿಜಯಂಗೈದ ಬಗ್ಗೆ ಭಾರತೀಯರೆಲ್ಲರೂ ಋಣಿಯಾಗಿದ್ದಾರೆ. ಬಾರ್ದೋಲಿ ಸಮರಾಂಗಣದ ಪ್ರತ್ಯಕ್ಷ ಸೇನಾನಿಗಳಾದ ಸರದಾರ ವಲ್ಲಭಭಾಯಿ ಪಟೇಲರವರಿಗೆ ನಾವು ಮನಃಪೂರ್ವಕ ಅಭಿನಂದಿಸಿ, ಮಹಾತ್ಮರಿಗೆ ಇಂಥ ವಿಧೇಯ ಸತ್ಪುರುಷರು ಲೋಕಸೇವೆಗೆ ಪ್ರಾಪ್ತರಾಗಲೆಂದೂ ಪ್ರಾರ್ಥಿಸುವೆವು. ಬಾರ್ದೋಲಿಯ ಕಾದಾಟವನ್ನು ಧರ್ಮದಿಂದ ನಡಿಸಿ ವಿಜಯ ಹೊಂದಿ ಬೇಸಾಯಗಾರರು "ಯತೋ ಧರ್ಮಸ್ತತೋ ಜಯಃ।" ಎಂಬ ಶ್ರೀ ಕೃಷ್ಣ ಪರಮಾತ್ಮನ ಉಕ್ತಿಯನ್ನು ಧಾರ್ಮಿಕ ಪ್ರಜೆಗಳಿಗೆಲ್ಲ ಆಚಾರದಿಂದ ಬೋಧಿಸಿದ್ದಾರೆ. ಭಾರತೀಯರೆಲ್ಲರೂ ಬಾರ್ದೋಲಿಯ ಪ್ರಜೆಗಳನ್ನು ಅನುಕರಿಸಿದರೆ ಭರತಖಂಡದ ಉದ್ಧಾರವು ಶೀಘ್ರವೇ ಕೊನೆಗಾಣುವದು.

— ನಿಪ್ಪಾಣಿ ಮ್ಯುನಿಸಿಪಾಲಿಟಿಯವರು ತಮ್ಮ ಕ್ಷೇತ್ರಕ್ಕೆ ಸಾತೇ-ಪರಾಂಜಪೇ ಯೋಜನೆಯಂತೆ ಸಂಬಳ ಕೊಡಲು ನಿರ್ಧರಿಸಿದ್ದಾರೆ.

— ವಾಲ್ಮೀಕಿ ರಾಮಾಯಣದ ಪುನರ್ಮುದ್ರಣಕ್ಕಾಗಿ ಜಮಖಂಡಿಯ ರಾಣಿಯವರು ೧೨೦೦ ರೂಪಾಯಿ ದಾನ ಮಾಡಿದ್ದಾರೆ.

ಸ್ಫುಟ ಸೂಚನೆಗಳು.

೧. ಲೋಕಮಾನ್ಯರ ಪುಣ್ಯತಿಥಿಯ ವಾರದಲ್ಲಿ ಬಾಗಲಕೋಟೆಯೊಳಗೆ ಸೇರಿದ ಪರಿಷತ್ತುಗಳ ಸಂಕ್ಷಿಪ್ತ ಉಲ್ಲೇಖವನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿರುವೆವು. ಕರ್ನಾಟಕದೊಳಗಿನ ವಿವಿಧ ಚಳವಳಿಯ ಉತ್ಸವಗಳು ಅಲ್ಲಿ ನಡೆದು ಕರ್ನಾಟಕ ಭಾವನೆಯು ದೃಢಮೂಲವಾಗುತ್ತ ನಡೆದಿದೆಂದು ತಿಳಿಸಲು ಸಂತೋಷವಾಗುತ್ತದೆ. ಧ್ವಜಾರೋಹಣ, ವ್ಯಾಯಾಮ ಪೀಠದ ವಾರ್ಷಿಕ ಸಮಾರಂಭ, ರೈತರ ಪರಿಷತ್ತು, ಪತ್ರಿಕಾಕರ್ತರ ಪರಿಷತ್ತು; ವರ್ತಕರ ಪರಿಷತ್ತು ಮುಂತಾದ ಪರಿಷತ್ತುಗಳಲ್ಲಿ ಕರ್ನಾಟಕ ಪ್ರಾಂತದ ಉನ್ನತಿಯ ಚರ್ಚೆಯಾಗಿದೆ. ವ್ಯಾಯಾಮ ವಿದ್ಯಾಪೀಠ ಸ್ಥಾಪನೆಯಿಂದ ಕರ್ನಾಟಕಸ್ಥರಿಗೆ ದೃಢಕಾಯರಾಗಿ ಮಾಡಲು ಡಾ|| ಹರ್ಡೀಕರ ನಾರಾಯಣರಾಯರು ಸಂಕಲ್ಪಿಸಿದ್ದಾರೆ. ರೈತರ ಪರಿಷತ್ತಿನಲ್ಲಿ ಕರ್ನಾಟಕ ಪ್ರಾಂತದ ವಿಚಾರದಿಂದ ಔದ್ಯೋಗಿಕ ಉನ್ನತಿ ವ್ಯಾಪಾರೋನ್ನತಿಗಳ ವಿಚಾರವಾಗಿ ಅದಕ್ಕೆ ತಕ್ಕ ತೀರ್ಮಾನಗಳೂ ಆಗಿವೆ. ಧನಿಕರ ಬಂಡವಲವನ್ನು ಘಟಿಸುವ ಕುರಿತು ವರ್ತಕರ ಪರಿಷತ್ತು ವಿಶೇಷ ಕಟಾಕ್ಷವನ್ನಿಟ್ಟಿದೆ. ಸಾಧ್ಯದಲ್ಲಿ ಕಾಂಗ್ರೆಸ್ಸಿನವರೊ, ಧನಿಕರವರೋ ಎಂಬುದೊಂದು ವಾದವಿದ್ದಿತ್ತು, ವರ್ತಕ ಪರಿಷತ್ತು ಈ ವಾದವನ್ನು ಇತ್ಯರ್ಥಗೊಳಿಸಿದೆ. ವರ್ತಕ ಪರಿಷತ್ತಿನ ಅಧ್ಯಕ್ಷರಾದ ಶ್ರೀ|| ನಾಗಪ್ಪ ಅಬ್ದುಲ್‌ಪುರಕರರವರು ಕರ್ನಾಟಕದೊಳಗೆ ಖನಿಜ ಪದಾರ್ಥಗಳು ಹೇರಳ ದೊರೆಯುತ್ತವಾಗಿಯೂ ಅವನ್ನು ಕರ್ನಾಟಕಸ್ಥರು ಸರಿಯಾಗಿ ಉಪಯೋಗಿಸಿಕೊಂಡು ಕರ್ನಾಟಕದ ಸಂಪತ್ತನ್ನು ವೃದ್ಧಿ ಮಾಡಿಕೊಳ್ಳಬೇಕಾಗಿಯೂ ಸಭಿಕರಿಗೆ ಹೇಳಿದರು. ವ್ಯಾಯಾಮ ವಿದ್ಯಾಪೀಠದ ವಾರ್ಷಿಕ ಸಮಾರಂಭದ ಯಜಮಾನರಾದ ಶ್ರೀ|| ರಾಜಾ ಧನರಾಜಗಿರಜಿ ಬಹಾದ್ದೂರರವರು ದೃಢಕಾಯದ ಮಹಿಮೆಯನ್ನು ಚನ್ನಾಗಿ ತಿಳಿಸಿಹೇಳಿ, ಜನಸೇವಾಬುದ್ಧಿಯಿಂದ ಯುವಕರೆಲ್ಲರೂ ವ್ಯಾಯಾಮ ಮಾಡಿ, ಆತ್ಮೋದ್ಧಾರವನ್ನೂ, ಕರ್ನಾಟಕೋದ್ಧಾರವನ್ನೂ ಸಾಧಿಸಿಕೊಳ್ಳಬೇಕಾಗಿ ಉದ್ಗರಿಸಿದರು. ಹೀಗೆಲ್ಲ ಬಾಗಲಕೋಟೆಯೊಳಗೆ ಕರ್ನಾಟಕದ ಭಾವನೆಯು ಅಂಕುರಿಸಲು ಅವಶ್ಯವುಳ್ಳ ವಾತಾವರಣವು ಸಿದ್ಧಗೊಳಿಸಲಾಗಿದೆ. ಈಗಿನ ಕಾಲದಲ್ಲಿ ಪರಿಷತ್ತುಗಳಿಗಿಂತ ಮುಂದಾಳುಗಳು ನಡಿಸುವ ಪ್ರತ್ಯಕ್ಷ ಕಾರ್ಯವೇ ಮಹತ್ವದ್ದಾದ್ದರಿಂದ ಆ ಕಡೆ ಕರ್ನಾಟಕದ ಮುಂದಾಳುಗಳು ವಿಶೇಷ ಲಕ್ಷಗೊಟ್ಟು ದುಡಿಯುವರಾಗಿ ನಾವು ಕೋರುವೆವು.

೨. ಬೆಂಗಳೂರಿನೊಳಗಿನ ಸುದ್ದಿ ಕೇಳಿದರೆ, ಮನಸ್ಸು ತಲ್ಲಣಿಸುತ್ತದೆ. ಮಹಾರಾಜರ ದರ್ಬಾರಿನಲ್ಲಿ ಈ ಪ್ರಕಾರ ಅನರ್ಥವೊದಗುವದೆಂದು ಯಾರೂ ಯೋಚಿಸಿರಲಿಲ್ಲ. ಸುಲ್ತಾನಪೇಟೆಯ ಹಿಂದು ಮಿಡಲ್ ಸ್ಕೂಲಿನೊಳಗೆ ಶ್ರೀ ವಿಘ್ನೇಶ್ವರನ ಮಂಗಳ ಮೂರುತಿಯಿತ್ತು; ಆ ಮೂರುತಿಯನ್ನು ಸಿಂಗರಿಸಿ, ಚಿಕ್ಕದೊಂದು ಗೋಪುರ ಕಟ್ಟಿಸಿ ವಿದ್ಯಾರ್ಥಿಗಳು ಜೀರ್ಣೋದ್ಧಾರ ಮಾಡಿದರು. ಶಾಲೆಯ ಮುಖ್ಯಾಧ್ಯಾಪಕರು ಪರಧರ್ಮೀಯರಾದರೂ ಚಿಕ್ಕ ಮಕ್ಕಳಿಗೆ ಸಮಾಧಾನಕೊಳ್ಳಿಗರನ್ನು ಪೂರೈಸಿದರು. ಈ ಶಾಲೆಯ ಇದಿರಿಗೆ ಖಾನಬಹಾದ್ದೂರ ಅಬ್ಬಾಸಖಾನರವರ ಬಂಗಲೆಯಿದೆ. ಅವರಿಗೆ ಹಿಂದು ವಿದ್ಯಾರ್ಥಿಗಳ ಆನಂದ ನೋಡಲಾಗಲಿಲ್ಲ; ಮುಖ್ಯಾಧ್ಯಾಪಕರಿಗೆ ಹೆದರಿಸಿ ನೋಡಿದರು. ದಿವಾಣರಿಗೂ, ಖಾನಬಹಾದ್ದೂರರಿಗೂ ಬಲು ಸ್ನೇಹ. ಗುಪ್ತ ಆಲೋಚನೆ ಏನು ನಡೆಯಿತೋ ತಿಳಿಯಲಿಲ್ಲ. ಶಾಲಾ ಖಾತೆಯ ಮುಖ್ಯಾಧಿಕಾರಿಗಳಾದ ಹಿಂದು ಧರ್ಮದ ಶ್ರೀ|| ಸುಬ್ಬರಾಯರು ಶಾಲೆಗೆ ಹೋದರು; ನಿರೀಕ್ಷಣೆಗಾಗಿ ಹೋದರು; ದಿವಾಣರ ಚೋದನೆಯಿಂದಲೇ ಹೋಗಿರಬೇಕೆಂದು ಬಲ್ಲವರ ತರ್ಕ. ಹ್ಯಾಗೂ ಇರಲಿ. ಸುಬ್ಬರಾಯರು ಮಂಗಳ ಮೂರುತಿಯನ್ನು ನೋಡಿದರಂತೆ. ಸ್ಥಾನಭ್ರಷ್ಟ ಮಾಡಿ ಮೂರ್ತಿಯನ್ನು ಕೋಣೆಯಲ್ಲಿಟ್ಟು ಬೀಗ ಹಾಕಿಸಿದರಂತೆ. ಚಿಕ್ಕ ಮಕ್ಕಳು ದೈನ್ಯಗೊಂಡು ಮಂಗಳ ಮೂರ್ತಿಯನ್ನು ಸ್ಥಾನಭ್ರಷ್ಟ ಮಾಡಬಾರದಾಗಿ ಬೇಡಿಕೊಂಡರು, ಸರಗೊಡ್ಡಿ ಪ್ರಾರ್ಥಿಸಿಕೊಂಡರು; ಆದರೂ, ಸುಬ್ಬರಾಯರ ಮನ ಒಲಿಸಲಾಗಲಿಲ್ಲ. ಈ ಸುದ್ದಿಯು ವರ್ತಮಾನಪತ್ರಗಳಲ್ಲಿ ಪ್ರಕಟವಾಯಿತು, ಚರ್ಚೆಗೆ ಪ್ರಾರಂಭವಾಯಿತು. "ವೀರಕೇಸರಿ" ಕರ್ತರು ಸುಬ್ಬರಾಯರ ದರ್ಶನ ಪಡೆದು ಈ ವಿಷಯದ ಹಕೀಕತವನ್ನು ಕೇಳಿದರು. 'ಶಾಲೆಯಿಂದ ದೂರ ಖಾನಬಹಾದ್ದೂರರ ಮನೆ ಹಿಂಭಾಗದಲ್ಲಿ ಮಸೀದಿಯೊಂದಿದೆ. ಪೂಜೆಯ ಕಾಲಕ್ಕೆ ಶಂಖ-ಜಾಘಂಟೆ ಬಾರಿಸಿದರೆ, ಮುಂದೆ ಮುಸಲ್ಮಾನರಿಗೆ ನೋವಾಗುವ ಸಂಭವವಿದೆ,' ಎಂದು ನುಡಿದರು. "ವೀರಕೇಸರಿ" ಕರ್ತರು ಕೇಳುವ ಮುಂಚೆಯೇ ಖಾನಬಹಾದ್ದೂರರು ಈ ವಿಷಯವಾಗಿ ಅವರಿಗೆ ತಿಳಿಸಿದ್ದೇನೆಂದರೆ: 'ನನಗೂ ಈ ವಿಷಯಕ್ಕೂ ಸಂಬಂಧವೇನಿಲ್ಲ. ಬೇಕಿದ್ದರೆ ಅಲ್ಲೊಂದು ಮಂದಿರ ಕಟ್ಟಿಸಿರಿ. ನಾನೂ ವಂತಿಗೆ ಕೊಡುತ್ತೇನೆ' ಖಾನಬಹಾದ್ದೂರರ ಮಾತನ್ನು ಸುಬ್ಬರಾಯರಿಗೆ ಹೇಳಿದರೆ, "ನನ್ನ ಜವಾಬುದಾರಿ ನಾನೇ ಬಲ್ಲೆ," ಎಂದು ದೊಡ್ಡಸ್ತನದ ಮಾತು ಹೇಳಿ, ರಾಯರು ಮೂರ್ತಿಯನ್ನು ಕೋಣೆಯಿಂದ ಹೊರ ಹಾಕಲೊಪ್ಪಲಿಲ್ಲ. "ವೀರಕೇಸರಿ" ಯಲ್ಲಿಯೂ, "ವಿಶ್ವಕರ್ನಾಟಕ" ದಲ್ಲಿಯೂ ಚರ್ಚೆಗೆ ಪ್ರಾರಂಭವಾಯಿತು. ಇಸ್ಲಾಮ ಧರ್ಮದ ಅಬ್ಬಾಸಖಾನರಿಗಿಂತ ಹಿಂದು ಧರ್ಮದ ಸುಬ್ಬರಾಯರಿಗೆ ಮಸೀದೆಯ ಮುಂದೆ ಭವಿಷ್ಯತ್ಕಾಲದಲ್ಲಿ ಬಾರಿಸಲ್ಪಡುವ ಶಂಖಜಾಘಂಟೆಗಳ ದನಿ ಕೇಳಿ, ಪ್ರಜಾಸಮ್ಮದಗಾಗಿ ಗಜಾನನ ಮೂರುತಿಯ ಅಪ್ರತಿಷ್ಠೆಯಾಯಿತು.

೩. ವಿದ್ಯಾರ್ಥಿಗಳು ಧರ್ಮಾಪಮಾನವನ್ನು ಸುಮ್ಮಗೆ ಸಹಿಸಲಿಲ್ಲ. ೨-೩ ದಿನಗಳ ವರೆಗೆ "ಗಣಪತಿಕಿ ಜೈ," "ಗಾಂಧೀಕಿ ಜೈ" ಮೊದಲಾದ ಜಯಘೋಷಗಳಿಂದ ಪಟ್ಟಣವೆಲ್ಲ ದುಮುದುಮಿಸಹತ್ತಿತು; ಸತ್ಯಾಗ್ರಹ ಮಾಡಲುದ್ಯುಕ್ತರಾದರು. ಸುಲ್ತಾನಪೇಟೆಯ ಮುಂದುಗಡೆ ರಾಜಮಾರ್ಗಕ್ಕೆ ಅಡೆಬಿತ್ತು. ಜಡಿಮಳೆ ಬಿದ್ದರೂ, ವಿದ್ಯಾರ್ಥಿಗಳು ಮಾರ್ಗದ ಮೇಲಿಂದ ಕದಲಲಿಲ್ಲ. ಅಬ್ಬಾಸಖಾನರ ಬಂಗ್ಲೆ ತುಂಬ ಮುಸಲ್ಮಾನರು ಸೇರಿದ್ದರು. ರಾತ್ರಿಯಾದರೂ ವಿದ್ಯಾರ್ಥಿಗಳು "ಹರಿ, ಹರಿ" ಎಂದು ಜಾಗರಣ ಮಾಡಿ ಸತ್ಯಾಗ್ರಹವನ್ನು ಅಪ್ರತಿಹತವಾಗಿ ನಡಿಸಿದರು. ಸತ್ಯಾಗ್ರಹ ಕೈಕೊಂಡ ಮೂರನೇ ದಿನವೇ ಶನಿವಾರ ಬಂತು. ಯಾವತ್ತೂ ಸ್ಕೂಲ-ಕಾಲೇಜುಗಳ ವಿದ್ಯಾರ್ಥಿಗಳು ಈ ಸತ್ಯಾಗ್ರಹದಲ್ಲಿ ಸೇರಿದರು. ಸರಕಾರಿ ನೌಕರರೂ ಈ ಗದ್ದಲದಲ್ಲಿ ಸೇರಿದರು. ಲಿಂಗಾಯತ ವರ್ತಕರೊಬ್ಬರು ಸತ್ಯಾಗ್ರಹಿಗಳಿಗೆ ಅವಶ್ಯವುಳ್ಳ ತಿಂಡಿ-ತಿನಸುಗಳನ್ನು ಪೂರೈಸಲು ಮುಂದೆ ಬಂದರು. ಹೀಗೆ ಸುಲ್ತಾನಪೇಟೆಯ ಸುತ್ತುಮುತ್ತು ಜನಸಂದಣಿ ತುಂಬಿಹೋಯಿತು. ಪೋಲೀಸ ಖಾತೆಯ ಪ್ರಧಾನರು ಪೋಲೀಸ ಕಾವಲನ್ನಿಟ್ಟಿದ್ದರು. ಹೀಗೆ ಅಭೂತಪೂರ್ವವಾದ ಉತ್ಸಾಹವನ್ನು ನೋಡಿ ಮೈಸೂರಿನ ನ್ಯಾಯವಿಧಾಯಕ ಸಭೆಯ ತೃತೀಯ ಸಚಿವರೇ ಮುಂತಾದವರು ಮಧ್ಯಸ್ಥಿಕೆ ಮಾಡಿ ಮಂಗಳ ಮೂರುತಿಯನ್ನು ಮಕ್ಕಳಿಗೆ ಕೊಡಿಸಿದರು. ಸತ್ಯಾಗ್ರಹಿಗಳಲ್ಲಿ ಕೆಲವರಿಗೆ ಸೆರೆ ಹಿಡಿಯಲಾಗಿತ್ತು. ಅವರಿಗೆ ಬಿಡುಗಡೆ ಮಾಡದೇ ... ವಿದ್ಯಾರ್ಥಿಗಳು ಹೇಳಿದರು. ಅಧಿಕಾರಿಗಳು ಅವರಿಗೆ ಬಿಡಲಿಲ್ಲ. ಮುಂದೆ ಕಾಲೇಜಿನ ವಿದ್ಯಾರ್ಥಿಗಳೂ ಈ ಸತ್ಯಾಗ್ರಹದಲ್ಲಿ ಸೇರಿದರು. ದಿವಾಣರು ಸತ್ಯಾಗ್ರಹ ಕ್ಷೇತ್ರ ನೋಡ ಬಂದೊಡನೆ "ಸೆರೆಯಾಳಾದವರಿಗೆ ಬಿಡುಗಡೆ ಮಾಡಿರೆಂ"ದು ಮಕ್ಕಳು ಬಿನ್ನೈಸಿಕೊಂಡರು. ದಿವಾಣರು ಒಪ್ಪಿದರು. ಅಷ್ಟರಲ್ಲಿ ಇದಿರಿಗೆ ನೆರೆದ ಮುಸಲ್ಮಾನರ ಗುಂಪಿನೊಳಗಿಂದ ಯಾರೋ ಒಬ್ಬ ಅಧಮರು ದಿವಾಣರ ಮೋಟಾರಿನ ಮೇಲೆ ಕಲ್ಲೆಸೆದರು. ದಿವಾಣರು ಕಣ್ಸನ್ನೆ ಮಾಡಿದರಂತೆ. ಕೂಡಲೆ ಸಿದ್ಧರಾಗಿದ್ದ ಸೈನಿಕರೂ, ಸವಾರರೂ ನಿರಪರಾಧಿ ಬಾಲಕರ ಮೇಲೆ ಸಾಗಿಹೋದರು. ಹುಡುಗರು ಎದೆಗುಂದಲಿಲ್ಲ; ಕೆಲ ಹುಡುಗರು ಕುದುರೆಗಳಿಗೆ ಅಡ್ಡಗಟ್ಟಿದರು. ಸವಾರರು ಕೈಯಲ್ಲಿದ್ದ ಭಲ್ಲೆ-ಬರ್ಚಿಗಳಿಂದ ವಿದ್ಯಾರ್ಥಿಗಳಿಗೆ ತಿವಿದರು. ಸರಕಾರಿ ವಕೀಲರಾದ ರಾ|| ಶಂಕರನಾರಾಯಣರಾಯರಿಗೂ, ಇತರ ಅಧಿಕಾರಿಗಳಿಗೂ ಭಲ್ಲೆ ಏಟು ಬಿದ್ದು ಅವರು ಘಾಸಿಯಾದರು. ಹೀಗೆ ಒಮ್ಮೆಲೇ ಭಯಂಕರ ಪ್ರಕಾರ ಸಂಭವಿಸಿತು. ಸೆರೆಯಾಳುಗಳಿಗೆಲ್ಲ ಬಿಡುಗಡೆಯಾಯಿತು. ವಿದ್ಯಾರ್ಥಿಗಳು ಶಾಂತರಾಗಿ ವಿಘ್ನೇಶನ ಮಂಗಳಾರತಿಗೆ ತೊಡಗಿದರು. ಮಂಗಳಾರತಿ ಮುಗಿದದೆ, ಎಲ್ಲರೂ ಪ್ರಸಾದಗ್ರಹಣ ಮಾಡಿ ಮನೆಗೆ ಹೋಗಲುದ್ಯುಕ್ತರಾಗಿದ್ದಾರೆ; ಅಷ್ಟರಲ್ಲಿ ಅಬ್ಬಾಸಖಾನರ ಬಂಗ್ಲೆಯಿಂದ ಗುಂಡಿನ ಏಟುಗಳಾದವು. ೮ ಘಂಟೆ ರಾತ್ರಿಯಾಗಿತ್ತು; ಒಮ್ಮೆಲೇ ಬಂಗ್ಲೆಯೊಳಗಿನ ದೀಪ-ಜ್ಯೋತಿಗಳೆಲ್ಲ ನಂದಿಹೋದವು, "ಧಂ, ಧಂ" ಶಬ್ದವಾಯಿತು, ಕ್ಷಣಾರ್ಧದಲ್ಲಿ ೭೦-೮೦ ಮಂದಿ ಮುಸಲ್ಮಾನರು "ಅಲ್ಲಾಹೋ ಅಕಬರ" ಮುಂತಾದ ಘೋಷ ಮಾಡುತ್ತ ಕಟ್ಟಿಗೆ ಕೊಡಲಿಗಳನ್ನು ಹಿಡಿದುಕೊಂಡು, ಪೂಜೆ ಮುಗಿಸಿಕೊಂಡು ಹೋಗುತ್ತಿದ್ದ ಹುಡುಗರಿಗೆ ಅಡ್ಡಗಟ್ಟಿ ಹೊಡೆದರು. ಪೋಲೀಸರೊಬ್ಬರೂ ಆ ಕಾಲಕ್ಕೆ ಅಲ್ಲಿರಲಿಲ್ಲ. ಸುಮಾರು ೫೦ಕ್ಕೆ ಮಿಕ್ಕಿ ಜನರಿಗೆ ಘಾಯಗಳಾಗಿವೆ; ಮೂವರು ಮರಣೋನ್ಮುಖರಾಗಿದ್ದಾರೆ. ಹಿಂದುಗಳು, ಹೊಡೆಯಬಂದ ಮುಸಲ್ಮಾನರಿಗೆ ಪ್ರತಿಭಟಿಸಂತೆ ಹಿಂದೆಗೆದಿರಾದ್ದರಿಂದ ಈ ಅನರ್ಥವು ಇಷ್ಟಕ್ಕೇ ತಪ್ಪಿತು. ಇಲ್ಲದಿದ್ದರೆ ಇನ್ನೂ ಅನೇಕರು ಘಾಯಪಡುತ್ತಿದ್ದರು. ಅಬ್ಬಾಸಖಾನರವರ ಉತ್ತೇಜನದಿಂದಲೇ ಮುಸಲ್ಮಾನರು ಹಿಂದುಗಳ ಮೇಲೆ ಈ ಪರಿಯಿಂದ ಅತ್ಯಾಚಾರ ನಡಿಸಿದರೆಂದು ಪರಿಸ್ಥಿತಿಯನ್ನು ಕಣ್ಣಾರೆ ಕಂಡವರು ಅಭಿಪ್ರಾಯಪಡುತ್ತಾರೆ. ಈಗ ಬೆಂಗಳೂರಿನಲ್ಲಿ ಲಷ್ಕರ ಕಾಯಿದೆ; "ವಿಶ್ವಕರ್ನಾಟಕ," 'ವೀರಕೇಸರಿ,' "ಪ್ರಜಾಮಿತ್ರ" ಪತ್ರಿಕೆಗಳ ಪ್ರಕಟಣೆಗೆ ತಡೆಹಾಕಲ್ಪಟ್ಟಿದೆ. ಸಾರ್ವಜನಿಕ ಸಭೆ ಸೇರಲು ಪ್ರತಿಬಂಧ.

ಖವರಿಗೆ ಮಿಕ್ಕಿ ಬಿಟ್ಟುಗೊಡಬಾರದೆಂದೂ ಹುಕುಮು! ಕೆಲ ಅಧಮ ಹಿಂದುಗಳು ಹೊಂಚು ಹಾಕಿಕೊಂಡು ಮುಸಲ್ಮಾನರ ಮೇಲೆ ಹಾಗಿಹೋಗಲುದ್ಯುಕ್ತರಾದರು. ಹಿಂದೆರಡುಕಡೆ ಚಿಕ್ಕ ಬಡದಾಟವೂ ಆಯಿತು. ಅದರಿಂದ ದೊಣ್ಣೆ ಕತ್ತಿ ಮುಂತಾದ ಆಯುಧಗಳನ್ನು ಕೊಂಡು ಅಡ್ಡಾಡಬಾರದಾಗಿಯೂ ಕಟ್ಟಾಜ್ಞೆ ಹೊರಡಿಸಲ್ಪಟ್ಟಿದೆ. ಈ ಅನರ್ಥದ ಸುದ್ದಿ ಕೇಳಿ, ಮನಸ್ಸು ಬಹಳ ಬೇಸರಗೊಳ್ಳುತ್ತದೆ. ಖಾನಬಹಾದ್ದೂರ ಅಬ್ಬಾಸಖಾನರವರು ಎಷ್ಟೋ ಸ್ನೇಹಭಾವದವರಾದಾಗ್ಯೂ, ದಿವಾಣರಾದ ಮಿರ್ಝಾ ಇಸ್ಮಾಯಿಲ್ ಸಾಹೇಬರವರು ವಿಚಾರ ಮಾಡಬೇಕಾಗಿತ್ತು. ಕಣ್ಣನ್ನೆಯಿಂದ ಸ್ವಂತ ಮಕ್ಕಳೋಪಾದಿಯಲ್ಲಿರುವ ಚಿಕ್ಕ ಮಕ್ಕಳ ಮೇಲೆ ಶಸ್ತ್ರ ಸೈನಿಕರಿಗೆ ಸಾಗಿಹೋಗಲು ಸೂಚನೆ ಮಾಡಿದ್ದು ನಿಜವಿದ್ದರೆ, ಇದು ಶೀರ ಅಧಮತನವೆಂದು ನಾವು ಹೇಳುವೆವು. ಮಂಗಳ ಮೂರ್ತಿಯನ್ನು ಸ್ಥಾನಭ್ರಷ್ಟಗೊಳಿಸುವಂಥ ಅಮಂಗಳ ಕಾರ್ಯ ಮಾಡಿದ ಸುಬ್ಬರಾಯರ ಬಗ್ಗೆ ಏನು ಬರೆಯಬೇಕೆಂದು ತಿಳಿಯದಂಗಿದೆ, ಅಷ್ಟು ಹೇಯವಾದ ಕಾರ್ಯವನ್ನು ಅವರು ಮಾಡಿದ್ದಾರೆ. ವಿಚಾರಹೀನ ಧರ್ಮಬಾಂಧವರಿಗೆ ದುರಭಿಮಾನದ ಪ್ರೇರಣೆ ಮಾಡಿ ಅಬ್ಬಾಸಖಾನರವರು ಚಿಕ್ಕ ಮಕ್ಕಳ ಮೇಲೆ ಮಾಡಿದ ಧರ್ಮದ್ರೋಹವನ್ನು ವಿಚಾರಶೀಲ ಮುಸಲ್ಮಾನರೆಲ್ಲರೂ ನಿಷೇಧಿಸುವರೆಂದು ನಾವು ಖಂಡಿತವಾಗಿ ಹೇಳುವೆವು. ಮೈಸೂರಿನ ಮಹಾರಾಜರ ನಿರ್ಮಲಚಿತ್ತದಿಂದ ಈ ಪ್ರಕರಣವನ್ನು ವಿಚಾರಿಸಿ, ಶಾಸನಾರ್ಹರಿಗೆ ಶಾಸನ ವಿಧಿಸಬೇಕಾಗಿಯೂ, ಲೋಕಕ್ಷೋಭವನ್ನು ಪ್ರಕ್ಷುಬ್ಧಗೊಳಿಸಲು ಯಾರೂ ಇನ್ನು ಕಲ್ಪಿಸದಂತೆ ಏರ್ಪಾಟು ಮಾಡಬೇಕಾಗಿಯೂ ಪ್ರಾರ್ಥಿಸುತ್ತೇವೆ. "ವೀರಕೇಸರಿ" ಮೊದಲಾದ ಪತ್ರಿಕೆಗಳ ಪ್ರಕಟಣೆಗೆ ತಡೆಹಾಕಿದ್ದು ಅನ್ಯಾಯವಿದೆ. ಇದನ್ನು ಕೂಡಲೆ ಪರಿಮಾರ್ಜನೆಗೈಯಬೇಕಾಗಿಯೂ ನಮ್ಮ ಅರಿಕೆ.

---

೪. "ಪ್ರೇಕ್ಷಕರೊಬ್ಬರು ಕಳೆದ ಸಂಚಿಕೆಯಲ್ಲಿ ವರ್ಣಿಸಿದ ರಿಟೈರ್ಡ್ ಜಜ್ಜರಾದ ಮಿ| ಓಕರವರ ಕಾರಭಾರವನ್ನು ನೋಡಿ ವ್ಯಸನವಾಗಿದೆ. ಜಜ್ಜರಾದ ಮಿ| ಓಕರವರು ಜಜ್ಜ ಪದಕ್ಕನುಗುಣವಾಗಿ ವರ್ತಿಸದಿದ್ದರೆ, ಜನರಿಗೆ ಬಲು ಕಷ್ಟವಾಗುತ್ತದೆ. ವಕೀಲರಿಗೆ ಹುಚ್ಚರೆಂದು ಸಂಬೋಧಿಸುವದರಿಂದ ಜಜ್ಜರ ಜಾಣತನವು ವ್ಯಕ್ತವಾಗುವದಿಲ್ಲ; ಜಜ್ಜರ ವಿಚಾರಯಂತ್ರಕ್ಕೆ ಎಲ್ಲಿಯೋ ಕೀಲು ತಪ್ಪಿರುವದೆಂಬಂತೆ ಭಾಸವಾಗುತ್ತದೆ. "ನಿಂದೇ ನನಗೆ ತಿಳಿಯಿತು, ಅಥವಾ ನಿಮಗೆ ತಿಳಿಯಲ್ಲಿ" ಎಂಬ ಮೈಕಲ್ಪಿತ ಬುದ್ಧಿಶೂನ್ಯತೆಯ ಉದ್ಗಾರದಿಂದ ಮಿ| ಓಕರವರು ನ್ಯಾಯವಿಚಾರವನ್ನು ಸಮತೋಲ ಬುದ್ಧಿಯಿಂದ ನಡಿಸಲು ಅನರ್ಹರೆಂದು ಹೇಳಲು ಸಾಕಷ್ಟು, ಬೇಕಷ್ಟು ಇಂಬು ದೊರಕುತ್ತದೆ. ವಕೀಲರು ಸ್ವಪಕ್ಷದ ತರ್ಕಗಳನ್ನು ನ್ಯಾಯಾಸನಕ್ಕೆ ಸಾದರಪಡಿಸುವಾಗ, ಮಿ| ಓಕರಿಗೆ ಆತ್ಮಸ್ಮರಣೆಯಾಗಿ ಕಥೆ ಹೇಳುವ ಪರಿಪಾಠವು ಕೇವಲ ಅನುಚಿತವು. ಜಜ್ಜರು ಹ್ಯಾಗೆ ನಡೆಯಬೇಕೆಂದು ನಾವು ಬರೆಯಬೇಕಾದವಶ್ಯಕತೆಯಿಲ್ಲ. ಇಬ್ಬರೂ, ಇಂದೆರಡು ಮಾತುಗಳನ್ನು ಹೇಳುವ ಪ್ರಸಂಗ ಬಂದಿದೆ. ವಕೀಲರು ಜಜ್ಜರಿಗಿಂತ ಕಡಿಮೆ ತರಗತಿಯವರೆಂಬ ಭಾವನೆಯನ್ನು ಜಜ್ಜರು ಎಷ್ಟುಕಾಲಕ್ಕೂ ಮನಸ್ಸಿನಲ್ಲಿ ಹಿಡಿಯಬಾರದು. ಜಜ್ಜರಿಗಿಂತ ಹೆಚ್ಚಿನ ಯೋಗ್ಯತೆಯುಳ್ಳವರೇ ವಕೀಲರಿರುತ್ತಾರೆ. ವಕೀಲರು ಪ್ರಕರಣದ ಅಭ್ಯಾಸ ಮಾಡುವ ಮೂಲಕ ಅವರ ಮಾತುಗಳನ್ನೆಲ್ಲ ಜಜ್ಜರು ಸಾವಧಾನದಿಂದ ಕೇಳಿಕೊಳ್ಳಬೇಕು. ವಕೀಲರಿಗಿಂತ ತಾವು ಜಾಣರೆಂಬ ಭಾವನೆಯನ್ನು ಹಿಮ್ಮೆಟ್ಟಿಸಬೇಕು. ತರ್ಕಗಳನ್ನು ಕೇಳಿಕೊಳ್ಳುವಾಗ ಆಯಾ ಪಕ್ಷದ ವಕೀಲರೊಡನೆ ತನ್ಮಯವಾಗಿ ಪ್ರಕರಣಗಳನ್ನು ಕೇಳಿಕೊಂಡರೆ, ಸಮತೋಲ ಬುದ್ಧಿಯಿಂದ ನ್ಯಾಯದಾನ ಮಾಡಲು ಬಹಳ ಅನುಕೂಲವಾಗುತ್ತದೆ ಲಕ್ಷಗೊಟ್ಟು ವಕೀಲರ ಹೇಳಿಕೆಯನ್ನು ಕೇಳಿಕೊಂಡರೆ, ವಕೀಲರಲ್ಲಿಯೂ ಜಜ್ಜರ ಬಗ್ಗೆ ಆದರಬುದ್ಧಿ ಹುಟ್ಟುತ್ತದೆ; ಮಧ್ಯ ಮಧ್ಯದಲ್ಲಿ ಜಜ್ಜರಿಗೆ ಆತ್ಮಸ್ಮರಣೆಯಾಗುವದಿಲ್ಲ ಮಿ|| ಓಕರವರು ಹಿಂದೀಯರಿದ್ದು, ನ್ಯಾಯ ವಿಚಾರದಲ್ಲಿ ಹೆಸರು ಪಡೆಯಬೇಕೆಂಬ ಸದ್ಭಾವದಿಂದ ಈ ವಿಚಾರಗಳನ್ನು ಪ್ರಕಟಿಸಿದ್ದೇವೆ. ಮಿ| ಓಕರವರು ಯೋಗ್ಯತಾವಂತರಾದರೆ ಭಾರತೀಯರಿಗೆ ಅದೊಂದು ಭೂಷಣವಲ್ಲವೇ?

ಈ ಇಲ್ಲಿಯ ಕಲ್ಯಾಣಪುರಕರ ನಾರಾಯಣರಾಯರು ಬೆಂಗಳೂರಲ್ಲಿ ನಿನ್ನೆ ಹೃದ್ರೋಗದಿಂದ ಪರಲೋಕವಾಸಿಗಳಾದರೆಂದು ತಿಳಿಯಲು ವ್ಯಸನವಾಗುತ್ತದೆ. ಕೈ| ವಾ|ಗಳು ಉಪ್ಪಿನ ಖಾತೆಯಲ್ಲಿ ಅಸಿಸ್ಟಂಟ ಕಲೆಕ್ಟರ ತನಕ ಏರಿ ಹೋಗಿ ಅಧಿಕಾರಿಗಳಿಗೂ, ಜನರಿಗೂ ಆದರಪಾತ್ರರಾಗಿದ್ದರು. ಪೆನ್ಶನು ಪಡೆದ ತರುವಾಯ ಬೆಂಗಳೂರಲ್ಲಿ ಇವರು ವಾಸವಾಗಿದ್ದರು. ಕೈ| ವಾ|ಗಳು ನಿಗರ್ವಿ ಸತ್ಪುರುಷರಿದ್ದು, ಖಾದಿ ಮುಂತಾದ ಚಳವಳಿಗಳನ್ನು ಪ್ರತ್ಯಕ್ಷ ಆಚರಿಸಿ ಮನಸ್ಸಿನ ಔದಾರ್ಯವನ್ನು ಪ್ರಕಟಿಸಿದ್ದರು. ನಿಧನ ಸಮಯ ಇವರ ವಯಸ್ಸು ೬೯. ಕೈ| ವಾ|ಗಳ ಸಹೋದರರಾದ ರಾ| ಬ| ವಿಶ್ವೇಶ್ವರರಾವ ಕಲ್ಯಾಣಪುರಕರರೊಡನೆಯೂ, ಶ್ರೀ| ಶ್ರೀಪಾದರಾವ ಕಲ್ಯಾಣಪುರಕರರೊಡನೆಯೂ ನಮ್ಮ ಸಹತಾಪವನ್ನು ವ್ಯಕ್ತಪಡಿಸಿ, ಕೈ| ವಾ|ಗಳಿಗೆ ಸದ್ಗತಿ ದೊರೆಯಲೆಂದು ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಚಲೋ ನಡಿಸುತ್ತದೆ. ಬಿಸಿಲು ಬೀಳುತ್ತಿದ್ದರೂ, ಜೋರಿನ ಮಳೆ ಬೀಳುತ್ತಿದೆ. ಆಶ್ಲೇಷಾ ನಕ್ಷತ್ರಕ್ಕೆ ಈ ರಭಸ ಬೇಡ. ಹವೆಯಲ್ಲಿ ವಿಲಕ್ಷಣವಾದ ತಂಪು ಹುಟ್ಟಿದೆ. ಈ ವಾರದಲ್ಲಿ ೧೧-೨೨ ಇಂಚು ಮಳೆ, ಇಂತು ಈ ವರೆಗೆ ೧೪೪-೫೩ ಇಂಚು ಮಳೆ ಬಿದ್ದಾಯಿತು.

ಮ್ಯುನಿಸಿಪಾಲಿಟಿಯ ಇಲೆಕ್ಷನು ಮಂಗಳವಾರಕ್ಕೆ ಮುಗಿಯಿತು ಇಲೆಕ್ಷನಿನ ಸಮಯ ಜಾಕಲರು ನಿರಂಕುಶವಾಗಿ ನಡೆದರೆಂದು ಮೇಲಾಟ ಮಾಡುವ ಮುಖ್ಯ ೮ ಮಂದಿ ಉಮೇದ್ವಾರರು ತಮ್ಮ ಉಮೇದ್ವಾರಿ ಅರ್ಜಿಗಳನ್ನು ಮಧ್ಯಾಹ್ನ ೧೧ ಘಂಟೆಗೆ ಹಿಂತೆಗೆದುಕೊಂಡರು ಅದರಿಂದ ಇಲೆಕ್ಷನಿನ ಪರಿಣಾಮದ ಬಗ್ಗೆ ಯಾರೂ ವಿಶೇಷ ಆತುರಗೊಳ್ಳುವದಿಲ್ಲ ಆರಿಸಿ ಬಂದ ಮೆಂಬರರ ಹೆಸರುಗಳು:— ಮಿ| (೧) ಗಾವಸ್ಕರ, (೨) ರಾಮ ಕಾಮತ (೩) ಶೇಷಗಿರಿ ಕಾಮತ, (೪) ಮಾರ್ತಾ ಶೈ, (೫) ಕೇಶವ ಶೈ, (೬) ರಾಮಕೃಷ್ಣ ಕಾಮತ, (೭) ಸೀತಾರಾಮ ಭಾಗ್ವತ, (೮) ಅಣ್ಣಪ್ಪ ನಾಯ್ಕ, (೯) ಅಣ್ಣಪ್ಪ ಶೈ, (೧೦) ರಾಮ ಕ್ಯಾಶಭಾಗ, (೧೧) ಗಂಗಾಧರ ಕ್ಯಾಸಭಾಗ, (೧೨) ಸೈಯದ ಹುಸೇನ.

ಹಗಡೆಯಲ್ಲಿ ೨—೩ ತಿಂಗಳ ಮೈಲಿ ಬೇನೆ ಬಂದಿದೆ. ಅದರಿಂದ ಶ್ರೀ ಶಾಂತಿಕಾಪರಮೇಶ್ವರಿ ದೇವಾಲಯದಲ್ಲಿ ೩ ದಿನ ಭಜನೆಯಾಯಿತು ಮೊನ್ನೆ ಶನಿವಾರಕ್ಕೆ ಮಂಗಳೋತ್ಸವವಾಯಿತು. ೩ ದಿನಗಳ ತನಕ ಪೇಟೆ ಮುಚ್ಚಿಕೊಂಡಿತ್ತು. ಈ ವಿನಿಯೋಗದಿಂದ ಉಪದ್ರವವು ಶಾಂತವಾಗಲಿ.

ಅಂಕೋಲಾ-ಕಾರವಾರ ರಸ್ತೆಯ ದುರುಸ್ತಿ ಕೆಲಸ ನಡೆದದೆ. ಒಂದೊಂದು ಮೈಲಿನ ತನಕ ಅರ್ಧ ಮಾರ್ಗವನ್ನು ಅಗಿದು ಖಡಿ ಹರಡುತ್ತಾರೆ. ೫-೬ ದಿನಗಳ ತನಕ ಆ ಖಡಿಯ ಮೇಲೆ ರೋಲು ಎಳೆಯುವದಿಲ್ಲ. ಇದರಿಂದ ಮೋಟಾರುಗಳಿಗೆ ಕಷ್ಟ-ನಷ್ಟ. ಟಾಯರುಗಳು ಹಾಳಾಗುತ್ತವೆ. ಅರ್ಧ ಮಾರ್ಗವನ್ನು ಮೊಟ್ಟಮೊದಲು ದುರುಸ್ತ ಮಾಡಿ, ಉಳಿದ ಬಾಕಿ ಅರ್ಧ ಮಾರ್ಗದ ದುರುಸ್ತಿ ಕೈಕೊಂಡರೆ ತೊಂದರೆಯಾಗುವದಿಲ್ಲವಾಗಿ ಬಲ್ಲವರು ತಿಳಿಸುತ್ತಾರೆ.

ಶ್ರೀ ಗೋಕರ್ಣ ಪರ್ತಗಾಳಿ ಮಠದ ವೈದಿಕರೊಬ್ಬರು ತಿಳಿಸುವದೇನಂದರೆ:— ಈ ವರುಷ ಭಾದ್ರಪದ ಶು| ೩ ಗೆ ಸೋಮವಾರ ಸ್ವರ್ಣ ಗೌರೀ ವ್ರತ, ೪ ಥೀ ಮಂಗಳವಾರ ಶ್ರೀ ಗಣೇಶ ಚತುರ್ಥೀ ವ್ರತ, ೫ ಮಿ ಬುಧವಾರ ಋಷಿಪಂಚಮಿ ವ್ರತ, ಈ ಕ್ರಮದಿಂದ ವ್ರತಗಳನ್ನಾಚರಿಸಬೇಕಾಗಿ ಶ್ರೀ ಮಠದ ವೈದಿಕರ ಅಭಿಪ್ರಾಯವಾಗಿದೆ ತಿಥಿಗಳ ವಿಷಯ ಸಂದೇಹವುಂಟಾದ್ದರಿಂದ ಈ ಖುಲಾಸೆ ಮಾಡಲಾಗಿದೆ.

ಭಟಕಳ— ಬಿಸಿಲು-ಮಳೆ ಸರಿಯಾಗಿ ಬೀಳುತ್ತಿವೆ. ಜನರ ಆರೋಗ್ಯ ತಕ್ಕಮಟ್ಟಿಗಿದೆ. ಅಕ್ಕಿ ಧಾರಣೆ ಇಳಿಯುತ್ತಬಂದರೂ, ಬೇರೆ ಜೀನಸಿನ ದರ ಏರುತ್ತಲಿದೆ. ಮುಸಲ್ಮಾನರ ಕೇರಿಯಲ್ಲಿ ಅತಿಸಾರದ ಬೇನೆಯು ಹಾವಳಿ. ಅದರಿಂದ ತಮ್ಮ ಕೇರಿಯಲ್ಲಿಯೂ, ಪುರಾತನ ಮಗ್ದಾಲಯದಲ್ಲಿಯೂ ಮುಸಲ್ಮಾನರು ಪ್ರಾರ್ಥನೆ ಸಪ್ತಾಹ ನಡಿಸಿದ್ದಾರೆ.

ಅಂಜುಮಾನ ಶಾಲೆಯಲ್ಲಿ ನಾಗರಿಕರ ಸಭೆಯಾಗಿ ಚಿಕ್ಕ ಹುಡುಗರ ಕಾಯಿದೆ, ತೀರ್ಥಯಾತ್ರೆಯ ಮಸೂದೆ, ಬಾರ್ಡೋಲಿ ಚಳುವಳಿ ಮುಂತಾದ ಠರಾವುಗಳಾದವು. ರಾ| ನಾರಾಯಣ ಶಾಸ್ತ್ರಿಗಳು ಅಧ್ಯಕ್ಷರಿದ್ದರು. ರಾ| ಜೀ. ಎನ್. ಭಟ್ಟ, ಎಮ್. ಎಮ್. ಸಿದ್ದಿಕಾ ಸಾಹೇಬ, ಎ. ಎಮ್. ಭಟ್ಟ ಮೊದಲಾದವರ ಭಾಷಣಗಳಾದವು.

ಇಲ್ಲಿ ಹುಲಿಗಳ ಕಾಟ ಬಹಳವಾಯಿತು. ಬೇಳ್ಕೆಯ ಪಟೇಲರ ೨ ಎಮ್ಮೆಗಳು ಹುಲಿಯ ಬಾಯಿಗೆ ಬಿದ್ದವು. ಕೋಟಖಂಡದಲ್ಲಿ ಹುಲಿಯ ಉಪದ್ರ ಮೇರೆತಪ್ಪಿತು. ರಾತ್ರಿಯಾಗಲು, ಹತ್ತಿರ ಅಡಿಕೆ ತೋಟ... ಗಲು ೪|| ಘಂಟೆ ಹಗಲಿನಲ್ಲಿಯೇ; ಕೊಟ್ಟಿಗೆಯಿಂದ ಒಬ್ಬನು ಎಮ್ಮೆಯನ್ನು ಹೊಡಕೊಂಡು ಮನೆಗೆ ಬರುತ್ತಿದ್ದನು. ಧಟ್ಟನೆ ಹುಲಿ ಹಾರಿ ಎಮ್ಮೆಯನ್ನು ಹಿಡಕೊಂಡು ಹೋಯಿತು. ಈ ಜನರ ಉಳಿಗಾಲವಿಲ್ಲ. ಜನರ ಕಡೆ ಶಸ್ತ್ರಾಸ್ತ್ರ ವಿಲ್ಲವೆಂದು ಹುಲಿಗೆ ಮನದಟ್ಟಾಗಿದೆ. ಮನುಷ್ಯನ ಆಯುಷ್ಯವು ಪಶುಗಳಿಗಿಂತಲೂ ಕಡೆಯಾಯಿತು!

ಹೊನ್ನಾವರ— ಪ್ಲೇಗಿನ ಭೀತಿ ಹುಟ್ಟಹತ್ತಿದೆ ಇಲಿಗಳು ಸಾಯುತ್ತಿವೆ. ಈ ಊರಲ್ಲಿ ಗಡಿಬಿಡಿಯಾಗುವದು ಬಹಳ ಅಪರೂಪ. ಅಂಥದೊಂದು ಅಪರೂಪದ ಪ್ರಸಂಗವು ರವಿವಾರ ತಾ. ೫ನೇಗೆ ಈ ಊರಲ್ಲಿ ಒದಗಿತು. ರಾವಸಾಹೇಬ ಹರಿವಿಲಾಸ ಶಾರದಾ ಎಂಬುವರು ಬಾಲವಿವಾಹವನ್ನು ಪ್ರತಿಬಂಧಿಸುವದಕ್ಕಾಗಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕ್ಕಾದ ಸೂಚಿಸುವವರಿದ್ದಾರೆ. ವರನ ವಯಸ್ಸು ೧೮ ವರ್ಷಕ್ಕಿಂತ ಕಡಿಮೆಯಿರಕೂಡದು; ವಧುವು ೧೪ ವರ್ಷಗಳಿಗೆ ಕಡಿಮೆಯಿರಕೂಡದು. ಈ ನಿಯಮದ ಉಲ್ಲಂಘನೆಯಾದರೆ, ಶಾಸನ ಮಾಡಬೇಕಾಗಿ ಈ ಕಾಯಿದೆಯ ಆಶಯ. ಈ ಕಾಯಿದೆಯ ವಿಚಾರ ಮಾಡುವದಕ್ಕಾಗಿ ಇಲ್ಲಿಯ ನಾಗರಿಕರು ತಾ. ೫ನೇಗೆ ಸಭೆಸೇರಿದರು. 'ಮಿತ್ರಸಮಾಜ' ದಲ್ಲಿ ಆ ದಿನ ೫ ಘಂಟೆಗೆ ಜನರು ತಂಡೋಗಟ್ಟಿ ಸೇರಿದ್ದರು. ಸಂಕೇರಿ—ಬಾಜಾರದಿಂದಲೂ ಮೋಟಾರು ತುಂಬಿ ತುಂಬಿ ಜನರು ಬಂದಿದ್ದರು. ರಾ| ದತ್ತಾತ್ರಯ ಭಾಸ್ಕರ ನಾಡಕರ್ಣಿಯವರು ಸಭಾಧ್ಯಕ್ಷರು. ರಾ| ಶೆಟ್ಟಿ. ಕ್ಯಾಸಭಾಗ, ಡಾ| ಶೀಲಂಗರವರು ವಿವಾಹ ಕಾನೂನಿನನ್ವಯ ಬಾಲ ವಿವಾಹಕ್ಕೆ ಪ್ರತಿಬಂಧ ಬಿದ್ದರೆ, ದೇಶದೊಳಗಿನ ಆರೋಗ್ಯ ಬಲವು ಹೆಚ್ಚುವದೆಂದೂ, ಬಾಲವಿಧವೆಗಳ ಸಂಖ್ಯೆಗೆ ತಡೆ ಬೀಳುವದೆಂದೂ ಪ್ರತಿಪಾದಿಸಿದರು.

ರಾ। ಸುಬ್ಬರಾವ ಹಳೇಹುಬ್ಬಳ್ಳಿಕರರವರು. ಈ ಠರಾವನ್ನು ವಿರೋಧಿಸಿದರು. ಸಾರ್ವಜನಿಕ ಕಟ್ಟೆಗಳಲ್ಲಿ ಸರಕಾರವು ಕೈಹಾಕಬಾರದೆಂದು ಅವರ ಹೇಳಿಕೆ. ರಾ। ಕೃಷ್ಣರಾವ ಹಳದೀಪುರಕರ, ಶ್ರೀನಿವಾಸ ಮುಜುಮದಾರಯವರು ವಿರೋಧಿಸಿ ಮಾತನಾಡಿದರು. ಮತಕೊಳ್ಳುವ ಪ್ರಸಂಗ ಬಂತು. ಆ ಕಾಲಕ್ಕೆ ಅಧ್ಯಕ್ಷರು ಬಾಹ-ಸುಂಕೇರಿಗಳ ಜನರ ಮತ ಕೊಳ್ಳಬಾರದಿಲ್ಲವಾಗಿ ಧ್ವನಿಸಿದರು " ಠರಾವಿನ ನಾಗಂಶರೆಂ"ಬ ವ್ಯಾಖ್ಯೆಯಲ್ಲಿ ಬಾಹ-ಸುಂಕೇರಿಗಳು ಸೇರುವದಿಲ್ಲೆಂದು ಅವರ ಪ್ರತಿಪಾದನೆ ಈ ಅಭಿಪ್ರಾಯದ ಸುಳಿವು ದೊರೆತೊಡನೆ ಸಭೆಯಲ್ಲಿ ಕೋಲಾಹಲವಾಯಿತು. ಎಲ್ಲರೂ ಮಾತನಾಡುವವರೇ ಕೇಳುವವರ್‍ಯಾರಿಲ್ಲ. ಬಳಿಕ, ಬಾಹ-ಸುಂಕೇರಿಯವರು ಠರಾವಿನ ನಾಗಂಶರಲ್ಲಿ ಸೇರುತ್ತಾರೆಂಬ ತೀರ್ಮಾನವಾಗಿ ಮತ ಎಣಿಕೆಯಾಯಿತು. ಈ ಠರಾವನು ಪ್ರಚಂಡ ಬಹುಮತದಿಂದ ಬಿದ್ದುಹೋಯಿತು. ಸಾರ್ವಜನಿಕ ಕಟ್ಟೆಗಳಲ್ಲಿ ಸರಕಾರವು ಕೈಹಾಕಬಾರದಾಗಿ ಬಹುಮತವಾಯಿತು. ಸಭೆಯು ನಿರ್ಣಯವಾದರೂ, ಸಭಿಕರೊಳಗೆ ಗೊಂದಲವು ನಡೆದೇ ಇತ್ತು; ವಾದ-ವಿವಾದಗಳು ನಡೆದಿದ್ದವು.

ಕುಮಟೆ— ಈ ಪೇಟೆಯಲ್ಲಿ ಕರಿಯಾವಿ ಎಂಬ ಗ್ರಾಮವಿದೆ ಈ ಗ್ರಾಮದ ಸಮೀಪ ಒಂದು ಹಳ್ಳ; ಈ ಹಳ್ಳದಲ್ಲಿ ಮೂರೇ ತಿಂಗಳು! ಕಾಡು ನಾಯಿಯು ಪ್ರತಿಪದಲ್ಲಿ ನೋಡಿಕ್ಕಿತು! ೩ ಜಾತಿ ನಾಯಿಗಳು ಬೆಟ್ಟದಲ್ಲಿ ಒಂದು ಮೃಗವ ಬೇಟೆಯಾಡುತ್ತಿದ್ದವು. ಆ ಮೃಗ ಬಿಡಲು ಒಬ್ಬರು ಹೋದರು. ಒಂದು ನಾಯಿಯು ಕಣ್ಣು ೧೦ ವರ್ಷ ಪ್ರಾಯದ ಒಬ್ಬ ಹುಡುಗನ ಮೇಲೆ ಬಿದ್ದು ಆ ಹುಡುಗನ ಬೆನ್ನಿಗೆ ಹತ್ತಿತು. ಹುಡುಗನು ಓಡಿನು, ತನ್ನ ಮನೆಯ ಒಳಕ್ಕೆ ಸೇರುವಷ್ಟರಲ್ಲಿ ನಾಯಿಯ ಜಿಗಿದು ಕುತ್ತಿಗೆ ಹಿಡಕಲುದ್ಯುಕ್ತವಾಯಿತು ಹುಡುಗನು ಎಡ ಗಟ್ಟಿ ಮಾಡಿ ನಿಂತು, ಮುಂಗೈಯಿಂದ ಮೂಗಿಗೆ ನೂಕಿದನು. ನಾಯಿಯು ಕೈಕಚ್ಚಿತು. ಕೆಲ ಹೊತ್ತಿನ ತನಕ ನಾಯಿಯೂ, ಹುಡುಗನೂ ಕುಸ್ತಿ ಆಡಿದರು. ಹೇಗೋ ತಪ್ಪಿಸಿಕೊಂಡು ಹುಡುಗನು ಮನೆಯ ಒಳಸೇರಿದನು. ನಾಯಿಯು ಬೆನ್ನಟ್ಟಿ ಹೋಯಿತು. ಹುಡುಗನು ನಾಯಿಯ ಕಣ್ಣು ತಪ್ಪಿಸಿಕೊಂಡು ಬೇರೆ ಮನೆಯಲ್ಲಿ ಹೊಕ್ಕು ಕಾಪಾಡಿಕೊಂಡನು. ಹಾದಿಯ ಮೇಲೆ ಬಿದ್ದ ಧೈಯದ ನೆತ್ತರದ ಹುಂಡುಗಳ ಮೇಲಿಂದ ನಾಯಿಯು ಆ ಮನೆಗೆ ಹೋಯಿತು. ಅಲ್ಲಿ ಹೆಂಗಸರು ಮಕ್ಕಳು ಇದ್ದರು. ಅವರಿಗೆ ಬಿಟ್ಟು, ಆಗ ಹುಡುಗನಿಗೆ ಬೆನ್ನಟ್ಟಿ ಹೋಯಿತು ಹೋಗುವಾಗ ಆದ ಮುಚ್ಚಲಾಯಿತು. ಆಧರ ದಂಡ ಗಳಲ್ಲಿ ನಾಯಿಯು ಆಲೆ ಒಂದು ಸಿಕ್ಕಿತು. ಧೈರ್ಯವಾಗಿ ಹಿಡಿದು, ಬಡಿಗೆಯಿಂದ ಬಡಿದು ನಾಯಿಯನ್ನು ಕೊಂದರು. ಹುಡುಗನ ಮರಣೋನ್ಮುಖನಾಗಿದ್ದಾನೆ. ಪಿನಾಕ!

ಮುಂಡಗೋಡ— ಈ ಊರೊಳಗಿನ ಕಾಡಿಯುವ ಸೀರಿನ ಹೊಂಡವು ಒಳಳ ಹೊಲಸಾಗಿದೆ ಜನರು ವಿಚಾರ ಪಡ ಮಾಡುವದಿಲ್ಲ. ಹೀಗೆ ಹೊಂಡ ಕೆಡಿಸುವವರಿಂದ ಜನರ ಆರೋಗ್ಯಕ್ಕೆ ಬಹಳ ಹಾನಿ ಲೋಕಲ್ ಬೋರ್ಡಿನವರೂ, ಪೋಲೀಸರೂ, ಜನರೂ ಇತ್ತ ಲಕ್ಷ್ಯ ಕೊಡಬೇಕು.

ಶಿರಸಿ— ಮಳೆಯು ಬಹಳ ಕುಗ್ಗಿತು. ಪ್ಲೇಗಿನ ಜನ ಅಗಮುನವ ಮಾಡಿದೆ. ೩-೪ ಜನರು ಪ್ಲೇಗಿಗೆ ತುತ್ತಾದರು. ಮ್ಯುನಿಸಿಪಾಲಿಟಿಯವರು ಇಲಿ ಪಂಜರಗಳನ್ನು ಹಂಚಲಾರಂಭಿಸಿದ್ದಾರೆ ಎಲ್ಲರೂ ಹುಚ್ಚಿಸಿಕೊಳ್ಳಬೇಕೆಂಬ ಪ್ರಕಟಣೆಯೂ ಹೊರಟಿದೆ.

ಇಲ್ಲಿಯ ಪ್ರಸಿದ್ಧ ವಕೀಲ ರಾ। ಹೆಗಡೆಯವರು ಕುತ್ಯುವಾದಕ್ಕೆ ಸಿಲುಕೊಂಡರು. ಅವರು ಹಿಂದೆ ಇಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಸ್ವತಃ ಸಮಾಜದಲ್ಲಿ ಅವರಿಗೆ ಬಹಳ ಆದರವಿತ್ತು. ಸ್ಮಶಾನ ಯಾತ್ರೆಗೆ ನೂರಾರು ಜನರು ಹೋಗಿದ್ದರು. ಅವರ ನಿಧನದ ದಿನ ಇಂಗ್ಲಿಷ ಶಾಲೆಗೆ ರಜೆ ಕೊಡಲಾಗಿತ್ತು.

ಸಿದ್ದಾಪುರ— ಈ ತಾಲೂಕಿನ ಸರಕುಳಿ, ಹಸ್ರಗೋಡ ಗ್ರಾಮಗಳೊಳಗಿನ ರೈತರು ೩ನೇ ತಾರೀಖು ಮಂಜಪ್ಪ ಹೆಗಡೆ ಬಂಕಾಳೆ ಹಾಗು ರಾಮಭಟ್ಟ ಅನಂತ ಹೆಗಡೆ ಇವರ ಅಧ್ಯಕ್ಷತೆಯಲ್ಲಿ ತಮ್ಮ ತಮ್ಮ ಗ್ರಾಮದಲ್ಲಿ ಸಭೆಸೇರಿ, ಜಕ್ಕ ಹೊಲಗಳ ಠರಾಯಿದ ಹಾಗು ತೀರ್ವ ಏರಿಕೆಯ ಠರಾಯಿಗಳನ್ನು ನಿಶ್ಚಯಿಸಿದರು; ಬುಧವಾರದಿಂದ ಚಿಂಬಲು ಕೊಟ್ಟರು. ಸಿದ್ದಾಪುರ ತಾಲೂಕಿನಲ್ಲಿ ತೀರ್ವ ಏರಿದ ಸುದ್ದಿಯಿಂದ ಜನರಲ್ಲಿ ಅಸಮಾಧಾನವಾಗಿರುವದಾಗಿಯೂ, ಕಾಳಿಮೆಣಸುಗಳ ಅಭಾವದಿಂದಲೂ, ಹೆಚ್ಚಿನ ಬಾಧೆಯಿಂದಲೂ, ಜನ-ಜಾನುವಾರುಗಳ ಸಂಖ್ಯೆಯ ಕುಗ್ಗಿರುವದರಿಂದಲೂ ಭೂಮಿ ಹಾಳು ಬೀಳಹತ್ತಿದೆ; ಈಗಿದ್ದ ಕಂದಾಯವನ್ನು ಕಡಿಮೆ ಮಾಡುವ ವಿಚಾರ ಮಾಡಬೇಕಾಗಿಯೂ ತೀರ್ಮಾನವಾಯಿತು; ಸಭೆಗಳಿಗೆ ಸುತ್ತು ಮುತ್ತಲಿನ ಗ್ರಾಮಗಳೊಳಗಿಂದ ಅನೇಕ ರೈತರು ಸೇರಿದ್ದರು.

ಕೋರ್ಟ ನೋಟೀಸು.

ವಿಕ್ರಯದ ಜಾಹೀರು ನಾಮೆಯನ್ನು ಗೊತ್ತು ಪಡಿಸುವ ಬಗ್ಗೆ ನೇಮಿಸಿದಧಿವಸ ನೋಟೀಸು (ಆ. ೩೧, ಕಾ. ೬೬). (ಖಾಪರ್ಮಸಂಬಂಧ ೩ನೇ ಪರಿಶಿಷ್ಟ ೪ ನಮೂನೆ ೧)

ಕುಮಟಾ ಜಿಲ್ಲೆಯ ಸಬ್ ಜಜ್ಜ ಕೋರ್ಟಿನಲ್ಲಿ.

ಮುಕ್ಕಾಮು ಕುಮಟಾ ಇಲ್ಲಿ ನಾ||.

ದಿವಾಣಿ ಮೊಕದ್ದಮೆ ನಂಬರು ೩ ಸನ್ ೧೯೩೭ನೇ ಪೈಕಿ.

ದರಖಾಸ್ತ ನಂಬರ ೪೭೨ ಸನ್ ೧೯೩೭ನೇ ಪೈಕಿ.

ಬಾಳು ಪಟ್ಟಯ್ಯ ಶೆಟ್ಟಿ ದೈವಜ್ಞ ರೈತ ಸಾ। ಹಿರೇಗುತ್ತಿ } ವಾದಿ
ವ। ರಾ। ಸಾ। ಕುಲ್ಕರ್ಣಿ

ವಿರುದ್ಧ

ಗಣಪತಿ ನಾರಾಯಣ ಶೆಟ್ಟಿ ದೈವಜ್ಞ
ಜಿಸಿವಾಲಿಕೆ ಕಸಬು ಸಾ। ದಾವಣಗೇರಿ
ಕೋರ್ಟ ಹದ್ದಿನ ದಾವಣಗೆರೆ ತಾಲೂಕ } ಪ್ರತಿವಾದಿ
ಬಗಲೂರ ನಿವಾಸಿ
ಪೋಸ್ಟ ಆಫೀಸ್ಸು ಇವನಿಗೆ.

ಧೈಕಲಿನ ಮುಂದಾದ ಮೇಲಿನ ಪ್ರತಿವಾದಿ ಇವನಿಗೆ.

ಸದರೀ ದಾವೆಯಲ್ಲಿ, ಹುಕುಮನಾಮೆ ಪಡೆದವನಾದ ಮೇಲಿನ ವಾದಿ ಇವನು ನಿಮ್ಮ ಬಾಬತು ಈ ಮೊದಲು ಜಪ್ತಾದ ಕುಮಟಾ ತಾಲೂಕ ಹಿರೇಗುತ್ತಿ ಗ್ರಾಮದ ಬಾಬತು —

ಜಂಟ್ರಿ	ಸರ್ವೆ ನಂ.	ಪೋ। ಹಿಸ್ಸಾ.	ಎಕ್ರೆ.	ಆಕಾರ.
೧	೮೮	೪	೦-೮-೦	೧-೯-೦
೨	೮೯	೫	೦-೫-೦	೦-೧೨-೦

ಸದರಿ ಸ್ಥಳಗಳಲ್ಲಿರುವ ಪ್ರತಿವಾದೀಗೆ ಇರುವ ಮೂಲಗೇಣಿ ಹಕ್ಕು ವ ಜಂಟ್ರಿ ೧ನೇ ಸ್ಥಳದಲ್ಲಿರುವ ಮನೆ ಹಿರಿವ ಉಪಗ್ರಹಗಳು ಕೂಡ್ರು ವಿಕ್ರಯ ಮಾಡುವ ವಿಷಯದಲ್ಲಿ ಅರ್ಜಿ ಮಾಡಿರುವದರಿಂದ ನಿಮಗೆ ಈ ಲೇಖದ ಮೂಲಕ ತಿಳಿಸುವದೇನಂದರೆ:- ಸನ್ ೧೯೩೮ನೇ ಸಪ್ಟಂಬರ ೧೦ನೇ ತಾರೀಖಿನ ಬೆಳಿಗ್ಗೆ ೧೧ ಘಂಟೆಗೆ ವಿಕ್ರಯದ ದಿವಸವನ್ನು ಜಾಹೀರನಾಮೆಯ ಶರ್ತುಗಳನ್ನು ಗೊತ್ತುಪಡಿಸುವ ಬಗ್ಗೆ ನೇಮಿಸಿದೆ. ಪ್ರಾದೆ ವಿಷಸ ನಿಮ್ಮ ಧಂದೆ ಯಾವದೆಂಬದು ಈ ಕೋರ್ಟಿಗೆ ಜಾಹೀರ ಮಾಡತಕ್ಕದ್ದು.

ಈ ಹೊತ್ತು ತಾರೀಖು ೮-೮-೧೯೩೮ನೇ ಇಸವಿಯ ದಿನ ನಮ್ಮ ಸಹಿ ಮಾಡಿ ಪತ್ತು ಕೋರ್ಟಿನ ಮೊಹರು ಮಾಡಿ ಕೊಡಲಾಯಿತು.

O A. G. Balvalli,

ಕೋರ್ಟ ಮೊಹರು ಇದೆ. *Clerk of the Court.*

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೆಕೆಟುಗಳಿಗೆ ರೂ. ೬	ತೆಂಗಿನ ಗಿಡ ೧೨ ಕ್ಕೆ ... ...೧೨ರಿಂದ ೩೬
... (ಎಕೆರಿಂಜರ್ಮೆಂಟು) ೩೫ ... ... ೪	೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ಹೂ ಬಳ್ಳಿಗಳ ಬೀಜಗಳು ೧೨ ,, ,, ೩॥	ನಿಂಬೆ ಗಿಡ ೩ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರೆ
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪॥	ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಜಪುರಿ,
ನಾಟಿ ... ೧೩ ,, ,, ೩॥	ಪನ್ನೇರಲ, ಕಂಚಿಕಾಯಿ, ಬಟಾಟೆ,
ಪಿಲ್ಪರ ಟಿಕ ೧ ರತ್ತಲಿಗೆ ... ,, ೨॥	ಈ ಎಲ್ಲ ೧೨ ಗಿಡಗಳಿಗೆ ರೂ. ೬.
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಲಿಗೆ... ೨॥	ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.
ಹರಿವೆ ಸೊಪ್ಪು ೧ ರತ್ತಲಿಗೆ ೪	ಸೇಬು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಕುದುರೆ ಮಸಾಲೆ ಬೀಜ ೧ ರತ್ತಲಿಗೆ ... ೩	ಪೀಚೆಸ್, ಪ್ಲಮ್ಸ, ಪಿಯರ ಗಿಡ ೧೨ ಕ್ಕೆ ... ೩೪
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨	ವೊಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ... ೫
ಚಲೋ ಕ್ರೋಟನ್ಸ ಗಿಡ ೧೨ ಕ್ಕೆ ... ೩ ರಿಂದ ೧೨	೧ ಬುಟ್ಟಿ ತುಂಬ ತರಕಾರಿ ...೫ ರಿಂದ ೬
ಅಂದವಾದ ಹೂ ಗಿಡ (ಕರೇಸಿಯಂ) ೧೨ ಕ್ಕೆ ... ೩ ರಿಂದ ೬	ಕ್ರಿಸಾಂತಿಮಮ್ ಗಿಡ ೧೦೦ ಕ್ಕೆ ... ೧೨
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೭ ರಿಂದ ೧೨	ಮೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೀರಿನಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ...೧॥ಯಿಂದ ೩	ನೆರಳು ಕೊಡುವ ತಾಳೆ ಎಲೆಯ ಪಾಂಟಿಲ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೭ ರಿಂದ ೧೨
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨	ಗಡ್ಡೆಗಳು ೧೨ ಕ್ಕೆ ರೂ. ೭ ರಿಂದ ೯.
ಟ್ಟದ ವಾಸಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨	ಎರೋಕೇರಿಯಾ ಕುಕ್ಕಿ ೧೨ ಗಿಡಗಳಿಗೆ ರೂ. ೬—೧೨—೨೪
ಬೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨	ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ಮಹಾತ್ಮರ ಆತ್ಮಚರಿತ್ರ.

(೧೬) ಚಂಪಾರಣ್ಯದೊಳಗಿನ ಕಾರ್ಯಕ್ರಮ.

ಚಂಪಾರಣ್ಯದ ಚೌಕಶಿ ಮಂಡಳದ ರಿಪೋರ್ಟ ಟೀಕೆಗಳನ್ನು ವಿವರಿಸಹೋದರೆ, ಚಂಪಾರಣ್ಯದ ಬೇಸಾಯಗಾರರ ಆಗಿನ ಇಡೀ ಇತಿಹಾಸವನ್ನು ವಿವರಿಸಬೇಕಾಗುವದು. ಈ ಅಧ್ಯಾಯಗಳಲ್ಲಿ ಅಂಥ ವಿವರ ಕೊಡುವ ವಿಚಾರವಿಲ್ಲ ಚಂಪಾರಣ್ಯದ ಚೌಕಶಿ ಎಂದರೆ, ಸತ್ಯ-ಅಹಿಂಸೆಗಳ ದೊಡ್ಡದೊಂದು ಪ್ರಯೋಗವಾಗಿತ್ತು. ಆ ಪ್ರಯೋಗದಿಂದ ನನಗೆ ಕಂಡುಬಂದ ವಿಚಾರಗಳನ್ನು ವಾರವಾರಕ್ಕೆ ನಾನು ಪ್ರಕಟಿಸುತ್ತೇನೆ. ತಪಶೀಲು ಬೇಕಾದರೆ, ಶ್ರೀ॥ ರಾಜೇಂದ್ರ ಪ್ರಸಾದರವರು ಹಿಂದೀ ಭಾಷೆಯಲ್ಲಿ ಬರೆದ ಚಂಪಾರಣ್ಯ ಸತ್ಯಾಗ್ರಹದ ಇತಿಹಾಸವನ್ನು ಓದತಕ್ಕದ್ದು. ಈ ಪುಸ್ತಕದ ಇಂಗ್ಲಿಷ ಪ್ರತಿಯು ಈಗ ಮುದ್ರಿಸಲ್ಪಟ್ಟಿರುವದಾಗಿ ತಿಳಿಯುತ್ತದೆ

ಇನ್ನು ಈ ಅಧ್ಯಾಯದ ವಿಷಯವನ್ನು ವಿವರಿಸುವೆನು. ಗೋರಖ ಬಾಬುವಿನ ಮನೆಯಲ್ಲಿ ಈ ಚೌಕಶಿ ನಡಿಸುವದು ಸಾಧ್ಯವಿದ್ದಿಲ್ಲ. ಹಾಗೆ ಚೌಕಶಿ ನಡಿಸಹತ್ತಿದರೆ, ಗೋರಖ ಬಾಬುಗಳು ಮನೆ ಬಿಟ್ಟು ಹೋಗಬೇಕಾಗಿದ್ದಿತ್ತು ಮೋತಿಹಾರಿಯ ಜನರೊಳಗೆ ಇನ್ನೂ ಭಯವಿತ್ತು. ಅದರಿಂದ ನಮಗೆ ಭಾಡಿಗೆ ಮನೆ ಸಿಗುವದು ಕಷ್ಟವಾಗಿತ್ತು. ವ್ರಜಕಿಶೋರ ಬಾಬುರವರು ಉಪಾಯದಿಂದ ಒಂದು ಮನೆ ಸಂಪಾದಿಸಿದರು. ಅದರೊಳಗೆ ಸುತ್ತುಮುತ್ತು ಅಂಗಳವಿತ್ತು; ನಾವು ಅಲ್ಲಿ ಬಿಡಾರ ಒಯ್ದೆವು.

ಹಣವಿಲ್ಲದೆ ಈ ಕೆಲಸವನ್ನು ನಡಿಸುವದು ಸಾಧ್ಯವಿದ್ದಿಲ್ಲ ಇಂಥ ಕೆಲಸಗಳಿಗಾಗಿ ಜನರಿಂದ ಹಣ ಕೇಳುವ ಪ್ರಘಾತ ಬಿದ್ದಿದ್ದಿಲ್ಲ. ವ್ರಜಕಿಶೋರ ಬಾಬುಗಳೂ, ಅವರ ಗೆಳೆಯರೂ ಬಹುತರವಾಗಿ ವಕೀಲರೇ. ಪ್ರಸಂಗ ಬಿದ್ದಾಗ ಅವರು ಸ್ವತಃ ವಂತಿಗೆ ಕೊಡುತ್ತಿದ್ದರು; ಅಥವಾ ಗೆಳೆಯರ ಕಡೆಯಿಂದ ಸಂಗ್ರಹಿಸುತ್ತಿದ್ದರು ಸ್ವತಃ ವ್ರಜಕಿಶೋರ ಬಾಬುಗಳೂ, ಅವರ ಗೆಳೆಯರೂ ಬೇಕಾದಷ್ಟು ದ್ರವ್ಯಸಹಾಯ ಮಾಡಬಲ್ಲವರಾಗ, ಜನರ ಕಡೆ ಅವರು ಹಣ ಬೇಡುವ ಬಗೆ ಹೇಗೆ? ಅದೊಂದು ವಿಚಾರಾರ್ಹ ಪ್ರಶ್ನೆಯಾಗಿತ್ತು ಚಂಪಾರಣ್ಯದ ಬೇಸಾಯಗಾರರ ಕಡೆಯಿಂದ ಎಷ್ಟಕ್ಕೂ ಹಣ ಸ್ವೀಕರಿಸಬಾರದೆಂದು ನಾನು ಮನಸ್ಸಿನಿ ಧಾರ ಮಾಡಿದ್ದೆ. ಅವರಿಂದ ಹಣ ಕೊಂಡರೆ, ಲೋಕದಲ್ಲಿ ತಪ್ಪು ಗ್ರಹಿಕೆಯಾಗುತ್ತಿತ್ತು. ಈ ಚೌಕಶಿಯ ಖರ್ಚಿಗಾಗಿ ರಾಷ್ಟ್ರದ ಕಡೆ ದ್ರವ್ಯಸಹಾಯ ಬೇಡಬಾರದಾಗಿಯೂ ನಾನು ನಿರ್ಧರಿಸಿದ್ದೆ ಯಾಕೆಂದರೆ, ಇಂಥ ಪ್ರಕಾರದಿಂದ ಈ ಪ್ರಶ್ನೆಗೆ ಅಖಿಲ ಭಾರತೀಯ ರಾಜಕಾರಣದ ಬಣ್ಣ ಬರುತ್ತಿತ್ತು. ಮುಂಬಯಿಯ ಗೆಳೆಯರೂ ೧೫೦೦೦ ರೂಪಾಯಿ ಕೊಡಲು ತಯಾರಿದ್ದರು ನಾನು ಅದನ್ನು ಸಾಭಾರ ನಿರಾಕರಿಸಿದೆನು ವ್ರಜಕಿಶೋರ ಬಾಬುರವರ ಸಹಾಯದಿಂದ ಚಂಪಾರಣ್ಯದ ಹೊರಗಿನವರೊಳಗಿನ ಸುಸ್ಥಿತಿಯ ಬಿಹಾರಿಗಳ ಕಡೆಯಿಂದ ಶಕ್ಯವಿದ್ದಷ್ಟು ದ್ರವ್ಯವನ್ನು ಸಂಗ್ರಹ ಮಾಡಬೇಕೆಂದು ನಾನು ನಿರ್ಧರಿಸಿದೆನು. ಇನ್ನು ಹಣ ತಗಲಿದರೆ, ನನ್ನ ಗೆಳೆಯರಾದ ರಂಗೂನಿನ ಡಾ॥ ಪಿ ಜೇ ಮೇಹತಾರವರ ಕಡೆ ಬಿನ್ನೈಸಿಕೊಳ್ಳಬೇಕೆಂದೂ ನನ್ನ ಆಲೋಚನೆಯಾಯಿತು. ಬೇಕಾದಷ್ಟು ಹಣವನ್ನು ಕಳಿಸಿಕೊಡತಕ್ಕವರಾಗಿ ಡಾ॥ ಮೇಹತಾರವರು ಸಂತೋಷದಿಂದ ಒಪ್ಪಿದರು ಹೀಗೆ ದ್ರವ್ಯಾನುಕೂಲತೆಯ ಚಿಂತೆಯು ದೂರವಾಯಿತು. ನಮಗೆ ಹೆಚ್ಚಿನ ಹಣ ಬೇಕಾಗಿದ್ದಿಲ್ಲ ಚಂಪಾರಣ್ಯದ ಬಡತನದ ವಿಚಾರದಿಂದ ಅಲ್ಪ ಖರ್ಚಿನಿಂದ ಈ ಕೆಲಸ ಮುಗಿಸಬೇಕೆಂದು ನಮ್ಮ ನಿಶ್ಚಯವಾಗಿತ್ತು. ನಿಜವಾಗಿಯೂ ನಮಗೆ ಹೆಚ್ಚಿನ ಹಣ ಬೇಕಾಗಿದ್ದಿಲ್ಲವೆಂದು ಕೊನೆಗೆ ತಿಳಿದುಬಂತು ಒಟ್ಟಿಗೆ ೩ ಸಾವಿರ ರೂಪಾಯಿಗಳಷ್ಟು ಹಣ ಖರ್ಚಾದ ನೆನಪಿದೆ ನಾವು ಪಟ್ಟಿಯಿಂದ ಕೂಡಿಸಿದ ಹಣದಲ್ಲಿ ನೂರಾರು ರೂಪಾಯಿ ಉಳಿದ ನೆನಪಿದೆ ಮೊದಮೊದಲು ನನ್ನ ಜೊತೆಗಾರರ ವಿಚಿತ್ರ ನಡಾವಳಿಯನ್ನು ಜಗಿಂದಾಗ ಟೀಕಿಸುವ ಪ್ರಸಂಗ ಬರುತ್ತಿತ್ತು. ಪ್ರತಿ ಒಬ್ಬ ವಕೀಲರಿಗೆ ಪ್ರತಪ್ರತ್ಯೇಕ ಆಳು, ಅಡಿಗೆ ಭಟ್ಟ ಇರುತ್ತಿದ್ದರು. ಪ್ರತ್ಯೇಕ ಅಡಿಗೆಮನೆಯೂ ಇರುತ್ತಿತ್ತು. ಮಧ್ಯರಾತ್ರ ತನಕ ಊಟ ನಡೆಯುತ್ತಿತ್ತು. ಖರ್ಚು ಅವರವರೇ ನೋಡಿಕೊಳ್ಳುತ್ತಿದ್ದರು. ಆದರೆ, ಅಕ್ರಮದಿಂದ ನನಗೆ ಬೇಸರ ಬಂತು. ಆದರೆ, ನಾವೆಲ್ಲರೂ ಅತ್ಯಂತ ಗೆಳೆಯರಾದ್ದರಿಂದ ನಮ್ಮೊಳಗೆ ತಪ್ಪು ಗ್ರಹಿಕೆಯಾಗುವ ಸಂಭವವಿರಲಿಲ್ಲ. ನನ್ನ ಟೀಕೆಯನ್ನು ಸಂತೋಷದಿಂದ ಅವರು ಸ್ವೀಕರಿಸಿದರು ಎಲ್ಲ ಆಳುಗಳನ್ನು ಮನೆಗೆ ಬಿಡತಕ್ಕ ಮಾಡಬೇಕಾಗಿಯೂ, ಎಲ್ಲ ಅಡಿಗೆಮನೆಗಳನ್ನು ಒಟ್ಟುಗೂಡಿಸಿ ಒಕ್ಕಟ್ಟು ಮಾಡಬೇಕಾಗಿಯೂ, ನಿಯಮಿತ ಹೊತ್ತಿಗೆ ಊಟ ಮಾಡಬೇಕಾಗಿಯೂ ಕೊನೆಗೆ ನಮ್ಮೊಳಗೆ ಗೊತ್ತಾಯಿತು. ಎಲ್ಲರೂ ವನಸ್ಪತ್ಯಾಹಾರಿಗಳಾಗಿರಲಿಲ್ಲ ಎರಡು ಅಡಿಗೆಮನೆಗಳನ್ನು ನಡಿಸಹೋದರೆ, ಖರ್ಚು ಹೆಚ್ಚು ಬರುತ್ತದೆ. ಆದರಿಂದ ಎಲ್ಲರ ಬಗ್ಗೆ ವನಸ್ಪತ್ಯಾಹಾರದ ಅಡಿಗೆಮನೆಯೊಂದನ್ನೇ ನಡಿಸಬೇಕಾಗಿ ನಮ್ಮೊಳಗೆ ನಿಶ್ಚಯವಾಯಿತು. ಸಾಮಾನ್ಯ ಪ್ರತಿಯ ಊಟಗಳನ್ನೇ ತಯಾರಿಸಬೇಕಾಗಿಯೂ ಗೊತ್ತಾಯಿತು.

ಈ ವ್ಯವಸ್ಥೆಯಿಂದ ಖರ್ಚಿನ ಮಾನವು ಬಹಳ ಕಡಿಮೆಯಾಯಿತು ನಮಗೆ ಕೆಲಸ ಮಾಡಲಿಕ್ಕೆ ಅವಶ್ಯವುಳ್ಳ ಹೆಚ್ಚಿನ ಸಮಯವೂ, ಚೈತನ್ಯವೂ ಪ್ರಾಪ್ತವಾದವು. ಒಕ್ಕಲಿಗರು ತಮ್ಮ ಹೇಳಿಕೆ ಹೇಳಲು ತಂಡುಗಟ್ಟಿ ಬರುತ್ತಿದ್ದರು. ಅವರ ಜೊತೆಗೆ ಅವರ ಇಷ್ಟಮಿತ್ರರು ಬರುತ್ತಿದ್ದರು. ನಮ್ಮ ಮನೆಯ ಆವಾರವೆಲ್ಲ ಜನಸಂದಣಿಯಿಂದ ತುಂಬಿಹೋಯಿತು ನನ್ನ ದರ್ಶನ ಪಡೆಯಲೋತ್ಸುಕರಾಗಿ ಬಂದ ಜನರಿಗೆ ತಡೆಯಲು ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾದವು. ಆದರಿಂದ ನಿಯಮಿತ ಹೊತ್ತಿಗೆ ನನ್ನ ದರ್ಶನ ಮಾಡಬೇಕಾಗಿತ್ತು. ಹೇಳಿಕೆ ಬರಕೊಳ್ಳಲು ೫-೭ ಜನ ಸ್ವಯಂಸೇವಕರು ಕೊಡಗುತ್ತಿದ್ದರು ಆದರೂ, ಸಾಯಂಕಾಲಕ್ಕೆ ಕೆಲವರು ಹಿಂದೆ ಹೋಗುವ ಪ್ರಸಂಗ ಬರುತ್ತಿತ್ತು. ಎಲ್ಲ ಹೇಳಿಕೆಗಳನ್ನು ಬರಕೊಳ್ಳುವ ಆವಶ್ಯಕತೆ ಇರಲಿಲ್ಲ ಕೆಲವರು ಹೇಳಿದ ಸಂಗತಿಯನ್ನೇ ಹೇಳುತ್ತಿದ್ದರು. ಆದರೆ, ತಮ್ಮ ಹೇಳಿಕೆ ಬರಕೊಂಡ ಹೊರತು ಜನರಿಗೆ ಸಮಾಧಾನವಾಗುತ್ತಿದ್ದಿಲ್ಲ. ಅವರ ಮನಸ್ಸಿನ ಕಾಂಕ್ಷೆಯ ಅರಿವು ನನಗಾಗುತ್ತಿತ್ತು

ಹೇಳಿಕೆಯನ್ನು ಬರಕೊಳ್ಳುವವರು ಕೆಲವು ನಿಯಮಗಳನ್ನು ಪಾಲಿಸಬೇಕಾಗಿತ್ತು ಪ್ರತಿ ಒಬ್ಬ ಒಕ್ಕಲಿಗನಿಗೆ ಸೂಕ್ಷ್ಮವಾಗಿ ಅಡ್ಡ ಸವಾಲು ಕೇಳಬೇಕಾಗಿತ್ತು ಅವುಗಳಿಗೆ ಸಮಾಧಾನಕರ ಉತ್ತರ ಕೊಡದವರ ಹೇಳಿಕೆ ಬರಕೊಳ್ಳುತ್ತಿದ್ದಿಲ್ಲ ಇದರಿಂದ ಹೆಚ್ಚಿನ ಸಮಯವು ತಗಲುತ್ತಿತ್ತು ಆದರೆ, ಈ ಕ್ರಮದಿಂದ ಕೊಂಡ ಹೇಳಿಕೆಗಳನ್ನು ಆಕ್ಷೇಪಿಸಲಾಗುತ್ತಿದ್ದಿಲ್ಲ.

ನಾವು ಒಕ್ಕಲಿಗರ ಹೇಳಿಕೆಗಳನ್ನು ಬರಕೊಳ್ಳುತ್ತಿದ್ದಾಗ ಗುಪ್ತ ಪೋಲೀಸ ಖಾತೆಯ ಅಧಿಕಾರಿಗಳಿಬ್ಬರು ಯಾವಾಗಲೂ ಹಾಜರಿರುತ್ತಿದ್ದರು. ಅವರಿಗೆ ಬಳಸದಂತೆ ನಾವು ಪ್ರತಿಬಂಧಿಸಬಹುದಿತ್ತು. ಆದರೆ, ಮುಂಚೆನಿಂದಲೇ ಗುಪ್ತ ಪೋಲೀಸ ಖಾತೆಯವರಿಗೆ ಶಿಷ್ಟಾಚಾರದಂತೆ ನಡಿಕೊಳ್ಳಬೇಕಾಗಿಯೂ, ಶಕ್ಯವಿದ್ದ ಮಾಹಿತಿಯನ್ನು ಅವರಿಗೆ ಪೂರೈಸಬೇಕಾಗಿಯೂ ನಾವು ನಿರ್ಧಾರ ಮಾಡಿದ್ದೆವು ಅದರಿಂದ ನಮಗೇನು ಬಾಧೆ ಇದ್ದಿಲ್ಲ. ವಿಚಾರ ಮಾಡಿದರೆ, ಅದರಿಂದ ಲಾಭವಿತ್ತು ಗುಪ್ತ ಪೋಲೀಸ ಖಾತೆಯವರ ಸಮಕ್ಷ ಅವರ ಹೇಳಿಕೆ ಕೇಳಿಕೊಂಡದ್ದರಿಂದ ಒಕ್ಕಲಿಗರು ನಿರ್ಭಯರಾಗಹತ್ತಿದ್ದರು; ಹಾಗು ಹೇಳಿಕೆಗಳನ್ನು ಜಾಗ್ರತೆಯಿಂದ ಅತಿಶಯೋಕ್ತಿ ಮಾಡದೆ ಹೇಳತೊಡಗಿದರು. ಗುಪ್ತ ಪೋಲೀಸ ಖಾತೆಯ ಗೆಳೆಯರ ಕೆಲಸವು ಜನರಿಗೆ ಹ್ಯಾಗಾದರೂ ಮಾಡಿ ಸಿಲುಕಿಸುವದಿತ್ತು. ಆದರಿಂದ ಒಕ್ಕಲಿಗರು ಬಹಳೇ ಜಾಗ್ರತೆಯಿಂದ ಜಬಾನಿ ಕೊಡುತ್ತಿದ್ದರು.

ತೋಟಿಗರ ಸಾವುಕಾರರ ಮನಸ್ಸಿನಲ್ಲಿ ದ್ವೇಷವನ್ನುಂಟು ಮಾಡಲು ನಾನು ಬಯಸಲಿಲ್ಲ. ಸಭ್ಯ ವರ್ತನದಿಂದ ಅವರ ಮನವೊಲಿಸಲು ನನ್ನ ಪ್ರಯತ್ನವಿತ್ತು. ವಿಶೇಷ ಆರೋಪ ಬಂದ ತೋಟಿಗರಿಗೆ ನಾನು ಪತ್ರ ಬರೆದು ಆರೋಪಗಳ ವಿವರ ಹೇಳುತ್ತಿದ್ದೆನು. ಅವರಿಗೆ ಭೆಟ್ಟಿ ಸಹ ಆಗುತ್ತಿದ್ದೆ; ತೋಟಿಗರ ಸಂಘಕ್ಕೂ ಸಹ ನಾನು ಹೋಗಿದ್ದೆ. ಒಕ್ಕಲಿಗರ ದೂರುಗಳನ್ನು ಅವರಿಗೆ ಹೇಳಿದೆ; ಅವರು ತಮ್ಮ ಕಡೆ ಹಕೀಕತನ್ನು ನನಗೆ ಹೇಳಿದರು. ಕೆಲವು ತೋಟಿಗರು ನನಗೆ ದ್ವೇಷಿಸಿದರು; ಕೆಲವರು ನನಗೆ ಆಲಕ್ಷ ಮಾಡಿದರು; ಕೆಲವರು ಆದರದಿಂದ ನನ್ನನ್ನು ನಡಿಸಿಕೊಂಡರು.

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ:-ಅಮೃತ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ.

ಸ್ಪೆಶಲ್ ಪೋಲೀಸಿಗಳು ೧-೭-೨೮ ನೇದರಿಂದ ಕೊಡಲ್ಪಡುತ್ತವೆ. ೨ ವರ್ಷಗಳ ಮೇಲೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು ಡಾಕ್ಟರರ ತಪಾಸು ಇಲ್ಲಾ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗುತದೆ, ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾರೆ; ಇನ್ನೂ ಇಳಿಸುತ್ತಿದಾರೆ. ಕಂತಿನ ರಕಮು ತಿಂಗಳಿಗೆ ೧ ಯಾ ೨ ರೂಪಾಯಿ. ೧೪ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ಸಿಗುತ್ತವೆ. ಪ್ರಯತ್ನಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ದಲಾಲಿ ದರವು ವಿಶೇಷ. ಏಜೆನ್ಸಿನ ಮಾಹಿತಿಯ ಬಗ್ಗೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದು.



इंग्लंडमध्यें तयार झालेली
रॉयल आर्चर
सायकल (सायकलच्या प्रत्येक भागावर "आर्चर" अशी निशाणी असते.)

उत्तम रीतीनें लांकडी खोक्यांत पॅक केलेली रेल्वे खर्च भरलेली, तुमच्या गांवच्या रेल्वे स्टेशनवर

फक्त रु. ८५ आ. ८.

या सायकल सोबत डनलॉप कॉर्ड टायर्स, फ्रीव्हील, २ रिम ब्रेक्स, मडगार्डस्, आरामशीर स्प्रिंग सीट, रबर पॅडल्स, लुकासचा "पाथफाइंडर" दिवा, सर्वोत्कृष्ट घंटा, डनलॉप प्लेटेड पंप, संपूर्ण हत्यारांसह हत्यारें ठेवण्याची बॅग, ऑईलर. ऑर्डर सोबत रु २१ आगाऊ उरलेली रक्कम व्ही. पी. नें वसूल केली जाईल.

वेलिंग्टन सायकल अँड मोटार कं.
मुंबई—हॉर्न्बी रोड. पुणे—आर्सेनल रोड

– ಉತ್ತರ ಕರ್ನಾಟಕ ಜಿಲ್ಲೆಯ ಮಾಲೂಜ ನಗರದ ಶ್ರೀ॥ ಟಿ. ಎಸ್. ಮಲ್ಲಪ್ಪನವರು ತಮ್ಮ ಮುರುಘಾ ಮಠದಲ್ಲಿ ತ್ರಕಾ ವಸತಿಗೃಹಗಳ ವಿನಿಯೋಗಗಳಿಗಾಗಿ ೩೦೦೦ ರೂಪಾಯಿಗಳನ್ನರ್ಪಿಸಿದ್ದಾರೆ.

– ಗೋಕಾವಿಯ ದಾ॥ ನಾರಾಯಣರಾವ ಶಟ್ಟಿ ಎಂಬುವ ಕುಮಾರಿ ಲೀಲಾಬಾಯಿ ಎಂಬ ೯ ವರ್ಷ ಪ್ರಾಯದ ಹುಡುಗಿಯು ಶಿಕ್ಷಣದ ಬಾಬಿ ವರ್ಷಾಸನ ೩೦೦ ರೂಪಾಯಿ ಗಳಿಸುತ್ತಾಳೆ.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ॥ ಎ. ರಂಗನಾಥ ಅವರ ಮುನ್ನುಡಿ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ॥ ಡ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ, ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦. ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಅದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ
(ಶಾ) ೧೩೩ ಬಾಮಮಾಜಪೇಟೆ, ೪ನೇ ಬೀದಿ,
ಬೆಂಗಳೂರು ಸಿಟಿ.

ಬೆಂಗಳೂರ ತಂಬಾಕಿನ ಖಾಜಾ ಸತ್ಯ! ಸುಲಭ ಕ್ರಯ

ಶಿಫಾರಸುಪತ್ರ ಪಡೆದ

ನಶ್ಯದ ಪುಡಿ!

೦. ೧ನೇ ನಶ್ಯದಪುಡಿ ೩೪ ತೊಲೆ ಶೇರು ೧ರ ರೂ.೧।.
೦. ೨ ನೇ ... ...ಶೇರು ೧ರ ರೂ. ೧-೨-೦.
೦. ೩ ನೇ ... ...ಶೇರು ೧ರ ರೂ. ೧-೦-೦.

ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಸಿಗುವದು

ಪತ್ತೆ:- ಪುಂಡ್ಲೀಕ ನಾಗ ಪೈ,
ನಶ್ಯವ್ಯಾಪಾರಿ, ಹೊನ್ನಾವರ (ಉ. ಕ.)

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ,
ವಿಧವಾವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.
ಇವರಿಗೆ ಬರೆದು ತಿಳಿದುಕೊಳ್ಳಿರಿ.

ಉಚಿತ!] ನನ್ನ ಶಾಸ್ತ್ರೀಯ ವಾದ [ಉಚಿತ!!

ಶಾರೀರಿಕ ಶಿಕ್ಷಣ.



ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು ನನ್ನಲ್ಲಿ ಕಲಿಯುತ್ತಿರುವವರ ಅಭಿಪ್ರಾಯಗಳೂ ಇದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೨ ಆಣೆಯ ಸ್ಟಾಂಪನ್ನು ಕಳುಹಿಸಿದರೆ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ.

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತಗಲುವ ವಿವಿಧ ಪಟ್ಟೆ,
ದೊರಗಾದ ಹಾಗೆ ನುಣುಪಾದ
ಉಣ್ಣೆಯ ಹಾಗು ಹತ್ತಿಯ ಹಣಿಗೆಗಳೂ,
ಹತ್ತಿಯ ಹಾಗು ಹಿತ್ತಾಳೆಯ ಬಿಜಗರುಗಳೂ,
... ಯ ಬೊಬಿನುಗಳೂ, ನಾಡೀಕಾಗಳೂ,
ಎಮೆರಿ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.
ಬಹಳ ಅಗ್ಗ!

P. P. TRIVEDI & CO.,
BRUCE Street, Fort, BOMBAY.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತದೆ ಪ್ರಯಾಣಿಕರಿಗೆ ಇಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಸಿಯು ಹೋಗಿ ಶಾಶ್ವತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರು ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಕೂಡಲೇ ದಿವಸವೇ ಬರುವದು. ಕಾಂತಿ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩–೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಹನ್ನೆರಡು ಬಾಟಲಿಗಳ ಕಿಮ್ಮತು ೧೨–೦–೦ ಮತ್ತು ೧ ಬಾಟಲ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟ॥ ಕಡಿಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव – मृद्विकारिष्ट – शारंगधर म. अ. १०

रामबाण औषध

सर्दि घालविणारें,
भूक वाढविणारें
शौच्यास साफ करणारें
झोप आणणार
शक्ति देणारें
तेजस्वीपणा आणणार

पित्यास रुचिकर

किंमत- एक रतलास १॥ रुपये.
ट्याटलाग मागवा

झंडु फार्मास्युटिकल वर्क्स लिमिटेड
मुंबई नं. १४

ऐजंट— मेसर्स पंडित आणी कंपनी,
तीर्थहळी

सिर्सि एजट एस. एल. धाकप्पा आणि ब्रदर

ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಅಗ್ರವಾದ
'ನೆಶನಲ್ ಇನ್ಶೂರನ್ಸ ಕಂಪನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು [illegible] ಕಳೆದ ವರುಷ ಲೆಕ್ಕಾಚಾರದ ಮೇಲೆ 5 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ [illegible] ಕೊಟ್ಟದ್ದುಂಟು

ಹೆಂಗಸರು 1000 ರೂಪಾಯಿಗಳ [illegible] ಕಂಪನಿ [illegible] ಅರ್ಧ [illegible] 1200 ರೂಪಾಯಿಗಳ [illegible] ನವ್ವ [illegible] ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು.

ಕರ್ನಾಟಕಕ್ಕೆ ಏಜಂಟರು
ಬಿ ಸಿ ಸಿರಾಳಕೊಪ್ಪ,
ಲೆಮಿಂಗ್ಟನ್ ಬಿಲ್ಡಿಂಗ
ಹುಬ್ಬಳ್ಳಿ

P D Churi,
Branch Secretar
Alice Building
Hornby Road,
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟೆ ಮಡಿ, ಸೀರೆ, ಖಣ, ರೇಶ್ಮೆ ಶಲ್ಲೆ, ಬನಾರಸಿ ಕಾಶ್ಮೀರದ ಶಾಲು ಸಕಲಾತಿ ಧಾಬಳಿ, ರುದ್ರಾಕ್ಷಿ ಸರ, [illegible] ಗೌರೀಶಂಕರ ಪಂಚಮುಖಿ ಸ್ಫಟಿಕ ಸರ, ಬಾಣಲಿಂಗ, ಶಾಲಿಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತ, ಜಾಪತ್ರಿ, [illegible] ಮುಂತಾದ ಸಕಲ ವಿಧವಾದ ಕಾಶಿಯ ಮಾಲುಗಳನ್ನು ಯೋಗ್ಯ ಬೆಲೆಗೆ ವಿ ಪಿ ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ವಿಳಾಸ—

ವಿಶ್ವನಾಥ ಎಂಡ್ ಬ್ರದರ್ಸ,
ದಶಾಶ್ವಮೇಧ ಘಾಟ ಬನಾರಸ ಸಿಟಿ

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ ಬೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಸೇರಲ್ಪಟ್ಟ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾದಾ ರೀ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು [illegible] ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ [illegible]

ಒಂದು ಡಬ್ಬಿಗೆ ಕ್ರಯ ರೂ ೦-೪-೦. [illegible] ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ—[illegible] ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪೋರ್ಕಟೌನ್, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತು.ಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ಸರ್ವಾಂಗ ಸುಂದರಪಾಕ. [ಸ್ಟರ್.

ವೀರ್ಯವು [illegible] ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ [illegible] ಸ್ವಪ್ನಾವಸ್ಥೆ [illegible] ಧಾತು ಹೋಗೋಣ, ಸ್ತ್ರೀಸ್ಪರ್ಶಮಾಡ [illegible] ವೀರ್ಯ ಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣ [illegible] (ಹಾರ್ಟ ಡಿಸೀಜ) [illegible] ಹಳೇ ಜ್ವರ, [illegible] ಮೂತ್ರ [illegible] ಯೋಣ [illegible] ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ [illegible] ಶುದ್ಧವಾಗಿ ಪುಷ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯ ಸ್ತಂಭನ [illegible] ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ [illegible] (೫೨) ವನಸ್ಪತಿಗಳು [illegible] "ಮೈಸೂರ [illegible]" ಪತ್ರಿಕೆಯಲ್ಲಿ [illegible] ಮಾಡಿದ್ದಾರೆ [illegible]

ಮುಂಜಾನೆ ೨ ತೊಲೆ [illegible] ರಾತ್ರಿಯ ಭೋಜನವಾದ ನಂತರ ೨ ತೊಲೆಯ ಒಂದು [illegible] ಯನ್ನು ತಕ್ಕೊಂಡು ಅದರ [illegible] ಹಾಲ [illegible] ತೊಲೆ ಏಕ್ಕಯ ಅಥವಾ ಆಕಳ ಹಾಲನ್ನು [illegible] ದಿವಸ [illegible] ಕೋ [illegible] ಡಬ್ಬಿಗೆ [illegible] ಡಬ್ಬಿಗೆ ೨೭ ರೂ ೧೦ ಡಬಿಗೆ ೫೦ ರೂ [illegible] ತಕ್ಕೊಂಡರೆ [illegible] ಪೂರ್ಣ ಗುಣಬರುವದು

ಪತ್ತೆ. ಮಾಲಿಕ ವೈದ್ಯ ವ್ಹಿ. ಎಸ್. ಕಾಪಸೆ, ಮು ಪೋ. ಮಿರಜ.

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ

ಈ ಮದ್ದು ಅತ್ಯಂತ ಅವಶ್ಯವಾದದ್ದು,

[illegible] ತೀರ ಅನುಕೂಲ, ಮನೆತನದವರಂತು ಇಟ್ಟುಕೊಳ್ಳಲೇ ಬೇಕು, ಏಡ್ಡ ಪೆಟ್ಟು ಗಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೆ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೋ,

ಮುಂಬಯಿ ಮತ್ತು ಮದ್ರಾಸ.

Printed and Published by [illegible] Shenvi (Editor) at his Star of Kanara Press, Kumta.

REG. NO. B. 1270 MONDAY, AUGUST 20TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೫

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ಯಾಯ
ಕ್ಯಾಪಿನ (೧೫ ಏಮ್ ಉದ್ದ)
೮ ಸಾಲುಗಳವರೆಗೆ ರೂ 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು
ದೊಡ್ಡದಿರುವದೋ ಆ ಮಾನ
ದಿಂದ ಅಷ್ಟುಸಾಲುಗಳು ಹಿಡಿ
ಯಲ್ಪಡುವವು.
ಬಾಕಿ ಜಾಹೀರಾತುಗಳ ಬಗ್ಗೆ
ಪತ್ರವ್ಯವಹಾರ ಯಾ ಸಮಕ್ಷ ತಿಳಿ
ಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೦ ಮಾಹೆ ಅಗೋಸ್ತ ಸನ್ ೧೯೨೩ನೇ ಇಸವಿ.)

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ -ಪಟ್ಟಣ ಮೊಳೆಗಳು, ಮೋಜಿನ ಉಪಯೋಗದ ಬೋಗುಣಿಗಳು, ಟಿನ್ ಪ್ರೇಶರ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಬಣ್ಣ ಸಿಗುತ್ತದೆ, ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಪೇಶಲ ಸಾಮಾನು ಸಿಗುವ ದುಕಾನೂ ಇದೇ! ಲಾಭೂನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಸಿರಸಿ ವ್ಯಾಪಾರಸ್ಥರು ರೊಖ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ವಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)

ಏಜಂಟರು ಬೇಕು! ಏಜಂಟರು ಬೇಕು!!



ನಮ್ಮಲ್ಲಿ
ಅತಿ ಮನೋಹರವಾದ
ಶೀಶಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ದಿಕ್ಷನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೊಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.
ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲತರದ ರೇಷ್ಮಿ ಪೀತಾಂಬರ, ಜರಿ ಕಣ ಜರಿ ಸೀರೆ, ಕಾಶ್ಮೀರ್ ಶಾಲು, ಧರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ. ಕಾಶೀಕ್ಷೇತ್ರ.

Wanted:- Candidates for Telegraph and Station Master's Classes. Full particulars and Railway Fare Certificate on 2 annas stamp. Apply to — Central Telegraph College Nai Sarak, **Delhi.**

" ಔಷಧ ಸೀಸೆಗಳಿಗಿಂತ ಒರೇ ಜೀವನಕ್ರಮದಿಂದಲೇ
ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು. "

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !-

ಆನರೇಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ " ಆರೋಗ್ಯಚಂದ್ರಿಕೆ " ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ ದೃಢಕಾಯಕರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೊಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಪತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಒಂದು ಬೀಳುವದು ಪತ್ರ ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ಮುಂಬಯಿ ಕಾಯಿದೆ ಕೌನ್ಸಿಲು.

(ಪ್ರಶ್ನೋತ್ತರಗಳಿಂದ ಸಂಗ್ರಹಿಸಿದ ಮಾಹಿತಿ)

ಪ್ರಾಥಮಿಕ ಶಿಕ್ಷಕರ ಸಂಬಳ

ಸಾಠೇ-ಪರಾಂಜಪೇ ಸ್ಕೇಲಿನಂತೆ ಪ್ರಾಥಮಿಕ ಶಿಕ್ಷಕರಿಗೆಲ್ಲ ಸಂಬಳ ಕೊಡಹೋದರೆ ಸರಕಾರಕ್ಕೆ ೧೮ ಲಕ್ಷ ೫೮ ಸಾವಿರ ರೂಪಾಯಿ ಹೆಚ್ಚಿನ ಖರ್ಚು ತಗಲುತ್ತದೆ. ೧೯೨೭ನೇ ಇಸ್ವಿಯ ಮುಂಚೆ ಸೇರಿದ ಪ್ರಾಥಮಿಕ ಶಿಕ್ಷಕರ ಬಗ್ಗೆ ಇಷ್ಟು ಖರ್ಚಾಗುತ್ತದೆ. ದ್ರವ್ಯಾಭಾವದ ಮೂಲಕ ಸಾಠೇ-ಪರಾಂಜಪೇ ಸ್ಕೇಲಿನಂತೆ ಈ ಸಂಬಳ ಕೊಡಲಾಗಲಿಲ್ಲ. ೧೯೨೬ನೇ … ತಿಂಗಳಿನಲ್ಲಿ ಕಾಯಿದೆ ಕೌನ್ಸಿಲು … ಸರಕಾರವು ಅಮಲಬಜಾವಣೆ ನಡಿಸದಿರಲಿಕ್ಕೂ ದ್ರವ್ಯಾಭಾವವೇ ಕಾರಣವಾಗಿರುತ್ತದೆ. ಸಾಠೇ-ಪರಾಂಜಪೇ ಸ್ಕೇಲಿನಂತೆ ಅಥವಾ ಅನ್ಯ ಸ್ಕೇಲಿನಂತೆ ಸಂಬಳ ಕೊಡಬೇಕೆಂಬ ಆಲೋಚನೆ ನಡೆದಿದೆ. ದ್ರವ್ಯ ಪೂರೈಕೆಯ ದೃಷ್ಟಿಯಿಂದ ಸೂಕ್ಷ್ಮ ವಿಚಾರ ಮಾಡಬೇಕಾಗಿದೆ. ಆದದರಿಂದ ಈ ವಿಷಯ ನಿಶ್ಚಯವಾದ ಉತ್ತರ ಕೊಡಲು ಸರಕಾರಕ್ಕೆ ಸಾಧ್ಯವಿಲ್ಲ. ಹೆಡ್ ಮಾಸ್ತರರನ್ನು ಆರಿಸುವ ಕುರಿತು ಸರಕಾರವು ೧೯೨೬ನೇ ಇಸ್ವಿ ಮಾರ್ಚ ಅಧಿವೇಶನದಲ್ಲಿ … ಇನ್ನೂ ವಿಚಾರ ಮಾಡಲಿಲ್ಲ. ಹೆಡ್ ಮಾಸ್ತರರ ಹಾಜರಿ ಪತ್ರಗೆ 'ಡ್ಯೂಟಿ ಭತ್ತೆ'ಯೆಂದು ಕೇಳಿದ ಮೇ ಈ ಬಗ್ಗೆ ೪|| ಲಕ್ಷ ರೂಪಾಯಿ ಖರ್ಚು ಬರಬಹುದು. ಈ ವಿಷಯವೂ ಆಲೋಚನೆ ನಡೆದದೆ. ಕೆಲವು ಪ್ರಾಥಮಿಕ ಶಿಕ್ಷಕರಲ್ಲಿ ಈ ಭತ್ತೆಯ ವಿಷಯ ಅಸಂತೋಷವಾಗಿರುತ್ತದೆ. ಸರಕಾರವು ಪ್ರಾ. ಶಿಕ್ಷಕರಿಗೆ ಸಂಬಳ ಕೊಡುವ ಪ್ರಶ್ನೆಯನ್ನು ಆಲೋಚಿಸುತ್ತಿದೆ. ತರತರದ ಆಲೋಚನೆಗಳ ವಿಚಾರವಾಗುತ್ತಿದೆ. ಹಣದ ಅಡಚಣಿಯ ಮೂಲಕ ಇನ್ನೂ ಯಾವದೇ ಯೋಜನೆಯನ್ನು ಕೈಕೊಳ್ಳಲು ಅನುಕೂಲವಾಗಲಿಲ್ಲ. ಸರಕಾರದ ಬಳಿ ವಿಶೇಷ ದ್ರವ್ಯಸಂಗ್ರಹವಾದ ಬಳಿಕ, ಯಾವದಾದರೊಂದು ಯೋಜನೆಯನ್ನು ಕೈಕೊಳ್ಳಲಿಕ್ಕಾಗುವದು. ಸ್ಥಾನಿಕ ವಿಚಾರದಿಂದ ವಿಶೇಷ ಸ್ಥಳಗಳಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಭತ್ತೆ ಕೊಡುವಂತೆ … ಕಮೀಟಿಯವರು ಮಾಡಿದ ಶಿಫಾರಸನ್ನು ಸರಕಾರವು ಮನ್ನಿಸಿದೆ. ಇಂಥ ಭತ್ತೆ ಮಾತ್ರ ಎಲ್ಲಿಯೂ ಕೊಡಲ್ಪಡಲಿಲ್ಲ. ಈ ಸೂಚನೆ ತರವ ಕೆಲವು … ಬೋರ್ಡುಗಳೂ ಎರಡು ಬೋರ್ಡುಗಳು ಈ ಸೂಚನೆ ಮಾಡಿರುತ್ತವೆ. ಸರಕಾರವು ವಿಚಾರ ಮಾಡುತ್ತಿದೆ. ಪ್ರಾಥಮಿಕ ಶಿಕ್ಷಕರಿಗೆ ಭೆಟ್ಟಿ ಕೊಟ್ಟಾಗ ಸಾಠೇ-ಪರಾಂಜಪೇ ಸ್ಕೇಲಿನ ಕಲಮೆ ಸಹ ತರಬೇಕಿದೆಂದು ಶಿಕ್ಷಣ ಖಾತೆಯ ಮಿನಿಸ್ಟರು ಹೇಳಿದ್ದಿರಬಹುದು. ಯಾಕಂದರೆ ಈ ಯೋಜನೆಗೆ ಸುಮಾರು ೬೧ ಲಕ್ಷ ರೂಪಾಯಿ ತಗಲುತ್ತದೆ. ಅಷ್ಟು ದೊಡ್ಡ ರಕಮನ್ನು ಈಗಿನ ಸ್ಥಿತಿಯಲ್ಲಿ ಸಂಗ್ರಹಿಸುವದು ಕಷ್ಟ. ತಾ ೧-೩-೧೯೨೩ನೇಗೆ ಮುಂಚೆಯಾಗಿ ನೇಮಣೂಕಿ… ಅಂಟ್ರೇಂಡರ ಸರ್ವ್ಹಿಸನ್ನು ಬಡತಿಯ ಬಗ್ಗೆ ಲೆಕ್ಕಕ್ಕೆ ಹಿಡಿಯಬಾರದೆಂದು ನೇಮಿಸಿದೆ. ಈ ನಿಯಮದ ತಿದ್ದುಪಡಿ ಮಾಡುವ ಆಲೋಚನೆಯು ಸರಕಾರಕ್ಕಿಲ್ಲ. ಪ್ರಾಥಮಿಕ ಶಿಕ್ಷಕರಲ್ಲಿ ೨ ತರಗತಿಗಳಿವೆ. ೧೯೨೩ನೇ ಇಸ್ವಿಗಿಂತ ಮುಂಚಿನವರು; ೧೯೨೩ನೇ ಇಸ್ವಿಯ ಮೇಲಿನವರು; ಇವರೊಳಗೆ ಸಂಬಳ, ಕೆಲಸದ … ಇವು ಭಿನ್ನ ಭಿನ್ನವಿರುತ್ತವೆ. ಸಂಬಳ ಕಡಿಮೆಯಾದ್ದರಿಂದ ಕಡಿಮೆ ಯೋಗ್ಯತೆಯವರು ಪ್ರಾಥಮಿಕ ಶಿಕ್ಷಕರಾಗಿ ಸೇರಿದರೆಂಬ ವಿಧಾನವು ಸರಕಾರಕ್ಕೆ ಒಪ್ಪಿಗೆಯಿಲ್ಲ. ಸಂಸ್ಕೃತ ಹಾಗು ಬೀಜಗಣಿತ ವಿಷಯಗಳನ್ನು ಶಿಕ್ಷಕರ ಅಭ್ಯಾಸಕ್ರಮದೊಳಗಿಂದ ತೆಗೆದು ಹಾಕಿದ್ದರಿಂದ ಶಿಕ್ಷಕರ ಯೋಗ್ಯತೆಯು ಕುಗ್ಗಿದೆಂಬ ವಿಧಾನವು ಸರಿಯಲ್ಲ. ಮುಖ್ಯೋಪಾಧ್ಯಾಯರಿಗೆ ನೇಮಿಸುವ ಅಧಿಕಾರವು ಬೋರ್ಡುಗಳದು. ಇಂಥವರನ್ನೇ ಮುಖ್ಯೋಪಾಧ್ಯಾಯರಾಗಿ ನೇಮಿಸಬೇಕೆಂಬ ನಿಯಮವಿಲ್ಲ. ಈ ಕುರಿತು ಅಹಮ್ಮದನಗರ ಜಿಲ್ಹೆಯ ರಾ|| ವಾಸುದೇವ ಗಣೇಶ ಜೋಶಿಯವರು 'ಕೇಸರಿ'ಯಲ್ಲಿ ಮಾಡಿದ ತಕ್ರಾರು ನಿರರ್ಥಕವಿದೆ. ಸಾತಾರಾ ಜಿಲ್ಹೆಯಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಗಲಿಲ್ಲ, ಆದರೂ, ಅಲ್ಲಿ ೨ ಆಣೆಯಂತೆ ಲೋಕಲ್ ಫಂಡ ವಸೂಲಾಗುತ್ತಿದೆ.

***

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕೇ !

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರದೆ … ನೀವು … ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು … ಉದುರುವವು. ನೀವು ಅವಕ್ಕೆ ಬೇಕೆಂಬ 'ಕೂದಲನ್ನು' … ಕೂದಲನ್ನಾವುದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ತೊಂಬು ಹೋಗುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

———o———

೪ ಔನ್ಸಿಗೆ	ರೂ	೨—೦—೦
೪ ಔನ್ಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಓಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂಬೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು ?

ಓಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಬಹಳ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಓಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No 2.**

ಬೆಟ್ಟ.

ಬೆಟ್ಟವನ್ನು ಪಾಣಿಯ ತೋಟಗಳಿಗೆ ಪ್ರತ್ಯೇಕಿಸಿ ಕೊಟ್ಟದ್ದರಿಂದ ಉಂಟಾದ ಅಡಚಣೆಯನ್ನು ಕಾನಡಾ ಜಿಲ್ಲೆಯ ಸಭಾಸದರು ಸರಕಾರಕ್ಕೆ ತಿಳಿಸಿದ್ದಾರೆ. ಈ ಕುರಿತು ಕಲೆಕ್ಟರರು ಚೌಕಶಿ ನಡಿಸುತ್ತಾರೆಂದು ಉತ್ತರ ಕೊಡಲಾಗಿತ್ತು. ತೋಟಗಳಿಗೆ ಪ್ರತಿಪ್ರತ್ಯೇಕ ತಗಲುವ ಬೆಟ್ಟದ ಕ್ಷೇತ್ರವು ನಿರ್ದಿಷ್ಟವಾಗಿದೆ. ಆದರೆ, ಅವನ್ನು ವಿಂಗಡಿಸಿಕೊಡಲಿಕ್ಕೆ ೮೫೦ ರೂಪಾಯಿ ಖರ್ಚಿನಿಂದ ೭ ತಿಂಗಳ ತನಕ ಒಂದು ಹಂಗಾಮಿ ಆಫೀಸನ್ನು ನಿರ್ಮಿಸಬೇಕಾಗಿ ಕಲೆಕ್ಟರರ ಅಭಿಪ್ರಾಯವಾಗಿದೆ. ಆದರೆ, ದ್ರವ್ಯಾಭಾವದ ಮೂಲಕ ಈ ವ್ಯವಸ್ಥೆಯನ್ನು ಕೈಕೊಳ್ಳಲಾಗಲಿಲ್ಲ. ಹೀಗೆ ಖರ್ಚು ತಗಲುವ ಮೂಲಕ ಪಾಣಿಯ ತೋಟಗಳಿಗೆ ವಿಂಗಡಿಸಿ ಕೊಟ್ಟ ಬೆಟ್ಟವನ್ನು ಪ್ರತಿಪ್ರತ್ಯೇಕವಾಗಿ ಹಂಚಿ ಹಾಕುವದಾಗಲಿ, ಅನುಕೂಲವಾಗುವಂತೆ ಕೊಟ್ಟ ಬೆಟ್ಟವನ್ನು ಹಂಚಿ ಹಾಕುವದಾಗಲಿ ಸಾಧ್ಯವಿಲ್ಲ. ವ್ಯಕ್ತಿಶಃ ತೋಟಿಗರು ಕಲೆಕ್ಟರರಿಗೆ ತಿಳಿಸಿದ್ದಲ್ಲಿ ಅವರ ಅನುಕೂಲತೆ ವ್ಯವಸ್ಥೆ ಮಾಡುವ ಬಗ್ಗೆ ಕಲೆಕ್ಟರರು ವಿಚಾರ ಮಾಡುವರು.

***

ಕಾನ ಬೆಟ್ಟದಲ್ಲಿ ಮೆಣಸಿನ ಸಾಗುವಳಿ.

ಕಾನಬೆಟ್ಟಗಳಲ್ಲಿ ಮುಂಚೆ ಮೆಣಸು ಬೆಳೆಯುತ್ತಿದ್ದರೋ ಹೇಗೆ? ಅವುಗಳನ್ನು ಈಗ ಪುನಃ ಬೆಳೆಸಬಹುದೋ ಹೇಗೆ? ಎಂಬ ಬಗ್ಗೆ ರಿಪೋರ್ಟ ಮಾಡಲು ಕಲೆಕ್ಟರರಿಗೆ ಬರೆದಿತ್ತು. ಕಲೆಕ್ಟರರು ಮುಲಕಿ ಹಾಗು ಜಂಗಲ ಖಾತೆಯವರೊಡನೆ ಆಲೋಚಿಸಿ ರಿಪೋರ್ಟ ಮಾಡಿದ್ದಾರೆ. ಸಂಸ್ಥಾನಿಕರಿಗೆ ಮೆಣಸಿನ ಉದ್ಯೋಗದಿಂದ ವರ್ಷಾಕ್ಕನ ೩೦ ಲಕ್ಷ ನಾಣ್ಯ ಅಂದರೆ, ೧೨ ಲಕ್ಷ ಪವನು ಉತ್ಪನ್ನವಿದ್ದಿತ್ತಾಗಿ "ಕಾನಡಾ ಗೆಝಿಟಿಯರ" ದಲ್ಲಿ ಬರೆದದೆ. ಗೇರುಸಪ್ಪೆಯ ರಾಣಿಗೆ ಪೋರ್ಚುಗೀಸರು "ಮೆಣಸಿನ ರಾಣಿ" ಯೆಂದು ಸಂಬೋಧಿಸುತ್ತಿದ್ದರಾಗಿಯೂ ಗೆಝಿಟಿಯರದಲ್ಲಿ ಬರೆದದೆ. ಈ ಮೆಣಸಲ್ಲ ಕಾನಬೆಟ್ಟದಲ್ಲಿ ಬೆಳೆಯುತ್ತಿದ್ದಿಲ್ಲ. ಕಲೆಕ್ಟರರು ಮಾಡಿದ ರಿಪೋರ್ಟನಂದರೆ:— ೧೯೦೭ನೇ ಇಸ್ವಿಯಲ್ಲಿ ೩೬೧ನೇ ನಂಬರಿನ ಮುಲ್ಕಿ ಠರಾವಾಗಿದೆ. ಆ ಠರಾವಿನೊಳಗಿನ ಕಾಗದಪತ್ರಗಳ ಮೇಲಿಂದ ಕಾನಬೆಟ್ಟಗಳೊಳಗಿಂದ ಮೆಣಸು ಮುಂತಾದ ಸಾಮುಗ್ರಿಗಳನ್ನು ಒಯ್ಯುತ್ತಿದ್ದರಾಗಿ ತಿಳಿಯುತ್ತದೆ. ಆ ಹಕ್ಕು ಅವರಿಗಿರುತದಾಗಿ ೧೮೭೩ನೇ ಇಸ್ವಿಯಲ್ಲಿ ಆದ ಸರ್ವೆ ಸೆಟ್ಲಮೆಂಟಿನ ಕಾಲಕ್ಕೆ ಸರಕಾರವು ಮನ್ನಿಸಿತು. ಆ ಮೇಲೆ ಆದ ಸರ್ವೆ ಸೆಟ್ಲಮೆಂಟುಗಳಲ್ಲಿ ಚಿಕ್ಕ ಚಿಕ್ಕ ಕಾನಬೆಟ್ಟಗಳು ಜಂಗಲ ಪ್ರದೇಶದೊಳಗಿಂದ ಕಡಿಮೆ ಮಾಡಲಾದವು. ಅಮೂಲ್ಯವಾದ ಕಾನಬೆಟ್ಟಗಳಲ್ಲಿ ಬೇಸಾಯಗಾರರಿಗಿರುವ ಹಕ್ಕಿನ ಬಗ್ಗೆ ಹಣ ಕೊಟ್ಟು ಆ ಹಕ್ಕನ್ನು ಸರಕಾರವು ವಹಿಸಿಕೊಂಡಿತು. ಜಂಗಲ ರಕ್ಷಣೆಯ ಬಗ್ಗೆ ಈ ಹಕ್ಕುಗಳು ವಹಿಸಿಕೊಳ್ಳಲ್ಪಟ್ಟವು. ಬೇಸಾಯಗಾರರು ಈ ಹಕ್ಕಿನ ದುರುಪಯೋಗ ಮಾಡಿದ್ದರಿಂದ ಈ ವ್ಯವಸ್ಥೆ ಮಾಡಬೇಕಾಯಿತು. ಕಾನಬೆಟ್ಟದಲ್ಲಿ ಬೆಳೆಯುವ ಕಾಡು ಮೆಣಸು, ತೋಟಗಳಲ್ಲಿ ಬೆಳೆಯುವ ಅರ್ಧದಷ್ಟು ಸಹ ಯೋಗ್ಯತೆಯದಲ್ಲ. ಈ ಉದ್ಯೋಗದಿಂದ ಲಾಭ ಸಹ ಆಗುವಂತಿಲ್ಲ. ಮೇಲಾಗಿ ಘಟ್ಟದ ಮೇಲಿನ ಬೆಟ್ಟ ಕಾಡಿನಲ್ಲಿ ಈ ಕಾನಬೆಟ್ಟಗಳಿವೆ. ತೋಟಗಳನ್ನು ಸಾಗುವಳಿ ಮಾಡಲು ಕೂಲಿಕಾರರು ಸಿಗದೆ ಅನೇಕ ತೋಟಗಳು ಬಂಜರು ಬೀಳಹತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಮೆಣಸಿನ ಸಾಗುವಳಿಯ ಬಗ್ಗೆ ಬೇಸಾಯಗಾರರು ಆತುರಪಡುತ್ತಿದ್ದಾರೆಂಬ ಗ್ರಹಿಕೆಯು ಸರಿಬರುವದಿಲ್ಲ. ಕಾನಬೆಟ್ಟದಲ್ಲಿ ಮೆಣಸು ಬೆಳಿಸುವ ಬಗ್ಗೆ ಜಂಗಲ ಸಹಾಯಿಯಾಗುವ ಲಕ್ಷಣ ಸಹ ತೋರುವದಿಲ್ಲ. ಅದರಿಂದ ಕಾಡು ಮೆಣಸು ಬೆಳಿಸುವ ಉದ್ಯೋಗವು ಸಾಧ್ಯವೆಂದು ನಾನು ತಿಳಿಯುವದಿಲ್ಲ. ಹೀಗೆ ಕಲೆಕ್ಟರರು ಮಾಡಿದ ರಿಪೋರ್ಟಿಗೆ ದಕ್ಷಿಣ ಭಾಗದ ಕಮೀಶನರರು ಜೋಡಿಸಿದ ಪುಸ್ತಿ ಏನಾದರೆ:— ಈ ಬೇಡಿಕೆಗೆ ಪ್ರಮುಖ್ಯವಾಗಿ ಸುಪೆಯವರೇ ಕಾರಣರು. ಆದರೆ, ಅಲ್ಲಿ ತುಂಬಾ ಜನರಿಲ್ಲಾದ್ದರಿಂದ ಈ ಬೇಡಿಕೆಯ ಪ್ರಯೋಗವನ್ನು ಅಲ್ಲಿ ಮಾಡಿ ನೋಡ ಬರುವದಿಲ್ಲ. ಇದಲ್ಲದೆ, ಹೀಗೆ ಮೆಣಸು ಬೆಳಿಸಗೊಟ್ಟರೆ, ಜಂಗಲ ರಕ್ಷಣೆಗೆ ಬಾಧೆ ತಟ್ಟುವಂತಿದೆ. ಈ ವಿಧಾನಕ್ಕೆ ೧೯೦೭ನೇ ಇಸ್ವಿಯಲ್ಲಾದ ೩೬೧ನೇ ನಂಬರಿನ ಪ್ರಕರಣದ್ದೇ ಆಧಾರ. ಸಪೆಯಲ್ಲಿ ಲಾಭ ಸಿಗುವ ಧೋರಣವು ತೀರ ಕಡಿಮೆ. ಆದರೆ, ಸರಕಾರಕ್ಕೆ ನಷ್ಟವಾಗುವ ಮಾತು ಖಂಡಿತ. ಸರಕಾರವು ಇದನ್ನೆಲ್ಲ ವಿಚಾರಿಸಿ ಕಮೀಶನರರ ಹೇಳಿಕೆಗೆ ಸರಿಯಾಗಿ ಕಾನಬೆಟ್ಟದಲ್ಲಿ ಮೆಣಸು ಬೆಳಿಸುವ ಉದ್ಯೋಗವು ಅವ್ಯವಹಾರ್ಯವೆಂದು ತಿಳಿದಾಗಿದೆ.

***

ಭೂಮಿಯ ಉತ್ಪನ್ನ.

ಕಾರವಾರ ಜಿಲ್ಲೆಯಲ್ಲಿ ಉತ್ತಮ ತರಿ ಭೂಮಿಯ ಉತ್ಪನ್ನವು ಎಕ್ರೆಗೆ ೯೩ ರೂಪಾಯಿಯಿದೆ, ಖರ್ಚು ಹೋಗಲಾಗಿ ೪೧ ರೂಪಾಯಿ ಲಾಭ ಉಳಿಯುತದೆ. ತೀರ್ವೆ ೫ ರೂಪಾಯಿಯಿದೆ.

***

ಕಾರವಾರದಲ್ಲಿ ಸರಪೇಠಿ ಮದ್ಯದ ಅಂಗಡಿ.

ಕಾರವಾರದಲ್ಲಿ ೧೯೪೧ನೇ ಇಸ್ವಿಯಲ್ಲಿ ೩ನೇ ಸರಪೇಠಿ ಮದ್ಯದ ಅಂಗಡಿಯು ತೆರೆಯಲಾಯಿತು. ೩-೩ ವರ್ಷಗಳು ಅದು ತೆರೆಯಲಾಗಿರುವದೆ. ಈ ವಿಧಾನವು ತಪ್ಪು. ೧೯೩೧ನೇ ಇಸ್ವಿಯಲ್ಲಿ ಕಾರವಾರದಲ್ಲಿ ಅಬಕಾರಿ ಕಮೀಟಿಯಿರಲಿಲ್ಲ. ಅದರಿಂದ ಅಬಕಾರಿ ಕಮೀಟಿಯ ಆಲೋಚನೆ ಪಡೆಯುವದು ಸಾಧ್ಯವಾಗಲಿಲ್ಲ. ಕಲೆಕ್ಟರರ ಹೇಳಿಕೆಯಂತೆ ಈ ಅಂಗಡಿ ತೆರೆಯಲಾಯಿತೇನು? ಕಾರವಾರ ನಾಗರಿಕರ ಅಭಿಪ್ರಾಯ ಪಡೆಕೊಳ್ಳಲಾಯಿತೇನು? ಎಂಬ ಸಂಗತಿಗಳನ್ನು ಈಗ ಹೇಳಬರುವದಿಲ್ಲ. ಸಂಬಂಧಪಟ್ಟ ಕಾಗದಗಳು ನಾಶವಾಗಿರುತ್ತವೆ. ಕಾರವಾರದಲ್ಲಿ ಈ ಅಂಗಡಿಯ ಸ್ಥಾಪನೆಯಿಂದ ಅಸಂತೋಷವಾಗಿರುವದಾಗಿ ಸರಕಾರದ ತಿಳುವಳಿಕೆಗೆ ಬರಲಿಲ್ಲ. ಈ ಅಂಗಡಿಯನ್ನು ಸರಕಾರವು ಮುಚ್ಚಬಯಸುವದಿಲ್ಲ.

***

ತೋಟಗಳ ಉನ್ನತಿ-ಅವನತಿ.

೧೯೦೭, ೧೯೧೭ ಹಾಗು ೧೯೨೭ನೇ ಇಸ್ವಿಗಳಲ್ಲಿ ಸಿದ್ದಾಪುರದಲ್ಲಿ ೭೪೮೫-೫೬೯೩-೬೨೨೩ ಎಕ್ರೆಗಳಲ್ಲಿ ಅಡಿಕೆಯೂ, ೩೪೦೭-೭೯೪-೩೬೬ ಎಕ್ರೆಗಳಲ್ಲಿ ಯಾಲಕ್ಕಿಯೂ, ೪೪೧೨-೧೯೪೮-೧೩೬೮ ಎಕ್ರೆಗಳಲ್ಲಿ ಮೆಣಸೂ ಬೆಳೆದವು. ಅದೇ ಶೀರ್ಯಯಲ್ಲಿ ೫೮೯೧-೫೮೦೮-೫೫೯೪ ಎಕ್ರೆಗಳಲ್ಲಿ ಅಡಿಕೆ, ೧೪೦೫-೫೩೮-೩೬೭ ಎಕ್ರೆಗಳಲ್ಲಿ ಯಾಲಕ್ಕಿ, ೨೮೯೯-೧೬೦೭-೧೪೯೮ ಎಕ್ರೆಗಳಲ್ಲಿ ಮೆಣಸು ಬೆಳೆದವು ಅದೇಯ ಲ್ಲಾಪುರ-ಮುಂಡಗೋಡಗಳಲ್ಲಿ ೧೯೦೭ ನೇ ಇಸ್ವಿಯಲ್ಲಿ ೧೫೦೪ ಎಕ್ರೆಗಳಲ್ಲಿ ಅಡಿಕೆ, ೫೭ ಎಕ್ರೆಗಳಲ್ಲಿ ಯಾಲಕ್ಕಿ, ೯೫ ಎಕ್ರೆಗಳಲ್ಲಿ ಮೆಣಸು ಬೆಳೆದವು. ಇದೇ ವರುಷ ಹಳಿಯಾಳ-ಸುಪೆಗಳಲ್ಲಿ ೧೪೩ ಎಕ್ರೆಗಳಲ್ಲಿ ಅಡಿಕೆ, ೨ ಎಕ್ರೆಗಳಲ್ಲಿ ಯಾಲಕ್ಕಿ, ೧ ಎಕ್ರೆಯಲ್ಲಿ ಮೆಣಸು ಬೆಳೆದವು. ೧೯೧೭ ೧೯೨೭ ನೇ ಇಸವಿಗಳಲ್ಲಿ ಯಲ್ಲಾಪುರದಲ್ಲಿ ೨೩೫೦-೨೨೫೪ ಎಕ್ರೆಗಳಲ್ಲಿ ಅಡಿಕೆಯೂ, ೯೯ ೬೧ ಎಕ್ರೆಗಳಲ್ಲಿ ಯಾಲಕ್ಕಿಯೂ, ೨೭೬-೨೦೪ ಎಕ್ರೆಗಳಲ್ಲಿ ಮೆಣಸೂ ಬೆಳೆದವು. ಇದೇ ವರುಷ ಮುಂಡಗೋಡದಲ್ಲಿ ಅನುಕ್ರಮವಾಗಿ ೨೯—೨೮ ಎಕ್ರೆಗಳಲ್ಲಿ ಅಡಿಕೆಯೂ, ೧-೦ಗಳಲ್ಲಿ ಯಾಲಕ್ಕಿಯೂ, ೩-೧ರಲ್ಲಿ ಮೆಣಸೂ ಬೆಳೆದವು ಇದೇ ವರುಷ ಹಳಿಯಾಳದಲ್ಲಿ ೧-೧ ಎಕ್ರೆಯಲ್ಲಿ ಅಡಿಕೆ, ೦-೦ ಯಾಲಕ್ಕಿ, ೦-೦ ಮೆಣಸು; ಹಾಗು ಸುಪೆಯಲ್ಲಿ ಇವೇ ವರುಷ ೧೭೭-೧೬೧ ಎಕ್ರೆಗಳಲ್ಲಿ ಅಡಿಕೆ, ೨-೧ ಎಕ್ರೆಗಳಲ್ಲಿ ಯಾಲಕ್ಕಿ, ೨೧-೭ ಎಕ್ರೆಗಳಲ್ಲಿ ಮೆಣಸು ಬೆಳೆದವು ಘಟ್ಟದ ಕೆಳಗಿನ ಕಾರವಾರ ತಾಲೂಕಿನಲ್ಲಿ ೩೮ ೨೫-೩೪ ಎಕ್ರೆಗಳಲ್ಲಿ ಅಡಿಕೆ ಬೆಳೆಯಿತು, ಅಂಕೋಲೆಯಲ್ಲಿ ೮೨೩ ೭೫೦-೬೧೯ ಎಕ್ರೆಗಳಲ್ಲಿ ಅಡಿಕೆ, ೧೮-೧೫-೨೨ ಎಕ್ರೆಗಳಲ್ಲಿ ಮೆಣಸು, ೩-೮-೧ ಎಕ್ರೆಯಲ್ಲಿ ಎಲೆ ಬಳ್ಳಿ ಬೆಳೆದವು. ಕುಮಟೆಯಲ್ಲಿ ೬೦೧-೬೩೭-೬೮೨ ಎಕ್ರೆಗಳಲ್ಲಿ ಅಡಿಕೆ, ೨೪-೮-೫೩ ಎಕ್ರೆಗಳಲ್ಲಿ ಮೆಣಸು, ೬-೭-೯ ಎಕ್ರೆಗಳಲ್ಲಿ ಎಲೆ ಬಳ್ಳಿ ಬೆಳೆದವು. ಹೊನ್ನಾವರ-ಭಟಕಳ ಪೇಟೆಗಳಲ್ಲಿ ಕೂಡಿ ೧೯೦೭ ನೇ ಇಸ್ವಿಯಲ್ಲಿ ೧೩೩೯ ಎಕ್ರೆಗಳಲ್ಲಿ ಅಡಿಕೆ ಬೆಳೆಯಿತು; ೨೩ ಎಕ್ರೆಗಳಲ್ಲಿ ಮೆಣಸು, ೮೮ ಎಕ್ರೆಗಳಲ್ಲಿ ಎಲೆ ಬಳ್ಳಿ ಬೆಳೆಯಿತು ೧೯೧೭-೧೯೨೭ನೇ ಇಸ್ವಿಗಳಲ್ಲಿ ಹೊನ್ನಾವರದಲ್ಲಿ ೧೨೫೭-೧೩೭೫ ಎಕ್ರೆಗಳಲ್ಲಿ ಅಡಿಕೆಯೂ, ೧೬-೨೧ರಲ್ಲಿ ಮೆಣಸೂ, ೨೨೨-೨೦೯ ರಲ್ಲಿ ಎಲೆ ಬಳ್ಳಿಗಳು ಬೆಳೆದವು. ಭಟಕಳ ಪೇಟೆಯಲ್ಲಿ ಇವೇ ವರುಷ ೪೫೬, ೪೭೯ ಎಕ್ರೆಗಳಲ್ಲಿ ಅಡಿಕೆಯೂ, ೨೨-೧೭ ಎಕ್ರೆಗಳಲ್ಲಿ ಮೆಣಸೂ, ೨೯-೨೧ ಎಕ್ರೆಗಳಲ್ಲಿ ಎಲೆ ಬಳ್ಳಿಗಳೂ ಬೆಳೆದವು. ಯಲ್ಲಾಪುರ ತಾಲೂಕಿನಲ್ಲಿ ಹೆಚ್ಚಿನ ಭೂಮಿಯಲ್ಲಿ ತೋಟವಾದ್ದರಿಂದ ಅಲ್ಲಿಯ ಕ್ಷೇತ್ರ ಮಾನವು ಹೆಚ್ಚಾಗಿ ಕಾಣುತ್ತದೆ. ಶಿರಸಿ-ಸಿದ್ದಾಪುರ ತಾಲೂಕುಗಳಲ್ಲಿ ಮೆಣಸು ಹಾಗು ಯಾಲಕ್ಕಿಗಳನ್ನು ಅಡಿಕೆ ತೋಟದಲ್ಲೇ ಬೆಳಿಸುತ್ತಿದ್ದಾಗ್ಯೂ ಅವುಗಳ ಕ್ಷೇತ್ರಮಾನವು ಬಹಳ ಕುಗ್ಗಿದೆ. ಈ ಬೆಳೆಗಳನ್ನು ಬೆಳಿಸಲು ಬಹಳ ಕಷ್ಟ ತಗಲುತ್ತದೆ. ಈ ಪ್ರದೇಶವು ಚಳಿ ಜ್ವರದ ಪ್ರದೇಶವಾದ್ದರಿಂದ ಕೂಲಿಆಳು ಸಿಗುವದು ದುರ್ಲಭ. ಅದರಿಂದ ಜನರು ಅಡಿಕೆ ತೋಟಗಳನ್ನೇ ಹೆಚ್ಚಾಗಿ ಬೆಳಿಸುತ್ತಾರೆ. ಹೊನ್ನಾವರ ತಾಲೂಕಿನ ಬೇಸಾಯದ ಸ್ಥಿತಿಯು ಉರ್ಜಿತಹೊಂದುತ್ತಿದ್ದದರಿಂದ ಹೊನ್ನಾವರದೊಳಗಿನ ಅಡಿಕೆ ತೋಟಗಳ ಕ್ಷೇತ್ರವು ಹೆಚ್ಚಿದೆ

***

ಪೋಟಿಹಿಸ್ಸಾ-ಮೋಜಣಿಯ ಖರ್ಚು.

ಸಾತಾರಾ ಜಿಲ್ಲೆಯಲ್ಲಿ ಪೋಟಹಿಸ್ಸಾ ಅಳತೆಯಾಯಿತು. ಆ ಅಳತೆಯ ಬಗ್ಗೆ ಖಾತೇದಾರರ ಕಡೆಯಿಂದ ಪ್ರತಿ ಪೋಟಹಿಸೆಗೆ ೧೯೨೦-೨೧-೨೨-೨೩-೨೪-೨೫-೨೬ನೇಗಳಲ್ಲಿ ಅನುಕ್ರಮವಾಗಿ [illegible] ಆಣೆಗಳಂತೆ ಅಳತೆ ಖರ್ಚು ವಸೂಲಾಯಿತು. ೧೯೨೭ನೇ ಇಸವಿಯಲ್ಲಿ ಸಣ್ಣ ಹಿಸ್ಸೆಗೆ ೧೦ ಆಣೆಯಂತೆಯೂ, ದೊಡ್ಡ ಹಿಸ್ಸೆಗೆ ೧॥ ರೂಪಾಯಿಯಂತೆಯೂ ವಸೂಲಾಯಿತು.

***

ಕಾರವಾರದಲ್ಲಿ ಗಾಳಿಮರದ ತೋಪು.

ಕಾರವಾರದ ನಾಗರಿಕರು ೨೭-೧-೧೯೨೮ ನೇಗೆ ಅಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರ ಮುಖಾಂತರವೂ, ಕಾನಡಾ ಜಿಲ್ಲೆಯ ಮೆಂಬರರ ಮುಖಾಂತರವೂ ಕಲೆಕ್ಟರರಿಗೆ ಅರ್ಜಿ ಮಾಡಿದರು. ಕೋಡಿಬಾಗ ಗ್ರಾಮದ ಸರ್ವೇ ನಂಬರ ೧೦-೧೧-೧೨-೧೦ಲಗಳೊಳಗಿನ ಗಾಳಿಮರದ ತೋಪು ಕಡಿಯಲ್ಪಟ್ಟಿದೆ. ಅಲ್ಲಿ ಪುನಃ ಗಾಳಿ ಸಸಿಗಳು ನೆಡೋಣಾಗುತ್ತವೆ. ಅವನ್ನು ನೆಟ್ಟರೆ ಜನರಿಗೆ ೫ ಪ್ರಕಾರದಿಂದ ನಷ್ಟವಾಗುತ್ತದೆ. ತೋಪಿನ ಸುತ್ತಗಡಿಗೆ ಕಾಯಿಪಲ್ಲೆಯಾಗಲಿ, ಬೇರೆ ಯಾವದೇ ಫಲವೃಕ್ಷವಾಗಲಿ ಬೆಳೆಯುವದಿಲ್ಲ, ಬಾವಿಯ ನೀರು ಹಾರಿಬಂದು ಬಿದ್ದ ಎಲೆಗಳಿಂದ ಕೊಳಕಾಗುತ್ತದೆ, ಗೆದ್ದಲಿಗೆ ಇದೊಂದು ಆಶ್ರಯ, ಸುತ್ತುಮುತ್ತಿದ್ದ ಮನೆಗಳ ನೆಲಗಟ್ಟಿಗೆ ಗೆದ್ದಲಿ ಹತ್ತಿ ನಷ್ಟ, ಈ ತೋಪಿನಲ್ಲಿ ಹಾವು, ನರಿ, ಚಿರ್ತೆ ಮುಂತಾದವು ಆಶ್ರಯಿಸಿಕೊಂಡು ಸುತ್ತಲಿನ ದನಗಳ ಸಂಹಾರ ಮಾಡುತ್ತವೆ, ಹವಾಮಾನವು ಉಷ್ಣವಾಗುತ್ತದೆ. ಈ ಪ್ರದೇಶವನ್ನು ಟೌನ ಪ್ಲನಿಂಗ ಪದ್ಧತಿಯಂತೆ ವ್ಯವಸ್ಥೆ ಮಾಡಿ ಜನರಿಗೆ ಕೊಟ್ಟರೆ ಸರಕಾರಕ್ಕೆ ಹೆಚ್ಚಿನ ಉತ್ಪನ್ನವಾದೀತು. ಕಾರವಾರ ಪಟ್ಟಣದಲ್ಲಿ ಮನೆ ಕಟ್ಟಿಕೊಳ್ಳುವದಕ್ಕೆ ಅನುವು ದೊರೆತು ಜನಸಂದಣಿ ದೂರವಾದೀತು ಪ್ಲೇಗಿನ ಕಾಲದಲ್ಲಿ ಸ್ಥಳಾಂತರ ಮಾಡಲು ಅನುಕೂಲವಾಗುತ್ತದೆ ಈ ಅರ್ಜಿಯನ್ನು ಕಲೆಕ್ಟರರಿಗೆ ಸಾದರಪಡಿಸುವಾಗ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಬರೆದದ್ದೇನಂದರೆ — ಅರ್ಜಿದಾರರ ಹೇಳಿಕೆಯು ಸಾಧಾರವೆಂದು ತೋರುತ್ತದೆ ಪ್ಲೇಗು ಬಂದಾಗ ಕೊರೆಂಟಯನ್ ಕಟ್ಟಲಿಕ್ಕೆ ಮ್ಯುನಿಸಿಪಾಲಿಟಿಯ ಬಳಿ ಬೈಲುಪ್ರದೇಶವಿಲ್ಲ ೧೯೨೫ನೇ ಇಸ್ವಿಯಲ್ಲಿ ಪ್ಲೇಗು ಬಂದಾಗ ತೊಡಕುಗಳುಂಟಾಗಿದ್ದವು. ಕೆಲವು ರೋಗಿಗಳನ್ನು ಅತ್ತ ಇಡುವ ಪ್ರಸಂಗ ಬಂದಿತ್ತು, ಈ ವರುಷ ಪ್ಲೇಗು ಬಂದಿದೆ. ಜನರಿಗೆ ಬಿಡಾರು ಕಟ್ಟಿಕೊಳ್ಳಲು ಬಹಳ ಅಡಚಣೆಯಾಗಿದೆ. ಮ್ಯುನಿಸಿಪಾಲಿಟಿಯು ಮಾಡಿದ ಠರಾವು ಈ ಹೊತ್ತೇ ಕಳಿಸೋಣಾಗಿದೆ ಮೇಲಾಗಿ ಅರ್ಜಿಯಲ್ಲಿ ಕಾಣಿಸಿದ ಸ್ಥಳಗಳು ಮ್ಯುನಿಸಿಪಾಲಿಟಿಯ ಹದ್ದಿನಲ್ಲಿವೆ ಅವನ್ನು ಮ್ಯುನಿಸಿಪಾಲಿಟಿಗೆ ಕೊಡಬಹುದು ಹಾಗೆ ಮಾಡಿದರೆ ಅರ್ಧ ಪ್ರದೇಶವನ್ನು ಟೌನ ಪ್ಲನಿಂಗ ಪದ್ಧತಿಯಂತೆ ಮ್ಯುನಿಸಿಪಾಲಿಟಿಯು ಜನರಿಗೆ ಕೊಡುವದು, ಉಳಿದ ಅರ್ಧವನ್ನು ಕಾಯ್ದಿಡುವದು. ಕಾಯದೆ ಕೌನ್ಸಿಲಿನ ಸಭಾಸದರು ತಮ್ಮ ಕಡೆ ಬಂದ ಅರ್ಜಿಯ ಪ್ರತಿಯನ್ನು ಕಲೆಕ್ಟರರಿಗೆ ಕಳಿಸುವಾಗ ಬರೆದದ್ದೇನಂದರೆ.— ಅರ್ಜಿಯ ವಿಷಯವು ಜಂಗಲ ಚೌಕಶಿಯ ಬಗ್ಗೆ ನೇಮಿಸಿದ ಕಮೀಟಿಯಲ್ಲಿ ಇತ್ಯರ್ಥವಾಗಿರುತ್ತದೆ. ಕುಮಟಾ ತಾಲೂಕಿನಲ್ಲಿ ಇಂಥ ತೋಟಗಳ ವಿಷಯ ಸರಕಾರವು ಕೈಕೊಂಡ ಧೋರಣವನ್ನೇ ಕಾರವಾರ ತಾಲೂಕಿನಲ್ಲಿ ಅನುಸರಿಸಬೇಕಾಗಿ ಮಂಡಳದೊಳಗಿನ ಬಿನ್ ಸರಕಾರಿ ಸಭಾಸದರು ಸೂಚಿಸಿದರು. ಗಾಳಿಮರದ ತೋಪಿನಿಂದ ಜನರಿಗೆ ಮನೆ ಕಟ್ಟಲು ಸ್ಥಳವಿಲ್ಲ. ಅದರಿಂದ ಜನರು ಕರಿ ಗಟ್ಟಿಗಳನ್ನು ಬಹು ಖರ್ಚಿನಿಂದ ತುಂಬಿಸಿ ಮನೆ ಕಟ್ಟಿಕೊಳ್ಳಬೇಕಾಗುತ್ತದೆಂಬ ಸಂಗತಿಯೂ ನಮೂದಿಸೋಣಾಗಿದೆ. ಗಾಳಿ ಮರದ ವಿಷಯ ಸ್ಥಳೀಕ ಅಧಿಕಾರಿಗಳಿಗೆ ಬರೆಕೊಳ್ಳಬೇಕಾಗಿ ಸರಕಾರಿ ಸಭಾಸದರು ಸೂಚಿಸಿದರು. ಮುಂಬಯಿ ಸರಕಾರವು ಈ ರಿಪೋರ್ಟನ್ನು ಸಮಾಲೋಚಿಸಿ ದಕ್ಷಿಣ ಭಾಗದ ಕನ್ಸರ್ವೇಟರರ ಕಡೆ ಈ ವಿಷಯ ಒಪ್ಪಿಸಲಾಗದೆಂದು ಬರೆದರು. ಕಲೆಕ್ಟರರು ಜಿಲ್ಲೆಯೊಳಗಿನ ರಾಜ್ಯಭಾರದ ಮುಖ್ಯಾಧಿಕಾರಿಗಳಿದ್ದದರಿಂದ ಅವರು ಈ ಕುರಿತು ತಕ್ಕ ವ್ಯವಸ್ಥೆ ಮಾಡಬೇಕು ಈ ವಿಕ್ರವ್ಯವಹಾರಕ್ಕೆಲ್ಲ ಸಂಸ್ಕಾರವು ಹಿಂದು ಉತ್ತರವನ್ನಿತ್ತು ಈ ವಿಷಯವನ್ನು ಸರಕಾರವು ಸದ್ಯಕ್ಕೇ ಆಲೋಚಿಸಿದ್ದರಿಂದ ಇನ್ನು ಸರಕಾರಕ್ಕೆ ಬರೆಕೊಳ್ಳುವದು ಪ್ರಶಸ್ತವಲ್ಲೆಂದು ಕಲೆಕ್ಟರರು ಅಭಿಪ್ರಾಯ ಪಟ್ಟು ಅರ್ಜಿಯನ್ನು ನಿಕಾಲೆಯಲ್ಲಿ ಹಾಕಿದರು.

ಜಾಹೀರ ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನಂದರೆ - ನನ್ನ ಮಗನಾದ ಸುಬ್ರಾಯ ನಾಗಪ್ಪ ಶೇಣ್ವಿ ಅವರ್ಸಾ ಈತನು ವಿಲಿಕಡೆಗೆ ಕೆಟ್ಟ ಜನರ ಸಹವಾಸಕ್ಕೆ ಬಿದ್ದು ಈತನು ನನ್ನ ಕಡೆಗೆ ಬಿಟ್ಟು ;ನನ್ನ ಭಾವ ವೈಕುಂಠ ಉಪೇಂದ್ರ ಶೇಣ್ವಿಯವರಲ್ಲಿದ್ದು ನಮ್ಮ ಪಟ್ಟು ಕುಟುಂಬದ ಒಕ್ಕಾಲೇಶ ಆಸ್ತಿ ಪೈಕಿ ನಮ್ಮ ಅಂಶವು ನನ್ನ ಭಾವನವರ ಬಂದೋಬಸ್ತನೆ ಮೇಲಿಂದಾ ಅವರಿಗೆ ಮಾರ್ಗಸ್ಥನಾಗಿಯೂ, ವ ಜಂಗಮ ಸ್ಥಿರ ವಿವಕರುಗಳು ಕೂಡಾ ಎರ್ಡನೇ ಜನರಿಗೆ ಮಾರಲಿಕ್ಕೆ ಕೊಡುವರೆ ಊರೊಳಗಿನ ಜನರಿಗೆ ಕೇಳುತ್ತಾ ಇದ್ದಾನಾಗಿಯೂ ನನಗೆ ನನ್ನ ಹುಡುಗನ ವ ಅವನಿಗೆ ಸಹಾಯಕರಾಗಿದ್ದ ಕೆಟ್ಟ ಜನರ ವರ್ತನೂಕವೇಲಿಂದ ಕಂಡು ಬಂದ ಮೂಲಕ ಈ ಜಾಹೀರ ನೋಟೀಸ ದ್ವಾರಾ ಯಾವತ್ತೂ ಜನರಿಗೆ ತಿಳಿಸುವದೇನಂದರೆ - ನನ್ನ ಮಗನಿಗಾಗಲಿ, ಮಾವನಾನಿಗಲಿ ಇದೂ ವರೆಗೆ ಯಾವದೇ ತರದ ಸಾಲ ವಸ್ತ್ರ ಬೋಡೆ ಇಲ್ಲಾಗಿದ್ದು ನನ್ನ ಮಗ ಸುಬ್ರಾಯ ಶೇಣ್ವಿಯು ನಮ್ಮ ಕುಟುಂಬದ ಸ್ಥಿರ-ಚರ ಅಸ್ತಿ ಕ್ರಯ ಅದ್ಮ ವಗೈರೆ ಮಾಡುವರೇ ಯಾರಿಗೂ ಕೇಳಿದ ಪಕ್ಷಕ್ಕೂ ಅವನ ಕೂಡಾ ಯಾವದೇ ತರದಿಂದ ಹಣದ ವ್ಯವಹಾರ ಮಾಡಕೂಡದು. ಹಾಗೂ ದುಕಾನುಗಳಲ್ಲಿ ಸಹಾ ಆತನ ಕೂಡಾ ಹಣದ ಸಮ್ಮಂಧ ಇಡಕೂಡದು. ಇದಕ್ಕೆ ಉಲ್ಲಂಘಿಸಿ ಆತನ ಕೂಡಾ ಯಾವದೇ ತರದಿಂದ ಲೇವಾದೇವಿ ನಡಿಸಿದ್ದಲ್ಲಿ ಅಂಥವರಿಗಾಗುವ ಲುಕ್ಸಾನಿಗೆ ನಾವಾಗಲೀ ನಮ್ಮ ಕುಟುಂಬದ ಅಂದರೆ ನಮ್ಮ ಅಂಶದ ಸ್ಥಿರ ಚರ ಅಸ್ತಿ ಕೂಡಾ ಜವಾಬದಾರ ಆಗಲಿಕ್ಕಿಲ್ಲಾ ತಿಳಿಯುವದು.

ಅವರ್ಸಾ, ತಾ. ೧೬-೮-೧೯೨೮

ಈ ಹೆಬ್ಬೆಟ್ಟಿನ ಗುರ್ತ
ಅಮರಾವತಿಬಾಯಿ ಕೋಂ ನಾಗಪ್ಪ ಶೇಣ್ವಿ, ಅವರ್ಸಾ ಇವರದಾಗಿರುತ್ತದೆ.

ಜಾಹೀರಾತು.

ಇದೇ ತಾ ೧೧ನೇ ಯಿಂದ ನಾವು ಕುಮಟಾ ಶಹರದಲ್ಲಿ ಮುಕ್ಕಾಂ ಮಾಡಿದ್ದು, ನಾವು ಜ್ಯೋತಿಷ, ಸಶಾಸ್ತ್ರ ಜಾತಕ ತಯಾರಿಸುವದು, ಫಲಾಫಲ ಭವಿಷ್ಯ, ಪ್ರಶ್ನೆ ಮುಂತಾದ ಪೂರ್ವಾಪರ ವಿಚಾರ ಹೇಳುವದು ಹಾಗು ಮಂತ್ರವಾದಿ ಕೆಲಸಗಳನ್ನು ಯೋಗ್ಯ ರೀತಿ ಮಾಡಿಕೊಡುತ್ತೇವೆ. ನಮ್ಮ ಮುಕ್ಕಾಂ ಇಲ್ಲಿ ಸ್ವಲ್ಪ ಕಾಲವಿರುವದರಿಂದ ಬೇಕಾದವರು ಅವಶ್ಯ ಲಾಭ ಹೊಂದಿ ಖಾತ್ರಿ ಮಾಡಿಕೊಳ್ಳಬೇಕು.

ಪತ್ತೆ:- **ಕೃಷ್ಣ ಜ್ಯೋತಿಷಿ,**
ಶ್ರೀ ವಸ್ತ್ರಾಕಸಾ ದೇವಸ್ಥಾನದ ಸಮೀಪ,
ಕುಮಟಾ (ಉ. ಕ.)

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೇಕಟ ಗಳಿಗೆ ರೂ ೬
(ಎಕಲೊಜೀ ಮೆಟಿಲ್ಸ) ೩೯ . .. ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥
ತಂಗಿ ತರಕಾರಿ ಬೀಜಗಳು ೧೬ ,, ,, ೪॥
ನಾಟಿ ೧೭ ,, ,, ೩॥
ಸಿಪ್ಪರ ಪಿಕ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ಲಿಗೆ ೨॥
ಕರಿದೆ ಸೊಪ್ಪು ೧ ರತ್ತಲಿಗೆ ೪
ಕುದುರೆ ಮಸಾಲೆ ಬೀಜ ೧ ರತ್ತಲಿಗೆ ... ೩
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಚಲೋ ಕ್ರೋಟನ್ಸ ಗಿಡ ೧೨ ಕ್ಕೆ .. ೩ ರಿಂದ ೧೨
ಅಂದವಾದ ಹೂ ಗಿಡ (ಜರೇನಿಯಂ)
೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ
ಗಿಡಗಳು ೧೨ ಕ್ಕೆ ... ೩ ರಿಂದ ೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ)
೧೨ ಗಿಡಕ್ಕೆ ... ೧॥ ಯಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ .. ೩ ರಿಂದ ೧೨
ಕಟ್ಟಿದ ಮಾವಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨
ಸೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ . ... ೧೨ ರಿಂದ ೩೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರೆ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಜಬೋರಿ, ಪನ್ನೇರಲ, ಕಂಚಿಕಾಯಿ, ಲಕ್ಮ್ಯೀಟಿ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೯
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೨೯
ವೆಲಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ .. ೫
೧ ಬುಟ್ಟಿ ತುಂಬ ತರಕಾರಿ ...೫ ರಿಂದ ೬
ಕ್ರಿಸಾಂಥಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೆರಳು ಕೊಡುವ ಶಾಳೆ ಎಲೆಯ ಬಾತಿಲ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡೆಗಳು ೧೨ ಕ್ಕೆ ರೂ. ೩ ರಿಂದ ೯
ಎರೋಕೇರಿಯಾ ಕುಕ್ಕಿ ೧೨ ಗಿಡಗಳಿಗೆ
ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, **ಬೆಂಗಳೂರು ಸಿಟಿ.**

ನಾಗ ಪಂಚಮಿ ಪೂಜೆ.

(ಲೇಖಕ:- ವಿಷ್ಣುದಾಸ.)

ಇಂದು ನಾಗರ ಪಂಚಮಿಯ ಹಬ್ಬ. ಪ್ರಾಚೀನರಿಂದ ಹಿಂದೂ ಜನರು ನಾಗೇಶನ ಪೂಜೆಯನ್ನು ಮಾಡುವರು. ಪ್ರಾತಃಕಾಲದಿಂದ ಪೂಜಾ ಸಾಮಗ್ರಿಗಳನ್ನು ಸಂಪಾದಿಸುವದರಲ್ಲಿಯೂ, ಹಬ್ಬದ ಸವಿ ಹೋಳಿಗೆಯ ಊಟವನ್ನು ಸಿದ್ಧ ಮಾಡುವದರಲ್ಲಿಯೂ ಈ ಪ್ರಸಂಗವನ್ನು ಕಳೆಕೊಂಡ ಪ್ರತಿ ಕುಟುಂಬವು ತೊಡಗಿರುವದು. ನಾಗ ಚಿತ್ರಾಂಕಿತ ಶಿಲಾಪ್ರತಿಮೆಯನ್ನು ಧೂಪ-ದೀಪ-ನೈವೇದ್ಯಗಳಿಂದ ಪೂಜಿಸಿ ಜನರು ಪ್ರಸಾದಗ್ರಹಣ ಮಾಡುವರು. ಕೆಲವರಿಗೆ ವ್ರತೋಪವಾಸವುಂಟು. ಕೆಲವರು ನೂತನ ಬಯಕೆ ಪೂರ್ತಿಕೆಯೆಂದು ಉಪವಾಸ ಮಾಡುವ ಹರಕೆಯನ್ನೂ ಹಾಕಿಕೊಳ್ಳುತ್ತಾರೆ. ವೇದ ಕಾಲದಲ್ಲಿ ಈ ಉಪಾಸನೆಯು ಅಷ್ಟು ರೂಢವಾಗಿದ್ದಿಲ್ಲ, ಇದ್ದಿಲ್ಲವೆಂದರೂ ಹೇಳಬಹುದು. ಐತಿಹಾಸಿಕ ದೃಷ್ಟಿಯಿಂದ ವಿಚಾರ ಮಾಡಿ ನೋಡಿದರೆ, ದ್ರಾವಿಡರು ಈ ನಾಗಪೂಜೆಯನ್ನು ನೆಲೆಗೊಳಿಸಿದರೆಂದು ದಂತಕಥೆ ಇದೆ. ಆರ್ಯಸಂಸ್ಕೃತಿಯಲ್ಲಿ ಇದು ಹೆಚ್ಚಾಗಿ ದಕ್ಷಿಣ ಹಿಂದುಸ್ಥಾನದಲ್ಲಿ ಕಂಡುಬರುತ್ತದೆ. ಉತ್ತರ ದಿಕ್ಕಿನಲ್ಲಿಯೂ ಸ್ವಲ್ಪವಾಗಿ ಇದನ್ನು ಕಾಣಬಹುದು.

ನಾಗ ಪೂಜೆಯ ಮರ್ಮವನ್ನು ಬಹಳ ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ ಆರ್ಯರಲ್ಲಿ ಎಷ್ಟು ಉಚ್ಚ ಭಾವನೆಯು ಆ ಕಾಲಕ್ಕೆ ಇತ್ತೆಂಬುದು ಕಂಡುಬರುವಂತಿದೆ. ಹಾಲಾಹಲವನ್ನು ಸರ್ಪವು ತನ್ನ ಹಲ್ಲು ಕೋರೆಗಳಲ್ಲಿ ತುಂಬಿಟ್ಟುಕೊಂಡು ಒಂದೇ ಕಡಿತದಿಂದ ಬಲವಾದ ಯಾವ ಸಜೀವ ಸತ್ವವನ್ನೂ ಗತಪ್ರಾಣ ಮಾಡುವ ಶಕ್ತಿಯು ಹಾವಿನಲ್ಲಿದೆ. ಹಗೆಯಂತೂ ಕೇಳುವದು ಬೇಡ. ಸ್ವಲ್ಪ ಪೆಟ್ಟು ತಾಗಿ ನೋಯಿಸಿದವನು ತನ್ನ ಕಣ್ಣಿಯಿಂದ ದೃಢವಾಗಿ ನಂಬಿ ಅವನ ಹಗೆಯನ್ನು ನೋಡಲು ಸ್ಮಶಾನದ ವರೆಗೆ ಹೊಂಚುಹಾಕಿಕೊಂಡಿರುವ ಹಗೆ ಹಾವಿನಲ್ಲಿದೆ. ಉಪಾಸನೆಯು ಕರ್ಮಾಂಗದೊಡನೆ ಶಾಸ್ತ್ರದಲ್ಲಿ ರಚಿಸಿರುವ ಭಾವನೆಯನ್ನು ತಿಳಕೊಂಡರೆ ನಾಗ ಪೂಜೆಯ ಗೋಜಿಗೆ ಯಾರೂ ಹೋಗಲಿಕ್ಕಿಲ್ಲ. ಪ್ರತೀಕದ ಪೂಜೆಯು ಆಯಾ ಅಧಿಷ್ಠಾನದ ಮಾಹಾತ್ಮ್ಯವನ್ನು ಅರಿತುಕೊಂಡು ಮಾಡಬೇಕಾಗಿದೆ. ಅದರಲ್ಲಿ ಆ ಅಧಿಷ್ಠಾನದ ಚೈತನ್ಯಶಕ್ತಿಯು ವೃದ್ಧಿಯಾಗಬೇಕೆಂದು ಉಪಾಸನೆಯನ್ನು ಮಾಡಲೇಬೇಕು. ಕ್ಷಣಾರ್ಧದಲ್ಲಿ ಈ ಜಗತ್ತನ್ನು ರಚಿಸಿ, ಪೋಷಿಸಿ ನಾಶ ಮಾಡುವ ಅಗಾಧ ಶಕ್ತಿಯು ಭಗವಂತನಲ್ಲಿ ಉಂಟೆಂಬ ದೃಢ ಭಾವನೆಯೇ ನಮಗೆ ಭಗವಂತನ ಉಪಾಸನೆಯ ಲಾಲಸೆಯನ್ನು ಹುಟ್ಟಿಸುತ್ತದೆ. ಅಂದ ಮೇಲೆ ಹಾವಿನ ಉಪಾಸನೆಯಿಂದ ಯಾವ ಶಕ್ತಿಯು ಬರಬೇಕೆಂದು ಈ ರೂಢಿಯು ನಮ್ಮಲ್ಲಿ ದೃಢವಾಗಿದೆ? ಹಡಸಲ್ಲಿ ಕಟ್ಟುಗಳಿದ್ದಂತೆ ಹಾವು ಹೆಚ್ಚು ಅವಕಾಶವಿಲ್ಲದೆ ಪ್ರಾಣವನ್ನು ಹೀರಿಕೊಳ್ಳುತ್ತದೆ. ಇದನ್ನು ಅರಿಯದ ಸಾಮಾನ್ಯ ಮಾನವ ಪ್ರಾಣಿಯೇ ಅಲ್ಲ. ಕೊಲ್ಲುವ ಶಕ್ತಿಯನ್ನು ಸನಾತನಿಗಳು ಮನಸ್ಸಿನಲ್ಲಿ ಸಹ ತರಬಾರದೆಂದು ಧರ್ಮಶಾಸ್ತ್ರವು ಸಾರಿ ಹೇಳುತ್ತದೆ. ಎಲ್ಲ ಧರ್ಮಶಾಸ್ತ್ರಗಳೂ ಅಹಿಂಸೆಯನ್ನೇ ಬೋಧಿಸುತ್ತಿವೆ ಅಂದ ಮೇಲೆ ಈ ಪೂಜೆ ಯಾಕೆ?

ನಿಜವಾಗಿ ಈ ಉಪಾಸನೆಯಲ್ಲಿ ಉಚ್ಚ ಭಾವನೆಯು ಅಡಗಿದೆ. ಯಾಕೆಂದರೆ ಸರ್ಪದೇಹವು ದುಷ್ಟತನದ ಬೀಜವಾಗಿದೆ. ಹಾಲು ಹಾಕಿ ಸಲಹಿದವನನ್ನು ಹಾವು ಸೋಂಕದೆ ಬಿಡದು. ಉಪಕಾರ ಮಾಡಿದವನಿಗೆ ತನ್ನ ವಿಷದ ವೃತ್ತಿಯಿಂದ ಕೇಡನ್ನು ಉಂಟುಮಾಡುತ್ತದೆ. ಬೇರೆ ಪ್ರಾಣಿಗಳು ನಿರ್ಮಿಸಿದ ಬಿಲದಲ್ಲಿ ತಾನು ಮನೆಮಾಡಿ ಆ ಪ್ರಾಣಿಗಳಲ್ಲಿ ಜಗಳ ಕಾದುಕೊಂಡಿರುತ್ತದೆ. ಇಷ್ಟು ದುರ್ಗುಣದ ಪ್ರಾಣಿಯ ಗುಣಾನುವಾದ ಮಾಡುವ ಪ್ರಸಂಗ ನಾಗ ಪೂಜೆಯಲ್ಲಿ ಬರುತ್ತದೆ. ಕೆಟ್ಟ ಗುಣಗಳನ್ನು ಅರಿತುಕೊಂಡು ಸ್ವಭಾವವನ್ನು ಸ್ಮರಿಸದ ಹೊರತು ಮಾನವನಲ್ಲಿ ಸೌಜನ್ಯವೂ, ಸಾತ್ವಿಕತನವೂ ಹುಟ್ಟುವದಿಲ್ಲ. ಅದಕ್ಕಾಗಿಯೇ ಶ್ರಾವಣ ಶುದ್ಧ ಪಂಚಮಿಯ ದಿವಸವನ್ನು ಆರ್ಯರು ನಾಗ ಪೂಜೆಗಾಗಿ ಕಾದಿಟ್ಟಿದ್ದಾರೆ. ದುರ್ಜನರ ಸಂಗತಿಯಾದರೂ ಅದು ಘಾತಕ್ಕೆ ಹುಟ್ಟುತ್ತಿರುತ್ತದೆ. ಆ ಸಂಗತಿಯಿಂದ ಒದಗುವ ಕಷ್ಟ-ನಷ್ಟಗಳನ್ನು ಅರಿತುಕೊಂಡು ವಿಪತ್ತಿನ ಪ್ರತಿಕ್ರಿಯೆಯನ್ನು ಸಜ್ಜನರು ಶೋಧಿಸುತ್ತಿರುತ್ತಾರೆ. ಸರ್ವೋತ್ತಮ ವಿಷ್ಣುವಿನ ಸ್ತುತಿಯ ಕಾಲಕ್ಕೆ "ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ" ಎಂಬ ಸೌಷ್ಟವವಾದ ಮಹಿಮೆಯು ಹೊಗಳಲ್ಪಡುತ್ತದೆ. ಶ್ರೀ ವಿಷ್ಣು ದೇವರು ಹಾವಿನ ಹಾಸಿಗೆಯಲ್ಲೇ ಇದ್ದು ಇಡೀ ಜಗತ್ತನ್ನು ಪಾಲಿಸುತ್ತಿದ್ದಾನೆ. ಸತ್ವಗುಣನಿಧಿಯೆಂಬ ಆತನು ಬಿರುದು ಹೊಂದಿದ್ದಾನೆ. ದುಷ್ಟ ಸಂಗ ಸಾತ್ವಿಕತನವನ್ನು ಹೆಚ್ಚಿಸುತ್ತಿದೆಂಬ ಈ ಜಗನ್ನಿಯಾಮಕನಿಂದ ನಾವು ತಿಳಿಯಬಹುದು. ಕಲಿಯುಗದ ಸಾಧುಸಂತರು ನಮಗೆ ಇದನ್ನೇ ಉಪದೇಶಿದ್ದಾರೆ. ಶ್ರೀ ತುಕಾರಾಮ ಮಹಾರಾಜರು ನಿಂದಕ ದುಷ್ಟನು ನೆರೆಹೊರೆಯಲ್ಲೇ ಮನೆಮಾಡಿಕೊಂಡಿರಬೇಕೆಂದು ಅಭಂಗವಾಣಿಯಿಂದ ಹಾದಿ ತೋರಿಸಿದ್ದಾರೆ. ಕಾರಣ ದುಷ್ಟತನದ ಸಂಪೂರ್ಣ ಪರಿಹಾರವಾದರೂ, ನಾಗ ದೇವರಿಗೆ ನಾವು ಅವಶ್ಯ ಪೂಜಿಸಬೇಕು. ದಿವ್ಯಶಕ್ತಿಯನ್ನು ಊಡುವವನೇ ದೇವರು. ಅಂಥ ದೇವರನ್ನು ನಾವು ಭಾವ-ಭಕ್ತಿಗಳಿಂದ ಪೂಜಿಸಬೇಕು. ನಾಗ ಪಂಚಮಿಯ ವ್ರತ ಮಾಡುವವನು ಅಂದು ಆತ್ಮನಿರೀಕ್ಷಣೆ ಮಾಡಿ ಬುದ್ಧಿಚರಣೆಯ ಬಗ್ಗೆ ಭೀಷ್ಮ ಪ್ರತಿಜ್ಞೆ ಮಾಡಬೇಕು, ಅಲ್ಲ!

ಹಾವು ದುಷ್ಟ ಪ್ರಾಣಿಯಾದರೂ ಅದನ್ನು ಮಂತ್ರ್ಯಾದಿಗಳಿಂದ ನಿರ್ವಿಷ ಮಾಡಬಹುದಾಗಿದೆ. "ಸರ್ಪಃ ಕ್ರೂರಃ ಖಲಃ ಕ್ರೂರಃ ಸರ್ಪಾತ್ ಕ್ರೂರತರಃ ಖಲಃ ॥ ಮಂತ್ರೌಷಧಿವಶಃ ಸರ್ಪಃ ಖಲಃ ಕೇನ ನಿವಾರ್ಯತೇ ॥" ಸರ್ಪವು ಕ್ರೂರ ಪ್ರಾಣಿಯು; ದುರ್ಜನನೂ ಕ್ರೂರ. ಆದರೆ ಸರ್ಪಕ್ಕಿಂತ ದುರ್ಜನನೇ ಕ್ರೂರನು ಯಾಕೆಂದರೆ ಹಾವು ಮಂತ್ರೌಷಧದಿಂದ ವಶವಾಗಬಲ್ಲದು. ದುರ್ಜನನು ಹೇಗೆ ಸಾಧುವಾದಾನು? ಎಂತ ಸುಭಾಷಿತಕಾರರು ವಿಧ್ಯರ್ಥರಾಗಿ ಪೃಚ್ಛಿಸುತ್ತಿದ್ದಾರೆ. ಸಮಾಜದಲ್ಲಿ ನೆರೆಹೊಂದಿರುವ ಕೆಟ್ಟ ಮನುಷ್ಯನನ್ನು, ಅಂದರೆ, ಹಾವು ಎಲ್ಲ ತರೆಯಿಂದ ಇಷ್ಟವೆಂದು ಹೇಳಬಹುದು. ಬೇರೆ ಎಲ್ಲ ಪ್ರಾಣಿಗಳಿಗಿಂತ ಮನುಷ್ಯನಿಗೆ ಬುದ್ಧಿ ದಾನವನ್ನು ದೇವರು ಹೆಚ್ಚಾಗಿ ಕೊಟ್ಟಿದ್ದಾನೆ. ಬುದ್ಧಿಗೇಡಿಯಾಗಿ ಕೆಲವು ಜನರು ಆಚರಿಸುವದನ್ನು ಮನಗಂಡರೆ, ಸರ್ಪದ ಶ್ರೇಷ್ಠತೆಯು ಸ್ಪಷ್ಟವಾಗುತ್ತದೆ.

NOTICE.

WANTED:- A Supervisor for Karwar Taluka Supervising Union on Rs 45/- plus a cycle allowance of Rs 15/- P. M One with a knowledge of Accountancy, Book-keeping and also knowing English, Marathi and Kanarese need apply stating age, qualifications and previous experience to the undersigned before 5 9-1928.

Karwar. 16-8-1928.

J. P. Saokar,
Chairman,
Supervising Unian
Karwar.

ನೂಲುಹುಣ್ಣಿವೆಯ ಹಬ್ಬ ಬಂತು!

ಭದ್ರ ಗ್ಯಾರಂಟಿಯ ಮೂಲ

ವೆಸ್ಟ ಎಂಡ್ ಗಡಿಯಾರಗಳನ್ನೇ ಕೊಳ್ಳಿರಿ!

ಕಾರಣವೇನಂದರೆ:--

ನಿಮ್ಮ ಇಷ್ಟ-ಮಿತ್ರರು ನಿಮ್ಮ ಹೆಸರನ್ನು ಪ್ರೀತಿಯಿಂದ ನೆನಪಿಡಬೇಕಾದರೆ, ನೀವು ಅವರಿಗೆ
" ವೆಸ್ಟ-ಎಂಡ್ " ಗಡಿಯಾರವನ್ನು ಕಾಣಿಕೆ ಕೊಡಿರಿ!
ನಿಮಗೆ ಸ್ವತಃ ಸರಿಯಾಗಿ ಹೊತ್ತು ತೋರಿಸುವ ಉತ್ತಮ ಹಾಗು ಬಾಳಿಕೆಯ ಗಡಿಯಾರ ಬೇಕೆಂದಿದ್ದರೆ,
ವೆಸ್ಟ ಎಂಡ್ ಗಡಿಯಾರವನ್ನೇ ಕೇಳಿರಿ!!

ಸಾವಿರಾರು ಕಡೆಯಲ್ಲಿ ಜಾಹೀರಾತು ಕೊಟ್ಟ ಕಡಿಮೆ ತರಗತಿಯ ಗಡಿಯಾರಗಳನ್ನು ಕೊಂಡು ಮೋಸ ಹೋಗಬೇಡಿ. ಆ ಗಡಿಯಾರಗಳೆಲ್ಲ ಬರೇ ಚಿಕ್ಕ ಮಕ್ಕಳ ಆಟಿಗೆಯ ಸಾಮಾನುಗಳಾಗಿವೆ! ನಿಮ್ಮ ಹಣವು ನಿರರ್ಥಕವಾಗುವದು!

ವೆಸ್ಟ ಎಂಡ್ " ಕೀಪ-ಸೇಕ್ "

ಕೀಲೆಸ್, ಲಿವ್ಹರ.

ನಿಕಲ್ ಬೆಳ್ಳಿ	ರೂ.	೩೨
ರೋಲ್ಡ ಗೋಲ್ಡ	,,	೬೨
೯ ಕ್ಯಾರೆಟ ಭಂಗಾರದ್ದು	,,	೫೦
೧೮ ಕ್ಯಾರೆಟ ಭಂಗಾರದ್ದು	,,	೭೦

ಸರಿಯಾಗಿ ಹೊತ್ತು ತೋರಿಸುವಂಥವು.



ಕ್ಯಾಟಲಾಗು ತರಿಸಿಕೊಳ್ಳಿ.

ವೆಸ್ಟ ಎಂಡ್ ವಾಚ್ ಕಂಪನಿ,

ಮುಂಬಯಿ. ಕಲಕತ್ತಾ.

ಕಾನಡಾ ವೃತ್ತ.

ಮಿತಿ ವಿಭವ ಸಂ। ನಿ। ಶ್ರಾವಣ ಶು। ೫ಮಿ, ಸೋಮವಾರ

ಭಾವೀ ರಾಜ್ಯಘಟಣೆ.

ಈಗ ರಾಜ್ಯಘಟನೆಯ ಯುಗವು. ಹಿಂದುಸ್ಥಾನದೊಳಗಿನ ಪ್ರಕೃತದ ರಾಜ್ಯಭಾರ ಕ್ರಮವು ಯಾರಿಗೂ ಮಾನ್ಯವಿಲ್ಲ. ಎಲ್ಲರೂ ರಾಜ್ಯಘಟನೆಯಲ್ಲಿ ತಿದ್ದುಪಾಟ ಮಾಡಬೇಕೆನ್ನುವವರೇ. ಸಾಮ್ರಾಜ್ಯ ಸರಕಾರವು ವಿಧಿಸಿದ ರಾಜ್ಯಭಾರ ತಿದ್ದುಪಾಟದ ಅವಧಿಯು ಮುಗಿಯುತ್ತ ಬಂತು. ಭರತಖಂಡದ ಸ್ಥಿತಿಯನ್ನು ಸಮಾಲೋಚಿಸಿ ರಾಜ್ಯಘಟನೆಯಲ್ಲಿ ತಿದ್ದುಪಾಟಗಳನ್ನು ಸೂಚಿಸಲು ಸಾರ್ವಭೌಮರು ಸರ್ ಜಾನ್ ಸ್ಯಾಮನ್‌ರವರ ಅಧಿಪತ್ಯದಲ್ಲಿ ಆಲೋಚನಾ ಮಂಡಳವನ್ನು ನೇಮಿಸಿರುತ್ತಾರೆ. ಈ ಕೂಟದ ಹಾವಳಿಯು ಒಮ್ಮೆ ಬಂದು ಹೋಗಿದೆ, ನಾಳಿನ ಅಕ್ಟೋಬರ ತಿಂಗಳಲ್ಲಿ ಇನ್ನೊಮ್ಮೆ ಬರುವದಿದೆ. ಇದೇ ಸಮಯ ಸಂಸ್ಥಾನಿಕರೂ ತಮ್ಮದೊಂದು ಘಟನೆಯನ್ನು ತಯಾರಿಸುವ ಗೊಂದಲದಲ್ಲಿ ಬಿದ್ದಿದ್ದಾರೆ. ಲಕ್ಷಾವಧಿ ರೂಪಾಯಿಗಳನ್ನು ತೆತ್ತು ವಿಲಾಯತಿ ಸಾಹೇಬರ ಬುದ್ಧಿಚಾತುರ್ಯದಿಂದ ತಮಗನುಕೂಲವಾದ ಒಪ್ಪಂದದ ತಹನಾಮೆಗಳನ್ನು ನಿರ್ಮಿಸತೊಡಗಿದ್ದಾರೆ. ಸ್ಯಾಮನ್ ಕೂಟಕ್ಕೆ ಸಾದರಪಡಿಸುವದಕ್ಕಾಗಿ ಭರತಖಂಡದೊಳಗಿನ ಕೆಲವು ಭಾರತವಾಸಿಯರು ತಮ್ಮ ತಮ್ಮಷ್ಟಕ್ಕೆ ಸುಧಾರಣೆಯ ಸೂಚನೆಗಳನ್ನು ಕಲ್ಪಿಸಿಕೊಳ್ಳುತ್ತಿದ್ದಾರೆ. ವಿಲಾಯತಿಯಲ್ಲಿಯೂ ಭಾರತೀಯ ರಾಜ್ಯಘಟನೆಯ ವಿಚಾರ ನಡೆದದೆ. ಭಾರತೀಯರಿಗೆ ಅಧಿಕಾರದಾನವಾಗದಂತೆ ಭಾಷೆಯ ಆಭಾಟದಿಂದ ಭಾರತೀಯರನ್ನು ಸಂತೈಸುವ ವಿಚಾರ ನಡೆದದೆ. ಇತ್ತ ರಾಷ್ಟ್ರೀಯ ಸಭೆಯವರೂ, ದೇಶಹಿತಚಿಂತಕರೂ, ಸಮಸ್ತ ಪಕ್ಷದ ಪ್ರತಿನಿಧಿಗಳೂ ಸೇರಿ ಪಂಡಿತ ಮೋತಿಲಾಲ ನೆಹರೂರವರ ಅಧಿಪತ್ಯದಲ್ಲಿ ಅಖಿಲ ಭಾರತೀಯ ರಾಜ್ಯಘಟನೆಯನ್ನು ತಯಾರಿಸಲು ಮಂಡಳವನ್ನೊಂದು ನೇಮಿಸಿದರು. ಆ ಮಂಡಳದ ರಿಪೋರ್ಟು ಕಳೆದ ವಾರದಲ್ಲಿ ಪ್ರಕಟವಾಗಿದೆ.

ಈ ಕಮಿಟಿಯಲ್ಲಿ ಭಿನ್ನ ಭಿನ್ನ ಪಕ್ಷದ ಪ್ರತಿನಿಧಿಗಳಿದ್ದರು. ಪಂಡಿತ ಮೋತಿಲಾಲ ನೆಹರೂರವರು ರಾಷ್ಟ್ರೀಯ ಸಭಾಭಿಮಾನಿಗಳು. ಸರ್ ಅಲೀ ಇಮಾಮ ಹಾಗು ಶ್ವೇಬ ಖುರೇಶಿಯವರು ಮಹಮ್ಮದೀಯ ಪ್ರತಿನಿಧಿಗಳು. ಸರ್ ತೇಜಬಹಾದ್ದೂರ ಸಪ್ರುರವರು ನೇಮಸ್ತರ ವಿಚಾರಗಳನ್ನು ಹೇಳಿದರು. ಶ್ರೀ। ಮಾಧವರಾವ ಅಣೇಯವರು ಹಿಂದು ಸಭೆಯ ವಿಚಾರಗಳನ್ನೂ, ಪ್ರತಿಸಹಕಾರ ಪಕ್ಷದ ವಿಚಾರಗಳನ್ನೂ ಮಂಡಳಕ್ಕೆ ತಿಳಿಸಿದರು. ಸರದಾರ ಮಂಗಲಸಿಂಗರವರು ಶೀಖರ ಪಕ್ಷವನ್ನು ನಿರ್ಮಲ ಚಿತ್ತದಿಂದ ನಿವೇದಿಸಿದರು. ಶ್ರೀ। ಸುಭಾಷಚಂದ್ರ ಬೋಸರವರು ಭರತಖಂಡದೊಳಗಿನ ಯುವಕರ ಉಚ್ಚ ಆಕಾಂಕ್ಷೆಗಳನ್ನು ಮಂಡಳಕ್ಕೆ ಸಾದರಗೊಳಿಸಿದರು. ನಾಶಿಕದ ಶ್ರೀ। ರಾಮಚಂದ್ರ ಪ್ರಧಾನರವರು ಮಹಾರಾಷ್ಟ್ರೀಯ ಅಂತಃಕರಣವನ್ನು ಮಂಡಳಕ್ಕೆ ವ್ಯಕ್ತಗೊಳಿಸಿದರು. ಹೀಗೆ ಎಲ್ಲರೂ ಮತಭೇದವನ್ನು ಪ್ರತಿಪಾದಿಸುತ್ತಿದ್ದಾಗ್ಯೂ ಮತೈಕ್ಯದಿಂದ ಘಟನೆಯನ್ನು ತಯಾರಿಸಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ನೇಮಸ್ತ-ರಾಷ್ಟ್ರೀಯರೊಳಗೂ, ಹಿಂದು-ಮುಸಲ್ಮಾನರೊಳಗೂ, ಬಾಲವೃದ್ಧರೊಳಗೂ ಮತೈಕ್ಯವಾಗದೆಂದೂ ಅಥವಾ ಮತೈಕ್ಯವಾಗಬಾರದೆಂದು ಬಯಸುವ ಹಾಗು ನಿರೀಕ್ಷಿಸುವ ಹಿತಚಿಂತಕರ ದುರಾಲೋಚನೆಗಳೆಲ್ಲ ಈ ರಿಪೋರ್ಟಿನಿಂದ ದೂರವಾಗಿವೆ. ಹಿಂದುಸ್ಥಾನದಲ್ಲಿ ರಾಷ್ಟ್ರೈಕ್ಯದ ಬುದ್ಧಿಯೂ ರಾಷ್ಟ್ರಹಿತದ ಬುದ್ಧಿಯೂ, ಮತಭೇದದ ಸ್ಥೂಲ ಕಾಲ ವಿಚಾರಗಳೂ, ಭಾರತೀಯ ಲೋಕನಾಯಕರಿಗೆ ತಿಳಿದಿರುತ್ತವೆಂದು ತಿಳಿದು, ಇನ್ನಾದರೂ ರಾಜ್ಯಾಧಿಕಾರಿಗಳು ಮುಂಜಾಗ್ರತೆ ವಹಿಕೊಂಡರೆ, ಸಾಮ್ರಾಜ್ಯ ಸರಕಾರಕ್ಕೂ, ಭರತಖಂಡಕ್ಕೂ ಕ್ಷೇಮವಿದೆ.

ಭಾವೀ ರಾಜ್ಯಘಟನೆಯ ಸ್ಥೂಲಸ್ವರೂಪವನ್ನಷ್ಟು ಇಂದಿಗೆ ನಾವು ನಿರ್ದೇಶಿಸುವೆವು. ಈಗ ಹಿಂದುಸ್ಥಾನದ ರಾಜ್ಯಭಾರವು ವಿಲಾಯತಿಯ ಸೂತ್ರಧಾರರಿಂದ ನಡಿಸಲ್ಪಡುತ್ತದೆ. ಇಲ್ಲಿಯ ದೊಡ್ಡ ದೊಡ್ಡ ಅಧಿಕಾರಿಗಳೆಲ್ಲ ವಿಲಾಯತಿಯೊಳಗಿನ ಸಾವ್ಕಾರರ ಸೂತ್ರಗೊಂಬೆಗಳು. ಅವರು ಹೇಳಿದಂತೆ ಇಲ್ಲಿ ಇವರು ನಡಕೊಂಡು ಪ್ರಜಾಕ್ಷೇಮವನ್ನು ಯೋಚಿಸಿ ಹೋದರಾಯಿತು. ಆ ಸ್ಥಿತಿಯನ್ನು ನೆಹರೂ ಮಂಡಳವು ಆಮೂಲಾಗ್ರ ಕಿತ್ತೊಗೆದಿದೆ. ಪ್ರಾಯಕ್ಕೆ ಬಂದ ಸ್ತ್ರೀಪುರುಷರಿಗೆಲ್ಲ ಮತದಾನ ಮಾಡಿ ಅವರಿಂದ ಘಟಿತವಾದ ನ್ಯಾಯವಿಧಾಯಕ ಸಭೆಗಳಿಗೆ ರಾಜ್ಯಭಾರವು ಒಪ್ಪಿಸಲ್ಪಟ್ಟಿದೆ. ಮತದಾರರ ಹೇಳಿಕೆಯಂತೆ ಇನ್ನು ಮುಂದೆ ರಾಜ್ಯಭಾರ ನಡೆಯತಕ್ಕದ್ದು.

ಸಾರ್ವಭೌಮರ ಅಥವಾ ಸಾಮ್ರಾಜ್ಯದ ಅಧಿಕಾರವನ್ನು ನೆಹರೂ ಮಂಡಳವು ಅಲ್ಲಗಳೆಯಲಿಲ್ಲ, ಬಾದಶಹರಿಗೆ ಮನ್ನಣೆ ಕೊಡೋಣಾಗಿದೆ. ಭರತಖಂಡದ ರಾಜ್ಯಕಾರಭಾರವು ಸಾಮ್ರಾಜ್ಯದ ಇತರ ಘಟಕಗಳಂತೆ, ಅಂದರೆ, ಆಯರ್ಲಂಡ, ಕೆನಡಾ, ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಂತೆ ಬ್ರಿಟಿಶ ಸಾಮ್ರಾಜ್ಯಕ್ಕೆ ಅಧೀನವಾಗಿ ನಡಕೊಳ್ಳತಕ್ಕದ್ದು. ಅದಕ್ಕಾಗಿ ಹೆಚ್ಚಿಗೆಯಾಗಿ ಈಗ ನಡಿಸುವ ನಿರಂಕುಶ ಕಾರಭಾರಕ್ಕೆ ತಡೆ ಬೀಳಬೇಕು. ಈ ಸೂಚನೆಯಿಂದ ಭಾರತೀಯರು ರಾಜ್ಯಕ್ರಾಂತಿ ಮಾಡಿ ಬ್ರಿಟಿಶ ಸಾಮ್ರಾಜ್ಯವನ್ನು ಧಿಕ್ಕರಿಸುತ್ತಾರೆಂಬ ಕೋಲಾಹಲಕ್ಕೆ ತಡೆಬೀಳುವದೆಂದು ನಮ್ಮ ಭಾವನೆ. ಬ್ರಿಟಿಶ ಅಧಿಕಾರಿಗಳ ಪುಂಡತನವನ್ನು ಸೈರಿಸಲಾರದೆ, ಸರ್ವಸ್ವಾತಂತ್ರ್ಯವನ್ನು ಪುರಸ್ಕರಿಸುವ ಸ್ವಾತಂತ್ರ್ಯವಾದಿ ಯುವಕರಿಗೆ ಈ ಶಿಫಾರಸಿನಿಂದ ಉತ್ಸಾಹಭಂಗವಾಗುವದು ಸಹಜವಿದೆ. ಆದರೆ, ಸಮಸ್ತ ಪಕ್ಷಗಳಿಗೆ ಗ್ರಾಹ್ಯವಾದ ಘಟನೆಯನ್ನು ತರಿಸುವಾಗ, ಒಂದೇ ಪಕ್ಷದ ಹಟ ಹಿಡಿಯುವದು ಪ್ರಶಸ್ತವಲ್ಲ. ಮಹಾತ್ಮರ ಅಂಬೋಣದಂತೆ ಲೋಕಮತಸಂಗ್ರಹವನ್ನು ಭಾರತೀಯರು ಈಗ ಗಳಿಸಬೇಕಾಗಿದೆ. ಈ ದೃಷ್ಟಿಯಿಂದ ವಿಚಾರಿಸಿದರೆ, ಸಾಮ್ರಾಜ್ಯ ಘಟಕಸ್ಥಾನವು ಸ್ವಾತಂತ್ರ್ಯ ಧ್ಯೇಯದಿಂದ ಚ್ಯುತವಾದರೂ ಇಷ್ಟವೆಂದು ಪಂಡಿತ ಮೋತಿಲಾಲ ನೆಹರೂರವರಂಥ ಮಾನ್ಯ ಲೋಕನಾಯಕರು ಅಭಿಪ್ರಾಯಪಟ್ಟಿದ್ದಾರೆ. ಮಹಾತ್ಮರು ಐಕ್ಯಮತ್ಯವನ್ನು ಸಾಧಿಸಿದ ಬಗ್ಗೆ ನೆಹರೂ ಮಂಡಳಕ್ಕೆ ಹರಸಿದ್ದಾರೆ, ನಾವೂ ನೆಹರೂ ಮಂಡಳವನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು. ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯಕ್ಕೆ ಇದರಿಂದ ಬಾಧೆ ತಟ್ಟುವಂತಿಲ್ಲ. ಪಂಡಿತ ನೆಹರೂರವರಾದರೂ ಇದಕ್ಕೆ ಮಿಕ್ಕ ರಾಜ್ಯಾಧಿಕಾರವನ್ನು ನಾವು ಸಂಪಾದಿಸಲಾಗದೆಂದು ಪ್ರತಿಬಂಧಿಸಲಿಲ್ಲ. ಮೊಂಟೆಗ್ಯೂ ಸ್ವರಾಜ್ಯದ ತರುವಾಯ ಜವಾಬದಾರ ಅಧಿಕಾರ ಕೊಡಬೇಕಿದ್ದರೆ, ಅದು ಸಾಮ್ರಾಜ್ಯ ಘಟಕಗಳ ಅಧಿಕಾರವೆಂದು ಅವರು ಪ್ರತಿಪಾದಿಸಿದ್ದಾರೆ. ಈ ವಿಚಾರಸರಣಿಗೆ ಯಾರೂ ಒಪ್ಪಬಹುದಲ್ಲವೇ? ಹಿಂದು-ಮುಸಲ್ಮಾನರ ಐಕ್ಯಸಾಧನೆಗಾಗಿ ನೆಹರೂ ಮಂಡಳವು ಒಂದು ಉಪಾಯಯೋಜನೆ ಮಾಡಿದೆ. ರಾಷ್ಟ್ರಹಿತಘಾತವಾಗದಂತೆಯೂ ಯೋಚಿಸಿದೆ. ಸಂಯುಕ್ತ ಮತದಾರ ಮಂಡಳಗಳನ್ನು ನಿರ್ಮಿಸಿ ಮುಸಲ್ಮಾನರಿಗೆ ಲೋಕಸಂಖ್ಯೆಯ ಮಾನದಿಂದ ಆಸನಗಳು ಕಾದಿಡೋಣಾಗಿದೆ. ಇದು ಪ್ರಯೋಗಾವಸ್ಥೆಯ ಸೂಚನೆ. ೧೦ ವರ್ಷಗಳ ತರುವಾಯ ಎಲ್ಲ ಜಾತಿಗಳ ಮತೈಕ್ಯದಿಂದ ಕಾದಿಟ್ಟ ಆಸನಗಳನ್ನು ಲೋಪ ಮಾಡಿ ಹಿಂದು ಮುಸಲ್ಮಾನರು ಸಂಯುಕ್ತ ಮತದಾರ ಮಂಡಳಗಳಲ್ಲಿ ಸ್ವಪರಾಕ್ರಮದಿಂದ ರಾಷ್ಟ್ರಪ್ರತಿನಿಧಿಗಳಾಗತಕ್ಕದ್ದಿರುತ್ತದೆ. ಸಿಂಧ ಪ್ರಾಂತದ ರಚನೆ, ಕರ್ನಾಟಕ ಏಕೀಕರಣ ಮುಂತಾದವುಗಳ ವಿಚಾರ ಮಾಡಿ

ನೆಹರು ಮಂಡಳವು ಭಾಷಾವಾರ ಪ್ರಾಂತರಚನೆಯನ್ನು ಪುರಸ್ಕರಿಸಿದೆ. ಒತ್ತಾಯದ ಪ್ರಾಥಮಿಕ ಶಿಕ್ಷಣ ಮುಂತಾದ ಸಾರ್ವತ್ರಿಕ ಸುಧಾರಣೆಯ ಯೋಜನೆಗಳು ಸೂಚಿಸೋಣಾಗಿವೆ. ನಾಗರಿಕರಿಗೆ ನಾಗರಿಕರ ಹಕ್ಕುಗಳ ಸಂರಕ್ಷಣೆ ಕೊಡೋಣಾಗಿದೆ. ಶಸ್ತ್ರಾಸ್ತ್ರಗಳ ಕಾನೂನಿನನ್ವಯ ವಿಧಿಸಿದ ಪ್ರತಿಬಂಧಗಳು ನೆಹರೂ ಕಮೀಟಿಯ ಘಟನೆಯಲ್ಲಿ ರದ್ದು ಮಾಡಲ್ಪಟ್ಟಿವೆ. ಹೊಸ ಘಟನೆಯಲ್ಲಿ ಹಿಂದೀಯರ ಕೈಕೆಳಗೆ ಕೆಲಸ ಮಾಡಲು ಒಪ್ಪದಿದ್ದ ಅಧಿಕಾರಿಗಳಿಗೆ ಪೆನ್ಶನು ಕೊಟ್ಟು ಸ್ವದೇಶಕ್ಕೆ ಕಳಿಸಲಿಕ್ಕೆ ನೆಹರೂ ಕಮೀಟಿಯ ಸೂಚನೆ ಇದೆ.

ಹೀಗೆ ಸಮಸ್ತ ಪಕ್ಷಗಳ ಐಕ್ಯಮತ್ಯದ ವರದಿಯನ್ನು ಪ್ರಕಟಿಸಿ ನೆಹರೂ ಮಂಡಳವು ಸ್ಯಾಯಮನ್ ಕೂಟಕ್ಕೆ ‘ಚೊಕ್ಕ ಉತ್ತರವನ್ನಿತ್ತಿದೆ. ಸ್ಯಾಯಮನ್ ಕೂಟವು ಕೂಡಲೇ ನೆಹರೂ ಮಂಡಳದೊಡನೆ ಆಲೋಚನೆ ನಡಿಸಿ, ಅವರ ಅನುಮತಿಯಿಂದ ಕಾರ್ಯವನ್ನು ನಿರ್ವಹಿಸುವ ಆಲೋಚನೆ ನಡಿಸಬೇಕೆಂದು ವಿಲಾಯತಿಯಲ್ಲಿ ಜೋರ್ಜ ಲೆನ್ಸಬೆರಿಯಂಥ ಪಾರ್ಲಿಮೆಂಟಿನ ಪ್ರಮುಖ ಸಭಾಸದರು ಸೂಚಿಸಹತ್ತಿದ್ದಾರೆ. ಸಕಲ ಪಕ್ಷಗಳ ವೈಯಕ್ತಿಕ ವಿಚಾರದಂತೆ ಈ ಘಟನೆಯಲ್ಲಿ ದೋಷಗಳಿರಬಹುದು. ದೋಷಗಳಿರುವದು ಸಹಜವಿದೆ. ಆದರೆ, ಐಕ್ಯಮತ್ಯದ ಸಾಧನೆಯೂ, ಅದಕ್ಕಾಗಿ ಗೇಕಬಿಂದನರು ದುಡಿಯುವ ಅವಶ್ಯಕತೆಯೂ ಈಗಿನ ಕಾಲದಲ್ಲಿ ಅತ್ಯಾವಶ್ಯಕವೆಂಬ ವಿಚಾರವನ್ನು ನಾವು ತಳೆದರೆ, ಸಾಮ್ರಾಜ್ಯ ಘಟಕಗಳ ರಾಜ್ಯಭಾರಕ್ರಮದ ಯೋಜನೆಯನ್ನು ನೆಹರೂ ಮಂಡಳವು ತಯಾರಿಸಿ ರಾಷ್ಟ್ರಕ್ಕೆ ಅಪಾರವಾದ ಸೇವೆ ಮಾಡಿರುವದಾಗಿ ಎಲ್ಲರೂ ಹೇಳುತ್ತಾರೆ. ಈ ಸೇವೆಗಾಗಿ ನಾವು ನೆಹರೂ ಮಂಡಳಕ್ಕೆ ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಈ ಘಟನೆಗಾಗಿ ಸಮಸ್ತ ಪಕ್ಷದವರು ಶಕ್ತಿಮೀರಿ ಸಾಹಸದಿಂದ ದುಡಿಯಲೆಂದೂ ಪ್ರಾರ್ಥಿಸುವೆವು.

ಸ್ಫುಟ ಸೂಚನೆಗಳು.

೧. ಬ್ರಿಟಿಶರ ಕಾರಕೀರ್ದಿಯಲ್ಲಿ ಭರತಖಂಡದಲ್ಲುಂಟಾದ ಅವಸ್ಥಾಂತರವನ್ನು ಹಲವರು ಹಲವು ಪರಿಯಿಂದ ಬಣ್ಣಿಸುತ್ತಾರೆ. ಬ್ರಿಟಿಶರ ಅನುಗ್ರಹದಿಂದಲೇ ಭರತಖಂಡದಲ್ಲಿ ಶಾಂತತೆಯು ನೆಲೆಗೊಂಡಿತೆಂದೂ, ಟಪಾಲ-ತಂತಿ-ಉಗಿಬಂಡಿ-ಉಗಿಹಡಗ ಮುಂತಾದ ಸುಧಾರಣೆಗಳು ನಮ್ಮ ಹಿಂದುಸ್ಥಾನದಲ್ಲಿ ಉಂಟಾದವೆಂದೂ, ಭಾರತೀಯರಿಗೆ ಅಮೂಲ್ಯವಾದ ಪಾಶ್ಚಾತ್ಯ ಸಂಸ್ಕೃತಿಯ ಸಂಸ್ಕಾರಗಳು ದೊರೆತವೆಂದೂ ಕೆಲವರು ಹೇಳುತ್ತಾರೆ. “ಇದೆಲ್ಲ ಸ್ಮಶಾನ ಶಾಂತತೆ, ಪ್ರಜೆಗಳೆಲ್ಲರೂ ನಿರ್ವೀರ್ಯರಾದರು. ಪಾಶ್ಚಾತ್ಯ ಸಂಸ್ಕೃತಿಯಿಂದ ಭಾರತೀಯರು ಪೂರ್ವಪರಂಪರೆಗೆ ಚ್ಯುತರಾಗಿ ಅಷ್ಟ-ನಷ್ಟಗಳಿಗೀಡಾಗಿದ್ದಾರೆ. ಟಪಾಲ-ತಂತಿ ಮುಂತಾದ ಸುಧಾರಣೆಗಳಿಗೆ ಬ್ರಿಟಿಶರ ಅನುಗ್ರಹ ಬೇಕಾಗಿಲ್ಲ.” ಇತ್ಯಾದಿ ಹಲವರು ಹೇಳುತ್ತಾರೆ. ಜರ್ಮನಿಯ ಸಮಾಚಾರ ಪತ್ರಿಕೆಯ ಬುದ್ಧಿಗಾರರೊಬ್ಬರು ತಮ್ಮ “ಬರ್ಲಿನ್” ಪತ್ರಿಕೆಯಲ್ಲಿ ಹಿಂದುಸ್ಥಾನದ ಬಗ್ಗೆ ಬರೆದ ಉದ್ಗಾರಗಳು ಮನನೀಯವಿವೆ. ಬ್ರಿಟಿಶರ ಕಾರಕೀರ್ದಿಯಲ್ಲುಂಟಾದ ಅವಸ್ಥಾಂತರದ ಮರ್ಮವನ್ನು ಅವರು ಸ್ವಲ್ಪದರಲ್ಲಿ ಹೇಳಿದ್ದಾರೆ. ಅವರು ಬರೆಯುವದೇನೆಂದರೆ:— “ಭರತಖಂಡವೆಂದರೆ, ಭೂಮಂಡಲದೊಳಗಿನ ವೈಭವ. ಪಾಶ್ಚಾತ್ಯರು ಆ ಸುರಮ್ಯ ದೇಶ ಕಾಲ್ಪನಿಕ ಕಥೆಯಂತೆ ನಯನಮನೋಹರವಾದ ರಾಷ್ಟ್ರ. ಅಂಥ ದೇಶವು ಇಂದಿಗೆ ಭಯಂಕರವಾದ ದಾರಿದ್ರ್ಯದಲ್ಲಿದೆ. ನಿರಾಶೆ, ದುಃಖ ಕಷ್ಟಗಳು ಆ ದೇಶದಲ್ಲಿ ತುಂಬಿಕೊಂಡಿವೆ. ಅಲ್ಲಿಯ ಅರಮನೆಗಳಲ್ಲಿ ಪರಕೀಯರು ವಾಸಿಸುತ್ತಾರೆ. ಭಾರತೀಯರು ಬಿಕ್ಷುಕರವಾಗಿ ಸ್ವಲ್ಪದರಲ್ಲಿ ನಿರ್ವಾಹ ಮಾಡುವವರು, ಪರಗ್ರಾಮದವರಿಗೂ ಅವರ ಕಲ್ಪನೆ ಸಹ ಆಗಲಾರದು. ಹೀಗಿದ್ದರೂ, ಅವರಿಗೆ ರಾಕಷ್ಟು ಅನ್ನ ದೊರಕುವದಿಲ್ಲ. ದಿನಾ ಅವರು ಉಪವಾಸ ಬೀಳುತ್ತಾರೆ. ಹಾಳು ಬಿದ್ದ ಹಳ್ಳಿಗಳಲ್ಲಿ ಗುಡಿಸಲುಗಳಿವೆ. ಬಿಲದಂಥ ಗುಡಿಸಲುಗಳು, ಅವು ಮಾನವ ನಿವಾಸಕ್ಕೆ ತೀರ ಅಯೋಗ್ಯವಾದವು. ಪ್ರಾಣಿಗಳು ಸಹ ಅಲ್ಲಿ ಆಶ್ರಯ ಮಾಡಲಾರವು. ಅಂಥ ಗುಡಿಸಲುಗಳಲ್ಲಿ ಉಪವಾಸ ಸಾಯುವ ಮನೆತನಗಳನ್ನು ಕಾಣಬಹುದು” ಜರ್ಮನಿಯ ಬುದ್ಧಿಗಾರರು ಭಾರತೀಯ ಸ್ಥಿತಿಯೊಳಗಿನ ತಿರುಳನ್ನರಿತಿದ್ದಾರೆ. ಹಿಂದುಸ್ಥಾನದಲ್ಲಿ ಆದ ಸುಧಾರಣೆಗಳಲ್ಲಿ ತೋರಿಕೆಯವು ಅವರಿಂದ ಬಡ ಭಾರತೀಯರಿಗೆ ಪ್ರಯೋಜನವಿಲ್ಲ. ಹೊಟ್ಟೆ ತುಂಬ ಕೂಳು ಸಿಗದವರಿಗೆ ಈ ಸುಧಾರಣೆಯು ಆಶಾ ಬರವೇಕೆ? ಅದರಿಂದ ಕೂಳಿನ ಪ್ರಾಪ್ತಿಯಿಲ್ಲ. ಕೂಳು ತಿಂದು ಸಂಗ್ರಹವಾಗಿದ್ದರೆ ಅದನ್ನು ಖರ್ಚ ಮಾಡಲು ಸುಧಾರಣೆಯಿಂದ ಕೂಲವಿದೆ. ಬ್ರಿಟಿಶ ರಾಜ್ಯಾಧಿಕಾರಿಗಳು ಈ ಸ್ಥಿತಿಯನ್ನು ಪರಾಂಬರಿಸಿ ಹೊಸ ಹೊಸ ತೆರಿಗೆಯನ್ನೇರಿಸುವ ಗೋಜಿಗೆ ಹೋಗದೆ, ಸರಕಾರಿ ಖರ್ಚನ್ನು ತಗ್ಗಿಸಿ, ತೆರಿಗೆಯನ್ನಿಳಿಸಿ ಪ್ರಜೆಗಳಿಗೆ ಉದ್ಯೋಗಗಳನ್ನು ಕಲಿಸಿ ಅವರಿಗೆ ಹೊಟ್ಟೆತುಂಬ ಅನ್ನ ಸಿಗುವಂತೆ ವ್ಯವಸ್ಥೆ ಮಾಡಿದರೆ, ಅದರಷ್ಟು ಸುಧಾರಣೆ ಬೇರೊಂದಿಲ್ಲ. ತಂತಿ-ಟಪಾಲಿಲ್ಲದೆ ಹಿಂದೆ ಯುಗಗಳಾದವು, ಮುಂದೆಯೂ ಆಗುವವು. ಉಪವಾಸ ಬಿದ್ದು, ಆಯುಷ್ಯವಿದ್ದರೂ ಬದುಕಬರುವದಿಲ್ಲ. ಎಲ್ಲಕ್ಕೂ ಹೊಟ್ಟೆಯ ಗೋಳೇ ಕಷ್ಟಪ್ರದವಾದದ್ದಿಲ್ಲವೇ?

೨. ಹಿಂದುಸ್ಥಾನದಲ್ಲಿ ಈಗ ವಿದ್ಯಾರ್ಥಿಗಳು ಮುಂದಾಗಹತ್ತಿದ್ದಾರೆ. ಶ್ರೀ| ಪರಿಮಾನಂದರವರು ಅಲ್ಲಲ್ಲಿ ಹೋಗಿ “ಯೂಥ ಲೀಗ” ದೊಡನೆ ತರುಣರ ಸಭೆಗಳನ್ನು ಸ್ಥಾಪಿಸಿ, ವಿದ್ಯಾರ್ಥಿಗಳಲ್ಲಿ ರಾಷ್ಟ್ರಾಭಿಮಾನವನ್ನು ಹುಟ್ಟಿಸುತ್ತಿದ್ದಾರೆ. ರಾಷ್ಟ್ರಕ್ಕೆ ವಿದ್ಯಾರ್ಥಿಗಳ ಕಡೆಯಿಂದ ಸೇವೆಯನ್ನು ಮಾಡಿಕೊಳ್ಳಲಿಕ್ಕೆ ಅವರು ಉಪಾಯ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಎಚ್ಚರಾಗುತ್ತಿದ್ದಾರೆಂದು ತಿಳಿಸಲು ಸಂತೋಷವಾಗುತ್ತದೆ. ಮುಂಬಯಿ ಸರಕಾರವು ಲೋಕಮತವನ್ನು ಧಿಕ್ಕರಿಸಿ ಸ್ಯಾಯಮನ್ ಕೂಟದೊಡನೆ ಸಹಕಾರ ಮಾಡಬೇಕೆಂಬ ನಿರ್ಧಾರ ಮಾಡಿದ ಸಂಗತಿಯು ಸರ್ವಶ್ರುತವಿದೆ. ಈ ನಿರ್ಧಾರದಂತೆ ಮುಂಬಯಿ ಸರಕಾರವು ಸ್ಯಾಯಮನ್ ಸಪ್ತಕರೊಡನೆ ಸಹಕರಿಸುವದಕ್ಕಾಗಿ ಪ್ರಾಂತಿಕ ಸಪ್ತಕರನ್ನು ನೇಮಿಸಿತು. ಕಾಯದೆ ಕೌನ್ಸಿಲಿನ ಸಭಾಸದರಾದ ಡಾ| ಅಂಬೇಡಕರರು ಈ ಸಪ್ತಕರಲ್ಲೊಬ್ಬರು. ಡಾ| ಅಂಬೇಡಕರರಿಗೆ ಮುಂಬಯಿಯ ಕಾಯದೆ ಕಾಲೇಜಿನಲ್ಲಿ ಶಿಕ್ಷಕರ ಕೆಲಸವಿದೆ. ಕೌನ್ಸಿಲ ಅಧಿವೇಶನ ಮುಗಿಸಿ ಪುಣೆಯಿಂದ ಮರಳಿ ಬಂದೊಡನೆ ವಿದ್ಯಾರ್ಥಿಗಳು ಅವರಿಗೊಂದು ಮಾನಪತ್ರ — ಯಥಾರ್ಥವಾಗಿ ಹೇಳಬೇಕಾದರೆ ಅವಮಾನಪತ್ರ — ವನ್ನು ಅರ್ಪಿಸಿ, ಸ್ಯಾಯಮನ್ ಕೂಟಕ್ಕೆ ಅನುಕೂಲ ಅಭಿಪ್ರಾಯ ಕೊಟ್ಟ ಬಗ್ಗೆ ವರ್ಗದಲ್ಲಿಯೇ ನಿಷೇಧಿಸಿದರು. ಸಪ್ತಕರೊಳಗಿಂದ ರಾಜೀನಾಮೆ ಕೊಟ್ಟು ಈಗಾದರೂ ಪರಾವೃತ್ತವಾಗಬೇಕಾಗಿಯೂ ಅನುಜ್ಞೆ ಮಾಡಿದರು. ನಿಷೇಧವೆಂದು ಆ ದಿನ ವಿದ್ಯಾರ್ಥಿಗಳೆಲ್ಲರೂ ವರ್ಗದೊಳಗಿಂದ ಎದ್ದು ನಡೆದರು. ಮುಂಬಯಿಯಲ್ಲಿ “ವಿಕ್ಟೋರಿಯಾ ಜುಬಿಲಿ ಟೆಕ್ನಿಕಲ್ ಇನ್‌ಸ್ಟಿಟ್ಯೂಟ” ಎಂಬ ಶಾಲೆಯಿದೆ. ಅಲ್ಲಿ ಮಗ್ಗಗಳ ಮೇಲೆ ಮಹಾತ್ಮರ ಚಿತ್ರಗಳನ್ನು ನೇಯುವ ಪರಿಪಾಠವಿದೆ. ಹಿಂದೆ ವಿದ್ಯಾರ್ಥಿಗೆ ಮಹಾತ್ಮರ ಚಿತ್ರ ನೇಯಿಸುವ ಸ್ಫೂರ್ತಿಯಾಯಿತು. ನಿಯಮದಂತೆ ಅಧಿಕಾರಿಗಳ ಅಪ್ಪಣೆ ಕೇಳೋಣಾಯಿತು. “ಈ ಬಗ್ಗೆ ಅಪ್ಪಣೆ ಕೊಡಲಾಗುವದಿಲ್ಲ. ವಿದ್ಯಾರ್ಥಿಗಳು ಸಮ್ರಾಟ, ಗವರ್ನರ, ವಿಭಾಗ ಮುಂತಾದ ಅಧಿಕಾರಿಗಳ ಚಿತ್ರಗಳನ್ನು ನೇಯಬಹುದು. ಶಾಸ್ತ್ರವಿಶಾರದ ಕಲಾನುಭಾವರ ಚಿತ್ರಗಳನ್ನೂ ನೇಯಬಹುದು. ಇನ್‌ಸ್ಟಿಟ್ಯೂಟಿನ ಚಾಲಕರ ಚಿತ್ರವನ್ನೂ ತೆಗೆಯಬಹುದು. ಆದರೆ, ಮಹಾತ್ಮರಂಥವರ ಚಿತ್ರವನ್ನು ತೆಗೆಯಲಾಗುವದಿಲ್ಲ.” ಈ ಅಪ್ಪಣೆ ಬಂದೊಡನೆ ವಿದ್ಯಾರ್ಥಿಗಳು ರೇಗಿಗೆದ್ದರು ಇನ್ನು ಮುಂದೆ ಯಾರೊಬ್ಬರ ಚಿತ್ರವನ್ನು ತೆಗೆಯಬಾರದೆಂದು ನಿರ್ಧಾರ ಮಾಡಿದ್ದಾರೆ. ಈ ಕುರಿತು ಕಳೆದ ಸೋಮವಾರಕ್ಕೆ ಶ್ರೀ| ಭಗವಾನದಾಸ ಧೀರುಭಾಯಿ ದೇಸಾಯಿಯವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳು ಸಭೆ ಸೇರಿ ಈ ಆಜ್ಞೆಯನ್ನು ನಿಷೇಧಿಸಿದರು. ಅಧ್ಯಕ್ಷರು ಅಧಿಕಾರಿಗಳಿಗೊಂದು ಮಾತನ್ನು ತಿಳಿಸಿದರು. ಸಮ್ರಾಟ, ಪ್ರಾಂತಾಧಿಪತಿ ಮುಂತಾದ ದೊಡ್ಡ ದೊಡ್ಡ ಅಧಿಕಾರಿಗಳ ದೊಡ್ಡಸ್ತನವೆಲ್ಲ ಹಿಟ್ಟು ರಾಶಿ ಮಾಡಿದರೂ, ಅದು ಮಹಾತ್ಮರ ದೊಡ್ಡಸ್ತನಕ್ಕೆಂದೂ ಸಾಬರದೆಂದು ಹೇಳಿ, ಇನ್‌ಸ್ಟಿಟ್ಯೂಟಿನ ಚಾಲಕರ ಕ್ಷುದ್ರ ಮನೋವೃತ್ತಿಯನ್ನು ಬೈಲಿಗೆಳೆದರು. ಈ ಸಂಗತಿಗಳ ಮೇಲಿಂದ ವಿದ್ಯಾರ್ಥಿಗಳಲ್ಲುಂಟಾದ ಜಾಗೃತಿಯು ಸ್ಫುಟವಾಗುತ್ತದೆ. ಇಜಿಪ್ತ-ಚೀನ ದೇಶಗಳಲ್ಲಿ ವಿದ್ಯಾರ್ಥಿಗಳಿಂದಲೇ ಸ್ವಾತಂತ್ರ್ಯ ಪ್ರಾಪ್ತಿಯಾಗಿದೆ. ಭರತಖಂಡದಲ್ಲಿಯೂ ಅವರಿಂದಲೇ ದೇಶೋದ್ಧಾರವಾಗುವ ಶುಭಲಕ್ಷಣಗಳು ದೃಗ್ಗೋಚರವಾಗುತ್ತವೆಂದರೆ, ಅಯಥಾರ್ಥವಾದೀತೇನು?

೩. ಮುಂಬಯಿ ಕಾಯದೆ ಕೌನ್ಸಿಲಿನ ಪ್ರಶ್ನೋತ್ತರಗಳಲ್ಲಿ ಪ್ರಾಥಮಿಕ ಶಿಕ್ಷಕರ ವಿಷಯು ಶಿಕ್ಕಿದ ಸರಕಾರಿ ಉತ್ತರಗಳು ಕೆಳಗೊಂದೆಡೆ ಸಂಗ್ರಹಿಸಲ್ಪಟ್ಟಿವೆ. ಅವನ್ನು ಪರಾಂಬರಿಸಿದರೆ, ಈ ರಾಜ್ಯಪದ್ಧತಿಯಲ್ಲಿ ಮೂಗು ಹಿಡಿಯುವ ಸಾಮರ್ಥ್ಯವಿಲ್ಲದಿದ್ದರೆ ಬಾಯಿ ತೆರೆಯುವದಿಲ್ಲೆಂದು ಸ್ಪಷ್ಟವಾಗುತ್ತದೆ. ಪ್ರಾಥಮಿಕ ಶಿಕ್ಷಕರು ಸಂಘ ಮಾಡಿದರು. ಸಭೆ ಸೇರಿಸಿದರು.

ರು ಕೌನ್ಸಿಲು ಸಭಾಸದರ ದರ್ಶನ ಕೊಂಡರು ಶಿಷ್ಟರಿಗೆ ಕಳುಹಿದರು. ಪಗಾರಿನ ಸ್ಕೇಲನ್ನು ಸಹ ತಯಾರಿಸಿ ಕೊಟ್ಟರು. ಹಿಂದಿನ ಕ್ಷಿಹಿಂದೊಂದು ಸ್ಕೇಲುಗಳು ತಯಾರಾದವು (ಸಾಠೇ-ಪರಾಂಜಪೇ ಸ್ಕೇಲು, ಕೊಲ್ಲಾಪುರ ಸ್ಕೇಲು, ಸಿಲೆಕ್ಷನ್ ಗ್ರೇಡು, ಸುರ್ವೇ ಕಮೀಟಿಯ ಸ್ಕೇಲು, ಹೆಡ್ ಮಾಸ್ತರಿ ಭತ್ತೆ ಮುಂತಾದ ಪಗಾರವಾರಿಯ ಕ್ರಮಗಳು (ಸೂಚಿಸಲ್ಪಟ್ಟವು. ಯಾವ ಸೂಚನೆಯಲ್ಲಿಯೂ ಸರಕಾರಕ್ಕೆ ಹಣ ಖರ್ಚಾಗದಂತೆ ಪ್ರಾಥಮಿಕ ಶಿಕ್ಷಕರ ಸಂಬಳವೇರುವ ಯೋಜನೆಯಿಲ್ಲ. ಸರಕಾರದ ಬಳಿ ಹಣವಂತು ಇಲ್ಲ. ಪ್ರಾಥಮಿಕ ಶಿಕ್ಷಕರಲ್ಲಿ ಟ್ರೇಂಡ-ಅಂಟ್ರೇಂಡ ಕ್ವಾಲಿಫ್ಯಾಡ-ಅನ್‌ಕ್ವಾಲಿಫ್ಯಾಡ ೧೯೩೩ನೇ ಇಸ್ವಿಯ ಮುಂಚಿನವರು-ಮೇಲಿನವರು, ಹೀಗೆ ತರತರದ ಭೇದಗಳು ಕಲ್ಪಿಸಲ್ಪಟ್ಟವು. ಆದರೂ, ಹಣವಿಲ್ಲದೆ ಸಂಬಳವನ್ನೇರಿಸಬರುವದಿಲ್ಲ. ಸಾಠೇ ಪರಾಂಜಪೇ ಸ್ಕೇಲಿನಂತೆ ಸಂಬಳ ಕೊಡಬೇಕೆಂದರೆ, ೧೮-೨೦ ಲಕ್ಷ ರೂಪಾಯಿ ಬೇಕು. ಸರ್ವೇ ಮಂಡಳದಂತೆ ಸಂಬಳ ಕೊಟ್ಟರೆ, ೪॥ ಲಕ್ಷ ರೂಪಾಯಿಯಾದರೂ ಬೇಕು. ಪ್ರಾಥಮಿಕ ಶಿಕ್ಷಣವು ಬೋರ್ಡಿಗೆ ವಹಿಸಲ್ಪಟ್ಟ ಬೋರ್ಡುಗಳಿಗೂ, ಶಿಕ್ಷಕರಿಗೂ ಈಗ ಹವಾಲಿ ಹಾಕಲಾಗುತ್ತದೆ. ಮೊಂಟೆಗ್ಯೂ ಸ್ವರಾಜ್ಯದ ಮುಂಚಿನಿಂದ ಸಂಬಳದ ಏರಿಕೆಗಾಗಿ ಬಡಿದಾಡುತ್ತಿರುವ ಪ್ರಾಥಮಿಕ ಶಿಕ್ಷಕರಿಗೆ ಮೊಂಟೆಗ್ಯೂ ಸ್ವರಾಜ್ಯ ಮುಗಿದು, ಪ್ರಾವಿನ್ಸ್ ಯುಗದ ಪ್ರಾರಂಭದ ಲಕ್ಷಣಗಳೂ ಬರಲು ಅವರ ಸಂಬಳವು ಏರುವದಿಲ್ಲ. ಏರಿಕೆ ಮಾಡಲು ಹಣಸಂಗ್ರಹವಾಗುವದಿಲ್ಲ. ದೊಡ್ಡ ದೊಡ್ಡ ಸಾಹೇಬರ ಸಂಬಳ ಏರಿ ಹೋಯಿತು. ಸೈನ್ಯ ಖರ್ಚ ಹಿಗ್ಗಿ ಕೋಟ್ಯಾವಧಿ ರೂಪಾಯಿಗಳ ಕುತ್ತವೂ ಹುಟ್ಟಿತು. ಆದರೂ ಪ್ರಾಥಮಿಕ ಶಿಕ್ಷಕ ಬಾಲಕರ ಬಾಯಲ್ಲಿ ಹುಂಡೆ ನೀರು ಬೀಳುವದಿಲ್ಲ. ಇಷ್ಟಾದರೂ ಪ್ರಾಥಮಿಕ ಶಿಕ್ಷಕರು ಪ್ರೇರಣೆಯಿಂದ ಇನ್ನೂ ಚಾತಕ ಪಕ್ಷಿಯಂತೆ ಸಾವಧಾನ ಚಿತ್ತದಿಂದ ಪರಿಶ್ರಮಪಡುತಿರುವದನ್ನು ನೋಡಿದರೆ ವಿಸ್ಮಯವಾಗುತ್ತದೆ. ಸೈರಣೆಬೀಳುವ ವ್ಯೆಸಿರಿಯೆಂಬ ಗಾದೆಯನ್ನು ನಾವು ಕೇಳಿದ್ದೇವೆ. ಆದರೆ ಕೈಸಿರಿ ಪ್ರಾಪ್ತಿಯಾಗದಿರುವಾಗ, ವೈಸಿರಿಯಿಂದ ಹೊಟ್ಟೆ ತುಂಬುತ್ತದೇನು? ಪ್ರಾಥಮಿಕ ಶಿಕ್ಷಕರು, ಬಾರ್ಡೋಲಿಯ ಮಂತೆ ಮೂಗು ಹಿಡಿಯಲು ಸಾಮರ್ಥ್ಯವಿಲ್ಲದಿದ್ದರೆ, ಸಂಘ-ವಿಪತ್ತಿನ ಚಳವಳಿಯನ್ನು ಒಮ್ಮೆಲೇ ವಿಸರ್ಜಿಸಿ, ಸಂಬಳದ ಏರಿಕೆಯ ಗೊಡವೆಯನ್ನೇ ಬಿಟ್ಟುಬಿಡತಕ್ಕದ್ದು. ಸರಕಾರದ ಆರ್ಥಿಕ ಸ್ಥಿತಿಯು ವಿಶೇಷ (substantially) ಸುಧಾರಿಸಿದ ಹೊರತು ಶಿಕ್ಷಕರಿಗೆ ಇನ್ನು ಸಂಬಳ ಹೆಚ್ಚಾಗದೆಂಬ ಮಾತು ಈಗ ಖಂಡಿತ. ಇದೇ ಪ್ರಕಾರ ರಾಜ್ಯಕಾರಭಾರ ನಡೆದರೆ, ಸರಕಾರದ ಬಳಿ ವಿಶೇಷ ದ್ರವ್ಯಸಂಗ್ರಹವಾಗುವದಾಗಿ ಲ್ಲೆಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ. ಅಂದಮೇಲೆ ಶಿಕ್ಷಕರ [illegible] ಸಿಲ [illegible] ದಾರಿಗಾಗಿ ಇನ್ನು ಹೀಗೆ ಕಷ್ಟ-ನಷ್ಟ ಪಡುವದೇಕೆ?

— ಸಂಸ್ಕೃತಲೆಯು ಅಧ್ಯಕ್ಷರಾಗಿ ಹೋದ ಬಳ್ಳಾರಿಯ ಶ್ರೀ [illegible] ರಾಘವಾಚಾರ್ಯರು ಲಂಡನಿನಲ್ಲಿ ಸರ್ [illegible] ಹೋ ಲಾರ್ಡ್ [illegible] ಲಡಿನ್ ಮುಂತಾದ ನಾಯಕ-ರನ್ನು ಭೇಟಿ [illegible] ಮಾಡಿದರು. ಪಾರಿಸ ಪಟ್ಟಣಕ್ಕೆ ಹೋಗಿ ಜಿಲ್ಲೆಯ [illegible] ಕಂಡರು.

ಸ್ಥಾನಿಕ ವೃತ್ತಾಂತ.

ಕುಮಟಾ— ಮಘಾ ನಕ್ಷತ್ರದ ಮಳೆಯು ಸಮಾಧಾನದಿಂದ ನಡಿಸುತ್ತಿದೆ. ಹವೆಯಲ್ಲಿ ಚಳಿ ಹುಟ್ಟಿದೆ. ಜ್ವರ ಅತಿಸಾರ ಮುಂತಾದ ಬೇನೆಗಳುಂಟಾಗುವ ದಿನಗಳಿವು. ಜನರು ಜಾಗ್ರತೆಯಿಂದಿರಬೇಕು. ಈ ವಾರದಲ್ಲಿ ೮-೩೩ ಇಂಚು, ೧೫೨ [illegible] ಈ ವರೆಗೆ ಇಂಚು ಮಳೆಯಾಯಿತು.

ಇಲ್ಲಿಯ ಮ್ಯುನಿಸಿಪಾಲಿಟಿಯ ಇಲೆಕ್ಷನ ಅಕ್ರಮಗಳ ಮೂಲಕ ಭ್ರಷ್ಟವಾಯಿತೆಂದೂ ಅದನ್ನು ರದ್ದು ಪಡಿಸಬೇಕೆಂದೂ ಕಾರವಾರ ಜಿಲ್ಲಾ ಕೋರ್ಟಿನಲ್ಲಿ ಶುಕ್ರವಾರಕ್ಕೆ ಅರ್ಜಿ ದಾಖಲಾಗಿದೆ. ಮ್ಯುನಿಸಿಪಾಲಿಟಿಯವರು ಮತಪತ್ರಿಕಗಳನ್ನು ೨೩ನೇ ತಾರೀಖಿಗೆ ನಾಶಗೊಳಿಸತಕ್ಕದ್ದಾಗಿ ಆ ದಿನ ಮ್ಯುನಿಸಿಪಾಲಿಟಿಯ ಸಭೆ ಸೇರಿಸುವ ನೋಟೀಸ ಹೊರಡಿಸಿದ್ದಾರೆ. ನಿನ್ನೆ ಅರ್ಜಿಯ ನೋಟೀಸ ಮ್ಯುನಿಸಿಪಾಲಿಟಿ ಅಧ್ಯಕ್ಷರ ಮೇಲೆ ಜಾರಿಯಾಯಿತು. ಮತಪತ್ರಿಕೆಗಳನ್ನು ಕೋರ್ಟಿನ ಹುಕುಮಾಗದ ಹೊರತು ನಾಶಗೊಳಿಸಬಾರದಾಗಿ ಜಡ್ಜರು ಅಧ್ಯಕ್ಷರಿಗೆ ಆಜ್ಞೆಯಾಗಿದೆ.

ಹೊನ್ನಾವರ— ಮಘಾ ನಕ್ಷತ್ರದ ಮಳೆ ಚಲೋ ನಡಿಸುತ್ತಿದೆ. ಅಡಿಕೆಗೆ ಮಾತ್ರ ಕೊಳೆ ಬಂದು ತೋಟಗರರಿಗೆ [illegible] ಇಲ್ಲಿಯ ಕನ್ನಡ [illegible] ಯು ಪೂರ್ಣ [illegible] ಕ್ಷೇತ್ರದಲ್ಲಿ [illegible] ಪರೀಕ್ಷೆಗಳು ಯಾವಾಗ ಬಿದ್ದಾವೆ [illegible] ಹೇಳಬರದು. ಶಾಲಾ ಪುಸ್ತಕದಲ್ಲಿ ಈ [illegible] ಗತಿ ಸಮುದ್ರ [illegible] ವಾಗಿ ತಿಳಿಯುತ್ತದೆ. [illegible] ರತಿನ ಸ್ಥಿತಿಗತಿ ನೋಡಿ [illegible] ಮಾಡಬೇಕು.

ಕೋರ್ಟಿನಿಂದ [illegible] ಹೋಗುವ ಮಾರ್ಗಕ್ಕೆ [illegible] ದೊಡ್ಡ ದೊಡ್ಡ [illegible] ಲು [illegible] ಅತ್ತ [illegible] ಮಾರ್ಗದಲ್ಲಿವೆ. [illegible] ಹೇಳಿಕೆ ಕೊಟ್ಟರೂ ಯಾವನ್ನೂ [illegible] ಸುಮ್ಮನೆ ಕೂತುಕೊಂಡಿದೆ. ಭಟ್ಕಳ ಮುರ್ಡೇಶ್ವರ ಕಡೆಯಿಂದ ಕೋರ್ಟ ಕೆಲಸಕ್ಕೆ ಬರುವವರು ಈ ಮಾರ್ಗದಿಂದಲೇ ತಿರುಗಾಡುತ್ತಾರೆ. [illegible] ರೂ ಕೆಸರಿನಲ್ಲಿ ಕಾಲು ಜಾರಿ ಬಿದ್ದರೆ ಕೋರ್ಟಿನೊಳಗಿನ ನಂಬರು [illegible] ಯಾಗ [illegible] ಇಲ್ಲಿನ ಒಬ್ಬರು [illegible] ಯಾಗುವದು ಜನರ ರಕ್ಷಣೆಗಾಗಿ ಮಾಡುವವರಾರು? ಈ ರಸ್ತೆಯೊಮ್ಮೆ ನೋಡಬೇಕು. ಯಾರಿಂದಲೂ ದುರುಸ್ತಿ ಆಗದಿದ್ದಲ್ಲಿ ಈ ರಸ್ತೆಯನ್ನು ಮುಚ್ಚಿಬಿಡಬೇಕು.

ಭಟ್ಕಳ— ಈ ವಾರದಲ್ಲಿ ಬಿಸಿಲು ಮೋಡವಿದ್ದು ಮಘಾ ಮಳೆ ಬಹಳ ಸುರಿಯಿತು. ಶುಕ್ರವಾರಕ್ಕೆ ನೆರೆ ಸಹ ಬಂದಿತ್ತು. ಚಳಿಯಿಂದ ಊರಲ್ಲೆಲ್ಲ ಚಳಿ ಜ್ವರ.

ಮೂಢಭಟಕಳ ಗ್ರಾಮದೊಳಗಿನ ಶ್ರೀ ತಿರುಮಲ ದೇವಸ್ಥಾನದಲ್ಲಿ ಮೊಕ್ತೇಸರರೊಳಗೂ, ಅರ್ಚಕರೊಳಗೂ ಕಲಹಗಳುಂಟಾಗಿರುವವಂತೆ! ಅನ್ಯಾಯ, ನಂದಾದೀಪಗಳ ವಿನಿಯೋಗಗಳಿಗೆ ತಕ್ಕಷ್ಟು ಖರ್ಚಾಗದೆ ಅಕ್ರಮಗಳಾಗಿರುವದಾಗಿ ಸುದ್ದಿ. ದೇವಾಲಯ ಕಮಿಟಿಯವರು ಕೂಡಲೆ ಅತ್ತ ಹೋಗಿ ವ್ಯವಸ್ಥೆ ಮಾಡಬೇಕು.

ರಸ್ತೆಯಲ್ಲೆಲ್ಲ ಐಕ್ಯಸಂಚಾರವಾಗುತ್ತಿರುವಾಗ ನಮ್ಮಲ್ಲಿಯ ಕೋಗ್ರೆಸ ಕಮಿಟಿಯಲ್ಲಿ ಬಿಡದಾಟ. ಕೆಲವರು ತಾರೀಖು ೧೧ ನೇಗೆ ಕೊಂಗ್ರೆಸ ಕೆಲಸದ ಸಾಮಾನುಗಳನ್ನು ದುಡ್ಡಿಗೆ ಮಂಛೇರಿನಂತೆ ಮಾರಿಬಿಟ್ಟರು. ಕೈಮಗ್ಗವನ್ನು ಲಿಲಾವು ಮಾಡುವ ಸಂಕಲ್ಪವಾಗಿದೆ. ಲೈಬ್ರರಿಯ ಪುಸ್ತಕಗಳೂ ಕಾಣೆಯಾದವಂತೆ! ಕಾರಣ ತಿಳಿಯಲಿಲ್ಲ.

ರಾ| ವಾಮನ ನರಸಿಂಹನಾಯ್ಕರು ಶ್ರೀನಾರಾಯಣ ದೇವಸ್ಥಾನದ ಇದಿರಿನ ಚೌಕಿಯನ್ನು ಕಟ್ಟಿಸುತ್ತಿದ್ದಾರೆ.

ಕಾಸರಕೋಡಿನಿಂದ ಮುಂಕಿಯ ಧರ್ಮಶಾಲೆ ವರೆಗಿನ ಮಾರ್ಗದ ಮೇಲೆ ದೊಡ್ಡಕಲ್ಲು ಹಾಸಿದ್ದಾರೆ. ಮಣ್ಣು ಹಾಕಲಿಲ್ಲ; ರೋಲು ಎಳೆಯಲಿಲ್ಲ. ಮಾವಿನಕಟ್ಟೆಯ ವರೆಗೆ ಖಡಿ ಹಾಕಿದ್ದಾರೆ. ಮಣ್ಣಿಲ್ಲದೆ ರೋಲ ಎಳೆದುಬಿಟ್ಟಿದ್ದಾರೆ. ಇದರಿಂದ ದುರಸ್ತಿಯು ಕ್ಷಿಪ್ರ-ಶೀಘ್ರ ಆಗಿ ಮೋಟಾರ ವಾಹನಗಳಿಗೆ ಬಲು ನಷ್ಟ. ಟ್ಯೂಬ-ಟಾಯರುಗಳ ಕಂಪನಿಗಳಿಗೆ ಲಾಭ! ಪ್ರಯಾಣಿಕರಿಗೂ ಉಪದ್ರವ. ಇಂಜನಿಯರ ಸಾಹೇಬರವರು ಇತ್ತ ಲಕ್ಷ ಕೊಡಬೇಕು.

ಮುರ್ಡೇಶ್ವರ ಪೇಟೆಯಿಂದ ಬಸ್ತಿಮಕ್ಕಿ ವರೆಗಿನ ಬೋರ್ಡಿನ ರಸ್ತೆಯೂ ಕೆಟ್ಟುಹೋಗಿದೆ. ಬೋರ್ಡಿನವರು ಕಣ್ತೆರೆಯಬೇಕು.

ಶಿರಸಿ— ಮಳೆಯು ಸುರಿಯುತ್ತಲೇ ಇದೆ.

ಪ್ಲೇಗರಾಜನ ದಬ್ಬಾಳಿಕೆಯು ಹಬ್ಬುತ್ತಲಿದೆ. ವಿನಾ ಒಂದೆರಡು ಮರಣಗಳ ವಾರ್ತೆ ಇದ್ದೇ ಇದೆ. ಚುಚ್ಚಿಸಿಕೊಳ್ಳುವದು ಭರದಿಂದ ನಡೆದಿದೆ. ಜನರು ಚಿಂತಾತುರರಾಗಿದ್ದಾರೆ. ವರ್ಷವರ್ಷಕ್ಕೆ ಪ್ಲೇಗರಾಜನ ಸವಾರಿ ಬರುತ್ತಿರುವದರಿಂದ ಜನರು ನಿರಾಶರೂ ನಿರ್ಧನರೂ ಕೂಡ ಆಗುವ ಲಕ್ಷಣ ತೋರುತ್ತದೆ.

ಇಲ್ಲಿ ಒಬ್ಬ ಗೃಹಸ್ಥರ ಮನೆಯಲ್ಲಿ ಧನಸರ್ವಸ್ವವಾದ ಒಂದು [illegible] ರಕ್ಕೆ ಮಿಕ್ಕಿದ ದಾಗೀನೆಗಳು [illegible] ಕಾಲ ೫ ಘಂಟೆಗೆ ಅರ್ಧ ತಾಸಿನ ಅವಕಾಶದಲ್ಲಿ ಕಳವಾದವು. ಸಂಶಯದ ಮೇಲಿಂದ ಪೋಲೀಸರು ಜಪ್ತಿ ಮಾಡಲು ನೆರೆಮನೆಯ ಹಾಳ್ಗೆಯ ಮೇಲೆ ಅಡಗಿಸಲ್ಪಟ್ಟದ್ದು ಬೆಳಕಿಗೆ ಬಂತು! ಫಿರ್ಯಾದಿ ದಾಖಲಾಗಿದೆ.

ಕಳವಿನಿಂದ ಸರಾಯಿ ಭಟ್ಟಿಯನ್ನು ನಡಿಸಿದ ಪ್ರಕರಣದಲ್ಲಿ ಆರೋಪಿಗಳಿಗೆ ೯ ರೂ. ೩ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು.

ಸಾಭಾರ ಸ್ವೀಕಾರ

ಧ್ರುವ ಚರಿತ್ರೆ— ರಾ| ಅಣ್ಣಪ್ಪಾ ಲಕ್ಷ್ಮಣ ವೈದ್ಯ ಕುಮಟಾ ಇವರಿಂದ ಸಂಪಾದಿತವಾದ ಕನ್ನಡ ಯಕ್ಷಗಾನ ಧ್ರುವ ಚರಿತ್ರೆಯಿದು. ರಾ| ವೈದ್ಯರು ತಮ್ಮಲ್ಲಿದ್ದ ಕೈಬರಹದ ಪ್ರತಿಯನ್ನು ಶೋಧಿಸಿ ಮುದ್ರಿಸಿ ಪ್ರಕಟಿಸಿದ್ದಾರೆ. ಚರಿತ್ರೆಯು ಪದ್ಯದ ಸ್ವರೂಪದ ಮೇಲಿಂದ ಈ ಗ್ರಂಥವು ಉತ್ತಮವಿದೆ. ನೆರೆಯ ಒಬ್ಬ ವಿದ್ವ ವೈಷ್ಣವನೆಂದು ವಿಚಾರಮಾಡಿದಂತೆ ತೋರುತ್ತದೆ. ಮುಕ್ತಾಂಬಿಕೆಯ ಸ್ತವನದ ಮೇಲಿಂದ ಗ್ರಂಥಕರ್ತರು ಕೊಲ್ಲೂರಿನವರೆಂಬಂತೆ ಭಾಸವಾಗುತ್ತದೆ. ಅಥವಾ ಗ್ರಾಮದ ಕುಲದೇವಿಯೆಂದು ಮೂಕಾಂಬಿಕೆ ಸ್ಮರಣೆಯಾಗಿರಬಹುದು. ಯಕ್ಷಗಾನ ಹಾಗು ಧ್ರುವಚರಿತ್ರೆ ವಿಷಯಗಳು ಯಾರಿಗೂ ಚಿತ್ತವೇಧಕವಾಗುವವು. ಚರಿತ್ರೆಯ ಪೂರ್ವ ಭಾಗವು ಬಹಳ ಸರಸವಾಗಿದೆ. ಉತ್ತರ ಭಾಗಕ್ಕೆ ಆಧುನಿಕ ವ್ಯಾಕರಣದ ಸ್ವಲ್ಪ ಭಿನ್ನ ತೋರುವದರಿಂದ ಕೈಬರಹದ ಪ್ರತಿಗಳನ್ನು ಸಂಗ್ರಹಿಸು

ದ ಕೆಲಸವೂ ಪ್ರಾರಂಭಿಸುವ ಕ ನವೂ ವಿಷ್ಣುದ ವೃಷ್ಟಿಯಿಂದ ಯಾವಾಗಲೂ ಆಕ್ರೋಶ ಕಂಡಿಸಿವೆ ರಾಷ್ಟ್ರಗಾನ ಪ್ರಸಂಗಗಳಿಂದ ಕರ್ನಾಟಕ ಸಂಸ್ಕೃತಿಯ ಆರ ವೃಂದಗಳಿಗೆ ನವ ಗೆ ಮುಂದರಿಯಲು ಮಾರ್ಗ ತೋರಿಸಿಕೊಟ್ಟಂತಾಗುತ್ತದೆ. ಈ ಕೆಲಸವನ್ನು ಸ್ವಾವಲಂಬನದಿಂದ ಕೈಕೊಳ್ಳುವವರು ವಿರಳರು. ರಾ। ವೈದ್ಯರಿಗೆ ಲೋಕಶಾಸ್ತ್ರಿಯ ಶಕ್ತಿ ಇಂಥ ಕೆಲಸ ಮಾಡಲು ಉತ್ತೇಜನ ಸಿಗಬೇಕಾಗಿ ಎಷ್ಟು ಅಪೇಕ್ಷೆ ಇದೆ. ಚರಿತ್ರೆಯು ಬೆಳೆಯಬೇಕಾಗಿದೆ.

ಬಾರ್ಡೋಲಿಯ ಭರತ ವಾಕ್ಯ.

ಬಾರ್ಡೋಲಿಯೊಳಗಿನ ಚಳವಳಿಗಳೆಲ್ಲ ಈಗ ಕಡೆ ಬಿಗ್ಗಿದೆ. ಸರಕಾರವು ಸತ್ಯಾಗ್ರಹಿಗಳಿಗೆ ಬಿಡುಗಡೆ ಮಾಡಿತು. ಆ ಮೇಲೆ ಶ್ರೀ ವಲ್ಲಭಭಾಯಿಯವರು ಸತ್ಯಾಗ್ರಹವನ್ನು ನಿಲ್ಲಿಸಿ ಹಿಂದಿನ ತೀರ್ವೆ ಮಾತ್ರ ಕೊಡಲು ಪ್ರಜೆಗಳಿಗೆ ಉಪದೇಶಿಸಿದರು. ತೀರ್ವೆ ಜಮೆಯಾಗುತ್ತಿದೆ. ರಾ। ರಾಮಚಂದ್ರ ಭಟ್ಟರ ಹಳೇ ಹೊಸ ತೀರ್ವೆಗಳೊಳಗಿನ ಭೇದವನ್ನು ಸರಕಾರ ತ್ರಿಪೋರಿಯಲ್ಲಿ ಜಮಾಗಿತ್ತವರು. ಸರಕಾರ ಮಾರಿದ ಭೂಮಿಯು ಜಪ್ತಿಯೊಳಗಿಂದ ಬಿಡುಗಡೆ ಹೊಂದಿದೆ. ಸೂರತದಲ್ಲಿಯೂ ಬಾರ್ಡೋಲಿಯಲ್ಲಿಯ ಸಭೆಗಳಾಗಿ ಬಾರ್ಡೋಲಿಯ ಜೇಸಾಯಿಗಾರರೂ ಶ್ರೀ ವಲ್ಲಭಭಾಯಿಯವರಿಗೂ ಅಭಿನಂದಿಸಲಾಯಿತು. ಬೇಸಾಯಗಾರರು ಈ ವಿಜಯದಿಂದ ಉಬ್ಬಿ ಹೋಗಬಾರದೆಂದು ೧೯ನೇ ಇಸ್ವಿಯಲ್ಲಿ ಕೊಂಡ ಸಾರ್ವಜನಿಕ ಕರ ನಿರಾಕರಣೆಯ ಪ್ರತಿಜ್ಞೆಯನ್ನು ಸ್ಮರಿಸಿ ಅದನ್ನು ಸಾರ್ಥಗೊಳಿಸುವ ಯೋಗ್ಯತೆಯನ್ನು ಸಂಪಾದಿಸಬೇಕಾಗಿಯೂ ಮಹಾತ್ಮರು ಎಚ್ಚರಿಕೆ ಕೊಟ್ಟರು. ಶ್ರೀ ವಲ್ಲಭಭಾಯಿ ಪಟೇಲರವರು ಅಹಮದಾಬಾದಕ್ಕೆ ಬಂದಾಗ ಅಲ್ಲಿ ಪ್ರಚಂಡ ಸ್ವಾಗತವಾಯಿತು. ಅವರ ನಗರ ಮೆರವಣಿಗೆಯೂ ತಗ್ಗಿದಂತಾಯಿತು, ಆಬಾಲವೃದ್ಧ ಸ್ತ್ರೀ ಪುರುಷರ ಮೆರವಣಿಗೆಯ ಮಾರ್ಗಗಳೆಲ್ಲ ಕಿಕ್ಕಿರಿದ ಹೋಗಿತ್ತು. ೫ ಲಕ್ಷಕ್ಕೆ ವಿಕ್ಕ ಜನಸಂದಣಿಯಾಗಿತ್ತಂತೆ! ಅಹಮದಾಬಾದದ ಮ್ಯುನಿಸಿಪಾಲಿಟಿಯವರು ಬಾರ್ಡೋಲಿದ ಸರದಾರರಿಗೆ ಮಾನಪತ್ರವನ್ನಿತ್ತು ಸತ್ಕಾರಂತಿಯುತವಾಗಿಂದ ಹಿರಿದಾಗಿಕೊಂಡರು. ಆ ಕಾಲಕ್ಕೆ ೧೦೦೦೦ ಜನರು ಸಭೆಯಲ್ಲಿ ಸೇರಿದ್ದರು. ಶ್ರೀ ವಲ್ಲಭಭಾಯಿಯವರು ಬಾರ್ಡೋಲಿಯ ವಿಜಯದ ಶ್ರೇಯಸ್ಸನ್ನೆಲ್ಲ ಮಹಾತ್ಮರಿಗರ್ಪಿಸಿದರು. ತಾವು ಮಹಾತ್ಮರ ಅಲ್ಪ ಪ್ರತಿಯ ಒಬ್ಬ ಭಕ್ತನೆಂದೂ ಅವರ ಶ್ರೇಷ್ಠ ಭಕ್ತನಾಗಲು ಇನ್ನೂ ದುಡಿಯಬೇಕಾಗಿದೆಂದೂ ವಿನಯಪೂರ್ವಕವಾಗಿ ನುಡಿದರು.

ಸತ್ಯಾಗ್ರಹ ನಿಧಿಯನ್ನು ಇನ್ನು ಕಳಿಸಬಾರದಾಗಿ ಮಹಾತ್ಮರು ಅಪ್ಪಣೆ ಮಾಡಿದ್ದಾರೆ. ಈ ವರೆಗೆ ಕೂಡಿಸಿದ ನಿಧಿಯಿದ್ದರೆ ಅದನ್ನು ಮಾತ್ರ ತಮಗೆ ಕಳಿಸಬೇಕಾಗಿಯೂ ಅನುಜ್ಞೆ ಮಾಡಿದ್ದಾರೆ.

ವೃತ್ತಸಾರ.

— ಮೈಸೂರಿನ ದಿವಾನರು ಚಿಕ್ಕಪಟ್ಟಣದೊಳಗಿನ ವಿದ್ಯುತ್ಸಂಗ್ರಹದ ವಾಸ್ತು ಸಮಾರಂಭವನ್ನು ನೆರವೇರಿಸಿದರು. ಸಂಸ್ಥಾನದೊಳಗಿನ ೬೩ ಮುಖ್ಯ ಪಟ್ಟಣಗಳಿಗೆ ಇಲ್ಲಿಂದಲೇ ವಿದ್ಯುಚ್ಛಕ್ತಿಯ ಪೂರೈಕೆಯಾಗುವದು.

— ಲೋಕಮಾನ್ಯರ ಸಾಂವತ್ಸರಿಕ ಪುಣ್ಯತಿಥಿ ಉತ್ಸವ ನಡಿಸುವ ಪಕ್ಕದ ಕೇಸರಿ-ಮರಾಠಾ ಪತ್ರಿಕೆಯ ಟ್ರಸ್ಟಿಗಳಾದ ಡಾ। ಮೂಂಜೆಯವರು ಕೆಳ ಕರಿಗೂ, ಲೋಕಮಾನ್ಯರ ಮಗಂದಿರಿಗೂ ಕಲ್ಪಹಪ್ರಂಗವಾಗಿದೆ. ರಾ। ಕೇಳಕರರು ಪುಣೆಯ ಕೋರ್ಟಿನಲ್ಲಿ ದಾವೆ ದಾಖಲ ಮಾಡಿ ಲೋಕಮಾನ್ಯರ ಮಗಂದಿರ ಮೇಲೆ ಹಂಗಾಮಿ ಪ್ರತಿಬಂಧಕ ಹುಕುಮು ಪಡೆದಿದ್ದರು. ಪುಣೆಯ ಡಿಸ್ಟ್ರಿಕ್ಟ ಜಜ್ಜರು ಪ್ರತಿಬಂಧಕ ಹುಕುಮು ಕೊಟ್ಟರು. ಕ್ಯಾಪಿಟಲ್‌ನಲ್ಲಿ ಲೋಕಮಾನ್ಯರ ಮಗಂದಿರು ಮಾಡಿದ ಅಪೀಲು ತಿರಸ್ಕರಿಸಲ್ಪಟ್ಟಿತು.

— ಕನಾ೯ಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಪಂಡಿತ ಮೋತಿಲಾಲ ನೆಹರೂರವರಿಗೆ ಅಧ್ಯಕ್ಷರನ್ನಾಗಿ ಆರಿಸಬೇಕೆಂದು ಠರಾವು ಮಾಡಿದ್ದಾರೆ. ಬಹುತರವಾಗಿ ಎಲ್ಲ ಪ್ರಾಂತಿಕ ಕಾಂಗ್ರೆಸ ಕಮಿಟಿಯವರೂ ಪಂಡಿತ ಮೋತಿಲಾಲರಿಗೇ ಠರಾವು ಮಾಡಿದ್ದರಿಂದ ಕಲಕತ್ತೆಯ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನವು ಪಂಡಿತ ಮೋತಿಲಾಲರಿಗೇ ಅರ್ಪಿಸಲ್ಪಡುವದು.

— ಪಾರ್ಲಮೆಂಟಿನಲ್ಲಿ ಹಿಂದೀ ವಿಷಯದ ವಿಷಯ ಮಾತಾಡಲು ವಜೀರ್ ಶ್ರೀಧೀಸರು ಸಮಯ ವನ್ನೇ ಕೊಡಲಿಲ್ಲ. ಕಾರ್ಮಿಕ ಸಕಲ ಕ್ರಾಂತಿಮಾಲೀರರರು ಹಿಂದೀ ಪ್ರಧಾನರಿಗೆ ಬ್ರಿಟಿಶ ಆಡಳಿತೆಯು ಮೋಗಲರಿಯಿಗಿಂತ ಬಿ ಎಸೆಂದು ಪತ್ರ ಬರೆದು ನಿವೇದಿಸಿ ೭ ಹಿಂದುಸ್ಥಾನದ ವಿಷಯವು ಮಾತನಾಡಲು ಕೆಲವು ಸಮಯ ಕೇಳಿಕೊಂಡಾಯಿತು.

— ಪುಣೆಯ ಶ್ರೀ ಕೇಳಕರರು ಮಹಾರಾಷ್ಟ್ರದ ಇತಿಹಾಸವನ್ನು ಬರೆಯುತ್ತಿದ್ದಾರೆ, ಕನಾ೯ಟಕ-ಮಹಾರಾಷ್ಟ್ರಗಳ ಇತಿಹಾಸವು ಬಹುತರವಾಗಿ ಒಂದಾಗಿರುವದರಿಂದ ಕನಾ೯ಟಕ ಇತಿಹಾಸದ ಬಗ್ಗೆ ಉಪಲಬ್ಧವಿರುವ ಮಾಹಿತಿಯನ್ನು ತಮಗೆ ಕಳಿಸಬೇಕಾಗಿ ಅವರ ವಿನಂತಿ.

— ಅರಸಿಕೆರೆಯ ವೀರಶೈವ ವಿದ್ಯಾರ್ಥಿಗಳಿಗೆ ಉಳಕೊಳ್ಳುವ ಅನುಕೂಲತೆಗಾಗಿ ಶ್ರೀಮಾನ್ ಮಠದ ಸಿದ್ಧಪ್ಪ ಶೆಟ್ಟರು ತಮ್ಮ ೩೨ ಸಾವಿರ ಬೆಲೆಯ ಭವನವನ್ನು ಅರ್ಪಿಸಿದ್ದಾರೆ.

— ಕರ್ನಾಟಕ ಪ್ರಾಂತವನ್ನು ಏಕೀಕರಣ ಮಾಡುವ ದೆಸೆಯಿಂದ ಡಾ। ಮಂ ರಾಮರಾಯರು ಧಾರವಾಡದ ನ್ಯಾಯವಿಧಾಯಕ ಸಭೆಯ ಕೌನ್ಸಿಲ ಆಫ್ ಸ್ಟೇಟ ನಲ್ಲಿ ಠರಾವನ್ನು ಸೂಚಿಸುವವರಿದ್ದಾರೆ.

— ವಂಗಾಲದಲ್ಲಿ ಗಿರಣಿ ಕಾಮಗಾರರ ಸಂಪು ನಡೆದದೆ. ಇದು ಸುಧಾರಿಸದ ಲಕ್ಷಣಗಳಿಲ್ಲ. ಗಿರಣಿ ಸಾವುಕಾರರಿಗೂ ಕೂಲಿಕಾರರಿಗೂ ಸಂಧಿ ಪ್ರಸ್ತಾಪ ನಡೆದಿತ್ತು. ಇದು ಸಾವುಕಾರರ ಸ್ವಾರ್ಥದಿಂದ ಬಿದ್ದು ಹೋಯಿತು. ೧೯೨೬ ನೇ ಇಸವಿಯಲ್ಲಿ ಗಿರಣಿ ಸಾವುಕಾರರಿಗೆ ರೂ ೧ ಕೋಟಿ ೧೦ ಲಕ್ಷ ನಷ್ಟವಾಯಿತು. ಅದನ್ನು ತುಂಬಿಕೊಳ್ಳುವದಕ್ಕಾಗಿ ಸಾವುಕಾರರು ಕೂಲಿಯ ಮಾನವನ್ನು ಶೇಕಡೆ ತಗ್ಗಿಸಿದ್ದರಿಂದ ಸಂಪಾಯಿತು. ಮುಂಬಯಿ ಮ್ಯುನಿಸಿಪಾಲಿಟಿ ಅಧ್ಯಕ್ಷರಾದ ಡಾ। ದೇಶಪಾಂಡರವರು ಸಿ ಪ್ರಕಾರದಿಂದ ಒಡಂಬಡಿಕೆಯಾಗಿ ಸಿವಿಲ ಚಿತ್ತದಿಂದ ಸಂಪನ್ನು ಅಂತ್ಯಪಡಿಸಲು ಬೋಧಿಸಿದ್ದಾರೆ.

— ಕಾಶಿಯ ಹಿಂದು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಬೇಕಾದವನ್ನು ಪೂರೈಸುವದಕ್ಕಾಗಿ ಖಾದಿ ಭಂಡಾರವೊಂದು ತೆರೆಯಲಾಗಿದೆ. ಪಂಡಿತ ಮಾಲವೀಯರವರು ಭಂಡಾರದ ವಾಸ್ತು ಸಮಾರಂಭದ ಕಾಲಕ್ಕೆ ಬೋಧಪ್ರದ ಭಾಷಣ ಮಾಡಿದರು. ಋಗ್ವೇದದ ಕಾಲಕ್ಕೆ ಅಂದರೆ ಸುಮಾರು ೬೦೦೦ ವರ್ಷಗಳ ಹಿಂದೆ ಸನಾತನ ವಿಶ್ವಸ್ಥಿತಿಗೆ ಅನುಕೂಲವಾಗುತ್ತಿದ್ದ ಕೆಲಸವನ್ನು ಪರದೇಶ ಜನರು ಹೇಳಿದರು. ಈ ಉದ್ಯೋಗವು ಅವನತಿ ಹೊಂದಿದಂತೆ ಹಿಂದಿನ ದೇಶವು ಅವನತಿಹೊಂದಿತೆಂದು ಪಂಡಿತ ಮಾಲವೀಯರು ತಿಳಿಸಿಹೇಳಿದರು. ಖಾದಿಯಲ್ಲಿ ಪಾವಿತ್ರ್ಯವಿದೆ, ದೇಶಾಭಿಮಾನವಿದೆ, ಸ್ವಾರ್ಥತ್ಯಾಗವಿದೆ. ಆದರ ಧಾರಣದಿಂದ ನೈತಿಕ ಸ್ವಾತಂತ್ರ್ಯವು ಬೆಳೆಯುತ್ತದೆಂದಾಗಿಯೂ ಪಂಡಿತ ಮಾಲವೀಯರು ಹೇಳಿದರು.

— ಹಳ್ಳಿಗಳನ್ನು ಕೆಲ ಕಾಲಕ್ಕೆ ತಕ್ಕ ಸ್ವಚ್ಛವಾಗಿಡುವ ಶ್ರೀ ಸ. ಪ್ರಸಾದ ಭ್ರಮಿಷ್ಠರಾಗಿ ವಶಗಾಗುವರ ಮಾಡಿ ಕಲಕತ್ತೆಯ ಸರ್ಚ್ಲೈಟ ಪತ್ರಿಕೆಯ ಪ್ರತಿನಿಧಿಗೆ ಹೇಳಿದರು.

— ಪರದೇಶಗಮನ ಮಾಡಿದವರೊಡನೆ ಪಂಕ್ತಿಭೋಜನ ಮಾಡುತ್ತೇವೆಂಬ ಸಂಶಯದ ಮೇಲಿಂದ ಸಹ ಜನ್ಮದಿಂದ ಡಾ। ಗುತ್ತಿಕರರ ಮೇಲೆ ಕೊರಡಿಸಿದ ಬಹಿಷ್ಕಾರ ರಾಯರ ಪ್ರಶ್ನೆ ಮತದಶಕದಿಂದ ಹಿಂತೆಗೆದುಕೊಳ್ಳಲಾಗಿದೆ. ಡಾ। ಗುತ್ತಿಕರರು ಕಳೆದ ೧೫ನೇ ತಾರೀಖಿಗೆ ಪಟ್ಟನು ಪಡೆದರು.

— ಬಂಗಾಲದೊಳಗಿನ ಗಣಪತಿ ಉತ್ಸವದ ಗಡಿಬಿಡಿಯನ್ನು ವಿಚಾರಿಸುವದಕ್ಕಾಗಿ ಮೈಸೂರ ಸರಕಾರವು ಒಂದು ಕಮಿಟಿಯನ್ನು ನೇಮಿಸಿದೆ. ರಾ। ಚಂಡಿಯವರು ಆ ಕಮಿಟಿಯ ಅಧ್ಯಕ್ಷರು.

— ಚೀನಾದೇಶದ ಸ್ವಾತಂತ್ರ್ಯದ ಮೇಲಿನ ಪ್ರತಿಬಂಧಗಳೆಲ್ಲ ಈಗ ದೂರವಾದವು. ಜಪಾನಿಗಳೂ ಬ್ರಿಟಿಶರೂ ಸೇರಿ ಮಾಡಿದಾಗಿ ಚೀನ ದೇಶದ ಸುಂಕದ ಅಧಿಕಾರವನ್ನು ಕೈಬಿಟ್ಟರು.

— ಈ ವರುಷ ಅಂಬು ವಿಟಾ ಜಿಂಕಿದ ಚೀನಾ ದೇಶದಲ್ಲಿ ಬಹಳ ಬೆಳೆ ಬೆಳೆದಿದೆ. ಅದಕ್ಕಾಗಿ ಈ ವರ್ಷ ೧೦ ಸಾವಿರ ಹೆಚ್ಚಿನ ಜನರಿಗೆ ಬೆಳೆ ಕೊಯ್ಯುವ ಕೆಲಸಕ್ಕಾಗಿ ಹೆಚ್ಚು ಬೇಕು.

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ ಲಿಮಿಟೆಡ್

ಹೆಡ್ ಆಫೀಸ - ಅಮೃತ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ

ಸ್ಪೆಶಲ್ ಪೋಲೀಸಿಗಳು ೧-೭ ೫೮ ನೇ ತಿಯಿಂದ ಕೊಡಲ್ಪಡುತ್ತವೆ. ೫ ವರ್ಷಗಳ ವೇಳೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು. ಡಾಕ್ಟರರ ತಪಾಸು ಇಲ್ಲ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗುತದೆ. ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾರೆ, ಇನ್ನೂ ಇಳಿಸುತ್ತಿದ್ದಾರೆ. ಕಂತಿನ ರಕಮು ತಿಂಗಳಿಗೆ ೧ ಯಾ ೫ ರೂಪಾಯಿ ೧೫ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ತಿಗುತ್ತವೆ. ಪ್ರಯತ್ನಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ದಯಾಳು ರವರು ವಿಶೇಷ ಹೆಚ್ಚಿನ ಮಾಹಿತಿಯ ಬಗ್ಗೆ ಹೆಡ್ ಆಫೀಸಿಗೆ ಬರೆಯತಕ್ಕದ್ದು.



इंग्लंडमध्ये तयार झालेली
रॉयल आर्चर
सायकल (सायकलच्या प्रत्येक भागावर " आर्चर " अशी निशाणी असते
उत्तम रीतीनें लाकडी खोक्यात पॅक केलेली रेल्वे खर्च भरलेली, तुमच्या गांवच्या रेल्वे स्टेशनवर
फक्त रु. ८५ आ ८.
या सायकल सोबत डनलॉप कॉर्ड टायर्स, फ्रीव्हील, २ रिम ब्रेक्स, मडगार्डस्, आरामशीर स्प्रिंग सीट, रबर पॅडल्स लुकासचा "पाथफाइंडर" दिवा, सर्वोत्कृष्ट घंटा, डनलॉप प्लेटेड पंप, संपूर्ण हत्यारासह हत्यारे ठेवण्याची बॅग, ऑर्डर ऑर्डर सोबत रु. २५ आगाऊ. उरलेली रक्कम व्ही पी नें वसूल केली जाईल
वेलिंग्टन सायकल ॲंड मोटार कं
मुंबई-लॅमिंग्टन रोड. पुणे-आर्सेनल रोड

ಮಹಾತ್ಮರ ಆತ್ಮಚರಿತ್ರ.

(೧೭) ಜೊತೆಗಾರರು.

ವ್ರಜಕಿಶೋರ ಬಾಬು ಹಾಗು ರಾಜೇಂದ್ರ ಬಾಬುಗಳ ಜೋಡಿಗೆ ಎಲ್ಲಿಯೂ ಸರಿಹೋಗದು. ಅವರು ನನ್ನ ಮೇಲೆ ತೋರ್ ಭಕ್ತಿಯನ್ನಿಟ್ಟಿದ್ದರು. ಅವರ ಬೆಂಬಲವಿಲ್ಲದೆ ಹುಲ್ಲುಕಡ್ಡಿಯನ್ನು ನನ್ನಿಂದ ಸರಿಸಲಾಗುತ್ತಿರಲಿಲ್ಲ. ಶಂಭು ಬಾಬು, ಅನುಗ್ರಹ ಬಾಬು, ಧರಣಿಬಾಬು, ರಾಮನವಮಿ ಬಾಬು ಪ್ರಭೃತಿ ವಕೀಲರು — ಇವರಿಗೆ ಆ ಬುದ್ಧ್ಯರ ಶಿಷ್ಯರೆನ್ನಿರಿ ಅಥವಾ ಜೊತೆಗಾರರೆನ್ನಿರಿ — ಯಾವಾಗಲೂ ನಮ್ಮ ಬಳಿಯಲ್ಲಿರುತ್ತಿದ್ದರು. ವಿಂಧ್ಯ ಬಾಬುಗಳೂ, ಜನಕಧಾರಿ ಬಾಬುಗಳೂ ಆಗಿಂದಾಗ ಬಂದು ನಮಗೆ ನೆರವಾಗುತ್ತಿದ್ದರು. ಇವರೆಲ್ಲರೂ ಬಿಹಾರಿಗಳು. ಬೇಸಾಯಗಾರರ ಹೇಳಿಕೆಗಳನ್ನು ಬರೆದುಕೊಳ್ಳುವದೇ ಇವರೆಲ್ಲರ ಮುಖ್ಯ ಕೆಲಸ.

ಪ್ರೊಫೆಸರ ಕಿರ್ಪಲಾನಿಯವರಿಗೆ ನಮ್ಮನ್ನು ಸೇರದಿರಲಾಗಲಿಲ್ಲ. ಅವರು ಸಿಂಧದವರು. ಆದರೆ ಬಿಹಾರದ ಮೇಲೆ ಬಿಹಾರಿಗಳಿಗಿಂತ ಅವರಿಗೆ ಭಕ್ತಿ ಹೆಚ್ಚು. ಹೀಗೆ ಪರಪ್ರಾಂತಕ್ಕೆ ಹೋಗಿ ಉಳಿದು ಅಲ್ಲಿ ಕೆಲಸ ಮಾಡುವವರು ಆ ಪ್ರಾಂತದ ಭಕ್ತರಾಗಿದ್ದವರನ್ನು ನಾನು ಕಂಡಿದ್ದೇನೆ. ಕಿರ್ಪಲಾನಿಯವರು ಆ ತರಗತಿಯವರು. ತಾನು ಪರಪ್ರಾಂತದವನೆಂಬ ಭಾವನೆ ಹುಟ್ಟದಂತೆ ಅವರು ತನ್ನವರಾಗಿ ನಡೆಕೊಳ್ಳುತ್ತಿದ್ದರು. ಅವರು ನನ್ನ ದ್ವಾರಪಾಲಕ ಮುಖ್ಯಸ್ಥರಾಗಿದ್ದರು. ದರ್ಶನೇಚ್ಛುಗಳ ಕಾಟದಿಂದ ನನ್ನನ್ನು ಕಾಪಾಡಲು ಅವರು ಮೊದಮೊದಲು ಬಹಳ ದುಡಿದರು. ಒಮ್ಮೆ ಅವರು ವಿನೋದದಿಂದ ದರ್ಶನಾಕಾಂಕ್ಷಿಗಳಿಗೆ ಹಿಮ್ಮೆಟ್ಟಿಸುತ್ತಿದ್ದರು. ವಿನಯಪೂರ್ವಕವಾಗಿ ಬೆದರಿಸಿ ಇನ್ನೊಮ್ಮೆ ಅವರಿಗೆ ಹಿಂತಿರುಗಿಸುತ್ತಿದ್ದರು. ಸಾಯಂಸಂಜೆಯಾದೊಡನೆ ಅವರು ಶಿಕ್ಷಕರಾಗುತ್ತಿದ್ದರು. ಜೊತೆಗಾರರಿಗೆ ಐತಿಹಾಸಿಕ ಅಭ್ಯಾಸಗಳನ್ನೂ, ಅವುಗಳ ಮೇಲಿಂದ ಹೊರಡುವ ಸಿದ್ಧಾಂತಗಳನ್ನೂ ತಿಳಿಸಿಹೇಳಿ ಪುಕ್ಕರಿಗೆ ಧೈರ್ಯವನ್ನು ಕೊಡುತ್ತಿದ್ದರು.

ಮೌಲಾನಾ ಮಝರೂಲ ಹಕ್ಕರವರು ಸಹಾಯಕಾರರ ದಳದಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿದ್ದರು. ಅವಶ್ಯವಿದ್ದಾಗ ನಾವವರಿಗೆ ಕರೆಯಬಹುದಾಗಿತ್ತು. ಅವರು ತಿಂಗಳಿಗೊಮ್ಮೆ ಯಾ ಎರಡು ಬಾರಿ ಬಂದು ನನ್ನನ್ನು ಕಂಡು ಮಾತನಾಡಿ ಹೋಗುತ್ತಿದ್ದರು. ಆ ಕಾಲದ ಅವರ ಸಂಭ್ರಮವೇ ಬೇರೆ. ಈಗಿನ ಅವರ ಸಾದಾ ಜೀವನಕ್ಕೂ, ಆಗಿನ ಪ್ರಕಾರಕ್ಕೂ ಬಹಳ ಅಂತರವಿದೆ. ಆದರೆ, ಅವರು ನಮ್ಮೊಡನೆ ಬಹು ಆಪ್ತತ್ವದಿಂದ ನಡೆಕೊಂಡು ನಮ್ಮವರಾಗಿದ್ದರು. ಪರಕೀಯರಿಗೆ ಅವರ ಹೊಳಪಿನ ಮೇಲಿಂದ ಸಹಜವಾಗಿ ಅವರು ನಮ್ಮವರಾಗಿ ತೋರುತ್ತಿದ್ದಿಲ್ಲ.

ಬಿಹಾರದ ಪರಿಸ್ಥಿತಿಯು ನನಗೆ ಹೊಳೆಯಹತ್ತಿತು. ಊರವರಿಗೆ ಶಿಕ್ಷಣವನ್ನು ಕೊಟ್ಟಹೊರತು ಇಲ್ಲಿ ಶಾಶ್ವತವಾಗಿ ಉಳಿಯುವಂಥ ಕಾರ್ಯ ಮಾಡಲು ಸಾಧ್ಯವಿಲ್ಲವಾಗಿ ನನಗನಿಸಿತು. ಬೇಸಾಯಗಾರರ ಅಜ್ಞಾನವನ್ನು ನೋಡಿ ನಾನು ಮರುಗಿದೆನು. ಕೆಲವರ ಮಕ್ಕಳು ಉಂಡಾಡಿಗರಾಗಿದ್ದರು, ಹಲವರ ಮಕ್ಕಳು ದುಡ್ಡಿಗಾಗಿ ಮುಂಜಾವಿನಿಂದ ಸಾಯಂಸಂಜೆಯ ತನಕ ನೀಲಿ ತೋಟಗಳಲ್ಲಿ ದಣಿಯುತ್ತಿದ್ದರು. ಆ ಕಾಲದಲ್ಲಿ ಗಂಡಸಿಗೆ ೧೦ ಪೈಸೆ, ಹೆಂಗಸಿಗೆ ೬ ಪೈಸೆ, ಹುಡುಗರಿಗೆ ೩ ಪೈಸೆಗಳಿಗಿಂತ ಹೆಚ್ಚು ಕೂಲಿ ಸಿಗುತ್ತಿರಲಿಲ್ಲ. ೪ ಆಣೆ ದಿನಗೂಲಿ ಗಳಿಸುವವನು ಭಾಗ್ಯವಂತನಾಗಿದ್ದನು.

ಜೊತೆಗಾರರೊಡನೆ ಆಲೋಚಿಸಿ ೬ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆದಿಡಬಯಸಿದೆನು. ಊರವರು ಶಿಕ್ಷಕರಿಗೆ ಊಟ-ಉಳಕೊಳ್ಳುವ ವ್ಯವಸ್ಥೆ ಮಾಡಿಕೊಡಬೇಕು, ಬಾಕಿ ಖರ್ಚನ್ನು ನಾವು ನೋಡಿಕೊಳ್ಳಬೇಕು. ಊರವರ ಬಳಿ ರೊಕ್ಕ ಹಣ ಉಳಿಯುವದು ಕಷ್ಟ, ಆದರು ಅನ್ನಸಾಮಗ್ರಿಗಳನ್ನು ಪೂರೈಸುವದು ಸ್ಥಿತಿಯಲ್ಲಿದ್ದರು. ಧಾನ್ಯಗಳನ್ನೂ, ಇತರ ಕಾಳು-ಕಡಿಗಳನ್ನೂ ಕಾವು ಪೂರೈಸುತ್ತೇವಾಗಿ ಅವರು ಸಂತೋಷದಿಂದ ಒಪ್ಪಿದರು.

ಶಿಕ್ಷಕರನ್ನು ಸಂಗ್ರಹಿಸುವದು ಒಂದು ದೊಡ್ಡ ಕೆಲಸವು. ಬರೇ ಊಟ ಮಾಡಿಕೊಂಡು ಅಥವಾ ವೇತನ ಪಡೆಯದೆ ಅಲ್ಲೇ ಶಿಕ್ಷಕರನ್ನು ಸಂಪಾದಿಸುವದು ಬಲು ಕಷ್ಟವಾಗಿತ್ತು. ಮಕ್ಕಳನ್ನು ಸಾಮಾನ್ಯ ಶಿಕ್ಷಕರ ವಶ ಕೊಡಲು ನನ್ನ ಒಪ್ಪಿಗೆ ಇರಲಿಲ್ಲ. ಪಾಂಡಿತ್ಯಕ್ಕಿಂತ ಸಂಪಾದನೆಗಿಂತ ನೀತಿಮತ್ತೆಯ ಸಂಪಾದನೆಯೇ ಹೆಚ್ಚಾಗಿ ಅವಶ್ಯವಿತ್ತು.

ಆದರಿಂದ ಸ್ವಯಂಸೇವಕ ಶಿಕ್ಷಕರಿಗಾಗಿ ನಾನೊಂದು ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿದೆನು. ಈ ಪ್ರಕಟಣೆಗೆ ತುಂಬಾ ಆಶ್ರಯ ದೊರಕಿತು. ಶ್ರೀ ಗಂಗಾಧರರಾವ ದೇಶಪಾಂಡೆಯವರು ಬಾಬಾ ಸಾಹೇಬ ಸೋಮಣರವರಿಗೂ ಪುಂಡರೀಕರವರಿಗೂ ಕಳುಹಿದರು. ಸೌ। ಅವಂತಿಕಾಬಾಯಿ ಗೋಖಲೇಯವರು ಮುಂಬಯಿಯಿಂದ ಬಂದರು. ಸೌ। ಆನಂದೀಬಾಯಿ ವೈಶಂಪಾಯನವರವರು ಪುಣೆಯಿಂದ ಬಂದರು. ಆಶ್ರಮದಿಂದ ಛೋಟಾಲಾಲ ಸುರೇಂದ್ರನಾಥ ಹಾಗು ಮಗನಾದ ದೇವೀದಾಸರವರಿಗೆ ಕರತರಿಸಿದೆನು. ಇದೇ ಸಮಯ ಮಹಾದೇವ ದೇಸಾಯಿಯವರೂ ನರಹರಿ ಪಾರಿಖರವರೂ ಸಪತ್ನೀಕರಾಗಿ ನನ್ನ ಬೆನ್ನು ಹಿಡಿದು ಬಂದರು. ಸೌ। ಕಸ್ತುರಬಾಯಿಯವರಿಗೂ ಕರತರಿಸಿದ. ಇಷ್ಟು ಜನರು ತಕ್ಕಮಟ್ಟಿಗೆ ಈ ಕೆಲಸವನ್ನು ಸಾಗಿಸುವಂಥವರಿದ್ದರು. ಸೌ। ಅವಂತಿಕಾಬಾಯಿ ಆನಂದೀಬಾಯಿಯವರ ಬಳಿ ಬೇಕಷ್ಟು ಶಿಕ್ಷಣ ಸಂಗ್ರಹವಿತ್ತು. ಆದರೆ ಸೌ। ದುರ್ಗಾ ದೇಸಾಯಿಯವರಿಗೂ, ಸೌ। ಮಣಿ ಬೆಹೆನ ಪಾರಿಖರವರಿಗೂ ಗುಜರಾಥಿಯ ಸಾಮಾನ್ಯ ಜ್ಞಾನವಿದ್ದೇ ಇತ್ತು. ಕಸ್ತುರಬಾಯಿಯವರಿಗೆ ಅದೂ ಬರುತ್ತಿದ್ದಿಲ್ಲ. ಇಂಥ ಸ್ತ್ರೀಯರು ಮಕ್ಕಳಿಗೆ ಹಿಂದೀ ಭಾಷೆಯಿಂದ ಕಲಿಸುವ ಬಗೆ ಹೇಗೆ? ನಾನು ಅವರಿಗೆ ಕಲಿಸಬೇಕಾದ ವಿಷಯವನ್ನು ವಿವರಿಸಿದೆನು. ಕಾಡುಗರಿಗೆ ವ್ಯಾಕರಣ ಕಲಿಸಬೇಕಾಗಿದ್ದಿಲ್ಲ. ಓದು ಬರಹವಾಗಲಿ ಗಣಿತವಾಗಲಿ ಕಲಿಸುವ ಅಪೇಕ್ಷೆಯಾಗಲಿಲ್ಲ. ಸ್ವಚ್ಛತೆ ಹಾಗು ಒಳ್ಳೇ ನಡೆ ನುಡಿಗಳನ್ನು ಕಲಿಸುವದೇ ಮುಖ್ಯ ಕೆಲಸವಾಗಿತ್ತು. ಅಕ್ಷರಗಳ ಕುರಿತು ಹೆಚ್ಚಿನ ಬೋಧವಿಲ್ಲವಾಗಿ ನಾನವರಿಗೆ ತಿಳಿಸಿ ಹೇಳಿದೆನು. ಗುಜರಾಥಿ ಹಿಂದಿ, ಮರಾಠಿ ಅಕ್ಷರಗಳಲ್ಲಿ ವಿಶೇಷ ಭೇದವಿದ್ದಿಲ್ಲ. ಪ್ರಾಥಮಿಕ ವರ್ಗಗಳಲ್ಲಿ ಮೂಲಾಕ್ಷರ ಹಾಗು ಅಂಕೆಗಳನ್ನು ಕಲಿಸುವದು ಕಠಿಣ ಕೆಲಸವಾಗಿದ್ದಿಲ್ಲ. ಹೀಗೆ ಈ ಸ್ತ್ರೀಯರು ನಡಿಸಿದ ವರ್ಗಗಳ ಕೆಲಸವು ಬಹಳ ಯಶಸ್ವಿಯಾಯಿತು. ಈ ಅನುಭವದಿಂದ ಅವರಲ್ಲಿ ಆತ್ಮವಿಶ್ವಾಸ ಹುಟ್ಟಿ ಈ ಕೆಲಸ ಮಾಡಲು ಅವರಿಗೆ ಹುರುಪು ಉಂಟಾಯಿತು. ಸೌ। ಅವಂತಿಕಾಬಾಯಿಯವರ ಶಾಲೆಯು ಆದರ್ಶಪ್ರಾಯವಾಯಿತು. ಅವರು ತನುಮನದಿಂದ ತಮ್ಮ ಕೆಲಸ ಮಾಡಿದರು. ಬುದ್ಧಿಚಾತುರ್ಯವನ್ನೆಲ್ಲ ವಿದ್ಯಾದಾನದ ಕೆಲಸಕ್ಕೇ ಉಪಯೋಗಿಸಿದರು. ಈ ಸ್ತ್ರೀಯರ ಮುಖಾಂತರ ಊರೊಳಗಿನ ಕೆಲ ಸ್ತ್ರೀಯರ ಶಿಕ್ಷಣ ಕೊಡಲಿಕ್ಕೂ ನಮಗೆ ಅನುಕೂಲವಾಯಿತು.

ಪ್ರಾಥಮಿಕ ಶಿಕ್ಷಣವನ್ನಷ್ಟೇ ಪೂರೈಸಿ ನಾನು ಸುಮ್ಮಗಾಗಿಯಿಲ್ಲ. ಹಳ್ಳಿಗಳೆಲ್ಲ ಅನಾರೋಗ್ಯವಾಗಿದ್ದವು, ಬೀದಿತುಂಬ ಹೊಲಸು, ಬಾವಿಗಳ ಸುತ್ತುಮುತ್ತು ಕೆಸರು, ಹಿತ್ತಲುಗಳಲ್ಲಿ ಹೊಲಸು. ಹಿರಿಯರಿಗೆ ಸ್ವಚ್ಛತೆ ಕಾಪಾಡುವ ಶಿಕ್ಷಣ ಕೊಡಬೇಕಾಗಿದ್ದಿತು. ಎಲ್ಲರೂ ತರತರದ ಚರ್ಮವ್ಯಾಧಿಯಿಂದ ನರಳುತ್ತಿದ್ದರು. ಆದರಿಂದ ಆರೋಗ್ಯಪಾಲನದ ಕಾರ್ಯವನ್ನು ಮುನ್ನಿಟ್ಟು ನಡಿಸಿ ಅವರಿಗೆ ಅದರ ಲಾಭ ಸಿಗುವಂತೆ ವ್ಯವಸ್ಥೆ ಮಾಡುವ ಆಲೋಚನೆ ಮಾಡಿಯಿತು.

ಇದಕ್ಕಾಗಿ ಡಾಕ್ಟರರು ಬೇಕಾಗಿದ್ದರು. ಸೈ। ನಾ। ಡಾ। ದೇವರವರಿಗೆ ಕಳುಹಲು ನಾನು ಭಾರತ ಸೇವಕ ಸಮಾಜಕ್ಕೆ ಬಿನ್ನಹ ಮಾಡಿಕೊಂಡೆನು. ಡಾ। ದೇವರವರೂ, ನಾನೂ ಅತ್ಯಂತ ಗೆಳೆಯರಾಗಿದ್ದೆವು. ೬ ತಿಂಗಳ ತನಕ ಉಚಿತವಾಗಿ ಕೆಲಸ ಮಾಡಲು ಅವರೊಪ್ಪಿದರು. ಸ್ತ್ರೀ-ಪುರುಷ ಶಿಕ್ಷಕರು ಡಾ। ದೇವರವರ ಕೈಕೆಳಗೆ ದುಡಿಯಬೇಕಾಗಿತ್ತು. ಕೋರ್ಟಿನ ಮೇಲೆ ಬರುವ ಫಿರ್ಯಾದಿಗಳನ್ನಾಗಲಿ, ರಾಜಕಾರಣವನ್ನಾಗಲಿ ಯಾರೂ ವಿಚಾರ ಮಾಡಬಾರದಾಗಿ ನಾನು ಕಟ್ಟಾಜ್ಞೆ ಕೊಟ್ಟಿದ್ದೆ. ಫಿರ್ಯಾದಿಗಳನ್ನೆಲ್ಲ ನನ್ನ ಕಡೆಗೇ ಹೇಳಬೇಕಾಗಿತ್ತು. ಅವ್ಮು ತಮ್ಮ ಕಾರ್ಯಕ್ಷೇತ್ರವನ್ನು ಯಾರೂ ಉಲ್ಲಂಘಿಸಕೂಡದು. ಗೆಳೆಯರೆಲ್ಲರೂ ನನ್ನ ಆಜ್ಞೆಯನ್ನು ಸ್ವಾಮಿನಿಷ್ಠೆಯಿಂದ ಪಾಲಿಸಿದರು. ಒಮ್ಮೆ ಸಹ ಅವುಗಳ ಉಲ್ಲಂಘನವಾದದ್ದು ನನಗೆ ನೆನಪಾಗುವದಿಲ್ಲ.

॥ ಶ್ರೀ ॥

ಕನ್ನಡ ಜ್ಞಾನೇಶ್ವರಿ.

(ವೇದಮೂರ್ತಿ ಪಂಡಿತ ಕುಮಠಾ ನಾರಾಯಣಾಚಾರ್ಯರವರಿಂದ ಪರಿಶೋಧಿಸಲ್ಪಟ್ಟಿದೆ.)

ಶ್ರೀ ಜ್ಞಾನೇಶ್ವರ ಮಹಾರಾಜರು ಶ್ರೀಮದ್ಭಗವದ್ಗೀತೆಯ ಮೇಲೆ ಮರಾಠಿಯಲ್ಲಿ ಬರೆದ ಟೀಕೆಯು ಜ್ಞಾನೇಶ್ವರಿ ಎಂಬ ಹೆಸರಿನಿಂದ ಪ್ರಸಿದ್ಧವಿರುತ್ತದೆ. ಇದಕ್ಕೆ ಭಾವಾರ್ಥದೀಪಿಕೆ ಎಂಬ ಹೆಸರಿದ್ದರೂ ಪ್ರಚಾರದಲ್ಲಿ ಜ್ಞಾನೇಶ್ವರಿ ಎಂಬ ಹೆಸರೇ ಪ್ರಸಿದ್ಧಿಗೆ ಬಂದಿರುತ್ತದೆ. ಶ್ರೀಕೃಷ್ಣ ಪರಮಾತ್ಮನ ಅವತಾರವೇ ಆಗಿದ್ದ ಜ್ಞಾನೇಶ್ವರ ಮಹಾರಾಜರು ಕುರುಕ್ಷೇತ್ರದಲ್ಲಿ ಸಂಕ್ಷೇಪದಿಂದ ಹೇಳಿದ ಗೀತೆಯನ್ನೇ ವಿಸ್ತಾರವಾಗಿ ಕಲಿಯುಗದ ಜನರಿಗೆ ತಿಳಿಯುವಂತೆ ಸುಲಭವಾಗಿಯೂ ಸರಸವಾಗಿಯೂ ಬರೆದ ಓವೀಬದ್ಧ ಕಾವ್ಯಾತ್ಮಕ ಗ್ರಂಥದಲ್ಲಿ ವಿಶದಪಡಿಸಿರುತ್ತಾರೆ. ಅದರ ಮೂಲ ಓವಿಗಳ ಸಂಖ್ಯೆ ಸುಮಾರು ೯೫೦೦ ಇದ್ದು ಇದನ್ನು ಕನ್ನಡಿಗರಿಗೆ ತಿಳಿಸಬೇಕೆಂಬ ಹೇತುವಿನಿಂದ ಕನ್ನಡ ಗುರುಚರಿತ್ರದ ಕರ್ತರಾದ ರಾ। ರಾಘವೇಂದ್ರ ಸುಬ್ಬರಾವ ಮುಡಕಟ್ಟೆ ಬಿ. ಎ. ಮಾಮಲೇದಾರ ಖಾನಾಪುರ ಇವರು ಸುಲಭವಾಗಿಯೂ ಸರಸವಾಗಿಯೂ ಪ್ರಾಸಾದಿಕವಾಗಿಯೂ ಕನ್ನಡ ಭಾಮಿನಿ ಷಟ್ಪದಿಯಲ್ಲಿ ಶ್ರೀ ಜ್ಞಾನೇಶ್ವರ ಮಹಾರಾಜರ ಪ್ರೇರಣೆಯಿಂದಲೇ ಕಾವ್ಯಾತ್ಮಕ ಗ್ರಂಥವಾಗಿ ಬರೆದಿರುತ್ತಾರೆ. ಈ ಗ್ರಂಥದ ಷಟ್ಪದಿಗಳ ಸಂಖ್ಯೆಯು ೬೨೦೦ ಕ್ಕಿಂತ ಹೆಚ್ಚಿಗೆ ಇರುತ್ತದೆ. ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ಗೀತಾಭಿಮಾನಿಗಳೂ ಇದನ್ನು ಕರಿಸಿ ಪ್ರೋತ್ಸಾಹ ಕೊಡಬೇಕೆಂದು ಕನ್ನಡಿಗರಿಗೆ ಪ್ರಾರ್ಥನೆಯಿದೆ. ಇದು ಮೂರು ಭಾಗಗಳಲ್ಲಿ ಪ್ರಸಿದ್ಧವಾಗುವದು. ಮೊದಲನೇ ಭಾಗದಲ್ಲಿ ಭಗವದ್ಗೀತೆಯ ೧ ರಿಂದ ೬ನೇ ಅಧ್ಯಾಯದ ತನಕ ಮೂಲ ಶ್ಲೋಕಗಳು ೨೮೦ ಮತ್ತು ಕನ್ನಡ ಭಾಮಿನಿ ಷಟ್ಪದಿಗಳು ೧೨೩೫ ಇರುವವು. ಈ ಭಾಗವು ಬರುವ ಅಕ್ಟೋಬರ ತಾ. ೧ನೇಗೆ ಹೊರಡುವದು. ಗ್ರಾಹಕರಾಗಲಿಕ್ಕೆ ಇಚ್ಛಿಸುವವರು ತಮ್ಮ ಹೆಸರುಗಳನ್ನು ಕೆಳಗೆ ಬರೆದ ವಿಳಾಸಕ್ಕೆ ಕಳುಹಿಸಿ ಹೆಸರು ಬರಿಸಿ ಇಡಬಹುದು. ತಾ॥ ೧ನೇ ಅಕ್ಟೋಬರದ ಒಳಗೆ ಹೆಸರು ಕೊಟ್ಟವರಿಗೆ ರೂಪಾಯಿಗೆ ೪ ಆಣೆಯಂತೆ ಬೆಲೆ ಕಡಿಮೆ ಬೀಳುವದು. ಸ್ವರದಾಡಿರಿ, ಈ ಭಾಗದ ಬೆಲೆಯು ೨ ಎರಡು ರೂಪಾಯಿಗಳಿಗಿಂತ ಹೆಚ್ಚಾಗಲಾರದು.

ವಿಳಾಸ:—

ಹಣಮಂತ ಶ್ರೀನಿವಾಸಾಚಾರ್ಯ ಭುಕೇಬಾಗೆ

ಪೋ - ಖಾನಾಪುರ. (ಜಿಲ್ಲಾ - ಬೆಳಗಾಂವಿ.)

ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ.

—೦೦೦—

ಮಾಧಿಕೆಯಂತೆ ಈ ಸಂಸ್ಥೆಯ ವಾರ್ಷಿಕ ಸಾಧಾರಣ ಸಭೆಯು ಹೋದ ತಿಂಗಳ ೭ನೇ ತಾರೀಖಿಗೆ ಮುಂಬಯಿ ಜೇಕಮಾಡಿಡು ಹಾಳಿನ ಬಿಲ್ಡಿಂಗದಲ್ಲಿ ನೆರೆಂತ್ತು ಸಭಾಧ್ಯಕ್ಷರು ಶ್ರೀ ಪಾಂಡುರಂಗ ಪ್ರ. ರಾವ ಬಿ ಎ ಇವರಾಗಿದ್ದರು ಮುಂದಿನ ವರ್ಷಕ್ಕೆ ಇವರೇ ಲೀಗಿನ ಅಧ್ಯಕ್ಷರು. ಹಿಂದಿನ ಕಮಿಟೀಕ.ರ ಮಂಡಳವೇ ಪುನಃ ಅಧಿಕಾರಾರೂಢವಾಗಿದೆ. ಆದರೆ ಕಾರ್ಯಕಾರಿ ಮಂಡಳದ ಸಭಾಸದಿಂದ್ದ ಹೋದ ವರ್ಷ ಆರಿಸಿ ತೆಗೆಯಲ್ಪಟ್ಟ ರಾ। ಅನಂತ ನಾರಾಯಣ ಗಾಯತೊಂಡೆ, ಗಣೇಶ ವಂಕಟೇಶ ಕಾಮತ ಇವರ ಬದಲು, ರಾ। ಶ್ರೀನಿವಾಸ ವೆಂಕಟೇಶ ಶ್ಯಾನಭಾಗ, ಗಣಪತ ಕೂಧವ ಕಿಣ್ಣಿ ಇವರೀರ್ವರು ಹೊಸದಾಗಿ ಆರಿಸಿ ಬಂದಿದ್ದಾರೆ ಡಾ। ವಿಠ್ಠಲ ಭಟ್ಕಳ್ಳಪ್ರಭು ಬಿ ಎ ಮತ್ತು ರಾ। ರಾಮಕೃಷ್ಣ ಮಾಧವ ಕಿಣಿ ಬಿ ಎ ಇವರು ಲೆಖ್ಖ ತಪಾಸಕರಾಗಿಯೂ, ರಾ। ಗೋವಿಂದ ಕೃಷ್ಣರಾವ ಮತ್ತು ರಾ। ವೆಂಕಟೇಶ ನಾರಾಯಣ ಕಾಮತರು ಮುಖ್ಯ ತನಾಸಕರಾಗಿಯೂ ನೇಮಿಸಲ್ಪಟ್ಟರು ನಮ್ಮ ಜಿಲ್ಲೆಯೊಳಗಿನ ಸ್ಥಾನಿಕ ಪ್ರತಿನಿಧಿಗಳ ಹೆಸರು ಕೆಳಗೆ ಕೊಟ್ಟಿದೆ ೧೯೨೭ನೇ ಇಸ್ವಿ ಮಾರ್ಚ ತಿಂಗಳ ಅಂತ್ಯದ ಸಾಲಿನ ಬಾಬ್ತು ಒಂದು ವರ್ಷಕ್ಕೆ ೬೧ ವಿದ್ಯಾರ್ಥಿಗಳು ೧೧೬೬ ರೂಪಾಯಿ ಸಹಾಯ ಪಡೆದರು ಈ ವರೆಗೆ ೧೩೩ ವಿದ್ಯಾರ್ಥಿಗಳಿಗೆ ಒಟ್ಟಿಗೆ ರೂಪಾಯಿ ೮೩೫೩-೧೨-೩ ರಷ್ಟು ಸಹಾಯವಾಗಿದೆ ಸಂಸ್ಥೆಯಲ್ಲಿ ರೂ ೧೬೩೫೮—೧೦—೬ ರಷ್ಟು ಕಾಯಂ ನಿಧಿಯಾಗಿ ಸಂಗ್ರಹವಾಗಿದೆ ಅಭಾವ ಸಹಿತ ಧೋರಣೆ ಪತ್ರಮುಖ ದಿಂದ ಮಾಸಗಿದೆ ವೈ। ವಾ। ದಾಮೋದರ ಮಂಜುನಾಥ ಪ್ರಭು ಇವರ ಹತ್ತರ ಇದ್ದ ರಕಂ ರೂಪಾಯಿ ೮೦-೧೪-೬ ಅಂಕೋಲೆ ಪ್ರತಿನಿಧಿಗಳ ಕಡೆಗೆ ಶ್ರೀ। ವಿಶ್ವನಾಥ ಪಾಂಡುರಂಗ ಪ್ರಭುರು ವಸೂಲು ಕೊಟ್ಟಿರುತ್ತಾರೆ ಬಿದ್ಯೋಗಿಕ ಕ್ಷೇತ್ರದ ವಿದ್ಯಾರ್ಥಿಯು ೯೭ರಿದ್ದರೆ ಮುಂಬಯಿ ವಿಶ್ವವಿದ್ಯಾಲಯದ ಮೆಟ್ರಿಕ್ ಅಥವಾ ಫಾಯನಲ ಪರೀಕ್ಷೆಯಲ್ಲಿ ಕಾನಡಾ ಜಿಲ್ಲೆಯಿಂದ ೧ನೇ ನಂಬರ ಪಡೆದ ಜ್ಞಾತಿ ವಿದ್ಯಾರ್ಥಿಗೆ ವೈ। ವಾ। ಡಾಂಗಿ ಸ್ಮಾರಕ ನಿಧಿ ಇನಾಮು ಕೊಡಬೇಕೆಂಬ ಹೊಸ ಠರಾವನ್ನು ಲೀಗು ಪಾಸು ಮಾಡಿದೆ ಸಭೆಯಲ್ಲಿ ಸಂಸ್ಥೆಗೆ ನೆರವಾದ ಸಾರಸ್ವತ ಬ್ರಾಹ್ಮಣ ಸಮಾಜ ಹಾಗೂ ಇತರೇ ಸಮಾಚಾರ ಪತ್ರಿಕೆಗಳ ಅಭಿನಂದಿಸಲಾಯಿತು. ಲೀಗದ ನಿಳ್ಗಾಗಿ ಸಭಾಸದರು ಕೈಲಾದಷ್ಟು ತನು-ಮನ-ಧನಗಳಿಂದ ದುಡಿಯಬೇಕಾಗಿ ವಿನಂತಿ ಇದೆ

ಉತ್ತರ ಕಾನಡಾ ಜಿಲ್ಲೆಯ

ಮಾನ್ಯ ಸ್ಥಾನಿಕ ಪ್ರತಿನಿಧಿಗಳ ಹೆಸರು.—

ಕಾರವಾರ —ಶ್ರೀ। ಕೃಷ್ಣರಾವ ರಾಮಚಂದ್ರ ಹಳದೀಪುರ,
ಬಿ. ಎ ಎಲ್ ಎಲ್. ಬಿ , ವಕೀಲ
„ ಜನಾರ್ದನ ಪುರುಷೋತ್ತಮ ಕೀಣಿ
ಅಂಕೋಲಾ —ಶ್ರೀ। ಶ್ರೀಧರ ವೆಂಕಟೇಶ ಭಟ, ಬಿ ಎ
„ ಶ್ರೀನಿವಾಸ ಗಣೇಶ ಪೈ.
ಕುಮಟಾ —ಶ್ರೀ। ಕೃಷ್ಣ ಪದ್ಮನಾಭ ಪ್ರಭು,
ಬಿ ಎ ಎಲ್ ಎಲ್ ಬಿ , ವಕೀಲ
„ ಪುರುಷೋತ್ತಮ ಲಕ್ಷ್ಮಯ್ಯ
ಶ್ಯಾನಭಾಗ ಹೆಗಡೇಕರ.
ಹೊನ್ನಾವರ —ಶ್ರೀ। ವಾಸುದೇವ ಪಾಂಡುರಂಗ ಶ್ಯಾನಭಾಗ
„ ರಾಘವೇಂದ್ರ ವೈಕುಂಠ ಪ್ರಭು

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ,
ವಿಧವಾವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.
ಇವರಿಗೆ ಬರೆದು ತಿಳಿದುಕೊಳ್ಳಿರಿ.

ಉಚಿತ!] ನನ್ನ ಶಾಸ್ತ್ರೀಯವಾದ [ಉಚಿತ!!

ಶಾರೀರಿಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ ಅಂಥಹ ಶರೀರದಾರ್ಢ್ಯವನ್ನು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುತ್ತದೆ ನನ್ನ ಶ್ಲಾಘಿಸಿರುವ ಪದವೀ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ ಟಪಾಲಖರ್ಚಿಗಾಗಿ ೩ ಆಣೆಯ ಸ್ಟಾಂಪನ್ನು ಕಳುಹಿಸಿಕೊಟ್ಟ ಪತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ

ಪ್ರೊಫೆಸರ್ ಎಂ ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ತರಗಲುಸ ವಿವಿಧ ಬಣ್ಣ,
ದೊರಗಾದ ಹಾಗು ಣಿನುಗಾದ
ಉಕ್ಕಿನ ಹಾಗು ಹಿತ್ತಾಳಿಯ ಹಣಿಗಳೂ,
ಹತ್ತಿಯ ಹಾಗು ಹಿತ್ತಾಳಿಯ ದಿಜಗರುಗಳೂ,
ತಂತಿಯ ಬೊಬಿನುಗಳೂ, ವಾರ್ಪಿನುಗಳೂ,
ಎಮೆರಿ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.
ಬಹಳ ಅಗ್ಗ !

P. P. TRIVEDI & CO.,
BRUCE Street, Fort, BOMBAY.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ

ಗೆರಸಪ್ಪಾ
ಜೋಗಿಗೆ
ರೆಗ್ಯುಲರ್
ಸರ್ವೀಸ್



ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತ್ತದೆ ಪ್ರಯಾಣಿಕರಿ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಫರ್ಸ್ಟ್ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು **M. Manjappa.**
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯ ಹೋಗಿ ನಾಶವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯಸ್ರಾವ ಬಂದಾಗುವದು.— ಪರಮಾ ಹಾಗೂ ಕಾಮಿನಿಂದ ದೂಷಿತವಾದ ಶರೀರವು ನಿರೋಗಿಯಾಗುವದು ಮೂರು ದಿವಸದಲ್ಲಿಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಪ್ಪಾಗಿ ಆಗುತ್ತದೆ, ಅದರ ಅನುಭವವು ಮೊದಲನೇ ದಿವಸವೇ ಬರುವದು. ರೋಗ ಸಾಧ ಆಗುವವರು ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦—೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ ಹತ್ತು ಬಾಟಲಿಗಳ ಕಿಮ್ಮತು ೧೩—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ್ದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव- – मृद्विकारिष्ट – शारंगधर म अ.१०

रामबाण औषध

सर्दि घालविणारें
भूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचिकर
किंमत एक रत्तलास १॥ रुपये.
सूचीपत्रक मागवा

झंडु फार्मास्युटिकल वर्क्स लिमिटेड
मुंबई नं: १४

ऐजंट— मेसर्स पंडित आणी कंपनी,
तीर्थहळ्ळी.
सिसि एजंट एस. एल. थाकप्पा आणि ब्रदर

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಒಡಿ ಒಂದಕ್ಕೆ ಕ್ರಯ ರೂ ೦-೪ ೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕ್‌ಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ಸಿಂ ತರುಣ್ವ ತಿಳುವಾಗುವದರಿಂದ ಉಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಡಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶಮಾತ್ರ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯು ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪ್ರಮೇಹ, ಗರ್ಮಿ, ಶೈತ್ಯ, ಮೂತ್ರ ಉರಿಯೋಣ, ಪಿತ್ತವಿಕಾರ ಸಿಟ್ಟು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಸುವಂಧವಾಗಿ ಎಂದಾವತೀ ಶಕ್ತಿಯಿಂದು ಅನುಭವಿಸಿರಿ. (೫೨) ವನಸ್ಪತಿಗಳು ಮತು ಭಸ್ಮಸು ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಾಶ ಮಾಡಿದೆತ್ತದೆ. ಓದಿಕೊಳ್ಳಿರಿ.

ಮುಂಜಾನೆ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ ಸ್ತ್ರೀಪಥ್ಯವಿಲ್ಲ ೨೧ ದಿವಸ ಸಾಕಾಗುವಷ್ಟು ೪೪ ತೊಲೆಯ ಒಂದು ಡಬ್ಬಿಗೆ ೫ ರೂ ೩ ಡಬ್ಬಿಗೆ ೧೪ ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ— **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ ಮಿರಜ.**

ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಅಗ್ಗವಾದ
'ನೆಶನಲ್ ಇನ್‌ಶೂರನ್ಸ ಕಂಪೆನಿ, (ಲಿಮಿಟೆಡ್)
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬಹುಮಾನ ಕೊಟ್ಟಿರುವೆವು

ಹೋಗಿದೆ 1000 ರೂಪಾಯಿಗಳ ವಿಮೆಯನ್ನು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು !

ಕರ್ನಾಟಕಕ್ಕೆ ಏಜಂಟರು - **P D. Churi,**

ಬಿ ಸಿ. ಸಿರಾಳಕೊಪ್ಪ, *Branch Secretary*
ಕೋಟುಂಬಿ ಬಿಲ್ಡಿಂಗ, Al ce Building,
ಹುಬ್ಬಳ್ಳಿ *Hori by Road,*
BOMBAY.

ಕಾಶಿಯ ಅಪೂರ್ವ ವಸ್ತುಗಳು.

ನಾವು ಕಾಶಿಯ ಪಟ್ಟ ಮಡಿ, ಶೀರೆ, ಖಣ, ರೇಶ್ಮೆ ಶಲ್ಲೆ, ಬಿಚಾನೆ, ಕಾಶ್ಮೀರದ ಶಾಲು ಸಕಲಜಾತಿ ಧಾಟಿಯ ರುದ್ರಾಕ್ಷ ಸರ, ಕಂಠಿ ಗೌರೀಶಂಕರ, ಪಂಚಾಯತನ ಸ್ಫಟಿಕ ಸರ, ಬಾಣಲಿಂಗ, ಕಾಲಗ್ರಾಮ, ಕೇಸರಿ, ಪಚ್ಚಕರ್ಪೂರ, ಶಿಲಾಜಿತು, ಜಾಫಂಖ, ಶಂಖ ಮುಂತಾದ ಸಕಲ ವಿಧವಾದ ಕಾಶಿಯ ಸಾಮಾನ ಗಳನ್ನು ಯೋಗ್ಯ ಬೆಲೆಗೆ ವಿ ಪಿ ಯಿಂದ ಕಳಿಸಿ ಕೊಡುತ್ತೇವೆ ವಿಶೇಷ ಮಾಹಿತಿಗೆ ಪತ್ರ ಬರೆದು ಕೂಡಲೇ ಕ್ಯಾಟಲಾಗನ್ನು ತರಿಸಿಕೊಳ್ಳಿರಿ

ನಮ್ಮ ಪತ್ತೆ —

ವಿಶ್ವನಾಥ ಎಂಡ್ ಬ್ರದರ್ಸ್,
ಗೋರ ಘಾಟ, ಬನಾರಸ್ ಸಿಟಿ



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

'ಈ ಮದ್ದು ಅತ್ಯಂತ ಅವಶ್ಯವಾದದ್ದು,

ಒಳಕೆಗೆ ತೀರ ಅನುಕೂಲ, ಮನೆಕನದವರಂತು ಇಟ್ಟುಕೊಳ್ಳಲೇ ಬೇಕು; ಬಿದ್ದ ಸುಟ್ಟ ಗಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೊ,

ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

REG. NO. B. 1270 MONDAY, AUGUST 27TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೭

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.
ಮನೆಯಾರ್ಡರಿಯಿಂದ ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

[illegible]
[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಪ್ಯಾಕಾ ಟ್ಯಾಯಿಪ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0.
೮ ನಂತ್ರ ಪ್ರತಿಸಾಲಿಗೆ 0-2-0.
ತಿಂಗಳ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೭ ಮಾಹೆ ಅಗೋಸ್ತ ಸನ್ ೧೯೨೩ನೇ ಇಸವಿ)—

ಹೊಸ ಅಂಗಡಿ! ಹೊಸ ಹೊಸ ಮ್ಯಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.—ಕಬ್ಬಿಣ ಮೊಳೆಗಳು, ಮೋಟಾರ ಉಪಯೋಗದ ಬೋಲ್ಟುಗಳು, ಪಿನ್ ಪ್ರೋಕರ, ಪಿಸ್ತೂಲ ಪ್ರೋಕರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಲಾಟೀನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ ! ಎಲ್ಲ ಸಾಮಾನು ಅಗ್ಗ ! ಕಿರಕೋಳ ವ್ಯಾಪಾರಸ್ಥರು ರೋಖ ಮ್ಯಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ನಿಮ್ಮ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ. ಕನಡ)

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ.
ನಮ್ಮ ವಿಳಾಸ:—
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

S. U. Narayanacharya & CO.
Chaukamba, BENARES CITY.

ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಥರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

Wanted:- Candidates for Telegraph and Station Master's Classes. Full particulars and Railway Fare Certificate on 2 annas stamp. Apply to— Imperial Telegraph College, Nai Sarak, **Delhi.**

" ಔಷಧ ಸೇವನೆಗಳಿಗಿಂತ ಬರೀ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು. "

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ " ಆರೋಗ್ಯ ಚಂದ್ರಿಕೆ " ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯ ದೃಢಕಾಯಕರಾಗಿ ಜೀವಿಸುವ ಮಾರ್ಗವನ್ನು, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಖ್ಯವಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಪ್ರಕಾಶಕ್ರು ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಅಂಚೆ ಹಾಕಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಚೆಟ್ಟಿ ಬೀದಿ, ಮದರಾಸು.

ವಿವಿಧ ಸಂಗ್ರಹ.

ಬೆಂಗಳೂರಿನೊಳಗಣ ವಿದ್ಯಾರ್ಥಿಗಳ ಸತ್ಯಾಗ್ರಹ.

ಬೆಂಗಳೂರಿನೊಳಗಿನ ಸುಲ್ತಾನ ಪೇಟೆಯೊಳಗಿದ್ದ ಗಣಪತಿ ಮೂರುತಿಯನ್ನು ಸ್ಥಳಾಂತರ ಮಾಡಿದ್ದರಿಂದ ವಿದ್ಯಾರ್ಥಿಗಳು ಕೈಕೊಂಡ ಸತ್ಯಾಗ್ರಹವನ್ನೂ, ಆ ಸತ್ಯಾಗ್ರಹಕ್ಕೆ ಉಂಟಾದ ಗಲಭೆಯನ್ನೂ, ಅಬ್ಬಾಸಖಾನರವರ ಬಂಗ್ಲೆಯೊಳಗಿಂದ ಮುಸಲ್ಮಾನರು ಆಚರಿಸಿದ ಪುಂಡಾಟಿಕೆಯನ್ನೂ ಈ ಹಿಂದೆ ವರ್ಣಿಸಿದ್ದೇವೆ. ಮೈಸೂರು ಸರಕಾರವು "ವಿಶ್ವಕರ್ಣಾಟಕ" ಮೊದಲಾದ ಪತ್ರಿಕೆಗಳಿಗೆ ವಿಧಿಸಿದ ಆಜ್ಞಾಶಾಸನವು ಈಗ ಅಂತ್ಯವಾಗಿ 'ವಿಶ್ವಕರ್ಣಾಟಕ'ದ ಆಗಸ್ಟ ೨೦ನೇ ತಾರೀಖಿನ ಸಂಚಿಕೆಯು ಈಗ ನಮ್ಮ ಕೈಸೇರಿದೆ. ಈ ಸಂಬಂಧ ಅದರೊಳಗೆ ಬರೆದ ಹೆಚ್ಚಿನ ಅಂಶಗಳನ್ನು ಇಂದಿಗೆ ಕೊಡುವೆವು. ಗಣಪತಿ ಮೂರುತಿಯನ್ನು ಸ್ಥಳಾಂತರ ಮಾಡಿದ ಸಂಗತಿ ವರ್ತಮಾನಪತ್ರಿಕೆಗಳಲ್ಲಿ ಚರ್ಚೆಗೆ ಪ್ರಾರಂಭವಾಯಿತು. "ವಿಶ್ವಕರ್ಣಾಟಕ" ಪತ್ರಿಕಾಕರ್ತರು ಶಾಲಾಧಿಕಾರಿಗಳಾದ ಪಿ. ಸುಬ್ಬರಾಯರಿಗೆ ಸತ್ಯಸ್ಥಿತಿಯನ್ನರುಹಲು ಪ್ರಾರ್ಥಿಸಿಕೊಂಡರು. ಸರಕಾರದ ಅಪ್ಪಣೆ ಹೊರತು ತಾವು ಉತ್ತರ ಕೊಡಬರುವದಿಲ್ಲವಾಗಿ ಅವರು "ವಿಶ್ವಕರ್ಣಾಟಕ" ಕರ್ತರಿಗೆ ಬರೆದರು. "ವಿಶ್ವಕರ್ಣಾಟಕ"ದವರು ಸರಕಾರಕ್ಕೆ ಬರೆದರು. ಅದಕ್ಕೆ ಉತ್ತರ ಸಿಗಲಿಲ್ಲ. ಮೈಸೂರ ಸರಕಾರವು ಈಗ ಚೌಕಶಿ ಮಂಡಳವನ್ನು ನೇಮಿಸಿದೆ. ಈ ಮಧ್ಯಂತರದಲ್ಲಿ ಮೈಸೂರು ಪ್ರಜೆಗಳಿಗೆ ಏನೊಂದೂ ವಿಶ್ವಾಸವಿಲ್ಲ. ದಿವಾಣರಾದಿ ಸರಕಾರಿ ಅಧಿಕಾರಿಗಳು ಸತ್ಯಸ್ಥಿತಿಯನ್ನು ಅಡಗಿಸಿಡಲು ಪ್ರಯತ್ನಿಸುತ್ತಾರೆಂದು ಶ್ರೀಮಾನ್ ಮಹಾರಾಜರವರಿಗೆ ೫೦೦೦ಕ್ಕೆ ಮಿಕ್ಕಿ ಜನರು ಬಿನ್ನಹವನ್ನು ಸಾದರಪಡಿಸಿದ್ದಾರೆ. ಗಲಭೆಯಾದ ಬಳಿಕ, ವರ್ತಮಾನಪತ್ರಿಕೆಗಳಿಗೆ ಆಜ್ಞಾಶಾಸನವಾದ ತರುವಾಯ ಸರಕಾರದಿಂದ ಪ್ರಕಟಣೆಗಳು ಹೊರಡಿಸಲ್ಪಟ್ಟವು. ದಿವಾಣರು ಮುಸಲ್ಮಾನರಿದ್ದದರಿಂದಲೋ ಏನೋ ಈ ಪ್ರಕಟಣೆಗಳಲ್ಲೆಲ್ಲ ಅವರ ವಕೀಲಿಯೇ ಸಾರಲ್ಪಟ್ಟಿತು. ಪೋಲೀಸರಿಗೆ ಗಣಪತಿ ವಿಗ್ರಹದ ಇದಿರಿನ ಅಬ್ಬಾಸಖಾನರವರ ಮನೆಯಲ್ಲಿ ಹೋಗಿ ಅಲ್ಲಿ ಸಂಗ್ರಹಿಸಲ್ಪಟ್ಟ ಕಲ್ಲು-ಕಟ್ಟಿಗೆಗಳನ್ನು ನೋಡಬೇಕಾಗಿಯೂ, ಆ ಮನೆಯೊಳಗಿನ ವಿದ್ಯಮಾನಗಳನ್ನು ನೋಡಿದ್ದರೆ ಸತ್ಯಸ್ಥಿತಿ ತಿಳಿಯುತ್ತಿತ್ತೆಂದೂ ಪೋಲೀಸರು ಬುದ್ಧ್ಯಾ ಒಳಹೊಕ್ಕಲಿಲ್ಲ. ಘೋಷಾ ಸ್ತ್ರೀಯರೂ ಆ ದಿನ ಅಬ್ಬಾಸಖಾನರ ಮನೆಯಲ್ಲಿ ಗಾಡಿ ತುಂಬಿ ಹೋದರು. ಎಲ್ಲ ಗಾಡಿಗಳಿಗೂ ಬಿರಿಕಿ ಹಾಕಿದ್ದರು. ಏನೇನು ಸಾಗಿ ಹೋಯಿತೆಂಬವನ್ನು ಯಾರೂ ನೋಡಲಿಲ್ಲ. ಗಲಭೆಯಾದ ಬಳಿಕ, ಕೆಲ ಮುಸಲ್ಮಾನರು ಹಾದಿಯ ಮೇಲೆ ಸಿಕ್ಕಿದ ಹಿಂದುಗಳಿಗೆ ಹೊಡೆಯಲಾರಂಭಿಸಿದರು. ಪೋಲೀಸರಿಗೆ ಹೇಳಿದರೆ, ಅವರ ದೂರುಗಳನ್ನು ಬರಕೊಳ್ಳುವದೇ ಇಲ್ಲ. ಆಸ್ಪತ್ರಿಗಳ ಅಧಿಕಾರಿಗಳು ಗಾಯಪಟ್ಟವರಿಗೆ ಸರ್ಟಿಫಿಕೀಟು ಕೊಡಲೊಪ್ಪುವದಿಲ್ಲ. ಖಾನಬಹಾದ್ದೂರ ಅಬ್ಬಾಸಖಾನರವರ ಮನೆಯಲ್ಲಿ ಗಲಭೆಯಾದ ಕೂಡಲೆ ಸರಕಾರದ ತಪಾಸ ಸಹ ನಡೆಯಲಿಲ್ಲ. ಆ ದಿನ ಕಳೆದು ಹೋದ ಬಳಿಕ ಶಾಸ್ತ್ರಕ್ಕಾಗಿ ತಪಾಸಾಯಿತು. ಆ ದಿನ ಹುಡುಗರ ಮೇಲೆ ಸಾಗಿ ಹೋದ ಕುದುರೆ ಸವಾರರ ಅಧಿಪತಿಗಳು ಅಬ್ಬಾಸಖಾನರವರ ಆಪ್ತರಂತೆ. ಇವೆಲ್ಲ ಕಾರಣಗಳ ಮೂಲಕ ಈಗಿನ ವಿಚಾರ ಮಂಡಳವು ನಿಷ್ಪಕ್ಷಪಾತತನದಿಂದ ನಿಜಸ್ಥಿತಿಯನ್ನು ಕಂಡುಹಿಡಿಯುವದೆಂದು ಪ್ರಜೆಗಳಿಗೆ ತೋರುವದಿಲ್ಲೆಂಬರ್ಥದ ಬಿನ್ನಹವು ಶ್ರೀಮನ್ಮಹಾರಾಜರವರಿಗೆ ಅರ್ಪಿಸಲ್ಪಟ್ಟಿದೆ.

***

ಚಿಮಣಿ ಎಣ್ಣೆ ಸಾವುಕಾರರ ಗುಪ್ತ ಆಲೋಚನೆ.

ಚಿಮಣಿ ಎಣ್ಣೆ ಸಾವುಕಾರರೊಳಗಿನ ಪೈಪೋಟಿಯು ಮುಗಿದು ಈಗ ಬಗಪಾಟಕ್ಕೆ ಪ್ರಾರಂಭವಾಗಿದೆ. ರಶಿಯಾ ದೇಶದಲ್ಲಿ ದೊಡ್ಡ ದೊಡ್ಡ ಚಿಮಣಿ ಎಣ್ಣೆಯ ಗಣಿಗಳು ದೊರಕಿವೆ. ಆ ಎಣ್ಣೆಗೆ ಬೊಲ್ಶೆವಿಕ್ ರಾಜ್ಯಸತ್ತಾತ್ಮಕದ ಮೈಲಿಗೆ ಇದ್ದದರಿಂದ ಅದಕ್ಕೆ ಸ್ಪರ್ಶ ಮಾಡಬಾರದೆಂಬ ಸ್ವಾರ್ಥಪರರಾಯಣ ನೀತಿಯು ಈಗ ಬಯಲಾಯಿತು. ಸಾವುಕಾರರೆಲ್ಲರೂ ಆಲೋಚಿಸಿ, ಆ ಎಣ್ಣೆಯನ್ನು ಸರಿಯಾಗಿ ಹಂಚಿಕೊಂಡು ಎಣ್ಣೆಯ ಮೇಲಿನ ಅನೀತಿಯ ಕಲಂಕ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು !

ಆದರೆ, ಕೆಲವು ಸ್ತ್ರೀಪುರುಷರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕ. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಚಿಕಿತ್ಸೆ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟಲಿಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

—:o:—

½ ಔಂಸಿಗೆ	ರೂ.	೨—೦—೦
¼ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೩—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಆಶ್ಚರ್ಯವು !

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ಇಷ್ಟೇ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗದು. ಒಟ್ಟೋ ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No. 2.**

ವನ್ನು ಪರಿಹರಿಸಲುದ್ಯುಕ್ತರಾಗಿದ್ದಾರೆ. ಸ್ಕಾಟ್ಲಂಡದಲ್ಲಿ ಶ್ರೀಮಂತರುಗಳ ಗುಪ್ತ ಆಲೋಚನೆ ನಡೆಯಿತು. ಬರ್ಮಾ ಆಯಿಲ್ ಕಂಪನಿ ಮುಂತಾದ ರೊಯಲ್ ಡಚ್ ಗ್ರೂಪ ಪರವಾಗಿ ಸರ್ ಹೆನ್ರಿ ಡಿಟರಡಿಂಗರವರೂ, ಎಂಗ್ಲೋ ಪರ್ಶಿಯನ್ ಗ್ರೂಪಿನ ತರ್ಫೆಯಿಂದ ಸರ್ ಜ್ಹೋನ್ ಕೆಡ್‌ಮನ್‌ರವರೂ, ಸ್ಟೆಂಡರ್ಡ ಆಯಿಲ್ ಕಂಪನಿಯ ತರ್ಫೆಯಿಂದ ಮಿ| ಡಬ್ಲ್ಯು. ಸಿ. ಟೀಗಲ್‌ರವರೂ ಗುಪ್ತವಾಗಿ ಕುಳಿತು ಮಾಡಿದರು. ಇಡೀ ಭೂತಲದೊಳಗಿನ ಚಿಮಣಿ ಎಣ್ಣೆಯು ಈ ಮೂವರ ಸ್ವಾಧೀನವಾಗಿದೆ. ಮೂವರ ಆಲೋಚನೆಯ ಮುಖ್ಯ ಕಾರಣವೇನೆಂದರೆ:— ಜಗತ್ತಿನೊಳಗಿನ ಎಣ್ಣೆಯ ಪೂರೈಕೆಯನ್ನು ಆದಷ್ಟು ಕಡಿಮೆ ಮಾಡಿ ಚಿಮಣಿ ಎಣ್ಣೆ-ಪೆಟ್ರೋಲ ಮುಂತಾದ ತರ್ಹೆವಾರು ಎಣ್ಣೆಗಳ ದರವನ್ನು ಏರಿಸುವದಕ್ಕಾಗಿ ಆ ಶ್ರೀಮಂತರುಗಳ ಕೂಟ. ಅಮೇರಿಕೆಯ ಸಾವುಕಾರರಿಗೆ ಈಗಿನ ದರದಿಂದ ಬೇಕಷ್ಟು ಲಾಭ ಸಿಗುವದಿಲ್ಲವಂತೆ. ರಶಿಯಾ ದೇಶದ ಎಣ್ಣೆಯನ್ನು ಬಿಟ್ಟರೆ, ಆ ಎಣ್ಣೆಯು ಬೇರೆಯವರ ಕೈವಶವಾಗಿ ಇವರೊಡನೆ ಮೇಲಾಟವಾಗುವ ಸಂಭವವಿದ್ದದರಿಂದ ಅದನ್ನು ಮೂವರೂ ಸಮಾಸದಿಂದ ಹಂಚಿಕೊಂಡು ದರವನ್ನು ಎಲ್ಲರೂ ಏರಿಸಬೇಕೆಂದು ಗೊತ್ತಾಗಿದೆ. ರಶಿಯಾ ದೇಶದಲ್ಲಿ ಸಿಗುವ ಎಣ್ಣೆಯ ಪರಿಮಾಣವು ಅರ್ಧಾಂಶಕ್ಕೆ ಮಿಕ್ಕಿ ಹೋಗುತ್ತದೆ. ಆದರಿಂದ ಇದೆಲ್ಲ ಗೊಂದಲ.

**

ವಿಜಾಪುರದ ಜಿಲ್ಲಾ ಬೋರ್ಡಿನೊಳಗಿನ ಅಕ್ರಮಗಳು.

ವಿಜಾಪುರ ಜಿಲ್ಲಾ ಬೋರ್ಡಿನಲ್ಲಿ ನಡೆಯುವ ಅಕ್ರಮಗಳ ಕಥೆಯು 'ಕರ್ನಾಟಕ ವೈಭವ'ದಲ್ಲಿ ಪ್ರಾಮುಖ್ಯವಾಗಿ ಬೆಳಕಿಗೆ ಬಂದಿದೆ. ಮುಂಬಯಿ ಸರಕಾರವು ನೀರಿನ ಪೂರೈಕೆಯ ವ್ಯವಸ್ಥೆಯ ಬಗ್ಗೆ ಇಡೀ ಜಿಲ್ಹೆಗೆ ಮುಕ್ಕಾಲು ಲಕ್ಷ ರೂಪಾಯಿಗಳನ್ನು ಕೊಟ್ಟಿತು. ಹಿಂದು ತಿಂಗಳಲ್ಲಿ ಈ ರಕಮನ್ನು ಖರ್ಚು ಮಾಡಲು ಜಿಲ್ಲಾ ಬೋರ್ಡಿನ ನಿಶ್ಚಯವಾಯಿತು. ಎಲ್ಲಾ ತಾಲೂಕಾ ಲೋಕಲ್ ಬೋರ್ಡುಗಳು ಸಾಧ್ಯವೆಂದು ಹೇಳಲಿಲ್ಲ. ಬಾಗೇವಾಡಿ ತಾಲೂಕಿನವರು ಮುಂದಾಗಿ ಬಂದರು. ಅಲ್ಲಿಯ ಅವಶ್ಯಕತೆ-ಅನಾವಶ್ಯಕತೆಗಳ ಕಡೆಗೆ ಲಕ್ಷ ಕೊಡದೆ ೨೪ ಕೆಲಸಗಳು ಕೈಕೊಳ್ಳಲ್ಪಟ್ಟವು. ೧ ತಿಂಗಳಲ್ಲಿ ೧೬ ಸಾವಿರ ರೂಪಾಯಿ ಖಲಾಸ! ಕಳೆದ ವರುಷ ೨೯ ಕಡೆ ನೀರು ಪೂರೈಕೆಯ ಯೋಜನೆಗಳು ಅದೇ ತಾಲೂಕಿನಲ್ಲಿ ಕೈಕೊಳ್ಳಲ್ಪಟ್ಟವು. ೧೮ ಸಾವಿರ ರೂಪಾಯಿ ಖರ್ಚು ಮಾಡಲ್ಪಟ್ಟವು. ಹೀಗೆ ೧೩ ತಿಂಗಳಲ್ಲಿ ಜಿಲ್ಹೆಯ ಬಗ್ಗೆ ಸರಕಾರವು ಕೊಟ್ಟ ಅರ್ಧ ರಕಮು ಒಂದೇ ತಾಲೂಕಿನಲ್ಲಿ ಖರ್ಚಾಯಿತು. ಮುಂಚಿನ ವರುಷ ೧ ತಿಂಗಳಲ್ಲಿ ೨೪ ಕೆಲಸಗಳ ಬಗ್ಗೆ ೧೬ ಸಾವಿರ ರೂಪಾಯಿ ಖರ್ಚಾಯಿತೆಂದು ಬರೆದದಷ್ಟೇ. ಇವುಗಳಲ್ಲಿ ರಡು ಕೆಲಸಗಳು ಎಷ್ಟೋ ವರುಷಗಳ ಹಿಂದೆ ಕೈಕೊಂಡು ಮುಗಿಸಲ್ಪಟ್ಟಿದ್ದವು. ಅವು ಈ ಹೊಸ ಸದರಿನಲ್ಲಿಯೇ ಸೇರಿಸಲ್ಪಟ್ಟವು. ಅನೇಕ ಕಡೆಗಳಲ್ಲಿ ಬಾವಿಗಳು ತೋಡಲ್ಪಟ್ಟವು. ಬಹಳ ಮಾಡಿ ಬೋರ್ಡ ಸಭಾಸದರಿಗೆ ಅನುಕೂಲವಾಗುವಂತೆಯೇ ಬಾವಿಗಳ ಘಟನೆ. ಹನುಮಪುರದೊಳಗೆ ಸರಕಾರಿ ಖರ್ಚಿನಿಂದ ಬೋರ್ಡ ಮೆಂಬರರ ಜಾಗದಲ್ಲಿಯೇ ಬಾವಿ ಕಟ್ಟಿದ್ದಾರೆ. ಕಂಟ್ರಾಕ್ಟರರೆಲ್ಲ ಶಿಖಂಡಿಗಳು. ಅವರ ಬೆನ್ನಿಗೆ ಸ್ವತಃ ಮೆಂಬರರಿದ್ದು ಕೆಲಸ ಮಾಡಿಸುತ್ತಾರೆ. ಹಿಬ್ಬ ಮೆಂಬರರೇ ಈ ಸಂಗತಿಯನ್ನು ಒಪ್ಪಿದರು. ಬಾಗೇವಾಡಿ ತಾಲೂಕಿನಲ್ಲಿ ಹಿಬ್ಬ ಕಂಟ್ರಾಕ್ಟರರ ಹೆಸರಿನಿಂದ ಬೀಲು ಮಂಜೂರಾಯಿತು. ಕಂಟ್ರಾಕ್ಟರರಿಗೆ ಮಾಡಲು ಕೊಟ್ಟ ಶರಾ ಸಹ ಉಂಟು. ಕಂಟ್ರಾಕ್ಟರರಿಗೆ ಕೇಳಿದರೆ, ಯಾವದೂ ತಮಗೆ ಗೊತ್ತಿಲ್ಲವೆಂದು ಅವರು ಹೇಳಿದರು. ಇಂಗಳೇಶ್ವರದಲ್ಲಿ ಎಮ್. ಆರ್. ಪಟೇಲ ಎಂಬ ಮೆಂಬರರಿರುತ್ತಾರೆ. ಇವರು ತಾ. ಲೋ. ಬೋರ್ಡಿನ ಮೆಂಬರರು; ಜಿಲ್ಹಾ ಬೋರ್ಡಿನ ಮೆಂಬರರು. ಈ ಗ್ರಾಮಕ್ಕೆ ಬಾಗೇವಾಡಿಯಿಂದ ಹೋಗುವ ಮಾರ್ಗವು ನೀರಿನ ಪೂರೈಕೆಯ ಬಗ್ಗೆ ಕೊಟ್ಟ ಗ್ರಾಂಟಿನಿಂದ ದುರುಸ್ತಾಯಿತು. ದುರುಸ್ತು ಆದ ಪ್ರಕಾರವು ಚಿತ್ತವೇಧಕವಿದೆ. ದುರುಸ್ತಿಯ ಕೆಲಸವು ಡಿ. ಲೋ. ಬೋರ್ಡಿನಿಂದ ಕೈಕೊಳ್ಳಲ್ಪಟ್ಟಿತು. ಅಧ್ಯಕ್ಷರ ಆಪ್ತರೊಬ್ಬರು ಮುಕ್ತರಂಗ ಕಾರಕೂನರಾಗಿ ನೇಮಿಸಲ್ಪಟ್ಟರು. ೩೩೭ ರೂಪಾಯಿಗಳು ಕೂಲಿಯಾಳುಗಳಿಗೆ ಬಟವಡೆಯಾದ ಬಗ್ಗೆ ಮೆಂಬರರ ಸಹಿಗಳಿವೆ. ಇದೇ ಕೆಲಸವು ಕಂಟ್ರಾಕ್ಟರರಿಗೆ ಕೊಡಲ್ಪಟ್ಟಿತು. ೪೪೬|| ರೂಪಾಯಿ ಕಂಟ್ರಾಕ್ಟರರಿಗೆ ಸಿಕ್ಕಿದವು. ಕಂಟ್ರಾಕ್ಟರರು ಉಪಾಧ್ಯಕ್ಷರ ನೆಂಟರು. ೩೩೭ ರೂಪಾಯಿಗಳ ಕೂಲಿ ಆಳುಗಳ ಹಾಜರಿ ರಿಜಿಸ್ತರು ನಿರರ್ಥಕವೆಂದು ಎಲ್ಲಿಯೋ ಒಗೆಯಲ್ಪಟ್ಟಿತ್ತು. ವಿಚಾರ ಕಾಲಕ್ಕೆ ಸಬ್ ಓವ್ಹರಶೀಯರರು ಅವನ್ನು ಹಾಜರಪಡಿಸಿದರು. ಕೆಲಸಗಳ ಬೇರಾಗಿ ಹಣ ಕೊಟ್ಟಾದ ಬಳಿಕ, ಆ ಕೆಲಸಗಳ ಅಂದಾಜು ಪತ್ರಕಗಳಾಗಿವೆ. ಮಂಗೊಳಿಯಲ್ಲಿ ಬಾವಿ ಕಟ್ಟಿದ ಕಂಟ್ರಾಕ್ಟರರಿಗೆ ೭೦೦ ರೂಪಾಯಿ ಅನಾಯಾಸವಾಗಿ ಸಿಕ್ಕಿಹೋದವು. ಈ ಬಾವಿಯ ಕಥೆಯು ಕೌತುಕಕ್ಕಾಧಾರವಾಗಿದೆ. ಕಂಟ್ರಾಕ್ಟರರಿಂದ ಕರಾರು ಕೈಕೊಳ್ಳಲಾಗಿದೆ. ಈ ಕರಾರುಗಳಲ್ಲಿ ದಿನಗಳಿಲ್ಲ. ಕ. ೬ ನ ರಕಮು ಇಲ್ಲ. ಕಲೆಕ್ಟರರಾದ ರಾ| ವೆಂಕಣ್ಣಾ ಹೊಸಬ ಸಾಹೇಬರಿಗೆ ಹಕೀಕತ್ತು ಗೊತ್ತಿರುವದಾಗಿ ಪ್ರಕಟವಾಗಿದೆ. ಆದರೂ, ಬೋರ್ಡಿನಲ್ಲಿ ಕಾಯಿದೆ ನೀತಿ-ನಿಯಮಗಳನ್ನೆಲ್ಲ ಉಲ್ಲಂಘಿಸಿ ಕೆಲಸ ನಡೆದದೆ. ಕಲೆಕ್ಟರರು ಕಣ್ಮುಚ್ಚಿ ಕುಳಿತುಕೊಂಡಿದ್ದಾರೆ. ಜನರು ಸ್ವರಾಜ್ಯ ಗಳಿಸಲಿಕ್ಕೆ ಅಪಾತ್ರರೆಂದು ಸಿದ್ಧಪಡಿಸುವದಕ್ಕಾಗಿ ಕಲೆಕ್ಟರರು ಇತ್ತ ಲಕ್ಷ ಕೊಡುವದಿಲ್ಲವೇ?

**

ದೇಶಭಕ್ತರ ಸಂಕಟಗಳು.

"ಬಂಗ್ಲಾರ ಕಥಾ" ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ| ಸತ್ಯರಂಜನ ಬಕ್ಷಿಯವರು "ಪಶುಬಲ್ಯ ಕಾರಭಾರ" ಎಂಬ ಹೆಸರಿನಲ್ಲಿ ಬರೆದ ಒಂದು ಲೇಖದ ಬಗ್ಗೆ ರಾಜದ್ರೋಹದ ಖಟ್ಲೆ ನಡೆದಿದೆ. ದಬ್ಬಾಳಿಕೆಯ ಕಾನೂನಿನನ್ವಯ ಸೆರೆ ಹಿಡಿದ ದೇಶಭಕ್ತರಿಗೆ ಸರಕಾರವು ನಡೆಸಿಕೊಳ್ಳುವ ವಿಷಯದ ಕುರಿತು ಈ ಲೇಖವಿತ್ತು. ಶ್ರೀ| ಮನೋರಂಜನಗುಪ್ತ ಎಂಬ ದಬ್ಬಾಳಿಕೆಯ ಕಾನೂನಿನ ಕೈದಿಗಳು ಈ ಪ್ರಕರಣದಲ್ಲಿ ಬಚಾವಿ ಸಾಕ್ಷಿಗಾರರಿದ್ದರು. ಅವರು ತಮ್ಮ ಸಾಕ್ಷಿಯಲ್ಲಿ ದೇಶಭಕ್ತರ ಕಷ್ಟಗಳನ್ನು ವಿವರಿಸಿದರು. "ನಾನು ೧೯೧೬ ನೇ ಇಸ್ವಿಯಲ್ಲಿ ಎಮ್. ಎ., ಕಲಿಯುತ್ತಿದ್ದೆನು. ಆಗ ನನಗೆ ಸೆರೆಹಿಡಿದರು. ಆರೋಪವು ಯಾವುದೆಂಬುದನ್ನು ನನಗೆ ಹೇಳಲಿಲ್ಲ. ಒಂದು ಜೈಲಿನಿಂದ ಮತ್ತೊಂದು ಜೈಲಿಗೆ ನನಗೆ ಸ್ಥಳಾಂತರ ಮಾಡುತ್ತಿದ್ದರು. ಜೈಲಿನೊಳಗಿನ ಸರ್ವತ್ರನಸ ಮೂಲಕ ನಿಷೇಧವೆಂದು ನಾನು ಮೂರು ಬಾರಿ ಉಪವಾಸ ಮಾಡಿದೆನು. ಒಂದು ಬಾರಿ ೨೧ ದಿನ; ೨ ನೇ ಬಾರಿ ೧೭ ದಿನ; ೩ ನೇ ಬಾರಿ ೬೪ ದಿನ ಉಪವಾಸದಿಂದಿದ್ದೆ. ಜೈಲು ಸುಪರಿಂಟೆಂಡೆಂಟರು ನನ್ನ ಹೊಟ್ಟೆಯ ಮೇಲೆ ಕೂತುಕೊಂಡು ಯುಕ್ತಿಗೆಯೊಳಗಿಂದ ಅನ್ನವನ್ನು ಒಳನೂಕುತ್ತಿದ್ದರು. ೬ ತಿಂಗಳ ತನಕ ನನಗೆ ಏಕಾಂತವಾಸದ ಶಿಕ್ಷೆ ವಿಧಿಸಿದರು. ೧೯೨೨ ನೇ ಇಸವಿಯಲ್ಲಿ ತ್ರಿಚನಾಪಳ್ಳಿಗೆ ನನ್ನನ್ನೊಯ್ದರು. ಅಲ್ಲಿ ಸಂದೀಪ ಗ್ರಾಮದಲ್ಲಿ ನನಗೆ ಬಿಟ್ಟರು. ಆ ಗ್ರಾಮದ ಚಿಕ್ಕಗಡಿಯಲ್ಲಿ ನಾನುಳಿಯಬೇಕಾಗಿದ್ದಿತು. ಈ ಕಾರಣದ ಮೂಲಕ ನನಗೆ ಕ್ಷಯ ರೋಗದ ಬಾಧೆಯಾಯಿತು. ಸಂದೀಪ ಗ್ರಾಮದಲ್ಲಿ ಒಮ್ಮೆ ನನಗೆ ಹಾವು ಕಚ್ಚಿತು. ಗುಣ ಹೊಂದಬೇಕಾದರೆ, ಒಂದು ತಿಂಗಳು ತಗಲಿತು. ೯ ವರುಷಗಳ ತನಕ ಸೆರೆಮನೆಯಲ್ಲಿ ನನ್ನ ವಾಸವಾಯಿತು. ಅನ್ನ ಹಾಗು ಉಡಿಗೆ-ತೊಡಿಗೆಗಳ ವಿಷಯವಾಗಿ ನಾನು ಉಪವಾಸ ಮಾಡಿದ್ದೆ. ಶ್ರೀ| ಅನಂತಕುಮಾರ ಮುಕರ್ಜಿಯವರಿಗೆ ೧೯೧೬ ನೇ ಇಸ್ವಿಯಲ್ಲಿ ಸೆರೆಹಿಡಿದಿದ್ದರು. ಇವರಿಗೆ ಪೋಲೀಸರು ಹೆಡಮುರಿಗೆ ಕಟ್ಟಿ ಕಷ್ಟ ಕೊಟ್ಟರು. ಕೇಳಿ ಕೇಳಿದ ಪ್ರಶ್ನೆಗೆ ಇವರು ಉತ್ತರ ಕೊಡದಿದ್ದದರಿಂದ ಈ ಅತ್ಯಾಚಾರವಾಯಿತಂತೆ. ಅರಿಯದ ಸಂಗತಿಗಳನ್ನು ತನ್ನಿಂದ ಹೇಳಲಾಗಲಿಲ್ಲವೆಂದು ಶ್ರೀ| ಅನಂತಕುಮಾರ ಮುಕರ್ಜಿಯವರು ಸಾಕ್ಷಿ ಕೊಟ್ಟರು. ಇವರಿಗೆ ೩೧ ದಿನಗಳ ತನಕ ಏಕಾಂತವಾಸದ ಶಿಕ್ಷೆಯಾಯಿತು. ೧೯೧೬ ನೇ ಇಸ್ವಿಯಲ್ಲಿ ಶ್ರೀ| ಅರುಣಚಂದ್ರ ಗುಹಾರವರಿಗೂ ಸೆರೆಹಿಡಿಯಲಾಯಿತು. ಇವರಿಗೆ ಠಾಣಾವಟ್ಟಣಕ್ಕೆ ತರುವಾಗ ಚಲೋ ಬಡಿದರು. ಅನ್ನ-ನೀರು ಕೊಡದೆ ಒಂದು ಕೋಣೆಯಲ್ಲಿ ಇಟ್ಟರು, ಬೇಡಿ ಹಾಕಿ ಇಡೀ ರಾತ್ರಿ ನಿಲ್ಲಿಸಿದರು. ಕತ್ತಲೆಯ ಕೋಣೆಯಲ್ಲಿ ಹಾಕಿ ಏಕಾಂತವಾಸದ ಶಿಕ್ಷೆ ಕೊಟ್ಟರು." ಇನ್ನೂ ಅನೇಕ ಸೆರೆಯಾಳುಗಳಾದ ದೇಶಭಕ್ತರ ಸಾಕ್ಷಿಗಳಾಗುತ್ತಿವೆ.

**

ಬೋಧಪ್ರದ ಖಟ್ಲೆಗಳು.

ಕುಲಾಬಾ ಜಿಲ್ಹೆಯೊಳಗಿನ ಸಬ್ ರಿಜಿಸ್ಟ್ರಾರರ ಕಚೇರಿಯಲ್ಲಿ ಕ್ರಯ ಪತ್ರವನ್ನು ರಿಜಿಸ್ಟರಿಗೆ ಹೋಗಿತ್ತು. ರಿಜಿಸ್ಟ್ರಾರರಿಗೆ ಕ್ರಯದಾರನ ಗುರುತು ಸಿಗಲಿಲ್ಲ. ರಿಜಿಸ್ಟ್ರಾರರಿಗೆ ಗುರುತಿತ್ತು; ಆದರೆ, ಆ ಗುರುತಿನ ಅರಿವಾಗಬೇಕಾದರೆ, ಆ ಸಬ್ ರಿಜಿಸ್ಟ್ರಾರರು ೩೫ ರೂಪಾಯಿ ಬೇಡಿದರು. ಆ ರಕಮು ಸಿಗಲಿಲ್ಲ. ಇವರು ಸಿಕ್ಕ ಹಾಗೆ ಬರೆದರು. ರಕಮು ಬೇಡಿದ ಬಗ್ಗೆ ಅರ್ಜಿಯಾಗಿ, ಸಬ್ ರಿಜಿಸ್ಟ್ರಾರರ ಮೇಲೆ ಖಟ್ಲೆಯಾಯಿತು. ಕುಲಾಬಾ ಜಿಲ್ಹೆಯ ಸೆಶನ್ಸ್ ಜಡ್ಜರು ಸಬ್ ರಿಜಿಸ್ಟ್ರಾರರಿಗೆ ೪ ತಿಂಗಳ ಶಿಕ್ಷೆ, ೫೦ ರೂಪಾಯಿ ದಂಡ ವಿಧಿಸಿದರು. ಸಬ್ ರಿಜಿಸ್ಟ್ರಾರರು ಹೈಕೋರ್ಟಿಗೆ ಮಾಡಿದ ಅಪೀಲಿನಲ್ಲಿ ಮೂಲ ತೀರ್ಪು ಕಾಯಂ ಆಗಿದೆ. ಸಬ್ ರಿಜಿಸ್ಟ್ರಾರರಿಗೆ ಈ ಖಟ್ಲೆಯಿಂದ ಯೋಗ್ಯ ಬೋಧ ಕೊಡಲ್ಪಟ್ಟಾಗಿದೆ. ಮೋಟರ ಡ್ರ್ಯಾಯ್ವರರಿಗೂ, ಮೋಟರ ಮಾಲೀಕರಿಗೂ ಒಂದು ಬೋಧ ಸಿಕ್ಕಿದೆ. ಭಾಡಾರ ಡ್ಯಾಕ್ಸ್ಮಲಿನ ವಿಜಯಸಿಂಗ ದ್ವಾರಕದಾಸ ಎಂಬ ೧೩ ವರ್ಷ ಪ್ರಾಯದ ಹುಡುಗನು ಮಾರ್ಗ ದಾಟಿ ಹೋಗುವಾಗ, ಗುಲಾಮ ಅಹ್ಮದ ಮರ್ಚಂಟ ಎಂಬ ವಕೀಲರ ಮೋಟಾರು ತಾಗಿ, ಅವನಿಗೆ ಪೆಟ್ಟಾ

ಯಿತು. ಅದರಿಂದ ಬಿಲಗಾಲನ್ನು ಕೆ[illegible] ತೆಗೆ[illegible] ಬೇಕಾಯಿತ. ಡ್ರಾಪ್ಪವ್ಹರನ ವೇಳೆ ಶಿಕ್ಷೆಯಾಗಿ ಶಿಕ್ಷೆಯಾಯಿತು. ಹುಡುಗನು ಮೋಟರ ಮಾಲೀಕರ ಮೇಲೆ ದಾವೆ ಹೂಡನು. ಅಪಘಾತದಿಂದ ಪ್ರಾಪ್ತವಾದ ಊನತನದಿಂದ ೧ ಲಕ್ಷ ರೂಪಾಯಿ ನಷ್ಟವಾಯಿತೆಂದು ಆತನ ಅಂದೋಣ. ೩ ಸಾವಿರ ರೂಪಾಯಿ ಔಷಧೋಪಚಾರಕ್ಕೆ ಖರ್ಚಾದವಂತೆ ಕೃತ್ರಿಮ ಕಾಲಿನ ಯೋಜನೆಯ ಬಗ್ಗೆ ಇನ್ನು ಖರ್ಚಾಗ ವದಂತೆ! ಊನದ ಮೂಲಕ ವ್ಯಾಪಾರದಲ್ಲಿಯೂ, ಸಮಾಜದಲ್ಲಿಯೂ ಪ್ರತಿಷ್ಠೆ ಕುಗ್ಗಿತು ಹೆಂಡತಿ ಸಿಗುವದು ಸಹ ಕಷ್ಟವಿದೆ ಇಷ್ಟೆಲ್ಲದರಲ್ಲಿಯೂ ಸಮಾಧಾನವಾಗಿ ೪೦ ಸಾವಿರ ರೂಪಾಯಿ ನಷ್ಟಭರಪಾಯಿ ಬಗ್ಗೆ ಕೊಡಬೇಕೆಂದು ಫೈಸಲೆಯಾಗಿದೆ ದ್ರವ್ಯದ ಮಹಿಮೆ ಬಹಳ ೪೦ ಸಾವಿರ ರೂಪಾಯಿಗಳಿಂದ ವಿಜಯಸಿಂಗನಿಗೆ ಸಮಾಜದಲ್ಲಿ ಪ್ರತಿಷ್ಠೆ ಹೆಂಡತಿ, ವ್ಯಾಪಾರೋದ್ಯೋಗ ಮುರಿದು ಹೋದ ಕಾಲು ಎಲ್ಲವೂ ದೊರಕಿದವು!! ಸಬ್ ರಿಜಿಸ್ಟ್ರರರಿಗೆ ಪರಿಚಯಿಸಿದ್ದವರ ಗುರುತು ಹತ್ತಲಿಕ್ಕಾದರೂ ಹಣವಿನ ಪ್ರತಿಷ್ಠೆ ಬೇಕೇ ಬೇಕು! "ಸರ್ವೇ ಗುಣಾಃ ಕಾಂಚನಮಾಶ್ರಯಂತೀ |"

* *

ಸಂಜೀವಿನಿ ವಿದ್ಯೆಯ ಶೋಧ

ಗಿಡಮೂಲಿಕೆಗಳ ಮಹಿಮೆಯು ಬಹಳವಿ[illegible] ಕಲಕತ್ತೆಯ ಸರ್ ಜಗದೀಶಚಂದ್ರ ಬೋಸರವರ ವನಸ್ಪತಿಶಾಸ್ತ್ರವನ್ನು ಆಳವಾಗಿಯೂ, ಸೂಕ್ಷ್ಮವಾಗಿಯೂ ಪರೀಕ್ಷಿಸಿ ವನಸ್ಪತಿಗಳಿಗೆ ಜೀವಕೋಟಿಯಂತೆ ಭಾವನಾಶಕ್ತಿ ಇರುವದಾಗಿ ಕಂಡುಹಿಡಿದಿದ್ದಾರೆ ಆಸ್ಟ್ರಿಯಾ ದೇಶದ ರಾಜಧಾನಿಯಾದ ವಿಯೆನ್ನಾ ಪಟ್ಟಣದಲ್ಲಿ ಅವರೊಂದು ಸಾರೆ [illegible] ಪ್ರಯೋಗವನ್ನು ವಿಜ್ಞಾನ ಹಾಗು ವೈದ್ಯಶಾಸ್ತ್ರಜ್ಞರಿಗೆ ಮಾಡಿ ತೋರಿಸಿದರು. ಬೋಸರವರ 'ಅವರಾ' ಎಂಬದೊಂದು ದ್ರವವನ್ನು ತಯಾರಿಸಿದ್ದಾರೆ ಈ ದ್ರವದಿಂದ ನಿಶ್ಚೇತನವಾಗಿದ್ದ ಗಿಡಕ್ಕೆ ಚೈತನ್ಯಶಕ್ತಿಯು ಪ್ರಾಪ್ತವಾಗುತ್ತದೆ ಬೋಸರವರು ಒಂದ ಗಿಡವನ್ನು ಪೊಟೆಶಿಯಮ್ ದ್ರಾವಕದಿಂದ ಕೊಂದರೆ, ಅಂದರೆ ಆ ದ್ರಾವಕವನ್ನು ಆ ಗಿಡದ ಮೇಲೆ ಸಿಂಪಡಿಸಿದೊಡನೆ ಆ ಗಿಡವು ನಿಶ್ಚೇತನ ಹೊಂದಿತು 'ಅವರಾ' ದ್ರವದ ೧೦-೧೨ ಹನಿಗಳನ್ನು ಸತ್ತುಹೋದ ಗಿಡದ ಮೇಲೆ ಚಿಮುಕಿಸಿದರು [illegible] ಪುನಃ ಆ ಗಿಡವು ಅರಳಿತು ಮೂರ್ಛೆಹೊಂದಿದವನು ಚೇತರಿಸಿಕೊಳ್ಳುವಂತೆ ಆ ಗಿಡದ ಪ್ರಕೃತಿಯಾಯಿತು ಸತ್ತುಬಿದ್ದ ಕಪ್ಪೆಯ ರಕ್ತಾಶಯವನ್ನು ಜಗದೀಶಚಂದ್ರರು ತಂದು ಅದರ ಮೇಲೆ 'ಅವರಾ' ದ್ರಾವಕದ ಪ್ರಯೋಗ ಮಾಡಿದರು ಹಾಗೆಯೇ ಆ ರಕ್ತಾಶಯಕ್ಕೆ ಚಾಲನೆ ಬಂತು, ಸಂಕೋಚ ವಿಕಾಸಗಳ ಪ್ರಾರಂಭವಾಯಿತು. ಸಜೀವ ಕಪ್ಪೆಯ ರಕ್ತಾಶಯವು ಹೇಗೆಯೇ ಚಲಿಸುತ್ತದಾಗಿ ನೆರೆದ ವಿದ್ವಾಂಸರು ಅಭಿಪ್ರಾಯಪಟ್ಟರು ಮತ್ತು ಬೋಸರಿಗೆ ಧನ್ಯವಾದಗಳನ್ನರ್ಪಿಸಿದರು 'ಅವರಾ' ದ್ರವದಲ್ಲಿ ಇನ್ನು ಕೆಲವು ಸುಧಾರಣೆಗಳನ್ನು ಮಾಡಿದರೆ, ಅದು ಮೃತ ಮನುಷ್ಯರ ಮೇಲೂ ಪ್ರಯೋಗಿಸಬಹುದೆಂದು ಹೇಳುತ್ತಾರೆ ಶ್ರೀ ಸರ್ ಜಗದೀಶಚಂದ್ರರವರಿಗೆ ಆ ಸ್ವಾರಣಗಳ [illegible] ನ್ನೆಲ್ಲ ಮಾಡಲು ಪ್ರೇರಣೆಯಾಗಲೆಂದೂ ಭರತ ಭೂಮಿಗೆ ದಿಗಂತ [illegible] ಪ್ರಾಪ್ತವಾಗಲಿ [illegible]

ಇದು ಸುಧಾರಣೆ!

[illegible]

ಅಮೇರಿಕಾ ಖಂಡವು ಪಾಶ್ಚಾತ್ಯ ಪ್ರಗತಿಯ ತೌರಮನೆ ಒಂದೂವರೆ ಶತಮಾನಗಳ ಹಿಂದೆ ಯುರೋಪೀಯ ರಾಷ್ಟ್ರಗಳ ದುಷ್ಟ ಕಾರಭಾರದಿಂದ ತಪ್ಪಿಸಿಕೊಂಡ ಸ್ವಾತಂತ್ರ್ಯವನ್ನು ಸಾಹಸದಿಂದ ಜಾಹೀರು ಮಾಡಿ, ಆ ರಾಷ್ಟ್ರವು ಸ್ವರಾಜ್ಯ ಸುಖವನ್ನನುಭವಿಸಲಿಕ್ಕೆ ಮೊದಲು ಮಾಡಿತ ಈಗ ಸುಧಾರಿಸಿದ ಜನಾಂಗದಲ್ಲಿ ಅದು ಅಗ್ರೇಸರತ್ವವನ್ನು ಪಡೆದಿರುವುದೆಂದು ಮೆರೆಯುತ್ತಿದೆ ಏಶಿಯಾ ಖಂಡದ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಸ್ಥಾಪಿಸುತ್ತಿರುವ ದ ರೋಪಿಯನರಂತೂ ಅಮೇರಿಕೆಯು ಸ[illegible] ಸಂಪತ್ತಿನಿಂದ ಮೆರೆಯುವ ಲೋಕಸತ್ತಾತ್ಮಕ ರಾಜ್ಯವೆಂದು ಬಹಳ ಅಭಿಮಾನದ ತ್ವಾರೆ [illegible] ಅನ್ನು ಕಾಪಾಡಿಕೊಂಡಿರುವದನ್ನು ಶ್ಲಾಘಿಸಲಿಕ್ಕಿಲ್ಲವೆಂದು ಹೇಳಬಹುದಾಗಿದೆ ಹಲವು ಯುಗಗಳಿಂದ ಆಧ್ಯಾತ್ಮ ಸಂಸ್ಕೃತಿಯ ಆಧಾರವಾದ ಭರತಖಂಡದಲ್ಲಿ ರಾಜಕಾರಭಾರ ನೀತಿ ಮುಂತಾದ ಶಾಸ್ತ್ರಗಳ ಮೂಲತತ್ವಗಳ [illegible] ಮೂಲಕ ಶಾಂತಿ ಸಾಮ್ರಾಜ್ಯ ಸ್ಥಾಪನೆಗಾಗಿ ಋಷಿಮುನಿಗಳು ಸಮ್ಮುಖದಲ್ಲಿ [illegible] ಪಾಶ್ಚಾತ್ಯ ಸಂಸ್ಕೃತಿಯನ್ನು ಆದರಿಸಿ [illegible] ಗಳನ್ನು ತೋರಿಸುವರು ಸದ್ಯಕ್ಕೆ [illegible] ಪ್ರಗತಿಯ ಉಚ್ಚ ಶಿಖರವನ್ನೇರಿದ ಅಮೇರಿಕಾ ಖಂಡವನ್ನೇ ನೋಡಿ [illegible] ಬೇಕಾಗಿದೆ

ಜಗತ್ತಿನ ಎಲ್ಲ ದೇಶಗಳ ಜನರು ಬಂದಿಳಿಯುವ ಕಾರಣದಿಂದ ಈ ದೇಶಕ್ಕೆ [illegible] ಬಿದ್ದ [illegible] ಗಳ [illegible] ದೆ [illegible] ರಿಗೆ [illegible] ಪತ್ರಿಕೆಗಳು [illegible] ಕೊಡುತ್ತವೆ [illegible] ಇತ್ತೀಚಿನ [illegible] ರಿಕೆಯಿಂದ ಬಂದ [illegible] ಅವರು ಸಿಂಹಲದ್ವೀಪದಲ್ಲಿ [illegible] ಗಳೇತರ ಎಂಬ [illegible] ಮಾಡಿ ಕೊಟ್ಟ [illegible] ಈ ಪ್ರವಾಸಿಗರು [illegible] ಬಂದಿರುವ ಹಿಂದಿನ [illegible] ಜನರಿಗೆ ಅಮೇರಿಕೆಯ [illegible] ಯಾಗಿ ವದಂತೂ ಅವರು ಸಾರಿದರು ಅದರ [illegible] ತಾತ್ಪರ್ಯವೇನೆಂದರೆ ಅಮೇರಿಕೆಯ [illegible] ಹಗಲ [illegible] ವ್ಯಾಪಿಸಿರುವದು ಜನವು ತುಂಬಿತುಳುಕುವ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹಗಲು [illegible] ಭಯಂಕರ ಅತ್ಯಾಚಾರಗಳೂ [illegible] ಗಳನ್ನು ಮಾಡುವದರಲ್ಲಿ ಅಮೇರಿಕೆಯ [illegible] ನ್ನು [illegible] ಹಣ ಕೊಡದಿದ್ದರೆ ಜೀವವು [illegible]" ಎಂಬ ವೀರೋಕ್ತಿಗಳಿಂದ ಬೆಂಕುಗಳಲ್ಲಿ [illegible] ಬೆಂಕಿನ [illegible] ಜವಾನರ ಬಳಿಗೆ ತೋಫುಗಳನ್ನು ಪ್ರದರ್ಶಿಸಿಕೊಂಡು [illegible] ಹಾಕಿಕೊಂಡ [illegible] ಬರುವ ಲೂಟಿಗಾರರಿಗೆ [illegible] ಕಣ್ಣಾರೆ ಕಂಡ ಅಂಥ ಒಂದು ಪ್ರಕಾರವನ್ನು ಆತಾಹಿದರು ನೋಡನೋಡುತ್ತಿರುವಷ್ಟರಲ್ಲಿ ಕೆಲವು ದರೋಡೆಖೋರರು ಒಂದು ಬೆಂಕಿನೊಳಗೆ [illegible] ಹಾಕಿಕೊಂಡು ಒಳಹೊಕ್ಕರು ನಗದಿ ಕೊಳ್ಳು ಅಡ್ಡಬಂದ ಒಬ್ಬನು [illegible] ಆತನ ಎದೆಗೆ ಆನಿಸಿದನು ಉಳಿದವರು ಕೆಲ ನಿಮಿಷದಲ್ಲಿ ಹಣವನ್ನು ಸೂರೆ ಮಾಡಿಕೊಂಡು ಹೋದರು ಗುಂಡು ತಾಕಿ ನೆತ್ತರ ಸುರಿಯುತ್ತಿದ್ದ ಆ ಬಡ ವ್ಯಕ್ತಿಯು ಹಾಗೆಯೇ ಬರಿ ನೆಲದ ಮೇಲೆ ಬಿದ್ದುಕೊಂಡಿದ್ದನು ಪೋಲೀಸ ಬಹಾದ್ದೂರರಿಗೆ ಇಂಥ ಕೊಲೆ ಸುಲಿಗೆಗಳ [illegible]

[illegible] ಮದ್ಯಪಾನ ನಿಷೇಧ ಚಳವಳಿಯು ಬರೇ ಬೇಷ್ಟದಾಗಿದೆ ಮದ್ಯ ನಿಷೇಧ ಯುಗದಲ್ಲಿ ಮದ್ಯ [illegible] ಹೊಟೆಲುಗಳು ಸಿಗುವದಪರೂಪ. ಮಾಡಿಕೆಯಾಗಿ ಪ್ರತಿಯೊಂದು ಕೋಣೆಯಲ್ಲಿ ಬ್ರಾಂಡಿ ಪುಸ್ತಕದೊಡನೆ ಸರಾಯಿ ಕುಪ್ಪಿ ತೆರೆಯುವ ಮೊಳೆ ಇದ್ದೇ ಇರುತ್ತದೆ ಈ ಮೊಳೆ ಕೂಡಲೇ ಕೈಗೆ ಸಿಗುವಂತೆ ಪಾನ ಸೌಕರ್ಯಕ್ಕಾಗಿ ಯಾರೂ ಹೊರ ಬಯ್ಯದಂತೆ ಗೋಡೆಗೆ ಸರಪಳಿಯಿಂದ ತೂಗಹಾಕಿದ್ದಿರುತ್ತದೆ ಸರಾಯಿ ವ್ಯಾಪಾರವು ಪ್ರತಿ ಕಡೆಯಲ್ಲಿ ನಡೆಯುತ್ತದೆ, ಮಿಯಾಮಿ ಪ್ರಾಂತದ ಜಾಕ್ಸನವಿಲ ಪಟ್ಟಣದ ಮುನಿಸಿಪಾಲಿಟಿ ಅಧ್ಯಕ್ಷ ಹಾಗು ಶೆರೀಫನ ಮೊದಲಗೊಂಡು ಬೇರೆ ಕೆಲವು ದೊಡ್ಡ ಅಧಿಕಾರಿಗಳಿಗೂ ಕಳೆದ ವರ್ಷದ ಬಗ್ಗೆ ಫೆಡರಲ ಯೆಂದ ಮಧ್ಯವರ್ತಿ ಸರಕಾರದ ಪೋಲೀಸರು ಸೆರೆ ಹಿಡಿದು ಜೈಲಿನಲ್ಲಿ ಹಾಕಿದರು

ಸ್ಟೇಟ ಯಾನ ಪ್ರಾಂತಿಕ ಪೋಲೀಸರು ತೀರ ನೀಚ ಕೆಲಸ ಮಾಡಲಿಕ್ಕೆ ಎಂದೂ ಹೇಸುವವರಲ್ಲ ಫೆಡರಲ ಪೋಲೀಸರು ವಂಚಕರಲ್ಲ. ಆದರೆ ಸಂಸ್ಥಾನದೊಳಗಿನ ಪೋಲೀಸರು ಘಟಿಂಗ ಜನರ ಸ್ನೇಹಿತರಾಗಿದ್ದಾರೆ ಸುಂದರವಾದ ವಿಹಾರಗೃಹಗಳು ಈಗೀಗ ಹೆಚ್ಚೆಚ್ಚಾಗಿ ಅಲ್ಲಿ ಕಾಣಬರುವದಿಲ್ಲ ಆದರೆ ಸಾವಿರಾರು ತುಂಬುವ ಉಗ್ರಾಣದ ಒಂದು ಕೋಣೆಯಲ್ಲಿ ಜನರ ಮನರಂಜನೆಗಾಗಿ ಸ್ನೇಹಿತರ ರಾತ್ರಿ ಕೂಟ-ಮನೆಗಳನ್ನು ಹೊರಗೆ ತೂಕದಿಸಿದ ಪಟಗಳ ನೋಟದಿಂದ ಗೊತ್ತು ಹಚ್ಚಬಹುದು ಅಂದ ಸ್ಥಳಗಳಲ್ಲಿ ಜನರು ವ್ಯಭಿಚಾರಿ ಹೆಂಗಸರೊಡನೆ ಮನರಂಜನೆ ಮಾಡಿಕೊಂಡಿರುತ್ತಾರೆ ಕಾಫಿ ಕ್ಲಬದೊಳಗಿನ ಒಂದು ಉದಾಹರಣೆಕ್ಕೆ ಮಿ| ಪರಿವಾರದವರು ಸ್ವತಃ ಹಾಜರಿದ್ದರು [illegible] ಜನರು ಕುಪ್ಪಿಗಳನ್ನು ತಬಕಿಯ ಗುಂಡುಗಳಂತೆ ಹಾರಿಸುತ್ತಿರುತ್ತಾರೆ ಇದೀಗ [illegible] ಹಚ್ಚು [illegible] ಗತಾಂಗವೆಂಬಂತೆ ತೋರುತ್ತಬಹಳ ನಂದ ಜನರು ಮಾದಕ ಪದಾರ್ಥಗಳ ಅತಿರೇಕದಿಂದ ತಮ್ಮ ತಕ್ತ ಚೀಗಗಳನ್ನು ಬಿಟ್ಟು ಕಾಫಿಯ ಬಟ್ಟಲುಗಳ ಮೇಲೆ ಕೂತುಕೊಳ್ಳಹತ್ತಿದ್ದರು ರಥಂಪೋಡಕ ಪಟ್ಟಣದಲ್ಲಿ ಒಂದ ಮನೋರಂಜಕ ಚಮತ್ಕಾರವಾಯಿತು ೨೦೦೦೦ ಸಾವಿರ ಜನರು ಮದ್ಯಪಾನ ನಿಷೇಧಕ್ಕಾಗಿ ಸಭೆ ಸೇರಿದ್ದರು. ಶಿವರಂಡ ಟಾಲಮಾಜೆ ಎಂಬವರು ಅಧ್ಯಕ್ಷರಿದ್ದರು ಇವರು ಮುನಿಸಿಪಾಲಿಟಿಯ ಅಧ್ಯಕ್ಷರೂ ಅಲ್ಲಿಯ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದರೆ ಮದ್ಯಪಾನ ಮಾಡಬಾರದೆಂದು ಅವರು ಜನರಿಗೆ ಒಂಬಂಬಿಯ ಬೋಧಿಸಿದರು ನೆರೆದ ಜನರು ವ್ಯಾಖ್ಯಾನವನ್ನು ಒಂದೇ ಮನಸ್ಸಿನಿಂದ ಕೇಳುತ್ತಿದ್ದರು ಮದ್ಯದಿಂದ ಆಗುವ ಕೇಡುಗಳನ್ನು ಅಧ್ಯಕ್ಷರು ಚೆನ್ನಾಗಿ ತಿಳಿಸಿ ಹೇಳಿದರು ಮರುದಿನ ಅಲ್ಲಿಯ ವರ್ತಮಾನಪತ್ರಿಕೆಯಲ್ಲಿ ಅವರ ಭಾಷಣವನ್ನು ಸ್ಪಷ್ಟವಾಗಿ ಕೊಟ್ಟಿದ್ದರು ಅದೇ ಪತ್ರಿಕೆಯು ಇನ್ನೊಂದು ಸಮೀಪದ ಇನ್ನೊಂದು ಕಾಲಮಿಯಲ್ಲಿ ಮದ್ಯದಾನ ಆಡುಳಿನಲ್ಲಿ ವೊಂಟಲು ಅವ್ಯಕ್ತವಾಗಿ ನಡೆಸಿದ ಬಗ್ಗೆ ಶಿವರಂಡ ಟಾಲಮಾಜೆಯವರಿಗೆ ಪೋಲೀಸರು ಶಿಕ್ಷೆ ಮಾಡಿದರೆಂತಲೂ ಬರೆದಿತ್ತು ಇಷ್ಟೇ ಅಲ್ಲ ಮದ್ಯಪಾನ ನಿಷೇಧ ಚಳವಳಿಯಿಂದ ದೂಷಿತ ಮದ್ಯ ಹಾಗೂ ಒಳ್ಳೇ ಮದ್ಯದೊಳಗಿನ ಭೇದಾಭೇದವು ಸಹ ಜನರಿಗೆ ತಿಳಿಯದೆ ಹೋಗಿದೆ

ಸಮಾಚಾರ ಪತ್ರಿಕೆಗಳು ಮಾತ್ರ ಬಹಳ ಸೊಗಸಾಗಿ ತಮ್ಮ ಕರ್ತವ್ಯಗಳನ್ನು ಮಾಡುತ್ತವೆ ತನಗೆ ವೃತ್ತಪತ್ರಿಕೆಯ ಪ್ರಪಂಚವೇ ಬಹಳ ಚಕಿತವಾಗಿ ಮಾಡಿತೆಂದು ಮಿ| ಪರೇರಾರು ಹೇಳುತಾರೆ ನ್ಯಾಯಾಧೀಶರುಗಳೇ, ಜ್ಯೂರಿಗಳುಗಳೇ ಕೊಟ್ಟ ತೀರ್ಪು ಜನರಿಂದ ಸರಿಯಾಗಿ ಟೀಕಿಸಲ್ಪಡುತವೆ ವ್ಯಕ್ತಿಯ ಅಧಿಕಾರವಾಗಲೀ, ದೊಡ್ಡಸ್ತನವಾಗಲೀ ವಿಚಾರಿಸದೆ ಕಂಡದ್ದನ್ನು ಮರೆಮಾಚದೆ ಪತ್ರಿಕೆಗಳು ಬರೆಯುತ್ತಿರುತ್ತವೆ ಪ್ರತಿ ಸಮಾಚಾರ ಪತ್ರಿಕೆಯ [illegible] ಪೋಲೀಸರಂತೆ ಬೇಕಾದ ಸುದ್ದಿಗಳನ್ನು ಹೊರಗೆಡಹುತ್ತಿದ್ದಾರೆ ಯೋಗ್ಯತೆಗೆ ಆಕರವಾದ ಪ್ರತಿಷ್ಠೆ [illegible] ಮನುಷ್ಯನ ಗತ ಇತಿಹಾಸವನ್ನು ಕಂಡು

ಇದು ಸಾರ್ವಜನಿಕ ಜನರಿಗೆ ಆಶ್ಚರ್ಯದ ಮಾಡಿಕೊಡು ವ ಅಪೂರ್ವ ಬುದ್ಧಿಚಾತುರ್ಯವು ಪತ್ರಿಕಾ ಬಾತ್ಮೀದಾರ ರಲ್ಲಿದೆ ಮನುಷ್ಯನಿಗೆ ಮಾತ್ರವಾದ ದೇಶದ ಮುಖಂಡರಿಗೆ ಇದೊಂದು ದೊಡ್ಡ ಧುರವಸ್ತುವು! ಅಮೇರಿಕಾದಲ್ಲಿ ಪ್ರಯೋಗದಿಂದ ಪತ್ರಿಕೆಗಳ ಮೇಲೆ ದಾಖಲ ಆಗುವದಿಲ್ಲ ಅದರ ವಿಧಾನವನ್ನು ಸಿದ್ಧಮಾಡಿ ತೋರಿಸಲಿಕ್ಕೆ ಅಷ್ಟು ಜಾಗರೂಕರಾಗಿರುತ್ತಾರೆ ಕಾಲಕಾಲದಂತೂ ಒಳ್ಳೇ ಸ್ಥಿತಿಯಲ್ಲಿದ್ದಾರೆ ಯಂತ್ರಗಳು ಹೆಚ್ಚಾದಂತೆ ದಿನಗೂಲಿಯು ಜನರೂ ಹೆಚ್ಚುತ್ತಾರೆ. ಇದೊಂದು ಚಮತ್ಕಾರವೇ ಸರಿ.

ನಿಶ್ಯ-ಭಾಗ್ಯಭಾವ ಮುಂತಾದ ಶಬ್ದಗಳು ನುಡಿಯಲ್ಲಿ ಮಾತ್ರ 'ಜೋರಾಗಿ' ಕೃತಿಯಲ್ಲಿ ಬಿಳೇ ಜನರನ್ನು ಬಿಟ್ಟು ಬೇರೆ ಎಲ್ಲ ಜನರು ಪೀಡಿಸಲ್ಪಡುತ್ತಾರೆ ನಿಗ್ರೋ ಜನರಿಗೆ ಸರಕಾರಿ ವಿದ್ಯಾಲಯಗಳಲ್ಲಿ ಕಲಿಯಲು ಅಂಬಿಲ್ಲ ಸ್ವಲ್ಪ ಅಪರಾಧಕ್ಕಾಗಿ ನಿಗ್ರೋ ಜನರು ಕೊಲ್ಲಲ್ಪಡುತ್ತಾರೆ. ೧೯೨೬ನೇ ಇಸ್ವಿಯಲ್ಲಿ ೩೬೬ ಮಂದಿ ನಿಗ್ರೋ ಜನರು ಕೊಲ್ಲಲ್ಪಟ್ಟರು ಈ ಜನರು ಮಾಡಿದ ಅಪರಾಧಗಳಿಗೆ ಬೇರೆ ಶಿಕ್ಷೆಯಿಲ್ಲಾದರೆ ಖರೇ ಕೆಲವು ಸಲ ಮರಣ ಮಾಡಿ ಬಿಡುತ್ತಿದ್ದರು ಅಮೇರಿಕೆಯಲ್ಲಿ ಮೂಲನಿವಾಸಿ ರೆಡ್ ಇಂಡಿಯನ್ ಎಂಬ ಒಂದು ಜಾತಿ ಇದೆ. ಅವರು ಬಂಜರು ಬಿದ್ದ ಭೂಮಿಗಳಲ್ಲಿ ವಾಸಿಸುವಂತೆ ವ್ಯವಸ್ಥೆ ಇದೆ ಈ ಜನರು ಗಂಧಕದ ಗಣಿಗಳಲ್ಲಿ ಗುಲಾಮರಂತೆ ದುಡಿಯಬೇಕಾಗಿದೆ ಹೊಟ್ಟೆಗೆ ಸರಿಯಾಗಿ ಕೂಳು ಸಿಗುವದಿಲ್ಲ ಒಟ್ಟಿಗೆ ಅಮೇರಿಕೆಯ ಜನರು ಮಾತಿನಲ್ಲಿ ಸವಿ ಇದ್ದರೂ ಖರೇ ಸಂಭಾವಿತರಿಗೆಂದು ಹೇಳಲಿಕ್ಕೆ ಅನರ್ಹ ಸಾಕಷ್ಟು ಆಧಾರವಿದೆ ಎಂದು ಮಿ ಪರೇರಾರು ಹೇಳಿದರು.

ಜಾಹೀರಾತು.

ತಾ॥ ಇದೇ ೧೧ ನೇ ಯಿಂದ ನಾವು ಕುಮಟಾ ಶಹರದಲ್ಲಿ ಮುಕ್ಕಾಂ ಮಾಡಿದ್ದು, ನಾವು ಜ್ಯೋತಿಷ, ಸಶಾಸ್ತ್ರ ಜಾತಕ ನಿಶ್ಚಯಗೊಳಿಸುವದು, ಫಲಾಫಲ ಭವಿಷ್ಯ, ಪ್ರಶ್ನೆ ಮುಂತಾದ ಪೂರ್ವಾಪರ ವಿಚಾರ ಹೇಳುವದು ಹಾಗು ಮಂತ್ರವಾದಿ ಕೆಲಸಗಳನ್ನು ಯೋಗ್ಯರೀತಿ ಮಾಡಿಕೊಡುತ್ತೇವೆ. ನಮ್ಮ ಮುಕ್ಕಾಂ ಇಲ್ಲಿ ಸ್ವಲ್ಪ ಕಾಲವಿರುವದರಿಂದ ಬೇಕಾದವರು ಅವಶ್ಯ ಲಾಭ ಹೊಂದಿ ಖಾತ್ರಿ ಮಾಡಿಕೊಳ್ಳಬೇಕು

ವ್ಯ.- ವೈಯನೂರು ಕೃಷ್ಣ ಜ್ಯೋತಿಷಿ,

ಶ್ರೀ ವೆಂಕಟರಮಣ ದೇವಸ್ಥಾನದ ಸಮೀಪ, ಮಹಾಬಲೇಶ್ವರ ಭಟ್ಟರ ಖಾನಾವಳಿ ಕುಮಟಾ (ಉ ಕ)

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಆರ್ಚರ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ " ಆರ್ಚರ " ಎಂಬ ಗುರುತಿರುವದು)

ಜನ್ನಾಗಿ ಪೆಟ್ಟಿಗೆಯಲ್ಲಿರಿಸಿ ರೇಲ್ವೆ ಚಾರ್ಜು ತುಂಬಿ ನಿಮ್ಮೂರ ಸ್ಟೇಶನ ಮೇಲೆ ೮೫ ರೂ. ೮ ಆ. ಗೆ ಮಾತ್ರ



ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ್, ಮಡಗಾರ್ಡ್, ಸೊಗಸಾದ ಸ್ಪ್ರಿಂಗಸೀಟ ರಬರ ಪ್ಯಾಡಲ್ಸ್, ಲುಕಸ್ಸಿನ " ಪಾಥ ಫಾಯಿಂಡರ " ದೀಪ, ಉತ್ತಮ ಘಂಟೆ, ಡನ್‌ಲಾಪ್ ಪ್ಲೇಟೆಡ್ ಪಂಪ ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತೆ. ಆರ್ಡರಿನ ಕೂಡ ರೂ ೨೫ ಮುಂಗಡ ಕಳಿಸಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್ ಎಂಡ್ ಮೋಟರ ಕಂಪನಿ,

ಮುಂಬಯಿ—ಹಾರ್ನಬೀ ರೋಡ

ಪುಣೆ—ಆರ್ಸೆನಲ್ ರೋಡ.

ವೃತ್ತಸಾರ.

— ರಶಿಯಾ ದೇಶದ ಒಳಿ ಒಂದು ಬ್ರಿಟಿಶ ಹಡಗು ಜಪ್ತಿ ಆಗಿ ಬಂಧನವನ್ನು ಹೊಂದಿತು; ಅದರೊಳಗಿನ ಬ್ರಿಟಿಶರೂ ಬಂಧನ ವನ್ನು ಹೊಂದಿದರು. ಇತ್ತ ಬಿದ್ದ ಆರ ಶವಗಳನ್ನು ಇಂಗ್ಲಂಡಕ್ಕೆ ತರುವ ಬಗ್ಗೆ ರಶಿಯಾ ಸರಕಾರಕ್ಕೂ, ಬ್ರಿಟಿಶ ಸರಕಾರಕ್ಕೂ ವಾದ. ಯುದ್ಧನೌಕೆಯನ್ನು ಕಳಿಸಿ ಆ ಶವಗಳನ್ನು ತಿರುಗಿ ತರಬೇಕೆಂದು ಬ್ರಿಟಿಶ ರಾಜಕಾರಣಿಗಳ ಧೋರಣ. ಬ್ರಿಟಿಶರು ಸತ್ತ ನಂತರ ಮಾಡಿ ತಮ್ಮ ಸಮುದ್ರದಲ್ಲಿ ಯುದ್ಧದ ಹಡಗುಗಳನ್ನು ಸೇರಿಸಲು ಬ್ರಿಟಿಶರ ಆಶಯ ನಡೆದರೆಂದು ರಶಿಯಾ ಸರಕಾರದ ಅಂಬೋಣ. ಅದಕ್ಕೆ ರಶಿಯಾ ಸರಕಾರವು ಒಪ್ಪಲಿಲ್ಲ. ವ್ಯಾಪಾರಿ ಹಡಗ ಕಳಿಸಲು ರಶಿಯಾ ಸರಕಾರದ ಅಡ್ಡಿಯಿಲ್ಲ. ಪ್ರೇತಗಳನ್ನು ಒಯ್ಯಲು ಯುದ್ಧದ ಹಡಗುಗಳೇಕೆ?

— ಮಧ್ಯಪ್ರಾಂತದ ಪ್ರತಿಗಾಮಿ ಪಕ್ಷದ ಪ್ರವರ್ತಕರಾದ ನಾ॥ ದೇಶಮುಖ ಹಾಗು ರಾವ ಈ ದಿವಾನದ್ವಯರು ತಮ್ಮ ಪಕ್ಷದ ಸಂಖ್ಯಾಬಲವು ತೀರ ಕಡಿಮೆಯಾಗುತ್ತ ನಡೆದದ್ದರಿಂದ ರಾಜೀನಾಮೆ ಕೊಟ್ಟಿರುವರು ನಾ॥ ರಾವರ ಮೇಲೆ ನಿಂದಾವ್ಯಂಜಕ ಠರಾವು ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಪಾಸ ಆಗುವ ಭಯದಲ್ಲಿದ್ದಾಗಲೇ ಇವರು ರಾಜೀನಾಮೆ ಕೊಟ್ಟರು ಇದು ಪ್ರತಿಗಾಮಿಗಳ ಗತಿ!

— ದುಕೂರಿ ಕೃಷ್ಣಜಯಂತ್ಯುತ್ಸವದ ಪ್ರಸಾರಕರಾದ ಶ್ರೀ ಕ್ಷೀರಸಾಗರ ಎಂಬುವರು ಪಣಜಿಯಲ್ಲಿ ಗೋವೆಯ ಗವರ್ನರರಿಗೆ ಭೆಟ್ಟಿಯಾದರು ಗವರ್ನರ ಸಾಹೇಬರು ಉತ್ಸವದ ಲಕ್ಷಣದ ಬಗ್ಗೆ ಒಳ್ಳೇ ಸಂತೋಷಪಟ್ಟು ಧರ್ಮಪ್ರಚಾರ ಮಾಡಲಿಕ್ಕೆ ಏನೂ ಆತಂಕವಿಲ್ಲೆಂದು ಉತ್ತರ ಕೊಟ್ಟರು ಇದನ್ನಾದರೂ ಕಂಡು ಅಸೂಯೆ ಪಡುವವರು ಗೋವೆಯ ಪ್ರಚಾರಕ್ಕೆ ತಡೆ ಹಾಕದಿರಲಿ!

— ಬೆರಿಸ್ಟರ ಜಿನ್ನಾ ಸಾಹೇಬರು ತಮ್ಮ ಇಂಗ್ಲಂಡದೊಳಗಿನ ಸಂಚಾರ ಮುಗಿಸಿಕೊಂಡು ಹಿಂದುಸ್ಥಾನಕ್ಕೆ ಬರಬೇಕೆಂತ ಹೊರಡಿದ್ದರು ಲಖನೌ ಪಟ್ಟಣದಲ್ಲಿ ಸಪ್ಟಂಬರ ೨೮ ನೇ ತಾರೀಖಿಗೆ ಸೇರಲಿಕ್ಕಿದ್ದ ಸರ್ವಪಕ್ಷೀಯ ಪರಿಷತ್ತಿಗೆ ಅವರು ಬಂದು ಮುಟ್ಟುವವರಿದ್ದರು ಪ್ಯಾರಿಸ್ ಪಟ್ಟಣದಲ್ಲಿ ಅವರ ಪತ್ನಿಯು ಕಾಯಿಲೆಯಿಂದ ಅಸ್ವಸ್ಥವಾದಳು ಜಿನಾ ಸಾಹೇಬರು ಸರ್ವಪಕ್ಷೀಯ ಪರಿಷತ್ತಿಗೆ ಬಂದು ಮುಟ್ಟುವ ಲಕ್ಷಣಗಳು ತೋರುವದಿಲ್ಲ

— ಮುಂಬಯಿ ಕಾಯಿದೆ ಕೌನ್ಸಿಲಿನ ಸಪ್ಟಂಬರ ಅಧಿವೇಶನದಲ್ಲಿ ಚಿಕ್ಕ ಹೊಲಗಳ ಏಕೀಕರಣದ ಕಾನೂನು, ತೀರ್ಪು ವರಿಕೆಯ ಕಾನೂನು ವಿಚಾರಕ್ಕೆ - ಬರಲಿಕ್ಕಿವೆ ಇನ್ನೂ ಈ ಬಿಲ್ಲಿನ ನಿಮಂತ್ರಣ ಹೊಂದಲಿಲ್ಲ, ಕ ದಾಮೋದರನ್ನು ಸೇರಿಸಲು ಸರಕಾರವು ತರಲಿಕ್ಕಿರುವ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ ಜೋಗಿರವರು ತಂದ ಸೂಚನೆಯು ಕಳೆದ ಅಧಿವೇಶನದಲ್ಲಿ ಮಂಜೂರಾಗಿದೆ ಆದರೂ ಸರಕಾರವು ತನ್ನ ಹಟ ಬಿಡಲೊಲ್ಲದು.

— ಅಲಮಟ್ಟಿಯ ವೀರಶೈವ ವಿದ್ಯಾಲಯಕ್ಕಾಗಿ ಶ್ರೀ ಹಡೇಕರ ಮಂಜಪ್ಪನವರು ದ್ರವ್ಯ ಸಹಾಯ ಬೇಡುತ್ತಾರೆ. ಈ ವಿದ್ಯಾಲಯವು ಒಕ್ಕಲತನ, ವ್ಯಾಪಾರ, ಉದ್ಯೋಗಗಳ ಶಿಕ್ಷಣ ಕೊಟ್ಟು ಮುಂದಿನ ನಾಗರಿಕರನ್ನು ತಯಾರಿಸುತ್ತದೆ ೨೧ ತಿಂಗಳೊಳಗೆ ೨೦ ಸಾವಿರ ರೂಪಾಯಿ ಬೇಕಾಗಿವೆ ಧನಿಕರು ನೆರವಾಗಬೇಕಲ್ಲದ್ದು

— ದಿಲ್ಲಿಯಲ್ಲಿ ಈ ವರುಷ ಮಳೆಯಿಲ್ಲದೆ ಜನರ ಗೋಳು. ಹಿಂದು-ಮುಸಲ್ಮಾನರು ಭಗವದನುಗ್ರಹಕ್ಕಾಗಿ ಪ್ರಾರ್ಥನೆ ನಡಿಸಿದರು

— ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರೂ, ಶ್ರೀ ಪಣ್ಮುಖಂ ಚೆಟ್ಟಿಯವರೂ ವಿಲಾಯತಿಯ ಪ್ರವಾಸ ಮುಗಿಸಿ ಹಿಂದುಸ್ಥಾನಕ್ಕೆ ಮರಳಿ ಬಂದರು ಬಿಡ್ಜಂಟ ಅಮ್ಮನವರೂ ಅದೇ ಹಡಗದಿಂದ ಮರಳಿ ಬಂದಿದ್ದಾರೆ ಮುಂಬಯಿಯ ಕಾಂಗ್ರೆಸ ಜಹಾಂಗೀರ ಸಭಾಮಂದಿರದಲ್ಲಿ ಶ್ರೀಮಾನರಿಗೆ ಮೂವರ ಭಾಷಣಗಳಾದವು ಮೂವರೂ ಬ್ರಿಟಿಶರೊ ಡನ ಸ್ನೇಹ ಬೆಳಿಸುವದರಿಂದ ಪ್ರಾಪ್ತಿಯೇನಿಲ್ಲೆಂದು ಸ್ಪಷ್ಟವಾಗಿ ಹೇಳಿದರು ಸಂಪೂರ್ಣ ಸ್ವಾತಂತ್ರ್ಯವನ್ನೇ ಪ್ರಾಪ್ತ ಮಾಡಿಕೊಳ್ಳಬೇಕಾಗಿ ಶ್ರೀಮಾನ್ ಅಯ್ಯಂಗಾರರು ಒತ್ತಿ ಹೇಳಿದರು

— ಶ್ರೀ ಆಗಾಸೂರ ರಾಮಚಂದ್ರರಾಯರು ೮ ನೇ ಮುದ್ರಣಾಲಯವು ಜಪ್ತಾಯಿತು ಮುದ್ರಣ ಕಾನೂನನ್ನು ಮೀರಿ 'ಕಡೆಯಾಟ ಪತ್ರಿಕೆ'ಯನ್ನು ಹೊರಡಿಸಿದ ಅಪರಾಧದ ಬಗ್ಗೆ ಆಗಾಸೂರರಿಗೆ ೮ ನೇ ಶಿಕ್ಷೆ ಇದು

— ಮುಂಬಯಿ ಪ್ರೆಸಿಡೆನ್ಸಿ ಎಸೋಸಿಯೇಶನ್‌ದವರು ನಮ್ಮ ಉತ್ತರ ಕನ್ನಡ ಜಿಲ್ಲೆಯ ಜಂಗಲು ದೂರುಗಳ ವಿಷಯ ಇನ್ನೊಂದು ಬಾರಿ ಮುಂಬಯಿ ಸರಕಾರಕ್ಕೆ ಅರ್ಜಿ ಮಾಡಿದ್ದಾರೆ ಗೋಚರಾಂವ ಫೀಯನ್ನು ೪ ಆಣೆ ಇದ್ದಲ್ಲಿ ೨ ಆಣೆ ತಗ್ಗಿಸಬೇಕಾಗಿ ಸೂಚನೆ ಮಾಡಿದ್ದಾರೆ ಜಂಗಲುಗಳ ಆಡಳಿತಕ್ಕಾಗಿ ಪಂಚಾಯತಿಗಳನ್ನು ನೇಮಿಸತಕ್ಕದ್ದು. ಮದ್ರಾಸ ಇಲಾಖೆಯಲ್ಲಿ ಸಂಚಾರಕರನ್ನು ಕಳುಹಿ ಅಲ್ಲಿನ ಪಂಚಾಯತಿಗಳ ಆಡಳಿತೆಯ ರಿಪೋರ್ಟನ್ನು ತರಿಸಬೇಕಾಗಿಯೂ ಸೂಚನೆ ಮಾಡಲಾಗಿದೆ

— ಮುಂಬಯಿಯ ಮುನಿಸಿಪಾಲಿಟಿಗೆ ದೊಡ್ಡದೊಂದು ಚಿಂತೆ ಹತ್ತಿದೆ. ಹೌದಿನೊಳಗಿನ ನೀರು ಸೋರಿ ಹೋಗುತ್ತದಂತೆ! ಅಲ್ಲಿಯ ಜಲಸಂಚಯವು ಬಹಳ ಕಡಿಮೆಯಾಗಿದೆ ಹೀಗೆ ಮಳೆ ಬಿದ್ದರೂ ಈ ಪ್ರಕಾರ ನೀಗುವ ಲಕ್ಷಣಗಳಾಗಿವೆ ಕಮಿಶನರರಿಗೆ ಈ ಕುರಿತು ಉಪಾಯಗಳನ್ನು ಕಂಡುಕೊಳ್ಳಲು ಹುಕುಮವಾಗಿದೆ

— ಇಂಪೀರಿಯಲ್ ಟೊಬೆಕೋ ಕಂಪನಿಯೆಂಬ ಸಿಗರೇಟ ಕಂಪನಿಯ ಮುಖ್ಯಸ್ಥರು ತೀರಿಕೊಂಡರು ಇವರ ಆಸ್ತಿಯು ೧ ಕೋಟಿ ಪವನು ಇನ್ನೂ ಪೂರ್ಣ ಆಸ್ತಿಯ ಲೆಕ್ಕವಾಗುವದಿಲ್ಲವಂತೆ! ಸಿಗರೇಟು ಸೇದುವವರು ಲಕ್ಷವಿಡಲಿ!

— ಅಮೇರಿಕೆಯ ಮಧ್ಯ ಇಂಡೀಜದಲ್ಲಿ ದೊಡ್ಡ ಭೂಕಂಪವಾಗಿ ನದ ಗಡ್ಡೆಯೊಂದು ಜಲಸಮಾಧಿ ಹೊಂದಿತು ತ್ರಿವೇಂದ್ರಮ ಬಳಿ ಸಮುದ್ರವು ೧ ಮೈಲು ಹಿಂದ ಸರಿದು ಬೈಲು ಪ್ರದೇಶವಾಗಿದೆ ಆ ಭೂಕಂಪಕ್ಕೂ ಇಲ್ಲಿಯ ಸಮುದ್ರದ ಹಿಂಜರಿಯೋಣಕ್ಕೂ ಸಂಬಂಧವಿರಬೇಕೆಂದು ಕೆಲವರ ಅಂಬೋಣ!!

— ಧಾರವಾಡದ ಲೋಕಕೋದ್ಧಾರಿ ನಾಗರಿಕರಾದ ಗುರುನಾಥರಾವ ಘಾಟಕರವರು ಕಳೆದ ವಾರ ತೀರಿಕೊಂಡರು ಮರಣ ಕಾಲಕ್ಕೆ ಇವರ ವಯಸ್ಸು ೫೮ ಸಾರ್ವಜನಿಕ ಪಕ್ಷೀಯರು. ಕರ್ನಾಟಕ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿದ್ದರು. ಇವರಿಗೆ ವಾಙ್ಮಯದ ಮೇಲೆ ಪ್ರೀತಿ ವಿಶೇಷ ಶ್ರೀ ಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯನ್ನು ಇವರೇ ಮುಂದಾಗಿ ಕಟ್ಟಿಸಿದ್ದರು. ಇವರಿಗೆ ಧಾರವಾಡದಲ್ಲಿ ಬಹಳ ಆದರವಿತ್ತು ಕರ್ನಾಟಕ ವಾಙ್ಮಯ ಸೇವಕರೊಬ್ಬರು ತೀರಿಕೊಂಡಂತಾಗಿದೆ

— ಗುಂಟೂರದಲ್ಲಿ ವೇಶ್ಯೆಯರ ಪರಿಷತ್ತು ನೆರೆದು, ಮುಂದಿನ ಪೀಳಿಗೆಯನ್ನು ವೇಶ್ಯಾವೃತ್ತಿಯಿಂದ ಅಲಿಪ್ತವಾಗಿಡಬೇಕಾಗಿ ಠರಾವಾಗಿದೆ.

— ಶ್ರೀ ರಂಗನಾಥ ದಿವಾಕರರವರು ಸರ್ವಪಕ್ಷೀಯ ಪರಿಷತ್ತಿಗಾಗಿ ಲಖನೌ ಪಟ್ಟಣಕ್ಕೆ ಹೋಗಿದ್ದಾರೆ.

— ಸರ್ಕಸ್ ಕಂಪನಿಯಿಂದ ಹೆಸರು ಹೊಂದಿದ ಪ್ರೊ. ರಾಮಮೂರ್ತಿಯವರು ಸರ್ಕಸ್ ಉದ್ಯೋಗವನ್ನು ಬಿಟ್ಟು ಬಾಲಕರಿಗೆ ಶಾರೀರಿಕ ಶಿಕ್ಷಣ ಕೊಡುವ ಶಾಲೆಯನ್ನು ಹೊರಡಿಸುವ ಸಂಕಲ್ಪ ಮಾಡಿದ್ದಾರೆ

— ನಿಜಾಮ ರಾಜ್ಯದಲ್ಲಿ ಚಮತ್ಕಾರಗಳು ಸಂಭವಿಸುವದು ವಿಶೇಷ! ನಾಂದೇಡ ಗ್ರಾಮದಲ್ಲಿ ಒಬ್ಬ ಶ್ರೀಮಂತರು ಇದ್ದರು ಅವರು ವೃದ್ಧರು, ಅಂಧರು. ಅಲ್ಲಿಯ ಲೇವಾದೇವಿಗಾರರೊಬ್ಬರು ಗ್ರಾಮಾಧಿಕಾರಿಗಳಿಗೆ ಕೊಟ್ಟು ಶ್ರೀಮಂತರು ಮರಣ ಹೊಂದಿದರೆಂದು ರಿಪೋರ್ಟು ಮಾಡಿಸಿ ಅವರ ಭೂಮಿ ಬೇರೆಯವರ ಪಾಲು ಮಾಡಿಸಿದರು ಶ್ರೀಮಂತರು ದೂರು ಹೇಳಿದರು, ಮೇಲಧಿಕಾರಿಗಳಿಗೆ ಬರಕೊಂಡರು, ಅಂದರೆ ಯಾವುದೂ ಪತ್ತೆ ಸಿಗುವದಿಲ್ಲ ಜೀವಂತವಿದ್ದು ಸತ್ತ ಲೆಕ್ಕ ಜನಮಾನಸದ ರಂಜನೆಗಳಾಗುತ್ತಿದೆ

ಕಾನಡಾ ವೃತ್ತ.

ಮಿತಿ ವಿಭವ ಸಂ। ನಿ। ಶ್ರಾವಣ ಶು। ೧೧ ೬, ಸೋಮವಾರ

ಕವಿ ಕಲ್ಪನೆಗಳು.

ಮುಂಬಯಿ ವಿಶ್ವವಿದ್ಯಾಲಯದ ವಾರ್ಷಿಕ ಸಮಾವರ್ತನ ಸಮಾರಂಭವು ಮಂಗಳವಾರಕ್ಕೆ ಜರಗಿತು ಬಿ ಏ. ಎಮ್. ಏ, ಮುಂತಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ರೀತಿಯಂತೆ ಪದವಿಗಳು ಅರ್ಪಿಸೋಣಾದವು ವಾಡಿಕೆಯಂತೆ ಗವ್ಹರ್ನರರಾದ ಸರ್ ಲೆಸ್ಲೀ ವಿಲ್ಸನ್‌ರವರ ಭಾಷಣವೂ ಆಯಿತು ಗವ್ಹರ್ನರರ ಭಾಷಣವು ವಿದ್ಯಾರ್ಥಿಗಳಿಗೆ ಉಪದೇಶಪರವಾಗಿರುತ್ತದೆ. ವಿದ್ಯಾರ್ಥಿದಶೆಯನ್ನು ತೀರಿಸಿಕೊಂಡು ಪ್ರಪಂಚದಲ್ಲಿ ಸೇರಲುದ್ಯುಕ್ತರಾದ ಎಳೆ ವಿದ್ಯಾರ್ಥಿಗಳಿಗೆ ಮುಂದಿನ ಮಾರ್ಗವನ್ನು ಪ್ರಾಂತಾಧಿಪರು ಬೋಧಿಸುತ್ತಾರೆ. ಪ್ರಾಂತಾಧಿಪರು ಪ್ರಾಂತದ ರಾಜಕಾರಣವನ್ನೂ, ಆಡಳಿತೆಯನ್ನೂ ನಡಿಸುವ ಮುಖ್ಯ ಯಜಮಾನರಿದ್ದದರಿಂದ ಅವರ ವಚನಗಳು ಪ್ರಾಪಂಚಿಕ ವ್ಯವಹಾರಕ್ಕೆ ತಕ್ಕದ್ದಾಗಿರಬೇಕು.

ಪ್ರಾಂತಾಧಿಪರು ಆಡಿದ ವಚನಗಳೆಲ್ಲ ಬರೇ ಕಲ್ಪನೆಯೊಳಗಿನವು. ಒಂದೊಂದಾಗ್ಗಿ ಅವನ್ನು ಕೇಳಿಕೊಳ್ಳಿ. ರಾಷ್ಟ್ರಗಳಲ್ಲಿ ಸೈನ್ಯ ಖರ್ಚು ವಿಪರೀತ ಬೆಳೆದದೆ, ಸೈನ್ಯಗಳನ್ನು ತಗ್ಗಿಸಿದರೆ ಆ ಹಣದಿಂದ ಲೋಕದಲ್ಲಿ ಸಮಾಜಹಿತಕಾರಕ ಯೋಜನೆಯನ್ನು ಕೈಕೊಳ್ಳಲು ಪ್ರಾವ್ಯಾನುಕೂಲವಾಗುವದು. ಶಸ್ತ್ರಸನ್ಯಾಸದ ಯೋಜನೆಗಳೆಲ್ಲ ಕೇವಲ ಮಹನ್ಮನ ವಿಲಾಸದ ಯೋಚನೆಗಳೆಂಬು ಎಲ್ಲರೂ ಅರಿತ ವಿಷಯ. ಎಲ್ಲ ಕಡೆಗಳಲ್ಲಿ ಶಸ್ತ್ರಸನ್ಯಾಸದ ಬಾಯ್ಬಡಿಕೆಯೇ ನಡಿದಿದೆ, ಹೊರತು, ಸೈನ್ಯ ಸಂಖೆಯನ್ನು ಇಳಿಸಲು ಯಾರೂ ಒಪ್ಪುವದಿಲ್ಲ. ಭೂತಲದೊಳಗಿನ ರಾಜಕಾರಣಧುರಂಧರರು ಸುಜ್ಞರಾಗಿ ಒಂಗೊಮ್ಮೆ ಸೈನ್ಯವನ್ನು ಇಳಿಸಿ, ಖರ್ಚು ತಗ್ಗಿಸಿದಾಗ್ಯೂ ಹಿಂದುಸ್ಥಾನದೊಳಗಿನ ಸೈನ್ಯವು ಆಚಂದ್ರಾರ್ಕ ಕಾಪಾಗಲ್ಪಡುವದೆಂದು ಭಾರತ ಮಂತ್ರಿಗಳಾದ ವಿಂಟರಟನ್ ದೊರೆಗಳು ಬೆಲ್‌ಫಾಸ್ಟಿನ ಕಾಲೇಜಿನಲ್ಲಿ ಭಾಷಣ ಮಾಡುವಾಗ ಸ್ಪಷ್ಟವಾಗಿ ಹೇಳಿ, ಆ ಕಾಲೇಜಿನ ವಿದ್ಯಾರ್ಥಿಗಳಿಗೆ ಸೈನ್ಯದಲ್ಲಿ ಸೇರಲು ಉಪದೇಶಿಸಿದ್ದಾರೆ. "ಹಿಂದುಸ್ಥಾನವು ವಿಶಾಲ ದೇಶವು, ಅಶಾಂತತೆಯ ಬೀಡು, ಅಲ್ಲಿ ಶಾಂತತೆ ಕಾಪಾಡಲು ಈಗಿನಷ್ಟೇ ಸೈನ್ಯ ಬೇಕು, ಭೂತಲದಲ್ಲಿ ಶಸ್ತ್ರಸನ್ಯಾಸವಾದರೂ, ಹಿಂದುಸ್ಥಾನದೊಳಗಿನ ಸೈನ್ಯವನ್ನು ತಗ್ಗಿಸಬರುವದಿಲ್ಲ" ಇಂಥ ಸ್ಥಿತಿಯಲ್ಲಿ ಸೈನ್ಯ ಖರ್ಚು ತಗ್ಗಿಸಿದ ಬಳಿಕ, ಹಿಂದುಸ್ಥಾನದ ಸಂಪದಭ್ಯುದಯವಾಗುವದೆಂಬ ಕಲ್ಪನಾಸೃಷ್ಟಿಯಲ್ಲಿ ನಲಿದಾಡುವದೇಕೆ?

ನಾಮದಾರ ಗವ್ಹರ್ನರರು ಪ್ರಕೃತ ಇತಿಹಾಸವನ್ನು ಕಲಿಯಲು ಬೋಧಿಸಿದರು. ರಶಿಯಾ ದೇಶದೊಳಗಿನ ರಾಜಕ್ರಾಂತಿ, ಚೀನ ದೇಶದೊಳಗಿನ ಸ್ವಾತಂತ್ರ್ಯ ಸಂಗ್ರಾಮ, ಇಜಿಪ್ತ ದೇಶದಲ್ಲಿ ನಡೆದ ಹೋರಾಟ ಮುಂತಾದ ವಿಷಯಗಳು ಈಗಿನ ಆಧುನಿಕ ಇತಿಹಾಸದಲ್ಲಿ ಸೇರುತ್ತವೆ. ಅವನ್ನು ಕಲಿಯಲು ಬಯಸಿದರೆ, ಗ್ರಂಥಗಳಲ್ಲಿ ಸಿಗುತ್ತವೆ? ಗ್ರಂಥಗಳನ್ನು ತರಿಸಹೋದರೆ, ಅವಕ್ಕೆ ನಮ್ಮ ದೇಶದಲ್ಲಿ ಪ್ರತಿಬಂಧ ಇಂಥ ಸ್ಥಿತಿಯಲ್ಲಿ ಆಧುನಿಕ ಇತಿಹಾಸವನ್ನು ಕಲಿಯಲು ಬೋಧಿಸಿ ಯಾರ ಕಣ್ಣಿಗೆ ಧೂಳಿ ಹಾಕಲು ಪ್ರಾಂತಾಧಿಪರು ಬಯಸುತ್ತಾರೆಂದು ನಾವರಿತಿರುವೆವು ಪರದೇಶದೊಳಗಿನ ವಾಚಕರಿಗೆ ವಿಲ್ಸನರ ಕಾರಕೀರ್ದಿಯಲ್ಲಿ ಆಧುನಿಕ ಇತಿಹಾಸದ ಅಭ್ಯಾಸಕ್ಕೆ ತಕ್ಕ ಸೌಕರ್ಯಗಳಿದ್ದು, ಅವನ್ನು ವಿದ್ಯಾರ್ಥಿಗಳು ದುರ್ಲಕ್ಷ ಮಾಡುತ್ತಾರೆಂಬರ್ಥದ ಗ್ರಹಿಕೆಯುಂಟಾಗಲು ಇದರಿಂದ ಆಸ್ಪದ ದೊರಕುತ್ತದೆ.

ಮೂರನೇ ಉಪದೇಶವನ್ನು ಕೇಳಿ ನಮಗೆ ತೀರ ವ್ಯಸನವಾಗುತ್ತದೆ ವಿಲ್ಸನ್ ದೊರೆಗಳು ಕಾಯಕಷ್ಟವನ್ನು ಕೊಂಡಾಡಿದರು ವಿದ್ಯಾರ್ಥಿಗಳು ನ್ಯಾವರಿಗು ದುಡಿಯಲು ಸಂಕೋಚದಿಂದ ಸಿದ್ಧರಾಗಬೇಕಾಗಿಯೂ, ಕಾರಕೂನ, ಅಧ್ಯಾಪಕ, ವಕೀಲರಾಗಬಯಸಬಾರದಾಗಿಯೂ ಉಪದೇಶಿಸಿದರು. ಕಾರಕೂನ-ಅಧ್ಯಾಪಕ_ವಕೀಲರ ಸಂಖೆಯು ಕೇವಳ ಬೆಳೆದಿರುತ್ತದಾಗಿಯೂ ಗವ್ಹರ್ನರರು ಒತ್ತಿಹೇಳಿದರು. ಈ ಉಪದೇಶದ ಬಗ್ಗೆ ಎಲ್ಲಿಯೂ ಮತಭೇದವಿಲ್ಲ ಮಹಾತ್ಮರಂಥ ಲೋಕನಾಯಕರು ಸಹ ಈ ಉಪದೇಶವನ್ನು ದೇಶಬಾಂಧವರಿಗೆ ಮಾಡುತ್ತಿದ್ದಾರೆ, ಕಾಯಕಷ್ಟದ ರುಚಿ ಹಚ್ಚುವದಕ್ಕಾಗಿ ಕೈರಾಟ, ಕೈಮಗ್ಗ, ಬುಗುರಿ ಮುಂತಾದ ಸಾಹಿತ್ಯಗಳನ್ನು ಮಹಾತ್ಮರು ಬೋಧಿಸಿ ಲೋಕಶಕ್ತಿಯನ್ನು ಸಂಗ್ರಹಿಸಲು ಮಾಡಿದ ಪ್ರಯತ್ನಗಳು ಸರ್ವಶ್ರುತವಿವೆ. ಹೀಗಿರಲು, ನಾಮದಾರ ಗವ್ಹರ್ನರರ ಬಾಯಿಂದ ಈ ಉಪದೇಶ ಕೇಳಿ ನಾವು ವ್ಯಸನಪಡುವದೇಕೆ?

ಕಾರಣವಿದೆ. ಈಗಿನ ಶಿಕ್ಷಣಕ್ರಮವು ಕಾಯಕಷ್ಟದರುಚಿಯನ್ನು ವಿದ್ಯಾರ್ಥಿಗಳಿಗೆ ಹಚ್ಚುವದಿಲ್ಲ, ಹಚ್ಚುವಂತೆ ಅದರ ಕಲ್ಪನೆಯಾಗಿರಲಿಲ್ಲ. ಈಗಿನ ಶಿಕ್ಷಣಕ್ರಮವು ಕಾರಕೂನರನ್ನು ತಯಾರಿಸುವದಕ್ಕಾಗಿ ಯೋಜಿಸಲ್ಪಟ್ಟಿರುತ್ತದೆಂದು ವಿಚಾರಶೀಲರನೇಕರು ಅಭಿಪ್ರಾಯಪಟ್ಟಿದ್ದಾರೆ ವಿಲ್ಸನ್‌ರ ಕಾರಕೀರ್ದಿಯಲ್ಲಿ ಅದೇನು ಸುಧಾರಣೆಯಾಗಲಿಲ್ಲ. "ಹೊಲಮನೆಗಳಲ್ಲಿ ದುಡಿಯಲು ನಾಚಬೇಡಿ, ನೀವು ಕಚ್ಚೆ ಉಟ್ಟುಕೊಂಡು ಕುದಾರಿ ಹಿಡಿದು ಹೊಲಗಳಲ್ಲಿ ದುಡಿದರೆ, ಬೇಸಾಯ ಕಮೀಶನು ಮಾಡಿದ ಶಿಫಾರಸುಗಳು ಸಾರ್ಥಕವಾಗುವವು; ಇಲ್ಲದಿದ್ದರೆ, ಅವೆಲ್ಲ ನಿರರ್ಥಕವಿವೆ. ದೇಶದ ಸಂಪದಭ್ಯುದಯವಾಗಲು ನೀವು ಹೀಗೆಯೇ ದುಡಿಯತಕ್ಕದ್ದು." ಮುತ್ತಿನಂಥ ವಚನಗಳಿವು. ಆಗ್ಗೆ ವಾದವಿಲ್ಲ. ಬಿ. ಏ., ಎಮ್. ಏ. ಮುಂತಾದ ವಾಙ್ಮಯ ವಿಶಾರದರ ಮಾತು ಅದಿಂತಿರಲಿ. ಬಿ. ಎಜಿ. ಮುಂತಾದ ಬೇಸಾಯ ಕಾಲೇಜಿನಲ್ಲಿ ಕಲಿತು ಬಂದ ಬೇಸಾಯ ಪದವೀಧರರು ಸಹ ಕೈಯಲ್ಲಿ ಕುದಾರಿ ಹಿಡಿಯಲು ಒಪ್ಪುವದಿಲ್ಲ, ಸ್ವತಃ ಕುದಾರಿ ಹಿಡಿದು ಬೇಸಾಯ ಕೈಕೊಳ್ಳಲೊಪ್ಪುವದಿಲ್ಲ.. ಪ್ರಯೋಗ ಹೊಲದಲ್ಲಿ ಕೂಲಿಯಾಳುಗಳಿಂದ ಕೆಲಸ ಮಾಡಿಸಿ ಸರಕಾರಿ ಸಂಬಳ ಪಡಿಯುತ್ತಾರೆ. ಸರಕಾರವಾದರೂ ಸ್ವಪರಾಕ್ರಮದಿಂದ ಪ್ರಪಂಚ ಸಾಗಿಸಲು ಇವರಿಗೆ ಕಲಿಸುವದಿಲ್ಲ. ಇಂಥ ಸ್ಥಿತಿಯಲ್ಲಿ ಕಾಯಕಷ್ಟದ ಪುರಾಣವನ್ನು ಗವ್ಹರ್ನರರು ಹೇಳಿದರೆ ಶೋಭಿಸುತ್ತದೆಯೋ? ಬೇಸಾಯದ ಪದವಿಗಳಲ್ಲಿ ಬೇಸಾಯಪ್ರವೃತ್ತಿಯನ್ನು ಹುಟ್ಟಿಸುವಷ್ಟು ಜವಾಳವಿಲ್ಲದಾಗ ವಾಙ್ಮಯವಿಶಾರದರ ಸಮಾವರ್ತನ ಕಾಲಕ್ಕೆ ಈ ಪ್ರಕಾರ ಉಪದೇಶ ಮಾಡುವದು ಪ್ರಶಸ್ತವೆಂದು ನಮಗೇನು ತೋರುವದಿಲ್ಲ. ಏನಾದರೊಂದು ಭಾಷಣ ಮಾಡಬೇಕೆಂಬ ಇಚ್ಛೆಯಿಂದ ಈ ಭಾಷಣವಾದದ್ದಿದ್ದರೆ, ಅದಕ್ಕೆ ನಮ್ಮ ಆಕ್ಷೇಪವಿಲ್ಲ. ಭಾಷಣವು ಸುಸಂಗತವಿದೆ, ಚಿತ್ತವೇಧಕ ವಿಚಾರಗಳಿಂದ ತುಂಬಿತುಳುಕಿದೆ; ಸುಂದರ ಕಲ್ಪನೆಗಳಿದ್ದಾವೆ. ಕಲ್ಪನೆಗಳಿಗೂ, ಪ್ರಚಲಿತ ಸ್ಥಿತಿಗೂ ಸಂಬಂಧವಿಲ್ಲ; ಇಷ್ಟೇ ನಾವು ಹೇಳುವದು. ಪ್ರಾಂತಾಧಿಪರಂಥ ರಾಜಕಾರಣಿಗಳು ಕಲ್ಪನಾತರಂಗಗಳನ್ನು ಪ್ರಪಂಚದಲ್ಲಿ ಸೇರಬಯಸುವ ವಿದ್ಯಾರ್ಥಿಗೆ ಬೋಧಿಸಲಾಗದು, ಬೋಧಿಸುವದು ಭೂಷಣವಲ್ಲ. ಈ ಭಾಷಣದೊಳಗಿನ ಸುವಿಚಾರಗಳನ್ನು ಆಚಾರದಲ್ಲಿ ತರಲು ಪ್ರಾಂತಾಧಿಪರು ಯೋಚಿಸದೆ, ಬರೇ ವಾಕ್ಪಾಂಡಿತ್ಯವನ್ನು ಪ್ರದರ್ಶಿಸಿದರೆ, ತಮ್ಮ ಕೆಲಸವಾಯಿತೆಂದು ಪ್ರಾಂತಾಧಿಪರ ಗ್ರಹಿಕೆಯಿದ್ದರೆ, ಅದು ತೀರ ತಪ್ಪೆಂದು ನಾವು ನಮೂದಿಸುವೆವು. ಭಾಷಣಗಳೊಳಗಿನ ವಿಚಾರ ಮುಂದಿರಿಕ್ಕೆ ಬೆಲೆಕೊಡಲು ವಿಲ್ಸನ್ ದೊರೆಗಳು ಕವಿಗಳಲ್ಲ. ಕವಿ ನಾತೆಯಿಂದ ಅವರ ಭಾಷಣವಾಗುವದಿಲ್ಲ. ಕವಿ ಕಲ್ಪನೆಗಳನ್ನು ಅವಸ್ಥರಮುಟ್ಟಿಗೆ ನಿಯಂತ್ರಿಸಿ ಕರ್ಮ ಸೃಷ್ಟಿಯಲ್ಲಿ ಕರ್ಮಾಂಗಣಗಳನ್ನು ಅಚರಿಸ ಹೊರಟ ವಿದ್ಯಾರ್ಥಿಗಳಿಗೆ ವಿಲ್ಸನ್ ದೊರೆಗಳು ಬರೇ ಕವಿ ಕಲ್ಪನೆಗಳನ್ನು ಬೋಧಿಸಿದ್ದನ್ನು ನೋಡಿ ಜನರಿಗೆ ವ್ಯಸನವಾಗಿರುತ್ತದೆ.

ಸ್ಫುಟ ಸೂಚನೆಗಳು.

೧. ಎಷ್ಟು ಬಚ್ಚಿಟ್ಟರೂ ಪಾಪವನ್ನು ಬಚ್ಚಿಡ ಬರುವದಿಲ್ಲ; ಅದು ಹೊರ ಬಂದೇ ಬರುತ್ತದೆ. ಬ್ರಿಟಿಶ ರಾಜ್ಯಭಾರದಲ್ಲಿ ನೀತಿಭ್ರಷ್ಟ ಲಂಚದ ವ್ಯಾಪಾರಗಳು ನಡೆಯುತ್ತವೆಂಬ ಮಾತು ಎಲ್ಲರಿಗೂ ಗೊತ್ತಿದ್ದಾಗ್ಯೂ, ಹಾಗೆ ಹೇಳಿದರೆ ಮಾನನಷ್ಟವೋ, ರಾಜದ್ರೋಹವೋ, ಏನೇನೋ ಆಗುತ್ತದೆ. ಅಕ್ಕಸಾಲಿಗನು ಕಿವಿ ಚುಚ್ಚಿದರೆ ಮಾತ್ರ ನೋವಾಗುವದಿಲ್ಲ! ಮುಲಾ ಪಟ್ಟಣದಲ್ಲಿ ಲೆಖ್ಖದ ಚೌಕಶಿ ನಡೆದಿದೆ. ಆ ಕಾಲಕ್ಕೆ ಕಾರಭಾರದ ನೀತಿಗೇಡಿನ ಕೃತ್ಯದ ಬಗ್ಗೆ ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳ ಅಭಿಪ್ರಾಯಗಳು ಕೇಳಲ್ಪಟ್ಟವು. ಪಂಜಾಬ-ಸಿಂಧ ಖಾತೆಯ ಅಧಿಪತಿಗಳಾದ ಡಾಯರೆಕ್ಟರ ಜನರಲ್‌ರವರು ಲಂಚದ ವ್ಯಾಪಾರಗಳನ್ನು ಕೆಳ ನೌಕರರ ತಲೆಗೆ ಕಟ್ಟಿ ಸಂಬಳ ಕಡಿಮೆಯಾದ್ದರಿಂದ ಇಂಥ ಅಕ್ರಮಗಳು ನಡೆಯುತ್ತವೆಂದು ಅಭಿಪ್ರಾಯ ಪಟ್ಟರು. ಆಡಿಟರ ಜನರಲ್, ಅಂದರೆ, ಅಖಿಲ ಹಿಂದುಸ್ಥಾನದ ಸಮಸ್ತ ಖಾತೆಗಳ ಲೆಖ್ಖವನ್ನು ಪರಿಶೋಧಿಸುವ ಅಧಿಕಾರಿಗಳಾದ ಸರ್ ಫ್ರೆಡರಿಕ್ ಗೌಂಟ್ಲೆಟ್‌ರವರು ನುಡಿದದ್ದೇನೆಂದರೆ.—"ಅಪ್ರಾಮಾಣಿಕತನವು ವರಿಷ್ಠ ದರ್ಜೆಯ ನೌಕರರಲ್ಲಿಯೂ ಹಬ್ಬಿಕೊಳ್ಳುತ್ತಿದೆ. ಸಂಬಳದ ದರವನ್ನು ಏರಿಸಬಯಸಿದ್ದಲ್ಲಿ ಅದನ್ನು ಬಹಳ ಬಹಳ ಏರಿಸಬೇಕಾಗುವದು." ಇದನ್ನು ಕೇಳಿ, ನಮಗಂತು ಏನೂ ತೋಚದು. ಇಡೀ ರಾಜ್ಯಪದ್ಧತಿಯು ನೀತಿಭ್ರಷ್ಟವಾಗಿರುವದೆಂಬ ಮಾತು ಸ್ಪಷ್ಟವಾಗುತ್ತದೆ. ನಿಯಮಿತ ಸಂಬಳಕೊಂಡು ಸರಕಾರಿ ಕೆಲಸ ಮಾಡಲು ಯಾರೂ ಒಪ್ಪುವದಿಲ್ಲ. ಎಲ್ಲರಿಗೂ ಲಂಚ ಬೇಕು. ಕಂಪನಿ ಸರಕಾರವು ನಷ್ಟವಾಗಿ ಸಾರ್ವಭೌಮ ಸರಕಾರವು ಅಧಿಷ್ಠಿತವಾದಾಗ್ಯೂ ರಾಜ್ಯಯಂತ್ರದ ಮೂಲ ಸ್ವಭಾವದಲ್ಲಿ ತಿದ್ದುಪಡಿಯಾಗಲಿಲ್ಲ. ಚಿಕ್ಕವರಾಗಲಿ, ದೊಡ್ಡವರಾಗಲಿ ಲಂಚ ತಿನ್ನದಿದ್ದರೆ, ಯಾವ ನೌಕರರಿಗೂ ಸಮಸಂತೋಷವಾಗುವದಿಲ್ಲ. ಹೀಗೆ ಏರೇರಿಸಿಕೊಂಡ ಸಂಬಳ, ಲಂಚದ ಗಿಂಬಳ ಇವನ್ನು ತೆರುತ್ತ ಹೋದರೆ, ದೇಶದೊಳಗಿನ ಪ್ರಜೆಗಳು ಬಾಳ್ವೆ ಮಾಡಿಕೊಂಡು ಉಳಿಯುವ ಬಗೆ ಹೇಗೆ? ಸಾಮ್ರಾಜ್ಯ ಸರಕಾರವೂ, ಹಿಂದುಸ್ಥಾನ ಸರಕಾರವೂ, ಪ್ರಾಂತಿಕ ಸರಕಾರಗಳೂ ಈ ವಿಷಯವನ್ನು ಚನ್ನಾಗಿ ಪರಾಂಬರಿಸತಕ್ಕದ್ದು. ಲಂಚ ತಿನ್ನುವಷ್ಟು ರಕಮನ್ನು ಸಂಬಳವಾಗಿ ಏರಿಸಹೋದರೆ, ಇಡೀ ಹಿಂದುಸ್ಥಾನವನ್ನೇ ಮಾರಿದರೂ ಸಂಬಳದ ಪೂರೈಕೆಯಾಗಲಿಕ್ಕಿಲ್ಲ. ಸರ್ ಫ್ರೆಡರಿಕ್ ಗೌಂಟ್ಲೆಟ್‌ರವರು ನುಡಿದಂತೆ ಮೇರೆದಪ್ಪಿ ಸಂಬಳವನ್ನೇರಿಸಬೇಕಾಗುವದು; ಹಾಗೆ ಏರಿಸಿದರೂ, ಲಂಚ ತಿನ್ನುವದಿಲ್ಲೆಂದು ಹೇಳಬರದು. ಯಾರಾದರೂ ಆಶಾವಧಿಯನ್ನು ಕಂಡವರುಂಟೇ?

---

೨. ಚದರಿಬಿದ್ದ ಕರ್ನಾಟಕವನ್ನು ಏಕೀಕರಣ ಮಾಡುವದಕ್ಕಾಗಿ ಕರ್ನಾಟಕಸ್ಥರು ನಡಿಸಿದ ಪ್ರಯತ್ನಕ್ಕೆ ಯಶಸ್ಸು ಪ್ರಾಪ್ತಿಯಾಗುತ್ತದೆಂದು ತಿಳಿಸಲು ಸಂತೋಷವಾಗುತ್ತದೆ. ಸಮಸ್ತ ರಾಜಕೀಯ ಪಕ್ಷಗಳ ಪರಿಷತ್ತಿನ ಅನುಜ್ಞೆಯಂತೆ ತಯಾರಿಸಿದ ಪಂಡಿತ ಮೋತಿಲಾಲ ನೆಹರೂರವರ ಸ್ವರಾಜ್ಯ ಯೋಜನೆಯಲ್ಲಿ ಕರ್ನಾಟಕ ಪ್ರಾಂತದ ಏಕೀಕರಣದ ಶಿಫಾರಸು ಆಗಿದೆ. ನೆಹರೂ ಮಂಡಳವು ಭಾಷಾವಾರಿಯಂತೆ ಪ್ರಾಂತವನ್ನು ಘಟಿಸಬೇಕೆಂಬ ಸಾಮಾನ್ಯ ಸಿದ್ಧಾಂತವನ್ನು ಸಮರ್ಥಿಸಿ, ಕರ್ನಾಟಕದ ವಿಚಾರ ಮಾಡಿದೆ; ಶ್ರೀ| ದಿವಾಕರ ರಂಗನಾಥರಾಯ ಪ್ರಭೃತಿ ಕರ್ನಾಟಕಸ್ಥ ಮುಂದಾಳುಗಳು ಏಕೀಕರಣದ ಯೋಜನೆಯನ್ನು ಸಾಂಗೋಪಾಂಗವಾಗಿ ತಮ್ಮ ಮಂಡಳಕ್ಕೆ ತಿಳಿಸಿಕೊಟ್ಟಿರುವದಾಗಿಯೂ ನಮೂದಿಸಿದೆ. ಮೈಸೂರು ಸಂಸ್ಥಾನದ ಕಡೆ ಸೇರಿದ ಕರ್ನಾಟಕದ ಭಾಗಗಳನ್ನು ಕರ್ನಾಟಕದಲ್ಲಿ ಸೇರಿಸುವದು ಕಠಿಣವಿದೆ; ಆದರೆ, ಮುಂಬಯಿ-ಮದ್ರಾಸ ಪ್ರಾಂತಗಳಲ್ಲಿ ಹಂಚಿ ಬಿದ್ದ ಕರ್ನಾಟಕದ ಭಾಗಗಳನ್ನು ಒಂದೆಡೆ ಘಟಿಸಲು ಪ್ರತ್ಯವಾಯವಿಲ್ಲವಾಗಿಯೂ ನೆಹರೂ ಮಂಡಳದ ಯೋಜನೆಯಿದೆ. ಕರ್ನಾಟಕದೊಳಗಿಂದ ವಸೂಲಾಗುವ ತೆರಿಗೆ, ಪ್ರಾಂತರಚನೆಗಾಗಿ ತಗಲುವ ಖರ್ಚು ಇವುಗಳ ವಿಚಾರ ಮಾಡಿದರೂ ಪ್ರಾಂತಿಕ ರಚನೆಗೆ ತಕ್ಕಷ್ಟು ತೆರಿಗೆ ವಸೂಲಾಗುತ್ತದೆಂದು ನೆಹರೂ ಮಂಡಳದ ಅಭಿಪ್ರಾಯವಾಗಿದೆ. ಕರ್ನಾಟಕ ಏಕೀಕರಣ ಪ್ರಯತ್ನಕ್ಕೆ ಇದೊಂದು ದೊಡ್ಡ ಬೆಂಬಲವೆಂದು ನಾವು ಗ್ರಹಿಸುತ್ತೇವೆ. ಜಾತಿ ಮತಭೇದಗಳನ್ನೆಲ್ಲ ಒತ್ತಟ್ಟಿಗಿಟ್ಟು ಕರ್ನಾಟಕಸ್ಥರು ಆಸ್ಥೆಯಿಂದ ದುಡಿದದ್ದರಿಂದ ಏಕೀಕರಣಕ್ಕೆ ನೆಹರೂ ಮಂಡಳದ ಆಶೀರ್ವಾದ ದೊರಕಿದೆ. ನೆಹರೂ ಮಂಡಳವು ಹೊಸೂರ, ಕೃಷ್ಣಗಿರಿ, ಕೊಳ್ಳೆಗಾಲ, ಮಡಕಶಿರ ತಾಲೂಕುಗಳನ್ನೂ, ನೀಲಗಿರಿ ಜಿಲ್ಲೆಯನ್ನೂ ಕರ್ನಾಟಕದಲ್ಲಿ ಸೇರಿಸಲು ಸೂಚಿಸಲಿಲ್ಲ; ಇವು ಮುಖ್ಯವಾಗಿ ಕನ್ನಡಿಗರ ಪ್ರದೇಶಗಳಾಗಿರುತ್ತವೆ. ಮಂಗಳವೇಢೆ ಶ್ರೀನಿವಾಸರಾಯರು ನೀಲಗಿರಿ ಜಿಲ್ಲೆಯ ಕುರಿತು ವಿಶೇಷ ಶೋಧ ನಡಿಸಿ ಅದರ ಕರ್ನಾಟಕತ್ವವನ್ನು ಪ್ರತಿಪಾದಿಸಿದ್ದಾರೆ. ಹುಬ್ಬಳ್ಳಿಯ ನಾಗರಿಕರು ಸಭೆಸೇರಿ ಈ ಪ್ರದೇಶಗಳನ್ನು ಭಾವೀ ಕರ್ನಾಟಕ ಪ್ರಾಂತದಲ್ಲಿ ಸೇರಿಸುವಂತೆ ಶಿಫಾರಸು ಮಾಡಬೇಕಾಗಿ ಲಖನೌದಲ್ಲಿ ಸೇರಲಿಕ್ಕಿದ್ದ ಸಮಸ್ತ ಪಕ್ಷಗಳ ಪರಿಷತ್ತಿಗೆ ಶಿಫಾರಸು ಮಾಡಿದ್ದಾರೆ. ಸರ್ವಪಕ್ಷೀಯ ಪರಿಷತ್ತು ಸಾಧಕ-ಬಾಧಕ ವಿಚಾರ ಮಾಡಿ ತಕ್ಕ ನಿರ್ಣಯವನ್ನು ಕೈಕೊಳ್ಳುವದೆಂದು ನಾವು ನೆರೆ ನಂಬಿದ್ದೇವೆ.

---

೩. ನೆಹರೂ ಮಂಡಳದ ಸ್ವರಾಜ್ಯ ಯೋಜನೆಯ ಮೇಲೆ ಟೀಕಾಮತವು ಪ್ರಕಟಹೊಂದುತ್ತಿದೆ. ಮಹಾತ್ಮರ ಮತವನ್ನು ನಾವು ಈ ಹಿಂದೆಯೇ ಹೇಳಿದ್ದೇವೆ. ಸಕಲ ಪಕ್ಷಗಳ ಪ್ರತಿನಿಧಿಗಳು ಐಕ್ಯಮತ್ಯದಿಂದ ಮಾಡಿದ ಯೋಜನೆಯಲ್ಲಿ ಪಕ್ಷವಿಚಾರದಿಂದ ಕುಂದು ಕೊರತೆಗಳಿರಬಹುದು; ಹಾಗೆ ಕುಂದು ಕೊರತೆಗಳಿರುವದು ಅಪರಿಹಾರ್ಯವಿದೆ. ಸಮಸ್ತ ಪಕ್ಷಗಳ ವಿಚಾರದಿಂದ ಈ ಯೋಜನೆಯಾದ್ದರಿಂದ ಇದನ್ನು ಇದ್ದಕ್ಕಿದ್ದ ಹಾಗೆ ಮನ್ನಿಸಬೇಕಾಗಿ ಮಹಾತ್ಮರು ಅಭಿಪ್ರಾಯಪಟ್ಟಿದ್ದಾರೆ. ನಮ್ಮ ಶ್ರೀ ಗೋಕರ್ಣ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮೀ ಶ್ರೀ ಭಾರತೀಕೃಷ್ಣತೀರ್ಥರವರು ಲಾಹೋರದಲ್ಲಿದ್ದಾರೆ. ಅವರು ಈ ಯೋಜನೆಯ ಮೇಲೆ ಮೂಲಭೂತವಾದ ಒಂದು ಆಕ್ಷೇಪವನ್ನು ನಮೂದಿಸಿದ್ದಾರೆ. ಇಂಗ್ಲಂಡದ ಅರಸರಿಂದ ನೇಮಿಸಲ್ಪಡುವ ಸರ್ವಾಧಿಪತಿಗಳಿಗೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಿಸುವ ಸ್ವತಂತ್ರ ಅಧಿಕಾರ ಕೊಟ್ಟಿದ್ದೂ ಕಾಯಿದೆ ಕೌನ್ಸಿಲು ಮನ್ನಿಸಿದ ಶಿಫಾರಸುಗಳನ್ನು ಅಲ್ಲಗಳೆಯುವ ಅಧಿಕಾರ ಕೊಟ್ಟಿದ್ದೂ ಜಗದ್ಗುರುಗಳಿಗೆ ಇಷ್ಟ ತೋರುವದಿಲ್ಲ. ಈ ಅಧಿಕಾರಗಳನ್ನು ಸರ್ವಾಧಿಪರೂ, ಪ್ರಾಂತಾಧಿಪರೂ ನಿರಂಕುಶರಾಗಿ ಪ್ರಯೋಗಿಸಿ ಪ್ರಜೆಗಳಿಗೆ ನಷ್ಟಪಡಿಸುತ್ತಿದ್ದದ್ದನ್ನು ನಾವು ಕಣ್ಣಾರೆ ಕಾಣುತ್ತೇವೆ. ಇಂಥ ಸ್ಥಿತಿಯಲ್ಲಿ ಹೊಸ ಯೋಜನೆಯನ್ನು ತಯಾರಿಸುವಾಗ ಆ ಅನುಭವವನ್ನು ಕಟ್ಟಿಟ್ಟರೆ ಹ್ಯಾಗೆ ಕ್ಷೇಮವಾದೀತು? ಮುಸಲ್ಮಾನರಿಗೆ ಮುಸಲ್ಮಾನರೆಂದು ಪ್ರತಿನಿಧಿಗಳನ್ನು ಕಾದಿಡುವ ಯೋಜನೆಯು ರಾಷ್ಟ್ರದಲ್ಲಿ ಜಾತಿಮತ್ಸರ ಬೆಳೆಸಲು ಕಾರಣವೆಂದು ಶ್ರೀ ಸ್ವಾಮಿ ಭಾರತೀಕೃಷ್ಣತೀರ್ಥರ ಅಭಿಪ್ರಾಯ. ಜಾತಿಭೇದಕ್ಕೆ ರಾಜ್ಯಕಾರಭಾರದಲ್ಲಿ ಎಳ್ಳುಕಾಳಿನಷ್ಟು ಆಸ್ಪದವಿರಬಾರದೆಂದು ಜಗದ್ಗುರುಗಳ ಅನುಜ್ಞೆ. ಒಟ್ಟಿಗೆ ಈ ಯೋಜನೆಯಿಂದ ಸೈಮನ್ ಕೋಟಕ್ಕೆ ಬ್ರಿಟಿಶರ ನಿರಂಕುಶ ಕಾರಭಾರವನ್ನು ಮುಂದರಿಸುವಂಥ ರಾಜ್ಯಕಾರಭಾರದ ಶಿಫಾರಸುಗಳನ್ನು ಸೂಚಿಸಲು ತುಂಬಾ ಇಂಬು ಸಿಗುವದೆಂದು ಜಗದ್ಗುರುಗಳು ಅಪ್ಪಣೆ ಕೊಡಿಸಿದ್ದಾರೆ.

---

೪. ನಮ್ಮ ಡಿ| ಜಡ್ಜರಾದ ರಾ| ಓಕರವರ ಚೇಷ್ಟೆಗಳು ಮೇರೆದಪ್ಪಿದವೆಂದು ಈಗ ಹೇಳಲಡ್ಡಿಯಿಲ್ಲ. ಕಾರವಾರದೊಳಗಿನ ವಕೀಲರ ಸಂಘದವರು ಕಳೆದ ಸೋಮವಾರಕ್ಕೆ ಸಭೆಸೇರಿ ರಾ| ಓಕರ ನಡಾವಳಿಯನ್ನು ನಿಷೇಧಿಸಿದರು. ಈ ನಿಷೇಧವು ವಿಚಾರಾರ್ಹವಿದೆ. ಸರಕಾರಿ ವಕೀಲರಾದ ಮಿ| ಕಾಟಿನೋರವರಂಥ ವಿಚಾರಶೀಲರೂ, ಸಮಸ್ತ ವಿಚಾರವಂತರೂ ಈ ಸಂಘದ ತಕ್ಷಣದ ನಿಷೇಧಪ್ರದರ್ಶನಕ್ಕೆ ತಯಾರಾದ ಬಳಿಕ, ರಾ| ಓಕರವರ ವರ್ತನವು ತೀರ ಅನುಚಿತವಾಗಿರುವದೆಂದು ನಾವು ನಿಶ್ಶಂಕೆಯವಾಗಿ ಹೇಳಬಹುದು. ವಕೀಲರ ಸಂಘವು ವಕೀಲರಿಗೆ ನಡಿಸಿಕೊಳ್ಳುವ ಪ್ರಕಾರವನ್ನಷ್ಟೇ ನಿಷೇಧವನ್ನು ನಮೂದಿಸಿದೆ. ಕೆಳ ನೌಕರರಿಗೆ ಸಹ ರಾ| ಓಕರವರು ಸಭ್ಯತನದಿಂದ ನಡಿಸಿಕೊಳ್ಳುವದಿಲ್ಲವಾಗಿ ಊರ ಸುದ್ದಿಯಿದೆ. ಕೆಲ ಜನರು ರಾ| ಓಕರವರನ್ನು ವರ್ಗಾಯಿಸಬೇಕಾಗಿ ಹ್ಯಾಕೋರ್ಟಿಗೂ, ಗವ್ಹರ್ನರರಿಗೂ, ಸರ್ವಾಧಿಪರಿಗೂ ಅರ್ಜಿ ಮಾಡಿಕೊಂಡಿರುತ್ತಾರಾಗಿ ತಿಳಿಯುತ್ತದೆ. ರಾ| ಓಕರವರು ಅಧಿಕಾರಾರೂಢರಾದ ೩-೪ ತಿಂಗಳುಗಳಲ್ಲಿ ಇಷ್ಟು ದೊಡ್ಡ ಕ್ರಾಂತಿಯಾಯಿತು. ಇದರ ಮೇಲಿಂದ ರಾ| ಓಕರವರು ಡಿ| ಜಡ್ಜರಾಗಿ ನಡಿಸಿದ ಅನುಚಿತ ಕೃತ್ಯಗಳ ಸ್ವರೂಪವು ತಿಳಿಯಬಹುದು. ಕೆಲವರು ಸೂಚಿಸಿದಂತೆ, ಇನ್ನು ರಾ| ಓಕರವರಿಗೆ ನಮ್ಮ ಜಿಲ್ಲೆಯಲ್ಲಿ ಡಿ| ಜಡ್ಜರಾಗಿ ಇಡಲಾಗದು. ವಕೀಲರಿಗೆ ಆದರವಿಲ್ಲವಿದ್ದ ಡಿ| ಜಡ್ಜರು ನ್ಯಾಯದಾನ ಮಾಡಿದರೂ, ಜನಸಾಮಾನ್ಯರಲ್ಲಿ ವಿಶ್ವಾಸ ಹುಟ್ಟುವದಿಲ್ಲ. ಅದರಿಂದ ಇವರಿಗೆ ಬೇಗನೇ ಗಟ್ಟದ ವರ್ಗಾಯಿಸುವದು ಉತ್ತಮ ಪಕ್ಷವು. ಈ ಅಧಿಕಾರಕ್ಕೆ ಇವರು ಯೋಗ್ಯರೋ ಹೇಗೆ? ಎಂಬದನ್ನು ಸರಕಾರವು ಭೂತವರ್ತಮಾನ ಕಾಲಗಳಲ್ಲಿ ನಡೆದ ಪ್ರಕಾರಗಳ ಮೇಲಿಂದ ವಿಚಾರಿಸಿ ರಾ| ಓಕರವರ ಸ್ವಭಾವಕ್ಕನುಗುಣವಾದ ಅಧಿಕಾರವನ್ನು ಕೊಡತಕ್ಕದಾಗಿ ನಮ್ಮದೊಂದು ಸೂಚನೆ.

ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನವು ಸಪ್ಟಂಬರ ೩ನೇ ತಾರೀಖಿಗೆ ಪುಣೆಯಲ್ಲಿ ಸೇರುವದು

ಸ್ಥಾನಿಕ ವೃತ್ತಾಂತ.

ಕುಮಟಾ— ಮಘಾ ಮಳೆ ಬಹಳ ಸುರಿಯುತ್ತಿದೆ. ಒಂದೆರಡು ದಿನ ಬಿಸಿಲು ತೋರಿಯಾಯಿತು ಆದರೆ, ಮಳೆಯ ಅಬ್ಬರವೇನು ಕಡಿಮೆಯಾಗಲಿಲ್ಲ. ಈ ವಾರದಲ್ಲಿ ೧೧ ೫೯ ಇಂಚು ಮಳೆ; ಈ ತನಕ ೧೩೪—೧೭ ಇಂಚು ಮಳೆಯಾಯಿತು.

ಪೋಲೀಸರು ದನಗಳನ್ನು ದೊಡ್ಡಿಗೆ ಹಾಕುವ ಕ್ರಮದಲ್ಲಿ ತೊಡಗಿದ್ದಾರೆ. ಜನರು ಜಾಗ್ರತೆಯಿಂದಿರಬೇಕು ಪೋಲೀಸರು ಸಮಾಧಾನ ಮಾಡಬೇಕು.

ಹೆರವಟ್ಟೆಯ ರಾ| ನಾರಾಯಣ ಸಾಂತಯ್ಯ ಪ್ರಭುರ ಮಗಂದಿರರಾದ ರಾ| ರಾಯಪ್ಪನವರು ಸಾಂಗಲಿಯಲ್ಲಿ ಕೃಷ್ಣಾ ನದಿಯ ಸ್ನಾನಕ್ಕೆ ಹೋದಾಗ ಪ್ರವಾಹದ ಸೆಳತಕ್ಕೆ ಸಿಕ್ಕಿ ವಿಧಿವಶರಾದ ದುಃಖಕಾರಕ ಸುದ್ದಿ ಬಂದಿದೆ. ರಾಯಪ್ಪನವರು ಚಿಕ್ಕಂದಿನಲ್ಲಿಯೇ ತಂದೆಯ ಸಂಗಡ ಗೋಮಾಂತಕಕ್ಕೆ ಹೋಗಿದ್ದರು. ಅಲ್ಲಿ "ರಂಗಬೋಧೇಚ್ಛು ನಾಟಕ ಮಂಡಳಿಯ ಪ್ರವರ್ತಕರಾದ ರಾ| ರಘುವೀರ ನಾರಾಯಣ ಸಾವಕಾರ ಇವರ ದೃಷ್ಟಿಗೆ ಬಿದ್ದರ ರಾಯಪ್ಪನವರ ವಾಕ್ಚಟುತ್ವವನ್ನೂ, ಸುಂದರ ಮೂರ್ತಿಯನ್ನೂ ಕಂಡು, ರಾ| ರಘುವೀರ ನಾರಾಯಣ ಸಾವಕಾರರು ಅವರಿಗೆ ತಮ್ಮ ಕಂಪನಿಯಲ್ಲಿ ಸೇರಿಸಿಕೊಂಡು ನಾಟ್ಯಕಲೆಗೆ ತಕ್ಕ ಶಿಕ್ಷಣ ಕೊಟ್ಟರು ರಾಯಪ್ಪನು "ಅರ್ ಬಾಪು" ಎಂದು ಸಂಬೋಧಿಸಲ್ಪಡುತ್ತಿದ್ದನು. ರಂಗಬೋಧೇಚ್ಛು ಕಂಪನಿಯಲ್ಲಿ ಇವರು ಸ್ತ್ರೀ ಪಾರ್ಟ ಮಾಡುತ್ತಿದ್ದರು. ಇವರ ಮಾತುಗಳೂ, ಅಭಿನಯಗಳೂ ಮೂಲ ಮಹಾರಾಷ್ಟ್ರೀಯರಿಗೆ ಸರಿಗಟ್ಟುತ್ತಿದ್ದವು. ಮುಂದೆ ಇವರು ಶ್ರೇಷ್ಠ ತರಗತಿಯ ನಟರಾಗುತ್ತಿದ್ದರೆಂದು ಇವರ ಭೂಮಿಕೆಯನ್ನು ನೋಡಿದವರು ಅಭಿಪ್ರಾಯಪಟ್ಟು, ನಿಧನವಾರ್ತೆ ಕೇಳಿ ವ್ಯಸನಪಡುತ್ತಾರೆ

ದಕ್ಷಿಣ ಕನ್ನಡ ಜಿಲ್ಲೆಯ ಬಾಲ ಹರಿದಾಸನಾದ ೧೨-೧೩ ವರ್ಷದ ಹುಡುಗನು ಇಲ್ಲಿ ೨—೩ ಕೀರ್ತನೆಗಳನ್ನು ಮಾಡಿದನು.

ಹೊನ್ನಾವರ— ನಮ್ಮ ಪೋಲೀಸರಿಗೊಂದು ಉದ್ಯೋಗ ಸಿಕ್ಕಿದೆ. ೬—೭ ದಿನಗಳ ಹಿಂದೆ ಆಫೀಸರರೊಬ್ಬರು ಕಚೇರಿಗೆ ಹೋಗುತ್ತಿದ್ದರಂತೆ. ದನಕ್ಕೇನು ಗೊತ್ತು! ಒಂದು ದನ ಇವರ ಬೆನ್ನು ಹಿಂಬಾಲಿಸಿಯೋ, ಮೈಮೇಲೆಯೋ ಓಡಿ ಬಂತಂತೆ! ಆದರಿಂದ ಪೋಲೀಸರು ೪-೫ ದಿನಗಳಿಂದ ಮಾರ್ಗದ ಮೇಲೆ ಸಿಕ್ಕಿದ ದನಗಳನ್ನು ದೊಡ್ಡಿಗೆ ಒಯ್ದು ಹಾಕಹತ್ತಿದ್ದಾರೆ. ಗೋಳಿಯಿಂದ ಮನೆಗೆ ಬರುವ ದನಗಳಿಗೂ ದೊಡ್ಡಿಯ ವಾಸವು ಪ್ರಾಪ್ತವಾಗುತ್ತದೆ. ಇದೊಂದು ದೊಡ್ಡ ಉಪದ್ರವವಾಗಿದೆ. ಪೋಲೀಸರು ಸಾಧಾರಣ ಬುದ್ಧಿಯನ್ನು ಕಳೆದು ಜನರಿಗೆ ಕಾಯಬೇಕು. ದೊಡ್ಡಿಯಲ್ಲಿ ದನಗಳನ್ನು ಹಾಕಿಹಾಕಿದಾಗ ದೊಡ್ಡಿ ಫೀಯನ್ನು ತೆರುತ್ತ ಹೋದರೆ, ದನಗಳನ್ನು ಮಾರಿದರೂ ಮತ್ತೆ ಬಾಕಿಯಾಗುವದು.

ಕಾಸರಕೋಡದಲ್ಲಿ ಭಜನೆ ಸಪ್ತಾಹ' ಮಂಡಳಿಯವರು ಶ್ರೀ ಗೋಪಾಲಕೃಷ್ಣ ದೇವರಲ್ಲಿ ಬರುವ ಶ್ರಾವಣ ಕೃ| ೧೧ ದೆ ಪ್ರಾರಂಭಿಸಿ ೮ ಮಿ ವರೆಗೆ ಭಜನೆ ಸಪ್ತಾಹ ಮಹೋತ್ಸವವನ್ನು ಪ್ರಾರಂಭಿಸುವ ಸಂಕಲ್ಪ ಮಾಡಿದ್ದಾರೆ. ಎಲ್ಲರೂ ಈ ಕಾರ್ಯದಲ್ಲಿ ಸೇರಿ ಭಗವದನುಗ್ರಹವನ್ನು ಸಂಪಾದಿಸಬೇಕು.

ಶಿರ್ಸಿ— ಪ್ಲೇಗಿನ ಗಡಬಡಿ ದಿನೇ ದಿನೇ ಹೆಚ್ಚಾಗುತ್ತ ನಡೆದಿರುವದು ಮರಣಪಟ್ಟವರ ಸಂಖ್ಯೆಯು ಈವರೆಗೆ ೫೦ಕ್ಕೆ ಮುಟ್ಟಿರಬಹುದು. ಇನಾಕ್ಯುಲೇಶನದ ಕೆಲಸ ಜೋರಿನಿಂದ ನಡೆದಿದೆ. ಆದರೆ, ಮುನಿಸಿಪಾಲಿಟೆಯವರು ಶಹರದ ಸ್ವಚ್ಛತೆಯ ಕಡೆಗೆ ವಿಶೇಷ ಲಕ್ಷ ಪುರೈಸಿದಂತೆ ಕಾಣುವದಿಲ್ಲ. ಯಾಕಂದರೆ, ಊರೊಳಗೆ ಅಲ್ಲಲ್ಲಿ ಕಸದ ಗುಡ್ಡೆಗಳು ಎಷ್ಟೋ ದಿನಗಳಿಂದ ರಾಶಿಯಾಗಿರುವದು ಕಂಡುಬರುತ್ತದೆ. ಇದು ಅವರ ಲಕ್ಷಕ್ಕೆ ಬಂದಿರಲಿಕ್ಕಿಲ್ಲವೇ?

ಇಲ್ಲಿಯ ದವಾಖಾನೆಯ ಡಾ| ಕಲ್ಲೇಯವರು ಕಣ್ಣಿನ ವಿಷಯದಲ್ಲಿ ಒಳ್ಳೇ ನಿಷ್ಣಾತರಿದ್ದು ಅವರ ಚಿಕಿತ್ಸೆಯಿಂದ ಎಷ್ಟೋ ಜನರು ಕಳೆದುಕೊಂಡ ಕಣ್ಣುಗಳು ತಿರುಗಿ ಬಂದಿದ್ದವು. ಈಗ ಅವರು ಅದೇ ವಿಷಯವಾಗಿ ಪೂರ್ಣ ಪ್ರಾವೀಣ್ಯವನ್ನು ಪಡೆಯುವದಕ್ಕಾಗಿ ವಿಲಾಯತಿಗೆ ಹೋಗಿರುವರು.

ನಮ್ಮ ಜಿಲ್ಲೆಯ ಜನರಿಗೂ, ವಿಶೇಷವಾಗಿ ಶಿರ್ಸಿಯ ನಿವಾಸಿಗಳಿಗೂ ಚಿರಪರಿಚಿತರಾದ ಅವ್ರಸೆಯ ಹರಿದಾಸರಾದ ಶ್ರೀ| ಜಗನ್ನಾಥ ಬುವಾರವರು ಕೆಲವು ದಿವಸಗಳ ಹಿಂದೆ ವೆಂಗುರ್ಲೆಯಲ್ಲಿ ನಿಧನಹೊಂದಿದರೆಂದು ತಿಳಿಸಲು ವ್ಯಸನವಾಗುತ್ತದೆ. ಇವರು ವೇದಾಂತ ವಿಷಯದಲ್ಲಿ ಒಳ್ಳೆ ಪ್ರವೀಣರಿದ್ದು ಉದಾಹರಣೆಗಾಗಿ ಅನುಭವಸಿದ್ಧವಾದ ಚಿಕ್ಕ ಪುಟ್ಟ ಸಂಗತಿಗಳನ್ನು ಕಥಾ ರೂಪದಿಂದ ಒಂದೇ ಸಮನಾಗಿ ಹೇಳುವ ಇವರ ರೀತಿಯು ಅವರ್ಣನೀಯವಾಗಿತ್ತು. ಶ್ರೀ ಹರಿಯು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಕಳೆದ ೧೩ ನೇ ತಾರೀಕ ಸೋಮವಾರ ಇಲ್ಲಿಯ ಶ್ರೀ ಮಾರಿಕಾಂಬಾ ದೇವಸ್ಥಾನದ ಕಾರಕೂನರಾದ ಶ್ರೀ| ಬಾಡದ ವೆಂಕಟೇಶಪ್ಪನವರ ಮನೆಯಲ್ಲಿ ಯಾರೂ ಇಲ್ಲದ ಹೊತ್ತಿನಲ್ಲಿ ಹಗಲೇ ರೂ. ೬೦೦ ರ ಶಾಗಿನೆ ಕಳುವಾಗಿ ಹೋದವು. ನೆರೆಮನೆಯಲ್ಲಿ ಶಕೇಯ ಕಡೆಯ ಮಿ| ದಿಂಡೆ ಎಂಬ ಲೋ. ಬೋ. ಕಾರಕೂನರೂ, ಮಿ| ಬೋಳಾ ಎಂಬ ಶ್ಯಾನಭೋಗರೂ ಅಕ್ಕ-ತಂಗಿಯರಾದ ಅವರ ಹೆಂಡಂದಿರೂ ಇರುತ್ತಿದ್ದು, ಸಂಶಯದ ಮೇಲೆ ಅದೇ ರಾತ್ರಿಯೇ ಅವರ ಮನೆಯ ಝಡ್ತಿ ಮಾಡಲಾಗಿ ಯಾವತ್ತೂ ವಸ್ತ್ರಾಲು ಸಿಕ್ಕಿತಂತೆ! ಆ ಕಾಲಕ್ಕೆ ಪೋಲೀಸರು ತೋರಿಸಿದ ಚಾತುರ್ಯವು ಹೊಗಳತಕ್ಕಂಥಾದ್ದಿತ್ತು. ಶ್ಯಾನಭೋಗರಿಗೂ ಆ ಕಾರಕೂನರ ಹೆಂಡತಿಗೂ ಕೈದ ಮಾಡಿ ಈಗ ಜಾಮೀನಿನ ಮೇಲೆ ಬಿಟ್ಟಿರುವರು ವಿಚಾರವು ಇದೇ ಸೋಮವಾರಕ್ಕಿಟ್ಟಿದೆ.

ಇಷ್ಟು ದಿವಸಗಳ ವರೆಗೆ ಹಳ್ಳಿಗಳೊಳಗಿನ ಲೋ. ಬೋ. ಶಾಲಾ ಇಮಾರತುಗಳ ಮಳೆಗಾಲದ ಶೋಚನೀಯವಾದ ಸ್ಥಿತಿಯು ಕೇಳಿ ಮಾತ್ರ ಗೊತ್ತಿತ್ತು. ಆದರೆ ಶಹರದ ಶಾಲೆಗಳೂ ಈಗ ಅದರ ಜೊತೆಗೆ ಸೇರಿದಂದಿನಿಂದ ಅದರ ಪ್ರತ್ಯಕ್ಷ ಅನುಭವವು ಬರಹತ್ತಿದೆ ಆದ್ದರಿಂದ ಸದ್ರಿ ಶಾಲೆಗಳನ್ನು ತಮ್ಮ ವಶಕ್ಕೆ ಪರತ ತೆಗೆದುಕೊಳ್ಳಲು ಇಲ್ಲಿಯ ಮುನಿಸಿಪಾಲಿಟಿಯ ಪ್ರಯತ್ನ ನಡೆದಿದೆ.

ಚಾತುರ್ಮಾಸವು ಪ್ರಾರಂಭವಾದಂದಿನಿಂದ ಜಾಗಾರ ಮಂಡಗಳ ಸುಳಸುಳಾಟವು ವಿಶೇಷವಾಗಿದೆ ಕ್ರಿಶ್ಚಿಯನರ ತಯಾರಿಯೂ ನಡೆದಿರುವದಂತೆ!

ಕಲೆಕ್ಟರರ ಬಂಗ್ಲೆಯ ಹತ್ತರ ೧ ಬೋರಿಂಗ ಬಾವಿಯನ್ನು ತೆಗೆಯುವ ಕೆಲಸವು ನಡೆದಿದೆ. ಇದು ಈ ಊರಲ್ಲಿಯ ನಾಲ್ಕನೇ ಬಾವಿಯು. ಈ ಮೊದಲು ತಯಾರಿಸಿದ ೩ ಬಾವಿಗಳಲ್ಲಿ ೧ ಬಾವಿಯು ಮಾತ್ರ ಪೂರ್ಣತೆಯನ್ನು ಹೊಂದಿರುವದು.

ಕೆಲ ದುಷ್ಕೃತ್ಯದ ಜನರು ಊರೊಳಗೆ ಸಹ ಜನ-ಜಾನುವಾರಗಳ ಜೀವಿತದ ಕಡೆಗೆ ಲಕ್ಷ ಕೊಡದೆ ಕಾಯಿದೆಗೆ ವಿರುದ್ಧವಾದ ವೇಗದಿಂದ ಮೋಟರಗಳನ್ನು ನಡಿಸುವದು ಕಂಡುಬರುತ್ತದೆ. ಇದು ಅವರ ಕೈಯೊಳಗೆ ಬರುವ ಸುದರ್ಶನ ಚಕ್ರದ ಪ್ರಭಾವವೋ?

೨ ವರ್ಷಗಳ ಹಿಂದೆ ಇಲ್ಲಿಯ ಹೈಸ್ಕೂಲಿನಲ್ಲಿ ಸ್ಥಾನಿಕ ಪದವೀಧರರೊಬ್ಬರು ೧ನೇ ಅಸಿಸ್ಟಂಟರಾಗಿದ್ದು ಮೇಲ್ತರಗತಿಯ ಶಿಕ್ಷಕರಾಗಿದ್ದರು. ಆದರೆ, ಪರಸ್ಥಳದ ಬೇರೊಬ್ಬ ಪದವೀಧರರು ಬಿ. ಟಿ. ಆಗಿರುತ್ತಾರೆಂಬ ಆಧಾರದ ಮೇಲೆ ಅವರಿಗೆ ಹೆಚ್ಚಿನ ಪಗಾರದ ಮೇಲೆ ೧ನೇ ಅಸಿಸ್ಟಂಟರನ್ನಾಗಿ ಮುನಿಸಿಪಾಲಿಟಿಯ ಮಹನೀಯರು ನೇಮಿಸಿದ್ದರಿಂದ, ಮೊದಲಿದ್ದವರು ರಾಜೀನಾಮೆಯನ್ನಿತ್ತು ಹೊರಟುಹೋದರು. ಈಗ ಹೊಸದಾಗಿ ಬಂದವರು ಬಿ. ಟಿ. ಆಗಿರುವದು ನಿರಾಧಾರವೆಂತಾ ಎಲ್ಲರಿಗೂ ತಿಳಿದುಬಂದಿದೆ. ಆದರೆ? ಬಳಗ ಇದ್ದವರ......

ಅಂಕೋಲಾ— ತೆರಪಿಲ್ಲದೆ ಮಳೆ ಬೀಳುತ್ತದೆ. ಇಲ್ಲಿ ಇಲಿಗಳು ಸಾಯಹತ್ತಿವೆ ೧॥-೨ ತಿಂಗಳಾಗುತ ಬಂತು, ಊರಲ್ಲಿ ಯಾರೂ ಪ್ಲೇಗಿಗೆ ತುತ್ತಾದ ಸುದ್ದಿಯೇನಿಲ್ಲ. ಇದೊಂದು ಸಂತಸದ ಸುದ್ದಿ.

ಈ ಊರಲ್ಲಿ ಈಗ ಜಾಗ್ರತೆ ಕೊಂಡಷ್ಟು ಬಹಳ. ಮುಷ್ಟಿ ಬಾಜಾರದಲ್ಲಿ ರಾ| ಶ್ರೀನಿವಾಸ ಎಂಬವರದೊಂದು ಅಂಗಡಿಯಿದೆ. ಅಲ್ಲಿ ಕೆಲವು ಇಲಿಗಳು ಸತ್ತು ಬಿದ್ದವು. ಪ್ಲೇಗಿನ ಇಲಿ ಇರಬಹುದೆಂದು ನೆರೆಯ ಅಂಗಡಿಕಾರರಾದ ಬಾ| ರಾಮಚಂದ್ರ ಮುಖಾಶೀಯವರು ಗ್ರಹಿಸಿ, ಚಿಮಣಿ ಎಣ್ಣೆ ಹಾಕಿ ಅದರ ಉತ್ತರ ವಿಧಿ ನಡಿಸಿದರು. ಪೋಲೀಸರು ಅವರ ಮೇಲೆ ಖಟ್ಲೆ ಮಾಡಿದ್ದಾರೆ. ಇಂಡಿಯನ್ ಪಿನಲ್ ಕೋಡ ಕಲಂ ೨೭೦ರನ್ವಯ ಖಟ್ಲೆಯಾಗಿದೆ. ಸಾರ್ವಜನಿಕ ಹೊಲಸು ಮಾಡುವವರಿಗೆ ಯಾವ ಕಲಮಿನಿಂದಲೂ ಶಿಕ್ಷೆ ವಿಧಿಸಲು ಮಾರ್ಗವಿಲ್ಲದಾಗ, ಈ ಕಲಮಿನಂತೆ ಶಿಕ್ಷೆ ವಿಧಿಸಬೇಕೆಂದಿದೆ. ಮೆಜಿಸ್ಟ್ರೇಟರು ಏನು ತೀರ್ಪು ಕೊಡುತ್ತಾರೆ, ನೋಡಬೇಕು.

ಕಾರವಾರ— ಮಘಾ ಮಳೆಯಿಂದ ಬಹಳ ಚಳಿ ಹುಟ್ಟಿದೆ. ಸುಂಕೇರಿ-ಕೋಡಿಬಾಗಗಳ ಕಡೆ ಇಲಿ ಸಾಯಹತ್ತಿದ್ದಾವೆ. ಮೂಷಕವಾಹನನ ಪ್ರಾರ್ಥನೆ ನಡಿಸಿದರೆ, ಇಲಿಗಳಿಗೆ ದೀರ್ಘಾಯುಷ್ಯ ಪ್ರಾಪ್ತವಾದೀತೋ ಏನೋ! ಜನರು ಭೀತಿಗೊಂಡಿದ್ದಾರೆ

ಇಲ್ಲಿಯ ವಕೀಲ ಸಂಘದವರು ಸೋಮವಾರಕ್ಕೆ ಸಭೆ ಸೇರಿ ಡಿ| ಜಜ್ಜರಾದ ಮಿ| ಹಿಕರವರು ವಕೀಲರೊಡನೆ ನಡೆಕೊಳ್ಳುವ ಸಾಧಾರಣ ವರ್ತನದ ನಿಷೇಧ ಮಾಡಿದ್ದಾರೆ. ಮುಂದೇನಾಗುತ್ತದೆಂದು ನೋಡಬೇಕು.

ಅಸಾಮು ಚಹ ತೋಟದ ಏಜಂಟರೊಬ್ಬರು ಇಲ್ಲಿ ಬಂದು ಐವರನ್ನು ಕೂಲಿಯಾಳುಗಳಾಗಿ ಸೇರಿಸಿಕೊಂಡಿದ್ದಾರೆ. ಚಹ ತೋಟದೊಳಗಿನ ಕಷ್ಟಗಳನ್ನು ಹೇಳಲಾಸಲ್ಲ. ಅಜ್ಞಾನಿ ಮಂದಿಗಳು ಏಜಂಟರ ಸವಿನುಡಿಗಳಿಗೆ ಮರುಳಾಗುತ್ತಾರೆ. ಜಿಲ್ಲಾಧಿಪತಿಗಳು

ತಕ್ಕ ಜಾಗ್ರತೆ ಕೊಳ್ಳಬೇಕು.

ವಕೀಲರಾದ ರಾ| ರಾಮರಾವ ಕಸಬೇಕರರವರು ತೀರಿಕೊಂಡರು. ೨-೩ ವರ್ಷಗಳಿಂದ ಅವರು ವಕೀಲಿಯನ್ನು ಬಿಟ್ಟು ವಿಶ್ರಾಂತಿ ಪಡೆಯುತ್ತಿದ್ದರು. ಮುಂಕೇರಿಯ ಕಂಟ್ರಾಕ್ಟರರಾದ ಎಳೆ ಪ್ರಾಯದ ರಾ| ಗೋವಿಂದ ನಾಗೇಶ ನಾಯ್ಕರವರೂ ತೀರಿಕೊಂಡರು. ಊರವರು ವ್ಯಸನಪಟ್ಟಿದ್ದಾರೆ.

ಜಿಲ್ಲಾ ಬೋರ್ಡಿನ ಸಭೆಯು ತಾ. ೨೪-೨೫ನೇಗೆ ಸೇರಿ, ಅನೇಕ ವಿಷಯಗಳ ಚರ್ಚೆಯಾಯಿತು. ಆ ಮುಖ್ಯ ವಿಷಯಗಳ ವಿವರವನ್ನು ಹೇಳಬಹುದು. ರಾ| ಕಾಮತರವರ ಕಾರವಾರದೊಳಗಿನ ಇವಾರ ತನ್ನು ಜಿ. ಬೋ.ನವರು ಕ್ರಯಕ್ಕೆ ತಕೊಳ್ಳುವ ಮಾತು ನಡೆದಿತ್ತು; ಮಾತಿನಂತೆ ಕ್ರಯಕ್ಕೆ ತೆಗೆದುಕೊಳ್ಳದ್ದರಿಂದ ಬೋರ್ಡಿಗೆ ಕಾಮತರ ವಕೀಲರು ನೋಟೀಸು ಕೊಟ್ಟಿದ್ದಾರೆ. ಈ ಕುರಿತು ಸರಕಾರಿ ವಕೀಲರ ಅಭಿಪ್ರಾಯ ಕೇಳಬೇಕಾಗಿ ಗೊತ್ತಾಯಿತು. ಅಧ್ಯಕ್ಷರು ಬೋರ್ಡಿನ ಸೆಕ್ರೆಟರಿಯ ಮೇಲೆ ಮೇಸ್ತ್ರಿಯವರಿಗೆ ಶಿಕ್ಷಣ ಕೊಡುವ ವರ್ಗ ತೆರೆಸಿದ್ದರು; ಅದರ ಖರ್ಚು ಮಂಜೂರ ಮಾಡಲ್ಪಟ್ಟಿತು. ಟೋಲ ಕಂಟ್ರಾಕ್ಟರರು ಕಾರಣಾಂತರದಿಂದ ಹೊಂದಿದ ನಷ್ಟಭರಪಾಯಿಯ ಬಗ್ಗೆ ಮಾಡಿದ ಅರ್ಜಿಗಳೆಲ್ಲ ತಿರಸ್ಕರಿಸಲ್ಪಟ್ಟವು. ಬೋರ್ಡಿನವರು ಸ್ವಂತ ಡಾಕ್ಟರರನ್ನು ನೇಮಿಸಿಕೊಳ್ಳುವ ವಿಚಾರವನ್ನು ಸದ್ಯಕ್ಕೆ ತಹಕೂಬ ಇಟ್ಟಿದ್ದಾರೆ. ಸರಕಾರವು ಡಾಕ್ಟರರ ಖರ್ಚನ್ನೆಲ್ಲ ತಾನೇ ಸಹಿಸಿ ಬೋರ್ಡು-ಮ್ಯುನಿಸಿಪಾಲಿಟಿಗಳ ಮೇಲೆ ಅವರ ಖರ್ಚ ಹೊರಿಸಬಾರದೆಂಬ ಸರಕಾರಿ ಯೋಜನೆಯ ನಿರೀಕ್ಷೆಯ ವೇಳೆ ಈ ವಿಚಾರ ತಹಕೂಬ ಇಡಲ್ಪಟ್ಟಿತು. ಅಘನಾಶಿನಿ ಹಾರಿಯನ್ನು ಇನ್ನೊಂದು ವರ್ಷದ ತನಕ ದ್ರವ್ಯಸಹಾಯದಿಂದ ನಡೆಸಬೇಕೆಂದು ಗೊತ್ತಾಯಿತು. ಜಿಲ್ಲಾ ಬೋರ್ಡು ಹಾಗು ಸ್ಕೂಲ ಬೋರ್ಡುಗಳ ಮೆಂಬರರಿಗೆ ಭತ್ತೆ ಕೊಡುವಾಗ ಕಾರವಾರವೇ ಮುಖ್ಯ ಸ್ಥಳವೆಂದು ಎಣಿಸಿ ಭತ್ತೆ ಕೊಡಬೇಕೆಂದು ನಿರ್ಣಯವಾಯಿತು. ಕುಮಟಾ ತಾಲೂಕ ಲೋಕಲ್ ಬೋರ್ಡಿನ ಕಾಮಗಾರಿಗಳ ವಿಷಯ ಈ ಸಭೆಯಲ್ಲಿ ಹೆಚ್ಚಿನ ಚರ್ಚೆ ನಡೆಯಿತು. ಕುಮಟಾ ಸಿದ್ದಾಪುರ ಮಾರ್ಗಕ್ಕೆ ಈ ವರ್ಷ ಮಾಡಿದ ಖರ್ಚನ್ನು ಸ್ಟೆಂಡಿಂಗ ಕಮಿಟಿಯವರು ತಿರಸ್ಕರಿಸಿದ್ದರು ಪ್ಲೆನ ಎಸ್ಟಿಮೇಟುಗಳು ಮಂಜೂರಾಗುವ ಮುಂಚೆಯೇ ಈ ದುರುಸ್ತಿಯ ಕೆಲಸವಾಗಿತ್ತು. ಇಂಥ ಅನೇಕ ಕಾಮಗಾರಿಗಳು ಆ ಬೋರ್ಡಿನಲ್ಲಿ ನಡೆದಿವೆ ಅನೇಕ ಸಭಾಸದರು ಜಿ. ಬೋರ್ಡಿಗೆ ವಿಚಾರಿಸದೆ ಕುಮಟಾ ತಾ. ಲೋ. ಬೋರ್ಡಿನವರು ರಿಎಪ್ರೊಪ್ರಿಯೇಶನ್, ಅಂದರೆ ಒಂದಕ್ಕೆ ಮಂಜೂರಾದ ಹಣವನ್ನು ಇನ್ನೊಂದು ಕಾಮಗಾರಿಗೆ ಉಪಯೋಗಿಸುತ್ತಾರೆಂದು ಹೇಳಿ, ಈ ಪ್ರಕಾರವು ಅಪ್ರಶಸ್ತವೆಂದು ಹೇಳಿದರು. ಶಾಸ್ತ್ರಪೂರ್ವಕ ಇಲ್ಲಿಂದ ಜಿ. ಬೋರ್ಡಿಗೆ ಕೇಳಲಾಗುತ್ತದೆಂದೂ ಸಭಿಕರ ಅಭಿಪ್ರಾಯವಾಯಿತು. ಈ ಬಗ್ಗೆ ಕುಮಟಾ, ತಾ. ಲೋ. ಬೋರ್ಡಿನ ಅಧ್ಯಕ್ಷರು ಎಲ್ಲ ಸಂಗತಿಗಳನ್ನು ವಿವರಿಸಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ್ದಾರೆಂದೂ, ಇಂಥ ಅಕ್ರಮಗಳು ಮುಂದೆ ನಡೆಯಲಿಕ್ಕಿಲ್ಲವಾಗಿ ಆಶ್ವಾಸನ ಕೊಟ್ಟಿದ್ದಾರೆಂದೂ ಹೇಳಲಾಯಿತು. ಅಧ್ಯಕ್ಷರು ಒಂದು ಸೂಚನೆ ಮಾಡಿದರು. ಕುಮಟಾ ತಾ. ಲೋ. ಬೋರ್ಡಿಗೆ ಹೊನ್ನಾವರದ ಸಭೆಯಲ್ಲಿ ಮುಂದಾಗ್ರಹ ಕೊಡುವದಕ್ಕಿಂತ, ಮುಂಚೆ ವಿವಾದಾಸ್ಪದವಾದ ಕಾಮಗಾರಿಗಳಾಗಿದ್ದವೆಂದು ಹೇಳಿದರು. ಇನ್ನು ಮುಂದೆ ಇಂಥ ಪ್ರಕಾರಗಳು ನಡೆದರೆ ಅವು ಮಂಜೂರಾಗಲಿಕ್ಕಿಲ್ಲವಾಗಿ ಸಭಿಕರ ಅಭಿಪ್ರಾಯವಾಗಿದೆ ಹೀಗೆಲ್ಲ ಚರ್ಚೆ ನಡೆದು ಈ ಹಿಂದೆ ತಾ. ಲೋ. ಬೋರ್ಡು ಮಾಡಿದ ಖರ್ಚು ಮಂಜೂರಾಯಿತು. ಗ್ರಾಮ ಶಾಲೆಯ ಕಟ್ಟಡಕ್ಕೆ ತಗಲುವ ಖರ್ಚಿನ ೧/೩ ಅಂಶದ ಖರ್ಚನ್ನು ಗ್ರಾಮಸ್ಥರು ಕೊಟ್ಟರೆ ಆ ಗ್ರಾಮದಲ್ಲಿ ಜಿಲ್ಲಾ ಬೋರ್ಡಿನವರು ಶಾಲೆ ಕಟ್ಟಿಕೊಡತಕ್ಕದ್ದಾಗಿಯೂ ಗೊತ್ತಾಯಿತು. ಹೆಡ್ ಮಾಸ್ತರಿ ಭತ್ತೆಗಾಗಿ ಸ್ಕೂಲ ಬೋರ್ಡಿನ ಬಜೆಟ್-ಖರ್ಚ ಪತ್ರಿಕೆಯಲ್ಲಿ ಅವಶ್ಯವಾದ ತಿದ್ದುಪಾಟಗಳು ಕೈಕೊಳ್ಳಲ್ಪಟ್ಟವು.

ಉಪಾಕರ್ಮವನ್ನು ಗುರುವಾರಕ್ಕೆ ಮಾಡಬೇಕಾಗಿ ಅಗ್ಗೇಕರ ರಾ| ಕೃಷ್ಣ ಶಾಸ್ತ್ರಿ ಉಪಾಧ್ಯರವರು ಪುರುಷಾರ್ಥ ಚಿಂತಾಮಣಿ ಗ್ರಂಥದ ಮೇಲಿಂದ ಅಭಿಪ್ರಾಯಪಟ್ಟಿದ್ದಾರೆ.

ಕಲಕತ್ತೆಯ ರಾಷ್ಟ್ರೀಯ ಸಭೆಯ ಸ್ವಾಗತ ಸಮಿತಿಯವರು ನಿನ್ನೆ ಸಭೆಗೂಡಿ ಎಲ್ಲ ಪ್ರಾಂತಿಕ ಮತಗಳ ವಿಚಾರ ಮಾಡಿ ಪಂಡಿತ ಮೋತೀಲಾಲ ನೆಹರೂರವರಿಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷಸ್ಥಾನಕ್ಕೆ ನೇಮಿಸಿದರೆಂದು ಕಲಕತ್ತೆಯಿಂದ ಇಂದು ತಂತಿ ಬಂದಿದೆ.

ವೃತ್ತಸಾರ.

— ದಕ್ಷಿಣ ಕನ್ನಡ ಜಿಲ್ಲೆಯ ಪಂಚಪತ್ರಿನ ಕಾಲಕ್ಕೆ ಯುವಕರ ಪರಿಷತ್ತನ್ನು ಸೇರಿಸಬೇಕಾಗಿ ಮಂಗಳೂರಿನವರು ಆಲೋಚಿಸುತ್ತಿದ್ದಾರೆ ಶ್ರೀ ನರಸಿಂಹರಾವ ಅಧ್ಯಕ್ಷರಾಗುವರು.

— ಅಮೇರಿಕೆಯ ರಾಜಧಾನಿ ನ್ಯೂಯೋರ್ಕ ಪಟ್ಟಣದಲ್ಲಿ ಜರಠ-ಕುಮಾರಿ ವಿವಾಹವಾಯಿತು. ಜರಠನು ಕುಮಾರಿಗೆ ಅಜ್ಜನಾಗುತ್ತಾನೆ ಪ್ರಾಯದಲ್ಲಷ್ಟೇ ಅಲ್ಲ! ಸಂಬಂಧದಲ್ಲೂ ಹಾಗೆಯೇ! ಕುಮಾರಿಯ ೨-ಜರಠನ ಕಲ್ಯಾಣ ಕಾರ್ಯಗಳು!! ಸುಧಾರಿಸಿದ ದೇಶದೊಳಗಿನ ಸುಧಾರಣೆಯಿದು!

— ಮೈಸೂರು ಸಂಸ್ಥಾನವು ತಿರುಪತಿಯಲ್ಲಿ ೧೫ ಸಾವಿರ ರೂಪಾಯಿ ಖರ್ಚುಮಾಡಿ ಒಂದು ಛತ್ರವನ್ನು ಕಟ್ಟಿಸುವದಿದೆ ಈ ಛತ್ರವು ಬ್ರಾಹ್ಮಣೇತರರ ಬಗ್ಗೆ!

— ಲೋಕಮಾನ್ಯರ ಮಗಂದಿರರಾದ ಶ್ರೀ ರಾಮಚಂದ್ರ ಪಂತರವರು ಮೂಲ ಕೇಸರಿ ಹಾಗು ಮ್ಯಾನೇಜರ ವಿಧಿಸಿದ ಪ್ರತಿಬಂಧಕ ಹುಕುಮವನ್ನು ಅಲ್ಲಗಳೆದು "ಕೇಸರಿ" "ಮರಾಠಾ" ಸಂಸ್ಥೆಯ ಪರ್ಯಾನಿಂದ (ಟಿಳಕ ಪಂಚಾಂಗದಂತೆ) ಗಾಯಕವಾಡ ವಾಡೆಯಲ್ಲಿ ಸ್ಥಾಪಿಸಿದ ಗಣಪತಿ ಮೂರ್ತಿಯನ್ನು ಕದಲು ಪ್ರಯತ್ನಿಸಿದ ಬಗ್ಗೆ ಅವರ ಮೇಲೆ ಕ್ರಿ. ಪ್ರೊ. ಕೋ. ೧೪೪ನೇ ಕಲಮಿನನ್ವಯ ಪ್ರಕರಣ ನಡೆದು ಜಾಮೀನ ಕ್ಷೇಮವಾಯಿತು. ಜಾಮೀನು ಕೊಡದ್ದರಿಂದ ಅವರಿಗೆ ೧೦ ದಿನಗಳ ತನಕ ಸೆರೆಮನೆಗೆ ಕಳಿಸಲಾಯಿತು.

— ಉಡುಪಿಯಲ್ಲಿ ಶ್ರೀ ಕೃಷ್ಣಾಪುರ ಮಠದ ಆನೆಯ, ಗಲಭೆ. ಮೆಜಿಸ್ಟ್ರೇಟರು ಮಠಾಧಿಪತಿಗಳ ಮೇಲೆ ಕ್ರಿ. ಪ್ರೊ. ಕೋಡ ೧೪೪ ನೇ ಕಲಮಿನನ್ವಯ ಪ್ರತಿಬಂಧಕ ಹುಕುಮನ್ನು ಜಾರಿ ಮಾಡಬೇಕಾಯಿತು. ಈ ಆನೆಗೆ ಹಳೇ ಮಾವುತನಿಂದ ತೊಂದರೆ ಆಗುವದಿಲ್ಲ. ೬ ತಿಂಗಳ ಹಿಂದೆ ಈ ಮಾವುತನಿಗೆ ಆನೆಯು ಜಜ್ಜಿ ಅವನಿಗೆ ಆಸ್ಪತ್ರೆಗೆ ಕಳಿಸಿತ್ತು. ಮಠಾಧಿಪರು ಮಠೆಯೊಳಗಿಂದ ಹೊಸ ಮಾವುತನನ್ನು ಕರತರಿಸಿದರು ಹಳೇ ಮಾವುತನು ಹುಚ್ಚನಾಗಿ ಒಂದೊತನೆ ಆನೆಯ ಕೈಯಲ್ಲಿ ಪುನಃ ಅಂಕುಶ ಕೊಡಲಾಯಿತು. ಆನೆಗೆ ಸಿಟ್ಟು ಬಂದಿತು; ಬಿದ್ದದ್ದೇ ತಡ ಅವನ ಬೆನ್ನಟ್ಟಿ ಓಡಿತು ಮಾವುತನು ಅಂಗಡಿಯಲ್ಲಿ ಹೊಕ್ಕನು, ಆನೆಯು ಅಂಗಡಿಯ ಹೊರಭಾಗದ ಛಪ್ಪರ ಮುರಿದು ಬಿಟ್ಟಿತು. ದೀಪದ ಕಂಬದ ಅಡ್ಡ ನಿಂತಿತು, ದೀಪದ ಕಂಬವು ನೆಲಕ್ಕುರುಳಿತು. ಮಾವುತನಿಗೆ ಆಯುಃಕಾಲವಿದ್ದದರಿಂದಲೇ ಆನೆಗೆ ಕಟ್ಟಿದ ಸಂಕೋಲೆಯು ಕಲ್ಲಿನಡಿಗೆ ಸಿಕ್ಕಿ ಆನೆಗೆ ಕಟ್ಟುಹಾಕಿದಂತಾಯಿತು ಹೊಸ ಮಾವುತನು ಮುಂದೆ ಬಂದನು, ಕೂಡಲೆ ಆನೆಯು ಸಮಾಧಾನ ಹೊಂದಿ ಅವನೊಡನೆ ಸ್ನೇಹಭಾವವನ್ನು ವ್ಯಕ್ತಪಡಿಸಿತು. ಮೆಜಿಸ್ಟ್ರೇಟರು ಹಳೇ ಮಾವುತನ ವಶಕ್ಕೆ ಆನೆ ಕೊಡತಕ್ಕದ್ದಾಗಿ ಕ್ರಿ. ಪ್ರೊ. ಕೋಡ ೧೪೪ ನೇ ಕಲಮಿನನ್ವಯ ಮಠಾಧಿಪತಿಗಳಿಗೆ ವಿಧಿಸಿದ್ದಾರೆ

— ಸೈಬೀರಿಯಾ ಪ್ರಾಂತದ ಪೂರ್ವ ಭಾಗದಲ್ಲಿ ತೆರಪಿಲ್ಲದೆ ಮಳೆ ಬಿದ್ದು ೫೦ ಗ್ರಾಮಗಳು ಕೊಚ್ಚಿಹೋದವು. ಸಾವಿರಾರು ಮಂದಿಗಳು ಮನೆಮಾರು ಕಳಕೊಂಡು ಅಲೆದಾಡುತ್ತಿದ್ದಾರೆ; ರಶಿಯಾ ದೇಶದ ಸರಕಾರವು ವಿಮಾನಗಳಿಂದ ಅನ್ನವನ್ನು ಈ ದುರ್ದೈವಿಗಳಿಗೆ ಪೂರೈಸುತ್ತಿದೆ.

— ಉಡುಪಿಯ ಮಿಶನ್ ಕಂಪೌಂಡಿನ ಆಸ್ಪತ್ರೆಯಲ್ಲಿ ಒಬ್ಬಳಿಗೆ ಬಹಳ ಪ್ರಸೂತಿ ವೇದನೆಗಳಾದವು. ಡಾಕ್ಟರರು ಶಸ್ತ್ರಪ್ರಯೋಗದಿಂದ ಶಿಶುವನ್ನು ಹೊರತೆಗೆದರು ಕೂಸಿಗೆ ಪ್ರತ್ಯೇಕ ೨ ತಲೆಗಳು; ಸ್ಥೂಲವಾದ ೧ ಕುತ್ತಿಗೆ, ೪ ಕಾಲುಗಳು, ೨ ಮೊಲೆಗಳು; ೧ ಎದೆ, ಹೊಟ್ಟೆಯು ಒಂದೇ, ಭುಜಗಳು ೩! ಬಹಳ ವಿಚಿತ್ರ!!

— ವಿಜಾಪುರದಲ್ಲಿ ೫೦ ವರ್ಷ ಪ್ರಾಯದವರೊಬ್ಬರು ೧೨ ವರ್ಷದ ಬಾಲೆಯೊಡನೆ ಮದುವೆಯಾಗುವವರಿದ್ದರು. ಮದುಮಗಂದಿರು ಸರಕಾರಿ ನೌಕರರಂತೆ. ಖಾಲಿಕಿಯ ಹಿತಚಿಂತಕರು ಮದುವೆಯನ್ನು ನಿಲ್ಲಿಸುವದಕ್ಕಾಗಿ ಕೋರ್ಟಿನಲ್ಲಿ ದಾವೆ ಹಾಕುವವರಿದ್ದಾರೆಂದು ಸುದ್ದಿ ಬಿದ್ದಿದೆ

— ಹಿಂದುಸ್ಥಾನದ ೩ ದಿಕ್ಕಿಗೆ ಉಪ್ಪಿನೀರಿನ ಸಮುದ್ರವಿದ್ದರೂ ಪರದೇಶದಿಂದ ಹಿಂದುಸ್ಥಾನಕ್ಕೆ ೧॥ ಕೋಟಿ ರೂ. ಉಪ್ಪು ಆಮದಾಗುತ್ತದೆ. ರಾಜ್ಯಕರ್ತರಿಗೆ ಇದೆಷ್ಟು ಭೂಷಣ ನೋಡಿ!

— ವಿಜಾಪುರದಲ್ಲಿ ಮಳೆಯಿಲ್ಲ. ಕೆಲವೆಡೆಗಳಲ್ಲಿ ಮಳೆ ಹನಿಸಿದ ಸುದ್ದಿ ಇದೆ.

— ಮದ್ರಾಸ ವೈದ್ಯಕ ಕಾಲೇಜಿನ ವಿದ್ಯಾರ್ಥಿನಿಯಾದ ಜಾನಕಿ ಎಂಬ ಹಿಂದೂ ಕುಮಾರಿಗೂ ಗುಂಟೂರಿನ ಹೆಲ್ತ್ ಆಫೀಸರರಾದ ಮಿ| ಅಬ್ದುಲ್ ಕರೀಮ ಎಂಬ ಮುಸಲ್ಮಾನರಿಗೂ ವಿವಾಹವಾಯಿತು. ಮದ್ರಾಸಿನೊಳಗಿನ ಅನೇಕ ಹಿಂದೂ ಪ್ರಮುಖರು ಈ ಶೋಭನ ಸಮಾರಂಭಕ್ಕೆ ಹೋಗಿದ್ದರಂತೆ! ವಿಶೇಷವಿಲ್ಲ.

— ಧಾರವಾಡ ಜಿಲ್ಲೆಯ ಕಡಕೋಳ ಗ್ರಾಮದಲ್ಲಿ ಹನಿ ಮಳೆ ಬೀಳದ ಬೆಳೆಗಳೆಲ್ಲ ಒಣಗಹತ್ತಿವೆ. ನಮ್ಮಲ್ಲಿ ಹೆಚ್ಚು ಮಳೆ ಬಿದ್ದು ಕಷ್ಟ, ಅಲ್ಲಿ ಮಳೆ ಬೀಳದ ಕಷ್ಟ!

— ಶ್ರೀ ನರಸಿಂಹರ ದಾನವನ್ನದ ಬೆಟ್ಟದಲ್ಲಿ ಫಕೀರರಾಗಿದ್ದ ಟೆಕ್ಟೇ ಶಿರ್ಕೆಯ ಮಿ| ಹಾಡೇಕರಯವರು ಆನಂತರಯವರ ರಾಮಕುಮಾರರ ರಕ್ಷಕರಾಗಿ ನೇಮಿಸಲ್ಪಟ್ಟಿದ್ದಾರೆ. ಅಂಜನಿಕುಮಾರ ಯಾವ ರಕ್ಷಣೆ ಕೊಡಬಲ್ಲನೋ!!

ಮಹಾತ್ಮರ ಆತ್ಮಚರಿತ್ರ.

(೧೮) ಗ್ರಾಮ ಚಳವಳಿ.

ಒಂದೊಂದು ಶಾಲೆಯಲ್ಲಿ ಒಬ್ಬ ಪುರುಷ ಹಾಗೂ ಒಬ್ಬ ಸ್ತ್ರೀ ಶಿಕ್ಷಕರನ್ನಿಡುವ ಏರ್ಪಾಟಾಯಿತು. ಗ್ರಾಮದೊಳಗೆ ಔಷಧೋಪಚಾರವನ್ನೂ, ಸ್ವಚ್ಛತೆಯನ್ನೂ ಅವರೇ ಮಾಡಬೇಕಾಗಿದ್ದಿತು. ಸ್ತ್ರೀಯರಿಗೆ ಬುದ್ಧಿ ಹೇಳಲು ಸ್ತ್ರೀ ಸ್ವಯಂಸೇವಿಕೆಯರಿಂದಲೇ ಪ್ರಯತ್ನವಾಗುತ್ತಿದ್ದಿತು.

ಔಷಧೋಪಚಾರವು ಕಠಿಣ ಕೆಲಸವಾಗಿದ್ದಿಲ್ಲ. ಔಡ್ಲ ಎಣ್ಣೆ, ಕ್ವಿನೀನ್, ಗಂಧಕದ ತೈಲ ಈ ಮೂರು ಸಾಹಿತ್ಯಗಳು ಸ್ವಯಂಸೇವಕರಿಗೆ ಕೊಡಲ್ಪಟ್ಟಿದ್ದವು. ರೋಗಿಯ ನಾಲಿಗೆಯು ಮಸಕಾದರೆ ಅಥವಾ ಮಲಬದ್ಧತೆಯಾದರೆ ಔಡ್ಲ ಎಣ್ಣೆ ಕೊಡಲಾಗುತ್ತಿತ್ತು, ಜ್ವರ ಬಂದರೆ ಔಡ್ಲ ಎಣ್ಣೆ ಕೊಟ್ಟ ಮೇಲೆ ಕ್ವಿನೀನಿನ ಪ್ರಯೋಗವಾಗುತ್ತಿತ್ತು. ಗಾಯ ಕಜ್ಜಿ ಮೊದಲಾದವುಗಳನ್ನು ತೊಳೆದು ಗಂಧಕ ತೈಲ ಹಚ್ಚಲಾಗುತ್ತಿತ್ತು. ಮದ್ದನ್ನು ಮನೆಗೆ ಒಯ್ಯಲು ರೋಗಿಗೆ ಅಪ್ಪಣೆಯಿದ್ದಿಲ್ಲ. ವಿಶೇಷ ಅಕ್ರಮಗಳಲ್ಲಿ ಡಾ. ದೇವರವರ ಆಲೋಚನೆ ಕೊಳ್ಳಲಾಗುತ್ತಿತ್ತು. ಪ್ರತಿಯೊಂದು ಕೇಂದ್ರಕ್ಕೆ ನಿಯಮಿತವಾಗಿ ಡಾಕ್ಟರ ದೇವರವರು ಕ್ರಮದಿಂದ ಭೆಟ್ಟಿಕೊಡುತ್ತಿದ್ದರು.

ಈ ಸಾಮಾನ್ಯ ಔಷಧ ಪ್ರಯೋಗದಿಂದ ಅನೇಕರು ಲಾಭ ಪಡೆದಿದ್ದರು. ಅಲ್ಲಿಯ ರೋಗಗಳು ವಿಶೇಷವಿದ್ದಿಲ್ಲ. ಸಾಮಾನ್ಯ ಉಪಚಾರದಿಂದ ಅವುಗಳ ಪರಿಹಾರವಾಗುತ್ತಿತ್ತು. ಅದರಿಂದ ಇಂಥ ಕ್ರಮವು ವಿಶೇಷಜ್ಞರಿಂದ ದೂರು ಗ್ರಹಿಸಲಾಗದು. ಜನರಿಗೂ ಈ ವ್ಯವಸ್ಥೆಯಿಂದ ಬಹಳ ಅನುಕೂಲವಾಯಿತು.

ಸ್ವಚ್ಛತೆಯನ್ನು ಕಾಪಾಡುವದಕ್ಕಾಗಿ ಬಹಳ ಪ್ರಯತ್ನ ಮಾಡಬೇಕಾಯಿತು. ಜನರು ಸ್ವತಃ ಏನೊಂದೂ ಕೆಲಸ ಮಾಡಲು ತಯಾರಿದ್ದಿಲ್ಲ. ಗದ್ದೆಗಳಲ್ಲಿ ಕೆಲಸ ಮಾಡುವ ಕೂಲಿ ಆಳುಗಳು ಸಹ ತಮ್ಮ ತಮ್ಮ ಹೊಲಸನ್ನು ಸ್ವಚ್ಛ ಮಾಡಲೊಪ್ಪುತ್ತಿದ್ದಿಲ್ಲ. ಡಾ। ದೇವರವರು ಎದೆಗುಂದುವ ವ್ಯಕ್ತಿಯಲ್ಲ. ಅವರೂ, ಸ್ವಯಂಸೇವಕರೂ ಗ್ರಾಮವನ್ನು ಆದರ್ಶಭೂತವಾಗಿ ನಿರ್ಮಲವಿಡಲು ಪ್ರಯತ್ನಿಸಿದರು. ಮಾರ್ಗಗಳನ್ನೂ, ಹಿತ್ತಲುಗಳನ್ನೂ ಅವರು ಗುಡಿಸಿದರು, ಬಾವಿಯೊಳಗಿಂದ ಕೆಸರು ತೆಗೆದರು, ನೆರೆಹೊರೆಯಲ್ಲಿದ್ದ ಹೊಲಸು ನೀರಿನ ಹೊಂಡಗಳನ್ನು ಮುಚ್ಚಿದರು, ಗ್ರಾಮಸ್ಥರೊಳಗಿನ ಸ್ವಯಂಸೇವಕರನ್ನು ತಮಗೆ ಕೊಡಲು ಪ್ರೀತಿಯಿಂದ ಯಾಚನೆ ಮಾಡಿದರು. ಕೆಲ ಕೆಲವು ಗ್ರಾಮಗಳಲ್ಲಿ ಜನರು ನಮ್ಮ ಸ್ವಯಂಸೇವಕರ ಕೆಲಸ ನೋಡಿ ನಾಚಿಕೊಂಡು ತಾವೂ ಬಂದರು. ಕೆಲ ಗ್ರಾಮಗಳಲ್ಲಿ ನನ್ನ ಮೋಟರ ಬಂಡಿಯನ್ನು ಊರೊಳಗೆ ಒಯ್ಯಲಿಕ್ಕಾಗಿ ಜನರು ಮಾರ್ಗಗಳನ್ನು ರಚಿಸಿದರು. ಇವೆಲ್ಲ ಸಂತೋಷದ ಅನುಭವಗಳು. ಜನರ ಅಜಾಗ್ರತೆಯ ಅನಿಷ್ಟ ಅನುಭವಗಳೂ ನಮಗೆ ಇದೇ ಕಾಲಕ್ಕೆ ಬಂದವು. ಕೆಲ ಹಳ್ಳಿಗರು ಇಂಥ ಕೆಲಸವು ತಮಗೆ ಸೇರುವದಿಲ್ಲವಾಗಿ ನನಗೆ ಸ್ಪಷ್ಟವಾಗಿ ಹೇಳಿದರು.

ಒಂದು ಸಂಗತಿಯನ್ನು ಇಲ್ಲಿ ನಮೂದಿಸಿದರೆ, ಅಪ್ರಸಂಗಿಕವಾಗಲಾರದು. ಅನೇಕ ಸಭೆಗಳಲ್ಲಿ ನಾನು ಈ ಸಂಗತಿಯನ್ನು ವರ್ಣಿಸಿದ್ದೇನೆ। ಬೀತಿಹಾರವ ಗ್ರಾಮದಲ್ಲಿ ನಾನೊಂದು ಸಣ್ಣ ಶಾಲೆಯನ್ನಿಟ್ಟಿದ್ದೆ. ಆ ಗ್ರಾಮದ ನೆರೆಯ ಗ್ರಾಮಕ್ಕೆ ನಾನು ಹೋಗುವ ಪ್ರಸಂಗ ಬಂತು. ಕೆಲ ಹೆಂಗಸರು ತೀರ ಹೊಲಸು ಬಟ್ಟೆಗಳನ್ನುಟ್ಟಿದ್ದರು. ಬಟ್ಟೆಗಳನ್ನು ಯಾಕೆ ಒಗೆಯುವದಿಲ್ಲವಾಗಿ ನನ್ನ ಹೆಂಡತಿಯು ಕಡೆಯಿಂದ ಕೇಳಿಸಿದೆನು. ಆ ಹೆಂಗಸು ನನ್ನ ಹೆಂಡತಿಗೆ ಗುಡಿಸಲಿನಲ್ಲಿ ಕರೆದೊಯ್ದು ನುಡಿದದ್ದೇನಂದರೆ — "ಇಗೋ ನೋಡಿ, ನನ್ನ ಬಳಿ ಪೆಟಾರಿಯಲ್ಲಾಗಲಿ ಪೆಟ್ಟಿಗೆಯಲ್ಲಾಗಲಿ ಉಡಲಿಕ್ಕೆ ತೊಡಿಗೆಗಳು ಇಲ್ಲ. ನನ್ನ ಹತ್ತರ ಇದ್ದ ಸೀರೆ ಒಂದೇ. ಅದನ್ನು ನಾನು ಉಟ್ಟುಕೊಂಡಿದ್ದೇನೆ. ಅದನ್ನು ಒಗೆಯುವದು ಹೇಗೆ? ನನಗೆ ಇನ್ನೊಂದು ಸೀರೆ ತಂದುಕೊಡಲು ಮಹಾತ್ಮರಿಗೆ ಹೇಳಿರಿ. ಅಂದರೆ, ನಾನು ನಿತ್ಯವೂ ಜಳಕ ಮಾಡಿ ಒಗೆದ ವಸ್ತ್ರಗಳನ್ನೇ ತೊಟ್ಟುಕೊಳ್ಳುತ್ತೇನೆ."

ಇದೊಂದೇ ಗುಡಿಸಲಾಗಿರಲಿಲ್ಲ. ಹಿಂದುಸ್ಥಾನದೊಳಗಿನ ಬಹಳ ಹಳ್ಳಿಗಳಲ್ಲಿ ಇದೇ ಸ್ಥಿತಿಯಾಗಿದೆ. ಅನೇಕ ಗುಡಿಸಲುಗಳಲ್ಲಿ ಜನರು ಸಂಸಾರದ ಸಾಹಿತ್ಯಗಳಿಲ್ಲದೆ ಬಾಳ್ವೆ ಮಾಡುತ್ತಾರೆ. ಬದಲಿಸುವಷ್ಟು ಅರಿವೆ-ಅಂಚಡಿಗಳಿರುವದಿಲ್ಲ. ನಾಚಿಕೆಯಾಗಬಾರದೆಂದು ಕೆಲವರು ಅರಿವೆ ತುಂಡುಗಳಿಂದ ಕಾಲ ಕಳೆಯುತ್ತಾರೆ.

ಇನ್ನೊಂದು ಸಂಗತಿಯನ್ನು ನಾನು ನಮೂದಿಸಬೇಕು. ಚಂಪಾರಣ್ಯದಲ್ಲಿ ಗಳು ಹಾಗು ಹುಲ್ಲು ವಿಪುಲವಾಗಿ ಸಿಗುತ್ತವೆ. ಭೀತಿಹಾರವದೊಳಗಿನ ಶಾಲೆಯ ಗುಡಿಸಲು ಈ ಸಾಮಗ್ರಿಯಿಂದಲೇ ಕಟ್ಟಲ್ಪಟ್ಟಿತ್ತು. ಒಂದು ದಿನ ಯಾರೋ ಒಬ್ಬರು ಈ ಗುಡಿಸಲಿಗೆ ಬೆಂಕಿ ಕೊಟ್ಟರು. ನೆರೆಹೊರೆಯೊಳಗಿನ ತೋಟಿಗರ ಜನರು ಬೆಂಕಿ ಕೊಟ್ಟಿರಬೇಕು. ಆದರಿಂದ ಪುನಃ ಈ ಸಾಹಿತ್ಯಗಳಿಂದ ಗುಡಿಸಲು ಕಟ್ಟುವದು ಯೋಗ್ಯ ತೋರಲಿಲ್ಲ. ಶ್ರೀ ಸೋಮಣರಾಮ ಸಾಕಸ್ತೂರಬಾಯಿಯವರೂ (ನನ್ನ ಹೆಂಡತಿ) ಈ ಶಾಲೆಯ ಚಾಲಕರಾಗಿದ್ದರು. ಶಾಲೆಗಾಗಿ ಭದ್ರ ಕಟ್ಟಡವನ್ನು ಕಟ್ಟಬೇಕೆಂದು ಶ್ರೀ ಸೋಮಣರ ನಿಶ್ಚಯ ಮಾಡಿದರು. ಅವರ ಉತ್ಸಾಹವು ಅವರಲ್ಲಿ ಪ್ರಾದುರ್ಭೂತವಾಗಿ ಎಲ್ಲರೂ ಅವರೊಡನೆ ದುಡಿದರು. ಅದರಿಂದ ಇಟ್ಟಂಗಿಗಳ ಮನೆಯು ತಯಾರಾಯಿತು. ಈ ಮನೆಗೆ ಬೆಂಕಿಯ ಭಯವಿರಲಿಲ್ಲ.

ಈ ಪ್ರಕಾರ ಶಾಲೆಗಳಿಂದಲೂ ಆರೋಗ್ಯಪಾಲನ ಕ್ರಮದಿಂದಲೂ ಔಷಧೋಪಚಾರದಿಂದಲೂ ಸ್ವಯಂಸೇವಕರು ಲೋಕಾದರವನ್ನು ಸಂಪಾದಿಸಿದರು. ಅದರಿಂದ ಗ್ರಾಮವರ್ಗದ ಮೇಲೆ ಅವರಿಗೆ ವರ್ಚಸ್ಸು ಪ್ರಾಪ್ತವಾಯಿತು.

ಈ ಸಂಧಾರಣೆಯನ್ನು ಶಾಶ್ವತವಾಗಿ ನಡೆಸುವ ಏರ್ಪಾಟು ಮಾಡಲು ನನ್ನಿಂದಾಗಲಿಲ್ಲೆಂದು ನಾನೊಪ್ಪುತ್ತೇನೆ. ಸ್ವಯಂಸೇವಕರು ಹಂಗಾಮಿಯಾಗಿ ಬಂದಿದ್ದರು. ಇನ್ನು ಸ್ವಯಂಸೇವಕರನ್ನು ಸಂಪಾದಿಸಲು ನನ್ನಿಂದಾಗಲಿಲ್ಲ. ಶಾಶ್ವತವಾಗಿ ಉಚಿತ ಕೆಲಸ ಮಾಡಲು ಬಿಹಾರಿಗಳು ಸಿಗಲಿಲ್ಲ. ಚಂಪಾರಣ್ಯದ ಕೆಲಸ ಮುಗಿದ ಕೂಡಲೆ ಕಾರಣಾಂತರದಿಂದ ನಾನು ಅಲ್ಲಿಂದ ಹಿಂತಿರುಗಬೇಕಾಯಿತು. ಚಂಪಾರಣ್ಯದಲ್ಲಿ ಕೆಲ ತಿಂಗಳು ಕೆಲಸ ಮಾಡಿದ್ದು ಗನ್ನು ಆ ಕೆಲಸದ ಫಲವನ್ನು ಒಂದಲ್ಲೊಂದು ರೂಪದಿಂದ ಈಗಲೂ ಅಲ್ಲಿ ಕಾಣಬರುತ್ತದೆ.

NOTICE.

WANTED:- A Supervisor for Karwar Taluka Supervising Union on Rs 45/- plus a cycle allowance of Rs 15/- P. M. One with a knowledge of Accountancy, Book-keeping and also knowing English, Marathi and Kanarese need apply stating age, qualifications and previous experience to the undersigned before 5 9-1928.

Karwar
16-8-1928

J. P. Saokar,
Chairman,
Supervising Union
Karwar.

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಹೂವಿನ ಬೀಜಗಳು ೧೨ ಪಾಕೀಟುಗಳಿಗೆ ರೂ. ೬
(ಎರಡು ತರದವುಗಳು) ... ೪
ಹೂಬಳ್ಳಿಗಳ ಬೀಜಗಳು ೧೨ ,, ,, ೨॥
ಇಂಗ್ಲೀಷ ತರಕಾರಿ ಬೀಜಗಳು ೧೬ ,, ,, ೪॥
ನಾಟಿ ೧೬ ,, ,, ೨॥
ಸಿಲ್ವರ ಓಕ ೧ ಪೌಂಡಿಗೆ . ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಲಿಗೆ ೬॥
ಕರಿಬೇವು ಸೊಪ್ಪು ೧ ರತ್ತಲಿಗೆ .. ೪
ಕಪ್ಪುರೆ ಮಾತೀ ಬೀಜ ೧ ರತ್ತಲಿಗೆ ... ೩
ಕಸಿ ಗುಲಾಬಿ ಗಿಡ ೧೨ಕ್ಕೆ ರೂ. ೫ ರಿಂದ ೧೨
ಕ್ರೋಟನ್ಸ್ ಗಿಡ ೧೨ಕ್ಕೆ ... ೩ ರಿಂದ ೧೨
ಅಂದವಾದ ಹೂಗಿಡ (ಬಿರೇಸಿಯಂ)
೧೨ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ
ಗಿಡಗಳು ೧೨ಕ್ಕೆ ... ೩ ರಿಂದ ೧೨
ಕೀರಿನಂತೆ ಬೆಳೆಯುವ ಗಡ್ಡೆ (ಕೆನ್ನಾ)
೧೨ ಗಿಡಕ್ಕೆ ... ೧॥ ರಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ಕ್ಕೆ ... ೩ ರಿಂದ ೧೨
ಕಟ್ಟಿದ ಮಾವಿನ ಗಿಡಗಳು ೧೨ಕ್ಕೆ ... ೧೦ ರಿಂದ ೧೨
ಪೇರು ಗಿಡಗಳು ೧೨ಕ್ಕೆ ... ... ೯ ರಿಂದ ೧೨
ತೆಂಗಿನ ಗಿಡ ೧೨ಕ್ಕೆ ... ... ೧೨ ರಿಂದ ೩೬
ಆ ಜಾತಿಯ ಬಾಳೇ ಗಿಡ ೧೨ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರ, ದ್ರಾಕ್ಷೆ, ಪೇರು, ದಾಳಿಂಬೆ, ಅಂಜೂರ, ರಾಜಬೆರಿ, ಪನ್ನೇರಲ ಕಂಚಿಕಾಯಿ, ಲಕ್ಕೋಟೆ,
ಈ ಎಲ್ಲ ೧೨ ಗಿಡಗಳಿಗೆ ರೂ. ೬

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇಬು ಹಣ್ಣಿನ ಗಿಡಗಳು ೧೨ಕ್ಕೆ ರೂ. ೨೪
ಪೀಚೆಸ್ ಪ್ಲಮ್ಸ್ ಪಿಯರ ಗಿಡ ೧೨ಕ್ಕೆ .. ೬೪
ಪ್ಯಾಶನ್ ಕಿತ್ತಳೇ ಹಣ್ಣು ೧ಕ್ಕೆ . ೫
೧ ಬುಟ್ಟಿ ತುಂಬ ತರಕಾರಿ .೫ ರಿಂದ ೬
ಕ್ರಿಶಾಂತಿಮಮ್ ಗಿಡ ೧೦೦ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ಕ್ಕೆ ರೂ. ೬ ೯ ೧೨
ನೆರಳ ಕೊಡುವ ಕಾಳಿ ಎಲೆಯ ಜಾತಿಯ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡೆಗಳು ೧೨ಕ್ಕೆ ರೂ. ೩ ರಿಂದ ೯
ಎರೆಕೇರಿಯಾ ಕುಕ್ಕಿ ೧೨ ಗಿಡಗಳಿಗೆ
ರೂ. ೬–೧೨—೨೪
ಅಲಂಕಾರವಾದ ಗಿಡ ೧೨ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಸ್. ದೇವಪ್ಪ ಎಂಡ್ ಸನ್ಸ್,

ಫಲ ಪುಷ್ಪಗಳ ಹಾಗ ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ
ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮುಮ್ಮಡಿಸಿನ ಮಹಾಮಂತ್ರಿಗಳು ಶ್ರೀ ಎ. ರಂಗನಾಥಂ
ಅವರ ಮುನ್ನುಡಿ ಸಹಿತ
ಸಚಿತ್ರ-ಹಿಂದೀ ಮೂಲ, ಗೂಢಾರ್ಥಟೀಕ
ಇತ್ಯಾದಿ ಸಹಿತ.

ಅನುವಾದಕ.— ಶ್ರೀ ಧ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವುದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ ೨-೮-೦, ರಫ್ ಪ್ರತಿ ರೂ ೨-೦-೦ ಅಂಚೆ ವೆಚ್ಚ ೦-೮-೦ ಪ್ರತ್ಯೇಕ ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ
(ತಾ) ೧೩೭ ಚಾಮರಾಜಪೇಟೆ, ೬ನೇ ಬೀದಿ,
ಬೆಂಗಳೂರು ಸಿಟಿ.

ಪ್ರೆಸಿಡೆನ್ಸಿ ಪ್ರಾವಿಡೆಂಟ್ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ:-ಅಮೃತ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ.

ಸ್ಪೆಶಲ್ ಪೋಲೀಸಿಗಳು ೧-೭-೨೮ ನೇದರಿಂದ ಕೊಡಲ್ಪಡುತ್ತವೆ. ೨ ವರ್ಷಗಳ ಮೇಲೆ ವಿಮೆ ಇಳಿಸಿದ ಪೂರ್ಣ ರಕಮು ಕೂಡಲೆ ಕೊಡಲ್ಪಡುವದು ಡಾಕ್ಟರರ ತಪಾಸು ಇಲ್ಲಾ. ಈ ಕಂಪನಿಯಲ್ಲಿ ವಿಮೆ ಇಳಿಸಿರಿ! ಅಂದರೆ ಅನಾಯಾಸದಿಂದ ಮುಂದಿನ ವ್ಯವಸ್ಥೆಯಾಗುತದೆ. ಸಾವಿರಾರು ಮಂದಿಗಳು ಈ ಕಂಪನಿಯಲ್ಲಿ ವಿಮೆ ಇಳಿಸಿದ್ದಾರೆ, ಇನ್ನೂ ಇಳಿಸುತ್ತಿದಾರೆ. ಕಂತಿನ ರಕಮು ತಿಂಗಳಿಗೆ ೧ ಯಾ ೨ ರೂಪಾಯಿ ೧೪ ವರ್ಷಗಳಲ್ಲಿ ಹೆಚ್ಚೆಂದರೆ ೫೦೦ ತಿಕುತ್ತವೆ ಪ್ರಯತ್ನಪಡುವ ಪ್ರಾಮಾಣಿಕ ಮಂದಿಗಳು ನಮ್ಮ ಪ್ರತಿನಿಧಿಗಳಾಗಿ ತಮ್ಮ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದು. ದಲಾಲಿ ದರವು ವಿಶೇಷ. ಹೆಚ್ಚಿನ ಮಾಹಿತಿಯ ಬಗ್ಗೆ ಹೆಡ್ ಆಫೀಸಿಗೆ ಬರಕೊಳ್ಳಬೇಕು.

ಪುನರ್ವಿವಾಹವಾಗಬಯಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ.
ವಿಧವಾವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.
ಇವರಿಗೆ ಬರೆದು ತಿಳಿದುಕೊಳ್ಳಿರಿ.

ಓದಿರಿ] ನನ್ನ ಶಾಸ್ತ್ರೀಯ ಪಾಠದ [ಓದಿರಿ!!

ಶಾರೀರಿಕ ಶಿಕ್ಷಣ



ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಶರೀರದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿದೆ. ನನ್ನಲ್ಲಿ ಕಲಿಯುತ್ತಿದವರ ಅಭಿಪ್ರಾಯಗಳೂ ಇದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಿಪಾ ... ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನೂ ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕೆ ಬರೆಯಿರಿ.

ಪ್ರೊಫೆಸರ್ ಎಂ. ವಿ. ಕೃಷ್ಣರಾವ್,
ಬಸವನಗುಡಿ, ಬೆಂಗಳೂರ ಸಿಟಿ

ಕೈಮಗ್ಗ ಹಾಗು ಯಾಂತ್ರಿಕ ಮಗ್ಗಗಳ

ನೇಕಾರರಿಗೆ

ಬೇಕಾಗುವ ವಿವಿಧ ಬಣ್ಣ,
ದೊರಗಾದ ಹಾಗು ನಯವಾದ
ಉಕ್ಕಿನ ಹಾಗು ಹಿತ್ತಾಳೆಯ ಹಣಿಗೆಗಳೂ,
ಹತ್ತಿಯ ಹಾಗು ಹಿತ್ತಾಳೆಯ ಬಿಜಗರುಗಳೂ,
ತಂತಿಯ ದೋಣಿಗಳೂ, ವಾರ್ಪೀಗಳೂ,
ಎಮೆರಿ ಕಾಗದಗಳೂ
ನಮ್ಮಲ್ಲಿ ಅಗ್ಗವಾಗಿ ಸಿಗುತ್ತವೆ.
ಬಹಳ ಅಗ್ಗ!

P. P. TRIVEDI & CO.,
BRUCE Street, Fort, BOMBAY.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯುಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಶಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ – ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸತಿ ವಿಚಾರ ಮಾಡಿದೆ, ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೆಟಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಶಾರೀರಿಕ ಶಕ್ತಿ ತರುಣರಂತೆ ಪವರ್ಧಮಾನವಾಗುವದು. ನಿಜವಾಗಿ ಒಂದೇ ವಾರದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಕಾವು ಹೋಗಿ ಮಾತವಾದೇ ಪುರುಷತ್ವವು ಇಲ್ಲದಂತಾಗುವದು ಮೂತ್ರವಿಸರ್ಜನದ ಪೂರ್ವದಲ್ಲಿ, ಅಥವಾ ಹಿಂಗೆ ಹೋಗುವ ವೀರ್ಯವು ಬಂದಾಗುವದು.— ಬರವಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗವಾಗುವದು. ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವದು ದಿವಸದಲ್ಲಿ ಹೊರಾದರೂ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಜಠರಾಗ್ನಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ನಾಲುಕ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧) ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ ಟಪಾಲು ಖರ್ಚು ಹೆಚ್ಚು ಬೀಳುವದಿಲ್ಲ ಹಜನ ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲು ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ್ಯ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಹಜನಿಗೆ ೧೩-೮-೦

ಪತ್ರವ್ಯವಹಾರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ ಜಿ ಬೆಳಗಾಂವ

झंडूचें

द्राक्षासव — मृद्विकारिष्ट — शारंगधर म अ. १०

रामबाण औषध

सर्दि घालविणारें,
भूक वाढविणारें,
शौच्यास साफ करणारें
झोप आणणारे
शक्ति देणारें
तेजस्वीपणा आणणारें

पिण्यास रुचिकर

किंमत एक रतलास १॥ रुपये.

कॅटलॉग मागवा

झंडु फार्मास्युटिकल वर्क्स लिमिटेड

मुंबई नं: १४

ऐजंट— मेसर्स पंडित आणी कंपनी,
तीर्थहळ्ळी

सिमि एजट एस. एल धाकप्पा आणि ब्रदर

ಹಿಂದ ಸ್ಥಾನದಲ್ಲಿಯೇ ಅತ್ಯಂತ ಅಗ್ರ ವಾದ
'ನೆಶನಲ್ ಇನ್‌ಶೂರನ್ಸ ಕಂಪೆನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿನಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 10 ರೂಪಾಯಿನಂತೆಯೂ ಬಹುಮಾನ ಕೊಟ್ಟಿರುವೆವು

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡ ಬೇಕೋ ಅದೇ ಕಂತಿಗ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕು !

ಕರ್ನಾಟಕಕ್ಕೆ ಏಜಂಟರು - **P D. Churi,**
ಬಿ ಸಿ ಸಿರಾಳಕೊಪ್ಪ, *Branch Secretory,*
ಲೋಂಡಿ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY.

ರೇಶ್ಮೆ ವಸ್ತ್ರ ಇನಾಂ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ಮಸಾದ, ರೇಶ್ಮೆ ಸೀರೆ, ಪೀತಾಂಬರ, ಮೊಗುಟ, ರವಕೆ ಖಣ, ಎಲವಸ್ತ್ರ ಪೇಟಾ, ಕಾಶ್ಮೀರ್ ಮತ್ತು ಕಾನಪುರ್ ಶಾಲು, ಧಾವಳಿ, ನಾವರ್ಡಿ, ರುದ್ರಾಕ್ಷಿ, ಸ್ಫಟಿಕ ಸರ ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚ ಕರ್ಪೂರ, ಕೇಶರಿ, ಶಿಲಾಜಿತು, ಅತ್ತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವದು. ಇಪ್ಪತ್ತೈದು ರೂಪಾಯಿ ಕ್ರಯ ಒಳವ ಸಾಮಾನುಗಳಿಗೆ ಅರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮಾಗಿ ದೊರೆಯುವುದು

ನಮ್ಮ ಪತ್ತೆ —

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ,
ದುರ್ಗಾಘಾಟ ಶ್ರೀ ಕಾಶೀ ನಂ

ಸುಲಭ ಕ್ರಯ ಸುಲಭ ಕ್ರಯ!

ಡಾಕ್ಟರ ಜೀ. ಟೀ. ಯವರ

ಸುಗಂಧಿ ನಶ್ಯದ ಪುಡಿ

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಡಬ್ಬಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸ ಪುಕ್ಕಟೆ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ०-४-०. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ०-೪-० ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಜಾರ್ಜಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯನ್ನು ಕಳುವ ಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ. ಸ್ವಪ್ನಾವಸ್ಥೆ, ಮೂತ್ರದೊಡಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವಯಾಗಿ ಶೌಚಕ್ಕೆ ಸಾಪ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಬಯಸುವಂದವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಇದು) ವನಸ್ಪತಿಗಳು ಮತು ಭಕ್ಷಿಸು "ಸ್ಟಾರ ಕ್ನಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿದ್ದದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವಡಿ, ರಾತ್ರಿಯು ಭೋಜನವಾದ ನಂತರ ೨ ತೊಲಿಯು ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯ ಬೇಕು. ಪಥ್ಯವಿಲ್ಲ. ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ನಡೆಯುವಷ್ಟು ೬೪ ತೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ ವ್ಹಿ ಪಿ ಖರ್ಚ ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ ಮಿರಜ.**

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು,

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟು ಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ದೇಶಾದ್ಯಂತ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೊ,

ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta

REG. NO. B. 1270 MONDAY, SEPTEMBER 3RD 1928.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೭

ಪತ್ರದ ವರ್ಗಣಿ.

ಕುಮಟೆಯಲ್ಲಿ ಆಗಾವು:
ರೂಪಾಯಿ 3-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎ... ಉದ್ದ) ಆ ಸಾಲುಗಳವರೆಗೆ ... 1-0.
ಆ ನಂತ್ರ ಪ್ರತಿಸ ... 0-2-0.
ಹಕಿಂಗದ ... ಎಷ್ಟು ಕೊಡ್ಡದಿರುವದೂ ... ಮಾನ ದಿಂದ ಅಷ್ಟು ... ಹಿಡಿ ಯಲ್ಪಡುವವು.
... ಜಾಹಿ ... ಬಗ್ಗೆ ಪತ್ರವ್ಯಾರ ... ಶಿ ... ಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೩ ಮಾಹೆ ಸಪ್ಟಂಬರ ಸನ್ ೧೯೨೮ನೇ ಸವಿ.)—

ಹೊಸ ಅಂಗಡಿ! ಹೊಸ ಹೊಸ ಮ್ಹಾಲು !!

... ದೀರ್ಘ ಪ್ರಕಾರದ ... ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.— ಕಟ್ಟಿಣ ... ಗಳು, ... ಉಪಯೋಗದ ದೋಣಿ ... ಗಳು, ಓನ್ ಪ್ರೆಶರ, ಡಿಸ್ಟ್ರಿಕ್ಟ ಪೋರ ಸಿಗುತ್ತವೆ, ... ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ... ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಶಾಬೂನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನ ಗಳೂ ಇಲ್ಲಿ ಸಿಗುತ್ತವೆ ! ಎಲ್ಲ ಸಾಮಾನು ಅಗ್ಗ ! ಚಿಲ್ಲರೆ ವ್ಯಾಪಾರಸ್ಥರು ... ಮ್ಹಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ನಮ್ಮ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —
ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನಡ)

ಎಜಂಟರು ಬೇಕು! ಎ... ರು ಬೇಕು!!



ನಮ್ಮಲ್ಲಿ
ಅತಿ ಮನೋಹರವಾದ
ಶೀಶೆ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ
ನಮ್ಮ ವಿಳಾಸ:—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಶುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ:- ಅಪ್ಪ್ಯಾ... ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ.

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲವೂ ಅನಿಶ್ಚಿತವಿದ್ದರೂ, ಸಾವು ಮಾತ್ರ ಖಂಡಿತವಾಗಿ ಬಂದೇ ಬರುವದು! ಅದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೋಳನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನಿಸಲೇಬೇಕು. ವಿಮೆ ಕಂಪನಿಗಳು ಅನೇಕ ಇರುವವು, ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೫ ವರ್ಷಗಳಲ್ಲಿ ೩೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೨ ರೂಪಾಯಿಗಳಂತೆ ತುಂಬಿ ೧೦ ವರ್ಷ ಮುದ್ದತಿನ ವಿಶೇಷ ಸವಲತಿನ ಸ್ಪೇಶಲ್ ಪೊಲಿಸಿಗಳನ್ನು ಹೊಂದಲು ಬರುತ್ತದೆ! ಕಂಪನಿಯಲ್ಲಿ ಹೆಂಗಸರಿಗೂ ವಿಮೆ ಇಳಿಸಲು ಬರುತ್ತದೆ. ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಇನ್ಸ್ಪೆಕ್ಟರ ಮಿ| ಎನ್. ಟಿ. ನಾಯ್ಕ ಆಫೀಸ-ಅಂಕೋಲಾ, ಜಿಲ್ಲಾ ಉ.ಕನ್ನಡ, ಇವರಕಡೆಗೆ ಬರೆದುಕೊಳ್ಳಬೇಕು.

" ಔಷಧ ಸೀಸೆಗಳಿಗಿಂತ ಬರೇ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು. "
ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ " ಆರೋಗ್ಯ ಚಂದ್ರಿಕೆ " ಎಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯದ ಕಾಯಕರಾಗಿ ಜೀವಿಸು... ಮಾರ್ಗವನ್ನು, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನು ಬೋಧಿಸುವದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ, ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೊಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಟಪಾಲು ಹಾಕಲು ಕೂಡ ನೀವು ಕೊಡಬೇಕಾಗಿಲ್ಲ

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ಗ್ರತೆ ಕೊಡೋಣವಾಗುತ್ತದೆ. ಆಡಂಬರವಾದ ಉಡಿಗೆ-ತೊಡಿಗೆಗಳನ್ನೂ, ಅರಿವೆ ಅಂಚಡಿಗಳನ್ನೂ ಧರಿಸಲಾಗದು. ಇದರಿಂದ ವಿಷಯವಾಸನೆಗೆ ತಡೆಬೀಳುತ್ತದೆ. ಪಿತೃಕುಲ, ಪಿತೃಧನದ ಬಡಿವಾರ ಬಡಿಯಲಾಗದು. ತಂದೆಯು ದೊಡ್ಡತನವನ್ನು ಗಂಡನ ಮನೆಯಲ್ಲಿ ತಟ್ಟಿಕೊಂಡರೆ, ನಿನ್ನ ಮೇಲಿ ಗಂಡನ ಮನೆಯವರ ಪ್ರೇಮ ಬೇರೂರುವದಿಲ್ಲೆಂಬ ಮಾತು ಹನ್ನೆರಡನೆಯ ದ ಆಗಿನ ಪಾಶ್ಚಾತ್ಯ ಶಿಕ್ಷಣ ಸುಧಾರಿಸಿದ ನಮ್ಮಲ್ಲಿಯ ಸ್ತ್ರೀಯರು ಈ ವಚನಗಳನ್ನು ಲಾಲಿಸಬೇಕು. ಜಪಾನ ದೇಶವು ಸುಧಾರಿಸಿದ ರಾಷ್ಟ್ರವು, ಮೇಲಾಗಿ ಪೌರ್ವಾತ್ಯ ಪರಂಪರೆಯದು. ಅದು ಕಾರಣ ಜಪಾನ ದೇಶವನ್ನು ಹಿಂಬಾಲಿಸಿದರೆ, ನಮ್ಮ ಉದ್ಧಾರವಾಗಬಲ್ಲದು. ಸ್ತ್ರೀಯರ ಶೀಲವೇ ಸಮಾಜದ ಮೂಲಾಧಾರವೆಂದು ಗೀತೆಯಲ್ಲಿ ಹೇಳಲಾಗಿದೆ. ಆದರಿಂದ ಸ್ತ್ರೀ ಶಿಕ್ಷಣದ ಪ್ರವರ್ತಕರೂ, ಸುಜ್ಞ ಸ್ತ್ರೀಯರೂ ಇತ್ತ ಕಡೆ ಲಕ್ಷ ಕೊಡಬೇಕು.

***

ಬ್ರಿಟಿಶ ರಾಜ್ಯದೊಳಗಿನ ಶಿಕ್ಷಣ

ಹಿಂದುಸ್ಥಾನ ಸರಕಾರವು ೧೯೩೫-೩೬ ನೇ ಇಸ್ವಿಯ ಶಿಕ್ಷಣದ ವರದಿಯನ್ನು ಪ್ರಕಟಿಸಿದೆ. ಈ ವರುಷದಲ್ಲಿ ಶೇಕಡಾ ೬॥ಯಂತ ಬಾಲ ಬಾಲಕಿಯರು ಶಿಕ್ಷಣ ಪಡೆಯುತ್ತಿದ್ದರು. ಹಿಂದಿನ ವರುಷಕ್ಕಿಂತ ಈ ವರುಷ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಶೇಕಡಾ ಅರ್ಧದಷ್ಟು ಏರಿತು. ಇಷ್ಟು ದೊಡ್ಡ ಏರಿಕೆಯು ಹಿಂದಿನ ೧೦ ವರುಷಗಳಲ್ಲಿ ಆಗಿಲ್ಲವಾಗಿ ಸರಕಾರವು ನಮೂದಿಸಿದೆ. ಸ್ತ್ರೀ ಶಿಕ್ಷಣದ ಪ್ರಮಾಣವು ೧೯೧೬ನೇ ಇಸ್ವಿಯಲ್ಲಿ ಶೇಕಡಾ ೧ ಸಹ ಬೀಳುತ್ತಿದ್ದಿಲ್ಲ. ೧೦ ವರುಷಗಳಲ್ಲಿ ಈ ಪ್ರಮಾಣವು ಶೇಕಡಾ ೧॥ಕ್ಕೆ ಮುಟ್ಟಿರುತ್ತದೆ. ವಿದ್ಯಾರ್ಥಿಗಳು ಒಮ್ಮೆ ಒಂದು ವರ್ಗದಲ್ಲಿ ಬಂದೊಡನೆ ಆ ವರ್ಗವನ್ನು ಬಿಟ್ಟು ಮುಂದಾಗುವದಿಲ್ಲ. ಬಿಹಾರ ಪ್ರಾಂತದ ವಿದ್ಯಾಧಿಕಾರಿಗಳು ರಿಪೋರ್ಟಿನಲ್ಲಿ ಬರೆಯುವ ಪ್ರಕಾರ ೩ ವರ್ಷದ ಅಭ್ಯಾಸದಿಂದ ಮೇಲ್ತರಗತಿಗೆ ಸೇರುವ ವಿದ್ಯಾರ್ಥಿಗಳ ಸಂಖ್ಯೆಯು ಶೇಕಡಾ ೯ ರಷ್ಟು, ೨ ವರ್ಷ ಅಭ್ಯಾಸ ಮಾಡಿ ಮೇಲ್ತರಗತಿಗೆ ಹೋಗುವವರು ಶೇಕಡಾ ೧೧, ೩ ವರ್ಷ ಅಭ್ಯಾಸ ಮಾಡಿ ೩ನೇ ಇಯತ್ತೆಗೆ ಹೋಗುವವರು ಶೇಕಡಾ ೮ ರಷ್ಟು. ಹೀಗೆ ಶೇಕಡಾ ೫೮ ರಷ್ಟು ವಿದ್ಯಾರ್ಥಿಗಳು ೧ನೇ ಇಯತ್ತೆ ದಾಟಿ ೨ನೇ ಇಯತ್ತೆಗೆ ಹೋಗುತ್ತಾರೆ. ಉಳಿದ ಶೇಕಡಾ ೪೨ ರಷ್ಟು ಜನರು ೧ನೇ ಇಯತ್ತೆಯಲ್ಲೇ ಸರಳುತ್ತಾರೆ. ಸರಕಾರವು ಶಾಲೆಗಳಿಗೆ ದ್ರವ್ಯಸಹಾಯ ಮಾಡುವ ಪದ್ಧತಿಯು ಪ್ರಾಂತ ಭೇದದಂತೆ ಭಿನ್ನವಾಗಿರುತ್ತದೆ. ಸಂಯುಕ್ತ ಪ್ರಾಂತದಲ್ಲಿ ಶೇಕಡಾ ೫೭ರಷ್ಟು ಖರ್ಚನ್ನು ಸರಕಾರವು ತೆರುತ್ತದೆ. ಬಂಗಾಲದಲ್ಲಿ ಸರಕಾರಿ ದ್ರವ್ಯಸಹಾಯವು ಶೇಕಡಾ ೩೬ಕ್ಕೆ ಮಿಕ್ಕುವದಿಲ್ಲ. ಫೀಯ ಮಾನವು ಬಹಳ ಏರಿದೆ. ಬಂಗಾಲದಲ್ಲಿ ಶಿಕ್ಷಣ ಖರ್ಚಿನ ಶೇಕಡಾ ೪೧ರಷ್ಟು ಹಣವು ಫೀಯಿಂದ ಉತ್ಪನ್ನವಾಗುತ್ತದೆ. ಬಂಗಾಲದಲ್ಲಿರೂ ೩॥ಲಕ್ಷ ಫೀ ಏರಿಸುವ ಶರ್ತಿನ ಮೇಲೆ ೩ ಲಕ್ಷ ರೂಪಾಯಿಗಳ ಹೆಚ್ಚಿನ ದ್ರವ್ಯಸಹಾಯವಾಯಿತು. ಫೀ ಏರಿಸದಿದ್ದರೆ ಕೊಡತಕ್ಕ ದ್ರವ್ಯಸಹಾಯಕ್ಕೇ ಕತ್ತರಿ ಹಾಕಲ್ಪಡುವದೆಂದು ಮುಂಬಯಿ ಸರಕಾರವು ಮಾಧ್ಯಮಿಕ ಶಾಲೆ-ಶಾಲೆಗಳಿಗೆ ಹೆದರಿಸಿ ಫೀ ಏರಿಸಿಕೊಂಡಿತು. ಸಕ್ತಿಯ ಶಿಕ್ಷಣದ ಪ್ರಗತಿಯ ವಿಷಯ ನಮೂದಿಸತಕ್ಕಂಥಾದ್ದಿದೆ. ಜಿಲ್ಲಾ ಬೋರ್ಡು, ಮುನಿಸಿಪಾಲಿಟಿಗಳಂಥ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಬರೇ ೭ ಸ್ಥಾನಿಕ ಸಂಸ್ಥೆಗಳು ಮಾತ್ರ ಸಕ್ತಿಯ ಶಿಕ್ಷಣವನ್ನು ಕೈಕೊಂಡಿವೆ. ಮಧ್ಯ ಪ್ರಾಂತದಲ್ಲಿ ಮೂರೇ ಮ್ಯುನಿಸಿಪಾಲಿಟಿಗಳ, ಬಿಹಾರ ಪ್ರಾಂತದಲ್ಲಿ ಒಂದೇ ಒಂದು. ಈ ೧೦ ವರುಷಗಳಲ್ಲಿ ಅಂದರೆ, ಮೊಂಟೆಗ್ಯೂ ಸ್ವರಾಜ್ಯ ಯುಗದಲ್ಲಿ ಆದ ಪ್ರಗತಿಯಿದು! ಮೈಸೂರಿನ ದಿವಾಣರಾದ ಸರ್ ಎಮ್ ವಿಶ್ವೇಶ್ವರಯ್ಯನವರು ಪುಣೆಯೊಳಗಿನ ಇಂಜಿನಿಯರಿಂಗ ಕಾಲೇಜಿನ ವಿದ್ಯಾರ್ಥಿಗಳ ಸಮ್ಮೇಲನದಲ್ಲಿ ಭಾಷಣ ಮಾಡುವಾಗ ಸರಕಾರಿ ಶಿಕ್ಷಣದ ಪರಿಣಾಮವನ್ನು ಸಾಧಾರ ವರ್ಣಿಸಿದರು. ಇಂಜಿನಿಯರಿಂಗ ಕಾಲೇಜಿನಲ್ಲಿ ವಿದ್ಯುತ್ ಶಾಖೆಯ ಸ್ಥಾಪನೆಯಾಗಿ ೨೦ ವರುಷಗಳಾದವು. ಆದರೆ, ವರುಷಕ್ಕೆ ೧೦ ವಿದ್ಯಾರ್ಥಿಗಳಿಗೆ ಮಾತ್ರ ಈ ಕಾಲೇಜಿನ ವಿದ್ಯುಚ್ಛಾಖೆಯಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಸಾಮ್ರಾಜ್ಯದ ಇತರ ಘಟಕಗಳ ವಿಚಾರ ಮಾಡಿದರೆ, ವಿದ್ಯುಚ್ಛಕ್ತಿಯ ಪ್ರಸಾರವನ್ನು ಅವಲಂಬಿಸಿದರೆ, ಮುಂಬಯಿ ಇಲಾಖೆಯ ವ್ಯಾಪ್ತಿಯನ್ನು ವಿಚಾರಿಸಿದರೆ, ವರುಷಕ್ಕೆ ೫೦೦ ವಿದ್ಯಾರ್ಥಿಗಳನ್ನು ಸೇರಿಸಿಕೊಂಡರೂ ಕಡಿಮೆಯೇ. ಇದೀಗ ಇಂಜನಿಯರರ ಯುಗವು. ದೊಡ್ಡ ದೊಡ್ಡ ಇಮಾರತುಗಳೂ, ಸಂಕಗಳೂ, ಕಟ್ಟುಗಳೂ ಕಟ್ಟಲ್ಪಡುವವು. ವಿಶೇಷ ಪ್ರಾಥಮಿಕ ಶಿಕ್ಷಣದ ಸ್ಥಿತಿಯು ಬ್ರಿಟಿಶ ಹಿಂದುಸ್ಥಾನದಲ್ಲಿ ತೀರ ಕಂಗೆಟ್ಟಿದೆ. ಬ್ರಿಟಿಶ ಹಿಂದುಸ್ಥಾನದ ಲೋಕಸಂಖ್ಯೆಯು ಸರಾಸರಿ ೨೫ ಕೋಟಿ. ಇದರೊಳಗೆ ೩ ಕೋಟಿ ಜನರು ಓದು-ಬರಹ ಬಲ್ಲವರು. ಅಂದರೆ, ಸರಾಸರಿ ಶೇಕಡಾ ೯ರಷ್ಟು ಜನರು ಬರಹಗಾರರು. ಪಾಶ್ಚಾತ್ಯ ದೇಶಗಳಲ್ಲಿಯೂ, ಜಪಾನದಲ್ಲಿಯೂ ಈ ಪ್ರಮಾಣವು ಶೇಕಡಾ ೯೦ಕ್ಕೂ ಮಿಕ್ಕುತ್ತದೆ. ಬ್ರಿಟಿಶ ಹಿಂದುಸ್ಥಾನದಲ್ಲಿ ಯಾವಾಗಲೂ ಏನಾದರೊಂದು ಕಲಿಯುತ್ತಿರುವವರ ಸಂಖ್ಯೆಯನ್ನು ಇಡೀ ಲೋಕಸಂಖ್ಯೆಯೊಡನೆ ತುಲನೆಮಾಡಿದರೆ, ಶೇಕಡಾ ೪ರಷ್ಟು ಬೀಳುತ್ತದೆ. ಅಮೇರಿಕೆಯಲ್ಲಿ ಈ ಪ್ರಮಾಣವು ಶೇಕಡಾ ೨೫ರಷ್ಟು. ಅಂದರೆ, ೪ರಲ್ಲೊಬ್ಬನು ವಿದ್ಯಾರ್ಥಿಯಾಗಿಯು, ವಿದ್ಯಾರ್ಜನವೇ ಅಲ್ಲಿಯ ದೊಡ್ಡದೊಂದು ಉದ್ಯೋಗವಾಗಿ ಪರಿಣಮಿಸಿದೆ. ನಾಗರಿಕರಾಗಲು ವಿದ್ಯಾರ್ಜನವು ಅಲ್ಲಿ ಬೇಕೇ ಬೇಕು. ೧೮೫೪ ನೇ ಇಸ್ವಿಯಲ್ಲಿ ವಿಲಾಯತಿಯೊಳಗಿನ ಭಾರತ ಮಂತ್ರಿಗಳು ಹಿಂದುಸ್ಥಾನದ ಶಿಕ್ಷಣದ ರಿಪೋರ್ಟಿನ ಮೇಲೆ ಒಂದು ಶರಾ ಬರೆದಿದ್ದರು: "ಭಾರತೀಯರ ಅಜ್ಞಾನವು ರಾಷ್ಟ್ರದ ಮೇಲಿನ ಶಾಪವು." ಈಗಲೂ ಅದೇ ಸ್ಥಿತಿ ಇರುವದಾಗಿ ಸರ್ ವಿಶ್ವೇಶ್ವರಯ್ಯನವರು ಉದ್ಗರಿಸಿ, ಬರಹ ಬಲ್ಲಾದವರ ಸಂಖ್ಯೆಯನ್ನು ಶೀಘ್ರವೇ ಶೇಕಡಾ ೯೦ಕ್ಕೆ ಏರಿಸುವ ಉದ್ಯೋಗದಲ್ಲಿ ಸಕಲರೂ ತೊಡಗಬೇಕಾಗಿ ಹೇಳಿದರು. ಈಗಿನ ಶಿಕ್ಷಣದಲ್ಲಿ ಔದ್ಯೋಗಿಕ ರುಚಿಯನ್ನು ಹುಟ್ಟಿಸಬೇಕಾಗಿಯೂ, ನಾಯಕರಾಗುವಂಥ ಜನರನ್ನು ತಯಾರಿಸಬೇಕಾಗಿಯೂ ಸರ್ ವಿಶ್ವೇಶ್ವರಯ್ಯನವರು ಉದ್ಗರಿಸಿದರು.

***

ಈಗಿನ ಶಿಕ್ಷಿತರ ವರ್ಣನೆ.

ಆಂಧ್ರ ವಿಶ್ವವಿದ್ಯಾಲಯದ ಪ್ರಮುಖ ಚಾಲಕರಾದ ಶ್ರೀ|| ಸಿ. ಆರ್. ರೆಡ್ಡಿಗಳವರು ಮೈಸೂರು ವಿಶ್ವವಿದ್ಯಾಲಯ ಪದವೀದಾನ ಸಮಾರಂಭದ ಕಾಲಕ್ಕೆ ಈಗಿನ ಶಿಕ್ಷಿತರ ವರ್ಣನೆ ಮಾಡಿದರು. ಅವರು ನುಡಿದದ್ದೇನಂದರೆ:— ಹುಡುಗರು ಹೈಸ್ಕೂಲಿನಿಂದ ಕಾಲೇಜಿಗೆ ಹೋಗುತ್ತಾರೆ. ವಯೋಮಾನದಂತೆ ಅವರ ಸ್ವಭಾವದಲ್ಲಿ ಬೆಳವಣಿಗೆಯಾಗುವದಿಲ್ಲ. ಅವರ ಹುಡುಗ ಬುದ್ಧಿಯು ಹಾಗೆಯೇ ಇರುತ್ತದೆ. ದೊಡ್ಡವರಾದರೂ ಅವರು ಹುಡುಗಾಟಿಕೆಯನ್ನೇ ಮಾಡುತ್ತಾರೆ. ಒಮ್ಮೆ ಸರ್ವಜ್ಞನಂತೆ ಅವರು ಮೆರೆಯುತ್ತಾರೆ; ಹಿರಿಯರಿಗೆ ಧಿಕ್ಕರಿಸುತ್ತಾರೆ. ಹಿರಿಯರ ಆತಂಕವಿಲ್ಲದಿದ್ದರೆ, ಕ್ಷಣಾರ್ಧದಲ್ಲಿ ಹಿಂದುಸ್ಥಾನದ ಉದ್ಧಾರ ಮಾಡಿಬಿಡುತ್ತಿದ್ದೆವಾಗಿಯೂ ಜಂಬ ಬಡಿಯುತ್ತಾರೆ. ಸಂಸಾರದಲ್ಲಿ ಸೇರಿದೊಡನೆ ಅವರಿಗೆ ಏನೂ ಗೋಚರವಾಗುವದಿಲ್ಲ. ನಿರಾಧಾರಿಗಳಂತೆ ನಿರಾಶರಾಗಿ ಅತ್ತಿತ್ತ ಅಲೆದಾಡುತ್ತಾರೆ. ಪರೀಕ್ಷೆ ಮುಗಿದೊಡನೆ ಇವರ ಅಭ್ಯಾಸವೂ ಮುಗಿಯಿತು; ಮುಂದೇನು ಮಾಡಬೇಕೆಂದು ಇವರಿಗೆ ತಿಳಿಯುವದಿಲ್ಲ. ಪ್ರಾಯ ಕಳೆಯುವ ತನಕ, ಅಂದರೆ ೫೫ ವರುಷಗಳ ತನಕ ಪರೀಕ್ಷೆಗಳ ಮೇಲೆ ಪರೀಕ್ಷೆಗಳಿದ್ದರೆ, ತಂದೆಯು ಪರೀಕ್ಷೆಗಾಗಿ ಹಣ ಕೊಡಲು ತಯಾರಿದ್ದರೆ, ಇವರು ಮುದುಕರಾಗುವವರೆಗೆ ಪರೀಕ್ಷೆ ಕೊಡುವ ಕೆಲಸವನ್ನು ಚೊಕ್ಕವಾಗಿ ಮಾಡಬಲ್ಲರು. ಆ ಮೇಲೆ ಪೆನ್ಶನ ಪಡೆದು ಮುಪ್ಪನ್ನು ಕಳೆಯಲೂ ಬಲ್ಲರು. ಇದೇ ಈಗಿನ ಶಿಕ್ಷಣ ಪಡೆದವರ ಐಹಿಕ-ಪಾರಲೌಕಿಕ ಸುಖವು! ೪ ವರ್ಷಗಳ ತನಕ ಕಾಲೇಜಿನಲ್ಲಿ ಕಲಿತವರಿಗೆ ಮಾನಸಿಕ ಶಿಸ್ತು ಪ್ರಾಪ್ತವಾಗಿ ತಮಗೆ ಯುಕ್ತ ಕಂಡ ಪ್ರಪಂಚವನ್ನು ಕೈಕೊಳ್ಳುವಷ್ಟು ವಿಚಾರ-ಸಾಮರ್ಥ್ಯವು ಪ್ರಾಪ್ತವಾಗದಿದ್ದರೆ, ಪದವೀದಾನ ಸಮಾರಂಭಗಳಲ್ಲಿ ದೊಡ್ಡ ದೊಡ್ಡವರು ಬಂದು ಭಾಷಣ ಮಾಡುವದರಿಂದ ಪ್ರಯೋಜನವೇನಿದೆ? ಇತ್ಯಾದಿ ಮಾತನಾಡಿ ಶ್ರೀ|| ರೆಡ್ಡಿಗಳವರು ಈಗಿನ ಶಿಕ್ಷಿತರ ಮರ್ಮವನ್ನು ಬೈಲಿಗೆಳೆದರು.

***

ವೇತಾಳ ಪಂಚವಿಶಿಯೊಳಗಿನ ೨೬ನೇ ಕಥೆ!

ವೇತಾಳ ಪಂಚವಿಶಿಯಲ್ಲಿ ವೇತಾಳನು ರಾಜಾಧಿರಾಜನಾದ ವಿಕ್ರಮನಿಗೆ ಹೇಳಿದ ೨೫ ಕಥೆಗಳಿವೆ. ಅದೇ ಪ್ರಕಾರದ ಕಥೆಯೊಂದು ಸಧ್ಯಕ್ಕೆ ಪಾಲೆಸ್ಟ್ಯಾನದ ರಾಜಧಾನಿಯಾದ ಜೆರುಸಲೇಮ ಪಟ್ಟಣದಲ್ಲಿ ಸಂಭವಿಸಿದೆ. ೩೦ ವರ್ಷಗಳ ಹಿಂದೆ ಪೋಲಂಡ ದೇಶದಲ್ಲಿ ಲೊಡ್ಜ ಗ್ರಾಮದಲ್ಲಿ ಲಿಯೊಂಗಥಸ್ ಎಂಬ ವರ್ತಕನಿದ್ದನು. ಆತನಿಗೆ ಇಬ್ಬರು ಮಕ್ಕಳು. ಮಗನೊಬ್ಬನು; ಮಗಳೊಬ್ಬಳು. ಲೊಡ್ಜದಲ್ಲಿ ಆತನ ಹೊಟ್ಟೆ ತುಂಬಲಿಲ್ಲ. ೧೯೦೬ನೇ ಇಸ್ವಿಯಲ್ಲಿ ಆತನು ಅಮೇರಿಕೆಗೆ ಹೋದನು. ಅಲ್ಲಿ ಪ್ರಯಾಸದಿಂದ ಗಿರಣಿ ಕೂಲಿಕಾರನಾದನು. ತಿಂಗತಿಂಗಳಿಗೆ ಕೆಲ ರಕಮನ್ನು ಹೆಂಡತಿಗೆ ಮನೆಗೆ ಕಳಿಸುತ್ತಿದ್ದನು. ಹೆಂಡರು-ಮಕ್ಕಳು ಹಾಗೂ ಹೀಗೂ ಮಾಡಿ ಲೊಡ್ಜದಲ್ಲಿ ಸಂಸಾರ ನಡಿಸುತ್ತಿದ್ದರು. ವಿರಹತಾಪವನ್ನು ಸಹಿಸಲಾರದೆ ಹೆಂಡತಿಯು ತೀರಿಕೊಂಡಳು. ಲಿಯೊಂಗಥಸ್ಸನು ಹೆಂಡತಿ ಸತ್ತ ಸುದ್ದಿ ಕೇಳಿದೊಡನೆ ವೈರಾಗ್ಯ ತಾಳಿದನು. ಮಗಳನ್ನೂ ಮರೆತನು; ಮಗನನ್ನೂ ಮರೆತನು. ಇಲ್ಲಿ ಆ ಮಕ್ಕಳ ಆರೈಕೆಯನ್ನು ಆಪ್ತರು ನಡಿಸಿದರು. ಅತ್ತ ಲಿಯೊಂಗಥಸ್‌ನಿಗೆ ಭಾಗ್ಯಕಾಲ ಬಂತು! ಅಮೇರಿಕೆಯಲ್ಲಿ ಆತನು ವ್ಯಾಪಾರ ಮಾಡಿ ಕೋಟ್ಯಾಧೀಶನಾದನು; ಮದುವೆ ಮಾಡಿಕೊಂಡನು. ಆತನಿಗೆ ಎರಡನೇ ಹೆಂಡತಿಯಲ್ಲಿ ಮಗಳೊಬ್ಬಳು ಹುಟ್ಟಿದಳು.

ಎರಡನೇ ಹೆಂಡತಿಯೂ ಕಿ ವಿಕ್ಟೋರಿಯೂ ಫೋಲಂಡ ದೊಳಗಿನ ಮುಕ್ಕಳು ೧೯೧೫ನೇ ಇಸ್ವಿಯು ತನಕ ಹ್ಯಾಗಾದರೂ ಮಾಡಿ ಸಂಸಾರ ನಡಿಸಿಕೊಂಡ್ದಿದ್ದರು. ಮುಂದೆ ಮಗನು ವಿಯೆನ್ನಾ ಪಟ್ಟಣಕ್ಕೆ ಹೋದನು. ಅಲ್ಲಿ ದೊಡ್ಡ ಐಶ್ವರ್ಯವಂತನಾದನು ತಂಗಿಗೆ ಕರಿಸಿಕೊಂಡನು. ಇಬ್ಬರೂ ಆನಂದದಿಂದ ಇರ ತೊಂಡಿರು. ಅಲ್ಲಿಂದ ಮಗನು ಜೆರುಸಲೆಮಿಗೆ ಹೋದನು. ಜೆರುಸಲೆಮ ಪಟ್ಟಣವು ಫೋಲಂಡದವರಿಗೆ ದೊಡ್ಡ ಕ್ಷೇತ್ರಸ್ಥಾನವು; ಮುಕ್ತಿಪದಭೋಗಗಳ ಸ್ಥಾನವು ಅದೇ. ಅಲ್ಲಿ ಹೋಗಿ ಈತನು ಉಳಿಯುತ್ತಿದನು. ಅಲ್ಲಿ ಈತನು ಆಸ್ಟ್ರಿಯಾ ದೇಶದವನೆಂದು ಖ್ಯಾತಿಗೊಂಡಿದ್ದನು. ಲೊಂಗಫಕ್ಸನ ೨ ನೇ ಹೆಂಡತಿಯ ಮಗಳು ಯುರೋಪಖಂಡದ ಸಂಚಾರ ಮಾಡ ಬಯಸಿ ಯುರೋಪ ಖಂಡಕ್ಕೆ ಬಂದಳು. ಸಂಚಾರ ಕಾರ್ಯಕ್ರಮದಲ್ಲಿ ಜೆರುಸಲೆಮ ಪಟ್ಟಣವು ಸೇರಿತು. ಕೋಟ್ಯಾಧೀಶನ ಮಗಳು, ಜೆರುಸಲೆಮದಲ್ಲಿರುವ ಆಸ್ಟ್ರಿಯಾ ದೇಶದ ಕೋಟ್ಯಾಧೀಶನನ್ನು ನೋಡಿದೊಡನೆ, ಹಿಂದು ಪ್ರಕಾರದ ಪ್ರೇಮಭಾವವು ಕಾಣಿಸಾಯಿತು. ಇಬ್ಬರೊಳಗೂ ಮದುವೆಯ ಪ್ರಸಕ್ತಿ ಬಂತು! ನಿಶ್ಚಯವೂ ಆಯಿತು!! ಅಮೇರಿಕೆಯಿಂದ ತಂದೆಯನ್ನು ಕರಿಸಬೇಕಾಗಿ ಗೊತ್ತಾಯಿತು. ಅಮೇರಿಕೆಯಿಂದ ಲೊಂಗಫಕ್ಸನು ಬಂದನು. ಅದೇ ಸಮಯ ವಿಯೆನ್ನಾ ಪಟ್ಟಣದಿಂದ ಲೊಂಗಫಕ್ಸನ ಹುಡುಗನು ತನ್ನ ಸಹೋದರಿಯನ್ನು ಕರಿಸಿದ್ದನು. ತಂಗಿಯು ಲಗ್ನವಾಗಿರಲಿಲ್ಲ. ಜೆರುಸಲೆಮದಲ್ಲಿ ಅಮೇರಿಕೆಯ ಲಕ್ಷಾಧೀಶನ ಮಗಳಿಗೂ, ಆಸ್ಟ್ರಿಯಾ ದೇಶದ ಲಕ್ಷಾಧೀಶನಿಗೂ ಸಂಕಲ್ಪದಂತೆ ಮದುವೆಯಾಗಿ ಹೋಯಿತು! ಮದುವೆ ಕಾಲಿಗೆ ವಿಯೆನ್ನಾದಿಂದ ಬಂದ ಎಳೆ ಹುಡುಗಿಯ ಮೇಲೆ ಕಣ್ಣು ಬಿತ್ತು. ಆತನು ಅವಳ ಸ್ನೇಲಗ್ನವಾಗಲು ಬಯಸಿದನು; ಆ ಲಗ್ನವೂ ಆಯಿತು ಮುಂದೆ ನಾಲ್ವರೂ ಅಮೇರಿಕೆಗೆ ಹೋದರು. ಅಲ್ಲಿ ಸಹಜವಾಗಿ ಫೋಲಂಡದ ಉಲ್ಲೇಖ ಬಂತು. ಮುದುಕನು ತನ್ನ ಕಥೆ ಹೇಳಿದನು. ಮುದುಕನ ಮಗನು ಇದನ್ನು ಕೇಳಿ ದೆಪ್ಪಗಾದನು ! ಮುದುಕನ ಮೂರನೇ ಹೆಂಡತಿಯು ದಿಗಿಲುಬಿದ್ದಳು ! ಜೌಕಿ ಮಾಡಲು ಮಗಳೇ ತಂದೆಯ ಮೂರನೇ ಹೆಂಡತಿ ! ಮಗನು ತಂದೆಯ ಅಳಿಯನು ! ! ಮಲ ಅಣ್ಣನು ಮಲ ತಂಗಿಯ ಗಂಡನು ! ! ! ಮಲ ತಂಗಿಯು ಮಲ ತಂಗಿಯ ಅತ್ತೆಯು ! ! ! ! ಹೀಗೆಲ್ಲ ಗೊಂದಲವೇ ಗೊಂದಲ ! ಇವರೊಳಗೆ ಹುಟ್ಟುವ ಸಂತತಿಯು ಸಂಬಂಧವನ್ನು ಹಚ್ಚಲಿಕ್ಕೆ ಬ್ರಹ್ಮದೇವನಿಗೆ ಸಹ ಕಠಿಣವಾಗಬಹುದಲ್ಲವೇ? ವಿಕ್ರಮನಿಗೆ ವೇತಾಳನು ಹೇಳಿದ ೨೫ ಕಥೆಗಳಿಗಿಂತ ಈ ಕಥೆಯು ಚಿತ್ರವಿಚಿತ್ರವೂ, ಅದ್ಭುತವೂ ಆಗಿರುವದಿಲ್ಲವೇ? ಗೋತ್ರಗಳನ್ನು ವಿಚಾರಿಸದೆ, ಕಣ್ಣಿಗೆ ಚಂದ ಕಂಡ ಹೆಂಗಸರನ್ನು ಕಾಮವಾಸನೆಗಾಗಿ ಮದುವೆಯಾದರೆ ಒದಗುವ ಅನರ್ಥ ಗರಂಪರೆಯಿದು.

— ಪಂಜಾಬದೊಳಗೆ ಸಕ್ಕರೆ ಮಾಡುವ ದೊಡ್ಡದೊಂದು ಕಾರಖಾನೆ ಪ್ರಾರಂಭವಾಗಿದೆ. ಅದರ ಭಂಡವಲು ೧೦ ಲಕ್ಷ ರೂಪಾಯಿ. ಪಂಜಾಬ ಸರಕಾರವು ೨ ಲಕ್ಷ ರೂಪಾಯಿಗಳ ಭಂಡವಲನ್ನು ಪೂರೈಸಿದೆ.

— ಸಿಂಗಿ ಕಾಲೇಜನ್ನು ತೆರೆಯುವ ಬಗೆಗುವಿಯು ಇ ಸಾರ್ವಜನಿಕ ಶಿಕ್ಷಣ ಸಂಘದವರಿಗೆ ಸಂಕೇಶ್ವರದಲ್ಲಿ ೧೨೦೦೦ ರೂಪಾಯಿಗಳು ಕೂಡಿವೆ.

ವೃತ್ತಸಾರ.

— ಶ್ರೀ ಕಂಬಿರಬೊಳಗಿನ ತಿರುಪತಿ ಮಂಡಳದ ಅಧಿಪರು ಹಲವು ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿ ಕೊಡುವದಕ್ಕಾಗಿ ೪೦ ಸಾವಿರ ರೂಪಾಯಿಗಳನ್ನು ಅರ್ಪಿಸಿದ್ದಾರೆ. ಹಿಂದೆ ೧೫ ಸಾವಿರ ರೂಪಾಯಿಗಳನ್ನು ಅವರು ಕೊಟ್ಟಿದ್ದರು.

— ಅಲಹಾಬಾದಿಯ ವೀರಶೈವ ವಿದ್ಯಾರ್ಥಿಯಕ್ಕೆ ಗುಲಬುರ್ಗಾ, ಕೊಲ್ಹಾಪುರ, ರಾಯಚೂರ, ಯಾದಗಿರಿಯಲ್ಲಿ ೫ ಸಾವಿರ ರೂಪಾಯಿಗಳ ಧನಸಹಾಯ ದೊರೆಯಿತೆಂದು ವೀರಶೈವ ವಿದ್ಯಾಲಯದ ಸಹಾಯಾಧಿಪತಿಗಳಾದ ಶ್ರೀ|| ಚಂದ್ರಶೇಖರ ಮಂಜಪ್ಪನವರು ಪ್ರಕಟಿಸಿದ್ದಾರೆ.

— ಬೆಂಗಳೂರಿನೊಳಗಿನ ವಿದ್ಯಾರ್ಥಿಗಳ ಸತ್ಯಾಗ್ರಹದ ಕಾರಣಗಳನ್ನು ಪರಿಶೋಧಿಸಲು ಶ್ರೀ ಮನ್ಮಹಾರಾಜರವರು ಸರ್ ಎಮ್. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಚೌಕಿ ಮಂಡಳವನ್ನೇರ್ಪಡಿಸಿದ್ದಾರೆ.

— ನಿಜಾಮ ರಾಜ್ಯದೊಳಗಿನ ನಲದುರ್ಗ ಗ್ರಾಮದವನೊಬ್ಬನು ತನಗೆ ಲಗ್ನವಾಗುವದಿಲ್ಲೆಂದು ಬೇಸರಪಟ್ಟು ಇಸ್ಲಾಮ ಧರ್ಮಕ್ಕೆ ಸೇರಿ ಆತಿಗೆ ಮಾಡುವ ಮುಸಲ್ಮಾನ ಹೆಂಗಸನ್ನು ಮದುವೆಯಾದನು ! ಕಾವಬಂಧುಗಳೆ ಧರ್ಮಬಂಧನೆಗಳಲ್ಲಿ ?

— ರಾಯಬಾಗದೊಳಗಿನ ಗದ್ದೆಯಲ್ಲಿ ಅಗೆಯುತ್ತಿರುವಾಗ ಹಿತ್ತಾಳೆಯ ಹಂಡೆಯೊಂದು ದೊರಕಿದೆ. ಅದರೊಳಗೆ ನಾಣ್ಯಗಳಿವೆ. ನಾಣ್ಯಗಳ ಮೇಲೆ ರಾಮ-ಕೃಷ್ಣ-ಗಣಪತಿ ಮೊದಲಾದ ದೇವತೆಗಳ ಚಿತ್ರಗಳಿವೆ. ಬಂಗಾರದ ನಾಣ್ಯಗಳು ೨೦, ಉಳಿದವೆಲ್ಲ ಬೆಳ್ಳಿಯವು.

— ಧಾರವಾಡದೊಳಗಿನ ರಾ| ರಾಜಾರಾಮ ಅನಂತ ಕುಳಕರ್ಣಿ, ಎಮ್. ಎ., ರವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ತೆರಳಿದರು.

— ಮಂಗಳೂರಿನಲ್ಲಿ ಆದೇ ತಿಂಗಳ ತಾರೀಖು ೧೧ ದಿನ ಗೀತಾಜಯಂತಿಯ ಉತ್ಸವವು ನಡೆಯುವದು. ಗೀತಾ ಮುಖದ ಸ್ಪರ್ಧೆ ನಡೆಯುವದಿದೆ

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೆಕೆಟ.ಗಳಿಗೆ ರೂ. ೬	ತೆಂಗಿನ ಗಿಡ ೧೨ ಕ್ಕೆ ... ..೧೨ ರಿಂದ ೩೬
... (ಎಸೆಲೊರ್ಟಮೆಂಟು) ೨೫ ... ... ೪	೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ಹೂ ಬಳ್ಳಿಗಳ ಬೀಜಗಳು ೧೨ ,, ,, ೩॥	ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಿಕ್ಕು, ಚಿತ್ರ
ಇಂಗ್ಲಿಷ ತರಕಾರಿ ಬೀಜಗಳು೧೬ ,, ,, ೪॥	ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಜಬೆರಿ,
ನಾಟಿ ... ೧೬ ,, ,, ೩॥	ಪನ್ನೇರಲ, ಗಂಡಿಕಾಯಿ, ಲಕ್ಷ್ಮಣೆ,
ಸಿಲ್ವರ ಓಕ ೧ ರತ್ತಲಿಗೆ ... ,, ೩॥	ಈ ಎಲ್ಲ ೧೨ ಗಿಡಗಳಿಗೆ ರೂ. ೬.
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಿಗೆ. . ೩॥	**ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.**
ಹರಿವೆ ಸೊಪ್ಪು ೧ ರತ್ತಲಿಗೆ ೪	ಸೇಬು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಕುಸುರೆ ಮಸಾಲೆ ಬೀಜ ೧ ರತ್ತಲಿಗೆ ... ೩	ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೨೪
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨	ವಾಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ... ೫
ಚಲೋ ಕ್ರೊಟನ್ ಗಿಡ ೧೨ ಕ್ಕೆ ... ೩ ರಿಂದ ೧೨	೧ ಬುಟ್ಟಿ ತುಂಬ ತರಕಾರಿ ...೫ ರಿಂದ ೬
ಅಂದವಾದ ಹೂ ಗಿಡ (ಜರೇನಿಯಂ) ೧೨ ಕ್ಕೆ ... ೩ ರಿಂದ ೬	ಕ್ರಿಶಾಂತಿಮಮ್ ಗಿಡ ೧೦೦ ಕ್ಕೆ ... ೧೨
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೨ ರಿಂದ ೧೨	ಡೇಲಿಯ ಗಡ್ಡೆಗಳು ೧೨ ಕ್ಕೆ ರೂ ೬-೯-೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ... ೧॥ ಯಿಂದ ೩	ನೆರಳು ಕೊಡುವ ತಾಳೆ ಎಲೆಯ ಜಾತಿ ೨೮ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೭ ರಿಂದ ೧೨
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨	ಗಡೆಗಳು ೧೨ ಕ್ಕೆ ರೂ. ೨ ರಿಂದ ೯
ಕಟ್ಟಿದ ಮಾದಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨	ಎರೊಕೇರಿಯಾ ಕುಕ್ಕಿ ೧೨ ಗಿಡಗಳಿಗೆ ರೂ. ೬—೧೨—೨೪
ಸೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨	ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:—ಆರ್ಡರಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, **ಬೆಂಗಳೂರು ಸಿಟಿ.**

ಇಂಗ್ಲಂಡದಲ್ಲಿ ಸಿದ್ಧವಾದ

ರಾಯೆಲ್ ಆರ್ಚರ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ " ಆರ್ಚರ " ಎಂಬ ಗುರುತಿರುವದು.)

ಚನ್ನಾಗಿ ಪೆಟ್ಟಿಗೆಯಲ್ಲಿರಿಸಿ ರೇಲ್ವೆ ಚಾರ್ಜ ತುಂಬಿ ನಿಮ್ಮಹ್ಮರ ಸ್ಟೇಶನ ಮೇಲೆ

೮೫ ರೂ. ೮ ಆ. ಗೆ ಮಾತ್ರ.

ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್ಸ, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ, ಮಡಗಾರ್ಡ್ಸ, ಸೊಗಸಾದ ಸ್ಪ್ರಿಂಗಸೀಟ, ರಬರ ಪೆಡಲ್ಸ ಲೂಕಸ್ಸಿನ " ಕಿಂಗ ಫಾಯಿಂಡರ " ದೀಪ ಉತ್ತಮ ಘಂಟೆ, ಡನ್‌ಲಾಪ್ ಪ್ಲೇಟೆಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತೆ ಆರ್ಡರಿನ ಕೂಡ ರೂ. ೨೫ ಮುಂಗಡ ಉಳಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್ ಎಂಡ್ ಮೋಟರ ಕಂಪನಿ,

ಮುಂಬಯಿ— ಹಾರ್ನಬೀ ರೋಡ

ಪುಣೆ— ಆರ್ಸೆನಲ್ ರೋಡ.

ಕಾನಡಾ ವೃತ್ತ.

ಮಿತಿ ವಿಭವ ಸಂ ನಿ। ಶ್ರಾವಣ ಬ ೪ರ್ಥಿ, ಸೋಮವಾರ

ಸಂಕ್ರಮಣ ಕಾಲ.

ಭರತಖಂಡವು ಕ್ರಮವಾಗಿ ಉತ್ಕ್ರಾಂತಿಯನ್ನು ಹೊಂದುತ್ತಲಿದೆ ಮಹಾತ್ಮರ ರಾಜಕಾರ್ಯ ಪ್ರವೇಶದಿಂದ ಭರತಖಂಡದಲ್ಲಿ ಉಂಟಾದ ಅವಸ್ಥಾಂತರಗಳು ಕಳೆದ ಮಂಗಳವಾರ ಲಖನೌದಲ್ಲಿ ಜರುಗಿದ ಸರ್ವಪಕ್ಷೀಯ ಪರಿಷತ್ತಿನಲ್ಲಿ ಪರಿಣಮಿಸಿ ಸಮಸ್ತರಿಗೂ ಗ್ರಾಹ್ಯವಾದ ತೀರ್ಮಾನಗಳಾದವೆಂದು ತಿಳಿಸಲು ಹರ್ಷವಾಗುತ್ತದೆ. ಪಕ್ಷಭೇದ, ಜಾತಿಭೇದಗಳಿಂದ ಚದರಿಹೋದ ಭಿನ್ನ ಬಿನ್ನ ಸಂಸ್ಥೆಗಳನ್ನು ಸರ್ವಪಕ್ಷೀಯ ಪರಿಷತ್ತಿನ ಸರದಲ್ಲಿ ಪೋಣಿಸಿ ಸಮಸ್ತ ಪಕ್ಷಗಳ ಲೋಕನಾಯಕರು ರಾಷ್ಟ್ರದ ಅಂತರಂಗವನ್ನು ನಿರಭಿಮಾನದಿಂದಲೂ ನಿಸ್ಪೃಹತನದಿಂದಲೂ ಆಲೋಚಿಸಿ ನಿರ್ಧರಿಸಿದ್ದಾರೆ ಪಂಡಿತ ಮೋತಿಲಾಲ ನೆಹರರವರು ಸಾದರಪಡಿಸಿದ ತೀರ್ಪನ್ನು ಮನ್ನಿಸಿದ್ದಾರೆ

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಡಾ। ಅನ್ಸಾರಿಯವರು ಸಭಾಪತಿಗಳಿದ್ದರು. ಪ್ರಾಸ್ತಾವಿಕ ಭಾಷಣವಾದ ಬಳಿಕ, ಪಂಡಿತ ಮೋತಿಲಾಲರವರು ಶಾಸ್ತ್ರದಂತೆ ವರದಿಯನ್ನು ಸಾದರಪಡಿಸಿದರು. ಪಂಜಾಬದ ದೇಶಭಕ್ತ ಲಾಲಾ ಲಜಪತರಾಯರೂ, ಮಾನ್ಯ ಲೋಕನಾಯಕರಾದ ಪಂಡಿತ ಮಾಲವೀಯರವರೂ ನಿರ್ಮಲಚಿತ್ತದಿಂದ ವರದಿ ತಯಾರಿಸಿದ ಬಗ್ಗೆ ಪಂಡಿತ ಮೋತಿಲಾಲರಿಗೆ ಪ್ರಶಂಸಿಸಿದರು. ಸಮಾಜಘಟಕದ ಸ್ವರಾಜ್ಯವನ್ನು ಹಿಂದುಸ್ಥಾನದ ಧ್ಯೇಯವಾಗಿ ನಮೂದಿಸಿದ ಬಗ್ಗೆ ಪಂಡಿತ ಮೋತಿಲಾಲರ ಸುಪುತ್ರರಾದ ಪಂಡಿತ ಜವಾಹಿರಲಾಲ ನೆಹರೂರವರು ಆಕ್ಷೇಪಿಸಿದರು. “ಸಂಪೂರ್ಣ ಸ್ವಾತಂತ್ರ್ಯವು ಭಾರತೀಯರ ಹಕ್ಕು, ಅದಕ್ಕೂ ಕಡಿಮೆ ಪ್ರತಿಯ ಧ್ಯೇಯವು ಹಿಂದುಸ್ಥಾನಕ್ಕೆ ಒಪ್ಪಿಗೆ ಇಲ್ಲವೆ”ಂದು ಜವಾಹಿರಲಾಲರು ಘೋಷಿಸಿದರು. ಮಾಲವೀಯರವರು ಈಗಿನ ಸ್ಥಿತಿಯಲ್ಲಿ ಬ್ರಿಟಿಶರ ಸಂಬಂಧವನ್ನು ತುಂಡರಿಸುವ ಆಲೋಚನೆ ಮಾಡುವದು ದೇಶಕ್ಕೆ ಹಿತಪ್ರದವಲ್ಲೆಂದು ಬುದ್ಧಿ ಹೇಳಿದರು. ಮೊಂಟೆಗ್ಯೂ ಸ್ವರಾಜ್ಯದಿಂದ ಸಾಮ್ರಾಜ್ಯಘಟಕದ ಸ್ವರಾಜ್ಯವು ಸ್ವಾಭಾವಿಕ ಬೆಳವಣಿಯೆಂದು ಅವರು ತಿಳಿಸಿಹೇಳಿದರು. ಮೌಲಾನಾ ಹಜರತ ಮೋಹಾನಿಯವರು ವಿರೋಧಿಸಿದರು. ಹೀಗೆ ಒಬ್ಬಿಬ್ಬರ ವಿರೋಧ ಬಿಟ್ಟರೆ, ಪಂಡಿತ ನೆಹರುರವರ ರಿಪೋರ್ಟಿಗೆ ಸಮಸ್ತ ಪಕ್ಷಗಳ ಸಂಪೂರ್ಣ ಬೆಂಬಲ ದೊರಕಿದೆ. ಚರ್ಚೆಯೊಳಗಿನ ಒಂದು ಮಾತನ್ನು ನಾವಿಲ್ಲಿ ನಮೂದಿಸುವೆವು. ಪಂಡಿತ ಮೋತಿಲಾಲರು ರಾಷ್ಟ್ರೀಯ ಸಭೆಯ ಭಕ್ತರಿದ್ದು ಬ್ರಿಟಿಶರ ಸಂಬಂಧವಿಡುವ ಸಾಮ್ರಾಜ್ಯ ಸ್ವರಾಜ್ಯವನ್ನು ಅವರು ಹೇಗೆ ಸೂಚಿಸಿದರೆಂದು ಮೌ। ಹಜರತ ಮೋಹಾನಿಯವರು ಪ್ರಶ್ನಿಸಿದರು. ಪಂಡಿತ ಮೋತಿಲಾಲರು ಕೊಟ್ಟ ಉತ್ತರವು ಮನನೀಯವಿದೆ. ಅದೇ ಇಡೀ ರಿಪೋರ್ಟಿನೊಳಗೆ ಸಂಚರಿಸಿದೆ. “ನಾವಿಬ್ಬರೆಂದರೆ ಭರತಖಂಡವಲ್ಲ, ಭರತಖಂಡದ ದೃಷ್ಟಿಯಿಂದ ಈ ರಿಪೋರ್ಟು ಬರೆಯೋಣಾಗಿದೆ” ಎಂದು ಪಂಡಿತ ಮೋತಿಲಾಲರು ಹೇಳಿ ಪಕ್ಷಾಭಿಮಾನಿಗಳ ದುರಾಗ್ರಹಕ್ಕೆ ತಡೆಹಾಕಿದರು

ಹಿಂದು ಮುಸಲ್ಮಾನರ ಹಾಗು ಸಂಯುಕ್ತ ಮತದಾರ ಸಂಘದ ಸೂಚನೆಗಳು ಮುಸಲ್ಮಾನರಿಗೆ ಸಹ ಗ್ರಾಹ್ಯವಾಗಿದೆ. ಈಗಿನಂತೆ ಮುಸಲ್ಮಾನರ ಮತದಾರ ಸಂಸ್ಥೆಗಳು ಬೇರೆ, ಮುಸಲ್ಮಾನೇತರರ ಮತದಾರ ಸಂಸ್ಥೆಗಳು ಬೇರೆ ಹೀಗಿನ ವ್ಯವಸ್ಥೆಯು ನೆಹರು ರಾಜ್ಯಪದ್ಧತಿಯಲ್ಲಿಲ್ಲ. ಹಿಂದುಗಳೂ ಮುಸಲ್ಮಾನರೂ ಸಂಯುಕ್ತ ಮತದಾರ ಮಂಡಳಗಳಲ್ಲಿ ಪ್ರತಿನಿಧಿಗಳಾಗಿ ನಿಲ್ಲುವರು. ಆವರವರ ಲೋಕಸಂಖ್ಯೆಯ ಪರಿಮಾಣದಂತೆ ಇನ್ನು ೧೦ ವರುಷಗಳ ತನಕ ಅವರ ಪ್ರತಿನಿಧಿಗಳು ಆರಿಸಿ ಬರಬೇಕೆಂದು ಗೊತ್ತಾಗಿದೆ. ಮುಸ್ಲಿಮ್ ಲೀಗಿನ ಸರ್ ಅಲಿ ಇಮಾಮರೂ, ಮೌ। ಜಾಫರ ಅಲ್ಲೀಖಾನರೂ ಈ ಯೋಜನೆಗೆ ಸಮ್ಮತಿಸಿದ್ದಾರೆಂದು ತಿಳಿಸಲು ಸಂತೋಷವೇ. ಬೆರಿಸ್ಟರ ಜಿನ್ನಾರವರ ಸ್ವತಂತ್ರ ಪಕ್ಷವೂ ಈ ಯೋಜನೆಯನ್ನು ಪುರಸ್ಕರಿಸಿದೆ. ಹಿಂದೂ ಮಹಾಸಭೆಯ ಪಂಡಿತ ಮದನಮೋಹನ ಮಾಲವೀಯರವರೂ, ಮಾಧವರಾವಜಿ ಅಣೆಯವರೂ, ಹಿಂದು-ಮುಸಲ್ಮಾನರ ಪ್ರತಿನಿಧಿ ನೇಮಣೂಕಿಯ ತತ್ವಗಳನ್ನು ಮನ್ನಿಸಿದ್ದಾರೆ.

ಇವೆರಡು ಮೂಲಭೂತ ತತ್ವಗಳಿಗನುಸರಿಸಿ ನೆಹರು ಮಂಡಳವು ಸೂಚಿಸಿದ ಅರಸರ ಅಧಿಕಾರ, ಸೇನಾಧಿಪತಿಗಳ ಅಧಿಕಾರ, ಪ್ರಾಂತಾಧಿಪರ ಅಧಿಕಾರ, ಪ್ರಾಂತಿಕ ಹಾಗು ಮಧ್ಯವರ್ತಿ ಸರಕಾರದ ಘಟನೆ ಮುಂತಾದ ಸೂಚನೆಗಳು ಲಜಪತರಾಯರ ಅಂಬೋಣದಂತೆ ಕೈಕೊಳ್ಳೋಣಾಗಿವೆ. ಇವನ್ನು ಸೂಚಿಸುವಾಗ ಲಜಪತರಾಯರು ಆಡಿದ ಮಾತುಗಳನ್ನು ಸಮಸ್ತರೂ ಲಕ್ಷದಲ್ಲಿಡತಕ್ಕದ್ದು. ಬ್ರಿಟಿಶ ಅರಸರಿಗಾಗಲಿ, ಅವರಿಂದ ನೇಮಿಸಲ್ಪಡುವ ರಾಜ್ಯಾಧಿಕಾರಿಗಳಿಗಾಗಲಿ ನಿರಂಕುಶ ಅಧಿಕಾರ ಕೊಡಲು ಯಾರೂ ಸಂತೋಷದಿಂದ ಒಪ್ಪುವದಿಲ್ಲ. ಇದನ್ನು ಈಗ ಮನ್ನಿಸುವದರಿಂದ ಮುಂದೆ ಚಳವಳಿ ಮಾಡಲು ಪ್ರತಿಬಂಧ ಸಹ ಇರುವದಿಲ್ಲ. ಈಗಿನ ಸ್ಥಿತಿಯಲ್ಲಿ ಇಷ್ಟು ರಾಜ್ಯಾಧಿಕಾರ ನಮಗೆ ದೊರೆತರೆ “ಸ್ವಲ್ಪಮಪಿ ಬಹು” ಎಂಬ ನ್ಯಾಯದಂತೆ ತಾವು ಸ್ವೀಕರಿಸುತ್ತೇವಾಗಿ ಲಜಪತರಾಯರವರು ನುಡಿದಿದ್ದಾರೆ. ಔದಾರ್ಯದಿಂದ ನಾವು ಈ ವಿಷಯವನ್ನು ವಿಚಾರಿಸಬೇಕಾಗಿಯೂ, ಲಜಪತರಾಯರು ಹೇಳಿದ್ದಾರೆ. ದೇಶದ ಕಾಲಮಾನವನ್ನೂ ಸಾಮರ್ಥ್ಯವನ್ನೂ, ಬಹುಜನಸಮಾಜದ ಸ್ಥಿತಿಯನ್ನೂ ಲೋಕನಾಯಕರು ಸೂಕ್ಷ್ಮವಾಗಿ ಪರ್ಯಾಲೋಚಿಸಿ ಮುಂದಿನ ದಾರಿಯನ್ನು ಬೋಧಿಸಬೇಕಾಗುತ್ತದೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು

ಸಿಂಧ ಪ್ರಾಂತವನ್ನು ಮುಂಬಯಿ ಇಲಾಖೆಯಿಂದ ವಿಂಗಡಿಸಬೇಕೆಂದು ಸ್ಥಳೀಕ ಮುಸಲ್ಮಾನರ ಪ್ರಯತ್ನ, ಹಿಂದು ಸಮಾಜವು ಅಲ್ಪಸಂಖ್ಯಾಕವಾಗಿರುವದರಿಂದ ಪ್ರಾಂತವನ್ನು ವಿಂಗಡಿಸಿದರೆ ಹಿಂದುಗಳು ಮುಸಲ್ಮಾನರ ಕೈಕೆಳಗೆ ಕೈಗೊಂಬೆಗಳಾಗಿ ಕಷ್ಟ-ನಷ್ಟಹೊಂದುವರೆಂದು ಶ್ರೀ। ಜಯರಾಮದಾಸ ದೌಲತರಾಮರವರಂಥ ಹಿಂದುಗಳ ಮತ। ಸರ್ವಪಕ್ಷೀಯ ಪರಿಷತ್ತಿನಲ್ಲಿ ಈ ವಾದವು ಸಮಾಧಾನಕರವಾಗಿ ಇತ್ಯರ್ಥವಾಯಿತು. ಸಿಂಧದಲ್ಲಿ ವಸೂಲಾಗುವ ತೆರಿಗೆಯು ಪ್ರಾಂತಿಕ ಖರ್ಚಿಗೆ ಸಾಲುವದಿಲ್ಲೆಂದು ಸರ್ವಪಕ್ಷೀಯ ಪರಿಷತ್ತಿನಿಂದ ನೇಮಿಸಲ್ಪಟ್ಟ ಸರ್ ಪುರುಷೋತ್ತಮದಾಸ ಠಾಕೂರದಾಸ ಕಮೀಟಿಯವರು ಅಂಕಿಗಳಿಂದ ಸಿದ್ಧಗೊಳಿಸಿದ್ದಾರೆ. ಈ ಮಾತು ಮುಸಲ್ಮಾನರಿಗೆ ಒಪ್ಪಿಗೆ. ಆದರಿಂದ ಇದನ್ನೆಲ್ಲ ಆಲೋಚಿಸಿ ಸರ್ವಸಮ್ಮತವಾದ ಸಂಧಾನವಾಗಿದೆ. ನೆಹರು ರಾಜ್ಯಪದ್ಧತಿ ಪ್ರಾರಂಭವಾದ ಬಳಿಕ ಸಿಂಧ ಪ್ರಾಂತಿಕ ಸರಕಾರದ ಖರ್ಚನ್ನು ತೆರಲು ಅಲ್ಲಿಯ ಬಹುಮತವು ತಯಾರಾದರೆ, ಹಿಂದುಗಳಿಗೆ ಆತ್ಮಸಂರಕ್ಷಣೆಯ ಬಗ್ಗೆ ತಕ್ಕ ಅನುಕೂಲತೆಗಳನ್ನು ಪೂರೈಸಿ, ಸಿಂಧ ಪ್ರಾಂತದ ಘಟನೆಯಾಗಬೇಕು. ಈ ಠರಾವು ಪ್ರಶಸ್ತವಿದೆ. ಹಿಂದು-ಮುಸಲ್ಮಾನರ ಕಲಹ ಕಾರಣವು ಇನ್ನು ಮುಂದೆ ಸಿಂಧದಲ್ಲಿ ಕೆಲಮಟ್ಟಿಗಾದರೂ ಪರಿಹಾರವಾಗುವದು. ಪರಿಷತ್ತಿನ ಅಧಿವೇಶನವು ಇನ್ನೂ ನಡೆದಿರುವದು.

ಅಂತು ಲಖನೌದೊಳಗಿನ ಸರ್ವಪಕ್ಷೀಯ ಪರಿಷತ್ತಿನಿಂದ ಹಿಂದುಸ್ಥಾನವು ಸಂಕ್ರಮಣಕಾಲವನ್ನು ದಾಟಿದೆಂದು ಹೇಳಬಹುದು. ಭಿನ್ನ ಭಿನ್ನ ಪಕ್ಷದವರು ಮತಭೇದದ ಬಾಹುಲ್ಯ ಮಾಡಿ ತಮ್ಮ ದೊಡ್ಡಸ್ತನವನ್ನು ಜಗತ್ತಿಗೆ ಜಾಹೀರುಪಡಿಸಿ ದೊಡ್ಡವರಾಗುವ ದುರಾಶೆಯನ್ನು ತ್ಯಜಿಸಿ ಐಕ್ಯ ಸಂಗ್ರಹ ಮಾಡಿ

ರಾಷ್ಟ್ರಕ್ಕೆ ಉದ್ಧಾರ ಮಾಡಲು ಬಯಸಿದ್ದಾರೆಂಬು ಈ ಪರಿಪತ್ರಿಕ ಮೇಲಿಂದ ಸ್ಪುಟವಾಗುತ್ತದೆ. ಪರಪಕ್ಷದ ದೋಷಗಳನ್ನು ಕಂಡು ಹಿಡಿದು ಸ್ವಸಾಹಸವನ್ನು ಬೀರುವ ಗೊಡವೆಗೆ ಯಾರೂ ಹೋಗದೆ ಅವಸ್ವರ ಮಟ್ಟಿಗೆ ದೇಶಬಾಂಧವರ ಮನ ಒಲಿಸಿಕೊಂಡು ಎಲ್ಲರೂ ಒಕ್ಕಟ್ಟಾಗಿ ಒಂದೊಂದು ಹೆಜ್ಜೆ ಮುಂದಾಗಲೆತ್ನಿಸುತ್ತಿದ್ದಾರೆ. ಸ್ವತ್ವವನ್ನೂ, ಸ್ವಪಕ್ಷ ವಿಶೇಷ ಸಾಹಸಗಳನ್ನೂ ಯಾರೂ ತ್ಯಜಿಸುವದಿಲ್ಲ. ಇದರಿಂದ ದೇಶದೊಳಗಿನ ಸಮಸ್ತರಿಗೂ ರಾಷ್ಟ್ರಕಾರ್ಯದಲ್ಲಿ ಸೇರಿ ದುಡಿಯಲು ಇಂಬು ದೊರೆಯುತ್ತದೆ. ಇದೇ ಬುದ್ಧಿಯು ಹೀಗೆಯೇ ಬಾಳಿದರೆ ರಾಷ್ಟ್ರೋದ್ಧಾರವು ಶೀಘ್ರವೇ ಕೊನೆಗಾಣುವದು

ಸ್ಫುಟ ಸೂಚನೆಗಳು.

೧. ಅಮೇರಿಕೆಯ ಪರರಾಷ್ಟ್ರೀಯ ಮಂತ್ರಿಗಳಾದ ಮಿ। ಕೆಲೋಗ್‌ರವರು ತಯಾರಿಸಿದ ಯುದ್ಧ ಪ್ರತಿಬಂಧಕ ಕಾನೂನಿನ ಮೇಲೆ ಕಳೆದ ಸೋಮವಾರ ಅಪರಾಹ್ಣ ಪಾರಿಸ ಪಟ್ಟಣದಲ್ಲಿ ಸಹಿಗಳಾದವು. ಬ್ರಿಟಿಶ, ಫ್ರೆಂಚ, ಅಮೇರಿಕಾ, ಜರ್ಮನ, ಇಟಾಲಿ, ಬೆಲ್ಜಿಯಮ್, ಜಪಾನ ದೇಶಗಳ ಪ್ರತಿನಿಧಿಗಳು ಸಹಿ ಮಾಡಿದರು. ಬ್ರಿಟಿಶ ಸಾಮ್ರಾಜ್ಯದ ಘಟಕಗಳಾದ ಕೆನಡಾ, ಆಸ್ಟ್ರೇಲಿಯಾ, ಐರ್ಲಂಡ ದೇಶಗಳ ಪ್ರತಿನಿಧಿಗಳೂ ಸಹಿ ಮಾಡಿದ್ದಾರೆ. ಹಿಂದುಸ್ಥಾನದ ತರ್ಫೆನಿಂದ ಬ್ರಿಟಿಶ ದೇಶದ ಪ್ರತಿನಿಧಿಗಳೇ ಸಹಿ ಮಾಡಿದರು. ಈ ಒಪ್ಪಂದದಂತೆ ಮಾನವ ಜಾತಿಯ ಕಲ್ಯಾಣಕ್ಕಾಗಿ ಯುದ್ಧ ತಿರಸ್ಕಾರವನ್ನು ರಾಷ್ಟ್ರಧೋರಣವಾಗಿ ನಡೆಸಬೇಕಾಗಿ ಗೊತ್ತಾಗಿದೆ. ಎಲ್ಲ ರಾಷ್ಟ್ರಗಳು ಈ ಕರಾರಿನ ಮೇಲೆ ಸಹಿ ಮಾಡಿದ ಬಳಿಕ, ಈ ಕರಾರಿನಂತೆ ಯುದ್ಧ ತಿರಸ್ಕಾರವು ರಾಷ್ಟ್ರಧೋರಣದಲ್ಲಿ ಸೇರುವದು. ಸೋಮವಾರಕ್ಕೆ ೧೪ ರಾಷ್ಟ್ರಗಳ ಸಹಿಗಳಾಗಿವೆ, ಇನ್ನು ೪೩ ರಾಷ್ಟ್ರಗಳ ಸಹಿಗಳಾಗಬೇಕು. ರಶಿಯಾ ದೇಶಕ್ಕೆ ಈ ಶಾಂತಿಪ್ರಿಯರು ಇನ್ನೂ ನಿಮಂತ್ರಣವನ್ನೇ ಕೊಟ್ಟಿಲ್ಲ. ಆ ಬಗ್ಗೆ ಅಮೇರಿಕೆಯವರು ರಶಿಯಾ ದೇಶಕ್ಕೆ ನಿಮಂತ್ರಣ ಕೊಡತಕ್ಕದ್ದೆಂದು ಸದ್ಯಕ್ಕೆ ಗೊತ್ತಾಗಿದೆ. ಸ್ಪೇನ-ತುರ್ಕಸ್ಥಾನ ಮುಂತಾದ ರಾಷ್ಟ್ರಗಳು ಈ ಒಪ್ಪಂದದಲ್ಲಿ ಸೇರುವ ಲಕ್ಷಣಗಳಿಲ್ಲ. ತುರ್ಕಸ್ಥಾನವಂತೂ ಸಹಿ ಹಾಕಲು ನಿರಾಕರಿಸಿದೆ, ಯುದ್ಧವನ್ನು ಪ್ರತಿಬಂಧಿಸಲು ಈ ಒಪ್ಪಂದದಿಂದ ಪ್ರಯೋಜನವಿಲ್ಲೆಂದು ತುರ್ಕಸ್ಥಾನದ ಅಭಿಪ್ರಾಯ. ಅಲ್ಲಿಯ ಪರದೇಶಿ ರಾಯಭಾರಿಗಳಾದ ರುಶಿದಿದೆಯವರು ಇರಾಣ, ಅಫಗಾಣಿಸ್ಥಾನ, ರಶಿಯಾ ದೇಶದ ಸರಕಾರಗಳೊಡನೆ ಆಲೋಚಿಸಿ ಕೊನೆ ನಿರ್ಣಯವನ್ನು ಈ ನಾಲ್ಕೂ ರಾಷ್ಟ್ರಗಳು ಒಟ್ಟಿಗೆ ಕೈಕೊಳ್ಳುವ ಆಲೋಚನೆ ನಡೆದಿದೆ. ಕೆಲೋಗ್ ಒಪ್ಪಂದದ ಸಂ-ಧೇಯವು ದೊಡ್ಡದು; ಪ್ರತ್ಯಕ್ಷ ಆಚಾರದಲ್ಲಿ ಪರಿಣಮಿಸಲು ಇದಕ್ಕೆ ಬಹಳ ಪ್ರತಿಬಂಧಗಳಿವೆ, ಮೊಟ್ಟಮೊದಲು ಎಲ್ಲ ರಾಷ್ಟ್ರಗಳು ಇದಕ್ಕೆ ಸಹಿ ಮಾಡದಿದ್ದರೂ ಈ ಒಪ್ಪಂದವು ಹೋಯಿತು. ಎಲ್ಲರೂ ಸಹಿ ಮಾಡುವ ಲಕ್ಷಣಗಳಿಲ್ಲಾದ್ದರಿಂದಲೇ ಈ ಶರ್ತ ಹಾಕಲಾಗಿದೆಯೋ ಏನೋ? ಎಲ್ಲರೂ ಸಹಿ ಹಾಕಿದಾಗ್ಯೂ ಯುದ್ಧ ಪ್ರತಿಬಂಧವು ಇದರಿಂದಾಗುವಂತಿಲ್ಲ. ಬ್ರಿಟಿಶರೂ, ಫ್ರೆಂಚರೂ, ಗುಪ್ತ ತಹನಾಮೆಯನ್ನು ಮಾಡಿಕೊಂಡು ಆ ತಹನಾಮೆಯಂತೆ ಸೈನ್ಯಬಲವನ್ನು ಹೆಚ್ಚಿಸಹತ್ತಿದ್ದಾರೆ. ಆತ್ಮಸಂರಕ್ಷಣಕ್ಕಾಗಿ ಯಾರಿಗೂ ಕೇಳದೆ, ಕೇಳದೆ ಒಮ್ಮೆಲೇ ಯುದ್ಧ ಹೂಡಲು ಕೆಲೋಗ್ ಒಪ್ಪಂದದಿಂದ ಪ್ರತಿಬಂಧವಾಗಬಾರದಾಗಿ ಕೇಳಿ ಬ್ರಿಟಿಶರೂ, ಫ್ರೆಂಚರೂ, ಜಪಾನಿಗಳೂ ಇವರು ಸಹಿ ಮಾಡಿದ್ದಾರೆ. ಆತ್ಮಸಂರಕ್ಷಣೆಯ ವ್ಯಾಖ್ಯೆಯಿಲ್ಲ. ಇತ್ತ ಅಮೇರಿಕೆಯವರು ಭೂತಲ ಶಾಂತತೆಯ ಪಾಠ ಪಠಿಸುತ್ತಿರುವಾಗಲೇ ದೊಡ್ಡ ದೊಡ್ಡ ಹಡಗುಪಡೆಗಳನ್ನು ಭರದಿಂದ ಕಟ್ಟಿಸುತ್ತಿದ್ದಾರೆ. ಅಮೇರಿಕೆಯವರೂ, ಇಜಿಪ್ತದವರೂ ಬ್ರಿಟಿಶರ ಭಂಗಕ್ಕಾಗಿ, ಸೊಕ್ಕು ಮುರಿಯುವದಕ್ಕಾಗಿ ಗುಪ್ತ ತಹನಾಮೆಯೊಂದನ್ನು ಮಾಡಿಕೊಂಡಿದ್ದಾರೆಂದು ಪ್ರಕಟವಾಗಿದೆ. ಇಜಿಪ್ತ ದೇಶದ ಮುಖಾಂತರ ತುರ್ಕಸ್ಥಾನ, ಇರಾಣ, ಅಫಗಾಣಿಸ್ಥಾನ ದೇಶಗಳೊಡನೆ ಇದೇ ಪ್ರಕಾರ ಅಮೇರಿಕೆಯು ತಹ ಮಾಡುವದೆಂದು ತಿಳಿಯುತ್ತದೆ. ಬ್ರಿಟಿಶರೂ, ಅಮೇರಿಕೆಯವರೂ ದೊಡ್ಡ ದೊಡ್ಡ ಗೆಳೆತನದ ಮಾತುಗಳನ್ನಾಡುತ್ತಿದ್ದರೂ, ಅಂತರಂಗದಲ್ಲಿ ಶತ್ರುಗಳೇ. ಕೆಲೋಗರವರಿಗೆ ಬ್ರಿಟಿಶರು ಲಂಡನಿಗೆ ನಿಮಂತ್ರಿಸಿದ್ದರು ಆದರೆ ಕೆಲೋಗ್‌ರವರಿಗೆ ಹೋಗಲು ಸಮಯವಿರಲಿಲ್ಲ ಐರ್ಲಂಡಕ್ಕೆ ಹೋಗಲು ಅನುಕೂಲವಾಯಿತು. ಹೀಗೆ ಕೆಲೋಗ್ ಒಪ್ಪಂದವನ್ನು ಘಟಿಸಿದ ಪ್ರಮುಖ ರಾಷ್ಟ್ರಗಳಿಗೇ ಯುದ್ಧ ಹೂಡುವ ಬಯಕೆಯಾಗಿರುವಾಗ, ಇಂಥ ಒಪ್ಪಂದಗಳಿಂದ ಪ್ರಯೋಜನವಿಲ್ಲೆಂಬ ತುರ್ಕಸ್ಥಾನಾದಿ ದೇಶಗಳ ಅಭಿಪ್ರಾಯವಾದರೆ ತಪ್ಪೇನು?

---

೨ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಹಿಂದುಸ್ಥಾನದ ಸಾರ್ವಜನಿಕ ಸಂರಕ್ಷಣೆಯ ಬಗ್ಗೆ ನಮ್ಮ ಹಿಂದುಸ್ಥಾನ ಸರಕಾರವು ಹಿಂದು ಕಾನೂನನ್ನು ನಿರ್ಮಿಸಲಿಕ್ಕಿದೆ. ಈ ಕಾನೂನಿನಂತೆ ಬ್ರಿಟಿಶ ಹಿಂದುಸ್ಥಾನದಲ್ಲಿ ರಾಜ್ಯಕ್ರಾಂತಿಯನ್ನು ಬೋಧಿಸುವ ಭಾರತೀಯೇತರರಿಗೆ ವಿಚಾರ ಮಾಡದೆ ಸರಕಾರಕ್ಕೆ ಹೊರಹಾಕಲು ಅಧಿಕಾರ ಸಿಗುವದು; ದಿವಾಣಿ ಯಾ ಫೌಜದಾರಿ ಕೋರ್ಟಿನಲ್ಲಿ ಇದಾದು ನಡೆಯಲಾಗದೆಂದೂ ಕಾನೂನಿನಲ್ಲಿ ನಮೂದಿದೆ. ಕಾನೂನನ್ನು ಕ್ರಾಂತಿಕಾರಕರಾದ ಪರದೇಶೀಯರ ಮೇಲೆ ಉಪಯೋಗಿಸುವ ಕಲ್ಪನೆ ಇದ್ದಾಗ್ಯೂ, ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಚಳವಳಿ ನಡಿಸುವ ಮಿ। ಹೊರ್ನಿಮನ್, ಸ್ಪ್ರ್ಯಾಟ್ ಪ್ರಭೃತಿಗಳ ಮೇಲೆ ಇದರ ಪ್ರಯೋಗವಾಗಿ ಮೊಟ್ಟಮೊದಲು ಇವರಿಗೇ ಹೊರದಳ್ಳುವರೆಂದು ಹೇಳಲು ಯಾವ ಪ್ರತ್ಯವಾಯವೂ ಇಲ್ಲ. ಇವರಿಗಾಗಿಯೇ ಈ ಕಾನೂನಿನ ನಿರ್ಮಾಣವಾಗುತ್ತದೆಂದು ಹೇಳಿದರೆ ಅಯಥಾರ್ಥವಾಗದು. ಅಪರಾಧಿಗಳನ್ನು ದಂಡಿಸಲು ಪಿನಲ ಕೋಡು, ಕ್ರಿ. ಪ್ರೊ. ಕೋಡು ಕಾನೂನುಗಳಿವೆ; ಪೋಲೀಸರಿದ್ದಾರೆ; ಸೈನಿಕರಿದ್ದಾರೆ. ಹೀಗೆಲ್ಲ ಸರಂಜಾಮು ಇದ್ದಾಗ್ಯೂ, ರಾಜ್ಯಕ್ರಾಂತಿಯನ್ನು ಬಾಯಿಯಿಂದ ಬೋಧಿಸುವ ಒಬ್ಬಿಬ್ಬ ಅಥವಾ ಹಿಂದು ನೂರು ಮನುಷ್ಯರಿಗಳಿಂದ ಈಗಿನ ಕಾಯಿದೆ ಕ್ರಮಕ್ಕನುಸರಿಸಿ ಬ್ರಿಟಿಶ ರಾಜ್ಯಕ್ರಮವನ್ನು ಸಂರಕ್ಷಿಸಲಾರದಿದ್ದರೆ, ರಾಜ್ಯಾಧಿಕಾರಿಗಳು ರಾಜ್ಯ ನಡಿಸಲು ಅನರ್ಹರೆಂದು ಯಾರೂ ಹೇಳುವರು ಪುರಾವೆ ಇಲ್ಲದೆ, ಕೋರ್ಟಿನಲ್ಲಿ ಸಿದ್ಧ ಮಾಡುವಷ್ಟು ಸಾಮರ್ಥ್ಯವಿಲ್ಲದೆ ಸ್ವದೇಶೀಯರಿಗಾಗಲೀ, ಪರದೇಶೀಯರಿಗಾಗಲೀ ಪ್ರತಿಬಂಧಿಸಿ ಹಿಂದುಸ್ಥಾನದ ಸಂರಕ್ಷಣ ಮಾಡುವದು ಅವಶ್ಯವಿಲ್ಲ. ಇದೊಂದು ದಬ್ಬಾಳಿಕೆಯ ಕಾನೂನು ಹಿಂದುಸ್ಥಾನದ ರಕ್ಷಣಕ್ಕಾಗಿ ಹಿಂದುಸ್ಥಾನ ಸರಕಾರವು ಪರಿಪರಿಯಿಂದ ಪೇಚಾಡುವದನ್ನು ನಾವೆಲ್ಲರೂ ಕಂಡಿದ್ದೇವೆ. ಇಂಥವರ ಕೈಯಲ್ಲಿ ಇಷ್ಟು ದೊಡ್ಡ ಅಧಿಕಾರ ಕೊಡಲಾಗದೆಂದು ನಮ್ಮ ಅಭಿಪ್ರಾಯ.

---

೩. ಇದೇ ತಿಂಗಳ ೫ನೇ ತಾರೀಖಿಗೆ ಸೇರಲಿಕ್ಕಿದ್ದ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ತೀರ್ವೆಯನ್ನು ಗೇಣಿಯ ಅರ್ಧದ ತನಕ ಏರಿಸಬಹುದೆಂಬ ಕಾನೂನಿನ ವಿಚಾರವಾಗುವದಿದೆ. ಈ ಅಧಿವೇಶನವು ತೀರ ಸಣ್ಣದು; ಬರೇ ೮ ದಿನಗಳದು. ಈ ಅಧಿವೇಶನದಲ್ಲಿ ಈ ಕಾನೂನನ್ನು ಸೂಚಿಸಿಕೊಂಡು ಮುಂಬಯಿ ಸರಕಾರವು ಬೇಸಾಯಗಾರರ ಸುಲಿಗೆ ಮಾಡಲು ಬಯಸಿದೆ. ತೀರ್ವೆಯ ಕಷ್ಟವನ್ನು ಪ್ರಜೆಗಳಿಗೆ ಹೇಳಬೇಕೆಂದಿಲ್ಲ. ತೀರ್ವೆ ತೆರುವ ಹಂಗಾಮಿನಲ್ಲಿ ಮಳೆಗಾಲದ ಊಟದ ಆಲೋಚನೆ ಮಾಡದೆ ಜನರು ಕಾಳು-ಕಡಿಗಳನ್ನು ಸಿಕ್ಕ ಹಾಗೆ ಮಾರಿ ತೀರ್ವೆ ತುಂಬುತ್ತಾರೆ. ಇಂಥ ಪ್ರಸಕ್ತಿಯಲ್ಲಿ ತೀರ್ವೆಯನ್ನೇರಿಸುವದು ಬರೇ ದುಷ್ಟತನವು. ಮುಂಬಯಿ ಕಾಯಿದೆ ಕೌನ್ಸಿಲಿನ ಲೋಕಪ್ರತಿನಿಧಿಗಳು ಈ ಪ್ರಮಾಣವನ್ನು ಎಷ್ಟಕ್ಕೂ ಗ್ರಾಹ್ಯ ಮಾಡಬಾರದಾಗಿ ನಮ್ಮ ಬಿನ್ನಹವಿದೆ. ಗೇಣಿಯ ಮೇಲಿಂದ ಯಾವದೇ ಅಂಶವನ್ನು ಹಿಡಿಯುವದಾದರೂ ತಪ್ಪೆಂದು ಈ ಹಿಂದೆ ಹೇಳಲಾಗಿದೆ. ಗೇಣಿಯಲ್ಲಿ ಬೇಸಾಯಗಾರರು ಲಾಗುವಾಡಿಗೆ ಖರ್ಚು ಮಾಡಿದ ಹಣದ ಬಡ್ಡಿ ಇದೆ, ಕ್ರಯಕ್ಕೆ ಕೊಂಡ ಹಣದ ಬಡ್ಡಿ ಇದೆ. ಪ್ರತ್ಯಕ್ಷ ಸಾಗುವಳಿ ಮಾಡುವ ಒಕ್ಕಲಿಗರಿಗೆ ಕೊಟ್ಟ ಹಣದ ವಿಚಾರವೂ ಇದೆ; ಇಷ್ಟೆಲ್ಲ ಬಾಬುಗಳನ್ನು ವಜಾ ಮಾಡಿ, ಉಳಿದ ಲಾಭದ ರಾಜಾಂಶವನ್ನು ಸರಕಾರಕ್ಕೆ ಕೊಡಲು ಬೇಸಾಯಗಾರರು ಒಪ್ಪುತ್ತಾರೆ. ಹಿಂದಿನ ಕಾಲದಲ್ಲಿ ರಾಜಾಂಶವು ೬ನೇ ೧ ಅಂಶವಾಗಿತ್ತು. ಈ ಪ್ರಮಾಣವನ್ನು ಕಾನೂನಿನಲ್ಲಿ ಸೇರಿಸಿದರೆ ಅದಕ್ಕೆ ನಮ್ಮ ಒಪ್ಪಿಗೆ ಇದೆ. ಸರಕಾರಿ ಆಲೋಚನೆಯಂತೆ ಅರ್ಧ ಗೇಣಿಯ ಲೆಕ್ಕ ಹೇಳಿದರೆ ನಮ್ಮ ಹಳ್ಳಿಯಲ್ಲಿ ಎಕ್ರೆಗೆ ೨೦ ರೂಪಾಯಿ ತೀರ್ವೆಯಾಗಲು ಏನೂ ಅಡ್ಡಿ ಇಲ್ಲ. ಈ ಹಿಂದೆ ನಾವು ಪ್ರಕಟಿಸಿದ ಕಾಯಿದೆ ಕೌನ್ಸಿಲಿನ ಪ್ರಶ್ನೋತ್ತರಗಳಲ್ಲಿ ಉತ್ತಮ ಕರಿ ಭೂಮಿಗೆ ೪೧ ರೂಪಾಯಿ ಮುನಾಫೆ ಉಳಿಯುತ್ತದೆಂಬ ಸರಕಾರಿ ಲೆಕ್ಕವು ಪ್ರಕಟ ಹೊಂದಿದೆ. ಇಷ್ಟು ತೀರ್ವೆಯಾದರೆ ಬೇಸಾಯಗಾರರು ಗತಿಗೇಡಾಗುವರು ಲೋಕಪ್ರತಿನಿಧಿಗಳು ವಿಚಾರಿಸಿ ಸರಕಾರದ ಹಬ್ಬಾಶೆಯನ್ನು ಜಗಿಮುರಿಯಬೇಕಾಗಿ ನಮ್ಮ ಅರಿಕೆ ಇದೆ

— ಪಾರಿಸದಲ್ಲಿ ಯುದ್ಧ ಪ್ರತಿಬಂಧಕ ಒಪ್ಪಂದದ ಮೇಲೆ ಸೋಮವಾರಕ್ಕೆ ಸಹಿ ಮಾಡುವ ಸಮಾರಂಭವಾಯಿತು. ಆ ಕಾಲಕ್ಕೆ ಆಸನಗಳನ್ನು ಕುದುರೆ ನಾಲಿನಾಕಾರದಲ್ಲಿ ಇಟ್ಟಿದ್ದರು; ಈ ಕಾರ್ಯವು ಶುಭಪ್ರದವೆಂಬುದೊಂದು ಭಾವನೆ. ಸುಧಾರಿಸಿದರೂ ಭಾವನೆ ಹೋಗುವದಿಲ್ಲ.

— ರಾವಬಹಾದ್ದೂರ ರಾಜ್ಯಾಧ್ಯಕ್ಷರಾದ ವರ್ಷಶ್ರಾದ್ಧದ ಕಾಲಕ್ಕೆ ಅವರ ಮಗಂದಿರು ರೂ ೩೩೦೦೦ಗಳ ಧರ್ಮ ಮಾಡಿದರು

ಸ್ಥಾನಿಕ ವೃತ್ತಾಂತ.

ಕುಮಟಾ— ೨-೩ ದಿನಗಳಿಂದ ಬಿಸಿಲು ಮೋರೆ. ಮಳೆ ವಿಪರೀತ ಬಿತ್ತು. ಕೆಲವೆಡೆಗಳಲ್ಲಿ ಬೆಳೆಗೆ ತಕೆ ಎತ್ತಿಗಲಿಲ್ಲ. ಊರಲ್ಲಿ ಚಳಿಜ್ವರ ಮುಂತಾದ ಬಾಧೆಯುಂಟಾಗಿದೆ. ಈ ವಾರದಲ್ಲಿ ೭-೭೭ ಇಂಚು ಮಳೆ ಬಿತ್ತು; ಈ ವರೆಗೆ ೧೩೧ ಆಳ ಇಂಚು ಮಳೆಯಾಯಿತು.

ನಮ್ಮಕಡೆ ಆಗಬೋಟಿಯು ಮುಂಬಯಿಯಿಂದ ಇನ್ನೇ ಬರುವ ತಾರೀಖು ೧೮ ನೇ ಮಂಗಳವಾರಕ್ಕೆಯಿಂದ ಹೊರಡುವದೆಂಬು ತಿಳಿಯುತ್ತದೆ ಪೆಸೆಂಜರ ಸ್ಟೀಮರು ೨೧ನೇ ಶುಕ್ರವಾರಕ್ಕೆ ಹೊರಡುವನು ಹೊನ್ನಾವರದಲ್ಲಿ ಅಕ್ಟೋಬರ ೩ನೇ ತಾರೀಖಿನ ನಂತರ ಬಂದರವಾಗುವದೆಂದು ಪ್ರಕಟವಾಗಿದೆ.

ಇಲ್ಲಿಯ ಮ್ಯುನಿಸಿಪಾಲಿಟಿಯವರು ಹೆಡ್‌ಬಂದರ ಮಾರ್ಗಕ್ಕೆ ಖಡಿ ಹಾಕಿದ್ದಾರೆ. ಈ ಮಾರ್ಗದ ಮೇಲೆ ವಾಹನಗಳ ಹೆಚ್ಚಿನ ಓಡಾಟವಿಲ್ಲ. ಖಡಿ ಹಾಸಿ ಪ್ರಯತ್ನವನ್ನು ಮಾಡಿದ್ದೇಕೆ? ಆಗಬೋಟಿಯಿಂದ ಇಳಿದು ಬಂದ ಸಾಹೇಬರಿಗೆ ಮ್ಯುನಿಸಿಪಾಲಿಟಿಯ ದೊಡ್ಡಸ್ತನ ತೋರಿಸುವದಾದರೆ ಆ ಮಾತು ಬೇರೆ! ಆದ್ದ ಮಾರ್ಗ-ಓಣಿಗಳ ಕಡೆ ಲಕ್ಷ ಪೂರೈಸಿ ಆ ಕಡೆ ಹೆಚ್ಚಿನ ಖರ್ಚ ಮಾಡಿದರೆ ಉಪಯೋಗವಾಗುವದಾಗಿದೆ. ಗುಂಡದ ಕಡೆ ಬರ-ಹೋಗುವ ಜನರ ತಿರುಗಾಟದ ಬಗ್ಗೆ ಕಾಲ್ದಾರಿ ಇಲ್ಲ, ಅಲ್ಲಿ ಒಂದು ದಾರಿಯನ್ನು ಕಟ್ಟಿಸಬಹುದು.

ಇಲ್ಲಿಯ ಕಟ್ಟೆಗೆ ಡಿಪೋನಲ್ಲಿ ಕಟ್ಟಿಗೆ ಸಿಲ್ಕು ಇಲ್ಲ. ದಿನಾ ೨-೩ ಗಾಡಿಗಳು ಬರುತ್ತವೆ. ಅಷ್ಟರಲ್ಲಿ ಊರವರು ಸಮಾಧಾನಪಡಕೊಳ್ಳಬೇಕು. ಇದರಿಂದ ಜನರಿಗೆ ಬಹಳ ಕಷ್ಟ.

ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನದ ಮೊಕ್ತೇಸರರು ಇಲ್ಲಿಯ ಪಂಚಧರ್ಮಾರ್ಥ ಕಮಿಟಿಯಲ್ಲಿ ಶ್ರೀ ದೇವರ ಲೆಖ್ಖಕ್ಕೆ ಜಮಾ ಇರುವ ಹಣಗಳ ಲೆಖ್ಖಾಚಾರದ ಕುರಿತು ಪಂಚಧರ್ಮಾರ್ಥ ಕಮಿಟಿಯ ಮೇಲೆ ಕಾರವಾರ ೧ನೇ ವರ್ಗದ ಸಬಜಜ್ಜ ಕೋರ್ಟಿನಲ್ಲಿ ದಾವೆ ದಾಖಲ ಮಾಡಿದ್ದಾರೆ.

ಮುಂಬಯಿ 'ಗೌಡಸಾರಸ್ವತ ಬ್ರಾಹ್ಮಣ ಸ್ಕೊಲರಶಿಪ್ ಲೀಗಿಗೆ ವೇ| ಮು| ನಾರಾಯಣ ಪದ್ಮನಾಭ ಭಟ್ಟ, ಮಾಡದೋಳ್ (ಗೋವಾ) ಇವರು ರೂಪಾಯಿ ೧೦೦-೧-೦ ಕೊಟ್ಟು ಆಜೀವ ಸಭಾಸದರಾಗಲೊಪ್ಪಿರುತ್ತಾರಾಗಿಯೂ, ರಾ| ಮಾಧವ ರಾಮಕೃಷ್ಣ ಶ್ಯಾನಭಾಗ ಚಿತ್ತಾಲ ಹಾಗು ಮುಕ್ತ ರಾಮ ಶ್ಯಾನಭಾಗ ಕಂಪನಿಯವರು ೫೧ ರೂಪಾಯಿ ಕೊಟ್ಟು ಸಹಾಯಕರಾಗಲು ಒಪ್ಪಿರುತ್ತಾರಾಗಿಯೂ ಲೀಗಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಹೊನ್ನಾವರ— ಮಘಾ ನಕ್ಷತ್ರದ ಮಳೆ ಭರದಿಂದ ಬಿದ್ದು ತೀರಿತು; ಹುಬ್ಬಾ ನಕ್ಷತ್ರ ಶುರುವಾಗುವಾಗಲೇ ೨ ದಿನ ಬಿಸಿಲು ಬೀಳುತ್ತದೆ. ಮೊನ್ನೆ ಶುಕ್ರವಾರಕ್ಕೆ ವಾಡಿಕೆಯಂತೆ ನಾಗರಿಕರು ಸಮುದ್ರ ಪೂಜೆಯನ್ನು ಸಾಂಗವಾಗಿ ನೆರವೇರಿಸಿದರು

ಮಿ| ದಿವೇಕರರು ಇದ್ದ ಫೋರೆಸ್ಟ ಬಂಗಲೆಯ ಮುಂಗಡೆಯಲ್ಲಿ ಜನರು ವಿಶ್ರಮಿಸುವ ಒಂದು ಕಲ್ಲಿನ ಸೀಟು ಇತ್ತು. ಬೇರೆ ಕಡೆಯಲ್ಲಿ ಹೊಸ ಸೀಟು ಕಟ್ಟಿ ಕೊಡುವ ಆಶ್ವಾಸನದ ಮೇಲೆ ಮ್ಯುನಿಸಿಪಾಲಿಟಿಯಿಂದ ಈ ಸೀಟನ್ನು ಡಿಪಾರ್ಟಮೆಂಟವರು ತೆಗೆದುಹಾಕಿದರು. ಇನ್ನೂ ಹೊಸ ಸೀಟು ಕಟ್ಟಿ ಕೊಡಲಿಲ್ಲ! ಈ ಬಂಗ್ಲೆ ಇದ್ದ ಸ್ಥಳವು ಸೃಷ್ಟಿಸೌಂದರ್ಯಸೇವನಕ್ಕೆ ಬಹಳ ಆಲ್ಹಾದಕರವಾಗಿದ್ದು ಶಾಲೆಯ ಹುಡುಗರೂ, ಸರಕಾರಿ ನೌಕರರೂ, ಬೇರೆ ವ್ಯಾಪಾರಿ ನಾಗರಿಕರೂ ಹುಡಿದ ದಣುವನ್ನು ಕಳಕೊಳ್ಳುವದಕ್ಕಾಗಿ ಮೇಲೆ ವಿಹಾರಕ್ಕಾಗಿ ಹೋಗುತ್ತಾರೆ. ಮ್ಯುನಿಸಿಪಾಲಿಟಿಯವರು ಇಂಥ ನುಸದಣಿ ಜಾಗದಲ್ಲಿ ಸೀಟು ಕಟ್ಟಿಸುವ ವ್ಯವಸ್ಥೆ ಮಾಡಬೇಕು.

ರವಿವಾರ ಸಾಯಂಕಾಲ ೬ ಘಂಟೆಗೆ ಪೋಲೀಸರು ನಿಷ್ಕಾರಣವಾಗಿ ದನಗಳನ್ನು ಹಿಡಿದು ದೊಡ್ಡಿಗೆ ಹಾಕುವ ಕುರಿತು ವಿಚಾರ ಮಾಡುವ ಬಗ್ಗೆ ಹೊನ್ನಾವರದ ನಾಗರಿಕರ ಜಾಹೀರ ಸಭೆಯು ಶ್ರೀ| ಎಮ್. ಡಿ. ಕರ್ಕಿ ಎಮ್. ಎಲ್. ಸಿ ಇವರ ಅಧ್ಯಕ್ಷತೆಯಲ್ಲಿ ನೇರಿತು. ಸಭೆಯ ಉದ್ದೇಶವನ್ನು ಜನರಿಗೆ ವಕೀಲ ಮಿ| ಶಾಸ್ತ್ರಿಗಳು ತಿಳಿಸಿಹೇಳಿದ ತರುವಾಯ ಜನರು ತಮ್ಮ ತಕರಾರುಗಳನ್ನು ಹೇಳಿದರು. ಆ ಮೇಲೆ ಚರ್ಚೆ ನಡೆದು ಈ ಕೆಳಗಿನ ಠರಾವು ಏಕಮತದಿಂದ ಪಾಸಾಯಿತು —

ಹೊನ್ನಾವರ ನಾಗರಿಕರ ಈ ಸಭೆಯು ಡಿಸ್ಟ್ರಿಕ್ಟ ಪೋಲೀಸ ಕಾಯಿದೆಯಂತೆ ಮೆಜಿಸ್ಟ್ರೇಟರು ಘೋಷಿಸಿದ ಹುಕುಂ ಪ್ರಕಾರ ಪೋಲೀಸರು ದನಗಳನ್ನು ಹಿಡಿದು ದೊಡ್ಡಿಯಲ್ಲಿ ಹಾಕುವ ಪದ್ಧತಿಯಿಂದ ಜನರಿಗೆ ಹಿತವೇನು ಆಗುವದಿಲ್ಲವೆಂತ ಕಂಡುಬಂದದರಿಂದ ಅಧಿಕಾರಿಗಳು ಹುಕುಮು ಪರತ ತಕ್ಕೊಳ್ಳಬೇಕೆಂದು ಅಭಿಪ್ರಾಯಪಡುತ್ತದೆ ಮತ್ತು ಆ ಕುರಿತು ಮ್ಯುನಿಸಿಪಾಲಿಟಿಯವರು ಹಾಗು ಈ ಸಭೆಯ ಅಧ್ಯಕ್ಷರು ಮೆ| ಕಲೆಕ್ಟರ ಸಾಹೇಬರ ಸಂಗಡ ಪತ್ರವ್ಯವಹಾರ ನಡಿಸಬೇಕೆಂತಲೂ, ಅಧ್ಯಕ್ಷರು ಈ ವಿಷಯವನ್ನು ಕೌನ್ಸಿಲಿನಲ್ಲಿ ಮುಂದೆ ತರಬೇಕೆಂತಲೂ, ಅದಷ್ಟು ತೀವ್ರವಾಗಿಯೂ ಕಾಯಿದೆ ಪ್ರಕಾರ ಆಗುವ ಹುಕುಮು ತಿರಗಿ ತಕ್ಕೊಳ್ಳುವಂತೆ ಮಾಡಬೇಕೆಂತಲೂ ಸೂಚಿಸುತ್ತದೆ.

ಭಟಕಳ— ಈ ವಾರದಲ್ಲಿ ಬಿಸಿಲು ಬೀಳಲಾರಂಭಿಸಿದೆ. ಸ್ವಲ್ಪ ಮಳೆಯೂ ಬಿತ್ತು. ಬೈಂದೂರ ತಾರಿಯ ಮಕ್ತೇದಾರನಾದ ರಾ| ಕಾಮಯ್ಯ ನಾಯ್ಕ ಎಂಬವರು ತಾರಿ ಹಾಸಲನ್ನು ಜನರಿಂದ ವಸೂಲ ಮಾಡುತ್ತಾರೆ; ಜನರಿಗೆ ದಾಟಿಸುವದಿಲ್ಲ; ದೋಣಿಯನ್ನು ಜನರು ದೂಡಿಕೊಂಡು ಸ್ವಂತ ಪಾರಾದರಾಯಿತು! ಮಂಗಳೂರು ಜಿಲ್ಲಾ ಬೋರ್ಡಿಗೆ ಅರ್ಜಿಯಾದರೆ ಅದಕ್ಕೆ ಉತ್ತರವಿಲ್ಲ. ಜಿಲ್ಲಾ ಬೋರ್ಡು ಇತ್ತ ಸ್ವಲ್ಪ ಲಕ್ಷ ಕೊಡಬೇಕು.

ಕೊಂಗ್ರೆಸ ಕಮಿಟಿಯೊಳಗೆ ಇತ್ತಂಡಗಳು ಈಗ ನಡ ಪೇಟೆಯಲ್ಲಿ ಬೈದಾಡಿಕೊಳ್ಳಹತ್ತಿದ್ದಾರೆ. ಇತ್ತಂಡದ ಪ್ರಮುಖರು ವಿವೇಕಿಗಳಾಗಿ ಕೊಂಗ್ರೆಸ ಹಣದ ಯೋಗ್ಯ ವ್ಯವಸ್ಥೆ ಮಾಡಬೇಕು.

ವೇ| ಮು| ಅನಂತ ಮಂಗೇಶ ಭಟ್ಟ ಇವರು ಶ್ರೀ ಗೋಪಾಲಕೃಷ್ಣನ ಕನ್ನಡ ಚರಿತ್ರೆಯ ಹಸ್ತಪ್ರತಿಯನ್ನು ಬರೆದು ಮುಗಿಸಿದ್ದಾರೆ. ಇದರಲ್ಲಿ ೨೮ ಪ್ರಕರಣಗಳಿವೆ.

ಹಳಿಯಾಳ— ಈ ಮ್ಯುನಿಸಿಪಾಲಿಟಿಯಲ್ಲಿ ಮೂರು ಮುಖ್ಯ ತೀವಾಳನಗಳಾಗಿವೆ. ಸ್ವಾಯನ್ ಕಂಟಕ್ಕೆ ಬಹಿಷ್ಕಾರ ಮಾಡಬೇಕು; ಖಾದಿಯ ಆದುದಿನ ಮೇಲೆ ಕರಗಳನ್ನೆತ್ತುವಳಿ ಮಾಡಲಾಗದು; ಮ್ಯುನಿಸಿಪಾಲಿಟಿಯು ಸ್ವದೇಶಿ ಸಾಮಗ್ರಿಗಳನ್ನೇ ಉಪಯೋಗಿಸಬೇಕು. ಇತರ ಮ್ಯುನಿಸಿಪಾಲಿಟಿಗಳಿಗೆ ಈ ಠರಾವುಗಳು ಆದರ್ಶಭೂತವಾಗಿರುತ್ತವೆ.

ಶಿರ್ಶಿ— ಹಾವೇರಿಯಿಂದ ಇಲ್ಲಿ ವರೆಗೆ ಟಪಾಲನ್ನು ಮೋಟಾರಿನಿಂದ ತರುವ ಕೊಂಟ್ರಾಕ್ಟ ಟಿ. ಎಸ್ ಮೋಟಾರ ಸರ್ವ್ಹಿಸಿಗೆ ಕೊಟ್ಟಿರುತ್ತದೆ. ಟಪಾಲ ತರೋಣವು ಇದೇ ಬರುವ ೬ನೇ ತಾರೀಖಿನಿಂದ ಪ್ರಾರಂಭವಾಗುವದು.

ಗಣೇಶ ಚತುರ್ಥೀ ನಿರ್ಣಯ.

ಗಣೇಶ ಚತುರ್ಥಿಯು ಸೋಮವಾರವೇ? ಮಂಗಳವಾರವೇ? ಎಂಬುದರ ಕುರಿತು ಈ ವರುಷ ವಾದಹುಟ್ಟಿದೆ. ಕೆಲ ಪಂಚಾಂಗಗಳಲ್ಲಿ ಅದಿಗಗಳಿಂದ ಕೂಡಿದ ಸೋಮವಾರವು ವಿನಾಯಕನ ಆರಾಧನೆಗೆ ವಿಶೇಷ ಪ್ರಶಸ್ತವೆಂದೆಣಿಸಿ ಸೋಮವಾರಕ್ಕೇ ಶ್ರೀ ಗಣೇಶ ಚತುರ್ಥಿಯೆಂಬುದೆನಿಸಬೇಕೆಂದು ಹೇಳುತ್ತಾರೆ ಈ ಬಗ್ಗೆ ನಿರ್ಣಯಸಿಂಧು, ಮಾಧವಾಚಾರ್ಯ ಮುಂತಾದ ಗ್ರಂಥಾಧಾರಗಳು ನಮ್ಮ ಕಡೆಗೆ ಒಂದಿರುತ್ತವೆ. ಕೆಲವರು ಮಾರನೇ ದಿನ ಗಣೇಶವ್ರತ ಮಾಡಬೇಕಾಗಿ ಹೇಳುತ್ತಾರೆ. ಇಂಥದೊಂದು ಪ್ರಸಂಗವು ಶ್ರೀ ಶಕೆ ೧೮೧೯ ನೇ ಈಶ್ವರ ಸಂವತ್ಸರದಲ್ಲಿ ಉಂಟಾದಾಗ ಶ್ರೀ ಗೋಕರ್ಣ ಪರ್ತಗಾಳಿ ಮಠದ ಶ್ರೀ ಪೂರ್ಣಪ್ರಜ್ಞತೀರ್ಥ ಶ್ರೀ ಸ್ವಾಮಿಗಳವರು ಚತುರ್ಥಿಯನ್ನು ಮಾರನೇ ದಿನ ಮಾಡಬೇಕೆಂದು ತೀರ್ಪು ಕೊಟ್ಟಿದ್ದರು. ಇದೇ ತೀರ್ಪನ್ನು ಈ ಮಠದ ಶ್ರೀಗಳು ಈ ವರುಷವೂ ಹೊರಡಿಸಿದ್ದಾರೆ ಶ್ರೀ ಗಣೇಶ ಪ್ರಕಾಶದ ರೂಢಿಯು ಮಾಡಿದೆ. ಇಂಥ ವಿಷಯಗಳಲ್ಲಿ ಶಾಸ್ತ್ರಕ್ಕಿಂತ ರೂಢಿಗೇ ಹೆಚ್ಚಿನ ಮಹತ್ವ ಸಿಗಬೇಕು. ಆದರಿಂದ ಆಲ್ಲಲ್ಲಿಯವರು ಶಾಸ್ತ್ರದ ಸೂಕ್ಷ್ಮ ವಾದದಲ್ಲಿ ಬೀಳದೆ, ರೂಢಿಯಿದ್ದಂತೆ ವರ್ತಿಸುವದು ಯುಕ್ತವು.

ವೃತ್ತಸಾರ.

— ಹಿಂದುಸ್ಥಾನಿ ಸೇವಾದಳದ ಶ್ರೀ| ನಾನಾ ಸಾಹೇಬ ಹರ್ಡೀಕರರವರಿಗೆ ರಾಷ್ಟ್ರೀಯ ಚೀನ ಸರಕಾರದ ಪ್ರಧಾನರಾದ ಮಿ| ಚೆಂಗಟಿಂಗ ಟಿಮಾರಿಗರವರು ಪ್ರತಿ ಸಂದೇಶವನ್ನು ಕಳುಹಿ ಭರತಖಂಡದೊಡನೆ ಬಂಧುಭಾವವನ್ನು ವ್ಯಕ್ತಪಡಿಸಿದ್ದಾರೆ; ರಾಷ್ಟ್ರೀಯ ಸಭೆಯು ಕೈಕೊಂಡ ಕಾರ್ಯವು ಫಲಪ್ರದವಾಗಲೆಂದೂ ಬಯಸಿದ್ದಾರೆ.

— ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಡಾ| ರಾಮಯ್ಯರು ಹೊಸ ಪದವೀಧರರಿಗೆ ಹಳ್ಳಿಗಳ ಜೀರ್ಣೋದ್ಧಾರ ಮಾಡಲು ಬೋಧಿಸಿದರು. ಪದವೀಧರರು ನಗರದೇವಿಯ ಮೋಹಪಾಶಗಳಿಗೆ ಮರುಳಾಗದೆ ಗ್ರಾಮಗಳನ್ನು ಸೇರಿ ಅಲ್ಲಿಯೇ ತಮ್ಮ ಸಂಸಾರ ನಡಿಸಲುದ್ಯುಕ್ತರಾಗಬೇಕಾಗಿ ಬೋಧಿಸಿದರು ಗ್ರಾಮಗಳಲ್ಲಿ ಬೇಸಾಯ ಕೈಗಾರಿಕೆ ವ್ಯಾಪಾರ ಮೊದಲಾದವುಗಳನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಪಡಬೇಕಾಗಿಯೂ ಬೋಧಿಸಿದರು.

— ಸಾಗರದಲ್ಲಿ ಬೇಕಷ್ಟು ಮಳೆಯಾಗಲಿಲ್ಲ. ತೀರ್ಥಹಳ್ಳಿಯಲ್ಲಿ ಮಹಾ ಮಳೆಯಿಂದ ಬೆಳೆಗೆ ಕಳೆ ಬಂದಿದೆ.

— ಅಮೇರಿಕೆಯಲ್ಲಿ ಮೋಟಾರು ತಿಕೀಟು ಪಡೆಯಲು ಬಹಳ ಅನುಕೂಲ. ಹಣವನ್ನು ಯಂತ್ರದಲ್ಲಿ ಹಾಕಿದರೆ ಅದಕ್ಕೆ ತಕ್ಕ ಟಿಕೀಟು ಕೈಸೇರುತ್ತದೆ. ಯಂತ್ರ ನೆಟ್ಟಗಿರದಿದ್ದರೆ, ದುಡ್ಡು ಹೋದಲೆಕ್ಕಕ್ಕೇ! ಎಷ್ಟು ಚಿನ್ನದ ಯಂತ್ರ ಯುಗವಿದು.

— ಮುಂಬಯಿ ಹಾಗು ಕಲಕತ್ತ ಮ್ಯುನಿಸಿಪಾಲಿಟಿಯವರು ಸೈಮನ್ ಕಮಿಟಿಗೆ ಬಹಿಷ್ಕಾರ ಹಾಕಬೇಕೆಂದು ನಿರ್ಧರಿಸಿದ್ದಾರೆ.

— ಮುಂಬಯಿ ಶಾಯಿದ ಕೌನ್ಸಿಲಿನ ಸಪ್ಟಂಬರದ ಅಧಿವೇಶನದಲ್ಲಿ ಬೆಳ್ಳ ಹೋಲಗಳನ್ನು ಪುನರ್ಘಟಿಸುವ ಶಾಸನದ ವಿಚಾರವಾಗಲಿಕ್ಕಿಲ್ಲವಾಗಿ ಈಗ ಪ್ರಕಟ ಹೊಂದಿದೆ.

— ಪಂಡಿತ ಜವಾಹರಲಾಲ ನೆಹರೂರವರ ನೇತೃತ್ವದಲ್ಲಿ ರಾಷ್ಟ್ರೀಯ ಸಭೆಯು ಆಶ್ರಯದಲ್ಲಿ ಸ್ವಾತಂತ್ರ್ಯ ಪಕ್ಷವೊಂದು ನಿರ್ಮಾಣಹೊಂದುವದು.

— ಜಮಖಂಡಿ ಪೇಟೆಯಲ್ಲಿ ಮಳೆಯಿಲ್ಲ. ಉದ್ದು-ಎಳ್ಳು ಬೆಳೆ ಆಗಿಯಿಲ್ಲ. ಮೇಲೆ ಬಿಟ್ಟಗಳ ಉಪದ್ರವ ಇದೆ. ಶಿಕ್ತ್ರ ಸಹಿಗೂ ಮಳೆಯಿಲ್ಲ. ಛತ್ರದ ಬೆಳೆ ಒಣಗುತ್ತಿದೆ.

— ತಂಜಾವರದಲ್ಲಿ ಒಬ್ಬನು ಬೀದಿ ಸೇದು ಬಿಸಾಡಿದ ಬೀಡಿ ಉಂಡಿನ ಬೆಂಕಿ ನಂದಿರಲಿಲ್ಲ; ಅದರಿಂದ ಬೆಂಕಿಯು ಉದ್ಭವಿಸಿ ೩ ಅಂಗಡಿಗಳಿಗೆ ಬೆಂಕಿ ತಗಲಿ ೩೦೦೦ ರೂಪಾಯಿಗಳ ನಷ್ಟ!

— ಅಫಗಾಣಿಸ್ಥಾನದಲ್ಲಿ ೧೦ ನೇ ಸ್ವಾತಂತ್ರ್ಯ ಜಯಂತಿಯು ಜರುಗಿತು. ಅಮೀರರಾದ ಅಮಾನುಲ್ಲಾಖಾನರವರು ಸ್ವಾತಂತ್ರ್ಯವನ್ನು ಶಾಂತ್ವಿಸ್ವ ಪ್ರಜೆಗಳಿಗೆ ಬೋಧಿಸಿದರು.

— ಮೈಸೂರಿನಲ್ಲಿ ದಸರೆಯ ಹಬ್ಬದ ಸಮಯ ಪ್ರದರ್ಶನ ನಡೆಯುವದು. ಅಖಿಲ ಭರತ ಖಂಡದೊಳಗಿನ ಕಲಾ ಕೌಶಲ್ಯದ ವಸ್ತುಗಳು ಪ್ರದರ್ಶಿಸಲ್ಪಡುವವು.

— ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಮಂಗಳೂರಿನ ಅಧಿವೇಶನವು ನವಂಬರ ತಾ. ೧೬–೧೭ನೇದಿನ ಮಂಗಳೂರಿನಲ್ಲಿ ಸೇರುವದು.

— ನಿಜಾಮ ರಾಜ್ಯದಲ್ಲಿ ಯಾರೂ ಭಿಕ್ಷೆ ಬೇಡಬಾರದೆಂದು ರಾಜಾಜ್ಞೆ. ಇದನ್ನು ಉಲ್ಲಂಘಿಸುವವರಿಗೆ ಕಾರಾಗೃಹ ವಾಸವಂತೆ. ಜೀವನೋಪಾಯ ಮಾಡಿಕೊಳ್ಳದೆ ಭಿಕ್ಷೆ ಬೇಡಬಾರದೆಂದು ವಿಧಿಸಿದರೆ, ಭಿಕ್ಷುಕರು ಊರಲ್ಲಿ ಅಲೆದಾಡುವದಕ್ಕಿಂತ ಕಾರಾಗೃಹವಾಸದಲ್ಲೇ ಸೇರಿ ಹೋಗುವರು. ನಿಜಾಮರು ಆಲೋಚಿಸತಕ್ಕ ವಿಷಯ.

— ಹಿಂದುಸ್ಥಾನ ಸೇವಾದಳದ ಕಾರ್ಯದರ್ಶಿಗಳಾದ ಡಾ। ನಾರಾಯಣರಾವ ಹರ್ಡೀಕರರವರು ಕರ್ನಾಟಕ ಸ್ವರಿಗೆ ರಾಷ್ಟ್ರೀಯ ಸಭೆಯ ಸಭಾಸದರಾಗಿ ಸೇರಬೇಕೆಂದು ಬೋಧಿಸಿದ್ದಾರೆ. ಇದೇ ತಿಂಗಳ ಕೊನೆಯೊಳಗೆ ಸಭಾಸದರಾಗತಕ್ಕದ್ದು. ಕರ್ನಾಟಕವು ಸಭಾಸದರ ಸಂಖ್ಯೆಯಲ್ಲಿ ಈ ವರ್ಷ ೧ನೇ ನಂಬರು ಪಡೆದಿದೆ. ಅದನ್ನು ಕಾಪಾಡಿಕೊಳ್ಳಬೇಕಾಗಿ ಶ್ರೀ। ನಾರಾಯಣರಾವ ಹರ್ಡೀಕರರವರ ಆಗ್ರಹಪೂರ್ವಕ ಅರಿಕೆ.

— ತ್ರಿವಾಂಕೂರ್ದಿಯ ಕಾಲೇಜ ಬೋರ್ಡಿನವರು ತಮ್ಮ ಕೈಕೆಳಗಿನ ಎಲ್ಲ ಶಾಲೆಗಳಲ್ಲಿ ನೂಲುವ ಶಿಕ್ಷಣ ಕೊಡುವ ನಿರ್ಧಾರ ಮಾಡಿದ್ದಾರೆ.

— ಪೂರ್ವ ಬಂಗಾಲದ ಪದ್ಮಾ ನದಿಗೆ ನೆರೆ ಬಂದು ಸಿರಾಜಗಂಜ ಪಟ್ಟಣವೂ, ಭರೀದಪುರದ ಪ್ರದೇಶವೂ ಜಲಮಯವಾಗಿತ್ತು. ಅನೇಕ ಹಳ್ಳಿಗಳು ಕೊಚ್ಚಿಹೋದವು.

— ಉಡುಪಿಯ ಶ್ರೀ ಕೃಷ್ಣ ಪುರ ಮಠದವರು ಪಾಲಿಯಾಳದ ಹೊಸ ಉತ್ತರಾಧಿಕಾರಿಯನ್ನು ನಿರುಪಾಯವಾಗಿ ನೇಮಿಸಿಕೊಂಡರು. ಈತನು ಆನೆಗೆ ನಾಯಿಯಂತೆ ಸಂಕೋಲೆ ಕಟ್ಟದೆ ವಿಜೃಂಭಣೆಯಿಂದ ಇಡೀ ಊರಲ್ಲಿ ಮೆರಿಸಿ ಊರಿಗೆ ಕರೆದನು. ಜನರು ಈ ಸ್ನೇಹಭಾವಕ್ಕೆ ಮೆಚ್ಚಿ ಆತನಿಗೆ ಹೊಡಮಾರಿಗಳಿಂದ ಸತ್ಕರಿಸಿದರು.

— ನಾಸಿಕದೊಳಗಿನ ಪಂಚವಟಿಯಲ್ಲಿ ಶ್ರೀ ರಾಮನಾಮಾಧಾರ ಆಶ್ರಮದ ಶಂಕುಸ್ಥಾಪನೆಯ ಸಮಾರಂಭವು ಶ್ರೀ ಶಂಕರಾಚಾರ್ಯರಾದ ಡಾ। ಕುರ್ತಕೋಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

— ವಿಜಾಪುರದ ಜಿಲ್ಲಾ ಬೋರ್ಡಿನವರು ಇಂಜನಿಯರರಾದ ಮಿ। ಜೇಶವಾಯವರನ್ನು ಬೇಕಾಯಿದೇಶೀರ ರೀತಿಯಿಂದ ಬಡತರ್ಫ ಮಾಡಿದ ಬಗ್ಗೆ ಬೋರ್ಡಿನ ಸೋಕರು ಮನೆ ಪಡೆದು, ಬೋರ್ಡಿಗೆ ಪ್ರತಿಕೂಲವಾದ ನಿರ್ಣಯ ಆಗಿದೆ. ಇಷ್ಟು ಬಲಾತ್ಕಾರವೇಕೆ?

— ಪುಣೆ ಜಿಲ್ಲೆಯ ಆಂಬಾಪುರ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ನಿರಂಕುಶ ಕಾರಭಾರ ನಡಿಸಿದ ಬಗ್ಗೆ ಮುಂಬಯಿ ಸರಕಾರವು ಇಡೀ ಮ್ಯುನಿಸಿಪಾಲಿಟಿಯನ್ನೇ ರದ್ದುಪಡಿಸಿ ಸರ್ವಾಧಿಕಾರವನ್ನು ವಹಿಸಿಕೊಂಡಿದೆ.

— ಸೊಂಡೂರ ಮಹಾರಾಜರವರು ತಮ್ಮಲ್ಲಿ ಪುರಾತನ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ಒಪ್ಪಿರುವರಂತೆ. ಶ್ರೀ ಹಳಕಟ್ಟಿಯವರು ಮಾಡಿದ ಪ್ರಯತ್ನಗಳು ಸದ್ಯಕ್ಕೆ ಫಲಿಸಿದವು. ಕರ್ನಾಟಕ ಪುರಾತನ ಸಂಶೋಧನ ಕಾರ್ಯಕ್ಕೆ ಇದೊಂದು ದೊಡ್ಡ ಆಶ್ರಯ.

— ಉಪ್ಪಿನಂಗಡಿಯಲ್ಲಿ ಒಬ್ಬ ಮಾಪಿಳ್ಳೆ ಜಾತಿಯ ಕಳ್ಳನಿಗೆ ಸೆರೆಹಿಡಿದಿದ್ದಾರೆ. ಈತನು ದೊಡ್ಡ ಕಳ್ಳನು. ಪ್ರಾಯ ೨೫ ವರುಷ. ಇವನು ಏಳು ದಿನಗಳಲ್ಲಿ ೪೮ ಮನೆಗಳನ್ನು ಹೊಕ್ಕನು. ಒಂದು ದಿನ ೧೧ ಮನೆ ಹೊಕ್ಕಿ ಕಳುವು ಮಾಡಿದನು. ೨೫ ವರುಷ ಪ್ರಾಯದಲ್ಲಿ ಈತನು ೧೩ ಬಾರಿ ಮದುವೆಯಾಗಿ ೧೩ ಕಾಂತಿ ಹೆಂಡರನ್ನೂ ಬಿಟ್ಟನು. ೧೪ ನೇ ಬಾರಿ ಉಪ್ಪಿನಂಗಡಿಯ ಹೆಣ್ಣು ಮದುವೆಯಾಗಿದ್ದನು!

— ಉತ್ತರ-ದಕ್ಷಿಣ ಜಿಲ್ಲೆಗಳ ಕಥೋಲಿಕ ಎಸೋಸಿಯೇಶನ್ನಿನ ಸರಕಾರಿ ಪಕ್ಷಪಾತಿಗಳು ಸ್ಥಾಯಿನ್ ಕಾಟಕ್ಕೆ ಭಿಟ್ಟಯಾಗಿ ಪ್ರಸಾದ ಪಡೆಯಬೇಕೆಂದು ಹೊಂಚು ಹಾಕಿದ್ದರು. ಆದರೆ, ಎಸೋಸಿಯೇಶನ್ನಿನ ತರುಣರು ಒಪ್ಪಲಿಲ್ಲ. ರಾಜಕಾರಣದಲ್ಲಿ ಸೇರಲಿಕ್ಕೆ ಎಸೋಸಿಯೇಶನಿನ ನಿಯಮಗಳಂತೆ ಸಾಧ್ಯವಿಲ್ಲೆಂಬ ಕಾರಣವು ಒಂದು ಸ್ಥಾವನ್ ಕಾಟಕ್ಕೆ ಅಪ್ರತ್ಯಕ್ಷ ಬಹಿಷ್ಕಾರ ಬಿದ್ದಿದೆ.

— ಹುಬ್ಬಳ್ಳಿಯಲ್ಲಿ ಕರ್ನಾಟಕ ವಿದ್ಯಾರ್ಥಿಗಳು ಸಭೆ ಸೇರಿ ಫೀ ಏರಿಕೆಯ ಸರಕಾರಿ ಧೋರಣವನ್ನು ನಿಷೇಧಿಸಿದರು.

— ಜಕರ ಕೆಂಪು ಕಾಮಿಲೆ ತಗಿದು ಕಾಡಿಯುವದರಿಂದ ಆರೋಗ್ಯ ಹಾನಿಯಾಗುತ್ತದೆಂದು ಪಾರ್ಲಿಮೆಂಟಿನ ಸಭಾಸದರಾದ ಮಿ। ಪರ್ನನ್ ಡೇವಿಸರವರು ಪಾರ್ಲಿಮೆಂಟಿನಲ್ಲಿ ಕರ ವಿರೆಕೆಯ ಶಾಸನದ ಮೇಲೆ ವಾದಿಸುತ್ತಾ ಮಾತನಾಡಿದರು.

— ಬಂಗಾಲ ಪ್ರಾಂತದ ವಿಷ್ಣುಪುರದಲ್ಲಿ ದೊಡ್ಡ ದೇವಾಲಯ ಒಂದು ದೊರೆತಿದೆ. ಈ ದೇವಾಲಯದ ಮೇಲೆ ಕೃಷ್ಣ ವಿಷ್ಣು-ಹಿಂದು-ಬುದ್ಧ ಜೈನ ಮುಂತಾದ ದೇವರ ನಕ್ಷೆಗಳಿವೆ. ಈ ದೇವಾಲಯವು ಗುಪ್ತರ ಕಾರಕೀರ್ದಿಯದೆಂದು ಪುರಾತನ ವಸ್ತುಸಂಶೋಧನ ಖಾತೆಯ ರಾ। ದೀಕ್ಷಿತರವರು ಅಭಿಪ್ರಾಯಪಡುತ್ತಾರೆ. ಈ ದೇವಾಲಯದ ನಕ್ಷೆಗಳ ಮೇಲಿಂದ ಆ ಕಾಲಕ್ಕೆ ಸಮಾಜದಲ್ಲಿ ಐಕ್ಯಭಾವವಿತ್ತೆಂದು ತಿಳಿಯಬೇಕಾಗಿಯೂ ರಾ। ದೀಕ್ಷಿತರ ಅಭಿಪ್ರಾಯ.

— ಆರ್ಯಸಂಸ್ಕೃತಿ ಹಾಗು ವೇದ-ಧರ್ಮಗಳ ಅಭ್ಯಾಸ ಪಡಿಸುವದಕ್ಕಾಗಿ ಅಮೇರಿಕೆಯಲ್ಲಿ ವಿದ್ಯಾಲಯ ಸ್ಥಾಪನೆಯಾಗುವದಿದೆ.

— ಸರ್ವಪಕ್ಷೀಯ ಪರಿಷತ್ತಿನಲ್ಲಿ ಕುಳ್ಳಾದ ಮಾಡಿಸ ಬೇಕಾಗ ಪಂಡಿತ ಮೋತಿಲಾಲ ನೆಹರೂರವರು ಸ್ವಾತಂತ್ರ್ಯದ ಧ್ಯೇಯಕ್ಕೆ ಇಡೀ ಹಿಂದುಸ್ಥಾನದಲ್ಲಿ ಬೆಂಬಲವಿಲ್ಲವಾಗಿ ಉದ್ಗರಿಸಿ ಹಾಗೆ ತಮಗೆ ತೋರಿದರೆ ಈ ರಿಪೋರ್ಟನ್ನು ಹಾಳು ಹರಿದು ಹಾರಿ ಹೋಗು ಮಾಡಲು ತಯಾರಿದ್ದೇನೆಂದು ಹೇಳಿದರು.

— ಹೊಸ ದಿಲ್ಲೀ ಪಟ್ಟಣವನ್ನು ರಚಿಸುವದಕ್ಕಾಗಿ ಹಿಂದುಸ್ಥಾನ ಸರಕಾರವು ೧೫ ಕೋಟಿ ರೂಪಾಯಿಗಳನ್ನು ಖರ್ಚ ಮಾಡಿತು. ಇದು ಸಂಪೂರ್ಣ ವ್ಯರ್ಥವೆಂದು ಹಿಂದುಸ್ಥಾನ ಸರಕಾರದ ಆದಾಯ-ಖರ್ಚಿನ ಚೌಕಶಿ ಮಾಡುತ್ತಿರುವ ಕಮೀಟಿಯ ಸಭಾಸದರಾದ ರಾ। ಬಿ ದಾಸರವರು ಅಭಿಪ್ರಾಯಪಟ್ಟಿದ್ದಾರೆ.

— ಜಮುನದೊಳಗಿನ ಕೊವೆರೋ ವಿದ್ಯುತ್ಕಾರಖಾನೆಯು ಹಾರಿ ಒಡೆದು ೩೦ ಮಂದಿಗಳು ಜಲಸಮಾಧಿಹೊಂದಿದರು.

— ಆಗ್ರಾದಲ್ಲಿ ತ್ರಿದಂಡಿ ಸನ್ಯಾಸಿಯ ಗಲಭೆ! ೭ ದಿನಗಳ ವರೆಗೆ ಈ ಸನ್ಯಾಸಿಯು ಅಪಕ್ಷಯೋಗದ ದೊಡ್ಡ ದೊಡ್ಡ ಚಮತ್ಕಾರಗಳನ್ನು ತೋರಿಸಿದನು. ಸ್ತ್ರೀ-ಪುರುಷರು ಅಂತುಗಟ್ಟಿ ದರ್ಶನಕ್ಕೆ ಸೇರುತ್ತಿದ್ದರು. ಸ್ತ್ರೀದರ್ಶನ ಮಾಡಕೂಡದ ಸನ್ಯಾಸಿಯು ಜನಕ್ಕಾರಿಗೆ ಒಳ್ಳೇ ಕಳ ಪಡುತ್ತಿತ್ತು. ೬ ದಿನ ಈ ಪ್ರದರ್ಶನವಾಯಿತು. ೭ನೇ ದಿನ ರಾತ್ರಿ ೫ ಮಂದಿ ಸುಭದ್ರಾ ದೇವಿಯರನ್ನು ಈ ತ್ರಿದಂಡಿಯು ಕರಕೊಂಡು ಪಾರಾದನು. ತ್ರಿದಂಡಿ ಅರ್ಜುನನಿಗಿಂತ ಈ ಸನ್ಯಾಸಿಯ ಪರಾಕ್ರಮ ಹೆಚ್ಚು.

— ಚೀನ ದೇಶದ ೬೦೧ ಹೂಕಂಗ ಎಂಬ ಹಡಗು ಮುಳಗಿ ೫೦೦ ಜನರು ಸತ್ತರು.

— ಬಾಳೆ ಹೂವನ್ನು ಇಜ್ಜಿ ರಸ ತಗೆದು ಮುಕ್ಕಾಲು ತೊಲೆಯಂತೆ ತ್ರಿಕಾಲ ಸೇವಿಸಿದರೆ ಕ್ಷಯ ಬೇನೆಯು ವಾಸಿಯಾಗುತ್ತದೆಂದು ಹೇಳುತ್ತಾರೆ.

— ಪಂಚಾಂಗ ಪ್ರದರ್ಶನ ಕಮೀಟಿಯು ಟಿಳಕ ಪಂಚಾಂಗದಂತೆ ಈ ತಿಂಗಳು ಭಾದ್ರಪದ ತಿಂಗಳು. ಅದರಿಂದ ಕಳೆದ ಶುದ್ಧ ಚತುರ್ಥಿಗೆ ಮುಂಬಯಿ, ಪುಣೆ ಮುಂತಾದ ಪಟ್ಟಣಗಳೊಳಗಿನ ಕೆಲವು ಶುದ್ಧ ಪಂಚಾಂಗ ಪ್ರಿಯರು ಶ್ರೀ ಗಣೇಶ ಮೂರ್ತಿಯ ಪೂಜೆ ಮಾಡಿ ವಿಸರ್ಜಿಸಿದರು. ಮುಂಬಯಿಯಲ್ಲಿ ೫೦-೬೦ ಗಣಪತಿ ವಿಸರ್ಜಿಸಿ ಳು ಮುಳುಗಿಸಲ್ಪಟ್ಟವು' ಪೋಲೀಸ ಪಹರೆ ಕಠಿಣವಾಗಿತ್ತು!!

— ಬಾಗೇವಾಡಿಯಲ್ಲಿ ಈ ವಾರವು ಪ್ರದರ್ಶನ ವಾರವು. ಶಿಕ್ಷಣ ಪ್ರದರ್ಶನವಿದೆ, ದನಗಳ ಪ್ರದರ್ಶನವಿದೆ. ಜಾತ್ರೆ ಇದೆ. ವೇಶ್ಯೆಯರ ನರ್ತನವೂ ಇದೆ. ವಿಜಾಪುರಿಗೆ ದೊಡ್ಡದೊಂದು ಪರ್ವಣಿ.

— ಮುಂಬಯಿ ಇಲಾಖೆಯಲ್ಲಿ ೧೯೨೭ನೇ ಸಾಲಿನಲ್ಲಿ ೩೪೨೭೦ ಮಂದಿಗಳು ಸರಕಾರದ ಆತಿಥ್ಯ ಪಡೆದರು. ಇವರ ಬಗ್ಗೆ ಸರಾಸರಿ ೧೯೫೦ ರೂಪಾಯಿಗಳಂತೆ ವಾರ್ಷಿಕ ಖರ್ಚ ಬಂತು. ಅಲ್ಲದೆ ೧೧॥ ರೂಪಾಯಿಗಳಂತೆ ಇವರಿಂದ ಕೂಲಿಗೆ ಪ್ರಾಪ್ತಿಯಾಯಿತು. ಸರಕಾರವು ಖರ್ಚ ವಿಚಾರ ಮಾಡುವದಲ್ಲಿತ್ತು.

— ಮಹಾಯುದ್ಧ ಸಮಯ ಯುವರಾಜರು ಫ್ರಾನ್ಸದೇಶದ ಒಬ್ಬ ಒಕ್ಕಲಿಗನ ಮನೆಯಲ್ಲಿ ಆಶ್ರಯ ಪಡೆಯಬೇಕಾಯಿತು. ಸದ್ಯಕ್ಕೆ ಫ್ರಾನ್ಸದೇಶಕ್ಕೆ ಹೋದಾಗ ಯುವರಾಜರು ಅಲ್ಲಿ ಹೋಗಿ ಆತಿಥ್ಯ ಸ್ವೀಕರಿಸಿದರಂತೆ! ಇವರು ನೀವು ಯುವರಾಜರು ಇನ್ನೂ ಕೊಟ್ಟ ಸುದ್ದಿಯೇನು ಪ್ರಕಟವಾಗಿಲ್ಲ. ಪುನಃ ಆ ಮನೆಗೆ ಹೋದ ವಾರ್ತೆಯಿಂದ ಪರೀ ಯುವರಾಜರು ಉದಾರ ಧೀರರೆಂದು ಎಲ್ಲರ ಅಂಬೋಣ.

— ಬ್ರಿಟಿಶ ಸಾಮ್ರಾಜ್ಯ ಸರಕಾರವು ಇರಾಕ ಆಚಾತವಲ್ಲಿಯೂ ಸಿಂಗಾಪುರದಲ್ಲಿಯೂ ವಿಮಾನ ಸ್ಥಾನಗಳನ್ನು ರಚಿಸುವ ಯೋಜನೆ ಮಾಡಿದೆ. ಯುದ್ಧಕಾಲದ ತಯಾರಿಯೆಂದು ಹೇಳುತ್ತಾರೆ. ಯುದ್ಧ ಪ್ರತಿಬಂಧಕ ಕರಾರಿನ ಪುಣ್ಯಕರ್ಮ ಇವರೇ!

— ವಿಜಾಪುರ ಜಿಲ್ಲೆಯ ಬೂದಗಟ್ಟಿ ಗ್ರಾಮದೊಳಗಿನ ಪಟೇಲರು ಈಗ ಪ್ರಾಮಾಣಿಯಮೇಲಿಲ್ಲ ಅಲ್ಲಿ ಒಂದು ರೈತರ ಸಭೆಯಾಯಿತು. ರಾ। ದತ್ತಾತ್ರಯ ನಾಗೇಶ ಎಂಬವರು ರೈತರ ಹೀನ ಸ್ಥಿತಿಯನ್ನು ವರ್ಣಿಸಿದರು. ಆದನ್ನು ಸುಧಾರಿಸುವ ಉಪಾಯಗಳನ್ನು ಸೂಚಿಸಿದರು. ಕೊನೆಯಲ್ಲಿಯೇ ಪಟೇಲರಿಗೆ ಇದೇಕ ಬಂತು! ಸಭೆಯನ್ನು ಇಲ್ಲಿಂದಲ್ಲೇ ನಿಲ್ಲಿಸಬೇಕಾಗಿ ಹುಕುಮು ಮಾಡಿದರು. ಆ ಹುಕುಮು ಯಾರೂ ಕೇಳಲಿಲ್ಲ.

ಮಹಾತ್ಮರ ಆತ್ಮಚರಿತ್ರೆ.

(೧೯) ಸುಶೀಲ ಪ್ರಾಂತಾಧಿಪರಿದ್ದಾಗ

ಹಿಂದಿನ ಅಧ್ಯಾಯಗಳಲ್ಲಿ ವರ್ಣಿಸಿದಂತೆ ಸಮಾಜಸೇವೆಯ ಕಾರ್ಯವು ನಡೆಯುತ್ತಿದ್ದಾಗ ರೈತರ ದೂರುಗಳನ್ನು ಕೇಳಿಕೊಂಡು ಬರೆದುಕೊಳ್ಳುವ ಕೆಲಸವು ಭರದಿಂದ ಸಾಗಿತ್ತು. ಸಾವಿರಾರು ಜನರ ಹೇಳಿಕೆಗಳನ್ನು ಬರೆದುಕೊಂಡಾಯಿತು. ಅದರಿಂದ ಪ್ರಾಂತದಲ್ಲಿ ಬಹಳ ಜಾಗ್ರತಿ ಹುಟ್ಟಾಯಿತು. ದಿನಾ ಫಿರ್ಯಾದಿ ಹೇಳಲು ರೈತರು ತಂಡುಗಟ್ಟಿ ಬರುತ್ತಿದ್ದರು. ಅದನ್ನು ನೋಡಿ ತೋಟಿಗ ಸಾಹುಕಾರರು ಕಿಡಿಕಿಡಿಯಾದರು. ನನ್ನ ಚೌಕಶಿಯ ಕೆಲಸದ ಫಲವನ್ನು ಅಳಿಸಲು ಶಕ್ಯವಾದದ್ದೆಲ್ಲ ಪ್ರಯತ್ನ ನಡಿಸಿದರು. ಒಂದು ದಿನ ಬಿಹಾರ ಸರಕಾರದಿಂದ ನನಗೊಂದು ಪತ್ರ ಬಂತು. ಅದರ ತಾತ್ಪರ್ಯವೇನಂದರೆ — ನಿಮ್ಮ ಚೌಕಶಿಯ ಕೆಲಸವು ನಡೆಯಹತ್ತಿ ಬಹಳ ಕಾಲವಾಯಿತು. ಅದನ್ನು ಈಗ ತೀರಿಸಿಕೊಂಡು ನೀವು ಬಿಹಾರದ ಹೊರಹೊರಟು ಹೋಗಬಹುದಲ್ಲವೇ? ಆ ಪತ್ರವು ಸಭ್ಯ ಭಾಷೆಯಲ್ಲಿ ಬರೆಯಲ್ಪಟ್ಟಿತ್ತು, ಅರ್ಥ ಮಾತ್ರ ಸ್ಪಷ್ಟವಿತ್ತು. ನಾನು ಉತ್ತರ ಬರೆದೆ. ಈ ಚೌಕಶಿಯ ಕೆಲಸವು ಇನ್ನೂ ನಡೆಯುವದವಶ್ಯವಿದೆ. ಜನರ ಸಂಕಷ್ಟಗಳು ದೂರವಾದ ಹೊರತು ಬಿಹಾರದಿಂದ ಮರಳುವ ಆಲೋಚನೆಯಿಲ್ಲವೆಂದು ನಾನು ತಿಳಿಸಿದೆನು. ರೈತರ ದೂರುಗಳು ನಿಜವಾದವೆಂದು ಸರಕಾರವು ಎಣಿಸಿ ಅವನ್ನು ಪರಿಹರಿಸಬಹುದು; ಶಕ್ಯವಾದರೆ ನನ್ನ ಚೌಕಶಿಯ ಕೆಲಸಕ್ಕೆ ತಾನಾಗಿ ತಡೆಬೀಳುವದೆಂದು ನಾನು ಬರೆದೆನು. ಅಥವಾ ಸರಕಾರಿ ಚೌಕಶಿ ಮಾಡುವಂಥ ಪ್ರಕರಣವಿರುವದಾಗಿ ನನ್ನ ಚೌಕಶಿಯ ಮೇಲಿಂದ ಸರಕಾರವು ಎಣಿಸಿ ಕೂಡಲೆ ಚೌಕಶಿಯ ಮಂಡಳವನ್ನು ನೇಮಿಸಿದರೆ, ನನ್ನ ಕೆಲಸ ಮುಗಿಯಿತಾಗಿಯೂ ನಾನು ಬರೆದೆನು.

ಆ ಕಾಲಕ್ಕೆ ಸರ್ ಎಡ್ವರ್ಡ ಗೇಟ ಎಂಬವರು ಲೆಫ್ಟನೆಂಟ ಗವರ್ನರರಿದ್ದರು. ಅವರು ತಮಗೆ ಬೆಟ್ಟಿಯಾಗಬೇಕಾಗಿ ನನಗೆ ಬರೆದರು. ಚೌಕಶಿ ಮಂಡಳವನ್ನು ನೇಮಿಸಲಿಕ್ಕೂ ಒಪ್ಪಿದರು. ನನಗೆ ಮಂಡಳದ ಮೆಂಬರನಾಗಬೇಕಾಗಿ ಹೇಳಿದರು. ಉಳಿದ ಮೆಂಬರರ ಹೆಸರುಗಳನ್ನು ನಾನು ತಿಳಕೊಂಡೆ. ಜೊತೆಗಾರರೊಡನೆ ಆಲೋಚಿಸಿ ಮಂಡಳದ ಮೆಂಬರನಾಗಲು ಒಪ್ಪಿದೆನು. ಒಂದು ಶರ್ತು — ಮಂಡಳದ ಮೆಂಬರನಾಗಿ ಕೆಲಸ ಮಾಡುತ್ತಿರುವಾಗ, ಈಗಿನ ಜೊತೆಗಾರರೊಡನೆ ಆಲೋಚಿಸಲು ನನಗೆ ಪ್ರತಿಬಂಧವಿರಕೂಡದು. ನಾನು ಮಂಡಳದಲ್ಲಿ ಸೇರಿದರೂ ರೈತರ ಪ್ರತಿನಿಧಿಯೆಂಬ ಸಂಗತಿಯನ್ನು ಸರಕಾರವು ಲಕ್ಷ್ಯದಲ್ಲಿಡತಕ್ಕದ್ದು. ಸರಕಾರಿ ಮಂಡಳದಿಂದ ನನಗೆ ಸಮಾಧಾನವಾಗದಿದ್ದಲ್ಲಿ ರೈತರಿಗೆ ಅವಶ್ಯವುಳ್ಳ ಸಲಹೆಗಳನ್ನು ಕೊಡಲು ನನಗೆ ಯಾವದೇ ಪ್ರತಿಬಂಧವಿರಬಾರದು.

ಸರ್ ಎಡ್ವರ್ಡ ಗೇಟರವರು ನನ್ನ ಎಲ್ಲ ಶರತ್ತುಗಳನ್ನು ಒಪ್ಪಿಕೊಂಡರು. ಅವೆಲ್ಲವೂ ನ್ಯಾಯವಾದವೆಂದೂ ಯೋಗ್ಯವೆಂದೂ ಅವರ ಅಭಿಪ್ರಾಯವಾಯಿತು. ಸರಕಾರಿ ಮಂಡಳವನ್ನು ನೇಮಿಸುವ ಪ್ರಕಟನೆಯಾಯಿತು. ಪರಲೋಕವಾಸಿ ಸರ್ ಫ್ರೆಂಕ ಸ್ಲೈಯ್‌ರವರು ಕಮೀಟಿಯ ಚೇರ್ಮನ್ನರಾದರು. ಕಮೀಟಿಯವರು ರೈತರಿಗೆ ಅನುಕೂಲವಾದ ನಿರ್ಣಯ ಕೊಟ್ಟರು. ತೋಟಿಗರು ಒಕ್ಕಲಿಗರ ಕಡೆಯಿಂದ ಎತ್ತುವ ಹಾಕುವ ಕೆಲ ಬಾಬುಗಳು ಕಾಯಿದೆಗೆ ಸಮ್ಮತವಲ್ಲೆಂದು ಅಭಿಪ್ರಾಯಪಟ್ಟು, ಅವನ್ನು ರೈತರಿಗೆ ಹಿಂತಿರುಗಿ ಕೊಡಬೇಕಾಗಿ ಶಿಫಾರಸು ಮಾಡಿದರು. ತಿನಕಾರ್ಯಾ ಸಾಗುವಳಿ ಪದ್ಧತಿಯನ್ನು ರದ್ದುಪಡಿಸಲು ಕಾಯಿದೆಯನ್ನೇರ್ಪಡಿಸಬೇಕಾಗಿಯೂ ಶಿಫಾರಸು ಮಾಡಿದರು. ಕಮಿಟಿಯವರೆಲ್ಲರೂ ಒಮ್ಮನಸ್ಸಿನಿಂದ ರಿಪೋರ್ಟನ್ನು ಸಾದರಪಡಿಸುವಂತೆ ಸರ್ ಎಡ್ವರ್ಡ ಗೇಟರವರು ಬಹು ಪ್ರಯಾಸಪಟ್ಟರು. ಕಮೀಟಿಯು ಶಿಫಾರಸಿನಂತೆ ಕಾಯಿದೆಯನ್ನೂ ಸ್ಥಿರಬುದ್ಧಿಯಿಂದ ಏರ್ಪಡಿಸಿಕೊಂಡರು. ಅವರು ನಿಶ್ಚಲರಾಗಿ ಆ ವಿಷಯ ಬುದ್ಧಿ ಚಾತುರ್ಯವನ್ನೆಲ್ಲ ಉಪಯೋಗಿಸಿರದಿದ್ದರೆ, ರಿಪೋರ್ಟು ಏಕಮತ್ಯದಿಂದ ಪ್ರಕಟ ಹೊಂದುತ್ತಿದ್ದಿಲ್ಲ. 'ಅಗ್ರೇರಿಯನ್ ಲಾ' ಎಂಬ ಒಕ್ಕಲಿಗರ ಕಾನೂನು ಕಾಯಿದೆಯಾಗುತ್ತಿದ್ದಿಲ್ಲ. ತೋಟಿಗರು ಪ್ರಚಂಡ ಸಾಮರ್ಥ್ಯವನ್ನು ಉಪಯೋಗಿಸಿದರು. ರಿಪೋರ್ಟು ಬರೆದರೂ, ಅವರು ಈ ಕಾನೂನಿಗೆ ವಿರೋಧಿಸಿದರು. ಆದರೆ, ಸರ್ ಎಡ್ವರ್ಡ ಗೇಟರವರು ಕೊನೆತನಕ ಚಂಚಲರಾಗಲಿಲ್ಲ. ಕಮೀಟಿಯು ಶಿಫಾರಸುಗಳನ್ನು ಸಂಪೂರ್ಣವಾಗಿ ಅವರು ಜಾರಿಯಲ್ಲಿ ತಂದರು. ತಿನಕಾರ್ಯಾ ಪದ್ಧತಿಯು ಈಗೊಂದು ಶತಮಾನದಿಂದ ನಡೆದು ಬಂದಿತ್ತು. ಹೀಗೆ ಅದಕ್ಕೆ ಅಂತ್ಯಕಾಲ ಪ್ರಾಪ್ತವಾಯಿತು, ಅದರೊಡನೆ ತೋಟಿಗರ ರಾಜ್ಯವೂ ನಷ್ಟವಾಯಿತು. ಒಕ್ಕಲಿಗರು ಇಷ್ಟರಲ್ಲಿ ಬೆಂದು ಬೆಂಡಾಗಿದ್ದರು. ಈಗ ಅವರಿಗೆ ಜೀವಕಳೆ ತುಂಬಿದಂತಾಯಿತು. ನೀಲಿಯ ಕಳಂಕವು ಎಷ್ಟಕ್ಕೂ ತೊಳೆದು ಹೋಗದೆಂಬ ಭಾವನೆಯೂ ನಷ್ಟವಾಯಿತು.

ಕೆಲ ವರ್ಷಗಳ ತನಕ ಇದೇ ವಿಧಾಯಕ ಕಾರ್ಯವನ್ನು ಮುಂದರಿಸಬೇಕೆಂದು ನನ್ನ ಅಪೇಕ್ಷೆಯಿತ್ತು. ಹೆಚ್ಚಿನ ಶಾಲೆಗಳನ್ನೂ ಸ್ಥಾಪಿಸಬೇಕೆಂಬ ವಿಚಾರವಿತ್ತು. ಗ್ರಾಮಗಳಲ್ಲಿ ಜಾಗ್ರತಿ ಹುಟ್ಟಿಸುವ ಏರ್ಪಾಟು ಮಾಡಬೇಕಾಗಿಯೂ ಮನಸ್ಸಿದ್ದಿತು. ಪೂರ್ವಪೀಠಿಕೆ ತಯಾರಿತ್ತು, ಆದರೆ, ಈಶಸಂಕಲ್ಪವಿರಲಿಲ್ಲ. ನನ್ನ ಯೋಜನೆಗಳು ಪೂರ್ತಿಯಾಗಲಿಲ್ಲ. ಕಾಲ ನಿಯಮದಂತೆ ಬೇರೆ ಕೆಲಸದ ಬಗ್ಗೆ ಹೊರಟು ಹೋಗಬೇಕಾಯಿತು.

ಜಾಹೀರ ನೋಟೀಸು.

ಅಂಕೋಲಾ ಶ್ರೀ ಶಾಂತಾದುರ್ಗಾ ದೇವಸ್ಥಾನದ ಈ ಕೆಳಗೆ ಸಹಿ ಮಾಡುವ ವೈವಾಟದಾರ ಮತ್ತು ಮುಕ್ತೇಸರ ಜನರ ಕಡೆಯಿಂದಾ ತಿಳಿಸಲ್ಪಡುವದೇನಂದರೆ — ಸದ್ರಿ ದೇವಸ್ಥಾನಕ್ಕೆ ಕೊಡತಕ್ಕ ಗೇಣಿ ಮಬಾಬಿಗೆ ಮತ್ತು ದಸ್ತಾವಜು ನೋಟು ವಗೈರೆ ಬಾಬತ್ತು ಭಂಡಾರಕ್ಕೆ ಸಲ್ಲತಕ್ಕ ದೇಣೆ-ಘೇಣೆ ಯಾವತ್ತು ವ್ಯವಹಾರ ಸದ್ರಿ ದೇವಸ್ಥಾನಕ್ಕೆ ವೈವಾಟ ನೋಡಲಿಕ್ಕೆ ದೇವಸ್ಥಾನ ಮುಕ್ತೇಸರರ ಕಮಿಟಿಯಲ್ಲಿ ಬಹುಮತದಿಂದ ರಾ|| ವಿಶ್ವನಾಥ ತೋರ್ಣಬಾರಾವ ನಾಡಕರ್ಣಿ ಇವರಿಗೆ ನೇಮಿಸಿರುವದರಿಂದಾ ಇನ್ನು ಮುಂದೆ ಅವರ ಕಡಿಗೆನೇ ಯಾವತ್ತೂ ವ್ಯವಹಾರ ನಡಿಸಿ ಭಂಡಾರದ ಸಿ|| ಅವರ ಬಾಪ್ತಿ ಪಡಿಯತಕ್ಕದ್ದಿರುತ್ತದೆ. ಇವರ ಶಿವಾಯ ಬೇರೆ ಯಾರ ಕಡಿಗೂ ವ್ಯವಹಾರ ನಡಿಸಿದ್ದಲ್ಲಿ ಅವಕ್ಕೆ ದೇವಸ್ಥಾನ ಭಂಡಾರ ಯಾವ ಕಾರಣದಿಂದಲೂ ಜವಾಬದಾರ ಇರಲಿಕ್ಕಿಲ್ಲ. ತಿಳಿಯುವದು.

ಅಂಕೋಲಾ, ತಾರೀಖು ೨೫ನೇ ಅಗಸ್ಟ ೧೯೨೮ನೇ ಇಸ್ವಿ

ನೀಲಕಂಠ ದೇವರಾವ ನಾಡಕರ್ಣಿ.
ವಿಶ್ವನಾಥ ಚಿದರ್ಣ ನಾಯಕ.
ಭಿಕ್ಕು ಶ್ರೀನಿವಾಸ ಮಹಾಲೇ.
ರಾಮರಾವ ಬಾಳಕೃಷ್ಣ ನಾಡಕರ್ಣಿ.
ಸುಬ್ರಾಯ ಶಾಂತಪ್ಪಾ ಶೆಟ್ಟಿ ಕಾಂಜನ.
ವಿಶ್ವನಾಥ ಮಹೋಬಾರಾವ ನಾಡಕರ್ಣಿ
ಚೆಅರಮನ್.

Wanted:- Candidates for Telegraph and Station Master's Classes Full particulars and Railway Fare Certificate on 2 annas stamp Apply to — Imperial Telegraph College, Nai Sarak, **Delhi.**

ಪ್ರಚಂಡ ಸೋಡ್ತಿ.

ಮಂಗಳೂರದಲ್ಲಿರುವ ಕೆನರಾ ಹೈಸ್ಕೂಲ ಮತ್ತು ಕೆನರಾ ಬಾಲಿಕೆಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮೆಜಿಸ್ಟ್ರೇಟರ ಅಪ್ಪಣೆ ಪಡೆದು ಪ್ರಮುಖ ಗೃಹಸ್ಥರ ನೇತೃತ್ವದಲ್ಲಿ ಒಂದು ಸೋಡ್ತಿ ತೆಗೆಯಲಾಗುವದು.

ಸೋಡ್ತಿಯ ಬಂಡವಲು ೧ ಲಕ್ಷ. ಇದರೊಳಗಿನ ಖರ್ಚಿನ ಬಗ್ಗೆ ೧೫ ಸಾವಿರ ರೂಪಾಯಿಗಳನ್ನು ವಜಾ ಮಾಡಿ, ಉಳಿದ ಹಣದೊಳಗಿಂದ ೪೦ ಸಾವಿರ ರೂಪಾಯಿಗಳನ್ನು ಶಾಲೆಗಳಿಗೆ ಕೊಟ್ಟು, ೪೫ ಸಾವಿರ ರೂಪಾಯಿ ಬೆಲೆಯ ೩೦೪೩ ಇನಾಮುಗಳು ಈ ಕೆಳಗಿನಂತೆ ಹಂಚಲಾಗುವವು —

(೧) ಮೊದಲನೇ ಬಹುಮಾನವು ರೂ.೧೫ ಸಾವಿರದ್ದು;
(೨) ರೂ ೫೦೦೦ ದ್ದು;
(೩) ೧೦೦೦ ರೂಪಾಯಿಗಳ ೨ ಇನಾಮುಗಳು;
(೪) ೫೦೦ ರೂಪಾಯಿಗಳ ೩ ಇನಾಮುಗಳು;
(೫) ೨೫೦ ರೂಪಾಯಿಗಳ ೬ ಇನಾಮುಗಳು;
(೬) ೧೦೦ ರೂಪಾಯಿಗಳ ೧೦ ಇನಾಮುಗಳು;
(೭) ೫೦ ರೂಪಾಯಿಗಳ ೨೦ ಇನಾಮುಗಳು;
(೮) ೨೫ ರೂಪಾಯಿಗಳ ೧೦೦ ಇನಾಮುಗಳು;
(೯) ೧೦ ರೂಪಾಯಿಗಳ ೮೦೦ ಇನಾಮುಗಳು;
(೧೦) ೫ ರೂಪಾಯಿಗಳ ೨೦೦೦ ಇನಾಮುಗಳು.

ಟಿಕೀಟುಗಳು ತಾ. ೪-೧-೨೯ ನೇ ತನಕ ಸಿಗುವವು. ಸೋಡ್ತಿಯು ತಾ. ೨೬-೧-೨೯ ನೇ ತೆಗೆಯಲ್ಪಡುವದು. ಟಿಕೀಟಿನ ಬೆಲೆ ಬರೇ ೧ ರೂಪಾಯಿ. ೨೪ ಟಿಕೀಟುಗಳನ್ನು ಮಾರುವವರಿಗೆ ಪರಿಶ್ರಮದ ಬಗ್ಗೆ ೧ ಟಿಕೀಟು ಉಚಿತವಾಗಿ ಕೊಡಲ್ಪಡುವದು. ಎಲ್ಲರಿಗಿಂತಲೂ ಹೆಚ್ಚು ಟಿಕೀಟುಗಳನ್ನು ಮಾರುವವರಿಗೆ ವಿಶೇಷ ಬಹುಮಾನಗಳು ಸಿಗುವವು. ಲೋಕಾಶ್ರಯಕ್ಕೆ ಪಾತ್ರವಾದ ೨ ಸಂಸ್ಥೆಗಳಿಗೆ ಸಹಾಯ ಮಾಡಿದ ಶ್ರೇಯಸ್ಸು ದೊರಕುವದು; ಕೆನರಾ ಹೈಸ್ಕೂಲಿನಲ್ಲಿ ಕೈಗಾರಿಕೆಯ ಶಾಖೆಯನ್ನು ಸ್ಥಾಪಿಸಲಿಕ್ಕೂ ಅನುಕೂಲತೆ ಮಾಡಿಕೊಟ್ಟಂತಾಗುವದು.

ಅಲ್ಲಲ್ಲಿ ಏಜಂಟರು ಬೇಕು. ಏಜಂಟರಾಗಲಿಚ್ಛಿಸುವವರು ಈ ಕೆಳಗಿನ ಪತ್ತೆಯ ಮೇಲೆ ಬರೆಕೊಳ್ಳಬೇಕು.

ಮಂಗಳೂರ, | ಬಿ. ಮಂಜುನಾಥ ಬಾಳಿಗಾ
ತಾ ೧೪-೭-೧೯೨೮ | ಓನರರಿ ಸೆಕ್ರೆಟರಿ,
ಕೆನರಾ ಹೈಸ್ಕೂಲ ರೆಫಲ್ ಕಮೀಟಿ
ಬ್ರಿಟೋ ಲೇನ, ಫಳನೀರ, ಮಂಗಳೂರ.
ದಕ್ಷಿಣ ಕನ್ನಡ

ಜಾಹೀರಾತು.

ಕಳೆದ ತಾ ೧೧ನೇಯಿಂದ ನಾವು ಕುಮಟಾ ಶಹರದಲ್ಲಿ ಮುಕ್ಕಾಂ ಮಾಡಿದ್ದು, ನಾವು ಜ್ಯೋತಿಷ, ಸಶಾಸ್ತ್ರ ಜಾತಕ ತಯಾರಿಸುವದು, ಭೂತ ಭವಿಷ್ಯ, ಪ್ರಶ್ನೆ ಮುಂತಾದ ಪೂರ್ವಾಪರ ವಿಚಾರ ಹೇಳುವದು ಹಾಗು ಮಂತ್ರವಾದಿ ಕೆಲಸಗಳನ್ನು ಯೋಗ್ಯರೀತಿ ಮಾಡಿಕೊಡುತ್ತೇವೆ. ನಮ್ಮ ಮುಕ್ಕಾಂ ಇಲ್ಲಿ ಸ್ವಲ್ಪ ಕಾಲವಿರುವದರಿಂದ ಬೇಕಾದವರು ಅವಶ್ಯ ಲಾಭ ಹೊಂದಿ ಖಾತ್ರಿ ಮಾಡಿಕೊಳ್ಳಬೇಕು.

ಪತ್ತೆ.— ಮೈಸೂರು ಕೃಷ್ಣ ಜ್ಯೋತಿಷಿ.
ಶ್ರೀ ವೆಂಕಟರಮಣ ದೇವಸ್ಥಾನದ ಸಮೀಪ, ಮಹಾಬಲೇಶ್ವರ ಭಟ್ಟರ ಖಾನಾವಳಿ, ಕುಮಟಾ (ಉ. ಕ

|| ಶ್ರೀ ||

ಕನ್ನಡ ಜ್ಞಾನೇಶ್ವರಿ.

(ವೇದಮೂರ್ತಿ ಪಂಡಿತ ಕುಮಠಾ ನಾರಾಯಣಾಚಾರ್ಯರವರಿಂದ ಪರಿಶೋಧಿಸಲ್ಪಟ್ಟಿದೆ.)

ಶ್ರೀ ಜ್ಞಾನೇಶ್ವರ ಮಹಾರಾಜರು ಶ್ರೀಮದ್ಭಗವದ್ಗೀತೆಯ ಮೇಲೆ ಮರಾಠಿಯಲ್ಲಿ ಬರೆದ ಟೀಕೆಯೇ 'ಜ್ಞಾನೇಶ್ವರಿ' ಎಂಬ ಹೆಸರಿನಿಂದ ಪ್ರಸಿದ್ಧವಿರುತ್ತದೆ. ಇದಕ್ಕೆ ಭಾವಾರ್ಥದೀಪಿಕೆ ಎಂಬ ಹೆಸರಿದ್ದರೂ, ಪ್ರಚಾರದಲ್ಲಿ 'ಜ್ಞಾನೇಶ್ವರಿ' ಎಂಬ ಹೆಸರೇ ಪ್ರಸಿದ್ಧಿಗೆ ಬಂದಿರುತ್ತದೆ. ಶ್ರೀಕೃಷ್ಣ ಪರಮಾತ್ಮನ ಅವತಾರವೇ ಆಗಿದ್ದ ಜ್ಞಾನೇಶ್ವರ ಮಹಾರಾಜರು ಕುರುಕ್ಷೇತ್ರದಲ್ಲಿ ಸಂಕ್ಷೇಪದಿಂದ ಹೇಳಿದ ಗೀತೆಯನ್ನೇ ವಿಸ್ತಾರವಾಗಿ ಕಲಿಯುಗದ ಜನರಿಗೆ ತಿಳಿಯುವಂತೆ ಸುಲಭವಾಗಿಯೂ, ಸರಸವಾಗಿಯೂ ಬರೆದ ಓವೀಬದ್ಧ ಕಾವ್ಯಾತ್ಮಕ ಗ್ರಂಥದಲ್ಲಿ ವಿಶದಪಡಿಸಿರುತ್ತಾರೆ. ಅದರ ಮೂಲ ಓವಿಗಳ ಸಂಖ್ಯೆ ಸುಮಾರು ೯೫೦೦ ಇದ್ದು ಅದನ್ನು ಕನ್ನಡಿಗರಿಗೆ ತಿಳಿಸಬೇಕೆಂಬ ಹೇತುವಿನಿಂದ ಕನ್ನಡ ಗುರುಚರಿತ್ರದ ಕರ್ತರಾದ ರಾ| ರಾಘವೇಂದ್ರ ಸುಬ್ಬರಾವ ಮಂಡಲಿಕ ಬಿ.ಎ., ಮಾಮಲೇದಾರ ಖಾನಾಪುರ ಇವರ, ಸುಲಭವಾಗಿಯೂ ಸರಸವಾಗಿಯೂ ಚಿತ್ರಸಾದಿಕವಾಗಿಯೂ ಕನ್ನಡ ಭಾಮಿನಿ ಷಟ್ಪದಿಯಲ್ಲಿ ಶ್ರೀ ಜ್ಞಾನೇಶ್ವರ ಮಹಾರಾಜರ ಪ್ರೇರಣೆಯಿಂದಲೇ ಕಾವ್ಯಾತ್ಮಕ ಗ್ರಂಥವಾಗಿ ಬರೆದಿರುತ್ತಾರೆ. ಈ ಗ್ರಂಥದ ಷಟ್ಪದಿಗಳ ಸಂಖ್ಯೆಯು ೬೨೦೦ ಕ್ಕಿಂತ ಹೆಚ್ಚಿಗೆ ಇರುತ್ತದೆ. ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ಗೀತಾಭಿಮಾನಿಗಳೂ ಇದನ್ನು ಕರಿಸಿ ಪ್ರೋತ್ಸಾಹಕೊಡಬೇಕೆಂದು ಕನ್ನಡಿಗರಿಗೆ ಪ್ರಾರ್ಥನೆಯಿದೆ. ಇದು ಮೂರು ಭಾಗಗಳಲ್ಲಿ ಪ್ರಸಿದ್ಧವಾಗುವದು. ಮೊದಲನೇ ಭಾಗದಲ್ಲಿ ಭಗವದ್ಗೀತೆಯ ೧ ರಿಂದ ೬ನೇ ಅಧ್ಯಾಯದ ತನಕ ಮೂಲ ಶ್ಲೋಕಗಳು ೨೮೦ ಮತ್ತು ಕನ್ನಡ ಭಾಮಿನಿ ಷಟ್ಪದಿಗಳು ೧೩೭೫ ಇರುವವು. ಈ ಭಾಗವು ಬರುವ ಅಕ್ಟೋಬರ ತಾ ೧ನೇಗೆ ಹೊರಡುವದು. ಗ್ರಾಹಕರಾಗಲಿಕ್ಕೆ ಇಚ್ಛಿಸುವವರು ತಮ್ಮ ಹೆಸರುಗಳನ್ನು ಕೆಳಗೆ ಬರೆದ ವಿಳಾಸಕ್ಕೆ ಕಳುಹಿಸಿ ಹೆಸರು ಬರಿಸಿ ಇಡಬಹುದು. ತಾ|| ೧ನೇ ಅಕ್ಟೋಬರದ ಒಳಗೆ ಹೆಸರು ಕೊಟ್ಟವರಿಗೆ ರೂಪಾಯಿಗೆ ೪ ಆಣೆಯಂತೆ ಬೆಲೆ ಕಡಿಮೆ ಬೀಳುವದು. ತ್ವರೆಮಾಡಿರಿ! ಈ ಭಾಗದ ಬೆಲೆಯು ೨ ಎರಡು ರೂಪಾಯಿಗಳಿಗಿಂತ ಹೆಚ್ಚಾಗಲಾರದು, ವಿಳಾಸ:—

ಹಣಮಂತ ಶ್ರೀನಿವಾಸಾಚಾರ್ಯ ಭುಕೇಬಾ
ಪೋ:-ಖಾನಾಪುರ. (ಜಿಲ್ಹಾ – ಬೆಳಗಾಂವಿ.

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಧರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ. ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾದೀತು.

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ| ಎ. ರಂಗನಾಥಂ ಅವರ ಮುನ್ನುಡಿ ಸಹಿತ
ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ| ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೫೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ ೨-೮-೦ ರಫ್ ಪ್ರತಿ ರೂ ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದ್ದ ಕಾರಣ ಈಗಲೇ ಬರೆದು ತರಿಸಿಕೊಳ್ಳಿರಿ.

ಶ್ರೀ ತುಳಸೀದಾಸ ರಾಮಾಯಣ ಕಾರ್ಯಾಲಯ
(ಕಾ) ೧೩೬ ಮಾಮೂಲುಪೇಟೆ, ೪ನೇ ಬೀದಿ,
ಬೆಂಗಳೂರು ಸಿಟಿ.

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ,
ವಿಧವಾವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.
ಇವರಿಗೆ ಬರೆದು ತಿಳಿದುಕೊಳ್ಳಿರಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್



ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು-

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತದೆ ಪ್ರಯಾಣಿಕರಿಗೆ ಇಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ವ್ಯವಸ್ಥೆ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦ ೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಅನನೆಂದಿಯನ್ನೊಳಗಿನ ಕಳೆಯ. ಹೋಗಿ ಶಾಂತವಾದ ಸಪ್ನಸಕಲ್ಪವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಹಿಂದಿ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ಹೊಸಿಕೆವಾದ ಶರೀರವು ನಿರ್ದೋಷವಾಗುವದು. ಮೂರು ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ ಉದರರೋಗ ಮುಂತಾದ ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಹೆಚ್ಚಾಗಿ ಆಗುತದೆ, ಇದರ ಅನುಭವವು ಮೊದಲನೇ ದಿವಸವೇ ಬರುವದು. ಕೌಜ ಸಾಥ ಲಗುವದು. ಮೈಯಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಪಡುವ ಕಾರಣವಿಲ್ಲ ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩–೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲದಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಹಜಾರ ಬಾಟಲಿಗಳ ಕಿಮ್ಮತು ೧೩–೦–೦ ಮತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಮಿಷನ್ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಹಜಾರಿಗೆ ೧೩-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಅಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव - मृद्विकारिष्ट - शारंगधर म. अ. १०

रामबाण औषध

सर्दि घालविणारें,
खूक वाढविणारें;
शौच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर

किंमत- एक रतलास १॥ रुपये.
कॅटलाग मागवा

झंडु फार्मास्युटिकल वर्क्स लिमिटेड
मुंबई नं: १४

ऐजंट — मेसर्स पंडित आणी कंपनी, तीर्थहळ्ळी

सिर्सि एजंट- एस. एल. धाकप्पा आणि ब्रदर

ಹಿಂದುಸ್ಥಾನದಲ್ಲಿಯೇ ಅತ್ಯಂತ ಅಗ್ರವಾದ
'ನೆಶನಲ್; ಇನ್‌ಶೂರನ್ಸ ಕಂಪೆನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ.

ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬಹುಮಾನ ಕೊಟ್ಟಿರುವೆವು

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ- ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - ಬಿ. ಸಿ. ಸಿರಾಳಕೊಪ್ಪ, ಲೋಖಂಡಿ ಬಿಲ್ಡಿಂಗ, ಹುಬ್ಬಳ್ಳಿ.

P. D. Churi,
Branch Secretary,
Alice Building,
Hornby Road,
BOMBAY.

ರೇಶ್ಮೆ ವಸ್ತ್ರ ಇನಾಂ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ವಸ್ತ್ರ, ರೇಶ್ಮೆ ಸೀರೆ ಪೀತಾಂಬರ ಮೊಗುಟ, ರವಕೆ ಖಣ, ಎಲವಸ್ತ್ರ ಪೇಟಾ, ಕಾಶ್ಮೀರ್ ಮತ್ತು ಕಾನಪುರ್ ಶಾಲು, ಧಾವಳಿ, ನಾಮರ್ದಿ, ರುದ್ರಾಕ್ಷಿ, ಸ್ಫಟಿಕ ಸರ ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚ ಕರ್ಪೂರ, ಕೇಸರಿ, ಶಿಲಾಜಿತ್ತು, ಅತ್ತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವದು. ಇಪ್ಪತ್ತೈದು ರೂಪಾಯಿ ಕ್ರಯದ ಬಾಳುವ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮಾಗಿ ದೊರೆಯುವುದು.

ನಮ್ಮ ಪತ್ತೆ.—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ,
ದುರ್ಗಾಘಾಟ್, ಶ್ರೀ ಕಾಶೀ ಯು. ಪಿ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ಸರ್ವ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ, ರೂ ೨-೮-೦. ವ್ಹಿ. ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ॰ ಬಾ ೫೧೦, ಪಾರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದ ಉಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಡಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶವಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರ್ಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಪ ಆಗುತದೆ. ಧಾತು ಶುದ್ಧವಾಗಿ ಪಟ್ಟು ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ಥಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಾಹಾಯಕರ ಆಗುತ್ತದೆ ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ (೫೨) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ ೩೧ ದಿವಸ ನಡೆಯಾಗುವಷ್ಟು ಅಳತೆಯ ಒಂದು ಡಬ್ಬಿಗೆ ೫॥ ರೂ, ೩ ಡಬ್ಬಿಗೆ ೧೪॥ ರೂ ೬ ಡಬ್ಬಿಗೆ ೨೭ ರೂ. ೧೨ ಡಬ್ಬಿಗೆ ೫೦ ರೂ ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ॰ ಮಿರಜ.**



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು,

ಬಾಳಿಕೆಗೆ ತೀರ ಅನುಕೂಲ; ಮನೆತನದವರೆಲ್ಲರೂ ಇಟ್ಟುಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯಿಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ದೇಶಾದ್ಯಂತ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೊ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

REG. NO. B. 1270

MONDAY, SEPTEMBER 10TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೮

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಪ ನೆಯಾರ್ವರಿಯಿಂದ
ರೂ. 3-0-0.
ವ್ಹಿ. ಪಿ ಅಂಚೆವೆಚ್ಚ ಸೇರಿ
ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹೀರಾತುಗಳ ದರ.

ಕನಡ, ಇಂಗ್ಲಿಷ ಸ್ಮಾಲ
ಪೈಕಿನ (೧೫ ಎಮ್ ಅಗಲ)
೬ ಸಾಲುಗಳವರೆಗೆ ರೂ. 1-0-
೬ ನಂತ್ರ ಪ್ರತಿಸಾಲಿಗೆ 0-2-0
ಹೆಡಿಂಗದ ಸಾಲು ಎಷ್ಟು
ದೊಡ್ಡದಿರುವದೋ ಆ ಮಾನ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.

ಖಾಸ ಜಾಹಿರಾತುಗಳ ಬಗ್ಗೆ
ಪತ್ರವ್ಯವಹಾರ ಯಾ ಸಮಕ್ಷ ತಿಳಿ
ಸಲ್ಪಡುವದು

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೦ನೇ ಮಾಹೆ ಸೆಪ್ಟಂಬರ ಸನ್ ೧೯೨೩ನೇ ಇಸವಿ)—

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ - ಕಬ್ಬಿಣ ಮೊಳೆಗಳು, ಮೋಟಾರ ಉಪಯೋಗದ ಬೋಲ್ಟು ಗಳು, ಪಿನ್ ಪೋಕರ, ಡಿಸ್ಟಿಲ್ಡ ವಾಟರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಶಾಟಿಂಗನ್ನು ಗಳನ್ನು ಇಲ್ಲಿಯೇ ಕೊಂಡುಕೊಳ್ಳಿ!! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ! ಎಲ್ಲ ಸಾಮಾನು ಅಗ್ಗ! ಚಿಲಕೋಲ ವ್ಯಾಪಾರಸ್ಥರು ರೋಖ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ರಾಮತೊಂಡೆ,
ಆಯರ್ನ ಮರ್ಚಂಟ,
ಕುಮಟಾ. (ಉ ಕನಡ)

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್
ಇನ್ಶ್ಯುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ:- ಅಪ್ಪಾಟ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲವೂ ಅನಿಶ್ಚಿತವಿದ್ದರೂ, ಸಾವು ಮಾತ್ರ ಖಂಡಿತವಾಗಿ ಬಂದೇ ಬರುವದು! ಆದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೋಳನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನಿಸಲೇಬೇಕು. ವಿಮೆ ಕಂಪನಿಗಳು ಅನೇಕ ಇರುವವು, ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೪ ವರ್ಷಗಳಲ್ಲಿ ೨೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೩ ರೂಪಾಯಿಗಳಂತೆ ತುಂಬಿ ೧೫ ವರ್ಷ ಮುದ್ದತಿನ ವಿಶೇಷ ಸವಲತಿನ ಸ್ಪೇಶಲ್ ಪೊಲಿಸಿಗಳನ್ನು ತೆಗೆದುಕೊಳ್ಳಲು ಬರುತ್ತದೆ! ಕಂಪನಿಯಲ್ಲಿ ಹೆಂಗಸರಿಗೂ ವಿಮೆ ಇಳಿಸಲು ಬರುತ್ತದೆ, ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಜನರಲ್ ಮ್ಯಾನೇಜರ ಮಿ|| ಎನ್. ಟಿ. ನಾಯ್ಕ ಆಫೀಸ-ಅಂಕೋಲಾ, ಜಿಲ್ಲಾ ಉ.ಕನ್ನಡ, ಇವರಕಡೆಗೆ ಬರೆದುಕೊಳ್ಳಬೇಕು.

ಏಜಂಟರು ಬೇಕು! ಏಜಂಟರು ಬೇಕು!!

ನಮ್ಮಲ್ಲಿ
ಅತಿ ಮನೋಹರವಾದ
ಸೀಶಿ ಕಟ್ಟಿಗೆಯ
ದೇವರ ಮಂಟಪಗಳೂ,
ಹೆಂಗಸರ ಸೌಭಾಗ್ಯವತಿ ಪೆಟ್ಟಿಗೆಗಳೂ, ಡಿಕ್ಸನೇರಿ ಪೆಟ್ಟಿಗೆಗಳೂ, ಆಫೀಸ ಬಾಕ್ಸಗಳೂ, ರೋಕಿಂಗ ಖುರ್ಚಿಗಳೂ ಹಾಗೂ ಯಾವತ್ತೂ ತರದ ಮನೇ ಸಾಮಾನು ಸಿಗುತ್ತದೆ

ನಮ್ಮ ವಿಳಾಸ.—
ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ,
ಕಾರವಾರ.

"ಔಷಧ ಸೀಸೆಗಳಿಗಿಂತ ಬರೇ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು."

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯದಿಂದ ಕಾಯಕರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೊಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಒಂದು ಬೀಳುವದು, ಜವಾಬು ಹಾಕಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಚೆಟ್ಟಿ ಬೀದಿ, ಮದರಾಸು.

ವಿವಿಧ ಸಂಗ್ರಹ.

ಬ್ರಿಟಿಶರ ಸುಲಿಗೆ.

ಕಲಕತ್ತೆಯ "ಫೊರವರ್ಡ" ಪತ್ರಿಕೆಯಲ್ಲಿ ಮಿ| ಬ್ರೂಕ್ಸ ಎಡೆಮ್ಸ, ಪ್ರೊ| ಡಿಗ್ಬೀ ಇವರ ಗ್ರಂಥಗಳ ಮೇಲಿಂದಲೂ, ಹಾಗು ಈಸ್ಟ ಇಂಡಿಯಾ ಕಂಪನಿಯ ರಿಕಾರ್ಡಿನ ಮೇಲಿಂದಲೂ ಬ್ರಿಟಿಶರು ನಡಿಸಿದ ಸುಲಿಗೆಯ ಕಥೆಯು ಪ್ರಕಟಹೊಂದಿದೆ. ಇಂಗ್ಲಂಡವು ವೈಭವ ಶಿಖರಕ್ಕೇರಿದ ಸಂಗತಿಯೂ, ಭರತಖಂಡದ ವೈಭವನಾಶದ ಸಂಗತಿಯೂ ಅಂಕಿಗಳಿಂದ ಹೇಳಲ್ಪಟ್ಟಿದೆ. ಬಂಗಾಲದಿಂದ ಇಂಗ್ಲಂಡಕ್ಕೆ ೧೭೫೭ ನೇ ಇಸ್ವಿಯಿಂದ ೧೭೬೭ ನೇ ಇಸ್ವಿಯ ತನಕ ೧೫ ಕೋಟಿ, ೬೦ ಲಕ್ಷ ಪವನು ರಫ್ತಾಯಿತು. ೧೭೮೮ ನೇ ಇಸ್ವಿಯಿಂದ ೧೮೦೮ ನೇ ಇಸ್ವಿಯ ತನಕ ೩ ಕೋಟಿ ೬೬ ಲಕ್ಷ, ೪೦ ಸಾವಿರ ಪವನು ರಫ್ತಾಯಿತು. ೧೮೩೯ ನೇ ಇಸ್ವಿಯಿಂದ ೧೮೫೦ ನೇ ಇಸ್ವಿಯ ತನಕ ೪ ಕೋಟಿ, ೯೧ ಲಕ್ಷ, ೮೦ ಸಾವಿರ ಪವನು ರಫ್ತಾಯಿತು. ಬ್ರಿಟಿಶರು ಹಿಂದುಸ್ಥಾನಕ್ಕೆ ಬರುವ ಪೂರ್ವದಲ್ಲಿ ಅಂದರೆ, ೧೭೫೩ ನೇ ಇಸ್ವಿಯಲ್ಲಿ ಇಂಗ್ಲಂಡದಲ್ಲಿ ೩೧ ಬೇಂಕುಗಳಿದ್ದವು. ತಲೆಗೆ ೩.೫೫ ರೂಪಾಯಿ ದ್ರವ್ಯ ಸಂಗ್ರಹ ಬೀಳುತ್ತಿತ್ತು. ೧೮೦೦ ನೇ ಇಸ್ವಿಯಲ್ಲಿ ಬೇಂಕುಗಳ ಸಂಖ್ಯೆಯು ೩೮೦ಕ್ಕೆ ಹಾರಿತು. ೧೮೫೫ ನೇ ಇಸ್ವಿಯಲ್ಲಿ ೫೩೦ಕ್ಕೆ ಮುಟ್ಟಿತು. ದ್ರವ್ಯ ಸಂಗ್ರಹವು ಈ ವರುಷಗಳಲ್ಲಿಯೇ ಅನುಕ್ರಮವಾಗಿ ತಲೆಗೆ ಸರಾಸರಿ ರೂ. ೧೪೫೦, ಹಾಗು ೧೮೫೫ ಕ್ಕೆ ಮುಟ್ಟಿತು ಮಿ| ಬ್ರೂಕ್ಸ ಎಡೆಮ್ಸರವರು ಬರೆಯುವದೇನಂದರೆ ಪ್ಲಾಶಿ ಕಾಳಗದ ನಂತರ ಬಂಗಾಲದಲ್ಲಿ ನಡಿಸಿದ ಲೂಟಿಯು ಪ್ರತ್ಯಕ್ಷ ಲಂಡನಕ್ಕೆ ಬಂದು ಮುಟ್ಟಿತು ಇದರಿಂದ ಬ್ರಿಟಿಶ ದೇಶದಲ್ಲಿ ಕೂಡಲೆ ದೊಡ್ಡದೊಂದು ಕ್ರಾಂತಿಯಾಯಿತು. ಔದ್ಯೋಗಿಕ ಯುಗವು ಆಗಲೇ ಬ್ರಿಟಿಶ ದೇಶದಲ್ಲಿ ಪ್ರಾರಂಭವಾಯಿತೆಂದು ಎಲ್ಲರೂ ಹೇಳುತ್ತಾರೆ. ಲಕ್ಷಾವಧಿ ಭಾರತೀಯರು ನೂರಾರು ವರ್ಷಗಳಿಂದ ಮಾಡಿದ ದ್ರವ್ಯಸಂಗ್ರಹವನ್ನು ಇಂಗ್ಲಿಷರು ಸುಲಿದು ಲಂಡನಕ್ಕೆ ಒಯ್ದರು. ಈಸ್ಟ ಇಂಡಿಯಾ ಕಂಪನಿಯು ೧೮೧೧ ನೇ ಇಸ್ವಿಯ ರಿಕಾರ್ಡಿನ ಮೇಲಿಂದ ತಿಳಿಯುವದೇನಂದರೆ -- "ಹಿಂದುಸ್ಥಾನದೊಳಗಿನ ವ್ಯಾಪಾರದಿಂದ ಕಂಪನಿಗೆ ಹೇರಳ ಧನವು ಪ್ರಾಪ್ತಿಯಾಯಿತು. ಇದಕ್ಕಾಗಿ ಕಂಪನಿಯವರ ಬಾಯಿಂದ ಹೇಳಲಾರದಷ್ಟು ಮಾರಪೀಡೆಯನ್ನು ನಡಿಸಿದ್ದರೆಂದು ನಮಗೆ ತೋರುತ್ತದೆ," ಎಂದು ಬರೆದಿದ್ದಾರೆ ಪ್ರೊ| ಡಿಗ್ಬೆಯವರು ೧೯೦೧ ನೇ ಇಸ್ವಿಯಲ್ಲಿ ಬರೆಯುವದೇನಂದರೆ--(ಬ್ರಿಟಿಶರ ಆಗಮನವಾದ ಬಳಿಕ) ಹಿಂದುಸ್ಥಾನದಲ್ಲಿ ತರತರದ ಸಾರ್ವಜನಿಕ ಕಷ್ಟಗಳೊದಗಿ ದೇಶವು ನಿರ್ಜನವಾಯಿತು. ೬ ವರ್ಷಗಳಲ್ಲಿ ಸಂಪನ್ನವಾಗಿದ್ದ ರಾಜ್ಯದೊಳಗಿನ ದೊಡ್ಡ ದೊಡ್ಡ ಪಟ್ಟಣಗಳು ನಿರ್ಜನವಾದವು. ಭೂತಲದಲ್ಲಿ ಸಾರವತ್ತಾದ ಹೊಲಗಳು ಬಂಜರ ಬಿದ್ದವು ೫೦ ಲಕ್ಷ ನಿರಪರಾಧಿ ಉದ್ಯೋಗಿ ಜನ ಭ್ರಷ್ಟರಾದರು; ಅಥವಾ ಕಾಲ ಹೊಂದಿದರು." ಇದು ಹಿಂದುಸ್ಥಾನದ ಸ್ಥಿತಿ. "ಇಂಗ್ಲಂಡದೊಳಗಿನ ವರ್ತಕರು ದ್ರವ್ಯದ ರಾಶಿಯಲ್ಲಿ ತೇಲಾಡುತ್ತಿದ್ದರು. ಸಾಮಾನ್ಯ ಹಿಕ್ಕಲಿಗರೂ, ಇತರ ಕಾರಖಾನೆಯವರೂ, ಸಂಪನ್ನರೂ, ಸುಖೋಪಭೋಗಿಗಳೂ ಆಗಿ ಸಂಸಾರ ಮಾಡ ಹತ್ತಿದ್ದರು." ೧೯೨೬-೨೭ ನೇ ಇಸ್ವಿಯಲ್ಲಿ ಹಿಂದುಸ್ಥಾನದಲ್ಲಿ ಆಮದಾದ ಸರಕುಗಳಲ್ಲಿಯ ಮುಸನೀಯುವಿದೆ ಬ್ರಿಟಿಶ ದೇಶದಿಂದ ಈ ವರುಷ ೫೫ ಕೋಟಿ ರೂಪಾಯಿಗಳ ಅರಿವೆ ಹಾಗು ೨ ಕೋಟಿ ರೂಪಾಯಿಗಳ ನೂಲ, ಇಷ್ಟು ಹಿಂದುಸ್ಥಾನದಲ್ಲಿ ಆಮದಾಯಿತು. ಅಂತು ಎಲ್ಲ ಪರದೇಶಗಳಿಂದ ಇಲ್ಲಿ ೫೫ ಕೋಟಿ ರೂಪಾಯಿಗಳ ಅರಿವೆ, ೭|| ಕೋಟಿ ರೂಪಾಯಿಗಳ ನೂಲು ಬಂತು. ಸರಾಸರಿ ೧೧ ರಲ್ಲಿ ೯ ಪಾಲು ಅರಿವೆ-ಅಂಚಶಿಗಳ ಆಮದು ಬ್ರಿಟಿಶ ದೇಶದ್ದೇ. ಎಲ್ಲ ಪ್ರಕಾರದ ಆಮದು ಜಿನಸುಗಳ ಕ್ರಯವು ೩ ಅಬ್ಜ, ೩೧ ಕೋಟಿ. ಇದರೊಳಗೆ ಬ್ರಿಟಿಶ ದೇಶದಿಂದ ಹಿಂದುಸ್ಥಾನಕ್ಕೆ ಬಂದದ್ದು ೧ ಅಬ್ಜ, ೧೦ ಕೋಟಿ. ಸಾಮ್ರಾಜ್ಯದ ಪ್ರಧಾನ ಮಂಡಲದಲ್ಲಿ ಸರ್ ವಿಲಿಯಮ್ ಜೊಯ್ನಸನ್ ಹಿಕ್ಸ ಎಂಬವರೊಬ್ಬರಿದ್ದಾರೆ ಇವರು ಇಂಗ್ಲಿಷ ದೇಶದ ಈಗಿನ ಗೃಹಮಂತ್ರಿಗಳು "ಹಿಂದುಸ್ಥಾನವಾಸಿಗಳ ಕಲ್ಯಾಣಕ್ಕಾಗಿ ನಾವು ಹಿಂದುಸ್ಥಾನವನ್ನು ಜಯಿಸಲಿಲ್ಲ ಭಾರತೀಯರ ಉದ್ಧಾರಕ್ಕಾಗಿ ಹಿಂದೂ ದೇಶವನ್ನು ನಾವು

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ ಕೂದಲು ಮನೋಹರವಾಗಿರಬೆ ಕಾದರೆ, ನೀವು ದಿನಾ ಅವುಗಳ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು ಇಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೨ ಬಾಟಲಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೧/೨ ಔಂಸಿಗೆ	ರೂ.	೨—೦—೦
೧/೪ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು, ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಅಲ್ಕೋಹೋಲ ಎಂಬಾತ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಕೆಡುವದು. ಒಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No 2.**

ಪಡಕೊಂಡೆವೆಂದು ವಿದ್ಯಾರ್ಥಿಗಳು ಸಭೆಯಲ್ಲಿ ಭಾಷಣ ಮಾಡುತ್ತಿದ್ದಾರೆ; ಇದು ತೀರ ವಿಪರೀತವು. ಬ್ರಿಟಿಶ ದೇಶದಲ್ಲಿ ತಯಾರಾಗುವ ಸರಕುಗಳಿಗೆ ಗಿರಾಕಿ ಸಿಗಬೇಕೆಂದು ನಾವು ಹಿಂದುಸ್ಥಾನವನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. ಖಡ್ಗಬಲದಿಂದ ನಾವು ಅದನ್ನು ಸಂಪಾದಿಸಿದ್ದೇವೆ, ಆ ಬಲದಿಂದಲೇ ನಾವು ಅದನ್ನು ಕಾಪಾಡಿಕೊಳ್ಳಬೇಕು. ಹಿಂದುಸ್ಥಾನದವರ ಕಲ್ಯಾಣಕ್ಕಾಗಿ ಹಿಂದುಸ್ಥಾನವನ್ನು ನಾವು ಕೈವಶ ಮಾಡಿಕೊಂಡೆವೆಂದು ಹೇಳಲಿಕ್ಕೆ ನಾನೇನು ಘಟಿಂಗನಲ್ಲ. ಬ್ರಿಟಿಶ ದೇಶದಲ್ಲಿ ತಯಾರಾಗುವ ಎಲ್ಲ ತರದ ಸರಕುಗಳನ್ನು ಮಾರಾಟ ಮಾಡುವದಕ್ಕಾಗಿಯೂ, ಪ್ರಾಮುಖ್ಯವಾಗಿ ಲಿಂಕಶಾಯರದೊಳಗಿನ ಅರಿವೆಗಳನ್ನು ವಿಕ್ರಯಿಸುವದಕ್ಕಾಗಿಯೂ ನಾವು ಹಿಂದುಸ್ಥಾನವನ್ನು ಕಾಪಾಡಿಕೊಂಡಿದ್ದೇವೆ." 'ಮೊರ್ನಿಂಗಪೋಸ್ಟ' ಎಂಬ ಪತ್ರಿಕೆಯಲ್ಲಿ ಕರ್ನಲ್ ಜೀ. ಎಸ್. ನೇಪಿಯರ ಎಂಬ ಸೈನಿಕರು ಒಂದು ಲೇಖ ಬರೆದಿದ್ದಾರೆ, ಅದರೊಳಗಿನ ವಿಚಾರಗಳ ಮೇಲಿಂದಲೂ ಬ್ರಿಟಿಶರ ಅಂತರಂಗವು ತಿಳಿಯುವಂತಿದೆ. 'ನಾವು ಹಿಂದುಸ್ಥಾನವನ್ನು ಪ್ರಬಲರಾಗಿ ಆಳತಕ್ಕದ್ದು. ಹಿಂದುಸ್ಥಾನವು ನಮ್ಮ ಪರಂಪರಾಗತ ಹಕ್ಕಿನದು. ಅದನ್ನು ನಾವು ನಮ್ಮದೇ ಪೇಟೆಯಾಗಿ ಪರಿಣಮಿಸಬೇಕು. ಹಿಂದವಾಸಿಗಳ ಮೇಲೆ ನಾವು ಅಪರಿಮಿತವಾದ ಉಪಕಾರ ಮಾಡಿದ್ದೇವೆ. ಅದಕ್ಕಾಗಿ ನಮಗೆ ಸಿಗಬೇಕಾದ ಪ್ರತಿಫಲವಿದು. ವಿಲಾಯತಿಯೊಳಗಿನ ವ್ಯಾಪಾರಿಗಳಿಗೆ ಎಲ್ಲ ಸಂಗತಿಗಳನ್ನು ಚನ್ನಾಗಿ ತಿಳಿಸಿಹೇಳಬೇಕು. ಹಿಂದುಸ್ಥಾನದೊಳಗಿನ ವ್ಯಾಪಾರವನ್ನೆಲ್ಲ ಸರಿಯಾಗಿ ಕೈವಶ ಮಾಡಿಕೊಂಡರೆ, ಬ್ರಿಟಿಶ ದೇಶದೊಳಗಿನ ನಿರುದ್ಯೋಗಿ ಪ್ರಶ್ನೆಯು ಪರಿಹಾರವಾಗುವದು. ಬ್ರಿಟಿಶ ದೇಶದ ಸಾಲವೂ, ಇತರ ಕರಗಳೂ ಈ ಉಪಾಯದಿಂದ ಕಡಿಮೆಯಾಗುವ ಹಾಗಿವೆ." ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಮಿ|| ಸಾರಾಭಾಯಿ ಹಾಜಿಯವರು ಹಿಂದು ಕಾನೂನನ್ನು ಸೂಚಿಸುವವರಿದ್ದಾರೆ. ದಂಡೆಗುಂಟದ ವ್ಯಾಪಾರವನ್ನು ಹಿಂದುಸ್ಥಾನದೊಳಗಿನ ಹಿಂದೀಯರ ಮಾಲ್ಕಿ ಹಡಗುಗಳಲ್ಲೇ ಆಗುವಂತೆ ಕಾನೂನಾಗಬೇಕೆಂದು ಮಿ|| ಹಾಜಿಯವರ ಸೂಚನೆ. ವಿಲಾಯತಿಯಲ್ಲಿ "ಫಿನೆನ್ಶಲ್ ಟೈಮ್ಸ" ಎಂಬದೊಂದು ಅರ್ಥಶಾಸ್ತ್ರಜ್ಞ ಪತ್ರಿಕೆಯಿದೆ. ಈ ಪತ್ರಿಕೆಯು ಈ ಕಾನೂನನ್ನು ವಿರೋಧಿಸುತ್ತದೆ. ಇಂಥ ಕಾನೂನು ಬ್ರಿಟಿಶರ ದ್ವೇಷದ ದ್ಯೋತಕವಂತೆ, ಈ ಕಾನೂನು ಮನ್ನಿಯಾದರೆ, ಬ್ರಿಟಿಶರ ಹಿತಕ್ಕೆ ಬಾಧೆ ತಟ್ಟುವದೆಂದೂ ಆ ಪತ್ರಿಕೆಯ ಅಭಿಪ್ರಾಯವಾಗಿದೆ. ಲಂಡನ್ ವ್ಯಾಪಾರಿ ಸಂಘದವರು ಈ ಕಾನೂನನ್ನು ವಿರೋಧಿಸಿದ್ದಾರೆ.

***

ಬೆಂಕಿಪೆಟ್ಟಿಗೆಯ ಕಾರಖಾನೆಗಳು.

ಬೆಂಕಿಪೆಟ್ಟಿಗೆಯ ಕಾರಖಾನೆಗಳಿಗೆ ಉತ್ತೇಜನ ಕೊಡುವ ವಿಷಯ ಹಿಂದುಸ್ಥಾನ ಸರಕಾರವು ಚೌಕಶಿ ನಡಿಸಿತು. ಈ ಚೌಕಶಿಯಲ್ಲಿ ಬೆಂಕಿಪೆಟ್ಟಿಗೆಯ ಕೈಗಾರಿಕೆಗೆ ಹಿಂದುಸ್ಥಾನ ಸರಕಾರವು ಅವಶ್ಯವಾಗಿ ಸಂರಕ್ಷಣ ಮಾಡಿ ಅಭಿವೃದ್ಧಿಗೈಯ್ಯಬೇಕೆಂದು ಅಭಿಪ್ರಾಯವಾಗಿದೆ. ಆಮದಾಗುವ ಬೆಂಕಿ ಪೆಟ್ಟಿಗೆಗಳ ಮೇಲೆ ಗ್ರೋಸಿಗೆ (೧೪೪ ಪೆಟ್ಟಿಗೆಗಳು) ೧|| ರೂಪಾಯಿಯಂತೆ ಆಮದು ತೆರಿಗೆ ಎತ್ತುವಳಿಯಾಗುತ್ತದೆ. ಇದರಿಂದ ಇಲ್ಲಿಯ ಉದ್ಯೋಗಕ್ಕೆ ಚಲೋ ಆಧಾರವಾಯಿತು. ಈ ದೇಶದಲ್ಲಿ ೧ ಕೋಟಿ ೭೦ ಲಕ್ಷ ಗ್ರೋಸ್ ಬೆಂಕಿ ಪೆಟ್ಟಿಗೆಗಳು ಖರ್ಚಾಗುತ್ತವೆ. ೧೯೨೧-೨೨ ನೇ ಇಸ್ವಿಯಲ್ಲಿ ೧ ಕೋಟಿ, ೪೫ ಲಕ್ಷ ಗ್ರೋಸ್ ಪೆಟ್ಟಿಗೆಗಳು ಹಿಂದುಸ್ಥಾನದಲ್ಲಿ ಆಮದಾದವು. ೧|| ರೂಪಾಯಿ ತೆರಿಗೆ ಹೇರಿದ ೫ ವರ್ಷಗಳಲ್ಲಿ ಈ ಆಮದಿನ ಮಾನವು ಬರೇ ೬೧ ಲಕ್ಷ ಗ್ರೋಸ್ಸಿಗೆ ಇಳಿಯಿತು; ಉಳಿದ ಬೆಂಕಿ ಪೆಟ್ಟಿಗೆಗಳು ಹಿಂದುಸ್ಥಾನದಲ್ಲಿ ತಯಾರಾದವು. ಇದನ್ನು ನೋಡಿ ಸ್ವೀಡಿಶ್ ಬೆಂಕಿ ಪೆಟ್ಟಿಗೆಯ ಕಂಪನಿಯವರು ಹಿಂದುಸ್ಥಾನದಲ್ಲೇ ತಮ್ಮದೊಂದು ಶಾಖೆಯನ್ನು ಸ್ಥಾಪಿಸಿ ಇಲ್ಲಿಂದಲೇ ಬೆಂಕಿ ಪೆಟ್ಟಿಗೆಗಳನ್ನು ದೇಶದಲ್ಲಿ ಪೂರೈಸುತ್ತಾರೆ. ಇವರು ದೇಶದಲ್ಲಿ ಕಾರಖಾನೆ ಸ್ಥಾಪಿಸಿದ್ದರಿಂದ ಸಂರಕ್ಷಕ ತೆರಿಗೆಯು ವಸೂಲಾಗುವದಿಲ್ಲ. ಈ ಕಂಪನಿಯ ಭಂಡವಲೂ, ಆಫೀಸರರೂ ಪರದೇಶದವರು. ಬ್ರಿಟಿಶ ಸರಕಾರದೊಡನೆ ಇವರ ಕರಾರುಗಳಾಗಿರುವವಂತೆ. ಈ ಕಂಪನಿಯವರು ಹಿಂದುಸ್ಥಾನದೊಳಗುಳಿದ ಹಿಂದುಸ್ಥಾನದ ಬೆಂಕಿಪೆಟ್ಟಿಗೆ ಉದ್ಯೋಗವನ್ನು ನಷ್ಟಪಡಿಸಲು ಪ್ರಯತ್ನಪಡುತ್ತಿದ್ದಾರೆ. ಈ ಕಂಪನಿ ಬಹು ದೊಡ್ಡದು; ಕೋಟ್ಯಾಧೀಶ ಕಂಪನಿ. ಈ ಕಂಪನಿಯು ಇತರ ತರದ ಜಾಹೀರಾತುಗಳನ್ನು ಕೊಟ್ಟು ಅಸಲಿಗಿಂತಲೂ ಕಡಿಮೆ ಧರಕ್ಕೆ ಬೆಂಕಿಪೆಟ್ಟಿಗೆಗಳನ್ನು ಮಾರಿ ಇಲ್ಲಿಯ ಉದ್ಯೋಗವನ್ನು ನಾಶಮಾಡಲು ಬಯಸುತ್ತದಾಗಿ ಚೌಕಶಿ ಮಂಡಳದವರು ಒಪ್ಪುತ್ತಾರೆ. ಆದರೂ, ಈ ಕಂಪನಿಯ ಮೇಲೆ ಸರಕಾರಕ್ಕೆ ಏನೊಂದು ಪ್ರತೀಕಾರದ ಉಪಾಯ ಕೈಕೊಳ್ಳಲು ಚೌಕಶಿ ಮಂಡಳವು ಸೂಚಿಸಲಿಲ್ಲ. ಈ ಕಂಪನಿಯ ಈ ಶಾಖೆಯಲ್ಲಿ ಹಿಂದೀಯರ ಭಂಡವಲು ಇರಬೇಕು, ಹಿಂದೀಯರೇ ಈ ಕಂಪನಿಯ ಯಜಮಾನರಾಗಿರಬೇಕ ; ಎಂಬದೊಂದು ಆಶೀರ್ವಾದವನ್ನು ಚೌಕಶಿ ಮಂಡಳದವರು ಕೊಟ್ಟಿರುತ್ತಾರೆ. ಹಿಂದುಸ್ಥಾನ ಸರಕಾರದವರು ಈ ಆಶೀರ್ವಾದ ಸಹ ಕೊಡಲಿಲ್ಲ. ಸ್ವೀಡಿಶ್ ಕಂಪನಿಯವರು ಬೆಂಕಿ ಪೆಟ್ಟಿಗೆಯ ಕಾರಖಾನೆಗೆ ಅವಶ್ಯವಿರ್ವ ಸಕಲ ಸಾಮಗ್ರಿಗಳನ್ನು ಭೂಮಂಡಳದೊಳಗಿನ ದೇಶಗಳಲ್ಲಿ ಕೊಂಡು ಕೊಂಡು ಒಕ್ಕಟ್ಟ ಮಾಡಿದ್ದಾರೆ; ಹಿಂದುಸ್ಥಾನದಲ್ಲಿಯೂ ಹಾಗೆಯೇ ಒಕ್ಕಟ್ಟ ಮಾಡಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಈ ಪ್ರಯತ್ನವು ಸಫಲವಾದರೆ, ಹಿಂದುಸ್ಥಾನದೊಳಗಿನ ಬೆಂಕಿ ಪೆಟ್ಟಿಗೆಯ ಕಾರಖಾನೆಗಳು ಮುಳುಗಿದ ಹಾಗೆಯೇ. ಹಿಂದುಸ್ಥಾನದಲ್ಲಿ ಬೆಂಕಿ ಕಡ್ಡಿಗಳಿಗೆ ಅನುಕೂಲವಿರುವ ಭಿನ್ನಭಿನ್ನ ಜಾತಿಯ ಬೇಕಷ್ಟು ಕಟ್ಟಿಗೆಯಿದೆ. ಸರಕಾರವು ಇವುಗಳನ್ನು ಕಡಿಯ್ಯಲು ಉಗಿಬಂಡಿಗಳ ದರಗಳಲ್ಲಿ ಅನುಕೂಲತೆ ಮಾಡಿಕೊಡಲಿಲ್ಲವಾದ್ದರಿಂದ ಈ ಉದ್ಯೋಗಕ್ಕೆ ತಡೆದಿದ್ದಿದೆ. ಎಸ್ಪಿನ್ ಕಟ್ಟಿಗೆಯು ಯುರೋಪ ಖಂಡದಲ್ಲಿಯೂ, ಸೈಬೇರಿಯಾ ದೇಶದಲ್ಲೂ ಸಿಗುತವೆ. ಅದನ್ನೆಲ್ಲ ಸ್ವೀಡಿಶ್ ಕಂಪನಿಯವರು ಕೊಂಡುಕೊಂಡಿದ್ದಾರೆ. ಬೇರೆಯವರಿಗೆ ಆ ಕಟ್ಟಿಗೆ ಸಿಗುವದು ಸಾಧ್ಯವಿಲ್ಲ. ಇಷ್ಟು ಸ್ಥಿತಿಯಿದ್ದರೂ, ಚೌಕಶಿ ಮಂಡಳದವರು ಈ ಕಂಪನಿಯ ಮೇಲೆ ಏನೊಂದೂ ಉಪಾಯಯೋಜನೆ ಮಾಡಬೇಕಾಗಿ ಸೂಚಿಸಲಿಲ್ಲ.

***

ಚೊಕ್ಕ ಉತ್ತರ

ಸರ್ವಪಕ್ಷೀಯ ಪರಿಷತ್ತಿನಲ್ಲಿ ಬ್ರಿಟಿಶ ಸಾಮ್ರಾಜ್ಯ ಘಟಕಗಳಷ್ಟು ಸ್ವರಾಜ್ಯವನ್ನು ಹಿಂದುಸ್ಥಾನಕ್ಕೆ ಕೊಡಬೇಕಾಗಿ ಠೀವರ್ಮಾನವಾದ ಠರಾವಾಯಿತು. ಅಲಹಾಬಾದದ "ಪಾಯೊನೀಯರ" ಪತ್ರಿಕೆಯ ಸಂಪಾದಕರು ಸರ್ವಪಕ್ಷೀಯ ಪರಿಷತ್ತಿನ ಅಧ್ಯಕ್ಷರಾದ ಡಾ| ಅನ್ಸಾರಿಯವರಿಗೆ ಒಂದು ಸೂಚನೆ ಮಾಡಿದರು: ತಾವು ಈ ಪರಿಷತ್ತನ್ನು ಸಮಾಪ್ತಿಗೊಳಿಸುವಾಗ, 'ದೇವರು ಬಾದಶಹರನ್ನು ರಕ್ಷಿಸಲಿ' ಎಂಬ ಬ್ರಿಟಿಶ ರಾಷ್ಟ್ರಗೀತವನ್ನು ಹಾಡುವದು ಪ್ರಶಸ್ತವು," ಎಂದು ತಿಳಿಸಿದರು. ಡಾ| ಅನ್ಸಾರಿಯವರು ಉತ್ತರ ಕೊಟ್ಟದ್ದೇನಂದರೆ— "ರಾಷ್ಟ್ರ ರಾಜ್ಯಾಧಿಕಾರದ ಹಕ್ಕು ಪ್ರಾಪ್ತಿಯಾದ ಬಳಿಕ, ನಿಮ್ಮ ಸೂಚನೆಯು ಅಂಗೀಕಾರವಾಗುವದು; ಸದ್ಯಕ್ಕೆ ನೀವು ನಮ್ಮ ಜೊತೆಗೆ 'ವಂದೇ ಮಾತರಮ್' ಗೀತ ಹಾಡಿರಿ," ಎಂದು ಡಾ| ಅನ್ಸಾರಿಯವರು ಚೊಕ್ಕ ಉತ್ತರವನ್ನಿತ್ತು 'ಪಾಯೊನೀಯರ' ಪತ್ರಿಕೆಯ ವಿಪರೀತ ರಾಜಭಕ್ತಿಗೆ ತಡೆಹಾಕಿದ್ದಾರೆ.

***

ಪರದೇಶದಲ್ಲಿ ಹಿಂದೂ ವೇದಾಂತದ ಪ್ರಶಂಸೆ!

"ಇಂಟರನೇಶನಲ್ ಓರಿಯೆಂಟಲಿಸ್ಟ್ಸ ಕೊಂಗ್ರೆಸ" ಎಂಬದೊಂದು ಅಂತರಾಷ್ಟ್ರೀಯ ಪೌರ್ವಾತ್ಯ ತತ್ವಜ್ಞಾನವನ್ನು ಅಭ್ಯಾಸ ಮಾಡುವ ಪಾಶ್ಚಿಮಾತ್ಯ ವಿದ್ವಜ್ಜನರ ಸಭೆಯೊಂದು ಭಿನ್ನಭಿನ್ನ ದೇಶಗಳಲ್ಲಿ ಸೇರುತ್ತಿದೆ. ೧೭ನೇ ಅಧಿವೇಶನವು ಈ ವರುಷ ಲಂಡನಿನಲ್ಲಿ ಸೇರಿತು. ಸ್ವಿಝರ್ಲಂಡ ದೇಶದ ಜಿನೇವಾ ಪಟ್ಟಣದ ಪ್ರೊಫೆಸರ ಆಲ್ಟ್ರಾಮೂರರವರು 'ಭಗವದ್ಗೀತೆಯ ಮೇಲೆ ಉಪನ್ಯಾಸ ಕೊಟ್ಟರು. ಭಗವದ್ಗೀತೆಯಲ್ಲಿ ಧರ್ಮನಿರೂಪಣವಾಗಿರುವದಾಗಿ ಅವರು ಹೇಳಿದರು; ಭಗವದ್ಗೀತೆಯಲ್ಲಿ ಮಾನವ ನಡಾವಳಿಯು ಬೋಧಿಸಲ್ಪಟ್ಟಿರುವದಾಗಿ ಅವರು ವಿವರಿಸಿದರು. ಆಸ್ಟ್ರಿಯಾದೊಳಗಿನ ಪ್ರೇಗ ಪಟ್ಟಣದ ಪ್ರೊಫೆಸರ ವಿಂಟರನಿಟ್ಸರವರು ಪುಣೆಯ ಪ್ರಾಚ್ಯವಿದ್ಯಾಸಂಶೋಧಕರು ನಡಿಸಿರುವ ಮ.ಭಾರತ ಗ್ರಂಥದ ಶೋಧಕ ಕಾರ್ಯವನ್ನು ಪ್ರಶಂಸಿಸಿದರು. ಈ ಕಾರ್ಯದ ಪ್ರಮುಖರಾದ ಡಾ| ಸುಖಟಣಕರರವರಿಗೆ ಹೊಗಳಿದರು, ಪುಣೆಯೊಳಗಿನ ಸಂಶೋಧಕರಿಗೆ ಅಭಿನಂದಿಸೋಣವಾಯಿತು. ಯುರೋಪ ಖಂಡದಲ್ಲಿದ್ದ ಹಸ್ತಪತ್ರಿಕೆಗಳನ್ನೆಲ್ಲ ಪುಣೆಯವರಿಗೆ ಪೂರೈಸಬೇಕಾಗಿಯೂ ಠೀವರ್ಮಾನವಾಯಿತು. ಮಹಾಭಾರತ ಗ್ರಂಥದ ಪ್ರಮಾಣಭೂತ ಕಾವ್ಯವು ಆದಷ್ಟು ಬೇಗನೇ ತಯಾರಾಗಬೇಕಾಗಿಯೂ ಈ ಸಭೆಯವರು [illegible]ಸಿದರು. "ಲಂಡನ್ ಟೈಮ್ಸ" ಪತ್ರಿಕೆಯಲ್ಲಿ ಸಂ[illegible]ದಕರು ಈ ವಿಷಯ ಒಂದು ದೊಡ್ಡ ಲೇಖ ಬರೆದಿದ್ದಾರೆ. ಪುರಾತನ ಪ್ರಾಚ್ಯವಿದ್ಯೆಯನ್ನು ಪರಿಶ್ರಮಪೂರ್ವಕ ಸಂಶೋಧಿಸಬೇಕಾಗಿ ಈ ಪತ್ರಿಕೆಯ ಅಭಿಪ್ರಾಯ. ಇದೇ ಲೇಖದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಬಗ್ಗೆ ಸಂಪಾದಕರು ಬರೆದ ಉದ್ಗಾರವನ್ನು ಭಾರತೀಯರು ಮನನ ಮಾಡತಕ್ಕದ್ದು. "ಈಗಿನ ಸುಧಾರಣೆಯ ಪ್ರವಾಹದಲ್ಲಿ ಪೌರ್ವಾತ್ಯರು ತಮ್ಮ ಪುರಾತನ ಹಾಗು ಪರಂಪರಾಗತ ನಡೆನುಡಿಗಳನ್ನು ಬಿಟ್ಟುಬಿಟ್ಟಿದ್ದಾರೆ. ಇದು ನಿಜವಾಗಿ ಶೋಚನೀಯವು. ಪೂಜ್ಯವಾದ ಹಳೇ ಪರಂಪರೆಗಳೂ, ಹಳೇ ಭಾಷೆಗಳೂ, ಉಪಭಾಷೆಗಳೂ, ಕ್ರಮವಾಗಿ ನಷ್ಟಹೊಂದುತ್ತಿವೆ. ಅವುಗಳ ಅಭ್ಯಾಸ ಮಾಡುವವರಿಲ್ಲ; ಅವುಗಳನ್ನು ದಾಖಲ ಮಾಡಿಕೊಳ್ಳುವವರಿಲ್ಲ, ಪೃಥಕ್ಕರಣ ಮಾಡುವವರೂ ಇಲ್ಲ!" ಸಂಯುಕ್ತ ಪ್ರಾಂತದ ಖುರ್ಜಾ ಗ್ರಾಮದ ಶೇಟ ಗೌರೀಶಂಕರ ಗೋಯೆಂಕಾ

ರವರು ಸಂಸ್ಕೃತ ಭಾಷೆಯ ಉದ್ಧಾರಕ್ಕಾಗಿ ಸರ್ಕಾರವು ಮಾಡಿದ ವ್ಯವಸ್ಥೆಯನ್ನು ಇಲ್ಲಿಯೇ ಉಲ್ಲೇಖಿಸಬೇಕಾಗಿದೆ. ೧॥ ಲಕ್ಷ ರೂಪಾಯಿಗಳನ್ನು ಅವರು ಸಂಯುಕ್ತ ಪ್ರಾಂತಿಕ ಸರಕಾರದ ಸ್ವಾಧೀನಪಡಿಸಿರುವರು. ಈ ರಕಮಿನ ಬಡ್ಡಿಯಿಂದ ಸಂಸ್ಕೃತ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ ಅತ್ಯಂತ ಶ್ರೇಷ್ಠತರಗತಿಯ ವಿದ್ವಜ್ಜನರಿಗೆ ೧-೧ ಸಾವಿರ ರೂಪಾಯಿಗಳಂತೆ ದಕ್ಷಿಣೆ ಕೊಡಬೇಕೆಂದು ಶೇಟ ಗೌರೀಶಂಕರರವರ ಅಪೇಕ್ಷೆ ಇದೆ. ಶ್ರೀಕ್ಷೇತ್ರ ಕಾಶಿಯೊಳಗಿನ ಸಂಸ್ಕೃತ ಪಾಠಶಾಲೆಯ ಇನ್ಸಪೆಕ್ಟರರಾದ ರಾ। ಕಾಶೀರಾಮರವರು ಈ ವಿಷಯದ ಸಮಸ್ತ ಮಾಹಿತಿಯನ್ನು ಪೂರೈಸುತ್ತಾರೆ.

* * *

ವಕೀಲರ ಮೇಲೆ ಗಂಡಾಂತರ.

ರಾಜಶಾಹಿಯೊಳಗಿನ ಮೂವರು ವಕೀಲರು ಸೈಮನ್ ಕಮಿಟಿಯ ಆಗಮನದ ದಿನ, ಅಂದರೆ, ೩ ಫೆಬ್ರುವರಿ ೩ನೇ ತಾರೀಖಿಗೆ ವ್ಯಾಪಾರಸ್ಥರೂ, ವಕೀಲರೂ ಕೋರ್ಟಿಗೆ ಹಾಜರಾಗಬಾರದಾಗಿ ಹಸ್ತಪತ್ರಿಕೆಯನ್ನು ಹೊರಡಿಸಿದ್ದರು. ಆ ಹಸ್ತಪತ್ರಿಕೆಯ ಮೇಲೆ ಮುದ್ರಣಾಲಯದ ಹೆಸರಿದ್ದಿಲ್ಲ. ಆ ಬಗ್ಗೆ ಮೇಲ್ಕಂಡ ಮೂವರ ಮೇಲೆ ಖಟ್ಲೆ ಮಾಡೋಣಾಯಿತು. ಆ ಖಟ್ಲೆಯೊಳಗಿಂದ ಈ ಮೂವರು ತಪ್ಪಿದರು. ಬಳಿಕ, ಲೀಗಲ್ ಪ್ರಾಕ್ಟೀಶನರ್ಸ್ ಏಕ್ಟ್, ಅಂದರೆ ವಕೀಲರ ಕಾಯಿದೆಯನ್ವಯ ಇವರ ಮೇಲೆ ದುರ್ವರ್ತನದ ನೋಟೀಸುಗಳು ಹೊರಡಿಸೋಣಾದವು. ಕಲಕತ್ತೆಯ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಸುಹ್ರಾವರ್ದಿ ಹಾಗು ಗಾರ್ಲಿಕ್‌ರವರು ಈ ಕುರಿತು ಕಳೆದ ಮಂಗಳವಾರಕ್ಕೆ ತೀರ್ಪು ಕೊಟ್ಟಿದ್ದಾರೆ. ನ್ಯಾಯಮೂರ್ತಿಗಳು ಈ ಬಾರಿ ಈ ವಕೀಲರಿಗೆ ಏನೊಂದೂ ಶಾಸನ ಮಾಡಬಾರದಾಗಿ ಅಭಿಪ್ರಾಯಪಟ್ಟಿದ್ದಾರೆ. ಆದರೆ, ವಕೀಲರು ಕೋರ್ಟಿನಲ್ಲಿ ಕೆಲಸ ಮಾಡಲು ಲೈಸನ್ಸ ಪಡೆದವರಿದ್ದು, ಅವರು ತಮ್ಮ ರಾಜಕೀಯ ಅಭಿಪ್ರಾಯವನ್ನು ಈ ಪ್ರಕಾರ ಉಪಯೋಗಿಸುವದು ದುರುಪಯೋಗವೆಂದು ಅಭಿಪ್ರಾಯಪಟ್ಟಿದ್ದಾರೆ. ಲೀಗಲ್ ಪ್ರಾಕ್ಟೀಶನರ್ಸ ಅಂದರೆ ವಕೀಲರ ಕಾಯಿದೆಯ ಪ್ರಕಾರ ಇದು ಅಪರಾಧವೆಂದೂ ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ನ್ಯಾಯದಾನದ ಕೆಲಸಕ್ಕೆ ತೊಂದರೆಯಾಗುತ್ತದಂತೆ. ಆದರೆ, ಈ ಹಸ್ತಪತ್ರಿಕೆಯಿಂದ ಕೋರ್ಟು ಕೆಲಸಕ್ಕೆ ತೊಂದರೆಯಾಗಿರಲಿಲ್ಲವಾದ್ದರಿಂದ ಈ ಬಾರಿ ಈ ವಕೀಲರಿಗೆ ಕ್ಷಮಿಸೋಣಾಗಿದೆ ಇತ್ಯಾದಿ ಬರೆದು ಈ ಪ್ರಕರಣವನ್ನು ಅಂತ್ಯಪಡಿಸಿದ್ದಾರೆ.

* * *

ಸೈಮನ್ ಕಮಿಟಿಯ ಹೊಲಸು.

ಸೈಮನ್ ಕಮಿಟಿಯ ಹೊಲಸು ಇನ್ನೂ ತೀರುವದಿಲ್ಲ. ಮದ್ರಾಸ ಕಾಯಿದೆಕೌನ್ಸಿಲಿನಲ್ಲಿ ಸೈಮನ್ ಕಮಿಟಿಯೊಡನೆ ಸಹಕಾರ ಮಾಡುವದಕ್ಕಾಗಿ ೭ ಮಂದಿಗಳ ಕಮಿಟಿ ನೇಮಿಸುವ ವಿಚಾರಬಂತು. ಆದರೆ, ಈ ವಿಷಯವು ೭ ತಿಂಗಳ ಹಿಂದೆ ಇದೇ ಕೌನ್ಸಿಲಿನಲ್ಲಿ ವಿಚಾರವಾಗಿ ಠರಾವು ಕಿತ್ತೊಗೆಯೋಣಾಗಿತ್ತು. ತದನಂತರ ಸರಕಾರದ ತರ್ಫಿನಿಂದ ಪರಿಪರಿಯ ಪ್ರಯತ್ನಗಳು ನಡೆದು ಈ ಕೌನ್ಸಿಲಿನಲ್ಲಿ ಆ ಠರಾವು ಪುನಃ ಸೂಚಿಸೋಣಾಯಿತು. ಪ್ರಾಂತಾಧಿಪರು ಪ್ರೇಕ್ಷಕರಾಗಿ ಕೌನ್ಸಿಲಿನಲ್ಲಿದ್ದರು. ಬ್ರಾಹ್ಮಣೇತರರನ್ನು ಸರಕಾರಿ ಪಕ್ಷಕ್ಕೆ ಒಲಿಸಿಕೊಳ್ಳೋಣಾಯಿತು. ಶ್ರೀ। ಸತ್ಯಮೂರ್ತಿಗಳಂಥ ಸ್ವರಾಜ್ಯ ಪಕ್ಷದವರು ನ್ಯಾಯಿವೆಯಂತೆ ಈ ವಿಷಯವನ್ನು ಚರ್ಚೆಗೆ ಕೊಳ್ಳಬರುವದಿಲ್ಲವಾಗಿ ವಾದಿಸಿದರು. ಅಧ್ಯಕ್ಷರಿಗೆ ತೀರ್ಪು ಕೊಡಲು ಬಿನ್ನೈಸಿದರು. ಅಧ್ಯಕ್ಷರು ಸರಕಾರಕ್ಕೆ ಅನುಕೂಲವಾದ ನಿರ್ಣಯ ಕೊಟ್ಟರು. ಕೂಡಲೆ ಮದ್ರಾಸ ಹೈಕೋರ್ಟಿನಲ್ಲಿ ಚರ್ಚೆ ಪ್ರತಿಬಂಧ ಮಾಡುವಂತೆ ಅರ್ಜಿ ದಾಖಲಾಯಿತು. ಮದ್ರಾಸ ಸರಕಾರದ ಸ್ಟೇಕಾಯಿದೆ ಶಾಖೆಯ ಸಭಾಸದರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರವರೂ, ಟಿ. ಆರ್. ವೆಂಕಟರಾಮ ಶಾಸ್ತ್ರಿಗಳವರೂ ಅರ್ಜಿಯ ಪರವಾಗಿ ವಾದಿಸಿದರು. ಅರ್ಜಿಯ ವಾದವು ಆ ದಿನ ಪೂರ್ಣವಾಗಲಿಲ್ಲ. ನ್ಯಾಯಮೂರ್ತಿ ಕುಮಾರಸ್ವಾಮಿ ಶಾಸ್ತ್ರಿಯರ್‌ರವರು ಮಾರನೇ ದಿನ ಅರ್ಜಿಯ ಕಾರಣಗಳನ್ನು ಕೇಳಿಕೊಳ್ಳಲು ನೇಮಿಸಿದರು. ಪ್ರತಿಬಂಧಕ ಹುಕುಮು ಕೂಡಲೇ ಕೊಡದಿದ್ದರೆ, ಸಹಕಾರ ಮಂಡಳವು ನೇಮಿಸಲ್ಪಟ್ಟು ಸಾರ್ವಜನಿಕ ಹಣದ ಅಪವ್ಯಯವಾಗುವದೆಂದು ರಾಮಸ್ವಾಮಿಗಳವರೂ, ಟಿ. ಆರ್. ವೆಂಕಟರಾಮ ಶಾಸ್ತ್ರಿಗಳವರೂ ವಾದಿಸಿದರು. ಪೂರ್ಣ ಚರ್ಚೆಗಾಗಿ ಮಾರನೇ ದಿನ ನೇಮಿಸಿ ಕೋರ್ಟು ಬರಖಾಸ್ತಾಗುವಷ್ಟರಲ್ಲಿ ಕೌನ್ಸಿಲಿನೊಳಗಿನ ಚರ್ಚೆ ಮುಂದರಿದು ಹೋಗಿ ಕಮಿಟಿಯು ನೇಮಿಸಲ್ಪಟ್ಟಿತು. ಮಾರನೇ ದಿನ ರಾಮಸ್ವಾಮಿಗಳವರು ತಮ್ಮ ಅರ್ಜಿಯನ್ನು ಇನ್ನು ಪುರಸ್ಕರಿಸುವದು ನಿರರ್ಥಕವೆಂದು ಹೇಳಿ ಅರ್ಜಿ ಹಿಂತೆಗೆದುಕೊಂಡರು. ಹೀಗೆ ಬರೇ ಬಲಾತ್ಕಾರದಿಂದ ಸೈಮನ್ ಕಮಿಟಿಯೊಡನೆ ಮದ್ರಾಸ ಸರಕಾರದ ಸಹಕಾರ ಮಂಡಳವು ನೇಮಿಸಲ್ಪಟ್ಟಿದೆ.

* * *

ಅಫಘಾಣಿಸ್ಥಾನದಲ್ಲಿ ಸ್ವಾತಂತ್ರ್ಯದಿನೋತ್ಸವ.

ಕಳೆದ ವಾರ ಅಫಘಾಣಿಸ್ಥಾನದಲ್ಲಿ ಸ್ವಾತಂತ್ರ್ಯ ದಿನೋತ್ಸವವು ಸಡಗರದಿಂದ ಪಾರಗಂಡಿತು. ಆ ದಿನ ಪಘಮಾನದಲ್ಲಿ ಅಫಘಾಣಿಸ್ಥಾನದಲ್ಲಿ ಬೆಳೆಯುವ ಜಿನಸುಗಳ ಪ್ರದರ್ಶನವಾಯಿತು, ಕೈಗಾರಿಕೆಗಳ ಪ್ರದರ್ಶನವೂ ಆಯಿತು. ಪ್ರಜೆಗಳಿಗೆ ಅಫಘಾಣಿಸ್ಥಾನದಲ್ಲಿ ಬೆಳೆಯುವ ಸರಕುಗಳನ್ನು ಉಪಯೋಗಿಸಿ ಆಶ್ರಯವನ್ನೀಯಲು ಅಮಾನುಲ್ಲಾ ಖಾನರವರು ಬೋಧಿಸಿದರು. ಅಫಘಾಣಿಸ್ಥಾನದ ಸರಕಾರವು ಈ ದಿನ ದೇಶದಲ್ಲಿ ವಿಶೇಷ ಸುಧಾರಣೆಗಳನ್ನು ಕೈಕೊಂಡಿದೆ. ಎಲ್ಲರಿಗೂ ಸೈನ್ಯ ಶಿಕ್ಷಣವು ಒತ್ತಾಯದಿಂದ ಕೊಡೋಣಾಗುವದು. ಸರಕಾರಿ ಅಧಿಕಾರಿಗಳು ಲಂಚ ತಿನ್ನದಂತೆ ಕಾನೂನಾಗುವದು. ಸರಕಾರಿ ನೌಕರರು ತಮ್ಮ ಅಧಿಕಾರದ ದುರುಪಯೋಗ ಮಾಡದಂತೆ ಕಾನೂನಾಗುವದಿದೆ. ಪ್ರತ್ಯಕ್ಷ ಚುನಾವಣೆಯಿಂದ ಪ್ರಜಾಪ್ರತಿನಿಧಿ ಸಭೆಯೊಂದನ್ನು ಸ್ಥಾಪಿಸುವ ಸಂಕಲ್ಪವಾಗಿದೆ. ಅಮೀರರು ಸಮಸ್ತ ಪ್ರಕಾರದ ಕಿತಾಬುಗಳನ್ನು ರದ್ದುಪಡಿಸಿದ್ದಾರೆ. ಸರಕಾರದಲ್ಲಿ ಯಾರಿಗೂ ಯಾವದೇ ಪ್ರಕಾರದಿಂದ ಕೃತ್ರಿಮ ಪ್ರತಿಷ್ಠೆ ಸಿಗದಂತೆ ವ್ಯವಸ್ಥೆಯಾಗಿದೆ. ಲೋಕಸತ್ತಾತ್ಮಕ ಪರಂಪರೆಯನ್ನು ಅನುಸರಿಸಿ ಸುಧಾರಣೆಗಳನ್ನೇರ್ಪಡಿಸಿದ ಬಗ್ಗೆ ವಿಲಾಯತಿಯೊಳಗಿನ ವೃತ್ತಪತ್ರಿಕೆಗಳು ಆಶ್ಚರ್ಯಗೊಂಡಿವೆ !

* * *

ಮೊಂಟಿಗ್ಯೂ ಸ್ವರಾಜ್ಯದಲ್ಲಿ ಮುಂಬೈ ಇಲಾಖೆಯೊಳಗಿನ ಶಿಕ್ಷಣದ ಪ್ರಗತಿ.

ಮುಂಬಯಿ ಸರಕಾರವು ಸೈಮನ್ ಕಮಿಟಿಗೆ ಸಾದರಪಡಿಸಲು ಒಂದು ಕೈಫಿಯತನ್ನು ತಯಾರಿಸಿದೆ. ಶಿಕ್ಷಣದ ಬಗ್ಗೆ ಆ ಕೈಫಿಯತಿನಲ್ಲಿ ಬರೆದಷ್ಟೇನಂದರೆ:— ೧೯೧೪-೧೫ ನೇ ಇಸ್ವಿಯಲ್ಲಿ ೭೪೯೭೯ ವಿದ್ಯಾರ್ಥಿಗಳಿದ್ದರು; ೧೨ ವರುಷಗಳಲ್ಲಿ ೧೧೪೪೭೧೪ ವಿದ್ಯಾರ್ಥಿಗಳು ಕಲಿಯಲಾರಂಭಿಸಿದರು; ಮದ್ರಾಸು-ಬಂಗಾಲದೊಡನೆ ಮುಂಬಯಿ ಪ್ರಾಂತಕ್ಕೆ ತುಲನೆ ಮಾಡಿದರೆ, ಬಂಗಾಲವು ಮೊದಲನೇ ನಂಬರು; ಮದ್ರಾಸ ಪ್ರಾಂತವು ೨ ನೇ ನಂಬರು, ಮುಂಬಯಿ ಪ್ರಾಂತವು ೩ ನೇ ನಂಬರು ಬರುತ್ತವೆ. ಇದೇ ಇಲಾಖೆಯಲ್ಲಿ ೩೭೫ ಹೈಸ್ಕೂಲುಗಳಿವೆ. ಅವುಗಳಲ್ಲಿ ೧೨೨ ಸರಕಾರಿ, ಉಳಿದವು ಖಾಸಗಿ. ಒಟ್ಟು ಮ್ಯುನಿಸಿಪಾಲಿಟಿಗಳು ೧೫೬; ಇವುಗಳಲ್ಲಿ ೫೦ ಮ್ಯುನಿಸಿಪಾಲಿಟಿಗಳು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡುತ್ತಿವೆ. ಇವುಗಳಲ್ಲಿ ೫ ಮ್ಯುನಿಸಿಪಾಲಿಟಿಗಳು ಬಾಲಕರಿಗೆ ಒತ್ತಾಯದಿಂದ ಶಿಕ್ಷಣ ಕೊಡುತ್ತಿವೆ. ೩ ಮ್ಯುನಿಸಿಪಾಲಿಟಿಗಳು ಬಾಲ-ಬಾಲಕಿಯರಿಗೆ ಒತ್ತಾಯದ ಶಿಕ್ಷಣವನ್ನು ಕೊಡುತ್ತಿವೆ. ೧೯೧೪-೧೫ ನೇ ಇಸವಿಯಲ್ಲಿ ಒಟ್ಟು ಶಿಕ್ಷಣಕ್ಕೋಸ್ಕರ ೧ ಕೋಟಿ, ೫೩ ಲಕ್ಷ ರೂಪಾಯಿ ಖರ್ಚಾಯಿತು. ಇದರಲ್ಲಿ ಪ್ರಾಥಮಿಕ ಶಿಕ್ಷಣದ ಬಗ್ಗೆ ೬೧ ಲಕ್ಷ ರೂಪಾಯಿ ಖರ್ಚು. ೧೨ ವರುಷಗಳಲ್ಲಿ ಈ ರಕಮುಗಳು ಅನುಕ್ರಮವಾಗಿ ೨ ಕೋಟಿ ೮೨ ಲಕ್ಷಕ್ಕೂ, ೧ ಕೋಟಿ ೯ ಲಕ್ಷಕ್ಕೂ ಏರಿದವು. ಮೋಂಟೆಗ್ಯೂ ಸ್ವರಾಜ್ಯದಲ್ಲಿ ಡಾ। ಪರಾಂಜಪೆಯವರು ಶಿಕ್ಷಣ ಖಾತೆಯ ಪ್ರಥಮ ದಿವಾಣರು. ಇವರು ೧೯೨೩ನೇ ಇಸ್ವಿಯಲ್ಲಿ ಒತ್ತಾಯ ಶಿಕ್ಷಣದ ಕಾಯಿದೆಯ ವ್ಯಾಪ್ತಿಯನ್ನು ಬೆಳಸಿದರು. ಮತ್ತು ಈ ಕಾಯಿದೆಯನ್ವಯ ಶಿಕ್ಷಣವು ಲೋಕಲ್‌ಬೋರ್ಡ ಮ್ಯುನಿಸಿಪಾಲಿಟಿಗಳಿಗೊಪ್ಪಿಸಲ್ಪಟ್ಟಿತು. ಇಷ್ಟರಲ್ಲಿ ಡಾ। ಪರಾಂಜಪೆಯವರ ಅಧಿಕಾರದ ಅವಧಿ ಮುಗಿಯಿತು. ರಾ। ಜಾಧವರವರು ದಿವಾಣರಾದರು. ಇವರು ಬ್ರಾಹ್ಮಣೇತರರು. ಹೊಸ ಚುನಾವಣೆಗಳಾದವು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಬ್ರಾಹ್ಮಣೇತರರಿಗೆ ಅಧಿಕಾರಪ್ರಾಪ್ತಿಯಾಯಿತು. ಅನೇಕ ಬೋರ್ಡುಗಳು ಶಿಕ್ಷಣವನ್ನು ವಹಿಸಿಕೊಳ್ಳಲೊಪ್ಪಲಿಲ್ಲ. ದಿವಾಣರು ಪರಿಪರಿಯಿಂದ ಬೋರ್ಡುಗಳ ಮನವೊಲಿಸಿ, ೧೯೨೬ ನೇ ಇಸ್ವಿಯಲ್ಲಿ ಶಿಕ್ಷಣವು ಸಂಪೂರ್ಣವಾಗಿ ಬೋರ್ಡುಗಳಿಗೆ ವಹಿಸಲ್ಪಟ್ಟಿತು. ರಾ। ಜಾಧವರವರ ಕಾರಕೀರ್ದಿಯಲ್ಲಿ ಚಿಕ್ಕಪುಟ್ಟ ಮ್ಯುನಿಸಿಪಾಲಿಟಿಗಳ ಹಟಕ್ಕೆ ಪುಟ ಏರಿತು. ಡಾ। ಪರಾಂಜಪೆಯವರು ಚಿಕ್ಕಪುಟ್ಟ ಮ್ಯುನಿಸಿಪಾಲಿಟಿಗಳೆಲ್ಲ ಬೋರ್ಡುಗಳಲ್ಲಿ ಸೇರಿ ಹೋಗಿ, ಬೋರ್ಡುಗಳ ಮುಖಾಂತರ ಶಿಕ್ಷಣ ನಡೆಸಬೇಕೆಂಬ ಧೋರಣವನ್ನಿರಿಸಿದ್ದರು. ರಾ। ಜಾಧವರವರು ಆ ಧೋರಣಕ್ಕೆ ಕೈಬಿಟ್ಟರು. ಜಾತಿವಿಷಯಕ ಜಗಳಗಳು ಬೋರ್ಡುಗಳಲ್ಲಿ ಬೆಳೆದದ್ದು ಇವರ ಕಾರಕೀರ್ದಿಯಲ್ಲಿಯೇ. ಈ ಜಗಳಗಳಿಂದ ಶಿಕ್ಷಕರೂ ಶಿಕ್ಷಣಾಧಿಕಾರಿಗಳೂ ಸುತ್ತುಗಟ್ಟಲ್ಪಟ್ಟರು. ಶಿಕ್ಷಣ ಪ್ರಗತಿಯು ಸಂಕಲ್ಪದಂತೆ ಸಾಗಲಿಲ್ಲ. ರಾ। ಜಾಧವರವರು ಹಿಂದುಳಿದ ಸಮಾಜಗಳಿಗೆ ಶಿಕ್ಷಣಕ್ಕಾಗಿ ಬಹಳ ದ್ರವ್ಯಸಹಾಯ ಮಾಡಿದ್ದಾರೆ. ಇವರ ಉತ್ತರಾಧಿಕಾರಿಗಳು ಈಗಿನ ದಿವಾಣ ಬಹಾದ್ದೂರರಾದ ಹರಿಲಾಲಭಾಯಿ ದೇಸಾಯಿಯವರು. ಹೈಸ್ಕೂಲ ಹಾಗು ಕಾಲೇಜ ಶಿಕ್ಷಣಗಳನ್ನು, ಪ್ರಾಥಮಿಕ ಶಿಕ್ಷಣವನ್ನು ಒಟ್ಟಿಗೆ ಬೆಳೆಸಲು ಇವರ ಸಂಕಲ್ಪ. ಗ್ರಾಮಗಳಲ್ಲಿ ಶಿಕ್ಷಣ ಕೊಡುವದಕ್ಕಾಗಿ ಹೆಚಿನ

ಖರ್ಚು ಮಾಡಬೇಕೆಂದು ಇವರದೊಂದು ಕಲ್ಪನೆ ಆದರೆ, ಶಿಕ್ಷಣ ಪ್ರಸಾರಕ್ಕಾಗಿ ಇವರ ಧೋರಣ ನಿಶ್ಚಯವಿಲ್ಲ. ರಾ| ಇಂಥವರಾದರೂ ಧೋರಣವಿಲ್ಲದ ದಿವಾಣರಾಗಿ ಹೋದರು. ಡಾ|| ಪರಾಂಜಪೇಯವರು ಮಾತ್ರ ನಿಶ್ಚಿತ ಧೋರಣದಿಂದ ಕೆಲಸ ಮಾಡುತ್ತಿದ್ದರು. ಮಹಾರಾಷ್ಟ್ರ-ಕರ್ನಾಟಕ ಭಾಗಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿವೆ; ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದೆ. ಆದರೆ, ಅದರ ಜೊತೆಗೆ ಶಿಕ್ಷಣದ ಗುಣವು ಹೆಚ್ಚಲಿಲ್ಲ. ಶಾಲೆಗಳ ಬೋರ್ಡಿನ ವಶವಾದಂದಿನಿಂದ ಶಿಕ್ಷಕರು ರಾಜಕಾರಣದಲ್ಲಿ ಪ್ರತಿಷ್ಠೆಯನ್ನು ಸಂಪಾದಿಸಹತ್ತಿದ್ದಾರೆ. ಗ್ರಾಮಾಂತರದಲ್ಲಿ ಇವರ ವಸ್ತಿ. ಇದರಿಂದ ಕೌನ್ಸಿಲುಗಳೊಳಗಿನ ಸಭಾಸದರಿಗೆ ಇವರ ಬೆಂಬಲ ಬೇಕಾಗುತ್ತದೆ. ಅವರಿಂದ ಕೌನ್ಸಿಲು ಉಮೇದ್ವಾರರ ಇವರ ಕಂಬಳದ ಏರಿಕೆಗಾಗಿ ಕೌನ್ಸಿಲಿನಲ್ಲಿ ಪ್ರಯತ್ನ ಮಾಡುತ್ತಾರೆ. ಈ ಕಲ್ಪನೆಯಿಂದ ನಡಕೊಂಡರೆ, ಶಿಕ್ಷಣ ಪ್ರಸಾರಕ್ಕೆ ತಗಲುವ ಖರ್ಚಿನ ವ್ಯವಸ್ಥೆಯಾಗದೆ ಮುಂದೆ ಅತಂತ್ರವಾಗುವದು. ಕೆಲವು ಕಡೆಗಳಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರರೊಳಗಿನ ಕಲಹಗಳು ಬೆಳೆದವು. ಲೋಕಲ್‌ಬೋರ್ಡು-ಮುನಿಸಿಪಾಲಿಟಿಗಳ ಮೇಲೆ ಈ ಕಲಹಗಳಿಂದ ನಷ್ಟವಾಗಿದೆ. ನುರಿತ ಶಿಕ್ಷಕರಿಗೆ ದೊಡ್ಡ ಜಾಗಗಳು ದೊರಕಲಿಲ್ಲ; ಹೊಸಬರಿಗೆ ಜಾತಿ ಶಿಫಾರಸಿನ ಮೇಲೆ ನೇಮಿಸಿಕೊಳ್ಳಲಾಗಿದೆ. ಇಂಥ ಸ್ಥಿತಿಯಲ್ಲಿ ಬೋರ್ಡುಗಳು ಶಿಕ್ಷಣ ಕಾರ್ಯವನ್ನು ನಡಿಸಲು ಪಾತ್ರವೋ ಹೇಗೆ? ಎಂಬದೊಂದು ಸಂದೇಹವುಂಟಾಗಿದೆ. ಇದ್ದಾಗ್ಯೂ, ಇಲಾಖೆಯೊಳಗಿನ ಶಿಕ್ಷಣ ಕಾರ್ಯವು ಎಲ್ಲ ಪ್ರಕಾರದಿಂದಲೂ ಭರದಿಂದ ಸಾಗಿರುತ್ತದೆಂದು ಅಭಿಪ್ರಾಯಪಟ್ಟಿದೆ.

* * *

ಅನುಕರಣೀಯ ಹ್ಯಾಸ್ಕೂಲು

ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಬಂಗಾಲದೊಳಗಿನ ಜೆಸ್ಸೋರ ಜಿಲ್ಹೆಯ ದುರ್ಗಾಪುರದಲ್ಲಿರುವ ಒಂದು ಹ್ಯಾಸ್ಕೂಲಿನ ವರ್ಣನೆ ಮಾಡಿದ್ದಾರೆ. ದುರ್ಗಾಪುರವು ಒಂದು ಸಣ್ಣ ಊರು ೩|| ಸಾವಿರ ಲೋಕಸಂಖ್ಯೆಯಿದೆ. ಕ್ಷೇತ್ರಫಲವು ೩ ಚೌರಸ ಮೈಲು. ಇಲ್ಲಿ ಹ್ಯಾಸ್ಕೂಲಾಗಿ ೬೦ ವರ್ಷಗಳಾದವು. ಹ್ಯಾಸ್ಕೂಲಿನ ಶಿಕ್ಷಕರು ಭಕ್ತಿಯಿಂದ ಕೆಲಸ ಮಾಡುತ್ತಾರೆ. ಅವರು ಪರಸ್ಪರ ಸಹಾಯಕ ಸಂಘವನ್ನೊಂದು ಏರ್ಪಡಿಸಿ ಚಲೋ ಕೆಲಸ ಮಾಡಿದ್ದಾರೆ. ಈ ಸಂಘವಾಗಿ ೧೩ ವರ್ಷಗಳಾದವು. ಈ ಸಂಘದ ಈಗಿನ ಭಂಡವಾಳವು ೪೯ ಸಾವಿರ ರೂಪಾಯಿ. ಎಲ್ಲ ಹಣವು ಊರವರಿಂದಲೇ ಸಂಗ್ರಹವಾಗಿದೆ. ದುರ್ಗಾಪುರದಿಂದ ೭ ಮೈಲು ದೂರ ಖಾದಿ ಬಟ್ಟೆಯನ್ನು ತಯಾರಿಸುವ ಕೇಂದ್ರವೊಂದು ಸ್ಥಾಪಿತವಾಗಿದೆ. ಈ ಖಾದಿ ಸಂಸ್ಥೆಗೆ ಬಂಗಾಲದ ಆಚಾರ್ಯ ಪ್ರಫುಲ್ಲಚಂದ್ರ ರೊಯ್‌ರವರು ಭೆಟ್ಟಿ ಕೊಟ್ಟಿದ್ದರು. ಆಚಾರ್ಯರ ಖಾದಿ ಉಪದೇಶವು ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಬಿಂಬಿ ೧೯೨೩ನೇ ಇಸ್ವಿಯಲ್ಲಿ ವಿದ್ಯಾರ್ಥಿಗಳು ಖಾದಿ ಭಂಡಾರವನ್ನೊಂದು ಸ್ಥಾಪಿಸಿದರು. ವಿದ್ಯಾರ್ಥಿಗಳೂ, ಶಿಕ್ಷಕರೂ ಖಾದಿಯನ್ನು ಅಭಿಮಾನದಿಂದ ಧರಿಸುತ್ತಾರೆ. ೧೯೨೩ನೇ ಇಸ್ವಿಯ ಆಗಸ್ಟ ೧೫ನೇ ತಾರೀಖಿಗೆ ಶಾಲೆಯ ವ್ಯವಸ್ಥಾಪಕ ಮಂಡಳದವರು ಒಂದು ಠರಾವನ್ನು ಮಾಡಿದರು. ಆ ಠರಾವಿನಂತೆ ಆ ಶಾಲೆಗೆ ಹಚ್ಚುವವರೆಲ್ಲರೂ ಖಾದಿಯನ್ನೇ ಧರಿಸತಕ್ಕದ್ದೆಂದು ನೇಮವಾಯಿತು. ಅಂದಿನಿಂದ ಎಲ್ಲರೂ ಖಾದಿಯನ್ನೇ ಧರಿಸುತ್ತಾರೆ. ಈಗ ಅಲ್ಲಿ ೩೨೦ ಮಂದಿ ವಿದ್ಯಾರ್ಥಿಗಳಿದ್ದಾರೆ. ಖಾದಿಯ ಉಪಯೋಗದಿಂದ ವಿದ್ಯಾರ್ಥಿಗಳ ಅರಿವೆ-ಅಂಚಡಿಯ ಖರ್ಚು ಬಹು ಮಟ್ಟಿಗೆ ತಗ್ಗಿದೆಂದು ಊರವರು ಸಂತೋಷದಿಂದ ಒಪ್ಪುತ್ತಾರೆ. ವಿದ್ಯಾರ್ಥಿಗಳು ನೇಶಾಭಿಮಾನದಿಂದಲೂ, ಮಿತವ್ಯಯದಿಂದಲೂ ಖಾದಿ ಕೊಳ್ಳುತ್ತಾರೆ. ಹ್ಯಾಸ್ಕೂಲಿನವರು ಬೇಸಾಯ ಹೊಲವನ್ನೊಂದು ಸ್ಥಾಪಿಸಿದ್ದಾರೆ; ಗೋಶಾಲೆ ಸ್ಥಾಪನೆಯಾಗುವದಿದೆ; ಕೈಗಾರಿಕೆ ಶಾಲೆ ಸ್ಥಾಪಿಸುವ ಆಲೋಚನೆಯಾಗಿದೆ. ಈ ಪ್ರಕಾರ ಖಾಸಗಿ ಹ್ಯಾಸ್ಕೂಲು ವರ್ತಿಸಿದರೆ, ಬಹಳ ಲೋಕೋಪಕಾರವಾಗುವಂತಿದೆ.— — —

ಜಾಹೀರಾತು.

ಕಳೆದ ತಾ. ೧೧ನೇಯಿಂದ ನಾವು ಕುಮಟಾ ಶಹರದಲ್ಲಿ ಮುಕ್ಕಾಂ ಮಾಡಿದ್ದು, ನಾವು ಜ್ಯೋತಿಷ, ಸಶಾಸ್ತ್ರ ಜಾತಕ ತಯಾರಿಸುವದು, ಫಲಾಫಲ ಭವಿಷ್ಯ, ಪ್ರಶ್ನೆ ಮುಂತಾದ ಪೂರ್ವಾಪರ ವಿಚಾರ ಹೇಳುವದು ಹಾಗು ಮಂತ್ರವಾದಿ ಕೆಲಸಗಳನ್ನು ಯೋಗ್ಯರೀತಿ ಮಾಡಿಕೊಡುತ್ತೇವೆ. ನಮ್ಮ ಮುಕ್ಕಾಂ ಇಲ್ಲಿ ಸ್ವಲ್ಪ ಕಾಲವಿರುವದರಿಂದ ಬೇಕಾದವರು ಅವಶ್ಯ ಲಾಭ ಹೊಂದಿ ಖಾತ್ರಿ ಮಾಡಿಕೊಳ್ಳಬೇಕು

ಪತ್ತೆ:- **ಪೈಯನೂರ ಕೃಷ್ಣ ಜ್ಯೋತಿಷಿ.** ಶ್ರೀ ಮಹಾಲಸಾ ದೇವಸ್ಥಾನದ ಸಮೀಪ, ಮಹಾಬಲೇಶ್ವರ ಭಟ್ಟರ ಖಾನಾವಳಿ, ಕುಮಟಾ (ಉ. ಕ.)

ವೃತ್ತಸಾರ.

— ಬೆಂಗಳೂರಿನ ಚಿಕ್ಕ-ಪೇಟೆಯ ದೊಡ್ಡ ವರ್ತಕರಾದ ಕೆ. ನಾರಾಯಣದಾಸ ಅವನವಾಲರವರು ತೀರಿಕೊಂಡರು. ಇವರು ಲಕ್ಷಾಧೀಶರು. ಧರ್ಮಕಾರ್ಯಗಳಿಗೆ ಸಾವಿರಾರು ರೂಪಾಯಿಗಳನ್ನರ್ಪಿಸಿದ್ದಾರೆ. ಉತ್ತರ ಹಿಂದುಸ್ಥಾನದಲ್ಲಿ ಯಾತ್ರೆ ಮಾಡಹೋದಾಗ ಮಥುರಾ ಪಟ್ಟಣದಲ್ಲಿ ಇವರು ಜ್ವರಗ್ರಸ್ತರಾಗಿ ತೀರಿಕೊಂಡರು. ಕೋಕನಪ್ರದರ್ಶನಕ್ಕಾಗಿ ಮುಂಬಯಿಯ ಝವೇರಿ ಬಝಾರ, ಮಾರ್ವಾಡಿ ಪೇಟೆಗಳು ಮುಚ್ಚಲಾಗಿದ್ದವು.

— ಹಿಂದುಸ್ಥಾನದ ಕ್ಷೇಮಕ್ಕಾಗಿ ಚಳವಳಿ ಮಾಡುವವರ ಬೆನ್ನು ಹತ್ತಬೇಕೆಂಬ ಬಂಗಾಲದ ಕಾನೂನನ್ನು ಜರಿದ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿ ಪಟೇಲರವರು ಕೌನ್ಸಿಲಿನಲ್ಲಿ ಸೂಚಿಸಗೊಡಲಿಲ್ಲ. ನಿಯಮದಂತೆ ಸರಕಾರವು ೩ ದಿನ ಮುಂಚೆ ಈ ಕಾನೂನಿನ ಮಸೂದೆಯನ್ನು ಸಭಾಸದರಿಗೆ ಪೂರೈಸಬೇಕಿತ್ತು, ಹಾಗೆ ಪೂರೈಸಲಿಲ್ಲವಾಗಿ ಪಂಡಿತ ಮೋತಿಲಾಲ ನೆಹರೂ ಪ್ರಭೃತಿ ಸಭಾಸದರು ಹೇಳಿ, ಸೂಚನೆಗೆ ಆಕ್ಷೇಪಿಸಿದರು. ಸರಕಾರಿ ಗಿಝೆಟಿನಲ್ಲಿ ಈ ಕಾನೂನು ಪ್ರಸಿದ್ಧವಾಗಿರುವದಾಗಿ ಸರಕಾರಿ ಸಭಾಸದರು ಖುಲಾಸೆ ಮಾಡಿದರು. ಪಂಡಿತ ಹೃದಯನಾಥ ಕುಂಝುರುರವರು ಸಪ್ಟಂಬರ ೩ ನೇ ತಾರೀಖಿಗೆ ಸರಕಾರಿ ಕಚೇರಿಯಲ್ಲಿ ಕಾನೂನಿನ ಪ್ರತಿ ಕೊಡಹೋದರೂ ಸಿಗಲಿಲ್ಲವಾಗಿ ಕೌನ್ಸಿಲಿನಲ್ಲಿ ಸಾರಿಕೊಂಡರು. ಅಧ್ಯಕ್ಷರು ಇದನ್ನೆಲ್ಲ ಕೇಳಿ ಕಾಯಿದೆಯಂತೆ ನೋಟೀಸು ಕೊಡದ್ದರಿಂದ ಕಾನೂನನ್ನು ಈ ಅಧಿವೇಶನದಲ್ಲಿ ಸೂಚಿಸಬರುವದಿಲ್ಲವಾಗಿ ಹೇಳಿ, ಸರಕಾರಿ ಸಭಾಸದರಿಗೆ ಸುಮ್ಮಗುಳಿಸಿಬಿಟ್ಟರು. ಸಧ್ಯಕ್ಕೆ ಗಾಳಿಯಿಂದಲೇ ಕಳ ಹೋಗಿದೆ

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ

ಆಯುರ್ವೇದಿಕ **ಅನುಭವಿಕ ಔಷಧಗಳು!** ಮಲಬಾರಿ ಕೃತಿ!

೧. ಮದನಕಾಮೇಶ್ವರಿ ಲೇಹ- ಧಾತುಪುಷ್ಟಿಕ, ವೀರ್ಯ-ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನಕಾಮೇಶ್ವರ- ಗುಣ ಮೇಲಿನಂತೆ. ಡ. ೧ ಕ್ಕೆ ೨ ರೂ ೩ ಕ್ಕೆ ೫ ರೂ [ಡ. ೧ ಕ್ಕೆ ೨|| ರೂ
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರ ಇಂದ್ರಿಯದ ಹುಣ್ಣು, ಪರಮಾ ಯಾವದೇ ತರದ ಕಠಿಣ ರೋಗವಾದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ೩ ದಿವಸದಲ್ಲಿ ಗುಣ ಹೊಂದುವದು.
೪. ಗರ್ಮಿ ರೋಗಕ್ಕೆ ಮಲಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ, ಕೋಷ್ಟವಾತ, ಮುಂತಾದ ೮೦ ತರದ ವಾತರೋಗಕ್ಕೆ ಸಿದ್ಧೌಷಧಿ ರೂ. |||, ೧|, ೨
೬. ಕೆಮ್ಮಿನ ಗುಳಿಗೆ- ಕ್ಷಯ, ದಮ್ಮು, ಕೆಮ್ಮು ಇವುಗಳ ಮೇಲೆ ರಾಮಬಾಣ ಡ. ೧೦ ಆಣೆ ರೂ ೧, ೧|||
೭. ವಾತ-ಪಿತ್ತ-ಕಫನಾಶಕ ಜುಲಾಬಿನ ಗುಳಿಗೆ- ೨೫ ರ [illegible] ೮, ೧೦೦ ಕ್ಕೆ ೧|| ರೂ
೮. ಸಂಜೀವನಿ- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ [illegible] ಜ್ವರಗಳ ಮೇಲೆ ೨೫ ೬ ಡ ೧ ರೂ, ೧೦೦ ರ ಡ ೩ ರೂ
೯. ಚಂದ್ರಪ್ರಭಾ ಮಾತ್ರೆ- ೨೦ ತರದ ಮೇಹ, ಮೂತ್ರದಾಹ, ಅರುಚಿ, ಧಾತುಕ್ಷಯ ಸ್ವಪ್ನಾವಸ್ಥೆ, ೪ ಡ ೨ ರೂ
೧೦. ದಂತಮಂಜನ- ಹಲ್ಲು ನೋವು, ಹುಳ, ಕೀವು, ಅಲುಗಾಡುವಿಕೆ ಇ ದೂರ ಗುಣವಾಗುವವು ಡ ೨ ಆಣೆ, ೧೨ ಕ್ಕೆ ೨| ರೂ.
೧೧. ಜಂತುವಿನ ಔಷಧ- ಹೊಟ್ಟೆ ಹುಳಗಳ ಮೇಲೆ ರಾಮಬಾಣ ಡಬಿ ೧ ಕ್ಕೆ ೧|| ಆಣೆ, ೨೫ ಕ್ಕೆ ೧|| ರೂ ೧೦೦ ಕ್ಕೆ ೫| ರೂ.
೧೨. ಖಜ್ಜಿಯ ಮಲಮು- ಡ ೪ ಆಣೆ, ೧೨ ಕ್ಕೆ ೨|| ರೂ, ಸಾತಕೋಟಿ ಮಾತ್ರೆ [illegible] ಡ ರೂ ೧|| [illegible]
೧೩. ವಾತಸಂಹಾರಿ ತೈಲ- ನಾರಾಯಣ ತೈಲ, ಅರ್ಧಾಂಗ ವಾತಾದಿ ಅನೇಕ ವಾ[illegible] ೨||| ಸಿದ್ಧ ತೈಲಗಳು [illegible] ೨ ರೂ.
೧೪. ವಾಕ್‌ಸಂಜೀವನಿ ಗುಟಿಕಾ- ಮಾತು ಕಡಿಯುವಿಕೆ, ತೊದಲು [illegible] ರೂ ೬ ಖರ್ಚು
೧೫. ಪುತ್ರಜೀವನ ಲೇಹ- ಗರ್ಭಪತನವಾಗುವ ಸ್ತ್ರೀಯರಿಗೆ ಸಿದ್ಧ[illegible] ಉಚಿತ) ಇವಲ್ಲದೆ ಬೇರೆ, ಅನುಪಾನ ಪಥ್ಯ ಔಷಧದ ಸಂಗಡ, (ಆಯುರ್ವೇದ ಗುಣ[illegible]ಗಳ ಸಿಗ್ಗೆ ಸ್ಟಾಂಪ ಇಟ್ಟು ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ [illegible] ಪತ್ರದ್ವಾರ ಪತ್ರಾಮುಕ್ಷ ತಿಳಕೊಳ್ಳಬಹುದು. [illegible] ಚೆಂಡಿಯೆ ತಾ. ಕಾರವಾರ.

ಪತ್ತೆ:- ಮೆನೇಜರ, ಆಯುರ್ಚಿಕಿತ್ಸಾಮ[illegible]hop, Store Lane, Fort Bombay

ಮುಂಬಯಿ ಏಜಂಟ- R. C. KAM[illegible]

ಕಾನಡಾ ವೃತ್ತ.

ಮಿತಿ ವಿಭವ ಸಂ। ನಿ। ಶ್ರಾವಣ ಬ। ೧೧ ಸೋಮವಾರ

ಅಥ ಶಾಂತಿಧ್ಯಾನಮ್।

ಪಾರಿಸ ಪಟ್ಟಣದಲ್ಲಿ ಅಮೇರಿಕೆಯ ಸರಕಾರದ ಪ್ರತಿನಿಧಿಗಳಾದ ಮಿ। ಕೆಲೊಗ್‍ರವರ ಪ್ರಯತ್ನದಿಂದ ಶಾಂತಿ ದೇವಿಯ ಧ್ಯಾನವಾಗಿದೆಂದು ನಾವು ಕಳೆದ ಸಂಚಿಕೆಯಲ್ಲಿ ಧ್ವನಿಸಿದ್ದೇವೆ ಆ ಒಪ್ಪಂದದೊಳಗಿನ ಶರ್ತುಗಳಿಂದ ರಾಷ್ಟ್ರಗಳಿಗೆ ಯುದ್ಧ ಮಾಡದಂತೆ ಯಾವದೇ ಬಂಧನವಿಲ್ಲ ಶಾಂತಿಪಾರವೊಂದು ಹೇಳಲ್ಪಟ್ಟದೆ. ಈಗಿನ ಸೈನ್ಯವನ್ನು ತಗ್ಗಿಸಲಿಕ್ಕಾಗಿ, ಮುಂದೆ ಬೆಳೆಸದಿರಲಿಕ್ಕಾಗಲಿ ರಾಷ್ಟ್ರಗಳಿಗೆ ಈ ಒಪ್ಪಂದದಿಂದ ಅಡ್ಡಿಯಾಗದು ಬ್ರಿಟಿಶ ದೇಶದ ತರ್ಫೆನಿಂದ ಪಾರಿಸ ಒಪ್ಪಂದದ ಮೇಲೆ ಸಹಿ ಮಾಡಿದ ಕುಶೆನಡನ್ ದೊರೆಗಳು ಈ ಸಂಗತಿಯನ್ನು ಸ್ಪಷ್ಟ ಮಾಡಿದ್ದಾರೆ ಸೈನ್ಯ ಸಂಖ್ಯೆಯನ್ನು ತಗ್ಗಿಸುವ ವಿಷಯ ಬ್ರಿಟಿಶ-ಫ್ರೆಂಚರೊಳಗೆ ಮತಭೇದವಾಗಿದ್ದು ಆ ಕಾರಿತು ಇನ್ನೂ ಗುಪ್ತವಾಗಿ ಮಾತುಕಥೆ ನಡೆದಿದೆ ಕುಶೆನಡನ್ ದೊರೆಗಳು ಒಂದು ತಹನಾಮೆಯನ್ನು ತಯಾರಿಸಿದ್ದಿದ್ದು ಅದನ್ನು ಅಭಿಪ್ರಾಯಾರ್ಥವಾಗಿ ಅಮೇರಿಕಾ, ಇಟಾಲಿ, ಜಪಾನ ದೇಶಗಳಿಗೆ ಕಳುಹಿದೆ ಇದರ ಮೇಲೆ ಮತಭೇದವಾದರೆ, ಪುನಃ ಆಲೋಚನೆಯಾಗಿ ಹೊಸ ಮಸೂದೆಯು ತಯಾರಾಗುವದು, ಅದರ ಮೇಲೆ ಪುನಃ ಚರ್ಚೆ ನಡೆಯುವದು ಚರ್ಚೆ ಮುಗಿಯುವದರೊಳಗೆ ಯುದ್ಧವಾಗದಿದ್ದರೆ, ಶಾಂತಿಧ್ಯಾನವು ಆಚಾರದಲ್ಲಿ ಪರಿಣಮಿಸಿ ಶಾಂತಿಸ್ಥಾಪನೆಯಾಗಬಹುದೆಂದು ಬಲ್ಲವರು ಹೇಳುತ್ತಾರೆ ಕಲಕತ್ತೆಯ 'ಫೋರವರ್ಡ' ಪತ್ರಿಕೆಯ ಸಿಲಹೆಟ್ ಸುದ್ದಿಗಾರರು ಒಂದು ಸಂಗತಿಯನ್ನು ಪ್ರಕಟಿಸಿದ್ದಾರೆ ಹಿಂದುಸ್ಥಾನದ ಸೇನಾಧಿಪತಿಗಳು ಒಂದು ಸರ್ಕ್ಯುಲರನ್ನು ಹೊರಡಿಸಿದ್ದಾರೆ ಸೈನಿಕರಿಗೆ ಕೂಡಲೆ ತಮ್ಮ ತಮ್ಮ [illegible]ಗಳಲ್ಲಿ ಹಾಜರಿ ಕೊಡಬೇಕಾಗಿ ಅಪ್ಪಣೆ ಮಾಡಿ[illegible]ರೆ. ರಜೆಯ ಮೇಲಿದ್ದ ಹಿಂದೀ ಸೈನಿಕರು ಮುಂದಿನ ಹುಕುಮು ನಿರೀಕ್ಷೆ ಮಾಡದೆ ಒಮ್ಮೆಲೇ ಕೆಲಸದ ಮೇಲೆ ಹಾಜರಾಗಲು ಹುಕುಮು ಹೊರ[illegible]ವದಾಗಿಯೂ ತಿಳಿಸುತ್ತಿದೆ ಅತ್ತ ಅಫಘಾಣಿಸ್ಥಾನದ ಅಮೀರರು ಸ್ವಾತಂತ್ರ್ಯ ದಿನೋತ್ಸವದ ಸಮಯ ನಾಗರಿಕರೆಲ್ಲರಿಗೆ ಒತ್ತಾಯದಿಂದ ಸೈನ್ಯ ಶಿಕ್ಷಣ ಕೊಡಲು ಉಪಕ್ರಮಿಸಹತ್ತಿದ್ದಾರೆಂದು ಸುದ್ದಿ ಬಂದಿದೆ ಇವುಗಳ ಮೇಲಿಂದ ಬ್ರಿಟಿಶಾದಿ ರಾಷ್ಟ್ರಗಳು ಶಾಂತಿದೇವಿಯ ಧ್ಯಾನವನ್ನಷ್ಟೇ ಮಾಡುತ್ತಾರೆಂದು ಗ್ರಹಿಸಲು ಬೇಕಷ್ಟು ಪ್ರಮಾಣಗಳಿವೆ.

ಆದರೆ, ಅಮೇರಿಕೆಗೆ ಯಾರೂ ಇದಿರಾಗಲು ಬಯಸುವದಿಲ್ಲ ಅಮೇರಿಕೆಯವರು ಪ್ರತಿಯೊಂದು ದೇಶದಲ್ಲಿಯೂ ಲೋಕಸಂಗ್ರಹವನ್ನು ಮಾಡತೊಡಗಿದ್ದಾರೆ ಚೀನ ದೇಶದಲ್ಲಿ ನೂತನವಾಗಿ ಸ್ಥಾಪನೆ ಹೊಂದಿದ ರಾಷ್ಟ್ರೀಯ ಸರಕಾರಕ್ಕೆ ಮಾನ್ಯತೆಯನ್ನಿತ್ತು, ಅವರೊಡನೆ ಒಪ್ಪಂದವನ್ನು ಮಾಡಿರುತ್ತಾರೆ ಬ್ರಿಟಿಶರಾಗಲಿ ಜಪಾನಿಗಳಾಗಲಿ ಚೀನ ದೇಶದ ರಾಷ್ಟ್ರೀಯ ಸರಕಾರವನ್ನು ಮನ್ನಿಸಲು ತಯಾರಿದ್ದಿಲ್ಲ ರಾಷ್ಟ್ರೀಯ ಸರಕಾರಕ್ಕೆ ಮನ್ನಣೆಯನ್ನಿತ್ತರೆ, ಬ್ರಿಟಿಶ ಜಪಾನಿಗಳ ಬೇಳೆ ಬೇಯುವದಿಲ್ಲ. ಒಡಕು ಹುಟ್ಟಿಸಿ ಯಾವದೊಂದು ಬದಿಯಿಂದ ಸೇರಿ ಲೋಕೋಪಕಾರದ ವೇಷಧರಿಸಿಕೊಂಡು ಅಲ್ಲಿ ಹಾವಳಿ ಹಾಕಲು ಅವರ ಬಯಕೆಯಿತ್ತು. ಅಮೇರಿಕೆಯಂಥ ಬಲಾಢ್ಯ ಹಾಗು ಮಾನ್ಯ ರಾಷ್ಟ್ರವು ಚೀನದೊಳಗಿನ ರಾಷ್ಟ್ರೀಯ ಸರಕಾರಕ್ಕೆ ಮನ್ನಣೆಯನ್ನಿತ್ತದ್ದರಿಂದ ಚೀನ ದೇಶದಲ್ಲಿ ಜಪಾನಿಗಳ ಕುಹಕಗಳಿಗೆ ಒಡ್ಡು ಹಾಕಿದಂತಾಗಿದೆ ಜಪಾನವು ಈ ನನಕ ರಾಷ್ಟ್ರೀಯ ಸರಕಾರದೊಡನೆ ಒಪ್ಪಂದ ಮಾಡಿಕೊಂಡು ಸ್ನೇಹ ಸಂಗ್ರಹ ಮಾಡದಿದ್ದ ಬಗ್ಗೆ ಜಪಾನದೊಳಗಿನ ಪತ್ರಿಕಾಕರ್ತರು ಅಲ್ಲಿಯ ಮುಖ್ಯ ಪ್ರಧಾನರಾದ ಬೆರನ್ ಟನಾಕಾರವರಿಗೆ ದೂಷಿಸಹತ್ತಿದ್ದಾರೆ ಜಪಾನ ದೇಶವು ಅಮೇರಿಕೆಯವರಿಗೆ ಮುಂದಾಗಿ ವರ್ತಕ ತಹನಾಮೆಯನ್ನು ರಾಷ್ಟ್ರೀಯ ಸರಕಾರದೊಡನೆ ಮಾಡಿಕೊಳ್ಳಲು ಬಿಟ್ಟುಗೊಟ್ಟದ್ದರಿಂದ ಚೀನ ದೇಶದಲ್ಲಿ ಜಪಾನದ ಅಪ್ರತಿಷ್ಠೆಯಾಗಿದೆಂದೂ, ಇದರಿಂದ ಜಪಾನ ದೇಶಕ್ಕೆ ನಷ್ಟವಾಗಿದೆಂದೂ, ಜಪಾನಿ ಪತ್ರಿಕಾಕರ್ತರ ಅಂಬೋಣ ಅಮೇರಿಕೆಯ ಸ್ನೇಹಭಾವದಿಂದ ಬ್ರಿಟಿಶ-ಜಪಾನಿಗಳಿಗೆ ಚೀನದೇಶದ ಮೇಲೆ ದಂಡೆತ್ತಿ ಹೋಗಲು ಈಗ ಸಾಧ್ಯವಿಲ್ಲ ಇದರಿಂದಲೂ ಇವೆರಡೂ ದೇಶಗಳಲ್ಲಿ ಹೊಟ್ಟೆ ಕೂಲಿಯುದ್ಧವೆ

ಇತ್ತ ಕಡೆ ಇರಾಣ-ಅಫಘಾಣಿಸ್ಥಾನ ದೇಶಗಳಲ್ಲಿಯೂ ಅಮೇರಿಕೆಯ ಪ್ರತಿಷ್ಠೆಯಾಗಹತ್ತಿದೆ. ಇಟಿಪ್ತದಂತೆ ಇರಾಣ ಅಫಘಾಣಿಸ್ಥಾನ ದೇಶಗಳೊಡನೆ ಗೆಳೆತನ ಬೆಳೆಸುವದಕ್ಕಾಗಿ ಅಮೇರಿಕೆಯ ಪ್ರಯತ್ನ ನಡೆದದೆ. ಇರಾಣದಲ್ಲಿಯೂ, ಅಫಘಾಣಿಸ್ಥಾನದಲ್ಲಿಯೂ ಅಮೇರಿಕೆಯವರೂ ಜರ್ಮನರೂ ಉಗಿಬಂಡಿಗಳನ್ನು ರಚಿಸುವ ದೊಡ್ಡ ದೊಡ್ಡ ಕಂಟ್ರಾಕ್ಟ ಪಡೆದಿದ್ದಾರೆ ಈ ಕಂಟ್ರಾಕ್ಟಗಳಂತೆ ಇರಾಣ—ಅಫಘಾಣಿಸ್ಥಾನದಲ್ಲೆಲ್ಲ ಉಗಿಬಂಡಿ ಮಾರ್ಗಗಳನ್ನೇರ್ಪಡಿಸಿ ಅರಬೀ ಸಮುದ್ರದ ತನಕ ಉಗಿಬಂಡಿಗಳು ತರಲಾಗುವವು ತ[illegible]ಸ್ಥಾನಕ್ಕೂ ಈ ಉಗಿಬಂಡಿಗಳಿಂದ ಅನುಕೂಲತೆಯಾಗುವದಿದೆ. ಈ ಯೋಜನೆಯಿಂದ ಅರಬೀ ಸಮುದ್ರದ ಮೇಲೆ ಇರುವ ಬ್ರಿಟಿಶರ ಸಾರ್ವಭೌಮಾಧಿಕಾರವು ಒಮ್ಮೆಲೇ ನಷ್ಟವಾಗಿ, ಇರಾಣ, ಅಫಘಾಣಿಸ್ಥಾನಾದಿ ರಾಷ್ಟ್ರಗಳು ಬ್ರಿಟಿಶರಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲುವವು. ಮುಂದಿನ ಮಾರ್ಗವನ್ನು ಬ್ರಿಟಿಶರು ಬಲ್ಲರು. ಈಗಲೇ ಯುದ್ಧ ಹೂಡಲು ಸಾಧ್ಯವಿಲ್ಲ, ಅದರಿಂದ ಇವರು ಸುಮ್ಮನೆ ಕಾಲಹರಣ ಮಾಡಬೇಕಾಗಿದೆ. ಮುಂದಿನ ಮರಣ ತಪ್ಪಿಸಿಕೊಳ್ಳುವದಕ್ಕಾಗಿ ಹಿಂದುಸ್ಥಾನದಲ್ಲಿ ಸೈನ್ಯ ಬಲವನ್ನು ಇನ್ನೂ ಹೆಚ್ಚಿಸುವ ಆಲೋಚನೆ ಗುಪ್ತವಾಗಿ ನಡೆದದೆ. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸರಕಾರವು ಇಂಥ ಕಲ್ಪನೆಯನ್ನು ಅಲ್ಲಗಳೆದಾಗ್ಯೂ, ಅದನ್ನು ಯಾರೂ ನಂಬುವದಿಲ್ಲ. ಇರಲಿ.

ಅಮೇರಿಕೆಯ ವಿಷಯ ಒಂದು ಮಾತನ್ನು ಬರೆದು ಮುಂದಿನ ಯುದ್ಧಕಾಂಡದೊಳಗಿನ ಶಾಂತಿಧ್ಯಾನದ ಅಧ್ಯಾಯವನ್ನು ಮುಗಿಸಬೇಕಾಗಿದೆ. ಅಮೇರಿಕೆಯವರ ಪ್ರಯತ್ನ ನೋಡಿ ಅನಭಿಜ್ಞರು ಅಮೇರಿಕೆಗೆ ಲೋಕೋಪಕಾರದ ಸರ್ಟಿಫಿಕೀಟು ಕೊಟ್ಟು ಬಹಳವಾಗಿ ಕೊಂಡಾಡುವರು ಆದರೆ, ಕಳ್ಳನ ಸುಳುವು ಕಳ್ಳನೇ ಬಲ್ಲ. ಅಮೇರಿಕೆಯ ಲೋಕೋಪಕಾರದ ಸ್ವರೂಪವನ್ನು ಹಿಂದುಸ್ಥಾನದಲ್ಲಿ ಲೋಕೋಪಕಾರ ಮಾಡಲು ನೇಮಿಸಲ್ಪಟ್ಟ ಬ್ರಿಟಿಶರು ಬಲ್ಲವರಿದ್ದಾರೆ ಅಮೇರಿಕೆಯಲ್ಲಿ ಮಹಾಯುದ್ಧದ ಮೂಲಕ ಹೇರಳ ದ್ರವ್ಯ ಸಂಗ್ರಹವಾಗಿದೆ, ಇನ್ನೂ ಆಗುತ್ತಲಿದೆ. ದ್ರವ್ಯದ ರಾಶಿಯು ಬೆಳೆದಂತೆ ಅದನ್ನು ವಿನಿಯೋಗಿಸುವ ಪ್ರಯತ್ನಗಳು ಹೆಚ್ಚುಹೆಚ್ಚಾಗಿ ನಡೆಯಹತ್ತಿವೆ. ಚೀನ ದೇಶದಲ್ಲಿ ವ್ಯಾಪಾರಿ ತಹನಾಮೆ, ಇರಾಣ-ಅಫಘಾಣಿಸ್ಥಾನ ದೇಶಗಳಲ್ಲಿ ಉಗಿಬಂಡಿಗಳನ್ನು ರಚಿಸಿಕೊಡುವ ಕಂಟ್ರಾಕ್ಟು ಮುಂತಾದ ಉಪಾಯಗಳಿಂದ ಅಮೇರಿಕೆಯೊಳಗಿನ ದ್ರವ್ಯದ ರಾಶಿಗೆ ಇದೊಂದು ಬಡ್ಡಿ ಗಳಿಸಿಕೊಳ್ಳುವ ಯೋಜನೆಯಾಗುತ್ತದೆ, ಹೊರತು ಇದರೊಳಗೆ ಲೋಕೋಪಕಾರಗಳೇನಿಲ್ಲ, ಹೀಗೆ ಹೇಳೋಣಾಗುತ್ತದೆ. ಪಾಶ್ಚಿಮಾತ್ಯರ ಸ್ವಾರ್ಥಪರಾಯಣತೆಯನ್ನು ನಾವೆಲ್ಲರೂ ಬಲ್ಲೆವು. ಆದರಿಂದ ಈ ಅನುಮಾನವನ್ನು ನಮ್ಮಿಂದ ತಿರಸ್ಕರಿಸಲಾಗದು. ಅದು ಹೇಗಿದ್ದರೂ, [ಈಗಿನ ಸ್ಥಿತಿಯು ಶಾಂತಿಸ್ಥಾಪನೆಯ ಪೂರ್ವಪೀಠಿಕೆಯಲ್ಲೆಂದು ನಾವು ತಿಳಿಯಬಹದು. ಎಲ್ಲರೂ ಸ್ವಾರ್ಥಪರಾಯಣರೇ, ಸ್ವಾರ್ಥಸಾಧನೆಗಾಗಿ ಧರಿಸಿದ ವೇಷಗಳು ಮಾತ್ರ ಬೇರೆ ಬೇರೆ. ವಿಚಾರ ಮಾಡಿದರೆ, ಎಲ್ಲರೂ ಯುದ್ಧವನ್ನೇ ಹಾರೈಸುತ್ತಿದ್ದಾರೆ. ಸ್ವಾರ್ಥಸಾಧನೆಯ ಸಂಧಿ ದೊರೆತ ಕೂಡಲೆ ರಣಭೇರಿಯು ಬಾರಿಸಲ್ಪಡುವದು, ಈ ಮಾತಿಗೆ ಸಂಶಯವುಂಟೇ!

ಸ್ಫುಟ ಸೂಚನೆಗಳು.

೧. ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ|| ವಿಠ್ಠಲಭಾಯಿ ಪಟೇಲರಿಗೂ, ಹಿಂದುಸ್ಥಾನ ಸರಕಾರಕ್ಕೂ ಕಣ್ಣಿದೊಂದು ವಾದವೆದ್ದಿದೆ. ವಿವಾದಾಸ್ಪದ ವಿಷಯವು ಅಷ್ಟು ಮಹತ್ವವಾಗಿ ಕಾಣದಿದ್ದರೂ, ಸರಕಾರಿ ಕುತಂತ್ರಗಳು ಈ ವಾದದಲ್ಲಿ ಹೊರಬಿದ್ದಿವೆ. ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಿಗೆ ಆಗಿಂದಾಗ ಸಲಹೆ ಕೊಡಲು ಕಾರ್ಯದರ್ಶಿಗಳಿದ್ದಾರೆ, ಆ ಕಾರ್ಯದರ್ಶಿಗಳು ಸರಕಾರಿ ಅಧಿಕಾರಿಗಳು, ಮೇಲಾಗಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸರಕಾರಿ ಕಡೆಯಿಂದ ನೇಮಕವಾದ ಸಭಾಸದರು ಹೀಗಿರುವದರಿಂದ ಅಧ್ಯಕ್ಷರಂಥ ನಿಷ್ಪಕ್ಷಪಾತ ಪುರುಷರಿಗೆ ನಿಷ್ಪಕ್ಷಪಾತದಿಂದ ಸಲಹೆ ಕೊಡಲು ಇವರು ನಾಲಾಯಕರೆಂದು ಶ್ರೀ|| ವಿಠ್ಠಲಭಾಯಿಯವರ ಅಂಬೋಣ. ಹಿಂದಿನ ಅಧ್ಯಕ್ಷರಾದ ಸರ್ ಫ್ರೆಡರಿಕ್ ವ್ಹೈಟರವರೂ ಇದೇ ತಕರಾರು ಮಾಡಿದ್ದರು. ತಮ್ಮ ಕೈಕೆಳಗೆ ತಾವು ಹೇಳಬಹುದಾದ ಇಸಮನ್ನು ಕಾರ್ಯದರ್ಶಿಗಳಾಗಿ ನೇಮಿಸಬೇಕೆಂದು ಶ್ರೀ|| ವಿಠ್ಠಲಭಾಯಿಯವರು ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷ ನಾತೆಯಿಂದ ಸರ್ವಾಧಿಪತಿಗಳಿಗೆ ಉತ್ತರ ಬರೆದರು. ಸರ್ವಾಧಿಪತಿಗಳು ಅದಕ್ಕೆ ಪ್ರತ್ಯುತ್ತರ ಕೊಡುವಷ್ಟು ಔದಾರ್ಯವಂತರಾಗಿರಲಿಲ್ಲ. ಮುಂದೆ ಸರ್ವಾಧಿಪತಿಗಳಿಗೂ, ಅಧ್ಯಕ್ಷರಿಗೂ ಪ್ರತ್ಯಕ್ಷ ಸಂಭಾಷಣವಾಯಿತು. ಈ ವಿಷಯ ಸರ್ವಾಧಿಪತಿಗಳು ಭಾರತ ಮಂತ್ರಿಗಳಿಗೆ ಕೆಲವು ಸೂಚನೆಗಳನ್ನು ಮಾಡಿ ಕಳುಹಿದರು. ಆ ಸೂಚನೆಗಳ ವಿವರವು ಅಧ್ಯಕ್ಷರಿಗೆ ತಿಳಿಸಲ್ಪಡಲಿಲ್ಲ. ಭಾರತ ಮಂತ್ರಿಗಳಿಗೆ ಕಳುಹಿದ ಪತ್ರದ ಪ್ರತಿಯನ್ನೊಂದು ತಮಗೆ ಕೊಡಬೇಕಾಗಿ ಅಧ್ಯಕ್ಷರಿಗೆ ಬರೆಯಲು, ಅದಕ್ಕೆ ಉತ್ತರವಿಲ್ಲ. ಭಾರತ ಮಂತ್ರಿಗಳಿಂದ ಅಡಿಗೆಯಲ್ಲಿ ತಯಾರಾಗಿ ಬಂದ ಬಳಿಕ, ಚರ್ಚೆಯಾಗುವದೆಂದು ಸರಕಾರದ ಕಡೆಯಿಂದ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಹೇಳೋಣಾಯಿತು. ಭಾರತ ಮಂತ್ರಿಗಳ ಮನೋನಿಶ್ಚಯವಾದ ಬಳಿಕ, ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾಗಲಿ, ಸಭಾಸದರಾಗಲಿ ಚರ್ಚಿಸಿ ಫಲವೇನು? ಬ್ರಿಟಿಶ ರಾಜ್ಯದಲ್ಲಿ ಪ್ರತಿಪಕ್ಷದ ಹೇಳಿಕೆ ಕೇಳಿಕೊಳ್ಳುವ ಶಾಸ್ತ್ರವೊಂದಿದೆ, ಆ ಶಾಸ್ತ್ರದ ಸೌಕರ್ಯವು ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಂಥ ಪ್ರಮುಖರಿಗೆ ಸಹ ದೊರೆಯದೇನು? ಈ ಕಗಟ ಸಾಧನೆಯನ್ನು ವರಿಷ್ಠ ಕಾಯಿದೆ ಕೌನ್ಸಿಲು ಒಪ್ಪಲಿಲ್ಲ. ಬಳಿಕ, ಕೌನ್ಸಿಲಿನೊಳಗಿನ ಸರಕಾರಿ-ಬಿನ್‌ಸರಕಾರಿ ಪಕ್ಷಗಳ ನಾಯಕರು ಅಧ್ಯಕ್ಷರ ಬಳಿ ಚರ್ಚೆ ನಡಿಸಿ, ಈ ವಿಷಯದ ಮೇಲಿನ ತಮ್ಮ ಮತವನ್ನು ಭಾರತ ಮಂತ್ರಿಗಳಿಗೆ ಮುಂದಾಗಿ ತಿಳಿಸಬೇಕಾಗಿ ಗೊತ್ತಾಯಿತು. ಕಾಯಿದೆ ಕೌನ್ಸಿಲಿನ ಅಧ್ಯಕ್ಷರ ಸ್ಥಾನವು ಪವಿತ್ರವಿದ್ದು, ಆ ಸ್ಥಾನಕ್ಕೆ ಸಲಹೆ ಕೊಡುವ ಇಸಮು ನಿರ್ಮಲಚಿತ್ತದವನೂ, ನಿಷ್ಪಕ್ಷಪಾತಿಯೂ ಇರಬೇಕೆಂಬುದು ಯಾರೂ ಒಪ್ಪಬೇಕು. ಇಂಥಲ್ಲಿ ಸಹ ಸರಕಾರಿ ಪಕ್ಷದ, ಸರಕಾರದ ಮೇಲೆ ಸರ್ವಥಾ ಅವಲಂಬಿಸಿರುವ ಇಸಮುಗಳನ್ನು ನೇಮಿಸಿ ಹಿಂದುಸ್ಥಾನ ಸರಕಾರವು ಕಾಯಿದೆ ಕೌನ್ಸಿಲಿನ ಕಾರ್ಯದಲ್ಲಿ ಸಹ ಅನಾವಶ್ಯಕವಾದ ಗೊಂದಲವನ್ನೆಬ್ಬಿಸುವದು ಅಸಭ್ಯವು. ಎಲ್ಲ ಪ್ರಕಾರಗಳೂ ಹೀಗೆಯೇ ನಡೆದಿರುವಾಗ, ಈ ವಿಷಯ ಮಾತ್ರ ಸರ್ಕಾರು ಹೀಗೆ ಮಾಡುವದು ಅಪ್ರಶಸ್ತವೆಂದು ಯಾರಾದರೂ ಹೇಳಿದರೆ, ನಮ್ಮ ಆಕ್ಷೇಪವೇನಿಲ್ಲ.

---

೨ ಮುಂಬಯಿ ಸರಕಾರವು ಸ್ಟ್ಯಾರನ್ ಕಮಿಟಿಗೆ ಸಾದರಗೊಳಿಸಿದ ವರದಿಯೊಳಗಿನ ಶಿಕ್ಷಣ ಪ್ರಗತಿಯ ಹಕೀಕತು ದೋಷಪ್ರದವಿದೆ. ಪ್ರತಿಯೊಂದು ಶಾಖೆಯಲ್ಲಿಯೂ, ಸರಕಾರಿ ಅನುಗ್ರಹದಲ್ಲಿಯೂ ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭೇದವನ್ನು ಕಲ್ಪಿಸಿ, ಪ್ರಜೆಗಳಲ್ಲಿ ಇತ್ತಂಡ ಮಾಡಲು ಬಹುಪರಿಯಿಂದ ಸರಕಾರಿ ಅಧಿಕಾರಿಗಳೇ ಕಾರಣರು. ಬ್ರಾಹ್ಮಣೇತರರಿಗೆ ಬ್ರಾಹ್ಮಣೇತರರೆಂಬ ಶಿಫಾರಸು ಸಿಗಹತ್ತಿತು, ಬ್ರಾಹ್ಮಣರಿಗೆ ಬುದ್ಧ್ಯಾ ಹಿಂದಕ್ಕೆ ಒತ್ತುತ್ತಿದ್ದರಿಂದ ಅವರು ಬ್ರಾಹ್ಮಣೇತರರ ಬಗ್ಗೆ ಅಸೂಯೆಯನ್ನು ತಳೆದರು; ಈ ಅಸೂಯೆಗೆ ಪ್ರತಿಯಾಗಿ ಬ್ರಾಹ್ಮಣೇತರರಲ್ಲಿಯೂ ಅಸೂಯೆ ಹುಟ್ಟಿತು, ಈ ದ್ವೇಷಾಸೂಯೆಗಳು ಸಮಸ್ತ ವ್ಯಾಪಾರಗಳಲ್ಲಿಯೂ ಹರಿದೋರಿದವು. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಬಹುಮತದ ಬಲ ಪ್ರಾಪ್ತಿಯಾದ ಕೂಡಲೆ ಕೆಲವೆಡೆ ಬ್ರಾಹ್ಮಣೇತರರು ಅವಿವೇಕಿಗಳಾಗಿ ಬ್ರಾಹ್ಮಣರನ್ನು ನಿಷ್ಕಾರಣವಾಗಿ ಪೀಡಿಸಹತ್ತಿದರು. ಮುಖ್ಯ ಶಿಕ್ಷಕರು ಮನೆಯಲ್ಲಿ ಕೂತುಕೊಳ್ಳಬೇಕಾಯಿತು., ಹೊಸಬರು ಅಧಿಕಾರಾರೂಢರಾದರು. ಹೀಗಾಗಿ ಶಿಕ್ಷಣದ ಪ್ರಗತಿಯು ಬಹುಮಟ್ಟಿಗೆ ಕುಗ್ಗಿತು. ಬ್ರಾಹ್ಮಣ-ಬ್ರಾಹ್ಮಣೇತರವೆಂಬ ಭೇದದಿಂದ ಶಿಕ್ಷಕರ ಯೋಗ್ಯಾಯೋಗ್ಯತೆಯ ವಿಚಾರವು ಒತ್ತಟ್ಟಿಗೆ ಬಿತ್ತು. ದಿವಾಣರು ನಿಶ್ಚಯ ಧೋರಣ ಹಿಡಿಯದೆ ಗಾಳಿ ಬಂದಂತೆ ತೂರಿಕೊಂಡು ಸಂಬಳ ಪಡೆಯುವವರಾದ್ದರಿಂದ ಉಬ್ಬರ ಧೋರಣವು ಇನ್ನೊಬ್ಬರ ಧೋರಣಕ್ಕೆ ಸರಿದೋರದೆ, ಎಲ್ಲ ಅವ್ಯವಸ್ಥೆಯಾಯಿತು. ಶಿಕ್ಷಣದ ಏಳ್ಗೆ ಬೀಳದ್ದಷ್ಟು ಕಾಣುತ್ತದೆ. ವಿದ್ಯಾರ್ಥಿಗಳ ಯೋಗ್ಯತೆಯು ಏರಾಗಿಲ್ಲವೆಂದೂ, ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅವಶ್ಯವುಳ್ಳ ಶಿಕ್ಷಕರ ಯೋಜನೆಯಾಗಲಿಲ್ಲವೆಂದೂ ಸರಕಾರಿ ರಿಪೋರ್ಟೇ ಹೇಳುತ್ತಿರುವಾಗ ನಾವು ಹೇಳುವದೇನುಳಿಯಿತು? ಇಷ್ಟೆಲ್ಲ ಅವ್ಯವಸ್ಥೆಯಾಗಿದ್ದರೂ, ಸರಕಾರಿ ರಿಪೋರ್ಟಿನಲ್ಲಿ ಶಿಕ್ಷಣದ ಪ್ರಗತಿಯು ಸಮಾಧಾನಕರವಾಗಿ ನಡೆದದೆಂಬ ಅಭಿಪ್ರಾಯ ನಮೂದಿದೆ. ಈ ಅಭಿಪ್ರಾಯಕ್ಕೆ ವರದಿಯಲ್ಲೇನಾಧಾರವಿಲ್ಲ. ಇಷ್ಟು ಮಾತು ಹೇಳಿ, ಮೊಂಟೆಗ್ಯೂ ಸ್ವರಾಜ್ಯದೊಳಗಿನ ಶಿಕ್ಷಣಪ್ರಗತಿಯ ಸಮಾಲೋಚನೆಯನ್ನು ಮುಗಿಸುವೆವು.

---

೩ ಪ್ರಾಥಮಿಕ ಶಿಕ್ಷಕರ ವಿಷಯ ಒಂದು ಮಾತು ಬರೆಯಲೇ ಬೇಕಾಗಿದೆ. ಪ್ರಾಥಮಿಕ ಶಿಕ್ಷಕರ ಸಂಬಳದ ಏರಿಕೆಗಾಗಿ ಕೌನ್ಸಿಲು ಸಭಾಸದರು ನಡಿಸುವ ಪ್ರಯತ್ನಗಳು ಚುನಾವಣೆಯ ದೃಷ್ಟಿಯಿಂದ ನಡೆವಿರುವದಾಗಿ ಸರಕಾರವು ಬರೆಯುತ್ತದೆ. ಈ ವಿಧಾನವು ಸರಕಾರಕ್ಕೆ ಭೂಷಣವಲ್ಲ. ಪ್ರಾಥಮಿಕ ಶಿಕ್ಷಕರ ಸಂಬಳವು ಏರಬೇಕೆಂಬ ಬಗ್ಗೆ, ಈಗಿನ ಸಂಬಳವು ಯೋಗ್ಯ ಶಿಕ್ಷಕರನ್ನು ಸೇರಿಸಿಕೊಳ್ಳಲು ಸಾಲುವದಿಲ್ಲೆಂಬ ಬಗ್ಗೆ ವಿವಾದವಿರುವದಾಗಿ ನಮಗೆ ತೋರುವದಿಲ್ಲ. ಡಾ|| ರಘುನಾಥರಾವ ಪರಾಂಜಪೇಯವರಂಥವರೂ ಸಹ ಈ ವಿಷಯವನ್ನು ಪುರಸ್ಕರಿಸಿ, ಸಂಬಳವನ್ನು ಏರಿಸಲು ಯೋಚಿಸಿದ್ದರು. ಡಾ|| ಪರಾಂಜಪೇಯವರಿಗೆ ಸರಕಾರವು ಭಾರತ ಮಂತ್ರಿಗಳ ಆಲೋಚನಾ ಮಂಡಳದಲ್ಲಿ ಸೇರಿಸಿಕೊಂಡು ಗೌರವಿಸಿದೆ. ಬ್ಯಾರಿಸ್ಟರ ಮುಕುಂದರಾವ ಜಯಕರರವರಂಥ ಪ್ರಾಥಮಿಕ ಶಿಕ್ಷಕರ ಸಂಬಳವನ್ನು ಬಯಸುವವರು ಈ ವಿಷಯ ಪ್ರಯತ್ನಪಟ್ಟಿದ್ದಾರೆ. ಸರಕಾರವು ವಿಚಾರ ಮಾಡಿ ಸಂಬಳವು ಈಗಿನ ಪರಿಸ್ಥಿತಿಯಲ್ಲಿ ಸಾಲದೆಂದು ಸಾವಕಾಶವಾಗಿ ಒಪ್ಪಿದೆ. ಹಣದ ಅಡಚಣೆಯನ್ನಷ್ಟೇ ಹೇಳುತ್ತಿದೆ. ಹೊಸ ಹೊಸ ಯೋಜನೆಗಳನ್ನು ತಯಾರಿಸುವದರಲ್ಲಿ ಸರಕಾರವು ತೊಡಗಿರುವದೆಂದು ಕಾಯಿದೆ ಕೌನ್ಸಿಲಿನಲ್ಲಿ ಅನೇಕಾವರ್ತಿ ಹೇಳಿದೆ. ಸರಕಾರದಿಂದ ನೇಮಕವಾದ ರಾ|| ಬೋಲೆಯವರಂಥ ಸಭಾಸದರು ಪ್ರಾಥಮಿಕ ಶಿಕ್ಷಕರ ಸಂಬಳದ ಏರಿಕೆಗಾಗಿ ಪ್ರಯತ್ನಪಡುತ್ತಿದ್ದಾರೆ. ದೊಡ್ಡ ದೊಡ್ಡ ಸಂಬಳ ತಿನ್ನುವ ಮೇಲಧಿಕಾರಿಗಳ ಸಂಬಳ ಏರಿತು, ಪೋಲೀಸರ ಸಂಬಳ ಏರಿತು, ಪ್ರಾಥಮಿಕ ಶಿಕ್ಷಕರ ಸಂಬಳ ಏರಿಸಬೇಕೆಂದರೆ ಸಭಾಸದರ ಮೇಲೆ ಅಸಭ್ಯ ಆರೋಪಗಳೇಳುತ್ತವೆ. / ಇದನ್ನು ನಾವು ನಿಷೇಧಿಸುವೆವು. ಕಾಯಿದೆ ಕೌನ್ಸಿಲಿನ ಸಭಾಸದರ ಮೇಲೆ ಇಂಥ ಆರೋಪಗಳನ್ನು ಹೊರಿಸುವದು ಅನುಚಿತವೆಂದು ನಮ್ಮ ಅಂಬೋಣ. ಈಗಿನ ಸಭಾಸದರು ಈ ಚಳವಳಿಯನ್ನೆಬ್ಬಿಸಲಿಲ್ಲ. ಪ್ರಾಥಮಿಕ ಶಿಕ್ಷಣವು ವಿದ್ಯಾಧಿಕಾರಿಗಳ ಪ್ರತ್ಯಕ್ಷ ಆಡಳಿತೆಯಲ್ಲಿದ್ದಾಗ, ಅಂದರೆ, ಮೊಂಟೆಗ್ಯೂ ಸ್ವರಾಜ್ಯದ ಪೂರ್ವದಿಂದಲೇ ಈ ಚಳವಳಿ ನಡೆದಿದೆ. ಹೀಗಿದ್ದು, ಸರಕಾರವು ಇದಕ್ಕೆಲ್ಲ ಅಲಕ್ಷ್ಯ ಮಾಡಿ ಲೋಕಪ್ರತಿನಿಧಿಗಳಿಗೆ ಏಕತರ್ಫೀನಿಂದ ಈ ಪ್ರಕಾರ ದೂಷಿಸಿದ್ದು ಸರ್ವಥಾ ಅಯೋಗ್ಯವೆಂದು ನಾವು ಇದನ್ನು ನಿಷೇಧಿಸುವೆವು.

---

೪ ಬೆಂಗಳೂರಲ್ಲಿ ನಡೆದ ಗಣಪತಿ ಮೂರುತಿಯ ಸತ್ಯಾಗ್ರಹದ ಗಲಾಟೆಯು ಇನ್ನೂ ಶಾಂತವಾಗಲಿಲ್ಲ. ಸಂಸ್ಥಾನದ ಅಧಿಕಾರಿಗಳು ನಿಶ್ಚಲಚಿತ್ತದಿಂದ ವರ್ತಿಸುವದಿಲ್ಲ. / ಶಾಕ-ಪೋಲೀಸ ಮುಸಲ್ಮಾನರು ಹಿಂದುಗಳಿಗೆ ಅಸ್ಥ ಬೀದಿಗಳಲ್ಲಿ ಏಟು ಕೊಡುತ್ತಿದ್ದಾರೆಂದು ತಿಳಿಯುತ್ತಿದೆ, ಇನ್ನೂ ಶಾಂತಿಯಾಗಲಿಲ್ಲ. ಹಿಂದು ಜನಾಂಗವು ವ್ಯಾಕುಲವಾಗಿದೆ. ಈ ಗಲಭೆಯನ್ನು ಚೌಕಶಿ ಮಾಡುವದಕ್ಕಾಗಿ ಸರಕಾರವು ನೇಮಿಸಿದ ಚೌಕಶಿ ಮಂಡಳವು ಜನರಿಗೆ ಏನೂ ಸಮ್ಮತವಿಲ್ಲ. ಸರಕಾರದ ಬಲವೇ ಹೆಚ್ಚು. ಬ್ರಾಹ್ಮಣ ದ್ವೇಷಿಗಳೇ ಪ್ರಾಮುಖ್ಯವಾಗಿ ಅದರೊಳಗೆ ಸೇರಿದ್ದಾರೆ. ಶ್ರೀ|| ಮಾಣಿಕ್ಯವೇಲು ಮೊದಲಿಯಾರರವರನ್ನು ಬಿಟ್ಟರೆ, ಈ ಮಂಡಳದಲ್ಲಿ ಲೋಕ ವಿಶ್ವಾಸವನ್ನು ಗಳಿಸುವ ಸಭಾಸದರಿನ್ನೊಬ್ಬರಿಲ್ಲೆಂದು ಹೇಳಬಹುದು. ಇಂಥ ಮಂಡಳವು ನಡಿಸುವ ಚೌಕಶಿಯಿಂದ ಸತ್ಯವು ಹೊರಬೀಳದು, ನ್ಯಾಯದಾನವಾಗದು. ಮೈಸೂರ ಸಂಸ್ಥಾನದಲ್ಲಿ ಪ್ರಜೆಗಳ ವಿಶ್ವಾಸವಿರುವ ೭ ಮಂದಿಗಳನ್ನು ನೇಮಿಸಲು ಸಂಸ್ಥಾನಾಧಿಕಾರಿಗಳಿಗೆ ಬರದಿದ್ದದ್ದು ಯಾತರ ದ್ಯೋತಕವಿದೆ? ಈ ಸತ್ಯಾಗ್ರಹದಲ್ಲಿ ಮೊದಲಿಂದ ಅಧಿಕಾರಿಗಳ ವರ್ತನವು ನಿರ್ಮಲವಿಲ್ಲ, ಸರಕಾರಿ ಪ್ರಕಟಣೆಗಳು ಪಕ್ಷಪಾತದವು, ಹೀಗೆ ಸಾರ್ವಜನಿಕ ತಕರಾರು. ಇಂಥ ಪ್ರಸಕ್ತಿಯಲ್ಲಿ ಸರಕಾರವು ವಿಶೇಷ ಜಾಗ್ರತೆಕೊಳ್ಳಬೇಕಾಗಿತ್ತು. ಶ್ರೀಮನ್ಮಹಾರಾಜರವರಿಗೆ ಪ್ರಜೆಗಳು ಬಿನ್ನಹಗಳನ್ನು ಸಾದರಪಡಿಸಿ ತಮ್ಮ ದೂರನ್ನು ದೊರೆತನಕ ಒಯ್ದಿದ್ದಾರೆ. ಮಹಾಸ್ವಾಮಿಯವರು ಪರಾಂಬರಿಸಿ ನ್ಯಾಯದಾನವಾಗುವಂತೆಯೂ, ಪ್ರಜಾ ನೆಮ್ಮದಿಯಾಗುವಂತೆಯೂ ಉಪಾಯ ಮಾಡಬೇಕಾಗಿ ನಮ್ಮದೊಂದು ಪ್ರಾರ್ಥನೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಹುಬ್ಬ ನಕ್ಷತ್ರಕ್ಕೆ ನ ಳೆಯಿಲ್ಲಿ ಬಿಸಿಲು ಕಾಯುತ್ತಿದೆ ದಿನಾ ಒಮ್ಮೆ ಸಹ ಮಳೆ ಹನಿಸುವದಿಲ್ಲ ತೆನೆ ಬಂದಿದೆ ಮಳೆ ಬೇಕು ದಿನಾ ಒಮ್ಮೆಯಾದರೂ ಹನಿಸದಿದ್ದರೆ, ಬೆಳೆಯು ಮಾನವು ಶೀರ ಕುಗ್ಗುವದು ಕೊನೆ ಯಾವಾಗ ಮಳೆ ಬೀಳುತ್ತದೋ ಏನೋ! ಬೇಸಾಯಗಾರರು ಚಿಂತಾಕ್ರಾಂತರಾಗಿದ್ದಾರೆ ಉಪ್ಪಿನಪಟ್ಟಣ-ಮಿರ್ಜಾನ ಕಡೆ ಹಂದಿಗಳ ಹಾವಳಿ ಹೆಚ್ಚಾಗಿದೆ ಕಬ್ಬು ಬೆಳೆಸಿದವರಿಗೆ ಬಹಳ ನಷ್ಟ

ಇಲ್ಲಿಯ ಮ್ಯುನಿಸಿಪಾಲಿಟಿಯವರು ಊರೊಳಗಿನ ಹೊಲಸು ಒಯ್ಯಲು ೨ ಕೋಣದ ೧ ಗಾಡಿ, ೧ ಎತ್ತಿನ ೧ ಗಾಡಿ ಹೀಗೆ ೨ ಗಾಡಿಗಳನ್ನಿಟ್ಟಿದ್ದಾರೆ ಇವುಗಳಿಂದ ಹೊಲಸು ಸಾಗಿಹೋಗುವದಿಲ್ಲ ಮಾರ್ಗ-ಕಾಲುವೆಗಳಿಂದ ತೆಗೆದ ಮಣ್ಣು ಅಲ್ಲಿಯೇ ರಾಶಿಯಾಗಿ ಉಳಿಯುತ್ತದೆ ಶಿರಸಿ ಮ್ಯುನಿಸಿಪಾಲಿಟಿಯವರು ೪ ಗಾಡಿ ಇಟ್ಟಿರುವರಂತೆ ಈ ಮುನಿಸಿಪಾಲಿಟಿಯಲ್ಲಿ ಮುಂಚೆ ೨-೨ ಕೋಣಗಳ ೨ ಗಾಡಿಗಳಿದ್ದವು ಈಗಿನ ಕಾರಕೀರ್ದಿಯಲ್ಲಿ ಮಿತವ್ಯಯವಾಗಿದೆ. ಹೊಲಸು ಒಯ್ಯುವದರಲ್ಲಿ ಮಿತವ್ಯಯ ಬೇಡ, ಇನ್ನೊಂದು ಗಾಡಿಯನ್ನಾದರೂ ಹೆಚ್ಚಿಸಬಹುದು

ಈ ವಾರದಲ್ಲಿ ಹೆಣ್ಣು ಹುಡುಗಿಯರ ಶಾಲೆಯ ಇಲ್ಲಿಯ ಮುಖ್ಯಾಧ್ಯಾಪಿಕೆಯರಾದ ಗಂಗಾಬಾಗಿರಥಿ ಹೆಬ್ಳೀಕರರವರು ಹುಡುಗಿಯರ ಕಡೆಯಿಂದ ಬಿಲ್ಲೆ-೨ ಬಿಲ್ಲೆ ಪಟ್ಟಿ ವಸೂಲ ಮಾಡಿ 'ಹಳದ ಕುಂಕುಮ' ಸಮಾರಂಭ ನಡಿಸಿದರು ಹುಡುಗಿಯರ ಖರ್ಚಿನಿಂದ ಈ ಸಾಭ್ರಮ ನಡಿಸುವದೇಕೆ?

ಹೊನ್ನಾವರ— ಇಲ್ಲಿಯ ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಎಡಬಲದಲ್ಲಿರುವ ಹಿತ್ತಲುಗಳೊಳಗಿನ ಗಿಡಮರಗಳು ಬಾಗಿ ಬಂದಿವೆ. ಇದರಿಂದ ಕಳೆ ಹೊರೆ ಒಯ್ಯುವವರಿಗೆ ತೊಂದರೆಯಾಗುತ್ತಿದೆ ಮ್ಯುನಿಸಿಪಾಲಿಟಿಯವರು ಈ ವಿಷಯ ವಿಚಾರ ಮಾಡಿ ತಕ್ಕ ಉಪಾಯ ಕೈಕೊಳ್ಳಬೇಕು

ದುರ್ಗಾಕೇರಿಯಿಂದ ಸ್ಮಶಾನಕ್ಕೆ ಹೋಗುವ ರಸ್ತೆ ತಿರುಗಿದ ಕಡೆಯಲ್ಲಿ ಮೂರು ಕಟ್ಟೆಯ ಹತ್ತರ ಮ್ಯುನಿಸಿಪಾಲಿಟಿಯವರು ಹೊಲಸು ಹಾಕಲು ಒಂದು ಚರಂಡಿಯಿಟ್ಟಿದ್ದರು ಆ ಚರಂಡಿ ಈಗ ಕಾಣೆ. ಅದರಿಂದ ಮಾರ್ಗದ ಮೇಲೆಲ್ಲ ಹೊಲಸು

ಇಲ್ಲಿಯ ರಾ| ವೆಂಕಟ್ರಮಣ ವಿಠ್ಠಲ ಶ್ಯಾನಭಾಗ ಇವರು ಮುಂಬಯಿಯ ಗೌಡ ಸಾರಸ್ವತ ಸೋಶಲರಿಫ್ ಲೀಗಿಗೆ ರೂ ೧೦೦ ಕೊಡಲೊಪ್ಪಿ ಆಜೀವ ಸಭಾಸದರಾಗಿದ್ದಾರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಭಟಕಳ— ಬಿಸಿಲಿನ ತಾಪ ಹೆಚ್ಚು; ಗದ್ದೆಯೊಳಗಿನ ನೀರೆಲ್ಲ ಬತ್ತಿ ಹೋಯಿತು. ಪೈರು ಬಾಡಲಿಕ್ಕೆ ಪ್ರಾರಂಭ. ಮಳೆ ಲೆಖ್ಖದಂತೆ ಬಹಳ ಬಿತ್ತು; ಆದರೂ, ಬೆಳೆ ನೀರಿಗಾಗಿ ಬಾಯಿ ಬಿಡುವದೇನು ತಪ್ಪಲಿಲ್ಲ. ಅಕ್ಕಿ ಕೊಳ್ಳುವವರಿಗೆ ಬಹು ಧಡಕಿ!

ಹಿರೇಕೇರಿಯ ಮಧ್ಯಭಾಗದಲ್ಲಿ ಹೊಂಡ್ರ ಕೆರೆಯಿದೆ. ಊರೊಳಗಿನ ಹೊಲಸು ನೀರೆಲ್ಲ ಈ ಕೆರೆ ಸೇರುತ್ತದೆ; ಚಿಕ್ಕಪುಟ್ಟ ಹೆಣಗಳು ಬಿದ್ದುಕೊಳ್ಳುವದೂ ಉಂಟು; ಕೆರೆಯಲ್ಲಿ ಮಣಕಗಳಿವೆ, ಅವು ದನಕರುಗಳನ್ನು ಹಿಡಿದು ಫಲಾಹಾರ ಮಾಡುತ್ತವೆ. ಹಿಮ್ಮೊಮ್ಮೆ ಜನರು ಬಿದ್ದು ಸತ್ತದ್ದೂ ಇದೆ. ಸಪ್ಟಂಬರದಿಂದ ಕೆರೆ ನೀರು ಒಣಗಹತ್ತುತ್ತದೆ. ಮುಂದೆ ನೀರು ದಟ್ಟಾಗಿ ಇಲ್ಲದ ರೋಗ ಕ್ರಿಮಿಗಳು ಕೆರೆಯಲ್ಲಿ ಮನೆ ಮಾಡುತ್ತವೆ. ಆಚೆ-ಈಚೆಗಿರುವ ಬಾವಿಗಳಲ್ಲಿ ಈ ಕೆರೆ ನೀರು ಸೋಸಿ ಬಾವಿ ನೀರು ಉಪಯೋಗಿಸುವ ಜನರಿಗೆ ಅಪಾಯ. ಈ ಕೆರೆಯನ್ನು ಹುಗಿಸಬೇಕಾಗಿ ಜನರು ಕಲೆಕ್ಟರರಿಗೆ ಅರ್ಜಿ ಮಾಡಿಕೊಂಡರು. ಅದಕ್ಕೆ ಉತ್ತರವಿಲ್ಲ. ಕೆರೆಯು ಮಾಲ್ಕಿ ಜಾಗದಲ್ಲಿದೆ ಆದರೆ, ಕೆರೆ ಹುಗಿಸುವಷ್ಟು ಅವರ ಸ್ಥಿತಿಯಿಲ್ಲ ಊರೊಳಗಿನ ಹೊಲಸು ತೆಗೆದು ಆರೋಗ್ಯಪಾಲನ ಮಾಡುವ ಮ್ಯುನಿಸಿಪಾಲಿಟಿಯೂ ಇತ್ತ ಲಕ್ಷ ಕೊಡುವದಿಲ್ಲ ಈಗಲಾದರೂ ವ್ಯವಸ್ಥೆ ಮಾಡಬೇಕು

ಇಲ್ಲಿಯ ಕರಿಬಂಟರ ಎಂಬ ದೇವರ ಗುಡಿಯಲ್ಲಿ ಮಾರಿಕಂಡವನ್ನು ಓಡಿಸಲು ೨೦೦-೪೦೦ ಜನರು ಸೇರಿದ್ದರು ನಾಮಧಾರಿ ಜಾತಿಯವರು ಕುದುರೆ ಈರಪ್ಪ ಎಂಬ ತಮ್ಮ ದೇವರನ್ನು ಕರಕೊಂಡು ಬರುವ ಸಾಂಪ್ರದಾಯವಿತ್ತು, ಸಾವುಕಾರರಿಗೂ, ನಾಮಧಾರಿ ಜನರಿಗೂ ಶೇಂದಿ ಚಪ್ಪರ ಗುತ್ತಿಯ ಸಂಬಂಧ ಮತಭೇದವಾಗಿ ಕುದುರೆ ಈರಪ್ಪನು ಕರಿಬಂಟನ ಸಹಾಯಕ್ಕೆ ಬರಲಿಲ್ಲ. ಮಾರಿಕಂಡಕ್ಕೆ ಓಡಿಸಲಾಗಲಿಲ್ಲ

ಶ್ರೀ ಗೋಕುಲಾಷ್ಟಮಿ ದಿನ ಇಲ್ಲಿಯ ಕನ್ನಡ ಶಾಲೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನ ಗುಣವರ್ಣನಪರ ಭಾಷಣಗಳಾದವು ರಾ| ಎಸ್ ಎನ್. ಕೊಪ್ಪಿಕರ ರವರು ಸಭಾಧ್ಯಕ್ಷರಾಗಿದ್ದರು. 'ಮುಖ್ಯಾಧ್ಯಾಪಕರಾದ ರಾ| ಶಿರೂರಕರಯವರು ಸುಶ್ರಾವ್ಯ ಭಾಷಣ ಮಾಡಿದರು ಸಭೆಗೆ ವಿದ್ಯಾರ್ಥಿಗಳೂ, ಊರ ಪ್ರಮುಖರೂ ಸೇರಿದ್ದರು ಗಣೇಶ ಚತುರ್ಥಿಯ ದಿನ ಇದೇ ಪ್ರಕಾರ ಸಭೆ ಸೇರುವದಿದೆ. ಇಂಥ ಧರ್ಮಬೋಧೆಯ ಉಪಕ್ರಮವು ಸ್ತುತ್ಯವಿದೆ.

ಇಲ್ಲಿಯ ಇಂಗ್ಲಿಷ ಶಾಲೆಯ ಮುಖ್ಯಾಧ್ಯಾಪಕರಾದ ರಾ|| ಎಚ್ ಎಸ್. ಕುಲಕರ್ಣಿಯವರು ವೃದ್ಧಾಪ್ಯದ ಮೂಲಕ ತಮ್ಮ "ತಿರುಪತಿ ನ್ಯೂ ಇಂಗ್ಲಿಷ ಶಾಲೆ" ಯನ್ನು ರಾ|| ಎಮ್. ಎಲ್. ಕೋಟಿಯವರಿಗೆ ವಹಿಸಿಕೊಟ್ಟಿದ್ದಾರೆ.

ಇಲ್ಲಿ ಆಸ್ಪತ್ರಿಯಿಟ್ಟಿದ್ದ ಡಾ| ವ್ಹಿ. ಎಸ್. ಅಡಿರೇಕರ ಎಲ್.ಸಿ ಪಿ ಎಸ್., ರವರು ಸಾಗರಕ್ಕೆ ಹೋಗಿದ್ದರು, ೮-೧೦ ದಿನಗಳಲ್ಲಿ ಪುನಃ ಇಲ್ಲಿ ದವಾಖಾನೆ ಚಾಲು ಮಾಡುವರಾಗಿ ತಿಳಿಯುತ್ತದೆ.

ಇಲ್ಲಿಯ ಕನ್ನಡ ಶಾಲೆಯಲ್ಲಿ ೫-೬-೭ ನೇ ಇಯತ್ತೆಯ ಹುಡುಗರು ಪ್ರತಿ ಗುರುವಾರಕ್ಕೆ ೧೫ ಸೂರ್ಯ ನಮಸ್ಕಾರಗಳನ್ನು ಹಾಕುತ್ತಾರೆ. ಈ ಉಪಕ್ರಮ ಮಾಡಿದ ಬಗ್ಗೆ ಶಾಲೆಯ ಶಿಕ್ಷಕರಿಗೆ ಅಭಿನಂದಿಸಬೇಕು

ವಿ| ಕೇ. ಬಾಪುಸಾಹೇಬರವರ ಪ್ರೋತ್ಸಾಹದಿಂದ ಇಲ್ಲಿ ಒಂದು ಲ್ಯಾಬರ್ರಿ ಸ್ಥಾಪನೆಯಾಗುವದಿದೆ

ಇಲ್ಲಿಯ ಪೇಟೆಯಿಂದ ಬಂದರಕ್ಕೆ ಹೋಗಲು ಎರಡು ದಾರಿಗಳಿವೆ. ಒಂದು ದಾರಿ ರಾಜರಸ್ತೆಯದು; ಇನ್ನೊಂದು ಕಾಲ್ದಾರಿ. ಕಾಲ್ದಾರಿ ೨ ಮೈಲು; ರಾಜರಸ್ತೆ-೩ ಮೈಲು ಯಾವ ರಸ್ತೆಯಿಂದ ಹೋದರೂ, ಮಧ್ಯದಲ್ಲಿ ಹೊಳೆ ದಾಟಬೇಕು. ಬೋಟ ಟಿಕೇಟ ಪಡೆಯಲಿಕ್ಕೆ ಜನರು ರಾಜರಸ್ತೆಯಿಂದಲೇ ಹೋಗಬೇಕಾಗುತ್ತದೆ. ಹೊಳೆ ದಾಟಲಿಕ್ಕೆ ಒಂದು ಬಿಲ್ಲೆ ಖರ್ಚು ಬರುತ್ತದೆ, ಹೊತ್ತು ಹೆಚ್ಚು ಬೇಕು. ಅದರಿಂದ ಭಟಕಳದಿಂದ ಮುಂಡಳ್ಳಿಗೆ ಹೋಗುವ ದೊಡ್ಡ ಸೇತುವೆ ಮೇಲಿನ ಫೈಲೊಳಗಿಂದ ಬಂದರದ ತನಕ ರಸ್ತೆ ತಯಾರಿಸಿದರೆ, ಜನರಿಗೆ ಬಹಳ ಅನುಕೂಲವಾಗುವದು ರಸ್ತೆಗೆ ಹೆಚ್ಚು ಖರ್ಚು ಬೇಡ.

ಶಿದ್ದಾಪುರ— ವೇ| ಮೂ| ಅನಂತ ಮಂಗೇಶ ಭಟ್ಟರು ಬರೆಯುತ್ತಿದ್ದ ಚರಿತ್ರೆಯ ಹೆಸರು "ಶ್ರೀ ಕೃಷ್ಣ ಚೈತನ್ಯ ಚರಿತ್ರೆ" ಎಂದು; ಹೊರತು ಶ್ರೀ ಗೋಪಾಲಕೃಷ್ಣ ಚರಿತ್ರೆಯಲ್ಲ.

ಶಿರಸಿ— ಈ ವಾರದಲ್ಲಿ ಮಳೆಯು ಮೋಲೆಯಿಲ್ಲ. ಪ್ಲೇಗರಾಜನ ಅಬ್ಬರವೂ ಕೇಳಿಸುವದಿಲ್ಲ. ದನಗಳನ್ನು ದೊಡ್ಡಿಗೆ ಹಾಕುವ ಪೋಲೀಸರ ಕ್ರಮವು ನಡೆದಿದೆಂದು ತಿಳಿಯುತ್ತದೆ. ಪ್ಲೇಗ ರೋಗಾದಿಗಳ ನಿವಾರಣಾರ್ಥವಾಗಿ ನಗರ ಸಂಕೀರ್ತನೆಗಳು ನಡೆಯುತ್ತಲಿವೆ.

ಭಜನ ಮಂದಿರದ ಸಪ್ತಾಹವು ವಾಡಿಕೆಯಂತೆ ನೆರವೇರಿತು.

ಮೋಟಾರುಗಳ ಸಂಖ್ಯೆಯು ಹೆಚ್ಚಿದಂತೆ ಮೋಟಾರುಗಳ ಅಪಘಾತಗಳೂ ಹೆಚ್ಚಿವೆ.

ಮೇಲಂಗಿ ಮೋಟಾರ ಡ್ರೈವ್ಹರನಿಗೆ ಎಕ್ಕಂಬಿ ಎಂಬಲ್ಲಿ ಹಲವರು ಕೂಡಿ ಹೊಡೆದರೆಂತಲೂ, ಬೇರೆ ಕೆಲವರಿಗೆ ಹೊಡತಗಳು ಬಿದ್ದಿವೆಯೆಂದೂ ಕೇಳುತ್ತಾರೆ

ಅಂಕೋಲಾ— ಇಲ್ಲಿ ಒಂದು ಪ್ಲೇಗ ಪ್ರಕರಣವಾಯಿತು. ಕಾಕರಮಠದಲ್ಲಿ ಇಲಿ ಬಿದ್ದ ಸುದ್ದಿಯಿದೆ. ಜನರು ಹೊಲಸಿಗೆ ಎಡೆ ಕೊಡಬಾರದು; ಗಟಾರ ಸಂಚಾರಕ್ಕೆ ಪೂರ್ಣ ಎಚ್ಚರಿಕೊಡಬೇಕು.

ನಿರುಪದ್ರವಿ ದನಗಳನ್ನು ಹಿಡಿದು ದೊಡ್ಡಿಗೆ ಹಾಕುವ ಕ್ರಮವನ್ನು ಇಲ್ಲಿಯ ಪೋಲೀಸರು ನಡಿಸಿದ್ದಾರೆ. ಇದರಿಂದ ದನಗಳ ಮಾಲೀಕರ ಮೇಲೆ ಇದೊಂದು ತೆರಿಗೆಯೇ ಸರಿ. ಕಾರಣ ಪೋಲೀಸರು ಇದನ್ನು ನಿಲ್ಲಿಸಬೇಕು.

ನಾದುರುಸ್ತಿಯಾದ ಮೋಟಾರುಗಳನ್ನು ಪರೀಕ್ಷಾರ್ಥವಾಗಿ (Trial) ಬಾಜಾರದೊಳಗಿನ ರಸ್ತೆ ಮೇಲಿಂದ ಅನೇಕ ಸಾರೆ ಓಡಿಸುವದು ಕಂಡು ಬರುತ್ತದೆ ಅನಾವಶ್ಯಕವಾಗಿ ರಹದಾರಿಯ ರಸ್ತೆ ಮೇಲಿಂದ ಮೋಟಾರುಗಳನ್ನು ಅತೀ ವೇಗದಿಂದ ಓಡಿಸುವದು ಪೋಲೀಸರು ಬಂದ ಮಾಡಬೇಕು. ಅಂಥವರ ಕಲುವಾಗಿ ಕೋರ್ಟ ಬೇಟಿ ಉಂಟು.

ಒಬ್ಬರು ತಿಳಿಸುವದೇನಂದರೆ:—

ವೇ| ಪಂಡಿತ ಕುಮಠಾ ನಾರಾಯಣಾಚಾರ್ಯರಿಂದ ರಚಿತವಾದ ಶ್ರೀ ಹರಿ ನೃಸಿಂಹಾಷ್ಟಕ ಸ್ತೋತ್ರವನ್ನು ಕನ್ನಡ ಭಾಷಾಂತರ ಸಹ ಇಲ್ಲಿಯ ಶ್ರೀ ಗಜಾನನ ಮುದ್ರಣಾಲಯದ ಮಾಲೀಕರಾದ ಶ್ರೀ|| ನಾರಾಯಣ ಗಣೇಶ ಮುಜಾವೀಯವರು ಪ್ರಕಟಿಸಿದ್ದಾರೆ ಅದರಲ್ಲಿ ಪದ್ಯಾವಲಿ, ಶ್ರೀರಾಮ ಸ್ತುತಿಯೂ ಉಂಟು. ಕಿಮ್ಮತ್ತು ಬರೇ ೧ ಆಣೆ. ವಿಶೇಷತಃ ಸಾಂಪ್ರತ ಪ್ಲೇಗರಾಜನ ಭೀತಿಯ ದಿವಸಗಳಲ್ಲಿ ಇದನ್ನು ಪ್ರತಿಯೊಬ್ಬರು ಪಠಣ ಮಾಡುವದು ಉತ್ತಮ.

ಕಾರವಾರ— ಕಳೆದ ವಾರ ಇಲ್ಲಿ ಮಳೆಯಿಲ್ಲ. ಕಲೆಕ್ಟರರು, ಆ| ಕಲೆಕ್ಟರರಾದ ಮಿ| ವ್ಯಾಕರವರೂ ಪುಣೆಗೆ ಹೋಗಿರುತ್ತಾರೆ.

ಈ ತಾಲೂಕಿನ ಪಾಲಕ್ಕಿ ಗೌಡರು ಪ್ರೈಕ ಕೂಟದಲ್ಲಿ ಸಭೆ ಸೇರಿ ಉಪಯುಕ್ತ ಠರಾವುಗಳನ್ನು ಮಾಡಿದ್ದಾರೆ. ಒಕ್ಕಲಿಗರೆಲ್ಲರೂ ತಮ್ಮ ಹುಡುಗರಿಗೆ ಶಾಲೆಗೆ ಕಳಿಸಬೇಕು; ತಪ್ಪು ಕಾಣಿಕೆಯ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಉಪಯೋಗಿಸಬೇಕು; ಒಕ್ಕಲಿಗಿತಿಯರು ಹೇರಳ ಮಣಿಸರಗಳನ್ನು ಧರಿಸಬಾರದು; ಸರಕಾರವು ರೈತರಿಗೆ ಭೂಮಿಗಳನ್ನು ಲಾಗಣಿಗೆ ಕೊಡಬೇಕು; ಮನೆಗೆ ಎಕ್ಕರೆಯಷ್ಟು ಭೂಮಿಯನ್ನು ಕುಂಬರಿಯ ಬಗ್ಗೆ ಉಚಿತವಾಗಿ ಕೊಡಬೇಕು; ಹಡಾತಿಯರಿಗೆ ವಿದ್ಯೆ ಕಲಿಯಲು ಉತ್ತೇಜನ ಕೊಡುವದಕ್ಕಾಗಿ ಪ್ರಾಥಮಿಕ ಶಾಲೆಗಳಲ್ಲಿಯೂ, ಮಾಧ್ಯಮಿಕ ಶಾಲೆಗಳಲ್ಲಿಯೂ ಕೆಲವು ಶಿಷ್ಯವೃತ್ತಿಗಳನ್ನು ಕಾಯಿಡಬೇಕು. ತಾಲೂಕ ಬೋರ್ಡು, ಜಿಲ್ಹಾ ಬೋರ್ಡು, ಸ್ಕೂಲ ಬೋರ್ಡುಗಳಲ್ಲಿ ಗೌಡ ಜಾತಿಯ ಒಬ್ಬ ಸಭಾಸದರನ್ನು ಸರಕಾರವು ನೇಮಿಸತಕ್ಕದ್ದು. ಇತ್ಯಾದಿ.

ಯಲ್ಲಾಪುರ— ಮಳೆ ಹೋಗಿ ಬಿಸಿಲು ಬೀಳಹತ್ತಿದೆ. ಮುಂಜಾನೆ ಮಂಜು ಬಹಳ. ಇಲ್ಲಿಯ ಶ್ರೀ ಗ್ರಾಮದೇವಿಯ ದೇವಸ್ಥಾನದಲ್ಲಿ ಇದೇ ಕಳೆದ ಶುಕ್ರವಾರದಿಂದ ಭಜನೆ ಸಪ್ತಾಹಕ್ಕೆ ಪ್ರಾರಂಭವಾಗಿರುವದು. ಈ ಊರ ನೆರೆಯ ನಾಯ್ಕನಕೆರೆಯ ದೇವಸ್ಥಾನದಲ್ಲಿ ಈ ತಿಂಗಳ ಮೊದಲನೇ ತಾರೀಖಿನಿಂದ ಶ್ರೀ ಬಾಲತ್ರಿಪುರಸುಂದರೀ ವಾಚನಾಲಯವು ಸ್ಥಾಪಿಸಲ್ಪಟ್ಟಿರುವದು.

ಇಲ್ಲಿ ಮಳೆಗಾಲ ತೀರಿದ ಬಳಿಕ ರೋಗರುಜಿನೆಗಳು ಬರುವ ಸಂಭವ ವಿಶೇಷ. ಆದರೆ ಇಲ್ಲಿಯ ಭಜಕ ಜನರು ಮೊದಲೇ ಜಾಗೃತರಾಗಿ ಈ ವಿಷಯ ಭಜನೆ ಸಪ್ತಾಹ ಮಾಡಿದ್ದರಿಂದ ರೋಗಾದಿಗಳೇನು ಇಲ್ಲಿ ಶ್ರೀ ದೇವಿಯ ಸಂತುಷ್ಟತೆಯಿಂದ ಬಾಧಿಸದಿರಲೆಂಬ ಭಾವಿಕರ ಭಾವನೆ ನಿಜವಾಗಲಿ.

ಕುಂಭಾರವಾಡೆ— ಇಲ್ಲಿ ದವಾಖಾನೆಯನ್ನು ಸ್ಥಾಪಿಸುವ ಬಗ್ಗೆ ಕಳೆದ ೨೫ನೇ ತಾರೀಖಿಗೆ ಜಿಲ್ಹಾ ಬೋರ್ಡಿನಲ್ಲಿ ಪುನಃ ಠರಾವಾಗಿದೆ. ಈ ಠರಾವು ಅಮಲಿನಲ್ಲಿ ಬೇಗನೆ ತರಬೇಕಾಗಿ ಜನರು ಪ್ರಾರ್ಥಿಸುತ್ತಿದ್ದಾರೆ. ಇದೇ ಬರುವ ನವಂಬರ ತಿಂಗಳಲ್ಲಿ ಸೇರುವ ಜಿಲ್ಹಾ ಬೋರ್ಡಿನ ಸಭೆಯಲ್ಲಿ ದವಾಖಾನೆಗೆ ಅವಶ್ಯವುಳ್ಳ ರಕಮನ್ನು ಖರ್ಚು ಹಾಕಲು ಬೋರ್ಡಿನಿಂದ ವ್ಯವಸ್ಥೆಯಾಗಬೇಕು. ಸರಕಾರವೂ ಸಹ ಇತ್ತ ಕಡೆ ಲಕ್ಷ್ಯ ಕೊಡಬೇಕಾಗಿಯೂ ಬೇಡಿಕೆಯುಂಟು.

ವೃತ್ತಸಾರ.

— ಮುಂಬಯಿಯಲ್ಲಿ ನ್ಯಾ|| ಮೂ|| ಕಾಶೀನಾಥ ತ್ರಿಂಬಕ ತೇಲಂಗರವರ ಪುಣ್ಯತಿಥಿಯು ಜರುಗಿತು. ರಾ|| ಮುನಶಿ ಮೊದಲಾದವರು ನ್ಯಾಯಮೂರ್ತಿ ತೇಲಂಗರವರ ಗುಣಾನುವಾದ ಮಾಡಿದರು.

— ಮಂಗಳೂರಿನ ರಾ|| ಬ|| ಡಾ|| ಎಸ್. ಶೇಷಪ್ಪರವರ ಮಗಂದಿರರಾದ ಶ್ರೀ ಪುರುಷೋತ್ತಮ ಪೈಗಳವರು ಲಂಡನ ವಿಶ್ವವಿದ್ಯಾಲಯದ ಬಿ ಎಸ್. ಸಿ. ಎಂಬ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮೊದಲನೇ ವರ್ಗದಲ್ಲಿ ಅಗ್ರಸ್ಥಾನ ಪಡೆದರು. ವಿಶ್ವವಿದ್ಯಾಲಯವು ಈ ಸ್ಥಾನಕ್ಕೆ ಇಟ್ಟ ಸುವರ್ಣಪದಕದ ಬಹುಮಾನವನ್ನೂ ಪಡೆದರು. ಹಿಂದೀಯರಿಗೆ ಈ ಬಹುಮಾನ ದೊರೆತದ್ದು ಇದೇ ಮೊದಲು. ಇದರಿಂದ ಶ್ರೀ|| ಪುರುಷೋತ್ತಮ ಪೈಗಳವರಿಗೆ ಮಂಗಳೂರಿನಲ್ಲಿ ಕೊಂಡಾಡುತ್ತಾರೆ.

— ಇದೇ ಕಳೆದ ಆಗಸ್ಟ ೧ನೇ ತಾರೀಖಿನ ವರೆಗೆ ಕರ್ನಾಟಕದಲ್ಲಿ ೨೧೯೧ ರಾಷ್ಟ್ರೀಯ ಸಭೆಯ ಸಭಾಸದರಾದರು, ೨೪೮ ಮಂದಿ ಸೇವಾದಲದ ಸಭಾಸದರಾದರು. ಸಭಾಸದರನ್ನು ಸೇರಿಸುವ ಅವಧಿ ತೀರುತ್ತ ಬಂತು. ಸಭಾಸದರಾಗುವವರೂ, ಸ್ವಯಂಸೇವಕರೂ ತ್ವರೆಮಾಡಬೇಕಾಗಿ ಸೇವಾದಲದ ಕಾರ್ಯದರ್ಶಿಗಳಾದ ಡಾ|| ನಾ. ಸು. ಹರ್ಡೀಕರರು ಬಿನ್ನೈಸುತ್ತಾರೆ.

— ದಕ್ಷಿಣ ಕನ್ನಡ ಜಿಲ್ಲೆಯ ಸಂಪಾಜೆ ಗ್ರಾಮದ ಆಚೆ ಈಚೆ ಬಂಬುಚ್ಚೆ ಎಂಬ ಹುಳಗಳು ಬೆಳೆ ಪೈರುಗಳ ಮೇಲೆ ಕೂತುಕೊಂಡು ಪೈರು ನಾಶಮಾಡುತ್ತವೆ. ಹುಳದ ಮೈ ಕಪ್ಪು, ತಲೆ ಕೆಂಪು. ಇದೊಂದು ಹೊಸ ಸಂಕಟ.

— ಉಡುಪಿಯೊಳಗೆ ಸ್ಥಾಪಿಸಲ್ಪಟ್ಟ "ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ" ಎಂಬ ಸಂಸ್ಕೃತ ಪಾಠಶಾಲೆಯ ೨೫ ನೇ ವರ್ಧಂತಿ ಮಹೋತ್ಸವವು ಜರುಗಿತು. ಶ್ರೀ ಪುರದ ಪೈಕಿ ಶ್ರೀ ಪುತ್ತಿಗೆ ಮಠಾಧಿಪರು ಸಮಾರಂಭದ ಯಜಮಾನರಾಗಿದ್ದರು ಶ್ರೀ ಸೋದೇ ಮಠಾಧಿಪರು ವೇದಾಂತ ವಿಷಯದಲ್ಲಿ ಮದ್ರಾಸ ವಿಶ್ವವಿದ್ಯಾಲಯದ ಪರೀಕ್ಷೆಯಲ್ಲಿ ವಿಶೇಷ ಯೋಗ್ಯತೆಯಿಂದ ತೇರ್ಗಡೆ ಹೊಂದಿದ ರಾ|| ನಾರಾಯಣಾಚಾರ್ಯರಿಗೆ ಸುವರ್ಣಪದಕವನ್ನಿತ್ತು ಸನ್ಮಾನಿಸಿದರು. ತರ್ಕಶಾಸ್ತ್ರದಲ್ಲಿ ಹೆಚ್ಚಿನ ಪ್ರಶಸ್ತಿ ಪಡೆದ ರಾ|| ಅನಂತರಾಮಾಚಾರ್ಯರಿಗೆ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು ೫೦ ರೂಪಾಯಿಗಳನ್ನಿತ್ತು ಬಹುಮಾನಿಸಿದರು

— ೧೯೨೫ನೇ ಸಾಲಿನಲ್ಲಿ ೧೦ ಸಾವಿರ ಟನ್ನಿನ ಎರಡು ಯುದ್ಧದ ಹಡಗುಪಡೆಗಳು ಅಮೇರಿಕೆಯಲ್ಲಿ ತಯಾರಾಗುವವು! ಶಾಂತಿಕಾಲದಲ್ಲಿ ಈ ಪರಿವಾರವೇಕೆ!

— ಸರ್. ಸಿ. ಪಿ. ರಾಮಸ್ವಾಮಿ ಅಯ್ಯರವರು ಭಾರತ ಮಂತ್ರಿಗಳ ಮೇಲೆ ಮದ್ರಾಸ ಹೈಕೋರ್ಟಿನಲ್ಲಿ ದಾವೆ ದಾಖಲು ಮಾಡುವವರಿದ್ದಾರೆ. ಸ್ಕೀಮನ್ ಕಮಿಟಿಗಾಗಿ ಸರಕಾರಿ ತಿಜೋರಿಯಿಂದ ಹಣ ಖರ್ಚು ಮಾಡದಂತೆ ಪ್ರತಿಬಂಧಕ ದಾವೆ.

— ಚಿದಂಬರದೊಳಗಿನ ಶಿವಕಾಮಸುಂದರಿ ಮಾತೆಗೆ ನೆಲ್ಲೂರಿನ ಐಶ್ವರ್ಯವಂತನ ಅರ್ಧಾಂಗಿಯು ಚಿನ್ನದ ಕವಚವನ್ನರ್ಪಿಸಿದ್ದಾಳೆ. ಅದರ ಬೆಲೆ ರೂಪಾಯಿ ೭೫ ಸಾವಿರ.

— ದಕ್ಷಿಣ ಆಫ್ರಿಕೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಕ್ಷವು ತಲೆಯೆತ್ತಿದೆ. ಬ್ರಿಟಿಶ ಸಾಮ್ರಾಜ್ಯ ಕೊಳ್ಳಬಿಟ್ಟಿರಲು ಇಲ್ಲಿಯವರ ಒಪ್ಪಿಗೆಯಿಲ್ಲ.

— ಕಲಕತ್ತೆಯ ಪಶುಸಂಗ್ರಹಾಲಯದಲ್ಲಿ ೨ ಬಿಳೇ ಆನೆಗಳಿದ್ದವು ಒಂದು ಗಂಡು, ಒಂದು ಹೆಣ್ಣು. ಗಂಡ-ಹೆಂಡರು ಪ್ರೀತಿಯಿಂದಿದ್ದವು ಗಂಡು ಆನೆಯು ತೀರಿಕೊಂಡಿತು, ಹೆಣ್ಣು ಆನೆಯು ಅನ್ನ-ನೀರು ಬಿಟ್ಟಿದೆ; ಹಗಲಿರುಳು ಮರುಗುತ್ತಿರುತ್ತದೆ, ಆನೆಯಷ್ಟು ಗೃಹಿಣಿಯ ಪ್ರೀತಿಯಿಲ್ಲ.

— ಡೆರಾಡನ್ನಿನಲ್ಲಿ ಜಂಗಲ ವಿಷಯ ಸಂಶೋಧಕ ಖಾತೆಯು ಫೊರೆಸ್ಟ ರಿಸರ್ಚ ಇನ್ಸ್ಟಿಟ್ಯೂಟಿಗಾಗಿ ೧ ಕೋಟಿ ೧೧ ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಕಟ್ಟಡ ಕಟ್ಟುವ ಸರಕಾರಿ ಆಲೋಚನೆ ಲೋಕಕ್ಷೇಮ ದೃಷ್ಟ್ಯಾರ್ಥಕ್ಕಾಗಿ ಲಾಲಾಲಜಪತರಾಯರು ೧ ಕೋಟಿ ರೂಪಾಯಿ ಬೇಡಿದಾಗ ಸರಕಾರವು ಹಣವಿಲ್ಲವಾಗಿ ಹೇಳಿ ವರ್ಷ ಸಹ ಆಗಲಿಲ್ಲ, ಕಟ್ಟಡ ಕಟ್ಟಲು ಹಣ ಎಲ್ಲಿಂದ ?

— ಮುಂಬಯಿಯ ಶಾಂತಿ ಖಾತೆಯಲ್ಲಿ ಶಿರಸ್ತೇದಾರರಾಗಿದ್ದ ಭಟ್ಟಾಚಾರ್ಯರೆಂಬವರು ೭|| ಸಾವಿರ ರೂಪಾಯಿಗಳ ಲೆಕ್ಕವನ್ನು ವಂಚನೆ ಮಾಡಿದರು, ತನಿಖೆಗೆ ಬಂದಾಗ ಲೆಕ್ಕದ ಪುಸ್ತಕವನ್ನು ಸುಟ್ಟರು, ಭಟ್ಟಾಚಾರ್ಯರಿಗೆ ಸೆರೆಹಿಡಿಯಲಾಗಿದೆ;

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳ ೧೨ ಪೆಕೆಟುಗಳಿಗೆ ರೂ ೬
... (ಎಕಿಲೋಜರ್ಮೆಂಟು) ೨೫ .. ... ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨||
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪||
ನಾಟಿ .. ೧೬ ,, ,, ೨||
ಸಿಲ್ವರ ಓಕ ೧ ರತ್ತಲಿಗೆ ... ,, ೨||
ಬೆಂಗಳೂರ ಬಿಳೇ ಮೂಲಂಗಿ ಬೀಜ ರೆ . ೨||
ಹಸಿವೆ ಸೊಪ್ಪು ೧ ರತ್ತಲಿಗೆ ೪
ಕುದುರೆ ಮಸಾಲೆ ಬೀಜ ೧ ರತ್ತಲಿಗೆ ... ೩
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಚಲೋ ಕ್ರೋಟನ್ಸ್ ಗಿಡ ೧೨ ಕ್ಕೆ ... ೩ ರಿಂದ ೧೨
ಅಂದವಾದ ಹೂ ಗಿಡ (ಜೆರೇನಿಯಂ) ೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೩ ರಿಂದ ೧೨
ಶೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ... ೧|| ರಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ .. ೩ ರಿಂದ ೧೨
ಕಟ್ಟಡ ಮಾದಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨
ನೇವು ಗಿಡಗಳು ೧೨ ಕ್ಕೆ ... ... ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ ... ... ೧೫ ರಿಂದ ೨೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಸಿತ್ತಳೇ ಗಿಡಗಳು, ಚಕ್ಕೋತ್ರೆ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಮಫಲ, ಪನ್ನೇರಲ, ಕಂಚೀಕಾಯಿ, ಲಕ್ಕ್ಯಾಟಿ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇಬು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ. . ೨೪
ವಾಶಿಂಗಟನ್ ಸಿತ್ತಳೇ ಹಣ್ಣು ೧ ಕ್ಕೆ... ೫
೧ ಬುಟ್ಟಿ ತುಂಬ ತರಕಾರಿ . . ೫ ರಿಂದ ೩
ಕ್ರೀಸಾಂತಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯಾ ಗಡ್ಡೆಗಳು ೧೨ ಕ್ಕೆ ರೂ ೬-೯-೧೨
ನೆರಳು ಕೊಡುವ ತಾಳೆ ಎಲೆಯ ಜಾತಿಫಲ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡೆಗಳು ೧೨ ಕ್ಕೆ ರೂ. ೩ ರಿಂದ ೯
ಎರೋಕೇರಿಯಾ ಕುಕ್ಕಿ ೧೨ ಗಿಡಗಳಿಗೆ ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ್,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ

ಮಹಾತ್ಮರ ಆತ್ಮಚರಿತ್ರ.

(೨೦) ಕೂಲಿಕಾರರು.

ಚಂಪಾರಣ್ಯದೊಳಗಿನ ನನ್ನ ಚೌಕಶಿ ಮಂಡಳದ ಕೆಲಸವನ್ನು ನಾನು ಪೂರ್ಣಪಡಿಸುವದರಲ್ಲಿ ತೊಡಗಿದ್ದನು ಅಷ್ಟರಲ್ಲಿ ಖೇಡಾ ಜಿಲ್ಹೆಯೊಳಗಿಂದ ಮೋಹನಲಾಲ ಪಂಡ್ಯಾರವರೂ ಶಂಕರಲಾಲ ಪರೀಖರವರೂ ಅಲ್ಲಿಯ ಶೀವೇ ಬೆಳೆಯ ವಿಷಯ ಪತ್ರ ಬರೆದರು ಅಲ್ಲಿ ಹೋಗಿ ಮುಂದಾಳಾಗಲು ನನಗೆ ಆಗ್ರಹಪೂರ್ವಕವಾಗಿ ಸೂಚಿಸಿದ್ದರು ಸ್ಥಳ ತಪಾಸ ಮಾಡಿದ ಹೊರತು ಯಾವದೇ ತರದ ಅಭಿಪ್ರಾಯ ಕೊಡಲು ನನ್ನ ಅಪೇಕ್ಷೆ ಇದ್ದಿಲ್ಲ ನನ್ನ ಸಾಮರ್ಥ್ಯವಾದರೂ ಅಷ್ಟಿದ್ದಿಲ್ಲ ಶ್ರೀಮತಿ ಅನಸೂಯಾಬಾಯಿಯವರೂ ಒಂದು ಪತ್ರ ಬರೆದಿದ್ದರು ಅವರು ಅಲ್ಲಿಯ ಕೂಲಿಕಾರರ ಸಂಘದ ವಿಷಯ ಬರೆದಿದ್ದರು ಕೂಲಿಕಾರರ ಸಂಬಳವು ತೀರ ಕಡಿಮೆ ಸಂಬಳವನ್ನು ಏರಿಸಬೇಕಾಗಿ ಬಹು ಕಾಲದಿಂದ ಅವರು ಹೇಳುತ್ತಿದ್ದರು ಆ ಬಗ್ಗೆ ಅವರಿಗೆ ನೆರವಾಗಬೇಕಾಗಿ ನನಗೆ ಸ್ಫೂರ್ತಿಯಾಗುತ್ತಿತ್ತು. ಇಂಥ ಚಿಕ್ಕ ಪುಟ್ಟ ಕೆಲಸಗಳನ್ನು (ಚಂಪಾರಣ್ಯದಂಥ) ದೂರ ದೇಶದಲ್ಲುಳಿದು ಕಡೆಗಾಣಿಸಿಕೊಳ್ಳಲು ಅನುಕೂಲವಿರುವದಾಗಿ ನನಗೆ ತೋರಲಿಲ್ಲ ಕಾರಣ ನಾನು ಕೂಡಲೆ ಹೊರಟೆನು ಅಹಮದಾಬಾದಕ್ಕೆ ಹೋಗಿ ತಲ್ಪಿದೆನು. ಇವೆರಡೂ ಕೆಲಸಗಳ ಚೌಕಶಿ ಮಾಡಿ ಅಲ್ಪಾವಧಿಯಲ್ಲಿಯೇ ಚಂಪಾರಣ್ಯಕ್ಕೆ ತಿರುಗಿ ಹೋಗಿ ಇಲ್ಲಿಯ ಸಂಘಟನೆಯ ಕಾರ್ಯದ ಮೇಲ್ವಿಚಾರ ನಡಿಸಬೇಕಾಗಿ ನನ್ನ ಸಂಕಲ್ಪವಿತ್ತು

ಆದರೆ, ಅಹಮದಾಬಾದಕ್ಕೆ ಹೋಗಿ ತಲ್ಪಿದ್ದೇ ತಡ ಒಂದರ ಹಿಂದೊಂದು ಪ್ರಕರಣಗಳುಂಟಾದವು ಬಹು ಕಾಲದ ತನಕ ಚಂಪಾರಣ್ಯಕ್ಕೆ ಹೋಗಲು ಸಾಧ್ಯವಾಗಲಿಲ್ಲ ಅಲ್ಲಿ ನಿರ್ಮಿಸಿದ ಶಾಲೆಗಳು ಒಂದೊಂದಾಗಿ ಮುಚ್ಚಿ ಹೋದವು ನಾನೂ ಜೊತೆಗಾರರೂ ಬಹಳ ಯೋಜನೆಗಳನ್ನು ಕಲ್ಪಿಸಿದ್ದೆವು, ಅವೆಲ್ಲ ಕಲ್ಪನೆಯಲ್ಲೇ ಉಳಿದವು ಚಂಪಾರಣ್ಯದೊಳಗಿನ ಗ್ರಾಮಗಳಲ್ಲಿ ಶಾಲೆ ಹಾಗು ಗ್ರಾಮ ಸುಧಾರಣೆಯ ಯೋಜನೆಗಳ ಜೊತೆಗೆ ಗೋರಕ್ಷಣ ಕಾರ್ಯವನ್ನೂ ನಾವು ಕೈಕೊಂಡಿದ್ದೆವು ಗೋಶಾಲೆ ಹಾಗು ಹಿಂದೀ ಭಾಷೆಯ ಪ್ರಚಾರದ ಕಾರ್ಯವನ್ನು ಮಾರವಾಡಿ ಬಂಧುಗಳು ವಹಿಸಿಕೊಂಡಿದ್ದರೆಂದು ಪ್ರಯಾಣದಲ್ಲಿ ನನಗೆ ತಿಳಿದು ಬಂತು ಬೇತಿಯಾದಲ್ಲಿ ಮಾರವಾಡಿ ಗೃಹಸ್ಥರೊಬ್ಬರು ತಮ್ಮ ಧರ್ಮಶಾಲೆಯಲ್ಲಿ ನನಗೆ ಆಶ್ರಯ ಕೊಟ್ಟಿದ್ದರು ತಾವು ಹೊರಡಿಸಿದ ಗೋಶಾಲೆಯ ಮಾಹಿತಿಯನ್ನೂ ಮಾಡಿಕೊಟ್ಟರು ಗೋರಕ್ಷಣದ ಕಾರತು ಈಗಿನ ವಿಚಾರಗಳೆಲ್ಲ ಆ ಕಾಲಕ್ಕೇ "ಘಟಿಸಲ್ಪಟ್ಟಿದ್ದವು ಜನಗಳ ಸಂತವೃದ್ಧಿ ದನಗಳ ಸುಧಾರಣೆ, ಎತ್ತುಗಳ ಕಡೆಯಿಂದ ಮಿತಿಯಾಗಿ ಕೆಲಸ ಕೊಳ್ಳುವದು ಗೋಶಾಲೆಯನ್ನು ಆದರ್ಶಭೂತವಾದ ದುಗ್ಧಾಲಯವಾಗಿ ಪರಿಣಮಿಸುವದು ಮುಂತಾದ ಪ್ರಕಾರಗಳೆಲ್ಲ ಗೋರಕ್ಷಣವೆಂಬ ಕಲ್ಪನೆಯಲ್ಲಿ ಸೇರುತ್ತವೆ ಈ ಕಾರ್ಯಕ್ಕೆ ತುಂಬಾ ನೆರವಾಗುತ್ತೇವಾಗಿ ಮಾರವಾಡಿ ಬಂಧುಗಳು ವಚನ ಕೊಟ್ಟಿದ್ದರು ಆದರೆ, ಚಂಪಾರಣ್ಯದಲ್ಲಿ ಸ್ಥಳಾಂತಿಕನಾಗಲು ನನಗೆ ಸಾಧ್ಯವಾಗಲಿಲ್ಲ ಆದರಿಂದ ಈ ಕಾರ್ಯವು ಅಪೂರ್ಣ ಸ್ಥಿತಿಯಲ್ಲೇ ಉಳಿಯಿತು ಬೇತಿಯಾ ಗ್ರಾಮದಲ್ಲಿ ಗೋಶಾಲೆಯು ಇನ್ನೂ ಇದೆ ಆದರೆ, ಅದು ಆದರ್ಶಭೂತ ದುಗ್ಧಾಲಯವಾಗಿ ಇನ್ನೂ ಪರಿಣಮಿಸಲಿಲ್ಲ ಅಲ್ಲಿಯ ಎತ್ತುಗಳ ಕಡೆಯಿಂದ ಇನ್ನೂ ಗೋಣು ಮುರಿಯುವಂತೆ ಕೆಲಸ ಮಾಡಿಸಿಕೊಳ್ಳುತ್ತಾರೆ. ಸ್ವತಃ ಹಿಂದುಗಳೆಂದು ಹೇಳಿಸಿಕೊಳ್ಳುವವರು ಎತ್ತುಗಳಿಗೆ ನಿರ್ದಯದಿಂದ ಹೊಡೆಯುತ್ತಾರೆ, ಧರ್ಮವನ್ನು ಅವರೇ ಬೋಧಿಸುತ್ತಾರೆ ಈ ಸಂಗತಿಯಿಂದ ಅನುದಿನ ನನಗೆ ಪಶ್ಚಾತ್ತಾಪವಾಗುತ್ತದೆ ಚಂಪಾರಣ್ಯಕ್ಕೆ ಹೋಗದ ಹೋದಾಗ ಅಪೂರ್ಣ ಉಳಿದು ಹೋದ ಕೆಲಸದ ನೆನಪಾಗಿ ನಾನು ...ರು ಬಿಡುತ್ತೇನೆ ಕೆಲಸವನ್ನು ಪೂರ್ಣಪಡಿಸದ ಬಗ್ಗೆ ಮಾರವಾಡಿ ಹಾಗು ಬಿಹಾರಿ ಬಂಧುಗಳಿಗೆ ಕೆಲಕೆಲವು ಬಾರಿ ದೂಷಿಸುತ್ತೇನೆ ಶಿಕ್ಷಣದ ಕೆಲಸವು ಇನ್ನೊಂದು ಬಗೆಯಿಂದ ಇತರ ಕಡೆಗಳಲ್ಲಿ ನಡೆದಿದೆ ಗೋಸೇವೆಯ ಕಾರ್ಯಕ್ಕೆ ಮಾತ್ರ ಸಾಕಷ್ಟು ಬೆಂಬಲವಾಗಿದ್ದಿಲ್ಲ ಆದರಿಂದ ಅತ್ತ ಪ್ರಗತಿಯಾಗಲನುಕೂಲವಾಗಲಿಲ್ಲ

ಅಹಮದಾಬಾದದಲ್ಲಿ ಖೇಡಾ ಜಿಲ್ಹೆಯೊಳಗಣ ಕೆಲಸದ ಸಂಬಂಧ ಚರ್ಚೆಯಾಗುತ್ತಲಿತ್ತು ಅಷ್ಟರೊಳಗೆ ಕೂಲಿಕಾರರ ಕೆಲಸವನ್ನು ನಾನು ಕೈಕೊಂಡಿದ್ದ ನನ್ನ ಸ್ಥಿತಿಯ ವಿಚಿತ್ರವಾಗಿತ್ತು ಕೂಲಿಕಾರರ ಪಕ್ಷವು ನನಗೆ ಪ್ರಬಲವಾಗಿ ತೋರಿತು ಶ್ರೀಮತಿ ಅನಸೂಯಾಬಾಯಿಯವರು ತಮ್ಮ ಸಹೋದರರೊಡನೆ ಕಾದಾಡಬೇಕಾಗಿತ್ತು ಕೂಲಿಕಾರ ಹಾಗು ಮಾಲೀಕರೊಳಗಿನ ಭಯಂಕರ ಯುದ್ಧದಲ್ಲಿ ಶ್ರೀ ಅಂಬಾಲಾಲ ಸಾರಾಭಾಯಿಯವರು ಪ್ರಮುಖ್ಯವಾಗಿ ದುಡಿಯುತ್ತಿದ್ದರು ಗಿರಣಿ ಮಾಲೀಕರೊಡನೆ ನನಗೆ ಸ್ನೇಹವಿತ್ತು ಅವರೊಡನೆ ಕಾದಾಡುವದು ನನಗೆ ಸ್ವಲ್ಪ ಕಠಿಣವಾಯಿತು ಅವರೊಡನೆ ಚರ್ಚೆ ನಡಿಸಿದೆನು ಕೂಲಿಕಾರರ ಬೇಡಿಕೆಗಳನ್ನು ವಿಚಾರಿಸುವದಕ್ಕಾಗಿ ಪಂಚರನ್ನು ನೇಮಿಸಲು ನಾನು ವಿನಂತಿ ಮಾಡಿಕೊಂಡೆನು ಆದರೆ ಕೂಲಿಕಾರ ಹಾಗು ಮಾಲೀಕರೊಳಗೆ ಪಂಚರ ಮಧ್ಯಸ್ಥಿಕೆ ಮಾಡುವಂಥ ಪ್ರಸಂಗವಿರುವದಾಗಿ ಮಾಲೀಕರು ಒಪ್ಪಲಿಲ್ಲ

ಕೂಲಿಕಾರರು ಸಂಪು ಮಾಡಬೇಕೆಂದು ನನ್ನ ಅಭಿಪ್ರಾಯವಾಯಿತು ಈ ಉಪದೇಶ ಮಾಡುವ ಪೂರ್ವದಲ್ಲಿ ಕೂಲಿಕಾರ ಹಾಗು ಅವರ ಮುಂದಾಳುಗಳೊಡನೆ ನಿಕಟ ಪರಿಚಯ ಮಾಡಿಕೊಂಡೆ ಸಂಪಿನ ಕರಾರುಗಳನ್ನು ಅವರಿಗೆ ತಿಳಿಸಿ ಹೇಳಿದೆನು ಅವು ಯಾವವೆಂದರೆ —

೧ ಶಾಂತತೆಯ ಭಂಗ ಮಾಡಲಾಗದು,

೨ ಕೆಲಸ ಮಾಡಹೋಗುವವರ ಮೇಲೆ ಬಲಾತ್ಕಾರ ಮಾಡಲಾಗದು

೩ ಕೂಲಿಕಾರರು ಭಿಕ್ಷಾನ್ನವನ್ನು ಕೊಳ್ಳಲಾಗದು,

೪ ಹರತಾಳವು ಬೇಕಷ್ಟು ದಿನಗಳ ವರೆಗೆ ನಡೆದರೂ ಎಲ್ಲರೂ ದೃಢ ಚಿತ್ತದಿಂದ ವರ್ತಿಸಬೇಕು, ಬಳಿಯಲ್ಲಿದ್ದ ಹಣ ತೀರಿದ ಬಳಿಕ, ಬೇರೆ ಕಡೆ ಕೂಲಿ ಕಷ್ಟ ಮಾಡಿ ಉದರತಾರ್ಥಕ್ಕೆ ಅಕ್ಕಷ್ಟು ವ್ಯವಸ್ಥೆ ಮಾಡಿಕೊಳ್ಳಬೇಕು

ಈ ಕರಾರುಗಳನ್ನು ಪ್ರಮುಖರು ಗ್ರಹಿಸಿ ಅವನ್ನು ಮನ್ನಿಸಿದರು ಕೂಲಿಕಾರರು ಸಭೆಸೇರಿದರು ತಮ್ಮ ಬೇಡಿಕೆಯು ಸ್ವೀಕಾರವಾಗುವ ವರೆಗೆ ಅಥವಾ ಆ ಬೇಡಿಕೆಯ ಯೋಗ್ಯಾಯೋಗ್ಯತೆಯ ತಪಾಸ ಮಾಡಲು ಪಂಚರನ್ನು ನೇಮಿಸುವ ತನಕ ಸಂಪು ಮಾಡತಕ್ಕದ್ದು ಈ ಸಂಪಿನ ಕಾಲಕ್ಕೆ ಶ್ರೀ ವಲ್ಲಭಭಾಯಿ ಹಾಗು ಶ್ರೀ ಬೇಂಕರರವರ ಮನಸ್ಸಿನ ಪರೀಕ್ಷೆಯು ನನಗಾಯಿತು ಶ್ರೀಮತಿ ಅನಸೂಯಾಬಾಯಿಯವರ ಪರಿಚಯವು ಈ ಮುಂಚೆಯೇ ಚಲೋ ರೀತಿಯಿಂದ ಆಗಿಹೋಗಿತ್ತು.

ದಿನಾ ನದಿ ದಂಡೆಯ ಮೇಲಿರುವ ಒಂದು ಮರದಡಿಗೆ ಸಂಪುಗಾರರು ಸಭೆಸೇರುತ್ತಿದ್ದರು ಸಾವಿರಾರು ಕೂಲಿಕಾರರು ಈ ಸಭೆಗಳಿಗೆ ಸೇರುತ್ತಿದ್ದರು ದಿನಾ ನಾನವರಿಗೆ ಅವರ ಪ್ರತಿಜ್ಞೆಯ ನೆನಪು ಮಾಡಿಕೊಡುತ್ತಿದ್ದೆ ಶಾಂತತಾಪಾಲನ ಹಾಗು ಸ್ವಾಭಿಮಾನ ರಕ್ಷಣ ಇವುಗಳ ಆವಶ್ಯಕತೆಯನ್ನು ನಾನವರಿಗೆ ತಿಳಿಸಿ ಹೇಳುತ್ತಿದ್ದೆ. ದೃಢ ನಿಶ್ಚಯದ ಧ್ವಜವನ್ನು ಕೊಂಡು ಪಟ್ಟಣದಲ್ಲಿ ಮೆರವಣಿಗೆ ಮಾಡಿ ಅವರು ಸಭೆಗೆ ಹೋಗುತ್ತಿದ್ದರು.

ಈ ಸಂಪು ೨೧ ದಿನಗಳ ತನಕ ನಡೆಯಿತು ಈ ಅವಧಿಯಲ್ಲಿ ಕಾಲಕಾಲಕ್ಕೆ ಮಾಲೀಕರೊಡನೆ ನಾನು ಚರ್ಚೆ ಮಾಡುತ್ತಿದ್ದೆ. ನ್ಯಾಯದಿಂದ ನಡೆಯಲು ಬಿನ್ನಹ ಮಾಡಿಕೊಳ್ಳುತ್ತಿದ್ದೆ "ನಮಗೂ ಸ್ವಾಭಿಮಾನವಿಲ್ಲವೇ? ಮಾಲೀಕ-ಕೂಲಿಕಾರರೆಂದರೆ ತಂದೆ-ಮಕ್ಕಳು. ಇಬ್ಬರೊಳಗೆ ಮೂರನೇಯವರು ಬಂದರೆ, ನಾವದನ್ನು ಸೈರಿಸುವದೆಂತು? ನಮ್ಮೊಳಗಿನ ಕಲಹವನ್ನು ಪರಿಹರಿಸಲಿಕ್ಕೆ ಪಂಚರೇಕೆ?" ಹೀಗೆ ಅವರು ನನಗೆ ಉತ್ತರ ಕೊಡುತ್ತಿದ್ದರು.

— ಕಾಶ್ಮೀರ ಪ್ರದೇಶದಲ್ಲಿ ಚಿನಾಬ ರಾವಿ ನದಿಗಳಿಗೆ ನೆರೆ ಬಂದು ಝೀಲಂ ಪಟ್ಟಣವು ಜಲಸಮಾಧಿಗೊಂಡಿದೆ ಅದು ರನಾಥಕ್ಕೆ ಹೋದ ನೂರಾರು ಮಂದಿ ಯಾತ್ರಿಕರು ದಿಕ್ಕುಗೆಟ್ಟವರಾಗಿದ್ದಾರೆ. ಕೆಲವರು ಬುಡಿದರೆಂದು ಸುದ್ದಿ. ಕಾಶ್ಮೀರ ಸಂಸ್ಥಾನವು ನಿರಾಶ್ರಿತರಿಗೆ ವ್ಯವಸ್ಥೆ ಮಾಡುತ್ತಿದೆ

ಜಾಹೀರ ನೋಟೀಸು.

ಅಂಕೋಲಾ ಶ್ರೀ ಶಾಂತಾದುರ್ಗಾ ದೇವಸ್ಥಾನದ ಈ ಕೆಳಗೆ ಸಹಿ ಮಾಡುವ ವೈವಾಟದಾರ ಮುಕ್ತೇಸರ ಜನರ ಕಡೆಯಿಂದಾ ತಿಳಿಸಲ್ಪಡುವದೇನಂದರೆ – ಸದ್ರಿ ದೇವಸ್ಥಾನಕ್ಕೆ ಕೊಡತಕ್ಕ ಗೇಣಿ ಸಭಾತಿಗೆ ಮುಸ್ತು ನಷ್ಟ ನೋಟು ವಗೈರೆ ಬಾಬತ್ತು ಭಂಡಾರಕ್ಕೆ ಸಲ್ಲತಕ್ಕ ದೇಣೆ ಘೇಣೆ ಯಾಬತ್ತು ವ್ಯವಹಾರ ಸದ್ರಿ ದೇವಸ್ಥಾನಕ್ಕೆ ವೈವಾಟ ನೋಡಲಿಕ್ಕೆ ದೇವಸ್ಥಾನ ಮುಕ್ತೇಸರ ಕಮಿಟಿಯಲ್ಲಿ ಬಹುಮತದಿಂದ ರಾ। ವಿಶ್ವನಾಥ ಮುಕೋಂಬಾರಾವ ನಾಡಕರ್ಣಿ ಇವರಿಗೆ ನೇಮಿಸಿರುವದರಿಂದಾ ಇನ್ನು ಮುಂದೆ ಅವರ ಕಡಿಗೇನೇ ಯಾವತ್ತೂ ವ್ಯವಹಾರ ನಡಿಸಿ ಭಂಡಾರದ ನಿ॥ ಅವರ ಪಾವ್ತಿ ಪಡಿಯತಕ್ಕದ್ದಿರುತ್ತದೆ ಇವರ ಶಿವಾಯ ಬೇರೆ ಯಾರ ಕಡಿಗೂ ವ್ಯವಹಾರ ನಡಿಸಿದ್ದಲ್ಲಿ ಅದಕ್ಕೆ ದೇವಸ್ಥಾನ ಭಂಡಾರ ಯಾವ ಕಾರಣದಿಂದಲೂ ಜವಾಬದಾರ ಇರಲಿಕ್ಕಿಲ್ಲ. ತಿಳಿಯುವದು

ಅಂಕೋಲಾ, ತಾರೀಕು ೨೫ ನೇ ಅಗಸ್ಟ ೧೯೨೮ ನೇ ಇಸ್ವಿ

ನೀಲಕಂಠ ದೇವರಾವ ನಾಡಕರ್ಣಿ.
ವಿಶ್ವನಾಥ ಚರ್ಡೆ ನಾಯಕ.
ಭಿಕ್ಕು ಶ್ರೀನಿವಾಸ ಮಹಾಲೇ.
ರಾಮರಾವ ಬಾಳಕೃಷ್ಣ ನಾಡಕರ್ಣಿ.
ಸುಬ್ರಾಯ ಸಾಂತಪ್ಪಾ ಶೆಟ್ಟಿ ಕಾಂಜನ.
ವಿಶ್ವನಾಥ ಮುಕೋಂಬಾರಾವ ನಾಡಕರ್ಣಿ.
ಚೆಅರಮನ್.

S. U. Narayanacharya & CO.
Chaukamba, BENARES CITY,

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಘರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಮಾಲಗಳು ಸಿಗುತ್ತವೆ. ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾದೀತು

ವಿಳಾಸ ಶಿರೋವಲಿ ನಾರಾಯಣಾಚಾರ್ಯ,
ಮುಕ್ತ್ತ ಕಂಪನಿ ಚೌಕಂಬಾ ಕಾಶೀಕ್ಷೇತ್ರ

Wanted:- Candidates for Telegraph and Station Master's Classes Full particulars and Railway Fare Certificate on 2 annas stamp Apply to Imperial Telegraph College, Nai Sarak, **Delhi.**

ಕೆಲ ಸಂಗತಿಗಳು.

— ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸಭಾಸದರಾದ ರಾ। ಕೇ ಟಿ ಭಾಷ್ಯಮ್‌ರವರು ಹಿಂದುಗಳ ವಾರಸ ಹಕ್ಕನ್ನು ಬಾಧಿಸುವ ಕಾಯಿದೆಯನ್ನು ಇದೇ ಬರುವ ದಸರೆಯ ಅಧಿವೇಶನದಲ್ಲಿ ಸೂಚಿಸುವವರಿದ್ದಾರೆ. ಅವಿಭಕ್ತ ಕುಟುಂಬದೊಳಗಿನ ವಿಧವೆಯರಿಗೆ ಆಸ್ತಿಯ ಹಕ್ಕಿನ ಕುರಿತು ಇರುವ ಪ್ರತಿಬಂಧಗಳೆಲ್ಲ ಈ ಕಾನೂನು ಮಂಜೂರಾದರೆ ದೂರವಾಗುವವು. ಜನ್ಮಾರಭ್ಯ ಊನಸ್ಥಿತಿಯಲ್ಲಿರುವವರಿಗೆ ಆಸ್ತಿಯಲ್ಲಿ ಹಕ್ಕು ಪ್ರಾಪ್ತವಾಗುವದು. ಅವಿಭಕ್ತ ಕುಟುಂಬದಲ್ಲಿರುವಾಗ ಕುಟುಂಬದ ಮಂಬರನು ಪರಧರ್ಮವನ್ನು ಸ್ವೀಕರಿಸಿದರೆ, ಕುಟುಂಬದ ಆಸ್ತಿಯಲ್ಲಿ ಅವನಿಗೆ ಹಕ್ಕು ಇಲ್ಲವೆಂಬ ... ಮುಂತಾದ ಕೆಲ ಮಾರ್ಗಗಳಿವೆ. ದಿಲ್ಲಿಯ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿಯೂ ರಾ। ಹರವಿಲಾಸ ಶಾರದಾರವರು ವಿಧವೆಯರಿಗೆ ಆಸ್ತಿಯ ಆಕಳಿಕೆಯ ಕುರಿತು ಇರುವ ಪ್ರತಿಬಂಧಗಳನ್ನು ದೂರ ಪಡಿಸಬೇಕಾಗಿ ಸೂಚಿಸುವವರಿದ್ದಾರೆ. ಸ್ತ್ರೀಸ್ವಾತಂತ್ರ್ಯದ ಗದ್ದಲವೇ ದೊಡ್ಡದಾಗಿ ಹೋಗಿದೆ

— ಜರ್ಮನಿಯ ಫ್ರಾಲ್ ಸ್ಟೇನ್ ಎಂಬಲ್ಲಿ ದೊಡ್ಡದೊಂದು ಮುದ್ರಣಾಲಯವಿದೆ ಅಲ್ಲಿ ಹಲವು ಪತ್ರಿಕೆಗಳು ಪ್ರಕಟಿಸಲ್ಪಡುತ್ತವೆ ೩೦೦ ಮಂದಿ ಸಂಪಾದಕರಿದ್ದಾರೆ ಕಾರಕೂನ, ಮೊಳೆ ಜೋಡಿಸುವವರೂ ಅವರೂ ಕೂಡಿ ಎಂಟುವರೆ ಸಾವಿರಕ್ಕೆ ಮಿಕ್ಕಿ ಜನರಿದ್ದಾರೆ. ಈ ಛಾಪಖಾನೆಯಲ್ಲಿ ದಿನಾ ೧೬ ಭಾಷೆಗಳ ಕೆಲಸ ನಡೆಯುತ್ತದೆ ತಿಂಗಳಿಗೆ ೧ ಲಕ್ಷ ರೂಪಾಯಿ ಟಪಾಲ ಖರ್ಚಿಗೆ ಬೇಕು. ೧ ತಾಸಿಗೆ ಈ ಛಾಪಖಾನೆಯಲ್ಲಿ ೧೬ ಪುಟದ ವೃತ್ತಪತ್ರಿಕೆಯ ೬೦ ಲಕ್ಷ ಪ್ರತಿಗಳು ಮುದ್ರಿಸಲ್ಪಡುತ್ತವೆ. ವರ್ತಮಾನಪತ್ರಿಕೆಗಳ ಹೊರತು ಇತರ ಛಾಪು ಕಾಗದಗಳು ದಿನಾ ೩॥ ಕೋಟಿ ಅಚ್ಚುಗುತ್ತಿವೆ. ಈ ಛಾಪಖಾನೆಯವರು ೩ ವಿಮಾನಗಳನ್ನು ಇಟ್ಟಿದ್ದಾರೆ. ಈ ತನಕ ಇಡೀ ಯುರೋಪ ಖಂಡದಲ್ಲಿ ಇದಕ್ಕೆ ಸಮಾನವಾದ ಅಚ್ಚುಕೂಟ ವಿಲ್ಲೆಂದು ಹೇಳುತ್ತಾರೆ.

— ಬುಲವಾಯೋಳಗಿನ ಕೆಲಸಿಗರು ಒಂದು ಠರಾವು ಮಾಡಿದ್ದಾರೆ: ಮನೆ ಮನೆಗೆ ಹೋಗಿ ತಲೆ ಬೋಳಿಸಬಾರದು, ಕ್ಷೌರ ಮಾಡಿಕೊಳ್ಳುವವರು ತಮ್ಮಲ್ಲಿಗೇ ಬರಬೇಕೆಂದು, ಕಾಲುಗುರುಗಳನ್ನು ತೆಗೆಯಲಾಗದು, ಯಾವಕ್ಕೆ ಮುಟ್ಟಬಂತಾಗುತ್ತದೆ; ಇದು ಅಪಮಾನಕರವು

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಆರ್ಚರ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ "ಆರ್ಚರ" ಎಂಬ ಗುರುತಿರುವದು.)

ಚನ್ನಾಗಿ ಪೆಟ್ಟಿಗೆಯಲ್ಲಿರಿಸಿ ರೇಲ್ವೆ ಚಾರ್ಜು ತುಂಬಿ ನಿಮ್ಮೂರ ಸ್ಟೇಶನ ಮೇಲೆ

೮೫ ರೂ. ೮ ಆ. ಗೆ ಮಾತ್ರ.

ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್ಸ, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ, ಮಡಗಾರ್ಡ್ಸ, ಸೊಗಸಾದ ಸ್ಪ್ರಿಂಗಸೀಟ, ರಬರ ಪ್ಯಾಡಲ್ಸ, ಲೂಕಸ್ಸಿನ "ಸಾಧ ಫಾಯಿಂಡರ" ದೀಪ, ಉತ್ತಮ ಘಂಟಿ, ಡನ್‌ಲಾಪ್ ಸ್ಟೀಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತದೆ. ಆರ್ಡರಿನ ಕೂಡ ರೂ. ೨೫ ಮುಂಗಡ. ಉಳಿದ ಹಣವು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್ ಎಂಡ್ ಮೋಟರ ಕಂಪನಿ,

ಮುಂಬಯಿ— ಹಾರ್ನಬೀ ರೋಡ.

ಪುಣೆ— ಅರ್ಸೆನಲ್ ರೋಡ.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಪ್ರಜಾಮಂತ್ರಿಗಳು ಶ್ರೀ। ಎ. ರಂಗನಾಥಂ ಅವರ ಮುನ್ನುಡಿ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ। ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦ ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ, ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀ ತುಳಸೀದಾಸ ರಾಮಾಯಣ ಕಾರ್ಯಾಲಯ

(ಕಾ) ೧೬೨ ಮಾಮುಲುಪೇಟೆ, ಆನೇ ಬೀದಿ,

ಬೆಂಗಳೂರು ಸಿಟಿ.

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ವಿ. ಆರ್. ಶ್ರೀನಿವಾಸಯ್ಯಂಗಾರ್,

ಗೌರವ ಕಾರ್ಯದರ್ಶಿ,

ವಿಧವಾವಿವಾಹ ಸಹಾಯಕ ಸಭಾ,

ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.

ಇವರಿಗೆ ಬರೆದು ತಿಳಿದುಕೊಳ್ಳಿರಿ.

// ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ- ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ, ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಿ

ಈ ಮಧುವು ಮಹೌಷಧಿಯಾಗಿದ್ದು ಬಹಳ ಸೀಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಶಕ್ತಿ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿ ಹೋಗಿ ದಾಹವಾದೇ ಪಡೋಸಕಳ್ಳತನ ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾಮಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅಜಲೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ, ಇದರ ಅನುಭವವು ಕೂಡಲೇ ದಿವಸವೇ ಬರುವದು. ಕೌಚ ಸಾಧ ಆಗುವದು. ಇದರಲ್ಲಿ ಎಷ್ಟೋ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧। ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಕೊಡು ಬೇಕಾದದ್ದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

झंडूचें

द्राक्षासव

– मृद्वकारिष्ट –
शार्ङ्गधर म अ १०

रामबाण औषध

सर्दि थांबविणारें,
भूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचिकर

किंमत एक रत्तलास १॥ रुपये.
क्याटलाग मागवा

झंडु फार्मास्युटिकल वर्क्स लिमिटेड
मुंबई नं: १४

ऐजंट— मेसर्स पंडित आणी कंपनी,
तीर्थहळ्ळी

सिर्सि एजंट- एस्. एल्. धाकप्पा आणि ब्रदर

ಹಿಂದುಸ್ಥಾನದಲ್ಲೆಲ್ಲಾ ಅತ್ಯಂತ ಅಗ್ರವಾದ
'ನೆಶನಲ್, ಇನ್‌ಶೂರನ್ಸ ಕಂಪನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ.

ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೋಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬಹುಮಾನ ಕೊಟ್ಟಿರುವೆವು.

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P. D. Churi,**
ಬಿ. ಸಿ. ಸಿರಾಳಕೊಪ್ಪ, *Branch Secretary,*
ಲೋಖಂಡಿ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY.

ರೇಶ್ಮೆ ವಸ್ತ್ರ ಇನಾಮ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ಪಸಾದ, ರೇಶ್ಮೆ ಸೀರೆ, ಪೀತಾಂಬರ, ಮೊಗುಟ, ರವಕೆ ಖಣ, ಎಲವಸ್ತ್ರ ಪೇಟಾ, ಕಾಶ್ಮೀರ್ ಮತ್ತು ಕಾನಪುರ್ ಶಾಲು ಧಾವಳಿ, ನಾರ್ಮದಿ, ರುದ್ರಾಕ್ಷಿ, ಸ್ಫಟಿಕ ಸರ, ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚಕರ್ಪೂರ, ಕೇಶರಿ ಶಿಲಾಜಿತು, ಅತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವದು ಇಪ್ಪತ್ತೈದು ರೂಪಾಯಿ ಕ್ರಯದ ಮಾಲ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮವಾಗಿ ದೊರೆಯುವದು.

ನಮ್ಮ ಪತ್ತೆ.—
ಕಾಪು ವಿಠ್ಠ ನಾಥರಾವ್ ಎಂಡ್ ಬ್ರದರ್ಸ,
ಪರ್ಗಾಘಾಟ, ಶ್ರೀ ಕಾಶೀ ಯು. ಪಿ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಸೇರಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾರೆವು.

ಬುಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಆಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ — ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜಿಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೀ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯನಷ್ಟ ಶಿಳವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪಮಾಪ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ ಪಿತ್ತವಿಕಾರ ನಿದ್ರೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಶಕ್ತಿ ಆಗುತದೆ. ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖಾನುಭವಸುಖವನ್ನು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಅದಿ) ಪನಸ್ಪತಿಗಳು ಮತು ಭಷ್ಟಿಸು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ ಓದಿಕೊಳ್ಳಿರಿ.

ಮುಂಜಾನೆ ೨ ತೊಲೆಯು ೧ ಪಡಿ, ರಾತ್ರಿಯ ಭೋಜನವಾದ ನಂತರ ೨ ತೊಲೆಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫॥ ರೂ ೩ ಡಬ್ಬಿಗೆ ೧೫। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸಿ. ಮು. ಪೋ ಮಿರಜ.**



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು,
ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯುಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದ್ದಲ್ಲಿ ಸಿಗತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

REG. NO. B. 1270

MONDAY, SEPTEMBER 17TH 1923.

ವರ್ಷ ೧೨

ಸಂಚಿಕೆ ೪೯

ಕಾನಡಾವೃತ್ತ.

THE KANARA NEWS.

[illegible]

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ರಾಥಮಿಕ (೧೧ ಎಮ್ ಅಕ್ಷರ) ೫ ಸಾಲುಗಳವರೆಗೆ ರೂ. 1-0-
ಆ ನಂತರ ಪ್ರತಿಸಾಲಿಗೆ 0-2-0.
ಹೆಚ್ಚಿಂಗಳ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುತ್ತವೆ.
ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ನಿಶ್ಚಯಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೭ ಮಾಹೆ ಸಪ್ಟಂಬರ ಸನ್ ೧೯೨೩ನೇ ಇಸವಿ.)—

ಹೊಸ ಅಂಗಡಿ! ಹೊಸ ಹೊಸ ವಸ್ತ್ರಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ತಹಾದರಿಯ ಸಾಮಾನುಗಳು ಸಿಗುತ್ತವೆ:- ಕಬ್ಬಿಣ ಪಾತ್ರೆಗಳು, ವ್ಯಾಪಾರ ಉಪಯೋಗದ ಬೋಲ್ಟುಗಳು, ಪಿನ್ ಪೋಕರ, ಪಿಸ್ತೂಲ ಪೋಕರ ಸಿಗುತ್ತವೆ; ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಲಾಟಣುಗಳನ್ನು ಇಲ್ಲಿಯೇ ಕೊಂಡುಕೊಳ್ಳಿರಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತವೆ ! ಎಲ್ಲ ಸಾಮಾನು ಅಗ್ಗ ! ಕಿರಕೋಳ ವ್ಯಾಪಾರಸ್ಥರು ರೋಕ ಹಣ ಕೊಟ್ಟು ಕೊಂಡರೆ, ಸವಲತ್ತು ಸಿಗುತ್ತೆ, ಖಮ್ಮ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ವಾತೊಂಡೆ,

ಅಯರ್ನ ಮರ್ಚಂಟ,

ಕುಮಟಾ. (ಉ. ಕನಡ)

ಪ್ರೆಸಿಡೆನ್ಸಿ ಪ್ರಾವಿಡೆಂಟ ಎಂಡ್ ಜನರಲ್ ಇನ್ಶುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ:- ಅನ್ಸೂಕ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಪೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ.

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲವೂ ಅನಿಶ್ಚಿತವಿದ್ದರೂ, ಸಾವು ಮಾತ್ರ ಖಂಡಿತವಾಗಿ ಬಂದೇ ಬರುವದು! ಅದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ. ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೋಕನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನಿಸಲೇಬೇಕು. ವಿಮೆ ಕಂಪನಿಗಳು ಅನೇಕ ಇರುವವು; ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ. ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೫ ವರ್ಷಗಳಲ್ಲಿ ೨೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೨ ರೂಪಾಯಿಗಳಂತೆ ತುಂಬಿ ೧೦ ವರ್ಷ ಮುದ್ದತಿನ ವಿಶೇಷ ಸವಲತಿನ ಸ್ಪೇಶಲ್ ಪೋಲಿಸಿಗಳನ್ನು ಹೊಂದಲು ಬರುತ್ತದೆ! ಕಂಪನಿಯಲ್ಲಿ ಹೆಂಗಸರಿಗೂ ವಿಮೆ ಇಳಿಸಲು ಬರುತ್ತದೆ. ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಇನ್ಸ್‌ಪೆಕ್ಟರರ ಮಿ| ಎನ್. ಟಿ. ನಾಯ್ಕ ಆಫೀಸ-ಅಂಕೋಲಾ, ಜಿಲ್ಲಾ ಉ. ಕನ್ನಡ, ಇವರ ಕಡೆಗೆ ಬರೆದುಕೊಳ್ಳಬೇಕು.



ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಚವತಿಹಬ್ಬದ ಲಾಗಾಯ್ತು

ದೀಪವಾಳಿಹಬ್ಬದ

ವರೆಗೆ ಮಾತ್ರ

ನಮ್ಮ ಅಂದವಾದ

ಸೀಸೆ ಕಟ್ಟಿಗೆಯ ಮಡಚಲಿಕ್ಕಾಗುಂತ

ದೇವರ ಮಂಟಪಗಳ

ಕಿಮ್ಮತ್ತು ಕಡಿಮೆ ಮಾಡಿರುತ್ತದೆ.

ನಮ್ಮ ವಿಳಾಸ:—

ದಿ ನೊರ್ಥ ಕೆನರಾ ಟ್ರೇಡಿಂಗ ಕಂಪನಿ,

ಶಾಂತಿ ಭುವನ, ಕಾರವಾರ.

“ ಔಷಧ ಸೀಸೆಗಳಿಗಿಂತ ಬರೀ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು! ”

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ “ ಆರೋಗ್ಯ ಚಂದ್ರಿಕೆ ” ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯ ದೃಢಕಾಯಕರಾಗಿ ಜೀವಿಸತಕ್ಕ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಅಂಚೆ ದಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ಕಲಬುರ್ಗಿಯ ೧೪ ನೇ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ

ಶ್ರೀ। ಶ್ರೀಕಂಠಯ್ಯನವರ ಭಾಷಣ.

ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ತುಂಬಿದ ಈ ಮಹಾಸಭೆಯಲ್ಲಿ ಅಗ್ರಾಸನಕ್ಕೆ ಅರ್ಹನಲ್ಲದ ನನಗೆ ತಾವು ಕೊಟ್ಟಿರತಕ್ಕ ಮರ್ಯಾದೆಗೆ ನನ್ನ ತಲೆಯನ್ನು ತಗ್ಗಿಸಬೇಕಾಗಿದೆ. ತಮ್ಮಲ್ಲಿ ಹಲವರು ದೇಶದ ಏಳಿಗೆಗಾಗಿಯೂ ಭಾಷೆಯ ಅಭಿವೃದ್ಧಿಗಾಗಿಯೂ ಬಹಳವಾಗಿ ಕೆಲಸಮಾಡುತ್ತೀರಿ. ನಾನು ಮಾಡಿರುವದು ಅತ್ಯಲ್ಪವಾಗಿರುತ್ತದೆ. ಈಗಲೂ ನನಗೆ ಜ್ಞಾಪಕವಿದೆ: ಮದರಾಸಿನಲ್ಲಿ ವಿದ್ಯಾರ್ಥಿಗಳಿದ್ದಾಗ ನನ್ನ ಸ್ನೇಹಿತರೂ ನಾನೂ ಸಾಯಂಕಾಲದ ಸಮುದ್ರತೀರದಲ್ಲಿ ಮರಳಿನ ಮೇಲೆ ಕುಳಿತು ಸಮಾಜದ ಮತ್ತು ಸಾಹಿತ್ಯ ವಿಷಯಗಳನ್ನು ಚರ್ಚಿಸುತ್ತ ಹೀಗೆ ಮಾಡಬೇಕು, ಕನ್ನಡ ನಾಡಿಗೆ, ಕನ್ನಡ ನುಡಿಗೆ, ನಮ್ಮ ಬಾಳಿಕೆಯನ್ನೇ ಕಾಣಿಕೆಯಾಗಿ ಒಪ್ಪಿಸಿಬಿಡಬೇಕು ಎಂಬ ಪೌರುಷವನ್ನು ಕೊಚ್ಚಿಕೊಳ್ಳುತ್ತಿದ್ದೆವು. ಕನ್ನಡ ಕಾವ್ಯಗಳನ್ನೆಲ್ಲ ಓದಬೇಕು, ಜನರಲ್ಲಿ ಬೆಳಕಿಗೆ ತರಬೇಕು, ಉಪಾಧ್ಯಾಯನಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮವನ್ನೂ ಬಿತ್ತಬೇಕು, ಜನಸಾಮಾನ್ಯಕ್ಕೆ ತಿಳಿವಳಿಕೆಯೂ, ಹೊಸ ನಡವಳಿಕೆಯೂ ಹುಟ್ಟುವಂತೆ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಬರೆಯಬೇಕು. ಷೇಕ್ಸ್‌ಪಿಯರನ ನಾಟಕಗಳನ್ನೂ ಗ್ರೀಕರ ವಿಷಾದಾಂತ ನಾಟಕಗಳನ್ನೂ ಪ್ಲೇಟೋವಿನ ಸಂವಾದಗಳನ್ನೂ ಕಾರ್ಲೈಲನ ಧೀರೋಪದೇಶಗಳನ್ನೂ ಕನ್ನಡಕ್ಕೆ ತರಬೇಕು, ಎಂಬಿವೇ ಮೊದಲಾದ ಕವಿಗನಸುಗಳನ್ನು ಕಂಡ ಆ ಯುವಕನ ಆಶೆ ಎಷ್ಟು! ಉದ್ಯೋಗದ ನಿರ್ಬಂಧನೆಗಳಿಗೂ, ಸಂಸಾರದ ಮನಃಕ್ಲೇಶಗಳಿಗೂ ಪ್ರಕೃತಿ ಧರ್ಮವಾದ ಅಸಡ್ಡೆ ಸೋಮಾರಿತನಗಳಿಗೂ ತುತ್ತಾಗಿ, ಇದ್ದ ಬಿದ್ದ ಅಲ್ಪ ಸ್ವಲ್ಪ ಶಕ್ತಿಯೂ ಕುಂದಿಹೋಗಿ, ಎಣಿಸುವದಕ್ಕೆ ಹೋದರೆ ಈಗ ನಡಿಸಿರುವದೆಷ್ಟು! ದೇಶಸೇವೆ, ಭಾಷಾಸೇವೆ, ಇವುಗಳ ಪುಣ್ಯ ಬಯಸುವವರಿಗೆಲ್ಲ ದೊರಕದೆನ್ನುವದು ಚೆನ್ನಾಗಿ ಅನುಭವಕ್ಕೆ ಬಂದ ಹತಾಶನಿಗೆ ಈ ದಿನ ತಾವು ತೋರಿಸಿರುವ ವಿಶ್ವಾಸಕ್ಕೆ ಒಂದು ಕಡೆ ನಾನು ಹೇಳಿದಂತೆ ತಲೆಯನ್ನು ತಗ್ಗಿಸಬೇಕಾಗಿದೆ. ಆದರೆ ಮತ್ತೊಂದು ಕಡೆ ತಮ್ಮಂಥ ಮಹಜನಸಂಘದಲ್ಲಿ ನಾನೂ ಒಬ್ಬನು ಸೇರಿ ದೀಕ್ಷೆಕೊಂಡದ್ದಕ್ಕಾಗಿ ಹೆಮ್ಮೆಯೂ ಉತ್ಸಾಹದ ಪುನರುತ್ಥಾನವೂ ಸ್ವಲ್ಪ ತಲೆದೋರುತ್ತವೆ. ಈ ಜೀವದಾನಕ್ಕೆ ತಮ್ಮಗಳಿಗೆಲ್ಲ ನಾನು ಬಹಳ ಕೃತಜ್ಞನಾಗಿದ್ದೇನೆ.

೨ ಮಹಾಶಯರೆ, ಒಂದು ದೇಶದ ಶ್ರೇಯೋಭಿವೃದ್ಧಿಗೆ ಅವಶ್ಯಕವಾದ ಅನೇಕ ಮುಖ್ಯವಾದ ಸಾಧನಗಳಲ್ಲಿ ಸಾಹಿತ್ಯ ಕೃಷಿ ಒಂದಾಗಿರುತ್ತದೆ. ಈ ಸಾಹಿತ್ಯ ಪರಿಷತ್ತಿನಲ್ಲಿ ಮುಖ್ಯವಾಗಿ ನಾವು ವಿಚಾರಮಾಡತಕ್ಕದ್ದು ಸಾಹಿತ್ಯವಿಷಯವೇ ಆಗಿದೆ. ಒಳ್ಳೇ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ, ನಿಷ್ಕಲ್ಮಷವಾದ ಆನಂದವೂ ಸತ್ಪ್ರೇರಣೆಯೂ ಸಮಾಜದ ಪುನರ್ನಿರ್ಮಾಣದ ಕಾರ್ಯದಲ್ಲಿ ಐಕ್ಯಮತ್ಯವೂ ಬಲವಾಗಿ ಬೇರೂರುತ್ತವೆ. ಅಂಥ ಸಾಹಿತ್ಯ, ಅಂಥ ಪುಸ್ತಕ ಭಾಂಡಾರ ನಮ್ಮಲ್ಲಿ ಎಷ್ಟಿವೆ? ಕನ್ನಡನಾಡಿನಲ್ಲಿ ಅನೇಕ ಜನರು-ಜನಸಾಮಾನ್ಯರೂ ಗಂಡಸರೂ ಹೆಂಗಸರೂ ಮಕ್ಕಳೂ ಈಗ ಓದುಬರಹವನ್ನು ಕಲಿಯುತ್ತಿದ್ದಾರೆ! ಮುಂದೆ ಇನ್ನು ಹೆಚ್ಚಾಗಿ ಕಲಿಯುವವರಿದ್ದಾರೆ. ತಮ್ಮೆಲ್ಲರ ಧ್ಯೇಯೋದ್ದೇಶವು, ದೇಶದಲ್ಲಿ ಸರ್ವರೂ ಅಕ್ಷರಸ್ಥರಾಗಿ ವಿದ್ಯಾರ್ಥಿಗಳಾಗಿ ಜ್ಞಾನಕಾಮರಾಗಿ ಸತ್ಪ್ರಜೆಗಳಾಗಿ ದೊಡ್ಡ ಬಾಳನ್ನು ಬದುಕಬೇಕೆಂಬುದೇ ಆಗಿದೆ. ಈ ಸಾಮಾನ್ಯರಾದ ಗಂಡಸರೂ ಹೆಂಗಸರೂ ಮಕ್ಕಳಿಗೆಲ್ಲ ವಿರಾಮಕಾಲವನ್ನು ಸದ್ವಿನಿಯೋಗ ಮಾಡುವದಕ್ಕಾಗಿ ಸುಲಭವಾದ, ಪ್ರಯೋಜನಕಾರಿಯಾದ, ರುಚಿಯಾದ, ಹರ್ಷಜನಕವಾದ, ಸದ್ಬೋಧಕವಾದ ಪುಸ್ತಕಗಳನ್ನು ಎಷ್ಟು ಮಟ್ಟಿಗೆ ಒದಗಿಸಿದ್ದೀರಿ? ಬರೆಯುವವರು ಕಡಿಮೆಯಾದರೆ ಓದುವವರು ಇನ್ನೂ ಕಡಿಮೆ. ಒಕ್ಕಡೆ ನಮ್ಮ ಪುಸ್ತಕಗಳನ್ನು ಕೇಳುವವರು ಇಲ್ಲವೆಂಬ ಕೊರತೆ, ಒಕ್ಕಡೆ ನಮ್ಮ ಹುಡುಗರಿಗೆ ಓದುವದಕ್ಕೆ ಸರಿಯಾದ ಪುಸ್ತಕಗಳಿಲ್ಲೆಂಬ ದೂರು. ಇದರ ಮೇಲೆ ಇಂಗ್ಲಿಷಿನ ಮೇಲೆ ವೈರ, ವೈರವಿಲ್ಲದಿದ್ದರೂ ಅಸಮಾಧಾನ ಅಸಡ್ಡೆ. ಹೋಗಲಿ! ಇಂಗ್ಲಿಷನ್ನು ಕಲಿತವನು ಕಾಣಬಹುದಾದ, ಹೊಕ್ಕು ಬಳಸಬಹುದಾದ ಸಾಹಿತ್ಯದ ರಮಣೀಯವಾದ ಉದ್ಯಾನಗಳನ್ನು ಕನ್ನಡ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅದರ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚೆಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಇಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಗಳಿಗೆ	,,	೨—೧೦—೦
ಅಂಚವೆಚ್ಚ	,,	೦—೧೨—೦

ನಿತ್ಯ ಅಂಗಡಿಕಾರರಿಂದ ತರಿಸಿಕೊಳ್ಳಿರಿ;

೧/೨ ಔಂಸಿಗೆ	ರೂ	೨—೦—೦
೧/೪ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು. ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ "ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆಲ್ಕೋಹೋಲ ಇಲ್ಲವೆ ಮದ್ಯವು ಸೇರಿರುತ್ತದೆ. ಆದರೆ ಈ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No. 2.**

...ನ್ನು ಬಿಟ್ಟವನು ಕಾಣುವಂತೆ, ತೂಕಕ್ಕೆ ಬಳಸುವಂ... ನಡೆಯುತ್ತೀರಾ? ಇಲ್ಲವಾದರೆ, ಬಂಗಾರದ ಬೆಲೆಯೂ ಇಲ್ಲದೆ, ಹಿತ್ತಾಳೆಯ ಕಡೆಗೂ ಇಲ್ಲದೆ, ...ಯೂ ಶೆಟ್ಟಿ, ಹೇಗೂ ಶೆಟ್ಟಿ, ಎಂಬ ಸ್ಥಿತಿಗೆ ನಮ್ಮ ಮಕ್ಕಳನ್ನು ತಳ್ಳಿದಹಾಗೆ ಆಗುವದಿಲ್ಲವೇ?

೩. ಹಳ್ಳೀಯರು, ತಾವು ಕೇಳಬಹುದು. ಇದೇನು, ಒಳ್ಳೆಯ ಸಾಹಿತ್ಯವೇ ನಮ್ಮಲ್ಲಿಲ್ಲವೇ? ಪುರಾತನರ ಪ್ರೌಢಸಾಹಿತ್ಯ, ಮಧ್ಯಕಾಲದವರ ಸುಲಭ ಸಾಹಿತ್ಯ, ನೂತನವರರಂಜನ ಸಾಹಿತ್ಯ ಇವು ನಮ್ಮ ಜ್ಞಾನದಾನವ್ರತಕ್ಕೆ ಸಾಲದೆ?—ಸಾಲದು, ಕ್ಷಮಿಸಬೇಕು, ಸಾಲದು. ಹೆಮ್ಮೆಯಿಂದ ತಮ್ಮ ಬೆನ್ನನ್ನು ತಾವು ತಟ್ಟಿಕೊಳ್ಳುವವರು ಬೇಕಾದಷ್ಟು ಹೇಳಿಕೊಳ್ಳಬಹುದು. ಹಾಗೆ ಬಂಟ ಕೊಚ್ಚಿಕೊಳ್ಳುವದೇ ದೇಶಾಭಿಮಾನವೆಂದೂ, ಹಾಗೆ ಕೊಂಗಳವವರು ದೇಶದ್ರೋಹಿಗಳೆಂದೂ ಭಾವಿಸಿಕೊಳ್ಳಬಹುದು. ಆದರೆ ಅನೇಕ ಉತ್ತಮ ಸಾಹಿತ್ಯಗಳನ್ನು ಪರ್ಯಾಲೋಚನಮಾಡಿರುವ, ವಿಶ್ವಪ್ರಪಂಚದ ಕವಿಕುಲಸುಧಾಕರರ ದಿವ್ಯ ಕಾವ್ಯತೀರ್ಥಗಳಲ್ಲಿ ಹೃದಯವನ್ನು ತೊಳೆದಿರುವ ವಿಮರ್ಶೆಯ ತಾರತಮ್ಯ ಜ್ಞಾನವಿಲ್ಲದೆ ಅತಿಶ್ಲಾಘನೆಗೆ ಮನಸೋತು ಒಪ್ಪಲಾರದ ನಿರ್ದಾಕ್ಷಿಣ್ಯವಾಗಿ ನಮ್ಮ ಸಾಹಿತ್ಯವನ್ನು ಕುಲುಮೆಗೆ ಹಾಕಿ ಒರೆಗಲ್ಲಿನಲ್ಲಿ ಉಜ್ಜಿ ಪರೀಕ್ಷಿಸಮಾಡುವದು ಕರ್ತವ್ಯವೆಂದು ನಂಬಿರುವ ರಸಜ್ಞರು ಯಾರೂ ಆ ರೀತಿ ಭಾವಿಸರು. ತಾರತಮ್ಯ ಜ್ಞಾನವುಳ್ಳವರು ಯಾರು ತಾನೇ ಕೀಳನ್ನು ಮೇಲೆಂದೂ, ಸಾಮಾನ್ಯವಾದದ್ದನ್ನು ಉತ್ಕೃಷ್ಟವೆಂದೂ, ಕಳಂಕಮಿಶ್ರವಾದದ್ದನ್ನು ಪರಿಶುದ್ಧವೆಂದೂ ಅರ್ಥಶೂನ್ಯವಾದ ಶಬ್ದಚಾತುರ್ಯವನ್ನು ಪೂರ್ಣಸಂಸ್ಕೃತವೆಂದೂ ಪೊಳ್ಳು ಹೇಳಲಾದೀತು! ಆದರಲ್ಲಿಯೂ ತಮ್ಮಂಥಹ ಮಹಾಪರಿಷತ್ತಿನ ಸಭಿಕರು ನಿಷ್ಪಕ್ಷಪಾತವಾದ ವಿಮರ್ಶೆಯನ್ನು ಕೈಬಿಟ್ಟರೆ ಅದಕ್ಕೆ ಮತ್ತೆಲ್ಲಿ ಆಶ್ರಯ ದೊರೆತೀತು?

೪. ನವಜೀವನದಲ್ಲಿ ಕಾಲಿಡುತ್ತಿರುವ ನವದರ್ಶನವನ್ನು ಕೈಕೊಳ್ಳುತ್ತಿರುವ ನಮ್ಮ ಜನಕ್ಕೆ ಹಳೆಗನ್ನಡದ ಮತ್ತು ಬಹುಮಟ್ಟಿಗೆ ನಡುಗನ್ನಡದ ಕಾವ್ಯರಾಶಿಯಿಂದ ಅಷ್ಟು ಹೆಚ್ಚಾದ ಪ್ರಯೋಜನವಾಗಲಾರದೆಂದು ನಾನು ಶಂಕಿಸುತ್ತೇನೆ. ಇಷ್ಟುಸಮೀಪ ಅಷ್ಟು ಪುರಾತನ ಪ್ರಪಂಚ ಸಾಹಿತ್ಯಭಾಷೆ, ಕಷ್ಟ, ಹಳೆಗನ್ನಡ ಹಾಗಿರಲಿ; ಅನಾವಶ್ಯಕವಾದ ಕನ್ನಡಕ್ಕೆ ಹೊಂದುವ ಪುಷ್ಟಿಯನ್ನಾಗಲೀ, ಶಕ್ತಿಯನ್ನಾಗಲೀ, ಸೌಂದರ್ಯವನ್ನಾಗಲಿ ಕೊಡದ ನಿಷ್ಪ್ರಯೋಜಕವಾದ ಪುಸ್ತಕದ ಸಂಸ್ಕೃತ ಶಬ್ದಗಳಿಂದ ತುಂಬಿಕೊಂಡಿರುವ ನೀಗೆಯ ಮೇಲೆ. ಶೈಲಿ ಸಾಧಾರಣವಾಗಿ ಕೃತಕ, ನೀರಸ;—ಇನ್ನೂ ರಕ್ಕೆ ಬಲಿಯದೆ ಕುಪ್ಪಳಿಸುವ ಹಕ್ಕಿಯ ಮರಿಯಹಾಗೆ ಸಣ್ಣ ಪದ್ಯಗಳಲ್ಲಿ ತೊಡರಿಕೊಂಡು ಕತ್ತರಿಸಿದೀಳುವ ಸಣ್ಣ ಪುಟ್ಟ ಕಾವ್ಯಗಳು; ಕೆಲವು ನಿರುಕಾದ ಅಡುಪಡಮಾತಿನ ಮಹತ್ವವನ್ನು ಅಷ್ಟೇನು ಮೀರಿದವಲ್ಲ, ದಾಕ್ಷರಚನೆ; ಮಾನವನ ವಿಶಾಲವಾದ ಮನೋವೃತ್ತಿಗಳನ್ನು ಛಾಯೆಯಂತೆ ಅನುಸರಿಸುವ ಪ್ರತಿಭಾಶಕವಾಪ ಉದಾತ್ತವಾಣಿಯಲ್ಲ. ನುಡಿಗಳನ್ನು ಮುತ್ತಿನಂತೆ ಪೋಣಿಸಿ ಅಯಿದು ಮಿಕವಾಗಿ ಬಳಸುವ ಸೈನಿಕರ ಬಣ್ಣಗಾರನಂತೆ ಅಲ್ಲಲ್ಲಿ ಬಣ್ಣವನ್ನು ಕಲ್ಪಿಸುವ, ಅನುರೋಚಿತವಾಗಿ ಸಹಜವಾಗಿ ಏಳುವ, ಇಳಿಯುವ, ಸಮುದ್ರದ ತೆರೆಯಂತೆ; ಹರಡಿಬೀಸುವ, ತೂರಳುವ ತಗ್ಗಿ ಕುಗ್ಗುವ, ಕುಲಸ್ತ್ರೀಯಂತೆ ಅಭಿನಯಮಾಡುವ, ಮೌನದಿಂದಲೇ ಭಾವವನ್ನು ಸೂಚಿಸುವ ಜಾತಿವೀರನಂತೆ ಸಂದರ್ಭದಲ್ಲಿ ಪರಾಕ್ರಮವೇ ವೀರಾವೇಶವನ್ನು ತಾಳುವ, ಹಾಗೆಯೇ ಶಾಂತವಾಗುವ, ಕಳವನ್ನು ತೋರಿಸಿ ಪರಮೇಶ್ವರನು ನಗುವನಗುವ ಹರಿಯುವ ತೊರೆಯಂತೆ ಸ್ಪಷ್ಟವಾಗಿ, ಸ್ವಚ್ಛವಾಗಿ ಹರಿಯುವ, ಅಲ್ಲಲ್ಲಿ ಮಡುಗಟ್ಟಿ ಗಂಭೀರವಾಗಿ ತೋರುವ, ನಲ್ಲೆಯ ಮೆಲ್ನುಡಿಯಂತೆ ಹೃದಯ ವೀಣೆಯ ತಂತಿಗಳನ್ನು ಮಿಡಿದು ನೋಯಿಸುವ ನಲಿಯಿಸುವ ಅನಂತಾನಂತ ರೂಪಿಯಾದ ಮಹಾವಾಣಿಯಲ್ಲಿ ಶಾಸ್ತ್ರಶಿಕ್ಷೆಯನ್ನು ಪಡೆದಿರಬಹುದು; ಆಡಂಬರ ವಿರಬಹುದು; ಚಮತ್ಕಾರ, ಚೇಷ್ಟೆ ಹಲವು ಹಿಂಗಕ್ಕಾರ ಇವೆಲ್ಲಾ ಇರಬಹುದು. ಆದರೆ ಇವೆಲ್ಲಾ ಶಬ್ದದ ರಂಜನೆ, ಹಾಡು ಬಗೆಯ ತಂತಿಗಾಗೆ ಮಾತ್ರ ರಂಜನೆ, ಕಥೆಯನ್ನು ರಚಿಸುವದೂ ಅಷ್ಟೆ, ವ್ಯಕ್ತಿಗಳನ್ನು ಚಿತ್ರಿಸುವದೂ ಅಷ್ಟೆ; ರಸಭಾವ, ವರ್ಣನೆಗಳನ್ನೂ ಪ್ರತಿಪಾದಿಸುವದೂ ಅಷ್ಟೆ;—ಋತು ವರ್ಣನ, ಹುಡುಗಾಲ ವೆಯಲ್ಲಿ ಬಾಚಿಗೆಟ್ಟು ಹರಿಯುವ ನೀರು, ವಿಷಯವ್ರೋ! ವೈರಾಗ್ಯ, ವೈರಾಗ್ಯದಲ್ಲಿ ವೈರಾಗ್ಯ ಹುಟ್ಟಿದಾಗ ಶೃಂಗಾರ.—ಎಂತಹ ಶೃಂಗಾರ! ಭಕ್ತಿ, ಜ್ಞಾನ, ಧರ್ಮ, ನೀತಿ ಮಾನವನ ಪ್ರಕೃತಿ ಇವೆಲ್ಲಾ ಉತ್ತಮ ಕಾವ್ಯವಿಷಯಗಳೇ ಆಹುದು. ಆದರೆ ಹೇಳುವ ರೀತಿ, ರಸದೃಷ್ಟಿ, ಸಂಸ್ಕೃತ ಮತ್ತು ಇಂಗ್ಲಿಷ ಭಾಷೆಗಳಲ್ಲಿರುವ ಮಹಾಮಹಾಕವಿಗಳ, ಪ್ರತಿಭೆಯೂ ಕಲ್ಪನಾಶಕ್ತಿಯೂ, ಉದಾತ್ತಭಾವಗಳೂ ರಸಪ್ರವಾಹವೂ ಅದ್ಭುತವಿವಾ ದೃಷ್ಟಿಯೂ, ಮನುಷ್ಯ ಜಾತಿಯೂ, ನಾನಾವಿಧವಾದ ಅನುಭವಗಳೂ, ಸಂಕಟಗಳೂ ಮಹತ್ಪ್ರಯತ್ನಗಳೂ, ನಗೆಯೂ, ಕಣ್ಣೀರೂ ಸೋಲೂ, ಗೆಲವೂ, ಹೀಗೆ ಪರಿಯೆಂದು ನಿರ್ಣಯಕ್ಕೆ ಸಿಕ್ಕದ ಜೀವದ ರಹಸ್ಯವೂ, ಆಶ್ಚರ್ಯವೂ, ವೈವಿಧ್ಯವೂ, ಸೌಂದರ್ಯವೂ ಭಯವೂ ಶಾಂತಿಯೂ ಮಂಗಳವೂ, ಅಮಂಗಳವೂ ಆ ಅಮಂಗಳದಿಂದಲೇ ಮಂಗಳವನ್ನು ಹಿಡಿದ ಅತ್ಯ ಶಕ್ತಿಯೂ, ಉತ್ತಮ ಸಾಹಿತ್ಯಗಳ ಸಮಕ್ಕೆ ತೂಗಬಲ್ಲವು ನಮ್ಮ ಪೂರ್ವದ ಸಾಹಿತ್ಯದಲ್ಲಿ ಎಷ್ಟು ಮಟ್ಟಿಗೆ ದೊರೆಯಬಹುದು? ಶುದ್ಧ ಕಲಾದೃಷ್ಟಿಯಿಂದ ಸಾಹಿತ್ಯ, ಕಾವ್ಯ ಎನ್ನಿಸಿಕೊಳ್ಳಬಹುದಾದ ಬರವಣಿಗೆ ನಮ್ಮ ಪೂರ್ವದ ಸಾಹಿತ್ಯದಲ್ಲಿ ಹೇರಳವಾಗಿದೆ ಎಂದು ಎಷ್ಟು ಮಟ್ಟಿಗೆ ಧೈರ್ಯವಾಗಿ ಹೇಳಬಹುದು?

೫. ಕರ್ನಾಟಕಭಕ್ತರೇ, ಕ್ಷಮೆಯಿಂದ ಆಲಿಸಬೇಕು. ಈ ನ್ಯೂನತೆಗಳನ್ನು ಸಾಮಾನ್ಯವಾಗಿ ಹೇಳಿದೆ; ಹೊರತು, ನಮ್ಮ ಸಾಹಿತ್ಯದಲ್ಲಿಯೂ ಇರುವ ಉದ್ದಾಮಕವಿಗಳನ್ನು ಸೇರಿಸಿಕೊಂಡು ಹೇಳಲಿಲ್ಲ ಹಿಂದೇ ಸಾಹಿತ್ಯದಲ್ಲಿ ಸಂಕುಚಿತ ದೃಷ್ಟಿಗಳಾಗದ ಹಲವು ಸಾಹಿತ್ಯಗಳ ಉದ್ದಾಮಕವಿಗಳನ್ನೆಲ್ಲಾ ಓದಿ, ಅನುಭವಿಸಿ ಸಂಸ್ಕಾರವನ್ನು ಪಡೆಯಬೇಕೆಂಬುದಾಗಿ ಹೇಳಿದೆ. ನಮ್ಮದು, ಅಷ್ಟರಿಂದ ಹೆಮ್ಮೆಯದು ಎಂಬ ದುರಭಿಮಾನವನ್ನು ಬಿಡೋಣ. ತಾರತಮ್ಯವನ್ನು ಬಿಟ್ಟ ವಿಮರ್ಶೆಯನ್ನು ಅಭ್ಯಾಸಮಾಡೋಣ. ನೆರೆಮನೆಯ ಮಕ್ಕಳು ಮನೆಯ ಮಕ್ಕಳಿಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ ಅವರ ಚಲವನ್ನು ಒಪ್ಪಿಕೊಳ್ಳೋಣ. ಅಗ್ಗ ನಮಗೆ ವಿನೀತರಲ್ಲಿ ಮುಂದಾಗದೆ ಹುಟ್ಟುವದು, ನಿಜವಾದ ಸೌಂದರ್ಯದ ಸರಿಯಾದ ಪರಿಜ್ಞಾನವುಂಟಾಗುವದು. ಹುರಿವೆಯಿಂದ ಕಣ್ಣು ಮುಚ್ಚಿ, ಹೋಗದೆ ಎಲ್ಲೆಲ್ಲಿ ದಿವ್ಯಜ್ಯೋತಿ ಪ್ರಕಾಶಿಸುವದೋ ಅಲ್ಲೆಲ್ಲಾ ಶಿಷ್ಯರಾಗಿದ್ದ ಕೊನೆಗೆ ನಮಗೂ ಗುರುತ್ವ ಲಭಿಸುವದು. ಕೇವಲ ಮತದ ಧನಗಾಗಿ ಅಥವಾ ಪುರಾಣೇತಿಹಾಸಮಹಾತ್ಮ್ಯ ಪ್ರಸಾರಣಗಾಗಿ, ಅಥವಾ ಕುಮುವ ಪುರುಷರಾಜನೆಗಾಗಿ, ಅಥವಾ ಪಾಂಡಿತ್ಯ ಪ್ರದರ್ಶನಕ್ಕಾಗಿ ಗತಿಸಿಹೋದ ಲೋಕದ ಸೂಡಿಳಗಳನ್ನು ತೀರ ಹಳೆಯದಾದ ಮಾರ್ಗಗಳಲ್ಲಿ, ನೆಯ್ದು, ನೆಯ್ದು ನೆಯ್ದು ರಾಶಿಹಾಕಿರುವ ಗ್ರಂಥಗಳು ಎಷ್ಟಿದ್ದರೇನು? ಎಷ್ಟು ಇನ್ನೂ ಅಚ್ಚಾಗದಿದ್ದರೇನು?— ಎಷ್ಟೋ ಉತ್ತಮವಾದ ವ್ಯವಸಾಯಗಳಿಗೆ ವಿನಿಯೋಗಿಸಬೇಕಾಗಿ ಬಂದಿರುವ ಈ ಕಾಲದಲ್ಲಿ ನಮ್ಮ ಹ್ರಸ್ವ ಜೀವಮಾನವನ್ನ ವಾತ್ಸಲ್ಯದಿಂದ ಪೂರ್ವಗ್ರಂಥಗಳಿಗೆ ಕೃಪಿಮಾಡಲು ಅವಕಾಶವುಂಟೇ? ಈಗ ಕನ್ನಡದ ಗ್ರಂಥರಾಶಿಯನ್ನೆಲ್ಲಾ ಪರೀಕ್ಷಿಸಿ ನೋಡುವದಕ್ಕೆ ಪ್ರತಿಯೊಬ್ಬರಿಗೂ ಅವಕಾಶವಾಗದಿದ್ದರೂ ಪಂಪ, ಪೊನ್ನ, ರನ್ನ, ನಾಗವರ್ಮ, ನಾಗಚಂದ್ರ, ನೇಮಿಚಂದ್ರ, ಜನ್ನ, ಮಧುರ, ರತ್ನಾಕರ, ಬಸವೇಶ್ವರ, ಹರೀಶ್ವರ, ರಾಘವಾಂಕ, ಸರ್ವಜ್ಞಮೂರ್ತಿ, ಚಾಮರಸ, ವಿರೂಪಾಕ್ಷ, ಷಡಕ್ಷರಿ ರುದ್ರಭಟ್ಟ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ನಿತ್ಯಾತ್ಮಶುಕ್ರ, ಲಕ್ಷ್ಮೀದಾಸರು, ತಿರುಮಲಾರ್ಯ, ಹೊನ್ನಮ್ಮ, ಹೆಣ್ಣಲ್ಲವೆ ತಮ್ಮನ್ನೆಲ್ಲ ಪಡೆದತಾಯಿ। ಹೆಣ್ಣಲ್ಲವೆ ಪೊರೆದವಳು। ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು । ಕಣ್ಣು ಕಾಣದ ಗಾವಿಲರು ॥೧॥ ಎಂದು ಮೂದಲಿಸಿದ ಹೊನ್ನಮ್ಮ, ಇಂಥ ಪ್ರಸಿದ್ಧ ಕವಿಗಳ ಕಾವ್ಯಗಳನ್ನಾದರೂ ವಿಮರ್ಶಿಸಿ ಪರಸ್ಪರ ಯೋಗ್ಯತಾ ವಿಷಯವನ್ನು ನಿರ್ಧರಿಸಿ, ಅತ್ಯುತ್ತಮವಾದ ಕಾವ್ಯಗಳನ್ನೂ, ಕಾವ್ಯ ಭಾಗಗಳನ್ನೂ ಸಂಗ್ರಹಿಸಿ ಸರ್ವತ್ರ ಪ್ರಚಾರಕ್ಕೆ ತರಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಹೀಗೆ ಶೋಧಿಸಿದ ಪೂರ್ವದ ಸಾಹಿತ್ಯದ ಜನಸಾಮಾನ್ಯಕ್ಕೆ ಉತ್ತೇಜನ ಕೊಡುವುದೇ ಅಲ್ಲದೆ ಹೊಸ ಸಾಹಿತ್ಯವನ್ನು ರಚಿಸತಕ್ಕವರಿಗೂ ಮಾರ್ಗದರ್ಶಿಯಾಗಿ ಫಲಪ್ರದಾಯಕವಾಗುತ್ತದೆ.

ಅಂತಹ ಉತ್ತಮವಾದ ಕಾವ್ಯಗಳೂ, ಕಾವ್ಯಭಾಗಗಳೂ ಕನ್ನಡದಲ್ಲಿ ಬೇಕಾದಷ್ಟು ಇಲ್ಲದೆ ಇಲ್ಲ. ಈ ವಿಷಯದಲ್ಲಿ ನಾವು ಯಾರಿಗೂ ತಲೆ ತಗ್ಗಿಸಬೇಕಾಗಿಲ್ಲ, ಅಹೋ ರೂಪಂ! ಅಹೋ ಧ್ವನಿಃ ಎಂದು ಬೆರಗಾಗುವ ಅಸಂಸ್ಕೃತರ ಬಲ್ಪನಕ್ಕೆ ಮಾತ್ರ ನಾವು ತಲೆ ತಗ್ಗಿಸಬೇಕಾಗಿದೆ ಅಷ್ಟೆ. ...ಗ ಸುಮಾರು ೩೦ ವರ್ಷಗಳಿಂದ ನಾವು ಕನ್ನಡವನ್ನು ಪ್ರೀತಿಯಿಂದ ಓದುತ್ತಿದ್ದೇವೆ! ನಗುತ್ತ ಹೇಳಿದವರು ಕೆಲ ಹೇಳಿದರು ಎಂಬ ಪ್ರೀತಿಯಿಂದಲ್ಲ, ಅಯ್ಯೋ ಹೇಳಿದವರು ಬಡಕು ಹೇಳಿದರು ಎಂಬ ಪ್ರೀತಿಯಿಂದ ಉದಾರವಾದ ಸನಾತನ ಧರ್ಮ, ಉಜ್ವಲವಾದ ಭಕ್ತಿ, ಸಂಸಾರದ ದುಃಖ, ಮನ್ಮಥವಾದ ಮರಣ ಪ್ರಲಾಪ, ನಿಸ್ಸಾರ ವಸ್ತುವಿನಲ್ಲಿ ವೈರಾಗ್ಯ—ವಿಶ್ವಕ್ಕೆ ಜಗ್ಗದ ಕರಷ್ಟ, ಶೌರ್ಯ, ಕಾರುಣ್ಯ, ರಾಗವೇಶ, ಕ್ಷಮೆ, ಪ್ರೇಮ, ಮಕ್ಕಳ ಬಯಕೆ, ಪ್ರಕೃತಿಯ ಹಲವು ನೋಟಗಳಲ್ಲಿ ಆನಂದ ಇವೇ ಮುಂತಾದ ನಮ್ಮ ಜನಕ್ಕೆ ಸ್ವಾಭಾವಿಕವಾದ ಸರ್ವ ಸಾಧಾರಣವಾದ ಅನೇಕ ಗುಣಗಳನ್ನು ಬಹು ಸುಬವಾಗಿ ಕಲಾಪ್ರಪಂಚದಲ್ಲಿ ಪ್ರತಿಬಿಂಬಿಸಿರುವದು ನಮ್ಮ ಕನ್ನಡದಲ್ಲಿ ಬೇಕಾದಷ್ಟಿದೆ. ಏಕೆಂದರೆ ನಮ್ಮ ಕವಿಗಳಲ್ಲಿ ಪ್ರಮುಖರಾದವರು ಎಷ್ಟೋ ಪಾಂಡಿತ್ಯದ ಹುಚ್ಚು ಹೊಳೆಯ ಸೆಳತಕ್ಕೆ ಸಿಕ್ಕಿದ್ದರೂ, ಎಷ್ಟೋ ಶಬ್ದದ ನಿರರ್ಥಕವಾದ

ನಿಬಂಧಗಳಿಗೆ ಕಟ್ಟು ಬಿದ್ದಿದ್ದರೂ ಎಷ್ಟೋ ಆಕಾಲ ಅಭಿರುಚಿ ಸಂಕೇತಗಳಿಗೆ ಅಂಧ ಪರಂಪರೆಯಾಗಿ ಮನ್ನಣೆಯನ್ನು ಕೊಟ್ಟಿದ್ದರೂ ಎಷ್ಟೋ ತಮ್ಮ ತಮ್ಮ ಮತಸಿದ್ಧಾಂತಗಳನ್ನು ರಾದ್ಧಾಂತ ಮಾಡಿ, ವಿಸ್ತರಿಸಿ ಲಂಬಿಸಿ, ಮರುಳು ಗಾಡಿನಲ್ಲಿ ಬಾಯಾರಿಕೆಯನ್ನೇ ಗಿಸುವ ಹೊಳೆ ಪಂಕ್ತಿ ಹೆಸರಿಯಿತೆಂಬಂತೆ ತೀರ್ಥಂಕರ ಪುರಾತನ ಭಕ್ತರ ಅವತಾರ ಪುರುಷರ, ವೀರರ, ನಾಯಕರ, ದಿವ್ಯ ವಿಗ್ರಹಗಳನ್ನು ಸರ್ವ ಕಾಲದಲ್ಲಿಯೂ ಸರ್ವರೂ ಮೆಚ್ಚುವಂತೆ ಕಡೆದಿರಿಸದಿರು ಹೇಳಿದರೂ, ಈ ಮತಾಭಿಮಾನಿಗಳಲ್ಲಿ ಈ ಶಾಸ್ತ್ರ ಪಕ್ಷಪಾತಿಗಳಲ್ಲಿ, ಈ ಪಂಡಿತರಲ್ಲಿ ಹುಟ್ಟಿಯೊಳಗೆ ಒಬ್ಬ ಆ ಹುಚ್ಚುಕವಿ, ಅವಿತುಕೊಂಡಿದ್ದರಿಂದ ಸರಿಯಾದ ಸ್ವತಂತ್ರವಾದ ಸಂಪೂರ್ಣವಾದ ವಿವಿಧ ಮಹಾನುಭವ ದೋಷಿತವ, ಶುದ್ಧ ಕಲಾಜ್ಯೋತಿಯ ಬಿಸಿಲಿನಲ್ಲಿ ಹೊಮ್ಮಿ ಬೆಳದಿಂಗಳಿನಲ್ಲಿ ಅರಳಿದಿದ್ದರೂ ಆ ಅಡಗಿದ್ದ ನಿಸರ್ಗ ಕವಿಯ ಪ್ರಭಾವದಿಂದ ಶುಷ್ಕವಾದ ಅರಣ್ಯರೋದನದ ನಡುವೆ ಸಮಯ ಬಂದ ಕೂಡಲೇ ಒಂದು ಕ್ಷಣದಲ್ಲಿ ಹೃದಯ ಹಿಗ್ಗಿ, ರಸ ಉಕ್ಕಿ ಮರುಭೂಮಿಯಲ್ಲಿ ಕಣ್ಣೀರ ಕೊಳ ಊರಿದಂತೆ, ಸುಗ್ಗಿಯ ಹೊಸ ಮಾವಿನ ಚಿಗುರಾವ್ನ ಸವಿದ ಕೋಗಿಲೆಯ ಕಂಠ ಉಂಟಾದಂತೆ, ಈ ಪಂಚಮದ ಗಿಣಿಗಳ, ಈ ಬಿಳಿಯ ಹಂಸಗಳು, ನೆಗೆದು, ಹಾಡಿ ಹಾಡಿ, ಸರಸ್ವತೀ ಪ್ರಸಾದಪೂರ್ಣ ರಮಣೀಯತೆಯನ್ನು ಸಹೃದಯರಿಗೆ ಅನುಭವ ಮಾಡಿಸಿ ಬಿಟ್ಟಿರುವರ

೬ ಅಂತಹ ಕೆಲವು ದಿವ್ಯ ಕಾವ್ಯ ಭಾಗಗಳನ್ನು ಈಗ ಓದಿ ತಮ್ಮ ಮನಸ್ಸನ್ನು ಆನಂದಗೊಳಿಸಲು ಅಪ್ಪಣೆಯನ್ನು ಬೇಡುತ್ತೇನೆ ಪಿಕ್ರಮಾರ್ಜುನ ವಿಜಯ, ಗದಾಯುದ್ಧ, ಯಶೋಧರ ಚರಿತ್ರ, ಭರತೇಶ್ವರ ವೈಭವ ಮುಂತಾದ ಉದ್ಗ್ರಂಥಗಳ ಕಥಾ ರಚನೆಯ ಸ್ವಾರಸ್ಯವನ್ನಾಗಲೀ ಪಂಪನ ಬಾಹುಬಲಿ, ಪಂಪ ರನ್ನರ ದುರ್ಯೋಧನ, ನಾಗಚಂದ್ರನ ರಾವಣ ಮುಂತಾದ ಪಾತ್ರ ಸೃಷ್ಟಿಗಳ ಗಾಂಭೀರ್ಯವನ್ನಾಗಲೀ, ಉದಾತ್ತ ಭಾವಗಳ, ಉಜ್ವಲ ರಸಗಳ ಪ್ರತಿಪಾದನೆಯನ್ನಾಗಲೀ, ಇಲ್ಲಿ ಸಮರ್ಪಿಸುವದು ಸಾಧ್ಯವಲ್ಲ. ನನ್ನ ಮಾತನ್ನು ಕೇಳಿ ತಾವು ಪಟ್ಟಿರುವ ಬೇಸರವನ್ನು ಕಳೆಯುವದಕ್ಕೆ ನಮ್ಮ ಮಹಾಕವಿಗಳ ಕೆಲವು ಮಾತುಗಳನ್ನು ನುಡಿಸುತ್ತೇನೆ

ಪಂಪನ:— ಬನವಾಸಿ ದೇಶದ ವರ್ಣನೆ,

ಹರೀಶ್ವರನ — ಹರಭಕ್ತಿಯ ವರ್ಣನೆ,

ಪಂಪನ — ಜಿನಸ್ತುತಿ,

ರನ್ನನ — ಧರ್ಮವೈರಾಗ್ಯ,

ನಾಗಚಂದ್ರನ.—ರಾವಣನ ಪಶ್ಚಾತ್ತಾಪ.

ಚಿಕದೇವನ — ತಪ್ಪು ಯಾರದು.

೭. ಈ ಕಾವ್ಯಭಾಗಗಳ ಭಾಷೆಯ ಲಾಲಿತ್ಯ, ಶೈಲಿಯ ವಿಷಯಕ್ಕನುಗುಣವಾದ ಸೌಂದರ್ಯ, ಭಾವ ರಸಗಳ ವೇಗ ಹುಟ್ಟಿಸುವ ಕವಿತಾ ಸೃಷ್ಟಿಯ ಸಫಲತೆ, ಇವುಗಳನ್ನು ನೋಡಿದರೆ ಇನ್ನೂ ಕಾವ್ಯಕಲೆಯಲ್ಲಿ ಕವಿಗಳು ಮಾಡಬಹುದಾದ ಕಾರ್ಯವಾದರೂ ಏನಿದ್ದೀತು ಎನಿಸುತ್ತದೆ— ದೋಷೈಕದೃಷ್ಟಿಯಾದ ನನಗೇ ಎನಿಸುತ್ತದೆ. ಗುಣವನ್ನು ಬಿಟ್ಟು ದೋಷವನ್ನು ಆರಿಸಿಕೊಂಡು ಹೋಗುವ ನನಗೆ ಪ್ರಾಯಶಃ ಯಾವನೋ ಬ್ರಹ್ಮರಾಕ್ಷಸನು ಕಿವಿಯಲ್ಲಿ "ಅಸಂತೋಷ ಶ್ರೇಯೋ ಮೂಲಃ" ಸುಲಭವಾಗಿ ಸಂತುಷ್ಟನಾಗಬೇಡ ಎಂದು ಉಪದೇಶ ಮಾಡಿರಬೇಕೆಂದು ಊಹಿಸಬೇಕಾಗುತ್ತದೆ.

೮ ಅದು ಹೇಗಾದರೂ ಇರಲಿ ವಿಮರ್ಶಪೂರ್ವಕವಾಗಿ, ನಮ್ಮ ಸಾಹಿತ್ಯ ರಾಶಿಯಿಂದ ಉತ್ತಮ ಕಾವ್ಯಗಳನ್ನೂ, ಕಾವ್ಯಭಾಗಗಳನ್ನೂ ಶೋಧಿಸಿ ತಗದು ಕಾವ್ಯಕೋಶಗಳನ್ನು ಸಿದ್ಧಪಡಿಸುವದೇ ನಮ್ಮ ಪ್ರಥಮ ಕರ್ತವ್ಯವೆಂದು ನಾನು ತಿಳಿದಿರುತ್ತೇನೆ ಈ ಉತ್ತಮ ಕಾವ್ಯಕೋಶಗಳಿಂದ ವಿದ್ಯಾರ್ಥಿಗಳ ಲೇಖಕರ ಮನಸ್ಸನ್ನೂ, ಕನ್ನಡದಲ್ಲಿ ಪ್ರೇಮವನ್ನು ವಿಶಾಲಪಡಿಸಿ, ಮುಂದೆ ಈ ಕಾಲಕ್ಕೆ ತಕ್ಕ ನೂತನ ಸಾಹಿತ್ಯವನ್ನು ನಿರ್ಮಾಣ ಮಾಡತಕ್ಕದ್ದು ನಮ್ಮ ಎರಡನೆಯ ಕರ್ತವ್ಯ ಏಕೆಂದರೆ ಹಿಂದಿನ ಸಾಹಿತ್ಯವು ಎಷ್ಟೋ ಉತ್ತಮ ಭಾಗಗಳನ್ನು ಒಳಕೊಂಡಿದ್ದರೂ, ನಮ್ಮ ರಕ್ತದಲ್ಲಿ ಕೂಡಿ ಬಂದು ಎಷ್ಟೋ ನಮ್ಮ ಅಭಿಪ್ರಾಯಗಳಿಗೆ ಬಗ್ಗಿ ಬಂದಿದ್ದರೂ ಅದು ಪುರಾತನ ಪ್ರಪಂಚಕ್ಕೆ ಸರಿದ್ದು, ಅಲ್ಲಿ ಹುಟ್ಟಿದ್ದು ಬೆಳೆದದ್ದು ನೂತನ ಪ್ರಪಂಚದಲ್ಲಿ ಹುಟ್ಟಿ ಬೆಳೆಯುತ್ತಿರುವ ನಮಗೆ ಬೇಕಾದ ರುಚಿಗಳನ್ನೆಲ್ಲ, ಸಂಸ್ಕಾರಗಳನ್ನೆಲ್ಲ ಅದು ಕೊಡಲಾರದು. ಯಾವ ವೃಕ್ಷದಲ್ಲಿ ಯಾವ ಫಲವನ್ನು ಹುಟ್ಟಿಸಬಹುದು? ಈ ನೂತನ ಪ್ರಪಂಚಕ್ಕೆ ಈ ನೂತನ ಸಮಾಜದ ಅಭಿಲಾಷೆಗಳು, ರುಚಿಗಳು, ಜೀವನ ವ್ಯಾಪಾರಗಳು ಇವುಗಳಿಗೆ ಅನುಕೂಲಿಸುವಂತಹ ಹೊಸ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದಲ್ಲದೆ ಕನ್ನಡ ಭಾಷೆಯ ಸೇವೆಗಾಗಲೀ ಕನ್ನಡ ದೇಶದ ಏಳಿಗೆಗಾಗಲಿ, ನಾವು ಈ ಪರಿಷತ್ತಿನ ಸ್ಥಾಪನೆಯ ಶ್ರದ್ಧೆಯನ್ನು ವಹಿಸಿ ಋಣವನ್ನು ತೀರಿಸಿದಂತಾಯಿತೆಂದು ನಾನು ಹೇಳಲಾರೆ ಹಾಗೆ ಮಾಡದಿದ್ದರೆ ಅರ್ಥಕ್ಕೆ ಹೆಚ್ಚಾಗಿಯೇ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸದೆ ಅಸಡ್ಡೆ ಮಾಡಿದಂತಾಗುತ್ತದೆ

೯ ಈ ಹೊಸ ಸಾಹಿತ್ಯವು ಹಳೆಯ ಸಾಹಿತ್ಯದ ಸಾರವನ್ನು ಸಹಾಯವನ್ನು ಸ್ವೀಕಾರ ಮಾಡಿದರೂ ಮತ ಪ್ರಸಾರಣೆಗಾಗಲೀ ಪೂರ್ವಕಥಾನುವಾದಕ್ಕಾಗಲೀ ಬರೆಯತಕ್ಕದ್ದಲ್ಲ, ನೂತನ ಜ್ಞಾನ ಪ್ರಸಾರಣೆಗಾಗಿ ಪೂರ್ಣ ಕಲಾನುಭವಕ್ಕಾಗಿ, ಉತ್ತಮ ಜೀವನ ಕಾರ್ಯಾರಂಭ ಪ್ರೇರಣೆಗಾಗಿ ಬರೆಯತಕ್ಕದ್ದು ಪ್ರಪಂಚದಲ್ಲಿ ತಿಳಿದಿರುವ, ನುಡಿದಿರುವ, ನಡೆದಿರುವ ಉತ್ತಮ ವಿಷಯಗಳನ್ನೆಲ್ಲವನ್ನು ಸಿಂಹಾವಲೋಕನದಿಂದ ತಾನು ಸ್ವಾನುಭವಕ್ಕೆ ತಂದುಕೊಂಡು ಹಾಗೆ ತಿಳಿಯಲಾರದ ಇತರರಿಗೆ ತಿಳಿಸತಕ್ಕದ್ದು. ಇದಕ್ಕೆ ಒಂದು ನಾಡಲ್ಲ. ಒಂದು ಬೀಡಲ್ಲ —ಇವರ ಮೂಲಮಂತ್ರ—"ಉದಾರ ಚರಿತಾನಾಂತು ವಸುಧೈವ ಕುಟುಂಬಂ" ಈ ಹೊಸ ಮಾರ್ಗದ ಗ್ರಂಥಕರ್ತನು ಸ್ವತಂತ್ರನು, ಪದ್ಯಕ್ಕಿಂತಲೂ ಹೆಚ್ಚಾಗಿ ಗದ್ಯದಲ್ಲಿ ಕೆಲಸ ಮಾಡುವವನು ವಿಷಯಕ್ಕೆ ತಕ್ಕ ಶೈಲಿಯನ್ನು ಹೊಂದಿಸಿ ಸರ್ವರೂ ಅರ್ಥ ಮಾಡಿಕೊಳ್ಳುವಂತೆ ಬರೆಯುವವನು. ಪ್ರಪಂಚದಲ್ಲೆಲ್ಲಾ ಸಾಹಿತ್ಯಗಳಿಂದಲೂ ಮಾದರಿಗಳನ್ನೂ, ವಿಷಯಗಳನ್ನೂ ಸ್ವೀಕರಿಸಿ ಯಾವ ಯಾವುದರಿಂದ ಕನ್ನಡಿಗರಿಗೆ ಉಪಯೋಗವುಂಟಾಗುವದೆಂದು ತಿಳಿಯುವದೋ ಅದೆಲ್ಲವನ್ನೂ ಕನ್ನಡಕ್ಕೆ ತಿರುಗಿಸುವವನು. ಮತದ ವಾದ ಪ್ರತಿವಾದಗಳನ್ನು ಹರಡುವವನು. ಬರಿಯ ಕಲ್ಪನೆಗಳನ್ನು ಬಿಟ್ಟು ಶಾಸ್ತ್ರಾಂಶಗಳನ್ನು ಜೀವನ ಚರಿತೆಗಳನ್ನು, ಜನಾಂಗಗಳ ಚರಿತೆಗಳನ್ನು ಮನುಷ್ಯಜಾತಿಯ ಅಭ್ಯುದಯವನ್ನು ವಿವರಿಸುವವನು ಚಂಪೂ ಮಹಾ ಕಾವ್ಯಗಳನ್ನು ಹಿಂದಕ್ಕೆ ತಳ್ಳಿ ಕಾದಂಬರಿಗಳಲ್ಲಿ, ಮತ್ತು ಸಣ್ಣ ಕಥೆಗಳಲ್ಲಿ, ತನ್ನ ಕಾಲದ ಅಥವಾ ಚರಿತ್ರೆ ಸಾಹಿತ್ಯ ಶಾಸನ ಮುಂತಾದ ಆಧಾರಗಳ ಮೇಲೆ ಸಂಗ್ರಹಿಸಿದ ಪೂರ್ವಕಾಲದ ಜನ ಜೀವನವನ್ನು ಚಿತ್ರಿಸುವವನು ತನ್ನ ಮತ್ತು ತನ್ನ ಸಮಕಾಲೀನರ ಮನಸ್ಸಿನ ಭಿನ್ನೋದ್ವೇಗಗಳನ್ನು ಹೃದಯರಸೋದ್ರೇಕಗಳನ್ನು ಸಣ್ಣ ಕವನಗಳಲ್ಲಿ ಮತ್ತು ಭಾಷೆಗಳಲ್ಲಿ ಮುಂಗಾರಿ ಮಳೆಯ ಹುಯ್ಯಲಂತೆ ಒಂದು ಕ್ಷಣದಲ್ಲಿ ಸುರಿದು ಬಿಡುವವನು ಇವೆಲ್ಲಕ್ಕಿಂತಲೂ ಜನರಿಗೆ ಅತಿ ಪ್ರಿಯವಾದ ರಂಗಸ್ಥಳಕ್ಕೆ ಒಪ್ಪುವ ಮನೋರಂಜನವಾದ ನಾಟಕಗಳಲ್ಲಿ ಜೀವನದ ಪ್ರತಿಬಿಂಬವನ್ನು ಉದಾತ್ತ ಚರಿತರಾದ ಮಹಾಪುರುಷರ ಆದರ್ಶ ವ್ಯಕ್ತಿಗಳನ್ನು ಸ್ಫೂರ್ತಿಯಿಂದ ಸೃಷ್ಟಿಸುವನು ವಿವಿಧ ವಿಷಯಗಳನ್ನೂ ಪ್ರಕೃತಿ ಶಾಸ್ತ್ರಸಾರಾಂಶವನ್ನೂ, ಪ್ರಕೃತಿ ಶಾಸ್ತ್ರಾಭ್ಯಾಸದಿಂದ ಉತ್ಪನ್ನವಾಗುವ ಶಾಸ್ತ್ರೀಯ ಮನೋಭಾವನ್ನು ಮತ್ತು ತನ್ನ ಇತರ ಸಾಧಾರಣವಾದ ಲೋಕಾನುಭವಗಳನ್ನು ಸ್ವಾರಸ್ಯವಾದ ಚಿತ್ತಾಕರ್ಷಕವಾದ ಸಣ್ಣ ಪುಸ್ತಕಗಳಲ್ಲಿಯೂ, ಸಣ್ಣ ಪ್ರಸಂಗಗಳಲ್ಲಿಯೂ ತಂದು ತುಂಬುವನು. ಈ ನಮ್ಮ ಹೊಸ ಲೇಖಕನು ಹಿರಿಯರ ಸೇವೆಯಲ್ಲಿ ಸಣ್ಣ ಮಕ್ಕಳನ್ನು ಮರೆಯುವದಿಲ್ಲ "ಮನುಜನಿಗೆ ಮಗು ತಂದೆ" ಎಂಬ ತತ್ವವನ್ನು ಈತನು ಬಲ್ಲನು ಆದ್ದರಿಂದ ಆ ಚಿಕ್ಕಮಕ್ಕಳನ್ನು ತನ್ನ ಕಡೆಗೆ ಒಲಿಸಿಕೊಂಡು ಅವರಿಗೆ ಬೇಕಾದ ಪುಟ್ಟ ಪುಟ್ಟ ಹಾಡ ಚಿತ್ರಗಳಿಂದ ಕೂಡಿರುವ ಬಾಲಶೈಲಿಯಲ್ಲಿ ಬರೆದಿರುವ ಸಾಹಸ ಕಥೆಗಳೂ ಆಶ್ಚರ್ಯಕಥೆಗಳೂ ದೇಶಸಂಚಾರಗಳು ಭೂಖಂಡದ ಪೂರ್ವ ಚರಿತ್ರೆಯ ಸಾರಾಂಶಗಳೂ ಸಮುದ್ರಯಾನಗಳೂ ಪ್ರಕೃತಿ ಶಾಸ್ತ್ರದ ಅದ್ಭುತ ವಿವರಣೆಗಳೂ ವೀರರ ನೈಜ ವೃತ್ತಾಂತಗಳೂ ಮುಂತಾದವುಗಳನ್ನು ಮೊದಲು ಸಿದ್ಧ ಮಾಡುವನು, ಆ ಬಳಿಕ ದೊಡ್ಡವರಿಗೆ ಬೋಧನೆ ಮಾಡುವದಕ್ಕೆ ಹೊರಟು ಕಾಲಗುಣ ಜನಾದರ ನ್ಯೂನತೆಗಳು ಸಂಸ್ಕರಣದ ಮಾರ್ಗಗಳು ಸಾಧಕ ಬಾಧಕಗಳು. ಜಾತಿ ಮತಗಳ ಪೂರ್ವಪದ್ಧತಿಗಳ ಮತ್ತು ಶಾಸ್ತ್ರ ವಿಧಿಗಳ ಗುಣದೋಷಗಳು ಜನಾಂಗಗಳ ಸ್ವಾತಂತ್ರ್ಯಸಾಧನೆಯ ತತ್ವಗಳು ಅದಕ್ಕೆ ಅತ್ಯವಶ್ಯಕವಾದ ಸ್ವಾರ್ಥತ್ಯಾಗಬುದ್ಧಿ ರಾಜ್ಯಭಾರದ ಕ್ರಮಗಳು ರಾಜ ಪ್ರಜೆಗಳ ಪರಸ್ಪರ ಧರ್ಮಗಳು ಲೋಕದ ಜನಾಂಗಗಳೆಲ್ಲವೂ ಪರಸ್ಪರ ಸೌಹಾರ್ದದಿಂದಲೂ ಸಹಕಾರ ಬುದ್ಧಿಯಿಂದಲೂ ಯುದ್ಧದ ಕಷ್ಟ ಕನಸು ಜೀವದ ಅವಿಚ್ಛಿನ್ನ ಶಾಂತಿಯಿಂದಲೂ ಭ್ರಾತೃಭಾವದಲ್ಲಿ ವರ್ತಿಸುವಂತೆ ಮಾಡುವದಕ್ಕೆ ನಡೆಸಬೇಕಾದ ಪ್ರಯತ್ನಗಳು ಇವೇ ಮುಂತಾದ ನೂತನ ಪ್ರಪಂಚದ ನೂತನ ಸಮಸ್ಯೆಗಳನ್ನು ವೃತ್ತಾಂತ ಪತ್ರಿಕೆಗಳಲ್ಲಿಯೂ ಮಾಸ ಪತ್ರಿಕೆಗಳಲ್ಲಿಯೂ ಉಪನ್ಯಾಸಗಳಲ್ಲಿಯೂ ಸಣ್ಣ ಪುಸ್ತಕಗಳಲ್ಲಿಯೂ ಯಾವಾಗಲೂ ಚರ್ಚಿಸುತ್ತಿರುವನು. ಪುರಾತನರ ಜ್ಞಾನಕೋಶವನ್ನು ಮತ್ತೊಮ್ಮೆ ವಿಮರ್ಶಿಸಿ ಬಳ್ಳಿಸ್ಸು ತೂರಿ, ಕಾಳನ್ನು ಕಣಜಕ್ಕೆ ತುಂಬಿ ಉಂಡು ಮತ್ತೆ ಬಿತ್ತಿ ಹೊಸ ಬೆಳೆಯನ್ನು ನೂರರಷ್ಟು ಹೆಚ್ಚಿಸುವನು. ಈ ಬಗೆಯ ಬರವಣಿಗೆಗಾರನು ನೂತನ ಲೋಕದ ಶಿಶು; ನೂತನ ವಿಶ್ವವಿದ್ಯಾಲಯದಲ್ಲಿ ಶಿಕ್ಷಿತನಾದವನು, ಇಂಗ್ಲಿಷ ಮುಂತಾದ ಪರಭಾಷೆಗಳನ್ನು ಕಲಿಯುವದು ಒಂದು ಅಶುದ್ಧತೆ ಎಂದು ಬಗೆಯುವವನು, ಅವನು ಕಲಿತದ್ದರಿಂದ ತನ್ನ ಮಾತೃಭಾಷೆಯನ್ನು

ತಿರಸ್ಕರಿಸುವವನು; ತನ್ನ ಜನ್ಮವಿತ್ತ ನಾಡನ್ನು ತಾಯ್ನುಡಿಯ ಮೂಲಕ ತನ್ನ ಜನಕ್ಕೆ ಕೊಡಬಲ್ಲವನು ತನ್ನ ದೇಶದ ತನ್ನ ಜನರ ಪೂರ್ವದ ಮಹಿಮೆಗೂ ಸಂಸ್ಕೃತಿಗೂ ನ್ಯಾಯವಾದ ಭಕ್ತಿಯನ್ನು ತೋರಿಸಿ ನೂತನ ಸಂಸ್ಕೃತಿಗೂ ಮಹಾತ್ಮ್ಯಕ್ಕೂ ತಕ್ಕ ಬೆಲೆಯನ್ನು ಕಟ್ಟಬಲ್ಲವನು. ಈತನು ಇಂಗ್ಲೀಷಿನಲ್ಲಿ ಪ್ರವೀಣನಾಗಿರಬೇಕೆಂದು ನಾನು ಒತ್ತಿ ಹೇಳುತ್ತಿರುವುದನ್ನು ಯಾರು ತಪ್ಪಾಗಿ ಭಾವಿಸಕೂಡದು. ಇಂಗ್ಲಿಷ ಒಂದನ್ನೇ ಅನನ್ಯಭಾವದಿಂದ ಶರಣು ಹೋಗಬೇಕೆಂದು ನನ್ನ ಭಾವವಲ್ಲ. ಅದಿಲ್ಲದೆ ಮುಕ್ತಿಯೇ ಇಲ್ಲೆಂದು ನಾನು ಹೇಳುತ್ತಿಲ್ಲ. ನಮ್ಮ ದಿವ್ಯ ಸಂಸ್ಕೃತವಿದೆ. ಅದರಿಂದಲೂ ಹೀರಬಹುದಾದ, ತೆಗೆದು ಬೀರಬಹುದಾದ ತಿರುಳು ಅಪಾರವಾಗಿದೆ, ಅನಂತವಾಗಿದೆ. ಆದರೆ ಹಿಂದಿನ ಕುಂಬಗಳನ್ನಿಂತ, ಅಂಧ ಶ್ರದ್ಧೆಯಿಂದ, ಅಪೂರ್ಣ ಶಾಸ್ತ್ರಸಂಸ್ಕಾರದಿಂದ ದೊಡ್ಡದು ಮಾಡಿಕೊಂಡು ನಮ್ಮ ಕನ್ನಡದ ಬಯಲಿಗೆ ತಿದ್ದಿಕೊಂಡ ವಿಷಯಗಳಷ್ಟೇ ಮುಕ್ತಿ ನಾವು ಈಗ ತಿದ್ದಬೇಕಾಗಿಲ್ಲ. ಎಷ್ಟೋ ಜನ ಪಂಡಿತರು ಆ ಕೆಲಸವನ್ನು ಹಿಂದೆ ಮಾಡಿರುವರು; ಈಗಲೂ ಮಾಡುತ್ತಿರುವರು. ಇಂಗ್ಲಿಷ ಸಂಸ್ಕಾರದಿಂದ ಅಂಜನ ಹಾಕಿ ಪರೆತೆಗೆದ ಹೊಸಕಣ್ಣಿನಿಂದ, ಹೊಸ ದಶೆಗಳ ತಿಳುವಳಿಕೆಯಿಂದ ವಿಮರ್ಶನಮಿಳಿತವಾದ ಶ್ರದ್ಧೆಯಿಂದ ವೇದಗಳು ಉಪನಿಷತ್ತುಗಳು, ಇತಿಹಾಸ ಪುರಾಣಗಳು, ದರ್ಶನಗಳು, ಶಾಸ್ತ್ರಗಳು, ಕಲೆಗಳು, ವೈದಿಕ, ಬೌದ್ಧ, ಜೈನ, ವೈಷ್ಣವ, ಶೈವ ಧರ್ಮಗಳು—ಇವುಗಳ ಪವಿತ್ರ ಮೂಲಗಳನ್ನು ಪರಿಶೋಧನೆ ಮಾಡಿ ಹಸಿದು ಕಂಗೆಟ್ಟಿರುವ ನಮ್ಮ ಜನಸಮುದಾಯಕ್ಕೆ ಶುದ್ಧಾಹಾರವನ್ನು ದೇಹಪುಷ್ಟಿ ಆತ್ಮಪುಷ್ಟಿ ಆಗುವ ನಿರ್ಮಲಾಹಾರವನ್ನು ಒದಗಿಸುವದು ವಿದ್ಯಾವಂತರ ಕರ್ತವ್ಯವಲ್ಲವೇ? ಪುಷ್ಟಿಗೊಳಿಸುವ ನಿರ್ಮಲಾಹಾರವನ್ನು, ಕಲ್ಲನ್ನಲ್ಲ, ಮರಳನ್ನಲ್ಲ, ಬಾಯಿಯಲ್ಲಿ ಬೂದಿಯಾಗುವ, ಹೊಟ್ಟೆಯಲ್ಲಿ ವಿಷವಾಗುವ ಆಹಾರವನ್ನಲ್ಲ. ಈ ವಿದ್ಯಾವಂತರು ತಾವು ಸಂಸ್ಕೃತದಲ್ಲಿ, ಕನ್ನಡದಲ್ಲಿ, ಪ್ರಾಕೃತದಲ್ಲಿ, ಪಾಲಿಯಲ್ಲಿ, ಇಂಗ್ಲೀಷಿನಲ್ಲಿ,—ಗ್ರೀಕಿನಲ್ಲಿ ಯಾವ ಭಾಷೆಯಲ್ಲಾದರೂ ಸಂಪಾದಿಸಿದ ಜ್ಞಾನವೇನುಂಟೋ, ಶೀಲವೇನುಂಟೋ, ಆನಂದವೇನುಂಟೋ, ಸ್ಫೂರ್ತಿಯೇನುಂಟೋ, ಅದೆಲ್ಲವನ್ನು ಅಜ್ಞಾನದಲ್ಲಿ ಮುಳುಗಿ ಜಡರಾಗಿ ಜೀವಿಸುತ್ತಿರುವ ತಮ್ಮ ಅಣ್ಣ-ತಮ್ಮಂದಿರಲ್ಲಿ, ಅಕ್ಕ-ತಂಗಿಯರಲ್ಲಿ, ಹಸುಮಕ್ಕಳಲ್ಲಿ ಅಜ್ಜ-ಅಜ್ಜಿಯರಲ್ಲಿ ಅವರೇನು ತೀರ ಕೈಬಿಟ್ಟು ಬಿಡಬೇಕಾಗಿವೇ. ಆದರಿಂದ ನಮಗೆ ಅಡ್ಡಿಯಾಗಲಿ ತೊಂದರೆಯಾಗಲಿ ಬಾರದಿರುವದೇ- ಅಜ್ಜ-ಅಜ್ಜಿಯರಿಗೆ—"ಸುಲಿದ ಬಾಳೆಯ ಹಣ್ಣಿನಂದದಿ ಕಳಿದ ಸಿಬುರಿನ ಕಬ್ಬಿನಂದದಿ" ಲಲಿತವಾದ, ಸುಬೋಧವಾದ ಕನ್ನಡದಲ್ಲಿ ಧಾರೆಯೆರೆಯಬೇಕಲ್ಲವೆ? ಮಿತ್ರರಿರಾ, "ಬೆಳೆಯೋದು ಬೇಕಾದಷ್ಟಾಗಿದೆ; ಕುಯ್ಯುವ ಗಾರರು ಕಡಿಮೆ" ಬನ್ನಿ, ಜನ್ಮವನ್ನು ತಮ್ಮ ಜನರ ಬೋಧೆಗಾಗಿ ಸಮರ್ಪಣ ಮಾಡಿದ ಹೊಸಬಗೆಯ ದೀಕ್ಷಿತರಾಗಿ ಪೂರ್ಣವಿಶ್ವರಾಗಿ ಸ್ವತಂತ್ರಪ್ರಿಯರಾಗಿ (ಸ್ವತಂತ್ರವೆಂದರೆ ಸ್ವೇಚ್ಛೆಯಲ್ಲ.) ಧರ್ಮಶಾಲರಾಗಿ ಆತ್ಮಸುಧಾರಕರಾಗಿ, ವ್ಯಕ್ತಿ ವರ್ಚಸ್ಸುಳ್ಳವರಾಗಿ, ಮಹದ್ದರ್ಶನವುಳ್ಳವರಾಗಿ ಉದಾರಾನುಭಾವರಾಗಿ, ಕಲಾಪುತ್ರರಾಗಿ—ಉದ್ದೇಶ, ವಿಷಯ, ರೀತಿ ಶೈಲಿ, ಭಾವ, ಭಂಗಿಗಳು—ಹೊಸದು ಬೇಕೆಂದರೆ ಹೊಸದು, ಹಳೆದು ಬೇಕಾದರೆ ಹಳೆದು—ನಮ್ಮ ಸಿಂಗರವಾದ ಮಂಗಳಮಯವಾದ ಕನ್ನಡ ನಾಡಿನಲ್ಲಿ ಬಿಡುಕಾಗುತಕ್ಕವಲ್ಲವನ್ನು ಬಳಸಿಕೊಂಡು ಹೊಸ ಜೀವವನ್ನು ಎಲ್ಲೆಲ್ಲಿಯೂ ತುಂಬಿ! ಆಗ್ಗೆ ವಿಶ್ವವಿದ್ಯಾನಿಲಯಗಳೂ, ಪರಿಷತ್ತುಗಳೂ, ಪಂಡಿತವರ್ಯರೂ, ಗ್ರಂಥಕರ್ತರೂ, ದೇಶಬಾಂಧವರೂ ಜನ್ಮವೆತ್ತಿದಕ್ಕೆ ಸಾರ್ಥಕತೆ ತೋರುವದು. ಆಗ್ಗೆ ಕನ್ನಡಕ್ಕೆ ಹಿಂದಿನ ಸಾಹಿತ್ಯ ಸೌಭಾಗ್ಯಕ್ಕಿಂತಲೂ ಮುಂದಿನ ಸಾಹಿತ್ಯದ ಶಕ್ತಿ ಹೆಮ್ಮೆಯ ವಿಷಯವಾಗುವದು. ಆಗ್ಗೆ ಕನ್ನಡಿಗರು ಇಷ್ಟು ಕೇಡಸ್ತಿಗಳಾಗುವರು(?). ಹಿಂದುಳಿದವರ ಜನಸಾಮಾನ್ಯರ ಮುಸುಕು ಮುಚ್ಚಿರುವ ಆತ್ಮಶಕ್ತಿಯನ್ನು ಬಿಡುಗಡೆ ಮಾಡಿದರೆ ಎಷ್ಟು ಸಾಹಿತ್ಯ ಸಂಪತ್ತು ಹೊರಕ್ಕೆ ಹೊಮ್ಮುವದೋ ಯಾರು ಬಲ್ಲರು.

ಮಹನೀಯರೆ, ನಮ್ಮ ಕನ್ನಡ ನಾಡು ಚಿಕ್ಕದಿರಬಹುದು. ನಮ್ಮ ಕನ್ನಡಿಗರು ಸ್ವಲ್ಪ ಜನರಿರಬಹುದು. ಅರಗವನ್ನು ಚೆಲ್ಲಿದಂತೆ ಚದರಿ ಹೋಗಿರಬಹುದು. ಆದರೆ ಕರ್ನಾಟಕದ ಪೂರ್ವದ ಚರಿತ್ರೆಯನ್ನು ಪ್ರಸ್ತುತ ಸಾಹಸಗಳನ್ನು ನೆನಸಿಕೊಂಡರೆ, ನಮ್ಮ ಪುರೋವೃದ್ಧಿಯಲ್ಲಿ ಯಾವ ಸಂದೇಹಕ್ಕೂ ಕಾರಣವಿರುವದಿಲ್ಲ. ಈ ಪುಣ್ಯಕ್ಷೇತ್ರದಲ್ಲಿ ಬೇರೂರಿ, ಆಕಾಶ ಮುಟ್ಟಿರುವ ಎಲ್ಲ ಪ್ರದೇಶಗಳಿಂದಲೂ ಗಾಳಿಯನ್ನೂ, ಬೆಳಕನ್ನೂ, ಆಹಾರವನ್ನೂ, ತೇಜಸ್ಸನ್ನೂ, ಹೀರಿಕೊಳ್ಳುವ ಉದಾರ ಹೃದಯವೊಂದನ್ನು ನಾವು ಧನ್ಯವಾಗಿ ಕಾಪಾಡಿಕೊಂಡರೆ — ಅವರನ್ನು ಅನುಸರಿಸುವದು, ಇವರನ್ನು ಧಿಕ್ಕರಿಸುವದು, ಒಬ್ಬರ ವೇಷವನ್ನು ತಾಳಿಕೊಳ್ಳುವದು, ಮತ್ತೊಬ್ಬರ ಮಹಿಮೆಯನ್ನು ಸಹಿಸಲಾರದೆ ಕುಯುಕ್ತಿಗಳನ್ನು ಹೂಡಿ ಅಡಿಕೊಳ್ಳುವದು, ಈ ಅಭ್ಯಾಸ ಚೇಷ್ಟೆಗಳನ್ನೂ ಮನೋವಿಕಾರಗಳನ್ನೂ, ಬಿಟ್ಟು ಬಿಡುವದಾದರೆ:- ಸ್ವಪ್ರಕೃತಿ, ಸ್ವಪ್ರತಿಭೆಯನ್ನು ವಿಚಾರ ಮಾಡಿ ಅರಿತು, ನಮ್ಮ ಆವರಣ ನಮ್ಮ ಅನುಕೂಲ್ಯವನ್ನು ಮನದಟ್ಟು ಮಾಡಿಕೊಂಡು ನ್ಯೂನತೆಗಳನ್ನೂ, ದೌರ್ಬಲ್ಯಗಳನ್ನೂ ಪರಿಶೋಧಿಸಿ, ಸತ್ಯಸಂಧರಾಗಿ ಋಜು ಮಾರ್ಗದಲ್ಲಿ ಕರ್ಮವೀರರಾಗಿ ಮುಂದಕ್ಕೆ ಹೆಜ್ಜೆಯನ್ನಿಡುವ ಪಕ್ಷದಲ್ಲಿ ನಮ್ಮ ಜನವೂ, ಜನದೊಡನೆ ಸಾಹಿತ್ಯವೂ, ಸಾಹಿತ್ಯದೊಡನೆ ಜನವೂ ಅಮೂಲ್ಯವಾಗುವದು; ಅಮೋಘವಾಗುವದು; ಸತ್ಯಪ್ರತಿಷ್ಠಿತವಾಗುವದು, ಧರ್ಮಪ್ರತಿಷ್ಠಿತವಾಗುವದು. ಆಗ್ಗೆ ಅದರ ಯಶಸ್ಸಿಗೆ ಮಿತಿಯುಂಟೆ? ಗುಣವಿದ್ದಲ್ಲಿ ಗಾತ್ರವನ್ನು ಯಾರು ನೋಡುವರು? ನಿಯುಕ್ತಿಯಲ್ಲಿ ವೇಷ-ಭೂಷಣಗಳನ್ನು ಯಾರು ಅರಿಸುವರು? ಎತ್ತ ಕಡೆಯಿಂದ ಶಿಕ್ಷೆಯನ್ನು ಪಡೆದರೂ, ಎತ್ತ ಕಡೆಯಿಂದ ಬೆಂಬಲವನ್ನು ಬಯಸಿದರೂ, ಜೇನು ಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲಾ ತನ್ನ ಜೇನು ತುಪ್ಪವನ್ನಾಗಿಯೇ ಮಾಡಿಕೊಳ್ಳುವಂತೆ, ಎಲ್ಲವೂ ಕನ್ನಡವೇ ಆಗಿ ಹೋದರೆ ಅದು ಹೊರಗಿನದು ಹೇಗೆ ಆದೀತು? ಮೊದಲಿನಿಂದಲೂ ನಮ್ಮ ಕರ್ನಾಟಕದ ಚರಿತ್ರೆಯೇ ಹೀಗೆಂದು ತೋರುವದು. ಆರ್ಯಾವರ್ತಕ್ಕೂ ದಕ್ಷಿಣ ಪಥದ ಸಮುದ್ರದ ಗಡಿಗಳಿಗೂ ಓಡಾಡುವ ರಾಜಮಾರ್ಗವಾಗಿ ಚಲಿಸಿ ಪಶ್ಚಿಮ ಸಮುದ್ರದ ಎದೆಯ ಮೇಲೆ ತನ್ನ ಹಡಗುಗಳನ್ನು ತಾಂಡವ ಮಾಡಿಸುತ್ತ, ಪಾರಸಿಕ, ಬ್ಯಾಬಿಲೋನಿಯ ಮುಂತಾದ ದೇಶದ ಜನರೂ, ಗ್ರೀಕರೂ, ರೋಮನರೂ, ಮುಂತಾದ ನಾಗರೀಕ ಜನರೊಡನೆ ನಾಗರೀಕತೆಯಿಂದ ವ್ಯವಹರಿಸುತ್ತ ಐಹಿಕ ವಿಷಯದಲ್ಲಾಗಲೀ, ಪಾರತ್ರಿಕ ವಿಷಯದಲ್ಲಾಗಲಿ, ಧರ್ಮಪ್ರಪಂಚದಲ್ಲಾಗಲೀ, ಕಾರ್ಯಪ್ರಪಂಚದಲ್ಲಾಗಲೀ, ಯಾವದರಲ್ಲೂ ಅತಿಗೆ ಹೋಗದೆ ಮಧ್ಯಸ್ಥನಾಗಿ ಕ್ರಮವಾಗಿ, ಸಮ್ಮಿತವಾಗಿ, ವೃದ್ಧಿ ಹೊಂದುತ್ತ ಅನೇಕ ರಾಜವಂಶಗಳನ್ನು ಪರಾಕ್ರಮದಿಂದ ಕೀರ್ತಿವಂತರನ್ನಾಗಿ ಮಾಡುತ್ತ ಬೌದ್ಧಗುರುಗಳು, ಜೈನ ಯತಿಗಳು, ಶ್ರೀ ಶಂಕರಾಚಾರ್ಯರೂ, ಶ್ರೀ ರಾಮಾನುಜಾಚಾರ್ಯರೂ, ಶ್ರೀ ಮಧ್ವಾಚಾರ್ಯರೂ, ಶ್ರೀ ಬಸವೇಶ್ವರರೂ, ಇಂಥ ಪ್ರಧಾನರಾದ ಸಂಸ್ಥಾಪನಾಚಾರ್ಯರುಗಳಿಗೆ ತನ್ನ ಸಮೃದ್ಧಿಯಿಂದ ಆಶ್ರಯವನ್ನು ನೀಡುತ್ತ ಶಿಲ್ಪಕಲೆ, ಚಿತ್ರಕಲೆ, ಗಾನಕಲೆ, ಸಾಹಿತ್ಯಕಲೆ ಮುಂತಾದ ಆತ್ಮಸ್ಫುರಣಗಳಲ್ಲಿ ಸೌಂದರ್ಯಾನ್ವೇಷಣೆಯನ್ನು ಮಾಡುತ ಕಾಲಕ್ಕೆ ತಕ್ಕಂತೆ ಪ್ರಭಾವತೆಯನ್ನೂ, ಪ್ರಬೋಧಕತೆಯನ್ನೂ, ಗುರಿಯಲ್ಲಿಟ್ಟುಕೊಂಡು, ಹೊಸ ಮತ, ಹೊಸ ಭಾಷೆ, ಹೊಸ ಕವನ, ಹೊಸ ದೇವ ಮುಂತಾದ ಹೊಸ ಪರೀಕ್ಷೆ ಹೊಸ ಆರಂಭಗಳನ್ನು ಉದಾರ ಹೃದಯದಿಂದ ಸ್ವೀಕಾರ ಮಾಡುತ್ತ ಬೆಳೆದು ಪಾರಾಗಿ ಪರಾಕ್ರಾಂತವಾಗಿ ಬದುಕಿಸೆಯಲ್ಲಿರುವಾಗ ಈಗ ಕೂಡಿ, ಗರ್ವದಿಂದ ಕಾಲೋಚಿತದಿಂದ ಶ್ರೇಯೋಮಾರ್ಗವನ್ನು ಸೂಚಿಸುವ ನೂತನ ಶಿಕ್ಷಣವನ್ನು ಪಡೆದು ಸ್ವಲ್ಪ ಕಾಲದಲ್ಲಿಯೇ ನವಚೈತನ್ಯವನ್ನು ನಿದ್ರೆಯುಳಿದು ಮೈಮರೆದು ಮಲಗಿ ಎದ್ದಸಿದಂತೆ ಮೈ ಮುರಿದು ನೆಗೆದು ಕತ್ತನ್ನು ಅಲುಗಿ ಗರ್ಜಿಸುತ್ತಿರುವ ಈ ಕನ್ನಡ ನಾಡಿನ ಚರಿತ್ರೆ ಯಾವ ಕನ್ನಡಿಗನಿಗೆ ತಾನೇ ಆತ್ಮಗೌರವವನ್ನೂ ಆತ್ಮಪ್ರತ್ಯಯವನ್ನೂ ಹೊಸ ಹುರುಪನ್ನೂ ಹೊಸ ಪ್ರಯತ್ನವನ್ನೂ ಹೊಂದಿಸಿ ಕೊಡಲಾರದು? ಆದುದರಿಂದ ಕನ್ನಡಿಗರೇ ಏಳಿ ಎಚ್ಚರಗೊಳ್ಳಿ, ಆರಂಭ ಮಾಡಿ ಪೂರ್ವ ಚರಿತ್ರೆಯೂ ವಿಶ್ವವಿದ್ಯಾಲಯದ ಸಾಹಿತ್ಯ ಪರಿಷತ್ತಿನ ನೂತನ ಸಾಹಿತ್ಯಕಾರರ ಉತ್ಸಾಹಪ್ರೇರಿತರಾಗಿ ಪಿಂಚಿತರಾದ(?) ಯುವಕ ದೇಶವತ್ಸಲರ ಕರ್ನಾಟಕ ಭಕ್ತರ ಜೀವನವನ್ನು ಸದಾಕಾಲದಲ್ಲಿಯೂ ತನ್ಮಯವಾದ ದಿವ್ಯ ಚಿತ್ತದಲ್ಲಿ ಪರ್ಯಾಲೋಚಿಸುತ್ತಿರುವ ನಮ್ಮ ಮೈಸೂರು ಶ್ರೀಮನ್ ಮಹಾರಾಜರಿಂದ ಸಾಹಿತ್ಯ ಸಂಸ್ಕೃತಿಗಳ ಕಟ್ಟಿನಿಂದ ಏಕ ಜನತೆಯನ್ನು ಬಯಸುತ್ತಿರುವ ಸಕಲ ಕರ್ನಾಟಕದ ಮಹತ್ಪ್ರೇರಣೆಯಿಂದ ಮಹತ್ಸಹಾಯದಿಂದ ಸಾಧ್ಯವಾಗದ ಕಾರ್ಯವಾವುದು? ಏಳಿ ಎಚ್ಚರಗೊಳ್ಳಿ, ಆರಂಭ ಮಾಡಿ. ಹಿಂದೆ ಯುರೋಪಿನಲ್ಲಿ ರಿನೇಸಾನ್ಸ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ ಒಬ್ಬ ಮಹಾಪಂಡಿತ "ನಾವು ಸತ್ತವರನ್ನು ಎಬ್ಬಿಸುವದಕ್ಕೆ ಹೋಗುತ್ತೇವೆ" ಎಂದು ಘೋಷಿಸಿದನು. ನಾವು ಕನ್ನಡಿಗರು ಇಂದು ಸತ್ತವರನ್ನು ಎಬ್ಬಿಸುವದೇ ಅಲ್ಲ, ಬದುಕಿರುವವರನ್ನು ಎಚ್ಚರಗೊಳಿಸುವದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ, ಮಾಡುವದಕ್ಕೇ ಅಲ್ಲ, ಹೊಸ ಉತ್ತಮ ಸಾಹಿತ್ಯ ಒಂದನ್ನು ಸೃಷ್ಟಿ ಮಾಡುವದಕ್ಕೆ ಹೊರಟಿರುವೆವು. ಹೊರಟವರು ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆ ಅಲ್ಲ, ಸಾಹಿತ್ಯ ಮಾನವ ಜೀವನದ ಧರ್ಮನಿರ್ವಾಹಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಕೈಯಲ್ಲಿನ ಖಡ್ಗವೂ ಅಹುದೆಂದು ತಿಳಿದಿರುವೆವು. ನಾವು ಹಿಂದು ಶಾಂತಿಯನ್ನು ತರಲಿಲ್ಲ ಖಡ್ಗವನ್ನು ತಂದೆವು. ಎಂದು

ಕರ್ತೃರ ಕಾರುಣ್ಯದಿಂದ ಬಿಟ್ಟ ಮಹಾತ್ಮ ಧರ್ಮಪುತ್ರನ ರಹಸ್ಯವನ್ನು ಹೃದಯದಲ್ಲಿಟ್ಟಿರುವೆವು. ಪುರಾತನ ಕರ್ಮವಾಸನೆಯಿಂದ ಆತ್ಮನು ಬದ್ಧನಾಗಿದ್ದರೂ ಸಂಪೂರ್ಣವಾಗಿ ಬದ್ಧನಲ್ಲ ಸ್ವತಂತ್ರನು ಮುಕ್ತಿಗರ್ಹನು ಹೊಸ ಕರ್ಮವನ್ನಾರಂಭಿಸಿ ವಿಶ್ವಾತ್ಮ-ಪರಮಾತ್ಮನನ್ನು ತನ್ನಲ್ಲಿ ಅನುಭವಿಸಿ, ಸಾಯುಜ್ಯವನ್ನು ಪಡೆಯುವ ಸಹಜವಾದ ಚೈತನ್ಯವುಳ್ಳವನು ಎಂದು ಆರ್ಯರಾದ ನಮ್ಮ ಹಿರಿಯರು ನಮಗೆ ಉಪದೇಶ ಮಾಡಿದ್ದಾರೆ ಕನ್ನಡಿಗರಾ, ಏಳಿ, ನಮ್ಮಲ್ಲಿ ಯಾವ ಯಾವ ಭಿನ್ನಾಭಿಪ್ರಾಯಗಳು ಭಿನ್ನ ರುಚಿಗಳು ಇದ್ದರೂ, ನಮ್ಮ ನಮ್ಮಲ್ಲಿಯೇ ಅವು ಇರಲಿ ಹಳೆಯ ಮಾರ್ಗವನ್ನು ಹಿಡಿಯುವವರು ಹೊಸ ಮಾರ್ಗವನ್ನೂ ಹಿಡಿಯುವರು ಸಂಸ್ಕೃತಾಭಿಮಾನಿಗಳು ಆಂಗ್ಲಾಭಿಮಾನಿಗಳು ಭಾರತ ಮಾತೆಯಲ್ಲಿ ನಿರತಿಶಯವಾತ್ಸಲ್ಯವುಳ್ಳವರು ವಿಶ್ವದೃಷ್ಟಿಯ ಸರ್ವಸಮೈಕ್ಯದ ಸಾಧುಸಂತರ —ಯಾರೇ ಆಗಲಿ, ಒಬ್ಬರಂತೆ ಒಬ್ಬರಿರುವೆವೆಂಬ ಬೂಟಾಟಿಕೆಯ ನಿರ್ಬಂಧ ಬೇಡ? ಒಬ್ಬರಂತೆ ಒಬ್ಬರಿಲ್ಲವೆಂಬ ಜಗಳವೂ ಬೇಡ ನಮಗೆ ಭಗವಂತನು ದಯಪಾಲಿಸಿರುವ ವರಪ್ರಸಾದಗಳನ್ನು ಬಗೆಬಗೆಯಾದ ಶಕ್ತಿ ರುಚಿಗಳನ್ನು ಕನ್ನಡ ನಾಡಿಗೆ, ಕನ್ನಡ ನುಡಿಗೆ ಒಮ್ಮನಸ್ಸಿನಿಂದ ಮುಡಿಪು ಕಟ್ಟೋಣ ಒಮ್ಮೆಯಾಗಿ ಅವುಗಳ ಏಳಿಗೆಯಲ್ಲಿ ಏಳಿಗೆಯಾಗೋಣ.

ಸಾಹಿತ್ಯ ಕಲಾರಾಧಕರೇ ಆಗೋ ನೋಡಿ, ಚಲನೆಯಿಲ್ಲದೆ ನಿಂತಿರುವಳು ಕರ್ನಾಟಕ ಸರಸ್ವತಿದೇವಿ. ತಲೆಯ ಮೇಲೆ ಭಾರವಾದ ಕಿರೀಟ, ಅಂಗಾಂಗವೆಲ್ಲಾ ತೆರಪಿಲ್ಲದೆ ಮುಳ್ಳು ಹೊಯ್ದಂತೆ ಹೇರಿರುವ ಜವಾಹಿರ ಶಾಸ್ತ್ರನಿಯಮಿತವಾದ ಒಂದು ಬಗೆಯ ನಿಲುವಿನ ಭಂಗಿ ಮುಖದಲ್ಲಿ ಕಲ್ಲಿನಲ್ಲಿ ಕಡೆದ ಏನೋ ಒಂದು ಬಗೆಯಾಗಿ ನಿಂತ ನಿಲುವಿನ ನಗ, ಹಾಗೇ ನೋಡುವವನ ಕಣ್ಣಿಗೆ ಕಣ್ಣು ನೆಟ್ಟು ದುರುಗುಟ್ಟಿಕೊಂಡು ನೋಡುತ್ತದೆ; ಇಲ್ಲಿ ಒಮ್ಮೊಮ್ಮೆ ಆಡುವಂತೆಯೂ ಕಾಣುತ್ತದೆ ಮೈಯೆಲ್ಲಾ ಮುಸುಕಿದ ದಪ್ಪವಾದ ಹಳೆಯ ಜರತಾರಿಯ ವಸ್ತ್ರ ಉಸಿರು ಬಿಗಿಸಿ ಎದೆಹೊಯ್ಯುತ್ತಾರಲ್ಲ:— ಇಷ್ಟು, ಏನರುತ್ತದೆಯೋ? ಇಲ್ಲ ಬರೆಯ ನಮ್ಮೆದೆಯ ಪದರಾಟವೆಯೋ? ಎಚ್ಚತ್ತಿರುವಳೋ? ನಿದ್ದೆಹೋಗುತ್ತಿರುವಳೋ? ಬನ್ನಿ ಆಕೆಯನ್ನು ಎಚ್ಚರಿಸೋಣ. ಕಿರೀಟದ, ಜವಾಹಿರಿಯ, ಶಿಲ್ಪನಿಯಮದ ಜರತಾರಿಯ ಭಾರವನ್ನು ಬಿಡಿಸೋಣ. ವಿಶ್ವವಾಣಿಯ, ದಿವ್ಯವಾಣಿಯ, ಸಂಜೀವ ಮಣಿಯ ಸ್ಪರ್ಶದಿಂದ ಶಾಪಗ್ರಸ್ತಳಾದ ಶಿಲಾಮೂರ್ತಿಯನ್ನು ಜೀವವುಳ್ಳ ಚೆಲುವೆಯನ್ನಾಗಿ ಮಾಡೋಣ. ಆ ಉನ್ನತ ಪೀಠದಿಂದ ಆಗ ಆಕೆ ಇಳಿಯುವಳು. ನಾಡಿನಲ್ಲೆಲ್ಲಾ ಸುಳಿಯುವಳು. ಸ್ವಾತಂತ್ರ್ಯದಿಂದ ಸಹಜವಾಗಿ ಆಕೆಯ ಹೃದಯವು ಆಡುವದು. ಕಣ್ಣು ಬಲಿದ ಹೆಣ್ಣಿನ ಕಣ್ಣು ಬಿನ್ನಾಣವನ್ನೆಲ್ಲಾ ತುಂಬಿ ಚೆಲ್ಲುವದು. ಕಾಳಿ ಕಾವೇರಿದ ಕೂಡಲು ಕನ್ನಡ ನಾಡಿನ ಬಯಲುಗಳ ನಡುವೆ ಮಲ್ಲಿಗೆಗಳನ್ನು ಧರಿಸಿ ಕಂಪು ಸೂಸುವ [illegible] ನಗುನಗುತ ನಮ್ಮಾಡನಾಡಿಯಾಗಿ, ಮನುಷ್ಯರೊಡನೆ ಮನುಷ್ಯಳಾಗಿ, ದಿವ್ಯಾತ್ಮರೊಡನೆ ದೇವಿಯಾಗಿ, ತಾನೂ ನಲಿದು ನಮ್ಮನ್ನೂ ನಲಿಸುವಳು. ಆಗ ಆಕೆಯೂ ಧನ್ಯಳು, ನಾವೂ ಧನ್ಯರು! ತಾಯಿ ಧನ್ಯಳಾದರೆ ಮಕ್ಕಳು ಧನ್ಯರಲ್ಲವೇ?

—ನವಕರ್ನಾಟಕ.

ಟೆಂಡರ ನೋಟೀಸು.

ಇದರ ಮೂಲಕ ತಿಳಿಯಪಡಿಸುವದೇನಂದರೆ —

ಯಲ್ಲಾಪೂರ ತಾಲೂಕ ಲೋಕಲ ಬೋರ್ಡಿಗೆ ಸಂಬಂಧಪಟ್ಟ ಈ ಕೆಳಗೆ ಕಾಣಿಸಿದ ಡಿಸ್ಟ್ರಿಕ್ಟ ಲೋಕಲ ಬೋರ್ಡ ಕಾಮಗಾರಿಗಳು ಮಂಜೂರಾಗಿ ಬಂದದ್ದು ಅವನ್ನು ತಾರೀಕು 1-10-1928 ನೇ ಶನಿವಾರ ದಿವಸ ಮಧ್ಯಾಹ್ನ ೩ ಘಂಟೆಯ ಸಮಯಕ್ಕೆ ಮುಂಡಗೋಡ ಡಿಸ್ಟ್ರಿಕ್ಟ ಬಂಗಲೆಯಲ್ಲಿ ಕೂಡ ತಕ್ಕ ಜನರಲ್ ಕಮೀಟಿಯಲ್ಲಿ ಕಂಟ್ರಾಕ್ಟಕ್ಕೆ ಕೊಡುವದರಲ್ಲಿ ಬಂದಾವು. ಕಾರಣ ಸದ್ರಿ ಕಾಮಗಾರಿಗಳನ್ನು ಕಂಟ್ರಾಕ್ಟಕ್ಕೆ ಪಡೆಯ ಅಪೇಕ್ಷೆಯುಳ್ಳವರು ಸದ್ರಿ ಕಮೀಟಿಯ ವೇಳ್ಯಾ ಹಾಜರ ಇದ್ದು ತಮ್ಮ ಟೆಂಡರ ಅರ್ಜಿಗಳನ್ನು ಕೊಡತಕ್ಕದ್ದು. ಯಾರ ಅರ್ಜಿ ಕಮೀಟಿಯಲ್ಲಿ ಮಂಜೂರಾಗುತ್ತದೋ ಅವರು ಕಾಯಿದೆಯಂತೆ ಕೂಡಲೇ ಕರಾರು ಬರಕೊಟ್ಟು ಎಸ್ಟಿಮೇಟ ರಕಮಿನ $\frac{1}{10}$ ರಕಂ ಡಿಪೋಜಿಟ ಕಟ್ಟತಕ್ಕದ್ದಿರುತ್ತದೆ. ಯಾರಿಗಾದರೂ ಸದ್ರಿ ಕಾಮಗಾರಿಗಳ ಪ್ಲೆನ ಎಸ್ಟಿಮೇಟುಗಳ ಮಾಹಿತಿ ಬೇಕಾದ್ದಲ್ಲಿ ರಜೆ ದಿವಸಗಳ ಹೊರತಾಗಿ ಇತರೇ ದಿವಸಗಳಲ್ಲಿ ಆಫೀಸ ವೇಳ್ಯಾ ನಮ್ಮ ಆಫೀಸಿನಲ್ಲಿ ಬಂದು ಮಾಹಿತಿ ಪಡೆಯಬಹುದು ತಾರೀಕು ೮-೯-೧೯೨೮.

ಕಾಮಗಾರಿ ಹೆಸರು.	ಎಸ್ಟಿಮೇಟಿನ ರಕಂ.
1. ಕುಂಚಿಕೇರಿಯಲ್ಲಿ ಹೊಸ ದವಾಖಾನೆ ಇಮಾರತು ಕಟ್ಟುವದು.	3000/-
2. ಬಿಗಳ್ಳಿಯಲ್ಲಿಯ ಲೋಕಲ್‌ಬೋರ್ಡ ಶಾಲಾ ಇಮಾರತಿಯ ಸ್ಪೆಶಲ್ ರಿಪೇರಿ.	683/-

H. S. BHAT.
President,
T. L. B. Yellapur.

ಕನ್ನಡಿಗರ ಕೂಟದಿಂದ

ವೈ. ವಾ. ಕೆರೂರ ವಾಸುದೇವಾಚಾರ್ಯರ

ಒಂದು ಚಿಕ್ಕ ಕಥೆ!] [ಬೆಲೆ ೧|| ಆಣೆ!!

ತೊಳೆದ ಮುತ್ತು!

ಸುಂದರವಾದ ಅಕ್ಷರ; ದಪ್ಪವಾದ ಚಂದಾದ ಹಾಳೆ; ಅಚ್ಚುಕಟ್ಟಾದ ಮುದ್ರಣ; ಮನಮೆಚ್ಚುವಂಥ ಕಥೆ, ಬೆಲೆ ತೀರ ಕಡಿಮೆ ಎರಡಾಣೆಯ ಪೋಷ್ಟ ಸ್ಟಾಂಪುಗಳನ್ನು ಕಳುಹಿಸಿ ಪಡೆದು ಸಂತೋಷಪಡಿರಿ. ಏಜಂಟರಾಗಲಿಚ್ಛಿಸುವವರು ಬೇಗನೇ ಬರೆದುಕೊಳ್ಳಿರಿ.

ಆಡಳಿತಗಾರ,
ಕನ್ನಡಿಗರ ಕೂಟ.
ಧಾರವಾಡ.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ

ಆಯುರ್ವೇದಿಕ] **ಅನುಭವಿಕ ಔಷಧಗಳು!** [ಮಲಬಾರಿ ಕೃತಿ!

೧. ಮದನಕಾಮೇಶ್ವರಿ ಲೇಹ- ಧಾತುಪುಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನಕಾಮೇಶ್ವರ- ಗುಣ ಮೇಲಿನಂತೆ. ತ. ೧ ಕ್ಕೆ ೨ ರೂ. ೩ ಕ್ಕೆ ೫ ರೂ [ತೊ. ೧ ಕ್ಕೆ ೨|| ರೂ.
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರ. ಇಂದ್ರಿಯದ ಹುಣ್ಣು, ಪರಮಾ ಯಾವದೇ ತರದ ಕಠಿಣ ರೋಗವಾದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣ ಹೊಂದುವದು.
೪. ಗರ್ಮಿ ರೋಗಕ್ಕೆ ಮಲಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ.
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ, ಕೋಷ್ಟವಾತ, ಸಂಧಿವಾತ ಇ. ೮೦ ತರದ ವಾತರೋಗಕ್ಕೆ ಸಿದ್ಧೌಷಧಿ ರೂ. |||, ೧|, ೨
೬ ಕೆಮ್ಮಿನ ಗುಳಿಗೆ- ಕ್ಷಯ, ದಮ್ಮು, ಕೆಮ್ಮು ಇ. ಮೇಲೆ ರಾಮಬಾಣ. ತೊ. ೧೦ ಆಣೆ ರೂ. ೧, ೧||
೭. ವಾತ-ಪಿತ್ತ-ಕಫನಾಶಕ ಜುಲಾಬಿನ ಗುಳಿಗೆ- ೨೫ ಗೆ ತ. ೮ ಆ; ೧೦೦ ಕ್ಕೆ ೧|| ರೂ.
೮. ಸಂಜೀವನಿ- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಸನ್ನಿಪಾತ ಇ. ಜ್ವರಗಳ ಮೇಲೆ. ೨೫ ರ ತ. ೧ ರೂ; ೧೦೦ ರ ತ ೩ ರೂ
೯. ಚಂದ್ರಪ್ರಭಾ ಮಾತ್ರೆ- ೨೦ ತರದ ಮೇಹ, ಮೂತ್ರದಾಹ, ಅಶ್ಮರೀ, ಧಾತುಕ್ಷಯ ಸ್ವಪ್ನದೋಷ, ಇ. ತ. ೨ ರೂ.
೧೧. ದಂತಮಂಜನ- ಹಲ್ಲು ನೋವು, ಹುಳ, ಕೀವು, ಅಲಗಾಡುವಿಕೆ ಇ. ದೋಷ ಗುಣವಾಗುವವು. ತ ೨ ಆಣೆ, ೧೨ ಕ್ಕೆ ೨| ರೂ.
೧೧. ಜಂತುವಿನ ಔಷಧ- ಹೊಟ್ಟೆ-ಹುಳಗಳ ಮೇಲೆ ರಾಮಬಾಣ ಪುಡಿ ೧ ಕ್ಕೆ ೧|| ಆಣೆ, ೨೫ ಕ್ಕೆ ೧|| ರೂ. ೧೦೦ ಕ್ಕೆ ೫| ರೂ.
೧೨. ಇಸಬಿಯ ಮಲಮು- ತ ೪ ಆಣೆ, ೧೨ ಕ್ಕೆ ೨|| ರೂ; ಸೋಮಶೇಖರ ಮಾತ್ರೆ ಫಕ್ತ ೫ ರೂ. ೧|| ೨|||, ೫
೧೩. ವಾತಸಂಹಾರಿ ತೈಲ- ನಾರಾಯಣ ತೈಲ, ಅರ್ಧಾಂಗ ಮೊದಲಾದ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು ಬಾಟ್ಲಿ ರೂ. ೧||, ೨|||.
೧೪. ವಾಕ್‌ಸಂಜೀವನಿ ಗುಟಿಕಾ- ಮಾತು ತಡೆಯುವಿಕೆ, ತೊದಲುವಿಕೆ ಇ. ತ ೨ ರೂ.
೧೫. ಪುತ್ರಜೀವನ ಲೇಹ- ಗರ್ಭದಶವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು ತ ೪ ರೂ ಟ. ಖರ್ಚು ಬೇರೆ; ಅನುಪಾನ ಪತ್ರ ಔಷಧದ ಸಂಗಡ; (ಆರೋಗ್ಯವೃದ್ಧಿ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಗುಳಿಗೆ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ವರೂಪ ಇಟ್ಟು ಪತ್ರದ್ವಾರಾ ಯಾ ಸಮಕ್ಷ ತಿಳಕೊಳ್ಳಬಹುದು.

ಪತ್ತೆ:- ಮೆನೇಜರ, ಆರ್ಯ ಚಿಕಿತ್ಸಾಮಂದಿರ, ಪೋ. ಚೆಂಡಿಯೆ ತಾ. ಕಾರವಾರ.

ಮುಂಬಯಿ ಏಜಂಟ:- R. C. KAMAT, *Teashop, Store Lane, Fort Bombay*

ವಿಶೇಷ ಸಂಗತಿಗಳು.

— ಹಿಂದುಸ್ಥಾನದಲ್ಲಿ ದಿನಾಲು ೧೫೦೦೦ ಜನರು ನಿಶ್ಯಕ್ತಿಯಿಂದ ಸಾಯುತ್ತಾರೆ. ಸರಕಾರದಿಂದ ಯೋಗ್ಯ ವ್ಯವಸ್ಥೆಯಾದರೆ, ಇಷ್ಟು ಜನರು ಬದುಕುತ್ತಿದ್ದರು. ಆದರಿಂದ ಬ್ರಿಟಿಶರು ಹಿಂದುಸ್ಥಾನದೊಳಗಿಂದ ಕಾಲ್ತೆಗೆಯಬೇಕೆಂದು ಸರ್ ಶಾಪುರಜಿ ಸಕಲಾತವಾಲಾರವರ ಹೇಳಿಕೆ.

— ಭರತಪುರ ಮಹಾರಾಜರಿಗೆ ಹಿಂದುಸ್ಥಾನದ ಸರ್ವಾಧಿಪತಿಗಳು ಭರತಪುರದ ೧೦೦ ಮೈಲಿನ ಪ್ರದೇಶದಲ್ಲಿ ಸಂಚರಿಸಬಾರದೆಂದು ಕಟ್ಟಪ್ಪಣೆ ಹೊರಡಿಸಿದ್ದಾರೆ. ೧೦೦ ಮೈಲು ಪ್ರದೇಶವು ಭರತಪುರ ಸಂಸ್ಥಾನದ್ದೇ. ಆ ಪ್ರದೇಶದೊಳಗಿನ ಗ್ರಾಮಸ್ಥರಾಗಲಿ, ಪಟ್ಟಣಿಗರಾಗಲಿ ಹೋದರೆ, ಮಹಾರಾಜರ ಮೇಲೆ ಪ್ರಯೋಗ್ಯ ಅಂದರೆ ಕೈಕೊಳ್ಳಾಗುವದಂತೆ! ಬ್ರಿಟಿಶ ರಾಜ್ಯದೊಳಗಿನ ಸಂಸ್ಥಾನಿಕರ ಅವಸ್ಥೆ ನೋಡಿರಿ!

— ಪಂಡಿತ ಮೋತಿಲಾಲರ ಮುಗಂದಿರಾದ ಜವಾಹರಲಾಲ ನೆಹರೂರವರು ಸ್ವಾತಂತ್ರ್ಯ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಈ ಬಗ್ಗೆ ಅವರ ಮೇಲೆ ಹಿಂದುಸ್ಥಾನ ಸರಕಾರವು ಖಟ್ಲೆ ಮಾಡುವದೆಂದು ಅಂತರಂಗದ ಒಂದು ಬಾತ್ಮಿ. ಖಟ್ಲೆಯಾದರೆ ಸ್ವಾತಂತ್ರ್ಯ ವಿಚಾರಕ್ಕೆ ದೇಶದಲ್ಲೆಲ್ಲ ಚಾಲನೆ ದೊರಕುವದೆಂದು ಮುಂಬಯಿಯ ಮಿ। ಭರೂಚಾರವರ ಜಾಗ್ರತಿ!

— ಕಪ್ಟನ್ ಶಿಕಂದರ ಹಯಾತಖಾನರವರು ಭವಲಾಪುರ ಸಂಸ್ಥಾನದಲ್ಲಿ ಮುಖ್ಯ ಪ್ರಧಾನರಿದ್ದರು. ನಿಜಾಮರು ಇವರ ಗೈರವರ್ತನದ ಬಗ್ಗೆ ಇವರನ್ನು ಪದಭ್ರಷ್ಟ ಮಾಡಿದರು. ಅವರು ಪಂಜಾಬ ಕಾಯದೆ ಕೌನ್ಸಿಲಿನ ಸಭಾಸದರು. ಸ್ಯಾಮುನ್ ಕಮಿಟಿಯ ಸಹಕಾರಿಗಳು. ಆದರಿಂದ ಹಿಂದುಸ್ಥಾನ ಸರಕಾರದವರು ಇವರಿಗೆ ಮುಖ್ಯ ಪ್ರಧಾನ ಅಧಿಕಾರವನ್ನು ಕೊಡಬೇಕಾಗಿ ಭವಾಲಪುರ ಸಂಸ್ಥಾನದ ನವಾಬರಿಗೆ ಬರೆದಿದ್ದಾರೆ. ಬ್ರಿಟಿಶರು ಸಂಸ್ಥಾನದ ರಾಜ್ಯಕಾರಭಾರದಲ್ಲಿ ಕೈಹಾಕುವದಿಲ್ಲ, ತಿಳಿಯಿತೇ?

— ವರಿಷ್ಠ ಕಾಯದೆ ಕೌನ್ಸಿಲಿನಲ್ಲಿ ಸರ್ ಹರಿಸಿಂಗ ಗೌರರವರು ಹಿಂದುಗಳಿಗೆ ಕಾಯಿದೆಯಿಂದ ಸುಧಾರಿಸಲು ಬಹು ಪ್ರಯತ್ನಿಸುತ್ತಾರೆ. ಗಂಡಂದಿರು ನಪುಂಸಕರಾದರೆ, ಹೆಂಡರಿಗೆ ಘಟಸ್ಫೋಟ ಮಾಡಿಕೊಳ್ಳುವ ಅಧಿಕಾರವಿರಬೇಕೆಂಬುದೊಂದು ಸರ್ ಹರಿಸಿಂಗರವರ ಕಾಯಿದೆ. ವಿಶೇಷ ರೋಗಗಳಿದ್ದರೂ ಗಂಡಂದಿರಿಗೆ ತ್ಯಜಿಸುವ ಅಧಿಕಾರವಿರಬೇಕಂತೆ. ಹಿಂದು ಧರ್ಮಶಾಸ್ತ್ರದಲ್ಲಿ ಹೆಂಗಸರಿಗೆ ಬೇಕಷ್ಟು ಅಧಿಕಾರಗಳಿರುವದಾಗಿ ಹೇಳಿ ಲಜಪತರಾಯರು ವಿರೋಧಿಸಿದರು. ಗೌರರವರು ತಮ್ಮ ಕಾನೂನಿನ ಸೂಚನೆಯನ್ನು ಹಿಂತೆಗೆದುಕೊಂಡು ಬಿಟ್ಟರು.

— ಧಾರವಾಡದ "ಕರ್ಮವೀರ" ಪತ್ರಿಕೆಯ ಸಂಪಾದಕರಾದ ಶ್ರೀ। ದಿವಾಕರ ರಂಗನಾಥರಾಯರು ಶ್ರೀ ಕ್ಷೇತ್ರ ಕಾಶಿಯೊಳಗಿನ ಹಿಂದು ವಿಶ್ವವಿದ್ಯಾಲಯದಲ್ಲಿ ಕರ್ನಾಟಕದ ಇತಿಹಾಸ ಹಾಗು ಸಂಸ್ಕೃತಿ ವಿಷಯದ ಮೇಲೆ ಉಪನ್ಯಾಸದನ್ನಿತ್ತರು. ಭಾಷೆಯಂತ ಪ್ರಾಂತಗಳನ್ನು ರಚಿಸಬೇಕಾಗಿಯೂ ಶ್ರೀ। ದಿವಾಕರರು ಪ್ರತಿಪಾದಿಸಿದರು.

— ಹಿಂದುಸ್ಥಾನದ ದಂಡೆಗುಂಟಿನ ಸಂಚಾರಗಳನ್ನು ಒಯ್ಯಲು ಹಿಂದೀ ಉಗಿಹಡಗ ಕಂಪನಿಗಳಿಗೆ ಸ್ವಾತಂತ್ರ್ಯವಿರಬೇಕಾಗಿಯೂ, ಬೇರೆ ಕಂಪನಿಗಳಿಗೆ ಈ ವ್ಯಾಪಾರ ಕೊಡಬಾರದಾಗಿಯೂ ಮಿ॥ ಹಾಜಿಯವರು ವರಿಷ್ಠ ಕಾಯದೆ ಕೌನ್ಸಿಲಿನಲ್ಲಿ ಕಾಯಿದೆಯನ್ನು ಸೂಚಿಸಿದ್ದಾರೆ. ಮುಂಬಯಿಯ ಗಿರಣಿ ಸಾವುಕಾರರ ಸಂಘದ ಪ್ರತಿನಿಧಿಗಳಾದ ಸರ್ ವ್ಹಿಕ್ಟರ ಸಸೂನರವರು ಇದನ್ನು ವಿರೋಧಿಸಿದರು. ಸಂಘದವರು ಈ ಕಾನೂನಿಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಹೀಗೆ ದೇಶ-ಪರದೇಶವೆಂಬ ಭೇದ ಮಾಡುವದರಿಂದ ಹಿಂದುಸ್ಥಾನದಲ್ಲಿ ವರ್ಣಭೇದಕ್ಕೆ ಎಡೆಯಾಗುತ್ತದೆಂದು ಅಂತರಂಗ-ಬಹಿರಂಗದಿಂದ ವರ್ಣಭೇದದಿಂದ ಕುಂದಿಸುತ್ತಿರುವ ಯುರೋಪಿಯನ್‌ರು ಪ್ರತಿಪಾದಿಸಿದರು. ಪಂಡಿತ ಮೋತಿಲಾಲರವರ ಮೇಲೂ ಒಂದು ಆಕ್ಷೇಪ. ನೆಹರೂರವರ ರಾಜ್ಯಘಟನೆಯಲ್ಲಿ ಬ್ರಿಟಿಶರ ಹಕ್ಕು ರಕ್ಷಣೆ ನಡೆಗುವದೆಂಬ ಅಭಿಪ್ರಾಯವಿದೆ. ಆದರಿಂದ ಈ ಕಾಯಿದೆಯೂ ಬೇಕೆಂದು ಅವರ ಹೇಳಿಕೆ. ಮೋತಿಲಾಲರು ಮುಂಚೆಯೇ ಇದನ್ನು ಮಾತಾಡಿದ್ದಾಗಿ ಹೇಳಿದರು. ರಿಪೋರ್ಟಿನಂತೆ ಕೊಟ್ಟ ಮೊದಲು ಪಕ್ಷಗಳ ಸ್ವರಾಜ್ಯವನ್ನಿತ್ತು, ಆಮೇಲೆ ಹೀಗೆ ಸಾಧನೆ ಮಾಡಬೇಕೆಂದರು.

— ಮೈಸೂರು ಸರಕಾರವು ಬೆಂಗಳೂರಲ್ಲಿ ಜುಲೈ ೩೦ ನೇ ತಾರೀಖಿಗೆ ಸಂಭವಿಸಿದ ಗಣಪತಿ ಸತ್ಯಾಗ್ರಹದ ಗೊಂದಲದ ಕಥೆಯನ್ನು ಲಂಡನದೊಳಗಿನ 'ಡೇಲಿ ಮೇಲ' ಪತ್ರಿಕೆಗೆ ತಂತಿಯಿಂದ ರವಾನಿಸಿತು. ಹಿಂದುಸ್ಥಾನದಲ್ಲಿ ಮೈಸೂರ ದರಬಾರಕ್ಕೆ ಒಂದು ಸಹ ಪತ್ರಿಕೆ ಸಿಗಲಿಲ್ಲ, ವಿಲಾಯತಿಗೆ ಓಡಿಹೋಗಬೇಕಾಯಿತು.

— ಪೆಶಾವರ ಪಟ್ಟಣದ ಬಳಿಯಲ್ಲಿ ಬುದ್ಧದೇವರ ಒಂದು ಮೂರ್ತಿ ಇದೆ. ಆ ಮೂರ್ತಿಯು ಹೊದಬಂದ ಒಬ್ಬ ಕ್ಷಯರೋಗಿಯನ್ನು ಮುಕ್ತಮಾಡಿತೆಂಬ ಸುದ್ದಿ ಹಬ್ಬಿದೆ. ಸುತ್ತುಮುತ್ತಲಿನೊಳಗಿನ ಕ್ಷಯರೋಗಿಗಳಾಗುಣಹೊಂದುವದಕ್ಕಾಗಿ ಅಲ್ಲಿ ಬರುತ್ತಿದ್ದಾರೆ. ಸರಕಾರವು ಪೋಲೀಸರನ್ನಿಟ್ಟು ಅಲ್ಲಿ ಶಾಂತತೆಯನ್ನು ಕಾಪಾಡಿಕೊಂಡಿದೆ.

— ವಿಜಾಪುರ ಜಿಲ್ಹೆಯೊಳಗಿನ ತಿ। ಕೋರ್ಟಿನಲ್ಲಿ ಒಂದು ದೊಡ್ಡ ಕಳವಾಯಿತು. ೩೦೦೦ ರೂಪಾಯಿಗಳೂ, ಕೆಲವು ಚಿನ್ನಾಭರಣಗಳೂ ಕಳುವಾಗಿವೆ. ಬಾಗಿಲದ ಬೀಗ ತೆಗೆದು ಕಳುವಾಯಿತಂತೆ!

— ಝೀಲಮ್, ಚೆನಾಬ, ರಾವಿ ನದಿಗಳಿಗೆ ನೆರೆಕಟ್ಟಿ ಶಹಾಪುರ, ಜೆಹಲವನ್, ಅಟಕ, ಗುಜರಾನವಾಲಾ, ಸಿಯಾಲಕೋಟ ಪ್ರದೇಶಗಳಲ್ಲಿ ಕೋಟ್ಯಾವಧಿ ರೂಪಾಯಿಗಳ ನಷ್ಟ! ದನಗಳು ಕೊಚ್ಚಿಹೋದವು. ಬೆಳೆಯೆಲ್ಲ ನೀರಿನಪಾಲು!! ಪಂಜಾಬಸರಕಾರವು ಬಹು ದಯಾಳುವಾಗಿ ಹತ್ತಲ್ಲ, ಇಪ್ಪತ್ತಲ್ಲ, ಅರ್ಧಲಕ್ಷ ರೂಪಾಯಿಗಳನ್ನು ಪ್ರಜೆಗಳ ಕಷ್ಟನಿವಾರಣೆಗಾಗಿ ಕೊಡಮಾಡಿದೆ.

— ಶಸ್ತ್ರಸನ್ಯಾಸದ ಮಾತುಕಥೆಯು ಬಿದ್ದುಹೋದ ಹಾಗೆಯೇ; ಬ್ರಿಟಿಶ-ಫ್ರೆಂಚರ ಜಾಲದಲ್ಲಿ ಅಮೇರಿಕೆಯವರೂ ಇಟಾಲಿಯವರೂ ಸಿಕ್ಕುತಿಯಾಗಲು ಒಪ್ಪುವದಿಲ್ಲವಂತೆ! ಫ್ರಾನ್ಸ ದೇಶದ ಮುಖ್ಯ ಪ್ರಧಾನರಾದ ಎಮ್ ಬ್ರಿಯಂಡರವರೇ ಈ ಮಾತನ್ನು ರಾಷ್ಟ್ರಸಂಘದಲ್ಲಿ ಹೇಳಿಬಿಟ್ಟರು. ಬ್ರಿಟಿಶ-ಫ್ರೆಂಚರ ಕರಾರುಗಳು ಈಗ ಎಲ್ಲವರಿಗೂ ತಿಳಿದುಹೋಗಿವೆ.

— ಕಲಕತ್ತೆಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕಲ್ಯಾಣಕರ ಮಂಡಳವು ವಿದ್ಯಾರ್ಥಿಗಳ ಪ್ರಕೃತಿಯನ್ನು ತಪಾಸು ಮಾಡಿ ರಿಪೋರ್ಟ ಪ್ರಕಟಿಸಿದೆ. ಅಲ್ಲಿ ಒಬ್ಬ ವಿದ್ಯಾರ್ಥಿಗೆ ಆರೋಗ್ಯವು ನೆಟ್ಟಗಿಲ್ಲವಾಗಿ ಅವರ ಅಭಿಪ್ರಾಯವಾಗಿದೆ. ಸರಕಾರವು ಯೋಗ್ಯ ದ್ರವ್ಯಸಹಾಯವನ್ನೀಯುತ್ತಿದ್ದರೆ ವಿದ್ಯಾರ್ಥಿಗಳ ದಶೆಯು ಸುಧಾರಿಸುವದೆಂದು ಕಮೀಟಿಯ ಅಭಿಪ್ರಾಯ. ಸರಕಾರಕ್ಕೆ ಸಹಾನುಭೂತಿ ಇದೆ; ಆದರೆ ಏನು ಮಾಡುವದು? ಅಂಥ ಕಾರ್ಯಗಳಿಗೆ ಹಣವಿಲ್ಲ.

— ಇಂದೂರ ಮಹಾರಾಜರ ಮೇಲೆ ಹೊಸ ಪ್ರಕರಣ ಒಂದು ಬಂದೊದಗಿದೆ. ಸೇವಕಳಾದ ಎಂಬೊಬ್ಬ ವೇಶ್ಯೆಗೆ ಮಹಾರಾಜರ ದೊರೆ ಧರ್ಮಾರ್ಥವಾಗಿ ಇಂದೂರಿಗೆ ಒಯ್ದರಂತೆ. ಅಲ್ಲಿ ಅವಳು ಮಹಾರಾಜರಿಗೆ ವಶವಾಗಲಿಲ್ಲೆಂದು ೧೧ ವರ್ಷಗಳ ತನಕ ಅವಳಿಗೆ ಪರಿಪರಿಯಿಂದ ಪೀಡಿಸಿದರಂತೆ!! ಅವಳ ಮಗಳಿಗೂ ಒಯ್ದರಂತೆ. ಅವಳ ಬಳಿಯಲ್ಲಿದ್ದ ರತ್ನಾಭರಣ ಸುಲಕೊಳ್ಳಲಾಯಿತಂತೆ. ಆದಕ್ಕಾಗಿ ೧ ಲಕ್ಷ ೩೦ ಸಾವಿರ ರೂಪಾಯಿಗಳ ದಾವೆ, ೧೧ ವರ್ಷಗಳ ತನಕ ಬಂಧನದಲ್ಲಿಟ್ಟಿದ್ದರಿಂದ ಇನ್ನು ೫೦೦೦೦ ರೂಪಾಯಿಗಳ ದಾವೆ ಹೀಗೆ ಒಟ್ಟು ೧ ಲಕ್ಷ ೮೦ ಸಾವಿರ ರೂಪಾಯಿಗಳ ದಾವೆ! ಮುಂಬಯಿಯ ಹಾಯಕೋರ್ಟಿಗೆ ಈ ದಾವೆ ವಿಚಾರಕ್ಕೆ ಕೊಳ್ಳಲು ಅಧಿಕಾರವಿಲ್ಲವೆಂದು ಮುಕೋಬಿ-ಯಾರ ಅರ್ಥರ್‌ನಂಥ ಮಿ। ಡಿ

ಎಫ್ ಮುಲ್ಲಾರವರ ತಕರಾರು ... ಹಾಯಕೋರ್ಟಿನ ನ್ಯಾಯಾಧೀಶರು ... ಸರಕಾರದ ಕಾಯದೆ ಸಭಾಸದರಿದ್ದರೆ ಅವರ ತಕರಾರುಗಳು ಗ್ರಾಹ್ಯವಾಗಲಿಲ್ಲ. ಹಾಯಕೋರ್ಟಿಗೆ ವಿಚಾರಾಧಿಕಾರವಿರುವದಾಗಿ ... ಹಾಯಕೋರ್ಟಿನ ತೀರ್ಪು. ... ದಾಖಲುಮಾಡಿಸಿಕೊಳ್ಳುವ ಪೂರ್ಣ ಅಧಿಕಾರವಿರುವದಾಗಿ ... ಜಜ್ಜರು ಅಭಿಪ್ರಾಯಪಟ್ಟದ್ದಾರೆ. ವಿಚಾರಾಧಿಕಾರಿ ಚರ್ಚೆಯೂ ಮುಂದದೆ.

ಧಾರವಾಡದ ಕಲೆಕ್ಟರರು ಸರ್ಕಾರದಿಂದ ಕರತೇರುವ ಉಪಾಯ ಮಾಡಿದ್ದಾರೆ. ಈ ಹಿಂದೆ ೪ ಆಣೆ ಒಳಗಿನ ರಕಮುಗಳಿಗೆ ಲೋಕಲ್ಫಂಡು ಇದ್ದಿಲ್ಲ; ಆದರೆ ಹೊಸ ಸರ್ಕಾರದಂತೆ ೪ ಆಣೆ ಒಳಗೆ ಎಷ್ಟು ರಕಮಿದ್ದರೂ ೩ ಪೈ ಲೋಕಲ್ಫಂಡು ಕೊಡಬೇಕೆಂದು ಹುಕುಮ. ಒಟ್ಟು ಕೊಡತಕ್ಕ ತೀರ್ವೆಯು ೪ ಆಣೆಗೆ ಮಿಕ್ಕಿದ್ದರೆ ಲೋಕಲ್ಫಂಡು ಮಾಫ! ಉದಾ: ಒಟ್ಟು ಸಲ್ಲತಕ್ಕ ತೀರ್ವೆ ೩ ಆಣೆ ೯ ಪೈ ಆದರೆ, ಲೋಕಲ್ಫಂಡು ಇಲ್ಲ, ರೂಪಾಯಿ ೧—೧—೦ ಆದರೆ ೫ ಪೈ ಲೋಕಲ್ಫಂಡು ಕೊಡಬೇಕು, ಮಂಚೆ ೧ ಆಣೆ ಕೊಟ್ಟರಾಗತ್ತು.

— ಸ್ಲೋವೋಕಿಯಾ ಪ್ರಾಂತದಲ್ಲಿ ೫ ವರ್ಷ ಪ್ರಾಯದ ಹುಡುಗನಿದ್ದಾನೆ. ಈ ಬಾಲಕನ ತಲೆ ಬಹು ದೊಡ್ಡದು. ಗಣಿತದಲ್ಲಿ ಬಹು ಪ್ರವೀಣ, ಯಾರೊಬ್ಬರು ಜನ್ಮದಿನ ಹೇಳಿದರೆ, ಈತನು ಈ ವರೆಗಿನ ಅವನ ವಯಸ್ಸನ್ನು ದಿನಗಳಲ್ಲಿ ಹೇಳುವನು. ಕ್ರಿಸ್ತಶಕ ಪ್ರಾರಂಭವಾಗಿ ಎಷ್ಟು ದಿನಗಳಾದವೆಂದು ಕೇಳಿದರೆ ಒಮ್ಮೆಲೇ ಹೇಳಿಬಿಡುತ್ತಾನೆ!

— ಅಮೇರಿಕೆಯಲ್ಲಿ ಒಬ್ಬ ಬಾಲಿಕೆಯು ಚಮತ್ಕಾರಗಳು! ಅವಳ ವಯಸ್ಸು ೮ ವರುಷ. ೮ ಭಾಷೆಗಳು ಬರುತ್ತವೆ. ೫ನೇ ವರ್ಷ ಪ್ರಾಯದಲ್ಲಿಯೇ ಅವಳೊಂದು ಕವಿತೆಯನ್ನು ರಚಿಸಿದಳು. ಅವಳು ೨-೩ ಪುಸ್ತಕಗಳನ್ನು ಬರೆದಿದ್ದಾಳೆ. ಜರ್ಮನಿಯ ಲ್ಯುಬೆಕ್‌ಗ್ರಾಮದಲ್ಲಿ ಒಬ್ಬ ಹುಡುಗನಿದ್ದಾನೆ. ಈತನ ಬುದ್ಧಿಯೂ ಅದ್ಭುತ! ಆಯುರ್ದಾಯವೂ ಅಷ್ಟೇ ಆರೇ ವರ್ಷ ಬದುಕಿದನು. ೧೦ ತಿಂಗಳಾಗಲಿಲ್ಲ, ಜರ್ಮನ ಭಾಷೆಯೊಳಗಿನ ಶಬ್ದಗಳೆಲ್ಲ ಈತನ ನಾಲಿಗೆಯ ತುದಿಯ ಮೇಲೆ, ಇನ್ನೆರಡು ತಿಂಗಳಲ್ಲಿ ಇತಿಹಾಸ-ಭೂಗೋಲಗಳನ್ನು ಕಲಿತನು, ಮುಖ್ಯ ಮುಖ್ಯ ಸಂಗತಿಗಳೆಲ್ಲ ಬಾಯಿಪಾಠವಾಗಿದ್ದವು, ೩ ವರ್ಷಗಳಾಗಿವೆ, ಬ್ಯಾಬಿಲ ಗ್ರಂಥದಲ್ಲಿ ಪಾರಂಗತನಾದನು ೪ ವರ್ಷದ ಚಿಕ್ಕ ಹುಡುಗನು ದೊಡ್ಡ ದೊಡ್ಡ ಜ್ಞಾನಿಗಳೊಡನೆ ಈತನು ಗಹನ ಚರ್ಚೆಮಾಡುತ್ತಿದ್ದನು. ಆರು ವರ್ಷಗಳಲ್ಲಿ ಆಯುರ್ದಾಯ ಮುಗಿಯಿತು. ಯಾವ ಮಹಾಪುರುಷನೋ ಏನೋ! ಯಾವ ಬಾಲಕ್ರೀಡೆಗಾಗಿ ಅವತರಿಸಿದನೋ ಏನೋ!

— ಪಂಜಾಬದೊಳಗಿನ ಭಿವಣಿ ಗ್ರಾಮದ ಪ್ರದೇಶದಲ್ಲಿ ಮಳೆಯಾಗಿಲ್ಲ. ... ಜನಗಳು ದೇವೇಂದ್ರನಿಗೆ ಅನುಗ್ರಹಿಸಲು ದೊಡ್ಡ ಯಜ್ಞ ಮಾಡಿದರು. ೨೦೦೦೦ ಜನರು ಸೇರಿದ್ದರು, ಯಜ್ಞ ಮುಗಿದ ಬಳಿಕ ೫-೬ ಇಂಚು ಮಳೆ ಬಿದ್ದಿದೆ.

— ವಿಜಯನಗರದೊಳಗಿನ ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಸಿಂಹಾದ್ರಿ ಅಪ್ಪಯ್ಯನವರು ತೀರಿಕೊಂಡರು. ಅವರು ೩೦ ವರುಷಗಳ ತನಕ ಈ ಕಾಲೇಜಿನಲ್ಲಿ ಇಂಗ್ಲಿಷ ವ್ಯಾಕರಣವನ್ನು ಕಲಿಸಿದರು. ಪೆನ್ಶನು ಕೊಂಡು ೧೫ ವರುಷಗಳಾದವು. ಅಪ್ಪಯ್ಯನವರು ಇಂಗ್ಲಿಷ ವ್ಯಾಕರಣ ಹಾಗು ಪ್ರಬಂಧ ಶಾಸ್ತ್ರಗಳ ಮೇಲೆ ೨ ಗ್ರಂಥಗಳನ್ನು ಪ್ರಕಟಿಸಿದ್ದಾರೆ.

— ಜಾಮನಗರದ ಜಾಮಸಾಹೇಬರು ಸರ್ವಾಧಿಪತಿಗಳ ಆದರಾತಿಥ್ಯ ಮಾಡುವದಕ್ಕಾಗಿ ೨೧ ಲಕ್ಷ ರೂಪಾಯಿಗಳ ಅಪವ್ಯಯ ಮಾಡಿದರು. ಏನಿದು?

— ರಂಗೂನಿನಲ್ಲಿ ಅಖಿಲ ಭೂಮಂಡಲದ ಮೇಲಿನ ಬುದ್ಧ ಧರ್ಮದವರ ಪರಿಷತ್ತು ಇದೇ ವರುಷದಲ್ಲಿ ಸೇರಲಿಕ್ಕಿದೆ. ಸಮಸ್ತ ಮಾನವ ಜಾತಿಗೆ ಸರ್ವ ಪ್ರಕಾರದ ಸುಖಸಾಧಕ ಯೋಜನೆಗಳನ್ನು ಒದಗಿಸಿಕೊಡಲು ಈ ಪರಿಷತ್ತಿನಲ್ಲಿ ಆಲೋಚನೆಯಾಗುವದಿದೆ.

ಕಾನಡಾ ವೃತ್ತ.

ಮಿತಿ ವಿಭವ ಸಂ। ಭಾದ್ರಪದ ಶು। ೪ಥೀ, ಸೋಮವಾರ.

ಯಂತ್ರಗಳ ಅನರ್ಥ.

ಈ ಸದರನ್ನು ಓದಿದ ಕೂಡಲೆ ಓದುಗರು ದಿಗಿಲುಬೀಳುವರು. ಸಹಜವಿದೆ. ಈಗಿನ ಯುಗವು ಯಾಂತ್ರಿಕ ಯುಗವು. ಆಧುನಿಕ ಸುಧಾರಣೆಯೆಂದರೆ, ಯಂತ್ರಗಳ ಸುಧಾರಣೆ. ಯಂತ್ರಗಳು ಸುಧಾರಿಸಿದ ಹಾಗೆ, ಯಂತ್ರಗಳ ನಮೂನೆಯು ಸಂಕೀರ್ಣವಾದ ಹಾಗೆ ನಮ್ಮ ಸುಧಾರಣೆಯು ಮುಂದಾಯಿತು, ನಾವೂ ಮುಂದಾದೆವು. ಬೇಕಾದರೆ ಮಾನವಿ ಯಂತ್ರಸಾಧ್ಯಗಿ ಈಶ್ವರನಿರ್ಮಿತ ಮಾನವ ಪ್ರಾಣಿಗಳ ಆಹುತಿಯಾದರೂ ಆ ಕಡೆ ನಮ್ಮ ಲಕ್ಷವಿಲ್ಲ. ಮಾನವನ ಸೌಕರ್ಯಕ್ಕಾಗಿ ಉಗಿಬಂಡಿ, ಮೋಟಾರು, ವಿಮಾನು ಮುಂತಾದ ಸಾಹಿತ್ಯಗಳು ನಿರ್ಮಾಣಹೊಂದಿದವು. ವಿಲಾಯತಿಯಲ್ಲಿ ಪ್ರೊ। ಡೊನನ್ ಎಂಬವರು ಶೋಧ ಮಾಡಿ ಜೀವನಕಳೆ ತುಂಬಿದ ರಂಧ್ರ (living cell) ಗಳನ್ನು ತಯಾರಿಸಬಹುದೆಂದು ಅಭಿಪ್ರಾಯಪಟ್ಟದ್ದಾಗಿ ಪ್ರಕಟಪೊಂದಿದೆ. ಪ್ರೊ। ಎ. ವ್ಹಿ. ಹಿಲ್ ಎಂಬ ಬ್ರಿಟಿಶ ಶಾಸ್ತ್ರಸಂಘದ ಅಧ್ಯಾಪಕರೊಬ್ಬರು ಜನನ-ಮೃತ್ಯುಗಳ ಮೂಲ ಶೋಧವನ್ನು ಸಂಶೋಧಿಸಿ ಒಂದು ಗ್ರಂಥವನ್ನು ಸದ್ಯಕ್ಕೇ ಪ್ರಕಟಿಸುವವರಿದ್ದಾರೆ. ಈ ಗ್ರಂಥದೊಳಗಿನ ವಿಚಾರಗಳು ಕ್ರಾಂತಿಕಾರಕವೆಂದು ಸುದ್ದಿಗಾರರು ಪ್ರಕಟಿಸುತ್ತಾರೆ. ಒಂದು ಮಾತನ್ನು ಇಲ್ಲಿಯೇ ಹೇಳಿಬಿಡಬೇಕು. ಈಗಿನ ಶೋಧಗಳ ಮೇಲಿಂದ ಜೀವನಕಳೆಯುಳ್ಳ ರಂಧ್ರವನ್ನು ತಯಾರಿಸುವದು ತರ್ಕಶಾಸ್ತ್ರದಂತೆ ಸಾಧ್ಯವಿದ್ದಾಗ್ಯೂ, ಅಷ್ಟು ಸೂಕ್ಷ್ಮ ರಂಧ್ರಗಳನ್ನು ತಯಾರಿಸುವ ಕೆಲಸವು ವಿಚಾರಕಕ್ಷೆಯ ಹೊರಗಿನ ಮಾತೆಂದು ಪ್ರೊ। ಡೊನನ್‌ರವರು ಉದ್ಗರಿಸಿದ್ದಾರೆ. ಆ ಮಾತು ಹೀಗಿದ್ದಾಗ್ಯೂ ಒಂದು ಸಂಗತಿಯು ಸಿದ್ಧವೇ. ಯಂತ್ರಘಟನೆಯು ಹೊಸ ಪಾಶ್ಚಾತ್ಯ ಸುಧಾರಣೆಯ ಮುಖ್ಯ ಲಕ್ಷಣವು. ಯಂತ್ರಗಳನ್ನು ನೋಡಿದ ಕೂಡಲೆ ಮಾನವರಿಗೆ, ಪ್ರಾಮುಖ್ಯವಾಗಿ ಅಜ್ಞರಿಗೆ ಇಂದ್ರಪದವಿಯ ಸುಖಪ್ರಾಪ್ತಿಯಾಗುತ್ತದೆ. ಇದರ ವಿವೇಚನವನ್ನು ಇಂದಿಗೆ ಮಾಡಬಯಸುವೆವು.

ಈ ವಿಷಯ ಅನೇಕ ಬಾರಿ ನಾವು ಪರಾಂಬರಿಸಿದ್ದೇವೆ. ಮಹಾತ್ಮರಂಥ ತಪೋನಿಧಿಗಳ ಅಭಿಪ್ರಾಯವನ್ನೂ, ಬೇರೆ ಬೇರೆ ಅರ್ಥಶಾಸ್ತ್ರಜ್ಞರ ಪ್ರಮಾಣಗಳನ್ನೂ ನಾವು ವಿಮರ್ಶಿಸಿರುವೆವು. ಫೆರೆರೋ ಎಂಬವರು "ಪುರಾತನ ರೋಮ ಹಾಗು ಆಧುನಿಕ ಅಮೇರಿಕಾ" ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಅದರೊಳಗೆ ಪುರಾತನ, ಆಧುನಿಕ ಸಂಸ್ಕೃತಿಗಳ ಸಮಾಲೋಚನವಾಗಿರುತ್ತದೆ. ಗ್ರಂಥಕಾರರು ಹೆಸರಾದವರಿರುವದರಿಂದ ಅವರ ವಿಚಾರಗಳನ್ನು ನಾವು ತಿಳಕೊಂಡರೆ, ನಮಗೆ ಲಾಭವಾಗುವಂತಿದೆ. ಫೆರೆರೋರವರು ಪೂರ್ವಪಕ್ಷವನ್ನು ಪ್ರಶ್ನರೂಪದಿಂದ ಎತ್ತಿದ್ದಾರೆ. "ಪುರಾತನ ಪುರುಷರು ಯಂತ್ರಗಳನ್ನು ಘಟಿಸಿದ್ದು ತೀರ ಅಪರೂಪ, ಇದ್ದ ಯಂತ್ರಗಳಿಗೆ ಅವರು ಬೆಚ್ಚುತ್ತಿದ್ದರು. ಹುಟ್ಟುವಳಿ ಮಾಡಲು ಪರಮಾತ್ಮನಿರ್ಮಿತ ಮಾನವಿ ಯಂತ್ರಕ್ಕೇ ಅವರು ಪ್ರಾಧಾನ್ಯ ಕೊಡುತ್ತಿದ್ದರು. ಹೀಗೆ ಯಾಕೆ? ಪುರಾತನಿಗಳಿಗೆ ಯಂತ್ರಜ್ಞಾನವಿದ್ದಿಲ್ಲ. ಆದರಿಂದ ಯಂತ್ರಕ್ಕೆ ಆ ಕಾಲದಲ್ಲಿ ಹಳಿಯೋಣಾಗುತ್ತಿತ್ತು. ಆಧುನಿಕರು ಪುರಾತನಿಗಳ ಬಗ್ಗೆ ವ್ಯಕ್ತಗೊಳಿಸುವ ದೊಡ್ಡಸ್ತನದ ತಿರಸ್ಕಾರವು ಫೆರೆರೋರವರಿಗೆ ಗ್ರಾಹ್ಯವಿಲ್ಲ. ಈಗಿನವರಂತೆಯೇ ಆ ಕಾಲದಲ್ಲಿಯೂ ಜ್ಞಾನಿಗಳಿದ್ದರು. ಈಗಿನ ಯುಗದಲ್ಲಿ ಮಾನವನ ಐಹಿಕ ಕಾಂಕ್ಷೆಗಳು ಬೆಳೆದಿವೆ, ಆ ಕಾಲದಲ್ಲಿ ಆತನಿಗೆ ಕಾಂಕ್ಷೆಗಳು ತೀರ ಕಡಿಮೆ. ಸಾಮಾನ್ಯ ಸಾಹಿತ್ಯಗಳಿಂದ ಜೀವನ ಮಾಡದದೇ ಆ ಕಾಲದಲ್ಲಿ ಪ್ರಾಮುಖ್ಯವಾಗಿ ನ್ಯಾಯವಾಗಿತ್ತು. ಈಗಿನವರಿಗೆ ಇದ್ದಷ್ಟು ಸರಕುಗಳು ಸಾಲವು. ಅಸಾಮಾನ್ಯ ಜೀವನವೇ ಹೇರಳವಾಗಿದೆ. ಆದರಿಂದ ನಮ್ಮ ಐಹಿಕ ಸುಖೋಪಭೋಗಗಳಿಗಾಗಿ ಯಂತ್ರಗಳಿಂದ ಹುಟ್ಟುವಳಿಯಾಗಬೇಕಾಗುತ್ತದೆ. ಪುರಾತನ ಕಾಲದಲ್ಲಿ ಪ್ರತಿಯೊಂದರಲ್ಲಿಯೂ ಕಲಾಕೌಶಲ್ಯವಿತ್ತು, ಮನೆಯಲ್ಲಿಯೂ, ಮನೆಯೊಳಗಿನ ಸಮಸ್ತ ಸಾಹಿತ್ಯಗಳಲ್ಲಿಯೂ ಹಸ್ತಕೌಶಲ್ಯವಿತ್ತು, ಕಲಾಕೌಶಲ್ಯದ ಕೈಗಾರಿಕೆಗಳು ಶ್ರೀಮಂತರಲ್ಲಿಯೂ ಬಡವರಲ್ಲಿಯೂ ಕಂಗೊಳಿಸುತ್ತಿದ್ದವು. ಈಗ ಬಡವರಿಗೆ ಹೊಟ್ಟೆತುಂಬಿಕೊಂಡಿದ್ದರೆ ಸಾಕಾಗಿದೆ. ಕಲಾಕೌಶಲ್ಯಕ್ಕೆ ಸಮಯವಿಲ್ಲ. ಇದರಿಂದ ಆ ಕಾಲದಲ್ಲಿ ಯಂತ್ರಗಳಿಗೆ ಉತ್ತೇಜನ ಸಿಗಲಿಲ್ಲ."

ಫೆರೆರೋರವರು ಎರಡನೇ ಕಾರಣವನ್ನು ಸಮೂದಿಸಿದ್ದಾರೆ. ಅದು ಬಹು ಬೋಧಪ್ರದವಿದೆ. ಈಗಿನವರಿಗೆ ಐಹಿಕ ಸುಖಾಭಿಲಾಷೆ ವಿಪರೀತ; ವಿಲಾಸ, ಭೋಗ, ಮುಂತಾದ ಕಾಂಕ್ಷೆಗಳು ಮಾನವನಲ್ಲಿ ಎದ್ದೇಳುತ್ತಿವೆ. ಮಾನವನು ಅವುಗಳನ್ನು ತೃಪ್ತಿಪಡಿಸಿಕೊಳ್ಳಲು ಬೇಡಾಡುತ್ತಾನೆ. ಯಂತ್ರದಿಂದ ಸರಕುಗಳು ಬಹುಬೇಗನೆ ತಯಾರಾಗುತ್ತವೆ; ಆದರೆ, ಅವುಗಳಿಗೆ ಸೊಬಗೆಲ್ಲಿಯದು? ಮಾನವನಿರ್ಮಿತ ಸಾಹಿತ್ಯಗಳಿಗೆ ಮನಮೋಹಕವಾದ ಸೊಬಗಿದೆ. ಆ ಸೊಬಗಿನ ಜೊತೆಗೆ ಯಾಂತ್ರಿಕ ಸರಕುಗಳು ಎಂದಿಗೂ ಸರಿಹೋಲಲಾರವು; ಮೇಲಾಗಿ ಮಾನವನಿಗೆ ಶಾಂತಿಯಿಲ್ಲ. ವಿಲಾಸಿಗಳೂ, ಐಶ್ವರ್ಯವಂತರೂ ಇನ್ನೂ ಅಸಾವಧಗಳಾಗಿ ಬೇಡಾಡುತ್ತಿದ್ದಾರೆ. ಒಂದು ಪ್ರಕಾರದ ಅಸಂತೋಷವು ಹಬ್ಬಿಕೊಂಡಿರುತ್ತದೆ. ಈಗಿನ ಯುಗಕ್ಕೆ ಬೇಕಾದದ್ದು ಪರಿಮಾಣ; ಅಂದರೆ ಹೆಚ್ಚೆಚ್ಚು ಬೆಳೆಸುವದು; ಗುಣಾತಿಶಯವಿಲ್ಲ. ಪುರಾತನ ಸಂಸ್ಕೃತಿಯು ಯಾವಾಗಲೂ ಶಾಶ್ವತಸ್ಥಾನದ ಕಡೆ ದೃಷ್ಟಿಯನ್ನಿಟ್ಟಿತ್ತು. ಶಾಶ್ವತ ಶಬ್ದದ ವ್ಯಾಪಕ ಅರ್ಥವನ್ನು ಗ್ರಹಿಸದೆ, ಸಾಮಾನ್ಯ ಅರ್ಥವನ್ನು ನಾವು ಹಿಡಿಯುವ. ನಮ್ಮ ಪೂರ್ವಜರು ಬಾಳಿಕೆಯ ವಸ್ತುಗಳನ್ನು ನಿರ್ಮಿಸುತ್ತಿದ್ದರು, ತಾವು ನಿರ್ಮಿಸಿದ ವಸ್ತುವು ಹೆಚ್ಚು ಕಾಲ ಬಾಳಬೇಕು, ಎಂಬುದೇ ಅವರ ಆಶೆ; ಈಗಿನವರು ಆ ಕಡೆ ದುರ್ಲಕ್ಷ ಮಾಡಿ ಒಂದೇ ಪ್ರಕಾರದ ಹೆಚ್ಚೆಚ್ಚು ವಸ್ತುಗಳನ್ನು ಅಗ್ಗಗ್ಗವಾಗಿ ನಿರ್ಮಿಸುವ ವ್ಯಾಪಾರದಲ್ಲಿ ತೊಡಗಿದ್ದಾರೆ. ಒಂದು ಹೋಗುವದೇ ತಡ, ಹೊಸ ವಸ್ತು ಬಂತೇ ಬಂತು. ಹೀಗೆ ಕ್ಷಣಭಂಗುರ ಗುಣಶೂನ್ಯ ಸಾಹಿತ್ಯಗಳು ಈಗಿನ ಯಂತ್ರ ಯುಗದಲ್ಲಿ ನಿರ್ಮಾಣಹೊಂದಲಾರಂಭಿಸಿವೆ. ಕಲಾನೈಪುಣ್ಯವು ಬಯಲಾಯಿತು; ಕಲಾಕೌಶಲ್ಯದ ಅಭಿರುಚಿಯೂ ನಷ್ಟವಾಯಿತು. ಕೈಗಾರಿಕೆಯು ಕಷ್ಟ ಸೈರಿಸಲು ನಿಮ್ನಂದಾಗದು. ಯಂತ್ರ ನಿರ್ಮಿತವಸ್ತುಗಳ ಉಪಭೋಗಕ್ಕಾಗಿ ನಾವೆಲ್ಲರೂ ಯಂತ್ರಗಳಾಗಿದ್ದೇವೆ. ರೋಮ ಇತಿಹಾಸದೊಳಗಿನ ಒಂದು ಉದಾಹರಣೆಯು ಬಹು ಮರ್ಮಭೇದಕವಿದೆ. ವೆಸ್ಪಾಸಿಯನ್ ಎಂಬವರು ರಾಜ್ಯವಾಳುತ್ತಿದ್ದರು. ಸಾರ್ವಭೌಮರ ದರ್ಬಾರಿನಲ್ಲಿ ಒಬ್ಬ ಯಂತ್ರಕಲಾಕೋವಿದನು ಯಂತ್ರ ರಚಿಸಿಕೊಂಡು ಬಂದನು. ಸರಕಾರವು ರಚಿಸುವ ಇಂಜನಿಯರ ಕಾಮಗಾರಿಗಳನ್ನು ಈ ಯಂತ್ರದಿಂದ ರಚಿಸಿದರೆ, ಸರಕಾರಕ್ಕೆ ಲಾಭವಾಗುವಂತಿತ್ತು; ಬಾದಶಹರು ಈ ಪ್ರಯೋಗವನ್ನು ನೋಡಿದರು; ಶೋಧಕರ ಚಾತುರ್ಯವನ್ನು ಬಹಳವಾಗಿ ಕೊಂಡಾಡಿದರು, ಬಹುಮಾನವಿತ್ತು ಅವರಿಗೆ ಸತ್ಕರಿಸಿದರು; ಆದರೆ, ಆ ಯಂತ್ರವನ್ನು ಪ್ರಚಾರದಲ್ಲಿ ತರಲಿಲ್ಲ; ಕೂಡಲೆ ಅದನ್ನು ನಾಶ ಮಾಡಿದರು. ಯಂತ್ರ ನಾಶದ ಕಾರಣವನ್ನು ಬಾದಶಹರೇ ಹೇಳಿದರು.—

"ಈ ಯಂತ್ರವು ಪ್ರಚಾರಗೊಂಡರೆ, ನಮ್ಮ ಪ್ರಜೆಗಳು ಕೆಲಸವಿಲ್ಲದೆ ಗೋಳಿಡಬೇಕಾಗುವದು. ಪ್ರಜೆಗಳಿಗೆ ಉಪವಾಸ ಹಾಕುವ ಯಂತ್ರಗಳನ್ನು ನಾನು ಪುರಸ್ಕರಿಸಲಾರೆ."

ವೆಸ್ಪಾಸಿಯನ್‌ರವರಿಗೆ ಮೂರ್ಖರೆಂದು ಈಗಿನ ಜ್ಞಾನಿಗಳು ಸಂಬೋಧಿಸದಿರರು. ಆದರೆ, ವೆಸ್ಪಾಸಿಯನ್‌ರವರು ದೂರದರ್ಶಿಗಳು,

ಯಂತ್ರೈಶ್ವರ್ಯದಿಂದ ಪ್ರಜೆಗಳ ಐಶ್ವರ್ಯವು ನಷ್ಟವಾಗುತ್ತಿದ್ದರೆ, ಆ ಯಂತ್ರಕ್ಕೆ ಬೆಲೆಯೇನಿದೆ? ಮುಖ್ಯ ಐಶ್ವರ್ಯವು ಪ್ರಜೆಗಳು; ಅವರ ಸುಖಸಮೃದ್ಧಿಗಾಗಿ ಯಂತ್ರ ಬೇಕು. ಈಗ ನೋಡಿರಿ, ಯಂತ್ರಪ್ರಸಾರವಾದ್ದಲ್ಲಿ ಜನರಿಗೆ ಕೆಲಸ ಮಾಡಲು ಕೆಲಸವಿಲ್ಲದೆ ತೊಂದರೆಯಾಗಿದೆ. ೩ ಲಕ್ಷ ಕೂಲಿಕಾರರನ್ನು ವಿಲಾಯತಿಯೊಳಗಿಂದ ಅಮೇರಿಕೆಯ ಕೆನಡಾ ದೇಶಕ್ಕೆ ರವಾನಿಸಿಕೊಡುವ ಆಲೋಚನೆಯಲ್ಲಿ ನಮ್ಮ ಸಾಮ್ರಾಜ್ಯ ಸರಕಾರವು ಬಿದ್ದಿದೆ. ಯಂತ್ರಗಳಿಂದ ಹಲವು ಮಂದಿಗಳ ಕೆಲಸವು ಕೆಲವು ಮಂದಿಗಳಿಂದ ಸಾಗುತ್ತದೆಂಬ ಮಾತು ನಿಜ; ಆದರೆ, ಉಳಿದವರಿಗೆ ಕೆಲಸವೆಲ್ಲಿ! ಜಗತ್ತಿನಲ್ಲಿ ಎಲ್ಲರೂ ಯಂತ್ರಸಹಾಯದಿಂದ ಸರಕುಗಳನ್ನು ಬೆಳೆಸುತ್ತ ಹೋದರೆ, ಅವುಗಳನ್ನು ಮಾರಾಟ ಮಾಡಲು ನಾವು ಚಂದ್ರಮಂಡಲ ಅಥವಾ ಮಂಗಳಮಂಡಲದ ಮೇಲೆ ಸ್ವಾರಿಯನ್ನೆತ್ತಿಕೊಂಡು ಹೋಗಬೇಕಾಗುವದು. ಇದೆಲ್ಲ ವಿಚಾರಿಸತಕ್ಕ ವಿಷಯ. ಯಂತ್ರಪ್ರಚಾರದಿಂದ ಲೋಕಕ್ಕೆ ಕ್ಷೇಮವೇ? ಎಂಬ ವಿಚಾರ ಮಾಡಿ ಅದರಿಂದ ಕ್ಷೇಮವಿಲ್ಲೆಂದು ಥೆರೆರೋರವರು ಪ್ರತಿಪಾದಿಸಿದ್ದಾರೆ. ಮಹಾತ್ಮರಾದರೂ ಇದೇ ಸಿದ್ಧಾಂತವನ್ನು ಅನೇಕ ಬಾರಿ ಹೇಳಿದ್ದಾರೆ. ಅಲ್ಲಲ್ಲಿಯ ವಿಚಾರಶೀಲರು ಇದನ್ನು ವಿಚಾರಿಸಿ, ಊರೊಳಗಿನವರಿಗೆ ಕೆಲಸ ಸಿಗುವ ವ್ಯವಹಾರಗಳಲ್ಲಿ ಯಂತ್ರಗಳನ್ನು ಆಮದು ಮಾಡಲಾಗದೆಂದು ಅರಿಕೆಯಿದೆ.

ಸ್ಫುಟ ಸೂಚನೆಗಳು.

೧. ಕಳೆದ ಸೋಮವಾರ ರಶಿಯಾ ದೇಶದ ಮಹಾಪುರುಷರಾದ ಕೌಂಟ ಲಿಯೋ ಟೋಲಸ್ಟೊಯ್‌ರವರ ಜಯಂತ್ಯುತ್ಸವವು ರಶಿಯಾ ದೇಶದಲ್ಲೆಲ್ಲ ವಿಜೃಂಭಣೆಯಿಂದ ನೆರವೇರಿತು. ಅಹಮದಾಬಾದದ ಸತ್ಯಾಗ್ರಹಾಶ್ರಮದಲ್ಲಿಯೂ ದೊಡ್ಡದೊಂದು ಸಭೆಯಾಗಿ ಟೋಲ್‌ಸ್ಟೊಯ್‌ರವರ ಗುಣಾನುವಾದ ಮಾಡಲಾಯಿತು. ಕೌಂಟ ಲಿಯೋ ಟೋಲ್‌ಸ್ಟೊಯ್‌ರವರು ದೊಡ್ಡ ಜಮೀನದಾರರು; ಕಾದಂಬರಿ ಲೇಖಕರು; ಯಾಸ್ನಾಯಾ, ಪಲಾನಾ, ನಿಕೋಲಸ್ಕಿ ಪ್ರದೇಶದ ಒಡೆಯರು; ರಶಿಯಾ ದೇಶದಲ್ಲಿ ದೊಡ್ಡ ದೊಡ್ಡ ಅಧಿಕಾರಸ್ಥಾನಗಳನ್ನು ವಹಿಸಿದವರ ಆಪ್ತರು; ಆದರೆ, ಈ ನಾತೆಯಿಂದ ಇವರ ಸಂಭ್ರಮವಾಗಲಿಲ್ಲ. ಟೋಲ್‌ಸ್ಟೊಯ್‌ರವರು ಇದಕ್ಕಾಗಿ ತಮ್ಮ ಪ್ರಾಣವನ್ನು ಧಾರೆಯೆರೆಯಲಿಲ್ಲ. ಬೇಸಾಯಗಾರರಿಗೂ, ಕೂಲಿಕಾರರಿಗೂ ಅವರು ತಮ್ಮ ಸರ್ವಸ್ವವನ್ನು ಅರ್ಪಿಸಿದ್ದಾರೆ. “ಬೋಲೀ ತೈಸಾ ಚಾಲೀ” ಅಂದರೆ, ಅತಿ ಹೇಶೆ ಮಾಡುವ ಮಹಾಪುರುಷರಿವರು. ಟೋಲ್‌ಸ್ಟೊಯ್‌ರವರು ಝಾರರ ಕಾರಕೀರ್ದಿಯಲ್ಲಿ ಹುಟ್ಟಿದರೂ, ಆ ಕಾರಕೀರ್ದಿಯೊಳಗಿನ ಸಮಾಜಸ್ಥಿತಿಯು ಅವರಿಗೆ ಗ್ರಾಹ್ಯವಾಗಲಿಲ್ಲ; ಜಾನೇಸುಮಾರಿ ಮಾಡುವಾಗ, ಬಡಬಗ್ಗರ ದಾರಿದ್ರ್ಯವನ್ನು ನೋಡಿ ಅವರು ಬಹು ವ್ಯಸನಪಟ್ಟರು. ಐಶ್ವರ್ಯವಂತರ ವಿಲಾಸೇಚ್ಛೆಯಿಂದಲೂ, ಸ್ವಾರ್ಥಸಾಧನದಿಂದಲೂ ಈ ಅವಸ್ಥೆಯುಂಟಾಗುತ್ತದೆಂದು ಅವರ ಮನೋನಿಶ್ಚಯವಾಯಿತು. ತನ್ನ ಆಸ್ತಿಯ ಮೇಲಿನ ಹುಲಸೇಪತ್ರವನ್ನಿಟ್ಟು ಬಡಬಗ್ಗರಂತೆ ಜೀವಿಸಹತ್ತಿದರು. ಆ ಕಾಲಕ್ಕೆ ಅವರು ಬರೆದ ಗ್ರಂಥಗಳು ರಶಿಯಾ ದೇಶದ ಪ್ರಜೆಗಳಲ್ಲಿ ವಿಲಕ್ಷಣವಾದ ಜಾಗೃತಿಯನ್ನುಂಟು ಮಾಡಿದವು. ಬಡವನ ಹಾಗು ಶ್ರೀಮಂತರೊಳಗಿನ ಭೇದವು ನಷ್ಟವಾಗದೆ ಕ್ಷುದ್ರವೃತ್ತಿಯವರು ತಮ್ಮ ಅಧಿಕಾರದ ದುರುಪಯೋಗ ಮಾಡಲಾಗದು. ಬಡಬಗ್ಗರಿಗೆ ಹೊಟ್ಟೆತುಂಬ ಅನ್ನ ಸಿಗದಾಗ, ಶ್ರೀಮಂತರು ವಿಲಾಸಗಳನ್ನು ಅನುಭವಿಸುವದು ಪಾಪವು. ಸಾಮಾನ್ಯ ಪ್ರಜೆಗಳ ಸಂಸಾರವು ಸುಖಮಯವಾಗುವದಕ್ಕಾಗಿ ಸಾಧಿಸುವದೇ ಧರ್ಮವು; ರಾಜಕಾರಣವೂ ಅದೇ; ಎಂಬುದಾಗಿ ಲಿಯೋ ಟೋಲಸ್ಟೊಯ್‌ರವರು ರಶಿಯಾ ದೇಶದಲ್ಲಿ ಬೋಧಿಸಿ, ಇಡೀ ದೇಶವನ್ನು ಜಾಗೃತಗೊಳಿಸಿದರು. ಈಗಿನ ರಶಿಯಾ ದೇಶವು ಟೋಲಸ್ಟೊಯ್‌ರವರ ಬೋಧದ ಫಲವು. ಆದರಿಂದಲೇ ರಶಿಯಾ ದೇಶದಲ್ಲಿ ಟೋಲಸ್ಟೊಯ್‌ರವರ ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಮಹಾತ್ಮರು ಅಹಮದಾಬಾದದಲ್ಲಿ ಭಾಷಣ ಮಾಡುವಾಗ ಟೋಲಸ್ಟೊಯ್‌ರವರಿಗೆ ಸತ್ಯಾವತಾರವೆಂದು ಸಂಬೋಧಿಸಿದ್ದಾರೆ; ಟೋಲಸ್ಟೊಯ್‌ರವರಂತೆ ಹಿಂದೀ ಪ್ರಜೆಗಳು ಆತ್ಮನಿರೀಕ್ಷಣೆ ಮಾಡಿ ಬಡಬಗ್ಗರ ಸೇವೆ ಮಾಡಿದರೆ, ಸ್ವರಾಜ್ಯವು ಶೀಘ್ರವೇ ಪ್ರಾಪ್ತವಾಗಿ ಭರತಖಂಡಕ್ಕೆ ವಿಶೇಷ ವೈಭವವು ಪ್ರಾಪ್ತವಾಗುವದೆಂದು ಬೋಧಿಸಿದ್ದಾರೆ. ಕೌಂಟ ಲಿಯೋ ಟೋಲಸ್ಟೊಯ್‌ರವರ ಬೋಧಸತ್ವವನ್ನು ಹೊಗಳುವದಕ್ಕಿಂತ ಆಚರಿಸುವದರಿಂದ ಹೆಚ್ಚಿನ ಲಾಭವಿರುವದಲ್ಲವೇ?

---

೨. ಹಿಂದುಸ್ಥಾನದಲ್ಲಿ ಚಳವಳಿ ಮಾಡಿ ಸಾರ್ವಜನಿಕ ಸುರಕ್ಷಿತತೆಗೆ ಭಂಗ ತರುವವರೆಂದು ಸರಕಾರಕ್ಕೆ ಗುಪ್ತ ಚಾರರಿಂದ ತಿಳಿದೊಡನೆ ಅವಿಚಾರದಿಂದ ಅಂದರೆ, ವಿಚಾರವಿಲ್ಲದೆ ಹಿಮ್ಮೇಲೀ ಬ್ರಿಟಿಶರನ್ನು ಹದ್ದುಪಾರು ಮಾಡುವ ಕಾನೂನಿನ ಪ್ರಸ್ತಾಪವು ವರಿಷ್ಠ ಕಾಯಿದೆ ಕೌನ್ಸಿಲಿನ ಈಗಿನ ಅಧಿವೇಶನದಲ್ಲಿ ನಡೆದದೆ. ಪಂಡಿತ ಮೋತಿಲಾಲರು ಈ ಕಾನೂನಿನ ಪ್ರಸ್ತಾಪಕ್ಕೆ “ಪ್ರಥಮಗ್ರಾಸೇ ಮಕ್ಷಿಕಾಪಾತಃ” ಎಂಬಂತೆ ಮಾಡಿದ ೩ ದಿನಗಳ ಅವಧಿಯ ತಕರಾರು ಗ್ರಾಹ್ಯವಾಗಿ ಕಳೆದ ವಾರದಲ್ಲಿ ಈ ಕಾನೂನಿನ ಪ್ರಸ್ತಾಪವಾಯಿತು. ಈ ಸಮಯ ಪಂಡಿತ ಮೋತಿಲಾಲರು ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿಕಾರದ ತಕ್ರಾರು ಹೇಳಿದರು. ವರಿಷ್ಠ ಕಾಯಿದೆ ಕೌನ್ಸಿಲು ವಿಲಾಯತಿಯ ಪಾರ್ಲಿಮೆಂಟಿನ ಅಧೀನದ ಸಂಸ್ಥೆ; ಪಾರ್ಲಿಮೆಂಟಿನ ಅಧಿಕಾರಕ್ಕೆ ಭಂಗ ತರುವಂಥ ಕಾಯಿದೆಯನ್ನು ಮನ್ನಿಸುವ ಅಧಿಕಾರವು ಈ ಕೌನ್ಸಿಲಿಗಿಲ್ಲ. ಬ್ರಿಟಿಶ ಕಾನೂನಿನಂತೆ ಬ್ರಿಟಿಶ ಪ್ರಜೆಗಳಿಗೆ ಅಕ್ರಮದಿಂದ ಸಂಚಾರಕ್ಕೆ ತಡೆಹಾಕಲು ಪಾರ್ಲಿಮೆಂಟಿಗೆ ಅಧಿಕಾರವಿಲ್ಲ. ಬ್ರಿಟಿಶ ಪ್ರಜೆಗಳಿಗೆ ಹೀಗೆ ಪ್ರತಿಬಂಧಿಸಲಾಗದೆಂದು ಮೆಗ್ನಾಚಾರ್ಟದಲ್ಲಿ ಸ್ಪಷ್ಟ ಉಲ್ಲೇಖವಿದೆ. ಆ ಕಾನೂನನ್ನು ಮನ್ನಿಸಲು, ಈ ಕಾಯಿದೆ ಕೌನ್ಸಿಲು ರಾಜ್ಯಘಟನೆಯಿಂದ ಬದ್ಧವಿದೆ; ಆದರಿಂದ ಈ ಕಾನೂನನ್ನು ಸರಕಾರಕ್ಕೆ ಸೂಚಿಸಬಾರದು; ಎಂಬರ್ಥದ ಆಕ್ಷೇಪವನ್ನು ಪಂಡಿತ ಮೋತಿಲಾಲರು ಮುಂದೊಡ್ಡಿದರು. ಹೋರ್ನಿಮನ್-ಬಿರ್ಕೆನ್‌ಹೆಡ್‌ರಂಥ ಹಿಂದಹಿತಕಾರಿ ಬ್ರಿಟಿಶರಿಗೆ ಹೊರಹಕ್ಕಲ್ಪಡಲಿ ಬಿಳಹಂಚಿನಲ್ಲಿ ಸೇರಿದ ಯುರೋಪಿಯನ್‌ರೂ, ಸರಕಾರವೂ ಈ ಆಕ್ಷೇಪ ಕೇಳಿ ದಿಙ್ಮೂಢರಾದರು. ಸರಕಾರಿ ಸೂತ್ರಚಾಲಕರಾದ ಮಿ|| ಕ್ರೆಯರರವರು ತ್ರಸ್ತಮನಸ್ಕರಾದರು; ಈ ಆಕ್ಷೇಪವು “ಮೂರ್ಗಂವಾರ”ವೆಂಬಂತಿದೆ. ವಾಸ್ತವವಾಗಿ ನೋಡಿದರೆ, ಸ್ವಾತಂತ್ರ್ಯಪ್ರಿಯ ಬ್ರಿಟಿಶರೇ ಈ ಆಕ್ಷೇಪ ಮಾಡಬೇಕಾಗಿತ್ತು. ಆದರೆ, ಹಿಂದುಸ್ಥಾನಕ್ಕೆ ಕಲ್ಯಾಣ ಮಾಡುವ ಅತ್ಯುತ್ಸಾಹದಲ್ಲಿ ಅವರು ಕರ್ತವ್ಯಪರಾಙ್ಮುಖರಾಗಿದ್ದಾರೆ. ಕಾಯಿದೆಯ ಆಕ್ಷೇಪ ಚರ್ಚೆಗೆ ಶ್ರೀ|| ವಿಠ್ಠಲಭಾಯಿ ಪಟೇಲರವರು ಅವಧಿ ಕೊಟ್ಟಿದ್ದಾರೆ, ತಾವೂ ಈ ಆಕ್ಷೇಪದ ಸಾಧಕ-ಬಾಧಕ ಪ್ರಮಾಣಗಳನ್ನು ಪರಿಶೋಧಿಸಿ ಚರ್ಚೆಗೆ ಸಿದ್ಧರಾಗುವೆವಾಗಿಯೂ ಹೇಳಿ, ಪ್ರಾಸ್ತಾವಿಕ ಆಕ್ಷೇಪ ವಿಚಾರವನ್ನು ಮುಂದೊತ್ತಿ ಕಾಯಿದೆಯ ಚರ್ಚೆಯನ್ನು ನಡೆಸಗೊಟ್ಟರು. ಈ ವಾರದಲ್ಲಿ ಈ ವಿಷಯ ನಿರ್ಣಯವಾಗುವದಿದೆ. ಸ್ವಾರ್ಥಲೋಲುಪ ಬ್ರಿಟಿಶರಿಗೆ ಸ್ವಾತಂತ್ರ್ಯದ ಹಕ್ಕಿನ ಬೆಲೆ ಸಹ ಇಲ್ಲ. ಹಿಂದುಸ್ಥಾನವನ್ನು ಪಾರತಂತ್ರ್ಯದಲ್ಲಿಡಬೇಕೆಂಬ ದುರಾಶೆಯಿಂದ ಬ್ರಿಟಿಶರ ಮೇಲೊದಗಿದ ಅವಸ್ಥಾಂತರವಿದು!

---

೩. ಸೀಮೆಎಣ್ಣೆಯ ಸರಕಾರಿ ಚೌಕಶಿಯು ಮುಗಿದು ರಿಪೋರ್ಟು ಹೊರಬಿದ್ದಿದೆ. ಸೀಮೆಎಣ್ಣೆಯ ಸಾವುಕಾರರಿಗೆ ಸಂರಕ್ಷಕ ತೆರಿಗೆಯನ್ನೇರ್ಪಡಿಸಿ ಸಂರಕ್ಷಣ ಕೊಡುವದು ಅವಶ್ಯವಿಲ್ಲವಾಗಿ ಕಮಿಟಿಯವರ ಅಭಿಪ್ರಾಯ. ಸರಕಾರವೂ ಅದೇ ಅಭಿಪ್ರಾಯಕ್ಕೆ ತಲೆದೂಗಿದೆ. ಚೌಕಶಿ ಮಾಡಿದ ತಾರಿಫ ಬೋರ್ಡಿನ ಅಧ್ಯಕ್ಷರಾದ ಸರ್ ಜಿನವಾಲಾರವರು ಬರ್ಮಾ ಆಯಿಲ್ ಕಂಪನಿ ಮುಂತಾದ ಕಂಪನಿಗಳ ಠಂಬಲನ್ನು ಚೆನ್ನಾಗಿ ಬೈಲಿಗೆಳೆದಿದ್ದಾರೆ. ಅಮೇರಿಕೆಯ ಸ್ಟೆಂಡರ್ಡ ಆಯಿಲ್ ಕಂಪನಿಯವರು ರಶಿಯಾದೇಶದಿಂದ ಅಗ್ಗವಾಗಿ ಎಣ್ಣೆ ತಂದು ಇಲ್ಲಿ ತನ್ನೊಡನೆ ಮೇಲಾಟ ಮಾಡಿದರೆಂದು ಬರ್ಮಾ ಆಯಿಲ್ ಕಂಪನಿಯ ಸಾಧನೆ. ವಿಚಾರ ಮಾಡಿದರೆ, ಬರ್ಮಾ ಆಯಿಲ್ ಕಂಪನಿಯ ತರ್ಫೆನ ಏಶಿಯಾಟಿಕ್ ಪೆಟ್ರೋಲಿಯಮ ಕಂಪನಿಯವರೇ ಮೇಲಾಟವನ್ನು ಮೊಟ್ಟಮೊದಲು ಪ್ರಾರಂಭಿಸಿದರೆಂದೂ, ಮೇಲಾಟದಲ್ಲಿ ಒದಗುವ ನಷ್ಟವನ್ನು ಬರ್ಮಾ ಆಯಿಲ್ ಕಂಪನಿಗೆ ಭರಪಾಯಿ ಮಾಡಿಕೊಡಲು ಏಶಿಯಾಟಿಕ್ ಕಂಪನಿಯು ಒಪ್ಪಿತ್ತಾಗಿಯೂ ಚೌಕಶಿಯಲ್ಲಿ ಹೊರಬಿದ್ದಿದೆ. ದರಗಳಲ್ಲಿಯೂ ಇದೇ ಪ್ರಕಾರ ಸುಲಿಗೆ ನಡೆದಿದೆ. ೨ ಡಬ್ಬಿಗಳಿಗೆ ಸಾಮಾನ್ಯವಾಗಿ ರೂ. ೩|| ಬೀಳುತ್ತವೆ; ಅವನ್ನು ರೂ ೪|| ಹಿಡಿಯಬೇಕೆಂದು ಬರ್ಮಾ ಕಂಪನಿ ಮೊದಲಾದವುಗಳ ಸಾಧನೆ. ಅಮೇರಿಕೆಯಲ್ಲಿ ಈ ದರವಿರುವದಂತೆ; ಅಮೇರಿಕೆಯೊಳಗಿನ ದರವನ್ನು ಹಿಂದುಸ್ಥಾನ ದೇಶದಲ್ಲಿ ಪಡೆಯಲಿಕ್ಕೆ ಹಿಂದುಸ್ಥಾನದಲ್ಲಿ ಅಮೇರಿಕೆಯಂತೆ ಕೋಟ್ಯಾಧೀಶರಿಲ್ಲ ಮೇಲಾಗಿ, ಇವರಿಗೆ ನಷ್ಟವೂ ಇಲ್ಲ; ಶೇಕಡಾ ೧೦ ರಿಂದ ೩೫ ರ ತನಕ ಈ ಕಂಪನಿಗಳಿಗೆ ಲಾಭ ಸಿಗುತ್ತದೆ. ಈ ವ್ಯಾಪಾರದಲ್ಲಿ ಈ ಕಂಪನಿಗಳು ವರ್ಷಕ್ಕೆ ೪ ಕೋಟಿ ರೂಪಾಯಿಗಳನ್ನು ಒಯ್ಯುತ್ತವೆ. ಎಲ್ಲ ಸೀಮೆಎಣ್ಣೆಯು ೪-೫ ಕಂಪನಿಗಳ ಕೈಯಲ್ಲಿರುವದರಿಂದ ಈ ಕಂಪನಿಗಳು ಒಕ್ಕಟ್ಟಾಗಿ ಪರಿಗೆಯ

ದರವನ್ನಿಟ್ಟು ಕೋಟ್ಯಾವಧಿ ಮುನಾಫೆ ಹೊಡೆಯುತ್ತಾರೆ. ರಾಷ್ಟ್ರಕ್ಷೇಮದೃಷ್ಟಿಯಿಂದ ಈ ಕುರಿತು ಹೆಚ್ಚಿನ ವಿಚಾರವಾಗುವದು ಅವಶ್ಯವೆಂದು ಸರ್ ಪಿ. ಪಿ. ಜಿನವಾಲಾರವರು ಹಿಂದುಸ್ಥಾನ ಸರಕಾರಕ್ಕೆ ಸೂಚಿಸಿದ್ದಾರೆ ಸ್ಟೆಂಡರ್ಡ ಕಂಪನಿಗೂ, ಬರ್ಮಾ ಮೊದಲಾದ ಕಂಪನಿಗಳಿಗೂ ಈಗ ಸಂಧಾನವಾಗಿದ್ದರಿಂದ ಭರತಖಂಡದ ಕಲ್ಯಾಣ ಮಾಡಬಯಸುವ ಸರಕಾರವು ಬೇಗನೆ ವಿಚಾರ ನಡಿಸಿ ಬಿರುಟೆ ಎಣ್ಣೆಯ ಸಾವುಕಾರರು ನಡಿಸುವ ಸುಲಿಗೆಗೆ ಪ್ರತಿಬಂಧಿಸಿ ತನ್ನ ಕಲ್ಯಾಣೇಚ್ಛೆಯನ್ನು ಪ್ರದರ್ಶಿಸಬಹುದಲ್ಲವೇ?

೮. ಇಲ್ಲಿಯ ನಾಗರಿಕರಾದ ಶ್ರೀ| ಮಾಧವ ರಾಮಚಾನಭಾಗ ಕಲಭಾಗಕರ ಇವರು ಶನಿವಾರ ರಾತ್ರಿ ೧೦-೧೧ ಘಂಟೆಯ ಸಮಯ ವಿಷಮ ಜ್ವರದಿಂದ ತಮ್ಮ ೫೬ ನೇ ವರುಷದಲ್ಲಿ ತೀರಿಕೊಂಡರೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ. ವೈಕುಂಠವಾಸಿಗಳು ಅಂತಃಕರಣಿಗಳೂ, ವಿಚಾರವಂತರೂ, ಪ್ರಶಾಂತಚಿತ್ತರೂ, ಪರೋಪಕಾರಿಗಳೂ ಆಗಿದ್ದರು. ಕುಲದೇವರಾದ ಶ್ರೀ ಶಾಂತೇರಿಕಾಮಾಕ್ಷಿ ದೇವಸ್ಥಾನದಲ್ಲಿ ಇವರು ಚಿರಸ್ಮರಣೀಯವಾದ ಸೇವೆಯನ್ನು ನಡಿಸಿದ್ದಾರೆ ಈಗಿನ ಶ್ರೀ ದೇವಸ್ಥಾನದ ಸ್ಥಿತಿಗೆ ಬಹುಮಟ್ಟಿಗೆ ಇವರೇ ಕಾರಣರೆಂದು ಹೇಳಿದರೆ, ಅದನ್ನು ಎಲ್ಲರೂ ಒಪ್ಪುವರು ಊರೊಳಗಿನೆಲ್ಲವರಿಗೆ ಪ್ರಾಪಂಚಿಕ ಸಾರ್ವಜನಿಕ ಅಡಚಣೆಗಳಲ್ಲಿ ನಿಃಸ್ವಾರ್ಥ ಬುದ್ಧಿಯಿಂದ ಸಲಹೆಗಳನ್ನೂ, ಸ್ವಸಾಮರ್ಥ್ಯಕ್ಕೆಮಿಕ್ಕಿ ದ್ರವ್ಯಸಹಾಯವನ್ನೂ ಇವರು ಮಾಡಿ ಕೀರ್ತಿವಂತರಾಗಿದ್ದಾರೆ. ಇಲ್ಲಿಯ ಶ್ರೀ ವಿಷ್ಣುತೀರ್ಥ ಕೆರೆಯನ್ನು ಸುಂದರವಾಗಿ ಕಟ್ಟಿಸಿದವರು ಇವರೇ! ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ ಕಟ್ಟಡ ಕಲ್ಪನೆಯೂ, ಘಟಣೆಯೂ ಇವರದೇ ವಿದ್ಯಾಭಿರುಚಿಯು ವೈಕುಂಠವಾಸಿಗಳಿಗೆ ವಿಶೇಷವಿತ್ತು ಬಡ ವಿದ್ಯಾರ್ಥಿಗಳಿಗೆ ತಕ್ಕಮಟ್ಟಿಗೆ ಇವರು ಸಹಾಯ ಮಾಡಿದ್ದಾರೆ. ಇಲ್ಲಿಯ ಗಿಬ್ಬ ಹೈಸ್ಕೂಲಿನ ಆದ್ಯ ಪ್ರವರ್ತಕರಲ್ಲಿ ಇವರೊಬ್ಬರು. ೪-೫ ವರುಷಗಳ ತನಕ ಈ ಸಂಸ್ಥೆಯ ಆಡಳತೆಯನ್ನು ಇವರು ಸುವ್ಯವಸ್ಥಿತವಾಗಿ ನಡಿಸಿದ್ದಾರೆ ಸ್ಥಳೀಕ ಸ್ಥಿತ್ಯಂತರದ ಮೂಲಕ, ಚಾಲಕರೊಳಗಿನ ಮತಭೇದದ ಮೂಲಕ ಇವರ ಸಂಬಂಧವು ಈತನಕ ಉಳಿಯಲಾಗಲಿಲ್ಲ. ಮೂರು ವರ್ಷಗಳ ತನಕ ಇಲ್ಲಿಯ ಸಹಕಾರಿ ಸಂಘದ ಗೌರವ ಕಾರ್ಯದರ್ಶಿಗಳಾಗಿ ವೈ| ವಾ| ಗಳು ಕೆಲಸ ಮಾಡಿ ಸಹಕಾರಿ ಸಂಘದ ವ್ಯಾಪಕತೆಯನ್ನು ಬೆಳಿಸಿದರು. ರಾಷ್ಟ್ರೀಯ ಚಳವಳಿಯಲ್ಲಿ ಇವರು ಸರ್ವ ಪರಿಯಿಂದಲೂ ಇಲ್ಲಿ ನೆರವಾಗಿದ್ದಾರೆ ತಾಲೂಕ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾಗಿಯೂ, ರಾಷ್ಟ್ರೀಯ ಶಾಲೆಯ ಪ್ರವರ್ತಕರಾಗಿಯೂ ಇವರು ದುಡಿದಿದ್ದಾರೆ. ಖಾದಿ ಪ್ರಸಾರ ಕಾರ್ಯದಲ್ಲಿ ಇವರು ಮನಃಪೂರ್ವಕ ಧಾವತಿ ಮಾಡಿದ್ದಾರೆ. ಹೀಗೆಲ್ಲ ಲೋಕಸೇವೆ ಮಾಡಿದ ಇಲ್ಲಿಯ ಪುರುಷನು ವೈಕುಂಠವಾಸಿಯಾಗಿದ್ದಾನೆ. ಇವರ ಮನೆಯವರಿಗೆ ಈಗಿನ ಕುಟುಂಬದ ಸ್ಥಿತಿಯಲ್ಲಿ ಇವರ ನಿಧನದಿಂದುಂಟಾದ ನಷ್ಟವನ್ನು ಹೇಳಿ ತೀರದು. ಅಣ್ಣಂದಿರಾದ ರಾ|| ವಾಮನ ಶ್ಯಾನಭಾಗರು ಒಪ್ಪೊಂಟಿಗ ಮಗನ ನಿಧನದಿಂದ ಉಂಟಾದ ದುಃಖಾವೇಗವನ್ನು ಸಹ ಮರೆ ಮಾಡಿ ತಮ್ಮ ಮಾಧವನಿಗೆ ನೋಡಿ ಜೀವದ ಸಮಾಧಾನ ಮಾಡಿಕೊಳ್ಳುತ್ತಿದ್ದರು. ಕುರುಡನ ಕೈಯಲ್ಲಿದ್ದ ದಂಟುಗೋಲು ಹೋದಂತೆ ಈಗ ಅವರ ಅವಸ್ಥೆಯಾಗಿದೆ. ಮನೆಯಲ್ಲಿ ವಯಸ್ಸಿನಿಂದ ಅವರು ಹಿರಿಯರಾದಾಗ್ಯೂ "ಬುದ್ಧಿಬಲ್ಲಾದವನೇ ಹಿರಿಯ" ಎಂಬ ನಾಣ್ಣುಡಿಗನುಸರಿಸಿ ಕಿರಿ ತಮ್ಮಂದಿರಾದ ಮಾಧವ ಶ್ಯಾನಭಾಗರೇ ಅವರ ಕುಟುಂಬದ ಯಜಮಾನರಾಗಿದ್ದರು. ವೈಕುಂಠವಾಸಿಗಳಿಗೆ ಅವರ ವಯಸ್ಸಾದರೂ, ಅಣ್ಣಂದಿರ ಮುಂದೆ ಹುಡುಗನು ಅಪ್ರಾಯಸ್ಥನಿರುವಾಗ ಅವರು ತೀರಿಕೊಳ್ಳಬಾರದಿತ್ತೆಂದು ಎಲ್ಲರೂ ಪಶ್ಚಾತ್ತಾಪಬಡುತ್ತಾರೆ. ಆದರೆ ಕಾಲಚಕ್ರಕ್ಕೆ ತಡೆಹಾಕಲು ಯಾರಿಗೆ ಸಾಮರ್ಥ್ಯವಿದೆ? ಕುಟುಂಬದವರು ತಮ್ಮ ಮನಸ್ಸಿಗೆ ಸಮಾಧಾನ ಮಾಡಿಕೊಳ್ಳತಕ್ಕದ್ದಲ್ಲದೆ ಬೇರೆ ಉಪಾಯವಿಲ್ಲ ವೈಕುಂಠವಾಸಿಗಳಿಗೆ ಸದ್ಗತಿ ದೊರೆಯಲೆಂದೂ ಅವರ ಪರಂಪರೆಯನ್ನು ಕಲಭಾಗಕರ ಕುಟುಂಬದವರು ಅಭಿಮಾನದಿಂದ ನಡಿಸಲೆಂದೂ ನಾವು ಪ್ರಾರ್ಥಿಸಿ, ಈ ಚಿಕ್ಕ ಲೇಖವನ್ನು ಮುಗಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಈವಾರದಲ್ಲಿ ಮಳೆ ಹನಿಸಿ, ಬಹಳ ತಂಪು ದೊರಕಿದೆ ಊರಲ್ಲಿವರು ಕೆಲ ಈ ಹೊತ್ತು ಗಣಪತಿಯ ಪೂಜೆ ಮಾಡುವರು: ಕೆಲವರು ನಾಳೆ ಮಾಡುವರು. ಈ ವಾರದಲ್ಲಿ ೨-೩೨ ಇಂಚು ಮಳೆ; ಅಂತು ೧೭೪-೧೭ ಇಂಚು ಮಳೆ ಬಿತ್ತು.

ಪೋಲೀಸರು ದನಗಳನ್ನು ಹಿಡಿದು ದೊಡ್ಡಿಯಲ್ಲಿ ಹಾಕುತ್ತಾರೆ. ದನ ಬಿಡಿಸಿ ತಂದ ಬಳಿಕ ಪೋಲೀಸ ಅಪ್ಪಣೆಯಂತೆ ಖಟ್ಲೆಗಳಾಗುತವೆ ಮೋಟಾರಿನವರ ಅರ್ಜಿಯಿಂದ ಪೋಲೀಸ ಸುಪರಿಂಟೆಂಡೆಂಟರು ಈ ಹುಕುಮು ಹೊರಡಿಸಿದ್ದಾರಂತೆ! ಮೋಟಾರಿನಿಂದ ಗಾಡಿ ಎತ್ತುಗಳ ಅನ್ನ ಹೋಯಿತು; ದನಗಳಿಗೆ ಸಾಕುವದೂ ಕಷ್ಟ. ಮೋಟಾರುಗಳನ್ನು ಊರ ಹೊರ ತಳ್ಳಿದರೆ ಸುಖ.

ಉಪ್ಪಿನಪಟ್ಟಣದ ಹುಲಿಹೊಂಡವು ಬಹಳ ಹುಗಿದು ಬಂದಿದೆ, ಅದರಿಂದ ಆ ಕೆರೆ ನೀರಿನ ಆಶ್ರಯವಿದ್ದ ಬೇಸಾಯಕ್ಕೆ ಬಹಳ ತೊಂದರೆ. ಈ ಕೆರೆ ನೀರಿರುವದೆಂಬ ಗ್ರಹಿಕೆಯ ಮೇಲೆ, ಸರಕಾರದೀಪ ಹೆಚ್ಚು ತೀರ್ವೆ ಸಹ ಆಕರಿಸೋಣಾಗಿತ್ತು. ಈಗ ಕೆರೆ ಹುಗಿದರೂ ತೀರ್ವೆ ತೆರಬೇಕು. ಊರವರು ಅರ್ಜಿ ಮಾಡಿದರೆ ದೊಡ್ಡ ದೊಡ್ಡ ಆಫೀಸರರು ಬಂದು ತಪಾಸ ಮಾಡಿ ಹೋಗುತ್ತಾರೆ. ಹಿಂದಿನಿಂದ ಮುಂದಿನ ವ್ಯವಸ್ಥೆಯಾಗುವದೆಂದು ಹೇಳಿದರು. ಈ ಕೆರೆಯ ದುರಸ್ತಿಯಾಗದೆ ೨೦-೨೫ ವರ್ಷಗಳಾದವು ಆಫೀಸರರಿಗೆ ಕೊಟ್ಟ ಭತ್ತೆಯ ರಕಮು ವೆಚ್ಚ ಮಾಡಿದ್ದರೆ, ಕೆರೆಯು ತಕ್ಕಮಟ್ಟಿಗೆ ದುರುಸ್ತ ಆಗಿ ಹೋಗುತ್ತಿತ್ತು. ಕೆರೆಯ ಬಳಿಯಲ್ಲಿಯೇ ಗುಡ್ಡಪ್ರದೇಶವಿದೆ. ನೆರೆಹೊರೆಯ ಭೂಮಿಯ ತೀರ್ವೆಗೂ, ಈ ಕೆರೆಯೊಳಗಿನ ಭೂಮಿಯ ತೀರ್ವೆಗೂ ತುಲನೆ ಮಾಡಿದರೆ, ತೀರ್ವೆಯ ಕಾಲಕ್ಕೆ ಕೆರೆನೀರಿನ ವಿಚಾರವಾಗಿತ್ತೆಂದು ಸ್ಪಷ್ಟವಾಗುತ್ತದೆ ಶ್ರೀ| ಕಲೆಕ್ಟರವರು ಇತ್ತ ಸ್ವಲ್ಪ ಲಕ್ಷ ಕೊಡಬೇಕು.

ಉಪ್ಪಿನಪಟ್ಟಣದಲ್ಲಿ ಕತ್ತಗಾಲ—ಉಪ್ಪಿನಪಟ್ಟಣವೆಂಬ ಹೊಸ ಮಾರ್ಗ ಮಾಡಿದ್ದಾರೆ. ಈ ಮಾರ್ಗದಿಂದ ಜನರಿಗೆ ಪ್ರಯೋಜನವಿಲ್ಲ; ಅಪಾಯವಾಗುವ ಸಂಭವವಿದೆ. ಮಳೆಗಾಲದಲ್ಲಿ ದಾರಿಯಿಂದ ತಿರುಗಾಡಲು ಸಾಧ್ಯವಿಲ್ಲ ಬೇಸಿಗೆಯಲ್ಲಿ ಹಳ್ಳಕ್ಕೆ ಭರತದ ನೀರು ಏರುತ್ತದೆ. ಈ ಬಗ್ಗೆ ಬಹಳ ಚರ್ಚೆಯಾಯಿತು. ಹಿಂದೆ ನೊಂದಿಕೆಲ್ಲ ಬಂದರಕ್ಕೆ ತಿರುಗಾಡುವ ಮಾರ್ಗವಿತ್ತು. ಆ ರಸ್ತೆಯ ದುರುಸ್ತಿಗೆ ಬಹಳ ಖರ್ಚು ಬರುತ್ತದೆಂತ ಆ ರಸ್ತೆ ತೆಗೆದು, ಲೋಕಲ್ ಬೋರ್ಡಿನವರು ಈ ರಸ್ತೆ ಮಾಡಿದ್ದಾರಾಗಿ ತಿಳಿಯುತ್ತದೆ. ಆದರೆ, ಬೋರ್ಡಿನ ಫಾಯಿದೆಗಿಂತ ಜನರ ಅನುಕೂಲತೆ ಕಡೆ ಹೆಚ್ಚು ಲಕ್ಷಗೊಡಬೇಕು. ಜಪಾಲ ಶಿಪಾಯಿಯು ಹೊಸ ಮಾರ್ಗದಿಂದ ಟಪಾಲ ತರುವಾಗ ಹೋಂಡದಲ್ಲಿ ಬಿದ್ದು ಅಪಾಯ ಹೊಂದಿದ್ದಾನೆ. ಮುಳಗಿ ಹೋಗಿದ್ದರೆ, ಹೆಂಡರು-ಮಕ್ಕಳಿಗೆ ಗೋಳಾಗುತ್ತಿತ್ತು. ತಾಲೂಕ ಬೋರ್ಡಿನವರೂ, ಜಲ್ಲಾ ಬೋರ್ಡಿನವರೂ ಪುನರಾಲೋಚಿಸಿ, ಹಿಂದಿನ ಮಾರ್ಗವನ್ನೇ ದುರುಸ್ತ ಮಾಡಿ ಕಟ್ಟಬೇಕಾಗಿ ಉಪ್ಪಿನಪಟ್ಟಣದವರ ಪ್ರಾರ್ಥನೆ.

ಭಟಕಳ— ಈ ವಾರದಲ್ಲಿ ಮಳೆಯಿಲ್ಲಾಗಿತ್ತು. ಶುಕ್ರವಾರದಿಂದ ಮಳೆ ಬೀಳಹತ್ತಿದೆ. ಅಕ್ಕಿ ದರ ಏರಿತು. ವರ್ತಕರು ಖುದ್ದೈನ.

ಇಲ್ಲಿ ಹೊಂದು ತರದ ಉಪದ್ರವ ಬಂದಿದೆ ಮೊಟ್ಟಮೊದಲು ತಲೆ ತಿರುಗುತ್ತದೆ; ಕಡೆಗೆ ವಾಂತಿ; ಬಳಿಕ ಭೇದಿ; ಆ ಮೇಲೆ ಶೀತವಾಗಿ ಕೊನೆಗೆ ಮರಣ! ರೋಗವಾದ ೩ ತಾಸಿನೊಳಗೆ ಎಲ್ಲ ಕೆಲಸ ಮುಗಿಯುತ್ತದೆ. ಈ ಅವಧಿಯೊಳಗೆ ಯೋಗ್ಯ ಔಷಧೋಪಚಾರವಾದರೆ ಗುಣವಾಗುತ್ತದೆಂದು ರೋಗಪರೀಕ್ಷಕರು ಅಭಿಪ್ರಾಯಬಡುತ್ತಾರೆ. ಆಯುರ್ಬಲವಿದ್ದರೂ ಬದುಕುವದುಂಟು. ಜನರು ಜಾಗ್ರತೆಯಿಂದ ಉಳಿಯಬೇಕು.

ಶ್ರೀಕೃಷ್ಣ ಜನ್ಮಾಷ್ಟಮಿಯು ಶ್ರೀಕ್ಷೇತ್ರ ಶ್ರೀಪತ್ತ ಕುಮಾರೇಶ್ವರ ದೇವಸ್ಥಾನದಲ್ಲಿ ಸಪ್ತಾಹವಾಯಿತು.

ಮಣಕುಳಿಕೇರಿಯಲ್ಲಿ ಹೊಂದು ಚಮತ್ಕಾರ! ರಮಣ ಪೈ ಎಂಬವರ ತಾಯಿ ಕೆಲವು ದಿನಗಳಿಂದ ಅಸ್ವಸ್ಥ ಬಿದ್ದಿದ್ದಳು. ಹೊಂದು ದಿನ ಅವಳಿಗೆ ಮೂರ್ಛೆಯಾಯಿತು; ಎಲ್ಲ ವ್ಯಾಪಾರಗಳು ನಿಂತವು; ರಮಣಪೈರು ತಾಯಿ ಸತ್ತಳೆಂದು ಗ್ರಹಿಸಿ ಉತ್ತರವಿಧಿಗೆ ಸಿದ್ಧರಾದರು; ಕರ್ಮವಿಧಿ ಮಾಡುವಷ್ಟರೊಳಗೆ ಅವಳಿಗೆ ಪ್ರಜ್ಞೆ ಬಂತು. ಚಮತ್ಕಾರ ಬರದೇಕಲ್ಲವೇ?

ಕಲಾನು ಊರಲ್ಲಿ ಮೇಯಲಿಕ್ಕೆ ಹೋದ ೩ ಎತ್ತುಗಳನ್ನು ೨ ಹುಲಿಗಳು ಸೋಮವಾರ ಅಪರಾಹ್ನ ೪ ಘಂಟೆಗೆ ಹಿಡಿಕೊಂಡು ತಿಂದವು. ಕಲಾನು ಊರು ಇಲ್ಲಿಂದ ೧ ಮೈಲು ದೂರವಿದೆ. ದನಕಾಯುವ ಹುಡುಗರು ಬೊಬ್ಬೆ ಹಾಕಿದರು ವೃಥಾ ಬೊಬ್ಬೆಗೆ ಹುಲಿಗಳು ಲಕ್ಷಕೊಡಲಿಲ್ಲ. ಭಟಕಳ ಪಟ್ಟಣದ ಹುಲಿಯ ಸಂಚಾರವಾಗುತ್ತದಾಗಿ ಸುದ್ದಿ; ಪಟ್ಟಣದಲ್ಲಿ ಹತ್ತರ ಜಂಗಲ ಖಾತೆಯವರು ಕಾಡು ಬೆಳಿಸಿ, ಇವುಗಳಿಗೆ ಬಿಡಾರ ಕಟ್ಟಿಕೊಡುತ್ತಿದ್ದಾರೆ. ಹುಲಿ ಬೇಟೆಗೆ ಸರಕಾರವು ಈಗಾದರೂ ಜನರಿಗೆ ಅಪ್ಪಣೆಕೊಡಬೇಕು.

ಶಿರ್ಶಿ— ಮಳೆಯು ಉಂಟು. ಚಳಿಯೂ, ಮಂಜೂ ಬೀಳಹತ್ತಿವೆ.

ಅಕ್ಕಿ ಮುಂತಾದ ಧಾನ್ಯಗಳನ್ನು ಮೋಟಾರುಗಳ ಮೇಲೆ ತರಿಸುವ ವ್ಯವಸ್ಥೆಯಾಗಿದೆ. ನಾಟುಗಳನ್ನೂ ಸಹ ಮೋಟಾರ ಮೇಲೆ ತರುವದುಂಟು. ಗಾಡಿಕಾರರಿಗೂ ದನಕರುಗಳಿಗೂ ಕಷ್ಟ ತಪ್ಪಿತು ಇನ್ನು ಗಾಡಿಕಾರರೆಲ್ಲ ಮುಂಬಯಿ ಗಿರಣಿಗಳಿಗೂ, ಆಸಾಮು ಚಹಾ ತೋಟಗಳಿಗೂ, ದನಕರುಗಳೆಲ್ಲ ಕಟಕರ ಮನೆಗಳಿಗೂ ಹೊರಟರಾಯಿತು. ಇಷ್ಟೇ ಖರ್ಚ ಇಲ್ಲದೆ ಉಭಯತರೂ ಯಮಪುರಿಗೆ ತೆರಳಬಹುದು.

ಹಲವು ಮಹನೀಯರು ಇಲ್ಲಿಗೆ ಬಂದು ವ್ಯಾಪಾರ ನಡಿಸಿರುತ್ತಾರೆ.

ಬೀಡೀ ಕಟ್ಟುವ ದರವನ್ನು ಇಳಿಸಿರುತ್ತದಾಗಿಯೂ ಬೀಡಿ ಕಟ್ಟುವವರಲ್ಲಿ ಅಸಂತೋಷವು ಹುಟ್ಟಿದ್ದು ಸಂಪು ಆಗುವ ಸಂಭವವಿದೆಯೆಂದಲೂ ಹೇಳುತ್ತಾರೆ. ಬೀಡಿ ಸೇದುವವರ ಸಂಖ್ಯೆಯು ಕಡಿಮೆಯಾಗಹತ್ತಿದ್ದು ಸಿಗರೇಟಿನ ಪ್ರಸಾರವು ಭರದಿಂದ ಹೆಚ್ಚುತ್ತಿರುವ ಪ್ರತ್ಯಕ್ಷ ಪ್ರಮಾಣವಿದು.

ಇಲ್ಲಿಯ ಮುನಿಸಿಪಾಲಿಟಿಯಲ್ಲಿ ಗಾಡಿಯ ಮೇಲಿನ ಸುಂಕವನ್ನು ತೆಗೆದು ಹಾಕಬೇಕೆಂದು ಒಂದು ವರ್ಷದ ಪೂರ್ವದಲ್ಲಿಯೇ ಅರ್ಜಿ ಬಂದಿತ್ತೆಂತಲೂ, ಸದ್ಯದಲ್ಲಿ ಅನುಕೂಲವಿಲ್ಲವೆಂದು ಉತ್ತರ ದೊರೆಯಿತೆಂತಲೂ ತಿಳಿಯುತ್ತದೆ. ಧಾರವಾಡ ಹುಬ್ಬಳ್ಳಿಯಂಥ ನಗರಗಳಲ್ಲಿ ಸಹ ಈ ಬಗ್ಗೆ ಠರಾವಾದದ್ದನ್ನು ಲಕ್ಷಿಸಿ ಇಲ್ಲಿಯ ಮುನಸೀಪಾಲಿಟಿಯವರು ಪುನರ್ವಿಚಾರ ಮಾಡುವರೇನು?

ಪ್ರತಿ ಮಂಗಳವಾರ ಸಂತೆ ನೆರೆಯುವ ಮಾರ್ಗದ ಮೇಲೆ ಮೋಟಾರು ನಡಿಸಬಾರದೆಂದು ಇಂಗ್ಲಿಷ ಭಾಷೆಯಲ್ಲಿ ಬೋರ್ಡು ಹಚ್ಚಿದೆ! ಮೋಟಾರುಗಳ ಉಪದ್ರವವೇನು ಕಡಿಮೆಯಾಗಿಲ್ಲ.

ಹಳಿಯಾಳ— ಈ ವರ್ಷದ ಮಳೆಯ ತರವೇ ಬೇರೆ! ಹಂಗಾಮಿಗೆ ಮಳೆ ಬೀಳಲಿಲ್ಲ. ಅದರಿಂದ ಬೆಳೆ ಕೆಟ್ಟು ಹೋಯಿತು; ಈ ಆಪತ್ತಿನಿಂದ ಬದುಕಿ ಉಳಿದ ಭತ್ತಕ್ಕೆ ರೋಗ ಹಿಡಿದು ಸುಟ್ಟಂತಾಗಿದೆ. ಈಗ ಮಳೆಯಿಲ್ಲ. ಹೀಗೆ ನಡೆದರೆ, ಬೀಜ ಹುಡುಕಬೇಕಾಗುವದು. ಕಕ್ಕಳ್ಳಿ ಗ್ರಾಮದಲ್ಲಿ ಬಿತ್ತಿಗೆ ಸಹ ಮಾಡಲಾಗಲಿಲ್ಲ. ಭೂಮಿಯಲ್ಲಿ ಬಂದರು. ಈ ತನಕ ಮಳೆ ೫೭ ಇಂಚು ಬಿತ್ತು. ಮೋಟಾರುಗಳು ಧರ್ಮಶಾಲೆಯ ಹತ್ತರ ನಿಲ್ಲುತ್ತಿದ್ದವು. ಮ್ಯುನಿಸಿಪಾಲಿಟಿಯವರು ಅಲ್ಲಿಯೇ ನಿಲ್ಲುವಂತೆ ಹುಕುಮು ಮಾಡಿದ್ದರು. ಈಗ ಕಿಲ್ಲೆ ಹತ್ತರ ಒಂದು ಖಾಲಿ ಜಾಗೆ ನೇಮಿಸಲ್ಪಟ್ಟದೆ. ಪ್ರಯಾಣಿಕರಿಗೆ ಬಹಳ ಅಡಚಣೆ. ಅಲ್ಲಿಯ ಮಾರ್ಗಗಳು ತೀರ ಇಕ್ಕಟ್ಟಿನವು. ಅಪಘಾತ ಸಂಭವಿಸುವ ಹಾಗಿದೆ. ಒಂದು ಲಾಭ. ಇಲ್ಲಿ ಚಹದ ಅಂಗಡಿಗಳಿಲ್ಲ. ಅದರಿಂದ ಪ್ರಯಾಣಿಕರಿಗೆ ಮುಕ್ತಿನ ಉಳಿತಾಯ!

ಕೋಲಮಡಿಯಲ್ಲಿ ಒಂದು ಉಪವನ ಹಾಗು ಟೇನಿಸ ಆಟವಾಡುವ ಬಗ್ಗೆ ಒಂದು ಸ್ಥಳ ನಿರ್ಮಿಸಲು ಮುನಿಸಿಪಾಲಿಟಿಯವರು ಠರಾವು ಮಾಡಿರುತ್ತಾರೆ. ಕೆಲವು ವರ್ಷಗಳಿಂದ ಈ ಠರಾವು ಆಗುತ್ತಿದೆ. ಎರಡೂ ಯೋಜನೆಗಳೂ ಇನ್ನೂ ಆಗಲಿಲ್ಲ. ಟೇನಿಸ ಗ್ರೌಂಡೇನು ಬೇಡ; ಉಪವನ ನಿರ್ಮಿಸಬಹುದು.

ನಮ್ಮ ಮ್ಯುನಿಸಿಪಾಲಿಟಿಯಲ್ಲಿ ಗ್ಯಾಸದೀಪಗಳು ಬರುವವು; ಊರವರು ಈಗಲೇ ಹಿಗ್ಗುತ್ತಾರೆ.

ಕೊಂಗ್ರೆಸ ಕಮೀಟಿಗಳನ್ನು ಸ್ಥಾಪಿಸಿರಿ.

ಹುಬ್ಬಳ್ಳಿಯ ಹಿಂದುಸ್ಥಾನಿ ಸೇವಾದಲದ ಕಾರ್ಯದರ್ಶಿಗಳಾದ ಶ್ರೀ|| ನಾನಾಸಾಹೇಬ ಹರ್ಡೀಕರರವರು ಬರೆಯುವದೇನೆಂದರೆ:- ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಂಗ್ರೆಸ ಕಮಿಟಿಗಳ ಘಟನೆಯು ಬಹಳ ಶಿಥಿಲವಾಗಿರುತ್ತವೆ. ಸಭಾಸದರನ್ನು ಕೂಡಿಸುವ ಕೆಲಸದಲ್ಲಿ ಸೇವಾದಲದವರು ಬಹು ಪ್ರಯತ್ನ ಮಾಡಿದ್ದಾರೆ. ಕಾರಣ ಅಲ್ಲಲ್ಲಿಯವರು ಸೇವಾದಲದವರ ಕಡೆಯಿಂದ ಮಾಹಿತಿ ತರಿಸಿಕೊಂಡು ತಮ್ಮಲ್ಲಿ ಕಮಿಟಿಗಳನ್ನು ಸ್ಥಾಪಿಸತಕ್ಕದ್ದು. ಇತ್ಯಾದಿ.

ರಾ|| ಎಲ್. ಟಿ. ಕರ್ಕಿಯವರ ಪ್ರಕರಣ.

ಸುದೆಯ ರಾಮನ ಮೃತ್ಯುವಿನ ವಿಷಯ ಕಲೆಕ್ಟರರು ಚೌಕಶಿ ಮಾಡಿ ಕೊನೆಯಲ್ಲಿಯೊಂದು ಅಭಿಪ್ರಾಯ ಪಟ್ಟಿದ್ದಾಗಿ ತಿಳಿಯುತ್ತದೆ. ಪೋಲೀಸರ ಬಂದೋಬಸ್ತಿಯಲ್ಲಿ ಡಿ|| ಮೆಜಿಸ್ಟ್ರೇಟರು ಚೌಕಶಿ ನಡಿಸಿದರು. ನೈಸರ್ಗಿಕ ಕಾರಣಗಳಿಂದ ಮೃತ್ಯು ಸಂಭವಿಸಲಿಲ್ಲೆಂದು ಅಭಿಪ್ರಾಯಪಟ್ಟ ಅಸಿಸ್ಟಂಟ ಸರ್ಜನ್‌ರಿಗೆ ಹಿಂದೆಮುಂದೆ ತಿಳಿಸಲಾಯಿತು. ವರಿಷ್ಠ ಸರ್ಜನರ ಸಾಕ್ಷಿ ಕೊಳ್ಳಲಾಯಿತು. ಕರ್ಕಿಯವರ ಡಿಪಾರ್ಟಮೆಂಟಲ್ ಚೌಕಶಿಯು ಹ್ಯಾಕೋರ್ಟಿನ ತೀರ್ಪಿನಂತೆ ನಿಲ್ಲಿಸಲಾಗಲಿಲ್ಲ. ಇನ್ನೂ ಅವರಿಗೆ ಮೆಜಿಸ್ಟ್ರೇಟ ಅಧಿಕಾರ ಕೊಡಲಾಗಲಿಲ್ಲ. ಇತ್ಯಾದಿ ಸಂಗತಿಗಳನ್ನು ನಮೂದಿಸಿ ಹ್ಯಾಕೋರ್ಟಿಗೆ ರಾಮನ ಕೊಲೆಯ ವಿಷಯ ಪ್ರತ್ಯೇಕ ಚೌಕಶಿ ಮಾಡಬೇಕಾಗಿ ರಾ|| ಕರ್ಕಿಯವರು ಅರ್ಜಿ ಮಾಡಿದ್ದರು. ಆ ಅರ್ಜಿಯು ತಿರಸ್ಕರಿಸಲಾಗಿದೆ.

ವೃತ್ತಸಾರ.

— ಮದ್ರಾಸ ಸರಕಾರವು ಮಂಗಳೂರಿನಲ್ಲಿ ಒಂದು ವರ್ತಕ ಶಾಲೆಯನ್ನು ಸ್ಥಾಪಿಸುವ ವಿಚಾರ ಮಾಡಿದೆ, ವಿಚಾರವು ಬೇಗನೆ ಆಚಾರದಲ್ಲಿ ಪರಿಣಮಿಸಲಿ.

— ರಾಷ್ಟ್ರಸೇವಿಕೆಯರಾದ ಸೌ|| ಸರೋಜಿನಿದೇವಿಯವರು ಅಮೇರಿಕೆಗೆ ಪ್ರಯಾಣ ಬೆಳೆಸುವವರಿದ್ದಾರೆ. ಅಮೇರಿಕೆಯಲ್ಲಿ ಹಿಂದುಸ್ಥಾನ ವಿಷಯಕ ಉಪನ್ಯಾಸಗಳನ್ನಿತ್ತು, ಅಲ್ಲಿ ಬೇರೂರಿಕೊಂಡ ನಿರಾಧಾರ ಕಲ್ಪನೆಗಳನ್ನು ಇವರು ಹೋಗಲಾಡಿಸಲು ಪ್ರಯತ್ನಿಸುವರು.

— ಗಣೇಶ ಚತುರ್ಥಿಯ ಹಬ್ಬದ ಸಮಯ ಸಮಸ್ತರೂ ಖಾದಿಯನ್ನು ಧರಿಸಬೇಕೆಂದು ಶ್ರೀ|| ಕೌಜಲಗಿ ಹನುಮಂತರಾಯರು ವಿಜ್ಞಾಪಿಸಿಕೊಂಡಿದ್ದಾರೆ.

— ಬೆಳಗಾವಿಯ ತ್ರಿಮೂರ್ತಿಯಿಂದ ಸ್ಟ್ಯಾಂಪಿನ ವಂಚನೆ ಪ್ರಕರಣದಲ್ಲಿ ರಾ|| ಕೇಶವ ವಾಸುದೇವ ವೇಲಂಗಿ ಪ್ರಸಿದ್ಧ ಶಹಾಪೂರ ಇವರಿಗೆ ೬೦೦ ರೂಪಾಯಿ ದಂಡ ಹಾಗು ಒಂದು ದಿನದ ಶಿಕ್ಷೆಯಾಗಿತ್ತು. ಬೆಳಗಾಂವ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಅಪೀಲಾಯಿತು. ಸೆಶನ್ಸ ಜಡ್ಜರು ಇಷ್ಟು ಶಿಕ್ಷೆ ಕಡಿಮೆಯಾಯಿತೆಂದೂ, ಶಿಕ್ಷೆಯನ್ನು ಹೆಚ್ಚಿಸಬೇಕೆಂದೂ ಬರೆದರು. ಹ್ಯಾಕೋರ್ಟಿನಲ್ಲಿ ನ್ಯಾಯಮೂರ್ತಿಗಳು ವಿಚಾರ ಮಾಡಿ ಪೂರ್ಣ ಶಿಕ್ಷೆಯನ್ನೇ ರದ್ದು ಮಾಡಿ, ರಾ|| ಕೇಶವ ವೇಲಂಗಿಯವರಿಗೆ ನಿರ್ದೋಷಿಯೆಂದು ಬಿಟ್ಟುಕೊಟ್ಟರು. ವಿಷಯವು ಆಶ್ಚರ್ಯಕರವಾಗುತ್ತದೆ! ದೈವಬಲ ಮಾತ್ರ ಇರಬೇಕು!!

— ವಿಖ್ಯಾತ ದೇಶಸೇವಕರಾದ ಬಾಬು ರಾಜೇಂದ್ರ ಪ್ರಸಾದರವರು ಆಸ್ಟ್ರಿಯಾ ದೇಶಕ್ಕೆ ಹೋಗಿದ್ದರು. ಅಲ್ಲಿ ಅವರನ್ನು ಕೊಲ್ಲುವ ಯೋಜನೆಯಾಯಿತು. ಅವರು ಕ್ರಾಂತಿಕಾರರೆಂದು ಅಲ್ಲಿಯವರು ಸಂದೇಹಪಟ್ಟರಂತೆ. ಅವರಿಗೆ ಒಂದು ಕಡೆ ಸಭೆಗೆಂದು ಕರೆತಂದು ಹೊಡೆ ಕೊಂದು ಕೊಲ್ಲಿರೆಂದು ಒಂದೇ ಧ್ವನಿಯಾಯಿತು. ಅವರ ಜೊತೆಗೊಬ್ಬ ಅಧ್ಯಾಪಕರು ಜೊತೆಯೊಳಗೆ ಹೋಗಿದ್ದರು. ಅವರು ಕ್ರಾಂತಿಕಾರಕರಿಗೆ ಅಡ್ಡಾಗಿ ನಿಂತು ರಾಜೇಂದ್ರಪ್ರಸಾದರವರನ್ನು ಬದುಕಿಸಿದರು. ಇಬ್ಬರಿಗೂ ಗಾಯಗಳಾಗಿವೆ. ಆದರೆ ಅದೇನು ದೊಡ್ಡದಲ್ಲ. ಮಹಾತ್ಮರು ಯುರೋಪ ಖಂಡಕ್ಕೆ ಹೋಗುವ ದೇಶಸೇವಕರಿಗೆ ಜಾಗೃತೆಯಿಂದ ವರ್ತಿಸಲು ಮುಂಜಾಗ್ರತೆ ಕೊಟ್ಟಿದ್ದಾರೆ.

— ಸದುಲಾಪೂರ ಸರಕಾರಿ ದ್ರವ್ಯಸಹಾಯ ಪಡೆಯುವ ಹ್ಯಾಸ್ಕೂಲಿಗೆ ಇಂಗ್ಲಿಷ ಜ್ಞಾನವಿದ್ದ ಕಾವ್ಯ-ವ್ಯಾಕರಣತೀರ್ಥ ಪಂಡಿತರು ಬೇಕಾಗಿದೆ; ದರಮಹಾ ೩೫ ರಂತೆ ಪಗಾರು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಇಷ್ಟು ಪ್ರೋತ್ಸಾಹ ಸಾಲದೇ!

— ಕರ್ನಾಟಕ ಏಕೀಕರಣ ವಿಷಯ 'ಕನ್ನಡಿಗರ ಕರ್ತವ್ಯ' ಎಂಬ ಲೇಖ ಬರೆದ ಶ್ರೀ|| ಆರ್. ಬಿ. ಕುಲಕರ್ಣಿ ಕಾವ್ಯರತ್ನ, ಬೆಳಗುಂದ ಇವರಿಗೆ ರೂಪಾಯಿ ೫೦ ಗಳ ಬಹುಮಾನ ಕೊಡಲಾಗಿದೆ ಹುಬ್ಬಳ್ಳಿಯ ಹಿಂದುಸ್ಥಾನಿ ಸೇವಾದಲದ ಕಡೆಯಿಂದ ಈ ಇನಾಮು ಕೊಡಲಾಗಿದೆ. ಬಹುಮಾನವನ್ನು ತೀರ್ಥಹಳ್ಳಿಯ ಶ್ರೀ|| ಬಿ. ನಾಗಾಭಟ್ಟರೂ ಶ್ರೀ|| ಯು. ಮಂಜುನಾಥಯ್ಯನವರೂ ಈ ಬಹುಮಾನ ಕೊಟ್ಟ ದಾತೃಗಳು,

— ಕರ್ನಾಟಕದಲ್ಲಿ ಇನ್ನು ೧೪ ಸಾವಿರ ಮೆಂಬರರನ್ನು ಕೂಡಿಸಿದರೆ ಮಾತ್ರ ಕರ್ನಾಟಕವು ಮೊದಲಿನ ಸ್ಥಾನವನ್ನು ಪಡೆಯುವದೆಂದೂ, ಇಲ್ಲದಿದ್ದರೆ ಕರ್ನಾಟಕವು ಕೆಳ ತರಗತಿಗೆ ಬೀಳುವದೆಂದೂ, ಕರ್ನಾಟಕಸ್ಥರು ತ್ವರೆಮಾಡಬೇಕೆಂದೂ ಶ್ರೀ|| ಬಿಂದುಮಾಧವ ಬುರ್ಲಿಯವರು ವಿನಂತಿಮಾಡಿಕೊಳ್ಳುತ್ತಾರೆ.

— ಸುರತ ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ ಮಂಡಳವು ಸ್ಥಾಪನ ಹೊಂದಿರುತ್ತವೆ, ಸರದಾರ ವಲ್ಲಭಭಾಯಿ ಪಟೇಲರು ಈ ಮಂಡಳದ ಅಧ್ಯಕ್ಷರು, ಕುಮಾರಿ ಮಿಠೂಬಾಯಿ ಪಟಿಟರು ಈ ಕಾರ್ಯವನ್ನು ಉತ್ಸಾಹದಿಂದ ನಡಿಸುತ್ತಿದ್ದಾರೆ. ಮಹಾತ್ಮರ ಆಶೀರ್ವಚನವಿದೆ,

— ಮಂಗಳೂರಿನ ಸ್ತ್ರೀ ಚಿಕಿತ್ಸಾಲಯದಲ್ಲಿ ಬಡಬಗ್ಗರ ಮಕ್ಕಳಿಗೆ ಧರ್ಮಾರ್ಥವಾಗಿ ನಿನ್ನೆಯಿಂದ ಔಷಧ ಕೊಡುತ್ತಿದ್ದಾರೆ.

— ಹಿಂದುಗಳು ತಮ್ಮ ರಾಜ್ಯದಲ್ಲಿ ಉತ್ಸವ ಮಾಡಬೇಕಾದರೆ ೫೦೦ ರೂಪಾಯಿಗಳ ಠೇವಣಿಯಿಡಬೇಕಾಗಿ ನಿಜಾಮರು ಫರ್ಮಾನು ಹೊರಡಿಸಿದ್ದಾರೆ. ಅತ್ಯಾಚಾರಗಳಾದರೆ, ಈ ಠೇವು ಜಪ್ತಾಗುವದಂತೆ. ಅತ್ಯಾಚಾರ ಮಾಡುವವರ್ಯಾರು? ಠೇವು ಯಾರದು? ಹಾಗಲವಾಡಿಯ ರಾಜ್ಯವು ನಿಜಾಮ ರಾಜ್ಯದಲ್ಲಿತ್ತೇನು?

— ಮೈಸೂರಿನ ಗಣಪತಿ ವಿಗ್ರಹದ ಗಲಾಟೆ ಚೌಕಶಿ ನಡೆದರೆ ಬೆಂಗಳೂರ ಮುನಿಸಿಪಾಲಿಟಿಯ ಅಧ್ಯಕ್ಷರಾದ ಖಾನಬಹಾದ್ದೂರ ಅಬ್ಬುಸಮಾನರವರು ತಮ್ಮ ಅಧ್ಯಕ್ಷರ ಅಧಿಕಾರಕ್ಕೆ ರಾಜೆ ಕೊಟ್ಟರು.

— ಮೈಸೂರು ಸಂಸ್ಥಾನದೊಳಗೇ ಉಪಾಧಿ. ದೇವರಾಯ ಗಣಪತಿ, ಕುರುಡಮಲೆ ಗಣಪತಿ, ಹೋಮಗಿರಿ ಮಲ್ಲಿಕಾರ್ಜುನ ಸ್ವಾಮಿ, ಚಾವಡಿ ಗಣೇಶ ಮುಂತಾದ ವಿಗ್ರಹ ಮೇಲೆ ಅಧಮರು ಅತ್ಯಾಚಾರಗಳನ್ನಾಚರಿಸಿದರು.

— ಹಲಗೇರಿ ಶ್ರೀ ಹಾಲಸಿದ್ಧೇಶ್ವರ ಪ್ರಾಸಾದಿಕ ಲೋಕಸೇವಕ ನಾಟಕ ಮಂಡಳಿಯವರು ಲಕ್ಷ್ಮೇಶ್ವರ ಮುಕ್ಕಾಮಿನಲ್ಲಿ ತಮ್ಮ ಪ್ರಯೋಗಗಳನ್ನು ಆಡಿ ತೋರಿಸುತ್ತಿರುವರು.

— ಮುಂಬಯಿಯಲ್ಲಿ ಬಾರ್ಟನ್ ಎಂಬ ದೊಡ್ಡ ನೇತ್ರ ಚಿಕಿತ್ಸಕರು ತಮ್ಮಲ್ಲಿ ಚಿಕಿತ್ಸೆಗೆ ಹೋದ ಫಾರ್ಸಿ ಹುಡುಗಿಯ ಮೈಮೇಲೆ ಕೈ ಹಾಕಿದ ಬಗ್ಗೆ ಪ್ರಕರಣ ನಡೆದು, ಅವರಿಗೆ ೧ ತಿಂಗಳ ಶಿಕ್ಷೆ ೧೦೦೦ ರೂಪಾಯಿ ದಂಡವಾಗಿದೆ. ಬಾರ್ಟನ್‌ರವರ ಇದೀ ಉದ್ಯೋಗ ಮುಳುಗಿತು. ಕಾಮುಕರು ಎಚ್ಚರವಿಡಬೇಕಾದ ವಿಷಯ.

— ಎಲ್ಯುಮಿನಮ್ ಪಾತ್ರೆಯಲ್ಲಿ ಅಡಿಗೆ ಮಾಡಿದರೆ, ಆಹಾರ ಪದಾರ್ಥಗಳಲ್ಲಿ ಎಲ್ಯುಮಿನಮ್ ಲೋಹವು ಸೇರುತ್ತದೆ. ಈ ಸತ್ವವು ವಿಷವು; ಆದರಿಂದ ಈ ಪಾತ್ರೆಗಳನ್ನುಪಯೋಗಿಸಲಾಗದೆಂದು "ಹೆಲ್ತ ಮೆಸಜಿಸ್" ಎಂಬ ಆರೋಗ್ಯ ಪತ್ರಿಕೆಯಲ್ಲಿ ಸಪ್ರಮಾಣ ಪ್ರತಿಪಾದಿಸಲಾಗಿದೆ.

ಮಹಾತ್ಮರ ಆತ್ಮಚರಿತ್ರ.

(೨೧) ಆಶ್ರಯ.

ಕೂಲಿಕಾರರ ವಾದವನ್ನು ವರ್ಣಿಸುವ ಮುಂಚೆ ಆಶ್ರಮದ ಕಡೆ ತಿರುಗುವದು ಅವಶ್ಯವದೆ. ಚಂಪಾರಣ್ಯದಲ್ಲಿದ್ದರೂ, ನನಗೆ ಆಶ್ರಮದ್ದೇ ಚಿಂತೆ. ಕೆಲವು ಸಾರೆ ಆಶ್ರಮಕ್ಕೆ ಹೋಗಿ ನಾನು ಮರಳಿ ಚಂಪಾರಣ್ಯಕ್ಕೆ ಬರುತ್ತಿದ್ದೆ. ಆ ಕಾಲಕ್ಕೆ ಆಶ್ರಮವು ಕೋಚರಬ್ ಗ್ರಾಮದಲ್ಲಿತ್ತು. ಕೋಚರಬ್ ಗ್ರಾಮವು ಅಹಮದಾಬಾದ ಪಟ್ಟಣದ ಬಳಿ ಚಿಕ್ಕ ಗ್ರಾಮವು. ಈ ಗ್ರಾಮದಲ್ಲಿ ಪ್ಲೇಗ ಬಂತು. ಆಶ್ರಮದೊಳಗಿನ ಬಾಲಕರಿಗೆ ಗಂಡಾಂತರವೊದಗುತ್ತದೆಂದು ನನಗೆ ತೋರಿತು. ಸುತ್ತುಮುತ್ತಲೊಳಗಿನ ಅನಾರೋಗ್ಯದ ಪರಿಣಾಮದಿಂದ ಸುರಕ್ಷಿತವಾಗಿರುವದು ಅಸಾಧ್ಯವಾಯಿತು. ಆಶ್ರಮ ಪ್ರಾಕಾರದಲ್ಲಿ ನಾವು ಎಷ್ಟು ಸ್ವಚ್ಛತೆಯನ್ನು ಕಾಪಾಡಿದರೂ, ಅದು ಸಾಧ್ಯವಿದ್ದಿಲ್ಲ. ಕೋಚರಬ್ ಗ್ರಾಮದವರಿಗೆ ಆರೋಗ್ಯ ನೇಮಗಳನ್ನು ಪಾಲಿಸಹಚ್ಚುವಷ್ಟು ಸಾಮರ್ಥ್ಯವು ನಮ್ಮಲ್ಲಿರಲಿಲ್ಲ. ಬೇರೆ ಉಪಾಯದಿಂದ ಗ್ರಾಮದಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಿದ್ದಿಲ್ಲ.

ಆಶ್ರಮವನ್ನು ಅಹಮದಾಬಾದ ಪಟ್ಟಣದಿಂದಲೂ, ಕೋಚರಬ್ ಗ್ರಾಮದಿಂದಲೂ ಸಾಧಾರಣ ದೂರ ಒಯ್ಯಲು ನಮ್ಮ ಧ್ಯೇಯವಿತ್ತು. ಆದರೆ, ಎಂದೂ ಸ್ಥಳದಿಂದ ಬಹು ದೂರವಿರಲಾಗದು. ಹಾಗು ಶೀಘ್ರವೇ ನಮ್ಮ ಮಾಲ್ಕಿಯ ಒಂದು ಸ್ಥಳದಲ್ಲಿ ಆಶ್ರಮವನ್ನಿಡಬೇಕೆಂದೂ ನಮ್ಮ ಬಯಕೆಯಿತ್ತು.

ಕೋಚರಬ್ ಗ್ರಾಮವನ್ನು ಬಿಡಲಿಕ್ಕೆ ಪ್ಲೇಗಿನ ನೋಟೀಸು ಸಾಕೆಂದು ನಾನು ನೆನೆಸಿದೆನು. ಅಹಮದಾಬಾದಲ್ಲಿ ಶ್ರೀ ಪುಂಜಾಬಾಯಿ ಹಿರಾಚಂದ ಎಂಬ ವರ್ತಕರಿದ್ದರು. ಆವರಿಗೆ ಆಶ್ರಮದ ಎಲ್ಲ ಮಾಹಿತಿ ಇತ್ತು. ನಿರ್ಮಲಾಂತಃಕರಣದಿಂದಲೂ, ನಿಸ್ವಾರ್ಥ ಬುದ್ಧಿಯಿಂದಲೂ ಅವರು ಹಲವು ಬಗೆಯಿಂದ ನಮಗೆ ನೆರವಾಗಿದ್ದಾರೆ. ಅಹಮದಾಬಾದದಲ್ಲಿ ಇವರು ಚಲೋ ಅನುಭವಿಕರಿದ್ದರು. ಪ್ರಶಸ್ತ ಭೂಮಿಯನ್ನು ಸಂಪಾದಿಸಲು ಇವರು ಮುಂದಾದರು. ಅವರ ಸಂಗತ ಸ್ಥಲಶೋಧನೆಯ ಬಗೆ ಕೋಚರಬ್ ಗ್ರಾಮದ ಉತ್ತರ ದಕ್ಷಿಣ ಪ್ರದೇಶಗಳಲ್ಲಿ ತಿರುಗಿದೆನು. ಈ ಗ್ರಾಮದ ಉತ್ತರಕ್ಕೆ ೩—೪ ಮೈಲು ದೂರ ಸ್ಥಳ ಕೊಳ್ಳಲು ನಾನವರಿಗೆ ಸೂಚಿಸಿದೆನು. ಅವರೇ ಈಗಿನ ಸ್ಥಳವನ್ನು ಶೋಧಿಸಿದರು. ಈ ಸ್ಥಳವು ಸಾಬರಮತಿ ಸೆಂಟ್ರಲ್ ಜೈಲಿನ ನೆರೆಹೊರೆಯಲ್ಲಿದೆ. ಇದರಿಂದ ನನಗೆ ವಿಶೇಷ ಸಂತೋಷವಾಯಿತು. ಸತ್ಯಾಗ್ರಹಿಗಳು ಜೈಲಿಗೆ ಹೋಗುವದು ಸ್ವಾಭಾವಿಕವು. ಇದರಿಂದ ಈ ಸ್ಥಳವು ಒಳ್ಳೇದೆಂದು ನನಗನಿಸಿತು. ಜೈಲುಗಳಿಗಾಗಿ ಆರಿಸಿ ತೆಗೆದ ಸ್ಥಳಗಳು ಸಾಮಾನ್ಯವಾಗಿ ಪ್ರಶಸ್ತ ಸ್ಥಳದಲ್ಲಿರುತ್ತದೆಂಬ ವಿಷಯವನ್ನು ನಾನರಿತಿದ್ದೆ.

ಆ ದಿನಗಳಲ್ಲಿಯೇ ಕ್ರಯಪತ್ರ ಆಯಿತು. ಈ ಸ್ಥಳದ ಮೇಲೆ ಆ ಕಾಲಕ್ಕೆ ಕಟ್ಟಡವಿರಲಿಲ್ಲ. ಮರಮಟ್ಟುಗಳಿರಲಿಲ್ಲ. ಸ್ಥಳವು ನದಿಯ ದಂಡೆಯ ಮೇಲಿತ್ತು. ಏಕಾಂತ ಸ್ಥಳವಾಗಿತ್ತು. ಇದೊಂದು ದೊಡ್ಡ ಲಾಭ. ಗುಡಾರ ಹೊಡಕೊಂಡು ಉಳಿಯಬೇಕಾಗಿ ನಾವು ನಿರ್ಣಯಿಸಿದೆವು. ಅಡಿಗೆಮನೆಯ ಬಗ್ಗೆ ತಗಡಿನ ಪಡಲು ಕಟ್ಟೋಣಾಯಿತು. ಭದ್ರ ಕಟ್ಟಡಗಳನ್ನು ಕಟ್ಟುವ ತನಕ ಈ ವ್ಯವಸ್ಥೆಯಾಗಿತ್ತು.

ಆಶ್ರಮವು ಕ್ರಮವಾಗಿ ವೃದ್ಧಿಯಾಗುತ್ತಿತ್ತು. ಗಂಡಸರೂ, ಹೆಂಗಸರೂ, ಹುಡುಗರೂ ಕೂಡಿ ಈಗ ೪೦ಕ್ಕೆ ಮಿಕ್ಕಿ ಜನರಿದ್ದರು. ನಾವೆಲ್ಲರೂ ಒಂದೇ ಕಡೆ ಊಟ ಮಾಡುತ್ತಿದ್ದೆವು. ಈ ಕಟ್ಟಡದ ಕಲ್ಪನೆಯೆಲ್ಲ ನನ್ನದು. ಆ ಸ್ಥಾನದಲ್ಲಿ ಮುಂದೆ ಕೆಲಸ ಮಾಡಿದ್ದು ಮಗನಲಾಲನು.

ಭದ್ರ ಬಿಡಾರು ಕಟ್ಟುವವರೆಗೆ ನಮಗೆ ಬಹಳ ಕಷ್ಟಗಳಾದವು. ಮಳೆಗಾಲ ಸಮೀಪಿಸಿ ಬಂದಿತ್ತು. ಅಹಮದಾಬಾದ ಪಟ್ಟಣವು ೪ ಮೈಲು ದೂರ, ಅಲ್ಲಿಂದ ಸಾಮಗ್ರಿಗಳನ್ನೆಲ್ಲ ಪೂರೈಸಿಕೊಳ್ಳಬೇಕಾಗಿತ್ತು. ಈ ಸ್ಥಳವು ಹಾಳುಬಿದ್ದುಕೊಂಡಿತ್ತು. ಹಾವುಗಳ ಬೀಡು, ಇಂಥಲ್ಲಿ ಚಿಕ್ಕ ಚಿಕ್ಕ ಬಾಲಕರೊಡನೆ ಉಳಿಯುವದೆಂದರೆ ದೊಡ್ಡ ಅಪಾಯ. ಸಾಮಾನ್ಯವಾಗಿ ಹಾವುಗಳಿಗೆ ಕೊಲ್ಲುತ್ತಿದ್ದಿಲ್ಲ. ಇವುಗಳ ಭೀತಿಯು ಆಗಲೂ ಇತ್ತು, ಈಗಲೂ ಇರುವದೆಂಬ ಸಂಗತಿಯನ್ನು ನಾನೊಪ್ಪುತ್ತೇನೆ. ವಿಷದ ಹಾವುಗಳನ್ನು ಕೊಲ್ಲಬಾರದೆಂಬ ನೇಮವು ಫೀನಿಕ್ಸದೊಳಗಿನ ಟೋಲಸ್ಟೋಯ್ ಆಶ್ರಮದಲ್ಲಿಯೂ, ಸಾಬರಮತಿ ಆಶ್ರಮದಲ್ಲಿಯೂ, ಪಾಲಿಸೋಣಾಯಿತು. ಎರಡೂ ಕಡೆ ಹಾಳು ಬಿದ್ದ ಭೂಮಿಯ ಮೇಲೆ ನಾವು ಬಿಡಾರು ಕಟ್ಟಿಕೊಂಡು ಉಳಿಯಬೇಕಾಯಿತು. ಹಾವು ಕಚ್ಚಿ ಯಾರೂ ಸಾಯಲಿಲ್ಲ. ದಯಾಘನ ಭಗವಂತನ ಅನುಗ್ರಹದಿಂದಲೇ ಹೀಗಾಯಿತೆಂದು ನನ್ನ ಶ್ರದ್ಧೆ. ಈ ಕುರಿತು ಯಾರೂ ನಿಂದೆ ಮಾಡಲಾಗದು. ಭಗವಂತನು ಪಕ್ಷಪಾತಿಯೆಂದೂ ಹೇಳಲಾಗದು. ಮಾನವ ಪ್ರಪಂಚದೊಳಗಿನ ಚಿಕ್ಕಪುಟ್ಟ ಸಂಗತಿಗಳಲ್ಲಿ ಆತನಿಗೆ ಲಕ್ಷ್ಯಕೊಡಲು ಸಮಯವೆಲ್ಲಿಂದ? ಗ್ರಹಿಸಲಾಗದು. ಈ ಪ್ರಕಾರ ಒದಗಿ ಬರಲು ಕಾರಣವೇನೆಂದು ಹೇಳಲು ಮತ್ತ್ಯಾವ ರೀತಿಯಿಂದಲೂ ನನಗೆ ಬರುವದಿಲ್ಲ. ಜಗಚ್ಚಾಲಕನ ಲೀಲೆಗಳನ್ನು ಮಾನವನಿಂದ ಯಥಾರ್ಥವಾಗಿ ಹೇಳಲು ಸಾಧ್ಯವಿಲ್ಲ. ಆತನ ಲೀಲೆಗಳು ಅವರ್ಣನೀಯವಿವೆ, ಅಗಾಧವಿವೆ, ಎಂಬ ಸಂಗತಿ ನನಗೆ ಗೊತ್ತುಂಟು. ಮತ್ಯಾರು ಇವುಗಳನ್ನು ವರ್ಣಿಸಬೇಕಾದಾಗ ಆತನು ತನಗೆ ಸಾಧ್ಯವಿದ್ದ ಅಸ್ಪಷ್ಟ ಭಾಷೆಯಲ್ಲೇ ಹೇಳಬೇಕಾಗುತ್ತದೆ. ೨೫ ವರುಷಗಳ ತನಕ ಹಾವುಗಳನ್ನು ಕೊಲ್ಲಬಾರದೆಂಬ ನಿಯಮವನ್ನು ಪಾಲಿಸಿ ನಮಗೇನೂ ಅಪಾಯ ಸಂಭವಿಸದಿದ್ದಾಗ, ಇದು ಸಹಜ ಒದಗಿದ ಸಂಗತಿಯಲ್ಲವಾ ಮತ್ತು ಭಗವಂತನ ಅನುಗ್ರಹವೆಂದೂ ನಂಬುವದು ಮೂಢ ಭಾವನೆ ಎಂದು ಯಾರೂ ಹೇಳಬಹುದು. ಮೂಢ ಭಾವನೆಯ ಅಪವಾದವನ್ನು ಸ್ವೀಕರಿಸಲು ನಾನು ಸಿದ್ಧನಿದ್ದೇನೆ.

ಅಹಮದಾಬಾದದಲ್ಲಿ ಗಿರಣಿ ಕೂಲಿಕಾರರ ಸಂಪಾದಾಗ ಆಶ್ರಮದ ನೇಯ್ಗೆಯ ಕಟ್ಟಡದ ನೆಲಗಟ್ಟು ಕಟ್ಟುತ್ತಿದ್ದರು. ನೇಯ್ಗೆಯೇ ಆ ಕಾಲದಲ್ಲಿ ಆಶ್ರಮದ ಪ್ರಮುಖ ಕಾರ್ಯವಾಗಿತ್ತು. ನೂಲಲು ಆಗ ಸಾಧ್ಯವಾಗಿದ್ದಿಲ್ಲ.

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಆರ್ಚರ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ " ಆರ್ಚರ ' ಎಂಬ ಗುರುತಿರುವದು)

ಚನ್ನಾಗಿ ಪೆಟ್ಟಿಗೆಯಲ್ಲಿರಿಸಿ ರೇಲ್ವೆ ಚಾರ್ಜ ತುಂಬಿ ನಿಮ್ಮೂರ ಸ್ಟೇಶನ ಮೇಲೆ

ಲ೫ ರೂ. ೮ ಆ. ಗೆ ಮಾತ್ರ.



ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್ಸ, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ, ಮಡಗಾರ್ಡ್ಸ, ಸೊಗಸಾದ ಸ್ಪ್ರಿಂಗಸೀಟ, ರಬರ ಪ್ಯಾಡಲ್ಸ, ಲೂಕಸ್ಸಿನ " ಪಾಥ ಫಾಯಿಂಡರ " ದೀಪ, ಉತ್ತಮ ಘಂಟೆ, ಡನ್ಲಾಪ್ ಪ್ಲೇಟೆಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತ. ಆರ್ಡರಿನ ಕೂಡ ರೂ ೨೫ ಮುಂಗಡ, ಉಳಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್ ಎಂಡ್ ಮೋಟರ ಕಂಪನಿ,

ಮುಂಬಯಿ— ಹಾರ್ನಬೀ ರೋಡ,

ಪುಣೆ— ಅರ್ಸೆನಲ್ ರೋಡ.

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೇಕೆಟ್ ಗಳಿಗೆ ರೂ ೬
(ಎಕೆಲೋಜಿಮೆಂಟು) ೨೫ ,, ,, ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೬।
ಇಂಗ್ಲಿಷ ತರಕಾರಿ ಬೀಜಗಳು ೧೭ ,, ,, ೪॥
ನಾಟಿ ೧೬ ,, ,, ೬॥
ಸಿಲ್ವರ ಓಕ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೀ ಮೂಲಂಗಿ ಬೀಜ ರತ್ತಲಿಗೆ ೬॥
ಹರಿವೆ ಸೊಪ್ಪು ೧ ರತ್ತಲಿಗೆ ... ೪
ಕದುರೆ ವನಾಶಿ ಬೀಜ ೧ ರತ್ತಲಿಗೆ ... ೩
ತಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಪಲೋಕ್ರೋಟನ್ಸ್ ಗಿಡ ೧೨ ಕ್ಕೆ . ೩ ರಿಂದ ೧೨
ಅಂದವಾದ ಹೂಗಿಡ (ಜಿರೇನಿಯಂ) ೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೨ ರಿಂದ ೧೨
ಕೇರಿನ ತೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ . . ೧॥ ರಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ .. ೩ ರಿಂದ ೧೨
ಕಸ್ಸಿದ ಮಾದರಿನ ಗಿಡಗಳು ೧೨ ಕ್ಕೆ .. ೧೦ ರಿಂದ ೧೨
ಸೇವು ಗಿಡಗಳು ೧೨ ಕ್ಕೆ .. .. ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ ... ...೧೨ ರಿಂದ ೩೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಮಫಲ, ಪನ್ನೇರಲ, ಕಂಚಿಕಾಯಿ, ಲಕ್ಕೋಟೆ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್ ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೬೪
ವೆಲಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ... ೫
೧ ಬುಟ್ಟಿ ತುಂಬ ತರಕಾರಿ . . ೫ ರಿಂದ ೬
ಕ್ರೊಟಾಂಟಿಸ್ ಗಿಡ ೧೦೦ ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬–೯–೧೨
ನೆರಳು ಕೊಡುವ ಕಾಡಿನ ಎಲೆಯ ಜಾತಿಯ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡೆಗಳು ೧೨ ಕ್ಕೆ ರೂ. ೩ ರಿಂದ ೯
ಎರೋಕೇರಿಯಾ ಕುಕ್ಕಿಗಾ ಗಿಡಗಳಿಗೆ ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆ ಇಲ್ಲದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

|| ಶ್ರೀ ||

ಕನ್ನಡ ಜ್ಞಾನೇಶ್ವರಿ.

(ವೇದಮೂರ್ತಿ ಪಂಡಿತ ಕುಮಠಾ ನಾರಾಯಣಾಚಾರ್ಯರವರಿಂದ ಪರಿಶೋಧಿಸಲ್ಪಟ್ಟಿದೆ.)

ಶ್ರೀ ಜ್ಞಾನೇಶ್ವರ ಮಹಾರಾಜರು ಶ್ರೀಮದ್ಭಗವದ್ಗೀತೆಯ ಮೇಲೆ ಮರಾಠಿಯಲ್ಲಿ ಬರೆದ ಟೀಕೆಯು 'ಜ್ಞಾನೇಶ್ವರಿ' ಎಂಬ ಹೆಸರಿನಿಂದ ಪ್ರಸಿದ್ಧವಿರುತ್ತದೆ. ಇದಕ್ಕೆ ಭಾವಾರ್ಥದೀಪಿಕೆ ಎಂಬ ಹೆಸರಿದ್ದರೂ, ಪ್ರಚಾರದಲ್ಲಿ 'ಜ್ಞಾನೇಶ್ವರಿ' ಎಂಬ ಹೆಸರೇ ಪ್ರಸಿದ್ಧಿಗೆ ಬಂದಿರುತ್ತದೆ. ಶ್ರೀಕೃಷ್ಣ ಪರಮಾತ್ಮನ ಅವತಾರವೇ ಆಗಿದ್ದ ಜ್ಞಾನೇಶ್ವರ ಮಹಾರಾಜರು ಕುರುಕ್ಷೇತ್ರದಲ್ಲಿ ಸಂಕ್ಷೇಪದಿಂದ ಹೇಳಿದ ಗೀತೆಯನ್ನೇ ವಿಸ್ತಾರವಾಗಿ ಕಲಿಯುಗದ ಜನರಿಗೆ ತಿಳಿಯುವಂತೆ ಸುಲಭವಾಗಿಯೂ, ಸರಸವಾಗಿಯೂ ಬರೆದು ಓವೀಬದ್ಧ ಕಾವ್ಯಾತ್ಮಕ ಗ್ರಂಥದಲ್ಲಿ ವಿಶದಪಡಿಸಿರುತ್ತಾರೆ. ಅದರ ಮೂಲ ಓವಿಗಳ ಸಂಖ್ಯೆ ಸುಮಾರು ೯೦೦೦ ಇದ್ದು ಅದನ್ನು ಕನ್ನಡಿಗರಿಗೆ ತಿಳಿಸಬೇಕೆಂಬ ಹೇತುವಿನಿಂದ ಕನ್ನಡ ಗುರುಚರಿತ್ರದ ಕರ್ತರಾದ ರಾ| ರಾ| ವೇಂಕಟಸುಬ್ಬರಾವ ಮುಡಕಟ್ಟೆ ಬಿ.ಎ., ಮಾಮಲೇದಾರ ಖಾನಾಪುರ ಇವರು, ಸುಲಭವಾಗಿಯೂ ಸರಸವಾಗಿಯೂ ಪ್ರಾಸಾದಿಕವಾಗಿಯೂ ಕನ್ನಡ ಭಾಮಿನಿ ಷಟ್ಪದಿಯಲ್ಲಿ ಶ್ರೀ ಜ್ಞಾನೇಶ್ವರ ಮಹಾರಾಜರ ಪ್ರೇರಣೆಯಿಂದಲೇ ಕಾವ್ಯಾತ್ಮಕ ಗ್ರಂಥವಾಗಿ ಬರೆದಿರುತ್ತಾರೆ. ಈ ಗ್ರಂಥದ ಷಟ್ಪದಿಗಳ ಸಂಖ್ಯೆಯು ೬೦೦೦ ಕ್ಕಿಂತ ಹೆಚ್ಚಿಗೆ ಇರುತ್ತದೆ. ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ಗೀತಾಭಿಮಾನಿಗಳೂ ಇದನ್ನು ಕರಿಸಿ ಪ್ರೋತ್ಸಾಹಕೊಡಬೇಕೆಂದು ಕನ್ನಡಿಗರಿಗೆ ಪ್ರಾರ್ಥನೆಯಿದೆ. ಇದು ಮೂರು ಭಾಗಗಳಲ್ಲಿ ಪ್ರಸಿದ್ಧವಾಗುವದು. ಮೊದಲನೇ ಭಾಗದಲ್ಲಿ ಭಗವದ್ಗೀತೆಯ ೧ ರಿಂದ ೬ನೇ ಅಧ್ಯಾಯದ ವರೆಗೆ ಮೂಲ ಶ್ಲೋಕಗಳು ೨೮೦ ಮತ್ತು ಕನ್ನಡ ಭಾಮಿನಿ ಷಟ್ಪದಿಗಳು ೧೨೨೫ ಇರುವವು. ಈ ಭಾಗವು ಬರುವ ಅಕ್ಟೋಬರ ತಾ. ೧ನೇಗೆ ಹೊರಡುವದು. ಗ್ರಾಹಕರಾಗಲಿಕ್ಕೆ ಇಚ್ಛಿಸುವವರು ತಮ್ಮ ಹೆಸರುಗಳನ್ನು ಕೆಳಗ ಬರೆದ ವಿಳಾಸಕ್ಕೆ ಕಳುಹಿಸಿ ಹೆಸರು ಬರಿಸಿ ಇಡಬಹುದು. ತಾ|| ೧ನೇ ಅಕ್ಟೋಬರದ ಒಳಗೆ ಹೆಸರು ಕೊಟ್ಟವರಿಗೆ ರೂಪಾಯಿಗೆ ೪ ಆಣೆಯಂತೆ ಬೆಲೆ ಕಡಿಮೆ ಬೀಳುವದು. ತ್ವರೆಮಾಡಿರಿ! ಈ ಭಾಗದ ಬೆಲೆಯು ೨ ಎರಡು ರೂಪಾಯಿಗಳಿಗಿಂತ ಹೆಚ್ಚಾಗಲಾರದು.,

ವಿಳಾಸ:— ಹಣಮಂತ ಶ್ರೀನಿವಾಸಾಚಾರ್ಯ ಭುಕೇಬಾಗ ಪೋ:—ಖಾನಾಪುರ. (ಜಿಲ್ಲಾ— ಬೆಳಗಾಂವಿ.

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪೀತಾಂಬರ, ಜರಿ ಖಣ, ಜರಿ ಸೀರೆ, ಕಾಶ್ಮೀರ್ ಶಾಲು, ಥರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಜಿನಸುಗಳು ಸಿಗುತ್ತವೆ. ಕ್ಯಾಟಲಾಗು ಕೋರುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಳ ಎಸ್. ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ದಕ್ಷಿಣದ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಪ್ರಧಾನಮಂತ್ರಿಗಳು ಶ್ರೀ ಸಿ. ರಾಜಗೋಪಾಲಾಚಾರ್ಯ ಅವರ ಮುನ್ನುಡಿ ಸಹಿತ

ಸಚಿತ್ರ, ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣದ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ ೨-೮-೦, ರಫ್ ಪ್ರತಿ ರೂ ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ (ಜ) ೧೭೩ ಚಾಮರಾಜಪೇಟೆ, ೪ನೇ ಬೀದಿ, ಬೆಂಗಳೂರು ಸಿಟಿ.

ಪುನರ್ವಿವಾಹವಾಗಲಪೇಕ್ಷಿಸುವ ಯುವತಿಯರಿಗೆ

ಸುಸಮಯ!

ಪಿ. ಆರ್. ಶ್ರೀನಿವಾಸಯ್ಯಂಗಾರ್,
ಗೌರವ ಕಾರ್ಯದರ್ಶಿ,
ವಿಧವಾ ವಿವಾಹ ಸಹಾಯಕ ಸಭಾ,
ಕೊಳ್ಳೇಗಾಲ ಬ್ರಾಂಚ್, ಕೊಳ್ಳೇಗಾಲ.
ಇವರಿಗೆ ಬರೆದು ತಿಳಿದುಕೊಳ್ಳಿರಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ— ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ, ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ— ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವ್ಯವಸ್ಥೆ ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಕದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಿಥಿಲ ಹೋಗಿ ಮಾಂಸವಾದೇ ಸಪೂರ್ಣ ಶಕ್ತಿ ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು ಮೂರೇ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಅದರಿಂದ ಕ್ಷಯರೋಗ ಉದರರೋಗ ದಮ್ಮು ಇವುಗಳು ನಾಶವಾಗುವವು. ಬಿಟ್ಟಸದಲ್ಲಿ ಮೂರುವರ್ಷ ಉಪಯೋಗಿಸಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸದೇ ಬರುವದು. ಕೌಟ ಸಾಧ ಆಗುತಾರೆ. ವ್ಯಯದಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ವಿಷಯ ಕಾರಣವಿಲ್ಲ ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೪—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡಿಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೩-೧-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ ಪೋ. ನಿಪ್ಪಾಣಿ, ಜಿ ಬೆಳಗಾಂವ

झंडूचे

द्राक्षासव- – मृद्रिकारिष्ट – शारंगधरम अ.१०

रामबाण औषध

सर्दि घालविणारें
भूक वाढविणारें
शौच्यास साफ करणारें
झोप आणणारें
शक्ति देणारें
तेजस्वीपणा आणणारें

पिण्यास रुचिकर

किंमत एक रतलास १॥ रुपये.
क्याटलाग मागवा

झंडु फार्मास्युटिकल वर्क्स लिमिटेड
मुंबई नं: १४

ऐजंट— मेसर्स पंडित आणी कंपनी,
तीर्थहळ्ळी

सिर्सि एजंट एम् एल् धाकप्पा आणि ब्रदर

ಹಿಂದ ಸ್ಥಾನದಲ್ಲೆಲ್ಲ ಅತ್ಯಂತ ಅಗ್ಗವಾದ
'ನೆಶನಲ್ ಇನ್‌ಶೂರನ್ಸ ಕಂಪೆನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ

ಕಳೆದ ವರುಷ ಲೆಕ್ಕಾಚಾರದ ಮೇಲೆ 8,40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೊಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿಯಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿಯಂತೆಯೂ ಬಹುಮಾನ ಕೊಟ್ಟಿರುವರು.

ಹೊರಗಡೆ 1000 ರೂಪಾಯಿಗಳ ವಿಮೆಯ ಎಷ್ಟು ಕಂತು ಕೊಡುವಿರೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗಳನ್ನು ಪಡೆಯಿರಿ ನಮ್ಮ ದರವು ಅಷ್ಟೊಂದು ಸುಲಭ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು - **P. D. Churi,**
ಬಿ. ಸಿ. ಸಿರಾಳಕೊಪ್ಪ, *Branch Secretary,*
ಲೋಂಡಿ ಬಿಲ್ಡಿಂಗ, Alice Building,
ಹುಬ್ಬಳ್ಳಿ *Hornby Road,*
BOMBAY

ರೇಶ್ಮೆ ವಸ್ತ್ರ ಇನಾಂ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ಸಾದ, ರೇಶ್ಮೆ ಸೀರೆ, ಪೀತಾಂಬರ, ಮೊಗುಟ, ರವಕೆ ಖಣ, ಎಲವನ್, ಪೇಟಾ, ಕಾಶ್ಮೀರ್ ಮತ್ತು ಕಾನಪುರ್ ಶಾಲು ಧಾಮಳೆ ನಾಮ, ರುದ್ರಾಕ್ಷಿ, ಸ್ಫಟಿಕ ಸರ ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ ಘಂಟಾಮಣಿ ತಾಳ, ಕಸ್ತೂರಿ, ಪಚ್ಚ ಕರ್ಪೂರ, ಕೇಸರಿ, ಶಿಲಾಜಿತು, ಅತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವದು ಇಪ್ಪತ್ತೈದು ರೂಪಾಯಿ ಕ್ರಯದ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮಾಗಿ ದೊರೆಯುವುದು.

ವಿಳಾಸ:

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ್,
ಬನಾರಸ್ ಸಿಟಿ ೨೨೩೬–೨೬೫

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಅಂತಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

(Registered Trade Mark)

ಬುಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.'

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ ಬಾ ೫೧೦, ಪಾರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪರಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವಯಾಗಿ ಶೌಚಕ್ಕೆ ಸಾಫ ಆಗುತದೆ. ಧಾತು ಶುದ್ಧವಾಗಿ ಘಟ್ಟ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಪುತ್ರ ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (ಜಾ) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ ಖುಲಾಸಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯ ಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ನಡೆಯುವಷ್ಟು ೬೪ ತೊಲೆಯ ಒಂದು ಡಬ್ಬಿಗೆ ೫। ರೂ, ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ.
ವ್ಹಿ ಪಿ ಖರ್ಚ ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.**

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು:

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು; ಬಿದ್ದ ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದ್ದಲ್ಲಿ ಸಿಗುತ್ತೆ.

[ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ

ಅಮೃತಾಂಜನ ಡೀಪೊ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

REG. NO. B. 1270 MONDAY, SEPTEMBER 24TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೦

ನೃಪತಿಹಿತಕರ್ತಾ द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವು:
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಪ್ಯಾಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

— (ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨೪ ಮಾಹೆ ಸಪ್ಟಂಬರ ಸನ್ ೧೯೨೩ನೇ ಇಸವಿ) —

ಹೊಸ ಅಂಗಡಿ! ಹೊಸ ಹೊಸ ವಸ್ತುಗಳು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಪ್ರಕಾರದ ಸಾಮಾನುಗಳು ಸಿಗುತ್ತವೆ - ಸೈಕಲ್ಲಿನ ಪೋಳೆಗಳು, ಮೋಟಾರ ಉಪಯೋಗದ ಪೋಲಿಷುಗಳು, ಪಿನ್ ಪೊಂಶರ, ಡಿಸ್ಟಿಲ್ಡ ವೊಟರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕಮ್ಮಾರಿಯ ಸಾಮಾನುಗಳೂ ಸಿಗುತ್ತವೆ ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಲಾಟೀನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿರಿ!! ಎಲ್ಲಾ ತರದ ಸಾಮಾನುಗಳೂ ಇಲ್ಲಿ ಸಿಗುತವೆ! ಎಲ್ಲ ಸಾಮಾನು ಅಗ್ಗ! ಸಿಂಗೋರ ಕ್ಯಾಮಾರಸ್ಥರು ರೋಕ ಹಣಕ್ಕೆ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಖಾಯಂ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು

ನಮ್ಮ ಪತೆ —

ಕೃಷ್ಣರಾವ ಕೇಶವ ಗಾಯ್ತೊಂಡೆ,
ಆಯರ್ನ ಮರ್ಚಂಟ್,
ಕುಮಟಾ (ಉ. ಕನ್ನಡ)

ತ್ವರೆ ಮಾಡಿರಿ! ತ್ವರೆ ಮಾಡಿರಿ!!



ಚವತಿಹಬ್ಬದ ಲಾಗಾಯ್ತು
ದೀಪವಾಳಿಹಬ್ಬದ
ವರೆಗೆ ಮಾತ್ರ
ನಮ್ಮ ಅಂದವಾದ
ಸೀಸೆ ಕಟ್ಟಿಗೆಯ ಮುಚ್ಚಳಿಕ್ಯಾಗುಂಥ
ದೇವರ ಮಂಟಪಗಳ
ಕಿಮ್ಮತ್ತು ಕಡಿಮೆ ಮಾಡಿರುತ್ತದೆ.
ನಮ್ಮ ವಿಳಾಸ:—
ದಿ ನೋರ್ಥ ಕೆನರಾ ಟ್ರೇಡಿಂಗ ಕಂಪನಿ,
ಶಾಂತಿ ಭುವನ, ಕಾರವಾರ.

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಶ್ಯುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ— ಅಸ್ಪೃಶ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ
ಸರಕಾರಿ ಭದ್ರತೆ ಇದೆ

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲರೂ ಆಸ್ತಿವಂತರಿದ್ದರೂ, ಸಾವು ಮಾತ್ರ ಖಚಿತವಾಗಿ ಬಾರದೇ ಇರುವದು! ಅದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೊತ್ತನ್ನು ಮಾಡುವದಕ್ಕೆ ಪ್ರಯತ್ನಿಸಲೇಬೇಕು ವಿಮಾ ಕಂಪನಿಗಳು ಅನೇಕ ಇರುವವು, ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೫ ವರ್ಷಗಳಲ್ಲಿ ೩೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೨ ರೂಪಾಯಿಗಳಂತೆ ತುಂಬಿದರೆ ವರ್ಷ ಮುದ್ದತಿನ ವಿಶೇಷ ಸವಲತಿನ ಸ್ಪೇಶಲ್ ಪೋಲಿಸಿಗಳನ್ನು ಹೊಂದಲು ಬರುತ್ತದೆ! ಕಂಪನಿಯಲ್ಲಿ ತಿಂಗಳಿಗೂ ವಿಮೆ ಇಳಿಸಲು ಬರುತ್ತದೆ. ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಜಿರ್ನರಲ ಏಜಂಟರು ಮಿ. ಎಸ್. ಟಿ. ನಾಯ್ಕ ಆಫೀಸ-ಅಂಕೋಲಾ, ಜಿಲ್ಲಾ ಉ. ಕನ್ನಡ, ಇವರಕಡೆಗೆ ಬರೆದುಕೊಳ್ಳಬೇಕು.

"ಔಷಧ ಸೀಸೆಗಳಿಗಿಂತ ಬರೀ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು!"

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು!

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ" ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯಸ್ಥರಾಯುಕ್ತರಾಗಿ ಜೀವಿಸುವ ಮಾರ್ಗವನ್ನು, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನು ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಕುಟುಂಬವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಟಪಾಲು ಹಾಕಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಚೆಟ್ಟಿ ಬೀದಿ, ಮದರಾಸು.

ವಿವಿಧ ಸಂಗ್ರಹ.

ಆಯುರ್ಮರ್ಯಾದೆಯ ಶಾಸ್ತ್ರ.

“ಸೆಲ್ಫ ಕಲ್ಚರ” ಎಂಬ ಮಾಸಪತ್ರಿಕೆಯಲ್ಲಿ ಜೇ. ಪಿ. ಲಿಬೆಟ್ ಸೆವ್ದರ್ ಎಂಬವರು ಒಂದು ಲೇಖ ಬರೆದು ಆಯುರ್ಮರ್ಯಾದೆಯನ್ನು ಪರಾಂಬರಿಸಿದ್ದಾರೆ. ಸೃಷ್ಟಿಶಾಸ್ತ್ರದಂತೆ ಪ್ರಾಣಿಯ ಬೆಳವಣಿಗೆ ಅವಧಿಯ ೫ ಪಟ್ಟು ಆಯುಷ್ಯವು ಆ ಪ್ರಾಣಿಗಿದೆ. ಪಶುಗಳ ವಿಚಾರ ಮಾಡಿರಿ; ಕುದುರೆಯು ೫ ವರ್ಷಗಳ ತನಕ ಬೆಳೆಯುತ್ತದೆ; ಅದರ ಆಯುಷ್ಯವು ೨೫–೩೦ ವರ್ಷ; ನಾಯಿಯ ಬೆಳವಣಿಗೆ ಅವಧಿಯು ೨॥ ವರುಷ; ಬಾಳಿಕೆಯು ೧೨-೧೪ ವರುಷ; ಒಂಟೆಯು ೮ ವರುಷದ ತನಕ ಬೆಳೆಯುತ್ತದೆ; ೪೦ ವರ್ಷದ ತನಕ ಬಾಳುತ್ತದೆ, ೧॥ ವರ್ಷದಲ್ಲಿ ಬೆಕ್ಕಿನ ಬೆಳವಣಿಗೆ ತೀರಿತು. ಆ ಮಾನದಿಂದ ೯ ೧೦ ವರ್ಷದ ತನಕ ಅದು ಬಾಳುತ್ತದೆ; ಮೊಲವು ೧ ವರ್ಷದ ತನಕ ಬೆಳೆದಷ್ಟು ಬೆಳೆದು ಹೋಯಿತು, ಮುಂದೆ ಅದು ಬೆಳೆಯುವದಿಲ್ಲ. ಅದರ ಆಯುಷ್ಯ ೮ ವರುಷ. ಎಲ್ಲ ಪ್ರಾಣಿಗಳು ಹೀಗೆಯೇ ಬೆಳೆದು ಬಾಳುತ್ತಿವೆ. ಮಾನವನ ಬೆಳವಣಿಗೆಯ ಕಾಲವು ೨೦-೨೫ ವರುಷ, ಅವನು ೧೦೦-೧೨೫ ವರ್ಷದ ತನಕ ಬದುಕಲೇಬೇಕು. ಅಪಘಾತ ಸಂಭವಿಸದಿದ್ದರೆ, ಮಾನವನ ಸ್ವಾಭಾವಿಕ ಆಯುರ್ಮರ್ಯಾದೆಯು! ಮಾನವರ ಅಸ್ತಿಪಂಜರದ ಪರೀಕ್ಷೆಯ ಮಾಡಿದರೂ, ಈ ಅನುಮಾನವೇ ಹೊರಡುತ್ತದೆ. ಎಲುಬುಗಳು ೨೫ ವರುಷಗಳ ತನಕ ಬೆಳೆಯುವ ಸ್ಥಿತಿಯಲ್ಲಿರುತ್ತವೆ, ಆ ಮೇಲೆ ಅವು ತುದಿಗೆ ಸುಣ್ಣದ ಸಮೂಹನೆಯುಳ್ಳವಾಗುತ್ತವೆ; ಆ ಬಳಿಕ ಮಾನವನು ಉದ್ದ ಬೆಳೆಯಲಾರನು. ೨೫ ವರ್ಷವಾದ ಬಳಿಕ, ಎಲುಬುಗಳಲ್ಲಿ ಬೆಳೆಯುವ ಜೀವಕಳೆ ಇರುವದಿಲ್ಲ. ಸರಿಯಾಗಿ ಆಹಾರ ಕೊಂಡರೆ, ಬ್ರಹ್ಮಚರ್ಯ ಪಾಲನ ಮಾಡಿದರೆ, ಯಾವಾಗಲೂ ನಗುಮೋರೆಯವನಾಗಿದ್ದರೆ, ಮಾನವನು ಇಷ್ಟು ಕಾಲ ಬದುಕಿ ಬಾಳುವದು ನಿಜ. ಹೊಟ್ಟೆಬಾಕರು, ಹೆಂಡಗುಡುಕರು, ವಿಲಾಸಿಗಳು, ಸೋಮಾರಿಗಳು, ವ್ಯಗ್ರರು ಮುಪ್ಪಿನ್ನೊಂದೂ ಕಾಣರು. ಹೀಗೆ ಜೀವಿಸಿ ನೂರಾರು ವರ್ಷ ಬದುಕಿದವರು ಅನೇಕರಿದ್ದಾರೆ. ಸ್ಕಾಟಲಂಡದಲ್ಲಿಯೂ, ಆಯರ್ಲಂಡದಲ್ಲಿಯೂ ದೀರ್ಘಾಯುಷಿಗಳ ಸಂಖ್ಯೆ ಹೆಚ್ಚಿನದು. ಬಲ್ಗೇರಿಯಾ ದೇಶದವರ ಜೀವನವು ಸಾಮಾನ್ಯವಾಗಿ ಆಯುಷ್ಯಕರವಾಗುವಂಥಾದ್ದಿದೆ. ಅಲ್ಲಿ ೯೦ ವರುಷಗಳ ತನಕ ಸಾಮಾನ್ಯರು ಸಹ ಬದುಕುತ್ತಾರೆ. ಫ್ರಾನ್ಸದೇಶದಲ್ಲಿ ವಿಲಂಬ ಹಚ್ಚಿ, ಆಯುರ್ಮರ್ಯಾದೆ ಕಡಿಮೆ. ಇದನ್ನೆಲ್ಲ ವಿಚಾರ ಮಾಡಿ ಮಿ| ಸೆವ್ದರ್‌ರವರು ದೀರ್ಘಾಯುಷ್ಯಂತರಾಗಲು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ– “ನೀರಸ ಪಡಬೇಡಿ, ಉಪಯುಕ್ತವಾದ ಕೆಲಸಗಳನ್ನು ಮಾಡಿರಿ. ಭೀತಪಡಬೇಡಿ; ಚಿಂತಾಕ್ರಾಂತರಾಗಬೇಡಿ. ಮಿತಿಮೀರಿ ಇಂದ್ರಿಯಗಳಿಗೆ ತೊತ್ತಾಗಹೋಗಬೇಡಿ; ಮನಸ್ಸಿನ ಕಡೆಯಿಂದಲೂ, ದೇಹದ ಕಡೆಯಿಂದಲೂ ಯೋಗ್ಯವಾಗಿ ಕೆಲಸ ಮಾಡಿಕೊಳ್ಳಿ, ಮನಶ್ಶಾಂತಿಯನ್ನೂ, ಆತ್ಮಸಂಯಮನವನ್ನೂ ಸಾಧಿಸಿರಿ” ಗ್ರಾಮಾಂತರದಲ್ಲಿ ಸಾಮಾನ್ಯವಾಗಿ ಜೀವಿಸುವವರು ಆಯುಷ್ಯ ಬೆಳಿಸಿಕೊಳ್ಳುತ್ತಾರೆ. ನಗರವಾಸಿಗಳು ಸ್ವಲ್ಪ ಸಂಯಮ ಮಾಡಿ ವಿಲಾಸೇಚ್ಛೆಗೆ ಬಿಗಿಹಿಡಿದರೆ, ಮುಪ್ಪಿನ ತನಕ ಬಾಳಬಹುದು. ನಗರದಲ್ಲಿ ಮಾನವನು ಚಿತ್ತವನ್ನು ಪ್ರಸನ್ನವಾಗಿಡಲು ಬೇಕಷ್ಟು ಭಿನ್ನ ಭಿನ್ನ ಪ್ರಕೃತಿಗಳಿರುತ್ತವೆ.

***

ಒಂದು ಪ್ರಚಂಡ ದಾವೆ.

ಜಬಲಪುರದ ಎಡಿಶನಲ್ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ರಜಪೂತ ಮಾಲಗುಜಾರರಾದ ಠಾಕೂರ ದೇವಸಿಂಗರವರೂ, ಇತರ ನಾಲ್ವರೂ ಕೂಡಿ ಒಂದು ದಾವೆ ದಾಖಲ ಮಾಡಿದ್ದಾರೆ. ಆ ದಾವೆಯಲ್ಲಿ ೩೬೯ ಮಂದಿ ಪ್ರತಿವಾದಿಗಳಿದ್ದಾರೆ. ಭೂಮಿಯ ಕಕ್ಷೆಯ ಬಗ್ಗೆ ಈ ದಾವೆಯಿದೆ. ಪ್ರತಿವಾದಿಗಳಲ್ಲಿ ಬಿರಿಸ್ಟರರಿದ್ದಾರೆ; ವಕೀಲರಿದ್ದಾರೆ; ದೊಡ್ಡ ದೊಡ್ಡ ಗೃಹಸ್ಥರಿದ್ದಾರೆ; ಯುರೋಪಿಯನ್‌ರೂ ಇದ್ದಾರೆ; ಎಂಗ್ಲೋ-ಇಂಡಿಯನ್‌ರೂ ಇದ್ದಾರೆ; ಭೂಮಿ ಕೊಂಡು ಬಂಗ್ಲೆ ಕಟ್ಟಿಕೊಂಡು ಉಳಿದ ಸುಖಾನುಭಾವರೇ ಹೆಚ್ಚಿನ ಮಂದಿ! ಗೋರಖಪುರ, ಕರಾಚಿಯಾ, ಇಕಾಲಿಯಾ, ದುಮಗಿರಿಯಾ, ಪುರ್ವಾ ಗ್ರಾಮದ ೫-೬ ಸಾವಿರ ರೂಪಾಯಿ ಕೀರ್ತಿಯ ಜಮೀನು ಈ ದಾವೆಯಲ್ಲಿ ಸೇರಿಸೋ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕ, ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹಿಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಹುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೩ ಔಂಸಿಗೆ	ರೂ.	೨—೦—೦
೧ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ”

ಒಂದು, ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ 'ಸಹಜ' ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಆದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No. 2.**

ಣಾಗಿದೆ, ದಾವೆಯೊಳಗಿನ ಆಸ್ತಿಗೆ ಲಕ್ಷಗಟ್ಟಲೆ ರೂಪಾಯಿ ಕಿಮ್ಮತ್ತು. ಪ್ರತಿವಾದಿಗಳೆಲ್ಲ ದೊಡ್ಡ ದೊಡ್ಡವರು ಸೇರಿಕೊಂಡಿದ್ದರಿಂದ ಊರಲ್ಲೆಲ್ಲ ಈ ದಾವೆಯದೇ ಚರ್ಚೆ.

⁂

ಸರಕಾರಿ ಅಧಿಕಾರಿಗಳ ಕುಹಕಗಳು.

ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿಕಾರಿಗಳಾದ ಶ್ರೀ| ವಿಠ್ಠಲಭಾಯಿಯವರು ಹಿಂದುಸ್ಥಾನ ಸರಕಾರದ ಬಗಲಲ್ಲಿ ಸೇರುವದಿಲ್ಲ. ಸ್ವತಂತ್ರ ವಿಚಾರ ಮಾಡಿ ನಿಯಮಗಳನ್ನು ನಿರ್ದಾಕ್ಷಿಣ್ಯದಿಂದ ಸರಕಾರಿ ಅಧಿಕಾರಿಗಳಿಂದಲೂ ಪಾಲಿಸಿಕೊಳ್ಳುತ್ತಾರೆ. ಇದರಿಂದ ಸರಕಾರಿ ಅಧಿಕಾರಿಗಳಿಗೆ ಇವರ ಮೇಲೆ ಕಡು ಕೋಪ. ಶ್ರೀ| ಪಟೇಲರಿಗೆ ಅಪಮಾನ ಮಾಡಲು ಇವರು ಬಹಳ ಪ್ರಯತ್ನಪಡುತ್ತಿದ್ದಾರೆ. ಕಳೆದ ಶುಕ್ರವಾರ ತಾ. ೧೪ನೇಗೆ ಪಂಡಿತ ಮೋತಿಲಾಲ ನೆಹರೂರವರು ಈ ವಿಷಯವನ್ನು ಕಾಯಿದೆ ಕೌನ್ಸಿಲಿನಲ್ಲಿ ಬಹಿರಂಗ ಪಡಿಸಿದರು. ಮುಂಬಯಿಯ "ಟೈಮ್ಸ್" ಪತ್ರಿಕೆಯಲ್ಲಿಯೂ, ಲಂಡನಿನ "ಡೇಲಿ ಟೆಲಿಗ್ರಾಫ" ಪತ್ರಿಕೆಯಲ್ಲಿಯೂ ಅಧ್ಯಕ್ಷರಾದ ಶ್ರೀ| ಪಟೇಲರವರು ಪಕ್ಷಾಂಧರಾಗಿ ಸರಕಾರದ ವಿರುದ್ಧ ತೀರ್ಪು ಕೊಡುತ್ತಾರೆಂದು ಈ ಪತ್ರಿಕೆಗಳ ಸಿಮ್ಲಾದ ಚಿತ್ರಗುಪ್ತರು ತಂತಿಯಿಂದ ತಿಳಿಸಿದರು. ಅಲಹಾಬಾದದ "ಪಾಯೋನಿಯರ" ಪತ್ರಿಕೆಯಲ್ಲಿ ಸರಕಾರದ ಗುಪ್ತ ಕಾರಸ್ಥಾನದ ನಾಮನಿರ್ದೇಶವಾಗಿದೆ. ಹಿಂದುಸ್ಥಾನ ಸರಕಾರದ ದೊಡ್ಡ ದೊಡ್ಡ ಅಧಿಕಾರಿಗಳು ಈ ಸುದ್ದಿಗಾರರಿಗೆ ಬೆಂಬಲ ಕೊಟ್ಟು ಶ್ರೀ| ಪಟೇಲರ ಅಪಮಾನ ಮಾಡುತ್ತಾರೆಂದು ಉಲ್ಲೇಖಿಸಲಾಗಿತ್ತು. ಪಂಡಿತ ಮೋತಿಲಾಲರೂ, ಶ್ರೀ| ಪಟೇಲರೂ ಪೂರ್ವಸಂಕೇತ ಮಾಡಿಕೊಂಡು ಆಕ್ಷೇಪಗಳನ್ನು ಕಾಯಿದೆ ಕೌನ್ಸಿಲಿನಲ್ಲಿ ಮುಂದೊಡ್ಡುತ್ತಾರೆಂಬದೊಂದು ಸಂಗತಿಯೂ ಪ್ರಕಟವಾಗಿದ್ದಿತು. ಪಂಡಿತ ಮೋತಿಲಾಲರವರು ಅಧ್ಯಕ್ಷರಾದ ಶ್ರೀ| ವಿಠ್ಠಲಭಾಯಿಯವರ ವಾಚನಾಲಯದಿಂದ ಕೆಲವು ಪುಸ್ತಕಗಳನ್ನು ತರಿಸಿದ್ದರು. ಇದೇ ಇಷ್ಟರಲ್ಲಿ ಕಾರಸ್ಥಾನದ ಸಣ್ಣ ಬೀಜ. ಪಂಡಿತ ಮೋತಿಲಾಲರು ತಮಗೆ ಕೆಲವು ಪುಸ್ತಕ ಬೇಕಾಗಿ ಟೆಲಿಫೋನಿನಿಂದ ಶ್ರೀ| ವಿಠ್ಠಲಭಾಯಿಯವರಿಗೆ ಅರಿಕೆ ಮಾಡಿಕೊಂಡರು. ಶ್ರೀ| ವಿಠ್ಠಲಭಾಯಿಯವರು ತಮ್ಮ ಸೆಕ್ರೆಟರಿಗಳಾದ ರಾ| ಧುರಂಧರರವರಿಗೆ ಪುಸ್ತಕ ಕೊಡಲು ತಿಳಿಸಿದರು. ರಾ| ಧುರಂಧರರು ಪುಸ್ತಕಗಳನ್ನು ಕಳಿಸಿದರು. ರಾ| ಧುರಂಧರರು ಅಧ್ಯಕ್ಷರ ಕೈಕೆಳಗಿನ ನೌಕರರು ಅಲ್ಲ; ಅವರೆ, ಅವರು ಸರಕಾರದ ನೌಕರರು. ಈ ಸಂಗತಿಯು ಸರಕಾರಿ ಅಧಿಕಾರಿಗಳಿಗೆ ತಿಳಿಸಲಾಯಿತ. ಸಹಜ ತಿಳಿಯಿತೆಂದು ರಾ| ಧುರಂಧರರವರು ಅಧ್ಯಕ್ಷರಿಗೆ ಹೇಳಿದರು. ಈ ಅಂಗುಷ್ಠದ ಮೇಲೆ ಶ್ರೀ| ವಿಠ್ಠಲಭಾಯಿ ಪಟೇಲರವರು ಪಕ್ಷಪಾತಿಗಳೆಂಬ ರಾವಣ ಮೂರ್ತಿಯು ನಿರ್ಮಿಸಲ್ಪಟ್ಟಿದೆ. ಈ ಕಾರಸ್ಥಾನ ಕೇಳಿ, "ನಾನು ಕಾಯಿದೆ ಕೌನ್ಸಿಲಿನ ಅಧ್ಯಕ್ಷನೋ, ಕೈದಿಯೋ? ನನ್ನ ಮೇಲೆ ಸರಕಾರಿ ಅಧಿಕಾರಿಗಳು ಗುಪ್ತ ಕಾವಲಿಟ್ಟಿದ್ದಾರೆ," ಎಂದು ಶ್ರೀ| ವಿಠ್ಠಲಭಾಯಿಯವರು ಉದ್ಗರಿಸಿದರು. "ಟೆಲಿಗ್ರಾಫ" ಪತ್ರಿಕೆಯು ಹೀಗೆ ನಿರಾಧಾರವಾದ ಸುದ್ದಿಗಳನ್ನು ಹರಡಿ ಅಧ್ಯಕ್ಷರ ಅಪಮಾನ ಮಾಡುವ ಮೂಲಕ ಅವರಿಗೆ ಶಾಸನ ವಿಧಿಸಬೇಕಾಗಿಯೂ ಪಂಡಿತ ಮೋತಿಲಾಲರು ತಿಳಿಸಿದರು. ವರ್ತಮಾನ ಪತ್ರಿಕೆಗಳ ಸುದ್ದಿಗಾರರಿಗೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರವೇಶ ಸಿಗಬೇಕಾದರೆ, ಅವರು ಕೌನ್ಸಿಲಿನೊಳಗಿನ ಪತ್ರಿಕಾ ಮಂಡಳದ ಅಪ್ಪಣೆ ಪಡೆಕೊಳ್ಳಬೇಕು; ಹಾಗೆ ಅಪ್ಪಣೆ ಪಡೆಕೊಳ್ಳಲ್ಪಟ್ಟಿತ್ತೇನು? ಎಂದು ಅಧ್ಯಕ್ಷರು ಕೇಳಿದರು. ಈ ವಿಷಯವು ತಮ್ಮ ಮುಂದೆ ಬರಲಿಲ್ಲವಾಗಿ ಮಂಡಳದ ಮುಖ್ಯಸ್ಥರಾದ ರಾ| ಕೇ. ಸಿ. ರೋಯ್‌ರವರು ಉತ್ತರ ಕೊಟ್ಟರು. ಸರಕಾರಿ ಅಧಿಕಾರಿಗಳಾದ ಮಿ| ಗ್ರೆಹಮ್‌ರವರು ಮುಂದಾಗಿ ಹೇಳಿದ್ದೇನಂದರೆ:—"ಆ ಸುದ್ದಿಗಾರರಿಗೆ ಪ್ರವೇಶ ಕೊಟ್ಟವನು ನಾನು; ಇವರು ೧೯೨೫ ನೇ ಇಸ್ವಿಯಲ್ಲಿ ಅಲಹಾಬಾದದ "ಪಾಯೋನಿಯರ" ಪತ್ರಿಕೆಯ ಸುದ್ದಿಗಾರರಾಗಿ ಕೌನ್ಸಿಲಿನಲ್ಲಿ ಪ್ರವೇಶ ಪಡೆದಿದ್ದರು; ಮುಂದೆ ಆ ಪತ್ರಿಕೆಯನ್ನು ಬಿಟ್ಟು 'ಟೆಲಿಗ್ರಾಫ' ಪತ್ರಿಕೆಯ ಸುದ್ದಿಗಾರರಾದರು. ಈಗ ಇವರಿಗೆ ಪ್ರವೇಶ ಕೊಡುವ ಮುಂಚೆ ಕಮಿಟಿಯ ಅಪ್ಪಣೆ ಪ್ರಶ್ನೆ ಇರಲಿಲ್ಲ. ಇವರು ಹೊಸಬರಲ್ಲ; ಹಳಬರೇ." ಶ್ರೀ| ವಿಠ್ಠಲಭಾಯಿಯವರು ಇದನ್ನು ಕೇಳಿಕೊಂಡರು. "ಇವರಿಗೆ ಸರಕಾರಿ ಬೆಂಬಲವಿದೆಯೋ? ಎಂಬ ಕೇಳಲ್ಪಟ್ಟಿತು. 'ಹೆಚ್ಚಿನ ಪ್ರತಿ ಭಾಗಗಳ ಪತ್ರಿಕೆಗಳಿಗಿರುವಷ್ಟೇ ಸರಕಾರಿ ಸಂಬಂಧವು ಈ ಪತ್ರಿಕೆಗಿರುತ್ತದೆ,' ಎಂಬ ಸರಕಾರದ ಕಡೆಯಿಂದ ಉತ್ತರ ಸಿಕ್ಕಿತು. ಕಾಯಿದೆ ಕೌನ್ಸಿಲಿನ ಪಟಾಂಗಣದಲ್ಲೆ ಅಧ್ಯಕ್ಷರು ಪಕ್ಷಪಾತದಿಂದ ವರ್ತಿಸುತ್ತಾರೆಂದು ಹಬ್ಬಿ ಸರಕಾರಿ ಅಧಿಕಾರಿಗಳೂ, ಹಬ್ಬ ಯುರೋಪಿಯನ್‌ರೂ ಮಾತಾಡುವದನ್ನು ತಾವು ಕೇಳಿದೆವಾಗಿ ದಿವಾನಾದಾಕ ಮೇದಾರವರು ಹೇಳಿದರು. ಅಧ್ಯಕ್ಷರು ಯುರೋಪಿಯನ್ ಸಭಾಸದರಿಗೇ ಪ್ರಶ್ನೆ ಮಾಡಿ 'ಟೆಲಿಗ್ರಾಫ' ಪತ್ರಿಕೆಯ ಸುದ್ದಿಗಾರರು ಬರೆದ ಅಭಿಪ್ರಾಯವು ಅಸಭ್ಯವೆಂಬ ಉತ್ತರ ಪಡೆದುಕೊಂಡರು. ಅಲಹಾಬಾದ 'ಪಾಯೋನಿಯರ' ಪತ್ರಿಕೆಯಲ್ಲಿ ಸರಕಾರಿ ಅಧಿಕಾರಿಗಳ ಬೆಂಬಲದಿಂದ ಈ ನೀಚ ವ್ಯಾಪಾರ ನಡೆದಿದೆಂಬ ಉಲ್ಲೇಖವಿದೆ. ಇದರ ವಿವರವನ್ನು ಕೊಡಲು ಅಧ್ಯಕ್ಷರು ಬರೆದಿದ್ದರು. "ಪತ್ರಿಕಾಕರ್ತರಿಗೆ ಈ ಮಾಹಿತಿ ಪೂರೈಸುವದು ಅನುಚಿತವೆಂದು ಸಂಪಾದಕರು ಬರೆದರು. ಆದರೆ, ಹಿಂದುಸ್ಥಾನ ಸರಕಾರದ ದೃಷ್ಟಿಯಿಂದಲೇ ಶ್ರೀ| ವಿಠ್ಠಲಭಾಯಿಯವರ ಅಪಮಾನವಾಗುತ್ತದೆಂಬ ಬಗ್ಗೆ ತಮ್ಮ ಬಳಿ ಸಾಕಷ್ಟು ಪುರಾವೆ ಇರುವದಾಗಿಯೂ ಹೇಳಿದರು. ಶ್ರೀ| ಪಟೇಲರು ಈ ಸಂಗತಿಯನ್ನು ಕೌನ್ಸಿಲಿಗೆ ತಿಳಿಸಿ ಸಂಪಾದಕರಿಗೆ ಭೆಟ್ಟಿಯಾಗಲು ತಾವು ಕರೆದಿದ್ದೇವಾಗಿಯೂ, ಅವರೊಡನೆ ಗೌಪ್ಯದಿಂದ ಮಾತನಾಡಿ ತಮ್ಮ ಅಭಿಪ್ರಾಯವನ್ನು ಮುಂದೆ ಜಾಹೀರ ಮಾಡುತ್ತೇವಾಗಿಯೂ ಹೇಳಿ, ಈ ವಿಷಯವನ್ನು ಸಮಾಪ್ತಿಗೊಳಿಸಿದರು. ಕೌನ್ಸಿಲಿನೊಳಗಿನ ಈ ವಾದವನ್ನು "ಪಾಯೋನಿಯರ" ಪತ್ರಿಕೆಯು ಮಾರನೇದಿನವೇ ಸಮಾಲೋಚಿಸಿತು. ಅಧ್ಯಕ್ಷರಿಗೆ ಲೋಕದಲ್ಲಿ ಅಪಮಾನ್ಯವಾಗದಂತೆ ಕಾಯುವ ಭಾರವು ಸರಕಾರಿ ಅಧಿಕಾರಗಳದು; ಅದನ್ನು ಅವರು ಮಾಡದಿದ್ದರೆ, ಅಧ್ಯಕ್ಷರು ಸರ್ವಾಧಿಪತಿಗಳಿಗೆ ಬರೆಕೊಂಡು ಈ ವಿಷಯದ ಚೌಕಶಿ ಮಾಡತಕ್ಕದ್ದು. "ಪಾಯೋನಿಯರ" ಪತ್ರಿಕೆಯ ಸಂಪಾದಕರು ಯುರೋಪಿಯನ್‌ರು. ಅವರು ಸಹ ಸರಕಾರದ ಕುಹಕಗಳಿಗೆ ಹೇಸಿದ್ದಾರೆ. ಹಿಂದು ಮಾತು ಹೇಳತಕ್ಕದ್ದಿದೆ. ಸ್ಟ್ಯಾನ್ ಕೋಟನ ಸತ್ತ ಕರಲ್ಲೊಬ್ಬರಾದ ಬನ್ನೇಟ ದೊರೆಗಳು "ಟೆಲಿಗ್ರಾಫ" ಪತ್ರಿಕೆಯ ಚಾಲಕರಲ್ಲೊಬ್ಬರು. ಸ್ಟ್ಯಾನ್ ಕೋಟನ್ರೂ ಶ್ರೀ| ವಿಠ್ಠಲಭಾಯಿ ಪಟೇಲರವರೂ, ಕಾಯಿದೆ ಕೌನ್ಸಿಲಿನೊಳಗಿನ ಇತರ ಸಭಾಸದರೂ ಅನುಕೂಲವಿಲ್ಲೆಂಬುವರಿಂದ ಪಟೇಲರ ಮೇಲೆ ನಾನಾ ತರದ ಆರೋಪಗಳು ಹೇರಲ್ಪಡುತ್ತವೆ.

⁂

ಕ್ರೈಸ್ತ ಧರ್ಮರಾಜ್ಯದ ಹೊಸ ವ್ಯವಸ್ಥೆ.

ಈ ವರೆಗೆ ಪೋರ್ತುಗೀಸ ರಾಜ್ಯದೊಳಗಿನ ಪಾದ್ರಿಗಳೂ, ಬ್ರಿಟಿಶ ರಾಜ್ಯದೊಳಗಿನ ಪಾದ್ರಿಗಳ ಮುಂಬಯಿ ಮೊದಲಾದ ಕಡೆಗಳಲ್ಲಿ ತಮ್ಮ ಮನ ಇಷ್ಟವಿದ್ದಂತೆ ಗುರುಕಾಣಿಕೆಯೋ, ಏನೇನೋ ವಸೂಲ ಮಾಡುತ್ತಿದ್ದರು. ಎರಡೂ ಕಡೆಯಿಂದಲೂ ವಸೂಲಾಗುತ್ತಿತ್ತು. ಈ ಪ್ರಭಾವದಿಂದ ಕ್ರಿಸ್ತರು ಇಮ್ಮ ಹಣ ತೆರುವ ಪ್ರಸಂಗ ಬರುತ್ತಿತ್ತು. ಈ ಕುರಿ ಕ್ರೈಸ್ತ ಮತದ ಗುರುಶ್ರೇಷ್ಠರಾದ ಪೋಪರವರಿಗೂ ಪೋರ್ತುಗೀಜ ಸರಕಾರಕ್ಕೂ ಸಖ್ಯಕೆಯೊಂದು ಕರಾರಾಗಿದೆ. ಈ ಕರಾರಿನಂತೆ ದೀವ-ದಮನ ನಡುಗ ಗಳಲ್ಲಿ ಇರುವ ಪೋರ್ತುಗೀಜ ಸರಕಾರದ ಕ್ರೈಸ್ತ ಗೋವೆಯ ಆರ್ಚಬಿಶೊಪ್‌ರವರ ಸ್ವಾಧೀನಕ್ಕೆ ಒ ಪ್ಪಿಸಲ್ಪಟ್ಟಿದ್ದಾರೆ. ದೀವ-ದಮನದೊಳಗಿನ ಪಾದ್ರಿಗ ಗೆ ಮುಂಬಯಿ ಕಡೆಗಳಲ್ಲಿ ಅಧಿಕಾರವಿಲ್ಲ. ಗೋವೆಯ ಆರ್ಚಬಿಶೊಪ್‌ರ ಬಿರುದಾವಳಿಯಲ್ಲಿ ಮೂಲಕ ತಿದ್ದುಪಾಟಗಳಾಗಿವೆ. ಇವರಿಗೆ ದಮಣ ಆರ್ಚಬಿಶೊಪ್‌ರೆಂದು ಹೇಳಲ್ಪಡುವದು. ದಮಣ ಆರ್ಚಬಿಶೊಪ್‌ರಿಗೆ ಕೆಂಗ್ರೆನೋರ ಆರ್ಚಬಿಶೊ ಎ ಬದೊಂದು ಪೋಪರ ಬಿರುದಿತ್ತು. ಆ ಬಿರು ಸಹ ಈ ಕರಾರಿನಂತೆ ಗೋಮಾಂತಕದ ಆರ್ಚಬಿಶ ಪ್‌ರಿಗೆ ಅರ್ಪಿಸಲಾಗಿದೆ. ಈ ಕರಾರಿನಂತೆ ಘಟಿಸ ಬ್ಬ ಪ್ರಾಂತದ ವ್ಯವಸ್ಥೆ ಮಾಡಲು ಎಡ್ವರ್ಡ ಮ ಯವರಿಗೆ ಪೋಪರವರು ಕಳುಹಿಕೊಟ್ಟಿದ್ದಾರೆ. ಇ ರು ೧ ವರ್ಷದಲ್ಲಿ ಈ ಕೆಲಸದ ರಿಪೋರ್ಟ ಕಳು ಬೇಕಾಗಿಯೂ ಅಪ್ಪಣೆಯಾಗಿದೆ. ಈ ಹುಕುಮಿನ ಶಿಷ್ಯ ವರ್ಗದವರು ನಡೆಕೊಳ್ಳದಿದ್ದರೆ, ಅವರಿಗೆ ಬ ವಚ್ಚಾದ ಹಾಗು ಸಂತ ಪೀಟರ-ಪೋಲರ ಶಾಪ ಬ ಗುವದೆಂದು ಪೋಪರ ಅಪ್ಪಣೆಯಾಗಿದೆ. ಈ ವ್ಯವ ಯಲ್ಲಿ ಕೊಂಕಣ ಪಟ್ಟಿಯೊಳಗಿನ ಉತ್ತರ-ದಕ್ಷಿ ಕನ್ನಡ ಜಿಲ್ಲೆಗಳೊಳಗಿನ ಕ್ರೈಸ್ತರ ಮೇಲೆ ನಡೆಯ ವ ಗೋಮಾಂತಕ ಹಾಗು ಬ್ರಿ ರಾಜ್ಯದೊಳಗಿ ಪಾದ್ರಿಗಳ ಹಾವಳಿಗೆ ತಡೆಬೀಳುವದಿಲ್ಲ. ಗೋಮಾ ತಕದೊಳಗಿನ ಪಾದ್ರಿಗಳಿಗೆ ಬ್ರಿಟಿಶ ಕ್ರೈಸ್ತರ ಭಾ ಸಹ ಬರುವದಿಲ್ಲ ತಮಗೆ ಗೋಮಾಂತಕ ಪಾದ್ರಿ ಅಧಿಕಾರದೊಳಗಿಂದ ತಪ್ಪಿಸಬೇಕಾಗಿ ಬ್ರಿಟಿಶ ಕ್ರೈಸ್ತರು ಬಹಳ ಪ್ರಯತ್ನಪಡುತ್ತಿದ್ದಾರೆ. ಆ ವಿಷಯ ನ್ನು ಈ ಮುಂದೆ ಪೋಪರವರು ವಿಚಾರಿಸಿ, ಧಾರ್ಮಿ ಪ್ರಜೆಗಳ ಕ್ಷೇಮವನ್ನುಂಟು ಮಾಡಬೇಕು, ಮುಂ ಯಿ-ಮದ್ರಾಸ ಕರಾರುಗಳು ಈ ಕುರಿತು ಪ್ರಯ ಮಾಡತಕ್ಕದ್ದು.

⁂

ಭರತಖಂಡದ ಅವನತಿಯ ಮೂಲಕಾರಣಗ

ಭರತಖಂಡದ ಭವ್ಯತೆಗಾಗಿ ಬಹಳ ಉಪಾಯ ದ ಕಲ್ಪನೆಯಾಗುತ್ತಿದೆ ಸಾರ್ವಜನಿಕ ಸಂರಕ್ಷಣೆ ಗಿ ಹಿಂದುಸ್ಥಾನ ಸರಕಾರವು ನಿರಂಕುಶ ಅಧಿಕಾರ ನ್ನು ಪಡೆಕೊಂಡು ಭಾರತೀಯರ ಸೇವೆ ಮಾಡ ಪರದೇಶೀಯರಿಗೆ ಹದ್ದುಪಾರು ಮಾಡುವ ಹಂಚಿ

ಯಲ್ಲಿದ್ದಾರೆ. ಈ ಸಮಯ ಮುಂಬಯಿ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾಗಿದ್ದ ಹಾಗು ಮುಂಬಯಿ ಸರಕಾರದಲ್ಲಿಯೂ ಪ್ರಮುಖ ಸಭಾಸದರಾಗಿದ್ದ ಸರ್ ಇಬ್ರಾಹಿಮ ರಹಿಮತುಲ್ಲಾರವರ ಅಭಿಪ್ರಾಯವನ್ನು ಎಲ್ಲರೂ ಪರಾಂಬರಿಸತಕ್ಕದ್ದು. ಹಿಂದೀ ಪ್ರಜೆಗಳ ಸ್ಥಿತಿಯ ವಿಚಾರ ಮಾಡಿದರೆ, ಭೂಮಿಯ ಸಾಗುವಳಿಯು ಶಕ್ಯಮಟ್ಟಿಗೆ ಚಲೋ ರೀತಿಯಿಂದ ಸಾಗಿದೆಂದು ಹೇಳಬಹುದು. ಆದರೆ, ಅವರಿಗೆ ಹೊಟ್ಟೆ ತುಂಬ ಅನ್ನ ಸಿಗುವದಿಲ್ಲ. ಹೀಗೆ ಉಪವಾಸ ಬೀಳುವವರು, ಅರಹೊಟ್ಟೆ ಉಣ್ಣುವವರು ಹೇರಳ ಮಂದಿ. ಇಂಥ ಪ್ರಸಕ್ತಿಯಲ್ಲಿ ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ-ಬರೆಗಳನ್ನು ಪೂರೈಸಿಕೊಡುವ ಆಶೆ ತೋರಿಸಿ ಯಾವದೊಂದು ಪಂಥವನ್ನು ಸ್ವೀಕರಿಸಲು ಉಪದೇಶವಾದರೆ, ಅದನ್ನು ಪ್ರಜೆಗಳು ತತ್ಪರತೆಯಿಂದ ಅಂಗೀಕರಿಸುತಾರೆ. ಚಲೋ ಚರಿತಾರ್ಥ ಸಾಗುವಲ್ಲಿ ದುರುಪದೇಶಗಳು ಬೇರೂರುವದಿಲ್ಲ. ಹಿಂದುಸ್ಥಾನದೊಳಗಿನ ದೈನ್ಯದಿಂದ ಇಲ್ಲಿಯ ಸ್ಥಿತಿಯು ಈ ತರದ್ದಾಗಿದೆ. ಇಲ್ಲಿ ಎರಡೇ ಧರ್ಮಗಳು ಪ್ರಾಮುಖ್ಯವಾಗಿ ರೂಢವಾಗಿದೆ ಸನಾತನ ಧರ್ಮ; ಇಸ್ಲಾಮ ಧರ್ಮ. ದಯಾಘನ ಪರಮಾತ್ಮನು ಅನುಗ್ರಹಿಸಿದ ಸ್ಥಿತಿಯಲ್ಲಿಯೇ ಸಮಾಧಾನ ಹೊಂದಬೇಕಾಗಿ ಎರಡೂ ಧರ್ಮಗಳು ಬೋಧಿಸುತ್ತವೆ. ಕರ್ಮಭೂಮಿಯ ಮೇಲಿನ ಸ್ಥಿತಿಯು ಕ್ಷಣಭಂಗುರವೆಂದೂ, ಪರಮಾರ್ಥ ಸಾಧನೆಯು ಒಂದು ಉಪಾಯವೆಂದೂ ಸನಾತನಿಗಳೂ, ಮುಸಲ್ಮಾನರೂ ಭಾವಿಸುತ್ತಾರೆ. ಈ ಶ್ರದ್ಧೆಯಿರದಿದ್ದರೆ, ಇಷ್ಟೊತ್ತಿಗೆ ದೊಡ್ಡ ಹಾವಳಿಯಾಗುತ್ತಿತ್ತು. ಅನ್ನ-ವಸ್ತ್ರ ಸಿಗದಿರಲು, ದೇಶದಲ್ಲಿ ಬೆಳೆ ಬೆಳೆಯುವದಿಲ್ಲೆಂದು ಹೇಳಬಹುದು. ಪರಕೀಯ ರಾಜ್ಯಭಾರದ ಮಿತಿ ಮೀರಿದ ಖರ್ಚಿನಿಂದಲೂ, ಪರಸ್ಥರ ಲಾಭಕ್ಕಾಗಿ ಪ್ರಜೆಗಳನ್ನು ಸುಲಿಯುವದರಿಂದಲೂ ಪ್ರಜೆಗಳು ಉಪವಾಸಬೀಳುತ್ತಾರೆ. ಹಿಂದುಸ್ಥಾನದಲ್ಲಿ ಹುಟ್ಟುವ ಹುಟ್ಟುವಳಿಯು ಹಿಂದೀಯರ ಬಾಯಲ್ಲಿ ಬೀಳುವದಿಲ್ಲ. ಇದರಿಂದ ಭಾರತೀಯರ ದೈವತಂತ್ರದ ಶ್ರದ್ಧೆಯು ಶಿಥಿಲವಾಗಿದೆ. ದೇಶದೊಳಗಿನ ಸಾಮುಗ್ರಿಗಳನ್ನು ದೇಶದಲ್ಲಿಯೇ ಉಳಿಸಿಕೊಳ್ಳುವ ಮನುಷ್ಯತಂತ್ರಕ್ಕೆ ಅವರು ಕೈಹಾಕುತ್ತಾರೆ. ಈಗ ಸರಕಾರವು ಗಾಬರಿಬಿದ್ದಿದೆ. ಸರಕಾರದ ರಾಜಾರ್ಥ ಎತ್ತುವಳಿಯಿಂದಲೂ ದೇಶದೊಳಗಿನ ಬಡತನವು ಮಿಗಿಲಾಗಿದೆ. ಸಾಮಾನ್ಯ ಪ್ರಜೆಗಳು ತರಬೇಕಾದ ತೆರಿಗೆಯ ಭಾರವು ಬಟ್ಟೆಯ ಮೇಲೆ ಹೇರಳ ಬೀಳುತ್ತದೆ. ಕಾಳು-ಕಡಿಗಳ ಮೇಲೆ ಶೀರ್ವ ರೂಪದಿಂದ ಎತ್ತುವಳಿಯಾಗುತ್ತದೆ; ಮನೆ ಖರ್ಚಿಗೆ ತಗಲಿ ಉಳಿದ ಸರಕುಗಳನ್ನು ಪರ ಊರಿಗೆ ಕಳಿಸಬೇಕಾದರೆ, ಉಗಿಬಂಡಿಯ ಹಾಸಲು ರೂಪದಿಂದ ಎತ್ತುವಳಿಯಾಗುತ್ತಿದೆ; ಅರಿವೆಯ ಮೇಲೆ ತೆರಿಗೆಯಿದೆ; ಉಪ್ಪಿನ ಮೇಲೆ ತೆರಿಗೆ, ಕಟ್ಟಿಗೆಯ ಮೇಲೆ ಕಂದಾಯ; ಚಿಮಣಿ ಎಣ್ಣೆ-ಸಕ್ಕರೆಗಳ ಮೇಲೆ ತೆರಿಗೆ; ಜನಗಳ ಹುಲ್ಲು ಬನ್ನಿಗೂ ತೆರಿಗೆ; ಜಿಲ್ಲಾ ಲೋಕಲ್ ಬೋರ್ಡುಗಳ ತೆರಿಗೆ ಬೇರೆ; ಮ್ಯುನಿಸಿಪಾಲಿಟಿಯ ಪೆಸ್ಟ್ ಪ್ರತ್ಯೇಕ; ಪ್ರಾಂತಿಕ ಸರಕಾರದ ತೆರಿಗೆ ಬೇರೆ; ಮಧ್ಯವರ್ತಿ ಸರಕಾರದ ತೆರಿಗೆಯಂತೂ ಬೇರೆ; ಹೀಗೆ ಪ್ರತ್ಯಕ್ಷ-ಅಪ್ರತ್ಯಕ್ಷವಾಗಿ ತೆರಿಗೆ ವಸೂಲಾಗುತ್ತಿದೆ. ಇದರಿಂದ ಬೇಸಾಯಗಾರರ ಕಡೆ ತಿಂದುಂಡು ಶಿಲ್ಕು ಉಳಿದರೆ, ಅದರೊಳಗಿಂದ ಈ ತೆರಿಗೆ ಕೊಡುವದು, (ಇಲ್ಲದಿದ್ದರೆ ಉಪವಾಸ ಬೀಳುವದು) ತೆರಿಗೆಯನ್ನೆತ್ತುವಳಿ ಮಾಡುವ ಗ್ರಾಮಾಧಿಕಾರಿಗಳೂ, ಗ್ರಾಮರಕ್ಷಣೆಯ ಪೋಲೀಸರೂ ಕೆಲ ಮಟ್ಟಿಗೆ ಪ್ರಜೆಗಳನ್ನು ಸುಲಿಯುತ್ತಾರೆ. ಇಂಥ ಸ್ಥಿತಿಯಲ್ಲಿ ಜನರು ರಾಜಕಾರಣ ಚಳವಳಿಯಲ್ಲಿ ಸುಲಭವಾಗಿ ಸೇರಿಹೋಗುತ್ತಾರೆ. ಅವರಿಗೆ ಮುಂದಿನ ಆಶೆಯಿಲ್ಲ. ಅವರಿಗೆ ಇನ್ನು ನಷ್ಟ ಹೊಂದುವದಾಗಿಲ್ಲ; ಅಷ್ಟು ಅವರು ದೀನರಾಗಿದ್ದಾರೆ. ಸರಕಾರವು ರಾಷ್ಟ್ರೀಯ ಸಂಪತ್ತನ್ನು ಅಭಿವೃದ್ಧಿ ಮಾಡುವ ಗೋಜಿಗೆ ಹೋಗುವದಿಲ್ಲ. ಹಿಂದುಸ್ಥಾನದೊಳಗಿನ ಗೊಂದಲದ ಕಾರಣವನ್ನು ನನಗೆ ಹೇಳಹೇಳಿದರೆ, ರಾಷ್ಟ್ರದ ಬಡತನವೆಂದು ನಾನು ಹೇಳುವೆನು. ರಾಷ್ಟ್ರದೊಳಗಿನ ಹುಟ್ಟುವಳಿಯಿಂದ ರಾಜ್ಯಭಾರದ ಖರ್ಚು ಜನಸಾಮಾನ್ಯರ ಸಾಮಾನ್ಯ ಚರಿತಾರ್ಥದ ಖರ್ಚು ಸಾಗಲಾರದಿದ್ದರೆ, ಆ ದೇಶದಲ್ಲಿ ಹೇಳಲಾರದಷ್ಟು ಅನರ್ಥಗಳು ಹುಟ್ಟುತ್ತವೆ. ಸುಧಾರಿಸಿದ ರಾಷ್ಟ್ರಗಳಲ್ಲೆಲ್ಲ ರಾಷ್ಟ್ರ ಸಂಪದಭ್ಯುದಯದ ಪ್ರಯತ್ನ ನಡೆಯುತ್ತಿದೆ. ನಮ್ಮ ಹಿಂದುಸ್ಥಾನ ಸರಕಾರವು ಹೀಗೆಯೇ ನಡೆಕೊಳ್ಳುತ್ತಿದ್ದರೆ, ನನಗೆ ಆನಂದವಾಗುತ್ತಿತ್ತು." ಸರ್ ಇಬ್ರಾಹಿಮ ರಹಿಮತುಲ್ಲಾರವರ ವಚನಗಳನ್ನು ಸರಕಾರವು ಪಾಲಿಸಿ ರೋಗಬೀಜವನ್ನು ನಷ್ಟಪಡಿಸಲು ಶಕ್ತಿಮೀರಿ ದುಡಿಯತಕ್ಕದ್ದು. ಪ್ರಜೆಗಳು ಸಹ ವಿಚಾರಿಸಿ ರಾಷ್ಟ್ರಸಂಪದಭ್ಯುದಯವಾಗುವಂಥ ಸರಕಾರವನ್ನೇರ್ಪಡಿಸುವಷ್ಟು ಲೋಕಮತವನ್ನು ಬಲಪಡಿಸತಕ್ಕದ್ದು.

***

ಸೇವಾಧರ್ಮಃ ಪರಮ ಗಹನೋ।

ಸರಕಾರಿ ನೌಕರಿಗಾಗಿ ಈಗಿನ ಕಾಲದಲ್ಲಿ ಎಲ್ಲರೂ ಹೇಳಾಡುತ್ತಾರೆ. ಆದರೆ ಸುಖ ದುಃಖಗಳು ಈಗ ಬಹಿರಂಗವಾಗುತ್ತಿವೆ. ರಾಜ್ಯಕಾರಭಾರದ ಖರ್ಚನ್ನು ಕಡಿಮೆ ಮಾಡುವ ಯೋಜನೆ ನಡೆದದೆ. ಹೆಚ್ಚಿನ ಸಂಬಳ ಪಡೆಯುವ ಮೇಲ್ತರಗತಿಯ ಯುರೋಪಿಯನ್ ನೌಕರರಿಗೆ ಇದರಿಂದ ಧಾಸ್ತಿಯಿಲ್ಲ. ಬಡ ಕಾರಕೂನರ ಮೇಲೆ ಈ ಸಂಕ್ರಾಂತಿ ಬರುತ್ತಿದೆ. ಜಿ. ಆಯ್. ಪಿ. ರೇಲ್ವೆಯು ಈಗ ಸರಕಾರದ ವಶವಾಗಿದೆ. ಸರಕಾರಿ ಕಾರಭಾರದಲ್ಲಿ ತಮಗೆ ಹೆಚ್ಚಿನ ಪಗಾರ ಸಿಗುವದೆಂದು ಕಾರಕೂನ-ಮಂದಿಗಳ ಆಶೆ. ಈಗ ಅದು ಬಯಲಾಯಿತು. ಇದ್ದ ಸಂಬಳದ ಮೇಲೆಯೇ ಕಾರಕೂನರಿಗೆ ಇಟ್ಟುಕೊಳ್ಳುವದು ಕಠಿಣವಾಗಿದೆ. ೧೮-೨೦ ವರ್ಷಗಳ ತನಕ ಸರ್ವಿಸಾದವರಿಗೆ ಸಹ ಬಡತರ್ಫ ಮಾಡುವ ಯೋಜನೆ ನಡೆದಿದೆ. ಬಡತರ್ಫ ಹೊಂದಲು ಅವರು ಒಪ್ಪದಿದ್ದರೆ, ಈಗಿನ ಸಂಬಳದ ಸ್ಥಿ ಸಂಬಳದ ಮೇಲೆ ಅವರು ಕೆಲಸ ಮಾಡಬೇಕು. ಮುಂಬಯಿಯಲ್ಲಿ ೮೦ ರೂಪಾಯಿ ಸಂಬಳ ಪಡೆಯುವ ೩೫ ಮಂದಿಗಳ ಮೇಲೆ ಈ ಪ್ರಸಂಗ ಬಂದಿದೆ. ಚೀಫ ಆಡಿಟರ ಆಫೀಸಿನಲ್ಲಿ ಕಳೆದ ಮಂಗಳವಾರಕ್ಕೆ ಇವರಿಗೆ ಒಬ್ಬೊಬ್ಬರಾಗಿ ಕರೆದು ಈ ಸಂಗತಿ ತಿಳಿಸಲಾಯಿತು. ರಾ| ರಾಜೇ ಎಂಬ ಕಾರಕೂನರು ೧೮ ವರ್ಷ ಕೆಲಸ ಮಾಡಿದ್ದರು, ಇವರಿಗೂ ಕರೆಯಲಾಯಿತು. "ನೀವು ೬೦ ರೂಪಾಯಿಗಳ ಮೇಲೆ ಕೆಲಸ ಮಾಡಬೇಕು. ಇಲ್ಲವಾದರೆ, ಬಡತರ್ಫ ಹೊಂದಬೇಕು," ಎಂದು ಡೆಪ್ಯುಟಿ ಆಡಿಟರರು ಹೇಳಿದರು. ಈ ನುಡಿಗಳನ್ನು ಕೇಳಿದೊಡನೆ ರಾ| ರಾಜೇಯವರಿಗೆ ಎದೆಯೊಡೆಯಿತು; ಅಲ್ಲಿಯೇ ಮೂರ್ಛೆ ಹೊಂದಿದರು. ಬಳಿಯಲ್ಲಿದ್ದ ಆ| ಚಿಕಿತ್ಸಕರು ಅವರಿಗೆ ಸಾವರಿಸಿಕೊಂಡರು, ರೇಲ್ವೆ ಡಾಕ್ಟರರು ಬಂದು ಉಪಚಾರ ಮಾಡಿದ ಬಳಿಕ, ಅವರಿಗೆ ಸ್ಮೃತಿ ಬಂತು. ಈ ಸಂಗತಿಯಿಂದ ಮೇಲಧಿಕಾರಿಗಳಿಗೆ ಕಾರಕೂನ ಬೇದೆಗಳ ದುರವಸ್ಥೆಯು ಹೊಳೆಯುವದೇ?

***

ಬ್ರಿಟಿಶ ಉಗಿಹಡಗ ಕಂಪನಿಗಳ ಹಾವಳಿ.

ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರಾದ ಮಿ|| ಹಾಜಿಯವರು ಒಂದು ಕಾಯಿದೆಯನ್ನು ಸೂಚಿಸಿದ್ದಾರೆ; ದಂಡೆಗುಂಟದ ಉಗಿಹಡಗದ ವ್ಯಾಪಾರವೆಲ್ಲ ಹಿಂದೀ ಕಂಪನಿಗಳಿಗೇ ಕಾದಿಡಬೇಕು; ಪರದೇಶಿ ಕಂಪನಿಗಳಿಗೆ ಮೇಲಾಟ ನಡೆಸಗೊಡಬಾರದು ಈ ಕಾಯಿದೆಯನ್ನು ಸಮರ್ಥಿಸುವಾಗ ಶ್ರೀ| ಷಣ್ಮುಖಂ ಚೆಟ್ಟಿಯವರು ಮುಖ್ಯದ ಭಾಷಣ ಮಾಡಿದರು. ಈಗಿನ ಉಗಿಹಡಗದ ಪರದೇಶಿ ಕಂಪನಿಯವರು ಬಹಳ ಅನ್ಯಾಯ ಮಾಡುತ್ತಾರೆ. ಬ್ರಿಟಿಶ ದೇಶದಿಂದ ಹಿಂದುಸ್ಥಾನಕ್ಕೆ ೬೦೦೦ ಮೈಲು ಅಂತರವಿದೆ; ೧ ಟನ್ ಸರಕಿಗೆ ೨೪ ಶಿಲಿಂಗು ಹಾಸಲು. ಈ ಕಂಪನಿಯವರೇ ಹಿಂದುಸ್ಥಾನದಲ್ಲಿ ದಂಡೆಗುಂಟ ಸರಕು ಒಯ್ಯುವ ದರ ನೋಡಿ. ೨೦೦೦ ಮೈಲಿಗೆ ೩೦ ಶಿಲಿಂಗು ದರ ಬೀಳುತ್ತದೆ. ಅಲ್ಲಿಯ ನಷ್ಟವನ್ನು ಇಲ್ಲಿಂದ ಇವರು ತುಂಬಿಕೊಳ್ಳುತ್ತಾರೆ. ಸ್ವದೇಶಿ ಕಂಪನಿ ಹೊರಟರೆ, ಅವುಗಳೊಡನೆ ಈ ಪರದೇಶಿ ಕಂಪನಿಗಳು ಮೇಲಾಟ ನಡಿಸಿ ಅವುಗಳನ್ನು ನಷ್ಟಕ್ಕೆ ಗುರಿ ಮಾಡುತ್ತವೆ. ಕಳೆದ ೩೦ ವರುಷಗಳಲ್ಲಿ ೧೨ ಕೋಟಿ ಭಂಡವಲಿನ ೭೦ ಸ್ವದೇಶಿ ಕಂಪನಿಗಳು ಹೊರಟವು, ಅವುಗಳಲ್ಲಿ ೯|| ಕೋಟಿ ಭಂಡವಲಿನ ೨೨ ಕಂಪನಿಗಳು ದಿವಾಳಿ ತೆಗೆಯಬೇಕಾಯಿತು; ೭ ಕಂಪನಿಗಳು ಜೀವ ಹಿಡಿದುಕೊಂಡಿವೆ. ಚರ್ಚೆಯಾಗಿ ಹಾಜಿಯವರು ಸೂಚಿಸಿದ ಕಾಯಿದೆಯಲ್ಲಿ ಅವಶ್ಯವಾದ ತಿದ್ದುಪಾಟಗಳನ್ನು ಮಾಡಲು ಚಿಕ್ಕದೊಂದು ಕಮಿಟಿ ನೇಮಿಸಲಾಯಿತು. ಸರಕಾರದ ಬದಿಗೆ ೪೬ ಮತಗಳು ಬಿದ್ದವು; ಮಿ| ಹಾಜಿಯವರಿಗೆ ೬೧ ಮತಗಳು ದೊರಕಿದವು. ತಿದ್ದುಪಾಟುಗಳಾದ ಬಳಿಕ, ಪುನಃ ಚರ್ಚೆಯಾಗಿ ಈ ಕಾಯಿದೆಯು ಮಂಜೂರಾಗುವದು. ಕಾಯಿದೆ ಮಂಜೂರಾದರೆ, ದೇಶಿ ಕಂಪನಿಗಳಿಗೆ ಉಗಿಹಡಗಗಳನ್ನು ಹೊರಡಿಸಲು ಚಲೋ ಉತ್ತೇಜನ ದೊರಕುವದು.

***

ಯುದ್ಧಸನ್ಯಾಸ ಕರಾರಿನ ಭವಿಷ್ಯ.

ಆಗೋಸ್ಟ ೨೭ ನೇ ತಾರೀಖಿನ ಅಪರಾಹ್ನ ೩ ಘಂಟೆಗೆ ಪ್ಯಾರೀಸ ಪಟ್ಟಣದಲ್ಲಿ ಅಮೇರಿಕಾ ಬ್ರಿಟಿಶ, ಜರ್ಮನಿ, ಕೆನಡಾ, ಬೆಲ್ಜಮ, ಇಟಾಲಿ, ಜಪಾನ ಮುಂತಾದ ೧೪ ರಾಷ್ಟ್ರಗಳ ಪ್ರತಿನಿಧಿಗಳು ಯುದ್ಧ ಸನ್ಯಾಸ ಕರಾರಿನ ಮೇಲೆ ಸಹಿ ಮಾಡಿದರು; ಈ ಸಮಯದ ಮೇಲಿಂದ ಭವಿಷ್ಯವಾದಿಗಳೊಬ್ಬರು ಭವಿಷ್ಯ ಹೇಳಿದ್ದಾರೆ: ಮಂಗಳ ಗ್ರಹವು ಈ ಕಾಲದಲ್ಲಿ ಅನುಕೂಲವಿಲ್ಲ; ಮಂಗಳ-ಶನಿ ಗ್ರಹಗಳು ಪರಸ್ಪರ ವಿರುದ್ಧವಾಗಿವೆ. ಇವುಗಳ ಮೇಲಿಂದ ಈ ಕರಾರಿನಿಂದ ಯುದ್ಧ ಸನ್ಯಾಸವಾಗದು. ಈ ಕರಾರಿನಿಂದಲೇ ಕಲಹಕಾರಣಗಳಾಗಿ ಯುದ್ಧವಾಗುವದು. ಭವಿಷ್ಯವಾದಿಗಳ ಭವಿಷ್ಯದ ಈ ವಿಷಯ ಅಷ್ಟೇನು ಅವಶ್ಯವಿಲ್ಲ ಸಹಿ ಹಾಕಿದ ರಾಷ್ಟ್ರಗಳೇ ಒಳಗಿಂದೊಳಗೆ ಬಡಿದಾಡುವ ಕಾ

ನ್ನು ನಿರೀಕ್ಷಿಸಬಹುದಿವೆ. ಆ ಕಡೆ ತಯಾರಿಯು ನಡೆದಿದೆ. ಯುದ್ಧ ಸನ್ನಾಹಕ್ಕೆ ಗ್ರಹಬಲವಿಲ್ಲದೆ ಯುದ್ಧ ಪ್ರಸ್ತಾಪಕ್ಕೇ ಗ್ರಹಬಲವಿದ್ದರೆ ರಾಷ್ಟ್ರಗಳೆಲ್ಲವೂ ಗ್ರಹಗತಿಯಂತೆ ನಡೆಯಲಾರದೆ ಮತ್ತೇನು ಮಾಡುವವು?

*

ಕಾಯಿದೆಯಿಂದ ನಡೆಯುವ ವಂಚನೆ

ಸರಕಾರಿ ಗುಪ್ತ ಪೋಲೀಸ ಖಾತೆಯವರು ದೇಶಭಕ್ತರನ್ನು ಪೀಡಿಸುವ ಪ್ರಕಾರಗಳು ಅನೇಕವಿವೆ. ಟಪಾಲಿನಲ್ಲಿ ಬಂದ ಕಾಗದಗಳನ್ನು ಸಹ ಒಡೆದು ನೋಡಿ ಕಳಿಸುತ್ತಾರೆ. ಬಿಶ್ಯಾಂಟ ಅಮ್ಮನವರು ಈ ಕುರಿತು ಸದ್ಯಕ್ಕೆ ತಕರಾರು ಮಾಡಿದ್ದಾರೆ. ಪಂಡಿತ ಮೋತಿಲಾಲರವರೂ ಇದೇ ತಕರಾರು ಮಾಡಿದ್ದಾರೆ. ಮೋತಿಲಾಲರವರಿಗೆ ಒಂದು ಪತ್ರ ಬಂತು. ಒಡೆಯುವ ಮುಂಚೆ ಅದು ತೆರೆದು ನೋಡಲ್ಪಟ್ಟಿತ್ತು. ಯಾರಿಗೂ ಅದು ಒಡೆದಂತೆ ತೋರಲಿಲ್ಲ. ಒಡೆದ ಕೂಡಲೆ, ಅದರೊಳಗೆ ಒಂದು ಚೀಟಿಯಿತ್ತು. "ಈ ಪತ್ರವು ನಿರುಪದ್ರವಿಯಿದೆ; ಮಾಲೀಕರಿಗೆ ಕೊಡಬಹುದು" ಈ ಹುಕುಮಿನ ಕೆಳಗೆ ಸಹಿಯಿರಲಿಲ್ಲ. ಟಪಾಲ ಕಾಯಿದೆಯಂತೆ ಟಪಾಲಿನಲ್ಲಿ ಕೊಟ್ಟ ಕಾಗದಗಳನ್ನು ಇದ್ದಕ್ಕಿದ್ದ ಹಾಗೆ ಮುಟ್ಟಿಸುವ ನಂಬಿಗೆಯ ಮೇಲೆ ಕಾಗದಗಳು ಕೊಡಲ್ಪಡುತ್ತವೆ. ಈ ಕಾಯಿದೆಯ ನಂಬಿಗೆಯನ್ನು ಭಂಗಿಸುವದು ಸರಿಯಲ್ಲ. ಇದು ಹಗಲುಗಳ್ಳತನವೆಂದು ಪತ್ರಿಕಾಕಾರರು ಟೀಕಿಸುತ್ತಾರೆ.

ಟೆಂಡರ ನೋಟೀಸು.

ಇದರ ಮೂಲಕ ತಿಳಿಯಪಡಿಸುವದೇನಂದರೆ:—

ಯಲ್ಲಾಪೂರ ತಾಲೂಕ ಲೋಕಲ ಬೋರ್ಡಿಗೆ ಸಂಬಂಧಪಟ್ಟ ಈ ಕೆಳಗೆ ಕಾಣಿಸಿದ ಡಿಸ್ಟ್ರಿಕ್ಟ ಲೋಕಲ ಬೋರ್ಡ ಕಾಮಗಾರಿಗಳು ಮಂಜೂರಾಗಿ ಬಂದದ್ದರಿಂದ ಅವನ್ನು ತಾರೀಖು 6 10-1928 ನೇ ಶನಿವಾರ ದಿವಸ ಮಧ್ಯಾಹ್ನ ೩ ಘಂಟೆಯ ಸಮಯಕ್ಕೆ ಮುಂಡಗೋಡ ಡಿಸ್ಟ್ರಿಕ್ಟ ಬಂಗಲೆಯಲ್ಲಿ ಕೂಡಿ ತಕ್ಕ ಜನರಲ್ ಕಮೀಟಿಯಲ್ಲಿ ಕಂಟ್ರಾಕ್ಟಕ್ಕೆ ಕೊಡುವದರಲ್ಲಿ ಬಂದಾವು. ಕಾರಣ ಸದ್ರಿ ಕಾಮಗಾರಿಗಳನ್ನು ಕಂಟ್ರಾಕ್ಟಕ್ಕೆ ತಕೆಯಬಯಸುವವರು ಸದ್ರಿ ಕಮೀಟಿಯು ವೇಳಕ್ಕೆ ಹಾಜರ ಇದ್ದು ತಮ್ಮ ಟೆಂಡರ ಅರ್ಜಿಗಳನ್ನು ಕೊಡತಕ್ಕದ್ದು. ಯಾರ ಅರ್ಜಿ ಕಮೀಟಿಯಲ್ಲಿ ಮಂಜೂರಾಗುತ್ತದೋ ಅವರು ಕಾಯಿದೆಯಂತೆ ಕೂಡಲೇ ಕರಾರು ಬರೆದುಕೊಟ್ಟು ಎಸ್ಟಿಮೇಟ ರಕಮಿನ ರಕಂ ಗೆ ಡಿಪೋಜಿಟ ಕಟ್ಟತಕ್ಕದ್ದಿರುತ್ತದೆ. ಯಾರಿಗಾದರೂ ಸದ್ರಿ ಕಾಮಗಾರಿಗಳ ಪ್ಲೆನ ಎಸ್ಟಿಮೇಟುಗಳ ಮಾಹಿತಿ ಬೇಕಾಗಿದ್ದಲ್ಲಿ ರಜೆ ದಿವಸಗಳ ಹೊರತಾಗಿ ಇತರೇ ದಿವಸಗಳಲ್ಲಿ ಆಫೀಸ ವೇಳ್ಯಾನಲ್ಲಿ ಆಫೀಸಿನಲ್ಲಿ ಬಂದು ಮಾಹಿತಿ ಪಡೆಯಬಹುದು. ತಾರೀಖು ೮-೯-೧೯೨೮.

ಕಾಮಗಾರಿ ಹೆಸರು.	ಎಸ್ಟಿಮೇಟಿನ ರಕಂ.
1. ಮಂಚಿಕೇರಿಯಲ್ಲಿ ಹೊಸ ದವಾಖಾನೆ ಇಮಾರತು ಕಟ್ಟುವದು.	3000/-
2. ಬಿಗಳ್ಳಿಯಲ್ಲಿಯ ಲೋಕಲ್ ಬೋರ್ಡ ಶಾಲಾ ಇಮಾರತಿಯ ಸ್ಪೆಶಲ್ ರಿಪೇರಿ.	633/-

H. S. BHAT.
President,
T. L. B. Yellapur.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ

ಆಯುರ್ವೇದಿಕ] ಅನುಭವಿಕ ಔಷಧಗಳು! [ಮಲಬಾರಿ ಕೃತಿ!

೧. ಮದನಕಾಮೇಶ್ವರಿ ಲೇಹ- ಧಾತುಪುಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನಕಾಮೇಶ್ವರ- ಗುಣ ತೋರಿದಂತೆ. ಪ. ೧ ಕ್ಕೆ ೨ ರೂ. ೩ ಕ್ಕೆ ೫ ರೂ [ಪ. ೧ ಕ್ಕೆ ೨॥ ರೂ.
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರೆ. ಇಂದ್ರಿಯದ ಹುಣ್ಣು, ಪರಮಾ ಯಾವದೇ ತರದ ಕಠಿಣ ರೋಗವಾದರೂ ಮರಳೊಮ್ಮೆ ಕಾಣಿಸಿಕೊಳ್ಳದ್ದರೂ ೭ ದಿವಸದಲ್ಲಿ ಗುಣ ಹೊಂದುವದು.
೪. ಗರ್ಮಿ ರೋಗಕ್ಕೆ ಮಲಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿವಸಕ್ಕೆ ಗುಣ.
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ, ಕೋಷ್ಟವಾತ, ಕಿರುಗಳ ೪. ೮೦ ತರದ ವಾತರೋಗಕ್ಕೆ ಸಿದ್ಧೌಷಧಿ ರೂ. ॥, ೧।, ೨
೬. ಕೆಮ್ಮಿನ ಗುಳಿಗೆ- ಕ್ಷಯ, ದಮ್ಮು, ಕೆಮ್ಮು ೪. ಮೇಲೆ ರಾಮಬಾಣ. ೩. ೧೦ ಆಣೆ ರೂ. ೧, ೧॥
೭. ವಾತ-ಪಿತ್ತ-ಕಫನಾಶಕ ಜುಲಾಬಿನ ಗುಳಿಗೆ- ೨೫ ರ ತ. ೮ ಆ; ೧೦೦ ಕ್ಕೆ ೧॥ ರೂ.
೮. ಸಂಜೀವನಿ- ವಿಷಮಜ್ವರ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಸನ್ನಿಪಾತ ೪. ಜ್ವರಗಳ ಮೇಲೆ. ೨೫ ರ ತ. ೧ ರೂ; ೧೦೦ ರ ತ. ೩ ರೂ.
೯. ಚಂದ್ರಪ್ರಭಾ ಮಾತ್ರೆ- ೨೦ ತರದ ಮೇಹ, ಮೂತ್ರದಾಹ, ಅಶ್ಮರೀ, ಧಾತುಕ್ಷಯ, ಸ್ವಪ್ನದೋಷ, ೪. ಪ. ೨ ರೂ.
೧೦. ದಂತಮಂಜನ- ಹಲ್ಲು ನೋವು, ಹುಳ, ಕಳಕ, ಅಲುಗಾಡುವಿಕೆ ೪. ಪೂರ್ಣ ಗುಣವಾಗುವವು. ಪ ೨ ಆಣೆ, ೧೨ ಕ್ಕೆ ೨। ರೂ.
೧೧. ಜಂತುವಿನ ಔಷಧ- ಹೊಟ್ಟೆ-ಹುಳಗಳ ಮೇಲೆ ರಾಮಬಾಣ ಪುಡಿ ೧ ಕ್ಕೆ ೧॥ ಆಣೆ, ೨೫ ಕ್ಕೆ ೧॥ ರೂ. ೧೦೦ ಕ್ಕೆ ೫॥ ರೂ.
೧೨. ಬಜ್ಜೆಯ ಮಲಮು- ಪ ೪ ಆಣೆ, ೧೨ ಕ್ಕೆ ೨॥ ರೂ; ಸಾಕಷ್ಟು ಮಾತ್ರ ಪತ್ರಕ್ಕೆ ೫ ರೂ. ೧॥ ೨॥, ೫
೧೩. ವಾತಸಂಹಾರಿ ತೈಲ- ನಾರಾಯಣ ತೈಲ, ಅರ್ಧಾಂಗ ವಾಯು ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು ಬಾಟ್ಲಿ ರೂ. ೧॥, ೨॥-
೧೪. ವಾಕ್ಸಂಜೀವನಿ ಗುಟಿಕಾ- ಮಾತು ತಡೆಯುವಿಕೆ, ತೊದಲುವಿಕೆ ೪. ಪ ೨ ರೂ.
೧೫. ಪುತ್ರಜೀವನ ಲೇಹ- ಗರ್ಭದೋಷವುಳ್ಳ ಸ್ತ್ರೀಯರಿಗೆ ಸಿದ್ಧೌಷಧಿಯು ಪ ೪ ರೂ. ಟ. ಖರ್ಚು ಬೇರೆ; ಅನುಪಾನ ಪತ್ರ ಔಷಧದ ಸಂಗಡ; (ಆಯುರ್ವೇದ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟಾಂಪ ಇಟ್ಟು ಪತ್ರದ್ವಾರಾ ಎಲ್ಲ ವಿವರ ತಿಳಕೊಳ್ಳಬಹುದು.

ಪತ್ತೆ:- ಮೆನೇಜರ, ಆರ್ಯವೈದ್ಯ ಚಿಕಿತ್ಸಾಮಂದಿರ, ಪೋ. ಚೆಂಡಿಯೆ ತಾ. ಕಾರವಾರ.
ಮುಂಬಯಿ ಏಜಂಟ- R. C. KAMAT, *Teashop, Store Lane, Fort Bombay.*

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೇಕಟಗಳಿಗೆ ರೂ. ೬
... (ಎಕ್ಸಿಬಿಷನ ವೆರೈಟಿ) ೨೫ ... ... ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪॥
ನಾಟಿ ... ೧೬ ,, ,, ೨॥
ಸಿಲ್ವರ ಓಕ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಲಿಗೆ... ೨॥
ಕರಿಬೇವು ಸೊಪ್ಪು ೧ ರತ್ತಲಿಗೆ ೪
ಕುದುರೆ ಮಸಾಲೆ ಬೀಜ ೧ ರತ್ತಲಿಗೆ ... ೩
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಚಲೋ ಕ್ರೋಟನ್ಸ ಗಿಡ ೧೨ ಕ್ಕೆ ... ೩ ರಿಂದ ೧೨
ಅಂದವಾದ ಹೂ ಗಿಡ (ಪರೇನಿಯಂ) ೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೩ ರಿಂದ ೧೨
ಕೇರಿನಂತೆ ಬೆಳೆಯುವ ಗಡ್ಡೆ (ಕನ್ನಾ) ೧೨ ಗಡ್ಡೆಕ್ಕೆ ... ೧॥ ಯಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨
ಕಪ್ಪದ ಮಾವಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨
ಸೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ ... ... ೧೨ ರಿಂದ ೩೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕೋತ್ರಿ, ದ್ರಾಕ್ಷಿ, ಪೇರಲ, ದಾಳಿಂಬ, ಅಂಜೀರ, ರಾಜಪುರಿ, ಪನ್ನೇರಲ, ಕಂಚಿಕಾಯಿ, ಲಕ್ಮ್ಯಾಟಿ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೬೪
ವಾಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ... ೫
೧ ಬುಟ್ಟಿ ತುಂಬ ತರಕಾರಿ ... ೫ ರಿಂದ ೬
ಕ್ರಿಸಾಂತಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೆರಳು ಕೊಡುವ ಕಾಡ ಎಲೆಯ ಜಾತಿಯ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡೆಗಳು ೧೨ ಕ್ಕೆ ರೂ. ೩ ರಿಂದ ೯
ಎರೋಕೇರಿಯಾ ಪಾಮ್ಸ್ ೧೨ ಗಿಡಗಳಿಗೆ ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಆರ್ಡರಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ್,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ಕಾನಡಾ ವೃತ್ತ.

ಸಂತಿ ವಿಭವ ನಂ। ಭಾದ್ರಪದ ಕೃ। ೧೦ಮಿ, ಸೋಮವಾರ

ಭಾರತೀಯರ ದೈನ್ಯ.

ಭರತಖಂಡವು ಪಾರತಂತ್ರ್ಯದಲ್ಲಿ ನರಳುವ ಪರಿಂದ ಅದಕ್ಕೆ ಪರಿಪರಿಯ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತದೆ. ರಾಷ್ಟ್ರದಲ್ಲಿ ಸುಖ-ಸಂಪತ್ತಿಲ್ಲದೆ ಭರತಪುತ್ರರು ಅನುಭವಿಸುವ ತಾಪತ್ರಯಗಳನ್ನು ಸರ್ ಇಬ್ರಾಹಿಮ ರಹಿಮತುಲ್ಲಾರವರು ವರ್ಣಿಸಿದ್ದಾರೆ. ಸರ್ ಇಬ್ರಾಹಿಮರವರು ಮುಂಬಯಿ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಿದ್ದರು. ಬಹು ಕಾಲದವರೆಗೆ ಮುಂಬಯಿ ಸರಕಾರದಲ್ಲಿ ಜವಾಬದಾರ ಅಧಿಕಾರಗಳನ್ನು ಅವರು ನಿರ್ವಹಿಸಿದ್ದಾರೆ. ದೇಶದಲ್ಲಿಯೂ ಇವರಿಗೆ ಮಾನ್ಯತೆಯಿದೆ. ಹೀಗೆ ರಾಜಪ್ರಜೆಗಳಿಗೆ ಮಾನ್ಯರಾದ ಮಹಾನುಭಾವರ ವಿಚಾರಗಳನ್ನು ಪರಾಂಬರಿಸಿದರೆ, (ಅವು ವಿವಿಧ ಸಂಗ್ರಹದಲ್ಲಿ ಸಂಗ್ರಹಿಸಲ್ಪಟ್ಟವೆ,) ಬ್ರಿಟಿಶ ರಾಜ್ಯಭಾರದಿಂದ ಭರತಖಂಡಕ್ಕೆ ಲಾಭವೆಷ್ಟಾಯಿತೆಂದು ತಿಳಿಯುವದಾಗಿದೆ. ಸುಧಾರಿಸಿದ ರಾಷ್ಟ್ರಗಳು ತಮ್ಮ ರಾಷ್ಟ್ರದೊಳಗಿನ ಸಂಪತ್ತನ್ನು ಬೆಳಿಸುವದಕ್ಕಾಗಿ ಯಾವಾಗಲೂ ಪ್ರಯತ್ನಪಡುತ್ತವೆ. ಹಿಂದುಸ್ಥಾನ ಸರಕಾರವು ಹಾಗೆ ಪ್ರಯತ್ನಪಡುವದಿಲ್ಲ. ಈ ವಚನಗಳು ಮಹತ್ವದ್ದಿವೆ. ಬ್ರಿಟಿಶರು ಸುಧಾರಿಸಿದಾಗ್ಯೂ, ಆ ಸುಧಾರಣೆಯ ಫಲವು ಭರತಖಂಡಕ್ಕೇನು ಲಭಿಸಲಿಲ್ಲ." ಇಷ್ಟೊಂದು ಮಾತನ್ನು ಅವರು ಹೇಳಿದ್ದಾರೆ. ಅದನ್ನು ಎಲ್ಲರೂ ಮನನ ಮಾಡತಕ್ಕದ್ದು. ದೇಶದೊಳಗೆ ಹಬ್ಬಿಕೊಂಡ ದಾರಿದ್ರ್ಯಕ್ಕೆ ಮೂಲ ಕಾರಣವ್ಯಾವುದೆಂದು ಇನ್ನು ಪ್ರಜೆಗಳಾಗಲಿ, ಸುಧಾರಕರಾಗಲಿ ಹುಡುಕಬೇಕಾಗಿಲ್ಲ. ಬ್ರಿಟಿಶ ರಾಜ್ಯಭಾರದಿಂದಲೇ ಭಾರತೀಯರು ಬಡವರಾಗಿದ್ದಾರೆ. ರಾಜ್ಯಾಧಿಕಾರಿಗಳ ಧೋರಣವು ದೇಶಹಿತಕಾರಿಯಾಗಿ ಪರಿಣಮಿಸಿದ್ದರೆ, ದೇಶಕ್ಕೆ ಲಾಭವಾಗುತ್ತಿತ್ತು. ಇದು ದೇಶದೊಳಗಿನ ಸ್ಥಿತಿಯಾಯಿತು.

ಪರದೇಶದೊಳಗಿನ ಭಾರತೀಯರ ಸ್ಥಿತಿಯನ್ನು ಕೇಳುವಿರಾ? ಪರದೇಶದಲ್ಲಿ ಹಿಂದುಸ್ಥಾನದ ಬಹು ದೊಡ್ಡ ಕೀರ್ತಿಯಿದೆ. ಸ್ವತಂತ್ರ ರಾಷ್ಟ್ರಗಳ ಜೊತೆಗ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳು ಸರಿಕರಾಗಿ ಕೂತುಕೊಳ್ಳುತ್ತಾರೆ. ಅದರ ಮೇಲಿಂದ ಹಿಂದುಸ್ಥಾನಕ್ಕೆ ಪರದೇಶದಲ್ಲಿ ಮಾನಕ್ಕೇನು ಕಡಿಮೆ? ಎಂದು ಅನಭಿಜ್ಞರು ಪ್ರಶ್ನಿಸಬಹುದು. ಊರಲ್ಲಿ ರಂಗನಾಗಿಂದೆ ಮಂಗನೆಂದರೂ, ಪರಊರಲ್ಲಿ ಹಿಂದುಸ್ಥಾನವು ರಂಗನೆಂದು, ಅನಭಿಜ್ಞರು ವಾದಿಸಬಹುದು, ವಾದಿಸುವಷ್ಟು ಬ್ರಿಟಿಶರು ವೇಶ ಬರೆದಿದ್ದಾರೆಂದು ನಾವೊಪ್ಪುವೆವು. ಆದರೆ, ಸತ್ಯಸ್ಥಿತಿಯನ್ನು ಬಚ್ಚಿಡಬರುತ್ತದೆಯೇ? ಅಮೇರಿಕೆಯಲ್ಲಿ ಭಾರತೀಯರಿಗ ನಾಗರಿಕತನದ ಹಕ್ಕುಗಳಿಲ್ಲ. ನಾಗರಿಕರಲ್ಲದಿದ್ದವರು ಪಶುಗಳಿಗಿಂತ ಕಡೆ. ಅಮೇರಿಕೆಯಲ್ಲಿ ಪಶುಗಳೂ, ಭರತಪುತ್ರರೂ ಒಂದೇ ತರಗತಿಯವರು, ಭರತಪುತ್ರರು ಪ್ರಜೆಗಳೆಂಬ ಸದರಿನಲ್ಲಿ ಸೇರುವದಿಲ್ಲ. ಈ ಕುರಿತು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಪ್ರಶ್ನೆ ಕೇಳಲಾಯಿತು. ಹಿಂದುಸ್ಥಾನ ಸರಕಾರದ ತರ್ಫೆನಿಂದ ಸರ್ ಡೆನಿಸ ಬ್ರೇಯವರು ಉತ್ತರ ಕೊಟ್ಟರು. ಅಮೇರಿಕೆಯ ವರಿಷ್ಠ ನ್ಯಾಯಾಸನವು ಭರತಪುತ್ರರಿಗೆ ನಾಗರಿಕತನದ ಹಕ್ಕುಗಳಿಲ್ಲವಾಗಿ ತೀರ್ಪು ಕೊಟ್ಟದ್ದರಿಂದ ಭರತಪುತ್ರರು ದೀನರಾಗಿದ್ದಾರೆಂದು ಹೇಳಿದರು. ಇದನ್ನು ಕೇಳಿ, ನಮ್ಮಲ್ಲಿಯ ಬ್ರಿಟಿಶ ರಾಜ್ಯಾಧಿಕಾರಿಗಳು ಪ್ರಾಮಾಣಿಕ ಪರೋಪಕಾರಿಗಳೆಂದು ಯಾರಾದರೂ ಘೋಷಿಸುವರು. " ಹಿಂದುಸ್ಥಾನ ಸರಕಾರವೇನು ಮಾಡತಕ್ಕದ್ದು? ಅಮೇರಿಕೆಯ ನ್ಯಾಯಾಸನದ ತೀರ್ಪು ಅಮೇರಿಕೆಯಲ್ಲಿ ನಡೆಯತಕ್ಕದ್ದಲ್ಲವೇ? ಅಲ್ಲಿಯ ನ್ಯಾಯಾಸನಕ್ಕೆ ಪಡಮೂರಿಗೆ ಕಟ್ಟಿ ಭರತಪುತ್ರರಿಗೆ ನಾಗರಿಕ ಹಕ್ಕು ಕೊಡಲು ಇಲ್ಲಿಯ ರಾಜ್ಯಾಧಿಕಾರಿಗಳಿಗೆ ಶಕ್ಯವೇ?" ಎಂಬ ಪ್ರಶ್ನೆಯೂ ಬರಬಹುದು. ಆದರೆ, ಅಂಥ ಕುಟಿಲ ನೀತಿಗೆ ಒಳಿಯಾಗುವಷ್ಟು ಮತಿಮಂದರು ಈಗ ತೀರ ಕಡಿಮೆ. ವರಿಷ್ಠ ನ್ಯಾಯಾಸನವು ಅಲ್ಲಿ ಹೋಗಿ ಉಳಕೊಳ್ಳುವ ಬ್ರಿಟಿಶರಿಗೆ ಪಶುಗಳೆಂದು ತೀರ್ಪು ಕೊಟ್ಟಿದ್ದರೆ, ಬ್ರಿಟಿಶ ಮಹಾನುಭಾವರು ಸುಮ್ಮಗುಳಿಯುತ್ತಿದ್ದರೇನು! ದಕ್ಷಿಣ ಆಫ್ರಿಕೆಯಲ್ಲಿ ಭೋಯರ ಸರಕಾರವು ಬ್ರಿಟಿಶರಿಗೆ ಕೆಟ್ಟ ರೀತಿಯಿಂದ ನಡಿಸಿಕೊಂಡಬಗ್ಗೆ ದೇಶಾಭಿಮಾನದಿಂದ ಯುದ್ಧಹೂಡಿ ಬ್ರಿಟಿಶರ ಮಾನ ಕಾಯ್ದು ತಂದ ಬ್ರಿಟಿಶ ರಾಷ್ಟ್ರದ ದೇಶಕಾರ್ಯವನ್ನು ಯಾರು ಮರೆತಾರು! "ಧ್ವನಿಗೆ ಪ್ರತಿಧ್ವನಿ" ಎಂಬಂತೆ ಪ್ರತೀಕಾರವಾಗಿ ಹಿಂದುಸ್ಥಾನದಲ್ಲಿ ಬಂದುಳಿದ ಅಮೇರಿಕೆಯವರಿಗೆ ನಾಗರಿಕತನದ ಹಕ್ಕುಗಳನ್ನು ಇಲ್ಲಗಳೆಯಲು ಹಿಂದುಸ್ಥಾನ ಸರಕಾರವು ಬದ್ಧವಾಗಿಲ್ಲವೇ? ಇಷ್ಟನ್ನು ಸಹ ಸರಕಾರವು ಮಾಡದೆ, ಭಾರತೀಯ ಪ್ರಜೆಗಳ ಬಗ್ಗೆ ತಮಗೆ ಅಭಿಮಾನವಿರುವದೆಂದು ಡಂಗುರ ಬಡಿದರೆ, ಅದನ್ನೆಲ್ಲ ನಂಬಿಕೊಂಡು, ಬ್ರಿಟಿಶರೇ ನಮ್ಮ ಕಲ್ಯಾಣಕರ್ತರೆಂದು ಹೇಳುವವರು ಇನ್ನು ಯಾರೂ ಸಿಗರು.

ರಾಷ್ಟ್ರಸಂಘದ ಉಲ್ಲೇಖ ಬಂತು. ಅದರಿಂದ ಆ ವಿಷಯದಲ್ಲಿಯೂ ಹಿಂದುಸ್ಥಾನಕ್ಕೆ ಒದಗಿದ ಒಂದು ಅಪಮಾನವನ್ನು ನಮೂದಿಸಿಬಿಡಬೇಕಾಗಿದೆ. ಅಗಸ್ಟ ೨೭ನೇ ತಾರೀಖಿಗ ಪ್ಯಾರಿಸ ಪಟ್ಟಣದಲ್ಲಿ ಯುದ್ಧ ಸನ್ನ್ಯಾಸ ಪರಿಷತ್ತಿನ ಸಣ್ಣ ಸಂಭ್ರಮವಾಯಿತು, ಆ ಸಂಭ್ರಮದಲ್ಲಿ ಹಿಂದುಸ್ಥಾನದ ತರ್ಫೆನಿಂದ ಬ್ರಿಟಿಶ ರಾಷ್ಟ್ರದ ಪ್ರತಿನಿಧಿಗಳಾದ ಕಾಲೆನಡನ್ ದೊರೆಗಳು ಕರಾರಿಗೆ ಸಹಿ ಮಾಡಿದರು. ಬ್ರಿಟಿಶ ಸಾಮ್ರಾಜ್ಯದೊಳಗಿನ ಕೆನಡಾದ ತರ್ಫೆನಿಂದ ಮಿ। ಕೊಸ್ ಗ್ರೇವರವರು ಸಹಿ ಮಾಡಿದ್ದಾರೆ, ಕೆನಡಾ ದೇಶದ ತರ್ಫೆನಿಂದ ಮಿ। ಮೆಕೆಂಝಿ ಕಿಂಗರವರು ಸಹಿ ಮಾಡಿದ್ದಾರೆ. ಆಸ್ಟ್ರೇಲಿಯಾ ತರ್ಫೆನಿಂದ ? ನೇಟರ ಮೆಕ್ಲಾಕ್ಲನ್‌ರವರು ಸಹಿ ಮಾಡಿದ್ದಾರೆ, ನ್ಯೂಝಿಲೆಂಡದ ತರ್ಫೆನಿಂದ ಸರ್ ಜೇಮ್ಸ ಪಾರ್‌ರವರ ಸಹಿಯಿದೆ; ದಕ್ಷಿಣ ಆಫ್ರಿಕೆಯ ತರ್ಫೆನಿಂದ ಮಿ। ಜೇ. ಸಿ. ಸ್ಮಿಥ್‌ರವರು ಸಹಿ ಮಾಡಿದ್ದಾರೆ, ಹಿಂದುಸ್ಥಾನದ ತರ್ಫೆನಿಂದ ಮಾತ್ರ ಬ್ರಿಟಿಶ ದೇಶದ ಕಾಲೆನ್‌ಡನ್ ದೊರೆಗಳೇ ಸಹಿ ಮಾಡಬೇಕಾಯಿತು.. ಹಿಂದುಸ್ಥಾನದ ತರ್ಫೆನಿಂದ ಹ್ಯಾ-ಕಮಿಶನರರಾಗಿ ನೇಮಿಸಲ್ಪಟ್ಟು ವಿಲಾಯತಿಗೆ ಹೋದ ಸರ್ ಅತುಲ ಚಟ್ಟರ್ಜೀಯವರು ಜೀವಂತರಿದ್ದಾರೆ. ಅವರದೊಂದು ಸಹಿ ಕೊಳ್ಳಲು ಸಾಮ್ರಾಜ್ಯ ಸರಕಾರವು ಒಪ್ಪಲಿಲ್ಲ. ಕಾರಣವೇನೆಂದು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸವಾಲಾಯಿತು. ಈ ಪ್ರಶ್ನೆಗೆ ಸರ್ ಡೇನಿಸ ಬ್ರೇಯವರೇ ಉತ್ತರ ಕೊಟ್ಟರು "ಈ ತಪ್ಪನ್ನು ಈಗ ತಿದ್ದಬರುವದಿಲ್ಲ." ತಪ್ಪು ಹೇಗಾಯಿತೆಂಬುದೇ ಪ್ರಶ್ನೆ. ಸಾಮ್ರಾಜ್ಯದ ಇತರ ಭಾಗಗಳ ಹ್ಯಾ-ಕಮಿಶನರರಿಗೆ ನಿಮಂತ್ರಿಸುವಷ್ಟು ಸ್ಮೃತಿ ಉಳಿಯಿತು, ಹಿಂದುಸ್ಥಾನ ದೇಶದ ಹ್ಯಾ-ಕಮಿಶನರರಿಗ ನಿಮಂತ್ರಿಸಲು ಎಚ್ಚರದಪ್ಪಿತು, ಇದು ಹೇಗೆ? ಹಿಂದುಸ್ಥಾನದ ಉಲ್ಲೇಖವೇ ಇಲ್ಲದಿದ್ದರೆ, ಹಿಂದುಸ್ಥಾನದ ಪರವಾಗಿ ಸಹಿಯಾಗದಿದ್ದರೆ, ನಮ್ಮದೇನು ತಕರಾರಿಯಿದ್ದಿಲ್ಲ. ಹಿಂದುಸ್ಥಾನದ ತರ್ಫೆನಿಂದ ಸಹಿಯಾಗುವಾಗ ಬ್ರಿಟಿಶ ರಾಜ್ಯಾಧಿಕಾರಿಗಳು ಮಾಡಿದ ನಿಯಮಗಳನ್ನಾದರೂ ನಡೆಯಬೇಕಲ್ಲವೇ? ಪರತಂತ್ರ ಹಿಂದುಸ್ಥಾನ ದೇಶದ ಪ್ರತಿನಿಧಿಯಾಗಿ ಸರ್ ಅತುಲ ಚಟ್ಟರ್ಜೀಯವರಿಗೆ "ಬಳಿಗೆ ಕೂಡ್ರಿಸಿಕೊಳ್ಳಲು ಬ್ರಿಟಿಶರಿಗೆ ನಾಚಿಕೆಯಾಗುತ್ತಿದ್ದರೆ, ಹ್ಯಾ-ಕಮಿಶನರರಾಗಿ ಇವರನ್ನು ನೇಮಿಸುವದೇಕೆ? ಆ ದೇಶದ ತರ್ಫೆನಿಂದ ಸಹಿಯಾದರೂ ಮಾಡುವದೇಕೆ!

ಇವೆಲ್ಲ ಭಾರತೀಯರ ವಂಚನೆಗಾಗಿ ಕೈಕೊಂಡ ವೇಷಗಳಿವು. ಈ ಮೂಲಕವಾಗಿಯೇ ಭಾರತೀಯರ ದೈನ್ಯವು ದಿನೇ ದಿನೇ ಮಿಗಿಲಾಗುತ್ತ ನಡೆದಿದೆ. ದೇಶದೊಳಗಿನ ಸ್ಥಿತಿ ಹೀಗೆ; ಪರದೇಶದೊಳಗಿನ ಸ್ಥಿತಿ ಹಾಗೆ. ಬ್ರಿಟಿಶ ರಾಜ್ಯದಲ್ಲಿ ಭರತಪುತ್ರರಿಗೊದಗಿದ ವಿಪನ್ನಾವಸ್ಥೆಯಿದು! ಇದನ್ನು ಸುಧಾರಿಸಬೇಕಾದರೆ, ಭರತಪುತ್ರರು ಪಾರತಂತ್ರ್ಯಂಖಲೆಯನ್ನು ತುಂಡರಿಸಲು ಶಕ್ತಿಮೀರಿ ದುಡಿಯಬೇಕು, ಅಂದರೆ ಮಾತ್ರ ಭರತಖಂಡದ ಉದ್ಧಾರವಾಗುವದು.

ಸ್ಫುಟ ಸೂಚನೆಗಳು.

೧ ಯುದ್ಧಕಹಳೆಯ ಧ್ವನಿಯು ಈಗಾಗಲೇ ಕೇಳಬರುತ್ತಿದೆ. ಬ್ರಿಟಿಶ ಸೈನಿಕರೂ, ಫ್ರೆಂಚ ಸೈನಿಕರೂ ಆಟಕ್ಕಾಗಿ ಯುದ್ಧ ಹೂಡಿ ಯುದ್ಧ ಕಾಲದಲ್ಲಿ ತಮಗೆ ಬರುವ ಅಡಚಣೆಗಳನ್ನು ಕಂಡುಕೊಳ್ಳುತ್ತಿದ್ದಾರೆ. ವೈಮಾನಿಕ ಸರಂಜಾಮಿನಲ್ಲಿ ಇಂಗ್ಲಂಡ ದೇಶವು ಬಹು ಹಿಂದಿದೆ. ವಿಮಾನಗಳನ್ನು ಬೆಳೆಸದಿದ್ದರೆ, ಯುದ್ಧವಾದಲ್ಲಿ ಲಂಡನ್ ಪಟ್ಟಣದ ಮೇಲೆ ಆಕಾಶಯಾನದೊಳಗಿಂದ ಬಾಂಬುಗಳನ್ನು ಹಾರಿಸಲು ಅನುಕೂಲವಿರುವದಾಗಿ ಸಿದ್ಧವಾಯಿತಂತೆ. ಅದರಿಂದ ವಿಮಾನಗಳನ್ನು ಬೆಳೆಸುವ ಕಲ್ಪನೆಯಿದೆ. ವಿಮಾನ ಸರಂಜಾಮಿನಲ್ಲಿ ಫ್ರೆಂಚರು ಬಹಳ ಮುಂದುವರಿದಿದ್ದಾರೆ. ಅದರಿಂದ ಅವರೊಡನೆ ಬ್ರಿಟಿಶರು ಗುಪ್ತವಾಗಿ ಒಂದು ಕರಾರನ್ನು ಮಾಡಿಕೊಂಡಿದ್ದಾರೆ. ಮುಂದಿನ ಯುದ್ಧಕ್ಕಾಗಿ ಬ್ರಿಟಿಶರು ಸಿಟ್ಟಾಗಿರುವದರಿಂದ ರಷ್ಯಾ ಪನ್ನಾಸದ ಬಂಬಗಳೆಲ್ಲ ನಿರರ್ಥಕವೆಂದು ಹೇಳುತ್ತಾರೆ. ಇಟಾಲಿಯಲ್ಲಿಯೂ ಹೊಸ ಶಸ್ತ್ರಾಸ್ತ್ರಗಳ ಪರೀಕ್ಷೆ ಕೈಕೊಳ್ಳಲಾಯಿತು. ವಿಮಾನಗಳ ಕಾದಾಟದ ಆಟ-ಓಟಗಳೂ ನಡೆದವು. ಬಲ್ಗೇರಿಯಾ ದೇಶದ ಮನಸ್ಸೊಲಿಸಿಕೊಂಡು ಇಟಾಲಿಯು ಬ್ರಿಟೀ-ಫ್ರೆಂಚರಿಗೆ ಇದಿರಾಗಬಯಸುತ್ತದೆ. ಇನ್ನು ಯುದ್ಧ ಸಾಹಿತ್ಯಗಳನ್ನು ಹೆಚ್ಚೆಚ್ಚಾಗಿ ಬೆಳೆಸುವ ಕೆಲಸ ನಡೆದಿದೆ. ಇಷ್ಟಾಗಿ ಈ ರಾಷ್ಟ್ರಗಳಿಗೆ ಯುದ್ಧ ಮಾಡುವ ಲವಲವಿಕೆ ಇಲ್ಲ. ರಶಿಯಾ ದೇಶದಲ್ಲಿ ಯುದ್ಧ ತಯಾರಿ ನಡೆದದೆ. ಅಲ್ಲಿ ಯುದ್ಧದ ಆಟಗಳಾಗುತ್ತವೆ. ಬೊಲ್ಶೆವಿಕರ ತಯಾರಿಯದು; ಅದರಿಂದ ಬೊಲ್ಶೆವಿಕರಿಗೆ ಇದಿರಾಗುವದಕ್ಕಾಗಿ ತಮ್ಮ ಸಿದ್ಧತೆಗಳು ನಡೆದಿರುವದಾಗಿ ವರ್ತಮಾನಪತ್ರಗಳಲ್ಲಿ ರಶಿಯಾ ದೇಶದೊಳಗಿನ ಚಿತ್ರವಿಚಿತ್ರ ವರ್ಣನೆಗಳು ಪ್ರಾಮುಖ್ಯವಾಗಿ ಪ್ರಕಟಿಸಲ್ಪಡುತ್ತಿವೆ. ಸತ್ಯಸ್ಥಿತಿಯೇ ಬೇರೆ. ಬ್ರಿಟಿಶ-ಫ್ರೆಂಚಾದಿ ರಾಷ್ಟ್ರಗಳಂತೆ ಅಲ್ಲಿಯೂ ಯುದ್ಧದ ಆಟ ನಡೆದಿದೆ, ಈ ರಾಷ್ಟ್ರಗಳಷ್ಟು ಯುದ್ಧದ ಲವಲವಿಕೆ ಇಲ್ಲ. ಕಾರಣವಿದೆ ದೇಸಾಯಿಗಾರರೂ, ಉದ್ಯೋಗ-ಧಂದೆಗಳುಳ್ಳ ಕಾರಖಾನೆಯವರೂ ರಶಿಯಾ ದೇಶದೊಳಗಿನ ಸೈನಿಕರು. ಸಂಬಳದ ಸೈನಿಕರು ತೀರ ಕಡಿಮೆ. ಪ್ರಪಂಚ ಪಟ್ಟು ದೇಸಾಯಿಗಾರಿ ಕೈಗಾರಿಕೆಯವರಿಗೆ ವಸಾಹತಿ ಪರದೇಶಗಳಲ್ಲಿ ಯುದ್ಧ ಹೂಡಲು ಅನುಕೂಲವಿಲ್ಲ. ಯುದ್ಧಪ್ರವೃತ್ತರಾಗಿರುವ ಬ್ರಿಟಿಶ-ಫ್ರೆಂಚರ ಹಾವಳಿಯಿಂದ ಸಂರಕ್ಷಣ ಮಾಡಲು ಅವರು ತಯಾರಿ ನಡಿಸಿದ್ದಾರೆ. ಇದನ್ನು ಬುದ್ಧ್ಯಾ ಅನ್ಯಥಾಗ್ರಹಿಸಿ ಬ್ರಿಟಿಶ-ಫ್ರೆಂಚರು ಯುದ್ಧ ಸಾಮಗ್ರಿಗಳನ್ನು ಹೆಚ್ಚೆಚ್ಚಾಗಿ ಶೇಖರಿಸಹತ್ತಿದ್ದಾರೆ. ಯುದ್ಧದ ಆಟವು ಮಹಾಯುದ್ಧವಾಗಿ ಪರಿಣಮಿಸುವದೆಂದು ಹೇಳಲು ಭವಿಷ್ಯವಾದಿ ಬೇಡ.

---

೨. ಒಪ್ಪಂದದ ತಹನಾಮೆಗಳಾಗುತ್ತಿವೆ; ಆದರೆ, ನಿಜವಾಗಿ ಒಪ್ಪಂದ ಮಾಡಿಕೊಳ್ಳುವ ಮನಸ್ಸಿನ ತಯಾರಿ ಇಲ್ಲವೆಂಬ ಬಗ್ಗೆ ಜಿನೆವಾ ಪಟ್ಟಣದಲ್ಲಿ ನಡೆಯುತ್ತಿರುವ ಸ್ಯಾರಲಂಡ ಪ್ರಶ್ನೆಯೇ ಸಾಕ್ಷಿ. ಸ್ಯಾರಲಂಡ ಪ್ರದೇಶವು ಈಗ ಬಹು ಕಾಲದಿಂದ ಜರ್ಮನ್ ಫ್ರೆಂಚರೊಳಗಿನ ವಾದ ಪ್ರದೇಶವು. ಜರ್ಮನ್ ಫ್ರೆಂಚರೊಳಗಿನ ಅನೇಕ ಯುದ್ಧಗಳಿಗೆ ಈ ಪ್ರದೇಶವೇ ಕಾರಣವಾಗಿದೆ. ಈ ಪ್ರದೇಶವು ಜರ್ಮನಿ, ಫ್ರಾನ್ಸ ಈ ದೇಶಗಳ ನಡುವೆ ಇದೆ. ತಮ್ಮದೆಂದು ಜರ್ಮನರು, ತಮ್ಮದೆಂದು ಫ್ರೆಂಚರು ಬಡಿದಾಡಿಕೊಳ್ಳುತ್ತಾರೆ. ಕಾಲಮಾನದಂತೆ ಪ್ರಬಲರಾದವರು ಈ ಪ್ರದೇಶವನ್ನು ಸೆಳೆಕೊಳ್ಳುತ್ತಾರೆ. ಮಹಾಯುದ್ಧದಲ್ಲಿ ಜರ್ಮನ್‌ರು ಸೋತರು. ಅದರಿಂದ ಈ ಪ್ರದೇಶವು ಫ್ರೆಂಚರ ಕೈವಶವಾಯಿತು. ಇದನ್ನು ಪುನಃ ಪಡೆಯುವದಕ್ಕಾಗಿ ಜರ್ಮನರು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ಬ್ರಿಟಿಶ, ಜರ್ಮನಿ, ಫ್ರೆಂಚ ಪ್ರಭೃತಿ ದೇಶದ ಪ್ರಮುಖರೊಡನೆ ಚರ್ಚೆಯಾಯಿತು. ಸ್ಯಾರಲಂಡ ಪ್ರದೇಶದ ಅಧಿಕಾರವನ್ನು ಫ್ರೆಂಚರು ಬಿಡಲೊಪ್ಪಿದರು; ಆದರೆ, ಜರ್ಮನಿಯು ಮಿತ್ರರಾಷ್ಟ್ರಗಳಿಗೆ ತೆರಬೇಕಾದ ಖಂಡಣಿಯನ್ನು ತೆರಬೇಕು, ಆ ಬಗ್ಗೆ ಈ ರಾಷ್ಟ್ರಗಳಲ್ಲಿ ಒಂದು ಮಂಡಳವನ್ನು ನೇಮಿಸಿವೆ. ಸ್ಯಾರಲಂಡ ಪ್ರದೇಶದಲ್ಲಿ ರಾಜ್ಯಭಾರ ನಡಿಸಲು ಒಂದು ಕಮೀಶನ್ ನೇಮಿಸಲ್ಪಡಬೇಕು. ಅದು ಎಷ್ಟು ಕಾಲವೆಂಬುದು ಮುಂದೆ ಚರ್ಚಿಸಿ ಮಾಡಲ್ಪಡಬೇಕು. ಬ್ರಿಟಿಶ ರಾಷ್ಟ್ರವು ಜರ್ಮನ್ ದೇಶಕ್ಕೆ ೧ ಪೈ ಬಿಡಲು ಒಪ್ಪದಿಲ್ಲ. ಬ್ರಿಟಿಶರು ಅಮೇರಿಕೆಯವರಿಗೆ ಸಾಲ ಕೊಡಬೇಕು; ಆ ಸಾಲದಲ್ಲಿ ೧ ಪೈ ಬಿಡಲು ಅಮೇರಿಕೆಯವರ ಬಳಿ ತಾವು ಕೇಳುವದಿಲ್ಲವಾಗಿಯೂ ಬ್ರಿಟಿಶ ಮುತ್ಸದ್ದಿಗಳ ದೊಡ್ಡಸ್ತನ. ಅಮೇರಿಕೆಯವರಿಗೆ ಬ್ರಿಟಿಶರಿಂದ ಸಲ್ಲಬೇಕಾದ ಸಾಲವು ಪರಸ್ಪರ ಜರ್ಮನ್ ಖಂಡಣಿಯಿಂದ ಸಂದಾಯವಾದರಾಯಿತು. ಜರ್ಮನಿಗೆ ಹಣದ ಅಡಚಣೆಯಲ್ಲಿ ಸಿಲುಕಿ ಹಾಕಿ ಫ್ರೆಂಚರಿಗೆ ಉಪಕಾರ ಮಾಡುವ ಧೂರ್ತ ಬ್ರಿಟಿಶರ ಹಂಚಿಕೆಯಿದು! ಇದರ ಮೇಲಿಂದ ಒಪ್ಪಂದದ ಮಾತುಕಥೆಗಳು ನಿರ್ಮಲಚಿತ್ತದಿಂದ ನಡಿಯುವದಿಲ್ಲೆಂಬುದು ಸ್ಪಷ್ಟವಾಗುತ್ತದೆ. ಶಾಂತತೆಯೆಲ್ಲ ತೋರಿಕೆಗೆ, ಮನೋರೋಗವೇ ಬೇರೆ. ಇಂಥ ಪರಿಸ್ಥಿತಿಯಲ್ಲಿ ರಣವೇದಿಕೆಯ ರಂಗಸ್ಥಳಕ್ಕೆ ಇಳಿಯದೆ ನಿಂತೀತೆ?

---

೩. ಬೆಂಗಳೂರಿನೊಳಗಿನ ದೊಂಬಿಯ ವಿಚಾರವನ್ನು ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಸಮಿತಿಯು ನಡಿಸುತ್ತಿದೆ. ಇವರ ಮಂಡಳದ ಘಟನೆಯು ಪ್ರಜೆಗಳ ವಿಶ್ವಾಸಕ್ಕೆ ಪಾತ್ರವಿಲ್ಲವಿದ್ದಾಗ್ಯೂ, ಕಾರ್ಯಕಲಾಪಗಳಿಂದ ಈ ಸಮಿತಿಯು ನ್ಯಾಯ ಮಾಡುವದೆಂದು "ವಿಶ್ವಕರ್ನಾಟಕ" ಆದಿ ಪತ್ರಿಕೆಗಳ ಅಭಿಪ್ರಾಯವಾಗಿದೆ. ಸರ್ ವಿಶ್ವೇಶ್ವರಯ್ಯನವರು ಸಾಕ್ಷಿಗಾರರಿಗೆ ನಂಬಿಕೆ ಕೊಟ್ಟು ಸತ್ಯವನ್ನೆಲ್ಲ ಅರಿತುಕೊಳ್ಳುತ್ತಾರೆ. ರಹಸ್ಯವಾಗಿಯೂ ಸಾಕ್ಷಿ ಕೇಳುತ್ತಾರೆ. ಜಿಲ್ಲಾ ಪೋಲೀಸ ಸುಪರಿಂಟೆಂಡೆಂಟ, ನಗರದ ಅ| ಪೋಲೀಸ ಸುಪರಿಂಟೆಂಡೆಂಟ, ಪೋಲೀಸ ಸಬ್ ಇನ್ಸಪೆಕ್ಟರ, ಸಿಟಿ ಮ್ಯಾಜಿಸ್ಟ್ರೇಟ ಕಂಟ್ರಾಕ್ಟರ ಮುಂತಾದವರ ಸಾಕ್ಷಿಗಳಾಗಿವೆ; ಇನ್ನೂ ಸಾಕ್ಷಿಗಳಾಗುತ್ತಿವೆ. ಈ ಸಾಕ್ಷಿಗಳ ವಿಷಯ ಸವಿಸ್ತರ ಪರಾಂಬರಿಸಲು ಸಾಧ್ಯವಿಲ್ಲ. ಮುಖ್ಯ ಸಾಕ್ಷಿಗಾರರಾದ ಅ| ಪೋಲೀಸ ಸುಪರಿಂಟೆಂಡೆಂಟರೂ, ಪೋಲೀಸ ಸುಪರಿಂಟೆಂಡೆಂಟರೂ ರಹಸ್ಯವಾಗಿ ಕೆಲವು ವಿಷಯಗಳನ್ನು ಸಮಿತಿಗೆ ಅರಿಕೆ ಮಾಡಿಕೊಂಡಿದ್ದಾರೆ. ಆದರಿಂದ ನಮ್ಮ ಅಭಿಪ್ರಾಯವು ಸಾಧಾರವಾಗಲಿಕ್ಕಿಲ್ಲ. ಒಂದು ಮಾತನ್ನು ಮಾತ್ರ ನಮೂದಿಸಲೇಬೇಕು. ಬೆಂಗಳೂರಿನಲ್ಲಿ ನಡೆದ ಈ ದೊಂಬಿಗೆ ಹಿಂದೂಹಿತವಿರೋಧಿಗಳು ಹಿಂದು-ಮುಸಲ್ಮಾನರ ಕಲಹವೆಂಬ ಬಣ್ಣ ಕೊಟ್ಟಿದ್ದಾರೆ. ಆ ಬಣ್ಣವು ತೀರ ನಿರಾಧಾರವಾದದ್ದು. ಅದಕ್ಕೆ ಈಗಿನ ಸಾಕ್ಷಿಗಾರರಾಗಲಿ, ಸತ್ಯಸ್ಥಿತಿ ಬಲ್ಲವರಾಗಲಿ ಎಡೆಗೊಡುತ್ತಿಲ್ಲ. ಪ್ರಜಾಪ್ರತಿನಿಧಿ ಸಭೆಯ ಸಭಾಸದರೂ, ಮೈಸೂರು ವಿಶ್ವವಿದ್ಯಾಲಯದ ಸಭಾಸದರೂ ಆದ ಶ್ರೀ| ಎಮ್. ಎನ್. ಲಕ್ಷ್ಮೀನಾರಣಪ್ಪನವರು ಮುಂಬಯಿಯ 'ಹೆರಲ್ಡ' ಪತ್ರಿಕೆಯಲ್ಲಿ ಲೇಖ ಬರೆದು ಈ ಸಿದ್ಧಾಂತವನ್ನು ಸಪ್ರಮಾಣ ಖಂಡಿಸಿದ್ದಾರೆ. ಬೆಂಗಳೂರಿನ ಡಾ|| ಅಬ್ದುಲ್ ರಹಿಮಾನರೂ ಒಂದು ಚಿಕ್ಕ ಪುಸ್ತಕವನ್ನು ಬರೆದು, ಇದಕ್ಕೆ ಮುಸಲ್ಮಾನರ ಬೆಂಬಲವಿಲ್ಲೆಂದು ಪ್ರತಿಪಾದಿಸಿದ್ದಾರೆ. ಹಿಂದು-ಮುಸಲ್ಮಾನರು ಬಹು ಸ್ನೇಹಭಾವದಿಂದ ಹಿಂದೆಯೂ ಇದ್ದರು; ಈಗಲೂ ಇದ್ದಾರೆ. ಈ ವಿಧಾನವನ್ನು ಬೆಂಗಳೂರಿನ "ವಿಶ್ವಕರ್ನಾಟಕ" ಕರ್ತರು ಸಹ ಒಪ್ಪುತ್ತಾರೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ಕುಲ ಶೀಲಹೀನ ಪುಂಡರು,-ಪಾಕ-ಪೋಕರು ಈ ದೊಂಬಿಯ ಅನರ್ಥಕ್ಕೆ ಕಾರಣರು. ಅವರಿಗೆ ದಬ್ಬಲು ಬೆಂಗಳೂರಿನೊಳಗಿನ ಪ್ರಜಾರಕ್ಷಕ ಅಧಿಕಾರಿಗಳಿಂದ ಆಗಲಿಲ್ಲ. ಅದರಿಂದ ಪುಂಡರಿಗೆ ಪುಟ ದೊರಕಿತು. ಅ| ಪೋಲೀಸ ಸುಪರಿಂಟೆಂಡೆಂಟರಾದ ಶ್ರೀ| ಮಂಡಯಂ ನರಸಿಂಹ ಅಯ್ಯಂಗಾರರು ತಮ್ಮ ಸಾಕ್ಷಿಯಲ್ಲಿ ಹೇಳಿದ ಒಂದು ವಿಧಾನವು ಪ್ರಮಾಣಕ್ಕಾಗಿ ನಮೂದಿಸಬಹುದು. ದೊಂಬಿಯನ್ನು ಮುರಿಯಲು ಪೋಲೀಸರೂ, ಪೋಲೀಸ ಸಬ್ ಇನ್ಸಪೆಕ್ಟರರಾದ ಶ್ರೀ| ಶೇಷಾದ್ರಿ ಅಯ್ಯರರವರೂ, ಅ| ಪೋ| ಸುಪರಿಂಟೆಂಡೆಂಟರಾದ ಶ್ರೀ| ಮಂಡಯಂ ನರಸಿಂಹ ಅಯ್ಯಂಗಾರರವರೂ ಹೋಗಿದ್ದರು. ಬಡಿದಾಟದಲ್ಲಿ ಶ್ರೀ| ಶೇಷಾದ್ರಿ ಅಯ್ಯರರಿಗೆ ಏಟು ಬಿತ್ತು. ಅವರು ಘಾಯಹೊಂದಿದರು. ರಾ| ನರಸಿಂಹ ಅಯ್ಯಂಗಾರರಿಗೆ ಕಂಡೊಡನೆ ಅವರು "ಅಯ್ಯೋ, ಸತ್ತೆ ಸತ್ತೆ" ಎಂದು ಕೂಗಿದರು. ಈ ಸಂಗತಿಯಾದೊಡನೆ ಪೋಲೀಸ ಬಲವೆಲ್ಲ ಚದರಿ ಹೋಯಿತು. ಪುಂಡರಿಗೆ ಅಧಿಕಾರ ಬಂತು ಹೀಗಾಗಿ, ಈ ದೊಂಬಿಗೆ ಉಗ್ರರೂಪ ಬಂತು. ಈ ಸಾಕ್ಷಿಯ ಮೇಲಿಂದಲೂ, ಬೆಂಗಳೂರಿನಲ್ಲಿ ಹಿಂದು-ಮುಸಲ್ಮಾನರ ಸಂಬಂಧಗಳು ಭ್ರಾತೃಭಾವದ್ದೇ ಎಂದು ಸಿದ್ಧವಾಗುತ್ತವೆ. ಇಂಥ ಅನರ್ಥಕ್ಕೆ ಹಿಂದು-ಮುಸಲ್ಮಾನರ ಕಾದಾಟದ ರೂಪ ಕೊಟ್ಟು, ಸಾಮಾಜಿಕ ಕಲಹಗಳನ್ನು ಉಟ್ಟು ಮಾಡಿ ಭಾರತೀಯರ ಅಪಾತ್ರತೆಯನ್ನು ಸಿದ್ಧಪಡಿಸಲು ಹಿಂದೂಹಿತವಿರೋಧಿಗಳು ಹೊಂಚು ಹಾಕಿದ್ದಾರೆ. ಸದ್ಯಕ್ಕೆ ಆ ವಿಧಾನವನ್ನಷ್ಟು ಖಂಡಿಸುವೆವು. ಸವಿಸ್ತರ ಚರ್ಚೆಯನ್ನು ಸಮಿತಿಯ ರಿಪೋರ್ಟ ಪ್ರಕಟವಾದ ಬಳಿಕ ಮಾಡುವೆವು

---

೪. ವಿಜಾಪುರ ಜಿಲ್ಲೆಯ ಜಿಲ್ಹಾಧಿಪತಿಗಳಾದ ರಾಜಶ್ರೀ ವೆಂಕಣ್ಣಾ ಹೊಸಬನಾಯ್ಕರವರಿಗೆ ಹರಸಲು ನಮಗೆ ಸಂತೋಷವಾಗುತ್ತದೆ. ವಿಜಾಪುರವೆಂದರೆ, ಬರಗಾಲದ ಬೀಡು; ಅಲ್ಲಿ ರಾ| ವೆಂಕಣ್ಣಾ ನಾಯ್ಕರು "ಬರಗಾಲ ನಿವಾರಣಾ ಸಂಘ" ವೆಂಬದೊಂದು ಸಂಸ್ಥೆಯನ್ನು ಸಹಕಾರಿ ಕಾಯಿದೆಯನ್ವಯ ನಿರ್ಮಿಸಿದರು. ಈ ಸಂಸ್ಥೆಯ ೧ ವರುಷದ ರಿಪೋರ್ಟ ಪ್ರಕಟವಾಗಿದೆ. ಈ ಸಂಘಕ್ಕೆ ೧|| ಲಕ್ಷಕ್ಕೆ ಮಿಕ್ಕಿ ವಾಗ್ದಾನಗಳ ದೊರಕಿವೆ ಇದರಲ್ಲಿ ೮೫ ಸಾವಿರ ರೂಪಾಯಿಗಳು ವಸೂಲಾಗಿವೆ. ಈ ಸಂಘದವರು ೫೫ ಕೆರೆಗಳನ್ನು ದುರಸ್ತಿ ಮಾಡಿ ಮು-

ಗ್ರಾಮಗಳಲ್ಲಿ ಅವನ್ನು ಬಾಡಿಗೆಯಿಂದ ಕೊಟ್ಟು ನಿರ್ಜಲ ಬೇಸಾಯಕ್ಕೆ ಬಹಳ ಅನುಕೂಲತೆ ಮಾಡಿ ಕೊಟ್ಟಿದ್ದಾರೆ. ೧ ಮೋಟಾರ ರಂಟೆಯೂ ಉಪಯೋಗಿಸಲ್ಪಡುತ್ತಿದೆ. ಒಂದೇ ಪಾತಳಿಯಲ್ಲಿರುವ ಭೂಮಿಗಳನ್ನೆಲ್ಲ ಒಟ್ಟು ಮಾಡಿ ಒಡ್ಡುಗಳನ್ನು ಹಾಕಿ ಎಲ್ಲ ಕಡೆಗೆ ನೀರು ಇಂಗುವಂತೆ ಈ ಸಂಘದಿಂದ ವ್ಯವಸ್ಥೆಯಾಗುತ್ತದೆ. ೨೫೨ ಗ್ರಾಮಗಳಲ್ಲಿ ೧೧೦೫ ಮಂದಿ ರೈತರು ಈ ಯೋಜನೆಯಿಂದ ಲಾಭ ಪಡೆದರು. ತಗ್ಗು ಎತ್ತರಗಳಿದ್ದ ಭೂಮಿಯನ್ನು ಸರಿಪಡಿಸುವದಕ್ಕಾಗಿ ಕಬ್ಬಿಣ ಬುಟ್ಟಿಗಳ (scrapers) ಪೂರೈಕೆಯಾಗಿದೆ. ಇಂಥ ೭೮ ಬುಟ್ಟಿಗಳು ಈ ವರುಷ ಉಪಯೋಗಿಸಲ್ಪಟ್ಟವು. ವಿಜಾಪುರ ಜಿಲ್ಲೆಯಲ್ಲಿ ಬೈಲುಪ್ರದೇಶ, ಮದ್ದಿಗೆ ಬೇಕೆಂದರೆ, ಒಂದು ಗಿಡ ಸಿಗದು. ಜೂನ ೨೬-೨೮ನೇ ತಾರೀಖಿಗೆ ಈ ಸಂಘದವರು 'ವೃಕ್ಷ ಸಂವರ್ಧನ ದಿನ'ವನ್ನು ಪಾಲಿಸುತ್ತಾರೆ ಆ ದಿನ ಯಾವತ್ತೂ ಶಾಲೆಯ ವಿದ್ಯಾರ್ಥಿಗಳೂ, ಶಿಕ್ಷಕರೂ ರೈತರೂ ಹುಣಸೆ, ತುಗಲಿ, ಅಂಜನ ಮುಂತಾದ ಅನೇಕ ಜಾತಿಯ ಬೀಜಗಳನ್ನು ನೆಡುತ್ತಾರೆ ಕಳೆದ ವರ್ಷ ಸುಮಾರು ೯ ಲಕ್ಷ ಬೀಜಗಳು ನೆಡೋಣಾದವು ಸಂಘದವರು ಕೈಗಾರಿಕೆಗಳನ್ನು ಹೆಚ್ಚಿಸುವ ಏರ್ಪಾಟವನ್ನೂ ಮಾಡಿದ್ದಾರೆ ಕಂಬಳಿ ನೇಯ್ಗೆಯನ್ನು ಕಲಿಯುವದಕ್ಕಾಗಿ ೮ ಜನ ಕುರುಬರಿಗೆ ದಾವಣಗೆರೆಗೆ ಕಳಿಸೋಣಾಗಿದೆ ಉಣ್ಣೆಯನ್ನು ಬೆಳೆಸುವದಕ್ಕಾಗಿ ೧೨ ಮರಿನೋ ಜಾತಿಯ ಕುರಿಗಳು ಹಿಸ್ಸಾರದಿಂದ ಇಲ್ಲಿ ಆಮದು ಮಾಡೋಣಾದವು; ಇವು ಇಲ್ಲಿಯ ಹವೆಗೆ ಹಿಡಿಯಲಿಲ್ಲ ೧೧ ಕುರಿಗಳು ಸತ್ತುಹೋದವು. ಹತ್ತಿ ಬೆಳೆಸುವ ಉದ್ಯೋಗಕ್ಕೂ ಉತ್ತೇಜನ ಕೊಡುವ ಕೆಲಸ ನಡೆದಿದೆ. ಹೊಸ ಜಾತಿಯ ಕೋಳಿಗಳು ತರಿಸೋಣಾಗಿವೆ ಒಕ್ಕಲತನ ಸಾಹಿತ್ಯಗಳನ್ನು ಸಂಗ್ರಹಿಸುವದಕ್ಕೂ, ಬೇಸಾಯವನ್ನು ಎಲ್ಲ ಬಗೆಯಿಂದ ಸುಧಾರಿಸುವ ಉಪಾಯಗಳನ್ನು ಸೂಚಿಸುವ ಗ್ರಂಥಗಳನ್ನು ಸಂಗ್ರಹಿಸಲಿಕ್ಕೂ ಒಂದು ಅವಕಾಶ ಕಟ್ಟೋಣಾಗುತ್ತಿದೆ. ರಾ| ವೆಂಕಣ್ಣ ನಾಯ್ಕರು ಈ ಪ್ರಕಾರ ಒಕ್ಕಲಿಗರ ಸೇವೆ ಮಾಡುವದನ್ನು ಕಂಡು ನಮಗೆ ಸಂತೋಷವಾಗಿದೆ ಒಂದು ಸೂಚನೆಯನ್ನು ಮಾತ್ರ ಮಾಡಬೇಕಾಗಿದೆ ಅದಷ್ಟರ ಮಟ್ಟಿಗೆ ಯಾಂತ್ರಿಕ ಸಾಹಿತ್ಯಗಳನ್ನು ಆಮದು ಮಾಡಲಾಗದು ವಿಜಾಪುರ ಜಿಲ್ಲೆಯಲ್ಲಿ ಹುಟ್ಟುವಂಥ, ಅಲ್ಲಿಯೇ ನೆಟ್ಟಗೆ ಮಾಡಬಹುದಾದಂಥ ರಂಟೆಗಳನ್ನೂ, ಬುಟ್ಟಿಗಳನ್ನೂ ಪ್ರಚಾರದಲ್ಲಿ ತರಬೇಕು. ಯಾಂತ್ರಿಕ ಸಾಹಿತ್ಯಗಳಿಂದ ಬೇಸಾಯಗಾರರು ಪರಾವಲಂಬಿಗಳಾಗುತ್ತಾರೆ; ಇದಲ್ಲದೆ, ಮರಿನೋ ಕುರಿ, ಹೊಸ ಹೊಸ ತರದ ಕೋಳಿ ಮುಂತಾದ ವಿಜಾಪುರ ಜಿಲ್ಲೆಯ ಹವೆಗೆ ಹಿಡಿಯದ ಕೈಗಾರಿಕೆಗಳಿಗೆ ಕೈನೀಡದೆ, ವಿಜಾಪುರ ಜಿಲ್ಲೆಯಲ್ಲಿ ಹುಟ್ಟುವಳಿಯಾಗುವ ಸರಕುಗಳಿಂದ ಕೈಗಾರಿಕೆಗಳನ್ನು ಪ್ರಚುರಗೊಳಿಸಬೇಕು. ಅವಶ್ಯವಿದ್ದರೆ, ಇಡೀ ವಿಜಾಪುರ ಜಿಲ್ಲೆಯ ಸಂಶೋಧನ (economic survey)ವನ್ನು ಈ ಸಂಘದ ಕಡೆಯಿಂದ ನಡಿಸಬೇಕು. ಬೇಕಾದರೆ, ಒಬ್ಬಿಬ್ಬ ತಜ್ಞರನ್ನು ನೇಮಿಸಿಕೊಳ್ಳಬಹುದು. ಈ ಜಿಲ್ಲೆಯಲ್ಲಿ ಹಿಂದೇನು ಬೆಳೆಯುತ್ತಿತ್ತು ಯಾವ ಯಾವ ಕೈಗಾರಿಕೆಗಳಿದ್ದವು ಈಗಿನ ಸ್ಥಿತಿಯಲ್ಲಿ ಏನೇನು ಸುಧಾರಣೆ ಮಾಡಬಹುದು. ಎಂಬುದೊಂದು ನಕಾಶೆ ಇದ್ದರೆ, ಅದರಿಂದ ಮುಂದಿನ ಸುಧಾರಣೆಗೆ ಸಂಘಟಿತ ರೂಪ ಬರುತ್ತದೆ. ರಾ| ವೆಂಕಣ್ಣ ನಾಯ್ಕರು ಈ ಸೂಚನೆಯಂತೆ ಏರ್ಪಾಟು ಮಾಡಿದರೆ, ಅವರು ಕೈಕೊಂಡ ಕಾರ್ಯದಿಂದ ಒಕ್ಕಲಿಗರಿಗೆ ಬಹಳ ಉಪಕಾರವಾಗುವದೆಂದು ನಮ್ಮ ಅಭಿಪ್ರಾಯ.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ರಾತ್ರಿ ಹೆಚ್ಚಾಗಿ ಬೀಳುತ್ತಿದೆ. ಈಗ ಇಷ್ಟು ಮಳೆ ಬೇಡವಾಗಿ ಒಕ್ಕಲಿಗರ ಹೇಳಿಕೆ ಊರಲ್ಲಿ ಜ್ವರದ ಬೀತಿದೆ. ಈ ವಾರದಲ್ಲಿ ೨-೮೮ ಇಂಚು ಮಳೆ, ಅಂತು ೧೭೭-೭೧ ಈ ವರೆಗೆ ಇಂಚು ಮಳೆಯಾಯಿತು

ಪೋಲೀಸರು ದನಗಳನ್ನು ದೊಡ್ಡಿಗೆ ಒಯ್ಯುತ್ತಾರೆ. ದೊಡ್ಡಿ ಫೀ ಕೊಟ್ಟು ಬಿಡಿಸಿ ತಂದ ಬಳಿಕ, ಫಿರ್ಯಾದು ಕೊಡುವ ರಭಸ ನಡೆದಿದೆ ಅಲ್ಲ ಪುನಃ ದಂಡ ತೆರಬೇಕು, ಬಡಬಗ್ಗರ ಕಷ್ಟ. ಪೋಲೀಸ ಸುಪರಿಂಟೆಂಡೆಂಟರು ಬೇಗನೆ ಸಮಾಧಾನ ಮಾಡಬೇಕು.

ಇಲ್ಲಿಯ ಮ್ಯುನಿಸಿಪಾಲಿಟಿಗೆ ಮಿ| ಅಲ್ಫ್ರೆಡ್ ಫರ್ನಾಂಡೀಸ, ರಾ| ಗೋಳಿ ಅಣ್ಣಪ್ಪ ನಾಯ್ಕ ಹಾಗು ಮಾಮಲೇದಾರ ಹೀಗೆ ಮೂವರ ಸಭಾಸದರು ಸರಕಾರದಿಂದ ನೇಮಿಸಲ್ಪಟ್ಟಿದ್ದಾರೆ, ಹೊಸ ಮ್ಯುನಿಸಿಪಾಲಿಟಿಯ ಸಭೆಯು ಮುಂದಿನ ಸೋಮವಾರಕ್ಕೆ ನೇರತಕ್ಕದ್ದಾಗಿ ಕಲೆಕ್ಟರರು ನೋಟೀಸು ಹೊರಡಿಸಿದ್ದಾರೆ ಮ್ಯುನಿಸಿಪಾಲಿಟಿ ಇಲೆಕ್ಷನ್ ರದ್ದಾಯಿತಿಯ ದಾವೆಯಲ್ಲಿ ಎದ್ರುಬಾರರಿಗೆ ನೋಟೀಸುಗಳು ಹೋಗಿವೆ.

ಉಗಿಹಡಗವು ಕಳೆದ ಬುಧವಾರಕ್ಕೆ ಬಂದು ಮಾಲು ಇಳಿಸಿ ಮುಂದರಿಯಿತು.

ಇಲ್ಲಿ ಮೋಗರಾಯಿಗಳ ಆಗಮನವಾಗಿದೆ. ಜನರು ಜಾಗ್ರತೆಯಿಂದಿರಬೇಕು.

ಶ್ರೀ ಗ್ರಾಮದೇವಸ್ಥಾನದಲ್ಲಿ ಮೊನ್ನೆ ಶನಿವಾರದಿಂದ ಭಜನೆಸಪ್ತಾಹಕ್ಕೆ ಪ್ರಾರಂಭವಾಗಿದೆ.

ಇಲ್ಲಿಯ ಗಿಡಮೂಲಿಕೆಗಳಿಂದ ಔಷಧೋಪಚಾರ ಮಾಡುವ ಶೇಟ ಮುರಾರಜಿ ದೇರಾರಜಿಯವರು ಕಳೆದ ವಾರ ತೀರಿಕೊಂಡರು.

ಭಟಕಳ— ಮಳೆಯ ಮಾನವು ತಕ್ಕಮಟ್ಟಿಗಿದೆ; ಬೆಳೆಗೆ ಸಾಕು. ಬಟ್ಟೆ ರೋಗದ ಉಪಹತಿಯು ಊರಲ್ಲಿದೆ.

ಕಳೆದ ಶನಿವಾರ ತಾ. ೧೫ನೇಗೆ ಗಣೇಶ ಚತುರ್ಥಿಯ ವಿಷಯ ಇಲ್ಲಿಯ ಕನ್ನಡ ಶಾಲೆಯಲ್ಲಿ ಬೋಧಪ್ರದ ಉಪನ್ಯಾಸಗಳಾದವು.

ಮುಂಬಯಿ ಸ್ಟೀಮ ನೇವಿಗೇಶನ್ ಕಂಪನಿಯ ಹಡಗ ಇಲ್ಲಿ ಬಂದು ಮಂಗಳೂರ ಕಡೆ ಮುಂದರಿಯಿತು.

ಇಲ್ಲಿಯ ಕಟ್ಟಿಗೆ ಡಿಪೋದಲ್ಲಿ ಕಟ್ಟಿಗೆಯಿಲ್ಲ. ಕಳೆದ ವಾರದಿಂದ ೪-೫ ಗಾಡಿ ಕಟ್ಟಿಗೆ ಬರುತ್ತಿದೆ. ಊರಿಗೆ ಸಾಲದು, ಇದು ಹಸಿ ಕಟ್ಟಿಗೆ; ಉರುವಲಕ್ಕೆ ಪ್ರಯೋಜನವಿಲ್ಲ. ಮುಂದೆ ಬರುವ ಮಾರ್ಚ ತಿಂಗಳ ವರೆಗೆ ಹಳೇ ಕಟ್ಟಿಗೆಯನ್ನೇ ಮಾರಬೇಕೆಂದು ಕಾನೂನಿದೆ. ತಲೆಹೊರೆಯಿಂದ ಒಣಕಟ್ಟಿಗೆ ತಂದರೆ ಜಂಗಲ ಖಾತೆಯವರು ದಂಡನಾಮೆ ಮಾಡುತ್ತಾರೆ. ಈ ವರುಷ ಡೀಪೋ ಬಗ್ಗೆ ಟೆಂಡರು ಕೇಳಲಿಲ್ಲ; ಲಿಲಾಂವಿಗೂ ಇಡಲಿಲ್ಲ. ಹಿಂದಿನ ಡೀಪೋದವರಿಗೇ ೩ ವರ್ಷದ ತನಕ ಮಕ್ತೆ ವಾರ್ಷಿಕವಾಗಿ ಬಿಟ್ಟಿದ್ದಾರೆ.

ಶಿರ್ಶಿ— ಹೋದ ವರ್ಷದ ಅಪೂರ್ವ ಪ್ರಕಾರದಿಂದ ಈ ವರ್ಷದ ಗೋಪಾಲಕೃಷ್ಣ ದೇವಸ್ಥಾನದ ಭಜನೆ ಸಪ್ತಾಹವು ಅಪೂರ್ವ ಉತ್ಸಾಹದಿಂದ ಪ್ರಾರಂಭಿಸಲ್ಪಟ್ಟಿದೆ.

ಇಲ್ಲಿಯ ವಕೀಲರಾದ ರಾವಸಾಹೇಬ ಪಟೇಲ ಇವರು ೨-೩ ತಿಂಗಳಿಂದ ಭ್ರಮಿಷ್ಟರಂತೆ ವರ್ತಿಸುತ್ತಿರುವರು.

ಪ್ಲೇಗ ಪ್ರತಿಬಂಧಕವಾಗಿ ನಡೆಯುತ್ತಿರುವ ನಗರ ಸಂಕೀರ್ತನೆಗಳೆಲ್ಲ ಪ್ಲೇಗಿನೊಂದಿಗೆ ಶಾಂತವಾಗಿವೆ.

ಮಾರೀ ಕೋಣನ ಆಯುಷ್ಯರೇಖೆಯು ಪ್ರಬಲವಿದ್ದವರಿಂದ ಜಾತ್ರೆಯು ಮುಂದೆ ದೂಡುತ್ತ ನಡೆದಿದೆ. ಸದ್ರಿ ಕೋಣವು ಊರಲ್ಲಿ ತಿರುಗಾಡಿ ಜನ-ಜಾನುವಾರಗಳಿಗೆ ಉಪದ್ರವ ಕೊಡದಂತೆ ವ್ಯವಸ್ಥೆ ಮಾಡುವದು ಒಳ್ಳೇದು.

ಗಣೇಶ ಚತುರ್ಥಿಯಲ್ಲಿ ಈ ವರ್ಷ ೨-೩ ಹಪ್ತೆಗಳು ಬಂದದರಿಂದ ಎಷ್ಟೋ ಉತ್ಸಾಹವು ತೋರಿಬರಲಿಲ್ಲ.

ಸಿಗರೇಟಿನ ವ್ಯಾಪಾರಿಗಳಾದ ಸಾಹೇಬರು ಮೋಟರು ತುಂಬ ಸಿಗರೇಟುಗಳನ್ನು ತಂದು ಜನರಿಗೆ ಉಪದೇಶಿಸುತ್ತಲೂ ವ್ಯಾಪಾರ ಮಾಡುತ್ತಲೂ ಇರುವರು.

ನೂರಾರು ಇರಾಣಿಗಳ ಒಂದು ತಂಡವು ಇಲ್ಲಿ ಬಂದು ಅಲ್ಪ ಸ್ವಲ್ಪ ಹಾವಳಿ ಮಾಡಿಹೋಯಿತು. ಸರಕಾರವು ಇವರಿಗೆ ಯಾಕೆ ಪ್ರತಿಬಂಧಿಸುವದಿಲ್ಲ? ಈ ತಂಡದವರಿಗೆ ಅಧಿಕಾರಿಗಳು ಮೋಟಾರ ಚಾರ್ಜನ್ನು ತಗ್ಗಿಸಿ ಕಳಿಸಿದ ಸುದ್ದಿಯಿದೆ. ಇದು ನಿಜವೇನು? ನಿಜವಿದ್ದರೆ, ಇದರ ಕಾರಣವೇನು?

ಅಂಕೋಲಾ— ಇಲ್ಲಿಯ ಶ್ರೀ ಗಜಾನನ ವ್ಯಾಯಾಮ ಶಾಲೆಯಲ್ಲಿ ಸಾರ್ವಜನಿಕ ಗಣೇಶೋತ್ಸವವಾಯಿತು. ಮಂಗಳವಾರಕ್ಕೆ ಶ್ರೀ ಗಜಾನನ ಮೂರುತಿಯ ಪ್ರತಿಷ್ಠೆಯಾಯಿತು ಋಷಿಪಂಚಮಿಯಿಂದ ಶ್ರೀ| ಕುಮಟಾ ನಾರಾಯಣಾಚಾರ್ಯರ ಅಧ್ಯಕ್ಷತೆ ಕೆಳಗೆ ಶ್ರೀ| ವಿಶ್ವನಾಥ ಪಾಂಡುರಂಗ ಪ್ರಭುಗಳವರು 'ಧರ್ಮಜಾಗೃತಿ' ವಿಷಯದ ಮೇಲೆ ಉಪನ್ಯಾಸ ಕೊಟ್ಟರು. ಗುರುವಾರಕ್ಕೆ ವೇ| ಮೂ|| ಪಾಂಡುರಂಗ ಭಟ್ಟರ ಉಪನ್ಯಾಸವಾಯಿತು. ಬಾಲ ಮಂಡಳಿಯವರು ರಾಸಕ್ರೀಡೆ ಮಾಡಿ ತೋರಿಸಿದರು. ಶುಕ್ರವಾರ ಹರಿಕೀರ್ತನೆ, ಭಜನೆ ಮಹಾಪೂಜೆಗಳಾದವು. ಶನಿವಾರಕ್ಕೆ ಶ್ರೀ ಗಜಾನನ ಮೂರುತಿಯ ಮೆರವಣಿಗೆಯಾಗಿ ವಿಸರ್ಜನೆ ಸಮಾರಂಭವಾಯಿತು.

ಯಲ್ಲಾಪೂರ— ತಾರೀಖು ೧೪-೯-೩೪ ನೇ ದಿವಸ ಇಲ್ಲಿ ಗ್ರಾಮದೇವಿ ದೇವಸ್ಥಾನದ ಭಜನೆ ಸಪ್ತಾಹ ಮುಗಿದು ತಾ.| ೧೫-೯-೩೪ ನೇ ದಿವಸ ಸಂತರ್ಪಣೆಯು ಆಯಿತು. ಇಲ್ಲಿ ರಾ| ರಾ| ಅಂಬ ಶೇಟ ಮಹಾಜನ ಕೀರ್ತನಕಾರರು ಬಂದಿದ್ದಾರೆ. ಇವರ ೩-೪ ಕೀರ್ತನಗಳಾದವು.

ಇಲ್ಲಿಯ ನಾಗರಿಕರು ವಾಡಿಕೆಯಂತೆ ಶ್ರೀ ಗಣೇಶ ಚತುರ್ಥಿಯನ್ನು ತಾ. ೧೭-೯-೩೪ ನೇ ದಿವಸ ಮಾಡಿದರು.

ಹುಳ-ದಿಸಿಲು ಬೀಳುತ್ತದೆ. ಇಲ್ಲಿಯ ವರೆಗೆ ೮೫ ಇಂಚ ಮಳೆ ಬಿತ್ತು. ಈಗಿನ ಹವಾಮಾನ ನೋಡಲಿಕ್ಕೆ ರೋಗಾದಿಗಳ ಬಿಸ್ತ ಕಂಡುಬರುತ್ತದೆ.

ಬೈಂದೂರ— ದಕ್ಷಿಣ ಕಾನಡಾ ಜಿಲ್ಲೆಯ ಬೋರ್ಡಿನವರ. ಇಲ್ಲಿರುವ ಇಂಗ್ಲಿಷ ಶಾಲೆ ತೆರೆದದ್ದಾಗ ಹುಡುಗರಿಗೆ ಪತ್ಯಪುಸ್ತಕಗಳೇ ಸಿಗುವದಿಲ್ಲ ಶಾಲೆಯ ಮಾಸ್ತರರು ೬೪ ಬಾರಿ ಅವನ್ನು ತರಿಸಿ ಕೊಡುತ್ತೇವೆಂಬಾಗಿ ಹೇಳಿ ಹುಡುಗರ ಕಡೆಯಿಂದ ಹಣ ವಸೂಲ ಕೊಂಡರು; ಪುಸ್ತಕಗಳು ಬರಲಿಲ್ಲ; ಹಣ ಮರಳಿ ಕೊಟ್ಟರು. ಜಿಲ್ಲಾ ಬೋರ್ಡಿನವರು ಇತ್ತ ಲಕ್ಷ ಕೊಡುವದಿಲ್ಲ. ಹೀಗಾದರೆ, ಹುಡುಗರ ಅಭ್ಯಾಸ ಹ್ಯಾಗೆ ಸಾಗಬೇಕು.?

ವೃತ್ತಸಾರ.

— ದ್ರಾಕ್ಷೆ, ಅಂಜೂರ, ಕಿತ್ತಳೆ ಮುಂತಾದ ಹಣ್ಣು-ಹಂಪಲಗಳನ್ನು ನೆಟ್ಟು ಬೇಸಾಯ ವ್ಯವಸಾಯ ಮಾಡುವದಕ್ಕಾಗಿ ೫೦ ಸಾವಿರ ರೂಪಾಯಿಗಳ ತನಕ ಸಾಲ ಕೊಡುವಂತೆ ಮೈಸೂರು ಸರಕಾರವು ಏರ್ಪಡಿಸಿದೆ.

— ಮೈಸೂರು ಸರಕಾರವು ಆಯುರ್ವೇದ ಕಲಿಯುವ ೪೦ ಮಂದಿ ವಿದ್ಯಾರ್ಥಿಗಳಿಗೆ ವೇತನ ಕೊಡುವ ನಿರ್ಧಾರ ಮಾಡಿದೆ. ಈ ಮುಂಚೆ ೨೦ ಮಂದಿಗಳಿಗೆ ಮಾತ್ರ ವೇತನ ಸಿಗುತ್ತಿತ್ತು.

— ಮಂಗಳೂರಿನ ಕೆನರಾ ಹೈಸ್ಕೂಲಿನಲ್ಲಿ ಮುಖ್ಯಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದ ಶ್ರೀ ಅಡಿಗೆ ಪದ್ಮನಾಭಯ್ಯನವರು ಮಂಗಳೂರಿನಲ್ಲಿ ಕಳೆದ ತಾರೀಖು ೧೬ ನೇಗೆ ದಿವಂಗತರಾದರು. ಕೆನರಾ ಹೈಸ್ಕೂಲಿನಲ್ಲಿ ೩೫ ವರುಷಗಳ ತನಕ ಇವರು ಕೆಲಸ ಮಾಡಿದ್ದಾರೆ. ಇವರ ಶಿಕ್ಷಣವು ಶ್ರೇಷ್ಠ ತರಗತಿಯದಿತ್ತು. ವಿದ್ಯಾರ್ಥಿಗಳೊಡನೆ ಗೆಳೆತನ ಬೆಳಸಿ, ಅವರಿಗೆ ಪ್ರೇಮಭಾವದಿಂದ ಶಿಕ್ಷಣ ಕೊಡುತ್ತಿದ್ದರು. ಇವರ ಶಿಕ್ಷಣವು ವಿಶಿಷ್ಟವಾದುದೆಂದು ದಿವಂಗತ ಆಪ್ಟೆಂಬಳ ಸುಬ್ರಾಯ ಪೈಗಳವರು ಒಮ್ಮೆ ಉದ್ಗರಿಸಿದ್ದಾರೆ.

— ದಕ್ಷಿಣ ಕನ್ನಡ ರಾಜಕೀಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಸರಿಮಾನಂದರಿಗೆ ಮುಂಬಯಿಯೊಳಗಿನ ಕನ್ನಡ ಜಿಲ್ಲೆಯವರು ಮೇಜವಾನಿ ಕೊಡುವ ತಯಾರಿ ಮಾಡಿದ್ದಾರೆ. 'ಹೆರಲ್ಡ' ಪತ್ರಿಕೆಯ ಸಂಪಾದಕರಾಗಿದ್ದ ರಾ॥ ರಾಮಚಂದ್ರ ಪ್ರಭುಗಳವರು ಈ ಸಮಾರಂಭದ ಯಜಮಾನರು. ದಿವಾನ ಬಹಾದ್ದೂರ ಅನಂತ ಪೈ, ಶ್ರೀ ರಾಮರಾವ ಪಡಬಿದ್ರಿ, ಮಿ॥ ಜೋಸೆಫ ಸಿಕ್ವೇರಾ ಮೊದಲಾದವರು ಕಾರ್ಯಕರ್ತ ಸಭಾಸದರು

— ಕಲಕತ್ತೆಯೊಳಗಿನ ಬಿಗ್ಗ ಬಝಾರದಲ್ಲಿ ಒಬ್ಬ ದೊಡ್ಡ ವರ್ತಕರಿದ್ದಾರೆ ಇವರ ಮಗನಾದ ರಾ॥ ರಘುನಾಥನು ನಾಲ್ಕಕ್ಕೆ ಮದುವೆಯಾಗಿದ್ದನು. ನೂತನ ದಂಪತಿಗಳು ವಿಶೇಷ ವಿಲಾಸ ಮಾಡಹತ್ತಿದರು. ಈ ಬಗ್ಗೆ ತಂದೆಯು ಸಿಟ್ಟು ತಾಳಲು, ಅಬ್ಬರೂ ವಿಷ ಕುಡಿದು ರಾತ್ರಿ ಆತ್ಮಹತ್ಯ ಮಾಡಿಕೊಂಡರು. ಹೀಗೆ ಯುವಯುವತಿಯರು ನಡೆಕೊಂಡರೆ, ಮುಂದಿನ ಗತಿಯೇನು ?

— ದಕ್ಷಿಣ ಆಫ್ರಿಕೆಯಲ್ಲಿ ಹಿಂದುಸ್ಥಾನ ಸರಕಾರದ ತರ್ಫೆನಿಂದ ಪ್ರತಿನಿಧಿಗಳಾಗಿ ಹೋದ ನೇಕ ನಾಮದಾರ ಶ್ರೀನಿವಾಸ ಶಾಸ್ತ್ರಿಗಳ ಅಧಿಕಾರ ಮುಗಿಯದೆ ಮುಗಿಯಿತು. ಅದರಿಂದ ಕೇಪ ಟೌನಿನೊಳಗಿನ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಮೇಜವಾನಿ ಕೊಟ್ಟರು; ಉಪಾಧ್ಯಕ್ಷರು ಈ ಸಮಾರಂಭಕ್ಕೆ ಒಪ್ಪಲಿಲ್ಲ. ಅದರಿಂದ ಸಮಾರಂಭದ ಸಮಯ ಶ್ರೀನಿವಾಸ ಶಾಸ್ತ್ರಿಗಳ ಮೇಲೆ ಶಕ್ತಿಗಳು ಎಸೆಯೋಣವಾದವು ಪುಣ್ಯದಿಂದ ಪೆಟ್ಟುಗಲಿಲ್ಲ

— ಮುಂಬಯಿ ಸೆಂಟ್ರಲ್ ಬೇಂಕಿನ ಮುಖ್ಯ ಚಾಲಕರಾದ ರಾ॥ ಪ್ರಭುಶಂಕರ ಸೆಲೋತ್ರಿಯವರು ೩೬ ಲಕ್ಷ ರೂಪಾಯಿಗಳ ಬೇಂಕಿನ ಹಣವನ್ನು ದುರುಪಯೋಗ ಮಾಡಿದ ಬಗ್ಗೆ ಅವರ ಮೇಲೆ ಖಟ್ಲೆ ನಡೆದು, ಅವರಿಗೆ ೩ ವರುಷಗಳ ಸಕ್ತ ಶಿಕ್ಷೆ ವಿಧಿಸಲಾಯಿತು.

— ಬಾಲವಿವಾಹವನ್ನು ಕಾಯಿದೆಯಿಂದ ಪ್ರತಿಬಂಧಿಸುವ ರೈ॥ ಹರಿವಿಲಾಸ ಶಾರದಾರವರ ಕಾಯಿದೆಯಿಂದ ಹಿಂದು-ಮುಸಲ್ಮಾನರ ಶಾಸ್ತ್ರವಚನಗಳಿಗೆ ಭಂಗ ಬರುತ್ತದೆ. ಅದರಿಂದ ಆ ಕಾಯಿದೆಯನ್ನು ಸರಕಾರವು ವಿರೋಧಿಸಬೇಕಾಗಿ ೫೯ ಮಂದಿ ಹಿಂದು-ಮುಸಲ್ಮಾನ ಸಭಾಸದರು ಹಿಂದುಸ್ಥಾನ ಸರಕಾರದ ಮಿ॥ ಕ್ರಿಯರರವರಿಗೆ ಬಿನ್ನೈಸಿಕೊಂಡಿದ್ದಾರೆ.

— ಕಾಶ್ಮೀರ ಸಂಸ್ಥಾನದ ಶ್ರೀನಗರ ಪಟ್ಟಣದ ಪೇಟೆಯಲ್ಲಿ ಗುರುವಾರ ಮಧ್ಯಾಹ್ನ ೧ ಘಂಟೆಗೆ ಬೆಂಕಿ ಹತ್ತಿ ೨೦ ಲಕ್ಷ ರೂಪಾಯಿಗಳ ನಷ್ಟ ಕಾಶ್ಮೀರ ಸರಕಾರವು ೫ ಲಕ್ಷ ರೂಪಾಯಿಗಳನ್ನು ನಿರಾಶ್ರಿತರ ಅಶ್ರಯಕ್ಕಾಗಿ ಅರ್ಪಿಸಿದೆ

— ಕಾಯಿದೆ ಕಲಿಯುವ ವೆಂಕಟಾಚಲ ನರಸಯ್ಯನೆಂಬ ತ್ರಿವೇಂದ್ರ ಪಾಡೊಳಗಿನ ವಿದ್ಯಾರ್ಥಿಯು ಥಿಯೊಸೊಫಿ ಪಂಥಕ್ಕೆ ಸೇರಿದನು. ಪರಮಾತ್ಮನನ್ನು ಕಾಣುವದಕ್ಕಾಗಿ ಆತನು ತ್ರಿವೇಂದ್ರಮುದ ಬಳಿ ಸಮುದ್ರದಲ್ಲಿ ಹಾರಿ ಜೀವ ಕೊಟ್ಟನು. ಇವರು ಆಂಧ್ರ ಕಾಲೇಜಿನಲ್ಲಿ ಕಾಯಿದೆ ಕಲಿಯುತ್ತಿದ್ದರು.

— ರುಷ್ಯೆಯ ಸಭೆಯ ಪಕ್ಷಕ್ಕೆ ಸೇರಿಕೊಂಡ ಮಾದ್ರಾಸ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ॥ ಎಸ್. ಕೆ. ಆಚಾರ್ಯರವರು ರುಷ್ಯೆಯ ಪಕ್ಷಕ್ಕೆ ವಿರೋಧವಾಗಿ ಮತಕೊಟ್ಟು ಸರಕಾರದ ಆ ಪಟ್ಟುಗಳಿಗೆ ಅನುಕೂಲರಾದ ಬಗ್ಗೆ ಎರಡ್ಡ ಕಾಯಿದ ಕೌನ್ಸಿಲಿನೊಳಗಿನ ರುಷ್ಯೆಯ ಪಕ್ಷದವರ ಸಭೆಯಲ್ಲಿ, ಅವರಿಗೆ ಪಕ್ಷದೊಳಗಿಂದ ಬಹಿಷ್ಕೃತ ಮಾಡಲಾಗಿದೆ ಅವರ ಮತದಾರ ಮಂಡಳದ ಕಡೆಯಿಂದ ಇವರಿಗೆ ರಾಜೀನಾಮೆ ಕೊಡುವಂತೆ ಬೆಳವಣಿಯಾಗುತಲಿದೆ

— ಮುಂಬಯಿ ಸರಕಾರದ ದಿವಾನರಾದ ರಾ॥ ಜೆ. ಬಿ ಪ್ರಧಾನರವರು ಕಾರ್ಯಕಾರಿ ಮಂಡಳದ ಸಭಾಸದರಾದರು. ಅವರ ಬದಲಿಗೆ ರಾ॥ ಜಾಧವರವರಿಗೆ ದಿವಾನಪದ ಕೊಡಲಾಗಿದೆ. ರಾ॥ಜಾಧವರವರು ಅಬಕಾರಿ-ಜಂಗಲು-ಬೇಸಾಯ ಖಾತೆಗಳ ದಿವಾನರ; ಆದರೆ ಈ ಮೂರು ಖಾತೆಗಳ ದಿವಾನರಿಗೆ ಅಬಕಾರಿ-ಜಂಗಲು ಖಾತೆಗಳ ದಿವಾನರೆಂದು ಹೇಳುತ್ತಿದ್ದರು; ಈಗ ಬೇಸಾಯ ಖಾತೆಯ ದಿವಾನರೆಂದು ನಾಮಾಭಿಧಾನವಾಗಿದೆ.

— ಉಡುಪಿಯೊಳಗಿನ ಮಠಾಧಿಪರು ಪಂಡಿತರನ್ನೆಲ್ಲ ಅಲ್ಲಿಯ ಶ್ರೀ ಚಂದ್ರಮೌಳೀಶ್ವರ ಗುಡಿಯಲ್ಲಿಯ ಮೇಲೆ ಸಭೆಸೇರಿಸಿ, ಗಣೇಶ ವ್ರತವನ್ನು ಸೋದುಮಾರವೇ ಆಚರಿಸುವದು ಶಾಸ್ತ್ರವಿಹಿತವೆಂದು ಅಭಿಪ್ರಾಯಪಟ್ಟಂತೆ ಉಡಪಿಯ ಮಠಗಳಲ್ಲಿಯೂ ಅವರ ಶಿಷ್ಯ ವರ್ಗದಲ್ಲಿಯೂ ಸೋಮವಾರವೇ ಗಣೇಶ ಚತುರ್ಥಿಯಾಯಿತು

— ಚೀನದಲ್ಲಿ ಒಬ್ಬ ಮುದುಕನಿದ್ದಾನೆ. ಈತನ ವಯಸ್ಸು ೨೫೦ ವರುಷ ರಿನಾ ೪೦ ಮೈಲು ನಡೆಯುತ್ತಾನೆ. ೧೪ ಸರ್ತಿ ಈತನ ವಿವಾಹ ಸಂಭ್ರಮವಾಯಿತು. ಈತನ ಕುಟುಂಬದಲ್ಲಿ ೧೮೦ ಜನರಿದ್ದಾರೆ; ೧೧ನೇ ತಲಾಂತರವನ್ನು ಕಂಡಿದ್ದಾನೆ. ಹೆಸರು ಲೀ-ಟಿಂಗ-ಯಿನ್ ಎಂದು. ಗಿಡಮೂಲಿಕೆಗಳನ್ನು ಸಂಗ್ರಹಿಸುವ ಹುಚ್ಚು ಇವನಿಗೆ ವಿಶೇಷ.

— ಸುಳ್ಳು ಹೇಳಿದರೆ, ಕಣ್ಣು ಕುರುಡಾಗುತ್ತದೆಂದು ಹಿಂದು ಜನರಲ್ಲಿ ಕೆಲವರ ಭಾವನೆಯುಂಟು. ಅಮೇರಿಕೆಯ ಡಾಕ್ಟರರೊಬ್ಬರು ಶೋಧ ಮಾಡಿ ಈ ಸಂಗತಿಯು ಖರೆ ಎಂದು ಅಭಿಪ್ರಾಯಪಟ್ಟಿದ್ದಾರೆ.

— ಅಮೇರಿಕೆಯ ಶಿಕಾಗೋ ಪಟ್ಟಣದಲ್ಲಿ ಒಂದು ದೊಡ್ಡ ಮನೆ ಕಟ್ಟಲ್ಪಡುತ್ತದೆ. ಇದಕ್ಕೆ ೧೩-೧೪ ಕೋಟಿ ರೂಪಾಯಿ ಖರ್ಚು ಬರಬಹುದು. ೭೫ ಉಪ್ಪರಿಗೆಗಳಾಗುವವು

— ಉಡುಪಿಯ ಶ್ರೀ ಕೃಷ್ಣಾಪುರ ಮಠದಲ್ಲಿ ಬಿಳೇ ಗಂಡು ಆನೆಯೊಂದಿದೆ. ಅದು ನವಂಬರ ೧ನೇ ತಾರೀಖಿಗೆ ಮಂಗಳೂರಿನಲ್ಲಿ ಲಿಲಾಂವು ಮಾಡಲ್ಪಡುವದು. ಆನೆಯು ಸಶಕ್ತವಿದ್ದು ಮರ ಎಳೆಯುವ ಕೆಲಸಗಳಲ್ಲಿ ಚತುರವಿದೆ. ಪ್ರಾಯ ೧೮ ವರುಷ.

— ಈ ಹೊತ್ತಿನಿಂದ ಪುಣೆಯಲ್ಲಿ ಮುಂಬಯಿ ಕಾಯಿದೆ ಕೌನ್ಸಿಲಿನ ಅಧಿವೇಶನ ನಡೆಯುತ್ತದೆ ಇದೇ ಅಧಿವೇಶನದಲ್ಲಿ ತೀರ್ವೆಯನ್ನು ಅರ್ಧಾಂಶದ ತನಕ ಏರಿಸಬಹುದೆಂಬ ಕಾಯಿದೆಯ ಪ್ರಥಮ ವಾಚನವಾಗುವದಿದೆ. ರಾ॥ ಜೋಶಿಯವರು ಸಹಕಾರಿ ಕಾಯಿದೆಯನ್ನೂ ನಾಲುವ ಹಾಗು ನೆಯ್ಗೆಯ ಕೇಂದ್ರಗಳನ್ನು ಸ್ಥಾಪಿಸಲು ಸರಕಾರದ ಯೋಜನೆಯಾಗಬೇಕೆಂಬ ಠರಾವನ್ನು ಸೂಚಿಸುವವರಿದ್ದಾರೆ

— 'ಕೇಸರಿ' 'ಮರಾಠಾ' ಸಂಸ್ಥೆಗಳ ಮೇಲೆ ಲೋಕಮಾನ್ಯರ ಮಗಂದಿರು ಮಾಡಿದ ಕಟ್ಲೆಯು 'ಪರಿಣಾಮದ ದಾವೆಯ ಪ್ರಕರಣವು ರಾಜಿಯಿಂದ ನಿಕಾಲೆಯಾಗುವ ವಾತು ಕಥೆ ನಡೆದಿರುವದಾಗಿ 'ಕೇಸರಿ'ಯಲ್ಲಿ ಪ್ರಕಟವಾಗಿದೆ. ಈ ಮುಂಚೆಯೇ ಈ ಯೋಚನೆಯಾಗಿದ್ದರೆ, ಬಹಳ ಅನರ್ಥ ತಪ್ಪುತ್ತಿತ್ತು. ಈಗಾದರೂ ರಾಜಿಯಾದರೆ ಒಳಿತು

— ನಮಾಸರ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಲಂಚತಿಂದರು. ಅದರಿಂದ ಅವರ ಮೇಲೆ ಖಟ್ಲೆಯಾಯಿತು ಒಂದು ದಿವಸದ ಶಿಕ್ಷೆ, ೨೫ ರೂಪಾಯಿ ದಂಡವಾಗಿದೆ.

— ಕಾರಾ ಜಿಲ್ಲೆಯೊಳಗಿನ ಉಂಡ ಮನೆ ಗುಂಡಿನ ಸಂಗತಿ ಕೇಳಿ. ಮೋರೇಶ್ವರ ನಾರಾಯಣ ಎಂಬ ವೈದ್ಯರೊಬ್ಬರು ರಾಧೆಯೆಂಬ ಅನಾಥ ಹುಡುಗಿಯನ್ನು ಸಾಲಿಸಿ ಪೋಷಿಸಿದ್ದರು ರಾಧೆಗೆ ಪ್ರಾಯ ಬಂದ ಬಳಿಕ, ವೈದ್ಯರು ತಾವೇ ಕಡೆಯಿಂದ ಬಂದ ಒಬ್ಬ ಬ್ರಾಹ್ಮಣ ಹುಡುಗನಿಗೆ ಅವಳನ್ನು ಅರ್ಪಿಸಿದರು. ದಂಪತಿಗಳು ದಾಂಡು ಪಟ್ಟಣದಲ್ಲಿ ೧೨ ವರ್ಷಗಳ ತನಕ ಆಚಾರಕರಾಗಿ ಉಳಿದರು; ಒಂದು ದಿನ ಒಬ್ಬರು ಈ ಆಚಾರಕರಲ್ಲಿ ಬಂದರು ವೈದ್ಯರ ಸಂಬಂಧಿಕರೆಂದು ಆಚಾರಕರ ಬಳಿ ಹೇಳಿದರು; ತಮಗೇನಾದರೂ ಕೆಲಸ ತೆಗಿಸಿ ಕೊಡಬೇಕಾಗಿ ರಾಧೆಯ ಗಂಡನ ಬಳಿ ಪ್ರಸ್ತಾಪಿಸಿದರು. ಊರು ಬೆಸ್ತರದು; ಆಚಾರಕರು ಅಲ್ಲಿ ಒಂದು ಶಾಲೆಯ ಶಿಕ್ಷಕರಾಗಿ ಅವರಿಗೆ ವ್ಯವಸ್ಥೆ ಮಾಡಿದರು ೩ ತಿಂಗಳು ಉಳಕೊಂಡರು; ಆಚಾರಕರು ಊರೊಳಗಿಲ್ಲದ ಸಮಯ ಸಾಧಿಸಿ, ರಾಧೆಗೆ ಕೊಂಡು ಈ ಶಿಕ್ಷಕರು ಮುಂಬಯಿಗೆ ಹಾರಾದರು! ಪೋಲೀಸರು ಶಿಕ್ಷಕರ ಬಳಕಂಡನಲ್ಲಿ ಸೇರಿದ್ದರಂತೆ. ಆಚಾರಕರು ತಮಾಸ ಮಾಡಿ ರಾಧೆಯು ಶಿಕ್ಷಕರ ಹೆಂಡತಿಯಾಗಿ ಉಳಕೊಂಡಿರುವಳೆಂಬ ಪತ್ತೆ ಹಚ್ಚಿದರು ಖಟ್ಲೆಯಾಯಿತು ಶಿಕ್ಷಕನಿಗೆ ೪ ತಿಂಗಳ ಶಿಕ್ಷೆಯಾಯಿತು. ರಾಧೆಯು ಆಚಾರಕ ಗಂಡನ ಬಳಿ ಬರಲೊಪ್ಪಲಿಲ್ಲ. ವ್ಯಭಿಚಾರದ ರುಚಿಯೇ ಬೇರೆ

— ಮ್ಯಾಮಿನ ವಿವಾಹದ ಕಾನೂನಿನ ಮಸೂದೆಯು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಗೆ ಬಂದು ಸಿಲೆಕ್ಟ ಕಮಿಟಿಯಲ್ಲಿ ವಿಚಾರಕ್ಕಾಗಿ ಒಪ್ಪಿಸಲ್ಪಟ್ಟಿತು. ಕಾಲಿಕಾರರು ಆಕಸ್ಮಿಕವಾಗಿ ಸಂಪು ಮಾಡಿದಂತ ಕಡೆ ಹಾಕಿದ ಈ ಕಾಯಿದೆಯಿಂದ ರೇಲ್ವೆ ಕೂಲಿಕಾರರೂ, ಅಂಚೆ ಕಟ್ಟೆಯ ಪೇದೆಗಳೂ ಹಾಗೇ ದಂಡದ ಜನರೂ ಸಂಪು ಮಾಡುವ ವಿಧವಿಧದ ವಾದಗಳು ಚರ್ಚಿಸಲ್ಪಟ್ಟು ಸಂಪಿನಿಂದ ಅತ್ಯಾಚಾರಗಳು ಒದಗದಂತೆಯೂ ವ್ಯವಸ್ಥೆ ಆಗಿದೆ.

— ಕೌನ್ಸಿಲ ಆಫ್ ಸ್ಟೇಟಿನ ವತಿಯಿಂದ ಸಾಯಮನ್ ಕಮಿಟಿಯೊಡನೆ ವಿಚಾರಕ್ಕೆ ಕೂಡುಕೊಳ್ಳುವ ಮೆಂಬರರನ್ನು ಆರಿಸುವಾಗ ಕೊಂಗ್ರೆಸ ಪಕ್ಷದ ಸಭಾಸದರೂ ಸ್ವತಂತ್ರ ಪಕ್ಷದ ಸಭಾಸದರೂ ಎದ್ದು ಸಭಾಸ್ಥಾನವನ್ನು ಬಿಟ್ಟು ನಡೆದರು ಈ ಕಮೀಟಿಯಲ್ಲಿ ಸರ್ ಶಂಕರನ್ ನಾಯರ, ಸರ್ ಆರ್ಥರ್ ಫ್ರೂಮ ಹಾಗು ನವಾಬ ಅಲ್ಲೀಖಾನ ಇವರು ಆರಿಸಿ ಬಂದಿದ್ದಾರೆ. ನವಾಬ ಅಲ್ಲೀಖಾನರು ಲಖನೌ ಅಖಿಲ ಪಕ್ಷದ ಪರಿಷತ್ತಿನಲ್ಲಿ ಮುಂದಾಯದ ರಿಪೋರ್ಟಿಗೆ ಸಹಿ ಹಾಕಿದ್ದಾರೆ ಈ ತ್ರಿಮೂರ್ತಿಗಳೊಡನೆ ಮುತ್ತಯಿವ ಟೌಕರಿಯು ಕೊಡುತ್ತದೆಂದು ನೋಡಬೇಕು.

ಮಹಾತ್ಮರ ಆತ್ಮಚರಿತ್ರ.

(೨೨) ಉಪವಾಸ.

ಮೊದಲಿನ ೨ ವಾರಗಳ ತನಕ ಗಿರಣಿ ಕೂಲಿಕಾರರು ಬಹಳ ಧೈರ್ಯ ತೋರಿಸಿದರು, ಸಂಯಮವನ್ನೂ ತೋರಿಸಿದರು. ನಿತ್ಯ ಪ್ರಚಂಡ ಸಭೆಗಳಾಗುತ್ತಿದ್ದವು. ಈ ಸಮಯ ನಾನವರಿಗೆ ಕೊಂಡ ಆಣೆಯ ನೆನಪು ಮಾಡಿಕೊಡುತ್ತಿದ್ದೆನು. ಬಾರಿ ಬಾರಿಗೂ ಅವರು ಪ್ರತಿಜ್ಞೆಯನ್ನು ಪಾಲನ ಮಾಡುವದಕ್ಕಾಗಿ ಪ್ರಾಣಾರ್ಪಣ ಮಾಡಲು ಸಹ ಸಿದ್ಧರಿದ್ದೇವಾಗಿ ನನಗೆ ಅಭಿವಚನ ಕೊಡುತ್ತಿದ್ದರು.

ಕೊನೆಗೆ ಅವರು ಹಿಂಜರಿಯುವ ಲಕ್ಷಣಗಳು ತೋರಿದವು. ನಿರ್ಬಲರು ಕ್ಷಿಪ್ರಕೋಪಿಗಳಾಗುತ್ತಾರೆ, ಹಾಗೆಯೇ ಈ ಜನರೊಳಗಿನ ಉತ್ಸಾಹವು ಕಳೆಗುಂದಿತು. ಸಂಪು ಮುರಿದು ಗಿರಣಿಗಳಲ್ಲಿ ಕೆಲಸ ಮಾಡಹೋದ ಕೂಲಿಕಾರರಿಗೆ ಅವರು ದ್ವೇಷ ಮಾಡಹತ್ತಿದರು. ಎಲ್ಲಿ ಕೈ ಕೈಯಾಗುತ್ತದೆ ಎಂದು ನಾನು ಬೀತಿಗೊಂಡೆ. ನಿತ್ಯ ಸಭೆಗಳೊಳಗಿನ ಜನರ ಸಂದಣಿಯು ಕುಗ್ಗಹತ್ತಿತು. ಸಭೆಗೆ ಬರುವ ಜನರ ಮೋರೆಯೂ ಉದಾಸೀನದಿಂದ ಬಾಡಹತ್ತಿದವು. ಕೂಲಿಕಾರರು ಹಿಂದಾಗುತ್ತಿದ್ದ ಸುದ್ದಿಯೂ ನನಗೆ ತಿಳಿತು. ನಾನು ಗೊಂದಲದಲ್ಲಿ ಬಿದ್ದೆ. ಈ ಸಂದರ್ಭದಲ್ಲಿ ನನ್ನ ಧರ್ಮವ್ಯಾವುದೆಂದು ನಾನು ವಿಚಾರ ಮಾಡಹತ್ತಿದೆ. ದಕ್ಷಿಣ ಆಫ್ರಿಕೆಯೊಳಗಿನ ಕೂಲಿಕಾರರ ಹರತಾಳದ ಅನುಭವವು ನನಗಿತ್ತು. ಆದರೆ, ಈ ಅನುಭವವು ನೂತನವಾದದ್ದು. ನನ್ನ ಪ್ರೇರಣೆಯಿಂದ ಕೈಕೊಳ್ಳಲ್ಪಟ್ಟ ಹಾಗು ದಿನಾ ನಾನು ಸಾಕ್ಷಿಯಾಗುತ್ತಿದ್ದ ಪ್ರತಿಜ್ಞೆಯು ಯಾಕೆ ಭಂಗವಾಗಬೇಕು? ಹೀಗೆ ನನ್ನ ಕಲ್ಪನೆಯಾಗಲು ನಾನು ದುರಭಿಮಾನಪ್ರೇರಿತನಾಗಿದ್ದೆನೋ? ಸತ್ಯನಿಷ್ಠವಂತನಾಗಿದ್ದೇನೋ? ಏನೆಂದು ನಾನು ಹೇಳಲಾರೆ.

ಮುಂಜಾವಿನ ಸಮಯ ನಾನು ಗಿರಣಿ ಕೂಲಿಕಾರರ ಸಭೆಯಲ್ಲಿದ್ದೆನು, ಏನು ಮಾಡಬೇಕೆಂದು ತೋಚದೆ ಅನ್ಯ ಪೇಚಾಡುತ್ತಿದ್ದೆನು, ಥಟ್ಟನೆ ಒಂದು ಪ್ರೇರಣೆಯಾಯಿತು. ಕಲ್ಪನೆ ಸಹ ನನಗಿರಲಿಲ್ಲ. ಒಮ್ಮಿಂದೊಮ್ಮೆ ನನ್ನ ಬಾಯಿಯಿಂದ ಮಾತು ಬಂದದ್ದೇನಂದರೆ – “ಸಂಪುಗಾರರು ಒಕ್ಕಟ್ಟಿನಿಂದ ಕೆಲಸ ಮಾಡದಿದ್ದರೆ, ಸಂಪಿನ ಇತ್ಯರ್ಥವಾಗುವ ವರೆಗೆ ಸಂಪನ್ನು ನಡಿಸದಿದ್ದರೆ, ಅಥವಾ ಗಿರಣಿಯೊಳಗಿನ ಕೆಲಸವನ್ನು ಬಿಡದಿದ್ದರೆ ನಾನು ಅನ್ನ ಸ್ಪರ್ಶಿಸಲಾರೆ” ಹೀಗೆ ಸಭೆಯಲ್ಲಿ ನಾನು ಹೇಳಿದೆನು. ಕೂಲಿಕಾರರು ಇದನ್ನು ಕೇಳಿ ದಿಗಿಲುಬಿದ್ದರು. ಅನಸೂಯಾಬಾಯಿಯವರು ಒಂದೇ ಸವನೆ ಕಣ್ಣೀರು ಸುರಿಸಿದರು, ಕೂಲಿಕಾರರು ಉದ್ಗರಿಸಿದ್ದೇನಂದರೆ,— “ಉಪವಾಸ ಮಾಡುವದು ನಾವು, ನೀವಲ್ಲ. ನೀವು ಉಪವಾಸ ಮಾಡುವದೆ ಅಸಂಬದ್ಧ. ನಮಗೆ ಕ್ಷಮಿಸಬೇಕು. ಕೊನೆತನಕ ನಾವು ಪ್ರತಿಜ್ಞೆಯಂತೆ ನಡೆಯುತ್ತೇವೆ.”

“ನೀವು ಉಪವಾಸ ಮಾಡುವ ಅವಶ್ಯಕತೆಯಿಲ್ಲ. ನಿಮ್ಮ ಪ್ರತಿಜ್ಞೆಯಂತೆ ನೀವು ನಡಕೊಂಡರೆ ಸಾಕು. ನಮ್ಮ ಬಳಿ ಹಣವಿಲ್ಲ. ಧರ್ಮಾರ್ಥವಾಗಿ ಬಂದ ಹಣದಿಂದ ನಾವು ಸಂಪು ನಡಿಸುವದು ಇಷ್ಟವಿಲ್ಲ. ಆದರಿಂದ ಯಾವದಾದರೊಂದು ಕೂಲಿಕಷ್ಟದ ಉಪಾಯವನ್ನು ನೀವು ಶೋಧಿಸಿ ತೆಗೆದು ಹೊಟ್ಟೆ ಹೊರಕೊಳ್ಳಬೇಕು. ಅಂದರೆ ಸಂಪು ಎಷ್ಟು ಕಾಲ ನಡೆದಾಗ್ಯೂ ನಿಮಗೆ ಅದರ ಪರಿವೆಯಿರಲಿಕ್ಕಿಲ್ಲ. ಇನ್ನು ನನ್ನ ಉಪವಾಸದ ವಿಷಯ; ಸಂಪಿನ ಇತ್ಯರ್ಥವಾದ ಬಳಿಕ, ಉಪೋಷಣದ ಪಾರಣೆಯಾಗುವದು.”

ವಲ್ಲಭಭಾಯಿಯವರು ಮ್ಯುನಿಸಿಪಾಲಿಟಿಯಲ್ಲಿ ಸಂಪಿನವರಿಗೆ ಕೆಲಸ ಕೊಡಲು ಪ್ರಯತ್ನಿಸುತ್ತಿದ್ದರು. ಆದರೆ ಅಲ್ಲಿ ಆಗಲಿಲ್ಲ. ಆಶ್ರಮದಲ್ಲಿ ನೆಯ್ಗೆಯ ಕಟ್ಟಡದ ನೆಲಗಟ್ಟಿಗೆ ಉಸುಬು ತುಂಬುವ ಕೆಲಸವಿತ್ತು. ಆ ಕೆಲಸವನ್ನು ಸಂಪಿನವರಿಗೆ ಕೊಡಬಹುದೆಂದು ಮಗನಲಾಲ ಗಾಂಧಿಯವರು ಸೂಚಿಸಿದರು. ಕೂಲಿಕಾರರಿಗೆ ಈ ಸೂಚನೆ ಗ್ರಾಹ್ಯವಾಯಿತು. ಅನಸೂಯಾಬಾಯಿಯವರು ತಲೆಯ ಮೇಲೆ ಬುಟ್ಟಿ ಇಟ್ಟುಕೊಂಡು ಎಲ್ಲರಿಗಿಂತಲೂ ಮುಂದಾದರು, ಕೂಡಲೆ ಕೂಲಿಕಾರರೆಲ್ಲರೂ ಸಾಲಾಗಿ ನದಿಯ ಪರಿಯೊಳಗಿಂದ ಉಸುಬಿನ ಬುಟ್ಟಿಗಳನ್ನು ತುಂಬಿ ಒಯ್ಯಹತ್ತಿದರು. ಅನಸೂಯಾಬಾಯಿಯವರು ಬುಟ್ಟಿ ತುಂಬಿಕೊಡುತ್ತಿದ್ದರು. ಈ ನೋಟ ನೋಡತಕ್ಕಂಥಾದ್ದಿತ್ತು. ಕೂಲಿಕಾರರಲ್ಲಿ ನವಚೈತನ್ಯ ತುಂಬಿತು. ಅವರಿಗೆ ಕೂಲಿ ಹಂಚುವ ಕೆಲಸವು ಬಹು ಕಠಿಣವಾಯಿತು (ಕೂಲಿ ಕೊಟ್ಟು ಪೂರೈಸಲಿಲ್ಲ)

ನನ್ನ ಉಪವಾಸ ಯೋಜನೆಯಲ್ಲಿ ಒಂದು ದೊಡ್ಡ ದೋಷವಿತ್ತು. ಗಿರಣಿ ಒಡೆಯರಿಗೂ, ನನಗೂ ಸಲಿಗೆಯ ಸ್ನೇಹಭಾವವಿತ್ತೆಂದು ಈ ಹಿಂದೆಯೇ ಹೇಳಿದ್ದೇನೆ. ಅವರಿಂದ ನನ್ನ ಉಪವಾಸವು ಅವರ ಮನೋನಿಶ್ಚಯದ ಮೇಲೆ ಕೆಲವೊಂದು ಪರಿಣಾಮ ಮಾಡದಿರಲಿಲ್ಲ. ನಾನು ಸತ್ಯಾಗ್ರಹಿ, ಆದರಿಂದ ಅವರ ವಿರುದ್ಧ ಉಪವಾಸ ಮಾಡಲು ನನಗೆ ಪ್ರತಿಬಂಧವಿತ್ತು. ಕೂಲಿಕಾರರ ಸಂಪಿನ ಗುಣದೋಷಗಳ ವಿಚಾರದಿಂದಲೇ ಅವರು ಸಂಪಿನ ಇತ್ಯರ್ಥ ಮಾಡಬೇಕೆಂದು ನನ್ನ ಇಚ್ಛೆಯಿತ್ತು. ಗಿರಣಿ ಯಜಮಾನರ ತಪ್ಪಿಗಾಗಿ ನಾನು ಉಪವಾಸ ಕೈಕೊಂಡಿದ್ದಿಲ್ಲ. ನಾನು ಕೂಲಿಕಾರರ ಪ್ರತಿನಿಧಿಯಾಗಿ, ಅವರ ಪ್ರತಿನಿಧಿನಾತೆಯಿಂದ ಅವರ ದೋಷದ ಪ್ರಾಯಶ್ಚಿತ್ತಕ್ಕಾಗಿ ನಾನು ಉಪವಾಸ ಮಾಡಿದೆ. ಗಿರಣಿ ಒಡೆಯರ ಬಳಿ ಕೂಲಿಕಾರರ ಪಕ್ಷದಿಂದ ವಾದಿಸುವದಿಷ್ಟೇ ನನ್ನ ಕೆಲಸ. ಉಪವಾಸ ಮಾಡಿದರೆ, ಅವರಿಗೆ ಒತ್ತಾಯವಾಗುವಂತಿತ್ತು. ಹೀಗಿದ್ದರೂ ನನ್ನ ಉಪವಾಸದಿಂದ ಅವರ ಮೇಲೆ ಒತ್ತಾಯವಾಗುವದೆಂದ ನನಗೆ ಗೊತ್ತಿತ್ತು. ಹಾಗೆ ಪರಿಣಾಮ ಸಹ ಆಯಿತು. ಆದರೆ ನನ್ನ ಉಪಾಯವಿಲ್ಲ. ಅದನ್ನು ಕೈಕೊಂಡು ಮುಂದರಿಸಿದ ಹೊರತು ನನಗೆ ಗತಿಯಿರಲಿಲ್ಲ.

ಗಿರಣಿ ಮಾಲೀಕರಿಗೆ ನಾನು ಸಮಾಧಾನ ಹೇಳಹತ್ತಿದೆನು. “ನನ್ನ ಉಪವಾಸದ ಮೂಲಕ ನೀವು ಅಲ್ಪಾಂಶದಿಂದ ಸಹ ಹಿಂಜರಿಯುವ ಕಾರಣವಿಲ್ಲ” ಎಂಬುದಾಗಿ ನಾನು ಹೇಳಿದೆನು. ಆದರೆ ಅವರು ಈ ಮಾತಿನಿಂದ ಸಮಾಧಾನ ಹೊಂದಲಿಲ್ಲ. ನನಗೆ ಸವಿಮಾತಿನಿಂದಲೇ ಚುಚ್ಚಿದರು. ಹೀಗೆ ಅವರು ಮಾತಾಡಲು ಈ ಸ್ಥಿತಿಯಲ್ಲಿ ಅವರಿಗೆ ಅಧಿಕಾರವಿತ್ತು.

ಸಂಪುಗಾರರಿಗೆ ತಲೆಬಗ್ಗಿಸಲಾಗದೆಂದು ಹೆಚ್ಚಿನ ಹಟವಿದ್ದ ಗಿರಣಿ ಮಾಲೀಕರಲ್ಲಿ ಶೇಟ ಅಂಬಾಲಾಲರೇ ಪ್ರಮುಖರು. ಶೇಟ ಅಂಬಾಲಾಲರು ದೃಢಮನಸ್ಕರು, ಅಂತಃಕರಣಗಳು ಈ ಗುಣಗಳಿಗೆ ನಾನು ಸಹ ಮರುಳಾದೆ. ಅವರೊಡನೆ ಕಾದಾಡಲು ನನಗೆ ಒಂದು ಪ್ರಕಾರದ ಸಂತೋಷವಾಯಿತು. ನನ್ನ ಉಪವಾಸದಿಂದ ಅವರ ಪಕ್ಷದಲ್ಲಿ ಉಂಟಾದ ಪೆಟ್ಟಿನಿಂದ ನನಗೆ ಬಹಳ ವ್ಯಸನವಾಯಿತು. ಅಂಬಾಲಾಲರ ಸೌಭಾಗ್ಯವತಿಯರಾದ ಸರಲಾದೇವಿಯವರು ಒಡಹುಟ್ಟಿದ ತಂಗಿಯಂತೆ ನನ್ನ ಮೇಲೆ ಪ್ರೀತಿ ಮಾಡುತ್ತಿದ್ದರು. ನನ್ನ ಉಪವಾಸದಿಂದ ಅವರಿಗೊದಗಿದ ಕಷ್ಟವನ್ನು ನನ್ನಿಂದ ನೋಡಲಾಗಲಿಲ್ಲ.

ಅನಸೂಯಾಬಾಯಿಯವರೂ, ಅನೇಕ ಗೆಳೆಯರೂ, ಹಲವು ಕೂಲಿಕಾರರೂ ಮೊದಲನೇ ದಿನ ನನ್ನ ಜೊತೆಗೆ ಉಪವಾಸ ಮಾಡಿದರು. ಆದರೆ ಅವರ ಮನವೊಲಿಸಿ ಅವರಿಗೆ ಮುಂದೆ ಉಪವಾಸ ಮಾಡಗೊಡಲಿಲ್ಲ, ಅವರ ಮನವೊಲಿಸಲು ನನಗೆ ಸ್ವಲ್ಪ ಕಷ್ಟವಾಯಿತು.

ಹೀಗೆಲ್ಲ ಏರ್ಪಾಟು ಮಾಡಿದ್ದರಿಂದ ಎಲ್ಲರಲ್ಲಿಯೂ ಒಂದು ಪ್ರಕಾರದ ಸ್ನೇಹಭಾವವೇ ತಲೆದೋರಿತು, ಗಿರಣಿ ಮಾಲೀಕರ ಕರಳು ಕರಗಿತು. ಈ ಪ್ರಕರಣವನ್ನು ಇತ್ಯರ್ಥಪಡಿಸುವ ಉಪಾಯವನ್ನು ಅವರು ಹುಡುಕಲಾರಂಭಿಸಿದರು. ಅನಸೂಯಾಬಾಯಿಯವರ ಮನೆಯಲ್ಲಿ ಚರ್ಚೆಯಾಗಹತ್ತಿತು. ಶ್ರೀ ಆನಂದಶಂಕರ ಧ್ರುವರವರು ಮಧ್ಯಸ್ಥಿಕೆ ಮಾಡಹತ್ತಿದರು. ಕೊನೆಗೆ ಅವರಿಗೇ ಪಂಚರನ್ನಾಗಿ ನೇಮಿಸಲಾಯಿತು. ಸಂಪು ಇಷ್ಟಕ್ಕೇ ನಡೆಯಿತು. ೩ ದಿನ ಉಪವಾಸ ಮಾಡುವದರಲ್ಲಿ ಸಂಪಿನ ಇತ್ಯರ್ಥವಾಯಿತು. ಗಿರಣಿ ಮಾಲೀಕರು ಕೂಲಿಕಾರರಿಗೆ ಮಿಠಾಯಿ ಹಂಚಿ ಸಮಾರಂಭ ಮಾಡಿದರು. ಹೀಗೆ ಸಂಪು ಹೂಡಿದ ೨೧ ದಿನಗಳಲ್ಲಿ ಸಂಪಿನ ಕಾರಣವು ಇತ್ಯರ್ಥವಾಯಿತು.

ಸಂಪು ಮುಗಿದ ಸಮಾರಂಭಕ್ಕಾಗಿ ಸಭೆಯಾಯಿತು. ಆ ಸಭೆಯಲ್ಲಿ ಗಿರಣಿ ಮಾಲೀಕರೂ, ಕಮೀಶನರರೂ ಬಂದಿದ್ದರು. ಕಮೀಶನರರು ಈ ಸಮಯ ಗಿರಣಿ ಕೂಲಿಕಾರರಿಗೆ ಉಪದೇಶಿಸಿದ್ದೇನಂದರೆ:— “ಮಿ| ಗಾಂಧಿಯವರು” ಉಪದೇಶಿಸಿದಂತೆ ನೀವು ಯಾವಾಗಲೂ ವರ್ತಿಸತಕ್ಕದ್ದು. ಈ ಸಂಗತಿಯಾದ ಕೆಲವು ದಿನಗಳಲ್ಲಿಯೇ ಈ ಕಮೀಶನರರ ಬಳಿ ನಾನು ಕಾದಾಡುವ ಪ್ರಸಂಗ ಬಂತು. ಆ ಕಾಲಕ್ಕೆ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿತ್ತು. ಇವರೂ ಬದಲಿದ್ದರು. ಖೇಡಾ ಪಟೀದಾರರಿಗೆ ನನ್ನ ಹೇಳಿಕೆಯಂತೆ ನಡೆಯಬಾರದಾಗಿ ಅವರು ಮುಂಜಾಗ್ರತೆ ಕೊಡುತ್ತಿದ್ದರು.

ಈ ಅಧ್ಯಾಯವನ್ನು ಮುಗಿಸಬೇಕಾದರೆ, ಒಂದು ಸಂಗತಿಯನ್ನು ಹೇಳಬೇಕಾಗಿದೆ. ಅದು ಚಿತ್ತಾಕರ್ಷಕವಿದ್ದು, ಹೃದಯದ್ರಾವಕವಿದೆ. ಮಿಠಾಯಿ ಹಂಚುವಾಗ ಈ ಸಂಗತಿ ಸಂಭವಿಸಿತು. ಗಿರಣಿ ಮಾಲೀಕರು ಬಹಳ ಮಿಠಾಯಿ ತಂದಿದ್ದರು. ಸಾವಿರಾರು ಕೂಲಿಕಾರರಿಗೆ ಹೇಗೆ ಹಂಚತಕ್ಕದ್ದೆಂಬುದು ಒಂದು ಪ್ರಶ್ನೆಯಾಗಿತ್ತು. ಪ್ರತಿಜ್ಞೆ ಕೊಂಡ ಮರದಡಿಗೇ ಮಿಠಾಯಿಯನ್ನು ಹಂಚುವದು ತೀರ ಯೋಗ್ಯವೆಂದು ನಿರ್ಣಯವಾಯಿತು. ಅವರನ್ನೆಲ್ಲ ಕೂಡಿಸಲು ಅನುಕೂಲವಾದ ಬೇರೆ ಸ್ಥಳವಿರಲಿಲ್ಲ.

ನನ್ನ ಸ್ವಭಾವವು ಸರಳ. ೨೧ ದಿನಗಳ ತನಕ ವ್ಯವಸ್ಥಿತವಾಗಿ ನಡಕೊಂಡ ಕೂಲಿಕಾರರು ವಿಶೇಷ ಪರಿಶ್ರಮವಿಲ್ಲದೆ ವ್ಯವಸ್ಥೆಯಿಂದ ಅಲ್ಲಿ ನಿಂತುಕೊಂಡು ಮಿಠಾಯಿ ಕೊಳ್ಳುವರೆಂದು ನನ್ನ ಭಾವನೆ. ಮಿಠಾಯಿಗಾಗಿ ಒಬ್ಬರ ಮೇಲೊಬ್ಬರು ತಂಡುಗಟ್ಟಿ ಹೋಗಲಿಕ್ಕಿಲ್ಲವಾಗಿಯೂ ನನ್ನ ಗ್ರಹಿಕೆ. ಪರೀಕ್ಷೆ ಸಮಯ ಬಂತು. ಮಿಠಾಯಿಯನ್ನು ವ್ಯವಸ್ಥೆಯಿಂದ ಹಂಚಲು ಮಾಡಿದ ಪ್ರಯತ್ನಗಳೆಲ್ಲ ನಿರರ್ಥಕವಾದವು. ನಿಮಿಷ—೨ ನಿಮಿಷ ಸಮಾಧಾನವಾಗುತ್ತದೆ, ಮಿಠಾಯಿ ಹಂಚಲಾರಂಭಿಸಿದ ಕೂಡಲೆ ಗದ್ದಲವಾಗುತ್ತದೆ. ಪ್ರಮುಖ ಕೂಲಿಕಾರರು ವ್ಯವಸ್ಥೆ ಮಾಡಲು ಬಹಳ ಹೇಣಾಡಿದರು. ಎಲ್ಲವೂ ವ್ಯರ್ಥ. ಕೊನೆಗೆ ಗೊಂದಲವೂ ಜನ ಸಂದಣಿಯು ಗಾಬರಿಯೂ ಮೀರಿದವು. ಹೇರಳ ಮಿಠಾಯಿಯು ಕಾಲು ತುಳಿಬಿದ್ದು ಹಾಳಾಯಿತು. ಬೈಲು ಪ್ರದೇಶದಲ್ಲಿ ಮಿಠಾಯಿ ಹಂಚುವ ಕೆಲಸವನ್ನು ಕೊನೆಗೆ ಬಿಟ್ಟುಬಿಡಬೇಕಾಯಿತು. ಉಳಿದ ಮಿಠಾಯಿಯನ್ನು ಶೇಟ ಅಂಬಾಲಾಲರವರ ಮಿರಜಾಪುರ ಬಂಗ್ಲೆಗೆ ಒಯ್ಯಬೇಕಾದರೆ ನಮಗೆ ಸಾಕುಬೇಕಾಯಿತು. ಆ ಬಂಗ್ಲೆಯ ಪ್ರಾಕಾರದಲ್ಲಿ ಮಾರನೇ ದಿನ ಸಮಾಧಾನದಿಂದ ಮಿಠಾಯಿ ಹಂಚಲಾಯಿತು.

ಈ ಸಂಗತಿಯೊಳಗಿನ ಹಾಸ್ಯರಸವು ಸ್ಪಷ್ಟವಿದೆ. ಆದರೆ, ಇದರೊಳಗಿನ ಕರುಣರಸವನ್ನು ನಮೂದಿಸಬೇಕು. ಅಹಮದಾಬಾದದೊಳಗಿನ ಭಿಕ್ಷೆ ಬೇಡುವವರಿಗೆ ಏಕ್‌ಟೇಕ ಮರದ ಬಳಿ ಮಿಠಾಯಿ ಹಂಚುವ ಸುಳಿವು ಹತ್ತಿತು. ಇವರು ತಂಡುಗಟ್ಟಿ ಅಲ್ಲಿ ಹೋದರು. ಹಸಿವಿನಿಂದ ಮಿಠಾಯಿಯನ್ನು ಇವರು ಬೇಗಬೇಗನೆ ಕೊಳ್ಳಹೋದದ್ದರಿಂದ ಇಷ್ಟೆಲ್ಲ ಗೊಂದಲವಾಯಿತೆಂಬುದು ಕಡೆಗೆ ಚೌಕಶಿಯ ಮೇಲಿಂದ ತಿಳಿಯಿತು.

ನಮ್ಮ ದೇಶದಲ್ಲಿ ಉಪವಾಸವು ಮೀರಿದಷ್ಟಿದೆ. ಇದರಿಂದ ಪ್ರತಿ ವರ್ಷ ಭಿಕ್ಷೆ ಬೇಡುವವರ ಸಂಖ್ಯೆಯು ಮಿಗಿಲಾಗುತ್ತ ನಡೆದದೆ. ಹೊಟ್ಟೆ ಕೂಳಿಗಾಗಿ ಅವರು ಹೇಳಲಾರದಷ್ಟು ಪ್ರಯತ್ನ ಮಾಡಬೇಕಾಗುತ್ತದೆ. ಹೀಗಾಗಿ ಅವರು ಸಭ್ಯತೆಗೂ, ಸ್ವಾಭಿಮಾನಕ್ಕೂ ವಿಮುಖರಾಗುತ್ತಾರೆ. ದೇಶದೊಳಗಿನ ಔದಾರ್ಯವಂತರು ಅವರಿಗೆ ಕೆಲಸ ಪೂರೈಸುವದಿಲ್ಲ, ಕೆಲಸ ಮಾಡಿ ಅವರು ಚರಿತಾರ್ಥ ಸಾಗಿಸಿಕೊಳ್ಳಬೇಕೆಂಬ ಆಗ್ರಹ ಹಿಡಿಯುವದಿಲ್ಲ, ಭಿಕ್ಷೆಯನ್ನಿಷ್ಟು ಕೊಟ್ಟು ಬಿಡುತ್ತಾರೆ.

— ಸ್ಕ್ಯಾಮುವ್ ಕೋರ್ಟಿನ ತಾಪವೆಯು ಬರುವ ತಿಂಗಳಲ್ಲಿ ಥರಕ ಖುಂಚದ ಮೇಲೆ ಬೀಳುತ್ತದೆ. ಸಭಾಸದರು ಸಹ ತ್ರೀಕರಾಗಿ ಬರುವವರಿದ್ದಾರೆ.

— ಬೆಂಗಳೂರಿನ ಬಳಿ ಶೆಂಗೇರಿಯಲ್ಲಿ ಬ್ರಹ್ಮಚಾರಿ ಗುರುಕುಲಾಶ್ರಮದ ಮಂದಿರ ತಯಾರಾಗುತ್ತಲಿದೆ. ಕೆಲ ವಿದ್ಯಾರ್ಥಿಗಳು ಅಲ್ಲಿ ಕಲಿಯ ಹತ್ತಿದ್ದಾರೆ.

— ಮಂಗಳೂರಿನ ಜಿಲ್ಹಾ ಹಂಚಿನ ಕಾರಖಾನೆಯ ಮೆ॥ ಸಿ. ಎಚ್. ಮೊಗೇನರವರು ಕಳೆದ ಸೋಮವಾರ ತೀರಿಕೊಂಡರು. ಇವರು ಧರ್ಮಾತ್ಮರು; ಪತ್ನಿಯ ಸ್ಮಾರಕಕ್ಕಾಗಿ ೩೦೦೦ ರೂಪಾಯಿಗಳನ್ನು ಹಂಗಸರ ಔಷಧಾಲಯಕ್ಕೆ ಅರ್ಪಿಸಿದ್ದರು. ಬಹಳ ಮಂದಿಗಳು ಸ್ಮಶಾನಯಾತ್ರೆಗೆ ಹೋಗಿದ್ದರು.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ

ಶ್ರೀ ತುಳಸೀದಾಸ ರಾಮಾಯಣ.

ಮದ್ರಾಸಿನ ಪ್ರಜಾಮಂತ್ರಿಗಳು ಶ್ರೀ॥ ಎ. ರಂಗನಾಥಂ ಅವರ ಮುನ್ನುಡಿ ಸಹಿತ

ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ ಇತ್ಯಾದಿ ಸಹಿತ.

ಅನುವಾದಕ:— ಶ್ರೀ॥ ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ

(ಶಾ) ೧೩೨ ಚಾಮರಾಜಪೇಟೆ, ೫ನೇ ಬೀದಿ,

ಬೆಂಗಳೂರು ಸಿಟಿ.

ಕನ್ನಡಿಗರ ಕೂಟದಿಂದ

ವೈ. ನಾ. ಕೆರೂರ ವಾಸುದೇವಾಚಾರ್ಯರ

ಒಂದು ಚಿಕ್ಕ ಕಥೆ!] [ಬೆಲೆ ೧॥ ಆಣೆ!!

ತೊಳೆದ ಮುತ್ತು!

ಸುಂದರವಾದ ಅಕ್ಷರ; ದಪ್ಪವಾದ ಚಂದಾದ ಹಾಳೆ; ಅಚ್ಚುಕಟ್ಟಾದ ಮುದ್ರಣ; ಮನಮೆಚ್ಚುವಂತಹ ಕಥೆ, ಬೆಲೆ ತೀರ ಕಡಿಮೆ. ಎರಡಾಣೆಯ ಪೋಸ್ಟ ಸ್ಟಾಂಪುಗಳನ್ನು ಕಳುಹಿಸಿ ಪಡೆದು ಸಂತೋಷಪಡಿರಿ. ಏಜಂಟರಾಗಲಿಚ್ಛಿಸುವವರು ಬೇಗನೇ ಬರೆದುಕೊಳ್ಳಿರಿ.

ಆಡಳಿತಗಾರ,

ಕನ್ನಡಿಗರ ಕೂಟ.

ಧಾರವಾಡ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ ಜೋಗಿಗೆ ರೆಗ್ಯೂಲರ್ ಸರ್ವೀಸ್

ಶಿವರಾತ್ರಿಯ ಸಮಯದಲ್ಲಿ ಗೋಕರ್ಣಕ್ಕೆ ಸ್ಪೆಶಲ್ ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಶಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಶಿರ್ಶಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯೂಲರ್ ಸರ್ವೀಸ ನಡೆಯುತದೆ. ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ವರ್ತಮಾನವನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR,

S. U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಧರವಾಂ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ ಸ್ಫಟಿಕಮಣಿ ಮೊದಲಾದ ಜಿನಸುಗಳು ಸಿಗುತ್ತವೆ. ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಳ ಎಸ್. ನಾರಾಯಣಾಚಾರ್ಯ, ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಆರ್ಚರ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ " ಆರ್ಚರ " ಎಂಬ ಗುರುತಿರುವದು.)

ಚನ್ನಾಗಿ ಪೆಟ್ಟಿಗೆಯಲ್ಲಿರಿಸಿ ರೇಲ್ವೆ ಚಾರ್ಜು ತುಂಬಿ ನಿಮ್ಮೂರ ಸ್ಟೇಶನ ಮೇಲೆ

೭೫ ರೂ. ೮ ಆ ಗೆ ಮಾತ್ರ.

ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್ಸ, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ, ಮಡಗಾರ್ಡ್ಸ, ಸೊಗಸಾದ ಸ್ಪ್ರಿಂಗಸೀಟ, ಢಬರ ಪ್ಯಾಡಲ್ಸ, ಲೂಕಸ್ಸಿನ " ಪಾಥ ಫಾಯಿಂಡರ" ದೀಪ, ಉತ್ತಮ ಘಂಟೆ, ಡನ್‌ಲಾಪ್ ಪ್ಲೇಟೆಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತೆ. ಆರ್ಡರಿನ ಕೂಡ ರೂ. ೨೫ ಮುಂಗಡ, ಉಳಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್ ಎಂಡ್ ಮೋಟರ ಕಂಪನಿ,

ಮುಂಬಯಿ— ಹಾರ್ನಬೀ ರೋಡ,

ಪುಣೆ— ಅರ್ಸೆನಲ್ ರೋಡ.

ಸರಕಾರದಲ್ಲಿ ರಜಿಸ್ಟರ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ

ದ್ರಾಕ್ಷಾರ್ಕಮಧು

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ೬೦-೭೦ ವರ್ಷದ ಮುದುಕರ ಕಾಮವಿಕಾರ ಶಕ್ತಿ ತರುಣರಂತೆ ವರ್ಧಮಾನವಾಗುವದು. ನಿಜವಾಗಿ ಒಂದೇ ಸಲಕ್ಕೆ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ ಶಕ್ತಿ ಹೋಗಿ ದುರ್ಬಲವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾಮಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮುಂತಾದ ಅನೇಕ ರೋಗಗಳು ನಾಶವಾಗುವವು. ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತ್ತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ್ತು ೩—೦-೦ ಮೂರು ಬಾಟಲಿಗಳನ್ನು ಒಂದೇ ಪಾರ್ಸಲಿನಲ್ಲಿ ಕಳಿಸುತೇವೆ. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತ್ತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟ ಕೊಡುವದು. ಟಪಾಲ ಖರ್ಚು ಬೇರೆ ಬೀಳುವದು. ಏಜಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಹಚ್ಚಿನಿಗೆ ೧೨-೦-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ ಬೆಳಗಾಂವ

झंडूचें

द्राक्षासव – मृद्विकारिष्ट – शारंगधर म अ. १०

रामबाण औषध

सर्दि घालविणारें,
भूक वाढविणारें,
शौच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर

किंमत- एक रत्तलास १॥ रुपये.

क्याटलाग मागवा

झंडु फार्मास्युटिकल वर्क्स लिमिटेड

मुंबई नं: १४

ऐजंट— मेसर्स पंडित आणी कंपनी,
तीर्थहळ्ळी.

सिर्सि एजंट एस. एल. थाकप्पा आणि ब्रदर

ಹಿಂದುಸ್ಥಾನದಲ್ಲೆಲ್ಲ ಅತ್ಯಂತ ಅಗ್ಗವಾದ
'ನೆಶನಲ್ ಇನ್‌ಶೂರನ್ಸ ಕಂಪನಿ, (ಲಿಮಿಟೆಡ್)'
ಎಂಬ

ಜೀವ ವಿಮೆಯ ಮಂಡಲಿ.

ಮೂಲಧನವು ಒಂದು ಕೋಟಿಯನ್ನು ಅತಿಕ್ರಮಿಸಿದೆ.

ಕಳೆದ ವರುಷ ಲೆಕ್ಕಾಚಾರದ ಮೇಲೆ 8 40,044 ರೂಪಾಯಿಗಳ ಲಾಭವು ದೊರೆತಿದೆ.

ಎಂಡೊಮೆಂಟ ಪತ್ರಗಳ ಮೇಲೆ ವರುಷಕ್ಕೆ 10 ರೂಪಾಯಿನಂತೆಯೂ, ಪೂರ್ತಿ ಜೀವ ವಿಮೆಯ ಪತ್ರದ ಮೇಲೆ ವರುಷಕ್ಕೆ 15 ರೂಪಾಯಿನಂತೆಯೂ ಬಹುಮಾನ ಕೊಟ್ಟಿರುವವು

ಹೊರಗಡೆ 1000 ರೂಪಾಯಿಗಳ ವಿಮೆ ಎಷ್ಟು ಕಂತು ಕೊಡ ಬೇಕೋ ಅದೇ ಕಂತಿಗೆ ನಮ್ಮಲ್ಲಿ ಸುಮಾರು 1200 ರೂಪಾಯಿಗಳ ಪತ್ರಗನ್ನು ಪಡೆಯಿರಿ- ನಮ್ಮ ದರವು ಅಷ್ಟೊಂದು ಸುಲಭ,

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕು!

ಕರ್ನಾಟಕಕ್ಕೆ ಏಜಂಟರು – **P D. Churi,**
ಬಿ ಸಿ. ಸಿರಾಳಕೊಪ್ಪ, *Branch Secretary,*
ಲೋಖಂಡಿ ಬಿಲ್ಡಿಂಗ, Alice Building
ಹುಬ್ಬಳ್ಳಿ *Hornby Road,*
BOMBAY.

ರೇಶ್ಮೆ ವಸ್ತ್ರ ಇನಾಂ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ವಸ್ತ್ರ, ರೇಶ್ಮೆ ಸೀರೆ, ಪೀತಾಂಬರ, ಮೊಗುಟ, ರವಕೆ ಖಣ, ಎಲವಸ್ತ್ರ ಪೇಟಾ, ಕಾಶ್ಮೀರ್ ಮತ್ತು ಕಾನಪುರ್ ಶಾಲು ಧಾವಳಿ, ನಾಮ್‌ಮಣಿ, ರುದ್ರಾಕ್ಷಿ, ಸ್ಫಟಿಕ ಸರ ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚಕರ್ಪೂರ, ಕೇಶರಿ ಶಿಲಾಜಿತು, ಅತ್ತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳಿಸಲ್ಪಡುವದು. ಇಪ್ಪತ್ತೈದು ರೂಪಾಯಿ ಕ್ರಯ ಬಾಳುವ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮಾಗಿ ದೊರೆಯುವದು.

ನಮ್ಮ ಪತ್ತೆ —
ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ,
ದ ಗಾರ್ಫೀಲ್ಡ್, ಶ್ರೀ ಕಾಶೀ ಯು. ಪಿ.

ಸುಲಭ ಕ್ರಯ! **ಸುಲಭ ಕ್ರಯ!!**

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು, ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ನೂರು ಡಬ್ಬಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ ಮಾದರಿ ಸಿಸೆ ಪುಕ್ಕಟೆ ಕಳಿಸಲಾದೀತು

ಬುಡಿ ಒಂದಕ್ಕೆ ಕ್ರಯ ರೂ ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦
ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

[ರಜಿ] ವಜ್ರಾಂಗ ಸುಂದರಪಾಕ. [ಸ್ವರ್ಣ

ಮಿಥ್ಯಾ ಕೆಳವಾದದಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದ ಕೆಟ್ಟ ಇಂದ್ರಿಯ ಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶ ಮಾತ್ರದಿಂದ 'ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಒಡನೋವು (ಪ್ರಮೇಹ) ಮೂಲವ್ಯಾಧಿ ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ ಪಿತ್ತವಿಕಾರ ನಿದ್ರೆ ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶರೀರಕ್ಕೆ ಶಾಂತಿ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಬಿಯ ಸುಮಂಧವರು ಒಂದಾವರ್ತಿ ತಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತು ಭಸ್ಮಸು "ವೈಕೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಾಶ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯ ೧ ವಡಿ, ರಾತ್ರಿಯ ಭೋಜನದ ನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯ ಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೨೧ ದಿವಸ ನಡೆಯಾಗುವಷ್ಟು ೨೪ ತೊಲೆಯ ಒಂದು ಡಬ್ಬಿಗೆ ೫। ರೂ ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ ಪಿ ಖರ್ಚ ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.**



ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು;

ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟುಕೊಳ್ಳಲೇ ಬೇಕು; ಬಿದ್ದ ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೆ ಗುಣಬರುತ್ತದೆ. ಬೇಕಾದ್ದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೊ,
ಮುಂಬಯಿ ಮತ್ತು ಮದ್ರಾಸ.

Pri nted and Published by Krishnarao Keshav Shenvi (Editor) at his Star of Kanara Prsse, Kumta.